

ಕರ್ನಾಟಕ ಸರಕಾರ
ನವಪದ
ಕರಕುಶಲ ಕಾವ್ಯಗಳು
ಡಾ. ಪಿ.ಕೆ. ರಾಜಶೇಖರ
ಕ
ಕನ್ನಡ ಪುಸ್ತಕ ಪ್ರಾಧಿಕಾರ

ಜನಪದ ಶರಣಕಾವ್ಯಗಳು

ಸಂಪಾದಕರು
ಡಾ. ಪಿ. ಕೆ. ರಾಜಶೇಖರ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೦೨

JANAPADA SHARANA KAVYAGALU: Folk Ballads On Saranas (Basaveswara and his contemporaries). Collected and Edited by Dr. P.K. Rajashekhara. Published by Ashok N. Chalawadi, Administrative Officer, Kannada Pustaka Pradhikara, Kannada Bhavana, J.C. Road, Bangalore - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಮೊದಲ ಮುದ್ರಣ : ೨೦೧೦
ಪುಟಗಳು : CX + ೫೦೬ = ೬೧೬
ಬೆಲೆ : ₹ ೪೦೦/-
ಪ್ರತಿಗಳು : ೫೦೦

First Print : 2010
Pages : CX + 506 = 616
Price : ₹ 400/-
Copies : 500

ಪ್ರಕಾಶಕರು :
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨.

ಕರಡು ತಿದ್ದಿದವರು : ಸಂಪಾದಕರು

ಮುಖಪುಟ ವಿನ್ಯಾಸ : **ಪ್ರಕಾಶ್ ಚಿಕ್ಕಪಾಳ್ಯ**, ವಿಸ್ಮಯ ಗ್ರಾಫಿಕ್ಸ್, ಮೈಸೂರು.

ಮುದ್ರಕರು:
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು-೫೬೦೦೨೭, ದೂ: ೨೨೨೫೪೪೦೬೬

ಅರ್ಪಣೆ



'ಯುಗಸಂಧ್ಯಾ' ಮಹಾಕವಿ
ಪರಮಪೂಜ್ಯ ಪ್ರಿಯ ಗುರುವರ್ಯ
ಶಿಷ್ಯವತ್ಸಲ
ಶ್ರೀ ಸುಜನಾ
ಅವರಿಗೆ
ಪ್ರೀತಿಪೂರ್ವಕವಾಗಿ

ಸುಜನಾ

ಕ್ಷೀರಪಥದಲ್ಲಿ ಸಂಭ್ರಮದ ಬೆಳಕಿನ ಪರ್ವ
ಚಂದ್ರಕಾಂತಿಯ ಚಿಲುಮೆ ಚಿದಾತ್ಮನಗೆಯಪೂರ್ವ
ಅಚ್ಚೋದ ತೀರದಲಿ ಮಲ್ಲಿಗೆಯ ಹೂರಾಶಿ
ಮಂಗಳ ಮಹೋನ್ನತಿಯ ಮತಿಭೂಮ ಶಿವಕಾಶಿ !
ಜ್ಞಾನಶರಧಿಯ ನಡುವೆ ಗಗನದೆತ್ತರ ನಿಂತ
ಬಹುಜ್ಞತ ತುಹಿನಗಿರಿ ಶಿಖರ ಶ್ರೀಗುರುಸಂತ.
ವಿದ್ಯುತ್ಪ್ರಪಂಚದಲಿ ತಲಸ್ಪರ್ಶಿ ಸಾರಮತಿ
ಗದುಗಿನ ಕವಿಚಕ್ರಿಯ ಸಹೋದರ ನಾದಯತಿ !
ಹೃದಯ ಸಂವಾದ ರಸಸ್ಫುರಿತ ವರಶುಭಶ್ವೇತ
ಮಾನವೀಯ ಗುಣಗಣ ಬದುಕದುವೆ ಪರಿಪೂತ.
ನುಡಿಯೆಲ್ಲಾ ರೂಪಕ ನಡೆಯೆಲ್ಲಾ ದೀಪಕ
ಶುಚೀಸ್ಮಿತ ಸುಪ್ರೀತ ಸುಸಂಭಾವ್ಯ ಸಾಧಕ.
ಕುವೆಂಪು ಬಸವರ ತತ್ತ್ವಾದರ್ಶ ಪರಿವೇಷಣ
ಅನ್ವರ್ಥನಾಮ ದಿಟ ನೀವು ನಿಜಕೂ ಸುಜನಾ !

ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ಮಹತ್ವದ ಅಪರೂಪದ ಕೃತಿಗಳನ್ನು ಪ್ರಕಟಿಸುತ್ತಾ ಬಂದಿದೆ. ಮೌಲಿಕ ಕೃತಿಗಳು ಜನಸಾಮಾನ್ಯರಿಗೆ ಸುಲಭ ದರದಲ್ಲಿ ದೊರೆಯಬೇಕೆಂಬುದೇ ಪ್ರಾಧಿಕಾರದ ಆಶಯವಾಗಿದೆ. ಶಿಷ್ಟ ಮತ್ತು ಜಾನಪದ ಈ ಎರಡೂ ನೆಲೆಗಳಲ್ಲಿ ಅನನ್ಯತೆ ಮತ್ತು ಘನತೆಯನ್ನು ಹೊಂದಿರುವ ಕನ್ನಡ ಜ್ಞಾನ ಸಂಪತ್ತು ಅಪರಿಮಿತವಾದದ್ದು. ಯಾವುದೇ ಸಾಹಿತ್ಯದ ಮೂಲ ಇರುವುದು ಜಾನಪದದಲ್ಲಿ. ಅದರಿಂದಾಗಿಯೇ ಜನವಾಣಿ ಬೇರೆ ಹೇಳಲಾಗಿದೆ. ಕನ್ನಡದಲ್ಲಿ ಅಪಾರವಾದ ಜಾನಪದ ಸಾಹಿತ್ಯ ಇದ್ದು ಕಳೆದ ಶತಮಾನದಿಂದ ಈಚೆಗೆ ಅದು ಪ್ರಕಟವಾಗುತ್ತಿರುವುದು ಸಮಾಧಾನದ ಸಂಗತಿಯಾದರೂ ಇನ್ನೂ ಮರೆಯಲ್ಲಿರುವ ಸಾಹಿತ್ಯ ಪ್ರಕಾರದ ಅನೇಕ ಕೃತಿಗಳು ಹೊರಬರಬೇಕಿದೆ. ಆ ದಿಶೆಯಲ್ಲಿ ಪ್ರಾಧಿಕಾರ ಕೈಗೊಂಡ ಒಂದು ಪ್ರಯತ್ನ ಇದು.

ಡಾ. ಪಿ.ಕೆ. ರಾಜಶೇಖರ ಅವರು ಕನ್ನಡ ಜಾನಪದ ವಿದ್ವಾಂಸರಲ್ಲಿ ಬಹಳ ಮುಖ್ಯರು. ಅನೇಕ ವರ್ಷಗಳಿಂದ ಜಾನಪದವನ್ನೇ ಉಸಿರನ್ನಾಗಿ ಮಾಡಿಕೊಂಡಿರುವ ಇವರ 'ಜನಪದ ಶರಣ ಕಾವ್ಯಗಳು' ಒಂದು ಅಪರೂಪದ ಕೃತಿ. ಇಲ್ಲಿ ಪ್ರಸ್ತುತ ಬದುಕಿನ ಸಮಸ್ಯೆ-ಸವಾಲುಗಳನ್ನು ಕುರಿತಾದ ಚರ್ಚೆಗೆ ಅತಿಮುಖ್ಯವಾದ ತಾತ್ತ್ವಿಕ ನೆಲೆಗಟ್ಟುಗಳನ್ನು ಒದಗಿಸಿಕೊಡುವ ಮೂಲಕ ಸಾರ್ಥಕ್ಯವನ್ನು ಪಡೆದುಕೊಳ್ಳುವುದು ಗಮನಾರ್ಹ. ಸಮಾನತೆಯ ಸಂಸ್ಕೃತಿಯನ್ನು ಸಂಸ್ಥಾಪಿಸಲು ಅಹರ್ನಿಶಿ ದುಡಿದ ಬಸವಣ್ಣ ಮತ್ತು ಆತನ ಸಮಕಾಲೀನ ಶರಣರ ಜೀವನ ಕಥಾನಕವನ್ನು ಇಲ್ಲಿನ ಕಾವ್ಯಗಳು ನಿರೂಪಿಸುತ್ತವೆ. ಹನ್ನೆರಡನೆಯ ಶತಮಾನದ ಚರಿತ್ರೆಯನ್ನು ಹೇಳುವುದು ಇಲ್ಲಿ ಮುಖ್ಯವಾಗುವುದಿಲ್ಲ. ಶರಣ ಧರ್ಮದ ಪ್ರಧಾನ ಧೋರಣೆಯಾಗಿದ್ದ 'ಸಮಾನತೆಯ ಸಮಾಜ' ನಿರ್ಮಾಣದ ತಾತ್ತ್ವಿಕತೆಯನ್ನು ವರ್ತಮಾನಗೊಳಿಸುವ ಹಂಬಲ ಇಲ್ಲಿ ಎದ್ದುಕಾಣುತ್ತದೆ. ಹಾಗಾಗಿ ಇಲ್ಲಿ ಕಥೆ ಇದ್ದರೂ ಅದು ಮುಖ್ಯವಾಗದೆ ಒಟ್ಟು ಶರಣಧರ್ಮ ಹಾಗೂ ಜನಪದ ಧರ್ಮಗಳ ತತ್ತ್ವಾದರ್ಶಗಳ ಚರ್ಚೆ ಪ್ರಧಾನವಾಗುತ್ತದೆ.

ಈ ಕೃತಿಯನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೂ ಆಭಾರಿಯಾಗಿದ್ದೇನೆ. ಈ ಸಂಶೋಧನಾತ್ಮಕ ಕೃತಿಯನ್ನು ಕನ್ನಡ ಸಾಹಿತ್ಯ ವಲಯ ತುಂಬು ಹೃದಯದಿಂದ ಸ್ವಾಗತಿಸುತ್ತದೆ ಎಂದು ಆಶಿಸುತ್ತೇನೆ.

(ಡಾ. ಸಿದ್ದಲಿಂಗಯ್ಯ)
ಅಧ್ಯಕ್ಷರು

ನೆರವಾದವರ ನೆನೆದು ನಮಿಸುವೆನು

ಒಂದು ಧರ್ಮ ಹಿಂದೆಂದೂ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳನ್ನೆಲ್ಲ ಆವರಿಸಿಕೊಂಡು ಅವುಗಳನ್ನೆಲ್ಲ ಒಂದೇ ಕಟ್ಟಿನಲ್ಲಿ ಹಿಡಿದಿಟ್ಟ ಉದಾಹರಣೆ ಜಗತ್ತಿನ ಬೇರೆಲ್ಲೂ ಕಾಣುವಂತಿಲ್ಲ ; ಈ ಎಲ್ಲವನ್ನೂ ತನ್ನ ತೆಕ್ಕೆಯಲ್ಲಿ ಅಳವಡಿಸಿಕೊಂಡ ಏಕಮೇವ ಧರ್ಮವೆಂದರೆ ಅದು ಕರ್ನಾಟಕದ ಶರಣಧರ್ಮ, ನಿಜವಾದ ಅರ್ಥದಲ್ಲಿ ವಿಶ್ವಕ್ಕೆ ಕನ್ನಡ ನಾಡು ಕೊಟ್ಟ ಮಹೋನ್ನತ ಕೊಡುಗೆಯೆಂದರೆ ಅದು ಈ ಶರಣಧರ್ಮ. ಇಂಥ ಧರ್ಮವೊಂದು ನಾಡಿನುದ್ದಗಲಕ್ಕೂ ಹಬ್ಬಿಕೊಂಡು ಜನಪದರನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಕಾರಣವಾದ ಮಹಾನ್ ಚುಂಬಕಶಕ್ತಿಯೆಂದರೆ ಮಹಾ ಮಾನವತಾವಾದಿಯಾದ ಬಸವಣ್ಣನವರು. ಬಸವಣ್ಣನವರಂಥ ಒಬ್ಬ ಮಹಾನ್ ಕ್ರಾಂತಿಕಾರಿ ಈ ನೆಲದಲ್ಲಿ ಉದಯವಾದದ್ದು ಈ ನಾಡಿನ ಪುಣ್ಯವಿಶೇಷ. ಜನಪರ ಹೋರಾಟಗಾರರಾಗಿ ನಿಂತ ಬಸವಣ್ಣನವರ ಚಿಂತನೆಗಳು ಇಂದಿಗೂ ಎಂದೆಂದಿಗೂ ಪ್ರಸ್ತುತ ಎನಿಸುವಂಥ ಗುಣಾತ್ಮಕ ತತ್ತ್ವಗಳಾಗಿವೆ.

ಧರ್ಮದ ಹೆಸರಿನಲ್ಲಿ ನುಚ್ಚುನೂರಿಯಾಗಿದ್ದ ಜನಪದ ಸಮುದಾಯವನ್ನು ಒಂದೇ ತೆಂಡೆಗೆ ತರಬೇಕೆಂಬ ವಿಶ್ವಮಾನವ ತತ್ತ್ವದ ಕಲ್ಪನೆ ಆ ಕಾಲಕ್ಕೆ ಮೂಡಿತೆಂಬುದು ಒಂದು ಸೋಜಿಗದ ಸಂಗತಿ. ಏಕೆಂದರೆ ಶರಣಧರ್ಮ ಈ ನೆಲದ ವ್ಯಕ್ತಿಯಿಂದ ಈ ನೆಲದ ಭಾಷೆಯಲ್ಲಿ ಈ ನೆಲದ ಜನರಿಗಾಗಿ ರೂಪುಗೊಂಡಂತೆ ಕಂಡರೂ ಅದರ ತತ್ತ್ವಗಳು ಔದಾರ್ಯಪೂರ್ಣವಾದ ಮಾತೃಹೃದಯದ ಮಾನವತಾಧರ್ಮ. ಆ ಕಾರಣದಿಂದ ಅದು ಸಮಾಜದ ಎಲ್ಲ ವರ್ಗದವರನ್ನೂ ತನ್ನ ಮಕ್ಕಳೆಂದು ಅಕ್ಕರೆಯಿಂದ ಅಪ್ಪಿಕೊಂಡಿತು.

ದುಡಿಮೆಯಲ್ಲಿ ದೇವರನ್ನು ಕಾಣುವ 'ಕಾಯಕವೇ ಕೈಲಾಸ' ಎಂಬ ಘನತತ್ತ್ವ, ಸ್ವಾಸ್ಥ್ಯ ಸಮಾಜ ನಿರ್ಮಾಣದ ಆಧಾರಸ್ತಂಭ ಎಂಬುದನ್ನು ಸಾರಿದ ಕಾಯಕ ಮಹತ್ವ ನಿರೂಪಕರಾಗಿಯೂ ಬಸವಣ್ಣನವರು ಕಾಣಿಸಿಕೊಳ್ಳುತ್ತಾರೆ. ಅವರು ಪ್ರಾಮಾಣಿಕ ಅಧಿಕಾರಿಯಾಗಿದ್ದಂತೆ ಸಂಘಟನಾ ಚತುರರೂ ಆಗಿದ್ದು ಅವರ ಅದಮ್ಯ ಉತ್ಸಾಹ, ಅಪಾರ ವಿಶ್ವಾಸ, ಅರ್ಪಣಾ ಮನೋಭಾವಗಳ ಮಹಾಸ್ರೋತದಲ್ಲಿ ಅಂತರ್ಜಾತಿ ವಿವಾಹದ ಮೂಲಕ ಜಾತಿ ವಿನಾಶದ ಪಾಯ್‌ಪೆಂಜನ್ನು ಎತ್ತಿಹಿಡಿದ ಸರ್ವೋದಯ ಸಾಧಕರೂ ಸಮಾನತಾವಾದಿಯೂ ಸಮಾಜ ಸುಧಾರಕರೂ ಆದ ಬಸವಣ್ಣನವರು ಒಂದು ಮಹಾಬೆರಗು ! ೨೦ನೇ ಶತಮಾನದಲ್ಲೂ "ಚಿ: ಪೆಣ್ಗೆ ಮಂತ್ರೋಪದೇಶಮಕ್ಕುಮೆ?" ಎಂದು ಪ್ರಶ್ನಿಸುತ್ತಿರುವಾಗ ೧೨ನೇ ಶತಮಾನದಷ್ಟು ಹಿಂದೆಯೇ ಲಿಂಗತಾರತಮ್ಯವನ್ನೆಣಿಸದೆ ಸ್ತ್ರೀಯರಿಗೆ ಧರ್ಮದೀಕ್ಷೆಯನಿತ್ತು ಅನುಭವ ಮಂಟಪದಲ್ಲಿ ಕುಳಿತು ಧಾರ್ಮಿಕ ವಿಚಾರಗಳನ್ನು ಕುರಿತು ಚರ್ಚೆ ಮಾಡುವಷ್ಟು ಸ್ವಾತಂತ್ರ್ಯವಿತ್ತಿದ್ದ ಏಕಮೇವ ಧರ್ಮವೆಂದರೆ ಅದು ಶರಣಧರ್ಮ. ಹೀಗೆ ಬಸವಣ್ಣನವರು ಸ್ತ್ರೀಸ್ವಾತಂತ್ರ್ಯದ ಹರಿಕಾರರಾಗಿಯೂ ಕಾಣಿಸಿಕೊಳ್ಳುತ್ತಾರೆ.

ಈ ಎಲ್ಲದಕ್ಕೂ ಬಸವಣ್ಣನವರ ನಾಯಕತ್ವ ಹಿನ್ನೆಲೆಯಾಗಿದ್ದರೂ ಅವರಿಗಿಂತಲೂ ಹಿಂದೆಯೇ ಈ ಶರಣಧರ್ಮ ರೂಪುಗೊಳ್ಳುತ್ತಿತ್ತು. ಬಸವಣ್ಣನವರ ಪ್ರವೇಶದಿಂದ ಶರಣಧರ್ಮದ ಕಲ್ಪನೆಗೆ ಒಂದು ಮಹಾಮಾರ್ಗ ಸಿದ್ಧವಾಯಿತು. ಬ್ರಾಹ್ಮಣ ಮೊದಲಾಗಿ ಅಂತ್ಯಜ ಕಡೆಯಾಗಿ ಎಲ್ಲರನ್ನೂ ಒಂದೇ ಎಂದು ಹೇಳುವ - ಹೇಳಿ ಜಯಿಸುವ - ಸಾಮರ್ಥ್ಯ ಆ ಕಾಲಕ್ಕೆ ಬ್ರಾಹ್ಮಣನೇ ಆಗಿದ್ದ ಬಸವಣ್ಣನವರಿಗಲ್ಲದೆ ಬೇರೆ ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಬಸವಣ್ಣನವರ ನಾಯಕತ್ವವನ್ನು ಒಪ್ಪುವುದಕ್ಕೂ ನಾಡವರ ಮನಸ್ಸು ೬೩ ಜನ ಶಿವಶರಣರ ಚರಿತ್ರೆಗಳ ಹಿನ್ನೆಲೆಯಲ್ಲಿ ಹದವಾಗಿತ್ತು. ಈ ಹದವಾದ ಭೂಮಿಯಲ್ಲಿ ಬಸವಣ್ಣನವರು ಕೇವಲ ವಚನಕಾರರಾಗದೆ, ಕೇವಲ ಭಂಡಾರ ಪಾಲಕರಾಗದೆ, ಕೇವಲ ಪ್ರಧಾನಿಯಾಗದೆ - ಈ ಎಲ್ಲವನ್ನೂ ಮೀರಿದ ವಿಕ್ರಾಂತ ಚೈತನ್ಯದ ಬಿತ್ತುಗಳನ್ನು ಬಿತ್ತಿ ವಿಶ್ವದ ಉದ್ದಗಲಕ್ಕೂ ಮಾನವತಾ ಮಹಾವೃಕ್ಷವನ್ನು ಬೆಳೆದು ಸೌಹಾರ್ದ ಸತ್ಫಲಗಳನ್ನು ಕೊಡುವಂತೆ ಮಾಡಿದವರು. ಎಲ್ಲರಿಗೂ ಎಟಕುತ್ತಿದ್ದ ಈ ವೃಕ್ಷದ ಆಸರಲ್ಲಿ ನಮ್ಮ ಜನಪದರು ಪಡೆದುಕೊಂಡು ಉಳಿಸಿಕೊಂಡು ಬಂದವುಗಳು ಈ ಶರಣಕಾವ್ಯಗಳು. ಈ ಕಾವ್ಯಗಳಲ್ಲಿ ಜನಪದರ ಭಕ್ತಿ ತನ್ಮಯತೆಗಳಿವೆ ; ಧಾರ್ಮಿಕ ಶ್ರದ್ಧೆಯಿದೆ ; ಅಡಗಿಸಿಟ್ಟಿರುವ ಇತಿಹಾಸವಿದೆ ; ಎಲ್ಲಕ್ಕೂ ಹೆಚ್ಚಾಗಿ ಗಾಯನ ಮತ್ತು ಕಥನಕಲೆಗಳು ಮೇಳವಿಸಿವೆ. ಇಂಥ ಅಮರ ಕವಿಗಳು ತಮ್ಮ ಅಮೃತ ಕಾವ್ಯಗಳನ್ನು ನಾನು ಕೇಳಿಕೊಂಡಾಗ ಹಾಡಿ ಉಪಕರಿಸಿದ್ದಾರೆ. ಮೊದಲಿಗೆ ಆ ಗಾಯನ ತಪಸ್ವಿಗಳನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಇಂಥ ಜನಪದ ಕಾವ್ಯಗಳನ್ನು ೧೯೭೧ನೇ ಇಸವಿಯಿಂದ ಸಂಗ್ರಹಿಸಿ ರಾಶಿ ಮಾಡಿಕೊಂಡಿದ್ದರೂ ಪ್ರಕಟಿಸಲು ಸಾಧ್ಯವಾಗದ ನಿರಾಶೆಯಲ್ಲಿದ್ದೆ. ಅಂಥ ಸಂದರ್ಭದಲ್ಲಿ ಸಾಹಿತ್ಯ ಅಕಾಡೆಮಿ ಕುಲಸಚಿವರಾದ ಸನ್ಮಿತ್ರ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿಯವರು ಆಶಾಕಿರಣವಾಗಿ ಬಂದರು. ಅವರು ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯನವರ ಬಳಿಗೆ ನನ್ನನ್ನು ಕರೆದುಕೊಂಡು ಹೋಗಿ ಈ ಶರಣಕಾವ್ಯಗಳ ಬಗೆಗೆ ಮಾತಾಡಿದರು. ಸಿದ್ಧಲಿಂಗಯ್ಯನವರಾದರೊ ಕುಂತಲ್ಲೆ ಥಟ್ಟನೆ ಒಪ್ಪಿಗೆಯಿತ್ತು ನನ್ನನ್ನು ದಿಙ್ಮೂಢನನ್ನಾಗಿ ಮಾಡಿದರು. ಈ ಔದಾರ್ಯದ ಮೇರುಗಳಿಂದ ಜನಪದ ಶರಣ ಕಾವ್ಯಗಳು ಬೆಳಕಿಗೆ ಬರುತ್ತಿರುವುದಕ್ಕಾಗಿ ಈ ಇಬ್ಬರನ್ನೂ ಕೃತಜ್ಞತೆಯಿಂದ ಹೃದಯ ತುಂಬಿ ವಂದಿಸುತ್ತೇನೆ. ಈ ಸಂಗ್ರಹದ ಹಸ್ತಪ್ರತಿಯನ್ನು ನೋಡಿ ಇವು ಶೀಘ್ರವಾಗಿ ಪ್ರಕಟವಾಗುವ ಅಗತ್ಯವಿದೆ ಎಂದು ನೆರವಾದ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿಯವರು ಜಾನಪದ ಅಕಾಡೆಮಿ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪನವರು ಹಾಗೂ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಂ.ಎಚ್. ಕೃಷ್ಣಯ್ಯನವರನ್ನು ಅಭಿಮಾನ ಪೂರ್ವಕವಾಗಿ ವಂದಿಸುತ್ತೇನೆ.

'ಯುಗಸಂಧ್ಯಾ' ಮಹಾಕವಿ ಪ್ರೊ. ಸುಜನಾ ಅವರು ನಾವು ಮಹಾರಾಜ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾಗ ನಮ್ಮನ್ನೆಲ್ಲ ಅಕ್ಕರೆಯಿಂದ ಬೆಳೆಸಿದವರು. ವಿದ್ಯಾರ್ಥಿದೆಸೆಯ ನನ್ನ ಕವನಗಳನ್ನು ತಿದ್ದಿ ಪ್ರಕಟಿಸಲು ಅನುವು ಮಾಡಿದವರು. ನನ್ನ ಕವನ ಸಂಕಲನ 'ಮಾನವದೀಪ್ತಿ'ಯನ್ನು ನಮ್ಮೂರಿಗೆ ಬಂದು ಬಿಡುಗಡೆ ಮಾಡಿ ಹರಿಸಿದವರು. ಆದರ್ಶ ಅಧ್ಯಾಪಕರೆನಿಸಿಕೊಂಡಿದ್ದ ಅವರ ಬದುಕನ್ನು ನಾವು ಅನುಸರಿಸಲು ಪ್ರಯತ್ನಿಸಿದವರು. ಅಂಥ ಗುರುವಿಗೆ ಈ ಶರಣಕಾವ್ಯಗಳ ಅರ್ಪಣೆ ಸೂರ್ಯನಿಗೆ ಬೆಳಗಿದ ಸೊಡರು!

ನನ್ನ ಪ್ರಿಯಗುರುಗಳಾದ ಪ್ರೊ. ರಾಗೌ ಅವರು ಆತ್ಮೀಯರಾದ ಶ್ರೀ ಟಿ. ತಿಮ್ಮೇಗೌಡರು ಮತ್ತು ಡಾ. ಡಿ. ತಿಮ್ಮಯ್ಯನವರು, ಶ್ರೀ ಅ. ದೇವೇಗೌಡರು 'ಜನಪದ ಶರಣ ಕಾವ್ಯಗಳ' ಕೃತಿ, ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗುತ್ತಿದೆ ಎಂದಾಗ ಸಂತೋಷಪಟ್ಟು ಅಭಿಮಾನದಿಂದ ಆಶೀರ್ವದಿಸಿದ್ದಾರೆ. ನಾನು ಪ್ರಸ್ತಾವನೆಯನ್ನು ಬರೆಯುವಾಗ ಗೆಳೆಯ ಪ್ರೊ. ಮೈಸೂರು ಕೃಷ್ಣಮೂರ್ತಿಯವರು ಹೆಜ್ಜೆಹೆಜ್ಜೆಗೂ ನೆರವಾಗಿದ್ದಾರೆ; ಅವರ ಉಪಕಾರವನ್ನು ಎಷ್ಟು ಹೇಳಿದರೂ ಕಡಿಮೆಯೆ. ಈ ಕಾವ್ಯಗಳನ್ನು ಸಂಗ್ರಹಿಸುವಾಗ ಹಸ್ತಪ್ರತಿಗಳನ್ನು ಸಿದ್ಧಪಡಿಸುವಾಗ, ಮುದ್ರಣ ಕಾರ್ಯದ ಪ್ರತಿ ಹಂತದಲ್ಲೂ ಸಹಾಯಕ್ಕೆ ನಿಂತ ನನ್ನ ಬಳಗ ದೊಡ್ಡದು. ಅವರಲ್ಲಿ ಕೆಲವರನ್ನಾದರೂ ಕೃತಜ್ಞತೆಯಿಂದ ನೆನೆಯಲೇಬೇಕು. ಡಾ. ಬಿ.ಎಸ್. ತಲ್ವಾಡಿ, ಡಾ. ಚಿಕ್ಕಮಾದು, ಎರೇಗೌಡನಹಳ್ಳಿ, ಎನ್. ಜಗದೀಶ್, ಬಿ.ವಿ. ಉಮಾಕಾಂತ, ತಲಕಾಡು ನಾಗರಾಜಮೂರ್ತಿ, ದಡದಹಳ್ಳಿ ಬ್ರಹ್ಮದೇವ, ಡಿ. ಕಿತ್ತೂರು ಸತೀಶ್, ಗೊರಳ್ಳಿ ಜಗದೀಶ್, ಗೋಪಾಲ ಕಂಪಲಾಪುರ, ಚಿಕ್ಕಮಳಲಿ ಆರ್., ಮಹದೇವ, ಡಿ.ಎಂ. ಅಭಿಲಾಷ್, ಮಹಾಜನ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ, ಡಾ. ತಿಮ್ಮೇಗೌಡ, ಎಚ್.ಎಲ್. ಮೋಹನ್‌ರಾಜ್, ಮೈಸೂರು ಉಮೇಶ್, ಎಂ. ಶೇಖರಶೆಟ್ಟಿ, ದಡದಕಲ್ಲಹಳ್ಳಿ ಶಂಭುಲಿಂಗಶೆಟ್ಟಿ, ಕೋಗಿಲವಾಡಿ ಬಿ. ರಾಜು, ಪ್ರೊ. ಹೆಚ್.ಆರ್. ಸಿದ್ದೇಗೌಡ, ಕಣಗಾಲ್ ವಿಶ್ವನಾಥ್, ಡಾ. ಸಿ.ಡಿ. ವೆಂಕಟೇಶ್, ಪಣ್ಣೇದೊಡ್ಡಿ ಆನಂದ್, ಸಿ.ಎಚ್. ಪುಟ್ಟರಾಜು, ಸಿ.ಎಚ್. ಕೃಷ್ಣಪ್ಪ, ಆರ್. ಗುರುಸ್ವಾಮಿ, ಡಾ. ಡಿ. ಸತೀಶ್‌ಚಂದ್ರ, ಡಾ. ವೈ.ಡಿ. ರಾಜಣ್ಣ, ನನ್ನ ಸಹೋದರ ಪಿ.ಕೆ. ವಾಸು, ಸೋದರಮಾವ ದಿವಂಗತ ಪಿ.ಎಸ್. ಕೆಂಪೇಗೌಡ ಅವರುಗಳು, ಈ ಕಾವ್ಯಗಳನ್ನು ಹಾಡಿದ ಗಾಯಕರುಗಳು, ಅಂದವಾದ ರಕ್ಷಾಪತ್ರವನ್ನು ಸಿದ್ಧಪಡಿಸಿಕೊಟ್ಟ ನಾಡಿನ ಸುಪ್ರಸಿದ್ಧ ಕಲಾವಿದ ವಿಸ್ಮಯದ ಪ್ರಕಾಶ್ ಚಿಕ್ಕಪಾಳ್ಯ ಹಾಗೂ ಲಾವಣ್ಯ ಮುದ್ರಣದ ಶ್ರೀಮತಿ ಸುಮಾ ಅವರು ಈ ಎಲ್ಲರನ್ನೂ ಕೃತಜ್ಞತಾಪೂರ್ವಕವಾಗಿ ನೆನೆಯುತ್ತ ಪ್ರೀತಿ ಪೂರ್ವಕವಾಗಿ ವಂದಿಸುತ್ತೇನೆ.

ಮೈಸೂರು
ದಿನಾಂಕ : ೧೬.೦೫.೨೦೧೦
ಬಸವ ಜಯಂತಿ

–ಡಾ. ಪಿ. ಕೆ. ರಾಜಶೇಖರ

ಪರಿವಿಡಿ

I ಅಧ್ಯಕ್ಷರ ನುಡಿ

II ನೆರವಾದವರ ನೆನೆದು ನಮಿಸುವೆನು

III ಪ್ರಸ್ತಾವನೆ

೧. ಶರಣಧರ್ಮ / ೧೧

೨. ಶರಣರ ಕಥೆಗಳು : ಉತ್ತರದಿಂದ ದಕ್ಷಿಣದ ಕಡೆಗೆ / ೧೪

೩. ಜನಪದ ಶರಣಕಾವ್ಯಗಳು / XVII

೪. ನಮ್ಮ ಗಾಯಕರು / XCI

IV. ಜನಪದ ಶರಣ ಕಾವ್ಯಗಳು - ಭಾಗ : ಒಂದು

೧. ಆದಿಬಸವೇಶ್ವರ / ೩

೨. ಕಲ್ಯಾಣದಣ್ಣ ಬಸವಣ್ಣ / ೧೧

೩. ಊಳ್ಪೆಯ ಶರಣರು / ೧೯

೪. ಘನಶರಣ ಹರಳಯ್ಯ / ೨೫

೫. ತುರುಕರ ಪೀರಣ್ಣ / ೪೯

೬. ನುಲುಗೆ ಚಂದಯ್ಯ / ೫೬

೭. ಸತ್ಯಶರಣೆ ಶಿವನಾಗಮ್ಮ/೫೮

೮. ಗಟ್ಟಿವಾಳಯ್ಯ / ೬೧

೯. ಲಕ್ಕನಾಗಮ್ಮ / ೬೮

೧೦. ಮಡಿವಾಳ ಮಾಚಪ್ಪ / ೧೨೪

೧೧. ಹೊಲೇರ ಹೊನ್ನಯ್ಯ-೧ / ೧೩೭

೧೨. ಹೊಲೇರ ಹೊನ್ನಯ್ಯ-೨ / ೧೫೨

೧೩. ಕಗ್ಗುಂಡಿ ಪರಂಜ್ಯೋತಿ ಹರಳಯ್ಯ / ೧೬೧

೧೪. ಕುಂಬಾರ ಗುಂಡಯ್ಯ-೧ / ೧೬೭

೧೫. ಕುಂಬಾರ ಗುಂಡಯ್ಯ-೨ / ೧೯೧

೧೬. ಕುಂಬಾರ ಗುಂಡಯ್ಯ-೩ / ೧೯೮

೧೭. ಒಕ್ಕಲಿಗರ ಮುದ್ದೇಗೌಡ / ೨೦೫

೧೮. ಕುರುಬರ ಬೀರಪ್ಪ / ೨೧೫

೧೯. ಸಿದ್ಧರಾಮೇಶ್ವರ / ೨೧೯

೨೦. ಗಾಣಿಗರ ಕಲ್ಲಯ್ಯ / ೨೪೪

೨೧. ಅಕ್ಕಮಾದೇವಿ / ೨೪೯

V. ಜನಪದ ಶರಣ ಕಾವ್ಯಗಳು-ಭಾಗ : ಎರಡು

೨೨. ಕರಪಾಲ ಬಸವಪುರಾಣ / ೨೫೯

VI. ಜನಪದ ಶರಣಕಾವ್ಯಗಳು-ಭಾಗ : ಮೂರು

೨೩. ಮೈದಾಳ ರಾಮಣ್ಣ / ೩೬೧

೨೪. ಗುಂಡು ಬ್ರಹ್ಮಯ್ಯ / ೪೧೬

೨೫. ಹೇಮರೆಡ್ಡಿ ಮಲ್ಲಮ್ಮ / ೪೬೦

೨೬. ಮಾದಾರ ಚನ್ನಯ್ಯ / ೪೭೬

೨೭. ಬಲ್ಲಾಳರಾಯ / ೪೮೨

೨೮. ಜಗಜ್ಯೋತಿ ಬಸವೇಶ್ವರ ಲಾವಣಿ / ೪೯೧

VII. ಅರ್ಥಕೋಶ / ೪೯೫

ಜನಪದ ಶರಣಕಾವ್ಯಗಳು : ಪ್ರಸ್ತಾವನೆ

೧. ಶರಣಧರ್ಮ

ಭಾರತವನ್ನು ಆರ್ಯರು ಪ್ರವೇಶಿಸುವುದಕ್ಕೂ ಪೂರ್ವದಲ್ಲಿ ಶಿವನು ದ್ರಾವಿಡರ ಆರಾಧ್ಯದೈವವಾಗಿದ್ದನೆಂಬುದು ಇತಿಹಾಸ. ಶಿವನ ಅಥವಾ ರುದ್ರನ ಆರಾಧನೆ ವೇದ (ಯಜುರ್‌ವೇದ) ಉಪನಿಷತ್ತು (ಅರಣ್ಯಕೋಪನಿಷತ್ತು)ಗಳ ಕಾಲದಿಂದಲೂ ನಡೆದುಕೊಂಡು ಬಂದಿದೆ. ವಿಷ್ಣುಪುರಾಣದಲ್ಲಿ ಶಿವನು ಉದ್ಭವವಾದ ಬಗೆಗೆ ವಿವರಗಳಿರುವುದಲ್ಲದೆ ಶಿವಪರವಾದ ಅನೇಕ ಪುರಾಣಗಳು ಸಂಸ್ಕೃತ ಭಾಷೆಯಲ್ಲಿವೆ. ರಾಮಾಯಣದಲ್ಲಿ ರಾವಣನು ಶಿವನ ಪರಮಭಕ್ತ. ಶ್ರೀರಾಮನು ಶಿವಲಿಂಗವನ್ನು ಪ್ರತಿಷ್ಠಾಪಿಸಿ ಪೂಜಿಸಿದ ಕಥೆಗಳಿಗೂ ಕೊರತೆಯಿಲ್ಲ. ಮಹಾಭಾರತದಲ್ಲಿ ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದ ಪ್ರಸಂಗ ಪ್ರಸಿದ್ಧವಾಗಿದೆ. ಶಿವನ ಕಥೆ ಮಹಾಕವಿಗಳನ್ನೂ ಆಕರ್ಷಿಸಿತ್ತೆಂಬುದಕ್ಕೆ ಕಾಳಿದಾಸನ 'ಕುಮಾರಸಂಭವ' ಒಂದು ಉತ್ತಮ ನಿದರ್ಶನವಾಗಿದೆ. ಹೀಗೆ ಶೈವಧರ್ಮ ಭಾರತದಾದ್ಯಂತವಿದ್ದು ಕಾಲಾನುಕ್ರಮದಲ್ಲಿ ಬೇರೆ ಬೇರೆ ಶೈವಪಂಥಗಳು ರೂಪುಗೊಂಡಂತೆ ಕಾಣುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪಾಶುಪತ, ಲಕುಲೀಶ, ಕಾಪಾಲಿ ಮತ್ತು ಕಾಳಾಮುಖಿಗಳೆಂಬ ಪಂಥಗಳು. ಶಿವನ ಅರ್ಚನಾ ವಿಧಾನದಲ್ಲಿ ಈ ಎಲ್ಲ ಪಂಥಗಳಲ್ಲಿದ್ದ ವೈರುದ್ಧ್ಯ ಮತ್ತು ವೈಪರೀತ್ಯಗಳನ್ನು ನಿವಾರಿಸಿ ಈಶ್ವರನನ್ನು 'ಸತ್ಯಂ ಶಿವಂ ಸುಂದರಂ' ಎಂಬುದಾಗಿ ಕಂಡ ಧರ್ಮ ಕರ್ನಾಟಕದ ಶರಣಧರ್ಮ.

ವೈದಿಕಧರ್ಮದ ಚಾತುರ್ವರ್ಣಗಳ ಚಕ್ರವ್ಯೂಹದಲ್ಲಿ ಸಿಕ್ಕಿಕೊಂಡ ಸಾಮಾನ್ಯ ಜನರಿಗೆ ಬೌದ್ಧ, ಜೈನಧರ್ಮಗಳು ನೆಮ್ಮದಿಯ ಬದುಕನ್ನು ಸಾರ್ಥಕ ನೆಲೆಯಲ್ಲಿ ರೂಪಿಸಿಕೊಡಲು ಪ್ರಾಯೋಗಿಕವಾಗಿ ವಿಫಲವಾಗಿದ್ದ ಸಂದರ್ಭದಲ್ಲಿ ದಕ್ಷಿಣಭಾರತದ ತಮಿಳುನಾಡಿನಲ್ಲಿ ಮೇಲು-ಕೀಳೆಂಬ ಪಕ್ಷಪಾತವಿಲ್ಲದೆ, ಹೆಣ್ಣು-ಗಂಡೆಂಬ ಲಿಂಗತಾರತಮ್ಯವಿಲ್ಲದೆ, ಬಡವ-ಬಲ್ಲಿದನೆಂಬ ಭೇದವಿಲ್ಲದೆ, ವರ್ಣ-ವರ್ಗಗಳ ವೈಷಮ್ಯವಿಲ್ಲದೆ, ಜಾತಿ-ಮತಗಳ ಜೀವವಿರೋಧಿ ಧೋರಣೆಯಿಲ್ಲದೆ ಯಾರು ಬೇಕಾದರೂ ತಮ್ಮ ನಿಶ್ಚಲಭಕ್ತಿಯಿಂದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಬಹುದೆಂಬ ಹೆಗ್ಗಳಿಕೆಗೆ ೬೩ ಜನ ಶಿವಭಕ್ತರು ಸಾಕ್ಷಿಯಾಗಿದ್ದರು. ಈ ಸತ್ವಶಾಲಿ ತತ್ತ್ವ ದಕ್ಷಿಣ ಭಾರತವನ್ನೆಲ್ಲ ತುಂಬಿಕೊಳ್ಳುತ್ತಿರುವ ಹೊತ್ತಿನಲ್ಲಿ "ಕರ್ನಾಟಕದಲ್ಲಿ ಸಮಾಜಕ್ಕೆ ಬಂದಳಿಕೆಯಂತೆ ಅಂಟಿಕೊಂಡು ಬಂದಿದ್ದ ಅಂಧಶ್ರದ್ಧೆಯ ಕೊಳೆಯು ಹಬ್ಬಿತ್ತು. ಧರ್ಮವೆನ್ನುವುದು ಉಕ್ಕಿನ ಕೋಟೆಯಂತಾಗಿ ಸಮಾಜ ಹೋಳು ಹೋಳಾಗಿತ್ತು. ಇಂತಹ ಬಂಧನಗಳನ್ನೊಡೆದು ಪರಿಶುದ್ಧವಾದ ಧರ್ಮದ ಫಲಗಳನ್ನು ಉಣಬಡಿಸಬಲ್ಲ ಮಹಾತ್ಮರ ಬರವನ್ನು ಸಾಮಾನ್ಯ ಜನತೆ ಕಾದು ಕುಳಿತಿತ್ತು. ಆಗ ಕನ್ನಡ ನಾಡಿನ ಜನಜೀವನದ ಕತ್ತಲೆಯಲ್ಲಿ ಬೆಳಕು ಮೂಡಿದಂತೆ ಬಸವೇಶ್ವರನ ಉದಯವಾಯಿತು."[1]

ಬಸವಣ್ಣನವರ ನಾಯಕತ್ವದಲ್ಲಿ ನಡೆದ ಶರಣರ ಕ್ರಾಂತಿಯು ಭಾರತ ಹಿಂದೆಂದೂ ಕಾಣದಿದ್ದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪರಿವರ್ತನೆಗೆ ಹೆದ್ದಾರಿಯನ್ನು ನಿರ್ಮಿಸಿತು. ನಮ್ಮ ಶರಣರ ಚಳವಳಿ ತಮಿಳುನಾಡಿನ ಶಿವಭಕ್ತರಿಂದ ಪ್ರೇರಿತವಾದರೂ ಅದನ್ನೂ ಮೀರಿದ ದಿಟ್ಟ ಹೆಜ್ಜೆಗಳನ್ನಿಟ್ಟು, ಅದಕ್ಕಿಂತಲೂ ಅತಿಶಯವಾದ ಸಾಧನೆಗೆ ಕಾರಣ ವಾಯಿತು ; ಮಹೋನ್ನತ ಶಕ್ತಿಯಾಗಿ ಆವಿರ್ಭವಿಸಿತು.

ಪ್ರತಿಯೊಬ್ಬರೂ ದುಡಿಯಲೇಬೇಕು, ದುಡಿಯದೆ ತಿನ್ನುವವನು ಕಳ್ಳ ಎಂದು ಹೇಳುವ 'ಕಾಯಕವೇ ಕೈಲಾಸ' ಎಂದು ಸಾರುವ ಕಾಯಕ ತತ್ತ್ವ -

ಕಾಯಕದಿಂದ ಸಂಪಾದಿಸಿದುದನ್ನು ಸಂಗ್ರಹಿಸಿಟ್ಟುಕೊಳ್ಳದೆ ಅಂದಂದಿನ ಸಂಪಾದನೆಯನ್ನು ಅಂದಂದೇ ಗುರು ಲಿಂಗ ಜಂಗಮರ ದಾಸೋಹಕ್ಕೆ ವಿನಿಯೋಗಿಸುವುದರಿಂದ ಆರ್ಥಿಕ ಅಸಮಾನತೆಯನ್ನು ತೊಡೆಯುವ ವಿಕೇಂದ್ರೀಕರಣ ತತ್ತ್ವ -

'ಬ್ರಾಹ್ಮಣ ಮೊದಲಾಗಿ ಅಂತ್ಯಜ ಕಡೆಯಾಗಿ ಎಲ್ಲರೂ ಒಂದೆ', 'ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ', 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವವರೆ ಕುಲಜರು' ಎಂಬ ಸಿದ್ಧಾಂತದಿಂದ ಜಾತಿವಿನಾಶಕ್ಕೆ ನಿರ್ಮಿಸಿದ ಮಹಾಮಾರ್ಗ -

---

1. ಡಾ.ಎಚ್. ತಿಪ್ಪೇರುದ್ರಸ್ವಾಮಿ : ಶರಣರ ಅನುಭವ ಸಾಹಿತ್ಯ. ಡಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು. ೧೯೬೩. ಪು.೫.

ಸ್ತ್ರೀಯರಿಗೆ ಶಿಷ್ಟಧರ್ಮವೇ ಕೊಡದಿದ್ದ ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರಪಂಚದಲ್ಲಿ ಮೊತ್ತಮೊದಲಿಗೆ ಕೊಟ್ಟು, ಆಕೆ ಪುರುಷನಿಗೆ ಸಮಾನಳು, 'ಮೊಲೆ ಮೂಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ.', 'ಹೆಣ್ಣು ಮಾಯೆ ಅಲ್ಲ.', 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂದು ಹೇಳಿ ಹೆಣ್ಣಿಗೆ ಧರ್ಮದೀಕ್ಷೆಯನ್ನು ಕೊಟ್ಟು, ವಿದ್ಯೆಯನ್ನು ನೀಡಿ, ವಚನರಚನೆ ಮಾಡಿ ಹಾಡಿ ಧರ್ಮಪ್ರಸಾರ ಮಾಡುವ ಅವಕಾಶ ಕಲ್ಪಿಸಿ ಲಿಂಗತಾರತಮ್ಯವನ್ನು ಕೊನೆಗಾಣಿಸಿದ ಅನನ್ಯ ಸಿದ್ಧಿ -

ರಾಜನಾಗಲಿ ಪ್ರಜೆಯಾಗಲಿ ಯಾರೂ ಮೇಲಲ್ಲ ಯಾರೂ ಕೀಳಲ್ಲ ಎಂಬ ಸಮಾನತಾವಾದವನ್ನೂ ಸಾಮಾಜಿಕ ನ್ಯಾಯವನ್ನು ಸಾರಿದ ಸ್ಥೈರ್ಯ -

ಈ ಎಲ್ಲವೂ ಶರಣ ಚಳವಳಿಯನ್ನು ಗಟ್ಟಿಗೊಳಿಸಿದವು.

ಹೀಗೆ ಶರಣಧರ್ಮ ತನ ಉತ್ಕರ್ಷ ಸ್ಥಿತಿಯಲ್ಲಿರುವಾಗ ಇದರಲ್ಲಿ 'ವೀರಶೈವ' ಯಾವಾಗ ಬಂದು ಸೇರಿಕೊಂಡಿತು ಎಂಬುದು ಅಸ್ಪಷ್ಟವಾಗಿದೆ. ಶರಣ ಚಳವಳಿಯ ಪೂರ್ವದಲ್ಲೆ ವೀರಶೈವ ಇತ್ತು ಎಂಬುದು ಒಂದು ವಾದವಾದರೆ ಬಸವಣ್ಣನವರ ಅನಂತರದಲ್ಲಿ ಶರಣಧರ್ಮ 'ವೀರಶೈವ'ವಾಗಿ ಪರಿವರ್ತನೆ ಹೊಂದಿತೆಂಬುದು ಮತ್ತೊಂದು ವಾದ.

ಜನಪದ ನಿರುಕ್ತಿಯಲ್ಲಿ ವೀರಶೈವ ಪದಕ್ಕೆ ಕರಪಾಲ ತಿಮ್ಮಪ್ಪನವರು ಕೊಡುವ ವಿವರಣೆ ಹೀಗಿದೆ :

ಮಾದಾರ ಹರಳಯ್ಯನ ಮಗನಿಗೆ ಬ್ರಾಹ್ಮಣ ಮಧುವರಸನ ಮಗಳನ್ನು ಕೊಟ್ಟು ಲಗ್ನ ಮಾಡಿದ ಪ್ರಸಂಗ ಸವರ್ಣೀಯರ ಅಸಮಾಧಾನಕ್ಕೆ ಕಾರಣವಾಯಿತು. ವರ್ಣಸಂಕರ ಆರೋಪಕ್ಕೆ ಗುರಿಯಾದ ಹರಳಯ್ಯ - ಮಧುವರಸರಿಗೆ ಎಳೆಹೂಟೆ ಶಿಕ್ಷೆಯನ್ನು ವಿಧಿಸಲಾಯಿತು. ಇದರಿಂದ ಕುಪಿತರಾದ ಜಗದೇವ ಮತ್ತು ಮಲ್ಲಿಬೊಮ್ಮಣ್ಣ ಎಂಬವರು ಸಮಯ ಸಾಧಿಸಿ ಬಿಜ್ಜಳನನ್ನು ಕೊಂದು ಹಾಕಿದರು. ಇದರಿಂದ ಇಡೀ ಕಲ್ಯಾಣಪಟ್ಟಣವೆ ಅಲ್ಲೋಲಕಲ್ಲೋಲವಾಯಿತು. ಸಾಮಾನ್ಯ ಪ್ರಜೆಗಳಿಂದ ರಾಜನ ಕೊಲೆಯಾಗುವುದೆಂದರೆ ಅದೇನು ಸಣ್ಣಪುಟ್ಟ ಘಟನೆಯೆ ? ಬಿಜ್ಜಳನ ಕಡೆಯವರ ರಕ್ತ ಕುದಿದು ಹೋಯಿತು. ಆಗ ಶರಣರನ್ನು ಕಂಡ ಕಂಡ ಕಡೆಯಲ್ಲೆಲ್ಲ ನಿರ್ದಯವಾಗಿ ಕೊಚ್ಚಿಹಾಕಲು ಆಜ್ಞೆ ಮಾಡಲಾಯಿತು. ಇಂಥ ಆದೇಶದ ಮೇರೆಗೆ ಎಲ್ಲೆಂದರಲ್ಲಿ ಶರಣರನ್ನು ಕತ್ತರಿಸಿ ಎಸೆಯತೊಡಗಿದರು. ಇದನ್ನು ಕಂಡ ಶರಣರು ಗಡಗಡ ನಡುಗಿದರು; ದಿಕ್ಕೆಟ್ಟು ರಕ್ಷಣೆಗಾಗಿ ಮಡಿವಾಳ ಮಾಚಿದೇವನ ಕಡೆಗೆ ಓಡಿದರು.

ಹೀಗೆ ಮೊರೆಬಿದ್ದ ಶರಣರಿಗೆ ಅಭಯವನ್ನು ಹೇಳಿದ ಮಾಚಿದೇವನು ಬಿಜ್ಜಳನ ಸೈನಿಕರನ್ನು ಕೆಕ್ಕರಿಸಿಕೊಂಡು ನೋಡುತ್ತ, ಹಲ್ಲು ಹಲ್ಲು ಕಡಿಯುತ್ತ, ಸಿಂಹದಂತೆ ಘರ್ಜಿಸುತ್ತ ರೋಷಾವೇಶದಿಂದ ಬಿಜ್ಜಳನ ಸೈನಿಕರ ಮೇಲೆ ಬಿದ್ದು, ಅವರನ್ನು ಅಟ್ಟಾಡಿಸಿಕೊಂಡು ಕೊಂದನು. ಅಲ್ಲದೆ ಗಡಗಡ ನಡುಗುತ್ತಿದ್ದ ಶರಣರನ್ನು ಕುರಿತು :

"ಶರಣರೇ, ಹೆದರಬೇಡಿ. ನಾವು ರುದ್ರನ ಮಕ್ಕಳು; ವೀರಭದ್ರನ ಒಕ್ಕಲು. ಹೆದರದೆ ಹೋರಾಡ ಬನ್ನಿ. ಹೋರಾಡುತ್ತ ಆಕಸ್ಮಿಕವಾಗಿ ಸತ್ತರೆ ಮರಣವೇ ಮಹಾನವಮಿ ಅನ್ನಿ. ಜೀವಭಯ ಬೇಡ ಶರಣರೆ. ವೀರಭದ್ರ ನಮ್ಮ ಶಿವನ ಮಗ; ದೇವತೆಗಳ ಸೇನಾಧಿಪತಿ. ಅಂಥವನ ಸಂತತಿ ನಮ್ಮದು. ನಾವು ವೀರಭದ್ರನ ಹೆಸರಿನಲ್ಲಿ ಯುದ್ಧ ಮಾಡೋಣ. ಬಿಜ್ಜಳನ ಸೈನಿಕರನ್ನು ನಿರ್ನಾಮ ಮಾಡೋಣ. ಬನ್ನಿ. ಬನ್ನಿ. 'ಜೈ ವೀರಭದ್ರ' ಎಂದು ಘೋಷಿಸುತ್ತ ನುಗ್ಗಿ ಬನ್ನಿ!" ಎಂದು ಕರೆ ನೀಡಿದ ನಂತೆ.

ಆಗ ಶರಣರೆಲ್ಲರೂ ಮಾಚಿದೇವನ ನಾಯಕತ್ವದಲ್ಲಿ ಆನೆಬಲ ಬಂದಂತಾಗಿ 'ಜೈ ವೀರಭದ್ರ' ಎಂದು ಉಗ್ಗಡಿಸುತ್ತ ಬಿಜ್ಜಳನ ಸೈನಿಕರನ್ನು ಕಂಡ ಕಂಡಲ್ಲೆಲ್ಲ ರುಂಡ ಚಂಡಾಡಿ ಕೊಂದರಂತೆ. ಇವರ ಉತ್ಸಾಹ ಧೈರ್ಯ ಸ್ಥೈರ್ಯ ಸಾಹಸಗಳನ್ನು ಕಂಡವರು :

"ಇವರು ವೀರರು; ಇವರು ಶೈವರು. ಇವರು ವೀರಭದ್ರನ ಶೈವರು. ವೀರಶೈವರು!" ಎಂದರಂತೆ. ಅಂದಿನಿಂದ ಈ ಶರಣರನ್ನು ವೀರಶೈವರು ಎಂದು ಕರೆದರಂತೆ. ಇವರ ವಿಜಯದ ಕುರುಹಾಗಿ ಅಂದಿನಿಂದ 'ವೀರಭದ್ರನ ಕುಣಿತ' ಎಂಬ ಜನಪದ ನೃತ್ಯವೂ ರೂಢಿಗೆ ಬಂದಿತಂತೆ.

ಕರಪಾಲ ತಿಮ್ಮಪ್ಪನವರು ಹೇಳಿರುವ ಈ ಕಥೆಯ ಸತ್ಯಾಸತ್ಯತೆ ಏನೇ ಇರಲಿ; ಇದು ಶರಣಧರ್ಮವು ವೀರಶೈವಧರ್ಮವಾಗಿ ಪರಿವರ್ತನೆ ಹೊಂದಿದ್ದನ್ನು ಹೇಳುತ್ತಿರುವುದಂತೂ ಸತ್ಯ. ಶರಣರಲ್ಲಿ ಕೆಲವು ಮೇಲ್ವರ್ಗದವರು ಬಸವಣ್ಣನವರ ತರುವಾಯ

ಸಂಸ್ಕೃತದ ಸೂಕ್ಷ್ಮಾಗಮ, ಸಂಪ್ರಭೇದ, ಸ್ವಾಯಂಭುವ, ವಾತಾಲ ಮುಂತಾದ ಆಗಮಗಳ ಜಾಡ್ಗನ್ನು ಹಿಡಿದು ಶರಣಧರ್ಮವನ್ನು ಕೈಬಿಟ್ಟು ವೀರಶೈವವನ್ನು ಕೈಗೆತ್ತಿಕೊಂಡರು. ಈ ಹಂತದಲ್ಲೆ ಶೂನ್ಯಸಂಪಾದನೆ, ಲಿಂಗಲೀಲಾವಿಲಾಸ, ಶಿವತತ್ತ್ವ ಚಿಂತಾಮಣಿ, ವೀರಶೈವಾಮೃತ ಮಹಾಪುರಾಣ ಮುಂತಾದ ಕನ್ನಡ ಗ್ರಂಥಗಳು ಹುಟ್ಟಿಕೊಂಡವು. ಇಲ್ಲಿಂದ ಜನಸಾಮಾನ್ಯರ ಶರಣಧರ್ಮ ಪರಿಪೂರ್ಣವಾಗಿ ಮರೆಯಾಯ್ತು. ಶಕ್ತಿವಿಶಿಷ್ಟಾದ್ವೈತ ತಾಂಡವವಾಡಿತು. ವಾಸ್ತವವಾಗಿ ಶರಣಧರ್ಮ ದೇಸೀ ದಾರಿಯಲ್ಲಿ ನಡೆದು ಬರುತ್ತಿದ್ದರೆ, ವೀರಶೈವವು ಶಿಷ್ಟವನ್ನು ಹಿಡಿದು ನಾಗಾಲೋಟದಿಂದ ಧಾವಿಸಿ ಮುನ್ನುಗ್ಗಿತು.

ಶರಣಧರ್ಮವನ್ನು ತನ್ನ ಕೃತಿಗಳಲ್ಲಿ ಸಾರುತ್ತ ಬಂದವನು ಹರಿಹರ. ಹರಿಹರನ ಪಥದಿಂದ ಚ್ಯುತನಾದ ರಾಘವಾಂಕನ ಹರಿಶ್ಚಂದ್ರ ಕಾವ್ಯ ಎಷ್ಟೇ ಶ್ರೇಷ್ಠ ಕೃತಿಯೆನಿಸಿದರೂ ಮಾತಂಗಕನ್ಯೆಯರ ಪ್ರಸಂಗದಲ್ಲಿ ಅದು ಶರಣಧರ್ಮಕ್ಕೆ ತಿಲಾಂಜಲಿಯನ್ನಿತ್ತಿತು. ಈ ಸತ್ಯ 'ಮಾದಾರ ಚನ್ನಯ್ಯನ ರಗಳೆ'ಯನ್ನು ಓದಿದ ಯಾರಿಗೂ ಢಾಳಾಗಿ ಎದ್ದುಕಾಣುತ್ತದೆ. ಈ ಕಾರಣದಿಂದಲೆ ರಾಘವಾಂಕ ಹರಿಹರನಿಂದ ಹಲ್ಲು ಮುರಿಸಿಕೊಂಡ. ಆದರೂ ಮುಂದಿನ ವೀರಶೈವ ಕವಿಗಳಿಗೆ ಹರಿಹರನಿಗಿಂತ ರಾಘವಾಂಕನ ಪಥವೇ ಮಹಾ ಮಾರ್ಗ ಎನಿಸಿತು. ಹಾಗಲ್ಲದಿದ್ದಲ್ಲಿ ಹರಿಹರನ 'ಬಸವರಾಜದೇವರ ರಗಳೆ'ಗೆ ಮುಕ್ಕಾಗುವ ದುರ್ಗತಿ ಒದಗಿಬರುತ್ತಿರಲಿಲ್ಲ.

ಹೀಗೆ ಸರ್ವರ ಸ್ವತ್ತಾಗಿದ್ದ ಶರಣಧರ್ಮ ಕಾಲಾನುಕ್ರಮದಲ್ಲಿ ವೀರಶೈವವಾಗಿ ಮಾರ್ಪಟ್ಟು, ವಿಜೃಂಭಿಸುತ್ತ ಉಳ್ಳವರ ಅಥವಾ ಬಲ್ಲಿದರ ಧರ್ಮವಾಗಿ ಪರಿವರ್ತನೆಗೊಳ್ಳುತ್ತಿದ್ದ ಸಂದರ್ಭದಲ್ಲಿ ಇದನ್ನು ಪ್ರತಿಭಟಿಸಿ ನಿಂತವರ ಗುಂಪುಗಳಿಗೆ ಮಂಟೇಸ್ವಾಮಿ ಮತ್ತು ಮಾದೇಶ್ವರರು ನಾಯಕರುಗಳಾದಂತೆ ಕಾಣುತ್ತದೆ. ಶಿವನೇ ತಮ್ಮ ಇಷ್ಟಲಿಂಗವೋ ಅಥವಾ ಆರಾಧ್ಯ ದೈವವೋ ಆಗಿದ್ದ ಶರಣಧರ್ಮದ ಮಧ್ಯೆ ವೀರಭದ್ರನ ಪ್ರವೇಶವಾದದ್ದು ಮತ್ತು ವೀರಶೈವಧರ್ಮ ಪ್ರತ್ಯಕ್ಷವಾದದ್ದೇ ಶರಣಧರ್ಮ ಒಡೆದು ಹೋಗಲು ಕಾರಣವಾಯಿತೆಂದು ಕಾಣುತ್ತದೆ. ಇಂಥ ಪರಿಸ್ಥಿತಿಯಲ್ಲಿ ಉತ್ತರದಿಂದ ದಕ್ಷಿಣದ ಕಡೆಗೆ ಮುಖ ಮಾಡಿದ ಮಾದೇಶ್ವರ - ಮಂಟೇಸ್ವಾಮಿಯವರು ವೀರಶೈವವನ್ನು ಒಪ್ಪದೆ ಸಿಡಿದು ಬಂದ ಶುದ್ಧ ಶರಣಧರ್ಮೀಯರು. ಜಾನಪದ ಜಗದ್ಗುರುಗಳಾದ ಮಾದೇಶ್ವರ ಮತ್ತು ಮಂಟೇಸ್ವಾಮಿಯವರು ತಮ್ಮ ಘನತರ ಪ್ರಭಾವದಿಂದ ಶೂದ್ರವರ್ಗದ ಎಲ್ಲ ಜಾತಿಯವರನ್ನೂ ತಮ್ಮ ತೆಕ್ಕೆಗೆ ತೆಗೆದುಕೊಂಡು ಔದಾರ್ಯಧರ್ಮದ ಒಡನಾಡಿಗಳನ್ನಾಗಿಸಿಕೊಂಡರು. ಇವರಲ್ಲಿ ಮಂಟೇಸ್ವಾಮಿಯನ್ನು ಅನುಸರಿಸಿದವರು ನೀಲಗಾರರಾದರು; ಮಾದೇಶ್ವರನನ್ನು ಅನುಸರಿಸಿದವರು ದೇವರಗುಡ್ಡರಾದರು. ಈ ಇಬ್ಬರು ಗುರುಗಳ ತತ್ತ್ವಗಳಿಗೆ ಬದ್ಧರಾದ ನೀಲಗಾರರು ಹಾಗೂ ದೇವರಗುಡ್ಡರು ಬಸವಣ್ಣನನ್ನು ಮರೆಯದೆ, ಶರಣತತ್ತ್ವಗಳನ್ನು ಕೈಬಿಡದೆ, ವೀರಶೈವವಾಗದೆ ಶರಣರಾಗಿಯೇ ಉಳಿದರು.

ಇಂಥ ಹೊಸನಾಯಕತ್ವವನ್ನು ಒಪ್ಪಿಕೊಂಡ ನೀಲಗಾರ ಮತ್ತು ದೇವರಗುಡ್ಡರಿಗೆ ಶಿಷ್ಟಸಂಪ್ರದಾಯದಲ್ಲಿ ಎತ್ತರೆತ್ತರಕ್ಕೆ ಬೆಳೆದು ಬರುತ್ತಿದ್ದ ಬಸವೇಶ್ವರನ ಕಥೆಗಳು, ಮಠಮಾನ್ಯತೆಗಳು, ಎಟುಕದಂತಾದರೂ ಬಸವಣ್ಣನವರ ಹೃದಯವಂತಿಕೆಯನ್ನು ಮರೆಯಲಾಗದೆ, ಅವರನ್ನು ತಮ್ಮ ಜೊತೆಗಿಟ್ಟುಕೊಂಡೇ ಅವರ ಸಮಕಾಲೀನ ಹಿಂದುಳಿದ ವರ್ಗದ ಶರಣರ ಕಥೆಗಳನ್ನು ಎದೆಯೊಳಗಿಟ್ಟುಕೊಂಡು ಅವರ ಚರಿತೆಗಳನ್ನೇ ಪ್ರಧಾನವಾಗಿ ಹಾಡತೊಡಗಿದರು. ಉದಾಹರಣೆಗೆ, ಮಾದೇಶ್ವರ ಮತ್ತು ಮಂಟೇಸ್ವಾಮಿಯವರು ಉತ್ತರದಿಂದ ಹೊರಟು ದಕ್ಷಿಣಕ್ಕೆ ಬಂದು ನೆಲೆಗೊಳ್ಳುವವರೆಗೂ ಮೆರೆದು ಬಂದ ಪವಾಡ ಸದೃಶ ಘಟನಾವಳಿಗಳನ್ನೆಲ್ಲ ಕಥೆ ಮಾಡಿ ಹಾಡಿ ಕೊಂಡಾಡಿದ್ದರಿಂದ ಈ ಇಬ್ಬರ ಬಗೆಗೂ ಒಂದೊಂದು ಜನಪದ ಮಹಾಕಾವ್ಯ ಹುಟ್ಟಿಬರಲು ಸಾಧ್ಯವಾಯಿತು. ಅಲ್ಲದೆ ಹರಳಯ್ಯ, ಮಾಚಯ್ಯ, ಚನ್ನಬಸವಣ್ಣ, ಮೈದಾಳರಾಮಣ್ಣ, ಕುಂಬಾರ ಗುಂಡಯ್ಯ, ಗುಂಡುಬ್ರಹ್ಮಯ್ಯ, ಸಿದ್ಧರಾಮಯ್ಯ, ಕುರುಬರ ಬೀರಯ್ಯ ಮುಂತಾದ ಶರಣರನ್ನೆಲ್ಲ ಕುರಿತು ಕಾವ್ಯವನ್ನು ಕಟ್ಟಿಹಾಡಿದರು. ಆದರೆ ಬಸವೇಶ್ವರರನ್ನು ಕುರಿತ ಇಂಥದೊಂದು ಜನಪದ ಧಾರ್ಮಿಕ ವೃತ್ತಿಗಾಯಕರ ಪರಂಪರೆ ಇಡೀ ಕರ್ನಾಟಕದ ಎಲ್ಲೂ ತಲೆಯೆತ್ತಲಾಗಲಿಲ್ಲ. ಶಂಕರಾಚಾರ್ಯ, ರಾಮಾನುಜ, ಮಧ್ವರು ಜನಪದರಿಗೆ ದೂರದಲ್ಲೇ ಉಳಿದಂತೆ ಬಸವಣ್ಣನವರೂ ಮೆಲ್ಲಮೆಲ್ಲಗೆ ದೂರವಾಗುತ್ತ ಬಂದರು. ಈ ಕಾರಣದಿಂದ ಯಾವ ಜನಪದ ವೃತ್ತಿಗಾಯಕರೂ ಬಸವೇಶ್ವರನ ಕತೆಯನ್ನು ತಾಳಿನಿಂದ ತುದಿಯವರಿಗೂ ಹಾಡಲಾಗಲೇ ಇಲ್ಲ. ಶಿಷ್ಟಕಾವ್ಯಗಳ ಮುಂದೆ ಇವರ ವಿಶಿಷ್ಟ ಕಾವ್ಯಗಳು ಬೇರೆಯದೇ ಆದ ದಾರಿಯಲ್ಲಿ ಕ್ರಮಿಸಬೇಕಾಯ್ತು. ಹೀಗಿರುವಾಗ ವೀರಶೈವ ವೃತ್ತಿಗಾಯಕರಾದ ಕರಪಾಲದವರು ಮಾತ್ರ ಶರಣರನ್ನು ಕುರಿತ ಗ್ರಂಥಸ್ಥ ಅಥವಾ ಪಂಡಿತ ಪರಂಪರೆಯ ಕಥೆಗಳನ್ನು ವೇದಿಕೆಗೆ ತಂದರು. ಆದರೆ ಇವರ ಕಾವ್ಯಗಳಲ್ಲಿ ನೀಲಗಾರರ ಅಥವಾ ದೇವರಗುಡ್ಡರ ಕಾವ್ಯಗಳಲ್ಲಿರುವ ಶರಣತ್ವದ ಸೊನೆಗಿಂತಲೂ ವೀರಶೈವದ ವಜನ್ನು ವಿಪುಲವಾಗಿ ವೈಭವೀಕರಣ ಗೊಂಡಿದೆ.

ಹೀಗೆ ಉತ್ತರದ ಶರಣರನ್ನು ಕುರಿತು ದಕ್ಷಿಣದ ವೃತ್ತಿಗಾಯಕರು ಅಪೂರ್ವವಾದ ಅನೇಕ ಕಾವ್ಯಗಳನ್ನು ಹಾಡಿಕೊಂಡು ಬಂದಿದ್ದಾರೆ. ಆಶ್ಚರ್ಯವೆಂದರೆ ಉತ್ತರದಲ್ಲಿ ಇಂಥ ಧಾರ್ಮಿಕ ವೃತ್ತಿಗಾಯಕರು ಕಾಣಿಸಿಕೊಳ್ಳದೆ ಹೋದದ್ದು ಹಾಗೂ ಶರಣರನ್ನು ಕುರಿತು ಕಾವ್ಯಗಳನ್ನು ಹಾಡದಿರುವುದು. ಇದರರ್ಥ ಆ ಕಡೆಗೆ ಶರಣಧರ್ಮ ಪ್ರಧಾನವಾಗದೆ, ಅಲಕ್ಷಿತ ವರ್ಗದವರು ನಾಯಕತ್ವ ವಹಿಸಲಾಗದೆ ವೀರಶೈವ ಪ್ರಧಾನವಾದುದೇ ಕಾರಣವೆಂದು ಹೇಳಬಹುದು.

ಉತ್ತರದಲ್ಲಿ ಉಳಿದಿದ್ದ ಶರಣಧರ್ಮದ ಅಷ್ಟಿಷ್ಟು ಕೂಡ ಎಲ್ಲಮ್ಮನ ಜೋಗ್ತಿ ಸಂಪ್ರದಾಯದ ಕೈ ಸೇರಿ ಅದು 'ಶರಣಸತಿ ಲಿಂಗಪತಿ' ತತ್ತ್ವವನ್ನು ತನ್ನದಾಗಿಸಿಕೊಂಡು, ಅದನ್ನೂ ತಪ್ಪಾಗಿ ಬಳಸಿಕೊಂಡ ಪರಿಣಾಮವಾಗಿ ದೇವದಾಸಿ ಪದ್ಧತಿಗೆ ಅಸ್ತಿಭಾರ ಹಾಕಿದ್ದು ಒಂದು ಧಾರ್ಮಿಕ ದುರಂತವೇ ಸರಿ. ಹೀಗೆ ಶರಣಧರ್ಮ ಅನೇಕ ಟಿಸಿಲುಗಳಾಗಿ ಈ ಹಿಂದೆ ಪ್ರಚಲಿತವಿದ್ದ ಕಾಪಾಲಿ ಕಾಳಾಮುಖಿ ಲಕುಲೀಶ ಪಾಶುಪತಗಳ ಜೊತೆ ಬೆರೆಯುತ್ತ ಸೂಫಿಗಳ ತತ್ತ್ವದ ಕೆಲವಂಶಗಳನ್ನೂ ಕೂಡಿಕೊಳ್ಳುತ್ತ ತಮ್ಮ ತಮ್ಮದೇ ಆದ ದೇವಾಲಯಗಳು, ಮಠಮಾನ್ಯತೆಗಳು ಮತ್ತು ಸಂಪ್ರದಾಯಗಳನ್ನು ರೂಢಿಸಿಕೊಂಡು ಬೆಳೆದು ಬಂದವು.

ಹೀಗಿರುವಾಗ ಯಾವುದೇ ಜಾತಿಭೇದಗಳನ್ನು ಮಾಡದೆ ಬಯಸಿದವರನ್ನೆಲ್ಲ ತಮ್ಮ ಸಿಸುಮಕ್ಕಳನ್ನಾಗಿ ಸ್ವೀಕರಿಸಿ ದೀಕ್ಷೆಯನ್ನು ಕೊಟ್ಟ ಔದಾರ್ಯಪೂರ್ಣ ಧಾರ್ಮಿಕ ಸಂಪ್ರದಾಯಗಳೆಂದರೆ - ಅವು - ಮಾದೇಶ್ವರನ ದೇವರಗುಡ್ಡರ ಸಂಪ್ರದಾಯ ಮತ್ತು ಮಂಟೇಸ್ವಾಮಿಯವರ ನೀಲಗಾರ ಸಂಪ್ರದಾಯಗಳು. ಈ ಅವಳಿ ಸಂಪ್ರದಾಯಗಳು ಕರ್ನಾಟಕ ಧಾರ್ಮಿಕ ವೃತ್ತಿಗಾಯಕ ಪರಂಪರೆಯಲ್ಲಿ ಅಗ್ರಮಾನ್ಯ ಸ್ಥಾನವನ್ನು ದಕ್ಕಿಸಿಕೊಂಡಿವೆ.

'ಜನಪದ ಶರಣ ಕಾವ್ಯಗಳು' ಎಂಬ ಈ ಸಂಕಲನದಲ್ಲಿ ತಂಬೂರಿ ಸಂಪ್ರದಾಯದ ಒಂದು ಕಾವ್ಯ, ಎರಡು ಹೆಂಗಸರ ಹಾಡ್ಗತೆಗಳು, ಒಂದು ಕರಪಾಲ ಬಸವಪುರಾಣವಾಗಿದ್ದು ಉಳಿದ ೨೭ ಕಾವ್ಯಗಳು ನೀಲಗಾರ ಮತ್ತು ದೇವರಗುಡ್ಡರ ಕೊಡುಗೆ ಗಳಾಗಿವೆ.

೨. ಶರಣರ ಕಥೆಗಳು : ಉತ್ತರದಿಂದ ದಕ್ಷಿಣದ ಕಡೆಗೆ

೧೯೩೧ರಲ್ಲಿ ಪ್ರಕಟವಾದ ಹಲಸಂಗಿ ಸೋದರರ 'ಗರತಿಯ ಹಾಡು' ಅತ್ಯಂತ ಜನಪ್ರಿಯ ತ್ರಿಪದಿಗಳ ಸಂಕಲನ. ಇಂಥ ಅಚ್ಚುಮೆಚ್ಚಿನ ಸಂಕಲನ ಕಣ್ಣಮುಂದಿದ್ದುದರಿಂದ ಬಹಳಷ್ಟು ಜನ ಕ್ಷೇತ್ರಕಾರ್ಯಕರ್ತರಿಗೆ ಜನಪದ ಸಾಹಿತ್ಯವೆಂದರೆ ತ್ರಿಪದಿ ಸಾಹಿತ್ಯ ಮಾತ್ರ ಎಂಬ ಕಲ್ಪನೆ ಗಟ್ಟಿಗೊಂಡಿತ್ತು. ಈ ದಾರಿಯಲ್ಲಿ ಮುನ್ನಡೆದ ಉತ್ತರದ ಕಡೆಯ ಡಾ.ಬಿ.ಎಸ್. ಗದ್ದಗಿಮಠ, ದಕ್ಷಿಣದ ಕಡೆಯ ಕದಬಳ್ಳಿ ಕೃಷ್ಣಸ್ವಾಮಿ (ಕರಾಕೃ) ಅವರುಗಳು ಸಂಗ್ರಹಿಸಿ ಪ್ರಕಟಿಸಿದ ಅಪಾರ ತ್ರಿಪದಿಗಳ ಸಂಗ್ರಹ ಬೆರಗನ್ನೂ ಕೃತಜ್ಞತೆಯನ್ನೂ ಮೂಡಿಸುತ್ತದೆ.

೧೯೩೩ರಲ್ಲಿ ಪ್ರಕಟವಾದ ಅರ್ಚಕ ರಂಗಸ್ವಾಮಿಯವರ 'ಹುಟ್ಟಿದ ಹಳ್ಳಿ - ಹಳ್ಳಿಯ ಹಾಡು' ಸಂಕಲನ ಆ ಕಾಲಕ್ಕೆ ದಕ್ಷಿಣದಿಂದ ಪ್ರಕಟವಾದ ಒಂದು ಪ್ರಾತಿನಿಧಿಕ ಸಂಕಲನ. ಇದರ ಜೊತೆಗೆ ಎಸ್.ಕೆ. ಕರೀಂಖಾನರು, ಮತಿಘಟ್ಟ ಕೃಷ್ಣಮೂರ್ತಿಯವರು, ಎಲ್. ಗುಂಡಪ್ಪನವರು, ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ಈ ಕ್ಷೇತ್ರವನ್ನು ಪ್ರವೇಶಿಸಿ ಕಾರ್ಯಪ್ರವೃತ್ತರಾಗಿದ್ದಾಗ ಈ ಎಲ್ಲರಿಂದ ಪ್ರೇರಿತರಾಗಿ ಕರಾಕೃ ಅವರು ಜಾನಪದವನ್ನೇ ತಮ್ಮ ಉಸಿರಾಗಿಸಿಕೊಂಡು ತಮ್ಮ ಸುತ್ತಿನಲ್ಲೆಲ್ಲ ಚೆಲ್ಲಾಡುತ್ತಿರುವ ಜಾನಪದ ಸಂಪತ್ತನ್ನು ಸಂಗ್ರಹಿಸಿ ಪ್ರಕಟಿಸಿ ಸಂರಕ್ಷಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯಿಂದ ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಜಾನಪದ ಕ್ಷೇತ್ರಕ್ಕೆ ತಮ್ಮನ್ನು ಅರ್ಪಿಸಿಕೊಂಡರು.

'ಹುಟ್ಟಿದ ಹಳ್ಳಿ'ಯಲ್ಲಿ ಹೆಸರಿಸಿದ್ದ ಹೆಣ್ಣುವೇಷದವರೆಂದೇ ಹೆಸರಾಗಿದ್ದ ದೊಂಬಿದಾಸರು ಕರಾಕೃ ಅವರ ಕಣ್ಣಿಗೆ ಬಿದ್ದರು. ನಾಗಮಂಗಲ, ತುರುವೇಕೆರೆ, ತಿಪಟೂರು ತಾಲ್ಲೂಕುಗಳಲ್ಲಿ ಎಲ್ಲೆಂದರಲ್ಲಿ ದೊಂಬಿದಾಸರ ಏಕತಾರಿ ಝೇಂಕಾರ ಕಿವಿಯನ್ನು ತುಂಬಿಕೊಳ್ಳುತ್ತಿತ್ತು. ಅರೆಅಲೆಮಾರಿಗಳಾಗಿದ್ದ ಅವರು ಊರಾಡಿ ಬಂದು ಸಂಜೆಯ ಹೊತ್ತಿಗೆ ಊರ ಚಾವಡಿಯಲ್ಲಿ ಬಣ್ಣದ ವೇಷ ಹಾಕಿಕೊಂಡು ಬಯಲಾಟಗಳನ್ನಾಡಿ ಹಳ್ಳಿಗರ ಹೃನ್ಮನಗಳನ್ನು ತಣಿಸುತ್ತಿದ್ದರು. ಅವರು ಹಾಡುತ್ತಿದ್ದ ಕಥೆಗಳು ತ್ರಿಪದಿಗಳಲ್ಲಿಲ್ಲದಿದ್ದರೂ ಪದ್ಯಗಳೇ ಆಗಿದ್ದವು. ದೊಂಬಿದಾಸರು ಹಾಡಲು ಕುಳಿತರೆ ಬೆಳಗಾನ ಹಾಡುತ್ತಿದ್ದರು ; ಬಯಲಾಟಕ್ಕೆ

ನಿಂತರೆ ಕೋಳಿ ಕೂಗುವವರೆಗೂ ಕುಣಿದು ಕುಪ್ಪಳಿಸುತ್ತಿದ್ದರು. ನೋಡುತ್ತ ಕೇಳುತ್ತ ಕುಳ್ಳಿತ್ತಿದ್ದವರಿಗೆ ಬೆಳಕು ಹರಿದಿದ್ದೇ ತಿಳಿಯುತ್ತಿರಲಿಲ್ಲ. ಹೀಗೆ ದೊಂಬಿದಾಸರು ತಮ್ಮ ಊರುಗಳಲ್ಲೆ ಬಂದಿಳಿದುಕೊಳ್ಳುತ್ತಿದ್ದುದನ್ನು ಕಂಡ ಕರಾಕೃ ಅವರು ಮೊತ್ತ ಮೊದಲಿಗೆ ವೃತ್ತಿಗಾಯಕರ ಕಾವ್ಯಗಳನ್ನು ಸಂಗ್ರಹಿಸಲು ಸಾಧ್ಯವಾಯ್ತು !

ವೃತ್ತಿಗಾಯಕರ ಕಾವ್ಯಗಳ ಸವಿಗೆ ಮರುಳಾದ ಕರಾಕೃ ಅವರು ಮೈಸೂರು ಮಂಡ್ಯ ಜಿಲ್ಲೆಗಳಲ್ಲಿ ಕಾಣಸಿಗುತ್ತಿದ್ದ ದೇವರಗುಡ್ಡರು ಹಾಗೂ ನೀಲಗಾರರ ಕಾವ್ಯಗಳನ್ನು ಸಂಗ್ರಹಿಸಲು ಕೈಹಾಕಿದರಾದರೂ ಆ ಪ್ರಕಾರಗಳನ್ನು ಅವರು ದಕ್ಕಿಸಿಕೊಳ್ಳಲಾಗಲಿಲ್ಲ. ಅದಕ್ಕೆ ಕಾರಣವೆಂದರೆ ಈ ವೃತ್ತಿಗಾಯಕರು ಹಾಡುಹಾಡುತ್ತ ನಡುವೆ ರಾಗಬದ್ಧವಾಗಿ ಹೇಳುತ್ತಿದ್ದ ವಚನ ಯಾವುದೇ ಛಂದೋರಚನೆಯ ಚೌಕಟ್ಟಿಗೆ ಸಿಗದೇ ಇದ್ದುದರಿಂದ ಇವುಗಳನ್ನು ಬರೆದುಕೊಳ್ಳುವುದು ಕ್ಲಿಷ್ಟವೆನಿಸಿ ಅಂಥ ವೃತ್ತಿಗಾಯನ ಕಾವ್ಯಗಳ ಗೊಡವೆಗೇ ಹೋಗಲಿಲ್ಲ. ಆದರೂ ಒಂದೆರಡು ನೀಲಗಾರರ ಹಾಗೂ ದೇವರಗುಡ್ಡರ ಕಾವ್ಯಗಳ ಜೊತೆಗೆ ದೊಂಬಿದಾಸರ ಹಾಗೂ ಹೆಂಗಸರ ಹಾಡ್ಗತೆಗಳ ಬೃಹತ್ಸಂಗ್ರಹ 'ಜಾನಪದ ಕಥನ ಗೀತೆಗಳು' ಸಂಕಲನ ೧೯೫೯ರಲ್ಲಿ ಪ್ರಕಟವಾಯಿತು. ಅದುತನಕ ಜನಪದ ಕಥನಗೀತೆಗಳನ್ನು ಈ ಪ್ರಮಾಣದಲ್ಲಿ ಸಂಗ್ರಹಿಸುವುದಾಗಲಿ ಪ್ರಕಟಿಸುವುದಾಗಲಿ ಸಾಧ್ಯವಾಗಿರಲಿಲ್ಲ. ಇದೇ ಅವಧಿಯಲ್ಲಿ ಸ.ಚ. ಮಹದೇವ ನಾಯಕರೂ ವೃತ್ತಿಗಾಯಕರ ಕೃತಿಗಳನ್ನು ಸಂಗ್ರಹಿಸಲು ಪ್ರಯತ್ನಿಸಿ ವಿಫಲರಾಗಿದ್ದರು.

ಇಲ್ಲಿ ಮರೆಯದೆ ಪ್ರಸ್ತಾಪಿಸಲೇಬೇಕಾದ ಮತ್ತೊಂದು ಹೆಸರು ಡಾ.ಬಿ.ಎಸ್. ಗದ್ದಗಿಮಠ ಅವರದು. ಕನ್ನಡದಲ್ಲಿ ಮೊತ್ತಮೊದಲಿಗೆ ಜಾನಪದ ವಿಷಯವೊಂದನ್ನು ಪಿಎಚ್.ಡಿ. ಪದವಿಗಾಗಿ ಆಯ್ಕೆ ಮಾಡಿಕೊಂಡ ಹಾಗೂ ಪಿಎಚ್.ಡಿ. ಪದವಿ ಪಡೆದ ಕೀರ್ತಿ ಗದ್ದಗಿಮಠ ಅವರಿಗೆ ಸಲ್ಲುತ್ತದೆ. ಹೀಗೆ ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಜಾನಪದವನ್ನು ಗದ್ದುಗೆಗೇರಿಸಿ ಆ ಕ್ಷೇತ್ರದ ಹೆದ್ದಾರಿಯಲ್ಲಿ ಮುನ್ನಡೆದ ಮೊದಲಿಗರೆ ಅವರು. ೧೯೬೩ರಲ್ಲಿ ಅವರ ಪಿಎಚ್.ಡಿ. ಮಹಾಪ್ರಬಂಧ 'ಕನ್ನಡ ಜಾನಪದ ಗೀತಗಳು' ಪ್ರಕಟವಾಯಿತು. ಇದಕ್ಕೂ ಮುನ್ನ ೧೯೫೨ರಲ್ಲಿ 'ನಾಲ್ಕು ನಾಡಪದಗಳು', ೧೯೫೬ರಲ್ಲಿ 'ಜನತಾ ಗೀತೆಗಳು', ೧೯೫೯ರಲ್ಲಿ 'ಕುಮಾರರಾಮನ ದುಂದುಮೆ' ಮತ್ತು 'ಮಲ್ಲಮಲ್ಲಾಣ', ೧೯೬೦ರಲ್ಲಿ 'ಲೋಕಗೀತೆಗಳು' ಮತ್ತು ೧೯೬೩ರಲ್ಲಿ 'ಕಂಬಿಯ ಹಾಡುಗಳು', ಸಂಕಲನಗಳು ಪ್ರಕಟವಾದವು.

ಹೀಗೆ ಉತ್ತರ ಕರ್ನಾಟಕದಲ್ಲಿ ಗದ್ದಗಿಯವರು ಹುಲುಸಾದ ಬೆಳೆ ತೆಗೆಯುತ್ತಿರುವಾಗ ಇತ್ತ ದಕ್ಷಿಣದ ಕಡೆಗೆ ಕದಬಳ್ಳಿ ಕೃಷ್ಣಸ್ವಾಮಿಯವರು (ಕರಾಕೃ) ಮದ್ದಾನೆಯಂತೆ ನುಗ್ಗಿ ದೊಡ್ಡದೊಡ್ಡ ಹೇರುಗಳನ್ನು ಹೊತ್ತುತಂದರು. ಅವರು ಗಾಢವಾದ ಕ್ಷೇತ್ರಕಾರ್ಯಕ್ಕೆ ತೊಡಗಿಕೊಂಡಾಗ ವೃತ್ತಿಗಾಯಕರು ಅವರ ಕಣ್ಣಿಗೆ ಬಿದ್ದರು. ಆದರೂ ಈ ವೃತ್ತಿಗಾಯಕರ ಕಾವ್ಯಗಳನ್ನೆಲ್ಲ ಸಂಗ್ರಹಿಸಿ, ಹಾಡುವುದನ್ನೆ ತಮ್ಮ ಹಿಟ್ಟುಬಟ್ಟೆಗೆ ಆಧಾರ ಮಾಡಿಕೊಂಡಿದ್ದ ಇವರನ್ನು ವೃತ್ತಿಗಾಯಕರೆಂದು ಕರೆದು ವೃತ್ತಿಗಾಯಕ ಪರಂಪರೆಯ ಅಧ್ಯಯನಕ್ಕೆ ಒಂದು ಶಾಸ್ತ್ರೀಯ ಚೌಕಟ್ಟನ್ನು ಹಾಕಿಕೊಟ್ಟವರು ಪ್ರೊ.ಜೀ.ಶಂ. ಪರಮಶಿವಯ್ಯನವರು. ಅವರು ದಕ್ಷಿಣ ಕರ್ನಾಟಕದ ಕಡೆಯಿಂದ ಮೊತ್ತಮೊದಲಿಗೆ ಜಾನಪದವನ್ನು ಸಂಶೋಧನೆಯ ವಿಷಯವನ್ನಾಗಿ ಆರಿಸಿಕೊಂಡು 'ದಕ್ಷಿಣ ಕರ್ನಾಟಕದ ಜನಪದ ಕಾವ್ಯಸಂಪ್ರದಾಯಗಳು' ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸಿ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಪಡೆದರು. ಅಲ್ಲದೆ 'ಇನ್ನೂ ಹೆಚ್ಚಿನ ಸಂಪತ್ತು ಇಲ್ಲಿದೆ' ಎಂದು ಹೇಳಿ ದೇವರಗುಡ್ಡರು, ನೀಲಗಾರರು, ಚೌಡಿಕೆಯವರು, ಗೊರವರು, ಗಣಿಯವರು, ದೊಂಬಿದಾಸರು, ಹೆಳವರು, ಕಿನ್ನರಿ ಜೋಗಿಗಳು, ಕರಪಾಲದವರು - ಈ ಎಲ್ಲ ವೃತ್ತಿಗಾಯಕರ ಕಾವ್ಯಪ್ರಪಂಚದ ಸುವರ್ಣದ್ವಾರವನ್ನು ತೆರೆದುಬಿಟ್ಟರು! ಈ ಲೋಕದೊಳಗಿರುವ ಅನರ್ಘ್ಯಸಂಪತ್ತನ್ನು ಒಬ್ಬರೇ ಹೊತ್ತುತರಲು ಸಾಧ್ಯವಿಲ್ಲ ಎಂಬ ಅರಿವು ಅವರಿಗೂ ಇತ್ತು. ಇದರಿಂದಾಗಿ ಈ ಅಕ್ಷಯ ಭಂಡಾರವನ್ನು ಅವರ ತರುವಾಯದ ಕ್ಷೇತ್ರಕಾರ್ಯ ಕರ್ತೃಗಳು - ಅಂದಿನಿಂದಲೂ ನಿರಂತರವಾಗಿ ಆ ವಿಧಿಯನ್ನೆಲ್ಲ ತಮ್ಮ ಶಕ್ತ್ಯಾನುಸಾರ ಹೊತ್ತು ತರುತ್ತಲೇ ಇದ್ದಾರೆ. ಹಾಗೆ ಹೊತ್ತು ತಂದ ಸಂಪತ್ತಿನಲ್ಲಿ ಒಂದು 'ಹಿಡಿಹೊನ್ನು' ಈ 'ಜನಪದ ಶರಣ ಕಾವ್ಯಗಳು'.

ದಕ್ಷಿಣ ಕರ್ನಾಟಕದಲ್ಲಿ ನಮ್ಮ ವೃತ್ತಿಗಾಯಕರು ಹಾಡಿರುವಂತ ಶರಣರನ್ನು ಕುರಿತ ಕಾವ್ಯಗಳು ಉತ್ತರ ಕರ್ನಾಟಕದಲ್ಲಿ ಪ್ರಕಟವಾಗಿಲ್ಲ. ಆದರೆ ಡಾ.ಬಿ.ಎಸ್. ಗದ್ದಗಿಮಠ ಅವರ 'ಕನ್ನಡ ಜಾನಪದ ಗೀತಗಳು ಕೃತಿಯ ಅನುಬಂಧದಲ್ಲಿ ಶರಣರನ್ನು ಕುರಿತ ೧೧ ಕಾವ್ಯಗಳು ಸೇರಿವೆ. ಶರಣರನ್ನು ಕುರಿತ ಇಷ್ಟೊಂದು ಕಾವ್ಯಗಳು ಸಿಕ್ಕಿರುವುದಕ್ಕಾಗಿ ಹಿಗ್ಗುತ್ತ ಅವುಗಳನ್ನು ಓದಲು ಹೋದರೆ ಈ ಕಾವ್ಯಗಳು ಹೇಗೆ ಜನಪದ ಕಾವ್ಯಗಳಾದಾವು? ಎಂಬ ಪ್ರಶ್ನೆ ಎದುರಾಗುತ್ತದೆ. ಏಕೆಂದರೆ ಅವುಗಳ ರಚನೆ ಪ್ರಾಸಾನುಪ್ರಾಸಗಳಿರುವ ಅಕ್ಷರಗಣ ನಿಯತವಾದ ಶುದ್ಧ ಶಿಷ್ಟ ತ್ರಿಪದಿಗಳಾಗಿವೆ. ಜಾನಪದದ ಜಾಯಮಾನಕ್ಕೆ ಹೊರತಾದ

ಅಂಶವೆಂದರೆ ರಾಘವಾಂಕ, ಕುಮಾರವ್ಯಾಸರು ಪ್ರತಿಯೊಂದು ಸಂಧಿಗೂ ಆ ಕಾವ್ಯಭಾಗದಲ್ಲಿನ ಕಥಾಸಾರವನ್ನು ಸೂಚಕ ಪದ್ಯದಲ್ಲಿ ಅಡಕಗೊಳಿಸಿರುವಂತೆ ಇಲ್ಲಿಯೂ ಪ್ರತಿಯೊಂದು ಕಾವ್ಯಕ್ಕೂ ಸೂಚಕಪದ್ಯವನ್ನು ಕೊಡಲಾಗಿದೆ. ಇದರ ಜೊತೆಗೆ ಭಾಷಾಶೈಲಿಗಳೂ ಶಿಷ್ಟವಾಗಿರುವುದಲ್ಲದೆ 'ಅನುಭಾವ' ಮುಂತಾದ ವೀರಶೈವ ಪಾರಿಭಾಷಿಕ ಶಬ್ದಗಳು ಹೇರಳವಾಗಿ ಪ್ರಯೋಗವಾಗಿವೆ. ಜನಪದ ಕಾವ್ಯಗಳಲ್ಲಿ ಕಥೆಯ ಓಘ ಸರಾಗವಾಗಿರುವಂತೆ ಈ ಕಾವ್ಯಗಳಲ್ಲಿ ಇಲ್ಲ. ಇವುಗಳಲ್ಲಿ ಕಥೆಯೇ ಗೌಣ ಎನ್ನುವಂತೆ ನಿರೂಪಣೆಗೊಂಡಿವೆ. ಈ ಕಾವ್ಯಗಳನ್ನು ಗಮನದಲ್ಲಿಟ್ಟುಕೊಂಡು ಡಾ. ದೇವೇಂದ್ರಕುಮಾರ ಹಕಾರಿಯವರು ಹೀಗೆ ಹೇಳುತ್ತಾರೆ :

"ಈ ಕಥಾನಕಗಳನ್ನು ಆಯ್ದುಕೊಳ್ಳುವಾಗ ಕೆಲವು ಆತಂಕಗಳು ಎದುರಾದುವು. ಮೊದಲನೆಯದು : ಈ ಹಾಡುಗಳ ಭಾಷೆ ಸಾಮಾನ್ಯವಾಗಿ ಯಾವುದೇ ಜನಪದ ಹಾಡು, ಕಥನಗೀತೆ, ಕಥೆ, ಒಗಟು, ಒಡಪು ಇತ್ಯಾದಿಗಳನ್ನು ಲಿಖಿತ ರೂಪಕ್ಕೆ ಒಳಪಡಿಸುವಾಗ ಆಯಾ ಭಾಗದ ಜನಪದ ವಕ್ತೃ, ವ್ಯಕ್ತಿ ನಿರೂಪಿಸುವ ಭಾಷೆಯಲ್ಲಿಯೇ ಅದನ್ನು ಬರೆದುಕೊಳ್ಳಬೇಕು. ಅದರಿಂದ ಆಯಾ ಪ್ರದೇಶದ ನುಡಿಯ ಸೊಗಡು, ಬೆಡಗು, ವಿವಿಧ ಅರ್ಥದ ಛಾಯೆ ಎಲ್ಲ ಜೀವಂತವಾಗಿರಲು ಸಹಾಯಕವಾಗುತ್ತದೆ. ಆದರೆ ಗದ್ದಗೀಮಠರ 'ಜನಪದ ಗೀತೆಗಳು' ಪ್ರಕಟಗೊಳ್ಳುವ ಸಂದರ್ಭದಲ್ಲಿ ಅವರ ಮಹಾಪ್ರಬಂಧದ ಬಹುಪಾಲು ಪದ್ಯಗಳು ತಿದ್ದುಪಡಿಗೆ ಒಳಗಾಗಿ ಜನಪದ ನುಡಿಯ ಸೊಗಡು ಬೆಡಗುಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ, ಕೆಲವಾದರೂ 'ಜಾಣಪದ'ಗಳಾಗಿ ತೋರಿದರೆ ಆಶ್ಚರ್ಯಪಡಬೇಕಾಗಿಲ್ಲ. ಆದರೂ ಗದ್ದಗೀಮಠರು ಮೌಖಿಕ ಪರಂಪರೆಯಲ್ಲಿ ಪರಿಚಲನಗೊಳ್ಳುತ್ತ, ಬಂದ ಹಂತಿಯ ಹಾಡಿನ ಕಥಾನಕಗಳನ್ನು ಅಂದು ದಾಖಲಿಸದೆ ಹೋಗಿದ್ದರೆ ಇಂದು ನಮ್ಮ ಪಾಲಿಗೆ ಯಾವುದೂ ದೊರಕುತ್ತಿರಲಿಲ್ಲ" ಎಂದು ಹೇಳಿ 'ಜಾಣಪದ' ಶಬ್ದ ಬಳಸಿರುವುದು ಅವುಗಳ 'ಜಾನಪದತ್ವ'ದ ಬಗೆಗಿರುವ ಸಂಶಯವನ್ನು ಸೌಮ್ಯವಾಗಿ ಹೇಳಿದ್ದಾರೆ. ಇದೇ ಕಾವ್ಯಗಳ ಬಗೆಗೆ ಅವರು ಮುಂದುವರೆದು "ಈಗೊಂದು ೨೦-೨೫ ವರ್ಷಗಳ ಮೊದಲು ಹಾಡಲಾಗುತ್ತಿದ್ದ ಶಿವಶರಣರ ಕಥನ ತ್ರಿಪದಿಗಳನ್ನು ಇಂದು ಯಾರೂ ಸಮಗ್ರವಾಗಿ ಹಾಡುತ್ತಿಲ್ಲ. ಅಕಸ್ಮಾತ್ ಹಾಡಿದರೂ ಕೂಡ ಶರಣರಿಗೆ ಸಂಬಂಧಿಸಿದಂತೆ ಕೇವಲ ಒಂದೋ ಎರಡೋ"[2] ಎಂದಿದ್ದಾರೆ. ಒಂದೋ ಎರಡೋ ಕೂಡ ಗದ್ದಗಿಯವರು ಕೊಟ್ಟಿರುವ ಶುದ್ಧತ್ರಿಪದಿಗಳಲ್ಲಿಲ್ಲ. ಅವೇನಿದ್ದರೂ ಅಕ್ಷರಸ್ಥ ಲಾವಣಿಕಾರರ ಕಾವ್ಯಗಳು ಮಾತ್ರ.

ಇದೇ ಕಾವ್ಯಗಳ ಬಗೆಗೆ ಪ್ರೊ.ಜೀ.ಶಂ. ಪರಮಶಿವಯ್ಯನವರು ಹೇಳಿರುವ ಈ ಮಾತುಗಳು ಗಮನಾರ್ಹವಾಗಿವೆ:

"ಉತ್ತರ ಸಂಪ್ರದಾಯದ ಜನಪದ ಕಲಾವಿದರಲ್ಲಿ ಕೆಲವು ಶರಣರ ಕಾವ್ಯಗಳು ಕಂಡುಬಂದರೂ ಇಲ್ಲಿನ ಕಾವ್ಯಗಳಿಗೂ, ಅಲ್ಲಿನ ಕಾವ್ಯಗಳಿಗೂ ಸಾಕಷ್ಟು ವ್ಯತ್ಯಾಸಗಳು ತೋರಿಬಂದಿವೆ. ಕಲ್ಯಾಣಬಸವಯ್ಯ, ಹರಳಯ್ಯ, ಮಡಿವಾಳ ಮಾಚಯ್ಯ, ಕಿನ್ನರಿಬೊಮ್ಮಯ್ಯ, ಮೋದರ ಕೇತಯ್ಯ, ಇಲಿಹಾಳ ಬೊಮ್ಮಯ್ಯ, ಹೂಗಾರ ಮಾದಯ್ಯ, ಜಾತಿಗರ ಚೌಡಯ್ಯ, ನೇಗಿಯ ಅಮುಗಯ್ಯ, ಕುಂಬಾರ ಗುಂಡಯ್ಯ, ಮಾದಾರ ಚೆನ್ನಯ್ಯ ಮುಂತಾದವರನ್ನು ಕುರಿತು ಹಂತಿಯ ಹಾಡುಗಳು ದೊರೆತಿದ್ದರೂ ದಕ್ಷಿಣ ಸಂಪ್ರದಾಯದ ಶಿವಶರಣರ ಕಾವ್ಯಗಳಷ್ಟು ವ್ಯಾಪಕತೆ ಅವುಗಳಿಗೆ ಬಂದಿಲ್ಲ. ಅಲ್ಲಿ ಕಥೆಯ ಅಂಶ ಕುಂಠಿತವಾಗಿ ವರ್ಣನಾಭಾಗಗಳು ಹೆಚ್ಚಾಗಿ ಬಂದಿವೆ. ಬಹುಶಃ ವೃತ್ತಿಗಾಯಕರ ವ್ಯಾಪ್ತಿಗೆ ಈ ಕಾವ್ಯಗಳು ಅಲ್ಲಿ ಬಂದಿಲ್ಲದಿರುವುದೇ ಕಾರಣವಿರಬಹುದು"[3] ಎಂದಿದ್ದಾರೆ. ಅಂದರೆ ಇವು ಬಹುಕವಿ ಕೃತ ಜನಪದ ಕಾವ್ಯವಾಗಿರದೆ ಏಕಕವಿ ಕೃತ ಶಿಷ್ಟಕಾವ್ಯವಾಗಿವೆ ಎಂಬುದು ಇಲ್ಲಿನ ಧ್ವನಿತಾರ್ಥ.

ಈ ಕಾವ್ಯಗಳ ಕರ್ತೃತ್ವದ ಬಗೆಗೂ ಗದ್ದಿಗೆಯವರಲ್ಲಿ ಏಕಾಭಿಪ್ರಾಯವಿಲ್ಲ. ಅವರೆ ಒಂದೆಡೆ ಹಂತಿಯ ಹಾಡುಗಳಲ್ಲಿರುವ ಈ ಶರಣರನ್ನು ಕುರಿತ ಕಾವ್ಯಗಳನು ಕುರಿತು "ಈ ಹಾಡುಗಳು ಬೆಳುವಲದ ತುಂಬೆಲ್ಲ ಹೇರಳವಾಗಿ ಸಿಗುವುವು. ಮನೆಯಲ್ಲಿ ನನ್ನ ತೀರ್ಥರೂಪರೇ ಈ ನೂರೊಂದು ಶಿವಶರಣರ ಹಾಡುಗಳನ್ನು ಹಂತಿಯಲ್ಲಿ ಹಾಡುತ್ತಿದ್ದುದರಿಂದ ಅವುಗಳಲ್ಲಿ ಹಲಕೆಲವು ಹಾಡುಗಳನ್ನು ಕೂಡಿಹಾಕಲು ಪ್ರಯತ್ನ ಮಾಡಲಾಗಿದೆ"[4] ಎಂದಿದ್ದಾರೆ. ಇದೇ ಕಾವ್ಯಗಳನ್ನು ಕುರಿತು ಅವರೇ ಮತ್ತೊಂದು ಕಡೆ

---

2. ಡಾ. ದೇವೇಂದ್ರಕುಮಾರ ಹಕಾರಿ : ಹಂತಿ ಹಾಡುಗಳು; ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೬. ಪುಟ : VIII - IX

3. ಪ್ರೊ.ಜೀ.ಶಂ. ಪರಮಶಿವಯ್ಯ : ಕನ್ನಡ ವೃತ್ತಿಗಾಯಕರ ಕಾವ್ಯಗಳು ; ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. ೧೯೮೧. ಪು. IXXIX

4. ಡಾ.ಬಿ.ಎಸ್. ಗದ್ದಗಿಮಠ, ಕನ್ನಡ ಜಾನಪದ ಗೀತೆಗಳು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ. ೧೯೬೯. ದ್ವಿತೀಯ ಮುದ್ರಣ ; ಪುಟ ೧೮೩

"ನೂರೊಂದು ಶಿವಶರಣರ ಹಂತಿಯ ಹಾಡುಗಳನ್ನು ಹಾಡಿದ ಇನ್ನೂ ಮೊನ್ನೆ ಮೊನ್ನೆ ಕೈಲಾಸವಾಸಿಯಾದ ನಿರಕ್ಷರ ಕವಿ ಸಾವಳಿಗೇಶ್ವರನೆಂದೇ ಹೇಳಬಹುದು"[5] ಎಂದು ಹೇಳುತ್ತಾರೆ.

ಇದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ : ಗದ್ದಗಿಮಠ ಅವರು ತ್ರಿಪದಿಯಲ್ಲಿರುವುದನ್ನೆಲ್ಲ ಜಾನಪದ ಎಂದು ಭಾವಿಸಿರಬಹುದು ಅಥವಾ ಜಯದೇವಿ ತಾಯಿ ಲಿಗಾಡೆಯವರು ತ್ರಿಪದಿಯಲ್ಲಿ 'ಸಿದ್ಧರಾಮೇಶ್ವರ ಪುರಾಣ'ವನ್ನು ಬರೆದಂತೆ ಯಾರೋ ಒಬ್ಬರು ಬರೆದಿರಬಹುದು. ಆ ಕಟ್ಟು ಗದ್ದಗಿಯವರ ಕೈಗೆ ಸಿಕ್ಕಿರಬಹುದು. ತ್ರಿಪದಿಯಲ್ಲಿದ್ದುದರಿಂದ ಗದ್ದಗಿಯವರು ಅದನ್ನೆಲ್ಲ ಜಾನಪದವೆಂದು ಉದಾರವಾಗಿ ಸ್ವೀಕರಿಸಿರಬಹುದು. ಆದರೆ ಗದ್ದಗಿಯವರೇ ಈ ಕಾವ್ಯಗಳನ್ನು ತನ್ನ ತಂದೆಯವರು ಹೇಳಿದರೆಂದು ಒಂದು ಕಡೆ ಹೇಳಿ ಮತ್ತೊಂದು ಕಡೆ ಈ ಕಾವ್ಯಗಳನ್ನೆಲ್ಲ ದಿವಂಗತ ಸಾವಳಿಗಯ್ಯನವರು ಹೇಳುತ್ತಿದ್ದರೆಂದು ದ್ವಂದ್ವ ಹೇಳಿಕೆಯಿಂದ ಗೊಂದಲ ಉಂಟುಮಾಡಿದ್ದೇಕೊ ತಿಳಿಯದು. ಹೀಗೆ ಗೊಂದಲ ಸೃಷ್ಟಿಯಾಗಿ ಇವುಗಳ ಕರ್ತೃತ್ವದ ಬಗೆಗೆ ಹಾಗೂ ಇವುಗಳು ಜಾನಪದವೆ? ಅಲ್ಲವೆ? ಎಂಬುದು ವಿವಾದದ ಸಂಗತಿಯಾಗುತ್ತದೆ. ಡಾ.ದೇವೇಂದ್ರಕುಮಾರ ಹಕಾರಿ ಮತ್ತು ಪ್ರೊ.ಜೀ.ಶಂ. ಪರಮಶಿವಯ್ಯನವರ ಅಭಿಪ್ರಾಯಗಳನ್ನು ಗಮನಿಸಿದರೆ ಈ ಕಾವ್ಯಗಳು ಕೃತಕ ಜಾನಪದ ಸೃಷ್ಟಿ ಎಂದು ಹೇಳುವುದು ಅನಿವಾರ್ಯವೆನಿಸುತ್ತದೆ.

ಶರಣರ ಕ್ರಾಂತಿ ನಡೆದದ್ದು ಉತ್ತರ ಕರ್ನಾಟಕದಲ್ಲಾದರೂ ಅವರ ಆಶಯಗಳನ್ನು ಹೊತ್ತುಕೊಂಡು ದಕ್ಷಿಣಕ್ಕೆ ಬಂದ ಶರಣರೇ ನಮ್ಮ ಧಾರ್ಮಿಕ ವೃತ್ತಿಗಾಯಕರಲ್ಲಿ ಅಗ್ರಗಣ್ಯರಾದ ದೇವರಗುಡ್ಡರು ಮತ್ತು ನೀಲಗಾರರು. ಇವರು ಹಾಡುವ ಕಾವ್ಯಗಳಲ್ಲದೆ ಹೆಂಗಸರ ಹಾಡ್ಗತೆಗಳಲ್ಲೂ ಶರಣರನ್ನು ಕುರಿತ ಕಥಾಕುಸುಮಗಳು ಅರಳಿ ಘಮಘಮಿಸುತ್ತಿವೆ.

ಈವರೆಗೂ ನಮ್ಮಲ್ಲಿ ಶರಣರನ್ನು ಕುರಿತ ಜನಪದ ಕಾವ್ಯಗಳನ್ನು ಕರಾಕ್ಯ, ಗೊ.ರು. ಚನ್ನಬಸಪ್ಪ, ಸ.ಚ. ಮಹದೇವನಾಯಕ, ಎಚ್.ಎಲ್. ನಾಗೇಗೌಡ, ಜೀಶಂಪ, ಡಿ. ಲಿಂಗಯ್ಯ, ಡಾ. ಶಿವಾನಂದ ಗುಬ್ಬಣವರ, ಬಿ.ನಂ. ಚಂದ್ರಯ್ಯ, ದೇವೇಂದ್ರಕುಮಾರ ಹಕಾರಿ, ಬೀಡನಹಳ್ಳಿ ಚೌಡೇಗೌಡ, ಕ್ಯಾತನಹಳ್ಳಿ ರಾಮಣ್ಣ, ಬಸವರಾಜ ನೆಲ್ಲೀಸರ, ಪಂಡಿತ ಮ. ಮಲ್ಲಪ್ಪ, ಎಂ.ಎಸ್. ಕಲ್ಲಪ್ಪ, ಬಸವನಗೌಡ ಪಾಟೀಲ, ಕೆ. ವಿರೂಪಾಕ್ಷಗೌಡ, ಹೊರೆಯಾಲ ದೊರೆಸ್ವಾಮಿ, ಮಲೆಯೂರು ಗುರುಸ್ವಾಮಿ, ದೇವಯ್ಯ ಹರವೆ, ಡಾ. ಚಕ್ಕೆರೆ ಶಿವಶಂಕರ್ ಮುಂತಾದವರೆಲ್ಲ ಅಪಾರ ಪ್ರಮಾಣದಲ್ಲಿ ಕಲೆಹಾಕಿದ್ದಾರೆ. ಬೇರೆ ಬೇರೆ ಸಂಕಲನಗಳಲ್ಲಿರುವ ಈ ಎಲ್ಲ ಕಾವ್ಯಗಳೂ ಶರಣಕಾವ್ಯಗಳ ತೌಲನಿಕ ಅಧ್ಯಯನಕ್ಕೆ ಅನನ್ಯ ಆಕರಗಳೆನಿಸಿವೆ.

೩. ಜನಪದ ಶರಣಕಾವ್ಯಗಳು

ಆದಿ ಬಸವೇಶ್ವರ

ಈ ಬ್ರಹ್ಮಾಂಡದ ಸೃಷ್ಟಿ ಎಂದಾಯಿತು ? ಹೇಗಾಯಿತು ? ಯಾರಿಂದಾಯಿತು? ಏಕಾಯಿತು? ಎಂಬೆಲ್ಲ ಪ್ರಶ್ನೆಗಳಿಗೆ ಈ ಅನಂತಾನಂತ ಕಾಲದೇಶಗಳಲ್ಲಿ ಉತ್ತರಿಸಲು ನಾವು ಎಷ್ಟರಮಟ್ಟಿಗೆ ಸಮರ್ಥರು? ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದರೂ ಮಾನವನಿಗಿರುವ ಪ್ರಕೃತಿದತ್ತ ಚಿಂತನಾಸಾಮರ್ಥ್ಯಕ್ಕೆ ಈ ಬ್ರಹ್ಮಾಂಡ ಒಂದು ಭೂಮಾದ್ಭುತ ವಿರಾಟ್‌ವಿಸ್ಮಯ. ಏಕೆಂದರೆ ಈ ಅನಂತಾಕಾಶದಲ್ಲಿ ಉರಿಯುವ ಸೂರ್ಯ, ತಂಪೆರೆಯುವ ಚಂದ್ರ, ಕಿಕ್ಕಿರಿದ ಗ್ರಹತಾರಿಕೆಗಳು, ಹಗಲಿರುಳುಗಳು, ದಟ್ಟೈಸಿದ ಕಾರ್ಮುಗಿಲಿನ ಎದೆಯಾಳದ ಸಿಡಿಲು, ಗಡಚಿಕ್ಕುವ ಗುಡುಗು, ಹಿಮಪಾತದ ಅವತಾರ, ಸುರಿಯುವ ಮಳೆ, ಹರಿಯುವ ಹೊಳೆ, ಕೊರೆಯುವ ಚಳಿ, ಉರಿಚಿಮ್ಮುವ ಜ್ವಾಲಾಮುಖಿ ; ಇತ್ತ ಸೃಷ್ಟಿಯಲ್ಲಿ ಉಕ್ಕುವ ಕಡಲು, ಬಾನ್ನೆಕ್ಕುವ ಗಿರಿಶಿಖರಗಳು, ನೆಲದಗಲಕ್ಕೂ ಬೆಳೆದಿರುವ ತರುಲತಾಗುಲ್ಮಗಳು, ಚಿತ್ರವಿಚಿತ್ರವಾದ ಕ್ರಿಮಿಕೀಟಗಳು, ಪಶುಪಕ್ಷಿಗಳು, ಅನಂತಾನಂತ ಉಸಿರ್ಜಾಲಗಳು - ಈ ಎಲ್ಲವುಗಳೂ ಏಕೆ, ಹೇಗೆ, ಎಂದು ಯಾರಿಂದ ಸೃಷ್ಟಿಯಾದವು? ಇವುಗಳ ಮೂಲ ಯಾವುದು ? ಇವುಗಳೆಲ್ಲ ಮೂಲದಲ್ಲಿ ಹೇಗಿದ್ದವು ? ಹೇಗಾದವು ? ಹೇಗೆ ಅಳಿಯುವುವು ? ಎಂಬ ಏನೊಂದೂ ತಿಳಿಯದಿದ್ದರೂ ಇಂಥ ಸುರಮ್ಯ ಸುಮಧುರ ಸುಂದರ ಭೀಮ ಭೀಕರ ರುದ್ರ ರಮಣೀಯ ಕಠೋರ ಕ್ರೌರ್ಯಭೈರವ ಭ್ರುಕುಟಿತ ನಿಸರ್ಗದ ಮಡಿಲಲ್ಲಿ

---

5. ಅದೇ ಪು.೨೧೨-೨೧೩

ಮಗುವಾಗಿರುವ ಮಾನವನು ತಾನು ಹುಟ್ಟಿದ ಆಕಸ್ಮಿಕಕ್ಕೆ ಬೆರಗಾಗುತ್ತಿರುವುದಲ್ಲದೆ ಇವುಗಳೆಲ್ಲವುಗಳ ಮೂಲವನ್ನು ಬೆದಕಲು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದಾನೆ. ಅಂಥ ಪ್ರಯತ್ನದ ಫಲವೆಂದರೆ : 'ವಿಜ್ಞಾನಪೂರ್ವಯುಗದ ವಿಜ್ಞಾನವೆನಿಸಿದ ಪುರಾಣಗಳು' ಹಾಗೂ ಆ ಪುರಾಣಗಳನ್ನು ಎಡತಾಕುತ್ತ ಬೆಳೆದ ತತ್ತ್ವಜ್ಞಾನ ಮತ್ತು ವಿಜ್ಞಾನಗಳು.

ಬಗೆಹರಿಯದ ಈ ಬ್ರಹ್ಮಾಂಡದ ಸೃಷ್ಟಿಯ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದ ಆರ್ಷೇಯರು ಅವರದೇ ಆದ ಜ್ಞಾನವನ್ನು ನಮ್ಮ ಮುಂದಿಟ್ಟಿದ್ದಾರೆ. ಪೌರಾಣಿಕ ಹಿನ್ನೆಲೆಯಲ್ಲಿ ಭೂಮಿಯ ಸೃಷ್ಟಿಯ ಬಗೆಗೆ ಮನು ಹೀಗೆ ಹೇಳುತ್ತಾನೆ : ಆದಿಯಲ್ಲಿ ವಿಶ್ವವು ಕತ್ತಲೆಯಿಂದ ಆವರಿಸಲ್ಪಟ್ಟಿದ್ದಿತು. ಎಲ್ಲೆಲ್ಲೂ ಶೂನ್ಯ. ವಿಶ್ವವೇ ನಿದ್ರಾವಸ್ಥೆಯಲ್ಲಿದ್ದಂತೆ ಕಾಣುತ್ತಿತ್ತು. ಅನಂತ ವ್ಯಾಪಿಯಾದ ಸ್ವಯಂಭೂ ಕತ್ತಲನ್ನು ಹೋಗಲಾಡಿಸಿ ಪಂಚಭೂತಗಳನ್ನು ಸೃಷ್ಟಿಸಿದ. ಮೊದಲು ಅವನು ಅನಂತ ಜಲವನ್ನು ಸೃಷ್ಟಿಸಿ ಆ ಅನಂತಸಾಗರದಲ್ಲಿ ಆದಿ ಬೀಜವನ್ನು ನೆಟ್ಟನು. ಬೀಜವು ಅಂಡವಾಯಿತು. ಅಂಡದಲ್ಲಿ ಸ್ವಯಂಭೂ ಬ್ರಹ್ಮನಾಗಿ ಹುಟ್ಟಿದ. ಬ್ರಹ್ಮನು ತನ್ನ ಇಚ್ಛೆಯಿಂದ ಆ ಅಂಡವನ್ನು ಎರಡು ಭಾಗವಾಗಿ ವಿಭಜಿಸಿದ. ಅದರಲ್ಲಿ ಒಂದು ಭಾಗ ಸ್ವರ್ಗವಾಯಿತು; ಮತ್ತೊಂದು ಭಾಗ ಭೂಮಿಯಾಯಿತು. ಅವುಗಳ ನಡುವೆ ಬ್ರಹ್ಮ ಆಕಾಶವನ್ನು ನಿರ್ಮಿಸಿದ. ಅಂಡದಿಂದ ಹೊರಬಂದ ಬ್ರಹ್ಮ ಸೃಷ್ಟಿಯಲ್ಲಿ ತೊಡಗಿದ[6] 'ರಾಮಾಯಣ'ದಲ್ಲಿ ಒಂದು ಕಡೆ ಭೂಮಿಯ ಸೃಷ್ಟಿಯ ಬಗೆಗೆ ಹೀಗೆ ಹೇಳಿದೆ : ಆದಿಯಲ್ಲಿ ಎಲ್ಲೆಲ್ಲೂ ಜಲರಾಶಿ-ಅನಂತಸಾಗರ. ಆ ಸಾಗರದಲ್ಲಿ ಭೂಮಿ ಸೃಷ್ಟಿಯಾಯಿತು. ಆ ತರುವಾಯ ಸ್ವಯಂಭೂ ಬ್ರಹ್ಮ ಮತ್ತು ದೇವತೆಗಳು ಹುಟ್ಟಿದರು ಹಾಗೂ ಋಷಿಗಳನ್ನು ಸೃಷ್ಟಿಸಿದ[7]. ಇಂಥ ಅನೇಕ ಪುರಾಣಕಥೆಗಳು ನಮ್ಮಲ್ಲಿವೆ. ಹೀಗಿದ್ದರೂ ವಿಜ್ಞಾನದ ವೈಚಾರಿಕ ದೃಷ್ಟಿ ಒಗ್ಗದವರಿಗಾಗಿ, ತತ್ತ್ವಜ್ಞಾನದ ಎತ್ತರಕ್ಕೆ ಏರಲಾಗದವರಿಗಾಗಿ ವಿಶ್ವದ ಪ್ರತಿಯೊಂದು ವಿಚಿತ್ರ ವಿಶೇಷಗಳಿಗೂ ಪುರಾಣಕಥೆಗಳನ್ನು ಕಟ್ಟಿ ಅವುಗಳ ಮೂಲಕ ವಿವರಣೆ ಕೊಡಬೇಕಾಗಿ ಬಂತು. ಅಂಥ ಪುರಾಣ ಕಥೆಗಳು ನಮ್ಮ ಜನಪದರಲ್ಲೂ ಅಪಾರವಾಗಿವೆ ; 'ಮಲೆಯ ಮಾದೇಶ್ವರ' ಮತ್ತು 'ಮಂಟೇಸ್ವಾಮಿ' ಮಹಾಕಾವ್ಯಗಳಲ್ಲೂ ಜಗತ್‌ಸೃಷ್ಟಿಯ ಕಥೆಗಳು ಅಪೂರ್ವವಾಗಿವೆ.

ಇಂಥದೇ ಪರಂಪರೆಯ ಜನಪದ ಕಾವ್ಯ 'ಆದಿಬಸವೇಶ್ವರ'ದಲ್ಲಿ ಬಂದಿರುವ 'ಉರಿಯಾದೇವಿ-ಉರಿಯಾದೇವರ' ಕಲ್ಪನೆ ಜೆಳಕಿನಿಂದ ಜೀವೋತ್ಪತ್ತಿಯಾಯಿತೆಂಬ ವಿಷಯಕ್ಕೆ ಸಂಕೇತರೂಪವಾಗಿ ಬಂದಿದೆ. ಈ ಇಬ್ಬರೂ ತಾಯಿ-ಮಗ ಎಂಬ ಕಲ್ಪನೆಯಲ್ಲೂ ಸೃಷ್ಟಿಗೆ ಆದಿಯಾದವಳು ಸ್ತ್ರೀ ಎಂಬ ಆದ್ಯತೆಯನ್ನು ಎತ್ತಿಹೇಳುವುದೇ ಆಗಿದೆ. ಇವರಿಬ್ಬರಿಂದ ಕೆರೆತಟ್ಟೆ(ಸಮುದ್ರ) ಸೃಷ್ಟಿಯಾಗುತ್ತದೆ. ಉರಿಯಾದೇವಿ ತನ್ನ ಸೃಷ್ಟಿ ಸಾಮರ್ಥ್ಯದಿಂದ ಸಮುದ್ರದ ಮೇಲೆ ಅಂಡಾಕಾರದ ಭೂಮಿಯನ್ನು ಸೃಷ್ಟಿಸುತ್ತಾಳೆ. ಅಲ್ಲದೆ ಅದರ ಮೇಲೆ ಹುಲ್ಲನ್ನು ಬೆಳಸುತ್ತಾಳೆ. ಆ ಹುಲ್ಲನ್ನು ತಿನ್ನಲು ಬಸವಣ್ಣನನ್ನು ಸೃಷ್ಟಿಸು ಎಂದು ತನ್ನ ಮಗ ಉರಿಯಾದೇವನಿಗೆ ತಿಳಿಸುತ್ತಾಳೆ. ಅವನು ತನ್ನ ಬೆವರಿನಿಂದ ಬಸವನನ್ನು ಸೃಷ್ಟಿಸಿ ಅಂಡಾಕಾರದಲ್ಲಿರುವ ಭೂಮಿಯ ಮೇಲೆ ಹುಲ್ಲು ಮೇಯಲು ಬಿಡುತ್ತಾನೆ. ಬಸವ ಹುಲ್ಲನ್ನು ಮೇಯುತ್ತದೆ. ಆಗ ಭೂಮಿದೇವಿ 'ನನ್ನೆದೆಯ ಮೇಲೆ ಬೆಳೆದ ಹುಲ್ಲನ್ನು ಮೇದ ಮೇಲೆ ನೀನು ನನಗೆ ಗಂಡನಾದೆ' ಎನ್ನುತ್ತಾಳೆ. ಉರಿಯಾದೇವಿ ಭೂಮಿಯನ್ನು ಸೃಷ್ಟಿಸುವುದು, ಉರಿಯಾದೇವ ಬಸವನನ್ನು ಸೃಷ್ಟಿಸುವುದು ಭೋಗ ಮತ್ತು ಭೋಗಿಗಳನ್ನು ಸೃಷ್ಟಿಸಿದುದರ ಪ್ರತೀಕವಾಗಿ ಮೂಡಿಬಂದಿದೆ. ಅಲ್ಲದೆ ಭೂಮಿ ಮತ್ತು ಬಸವರ ಸಂಬಂಧವು 'ಈಡಿಪಸ್ ಕಾಂಪ್ಲೆಕ್ಸ್'ನ್ನು ನೆನಪಿಗೆ ತರುತ್ತದೆ. ತಾಯಿಯ ಜೊತೆ ಲೈಂಗಿಕ ಸಂಬಂಧವನ್ನು ಒಲ್ಲದ ಬಸವ ಭಯದಿಂದ ತತ್ತರಿಸಿಹೋಗುತ್ತಾನೆ. ದಿಗಿಲುಗೊಂಡ ಅವನು ತಾಯಿ-ಮಕ್ಕಳ ಸಂಬಂಧವನ್ನು ಅಪವಿತ್ರಗೊಳಿಸುವುದು ಬೇಡವೆಂದು ಬಗೆಬಗೆಯಾಗಿ ಪ್ರಾರ್ಥಿಸುತ್ತಾನೆ. ಬಹುಶಃ ಸಂಸ್ಕೃತಿ ಪೂರ್ವದ ಪ್ರಾಕೃತಿಕ ಬದುಕಿನಲ್ಲಿದ್ದ ಈ ಸಂಬಂಧವನ್ನು ಅನಂತರದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿರಾಕರಿಸುವ ಪ್ರಕ್ರಿಯೆ ಇದರಲ್ಲಿದೆ. ಆದರೆ ಮುಂದೆ ನರಕಲಿಗೆ ನಮ್ಮ ಸಂಬಂಧ ಅನಿವಾರ್ಯ ಎಂದು ಭೂದೇವಿ ಉದ್ಘೋಷಿಸುತ್ತಾಳೆ. ಆದರೂ ಬಸವ ಅವಳ ಮಾತನ್ನು ಧಿಕ್ಕರಿಸಿ ಅವಳಿಂದ ತಪ್ಪಿಸಿಕೊಳ್ಳಲು ಉಪಾಯ ಹುಡುಕುತ್ತಾನೆ. ಒತ್ತಡಕ್ಕೆ ಮಣಿಯದ ಅವನು ಎತ್ತ ಕಡೆಗಾದರೂ ಓಡಿ ತಪ್ಪಿಸಿಕೊಳ್ಳಬಹುದೆಂದು ಭಾವಿಸುತ್ತಾನೆ. ಹಾಗೆ ನಿರ್ಧರಿಸಿ ಓಡಿಹೋಗಲು ನುಗ್ಗುತ್ತಾನೆ. ಬಸವ ಎತ್ತೆತ್ತ ಓಡಿ ಹೋಗುತ್ತಾನೊ ಅತ್ತತ್ತ ಕಡೆಗೆಲ್ಲ ಅಂಡಾಕೃತಿಯಲ್ಲಿದ್ದ ಭೂಮಿ ಮೈಯನ್ನು ಚಾಚುತ್ತ ಅರಳಿಕೊಳ್ಳುತ್ತದೆ. ಈಗ ಬಸವ ನಿರುಪಾಯನಾಗುತ್ತಾನೆ. ಇದರಿಂದ ಸಿಟ್ಟುಗೊಂಡ ಭೂದೇವಿ :

---

6. Rev. E. Osborn Martin, The Gods of India : J.M. Dent and Sone Ltd., London. 1924. p.31.
7. Griffith : Ramayana II. 110-112

ನನ್ನ ಎದೆ ಮ್ಯಾಲೆ ಸುವ್ಯಲಾಲಿ
ಎದೆಯ ಕೆರ್ದು ನೀನು
ನರಕಲೀಗನ್ನ ಮಾಡು
ನನ್ನ-ಎದೆಯೆಲ್ಲು ಭಾಗ ಮಾಡಿ
ಉಳಬೇಕು ಬೆಳೀಬೇಕು
ನರಕಲಿಗನ್ನವಾಗಬೇಕು

ಎಂದು ಶಪಿಸುತ್ತಾಳೆ.

ಅಂಡಾಕಾರದಲ್ಲಿದ್ದ ಭೂಮಿ ಬೇರೆ ಬೇರೆ ಕಡೆಗೆಲ್ಲ ಹಬ್ಬಿ ಚಪ್ಪಟೆಯಾಗಿ ಹರಡಿಕೊಂಡುದರ ಬಗೆಗೆ ಸುಂದರವಾದ ವಿವರಣಾತ್ಮಕ ಕಥೆ ಇದಾಗಿದೆ. ಭೂಮಿಯನ್ನು ಎತ್ತುಗಳು ಉಳುವುದಕೆ ನಿಮಿತ್ತವಾಗುವ ಕಾರ್ಯಕಾರಣ ಸಂಬಂಧವನ್ನೂ ಇದು ಸೊಗಸಾಗಿ ಹೇಳಿದೆ.

ಮುಂದೆ ಉರಿಯಾದೇವಿಯಿಂದ ಈಶ್ವರ-ಪಾರ್ವತಿಯರ ಸೃಷ್ಟಿಯಾಗುತ್ತದೆ. ಈ ಇಬ್ಬರಿಂದ 'ನರಕಲಿ' ಆಗಬೇಕಿರುವುದರಿಂದ ಪಾರ್ವತಿ ಸೃಷ್ಟಿಸಿದ ಹೆಣ್ಣುಗೊಂಬೆ ಮತ್ತು ಈಶ್ವರ ಸೃಷ್ಟಿಸಿದ ಗಂಡುಗೊಂಬೆಗಳನ್ನು ಗಂಡಹೆಂಡಿರಾಗುವಂತೆ ಮದುವೆ ಮಾಡುತ್ತಾರೆ. ಇಲ್ಲಿ ಆಧುನಿಕ ಕಲ್ಪನೆಗೆ ಹೊರತಾದ ಅಣ್ಣ-ತಂಗಿಯರ ವಿವಾಹ ಸಂಬಂಧ ಏರ್ಪಟ್ಟಿದೆ.

ಈ ದಂಪತಿಗಳನ್ನು ಈಶ್ವರ-ಪಾರ್ವತಿಯರು ಕಣ್ತುಂಬ ನೋಡಿ

ಈ ಇಬ್ಬಾರ ಮಕ್ಕಳ ಸುವ್ಯಲಾಲಿ
ಮದುವೇಯ ಮಾಡೀವಿ
ಅವ್ರ-ಅಡ್ತಾನ ಬಡ್ತಾನ
ಅವ್ರ-ಸಿರಿತನ ಹಿರಿತನ
ಅವ್ರ ಕಷ್ಟಾಸುಖಕೆಲ್ಲ
ನಾವು-ಒಪ್ಪಂದ ಮಾಡಬೇಕು
ಹಂಗಂತ ಅಂದುಕೊಂಡು
ಕೇಳಿ ಕೇಳಿ ಮಕ್ಕಾಳೆ
ಬಸವಣ್ಣನ ಕಟ್ಕಿಕೊಂಡು
ಭೂಮೀಯ ಉತ್ತಾರೆ
ಬೀಜಾವ ಬಿತ್ತಾರೆ
ಬೇಕಾದ್ದ ಬೆಳೆ ಬೆಳ್ದು
ಮೂರು ಲೋಕಕು ನೀವು
ಅನ್ನಾವ ಕೊಡಬವುದು
ಅನ್ನದಾನ ಮಾಡಿ ನೀವು
ಪುಣ್ಯವಂತರಾಗಿರಪ್ಪ"

ಎಂದು ಆಶೀರ್ವದಿಸುತ್ತಾರೆ. 'ನೇಚರ್' ಮಾತ್ರವೇ ಆಗಿದ್ದ, ಅಂದರೆ ಪ್ರಾಣಿ ಮಾತ್ರವೆ ಆಗಿದ್ದ ಆದಿ ಮಾನವನನ್ನು 'ಅಗ್ರಿಕಲ್ಚರ್' ಕಡೆಗೆ ಮುನ್ನಡೆಸುವ ಜೀವನವಿಕಾಸದ ಚಿತ್ರ ಇಲ್ಲಿದೆ. ವನ್ಯ ಮೃಗಗಳನ್ನು ಪಳಗಿಸಿ ಸಾಧುಪ್ರಾಣಿಗಳನ್ನಾಗಿಸಿಕೊಂಡು ತನ್ನ ಉದ್ದೇಶಕ್ಕೆ ತಕ್ಕಂತೆ ಬಳಸಿಕೊಂಡು ವಿಧಾನವನ್ನು ಇದು ಹೇಳುತ್ತಿದೆ.

ಅದೇನಾದರೂ ಇರಲಿ, ಈ ಆದಿಕಥೆ ಥಟ್ಟನೆ ಈಶ್ವರನ ಲಿಂಗಕ್ಕೆ ಎದುರಾಗಿ ಬಸವನ ವಿಗ್ರಹ ಇರುವುದಕ್ಕೆ ಕಾರಣವನ್ನು ಹೇಳುವ ವಿವರಣಾತ್ಮಕ ಕಥೆಯಾಗಿ ಮುಂದುವರೆದು ತಾನು ತಾಯಿಯನ್ನು ಕೂಡಿದ ಕರ್ಮವನ್ನು ಕಳೆದುಕೊಳ್ಳಲು ಬಸವ,

ಕಲ್ಯಾಣದಲ್ಲುಟ್ಟಿ ಸುವ್ಯಲಾಲಿ
ಕರ್ಮ ಕಳೀಬೇಕಂತ
ಯೋಚಿನೆಯ ಮಾಡುತಾರೆ

ಪ್ರಾಕೃತಿಕ ಬದುಕಿಗೆ ಅನಂತರದ ಸಂಸ್ಕೃತಿ ಒಡ್ಡಿದ ತಾಯಿ-ಮಗ ಸಂಬಂಧವನ್ನು ನಿರಾಕರಿಸುವುದಕ್ಕೆ ವಿವರಣೆಯ ಕಥೆಯಾಗಿಯೂ ಪ್ರಾಚೀನ ಜೀವನ ವಿಧಾನದ ಪಳೆಯುಳಿಕೆಯಾಗಿಯೂ ಈ ಕಾವ್ಯ ಗೆಲ್ಲುತ್ತದೆ. ಇದಕ್ಕಿಂತಲೂ ಮುಖ್ಯವಾಗಿ ಪಶುಪಕ್ಷಿಯಾದಿಯಾಗಿ ಮಾನವನವರೆಗೂ ಇರುವ ಎಲ್ಲ ಜೀವರಾಶಿಗಳಿಗೂ ಈ ಭೂಮಿಯೇ ತೊಟ್ಟಿಲು ಅರ್ಥಾತ್ ಆಶ್ರಯ ತಾಣ. ಆದ್ದರಿಂದಲೆ ಇವೆಲ್ಲಕ್ಕಿಂತಲೂ ಭೂಮವಾದುದ್ದು ಭೂಮಿ. ನೆಲದಿಂದಲೆ ಉತ್ಪತ್ತಿಯಾಗಿ, ನೆಲದಲ್ಲಿಯೇ ಬದುಕಿ ಬಾಳಿ, ಕಡೆಗೆ ನೆಲದಲ್ಲಿಯೇ ಸೇರಿಹೋಗುವ ಜೀವನಚಕ್ರದಲ್ಲಿನ ಜೀವರಾಶಿಗಳನ್ನೆಲ್ಲ ತನ್ನೊಡಲಿನಲ್ಲಿರಿಸಿಕೊಂಡಿರುವ 'ಈ ನೆಲ ದೊಡ್ಡದು'ಎಂಬುದನ್ನು ಸಾದರಪಡಿಸುವ ಉದ್ದೇಶ ಈ ಕಾವ್ಯದಲ್ಲಿದೆ. ಬೆವರಿನಿಂದ ಬಸವಣ್ಣನನ್ನು ಪಡೆಯುವ ಕ್ರಮ ಶ್ರಮ ಸಂಸ್ಕೃತಿಯ ಹಿರಿಮೆಯನ್ನು ಕೊಂಡಾಡುವ ವಿಧಾನವೇ ಆಗಿದೆ. 'ಶ್ರಮದಿಂದಲೆ ಜಗತ್ತಿನ ಬೆಳಕು' ಎಂಬ ಆಶಯ ಇಲ್ಲಿ ಸೂಕ್ಷ್ಮವಾಗಿ ಒಡಮೂಡಿದೆ. ಭೂಮಿಯ ಜೀವಂತಿಕೆ ಇರುವುದು ಪ್ರಕೃತಿ-ಪುರುಷರ ಸಮ್ಮಿಲನದಿಂದ ಎಂಬ ಕಲ್ಪನೆಯೂ ಇಲ್ಲಿದೆ. ಭೂಮಿಯ ಮೇಲಿನ ಆಹಾರವೆಲ್ಲವೂ ತಾಯಿ ಎದೆಹಾಲಿಗೆ ಸಮಾನ ಎಂಬ ಮಾತು ಆಹಾರ ಪದಾರ್ಥಗಳ ಮಹತ್ವವನ್ನೂ ಸೂಚಿಸುತ್ತದೆ.

ಕಲ್ಯಾಣದ ಬಸವಣ್ಣ

ನಮ್ಮ ಜನಪದ ಗಾಯಕರು ಬಸವಣ್ಣನವರನ್ನು ಕುರಿತ ಹರಿಕಥೆಗಳನ್ನು ಕೇಳಿದ್ದಾರೆ : ನಾಟಕಗಳನ್ನು ನೋಡಿದ್ದಾನೆ; ಕೆಲವೊಮ್ಮೆ ಅಕ್ಷರಸ್ಥರು 'ಬಸವಪುರಾಣ'ದಂಥ ಕಾವ್ಯವನ್ನು ವಾಚನ ಮಾಡುತ್ತಿರುವಾಗ ಕುಳಿತು ಅದನ್ನು ಕಿವಿಗೆ ಹಾಕಿಕೊಂಡಿದ್ದಾರೆ; ಯಕ್ಷಗಾನಗಳಲ್ಲಿ ತಾವೂ ಕುಣಿದು ಕುಪ್ಪಳಿಸಿದ್ದಾರೆ. ಹೀಗೆ ಹತ್ತಾರು ಬಗೆಯ ಪ್ರಭಾವಕ್ಕೆ ಸಿಕ್ಕಿದ ಗಾಯಕರು ಆ ಕಥಾಭಾಗಗಳನ್ನು ತಮ್ಮ ವಾದ್ಯಕ್ಕೆ, ತಮ್ಮ ಗಾಯನ ಕೌಶಲಕ್ಕೆ ತಕ್ಕಂತೆ ಅಳವಡಿಸಿಕೊಂಡು ಹಾಡಿದ್ದಾರೆ. ಅಂಥ ಪ್ರಭಾವದಿಂದ ಹುಟ್ಟಿಕೊಂಡಿರುವ ಕಾವ್ಯ 'ಕಲ್ಯಾಣದಣ್ಣ ಬಸವಣ್ಣ'.

'ಕಲ್ಯಾಣದಣ್ಣ ಬಸವಣ್ಣ' ಕಾವ್ಯದ ಕಥಾವಸ್ತು ನಾಟಕೀಯವಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಶಿವಸೇವಾನಿರತನಾಗಿದ್ದ ನಂದಿಗೆ ನರಲೋಕದಲ್ಲಿ ಕರ್ಮ ಹೆಚ್ಚಿ ಕತ್ತಲು ಕವಿದಿರುವ ಕಷ್ಟ ಅರಿವಿಗೆ ಬಂದು ಬೇಗುದಿಗೊಳ್ಳುತ್ತಾನೆ. ಕತ್ತಲನ್ನು ಸರಿಸಲು ಬೆಳಕನ್ನು ಹರಿಸಲು ತಾನು ಧರೆಗೆ ಹೋಗಿ ಬರುವುದಾಗಿ ಹೇಳುತ್ತಾನೆ. ಪರಮೇಶ್ವರನು ನಂದಿಯ ಇಚ್ಛೆಯನ್ನು ಮೆಚ್ಚಿ ಹೋಗಿ ಬಾರೆಂದು ಹರಸುತ್ತಾನೆ. ಜೊತೆಗೆ ಧರೆಯಿಂದ ಹರನ ಕೈಲಾಸಕ್ಕೆ ಬರುವಾಗ ಕೊರಳಲ್ಲಿ ಶಿವಲಿಂಗವಿಲ್ಲದಿದ್ದರೆ ಕೈಲಾಸಕ್ಕೆ ಪ್ರವೇಶವಿಲ್ಲ ಎಂಬ ಎಚ್ಚರಿಕೆಯನ್ನೂ ಕೊಡುತ್ತಾನೆ.

ನಂದಿ ಕರ್ಮಾಂಧಕಾರ ಕವಿದಿದ್ದ ವಸುಂಧರೆಗೆ ಬರುತ್ತಾನೆ. ಅರಣ್ಯ ಮಾರ್ಗದಲ್ಲಿ ಬರುತ್ತಿರುವಾಗ ಘನಶರಣನಾದ ದೊರೆ ದೀಪಕರಾಜ ಎದುರಾಗುತ್ತಾನೆ. ಪರಸ್ಪರ ಪರಿಚಯದನಂತರ ದೀಪಕರಾಜನು ಖಿನ್ನನಾಗಿರುವುದನ್ನು ನಂದಿ ಗುರುತಿಸುತ್ತಾನೆ. ಕನಿಕರಗೊಂಡ ನಂದಿ ರಾಜನ ಖಿನ್ನತೆಗೆ ಕಾರಣವನ್ನು ಕೇಳುತ್ತಾನೆ. ಬೇಟೆಗೆಂದು ಬಂದಿದ್ದ ದೀಪಕನು ಹಸಿವು ಬಾಯಾರಿಕೆಗಳಿಂದ ಬಳಲಿರುವುದಾಗಿ ತಿಳಿಸುತ್ತಾನೆ. ಅದಕ್ಕೆ ನಂದಿಯು ಪಕ್ಕದಲ್ಲೆ ಕಾಣುತ್ತಿದ್ದ ಸರೋವರದಲ್ಲಿ ನೀರು ಕುಡಿಯಲು ನಿರ್ದೇಶಿಸುತ್ತಾನೆ. ಅದಕ್ಕೆ ದೊರೆ ತಾನು ಲಿಂಗಪೂಜೆ ಮಾಡದ ಹೊರತು ಅನ್ನ ನೀರನ್ನು ಸೇವಿಸುವುದಿಲ್ಲವೆಂದೂ ತನ್ನಲ್ಲಿ ಶಿವಲಿಂಗವಿಲ್ಲವೆಂದೂ ಹೇಳುತ್ತಾನೆ. ರಾಜನ ಅಚಲ ಭಕ್ತಿ, ಲಿಂಗನಿಷ್ಠೆಗಳನ್ನು ಮೆಚ್ಚಿದ ನಂದಿ ತನ್ನಲ್ಲಿದ್ದ ಶಿವಲಿಂಗವನ್ನು ದೀಪಕನ ಕೈಗಿತ್ತು 'ಇದನ್ನು ನೆಲದ ಮೇಲಿರಿಸಬೇಡ. ಇದನ್ನು ಪೂಜಿಸಿ ನೀನು ಆಹಾರ ಸೇವಿಸಿದ ಮೇಲೆ ಇದನ್ನು ಹಿಂದಿರುಗಿಸು' ಎನ್ನುತ್ತಾನೆ. ನಂದಿಯ ಸೂಚನೆಯನ್ನು ಮರೆತ ದೀಪಕನು ಲಿಂಗವನ್ನು ಭೂಮಿಯ ಮೇಲಿಟ್ಟುಬಿಡುತ್ತಾನೆ. ಅದು ಭೂಸ್ಪರ್ಶವಾದ ಕೂಡಲೆ ಆಳಪಾತಾಳಕ್ಕೆ ಬೇರುಬಿಟ್ಟ ಹೆಮ್ಮರದಂತೆ ನೆಲಕ್ಕೆ ಕಚ್ಚಿಕೊಳ್ಳುತ್ತದೆ. ಅದನ್ನು ಕಿತ್ತುಮೇಲೆತ್ತಲಾಗುವುದಿಲ್ಲ. ಅಸಹಾಯಕನಾಗಿ ನಿಂತ ದೀಪಕರಾಜನನ್ನು ನೋಡಿದ ನಂದಿಯು ನೆಲೆ ಕಳೆದುಕೊಂಡಂತಾಗಿ ನಿವಾರಣೋಪಾಯವನ್ನರಿಯದೆ ಕೈಲಾಸದ ಕಡೆಗೆ ನಡೆಯುತ್ತಾನೆ. ಲಿಂಗದ ಮೇಲೆ ಲಿಂಗವಿಲ್ಲದೆ ಬಂದ ನಂದಿಯನ್ನು ಕೈಲಾಸದ ದ್ವಾರಪಾಲಕ ತಡೆಯುತ್ತಾನೆ. ಇದರಿಂದ ಕಸಿವಿಸಿಗೊಂಡ ಈಶ್ವರ 'ನಂದಿಯನ್ನು ತಡೆಯಬೇಡ. ಅವನು ಸಾಮಾನ್ಯನಲ್ಲ. ಭೂಲೋಕ ಯಾತ್ರೆ ಮಾಡಿ ಬಂದ ಅವನು ದಿತಿಶಂಭು (ದ್ವಿತೀಯಶಂಭು)' ಎಂದು ಕೊಂಡಾಡಿದ. ಇದನ್ನು ಕೇಳಿ ಸಹಿಸದೆ ಗೊಣಗಾಡಿದ ಗಣಗಳನ್ನು 'ನಿಜವನ್ನು ತಿಳಿಯ ಬೇಕಾದರೆ ನೀವು ಭೂಮಿಯಲ್ಲಿ ಹುಟ್ಟುವುದೇ ಸರಿ. ಕಲ್ಯಾಣ ಪಟ್ಟಣದ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗುವ

ನಂದಿಯಿಂದ ಅವನ ಹಿರಿಮೆ ಏನೆಂಬುದು ನಿಮಗೆ ತಿಳಿಯುತ್ತದೆ' ಎಂದು ಶಪಿಸಿ ಅವರನ್ನೆಲ್ಲ ಭೂಮಿಗೆ ಅಟ್ಟುತ್ತಾನೆ. ಹೀಗೆ ನಂದಿಯು ಬಸವಣ್ಣನಾಗಿ ಭೂಮಿಯಲ್ಲಿ ಹುಟ್ಟಲು ಕಾರಣಕ್ಕೆ ಒಂದು ಬುನಾದಿಯನ್ನು ನಿರ್ಮಿಸಲಾಗಿದೆ.

ನಂದಿಯು ಬಾಗೇವಾಡಿಯ ಭಕ್ತಶಿರೋಮಣಿಗಳಾದ ಮಾದರಸ-ಮಾದಲಾಂಬಿಕೆಯರ ಪುಣ್ಯಗರ್ಭದಲ್ಲಿ ಜನಿಸುತ್ತಾನೆ. ಆ ಮಗುವಿಗೆ ಬಸವಣ್ಣ ಎಂದು ನಾಮಕರಣ ಮಾಡುತ್ತಾರೆ. ತಮ್ಮ ಮಗ ಓಡಾಡುವ ವಯಸ್ಸಿಗೆ ಬಂದಾಗ ಓದಲು ಮೇದಿನಿ ಮಠಕ್ಕೆ ಕಳಿಸುತ್ತಾರೆ. ಒಮ್ಮೆ ಮಠದ ಹುಡುಗರೆಲ್ಲ ನದಿಯಲ್ಲಿ ಹಲಗೆ ಬಳಪವನ್ನು ತೊಳೆಯಲು ಹೋಗುತ್ತಾರೆ. ಅಲ್ಲಿ ಒಬ್ಬ ಹುಡುಗ ಕಾಲು ಜಾರಿ ನೀರಿಗೆ ಬಿದ್ದು ಸಾಯುತ್ತಾನೆ. ಅವನು ಸತ್ತುದನ್ನು ಕಂಡ ಹುಡುಗರೆಲ್ಲ ಎಲ್ಲಿ ತಮ್ಮ ಮೇಲೆ ಈ ಅಪವಾದ ಬರುತ್ತದೊ ಎಂದು ಹೆದರಿ ಬಸವಣ್ಣನೇ ಆ ಹುಡುಗನನ್ನು ಹೊಳೆಗೆ ತಳ್ಳಿದ ಎಂದು ಸುಳ್ಳು ಹೇಳುತ್ತಾರೆ. ಸತ್ಯವನ್ನು ಸಾಬೀತುಪಡಿಸಲು ಬಸವಣ್ಣ ಸತ್ತ ಹುಡುಗನನ್ನು ಬದುಕಿಸಿ ಅವನಿಂದ ನಿಜಸಂಗತಿ ಎಲ್ಲರಿಗೂ ತಿಳಿಯುವಂತೆ ಮಾಡುತ್ತಾನೆ. ಇದನ್ನು ಕಂಡ ಕುಚೇಷ್ಟೆಯ ಕೆಲ ಹುಡುಗರು ಮತ್ತೊಬ್ಬ ಹುಡುಗನನ್ನು ಸತ್ತವನಂತೆ ಮಲಗಿಸಿ ಬಸವಣ್ಣನ ಬಳಿಗೆ ಓಡೋಡಿ ಬಂದು, 'ಬಸವ ಆ ಹುಡುಗ ಸತ್ತು ಹೋಗಿದ್ದಾನೆ. ನೀನು ಸತ್ಯವಂತನೇ ಆಗಿದ್ದರೆ ಅವನನ್ನು ಮಾತಾಡಿಸು' ಎಂದು ಸವಾಲೊಡ್ಡುತ್ತಾರೆ. ಬಸವಣ್ಣ ಹುಡುಗನ ಹೆಸರನ್ನು ಕೂಗಿ ಕರೆಯುತ್ತಾನೆ. ಹುಡುಗನಿಂದ ಉತ್ತರ ಬರುವುದಿಲ್ಲ. ಆಗ ಆ ಹುಡುಗ ಸತ್ತಿರುವುದಾಗಿ ಬಸವಣ್ಣ ಹೇಳುತ್ತಾನೆ. ಆ ಎಲ್ಲ ಹುಡುಗರು ತಾವು ಗೆದ್ದವರಂತೆ 'ಸುಳ್ಳು' 'ಸುಳ್ಳು' ಎಂದು ಕೇಕೆ ಹಾಕಿ ಕುಣಿಯುತ್ತಾರೆ. ವಾಸ್ತವ ಸಂಗತಿಯೆಂದರೆ ಆ ಹುಡುಗ ನಿಜಕ್ಕೂ ಸತ್ತಿರುತ್ತಾನೆ. ಸರಸಕ್ಕೆ ಆಡಿದ ಆಟ ಮರಣಕ್ಕೆ ಕಾರಣವಾಗುತ್ತದೆ. ಆ ಹುಡುಗನ ತಾಯಿ-ತಂದೆಯರು ಬಸವಣ್ಣನ ಬಳಿಗೆ ಬಂದು ಗೋಳಾಡುತ್ತಾರೆ. ಅವರ ದುಃಖವನ್ನು ನೋಡಲಾಗದ ದಯಾಳು ಬಸವ ತನ್ನ ಸತ್ಯದಿಂದ ಸತ್ತ ಹುಡುಗನನ್ನು ಬದುಕಿಸುತ್ತಾನೆ. ಹೀಗೆ ಸಾಧುಸಂತರ ಸುತ್ತ ಹಲವಾರು ಪವಾಡ ಕಥೆಗಳು ಹುಟ್ಟಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ.

ವಯಸ್ಸಿಗೆ ಬಂದ ಮಗನಿಗೆ ದಿತಿದೀಕ್ಷೆ (ಉಪನಯನ) ಮಾಡಬೇಕೆಂದಾಗ ಬಸವಣ್ಣ ಅದನ್ನು ಧಿಕ್ಕರಿಸಿ ಮನೆ ಬಿಟ್ಟು ಕೂಡಲಸಂಗಮಕ್ಕೆ ನಡೆಯುತ್ತಾನೆ. ಬಸವಣ್ಣನ ಹಿಂದೆಯೇ ಅವನ ಸೋದರಿ ಅಕ್ಕನಾಗಮ್ಮಳೂ ಬರುತ್ತಾಳೆ. ಬಸವಣ್ಣನವರಿಗೆ ಪಿಪಿಲಿಪಟ್ಟಣದಲ್ಲಿದ್ದ ಸೋದರಮಾವ ಬಲದೇವನಲ್ಲಿ ಆಶ್ರಯ ಸಿಕ್ಕುವುದರ ಜೊತೆಗೆ ಅವನ ಮಗಳು ಗಂಗಾಂಬಿಕೆಯೊಡನೆ ಮದುವೆಯೂ ಆಗುತ್ತದೆ.

ಬಲದೇವರ ತರುವಾಯ ಬಿಜ್ಜಳನ ಆಸ್ಥಾನದಲ್ಲಿ ಮಹಾಮಂತ್ರಿ ಪದವಿ ತೆರವಾಗುತ್ತದೆ. ಈ ಸಂದರ್ಭದಲ್ಲಿ ಬಸವಣ್ಣನವರನ್ನು ಬಿಜ್ಜಳನ ಆಸ್ಥಾನಕ್ಕೆ ಬರಮಾಡಿಕೊಳ್ಳಲು ಒಂದು ವಿಚಿತ್ರ ಘಟನೆ ಸಂಭವಿಸುತ್ತದೆ. ಅದೆಂದರೆ ಬಿಜ್ಜಳನ ಆಸ್ಥಾನಕ್ಕೆ ಸ್ವರ್ಗದಿಂದ ಓಲೆಯೊಂದು ಬಂದು ಬೀಳುತ್ತದೆ. ಅದನ್ನು ಓದಲು ಯಾರಿಗೂ ಸಾಧ್ಯವಾಗುವುದಿಲ್ಲ. ಬಲದೇವರಿದ್ದರೆ ಓದುತ್ತಿದ್ದರೇನೊ ಎಂಬ ಮಾತು ತೇಲಿಹೋಗುತ್ತದೆ. ಬಲದೇವರ ಅಳಿಯ ಓದಿದರೂ ಓದಬಹುದು ಎಂಬ ಮಾತಿಗೆ ಮಹತ್ವ ಬಂದು ಬಸವಣ್ಣನವರು ಬಿಜ್ಜಳನ ಆಸ್ಥಾನಕ್ಕೆ ಬಂದು ಯಾರೂ ಓದಲಾಗದಿದ್ದ ಓಲೆಯನ್ನು ಓದಿ ಅಚ್ಚರಿಯನ್ನು ಮೂಡಿಸುತ್ತಾರೆ. ದೊರೆಯ ಸಿಂಹಾಸನದ ಅಡಿಯಲ್ಲಿ ರತ್ನಸಿಂಹಾಸನ ಹುದುಗಿಯೆಂದೂ ಅದರ ತಳದಲ್ಲಿ ಏಳುಕೊಪ್ಪರಿಕೆ ಐಶ್ವರ್ಯವಿದೆ ಯೆಂದೂ ಓದಿ ಹೇಳಿದಾಗ ಪರೀಕ್ಷಿಸಿ ನೋಡಲು ಅದು ಸತ್ಯವಾಯಿತು. ಇದರಿಂದ ಬಸವಣ್ಣನವರ ಅದೃಷ್ಟದ ಬಂಗಾರದ ಬಾಗಿಲು ತೆರೆದುಕೊಂಡಿತು. ಬಸವಣ್ಣನವರು ಏಕ್‌ದಂ ಮುಖ್ಯಮಂತ್ರಿ ಪಟ್ಟಕ್ಕೆ ಬಂದರು. ಅಲ್ಲಿ ಕಲ್ಯಾಣದ ಅಣ್ಣ ಬಸವಣ್ಣ ಆದರು.

ಈ ಕಥಾಭಾಗ ಹೆಚ್ಚೂಕಡಿಮೆ ಚನ್ನಪ್ಪ ಕವಿಯ ಯಕ್ಷಗಾನ 'ಶರಣಲೀಲಾಮೃತ' ಕೃತಿಗೆ ಋಣಿಯಾಗಿದೆ[೪]. ಬಸವಣ್ಣನವರು ಮಹಾಮಹಿಮರೇ ಆದರೂ ಅವರನ್ನು 'ದ್ವಿತೀಯ ಶಂಭು' ಎಂದು ಕರೆಯಲು ಅತಿಯಾದ ಮತೀಯಸ್ಪರ್ಶ ಕಾರಣವೆನಿಸುತ್ತದೆ. 'ಶರಣ ಲೀಲಾಮೃತ'ದ ಅನಿಮಿಷರಾಜ ಇಲ್ಲಿ ದೀಪಕರಾಜನಾಗಿದ್ದಾನೆ. ಹಾಗೆಯೇ ಚಾಮ ಎಂಬ ಹುಡುಗ ಶ್ಯಾಮ ಆಗಿದ್ದಾನೆ. ಶಿಷ್ಟಗ್ರಂಥದಲ್ಲಿ ಲಭ್ಯವಾಗುವ ವಸ್ತುವನ್ನು ಜನಪದ ಗಾಯಕ ಸ್ವೀಕರಿಸಿದಾಗ ಆಗುವ ಅಚಾತುರ್ಯಗಳು ಈ ಕೃತಿಯಲ್ಲಿವೆ. ಅಂದರೆ ಜಾನಪದ ಸತ್ವ ಸೊರಗಿರುವುದರಿಂದ ಓದುಗರ ಮನಸ್ಸಿನ ಮೇಲೆ ಯಾವ ಅದ್ಭುತ ಪರಿಣಾಮವೂ ಉಂಟಾಗುವುದಿಲ್ಲ.

---

8. ಚನ್ನಪ್ಪ ಕವಿ ಕೃತ ಶರಣ ಲೀಲಾಮೃತ. ಸಂ. : ಶಿವಬಸವಸ್ವಾಮಿಗಳು. ಪ್ರಕಾಶಕರು : ಶ್ರೀ.ಮ.ನಿ.ಪ್ರ. ಮಹಂತಸ್ವಾಮಿಗಳು. ಗುರುಮಲ್ಲೇಶ್ವರ ಮಹಾಸಂಸ್ಥಾನಮಠ. ದೇವನೂರು. ಮೂ.ಮು.೧೯೫೫, ಪೂರ್ವ-೧೬೧.

ಊಳ್ಳೆಯ ಶರಣರು

ಕಾಶ್ಮೀರ ದೇಶದ ರಾಜಧಾನಿ ಮಾಂಡವ್ಯಪುರ. ಅದನ್ನಾಳುತ್ತಿದ್ದ ರಾಜ ಮಹಾದೇವ ಭೂಪಾಲ ; ಅವನ ಮಡದಿ ಗಂಗಾದೇವಿ. ಮಹಾದೇವರಾಜನು ಸಂಸಾರವಿಲಾಸ ಮತ್ತು ಶಿವಭಕ್ತಿ ವಿಲಾಸಗಳ ಸಮನ್ವಯವನ್ನು ಸಾಧಿಸುತ್ತ ರಾಜ್ಯಭಾರ ಮಾಡುತ್ತಿದ್ದ. ಗಂಗಾದೇವಿಯು ಪತಿಗೆ ಅನುಗುಣಳಾದ ಸತಿಶಿರೋಮಣಿ. ಈ ದಂಪತಿಗಳು ಪರಮಶಿವಭಕ್ತರಾಗಿದ್ದು ಆರು ಸಾವಿರ ಜಂಗಮರ ಆರಾಧನೆಯನ್ನು ನಡೆಸುತ್ತ ಯೋಗ ಭೋಗಗಳ ಹದವರಿತು ಜೀವನ ನಡೆಸುತ್ತಿದ್ದರು. ಇವರ ಭಕ್ತಿಪರವಶತೆ, ಸೇವಾತತ್ಪರತೆಗಳ ಉಜ್ವಲಕಾಂತಿ ಕಿರಣಗಳು ಕಲ್ಯಾಣಪಟ್ಟಣದವರೆಗೂ ಹರಡಿದ್ದವು.

ಜಂಗಮರನ್ನೇ ತನ್ನ ಪ್ರಾಣವೆಂದು ಭಾವಿಸಿದ್ದ ಬಸವಣ್ಣನವರ ಬಳಿ ಒಂದು ಲಕ್ಷದ ತೊಂಬತ್ತು ಸಾವಿರ ಜಂಗಮರಿದ್ದರು. ಇನ್ನು ಆರು ಸಾವಿರ ಜಂಗಮರು ಮಾಂಡವ್ಯಪುರದ ಊಳ್ಳೆಯಲ್ಲಿದ್ದರು. ಆ ಆರುಸಾವಿರ ಜಂಗಮರನ್ನು ಕಲ್ಯಾಣ ಪಟ್ಟಣಕ್ಕೆ ಕರೆತಂದ ಕಥೆಯೇ 'ಊಳ್ಳೆಯ ಶರಣರು'. ವಾಸ್ತವವಾಗಿ ಈ ಕಥೆ ಭೀಮಕವಿಯ 'ಬಸವ ಪುರಾಣ' (೩೦ನೇ ಸಂಧಿ) ಯಳಂದೂರು ಹರೀಶ್ವರ ಕವಿಯ 'ಪ್ರಭುದೇವರ ಪುರಾಣ' (VII-೨೪೬) ಪಂಚಯ್ಯ ಕವಿಯ 'ಭಕ್ತಿರಸದ ಸೋನೆ' (ಪು.೫೪) ಬಸವಕವಿಯ 'ಮಹಲಿಂಗಲೀಲೆ' (XIII-XIV) ಉತ್ತರದೇಶದ ಬಸವಲಿಂಗದೇವರು ವಿರಚಿತ 'ಕಥಾಸಾಗರ' (ಪು.೭೧), ಪರ್ವತೇಶ ಕವಿಯ 'ಚತುರಾಚಾರ್ಯ ಪುರಾಣ' (ಪು.೬೬೦) ಲಕ್ಕಣದಂಡೇಶನ 'ಶಿವತತ್ತ್ವಚಿಂತಾಮಣಿ' (ಪು.೩೫೨) ಫ.ಗು. ಹಳಕಟ್ಟಿಯವರ ಕೃತಿಗಳಾದ 'ಬಸವೇಶ್ವರ ಷಟ್‌ಸ್ಥಲ ವಚನ ಕಥಾಸಾರ' (ಪು.೪೮) ಸಿದ್ದಯ್ಯ ಪುರಾಣಿಕರ 'ಶರಣಚರಿತಾಮೃತ' (ಪು.೩೮೩-೩೯೮) ಹೊನ್ನವಳ್ಳಿಯ ಗೌರವಾಂಕ ಕವಿಯ 'ಮೋಳಿಗಯ್ಯ ಪುರಾಣ' ಮುಂತಾದ ಕೃತಿಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ.

ಕೋಟಿಗೆ ಒಬ್ಬ ಭಕ್ತ ಕುಲಕ್ಕೆ ಒಬ್ಬ ಶರಣ- ಹೀಗೆ ಸತ್ಯಶರಣರು ಅಪರೂಪವಾದರೂ ಬಸವಣ್ಣನವರ ಮಹಾಶೈವ ಸಭೆಯಲ್ಲಿ ಒಂದು ಲಕ್ಷದ ತೊಂಬತ್ತು ಸಾವಿರ ಜಂಗಮರಿದ್ದಾರೆ. ಅವರೆಲ್ಲರಿಗೂ ನಿಚ್ಚ ದಾಸೋಹ ನೆರವೇರುತ್ತಿದೆ. ಆದರೆ ಬಸವಣ್ಣನವರ ಮಡದಿ ನೀಲಮ್ಮನವರಿಗೆ ಆರು ಸಾವಿರ ಜಂಗಮರಿಲ್ಲದ ಕೊರತೆ ಎದ್ದುಕಾಣುತ್ತದೆ. ಅದನ್ನು ಅಣ್ಣನವರಲ್ಲಿ ಹೇಳಿದಾಗ ಇರುವ ಜಂಗಮರಿಗೆ ಔತಣವಿಕ್ಕಿ ತೃಪ್ತಿಪಡಿಸುವುದೇ ಕಷ್ಟವಾಗಿರುವಾಗ ಮತ್ತೆ ಆರು ಸಾವಿರ ಜಂಗಮರನ್ನು ಕರೆತಂದರೆ ನಿಚ್ಚಭೋಜನಕ್ಕೆ ವ್ಯವಸ್ಥೆಯಾದರೂ ಹೇಗೆ ಎಂಬ ಶಂಕೆ ಬಸವಣ್ಣನವರದು. ಆದರೆ ಇದಕ್ಕಾಗಿ ಅಣ್ಣನವರು ಒಡ್ಡಿದ ಪರೀಕ್ಷೆಯಲ್ಲೆಲ್ಲ ನೀಲಮ್ಮ ಗೆಲ್ಲುತ್ತಾರೆ.

ಬಸವಣ್ಣನವರ ಭಕ್ತಿ ಮತ್ತು ನೀಲಮ್ಮನವರ ಜಂಗಮಸೇವೆಯಿಂದ ಸುಪ್ರೀತನಾದ ಸಂಗಮೇಶ್ವರ ಅಶರೀರವಾಣಿಯಲ್ಲಿ ಅವರಿಬ್ಬರ ಅಭೀಷ್ಟವೇನೆಂದು ಕೇಳುತ್ತಾನೆ. ಬಸವಣ್ಣನವರು ಆರು ಸಾವಿರ ಜಂಗಮರನ್ನು ಭೋಜನಕ್ಕೆ ಕಳುಹಿಸಬೇಕೆಂದು ಬೇಡುತ್ತಾರೆ. ಉತ್ತರದೇಶದ ಮಾಂಡವೀಪುರದ ಊಳ್ಳೆ ಮನೆತನದ ಮಾದೂರಾಯ (ಮಹಾದೇವರಾಜ)ನೆಂಬಾತ ಸದಾಕಾಲ ಮಾಡಿಸುವ ಶಿವಪೂಜೆ ಮತ್ತು ಜಂಗಮ ಸೇವೆಯನ್ನು ತಿಳಿದ ಬಸವಣ್ಣನವರಿಗೆ ಅಲ್ಲಿರುವ ಆರು ಸಾವಿರ ಜಂಗಮರನ್ನು ಕರೆತರುವ ನಿರ್ದೇಶನ ದೊರೆಯುತ್ತದೆ.

ಈಗ ಬಸವಣ್ಣನವರು ಬಸಶೆಟ್ಟಿ ಎಂಬ ವ್ಯಾಪಾರಿಯ ವೇಷದಲ್ಲಿ ಮಾಂಡವೀಪುರಕ್ಕೆ ಬಂದು ಅಲ್ಲಿದ್ದ ಜಂಗಮರನ್ನು ಬಿಲ್ವತ್ರೆದಳಗಳನ್ನಾಗಿ ಮಾಡಿ ಜೋಳಿಗೆಯಲ್ಲಿಟ್ಟುಕೊಂಡು ಕಲ್ಯಾಣ ಪಟ್ಟಣಕ್ಕೆ ತರುತ್ತಾರೆ. ಕಲ್ಯಾಣ ಪಟ್ಟಣದಲ್ಲಿ ಬಿಲ್ವತ್ರೆ ದಳಗಳಾಗಿದ್ದ ಶಿವಶರಣರೆಲ್ಲ ತಮ್ಮ ನಿಜ ಸ್ವರೂಪವನ್ನು ತಾಳುತ್ತಾರೆ. ಬಸವಣ್ಣನವರ ಸೋದರಿ ಅಕ್ಕನಾಗಮ್ಮನವರು ಮುತ್ತೈದೆಯರ ಜೊತೆ ಬಂದು ಜಂಗಮರಿಗೆಲ್ಲ ಆರತಿ ಬೆಳಗುತ್ತಾರೆ. ಹೀಗೆ ಬಸವಣ್ಣನವರು ಕರೆದುತಂದ ಜಂಗಮರ ಸೇವೆ ಕಲ್ಯಾಣಪಟ್ಟಣದಲ್ಲಿ ನಡೆಯುತ್ತದೆ. ಕಾವ್ಯ ಥಟ್ಟನೆ ಇಲ್ಲಿಗೆ ನಿಲ್ಲುತ್ತದೆ.

ಆದರೆ ಗ್ರಂಥಸ್ಥ ಕಾವ್ಯಗಳಲ್ಲಿ ಬಸವಣ್ಣನವರ ತಂತ್ರದಿಂದ ಕುಪಿತನಾದ ಮಹಾದೇವರಾಯ ಪ್ರತೀಕಾರ ಮಾಡಲು ಪ್ರಯತ್ನಿಸಿ ವಿಫಲನಾದಾಗ ಬಸವಣ್ಣನವರ ದೊಡ್ಡತನಕ್ಕೆ ಮರುಳಾಗಿ ರಾಜ್ಯಕೋಶವನ್ನೆಲ್ಲ ತೊರೆದು ಕಲ್ಯಾಣಪಟ್ಟಣಕ್ಕೆ ಬಂದು ಮೋಳಿಗೆ ಮಾರಯ್ಯನೆಂಬ ಹೆಸರಿನಿಂದ ಖ್ಯಾತನಾಗುತ್ತಾನೆ ಎಂಬ ಉಲ್ಲೇಖ ಕಂಡುಬರುತ್ತದೆ.

ಈ ಕಾವ್ಯದ ಮುಖ್ಯ ಆಶಯ ಬಸವೇಶ್ವರ 'ಜಂಗಮ ಪ್ರಾಣ' ಎಂದು ಹೇಳುವುದೇ ಆಗಿದೆ. ಅಲ್ಲದೆ ಅವರ ಸಹಧರ್ಮಿಣಿ ಹಾಗೂ ಸೋದರಿಯರು ಬಸವಣ್ಣನವರ ಕಲ್ಪನೆಗೆ ಎರಡು ಕಣ್ಣುಗಳಾಗಿ ನಿಂತುದನ್ನೂ ಇದು ಹೇಳುತ್ತದೆ.

ಘನಶರಣ ಹರಳಯ್ಯ

ಹರಳಯ್ಯನೆಂಬೋನು ನರನಲ್ಲ ಕಾಣೆರೊ
ಅವನು - ಶರಣರಿಗೆ ಶರಣ ಘನಶರಣ

ಇದು ಜನಪದ ಕವಿಯೊಬ್ಬ ಶರಣ ಹರಳಯ್ಯನನ್ನು ಕೊಂಡಾಡಿರುವ ಬಗೆ. ಇಷ್ಟೊಂದು ಬಗೆಯಲ್ಲಿ ಜನಪದರ ಹೃದಯವನ್ನು ತುಂಬಿಕೊಂಡಿರುವ, ಮನವನ್ನು ಸೂರೆಗೊಂಡಿರುವ ಹರಳಯ್ಯನ ಬಗೆಗೆ ಅಕ್ಷರಸ್ಥರಲ್ಲಿ ಒಮ್ಮತವಿಲ್ಲ. ಅವರು ಹರಳಯ್ಯ ಎಂಬ ಶರಣ ಒಬ್ಬ ಇದ್ದನೆ? ಇದ್ದಿದ್ದರೆ ಅವನ ಹೆಸರು ನಿಜವಾಗಿಯೂ ಹರಳಯ್ಯನೆಂದೆ? ಅವನು ವಚನಕಾರನಾಗಿದ್ದನೆ ? ಅವನು ಹಾಗೂ ಅವನ ಪತ್ನಿ ಕಲ್ಯಾಣಮ್ಮನವರು ತಮ್ಮ ತೊಡೆಯ ಚರ್ಮ ಅಳಿದು ಬಸವಣ್ಣನವರಿಗಾಗಿ ಪಾದರಕ್ಷೆಗಳನ್ನು ಮಾಡಿದ್ದು ನಿಜವೆ? ಗುಲಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಬಿಜನಳ್ಳಿಯಲ್ಲಿ ರಕ್ಷಿಸಿಕೊಂಡು ಬಂದಿರುವ ಪಾದುಕೆಗಳು ನಿಜವಾಗಿಯೂ ಹರಳಯ್ಯ - ಕಲ್ಯಾಣಮ್ಮನವರ ತೊಡೆಚರ್ಮದಿಂದ ಮಾಡಿದವುಗಳೆ? ಅವುಗಳು ೧೨ನೇ ಶತಮಾನದಷ್ಟು ಪ್ರಾಚೀನವಾದವುಗಳೆ? ಎಂಬೆಲ್ಲ ಪ್ರಶ್ನೆಗಳ ಮುತ್ತಿಗೆಗೆ ಒಳಗಾಗಿದ್ದಾರೆ.

ಹರಳಯ್ಯನ ವಿಷಯವನ್ನು ಪ್ರಸ್ತಾಪಿಸುವ ಕಾವ್ಯಗಳಾದ ಪಾಲ್ಕುರಿಕೆ ಸೋಮನಾಥನ 'ತೆಲುಗು ಬಸವ ಪುರಾಣ', ಭೀಮಕವಿಯ 'ಬಸವ ಪುರಾಣ' ವಿರೂಪಾಕ್ಷ ಪಂಡಿತನ 'ಚನ್ನಬಸವ ಪುರಾಣ' ಉತ್ತರದೇಶದ ಬಸವಲಿಂಗದೇವರ 'ಕಥಾಸಾಗರ' ಶಂಕರಕವಿಯ 'ಚೋರ ಬಸವ ಪುರಾಣ', ಪಂಚಯ್ಯ ಕವಿಯ 'ಭಕ್ತಿರಸದ ಸೋನೆ', ಯಳಂದೂರ ಹರೀಶ್ವರನ 'ಪ್ರಭುದೇವರ ಪುರಾಣ', ಷಡಕ್ಷರದೇವನ 'ಬಸವರಾಜ ವಿಜಯಂ', ನಂಜುಂಡನ 'ಭೈರವೇಶ್ವರ ಕಾವ್ಯ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ', ಚನ್ನಪ್ಪಕವಿಯ 'ಶರಣಲೀಲಾಮೃತ'ಗಳಲ್ಲೆಲ್ಲ ಹರಳಯ್ಯನನ್ನು ಅಲ್ಲಯ್ಯ, ಅಳ್ಳಯ್ಯ, ಹಳ್ಳಯ್ಯ, ಹರಳಯ್ಯ ಎಂದೆಲ್ಲ ಕರೆದಿರುವುದಲ್ಲದೆ ಹರಳಯ್ಯನಿಗೆ ಸಂಬಂಧಿಸಿದ ವಿಷಯಗಳಲ್ಲೂ ಗೊಂದಲವನ್ನು ಉಳಿಸಿವೆ. ಇಂಥ ಗೊಂದಲಗಳನ್ನೆಲ್ಲ ಕೆದಕಿ ಬೆದಕಿ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿರುವ ಡಾ. ಅರವಿಂದ ಮಾಲಗತ್ತಿಯವರ 'ಹರಳಯ್ಯ'[9] ಎಂಬ ಲೇಖನ ಅನೇಕ ಕಾರಣಗಳಿಂದ ಮಹತ್ವದ್ದೆನಿಸುತ್ತದೆ. ಈ ಲೇಖನದಲ್ಲಿರುವ ಅವರ ವಿಷಯ ಮಂಡನೆ, ತಾರ್ಕಿಕ ನೆಲೆಗಟ್ಟು, ಹಾಗೂ ಅವರು ಎತ್ತುವ ಪ್ರಶ್ನೆಗಳು ಆ ಕುರಿತ ಸಂಶೋಧನಾ ಕ್ಷೇತ್ರದ ವಲಯವನ್ನು ವಿಸ್ತರಿಸುವಂತದ್ದಾಗಿದೆ.

"ಅಸ್ಪೃಶ್ಯ ವಚನಕಾರರ ಹೆಸರುಗಳನ್ನು ಪದೇ ಪದೇ ಹೇಳುವ ಬಸವಣ್ಣನವರು ಹರಳಯ್ಯ ಅಥವಾ ಅಲ್ಲಯ್ಯ/ ಅಳ್ಳಯ್ಯ/ಹಳ್ಳಯ್ಯನ ಹೆಸರನ್ನು ಎಲ್ಲಿಯೂ ಸ್ಮರಿಸುವುದಿಲ್ಲ ಯಾಕೆ?"[10] ಎಂಬುದು ಡಾ. ಅರವಿಂದ ಮಾಲಗತ್ತಿಯವರ ಮೊದಲ ಪ್ರಶ್ನೆ.

ಅವರ ಎರಡನೆಯ ಪ್ರಶ್ನೆ : "೧೨ನೇ ಶತಮಾನದಲ್ಲಿ ನಡೆದ ಅಂತರ್ಜಾತೀಯ ವಿವಾಹದ ಕುರಿತು ವಚನಗಳಲ್ಲಿ ಏಕೆ ದಾಖಲಾಗಲಿಲ್ಲ? ಅಥವಾ ಅನಂತರ ಬರೆದವರ ವಚನಗಳಲ್ಲಾದರೂ ಈ ಮಹತ್ವದ ವಿಷಯದ ಕುರಿತು ಯಾಕೆ ಪ್ರಸ್ತಾಪವೇ ಬರಲಿಲ್ಲ? ಕಲ್ಯಾಣ ಕೆಟ್ಟನಂತರ ಶರಣರೆಲ್ಲ ಚದುರಿಹೋಗಿ ದಾಖಲಾಗಲಿಲ್ಲವೆಂದು ಒಂದು ಕ್ಷಣ ಕಲ್ಪಿಸಿಕೊಂಡರೂ ಮುಂದೆ ಬರುವ ಹರಿಹರ ಯಾಕೆ ಅಂತರ್ಜಾತೀಯ ವಿವಾಹದ ಕುರಿತು ಹರಳಯ್ಯನ ಕುರಿತು ಬರೆಯಲಿಲ್ಲ? ಈತನನಂತರ ಬರೆದವರೂ ಇಂಥ ಮಹತ್ವದ ಘಟನೆಯನ್ನು ಯಾಕೆ ದಾಖಲಿಸಲಿಲ್ಲ? ಇಂಥ ಮಹತ್ವದ ಘಟನೆಯನ್ನು ದಾಖಲಿಸಲು ೧೭ನೇ ಶತಮಾನದ ವರೆಗೂ ಯಾಕೆ ಕಾಯಬೇಕಾಗಿ ಬಂತು? ಇಂಥ ಮುಖ್ಯ ಪ್ರಶ್ನೆಗಳ ಜೊತೆಗೆ ಹಲವಾರು ಉಪಪ್ರಶ್ನೆಗಳೂ ಎದ್ದುನಿಲ್ಲುತ್ತವೆ"[11] ಎಂದಿದ್ದಾರೆ. ಅಲ್ಲದೆ ಹರಳಯ್ಯ ಕಾಲ್ಪನಿಕ ವ್ಯಕ್ತಿಯೆ? ಧೂಳಯ್ಯನೇ ಹರಳಯ್ಯನಾಗಿರಬಹುದೆ? ಎಂದೂ ಪ್ರಶ್ನಿಸಿದ್ದಾರೆ.[12]

---

9. ಡಾ. ಅರವಿಂದ ಮಾಲಗತ್ತಿಯವರ ಲೇಖನ. 'ಹರಳಯ್ಯ', ಶರಣಜಗತ್ತು. ಸಂಪಾದಕ : ವಿದ್ವಾನ್ ಎಂ. ಶಿವಕುಮಾಸ್ವಾಮಿ. ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಮೈಸೂರು-೨೩. ೧೯೯೮. ಪು.೬೪೩-೬೫೫.

10. ಅದೇ. ಪು.೬೪೮

11. ಅದೇ. ಅಲ್ಲೇ.

12. ಅದೇ ಪು.೬೫೧

ವಾಸ್ತವವಾಗಿ ಈ ಬಗ್ಗೆ ಹರಿಹರ ಖಂಡಿತ ಮೌನವಾಗಿರಲಿಲ್ಲ ಎಂದು ಮೊದಲಿಗೇ ಹೇಳಬೇಕು. ಏಕೆಂದರೆ ಅವನು ಉತ್ಸಾಹದಿಂದ ಬರೆದ 'ಬಸವರಾಜ ದೇವರ ರಗಳೆ'ಯು ೨೫ ಸ್ಥಳಗಳಿಂದ ಕೂಡಿದ್ದು ಅದರ ಬಹುಭಾಗ ಕಾರಣಾಂತರದಿಂದ ಖಿಲವಾದ ದಂತಕಥೆ ಪ್ರಚಲಿತವಿರುವುದು ಸರಿಯಷ್ಟೆ. ಈಗ ಕೇವಲ ೧೧ ಸ್ಥಳ ಮಾತ್ರವಿದ್ದು ಕೊನೆಯ ಸ್ಥಲವೂ ಅಪೂರ್ಣವಾಗಿದೆ. ಹರಿಹರನ ಯಾವ ರಗಳೆಗೂ ಬರದ ದುರ್ಗತಿ ಈ ಕೃತಿಗೆ ಬರಲು ಕಾರಣವೇನು ? ಎಂದು ಚಿಂತಿಸಬೇಕಾಗಿದೆ. ಬಹುಶಃ ಹರಳಯ್ಯ-ಮಧುವರಸರ ಪ್ರಸಂಗವೇ ಈ ಕೃತಿಯ ದುರದೃಷ್ಟವಾಗಿ ಪರಿಣಮಿಸಿ ಅದು ಖಿಲವಾಗಲು ಕಾರಣವಾಗಿರಬಹುದು. ಇದಾದನಂತರ ಹರಿಹರ ಮುಂದೆಲ್ಲೂ ಹರಳಯ್ಯನ ಹೆಸರನ್ನಾಗಲಿ ಅವನನ್ನು ಕುರಿತ ಪ್ರತ್ಯೇಕ ರಗಳೆಯೊಂದನ್ನಾಗಲಿ ಬರೆಯಲಾಗದ ಭೀಕರ ಮೌನಕ್ಕೆ ತುತ್ತಾಗಿರಬಹುದು. ಆದ್ದರಿಂದ ಹರಳಯ್ಯನನ್ನು ಕಾಲ್ಪನಿಕ ವ್ಯಕ್ತಿಯೆಂದು ಹೇಳುವುದು ಸುತರಾಂ ಸರಿಯಲ್ಲ. ಅಲ್ಲದೆ ಧೂಳಯ್ಯನನ್ನು ಹರಳಯ್ಯನಿಗೆ ತಗಲು ಹಾಕುವುದು ಹರಳಯ್ಯ ಸಮಸ್ಯೆಗೆ ಪರಿಹಾರ್ಯವಲ್ಲ. ಹರಳಯ್ಯನೇ ಧೂಳಯ್ಯನಾಗಿದ್ದರೆ ಈಗ ಹರಳಯ್ಯನ ವಂಶಿಕರೆಂದು ಹೇಳಿಕೊಳ್ಳುತ್ತಿರುವವರಲ್ಲಿ ಯಾರಾದರೂ ಆ ಹೆಸರನ್ನು ವಂಶಪಾರಂಪರ್ಯವಾಗಿ ಉಳಿಸಿಕೊಂಡು ಬರುತ್ತಿದ್ದರು. ಅಲ್ಲದೆ ಕರ್ನಾಟಕದಾದ್ಯಂತ ಇರುವ ಹರಳಯ್ಯನ ಯಾವುದಾದರೂ ಒಂದು ಗದ್ದುಗೆಗಾಗಲಿ ಮಠಕ್ಕಾಗಲಿ ಹರಳಯ್ಯನೆಂದು ಖ್ಯಾತನಾಗಿರುವ ಧೂಳಯ್ಯನ ಗದ್ದಿಗೆ, ಧೂಳಯ್ಯನ ಮಠ ಎಂದು ಹೇಳಬಹುದಿತ್ತು. ಆದರೆ ವಸ್ತುಸ್ಥಿತಿ ಹಾಗಿಲ್ಲ ;ಆದ್ದರಿಂದ ಹರಳಯ್ಯ ಧೂಳಯ್ಯರ ಸಮೀಕರಣ ಉಚಿತವೆನಿಸುವುದಿಲ್ಲ. ಅಲ್ಲದೆ ಹರಳಯ್ಯನ ಹೆಸರಿನ ಗದ್ದಿಗೆಗಳು, ಹರಳಯ್ಯನ ಮಠಗಳು ಹಾಗೂ ಹರಳಯ್ಯನನ್ನು ಕುರಿತ ಜನಪದ ಕಾವ್ಯಗಳು ಹರಳಯ್ಯನ ಅಸ್ತಿತ್ವದ ಆಧಾರಸ್ತಂಭಗಳಾಗಿವೆ.

ಬಸವಣ್ಣನವರು 'ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ' ಎಂದರು. 'ಕುಲವೇನೊ ಆವಂದಿರ ಕುಲವೇನೊ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವರೇ ಕುಲಜರು' ಎಂದೂ ಹೇಳಿದರು. ಇಂಥ ಅಮೃತವಾಣಿಗಳು ಬಸವಣ್ಣನವರ ಅಂತರಂಗದ ಅಭಿವ್ಯಕ್ತಿ. ಆದರೆ ಸಾಮಾಜಿಕ ನೆಲೆಯಲ್ಲಿ ಇದನ್ನು ಆಗಮಾಡುವ ಜನ ಹೆಚ್ಚಿರಲಿಲ್ಲ. ಇದಕ್ಕೆ ಆತ್ಮನಿಷ್ಠೆ ಬೇಕು. ಹಾಗಿದ್ದ ವಿರಾಳಾತಿವಿರಳರೆಂದರೆ, ಅಣ್ಣನವರ ಅಮೃತವಾಣಿಯನ್ನು ನಡೆಯಲ್ಲಿ ಆಚರಿಸಿ ತೋರಿಸಿದ ಮಹಾಶರಣರೆಂದರೆ ಘನಶರಣ ಹರಳಯ್ಯ ಮತ್ತು ಮಧುವರಸರು. ನಿಜ ಹೇಳಬೇಕೆಂದರೆ ಕಲ್ಯಾಣಕ್ರಾಂತಿಯ ಪಾಯ್‌ಪೆಂಜೇ ಹರಳಯ್ಯ, ಮತಾಂಧತೆಯನ್ನು ತುಳಿದು ಮಾನವತೆಯನ್ನು ಮೊಳಗಿಸಿದ ಮಹಾನುಭಾವನೇ ಮಧುವರಸ. ಬಸವೇಶ್ವರರ ಕನಸನ್ನು ನನಸಾಗಿಸಿದ ಮಹಾಮಹಿಮರು ಈ ಹರಳಯ್ಯ ಮತ್ತು ಮಧುವರಸರು.

ಇಂಥ ಮಹತ್ಕಾರ್ಯವೆಸಗಿದ ಹರಳಯ್ಯನನ್ನು ಯಾವೊಬ್ಬ ವಚನಕಾರನಾಗಲಿ ಕಡೆಗೆ ಬಸವಣ್ಣನವರಾಗಲಿ ಏಕೆ ಹೆಸರಿಸಲಿಲ್ಲವೆಂಬುದು ಒಂದು ಪ್ರಶ್ನೆ. ಬಹುಶಃ ಬಸವಣ್ಣನವರು ವಚನ ಬರೆಯುತ್ತಿದ್ದ ಕಾಲದಲ್ಲಿ ಹರಳಯ್ಯ ಅಷ್ಟು ಪ್ರಸಿದ್ಧನಾಗಿಲ್ಲದಿರಬಹುದು. ಹರಳಯ್ಯ-ಮಧುವರಸರ ಪ್ರಸಂಗದಿಂದ ಕಲ್ಯಾಣದಲ್ಲಿ ರಕ್ತದೋಕುಳಿ ಹರಿಯುತ್ತಿರುವಾಗ ಬಸವಣ್ಣನವರು ಕುಳಿತು ಹರಳಯ್ಯನನ್ನು ಕುರಿತು ವಚನ ಬರೆಯಲು ಪುರುಸೊತ್ತಾದರೂ ಎಲ್ಲಿತ್ತು? ಈ ಪ್ರಕರಣಕ್ಕೆ ತೆರೆ ಎಳೆಯುವ ಕಾರಣದಿಂದ 'ಕರ್ಫ್ಯೂ'ವಿನಂತ ರಾಜಾಜ್ಞೆ ಜಾರಿಯಲ್ಲಿದ್ದ ಆ ದಿನಗಳಲ್ಲಿ ಯಾರೂ ಅದರ ಬಗೆಗೆ ಪಿಸುಗುಡಲೂ ಸಾಧ್ಯವಾಗಿಲ್ಲದಿರಬಹುದೆಂದು ಊಹಿಸಬೇಕಾಗಿದೆ.

ಮತ್ತೆ ಪ್ರೊ.ಮಾಲಗತ್ತಿಯವರ ಹತ್ತಿರದ ಮಾತು : "ಈ ಎಲ್ಲ ವ್ಯಕ್ತಿಗಳ ನಡುವೆ ಎಲ್ಲೋ ಜಾತಿ ಮೀರಿದ ಸಂಬಂಧದ ಎಳೆಯ ಕುರುಹು ಇದೆ ಎನಿಸುತ್ತದೆ. 'ಬೆಂಕಿ ಇರದೆ ಹೊಗೆಯಾಡದು' ಎನ್ನುವ ತತ್ತ್ವದ ಹಿನ್ನೆಲೆಯಲ್ಲಿ 'ವರ್ಣಸಂಕರ'ದ ನೆಲೆಯನ್ನು ಗ್ರಹಿಸುವ ಅಗತ್ಯವಿದೆ ಎನಿಸುತ್ತದೆ"[13] ಎಂದಿದ್ದಾರೆ. ಇದೇ ನಿಜವಾದ ಸತ್ಯ. ಆದರೆ 'ವರ್ಣಸಂಕರ' ಎಂಬುದು ಶರಣರ ದೃಷ್ಟಿಯಲ್ಲಿಲ್ಲ. ಅವರ ವಿರೋಧಿಗಳು ಹಾಗೆ ಬೊಬ್ಬೆ ಹಾಕಿದರು, ಅಷ್ಟೆ.

ಕಲ್ಯಾಣದ ಕ್ರಾಂತಿಯನಂತರ ಚದುರಿದ ಶರಣರಲ್ಲಿ ಹರಳಯ್ಯನ ಆದರ್ಶವನ್ನು ಹೊತ್ತು ನಡೆದವರು ತಾವು ನೆಲೆಗೊಂಡ ಸ್ಥಳಗಳಲ್ಲೆಲ್ಲ ಹರಳಯ್ಯನ ತೋರುಗದ್ದುಗೆಗಳನ್ನು ಸ್ಥಾಪಿಸಿದ್ದಾರೆ. ಹರಳಯ್ಯನ ಹೆಸರಿನ ಮಠಗಳನ್ನು ಕಟ್ಟಿದ್ದಾರೆ. ವಾಸ್ತವ ಸಂಗತಿಯೆಂದರೆ ಶರಣರಲ್ಲಿ ಹರಳಯ್ಯನವರ ಹೆಸರಿನಲ್ಲಿರುವಷ್ಟು ಗದ್ದಿಗೆಗಳಾಗಲಿ ಮಠಗಳಾಗಲಿ ಬೇರೆ ಯಾವ ಶರಣನ ಹೆಸರಿನಲ್ಲೂ ಇಲ್ಲ ಎಂದಾಗ ಹರಳಯ್ಯನ ಮಹೋನ್ನತ ವ್ಯಕ್ತಿತ್ವ ಅರಿವಿಗೆ ಬರುತ್ತದೆ.

---

13. ಅದೇ. ಪು.೬೫೩.

ಹರಳಯ್ಯನವರು ಹುಟ್ಟಿ ಬೆಳೆದು ಓಡಾಡಿದ ಅಥವಾ ಪವಾಡವೆಸಗಿದ ಸ್ಥಳಗಳನ್ನೆಲ್ಲ ಗುರುತಿಸಲಾಗಿದೆ. ಕರ್ನಾಟಕದಾದ್ಯಂತ ಹೆಸರಾಗಿರುವ ಹರಳಯ್ಯ ಒಬ್ಬ ಕಾಲ್ಪನಿಕ ವ್ಯಕ್ತಿ ಎಂದು ಕಡ್ಡಿ ತುಂಡಾದಂತೆ ಹೇಳುವ ಅಗತ್ಯವಿಲ್ಲ. ಏಕೆಂದರೆ ಶಿಷ್ಟಕವಿಗಳ ಅಥವಾ ಶಿಷ್ಯರೆನಿಸಿಕೊಂಡವರ ಗಮನಕ್ಕೆ ಬಾರದ ಮಲೆಮಾದೇಶ್ವರ, ಮಂಟೇಸ್ವಾಮಿ, ರಾಚಪ್ಪಾಜಿ, ಸಿದ್ದಪ್ಪಾಜಿ, ಹಾಗಲವಾಡಿ ಜುಂಜಪ್ಪ ಮುಂತಾದವರೆಲ್ಲ ಜಾನಪದ ಜಗದ್ಗುರುಗಳಾಗಿ ದೊಡ್ಡ ಹೆಸರನ್ನು ಗಳಿಸಿದವರಾಗಿದ್ದಾರೆ. ಆದರೆ ಶಿಷ್ಟಕವಿಗಳು ಹೆಸರಿಸಿರುವ ಅನೇಕ ವ್ಯಕ್ತಿಗಳು ಜನಮನದಲ್ಲಿ ಹೇಳಹೆಸರಿಲ್ಲದಂತಾಗಿದ್ದಾರೆ.

ಪ್ರಸ್ತುತ ಜನಪದರು ಹಾಡಿರುವ ಘನಶರಣ ಹರಳಯ್ಯ ಕಾವ್ಯ ಹಲವಾರು ವಿಭಿನ್ನ ವಿಚಾರಗಳ ನಿರೂಪಣೆಯಿಂದ ಗಮನಸೆಳೆಯುವಂಥದ್ದಾಗಿದೆ. ಹರಳಯ್ಯ ಬಸವಣ್ಣನವರಿಂದ ಎರಡು ಶರಣಾರ್ತಿಗಳನ್ನು ಸ್ವೀಕರಿಸಿದ್ದಕ್ಕೆ ಪ್ರತಿಯಾಗಿ ತನ್ನ ಅಂಗೋಪಾಂಗಗಳನ್ನೇ ಆಯುಧಗಳನ್ನಾಗಿ ಮಾಡಿಕೊಂಡು ತನ್ನ ಬಲತೊಡೆ ಮತ್ತು ತನ್ನ ಪತ್ನಿ ಕಲ್ಯಾಣಮ್ಮನ ಎಡತೊಡೆ ಚರ್ಮದಿಂದ ಪಾದರಕ್ಷೆಯನ್ನು ತಯಾರಿಸಿ ಅದನ್ನು ಬಸವಣ್ಣನವರ ಪಾದಗಳಿಗೆ ಮೆಟ್ಟಿಸಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕೆಂಬ ಆಶಯ, ಪ್ರೀತಿ ಮತ್ತು ಭಕ್ತಿಗಳೆಂಬ ಮೌಲ್ಯಗಳ ಪರಾಕಾಷ್ಠೆ ಎನಿಸುತ್ತದೆ. ಆ ಚರ್ಮದ ಚಂದದ ಚಪ್ಪಲಿಗಳನ್ನು ಚಿನ್ನ ಮತ್ತು ರತ್ನಗಳಿಂದ ಅಲಂಕರಿಸಿದ ಹರಳಯ್ಯ ಎಂದಿರುವುದು ಜನಪದ ಕವಿಯ ಭಾವ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಹರಳಯ್ಯ ಮತ್ತು ಕಲ್ಯಾಣಮ್ಮನವರು ಆ ಪಾದುಕೆಗಳನ್ನು ಹೊತ್ತುಕೊಂಡು ಬಸವಣ್ಣನವರ ಮಠಕ್ಕೆ ಬಂದು

ದಯಮಾಡಿ ನನ್ನ ಗುರು ನನ್ನ ದಯಾವುಳ್ಳ ಬಸವಣ್ಣ
ನಿಮ್ಗೆ ಮಾಡ್ಕೊಂದ್ಬಂದಿವ್ನಿ ಪಾದ್ರಾಕ್ಷ್ಯ |

ಎಂದು ಹೇಳಿ ಪಾದರಕ್ಷೆಯ ಗಂಟನ್ನು ಬಿಚ್ಚಿದ ಕೂಡಲೆ

ಕತ್ತಲೆಯ ಮನೆಗೆ ಜ್ಯೋತಿಯ ಹಸ್ಸಾದಾಗೆ
ಪ್ರಕಾಸುವಾಯಿತು ಅವರ ಗುರುಮಠ |

ಆ ಪಾದರಕ್ಷೆ ಮಾಡಿರುವ ಪರಿಯನ್ನು ತಿಳಿದ ಬಸವಣ್ಣನವರು

ನರಲೋಕದವರಿಗೆ ಸಲ್ಕೊ ಪಾದ್ರಾಕ್ಷಿಯಲ್ಲ
ಇವು - ಕೈಲಾಸಕ್ಕೆ ಸಲ್ಕೊ ಪಾದ್ರಾಕ್ಷಿ |

ಕೂಡಲ ಸಂಗಮನಿಗೆ ಸಲ್ಲುವಂತ ಪಾದ್ರಾಕ್ಷಿ
ಇವು - ಬ್ಯಾಡ ಕಣಪ್ಪ ನನ್ಗೆ ಹರಳಯ್ಯ |

ಎಂದು ಹೇಳಿದ ಬಸವಣ್ಣನವರು

ಎತ್ಕೊಂಡ್ರು ಪಾದ್ರಾಕ್ಷ್ಯ ತಮ್ನೆತ್ತೀಮ್ಯಾಲಿಟ್ಕುಕೊಂಡ್ರು
ಜಂಗುಮರ ಸಭೆಯಲ್ಲಿ ಮೆರಿದಾರು |

ಈ ಹೃದ್ಯ ಸನ್ನಿವೇಶ ದಮನಿತ ವರ್ಗಗಳ ನಿಷ್ಠೆ-ನಿಯತ್ತು, ಶ್ರದ್ಧೆ-ಕ್ರತುಶಕ್ತಿಗಳಿಗೆ ಮಹಾಮನ್ನಣೆ ನೀಡುವ ಬಸವಣ್ಣನವರ ಹೃದಯವಂತಿಕೆ - ಎರಡೂ ಮಹತ್ವದ ವಿಚಾರಗಳಾಗುತ್ತವೆ. ಬಸವಣ್ಣನವರ ನಡತೆಯಿಂದ ಬೆದರಿಹೋದ ಹರಳಯ್ಯ ಏನೇ ಕಾರಣಕ್ಕೂ ಮೆಟ್ಟಲೊಪ್ಪದ ಬಸವಣ್ಣನವರನ್ನು ಕುರಿತು

ಆಸೆಯಾಗಿ ಮಾಡಿದ್ದು ಆಸಂದುವಾದ ಪಾದ್ರಾಕ್ಷ್ಯ
ನನ್ನಾಸೆಗೆ ಮೋಸ ಮಾಡಬವುದ |

ಎಂದು ಕೊರಗಿದ. ಕೂಡಲಸಂಗಮನಿಗೆ ಅರ್ಪಿಸಬೇಕಾದ ಪಾದರಕ್ಷೆಗಳನ್ನು ಗ್ಯಾಟೆಯಲ್ಲಿರಿಸಿಕೊಂಡು ರಾಜಬೀದಿಯಲ್ಲಿ ಬರುತ್ತಿರಬೇಕಾದರೆ ಬ್ರಾಹ್ಮಣ ಮಧುವರಸ ಹರಳಯ್ಯನನ್ನು ಅಡ್ಡಗಟ್ಟಿದ. ಗ್ಯಾಟೆಯಲ್ಲಿದ್ದ ಪಾದರಕ್ಷೆಗಳನ್ನು ತೆಗೆಸಿ ನೋಡಿದ. ಅವುಗಳ ಚಂದಕ್ಕೆ ಮರುಳಾದ. ಬೇಡ ಬೇಡವೆಂದರೂ ಬಿಡದೆ ಮೆಟ್ಟಲು ಹೋದ. ಪಾದುಕೆಗಳ ಮೇಲೆ ಕಾಲಿಡಲು ಹೋದುದ್ದೇ ತಡ ಆ ಪಾದುಕೆಗಳು ಮಂಗಮಾಯವಾದವು.

ಹರಳಯ್ಯ ಪಾದ್ರಾಕ್ಷಿ ಕೈಲಾಸ್ಕೆ ಹೊರಟೋದೊ
ಇವ ಭಗ್ಗನೆ ಕತುಕೊಂಡ ಮಧುವರಸ |

ಭಗ್ಗಭಗ್ಗನೆ ಉರಿ ಎದ್ದು ಧಿಗ್ಗು ಧಿಗ್ಗುನೆ ಉರಿದು
ಅವ - ಜಗ್ಗುಜಗ್ಗುನೆ ಬ್ರಾಮಣ ಕುಣಿದಾನೊ |

ಮೂರು ಸಾರಿ ಹತ್ತಿ ಫಕ್ಕನೆ ಕೆಟ್ಟೋಯ್ತು
ಉರಿ ಹೊಪ್ಪಳೆ ಅವನ ಮೈಯೆಲ್ಲ |

ಬಾಯ್ ಬಾಯಿ ಬಡಿಕೊಂಡು ಬಿದ್ದೋಡಾವನೆ ಬ್ರಾಮಣ
ಓಡು ಬಂದು ಬಿದ್ದ ತನ್ನನೆಯಲ್ಲಿ |

ಮಧುವರಸನಿಗೆ ಮೈಯಾದ ಮೈಯಲ್ಲಿ ಉರಿ ಉರಿ ಉರಿ. ಏಳಲಾರದೆ ತಾಳಲಾರದೆ ಅರಚಾಡುತ್ತ ಕಿರುಚಾಡುತ್ತ ಎದ್ದು ಬಿದ್ದೇಳುತ್ತ ಒದ್ದಾಡಿದ. ಉರಿಯ ಉಪಶಮನಕ್ಕೆ ಮೈಮೇಲೆ ಗುಂಭಗುಂಭಗಳ ತಣ್ಣೀರೆರೆಸಿಕೊಂಡ. ಎಷ್ಟೇ ತಣ್ಣೀರೆರೆದರೂ ತಪ್ಪದ ಉರಿ. ಉರಿ ಉರಿ ಎಂದು ಹಾರಿ ಹಾರಿ ಬಿದ್ದು ಹೊರಳಾಡಿದ. ನೀರು ತರುವುದು, ತಂದು ಮಧುವರಸನ ಮೇಲೆ ಸುರಿಯುವುದೇ ಗೌಡೀರಿಗೆ ದೊಡ್ಡ ಕೆಲಸವಾಯಿತು.

ಹೀಗೆ ನೀರು ತರಲು ಹೋಗುತ್ತಿದ್ದ ಗೌಡೀರಲ್ಲಿ ಒಬ್ಬಳು ಊರಿಗೆ ಹೊಸದಾಗಿ ಬಂದಿದ್ದ ದೊಂಬರ ಆಟವನ್ನು ಮೈಮರೆತು ನೋಡುತ್ತ ನಿಂತುಬಿಟ್ಟಳು. ಆಟ ಮುಗಿದ ಮೇಲೆ ತನ್ನ ಕೆಲಸದ ಅರಿವು ಬಂದು ಹೆದರುತ್ತ ಬೆದರುತ್ತ ಆತುರಾತುರವಾಗಿ ನೀರು ತರಲು ಹೊರಟಳು. ದೂರದ ಕೊಳಕ್ಕೆ ಹೋಗಿ ಬರಲು ಹೆಚ್ಚು ಕಾಲ ಬೇಕೆಂದುಕೊಂಡ ಅವಳು ಹತ್ತಿರದಲ್ಲೆ ಇದ್ದ ಹರಳಯ್ಯನು ಚರ್ಮ ಹದ ಮಾಡುವ ಕರೆಬಾನಿಯ ನೀರನ್ನು ತುಂಬಿಕೊಂಡು ತಂದು ಮಧುವರಸನ ಮೇಲೆ ಸುರಿದಳು. ಆ ಕೂಡಲೆ ಮಧುವರಸನ ಮೈಯಿನ ಉರಿಯೆಲ್ಲ ಹೇಳ ಹೆಸರಿಲ್ಲದಂತೆ ಥಟ್ಟನೆ ನಿಂತು ಹೋಯಿತು! ಇದರಿಂದ ಸೋಜಿಗಗೊಂಡ ಮಧುವರಸ ನಿಜಸಂಗತಿಯನ್ನು ಗೌಡಿಯಿಂದ ತಿಳಿದು

ಆ ಹರಳಯ್ಯ ನಿಂದೀಸಿ ನಾ ಕೆಟ್ಟು ಬೆಂದೆನಲ್ಲ
ಈಗವನ ಮನೆಯ ಸಿರುತೀರ್ಥ |

ಈಗವನ ಮನೆಯ ಸಿರುತೀರ್ಥ ನನ ಮಂಡೆಯ ಮೇಲೆ
ಬೀಳಲಾಗಿ ಪಾವನವಾಯ್ತು ನನ ರುದಯವು |

ಎಂದು ಹಿಗ್ಗಿದ ಮಧುವರಸ ಮೃದುವಾಗಿ ಹರಳಯ್ಯನ ನೆಂಟು ಬೆಳೆಸಲು ನಿರ್ಧರಿಸುತ್ತಾನೆ. ಈ ನಿರ್ಧಾರವೇ ಕಲ್ಯಾಣದ ಕ್ರಾಂತಿಗೆ ಆದಿಬೀಜವಾಗಿ ಪರಿಣಮಿಸುತ್ತದೆ.

ಮಧುವರಸ ಹಾಗೂ ಹರಳಯ್ಯನ ಮಕ್ಕಳ ಮದುವೆ ವಿಚಾರವಾಗಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಅದು ಕೇವಲ ಪ್ರಯತ್ನ ಎಂಬುದು ಒಂದು ಅಭಿಪ್ರಾಯವಾದರೆ, ಮದುವೆ ನಡೆದದ್ದು ನಿಜ ಎಂಬುದು ಇನ್ನೊಂದು ವಾದವಾಗಿದೆ. ಈ ವಿಚಾರವಾಗಿ ಪ್ರಸ್ತುತ ಕಾವ್ಯ ವಿಶೇಷ ಬೆಳಕು ಬೀರುತ್ತದೆ.

ಬಹುತೇಕ ಕಾವ್ಯಗಳಲ್ಲಿ ಮಧುವರಸನ ಮಗಳಿಗೂ ಹರಳಯ್ಯನ ಮಗನಿಗೂ ವಿವಾಹವಾದಂತೆ ತಿಳಿಸಿದ್ದರೆ, ಈ ಕಾವ್ಯ ಹರಳಯ್ಯನ ಮಗಳು ಹಾಗೂ ಮಧುವರಸನ ಮಗನ ನಡುವೆ ವಿವಾಹ ಸನ್ನಾಹ ನಡೆದಂತೆ ತಿಳಿಸುತ್ತದೆ. ಜೊತೆಗೆ ವರ್ಣ ಸಂಕರದ ಪರಿಣಾಮವನ್ನು ಊಹಿಸಿ ಹರಳಯ್ಯ ಈ ಮದುವೆಯನ್ನು ನಿರಾಕರಿಸಿದಂತೆ ಹೇಳಿರುವುದು ಹೊಸ ವಿಚಾರವಾಗಿದೆ. ಅಲ್ಲದೆ ಹರಳಯ್ಯನ ಮಗಳು ಅರುಂಧತಿ ನಕ್ಷತ್ರವಾದಳು ಎಂದು ಹೇಳುವುದೇ ಕಾವ್ಯದ ಮೂಲ ಆಶಯವಾಗಿದ್ದು, ಅದರ ಮೇಲೆ ಹೆಚ್ಚು ಒತ್ತುಕೊಟ್ಟಂತೆ ಕಂಡುಬರುತ್ತದೆ. ಅನಂತರ ಬ್ರಾಹ್ಮಣ ವರನನ್ನು ಮದುವೆಯಾಗಲೊಲ್ಲದೆ ಹರಳಯ್ಯನ ಮಗಳು ಮದುವೆ ಮಂಟಪದಿಂದ ಮಾಯವಾದಂತೆ ಚಿತ್ರಿಸಿರುವುದು ಇದಕ್ಕೆ ಪೂರಕವಾಗಿದೆ. ಈ ಸಂಗತಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ ವಧುವರರ ಸಮ್ಮತಿ ಪಡೆಯದೆ ಆತುರವಾಗಿ ಮದುವೆಗೆ ಕಾರ್ಯಯೋಜನೆ ರೂಪಿಸಿರುವಂತೆ ಕಂಡುಬರುತ್ತದೆ. ಇದು ಯಾರದೋ ಒತ್ತಾಯ-ಅಪೇಕ್ಷೆಗಳಿಗಾಗಿ ಏರ್ಪಟ್ಟು ವಿಫಲವಾದಂತೆ ಅನ್ನಿಸುತ್ತದೆ. ಹೀಗೆ ಮದುವೆ ಜರುಗದೆ ಹೋದಾಗ

ಬಿಜ್ಜಳನಲ್ಲಿ ಮಧುವರಸ ದೂರ ಸಲ್ಲಿಸಿ ಬಸವಣ್ಣನವರನ್ನು ಆರೋಪಿಯನ್ನಾಗಿಸಿರುವುದು ವಿಚಿತ್ರವೆನಿಸುತ್ತದೆ. ಅನಂತರದ ಪವಾಡ ಸದೃಶ ಘಟನೆಗಳ ಮೂಲಕ ಸಂದರ್ಭವನ್ನು ಸಾಪೇಕ್ಷವಾಗಿ ಮುಕ್ತಾಯಗೊಳಿಸಲಾಗಿದೆ.

ಒಟ್ಟಾರೆ ಈ ಬಗೆಯ ಚಿತ್ರಣ ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಈ ಕುರಿತಾದ ಇನ್ನಷ್ಟು ಸಂಶೋಧನೆಗೆ ಇದು ಪ್ರೇರಣೆ ನೀಡುತ್ತದೆ. ಅಲ್ಲದೆ "ಇದು ಗ್ರಂಥಸ್ಥ ಕಥಾವಸ್ತುವಿಗಿಂತ ಭಿನ್ನಮುಖಿಗಳನ್ನು ಹೊಂದಿದ್ದು ಮತಪ್ರಚಾರದ ಸೋಂಕು ಇದರಲ್ಲಿಲ್ಲ. ಮಾನವ ಸಹಜ ಸ್ವಭಾವದ ನಡಿಗೆ ಈ ಕಥನಗೀತೆಯಲ್ಲಿದೆ. ಪವಾಡದ ಗುಣಗಳು ಮನೆ ಮಾಡಿವೆ. ಮಡದಿ ಕಲ್ಯಾಣಮ್ಮನ ಕುರಿತ ಕೆಲ ವಿವರಗಳು ಪೌರಾಣಿಕ ಪವಾಡಗಳ ನೆಲೆಯಲ್ಲಿ ಕಾಣಿಸಿಕೊಳ್ಳುತ್ತವೆ.[14] ಅಲ್ಲದೆ ಶರಣೆಯರ ವಿಶೇಷ ಉಲ್ಲೇಖ ಹಾಗೂ ಶರಣೆಯರ ಕಾಯಕ ನಿಷ್ಠೆಯನ್ನು ವಿಶೇಷವಾಗಿ ಹೇಳಿರುವುದು ಇಲ್ಲಿ ಗಮನ ಸೆಳೆಯುತ್ತದೆ. ಎಲ್ಲಕ್ಕೂ ಹೆಚ್ಚಾಗಿ ಬಸವಣ್ಣನವರ ಇಲ್ಲಿನ ವರ್ತನೆಗಳು ಹೆಚ್ಚು ಮಾನವೀಯವಾಗಿದ್ದು ದಮನಿತ ವರ್ಗಗಳನ್ನು ಉನ್ನತಿಗೊಳಿಸುವ ಸಹಜ ಸ್ವಭಾವಕ್ಕೆ ಸಾಕ್ಷಿಯಾಗುತ್ತಾರೆ.

ಇಷ್ಟಾದರೂ ಹರಳಯ್ಯನ ಮಗ ಶೀಲವಂತನಿಗೆ ಮಧುವರಸನ ಮಗಳನ್ನು ಕೊಟ್ಟು, ಲಗ್ನ ಮಾಡಿದ ಮಹೋನ್ನತ ಕ್ರಾಂತಿಕಾರೀ ಘಟನೆ ಈ ಕಾವ್ಯದಲ್ಲಿ ಮುಕ್ಯಾಗಿರುವುದು ಆಕಸ್ಮಿಕವೆನಿಸುತ್ತದೆ. ನೀಲಗಾರರಲ್ಲಿ ಕೆಲವರು ಈ ಪಾಠವನ್ನು ಹೇಳಿರುವುದೂ ಉಂಟು. ಶರಣ ತತ್ತ್ವಗಳನ್ನು ಆಚರಣೆಯಲ್ಲಿ ತಂದು ನುಡಿನಡೆಗಳನ್ನೊಂದಾಗಿಸಿದ ಕೀರ್ತಿ ಹರಳಯ್ಯ-ಮಧುವರಸರಿಗೆ ಸಲ್ಲುತ್ತದೆ. ಈ ಅಂತರ್ಜಾತಿಯ ವಿವಾಹ ಸನಾತನಿಗಳಿಗೆ ಸಮಾಲಾದಂತೆ ಬಿಜ್ಜಳನ ಅತಿವರ್ತನೆಯಿಂದ ಅವನ ಪ್ರಾಣಕ್ಕೆ ಕುತ್ತೊದಗಿತು. ಬಿಜ್ಜಳನನಂತರ ಪಟ್ಟಕ್ಕೆ ಬಂದ ಅಳಿಯ ಬಿಜ್ಜಳನೂ ಶರಣರನ್ನು ಅಡಗಿಸಲು ಪ್ರಯತ್ನಿಸಿದ. ಪ್ರಜಾಪ್ರಭುತ್ವದ ಕಲ್ಪನೆಯನ್ನು ಮೂಡಿಸಿದ ಶರಣ ಕ್ರಾಂತಿ ದೊಡ್ಡ ಯುದ್ಧಕ್ಕೂ ಕಾರಣವಾಯಿತು.

ಹೀಗೆ ಶರಣರು ಅಳಿಯ ಬಿಜ್ಜಳನ ಜೊತೆ ಕಾದಿದ ಹಳ್ಳಿಯೇ ಬೆಳಗಾವಿ ಜಿಲ್ಲೆಯಲ್ಲಿರುವ ಇಂದಿನ ಕಾದರವಳ್ಳಿ. ಈ ಯುದ್ಧದಲ್ಲಿ ಗಂಗಾಂಬಿಕೆ ಗಾಯಗೊಂಡು ಮಡಿಯುತ್ತಾಳೆ. ಅವಳ ಸಮಾಧಿ ಕಾದರವಳ್ಳಿ ಸಮೀಪದ ಮಲಪ್ರಭ ನದಿಯ ದಂಡೆಯಲ್ಲಿದೆ. ಹರಳಯ್ಯನ ಹೆಂಡತಿ ಕಲ್ಯಾಣಮ್ಮಳೂ ಈ ಕಾಳೆಗದಲ್ಲಿ ಹೋರಾಡುತ್ತ ಸಾಯುತ್ತಾಳೆ. ಅವಳು ಮಡಿದ ಸ್ಥಳ ಅವಳ ಹೆಸರಿನ ಕಲ್ಯಾಣೆಯೂರು - ಈಗ - ಕಲ್ಲೂರಾಗಿದೆ. ಈ ಊರಿನಲ್ಲಿ ಕಲ್ಯಾಣಮ್ಮನ ಸಮಾಧಿ ಇದೆ. ಅಕ್ಕನಾಗಮ್ಮ ಮಡಿದ ಸ್ಥಳ ಈಗ ನಾಗಲಾಪುರ ಎಂಬ ಹೆಸರಿನ ಊರಾಗಿದೆ. ಇಲ್ಲಿ ಅಕ್ಕನಾಗಮ್ಮನ ಸಮಾಧಿ ಇದೆ. ಈ ಎಲ್ಲ ಊರುಗಳು ಹಾಗೂ ಸಮಾಧಿಗಳು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಕಾದರವಳ್ಳಿಯ ಸೀಮೀಮಠದ ಸಮೀಪದಲ್ಲೆ ಸುತ್ತಮುತ್ತ ಇವೆ.[15]

ತುರುಕರ ಪೀರಣ್ಣ

'ತುರುಕರ ಪೀರಣ್ಣ' ಕನ್ನಡ ಜನಪದ ಕಾವ್ಯ ಪ್ರಪಂಚದಲ್ಲಿ ಒಂದು ಅಪರೂಪದ ವಿಶಿಷ್ಟ ಕಾವ್ಯ. ಹೀಗೆ ಮುಸ್ಲಿಮರ ಪೀರಣ್ಣನನ್ನು ಕುರಿತು ಕಾವ್ಯ ಕಟ್ಟುವುದೇ ನಮ್ಮ ಜನಪದರ ಜಾತ್ಯತೀತ ಧರ್ಮನಿರಪೇಕ್ಷ ನಿಲುವಿಗೆ ಸಾಕ್ಷಿಯಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಪೀರಣ್ಣ ಎಂಬ ಹೆಸರಿನ ಅನೇಕರು ಇಂದಿಗೂ ಇದ್ದು ಇದು ಕೋಮುಸಾಮರಸ್ಯದ ಸಾಫಲ್ಯವನ್ನು ಹೇಳುವಂತದ್ದಾಗಿದೆ. ಜನಪದರಲ್ಲಿರುವ ಹಿಂದೂ-ಮುಸ್ಲಿಂರ ನಡುವಣ ಸಮವೃತ್ತಿಯ ಸಮಚಿತ್ತದ ಸಮಗ್ರಾಹಕಭಾವ ಅನನ್ಯವಾದುದು. ಅವರ ಹೃದಯವಂತಿಕೆ, ಔದಾರ್ಯಗಳ ಔನ್ನತ್ಯವನ್ನು ಸಾದ್ಯಂತವಾಗಿ ಬಿಂಬಿಸುವುದೇ ಈ ಕೃತಿಯ ಮುಖ್ಯ ಉದ್ದೇಶವಾಗಿದೆ. 'ಸರ್ವೇ ಜನಾಃ ಸುಖಿನೋ ಭವಂತು' ಎಂದು ಉದ್ಘೋಷಿಸುವ ಮಹನೀಯರಲ್ಲಿಲ್ಲದ ಮಾನವೀಯ ಗುಣವನ್ನು ಅನಕ್ಷರಸ್ಥ ಜನಪದರಲ್ಲಿ ಕಾಣಬಹುದಾದ ಒಂದು ವಿಶಿಷ್ಟ ಚಿತ್ರ ಈ ಕಾವ್ಯದಲ್ಲಿ ಮೂಡಿಬಂದಿದೆ.

---

14. ಪ್ರೊ. ಅರವಿಂದ ಮಾಲಗತ್ತಿ : ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ಪು.೩೭೧
15. ಮಾಹಿತಿ ಒದಗಿಸಿದವರು ಶ್ರೀ ಪ.ಬ್ರ. ಪಾಲಾಕ್ಷ ಶಿವಯೋಗೀಶ್ವರರು. ಶ್ರೀ ಸದ್ಗುರು ಅದೃಶ್ಯಾನಂದಾಶ್ರಮ ಸೀಮೀಮಠ, ಕಾದರವಳ್ಳಿ, ಬೆಳಗಾವಿ ಜಿಲ್ಲೆ.

ಇಲ್ಲಿ ಒಂದು ಸಮಸ್ಯೆ : ೧೨ನೇ ಶತಮಾನದ ಹೊತ್ತಿಗೆ ಮುಸ್ಲಿಮರು ದಕ್ಷಿಣ ಭಾರತವನ್ನು ಆಳಿಕಿದ್ದರೆಂಬುದು ಇತಿಹಾಸ. ಆದರೆ ಇವರು ಕಲ್ಯಾಣ ಪಟ್ಟಣಕ್ಕೆ ಬಂದಿದ್ದರೆ ? ಅವರಲ್ಲಿ ಯಾರಾದರೂ ಬಸವೇಶ್ವರನನ್ನು ಕಂಡಿದ್ದರೆ ? ಕಂಡಿದ್ದು ಶರಣತತ್ತ್ವಕ್ಕೆ ಮರುಳಾದರೆ ? ಮರುಳಾಗಿ ಶರಣರಾಗಿ ಕಲ್ಯಾಣದಲ್ಲಿ ಉಳಿದರೆ ? ಎಂಬುದಕ್ಕೆ ಶಿಷ್ಟ ಕಾವ್ಯಗಳಲ್ಲೆಲ್ಲೂ ಆಧಾರಗಳಿಲ್ಲ. ಹಾಗಾದರೆ ಇಲ್ಲಿ ಬರುವ ಬಸವಣ್ಣ ಕಲ್ಯಾಣದ ಬಸವಣ್ಣನೆ ಅಥವಾ ಅಲ್ಲವೆ ? ಕಲ್ಯಾಣದ ಬಸವಣ್ಣನಾಗಿರದೆ ಕೊಡೆಕಲ್ಲು ಬಸವಣ್ಣನಂಥ ಬೇರೆ ಯಾರಾದರೂ ಆಗಿರಬಹುದೆ? ಎಂಬ ವಿಚಾರಕ್ಕೆ ಇನ್ನೂ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ. ಆದರೆ ಇಂಥದೊಂದು ಕೋಮುಸಾಮರಸ್ಯದ ಘಟನೆಯ ಹಿನ್ನೆಲೆಯಲ್ಲಿ ಈ ಕಾವ್ಯ ರೂಪುಗೊಂಡಿರುವುದು ಅದ್ಭುತವೇ ಸರಿ. ಇಂಥ ಹಿನ್ನೆಲೆ ಇಲ್ಲದೆ ಇದ್ದ ಪಕ್ಷದಲ್ಲಿ ನಮ್ಮ ಜನಪದ ಗಾಯಕರು ಪೀರಣ್ಣನ ಹೆಸರನ್ನಾಗಲಿ ಅವನ ಬಗೆಗೆ ಇಂಥದೊಂದು ಕಥೆಯನ್ನು ಹೇಳುವುದಕ್ಕಾಗಲಿ ಹೇಗೆ ಸಾಧ್ಯವಾಗುತ್ತಿತ್ತು? ಅಲ್ಲದೆ ನಮ್ಮ ಗಾಯಕರು ಶರಣರನ್ನು ಕುರಿತ ಕಾವ್ಯಗಳನ್ನು ಹೇಳುವಾಗ ಕಲ್ಯಾಣಪಟ್ಟಣದಲ್ಲಿ ಯಾವ ಯಾವ ಶರಣರು ಇದ್ದರು ಎಂದು ಹೇಳುವಾಗಲೆಲ್ಲ ತುರುಕರ ಪೀರಣ್ಣನನ್ನು ತಪ್ಪದೆ ಹೆಸರಿಸುತ್ತಾರೆ. ಪೀರಣ್ಣನನ್ನು ಕುರಿತು ಇಂಥದೊಂದು ಕಥನ ಗೀತೆ ನಮ್ಮ ಗಾಯಕರ ಸ್ಮೃತಿಪಟಲದಲ್ಲಿ ಉಳಿದು ಬಂದುದು ನಮ್ಮ ಸುದೈವ.

'ಪಾರ್ಥನ ಜೋಗಿ ಹಾಡು' ಮತ್ತು 'ಜನಪದ ಮಹಾಭಾರತ'ಗಳಲ್ಲಿ ಜೋಗಿವೇಷದಲ್ಲಿದ್ದ ಅರ್ಜುನ ಮುಸ್ಲಿಮ್ ಕೇರಿಗೆ ಹೋಗುವುದು, 'ಪಿರಿಯಾಪಟ್ಟಣದ ಕಾಳಗ' ವೀರಕಾವ್ಯದಲ್ಲಿ ಪೈಗೂರು ಫಕೀರ ಪಿರಿಯಾಪಟ್ಟಣದ ವೀರಾಜನ ಪರವಾಗಿ ಯುದ್ಧ ಮಾಡುವುದು ಫಕೀರನ ತಂಗಿ ಉಪ್ಪಾರನ ಮನೆ ಆಶ್ರಯ ಪಡೆದು ಅವನಿಗೆ ಪತ್ನಿ ಆಗುವುದು. 'ಗುಂಡು ಬ್ರಹ್ಮಯ್ಯ'ನ ಕಾವ್ಯದಲ್ಲಿ ಶಿವನಾರಾಯಣರು ತುರುಕರ ಕೇರಿ ಪ್ರವೇಶ ಮಾಡುವುದು. ದೊಂಬಿದಾಸರ 'ಗಂಗೆ-ಗೌರಿ' ಕಾವ್ಯದಲ್ಲಿ ದಕ್ಷಬ್ರಹ್ಮ ತನ್ನ ಮಗಳನ್ನು 'ತುರುಕರಿಗೆ ಕೊಡಲೇನೆ ಮಗಳೆ ಶ್ರೀಗೌರಿ' ಎಂದು ಕೇಳುವುದು - ಇಂಥ ಕಡೆಯಲ್ಲೆಲ್ಲ ಜನಪದರ ಹೃದಯ ವೈಶಾಲ್ಯವನ್ನು ಕಾಣಬಹುದಾಗಿದೆ. 'ತುರುಕರ ಪೀರಣ್ಣ'ನ ಕಥೆಯು ಇಂಥ ಮನಃಸ್ಥಿತಿಯಲ್ಲೆ ಒಡಮೂಡಿ ಬಂದಿರುವಂಥದು.

ಶಿವಶರಣರ ಪಟ್ಟಣವಾದ ಕಲ್ಯಾಣದಲ್ಲಿರುವ ಭಕ್ತ ಮಹಾಶಯರಲ್ಲಿ ತುರುಕರ ಪೀರಣ್ಣನೂ ಒಬ್ಬ. ದನದಮಾಂಸವನ್ನು ಮಾರುವುದು ಅವನ ವೃತ್ತಿ. ಇದನ್ನು ಕಂಡು ಬಸವಣ್ಣನವರು ಚಿಂತೆಗೀಡಾದರು. ಶಿವನನ್ನು ಧ್ಯಾನಿಸುತ್ತ ಉರಿಯ ಗದ್ದುಗೆಯ ಮೇಲೆ ಒರಗಿ ನಿದ್ರೆ ಮಾಡುತ್ತಿರುವಾಗ ಅವರಿಗೆ ಮಾಯದ ಸ್ವಪ್ನ ಬಿದ್ದು ಶಿವನು ಕಾಣಿಸಿಕೊಂಡ. "ಬಸವಣ್ಣ ನೀನೊಬ್ಬ ಶರಣನಾಗಿ ದುಃಖಿಸುವುದು ತರವೆ ? ನೀನು ಮುಸುಲ್ಮಾನ ಪೀರಣ್ಣನನ್ನು ಶಿವಶರಣನನ್ನಾಗಿ ಮಾಡಬೇಕು" ಎಂದು ಹೇಳಿದ.

ಶಿವನ ಆದೇಶದಂತೆ ಬಸವಣ್ಣನವರು ಹೋರಿಯ ರೂಪವನ್ನು, ಶಿವನು ಹೋರಿ ವ್ಯಾಪಾರದ ದಳ್ಳಾಳಿ ವೇಷವನ್ನು ತಾಳಿದರು. ಸಮಸಮ ರಾತ್ರಿಯ ಹೊತ್ತಿನಲ್ಲಿ ಹೊಲೆಯರ ಹೊನ್ನಯ್ಯನ ಮನೆಗೆ ಬಂದರು. ಸಾವಿರ ಹಣ ಬೆಲೆಬಾಳುವ ಹೋರಿಯನ್ನು ಕೇವಲ ಹತ್ತು ಹಣಕ್ಕೆ ಮಾರುವುದಾಗಿ ಶಿವ ಹೊನ್ನಯ್ಯನಿಗೆ ಹೇಳಿದ. ಹೊನ್ನಯ್ಯನ ಹತ್ತಿರ ಕೇವಲ ಎರಡೇ ಎರಡು ಹಣವಿದ್ದುದರಿಂದ ತನ್ನ ತಮ್ಮ ಚನ್ನಯ್ಯನ ಬಳಿಗೆ ಬರುತ್ತಾನೆ. ಚನ್ನಯ್ಯನಲ್ಲಿಯೂ ಎರಡು ಹಣದ ಮೇಲೆ ಒಂದು ಕವಡೆಯೂ ಇರಲಿಲ್ಲ. ಪೀರ್ ಸಾಹೇಬ ಹಣದ ಮನುಷ್ಯನಾಗಿದ್ದುದರಿಂದ ಅವನೊಂದಿಗೆ ಪಾಲುದಾರರಾಗಿ ಹೋರಿಯನ್ನು ಕೊಳ್ಳಲು ಪ್ರಯತ್ನಿಸುತ್ತಾರೆ. ಪೀರಣ್ಣ ಇವರೆಲ್ಲ ತನ್ನ ಹತ್ತಿರಕ್ಕೆ ಬಂದಾಗ ಶಿವನನ್ನು ಕುರಿತು ನಮಾಜು ಮಾಡುತ್ತಿದ್ದ. ಹೋರಿಯನ್ನು ಕೊಳ್ಳಲು ಪಾಲುದಾರನಾಗಲು ಅವನು ಒಪ್ಪಿದ. ಮೂವರೂ ಸೇರಿ ಹೋರಿಯನ್ನು ಕೊಂಡುಕೊಂಡರು. ಪೀರ್ ಸಾಹೇಬ ಮಿಸ್ಮಿಲ್ಲ ಮಾಡಿ ಹೋರಿಯನ್ನು ಕೊಲ್ಲಲು ಮಾಂಸವನ್ನು ಮೂವರೂ ಹಂಚಿಕೊಂಡರು. ಹೋರಿಯ ಮಾರಾಟಗಾರ ಮಾಯದ ಶಿವ ತನಗೂ ಒಂದು ಪಾಲು ಕೊಡಿರೆಂದು ಕೇಳಿದ. ಆ ಮೂವರೂ ಮೊದಲೇ ಮಾಂಸವನ್ನು ಪಾಲು ಮಾಡಿಕೊಂಡಿದ್ದರಿಂದ ಶಿವನಿಗೆ ಪಾಲು ಕೊಡಲಾಗಲಿಲ್ಲ. ವ್ಯಾಪಾರಿ ನಸುನಗುತ್ತ ಅಲ್ಲಿಂದ ಮಾಯವಾದ.

ಹೊನ್ನಯ್ಯ ಮನೆಗೆ ಹೋಗಿ ತಾನು ತಂದಿದ್ದ ಮಾಂಸದ ಗಂಟನ್ನು ಬಿಚ್ಚಿ ನೋಡಿದರೆ ಅದು ಬಸವಣ್ಣನವರ ತಲೆಯಾಗಿತ್ತು. ಇದನ್ನು ಕಂಡ ಹೊನ್ನಯ್ಯ ಗಾಬರಿಯಾದ. ನರಹತ್ಯೆ ಮಾಡಿಸಿದವನು ಮಾಯಕಾರನೇ ಇರಬೇಕು. ಈ ಹತ್ಯೆಯ ವಿಷಯ ಬಿಜ್ಜಳನಿಗಾಗಲಿ, ಮಂಚಣ್ಣನಿಗಾಗಲಿ ತಿಳಿದರೆ ನನ್ನ ಗತಿಯೇನು? ಎಂದು ಹೆದರಿ ಬಸವಣ್ಣನವರ ತಲೆಯನ್ನು ಊರಾಚೆಯ ಬೆಟ್ಟದ ಕಿಬ್ಬಿಯಲ್ಲಿ ಕಾಣದಂತೆ ಇರಿಸಿ ಬಂದ. ಚನ್ನಯ್ಯನ ಪಾಲಿನ ಮಾಂಸ ಬಸವಣ್ಣನವರ ಕೈಕಾಲುಗಳಾಗಿ ಪರಿವರ್ತನೆ ಹೊಂದಿರುವುದನ್ನು ಕಂಡು ಚನ್ನಯ್ಯನೂ ಸಹ ಹೆದರಿ ಊರ ಹೊರಗಿನ ಕಣಿವೆಯಲ್ಲಿ ಗುಟ್ಟಾಗಿ ಇಟ್ಟುಬಂದ. ಇತ್ತ ಕಡೆ ಚೌಕದಲ್ಲಿ ಸುತ್ತಿ ತಂದಿದ್ದ ಮಾಂಸಕ್ಕೆ ಬದಲಾಗಿ ಬಸವೇಶ್ವರನ ಮುಂಡ ಇರುವುದನ್ನು ಕಂಡು ಪೀರ್ ಸಾಹೇಬನೂ ಹೆದರಿ

ಅವನೂ ಅದನ್ನು ಕಣಿವೆಯಲ್ಲಿ ಅವಿತಿಟ್ಟು ಬಂದ. ಈ ಮೂವರೂ ಬೆಟ್ಟದ ಬಳಿ ಸಂಧಿಸಿದ ಸಮಯ ನೋಡಿ ಮಾಯಕಾರ ಶಿವನು ಬಿಜ್ಜಳನ ಗೂಢಚಾರ (ಕೋಲ್ಕಾರ), ಮಂಚಣ್ಣ ಮತ್ತು ಮಾಯದ ಚಕ್ಕುರ - ಇವರನ್ನೆ ಸೃಷ್ಟಿಸಿ ಕಳುಹಿಸಿದ. ಅವರು ಆ ಮೂವರನ್ನೂ ಬಸವಣ್ಣನವರ ಕೊಲೆ ಮಾಡಿದವರೆಂದು ಬಂಧಿಸಿ ಮಾಯದ ಬಿಜ್ಜಳನ ಮುಂದೆ ನಿಲ್ಲಿಸಿದರು. ಬಿಜ್ಜಳನು ಬಸವಣ್ಣನವರ ಕಳೇವರವನ್ನು ಅವರಿಂದ ತರಿಸಿ ಕಡಿದು ಹೋಗಿದ್ದ ಅಂಗೋಪಾಂಗಗಳನ್ನು ಸೇರಿಸುವಂತೆ ಅವರಿಗೆ ಆಜ್ಞೆ ಮಾಡಿದ. ಅಂಗೋಪಾಂಗಗಳು ಸೇರ್ಪಡೆಯಾದಾಗ ಬಸವಣ್ಣನವರು ನಿದ್ದೆಯಿಂದ ಎಚ್ಚೆತ್ತವರಂತೆ ಮೇಲೆದ್ದರು. ಅದೇ ಸಮಯದಲ್ಲಿ ಮಾಯದ ಬಿಜ್ಜಳ, ಮಾಯದ ಮಂಚಣ್ಣ, ಮಾಯದ ಚಕ್ಕುರ - ಇವರೆಲ್ಲ ಅದೃಶ್ಯರಾದರು. ಬಸವಣ್ಣನವರು ಕೊಲೆಯ ಆಪಾದನೆಯನ್ನು ಹೊತ್ತ ಈ ಮೂವರನ್ನು ಕುರಿತು

ನಿಮ್ಮ ಸತ್ಯಾವ ಒಪ್ಪಿಕೊಂಡೆ ಸುವ್ವಿಲಾಲೆ
ಹೆದುರ್ಪ್ಯಾಡ ಚನ್ನಯ್ಯ
ಹೊಲೇರು ಹೊನ್ನಯ್ಯ
ತುರುಕರ ಪೀರಣ್ಣ
ನಿಮ್ಮ - ಸತ್ಯಾವ ಮೆಚ್ಚಿಕೊಂಡೆ ।

ಎಂದು ಹೇಳಿದ ಬಸವಣ್ಣನವರು ಈ ಮೂವರು ಶರಣರ ಸಹಿತ ಕಲ್ಯಾಣ ಪಟ್ಟಣಕ್ಕೆ ಬರುತ್ತಾರೆ. ಹೀಗೆ ಬಸವಣ್ಣನವರ ಕೃಪೆಗೆ ಪಾತ್ರರಾದ ಹೊನ್ನಯ್ಯ ಚನ್ನಯ್ಯ ಮತ್ತು ಪೀರಣ್ಣ ಘನಶರಣರಾಗಿ ಜೀವನ ಸಾಗಿಸುತ್ತಾರೆ.

ಮುಂದೆ ಭಕ್ತ ಸಿರಿಯಾಳನ ಕಥೆಯನ್ನು ನೆನಪಿಸುವ ನರಮಾಂಸ ಭಕ್ಷಣೆಯ ಅಪೇಕ್ಷೆಯಿಂದ ಪೀರಣ್ಣನನ್ನು ಪರೀಕ್ಷಿಸುವ ಸನ್ನಿವೇಶ ಬರುತ್ತದೆ. ಇಂಥ ಚಿತ್ರ ಹರಿಹರನ ಇಳೆಯಾಂಡ ಗುಡಿಮಾರನ ಕತೆಯಲ್ಲೂ ಬರುತ್ತದೆ. ಆ ಎಲ್ಲ ಕಥೆಗಳೂ ಸುಖಾಂತವಾಗುತ್ತದೆ.

ಸಹಜ ಮಾಂಸಾಹಾರಿಗಳನ್ನು ಶರಣತತ್ತ್ವದ ನೆಲೆಯಲ್ಲಿ ಸಸ್ಯಾಹಾರಿಗಳನ್ನಾಗಿ ಪರಿವರ್ತಿಸುವ ಪ್ರಕ್ರಿಯೆಯ ಪ್ರತಿಮೆಯಾಗಿ ಈ ಕಾವ್ಯ ಕಂಡುಬರುತ್ತದೆ. ಪೀರಣ್ಣ, ಹೊನ್ನಯ್ಯ, ಚೆನ್ನಯ್ಯ ಮೂವರೂ ಒಟ್ಟಾಗಿ ಏರೀದಿಸಿದ ಮಾಂಸಕ್ಕಾಗಿ ಕತ್ತರಿಸಿದ ಹೋರಿಯ ಅಂಗೋಪಾಂಗಗಳು ಬಸವನ ದೇಹದ ಭಾಗಗಳಾಗಿ ಕಾಣಿಸಿಕೊಳ್ಳುವುದು ಸಾಂಕೇತಿಕವಾಗಿದೆ. ಜೊತೆಗೆ ಇಲ್ಲಿ ಕೊಲೆಯಾಗುವ ಪ್ರಾಣಿ ಮಾಂಸಾಹಾರಕ್ಕೆ ಸಲ್ಲುವ ಇನ್ನಾವುದೋ ಪ್ರಾಣಿಯಾಗಿರದೆ 'ಹೋರಿ'ಯೇ ಆಗಿರುವುದು ಗಮನಾರ್ಹ. ಮಾಯದ ಬಿಜ್ಜಳನ ವಿಚಾರಣೆಯ ಸಂದರ್ಭದಲ್ಲಿ ಆ ಮೂವರೂ ಬಸವಣ್ಣನ ಅಂಗೋಪಾಂಗಗಳನ್ನು ಜೋಡಿಸುವುದು, ತರುವಾಯ ಬಸವಣ್ಣ ಮೈಮುರಿದು ಮೇಲೇಳುವುದು - ಈ ಎರಡೂ ಕ್ರಿಯೆಗಳು ಮಾಂಸಾಹಾರಿಗಳು ತಮ್ಮ ಆಹಾರ ಪದ್ಧತಿಯನ್ನು ಬದಲಾಯಿಸಿಕೊಳ್ಳುವ ಕ್ರಿಯೆಗೆ ಸಾಕ್ಷಿಯಾಗುತ್ತವೆ.

ತರುವಾಯದಲ್ಲಿ ಬಸವಣ್ಣ ಪೀರಣ್ಣನ ಮನೆಗೆ ಬಂದು ಆತನ ಮಗನ ಮಾಂಸವನ್ನೇ ಆಹಾರವಾಗಿ ಬಯಸುವುದು ಕೊಲ್ಲುವುದರ ಹಿಂದಿನ ಕ್ರೌರ್ಯ ಹಾಗೂ ಅಮಾನವೀಯತೆಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವೇ ಆಗಿದೆ. ಆದರೆ ಬಸವಣ್ಣನವರ ಈ ಪ್ರಯತ್ನ ಪೂರ್ಣ ಯಶಸ್ಸು ಕಾಣದೆ ಹೋಯಿತು. ಮಂಟೇಸ್ವಾಮಿ ಮತ್ತು ಮಾದೇಶ್ವರರ ಪರಂಪರೆಯಲ್ಲಿ ಆಹಾರ ಪದ್ಧತಿಯಲ್ಲಿ ಅಂಥ ಕಟ್ಟುನಿಟ್ಟುಗಳು ಇಕ್ಕಟ್ಟಿಗೆ ಸಿಕ್ಕಿಸಲಿಲ್ಲ.

ಅಲ್ಲದೆ ಮುಸ್ಲಿಮರ ಅಲ್ಲಾ ಪ್ರಾರ್ಥನೆಯ ಕೂಗಿಗೆ ಇಲ್ಲಿ ಹೊಸ ಅರ್ಥ ವ್ಯಾಖ್ಯಾನ ನೀಡಿರುವುದು ವಿಶೇಷವಾಗಿದೆ. ದೇವರ ಅಸ್ತಿತ್ವವನ್ನು ಅಲ್ಲಗಳೆಯದೆ

ದಿನಕ್ಕೆ ಮೂರೊತ್ತು ಸುವ್ವಿಲಾಲೆ
ನೀನು ಶಿವನನ್ನು ಕೂಗಪ್ಪ
ಶಿವಗ್ಯಾನ ಮರಿದಂತೆ
ನರಮನುಸ್ರುಗೆ ಎಚ್ರಕೊಡು
ಮುಂದೆ ಕಲಿಕಾಲ ಕಾಣಪ್ಪ
ದೇವ್ರು ಇಲ್ಲ ಇಲ್ಲ ಅಂತಾರೆ

ಅವುರ್ಗೆ ಅದಲ್ಲ ಅಂತ ಎಚ್ರ ಹೇಳು
ಇಲ್ಲಾ ಅನ್ನೋದು ಸುಳ್ಳು
ಅದಲ್ಲಾ ಅಲ್ಲಾ ಸತ್ಯ ।

ಎನ್ನುವ ಮಾತಿನಲ್ಲೂ ಧರ್ಮಸಮನ್ವಯದ ಔದಾರ್ಯವನ್ನು ನೋಡಬಹುದಾಗಿದೆ.

ನುಲುಗೆ ಚಂದಯ್ಯ

'ನುಲುಗೆ ಚಂದಯ್ಯ' ಒಂದು ಅಚ್ಚುಕಟ್ಟಾದ ಪುಟ್ಟ ಕಾವ್ಯ. ಇದರ ಕಥಾವಸ್ತು ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಅಭಿವ್ಯಕ್ತಿ ಪಡೆದಿದೆ. ಉತ್ತರ ದೇಶದ ಬಸವಲಿಂಗ ದೇವರ 'ಕಥಾಸಾಗರ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ' ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ' ಚೆನ್ನಪ್ಪ ಕವಿಯ 'ಶರಣಲೀಲಾಮೃತ' ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಪುರಾಣ' ಯಳಂದೂರು ಹರೀಶ್ವರ ಕವಿಯ 'ಪ್ರಭುದೇವರ ಪುರಾಣ', ಚೆನ್ನಕವಿಯ 'ವಿಜಯ ಮಹಾಂತೇಶ ಪುರಾಣ'ಗಳಲ್ಲದೆ 'ನುಲಿಯ ಚಂದಯ್ಯಗಳ ತ್ರಿವಿಧಿ' ಎಂಬ ಅಜ್ಞಾತ ಕರ್ತೃವಿನ ತ್ರಿಪದಿ ಕಾವ್ಯಗಳಲ್ಲಿ ಮೂಡಿಬಂದಿದೆ. ಈ ಕಾವ್ಯಗಳಲ್ಲಿರುವ ಕಥೆಯೇ ಹೆಚ್ಚೂ ಕಡಿಮೆ ಇಲ್ಲಿಯೂ ಬಂದಿದೆ. ಈ ಕಥೆಯ ಮುಖ್ಯ ಆಶಯವೆಂದರೆ 'ಕಾಯಕದಲ್ಲಿ ನಿರತನಾದಾಗ ಲಿಂಗವನ್ಯಾದರೂ ಮರೆಯಬೇಕು' ಎಂಬ ನಿಲುವಿಗೆ ಸಂಕೇತವಾಗಿರುವುದು ಒಂದು. 'ಅಪ್ರಮಾಣ ಅಗಮ್ಯ, ಅಗೋಚರ'ನಾದ ಪರಶಿವನು 'ಕರಸ್ಥಲಕ್ಕೆ ಬಂದು ಚುಳುಕಾ'ಗಿ ಕೂರುವುದೆಂದರೆ ಅವನು ಭಕ್ತರ ಅಧೀನನೆಂಬುದು ಮತ್ತೊಂದು. ಅಂದರೆ ಶಿವ ಬಲ್ಲಿದನೋ ಅಥವಾ ಶಿವನ ಶರಣರು ಬಲ್ಲಿದರೊ ? ಎಂದು ನಾನಾ ವಿಧದಲ್ಲಿ ವಿಚಾರಿಸಿ ನೋಡಿದರೆ ಶಿವನೇ ಭಕ್ತರ ಅಧೀನನಾಗಿದ್ದಾನೆ. ಅಂದ ಮೇಲೆ ಶರಣರೇ ಮೇಲು ಎಂದು ಶರಣ ಮಹತ್ವವನ್ನು ಸಾರುವುದೇ ಈ ಕಾವ್ಯದ ಉದ್ದೇಶವಾಗಿದೆ. ಇಲ್ಲಿ ಕಾಯಕದ ಘನತೆಯನ್ನು ಶರಣರ ಹಿರಿಮೆಯನ್ನು ಎತ್ತಿಹಿಡಿಯುತ್ತ ಭಕ್ತರಿಲ್ಲದಿದ್ದರೆ ದೇವರೆಲ್ಲಿದ್ದಾನೆ? ಆದ್ದರಿಂದ ದೇವರು ಭಕ್ತರಿಂದ ಹಾಗೂ ಭಕ್ತರ ಅಧೀನ ಎಂಬ ತತ್ತ್ವವನ್ನು ಪ್ರತಿಪಾದಿಸಿದೆ.

'ನುಲಿ' ಎಂದರೆ ಹೊಸೆಯುವುದು. ನುಲಿಗೆ ಚಂದಯ್ಯನದು ಹಂಬುಗಳಿಂದ ಬಳ್ಳಿಗಳಿಂದ ಹಗ್ಗವನ್ನು ಹೊಸೆಯುವ ಕಾಯಕ. ನುಲಿದ ಹಗ್ಗಗಳನ್ನು ಮಾರಿ ಬಂದ ಹಣದಿಂದ ಗುರುಲಿಂಗ ಜಂಗಮರಿಗೆ ದಾಸೋಹ ನಡೆಸುತ್ತಿರುತ್ತಾನೆ.

ಒಂದು ದಿನ ಚಂದಯ್ಯ ಕಾಡಿಗೆ ಹೋಗಿ ಹಂಬುಗಳನ್ನು ಬಳ್ಳಿಗಳನ್ನು ಹೊರೆಕಟ್ಟಿ ಹೊತ್ತುಕೊಂಡು ಬರುತ್ತಿರುವಾಗ ಬಾಯಾರಿಕೆಯಾಯಿತು. ಪಕ್ಕದಲ್ಲೆ ಇದ್ದ ಸರೋವರದಲ್ಲಿ ನೀರನ್ನು ಕುಡಿಯಲು ಹೊರೆಯನ್ನು ಇಳುಕಿ ಸರೋವರಕ್ಕಿಳಿದು ಮೊದಲು ಜಲವನ್ನು ಲಿಂಗಕ್ಕೆ ಅರ್ಪಿಸಬೇಕೆಂದು ಕುತ್ತಿಗೆಯಿಂದ ತೆಗೆದು ಅಂಗೈಯಲ್ಲಿಟ್ಟುಕೊಂಡು ಕಣ್ಣುಮುಚ್ಚಿ ಧ್ಯಾನಿಸತೊಡಗಿದ. ಆ ಸಂದರ್ಭದಲ್ಲಿ ಅಂಗೈಯಲ್ಲಿದ್ದ ಲಿಂಗಯ್ಯ ಆಟಗುಳಿ ಹುಡುಗನಂತೆ ಕುಚೇಷ್ಟೆ ಮಾಡುವ ಉದ್ದೇಶದಿಂದ ಜಾರಿ ನೀರಿನೊಳಕ್ಕೆ ಬಿದ್ದ. ಬಿದ್ದು ನೀರೊಳಗಿದ್ದ ಲಿಂಗಯ್ಯನನ್ನು ಚಂದಯ್ಯ ತನ್ನ ಅಂಗೈಗೆ ಬಾರೆಂದು ಮತ್ತೆ ಮತ್ತೆ ಕರೆದರೂ ಚಂದಯ್ಯನನ್ನು ಚುಡಾಯಿಸ ಲೆಂದೇ ಲಿಂಗಯ್ಯ ಮೇಲಕ್ಕೆ ಬರಲಿಲ್ಲ. ಸರಿ, ಸತಾಯಿಸುವ ಲಿಂಗವನ್ನು ಯಥಾಸ್ಥಿತಿಯಲ್ಲೇ ಬಿಟ್ಟು ಲಿಂಗಪೂಜೆಯಿಲ್ಲದ ನೀರನ್ನು ಕುಡಿಯಲಾರದೆ ಲಿಂಗಯ್ಯ ಬರದಿದ್ದರೆ ಅಲ್ಲೆ ಇರಲಿ ಇನ್ನು ಕಾಯಕಕ್ಕೆ ತಡೆಯಾಗುತ್ತದೆ ಎಂದೆಣಿಸಿ ಚಂದಯ್ಯ ಊರು ಸೇರಿದ.

ಇತ್ತ ನೀರಿನಿಂದ ಮೇಲಕ್ಕೆ ಬಂದ ಚಲ್ಲಾಟದ ಲಿಂಗಯ್ಯ ಎಲ್ಲ ಕಡೆಗೂ ಕಣ್ಣಾಡಿಸಿ ಅಲ್ಲೆಲ್ಲೂ ಒಡೆಯನಿಲ್ಲದುದನ್ನು ಕಂಡು ಗಾಬರಿಯಿಂದ ಊರಿಗೆ ಓಡೋಡಿ ಬಂದ.

ಓಡಿ ಬಂದರಂತೆ ಲಿಂಗಯ್ಯ ಆ ಊರ್ಗೆ
ಬಾಗಿಲಲ್ಲಿ ಬಗ್ಗಿ ನೋಡುತಾರೆ ।

ಭಯವಾಗಿ ಬಾಗಲಲ್ಲಿ ನಿಂತುಕೊಂಡು ಲಿಂಗಯ್ಯ
ಅಲ್ಲೊಂದು ಯೋಚನೆ ಮಾಡುತಾನೆ ।

ಸುಮ್ಮನೆ ಇರುವಾದು ನನಗೆ ಸರಿಯಲ್ಲವೆಂದು
ಹಂಬುಗಳ ಹೊಸ್ದು ಹಗ್ಗ ಮಾಡುತಾನೆ ।

ಹಗ್ಗಗಳನ್ನು ಹೊಸೆದು ತಲೆ ಮೇಲೆ ಹೊತ್ತುಕೊಂಡು ಬೀದಿ ಬೀದಿಗಳಲ್ಲಿ ಮಾರುತ್ತಾನೆ. ಮಾರಿ ಬಂದ ಹಣವನ್ನು ತಂದು ಚಂದಯ್ಯನಿಗೆ ಕೊಡಲು ಹೋಗುತ್ತಾನೆ. ಆಗ ಚಂದಯ್ಯ ಲಿಂಗಪ್ಪನನ್ನು ಕಂಡು ಕಡುಗೋಪದಿಂದ

ಕೈಬಿಟ್ಟು ಹೋದವನು ತಿರಿಯಾಕಿ ಬರಬಾವುದ
ನೀನು - ನನ್ನ ಮನೆಯಲ್ಲಿ ಇರಬ್ಯಾಡ |

ನನ್ನ ಮನೆಯಲ್ಲಿ ಇರಬ್ಯಾಡ ಲಿಂಗಯ್ಯ
ಅನುತ್ಹೇಳಿ ಆಚೆಗೆ ನೂಕುತಾನೆ |

ಲಿಂಗಯ್ಯ ಪಶ್ಚಾತ್ತಾಪದಿಂದ ತನ್ನ ತಪ್ಪನ್ನು ಕ್ಷಮಿಸುವಂತೆ ಎಷ್ಟೇ ಬಗೆಯಲ್ಲಿ ಕೇಳಿಕೊಂಡರೂ ಚಂದಯ್ಯನ ಕರುಳು ಕರಗಲಿಲ್ಲ. ಇದರಿಂದ ನೊಂದ ಲಿಂಗಯ್ಯ ಕಣ್ಣೀರು ಸುರಿಸುತ್ತ ಬಸವಣ್ಣನವರ ಬಳಿಗೆ ಬಂದು ಸಂಕಟದಿಂದ

ಒಡೆಯರಿಗೂ ನನಗೂ ಹೊಡೆದಾಟವಾಗಿದೆ
ನೀವು ಸಮ್ತೀಯ ಮಾಡಬೇಕು |

ನ್ಯಾಯ ಪಂಚಾಯ್ತಿ ಮಾಡಿ ಮನೆಗೆ ಸೇರಿಸಬೇಕು
ಇದು ಒಂದು ಧರ್ಮ ನಿಮದೆಂದ |

ಗೋಳುಪಡುತ್ತಿರುವ ಲಿಂಗಯ್ಯನನ್ನು ಕರೆದುಕೊಂಡು ಬಸವಣ್ಣನವರು ಚಂದಯ್ಯನ ಮನೆಗೆ ಬಂದರು. ಚಂದಯ್ಯನಾದರೊ ಭಕ್ತಿ ಪರವಶನಾಗಿ ಓಡೋಡಿ ಬಂದು ಬಸವಣ್ಣನವರಿಗೆ ಶರಣು ಮಾಡಿದ. ಬಸವಣ್ಣನವರು

ಲಿಂಗಯ್ನ ತೆಪ್ಪುಗಳ ಮಾಪನ್ನೆ ಮಾಡಲು ಬೇಕು
ಲಿಂಗಯ್ಯ ನಿಮ್ಮ ಮಲ್ಲಿರಬೇಕು |

ಎಂದು ಕೇಳಿಕೊಂಡಾಗ ಚಂದಯ್ಯ ಗುರುವಿನ ಮಾತಿಗೆ ಎದುರೋಕ್ತಿಗಳನ್ನಾಡದೆ ಒಪ್ಪಿಕೊಂಡ. ಆಗ ಬಸವಣ್ಣನವರು

ಲಿಂಗಯ್ಯ ನೀನಿನ್ನು ತಪ್ಪಿ ಬಾಳಲಿಬ್ಯಾಡ
ಹಂಗಂದ್ರು ಅಣ್ಣ ಬಸವಣ್ಣ |

ನಿನಗಿಂತ ನಿನ್ನ ಶರಣರೆ ಹೆಚ್ಚು ಕಾಣೊ
ಶರಣರ ಆಗ್ನೆ ಮೀರಲಿಬ್ಯಾಡ |

ಎಂದು ಬುದ್ಧಿವಾದ ಹೇಳಿ ಚಂದಯ್ಯನ ಮನೆಗೆ ಕಂದಯ್ಯನನ್ನು ಸೇರಿಸಿದರು. ಇಲ್ಲಿಗೆ ಕಥೆ ಮುಕ್ತಾಯವನ್ನು ಕಾಣುತ್ತದೆ. ಆದರೆ ಸುಂದರವಾದ ಈ ಕಾವ್ಯ ನಮ್ಮ ಹಳ್ಳಿಗಳಲ್ಲಿನ ಹಳೇತಲೆಮಾರಿನ ತಂದೆ-ಮಗ ಮುನಿಸಿಕೊಂಡಾಗ ಪಂಚಾಯ್ತಿ ಕಟ್ಟೆಯಲ್ಲಿ ಯಜಮಾನರು ನ್ಯಾಯ ಮಾಡಿ ತಂದೆ ಮಕ್ಕಳನ್ನು ಒಂದುಗೂಡಿಸುವ ಮಧುರಸಂಗಮದ ಮೋಹಕ ಕಥೆಯಂತೆ ಕಣ್ಣಿಗೆ ಕಟ್ಟುತ್ತದೆ.

ಸತ್ಯಶರಣೆ ಶಿವನಾಗಮ್ಮ

ಹರಿಹರ ಕವಿಯ 'ಬಸವರಾಜದೇವರ ರಗಳೆ'[16]ಯಲ್ಲಿ ಬರುವ ಸಂಬೋಳಿ ನಾಗಿದೇವನ ಕಥೆಯ ಒಂದು ರೂಪಾಂತರ ಈ ಕಥಾನಕ. ಹರಿಹರ ಕವಿಯಲ್ಲಿ ಸಂಬೋಳಿ ನಾಗಿದೇವ ಎಂಬ ಶರಣನ ಉಲ್ಲೇಖವಿದ್ದರೆ ಜನಪದ ಕಾವ್ಯದಲ್ಲಿ ಶರಣೆ ಶಿವನಾಗಮ್ಮನ ಉಲ್ಲೇಖವಿದೆ. ಸಂಬೋಳಿ ನಾಗಿದೇವ ಅಥವಾ ಕಂಬಳಿ ನಾಗಿದೇವನಿಗೆ ಶಿವನಾಗಮಯ್ಯ ಎಂಬ ಹೆಸರೂ ಬಳಕೆಯಾಗಿದೆ. ಈ ಶಿವನಾಗಮ್ಮಯ್ಯದಲ್ಲಿರುವ ಹಳಗನ್ನಡ ಅಮ್ಮಯ್ಯ (ಅಮ್ಮ=ತಂದೆ, ಅಯ್ಯ<ಆರ್ಯ, ಅಜ್ಜ ಎಂಬ

---

16. ನೋಡಿ : ಹರಿಹರನ 'ಬಸವರಾಜದೇವರ ರಗಳೆ' ೧೦ನೇ ಸ್ಥಲ.

ತದ್ಭವರೂಪವೂ ಇದಕ್ಕಿದೆ) ಪುರುಷವಾಚಿ ಎಂಬುದು ಕಾಲಕ್ರಮದಲ್ಲಿ ಮರೆಯಾಗಿ ಇತ್ತೀಚಿನ ಜನಪದ ಗಾಯಕರಿಗೆ ಸ್ತ್ರೀವಾಚಿಯೆನಿಸಿ 'ಶಿವನಾಗಮ್ಮಯ್ಯ' ಎಂಬುದು 'ಶಿವನಾಗಮ್ಮ' ಆಗಿರಬಹುದು ಎನಿಸುತ್ತದೆ.

ಹರಿಹರನ 'ಬಸವರಾಜದೇವರ ರಗಳೆ'ಯಲ್ಲಿ ಬಂದಿರುವ ಕಥೆಯನ್ನೇ ಪಾಲ್ಕುರಿಕೆ ಸೋಮನಾಥ, ಉತ್ತರದೇಶದ ಬಸಪಲಿಂಗದೇವರು, ಶಾಂತಲಿಂಗ ದೇಶಿಕ ಮುಂತಾದವರು ಅನುಸರಿಸಿದಂತಿದೆ. ಇವರೆಲ್ಲರೂ ಹೇಳಿರುವ ಶಿವನಾಗಮಯ್ಯನ ಕಥೆಯೇ ಜನಪದ ಕಾವ್ಯ 'ಸತ್ಯಶರಣೆ ಶಿವನಾಗಮ್ಮ'ನ ಕಥೆಯಾಗಿದೆ.

ಒಮ್ಮೆ ಬಸವಣ್ಣನವರು ಕಾರ್ಯಾರ್ಥವಾಗಿ ಕಲ್ಯಾಣ ಪಟ್ಟಣದ ಬೀದಿಯೊಂದರಲ್ಲಿ ಬರುತ್ತಿರುವಾಗ ಶಿವನಾಗಮ್ಮ ಎಂಬ ಶರಣೆಯ ಮನೆಯಲ್ಲಿ ಕರಡೆ, ಗಂಟೆ, ಗಗ್ಗರ, ಜಾಗಟೆ, ಜಾಲಾರಗಳು ಮೇಳೈಸಿ ಶಿವಪೂಜೆ ನಡೆಯುತ್ತಿತ್ತು. ಇದನ್ನು ಕಂಡ ಬಸವಣ್ಣನವರು ತಾವೂ ಪೂಜೆಗೆಂದು ಶಿವನಾಗಮ್ಮನ ಮನೆಗೆ ಬಂದರು. ಹೀಗೆ ಬಂದ ಬಸವಣ್ಣನವರನ್ನು ಭಕ್ತಿಯಿಂದ ಬರಮಾಡಿಕೊಂಡ ಶಿವನಾಗಮ್ಮ ಪಾದ ತೊಳೆದು ಪೂಜೆ ಮಾಡಿ ಪ್ರಸಾದ ನೀಡಿ ಬೀಳ್ಕೊಟ್ಟಳು. ಪೂಜೆ ಮುಗಿಸಿಕೊಂಡು ಶಿವನಾಗಮ್ಮನ ಮನೆಯಿಂದ ಹೊರಟಾಗ ಬಸವಣ್ಣನವರನ್ನು ಮಂಚಣ್ಣ ನೋಡಿದ. 'ಬಸವಣ್ಣ ಎಲ್ಲಿಗೆ ಹೋಗಿದ್ದಿರಿ?' ಎಂದೂ ಕೇಳಿದ. ಅದಕ್ಕೆ ಬಸವಣ್ಣನವರು ಶಿವನಾಗಮ್ಮನ ಮನೆಯ ಶಿವಪೂಜೆಗೆ ಹೋಗಿದ್ದುದಾಗಿ ತಿಳಿಸಿದರು. ಆ ಕೂಡಲೆ ಮಂಚಣ್ಣ ಎಲ್ಲೂ ನಿಲ್ಲದೆ ಬಿಜ್ಜಳರಾಜನ ಹತ್ತಿರಕ್ಕೆ ಬಂದು

ಹೊಲೇರ ಶಿವನಾಗಮ್ನ ಮಠದಲ್ಲಿ ಶಿವಪೂಜೆ
ನಿಮ್ಮ ಪರದಾನಿಗಳಿಗೆ ತರವೇನು |

ಇವರು ವಿರಕ್ತರು ಸ್ವಾಮಿ ಮೇಲಾಗಿ ಶಿವಭಕ್ತ್ರು
ಭವಿಗಳ ಮನೆಗೆ ಇವ್ರು ಹೋಗಬವುದ |

ಎಂದು ಕಿವಿಯನ್ನು ಕಚ್ಚಿದ. ಮಂಚಣ್ಣನ ಮಾತಿನಿಂದ ಮುಜುಗರಕ್ಕೊಳಗಾದ ಬಿಜ್ಜಳ ದೊರೆ ಬಸವಣ್ಣನವರು ಬಂದ ಕೂಡಲೆ ಮಂಚಣ್ಣ ಹೇಳಿದ ವಿಷಯವನ್ನು ಪ್ರಸ್ತಾಪಿಸಿದ. ಅದಕ್ಕೆ ಬಸವಣ್ಣನವರು

ದೇವಾರ ಪೂಜೆಗೆ ಹೋಗಿದ್ದು ನಿಚ್ಚಾಯ
ಇದಕಾಗಿ ನಿಮಗೆ ಸಂಶಯವೇನಾ ?|

ಎಂದು ಪ್ರಶ್ನಿಸಿದರು. ಅದಕ್ಕೆ ಮಂಚಣ್ಣ

ನೀವು ನೋಡಿದರೆ ಗುರುವೆ ಭಕ್ತಿ ಇಚಾರದವ್ರು
ಭವಿಗಳ ಮಠಕೆ ನೀವು ಹೋಗಬವುದ ? |

ಎಂದು ಮತ್ತೆ ಕೆಣಕಿದ. ಅದಕ್ಕೆ ಬಸವಣ್ಣನವರ ಸಮಜಾಯಿಷಿ,

ಶಿವನ ಭಕ್ತರಿಗೆ ಭಿನ್ನವಿಲ್ಲ ಭೇದವಿಲ್ಲ
ಇದರಿಂದ ತೊಂದರೆ ನಿಮಗೇನು |

ಅವರಿಗೂ ನಮಗೂ ಭೇದವಿಲ್ಲ ಮಂಚಣ್ಣ
ನಮಗಿಂತಲೂ ಅವರು ಶರಣಾರು |

ಇದರಿಂದ ಕಸಿವಿಸಿಗೊಂಡ ಮಂಚಣ್ಣ ಕೊಂಚ ಕುಪಿತ ದನಿಯಲ್ಲೆ

ಹೆಚ್ಚು ಹೆಚ್ಚೆಂದರೆ ಹೆಚ್ಚು ಮಾತೇನು ಬ್ಯಾಡ
ಅವ್ರ ಮೈಯಲಿ ರಕುತ ಇಲುವೇನು |

ನಮ್ಮ ಮೈಯಲಿ ರಕುತ ಅವಳ ಮೈಯಲಿ ಹಾಲು
ತುಂಬಾದ ಹೇಳು ಬಸವಣ್ಣ |

ಎಂದು ಸವಾಲು ಹಾಕಿದ. ಅದಕ್ಕೆ ಬಸವಣ್ಣನವರು ಥಟ್ಟನೆ,

ನೀವು ಹೇಳಿದ ಮಾತು ನೂರಕ್ಕೆ ನೂರು ಸತ್ಯ
ನಮ್ಮ ಶರಣರ ರಕುತ ತನಿಯೂಲು |

ಎಂದುಬಿಟ್ಟರು. ಬಸವಣ್ಣನವರು ಇಷ್ಟು ಹೇಳಿದ ಮೇಲೆ ಇದರ ಸತ್ಯವನ್ನು ಪರೀಕ್ಷಿಸಲೇಬೇಕು ಎಂದು ಹಠ ಹಿಡಿದು ಕುಳಿತ ಮಂಚಣ್ಣ. ಆಗ ಬಸವಣ್ಣನವರು ಸತ್ಯಶರಣೆ ಶಿವನಾಗಮ್ಮನನ್ನು ಬಿಜ್ಜಳನ ಆಸ್ಥಾನಕ್ಕೆ ಕರೆಸಿದರು. ಕರೆಸಿದ ಅವರು

ನಾಗಮ್ಮ ಕರವನ್ನೆ ಹಿಡ್ದು ಬಸವಣ್ಣನವರು
ಅವ್ವ - ಕಿರುಬೆಳ್ಳ ಹಿಡಿದು ಹಿಂಡುತಾರೆ |

ಹಿಂಡಿದಾಗ ನೊರೆಹಾಲು ಕಂಡಾರು ಮಂಚಣ್ಣ
ಅವ್ವ ಸತ್ಯಾಪ ಅಲ್ಲಿ ಮೆಚ್ಚುತಾರೆ |

ಹೀಗೆ ಈ ಕಾವ್ಯದಲ್ಲಿ ಬಸವಣ್ಣನವರ ದಲಿತ ನಿಷ್ಠೆ ಹಾಗೂ ಶರಣರ ಅನನ್ಯತೆಯ ಅನಾವರಣಕ್ಕಾಗಿ ಈ ಪ್ರಸಂಗ ಬಂದಿದೆ. 'ನಮ್ಮ ಶರಣರ ರಕುತ ತನಿಯೂಲು' ಎಂದು ಶರಣರು ಇತರರಿಗಿಂತ ಭಿನ್ನ ಎಂಬುದನ್ನು ಪವಾಡ ಸದೃಶ ಘಟನೆಯ ಮೂಲಕ ನಿರೂಪಿಸಿ ಕಥೆ ಕೃತಾರ್ಥವಾಗುತ್ತದೆ.

ಗಟ್ಟಿವಾಳಯ್ಯ

ದಂಡಿನ ಮಾರಮ್ಮ ದಿಂಡಾಗಿ ಹೇಳುತೀನಿ
ದಂಡಿಗೋಗಿರೋ ನನಮಿಂಡ - ಹಿಂಬಂದರೆ
ನಿನ್ಗೆ - ನನಗಂಡನ ಬಲಿಯ ಕೊಡುತೀನಿ |

ಎಂಬ ತ್ರಿಪದಿ ಹಳ್ಳಿಯ ಹುಡುಗರು ಹೈಲಾಟಕ್ಕಾಗಿ ಹಾಡುವ ಕಿಲಲಿಯೋ ಪದ. ಇದು ಹಾಸ್ಯವನ್ನು ಉಕ್ಕಿಸುತ್ತಿರಬಹುದು. ಆದರೆ ಇಲ್ಲಿ ಹಾಸ್ಯವನ್ನು ಮೀರಿದ ಕ್ರೌರ್ಯ ಇದೆ. ಇದು ನಿಜವೆ ? ಸಾಧ್ಯವೆ? ಎಂದು ಹುಬ್ಬೇರಿಸುವವರೂ ಇರಬಹುದು. ಆದರೆ ಇದು ಕಟುವಾಸ್ತವ. ವಾಸ್ತವ ಜಗತ್ತಿನಲ್ಲಿ ನಾವು ಕಲ್ಪಿಸುವುದಕ್ಕೂ ಸಾಧ್ಯವಾಗದ ಅಥವಾ ನಮ್ಮ ಕಲ್ಪನೆಯನ್ನು ಮೀರಿಸಿದ ಅನೇಕ ಘಟನೆಗಳು ನಡೆದುಹೋಗುತ್ತವೆ. ಆಗ 'ಹೀಗೂ ಉಂಟೆ?' ಎಂಬುವವರ ಪ್ರಶ್ನೆಗೆ ಉತ್ತರ 'ಹೀಗೂ ಉಂಟು' ಎಂಬುದಷ್ಟೇ ಆಗಿರುತ್ತದೆ. ಕೆಲವರಿಗೆ ಗಟ್ಟಿವಾಳಯ್ಯನ ಕಥೆ ತೀರ ಕೆಟ್ಟದ್ದೆನಿಸಿದರೆ ಅದಕ್ಕೆ ಒಂದು ಸಮಾಧಾನ 'ಅಕಾಲಿಕ ವಿವಾಹದಿಂದ ದಾಂಪತ್ಯದಲ್ಲಿ ಉದ್ಭವಿಸುವ ವಿಕಾರಗಳನ್ನು ತಿಳಿಸುವುದೇ ಈ ಕಥಾನಕದ ಉದ್ದೇಶವಾಗಿದೆ' ಎಂಬುದು.

ಗಟ್ಟಿವಾಳಯ್ಯ ಬಸವಣ್ಣನವರ ಕಾಲದ ಒಬ್ಬ ವಚನಕಾರ, ಅವನು 'ಚಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿ ಶರಣಧರ್ಮವನ್ನು ಪ್ರಸಾರ ಮಾಡಿದವನು. ಇವನ ಹೆಸರಿನ ಒಟ್ಟು.....ವಚನಗಳು ಪ್ರಕಟವಾಗಿವೆ. ಇವನ ನಿಜವಾದ ಹೆಸರು ಮುತ್ತಯ್ಯ. ಆದರೆ ಇವನು ವಿಭೂತಿಘಟ್ಟಿಗಳನ್ನು ತಯಾರಿಸಿ ಶಿವಶರಣರಿಗೆ ವಿತರಿಸುತ್ತಿದ್ದುದರಿಂದ ಇವನಿಗೆ ಗಟ್ಟಿವಾಳಯ್ಯ ಎಂಬ ಅನ್ವರ್ಥನಾಮವೇ ಶಾಶ್ವತವಾಯಿತು. ಗಟ್ಟಿವಾಳಯ್ಯನ ಜೀವಿತದ ಕೆಲ ವಿಚಾರಗಳನ್ನು ಪರ್ವತೇಶ ಕವಿಯ 'ಚತುರಾಚಾರ್ಯ ಪುರಾಣ' ಚೆನ್ನ ಕವಿಯ 'ವಿಜಯ ಮಹಾಂತೇಶ ಪುರಾಣ' ಉತ್ತರ ದೇಶದ ಬಸವಲಿಂಗದೇವರ 'ಕಥಾಸಾಗರ' ಶಾಂತಲಿಂಗದೇಶಿಕನ 'ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ' ಮುಂತಾದ ಕೃತಿಗಳಲ್ಲಿ ಕಾಣಬಹುದಾಗಿದೆ. ಜನಪದ ಕಾವ್ಯದಲ್ಲಿ ಶಿಷ್ಟಕಾವ್ಯಗಳ ಕಥೆಯ ಛಾಯೆ ಇದ್ದರೂ ಸಣ್ಣಪುಟ್ಟ ವ್ಯತ್ಯಾಸಗಳಿಂದ ಕಾವ್ಯವೂ ಪರಿಣಾಮ ರಮಣೀಯತೆಯಿಂದ ಹೃದಯವನ್ನು ತಟ್ಟುತ್ತದೆ.

ಕಲ್ಯಾಣಪಟ್ಟಣದ ಶರಣರಿಗೆಲ್ಲ ಧರಿಸಲು ವಿಭೂತಿ ತಯಾರಿಸಿ ಕೊಡುವ ಕಾಯಕ ಹಿಡಿದಿದ್ದವನು ಗಟ್ಟಿವಾಳಯ್ಯ. ಅವನು ಹಣ್ಣು ಹಣ್ಣು ಮುದುಕನಾಗಿದ್ದ. ಈವರೆಗೂ ಮದುವೆಯಾಗಲು ಬಯಸದಿದ್ದ ಗಟ್ಟಿವಾಳಯ್ಯನಿಗೆ ಮುಪ್ಪಿನಲ್ಲಿ

ಮದುವೆಯ ಬಯಕೆ ಚಿಗುರೊಡೆಯಿತು. ಬಸವಣ್ಣನವರ ಬಳಿ ತನ್ನ ಬಯಕೆಯನ್ನು ತೋಡಿಕೊಂಡ. ಅವರಾದರೂ ಈ ವಯಸ್ಸಿನಲ್ಲಿ ಮದುವೆಯಾಗುವ ಹಂಬಲ ಬೇಡ ಗುರುವೆ ಎಂದು ಬುದ್ಧಿವಾದ ಹೇಳಿದರೂ ದೃಢ ನಿರ್ಧಾರ ಮಾಡಿಕೊಂಡಿದ್ದ ಗಟ್ಟಿವಾಳಯ್ಯನಿಗೆ ಒಪ್ಪಿಗೆ ಕೊಡುವುದು ಬಸವಣ್ಣನಿಗೆ ಅನಿವಾರ್ಯವಾಯಿತು. ಗಟ್ಟಿವಾಳಯ್ಯ ಏಕತಾರಿ ಹಿಡಿದು ಮನೆಮನೆಯ ಮುಂದೆ ನಿಂತ. ಭಿಕ್ಷೆಯ ಜೊತೆಗೆ ಕನ್ಯಾಭಿಕ್ಷೆಯನ್ನೂ ಕೇಳಿದ. ಅನ್ನ ಭಿಕ್ಷೆ ಕೊಟ್ಟವರು ಕನ್ಯಾ ಭಿಕ್ಷೆಯನ್ನು ಕೇಳುವ ಮುದುಕನನ್ನು ಕಂಡು ಕೆಲವರು ನಕ್ಕರು ; ಕೆಲವರು ಬೆರಗಾದರು. ಕೆಲವರು ಬೈದರು ; ಕೆಲವರು ಸಿಟ್ಟಾದರು. ಕೊನೆಗೂ ಒಂದು ಕಡೆ ಗಟ್ಟಿವಾಳಯ್ಯನ ಆಸೆ ಈಡೇರಿತು. ನಾಲ್ಕು ಜನ ವಿವಿವಾಹಿತ ಮಕ್ಕಳಿದ್ದ ಬಡ ತಂದೆಯೊಬ್ಬ ಗಟ್ಟಿವಾಳಯ್ಯನ ಇಚ್ಛೆಯಂತೆ ಕಿರಿಯ ಮಗಳನ್ನು ಧರ್ಮಾರ್ಥವಾಗಿ ಧಾರೆಯೆರೆದು ಕೊಟ್ಟ.

ಮದುವೆಯಾದ ಗಟ್ಟಿವಾಳಪ್ಪ ಹೆಂಡತಿಯನ್ನು ತನ್ನ ಹಟ್ಟಿಗೆ ಕರೆದುಕೊಂಡು ಬಂದ. ಪ್ರತಿನಿತ್ಯ ಭಿಕ್ಷೆಯಿಂದ ಬರುತ್ತಿದ್ದ ಮೂರು ಪಾವು ಅಕ್ಕಿಯನ್ನು ಹೆಂಡತಿಯ ಕೈಗೆ ತಂದುಕೊಡುತ್ತಿದ್ದ. ಅದರಲ್ಲಿ ಅವನಿಗೊಂದು ಪಾವು, ಹೆಂಡತಿಗೊಂದು ಪಾವು, ಬರುವ ಅತಿಥಿಗಳಿಗೊಂದು ಪಾವು ವಿನಿಯೋಗವಾಗುತ್ತಿತ್ತು.

ಪಕ್ಕದ ಊರಿನವನೊಬ್ಬ ದನಕರು ಮೇಯಿಸುವುದಕ್ಕಾಗಿ ಇವರ ಹಟ್ಟಿಯ ದಂಡ್ಯಕೆ ಬರುತ್ತಿದ್ದ. ಅವನು ಗಟ್ಟಿವಾಳಯ್ಯನ ಹೆಂಡತಿಯ ಅಂದ ಚಂದಕ್ಕೆ ಹುಚ್ಚಾಗಿ ಒಂದು ಸಾವಿರ ಹೊನ್ನು ಕೊಟ್ಟು, ಅವಳನ್ನು ತನ್ನವಳನ್ನಾಗಿಸಿಕೊಂಡ. ಗಟ್ಟಿವಾಳಯ್ಯನ ಹಟ್ಟಿ ಅವನ ವಿಶ್ರಾಂತಿ ಗೃಹವಾಯಿತು. ಒಂದು ದಿನ ಆಯಪ್ಪ ಗಟ್ಟಿವಾಳಯ್ಯನ ಮನೆಯಲ್ಲಿ ಮಲಗಿದ್ದ. 'ಮಲಗಿರುವವರು ಯಾರು?' ಎಂದು ಗಂಡ ಕೇಳಿದ್ದಕ್ಕೆ ಅವಳು 'ನನಗೆ ಗೊತ್ತಿಲ್ಲ. ನಿಮ್ಮನ್ನು ನೋಡಬೇಕೆಂದು ಬಂದು ಇಲ್ಲಿಯೇ ಮಲಗಿದ್ದಾರೆ' ಎಂದು ಹೇಳಿದಳು. ಪ್ರತಿನಿತ್ಯವೂ ಆತ ಮನೆಯಲ್ಲಿ ಮಲಗಿರುತ್ತಿದ್ದರೂ ಮಲಗಿದ್ದವರನ್ನು ಎಚ್ಚರಿಸಿದರೆ ನಿದ್ರಾಭಂಗದ ಪಾಪ ತಟ್ಟುತ್ತದೆಯೆಂದು ಗಟ್ಟಿವಾಳಯ್ಯ ತೆಪ್ಪಗಾಗುತ್ತಿದ್ದನು. ಹೀಗೆ ಅಪರಿಚಿತ ವ್ಯಕ್ತಿ ಗಟ್ಟಿವಾಳಯ್ಯನ ಮನೆಯಲ್ಲಿ ಆಗಾಗ ಬಂದು ಮಲಗಿ ಹೋಗುತ್ತಿದ್ದುದು ಮಾಮೂಲಾಗಿತ್ತು. ಆದರೆ ಗಟ್ಟಿವಾಳಯ್ಯ ಅವನನ್ನು ಎಂದೂ ಯಾರೆಂದು ವಿಚಾರಿಸುವ ಗೋಜಿಗೆ ಹೋಗಲಿಲ್ಲ.

ಗಟ್ಟಿವಾಳಯ್ಯನ ಹೆಂಡತಿಗೆ ಮೂರು ತಿಂಗಳಾಯಿತು. ಯಾಕೋ ಅವಳಿಗೆ ಸಣ್ಣಗೆ ಹೊಟ್ಟೆನೋವು ಕಾಣಿಸಿಕೊಂಡಿತು. ಅವಳು ತವರಿಗೆ ಹೋಗಬೇಕೆಂದು ಹಟ ಹಿಡಿದು ಕುಳಿತಳು. ಅವಳನ್ನು ಕರೆದುಕೊಂಡು ಹೋಗಲು ಬಾಡಿಗೆ ಬಂಡಿ ಹುಡುಕುತ್ತಿರುವಾಗ ತನ್ನ ಮನೆಯಲ್ಲೇ ಮಲಗುತ್ತಿದ್ದ ಆಸಾಮಿಯೇ ಬಾಡಿಗೆಗೆ ಬಂಡಿ ಹೊಡೆದುಕೊಂಡು ಬಂದ. ತನ್ನ ಹೆಂಡತಿಯೊಡನೆ ಗಟ್ಟಿವಾಳಯ್ಯ ಬಂಡಿಯಲ್ಲಿ ಕುಳಿತ. ಬಂಡಿ ಹೊರಟಿತು. ಕಾಡುದಾರಿಯ ನಡುವೆ ಈಕೆ ಬಾಯಾರಿಕೆಯೆಂದು ಬೊಬ್ಬಿಟ್ಟಳು. ನೀರಿಗಾಗಿ ಸುತ್ತೆಲ್ಲ ಅಲೆದ ಗಟ್ಟಿವಾಳಯ್ಯನಿಗೆ ಆಳವಾದ ನೆಲಬಾವಿಯ ತಳದಲ್ಲಿ ತುಸುವೇ ನೀರಿರುವುದು ಕಾಣಿಸಿತು. ಮಿಳ್ಳೆಯನ್ನು ಹಿಡಿದು ಗಟ್ಟಿವಾಳಯ್ಯ ಬಾವಿಗೆ ಇಳಿದಾಗ ಹೆಂಡತಿ ಹಾಗೂ ಅವಳ ಮಿಂಡ ಸೇರಿಕೊಂಡು ಗಟ್ಟಿವಾಳಯ್ಯನ ಮೇಲೆ ಒಂದು ಗುಂಡನ್ನು ನೂಕಿ ಕೊಲ್ಲಲು ಪ್ರಯತ್ನಿಸಿದರು. ಆದರೆ ಗುಂಡು ಬೀಳುತ್ತಿರುವ ಸದ್ದನ್ನು ಕೇಳಿದ ಗಟ್ಟಿವಾಳಯ್ಯ ಥಟ್ಟನೆ ಬಸವೇಶ್ವರನನ್ನು ಸ್ಮರಿಸಿದ. ಉರುಳಿ ಬರುತ್ತಿದ್ದ ಗುಂಡು ಬಾವಿಯ ಮಧ್ಯಭಾಗದಲ್ಲೆ ನಿಂತು ತೊಟ್ಟಿಲಿನಂತೆ ತೂಗಾಡಿತು. ಗಟ್ಟಿವಾಳಯ್ಯ ಬಾವಿಯ ಮೆಟ್ಟಿಲುಗಳನ್ನು ಹತ್ತಿ ಬರುವಾಗ ಅದು ಅವನಿಗೆ ದಾರಿ ಬಿಟ್ಟುಕೊಟ್ಟಿತು. ಕಾಡಿನ ನಡುವೆ ಮೂವರೂ ಬುತ್ತಿಯುಂಡು ನೀರು ಕುಡಿದು ಪ್ರಯಾಣ ಮುಂದುವರೆಸಿದರು.

ಇವರು ಊರು ಸೇರಿ ಬಂಡಿಯಿಂದ ಕೆಳಕ್ಕಿಳಿಯುವಷ್ಟರಲ್ಲಿ ಆ ಊರಿನ ವ್ಯಕ್ತಿಯೊಬ್ಬ ನುಗ್ಗಿ ಬಂದು 'ಒಂದು ಸಾವಿರ ಹೊನ್ನು ತಕ್ಕಂಡು ಇಷ್ಟು ದಿನ ಎಲ್ಲಿಗೆ ಹೋಗಿದ್ದೆ?' ಎಂದು ಗದರುತ್ತ ಗಟ್ಟಿವಾಳಯ್ಯನ ಹೆಂಡತಿಯ ರಟ್ಟೆಯನ್ನು ಹಿಡಿದು ಎಳೆಯಲು ಹೋದ. ಆಗ ಬಂಡಿಕಾರನು 'ನಾನೂ ಸಾವಿರ ಹೊನ್ನು ಕೊಟ್ಟಿರೊ ಆಸಾಮೀನೆ' ಎಂದು ಹೇಳಿ ಅವಳ ಮತ್ತೊಂದು ರಟ್ಟೆಯನ್ನು ಹಿಡಿದು ತನ್ನತ್ತ ಎಳೆಯತೊಡಗಿದ. ಹೀಗೆ ಇಬ್ಬರೂ ಎಳೆದಾಡುತ್ತಿರುವಾಗ ಗಟ್ಟಿವಾಳಯ್ಯ ಮಧ್ಯೆ ಪ್ರವೇಶಿಸಿ ಅವರನ್ನು ಸಮಾಧಾನಪಡಿಸಿ ಬಸವೇಶ್ವರನ ಹೆಸರನ್ನು ಹೇಳಿ ಅವಳ ಬೈತಲೆಗೆ ಕೈ ಊರಿದನು. ಅವಳು ಎರಡು ಸೀಳಾದಳು. ಎರಡು ಸೀಳುಗಳೂ ಎರಡು ಹೆಣ್ಣಾದವು. ಗಟ್ಟಿವಾಳಯ್ಯ ಇಲ್ಲಿಯೂ ಪವಾಡ ಮೆರೆದು ಇಬ್ಬರಿಗೂ ಒಬ್ಬೊಬ್ಬಳನ್ನು ಒಪ್ಪಿಸಿದನು. ಅಲ್ಲಿಂದ ನೇರವಾಗಿ ಕಲ್ಯಾಣಕ್ಕೆ ಬಂದನು.

ಕಲ್ಯಾಣದ ದ್ವಾರಪಾಲಕರು ಲಿಂಗ ಧರಿಸಿಲ್ಲದ ಗಟ್ಟಿವಾಳಯ್ಯನನ್ನು ಒಳಕ್ಕೆ ಬಿಡದೆ ತಡೆದರು. ಆಗ ಗಟ್ಟಿವಾಳಯ್ಯ ಎಡಕ್ಕೆ ನೋಡಿದನು ; ಅಲ್ಲೊಂದು ಬೆಟ್ಟವಿತ್ತು. ಬಲಕ್ಕೆ ನೋಡಿದನು ; ಇಲ್ಲೊಂದು ಬೆಟ್ಟವಿತ್ತು. ಈಗ ಗಟ್ಟಿವಾಳಯ್ಯ ತನ್ನ

ಎದೆಯನ್ನು ಬಗೆದು ಅಲ್ಲಿದ್ದ ಆತ್ಮಲಿಂಗಕ್ಕೆ ಬೆಟ್ಟಿಗಳನ್ನು ತೋರಿಸಿ 'ಲಿಂಗಪ್ಪ ಹಿಟ್ಟಿಕ್ಕಿದೆ ಸುಂಗಪ್ಪ' ಎಂದನು. ಆತ್ಮಲಿಂಗ ಆ ಕೂಡಲೆ ಮುದ್ದೆಗಳನ್ನು ನುಂಗುವಂತೆ ಆ ಎರಡೂ ಬೆಟ್ಟಿಗಳನ್ನು ನುಂಗಿಕೊಂಡಿತು. ಇದನ್ನು ಕಂಡ ದ್ವಾರಪಾಲಕರು ಭಯಭಕ್ತಿಗಳಿಂದ ಗಟ್ಟಿವಾಳಯ್ಯನನ್ನು ಕಲ್ಯಾಣದೊಳಕ್ಕೆ ಕರೆದುಕೊಂಡರು.

ಗಟ್ಟಿವಾಳಯ್ಯ ಬಸವಣ್ಣನವರನ್ನು ಕಂಡು ಶುಕ್ರವಾರ ತಾನು ಕೈಲಾಸ ವಾಸಿಯಾಗಿವುದಾಗಿ ತಿಳಿಸಿದ. ಶುಕ್ರವಾರ ಬಂತು. ಗಟ್ಟಿವಾಳಯ್ಯನ ದಿವ್ಯದೇಹಕ್ಕೆ ಶರಣರು ಕಾವಿಬಟ್ಟೆ ಹೊದಿಸಿದರು. ಅಷ್ಟರಲ್ಲಿ ಬಿಜ್ಜಳನ ಆಜ್ಞೆಯಂತೆ ಶರಣರು ಕಲ್ಯಾಣವನ್ನು ಬಿಡಬೇಕಾಗಿ ಬಂದುದರಿಂದ ಗಟ್ಟಿವಾಳಯ್ಯನ ದೇಹವನ್ನು ಸಾಗಿಸಲು ನೋಡಿದರು. ನೋಡಿದರೆ ಗಟ್ಟಿವಾಳಯ್ಯನ ದೇಹವೆಲ್ಲ ವಿಭೂತಿ ಘಟ್ಟಿಯಾಗಿತ್ತು. ಶರಣರೆಲ್ಲ ಆ ವಿಭೂತಿ ಘಟ್ಟಿಯನ್ನು ಚೂರುಚೂರಾಗಿ ಕತ್ತರಿಸಿ ತಮ್ಮ ತಮ್ಮ ಸೆರಗಿಗೆ ಕಟ್ಟಿಕೊಂಡ ಊಳ್ಳೆಗೆ ನಡೆದರು.

'ಗಟ್ಟಿವಾಳಯ್ಯ' ಕಾವ್ಯ ಮುದಿ ವಯಸ್ಸಿನಲ್ಲಿ ಮದುವೆಯಾಗಿ ಬಯಸುವವರಿಗೆ ನೀತಿಬೋಧಕವಾಗಿದೆ. ಅಷ್ಟಲ್ಲದೆ 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ಶರಣರ ನಿಲುವಿಗೆ ವಿಮುಖರಾಗಿ ಕಾಲವಲ್ಲದ ಕಾಲದಲ್ಲಿ ಮದುವೆ ಮಾಡಿಕೊಂಡರೆ ಅದು ಅರ್ಥಹೀನ ಎಂಬುದನ್ನು ಇದು ನಿರೂಪಿಸುತ್ತದೆ. ಅದರ ಜೊತೆಗೆ ಬಸವಣ್ಣನವರ 'ಶರಣ ರಕ್ಷಕ ಗುಣ'ವನ್ನು ಸಾರುವುದು ಈ ಕಾವ್ಯದ ಇನ್ನೊಂದು ಉದ್ದೇಶ. ಅದೂ ಅಲ್ಲದೆ ಅನಿವಾರ್ಯವಾದದ್ದನ್ನು ಸಹಿಸುವುದು, ಕೂಡಿಬರದ್ದನ್ನು ತ್ಯಜಿಸುವುದು ಶ್ರೇಯಸ್ಕರ ಎಂಬುದನ್ನೂ ತಿಳಿಸುತ್ತದೆ.

ಅಕ್ಕನಾಗಮ್ಮ : ಚನ್ನಬಸವಣ್ಣನ ತಾಯಿ

ಹರಿಹರನ 'ಬಸವರಾಜದೇವರ ರಗಳೆ' ಪರಿಪೂರ್ಣ ಭಾಗ ಲಭ್ಯವಾಗಿರದೆ ಅರ್ಧಂಬರ್ಧ ಸಿಗುತ್ತಿದ್ದು, ಮುಂದಿನ ಅನೇಕ ಕವಿಗಳಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ ಆಕರವಾಗಬಹುದಾಗಿದ್ದ ಬಹು ಅಮೂಲ್ಯವೆನಿಸಬಹುದಾಗಿದ್ದ ಕಥಾರೇಖೆಗಳು ಖಿಲವಾದದ್ದು ದುರ್ದೈವವೇ ಸರಿ. ಹರಿಹರನ ಬೇರೆ ಯಾವ ರಗಳೆಗೂ ಒದಗದಿದ್ದ ಈ ದುರ್ಗತಿ ಅತಿ ಮಹತ್ವದ್ದೆನಿಸುವ ಬಸವರಾಜ ದೇವರ ರಗಳೆಗೆ ಮಾತ್ರವೇ ಒದಗಿಬಂದುದಕ್ಕೆ ಬೇರೆಯೇ ಕಾರಣವಿದ್ದಿರಬೇಕು. ಬಹುಶಃ ಐತಿಹಾಸಿಕ ಸತ್ಯಗಳನ್ನು ಒಪ್ಪದೆ ಹೋದವರಿಂದ ಈ ರಗಳೆ ಮುಕ್ಕಾಗಿರಬಹುದೆಂದು ಕಾಣುತ್ತದೆ. ಚಾಮರಸನ ಪ್ರಭುಲಿಂಗಲೀಲೆಯೂ ಕೂಡ ಹರಿಹರನನ್ನು ಒಪ್ಪದ ಮನಃಸ್ಥಿತಿಯಿಂದಲೇ ಹುಟ್ಟಿಬಂದದ್ದು. ಬಸವರಾಜದೇವರ ರಗಳೆ ಸಂಪೂರ್ಣವಾಗಿ ಸಿಗದಿರುವುದರಿಂದ ಈಗ ಉದ್ಭವವಾಗಿರುವ ಕೆಲವು ಸಮಸ್ಯೆಗಳಿಗೆ ಎತ್ತಿಹಿಡಿಯಬಹುದಾದ ಉತ್ತರಗಳಿಲ್ಲದೆ ಪರದಾಡುವ ಸ್ಥಿತಿ ಬಂದಿದೆ. ಇಂಥ ಸಮಸ್ಯೆಗಳಲ್ಲಿ ಚನ್ನಬಸವಣ್ಣನ 'ಅಪ್ಪ' ಯಾರು ಎಂಬುದು ಒಂದು. ಹರಿಹರನಾಗಲಿ ರಾಘವಾಂಕನಾಗಲಿ ಚನ್ನಬಸವಣ್ಣನನ್ನೋ ಕಕ್ಕಯ್ಯನನ್ನೋ ಅಥವಾ ಹರಳಯ್ಯನನ್ನೋ ಕುರಿತು ಒಂದು ರಗಳೆಯನ್ನೋ ಕಾವ್ಯವನ್ನೋ ಬರೆದಿದ್ದರೂ ಈ ತಲೆನೋವು ತಪ್ಪುತ್ತಿತ್ತು.

ಹರಿಹರ ರಾಘವಾಂಕರ ಅನಂತರದಲ್ಲಿ ಶರಣ ಕಥೆಗಳನ್ನೂ ಪುರಾಣವನ್ನು ಬರೆದ ಪಾಲ್ಕುರಿಕೆ ಸೋಮನಾಥ, ಪಿಡುಪರ್ತಿ ಸೋಮನಾಥ, ಅತ್ತಲೂರಿ ಪಾಪಕವಿ, ಲಕ್ಕಣ್ಣ ದಂಡೇಶ, ಗುಬ್ಬಿಯ ಮಲ್ಲಣಾರ್ಯ, ಶಾಂತಲಿಂಗದೇಶಿಕ, ಭೀಮಕವಿ, ಲಿಂಗಣಾರ್ಯ, ಎಳಂದೂರು ಹರೀಶ್ವರ, ಸಿದ್ಧನಂಜೇಶ, ಎಡೆಯೂರು ಸಿದ್ಧಲಿಂಗ ಶಿವಯೋಗೀಂದ್ರ, ಅದೃಶ್ಯ ಕವಿ ಹಾಗೂ ಚನ್ನಪ್ಪ ಕವಿಗಳೆಲ್ಲರೂ ಕಕ್ಕಯ್ಯನ ಮನೆ ಪ್ರಸಾದದಿಂದ ಅಕ್ಕನಾಗಮ್ಮ ಗರ್ಭಿಣಿಯಾಗಿ ಚಿಕ್ಕದಣಾಯಕ ಚನ್ನಬಸವಣ್ಣನನ್ನು ಹಡೆದಳೆಂದು ಹೇಳಿದರೆ ಸಿಂಗಿರಾಜನ 'ಸಿಂಗರಾಜಪುರಾಣ'ದಲ್ಲಿ ಮಾತ್ರ ಚನ್ನಬಸವಣ್ಣನ ತಂದೆ ಶಿವಸ್ವಾಮಿ ಎಂದು ಹೇಳಲಾಗಿದೆ. ಇದೂ ಕೂಡ ಕಕ್ಕಯ್ಯನ ಸಂಬಂಧವನ್ನು ಒಪ್ಪದ ಮನಃಸ್ಥಿತಿಯಿಂದ ಶಿವಸ್ವಾಮಿಯನ್ನು ಸೃಷ್ಟಿಸಿದ್ದಾಗಿದೆ.

ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿಯ ಗಾಢ ಪ್ರಭಾವಕ್ಕೊಳಗಾಗಿರುವ ನಮ್ಮ ಜನಪದರು ಆ ಕ್ರಾಂತಿಯ ಪಾಯ್ ಪೆಂಜುಗಳನ್ನು ಹಿಡಿದ ಮಹನೀಯರುಗಳನ್ನೂ ಅವರ ಜೀವನದ ಘಟನಾವಳಿಗಳನ್ನೂ ಐತಿಹ್ಯ, ಪುರಾಣ, ಗೀತ, ಕಾವ್ಯಗಳ ರೂಪದಲ್ಲಿ ತಲೆಮೊರೆಯಿಂದ ತಲೆಮೊರೆಗೆ ತಮ್ಮ ಸ್ಮೃತಿಸಂಪುಟದಲ್ಲಿ ರಕ್ಷಿಸಿಕೊಂಡು ಬಂದಿದ್ದಾರೆ. ಈ ಸುವರ್ಣ ಸಂಪುಟದ ಅನರ್ಘ್ಯ ರತ್ನವೆಂದರೆ ಕ್ರಿ.ಶ.೧೭೫೦ರಲ್ಲಿದ್ದ ಶ್ರೀ ಚನ್ನಪ್ಪ ಕವಿ ಕೃತ 'ಯಕ್ಷಗಾನ ಬಸವ ಪುರಾಣ' ಅಥವಾ 'ಶರಣ

'ಶರಣ ಲೀಲಾಮೃತ'ವು ಬಸವಪುರಾಣದ ಕಥೆಯನ್ನು ಸುವಿಸ್ತಾರವಾಗಿ ನಿರೂಪಿಸುವ ಗ್ರಂಥ. ಇದರಲ್ಲಿ ಎಲ್ಲ ಶರಣರ ಪ್ರಸ್ತಾಪ ಇರುವಂತೆ ಶರಣ ಕಕ್ಕಯ್ಯ ಹಾಗೂ ಶರಣ ಹರಳಯ್ಯರ ಪ್ರಸಂಗಗಳೂ ವಿಸ್ತಾರವಾಗಿಯೇ ಬಂದಿವೆ.

ಕಕ್ಕಯ್ಯನಿಗೆ ಸಂಬಂಧಿಸಿದ ಭಾಗದಲ್ಲಿ ಕಕ್ಕಯ್ಯನ ಗುಣಗಾನದಿಂದ ಪ್ರಾರಂಭವಾಗುವ ಕಥೆ ಬಸವಣ್ಣನವರು ಈ ಶರಣನ ಮನೆಯ ಪ್ರಸಾದ ಶೇಷಕ್ಕಾಗಿ ಕಾದದ್ದು, ಇರುವೆ ತಂದ ಪ್ರಸಾದದ ಚೂರನ್ನು ಕಸಿದುಕೊಳ್ಳಲು ಅದಕ್ಕೆ ಸಕ್ಕರೆ ಆಸೆ ತೋರಿಸಿ ಬಿಡಿಸಿಕೊಂಡದ್ದು, ಮನೆಗೆ ತಂದ ಆ ಪ್ರಸಾದ ಶೇಷವನ್ನು ಅರಿಯದ ಅಕ್ಕನಾಗಮ್ಮ ಸೇವಿಸಿ ಗರ್ಭಿಣಿಯಾದದ್ದು, ಕೊಂಡೆಯದ ಮಂಚಣ್ಣ 'ಪುಂಡು ಜಂಗಮರನ್ನು ಕೂಡಿಕೊಂಡು ಅಕ್ಕನಾಗಮ್ಮ ಗರ್ಭಿಣಿಯಾಗಿದ್ದಾಳೆ' ಎಂದು ಬಿಜ್ಜಳನಲ್ಲಿ ದೂರಿದ್ದು, ಬಿಜ್ಜಳನ ಆಸ್ಥಾನದಲ್ಲಿ ಅಕ್ಕನಾಗಮ್ಮನ ಸತ್ವಪರೀಕ್ಷೆ ನಡೆದದ್ದೂ. ಗರ್ಭದಿಂದಲೆ ಚನ್ನಬಸವಣ್ಣ ಮಾತಾಡಿದ್ದು, ಅಕ್ಕನಾಗಮ್ಮನ ಪಾತಿವ್ರತ್ಯಕ್ಕೆ ಶರಣರೆಲ್ಲರೂ ತಲೆದೂಗಿದ್ದಲ್ಲದೆ ಅಂತ್ಯದಲ್ಲಿ ಶರಣರೆಲ್ಲ ಉಳುವಿಗೆ ಹೋಗುವಾಗ ಕಕ್ಕಯ್ಯಾದಿಗಳು ಅಳಿಯ ಬಿಜ್ಜಳನ ಸೈನ್ಯದೊಡನೆ ಕಾದಾಡಿದ ಘಟನೆಗಳು ನಿರೂಪಿತವಾಗಿವೆ.

ಜನಪದದಲ್ಲಿ ಚನ್ನಬಸವಣ್ಣನನ್ನು ಕುರಿತ ನಾಲ್ಕಾರು ಕಾವ್ಯಗಳು ಪ್ರಕಟವಾಗಿವೆ.[17] ಅವುಗಳೆಲ್ಲವುಗಳ ವಿಚಿತ್ರವೆಂದರೆ ಚನ್ನಬಸವಣ್ಣನ ಹುಟ್ಟಿಗೆ ಹರಳಯ್ಯನ ಮನೆ ಪ್ರಸಾದ ಕಾರಣ ಎಂದು ಹೇಳಲಾಗಿದೆ. ನೆನಪಿಸಿಕೊಂಡಂತೆ ಕ್ವಚಿತ್ತಾಗಿ ಕಕ್ಕಯ್ಯ ಹಾಗೂ ಚನ್ನಯ್ಯರ ಹೆಸರೂ ಅಲ್ಲಲ್ಲಿ ಕಾಣಿಸಿಕೊಂಡಿವೆ. ಆದರೆ ಕಥಾವಸ್ತು 'ಶರಣಲೀಲಾಮೃತ'ದಲ್ಲಿರುವಂತೆಯೇ ಮೂಡಿಬಂದಿದೆ. ಇದು ಶರಣಲೀಲಾಮೃತಕ್ಕೆ ಜನಪದ ಗಾಯಕರಿಂದ ಕಥೆ ಹೋಯಿತೊ ಅಥವಾ ಶರಣ ಲೀಲಾಮೃತವನ್ನು ಜನಪದ ಗಾಯಕರು ಕೇಳಿ ಅಥವಾ ಯಕ್ಷಗಾನವನ್ನು ನೋಡಿ ತಮ್ಮ ಗಾಯನಕ್ಕೆ ಅಳವಡಿಸಿಕೊಂಡಿರೊ ಎಂಬುದನ್ನು ಖಚಿತವಾಗಿ ಹೇಳಬರುವುದಿಲ್ಲ.

ಒಟ್ಟಿನಲ್ಲಿ ಚನ್ನಬಸವಣ್ಣನ ಜನ್ಮವೃತ್ತಾಂತ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಕುರಿತಾದ ಚರ್ಚೆಗೆ ಪ್ರಧಾನ ಭೂಮಿಕೆಯಾಗಿದೆ ಪ್ರಸ್ತುತ ಕಾವ್ಯ. ಮಕ್ಕಳ ಫಲಕ್ಕಾಗಿ ಹರಳಯ್ಯನ ಮನೆಯಿಂದ ಕಷ್ಟಪಟ್ಟು ತಂದ ಪ್ರಸಾದವನ್ನು ಬಸವಣ್ಣನವರ ಅವಿವಾಹಿತ ತಂಗಿ ಅಕ್ಕನಾಗಮ್ಮ ತಿಂದದ್ದರಿಂದ ಆದ ಅನಾಹುತ ಇಲ್ಲಿನ ಕಥೆ.

ಕಲ್ಯಾಣಪಟ್ಟಣದಲ್ಲಿ ಶರಣ ಸಂದೋಹದ ನಡುವೆ ಸುಖಸಂತೋಷಗಳಿಂದ ಕಾಲ ಕಳೆಯುತ್ತಿದ್ದ ಬಸವಣ್ಣನವರ ಪತ್ನಿ ನೀಲಮ್ಮನವರನ್ನು ನೋಡಿದ ಶಿವನು ಅವರ ಕನಸಿಗೆ ಬಂದು,

ಮಕ್ಕಳಿಲ್ಲದ ಮನೆ ಮರುಗ ಇಲ್ಲಾದ ತೋಟ
ಲಿಂಗ ಇಲ್ಲದ ದೇವ್‌ಲಾಯ |

ಲಿಂಗ ಇಲ್ಲದ ದೇವ್‌ಲಾಯ ನೀಲಮ್ಮಯ್ಯ
ನೀವು ಕಲ್ಯಾಣ ಆಳಿ ಫಲುವೇನ |

ಶತಕೋಟಿ ಜಂಗಮರು ನಿಮ್ಮಶದಲ್ಲಿದ್ದರೇನ
ನಿಮ್ಮೊಟ್ಟೆಗುಟ್ಟಿದ ಮಕ್ಕ ನಿಮುಗಿಲ್ಲ |

---

17. ಚನ್ನಪ್ಪ ಕವಿಕೃತ **ಶರಣ ಲೀಲಾಮೃತ** : ಸಂ. : ಶ್ರೀ ಶಿವಬಸವ ಸ್ವಾಮಿಗಳವರು. ಪ್ರೊ. ಶ್ರೀ ಮ.ನಿ.ಪ್ರ. ಮಹಂತಸ್ವಾಮಿಗಳು, ಶಿವಶರಣ ವಾಙ್ಮಯ ಪ್ರಕಾಶ, ದೇವನೂರು. ೧೯೫೫, ಪು.೨೯-೩೦೧, ೫೪೮. **ಆ) ಜನಪದ ಬಸವ ಪುರಾಣ, 'ಚನ್ನಬಸವಣ್ಣ'**, ಸಂ.: ಪಿ.ಕೆ. ರಾಜಶೇಖರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧, ಪು.೧೮೦-೩೦೭. **ಆ) ಕನ್ನಡ ವೃತ್ತಿಗಾಯಕರ ಕಾವ್ಯಗಳು, 'ಚನ್ನಬಸವಣ್ಣ'**, ಸಂ.:ಜೀ.ಶಂ. ಪರಮಶಿವಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೨, ಪು.೪೨-೯೪೮. ಇ) **ಚಿಕ್ಕದಣ್ಣಾಯಕ ಚನ್ನಬಸವಣ್ಣ**, ಸಂ.:ಮಲೆಯೂರು ಗುರುಸ್ವಾಮಿ ಮತ್ತು ದೇವಯ್ಯ ಹರವೆ, ರೂಪ ಪ್ರಕಾಶನ, ನಂಜನಗೂಡು, ೧೯೮೩. ಈ) **ಐದು ಜನಪದ ಕಥನಗೀತೆಗಳು, 'ಅಕ್ಕನಾಗಮ್ಮ'**, ಸಂ. : ಕ್ಯಾತನಹಳ್ಳಿ ರಾಮಣ್ಣ, ಜನಪದ ಬಳಗ, ಮಾನಸ ಗಂಗೋತ್ರಿ, ಮೈಸೂರು. ೧೯೭೦, ಪು.೪೬-೬೫. ಉ) **ನಾಲಿಗೆ ಅಕ್ಷರಕೆ ಒದುಗವ್ವ, 'ಸತ್ಯಂತ ನಾಗಮ್ಮ'**, ಸಂ. : ಹೊರೆಯಾಲ ದೊರೆಸ್ವಾಮಿ, ನುಡಿ ಪ್ರಕಾಶನ, ಮೈಸೂರು. ೧೯೭೪. ಪು. ೬೮-೮೬.
ಈ ಎಲ್ಲ ಸಂಕಲನಗಳಲ್ಲಿ ಇರುವ ಜನಪದ ಕಾವ್ಯಗಳಲ್ಲಿ ಕಕ್ಕಯ್ಯನ ಮನೆಯ ಪ್ರಸಾದದ ಜೊತೆಗೆ ಚನ್ನಯ್ಯ, ಹರಳಯ್ಯರ ಹೆಸರುಗಳನ್ನು ಸೇರಿಸಿ ಹಾಡಲಾಗಿದೆ. ಕಲ್ಯಾಣದೊಳಗೊಂದು ಪಂಚಾಯಿತಿ - ಸಂಪಾದಕರು : ಡಾ. ಚಕ್ಕೆರೆ ಶಿವಶಂಕರ್; ಸಾಗರ್ ಪ್ರಕಾಶನ, ಬೆಂಗಳೂರು, ೨೦೦೬

ನೀವು ಸಂದೋದ ಕಾಲ್ಕೆ ಕೇಳಿ ನೀಲಮ್ಮಯ್ಯ
ನಿಮ್ಮ ಗದ್ದುಗ್ಗೆ ಸಲುವ ಮಕ್ಕಳಿಲ್ಲ |

ಪರವರ ಮಕ್ಕಳು ನಿಮ್ಮಕ್ಕಳಾಗೋದಿಲ್ಲ
ನಿಮ್ - ಉರಿಗದ್ದಿಗೆ ಪರರು ಸಲ್ಲೋದಿಲ್ಲ |

ಸ್ವಪ್ನವನ್ನು ಕಂಡ ನೀಲಮ್ಮ ಧಿಗ್ಗನೆದ್ದು ಬಸವಣ್ಣನವರ ಸನ್ನಿಧಿಗೆ ಬಂದು

ಮಕ್ಕಳಿಲ್ಲಾದ ಮನೆ ಮರುಗವಿಲ್ಲಾದ ತೋಟ
ಇದು ಲಿಂಗವಿಲ್ಲಾದ ದೇವ್ನಾಯ |

ಲಿಂಗವಿಲ್ಲಾದ ದೇವ್ನಾಯ ಬಸವಣ್ಣೋರೆ
ಈ ಮೂರೂ ಇರಬಾರ್ದು ಈ ಧರೆಯಲ್ಲಿ |

ನಮ್ಮಂತ ಮಕ್ಕಳಿಲ್ದ ಜಲ್ಮ ಇದ್ದೇನು ಫಲ ಸ್ವಾಮಿ
ಅಂತ್ಹೇಳಿ ನೀಲಮ್ಮ ಅಳುತಾಳೆ |

ನೀಲಮ್ಮನ ಮಾತನ್ನು ಕೇಳಿ ಬಸವಣ್ಣನವರು ಫಕ್ಕಫಕ್ಕನೆ ನಕ್ಕುಬಿಟ್ಟರು. ಏಕೆಂದರೆ

ಕೋಟುಗೊಬ್ಬ ಸರಣಾರು ಕುಲುಕೊಬ್ಬ ಭಕ್ತರು
ಇವುರೆಲ್ಲ ನಮುಗೆ ಮಕ್ಕಳಲ್ಲವ |

ಆಪ್ತ ಸಿಸುಮಕ್ಕ ನಮ್ಮಠದಲ್ಲಿದ್ದ ಮೇಲೆ
ಇನ್ ಮಕ್ಕಾಳ ಫಲ ನಮುಗ್ಯಾಕೆ |

ಮಕ್ಕಾಳ ಫಲ ನಮಗ್ಯಾಕೆ ನೀಲಮ್ಮಯ್ಯ
ಈ ಕೋಟಿ ಜಂಗಮರೆ ನಮ್ ಸಿಸುಮಕ್ಕ |

ಹೀಗೆ ಮುಂದುವರೆಯುವ ಸಂಭಾಷಣೆಯಲ್ಲಿ ನೀಲಮ್ಮಳ ಪುತ್ರದೋಹಳ ಸನ್ನಿವೇಶ ಆತ್ಮೀಯವಾಗಿ ಮೂಡಿಬಂದಿದೆ.

ನೀಲಮ್ಮನ ಪುತ್ರದೋಹಳವನ್ನು ಅರ್ಥ ಮಾಡಿಕೊಂಡ ಬಸವಣ್ಣನವರು ಸ್ನಾನಮಡಿಗಳಿಂದ ಶಿವನನ್ನು ಆರಾಧಿಸಿ ಗದ್ದಿಗೆಯಲ್ಲೊರಗಿರುವಾಗ ಜೊಂಪು ಹತ್ತಿದಂತಾದಾಗ ಕನಸಿನಲ್ಲಿ ಶಿವ ಕಾಣಿಸಿಕೊಂಡು

ಮಕ್ಕಾಗೊ ತರುವ ಇಂದೇಳ್ತಿನಿ ಬಸವಣ್ಣ
ಚಿತ್ತವಿಟ್ಟು ಕೇಳಿ ನಿಮ್ ಮನದಲ್ಲಿ |

ಕಕ್ಕಯ್ನ ಮನೆಯ ಮಿಕ್ಕುನ ಪ್ರಾಸೋದ್ಕೆ
ನೀವ್ ತೊಂಬತ್ತೊಂದೊರುಸ ತ್ರಪಿಸಿರಬೇಕು |

ಚನ್ನಯ್ಯ ಮನೆಯ ಹೊನ್ನುನಂತ ಪ್ರಾಸೋದ್ಕೆ
ನೀವು ಹನ್ನೆರಡೊಂದೊರ್ಸ ತ್ರಪಿಸಿರಬೇಕು |

ಹರಳಯ್ನ ಮನೆಯ ಒಳ್ಳೆ ಕರುಣುಳ್ಳ ಪ್ರಾಸೋದ್ಕೆ
ಅರವತ್ತೊಂದೊರುಸ ತ್ರಪಿಸಿರಬೇಕು |

ಅರವತ್ತೊಂದೊರುಸ ನಿಜ ತ್ರಪಸನ್ನೆ ಮಾಡಿದರೆ
ಒರಾಳನೋರಿ ನಿಮುಗೆ ಹುಟ್ಟುತಾಯ್ತೆ |

ಎಂದು ಹೇಳಿ ಅದೃಶ್ಯನಾದನು. ಮಹಾಶರಣರ ಮನೆಯ ಪ್ರಸಾದಕ್ಕಾಗಿ ತಪಸ್ಸು ಮಾಡಬೇಕೆಂದು ಗಂಡಹೆಂಡಿರಿಬ್ಬರೂ ಕಲ್ಯಾಣದ ಹೊರಗೆ ಕಾವೀಡೇರ್ಯಾದಲ್ಲಿ ಉಳಿದು ತಪಸ್ಸಿಗೆ ತೊಡಗಿದರು. ಅರವತ್ತೊಂದು ವರ್ಷಗಳ ಕಾಲ ತಪಸ್ಸು ಮಾಡಿದರೂ ಫಲ ಮಾತ್ರ ಕಾಣಲಿಲ್ಲ. ಆಗ ಬಸವಣ್ಣನವರು

ಕುಂತ ಜಾಗದ ಒಳುಗೆ ನಾವು ತ್ರಬಸನ್ನೆ ಮಾಡಿದರೆ
ಹಂಗೂ ದೊರೆಯನಿಲ್ಲ ಪ್ರಾಸೋದ |

ಕುಂತ ಜಾಗದ ಒಳುಗೆ ನಾವು ತ್ರಬಸನ್ನೆ ಮಾಡಿದರೆ
ನೀಲಮ್ಮ - ತಂದು ಕೊಡೋರ್ಯಾರು ವರವನ್ನು |

ಮಾನ್ಯ ಹರಳಯ್ಯ ಮಠುಕೆ ನಾವೇ ಹೋಗಲು ಬೇಕು
ಹೋಗಿ ಪ್ರಾಸೋದ ತರಬೇಕು |

ಎಂದು ಹೇಳಿ ಸಾವಿರಾರು ಭಕ್ತರೊಂದಿಗೆ ಬಸವಣ್ಣ ಹೊರಟರು.

ಹರಳಯ್ಯನ ಮಡದಿ ಕಲ್ಯಾಣಮ್ಮ ಕಪ್ಪೆ ಮುಟ್ಟಿದ ನೀರು (ಎಳನೀರು) ಅಗ್ನಿಮುಟ್ಟಿದ ಗುಂಬ (ಹಸೀ ಮಡಕೆ)ದಲ್ಲಿ ಅಡಿಗೆ ಮಾಡಿ ಎಡೆ ಇಡುವ ಹೊತ್ತಿಗೆ ಬಸವಣ್ಣ ಅಲ್ಲಿಗೆ ಬಂದರು. ಆ ಕೂಡಲೆ ಹರಳಯ್ಯ

ದೊಡ್ಡವರ ಕಣ್ಣಿಗೆ ಮರೆಯಾಗಿರಬೇಕೆಂದು
ಹೊಚ್ಚಿದುರು ಮನೆಯ ಕದಗಳ |

ಕದ ಮುಚ್ಚಿದ್ದನ್ನು ಕಂಡ ಬಸವಣ್ಣನವರು ವೀರಸಂಗಯ್ಯನನ್ನು ಕರೆದು ಮನೆಯೊಳಗಿನ ವಿದ್ಯಮಾನಗಳನ್ನು ತಿಳಿದುಬರಲು ಕಳುಹಿದರು. ಒಳಕ್ಕೆ ಹೋದಾಗ ಹರಳಯ್ಯನವರು ಶರಣರಿಗೆ ಎಡೆಪಡುಸಿದ ಎಲೆಗಳನ್ನು ಹೊರಗಡೆ ಎಸೆದರೆ ಭಕ್ತರ ಕಾಲಿಗೆ ತಗುಲೀತು ಎಂದು ಹನ್ನೆರಡಾಳುದ್ದ ಕಂದಕ ತೆಗೆಸಿ ಅದರೊಳಕ್ಕೆ ಒಂದು ಇರುವೆಯೂ ಪ್ರವೇಶಿಸದಂತೆ ಸುತ್ತಲೂ ಬೆಂಕಿ ಕೆಂಡ ಸುರಿಯುವ ಪದ್ಧತಿ ಇರುವುದು ವೀರಸಂಗಯ್ಯನಿಗೆ ತಿಳಿಯಿತು. ಅವನು ಹಿಂದಿರುಗಿ ಬಂದು ಅಣ್ಣನವರಿಗೆ ಆ ವಿಚಾರಗಳನ್ನೆಲ್ಲ ತಿಳಿಸಿದನು. ಅಂದ ಮೇಲೆ ಪ್ರಸಾದವನ್ನು ಪಡೆಯುವುದು ದುಃಸಾಧ್ಯವಾದ ಕೆಲಸವೆಂಬುದು ತಿಳಿದಾಗ ಬಸವಣ್ಣನವರು 'ಅಯ್ಯೋ ಶಿವನೆ' ಎಂದು ನಿಟ್ಟುಸಿರುಬಿಟ್ಟರು. ಬಸವಣ್ಣನವರ ಕಷ್ಟವನ್ನು ತಿಳಿದ ಶಿವನು ಕಟ್ಟಿರ, ಕಾಳಿರ, ಸಣ್ಣಿರ, ನುಚ್ಚಿರಗಳನ್ನು ಸೃಷ್ಟಿಸಿ ತಾನೂ ಒಂದು ಇರುವೆಯಾಗಿ ಹರಳಯ್ಯನ ಮನೆಯನ್ನು ಪ್ರವೇಶಿಸಿದನು. ಮನೆಯೊಳಗೆ ಸಾಲುಸಾಲಾಗಿ ಹರಿಯುತ್ತಿದ್ದ ಅಷ್ಟೊಂದು ಇರುವೆಗಳನ್ನು ಕಂಡು ತಪ್ಪಿ ತುಳಿದರೆ ಪಾಪ ತಪ್ಪಿದ್ದಲ್ಲವೆಂದುಕೊಂಡು ಅವುಗಳನ್ನು ಮೆಲ್ಲಗೆ ಹೊರಗಡೆಗೆ ತಳ್ಳಿಸಿ ಮತ್ತೆ ಒಳಕ್ಕೆ ಬಾರದಂತೆ ಬೆಂಕಿಕೆಂಡವನ್ನು ಸುರಿಸಿದ. ಶಿವನಿಂದ ಸೃಷ್ಟಿಯಾದ ಇರುವೆಗಳನ್ನು ಕೊಲ್ಲದ ಹರಳಯ್ಯನ ನಿಲುವು 'ಚಿಕ್ಕದಾದರೂ ಸರಿಯೆ ದೊಡ್ಡದಾದರೂ ಸರಿಯೆ ಪ್ರಾಣಬಿಟ್ಟ ಎಲ್ಲ ಒಂದೇ' ಎಂಬ ಮಾತು ಹರಳಯ್ಯನ ಜೀವದಯೆಯ ವ್ಯಾಪ್ತಿ-ವಿಸ್ತಾರಗಳನ್ನು ಚನ್ನಾಗಿ ತಿಳಿಸುತ್ತದೆ.

ಹಿರಿಯರಿಗೆ ಎಡೆಮಾಡಿ ಹೋಗುತ್ತಿರುವುದನ್ನೇ ಕಾಯುತ್ತಿದ್ದ ಇರುವೆ ರೂಪದಲ್ಲಿದ್ದ ಈಶ್ವರ ಎಡೆಯ ಒಂದು ಅಗುಳನ್ನು ನೆತ್ತಿಯ ಮೇಲೆ ಹೊತ್ತುಕೊಂಡು ಹೊರಬಂದಾಗ ಇದನ್ನು ಕಂಡ ಬಸವಣ್ಣನವರು ಕೈಯಲ್ಲಿ ಮುಟ್ಟಿದರೆ ಇರುವೆ ಸತ್ತು ಹೋಗುತ್ತದೆಯಾದ್ದರಿಂದ ಇದನ್ನು ಹೇಗೆ ಬಿಡಿಸಿಕೊಳ್ಳಲಿ ಎಂದು ಚಿಂತಿಸಿ ಹಾಲುಸಕ್ಕರೆ ತರಿಸಿ ಎದುರಿಗೆ ಇರಿಸಿದರು. ತಲೆಯ ಮೇಲಿದ್ದ ತಮ್ಮ ಅಪರಂಜಿ ಪೇಟವನ್ನು ನೆಲಕ್ಕೆ ಹಾಸಿದರು. ಇರುವೆಯು ಹಾಲುಸಕ್ಕರೆಗೆ ಆಸೆಪಟ್ಟು ತಮ್ಮ ಅಪರಂಜಿ ಪ್ರಸಾದವನ್ನು ಪೇಟದ ಮೇಲೆ ಬಿಟ್ಟು ಸಕ್ಕರೆಯ ಕಡೆಗೆ ಹೋಯಿತು. ಈಗ ಬಸವಣ್ಣನವರು ಹತ್ತು ಬೆರಳಲ್ಲೂ ಆ ಪೇಟವನ್ನು ಎತ್ತಿಕೊಂಡು ಹೋಗಿ ಉರಿಗದ್ದಿಗೆಯ ಮೇಲೆ ಮಡಗಿದರು. ಸ್ನಾನಮಡಿಗಳನ್ನು ಮಾಡಿಕೊಂಡು ಬಂದು ಶಿವಪೂಜೆಯನ್ನು ಮಾಡಿ ಅನಂತರ ಆ ಪ್ರಸಾದವನ್ನು ಸಲ್ಲಿಸಬೇಕೆಂದುಕೊಂಡ ಬಸವಣ್ಣ ನೀಲಮ್ಮರು ಸ್ನಾನಕ್ಕಾಗಿ ಚಿತ್ರಕಲ್ ದುರ್ಗಕ್ಕೆ ಹೋದರು.

ಇತ್ತ ಮಠದಲ್ಲಿ ಒಬ್ಬಳೇ ಇದ್ದ ನಾಗಮ್ಮ ಮಠವನ್ನು ಶೃಂಗರಿಸಬೇಕೆಂದು ಮುತ್ತಿನ ಹಿಡುಗಲಿನಿಂದ ಕಸ ಹೊಡೆಯುತ್ತಿದ್ದಾಗ ಪ್ರಸಾದದ ಪರಿಮಳ ಮಠವನ್ನು ತುಂಬಿ ತುಳುಕಿತು.

ಹೋದೋದ ಕಡೆಯೆಲ್ಲ ಒಂದೊಂದು ಗಮನವಲ್ಲ
ಇದೇನವ್ವ ಈ ಗಮನ ತಿಳಿಯಾದು |

ಎಂದು ಹೇಳಿ ಮನೆಮಠವನ್ನೆಲ್ಲ ಹುಡುಕಾಡಿದಳು. ಉರಿಗದ್ದುಗೆ ಮೇಲಿದ್ದ ಮಗುಟದ ಗಂಟನ್ನು ಬಿಚ್ಚಿದಳು. ಬಿಚ್ಚಿ ನೋಡಿದರೆ ಅದರೊಳಗೆ ಒಂದು ನವಣಕ್ಕಿ ಪ್ರಸಾದವಿತ್ತು.

ಒಂದೇ ಒಂದು ಹರಳು ಒಳಗಿತ್ತು ಪ್ರಾಸೋದ
ಮೂರು ಗಾವುದಕೆ ಗಮನ ನಿಲುಭಾರ |

ಪ್ರಸಾದದ ಸುವಾಸನೆಗೆ ಸೋತ ಅಕ್ಕನಾಗಮ್ಮ

ಒಂದೀಗುಟ್ಟಿದೊಡಹುಟ್ಟು ಒಬ್ಬಾಳೆ ಎನುತ್ತೆಳಿ
ನನ್ನೆ - ತಂದು ನಮ್ಮಣ್ಣಯ್ಯ ಮಡಗವುರೆ |

ಎಂದು ಭಾವಿಸಿ ಸ್ನಾನ ಮಡಿಗಳನ್ನು ಮಾಡಿಕೊಂಡು ಬಂದು ಲಿಂಗಕ್ಕೆ ಪುಷ್ಪಾರ್ಚನೆ ಮಾಡುತ್ತಾಳೆ. ಹೀಗೆ ಪುಷ್ಪಾರ್ಚನೆ ಮಾಡುವಾಗ ಅವಳು ಹೂವುಗಳನ್ನು ಕರೆಯುವ ವರ್ಣನೆ ವಿಶೇಷವಾಗಿ ಎದ್ದುಕಾಣುತ್ತದೆ. ಪೂಜೆಯ ಹೊತ್ತಿಗೆ ಸರಿಯಾಗಿ ಬರ ಎಕ್ಕದ ಹೂ, ಉಮ್ಮತ್ತದ ಹೂ ಮತ್ತು ತಾಳೆ ಹೂಗಳಿಗೆ ಅವಳು ಕೊಡುವ ಶಾಪದ ಪರಿಯೂ ಸೊಗಸೆನಿಸುತ್ತದೆ. ಪೂಜೆಯ ನಂತರ ತಾಯಿ ತಂದೆ ಆದಿಯಾಗಿ ದೇವಾದಿ ದೇವತೆಗಳನ್ನೆಲ್ಲ ನೆನೆದು ಪ್ರಸಾದವನ್ನು ಕಣ್ಣಿಗೊತ್ತಿಕೊಂಡು ಭಕ್ತಿಪೂರ್ವಕವಾಗಿ ಉದರಕ್ಕೆ ಸಲ್ಲಿಸುತ್ತಾಳೆ. ಆ ಕೂಡಲೆ 'ಕಲ್ಯಾಣದ ಕಡೇಬಾಗಲಲ್ಲಿದ್ದ ನಾಲಗಿಲ್ಲದ ಗಂಟೆ ಅದು ಲಾದಾಯ್ತು' ಇದನ್ನು ಕೇಳಿಸಿಕೊಂಡ ಬಸವಣ್ಣ-ನೀಲಮ್ಮರು ಏನೋ ಅನಾಹುತವಾಗಿರಬಹುದೆಂದು ತಾಗುಬಾಗುನಲ್ಲಿ ಕಲ್ಯಾಣಕ್ಕೆ ಬರುತ್ತಾರೆ. ಅಚಾತುರ್ಯ, ಆಕಸ್ಮಿಕಗಳಿಂದ ಅನಾಹುತ ಉಂಟಾಗಬಹುದಾದ ಸಾಧ್ಯತೆ ಇರುವಲ್ಲಿ ಜೀವ ಪರಿತಪಿಸುವ ಬಗೆಯನ್ನು ನಾಗಮ್ಮನ ಸಂದರ್ಭದಲ್ಲಿ ಜನಪದ ಕವಿ ಭಾವಸ್ಪರ್ಶ ರೀತಿಯಲ್ಲಿ ಕಂಡರಿಸಿದ್ದಾನೆ.

ಎಂದೂ ಆಗದ ಗಂಟೆ ಇಂದು ಲಾದಾಯ್ತು ನೀಲಮ್ಮ
ಏನೊ ಹೊಸ ನಡುತೆ ನಮ್ಮಳದಲ್ಲಿ |

ಎಂದುಕೊಂಡಂತೆ ಗದ್ದುಗೆಯ ಮೇಲಿದ್ದ ಪ್ರಸಾದ ಮಾಯವಾಗಿತ್ತು.

ಮಕ್ಕಳುಗೋಸ್ಕರ ಮಾಕಷ್ಟ ಪಟ್ಟುನಲ್ಲ
ಹಂಗೂ ಪ್ರಾಸೋದ ನಮ್ಗೆ ದೊರಿನಿಲ್ಲ |

ಎಂದು ಚಿಂತಿಸುತ್ತ ಮಠದಲ್ಲಿದ್ದವರನ್ನೆಲ್ಲ ಕರೆದು ವಿಚಾರಿಸಿದಾಗ ಅಕ್ಕನಾಗಮ್ಮ ಆ ಪ್ರಸಾದವನ್ನು ಸೇವಿಸಿದಳು ಎಂದು ಗೊತ್ತಾಯಿತು. ಇದನ್ನು ಕೇಳಿದ ಬಸವಣ್ಣನವರು ದಿಗ್ಮೂಢರಾಗಿ ನಿಂತುಬಿಟ್ಟರು. ಹರಳಯ್ಯನ ಮನೆ ಪ್ರಸಾದ ಮಕ್ಕಳ ಫಲವನ್ನು ಕೊಡುವ ಮಹತ್ವವುಳ್ಳದ್ದು ಎಂದು ತಿಳಿದಾಗ ಅಕ್ಕನಾಗಮ್ಮನಿಗೆ ಬರಸಿಡಿಲೆರಗಿದಂತಾಯಿತು. ಅಣ್ಣನ ವ್ಯಕ್ತಿತ್ವಕ್ಕೆ ಕಳಂಕ ಬರುವಂತಾಯಿತಲ್ಲ ಎಂದು ಮಮ್ಮಲ ಮರುಗಿದಳು.

ಕುಂದದ ಮಾತು ನನ್ ಜಲ್ಮಕ್ಕೆ ಬಂದ್ಮೇಲೆ
ಆ ಕುಂದ ಬರೋದ್ಕೆ ಮುಂಚೆ ನಾನ್ ಸಾಯ್ಬೇಕು |

ಎಂದು ಯೋಚಿಸಿದ ಅಕ್ಕನಾಗಮ್ಮ ಪ್ರಾಣ ಕಳೆದುಕೊಳ್ಳಲು ವಿಭೂತಿ ಕೊಳದ ಕಡೆಗೆ ನಡೆದಳು. ಇದನ್ನು ತಿಳಿದ ನೀಲಮ್ಮ ಥಟ್ಟನೆ ಬಂದು ನಾದಿನಿಯನ್ನು ತಡೆದು

ನಿನುಗೆ ಬಂದ ಕಷ್ಟ ನನಗು ಇಲ್ಲ ನಾಗಮ್ಮ
ಅಳಬ್ಯಾಡ ನಡಿಯವ್ವ ಗುರುಮಠಕೆ |

ಅಕ್ಕನಾಗಮ್ಮನಿಗೆ ಬಗೆಬಗೆಯಾಗಿ ಬುದ್ಧಿ ಹೇಳಿ ಸಮಾಧಾನಪಡಿಸಿ ಮನೆಗೆ ಕರೆದುಕೊಂಡ ಬಂದಳು ನೀಲಮ್ಮ. ಅತ್ತಿಗೆ-ನಾದಿನಿಯರ ಒಂದು ಆದರ್ಶದ ಮಾದರಿಯನ್ನು ಇಲ್ಲಿ ಕಾಣಬಹುದು. ಪರಿತಪಿಸುವ ನಾಗಮ್ಮನನ್ನು ನೀಲಮ್ಮ ಸಮಾಧಾನಪಡಿಸುವ ಕ್ರಮ ಜೀವನೋತ್ಸಾಹವನ್ನು ಕಳೆದುಕೊಂಡು ಮರಣಮುಖಿಯಾದ ಆರ್ತಜೀವವನ್ನು ಉಳಿಸಿಕೊಳ್ಳುವ ತಾಯ್ತನದ ಪರಮಪರಿಯಂತೆ ಕಂಡು ಬರುತ್ತದೆ.

ಬಸವಣ್ಣನವರ ಮಾನವೀಯ ಮುಖವನ್ನು ಇಲ್ಲಿ ಕಾಣಿಸಿರುವ ಪರಿ ಅನ್ಯಾದೃಶವಾಗಿದೆ. ವಚನಗಳು ಹಾಗೂ ಶಿಷ್ಟ ಕಾವ್ಯಗಳು ಈಗಾಗಲೆ ಕಾಣಿಸಿರುವ ಬಸವಣ್ಣನಿಗಿಂತ ಭಿನ್ನವಾದ ಮನುಷ್ಯ ನೆಲೆಯಲ್ಲಿ ತನ್ನನ್ನು ಅನಾವರಣ ಮಾಡಿಕೊಳ್ಳುವ ಬಸವಣ್ಣ ಇಲ್ಲಿ ಕಂಡುಬರುವುದು ವಿಶೇಷ. 'ಮಾನ ಕೆಡುವಂತ ದಿನ ಬಂತು' ಎಂದು ಕಲ್ಲಣದಿಂದ ಕಣ್ಣೀರು ಹರಿಸುವ

ಅಪರೂಪದ ಬಸವಣ್ಣ ಇಲ್ಲಿ ಚಿತ್ರಿತವಾಗಿದ್ದಾನೆ. ಈ ಬಗೆಯ ತಲ್ಲಣ-ಪರಿತಾಪಗಳು ಸಹಜವಾದರೂ ಇದು ಜೀವವಿರೋಧಿ ನೆಲೆಗೆ ಹೋಗಬಾರದು. ಈ ವಿಚಾರದಲ್ಲಿ ಇಲ್ಲಿನ ಬಸವಣ್ಣ ಅಸಹಾಯಕನಾಗದೆ ಉದಾತ್ತ ವ್ಯಕ್ತಿಯಾಗುವುದು ಗಮನಾರ್ಹ. ಸಮಾಜದ ಕಟ್ಟುಪಾಡುಗಳೇನೇ ಇರಲಿ ವ್ಯಕ್ತಿ ಬದುಕು ದೊಡ್ಡದು. ಆಕಸ್ಮಿಕಗಳಿಗೆ ಕ್ಷಮೆ ಇರಬೇಕು ; ತಿಳಿಯದೆ ಆದದ್ದು ಶಿಕ್ಷಾರ್ಹವಲ್ಲ ಎಂಬ ಜನಪದರ ಮಾನವೀಯ ನಿಲುವು ಇಲ್ಲಿ ಮುಖ್ಯವಾಗುತ್ತದೆ. ಮುಂದೆ ನಾಗಮ್ಮನ ಬಸುರೊಸಗೆ ಸಂದರ್ಭದಲ್ಲಿ ಶಾಸ್ತ್ರ ಮಾತುವುದಕ್ಕೆ ಬಂದ ಹೆಂಗಸರು ಹೇಳುವ ಮಾತು ಇದಕ್ಕೆ ಪೂರಕವಾಗಿದೆ.

ಗಂಡುಸ್ರು ಕದ್ದೋರು ಇಂತೆ ಯಸನ ಮಾಡೋದಿಲ್ಲ
ನೀ ಸತ್ಯುವಂತೆ ಯಸನ ಪಡುಬೇಡ |

ಎನ್ನುವ ಮಾತು ಉಲ್ಲೇಖಾರ್ಹ. ನಾಗಮ್ಮನ ಬಸುರೊಸಗೆ ಸಂದರ್ಭವನ್ನು ಅಚ್ಚುಕಟ್ಟಾಗಿ ಆಚಾರಣಾ ಪರಂಪರೆಯ ಪರಿಕ್ರಮದಲ್ಲಿ ವರ್ಣಿಸಿರುವುದು ವಿಶೇಷವೆನಿಸುತ್ತದೆ.

ಆದರೆ ಕೊಂಡುಗದ ಮಂಚಣ್ಣನನ್ನು ಮನೆಗೆ ಕರೆದು ಊಟ ಹಾಕಿದ ಬಸವಣ್ಣನವರು ತರುವಾಯ ಮಂಚಣ್ಣನ ಕೂಡ

ಬಿಜ್ಜಳನ ಜೊತೆಯಲ್ಲಿ ನಿವೊಳ್ಳೆದಾಗಾಡಿದರೆ
ನಾನ್ ಹೊಳ್‌ಕೊಂಡಿ ಎಂದು ತಿಳುಕೊಳ್ಳುವೆ |

ಆ ರಾಜನ ಜೊತೆಯಲ್ಲಿ ನೀ ಕೆಟ್ಟುದಾಗೆ ಹೇಳಿದರೆ
ನಾ ಹದಗೆಟ್ಟಿ ಎಂದು ತಿಳುಕೊಳುವೆ |

ಎಂದು ಹೇಳುವುದು ಸಮಂಜಸವೆನಿಸುವುದಿಲ್ಲ. ಬಸವಣ್ಣನವರ ವ್ಯಕ್ತಿತ್ವ ಇಲ್ಲಿ ತುಸು ಕುಸಿದಂತೆ ಕಂಡುಬರುತ್ತದೆ. ಬಿಜ್ಜಳನನ್ನು ನೇರವಾಗಿ ಎದುರಿಸಬಲ್ಲ ಛಾತಿ, ಒಪ್ಪಿಸಬಲ್ಲ ಸಲುಗೆ ಇದ್ದ ಬಸಣ್ಣ ಮಂಜಣ್ಣನ ಮುಂದೆ ದೀನನಾಗುವುದು ಘನವೆನಿಸುವುದಿಲ್ಲ.

ತಂಗಿ ನಾಗಮ್ಮ ಬಸುರಿಯಾದ ವಿಚಾರವನ್ನು ಚಾಡಿಕೋರ ಕೊಂಡುಗನಿಂದ ಮರೆಮಾಚಲು ಬಸವೇಶ್ವರ ಪ್ರಯತ್ನಿಸಿದರೂ ಗುಟ್ಟು ರಟ್ಟಾಗುತ್ತದೆ. ಬಿಜ್ಜಳನ ಸಮಕ್ಷಮದಲ್ಲಿ ಪಂಚಾಯಿತಿ ಸೇರಿ ಕೊಂಡುಗನ ಸವಾಲಿಗೆ ಉತ್ತರ ಕೊಡಲಾಗದೆ ತಂಗಿ ನಾಗಮ್ಮನ ಸಭೆಗೆ ಬರಬೇಕಾಗುತ್ತದೆ. ಕುಲದವರ ಸಭೆಯಲ್ಲಿ ನಡೆಯುವ ಚರ್ಚೆ ಗ್ರಾಮೀಣ ಬದುಕಿನಲ್ಲಿ ಕಂಡುಬರುವ ಅಕ್ರಮ ಗರ್ಭದ ಖಂಡನೆಗೆ ಸಾಕ್ಷಿಯಾಗಿದೆ. ಹಾಗೆಯೇ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಪುರುಷ ಸಮುದಾಯ ಗರ್ವಿಸಿ ಕ್ರೌರ್ಯ ಮೆರೆಯುವ ಖಂಡದೃಷ್ಟಿಗೂ ಇದು ಸಾಕ್ಷಿಯಾಗಿದೆ.

ಬಿಜ್ಜಳನನ್ನು ತನ್ನ ಕೈಗೊಂಬೆ ಮಾಡಿಕೊಂಡಿದ್ದ ಕೊಂಡುಗ ಅಪರಾಧಿ ಸ್ಥಾನದಲ್ಲಿ ನಿಂತಿದ್ದ ನಾಗಮ್ಮನಿಗೆ ಬಹಿರಂಗವಾಗಿ ಅನೇಕ ದಿಬ್ಬಗಳನ್ನು ಒಡ್ಡುತ್ತಾನೆ. ಹರಳಯ್ಯನ ಮನೆ ಪ್ರಸಾದದಿಂದ ಗರ್ಭಿಣಿಯಾದಳೆಂದು ಹೇಳಿದಾಗ ಅವನು

ಅನ್ನ ಉಂಡೆಂಗುಸರೆಲ್ಲ ಹಂಗಾಗೆ ಬಸುರಾದ್ರೆ
ಗಂಡ್ಮಾಕೆ ಬೇಕು ಈ ಧರಿಯಲ್ಲಿ? |

ಆಕಾಸ ಗುಡುಗಾದೆ ಭೂಮಿಗೆ ಮಳೆ ಹೂಯಾದೆ
ಪೈರಾಗದುಂಟ ಈ ಧರೆಯಲ್ಲಿ? |

ಗಂಡನಿಲ್ಲದ ಬಾಲ್ಗೆ ಗಂಡನ ಭೋಗ ಇಲ್ದೆ
ಮಕ್ಕಳಾಗಾದು ಸುಳ್ಳೆಂದ |

- ಹೀಗೆ ಗೇಲಿ ಮಾಡಿದ್ದಲ್ಲದೆ

ಗಂಡನಿಲ್ಲಾದೆ ಭೋಗವಿಲ್ದೆ ಬಸುರಾದಿ ಹಾಗೆಂದರೆ
ಆವುಳುಣಸೆ ಬರಳನೇಟು ಗುರಿಯೆಂದ |

ಕೊಂಡುಗ ನಾಗಮ್ಮನನ್ನು ಅರಬೆತ್ತಲೆ ನಿಲ್ಲಿಸಿ ರಕ್ತ ಚಿಮ್ಮುವವರೆಗೂ ಹೊಡೆದ. ಇದನ್ನು ಕಂಡು ಸೇರಿದ್ದ ಜನವೆಲ್ಲ ಮಮ್ಮಲ ಮರುಗಿತು ; ಕೊಂಡುಗನಿಗೆ ಓಡಿ ಓಡಿ ಶಾಪ ಹಾಕಿತು. ಬಿಜ್ಜಳನ ಆಸ್ಥಾನದಲ್ಲಿ ಹೀಗೆಲ್ಲ ಮಾಡಲು ಸಾಧ್ಯವೆ ಎಂದು

ಪ್ರಶ್ನಿಸುವುದೇನೋ ಸರಿ. ಆದರೆ ನಮ್ಮ ಗ್ರಾಮಗಳ ಹೆಂಗಸರು ಇಂಥ ಘಟನೆಗಳನ್ನು ಮತ್ತೆ ಮತ್ತೆ ಹಾಡಿಸಿ ಕೇಳುವುದರಿಂದ ಇಲ್ಲಿ ಬಿಜ್ಜಳನ ಆಸ್ಥಾನವೂ ನಮ್ಮ ಹಳ್ಳಿಗಳ ಮಂದಕಟ್ಟೆಯಾಗಿ ಕಾಣಿಸಿಕೊಂಡಿದೆ. ನಾಗಮ್ಮ ಕೊಂಡುಗ ಒಂದಾದ ಮೇಲೊಂದರಂತೆ ಒಡ್ಡಿದ ದಿಬ್ಯಗಳನ್ನೆಲ್ಲ ಲೀಲಾಜಾಲವಾಗಿ ಗೆಲ್ಲುತ್ತಾಳೆ. ಆದರೆ ಮಂಚಣ್ಣನ ವರ್ತನೆಯಲ್ಲಿ ಹೆಣ್ಣಿನ ವಿಷಯದಲ್ಲಿ ಅಪನಂಬಿಕೆಯನ್ನಿರಿಸಿಕೊಳ್ಳುವ ಪುರುಷ ಸಮಾಜದ 'ಅಹಂ' ಕಂಡುಬರುತ್ತದೆ.

ಅಕ್ಕ ನಾಗಮ್ಮ ದಿಬ್ಯಗಳನ್ನೆಲ್ಲ ಗೆದ್ದುದಕ್ಕೆ ಮಾಯ ಮಾಟ ಮಂತ್ರ ಎಂದು ಆರೋಪಿಸುತ್ತಿದ್ದ ಕೊಂಡುಗ ಕೊನೆಗೊಮ್ಮೆ ತೀರ ಭಯಂಕರವಾದ ಪರೀಕ್ಷೆಯನ್ನು ಒಡ್ಡಿದ.

ಇವಳೊಟ್ಟೆ ಒಳುಗಲ ಮಗು ನಮ್ಮೊಂದುಗೆ ಮಾತಾಡಿದರೆ
ಒಪ್ಪುತ್ತೆತೆ ನನ್ನ ಕುಲುವೆಲ್ಲ |

ಎಂದ. ದಿಕ್ಕುಗಾಣದೆ ಅಕ್ಕನಾಗಮ್ಮ ಬಿಕ್ಕಿ ಬಿಕ್ಕಿ ಅತ್ತಳು. ತನ್ನ ಸಂಕಟಕೆ ಹೊಟ್ಟೆ ಬಡಿದುಕೊಂಡು ಅತ್ತಳು. 'ನೀನಾದರೂ ಮಾತಾಡಿ ನನ್ನ ಸೆರೆಯ ಬಿಡಿಸೊ ಕಂದ ಈ ನವನರಕದಿಂದ ನನ್ನನ್ನು ಪಾರು ಮಾಡೊ' ಎಂದು ಗೋಳಾಡಿದಳು.

'ಅಂಜುಬ್ಯಾಡ ತಾಯಮ್ಮ ನೀ ಹೆದುರ್‌ಬ್ಯಾಡ ನನ್ನಮ್ಮ
ನಿನ್ ಕಷ್ಟನೆಲ್ಲ ತಾಯಿ ತಿಳುದೀನಿ |

ಕಷ್ಟ ನಾ ತಿಳುದೀನಿ ದುಷ್ಟರಿಗೆ ವೈರಿಯಾಗಿ ಬರುತೀನಿ'
ಎದ್ದೊಂದು ಗುಟುರ ಹೊಡಿದಾನು |

ಇದನ್ನು ಕೇಳಿ ಅಲ್ಲಿದ್ದವರೆಲ್ಲ ಭಯಭೀತರಾದರು. ಗರ್ಭಸ್ಥ ಶಿಶುವಿನ ಪ್ರತಿಕ್ರಿಯೆ ಹಾಗೂ ಅದರ ಪರಿಣಾಮಗಳು ವಿಶೇಷವಾಗಿ ಮೂಡಿಬಂದಿವೆ. ಸಿಂಹಾಸನದಿಂದ ಬಿಜ್ಜಳ ಮೊಕ್ಕಾಡೆ ಬೀಳುವುದು ಕುಲಸಭೆ ಮೂರ್ಚೆ ಹೋಗುವುದು - ಇವೆಲ್ಲ ಪ್ರಕೃತಿಯ ಸಹಜ ವ್ಯಾಪಾರಿಗಳಿಗೆ ನಿರ್ಬಂಧ ಹಾಕುವ ಮನುಷ್ಯನ ಮೂರ್ಖ ವರ್ತನೆಗೆ ಕಾಲ ಮತ್ತು ಪ್ರಕೃತಿ ನೀಡುವ ಉತ್ತರಗಳಂತೆ ಕಂಡುಬರುತ್ತವೆ. ಮುಂದೆ ಚೆನ್ನಬಸವಣ್ಣ ನಾಗಮ್ಮನ ಬೆನ್ನುಮಚ್ಚೆಯನ್ನು ಸೀಳಿಕೊಂಡು ಹೊರಬಂದು ಕಾಡಿದ ಕೊಂಡುಗ ಮಂಚಣ್ಣನನ್ನು ಅಟ್ಟಿಸಿಕೊಂಡು ಹೋಗಿ ಕೊಂದು ಹಾಕುವುದು ; ಉರಿಗಣ್ಣು ಬಿಟ್ಟೊಡನೆ ಬಿಜ್ಜಳನ ಕಲ್ಲು, ಚಾವಡಿ ಹತ್ತಿಕೊಂಡು ಉರಿಯುವುದು ; ಬಿಜ್ಜಳನನ್ನು ಕೆಳಕ್ಕೆ ಕೆಡವಿ ಅವನ ಎದೆ ಮೇಲೆ

ನಾಲ್ಕು ಪಾದ್ವ ಅವನೆದೆಯ ಮೇಲಿರಿಸಿ
ಕಾರ ಹೊಸುಗುಂಗೆ ಪಾಪ್ಯ ಹೊಸುಗೀದ |

ಬಹುಶಃ ಶರಣ ಸಮುದಾಯವನ್ನು ಕ್ರೌರ್ಯದ ನೆಲೆಯಲ್ಲಿ ಕಾಡಿದ ಸಂಕುಚಿತ ಬುದ್ಧಿಯ ಕ್ರೂರಿಗಳಿಗೆ ಶರಣ ಸಂದೋಹ ತೋರಿರಬಹುದಾದ ಪ್ರತಿ ಹಿಂಸಾತ್ಮಕ ಪ್ರತಿಕ್ರಿಯೆಯಂತೆ ಇದು ಕಂಡುಬರುತ್ತದೆ. ಮತ್ತೆ ಬಸವಣ್ಣ ಚೆನ್ನಬಸವಣ್ಣನನ್ನು ಸಮಾಧಾನಪಡಿಸಿ ತಾಯಿಗರ್ಭಕ್ಕೆ ಪುನಃ ಕಳುಹಿಸುವ ಅಲೌಕಿಕ ಕ್ರಿಯೆ ಅಂತಹ ಹಿಂಸಾತ್ಮಕ ವರ್ತನೆಯನ್ನು ಶಮನಗೊಳಿಸಿರಬಹುದಾದರ ಪ್ರತೀಕವೂ ಆಗುತ್ತದೆ.

ತಂಗಿಯ ಮಗನ ಪರಾಕ್ರಮ ಬಸವಣ್ಣನವರಿಗೆ ಒಂದು ಕಡೆ ಸಂತೋಷವೆನಿಸಿದರೆ ಮತ್ತೊಂದು ಕಡೆ ತನಗೆ ಆಶ್ರಯ ಕೊಟ್ಟಿದ್ದ ಬಿಜ್ಜಳನ ಸಾವು ಅಸಹನೀಯವಾಗುತ್ತದೆ. ಕಪ್ಪು ಧೂಳ್ತವನ್ನು ಬಿಜ್ಜಳನ ಹಾಗೂ ಮಂಚಣ್ಣನ ಮೇಲೆ ಪಿಡಿದು ಮತ್ತೆ ಬದುಕಿಸಿಕೊಳ್ಳುತ್ತಾರೆ.

ಅಕ್ಕನಾಗಮ್ಮನ ಪುತ್ರ ಚೆನ್ನಬಸವಣ್ಣನನ್ನು ಬಸವಣ್ಣನವರು ತೊಡೆಯ ಮೇಲೆ ಕೂರಿಸಿಕೊಂಡು ಪ್ರೀತಿಯಿಂದ ಜೋಗುಳ ಹಾಡಿದರು. ಅವನ ಉರಿಗಣ್ಣನ್ನು ಕಪ್ಪುಧೂಳ್ತದಿಂದ ಮುಚ್ಚಿದರು. 'ನಮ್ಮಾಳ್ಕೆ ತೀರೋಯ್ತು. ಇನ್ನು ನಮ್ಮಳಿಯನಾಳ್ಕೆ ಕಾಣ್ಕೋ ಲೋಕ ಆಳೋನು ಚೆನ್ನಬಸವಣ್ಣ' ಎಂದು ಬಸವಣ್ಣನವರು ಹೇಳುವ ಮಾತುಗಳು ಶರಣ ಚಳವಳಿಯ ಒಂದು ಸಂಕೀರ್ಣ ಘಟ್ಟದ ಚರಿತ್ರೆಯನ್ನು ಸೂಚಿಸುತ್ತದೆ. ಶರಣ ಚಳವಳಿ ತನ್ನ ಉದ್ದೇಶ ಸಾಧನೆಯ ಉತ್ತುಂಗ ಸ್ಥಿತಿಯಲ್ಲಿದ್ದಾಗ, ಸಹಜವಾಗಿಯೇ ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಯಥಾಸ್ಥಿತಿವಾದಿಗಳು ಪ್ರಬಲ ವಿರೋಧ ತೋರಿ ಹಿಂಸಾತ್ಮಕ ನೆಲೆಯಲ್ಲಿ ಚಳವಳಿಯನ್ನು ದಮನ ಮಾಡಲು ಜೋರಾಗಿಯೇ ಕಾರ್ಯೋನ್ಮುಖರಾಗುತ್ತಾರೆ. ತಾನು ನಂಬಿದ್ದ ಧೋರಣೆಗಳಿಗೆ ತಿಲಾಂಜಲಿಯಿತ್ತು

ಅಸ್ತಿತ್ವ ಕಾಪಾಡಿಕೊಳ್ಳಬೇಕಾದ ಸಂಧಿಗ್ಧ ಸ್ಥಿತಿಯಲ್ಲಿ ಬಸವಣ್ಣನವರು ಅಧಿಕಾರವನ್ನು ಮತ್ತು ನಾಯಕತ್ವವನ್ನು ಹಸ್ತಾಂತರಿಸುತ್ತಾರೆ. ಚೆನ್ನ ಬಸವಣ್ಣನನ್ನು ಆ ಕಾರಣಕ್ಕಾಗಿಯೇ ಕಾವ್ಯದಲ್ಲಿ ಮತ್ತೆ ಮತ್ತೆ 'ಮೊನುಗಾರ' ಎಂದು ಕರೆಯುವುದನ್ನು ಗಮನಿಸಬೇಕು.

'ಬಿಜ್ಜಳನೇ ಆಳಿಕೊಳ್ಳಲಿ ಗುರುಮಠವ' ಎಂದು ಬಸವಣ್ಣ ಹೇಳುವುದು, ಅಂತೆಯೇ 'ಇನ್ನು ಬ್ಯಾಡಿ ಈ ಗುರುಮಠ' ಎಂದು ಅಕ್ಕನಾಗಮ್ಮ ಅಣ್ಣನಿಗೆ ಸಲಹೆ ಮಾಡುವುದು, ಮುಂದುವರಿದು ಸ್ವಯಂ ಬಸವಣ್ಣನವರೇ

ಕೈಲಾಸಕ್ಕೋಗುನ ನನ್ನಕ್ಕ ನಾಗಮ್ಮಯ್ಯ
ನಮಗೆ ಬ್ಯಾಡ ಕಲ್ಯಾಣ ಗುರುಮಠ |

ಎಂದು ನುಡಿಯುವುದು - ಇವೆಲ್ಲ ಒಟ್ಟಾರೆ ಕಲ್ಯಾಣ ಕೆಟ್ಟಿತ್ತು ಎಂಬುದನ್ನೇ ತಿಳಿಸುತ್ತದೆ.

ಮುಂದೆ ಬಸವಣ್ಣನವರ 'ಮಹಾಪ್ರಸ್ಥಾನ' ಪರ್ವ. ತಾವು ಕೈಲಾಸಕ್ಕೆ ಹೋಗುವಾಗ ಅಳಿಯ ಚೆನ್ನಬಸವಣ್ಣನನ್ನು ಕರೆದು ಪ್ರಜಾಸಂರಕ್ಷಣಾ ಸೂತ್ರವಾಗಿ ಈವರೆವಿಗೂ ಅನ್ನ ಕೊಟ್ಟ ಬಸವಣ್ಣ ಹೋಗಿಬಿಟ್ಟರೆ ಮುಂದೆ ನಮ್ಮ ಗತಿ ಏನು ಎಂದು ಕೇಳಿದರೆ ಅವರಿಗೆ ಅನ್ನದ ಮಾರ್ಗವನ್ನು ಸಾರಪ್ಪ ಎಂದು ಹೇಳಿದರು. ದಿನಕ್ಕೆ ಮಕ್ಕಳಿಗೆ ಮೂರೂಟ, ದೊಡ್ಡವರಿಗೆ ಎರಡೂಟ ಎಂದು ಸಾರಲು ಹೇಳಿದ ಉದಾರ ಬುದ್ಧಿಯ ಚನ್ನಬಸವಣ್ಣ 'ಲೆಕ್ಕವಿಲ್ಲದ ಊಟ ಎಳೆಮಕ್ಕಳೆ ಉಣ್ಣೆ' 'ಮೂರು ಹೊತ್ತುನ ಊಟ ದೊಡ್ಡವರು ಉಣ್ಣೆ' ಎಂದು ಸಾರಿಬಿಟ್ಟ. ಈ ಕಾರಣದಿಂದ ಚೆನ್ನಬಸವಣ್ಣ ಜನರಿಗೆ ಗೇದಿಕ್ಕುವುದಕ್ಕಾಗಿ ಭೂಮಿಯಲ್ಲೇ ಉಳಿಯಬೇಕಾಯ್ತು. ಒಕ್ಕಲಿಗರ ಮುದ್ದಯ್ಯನಿಗೆ ಚೆನ್ನಬಸವಣ್ಣನನ್ನು ಕೊಟ್ಟು ಅವನನ್ನು ಮೂಗನನ್ನಾಗಿ ಮಾಡಿದರು. ಶರಣರೆಲ್ಲರನ್ನು ಕರೆದು ಚೆನ್ನಬಸವಣ್ಣನ ಸಂರಕ್ಷಣೆಯ ಹೊಣೆಯನ್ನು ಅವರೆಲ್ಲರಿಗೂ ಒಪ್ಪಿಸಿದರು. 'ಹೊನ್ನಯ್ಯನ ಕರೆದು ನನ್ನಳಿಯನ ಕಂಡ ಮಾವ್ಸವ ನಿನ್ನ ರುದಯಕ್ಕೆ ಸಲ್ಲುಸಪ್ಪ' "ನನ್ನಳಿಯ ಮರಣವಾದಾಗ ಹೊರಗೆ ಬಿಸಾಡ್ಬೇಡಿ. ಹೊನ್ನಯ್ಯ ಚೆನ್ನಯ್ಯರನ್ನು ಕರೆಸಿ ಅವರಿಂದ ಒಪ್ಪ ಮಾಡಿಸಿ" ಇತ್ಯಾದಿಯಾಗಿ ಬಸವಣ್ಣನವರು ಹೇಳುವುದು ವಿಶಿಷ್ಟವಾಗಿದೆ. ಇದನ್ನು ಮಾಂಸಾಹಾರದ ವಿಚಾರದಲ್ಲಿ ಬಸವಣ್ಣನಲ್ಲಾದ ಆಲೋಚನಾ ಪರಿವರ್ತನೆ ಎನ್ನುವದಕ್ಕಿಂತ ಮೂಲತಃ ಮಾಂಸಾಹಾರಿಯಾಗಿದ್ದವರು ಅಪ್ರತ್ಯಕ್ಷವಾಗಿ ಬಸವಣ್ಣನವರಿಂದ ಮಾಂಸಾಹಾರ ಸೇವನೆಗೆ ರಹದಾರಿ ಪಡೆದುಕೊಂಡ ಚಮತ್ಕಾರದಂತೆ ಕಾಣುತ್ತದೆ. ಅಲ್ಲದೆ ಬಸವಣ್ಣನವರೆ ಚನ್ನಬಸವಣ್ಣನ ಪೂಜೆ ಮಾಡುವುದು ಪಶುಸಂಗೋಪನೆ ಮತ್ತು ಕೃಷಿ ಸಂಸ್ಕೃತಿಯ ಹಿರಿಮೆಯನ್ನು ಸಾರುತ್ತದೆ.

ಕಾವ್ಯದ ಕೊನೆಯ ಭಾಗದಲ್ಲಿ ಬಸವಣ್ಣನವರು 'ಕಲ್ಯಾಣ ಇನ್ಮೇಲೆ ಕಡುಕರ ಅಂಗಡಿ' ಎಂದು ನುಡಿಯುವುದು ಮಾರ್ಮಿಕವಾಗಿದೆ. 'ನಮಗೆ ಗುರು ಯಾರು?' ಎಂದು ಪ್ರಶ್ನಿಸಿದ ಬಿಜ್ಜಳನಿಗೆ 'ಗುರುಗಳ ಕಾಲ ಮುಗುದೋಯ್ತು, ಇದು ರಾಜರ ಕಾಲ' ಎಂದು ಉತ್ತರ ಕೊಡುವಲ್ಲಿ ಮತ್ತೆ ಮತ್ತೆ ಪಟ್ಟಭದ್ರ ಹಿತಾಸಕ್ತಿಗಳು ಹಾಗೂ ಅಧಿಕಾರ ಶಾಹಿಗಳು ಮೇಲುಗೈ ಸಾಧಿಸುತ್ತ ಸಂಸ್ಕೃತಿಯ ನಿರ್ವಹಣೆಯನ್ನು ತನ್ನ ಕೈಗೆ ಎತ್ತಿಕೊಂಡು ಅದನ್ನು ಪತನಮುಖಿಯನ್ನಾಗಿಸುವ ವರ್ತನೆಯನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಜನಪದಕವಿ ಬಸವಣ್ಣನವರ ಮುಖವಾಣಿಯಾಗಿ ಬಿಜ್ಜಳನನ್ನು ನಿಂದಿಸುವುದು ಗಮನಾರ್ಹ. 'ಹೊಯ್ದವರೆನ್ನ ಹೊರೆದವರೆಂಬ' ಎಂಬ ಬಸವಣ್ಣನವರು ಹೀಗೆ ಹೇಳಿರಲಾರರು. ಆದರೆ ಪ್ರಭುತ್ವದ ಅವಿವೇಕ - ಕ್ರೌರ್ಯಗಳಿಂದ ಮತ್ತೆ ಮತ್ತೆ ನಲುಗುವ ಜನಸಾಮಾನ್ಯ ಇಲ್ಲಿ ತನ್ನ ಪ್ರತಿಕ್ರಿಯೆಯನ್ನು ದಾಖಲಿಸಿದ್ದಾನೆ.

ಒಟ್ಟಿನಲ್ಲಿ ಚನ್ನಬಸವಣ್ಣನ ಜನ್ಮವನ್ನು ಹೇಳುವ 'ಅಕ್ಕನಾಗಮ್ಮ' ಕಾವ್ಯ ಜನಪದ ಸಂಸ್ಕೃತಿಯ ಸತ್ವದೊಡನೆ ಜನಪದ ಭಾಷೆಯ ಹಾಗೂ ಬದುಕಿನ ಬನಿಸೊನೆಗಳನ್ನೆಲ್ಲ ತುಂಬಿಕೊಂಡ ಶ್ರೇಷ್ಠ ಕಾವ್ಯವಾಗಿದೆ.

ಮಡಿವಾಳ ಮಾಚಯ್ಯ

ವೀರ ಪೌರುಷಗಳಿಗೆ ಹೆಸರಾದ ಮಡಿವಾಳ ಮಾಚಯ್ಯನನ್ನು ಕಂಡವರು ಈತ ಸಾಕ್ಷಾತ್ ವೀರಭದ್ರನ ಅವತಾರವೆಂದೇ ಕರೆದರು. ಈತ ಬಿಜಾಪುರ ಜಿಲ್ಲೆ ಹಿಪ್ಪರಿಗೆಯ ಮಡಿವಾಳ ಪರ್ವತಯ್ಯ ಎಂಬುವನ ಮಗ. ಕಲ್ಯಾಣಪಟ್ಟಣದಲ್ಲಿ ರಜಕ ಕಾಯಕದಿಂದ ಬಂದುದರಲ್ಲಿ ಜಂಗಮಾರ್ಚನೆ ಮಾಡಿಕೊಂಡಿರುತ್ತಿದ್ದ ಈತ ಒಬ್ಬ ವಚನಕಾರನೂ ಹೌದು. ಈತನ ವಚನಗಳ ಅಂಕಿತ 'ಕಲ್ಲಿನಾಥ' ಎಂಬುದು. ಕಲ್ಯಾಣದ ಕ್ರಾಂತಿಯಿಂದಾಗಿ ಚನ್ನಬಸವಣ್ಣ ಉಳವಿಗೆ ಹೋದ ಮೇಲೆ ಇವನು ಶರಣರ ದಂಡಿಗೆ

ಅಧಿಪತಿಯಾಗಿ ಬಿಜ್ಜಳನ ಸೇನೆಯೊಡನೆ ಹೋರಾಡುತ್ತ ತೊರೆಗಲ್ಲು ನಾಡಿನಲ್ಲಿ ಮರಣ ಹೊಂದಿದನು. ಈತನ ಸಮಾಧಿ ಕಾರಿಮನೆ ಎಂಬಲ್ಲಿದೆ[18].

ಭೀಮಕವಿಯ 'ಬಸವಪುರಾಣ', ಶಾಂತಲಿಗದೇಶಿಕನ 'ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ', ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ', ವಿರೂಪಾಕ್ಷ ಪಂಡಿತನ 'ಚೆನ್ನಬಸವ ಪುರಾಣ', ಚನ್ನಪ್ಪ ಕವಿಯ 'ಶರಣಲೀಲಾಮೃತ', ಉತ್ತರದೇಶದ ಬಸವಲಿಂಗದೇವರ 'ಕಥಾಸಾರ', ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಪುರಾಣ', ಚನ್ನಕವಿಯ 'ವಿಜಯಮಹಾಂತೇಶ ಪುರಾಣ, ಸಿದ್ಧನಂಜೇಶನ 'ಗುರುರಾಜ ಚಾರಿತ್ರ', ಪಂಚಯ್ಯನ 'ಭಕ್ತಿರಸದ ಸೋನೆ'ಗಳಲ್ಲಲ್ಲದೆ ಕರ್ತೃಗಳ ಹೆಸರು ಗೊತ್ತಿಲ್ಲದ 'ಮಡಿವಾಳಯ್ಯಗಳ ಚರಿತ್ರೆ' ಮತ್ತು 'ಮಡಿವಾಳಯ್ಯಗಳ ಸಾಂಗತ್ಯ' ಮುಂತಾದ ಕೃತಿಗಳೆಲ್ಲ ಮಡಿವಾಳ ಮಾಚಯ್ಯಗಳ ವಿಶಿಷ್ಟ ವ್ಯಕ್ತಿತ್ವವನ್ನು ಪೌರಾಣಿಕ ಕಲ್ಪನೆಗಳೊಡನೆ ನಿರೂಪಿಸಿವೆ.

ಪ್ರಸ್ತುತ ಜನಪದ ಕಾವ್ಯ 'ಮಡಿವಾಳ ಮಾಚಯ್ಯ'ದಲ್ಲಿ ಬರುವ ರಾವ್ಮಡಿಯ ಕಲ್ಪನೆ ಅತಿವಿಚಿತ್ರವೂ ಘೋರಭೀಕರವೂ ಆಗಿದೆ. 'ರಾವು' ಎಂಬ ಪದಕ್ಕೆ ರಾಹು, ಗ್ರಹ, ಪೀಡೆ, ಪಿಶಾಚಿ ಎಂಬ ಅರ್ಥಗಳಿದ್ದರೂ ಇಲ್ಲಿ 'ಭಯಂಕರ' ಎಂಬರ್ಥದಲ್ಲಿ ಪ್ರಯೋಗವಾಗಿದೆ. ಮಾನವರಕ್ತದಲ್ಲಿ ಅದ್ದಿ ಬಟ್ಟೆ, ಒಗೆಯುವುದು ಈಲಿಯನ್ನು ನೀಲಿ ಮಾಡಿಕೊಳ್ಳುವುದು ಮೆದುಳನ್ನು ಗಂಜಿ ಮಾಡಿ ಕೊಂಡು ಅದ್ದುವುದು ಬೆನ್ನುಮಚ್ಚವನ್ನು ಕಲ್ಲು ಮಾಡಿಕೊಂಡು ಜೋಳಿಗೆಯನ್ನು ಒಗೆಯುವ ಕಲ್ಪನೆ ಭಯಾನಕ ರೀತಿಯಲ್ಲಿ ಚಿತ್ರಿತವಾಗಿದೆ.

ಜನಪದ ಕಾವ್ಯಗಳಲ್ಲಿ ಈ ಕಥಾವಸ್ತು ಎರಡು ಕವಲಿನಲ್ಲಿ ಕಾಣಿಸಿಕೊಂಡಿದೆ. ಒಂದು ಕವಲಿನ ಕಥೆಯಲ್ಲಿ ಕಂತೆಯನ್ನು ರಾವ್ಮಡಿ ಕೊಡಲು ಮಾಚಯ್ಯನನ್ನು ಬಸವಣ್ಣನವರು ಕೇಳುವಂತಿದ್ದರೆ[19] ಮತ್ತೊಂದು ಕವಲಿನ ಪಾಠದಲ್ಲಿ ಬಸವಣ್ಣನವರಿಗೆ ಬದಲಾಗಿ ಮಂಟೇಸ್ವಾಮಿಯವರಿಗೆ ರಾವ್ಮಡಿ ಮಾಡಿಕೊಟ್ಟಂತೆ ಹೇಳಲಾಗಿದೆ.[20] ಹೀಗಾಗಲು ಕಾರಣವೇನೆಂದು ಹೇಳಲಾಗದಿದ್ದರೂ ಭೌಗೋಳಿಕವಾಗಿ ದೂರದೂರದ ಕಲಾವಿದರು ಬೇರೆ ಬೇರೆ ಗುರುಗಳಲ್ಲಿನ ಸಂಪ್ರದಾಯಗಳಿಂದ ಬೇರೆ ಬೇರೆಯಾಗಿಯೇ ಈ ಆಶಯವನ್ನು ರೂಢಿಸಿಕೊಂಡು ಬಂದಿರಬಹುದು. ಇದೇ ರೀತಿಗೆ ಮತ್ತೊಂದು ಉದಾಹರಣೆಯೆಂದರೆ ಬಸವಣ್ಣನವರನ್ನು 'ಮಲೆಯ ಮಾದೇಶ್ವರ' ಮಹಾಕಾವ್ಯದಲ್ಲಿ ಮಾದೇಶ್ವರರು ಪರೀಕ್ಷಿಸಲು ಬಂದರೆ 'ಮಂಟೇಸ್ವಾಮಿ ಮಹಾಕಾವ್ಯ'ದಲ್ಲಿ ಮಂಟೇಸ್ವಾಮಿಯವರು ಪರೀಕ್ಷಿಸುತ್ತಾರೆ. ಇಂಥ ವೈರುದ್ಧ್ಯಗಳು, ವೈಪರೀತ್ಯಗಳು ಮೌಖಿಕ ಕಾವ್ಯಗಳಲ್ಲಿ ಅನಿವಾರ್ಯವೆಂದೂ ಅಥವಾ ಸರ್ವೇಸಾಮಾನ್ಯವೆಂದೋ ಹೇಳಬಹುದು.

ಕಾಯಕನಿಷ್ಠೆ ಹಾಗೂ ಜೀವದಯೆ ಇವೆರಡೂ ಒಟ್ಟಿಗೆ ನಿರ್ವಹಣೇಗೊಳ್ಳಬೇಕು ಎಂಬ ಧೋರಣೆಯನ್ನು ಸಾದರಪಡಿಸಲು ನಿರೂಪಿತವಾಗಿರುವ ಪಮಾಡ ಸದೃಶ ಘಟನೆ ಈ ಕಾವ್ಯದಲ್ಲಿದೆ.

ಕಲ್ಯಾಣದ ಶರಣ ಸಂಕುಲದಲ್ಲಿದ್ದ ಮಡಿವಾಳ ಮಾಚಯ್ಯನಿಗೊಂದು ಅಗ್ನಿಪರೀಕ್ಷೆ ತಲೆ ಎತ್ತುತ್ತದೆ. ಬಸವಣ್ಣನವರ ಶಿವಕಂತೆಯಲ್ಲಿ ಉತ್ಪತ್ತಿಯಾಗಿದ್ದ ತಿಗಣೆ ಚಿಗಟ ಹೇನು ನಸುರು ನತ್ತು ಮುಂತಾದ ಕ್ರಿಮಿಗಳನ್ನು ಕೊಲ್ಲದೆ ಅದನ್ನು ಶುದ್ಧೀಕರಿಸುವ ಕಠಿಣ ಸವಾಲೆ ರಾವ್ಮಡಿ. ಶಿವಕಂತೆ ಶುದ್ಧೀಕರಿಸುವ ಕಾಯಕಕ್ಕೆ ಬಸವಣ್ಣನವರು 'ಚಂಚಕಾರ' ಕೊಡುತ್ತಾರೆ. ಚಂಚಕಾರ ಕೊಡುವುದರಲ್ಲಿ ಪ್ರತಿಕಾಯಕಕ್ಕೂ ಮೌಲ್ಯವಿದೆ. ಅಂತೆಯೇ ಮೌಲ್ಯನಿರ್ಧಾರ ಮತ್ತು ನೀಡಿಕೆಯಿಂದ ಕಾಯಕವನ್ನು ಪೋಷಿಸಬೇಕು ಎಂಬ ಧ್ವನಿಯೂ ಇದೆ. ಕಾಯಕತತ್ತ್ವದ ಹಿನ್ನೆಲೆಯಲ್ಲಿ ಚಂಚಕಾರವನ್ನು ಕೊಟ್ಟು,

ನಾನು ಕೊಟ್ಟಂತ ಶಿವಕಂತೆ ಜೋಳಿಗೆಯ
ನೀರುನಲ್ಲಿ ಅಜ್ಜೊ ಹಂಗಿಲ್ಲ
ಕಲ್ಲುನ ಮ್ಯಾಲೆ ಕುಸುರೋ ಹಂಗಿಲ್ಲ
ಉಬ್ಬೇಲಿ ಬೇಯ್ಸೋ ಹಂಗಿಲ್ಲ ನೀಲಿ ಹಾಕೋ ಹಂಗಿಲ್ಲ

---

೧೮. ತ.ಸು.ಶಾಮರಾವ್ - ಶಿವಶರಣ ಕಥಾಕೋಶ, ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ೧೯೬೭. ಪು.೩೧೦

೧೯. ನೋಡಿ : ಕನ್ನಡ ವೃತ್ತಿಗಾಯಕರ ಕಾವ್ಯಗಳು ; ಸಂ. ಡಾ.ಜೀ.ಶಂ. ಪರಮಶಿವಯ್ಯ ; ಕನ್ನಡ ಸಾಹಿತ್ಯ ಪರಿಷತ್ತು ; ೧೯೮೨. ಪು.೮೫೫-೮೯೨.

೨೦. ನೋಡಿ : ಸೂಸಿ ಹರಿದಾಳೆ ಶಿವಗಂಗೆ ; ಸಂ. : ಕ.ರಾ.ಕೃ. ಜನಪದ ಸಾಹಿತ್ಯ ಅಕಾಡೆಮಿ, ೧೯೬೨. ಪು.೫೯-೬೨.

ಅದ್ಕೆ
ರಾವ್ಮಡಿಯ ಶರಣ ಮಾಡಬೇಕು |

ಎಂದು ಹೇಳಿದ್ದಲ್ಲದೆ

ಬಸವಣ್ಣನವರು ಆ ಶಿವಕಂತೆಯನ್ನು ಪಕ್ಕದಲ್ಲಿಟ್ಟುಕೊಂಡು
ತ್ರಾಸನ್ನು ತಕೊಂಡು ಕೈಲಿಡುಕೊಂಡು
ಒಕ್ಕಡೆ ಬಿಟ್ಟು ಒಕ್ಕಡೆ ಶಿವಕಂತೆಯನ್ನು ಮಡುಗಿ -

ಶಿವಕಂತೆ ತೂಕ ಮಾಡುತಾರೆ |

ಆ ಶಿವಕಂತೆ ಹನ್ನೆರಡು ತೂಕ ತೂಗಿತು.

ಅಪ್ಪಾ ಮಡುವಾಳ ಮಾಚಯ್ಯ
ಶಿವಕಂತೆ ಜೋಳುಗೆ ಹನ್ನೆರಡು ತೂಕ ಸರಿಯಾಗಿ ಬಂದ್ಕೆತೆ
ನೋಡಪ್ಪ ಒಂದು ಮೊಟ್ಟೆ ಒಡೀಬಾರ್ದು
ಒಂದು ಸೀರು ಸಿಡೀಬಾರ್ದು
ಒಂದು ನಸುರು ನಲುಗ್ಬಾರ್ದು
ಒಂದು ನತ್ತು ನರುಳ್ಬಾರ್ದು
ಒಂದು ಹೇನು ನೋಯಬಾರ್ದು
ಒಂದು ತಿಗಣೆ ಸಾಯಬಾರ್ದು
ಬಿಗಟೆ ಪ್ರಾಣ ಬುಡಬಾರ್ದು

ಈ ಥರ್ದಲ್ಲಿ ರಾವ್ಮಡಿ ಮಾಡ್ಕೊಂಡು ಬಂದುದ್ದೇ ಸಾಚುವಾದ್ರೆ -

ನೀನು ಕೇಳೀದ ಬೋಮಾನ ಕೊಡುವೇನು |

ಮಡಿವಾಳ ಮಾಚಪ್ಪ ಪ್ರತಿ ಮಾತಾಡದೆ 'ತಮ್ಮಪ್ಪೆಯಂತಾಗ್ಲಿ ಕೊಡೀ ಬುದ್ಧಿ' ಎಂದು ಹೇಳಿ ಶಿವಕಂತೆಯನ್ನು ಪಡೆದುಕೊಂಡ. ಆದರೆ ರಾವ್ಮಡಿ ಮಾಡುವ ಬಗೆ ಹೇಗೆಂದು ತಿಳಿಯದೆ ಚಿಂತಿಸುತ್ತ ನದೀದಡದ ಮರದ ಕೆಳಗೆ ಮೊಕ್ಕಡೆನಾಗಿ ಮಲಗಿಬಿಟ್ಟ. ಬುತ್ತಿ ತಂದ ಮಡದಿ ಮಲ್ಲಿಗದೇವಿ ಗಂಡನ ಸಂಕಷ್ಟವನ್ನು ಕೇಳಿ

"ಅಯ್ಯೊ ಸ್ವಾಮಿ ಶಿವಕಂತೆಯನ್ನು
ರಾವ್ಮಡಿ ಮಾಡುವಂತ ವಿಧ ನಂಗೆ ಚನ್ನಾಗಿ ಗೊತ್ತು
ಅದನ್ನ ಹೇಳ್ಕೊಡ್ತೀನಿ ಅದುಕ್ಕೆ ಮೊದ್ಲು -

ಊಟಕ್ಕೆ ನೀವು ದಯಮಾಡಿ" |

ಎಂದು ಹೇಳಿ ಗಂಡನಿಗೆ ಊಟ ಬಡಿಸಿದಳು. ಗಂಡ ಮಾಚಯ್ಯ ಸಂತೃಪ್ತನಾಗಿ ಕುಳಿತಾಗ ಮಲ್ಲಿಗದೇವಿ 'ರಾವ್ಮಡಿ' ಎಂದರೇನೆಂಬುದನ್ನು ಹೀಗೆ ಹೇಳಿದಳು.

ಸ್ವಾಮಿ ಯಜಮಾನ್ರೆ
ಬಸವಣ್ಣನವರ ಶಿವಕಂತೆಯನ್ನು ರಾವ್ಮಡಿ ಮಾಡ್ಬೇಕಾದ್ರೆ
ಪತೀ ಅನ್ನೋ ಆಸೆಯನ್ನು ನಾನು ಮರೀತಿದ್ದೀನಿ
ಸತೀ ಅನ್ನೋ ಆಸೆಯನ್ನ ನೀವು ಮರುತ್ಬುಟ್ಟು -

ಅಯ್ಯ-ಕುಯ್ಯಯ್ಯ ನನ್ನ ಸಿರುಸಾವ |

ಸ್ವಾಮಿ ನನ್ನ ಸಿರುಸೇದ್ನೆಯನ್ನು ಮಾಡ್ಬುಡಿ
ಆ ರಕ್ತ ಹರೀತದಲ್ಲ
ಅದ್ನ ಅಗುರ್ ಬಾಂಡವಾಳ್ಕೆ ಬಸ್ಕೊಯ್ಯ

ನನ್ನ ಎದೆಯ ಗುಂಡ್ಗೆ ಸಿಗಿಯಯ್ಯ
ನನ್ನ ಹೊಟ್ಟೆಯೊಳಗಿರುವ ಈಲಿಯನ್ನು ತಕ್ಕೊಂಡು -

ಅದ ನೀಲಿ ಅಜ್ಜೋಕೆ ಮಡಿಕೊಯ್ಯ |

ಸ್ವಾಮಿ ನನ್ನ ತಲೆಯನ್ನು ಒಡುದ್ಬುಟ್ಟು
ಆ ನನ್ನ ನೆತ್ತಿಯಲ್ಲಿರುವ ಆ ಮಿದಿಲಿಯನ್ನ ತಕ್ಕೊಳ್ಳಿ
ಬಸವಣ್ಣನವರು ಕೊಟ್ಟಂತ ಶಿವಜೋಳಿಗೆಯನ್ನು
ರಾವ್ಮಡಿ ಮಾಡುವಾಗ -

ಅದ - ಗಂಜಿ ಅಜ್ಜೋಕೆ ಮಡಿಕೊಯ್ಯ |

ನನ್ನ ಎರಡು ರುಂಡಿಯನ್ನು ತಕ್ಕೊಂಡು
ಭೂಮಿ ಮ್ಯಾಲೆ ಇಟ್ಟುಟ್ಟು
ಅದುರ್ಮ್ಯಾಲೆ ಅಗುರ್ ಬಾಂಡವಾಳವನ್ನು ಮಡಗಿ
ಬಸವಣ್ಣೋರ್ ಪಾದವೇ ಗತಿ ಅಂತ್ಹೇಳಿ
ಆ ಬಸ್ವಣ್ಣೋರ್ ಪಾದವೇ ಗತಿ ಅಂತ್ಹೇಳಿ
ಆ ಬಸ್ವಣ್ಣೋರ್ ಪಾದ ನೆನುಕೊಂಡ್ರೆ
ಅಗ್ಗುದೇವ್ರಿ ಧಗ್ಗಂತ ಹತ್ಕೊತಾಳೆ
ಆವಾಗ ನನ್ನ ಬೆನ್ನುನ ಮಚ್ಚೇಮ್ಯಾಲೆ -

ಹೆಚ್ಚಾಳದಿಂದ ಮಡಿಯ ಮಾಡಯ್ಯ |

ಮಲ್ಲಿಗೆದೇವಿ 'ಗಂಡಿಗೆ ಗುರು ಹೆಣ್ಣು' ಎಂಬ ಮಾತಿಗೆ ಸಾಕ್ಷೀರೂಪವಾಗಿ ನಿಂತಳು. ಆದರೆ ಈ ರೌದ್ರಕಾರ್ಯಕ್ಕೆ ಮಾಚಯ್ಯ ತತ್ತರಿಸಿ ಹೋದ! ಕಣ್ಣಲ್ಲಿ ನೀರು ಕೆಡವಿದ.

ಮಡದಿ ಮಲ್ಲುಗದೇವಿ
ನೀನು ಬಲಗಾಲು ಮುಂದುವಾಗಿ ಲಗ್ನವಾಗಿ ನನ್ನ ಮನೆಗೆ ಬಂದೆ
ಬಾಯೆತ್ತಿ ಬೈನಿಲ್ಲ
ಕೈಯೆತ್ತಿ ನಿನ್ನ ನಾ ಹೊಡೀನಿಲ್ಲ
ಇಂದುನ ದಿವ್ಸ ನನ್ನ ಸಿರುಸಾ ಕುಯ್ಬುಟ್ಟು
ರಾವ್ಮಡಿ ಮಾಡಿ ಬಸವಣ್ಣನವರಿಗೆ ಶಿವಕಂತೆ ಒಪ್ಸಿ ಅಂತಿಯಲ್ಲ -

ಹೆಣ್ಣೆ - ಹೆಂಗೆ ಕುಯ್ಲಿ ನಿನ್ನ ಸಿರುಸಾವ |

ಎಂದೆಲ್ಲ ಗೋಳಾಡಿದ. ಅದಕ್ಕೆ ಮಲ್ಲಿಗೆದೇವಿ ತನ್ನ ತಂದೆ ತಾಯಿ ಅಣ್ಣ ತಮ್ಮಂದಿರಿಂದ ಮಾಚಯ್ಯನವರ ಮೇಲೆ ದೂರು ಬರದಂತೆ ಉಪಾಯ ಹುಡುಕಿ ತಾನೇ ಖುದ್ದಾಗಿ ಚೂರಿ ಭಾಂಡವಾಳಗಳನ್ನು ಮಾಡಿಸಿಕೊಂಡು ಬಂದು ಮಾಚಯ್ಯನಿಗೆ ಕೊಟ್ಟಳು. ಮಾಚಯ್ಯ ಕೊಳದಿಂದ ಬಂದ ಹೆಂಡತಿಯನ್ನು ಹೊಸ್ತಿಲ ಮೇಲೆ ಬೀಳಿಸಿ ಕತ್ತು ಕುಯ್ದು ಮಲ್ಲಿಗೆದೇವಿ ಹೇಳಿದ್ದ ಪ್ರಕಾರದಲ್ಲಿ ಮಡಿ ಮಾಡಿದ. ಹಾಗೆ ಮಡಿ ಮಾಡಿದ ಶಿವಕಂತೆಯನ್ನು ಬಸವಣ್ಣನವರಿಗೆ ಒಪ್ಪಿಸಲು ತಂದರೆ ಬಸವಣ್ಣನವ ರಾದರೋ

ಸಾಬಾಸ್ ಮಾಚಯ್ಯ ಸರಣಾ
ಆದ್ರೂ ನಿನ್ನ ಸರಣತ್ವೆ ತಿಳಿದಂಗಾಯ್ತು
ಇಷ್ಟೇ ಸಾಕು ನಿಜಾ ನೋಡಿದ್ದು
ಅಪ್ಪಾ ಮಾಚಯ್ಯ ಶಿವಕಂತೆ ಜೋಳಿಗೆ ಒಪ್ಪುಸ್ಕೊ ಬೇಕಾದ್ರೆ -

ನಿನ್ನ ಮಡದಿ ಮಲ್ಲುಗದೇವಿ ಬರಬೇಕು |

ಎಂದಾಗ ಮಾಚಯ್ಯನಿಗೆ ದುಃಖ ಉಕ್ಕಳಿಸಿ ಬಂತು. ಕಣ್ಣೀರು ತುಂಬಿಕೊಂಡು ದುಕ್ಕುಳುಸ್ತ 'ಮಡ್ದಿ ಮಲ್ಲುಗ್ದೇವಿ' ಎಂದು ಕರೆದ. ಶಿವನ ದಯೆಯಿಂದ ಬಸವಣ್ಣನವರ ಆಶೀರ್ವಾದದಿಂದ ಮಲ್ಲಿಗೆದೇವಿ ಮೂಡಿಬಂದಳು. ಆಗ ದಂಪತಿಗಳು ಶಿವಜೋಳಿಗೆಯನ್ನು ಬಸವಣ್ಣನವರಿಗೆ ಅರ್ಪಿಸಿ ಕೃತಾರ್ಥರಾದರು.

ಈ ಕಾವ್ಯದಲ್ಲಿ ಭಕ್ತಿ, ಪ್ರೀತಿ, ತ್ಯಾಗಗಳ ಮುಪ್ಪರಿಗೊಂಡು ಅದ್ಭುತವಾಗಿ ಮೂಡಿಬಂದಿದೆ. ಗಂಡನಿಗೆ ತಕ್ಕ ಮಡದಿಯಾದ ಮಲ್ಲಿಗೆದೇವಿ ಮಹಾದೇವಿಯಂತೆ ಕಾಣುತ್ತಾಳೆ. ಅವಳು ಸುಪ್ರಭಾತವನ್ನು ಹೇಳಿ ಗಂಡನನ್ನು ಎಚ್ಚರಿಸುವ ವರ್ತನೆ ವಿಶೇಷವಾಗಿ ಮನಸೆಳೆಯುತ್ತದೆ. ಬಿಜ್ಜಳನ ಕಲ್ಯಾಣ ಪಟ್ಟಣವನ್ನು ಇಲ್ಲಿ 'ತುಂಟುಗ್ರಾಮ' ಎಂದು ಕರೆಯಲಾಗಿದೆ. ಬಹುಶಃ ಆ ಕಾಲದಲ್ಲಿ ಶರಣರು ಹಾಗೂ ಇತರರ ನಡುವೆ ಏರ್ಪಡುತ್ತಿದ್ದ ವಾಗ್ಯಾದ, ನಡೆಯುತ್ತಿದ್ದ ಸಂಘರ್ಷಗಳನ್ನು ಇದು ಸಂಕೇತಿಸುತ್ತದೆ.

ರಾವ್ಮಡಿ ಮಾಡುವ ವಿಚಾರವಾಗಿ ಚಿಂತಿಸುವ ಗಂಡನಿಗೆ ಮಲ್ಲಿಗದೇವಿ ಸಮಾಧಾನ ಮಾಡುವ ಬಗೆ ಚನ್ನಾಗಿದೆ. ರಾವ್ಮಡಿ ವಿಧಾನವನ್ನು ಹೇಳುವ ಮುನ್ನ ಹಸಿದ ಗಂಡನಿಗೆ ಊಟ ಮಾಡಿಸುವ ಅವಳ ಸತೀತ್ವ 'ಭೋಜನೇಷು ಮಾತಾ' ಗುಣದ ಪ್ರತೀಕವಾಗುತ್ತದೆ. ರಾವ್ಮಡಿಗಾಗಿ ತನ್ನನ್ನೇ ಬಲಿಕೊಡಲು ಸಿದ್ಧಳಾಗುವ ಅವಳ ಧೈರ್ಯ ಅಪರೂಪದ್ದು. ಜೀವದಯಾ ತತ್ತ್ವದ ಪರಿಪಾಲನೆ ಕಡುಕಷ್ಟ. ಅದರ ನಿರ್ವಹಣೆಯಲ್ಲಿ ವ್ಯಕ್ತಿಗೆ ವೈಯಕ್ತಿಕ ನೆಲೆಯಲ್ಲಿ ಆಗಬಹುದಾದ ಸಂಕಷ್ಟಗಳ ಸಮಗ್ರ ಸಂಕೇತದಂತೆ ಈ ಪ್ರಸಂಗವಿದೆ. ಶರಣೆಯರನ್ನು 'ಕೈಹಿಡಿದವರ ಕೈದೀವಿಗೆಗಳು' ಎಂದು ಕರೆಯಲಾಗಿದೆ. ಈ ಹೇಳಿಕೆಗೆ ಒಂದು ಜ್ವಲಂತ ಸಾಕ್ಷಿಯಾಗಿ ಮಲ್ಲಿಗೆದೇವಿ ಕಂಡುಬರುತ್ತಾಳೆ. ಮಲ್ಲಿಗೆದೇವಿಯನ್ನು ಕೊಲ್ಲುವ ಸಂಬಂಧವಾಗಿ ಗಂಡಹೆಂಡಿರ ನಡುವೆ ನಡೆಯುವ ಸಂವಾದ ಕರುಣರಸಾರ್ದ್ರವಾಗಿ ಮೂಡಿಬಂದಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇಲ್ಲಿ ಮೂಡಿಬಂದಿರುವ ಜೀವದಯಾಪರ ನಿಲುವಿನಲ್ಲಿ ತ್ಯಾಗದ ಆಶಯವೂ ಅಡಗಿದೆ.

ಹೊಲೇರ ಹೊನ್ನಯ್ಯ - ೧

೧೨ನೇ ಶತಮಾನದ ದಲಿತವರ್ಗದ ಶರಣ ಸಮೂಹದಲ್ಲಿ ಹೊಲೆಯರ ಹೊನ್ನಯ್ಯನೂ ಒಬ್ಬ. ಶಿಷ್ಟ ಸಾಹಿತ್ಯದಲ್ಲಿ ಹೊನ್ನಯ್ಯನ ಬಗ್ಗೆ ಮಾಹಿತಿಗಳು ಪ್ರಧಾನವಾಗಿರದೆ ಪ್ರಾಸಂಗಿಕವಾಗಿ ಮಾತ್ರ ಪ್ರಸ್ತಾಪವಾಗಿವೆ. ಆದರೆ ಜನಪದ ಸಾಹಿತ್ಯದಲ್ಲಿ ಮಾತ್ರ ಇವನ ಬಗ್ಗೆ ವಿಪುಲವಾದ ಮಾಹಿತಿಗಳು ಲಭ್ಯವಾಗುತ್ತವೆ.

ಪ್ರಸ್ತುತ 'ಹೊಲೇರ ಹೊನ್ನಯ್ಯ-೧' ಕಾವ್ಯವು ಮಾನವ ಸಹಜ ಬಯಕೆಗಳು ಜಾತಿ ಕಟ್ಟಳೆಗಳನ್ನು ಅಲ್ಲಲ್ಲಿ ಮೀರುತ್ತವೆ ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ.

ಬಡಗಿಯ ಮಗಳು ಅಲಂಕಾರ ಮಾಡಿಕೊಂಡು ಕುತನೀಚೀಲವನ್ನು ಎಡಕೈಲಿ ಹಿಡುಕೊಂಡು ರನ್ನದ ಕೊಡವನ್ನು ಕಂಕುಳಲ್ಲಿ ಇರುಕಿಕೊಂಡು ಬಾವಿ ನೀರಿಗೆ ಬಂದಳು. ನೀರನ್ನು ತುಂಬಿಕೊಂಡು ಕೊಡ ಹೊತ್ತುಕೊಂಡು ಬರುತ್ತಿರುವಾಗ ಹೊಲೇರ ಹೊನ್ನಯ್ಯನ ಮಗ ಅವಳನ್ನು ಅಡ್ಡಗಟ್ಟಿ

ಏಳು ಸುತ್ತೀನ ಮಲ್ಲೀಗೆ ಮೊಗ್ಗೀಗೆ
ಕಬ್ಬಿಣ್ದ ಬೇಲಿಯು ತರವೇನೆ |

ಕಬ್ಬಿಣ್ದ ಬೇಲಿ ಯಾಕೆ ? ಕಲ್ಲು ಕಟ್ಟೆ ಯಾಕೆ ?
ನಿಲ್ಲೆ ನಿನ್ನ ಜೊತೆಗೆ ಬರುತೀನಿ |

ಎಂದು ಹೇಳುತ್ತ ಬಿಳಿಯಲೆಗೆ ಸುಣ್ಣಸವರಿ ಕಳಿಯಡ್ಕೆ ಮಡಗಿ ಮೆಲ್ಲುವುದಕ್ಕೆ ಕೊಡಲು ಮುಂದೆ ಬಂದು ಹುಡುಗಿಯನ್ನು ಬಳಸಿ ನಿಂತನು. ದಾರಿ ಬಿಡದೆ ಅವಳ ಬಾಯಿಗೆ ಬಲವಂತ ಮಾಡಿ ಎಲೆಯಡಕೆ ಮಡಗಿದ. ಆಗವಳು ಸಿಡುಕಿನಿಂದ ಮನೆಗೆ ಬಂದು ಮಂಚದ ಮೇಲೆ ಮೊಕ್ಕಾಡೆ ಮಲಗಿಬಿಟ್ಟಳು. ಅವಳಪ್ಪ ಬಡಗಿ ಬಂದು

ಯಾಕವ್ವ ಮಗಳೆ ಮನುಗಿ[illegible]ೀಗ
ಏಳವ್ವ ಊಟವ ಮಾಡೇ[illegible]

ಎಂದರೆ ಅದಕ್ಕಪಳು

ನಾನೆದ್ದು ಊಟವ ಮಾಡದಿಲ್ಲ ನನತಂದೆ
ಹೊಲ್ಯಾರ ವಮುಸ ಇಲ್ಲದಂಗೆ |

ಹೊಲ್ಯಾರ ವಮುಸ ಇಲ್ಲದಂಗೆ ನನತಂದೆ
ಇಸುಗುಂಟೆನ್ಯಾಕಿ ಪರಗೋಗೊ |

ಇಸುಗುಂಟೆನ್ಯಾಕಿ ಹರಗಿ ಬಾ ನನತಂದೆ
ಆಗೆದ್ದು ನಾನು ಊಟ ಮಾಡುತೀನಿ |

ಮಗಳ ಮಾತನ್ನು ಕೇಳಿದ ಬಡಗಿ ವಿಷಕುಂಟೆಯಲ್ಲಿ ಹರಗುತ್ತ

ಬತ್ತಾದ ಗದ್ದೇಗೆ ಹತ್ತಾನೆ ನುಗ್ಗಿದಂಗೆ
ವಲೇರ್ನ ಇಸುಗುಂಟೇಲಿ ಹರ್ಸುತಾನೆ |

ರಾಗೀಯ ಹೊಲದಲ್ಲಿ ಚೇಗೊಂದು ಇಲ್ಲದಂಗೆ
ಇಸಗುಂಟೇಲಿ ವಲೇರ್ನ ಹರ್ಸುತಾನೆ |

ಜೋಳದ ಹೊಲದಲ್ಲಿ ಕೂಳೊಂದುಳೀದಂತೆ
ಇಸಗುಂಟೇಲಿ ವಲೇರ್ನ ಹರ್ಸುತಾನೆ |

ಹೊಲೆಯರ ವಂಶ ಇಲ್ಲದಂತೆ ಮಾಡಬೇಕೆಂದು ಹರತೆ ಹೊಡೆದುಕೊಂಡು ಬರುತ್ತಿರುವಾಗ ಹೊಲೆಯರ ಹುಡುಗನೊಬ್ಬ ತಪ್ಪಿಸಿಕೊಂಡು ಓಡುತ್ತಿರುತ್ತಾನೆ. ಬಡಗಿ ಅವನನ್ನು ಬೆನ್ನಟ್ಟಿ ಬರುವಾಗ ಹೆದರಿದ ಹೊಲೆಯರ ಹುಡುಗ ಮಡುವಿನಲ್ಲಿ ಬಟ್ಟೆ ಒಗೆಯುತ್ತಿದ್ದ ಮಡಿವಾಳ ಮಾಚಯ್ಯನನ್ನು ಕಂಡು

ಪಟ್ಟಣ ಹಿಂದಾಗಿ ಕಟ್ಟೇನೆ ಮುಂದಾಗಿ
ಬಟ್ಟೇಯ ಒಗಿಯೋ ಶರಣಾರೆ |

ಉಸ್ಸಂತ ಉಸ್ಸಂತ ವಸ್ತ್ರಾವ ಒಗಿಯೋರೆ
ವಸ್ತ್ರವ ತೊಳಿಯೋ ಶರಣಾರೆ |

ನಾನು ನಿಮ್ಮೋನು ನಿಮ್ಮ ಮಗ ನಾನು
ನನ್ನ ಕಾಪಾಡಿ ನಿಮ್ಮ ಧರ್ಮ |

ಎಂದು ಹೇಳುತ್ತ ಮಾಚಪ್ಪನನ್ನು ತಬ್ಬಿಕೊಂಡಿತು. ದಯಾರ್ದ್ರಹೃದಯದ ಮಾಚಪ್ಪ ಆ ಹೊಲೆಯರ ಹುಡುಗನನ್ನು ಬಾನಿ ದಬ್ಬಾಕಿ ರಕ್ಷಿಸಿದರು. ಅಲ್ಲಿಗೆ ಬಂದ ಬಡಗಿ 'ಇಲ್ಲೆ ಹೊಲೇರುಡ್ಗ ಓಡಿ ಬಂತೆ?' ಎಂದು ವಿಚಾರಿಸಿದ. ಅದಕ್ಕೆ ಮಾಚಪ್ಪ

ಹೊಲೇರುಡ್ಗಾನ ಸುಳ್ಳ ನಾನೇನು ಬಲ್ಲೇನು
ನನ್ನ ಮಗನ ಬಿಸಲಂತ್ಹೇಳಿ |

ಬೆನ್ನಾಡಿ ಬಂದ ನನ್ನ ಮಗನ ನಾನೀಗ
ಬಾನಿ ದಬ್ಬಾಕಿ ಮಡಗಿದ್ದೀನಿ |

ಎಂದು ಹೇಳಿದ. ಆದರೆ ಬಡಗಿಗೆ ಅನುಮಾನ. ಮಾಚಪ್ಪ ಹೊಲೆಯರ ಹುಡುಗನನ್ನು ರಕ್ಷಿಸಲು ಸುಳ್ಳು ಹೇಳುತ್ತಿದ್ದಾನೆಂದು ಶಂಕಿಸಿದ. ಅದಕ್ಕಾಗಿ ಅವನು

ನಿನ್ನ ಮಗನಾದರೆ ನಿನ್ನೊಂದಿಗುಣಬೇಕು
ನಿನ್ನ ಮಡದೀಯ ಎದಿಯಾಲೋ |

ನಿನ್ನ ಮಡದೀಯ ಎದಿಯಾಲ ಕುಡಿದಾರೆ
ಬುಟ್ಟೋಯ್ತೀನಿ ನಾನು ಮಡಿವಾಳ |

ಎಂದ. ಮಾಚಪ್ಪ ಆ ಮಗುವನ್ನು ತನ್ನೊಂದಿಗೆ ಕುಳ್ಳಿರಿಸಿಕೊಂಡು ಊಟ ಮಾಡಿದ. ಮಾಚಪ್ಪನ ಹೆಂಡತಿ ಮಲ್ಲೀರಮ್ಮ ಆ ಮಗುವಿಗೆ ಹಾಲನ್ನು ಕುಡಿಸಿದಳು. ಕಂದನ ಬಾಯಿ ತುಂಬ ಹಾಲು ಹರಿಯುವುದನ್ನು ನೋಡಿದ ಬಡಗಿ ತೆಪ್ಪಗೆ ಹಿಂದಕ್ಕೆ ಹೋದ.

ಆ ಹೊಲೆಯರ ಹುಡುಗನನ್ನು ಮಾಚಪ್ಪ ತಾನೇ ಸಾಕಿದ. ಅವನು ಬೆಳೆಯುತ್ತ ಕತ್ತೆ ಕಾಯುತ್ತ ಎದೆ ಬಡಿದು ಹರೆ ಬಡಿಯೋದನ್ನು ಕಲಿತ; ಹನ್ನೆರಡು ಕಿನ್ನಡಿ ನುಡಿಸುವುದನ್ನು ಕಲಿತ. ಹೀಗೆ ಔದಾರ್ಯವನ್ನು ತೋರಿದ ಮಾಚಪ್ಪ-ಮಲ್ಲೀರಮ್ಮನವರು ಆಪತ್ತಿಗೆ ಗುರಿಯಾದ ಜೀವಿಯನ್ನು ರಕ್ಷಿಸುವುದೇ ಮಾನವೀಯತೆ - ಇಂಥ ಕಾರ್ಯದಲ್ಲಿ, ವರ್ಗ, ಜಾತಿಗಳ ಅಹಂ ನೆಲೆಯಲ್ಲಿ ಮೂಡಿರುವ ವ್ಯಕ್ತಿ ಸಂಕೋಚಗಳ ಗಡಿಯನ್ನು ದಾಟುವ ಮಾಚಪ್ಪ ಮತ್ತು ಮಲ್ಲೀರಮ್ಮರ ವ್ಯಕ್ತಿತ್ವ ಗಮನ ಸೆಳೆಯುತ್ತದೆ.

ಹೊಲೇರ್ಹುಡುಗ ವಾದ್ಯ ನುಡಿಸುವ ಕಲೆಯಲ್ಲಿ ಸಿದ್ಧಿಯನ್ನೇನೋ ಪಡೆದಿದ್ದ. ಇತ್ತ ಕಡೆ ವಾದ್ಯವಿಲ್ಲದೆ ಶಿವಪಾರ್ವತಿಯರು ಪಟ್ಟಕ್ಕೆ ಬಂದಿಲ್ಲ.

ಮಣ್ಹಾಕಿ ಮೂವತ್ತು ದಿನ ಹಸ್ಮಾಕಿ ಹನ್ನೆರ್ಡು ದಿನ
ಚಪ್ಪರ್ಹಾಕಿ ಚಪ್ಪನ್ನೈವತ್ತಾರು |

ಆದರೂ ವಾದ್ಯ ಮಾಡುವವರಿಲ್ಲದೆ ಶಿವಪಾರ್ವತಿಯರ ಮದುವೆ ನಿಂತುಹೋಗಿದೆ. ಅದಕ್ಕಾಗಿ ಶಿವಪಾರ್ವತಿಯರು ಬಡಗಿಯ ಮನೆಗೆ ಬಂದು

ನಾವು ಪಟ್ಟಾಕೆ ನಿಲುವಂತ ಕಾಲದಲ್ಲಿ
ನಮ್ಮ - ವಲಮಗನ ವಾದ್ಯ ಇಲ್ಲುವಲ್ಲೊ |

ವಲಮಗನ ವಾದ್ಯಿಲ್ಲ ಬ್ಯಾಗುದಲ್ಲಿ ತಂದುಕೊಡೊ
ಇಲ್ದಿದ್ರೆ - ಕಬ್ಬರಸುದಂಗೆ ಅರುಸ್ತೀನಿ |

ಹೀಗೆ ಹೇಳಿದಾಗ ಬಡಗಿ ಹಾಗೂ ಬಡಗಿ ಮಗಳ ಹೊನ್ನಾದೇವಿ ಗಾಬರಿಯಾದರು, ಹೊನ್ನಾದೇವಿ ಕೊಡ ತೆಗೆದುಕೊಂಡು ನೀರಿಗೆ ಹೋದಳು. ಅಲ್ಲಿಗೆ ಮಡಿವಾಳ ಮಾಚಯ್ಯ ಮಗಳು ಚನ್ನಾದೇವಿ ಬಂದಳು. ಇಬ್ಬರೂ ಮಾತಿಗಾರಂಭಿಸಿದರು. ಚಿಂತೆ ಮಾಡುತ್ತ ಕುಳಿತಿದ್ದ ಹೊನ್ನಾದೇವಿಯನ್ನು ಕುರಿತು

ಕೊಡವ ಹೊತುಕೊಂಡು ಏಳಮ್ಮ ಹೊನ್ನಾದೇವಿ
ಏನು ಯೋಚುಣೆಯ ಮಾಡುತೀಯೆ |

ನಿನ ಕಷ್ಟವಾದರೂ ಅದು ಏನು ಹೇಳೆ
ಸುಮ್ಮನೆ ಚಿಂತಿಸಬೇಡಮ್ಮ |

ಎಂದು ಹೇಳಿದರೆ ಅದಕ್ಕೆ ಚೆನ್ನಾದೇವಿ

ಚಿಂತೇನೂ ಕಾಣೆ ಕಂತೇನೂ ನಾ ಕಾಣೆ
ನನ್ನ ಕಷ್ಟ ನನ್ನದು ಹೋಗು ತಾಯಿ |

ನನ್ನ ಕಷ್ಟವ ನೀನು ತೀರುಸೊಕಾದತ
ಹೋಗಮ್ಮ ನಿನ್ನ ಅರಮನೆಗೆ |

ನಾವಿಬ್ಬರೂ ದೋಸ್ತಿಗಾರರಾದ್ದರಿಂದ ಪರಸ್ಪರ ಕಷ್ಟ-ಸುಖಗಳನ್ನು ಅಳಕೊಂಡು ಸುರುಕೊಳ್ಳೋಣವೆಂದು ಮಾತನಾಡಿಕೊಂಡಾಗ ಶಿವಪಾರ್ವತಿಯರು ಹೊಲೆಯರ ಹುಡುಗನನ್ನು ಹುಡುಕಿಕೊಂಡು ತಮ್ಮ ಮನೆಗೆ ಬಂದಿದ್ದ ವಿಚಾರ, ಅವರ ತಂದೆ ಬಡಗಿ ವಿಷಕುಂಟೆಯಲ್ಲಿ ಹೊಲೆಯರ ವಂಶವನ್ನು ಹರತೆ ಹೊಡೆದ ವಿಷಯವೆಲ್ಲ ಪ್ರಸ್ತಾಪಕ್ಕೆ ಬಂದು, ಹೊಲೆಯರ ಹುಡುಗ

ನನ್ನು ತೋರಿಸದಿದ್ದರೆ ತಮ್ಮಪ್ಪನನ್ನು ಶೂಲಕ್ಕೇರಿಸುವ ಆಜ್ಞೆ ಮಾಡಿರುವುದರಿಂದ ತಮಗೆ ಈ ಕಷ್ಟ ಬಂದಿರುವುದಾಗಿ ತಿಳಿಸಿದಳು. ಆಗ ಚೆನ್ನಾದೇವಿ ತನ್ನ ಗೆಳತಿಯ ಕಷ್ಟಕ್ಕೆ ಸ್ಪಂದಿಸಿ 'ನಮ್ಮ ದೊಡ್ಡಪ್ಪನವರ ಮನೆಯಲ್ಲಿ ಒಂದೊಲೇರ ಹುಡ್ಗ ಏತಿ ಕನೆ' ಒಂದು ಮೊರ ಬಂಗಾರ ಒಂದು ಬಿಂದಿಗೆ ಹಣ ಕೊಟ್ಟು ಮಡಿವಾಳ ಮಾಚಪ್ಪನವರಿಂದ ಕೊಂಡುಕೊಳ್ಳಿ ಎಂದು ಸಲಹೆ ನೀಡಿದಳು.

ಹೀಗಾಗಿ ಹೊಲೇರ ಹುಡುಗ ಶಿವಪಾರ್ವತಿಯರ ಮದುವೆಗೆ ವಾದ್ಯಗಳನ್ನು ತುಂಬಿಕೊಂಡು ಆನೆ ಮೇಲೆ ಹೋಗುವಾಗ ಹನ್ನೆರಡು ಕಿನ್ನರಿ ಬಾರಿಸುತ್ತಿರುವಾಗ ಪೀಪಿ ಬಾಯಿಂದ ಕಳಚಿಕೊಂಡು ಕೆಳಕ್ಕೆ ಬಿತ್ತು. ಅದನ್ನು ಹಜಾಮರ ಹುಡುಗ ತೆಗೆದು ಕೊಂಡ. ಕೈಯಲ್ಲಿನ ಕುಡ ಕೆಳಕ್ಕೆ ಬಿದ್ದಾಗ ಅದನ್ನು ಮಾದಿಗರ ಹುಡುಗ ತೆಗೆದುಕೊಂಡ. ಉಳಿದ ಹತ್ತು ವಾದ್ಯಗಳೊಡನೆ ಹೋದ ಹೊಲೇರ ಹುಡುಗ ಹತ್ತು ವಾದ್ಯಗಳನ್ನು ನುಡಿಸಿದ. ಶಿವಪಾರ್ವತಿಯರ ಮದುವೆ ಅದ್ಧೂರಿಯಾಗಿ ನೆರವೇರಿತು.

ಮುಂದಿನ ಭಾಗದಲ್ಲಿ ಹೊಲೆಯರ ಉತ್ಪತ್ತಿಯ ಕುಲಪುರಾಣ ಸವಿಸ್ತಾರವಾಗಿ ಮೂಡಿಬಂದಿದೆ. 'ಮಲೆಯ ಮಾದೇಶ್ವರ'[21] ಮಹಾಕಾವ್ಯದಲ್ಲಿ ಬಂದಿರುವ ಕಥೆಯೇ ಆದ ಎಡಗ್ಯೆ - ಬಲಗ್ಯೆಯವರ ಕಥೆಯ ಜೊತೆಗೆ ಬೇಡರ ಹಾಗೂ ತುರುಕರ ಕಥೆಯೂ ಇಲ್ಲಿ ಸೇರಿದೆ.

ಶಿವಪಾರ್ವತಿಯರ ಮನೆಯಲ್ಲಿ ಕಾಮಧೇನುವನ್ನು ಕಾಯ್ದುಕೊಂಡಿದ್ದ ಹೊಲೆಮಗ ಕಾಮಧೇನುವಿನ ಹಾಲು ಕಾಯಿಸಿದ್ದ ಪಾತ್ರೆಯ ಸೀಕಿನ ರುಚಿಗೆ ಮರುಳಾಗಿ ಕಾಮಧೇನುವನ್ನೇ ತಿನ್ನಬಯಸಿದ. ಅದಕ್ಕಾಗಿ ಕಾಮಧೇನುವನ್ನು ಕೊಂದ. ಅದನ್ನ ನಾಲ್ಕು ಪಾಲು ಮಾಡಿ ಒಂದು ಪಾಲು ಬೇಡರ ಹುಡುಗನಿಗೆ, ಒಂದು ಪಾಲು ತುರುಕರ ಹುಡುಗನಿಗೆ ಒಂದು ಪಾಲು, ಮಾದಾರ ಹುಡುಗನಿಗೆ ಕೊಟ್ಟು ತಾನೊಂದು ಪಾಲು ಹೊತ್ತುಕೊಂಡು ಬೋರೆ ಹತ್ತಿರಕ್ಕೆ ಬಂದ. ಆಗ ಮಳೆ ಬಂತು. ಅಲ್ಲೊಂದು ಗುಡಿಯಿತ್ತು. ತುರುಕರ ಹುಡುಗ ಹಾಗೂ ಬೇಡರ ಹುಡುಗ ಗುಡಿ ಒಳಕ್ಕೆ ಹೋದರು. ಉಳಿದಿಬ್ಬರು ಗುಡಿಯ ಹೊರಗಡೆ ಉಳಿದರು. ಆ ಸಮಯಕ್ಕೆ ಶಿವಪಾರ್ವತಿಯರು ಅಲ್ಲಿಗೆ ಬಂದರು. ಅವರನ್ನು ನೋಡಿದ ಮಕ್ಕಳ ಓಡೋಡಿ ಹೋಗಿ ಎಡಕ್ಕೊಬ್ಬ ಬಲಕ್ಕೊಬ್ಬ ತಬ್ಬಿಕೊಂಡರು. ಎಡಕೆ ನಿಂತ ಮಾದಾರ ಹುಡುಗ ಎಡಗ್ಯೆಯವನಾದ ; ಬಲಕೆ ನಿಂತ ಹೊಲೆಯರ ಹುಡುಗ ಬಲಗ್ಯೆಯವನಾದ. ನಾಲ್ಕು ಜನ ಮಕ್ಕಳನ್ನೂ ಆಶೀರ್ವದಿಸಿ ಕಳಿಸಿಕೊಟ್ಟರು. ಅವರು ಲೋಕಕ್ಕೆ ಪಡಿ ಅಳೆಯುತ್ತ ಮುಂದೆ ಮುಂದೆ ಹೊರಟರು.

ಶಿವಪಾರ್ವತಿಯರು ಪಡಿ ಅಳೆಯುತ್ತಿರುವುದನ್ನು ನೋಡಿದ ಮುದ್ದೇಗೌಡನ ಮಡದಿ ಪಡಿಗೆ ಮಡಿಲನ್ನು ಒಡ್ಡಿದಳು. ಕೊಟ್ಟ ಪಡಿಯನ್ನು ಆತುಕೊಂಡಳು. ಮುದ್ದೇಗೌಡನ ಮಡದಿ ಮಡಿಲು ತುಂಬಿದ ಮೇಲೆ ಶಿವಪಾರ್ವತಿಯರು ಮುಂದಕ್ಕೆ ನಡೆದರು. ಇದನ್ನು ನೋಡಿದ ಹೊಲೇರ ಹೊನ್ನಯ್ಯನ ಮಗ ಮಡದಿಯ ಸಹಿತ ಓಡೋಡಿ ಬಂದು ಸೆರಗೊಡ್ಡಿ ನನಗೂ ಪಡಿಯನ್ನು ಕೊಡಿ ಎಂದು ಕೇಳಿದ. ಆಗ ಶಿವಪಾರ್ವತಿಯರು

ನನಗೂ ಪಡಿಯ ಅಳಿ ಅಂತ ಹೇಳಿದರೆ
ಎಲ್ಲಿಂದ ತರುವುದಕಾದೀತು |

ನಿನಗೆ ಪಡಿಯನ್ನು ನಾನೇನು ತರಲಪ್ಪ
ಈ ಗೌಡನ ಕೈಲಿ ನೀವು ಈಸಿಕೊಳ್ಳಿ |

ಅಲ್ಲೀಗೆ ನೀನೋಗಿ ಈಸಿಕೊಳ್ಳೊ ಕಂದಯ್ಯ
ಅಲ್ಲೇಯ ಪಡಿಯ ಅಳೆದಿವ್ನಿ |

ಎಂದು ಹೇಳಿ ಮುಂದೆ ಹೊರಟೇಬಿಟ್ಟರು. ಆಗ ಅಲ್ಲಿಗೆ ಬಂದ ಬಸವಣ್ಣನವರು ಮುದ್ದೇಗೌಡನನ್ನು ಕಂಡು ಹೊನ್ನಯ್ಯನ ಮಗನಿಗೆ ಪಡಿಯ ಕೊಡಹೇಳಿದರು. ಅದಕ್ಕೆ ಮುದ್ದೇಗೌಡ

ಲೋಕಕೆ ಪಾಲ ಕೊಡುವಾಗ ನಾನು
ಹೊನ್ನಯ್ಯನನ್ನು ಮರೆಯದುಂಟ ? |

ಎಂದು ಹೇಳಿದ. ಇದರಿಂದ ಬಸವಣ್ಣನಿಗೆ ಸಂತೋಷವಾಗಿ ಶರಣಮುದ್ದಯ್ಯ ಶರಣ ಹೊನ್ನಯ್ಯರ ಜೊತೆಯಲ್ಲಿ ಕಲ್ಯಾಣ ಪಟ್ಟಣಕ್ಕೆ ನಡೆದರು.

---

೨೧. ಮಲೆಯ ಮಾದೇಶ್ವರ - ಸಂ.:ಡಾ.ಪಿ.ಕೆ.ರಾಜಶೇಖರ, ಸಂಯುಕ್ತ ಪ್ರಕಾಶನ, ಮೈಸೂರು ; ೧೯೭೩. ಸಂಪುಟ : ೧ ಪು.೪೩-೫೦.

ವಾದ್ಯ ಮಾಡಿಕೊಂಡು ವೈಭೋಗದಿಂದ ಹೊನ್ನಯ್ಯ
ಬರುವಾಗ ನದರ ಕೊಡುತಾರೆ |

ಹೊನ್ನಯ್ಯನ ವೈಭವವನ್ನು ಕಂಡು ಎಲ್ಲರೂ ಬೆರಗಾಗುತ್ತಾರೆ. ಅದನ್ನು ನೋಡಿದ ಹೊನ್ನಯ್ಯ

ಎಲ್ಲಾ ಕುಲಸ್ಥ್ರಾಗೂ ಕಾಲ್ನಡುಗೆಯಾದರೆ
ನಮ್ಮ ಕುಲದೋರ್ಗೆ ಪಟ್ಟದಾನೆ |

ಎಂದು ಬೀಗುತ್ತಾನೆ. ಆದರೆ ಆನೆ ಮೇಲೆ ಕುಳಿತು ವಾದ್ಯ ನುಡಿಸುತ್ತಿದ್ದ ಅವನಿಗೆ ಕಲ್ಯಾಣ ಮಂಟಪದೊಳಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಇದೇ ನೆಪವಾಗಿ ಇಂದಿಗೂ ಎಲ್ಲರ ಮದುವೆಗಳಲ್ಲೂ ಹೊನ್ನಯ್ಯನ ಕುಲದವರು ಮದುವೆ ಮಂಟಪದೊಳಕ್ಕೆ ಪ್ರವೇಶ ಮಾಡದಂತಾಗಲು ಕಾರಣವಾಯಿತು. ಇದು ಕಾರ್ಯಕಾರಣ ಸಂಬಂಧ ಹೇಳುವ ಕಥೆಯಂತೆ ಕಂಡರೂ ಬಸವಣ್ಣನವರ ಕಾಲದಲ್ಲೇ ಕಲ್ಯಾಣಪಟ್ಟಣದಲ್ಲೂ ಇದ್ದಿರಬಹುದಾದ ಜಾತೀಯತೆಯನ್ನು ಕಾವ್ಯ ಸೂಚಿಸುತ್ತಿರುವಂತಿದೆ. ಯಾರೊಬ್ಬರಿಗೂ ಅಹಂಕಾರ ಸಲ್ಲ ಎಂಬ ನೀತಿಯೂ ಕಾವ್ಯದಲ್ಲಿ ಅಭಿವ್ಯಕ್ತಗೊಂಡಿದೆ.

ಕಗ್ಗುಂಡಿ ಪರಂಜ್ಯೋತಿ ಹರಳಯ್ಯ

ಕಗ್ಗುಂಡಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಒಂದು ಹಳ್ಳಿ. ಈ ಹಳ್ಳಿಯ ಮಗ್ಗುಲಲ್ಲೆ ಹರಳಯ್ಯನವರ ಗದ್ದುಗೆ ಇದೆ. ಹರಳಯ್ಯನವರ ವಂಶಿಕರು ಇಲ್ಲೊಂದು ಮಠವನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ಈ ಗದ್ದುಗೆಯ ಪೂರ್ವಕ್ಕೆ ಅನತಿ ದೂರದಲ್ಲಿ ಹರಳಹಳ್ಳಿ ಎಂಬ ಗ್ರಾಮವಿದೆ. ಇದಕ್ಕೆ ಪೂರ್ವದಲ್ಲಿ ಅರುಹಂತಪುರ ಎಂಬ ಹೆಸರಿದ್ದಿತಂತೆ. ಹರಳಯ್ಯನವರು ಅರುಹಂತಪುರದಲ್ಲಿ ಪವಾಡ ಮಾಡಿ ಗೆದ್ದುದರಿಂದ ಆ ಊರಿನ ಜನರೆಲ್ಲ ಜೈನಮತ ತೊರೆದು ಶರಣಧರ್ಮವನ್ನು ಸ್ವೀಕರಿಸಿದರಂತೆ. ಹರಳಯ್ಯನವರಿಂದ ಇಷ್ಟೆಲ್ಲ ಕಾರ್ಯ ನಡೆದುದರಿಂದ ಇಲ್ಲಿನ ಜನತೆ ಅರುಹಂತಪುರವನ್ನು 'ಹರಳಹಳ್ಳಿ' ಎಂಬ ಹೆಸರಿನಿಂದ ಕರೆದರಂತೆ. ಇಂಥ ಸ್ಥಳೀಯ ಐತಿಹ್ಯದ ಹಿನ್ನೆಲೆಯಲ್ಲಿ ಕಂಪಲಾಪುರದ ನೀಲಗಾರ ರಾಚಯ್ಯನವರು ಈ ಕಾವ್ಯವನ್ನು ಹಾಡಿದ್ದಾರೆ.

ಹನ್ನೆರಡನೆಯ ಶತಮಾನದ ಶರಣರ ಕ್ರಾಂತಿಗೆ ಬಸವಣ್ಣನವರು ಮೆದುಳೆನಿಸಿದರೂ ಅದರ ಮುನ್ನೋಟವನ್ನು ಕಂಡ ದರ್ಶನ ಚಕ್ಷುಗಳೆಂದರೆ ಹರಳಯ್ಯ-ಮಧುವರಸರು. ಅವರ ಕಣ್ಣುಗಳಿಂದ ಹೊರಟ ಕ್ರಾಂತಿಯ ಕಿಡಿಗಳು ಶರಣಧರ್ಮದ ಭವಿಷ್ಯವನ್ನು ನಿರ್ಧರಿಸಲು ಬೀಜಮಂತ್ರವಾದವು. ಶರಣ ಸಾಹಿತ್ಯದ ಉಗಮದ ಮೂಲ ಸೆಲೆಯಾಯಿತು. ಉತ್ತರದಲ್ಲಿದ್ದ ಈ ಎತ್ತರದ ಧರ್ಮ ನಾಡಿಸುದ್ದಗಲಕ್ಕೂ ಬಿತ್ತರಗೊಳ್ಳಲು ಇದೇ ನಾಂದಿಯಾಯಿತು. ಏಕೆಂದರೆ ಹರಳಯ್ಯ-ಮಧುವರಸರು ತತ್ತ್ವಗಳನ್ನು ಆಡಿ ಕುಳಿತವರಲ್ಲ; ಮಾಡಿ ತೋರಿದವರು. ಈ ಕಾರಣದಿಂದ ಅವರು ಶರಣಧರ್ಮದ ಕ್ರಾಂತಿದರ್ಶಿಗಳಾದರು. ಹರಳಯ್ಯನವರು ಘನಶರಣ ಹರಳಯ್ಯನಾದರು. ಅವರ ಹೆಸರಿನ ಗದ್ದುಗೆಗಳು ಮಠಗಳು ನಾಡಿನಾದ್ಯಂತ ಎಲ್ಲೆಂದರಲ್ಲಿ ತಲೆಯೆತ್ತಿ ಮೆರೆಯುವಂತಾದವು. ಈ ಭಾಗ್ಯ ಬೇರೆ ಯಾವ ಶರಣನಿಗೂ ದಕ್ಕದ ವಿಷಯ ! ಹರಳಯ್ಯನೆಂಬ ಶರಣ ಇದ್ದನೆ ? ಎಂದು ಅನುಮಾನಿಸುವ ಜನರಿಗೆ ಹರಳಯ್ಯನ ಮಠಗಳು ಮೂತಿಗೆ ತಿವಿದರೆ ಗದ್ದುಗೆಗಳು ಘರ್ಜಿಸುತ್ತಿವೆ. ಹಾಗಾಗಿ ಕುವೆಂಪು ಅವರ ಶಿಲಾಭೇರಿ ಕವನದ 'ಕೂಗುತಿದೆ ಕಲ್ಲು ಕಿವಿವೆತ್ತ ಕಿವುಡರಿರ ಕೇಳಿರಾ ಸೊಲ್ಲು' ಎಂಬ ಸಾಲುಗಳು ಕವಿಯಲ್ಲಿ ಮೊರೆಯುತ್ತಿವೆ.

ಕಲ್ಯಾಣದಲ್ಲಿದ್ದ ಕುಟಿಲ ವ್ಯಕ್ತಿತ್ವದ ಕೊಂಡುಗ ಮಂಚಣ್ಣನಿಗೆ ದಿನಕ್ಕೊಂದಾದರೂ ಚಾಡಿ ಹೇಳಲೇಬೇಕು. ಹಾಗೆ ಹೇಳದಿದ್ದರೆ ಅವನಿಗೆ ಹೊಟ್ಟೆ ಉಬ್ಬಸ ಪ್ರಾರಂಭವಾಗುತ್ತದೆ. ಹಾಗೆ ಹೊಟ್ಟೆ ಬೇನೆಯಿಂದ ನರಳುತ್ತಿರುವಾಗ ಕಲ್ಯಾಣ ಪಟ್ಟಣದ ರಾಜಬೀದಿಯಲ್ಲಿ ಮಂಗಳವಾದ್ಯಗಳು ಮೊಳಗಿದವು. ಆ ಸದ್ದಿಗೆ ಮೈಯೆಲ್ಲ ಕಿವಿಯಾದ ಕೊಂಡುಗ ಮಂಗಳವಾದ್ಯದ ಕಾರಣ ಕೇಳಿದ. ನೀರು ತರುತ್ತಿದ್ದ ಹೆಂಗಸರು

ಸ್ವಾಮಿ - ಹರುಳಯ್ಯ ಮಗನೀಗೂ ಮಧುವರ್ಸರ ಮಗಳೀಗೂ
ಮದುವೆ ಕಾರ್ಯ ನಡೆಯುತಿದೆ |

ಹೀಗೆ ಈ ಕಾವ್ಯ ಅನೇಕ ಕಾರ್ಯಕಾರಣಗಳಿಗೆ ವಿವರಣೆ ಕೊಡುತ್ತ ಕುಲಪುರಾಣ ವೃತ್ತಿ ಪುರಾಣ ಹಾಗೂ ಆಹಾರ ವಿಹಾರಗಳನ್ನು ಕುರಿತ ವಿಚಾರಗಳಿಗೆ ಸಂಬಂಧಿಸಿದ ಅನೇಕ ಸಂಗತಿಗಳನ್ನು ಹೇಳುವ ಒಂದು ವಿಶಿಷ್ಟ ಪುರಾಣ ಕಾವ್ಯವಾಗಿದೆ.

ಹೊನ್ನಯ್ಯನನ್ನು ಕುರಿತು ಪಾರ್ವತಿ 'ನನ್ಮಗನೆ ಹೊರತು ಬದುಲಲ್ಲ ನೀನು' ಎನ್ನುವುದು ಪತನಮುಖಿಯಾದ ಅಮಾಯಕರನ್ನು ಉನ್ನತ ನೆಲೆಗೆ ಕೊಂಡೊಯ್ಯುವ ಸಮಾನತೆಯ ಎಂಬ ಧೋರಣೆಯಿಂದ ಕೂಡಿದೆ.

'ಕೊಲುವವನೆ ಮಾದಿಗ ಹೊಲಸು ತಿಂಬವನೆ ಹೊಲೆಯ' ಎಂಬ ವಚನಕಾರರ ಆಹಾರಪದ್ಧತಿಗಿಂತ ಆಯಾ ಜನರ ಆಹಾರ ಪದ್ಧತಿಯ ಮೇಲೆ ನಿಯಂತ್ರಣ ಹೇರುವುದು ಸರಿಯಲ್ಲ ಎಂಬ ನಿಲುವು ಇಲ್ಲಿದೆ.

ಕಲ್ಯಾಣದ ಬಸವಣ್ಣ ಇಲ್ಲಿ ಪ್ರವೇಶ ಪಡೆಯುವಂತೆ ಮಾಡಿರುವುದು ಅಪರಿಗ್ರಹ ತತ್ತ್ವದ ಪ್ರತಿಪಾದನೆ ಹಾಗೂ ವಿಕೇಂದ್ರೀಕರಣ ಸಿದ್ಧಾಂತದ ಅನಾವರಣಕ್ಕೆ ಅನುಕೂಲಕರವಾದಂತೆ ಕಾಣುತ್ತದೆ. ಆದರೆ ಕಾವ್ಯದ ಪ್ರಧಾನ ಆಶಯ-ಧೋರಣೆ ಪತನಮುಖೀ ಜನವರ್ಗವನ್ನು ಉದ್ಧಾರದ ಮಾರ್ಗಕ್ಕೆ ತರುವಂಥದ್ದಾಗಿದೆ ಎಂದು ಯೋಚಿಸುತ್ತಿರುವಾಗ, ಪಡಿ ಅಳೆಯುವ ಸಂದರ್ಭದಲ್ಲಿ ಈ ಜನ ಕುತಂತ್ರಕ್ಕೆ ಬಲಿಯಾದಂತೆಯೂ ಕಾಣುತ್ತದೆ.

ಹೊಲೇರ ಹೊನ್ನಯ್ಯ - ೨

'ಮನುಷ್ಯನಿಗೆ ಅಹಂಕಾರ ಸಲ್ಲ' ಎಂಬುದು ಈ ಕಾವ್ಯದ ಮೂಲ ಆಶಯ. ಕಾವ್ಯದ ಪ್ರಥಮಾರ್ಧದಲ್ಲಿ ದಕ್ಷಬ್ರಹ್ಮನ ಅಹಂಕಾರದ ಪರಾಕಾಷ್ಠೆಯಿದ್ದರೆ ಉತ್ತರಾರ್ಧದಲ್ಲಿ ಹೊನ್ನಯ್ಯನ ಅಹಂ ವಿಜೃಂಭಿಸಿದೆ. ಹೀಗಾಗಿ ನಮ್ಮ ಜನಪದರಲ್ಲಿ ಒಂದು ಗಾದೆ ಪ್ರಚಲಿತವಿದೆ : 'ಹಮ್ಮಾಡಿ ಬ್ರಮ್ಮ ಕೆಟ್ಟ, ನಮ್ಮೂರಲ್ಲೊಬ್ಬ ಹಂಗೇ ಕೆಟ್ಟ' ಎಂದು. ಇದು ತ್ರಿಮೂರ್ತಿಗಳಲ್ಲಿ ನಾನೇ ಶ್ರೇಷ್ಠ ಎಂದು ಮೆರೆದು ಶಾಪಗ್ರಸ್ಥನಾದ ಬ್ರಹ್ಮನಿಗೆ ಅನ್ವಯಿಸುವಂತೆ ಈಶತ್ವವನ್ನು ಪಡೆದು ತ್ರಿಮೂರ್ತಿಗಳಿಗಿಂತಲೂ ತಾನೇ ಸರ್ವಶಕ್ತ ಹಾಗೂ ಸರ್ವಶ್ರೇಷ್ಠನಾಗಬೇಕೆಂದು ಹಂಬಲಿಸಿ ಶಿರಸ್ಸನ್ನು ಕಳೆದುಕೊಂಡು ದಕ್ಷಬ್ರಹ್ಮನಿಗೂ ಅನ್ವಯಿಸುತ್ತದೆ.

'ಹೊಲೇರ ಹೊನ್ನಯ್ಯ'ನನ್ನು ಕುರಿತ ಕಾವ್ಯವೆಂದು ಓದುತ್ತ ಹೋದರೆ ಕಾವ್ಯದ ಪೂರ್ವಾರ್ಧವೆಲ್ಲ ದಕ್ಷಬ್ರಹ್ಮನ ಅಹಂಕಾರದ ಕಥೆಯಾಗಿದೆ. ಮಧ್ಯಮಾಂಕದಂತೆ ಗಿರಿಜಾಕಲ್ಯಾಣದ ಕಥೆ ನಿರೂಪಿತವಾಗಿದೆ.

ಕಲ್ಯಾಣವೆಂದ ಮೇಲೆ ಮಂಗಳವಾದ್ಯಗಳು ಮೊಳಗಬೇಕು. ಅದಕ್ಕಾಗಿ ವಾದ್ಯ ನುಡಿಸುವುದರಲ್ಲಿ ಮಹಾನ್ ಕಲಾವಿದನೆನಿಸಿದ ಹೊನ್ನಯ್ಯನಿಗೆ ಕರೆಹೋಯಿತು. ಕರೆ ಕಳಿಸಿರುವವರು ಕಲ್ಯಾಣದ ಅಣ್ಣ ಬಸವಣ್ಣನವರು; ಮದುವೆಯಾದರೋ ಶಿವ ಪಾರ್ವತಿಯರದು. ಆದ್ದರಿಂದ ತಾನು ಪಡಗೋಸಿಯಂತೆ ವಾದ್ಯ ನುಡಿಸಲು ಬರದೆ ವೈಭವದಲ್ಲಿ ಬರತ್ತೇನೆ, ಅದಕ್ಕಾಗಿ ತನಗೆ ಆನೆಯನ್ನು ಕಳಿಸಿರಿ ಎಂದು ಹೇಳಿ ಕಳಿಸಿದ. ಶರಣರ ಅಪೇಕ್ಷೆ ಈಡೇರಿಸುವುದಕ್ಕಿಂತಲೂ ಮಹತ್ಕಾರ್ಯ ಬಸವಣ್ಣನವರಿಗೆ ಯಾವುದಿದೆ ? ಆ ಕೂಡಲೆ ಹೊನ್ನಯ್ಯನ ಅಪೇಕ್ಷೆಯಂತೆ ಆನೆ ಮೇಲೆ ಬರಲು ವ್ಯವಸ್ಥೆ ಕಲ್ಪಿಸಿದರು. ಆಗ ಹೊನ್ನಯ್ಯ

ನಡೆಮಡಿ ನಡೆಚಪ್ಪ ನಗಾರಿ ನೌಪತ್ತು
ಕೊಂಬು ತಮಟೆ ತಾಳಮೇಳ ಸೈತುವಾಗಿ -

ಹನ್ನೆರಡು ತಾಳಗಳು ಹನ್ನೆರಡು ಮೇಳಗಳು
ಡೋಲು ವಾಲುಗ ಶ್ರುತಿಮೋರಿ |

ಡೋಲು ವಾಲುಗ ಶ್ರುತಿಮೋರಿ ನಡೆಸುತ
ಲಿಂಗಬೀರರ ಕುಣಿಸುತ |

ಬೆಳ್ಳಿ ಅಂಬಾರಿ ಮೇಲೆ ಚಿನ್ನದ ಕಳಸವು
ನಂದಿಧ್ವಜ ಸೈತುವಾಗಿ ಬರುತಾರೆ |

ಮದುವೆ ಕಾರ್ಯಕೆ ವಲೇರವೊನ್ನಯ್ಯ
ವಾಲ್ಗ ಮಾಡುತವ್ರೆ ಸ್ವಾಮಿಯೋರ |

ಎಂದರು. ಗೌಡಿಯರ ಮಾತನ್ನು ಕೇಳಿದ ಕೂಡಲೆ ಮಂಚಣ್ಣ ಕೊಂಡುಗದೇವಿಗೆ ಕೈಮುಗಿದ. ಸದ್ಯ ತನ್ನ ಹೊಟ್ಟೆ ಉಬ್ಬಸಕ್ಕೆ ಒಂದು ಪರಿಹಾರ ಸಿಕ್ಕಿತೆಂದು ಹಿರಿಹಿರಿ ಹಿಗ್ಗಿದ. ಬಿಜ್ಜಳನ ಹತ್ತಿರಕ್ಕೆ ಓಡೋಡಿ ಹೋದ - ನಡೆಯುತ್ತಿರುವ ವರ್ಣಸಂಕರ ವಿವಾಹದ ವಿಷಯವನ್ನು ತಿಳಿಸಿ ಬಿಜ್ಜಳನ ತಲೆ ಕೆಡಿಸಿದ. ಬಿಜ್ಜಳನ ಕಳವಳಕ್ಕೆ ಬಸವಣ್ಣನವರು

'ಶರಣರು ಶರಣರ ಜೊತೆ ಸಮ್ಮಂದ
ಮಾಡಿದರದಕೆ ದೋಷುವಿಲ್ಲ' |

ಎಂದರು. ಇದನ್ನು ಕೇಳಿ ಕೆಂಡಾಮಂಡಲವಾದ ಬಿಜ್ಜಳ

'ಬ್ರಾಮಣ ಮಾದಾರ ಒಂದೇ ಆಗುವುದು
ಯಾವ ಶಾಸ್ತ್ರದಲಿ ಹೇಳೀರಪ್ಪ?' |

ಎಂದುದಲ್ಲದೆ ಈ ಮದುವೆಯನ್ನು ತಡೆಯಬೇಕು ಎಂದು ಆಜ್ಞೆ ಮಾಡಿದ. ಒಪ್ಪಿದ ಬಸವಣ್ಣನವರು ತಮ್ಮ ಅಧಿಕಾರವನ್ನು ತ್ಯಜಿಸಿ ಹೊರನಡೆದರು. ಆ ಅಧಿಕಾರ ಕೊಂಡುಗ ಮಂಜಣ್ಣನ ವಶವಾಯಿತು. ಆತ ಹರಳಯ್ಯ - ಮಧುವರಸರನ್ನು ಆನೆಯ ಕಾಲಿನಿಂದ ತುಳಿಸುವ ಶಿಕ್ಷೆ ವಿಧಿಸಿದ.

ಹರಳಯ್ಯ-ಮಧುವರಸರನ್ನು ತುಳಿಯಬೇಕಿದ್ದ ಮದ್ವಾನೆ ಬದಲಿಗೆ ಕೊಂಡುಗ ಮಂಚಣ್ಣನನ್ನು ತನ್ನ ಸೊಂಡಿಲಿನಲ್ಲಿ ಬಾಚಿ ಎತ್ತಿ 'ಬಟ್ಟೆ ಒಗೆಯೊಂಗೆ ಒಗೆಯಿತು'. ಮಂಚಣ್ಣ ಅಪ್ಪಚ್ಚಿಯಾದ. ಆನೆಯಾದರೂ ಹರಳಯ್ಯನನ್ನು ಎತ್ತಿ ಬೆನ್ನಿಗೇರಿಸಿಕೊಂಡು ದಕ್ಷಿಣದ ಬೆಟ್ಟದಪುರದ ಕಡೆಗೆ ಧಾವಿಸಿತು. ಅಲ್ಲಿಂದ ಹರಳಯ್ಯನವರ ಬಳಗ ರಾವಂದೂರಿನ ಬಳಿಯ ಅರುಹಂತಪುರಕ್ಕೆ ಬಂತು. ಅಲ್ಲಿ ನಡೆದ ಜೈನ-ಶರಣ ಸಂಘರ್ಷದಲ್ಲಿ ಹರಳಯ್ಯ ವಿಜಯಿಯಾದರು. ಜೈನರೆಲ್ಲ ಶರಣರಾಗಿ ಪರಿವರ್ತಿತರಾದರು. ಹರಳಯ್ಯ ತನ್ನ ಪವಾಡವನ್ನು ಮೆರೆದ ಹಳ್ಳಿ ಹರಳಹಳ್ಳಿಯಾಯಿತು. ಅಲ್ಲಿದ್ದ ಚಂದ್ರನಾಥ ಬಸದಿ ಚಂದ್ರಮೌಳೇಶ್ವರ ದೇವಾಲಯವಾಯಿತು.

'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದಲ್ಲಿ 'ಬಸ್ತಮ್ಮ', 'ಶ್ರವಣದೊರೆ' ಎಂಬ ಹೆಸರುಗಳಿದ್ದು ಅವರನ್ನು ಮಾದೇಶ್ವರ ಸಂಹರಿಸಿದರೂ ಅಲ್ಲೆಲ್ಲೂ ಜೈನಮತದ ಹೆಸರಿಲ್ಲದಂತೆ ಸೌಮ್ಯವಾಗಿ ಮತವನ್ನು ನಾಶ ಮಾಡಿದಂತೆ ಕಾಣುತ್ತದೆ. ಆದರೆ ಇಲ್ಲಿ ಜೈನ-ಶರಣ ಸಂಘರ್ಷ ನೇರವಾಗಿ ಪ್ರಸ್ತಾಪವಾಗಿರುವುದು ಬಹುಶಃ ಸ್ಥಳೀಯ ಜನರಲ್ಲಿ ಪ್ರಚಲಿತವಿದ್ದ ಐತಿಹ್ಯವೇ ಕಾರಣವೆಂದು ಕಾಣುತ್ತದೆ.

ಕುಂಬಾರ ಗುಂಡಯ್ಯ - ೧

ಹರಿಹರಕವಿಯ 'ಕುಂಬಾರ ಗುಂಡಯ್ಯಗಳ ರಗಳೆ' ಪುಟ್ಟದಾದರೂ ಸುಂದರವಾದ ಕಾವ್ಯ. ಈ ರಗಳೆ ಪ್ರಕಾರ ಗುಂಡಯ್ಯ ಉತ್ತರದ (ಹೈದರಾಬಾದ್ ಸಂಸ್ಥಾನ) ಬಲ್ಲುಕೆಪುರದವನು (ಭಾಲ್ಕಿ). ಕುಂಬಾರ ವೃತ್ತಿಯಲ್ಲಿ ಜೀವಿಸಿದ್ದ ಗುಂಡಯ್ಯ ಪರಮಶಿವಭಕ್ತ. ಅವನು ಅನನ್ಯ ಭಕ್ತಿಯಿಂದ ತನ್ನ ಕಾಯಕದಲ್ಲಿ ಲೀನವಾಗಿ ಮಡಕೆಗಳನ್ನು ಲಯಬದ್ಧನಾಗಿ ತಟ್ಟುತ್ತಿದ್ದ. ಈ ಭಕ್ತಿ ಈ ಲಯಬದ್ಧ ತಾಳ ಶಿವನಿಗೆ ಪ್ರಿಯವಾಗಿ ಗುಂಡಯ್ಯ ಮಡಕೆ ತಟ್ಟುವುದಕ್ಕೆ ತೊಡಗಿದನೆಂದರೆ ಅದರ ತಾಳಕ್ಕೆ ತಕ್ಕಂತೆ ಶಿವ ಅವನ ಹೃದಯದಲ್ಲಿ ನರ್ತಿಸುತ್ತಿದ್ದ. ಇದರಿಂದ ಪುಳಕಗೊಳ್ಳುತ್ತಿದ್ದ ಗುಂಡಯ್ಯ ಶ್ರಿಕರಣ ಶುದ್ಧಿಯಿಂದ ಕಾಯಕದಲ್ಲಿ ಮೈಮರೆಯುತ್ತಿದ್ದ. ಹಾಗೆಯೇ ಶಿವನೂ ಮೈಮರೆತು ನರ್ತಿಸುತ್ತಿದ್ದ. ಒಮ್ಮೆ 'ಶಿವ ತಾಳದಲ್ಲಿ ತಲ್ಲೀನನಾಗಿ ತಾನು ಕೈಲಾಸ ದಲ್ಲಿದ್ದೇನೆಂಬುದನ್ನು ಮರೆತು

ಗುಂಡನ ಹೃದಯವಿದೆಂದೇ ಬಗೆವುತೆ
ತಂಡದ ಸುರರೋಲಗಮಂ ಮರೆವುತೆ

ಶಿವಪದದಂದುಗೆ ಘಲುಘಲುಕೆಂದೆನೆ
ನವಕಟಕ ಧ್ವನಿ ಝಂ ಝಣಕೆಂದೆನೆ
ಮರ್ತ್ಯದ ಧ್ವನಿ ಕೈಲಾಸದ ನೃತ್ಯಂ....

ಹೀಗೆ ಉನ್ಮತ್ತನಾಗಿ ಶಿವ ನರ್ತಿಸುತ್ತಿರುವುದನ್ನು ಕಂಡು ಗಿರಿಚೆ ಬೆರಗಾದಳು. ಕುಣಿಯುವ ಹೊಸಪರಿ ಇದೇನೆಂದು ವಿಸ್ಮಯದಿಂದ ವಿಚಾರಿಸಿದಳು. ಶರಣ ಗುಂಡಯ್ಯ ತಟ್ಟುವ ಮಡಕೆಯ ತಾಳಕ್ಕೆ ಮರುಳಾಗಿ ಕುಣಿಯುತ್ತಿರುವೆನೆಂದು ಶಿವ ಹೇಳಿದ. ಅದಕ್ಕೆ ಗಿರಿಸುತೆ

ನಿಮ್ಮುವನಾಡಿಪ ಭಕ್ತನದಾವಂ
ನಿಮ್ಮಂ ಮೆಚ್ಚಿಪ ಶರಣನದಾವಂ
ದೇವಾ ಎನಗಿದು ಕೌತುಕ.....

ಎಂದಳು. ಅದಕ್ಕೆ ಶಿವ

ನಡೆ ತೋರಿದಪೆಂ ಭಕ್ತನ ನಿಲವಂ
ಎಡೆಗೊಂಡೆನ್ನಯ ನಾಟ್ಯದ ಫಲಮಂ

ಎನ್ನುದು ಹೇಳಿ ಗೌರೀಸಮೇತ ಮರ್ತ್ಯಕ್ಕೆ ಬಂದು ಅಂಬಿಕೆಯನ್ನು ಗಗನದಲ್ಲಿ ನಿಲ್ಲಿಸಿ, ಗುಂಡಯ್ಯನ ಮನೆಯಂಗಳಕ್ಕೆ ಬಂದು, ಅವನು ಗುಂಡಯ್ಯ ತಟ್ಟುತ್ತಿದ್ದ ಮಡಕೆಯ ತಾಳಕ್ಕೆ ತಕ್ಕಂತೆ ತಪ್ಪಯನಾಗಿ ಕುಣಿಯತೊಡಗಿದ. ಹೃದಯದಲ್ಲಿ ನರ್ತಿಸುತ್ತಿದ್ದ ಶಿವ ತನ್ನೆದುರೇ ಕುಣಿಯುತ್ತಿರುವುದನ್ನು ಕಂಡು ಗುಂಡಯ್ಯನೂ ಕುಣಿಯತೊಡಗಿದ. ಇವರ ನರ್ತನವನ್ನು ಕಂಡು ಪರವಶರಾದ ಗಣಂಗಳು ಉದ್ಘೋಷಿಸುತ್ತ ಕುಣಿಯತೊಡಗಿದವು. ಅಷ್ಟು ಮಾತ್ರವಲ್ಲ ಈ ಆನಂದ ಲೋಕ ಲೋಕವನ್ನೆಲ್ಲ ಹಬ್ಬಿತು ; ಲೋಕ ಲೋಕವನ್ನೆಲ್ಲ ತಬ್ಬಿತು. ಈಗ ಅಖಂಡ ಬ್ರಹ್ಮಾಂಡವೇ ನರ್ತನದಲ್ಲಿ ಮುಳುಗಿಹೋಯಿತು. ಗುಂಡಯ್ಯನ ತಾಳದ ರೀತಿಗೆ ಹೃದಯದ ಭಕ್ತಿಗೆ ಮರುಳಾದ ಪರಮೇಶ್ವರ ಅವನನ್ನು ಕೈಲಾಸಕ್ಕೆ ಎತ್ತಿಕೊಂಡ.

ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಪುರಾಣ', ವಿರೂಪಾಕ್ಷ ಪಂಡಿತನ 'ಚನ್ನಬಸವ ಪುರಾಣ' ಶಾಂತಲಿಂಗ ದೇಶಿಕರ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ', ಉತ್ತರದೇಶದ ಬಸವಲಿಂಗ ದೇವರ 'ಕಥಾಸಾಗರ', ಪರ್ವತೇಶನ 'ಚತುರಾಚಾರ್ಯ ಪುರಾಣ' ಮುಂತಾದ ಕೃತಿಗಳಲ್ಲಿ ಗುಂಡಯ್ಯನನ್ನು ಕುರಿತ ವಿಚಾರ ಬಂದರೂ ಇವರ್ಯಾರೂ ಹರಿಹರ ಹೇಳಿರುವ ಕಥಾಪರಿಧಿಯನ್ನು ದಾಟಿ ಹೋಗಿಲ್ಲ. ಆದರೆ ಗುಂಡಯ್ಯನನ್ನು ಕುರಿತ ಮೂರು ಕಾವ್ಯಗಳನ್ನು ನಮ್ಮ ಜನಪದ ಗಾಯಕರು ಹಾಡಿದ್ದಾರೆ.

ಮೊದಲ ಈ ಕಾವ್ಯವನ್ನು ಹಾಡಿದವರು ಬೆಟ್ಟದಬೀಡು ಸಿದ್ದಶೆಟ್ಟರು. ಕುಂಬಾರ ಕುಲದವರೇ ಆದ ಅವರು ಈ ಕಾವ್ಯವನ್ನು ಹೃದಯತುಂಬಿ ಮನಸಾರೆ ಹಾಡಿದ್ದಾರೆ. ಇಷ್ಟಾಗಿಯೂ ಈ ಕಾವ್ಯದಲ್ಲಿ ಬರುವ ಆಶಯಗಳು 'ತಿರುನೀಲಕಂಠ ರಗಳೆ' ಹಾಗೂ ಮಹಾರಾಷ್ಟ್ರದ 'ಭಕ್ತ ಗೋರಕುಂಬಾರ'ನ ಕಥೆಯ ಆಶಯಗಳಿಂದ ಕೂಡಿರುವಂತೆ ಕಾಣುತ್ತದೆ. ಹೀಗೆ ಜನಪದ ಆಶಯಗಳು ಕೊಡುಕೊಳುಗೆಯಾಗಿರುವ ಸಾಧ್ಯತೆಯೂ ಇರಬಹುದು. ಆದರೆ ಜನಪದ ಗಾಯಕನಿಗೆ ಹೇಳಿರುವ ಈ ಎರಡು ಕಥೆಗಳೂ ಗೊತ್ತಿಲ್ಲ. ಆದ್ದರಿಂದ ಈ ಆಶಯಗಳು ಒಂದು ಕಥೆಯಿಂದ ಇನ್ನೊಂದು ಕಥೆಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಂಚಾರ ಮಾಡಿರುವುದು ಸ್ಪಷ್ಟವಾಗಿದೆ. ರಕ್ತ ಬೆರೆತ ಮಣ್ಣಿನಿಂದ ಮಾಡಿದ ಚಟ್ಟಿ ಒಡೆಯಲಿಲ್ಲವೆಂಬುದು ಹೊಸ ಆಶಯವಾಗಿದೆ. ಅದೇನೇ ಇರಲಿ ಈ ಕಾವ್ಯ ಒಟ್ಟಂದದಲ್ಲಿ ಸುಂದರವಾಗಿ ನಿರೂಪಣೆಗೊಂಡಿರುವ ಒಂದು ಸೊಗಸಾದ ಕಾವ್ಯವಾಗಿದೆ. ಕಥನ ಕಲೆಯ ದೃಷ್ಟಿಯಿಂದ ನೋಡಿದಾಗ ಇದೊಂದು ಅಪೂರ್ವ ಕಾರ್ಯ ಎಂಬಲ್ಲಿ ಎರಡು ಮಾತಿಲ್ಲ.

ಕಾಯಕದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆ ಮುಖ್ಯ ಎಂಬ ಧೋರಣೆ ಇಲ್ಲಿ ಪ್ರತಿಪಾದಿತವಾಗಿದೆ. ಕಾಯಕವೇ ಶಿವಧ್ಯಾನವೂ ಹೌದು ಎಂಬ ತಪಸ್ಯೆಯ ತತ್ತ್ವ ಇಲ್ಲಿದೆ. ಆ ಕಾರಣದಿಂದಲೆ ಇಹಪರಗಳೆರಡರ ಸಿದ್ಧಿಗೂ ಕಾಯಕೆ ಶ್ರೇಷ್ಠವಾಗುತ್ತದೆ. ಅಲ್ಲದೆ ಅದು ಸಾರ್ವಕಾಲಿಕ ಮೌಲ್ಯವು ಹೌದೆಂಬುದನ್ನು ಸಾಬೀತುಪಡಿಸಿದೆ. ಆದ್ದರಿಂದ ಕಾಯಕಕ್ಕೆ ತಕ್ಕ ಬೆಲೆ ನೀಡುವುದು ಬಹುಮುಖ್ಯ.

ಬಿಟ್ಟ ತಕ್ಕೊಂಡಂತ
ಚಟ್ಟೀಲಿ ಅಟ್ಟುಂಡರೆ
ಹೊಟ್ಟೆನೋವು ಬರುತ್ತದೆ

ಎಂದು ಶಿವನಿಂದ ಹೇಳಿಸಿರುವುದು ಉಚಿತವಾಗಿದೆ. ಶ್ರಮಕ್ಕೆ ತಕ್ಕ ಬೆಲೆ ಸಿಗದೆ ಹೋದರೆ ಕಾಯಕ, ಕಾಯಕಜೀವಿ ಇಬ್ಬರೂ ಉಳಿಯುವುದಿಲ್ಲ. ಈ ವಿಚಾರ ಪ್ರಸ್ತುತ ಸಂದರ್ಭಕ್ಕೆ ಹೆಚ್ಚು ಸಂಗತವೆನಿಸುತ್ತದೆ. ಜಾಗತೀಕರಣದ ಸಂದರ್ಭದಲ್ಲಿ ಈ ದೇಶದ ಶ್ರಮಜೀವಿಗಳು ಎದುರಿಸುತ್ತಿರುವ ಸವಾಲು ಹಾಗೂ ಸಂಕಟಗಳನ್ನು ಅರ್ಥೈಸಿಕೊಳ್ಳುವ ಹಾಗೂ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವ ಚಿಂತನೆಗೆ ಇದು ಸಹಕಾರಿ ಎನಿಸುತ್ತದೆ. ಅಲ್ಲದೆ ಕಲ್ಯಾಣದ ಬಸವಣ್ಣ ೧,೮೬,೦೦೦ ಶರಣರಿಗೆ ಬೇಕಾದ ಪಾತ್ರೆ ಪರಿಕರಗಳನ್ನು ಮಾಡಿಕೊಡಲು 'ಆರ್ಡರ್' ಕೊಡುವುದು ಹಾಗೂ ಮುಂಗಡ ಕೊಡುವುದು ಕಾಯಕಜೀವಿಗಳನ್ನು ಉಳಿಸಿ ಬೆಳೆಸುವ ಧೋರಣೆಗೆ ಪ್ರತೀಕವಾಗಿದೆ.

ಕುಂಬಾರ ಗುಂಡಯ್ಯ - ೨

ಈ ಜಗತ್ತಿನಲ್ಲಿ ಅನ್ನದ ಕೊರತೆಯಿಂದ ನರಳುತ್ತಿರುವವರಿಗಿಂತ ಪ್ರೀತಿಯ ಕೊರತೆಯಿಂದ ನರಳುತ್ತಿರುವವರೇ ಹೆಚ್ಚು. ಈ ಕೊರತೆಯನ್ನು ನೀಗಿಸಲು ಶರಣರು ಕಂಡುಕೊಂಡು ದಿವ್ಯೌಷಧವೆಂದರೆ ಲಿಂದು ದಾಸೋಹ. ಈ ದಾಸೋಹವೆಂದರೆ ಲಿಂದು ಕೇವಲ ಅನ್ನದಾನವಲ್ಲ. ಲಿಂದು ಅನ್ನದೇವತೆಯ ಆರಾಧನೆ ; ಪ್ರೀತಿಯ ಪರಮ ಸಾಧನೆ. ಲಿಂದು ಕೇವಲ ಕರುಣೆಯಿಂದ ಕೊಟ್ಟ ಅನ್ನದಾನವಲ್ಲ ; ಲಿಂದು ಮಾನವ ಪ್ರೀತಿಯ ನಿವೇದನೆ. ಇದೇ ಶರಣಧರ್ಮದ ಸುಪ್ರೀತಿಯೋಗ.

ಈ ಸುಪ್ರೀತಿಯೋಗ ಸಾಧನೆ ಬಸವಣ್ಣನವರಿಗೆ ಕಷ್ಟವೇನಲ್ಲ. ಆದರೆ ಒಂದು ಲಕ್ಷದ ಮೇಲೆ ಎಂಬತ್ತಾರು ಸಾವಿರ ಜಂಗಮರಿಗೆಲ್ಲ ದಾಸೋಹ ಮಾಡಬೇಕೆಂದರೆ ಅಷ್ಟನ್ನು ಅಡುವುದಕ್ಕೆ ಪಾತ್ರೆ ಬೇಕಲ್ಲವೆ ? ಅದಕ್ಕಾಗಿ ಅಲ್ಲಮಪ್ರಭುಗಳಲ್ಲಿ ಸಲಹೆ ಕೇಳಲು ಬಸವಣ್ಣನವರೊಡನೆ ನೀಲಮ್ಮ ತಾಯಿ ಹೋದರು. ಪ್ರಭುದೇವರು ದಿವಿಪಾತ್ರೆಯನ್ನು ತಯಾರಿಸಲು ಕುಂಬಾರ ಗುಂಡಯ್ಯ ಶರಣರನ್ನು ಕೇಳಿಕೊಳ್ಳಲು ಹೇಳಿಕಳಿಸಿದರು. ಈ ದಿವಿಪಾತ್ರೆಯನ್ನು ಮಾಡಿಕೊಟ್ಟ ಕಥೆ 'ಕುಂಬಾರ ಗುಂಡಯ್ಯ-೨' ಕಾವ್ಯಭಾಗದಲ್ಲಿ ನಿರೂಪಿತವಾಗಿದೆ.

'ಕೊಟ್ಟ ಮಾತನ್ನು ಉಳಿಸಿಕೊಳ್ಳುವ' ತತ್ತ್ವ ಈ ಕಥೆಯ ಹೂರಣವಾಗಿದೆ. ನೀಲಮ್ಮನವರಿಂದ ಮುಂಗಡ ಪಡೆದು ದಿವಿಪಾತ್ರೆಯನ್ನು ಮಾಡಿಕೊಡುತ್ತೇನೆಂದು ಒಪ್ಪಿಕೊಂಡ ಗುಂಡಯ್ಯ ಸಂಕಷ್ಟಕ್ಕೆ ಸಿಕ್ಕಿ ನರಳುತ್ತಾನೆ. ಕಷ್ಟಕಾಲದಲ್ಲಿ ನೆರವಾಗಲು ದೈವಕೃಪೆ ಯಾವ ರೂಪದಲ್ಲಿ ಬರುತ್ತದೊ ಯಾರು ಬಲ್ಲರು ? ಪಂಚಲೋಕಗಳ ಮಣ್ಣಿನಿಂದ 'ದಿವಿಪಾತ್ರೆ' ಆಗಬೇಕು. ಆದರೆ ಐದು ಲೋಕಗಳಿಂದ ಮಣ್ಣು ತರುವ ಬಗೆ ಹೇಗೆಂದು ತಿಳಿಯದೆ ಗುಂಡಯ್ಯ ಪ್ರಾಣ ಕಳೆದುಕೊಳ್ಳು ಯತ್ನಿಸುವ ಸಮಯಕ್ಕೆ ಸರಿಯಾಗಿ ಆನೆ ರೂಪದಲ್ಲಿ ಬಂದ ಗಣಪತಿ ಗುಂಡಯ್ಯನಿಗೆ ಸಹಾಯಕನಾಗಿ ನಿಲ್ಲುತ್ತಾನೆ. ಗಣಪತಿಯ ವಾಹನವಾದ ಮೂಷಿಕದ ಸಹಾಯದಿಂದ ಬ್ರಹ್ಮಲೋಕ, ವೈಕುಂಟ, ಕೈಲಾಸ, ಪಾತಾಳಲೋಕಗಳ ಮಣ್ಣನ್ನು ಪಡೆಯುತ್ತಾನೆ ಆ ನಾಲ್ಕು ಲೋಕದ ಮಣ್ಣಿಗೆ ಭೂಲೋಕದ ಮಣ್ಣನ್ನು ಬೆರಸಿ ಗುಂಡಯ್ಯ ದಿವಿಪಾತ್ರೆ ತಯಾರಿಸುತ್ತಾನೆ. ಅಸಾಮಾನ್ಯವಾದುದನ್ನು ಶ್ರದ್ಧೆ ಮತ್ತು ಬದ್ಧತೆಯಿಂದ ಸಾಧಿಸಲು ಸಾಧ್ಯ ಎಂಬ ಆಶಯ-ಸಾವನ್ನೂ ಲೆಕ್ಕಿಸದೆ ಶ್ರಮಮುಖಿಯಾಗಿ ಪ್ರಯತ್ನಿಸಿದರೆ ಸಾಧಿಸುವುದು ಸುಲಭ ಎಂಬ ನಿಲುವು ಇಲ್ಲಿದೆ. ಇಂಥ ನೆಲೆಯಲ್ಲಿ ಸಾಧಿತವಾದದ್ದು ಸಾರ್ವಕಾಲಿಕ ಮೌಲ್ಯ ಹಾಗೂ ಪ್ರಯೋಜನಕಾರಿಯಾಗುತ್ತದೆ. 'ದಿವಿಪಾತ್ರೆ'ಯ ಕಲ್ಪನೆ ಇದನ್ನೇ ಸೂಚಿಸುತ್ತದೆ.

ಕುಂಬಾರ ಗುಂಡಯ್ಯ - ೩

'ಕುಂಬಾರ ಗುಂಡಯ್ಯ-೩' ಕಾವ್ಯದ ಕಥೆ ತಂತ್ರಗಾರಿಕೆಯ ಕಥೆಯಾಗಿದೆ. ಜನಪದ ಕಥೆಗಳಲ್ಲಿ ಬರುವ ಬುದ್ಧಿವಂತಿಕೆ ಕಥೆಯ ಗುಂಪಿಗೆ ಸೇರಬಹುದಾದ ಈ ಕಥಾವಸ್ತು ಕುಂಬಾರ ಗುಂಡಯ್ಯನ ಬದುಕಿನೊಡನೆ ತಳುಕು ಹಾಕಿಕೊಂಡಿದೆ.

ಕುಂಬಾರ ಗುಂಡಯ್ಯನ ಮಗಳು ಕಲ್ಯಾಣಿಯ ಮದುವೆಗೆ ಎಲ್ಲ ಸಿದ್ಧತೆಯು ನಡೆಯುತ್ತದೆ. ಗಂಡಿನ ಕಡೆಯವರು ಮದುವಣಿಗನನ್ನು ಆನೆಯ ಮೇಲೆ ಕೂರಿಸಿಕೊಂಡು ಮದುವೆ ಮಂಟಪಕೆ ಕರೆದುಕೊಂಡು ಹೋಗಬೇಕೆಂದು ಬಯಸುತ್ತಾರೆ. ಅದಕ್ಕಾಗಿ ಗುಂಡಯ್ಯ ಮದ್ದಾರಿ ಮಾವಟಿ ಎಂಬವನಲ್ಲಿ ಆನೆಯನ್ನು ಬಾಡಿಗೆಗೆ ಮಾತಾಡಿ ತರಿಸುತ್ತಾನೆ. ಮೆದುವಣಿಗ ಲಿಂಗಯ್ಯ - ಮದುವಣಗಿತ್ತಿ ಕಲ್ಯಾಣಿಯ ಮದುವೆ ಅದ್ಧೂರಿಯಾಗಿ ನೆರವೇರುತ್ತದೆ. ಮಗಳು-ಅಳಿಯಂದಿರನ್ನು ಸ್ವಸ್ಥಾನಕ್ಕೆ ಮುಟ್ಟಿಸಿ ಬರುತ್ತಿದ್ದ ಆನೆ ಕೆಮ್ಮಾರ್ಲು ರೋಗದಿಂದ ಘೀಳಿಡುತ್ತ ನೆಲಕ್ಕೆ ಬಿದ್ದು ಪ್ರಾಣ ಬಿಡುತ್ತದೆ.

ಮದ್ದಾರಿಗೆ ತನ್ನ ಆನೆ ಸತ್ತ ಸುದ್ದಿ ಕೇಳಿ ತನಗೆ ತನ್ನ ಆನೆ ಬೇಕೇ ಬೇಕು ಎಂದು ಹಟ ಹಿಡಿಯುತ್ತಾನೆ. ಅವನ ಆನೆಗೆ ಪ್ರತಿಯಾಗಿ ಬೇರೆ ಆನೆ ಕೊಡಿಸುತ್ತೇನೆಂದು ಹೇಳಿದರೂ ಮದ್ದಾರಿ ಅದಕ್ಕೆ ಒಪ್ಪದೆ ತನಗೆ ತನ್ನ ಆನೆಯೇ ಬೇಕೆಂದು ಪಟ್ಟು ಹಿಡಿದುಬಿಡುತ್ತಾನೆ. ಇದರಿಂದ ಗುಂಡಯ್ಯ ಚಿಂತಾಕ್ರಾಂತನಾಗಿ ಒರಗಿರುವಾಗ ಶಿವನು ಸ್ವಪ್ನಕೆ ಬಂದು

ಶರಣ ಗುಂಡಯ್ಯ
ಚಿಂತೆಯ ಮಾಡಬೇಡ
ಏಳು ಬೇಗೇಳು
ನಾವು ಹೇಳಿದಂತೆ ಮಾಡಪ್ಪ |

ಮನೆಯ ಮುಂಬಾಗಲ
ಮುಚ್ಚಿಕೊ ಗುಂಡಯ್ಯ |

ಕದದ ಕೆಳಗಲಿಂದ
ಉತ್ಸಾಸ್ವವರುಗೂ
ನೀನು ಹೊಸ ಮಡ್ಕೆಗಳನೆಲ್ಲ
ಒತು ಬುಡು ಗುಂಡಯ್ಯ |

ಎಂಬುದೊಂದು ತಂತ್ರವನ್ನು ಹೇಳಿಕೊಟ್ಟು ಮರೆಯಾದರು. ಮದ್ದಾರಿ ತನಗೆ ತನ್ನ ಆನೆಯನ್ನು ಕೊಡಿಸಿಕೊಡಿ ಎಂದು ಪಂಚಾಯಿತಿಯವರನ್ನು ಸೇರಿಸಿ ನ್ಯಾಯ ಕೇಳಿದನು. ನ್ಯಾಯದ ಕಟ್ಟೆಗೆ ಗುಂಡಯ್ಯನನ್ನು ಕರೆದುಕೊಂಡು ಬರಲು ಮದ್ದಾರಿಗೆ ಹೇಳಿದರು. ಬಾಗಿಲು ಮುಚ್ಚಿಕೊಂಡು ಮನೆಯೊಳಗಿದ್ದ ಗುಂಡಯ್ಯ ಎಷ್ಟೇ ಕೂಗಿದರೂ ಮಾತಾಡದೆ ಮನೆಯೊಳಗೇ ಇದ್ದ. ಇದರಿಂದ ಕೋಪಗೊಂಡ ಮದ್ದಾರಿ ಮುಚ್ಚಿದ ಬಾಗಿಲನ್ನೂ ಝಾಡಿಸಿ ಒದ್ದ. ಬಾಗಿಲ ಒಳಭಾಗದಲ್ಲಿ ಒತಿದ್ದ ಮಡಕೆಗಳೆಲ್ಲ ಒದ್ದ ರಭಸಕ್ಕೆ ಪುಡಿಪುಡಿಯಾದವು.

ಆ ಕೂಡಲೆ ಸಂತೋಷದಿಂದ ನ್ಯಾಯದ ಕಟ್ಟೆಗೆ ಬಂದ ಗುಂಡಯ್ಯ ಮದ್ದಾರಿ ಒದ್ದುದರಿಂದ ಒಡೆದುಹೋದ ತನ್ನ ಮಡಕೆಗಳನ್ನು ಕೊಡಿಸಿ ಎಂಬ ಬೇಡಿಕೆ ಮುಂದಿಟ್ಟ. ಅದಕ್ಕೆ ಮದ್ದಾರಿ ಗುಂಡಯ್ಯನಿಗಾಗಿರುವ ನಷ್ಟವನ್ನು ಕಟ್ಟಿಕೊಡುತ್ತೇನೆ ಎಂದ.

ನನ್ಗೆ - ನಷ್ಟ ಕಟ್ಟಿಕೊಡೊ
ಕಷ್ಟ ನಿನುಗ್ಯಾತಕಪ್ಪ
ಮದ್ದಾರಿ ನನ್ಗೆ ನನ್ನ
ಮಡ್ಕೆಗಳೇ ಬೇಕು |

ನನ್ನ ಮಡ್ಕೆ ಬುಟ್ಟು
ನನಗೇನು ಬೇಕಾಗಿಲ್ಲ
ಮೊದಲಿದ್ದಂತೆ ನನ್ನ
ಆ ಮಡ್ಕೆಗಳ ಕೊಡಬೇಕು |

ಅದಕ್ಕೆ ಮದ್ದಾರಿ
ಒಡುದ ಮಡ್ಕೆಗಳ

ಮೊದಲಂಗೆ ಕೊಡಕಾದ್ದ
ಅದಕೇನು ಬೆಲೆಯಾಯ್ತದೆ
ಹೇಳು ಗುಂಡಯ್ಯ |

ಆ ಕೂಡಲೆ ಗುಂಡಯ್ಯ

ಒಡ್ಡ ಮಡ್ಕೆಗಳು
ಮೊದಲಂಗೆ ಆಗದಿಲ್ಲ
ಸತ್ತ ಆನೆ ಸ್ಕೆತ
ಮತ್ತೆಂಗೆ ಬಂದೀತು ? |

ಎಂದಾಗ ಮದ್ದಾರಿಗೆ ಜ್ಞಾನೋದಯವಾಯಿತು. ಆಗ ಅವನು ಆನೆಗೆ ಸಲ್ಲುವ ಬೆಲೆಯನ್ನು ಪಡೆದುಕೊಂಡು ತೆಪ್ಪಗಾದ.

ಈ ಕಾವ್ಯದಲ್ಲಿ ಅನಗತ್ಯ ಅದ್ಧೂರಿ ಮದುವೆಗಳಿಂದುಂಟಾಗುವ ತಾಪತ್ರಯಗಳ ನಿರೂಪಣೆ ಇದೆ. ಜೊತೆಗೆ ವಾಸ್ತವ ಸ್ಥಿತಿಯನ್ನು ಅರಿತು ಸಹಕರಿಸದವರನ್ನು ತಂತ್ರ-ಉಪಾಯಗಳಿಂದ ಬಗ್ಗುಬಡಿಯಬೇಕೆಂಬುದೇ ಈ ಕಾವ್ಯದ ಆಶಯವಾಗಿದೆ. ಶಿವನಿಂದಲೇ ಅಂಥ ತಂತ್ರವನ್ನು ಹೇಳಿಸಿರುವುದರಿಂದ ಜೀವನದಲ್ಲಿ ಇದು ಒಮ್ಮೊಮ್ಮೆ ಅನಿವಾರ್ಯವಾಗುತ್ತದೆ ಎಂಬು ಧೋರಣೆಯೂ ಇಲ್ಲಿದೆ ಎನಿಸುತ್ತದೆ.

ಒಕ್ಕಲಿಗರ ಮುದ್ದೇಗೌಡ

ಒಕ್ಕಲಿಗರ ಮುದ್ದೇಗೌಡನ ಸಂಬಂಧದಲ್ಲಿ ಲಿಖಿತ ಗ್ರಂಥಗಳಾದ ಉತ್ತರದೇಶದ ಬಸವಲಿಂಗದೇವರ 'ಕಥಾಸಾಗರ' ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ', ಪರ್ವತೇಶ ಕವಿಯ 'ಚತುರಾಚಾರ್ಯಪುರಾಣ', ಫ.ಗು. ಹಳಕಟ್ಟಿಯವರ 'ಅಮರಗಣಾಧೀಶ್ವರರ ಚರಿತ್ರೆಗಳು' ಮತ್ತು 'ಶಿವಶರಣ ಚರಿತ್ರೆ'ಗಳಲ್ಲಿರುವ ಸಂಗತಿಗಳನ್ನೆಲ್ಲ ಕ್ರೋಢೀಕರಿಸಿ ತ.ಸು. ಶಾಮರಾಯರು ಹೀಗೆ ಹೇಳಿದ್ದಾರೆ :

"ಕರ್ನಾಟಕದಲ್ಲಿರುವ ಜೋಳದಹಾಳೆಂಬ ಗ್ರಾಮದಲ್ಲಿ ಈತನು ಬೇಸಾಯದ ಕಾಯಕದಿಂದ ಜೀವಿಸುತ್ತಿದ್ದನು. ಒಮ್ಮೆ ಆತ ಉಳುತ್ತಿರುವಾಗ ನೇಗಿಲು ಮುಂದೆ ನಡೆಯದೆ ನಿಂತಿತು. ಒಳಗಿನಿಂದ 'ನಾನಿದ್ದೇನೆ ಜೋಪಾನವಾಗಿ ಹೊರಕ್ಕೆ ತೆಗೆ' ಎಂದು ಕೇಳಿಸಲು ಮುದ್ದಯ್ಯನು ಮೆಲ್ಲಗೆ ಅಗೆದು ಅಲ್ಲಿದ್ದ ಸ್ವಯಂಭುಲಿಂಗವನ್ನು ಹೊರತೆಗೆದು ಪೂಜಿಸಿದನು. ನಂತರ ಆತನು ವಿಶ್ರಾಂತಿಯನ್ನು ಹೊಂದಿ ಮೇಲಕ್ಕೇಳಲು ಜಂಗಮನೊಬ್ಬನು ಕಾಣಿಸಿಕೊಂಡು, ಮುದ್ದಯ್ಯನಿಗೆ ದೀಕ್ಷೆಯಿತ್ತು, ಮತ್ತೆ ಲಿಂಗದಲ್ಲಿ ಐಕ್ಯನಾದನು. ಮುದ್ದಯ್ಯನು ತನ್ನ ಕಾಯಕದಿಂದ ಬಂದುದನ್ನೆಲ್ಲಾ ಗುರುಲಿಂಗ ಜಂಗಮಕ್ಕೆ ಅರ್ಪಿಸಿ, ಶಿವನನ್ನು ಮೆಚ್ಚಿಸಿದನು.

'ಕಾಮ ಭೀಮ ಜೀವ ದನದೊಡೆಯ' ಎಂಬ ಅಂಕಿತದಿಂದ ಈತನು ವಚನಗಳನ್ನು ರಚಿಸಿದ್ದಾನೆ."[22]

ಸಂಶೋಧಕ ಹ.ಕ. ರಾಜೇಗೌಡರು ತಮ್ಮ 'ಕನ್ನಡನ ನಾಡಿನ ಒಕ್ಕಲಿಗರು' ಎಂಬ ಲೇಖನದಲ್ಲಿ ಒಕ್ಕಲಿಗರ ಮುದ್ದೇಗೌಡನ ಬಗೆಗಿರುವ ಲಿಖಿತ ಹಾಗೂ ಜನಪದ ಮೂಲಗಳಿಂದೆಲ್ಲ ಲಭ್ಯವಾಗುವ ಮಾಹಿತಿಗಳನ್ನೆಲ್ಲ ಕಲೆಹಾಕಿ ಸಾಕಷ್ಟು ಸಂಗತಿಗಳನ್ನು ವಿವರಿಸಿದ್ದಾರೆ.[23]

ಆದರೆ ಅಂದು ಅರಿಕೇಸರಿ ಪಂಪನಿಗೆ ಆಶ್ರಯ ಕೊಟ್ಟಿದ್ದಂತೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬೆಟ್ಟದಬೀಡು ಗ್ರಾಮದ ಪಟೇಲ್ ನೀಲೇಗೌಡರ ಆಶ್ರಯದಲ್ಲಿದ್ದ ಜನಪದ ವ್ಯಾಸ ಸಿದ್ದಶೆಟ್ಟರು 'ಒಕ್ಕಲಿಗರ ಮುದ್ದೇಗೌಡ' ಎಂಬ ಈ ಕಾವ್ಯವನ್ನು ಹೃದಯ ತುಂಬಿ ಹಾಡಿದ್ದಾರೆ. ಅವರು ಹೇಳಿದ ಸರ್ವಜ್ಞನ ವಚನ ಹೀಗಿದೆ -

---

22. ತ.ಸು. ಶಾಮರಾಯರು : ಶಿವಶರಣ ಕಥಾರತ್ನಕೋಶ. ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು. ೧೯೬೭. ಪು.೫೫-೫೫.
23. ಗೌಡ ಜನಾಂಗ : ಇತಿಹಾಸ ಮತ್ತು ಸಂಸ್ಕೃತಿ, ಸಂಪಾದಕರು - ಡಾ.ಕೆ. ಚಿನ್ನಪ್ಪಗೌಡ, ಬೆಳ್ಳಿಹಬ್ಬ ಆಚರಣಾ ಸಮಿತಿ, ಒಕ್ಕಲಿಗರ ಯಾನೆ ಗೌಡರ ಸೇವಾ ಸಂಘ, ಮಂಗಳೂರು, ೨೦೦೩. ಪು.೧೮೮-೨೦೪.

ಒಕ್ಕಲಿಗ ದುಡಿದು ತಾನಿಕ್ಕುವನು ಅನ್ನವನು
ಮಿಕ್ಕಜನ ನಕ್ಕು ನಲಿವುದಕೆ - ಕಾರಣ
ಒಕ್ಕಲಿಗನ ಅನ್ನ ಸರ್ವಜ್ಞ.

ಒಕ್ಕಲಿಗರ ಬಗೆಗಿರಿಸಿದ್ದ ಅತ್ಯಭಿಮಾನ ಒಂದು ಕಡೆಯಾದರೆ ಅರಿಕೇಸರಿ - ಪಂಪರಂತಿದ್ದ ನೀಲೇಗೌಡ - ಸಿದ್ದಶೆಟ್ಟರ ಆತ್ಮೀಯತೆ, ಮಾತಿಗೆ ಮೀರಿದ ಪ್ರೀತಿ-ಸ್ನೇಹ, ಬಾಂಧವ್ಯ. ಆ ಕಾರಣದಿಂದ ಸಿದ್ದಶೆಟ್ಟರು ಈ ಕಾವ್ಯವನ್ನು ಅತ್ಯಂತ ಪ್ರೀತಿಯಿಂದ ಹಾಡಿದ್ದಾರೆ.

ಜೈನನಾಗಿದ್ದ ಮುದ್ದೇಗೌಡ ಊರಿಗೇ ದೊಡ್ಡ ಕುಳ. ಪ್ರಬಲನಾಗಿರುವ ಇಂಥ ಕುಳವನ್ನು ತನ್ನ ಧರ್ಮಕ್ಕೆ ಬರಮಾಡಿಕೊಳ್ಳುವ ಮೂಲಕ ತಮ್ಮ ಮತ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದ ತಂತ್ರಗಾರಿಕೆಯನ್ನೂ ಇಲ್ಲಿ ಕಾಣಬಹುದಾಗಿದೆ. ಭೂಮಿ ತೂಕದ ಮನುಷ್ಯನಾದ ಮುದ್ದೇಗೌಡನನ್ನು ಮೆಚ್ಚಿದ ಶಿವ 'ಇವ್ನ ಏನಾರ ಮಾಡಿ ಚಟಕಾಯಸ್ಕೋಬೇಕಲ್ಲ' ಎಂದು ಹೇಳುವ ಮಾತು ಮತಾಂತರ ಪ್ರಕ್ರಿಯೆಗೆ ಬರೆದ ಮುನ್ನುಡಿಯಂತಿದೆ. ಉಳುತ್ತಿದ್ದ ನೇಗಿಲ ಕುಡ ಹೊಲದೊಳಗೆ ಹೂತಂತಾಗಿ ಮುನ್ನಡೆಯದಿರುವಾಗ ಕಲ್ಯಾಣದ ಬಸವಣ್ಣನವರು ಬಂದು ಮಲ್ಲಿನಾಥ ತೀರ್ಥಂಕರನಿಂದಾಗದ ಕಾರ್ಯವನ್ನು ಮಲ್ಲಿಕಾರ್ಜುನನಿಂದಾಗುವಂತೆ ಮಾಡುವುದು ಮತಾಂತರ ಇತಿಹಾಸದ ಒಂದು ಸ್ಯಾಂಪಲ್‌ನಂತಿದೆ. ಗೌಡನ ಮನೆಯ ಹಾಲಿನ ವಿತರಣೆಯಲ್ಲೂ ಈ ಅಸಮಾನತೆ ಮೊಳಗುತ್ತದೆ. ವೀರಶೈವ ಧರ್ಮಕ್ಕೆ ಮತಾಂತರಗೊಂಡ ಮುದ್ದೇಗೌಡ ಶರಣರಿಗೆ ಮಾತ್ರ ಹಾಲು ಕೊಟ್ಟು ಜೈನರಿಗೆ ನಿರಾಕರಿಸುವುದು ಮತವನ್ನು ಮುಂದು ಮಾಡಿಕೊಂಡು ಮಾನವೀಯತೆಯನ್ನೇ ಕಡೆಗಣಿಸುತ್ತಿದ್ದ ಮನುಷ್ಯ ವರ್ತನೆಯ ಒಂದು ಸಾಕ್ಷಿಯಾಗಿ ನಿಲ್ಲುತ್ತದೆ. ಹಾಗೆಯೇ ಮತಾಂತರವನ್ನು ಪ್ರತಿಭಟಿಸಿ ಪ್ರಶ್ನಿಸಿದ ಜನರನ್ನು ಹಿಂಸಿಸಿ, ಇಲ್ಲವೇ ಕೆಲವರನ್ನು ಕೊಂದು ಭಯ ಹುಟ್ಟಿಸಿ ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುತ್ತಿದ್ದ ಧರ್ಮಪ್ರಭುತ್ವದ ಹಿಂಸಾಮುಖವನ್ನು ಈ ಕಾವ್ಯದ ಅನಂತಯ್ಯನ ಪ್ರಸಂಗ ಅನಾವರಣಗೊಳಿಸುತ್ತದೆ. ಇಲ್ಲಿ ಶರಣಧರ್ಮ ಮಸುಕಾಗಿ ವೀರಶೈವಧರ್ಮ ವಿಜೃಂಭಿಸಿದಂತೆ ಕಾಣುತ್ತದೆ.

'ಇದು ಯಾವ್ದು ನನ್ನದಲ್ಲ ಎಲ್ಲವೂ ನಿಮ್ಮದೆ' ಎಂಬ ಭಾಗದಲ್ಲಿ ಮುದ್ದೇಗೌಡ ಮಹಾಶರಣನಾಗಿ ಕಾಣುತ್ತಾನೆ. ಅವನ ಔದಾರ್ಯ ಈ ಶರಣರು ಕೇಳಿದ್ದನ್ನು ಇಲ್ಲ ಎನ್ನದೆ ಕೊಡುವ ಬಸವಣ್ಣನವರನ್ನು ನೆನಪಿಸುತ್ತದೆ. ಶ್ರೀಶೈಲಕ್ಕೆ ಹೋಗುತ್ತಿದ್ದ ಪರಿಷೆಗೆ ಬಿತ್ತನೆ ಕಾಳುಗಳನ್ನೆಲ್ಲ ಕೊಟ್ಟು ಬಿತ್ತಲು ಒಂದು ಕಾಳು ಉಳಿಯದಿದ್ದರೂ ಬೆಳಗಿನ ಹೊತ್ತಿಗೆ ಅವರ ಹೊಲಗದ್ದೆ, ತೋಟಗಳೆಲ್ಲ ಬೆಳೆಸಮೃದ್ಧಿಯಿಂದ ಶೋಭಿಸುವ ಪವಾಡ ದಾನದ ಸತ್ಫಲವನ್ನು ಸಾಂಕೇತಿಕವಾಗಿ ಹೇಳುತ್ತಿರುವಂತಿದೆ.

ಒಕ್ಕಲಿಗರ ಕುಲಪುರಾಣವಾಗುವ ಮುಂದಿನ ಭಾಗದಲ್ಲಿ ಮುದ್ದೇಗೌಡರ ಮಗಳು ಲಕ್ಷುಮ್‌ದೇವಿಯನ್ನು ಅಲ್ಲಿನ ರಾಜ ಮದುವೆಯಾಗಲು ಬಯಸುವುದು, ಕುಲವಲ್ಲದವನ ಸಂಬಂಧವನ್ನು ಒಪ್ಪದ ಗೌಡರ ನಿರಾಕರಣೆ, ರಾಜನ ಕ್ರೌರ್ಯದ ಮುಖವನ್ನು ಬಲ್ಲವರಾಗಿದ್ದ ಗೌಡರ ಕುಟುಂಬ ರಾತ್ರಿಯಾನ್ ರಾತ್ರಿಯೇ ಊರು ತೊರೆದು ದೂರ ದೂರ ಹೋಗಲು ನಿರ್ಧರಿಸುವುದು. ಇದರಿಂದ ಕುಪಿತನಾದ ರಾಜ ಅವರನ್ನು ಎಳೆತರಲು ದಂಡನ್ನು ಕಳಿಸುವುದು. ನುಗ್ಗಿ ಬರುತ್ತಿರುವ ದಂಡನಿಂದ ತಪ್ಪಿಸಿಕೊಳ್ಳಲು ಅಡ್ಡವಾಗಿ ಬಂದ ನದಿಯ ಮುಂದೆ ಲಕ್ಷುಮ್‌ದೇವಿ ಗಂಗೆಯನ್ನು ದಾರಿ ಬಿಡಲು ಪ್ರಾರ್ಥಿಸುವುದು. ಗಂಗೆ ದಾರಿಕೊಟ್ಟು, ಮತ್ತೆ ಮೊದಲಿನಂತೆ ಹರಿದು ಸೈನಿಕರನ್ನು ತಡೆಯುವುದು, ಆಚೆ ದಡಕ್ಕೆ ಹೋದ ಗೌಡರ ಕುಟುಂಬದಲ್ಲಿ ಲಕ್ಷ್ಮೀದೇವಿ ಇದ್ದಕ್ಕಿದ್ದಂತೆ ಕಣ್ಮರೆಯಾಗಿ ಮುದ್ದೇಗೌಡರ ಮನೆ ದೇವತೆಯಾಗುವುದು ಮುಂತಾದ ಘಟನೆಗಳು ನಿರೂಪಿತವಾಗಿವೆ.

ಈ ಕಾವ್ಯದಲ್ಲಿರುವ ಮತೀಯ ವಿಚಾರಗಳನ್ನು ಹೊರತುಪಡಿಸಿ ನೋಡಿದಾಗ ಕಾವ್ಯ ಅನೇಕ ಪೌರಾಣಿಕ ಅಂಶಗಳನ್ನೊಳಗೊಂಡ ಸುಂದರಕಾವ್ಯವಾಗಿ ಆಕರ್ಷಿಸುತ್ತದೆ.

ಕುರುಬರ ಬೀರಪ್ಪ

ವಚನಕಾರರಲ್ಲಿ ಬೀರಪ್ಪನ ಹೆಸರಿಲ್ಲ. ಶರಣ ಸಂಕುಲದಲ್ಲಿ ಬೀರಪ್ಪ ಇದ್ದ ಉಲ್ಲೇಖ ಎಲ್ಲೂ ಇದ್ದಂತಿಲ್ಲ. ಆದರೆ ಲಕ್ಕಣದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ಮಾತ್ರ ಬೀರಪ್ಪನ ಹೆಸರು ಮೊತ್ತ ಮೊದಲಿಗೆ ಕಾಣಸಿಗುತ್ತದೆ. ಆದರೆ ನಮ್ಮ ಜನಪದ ಗಾಯಕರು ಶರಣರ ಕಥೆಗಳನ್ನು ಹಾಡುವಾಗ ಸಂದರ್ಭ ಒದಗಿಬಂದಾಗೆಲ್ಲ ಹಲವಾರು ಶರಣರ ಹೆಸರುಗಳ ಜೊತೆಯಲ್ಲಿ

ಬೀರಪ್ಪನನ್ನು ಸೇರಿಸಿ ಹಾಡುವುದು ಸಾಮಾನ್ಯವಾಗಿದೆ. ಅಲ್ಲದೆ ಬೀರಪ್ಪನನ್ನು ಕುರಿತ ಒಂದು ಕಾವ್ಯವೂ ನಮ್ಮ ಗಾಯಕರಲ್ಲಿದೆ.

ಬೀರಪ್ಪ ಕಲ್ಯಾಣಪಟ್ಟಣದ ಹೊರವಲಯದಲ್ಲಿ ಕುರಿಕಾಯುತ್ತ ನಿಂತಿದ್ದ. ಆ ಮಾರ್ಗದಲ್ಲಿ ಕಲ್ಯಾಣಪಟ್ಟಣದಿಂದ ಶ್ರೀಶೈಲಕ್ಕೆ ಹೋಗುತ್ತಿದ್ದ ಪರುಷೆಯನ್ನು ಬೀರಪ್ಪ ನೋಡಿ ಅವರಿಗೆ ನಮಸ್ಕರಿಸಿದ. ಅದಕ್ಕವರು 'ನಮ್ಮಿಂದ ಏನಾಗಬೇಕಪ್ಪ?' ಎಂದು ವಿಚಾರಿಸಿದಾಗ

ಸ್ವಾಮಿಗಳೇ ಜೋ ದಿನದಿಂದ
ಕಲ್ಯಾಣದ ಕೈಲಾಸುಕ್ಕೋಗಿ
ಅಣ್ಣ ಬಸವಣ್ಣನವರ ನೋಡ್ಬೇಕು ಅಂತ ಆಸೆ
ನನಗೆ ಹೋಗೋ ಬಗೆ ಹೇಳಿ ಬುದ್ಧಿ

ಎಂದು ಕೇಳಿಕೊಂಡು, ಲಿಂಗಧಾರಣೆಯಿಲ್ಲದವರನ್ನೂ ದ್ವಾರಪಾಲಕರು ಮಹಾಮನೆಯೊಳಕ್ಕೆ ಬಿಡುವುದಿಲ್ಲ ಎಂದರು. ಹಾಗಾದರೆ ನನಗೆ ಲಿಂಗಧಾರ್ಣೆ ಮಾಡಿ ಎಂದು ಬೇಡಿದ ಬೀರಪ್ಪನಿಗೆ

ಅಯ್ಯಾ ನಾವು ಶ್ರೀಶೈಲಕ್ಕೋಯ್ತಾ ಇವಿ
ಶ್ರೀಶೈಲದಲ್ಲಿ ಲಿಂಗಗಳು ಬೇಕಾದಂಗೆ ಸಿಕ್ತವೆ
ನಾವೇ ಅಲ್ಲಿಂದ ಒಂದು ಲಿಂಗ ತಂದು
ನಿನ್ನ ಕುತ್ತಿಗ್ಗೆ ಕಟ್ಟಿ
ನಾವೇ ನಿನ್ನ ಕಲ್ಯಾಕ್ಕೆ ನಮ್ಮೊಟ್ಟಿಗೆ ಕರ್ಕೊಂಡೊಯ್ತೀವಿ'

ಎಂದು ಆಸೆ ಹುಟ್ಟಿಸಿದರು. ಬೀರಪ್ಪ ಶ್ರೀಶೈಲದಿಂದ ಹಿಂಬರುವ ಪರುಷೆಯನ್ನು ಕಾಯುತ್ತ ಕುಳಿತ. ಹಿಂಬಂದ ಪರುಷೆ ಬೀರಪ್ಪನನ್ನೂ ಅವನ ಲಿಂಗದೀಕ್ಷೆ ವಿಷಯವನ್ನೂ ಮರೆತೇಬಿಟ್ಟಿತ್ತು. ಈಗೇನ್ ಮಾಡದಪ್ಪ ಅಂತ ಯೋಚ್ನೆ ಮಾಡುದ್ರು, ಕಡೇಗೆ ಕುರಿಪಿಕ್ಕೆಯನ್ನು ಲಿಂಗವೆಂದು ಹೇಳಿ ಕುತ್ತಿಗೆಗೆ ಕಟ್ಟಿದರು. ತಾವೇ ಬೀರಪ್ಪನನ್ನು ಕಲ್ಯಾಣಕ್ಕೆ ಕರೆದುಕೊಂಡು ಹೋಗಿ

ಈ ಒಣೇಲಿ ಹೋಗಪ್ಪ
ಅಲ್ಲಿ ಬಸವಣ್ಣದೇವರ
ಗುರುಮಠ ಕಾಣುತದೆ

ಎಂದು ಹೇಳಿ ಬಿಟ್ಟು ಹೋದರು. ಬಸವಣ್ಣನವರ ಗುರುಮಠವನ್ನು ಕಾಣದೆ ಪರದಾಡುತ್ತಿದ್ದ ಬೀರಪ್ಪನನ್ನು ಕಾವಲುಗಾರರು ಕರೆದುಕೊಂಡು ಹೋಗಿ ಅಣ್ಣನವರ ದರ್ಶನ ಮಾಡಿಸಿದರು. ಬಸವಣ್ಣನವರಾದರೋ ಬೀರಪ್ಪನನ್ನು ಭಯಭಕ್ತಿಯಿಂದ ಬರಮಾಡಿಕೊಂಡು ಪಾದ ಪೂಜೆ ಮಾಡಿದರು. ಇದರಿಂದ ದಿಗಿಲುಗೊಂಡ ಬೀರಪ್ಪ 'ನನ್ನ ಬುಟ್ಟುಡಿ' ಎಂದು ಗೋಗರೆದ. ಆಗ ಬಸವಣ್ಣನವರು ಬೀರಪ್ಪನ ಕುತ್ತಿಗೆಯಲ್ಲಿದ್ದ ವಸ್ತ್ರವನ್ನು ಬಿಚ್ಚಿ ಅದರಲ್ಲಿರುವ ಕುರಿಪಿಕ್ಕೆಯನ್ನು ತೋರಿಸಿ 'ಇದೇನು ಸ್ವಾಮಿ?' ಎಂದು ಕೇಳಿದರು. ಅದನ್ನು ನೋಡಿದ ಬೀರಪ್ಪ ಅದರಲ್ಲಿ ಕೈಲಾಸ, ಶಿವ ಪಾರ್ವತಿ, ಗಣಪತಿ, ಷಣ್ಮುಖ, ಗಣಗಳೆಲ್ಲವನ್ನು ಕಂಡ. ಆದರೆ ಬಸವಣ್ಣ-ನೀಲಮ್ಮರಿಗೆ ಬರೀ ಕುರಿಪಿಕ್ಕೆ ಕಾಣುತ್ತಿದೆ. ಅಣ್ಣ ಬೀರಪ್ಪನ ಮುಖ ನೋಡಿದರು. ಅದು ಪೂರ್ಣಮೆ ಚಂದ್ರನಂತೆ ಬೆಳಗುತ್ತಿತ್ತು. ಹೀಗೆ ಕುರಿಪಿಕ್ಕೆಯನ್ನೇ ಲಿಂಗ ಮಾಡಿದ ಕಲ್ಯಾಣಪಟ್ಟಣವನ್ನೇ ಕೈಲಾಸ ಮಾಡಿದ ಬೀರಪ್ಪನಿಗೆ ಶರಣು ಮಾಡಿದರು.

ಬಹುಸುಂದರವಾದ ಈ ಪುಟ್ಟ ಕಾವ್ಯದ ಪ್ರಾರಂಭದಲ್ಲೆ ಕಲ್ಯಾಣ ಪಟ್ಟಣ ಹಾಗೂ ಬಸವಣ್ಣನವರ ಬಗೆಗೆ ಜನಪದರು ಇರಿಸಿಕೊಂಡಿರುವ ಗೌರವ ಭಾವನೆ ಎದ್ದುಕಾಣುತ್ತದೆ. ಲಿಂಗಧಾರಣೆಯ ಮಹತ್ವವನ್ನೂ ಇದು ಹೇಳುತ್ತದೆ. ಶ್ರೀಶೈಲದಿಂದ ಲಿಂಗ ತಂದು ಧಾರಣೆ ಮಾಡುತ್ತೇನೆ ಎಂದು ಹೇಳಿದ್ದ ಪರುಷೆ ಬೀರಪ್ಪನಿಗೆ ಕುರಿಪಿಕ್ಕೆಯನ್ನೇ ವಸ್ತ್ರದಲ್ಲಿ ಸುತ್ತಿ ಲಿಂಗವೆಂದು ಧಾರಣೆ ಮಾಡಿಸುವುದು ಒಂದು ಬಗೆಯಲ್ಲಿ ಅಮಾಯಕ ಮುಗ್ಧರನ್ನು ಕೆಲವು 'ಪ್ರತಿಷ್ಠ ಶರಣರು' ವಂಚಿಸುತ್ತಿದ್ದುದರ ಸಾಕ್ಷಿ ಎಂಬಂತಿದೆ.

ಆಡಂಬರ ಮೋಹಿಯಲ್ಲದ ಬಸವಣ್ಣನವರ ವಿಶಾಲ ವ್ಯಕ್ತಿತ್ವ ಇಲ್ಲಿ ಮತ್ತೊಮ್ಮೆ ಅನಾವರಣಗೊಂಡಿದೆ. ಬೀರಪ್ಪನನ್ನು ಬಸವಣ್ಣನವರು ಸಾಕ್ಷಾತ್ ಶಿವನೆಂದು ಭಾವಿಸಿ ಹಾಸಾಸಿ ಅಡ್ಡಬೀಳುವುದು ಬಸವಣ್ಣನವರು ಪಶುಪಾಲನೆ, ಕೃಷಿಯ ಬಗ್ಗೆ ಹೊಂದಿದ್ದ ಉತ್ಕೃಷ್ಟ ಭಾವನೆಗಳಿಗೆ ಸಾಕ್ಷಿಯಾಗಿದೆ. ಇದನ್ನು ಕೃಷಿ ಹಾಗೂ ಪಶುಪಾಲನಾ ಸಂಸ್ಕೃತಿಯ ಘನತೆಯ ಘೋಷಣೆ

ಎಂಬ ಅರ್ಥದಲ್ಲೂ ಗ್ರಹಿಸಲು ಸಾಧ್ಯವಿದೆ. ಕುರಿಪಿಕ್ಕೆಯಲ್ಲೇ ಬೀರಪ್ಪ ಕೈಲಾಸದ ಸಕಲವನ್ನೂ ಕಂಡಂತೆ ಚಿತ್ರಿಸಿರುವುದು ಮತ್ತೊಮ್ಮೆ 'ಕಾಯಕವೇ ಕೈಲಾಸ' ತತ್ತ್ವವನ್ನು ಪ್ರತಿಪಾದಿಸುತ್ತದೆ. ಈ ಸಂದರ್ಭವನ್ನೂ ಜನಪದರು ಅದೆಷ್ಟು ಸೊಗಸಾಗಿ ಚಂದಗಾಣಿಸಿದ್ದಾರೆಂದರೆ ಅದನ್ನು ಓದಿಯೇ ಸವಿಯಬೇಕು !

ಗಾಣಿಗರ ಕಲ್ಲಯ್ಯ

೧೨ನೇ ಶತಮಾನದ ಶರಣ ನಾಮಾವಳಿಯಲ್ಲೆಲ್ಲೂ ಗಾಣಿಗರ ಕಲ್ಲಯ್ಯನ ಹೆಸರಿಲ್ಲ. ಕಲ್ಲಪ್ಪ, ಕಣ್ಣಪ್ಪ ಎಂಬ ಹೆಸರಿನ ಶರಣರಿದ್ದರೂ ಅವರು ಗಾಣದಲ್ಲಿ ಎಣ್ಣೆಕಾಳುಗಳನ್ನು ಅರೆದು ಎಣ್ಣೆ ತೆಗೆದು ಅದನ್ನು ಶರಣರ ಅಗತ್ಯಗಳಿಗೆ ಪೂರೈಸುವ ಕಾಯಕದವರಾಗಿಲ್ಲ. 'ಶಿವತತ್ತ್ವ ಚಿಂತಾಮಣಿ' ನಾಡಿನ ಶರಣರೆಲ್ಲರ ಹೆಸರುಗಳನ್ನು ದಾಖಲಿಸುವ ಕೃತಿಯಾಗಿದ್ದು ಅದರಲ್ಲೂ ಗಾಣಿಗರ ಕಲ್ಲಯ್ಯನ ಹೆಸರಿಲ್ಲ. ಹೀಗೆ ಲಿಖಿತ ಆಕರಗಳಲ್ಲೆಲ್ಲೂ ಲಭ್ಯವಾಗದ ಗಾಣಿಗರ ಕಲ್ಲಯ್ಯನ ಕಥೆ ನಮ್ಮ ಜನಪದರಿಗೆ ಯಾವ ಮೂಲದಿಂದ ಬಂದಿತೋ ತಿಳಿಯದು. ಇಂಥದೊಂದು ಕಾವ್ಯವನ್ನು ನಮ್ಮ ನೀಲಗಾರರು ಹಾಡುತ್ತಾರೆಂಬ ವಿಷಯ ನನಗೆ ಮೈಸೂರು ಆಕಾಶವಾಣಿಯಲ್ಲಿ ಆಡಿಷನ್‌ಗಾಗಿ ಬಂದಿದ್ದ ನೀಲಗಾರ ಮಂಟೇಲಿಂಗಯ್ಯನಿಂದ ತಿಳಿಯಿತು. ಆತ ಗಾಣಿಗರ ಕಲ್ಲಯ್ಯನನ್ನು ಕುರಿತು ಹಾಡುತ್ತೇನೆ ಎಂದಾಗ ಪರೀಕ್ಷಕನಾಗಿ ಕುಳಿತಿದ್ದ ನನಗೆ ಮೈಯೆಲ್ಲ ಕಿವಿಯಾಗಿ ಅಲ್ಲೆ ಸ್ವಲ್ಪ ಹಾಡಿಸಿ ಆತನ ವಿಳಾಸವನ್ನು ತೆಗೆದುಕೊಂಡು ಗೆಳೆಯ ಡಾ.ಬಿ.ಎಸ್. ತಲ್ಕಾಡಿಯೊಡನೆ ಕಲಾವಿದನ ಮನೆಗೆ ಹೋದೆ. ಮೊದಲ ಸಲ ಕಲಾವಿದ ಮನೆಯಲ್ಲಿರಲಿಲ್ಲ. ಎರಡನೆಯ ಸಲ ಕಲಾವಿದನನ್ನು ಭೇಟಿ ಮಾಡಲು ಸಾಧ್ಯವಾಯಿತು. ಮೈಸೂರಿಗೆ ಬಂದು 'ಗಾಣಿಗರ ಕಲ್ಲಯ್ಯ'ನ ಕಾವ್ಯವನ್ನು ಹಾಡಿದನಾದರೂ ನನ್ನ ನಿರೀಕ್ಷೆಯ ಮಟ್ಟಕ್ಕೆ ಆ ಕಾವ್ಯ ಇರಲಿಲ್ಲ. ಅದನ್ನು ಮತ್ತೆ ಮತ್ತೆ ಹಾಡಿಸಿ ಸರಿಪಡಿಸಬೇಕಾಯ್ತು. ಅದನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂಬ ಛಲದಿಂದ ಈ ಅಪರೂಪದ ಕಾವ್ಯವನ್ನು ಬರೆದುಕೊಂಡೆ. ಈ ಕಾವ್ಯವನ್ನು ಈ ಹಿಂದೆ ನಾನು ಕಂಡಿದ್ದ ಯಾವ ಗಾಯಕರೂ ಗಾಣಿಗರ ಕಲ್ಲಯ್ಯನ ಹೆಸರನ್ನು ಹೇಳಿರಲಿಲ್ಲ. ಈ ಕಾರಣದಿಂದ ಈ ಕಾವ್ಯವನ್ನು ಸಂಗ್ರಹಿಸಿಕೊಳ್ಳುವವರೆಗೂ ನನ್ನ ಜೀವ ತಡೆಯಲಿಲ್ಲ. ಹೀಗಾಗಿ ಸಿಕ್ಕಿದಷ್ಟರಲ್ಲಿ ತೃಪ್ತಿಪಟ್ಟು ಕೊಂಡೆ.

ಶರಣರ ದಾಸೋಹಕ್ಕಾಗಿ ನೀಲಮ್ಮ ತಾಯಿ ಕೋರಿಕೆ ಸಲ್ಲಿಸಿ ಹೋಗಿದ್ದ ಎಣ್ಣೆಯನ್ನು ಇಲ್ಲದಂತಾಗಿಸಿ, ತನಗೆ 'ಪಂಚಾರತಿ' ಮಾಡಬೇಕೆಂಬ ಬೇಡಿಕೆ ಸಲ್ಲಿಸಿದ್ದ ಶಿವನು ಈ ಶರಣದಂಪತಿಗಳನ್ನು ಪರೀಕ್ಷಿಸಿದ ರೀತಿ ವಿನೂತನವಾಗಿದೆ.

ಶಿವನೇ ಬಸವಣ್ಣನೊಡನೆ ವೇಷ ಮರೆಸಿಕೊಂಡು ಕಲ್ಲಯ್ಯನ 'ದುಡಮನದ ಪರೀಕ್ಷೆ'ಗಾಗಿ ಹೋಗುತ್ತಾನೆ. ನೀಲಮ್ಮನಿಗೆ ಹಾಗೂ ಈ ಶರಣನ ಪಂಚಾರತಿಗಾಗಿ ಸಿದ್ಧಪಡಿಸಿ ಮಡಗಿದ್ದ ಎಣ್ಣೆಯೆಲ್ಲವೂ ಮಾಯವಾಗಿ ಗಡಿಗೆಗಳಲ್ಲಿ ಒಂದು ತೊಟ್ಟು ಎಣ್ಣೆಯೂ ಇಲ್ಲವಾಗುತ್ತದೆ. "ಶರಣರಿಗೆ ಪಂಚಾರತಿ ಮಾಡಲೇಬೇಕೆಂಬ ಬದ್ಧತೆಯಿಂದಾಗಿ ಶರಣ ಕಲ್ಲಯ್ಯ ಹಾಗೂ ಅವನ ಪತ್ನಿ ಗಿರಿಯಮ್ಮ ಮಿಂದು ಮಡಿಯುಟ್ಟು ಕಡ್ಡಿ-ಕರ್ಪೂರಗಳಲ್ಲಿ ಬೆಳಗಿ ತಮ್ಮ ಡಿಂಬಗಳನ್ನು ಅಳಿದು ಕೊಬ್ಬನ್ನು ತಂದು ಗಸಗಸನೆ ಹಿಂಡುತ್ತಾರೆ.

ಗಂಡ ತನ್ನ ಬಲಗೈನ ಐದು ಬೆಳ್ಳುಗೆ
ಹೆಂಡ್ತಿ ತನ್ನ ಎಡಗೈನ ಐದು ಬೆಳ್ಳುಗೆ
ಅಳ್ಳೆಯನ್ನು ಸುತ್ತಿ
ಆ ಅಳ್ಳೆಬೆಳ್ಳುಗಳ
ಬಾಂಡದಲ್ಲಿರೋ ರಸುಕ್ಕೆ ಅಜ್ಜೊಂಡು
ಅಗ್ನಿದೇವ್ತೆಯನ್ನು ನೆನುದ್ರು
ಆಗ ದಿಗ್ಗನೆ ಬೆಳ್ಳುಗಳ ದೀಪ ಹತ್ಕೊಂಡು -

ತಮ್ಮ - ಏಡು ಹಸ್ತಗಳ ಜೋಡಿಸಿ ಕೈ ಮುಗ್ದು
ಪರಶಿವನಿಗೆ ಪಂಚಾರ್ತಿ ಎತ್ತುತಾರೆ |

ಇಂಥ ಭಕ್ತರನ್ನು ಮೆಚ್ಚಿ ಶಿವ ತನ್ನ ಕೈಲಾಸಕ್ಕೆ ಕರೆದುಕೊಂಡು ಹೋಗುತ್ತಾನೆ.

ಶಿವನಿಂದ ಗಾಣದ ಕಲ್ಲಯ್ಯನ 'ದುಡಮನದ ಪರೀಕ್ಷೆ,' ಕಾಯಕ ಜೀವಿಗೆ ಇರಬೇಕಾದ 'ಬದ್ಧತೆ'ಯನ್ನು ತಿಳಿಸುವುದು ಮುಖ್ಯ ಉದ್ದೇಶ. ಇದರಲ್ಲಿ ಬರುವ ಪವಾಡ ಸದೃಶ ಘಟನೆ ಕಾಯಕದಲ್ಲಿ ಕಾಯವನ್ನು ಪರಿಪೂರ್ಣವಾಗಿ ತೊಡಗಿಸಿಕೊಳ್ಳಬೇಕಾದ ಕ್ರಮವನ್ನು ಬಿತ್ತರಿಸುತ್ತದೆ. ಇರುವ ಶಕ್ತಿ-ಸಾಮರ್ಥ್ಯಗಳನ್ನೆಲ್ಲ ದುಡಿಸಿಕೊಂಡು ಮಾಡುವ ಕಾಯಕ ಶಿವನಿಗೆ ತೃಪ್ತಿ. ಅದರಿಂದಲೇ ಲೋಕಕ್ಕೆ 'ಬೆಳಗು' - 'ಬೆಳಕು' ಎಂಬ ಭಾವ ಇಲ್ಲಿದೆ.

ಸಿದ್ಧರಾಮೇಶ್ವರ

ಹನ್ನೆರಡನೇ ಶತಮಾನದ ಸುಪ್ರಸಿದ್ಧ ವಚನಕಾರರಲ್ಲಿ ಸಿದ್ಧರಾಮನೂ ಒಬ್ಬ. 'ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬುದು ಅವನ ವಚನಗಳ ಅಂಕಿತ. ಸೊನ್ನಲಿಗೆಯ ಕುಡಿಯ ಒಕ್ಕಲಿಗ[24] ಮುದ್ದೇಗೌಡ ಮತ್ತು ಸುಗ್ಗವ್ವೆಯರ ಮಗನಾದ ಸಿದ್ಧರಾಮನ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಸಾಧನೆಗಳನ್ನು ಮೊತ್ತಮೊದಲಿಗೆ ಕಥೆ ಮಾಡಿ ಹಾಡಿದವನು ಕವಿ ರಾಘವಾಂಕ. ಅವನ 'ಸಿದ್ಧರಾಮಚರಿತ್ರ'ದಿಂದ ಹಿಡಿದು ಇಂದಿನ ಜಯದೇವಿ ತಾಯಿ ಲಿಗಾಡೆಯವರ 'ಸಿದ್ಧರಾಮೇಶ್ವರ ಪುರಾಣ'ದ ವರೆಗೂ ಸಿದ್ಧರಾಮನನ್ನು ಕುರಿತು ಹಲವಾರು ಕಾವ್ಯಗಳು ಮಾಹಿತಿಗಳನ್ನು ಒದಗಿಸುತ್ತವೆ. ಈ ಜನಪದ ಕಾವ್ಯವೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಶಿಷ್ಟಕಾವ್ಯಗಳಿಗೆ ಸ್ವಲ್ಪಮಟ್ಟಿಗೆ ಋಣಿಯಾಗಿರುವಂತೆ ಕಂಡರೂ ಜಾನಪದದ ಗಣಿಯಲ್ಲೇ ಸಿಕ್ಕಿದ ಒಂದು ಅಪೂರ್ವ ವಜ್ರದಂತೆ ಕಂಗೊಳಿಸುತ್ತದೆ.

ಜನಪದ ಕಾವ್ಯ 'ಸಿದ್ಧರಾಮೇಶ್ವರ'ದ ಪ್ರಾರಂಭವೇ ರಾಘವಾಂಕನ ರೀತಿಯಿಂದ ದೂರವಾಗಿ ನಿಲ್ಲುತ್ತದೆ. ಅದ್ರಿಶಿರ - ಊರ್ದ್ವಶಿರ ಅವರಿಗೆ ಭೃಂಗಿಯ ಶಾಪ ಇತ್ಯಾದಿಗಳು ಜನಪದರಿಗೆ ಗ್ರಹಿಸಲು ಸಾಧ್ಯವಾದಂತೆ ಕಾಣುವುದಿಲ್ಲ. ಸಿದ್ಧರಾಮನ ಅವತರಣಕ್ಕೆ ಜನಪದರು ಸೃಷ್ಟಿಸಿರುವ ಘಟನೆ ಹೊಸತನದಿಂದ ಕೂಡಿದೆ. ಅಲ್ಲದೆ ಕಲಾವಿದ ಸಿದ್ಧಶೆಟ್ಟರ ಕಥನತಂತ್ರವಾದ ಚುರುಕು ಸಂಭಾಷಣೆಗಳು ಈ ಕಾವ್ಯದಲ್ಲಿ ವಿಜೃಂಭಿಸಿವೆ.

ಕರ್ಮಯೋಗಿಯೆಂದೇ ಖ್ಯಾತನಾದ ಸಿದ್ಧರಾಮನ ಅವತಾರಕ್ಕೆ ಕಾರಣವಾಗುವ ಸನ್ನಿವೇಶದಲ್ಲಿ ಬಂದಿರುವ ವಸ್ತು, ಪ್ರತಿಭಟನೆಯ ಹಿನ್ನೆಲೆಯಲ್ಲಿ ಅವಲೋಕಿಸಲು ಗ್ರಾಸವಾಗುತ್ತದೆ. ಶಿವಸೇವೆಗೆ ತಡವಾಯಿತೆಂದು ಹೊರಟು ನಿಂತ ನಂದೀಶ್ವರನಿಗೆ ಅವನ ಹೆಂಡತಿ ಕಾಮಧೇನು ಕೇಳುವ ಪ್ರಶ್ನೆಗಳಲ್ಲಿ ಹೊಸತನವಿದೆ. ಈ ಪರಿಯನ್ನು ನೋಡಿ :

'ಲೋಕದ ತಂದೆ-ತಾಯಿಗಳಾದ ಈಶ್ವರ-ಪಾರ್ವತಿಯರು ಜಗತ್ತಿನ ಜೀವಿಗಳಿಗೆಲ್ಲ ಪಡಿ ಅಳೆಯುವುದಕ್ಕೆ ಹೋಗುತ್ತಿದ್ದಾರೆ. ಅದ್ದರಿಂದ ನಾನು ಬೇಗ ಹೋಗಬೇಕು' ಎಂದು ಆತುರದಲ್ಲಿ ನಂದೀಶ್ವರ ಹೊರಟು ನಿಂತಾಗ ಅವನ ಪತ್ನಿ ಕಾಮಧೇನು ಕುಪಿತಳಾಗಿ

---

24. 'ಕುಡಿಯ' ಎಂಬುದು ಪದ 'ಒಕ್ಕಲಿಗ' ಪದಕ್ಕಿರುವ ಪರ್ಯಾಯ ಪದಗಳಲ್ಲಿ ಒಂದು. ಇದು ಕವಿರಾಜಮಾರ್ಗದಲ್ಲೂ ಪ್ರಯೋಗವಾಗಿದೆ (೧-೬೫), ವಿರೂಪಾಕ್ಷ ಪಂಡಿತನ 'ಚನ್ನಬಸವಪುರಾಣ'ದಲ್ಲಿ 'ಸೊನ್ನಲಿಗೆಯೊಳಗೊಪ್ಪುತಿರ್ಪ ಕುಡಿಯೊಕ್ಕಲಿಗರ ರಂಜಿಸುವ ಗರ್ಭಂಗಳಿಂದುದಿಸಿ (೫೯-೩೭) ಎಂದಿದೆ, ಮೂರನೇ ಮಂಗರಸನ 'ಜಯನೃಪಕಾವ್ಯ'ದಲ್ಲಿ ಕುಡಿಯರಳುವುಳ್ಕೆಗಳಂ ಕೆಂಪಾದ ಪೊಲಂಗಳಂ (೧-೩೭) ಎಂಬ ಪ್ರಯೋಗವಿದೆ. ಈ ಪದಕ್ಕೆ ಸಂಶೋಧಕರಾದ ಹ.ಕ. ರಾಜೇಗೌಡರು ಹಳಗನ್ನಡ ಕಾವ್ಯದಿಂದ ಕೊಟ್ಟಿರುವ ಉದಾಹರಣೆ ಹೀಗಿದೆ : ಈಶ್ವರಂ ಕಾಡೊಳಿರ್ದ ಧಾನ್ಯಗಳನೊಕ್ಕಿ ತರುವುದಕ್ಕೆ ವೊಕ್ಕಲಿರ್ಗೆ ತನ್ನ ವೃಷಭನಂ ಕೊಟ್ಟು ಆ ಭೂಮಿಯೊಳು ಬಿತ್ತಿ ಬೆಳೆಯಿರಿ ಎಂದು ನೇಮಿಸೆ ಆಮೇಲೆ ವೊಕ್ಕಲಿಗರು ಬಿತ್ತಿ ಬೆಳೆದು ಇರುವೆ ಮೊದಲಾದ ಎಂಭತ್ತು ನಾಲ್ಕು ಜೀವರಾಶಿಗಳಿಗೆಲ್ಲ ಅನ್ನಮಂ ಕೊಟ್ಟುದರಿಂ ನೀನೇ ಲೋಕಕ್ಕೆ ಜೀವನಕಾರಿಯೆಂದು ದೇವತೆಗಳಾಗಿರುವವರು ಕೊಂಡಾಡುವರು. ಆ ವಂಶದೊಳೆ ಅನೇಕ ಜಾತಿಗಳುತ್ಪತ್ತಿಯಾದವು. ಅವರಲ್ಲಿ ಗಂಗ, ಕುಡಿಯ, ಮೊಸರ, ಕುಂಚ, ರಡ್ಡಿ, ನೊಣಬ, ಸಾದ, ಗುಡಿ, ದಾಸ ಮೊದಲಾದ ಭೇದಂಗಳಾಗಿ ವರ್ತಿಸುವರು. ಹ.ಕ. ರಾಜೇಗೌಡರ 'ಕನ್ನಡ ನಾಡಿನ ಒಕ್ಕಲಿಗರು' ಲೇಖನಕ್ಕಾಗಿ -

ನೋಡಿ : ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ : ಸಂಪಾದಕರು ಡಾ.ಕೆ. ಚಿನ್ನಪ್ಪಗೌಡ, ಬೆಳ್ಳಿಹಬ್ಬ ಆಚರಣಾ ಸಮಿತಿ, ಒಕ್ಕಲಿಗರ ಯಾನೆಗೌಡರ ಸೇವಾ ಸಂಘ, ಮಂಗಳೂರು. ೧೦೦೦, ಪು.೧೮೮-೨೦೪.

'ಹೊತ್ಕೊಂಡು ತಿರ್ಗಕೂ ಇಷ್ಟೊಂದು ಆತುರ್ಯಾ?'
'ಅದು ನನ್ನ ಕರ್ತವ್ಯ ಕಣೆ!'
'ಕರ್ತವ್ಯ ಅಲ್ಲ ಕಣ್ರೆ ಅದು ಜೀತ!'

ಎಂಬ ಮಾತುಗಳು ಬೆರಗು ಮೂಡಿಸುತ್ತವೆ. ನಾವು ಇಂದು ಪ್ರಭಾವಿಗಳನ್ನು ರೌಡಿ ಮಾಫಿಯಾಗಳನ್ನು ಎದುರು ಹಾಕಿಕೊಳ್ಳಲು ಹಿಂದೇಟು ಹಾಕುವಾಗ ನಮ್ಮ ಜನಪದರು ಪರಮೇಶ್ವರ-ಪಾರ್ವತಿಯಂಥ ಜಗದಾದಿ ತಂದೆ-ತಾಯಿಗಳನ್ನೇ ಪ್ರಶ್ನಿಸುತ್ತಾರೆ ಎಂಬುದು ಸುಲಭದ ಮಾತಲ್ಲ. ಇಂಥ ಪ್ರಶ್ನೆಗಳು ಈ ಕಥನದಲ್ಲಿ ಮತ್ತೆ ಮತ್ತೆ ಬರುತ್ತವೆ. ಕಾಮಧೇನು ಶಿವನ ವಿಚಾರದಲ್ಲಿ

'ತಂದೆ ತಾಯಿ ಕಂಡಿದ್ದೋರ್ಗೆ
ತಂದೆ ತಾಯ್ಗಳ್ ಸುಖ ಅಂದ್ರೇನು
ಅನ್ನೋದು ಅರ್ಥವಾಯ್ತದೆ
ಅಂದ್ಮೇಲೆ ಪರಮೇಶ್ವರಂಗೆ ಹೆಂಗ್
ಅರ್ಥವಾಯ್ತದೆ ಹೇಳಿ?'

ಎಂಬ ಮಾತು ಶಿವನನ್ನು ಚಿಂತೆಗೀಡುಮಾಡುತ್ತದೆ. ಹೀಗೆ ಪ್ರಶ್ನಿಸಿದ ಕಾರಣದಿಂದ ಶಿವ ಭೂಮಿಯಲ್ಲಿ ತಂದೆ-ತಾಯಿಗಳಿಗೆ ಮಗನಾಗಿ ಹುಟ್ಟಬೇಕು ಎಂದು ತೀರ್ಮಾನಿಸುತ್ತಾನೆ. ಪ್ರಶ್ನಿಸಿದ ಕಾಮಧೇನು ಭೂಮಿಯಲ್ಲಿ ಸುಗ್ಗವ್ವೆಯಾಗಿ ಹುಟ್ಟಬೇಕಾಗುತ್ತದೆ. ನಂದೀಶ್ವರ ಮುದ್ದೇಗೌಡ ಎಂಬ ಹೆಸರಿನಿಂದ ಸುಗ್ಗವ್ವೆಗೆ ಪತಿಯಾಗಿ ಹುಟ್ಟಾತ್ತಾನೆ.

ಬಂಜೆ ಎಂಬ ಕಾರಣಕ್ಕೆ ಭಿಕ್ಷೆ ತಿರಸ್ಕರಿಸಿದ ರೇವಣಸಿದ್ದರಿಗೆ ಸುಗ್ಗವ್ವನ ಪ್ರಶ್ನೆ

'ಮಕ್ಕಳಿಲ್ಲದವರ ಕೈನ ಭಿಕ್ಷಾ ಬ್ಯಾಡಾಂತಂದ್ರೆ
ಮಕ್ಕಳ ಫಲವನ್ನು ನನ್ನಣಲಿ ಬರೀದೆ ಇರೋದು
ನಿಮ್ಮ ತಪ್ಪಲ್ಲವೆ?'

ಎಂದು ಪ್ರಶ್ನಿಸುವ ಸುಗ್ಗವ್ವೆಗೆ ರೇವಣಸಿದ್ಧರ ಸಮಾಧಾನದ ಮಾತು ಸೌಮ್ಯವಾದ ಸುಂದರ ನುಡಿಯಾಗಿದೆ.

'ತಾಯಿ ಆ ಶಿವನನ್ನು ಭಕ್ತಿಯಿಂದ ಪೂಜೆ ಮಾಡು
ನೀನು ಬರೀ ತಾಯಲ್ಲ ಮಹಾತಾಯಿ ಆಗ್ತೀಯ'

ಎಂಬ ಭರವಸೆಯ ಬೆಳಕನ್ನು ಬಿತ್ತುತ್ತಾರೆ. ಸುಗ್ಗವ್ವೆ ಹೊಟ್ಟೆಯಲ್ಲಿ ಶಿವನೇ ಮಗುವಾಗಿ ಹುಟ್ಟಿದಾಗ ಪಾರ್ವತಿಯೇ ಹೆರಿಗೆ ಮಾಡಿಸುವುದಲ್ಲದೆ ಶಿವನಿಗೆ ಎದೆಹಾಲು ಕುಡಿಸುತ್ತಾಳೆ. ಆಗ ಶಿವ

'ಕೈಲಾಸ್ದಲ್ಲಿ ಮಡ್ದಿ ನೀನು
ಭೂಲೋಕ್ದಲ್ ತಾಯಾದೆ
ನನ್ಗೆ ಹಾಲು ಕುಡಿಸೀದೆ
ಈ ಒಂದು ಕಾರ್ಣದಿಂದ
ಈ ಭೂಮಿಲಿರೊ ಹೆಣ್ಗಳೆಲ್ಲ
ನನ್ಗೆ ತಾಯಿ ಸಮಾನ'

ಎಂದು ಹೇಳಿದ ಶಿವಸಿದ್ಧರಾಮ ಜೀವನಪರ್ಯಂತ ಲೋಕದ ಎಲ್ಲ ಹೆಂಗಸರನ್ನೂ ತಾಯಿಯಾಗಿಯೇ ಕಂಡು ಅಖಂಡ ಬ್ರಹ್ಮಚಾರಿ ಎನಿಸಿದ.

ಸಿದ್ಧರಾಮ ಹುಟ್ಟಿದಾಗ ಚಿನ್ನದ ಮಳೆ ಹುಯ್ಯಿತೆನ್ನುವುದು ಆ ನೆಲದ ಸಮೃದ್ಧಿಗೆ ಸಂಕೇತವಾಗಿ ಬಂದಿದೆ. ಇದರಿಂದ ರಾಣಿ ಚಾಮಲದೇವಿಯ ಬೊಕ್ಕಸವೆಲ್ಲ ಚಿನ್ನದಘಟ್ಟಿಗಳಿಂದ ತುಂಬಿಕೊಳ್ಳುತ್ತದೆ. ಮುಂದೆ ಸಿದ್ಧರಾಮನ ಸಮಾಜ ಸೇವೆಗೆ ಚಾಮಲದೇವಿ ನೆರವಾಗಿ ನಿಲ್ಲುತ್ತಾಳೆ. ಹೀಗೆ ಚಿನ್ನದ ಮಳೆ ಹೂದದ್ದರಿಂದ ಆ ಊರಿಗೆ ಸುವರ್ಣಪುರ (ಸೊಲ್ಲಾಪುರ, ಸೊನ್ನಲಿಗೆ) ಆಯಿತಂತೆ.

ಸಿದ್ಧರಾಮ ಕರುಗಳನ್ನು ಕಾಯಲು ಹೊಲಕ್ಕೆ ಹೋಗುವುದು ಅಲ್ಲಿಗೆ ಮಲ್ಲಯ್ಯ ಬಂದು

"ನನ್ಗೆ ಹೊಟ್ಟೆ ಬಾಳ ಹಸ್ಕ್ಯಾಗದೆ
ಈ ತಕ್ಷಣವೆ ನನ್ಗೆ ತಿನ್ನಕೆ ಏನಾರೂ ಕೊಟ್ಟು
ಈ ಜೀವ ಉಳುಸ್ಕೋಪ್ಪಾ"

ಎಂದು ಕೇಳಿಕೊಳ್ಳುವುದು - ಹಾಲೋಗರ-ಮೇಲೋಗರ ತರುತ್ತೇನೆಂದು ಮನೆಗೆ ಹೋದ ಸಿದ್ದರಾಮ ಹಿಂದಿರುಗಿ ಬರುವಷ್ಟರಲ್ಲಿ ಮಲ್ಲಯ್ಯ ಮರೆಯಾಗಿರುವುದು - ಶ್ರೀಶೈಲದ ಪರಿಷೆ ಸಿದ್ದರಾಮನಿಗೆ ಮಲ್ಲಯ್ಯನನ್ನು ತೋರಿಸುತ್ತೇವೆಂದು ಕರೆದುಕೊಂಡು ಹೋಗುವುದು - ಅವರು ತೋರಿಸಿದ ಮಲ್ಲಿಕಾರ್ಜುನ ಲಿಂಗವೇ ಮಲ್ಲಯ್ಯ ಎಂದು ತೋರಿಸಿದಾಗ ಅದು ಮಲ್ಲಯ್ಯ ಅಲ್ಲ ಕಲ್ಲಯ್ಯ ಎಂದು ಹೇಳಿ ಮಲ್ಲಯ್ಯನನ್ನು ಹುಡುಕಿಕೊಂಡು ಬೆಟ್ಟಗುಡ್ಡಗಳಲ್ಲೆಲ್ಲ ಅಲೆಯುವುದು - ಈ ಎಲ್ಲ ಸಂದರ್ಭಗಳೂ ರಾಘವಾಂಕನನ್ನೇ ಅನುಸರಿಸಿದಂತಿದೆ. ಆದರೆ ಸಿದ್ದರಾಮನ ಕಾಲು, ಮಂಡಿ, ತೋಳು, ಮೊಣಕಾಲುಗಳೆಲ್ಲ ಮುರಿದಂತಾಗಿ ಬಿದ್ದರೂ ಅವನು ಎದೆಯಲ್ಲಿ ತೆವಳುಕೊಂಡು ಹೋಗುವುದು - ಈ ಎಲ್ಲವೂ ಮೈದಾಳ ರಾಮಯ್ಯನ ಕಥೆಗೆ ಋಣಿಯಾಗಿರುವಂತೆ ಕಾಣುತ್ತದೆ.

ಶಿವನನ್ನು ಕಂಡ ಸಿದ್ದರಾಮ ಕೈಲಾಸದಿಂದ ಭೂಮಿಗೆ ಹಿಂದಿರುಗಿದ ಮೇಲೆ ಲೋಕೋಪಯೋಗಿ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಸಿದ್ದರಾಮನ ಲೋಕೋಪಯೋಗಿ ಕಾರ್ಯಗಳನ್ನು ಅಂಥ ಕಾರ್ಯಗಳ ನಿರೀಕ್ಷೆಯಲ್ಲಿ ಬಹುವರ್ಷಗಳಿಂದ ಇರುವ ಜನಪದ ಕವಿಗಳು ಅತಿಶಯವಾಗಿ ಹೇಳಿದ್ದಾರೆ. 'ಕೆಲಸ ಇಲ್ಲದವರಿಗೆ ಕೆಲಸ ಕೊಡಿಸಿದ' ಎಂಬ ಮಾತು ಗಮನಾರ್ಹ. ಈ ಸನ್ನಿವೇಶದ ವಿವರಣೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರಗಳು ಮಾಡಬೇಕಾದ ಜನಪರ ಕೆಲಸಗಳನ್ನೇ ನಿರೂಪಿಸುತ್ತಿದೆ. ಇದೊಂದು ರೀತಿಯಲ್ಲಿ ಬಡವರ ಸಾರ್ವಜನಿಕ ಅಹವಾಲಾಗಿದೆ.

'ಕಾಯ ಸಹಿತ ಕೈಲಾಸಕ್ಕೆ ಹೋಗಿ ಬಂದಾತ ಸಿದ್ದರಾಮ ಮಾತ್ರ' ಎಂದು ಕವಿ ಹಾಡುವುದು ವಿಶೇಷವಾಗಿದೆ. 'ಕಾಯಕವೇ ಕೈಲಾಸ' ಎಂಬ ಮಾತಿಗೆ ಇದು 'ಪವಾಡ ಸಾಕ್ಷಿ'ಯಾಗಿದೆ ಎನ್ನಬಹುದು.

ಇಡೀ ಕಾವ್ಯ ವೇಗವಾಗಿ ಸಾಗುತ್ತದೆ. ಓದಲಿಕ್ಕೆ-ಕೇಳಲಿಕ್ಕೆ ಬೇಸರವಾಗದ ಹಾಗೆ ಸೂಜಿಗಲ್ಲಿನಂತೆ ಸೆಳೆಯುತ್ತದೆ. ಇದಕ್ಕೆ ಕಾರಣ ಗಾಯಕನ ಭಾಷೆಯ ಬಳಕೆ ಹಾಗೂ ಮಿಂಚಿನಂತೆ ಬಂದು ಹೋಗುವ ಚುರುಕಾದ ಸಂಭಾಷಣೆಗಳು 'ಸಡಾರ್ನೆ', 'ಸಿಬ್ರಿ' ಮುಂತಾದ ಗ್ರಾಮೀಣ ಪದಗಳು ಕೇಳುಗನಿಗೆ ಏಕತಾನತೆ ಅಥವಾ ಬೋರ್ ಆಗದ ಹಾಗೆ ನೋಡಿಕೊಳ್ಳುತ್ತವೆ. ಸೊಗಸಾದ ನಿರೂಪಣೆ, ಸುಂದರವಾದ ವಿವರಣೆ, ತರ್ಕಬದ್ಧ ಸಂಭಾಷಣೆಗಳಿಂದಾಗಿ ಈ ಜನಪದ ಕಾವ್ಯ ಒಂದು ಮಹಾಕಾವ್ಯವೇನೋ ಎಂಬ ಭವ್ಯತೆಯ ಅನುಭವವನ್ನುಂಟುಮಾಡುತ್ತದೆ.

ಅಕ್ಕಮಾದೇವಿ

ಅಕ್ಕಮಹಾದೇವಿ ಅಗ್ರಶ್ರೇಣಿಯ ವಚನಕಾರ್ತಿ. "ಮಹಾದೇವಿಯಕ್ಕನ ಜೀವನಚರಿತ್ರೆ ಹೆಣ್ಣಿನ ಗೌರವ ಸಾಧನೆಯ ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾಪ್ರಕರಣ."[25] ಆದರೆ ಅವಳ ಜೀವನವನ್ನು ಕಾವ್ಯವಾಗಿಸಿದ ಕವಿಗಳಲ್ಲಿ ಒಮ್ಮತವಿಲ್ಲದೆ ಗೋಜುಗೋಜಲಾಗಿದೆ. ಶರಣರಿಗೆ ಹತ್ತಿರದ ಕಾಲದಲ್ಲಿ ಬದುಕಿದ್ದ ಹರಿಹರನನ್ನು ಒಪ್ಪದ ಮುಂದಿನ ಕೆಲವು ಕವಿಗಳು ಶೂನ್ಯ ಸಂಪಾದನೆಯ ಜಾಡಿನಲ್ಲಿ ಸಾಗಿ ಐತಿಹಾಸಿಕಾಂಶವೆಲ್ಲ ಮಸುಳಿ ಹೋಗುವಂತೆ ಮಾಡಿದರು. ಹರಿಹರನ 'ಮಹದೇವಿಯಕ್ಕಗಳ ರಗಳೆ'ಯ ತರುವಾಯದಲ್ಲಿ ಪಾಲ್ಕುರಿಕೆ ಸೋಮನಾಥನ 'ಪಂಡಿತಾರಾಧ್ಯ ಚರಿತ್ರೆ' ಚಾಮರಸನ 'ಪ್ರಭುಲಿಂಗಲೀಲೆ' ಎಳಂದೂರು ಹರೀಶ್ವರನ 'ಪ್ರಭುದೇವರ ಪುರಾಣ' ಚನ್ನಬಸವಾಂಕನ 'ಮಹಾದೇವಿಯಕ್ಕನ ಸಾಂಗತ್ಯ' ಮುಂತಾದ ಕೃತಿಗಳು ರಚನೆಯಾಗಿವೆ. ಹರಿಹರನ ಕಥೆಯನ್ನು ಒಪ್ಪದವರಿಗಾಗಿ "ಅಲ್ಲಮನ ಜೀವನ ಚರಿತ್ರೆಯನ್ನು ತಿದ್ದಲು ಯಾವ ಧಾರ್ಮಿಕ ಅಂಧಶ್ರದ್ಧೆ ಕಾರಣವಾಯಿತೋ ಅದೇ ಇಲ್ಲಿಯೂ ಕೆಲಸ ಮಾಡಿರುವಂತೆ ಕಾಣುತ್ತದೆ"[26] ಎಂಬ ಹೇಳಿಕೆಯನ್ನು ಇಲ್ಲಿ ನೆನೆಯಬೇಕಾಗಿದೆ.

---

25. ಎಂ.ಆರ್. ಶ್ರೀನಿವಾಸಮೂರ್ತಿ, ವಚನ ಧರ್ಮಾಸಾರ, ಪ್ರಸಾರಾಂಗ, ಮೈಸೂರು. ೧೯೬೮. ಪು.೬೦೩
26. ಎಂ. ಚಿದಾನಂದಮೂರ್ತಿ 'ಶೂನ್ಯ ಸಂಪಾದನೆಯನ್ನು ಕುರಿತು' ಮೈಸೂರು. ೧೯೬೨. ಪು.೬೨.

ಭಿನ್ನ ಭಿನ್ನ ಮೂಲದಲ್ಲಿ ಬರುವ ಅಕ್ಕಮಹಾದೇವಿ ಕಥೆಯನ್ನು ಜನಪದರು ಗ್ರಹಿಸಲಾಗದೆ ಹೋದ ಕಾರಣದಿಂದ ಜನಪದ ಕಾವ್ಯದಲ್ಲಿ ಕಥೆ ಅವರ ಹಿಡಿತಕ್ಕೆ ದಕ್ಕಿದಂತೆ ಕಾಣುವುದಿಲ್ಲ. ಪ್ರಾರಂಭದಲ್ಲಿ ಬರುವ ಸಂಭಾಷಣೆಗಳು ಸ್ವಾರಸ್ಯ ಪೂರ್ಣವಾಗಿದ್ದರೂ ಕಥೆಯ ಓಘ ಕುಂಟುವುದನ್ನು ಗಮನಿಸಬಹುದಾಗಿದೆ. ಆದರೆ ಕರಪಾಲದವರು ಚಾಮರಸನ ಮಾರ್ಗದಲ್ಲಿ ಅಕ್ಕಮಹಾದೇವಿಯ ಕಥೆಯನ್ನು ಸುದೀರ್ಘವಾಗಿ ಹಾಡುತ್ತಾರೆ.

ಪ್ರಸ್ತುತ ಕಾವ್ಯವು ಕೈಲಾಸದಲ್ಲಿ ಪಾರ್ವತಿಯ ಸಾಕುಮಗಳಾದ ಶಿವಮಣಿಯ ಸಂಗೀತ ನೃತ್ಯದಿಂದ ಪ್ರಾರಂಭವಾಗುತ್ತದೆ. ಇವಳ ಅಮೋಘವಾದ ಸಂಗೀತ ನೃತ್ಯಗಳಿಗೆ ಮರುಳಾದ ಗಣಗಳಲ್ಲೊಬ್ಬನಾದ ಶಿವಗಣನೆಂಬುವನು ತಾನೆಲ್ಲಿದ್ದೇನೆಂಬುದನ್ನು ಮರೆತು ಅತಿಕ್ರಮವಾಗಿ ನಡೆದುಕೊಳ್ಳುತ್ತಾನೆ. ಇದರಿಂದ

ಕುಪಿತನಾದ ಪರಮೇಶ್ವರನು
ಕಾಮನ ಗೆಲ್ಲದ ಗಣಗಳು ಇನ್ನು
ಕೈಲಾಸದಲ್ಲಿ ಇರುವಂತಿಲ್ಲ
ಈಗಲೆ ನೀವು ಭೂಮಿಗೆ ಹೋಗಿ
ಕಾಮದ ಕರ್ಮವ ತಿಳಿದು ಬನ್ನಿರಿ

ಎಂದು ಶಪಿಸುತ್ತಾನೆ. ಈ ಶಾಪವನ್ನು ಪ್ರತಿಭಟಿಸಿದ ಶಿವಗಣ ತಾವು 'ಅರ್ಧನಾರೀಶ್ವರ'ರಾಗಿ ಹೇಗೆ 'ಯೋಗೀಶ್ವರ' ಎಂಬ ಹೆಸರಿಗೆ ಸಲ್ಲುತ್ತೀರಿ ಎಂಬ ತರ್ಕದಿಂದ ತಡೆಯೊಡ್ಡುತ್ತಾನೆ. ಅದಕ್ಕೆ ಶಿವನು

ನಿನ್ನ ಮಾತು ನೀನಾಡಿದ ಮಾತಲ್ಲ
ಇದು ಲೋಕವೆ ಕೇಳುವ ಮಾತಪ್ಪ
ಇಂತೆ ಕಟ್ಟೆಸ್ರ ನಾನ್ ಕಳಕೊಳ್ಳಬೇಕು
ಗಿರಿಜೆಗು ನನಗೂ ಈ ಮಾತು ಸಂದಿತು

ಎಂದು ಹೇಳಿ ತಾವೂ ಭೂಮಿಯಲ್ಲಿ ಅವತರಿಸಲು ನಿರ್ಧರಿಸುತ್ತಾನೆ. ಶಿವನು ಅಲ್ಲಮಪ್ರಭುವಾಗಿ ಪಾರ್ವತಿ ಅಕ್ಕಮಹಾದೇವಿಯಾಗಿ ಶಿವಮಣಿ ಅಕ್ಕನಾಗಮ್ಮನಾಗಿ ಮತ್ತು ಶಿವಗಣ ಸುಧೀರ ಕೂಚಪ್ಪಯ್ಯನಾಗಿ ಹುಟ್ಟುತ್ತಾರೆ.

ಉಡುತಾಳು ಗ್ರಾಮದ ಶಂಭುಲಿಂಗಯ್ಯ-ಲಿಂಗಮ್ಮರ ಮಗಳಾಗಿ ಹುಟ್ಟಿದ್ದ ಅಕ್ಕಮಹಾದೇವಿಯನ್ನು ರಾಜ ಸುಧೀರ ಕೂಚಪ್ಪಯ್ಯ ಕಂಡು ಮರುಳಾಗಿ ಮದುವೆಯಾಗಲು ನಿರ್ಧರಿಸುತ್ತಾನೆ. ಇದನ್ನು ಒಪ್ಪದ ಅವಳನ್ನು ಬಲಾತ್ಕರಿಸಿದಾಗ ಅವಳು ಚಾಮುಂಡೇಶ್ವರಿಯಾಗಿ ಅವನ ಸಂಹಾರ ಮಾಡುತ್ತಾಳೆ. ಒಂದು ಐತಿಹಾಸಿಕ ಘಟನೆ ಪೌರಾಣಿಕ ರೂಪವನ್ನು ತಳೆದಾಗಲೂ ಈ ಪ್ರಸಂಗ ಅಕ್ಕನ ಹಿರಿಮೆಯನ್ನು ಹೆಚ್ಚಿಸಲು ಮಾಡಿದ ತಂತ್ರವಾಗಿದೆಯೇ ಹೊರತು ಯಾವ ಲಿಖಿತಾಧಾರವೂ ಇದನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಇವೆಲ್ಲವೂ ಅಕ್ಕನ ಕಥೆಗೆ ಹೊಂದಾಣಿಕೆಯಾಗದೆ ಮಹಾದೇವಿಯಕ್ಕನ ಕಥೆಯನ್ನು ಕ್ರಮಬದ್ಧವಾಗಿ ದುಡಿಸಿಕೊಳ್ಳಲು ಜನಪದರು ಸೋತಿರುವಂತೆ ಕಾಣುತ್ತದೆ. ಆದರೆ ಪ್ರಾರಂಭದಲ್ಲಿ ಬಂದಿರುವ ಸಂಭಾಷಣೆಗಳು ಸೊಗಸಾಗಿ ಮೂಡಿಬಂದಿದೆ. ಭದ್ರ ಬುನಾದಿ ರಚನೆಯಾದಂತಿದ್ದರೂ ಕಟ್ಟಿದ ಕಟ್ಟಡ ಕಳಪೆಯಾದಂತಾಗಿದೆ.

ಕರಪಾಲ ಬಸವ ಪುರಾಣ

ಜಾನಪದ ವಿದ್ವಾಂಸರ ಕಣ್ಣಿಗೆ ಕರಪಾಲ ಮೇಳ ಮೊದಲಿಗೆ ಕಂಡಾಗ ಅವರು ಅದನ್ನು ಜನಪದ ಅಭಿನಯ ಕಲೆ ಎಂದು ಗುರುತಿಸಿದರು.[27] ಆದರೆ ಅದನ್ನು ಸಂಶೋಧನಾದೃಷ್ಟಿಯಿಂದ ನೋಡಿದವರಿಗೆ ಈ ಕರಪಾಲದವರು ಕಾಲಜ್ಞಾನ ವಚನಗಳನ್ನು ಹೇಳುತ್ತ ಕಾಣಿಕೆ ಕೊಟ್ಟವರ ಹೆಸರುಗಳನ್ನು ಕೈಬೆರಳುಗಳ ಸಂಜ್ಞೆಯಿಂದ ತಿಳಿಸಿ ಬೆರಗು ಮೂಡಿಸುವ ಒಂದು ವಿಶಿಷ್ಟ ಕಲೆಯನ್ನು ರೂಢಿಸಿಕೊಂಡಿರುವ ವೀರಶೈವ ಅಯ್ಯಗಳು ಎಂಬುದಾಗಿ ಕಂಡುಬಂತು.[28] ಈ ಕಲೆ ದಕ್ಷಿಣದಲ್ಲಿಯೇ ಇತ್ತೊ ಉತ್ತರದ

27. ಜೀ.ಶಂ. ಪರಮಶಿವಯ್ಯ, ಜನಪದ ಸಾಹಿತ್ಯ ಸಮೀಕ್ಷೆ, ಮೋಹನ ಪ್ರಕಾಶನ, ಮೈಸೂರು (೧೯೬೭) ಪು.೯-೧೬.

28. ಡಾ.ಎಂ.ಚಿದಾನಂದಮೂರ್ತಿ, ಸಂಶೋಧನಾ ತರಂಗ, ಸಂ.:೨. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು(೧೯೭೦)ಪು.೫೦-೬೦.

ಕಡೆಯಿಂದ ದಕ್ಷಿಣಕ್ಕೆ ಬಂತೊ ಎಂಬ ವಾದವೂ ಮಂಡಿತವಾಯಿತು. ಇಂಥ ಗೊಂದಲಗಳಿಗೆಲ್ಲ ಸಂಶೋಧಕರಾದ ಜಿ.ಜಿ. ಮಂಜುನಾಥ್ ಅವರು ಆಧಾರಸಹಿತವಾದ ಸಮರ್ಥ ವಿಷಯ ಮಂಡನೆಯಿಂದ ಅನೇಕ ಗೊಂದಲಗಳನ್ನು ನಿವಾರಿಸಿದ್ದಾರೆ. ಅವರು ಸಂಕೇತ ಭಾಷೆಯ ಬಗೆಗೆ ವಿಶೇಷ ಅಧ್ಯಯನ ನಡೆಸಿ 'ಕರಪಾಲ' ಶಬ್ದ ನಿಷ್ಪತ್ತಿಯ ಬಗೆಗೂ ವ್ಯಾಖ್ಯಾನ ಮಾಡಿದ್ದಾರೆ.[29]

ಪ್ರಾಚೀನ ಭಾರತದಲ್ಲಿ ಸಂಕೇತ ಭಾಷೆಯ ಸ್ವರೂಪ ಹೇಗಿತ್ತೆಂಬುದನ್ನು ಅವರು ಕೌಟಿಲ್ಯನ 'ಅರ್ಥಶಾಸ್ತ್ರ', ವಾತ್ಸಾಯನನ 'ಕಾಮಸೂತ್ರ', ಶಾಂತಲಿಂಗದೇಶಿಕ ಕೃತ 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ' ಹಾಗೂ 'ಕರಪಲ ಸವುಜ್ಞೆ' ಎಂಬ ಗ್ರಂಥಾಧಾರಗಳಿಂದ ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ.

ಜಿ.ಜಿ. ಮಂಜುನಾಥ್ ಅವರ ಲೇಖನದ ಸಾರವೆಂದರೆ

೧. ಕರಪಲ ವರ್ಣ ಸಮಾಮ್ನಾಯವನ್ನುಳ್ಳ ಒಂದು ಸಂಜ್ಞಾಭಾಷೆ, ೨. ಅಕ್ಷರ ಮುಷ್ಟಿಕಾ ಕಥನದ ಗುಂಪಿಗೆ ಸೇರಿದುದು, ೩. ಕೌಟಿಲ್ಯನಿಗಿಂತಲೂ ಹಳೆಯದು, ೪. ರಹಸ್ಯಪಾಲನೆಗಾಗಿ ಮತ್ತು ಗ್ರಂಥ ಸಂಕ್ಷೇಪಕ್ಕಾಗಿ ಇದನ್ನು ಬಳಸುತ್ತಿದ್ದರು, ೫. ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ ಅಖಿಲಭಾರತ ಮಟ್ಟದ್ದು.

'ಕರಪಾಲ' ಶಬ್ದ ನಿಷ್ಪತ್ತಿಯ ಬಗೆಗೂ ಅವರ ವಿವರಣೆಯೇ ಸೂಕ್ತವೆನಿಸುತ್ತದೆ.

"ಕರ್ಪಲ್ಲ, ಕರಪಲ, ಕರಪಲ್ಕ, ಕರಪಲ್ಲವ, ಕರಪ್ಲ ಎನ್ನುವ ಈ ಸಂಜ್ಞಾ ಭಾಷೆಯ ಹೆಸರುಗಳಲ್ಲಿ ಕರಪಲ ಅಥವಾ ಕರಪ್ಲ ಎನ್ನುವ ರೂಪಗಳು ಸರಿಯಾದ್ದು ಎಂದು ಮೇಲುನೋಟಕ್ಕೆ ತಿಳಿದುಬರುತ್ತದೆ. ಆದರೆ ಕರಪಲ ಅಥವಾ ಕರಪ್ಲ ಎಂದರೆ ಕೈಯಚೇಷ್ಟೆ. ಉದಾಹರಣೆಗೆ ಲಕ್ವ ಹೊಡೆದು ಕೈಯ ಮೇಲಿನ ಹತೋಟಿಯನ್ನು ಕಳೆದುಕೊಂಡು ಸದಾ ಒದರುತ್ತಿರುವುದು (ಪಾರ್ಕಿನ್‌ಸನ್ ವ್ಯಾಧಿ). ಮಕ್ಕಳು ಏನಾದರೂ ಕೈಯ ಚೇಷ್ಟೆಯನ್ನು ಮಾಡುತ್ತಿದ್ದರೆ 'ನಿನ್ನ ಕೈಗೆ ಕರಪ್ಲ ಬಡಿಯ' ಎಂದು ಬಯ್ಯುವುದು ಇಂದಿಗೂ ರೂಢಿ. ಕರಪಲ ಎನ್ನುವ ರೂಪ ಮೂಲವಾಗಿದ್ದು ಆಡುಮಾತಿನಲ್ಲಿ ಕರಪ್ಲ ಆಗಿರುವ ಸಾಧ್ಯತೆ ಬಹಳ. ಈ ಸಂಜ್ಞಾಭಾಷಾ ಪ್ರಯೋಗದಲ್ಲಿ ಕೈಯ ಚೇಷ್ಟೆಯೇ ಪ್ರಧಾನವಾಗಿರುವುದನ್ನು ಗಮನಿಸಿದಾಗ 'ಕರಪಲ' ಎಂಬುದನ್ನು ನಾವು ಅಂಗೀಕರಿಸಬಹುದು.

ಬಹುಶಃ ಮೂಲದಲ್ಲಿ ರಾಜಕೀಯ ರಹಸ್ಯಗಳನ್ನು ತಿಳಿಸಬೇಕಾಗಿದ್ದ ಸಂದರ್ಭಗಳಲ್ಲಿ ಬಳಕೆಯಾಗುತ್ತಿದ್ದ ಈ ಭಾಷೆಯನ್ನು ರಾಜಕೀಯ ಹಾಗೂ ಧಾರ್ಮಿಕ ಸ್ಥಿತ್ಯಂತರಗಳ ಅವಧಿಯಲ್ಲಿ ಶರಣರೂ ಇದನ್ನು ಬಳಸಿಕೊಳ್ಳಬೇಕಾಗಿ ಬಂತೆಂದು ಕಾಣುತ್ತದೆ. ಆದರೆ ತಾವು ಗೂಢಚಾರರಲ್ಲವೆಂಬಂತೆ ಕಾಲಜ್ಞಾನ ವಚನಗಳನ್ನು ಹಾಡಿಕೊಂಡು ತಿರುಗುತ್ತಿದ್ದ ಇವರೇ ಕಾಲಕ್ರಮದಲ್ಲಿ ಈ ಮಾಧ್ಯಮಕ್ಕೆ ಕಥೆಗಳನ್ನು ಹೇಳುವ ಕ್ರಮವನ್ನು ಅಳವಡಿಸಿಕೊಂಡಂತೆ ಕಾಣುತ್ತದೆ.

ಕರಪಾಲದ ಆಟಗಳಿಗೆ ಬಯಲಾಟಗಳಂತೆಯೇ ಊರ ಒಳಗೆ ಅಥವಾ ಇತರ ಗೊತ್ತಾದ ಸ್ಥಳಗಳಲ್ಲಿ ಎತ್ತರವಾದ ವೇದಿಕೆ ಇರುವಂತೆ ಚಪ್ಪರ ಹಾಕುತ್ತಾರೆ. ಚಪ್ಪರದ ಮುಂದೆ ಈಶ್ವರ ಪಾರ್ವತಿ ಅಥವಾ ಬಸವೇಶ್ವರರ ಪಟವನ್ನಿಟ್ಟು, ಆಟಕ್ಕೆ ಮುಂಚೆ ಪೂಜಿಸುತ್ತಾರೆ. ಸ್ಥಳದಿಂದ ಸ್ಥಳಕ್ಕೆ ಸಂಚರಿಸುವ ಕರಪಾಲದವರು ಸಂತೆಗಳಲ್ಲಿ ಹಾಗೂ ಊರ ಬೀದಿಗಳಲ್ಲಿ ಸಹ ಪ್ರದರ್ಶನಗಳನ್ನು ನೀಡುತ್ತಾರೆ. ಚಪ್ಪರವು ನಿರೂಪಕ ಮತ್ತು ಅವನ ಇಬ್ಬರು ಸಹನರ್ತಕರು ಅಭಿನಯಿಸುವಷ್ಟು ವಿಸ್ತಾರವಾಗಿದ್ದು ಚಪ್ಪರದ ನಾಲ್ಕು ಕಡೆಯೂ ನಾಲ್ಕು ಕಂಬಗಳನ್ನು ನೆಟ್ಟಿರುತ್ತಾರೆ. ಪ್ರೇಕ್ಷಕರ ಕಡೆ ತೆರವು ಮಾಡಿ ಉಳಿದ ಮೂರು ಭಾಗಗಳನ್ನು ಸೋಗೆಯಿಂದ ಮುಚ್ಚಿರುತ್ತಾರೆ. ಮೃದಂಗ ಮತ್ತು ಹಾರ್ಮೋನಿಯಂ ವಾದಕರು ಹಿಮ್ಮೇಳದವರಾಗಿದ್ದು ಚಪ್ಪರದ ಮುಂಭಾಗದಲ್ಲಿ ಕುಳಿತಿರುತ್ತಾರೆ. ಕರಪಾಲ ಮೇಳಗಳಲ್ಲಿ ಯಕ್ಷಗಾನ, ಬಯಲಾಟಗಳಂತೆ ಬಿರುಸು ಕುಣಿತಗಳಿಲ್ಲವಾಗಿ ವೇದಿಕೆ ಅಟ್ಟದಿಂದ ಕೂಡಿರಬೇಕಾದ ಅಗತ್ಯವಿಲ್ಲ.

ಷೇಕ್ಸ್‌ಪಿಯರ್ ಕಾಲದ ಇಂಗ್ಲೀಷ್ ನಾಟಕ ಮಂದಿರಗಳಲ್ಲಿ ನಟರಿಗೂ ಪ್ರೇಕ್ಷಕರಿಗೂ ನೇರ ಸಂಪರ್ಕವಿದ್ದಂತೆ ಕರಪಾಲದ ರಂಗಭೂಮಿಯಲ್ಲಿ ಸಹ ಆಟದ ಅಯ್ಯಗಳಿಗೂ ಪ್ರೇಕ್ಷಕರಿಗೂ ನಿಕಟ ಸಂಪರ್ಕವಿರುತ್ತದೆ. ಪ್ರೇಕ್ಷಕರು, ನಿರೂಪಕ ಮತ್ತು ಅವನ ಶಿಷ್ಯರ ಸಂಜ್ಞೆಗಳಿಂದ ತಮ್ಮ ಹೆಸರುಗಳನ್ನು ತಿಳಿದುಕೊಳ್ಳುತ್ತಾರೆ. ಕಥೆಯ ನಿರೂಪಣೆಯಲ್ಲಿ ಶಿವನು ಬರುವ ಹಾಗೂ ನಿರ್ಗಮಿಸುವ ಸಂದರ್ಭಗಳಲ್ಲಿ ನಿರೂಪಕ "ಜೈ ನಮಃ ಪಾರ್ವತೀ ಪತೇ" ಎಂದು ಹೇಳುವಾಗ ಪ್ರೇಕ್ಷಕರು ಹಿಮ್ಮೇಳದವರೊಡನೆ ಕೂಡಿಕೊಂಡು ತಾವೂ ಸಹ "ಹರಹರ ಮಹಾದೇವ" ಎಂದು ಘೋಷಿಸುತ್ತಾರೆ.

---

29. ಜಿ.ಜಿ. ಮಂಜುನಾಥ್, ಪ್ರಬುದ್ಧ ಕರ್ನಾಟಕ, ಮೈಸೂರು (೧೯೭೪)ಪು.೭೩-೮೦.

ಕರಪಾಲ ಮೇಳದ ಕಲಾವಿದರು ಪ್ರಮುಖವಾಗಿ ವೀರಶೈವರು. ಮೇಳದಲ್ಲಿ ಒಬ್ಬ ಕಥಾ ನಿರೂಪಕ (ಗುರು) ಮತ್ತು ಅವನ ಸಹಾಯಕ್ಕೆ ನಿಲ್ಲುವ ಇಬ್ಬರು ಶಿಷ್ಯರು, ಚಪ್ಪರದ ಮುಂದೆ ಕುಳಿತು ಹಾರ್ಮೋನಿಯಂ ನುಡಿಸುವ ಮತ್ತು ಮೃದಂಗ ಬಾರಿಸುವ ಇಬ್ಬರು ಹಿಮ್ಮೇಳದವರು - ಒಟ್ಟು ಐದು ಜನರಿರುತ್ತಾರೆ. ನಿರೂಪಕನ ಅಕ್ಕಪಕ್ಕಗಳಲ್ಲಿ ನಿಲ್ಲುವ ಇಬ್ಬರು ಸಹಾಯಕರು ಮುಖ್ಯ ಕಥೆಯ ಮುನ್ನಡೆಗೆ ಸಹಾಯಕರಾಗಿದ್ದು ಕೆಲವೊಮ್ಮೆ ತಾವೂ ಸಂಭಾಷಣೆಗಳನ್ನಾಡುವ ಪಾತ್ರಧಾರಿಗಳಾಗಿ ಅಭಿನಯಿಸುತ್ತಾರೆ. ಉಪಕಥೆಗಳನ್ನು ಹೇಳುವಾಗಲಂತೂ ಇವರ ಅಭಿನಯ ಹಾಗೂ ಮಾತಿನ ವರಸೆಗಳು ಪ್ರೇಕ್ಷಕರನ್ನು ನಕ್ಕು ನಲಿಸುತ್ತವೆ. ಮೃದಂಗ ಹಾಗೂ ಹಾರ್ಮೋನಿಯಂ ಹಿಡಿದವರು ಹಿಮ್ಮೇಳವನ್ನು ಕೂಡಿಸುತ್ತಾರೆಯೇ ಹೊರತು ಕುಣಿತದಲ್ಲಿ ಹಾಗೂ ಕಥೆಯ ನಿರೂಪಣೆಯಲ್ಲಿ ಭಾಗವಹಿಸುವುದಿಲ್ಲ.

ಕರಪಾಲ ಕಲಾವಿದರು ವೃತ್ತಿಗಾಯಕರ ವರ್ಗಕ್ಕೆ ಸೇರಿದವರು. ಇವರನ್ನು ಲೌಕಿಕ ವೃತ್ತಿಗಾಯಕರೆಂದು ಹೇಳಬಹುದು. ಕರಪಾಲ ಮೇಳಗಳಲ್ಲಿ ನಾಟಕದ ಪಾತ್ರಗಳು ಧರಿಸುವಂತೆ ಎದ್ದುತೋರುವ ವೇಷಭೂಷಣಗಳ ಅಗತ್ಯವಿಲ್ಲ. ನಿರೂಪಕನು ವರ್ಣರಂಜಿತವಾದ ಉದ್ದನೆಯ ಕುಲಾವಿಯನ್ನು ತಲೆಗೆ ಹಾಕಿರುತ್ತಾನೆ. ಕುಲಾವಿಗೆ ಇಳಿಬಿದ್ದ ತುರಾಯಿ ಸಹ ಇರುತ್ತದೆ. ಆತನು ಕಿವಿಗಳಿಗೆ ದೊಡ್ಡ ಕರ್ಣಕುಂಡಲಗಳನ್ನು ಕತ್ತಿಗೆ ರುದ್ರಾಕ್ಷಿ ಸರವನ್ನು, ಕಾಲಿಗೆ ಗೆಜ್ಜೆಯನ್ನು, ನಡುವಿಗೆ ಬಣ್ಣದ ನಡುಪಟ್ಟಿಯನ್ನು ಧರಿಸಿ ಕಚ್ಚೆಪಂಚೆಯನ್ನು ಉಟ್ಟಿರುತ್ತಾರೆ. ಹಣೆಯ ತುಂಬ ವಿಭೂತಿ ಧರಿಸಿರುತ್ತಾರೆ. ಅವನ ಸಹಾಯಕರಲ್ಲಿ ಒಬ್ಬ ತಾಳವನ್ನು ಮತ್ತೊಬ್ಬ ದಮ್ಮಡಿ ಎಂಬ ಚರ್ಮವಾದ್ಯವನ್ನು ಹಿಡಿದಿರುತ್ತಾನೆ. ಈ ಇಬ್ಬರೂ ಸವಾರರ ಶೈಲಿಯ ಪೇಟಗಳನ್ನು ಧರಿಸಿ ನಡುವಿಗೆ ಬಿಳಿಯ ನಡುಪಟ್ಟಿಯನ್ನು ಮತ್ತು ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿರುತ್ತಾರೆ.

ಕರಪಾಲ ಮೇಳದ ಆಟ ದೇವತಾ ಪ್ರಾರ್ಥನೆಯೊಡನೆ ಪ್ರಾರಂಭವಾಗುವುದು. ತರುವಾಯ ಅಭಿನಯಿಸುವ ಕಲಾವಿದರು ತಮ್ಮ ಪರಿಮಿತ ಜ್ಞಾನವನ್ನು ಪ್ರೇಕ್ಷಕರಿಗೆ ಹೀಗೆಂದು ಬಿನ್ನೈಸಿಕೊಳ್ಳುತ್ತಾರೆ :

ನಾವು ಬಲ್ಲವರಲ್ಲ ನಾವು ತಿಳಿದವರಲ್ಲ
ಯಾವ ತಪ್ಪಿದ್ದರೂ ತಿದ್ದಿಕೊಳಬೇಕು
ತಿದ್ದಿಕೊಳಬೇಕು |
ಧಿತ್ ತಳಾಂಗು ತಕಧಿಮಿತ

ನಿರೂಪಕನು ಚಪ್ಪರದ ಮಧ್ಯೆ ನಿಂತು ಕಥೆಯನ್ನು ನಿರೂಪಿಸುತ್ತಿರುವಾಗ ಅವನ ಎಡಬಲಗಳಲ್ಲಿ ನಿಂತಿರುವ ಅವನ ಸಹಾಯಕರು ಹಾಡುತ್ತ ಕುಣಿಯುತ್ತಾರೆ. ನಿರೂಪಕನು ಎತ್ತಿಕೊಡುವ ಹಾಡಿನ ಮೊದಲ ಚರಣವನ್ನು ಹಿಡಿದು ಅವರು ಹಾಡಿನ ಉಳಿದ ಭಾಗವನ್ನು ಹಾಡಿ ನರ್ತಿಸುತ್ತಾರೆ. ಕಥೆ ರಾತ್ರಿ ಬಹಳ ಹೊತ್ತಿನವರೆಗೂ ನಡೆಯುವುದು. ಕಥೆಯಲ್ಲಿ ಉಪಕಥೆ ಇಲ್ಲವೆ ಹಾಸ್ಯ ಪ್ರಸಂಗಗಳು ಮುಗಿದ ಮೇಲೆ ನಿರೂಪಕನು ಕಥೆಯನ್ನು ಮುಂದುವರಿಸುವಾಗ ಅವನ ಸೊಲ್ಲಿಗೆ ತಾಳ ಹಿಡಿದ ಅವನ ಸಹಾಯಕರು ಹುಂಗೊಡುತ್ತಾ ಹೋಗುತ್ತಾರೆ. ನಿರೂಪಕನ ಮತ್ತು ತಾಳದವರ ಸಂಭಾಷಣೆಯ ಮೂಲಕ ಕಥೆ ಸರಾಗವಾಗಿ ಸಾಗುತ್ತದೆ.

ಕರಪಾಲದ ಕಥೆಗಳು ಸಾಮಾನ್ಯವಾಗಿ ಎಲ್ಲ ಜನಪದ ಕಥೆಗಳಂತೆ ಸುಖಾಂತವಾಗಿ ಮುಗಿಯುತ್ತದೆ. ಮಂಗಳವನ್ನು ಕಲಾವಿದರೆಲ್ಲ ಕೂಡಿ ವಾದ್ಯಗಳೊಂದಿಗೆ ಹಾಡುತ್ತಾರೆ.

ಜನಪ್ರಿಯವಾದ ಕಥೆಗಳೇ ಕರಪಾಲದವರು ಹೇಳುವ ಕಥೆಗಳಾಗಿವೆ. ಅಂಥ ಕಥೆಗಳಲ್ಲಿ ಕೆಲವು 'ಕಾಡು ಸಿದ್ದಮ್ಮನ ಕಥೆ', 'ನೀಲಕಂಠ-ರೂಪವತಿ', 'ಬಸವಪುರಾಣ', 'ಬಸವಕುಮಾರ-ಲೋಹಿತಕುಮಾರ', 'ರುದ್ರೇಶ್ವರ ಮಹಾತ್ಮೆ', 'ಶಿವಯೋಗಿ-ಪರಯೋಗಿ', 'ಭಕ್ತ ಚಂದ್ರಹಾಸ', 'ಮಹಾಸತಿ ಸುಗುಣವತಿ', 'ನಳ ಚರಿತ್ರೆ', 'ಭಕ್ತ ಸಿರಿಯಾಳ', 'ರಾಜಾ ಸತ್ಯವ್ರತ', 'ರಾಜಾ ವಿಕ್ರಮ' ಮುಂತಾದವು. ಎಲ್ಲ ರೊಮ್ಯಾಂಟಿಕ್ ಕಥೆಗಳಂತೆ ನಾಯಕ-ನಾಯಕಿಯರು ಕಷ್ಟಗಳಿಗೆ ತುತ್ತಾಗಿ ಯಾವುದೋ ಅದ್ಭುತ ಇಲ್ಲವೆ ಅತಿಮಾನುಷ ಶಕ್ತಿಯ ನೆರವಿನಿಂದ ಮುಕ್ತರಾಗಿ ಸುಖವಾಗಿ ಬಾಳುತ್ತಾರೆ. ಕಥೆಗಳು 'ಅಧರ್ಮಕ್ಕೆ ಸೋಲು ಧರ್ಮಕ್ಕೆ ಜಯ' ಎಂಬ ಆದರ್ಶವನ್ನು ಹೊಂದಿ ನೀತಿ ಬೋಧಕವಾಗಿವೆ. ಕತೆಗಳು ಚಂಪೂರೂಪದಲ್ಲಿರುವುದು ಸಾಮಾನ್ಯ.

ಕರಪಾಲ ಮೇಳದ ಹಾಡುಗಳು ಬಯಲಾಟದ ಮಟ್ಟುಗಳನ್ನೇ ಅನುಕರಿಸಿವೆ. ಬಹುಮಟ್ಟಿಗೆ ದ್ವಿಪದಿಗಳೇ ಹೆಚ್ಚು. ಶಿವಶರಣರ ವಚನಗಳು, ತತ್ತ್ವದ ಪದಗಳನ್ನು ಅಲ್ಲಲ್ಲಿ ಬಳಸಿಕೊಳ್ಳುತ್ತಾರೆ. ಹಾಡುಗಳು ಶೋಕಸನ್ನಿವೇಶಗಳಲ್ಲಿ ಪ್ರೇಕ್ಷಕರ ಹೃದಯವನ್ನು ಮುಟ್ಟುವಂತೆ ಮಾಡಿ ಕಥೆಯಲ್ಲಿ ಅವರನ್ನು ತಲ್ಲೀನರಾಗುವಂತೆ ಮಾಡುವ ಪ್ರಭಾವವನ್ನು ಹೊಂದಿರುತ್ತವೆ.

ಕಥೆಯ ಬೆಳವಣಿಗೆಯಲ್ಲಿ ಪ್ರಾರಂಭ, ಸಾರೋಕ್ತಿ ಮತ್ತು ಮುಕ್ತಾಯಗಳಿಗೆ ತಕ್ಕಂಡೆ ಹಾಡುಗಳನ್ನು ಅಪೂರ್ವ ಮಟ್ಟುಗಳಲ್ಲಿ ಹಾಡುವುದರಿಂದಲೂ, ನೃತ್ಯವೂ ಅಲ್ಲಲ್ಲಿ ಬೆರೆತು ಕಥೆ ಸ್ವಾರಸ್ಯಪೂರ್ಣವಾಗಿ ಸಾಗುವುದರಿಂದಲೂ ಕರಪಾಲ ಮೇಳವು ವೈವಿಧ್ಯಮಯ ಜನಪದ ಕಲೆಯೆನಿಸಿಕೊಂಡಿದೆ.

ಪ್ರಸ್ತುತ ಕರಪಾಲ ಬಸವಪುರಾಣವು ಶುದ್ಧಾಂಗವಾಗಿ ಶಿಷ್ಟ ಬಸವ ಪುರಾಣವನ್ನು ಜನಪದ ರೂಪಕ್ಕೆ ಅಳವಡಿಸಿಕೊಂಡಿರುವ ವೈಶಿಷ್ಟ್ಯದಿಂದ ಕೂಡಿದೆ. ಹಾಡು, ನೃತ್ಯ, ಕಥಾ ನಿರೂಪಣೆ ಮುಪ್ಪರಿಗೊಂಡಿರುವ ಈ ಕಾವ್ಯ ರಾತ್ರಿಯಿಡೀ ಸಾಗುವ ಅತ್ಯಂತ ದೀರ್ಘ ಕಥಾನಕವಾಗಿದೆ.

ಕರಪಾಲ ಬಸವ ಪುರಾಣವು ಮೂಲತಃ ಪುರಾಣ ಕಾವ್ಯ. ಐತಿಹಾಸಿಕ ವ್ಯಕ್ತಿಯಾದ ಬಸವೇಶ್ವರನ ಪಾತ್ರವೇ ಇದರಲ್ಲಿ ಪ್ರಧಾನವಾಗಿದ್ದೂ ಐತಿಹಾಸಿಕಾಂಶಗಳು ಇದರಲ್ಲಿ ಗೌಣವಾಗಿ ಪೌರಾಣಿಕ ದೃಷ್ಟಿಯೇ ಪ್ರಧಾನವಾಗಿರುವುದರಿಂದ ಅದ್ಭುತ ಘಟನಾವಳಿಗಳು, ಪವಾಡಗಳು, ಉತ್ಪ್ರೇಕ್ಷೆಗಳು ಹಾಗೂ ಕಲ್ಪನಾಂಶಗಳು ಹೇರಳವಾಗಿವೆ. ಆದರೂ ಇದರಲ್ಲಿ ಇತಿಹಾಸವು ಪುರಾಣದ ಮುಸುಕನ್ನು ಹಾಕಿಕೊಂಡು ಘಂಗುಡುತ್ತಿದೆಯೆಂಬುದನ್ನು ಮರೆಯುವಂತಿಲ್ಲ. ಆದರೆ ಸಮಗ್ರ ಕರ್ನಾಟಕದಲ್ಲಿ ಬಸವೇಶ್ವರನನ್ನು ಕುರಿತ ಕಾವ್ಯಗಳನ್ನೆಲ್ಲ ಸಂಗ್ರಹಿಸಿ ಕ್ರಮಬದ್ಧವಾಗಿ ಗ್ರಂಥ ಸಂಪಾದನಾ ಕ್ರಮಕ್ಕೊಳಪಡಿಸಿ ಪ್ರಕಟಿಸಿದರೆ ಬಸವೇಶ್ವರನನ್ನು ಕುರಿತು ಒಂದು ಜನಪದ ಮಹಾಕಾವ್ಯ ಲಭ್ಯವಾಗುವುದರಲ್ಲಿ ಸಂಶಯವಿಲ್ಲ. ಪ್ರಸ್ತುತ 'ಕರಪಾಲ ಬಸವಪುರಾಣ' ಕರಪಾಲ ಕಾವ್ಯಗಳಲ್ಲೇ ಒಂದು ಅಪೂರ್ವ ರತ್ನ.

ಮೈದಾಳ ರಾಮಣ್ಣ

'ಮೈದುನ ರಾಮಣ್ಣ', ನಮ್ಮ ಜನಪದರ ಬಾಯಲ್ಲಿ 'ಮೈದಾಳ ರಾಮಣ್ಣ', 'ಮೈದಾಳು ರಾಮಣ್ಣ', 'ಮೈದಾಳಿ ರಾಮಣ್ಣ' ಮುಂತಾಗಿ ಕರೆಯಲ್ಪಟ್ಟು ಅವನ ಕಥೆ ಅತ್ಯಂತ ಜನಪ್ರಿಯ ಕಥೆಯಾಗಿದೆ. ಅವನ ಮುಗ್ಧಭಕ್ತಿಗೆ ಮಾರುಹೋದ ನಮ್ಮ ಜನಪದರು 'ಆ ಕಂದಯ್ಯನ ಕಥೆ ಕೇಳೋಕೆ ಒಂದು ಚಂದ' ಎಂದು ಹರ್ಷಿಸಿ ಉದ್ಗರಿಸುತ್ತಾರೆ. ಮೈದುನ ರಾಮಣ್ಣನ ನಿಜವಾದ ಹೆಸರು ರಾಮನಾಥ. ಅವನೊಬ್ಬ ವಚನಕಾರ. ಅವನ ವಚನಗಳ ಅಂಕಿತ ಮಹಾಲಿಂಗಚನ್ನರಾಮ. ಬಸವಣ್ಣನವರ ಸಮಕಾಲೀನನಾದ ಇವನ ನಾಲ್ಕು ವಚನಗಳು ಸಿಕ್ಕಿವೆ. ಮೈದುನ ರಾಮಣ್ಣ ಮೂಲತಃ ಆಂಧ್ರದ ಭೀಮಾವತಿ ಎಂಬ ಊರಿನವನೆಂದು ತಿಳಿದುಬರುತ್ತದೆ. ಇವನು ಗೌರಿಯನ್ನೇ ತನ್ನ ಅಕ್ಕಳೆಂದೂ ಈಶ್ವರನನ್ನೇ ತನ್ನ ಭಾವನೆಂದೂ ತಾನು ಈಶ್ವರನ ಮೈದುನನೆಂದು ಸಾಧಿಸಿಕೊಂಡದ್ದರಿಂದ ಅವನು 'ಮೈದುನರಾಮಣ್ಣ'ನೆಂದೇ ವಿಖ್ಯಾತನಾಗಿದ್ದಾನೆ.

ಮೈದುನ ರಾಮಯ್ಯನನ್ನೂ ಕುರಿತು ಸಂಸ್ಕೃತ ತೆಲುಗು ಕನ್ನಡ ಗ್ರಂಥಗಳಲ್ಲಿ ಸಾಕಷ್ಟು ವಿಷಯಗಳು ನಿರೂಪಿತವಾಗಿವೆ. ಶಂಕರದೇವ ಕವಿಯ 'ಮೈದುನರಾಮಯ್ಯನ ರಗಳೆ'ಯ ಜೊತೆಗೆ ಉತ್ತರ ದೇಶದ ಬಸವಲಿಂಗದೇವರ 'ಕಥಾಸಾಗರ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಥಾಮಮಣಿ ಸೂತ್ರ ರತ್ನಾಕರ', ಗುಬ್ಬಿ ಮಲ್ಲಣಾರ್ಯನ 'ವೀರಶೈವಾಮೃತ ಮಹಾಪುರಾಣ', ಪರ್ವತೇಶನ 'ಚತುರಾಸ್ಯ ಪುರಾಣ' ನಿಜಮಠಾಂಕ ಸಿದ್ಧರಾಮ ಶಿವಯೋಗಿಯ 'ಚನ್ನಬಸವ ಪುರಾಣ'ಗಳಲ್ಲದೆ ಪಾಲ್ಕುರಿಕೆ ಸೋಮನಾಥನ 'ಪಂಡಿತಾರಾಧ್ಯ ಚಾರಿತ್ರ' ನೀಲಕಂಠಾಚಾರ್ಯನ 'ಆರಾಧ್ಯ ಚಾರಿತ್ರ' ಹಾಗೂ ಗುರುರಾಜ ಕವಿಯ ಸಂಸ್ಕೃತ 'ಪಂಡಿತಾರಾಧ್ಯ ಚಾರಿತ್ರ'ಗಳಲ್ಲಿ ಮೈದುರಾಮಯ್ಯನ ಬಗೆಗೆ ಸಾಕಷ್ಟು ಸಂಗತಿಗಳನ್ನು ಹೇಳಿವೆ. ರಾಮಯ್ಯನ ಮುಗ್ಧಭಕ್ತಿಯ ಈ ಮುದ್ದಾದ ಕಥೆ ನಮ್ಮ ಜನಪದರ ಹೃದಯವನ್ನು ಸೂರೆಗೊಂಡ ಕಾರಣದಿಂದ ಮೌಖಿಕ ಸಂಪ್ರದಾಯದಲ್ಲೂ ಬೆಳೆದುಳಿದು ಬಂದಿದೆ.

೧೯೫೭ರ ಹೊತ್ತಿಗೆ ನಮ್ಮ ಆದ್ಯ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಶ್ರೀ ಗೊ.ರು. ಚನ್ನಬಸನಪ್ಪನವರು ಕುಡ್ಲೂರಿನ ಶ್ರೀ ಎಂ.ಎಸ್.ಟಿ. ರುದ್ರಪ್ಪನವರು ಹಾಡಿದ ೬೯೫ ತ್ರಿಪದಿಗಳಷ್ಟು ಸುದೀರ್ಘವಾದ 'ಮೈದುನ ರಾಮಣ್ಣ'[30] ಎಂಬ ಕಾವ್ಯವನ್ನು ಪ್ರಕಟಿಸಿದರು. ಹೆಂಗಸರ ಹಾಡ್ಗತೆಗಳಲ್ಲೂ ಪ್ರಚಲಿತವಿದ್ದ ಈ ಕಾವ್ಯದ ಮತ್ತೊಂದು ಪಾಠವನ್ನು ಬೀಡನಹಳ್ಳಿ

30. ಮೈದುನ ರಾಮಣ್ಣ : ಸಂಪಾದಕರು ಗೊ.ರು. ಚನ್ನಬಸವಪ್ಪ, ತರುಣಸಂಘ, ಗೊಂಡೇದಹಳ್ಳಿ, ಅಜ್ಜಂಪುರ ಅಂಚೆ, ಚಿಕ್ಕಮಗಳೂರು ಜಿಲ್ಲೆ, ೧೯೫೭.

ಗೌರಮ್ಮನವರಿಂದ ಹಾಡಿಸಿ ಬೀಡನಹಳ್ಳಿ ಚೌಡೇಗೌಡರು ೧೯೭೯ರಲ್ಲಿ ಪ್ರಕಟಿಸಿದರು.[31] ೨೪೨ ತ್ರಿಪದಿಗಳಲ್ಲಿರುವ ಈ ಕಾವ್ಯ ಪ್ರಕಟಣೆಯ ನಂತರ ೧೯೮೨ರಲ್ಲಿ ವೃತ್ತಿಗಾಯಕರಲ್ಲಿ ಪ್ರಸಿದ್ಧರಾದ ನೀಲಗಾರರು ಹಾಡಿದ ಒಂದು ಪಾಠವನ್ನು ಪ್ರೊ. ಜೀ.ಶಂ. ಪರಮಶಿವಯ್ಯ ಪ್ರಕಟಿಸಿದರು.[32] ಪ್ರಸ್ತುತ 'ಮೈದಾಳ ರಾಮಣ್ಣ' ಕಾವ್ಯ ನೀಲಗಾರ ಸಂಪ್ರದಾಯದ ಶ್ರೇಷ್ಠ ಗಾಯಕ ಜೋಪ್ಡಿ ಮಾದಯ್ಯನವರು ಹಾಡಿರುವ ಕೃತಿರತ್ನ.

ಭೀಮಾವತಿಯ ಸೋಮಯ್ಯ ಆಗರ್ಭ ಶ್ರೀಮಂತ. ಅವನ ಧರ್ಮಪತ್ನಿ ಮಹಾದೇವಮ್ಮ. ಶೈವಬ್ರಾಹ್ಮಣನಾದ ಇವನು ಊರಿಗೆ ಮುಖ್ಯಸ್ಥ. ನ್ಯಾಯ-ನೀತಿ, ಕಟ್ಟು-ಕಟ್ಟಳೆಗಳನ್ನು ವಿಧಿಸುವ ನ್ಯಾಯಾಧಿಕಾರಿಯಾಗಿದ್ದ ಸೋಮಯ್ಯನಿಗೆ ಸಂತಾನಫಲವಿಲ್ಲ. ಅವನು ನ್ಯಾಯ ಮಾಡಲು ನ್ಯಾಯದ ಕಟ್ಟೆಯಲ್ಲಿ ಕೂರುತ್ತಿದ್ದ ಸ್ಥಳದ ಮಣ್ಣನ್ನು ಅವನು ಹೋದ ಮೇಲೆ ಗುದ್ದಲಿಯಿಂದ ತೆಗೆದು ಹಾಕಿ ಆ ಸ್ಥಳಕ್ಕೆ ಬೇರೆ ಮಣ್ಣನ್ನು ಸುರಿದು ಗಂಜಲದಿಂದ ಸಾರಿಸಿ ಶುಚೀ ಮಾಡುತ್ತಿದ್ದರು. ಈ ವಿಷಯ ತಿಳಿದು ಮಕ್ಕಳಿಲ್ಲದ ಕಾರಣಕ್ಕೆ ಪಂಚಾಯ್ತಿಯ ಜನರು ತನ್ನನ್ನು ಅವಮಾನಿಸಿದ್ದರಿಂದ ಬೇಸತ್ತ ಸೋಮಯ್ಯ ಮನೆಗೆ ಬಂದರೆ ಅವನ ಹೆಂಡತಿ ಮಾದೇವಮ್ಮನಿಗೂ ಇಂಥದೇ ಅವಮಾನ !

ಸ್ವಾಮಿ ನಿಮ್ಮ ಸಿತಿಗಿಂತ್ಲೂ ನನ್ನ ಸಿತಿ
ಬಾಳ ದೊಡ್ಡದಾಗದಲ್ಲ
ನಾನು ಮಕ್ಕಳಿಲ್ಲದ್ ಪುತ್ರಈನೆ ಅಂತೆ ನಾನು
ಇವುಳ್ಳೊತೆ ನಾವು ನೀರ್ಗೋದ್ರೆ ನಾವು ಬಂಜೆರಾಯ್ತೀವಿ
ಇವುಳಜ್ಜೆ ನಾವೆಜ್ಜೆ ಹಾಕುದ್ರೆ
ನಾವು ಬಂಜೆರಾಯ್ತುದ್ದೀವಿ
ಇವುಳ ನೆರ್ಳು ನಮ್ ಮ್ಯಾಲೆ ಬಿದ್ರೆ
ನಾವು ಬಂಜೆರಾಯ್ತುದ್ದೀವಿ ಅಂತ್ಹೇಳ್ತಿರ್ತಾರೆ ಸ್ವಾಮಿ

ಎಂದು ಹೇಳಿಕೊಂಡು ಗೋಳಾಡುತ್ತಾಳೆ. ಆಗ ಸೋಮಯ್ಯ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿ ತನ್ನ ಹೆಂಡತಿಗೆ 'ನೀನೆಲ್ಲಾರು ಸೇರಿ ಬದುಕೋಗು' ಎಂದು ತಿಳಿಸುವುದು ಗಮನಾರ್ಹ. ಪರಿಹಾರ ಸಾಧ್ಯವಿರುವ ಸಮಸ್ಯೆಗಳಿಗೆ ಶರಣಾಗಿ ಸಾಮೂಹಿಕ ಆತ್ಮಹತ್ಯ ಮಾಡಿಕೊಳ್ಳುತ್ತಿರುವ ಅಥವಾ ಒಬ್ಬನ ಸಮಸ್ಯೆಗಾಗಿ ಇಡೀ ಕುಟುಂಬವನ್ನೇ ಹತ್ಯೆ ಮಾಡುವ ಇಂದಿನ ದುರಂತಮುಖೀ ಜೀವನದ ಸಂದರ್ಭದಲ್ಲಿ ಸೋಮಯ್ಯ ಹೇಳುವ ಮಾತು ಚಿಂತನಾರ್ಹವಾಗಿದೆ. ಇತರ ಜನಪದ ಕಾವ್ಯಗಳಲ್ಲಿ ಬರುವಂತೆ ಇಲ್ಲಿಯೂ 'ಸಂತಾನಹೀನ ಸ್ಥಿತಿ'ಗೆ ಪರಿತಪಿಸುವ ಶೋಕಿಸುವ ಸನ್ನಿವೇಶವೊಂದು ಬರುತ್ತದೆ. ಪ್ರಕೃತಿಯ ಸೃಷ್ಟಿಶೀಲ ಶಕ್ತಿಯನ್ನು ನಿರಂತರವಾಗಿಡಲು ಶ್ರಮಿಸುವ ಕ್ರಿಯಾಶೀಲ ಧೋರಣೆಯ ಜನಪದರ ಇಂಥ ಪರಿತಾಪ ಕೇವಲ ವೈಯಕ್ತಿಕ ನೆಲೆಯದ್ದಾಗಿರದೆ ಒಟ್ಟು ನಿಸರ್ಗದ ನೆಲೆಯಲ್ಲಿ ತನ್ನ ಅರ್ಥವನ್ನು ವಿಸ್ತರಿಸಿಕೊಳ್ಳುತ್ತದೆ.

ಸೋಮಯ್ಯ ಮತ್ತು ಮಾದೇವಮ್ಮ ದಂಪತಿಗಳು ಒಟ್ಟಿಗೆ ಆತ್ಮಹತ್ಯೆಗೆ ಮಾಡಿಕೊಳ್ಳುವ ತೀರ್ಮಾನ ಕೈಗೊಂಡ ಸಂದರ್ಭದಲ್ಲಿ ಶಿವ ಪಾರ್ವತಿಗೆ ಹೇಳುವ ಮಾತು ಗಮನಾರ್ಹ.

ಅಂತೆ - ಸತ್ಯಮಾತ್ಮರು ಹೋದಮ್ಮಾಲೆ ನಾವಿದ್ದೇನು ಫಲ ಬಂತು ?
ಹೋಗಿ ಅವ್ರ ಕಷ್ಟ ನೋಡಬೇಕು |

ಎಂಬ ಮಾತು 'ಸತ್ಯಂ ಶಿವಂ ಸುಂದರಂ' ಮಾತಿನ ಮೂಲರೂಪದಂತಿದೆ. 'ಸತ್ಯ ಸತ್ತರೆ ಈ ಲೋಕ ಉಳಿಯುವುದಿಲ್ಲ' ಎಂಬ ಜನಪದರ ನಿಲುವು ಇಲ್ಲಿ ಅಭಿವ್ಯಕ್ತಗೊಂಡಿದೆ. 'ಶಿವನ ಕಳೆ ಹೆಚ್ಚೊ, ಪಾರ್ವತಿಯ ಕಳೆ ಹೆಚ್ಚೊ' ಎಂದು ಹೇಳುವಾಗಿನ ಗಿಣಿರಾಮನ ಸತ್ಯವ್ರತ ಇಲ್ಲಿ ಸಾಕಾರಗೊಳ್ಳುತ್ತದೆ. ಅದಕ್ಕಾಗಿ ಗಿಣಿರಾಮನ ನಿರ್ಧಾರ ಇದು :

---

31. ಗೌರಕ್ಕನ ಮುಕ್ತಕಗಳು ಮತ್ತು ಮೈದುನ ರಾಮಣ್ಣ : ಸಂಪಾದಕರು, ಚೌಡೇಗೌಡ ಬೀಡನಹಳ್ಳಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

32. ಕನ್ನಡ ವೃತ್ತಿಗಾಯಕ ಕಾವ್ಯಗಳು : ಸಂಪಾದಕರು, ಪ್ರೊ. ಜೀ.ಶಂ. ಪರಮಶಿವಯ್ಯ (ಮೈದಾಳ ರಾಮಯ್ಯ ಪು.೭೩೩-೭೭೩) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೧.

ಕೊಟ್ಟ ಕಷ್ಟನೆಲ್ಲ ಕೊಟ್ಕಳ್ಳಿ
ನಂಗೆ ಬಂದ ಕಷ್ಟವೆಲ್ಲ ಬಂದ್ಕೊಳ್ಳಿ

ಎಂದು ಗಿಣಿರಾಮ ಶಿವ-ಪಾರ್ವತಿಯರ ಸ್ವಯಂಸ್ಪರ್ಧೆಗೆ ಸಂಬಂಧಿಸಿದಂತೆ ಸತ್ಯ ಹೇಳುವುದು ಇಲ್ಲಿ ಮುಖ್ಯವಾಗುತ್ತದೆ. ಕೇವಲ ಒಬ್ಬರನ್ನು ಸಂತೃಪ್ತಿಗೊಳಿಸಲು ಎಲ್ಲರ ಹಿತ ಕಾರಣವಾಗುವ ಸತ್ಯವನ್ನು ಬಲಿಕೊಡುವುದು ಸಮುದಾಯ ಸಂಹಾರಕ ಕೃತ್ಯವಾಗುತ್ತದೆ ಎಂಬ ನಿಲುವು ಇಲ್ಲಿ ಮುಖ್ಯವಾಗಿದೆ. ಸತ್ಯ ಹೇಳಿದ ಗಿಣಿರಾಮ ಶಿವನ ಉರಿಹಸ್ತದಿಂದ ಭಸ್ಮವಾಯಿತು. ಆ ಭಸ್ಮವನ್ನು ತೆಗೆದುಕೊಂಡ ಶಿವನು ನೇರವಾಗಿ ಭೀಮಾವತಿ ಪಟ್ಟಣಕ್ಕೆ ಬಂದು ಸೋಮಯ್ಯನ ಮನೆ ಮುಂದೆ ನಿಂತು ಕೋರಣ್ಯ ಸಾರಿದ. ಸೋಮಯ್ಯ ಮಡದಿಗೆ "ಭಿಕ್ಷವನ್ನು ಕೊಟ್ಟು ಬೈಗ ಕಳುಸ್ಬುಡು ನಾವಿಸಾ ಕಡೀಬೇಕು" ಎಂದು ಆತುರ ಮಾಡಿದ. ಭಿಕ್ಷಕ್ಕೆ ಬಂದಿದ್ದ ಜಂಗಮರೂಪಿ ಶಿವ

ಮಕ್ಕಳ ಫಲವು ನಿನಗಿಲ್ಲಾದ ಮ್ಯಾಕಿನ್ನು
ನಿನ್ನ - ಬಂಜೆ ಕೈಯಿನ ಭಿಕ್ಷೆ ನನ್ಗೆ ಬೇಕಿಲ್ಲ

ಸಾವಿಗಿಂತ ಬದುಕು ದೊಡ್ಡದು ಎಂಬುದೇ ನಮ್ಮ ಜನಪದರ ನಿಜ ನಿಲುವು. ಸಾಯುವ ಹೊತ್ತಲ್ಲೂ ದಾನ ನೀಡಿ ಮಾನ ಉಳಿಸಿಕೊಳ್ಳಬೇಕೆಂಬ ಹಂಬಲವನ್ನು ಸೋಮಯ್ಯ ಮತ್ತು ಮಾದೇವಮ್ಮ ವ್ಯಕ್ತಪಡಿಸುವುದು ಜೀವನ ಮೌಲ್ಯವನ್ನು ಎತ್ತಿಹಿಡಿಯುವಂಥದ್ದಾಗಿದೆ.

ಶಿವ ಮಕ್ಕಳ ಫಲವನ್ನು ಕೊಡುತ್ತೇನೆಂದು ಹೇಳುವಾಗಲೂ ಸದ್ಗುಣಿಯಾದ ಅಲ್ಪಾಯುವೇ ನಮಗಿರಲಿ ಎನ್ನುವ ಮಾದೇವಮ್ಮನ ಮಾತಿನಲ್ಲಿ ಜೀವಿತಾವಧಿ ಮುಖ್ಯವಲ್ಲ. ಜೀವನ ಶೈಲಿ, ಜೀವನ ಮೌಲ್ಯ ಮುಖ್ಯ ಎಂಬ ಜೀವನ ದೃಷ್ಟಿ ಸೂಕ್ತವೆ ಆಗಿದೆ. ಶಿವ ವಿಷದ ಗಂಜಿಯನ್ನು ಮನಃತೃಪ್ತಿಯಾಗಿ ಕುಡಿದು

ಕಂದನ ಭಾಗ್ಯ ನಿಮ್ಮ ಮನೆ ತುಂಬಾಲಿ
ಜ್ಯೋತಿಯಾಗಿ ಮನೆಯ ಬೆಳಗಾಲಿ |

ಎಂದು ಹರಸಿದನು. ಅವನ ಆಶೀರ್ವಾದದಂತೆ ಮಾದೇವಮ್ಮ ಗರ್ಭಿಣಿಯಾಗಿ ಗಂಡು ಮಗುವಿಗೆ ಜನ್ಮವಿತ್ತಳು. ಊರಿಗೆ ಊರೇ ಆನಂದಸಾಗರದಲ್ಲಿ ಮುಳುಗಿಹೋಯಿತು. ಮಗುವಿಗೆ ಶುಭದಿನದಲ್ಲಿ 'ಮೈದಾಳ ರಾಮಣ್ಣ' ಎಂದು ಹೆಸರಿಟ್ಟರು. ಬೆಳೆದು ಮೂರು ವರ್ಷವಾದ ಮಗ ಬೀದಿ ಹುಡುಗರ ಜೊತೆ ಆಟವಾಡಿಕೊಂಡಿರುವಾಗ ಅವನನ್ನು ಓದಿಸಲು ನಿರ್ಧರಿಸಿ ಕೂಲಿಮಠಕ್ಕೆ ಸೇರಿಸಿದರು. ಈ ಸಂದರ್ಭದಲ್ಲಿ ಹಿಂದಿನ ಕೂಲಿಮಠದಲ್ಲಿದ್ದ ಶಿಕ್ಷ-ಶಿಕ್ಷಣ ಪದ್ಧತಿಯ ಪರಿಯನ್ನೆಲ್ಲ ಕಲಾವಿದ ಚಾಚೂತಪ್ಪದೆ ವಿವರಿಸಿದ್ದಾನೆ.

ಸೋಮಯ್ಯನು ಕೂಲಿಮಠಕ್ಕೆ ತನ್ನ ಮಗ ರಾಮಣ್ಣನನ್ನು ಸೇರಿಸಿ ಬರುತ್ತಿರುವಾಗ ತಿಳಿಯದೆ ಕಾಲುದಾರಿಯ ಸತ್ತೆಯೊಳಗಿದ್ದ ಹಾವಿನಹೆಡೆ ಮೇಲೆ ಕಾಲಿಟ್ಟುಬಿಟ್ಟನು. ಆ ಕೂಡಲೆ ಆ ಹಾವು ಸೋಮಯ್ಯನನ್ನು ಕಚ್ಚಿತು. ಸರ್ಪದಷ್ಟನಾದ ಸೋಮಯ್ಯ ಕಷ್ಟದಿಂದ ಮನೆ ಸೇರಿ ಹೆಂಡತಿ ಮಹದೇವಮ್ಮನಿಗೆ ನಿಜಸಂಗತಿಯನ್ನು ತಿಳಿಸಿದ. ಮಾದೇವಮ್ಮ ಲಬಲಬನೆ ಬಾಯಿ ಬಾಯಿ ಬಡಿದುಕೊಂಡು ಗೋಳಾಡಿದಳು. ಈ ಸನ್ನಿವೇಶ ಕಾವ್ಯದಲ್ಲಿ ಸಶಕ್ತವಾಗಿ ಮೂಡಿಬಂದಿದೆ. ಕರುಣರಸದ ಕಡಲಾಗಿದೆ. ಅಲ್ಲದೆ ಸೋಮಯ್ಯ ಸತ್ತಕಾಲಕ್ಕೆ 'ಗೋರುಬಡಸ್ತನ' ಉಂಟಾಗಿ ಊರು ಜನರೆಲ್ಲ ಚಂದಾ ಎತ್ತಿ ಸೋಮಯ್ಯನ ಉತ್ತರ ಕ್ರಿಯಾದಿಗಳನ್ನು ಮಾಡುವುದು 'ಗುಂಪು ಒಂದು ತಂಪು' ಎಂಬ ಜನಪದರ ಧೋರಣೆಗೆ ಸಾಕ್ಷಿಯಾಗಿದೆ. ಸಾವಿನ ಸಂದರ್ಭದಲ್ಲಿ ಹಳ್ಳಿಗಳ ಜನರು ನಡೆದುಕೊಳ್ಳುವ ಬಗೆಯನ್ನು ಕಲಾವಿದ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ದುಃಖಿಸುತ್ತಿರುವವರನ್ನು ಸಂತೈಸುವ ಮಾತುಗಳು ಸಹಜವಾಗಿ ಮೂಡಿಬಂದಿದೆ.

"ಮಾದೇವಮ್ಮ ಮೂರೊರುಸದ ಕಂದನ
ಮುಂದಿಟ್ಕೊಂಡು
ದುಕ್ಕಾ ಮಾಡ್ತಿದ್ದೀಯಲ್ಲ ತಾಯಿ
ಮಗುಂಗೆ ಸಮಾಧಾನ ಹೇಳ್ಬೇಕಾದವಳು ನೀನು
ನೀನೆ ಓಂಗೆ ಧೈರ್ಯಗೆಟ್ರೆ ಹೆಂಗಮ್ಮ ತಾಯಿ

ಸತ್ತಿರುವ ಸಬವನ್ನು ಮುಂದ್ ಮಡಿಕೊಂಡು ದುಕ್ಕ ಮಾಡುದ್ರೆ
ಸತ್ತೋರು ಬದುಕ್ತರ ?
ಸಮಾಧಾನ ಮಾಡ್ಕೊ ತಾಯಿ
ಮಗುಂಗೆ ಧೈರ್ಯ ಕೊಟ್ಕೊಂಡು ಇರ್ಬೇಕಾದ್ದು ನಿನ್ನ ಕರ್ತವ್ಯ"

ಈ ಬಗೆಯ ಸಾಂತ್ವನದ ಮಾತಿನಲ್ಲಿ ಕಲಾತ್ಮಕತೆಯ ಮೋಡಿಯಿದೆ. ಕರುಣರಸದ ಉಕ್ಕಂದವಿದೆ.

ವಿಧವೆಯಾದ ಮಾದೇವಮ್ಮನಿಗೆ ಬ್ರಾಹ್ಮಣ ಸಂಪ್ರದಾಯದಂತೆ ಕೇಶಮಂಡನ ಮಾಡಲು ಸಿದ್ಧತೆ ನಡೆಯುತ್ತಿರುವಾಗ ಕೂಲಿಮಠದಿಂದ ರಾಮಣ್ಣ ಮನೆಗೆ ಬಂದ. ನಡೆಯುತ್ತಿರುವುದು ಏನು ಎಂದು ಪ್ರಶ್ನಿಸಿದ. 'ಮಂಡೆಸುದ್ದಿ' ಎಂದರು. ಅದಕ್ಕೆ ರಾಮಣ್ಣ,

ಗಂಡ ಸತ್ರೆ ಏನು ಸ್ವಾಮಿ ಗಂಡು ಮಗ ನಾನಿರುವಾಗ
ಮಂಡೆ ಸುದ್ದೀಯ ಮಾಡಬವುದ ? |

ಎಂದು ಪ್ರಶ್ನಿಸಿ ವೈದಿಕಧರ್ಮದ ಅಂಧಾನುಕರಣೆಯನ್ನು ಪ್ರತಿಭಟಿಸಿ ನಿಂತ. ಜಾತಿಮತದ ಕ್ರಿಯಾಕಟ್ಟಳೆಗಳನ್ನು ಮೀರಿದರೆ

ನಮ್ಮಿಂದ ನಿಮಗೆ ಬೆಂಕಿ ಬಿಸ್ನೀರಿಲ್ಲ
ಹದ್‌ಬಸ್ತಲ್ ನಿಮ್ಮ ಮಡುಗ್ತೀವಿ |

ಎಂದರೆ ಅದಕ್ಕೆ ಈ ಶರಣ "ಸ್ವಾಮಿ ತಾವು ದೊಡ್ಡೋರು ನೀವೇನ್ಬೇಕಾದ್ರೂ ಮಾಡ್ಕೋಬೋದು!" ಎಂದುಬಿಟ್ಟ. ರಾಮಣ್ಣನ ತೀವ್ರಸ್ವರೂಪದ ಪ್ರತಿರೋಧ ವೈದಿಕಧರ್ಮದ ವಿರುದ್ಧ ಸಿಡಿದೆದ್ದ ಶರಣಧರ್ಮದ ಆದರ್ಶವಾಗಿದೆ. ಸ್ತ್ರೀಪರವಾದ ಶರಣಧರ್ಮದ ಸಾಕ್ಷಾತ್ಕಾರವೆನಿಸಿದೆ. ಇದು ವೈದಿಕ ಸಂಸ್ಕೃತಿಯ ಸ್ತ್ರೀ ಸ್ವಾತಂತ್ರ್ಯ ವಿರೋಧಿ ನಿಲುವಿಗೆ ದ್ರಾವಿಡ ಸಂಸ್ಕೃತಿಯ ಅರ್ಥಾತ್ ಶರಣಸಂಸ್ಕೃತಿಯ ಪ್ರತಿಕ್ರಿಯೆಯಾಗಿದೆ. ಅರ್ಥಹೀನ ಸಂಪ್ರದಾಯದ ವಿರುದ್ಧದ ಪ್ರತಿಭಟನೆ ಇಲ್ಲಿ ಗಮನಾರ್ಹವಾಗಿದೆ.

ಈಗ ದೀಪಾವಳಿ ಹಬ್ಬಕ್ಕೆ ಅಕ್ಕ-ಭಾವರನ್ನು ಕರೆತರಬೇಕು. ಅವರ ಜೊತೆಯಲ್ಲಿ ಸಂತೋಷದಿಂದ ಹಬ್ಬ ಮಾಡಬೇಕೆಂದು ರಾಮಣ್ಣನ ಸಹಪಾಠಿಗಳೆಲ್ಲ ಗುರುವಿನ ಬಳಿಯಲ್ಲಿ ಹತ್ತು-ಹತ್ತು ದಿನಗಳ ರಜ ಕೇಳುತ್ತಾರೆ. ಎಲ್ಲ ಹುಡುಗರು ಕೇಳಿದಾಗ ರಾಮಣ್ಣನೂ

ನಮ್ಮಕ್ಕ ಭಾವನ ನಾನು ಹೋಗಿ ಕರತಂದು
ಅರ್ಥದಲ್ಲಿ ಹಬ್ಬ ಮಾಡಬೇಕು |

ಎಂದು ರಜ ಕೇಳಿಕೊಳ್ಳುತ್ತಾನೆ. ಅವನ ಬುದ್ಧಿ, ಪ್ರತಿಭೆಗಳಿಗೆ ಕರುಬುತ್ತಿದ್ದ ಸಹಪಾಠಿಗಳು ಸಮಯ ಕಾಯುತ್ತಿದ್ದರು. ಈಗ ಅವರ ಸೇಡಿಗೊಂದು ಸದವಕಾಶ ಸಿಕ್ಕಂತಾಯ್ತು.

ಅಕ್ಕ ಭಾವುಳ್ಳೋರು ನಾವು ಕರೆಯಾಕೋದರೆ
ದಿಕ್ಕಿಲ್ಲದ ನೀನೆಲ್ಲಿಗೋಗುತೀಯೋ |

ಎಂದು ಕೆಣಕು ಮಾತುಗಳಿಂದ ಅಣಕಿಸಿದರು.

"ನಿನಗ್ಯಾಕೊ ರಜ ? ನಿನುಗ್ಯಾರಿದ್ದರು?
ನಿನ್ ತಾಯಿ ಹೆಣ್ ಹೆತ್ತಿದ್ದಳ ?
ಹೆತ್ತಿದ್ರೆ ಯಾರುಗ್ ಮದುವೆ ಮಾಡಿದ್ದಳು ?
ಯಾವೂರುಗ್ ಕೊಟ್ಟಿದ್ದರು ?
ನಿನಗ್ಯಾಕ್ಲ ತಬ್ಬಲಿ ಮಗ್ನೆ ರಜ ?"

ಎಂದು ಜರಿದು ಮಾತಾಡಿದರು. ಉಪಾಧ್ಯಾಯರೂ ಕೂಡ "ನಿನ್ನ ಅಕ್ಕ-ಭಾವನ ಹೆಸರ್ಹೇಳು ನಿನ್ಗೆ ರಜ ಕೊಡ್ತೀವಿ" ಎಂದು ಬಿಟ್ಟರು. ಅಳುತ್ತ ಮನೆಗೆ ಬಂದ ಮಗನನ್ನು ಕಂಡು ಮಾದೇವಮ್ಮನ ಜೀವ ಹಾರಿಹೋದಂತಾಯಿತು. ಕಾರಣ ಕೇಳಿದರೆ "ನನಗೆ ಅಕ್ಕ-ಭಾವ ಇಲ್ಲವೇನಮ್ಮ? ಹುಡುಗ್ರೆಲ್ಲ 'ನಾವು ಹಬ್ಬ ಮುಚ್ಚೇಕು ಅಕ್ಕ ಭಾವರನ್ನ ಕರ್ಕೊಂಡ್ಬರ್ಬೇಕು' ಅಂತ್ಹೇಳಿ ರಜ

ಕೇಳ್ಕೊಂಡ್ರು. ನಾನು ರಜ ಕೇಳಿದ್ಕೆ ನನಗೆ ಅಕ್ಕ ಭಾವ ದಿಕ್ಕು ದೆಸೆ ಸೊಮ್ಮು ಸೋದ್ರ ಒಂದೂ ಇಲ್ದೋನಂತೆ ಹಾಗಂತ ಹುತ್ತುಗ್ರೆಲ್ಲ ಜರ್ದು ಮಾತಾಡುದ್ರಮ್ಮ. ಅಮ್ಮ ನಾನೂ ಅಕ್ಕ ಬಾವಂದ್ರ ಕರ್ಕೊಂಡ್ಬಂದು ಹಬ್ಬ ಮಾಡ್ಬೇಕು ತಾಯಿ" ಅಂದ. ತನಗೆ ಅಕ್ಕ-ಭಾವರಿಲ್ಲ ಎನ್ನುವುದಾದರೆ

"ನನ್ಮಗ ಅನ್ನೋ ಆಸೆ ನೀ ಮಡುಗ್ಬೇಡ ಅಮ್ಮಯ್ಯ
ಕಂಡುತ್ಯಾಗೂ ನಾನು ಪ್ರಾಣ ಬುಡುತೀನಿ |"

ಎಂದು ದೃಢನಿರ್ಧಾರದ ಮಾತಾಡಿದ. ಇರುವ ಒಬ್ಬ ಮಗನೂ ಇಂಥ ಮಾತಾಡಿದರೆ ಏನು ಗತಿ ಎಂದು ಯೋಚಿಸಿದ ಮಾದೇವಮ್ಮ 'ಹಬ್ಬ ಮಾಡಿ ಹಟಾ ಕಳ್ಕೋತೀನಿ' ಎಂಬ ಮಗನನ್ನು ಸಂತೈಸಲು ಅವಳಿಗೆ ದಿಕ್ಕೇ ತೋಚದಂತಾಯಿತು.

"ಮಾರುಸ್ಕೊಂಡ್ಹೋದ್ ಮಗ್ಳು
ಮನೆಗ್ಯಾಕ್ಬೇಕು ಅನ್ನೋಹಂಗೆ
ಅಂತೆ ಹೆಣ್ಮಕ್ಕಿಂದ ಬರ್ತಕ್ಕಂತ ಬೋಮಾಸವೇನು ?"

ಎಂದು ಮಾದೇವಮ್ಮ ಹೇಳಿದ್ದೇ ತಡ - ರಾಮಣ್ಣ - ಹೆಣ್ಣುಮಕ್ಕಳ ಹಿರಿಮೆಯನ್ನು ಸಾರತೊಡಗುತ್ತಾನೆ.

ಹೆಣ್ಣಿಲ್ಲದವರಿಗೆ ಪುಣ್ಯವೇ ಮೊದಲಿಲ್ಲ
ಎರ್ದೂ ಕಣ್ಣಿಲ್ಲ ತೆರನಂತೆ ತಾಯಿ |

ಅಕ್ಕನಿಲ್ಲದ ಮನೆ ಲಕ್ಷ್ಮಿಲ್ಲದ ಮೇಘ
ಹೆಣ್ಣು-ಮಕ್ಕಳಿಲ್ಲಾದ ಮನೆಹಾಳು |

ಇಂಥ ಮಾತುಗಳನ್ನು ರಾಮಣ್ಣ ಹೇಳುವುದರ ಮೂಲಕ ಇಡೀ ಕಾವ್ಯ ಸ್ತ್ರೀಪರವಾದುದು ಎಂಬುದನ್ನು ಸ್ಪಷ್ಟಪಡಿಸುತ್ತದೆ.

"ಅಮ್ಮ ನಾನು ಪ್ರಾಣತ್ಯವಾದ ಕಾಲ್ದಲ್ಲಿ
ಒಡುಟ್ಟಾಗಿರುವ ಹೆಣ್ಮಾಗ್ಳು ಬಂದು
ಚಟ್ಟವನ್ನು ಮೆಟ್ಟಿ
'ಹೋದ್ಯಪ್ಪ ಅಣ್ಣ
ತವುರ್ಮನೆಗೆ ಹೆಗ್ಗಂಬದಂತಿದ್ದಲ್ಲೊ ಅಣ್ಣ
ಅಕ್ಕತಂಗೀರು ಅಂದ್ರೆ ಪ್ರಾಣ ಬುಡ್ತಿದ್ದಲ್ಲೊ ಅಣ್ಣ
ಹಬ್ಬ ಹುಣ್ಣಿಮೆಗಳಿಗೆ ಅಕ್ಕಿಯಿಂದ ಅಕ್ಕ ತಂಗೇರ ಕರ್ದು
ಬಾವುನ್ನೆ ಮರ್ಯಾದೆ ಮಾಡಿ ಕಳುಸ್ಕೊಡ್ತಿದ್ದಲ್ಲೊ'
ಹಂಗೆ ಹೇಳ್ತ ಬಾಯ್ಬಡ್ಕೊಂಡತ್ರೆ ನನಗೆ ಸೊರುಗ
ಇಲ್ಲೆ ಇದ್ರೆ ಸೊರುಗವಿಲ್ಲ
ನಾ ನಗುನ ಪ್ರಸ್ತನಾಗುವಾಗ
ಒಡುಟ್ಟು ಕಂದ್ಲು ಗಡಿಗೆ ತಂದು
ಚಪ್ಪರದಟ್ಟೀಲಿ ಮಡುಗುದ್ರೆ ಎಷ್ಟು ಕಳೆಯ ?
ಅದ್ಕೆ ಒಡುಟ್ಟು ಬೇಕು ತಾಯಿ"

ಎಂದು ಹೇಳಿ ಒಡುಟ್ಟಿಲ್ಲದ ನಾನು ಬದುಕುವುದಿಲ್ಲವೆಂದು ಸಾಯಲು ಚಂದ್ರಾಯುಧವನ್ನು ಎತ್ತಿ ಹೆಕ್ಕತ್ತಿಗಿಡುವುದರಲ್ಲಿದ್ದ. ಆಗ ಮಾದೇವಮ್ಮ "ಈ ಪ್ರಾಣ ಹೋಗೊ ಕಾಲ್ದಲ್ಲಿ ಒಂದು ಸುಳ್ಳು ಹೇಳಿ ಪ್ರಾಣ ಉಳುಸ್ಬೇಕು" ಎಂದು ನಿರ್ಧರಿಸಿದ ಅವಳು ಥಟ್ಟನೆ ಆತುರ ಪಡಬೇಡ ಮಗನೆ ಸತ್ತು ಯಾತರ ಸುಖ ಪಡುತ್ತೀಯೋ ತಾಳು ತಾಳು

ಅಕ್ಕಯ್ಯ ನಿನಗುಂಟು ಬಾವಾಜಿ ನಿನಗುಂಟು
ಮಿಕ್ಕ ಬಾಂಧವರು ನಿನಗುಂಟು |

ಶ್ರೀಗೌರಿ ಎಂಬೋಳು ಹಿರಿಯಕ್ಕ ರಾಮಯ್ಯ
ರಂಭೆ ಊರ್ವಸಿಗಿಂತ ಅತಿ ಚೆಲುವೆ |

ಮಲ್ಲಯ್ಯನೆಂದು ಲೋಕ ಕೊಂಡಾಡುವುದು
ಭೂತಳಲೋಕಕೆ ದೊಡ್ಡವರು |

ಇಂತೆ ಲಕ್ಕಭಾವಂದಿರು ನಿನಗಿರುವಾಗ
ನೀನು ದುಕ್ಕ ಮಾಡೋದು ತರವಲ್ಲ |

ಎಂದಾಗ ರಾಮಣ್ಣನ ಹರ್ಷದ ಕಡಲು ಉಕ್ಕಿ ಉಕ್ಕಿ ಮೊರೆಯಿತು. ಅವನ ಆನಂದಕ್ಕೆ ಪಾರವೇ ಇಲ್ಲದಂತಾಯ್ತು. ಆದರೆ ಗೌರಿಯನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಶಿವ

ಕಟ್ಟಬಾರದ ತೆರವ ಕಟ್ಟವುರೆ ಜಗದೀಶ
ಇಕ್ಕಬಾರದ ಲಗವ ಇಕ್ಕವುರೆ |

ಆನೆ ಮ್ಯಾಲೆ ದಿರವಯನ್ನೇ ಹೊತ್ಕೊಂಡು ಬಂದ್ರಯ್ಯ
ಚಪ್ಪುದಟ್ಟಿ ಒಳುಗೆ ಸುರಿದಾವು |

ಕೊಂಗುದಲ್ಲಿ ತೂರಿದರು ಕೊಳುಗದಲ್ಲಿ ಅಳೆದಾರು
ಗೌರಿ ಉದ್ದುಕು ಚನ್ನ ಸುರಿದಾರು |

ಅಲ್ಲದೆ ಮತ್ತೂ ಏನು ಹೇಳಿದರೆಂದರೆ :

ಹೆಣ್ಣು ನಮ್ಮದು ತಾಯಿ ಹೊನ್ನು ಚನ್ನ ನಿಮ್ದು
ನನ್ನ ಕೈಲಾಸ್ಕೆ ನೀವ್ ಮಾತ್ರ ಬರಬೇಡಿ |

ಎಂದು ಹೇಳಿ ಗೌರಿಯನ್ನು ಕರೆದುಕೊಂಡು ಹೋದರೆಂದು ಹೇಳಿದಾಗ 'ಹೊನ್ನು ಚಿನ್ನದಾಸೆಗೆ ಹೆಣ್ಣು ಮಾರುವ ಜಾತಿ ನೀವು' ಎಂದು ಹೇಳಿ ರಾಮಣ್ಣ ಕಿಡಿಕಿಡಿಯಾದ. ಶಿವ ಕಟ್ಟಿರಬಹುದಾದ ತೆರವನ್ನು ಮುಟ್ಟಿಸುವುದಕ್ಕೆ ಸಂಬಂಧಿಸಿದಂತೆ ರಾಮಣ್ಣ ಹೇಳುವ ಮಾತುಗಳು ವೈಚಾರಿಕವಾಗಿವೆ. ತೆರ ಕಟ್ಟಿರುವುದರಿಂದ ನಿಮ್ಮಕ್ಕನನ್ನು ಕಳಿಸುವುದಕ್ಕಾಗುವುದಿಲ್ಲ ಎಂದೇನಾದರೂ ಶಿವ ಹೇಳಿದರೆ ಅದಕ್ಕೆ ರಾಮಣ್ಣನ ಉತ್ತರ

ಏನ್ ಸ್ವಾಮಿ ನೀವು ಕಟ್ಟಬಾರದ ತರುವ ಕಟ್ಟಿದ್ರೆ
ನಮ್ಮಕ್ಕುನ್ ಕುಂಡ್ರುಸ್ಕೊಂಡ್ ಕೂತಿದ್ದೀರ್ಕೊ ?

ಎಂದು ಪ್ರಶ್ನಿಸಿ ಅವಳು ಗೃಹಿಣಿಯಾಗಿ ಮಾಡುವ ಮನೆಗೆಲಸದ ಪಟ್ಟಿಯನ್ನೆ ಒಪ್ಪಿಸುತ್ತಾನೆ. ಹೆಂಡತಿಯಾಗಿ ಮನೆಯ ಒಳಗೇ ದುಡಿಯುವ ಹೆಣ್ಣಿನ ಉತ್ಪಾದಕತೆಯನ್ನು ಆರ್ಥಿಕ ನೆಲೆಯಿಂದ ಮೌಲ್ಯೀಕರಿಸುವ ಇಲ್ಲಿನ ಮಾತುಗಳು ಸಾರ್ವಕಾಲಿಕ ಸತ್ಯಗಳಾಗಿವೆ. ಈ ಹಿಂದೆ ಜನಪದರು ಹೇಳಿದ ಇಂಥ ಮಾತನ್ನು ಸಮುದಾಯ ಲಕ್ಷಿಸಿದೆ. ಪ್ರಸ್ತುತ ಆಧುನಿಕ ಮಹಿಳೆಯು ಎತ್ತುತ್ತಿರುವ ಬಲುಮುಖ್ಯ ಪ್ರಶ್ನೆಗೆ ಇಲ್ಲಿ ಜನಪದ ಕವಿ ಉತ್ತರ ಕೊಟ್ಟಿರುವುದು ಮಹತ್ವದ ಸಂಗತಿಯಾಗಿದೆ. ಜನಪದ ಕಾವ್ಯಗಳು ಸಾರ್ವತ್ರಿಕ ನೆಲೆಯಲ್ಲಿ ಸಲ್ಲುವ ಬಗೆಯನ್ನು ಇಲ್ಲಿ ಕಾಣಬಹುದು.

ಮದುವೆಯಾದ ಗೌರಿಯ ಜೊತೆಯಲ್ಲಿ ಕೈಲಾಸಕ್ಕೆ ಹೋದ ಐದು ಜನ ಮುತ್ತೈದೆಯರನ್ನು ಭೂಲೋಕಕ್ಕೆ ಕಳುಹಿಸದ ಶಿವನನ್ನು ರಾಮ ಪ್ರಶ್ನಿಸುವುದಲ್ಲದೆ ಶಿಕ್ಷಿಸುವುದಾಗಿ ಹೇಳಿದಾಗ ಶಿವ 'ಮೊರೆದು' ಎಳುವುದು ಪುರುಷನ 'ಅಹಂ'ನ ಸಂಕೇತವಾಗಿದೆ. ಇಂಥ ಸಂದರ್ಭದಲ್ಲಿ

ಅರಿಯದ ಕಂದಯ್ಯ ಆಡೀದ ಮಾತೀಗೆ
ಉರಿಯುವ ಕ್ವಾಪ ನಿಮುಗ್ಯಾಕೆ |

ಎಂದು ಹೇಳುವ ಪಾರ್ವತಿಯ ವಿವೇಕ, ಸಹನೆ, ತಾರ್ಕಿಕತೆ - ಇವೆಲ್ಲ 'ಗಂಡಿಗೆ ಗುರು ಹೆಣ್ಣು' ಎಂಬ ಮಾತನ್ನು ಸಾಕ್ಷೀಕರಿಸಲು ಸಹಕರಿಸುತ್ತವೆ.

ಛಲ ಬಿಡದೆ ಹೊರಟು ನಿಂತ ರಾಮಣ್ಣನಿಗೆ ತಾಯಿ ಮಾದೇವಮ್ಮ ಬುತ್ತಿ ಕಟ್ಟಿಕೊಟ್ಟಳು. ಕೈಲಾಸಕ್ಕೆ ಹೋಗುವವರಿಗೆ ಲಿಂಗಧಾರ್ಣೆ ಆಗ್ಬೇಕಪ್ಪ ಎಂದು ಹೇಳಿದಾಗ ಲಿಂಗಧಾರಣೆಯ ಬಗ್ಗೆ ತಾಯಿ-ಮಗನ ನಡುವೆ ನಡೆಯುವ ಚರ್ಚೆ ವಿಶೇಷವಾಗಿದೆ.

ಗುರುವಿನ ಮಾರ್ಗವ
ಗುರುವೇ ಬಲ್ಲನು
ಶಿವನ ಮಾರ್ಗವ
ಶಿವನೇ ಬಲ್ಲನು

ಬ್ರಾಮಣ ತಾನು ಬಲ್ಲನೆ - ತಾಯಿ
ಬ್ರಾಮಣ ತಾನು ಬಲ್ಲನೆ |

ಅಮ್ಮ ನನ್ನೊಟ್ಟೆಪೊಳುಗೆ ಲಿಂಗ ಇದೆ ತಾಯಿ
ಈಚೆಗೆ ಕಾಣೋಂಗೆ ಕಟ್ಕೊಂಡಿಲ್ಲ ನಾನು |

ಎಂದು ಎದೆ ಬಗೆದು ತಾಯಿಗೆ ಆತ್ಮಲಿಂಗ ದರ್ಶನ ಮಾಡಿಸುತ್ತಾನೆ. ಕಟ್ಟಿಕೊಳ್ಳುವ ಬಾಹ್ಯಲಿಂಗ ಕಾಯುವುದಿಲ್ಲ ; ಆತ್ಮ ಎಂಬುದೇ ನಿಜವಾದ ಲಿಂಗ' ಎಂದು ರಾಮಣ್ಣ ವಾದಿಸುವುದು ವೈಚಾರಿಕವಾಗಿದೆ. 'ಮಂಟೇಸ್ವಾಮಿ' ಹಾಗೂ 'ಮಾದೇಶ್ವರ'ರನ್ನು ತಮ್ಮ ನಿಜದೈವ - ನಾಯಕರನ್ನಾಗಿ ಸ್ವೀಕರಿಸಿದ ಜನಪದರ ವೈಚಾರಿಕ ನಿಲುವ ಇಲ್ಲಿ ಸಹಜವಾಗಿ ಮೂಡಿಬಂದಿದೆ - 'ಕಾವಿ ಕಲ್ಯಾಣ'ವನ್ನು ಖಂಡಿಸುವ ಪ್ರತಿಭಟಿಸುವ ಧೋರಣೆ ಇಲ್ಲಿದೆ.

ಅಕ್ಕ ಗೌರಿಯನ್ನು ಭಾವ ಶಂಕರನನ್ನು ಕರೆತರಲು ಕೈಲಾಸಕ್ಕೆ ನಡೆದ ರಾಮನ ಅನ್ವೇಷಣಾ ವಿಧಾನ ರಾಘವಾಂಕ ಕವಿಯ 'ಸಿದ್ಧರಾಮ ಚಾರಿತ್ರ'ದ ಸಿದ್ಧರಾಮನ ಮಲ್ಲಿಕಾರ್ಜುನನ ಹುಡುಕಾಟದ ಬಗೆಯನ್ನು ಹೋಲುತ್ತದೆ. ಇದು ಆಧ್ಯಾತ್ಮಿಕ ಸಾಕ್ಷಾತ್ಕಾರಕ್ಕೆ ಹಂಬಲಿಸುವ ಸಾಧನಾಶೀಲನ ಹುಡುಕಾಟದ ಬಗೆಯನ್ನು ಹೋಲುತ್ತದೆ.

ಕಜ್ಜಿ, ಕುರ, ಕೀವು, ರಕ್ತಗಳಿಂದ ಕೂಡಿದ ಜಂಗಮನನ್ನು ರಾಮ ಶುಶ್ರೂಷೆ ಮಾಡಿ ಕರ್ಮನಾಶ ಮಾಡಿಕೊಳ್ಳುವುದು ಜನಪದರ ಒಂದು ಮಹತ್ವದ ಆಶಯವಾಗಿದೆ. 'ನೊಂದವರ ಸೇವೆ'ಯೇ ಜೀವನ ಸಾರ್ಥಕತೆಗೆ ಇರುವ ಮಾರ್ಗ ಎಂಬ ನಿಲುವಿಗೆ ಇದು ಸಾಕ್ಷಿಯಾಗಿದೆ.

ರಾಮನಿಗೆ ಕಷ್ಟ ಕೊಡುವ ಉದ್ದೇಶದಿಂದ ಶಿವ ಕಾಡು ಪ್ರಾಣಿಗಳನ್ನು ಸೃಷ್ಟಿಸಿ ರಾಮನನ್ನು ಭಯಪಡಿಸಿ ಸಾಧನಾ ಮಾರ್ಗದಿಂದ ಹಿಮ್ಮೆಟ್ಟಿಸುವ ಪ್ರಯತ್ನ ಮಾಡಿದಾಗ ರಾಮ ಅವುಗಳನ್ನೆಲ್ಲ ಗುಣಗಾನ ಮಾಡಿ ಒಲಿಸಿಕೊಳ್ಳುವುದು ಸಾಂಕೇತಿಕವಾಗಿದೆ. ಪೋಷಿಸುವ ಶಕ್ತಿಯಾಗಿರುವ ಪ್ರಕೃತಿ, ಮನುಷ್ಯನಿಗೆ ಒಂದು ದೊಡ್ಡ ಸವಾಲೂ ಕೂಡ. ಇಂಥ ಸವಾಲನ್ನು ಎದುರಿಸಿ ಯಶಸ್ಸು ಸಾಧಿಸುವ ಕ್ರಮ ಸಾಂಕೇತಿಕ ರೂಪವಾಗಿದೆ ಈ ಪ್ರಸಂಗ. ಈ ಸಂದರ್ಭದಲ್ಲಿನ ವರ್ಣನೆ ಸೊಗಸಾಗಿ ಮೂಡಿಬಂದಿದೆ. ಶಿವ ಕಪಿಗಳ ಹಿಂಡನ್ನು ಬಿಟ್ಟು ರಾಮನನ್ನು ಹೆದರಿಸಲು ಪ್ರಯತ್ನಿಸಿದಾಗ ರಾಮ ಆ ಕಪಿಗಳನ್ನೆಲ್ಲ ಮಿತ್ರರನ್ನಾಗಿಸಿಕೊಂಡು ಕುಣಿದಾಡುತ್ತಾ -

ನಿನ್ನ ಸ್ವಾಮಿ ದೊಡ್ಡರಾಮ ನಾನೊಬ್ಬ ಪುಟ್ಟರಾಮ
ನನ್ನೂ - ನೀನು ಸಾಹ್ಯವ ಮಾಡಬೇಕು |

ಕಪಿಗಳಿಗೆ ರಾಮ ಬಗ್ಗುವುದಿಲ್ಲವೆಂದುಕೊಂಡ ಶಿವ ಆನೆಗಳ ಹಿಂಡನ್ನು ಕಳಿಸಿದರೆ -

ಹೆಬ್ಬಂಡೆ ಮೈಯವನೆ ಎಬ್ಬರಿಸಿ ಬರುವೋನೆ
ಉಬ್ಬಾರಿ ಸೊಂಡಿಲ ತಲೆಯವನೆ |

ಮೊರದಗಲ ಕಿವಿಯೋನೆ ಮೊರಮೊರೆದು ಬರುವೋನೆ
ನಮ್ಮಕ್ಕನ ಮುದ್ದು ಮೊಗರಾಯ |

ಎಂದು ಹೇಳಿ ಆನೆಗಳ ಮನಸ್ಸನ್ನು ಗೆಲ್ಲುತ್ತಾನೆ. ಆನೆಗಳಿಗೆ ಹೆದರದ ರಾಮ ಹುಲಿಗೆ ಹೆದರುತ್ತಾನೆಂದು ಭಾವಿಸಿದ ಶಿವ ಹುಲಿಹಿಂಡನಟ್ಟಿದರೆ

ಬೆಟ್ಟದ ಗವಿಯೋನೆ ಪಟ್ಟೆಯ ಮ್ಯೆಯವನೆ
ಹೊನ್ನ ಬಣ್ಣದ ಹುಲಿರಾಯ |

ಅಕ್ಕ ಗೌರಮ್ಮನ ಅಕ್ಕರೆಯ ವಾಗನನೆ
ಭಾವ ಮಲ್ಲಯ್ಯನ ಮಠವೆಲ್ಲಿ ?|

ಎಂದು ಹುಲಿಗಳನ್ನು ತಲೆತೂಗುವಂತೆ ಮಾಡಿದ. ಈಗ ಹನ್ನೆರಡು ಸಾವಿರ ಗಿಳಿಹಿಂಡು ಬರಲು, ಕಂಡ ರಾಮ ಕೇಕೆ ಹಾಕಿ ಕುಣಿಯುತ್ತ

ಮಳಿಲ್ಲ ಬೆಳಿಲ್ಲ ಮ್ಯೆಯೆಲ್ಲ ಹಸುರು
ಎಲಿಲ್ಲ ಅಡ್ಡಿಲ್ಲ ಬಾಯೆಲ್ಲ ಕೆಂಪು |

ನಿನ್ನ - ಪಚ್ಚೇಯ ಮ್ಯೆಚಂದ ಪವಳಾದ ಬಾಯಿಚಂದ
ನೀನಾಡೊ ಮಾತು ಬಲುಚಂದ

ಎಂದು ಹೇಳಿ ಮಾತಿನಗಿಳಿಗಳನ್ನು ಮರುಳು ಮಾಡಿದ. ಹಾಗೆಯೇ ಕೋಗಿಲೆ, ಕಾಡುಕೋಳಿ, ಹುಲ್ಲೇಕರ, ದುಂಬಿ, ಜೀರುಂಡೆ ಮುಂತಾದವುಗಳೆಲ್ಲ ರಾಮನ ದಾರಿಯನ್ನು ಸುಗಮಗೊಳಿಸಿದವು.

ಇಷ್ಟಾದರೂ ರಾಮಯ್ಯನನ್ನು ಪರೀಕ್ಷಿಸುವ ಶಿವನ ಕೆಲಸ ನಿಲ್ಲಲಿಲ್ಲ. ನಡೆದು ನಡೆದು ರಾಮನ ಪಾದ, ಮಂಡಿ, ಮೊಣಕೈ, ಗುಂಡಿಗೆಗಳೆಲ್ಲ ತರಚಿ ರಕ್ತಮಯವಾದವು. ತೆವಳುತ್ತ ತೆವಳುತ್ತ ಕಷ್ಟದಿಂದ ಬೆಟ್ಟದ ತುದಿಗೆ ಹೋದ. ಅಕ್ಕ-ಭಾವರನ್ನು ಕರೆದುಕೊಂಡು ಹೋಗಲಾಗದ ಮೇಲೆ ನಾನ್ಯಾಕೆ ಬದುಕಿರಬೇಕು ಎಂದುಕೊಂಡ ರಾಮ ಬೆಟ್ಟದ ತುದಿಯಿಂದ ಕಮ್ಮರಿಯೊಳಕ್ಕೆ ಹಾರಿಕೊಂಡ.

ಉಕ್ಕುಳಿಸಿ ನೆಗೆದ ರಾಮಯ್ನ ಪರಮಾತ್ಮ
ಹೂವ ಚಂಡಂತೆ ಆತುಕೊಂಡ್ರು |

ಆತುಕೊಂಡ ಅವನನ್ನು ಋಷ್ಯಾಶ್ರಮದಲ್ಲಿ ಇಳಿಸಿದ. ಋಷಿ ವೇಷದಲ್ಲಿದ್ದ ಶಿವ ಮತ್ತು ರಾಮನ ನಡುವೆ ನಡೆಯುವ ಸಂಭಾಷಣೆ ಹೃದ್ಯವಾಗಿದೆ. ಅದು ಜನಪದರ ಜೀವನದ ಘನತೆಯನ್ನು ಅನಾವರಣಗೊಳಿಸುವಂಥದಾಗಿದೆ.

ರಾಮನನ್ನು ಹೆದರಿಸಲು ಶಿವ -

"ರಾಮಯ್ಯ ಈ ರುಸಿಗಳು ಯಾರಾದ್ರೂ ಕಣ್ಬುಟ್ಟು ನಿನ್ನ ನೋಡುದ್ರೆ
ನೀನು ಸುಟ್ಟು ಭಸ್ಮ ಆಗೋಯ್ತಿಯಪ್ಪ!"
"ಯಾಕೆ ಬುದ್ಧಿ?"
"ಅವ್ರು ತ್ರಪಸ್ ಮಾಡವ್ರೆ"
"ಸ್ವಾಮಿ ನಾನು ನನ್ನ ಅಕ್ಕ ಗೌರಮ್ಮನ ಭಾವ
ಮಲ್ಲಯ್ಯನ ಕುರ್ತು
ನಾನು ಹುಟ್ಟುತ್ತಾವ್ಗಿಂದ ಜಪುನೆ ಮಾಡ್ತಿದ್ದೀನಿ
ಇವತ್ಗೆ ನನ್ ತ್ರಬಸ್ ಮುಗೀತು
ನಾನೂ ಕಣ್ಬುಟ್ರೆ ಈ ರುಸುಗಳೂ ಭಸ್ಮ ಆಯ್ತುರೆ |"

ಎಂಬ ಮಾತು ಬೆರಗು ಮೂಡಿಸುತ್ತದೆ. ಶ್ರಮ, ಸಹಿಷ್ಣುತೆ, ಪ್ರಾಮಾಣಿಕತೆ, ಶ್ರದ್ಧೆ, ಪರೋಪಕಾರ ಇತ್ಯಾದಿ ಗುಣಾತ್ಮಕ ಮೌಲ್ಯಗಳನ್ನಾಧರಿಸಿ ಬದುಕುವ ಜನಪದರ ಜೀವನ ಕ್ರಮವೇ ಒಂದು ತಪಸ್ಸು ಎಂಬ ಪ್ರತಿಪಾದನೆ ಇಲ್ಲಿ ಗಮನಸೆಳೆಯುತ್ತದೆ.

ರಾಮನ ಕೈಲಾಸ ಪ್ರವೇಶ ಸಂದರ್ಭದಲ್ಲಿಯೂ ಆತ್ಮಲಿಂಗದ ಚರ್ಚೆ ಬರುತ್ತದೆ. ರುದ್ರಾಕ್ಷಿಲಿಂಗ ಹಾಗೂ ಕರಡಿಗೆ ಒಳಗಿನ ಲಿಂಗವನ್ನು ಕೇವಲ ಕಾಯಿಲಿಂಗ - ಕಲ್ಲುಲಿಂಗ ಎಂದು ಟೀಕಿಸಿದ ರಾಮ ಇಲ್ಲಿಯೂ ಆತ್ಮಲಿಂಗದ ಹಿರಿಮೆಯನ್ನು ಕೊಂಡಾಡುತ್ತಾನೆ. ದೇಹವನ್ನು ಸೀಳಿಕೊಂಡು ರಾಮ ಆತ್ಮಲಿಂಗ ತೋರುವುದು ಹನುಮಂತನನ್ನು ನೆನಪಿಸುತ್ತದೆ.

ರಾಮ ಕೈಲಾಸಕ್ಕೆ ಬರುವ ದಾರಿಯಲ್ಲಿ ಮಲ್ಲಿಗೆ ಹೂವಿನ ಮಳೆಯಾಗುತ್ತದೆ. ಪುಷ್ಪವೃಷ್ಟಿ ಸಂತಸದ ಸಂಗತಿಯಾದರೂ ಹೂ ತುಳಿದು ನಡೆಯುವ ಕ್ರಮಕ್ಕೆ ರಾಮನ ವಿರೋಧ ವ್ಯಕ್ತವಾಗಿದೆ. ತಾವು ಶ್ರಮವಹಿಸಿ ಬೆಳೆಯುವ ಸುಂದರ-ಸುಗಂಧಪೂರಿತ ಹೂಗಳನ್ನು ತುಳಿಯಲು ಜನಪದರು ವಿರೋಧಿಸುವುದು ಸಹಜವಾಗಿದೆ.

ಕೈಲಾಸಕ್ಕೆ ಬಂದ ರಾಮನ ಆನಂದಕ್ಕೆ ಪಾರವೇ ಇಲ್ಲ. ಅಕ್ಕ-ಭಾವರ ಅಕ್ಕರೆಯ ರಾಮಣ್ಣ ಸಕ್ಕರೆಯ ಸವಿಮಾತಿನಿಂದ ನಕ್ಕುನಲಿಯುತ್ತಾನೆ. ಆಗ ಈಶ್ವರ ಬೇಕಂತಲೆ ನಾವು ಭೀಮಾವತಿಗೆ ಬರುತ್ತೇವೆ. ಆದರೆ ಕೈಲಾಸದಲ್ಲಿ

"ವಜ್ರವೈಡೂರ್ಯ ರವರತ್ನಗಳೆ ತುಂಬ್ಯವೆ
ನಿನ್ನ - ಪಟ್ಟಣದಲೇನುಂಟು ಹೇಳಯ್ಯ?"

ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ರಾಮನ ಉತ್ತರದಲ್ಲಿ ಹೊನ್ನು-ಅನ್ನಗಳ ತೌಲನಿಕ ವಿಮರ್ಶೆ ಸೊಗಸಾಗಿದೆ.

"ಭಾವಾಜಿ ಭಾವಾಜಿ ಏನು ಮಾತಾಡಿದಿರಿ
ನಿಮ್ಮ - ವಜ್ರವೈಡೂರ್ಯ ರವರತ್ನಗಳ |

ನಿಮ್ಮ ರವರತ್ನಗಳು ಯಾರೀಗೆ ಬೇಕು ಭಾವಾಜಿ
ನೀವಲ್ಲವೆ ಲೋಕದ ಜೀವರತ್ನ |

ಹುಳ್ಳಿ ತಡುಗುಣಿ ತೊಗರಿಗಳ ತಿನ್ನಬವುದು
ವಜ್ರವೈಡೂರ್ಯ ರತ್ನಗಳ |

ವಜ್ರವೈಡೂರ್ಯ ರತ್ನಗಳ ಸುರುಕೊಂಡು
ತಿನ್ನಬವುದೆ ಹೇಳಿ ಭಾವಾಜಿ |

ಅನ್ನರತ್ನದ ಮುಂದೆ ಇನ್ನಾವ ರತ್ನವು
ನಿಮ್ಮ ರವರತ್ನವ್ಯಾತಕ್ಕೆ ಭಾವಾಜಿ |

ಶುದ್ಧಾಂತಃಕರಣದ ಮುದ್ದುರಾಮನ ಪ್ರಬುದ್ಧ ಮಾತುಗಳು ಎಲ್ಲರ ಮನವನ್ನು ಗೆದ್ದುಕೊಂಡವು.

ರಾಮಾನ ಮಾತುಗಳು ರವರತ್ನಕಿಂತ ಹೆಚ್ಚೆಂದು
ಮೊಳಗಿದವು ಕೈಲಾಸ್ದ ಶಿವುಗಹಳೆ |

ಕೈಲಾಸಕ್ಕೆ ಕೈಲಾಸವೇ ಭೀಮಾವತಿಗೆ ಹೊರಟುನಿಂತಿತು. ಶಿವನ ಕೃಪೆಯಿಂದ ರಾಮನ ಮನೆ ಅರಮನೆ ಆಯಿತು. ಅರಮನೆ ತುಂಬ ಐಶ್ವರ್ಯ ತುಂಬಿ ತುಳುಕಿತು. ಕೈಲಾಸದಿಂದ ಭೂಲೋಕಕ್ಕೆ ಮಾರ್ಗವಾಯಿತು. ಮಾರ್ಗ ಮಧ್ಯೆ ಮದ್ಯೆ ಬರುವವರ ಉಪಚಾರಕ್ಕೆ ಅರವಟ್ಟಿಗೆಗಳು.

ಮಗಳಾಗಿ ಬಂದ ಗೌರಿಯನ್ನು ಎದುರುಗೊಳ್ಳುವ ಚಿತ್ರ ನಮ್ಮ ಗ್ರಾಮೀಣ ಬದುಕಿನ ತಾಯಿ-ಮಗಳ ಹೃದ್ಯಸಂಬಂಧವನ್ನು ಮುದ್ದಾಗಿ ಚಿತ್ರಿಸಿದೆ.

ತಾಯಿ ಮೊಕುವ ನೋಡುಬುಟ್ಟು ಗೌರಮ್ಮ
ಗುಳುಗುಳನೆ ಕಣ್ಣೀರ ಸುರಿಸಿದಳು |
ಮಗಳ ಸಂತೈಸಿ ತಾಯಿ ಮಾದೇವಮ್ಮ
ಮನೆಯ ಒಳಗಡೆಗೆ ಕರುಕೊಂಡ |

ಹೀಗೆ ಕೈಲಾಸ-ಮರ್ತ್ಯದ ಮಧುರ ಸಂಬಂಧ ಬೆಸಿದುಕೊಳ್ಳುವ ಚಿತ್ರ ಅನೂಹ್ಯ ಪ್ರೇಮದ ಪ್ರತೀಕವಾಗಿದೆ. ದೀಪಾವಳಿಗೆ ಬಂದ ಶಿವಪಾರ್ವತಿಯರು ಸಂತೃಪ್ತರಾದುದು ಮಾತ್ರವಲ್ಲ. ಗೌರಿಗೆ ಪ್ರತಿವರ್ಷವೂ ತಾಯಿ ಮನೆಗೆ ಬರಬೇಕೆನಿಸಿದ್ದರಿಂದ ಗೌರೀಹಬ್ಬದ ಆಚರಣೆಯೂ ರೂಢಿಗೆ ಬರುವಂತಾಯಿತು. ಗೌರೀಹಬ್ಬಕ್ಕೂ ರಾಮಣ್ಣನ ಕಥೆಗೂ ತಳಕುಹಾಕಿರುವ ಇಲ್ಲಿನ ಕ್ರಮ ಚಮತ್ಕಾರಯುತವಾಗಿದೆ. ಮುಗ್ಧ ಬಾಲಕ ರಾಮಣ್ಣನ ಈ ಕಥೆ ಜನಪದ ಗಾಯಕರ ಕಲಾತ್ಮಕ ಸಿದ್ಧಿಗೂ ಸಾಕ್ಷಿಯಾಗಿ ನಿಲ್ಲುತ್ತದೆ.

ಗುಂಡುಬ್ರಹ್ಮಯ್ಯ

(ಒರುಗಲ್ಲು ಘನಪತಿ ರಾಜನ ಕಥೆ)

ಗುಂಡುಬ್ರಹ್ಮಯ್ಯಗಳನ್ನು ಕುರಿತ ಕಾವ್ಯಗಳು ಶಿಷ್ಟ ಮತ್ತು ಜನಪದಗಳೆರಡರಲ್ಲೂ ವಿಪುಲವಾಗಿವೆ. ಅವುಗಳಲ್ಲಿ ಡಾ.ವಿ. ಶಿವಾನಂದ ಅವರು ೧೯೭೪ರಲ್ಲಿ ಕವಿಚನ್ನನ 'ಗುಂಡು ಬ್ರಹ್ಮಯ್ಯಗಳ ತ್ರಿಪದಿ' ಎಂಬ ಕೃತಿಯನ್ನು ಪ್ರಕಟಿಸಿದರು. ಇದರ ತರುವಾಯ ೧೯೭೯ರಲ್ಲಿ ಪಂಡಿತ ಎಂ. ಮಲ್ಲಪ್ಪನವರು ದಕ್ಷಿಣ ಕರ್ನಾಟಕದ ಜನಪದ ವೃತ್ತಿಗಾಯಕರಲ್ಲಿ ಪ್ರಮುಖರಾದ ನೀಲಗಾರರು ಹಾಡಿದ ಗುಂಡುಬ್ರಹ್ಮಯ್ಯಗಳ ಕಥೆಯನ್ನು 'ಒರುಗಲ್ಲು ಸೂರೆ'[33] ಎಂಬ ಹೆಸರಿನಿಂದ ಪ್ರಕಟಿಸಿದರು. ಇದಾದ ನಂತರ ೧೯೮೧ರಲ್ಲಿ ಪ್ರೊ.ಜೀ.ಶಂ. ಪರಮಶಿವಯ್ಯನವರು ತಮ್ಮ 'ಜನಪದ ವೃತ್ತಿಗಾಯಕರ ಕಾವ್ಯಗಳು' ಎಂಬ ಸಂಕಲನದಲ್ಲಿ ಗುಂಡುಬ್ರಹ್ಮಯ್ಯಗಳನ್ನು ಕುರಿತು ನೀಲಗಾರರು ಹಾಡಿದ 'ಘನಪತಿರಾಯ' ಎಂಬ ಕಾವ್ಯವನ್ನು ಪ್ರಕಟಿಸಿದ್ದಾರೆ.[34]

ಗುಂಡುಬ್ರಹ್ಮಯ್ಯಗಳ ಬಗೆಗೆ ಇಂತೆಲ್ಲ ಸಂಶೋಧನೆ ನಡೆಯುತ್ತಿರುವುದನ್ನು ಮುಂದುವರೆಸಿದ ಡಾ.ಕೆ. ರವೀಂದ್ರನಾಥ ಅವರು ೨೦೦೦ದ ಸುಮಾರಿನಲ್ಲಿ ಹರಪನಹಳ್ಳಿಯಲ್ಲಿ ಸಮಾವೇಶಗೊಂಡಿದ್ದ ಕರ್ನಾಟಕ ಇತಿಹಾಸ ಅಕಾಡೆಮಿಯು ನಡೆಸಿದ ವಿಚಾರ ಸಂಕಿರಣದಲ್ಲಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕೋಗಳಿಯ ಚಕ್ರಸಾಲಿ ದೊಡ್ಡವೀರಪ್ಪನವರ ಮನೆಯಲ್ಲಿ ದೊರೆತ ಹಸ್ತಪ್ರತಿಯನ್ನಿಟ್ಟುಕೊಂಡು ಒಂದು ಪ್ರಬಂಧವನ್ನು ಮಂಡಿಸಿದರು. ಅವರೇ ವಿವಿಧ ಆಕರಗಳಲ್ಲಿ ಲಭ್ಯವಾಗುತ್ತಿದ್ದ ಸಾಹಿತ್ಯವನ್ನೆಲ್ಲ ಸಂಗ್ರಹಿಸಿ 'ಗುಂಡುಬ್ರಹ್ಮಯ್ಯಗಳ ಸಾಹಿತ್ಯ'[35] ಎಂಬ ಗ್ರಂಥವನ್ನೂ ಪ್ರಕಟಿಸಿದ್ದಾರೆ. ಇದರಲ್ಲಿ ಕವಿ ಚನ್ನ 'ಗುಂಡುಬ್ರಹ್ಮಯ್ಯಗಳ ತ್ರಿಪದಿ', ಓದಿಸುವ ಮಡಿವಾಳಯ್ಯನ 'ಗುಂಡುಬ್ರಹ್ಮಯ್ಯಗಳ ಚೌಪದಿ', ಕಾಶೀಪತಿಯ 'ಗುಂಡು ಬ್ರಹ್ಮಯ್ಯಗಳ ಸಾಂಗತ್ಯ', ಆರಾಧ್ಯ ಶಂಕರನ 'ಚೇರಮಾಂಕ ಕಾವ್ಯ' ಎಂಬ ಹೆಸರಿನಲ್ಲಿರುವ 'ಶರಣರಿಗೆ ಶರಣಾರ್ಥಿನಾಂದ್ಯ' ಎಂಬ ಕಾವ್ಯ. ಕೋಗುಳಿಯಲ್ಲಿ ದೊರೆತ 'ಗುಂಡುಬ್ರಹ್ಮಯ್ಯಗಳ ಗದ್ಯ' ಮತ್ತು ಪ್ರೊ.ಜೀಶಂಪ ಅವರ ಸಂಗ್ರಹ 'ಘನಪತಿರಾಯನ ಕಥೆ' ಎಂಬ ಕೃತಿಗಳಿದ್ದು - ಇವುಗಳೆಲ್ಲ ಗುಂಡುಬ್ರಹ್ಮಯ್ಯಗಳ ಕಥೆಯನ್ನು ವಿವರವಾಗಿ ಹೇಳುವಂಥವಾಗಿವೆ.

ಮೇಲೆ ತಿಳಿಸಿದ ಕಾವ್ಯಗಳಲ್ಲದೆ ಗುಬ್ಬಿಮಲ್ಲಣಾರ್ಯನ 'ವೀರಶೈವಾಮೃತ ಪುರಾಣ', ಪದ್ಮಣಾಂಕನ 'ಪದ್ಮರಾಜಪುರಾಣ', ಕುಮಾರ ಪದ್ಮರಸನ 'ಸಾನಂದ ಗಣೇಶ', ದೇಪನ 'ಮರುಳಸಿದ್ಧಕಾವ್ಯ', ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಪುರಾಣ', ವಿರೂಪಾಕ್ಷಪಂಡಿತನ 'ಚನ್ನಬಸವ ಪುರಾಣ', ಲಕ್ಕಣ ದಂಡೇಶನ 'ಶಿವತತ್ತ್ವ ಚಿಂತಾಮಣಿ', ಮಲ್ಲಿಕಾರ್ಜುನ ಪಂಡಿತಾರಾಧ್ಯನ 'ಸಹಸ್ರ ನಾಮಾವಳಿ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಥಾ ಮಣಿಸೂತ್ರ ರತ್ನಾಕರ' ಮುಂತಾದ ಕೃತಿಗಳಲ್ಲೆಲ್ಲ ಪ್ರಸ್ತಾಪಿಸಲಾಗಿದೆ. ಇವಲ್ಲದೆ ಉತ್ತರ ದೇಶದ ಬಸವಲಿಂಗದೇವರ 'ಕಥಾಸಾಗರ', ಫ.ಗು. ಹಳಕಟ್ಟಿಯವರ 'ಬಸವೇಶ್ವರ ಷಟ್‌ಸ್ಥಲ ವಚನ ಕಥಾಸಾರ' ಮತ್ತು 'ಅಮರಗಣಾಧೀಶರ ಚರಿತ್ರೆಗಳು' ಕೃತಿಗಳಲ್ಲೂ ಗುಂಡುಬ್ರಹ್ಮಯ್ಯಗಳ ಕಥೆಯನ್ನು ಹೇಳಲಾಗಿದೆ.

ಗುಂಡುಬ್ರಹ್ಮಯ್ಯಗಳ ಸ್ಥಳ ಗೋಚನಪುರ ಅಥವಾ ಗವಚೆರುಪುರ ಎಂಬುದರ ಬಗೆಗೆ ಒಂದು ಮಾತು : ಡಾ.ಕೆ. ರವೀಂದ್ರನಾಥ ಅವರು 'ಗವಚೆರು' ಎಂಬ ಪದ ಸ್ಥಳನಾಮವಾಗಿರದೆ ಜನಾಂಗ ಪದವಾಚಿ ಎನಿಸುತ್ತದೆ ಎಂದಿದ್ದಾರೆ[36] ಅಲ್ಲದೆ ಐತಿಹಾಸಿಕ ವ್ಯಕ್ತಿಗಳಾಗಿದ್ದ ಗುಂಡುಬ್ರಹ್ಮಯ್ಯರು ಬೇಡ ಜನಾಂಗದವರಾಗಿದ್ದು ಶರಣ ಚಳವಳಿಗೆ ಪ್ರಭಾವಿತರಾಗಿ ವೀರವ್ರತವನ್ನು ಬದುಕಿದವರಾಗಿದ್ದಾರೆ[37] ಎಂಬ ತೀರ್ಮಾನಕ್ಕೆ ಬಂದುಬಿಡುತ್ತಾರೆ. ಇದಕ್ಕೆ ಅವರು ಕೊಡುವ ಉಲ್ಲೇಖ ಹೀಗಿದೆ :

"ಇಲ್ಲಿಯ 'ಗವೆಚೆರಪುರ' ಸ್ಥಳವಾಚಿಯೋ, ಜನಾಂಗವಾಚಿಯೋ ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. 'ಗವಚೆರ'ವೆಂಬುದು ಜನಾಂಗವಾಚಕವಾಗಿ ಬಳಕೆಯಾದಂತೆ ಗುಂಡುಬ್ರಹ್ಮಯ್ಯಗಳ ಸಾಂಗತ್ಯದ ಈ ಕೆಳಗಿನ ಪದ್ಯಗಳಿಂದ ತಿಳಿದು ಬರುತ್ತದೆ. ಕಳವಿಗೆ ಬಂದ ಶಿವನಾರಂದರು ಗುಂಡಬ್ರಹ್ಮಯ್ಯರ ಬಗ್ಗೆ ನೀರಿಗೆ ಬಂದ ಅವರ ತಂಗಿಯರನ್ನು ವಿಚಾರಿಸಿದಾಗ ಅದಕ್ಕವಳು

---

33. ಒರಗಲ್ಲು ಸೂರೆ : ಪಂಡಿತ ಮ. ಮಲ್ಲಪ್ಪ ; ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು. ೧೯೭೯
34. ಜನಪದ ವೃತ್ತಿಗಾಯಕರ ಕಾವ್ಯಗಳು : ಜೀ.ಶಂ. ಪರಮಶಿವಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೮೨. ಪು.೭೭೪-೮೪೨.
35. ಗುಂಡುಬ್ರಹ್ಮಯ್ಯಗಳ ಸಾಹಿತ್ಯ : ಡಾ.ಕೆ. ರವೀಂದ್ರನಾಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ೨೦೦೬.
36. ಅದೇ. ಪು.೮
37. ಅದೇ. ಪು.೯

ಅವರೀ ಪಟ್ಟಣದೊಳಗಿಲ್ಲ ಗುರುವೆ
ಅವರತ್ತ ಗವಚೆರರಿಹರೂ
ಅವರು ಊರಾಡಿ ಬಂದರೆ ಹಿರಿಯರಿ
ಗವರು ಸೇವೆಯ ಮಾಡುತಿಹರು" (ಸಂ.ಟ. ಪದ್ಯ ೨೧. ಪು.೧೪೬-೧೬೧)[38]

ಎಂಬ ಪದ್ಯವನ್ನಿಟ್ಟುಕೊಂಡ ಡಾ.ಕೆ. ರವೀಂದ್ರನಾಥ ಅವರು "ಧರ್ಮಸ್ಥಳ (ತಾಳೆಗರಿ ೪೨೯/೨) ಪ್ರತಿಯ ಸಹಾಯದಿಂದ ಸಮಗ್ರವಾಗಿ ದೊರೆತ ಶ್ರವಣಬೆಳಗೊಳದ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಕೇಂದ್ರದ (ತಾಡೋಲೆ-೩೫) ಪ್ರತಿಯನ್ನು ಪರಿಷ್ಕರಿಸಿದ್ದೇನೆ." ೧೮ ಸಂಧಿಯ ೧೬೧೩ ಪದ್ಯಗಳ ವ್ಯಾಪ್ತಿಯನ್ನು ಈ ಕೃತಿ ಪಡೆದುಕೊಂಡಿದೆ[39] ಎಂದಿದ್ದಾರೆ.

ಆದರೆ ಈ ಪದ್ಯದ 'ಗವಚೆರಿಹರೂ' ಎಂಬ ಪದ 'ಗವಚೆರಲಿಹರೂ' ಎಂದಿರುವ ಸಾಧ್ಯತೆ ಇದೆ. ಇದು ಲಿಪಿಕಾರನ ಅಥವಾ ಓದುಗನ ದೋಷದಿಂದ 'ಲ'ಕಾರ 'ರ'ಕಾರವಾಗಿ ಕಂಡಿರಬಹುದು. ಸಂಪಾದಕರು ಹಲವಾರು ಹಸ್ತಪ್ರತಿಗಳನ್ನಿಟ್ಟುಕೊಂಡು ಒಂದು ಕೃತಿಯನ್ನು ಸಂಪಾದಿಸುವಾಗ ಸ್ವೀಕೃತ ಪಾಠದ ಜೊತೆಗೆ ಉಳಿದ ಪ್ರತಿಗಳಲ್ಲಿರಬಹುದಾದ ಪಾಠಗಳನ್ನು ಅಡಿಟಿಪ್ಪಣಿಯಲ್ಲಿ ಕೊಡುವುದು ಸಂಪ್ರದಾಯ. ಆದರೆ ಈ ಸಂಪಾದಕರು ಇಲ್ಲಿನ ಯಾವ ಕೃತಿಗಳಿಗೂ ಅಡಿಟಿಪ್ಪಣಿಗಳಲ್ಲಿ ಪಾಠಾಂತರಗಳನ್ನು ಕೊಟ್ಟಿಲ್ಲ. ಹೀಗಾಗಿರುವುದರಿಂದ ಸತ್ಯಾನ್ವೇಷಣೆಗೆ ಮಾರ್ಗದರ್ಶಿಯಾಗಬಹುದಾಗಿದ್ದ ಭಿನ್ನಪಾಠಗಳು ಲಭ್ಯವಾಗದೆ ಕಲ್ಪಿತಸತ್ಯ ಉದ್ಘೋಷಿತವಾದಂತಾಗುತ್ತದೆ. ರವೀಂದ್ರನಾಥರ ಗ್ರಹೀತ ಸತ್ಯವನ್ನು ನಿರಾಕರಿಸಲು ಇನ್ನೊಂದು ಸಾಕ್ಷಿಯನ್ನು ಕೃತಿಯೇ ಒದಗಿಸಿಕೊಡುತ್ತದೆ. ಮೇಲೆ ಉದಾಹರಿಸಿದ ಪದ್ಯದ ತರುವಾಯದಲ್ಲಿ ಬರುವ ಈ ಪದ್ಯವನ್ನು ಗಮನಿಸಬಹುದು.

ಎತ್ತಣ ದಿಕ್ಕದು ಗವಚೆರೆಂಬುದು
ಮತ್ತೆಷ್ಟು ದೂರವು ಮಗಳೆ (ಸಂಧಿ. ೬ ಪದ್ಯ. ೨೨. ಪು.೧೪೭)

ಈ ಮಾತಿನಲ್ಲಿ ಗವಚೆರು ಎಂಬುದು ಎಷ್ಟು ದೂರದಲ್ಲಿದೆ ಎಂದು ಕೇಳಲಾಗಿದೆ. ಹೀಗೆಂದಾಗ ಇದು ಸ್ಥಳವಾಚಿಯಾಗದೆ ಹೇಗೆ ಜನಾಂಗವಾಚಿಯಾದೀತು ? ಇನ್ನೊಂದೆಡೆಯಲ್ಲಿ ಬಿರುದಿನ ಕಹಳೆಯನ್ನು ಊದುತ್ತಿರುವವನು ಗುಂಡುಬ್ರಹ್ಮಯ್ಯ ಎಂದು ನಾರಂದನಿಗೆ ಶಿವನು ತಿಳಿಸುವಾಗ

ನಾರಂದ ಕೇಳಿದ ಮಾರಾರಿಯನಾಗ
'ಆರು ಹೇಳು ಹೇಳೆ'ನುತ
'ಧಾರುಣಿಯೊಳಗಣ ಗವಚೆಯಲ್ಲಿದ್ದಾನೆ
ನಾರಂದ ಕೇಳು ಭಕ್ತರನೂ (ಸಂಧಿ. ೩ ಪದ್ಯ. ೪೨. ಪು.೧೬೧)

'ಧಾರುಣಿಯೊಳಗಣ ಗವಚೆ' ಎಂದಾಗ ಅದು ಒಂದು ಸ್ಥಳವಾಚಿ ಎಂಬುದು ಸ್ಪಷ್ಟವಾಗಿದೆ.

ಅಲ್ಲದೆ ಆರಾಧ್ಯಶಂಕರನ 'ಶರಣರಿಗೆ ಶರಣಾರ್ಥಿನಾಂದ್ಯ'[40]ದಲ್ಲಿ

ಭೂಪತಿ ಪಟ್ಟಣಕೆ ಅರ್ಧಯೋಜನದಲ್ಲಿ
ವ್ಯಾಪಿಸುವ ಗವಚೆರುಪುರದ ಮಧ್ಯದೊಳಲ್ಲಿ
ಕಾಪಾಲಿಧಜ ಭಕ್ತಗುಂಡಯ್ಯಗಳು (ಪದ್ಯ ೫)

ಎಂಬುದನ್ನೂ ಅಗತ್ಯವಾಗಿ ಗಮನಿಸಬೇಕು.

ಈ ಕಾರಣದಿಂದ ಡಾ.ಕೆ.ರವೀಂದ್ರನಾಥರು ಗುಂಡು ಬ್ರಹ್ಮಯ್ಯಗಳು ಬೇಡ ಜನಾಂಗದ ಬುಡಕಟ್ಟು ಸಮುದಾಯದವರು ಎಂದು ಹೇಳುವುದು ಸುತರಾಂ ವಿಶ್ವಾಸಾರ್ಹ ಸಂಗತಿಯಾಗುವುದಿಲ್ಲ. ಉಳಿದೆಲ್ಲ ಕಾವ್ಯಗಳು ಗುಂಡುಬ್ರಹ್ಮಯ್ಯನವರನ್ನು 'ಕುಂಬಾರ' ಜನಾಂಗದವರು ಎಂದು ಹೇಳಿರುವುದನ್ನು ರವೀಂದ್ರನಾಥರು ಅಲಕ್ಷಿಸಿ ಅವರನ್ನು ಬೇಡ ಜನಾಂಗದವರೆಂದು ತೀರ್ಮಾನಿಸುವುದು ಸರಿಯಲ್ಲ ಎನಿಸುತ್ತದೆ. ಇದು ಕೃತಿಯೊಳಗಣ ಆಧಾರಗಳನ್ನು ಕಡೆಗಣಿಸಿ ಕೈಗೊಂಡ ನಿರ್ಣಯವಾಗಿದೆ.

---

೩೮. ಅದೇ. ಅಲ್ಲೇ.
೩೯. ಅದೇ. ಪು.೨೮
೪೦. ಅದೇ. ಪದ್ಯ ೫ ಪು.೩೯೦

'ಗುಂಡಯ್ಯ ಬ್ರಹ್ಮಯ್ಯಗದ್ಯ'ದಲ್ಲಿ '.....ಕೋಲಹರ ಗುಂಡಯ್ಯನೆಂದು ಹೆಸರಂ ಪಡೆದನು | ಯಿತಗೆ ಕುಲಮಹಾಸ್ವಾಮಿ ಕುಂಬೇಶ್ವರಲಿಂಗ | ಈತನ ಗೋತ್ರ ವೃಷಭ ಗೋತ್ರ | ಧರ್ಮಸಿಂಹಾಸನ | ಚಕ್ರದ ಮಠ ಗೊಳಕಲ್ಲು ಬಡಗಿ ಈ ಪ್ರಕಾರ ಕೊಟ್ಟು | ಈತನು ಇದೆ ಚಕ್ರದ ಮೇಲೆ ಮೃತ್ಯುಕಿಯ ಬಾಂಡಗಳು | ಲಿಂಗದ ಬಟ್ಟಲುಗಳು ಮಾಡಿ ಶಿವಜಂಗಮದ ಸೇವೆಯಲ್ಲು ಇದನು | ಆವಾಗ | ತೇತ್ರಾಯುಗದಲ್ಲು ಕುಂಭಜ ಋಷಿಯ ಕರುಣದಿಂದ ಇಬ್ಬರು ಮಕ್ಕಳಂ ಪಡೆದನು | ಇವರ ನಾಮ ಗುಂಡಯ್ಯ ಬ್ರಹ್ಮಯ್ಯ | ನೆಂದು ಹೆಸರಂನಿಟ್ಟು | ಗುಂಡಯ್ಯಗೆ ಶಿವಕ್ಕ ಬ್ರಹ್ಮಯ್ಯಂಗೆ ಮಹದೇವಕ್ಕ | ಇವರ ಲಗ್ನ ಮಾಡಿದ ಬಳಕ್ಕಾ | ಕುಂಬೇಶ್ವರನ ಕರುಣದಿಂದ ಗಂಡುಮಕ್ಕಳಂ ಪಡೆದರು. .....ಈ ಗುಂಡಯ್ಯಗಳ ಅಂಶದಲ್ಲಿ ಮೂಲಪುರುಷರು ತಿರುನೀಲಕಂಠರು"[41] ಈ ಎಲ್ಲ ಆಕರಗಳಿಂದ ಗುಂಡುಬ್ರಹ್ಮಯ್ಯರು ಗವಚೆರುಪುರದವರು ಹಾಗೂ ಕುಂಬಾರರು ಎಂಬುದು ಖಚಿತವಾಗುತ್ತದೆ.

ಪುರ, ಶಿವಪುರ, ಗವಚೆರಪುರ, ಗೋಚನಪುರ ಎಂಬ ಹೆಸರುಗಳು ಜನಪದ ಮತ್ತು ಶಿಷ್ಟ ಕೃತಿಗಳ್ಲಿ ದೊರೆಯುತ್ತಿವೆ. ಆದರೆ ಈ ಗೋಚನಪುರ ಅಥವಾ ಶಿವಪುರವನ್ನು ಹುಲ್ಲೂರು ಶ್ರೀನಿವಾಸ ಜೋಯಿಸರು ಓರಂಗಲ್ ಸಮೀಪದ ತೊರಗಲ್ ಆಗಿರಬೇಕೆಂದು ಹೇಳಿದ್ದಾರೆ. ಆಂಧ್ರಪ್ರದೇಶದಲ್ಲಿ ೧೨ನೇ ಶತಮಾನದಿಂದ ಸುಮಾರು ೨೦೦ ವರ್ಷಗಳವರೆಗೆ ರಾಜ್ಯಭಾರ ಮಾಡಿದ ಪ್ರಖ್ಯಾತ ಅರಸು ಗಣಪತಿ ರಾಜ "ಗಣಪತಿ ದಕ್ಷ ಶಾಸಕ. ಪ್ರಜಾಚಿಂತಕ. ಈತ ರಾಜಧಾನಿಯನ್ನು ಅನುಮಗೊಂಡದಿಂದ ಓರಂಗಲ್ಲಿಗೆ (ವಾರಂಗಲ್ಲಿಗೆ) ಸ್ಥಳಾಂತರಿಸಿ ಅದರ ಸುತ್ತು ಭದ್ರವಾದ ಕೋಟೆ ಕಟ್ಟಿಸಿದ.[42]

ಇಂಥ ಭದ್ರಕೋಟೆಯನ್ನು ಭೇದಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ಹೇಳಿಕೆಯ ಹಿನ್ನೆಲೆಯ ಜೀವಾಕರ್ಷಣ ಸವಾಲನ್ನು ಸ್ವೀಕರಿಸಿದ ವೇಷಧಾರಿ ಶಿವಕೋಟೆಗೆ ಕನ್ನವಿಕ್ಕಿ ಕಳವು ಮಾಡಿ ಬಂದು ರಕ್ಷಣೆಗಾಗಿ ಗುಂಡುಬ್ರಹ್ಮಯ್ಯಗಳನ್ನು ಮೊರೆಹೊಕ್ಕಾಗ, ಕಟುಸತ್ಯದ ಅರಿವಿದ್ದೂ ಅಂಥವರ ಪರವಾಗಿ ನಿಂತು, ಅವರಿಗೆ ಬದಲಾಗಿ ತಾವೇ ಶೂಲವೇರಿದ ಗುಂಡುಬ್ರಹ್ಮಯ್ಯಗಳ ಅಸಾಧಾರಣ ಘನವ್ಯಕ್ತಿತ್ವ ಜನಪದರ ಮೇಲೆ ಬೀರಿದ ಗಾಢಪ್ರಭಾವ-ಪರಿಣಾಮಗಳ ಕಾರಣದಿಂದಾಗಿ ಈ ರೌದ್ರಘಟನೆ ಜನಮನದಿಂದ ಬತ್ತಿಹೋಗದೆ ನಾಡವರ ನಾಲಗೆಯಲ್ಲಿ ಹಾಡ್ಗತೆಯಾಗಿ ಹರಿದಾಡಿದೆ. ಇಂಥ ಕಂಠಸ್ಥ ಸಂಪ್ರದಾಯದ ಸಾಹಿತ್ಯ ಶಿಷ್ಟಕವಿಗಳನ್ನೂ ಆಕರ್ಷಿಸಿರಬಹುದಾದ ಕಾರಣದಿಂದ ಶಿಷ್ಟ ಹಾಗೂ ಜನಪದ ಸಾಹಿತ್ಯಗಳೆರಡರಲ್ಲೂ ಗುಂಡುಬ್ರಹ್ಮಯ್ಯಗಳ ಕಥಾವಾಹಿನಿ ಹರಿದುಬಂದಿದೆ.

ಗುಂಡುಬ್ರಹ್ಮಯ್ಯ ಎಂಬ ಹೆಸರು ಏಕವ್ಯಕ್ತಿಯದಲ್ಲ ; ಇದರಲ್ಲಿ ಗುಂಡಯ್ಯ ಮತ್ತು ಬ್ರಹ್ಮಯ್ಯ ಎಂಬ ಇಬ್ಬರು ಇದ್ದಾರೆ ಎಂದು ಹೇಳುವಂತೆ ಗುಂಡುಬ್ರಹ್ಮಯ್ಯ ಒಬ್ಬನೇ ಎಂದೂ ಶಿಷ್ಟ ಹಾಗೂ ಜನಪದ ಕಾವ್ಯಗಳಲ್ಲಿ ಹೇಳಿಕೊಂಡು ಬರಲಾಗಿದೆ. ಆದರೆ ಗುಂಡಯ್ಯ ಮತ್ತು ಬ್ರಹ್ಮಯ್ಯರು ಇಬ್ಬರಾಗಿದ್ದು ಅವರು ಭಾವ-ಮೈದುನರಾಗಿದ್ದರೆಂದು 'ಗುಂಡುಬ್ರಹ್ಮಯ್ಯಗಳ ತ್ರಿಪದಿ'ಯಿಂದ ತಿಳಿದುಬರುತ್ತದೆ.

ಗುಂಡುಬ್ರಹ್ಮಯ್ಯಗಳು ಗಂಡುಗಲಿ ಧೀರರು
ಕಂಡವರು ಕದ್ದು ಮೊರೆಹೋಗಲು - ಕೊಡೆನೆಂದು ಕಾ
ಲ್ತೊಡಯನಿಟ್ಟು, ಮೆರೆದಾರು |

ಭಾವ ಮೈದುನ ಭೇದಗಳಿಲ್ಲ
ಜೀವವೊಂದಾಗಿ ಇರುತಿಹರು - ತಮಗಲ್ಲಿ
ಸಾವು ಬಂದಲ್ಲಿ ಸಮವಾಗಿ |
ಗುಂಡುಬ್ರಹ್ಮಯ್ಯಗಳ ತ್ರಿಪದಿ. ೧-೬, ೮.

ಇದಕ್ಕೆ ಸಾಕ್ಷಿಯಾಗಿ ಕರ್ನಾಟಕದಲ್ಲಿ ದೊರೆತಿರುವ ಶಿಲ್ಪಗಳಲ್ಲಿ ಈ ಇಬ್ಬರ ಚಿತ್ರಗಳನ್ನೂ ಕಾಣಬಹುದಾಗಿದೆ. ದಾವಣಗೆರೆ ಸಮೀಪದ ಅಮರಗೊಳ್ಳ ಗ್ರಾಮದ ವೀರಭದ್ರ ದೇವಸ್ಥಾನದಲ್ಲಿ ಗುಂಡುಬ್ರಹ್ಮಯ್ಯರುಗಳ ಶಿಲ್ಪವಿದ್ದು ಗುಂಡಯ್ಯನ

---

41. ಡಾ.ಕೆ. ರವೀಂದ್ರನಾಥ. ಅದೇ. ಪು.೩೮೪-೩೮೫, ೩೮೭

42. ಕನ್ನಡ ವಿಶ್ವಕೋಶ, ಸಂ. :೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೧. ಪು.೪೧೩.

43. ಡಾ.ಕೆ. ರವೀಂದ್ರನಾಥ, ಅದೇ. ಪು. ೩೩-೩೪

ಜೊತೆ ಅವನ ಪತ್ನಿ ಚನ್ನಮ್ಮನ ಚಿತ್ರವೂ ಇದೆ. ಬ್ರಹ್ಮಯ್ಯ ಅವಿವಾಹಿತನೆಂದು ತಿಳಿದುಬಂದರೂ ಕೆಲವು ಕಡೆ ಬ್ರಹ್ಮಯ್ಯನ ಪತ್ನಿ ಎಂದು ಹೇಳುವ ಶಿಲ್ಪಗಳೂ ಇವೆ. ಗುಂಡುಬ್ರಹ್ಮಯ್ಯರನ್ನು 'ಶೂಲಬ್ರಹ್ಮ'ರೆಂದು ಕರೆಯುತ್ತಾರೆ. ಅಲ್ಲದೆ ಹಬ್ಬ-ಹರಿದಿನಗಳಲ್ಲಿ ಮನೆಮನೆಗಳಲ್ಲೆಲ್ಲ ಗುಂಡುಬ್ರಹ್ಮಯ್ಯರ ಕಥಾಪಠಣ ನಡೆಯುತ್ತದೆ.[44]

ಭಾವ-ಮೈದುನರಾದ ಈ ಗುಂಡುಬ್ರಹ್ಮಯ್ಯರುಗಳನ್ನು "ಉಂಬಲ್ಲಿ ಉಡುವಲ್ಲಿ ಕೊಂಬಲ್ಲಿ ಕೊಡುವಲ್ಲಿ ಸಾವಲ್ಲಿ ಸಮಬುದುಕನ್ನು ಬಾಳಿದ ಏಕೋಭಾವ ನಿಷ್ಠೆಯ ಶರಣದ್ವಯರು" ಎಂದು ಕೊಂಡಾಡಲಾಗಿದೆ. ಧರ್ಮಾತ್ಮರೂ ಸಮಾಜಪರರೂ ಶೌರ್ಯವಂತರೂ ಆಗಿದ್ದ ಈ ಇಬ್ಬರು ಸಜ್ಜರನ್ನು ದೇವರಂತೆ ಆರಾಧಿಸಲಾಗುತ್ತದೆ. ಶೂಲಕ್ಕೇರಿ ರೌದ್ರಭೀಕರ ಮರಣವನ್ನಪ್ಪಿದ ಇವರ ಬಗೆಗೆ ಜನತೆ ತಾಳಿದ ಸಹಮತ, ಸಹಾನುಭೂತಿ ಮತ್ತು ಗೌರವಾದರಗಳು ಇವರ ಹೆಸರಿನ ಅನೇಕ ದೇವಾಲಯಗಳ ಹಾಗೂ ಶಿಲ್ಪಗಳ ಸೃಷ್ಟಿಗೆ ಕಾರಣವಾಯಿತೆಂದು ಹೇಳಬಹುದು. ಇವರು ಶೂಲಕ್ಕೆ ಬಿದ್ದ ಓರಂಗಲ್ಲಿನಲ್ಲೇ ಈ ಇಬ್ಬರು ಶರಣರ ದೇವಾಲಯವಿದ್ದು ಅದು ಅವರ ತ್ಯಾಗಬಲಿದಾನಕ್ಕೆ ದಿವ್ಯಸಾಕ್ಷಿಗಳಾಗಿವೆ.

ಆಳುವವರ ದೌರ್ಜನ್ಯಕ್ಕೆ ಪ್ರತಿಭಟನೆಯ ಪ್ರತೀಕಗಳಾಗಿ ನಿಂತ ಇವರನ್ನು ಮೆಚ್ಚಿದ ಜನಪದ ನಾಡಿನಾದ್ಯಂತ ಇವರನ್ನು ಶಿಲ್ಪದಲ್ಲಿ ಕಂಡರಿಸಿ ಸಂತೃಪ್ತಿಗೊಂಡಿದೆ. ಕೋಲಾರ ಜಿಲ್ಲೆಯ ನಂದಿಬೆಟ್ಟ ; ಚಾಮರಾಜನಗರ ಜಿಲ್ಲೆಯ ಯಳಂದೂರು ; ಚಿಕ್ಕಮಗಳೂರು ಜಿಲ್ಲೆಯ ದೊಡ್ಡಅಣಗೆರೆ, ಚಿಕ್ಕಾಂಬುಧಿ, ಗರಗದಹಳ್ಳಿ, ಬನವಾಸಿ ; ಚಿತ್ರದುರ್ಗ ಜಿಲ್ಲೆಯ ಹಿಂಡಬೇಶ್ವರ ದೇವಾಲಯ, ಸಂಪಿಗೆ ಸಿದ್ದೇಶ್ವರ ದೇವಾಲಯ, ಇದೇ ಜಿಲ್ಲೆಯ ಅಸಗೋಡು, ಚಿಕ್ಕಪುರ, ಹಿರೇಗುಂಟೂರು, ಹೊಸದುರ್ಗ ಮತ್ತು ಶ್ರೀರಾಂಪುರ ; ತುಮಕೂರು ಜಿಲ್ಲೆಯ ಗುಬ್ಬಿ ಮತ್ತು ದೇವಪುರ ; ದಾವಣಗೆರೆ ಜಿಲ್ಲೆಯ ಉಮಾಪತಿಗೊಳ್ಳಿ ಮತ್ತು ನೀತಿಗೆರೆ; ಧಾರವಾಡ ಜಿಲ್ಲೆಯ ಹಳ್ಳೂರು ಮತ್ತು ಗುಂಡೇನಹಳ್ಳಿ ; ಬಳ್ಳಾರಿ ಜಿಲ್ಲೆಯ ಬುಕ್ಕಸಾಗರ, ಉಜ್ಜನಿ ಮತ್ತು ಗರಗನಾಗಲಾಪುರ ; ಬೆಳಗಾವಿ ಜಿಲ್ಲೆಯ ಮುರ್ಕಿಬಾವಿ ; ಮಂಡ್ಯ ಜಿಲ್ಲೆಯ ಗುಂಡಾಪುರ ; ಶಿವಮೊಗ್ಗ ಜಿಲ್ಲೆಯ ಕುಸ್ಕೂರು ; ಹಾವೇರಿಜಿಲ್ಲೆಯ ಗುಂಡೇನಹಳ್ಳಿ ಮತ್ತು ಹಾಸನ ಜಿಲ್ಲೆಯ ದೊಡ್ಡಗದ್ದವಳ್ಳಿ, ಹಾರನಹಳ್ಳಿ ಮುಂತಾದ ಕಡೆಗಳಲ್ಲೆಲ್ಲ ಗುಂಡುಬ್ರಹ್ಮಯ್ಯಗಳ ಶಿಲ್ಪಗಳಿರುವುದು ಅವರ ಮಹೋನ್ನತ ವ್ಯಕ್ತಿತ್ವದ ಸಂಕೇತಗಳೆನಿಸಿವೆ.

"ಚಿಕ್ಕಮಗಳೂರು ಜಿಲ್ಲೆಯ ದೊಡ್ಡಣಗೆರೆ ಗುಂಡುಬ್ರಹ್ಮಯ್ಯಗಳ ಸ್ಥಳ ಎನ್ನಲಾಗಿದೆ. ಬ್ಯಾಡಗಿ ತಾಲ್ಲೂಕಿನ ಗುಂಡೇನಹಳ್ಳಿ ಹಾಗೂ ಆಂಧ್ರದ ಓರಂಗಲ್ ಅವರ ಕಾರ್ಯಕ್ಷೇತ್ರ ಆಗಿತ್ತು ಎಂಬ ಅಭಿಪ್ರಾಯವಿದೆ"[45]. ಈ ವಿಚಾರದಲ್ಲಿ ಹೆಚ್ಚಿನ ಸಂಶೋಧನೆ ನಡೆಯಬೇಕಾಗಿದೆ.

ಜನಪದ ಸಂಸ್ಕೃತಿ ಮೂಲತಃ ಭೋಗಸಂಸ್ಕೃತಿಯನ್ನು ವಿರೋಧಿಸುವಂತದ್ದು. ದೌಲತ್ತು ಹಾಗೂ ವ್ಯಕ್ತಿ ಅಹಂಕಾರಗಳನ್ನು ಇದು ಎಂದಿನಿಂದಲೂ ಪ್ರತಿಭಟಿಸುತ್ತಲೇ ಬಂದಿದೆ. ಜನಪದರ ಈ ಬಗೆಯ ಪ್ರತಿಭಟನೆ ಕೇವಲ ಬಹಿರಂಗದ್ದಲ್ಲ ; ಸೂಕ್ಷ್ಮ ಪರಿಣಾಮ ಅಪೇಕ್ಷಿಯಾದದ್ದು. ಈ ಧೋರಣೆಯ ಸಮರ್ಥ ಪ್ರತೀಕವಾಗಿ 'ಗುಂಡು ಬ್ರಹ್ಮಯ್ಯ' ಕಾವ್ಯ ಅರಳಿದೆ.

ಓರುಗಲ್ಲು ಪಟ್ಟಣದ ಘನಪತಿರಾಜ ಪರಮಭೋಗ ಮತ್ತು ಅಹಂಕಾರಗಳ ಪ್ರತಿನಿಧಿಯಾಗಿದ್ದಾನೆ. ತಪಸ್ಸು ಎನ್ನುವುದು ವ್ಯಕ್ತಿ ಉದ್ಧಾರಕ್ಕೆ, ಆತ್ಮೋನ್ನತಿಗೆ ಕಾರಣವಾಗದೆ ಅದು ಕೇವಲ ಭೋಗಾಪೇಕ್ಷಿಯಾಗುವುದನ್ನು ಕಾವ್ಯ ಪ್ರಾರಂಭದಲ್ಲೇ ಸೂಚಿಸುತ್ತದೆ. ಪ್ರಸ್ತುತ ಶಿಕ್ಷಣದ ಉದ್ದೇಶವೂ ಇದೇ ಆಗಿರುವುದರ ಕಡೆಗೆ ಬೆರಳು ಮಾಡಿ ತೋರುವ ಕಾವ್ಯ ದೂರದ ಸಂಗತಿಯ ಭಿತ್ತಿಯಾಗದೆ ರೆಲೆವೆಂಟ್ ಆಗುವುದು ಮುಖ್ಯ ವಿಚಾರವಾಗಿದೆ.

ತಪಸ್ಸು ಮಾಡಿ ಈಶ್ವರನನ್ನು ಮೆಚ್ಚಿಸಿದ ಘನಪತಿರಾಜನಿಗೆ ವರ ಕೊಡುವ ವಿಚಾರದಲ್ಲಿ ಪಾರ್ವತಿ-ಶಿವರ ನಡುವೆ ನಡೆದ ಸಂವಾದ ಸ್ವಾರಸ್ಯಕರವಾಗಿದೆ.

"ಪಾರ್ವತ ಬುಯಿಲೋಕದಲ್ಲಿ
ನರ್ಮಳ ನಮ್ಮನ್ನು ಕುರ್ತು ಏಗವಾಗಿ
ತಪಸು ಮಾಡ್ತಿದ್ದಾದೆ
ಅವ್ನು ಕೇಳುವಂತ ವರವ ಕೊಟ್ಟು ಬರಬೇಕು'

---

44. ಬುರುಡೇಕಟ್ಟೆ ಮಂಜಪ್ಪ : ಗುಂಡು-ಬ್ರಹ್ಮಯ್ಯರ ನವಶೋಧಿತ ಶಿಲ್ಪಗಳು, 'ಪ್ರಜಾವಾಣಿ', ದಿನಾಂಕ ೨೬. ಜೂನ್ ೨೦೦೮.
45. ಬುರುಡೇಕಟ್ಟೆ ಮಂಜಪ್ಪ : ಪೂರ್ವೋಕ್ತ. ಅದೇ. ಅಲ್ಲೇ.

'ಸ್ವಾಮಿ ನರಪ್ರಾಣಿಗಳಿಗೆಲ್ಲ ವರ ಕೊಡಬೇಕು ಅಂತಿರಿ
ಮುಂದೆ ಅವ್ರಲ್ಲೆ ಅಂಕಾರ ಅಲ್ವೆ?'
'ಪಾರ್ವತ ಅವ್ರಾಂಕಾರ ಕಟ್ಕೊಂಡು ನಮಗೇನಾಗ್ಬೇಕು
ಅವ್ರಾಂಕಾರ ಅವ್ರನ್ನೆ ತಿಂತದೆ
ನಡಿ ವರುವನ್ನು ಕೊಟ್ಟು ಬರುವ'

ಎನ್ನುತ್ತಾನೆ. ಪಾರ್ವತಿಯ ನಿಲುವಿಗೆ ಪರಮೇಶ್ವರನ ನಿಲುವು ಭಿನ್ನವಾಗಿರುವಂತೆ ಕಂಡರೂ ಇವರೆಡೂ ಪರಸ್ಪರ ಪೂರಕ ವಿಚಾರಗಳಾಗಿ ಅಹಂಕಾರಿ ಮನುಷ್ಯನ ಇತಿಹಾಸವನ್ನೇ ಕಣ್ಣೆದುರು ತೆರೆದಿಡುತ್ತವೆ.

ಇತ್ತ ಕಡೆ ಗುಂಡಾಪುರದಲ್ಲಿ ಗುಂಡುಬ್ರಹ್ಮಯ್ಯನೂ ಶಿವನನ್ನು ಕುರಿತು ಧ್ಯಾನ ಮಾಡುತ್ತಿದ್ದಾನೆ. ಅದನ್ನು ಕೇಳಿಸಿಕೊಂಡ ಪಾರ್ವತಿ :

'ಸ್ವಾಮಿ ಯಾರಾಗಿರಬವುದು?'
'ಪಾರ್ವತ ಗುಂಡಾಪುರದ ಗುಂಡು ಬ್ರಮ್ಮಯ್ಯ
ಏಗದಲ್ಲಿ, ನನ್ನ ಧ್ಯಾನ ಮಾಡ್ತಿದ್ದಾನೆ.'
'ಸ್ವಾಮಿ ಅವನ್ಗೂನು ಏನಾದ್ರೂ ವರ ಕೊಡಬಾರ್ದೆ ?'
'ಪಾರ್ವತ ನನ್ನ ಭಕ್ತ
ಬೇಕೂಂತ ಬಯಸ್ತೋರಲ್ಲ ಸಾಕೂಂತ ಸುಮ್ನಾದೋರಲ್ಲ'

ಎಂಬ ಮಾತಿನಲ್ಲಿ ಭೋಗಜೀವನಾಪೇಕ್ಷಿಯಾದ ಘನಪತಿರಾಜನ ಹಾಗೂ ಯೋಗಸಾಧಕನಾದ ಗುಂಡುಬ್ರಹ್ಮಯ್ಯನ ವ್ಯಕ್ತಿತ್ವಗಳನ್ನು ತೂಗಿ ನೋಡಬಹುದಾಗಿದೆ. ಶಿವನಿಂದ ಬಯಸಿದ್ದನ್ನು ಪಡೆದ ಘನಪತಿರಾಜ ತನ್ನ ಐಶ್ವರ್ಯವನ್ನು ಉಳಿಸಿಕೊಳ್ಳುವ ಹಂಬಲದಿಂದ :

ಕಳ್ರುಗೆ ನಾ ಗಂಡಾಂತ ಕಾಲ್ಗೆ ಪೆಂಡೆ ಧರುಸಿವ್ನಿ
ಚಿನ್ನಾದ ಕಾಳೆ ಬಲಗ್ಯೆಲಿ |

ನನ್ನ ಕನ್ನೆ ಮೈಮುಟ್ಕ ಚಿನ್ನವ ಕಳುದೋನ
ಅವ್ನ ಚಿತ್ರದಂಡ ಮಾಡಿ ಕುಯ್ಸುವೆನು |

ನನ್ನ ಪಟ್ಣದಲ್ಲಿ ಕಳುವೋನ ಈ ಸೂಲ್ಕೆ
ಎತ್ತುಸ್ತೀನಂತ ಕಾಳೆ ಕರಿಸಿದವು |

ಇಷ್ಟು ಬಂದರೂ ಸರಿಯೆ ಬ್ರಹ್ಮ ಬಂದರು ಸರಿಯೆ
ಅಷ್ಟ ದಿಕ್ಪಾಲಕರು ಬಂದರು ಸರಿಯೆ |

ಅಷ್ಟ ದಿಕ್ಪಾಲಕರು ಸೈತುವಾಗಿ ಶಿವಬಂದ್ರು
ಅವ್ರನ್ನ - ಸೂಲಕೆತ್ತುಸ್ತೀನಂತ ಕರಿಸಿದವು |

ಇದು ಮಾನವನ ಅಹಂಕಾರದ ಪರಾಕಾಷ್ಠೆಯಾಗಿದೆ. ಪ್ರಕೃತಿಯ ಶಿಶುವಾದ ಮನುಷ್ಯ ಅವಿವೇಕಿಯಾಗಿ ನಿಸರ್ಗಕ್ಕೆ ಸವಾಲು ಹಾಕುವ ಮೂರ್ಖತನದಂತೆ ಕಂಡುಬರುತ್ತದೆ.

ಘನಪತಿರಾಜನ ಕಹಳೆಗೆ ಗುಂಡುಬ್ರಹ್ಮಯ್ಯ ಎದುರು ಕಹಳೆ ನುಡಿಸುತ್ತಾನೆ. ಶಿವಕೊಟ್ಟ ಸಂಪತ್ತಿನಿಂದ ಸೊಕ್ಕಿದ ಘನಪತಿರಾಜನ ಕಹಳೆಗೆ ಎದುರು ಕಹಳೆ ಹೀಗೆ ಮೊರೆಯುತ್ತದೆ.

ಯಾರು ಬೇಕಾದ್ರೂ ಒರ್ಗಲ್ ಕ್ಕೋಟಿಗೆ ಕನ್ನ ಹಾಕಬವುದು -

ಕದ್ದವನ ಕೊಡೋದಿಲ್ಲ ಮೊರೆಬದ್ನೋನ ಬುಡೋದಿಲ್ಲ
ಬವನೇರೂ ಶೂಲ್ಕೆ ನಾನೇರುತೀನಿ !

ಸಿರುಸ ಹೋಯ್ತದಂತ ನನ್ನ ಬಿದ್ದು ಬೇಡಿದರೆ
ಅವ್ರ - ಸಿರುಸಕೆ ನನ ಸಿರುಸ ಕೊಡುವೆನು |

ಪ್ರಾಣ ಹೋಯ್ತದಂತ ಓಡಿ ಬಂದು ಬೇಡಿದೋರ್ಗೆ
ಅವ್ರ-ಪ್ರಾಣಕೆ ನನ ಪ್ರಾಣ ಕೊಡುವೇನು |

ದೌಲತ್ತು ಮತ್ತು ಅಹಂಕಾರವನ್ನು ಎಂದೂ ವಿರೋಧಿಸುವ ಜನಪದರ ಧೋರಣೆಯ ಪ್ರತೀಕವಾಗಿ ಗುಂಡುಬ್ರಹ್ಮಯ್ಯ ಕಂಡುಬರುತ್ತಾನೆ. ಅವನ ಈ ಘೋಷಣೆ ಶೋಷಿಸುವ ಸಿರಿವಂತರ 'ಸಂಪತ್ತಿಗೆ ಸವಾಲ್'ನಂತಿದೆ.

ಗುಂಡುಬ್ರಹ್ಮಯ್ಯ ಊದಿದ ಕಹಳೆ ಶಬ್ದ ಪಾರ್ವತಿಯ ಪಾದದ ಮೇಲೆ ಬಿದ್ದು
ಮೂರ್ತಿಂಗ್ಳು ಮಗಾ ಒದ್ದಾಡುವಂಗೆ ಒದ್ದಾಡ್ಬುಡ್ತಂತೆ

ಎಂಬ ಉಪಮೆ ದುಡಿದು ಬದುಕು ಕಟ್ಟಿಕೊಳ್ಳುವ ಬಡವರ ನಿರಂತರ ಆರ್ತನಾದವನ್ನು ಸಮರ್ಥವಾಗಿ ಸಂಕೇತಿಸುತ್ತದೆ. ಶಿವನೊಡನೆ ಪಗಡೆ ಆಡುತ್ತ ಕುಳಿತಿದ್ದ ಪಾರ್ವತಿಗೆ ಘನಪತಿರಾಜನ ಗರ್ವದ ಅರಿವಾಗುತ್ತದೆ. 'ಆಂಕಾರ ಪಟ್ಟೋರ್ಗೆ ವಾಂಕಾರ ತಪ್ಪಿದ್ದಲ್ಲ', 'ಪರಮೇಶ್ವರ ವರಾ ಕೊಟ್ಟು ಶಿರುಕ್ಕೆ ತಂದುಕೊಂಡಿದ್ದಾರೆ' ಎಂದುಕೊಂಡ ಅವಳು ಮುಂದಾಲೋಚನೆಯಿಲ್ಲದೆ ವರ ಕೊಟ್ಟ ಹರನನ್ನು ನೆನೆದು ಫಕ್ಕನೆ ನಕ್ಕುಬಿಟ್ಟಳು. ಕಾರಣ ಕೇಳಿದ್ದಕ್ಕೆ ಭೋಗಿಯ ಕಹಳೆ ಒಂದು ಕಡೆ ತ್ಯಾಗಿಯ ಕಹಳೆ ಮತ್ತೊಂದು ಕಡೆ ಏನನ್ನು ಸಾರುತ್ತಿದೆ ನೋಡಿ ಎಂದು ಹೇಳಿ ಶಿವನನ್ನು ಚಿಂತೆಗೆ ಹಚ್ಚಿದಳು. ವಾಸ್ತವವಾಗಿ ಘನಪತಿರಾಜನ ಗರ್ವಭಂಗ ಕ್ರಿಯೆಯಲ್ಲಿ ಶಿವನಾರಾಯಣರೇ ಪ್ರಧಾನ ಪಾತ್ರ ವಹಿಸಿದರೂ ಅವರ ಯಶಸ್ಸಿನ ಹಿಂದಿರುವವಳು ಪಾರ್ವತಿಯೇ. ಶಿವನ ಅವಿಚಾರ ನಿರ್ಧಾರಗಳಿಗೆಲ್ಲ ಸಕಾರಣ ಪ್ರತಿಕ್ರಿಯೆ ಕೊಡುವವಳು ಶಿವೆಯೇ ಆಗಿದ್ದಾಳೆ. ಈ ನಿಟ್ಟಿನಲ್ಲಿ ನೋಡಿದಾಗ ಉಲ್ಲೇಖಿತ ಹೋಲಿಕೆಯ ಅರ್ಥವಂತಿಕೆ ಮತ್ತಷ್ಟು ವಿಶೇಷವೆನಿಸುತ್ತದೆ.

ಘನಪತಿರಾಜನ ಗಳಿಕೆ ಹಾಗೂ ಗರ್ವದ ನಾಶ ಜೊತೆಗೆ ಗುಂಡುಬ್ರಹ್ಮಯ್ಯನ ದೃಢಮನದ ಪರೀಕ್ಷೆ - ಇವೆರಡನ್ನೂ ಒಟ್ಟಿಗೆ ಅಥವಾ ಪರಸ್ಪರ ಪೂರಕವಾಗಿ ಶಿವ ನಡೆಸುವಂತೆ ಕಥಾಸಂವಿಧಾನವಿರುವುದು ಕುತೂಹಲಕಾರಿಯಾಗಿದೆ. ಈ ಸಂದರ್ಭದಲ್ಲಿ ಶಿವ ಪಾರ್ವತಿಗೆ ಹೇಳುವ ಮಾತು :

ಆ ಘನಪತಿರಾಜುನ್ನ -

ಹಾಳು ಮಾಡಬೇಕು ಹೆಣ್ಣೆ ಧೂಳು ಮಾಡಬೇಕು ಹೆಣ್ಣೇ
ಅವ್ನ - ಗಾಳಿಗೆತ್ತಿದ ಸೊಳ್ಳ ಮಾಡಿ ಬರುತೀವಿ |

ಪಂಥ ಮಾಡಿದೋನ ಅಂತೆ ಬುಡೂಕಾಗ್ದು
ಅವ್ನ ದಟ್ಟೆ ಸೀಳೋಂಗೆ ಸೀಳುತೀವಿ |

'ಗಾಳಿಗೆತ್ತಿದ ಸೊಳ್ಳ ಮಾಡಿ ಬರುತೀವಿ' ಎನ್ನುವಲ್ಲಿನ ರೂಪಕ ಸತ್ತ್ವಶಾಲಿ ಜಾನಪದೀಯ ರೂಪಕವಾಗಿ ಗಮನಸೆಳೆಯುತ್ತದೆ. ಅಹಂಕಾರಿಗಳು ಕಾಲದ ಸಂದರ್ಭದಲ್ಲಿ ಪತನಗೊಳ್ಳುತ್ತಾರೆ ಎಂಬ ಭಾವವೂ ಇಲ್ಲಿದೆ.

ಘನಪತಿರಾಜನ ಕೋಟೆಯ ಧ್ವಂಸಕ್ಕೆ ಯಾರು ಹೋಗಬೇಕು ಎಂಬುದರ ಬಗ್ಗೆ ತೀರ್ಮಾನ ಕೈಗೊಳ್ಳುವ ಸಲುವಾಗಿ 'ದೇವ್ತಿ ಹಜಾರ'ದಲ್ಲಿ ಸಭೆ ಸೇರಿ ನಿರ್ಧರಿಸುವುದು 'ಡೆಮೊಕ್ರಾಟಿಕ್' ಆಗಿದೆ. ಇಲ್ಲಿಯೂ ಪಾರ್ವತಿಯ ಆದೇಶದಂತೆ ಶಿವ ಒಬ್ಬನೇ ಹೋಗುವುದರ ಬದಲು ನಾರಾಯಣನನ್ನು ಜೊತೆಗೆ ಕರೆದುಕೊಂಡು ಹೋಗಲು ತೀರ್ಮಾನವಾಗುತ್ತದೆ. ಇಲ್ಲಿ ಶಿವ ಮತ್ತು ನಾರಾಯಣರು ಭಾವ-ಭಾವಮೈದುನರಾಗಿ ನಡೆದುಕೊಳ್ಳುವ ಆತ್ಮೀಯ ನಡತೆ ಅಪೂರ್ವ ಎನಿಸುತ್ತದೆ (ಈ ಭಾವ ಮೈದುನರು ಶಿವ-ನಾರಾಯಣರಿಗೆ ಆರೋಪಿತರಾಗಿರುವ ಗುಂಡಯ್ಯ-ಬ್ರಹ್ಮಯ್ಯರೇ.)

ಘನಪತಿರಾಜನ ಕೋಟೆಯನ್ನು ಭೇದಿಸುವ ಮಾರ್ಗವನ್ನು ಪೂರ್ವಭಾವಿಯಾಗಿ ತಿಳಿಯಲು ದಾಸಯ್ಯನ ವೇಷದಲ್ಲಿ ಬರುವ ನಾರಾಯಣನ ಸಮ್ಮುಖದಲ್ಲಿ ಗುಂಡುಬ್ರಹ್ಮಯ್ಯ ಹಾಗೂ ಅವನ ಮಗಳು ಕಲ್ಯಾಣಿ ಹೇಳುವ ಮಾತುಗಳು ಮತ್ತೆ 'ಪ್ರಭುತ್ವ ವಿರೋಧಿ' ಧೋರಣೆಯನ್ನು ಪ್ರಕಟಿಸುತ್ತವೆ. ಕಲ್ಯಾಣಿ.

ಆ ಪಾಪಿ ಪಟ್ಟಣಕೆ ಹೋದೋರ ನಾ ಕಾಣೆ
ಆ ಪಟ್ಟಣದ ಸುದ್ದಿ ನಿಮುಗೆ ತರುವಲ್ಲ |

ಎನ್ನುವುದು, ಪಂಥ ಮಾಡಿರುವ ಗುಂಡಯ್ಯನನ್ನು ಕುರಿತು ನಾರಾಯಣ,

'ಗುಂಡುಬ್ರಹ್ಮಯ್ಯ ಅವುನಾರೂ ದೊರೆ ಅನ್ನುಸ್ಕೋತಾನೆ
ನೀನ್ ನೋಡುದ್ರೆ ಗರೀಬ
ಅವುನೊಂದ್ಗೆ ಪಂಥ ಮಾಡಿದ್ದಿಯಲ್ಲಪ್ಪ'

ಎಂದಾಗ ಗುಂಡುಬ್ರಹ್ಮಯ್ಯ ಸೆಟೆದು,

'ಸ್ವಾಮಿ ದೊರೆಯಾದ್ರೆ ಅವುನ್ ಮನೆಗೆ'

ಎಂದು ನುಡಿವುದಲ್ಲದೆ ತನ್ನ ದೃಢನಿರ್ಧಾರ ವ್ಯಕ್ತಪಡಿಸುವ ದಿಟ್ಟನಿಲುವು ಇದು.

'ಆಡೀದ ಮಾತೀಗೆ ನಾ ಹೇಡಿಯಾಗೋನಲ್ಲ
ನಾ ಬಾಳುವಂತ ತಲೆ ನಿಮ್ಗೆ ಕೊಡ್ತೀನಿ |

ಬಾಳುವಂತ ತಲೆಯ ಕೊಡುತೀನಿ ನಿಮ್ಮಪಾದ
ಹೋಗ್ಬನ್ನಿ ಧೀರ್ನ ಅರಮನೆಗೆ |

ಎನ್ನುತ್ತಾನೆ. ಈ ಸಂದರ್ಭದ ಮಾತುಗಳೆಲ್ಲ ಜನಪದರ ಸ್ವಾಭಿಮಾನ ಹಾಗೂ ಪ್ರತಿಭಟನಾ ಮನೋಭಾವವನ್ನು ಸಹಜವಾಗಿ ಸಾದರಪಡಿಸುತ್ತವೆ. ಮುಂದೆ ಕೋಟೆರಹಸ್ಯವನ್ನು ತಿಳಿಯುವ ಸನ್ನಾಹದಲ್ಲಿ ನಾರಾಯಣ ಪಾರದವರಿಗೆ ಹೇಳುವ 'ಸಾಸ್ತ್ರ' ಪ್ರಸಂಗಗಳಲ್ಲಿಯೂ ಬಡವರ ಪರವಾದ ನಿಲುವು, ಧನಪರಿಗ್ರಹದ ದುಷ್ಪರಿಣಾಮಗಳು ವ್ಯಕ್ತಿ ಅಂತರಂಗದ ದುರಾಶೆಗಳು - ಇತ್ಯಾದಿಗಳೆಲ್ಲ ಚರ್ಚಿತವಾಗುತ್ತವೆ. ತಾಂತ್ರಿಕವಾಗಿಯೂ ಈ ವಿಧಾನ ಯಶಸ್ವಿಯಾಗಿದೆ.

ಜನಪದ ಕಾವ್ಯಗಳು ವಿಶೇಷವಾಗಿ ಹೆಣ್ಣನ್ನು ಸೂಕ್ಷ್ಮಜ್ಞಾನಿಯಂತೆ ಕಾಣಿಸುತ್ತವೆ. ಇದು ವಾಸ್ತವವೂ ಹೌದು. ಪಾರ್ವತಿಯ ಸಂದರ್ಭದಲ್ಲಿ ಈಗಾಗಲೇ ಈ ಬಗ್ಗೆ ಸೂಚಿಸಲಾಗಿದೆ. ಘನಪತಿರಾಜನ ರಾಣಿ ರಾಮಾಯಿಯ ಸಂದರ್ಭದಲ್ಲೂ ಇಂಥದನ್ನು ಕಾಣಬಹುದು. 'ಸಾಸ್ತ್ರಕಾರ'ನಾಗಿ ಬಂದಿರುವವನು 'ದೇವರು' ಎಂಬ ಸತ್ಯವನ್ನು ಅರಿಯುವವಳು ಇಲ್ಲಿ ರಾಣಿಯೇ. ಅದಕ್ಕೆ ತಕ್ಕಂತೆ ಪಾದಕ್ಕೆ ಬಿದ್ದು ಕ್ಷಮೆ ಕೋರುವ ಅವಳ ವರ್ತನೆಯೂ ಸಮಂಜಸವಾಗಿದೆ. ಹೆಣ್ಣಿನ ಸೂಕ್ಷ್ಮತೆ, ವಿವೇಕ, ವಿನಯಕ್ಕೆ ಇದು ಸಾಕ್ಷಿ.

ಜನಪದ ಕಾವ್ಯಗಳಲ್ಲಿ ಸಾಮಾನ್ಯವಾಗಿ ಕಾಣಿಸಿಕೊಳ್ಳುವ ದೇವಲೋಕ ಮತ್ತು ದೇವತೆಗಳ ಸ್ಥಳೀಯೀಕರಣ ಇಲ್ಲಿಯೂ ಕಾಣಿಸಿಕೊಳ್ಳುತ್ತದೆ. 'ಕೋಳಿ ಕೂಗಿದ ಮೇಲೆಯೇ ಸತ್ಯಲೋಕದಲ್ಲಿ ಬೆಳಕಾಗುವುದು', ಕನ್ನಗತ್ರಿ ತಯಾರಿಕೆಯಲ್ಲಿ ಶಿವನಾರಾಯಣರೇ ತಿದಿಯೊತ್ತುವುದು. ದೇವರಾಗಿದ್ದರೂ ಶಿವನು ರಾಣಿರಾಮಾಯಿಯ ಚೆಲುವಿಗೆ ಮರುಳಾಗುವುದು - ಇತ್ಯಾದಿ ಸನ್ನಿವೇಶಗಳು ಮಾನವ ಸಹಜ ಲಕ್ಷಣಗಳೇ ಆಗಿದ್ದು ಜಾನಪದೀಯ ಶೈಲಿಯಲ್ಲಿ ನಿರೂಪಗೊಂಡಿವೆ.

ಕಳ್ಳತನದಂಥ ನೇತ್ಯಾತ್ಮಕ ಕೆಲಸವನ್ನು ಜನಪದರು ಎಂದೂ ವಿರೋಧಿಸುತ್ತಾರೆ. ಘನಪತಿರಾಜನ ಗರ್ವಭಂಗದ ಕಾರಣಕ್ಕಾಗಿ ಇಲ್ಲಿ ಕಳ್ಳತನ ತಾಂತ್ರಿಕವಾಗಿ ವೈಭವೀಕರಣಗೊಂಡಿದ್ದರೂ, ಅಂತರಾಳದಲ್ಲಿ ಈ ಕಾವ್ಯ ಚೋರವೃತ್ತಿಯನ್ನು ವಿರೋಧಿಸುತ್ತದೆ. ಕಳ್ಳತನಕ್ಕಾಗಿ ಬಳಸಲು ಕನ್ನಗತ್ರಿಯನ್ನು ಮಾಡಿಕೊಡಲು 'ಇಸುಬ್ರಹ್ಮ'ನಿಗೆ ಶಿವ 'ಆರ್ಡರ್' ಕೊಟ್ಟ ಸಂದರ್ಭದಲ್ಲಿ ಬ್ರಹ್ಮ ಮೊದಲಿಗೆ 'ಕೆಟ್ಟೆ' ಎಂದುಕೊಳ್ಳುವುದು ಗಮನಾರ್ಹ. ಅಲ್ಲದೆ ಕಳ್ಳತನಕ್ಕೆ ಒಳಗಾದವರು

ಅವ್ ಯಾವ ಮಾಡ್ಕೊಟ್ಟ ಅವುನ್ ಮಕ್ಕು ತಿನ್ಕೊಳ
ಕನ್ಗತ್ರಿಯ ಅಂತ
ಅವುರು ನನ್ನ ಬೋಯ್ತಾರೆ

ಎಂದು ಸ್ವಯಂಬ್ರಹ್ಮ ನುಡಿಯುವುದು, ಇಸುಬ್ರಹ್ಮಾ ಕನ್ನಗತ್ರಿ ಮಾಡಿಕೊಟ್ಟಿದ್ದಕ್ಕೆ ಪ್ರತಿಯಾಗಿ ಶಿವನಾರಾಯಣದಲ್ಲಿ ಈಶ್ವರ

ಅಕ್ಕೀಗೆ ಆರೂರು ತುಪ್ಪಕ್ಕೆ ಮೂರೂರು
ನಮ್ಮುಕ್ಕಣ್ಣಯ್ಯ ಧಾರೆ ಎರೆದಾರು |

ಆದರೆ ನಾರಾಯಣ ಇಸುಬ್ರಹ್ಮನಿಗೆ ಕೊಟ್ಟ ಶಾಪ ಇದು

ನೀನು ಬೆಟ್ಟುದ್ಗಾತ್ರ ಕಬ್ಬುಣವ ಸಂದ್ಗಂಟ ಬಡುದ್ರೂವೆ
ಹಾಗಾದ ಕಾಸಲ್ದೆ ನಿನುಗೆ ಹಣುವಿಲ್ಲ |

ಬಾಗುಲ್ಗಂಡ್ಗಾಣೆ ಬರ್ಲಿನಿನ್ಗೆ ಚಚ್ಚಲ್ಗಂಡ್ಗಾಣೆ ಹೋಗ್ಲಿ
ಅಂತ ನಾರಾಯ್ಣ ಸಾಪ ಕೊಡುತಾರೆ |

ಲಕ್ಕಸಾಲಿಗರಿಗೆ ನಾರಾಯಣ ಶಾಪ ಇರುವಂತೆ ಮಂಟೇಸ್ವಾಮಿಯವರ ಶಾಪವೂ ಇದೆ ಎಂಬುದು ನಮ್ಮ ಜನಪದರ ನಂಬಿಕೆ. ನಾರಾಯಣ ಶಾಪಕ್ಕೆ ಪ್ರತಿಯಾಗಿ ಇಸುಬ್ರಹ್ಮ

ನೀನು - ಹತ್ತವುತಾರುವ ಧರಿಯಲ್ಲಿ ಎತ್ತಬೇಕು
ನೀನು ಪಡುಬಾರ್ದ ಪಾಡ ಪಡಬೇಕು |

ಎಂದೂ ಶಪಿಸುವುದು ವೈದಿಕ ಪುರಾಣಗಳ ಕಥೆಯನ್ನು ಇಲ್ಲಿಗೆ ಥಳಕು ಹಾಕಿದಂತಾಗಿದೆ. ಶಿವ ಪಾರ್ವತಿಯ ಮಾತನ್ನು ನಿರ್ಲಕ್ಷಿಸಿ ಕಳ್ಳತನಕ್ಕೆ ಹೊರಟಾಗ ಪಾರ್ವತಿಯು ತಡೆಯಲು ಯತ್ನಿಸಿ ವಿಫಲಳಾಗುತ್ತಾಳೆ. ಮುನಿದುಕೊಂಡ ಶಿವ-ಪಾರ್ವತಿಯರನ್ನು ತಂತ್ರಗಾರ ನಾರಾಯಣ ಮತ್ತೆ ಒಂದಾಗುವಂತೆ ಮಾಡುತ್ತಾನೆ.

ಕನ್ನ ಹಾಕುವುದಕ್ಕೆ ಮೊದಲು ಈಶ್ವರ ಕೈಕಾಲು, ಮುಖ ತೊಳೆದುಕೊಂಡು ಹಣೆಗೆ ಕೀಲುಕೀಲಿಗೆ ವಿಭೂತಿ ಧರಿಸಿ ಕೊರಳಲ್ಲಿ ರುದ್ರಾಕ್ಷಿ ಧರಿಸಿ ಪೂಜೆಗೆ ಕುಳಿತುಕೊಳ್ಳುತ್ತಾನೆ. ಆ ಸಂದರ್ಭದಲ್ಲಿ ಪೂಜೆಗೆ ಹೂವುಗಳ ಹೆಸರು ಓಪಿದು ಕರೆಯುವ ಪರಿ ಸೊಗಸಾಗಿದೆ. ಪೂಚೆ ಆದ ಮೇಲೆ ಗಂಗಮ್ಮ ಗೌರಮ್ಮನು ಒಪ್ಪಿ ಶಿವನಾರಾಯರಣರನ್ನು ಬೀಳ್ಕೊಟ್ಟರು.

ಉಪಕಾರ ಪ್ರವೃತ್ತಿ, ಉಪಕಾರ ಸ್ಮರಣೆ, ಉಪಕೃತರಿಂದ ಕೃತಜ್ಞತೆ ಸಲ್ಲಿಕೆ - ಇವು ಜನಪದರ ಪ್ರಮುಖ ಜೀವನ ಮೌಲ್ಯಗಳು. ಸ್ವಯಂ ಬಾಗಿ ಶಿವನಾರಾಯಣರಿಗೆ ಕುಡಿಯಲು ಕೆಂದೆಳನೀರನ್ನು ಕೊಟ್ಟ ತೆಂಗಿನಮರಕ್ಕೆ ಕೃತಜ್ಞತೆಯನ್ನು ಹೇಳುವ ಶಿವನು ತೆಂಗಿನ ಮರಕ್ಕೆ ಮೂರುಕಣ್ಣುಗಳನ್ನು ಕೊಟ್ಟು 'ಮುಕ್ಕಣ್ಣಯ್ಯ' ಎಂದು ಕರೆದರು. ತೆಂಗಿನ ಮರಕ್ಕೆ ಹೇಳುವ ಬುದ್ಧಿಮಾತು 'ಹೋಗ್ರಪ್ಪ ಈ ಸಲ ಅಂತ್ಕೊಂಡು ಬೆಳೀಬೇಡಿ ತಗ್ಗಿಬಗ್ಗಿ ಬೆಳೀರಿ' ಎಂದ ಮಾತು ಎಲ್ಲ ಕಾಲಕ್ಕು ಎಲ್ಲರಿಗೂ ಹೇಳಬಹುದಾದ ನೀತಿಯ ಮಾತಾಗಿದೆ. ಶಿವನಾರಾಯಣರು ಹೊಟ್ಟೆಗಿಲ್ಲದವರಂತೆ ಬಟ್ಟೆಗಿಲ್ಲದವರಂತೆ ಕಳ್ಳತನಕ್ಕೋಗುತ್ತಿರುವುದನ್ನು ತನ್ನ ಸುತ್ತೆಲ್ಲ ಇರುವ ಗಿಡಗಳಿಗೆಲ್ಲ ಹೇಳುತ್ತ

ದಾಳಿಂಬಿರುಕ್ಷ ಎಲ್ಲಾರ್ಗೂ ಹೇಳ್ಬುಟ್ಟು
ಅರಬಾಯ ಬುಟ್ಟು ನೆಗುತಾದೆ |

ಆ ಅರೆನಗೆಯೇ ಇಂದಿಗೂ ದಾಳಿಂಬೆ ಹಣ್ಣಾಗುವಾಗ ಬಿರಿಯಲು ಕಾರಣವಾಯಿತಂತೆ. ಏಳುಸಮುದ್ರಗಳಲ್ಲಿ ಸೀನೀರು ಸಮುದ್ರವನ್ನು ದಾಟಲು ಆನೆಯೊಂದನ್ನು ಕೊಂದು ಅದರಿಂದ ಹರಗೋಲು ಮಾಡಿಕೊಂಡು ಹೋಗುತ್ತಿರುವಾಗ ದೊಡ್ಡಬಂಡೆಯೊಂದು ಉರುಳಿ ಬಂದು ಹರುಗೋಲಿಗೆ ಬಿದ್ದು ಅದು ಮುಳುಗುವ ಹೊತ್ತಿನಲ್ಲಿ ಕಾಳಿಂಗಸರ್ಪವೊಂದು ಇವರನ್ನು ತನ್ನ ಹೆಡೆಯಲ್ಲಿ ಎತ್ತಿತಂದು ದಡ ಸೇರಿಸಿತು. ಆಗ ಆ ಕಾಳಿಂಗ ಸರ್ಪಕ್ಕೆ ನಾರಾಯಣ ಕಾಳಿ, ಕಂಕಾಳಿ, ಕರಾಳಿ, ಯಮದೂತಿ ಅನ್ನುವಂತ ಹಲ್ಲುಗಳನ್ನು ಕೊಟ್ಟರು. ಆ ಹಲ್ಲುಗಳಿಗೆ ಈಶ್ವರ ವಿಷವನ್ನು ಕೊಟ್ಟ

'ನಾರಾಯ್ಣ ಇದು ಬಾಳ ಕಷ್ಟ ಮಾಡದೆ
ನಮ್ಮ ಕಿರೀಟದಲ್ಲಿ ಒಂದು ನಾಗರತ್ನದ ಹರುಳ್ ಕಿತ್ತು
ಅದುಕ್ಕೆ ಕೊಟ್ಟುಡಪ್ಪ' ಅಂದ್ರು
'ನೀನು ಈ ಸರುಳ ದವಡೆ ಒಳುಗೆ ಮಡೀಕೊಂಡಿದ್ದು

ಕತ್ಲೇಲಿ ಹಾರ ಹುಡ್ಕಕೋದಾಗ
ಎಲ್ಲಾರೂ ಮಡೀಕೊಂಡಿದ್ದು ಬೆಳುಕ್ನಲ್ಲಿ ಚೆಂಚಾರ ಮಾಡಪ್ಪ

ಎಂದು ಆಶೀರ್ವದಿಸಿದರು. ನಾಗರಹೆಡೆಯಲ್ಲಿ ಇಂದಿಗೂ ಒಂದು ನಾಗಮಣಿ ಇದೆ ಹಾಗೂ ಸರ್ಪ ನಿಧಿಯನ್ನು ಕಾಯುತ್ತಿರುತ್ತದೆ ಎಂಬ ನಮ್ಮ ಜನಪದರ ನಂಬಿಕೆಯೇ ಈ ಪ್ರಸಂಗದ ಸೃಷ್ಟಿಗೆ ಕಾರಣವಾಗಿದೆ. ಹೀಗೆ ಶಿವನಾರಾಯಣರು ಕಾಣಿಕೆ ಕೊಟ್ಟು ಸತ್ಕರಿಸುವುದು - ಸೂಚಿತ ಮೌಲ್ಯಪ್ರತಿಪಾದನೆಗಾಗಿ ಬಂದಿವೆ ಎನಿಸುತ್ತದೆ.

ಕಳ್ಳತನ ಮಾಡಲು ಶಿವ-ನಾರಾಯಣರು ಓರುಗಲ್ಲಿನ ಕುಂಬಾರಗೇರಿ, ಗಾಣಿಗರ ಕೇರಿ, ಒಕ್ಕಲಿಗರ ಕೇರಿ, ಶಿವಭಕ್ತರ ಕೇರಿಗಳಿಗೆಲ್ಲ ಬಂದು ಪಕ್ಕದಲ್ಲೇ ಇದ್ದ ಮುಸ್ಲಿಮರ ಕೇರಿಗೂ ಬರುತ್ತಾರೆ. ಮಾಯದ ಬೇಳ್ಕೆಗೆ ಸಿಕ್ಕಿ ಎಲ್ಲರೂ ಗಾಢನಿದ್ರೆಯಲ್ಲಿರುವವರಂತೆ ಜ್ಞಾನ ತಪ್ಪಿ ಒರಗಿರುವವರನ್ನು ಕಂಡು ಎಲ್ಲ ಜಾತಿಯ ಜನರನ್ನೂ ತಿಳಿಹಾಸ್ಯದಲ್ಲಿ ವಿಡಂಬಿಸುತ್ತ ಮುಸ್ಲಿಮರ ಮಸೀದಿಯೊಳಕ್ಕೆ ನುಗ್ಗಿದ ಶಿವನಾರಾಯಣರು

ದಿನಕೆ ಮೂರುದಪ ನಮಾಜ ಮಾಡುತಾರೆ
ಇವರು ನಮಗೆ ಒಳ್ಳೆ ಭಕ್ತರಪ್ಪ |

ಎಂದು ಹೇಳುವುದಲ್ಲದೆ ಒಬ್ಬರು ಗಡ್ಡವನ್ನು ಮತ್ತೊಬ್ಬರಿಗೆ ಕಟ್ಟಿ

ಇಸ್ಕಿ ಗಡ್ಡ ದೇಪೊ ಉಸ್ಕಿ ದಾಡಿ ದೇಪೊ
ದೇಪೋರೆ ಹಮಾರ ಮಸಲತ್ತು |

ಎಂದೆಲ್ಲ ಮಾತನಾಡುವ ಭಾಗ ಜನಪದರ ಉರ್ದುಭಾಷೆಯ ಪರಿಣತಿ ಹಾಗೂ ಕೋಮು ಸೌಹಾರ್ದಕ್ಕೆ ಸಾಕ್ಷಿಯಾಗುತ್ತದೆ. ಅಲ್ಲದೆ ಅರಮನೆಯಲ್ಲಿ ಅಲ್ಲಲ್ಲೇ ಮಲಗಿದ್ದ ಹೆಣ್ಣುಗಳನ್ನು ಹಸ್ತಿನಿ ಚಿತ್ತಿನಿ ಶಂಖಿನಿ ಪದ್ಮಿನಿ ಜಾತಿಯವರೆಂದು ಹೇಳುವುದನ್ನು ನೋಡಿದಾಗ ನಮ್ಮ ಜನಪದರಿಗಿರುವ ಕಾಮಶಾಸ್ತ್ರ ಜ್ಞಾನ ಆಶ್ಚರ್ಯವನ್ನುಂಟುಮಾಡುತ್ತದೆ. ಗಗನಚಿಕ್ಕಿ ಅರಮನೆಯಲ್ಲಿ ಪದ್ಮಿನಿ ಜಾತಕದ ಹೆಣ್ಣು ರಾಮಾಯಿ ಇದ್ದಾಳೆಂದು ಹೋಗಿ ಬಾಗಿಲು ತೆರೆಯುವಾಗ ಬಾಗಿಲು 'ಗಪ್ಪಂತ' ಕೈಯನ್ನು ಹಿಡಿದು ಕೊಂಡಿತು. 'ಕಳ್ರು ಬಂದವ್ರೆ' ಎಂದು ಕೂಗಿ ಹೇಳಿತು. ಇದು ಆಧುನಿಕ ರಿಮೋಟ್‌ಗಳ ನೆನಪನ್ನು ತರುತ್ತದೆ.

ರಾಮಾಯಿಯ ಚಲುವನ್ನು ಎಷ್ಟು ವರ್ಣಿಸಿದರೂ ಜನಪದ ಕವಿಗೆ ತೃಪ್ತಿ ಇಲ್ಲ. ಈಶ್ವರನಿಗೆ ಇಂಥ ಸುಂದರಿಯನ್ನು ಬಿಟ್ಟುಹೋಗುವ ಮನಸ್ಸಿಲ್ಲ. ಮಾಯದ ಬೇಳ್ಕೆಯಿಂದಾಗಿ ರಾಮಾಯಿಗೂ ಎಚ್ಚರವಿಲ್ಲ. ಮಾತಿನಗಿಳಿ ಬಂದು ಎಚ್ಚರಿಸಿದರೂ ಅವಳಿಗೆ ಎಚ್ಚರವಿಲ್ಲ. ಶಿವನ ಮನಸ್ಸನ್ನು ರಾಮಾಯಿ ಕಡೆಯಿಂದ ಬೇರೆಡೆಗೆ ತಿರುಗಿಸಲು ನಾರಾಯಣ ಒಂದು ತಂತ್ರ ಹೂಡಿದ.

ಕೋಳಿ ಕೂಗಿ ಲೋಕ ಬೆಳಕಾಯ್ತು ಈಸ್ವರ
ಆ - ನಾರಿ ಸಂಗ್ಡ ಬುಟ್ಟು ಕೆಳಿಕಿಳಿಯಪ್ಪ |

ಯತುಮುನುಗಳು ತ್ರಪವ ಕೆಡಿಸುವಳು ರಾಮಾಯಿ
ಈ ಸತಿಯ ಸಂಗಾಟ ನಿಮುಗೆ ತರುವಲ್ಲ |

ಎಂದು ಹೇಳಿ ರಾಮಾಯಿಯ ಮೈಮುಟ್ಟಿ ಒಡವೆಗಳನ್ನು ಕದ್ದುದಲ್ಲದೆ ಘನಪತಿರಾಜನ ಎರಡು ಕಾಲುಗಳಲ್ಲಿದ್ದ ಚಿನ್ನದ ಪೆಂಡೆಯಗಳನ್ನು ಚಂದ್ರಾಯುಧವನ್ನು ಕಸಿದುಕೊಂಡರು. ಸೆರೆಯಲ್ಲಿಟ್ಟ ಲಕ್ಷ್ಮಿಯರು ಬಿಡುಗಡೆಗಾಗಿ ತಪಿಸಿ ಶಿವನ ಪಾದವನ್ನು ಹಿಡಿದುಕೊಂಡರು. ಅವರ ಸೆರೆಯನ್ನು ಬಿಡಿಸಿದ ಶಿವನಾರಾಯಣರು.

ಈವತ್ತು ಇದ್ದವರ ಮನೆ ನೀವು ನಾಳೀಕೆ ಇರಬ್ಯಾಡಿ
ನಾಡು ನಾಗಾವುದ ಹೊಂಟೋಗಿ |

ಎಂದು ಹೇಳಿದರು. ಘನಪತಿರಾಜನ ಐಶ್ವರ್ಯವನ್ನೆಲ್ಲ ಆನೆ ಒಂಟೆಗಳ ಮೇಲೆ ಹೇರಿಕೊಂಡು ದಾರಿಯುದ್ದಕ್ಕೂ ಸಾಲು ಬಿಟ್ಟುಕೊಂಡು ಹೋದರು. ಊರವರೆಲ್ಲ ಅವುಗಳನ್ನು ಆಯ್ದುಕೊಳ್ಳಲಿ ಎಂಬ ವಿಕೇಂದ್ರೀಕರಣ ತತ್ತ್ವ ಇಲ್ಲಿದೆ. ಹೇರಿಕೊಂಡು ತಂದ ದ್ರವ್ಯವನ್ನೆಲ್ಲ ಘನಪತಿರಾಜನ ಮನೆದೇವರು ಹೆಬ್ಬೆಟ್ಟಾಯನ ಗುಡಿ ಮುಂದೆ ಸುರಿದು ಒಂದಾನೆ ಹೇರಿನ ಜೊತೆ

ದಾರಿಯುದ್ದಕ್ಕೂ ಮುತ್ತಿನ ಸಾಲನ್ನು ಬಿಡುತ್ತ ಶಿವನಾರಾಯಣರು ಗುಂಡುಬ್ರಹ್ಮಯ್ಯನ ಬಾಗಲಿಗೆ ಬಂದರು. ಘನಪತಿರಾಜನ ಚಿನ್ನದ ಪೆಂಡೆಯವನ್ನು ಚಿನ್ನದ ಕಹಳೆಯನ್ನೂ ಗುಂಡುಬ್ರಹ್ಮಯ್ಯನ ಮನೆ ಬಾಗಿಲಿಗೆ ಕಟ್ಟಿದರು.

ಏನೂ ಅರಿಯದವರಂತೆ ಆವಿಗೆ ಕೊಟ್ಟಿಗೆಗೆ ಹೋಗಿ ಮಲಗಿಬಿಟ್ಟರು. ಬೆಳಗೆದ್ದ ಗುಂಡುಬ್ರಹ್ಮಯ್ಯನಿಗೆ ಶಿವನಾರಾಯಣರ ದರ್ಶನವಾಯಿತು.

'ಆಡೀದ ಮಾತೀಗೆ ಬಂದೀರ' ಅಂತ್ಹೇಳಿ
ನನ್-ಮೊರುಬಿದ್ದ ಕಳ್ಸ ನಾ ಕೊಡಲಾರಿ |

ಎಂದು ಹಿರಿಹಿರಿ ಹಿಗ್ಗಿದ.

ಓರುಗಲ್ಲಿಗೆ ಬೆಳಕಾಯಿತು. ಆಗಿರುವ ಅನಾಹುತದ ಅರಿವಾಯಿತು. ಮುತ್ತಿನಸಾಲನ್ನು ಅನುಸರಿಸಿ ಬಂದರೆ ಅದು ಗುಂಡುಬ್ರಹ್ಮಯ್ಯನ ಮಠಕ್ಕೆ ಬಂದಿತು. ಮಠದ ಮುಂದೆ ನಿಂತ ಘನಪತಿರಾಜ

'ಯಾರಪ್ಪ ಸರಣ ಗುಂಡುಬ್ರಮ್ಮಯ್ಯಾನೆ
ಈಚೆಗೆ ಬಾರಪ್ಪ ಸರಣಾನೆ' |

'ಅಹ್ಹಾ ದೊರೆಯೆ ಏನು?'
'ಏನು ಅನ್ನೋದಾಗಿ ನೀನ್ ಕೇಳ್ತಿಯಯ್ಯ -

ದಾರೀಯ ಒಳುಗೆ ಒನ್ ಮಠವ ಕಟುಕೊಂಡು
ಹೋಗ್ಬರೊ ಕಳ್ಸುನೆಲ್ಲ ಸೇರುಸ್ಕೊಂಡು |

ನನ್ನ ಪಟ್ಟುನ ಹಲ್ಲೆ ಮಾಡುಬೋದ ?
ನಿನ್ ಮೊನುಗಳ್ಸ ತೋರ್ಸು ಜಲ್ದಿ' |

'ಊಟ ಮಾಡ್ತವುರೆ ಸೊಲ್ಪ ನಿಂತ್ಕೊ ದೊರೆ
ಇನ್ನೇನ್ ಬತ್ತರೆ ತಾಂಬೂಲ ಮಾಡ್ತಾ ಅವ್ರೆ' |

ಎಂದು ಹೇಳುತ್ತಾನೆ. ಕಾವ್ಯದ ಕೊನೆಯ ಈ ಭಾಗ ಮಾತು - ಕ್ರಿಯೆ - ನೀತಿಗಳ ಸಮನ್ವಯವನ್ನು ಅನಾವರಣ ಮಾಡುವುದಕ್ಕಾಗಿ ಮೀಸಲಾಗಿದೆ.

'ದೊರೆಯ ನನ್ನ ಮೊರೆ ಹೊಕ್ಕುದ ಕಳ್ಸ ನಾನು ಕೊಡೊದಿಲ್ಲ
ಅವುರೇರುವಂತೆ ಶೂಲ್ಕೆ ನಾನೇರ್ಬೇಕು' |

ಎಂಬ ತನ್ನ ನಿಲುವು ಮತ್ತು ಘೋಷಣೆಗೆ ಬದ್ಧನಾಗಿ ನಡೆದುಕೊಳ್ಳುವ ಗುಂಡುಬ್ರಹ್ಮಯ್ಯನ ಸತ್ಯ-ಸತ್ತ್ವಪರೀಕ್ಷೆ ಇಲ್ಲಿ ನಡೆಯುತ್ತದೆ. ಸಾವಿಗಿಂತ ಇಲ್ಲಿ ಸತ್ಯ ದೊಡ್ಡದು ಎಂಬ ನಿಲುವು ಇಲ್ಲಿ ಪ್ರಧಾನವಾಗಿದೆ. ಜೀವ ಭಯ ತೊರೆದು ಬ್ರಹ್ಮಯ್ಯ ಶೂಲಕ್ಕೆ ಬಡಿದುಕೊಳ್ಳುವುದು, ಬ್ರಹ್ಮಯ್ಯನ ಮಡದಿಯರು ತಮ್ಮ ಕತ್ತನ್ನು ತಾವೇ ಕತ್ತರಿಸಿಕೊಳ್ಳುವುದು - ಇವೆಲ್ಲ ಕ್ರೂರವಾಗಿ ಕಂಡರೂ ಸತ್ಯಸ್ಥಾಪನೆಯಂಥ ಮಹತ್ಕಾರ್ಯದಲ್ಲಿ ವ್ಯಕ್ತಿ ಎದುರಿಸುವ ಸವಾಲುಗಳು, ಅನುಭವಿಸಬೇಕಾಗಿ ಬರುವ ಸಂಕಷ್ಟ ಪರಂಪರೆಗಳಿಗೆಲ್ಲ ಸಂಕೇತಗಳಾಗುತ್ತವೆ. ಇಲ್ಲಿ ಗುಂಡುಬ್ರಹ್ಮಯ್ಯ ಶೂಲವೇರುತ್ತಿದ್ದಂತೆ ಗಗನಚುಕ್ಕಿ ಅರಮನೆಯಲ್ಲಿ ಶಿವ ನಾರಾಯಣರು ಬಿಟ್ಟು ಬಂದಿದ್ದ ಕನ್ನಗತ್ರಿ ಸಿಡಿದು ಅರಮನೆಯಾದ ಅರಮನೆಯೇ ಧಗಾಧಗನೆ ಹತ್ತಿಕೊಂಡು ಧಿದಾಧಿಗನೆ ಉರಿದುಹೋಗುವುದು ಪ್ರಜೆಗಳ ಹೋರಾಟಕ್ಕೆ ಸಿಕ್ಕ ವಿಜಯಕ್ಕೆ ಸಂಕೇತವಾಗಿರುವಂತೆ ಕಾಣುತ್ತದೆ.

ಮುಂದೆ ಈಶ್ವರನು ಬ್ರಹ್ಮಗುಂಡಯ್ಯನನ್ನು ಕೈಲಾಸಕ್ಕೆ ಕರೆತರುವುದು ಅಲ್ಲಿ ಸಾಕ್ಷಾತ್ ಶಿವೆ ಆತನಿಗೆ ಆರತಿ ಬೆಳಗುವುದು - ದಿಟ್ಟ ಸವಾಲುಗಳನ್ನು ಎದುರಿಸಿದವರ ಸಾಮಾಜಿಕ ಪರಿಣಾಮಕ್ಕೆ ಕಾಲ ತನ್ನೊಡಲಲ್ಲಿ ಶಾಶ್ವತ ಸ್ಥಾನ ನೀಡಿ ಅನಂತ ಕೃತಜ್ಞತೆಗೆ ಆಸ್ಪದ ಮಾಡಿಕೊಡುವ ಕಾರುಣ್ಯಕ್ಕೆ ಸಾಕ್ಷಿಯಾಗುತ್ತದೆ. ಕುಂಬಾರ ವೃತ್ತಿಗೆ ಅಗತ್ಯವಾಗಿ ಬೇಕಾದ ಚಕ್ರವನ್ನು ಗುಂಡುಬ್ರಹ್ಮಯ್ಯನಿಗೆ ವಿಷ್ಣು ಕೊಟ್ಟನೆಂಬ ಕಲ್ಪನೆಯಲ್ಲಿಯೂ ಒಂದು ವೈಶಿಷ್ಟ್ಯವಿದೆ.

"ಈ ಚಕ್ರದಲ್ಲಿ ನಿನ್ ಜೀವ್ನ ಮಾಡಪ್ಪ
ಈ ಜಗತ್ಕದಲ್ಲಿ ಬಡುಬಗ್ಗುರ್ಗೆ ಬೇಕಾದ ಮಡ್ಕೆಕುಡ್ಕೆಗಳ ಮಾಡ್ಕೊಡಪ್ಪ
ನಿನ್ನ ಕೀರ್ತಿ ಜಗತ್ಕದಲ್ಲಿ ಮೆರೀಲಪ್ಪ

ಎಂಬ ಮಾತೂ ಜನಪರವಾದ ಮಾತೇ ಆಗಿದೆ.

ಒಟ್ಟಾರೆ ಈ ಕಾವ್ಯ ದಿಟ್ಟತನದ ಶರಣನ ಕಟ್ಟುಗ್ರ ಸಾಮರ್ಥ್ಯವನ್ನು ಸಾರುವುದರ ಜೊತೆಗೆ ವಸ್ತು, ಧೋರಣೆ, ನಿರೂಪಣಾ ವಿಧಾನಗಳಿಂದ ವಿಶೇಷ ಗಮನಕ್ಕೆ ಪಾತ್ರವಾಗುತ್ತದೆ.

ಹೇಮರೆಡ್ಡಿ ಮಲ್ಲಮ್ಮ

ಹೇಮರೆಡ್ಡಿ ಮಲ್ಲಮ್ಮ ಆಂಧ್ರದ ವೇಮರೆಡ್ಡಿ ವಂಶಕ್ಕೆ ಸೇರಿದವಳು. ರೆಡ್ಡಿ ಎಂಬುದು ಒಂದು ರಾಜವಂಶ. ಚಾಲುಕ್ಯರಿಗೆ ಸೋತ ರಾಷ್ಟ್ರಕೂಟರು ಆಂಧ್ರದ ಕಡೆಗೆ ತಳ್ಳಲ್ಪಟ್ಟವರಾಗಿ ಶ್ರೀಶೈಲದ ಸುತ್ತಮುತ್ತ ನೆಲಸಿದ ಇವರು ರಾಷ್ಟ್ರಕೂಟ > ರಟ್ಟ > ರಡ್ಡ > ರೆಡ್ಡಿಯಾದರು. ಮೂಲತಃ ಒಕ್ಕಲಿಗರಾದ ಇವರಲ್ಲಿ ಕೆಲವರು ತರುವಾಯದಲ್ಲಿ ವೀರಶೈವ ಧರ್ಮವನ್ನು ಅನುಸರಿಸಿದಂತೆ ತಿಳಿದುಬರುತ್ತದೆ. ಈಗಲೂ ಆಂಧ್ರದಲ್ಲಿ ವೀರಶೈವ ರೆಡ್ಡಿಗಳು ಹಾಗೂ ಒಕ್ಕಲಿಗರೆಡ್ಡಿಗಳು ಎಂಬ ಎರಡು ಬಗೆಯ ಒಕ್ಕಲಿನವರು ಇದ್ದಾರೆ. ಬಹುಶಃ ಹೇಮರೆಡ್ಡಿ ಮಲ್ಲಮ್ಮ ವೀರಶೈವ ಅಥವಾ ಶೈವಪಂಥಕ್ಕೆ ಸೇರಿದವಳಾಗಿರಬಹುದು. ಮತ್ತೆಂದು ವಿಶೇಷ ವಿಷಯವೆಂದರೆ ಮಹಾಯೋಗಿ ವೇಮನ ಮಲ್ಲಮ್ಮನೆ ಮೈದುನ.

ವೇಶ್ಯಾಲಂಪಟನಾಗಿದ್ದ ಇವನ ಕಣ್ಣು ತೆರೆಸಿದವಳೇ ಮಲ್ಲಮ್ಮ. ತನ್ನ ಅಕೃತ್ಯಗಳಿಗೆ ಪಶ್ಚಾತ್ತಾಪಪಟ್ಟ ವೇಮನ ಸನ್ಯಾಸಿಯಾಗಿ ನಮ್ಮ ಸರ್ವಜ್ಞನಂತೆ ವಚನಕಾರನಾಗಿ ಪ್ರಸಿದ್ಧನಾಗಿದ್ದಾನೆ.

ಹೇಮರೆಡ್ಡಿ ಮಲ್ಲಮ್ಮನ ಚರಿತ್ರೆಯನ್ನು ತೆಲುಗಿನಲ್ಲಿ ನಂದಿಕೊಟ್ಟೂರು ಸುಬ್ಬಕವಿಗಳು ಮತ್ತು ಕುರುಕುಂದ ಭೀಮಕವಿಗಳು ಬರೆದಿದ್ದಾರೆಂದು ತಿಳಿದುಬರುತ್ತದೆ. ಕನ್ನಡದಲ್ಲಿ ದ್ಯಾಂಪುರ ಚನ್ನಕವಿ ಎಂಬವರು ಹೇಮರೆಡ್ಡಿ ಮಲ್ಲಮ್ಮನ ಪುರಾಣವನ್ನು ಬರೆದಿದ್ದಾರೆ. ಹೇಮರೆಡ್ಡಿಮಲ್ಲಮ್ಮ ಆಂಧ್ರದವಳಾದರೂ ಅವಳ ಜೀವನವನ್ನು ಹೇಳುವ ನಾಟಕಗಳು ವೃತ್ತಿನಿರತ ನಾಟಕ ಮಂಡಲಿಯವರಿಂದ ಪ್ರದರ್ಶನಗೊಂಡು ಪ್ರಸಿದ್ಧವಾಗಿದ್ದುದಲ್ಲದೆ ಅವು ಕನ್ನಡ ಚಲನಚಿತ್ರವಾಗಿಯೂ ಯಶಸ್ವಿಯಾಗಿವೆ.

ಹೇಮರೆಡ್ಡಿ ಮಲ್ಲಮ್ಮ ಸುಮಾರು ೧೪-೧೫ನೇ ಶತಮಾನಗಳ ಅಂತರದಲ್ಲಿದ್ದವಳೆಂದು ತಿಳಿದುಬರುತ್ತದೆ. ಕೆಲವಿದ್ವಾಂಸರ ಪ್ರಕಾರ ಈಕೆಯು ಕ್ರಿ.ಶ.೧೩೨೭ರಲ್ಲಿ ಜನಿಸಿದಳು. ೧೩೪೪ರಲ್ಲಿ ಮದುವೆಯಾಯಿತು. ೧೩೭೪ರಲ್ಲಿ ಶಿವಸಾಯುಜ್ಯವನ್ನು ಹೊಂದಿದಳೆಂದು ಶ್ರೀಶೈಲ ಇತಿಹಾಸಕಾರರು ಹಿಂದೂ ಸಂವತ್ಸರ ಸಹಿತ ಕೊಟ್ಟಿದ್ದಾರೆ. ಆದರೆ ಇದಕ್ಕೆ ಚರಿತ್ರೆಯ ಆಧಾರವಿರುವುದಿಲ್ಲ. ಈಕೆಯ ಕಾಲವನ್ನು ರೆಡ್ಡಿ ವಂಶವಕ್ಷದಲ್ಲಿ ಕೊಟ್ಟಿರುವಂತೆ ಕ್ರಿ.ಶ.೧೫ನೇ ಶತಮಾನದ ಪೂರ್ವಾರ್ಧವೆಂದು ಹೇಳಬಹುದು.[46]

ಶ್ರೀಶೈಲ ಪರ್ವತದ ಎಡಭಾಗದಲ್ಲಿ ಸಿದ್ಧಾಪುರ, ಬಲಭಾಗದಲ್ಲಿ ರಾಮಾಪುರ ಎಂಬ ಹೆಸರಿನ ಊರುಗಳು. ರಾಮಾಪುರದಲ್ಲಿದ್ದ ಸೋಮರೆಡ್ಡಿ-ಗೌರಮ್ಮ ದಂಪತಿಗಳು ಮಗಳು ಮಲ್ಲಮ್ಮ. ಮದುವೆ ವಯಸ್ಸಿಗೆ ಬಂದ ಮಗಳನ್ನು ಸಿದ್ಧಾಪುರದ ಹೇಮರೆಡ್ಡಿ - ಹೊನ್ನಾಜಮ್ಮನವರ ಮೂರನೇ ಮಗ ಭರಮಣ್ಣನಿಗೆ ಕೊಟ್ಟು ಮದುವೆ ಮಾಡಿದರು. ಮಲ್ಲಮ್ಮ ಹೇಮರೆಡ್ಡಿಯ ಮನೆಗೆ ಬರುವುದಕ್ಕೆ ಮುಂಚೆಯೇ ಇಬ್ಬರು ಹಿರಿಯ ಸೊಸೆಯರಿದ್ದರು. ಮಲ್ಲಮ್ಮ ತನ್ನ ಸದ್ಗುಣಗಳಿಂದ ಮನೆಯವರೆಲ್ಲರ ಮೆಚ್ಚಿಗೆಗೆ ಪಾತ್ರಳಾಗುತ್ತಿರುವುದನ್ನು ಕಂಡು ಅವರು ಕರುಬಿದರು. ಅವಳ ಮೇಲೆ ಇಲ್ಲಸಲ್ಲದ ಅಪವಾದವನ್ನು ಹೊರಿಸುವಲ್ಲಿ ಯಶಸ್ವಿಯಾದರು. ಅತ್ತೆಗೂ ತನ್ನ ಸೊಸೆ ಮಲ್ಲಮ್ಮನ ಮೇಲೆ ಅನುಮಾನ ಹೆಚ್ಚಿದ್ದಲ್ಲದೆ ವಿನಾಕಾರಣ ಅವಳನ್ನು ಗೋಳು ಹೊಯ್ದುಕೊಳ್ಳಲಾರಂಭಿಸಿದಳು. ಗುರು-ಜಂಗಮರ ಸೇವಾಪರಳಾದ ಮಲ್ಲಮ್ಮನನ್ನು ದೂಷಿಸಿ ಆಳಿಗಿಂತಲೂ ಕಡೆಯಾಗಿ ಕಂಡು ಬಗೆ ಬಗೆಯಾಗಿ ಶಿಕ್ಷಿಸಿದಳು. ಅತ್ತೆ ಕೊಟ್ಟ ಶಿಕ್ಷೆಗಳನ್ನೆಲ್ಲ ಶ್ರೀಶೈಲ ಮಲ್ಲಿಕಾರ್ಜುನನ ದಯೆಯಿಂದ ಗೆದ್ದ

---

46. ನೋಡಿ : ಎಂ.ಜಿ. ನಂಜುಂಡಾರಾಧ್ಯರು 'ಹೇಮರೆಡ್ಡಿ ಮಲ್ಲಮ್ಮ - ರಾಜಯೋಗಿ ವೇಮಣ್ಣ', ಪ್ರಬೋಧ ಪುಸ್ತಕ ಮಾಲೆ, ಬೆಂಗಳೂರು ೧೯೫೦, ಪು. ೭ ಮತ್ತು ೩೫.

ಮಲ್ಲಮ್ಮ ಅತ್ತೆಗೆ ಜ್ಞಾನೋದಯವಾಗುವಂತೆ ಮಾಡಿದಳು. ನಿಷ್ಕಾರಣವಾಗಿ ಮಲ್ಲಮ್ಮನನ್ನು ಶಿಕ್ಷಿಸಿದ್ದಕ್ಕಾಗಿ ಅತ್ತೆ ಹೊನ್ನಾಜಮ್ಮ ಪಶ್ಚಾತ್ತಾಪ ಪಟ್ಟು, ಶುದ್ಧವಾದಳು.

ಮಹಾಸತಿ ಮಲ್ಲಮ್ಮ ಶ್ರೀಶೈಲಕ್ಕೆ ಅತ್ತೆ, ಮಾವ ಹಾಗೂ ಪತಿ ಭರಮಣ್ಣನ ಜೊತೆ ಬಂದು ಅವರೆಲ್ಲರೊಡನೆ ಕೈಲಾಸಕ್ಕೆ ನಡೆದಳು "ಮಲ್ಲಮ್ಮನ ಭಕ್ತಿಯ ಫಲವಾಗಿ ಶ್ರೀ ಗಿರಿಮಲ್ಲಿಕಾರ್ಜುನ ದೇವಾಲಯ, ಪ್ರಾಕಾರ, ಮೂರುಗಾವುದದ ವರೆಗಿನ ಮಾರ್ಗ, ಪಾತಾಳ ಗಂಗೆಯವರೆಗಿನ ಸೋಪಾನ ಮುಂತಾದ ಅನೇಕ ಪುಣ್ಯಕೆಲಸಗಳು ಅಲ್ಲಿ ವಿರಾಜಿಸುತ್ತಿವೆ. ಕಡೆಕಡೆಗೆ ಮಲ್ಲಮ್ಮನು ಶ್ರೀಗಿರಿಯಲ್ಲಿ ಪತಿಯೊಡನೆ ಅನೇಕ ವರ್ಷಗಳು ತಪಸ್ಸು ಮಾಡಿ ಮಲ್ಲಿಕಾರ್ಜುನನಲ್ಲಿ ಒಡವೆರೆದಳು. ಈ ಮಹಾಮಾತೆಯ ದಿವ್ಯ ತೇಜೋಮೂರ್ತಿಯ ಪ್ರತಿಮೆಯೊಂದು ಶ್ರೀಶೈಲದಲ್ಲಿ ನಮಗಿಂದಿಗೂ ಮಲ್ಲಮ್ಮನ ಆದರ್ಶ ಪುಣ್ಯಜೀವನದ ಇತಿಹಾಸವನ್ನು ಸಾರುತ್ತಿದೆ."[47]

ಗಿರಿಯಾಪುರ ಎಂಬಲ್ಲಿ ಹೇಮರೆಡ್ಡಿ ಜನಾಂಗದ ಮುಂದಾಳುಗಳು ಹೇಮರೆಡ್ಡಿ ಮಲ್ಲಮ್ಮನ ವಿಗ್ರಹವನ್ನು ಪ್ರತಿಷ್ಠಾಪಿಸಿ ಪ್ರತಿವರ್ಷವೂ ಜಾತ್ರೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ನಮ್ಮ ಜನಪದರ ಮೇಲೂ ಈ ಮಹಾಸತಿಯ ದಿವ್ಯಕಥೆ ಬೀರಿದ ಪ್ರಭಾವದಿಂದ ಆ ಕಥೆ ನಾಟಕವಾಗಿ ಕಾವ್ಯವಾಗಿ ಚಲನಚಿತ್ರವಾಗಿ ಕನ್ನಡ ನಾಡವರ ಮನದಾಳದಲ್ಲಿ ನೆಲೆಯಾಗಿದೆ.

ಹಿಂದಿನ ಕಾಲದಲ್ಲಿ ಅತ್ತೆ-ಸೊಸೆಯರೆಂದರೆ ಪರಮ ವೈರಿಗಳೆಂಬ ಕಲ್ಪನೆ ಇದ್ದಂತೆ ಕಾಣುತ್ತದೆ. ಇದಕ್ಕೆ ಅಪವಾದವಾಗಿ ಒಳ್ಳೆಯ ಅತ್ತೆ-ಸೊಸೆಯರು ಇರಲಿಲ್ಲ ಎಂದಲ್ಲ. ಆದರೆ ದುರದೃಷ್ಟ, ಮೆಟ್ಟಿದವರಿಗೆ ಹೊನ್ನಾಜಮ್ಮನಂಥ ಅತ್ತೆಯರು ಸಿಕ್ಕಿ ಮಲ್ಲಮ್ಮನಂಥ ಸಾಧ್ವಿಮಣಿಗಳು ನರಳಬೇಕಾಗುತ್ತಿತ್ತು. ಇಂಥ ಅತ್ತೆ-ಸೊಸೆಯರ ಬಾಂಧವ್ಯ ಚಿತ್ರಣದಲ್ಲಿ ಈ ಕಾವ್ಯ ಪರಿಣಾಮ ರಮಣೀಯವಾಗಿದೆ. ಅತ್ತೆ ಒಡ್ಡುವ ಪರೀಕ್ಷೆಗಳನ್ನೆಲ್ಲ ಚನ್ನಮಲ್ಲಿಕಾರ್ಜುನನ ಕೃಪೆಯಿಂದ ಮಲ್ಲಮ್ಮ ಗೆಲ್ಲುತ್ತಾಳೆ. ಇಂಥ ಪವಾಡ ಸದೃಶ ಘಟನೆಗಳಿಂದ ಕಾವ್ಯ ರಸವತ್ತಾಗಿ ರಂಜನೀಯವಾಗಿದೆ. ಅತ್ತೆಯರ ಕಿರುಕುಳದ ಕಲ್ಪನೆಯುಳ್ಳ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ಈ ಕಾವ್ಯವನ್ನು ಹಾಡುತ್ತ ಕೇಳುತ್ತ ಕಣ್ಣೀರು ಸುರಿಸುವುದನ್ನು ಇಂದಿಗೂ ನೋಡಬಹುದಾಗಿದೆ.

ಹೆಂಗಸರ ಹಾಡ್ಗತೆಗಳಲ್ಲಿ ಸಿಗುತ್ತಿರುವ 'ಹೇಮರೆಡ್ಡಿ ಮಲ್ಲಮ್ಮ' ಕಾವ್ಯದ ಒಂದು ಉತ್ತಮ ಪಾಠ ಇದಾಗಿದೆ. ಇದೇ ಕಾವ್ಯದ ಇನ್ನೊಂದು ಪಾಠ ಪ್ರೊ.ಬಿ.ಸಂ. ಚಂದ್ರಯ್ಯನವರ 'ಜಾನಪದ ಕಥನ ಗೀತೆಗಳು' ಸಂಕಲನದಲ್ಲಿದೆ.[48] ಹೇಮರೆಡ್ಡಿ ಮಲ್ಲಮ್ಮನ ಕಥೆಯನ್ನು ವೃತ್ತಿಗಾಯಕರಲ್ಲಿ ಕರಪಾಲದವರೂ ಚೌಡಿಕೆಯವರೂ ಹಾಡುತ್ತಾರೆಂದು ತಿಳಿದುಬರುತ್ತದೆ. ಹೀಗೆ ವಿವಿಧ ಮೂಲಗಳಲ್ಲಿ ಈ ಸಾಧ್ವೀಮಣಿಯ ಕಥೆ ಜೀವಂತವಾಗಿದ್ದು ಆದರ್ಶ ಮಹಿಳೆಯ ಅನುಪಮ ಕಥೆಯೆನಿಸಿದೆ.

ಮಾದಾರ ಚೆನ್ನಯ್ಯ

'ಅಪ್ಪನು ನಮ್ಮ ಮಾದಾರ ಚೆನ್ನಯ್ಯ', 'ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ', 'ಚೆನ್ನ ಚೇರಮರ ಬಂಟ ನಾನಯ್ಯ', 'ಚೆನ್ನಯ್ಯನೆನ್ನ ಮುತ್ತಯ್ಯನಪ್ಪನಜ್ಜನಪ್ಪನಯ್ಯ', 'ಎಮ್ಮಯ್ಯ ಚೆನ್ನಯ್ಯ ರಾಯಕಂಪಣವ ಹೇರುವ' - ಹೀಗೆ ಬಸವಣ್ಣನವರು ಗೌರವಾದರಗಳಿಂದ ಹೇಳಿರುವ ಮಾತುಗಳು ಚೆನ್ನಯ್ಯನ ಮಹೋನ್ನತ ವ್ಯಕ್ತಿತ್ವಕ್ಕೂ ಅಂತೆಯೇ ಬಸವಣ್ಣನವರ ಹೃದಯವಂತಿಕೆಗೂ ಹಿಡಿದ ರನ್ನಗನ್ನಡಿಯಂತಿವೆ. ಬಸವಣ್ಣನವರು 'ಚೆನ್ನ' ಎಂಬ ಪದವನ್ನು ಶ್ಲೇಷೆಯಾಗಿ ಬಳಸಿದ ಒಂದು ಸುಂದರ ವಚನ ಇದು :

ನಡೆ ಚೆನ್ನ ನುಡಿಚೆನ್ನ ಎಲ್ಲಿ ನೋಡಿದಡಲ್ಲಿ ಚೆನ್ನ
ಪ್ರಮಥರೊಳಗೆ ಚೆನ್ನ ಪುರಾತರೊಳಗೆ ಚೆನ್ನ
ಸವಿ ನೋಡಿ ಅಂಬಲಿಯ ರುಚಿಯಾಯಿತೆಂದು

---

47. ಎಂ.ಜಿ. ನಂಜುಂಡಾರಾಧ್ಯ, ಅದೇ. ಪು.೪೦

48. ಡಾ.ಬಿ.ಸಂ. ಚಂದ್ರಯ್ಯ : ಜಾನಪದ ಕಥನ ಗೀತೆಗಳು ; ಶರತ್ ಪ್ರಕಾಶನ, ಮೈಸೂರು ; ೧೯೭೭. ಪು.೧೯-೩೦.

ಕೂಡಲಸಂಗಮ ದೇವಂಗೆ
ಬೇಕೆಂದು ಕೈದೆಗೆದ ಚೆನ್ನ.

ವಚನಗಳಲ್ಲಿ ವ್ಯಕ್ತವಾಗಿರುವ ಈ ಸೂಚನೆಗಳ ಹಿನ್ನೆಲೆಯಲ್ಲಿ ಹರಿಹರ ಕವಿ 'ಮಾದಾರ ಚೆನ್ನಯ್ಯನ ರಗಳೆ' ಬರೆದಿದ್ದಾನೆ. ಶರಣತತ್ತ್ವದ ಸತ್ವವನ್ನೆಲ್ಲ ಭಟ್ಟಿಯಿಳಿಸಿ ಹೇಳಿರುವಂಥ ಈ ರಗಳೆ ಹರಿಹರನ ರಗಳೆಗಳಲ್ಲೆ ಒಂದು ಆಣಿಮುತ್ತು. ಆದರೆ 'ಮಾದಾರ ಚೆನ್ನಯ್ಯ' ಎಂಬ ಈ ಜನಪದ ಕಾವ್ಯ ಹರಿಹರ ಹೇಳಿರುವ ಕಥೆಯ ಹಿನ್ನೆಲೆಯಲ್ಲಿ ಮೂಡಿಬಂದುದಲ್ಲ. ಇಲ್ಲಿಯ ಚೆನ್ನಯ್ಯ ಚೌಡಿಕೆಯವರು ಹಾಡುವ 'ಎಲ್ಲಮ್ಮದೇವಿ' ಮಹಾಕಾವ್ಯದ ಒಂದು ಪ್ರಸಂಗವಾಗಿ ಮಾತ್ರ ರೂಪುಗೊಂಡಿದೆ. ಮಗ ಪರಶುರಾಮನಿಂದ ತಪ್ಪಿಸಿಕೊಳ್ಳಲು ಬಂದ ಎಲ್ಲಮ್ಮ ಮಾದಾರ ಚೆನ್ನಯ್ಯನ ಮನೆ ಕರೆಬಾನಿಯಲ್ಲಿ ಆಶ್ರಯ ಪಡೆದ ಕಾರಣದಿಂದ ಮಾದಾರರ ಮನೆದೇವತೆಯಾದ ಕಥೆಯನ್ನು ಹೇಳುತ್ತದೆ. ಇದರಿಂದಾಗಿ ಹರಿಹರ ಹೇಳಿದ ಚೆನ್ನಯ್ಯನೂ ಇವನಲ್ಲ ; 'ಕೈಯುಳ ಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮರಾಮ ರಾಮನಾ' ಎಂಬ ಅಂಕಿತದಿಂದ ವಚನಗಳನ್ನು ಬರೆದಿರುವ ಚೆನ್ನಯ್ಯನೂ ಇವನಲ್ಲ.

ತಂದೆ ಜಮದಗ್ನಿಯನ್ನು ಕೊಂದ ಕಾರ್ತವೀರ್ಯಾರ್ಜುನನನ್ನು ಸಂಹರಿಸಿದ ಪರಶುರಾಮನು ಕಾರ್ತವೀರ್ಯನ ಸಮಾಧಿ ಮೇಲೆ ಕುಳಿತು ಸ್ನಾನ ಮಾಡು ಬಾ ಎಂದು ತಾಯಿ ರೇಣುಕೆಯನ್ನು ಆಹ್ವಾನಿಸುತ್ತಾನೆ. ತನ್ನ ಅಣ್ಣನನ್ನು ಹೂತಿರುವ ಸ್ಥಳದಲ್ಲಿ ಕುಳಿತು ಸ್ನಾನ ಮಾಡಲೊಪ್ಪದ ಎಲ್ಲಮ್ಮ ಬಿಜ್ಜಳನ ಕಲ್ಯಾಣ ಪಟ್ಟಣಕ್ಕೆ ಬಂದು ಮಾದಾರ ಚೆನ್ನಯ್ಯನ ಮನೆಯ ಚರ್ಮ ಕೊಳೆಹಾಕುವ ಕರೆಬಾನಿಯಲ್ಲಿ ಅಡಗಿ ಕುಳಿತುಕೊಳ್ಳುತ್ತಾಳೆ. ಸುಳಿವು ತಿಳಿದು ಬಂದ ಪರಶುರಾಮ ತಾಯಿಯನ್ನು ಮೇಲೆತ್ತಲು ಪ್ರಯತ್ನಿಸಿದ. ಮಗನಿಂದ ತಪ್ಪಿಸಿಕೊಳ್ಳಲು ತಾಯಿ ನೆಲದುರ್ಗಕ್ಕೆ ಇಳಿಯಲು ಪ್ರಾರಂಭಿಸಿದಳು. ಆಗ ಪರಶುರಾಮ ಆರ್ತನಾಗಿ

"ಅಮ್ಮಾ ನನ್ನ ತಂದೆಯಾದ ಜಮದಗ್ನಿ ಶಿರುವನ್ನ
ಕಾರ್ತವೀರ್ಯ ತಗುದ
ಕಾರ್ತವೀರ್ಯನ ಶಿರುವನ್ನ ನಾನು ತಗುದೆ
ನನ್ಗೆ ನನ್‌ತಾಯಿ ಒಬ್ಬಳಾದ್ರೂ ಇರ್ಲಿ ಅಂದ್ರೆ
ನನ್ನುನ್ನ ತಬ್ಬಲಿ ಮಾಡಿ ಪಾತಾಳುಕ್ಕಿಳಿತಿದ್ದೀಯೆ
ಅಮ್ಮ ಹೋಗಬ್ಯಾಡ ಬಾಮ್ಮ ಬಾಮ್ಮ
ಬರ್ದೇ ಹೋದ್ರೆ ನಿನ್ನ ಕೀಲುದೇವುರು ಮಾಡ್ತಿದ್ದೀನಿ
ಇನ್ನು ಎಂದೆಂದಿಗೂ ನೀನು
ಕೀಲು ದೇವರಾಗಿ ಉಳೀಬೇಕಾಯ್ತದೆ"

ಎಂದು ಬಗೆಬಗೆಯಾಗಿ ಬೇಡಿಕೊಂಡರೂ ಎಲ್ಲಮ್ಮ ಹಿಂದಕ್ಕೆ ಬರದೆ ಪಾತಾಳಕ್ಕೆ ಇಳಿದುಹೋಗುತ್ತಿದ್ದಳು. ಇದರಿಂದ ನೊಂದ ಪರಶುರಾಮ "ನಮ್ಮ ತಾಯಿ ಕಣ್ಣುಗ್ ಕಾಣದಂಗಾಗ್ಬುಡ್ತಳಲ್ಲ" ಎಂದು ಹೇಳಿ ತಾಯಿಯ ಮಾರುದ್ದ ಮಂಡೆ ಕೂದಲನ್ನು ಕಾಯ್‌ಗುದಿ ಸುತ್ತಿಕೊಳ್ಳುವ ರೀತಿಯಲ್ಲಿ ಎಡಗೈಗೆ ಸುತ್ತಿಕೊಂಡು ಗಂಡುಗೊಡಲಿಯಲ್ಲಿ ತಾಯಿ ಶಿರವನ್ನು ಕತ್ತರಿಸಿಕೊಂಡ. ಅದನ್ನು ಅಪರಂಜಿ ವಲ್ಲಿಯಲ್ಲಿ ಇರಿಸಿಕೊಂಡ. ತಂದು ಮಂಚದ ಮೇಲೆ ಮಡಗಿದ. ಬಗೆಬಗೆಯ ಹೂಗಳಿಂದ ಪೂಜಿಸಿದ. ತನ್ನ ತಾಯಿಯನ್ನೇ ಕೊಂದ ಪಾಪಿ ಬದುಕಿರಬಾರದು ಎಂದು ಹೇಳಿ ಶಸ್ತ್ರಾಸ್ತ್ರಗಳಿಂದ ಹೊಯ್ದುಕೊಳ್ಳಲು ಹೋದ. ತನ್ನ ಮಗನ ಸಾವನ್ನು ನೋಡಲಾಗದ ತಾಯಿಹೃದಯ ಥಟ್ಟನೆ ಜಾಗೃತವಾಗಿ ಆ ಬಾಣಗಳನ್ನೆಲ್ಲ ಕಿತ್ತು ಮುರಿದೆಸೆದಳು. ಮಗನನ್ನು ಬಾಚಿ ತಬ್ಬಿಕೊಂಡಳು. ತಾಯಿ-ಮಕ್ಕಳ ಈ ಚಂದದ ಆಟವನ್ನು ನೋಡುತ್ತಿದ್ದ ಚೆನ್ನಯ್ಯ. ಆಗ ಎಲ್ಲಮ್ಮ,

"ಚೆನ್ನಜ್ಜಯ್ಯ
ನನ್ನ ಮಗ ನನ್ನ ಅಟ್ಟುಸ್ಕೊಂಡ್ ಬಂದಾಗ
ನನ್ನನ್ನು ನೀನು ಬಚ್ಚಿಟ್ಟಿದ್ದೀಯೆ
ನನ್ನ ಮಗನ ಕ್ಕೋಪ ಇಳಿಯೋವರ್ಗೂ
ನನ್ನನ್ನು ಕಾಪಾಡಿದ್ದೀಯೆ
ಅದುಕ್ಕೆ ನಾನು ನಿನ್ನ ಕುಲವನ್ನು ಉದ್ಧಾರ ಮಾಡಿ

ನಿನ್ನ ಕುಲದೇವತೆ ಆಗ್ತಿದ್ದೀನಿ
ನಿನಗೆ ಸಕಲ ಸಂಪತ್ತನ್ನೂ ಕೊಡ್ತಾ ಇದ್ದೇನೆ

ನನ್ನ ಒಕ್ಕಲು ನೀನು ಆಗು ಚನ್ನಯ್ಯ
ಬಾರೆ ಎಲ್ಲಮ್ಮ |
ನಿನ್ನ ಮನೆಯಲಿ ನಾನು ಉಕ್ಕುತೀನಯ್ಯ
ಬಾರೆ ಎಲ್ಲಮ್ಮ |

ಅಪ್ಪಾ ಚನ್ನಯ್ಯ
ನಾನು ಕೊಡುವ ಐಶ್ವರ್ಯದಲ್ಲಿ
ನೀನೆಷ್ಟೇ ಸಾವುಕಾರನಾದ್ರೂ
ಕಾಲುಭಾಗನಾದ್ರೂ ಒಡತನ ಇಟ್ಕೊಂಡು ಬಾಳಪ್ಪ
ಇದೇ ನಾನು ನಿನಗೆ ಕೊಡ್ತಾ ಇರೋ ವರ"

ಎಂದು ಆಶೀರ್ವದಿಸಿದಳು. ಎಲ್ಲಮ್ಮದೇವಿ ಮಾದಾರ ಚನ್ನಯ್ಯನ ಮನೆಯಲ್ಲಿ ಆಶ್ರಯ ಪಡೆದದ್ದು. ಈಶ್ವರ ಮಾದಾರಚನ್ನಯ್ಯನ ಜೊತೆ ಅಂಬಲಿ ಕುಡಿದಷ್ಟೇ ರೋಚಕವಾಗಿ ನಿರೂಪಿತವಾಗಿದೆ. ಅಣ್ಣ-ತಂಗಿಯರ ಸಂಬಂಧ, ತಾಯಿ-ಮಕ್ಕಳ ಸಂಬಂಧದ ಬಗೆಗೂ ಈ ಕಾವ್ಯ ಚಿಂತನೆಯ ಕಡೆಗೆ ಸೆಳೆಯುತ್ತದೆ. ರಕ್ತಸಂಬಂಧ ಎಂಬುದು ಎಷ್ಟು ಜಟಿಲವಾದುದು ಎಂಬುದರ ಬಗೆಗೂ ಇಲ್ಲಿ ಒತ್ತುಬಿದ್ದಿದೆ. ಕ್ಷತ್ರಿಯ ಕುಲದವಳಾದ ರೇಣುಕೆ ಮಾದಾರ ಕುಲದವರಿಗೊಲಿದುದೂ ಮಹೋನ್ನತ ವ್ಯಕ್ತಿತ್ವವನ್ನು ಮೆಚ್ಚಿದ್ದರ ಪ್ರತೀಕವಾಗುತ್ತದೆ.[49]

ಬಲ್ಲಾಳರಾಯ

ತಮಿಳುನಾಡಿನ ಅರವತ್ತುಮೂವರು ಪುರಾತನರಲ್ಲಿ ಸಿಂಧುಬಲ್ಲಾಳನೂ ಒಬ್ಬ. ಇವನನ್ನು ತಮಿಳು ಕಾವ್ಯ 'ಪೆರಿಯ ಪುರಾಣಂ'ನಲ್ಲಿ ಇಹಪಗೆಯಾಂಡ, ಭಕ್ತೇಂಗಿತಪ್ರದ ಎಂದೆಲ್ಲ ಕರೆಯಲಾಗಿದೆ. ಈ ಭಕ್ತನ ಕಥೆಯನ್ನು ಕನ್ನಡದಲ್ಲಿ ಉತ್ತರದೇಶದ ಬಸವಲಿಂಗ ದೇವರ 'ಕಥಾಸಾಗರ', ಬಸವಕವಿಯ 'ಮಹಲಿಂಗಲೀಲೆ', ವಿರೂಪಾಕ್ಷ ಪಂಡಿತನ 'ಚೆನ್ನ ಬಸವ ಪುರಾಣ', ಗುಬ್ಬಿಯ ಮಲ್ಲಣಾರ್ಯನ 'ವೀರಶೈವವಾಮ್ಯತ ಮಹಾಪುರಾಣ', ಸೋಮದೇವನ 'ಉದ್ಧಟ ಕಾವ್ಯ,', ಚೆನ್ನಣ್ಣನ 'ದೀಪದ ಕಲಿಯರ ಕಾವ್ಯ', ಚೆನ್ನಬಸವ ಕವಿಯ 'ಚೆನ್ನಬಸವಪುರಾಣ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಥಾ ಸೂತ್ರ ರತ್ನಾಕರ', ಪಾಲ್ಕುರಿಕೆ ಸೋಮನಾಥನ 'ಸೋಮೇಶ್ವರ ಪುರಾಣ', ಲಕ್ಕಣದಂಡೇಶನ 'ಶಿವತತ್ತ್ವ ಚಿಂತಾಮಣಿ' ಮುಂತಾದ ಕಾವ್ಯಗಳಲ್ಲಿ ಪ್ರಾಸಂಗಿಕವಾಗಿ ಹೇಳಲಾಗಿದೆ. ಅವುಗಳಲ್ಲಿ ಬರುವ ಕಥೆ ಇದು :

"ಕಾವೇರಿಪುರದಲ್ಲಿದ್ದ ಸಿಂಧುಬಲ್ಲಾಳರಾಯ ಪರಮ ಶಿವಭಕ್ತನಾಗಿದ್ದನು. ಈತನ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಶಿವನು ಜಂಗಮರೂಪಿನಿಂದ ಬಂದು ಅವನ ಸತಿಯನ್ನು ಬೇಡಲು, ರಾಯನು ಹಿಂದು ಮುಂದು ನೋಡದೆ ತನ್ನ ಸತಿಯನ್ನು ಅವನ ಬಳಿಗೆ ಕಳುಹಿಸಿದನು. ಅವಳು ನಿದ್ದೆ ತಿಳಿದಾಗ ಶಿವನು ಶಿಶುವಾಗಿ ಮೊಲೆಯುಣ್ಣುತ್ತಿರಲು, ರಾಜರಾಣಿಯರು ಆಶ್ಚರ್ಯಚಕಿತರಾದರು. ಶಿವನು ಅವರನ್ನು ಕೈಲಾಸಕ್ಕೆ ಕರೆದೊಯ್ದನು."[50]

ಪ್ರಸ್ತುತ ಜನಪದ ಕಾವ್ಯ 'ಬಲ್ಲಾಳರಾಯ' ಕೃತಿಯಲ್ಲಿ ಅವನು "ಭಕ್ತೇಂಗಿತಪ್ರದ' ಎಂಬ ವಿಷಯವು ಪ್ರಧಾನವಾಗಿದ್ದು, ಕಥೆಯೂ ಸುಸಂಬದ್ಧವಾಗಿ ನಿರೂಪಿತವಾಗಿದೆ. ಬಲ್ಲಾಳ ರಾಯನ ಬದುಕಿನ ಪರಮಗುರಿಗಳೆಂದರೆ ಅವನು ದಾಸೋಹದ ಮೂಲಕ ಭಕ್ತರನ್ನು ತಣಿಸುವುದು ಮೊದಲನೆಯದು. ತದನಂತರ ಅವರು ಕೇಳಿದ್ದನ್ನು ತಪ್ಪದೆ ಅವರಿಗೊಪ್ಪಿಸುವ ಕಟ್ಟುಗ್ರ ನೋಂಪಿ ಎರಡನೆಯದು. ದಾಸೋಹದ ವ್ರತ ಮತ್ತು ದಾನದ ನೋಂಪಿಯನ್ನು ನಿಷ್ಠೆಯಿಂದ ನಡೆಸಿಕೊಂಡು ಬರುತ್ತಿದ್ದ ಭಕ್ತ

---

49. ಎಲ್ಲಮ್ಮದೇವಿಯನ್ನು ಕುರಿತ ಸಮಗ್ರ ಕಾವ್ಯಕ್ಕೆ ನಂ. ನಾರಾಯಣಗೌಡರ 'ಚೌಡಿಕೆ ಕಾವ್ಯಗಳು' ಎಂಬ ಜನಪದ ಕಾವ್ಯಸಂಕಲನವನ್ನು ನೋಡಿ.

50. ತ.ಸು. ಶಾಮರಾಯರ 'ಶಿವಶರಣ ಕಥಾ ರತ್ನಕೋಶ'ದಲ್ಲಿ 'ಸಿಂಧುಬಲ್ಲಾಳ' ಎಂಬ ಶೀರ್ಷಿಕೆಯನ್ನು ನೋಡಿ.

ಬಲ್ಲಾಳರಾಯನ ದೃಢಮನವನ್ನು ಪರೀಕ್ಷಿಸಬೇಕೆಂದು ಬಯಸಿದ ಶಿವನು ಅದಕ್ಕಾಗಿ ಒಂದು ತಂತ್ರವನ್ನು ಹೂಡಿದನು. ತಾನು ದಾಸೋಹಕ್ಕೆ ಹೋಗುವ ಒಬ್ಬ ಗುರುವಿನ ವೇಷವನ್ನು, ಪಾರ್ವತಿಗೆ ದೊಂಬರ ಸೂಳೆಯಾಗಿ ಕಾಣಿಸಿಕೊಳ್ಳುವ ವೇಷವನ್ನು, ಗಣಪತಿ-ಷಣ್ಮುಖರಿಗೆ ದೊಂಬರ ವೇಷವನ್ನು ಸೃಷ್ಟಿಸಿ ಬಲ್ಲಾಳರಾಯನ ಶಂಕರಪುರಕ್ಕೆ ಬಂದರು.

ನಿತ್ಯನಿಯಮಾನುಸಾರವಾಗಿ ಬಲ್ಲಾಳರಾಯನು ಭೋಜನಕ್ಕೆ ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ಶಿವಭಕ್ತರಿಗಾಗಿ ಕಾದನು. ಶಿವಭಕ್ತರಿಗೆ ಭೋಜನ ಮಾಡಿಸದೆ ಅವನ ಅನ್ನಪಾನಾದಿಗಳನ್ನು ಸೇವಿಸುವಂತಿಲ್ಲ. ಹಾಗಾಗಿ ಯಾರಾದರೂ ಶಿವಭಕ್ತರು ಸಿಗಬಹುದೆಂದು ಬೀದಿಬೀದಿಗಳಲ್ಲಿ ಕೇರಿ ಕೇರಿಗಳಲ್ಲಿ ಹುಡುಕುತ್ತ ಕಡೆಗೆ ಊರ ಹೊರಗಿನ ಬಿಳಗೇರಿ ಕಟ್ಟೆಯ ಒತ್ತಿಯಲ್ಲಿರುವ ಬಿಲ್ವತ್ರೈವನದಲ್ಲಿ ಕುಳಿತಿದ್ದ ಒಬ್ಬ ಗುರುವನ್ನು ಕಂಡು ಹರ್ಷಪುಲಕಿತನಾಗಿ ಮಾಯಾಶಿವನೆಂದು ತಿಳಿಯದೆ ದೊಡ್ಡಗುರುಗಳೆಂದು ಭಾವಿಸಿ ತನ್ನ ಮನೆಯ ದಾಸೋಹಕ್ಕೆ ಅವರನ್ನು ಒಪ್ಪಿಸಿ ಕರೆದುಕೊಂಡು ಹೊರಟನು.

ಹೀಗೆ ಕರೆದುಕೊಂಡು ಬರುತ್ತಿರುವಾಗ ಮಠದ ಬೀದಿ ಚೌಕದಲ್ಲಿ ಪೂರ್ವ ನಿಯೋಜನೆಯಂತೆ ಪಾರ್ವತಿ, ಗಣಪತಿ, ಷಣ್ಮುಖ, ನಂದೀಶರು ದೊಂಬರ ವೇಷದಲ್ಲಿ ಆಟ ಹೂಡಿದ್ದರು. ಗಣೆಮ್ಯಾಲೆ ಒಯ್ಯಾರದಿಂದ ಆಡುತ್ತಿದ್ದ ದೊಂಬರ ಸೂಳೆಯನ್ನು ಕಂಡ ಗುರುಗಳ ನಡಿಗೆ ನಿಂತಿತು. ನೆಟ್ಟ ಕಣ್ಣು ನೆಟ್ಟಂತೆ ನೋಡುತ್ತ ನಿಂತುಬಿಟ್ಟರು. ದೊಂಬರು ಆಟ ಮುಗಿಸಿ ಹೋದ ಮೇಲೆ ಬಲ್ಲಾಳರಾಯನ ಅರಮನೆಗೆ ಬಂದು ಭೋಜನ ಸ್ವೀಕರಿಸಿದರು.

ತಾಂಬೂಲ ಚರ್ವಣವೂ ಆಯಿತು. ಆಗ ಬಲ್ಲಾಳರಾಯ ಗುರುಗಳಿಗೆ ಶರಣು ಮಾಡಿ

"ಬೇಕಾದ್ದ ಕೇಳಿ ಸ್ವಾಮಿ"

ಎಂದು ಕೇಳಿದನು. ಅದಕ್ಕೆ ಆ ಗುರುಗಳು

"ರಾಜ ಬಲ್ಲಾಳರಾಯ
ಆ ದೊಂಬ್ರ ಸೂಳೆ ಕಂಡು
ಮನ್ಸು ನಿಯಾಮಿತ
ಕಳುಕೊಂಡ್ತು ರಾಜ
ಅವಳು ನನ್ನ ಕಣ್ಣಲ್ಲಿ
ತುಂಬಿಕೊಂಡವುಳೆ
ಅವುಳ ಕಂಡು ರಾಜ
ನಿನ್ನ-ಊಟ ಉಪಚಾರಗಳು
ಒಂದೂ ರುಚಿಸಿಲ್ಲ
ರಾಜ ನನ್ನ ಹಾಸಿಗ್ಗೆ
ಅವ್ಯ-ಕಳ್ಸಿಕೊಡಯ್ಯ"

ಎಂದರು. ಆ ಕೂಡಲೆ ರಾಜನು ಆ ದೊಂಬರ ಸೂಳೆಯನ್ನು ಕರೆತರಲು ಸೇವಕರನ್ನು ಕಳಿಸಿದನು. ಮಾಯಾಕಾರದ ದೊಂಬರ ಸೂಳೆ ಯಾರ ಕಣ್ಣಿಗೂ ಬೀಳಲಿಲ್ಲ. ಹುಡುಕಿ ತಡಕಿ ಸಾಕಾದ ಸೈನಿಕರು ಬರಿಗೈಲಿ ಹಿಂದಿರುಗಿದಾಗ ಗುರುಗಳ ಆತಂಕ ಮಿತಿಮೀರಿತು. ಅವಳ ಬದಲಿಗೆ ಊರ ಸೂಳೆಯರನ್ನು ಕರೆಸುವುದಾಗಿ ರಾಜ ಹೇಳಿದಾಗ ಅದಕ್ಕೆ ಗುರುಗಳು ಒಪ್ಪಲಿಲ್ಲ. ತನ್ನ ರಾಣಿ ವಲ್ಲಬಮ್ಮನನ್ನು ಕಳಿಸಿಕೊಡುತ್ತೇನೆಂದಾಗ 'ಆ ಮುದಿಗೂಬೆ ಬೇಕಾಗಿಲ್ಲ' ಎಂದುಬಿಟ್ಟರು.

ಆಗ ರಾಜ-ರಾಣಿಯರೇ ದೊಂಬರ ಸೂಳೆಯನ್ನು ಹುಡುಕಿ ತರುವುದಾಗಿ ಹೋದವರು ವಿಫಲರಾದರು. ಇಬ್ಬರೂ ಬಿಲ್ವತ್ರೈ ವನದಲ್ಲಿ ಸಂಧಿಸಿದರು. ರಾಜನಾದರೋ 'ಒಬ್ಬ ಭಕ್ತನ ಬಯಕೆಯನ್ನು ಈಡೇರಿಸಲಾರದ ನಾನು ಬದುಕಿ ಬಂದ ಭಾಗ್ಯವೇನು?' ಎಂದು ನೊಂದು ತನ್ನ ಕುತ್ತಿಗೆಯನ್ನು ಕತ್ತಿಯಿಂದ ಕತ್ತರಿಸಿಕೊಳ್ಳಲು ಹೋದಾಗ ಈಶ್ವರ ಬಂದು ತಡೆದು 'ಭಕ್ತ ನಿನ್ನ ಭಕ್ತಿಗೆ ಮೆಚ್ಚಿದ್ದೇನೆ. ಬಾ ಕೈಲಾಸಕ್ಕೆ ಹೋಗೋಣ' ಎಂದು ಕರೆದನು. ಅದಕ್ಕೆ ಬಲ್ಲಾಳರಾಯ :

"ಸ್ವಾಮಿ ನಿನ್ನ ಕೈಲಾಸ
ಅತ್ಲಾಗಿರಲಿ ಬುದ್ಧಿ
ನಾನು ಗುರುಸ್ವಾಮಿಗಳ
ಕೋರಿಕೆಯ ಸಲ್ಲಿಸದ
ಪಾಪಿ ಆಗಿದ್ದೀನಿ
ಆ ಗುರು ಮಹಾಶಯರು
ಸಂತೋಸ ಪಡುವುದ
ನಾನು ನೋಡದ ಹೊರತು
ನನಗೆ ನೀನೂ ಬ್ಯಾಡ
ನಿನ್ನ ಕೈಲಾಸವೂ ಬ್ಯಾಡ"

ಎಂದನು. ಅಷ್ಟು ಹೊತ್ತಿಗೆ ಆ ಮಾಯಾಕಾರರಾದ ಗುರುಗಳು ದೊಂಬರ ಸೂಳೆಯನ್ನು ಹೆಗಲ ಮೇಲೆ ಕೂರಿಸಿಕೊಂಡು ಬಂದು

"ಊರ ಬಾಕ್ಲಲ್ಲಿ ಇದ್ದ
ದೊಂಬ್ರು ಹುಡುಗೀಯ
ಇಲ್ಲ ಇಲ್ಲ ಅಂತ
ಸುಳ್ಳು ಹೇಳಿದೆಯಲ್ಲ
ಈಗ ನೋಡು ರಾಜ
ನಾನೆ ಕರುಕೊಂಡು ಬಂದೆ"

ಎಂದಾಗ ಗುರುಗಳಿಗೆ ದೊಂಬರ ಸೂಳೆಯನ್ನು ತಾನು ಒಪ್ಪಿಸಲಿಲ್ಲವಾದ್ದರಿಂದ ತಾನು ಕನ್ಯಾದಾನ ಮಾಡಿದಂತಾಗಲಿಲ್ಲ ಎಂಬ ಅಪರಾಧ ಪ್ರಜ್ಞೆ ಬಲ್ಲಾಳರಾಯನದು. ಅದಕ್ಕೆ ಆ ಗುರುಗಳ ಕೋರಿಕೆ 'ನೀನು ಹೋಗುವ ಕಡೆಗೆ ನನ್ನನ್ನು ಕರೆದುಕೊಂಡು ಹೋಗು' ಎಂಬುದು. ಕೈಲಾಸಕ್ಕೆ ಗುರುಗಳೂ ಜೊತೆಗೆ ಬರಲಿ ಎಂಬುದು ಬಲ್ಲಾಳರಾಯನ ಬೇಡಿಕೆ. ಅದಕ್ಕೆ ಗಣಗಳು ಒಪ್ಪಲಿಲ್ಲ. ಆಗ ರಾಜನು

"ಹಂಗಾದ ಮ್ಯಾಕೆ ಸ್ವಾಮಿ
ನಿಮ್ಮ ಕೈಲಾಸವಾದರೆ
ನಿಮಗೆ ಇದ್ದುಕೊಳಲಿ
ನನಗೆ ನನ್ನ ರೊತವೆ
ಮೇಲಾಗಿ ಉಳಿಯಲಿ"

ಎಂದಾಗ ಗುರುಗಳನ್ನು ಹಾಗೆಯೇ ಗುರುಮೆಚ್ಚಿದ ದೊಂಬತಿಯನ್ನು ಕೈಲಾಸಕ್ಕೆ ಕರೆದುಕೊಂಡು ಬರಲು ಬಲ್ಲಾಳರಾಯನಿಗೆ ಒಪ್ಪಿಗೆ ಸಿಕ್ಕಿತು. ಶಿವಪಾರ್ವತಿಯರು ಗುರುವಿನ ಹಾಗೂ ದೊಂಬತಿಯವೇಷ ತೊರೆದು ನಿಜರೂಪದಲ್ಲಿ ದರ್ಶನವಿತ್ತರು.

ಈ ಕಾವ್ಯದಲ್ಲಿನ ಬಲ್ಲಾಳರಾಯನದು ಒಂದು ಅನುಪಮ ವ್ಯಕ್ತಿತ್ವ. ಅವನ ದಾಸೋಹವ್ರತ ಹಾಗೂ ಭಕ್ತರು ಬೇಡಿದ್ದನ್ನು ಕೊಡುತ್ತೇನೆ ಎಂಬ ಸೋಂಪಿಯನ್ನು ಕಾರ್ಯಗತ ಮಾಡಲು ಅವನು ಎಂಥ ತ್ಯಾಗಕ್ಕೂ ಸಿದ್ಧನಾಗುವ ಬಗೆ ಅಸಾಧಾರಣವಾದುದು. ಅಲ್ಲದೆ ದೇವರಿಗಿಂತಲೂ ಭಕ್ತನೇ ಶ್ರೇಷ್ಠ ; ಭಕ್ತನ ಸಂತೃಪ್ತಿಯೇ ದೇವನ ಸಂತೃಪ್ತಿ ಎಂಬ ಕಲ್ಪನೆಯೂ ಉದಾತ್ತವಾದುದು. ತನಗೆ ಕೈಲಾಸ ಸಿಗುತ್ತದೆ ಎಂಬ ಅವಕಾಶಕ್ಕೆ ಜೋತು ಬೀಳದೆ ತನ್ನನ್ನು ನಂಬಿ ಬಂದವರನ್ನು ತನ್ನೆತ್ತರಕ್ಕೆ ಎಳೆದುಕೊಳ್ಳಬೇಕೆನ್ನುವ ಹೃದಯವಂತಿಕೆ ಸರ್ವೋದಯ ತತ್ತ್ವವನ್ನು ನೆನಪಿಗೆ ತರುತ್ತದೆ. ತಾನೂ ತನ್ನ ಹೆಂಡತಿ ವಲ್ಲಬಮ್ಮನೂ ಕೈಲಾಸಕ್ಕೆ ಬರಬೇಕೆಂದರೆ ತನ್ನನ್ನು ಆಶ್ರಯಿಸಿದ ಗುರುಗಳನ್ನೂ ಆ ಗುರುಗಳು ಬಯಸಿರುವ ದೊಂಬರ ಸೂಳೆಯನ್ನೂ ಕೈಲಾಸಕ್ಕೆ ಕರೆದುಕೊಳ್ಳಬೇಕೆನ್ನುವ ಬಲ್ಲಾಳರಾಯನ ಭಕ್ತಿಯ, ದಾಸೋಹದ, ದಾನದ ನಿಷ್ಠೆಯ ಪರಾಕಾಷ್ಠೆಗೆ ಸಾಕ್ಷಿಯಾಗುತ್ತದೆ. ಹೀಗೆ ಕಠಿಣತಮ ಪರೀಕ್ಷೆಗಳಲ್ಲಿ ಜಲಶೀಲನಾದ ಬಲ್ಲಾಳರಾಯನ ಕಥೆ 'ಪೆರಿಯಪುರಾಣ'ದ ಕಥೆಗಿಂತಲೂ ವಿಶಿಷ್ಟವಾಗಿ ಮೂಡಿಬಂದಿದ್ದು ಆಪ್ಯಾಯಮಾನವಾಗಿದೆ.

ಜಗಜ್ಜ್ಯೋತಿ ಬಸವೇಶ್ವರ ಲಾವಣಿ

ಅನಕೃ ಅವರಿಗೆ ಆಪ್ತ ಸಹಾಯಕರಂತಿದ್ದ ಡಾ. ಕೋದಂಡರಾಮನ್ ಅವರು ಭಜನೆಗಳು, ಭಕ್ತಿಗೀತೆಗಳು ಮತ್ತು ಲಾವಣಿಗಳನ್ನು ಬರೆದು ಪ್ರಸಿದ್ಧ ಹೆಸರಾಗಿದ್ದರು. ಅವರು ಅನಕೃ ಅವರ ಜಗಜ್ಜ್ಯೋತಿ ಬಸವೇಶ್ವರ ನಾಟಕದ ಆಧಾರದಿಂದ ಅದೇ ಹೆಸರಿನ ಲಾವಣಿ ಕೃತಿಯೊಂದನ್ನು ೧೯೬೦ನೇ ದಶಕದಲ್ಲಿ ಬರೆದು ಪ್ರಕಟಿಸಿದ್ದರು. ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ಆ ಲಾವಣಿ ಪುಸ್ತಿಕೆಯನ್ನು ನೋಡಿದ್ದೆ, ಓದಿದ್ದೆ ಹಾಡಿದ್ದೆ. ಈಗ ಆ ಕೃತಿಗಾಗಿ ಎಷ್ಟೇ ಪ್ರಯತ್ನಪಟ್ಟರೂ ಅದು ಸಿಗಲಿಲ್ಲ. ಆದರೆ ಅವರ ಪತ್ನಿ ಸುಭದ್ರಕ್ಕನವರು ಕೊಟ್ಟಿದ್ದ ಪುಸ್ತಕಗಳ ಕಟ್ಟಿನಲ್ಲಿದ್ದ "ಜಗಜ್ಜ್ಯೋತಿ ಬಸವೇಶ್ವರ ಲಾವಣಿ"ಯ ಒಂದು ತುಣುಕನ್ನು ಈ ಸಂಗ್ರಹದಲ್ಲಿ ಕೊಡಲು ಸಾಧ್ಯವಾಯಿತು. ಈ ಭಾಗದಲ್ಲಿ ನಂದಿಯು ಲೋಕೋದ್ಧಾರಕ್ಕಾಗಿ ಬಸವನಾಗಿ ಭೂಮಿಯಲ್ಲಿ ಅವತರಿಸುವುದು ಹಾಗೂ ಬಾಲ್ಯದ ಒಂದೆರಡು ಘಟನೆಗಳು ಮಾತ್ರವಿದ್ದು ಸರಳವಾಗಿ ಕಥೆಯನ್ನು ಹೇಳಿಕೊಂಡು ಹೋಗಲಾಗಿದೆ. ಈ ಲಾವಣಿಯ ಸಮಗ್ರ ಕೃತಿಗಾಗಿ ಶೋಧ ನಡೆದಿದೆ.

ಇದು ಮುಕ್ತಾಯವಲ್ಲ

ಈ ಸಂಕಲನದಲ್ಲಿ ಶರಣರನ್ನು ಕುರಿತ ೨೮ ಕಾವ್ಯಗಳು ಸೇರಿವೆ. ಇವುಗಳಲ್ಲಿ ಹೆಚ್ಚು ಕಾವ್ಯಗಳು ನಾನು ಸಂಶೋಧನಾ ವಿದ್ಯಾರ್ಥಿಯಾಗಿದ್ದಾಗ ಪರಿಚಿತರಾದ ಕಲಾವಿದರುಗಳಾದ ಬೆಟ್ಟದಬೀಡು ಸಿದ್ದಶೆಟ್ಟಿ, ಕಾರಾಪುರದ ಪುಟ್ಟಮಾದಯ್ಯ, ಜೋಷ್ಟಿ ಮಾದಯ್ಯ, ಕ್ಯಾತಮಾರನಹಳ್ಳಿ ಮಹದೇವಯ್ಯ, ಕೃಷ್ಣಾಪುರದ ಸಿದ್ದಶೆಟ್ಟಿ, ಆಲ್ಗೂಡು ಚೆನ್ನಯ್ಯ, ಕಂಪಲಾಪುರದ ರಾಚಯ್ಯ ಮುಂತಾದವರಿಂದ ೧೯೭೦-೮೦ನೇ ವರ್ಷಗಳ ಅವಧಿಯಲ್ಲಿ ಸಂಗ್ರಹಿಸಿದ ಕಾವ್ಯಗಳಾಗಿವೆ. ಇಲ್ಲಿನ ಹೆಚ್ಚು ಕಾವ್ಯಗಳನ್ನು ಬೆಟ್ಟದಬೀಡು ಸಿದ್ದಶೆಟ್ಟರು ಹಾಡಿದ್ದಾರೆ. ಅವರಲ್ಲಿದ್ದ ಪೂರ್ಣಕಾವ್ಯಗಳನ್ನು ಸಂಗ್ರಹಿಸಿಕೊಳ್ಳಲಾಗದ್ದಕ್ಕೆ ಈಗಲೂ ನೊಂದು ಕೊಳ್ಳುತ್ತಿರುತ್ತೇನೆ.

ವಾಸ್ತವ ಸಂಗತಿಯೆಂದರೆ ಕರ್ನಾಟಕದಾದ್ಯಂತ ಸಮಗ್ರವಾಗಿ ಕ್ಷೇತ್ರಕಾರ್ಯ ನಡೆದಿಲ್ಲ. ಇದಕ್ಕೆ ಕೊಡುವ ವಿದ್ವತ್ಕಾರಣಗಳೇನೇ ಇರಲಿ ನಷ್ಟವಂತೂ ಕರ್ನಾಟಕ ಜಾನಪದಕ್ಕೆ ಎಂಬುದನ್ನು ವ್ಯಥೆಯಿಂದ ಹೇಳಬೇಕಾಗಿದೆ. ಈ ಗುರುತರವಾದ ಕಾರ್ಯ ಏಕವ್ಯಕ್ತಿಯಿಂದ ಆಗುವಂಥದಲ್ಲ. ಇದಕ್ಕೆ ಪ್ರಬುದ್ಧ ಕ್ಷೇತ್ರ ಕಾರ್ಯಕರ್ತರುಗಳ ಸಮೂಹವೇ ಟೊಂಕ ಕಟ್ಟಿ ನಿಲ್ಲಬೇಕಾಗಿದೆ. ಅಂಥ ಶ್ರದ್ಧಾಳುಗಳ ಶ್ರಮಕ್ಕಾಗಿ ಜಾನಪದ ಸುವರ್ಣದ್ವಾರ ತೆರೆದುಕೊಂಡಿದೆ. ಕರ್ನಾಟಕದ ಎಲ್ಲ ವೃತ್ತಿಗಾಯಕರ ಸಮಗ್ರ ಕೃತಿಗಳ ಸಂಗ್ರಹ ಕಾರ್ಯ ನಡೆದಾಗ ಉಳಿದುಹೋಗಿರುವ ಶರಣಕಾವ್ಯಗಳು ಬೆಳಕು ಕಂಡಾವು. ಅಂಥ ಕ್ಷೇತ್ರ ಕಾರ್ಯ ಸುಯೋಗಪರ್ವ ಯೋಜನೆಯನ್ನು ನಮ್ಮ ಕರ್ನಾಟಕ ಜಾನಪದ ಅಕಾಡೆಮಿ ಹಮ್ಮಿಕೊಳ್ಳಲಿ ; ಅದರಿಂದ ನಾಡು ಹೆಮ್ಮೆ ಪಡುವಂತಾಗಲಿ.

೪. ನಮ್ಮ ಗಾಯಕರು

ಜನಪದ ಶರಣ ಕಾವ್ಯಗಳನ್ನು ಹಾಡಿರುವ ಗಾಯಕರೆಲ್ಲರೂ ಹಿರಿಯ ತಲೆಮಾರಿನವರು. ಅವರೆಲ್ಲರೂ ೨೦ನೇ ಶತಮಾನದಲ್ಲಿ ಉತ್ಸಾಹದಿಂದ ಹಾಡಿಕೊಂಡು ಓಡಾಡಿದವರು. ಈ ಗಾಯಕರಲ್ಲಿ ಬಹಳಷ್ಟು ಜನ ೨೧ನೇ ಶತಮಾನಕ್ಕೆ ಅಡಿಯಿಡಲೇ ಇಲ್ಲ. ಉಳಿದಿರುವ ಒಬ್ಬಿಬ್ಬರೂ ಈಗ ಹಣ್ಣೆಲೆಯಾಗಿದ್ದಾರೆ.

ಶರಣರಿಗೆ ಸಂಬಂಧಿಸಿದ ಈ ಕಾವ್ಯಗಳನ್ನು ಪ್ರೀತಿಯಿಂದ ಹಾಡುತ್ತಿದ್ದ, ಬೆಳಗಾನ ಹಾಡಿದರೂ ಸಹನೆಯಿಂದ ಕುಳಿತು ಭಕ್ತಿ ತನ್ಮಯತೆಗಳಿಂದ ಕೇಳುತ್ತಿದ್ದ ಕೇಳುಗರೂ ಇಂದು ಕಡಿಮೆಯಾಗುತ್ತಿದ್ದಾರೆ; ಹಾಗೆಯೆ ಹಾಡುತ್ತಿದ್ದ ಗಾಯಕರ ಸಂಖ್ಯೆಯೂ ಕ್ಷೀಣಿಸುತ್ತಿದೆ. ಇನ್ನೂ ಚೆನ್ನಾಗಿ ಹೇಳಬೇಕೆಂದರೆ ಈಗ ಈ ಕಾವ್ಯಗಳನ್ನು ಹಾಡುವವರೂ ಇಲ್ಲ ; ಹಾಡಿದರೆ ಕೇಳುವವರೂ ಇಲ್ಲ. ಅಂದರೆ ವೃತ್ತಿಗಾಯನ ಪರಂಪರೆ ಅಪಾಯದ ಅಂಚಿನಲ್ಲಿದೆ. ಇನ್ನು ಕೆಲವೇ ಕೆಲವು ವರ್ಷಗಳಲ್ಲಿ ಈ ಪರಂಪರೆ ಏನಾಗಿರುತ್ತದೆ ಎಂದು ಊಹಿಸಲೂ ಸಾಧ್ಯವಾಗದ ಸ್ಥಿತಿ ಉಂಟಾಗುತ್ತಿದೆ.

ನಮ್ಮ ಜನಪದ ಗಾಯಕರ್ಯಾರೂ ಅಕ್ಷರಸ್ಥರಲ್ಲ; ಅವರು ಮನೆ ಮಠ ಆಸ್ತಿ ಭೂಸ್ತಿಗಳಿಂದ ವ್ಯವಸ್ಥಿತ ಜೀವನವನ್ನು ನಡೆಸುತ್ತಿರುವವರೂ ಅಲ್ಲ. ಅವರ ಸಂಪತ್ತೇನಿದ್ದರೂ ಅವರಿಗೆ ಅನ್ನ ನೀರು ಬಟ್ಟೆಬರೆಗೆ ದಾರಿಯಾಗಿದ್ದ ಅವರ ವಾದ್ಯಗಳು, ಅವರ ಹಿರಿಯರಿಂದ ಕಲಿತ ಹಾಡುಗಳು ಹಾಗೂ ಅವರ ಕಂಠಶ್ರೀ ಮಾತ್ರ. ಅವರು ಪ್ರತಿನಿತ್ಯ ಅವರಿವರ ಮನೆ ಮುಂದೆ ನಿಂತು ಅಥವಾ ಜಗಲಿಯ ಮೇಲೆ ಕುಳಿತು ತಮ್ಮ ಹಾಡಿನಿಂದ ದಾನಿಗಳ ಮನಸ್ಸನ್ನು ಪ್ರಸನ್ನಗೊಳಿಸಿ ಅವರಿಂದ ಭಿಕ್ಷೆಯನ್ನು ಪಡೆದು ತಮ್ಮ ಹೊಟ್ಟೆಪಾಡಿಗೆ ದಾರಿ ಮಾಡಿಕೊಳ್ಳುತ್ತಿದ್ದರು. ಕೆಲವು ವಿಶೇಷ ದಿನಗಳಲ್ಲಿ ಕರೆದಲ್ಲಿಗೆ ಹೋಗಿ ಬೆಳಗಾನ ಕಥೆ ಮಾಡಿ ಕೊಟ್ಟ ದವಸ ಧಾನ್ಯ ದುಡ್ಡುಕಾಸಿನಿಂದ ಜೀವನವನ್ನು ನಿರ್ವಹಿಸುತ್ತಿದ್ದರು. ಹಬ್ಬ-ಹರಿದಿನ, ಜಾತ್ರೆ-ಉತ್ಸವಗಳಲ್ಲಿ ಮಾತ್ರವಲ್ಲದೆ ಹುಟ್ಟು-ಸಾವು, ಮದುವೆ-ಮುಂಜಿ-ನಾಮಕರಣ ಮುಂತಾದ ಸಂದರ್ಭಗಳಲ್ಲೂ ಈ ಕಲಾವಿದರಿಗೆ ಅವಕಾಶ ಸಿಗುತ್ತಿದ್ದವು. ಇಂಥ ವಿಶೇಷ ಸಂದರ್ಭಗಳು ಎಲ್ಲ ಕಲಾವಿದರಿಗೂ ಒದಗಿಬರುತ್ತಿತ್ತು ಎಂದು ಹೇಳಬರುವುದಿಲ್ಲ. ಹಾಗೆ ಸಿಕ್ಕವರು ತಮ್ಮ ಪುಣ್ಯ ವೆಂದುಕೊಂಡು ಧನ್ಯತಾಭಾವದಿಂದ ಹಿರಿಹಿರಿ ಹಿಗ್ಗುತ್ತಿದ್ದರು. ಉಳಿದ ದಿನಗಳಲ್ಲಿ ಒಂದು ತುತ್ತು ಅನ್ನಕ್ಕಾಗಿ ಐದಡಿ ದೇಹವನ್ನು ಮೂರುಗೇಣು ಮಾಡಿಕೊಂಡು ಅವರಿವರ ಮನೆಗಳಲ್ಲಿ ಕೂಲಿನಾಲಿ ಮಾಡಿಕೊಂಡು ಜೀವಿಸುತ್ತಿದ್ದರು. ದುಡಿಸಿಕೊಳ್ಳುತ್ತಿದ್ದ ಮಾನ್ಯರೂ ಇಂಥವರ ಚಟುಗಳನ್ನು ಅರಿತವರಾಗಿ ಅವರಿಗೆ ಚನ್ನಾಗಿ ಕುಡಿಸಿ ತಮ್ಮ ಬಗೆಗೆ ಭಕ್ತಿ-ಗೌರವಗಳನ್ನು ತೋರಿಸುವಂತೆ ಮೂಗಿಗೆ ತುಪ್ಪ ಸವರುತ್ತಿದ್ದರು. ಹೀಗಾಗಿ ನಮ್ಮ ಗಾಯಕರು ದರಿದ್ರ ಸಾಮ್ರಾಜ್ಯದ ದೀನ ಚಕ್ರವರ್ತಿಗಳಾಗಿ ಹಾಡಿ ಕುಣಿದು ಸ್ವರ್ಗವನ್ನು ಕಂಡುಕೊಳ್ಳುತ್ತಿದ್ದರು.

ಈ ಕಲಾವಿದರ ಸಾಮರ್ಥ್ಯವೆಂದರೆ ಅವರಿಗಿದ್ದ ಸ್ಮರಣಶಕ್ತಿ. ಬೆಟ್ಟದಬೀಡು ಸಿದ್ದಶೆಟ್ಟರು ಹೇಳುವಂತೆ 'ಗುರು ಕೊಟ್ಟ ಜೋಳಿಗೆಯನ್ನು ತುಂಬಿಕೊಂಡಿರುತ್ತಿದ್ದರು. ಶಿವಕೊಟ್ಟ ನೆನಪಿನ ಶಕ್ತಿಯನ್ನು ನಂಬಿಕೊಂಡಿರುತ್ತಿದ್ದರು'. ಈ ಕಲೆಯೇ ಅವರ ಸರ್ವಸ್ವವಾಗಿರುತ್ತಿತ್ತು.

ಕರ್ನಾಟಕದಾದ್ಯಂತ ಇಂಥ ಕೋಟ್ಯಂತರ ಗಾಯಕರು ಇದ್ದಾಗ ನಾವು ಅವರ ಬೆಲೆಯನ್ನು ಅರ್ಥಮಾಡಿಕೊಳ್ಳಲಿಲ್ಲ. ಅವರೆಲ್ಲ ಸತ್ತು ಮಣ್ಣಾದ ಮೇಲೆ ಅವರನ್ನೆಲ್ಲ ಕಳೆದುಕೊಂಡ ನಾವು ನತದೃಷ್ಟರೆಂದು ಈಗ ಕೊರಗುತ್ತಿದ್ದೇವೆ. ಈಗ ಹಂಕಲೆತ್ತುವ ಕೆಲಸವಾದರೂ ಪ್ರಾಮಾಣಿಕವಾಗಿ ನಡೆಯಬೇಕಿದೆ.

ಬೆಟ್ಟದಬೀಡು ಸಿದ್ದಶೆಟ್ಟರು

ರಾಷ್ಟ್ರಕೂಟಪ್ರಭು ನೃಪತುಂಗನು ತನ್ನ ಕವಿರಾಜಮಾರ್ಗದಲ್ಲಿ ನಾಡವರನ್ನ ಕುರಿತು ಹೇಳುವಾಗ ಅವರು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದಿದ್ದಾನೆ. ಇಂಥ ಅನಕ್ಷರಸ್ಥ ಜನಪದ ಕವಿಗಳ ಅಕ್ಷಯ ಭಂಡಾರದಂತಿದೆ ನಮ್ಮ ನಾಡು. ಈವರೆಗೂ ಗುರುತಿಸಿರುವ ೧೫೦ಕ್ಕೂ ಹೆಚ್ಚು ವೃತ್ತಿಗಾಯನ ಸಂಪ್ರದಾಯಗಳ ಲಕ್ಷಾಂತರಕ್ಕೂ ಹೆಚ್ಚು ಜನ ಮಹಾನ್ ಗಾಯಕರು ನಮ್ಮಲ್ಲಿದ್ದಾರೆ. ಇಂಥ ಶ್ರೇಷ್ಠಗಾಯಕರಲ್ಲಿ ಬೆಟ್ಟದಬೀಡು ಸಿದ್ದಶೆಟ್ಟರೂ ಒಬ್ಬರು.

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹೊರಳ್ಳಿ ಗ್ರಾಮದ ಗುಂಡುಮಾದಯ್ಯನವರು ಮಲೆಮಾದೇಶ್ವರ ಸ್ವಾಮಿಯ ಪರಮಭಕ್ತರು. ಅವರು ದೇವರಗುಡ್ಡರೂ ಆಗಿದ್ದರು. ಜೊತೆಗೆ ಕುಲಕಸುಬಾದ ಕುಂಬಾರ ವೃತ್ತಿಯಲ್ಲಿ ಸಂತೃಪ್ತ ಜೀವನವನ್ನು ಸಾಗಿಸುತ್ತಿದ್ದರು. ಅವರ ಸಹಧರ್ಮಿಣಿ ಸಿದ್ದಮ್ಮನವರಿಂದ ಅವರ ಬಾಳು ಹಾಲು-ಜೇನು ಬೆರೆತಂತೆ ಸುಮಧುರ ಸುಂದರವಾಗಿತ್ತು. ದುರ್ದೈವವೆಂದರೆ ಅವರಿಗೆ ಹುಟ್ಟಿದ ಮೂರು ಗಂಡು ಮಕ್ಕಳು ಹಾಗೂ ಎರಡು ಹೆಣ್ಣು ಮಕ್ಕಳು ಹುಟ್ಟುಹುಟ್ಟುತ್ತಿದ್ದಂತೆಯೇ ಸತ್ತುಹೋಗಿ ಹುತ್ತವನ್ನು ತುಂಬಬೇಕಾಗಿ ಬಂದು ಆ ದಂಪತಿಗಳು ಭರಿಸಲಾರದ ದುಃಖದಲ್ಲಿ ಕೊರಗುತ್ತಿದ್ದರು. ಸದಾ ಸಂಕಟದಿಂದ ನರಳುತ್ತಿದ್ದ ಅವರನ್ನು ಕಂಡ ಹಿತೈಷಿಯೊಬ್ಬರು ಚಿಕ್ಕಹಲಗೂರಿನ ಸಿದ್ದಪ್ಪಾಜಿಗೆ ಹರಕೆ ಕಟ್ಟಿಕೊಳ್ಳುವಂತೆ ಹೇಳಿದರು. ಆಗ ಗುಂಡುಮಾದಯ್ಯ ದಂಪತಿಗಳು ಸಿದ್ದಪ್ಪಾಜಿಯನ್ನು ಮೊರೆಬಿದ್ದ ದೇವರಾಗಿ ಸ್ವೀಕರಿಸಿ,

"ಸ್ವಾಮಿ ಸಿದ್ದಪ್ಪಾಜಿ, ನಮಗೆ ಒಬ್ಬ ಗಂಡು ಮಗ ಹುಟ್ಟಿ ಬದುಕ್ಕೊಂಡ್ರೆ ಅವುನ್ಗೆ ನಿನ್ನ ಹೆಸರನ್ನೇ ಕರೀತೀನಪ್ಪ" ಎಂದು ಹರಕೆ ಕಟ್ಟಿಕೊಂಡರು.

ಈ ಸಲ ಅವರ ಪ್ರಾರ್ಥನೆ ವ್ಯರ್ಥವಾಗಲಿಲ್ಲ. ಗುಂಡುಮಾದಯ್ಯನವರ ಹೆಂಡತಿ ಸಿದ್ದಮ್ಮ ಗರ್ಭಿಣಿಯಾದರು. ಸುದ್ದಿವಮೆಂದರೆ ಈ ಸಲ ಹುಟ್ಟಿದ್ದು ಗಂಡುಮಗು ಮಾತ್ರವಲ್ಲ ; ಅದು ಬದುಕುಳಿಯಿತು. ಇದರಿಂದ ಆ ದಂಪತಿಗಳ ಮನ ಬೆಳಗಿತು, ಮನೆ ಬೆಳಗಿತು, ಆನಂದ ಅರಳಿತು. ಕಟ್ಟಿಕೊಂಡ ಹರಕೆಯಂತೆ ಮಗುವಿಗೆ ಸಿದ್ದಯ್ಯಶೆಟ್ಟಿ ಎಂದು ಹೆಸರು ಕರೆದರು. ಸಿದ್ದಮ್ಮನವರ ಕಣ್ಣಾವಲಿನಲ್ಲಿ ಮಗುವಿಗೆ ಐದು ತಿಂಗಳು ತುಂಬಿತು.

ಅದು ದೀವಳಿಗೆ ತಿಂಗಳು. ಮಲೆಮಾದೇಶ್ವರನ ಸೇವೆಗೆಂದು ಗುಂಡುಮಾದಯ್ಯನವರು ಪ್ರರಿಷೆಯೊಡನೆ ಬೆಟ್ಟಕ್ಕೆ ಹೋದರು. ಹಾಗೆ ಹೋದವರು ಮನೆಗೆ ಹಿಂದಿರುಗುಲೇ ಇಲ್ಲ. ಅವರು ಮಾದಪ್ಪನ ದಿವ್ಯ ಸನ್ನಿಧಿಯಲ್ಲೇ ಕಾಲವಶರಾಗಿ ಹೋದರು. ಸುದ್ದಿ ತಿಳಿದ ಸಿದ್ದಮ್ಮ ನೆಲಮುಗಿಲು ಒಂದಾಗುವಂತೆ ತಲೆತಲೆ ಚಚ್ಚಿಕೊಂಡು ಗೋಳಾಡಿದರು. ಬದುಕೇ ಬೇಡೆನಿಸಿರುವಾಗ ಕರುಳು ಕತ್ತರಿಸುವಂತೆ ತೊಟ್ಟಿಲಿನಲ್ಲಿ ಅಳುತ್ತಿದ್ದ ಐದು ತಿಂಗಳ ಕಂದನಿಗಾಗಿ ಬದುಕಬೇಕೆಂಬ ಆಸೆ ಗರಿಗೆದರಿತು. ಎದೆಯನ್ನು ತುಂಬಿಕೊಂಡಿದ್ದ ಅಳಲು ಕಣ್ಣೀರ ಕೋಡಿಯಾಗಿ ಹರಿಯಿತು. ತನ್ನ ಕಂದನಿಗಾಗಿ ಬದುಕುವುದು ಅನಿವಾರ್ಯವೆನಿಸಿ ಸಿದ್ದಮ್ಮನವರಿಗೆ ಕಾಲಕ್ರಮದಲ್ಲಿ ಜೀವನ ಸಹ್ಯವಾಯಿತು.

ತತ್ತ್ವದ ಪದಗಳನ್ನು ಹಾಡುತ್ತಿದ್ದ, ಪುರಾಣ ಪುಣ್ಯಕಥೆಗಳನ್ನು ಹೇಳುತ್ತಿದ್ದ, ಕಂಸಾಳೆ ಕುಟ್ಟುತ್ತ ಕಥೆಗಳನ್ನೂ ಮಾಡುತ್ತಿದ್ದ ಗುಂಡುಮಾದಯ್ಯನವರು ಇರುವವರೆಗೂ ಸಿದ್ದಮ್ಮನವರಿಗೆ ಸಮಸ್ಯೆಗಳೇ ಇರಲಿಲ್ಲ. ಗಂಡನನ್ನು ಕಳೆದುಕೊಂಡು ಹಸುಗೂಸನ್ನು ಎತ್ತಿಕೊಂಡು ಕೂಲಿನಾಲಿ ಮಾಡಿ ಮಗುವನ್ನು ಸಾಕಿದ ಸಿದ್ದಮ್ಮ ಮಗನನ್ನು ಕೂಲಿಮಠಕ್ಕೆ ಕಳಿಸಿ ಎರಡನೇ ತರಗತಿಯವರೆಗೂ ಓದಿಸಿದರು.

ಸಿದ್ದಶೆಟ್ಟರ ದೊಡ್ಡಪ್ಪನವರಾದ ದೊಡ್ಡಮಾದಯ್ಯನವರು ನೀಲಗಾರರು. ಅವರು ತತ್ತ್ವಪದಗಳು, ಪುರಾಣಕಥೆಗಳು, ಭಜನೆ ಮುಂತಾದವುಗಳನ್ನೆಲ್ಲ ಬಲ್ಲವರಾಗಿದ್ದರು. ದೊಡ್ಡಪ್ಪನವರು ತಂಬೂರಿ ಹಿಡಿದು ಹಾಡಲು ಕುಳಿತಾಗ ಅವರ ಹತ್ತಿರವೇ ಕುಳಿತು ಎಲ್ಲವನ್ನೂ ಗಮನಿಸುತ್ತಿದ್ದ ಬಾಲಕ ಸಿದ್ದಶೆಟ್ಟಿಯವರಿಗೆ ತಾನೂ ಅವರಂತೆ ತಂಬೂರಿ ನುಡಿಸುತ್ತ ಹಾಡಬೇಕೆಂಬ ಆಸೆ ಕುಡಿಯೊಡೆಯಿತು.

ಸಿದ್ದಶೆಟ್ಟರಿಗೆ ಮೊದಲ ಗುರು ದೊಡ್ಡಮಾದಯ್ಯನವರಾದರೂ ಉದ್ಬೂರಿನ ದೇವರು ಗುಡ್ಡ ಮಾದಪ್ಪಶೆಟ್ಟರು ಕಂಸಾಳೆ ಪದಗಳನ್ನು ಕಲಿಸಿಕೊಟ್ಟ ಗುರುವಾದರು. ಮಾದಪ್ಪಶೆಟ್ಟರ ಮೆಚ್ಚಿನ ಸಿಸುಮಗನಾಗಿದ್ದ ಸಿದ್ದಶೆಟ್ಟರು ಗುರುವಿನ ಅಂತ್ಯದವರೆಗೂ ಮನ ಮುಟ್ಟುವಂತೆ ಸೇವೆ ಮಾಡಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡರು. ಅಲ್ಲದೆ ತಾಯಿಯನ್ನು ಉದ್ಬೂರಿಗೆ ಕರೆದುಕೊಂಡು ಬಂದು ನೆಲೆನಿಂತರು.

ಹೀಗಿರುವಾಗ ಒಂದು ಸಲ ಉದ್ಬೂರಿಗೆ ಮಧೂನಹಳ್ಳಿ ನಂಜಪ್ಪಶೆಟ್ಟರು ಎಂಬ ಮಹಾಗಾಯಕ ಬಂದಿದ್ದರು. ನೆಂಟರ ಮನೆಯಲ್ಲಿ ಉಳಿದುಕೊಂಡಿದ್ದ ನಂಜಪ್ಪಶೆಟ್ಟರ [illegible]ಂತು ಸಿದ್ದಶೆಟ್ಟರು ಅನಿಮಿಷ ಯೋಗಿಯನ್ನು ಕಂಡ ಅಲ್ಲಮಪ್ರಭುವಿನಂತೆ ಆನಂದದಿಂದ ಪುಲಕಿತರಾದರು. ಜನ್ಮಜನ್ಮಾಂತರದ ಬಂಧುವನ್ನು ಕಂಡಂತೆ ದೀರ್ಘದಂಡ ನಮಸ್ಕಾರ ಮಾಡಿದರು. ಗುರುವಿನ ಗುಲಾಮನಾಗಿ ತಮ್ಮ ಗಾಯನ ಕಲೆಗೆ ಮೆರುಗಿನ ಸಿರಿಯನ್ನು ತಂದುಕೊಂಡರು. ರಾಮಾಯಣ, ಮಹಾಭಾರತ, ಎಲ್ಲಮ್ಮನ ಕಥೆ ಮುಂತಾದವುಗಳನ್ನು ಕಲಿತುದಲ್ಲದೆ ದೇವರಗುಡ್ಡ ಹಾಗೂ ನೀಲಗಾರ ಸಂಪ್ರದಾಯದ ಕಾವ್ಯಗಳನ್ನು ಕರತಲಾಮಲಕ ಮಾಡಿಕೊಂಡರು. ಜೊತೆಗೆ ಗಾದೆ, ಒಗಟು, ತತ್ತ್ವಪದ, ಜನಪದ ಲೆಕ್ಕಗಳು, ಪುರಾಣಕಥೆಗಳು, ಐತಿಹ್ಯಗಳು, ಹನ್ಸದ ಕಥೆಗಳನ್ನೆಲ್ಲ ತಮ್ಮ ಕಣಜಕ್ಕೆ ತುಂಬಿಕೊಂಡರು. ಮೊದಲೆ ತಮಗೆ ಗೊತ್ತಿದ್ದ ಕಾವ್ಯಗಳಲ್ಲಿದ್ದ ಕೊರತೆಯನ್ನೆಲ್ಲ ನೀಗಿಸಿಕೊಂಡು ಸಿದ್ದಶೆಟ್ಟರು ಒಬ್ಬ ಮಹಾಕಲಾವಿದನಾಗಿ ಬೆಳೆದರು. ಜೊತೆಗೆ ಹತ್ತಾರು ಜನ ಸಹಕಲಾವಿದರೊಡನೆ ಕೋರಣ್ಯಕ್ಕೆ ಹೋಗುವ ಪರಂಪರೆಯನ್ನು ಬೆಳೆಸಿದರು. ಸಿದ್ದಶೆಟ್ಟಿಯವರ ಔದಾರ್ಯವನ್ನು ಕಂಡಿದ್ದ ಸಹಕಲಾವಿದರಿಗೆ ಅವರೊಡನೆ ಕೋರಣ್ಯಕ್ಕೆ ಹೋಗುವುದೆಂದರೆ ಎಲ್ಲಿಲ್ಲದ ಉತ್ಸಾಹ, ಅಭಿಮಾನ, ಪ್ರೀತಿ ತುಂಬಿ ತುಳುಕುತ್ತಿತ್ತು.

ಸಿದ್ದಶೆಟ್ಟರು ಜೊತೆಗಾರರೊಡನೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲೆಲ್ಲ ತಿರುಗಿ, ಬಯಸಿದವರೆದುರು ಕಥೆ ಮಾಡಿ ಸೈ ಎನಿಸಿಕೊಂಡರು. ಹೀಗೆ ಊರಾಡುತ್ತಿರುವಾಗ ಒಂದು ಸಲ ಅವರ ತಂಡ ಮೈಸೂರಿಗೆ ಸಮೀಪದಲ್ಲಿರುವ, ಆದರೆ ಹೆಗ್ಗಡದೇವನ ಕೋಟೆ ತಾಲ್ಲೂಕಿಗೆ ಸೇರಿರುವ ಬೆಟ್ಟದಬೀಡು ಗ್ರಾಮದಲ್ಲಿ ಕಥೆ ಮಾಡಿದರು. ಆ ಊರಿನ ಹಿರೀಕರು ಸಿದ್ದಶೆಟ್ಟಿಯವರ ಕಥನ ಕಲೆ, ಪುರಾಣ ಪ್ರಜ್ಞೆ, ಗಾಯನ ಕೌಶಲಗಳನ್ನೆಲ್ಲ ಮೆಚ್ಚಿ ವಾರಗಟ್ಟಲೆ ತಮ್ಮ

ಊರಿನಲ್ಲಿ ಉಳಿಸಿಕೊಂಡು ಒಂದೊಂದು ದಿನ ಒಬ್ಬೊಬ್ಬರ ಮನೆಯವರು ಒಂದೊಂದು ಕಥೆ ಮಾಡಿಸುವ ವ್ಯವಸ್ಥೆ ಮಾಡಿದರು. ಒಕ್ಕಲಿಗರೇ ಹೆಚ್ಚಾಗಿರುವ ಆ ಊರಿನ ಪಟೇಲ್ ನೀಲೇಗೌಡರು, ಪುಟ್ಟೇಗೌಡರು, ಸಿದ್ದೇಗೌಡರುಗಳು ಸಿದ್ದಶೆಟ್ಟಿಯವರ ನಡೆ-ನುಡಿಗಳನ್ನೆಲ್ಲ ಮೆಚ್ಚಿಕೊಂಡು 'ಆಗಾಗ ನಮ್ಮೂರ್ಗೆ ಬರ್ತಾ ಇರಪ್ಪ' ಎಂದು ಹೇಳಿ ಮನಃತೃಪ್ತಿಯಾಗುವಷ್ಟು ದುಡ್ಡುಕಾಸು ದವಸಧಾನ್ಯಗಳನ್ನು ಕೊಟ್ಟು ಕಳಿಸಿದರು. ಪಟೇಲ್ ನೀಲೇಗೌಡರ ಅಭಿಮಾನಕ್ಕೆ ಸೋತ ಸಿದ್ದಶೆಟ್ಟರು ಆಗಾಗ ಜೊತೆಗಾರರೊಡನೆ ಬೆಟ್ಟದಬೀಡಿಗೆ ಬಂದು ಹೋಗುತ್ತಿದ್ದರು.

ಆಗ ಸಿದ್ದಶೆಟ್ಟರಿಗೆ ಹದಿನೆಂಟರ ಹರೆಯ. ಅವರು ಒಬ್ಬೊಂಟಿ ಎಂಬ ವಿಚಾರವನ್ನು ತಿಳಿದುಕೊಂಡ ನೀಲೇಗೌಡರು ತಮ್ಮೂರವರೊಡನೆ ಚರ್ಚಿಸಿ ತಮ್ಮೂರಿನ ನಂಜಯ್ಯಶೆಟ್ಟಿಯ ಸಾಕುಮಕ್ಕಳಲ್ಲಿ ಒಬ್ಬಳಾದ ಸುಬ್ಬಮ್ಮನನ್ನು ಕೊಟ್ಟು ಮದುವೆ ಮಾಡಿದ್ದಲ್ಲದೆ ತಮ್ಮ ಊರಿನಲ್ಲೆ ಇರಿಸಿಕೊಂಡು ನಾಲ್ಕು ಎಕರೆ ದರಕಾಸು ಭೂಮಿಯನ್ನು ಕೊಡಿಸಿದರು. (ಈ ಸಂಕಲನದ 'ಹೇಮರೆಡ್ಡಿ ಮಲ್ಲಮ್ಮ' ಎಂಬ ಕಥನಗೀತೆಯನ್ನು ಈ ತಾಯಿ ಸುಬ್ಬಮ್ಮನವರು ಹಾಡಿದ್ದಾರೆ). ಸಿದ್ದಶೆಟ್ಟರು ಸುಬ್ಬಮ್ಮ ನಂಥ ಸಾಧ್ವೀಮಣಿ ಜೊತೆ ಸಂಸಾರ ನಡೆಸಿ ಪಂಚರತ್ನಗಳಂಥ ಐವರು ಮಕ್ಕಳನ್ನು ಪಡೆದು ಹಾಲು ಸಾಗರವಾಗಿ ಬದುಕಾಟ ನಡೆಸಿದರು.

ಸಿದ್ದಶೆಟ್ಟರನ್ನು ನನಗೆ ಪರಿಚಯ ಮಾಡಿಕೊಟ್ಟವರು ಮೈಸೂರಿನ ಜಯನಗರದ ಜೋಪ್ಡಿ ಮಾದಯ್ಯನವರು. ನಾನು ೧೯೭೨ರಲ್ಲಿ 'ಮಲೆಯ ಮಾದೇಶ್ವರ' ಕಾವ್ಯ ಸಂಪಾದಿಸುತ್ತಿದ್ದ ಕಾಲದಲ್ಲಿ ಮಾದೇಶ್ವರನ ಬಗೆಗೆ ಹೆಚ್ಚು ತಿಳಿದವರೆಂದರೆ ಸಿದ್ದಶೆಟ್ಟರೆಂದು ಹೇಳಿದ ಜೋಪ್ಡಿ ಮಾದಯ್ಯನವರು ಸಿದ್ದಶೆಟ್ಟರನ್ನು ಮಾನಸಗಂಗೋತ್ರಿಯ ಸ್ನಾತಕೋತ್ತರ ನಿಲಯದ ೧೭೯ನೇ ನಂಬರಿನ ನಾನಿದ್ದ ರೂಮಿಗೆ ಕರೆದುಕೊಂಡು ಬಂದು ಪರಿಚಯಿಸಿದರು. ಆ ದಿನ ಇಬ್ಬರೂ ಜೊತೆಯಲ್ಲಿ ತುರುಕರ ಪೀರಣ್ಣ ಮತ್ತು ಗಟ್ಟಿವಾಳಯ್ಯ ಕಾವ್ಯಗಳನ್ನು ಹಾಡಿದರು. ಅನಂತರದಲ್ಲಿ ಮಾದೇಶ್ವರನಿಗೆ ಸಂಬಂಧಿಸಿದ ಅನೇಕ ವಿರಳ ಭಾಗಗಳನ್ನು ಹಾಡಿದ್ದಲ್ಲದೆ ಶರಣರಿಗೆ ಸಂಬಂಧಿಸಿದ 'ಕಲ್ಯಾಣದಣ್ಣ ಬಸವಣ್ಣ', 'ಊಳ್ಳೆಯ ಶರಣರು', 'ನುಲುಗೆ ಚಂದಯ್ಯ', 'ಸತ್ಯಶರಣೆ ಶಿವನಾಗಮ್ಮ', 'ತುರುಕರ ಪೀರಣ್ಣ', 'ಗಟ್ಟಿವಾಳಯ್ಯ', 'ಕುಂಬಾರ ಗುಂಡಯ್ಯ-೧', 'ಒಕ್ಕಲಿಗರ ಮುದ್ದೇಗೌಡ', 'ಕುರುಬರ ಬೀರಪ್ಪ', 'ಸಿದ್ದರಾಮೇಶ್ವರ', 'ಅಕ್ಕಮಾದೇವಿ', 'ಬಲ್ಲಾಳರಾಯ' - ಈ ಎಲ್ಲ ಕಾವ್ಯಗಳನ್ನು ಹಾಡಿದ್ದಾರೆ.

ಇಷ್ಟೆಲ್ಲ ಕಾವ್ಯಗಳನ್ನು ಹಾಡಿದರೂ ಅವರ ಮೇರುಕೃತಿ 'ಜನಪದ ಮಹಾಭಾರತ' ಸಿದ್ದಶೆಟ್ಟಿಯವರಿಗೆ 'ಜನಪದ ವ್ಯಾಸ', 'ಜನಪದ ಗಾಯಕ ಶ್ರೇಷ್ಠ', 'ಜನಪದ ಗಾಯಕ ರತ್ನ' ಮುಂತಾದ ಹೆಗ್ಗಳಿಕೆಯನ್ನು ತಂದುಕೊಟ್ಟಿದೆ.

ಸುಬ್ಬಮ್ಮನವರು

ಬೆಟ್ಟದಬೀಡು ಸಿದ್ದಶೆಟ್ಟರ ಸಹಧರ್ಮಿಣಿ ಸುಬ್ಬಮ್ಮನವರು ಈ ಸಂಕಲನದ 'ಹೇಮರೆಡ್ಡಿ ಮಲ್ಲಮ್ಮ' ಎಂಬ ಕಥನಗೀತೆಯನ್ನು ಹಾಡಿದ್ದಾರೆ.

ನಂಜನಗೂಡು ತಾಲ್ಲೂಕಿನ ಹೊರಳ್ಳಿ ಗ್ರಾಮದ ಸಿದ್ದಶೆಟ್ಟರು ತಾಯಿಯೊಡನೆ ಮೈಸೂರು ತಾಲ್ಲೂಕಿನ ಉದ್ಬೂರಿಗೆ ಬಂದು ನೆಲಸಿದರು. ತಾಯಿಯು ತೀರಿಕೊಂಡ ಮೇಲೆ ಒಂಟಿಯಾದ ಸಿದ್ದಶೆಟ್ಟರು ಸಹಗಾಯಕರೊಡನೆ ಊರೂರ ಮೇಲೆ ಕೋರಣ್ಯಕ್ಕೆ ಹೋಗುತ್ತಿರುವಾಗ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬೆಟ್ಟದಬೀಡಿಗೆ ಬಂದರು. ಅಲ್ಲಿ ಸಿದ್ದಶೆಟ್ಟರು ಕೋಗಿಲೆಯಂತೆ ದನಿಯೆತ್ತಿ ಹಾಡುವುದನ್ನು ಮೆಚ್ಚಿದ ಪಟೇಲ್ ನೀಲೇಗೌಡರು ಆಗಾಗ ತಮ್ಮ ಊರಿಗೆ ಬಂದು ಕಥೆ ಮಾಡಿ ಹೋಗುವಂತೆ ಹೇಳಿ ಮನಃತೃಪ್ತಿಯಾಗುವಷ್ಟು ದವಸಧಾನ್ಯ, ದುಡ್ಡುಕಾಸು ಕೊಟ್ಟು ಕಳಿಸಿದರು. ನೀಲೇಗೌಡರ ಔದಾರ್ಯ, ವಿಶ್ವಾಸಗಳಿಗೆ ಸೋತ ಸಿದ್ದಶೆಟ್ಟರು ಆಗಾಗ ಬೆಟ್ಟದಬೀಡಿಗೆ ಬಂದು ಹೋಗುತ್ತಿದ್ದರು.

ಆಗ ಸಿದ್ದಶೆಟ್ಟರಿಗೆ ಹದಿನೆಂಟರ ಹರೆಯ. ಅವರು ಒಬ್ಬೊಂಟಿ ಎಂಬ ವಿಚಾರವನ್ನು ತಿಳಿದುಕೊಂಡ ನೀಲೇಗೌಡರು ತಮ್ಮ ಊರ ಪ್ರಮುಖರೊಡನೆ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದರು. ಅವರು ಸಿದ್ದಶೆಟ್ಟರನ್ನು ಹತ್ತಿರಕ್ಕೆ ಕರೆದು,

"ಸಿದ್ದಪ್ಪ, ನೀನು ನಮ್ಮೂರಲ್ಲೇ ನಮ್ಮ ಜೊತೇಲೇ ಇದ್ದುಬಿಡು. ನೀನು ನಮ್ಮ ಜನರ ಮಧ್ಯದಲ್ಲಿ ಇರ್ಬೇಕು ಅನ್ನೋದು ನಮ್ಮ ಆಸೆ. ನಿನಗೆ ನಮ್ಮ ಮನೆ ಒಸಾರದಲ್ಲಿ ಉಳುಕೊಳಕೆ ಜಾಗ ಕೊಡ್ತೀನಿ. ಅಷ್ಟೇ ಅಲ್ಲ, ನಮ್ಮ ಊರಲ್ಲಿರೋ ನಂಜಯ್ಯಶೆಟ್ಟರ ಕಿರಿಮಗಳು ಸುಬ್ಬಮ್ಮ ಇದ್ದಾಳಲ್ಲ; ಅವ್ಳನ್ನ ನಿನಗೆ ಮದುವೆ ಮಾಡ್ಕೊಡ್ತೀವಿ. ನಿನಗೆ ಒಪ್ಪುಗೆಯ?" ಎಂದು ಕೇಳಿದರು.

ಸಿದ್ದಶೆಟ್ಟರು ದಿಙ್ಮೂಢರಾಗಿ ಕುಳಿತು ಪಟೇಲರ ಮುಖವನ್ನು ದಿಟ್ಟಿಸುತ್ತ ಫಳಫಳ ಕಣ್ಣೀರು ಸುರಿಸಿಬಿಟ್ಟರು. ಏನು ಮಾತಾಡಬೇಕೆಂಬುದೇ ತಿಳಿಯದಂತಾಗಿ ಕುತ್ತಿಗೆ ಕಟ್ಟಿಬಂತು. ಸಿದ್ದಶೆಟ್ಟರು ಪಟೇಲರ ಪಾದಗಳಿಗೆ ಬಿದ್ದು

"ಗೌಡ್ರೆ, ತಾವು ಮನುಸ್ರಲ್ಲ. ಸಾಕ್ಷಾತ್ ದೇವ್ರು. ನೀವು ನನಗೆ ತಂದೆ ಸ್ಥಾನದಲ್ಲಿದ್ದೀರಿ. ನಾನು ನಿಮ್ಮ ಮಗ. ನೀವು ಕಾಲಿನಲ್ಲಿ ತೋರಿದ್ದ ನಾನು ತಲೆಲ್ಹೊತ್ತು ನಡುಸ್ತೀನಿ."

"ಸಿದ್ದಪ್ಪ, ಆಮೇಲೆ ಪಟೇಲರು ನನುಗೆ ಅನ್ಯಾಯ ಮಾಡುದ್ರು ಅಂತ ಹೇಳಬಾರ್ದು. ಅದಕ್ಕೆ ಮೊದಲಿಗೆ ಒಂದು ಮಾತ್ಹೇಳ್ತೀನಿ. ನಮ್ಮೂರ ನಂಜಯ್ಯಶೆಟ್ಟಿಗೆ ಮಕ್ಕಿರ್ನಿಲ್ಲ. ಮಕ್ಕು ಫಲ ಕೇಳಕೆ ಅಂತ ಅವರೊಂದು ಸಲ ರಾವಣೆ (ಮಳವಳ್ಳಿ ತಾಲ್ಲೂಕಿನಲ್ಲಿರುವ ಒಂದು ಕ್ಷೇತ್ರ) ಸಿದ್ದೇಶ್ವರನ ಜಾತ್ರೆಗೆ ಹೋಗಿದ್ರು. ಆ ಜಾತ್ರೇಲಿ ಯಾರೋ ಎರಡು ಹೆಣ್‌ಮಕ್ಕುಳ್ನ ಬಿಟ್ಟುಬುಟ್ ಹೋಗಿದ್ರಂತೆ. ಅಳ್ತಾ ನಿಂತಿದ್ದ ಆ ಮಕ್ಕುಳ್ನ ಯಾರೂ ಕೇಳೋರೇ ದಿಕ್ಕಿರ್ನಿಲ್ಲ. ಆಗ ಈ ಗಂಡ-ಹೆಂಡ್ತೀರಿಬ್ರೂ ಒಂದೊಂದ್ ಮೊಗಾ ಎತ್ಕೊಂಡು ಆ ದಿನವೆಲ್ಲ ಜಾತ್ರೇಲಿ ಓಡಾಡುದ್ರಂತೆ. ಯಾರೂ ಆ ಮಕ್ಕುಳ್ನ ನಮ್ಮವು ಎನ್ನದಿದ್ದಾಗ ಗಂಡ-ಹೆಂಡ್ತಿ ಆ ಮಕ್ಕುಳ್ನ ತಂದು ಸಾಕುದ್ರು. ಹಿರಿಯೋಳು ಚಾಮವ್ವ. ಅವ್ಳನ್ನ ಇದೇ ಊರಿನ ಪುಟ್ಟಶೆಟ್ಟರಿಗೆ ಕೊಟ್ಟು ಮದುವೆ ಮಾಡದೆ; ಕಿರಿಯೋಳು ಸುಬ್ಬಮ್ಮ. ಒಳ್ಳೇ ಹುಡುಗಿ, ಗುಣವಂತೆ, ನಿನಗೆ ಒಪ್ಪಾ ಹೇಳು?"

"ತಂದೆ ಮಾತ ಮಗ ಕೇಳದೇ ಇದ್ರೆ ಅವುರೆಂತೆ ತಂದೆ-ಮಗ ಗೌಡ್ರೆ."

ಪಟೇಲ್ ನೀಲೇಗೌಡರು ತಮ್ಮ ಕುಲಸ್ಥರನ್ನೆಲ್ಲ ಸೇರಿಸಿ ತಾವೇ ನಿಂತು ಸುಬ್ಬಮ್ಮ-ಸಿದ್ದಶೆಟ್ಟಿಯವರ ಮದುವೆಯನ್ನು ಜನ ಮೆಚ್ಚುವಂತೆ ಮಾಡಿದರು. ತಮ್ಮ ಮನೆ ವಸಾರದಲ್ಲಿಯೇ ಆ ದಂಪತಿಗಳಿಗೆ ವಸತಿ ಕಲ್ಪಿಸಿಕೊಟ್ಟರು. ಹೀಗೆ ಸುಬ್ಬಮ್ಮ-ಸಿದ್ದಶೆಟ್ಟರ ಸಂಸಾರದ ಹಣತೆ ನೀಲಗೌಡರ ವಸಾರದಲ್ಲಿ ಬೆಳಗತೊಡಗಿತು.

ಸಿದ್ದಶೆಟ್ಟರ ಸಹಧರ್ಮಿಣಿ ಸುಬ್ಬಮ್ಮನವರು ಸಾಧ್ವಿ ಶಿರೋಮಣಿ. ಸಿದ್ದಶೆಟ್ಟರ ಸ್ವಭಾವಗಳಿಗೆ ಸಮಸ್ಪಂದಿಯಾಗಿ ಸಂಸಾರವನ್ನು ಎಂಥ ಸಂಕಷ್ಟ ಸ್ಥಿತಿಯಲ್ಲೂ ಸರಿದೂಗಿಸಿಕೊಂಡು ಹೋಗಬಲ್ಲ ಸದ್ಗೃಹಿಣಿ. ಗಂಡ ಕತೆ ಮಾಡಲು ಅಥವಾ ಉಪದಾನ ಮಾಡಲು ಊರೂರ ಮೇಲೆ ಹೋದರೆ ಸುಬ್ಬಮ್ಮನವರು ಅವರಿವರ ಮನೆಗಳಲ್ಲಿ ಬೀಸುವ, ಕುಟ್ಟುವ, ದವಸ-ಧಾನ್ಯಗಳನ್ನು ಶುಚೀಗೊಳಿಸುವ, ಮಕ್ಕಳು-ಮರಿಗಳಿಗೆ ನೀರ್ಹುಯ್ಯುವ, ಹೆರಿಗೆ ಮಾಡಿಸುವ, ಬಾಣಂತನ ಮಾಡುವ, ಗೆಣೆಕಾತಿಯರೊಡನೆ ಕಂಡವರ ಹೊಲಗದ್ದೆ ತೋಟಗಳ ಬೆಳಸಾಯದ ಕೂಲಿ ಮಾಡುವ ಕೆಲಸಗಳಲ್ಲಿ ಬಂದ ಅಷ್ಟಿಷ್ಟು ದವಸ-ಧಾನ್ಯ ದುಡ್ಡುಕಾಸಿನಿಂದ ಸಂಸಾರವನ್ನು ನಿಭಾಯಿಸುತ್ತಿದ್ದರು. ಸಹನೆಯ ಸೊಡರಿನಂತಿದ್ದ ಸುಬ್ಬಮ್ಮನವರನ್ನು ಪಡೆದ ಪುಣ್ಯಾತ್ಮಾಲಿ ಸಿದ್ದಶೆಟ್ಟರು ಎನ್ನುವಷ್ಟರಮಟ್ಟಿಗೆ ಸುಬ್ಬಮ್ಮನವರು ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು.

೧೯೭೬ರಲ್ಲಿ ನಾನು ಮಾನಸಗಂಗೋತ್ರಿಯ ಉಪನ್ಯಾಸಕರ ವಸತಿ ಎಲ್-೨ಳರಲ್ಲಿದ್ದಾಗ ಈ ದಂಪತಿಗಳು ನಮ್ಮ ಮನೆಗೆ ಬಂದಿದ್ದರು. ಆ ಸಂದರ್ಭದಲ್ಲಿ ಸುಬ್ಬಮ್ಮನವರು ಒಬ್ಬ ಗಾಯಕಿ ಎಂದು ತಿಳಿದುಬಂತು. ಆ ದಿನ ಅವರು ಹಾಡಿದ ಕಥನಗೀತೆ 'ಹೇಮರೆಡ್ಡಿ ಮಲ್ಲಮ್ಮ' ಈ ಸಂಕಲನದಲ್ಲಿ ಸೇರಿದೆ.

ಜೋಪ್ಡಿ ಮಾದಯ್ಯ

ಮೈಸೂರು ನಗರದ ಕೃಷ್ಣಮೂರ್ತಿಪುರಂ ಬಲ್ಲಾಳ್ ಸರ್ಕಲ್‌ನ್ನು (ಅಶೋಕ್ ಸರ್ಕಲ್) ಹಾದು ಬರುವ ನ್ಯೂಕಾಂತರಾಜ ಅರಸ್ ರಸ್ತೆಯಲ್ಲಿ ರೈಲ್ವೆ ಅಂಡರ್ ಬ್ರಿಡ್ಜ್‌ನ ಮೂಲಕ ಕನ್ನೇಗೌಡನ ಕೊಪ್ಪಲನ್ನು ಪ್ರವೇಶಿಸುವ ಮೊದಲಿಗೆ ಬಿಡ್ಡಿನ ಬಲಕ್ಕೆ

(ಉತ್ತರದ ಕಡೆಗೆ) ಇತ್ತೀಚೆಗೆ ಕಟ್ಟಿರುವ ಚಾಮುಂಡೇಶ್ವರಿ ದೇವಾಲಯವಿದೆ; ಎಡಕ್ಕೆ (ದಕ್ಷಿಣದ ಕಡೆಗೆ) ಒತ್ತಿಯಲ್ಲೆ ೧೯೭೨ರ ಅವಧಿಯಲ್ಲಿ ಒಂದು ಗುಡಿಸಲಿತ್ತು. ಈಗ ಅಲ್ಲಿ ಆ ಗುಡಿಸಲಿಲ್ಲ. ಬದಲಾಗಿ ಅಲ್ಲಿಂದ ಜಯನಗರ ಬಡಾವಣೆಗೆ ಸೇರಿದ ಒಂದು ರಸ್ತೆ ರೈಲ್ವೆ ಹಳಿಗೆ ಸಮಾನಾಂತರವಾಗಿ ಜಯನಗರ ಗೇಟ್ ಕಡೆಗೆ ಹೋಗುತ್ತದೆ. ಬಹುಶಃ ಆ ಗುಡಿಸಲು ನಗರಪಾಲಿಕೆಯವರಿಂದ ಎತ್ತಂಗಡಿಯಾದ ಮೇಲೆ ಜೋಪ್ಡಿ ಮಾದಯ್ಯನವರು ಜೋಪ್ಡಿಯನ್ನು ಕಳೆದುಕೊಂಡು ಎಲ್ಲಿ ಹೋದರೋ ಏನೋ ತಿಳಿಯಲೇ ಇಲ್ಲ. ಅವರು ಇಲ್ಲಿದ್ದ ಜೋಪ್ಡಿಯಲ್ಲಿ ವಾಸವಿದ್ದುದರಿಂದ ಎಲ್ಲರೂ ಅವರನ್ನು ಜೋಪ್ಡಿ ಮಾದಯ್ಯ ಎಂದೇ ಕರೆಯುತ್ತಿದ್ದರು.

ಜೋಪ್ಡಿ ಮಾದಯ್ಯನವರ ಮೂಲನೆಲೆ ಮೈಸೂರು ತಾಲ್ಲೂಕಿನ ಮದ್ದೂರು ಗ್ರಾಮ. ತಂದೆ ಮಾದಯ್ಯ ತಾಯಿ ಸಂಬಮ್ಮ. ಚಿಕ್ಕ ವಯಸ್ಸಿನಲ್ಲೆ ತಂದೆಯನ್ನು ಕಳೆದುಕೊಂಡ ಮಗನನ್ನು ಕಟ್ಟಿಕೊಂಡು ಕೂಲಿನಾಲಿ ಮಾಡಿ ಜೀವನ ಹಾಕುತ್ತಿದ್ದ ಸಂಬಮ್ಮ ಮಗ ಕೈಗೆ ಬರುವ ಹೊತ್ತಿಗೆ ಇಹಲೋಕವನ್ನು ತ್ಯಜಿಸಿದರು. ತಾಯಿ-ತಂದೆಗಳಿಬ್ಬರನ್ನೂ ಕಳೆದುಕೊಂಡ ಮಾದಯ್ಯನನ್ನು ಅವರ ಸೋದರಮಾವ ನಿಂಗಯ್ಯನವರು ಮೈಸೂರಿಗೆ ಕರೆದುಕೊಂಡು ಬಂದರು.

ನಸುಗಪ್ಪಾದರೂ ಕಣ್ಸೊಪ್ಪುವ ನೀಳಕಾಯದ ಸುಂದರ ತರುಣ ಮಾದಯ್ಯನವರು ನಾಟಕಗಳಲ್ಲಿ ಶ್ರೀರಾಮ ಶ್ರೀಕೃಷ್ಣನ ಪಾತ್ರಗಳನ್ನು ಮಾಡಲು ಹೇಳಿ ಮಾಡಿಸಿದಂತಿದ್ದರು. ಯಕ್ಷಗಾನ, ನಾಟಕಗಳಲ್ಲಿ ಬಣ್ಣ ಹಾಕಿಕೊಂಡು ಕುಣಿಯುತ್ತಿದ್ದ ಈ ತರುಣ ತೇಜಸ್ವಿ ಹೆಣ್ಣುಮಕ್ಕಳುಳ್ಳ ಹತ್ತಾರು ತಂದೆ ತಾಯಿಗಳ ಕಣ್ಣಿಗೆ ಬಿದ್ದರು. ಆದರೂ ಜೀವನೋಪಾಯಕ್ಕೆ ಒಂದು ದಾರಿಯಾಗದೆ ಮದುವೆ ಮಾಡಬಾರದೆಂದು ನಿರ್ಧರಿಸಿದ ಮಾವ ನಿಂಗಯ್ಯನವರು ಬಾಲಕನಿಗೆ ಹೊಮ್ಮರಗಹಳ್ಳಿ ಪುರಸಕಾರಿ, ದಂಡಿಕೆರೆ ಕರಿಯಪ್ಪ, ಕ್ಯಾತಮಾರನಹಳ್ಳಿ ಮಾದಯ್ಯನವರ ಸಮಕ್ಷಮ ದೇವರಗುಡ್ಡನ ದೀಕ್ಷೆ ಕೊಡಿಸಿ ಈ ಮೂವರು ಗುರುಗಳ ಒಡನಾಟಕ್ಕೆ ಅನುವು ಮಾಡಿಕೊಟ್ಟರು. ಇವರೆಲ್ಲರ ಜೊತೆ ಕೋರಣ್ಯಕ್ಕೆ ಹೋಗುತ್ತ ಗುರುಗಳ ಕಾರುಣ್ಯಕ್ಕೆ ಪಾತ್ರರಾಗಿ ಮಲೆ ಮಾದೇಶ್ವರಸ್ವಾಮಿ ಕಥೆಯನ್ನು ಕರತಲಾಮಲಕ ಮಾಡಿಕೊಂಡರು. ಅಲ್ಲದೆ ತಂಬೂರಿ ನಾದಕ್ಕೆ ಮರುಳಾಗಿ ಮಳವಳ್ಳಿ ಪೆದ್ದೊಡೆಯ, ಚಿಕ್ಕರಾಚಪ್ಪ ಮೊದಲಾದವರಲ್ಲಿ ಶಿಷ್ಯವೃತ್ತಿಯನ್ನು ಕೈಗೊಂಡು ನೀಲಗಾರ ಸಂಪ್ರದಾಯದ ಕಾವ್ಯಗಳನ್ನೆಲ್ಲ ಕೊಳ್ಳೆ ಹೊಡೆದರು.

ಮುದ್ದು ಹುಡುಗನಿಗೆ ಮದುವೆ ಮಾಡಬೇಕೆಂದಾಗ ಹೆಣ್ಣುಮಕ್ಕಳು ಇದ್ದಬದ್ದವರೆಲ್ಲ ಎದ್ದುಬಿದ್ದು ಬಂದರೂ ಮದ್ದೂರಿನ ಸಿದ್ದಯ್ಯನ ಮಗಳು ಸಿದ್ದಮ್ಮ ಮಾದಯ್ಯನವರ ಮನಗೆದ್ದು ಮುದ್ದಿನ ಮಡದಿಯಾದರು. ಆದರೆ ಹಬ್ಬಹರಿದಿನಗಳಲ್ಲಿ, ಜಾತ್ರೆ-ಉತ್ಸವಗಳಲ್ಲಿ, ಮದುವೆ-ಮುಂಜಿಗಳಲ್ಲಿ ತಿಥಿಗತಿಗಳಲ್ಲಿ ಶನಿಕಥೆ ಓದಿಸುವೆಡೆಗಳಲ್ಲಿ ಭಾಗವಹಿಸುತ್ತಿದ್ದ ಮೋಹಕ ಮಾದಯ್ಯನವರನ್ನು ಕಂಡು ಬೆರಗಾದ ಮರುಳಾದ ಮನಸಾರೆ ಮೆಚ್ಚಿದ ಮದನಿಕೆಯರ ಜೊತೆಗಿನ ಅವರ ವರ್ಣರಂಜಿತ ರೋಚಕ ಬದುಕು ಸುಮಧುರ ಸುಂದರ ಶೃಂಗಾರ ರಸೋದ್ದೀಪಿತ ಮಹಾಕಾವ್ಯದ ಒಂದು ಬೃಹತ್ಸಂಪುಟ.

ಜೋಪ್ಡಿ ಮಾದಯ್ಯನವರಿಗೆ ಹುಟ್ಟಿದ ಮಕ್ಕಳು ಐದು. ಆದರೆ ಉಳಿದವನು ಒಬ್ಬನೇ ಒಬ್ಬ ಮಗ. ಅವನ ಹೆಸರು ಎಂ. ಮಾದಯ್ಯ. ರೈಲ್ವೆ ವರ್ಕ್ಸ್‌ಷಾಪ್‌ನಲ್ಲಿ ಕೆಲಸಕ್ಕಿದ್ದ ಅವರು ತಂದೆ-ತಾಯಿಗಳ ಜೊತೆಗಿರದೆ ಗಾಂಧೀನಗರದಲ್ಲಿದ್ದ ಹೆಂಡತಿ ಮನೆಯಲ್ಲಿದ್ದರು.

ಜಂಬೂಮತಸ್ಥ ಜೋಪ್ಡಿ ಮಾದಯ್ಯನವರು ಅಕ್ಷರ ಬಲ್ಲವರಲ್ಲ. ಅವರ ಜೀವನೋಪಾಯಕ್ಕೆ ಇದ್ದ ಏಕೈಕ ಆಸರೆಯೆಂದರೆ ಕೋರಣ್ಯ ಮಾಡುವುದು; ಯಾರಾದರೂ ಕರೆದಲ್ಲಿಗೆ ಹೋಗಿ ಕತೆ ಮಾಡುವುದು. ಹೆಂಡತಿ ಸಿದ್ದಮ್ಮ ತರಕಾರಿ ಗೂಡೆ ಹೊತ್ತುಕೊಂಡು ಮನೆಮನೆಗೆ ತಿರುಗಿ ಮಾರಿ ಬರುತ್ತಿದ್ದ ಪುಡಿಗಾಡಿಸಿನಿಂದ ಹೇಗೋ ಅವರ ಜೀವನ ನಡೆಯುತ್ತಿತ್ತು.

ನನ್ನನ್ನು ಅತಿಯಾಗಿ ಹಚ್ಚಿಕೊಂಡಿದ್ದ ಈ ದಂಪತಿಗಳು ನಾನು ಮಾನಸಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿ ನಿಲಯದಲ್ಲಿದ್ದಾಗ ನನಗಾಗಿ ಹೆಚ್ಚಟ್ಟೆ ಮಾಡಿಕೊಂಡು ನನ್ನ ಕೊಠಡಿಗೆ ಬಂದು ಊಟ ಮಾಡಿಸಿ ಸಂತೋಷಪಟ್ಟು ಹೋದರು. ಇದಾದ ಒಂದೆರಡು ಬಾರಿ ಅವರ ಗುಡಿಸಿಲಿಗೇ ಕರೆದುಕೊಂಡು ಹೋಗಿ ಊಟಲಿಕ್ಕೆ ಆನಂದಿಸಿದ್ದರು.

ಆಸ್ತಮಾದಿಂದ ನರಳುತ್ತಿದ್ದ ಇವರು ಬೇರೆ ಬೇರೆ ಕಡೆಗಳಲ್ಲೆಲ್ಲ ಔಷಧವನ್ನು ತೆಗೆದುಕೊಂಡಿದ್ದರೂ ಫಲಕಾರಿಯಾಗಿರಲಿಲ್ಲ. ಗಂಡಹೆಂಡಿರಿಬ್ಬರೂ ದಿನವೆಲ್ಲ ದುಡಿದರೂ ಒಂದು ಹೊತ್ತಿನ ಗಂಜಿಗೂ ಸಾಲುತ್ತಿರಲಿಲ್ಲವಾದ್ದರಿಂದ ಅವರ

ಬದುಕು ದುಸ್ತರವಾಗಿತ್ತು. ಈ ಮಹಾನ್ ಕಲಾವಿದ ಇಹಲೋಕವನ್ನು ತ್ಯಜಿಸಿದ ಸಂಗತಿ ಜಾನಪದ ವಿದ್ಯತ್‌ಲೋಕವನ್ನು ಮುಟ್ಟಲೇ ಇಲ್ಲ.

"ಚಿಕ್ಕ ವಯಸ್ಸಲ್ಲಿ ನಾನು ಹಾಡ್ತಿದ್ರೆ ಕೋಗಿಲೆ ಹಂಗೆ ಹಾಡ್ತಿಯಲ್ಲಪ್ಪ ಅನ್ನೋರು. ಈಗ್ನೋಡಿ ಹಾಳ್ ದಮ್ಮು ನನ್ನ ಹಾಡಕಾಗ್ದಂಗೆ ಮಾಡ್ಬುಟದೆ" ಎಂದು ನೊಂದು ನುಡಿಯುತ್ತಿದ್ದ ಜೋಪ್ಡಿ ಮಾದಯ್ಯನವರು ಮಾಧ್ವೇಶ್ವರನ ಕಥೆಯ ವಿಚಾರಕ್ಕೆ ಬಂದಾಗ,

"ಮಾದಪ್ಪನ ಕತೆಯ ಈಗ್ಯಾರೂ ಹಳಗನ್ನಡದಲ್ ಹೇಳೋದಿಲ್ಲ. ಏನಿದ್ರೂ ತಳುಕಿನ ಮ್ಯಾಲೆ ಕೆಲ್ಸ ಮಾಡ್ತರೆ" ಎಂಬುದಾಗಿ ೧೯೭೨ರ ಅವಧಿಯಲ್ಲಿ ಹೇಳಿದ್ದರು. ಮಾದೇಶ್ವರನ ಕಥೆಯನ್ನು ಐದು ವರ್ಷಗಳ ಕಾಲ ಶಿಷ್ಯವೃತ್ತಿಯಲ್ಲಿದ್ದು ಕಲಿತರಂತೆ. ಇದರ ಜೊತೆಗೆ ಹತ್ತಾರು ಕಾವ್ಯಗಳನ್ನು ಹಾಡುತ್ತಿದ್ದರಾದರೂ 'ಮೈದಾಳ ರಾಮಣ್ಣ' ಮತ್ತು 'ಕುಂಬಾರ ಗುಂಡಯ್ಯ' ಕಾವ್ಯಗಳನ್ನು ಹಾಡುವುದರಲ್ಲಿ ಸ್ಪೆಷಲಿಸ್ಟ್ ಎನಿಸಿದ್ದರು. ಜೋಪ್ಡಿ ಮಾದಯ್ಯನವರ ಸ್ಮರಣಾರ್ಥವಾಗಿ ಉಳಿದಿರುವ ಈ ಎರಡೂ ಕಾವ್ಯಗಳೂ ಈ ಸಂಕಲನದಲ್ಲಿ ಸೇರಿವೆ.

ಈ ಎಲ್ಲಕ್ಕಿಂತ ಹೆಚ್ಚಾಗಿ ಜೋಪ್ಡಿ ಮಾದಯ್ಯನವರು ಮಾಡಿದ ಮಹದುಪಕಾರವೆಂದರೆ ಜನಪದ ವ್ಯಾಸನೆಂದೇ ಖ್ಯಾತರಾಗಿರುವ ಬೆಟ್ಟದಬೀಡು ಸಿದ್ದಶೆಟ್ಟರನ್ನು ಮಾನಸಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿನಿಲಯದಲ್ಲಿದ್ದ ನನ್ನ ಕೊಠಡಿಗೆ ಕರೆದುಕೊಂಡು ಬಂದು ಪರಿಚಯಿಸಿದ್ದು.

ಪುಟ್ಟಮಾದಯ್ಯ

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಕೌಲಂದೆ ಹೋಬಳಿ ಕಾರೇಪುರದ ಪುಟ್ಟಮಾದಯ್ಯನವರು ನೀಲಗಾರ ಸಂಪ್ರದಾಯದ ಕಲಾವಿದರಲ್ಲಿ ಅಗ್ರಮಾನ್ಯರು. ಇವರ ತಂದೆ ಸಿದ್ದಯ್ಯನವರು ತಾಯಿ ಚಾಮರಾಜನಗರ ತಾಲ್ಲೂಕಿನ ಬದನಗುಪ್ಪೆಯ ಮಾದಮ್ಮನವರು. ಈ ದಂಪತಿಗಳಿಗೆ ಒಂಬತ್ತು ಜನ ಮಕ್ಕಳು. ಅವರೆಂದರೆ ಬಸಮ್ಮ, ಸಿದ್ದಲಿಂಗಯ್ಯ, ಮಾದಯ್ಯ, ಮಾರಯ್ಯ, ಸಿದ್ದಯ್ಯ, ಪುಟ್ಟಸಿದ್ದಯ್ಯ, ಗುರುಸಿದ್ದ, ಮರಿಸಿದ್ದ - ಈ ಎಲ್ಲ ಅಕ್ಕ-ಅಣ್ಣಂದಿರ ಪ್ರೀತಿಯ ತಮ್ಮನೇ ನಮ್ಮ ಜನಪದ ಗಾಯಕ ಶ್ರೇಷ್ಠ ಪುಟ್ಟಮಾದಯ್ಯನವರು.

ತಂದೆ ಸಿದ್ದಯ್ಯನವರಿಗೆ ಕಾರೇಪುರದಲ್ಲಿ ೧೨ ಎಕರೆ ಹೊಲ ಇತ್ತು. ವ್ಯವಸಾಯಗಾರರಾಗಿದ್ದರೂ ಮಂಟೇಸ್ವಾಮಿಯವರ ಪರಮಭಕ್ತರಾಗಿದ್ದ ಇವರಿಗೆ ನೀಲಗಾರ ದೀಕ್ಷೆಯಾಗಿತ್ತು. ಅವರು ತಂಬೂರಿ ಹಿಡಿದು ಹಾಡಲು ಕುಳಿತರೆಂದರೆ ಊರಿಗೆ ಊರೇ ಗಂಧರ್ವಲೋಕವಾಗುತ್ತಿತ್ತು. ನೀಲಗಾರರಾಗಿ ಅವರಿಗೆ ದೊಡ್ಡ ಹೆಸರಿತ್ತು. ಸಿದ್ದಯ್ಯನವರ ಅಕ್ಕ ಮಾದಮ್ಮ; ಭಾವ ದಾಸಯ್ಯ. ಇವರ ಮಗ ದ್ಯಾಮಳ್ಳಿ (ದೇಮಹಳ್ಳಿ, ಚಾಮರಾಜನಗರ ತಾಲ್ಲೂಕು) ದೇವರಗುಡ್ಡ ಎಂದೇ ಪ್ರಖ್ಯಾತರಾಗಿದ್ದ ದ್ಯಾಮಳ್ಳಿ ಪುಟ್ಟಮಾದಯ್ಯನವರು. ಇವರೇ ಕಾರೇಪುರದ ಪುಟ್ಟಮಾದಯ್ಯನವರಿಗೆ ತಮ್ಮ ಗಾಯನ ಕಲೆಯನ್ನು ಧಾರೆಯೆರೆದ ದೀಕ್ಷಾಗುರು. ಪುಟ್ಟಮಾದಯ್ಯನವರಾದರೋ ಬೆರಳು ತೋರಿದರೆ ಹಸ್ತವನ್ನೇ ನುಂಗುವಷ್ಟು ಚತುರಮತಿ. ಹಾಗಾಗಿ ಗುರುವಿನಲ್ಲಿದ್ದ ವಿದ್ಯೆಯನ್ನೆಲ್ಲ ಕರತಲಾಮಲಕ ಮಾಡಿಕೊಂಡು ಗುರುವಿನಿಂದ ಸೈ ಎನಿಸಿಕೊಂಡರು. ಗುರುವಿನಲ್ಲಿದ್ದ ಕಾವ್ಯಸಂಪತ್ತನ್ನೆಲ್ಲ ತಮ್ಮದನ್ನಾಗಿಸಿಕೊಂಡರು.

ಪುಟ್ಟಮಾದಯ್ಯನವರು ಹದಿನೆಂಟು ವರ್ಷದ ಯುವಕನಾಗಿದ್ದಾಗ ಪುಟ್ಟಸಿದ್ದಮ್ಮ ಎಂಬುವರನ್ನು ಮದುವೆಯಾದರು. ಸಾಧ್ವೀಶಿರೋಮಣಿಯಾಗಿದ್ದ ಪುಟ್ಟಸಿದ್ದಮ್ಮನವರು ಪುಟ್ಟಮಾದಯ್ಯನವರ ಮನೋಭಾವಗಳಿಗೆ ಸಮಸ್ಪಂದಿಯಾದವರೂ ಅನುರೂಪವೂ ಅನುಗುಣರೂ ಆಗಿದ್ದು, ಅವರ ದಾಂಪತ್ಯ ಆನಂದ ಸಾಗರವಾಗಿತ್ತು.

ಈ ದಂಪತಿಗಳ ಪುಣ್ಯಗರ್ಭದಲ್ಲಿ ಜನಿಸಿದ ೧೨ ಮಕ್ಕಳಲ್ಲಿ ನಾಲ್ಕು ಚಿಕ್ಕವಯಸ್ಸಿನಲ್ಲೆ ತೀರಿಕೊಂಡವು. ಉಳಿದವರೆಂದರೆ ರಾಚಪ್ಪ, ಸಾಂಕರಿ, ಕೆಂಪಮ್ಮ, ಚನ್ನೋಜಮ್ಮ, ರಾಜಮ್ಮ, ಮರಿತಾಯಮ್ಮ, ಸ್ವಾಮಿ ಮತ್ತು ಸಿದ್ದೇಶ ಎಂಬುವರು. ಈ ಎಲ್ಲರೂ ತಂದೆ-ತಾಯಿಗಳ ಆದರ್ಶಮಾರ್ಗದಲ್ಲಿ ನಡೆದು ಒಳ್ಳೆಯ ಸ್ಥಾನಮಾನಗಳಲ್ಲಿದ್ದು ಪುಟ್ಟಮಾದಯ್ಯನವರ ಹೆಸರಿಗೆ ತಕ್ಕ ಮಕ್ಕಳಾಗಿ ಖ್ಯಾತರಾಗಿದ್ದಾರೆ.

ಪುಟ್ಟಮಾದಯ್ಯನವರು ಮಹಾನ್ ಕಲಾವಿದರೆಂಬ ಖ್ಯಾತಿ ಮೈಸೂರು, ಮಂಡ್ಯ, ಬೆಂಗಳೂರು, ಚಾಮರಾಜನಗರ ಜಿಲ್ಲೆಗಳಲ್ಲೆಲ್ಲ ದಟ್ಟವಾಗಿ ಹರಡಿದ್ದ ಕಾಲ. ಈ ಪರ್ವ ಕಾಲದಲ್ಲಿ ಒಮ್ಮೆ ಮೈಸೂರು ಮಹಾರಾಜರು ಬೊಪ್ಪಗೌಡನಪುರಕ್ಕೆ ಬಂದಿದ್ದರು. ಅವರು ಬೊಪ್ಪಗೌಡನಪುರದ ಸ್ವಾಮಿಗಳೊಡನೆ ಮಾತಾಡುತ್ತ, ಮಾತಿನ ನಡುವೆ

"ನಾವು ಅರಸರು, ಸಿದ್ದಪ್ಪಾಜಿ ಅಕ್ಕಸಾಲಿಗರವನಂತೆ, ಅವನನ್ನ ಅರಸರು ಪೂಜೆ ಮಾಡೋದ್ಕೆ ಏನು ಕಾರಣ?" ಎಂದು ಪ್ರಶ್ನಿಸಿದರಂತೆ. ಅದಕ್ಕೆ ಮಠಾಧಿಪತಿಗಳಾಗಿದ್ದ ಅರಸಿನವರು

"ಅದರ ವಿಚಾರ ನಮಗೆ ಪೂರ ಗೊತ್ತಿಲ್ಲ. ಮುಂದಿನ ಸಲ ನೀವು ಬರೋದರೊಳಗೆ ಅದರ ಮೂಲ ಚೂಲವನ್ನೆಲ್ಲ ತಿಳಿದೋರ್ನ ವಿಚಾರಿಸಿ ಹೇಳ್ತೀವಿ" ಅಂದರಂತೆ. "ಆಗಲಿ" ಎಂದು ಹೇಳಿ ಮಹಾರಾಜರು ಹೊರಟು ಹೋದರು.

ಆ ಕೂಡಲೆ ಮಠದಸ್ವಾಮಿಗಳು ಮಠದ ಕಾರುಬಾರಿನಲ್ಲಿದ್ದ ಮಲ್ಲಪ್ಪಾಜಿ ಬಸವನ ಸಿದ್ದಪ್ಪ, ಛತ್ರಿವೆಂಕಟಪ್ಪ, ಅಡಿಗೆ ಕೆಂಪಣ್ಣ - ಈ ನಾಲ್ವರನ್ನೂ ಕರೆಸಿ,

"ಮಾರಾಜರು ಇಂತದೊಂದು ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಅವರು ಮುಂದಿನ ಸಲ ಮಠಕ್ಕೆ ಬರುವ ಹೊತ್ತಿಗೆ ನಾವು ಇದರ ಇತಿಹಾಸವನ್ನೆಲ್ಲ ತಿಳುಕೊಂಡು ಅವರಿಗೆ ಹೇಳಬೇಕು. ಆದ್ದರಿಂದ ಈ ಸಂಗ್ತೀನ ಯಾರಿಂದ ತಿಳೀಬಹುದು ಅನ್ನೋದ ಪತ್ತೆಮಾಡಿ" ಎಂದರು. ಅದಕ್ಕೆ ಈ ನಾಲ್ವರೂ

"ಬುದ್ಧಿ, ಈ ಕಥೆ ಏನಿದ್ರೂ ಮಂಟ್ಯೇದವರ ಬಾಯಲ್ಲಿ ಮಾತ್ರ ಕೇಳಿ ತಿಳ್ಕೋಬೇಕು. ಇದು ಪುಸ್ತಕದಲ್ಲೆಲ್ಲೂ ಇಲ್ಲ" ಎಂದರು.

"ಹಾಗಾದ್ರೆ ತಾಳಿನಿಂದ ತುದೀವರ್ಗೂ ಇದನ್ನೆಲ್ಲ ಬಲ್ಲೋರ್ನ ಕಂಡ್ಹಿಡೀರಪ್ಪ."

"ಬುದ್ಧಿ, ನಾವು ಸಾವಿರಾರು ಜನ ನೀಲಗಾರುರ್ನ ನೋಡಿದ್ದೀವಿ. ಅವರಲ್ಲಿ ಆ ಕಾರೇಪುರದ ಪುಟ್ಟಮಾದಯ್ಯ ಅವನಲ್ಲ - ಅವನು ಮಾತ್ರ - ಇದನ್ನೆಲ್ಲ ಹೇಳಬಲ್ಲ."

"ಹಾಗಾದ್ರೆ ಬೇಗನೆ ಅವನನ್ನ ಕರೆಸಿ" ಎಂದರು. ಆಗ ಬಸವನ ಸಿದ್ದಪ್ಪ ಜಾತ್ರೆನೆಲ್ಲ ಹುಡುಕಿ ತಡಕಿದರೂ ಪುಟ್ಟಮಾದಯ್ಯ ಸಿಗಲಿಲ್ಲ. ಯಾರೋ "ಪುಟ್ಟಮಾದಯ್ಯನವರು ನೆನ್ನೆನೆ ಊರಿಗೆ ಹೋದರು" ಎಂದು ಹೇಳಿದರು. ಬಸವನ ಸಿದ್ದಪ್ಪ ಸ್ವಾಮೀಜಿಯವರ ಆದೇಶದಂತೆ ಪುಟ್ಟಮಾದಯ್ಯನವರನ್ನು ಹುಡುಕಿಕೊಂಡು ಕಾರೇಪುರಕ್ಕೇ ಬಂದರು. ವಿಷಯವನ್ನು ತಿಳಿಸಿದರು. ಅದಕ್ಕೆ ಪುಟ್ಟಮಾದಯ್ಯನವರು,

"ಸ್ವಾಮಿ, ನನ್ನ ಜೊತೆಗೆ ಹಿಮ್ಮೇಳ ಕೊಡೋದಕ್ಕೆ ಒಬ್ಬ ಬೇಕು. ನನ್ನ ಶಿಷ್ಯ ರಾಜ ಅಂತ ಬನ್ನೂರುದಲ್ಲವುನೆ, ಅವುನ್ನ ಕರ್ಕೊಂಡು ನಾನು ಬತ್ತಿನಿ. ತಾವು ದಯಮಾಡಿ" ಎಂದು ಹೇಳಿಕಳಿಸಿದರು.

ಪುಟ್ಟಮಾದಯ್ಯನವರು ಬೊಪ್ಪಗೌಡನಪುರಕ್ಕೆ ಹೋಗಲು ಸಿದ್ಧತೆ ಮಾಡಿಕೊಂಡು, ಬನ್ನೂರಿಗೆ ಹೋಗಿ ಶಿಷ್ಯನನ್ನು ಕರೆದುಕೊಂಡು ಕೊನೆಗೂ ಬೊಪ್ಪಗೌಡನ ಪುರವನ್ನು ತಲುಪಿದರು.

ಮಠದಲ್ಲಿ ದೊಡ್ಡಬುದ್ಧಿಯವರು, ಅವರ ತಮ್ಮ ರಾಜಾಬುದ್ಧಿಯವರು, ಅವರಿಬ್ಬರ ಪತ್ನಿಯರು ಪುಟ್ಟಮಾದಯ್ಯನವರನ್ನು ನಿರೀಕ್ಷಿಸಿ ಕಾದು ಕುಳಿತಿದ್ದರು. ಬಂದ ಕಲಾವಿದರನ್ನು ಆದರದಿಂದ ಬರಮಾಡಿಕೊಂಡರು. ಊಟ ಉಪಚಾರಗಳಾದ ಮೇಲೆ ಕಥೆ ಮಾಡಲು ಹೇಳಿದರು.

ತಂಬೂರಿಯನ್ನು ಶ್ರುತಿ ಮಾಡಿಕೊಂಡ ಪುಟ್ಟಮಾದಯ್ಯನವರು ಮೊದಲಿಗೆ ಗಣಪತಿ ಸರಸ್ವತಿ ಮಂಟೇಸ್ವಾಮಿ, ರಾಜಪ್ಪಾಜಿ ಹಾಗೂ ಸಿದ್ದಪ್ಪಾಜಿಯವರ ಸ್ಮರಣೆ ಮಾಡಿ ಅನಂತರ ಕಥೆಯನ್ನು ಮಾರಳ್ಳಿಯಿಂದ ಪ್ರಾರಂಭಿಸಿದರು. ಅದು ಸಿದ್ದಪ್ಪಾಜಿಯ ಕಥೆಗೆ ತಳಹದಿ. ಅದನ್ನು ಕೇಳಿದ ಅರಸಿನವರು,

"ಇಷ್ಟೆಯೇನಪ್ಪ ಕಥೆ?" ಎಂದು ಕೇಳಿದರು.

"ಇಷ್ಟೆ ಅಂದ್ರೆ ಆದತ ಬುದ್ಧಿ. ಅದು ಬೆಳಗಾನ ನಿದ್ದೆಗೆಟ್ಟು ಕೇಳುದ್ರೆ ಒಂದು ವಾರುಕ್ಕೂ ಹೆಚ್ಚಾಯ್ತದೆ. ಅಷ್ಟು ದೊಡ್ಡ ಕಥೆ ಅದು" ಎಂದರು.

"ಆ ದೊಡ್ಡಕಥೆ ಕೇಳ್ಬೇಕು ಅಂತ್ಲೆ ನಿನ್ನ ಕರ್ದಿದ್ದು ಕಣಪ್ಪ. ನಾವು ಅರಸುಗಳು. ಆ ಸಿದ್ದಪ್ಪಾಜಿ ಆಚಾರ್ರೋನು. ಅವ್ರನ್ನ ನಾವು ಪೂಜೋದಕ್ಕೆ ಕಾರಣ ಏನು ಅನ್ನದ್ಕೆ ಆದಿಯಿಂದ ಈ ದಿನದವರ್ಗೂ ಇದ್ದುದನ್ನು ಇದ್ದಂಗೆ ಹೇಳಪ್ಪ" ಎಂದು ಕೇಳಿದರು.

ಪುಟ್ಟಮಾದಯ್ಯನವರು ಆ ರಾತ್ರಿಯೇ ಕಥೆಯನ್ನು ಪ್ರಾರಂಭಿಸಿ ಹತ್ತು ದಿನಗಳ ಪರಿಯಂತ ಹಾಡಿದರು. ಇದನ್ನೆಲ್ಲ ಕೇಳಿ ಪ್ರಸನ್ನರಾದ ಬುದ್ಧಿಯವರು

"ನಾವು ಗೊತ್ತುಗುರಿ ಇಲ್ದೆ ಪೂಜೆ ಮಾಡ್ತಿದ್ದೊ. ಈಗ ನಿನ್ನಿಂದ ಈ ಕಥೆ ಕೇಳಿದ ನಾವಲ್ಲಪ್ಪ ಗುರು ; ಇದರ ಬೇರು ತೋರಿದ ನೀವು ಗುರು!" ಎಂದು ಹೇಳಿ ಒಂದು ಹಸು, ಒಂದು ಕೋಟು, ೧೫ ಸೇರಕ್ಕಿ, ಮೂರು ಸೇರು ಬೇಳೆ, ೫ ತೆಂಗಿನ ಕಾಯಿ, ೨ ಸೇರು ಕಾರದಪುಡಿ - ಅಲ್ಲದೆ - ಪುಟ್ಟಮಾದಯ್ಯನವರ ಪತ್ನಿಗೆ ಒಂದು ಸೀರೆ ಒಂದು ರವಿಕೆ ಕಣವನ್ನೆಲ್ಲ ಕೊಟ್ಟರು. ಇಷ್ಟೆಲ್ಲ ಕೊಟ್ಟಾದ ಮೇಲೆ ಅವರಿಗೆ ಏನನ್ನಿಸಿತೋ ಏನೋ ಥಟ್ಟನೆ ಮೇಲಕ್ಕೆದ್ದು ಒಳಕ್ಕೆ ಹೋಗಿ ತಾವು ಧರಿಸುತ್ತಿದ್ದ ಪೇಟವನ್ನು ಪುಟ್ಟಮಾದಯ್ಯನವರಿಗೆ ಕೊಡಲು ಬಂದರು. ಆಗ ಪುಟ್ಟಮಾದಯ್ಯನವರು :

"ಸ್ವಾಮಿ, ನೀವು ಉರೀಗದ್ದಿಗೆ ಮ್ಯಾಲೆ ಕುಳುತ್ಕೋತೀರಿ. ನಿಮ್ಮ ಪೇಟ ನನಗೆ ತರವಲ್ಲ. ಬೇಕಾದ್ರೆ ಒಂದು ಹೊಸದು ಕೊಡಿ" ಎಂದು ಕೇಳಿದರು. ಮಠದಲ್ಲಿ ಹೊಸ ಪೇಟ ಇರಲಿಲ್ಲವೆಂದು ಕಾಣುತ್ತದೆ. ಆದ್ದರಿಂದ ಅವರು :

"ಇನ್ನೊಂದು ಸಲ ಬಂದಾಗ ಕೊಡ್ತೀವಿ" ಎಂದು ಹೇಳಿದ್ದಲ್ಲದೆ ಆ ವರ್ಷದಿಂದ "ಕಾರಾಪುರದವನ ವಚನದ ಪಡಿ" ಎಂದು ಹೇಳಿ ಗೌರವಿಸುವ ಪದ್ಧತಿಯನ್ನು ರೂಢಿಗೆ ತಂದರು.

ಹೀಗೆ ಬೊಪ್ಪಗೌಡನಪುರದ ಮಠದ ಅರಸಿನವರ ಕೃಪೆಗೆ ಪಾತ್ರರಾದ ಪುಟ್ಟಮಾದಯ್ಯನವರು ಉಳಿದೆಲ್ಲ ಕಲಾವಿದರಿಗೆ ಮಾರ್ಗದರ್ಶಕರಾಗಿ ಎಲ್ಲರಿಗೂ 'ಗುರು'ವಾಗಿ ಗೌರವವನ್ನು ಪಡೆದರು. ಹೀಗೆ ಪುಟ್ಟಮಾದಯ್ಯನವರ ಹೆಸರು ನೀಲಗಾರರೆಲ್ಲರಿಗೂ ಪರಿಚಿತವಾದ ಹೆಸರಾಯಿತು.

ಹೀಗೆಲ್ಲ ಪ್ರಖ್ಯಾತರಾದ ಪುಟ್ಟಮಾದಯ್ಯನವರೆಂದರೆ ಎನ್. ರಾಚಯ್ಯನವರ ತಂದೆ ನರಸಿಂಹಯ್ಯನವರಿಗೂ ಅಪಾರ ಭಯ-ಭಕ್ತಿ. ಅವರು ತಮ್ಮ ಕಷ್ಟ-ಸುಖದ ದಿನಗಳಲ್ಲಿ ಹೋಗಬೇಕೆನಿಸಿದಾಗ ಪುಟ್ಟಮಾದಯ್ಯನವರನ್ನೂ ಕರೆದುಕೊಂಡು ತಮ್ಮ ಮನೆದೇವರು ಚನ್ನಯ್ಯನ ದೇವಸ್ಥಾನಕ್ಕೆ ಹೋಗುತ್ತಿದ್ದರಂತೆ.

ಪುಟ್ಟಮಾದಯ್ಯನವರನ್ನು ಅತ್ಯಂತ ಪ್ರೀತಿಯಿಂದ ಗೌರವದಿಂದ ನೋಡಿಕೊಳ್ಳುತ್ತಿದ್ದ ಇವರ ಮಗ ಸ್ವಾಮಿಯವರು ಬಿ.ಎಸ್ಸಿ. ಎಜಿ ಪದವೀಧರರು. ವ್ಯವಸಾಯ ಇಲಾಖೆಯ ಅಧಿಕಾರಿಯಾಗಿದ್ದು ಇತ್ತೀಚೆಗಷ್ಟೆ ನಿವೃತ್ತರಾಗಿದ್ದಾರೆ. ಪುಟ್ಟಮಾದಯ್ಯನವರು ಹಾಡುತ್ತಿದ್ದ ಎಲ್ಲ ಕಾವ್ಯಗಳನ್ನೂ ಉಳಿಸಿಕೊಳ್ಳಬೇಕೆಂಬ ಹಂಬಲ ಅವರದಾಗಿತ್ತು. ಈ ಕಾವ್ಯಗಳನ್ನೆಲ್ಲ ಸಂಗ್ರಹಿಸಿಕೊಳ್ಳಲು ಅವರು ನನಗೆ ಒಪ್ಪಿಗೆಯಿತ್ತಿದ್ದಿರಲ್ಲದೆ ಕ್ಷೇತ್ರಕಾರ್ಯಕ್ಕಾಗಿ ನಾನು ಹೋದಾಗಲೆಲ್ಲ ಅವರ ಮನೆಗೆ ಆದರೋಪಚಾರಗಳಿಂದ ಬರಮಾಡಿಕೊಳ್ಳುತ್ತಿದ್ದರು. ಸ್ವಾಮಿಯವರ ಈ ಪ್ರೀತಿ ಅಭಿಮಾನ ಔದಾರ್ಯಗಳು ಮಂಟೇಸ್ವಾಮಿ ಮಹಾಕಾವ್ಯ, ಚನ್ನಬಸವಣ್ಣ (ಅಕ್ಕನಾಗಮ್ಮ), ಘನಶರಣ ಹರಳಯ್ಯ, ಪಿರಿಯಾಪಟ್ಟಣದ ಕಾಳಗ, ಮೈಸೂರು ಚಾಮುಂಡಿ, ಚನ್ನಿಗರಾಮ, ಬಿಳಿಗಿರಿ ರಂಗಸ್ವಾಮಿ, ಮುಡುಕುತೊರೆ ಮಲ್ಲಪ್ಪ ಮತ್ತಿತರ ಕಾವ್ಯಗಳನ್ನೂ ರಕ್ಷಿಸಿಕೊಳ್ಳಲು ಅನುವು ಮಾಡಿಕೊಟ್ಟವು.

ಮಕ್ಕಳು ಮೊಮ್ಮಕ್ಕಳೊಡನೆ ಸಂತೋಷ-ಸಂಭ್ರಮಗಳಿಂದ ತುಂಬು ಜೀವನವನ್ನು ನಡೆಸಿದ ಪುಟ್ಟಮಾದಯ್ಯನವರು ನಮ್ಮ ಜನಪದ ಗಾಯಕರಲ್ಲಿ ಒಂದು ಅನರ್ಘ್ಯರತ್ನ. ಅವರು ಹಾಡಿದ ಶರಣಕಾವ್ಯಗಳಲ್ಲಿ ಘನಶರಣ ಹರಳಯ್ಯ ಮತ್ತು ಅಕ್ಕನಾಗಮ್ಮ (ಚನ್ನಬಸವಣ್ಣ) ಕಾವ್ಯಗಳು ಈ ಸಂಕಲನದಲ್ಲಿ ಸೇರಿವೆ.

ಕ್ಯಾತಮಾರನಹಳ್ಳಿ ಮಹದೇವಯ್ಯ

ನಾನು ೧೯೭೧ನೇ ವರ್ಷದಲ್ಲಿ ವಿಶ್ವವಿದ್ಯಾನಿಲಯದ ಧನಸಹಾಯ ಆಯೋಗದ ಸಂಶೋಧನಾ ವಿದ್ಯಾರ್ಥಿಯಾಗಿ ಕನ್ನಡ ಅಧ್ಯಯನ ಸಂಸ್ಥೆಯಲ್ಲಿದ್ದೆ. ಆ ಸಮಯದಲ್ಲಿ ಪಡುವಾರ ಹಳ್ಳಿಯಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದೆ. ಒಂದು ದಿನ (೧೯೭೧ ಡಿಸೆಂಬರ್ ತಿಂಗಳು) ವಾಣೇವಿಲಾಸಪುರಂ ಕಡೆಯಿಂದ ಬರುತ್ತಿರುವಾಗ ದಾರಿಯಲ್ಲಿ ಕಂಸಾಳೆ ಶಬ್ದ ನನ್ನ ಕಿವಿಗೆ ಬಿದ್ದು ಸುತ್ತಮುತ್ತಾ ನೋಡಿದೆ. ಈ ಕಲಾವಿದರು ತುಸು ದೂರದ ಮನೆಯ ಮುಂದೆ ಭಿಕ್ಷಕ್ಕಾಗಿ ನಿಂತಿದ್ದರು. ನಾನು ಕುತೂಹಲದಿಂದ ಅವರನ್ನ ಸಮೀಪಿಸಿ ಪರಿಚಯ ಮಾಡಿಕೊಂಡೆ. ಅವರು ಒಳ್ಳೆಯ ಗಾಯಕರೆಂದು ನಿರ್ಧಾರವಾದ ಮೇಲೆ ನಾನಿದ್ದ ಮನೆಗೆ ಕರೆದುಕೊಂಡು ಹೋಗಿ ಹಾಡಿಸಿದೆ. ಅವರು ಹಾಡುವ ಕಾವ್ಯಗಳ ಸಂಖ್ಯೆ ೧೫ಕ್ಕೂ ಹೆಚ್ಚೆಂದಾಗ ಸೋಜಿಗಗೊಂಡ ನಾನು ಕ್ಷೇತ್ರಕಾರ್ಯಕ್ಕಿಳಿದೇಬಿಟ್ಟೆ. ಮಲೆಯ ಮಾದೇಶ್ವರ ಮಹಾಕಾವ್ಯದ ಜೊತೆಗೆ ಇವರು ಹಾಡಿದ ಹತ್ತಾರು ಕಾವ್ಯಗಳನ್ನು ಬರೆದುಕೊಂಡೆ. ನನ್ನ ಮೊದಲ ಜಾನಪದ ಕೃತಿಯಾಗಿ ಇವರು ಹಾಡಿದ 'ಬೆಟ್ಟದ ಚಾಮುಂಡಿ' ೧೯೭೧ರಲ್ಲಿ ಪ್ರಕಟವಾಯಿತು. ಅನಂತರದಲ್ಲಿ ಪ್ರೊ.ರಾಗೌ, ಗೆಳೆಯ ಎಸ್. ಬಸವಯ್ಯ (ಈಗಿನ ಹೆಸರು ಡಾ.ಬಿ.ಎಸ್. ತಲ್ಕಾಡಿ) ಹಾಗೂ ನಾನೂ ಸೇರಿ ಪ್ರಕಟಿಸಿದ 'ಜನಪದ ರಾಮಾಯಣ'ದಲ್ಲಿ ಈ ಗಾಯಕನ 'ಲವಕುಶರ ಕಾಳಗ' ಪ್ರಕಟವಾಗಿದೆ.

ಈಗ ಸುಮಾರು ೭೦ ವರ್ಷಗಳಾಗಿರಬಹುದಾದ ಈ ಕಲಾವಿದರ ತಂದೆ ಮಾದಯ್ಯ, ತಾಯಿ ಬಸಮ್ಮ. ಈ ದಂಪತಿಗಳ ಮೊದಲ ಮಗ ಮಹದೇವಯ್ಯನವರಾದರೆ ಉಳಿದಿಬ್ಬರು ಪುಟ್ಟಮಾದ ಮತ್ತು ಕುಳ್ಳ ಎಂಬವರು. ಇವರಿಗೆ ನಂಜಮ್ಮ ಮತ್ತು ಸಿದ್ದಮ್ಮ ಎಂಬ ಇಬ್ಬರು ಸೋದರಿಯರೂ ಇದ್ದಾರೆ. ಇವರ ತಂದೆ ಮಾದಯ್ಯನವರು ಬಡತನದಲ್ಲಿ ಹುಟ್ಟಿ ಬೆಳೆದರೂ ಅವರ ಗಾಯನಸಿರಿಗೇನೂ ಕೊರತೆ ಇರಲಿಲ್ಲ. ಈ ಅನುಪಮವಾದ ಗಾಯನ ಕಲೆಯನ್ನು ತನ್ನ ಮೂರು ಜನ ಗಂಡು ಮಕ್ಕಳಿಗೂ ಧಾರೆ ಎರೆದು ಅವರಿಗೆ ಆದಿಗುರು ಎನಿಸಿದರು. ಮಹದೇವಯ್ಯನವರೂ ಅಷ್ಟೇ ಶ್ರದ್ಧೆಯಿಂದ ಕಲಿತು ತನ್ನ ತಂದೆಯ ಉತ್ತರಾಧಿಕಾರಿಯಾದರು. ಅಲ್ಲದೆ ಹಲವಾರು ಜನ ಗಾಯಕರೊಡನೆ ಓಡಾಡಿ, ಊರೂರು ಅಲೆದು ಅತಿಶಯವಾದ ಕಥನಭಂಡಾರವನ್ನು ತಮ್ಮದನ್ನಾಗಿಸಿಕೊಂಡರು.

ಮಲೆಯ ಮಾದೇಶ್ವರಸ್ವಾಮಿಯ ಪರಮಭಕ್ತರಾದ ಕಂಸಾಳೆ ಮಹದೇವಯ್ಯನವರು ನಾಯಕಜನಾಂಗಕ್ಕೆ ಸೇರಿದವರಾಗಿದ್ದಾರೆ. ಇವರ ಪತ್ನಿಯ ಹೆಸರು ಮರಿಯಮ್ಮ. ಇವರಿಗೆ ಶಿವಮಣಿ ಮತ್ತು ನಾಗಮ್ಮ ಎಂಬ ಇಬ್ಬರು ಹೆಣ್ಣುಮಕ್ಕಳು ಮತ್ತು ಸ್ವಾಮಿ, ಚಂದ್ರಶೇಖರ, ಲೋಕೇಶ ಎಂಬ ಮೂರು ಜನ ಗಂಡು ಮಕ್ಕಳೂ ಇದ್ದಾರೆ. ಮಕ್ಕಳ್ಯಾರೂ ತನ್ನ ಗಾಯನ ಕಲೆಯನ್ನು ರೂಢಿಸಿಕೊಳ್ಳಲಿಲ್ಲವೆಂಬುದು ಅವರ ಅಂತರಂಗದ ಕೊರಗಾಗಿದೆ. ಇಂದಿಗೂ ಕಾರ್ಯಕ್ರಮಗಳನ್ನು ನೀಡುತ್ತ ದೇವರಗುಡ್ಡರ ಸಂಪ್ರದಾಯವನ್ನು ಜೀವಂತವಾಗಿ ಉಳಿಸಿಕೊಂಡು ಬರಲು ಸೆಣಸುತ್ತಿರುವ ಇವರು ಹಾಡಿರುವ 'ಮಡಿವಾಳ ಮಾಚಪ್ಪ' ಎಂಬ ಕಾವ್ಯ ಈ 'ಜನಪದ ಶರಣ ಕಾವ್ಯಗಳು' ಸಂಕಲನದಲ್ಲಿ ಸೇರಿದೆ.

ಕೃಷ್ಣಾಪುರದ ಸಿದ್ದಶೆಟ್ಟಿ

ನಾನು ಸ್ನಾತಕೋತ್ತರ ವಿದ್ಯಾರ್ಥಿ ನಿಲಯದಲ್ಲಿದ್ದಾಗ ನನ್ನ ಗೆಳೆಯರಾದ ಎರಗಂಬಳ್ಳಿ ಸಿದ್ದರಾಜು (ಮಹಾರಾಜ ಕಾಲೇಜಿನ ಪ್ರಾಚೀನ ಇತಿಹಾಸ ವಿಭಾಗದಲ್ಲಿ ಉಪನ್ಯಾಸಕರಾಗಿ ನೇಮಕವಾದ ಸಿದ್ದರಾಜು ಅವರು ನಿವೃತ್ತಿಯ ಹೊತ್ತಿಗೆ ಕಾಲೇಜಿನ ಪ್ರಾಂಶುಪಾಲರಾಗಿದ್ದು, ದಕ್ಷ ಆಡಳಿತಗಾರರೆಂಬ ಹೆಸರು ಗಳಿಸಿದ್ದರು.) ವೈ.ಕೆ. ಮೋಳೆ ಶಿವಣ್ಣ, ಸುತ್ತೂರು ರಾಮಯ್ಯನವರುಗಳು ತಮ್ಮ ಕಡೆ ಒಬ್ಬ ಉತ್ತಮ ಕಲಾವಿದನಿರುವನೆಂದೂ, ನೀವು ಬಯಸಿದಲ್ಲಿ ಕರೆಸಿಕೊಡುತ್ತೇವೆಂದೂ ಮತ್ತೆ ಮತ್ತೆ ಹೇಳುತ್ತಲೇ ಇದ್ದರು. ಕೊನೆಗೂ ಕೃಷ್ಣಾಪುರದ ಸಿದ್ದಶೆಟ್ಟರು ಮಾನಸಗಂಗೋತ್ರಿಯ ಸ್ನಾತಕೋತ್ತರ ನಿಲಯದ ನನ್ನ ಕೊಠಡಿಗೆ ಬಂದರು.

ಎಳೆಂದೂರು ತಾಲ್ಲೂಕಿನ ಕೃಷ್ಣಾಪುರದ ಉಪ್ಪಲಿಗ ಶೆಟ್ಟರಾದ ಸಿದ್ದಶೆಟ್ಟರಿಗೆ ೧೯೭೨ರ ಅಂತರದಲ್ಲಿ ಸುಮಾರು ೩೮ ವರ್ಷ ವಯಸ್ಸಾಗಿತ್ತು. ಈ ಕಲಾವಿದರಿಗೆ ಕಂಸಾಳೆ ಸಂಪ್ರದಾಯದ ಗುರು ಎರ್ಗಂಬಳ್ಳಿ ಮಾದಪ್ಪ, ನೀಲಗಾರ ಸಂಪ್ರದಾಯದ ಗುರು ಕಾರಾಪುರದ ಪುಟ್ಟಮಾದಯ್ಯ. ಭಿಕ್ಷವೇ ಇವರ ಪ್ರಧಾನ ವೃತ್ತಿಯಾಗಿರಲಿಲ್ಲ. ವ್ಯವಸಾಯವನ್ನು ಜೀವನಕ್ಕಾಗಿ ಅವಲಂಬಿಸಿದ್ದ

ಇವರು ಕರೆದಲ್ಲಿಗೆ ಹೋಗಿ ಕಥೆ ಮಾಡಿ ತಮ್ಮ ಕಲೆ ಹಾಗೂ ಸದ್ಗುಣಗಳಿಂದ ಎಲ್ಲರ ಆದರ ಅಭಿಮಾನಗಳಿಗೂ ಪಾತ್ರರಾಗಿದ್ದರು.

ಇವರಿಂದ 'ಮಲೆಯ ಮಾದೇಶ್ವರ ಮಹಾಕಾವ್ಯ'ವಲ್ಲದೆ, ಮುಡುಕುತೊರೆ ಮಲ್ಲಪ್ಪ, ಬಿಳಿಗಿರಿರಂಗಸ್ವಾಮಿ ಹಾಗೂ ಕುಂಬಾರ ಗುಂಡಯ್ಯ ಕಾವ್ಯಗಳನ್ನು ಸಂಗ್ರಹಿಸಿಕೊಂಡಿದ್ದೆ. ಹಿತಮಿತ ಮೃದುವಚನಗಳ ಇವರು ಒಳ್ಳೆಯ ಕಲಾವಿದರೆನಿಸಿಕೊಂಡಿದ್ದರು. ಏಕತಾರಿ, ಕಂಸಾಳೆ ಹಾಗೂ ತಂಬೂರಿಗಳ ಜೊತೆಗೂ ಹಾಡುವುದನ್ನು ರೂಢಿಸಿಕೊಂಡಿದ್ದರು.

ಇತ್ತೀಚೆಗೆ ನಾಗರಿಕ ವೇದಿಕೆಗಳಲ್ಲಿ ಕೇಳಿಬರುವ 'ಬಿಳಿಗಿರಿ ರಂಗಸ್ವಾಮಿ'ಯ ಕಾವ್ಯದ 'ಕಕ್ಕೆಹೂವಿಗೊಲಿದೆ ಕವಲುನಾಮಕ್ಕೊಲುದೆ' ಎಂದು ಶುರುವಾಗುವ ಮಟ್ಟು ಈ ಕಲಾವಿದನದು.

ಕೃಷ್ಣಾಪುರದ ಸಿದ್ದಶೆಟ್ಟರು ತಮ್ಮ ಬಗೆಯಾಗಲಿ ತಮ್ಮ ಕಲಾಕೌಶಲದ ಬಗೆಗಾಗಲಿ ಎಂದೂ ಅಹಂಕಾರದ ಮಾತು ಗಳಾಡಿದವರಲ್ಲ. ಈ 'ಜನಪದ ಶರಣ ಕಾವ್ಯಗಳು' ಸಂಕಲನದಲ್ಲಿರುವ 'ಕುಂಬಾರ ಗುಂಡಯ್ಯ-೨' ಈ ಕಲಾವಿದರದು.

ಕಂಪ್ಲಾಪುರದ ರಾಚಯ್ಯ

'ಗುರುಕಾರಯ್ಯ' ಎಂದೇ ಹೆಸರಾಗಿದ್ದ ಕಂಪಲಾಪುರದ ರಾಚಯ್ಯನವರ ತಂದೆ ಸಿದ್ದಯ್ಯನವರು. ಸಿದ್ದಯ್ಯನವರೂ ತಂಬೂರಿ ಹಿಡಿದು ಹಾಡುವ ನೀಲಗಾರ ಸಂಪ್ರದಾಯದ ಮಹಾನ್ ಕಲಾವಿದರಾಗಿದ್ದರು. ತಂದೆಯಂತೆಯೇ ರಾಚಯ್ಯನವರು ಕಂಚಿನ ಕಂಠದ ಗಾಯಕರೆಂದು ಪ್ರಖ್ಯಾತರಾಗಿದ್ದರು.

ತಂದೆ ಸಿದ್ದಯ್ಯನವರಿಂದ ದೀಕ್ಷಿತರಾಗಿದ್ದ ರಾಚಯ್ಯನವರು ತಂದೆಯವರೊಡನೆ ಕೋರಣ್ಯಕ್ಕೆ ಹೋಗುತ್ತ ಆವರೊಡನೆ ಹಾಡುತ್ತ ಅವರ ಕಾವ್ಯಗಳನ್ನೆಲ್ಲ ಹೃದ್ಗತ ಮಾಡಿಕೊಂಡಿದ್ದರು. ಮಂಟೇಸ್ವಾಮಿ ಮಹಾಕಾವ್ಯವಲ್ಲದೆ ಪಿರಿಯಾಪಟ್ಟಣದ ಕಾಳಗ, ಚೆನ್ನಿಗರಾಮ, ಬಂಜೆಹೊನ್ನಮ್ಮ, ಮೈಸೂರು ಚಾಮುಂಡಿ, ಬಾಲನಾಗಮ್ಮ, ಮುಡುಕುತೊರೆ ಮಲ್ಲಪ್ಪ, ಬಿಳಿಗಿರಿ ರಂಗಸ್ವಾಮಿ ಮುಂತಾದ ಕಾವ್ಯಗಳ ಜೊತೆಗೆ ಬಸವಪುರಾಣಕ್ಕೆ ಸಂಬಂಧಿಸಿದಂತೆ ಹಲವಾರು ಶರಣರನ್ನು ಕುರಿತ ಕಾವ್ಯಗಳನ್ನು ಹಾಡುತ್ತಿದ್ದರು.

ನಾನು 'ಪಿರಿಯಾಪಟ್ಟಣದ ಕಾಳಗ' ಕಾವ್ಯದ ಹಲವಾರು ಪಾಠಗಳನ್ನು ಸಂಗ್ರಹಿಸಿ ಸಂಪಾದಿಸುತ್ತಿದ್ದ ಸಮಯದಲ್ಲಿ ಕಂಪಲಾಪುರದ ರಾಚಯ್ಯನವರು ನೆನಪಾದರು. ನನ್ನ ಸಹೋದರ ಪಿ.ಕೆ. ವಾಸುದೇವ ಮತ್ತು ನನ್ನ ಸೋದರ ಮಾವ ಪಿ.ಎಸ್. ಕೆಂಪೇಗೌಡ ಅವರಲ್ಲಿ ರಾಚಯ್ಯನನ್ನು ನೋಡಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದೆ. ನಾವು ಬಯಸಿ ಹೋದಾಗ ರಾಚಯ್ಯ ಊರಿನಲ್ಲಿರಲಿಲ್ಲ. ನಿರಾಶನಾದ ನನ್ನನ್ನು ನೋಡಿದ ನನ್ನ ಸೋದರಮಾವನವರು :

'ಅದುಕ್ಕಾಕೆ ಇಷ್ಟು ಬೇಸರ ಮಾಡ್ಕೋತೀಯಪ್ಪ. ರಾಚಯ್ಯನ್ನ ನಾನೇ ಖುದ್ದಾಗಿ ಮೈಸೂರಿಗೆ ಕರೆದುಕೊಂಡು ಬರ್ತೇನೆ' ಎಂದು ಆಶ್ವಾಸನೆ ಕೊಟ್ಟರು. ಅವರು ಹೇಳಿದಂತೆ ಸೋದರ ವಾಸುವಿನ ಜೊತೆಯಲ್ಲಿ ರಾಚಯ್ಯನವರನ್ನು ನಾನಿದ್ದ ಮಾನಸಗಂಗೋತ್ರಿ ಅಧ್ಯಾಪಕರ ವಸತಿ ಎಲ್-೨೫ಕ್ಕೆ ಕರೆದುಕೊಂಡು ಬಂದರು.

ಸೌಜನ್ಯ ಮೂರ್ತಿಯಾಗಿದ್ದ ರಾಚಯ್ಯನವರು 'ಪಿರಿಯಾಪಟ್ಟಣದ ಕಾಳಗ', 'ಕಗ್ಗುಂಡಿ ಪರಂಜ್ಯೋತಿ ಹರಳಯ್ಯ', 'ದೇವರಿಗೊಪ್ಪತ್ತಿದ್ದೋಳು', 'ಕೊಂಡಾಡುವ ಪದ' ಮುಂತಾದವುಗಳನ್ನು ಹಾಡಿದರು. ಉಳಿದ ಕಾವ್ಯಗಳಲ್ಲಿ 'ಮಂಟೇಸ್ವಾಮಿ ಮಹಾಕಾವ್ಯ'ವನ್ನು ಹಾಡಲು ಕೋರಿಕೊಂಡೆ. ಮೂರು ದಿನಗಳಿಂದಲೂ ಮೈಸೂರಿನಲ್ಲಿದ್ದ ನನ್ನ ಸೋದರ ಮಾವ, ನನ್ನ ಸೋದರ ಹಾಗೂ ಕಲಾವಿದ - ಈ ಮೂವರೂ ಮತ್ತೆ ಬರುವುದಾಗಿ ಹೇಳಿ ಹೊರಟರು.

'ಪಿರಿಯಾಪಟ್ಟಣದ ಕಾಳಗ' ೧೯೯೦ರಲ್ಲಿ ಅಚ್ಚಾಯಿತು. ಆ ಪುಸ್ತಕವನ್ನು ನೋಡುವುದಕ್ಕೂ ರಾಚಯ್ಯನವರು ಉಳಿದಿರಲಿಲ್ಲ. ದುರ್ವಿಧಿ ಅವರನ್ನು ನಮ್ಮಿಂದ ಅಗಲಿಸಿತ್ತು. ಅಂಥ ಶ್ರೇಷ್ಠ ಗಾಯಕನನ್ನು ಕಳೆದುಕೊಂಡು ಇಡೀ ಪಿರಿಯಾಪಟ್ಟಣದ ತಾಲ್ಲೂಕು ತಬ್ಬಲಿಯಾಗಿತ್ತು. ಅಂಥ ಮತ್ತೊಬ್ಬ ನೀಲಗಾರ ಈ ತಾಲ್ಲೂಕಿನಲ್ಲಿ ಮತ್ತೆ ಹುಟ್ಟಿ ಬರಲೇ ಇಲ್ಲ.

ರಾಚಯ್ಯನವರು ಹಾಡಿದ 'ಕಗ್ಗುಂಡಿ ಪರಂಜ್ಯೋತಿ ಹರಳಯ್ಯನವರು' ಎಂಬ ಕಾವ್ಯ ಈ ಸಂಕಲನದಲ್ಲಿದೆ.

ಆಲಗೂಡು ಚನ್ನಯ್ಯ

ನಾನು 'ಮಲೆಯ ಮಾದೇಶ್ವರ' ಜನಪದ ಮಹಾಕಾವ್ಯದ ಹಲವಾರು ಪಾಠಗಳನ್ನು ಸಂಗ್ರಹಿಸುತ್ತಿರುವಾಗ ಕಾರೇಪುರದ ಪುಟ್ಟಮಾದಯ್ಯನವರು ಚನ್ನಯ್ಯನವರನ್ನು ನಾನು ವಾಸವಿದ್ದ ಮಾನಸಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿನಿಲಯದ ನನ್ನ ಕೊಠಡಿಗೆ ಕರೆದುಕೊಂಡು ಬಂದರು. ಚನ್ನಯ್ಯನವರು ಟಿ. ನರಸೀಪುರ ತಾಲ್ಲೂಕಿನ ಆಲಗೂಡು ಗ್ರಾಮದವರು. ಗಂಗೇಮತಸ್ಥರಾದ ಇವರ ತಂದೆ ಹನುಮಯ್ಯ ತಾಯಿ ತೋಟಗೆರಮ್ಮನವರು. ಈ ಕಲಾವಿದರಿಗೆ ದೇವರಗುಡ್ಡರ ಸಂಪ್ರದಾಯದ ಗುರು ಆಲಗೂಡು ಸಿದ್ದಯ್ಯನವರು ; ನೀಲಗಾರ ಸಂಪ್ರದಾಯದ ಗುರು ಕಾರೇಪುರದ ಪುಟ್ಟಮಾದಯ್ಯನವರು. ೧೯೭೩ರಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಇವರ ವಯಸ್ಸು ೪೫ ವರ್ಷಗಳು.

ಚನ್ನಯ್ಯನವರು ಕಾರಣಾಂತರದಿಂದ ಆಲಗೂಡನ್ನು ಬಿಟ್ಟು ಟಿ. ನರಸೀಪುರ ತಾಲ್ಲೂಕಿನ ಹುಣಸೂರು ಗ್ರಾಮದಲ್ಲಿ ನೆಲೆಗೊಂಡರು. ಇವರಿಗೆ ಎರಡು ಜನ ಮಕ್ಕಳು ; ಒಂದು ಹೆಣ್ಣು, ಒಂದು ಗಂಡು. ಹೆಣ್ಣು ಮಗುವನ್ನು ಓದಿಸುತ್ತಿರುವುದಾಗಿ ಹೇಳಿಕೊಂಡಿದ್ದರು.

ಅಲ್ಪಸ್ವಲ್ಪ ಕನ್ನಡವನ್ನು ಓದಲೂ ಬಲ್ಲ ಈ ಕಲಾವಿದರ ಪ್ರಧಾನ ವೃತ್ತಿ ಕೋರಣ್ಯ ಮಾಡುವುದು. ಜೊತೆಗೆ ಹೊಳೆ ಮರಳಿನಲ್ಲಿ ಮಿಣಕೆ, ಕರೀಬೀಜದಹಣ್ಣು (ಕಲ್ಲಂಗಡಿಹಣ್ಣು) ಮುಂತಾದವನ್ನು ಬೆಳೆದು ಮಾರಿ ಜೀವನ ಸಾಗಿಸುತ್ತಿದ್ದರು. ಇದಲ್ಲದೆ ಇವರು ಜನಪದ ವೈದ್ಯರೂ ಹೌದು. ಹೊಟ್ಟೆನೋವು, ಅರುಸ್ರಿ, ಬಾಯಿಳ್ಳಾಗರು, ಅಂಗಳುಗಪ್ಪೆ, ಪತ್ನಾಲ್ಗೆ, ದಮ್ಮು, ಮೇಚಾಡ್ಯ, ಸೀರೆರೋಗ, ಲಕ್ವ, ವಾಯು, ಹಾವು ಕಡಿತಕ್ಕೆಲ್ಲ ಔಷಧವನ್ನು ಕೊಡುವುದಲ್ಲದೆ ಯಂತ್ರ ಮಂತ್ರಗಳಿಂದ ಕಾಯಿಲೆಗಳನ್ನು ಗುಣಪಡಿಸುವುದಾಗಿ ಹೇಳಿಕೊಳ್ಳುತ್ತಿದ್ದರು.

ಆಲಗೂಡು ಚನ್ನಯ್ಯನವರು ಮಾದೇಶ್ವರ, ಮಂಟೇಸ್ವಾಮಿ ಕಾವ್ಯಗಳಲ್ಲದೆ ದೇವರಗುಡ್ಡರು ಹಾಡುವ ಇನ್ನಿತರ ಕಾವ್ಯಗಳನ್ನು ಹಾಡುತ್ತಿದ್ದರು. ಅವರು ಹಾಡಿರುವ ಕುಂಬಾರ ಗುಂಡಯ್ಯನವರನ್ನು ಕುರಿತ ಕಾವ್ಯ 'ಕುಂಬಾರ ಗುಂಡಯ್ಯ-೨' ಎಂಬ ಹೆಸರಿನಿಂದ ಈ ಸಂಕಲನವನ್ನು ಸೇರಿದೆ.

ಜೆಲ್ಪ ಅಡ್ಡ ಹೆಸರಿನ ಸಿದ್ದಯ್ಯ

'ಆದಿಬಸವೇಶ್ವರ' ಕಾವ್ಯವನ್ನು ಹಾಡಿರುವ ಕಲಾವಿದರು ಜೆಲ್ಪ ಉರುಫ್ ಸಿದ್ದಯ್ಯನವರು. ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಗೋಣಿಬೀಡು ಗ್ರಾಮದ ನಿವಾಸಿಯಾಗಿದ್ದ ಸಿದ್ದಯ್ಯನವರು ಲೌಕಿಕ ವೃತ್ತಿಗಾಯಕರಲ್ಲಿ ತಂಬೂರಿ ಸಂಪ್ರದಾಯಕ್ಕೆ ಸೇರಿದವರು. ೧೯೭೨ರಲ್ಲಿ ನಾನು ಈ ಕಾವ್ಯವನ್ನು ಸಂಗ್ರಹಿಸುವಾಗ ಸುಮಾರು ೪೮ ವರ್ಷ ವಯಸ್ಸಾಗಿತ್ತು. ನನ್ನ ವಿದ್ಯಾರ್ಥಿಯಾಗಿದ್ದ ಮೂಡಿಗೆರೆಯ ಕೊಲ್ಲಿಬೈಲಿನ ವೆಂಕಟೇಶ್ವರ ಎಸ್ಟೇಟಿನ ಶ್ರೀಮತಿ ಪೂವಮ್ಮ ಹುಚ್ಚೇಗೌಡರ ಮಗ ಶ್ರೀ ಕೆ.ಎಚ್. ವೆಂಕಟೇಶ್ ಅವರ ನೆರವಿನಿಂದ ನನ್ನ ಗೆಳೆಯ ಡಾ. ಬಿ.ಎಸ್. ತಲ್ವಾಡಿಯವರು ಈ ಕಲಾವಿದನನ್ನು ಮೈಸೂರಿಗೆ ಕರೆದುಕೊಂಡು ಬಂದರು. ನಾನಾಗ ಮಾನಸ ಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿ ನಿಲಯದಲ್ಲಿದ್ದೆ. ಅಂದು ಈ ಕಲಾವಿದ ಹಾಡಿದ 'ನಿರ್ವಾಣೇಶ್ವರ ಕಾವ್ಯ' ಮತ್ತು 'ಆದಿಬಸವೇಶ್ವರ' ಎಂಬೆರಡು ಕಾವ್ಯಗಳನ್ನು ಸಂಗ್ರಹಿಸಿಕೊಳ್ಳಲು ಸಾಧ್ಯವಾಯಿತು.

ತರುವಾಯದಲ್ಲಿ ನನ್ನ ಗೆಳೆಯ ಎಸ್.ಬಸವಯ್ಯ (ಡಾ.ಬಿ.ಎಸ್. ತಲ್ವಾಡಿಯವರ ವಿದ್ಯಾರ್ಥಿ ದೆಸೆಯಲ್ಲಿದ್ದ ಹೆಸರು)ನವರು ಸಿದ್ದಯ್ಯನವರಿಂದ ಜನಪದ ಸಂಪೂರ್ಣ ರಾಮಾಯಣವನ್ನು ಸಂಗ್ರಹಿಸಿಕೊಂಡರು. ಈ ಕಾವ್ಯ ಪ್ರೊ. ರಾಗೌ, ಬಿ.ಎಸ್. ತಲ್ವಾಡಿ ಮತ್ತು ನಾನು ಈ ಮೂವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಜನಪದ ರಾಮಾಯಣ' ಸಂಗ್ರಹದಲ್ಲಿ ಸೇರಿದೆ.

ಅನಂತರ ಹತ್ತು-ಹಲವು ಸಮಸ್ಯೆಗಳಿಗೆ ಸಿಕ್ಕಿಕೊಂಡಿದ್ದ ನಾನು ಈ ಕಲಾವಿದನನ್ನು ಮತ್ತೆ ನೋಡುವುದಾಗಲಿ ಅಥವಾ ನಾವಿರುವಲ್ಲಿಗೇ ಕರೆಸಿಕೊಳ್ಳುವುದಾಗಲಿ ಸಾಧ್ಯವೇ ಆಗಲಿಲ್ಲ. ಗೆಳೆಯ ಕೊಲ್ಲಿಬೈಲ್ ವೆಂಕಟೇಶರನ್ನು ಕಾಣಲು ಒಮ್ಮೆ ಕೊಲ್ಲಿಬೈಲಿಗೆ ಹೋಗಿದ್ದಾಗ ಸಿದ್ದಯ್ಯನವರ ನೆನಪಾಗಿ ವೆಂಕಟೇಶ್ ಅವರನ್ನು ವಿಚಾರಿಸಿದಾಗ, ಆತ ಸತ್ತು ಎಷ್ಟೋ ವರ್ಷಗಳಾದವು ಎಂದು ಹೇಳಿದಾಗ ನನಗೆ ಉಸಿರು ಕಟ್ಟಿದಂತಾಯ್ತು. ಇಂಥ ಎಷ್ಟೋ ಜನ ಮಹಾನ್ ಗಾಯಕರು ವಿದ್ವಾಂಸರ ಅವಜ್ಞೆಗೆ ಒಳಗಾಗಿ ಅವರಲ್ಲಿದ್ದ ಅಪಾರವಾದ ಸಾಹಿತ್ಯ ಸಂಪತ್ತನ್ನು ಕಳೆದುಕೊಂಡಾಗಿದೆ. ಉಭಯದೃಷ್ಟಿಯಲ್ಲೂ ನಾವು ನತದೃಷ್ಟರು.

ಸೋಬಾನೆ ತೋಪಮ್ಮ

ಈಗ್ಗೆ ಸುಮಾರು ಮೂವತ್ತೈದು ವರ್ಷಗಳ ಹಿಂದೆ ನಾನು ಮಾಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿದ್ದೆ. ನಾನು ತರಗತಿಯಲ್ಲಿ ಪಾಠ ಮಾಡುತ್ತ ಸಂದರ್ಭ ಒದಗಿಬಂದಾಗ ನನ್ನ ವಿದ್ಯಾರ್ಥಿಗಳಿಗೆ ಜಾನಪದಕ್ಕೆ ಸಂಬಂಧಿಸಿದ ಅಷ್ಟಿಷ್ಟು ವಿಚಾರಗಳನ್ನು ಸೋದಾಹರಣವಾಗಿ ಹೇಳುತ್ತಿದ್ದೆ. ಅಲ್ಲದೆ ತಮ್ಮ ತಮ್ಮ ಗ್ರಾಮಗಳಲ್ಲಿ ಮೌಖಿಕ ಸಂಪ್ರದಾಯದಲ್ಲಿ ಉಳಿದು ಬಂದಿರುವ ಕಥೆ, ಕಾವ್ಯ, ಗಾದೆ, ಒಗಟು, ಐತಿಹ್ಯ, ಪುರಾಣ ಮುಂತಾದವುಗಳನ್ನೆಲ್ಲ ಸಂಗ್ರಹಿಸಿ ಸಂರಕ್ಷಿಸಿ ಜಾನಪದದ ನೈರಂತರ್ಯಕ್ಕೆ ತಮ್ಮ ಕೈಗಳನ್ನೂ ಜೋಡಿಸಿ ಎಂದು ಹೇಳುತ್ತಿದ್ದೆ.

ಇಂಥ ನನ್ನ ಮಾತುಗಳಿಂದ ಜಾನಪದದ ಸೆಳವಿಗೆ ಒಳಗಾದ ವಿದ್ಯಾರ್ಥಿಗಳಲ್ಲಿ ಕೆಂಪಲಿಂಗೇಗೌಡ ಎಂಬವರು ಒಬ್ಬರು. ಅವರ ಊರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಹೊನ್ನಶೆಟ್ಟಿಹಳ್ಳಿ. ಉತ್ಸಾಹಿ ತರುಣ ಕೆಂಪಲಿಂಗೇಗೌಡರು ಜಾನಪದ ಕ್ಷೇತ್ರಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಚನ್ನರಾಯಪಟ್ಟಣ ತಾಲ್ಲೂಕಿನ ಆಲಗೋಡನ ಹಳ್ಳಿಯ ಗಾಯಕಿ ಸೋಬಾನೆ ತೋಪಮ್ಮನವರು ಹಾಡಿದ 'ಹೊಲೇರ ಹೊನ್ನಯ್ಯ' ಕಥನಗೀತೆಯನ್ನು ಸಂಗ್ರಹಿಸಿದರು.

ಹೀಗೆ ಸಂಗ್ರಹಿಸಿದ 'ಹೊಲೇರ ಹೊನ್ನಯ್ಯ' ಕಥನಗೀತೆಯ ಹಸ್ತಪ್ರತಿಯನ್ನು ನನ್ನ ಕೈಗಿತ್ತು ಕ್ಷೇತ್ರಕಾರ್ಯದ ಯಶಸ್ಸಿನ ಬಗೆಗೆ ಹೇಳಲು ತಿಳಿಸಿದರು. ಹಾಗೆ ನನ್ನ ಕೈಗಿತ್ತು ಹೋದವರನ್ನು ಅಂದಿನಿಂದ ಇಂದಿನವರೆಗೂ ನಾನು ನೋಡಲಾಗಲೇ ಇಲ್ಲ. ಈ ಸಂಗ್ರಹವನ್ನು ತಿರುಗಿ ಪಡೆದುಕೊಳ್ಳುವುದಕ್ಕೂ ಅವರು ನನ್ನ ಬಳಿಗೆ ಬರಲಿಲ್ಲ. ಈ ಕಾರಣದಿಂದ ತೋಪಮ್ಮ ಹಾಡಿದ ಕಾವ್ಯ ಈವರೆಗೂ ನನ್ನಲ್ಲೆ ಉಳಿದಿತ್ತು. .

ಜನಪದ ಶರಣ ಕಾವ್ಯಗಳನ್ನು ಪ್ರಕಟಿಸಲು ಒದಗಿಬಂದ ಸಂದರ್ಭದಲ್ಲಿ ಈಗ ಮತ್ತೆ ಕೆಂಪಲಿಂಗೇಗೌಡರ ನೆನಪಾಯಿತು. ತೋಪಮ್ಮನ ಆಲಗೋಡನಹಳ್ಳಿಗೆ ನನ್ನ ಪಿರಿಯಾಪಟ್ಟಣದ ಸ್ಣಾಯ್ಯನವರ ಬೀದಿಯ ದೇವಪ್ಪನವರ ಮಗಳು ಜಯಲಕ್ಷ್ಮಮ್ಮನನ್ನು ಆ ಊರಿನ ಶಿವನಂಜೇಗೌಡ ಎಂಬವರಿಗೆ ಕೊಟ್ಟು ಮದುವೆಯಾಗಿರುವ ವಿಷಯ ಥಟ್ಟನೆ ನೆನಪಿಗೆ ಬಂತು. ಆಗ ಈ ದಂಪತಿಗಳ ಪುತ್ರ ಜಗದೀಶ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿದೆ. ಅವರೀಗ ಚನ್ನರಾಯಪಟ್ಟಣ ತಾಲ್ಲೂಕಿನ ಸಾತೇನಹಳ್ಳಿಯ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿರುವುದರಿಂದ ಅವರ ನೆರವಿನಿಂದ ಕೆಂಪಲಿಂಗೇಗೌಡ ಹಾಗೂ ತೋಪಮ್ಮನವರ ಶೋಧಕ್ಕೆ ತೊಡಗಿದೆ. ಗೆಳೆಯ ಜಗದೀಶನ ಜೊತೆಯಲ್ಲಿ ಹೊನ್ನಶೆಟ್ಟಿಹಳ್ಳಿಯಲ್ಲಿ ಕೆಂಪಲಿಂಗೇಗೌಡರ ಪತ್ತೆಯನ್ನು ಕೇಳಿಕೊಂಡು ಹೋದೆವಾದರೂ ಅವರ ಬಗೆಗೆ ಏನೊಂದು ಮಾಹಿತಿಯೂ ಸಿಗಲಿಲ್ಲ. ಅವರು ಎಲ್ಲಿದ್ದಾರೆ ? ಹೇಗಿದ್ದಾರೆ ? ಏನಾಗಿದ್ದಾರೆ ? ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಲೇ ಇಲ್ಲ.

ಕೆಂಪಲಿಂಗೇಗೌಡರು ಪತ್ತೆಯಾಗದಿದ್ದರೂ ಅವರಿಗೆ 'ಹೊಲೇರ ಹೊನ್ನಯ್ಯ' ಕಾವ್ಯವನ್ನು ಹಾಡಿದ್ದ ತೋಪಮ್ಮನವರು ಚನ್ನರಾಯಪಟ್ಟಣ ತಾಲ್ಲೂಕಿನ ಆಲಗೋಡನಹಳ್ಳಿಯವರೇ ಆಗಿದ್ದರಿಂದ ಗೆಳೆಯ ಜಗದೀಶ್ ಅವರ ಸಹಾಯದಿಂದ ಆ ತಾಯಿಯ ಬಗೆಗೆ ಅಷ್ಟಿಷ್ಟು ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ದುರ್ದೈವದ ಸಂಗತಿಯೆಂದರೆ ಸೋಬಾನೆ ತೋಪಮ್ಮನವರು ಈಗ್ಗೆ ೨೦ ವರ್ಷಗಳ ಹಿಂದೆಯೇ ತೀರಿಕೊಂಡರಂತೆ. ಆ ತಾಯಿಯ ಒಬ್ಬನೇ ಮಗ ನಂಜಯ್ಯನವರಿಗೆ ೫೦ ವರ್ಷ ವಯಸ್ಸಾಗಿದೆ. ಅವರು ಈಗ ಆಲಗೋಡನಹಳ್ಳಿಯಲ್ಲೇ ಇದ್ದಾರೆ.

ಆಲಗೋಡನಹಳ್ಳಿಯ ಶ್ರೀಮತಿ ಜಯಲಕ್ಷ್ಮಮ್ಮ ಶಿವನಂಜೇಗೌಡರಿಂದ ಸೋಬಾನೆ ತೋಪಮ್ಮನ ಬಗೆಗೆ ತಿಳಿದುಬಂದ ವಿಷಯಗಳು ಇವು :

ತೋಪಮ್ಮನಿಗೆ ಒಂದು ಗಂಡು ಮಗು ಹುಟ್ಟಿದ ಕೆಲವೇ ವರ್ಷಗಳಲ್ಲಿ ಅವರ ಗಂಡ ತೀರಿಕೊಂಡರು. ಚಿಕ್ಕಮಗುವನ್ನು ಕಂಕುಳಿಗೇರಿಸಿಕೊಂಡು ಅವರಿವರ ಮನೆ ರಾಗಿ ಬೀಸಿಕೊಡುವುದು, ಬತ್ತ ಕುಟ್ಟುವುದು, ಅಕ್ಕಿ ರಾಗಿ ಇತ್ಯಾದಿ ದವಸ ಧಾನ್ಯಗಳನ್ನು ತೂರಿ ಕೇರಿ ಶುಚಿ ಮಾಡಿಕೊಡುವುದು, ಇತ್ಯಾದಿ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದುದಲ್ಲದೆ ಊರಿನಲ್ಲಿ ಯಾರದೇ ಮದುವೆ-ಮುಂಜಿ ಕಾರ್ಯಗಳಲ್ಲಾಗಲಿ, ಯಾವುದೇ ಶಾಸ್ತ್ರ ಸಂಬಂಧಿ ಕಾರ್ಯಕ್ರಮವಾಗಲಿ, ಹೊಲಗದ್ದೆ ತೋಟಗಳಲ್ಲಿ ದುಡಿಯುವ ಹೊತ್ತಿನಲ್ಲೆ ಆಗಲಿ ಅಲ್ಲೆಲ್ಲ ಸೋಬಾನೆ ತೋಪಮ್ಮನವರ ಹಾಡಿನ ಹೊಳೆ ಹರಿಯುತ್ತಿತ್ತಂತೆ. ಅವರಿವರ ಹೊಲಗದ್ದೆ ತೋಟ ಮನೆಗೆಲಸಗಳಲ್ಲಿ ದುಡಿದು ಅವರು ಕೊಟ್ಟ ದುಡ್ಡುಕಾಸು, ದವಸಧಾನ್ಯ, ಬಟ್ಟೆಬರೆಗಳಿಂದ ಬದುಕಿದ್ದ ತೋಪಮ್ಮನವರ

ಹೃದಯದ ಹಗೇವು ಹಾಡಿನ ಮುತ್ತುರತ್ನ ಪಚ್ಚೆಹವಳಗಳಿಂದ ಸಮೃದ್ಧವಾಗಿತ್ತು. ಅವುಗಳನ್ನೆಲ್ಲ ಉಳಿಸಿಕೊಳ್ಳುವ ಪುಣ್ಯ ನಮಗೆ ಸಿಗಲಿಲ್ಲ. ಆದರೆ ಅವುಗಳಲ್ಲಿ ಗೆಳೆಯ ಕೆಂಪಲಿಂಗೇಗೌಡರು ತೋಪಮ್ಮನವರ ಕಂಠಸಿರಿಯಲ್ಲಿ ಕೇಳಿ ಪಡೆದುಕೊಂಡಿದ್ದ 'ಹೊಲೇರ ಹೊನ್ನಯ್ಯ' ಎಂಬ ಒಂದು ಕಾವ್ಯರತ್ನ ಮಾತ್ರ ಈಗ ನಮಗೆ ಉಳಿದುಕೊಂಡಿದೆ.

ಸೋಬಾನೆ ತೋಪಮ್ಮನವರು ಹಾಡಿರುವ 'ಹೊಲೇರ ಹೊನ್ನಯ್ಯ' ಕಾವ್ಯ ಈ ಸಂಕಲನದಲ್ಲಿ ಸೇರಿರುವ ವಿಷಯ ಮಿತ್ರರಾದ ಹೊನ್ನಶೆಟ್ಟಿಹಳ್ಳಿಯ ಕೆಂಪಲಿಂಗೇಗೌಡ ಅವರ ಗಮನಕ್ಕೆ ಬಂದಲ್ಲಿ ಅವರು ದಯಮಾಡಿ ಅವರನ್ನು ನೋಡುವ ಅವಕಾಶವನ್ನು ನನಗೆ ಕಲ್ಪಿಸಿಕೊಡಬೇಕೆಂದು ಕೋರಿಕೊಳ್ಳುತ್ತಿದ್ದೇನೆ. ಅಲ್ಲದೆ ಅವರ ಸಂಗ್ರಹವಾದ ಈ ಕಾವ್ಯ 'ಜನಪದ ಶರಣ ಕಾವ್ಯಗಳು' ಸಂಕಲನದಲ್ಲಿ ಸೇರಿ ಪ್ರಕಟವಾಗುತ್ತಿದೆ. ಹಾಗೆ ಇಲ್ಲಿ ಸೇರದಿದ್ದಲ್ಲಿ ಅದು ದಿಕ್ಕಿಲ್ಲದೆ ಹಾಳಾಗುತ್ತಿತ್ತು. ಆ ಕಾರಣದಿಂದ 'ಹೊಲೇರ ಹೊನ್ನಯ್ಯ' ಕಾವ್ಯ ಈ ಸಂಕಲನದಲ್ಲಿ ಸೇರಿದೆ. ಆದರೆ ಈ ಕಾವ್ಯದ ಮೇಲಿನ ಪರಿಪೂರ್ಣ ಹಕ್ಕುಗಳು ಕೆಂಪಲಿಂಗೇಗೌಡರವರಿಗೇ ಸೇರಿವೆ.

ಈ ಸಂಕಲನದಲ್ಲಿರುವ 'ಹೊಲೇರ ಹೊನ್ನಯ್ಯ-೧' ಕಾವ್ಯ ಸೋಬಾನೆ ತೋಪಮ್ಮನವರು ಕನ್ನಡಿಗರಿಗೆ ಉಳಿಸಿ ಹೋಗಿರುವ ಒಂದು ಸುಂದರ ಬಂಧುರ ಕಾವ್ಯ.

ಮಂಟೇಲಿಂಗಯ್ಯ

ನೀಲಗಾರ ಸಂಪ್ರದಾಯದ ಮಂಟೇಲಿಂಗಯ್ಯ ನನಗೆ ಪರಿಚಯವಾದದು ಒಂದು ವಿಶೇಷ ಸಂದರ್ಭದಲ್ಲಿ. ನಾನು ಮೈಸೂರು ಆಕಾಶವಾಣಿಯ ಜನಪದ ಗಾಯಕರ 'ಆಡಿಸನ್' ಕಾರ್ಯದ ಒಬ್ಬ ತೀರ್ಪುಗಾರನಾಗಿ ಹೋಗಿದ್ದೆ. ಆ ದಿನ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕೆ. ಶೆಟ್ಟಿಹಳ್ಳಿಯ ಮಂಟೇಲಿಂಗಯ್ಯನವರೂ ಪರೀಕ್ಷಾರ್ಥಿಯಾಗಿ ಬಂದಿದ್ದರು. ಅವರ ಧ್ವನಿಪರೀಕ್ಷೆಯ ನಂತರ 'ಯಾವ ಯಾವ ಹಾಡುಗಳನ್ನು ಹಾಡುತ್ತೀರಿ?' ಎಂದು ಪ್ರಶ್ನಿಸಿದೆ. ಅವರ ಉತ್ತರದಲ್ಲಿ ಬೇರೆ ಬೇರೆ ಕಾವ್ಯಗಳ ಜೊತೆಗೆ ಗಾಣದ ಕಲ್ಲಯ್ಯನ ಕಥೆಯನ್ನೂ ಹಾಡುತ್ತೇನೆ ಎಂದರು. ಈವರೆಗೂ ಯಾವ ಕಲಾವಿದರೂ ಈ ಹೆಸರಿನ ಕಥೆಯನ್ನು ಹಾಡುವುದಾಗಿ ಹೇಳಿರಲಿಲ್ಲ. ಹಾಗಾಗಿ ನನ್ನ ಕುತೂಹಲ ನೂರ್ಮಡಿಯಾಯಿತು. ನಾನು ಅವರ ವಿಳಾಸವನ್ನು ಪಡೆದುಕೊಂಡೆ. ಗೆಳೆಯ ಡಾ.ಬಿ.ಎಸ್.ತಲ್ವಾಡಿಯವರ ಕಾರಿನಲ್ಲಿ ಬೆಂಗಳೂರಿಗೆ ಹೋಗುತ್ತಿರುವಾಗ ಥಟ್ಟನೆ ಮಂಟೇಲಿಂಗಯ್ಯನವರ ನೆನಪಾಗಿ ಅವರ ಮನೆ ಗುರುತನ್ನು ಕೇಳಿಕೊಂಡು ಹೋದೆವು. ಆ ದಿನ ಮನೆಯಲ್ಲಿ ಅವರ ತಂದೆ ಗುರುಮೂರ್ತಿ ಇದ್ದರು. ನಾವು ಅವರನ್ನು ನೋಡಲು ಬಂದಿದ್ದ ವಿಚಾರವನ್ನು ತಿಳಿಸಲು ಹೇಳಿ ಫೋನ್‌ಮಾಡಲು ನಮ್ಮ ದೂರವಾಣಿ ಸಂಖ್ಯೆಯನ್ನು ನೀಡಿ ಬೆಂಗಳೂರು ಕಡೆಗೆ ಹೊರಟೆವು.

ಆ ಮಾರನೆಯ ದಿನವೇ ಮಂಟೇಲಿಂಗಯ್ಯನವರಿಂದ ಕರೆಬಂತು. ಅವರನ್ನು ಮೈಸೂರಿನ ಡೂಪ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ನನ್ನ ಮಿತ್ರ ಎರೇಗೌಡನಹಳ್ಳಿ ಜಗದೀಶ್ ಅವರ ಮೈಸೂರು ಕಾಫಿ ವರ್ಕ್ಸ್ ಬಳಿಗೆ ಬರಲು ಸೂಚಿಸಿದೆವು. ಮಂಟೇಲಿಂಗಯ್ಯನವರು ಬಂದರು. ನಮ್ಮ ಬಯಕೆಯ 'ಗಾಣದ ಕಲ್ಲಯ್ಯ' ಕಾವ್ಯವನ್ನು ಹಾಡಲು ಒಪ್ಪಿದರು. ಅದಕ್ಕೆ ಅವರ ಬೇಡಿಕೆ ಒಂದು ಮೊಬೈಲ್ ಆಗಿತ್ತು.

'ಗಾಣದ ಕಲ್ಲಯ್ಯ' ಅಪರೂಪದ ಕೃತಿಯಾದರೂ ಈ ಕಲಾವಿದರು ಅದನ್ನು ಅಷ್ಟು ಸಮರ್ಥವಾಗಿ ಹಾಡಲು ಆಗಲಿಲ್ಲ. ಆದರೂ ಅದನ್ನು ಮೂರು ಬಾರಿ ಹಾಡಿಸಿದೆ. ಅನಂತರದಲ್ಲಿ ಆ ಮೂರು ಪಾಠಗಳನ್ನಿಟ್ಟುಕೊಂಡು ಈ ಸಿದ್ಧಪಾಠವನ್ನು ಈ ಸಂಕಲನದಲ್ಲಿ ಕೊಟ್ಟಿರುತ್ತೇನೆ.

ಕರಪಾಲ ತಿಮ್ಮಪ್ಪನವರು

ಆಗ ನಾನಿನ್ನು ಸಂಶೋಧನಾ ವಿದ್ಯಾರ್ಥಿಯಾಗಿ ಕೆಲಸ ಮಾಡುತ್ತಿದ್ದೆ. ಜಾನಪದ ವಿಷಯ ಸಂಗ್ರಹಕ್ಕಾಗಿ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕು ಗುಡ್ಡೇನಹಳ್ಳಿಯ ಗೆಳೆಯ ಜಿ.ಕೆ. ರುದ್ರೇಗೌಡ (ರತ್ನ)ನ ಜೊತೆಯಲ್ಲಿ ಹೋಗಿದ್ದೆ. ಅಲ್ಲಿ ರುದ್ರನ ಭಾವನವರಾದ ಶ್ರೀ ಪುಟ್ಟಸ್ವಾಮಿಗೌಡರ ಪರಿಚಯ ನನಗಾಯ್ತು. ಅವರು ನಾನು ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲ

ತಮ್ಮ ಊರಿನ ಕರಪಾಲ ಕಲಾವಿದರಾದ ಶ್ರೀ ತಿಮ್ಮಪ್ಪನವರ ಬಗ್ಗೆ ಮತ್ತೆ ಮತ್ತೆ ಹೇಳುತ್ತಲೇ ಇದ್ದರು. ಆದರೂ ಕರಪಾಲ ಪ್ರಕಾರದ ಕಥೆಗಳನ್ನು ಸಂಗ್ರಹಿಸಬೇಕೆಂಬ ನನ್ನ ಹಂಬಲ ಈಡೇರಿದ್ದು ೧೯೮೨ರಲ್ಲಿ. ಪುಟ್ಟಸ್ವಾಮಿಗೌಡರು ಮೈಸೂರಿಗೇ ಕರಪಾಲ ತಿಮ್ಮಪ್ಪನವರನ್ನು ಕರೆದುಕೊಂಡು ಬಂದರು. ಇದರಿಂದ ಕೊನೆಗೂ ನನ್ನ ಆಸೆ ಕೈಗೂಡುವಂತಾಯ್ತು.

ಸುಮಾರು ೭೨ ವರ್ಷದ ತಿಮ್ಮಪ್ಪನವರು ಪರಮ ಶಿವಭಕ್ತರು. ಸೌಜನ್ಯದ ಸಾಕಾರಮೂರ್ತಿ, ತೆಳುದೇಹದ ನೀಳಕಾಯದ ಅವರು ಕಚ್ಚೆ ಪಂಚೆಯುಟ್ಟು, ಬಿಳಿ ಷರಟಿನ ಮೇಲೆ ಕಪ್ಪು ಕೋಟು ಧರಿಸಿ ತಲೆಗೊಂದು ಬಿಳೀ ಜರೀ ಪೇಟ ತೊಟ್ಟು, ಹಣೆಗೆ ವಿಭೂತಿ ಧರಿಸಿ ಕೈಯಲ್ಲಿ ತಾಳ ಹಿಡಿದು ನಿಂತರೆ ಹದಿಹರಯದ ಯುವಕನ ಉತ್ಸಾಹದಿಂದ ಹಾಡಿ ನರ್ತಿಸುತ್ತಿದ್ದರು. ಎಣ್ಣೆಗೆಂಪು ಬಣ್ಣದ ಅವರ ನಡೆ ಚನ್ನ ನುಡಿ ಚನ್ನ.

ತಿಮ್ಮಪ್ಪನವರು ಹೇಳುತ್ತಿದ್ದ ಕಥೆಗಳಲ್ಲಿ ಬಸವಪುರಾಣವನ್ನು ಬರೆದುಕೊಳ್ಳಲು ನಿರ್ಧರಿಸಿ ದಿ.೬.೭.೧೯೮೨ರಲ್ಲಿ ಪ್ರಾರಂಭಿಸಿದೆ. ಅದು ದಿ.೯.೭.೧೯೮೨ರಂದು ಸಂಪೂರ್ಣವಾಯ್ತು.

ಐದು ದಿನಗಳ ಕಾಲ ನಮ್ಮ ಜೊತೆಗಿದ್ದ ಅವರ ವಿದ್ವದ್ಗಾಂಭೀರ್ಯ, ವಿನೀತಭಾವ, ವಿಶಾಲ ಹೃದಯ, ಸುಸಂಸ್ಕೃತ ಸನ್ನಡತೆಗಳು ನಮ್ಮ ಹೃದಯವನ್ನು ಸೂರೆಗೊಂಡವು. ಸುದ್ಯೆವದಿಂದ ನನಗೆ ಶ್ರೇಷ್ಠ ಕಲಾವಿದರೊಬ್ಬರ ಪರಿಚಯವಾಯಿತಲ್ಲ ಎಂದು ಹೆಮ್ಮೆಪಟ್ಟೆ. ಅವರು ಹೇಳುವ ಉಳಿದ ಕಥೆಗಳನ್ನೂ ಬರೆದುಕೊಳ್ಳಲು ಮತ್ತೆ ಕರೆಸಿಕೊಳ್ಳುವುದಾಗಿ ಹೇಳಿದೆ. ನನ್ನ ದುರಾದೃಷ್ಟದಿಂದ ಅಂಥ ಸುದಿನಗಳು ಕೂಡಿ ಬರಲೇ ಇಲ್ಲ. ಅಷ್ಟು ಮಾತ್ರವಲ್ಲ, ಅವರು ಬದುಕಿದ್ದಾಗಲೆ ಈ ಪುಸ್ತಕವನ್ನು ಪ್ರಕಟಿಸುವುದೂ ನನ್ನಿಂದಾಗಲಿಲ್ಲ.

ಇಂಥ ಮಹಾನ್ ಕಲಾವಿದರು ನಮ್ಮ ನಾಗರಿಕ ಪ್ರಪಂಚದ ಕಣ್ಣಿಗೆ ಕಾಣದೆ, ನಮ್ಮ ಅಕಾಡೆಮಿಗಳು ಗುರುತಿಸದೆ, ಯಾವ ಪ್ರಶಸ್ತಿ ಸನ್ಮಾನಗಳೂ ಇಲ್ಲದೆ ಗತಿಸಿಹೋದರು. ಹೀಗೇ ಎಷ್ಟು ಜನ ಕಲಾವಿದರು ಮರೆಯಾಗಿಹೋದರೋ !

ಬುರುಡೇಘಟ್ಟದ ಸದ್ವಂಶಪ್ರಸೂತ ಶ್ರೀ ರಂಗಪ್ಪ ಹಾಗೂ ಶ್ರೀಮತಿ ಚನ್ನಮ್ಮ ಎಂಬ ವೀರಶೈವ ಪುಣ್ಯದಂಪತಿಗಳ ಗರ್ಭಸಂಜಾತರಾದ ಶ್ರೀ ತಿಮ್ಮಪ್ಪನವರು ವಿನಯ ಸಂಪನ್ನರು. ಅವರೊಡನೆ ದಿ.೯.೭.೧೯೮೨ರಂದು ನಡೆಸಿದ ಸಂದರ್ಶನದ ಕೆಲವು ಭಾಗಗಳನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ.

'ಕರಪಾಲ ಕಲೆಯನ್ನು ನೀವು ಮೊದಲು ಕಂಡದ್ದು ಎಲ್ಲಿ? ಅದನ್ನು ನೀವು ಹೇಗೆ ಕಲಿತಿರಿ? ಇದಕ್ಕೆ ನಿಮ್ಮ ಗುರು ಯಾರು?'

'ನನಗೆ ಶಿಕ್ಷಣಗುರು ಬೆಣಚಗೆರೆ ಬಸಪ್ಪನವರು. ಅವರಿಂದ ನನಗೆ ರಾಜಶೇಖರ ವಿಳಾಸ, ಹರಿಶ್ಚಂದ್ರ ಕಾವ್ಯ, ಶಬರಶಂಕರ ವಿಳಾಸ ಹಾಗೂ ಅನೇಕ ಯಕ್ಷಗಾನಗಳು ಕರಗತವಾದವು. ಅವರು ಆ ಕಾಲದ ಮಹಾನ್ ವಿದ್ವಾಂಸರು. ೧೨ ವಯಸ್ಸಿನ ಹುಡುಗನಾಗಿದ್ದಾಗ ನನ್ನನ್ನು ಅವರು ಅತಿಯಾದ ಅಭಿಮಾನದಿಂದ ತಾವು ಎಲ್ಲೆಲ್ಲಿ ಪುರಾಣ ಪ್ರವಚನಾದಿಗಳಿಗೆ ಹೋಗುತ್ತಿದ್ದರೋ ಅಲ್ಲಿಗೆಲ್ಲ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಇದರಿಂದಾಗಿ ನನಗೆ ಈ ಕಲೆಯನ್ನು ರೂಢಿಸಿಕೊಳ್ಳಲು ಸಾಧ್ಯವಾಯ್ತು.'

'ಅದು ಸರಿ. ಕರಪಾಲ ನಿಮಗೆ ತಗುಲಿಕೊಂಡದ್ದು ಹೇಗೆ ಅಂತ ನಾನು ಕೇಳಿದ್ದು?'

'ಹೇಳ್ತೀನಿ. ನಮ್ಮ ಗ್ರಾಮದಲ್ಲಿಯೇ ತಡಸೂರಿನ ಕರಪಾಲ ಸಂಘದವರು ಒಂದು ಸಲ ಬಂದು - ಅಂದರೆ ಈಗ್ಗೆ ಮೂವತ್ತು ವರ್ಷಗಳ ಹಿಂದೆ ಮಹಾಶರಣೆ ಕಾಡುಸಿದ್ದಮ್ಮನ ಕಥೆ ಪ್ರಸಾರ ಮಾಡಿದರು. ಆ ಕಥೆ ಹಾಗೂ ಆ ಕಥೆ ಮಾಡೋ ರೀತಿ ನನಗೆ ತುಂಬ ಹಿಡಿಸ್ತು. ನಾನು ಹೋಯ್ತಾ ಬತ್ತಾ ಆ ಹಾಡುಗಳನ್ನೇ ಗುನುಗ್ತಾ ಇದ್ದೆ. ಆಗ ನಮ್ಮ ಊರಿನ ಗೆಳೆಯರು ನಾವೂ ಯಾಕೆ ಕರಪಾಲದ ಕಥೆ ಮಾಡಬಾರದು ಅಂದ್ರು. ನನಗೆ ಬಹಳ ಸಂತೋಷವಾಯ್ತು. ಊರ ಜನರೂ ಪ್ರೋತ್ಸಾಹ ಕೊಟ್ಟರು. ಇದರಿಂದ ನಾವೂ ಒಂದು ಕರಪಾಲ ಸಂಘವನ್ನು ಕಟ್ಟಕೊಂಡು ಈ ಕಲೆಯನ್ನು ರೂಢಿಸಿಕೊಂಡು ಬಂದೊ.'

'ತಡಸೂರಿನ ಕರಪಾಲದವರನ್ನಲ್ಲದೆ ಮತ್ತಿನ್ಯಾವ ಕರಪಾಲದವನ್ನು ನೀವು ನೋಡಿದ್ದೀರಿ?'

'ಒಡೇರಹಳ್ಳಿ ಸಿದ್ದಪ್ಪ, ಶಿಡ್ಲಹಳ್ಳಿ ಚಂದ್ರಶೇಖರಪ್ಪ ಇವರು ಕಥೆ ಮಾಡದ್ನೆಲ್ಲ ನೋಡಿದ್ದೀನಿ.'

'ಅವರು ಕಥೆ ಮಾಡೋ ರೀತಿಗೂ ನೀವು ಕಥೆ ಮಾಡೋ ರೀತಿಗೂ ಏನಾದ್ರೂ ವ್ಯತ್ಯಾಸವಿದೆಯಾ?'

'ಅವರಿಗೂ ನನಗೂ ಅಂಥಾ ವ್ಯತ್ಯಾಸವೇನೆಂದು ಹೇಳದಕ್ಕೆ ನನಗೆ ತಿಳಿಯೋದಿಲ್ಲ. ಯಾಕೆಂದರೆ ಅವರವರ ಕಲಾನುಭವ, ಭಾಷಾ ಪ್ರೌಢಿಮೆ, ಕಥಾ ನಿರೂಪಣೆ, ವಾಕ್‌ಶಕ್ತಿಗಳು ಅವರವರ ರೀತೀನೇ ಆಗಿರ್ತವೆ. ಅವುಗಳನ್ನೆಲ್ಲ ನೋಡಿದವರು ವ್ಯತ್ಯಾಸಗಳನ್ನು ಹೇಳಬಹುದೇನೋ'

'ಕಥೆ ಮಾಡದಕೆ ನೀವು ಪ್ರಾರಂಭಿಸಿದ್ದು ಯಾವಾಗ?'

'ಈಗ್ಗೆ ೨೦ ವರ್ಷಗಳ ಹಿಂದೆ. ಅಂದರೆ ೧೯೬೨ನೇ ಇಸವೀನಲ್ಲಿ ಅಷ್ಟಗ್ರಹ ಕೂಟ ಉಂಟಾಯ್ತು. ಜನವೆಲ್ಲ ಹೆದರಿ ಅನಿಷ್ಟ ಪರಿಹಾರಕ್ಕಾಗಿ ಪೂಜೆ ಪುರಸ್ಕಾರ ಪುರಾಣ ಪುಣ್ಯಕಥಾ ಪ್ರವಚನಗಳನ್ನು ನಡೆಸ್ತ್ರು. ನಾವು ನಮ್ಮ ಊರಿನಲ್ಲೆ ಕಾಡುಸಿದ್ದವ್ವನ ಕತೆ ಮಾಡಿದೆವು. ಈ ಸುದ್ದಿ ಸುತ್ತಮುತ್ತಲ ಹಳ್ಳಿಗಳಿಗೂ ತಲುಪಿ ಅವರೆಲ್ಲ ನಮ್ಮನ್ನು ಕರೆಸಿ ಕತೆ ಮಾಡಿಸಿದರು. ಇಲ್ಲಿಂದ ನಾವು ಊರೂರುಗಳಲ್ಲಿ ಕಥೆ ಮಾಡೋ ಪರಿಪಾಠ ಪ್ರಾರಂಭವಾಯ್ತು.'

'ನೀವು ಯಾವ ಯಾವ ಕಥೆಗಳನ್ನು ಮಾಡುತ್ತೀರಿ?'

'ಬಸವಪುರಾಣ, ಮಹಾಶರಣೆ ಕಾಡುಸಿದ್ದವ್ವ, ಮಹಾಸತಿ ಸುಗುಣವತಿ, ಭಕ್ತ ಸಿರಿಯಾಳ, ಚಂದ್ರಹಾಸ, ರಾಜಾ ವಿಕ್ರಮ, ರಾಜಾ ಸತ್ಯವ್ರತ, ನಳಚರಿತ್ರೆ - ಇಂಥ ಕಥೆಗಳನ್ನೆಲ್ಲ ಮಾಡ್ತೇವೆ.'

'ಇವುಗಳಲ್ಲಿ ನಿಮಗೆ ಮೆಚ್ಚುಗೆಯಾದದ್ದು ಯಾವುದು?'

'ಶಿವಕಥೆಗಳೆಲ್ಲವೂ ನನಗೆ ಇಷ್ಟವೇ.'

'ಶಿವಕಥೆಯಲ್ಲೂ ಯಾವುದು?'

'ಬಸವ ಪುರಾಣ.'

'ಬಸವಪುರಾಣದ ಕಥೆಯನ್ನು ನೀವು ಎಲ್ಲಿಂದ ಕಲಿತಿರಿ.'

'ಶರಣಲೀಲಾಮೃತವನ್ನು ನಾನು ಚೆನ್ನಾಗಿ ಓದಿದ್ದೆ. ನಮ್ಮ ಗುರುಗಳು ಭೀಮಕವಿಯ ಬಸವಪುರಾಣದ ಕಥೆ ಓದಿಸಿದ್ದರು. ನಾನು ಶಿವಶರಣರ ಕಥೆಗಳು, ವಚನಗಳು ಎಲ್ಲವನ್ನೂ ಅಭ್ಯಾಸ ಮಾಡಿದ್ದೆ. ಅಮರಕೋಶ ಕಂಠಪಾಠವಾಗಿತ್ತು. ಗುರುಮುಖೇನ ಸಂಸ್ಕೃತ ಸುಭಾಷಿತಗಳ ಕಂಠಪಾಠವಾಗಿದ್ದವು. ಹೀಗೆ ದೊರೆತ ಎಲ್ಲ ವಿದ್ಯೆ ಹಾಗೂ ಅನುಭವಗಳನ್ನು ಕಥೆ ಮಾಡುವಲ್ಲಿ ರೂಢಿಸಿಕೊಂಡಿದ್ದೇನೆ.'

'ಬಸವಣ್ಣನವರಿಗೆ ಒಬ್ಬ ಮಗ ಇದ್ದ ಅಂತ ಹೇಳಿದ್ದೀರಿ. ಕೆಲವು ಗ್ರಂಥಗಳಲ್ಲಿ ಇದರ ಪ್ರಸ್ತಾಪ ಇಲ್ಲಲ್ಲ.'

'ಒಂದೊಂದು ಕವಿತಾ ಚಮತ್ಕಾರದಲ್ಲಿ ಒಬ್ಬೊಬ್ಬ ಒಂದೊಂದು ರೀತಿ ಹೇಳಿರುತ್ತಾನೆ. ನಾನು ಬಸವಣ್ಣನವರಿಗೆ ಒಬ್ಬ ಮಗ ಇದ್ದ ಎಂದು ಒಪ್ಪಿಕೊಂಡಿದ್ದೇನೆ.'

'ಬಸವಣ್ಣನವರು ನಮ್ಮಂತೆ ಬಾಳಿ ಬದುಕಿ ಉಂಡು ಉಟ್ಟು, ಬಳಸಿ ಬೆಳೆಸಿ ಹೋದವರು. ಅಂದರೆ ಅವರೂ ಒಬ್ಬ ಐತಿಹಾಸಿಕ ವ್ಯಕ್ತಿಯೇ ಆಗಿದ್ದಾರೆ. ಅಂತಾದ್ರಲ್ಲಿ ನೀವು ಹೇಳಿರುವ ಪವಾಡಗಳು ಸತ್ಯವೆ?'

'ಲೋಕಕಲ್ಯಾಣಕ್ಕಾಗಿ ಅವತರಿಸಿದ ಮಹಾಕಾರಣಿಕ ಬಸವೇಶ್ವರರು ಪವಾಡಗಳನ್ನು ಮಾಡಿರಬಹುದೆಂದೇ ನಾನು ನಂಬಿದ್ದೇನೆ. ಅವರು ಅವತಾರ ಪುರುಷರು ಅಂಬೊದ್ರಲ್ಲೂ ಅನುಮಾನವಿಲ್ಲ. ವಿಭೂತಿ ಪುರುಷರಾದ ಅವರು ಪವಾಡಗಳನ್ನು ಯಾಕೆ ಮಾಡಿರಬಾರದು?'

'ನೀವು ಬಸವೇಶ್ವರರು ಐಕ್ಯರಾದ ವಿಷಯವನ್ನು ಇನ್ನೂ ಸ್ಪಷ್ಟವಾಗಿ ಹೇಳಬಹುದಿತ್ತಲ್ಲವೆ?'

'ನನಗೆ ಗೋಚರವಾದ ಮಟ್ಟಿಗೆ ನಾನು ಹೇಳಿದ್ದೇನೆ. ಅದಕ್ಕಿಂತ ಹೆಚ್ಚು ನನಗೆ ಗೊತ್ತಿಲ್ಲ.'

'ಕಥೆಗಳ ಮಧ್ಯೆ ಮಧ್ಯೆ ಇಷ್ಟೊಂದು ಪದ್ಯಗಳು, ವಚನಗಳು, ಸುಭಾಷಿತಗಳು, ಸಂಸ್ಕೃತ ಶ್ಲೋಕಗಳು, ಹಾಡುಗಳನ್ನೆಲ್ಲ ಹೇಳಿದ್ದೀರಲ್ಲ ಇದನ್ನೆಲ್ಲ ಹೇಗೆ ಗಳಿಸಿಕೊಂಡಿರಿ?'

'ಗುರುಕೃಪೆಯಿಂದ!'

'ಹಾಗಾದರೆ ನಿಮಗೆ ಸಂಸ್ಕೃತ ಭಾಷೆ ಬರುತ್ತ?'

'ಸಂಸ್ಕೃತ ಭಾಷೆಯನ್ನು ಓದಲು ಬರದಿದ್ದರೂ ಘಟಿತವಾದ ಕಾವ್ಯಗಳಲ್ಲಿರುವ ಕನ್ನಡ ಲಿಪಿಯ ಮೂಲಕ ಸಂಸ್ಕೃತವನ್ನು ಓದಬಲ್ಲೆ. ಅಲ್ಲದೆ ಅವೆಲ್ಲ ಗುರುಮುಖೇನ ಕಂಠಪಾಠವಾಗಿದೆ. ನನ್ನ ತಂದೆಯವರೂ ಮಹಾನ್ ವಿದ್ವಾಂಸರಾಗಿದ್ದರಿಂದ ಅವರು ಪ್ರತಿನಿತ್ಯ ಬೋಧಾಮೃತಗಳನ್ನು ಹೇಳಿಕೊಟ್ಟಿದ್ದರಿಂದಲೂ ಅವೆಲ್ಲ ನನಗೆ ಬಂದವು.'

'ಎಲ್ಲಾ ಕಥೆಗಳಲ್ಲೂ ಇಷ್ಟೊಂದು ವಚನಗಳನ್ನು ಪದ್ಯಗಳನ್ನು ಸಂಸ್ಕೃತ ಸುಭಾಷಿತಗಳನ್ನು ಬಳಸುತ್ತೀರಾ?'

'ಇಲ್ಲ ಬಸವಣ್ಣನವರ ಕಥೆಗೆ ವಚನಗಳನ್ನು ಬಳಸಲೇಬೇಕು. ಅಲ್ಲದೆ ಈ ಕಥೆಯ ಗೌರವಕ್ಕೆ ಗಾಂಭೀರ್ಯಕ್ಕೆ ಘನತೆಗೆ ಒಪ್ಪುವಂತೆ ವಚನ, ಪದ್ಯ, ಸುಭಾಷಿತ - ಇವುಗಳನ್ನೆಲ್ಲ ಬಳಸಿದ್ದೇನೆ. ಉಳಿದ ಕಥೆಗಳಿಗೆ ಇಂಥ ತೂಕ ಇಲ್ಲ.'

'ನಿಮ್ಮ ತಂದೆಯವರು ದೊಡ್ಡ ವಿದ್ವಾಂಸರು ಎಂದು ಹೇಳಿದಿರಿ. ಅವರಿಗೂ ಈ ಕರಪಾಲ ಕಥೆಯ ಹಿನ್ನೆಲೆ ಇತ್ತೆ?'

'ಅವರು ಪುರಾಣ ಪ್ರವಚನ ಪ್ರವೀಣರಾಗಿದ್ದರು. ಕಾವ್ಯವಾಚನ ಮಾಡಿ ಮಕ್ಕಳಿಗೂ ಅರ್ಥವಾಗುವ ರೀತಿಯಲ್ಲಿ ತಿಳಿಯಾದ ಭಾಷೆಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದರು.'

'ನಿಮ್ಮ ತಂದೆಯವರಿಂದ ನಿಮಗೆ ಕಥೆ ಮಾಡಲು ಪ್ರೋತ್ಸಾಹ ಸಿಕ್ತೆ?'

'ಹೌದು, ಪ್ರಾರಂಭದಲ್ಲಿ ನಾನು ಭೂಕೈಲಾಸ, ಭಕ್ತಸಿರಿಯಾಳ, ಭಕ್ತ ಚಂದ್ರಹಾಸನ ಕಥೆಗಳನ್ನು ಹರಿಕಥೆ ರೀತೀಲಿ ಮಾಡ್ತಿದ್ದೆ. ಹರಿಕಥೆ ರೀತಿಗಿಂತ ಕರಪಾಲ ರೀತಿ ಚೆನ್ನಾಗಿದೆ ಅಂತ ತಿಳಿದು ಇದಕ್ಕೆ ನನ್ನ ತೊಡಗಿಸಿಕೊಂಡೆ.'

'ಪ್ರಾರಂಭದಲ್ಲಿ ಕಥೆ ಮಾಡುವುದಕ್ಕೆ ಒಂದು ಮೇಳ ಬೇಕಿತ್ತಲ್ಲ ಹೇಗೆ ಕೂಡಿಸಿಕೊಂಡಿರಿ?'

'ನಮ್ಮ ಊರಲ್ಲಿ ಮೊದಲೆ ಭಜನೆ ಮಾಡೋ ಗುಂಪಿತ್ತು. ಅವರೇ ಮುಂದೆ ಬಂದು ಈ ಮೇಳಕ್ಕೆ ಸೇರಿ ಕೊಂಡರು.'

'ಯಾರ್ಯಾರು ಹಾಗೆ ಬಂದು ಸೇರಿದವರು?'

'ನಮ್ಮ ಗ್ರಾಮದವರೇ ಆದ ಚಂದ್ರಶೇಖರಯ್ಯ, ಬಸ್ತೀಹಳ್ಳಿ ಬಸವರಾಜು, ಲಕ್ಕಣ್ಣ, ಬುರುಡೇಘಟ್ಟದ ಚಂದ್ರಪ್ಪ, ಅಡವೀಶಯ್ಯ, ಎಡೆಹಳ್ಳಿ ನಿಂಗಪ್ಪ ಇವರೆಲ್ಲ ಸೇರಿದ್ರಿಂದ ಕಥೆಗೆ ಕಳೆ ಕಟ್ಟುವಂತೆ ಆಯ್ತು.

'ನೀವು ಎಲ್ಲೆಲ್ಲಿ ಕಥೆ ಮಾಡಿದ್ದೀರಿ?'

'ತುಮಕೂರು, ಹಾಸನ, ಚಿತ್ರದುರ್ಗಗಳ ಕಡೆ ಅಲ್ಲದೆ ಶಿರಾ, ಕೊಡಗಾರನಹಳ್ಳಿ, ಕೊಂಡನಪಳ್ಳಿ, ರೊಳ್ಳೆ ಈ ಆಂಧ್ರಪ್ರದೇಶದ ಊರುಗಳಲ್ಲೂ ಕಥೆ ಮಾಡಿದ್ದೀವಿ. ನಮ್ಮ ಕಡೇಲೆ ಒಂದೊಂದೂರಲ್ಲೂ ಹತ್ತ್ಹತ್ತು ಸಲ ಕಥೆ ಮಾಡಿದ್ದೀವಿ.'

'ನಿಮ್ಮ ಕಥೆಗೆ ಯಾವ ಕಡೆ ಹೆಚ್ಚು ಪ್ರೋತ್ಸಾಹ ಇದೆ ಅಂತೀರಿ?'

'ನಾವು ಕಥೆ ಮಾಡಿದ ಎಲ್ಲ ಕಡೆಯೂ ಜನ ನಮ್ಮನ್ನ ಮೆಚ್ಚಿ ಪ್ರೋತ್ಸಾಹ ಕೊಟ್ಟಿದ್ದಾರೆ. ಮತ್ತೆ ಮತ್ತೆ ಕಥಾಭಾಗ ಮಾಡಲು ಕರೆಸಿಕೊಂಡಿದ್ದಾರೆ. ಗೌರವಿಸಿದ್ದಾರೆ.'

'ನಿಮ್ಮ ಶಿಷ್ಯರೂ ಈ ಕಲೆಯನ್ನು ಹೀಗೇ ಉಳಿಸಿಕೊಂಡು ರೂಢಿಸ್ಕೋತಾರೆ ಅಂತ ನಿಮಗನ್ನುಸುತ್ತಾ?

'ಉಳುಸ್ಕೊಂಡು ರೂಢುಸ್ಕೋತಾರೆ ಅಂತ ನಂಬಿಕೆ ನನಗಿದೆ. ಕಥೆ ಮಾಡ್ಸೋರಿದ್ರೆ ನಾವು ಉಳುಸ್ಕೋಬೇಕಾಯ್ತದಲ್ಲ.'

'ಅವರೂ ಸ್ವತಂತ್ರವಾಗಿ ಅಂದರೆ ನೀವಿಲ್ದೆ ಇದ್ದಾಗ್ಲೂ ಎಲ್ಲಿಯಾದ್ರೂ ಕಥೆ ಮಾಡಿದ್ದಾರ?'

'ಈವರ್ಗೂ ಮಾಡಿಲ್ಲ. ಆದ್ರೆ ಅವರು ಮಾಡಬಲ್ರು.'

'ಅವ್ರುನ್ಗೂ ಕಥೆ ಮಾಡೋ ಕ್ರಮಾನೆಲ್ಲ ಚೆನ್ನಾಗಿ ಹೇಳ್ಕೊಟ್ಟಿದ್ದೀರಾ?'

'ಹೇಳ್ಕೊಡೋದೇನ್ ಬಂತು. ಅವರು ಹಿಂಗೆ ನಮ್ಮ ಜೊತೆ ಕಥೆಗೆ ಬತ್ತಾ ಇರೋದ್ರಿಂದ ಅವ್ರುನ್ಗೂ ಇದೆಲ್ಲ ಕರಗತ ಆಗಿದೆ.'

'ಆಕಾಶವಾಣೀಲೇನಾದ್ರೂ ಹಾಡಿದ್ದೀರ?'

'ಇಲ್ಲ.'

'ಯಾಕೆ?'

'ಯಾಕೆ ಅಂದ್ರೆ ನಾವು ಅಷ್ಟೆಲ್ಲ ದೂರ ಯೋಚನೆ ಮಾಡಲೇ ಇಲ್ಲ. ಅದೂ ಅಲ್ಲದೆ ಅವರು ಕೊಡೋ ಟೇಮು ಕಡಿಮೆಯಂತೆ. ನಮ್ಮ ಕಥೆಗಳಾದರೊ ರಾತ್ರಿಯೆಲ್ಲ ನಡೆಯುವಂತವು. ಒಂದ್ ಗಳಿಗೇಲಿ ಮುಗಿಸ್ಬೇಕು ಅಂದ್ರೆ ನಮ್ಮಿಂದ ಆಗೋದಿಲ್ಲ.'

'ಸಂಕ್ಷಿಪ್ತವಾಗಿ ಹಾಡಿ.'

'ಇಲ್ಲ ನಮ್ಮಿಂದಾಗದಿಲ್ಲ.'

'ಕೆಲವರು ಹಾಗೆ ಮಾಡಿ ಹಾಡಿದ್ದಾರಲ್ಲ.'

'ಅದು ಅವುರವುರ ಬುದ್ಧಿಗೆ ನಿಲುಕಿದ್ದು ನೋಡಿ.'

'ಈಗ ಬೆಂಗಳೂರಿನಲ್ಲಿ ಜಾನಪದ ಟ್ರಸ್ಟ್, ಜಾನಪದ ಅಕಾಡೆಮಿ ಅಂತ ಎಲ್ಲ ಇವೆ. ಅವು ನಿಮಗೇನಾದ್ರೂ ಗೊತ್ತಾ?'

'ಇಲ್ಲ.'

'ಎಚ್.ಎಲ್. ನಾಗೇಗೌಡ್ರು ಹೆಸ್ರು ಕೇಳಿದ್ದೀರಾ?'

'ಇಲ್ಲ.'

'ನೋಡಿ ಅವರು ನಿಮ್ಮಂಥ ಕಲಾವಿದರನ್ನೆಲ್ಲ ಬೆಂಗಳೂರಿಗೆ ಕರೆಸಿ, ಮೇಳಗಳನ್ನು ನಡೆಸಿ ಸನ್ಮಾನ ಎಲ್ಲಾ ಮಾಡ್ತಾರೆ. ನೀವು ಅಲ್ಲಿಗ್ಯಾಕೆ ಹೋಗ್ಲಾರ್ದು?'

'ಕರುದ್ರೆ ಹೋಗ್ತೀವಿ. ಈಗ ನೀವು ಕರುದ್ರಿ ನಾವು ಬಂದಿಲ್ವ?'

'ನಿಮ್ಮ ಮಕ್ಕಳು ಈ ಕಥೆ ಮಾಡೋದು ಕಲೀನಿಲ್ವ?'

'ಇಲ್ಲ, ಅಪ್ಪನ ಆಸ್ತಿ ಅಂದ್ರೆ ಹೊಲಗದ್ದೆ ತೋಟ ಮನೆ ಮಠ ಅಷ್ಟೆ ಅವರಿಗೆ ಕಂಡಿದ್ದು.'

'ನೀವು ಹಾಸ್ಯ ಕಥೆ ಹೇಳೊಲ್ವ?'

'ಹೇಳ್ತೀವಿ.'

'ಎಷ್ಟ್ರ ಹೇಳ್ತೀರಿ.'

'ಹದಿನೈದಿಪ್ಪತ್ತು ಹೇಳ್ತೀವಿ. ಸಂದರ್ಭಕ್ಕೆ ಉಚಿತವಾದ ರೀತೀಲಿ ಸೇರುಸ್ಕೋತೀವಿ.'

'ಮತ್ತೆ ಯಾಕೆ ಬಸವಪುರಾಣದಲ್ಲಿ ಅಂತ ಹಾಸ್ಯಗಳನ್ನು ಹೇಳಿಲ್ಲ?'

'ಯಾಕೇಂದ್ರೆ ಪಂಡಿತರಂಜನೆ, ಪಾಮರರಂಜನೆ ಅಂತ ಇದೆ. ನಗುಸ್ಬೇಕು ಅಂತ ಎಂತೆಂತದನ್ನೆಲ್ಲ ಹೇಳಕೆ ನನಗೆ ಇಷ್ಟ ಇಲ್ಲ. ಶರಣರ ಕಥೆಗೆ ಶುದ್ಧಿ ಬೇಕು.'

'ಶುದ್ಧಿ ಅಂದುದ್ಕೆ ಒಂದು ಪ್ರಶ್ನೆ. ನೀವು ಕಥೆ ಮಾಡುವಾಗ ಪುಸ್ತಕದ ಭಾಷೆ ಥರಾ ಮಾತಾಡ್ತೀರಲ್ಲ. ದಿನಬಳಕೆಯಲ್ಲಿ ಮಾತಾಡೋ ಥರಾ ಮಾತಾಡೋಕೆ ಆಗಲ್ವಾ?'

'ಅದು ನಾವು ರೂಢಿ ಮಾಡ್ಕೊಂಡು ಬಂದ ಹಾಗೆ. ಅಲ್ಲದೆ ಪುಣ್ಯಕಥೆಗಳನ್ನು ಒಳ್ಳೆ ಭಾಷೇಲಿ ಹೇಳಬೇಕು, ಕೇಳೋ ಮಾನ್ಯರು ಮೆಚ್ಚಬೇಕು.'

'ಜೀವನೋಪಾಯಕ್ಕೆ ಈ ಕಥೆಯನ್ನು ಅವಲಂಬಿಸಿಕೊಂಡಿದ್ದೀರಾ?'

'ಇಲ್ಲ. ಇದರಿಂದಲೇ ಜೀವನೋಪಾಯ ಮಾಡಬೇಕೆಂಬ ಅವಶ್ಯಕತೆ ಏನಿಲ್ಲ. ಇದು ಒಂದು ಹವ್ಯಾಸ.'

'ಹಾಗಾದ್ರೆ ನಿಮ್ಮ ಜೀವನಕ್ಕೋಸ್ಕರ ಏನು ವೃತ್ತಿ ಮಾಡ್ಕೊಂಡಿದ್ದೀರಿ?'

'ನನಗೆ ಜಮೀನಿದೆ. ವ್ಯವಸಾಯ ಮಾಡ್ಕೊಂಡಿದ್ದೀನಿ.'

'ಜಮೀನೆಷ್ಟಿದೆ?'

'ನಮ್ಮದು ೬೦೦ ಗಿಡ ತೆಂಗಿದೆ. ನಾಲ್ಕೆಕರೆ ಗದ್ದೆ ಇದೆ. ೨೦ ಎಕರೆ ಖುಷ್ಕಿ ಜಮೀನಿದೆ.'

'ಈಗ ಮಕ್ಕಳು ನೀವು ಒಟ್ಟಾಗಿದ್ದೀರಾ?'

'ಇಲ್ಲ. ಬೇರೆ ಬೇರೆ ಆಗಿದ್ದಾರೆ. ಕಿರೇಮಗ ನಾವು ಒಟ್ಟಾಗಿದ್ದೀವಿ.'

'ನಿಮಗೆ ಈಗ ೭೨ ವರ್ಷ ಅಂತೀರಿ. ಈ ವಯಸ್ಸಿನಲ್ಲೂ ಕುಣಿಯುತ್ತ ಕಥೆ ಮಾಡೋದಕ್ಕೆ ನಿಮಗೆ ಸಾಧ್ಯನಾ?'

'ನನಗೆ ಕಥೆ ಮಾಡೋದಕ್ಕೂ ವಯಸ್ಸಿಗೂ ಸಂಬಂಧಾನೆ ಗೊತ್ತಾಗಿಲ್ಲ.'

'ಕಥೆ ಮಾಡೋಕೆ ದೊಡ್ಡ ದೊಡ್ಡ ಊರುಗಳಿಗೆ ಹೋದಾಗ ಅಲ್ಲಿ ನಿಮಗೆ ಒಂದು ರೀತಿ ಭಯ ಏನಾಗಿಲ್ವ?'

'ಒಂದ್ಸಲ ಹಂಗಾಯ್ತು. ಆಗಿನ್ನೂ ನಾವು ಹಳ್ಳೀಲಿ ಮಾತ್ರ ಕಥೆ ಮಾಡ್ತಿದ್ದೊ. ತುರುವೇಕೆರೇಲೂ ಒಂದ್ಸಲ ನಮ್ಮ ಕಥೆ ಇಟ್ಟುಕೊಂಡ್ರು. ಅಲ್ಲೆಲ್ಲ ಓದಿರೋಂತ ದೊಡ್ಡ ದೊಡ್ಡ ಮಾನ್ಯರು ಸೇರಿದ್ರು. ನನಗೆ ಸ್ವಲ್ಪ ಅಳುಕಾಯ್ತು. 'ಶಿವನೇ ನೀನೇ ಗತಿ ಕಣಪ್ಪ' ಅಂತ ಹೇಳಿ ಕಥೆ ಪ್ರಾರಂಭಿಸಿದೊ. ಕಥೆ ಮಾಡ್ತಿರೋಗ ಯಾರೋ ಒಬ್ಬ ಮಹಾನುಭಾವರು ಸ್ಟೇಜ್ ಮ್ಯಾಲಕ್ಕೆ ಬಂದು ಹಾರ ಹಾಕಿ 'ಬಹಳ ಚೆನ್ನಾಗಿ ಕಥೆ ಮಾಡ್ತೀರಿ ಮುಂದುವರ್ಸಿ' ಅಂದ್ರು. ಅಲ್ಲಿಂದ ನನಗೆ ಧೈರ್ಯ ಬಂತು ನೋಡಿ.'

'ಸರಿ. ಕರಪಾಲದ ಕಥೆ ಮಾಡ್ತಿದ್ದೀರಲ್ಲ, ಈ ಕರಾಪಲ ಅಂದ್ರೇನು?'

'ಅದ್ನ ನೀವೇ ಹೇಳ್ಬೇಕು. ಒಂದ್ಸಲ ತುರುವೇಕೆರೇಲಿ ಯಾರೋ ಒಬ್ರು ಹೀಗೆ ನನ್ನ ಕೇಳುದ್ರು. ನನಗೆ ದಿಕ್ಕೇ ತೋಚದಂತಾಯ್ತು. ಆಗ ದೇವರು ನನ್ನ ಹೃದಯಕ್ಕೆ ಏನು ಸೂಚಿಸಿದನೋ ಅದನ್ನ ಹೇಳ್ಬುಟ್ಟೆ?'

'ಏನದು?'

'ಅದೇನಪ್ಪ ಅಂದ್ರೆ 'ಕ' ಅಂದ್ರೆ ಕಾಯಕ ಅಥವಾ ಕರ್ಮವನ್ನು 'ರ' ಅಂದ್ರೆ ರಕ್ಷಿಸಿ 'ಪಾ'ಅಂತ ಅಂದ್ರೆ ಪಾಪಗಳನ್ನೆಲ್ಲ 'ಲ' ಅಂದ್ರೆ ಲಯ ಹುಟ್ಟಿಸಬಲ್ಲ ಪರಮೇಶ್ವರ ಅಂತ ಹೇಳ್ದೆ. ಅವರು ಒಪ್ಕೊಂಡ್ರು.' '

'ನೀವು ಹೇಳಿರೋದು ಒಂದು ರೀತಿ ಚೆನ್ನಾಗಿದೆ. ಇದು ಅಕ್ಷರಾರ್ಥ ಚಮತ್ಕಾರ.'

ಹೀಗೆ ದೊಡ್ಡ ವ್ಯಕ್ತಿ ಎನ್ನಿಸಿಕೊಂಡು ಬದುಕಿದ ಕರಪಾಲ ತಿಮ್ಮಪ್ಪನವರು ೧೯೯೧ರಲ್ಲಿ ನಮ್ಮನಗಲಿದ್ದರಿಂದ ಜಾನಪದ ಲೋಕ ಒಬ್ಬ ಮಹಾನ್ ಕಲಾವಿದನನ್ನು ಕಳೆದುಕೊಂಡಿತು.

ಬಜಗೂರು ಎಲ್ಲಯ್ಯ

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಬಜಗೂರು ಗ್ರಾಮದವರಾದ ಚೌಡಿಕೆ ಎಲ್ಲಯ್ಯನವರ ವಂಶಿಕರು ಐದಾರು ತಲೆಗಳ ಹಿಂದೆಯೆ ನೊಣವಿನಕೆರೆ ಹೋಬಳಿ ಹುಣಸೇಘಟ್ಟದಿಂದ ಬಜಗೂರಿಗೆ ಬಂದು ನೆಲೆಸಿದರು. ಎಲ್ಲಯ್ಯನವರ ತಂದೆ ಪರಶುರಾಮಯ್ಯ, ತಾಯಿ ಎಲ್ಲಮ್ಮ. ಎಲ್ಲಯ್ಯನವರಿಗೆ ಒಬ್ಬ ಅಣ್ಣ ಹಾಗೂ ಒಬ್ಬ ತಮ್ಮ ಇದ್ದು ಈಗ ತಮ್ಮ ಮಾತ್ರ ಉಳಿದಿದ್ದಾನೆ.

ಬೆರಳಿಗೆ ಗೆಜ್ಜುಗದ ಸಿಪ್ಪೆಯನ್ನು ಸಿಕ್ಕಿಸಿಕೊಂಡು ಮರಳಿನ ಮೇಲೆ ಅಕ್ಷರ ಬರೆಯುತ್ತಿದ್ದ ಕಾಲದಲ್ಲಿ ಎಲ್ಲಯ್ಯನವರೂ ಅಷ್ಟಿಷ್ಟು ಓದಲು ಕಲಿತರು. ಆದರೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಹದಗೆಟ್ಟ ಆರ್ಥಿಕ ಪರಿಸ್ಥಿತಿ ಅಡ್ಡಿಯಾಯಿತು.

ಏಳು ವರ್ಷದ ಎಲ್ಲಯ್ಯನನ್ನು ನೋಡಿದ ತಂದೆ ಪರಶುರಾಮಯ್ಯನವರಿಗೆ ತಮ್ಮ ಮಗನೂ ತಮ್ಮಂತೆ ಒಳ್ಳೆಯ ಕಲಾವಿದನಾಗಬೇಕೆಂಬ ಹೆಬ್ಬಯಕೆ. ಆದರೆ ಎಲ್ಲಯ್ಯನವರಿಗೆ ತಂದೆಯ ವೃತ್ತಿಯ ಬಗೆಗೆ ಅನಾದರ ; ಭಿಕ್ಷೆ ಮಾಡುವ ಕೆಲಸಕ್ಕೆ ಕಟ್ಟುಗ್ರ ವಿರೋಧಿ. ತಂದೆಯ ಬೆದರಿಕೆಗೆ, ಒತ್ತಾಯಕ್ಕೆ ಯಾವುದಕ್ಕೂ ಮಣಿಯದ ಛಲ.

ಹೀಗಿದ್ದರೂ ಪರಶುರಾಮಯ್ಯನವರು ತಮ್ಮ ಮಗನ ಕೈಗೆ ಶಾಸ್ತ್ರೀಯವಾಗಿ ಚೌಡಿಕೆ ಕೊಡಿಸಬೇಕೆಂದು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡರು. ಇದನ್ನು ತಿಳಿದ ಎಲ್ಲಯ್ಯನವರು ಯಾರ ಕಣ್ಣಿಗೂ ಬೀಳದಂತೆ ದನದ ಗೊಂತಿನಲ್ಲಿ ಅಡಗಿ ಕುಳಿತರಂತೆ. ಆ ಹೊತ್ತಿನಲ್ಲಿ ಜೋಗ್ತಿ ಪಟ್ಟದ ಬಳಿ ಕಾಯುತ್ತಿದ್ದ ದರ್ಶನಕಾರನಿಗೆ ಇದ್ದಕ್ಕಿದ್ದಂತೆ ಎಲ್ಲಮ್ಮ ಮೈತುಂಬಿ ಬಂದು 'ಉಧೋ ಉಧೋ' ಎಂದು ಕಾಕ್ಕಾಹುತ್ತ ಗೊಂತಿನಲ್ಲಿ ಅಡಗಿ ಕುಳಿತಿದ್ದ ಹುಡುಗನ ಜುಟ್ಟನ್ನು ಹಿಡಿದೆಳೆದು ತಂದು ಜೋಗ್ತೀಪಟ್ಟದ ಮೇಲೆ ಕುಳ್ಳಿರಿಸಿತಂತೆ ! ಎಲ್ಲಮ್ಮದೇವಿಯೇ ಬಯಸಿದಳೆಂದ ಮೇಲೆ ಎಲ್ಲಯ್ಯನವರು ಚೌಡಿಕೆ ಹಿಡಿಯದೆ ಇರುವುದಾದರೂ ಹೇಗೆ!

ತಂದೆಯ ಹಂಬಲ ಈಡೇರಿತು. ಅವರು ಬಯಸಿದಂತೆ ಎಲ್ಲಯ್ಯನವರು ಬೆರಳು ತೋರಿಸಿದರೆ ಹಸ್ತವನ್ನು ನುಂಗುವ ಗಾಯಕನಾಗಿ ಬೆಳೆದರು. ತಂದೆ ಹಾಗೂ ಅಣ್ಣ ಚಿಕ್ಕೆಲ್ಲಯ್ಯನನ್ನೂ ಮೀರಿಸುವ ಸ್ಮೃತಿಶಕ್ತಿ, ಕಂಠಮಾಧುರ್ಯ ಹಾಗೂ ಪುನರ್ ಸೃಷ್ಟಿ ಸಾಮರ್ಥ್ಯ ಅವರನ್ನು ಶ್ರೇಷ್ಠ ಕಲಾವಿದರನ್ನಾಗಿಸಿತು. ಮುದ್ದು ಮುದ್ದಾಗಿದ್ದ ತರುಣ ಎಲ್ಲಯ್ಯನವರನ್ನು ಕಂಡು ತಂದೆ ಹೆಮ್ಮೆಪಡುತ್ತಲೇ ಹಾಸಿಗೆ ಹಿಡಿದರು. ಮಗನ ಮದುವೆಯನ್ನು ಕಣ್ತುಂಬ ನೋಡಿ ಸಾಯಬೇಕೆಂಬ ಅವರ ಹಂಬಲ ಕೈಗೂಡಲಿಲ್ಲ. ತಂದೆಯನ್ನು ಉಳಿಸಿಕೊಳ್ಳುವ ಆಸೆಯಿಂದ ಎಲ್ಲಯ್ಯನವರು ಸಾಲಗಾರರಾದರು. ಆ ಸಾಲ ತೀರಿಸಲು ಜೀತ ದಾಳಾಗಿ ದುಡಿಯಬೇಕಾಯ್ತು.

ತನ್ನ ಪತಿಯ ಆಸೆಯನ್ನು ನೆರವೇರಿಸುವುದಕ್ಕಾಗಿ ಎಲ್ಲಮ್ಮನವರು ಮಗನ ಮದುವೆಗೆ ಸಿದ್ಧತೆ ಮಾಡಿದರು. ತುರುವೇಕೆರೆಯ ಕರಿಯಪ್ಪ-ಜವರಮ್ಮರ ಮಗಳು ಮಲ್ಲಮ್ಮನನ್ನು ಸೊಸೆಯಾಗಿ ತಂದುಕೊಂಡರು. ಹುಡುಗಿ ಋತುವಾಗಿಲ್ಲದ ಕಾರಣ ತಂದೆ ಮನೆಯಲ್ಲೇ ಇದ್ದಳು.

ಎಲ್ಲಮ್ಮನವರಿಗೆ ಇದ್ದಕ್ಕಿದ್ದಂತೆ ಆರೋಗ್ಯ ಹದಗೆಟ್ಟಿತು. ಹಾಸಿಗೆ ಹಿಡಿದಿರುವ ತಾಯಿಯ ಶುಶ್ರೂಷೆಗಾದರೂ ಹೆಂಡತಿ ಮನೆಗೆ ಬರಲಿ ಎಂಬ ಬಯಕೆಯಿಂದ ಹೆಂಡತಿಯನ್ನು ಕರೆತರಲು ಹೋದ ಎಲ್ಲಯ್ಯನ ಜೊತೆಗೆ ಮಲ್ಲಮ್ಮನನ್ನು ಕಳಿಸಿಕೊಡಲು ಮಾವನ ಮನೆಯವರು ಒಪ್ಪಲಿಲ್ಲ. ಅದಕ್ಕೆಲ್ಲ ಶಾಸ್ತ್ರವಾಗಬೇಕಲ್ಲವೆ ಎಂದುಬಿಟ್ಟರು. ತಾಯಿಯ ಉಪಚಾರಕ್ಕೆ ಬೇವಿನಹಳ್ಳಿಯಲ್ಲಿದ್ದ ತಂಗಿಯನ್ನು ಕರೆದುಕೊಂಡು ಬಂದರು.

ಮನೆಯಲ್ಲಿನ ಪರಿಸ್ಥಿತಿಯಿಂದ ಬೇಸತ್ತು ತಲೆಕೆಟ್ಟಂತಾಗಿ ಮನೆ ಬಿಟ್ಟು ಹೊರಟ ಎಲ್ಲಯ್ಯನವರು ಅಲೆದಲೆದು ಮಂಡ್ಯಕ್ಕೆ ಬಂದರು. ಅಲ್ಲಿ ಒಂದು ತಿಂಗಳ ಕಾಲ ಸಕ್ಕರೆ ಕಾರ್ಖಾನೆಯಲ್ಲಿ ಕೂಲಿ ಮಾಡಿದರು. ಅಲ್ಲಿಂದ ಏನೊ ಬೇಸರವಾದಂತಾಗಿ ರೈಲನ್ನು ಹತ್ತಿ ಕೆ.ಆರ್. ನಗರದಲ್ಲಿ ಇಳಿದರು. ಹೊಟ್ಟೆ ತಾಳ ಹಾಕುತ್ತಿತ್ತು. ಹತ್ತಿರದ ಅಂಗಡಿಯಲ್ಲಿ ಒಂದು ಸೇರು ಪುರಿಯನ್ನು ಕೊಂಡು ಪಲ್ಲಿಗೆ ಕಟ್ಟಿಕೊಂಡು ತಿನ್ನುತ್ತಾ ಕುಳಿತರು. ಈ ಮುದ್ದಾದ ತರುಣನನ್ನು ನೋಡಿದ ರಂಗಯ್ಯ ಎನ್ನುವವರು ತಮ್ಮ ಮನೆಗೆ ಕರೆದುಕೊಂಡು ಹೋಗಿ ಎಲ್ಲಯ್ಯನ ಕಥೆಯನ್ನೆಲ್ಲ ಕೇಳಿ ಮರುಗಿ ಪ್ರೀತ್ಯಾದರಗಳಿಂದ ಉಪಚರಿಸಿದರು.

ಹದಿನೈದು ದಿನಗಳವರೆಗೆ ಹಾಯಾಗಿದ್ದ ಎಲ್ಲಯ್ಯನವರನ್ನು ದಿಗ್ಭ್ರಾಂತರನ್ನಾಗಿಸುವ ಮಾತು ರಂಗಯ್ಯನವರ ಬಾಯಿಂದ ಹೊರಟಿತು. ತಮಗೆ ಅಳಿಯನಾಗಬೇಕೆಂದು ರಂಗಯ್ಯನವರು ಪಟ್ಟು ಹಿಡಿದಾಗ ಎಲ್ಲಯ್ಯನವರಿಗೆ ತಮ್ಮ ಎಳೆವಯಸ್ಸಿನ ಹೆಂಡತಿಯ ನೆನಪಾಯಿತು. ಇಂಥವರ ಸಹಾಯದ ಹಿಂದಿರುವ ಸ್ವಾರ್ಥವನ್ನು ಕಂಡು ನೋವಾಯಿತು. ಅವರು ಆ ದಿನವೆ ರಂಗಯ್ಯನವರಿಗೆ ತಿಳಿಯದಂತೆ ಅವರಿಗೆ ಹೇಳದೆ ಕೇಳದೆ ಕಾಲು ಕಿತ್ತರು.

ಮತ್ತೆ ಟ್ರೈನ್ ಹತ್ತಿ ಅರಸೀಕೆರೆ ಸೇರಿದರು. ಅಲ್ಲಿ ಹೊಟೇಲೊಂದರಲ್ಲಿ ಬಟ್ಟಲು ತೊಳೆಯುವ ಕೆಲಸಕ್ಕೆ ಸೇರಿದರು. ಮೂರು ತಿಂಗಳು ಕಳೆಯುವ ಹೊತ್ತಿಗೆ ಕೈಬೆರಳುಗಳ ಸಂದುಸಂದುಗಳೆಲ್ಲ ಶೀತದಿಂದ ಸೆಲೆತು ಹುಳು ಬಿದ್ದುಬಟ್ಟೊ. ಈಗ ಹೊಟೇಲು ಮಾಲೀಕನಿಗೆ ಎಲ್ಲಯ್ಯನವರ ಅಗತ್ಯ ಖಂಡಿತ ಬೇಕೆನಿಸಲಿಲ್ಲ. ಸಂಬಳವೆಂದು ಹೇಳಿ ಕೈಗಷ್ಟು ಚಿಲ್ಲರೆ ಕೊಟ್ಟು ಹೊರಹಾಕಿದ. ಅಲ್ಲಿಂದ ಮತ್ತೆ ಟ್ರೇನಿನಲ್ಲಿ ತಿಪಟೂರಿಗೆ ಬಂದು ಸಮೀಪದ ಮಾದಿಹಳ್ಳಿ ರಂಗಯ್ಯನವರ ಮನೆಯಲ್ಲಿ ಕೂಲಿಗೆ ಸೇರಿದರು. ಈ ಮಹಾಯಾತ್ರಿಕನ ಮಾಹಿತಿ ಎಲ್ಲಯ್ಯನವರ ಭಾವನಿಗೆ ತಿಳಿದು ತಕ್ಷಣವೇ ಬಂದು ಎಲ್ಲಯ್ಯನವರನ್ನು ಊರಿಗೆ ಕರೆದುಕೊಂಡು ಹೋದರು.

ದೇವಿ ಎಲ್ಲಮ್ಮತಾಯಿ ತನ್ನ ಭಕ್ತ ಚೌಡಿಕೆ ಹಿಡಿಯುವ ವೃತ್ತಿಯನ್ನಲ್ಲದೆ ಬೇರೆ ಯಾವ ವೃತ್ತಿ ಮಾಡುವುದನ್ನೂ ಒಪ್ಪಲಿಲ್ಲ. ಹೀಗೆ ಎಲ್ಲಯ್ಯನವರು ಎಲ್ಲಮ್ಮ ತಾಯಿಯ ಜೋಗಿಯಾಗಿ ಚೌಡಿಕೆ ಹಿಡಿದು ಈ ಸಂಪ್ರದಾಯದ ಶ್ರೇಷ್ಠ ಕಲಾವಿದರೆನಿಸಿದರು.

ಎಲ್ಲಯ್ಯನವರಿಗೆ ಸಿನೇಮಾದ ಹುಚ್ಚು, ನಾಟಕದ ತೆವುಲು, ಯಕ್ಷಗಾನದ ಖಯಾಲಿ ಹರಿಕಥೆಯ ಚೂಲಿದ್ದು ಇವು ಎಲ್ಲಿ ನಡೆಯುತ್ತಿರಲಿ ದೂರ-ಹತ್ತಿರ ಎನ್ನದೆ ಹಗಲು-ಇರುಳು ಎನ್ನದೆ ಎಲ್ಲೆಂದರಲ್ಲಿಗೆ ಹೋಗುವ ಆಸಕ್ತಿ, ಅಭಿರುಚಿ ಶ್ರದ್ಧೆ ಅವರದಾಗಿತ್ತು. ತಾವೂ ಬಣ್ಣ ಹಾಕಿಕೊಂಡು ನಾಟಕ, ಯಕ್ಷಗಾನಗಳಲ್ಲಿ ಕುಣಿದಿದ್ದರು. ದಾನಶೂರಕರ್ಣ ನಾಟಕದಲ್ಲಿ ಎಲ್ಲಯ್ಯನವರು ಸ್ವಯಂಪ್ರಭೆ ಪಾತ್ರ ಮಾಡಿದ್ದಾಗಿನ ಜನಪ್ರಿಯತೆ ಆ ಸುತ್ತಿನಲ್ಲೆ ಹೆಸರಾಗಿತ್ತು. ಬೇರೆ ಬೇರೆ ನಾಟಕಗಳಲ್ಲಿ ವಿವಿಧ ಬಗೆಯ ಪಾತ್ರಗಳನ್ನು ಮಾಡಿ ಜನಪ್ರಿಯತೆ ಗಳಿಸಿದ್ದರು. ಆದರೂ ಚೌಡಿಕೆ ಮೇಳವೇ ಈ ಕಲಾವಿದರಿಗೆ ಶ್ರೇಷ್ಠ ಮತ್ತು ಮೆಚ್ಚು. ಉಳಿದ ಕಲೆಯೆಂದರೆ ಮದುವೆ ಮುಂಜಿಗಳಲ್ಲಿ ಓಲಗ ನುಡಿಸುವುದರಲ್ಲೂ ದೊಡ್ಡ ಹೆಸರಾಗಿದ್ದಾರೆ.

ಎಲ್ಲಯ್ಯ-ಮಲ್ಲಮ್ಮ ದಂಪತಿಗಳಿಗೆ ನಾಲ್ವರು ಗಂಡುಮಕ್ಕಳು. ಒಬ್ಬ ಹೆಣ್ಣುಮಗಳಿದ್ದಾಳೆ. ಜಗದೀಶ್, ಪ್ರಕಾಶ್, ಬಾಬು, ಕೃಷ್ಣ - ಈ ನಾಲ್ವರಲ್ಲಿ ಜಗದೀಶ ಮತ್ತು ಪ್ರಕಾಶ ಅವರುಗಳು ಚೌಡಿಕೆ ಮೇಳದಲ್ಲಿ ತಂದೆಗೆ ಸಾಥ್ ನೀಡುತ್ತಾರೆ. ಹೆಣ್ಣುಮಗಳು ರೇಣುಕಾ ಅವರನ್ನು ಅರಳಿಕೆರೆ ಲಕ್ಷ್ಮಣ್ ಎಂಬಪರಿಗೆ ಕೊಟ್ಟು ಮದುವೆಯಾಗಿದೆ. ಈ ಎಲ್ಲ ಮಕ್ಕಳೂ ಎಲ್ಲಯ್ಯನವರನ್ನು ಅಕ್ಕರೆಯಿಂದ ನೋಡಿಕೊಳ್ಳುತ್ತಿದ್ದಾರೆ.

ಎಲ್ಲಯ್ಯನವರಿಗೆ ೨೦೦೫ನೇ ವರ್ಷದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರಕಿರುವುದಲ್ಲದೆ ಹಲವಾರು ಸಂಘ-ಸಂಸ್ಥೆಗಳು ಪ್ರಶಸ್ತಿಗಳನ್ನಿತ್ತು ಸನ್ಮಾನ ಮಾಡಿ ಗೌರವಿಸಿವೆ.

ಎಲ್ಲಯ್ಯನವರಿಗೆ ಈಗ ಸುಮಾರು ೬೬ ವರ್ಷ ವಯಸ್ಸಾಗಿರಬಹುದು. ಈ ಕಲಾವಿದರ ಕಾವ್ಯಗಳನ್ನು ೧೯೭೩ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಸಂಗ್ರಹಿಸಿದ ತಿಪಟೂರು ತಾಲ್ಲೂಕಿನ ಮಾಕನಹಳ್ಳಿ ನಂ.ನಾರಾಯಣಗೌಡ ಅವರು ೧೯೭೪ನೇ ವರ್ಷದಲ್ಲಿ 'ಚೌಡಿಕೆ ಕಾವ್ಯಗಳು' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ.

ಎಲ್ಲಮ್ಮದೇವಿ ಕಾವ್ಯದಲ್ಲಿ ಬರುವ ಮಾದಾರ ಚನ್ನಯ್ಯನ ಕಥೆಯನ್ನು ಎಲ್ಲಯ್ಯನವರು 'ಜನಪದ ಶರಣ ಕಾವ್ಯಗಳು' ಸಂಕಲನಕ್ಕಾಗಿ ಮತ್ತೆ ಹಾಡಿದ್ದಾರೆ.

ಡಾ.ಜಿ. ಕೋದಂಡರಾಮನ್

ಮೈಸೂರು ನಗರವು ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರದ ದಶಕದಲ್ಲಿ ದಕ್ಷಿಣಶೈಲಿಯ ಲಾವಣಿಕಾರರ ಕೇಂದ್ರ ಸ್ಥಾನವೆನಿಸಿತ್ತು. ಮೈಸೂರು ಈರಮುದ್ದಿ, ಶೇಷಗಿರಿ ಹರಿದಾಸ, ಈರನಗೆರೆ ಪುಟ್ಟಣ್ಣ, ಸಿ.ಬಿ. ಸಂಜೀವಯ್ಯ, ಬಿ. ನೀಲಕಂಠಯ್ಯ, ಕಂಪಲಾಪುರದ ಲಾವಣಿ ಸಿದ್ದಪ್ಪ, ರಾಜೋಜ ಮುಂತಾದವರ ಸಾಲಿನಲ್ಲಿ ಮೈಸೂರಿನ ಡಾ. ಜಿ. ಕೋದಂಡರಾಮನ್

ಅವರೂ ಒಬ್ಬರು. ಎಂಬಿಬಿಎಸ್ ಪದವೀಧರರಾಗಿ ಡಾಕ್ಟರರಾಗಿದ್ದ ಕೋದಂಡರಾಮನ್ ಅವರು ನಾಡಿನ ಹೆಸರಾಂತ ಸಾಹಿತಿಗಳಾದ ಅನಕೃ, ತರಾಸು ಮತ್ತು ನಾಡಿಗೇರ ಕೃಷ್ಣರಾಯರ ಸಾನಿಧ್ಯದಲ್ಲಿ ಸಾಹಿತ್ಯದ ಸಾರಾಮೃತಕ್ಕೆ ಮರುಳಾದವರು. ಈ ಮಹಾನ್ ಸಾಹಿತಿಗಳ ಸೇವೆಯಲ್ಲೇ ತಮ್ಮ ಜೀವನದ ಸಾರ್ಥಕ್ಯ ವನ್ನು ಕಂಡುಕೊಂಡವರು. ಅದರಲ್ಲೂ ಅನಕೃ ಎಂದರೆ ಕೋದಂಡರಾಮು ಅವರಿಗೆ ಜೀವ ದೈವ ಸರ್ವ ಎಂಬಂತಿದ್ದರು. ಅನಕೃ ಅವರ ಆದರ ಅಭಿಮಾನ ಆಶ್ರಯ ಆಶೀರ್ವಾದಗಳು ಕೋದಂಡರಾಮು ಅವರ ಸಾಹಿತ್ಯ ಚಟುವಟಿಕೆಗಳಿಗೆ ಕಲೋಪಾಸನೆಗೆ ಸ್ಫೂರ್ತಿಯ ಶರಾವತಿಯಂತಿದ್ದವು. ಅನಕೃ ಅವರು ಕೋದಂಡ ರಾಮುವಿಗೆ ಬರೆದಿರುವ ಪತ್ರಗಳ ರಾಶಿಯನ್ನು ನೋಡಿದರೆ ಯಾರೊಬ್ಬರಿಗೂ ಬೆರಗಾಗುತ್ತದೆ; ಅಲ್ಲದೆ ಅವು ಕೋದಂಡರಾಮು ಅವರು ಅನಕೃ ಅವರ ಕಾರ್ಯಕ್ಷೇತ್ರದಲ್ಲಿ ಅನಿವಾರ್ಯ ವ್ಯಕ್ತಿಯಾಗಿದ್ದರು ಎಂಬುದನ್ನು ಹೇಳುತ್ತವೆ.

ಡಾ.ಜಿ. ಕೋದಂಡರಾಮನ್ ಅವರನ್ನು ನಾನು ಚಿಕ್ಕಹುಡುಗನಾಗಿದ್ದಾಗ ಕಂಡಿದ್ದೆ. ಅವರು ನನ್ನ ಊರು ಪಿರಿಯಾಪಟ್ಟಣದ ದೊಡ್ಡಬೀದಿಯಲ್ಲಿರುವ ತೆಲಗು ಬಣಜಿಗರ ಪಾರ್ವತಮ್ಮ ಎಂಬವರ ಅಳಿಯ. ಅವರ ಪತ್ನಿಯ ಹೆಸರು ಸುಭದ್ರಮ್ಮ. ನಮ್ಮ ದೊಡ್ಡಮ್ಮನವರ ಪುತ್ರ ಅರ್ಥಾತ್ ನನ್ನ ಅಣ್ಣ ಪಿ.ಕೆ.ಶಿವಪ್ಪನವರ ವಿವಾಹ ಸಂದರ್ಭದಲ್ಲಿ ಈ ದಂಪತಿಗಳು ಕಾರ್ಯಕ್ರಮ ನಿಯೋಜನೆಯಲ್ಲಿ ಉತ್ಸಾಹದಿಂದ ಓಡಾಡುತ್ತಿದ್ದುದು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಅವರು ಚಿತ್ರಕಲಾವಿದರೂ ಆಗಿದ್ದರೆಂದು ಕಾಣುತ್ತದೆ. ಅವರು ನನ್ನ ಅಣ್ಣ-ಅತ್ತಿಗೆಯರ ಹೆಸರುಗಳನ್ನು ಬಗೆಬಗೆಯ ಬಣ್ಣಗಳನ್ನು ಬಳಸಿ 'ಪಿ.ಕೆ. ಶಿವಪ್ಪ-ಶಾರದ ಶಿವಪ್ಪ' ಎಂದು ಕಲಾತ್ಮಕವಾಗಿ ಬರೆದು ನಮ್ಮ ಕಣ್ಣುಗಳಿಗೆ ಹಬ್ಬವನ್ನುಂಟುಮಾಡಿದ್ದರು. ಅವರು ಹಾಡಲೂ ಬಲ್ಲವರಾಗಿದ್ದರೆಂಬುದು ನನ್ನ ನೆನಪಿನಲ್ಲುಳಿದಿದೆ. ಅವರು ಬರೆದಿದ್ದ 'ಜಗಜ್ಜೋತಿ ಬಸವೇಶ್ವರ ಲಾವಣಿ' ಕೃತಿಯು ನನ್ನ ಅಣ್ಣ ಪಿ.ಕೆ.ಶಿವಪ್ಪನವರ ಪುಸ್ತಕ ಭಂಡಾರದಲ್ಲಿತ್ತು. ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದ ನಾನು ಅವರ ಸಂಗ್ರಹದಲ್ಲಿದ್ದ ಪುಸ್ತಕಗಳನ್ನೆಲ್ಲ ಓದಲು ಪ್ರಯತ್ನಿಸುತ್ತಿದ್ದೆ. ಹಾಗೆಯೇ ಬಸವೇಶ್ವರ ಲಾವಣಿಯನ್ನೂ ಓದಿದ್ದೆ.

ಎಷ್ಟೋ ವರುಷಗಳು ಉರುಳಿಹೋದವು. ನಾನು ಕನ್ನಡ ಎಂ.ಎ. ಮುಗಿಸಿ ಮಹಾರಾಜ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿದ್ದೆ. ಆ ಸಂದರ್ಭದಲ್ಲಿ ಒಮ್ಮೆ ನಾನು ನನ್ನ ಊರು ಪಿರಿಯಾಪಟ್ಟಣಕ್ಕೆ ಹೋಗಿದ್ದೆ. ನಾನು ನಮ್ಮ ದೊಡ್ಡಮ್ಮನ ಮನೆಯಲ್ಲಿದ್ದ ವೇಳೆಯಲ್ಲಿ ಸುಭದ್ರಕ್ಕ ಅಲ್ಲಿಗೆ ಬಂದಿದ್ದರು. ಅವರ ಪತಿ ಕೋದಂಡರಾಮು ತೀರಿಕೊಂಡದ್ದರಿಂದ ಅವರು ತಮ್ಮ ತಾಯಿ ಮನೆಗೆ ಬಂದು ತಾಯಿಯೊಡನೆ ವಾಸವಾಗಿದ್ದರು. ಕೆಲವು ವರ್ಷಗಳ ಅನಂತರ ತಾಯಿ ಪಾರ್ವತಮ್ಮನವರೂ ತೀರಿಕೊಂಡದ್ದರಿಂದ ಸುಭದ್ರಕ್ಕ ಒಂಟಿಯಾದರು. ವಾಸಕ್ಕೆ ತಾಯಿ ಬಿಟ್ಟುಹೋಗಿದ್ದ ಮನೆಯಲ್ಲದೆ ಅವರು ಜೀವನ ನಡೆಸಲು ಯಾವುದೇ ವಿಧವಾದ ದಾರಿ ಇರಲಿಲ್ಲ. ಅವರಿಂದ ಮನೆಯ ಅರ್ಧಭಾಗಕ್ಕೆ ಮಧ್ಯೆ ಗೋಡೆ ಹಾಕಿಸಿ ಬೇರೆ ಬಾಗಿಲಿಡಿಸಿ ಬಾಡಿಗೆಗೆ ಕೊಟ್ಟು, ಬರುವ ಸಣ್ಣಪ್ರಮಾಣದ ಬಾಡಿಗೆ ಹಣದಲ್ಲಿ ಹೊತ್ತಿನ ಒಂದು ತುತ್ತಿಗೆ ದಾರಿ ಮಾಡಿಕೊಂಡಿದ್ದರು.

ನಾನು ಜನಪದ ಶರಣ ಕಾವ್ಯಗಳನ್ನು ಸಂಗ್ರಹಿಸುತ್ತಿದ್ದ ವೇಳೆಯಲ್ಲಿ ಇದ್ದಕ್ಕಿದ್ದಂತೆ 'ಜಗಜ್ಯೋತಿ ಬಸವೇಶ್ವರ ಲಾವಣಿ' ನೆನಪಿಗೆ ಬಂತು. ಪಿರಿಯಾಪಟ್ಟಣಕ್ಕೆ ಹೋಗಿದ್ದಾಗ ನಮ್ಮ ಕೆಂಪೇಗೌಡ ಮಾವನಿಗೆ ತಿಳಿಸಿದೆ. ಅವರು ಆ ಕೂಡಲೆ ನನ್ನನ್ನು ಸುಭದ್ರಕ್ಕನ ಮನೆಗೆ ಕರೆದುಕೊಂಡು ಹೋದರು. ಏಕಾಂಗಿಯಾಗಿದ್ದ ಅವರ ಕುಶಲವನ್ನು ವಿಚಾರಿಸಿ ಡಾ.ಜಿ. ಕೋದಂಡರಾಮನ್ ಅವರ ಬಗೆಗೆಲ್ಲ ಮಾತನಾಡುತ್ತ ಅವರ ಗಾಯನ ಕೌಶಲ, ಕಾವ್ಯ ರಚನಾಶಕ್ತಿ, ಚಿತ್ರಕಲಾ ನೈಪುಣ್ಯತೆಯನ್ನೆಲ್ಲ ಕುರಿತು ಮಾತಾಡುತ್ತ "ಅಕ್ಕ ನನಗೆ ರಾಮಣ್ಣ ಬರೆದಿರೊ 'ಜಗಜ್ಜೋತಿ ಬಸವೇಶ್ವರ ಲಾವಣಿ' ಪುಸ್ತಕವನ್ನು ಕೊಡಕ್ಕ" ಎಂದು ಕೇಳಿಕೊಂಡೆ. ಆಗವರು ಕೋದಂಡರಾಮು ಅವರ ಆಸ್ತಿಯಂತಿದ್ದ ಪುಸ್ತಕಗಳ ಕಟ್ಟೊಂದನ್ನುತಂದು ನನ್ನ ಮುಂದಿರಿಸಿದರು. ನಾನು ಕುತೂಹಲದಿಂದ ಆ ಕಟ್ಟನ್ನು ಬಿಚ್ಚಿದೆ. ಆ ಕಟ್ಟಿನ ತುಂಬ ಅನಕೃ, ತರಾಸು, ನಾಡಿಗೇರ ಕೃಷ್ಣರಾಯರು ಮುಂತಾದ ಮಹನೀಯರುಗಳ ಕೋದಂಡರಾಮು ಅವರಿಗೆ ಬರೆದಿರುವ ಪತ್ರಗಳು, ಒಂದು ನೋಟ್‌ಬುಕ್, ಕೆಲವು ಪದ್ಯಗಳಿರುವ ಹಾಳೆಗಳು ಹಾಗೂ 'ಕನ್ನಡ ನಾಡಿನ ಲಾವಣಿ', 'ಶ್ರೀ ಗಣಪತಿ ಶತನಾಮಾವಳಿ ಭಜನಮಾಲಾ', 'ಶ್ರೀವಾಸವಾಂಬ ಅಷ್ಟೋತ್ತರ ಭಜನಮಾಲಾ', 'ಶತಕೋಟಿ ದರ್ಶನ', 'ಅಕ್ಷರ ಮಾಲ ಗಣಪತಿ ಸ್ತೋತ್ರ ಪದ್ಯಾವಳಿ', 'ಶ್ರೀ ಗುರು ಪದ್ಮಾನಂದ ಸ್ವಾಮಿ ಅಷ್ಟೋತ್ತರ ಭಜನಾವಳಿ' ಎಂಬ ಅಂಗೈ ಅಗಲದ ಪುಟ್ಟ ಪುಟ್ಟ ಪುಸ್ತಿಕೆಗಳು ಮತ್ತು ಎನ್.ಎಸ್. ವೀರಪ್ಪನವರ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದ 'ಕನ್ನಡ ರಂಗಭೂಮಿಯ ಶತಮಾನೋತ್ಸವ ಸ್ಮಾರಕ ಗ್ರಂಥ' (೧೯೪೮) ಮುಂತಾದ ಪುಸ್ತಕಗಳಿದ್ದವು. ಆದರೆ ಆ

ಕಟ್ಟಿನಲ್ಲಿ ನಾನು ಅಪೇಕ್ಷಿಸಿದ್ದ 'ಜಗಜ್ಜೋತಿ ಬಸವೇಶ್ವರ ಲಾವಣಿ' ಇರಲಿಲ್ಲ. ನನಗೆ ತುಂಬ ನಿರಾಶೆಯಾಯಿತು. ಅದಕ್ಕವರು "ಮೈಸೂರಿನಲ್ಲಿ ನಮ್ಮ ಪರಿಚಿತರ ಯಾರ ಬಳಿಯಲ್ಲಾದರೂ ಇದ್ದರೆ ಅದನ್ನು ನಿಮಗೆ ಕೊಡಿಸುತ್ತೇವೆ" ಎಂದು ಹೇಳಿ ಆ ಪುಸ್ತಕದ ಕಟ್ಟನ್ನು ಪತ್ರಗಳ ಸಹಿತ ನನಗೇ ಕೊಟ್ಟುಬಿಟ್ಟರು.

ನಾನು ಮತ್ತೆ ಸುಭದ್ರಕ್ಕನವರನ್ನು ನೋಡಬೇಕೆಂದು ಪಿರಿಯಾಪಟ್ಟಣಕ್ಕೆ ಹೋಗಿ ನನ್ನ ಸಹೋದರ ಪಿ.ಕೆ. ವಾಸುವಿಗೆ ಹೇಳಿದೆ. ಅಷ್ಟು ಹೊತ್ತಿಗಾಗಲೆ ಅವರು ತಾವು ವಾಸವಾಗಿದ್ದ ಮನೆಯನ್ನು ಮಾರಿ ಮೈಸೂರಿಗೋ ಬೆಂಗಳೂರಿಗೋ ಹೊರಟುಹೋದರು ಎಂದು ತಿಳಿಸಿದ. ಆ ವಿಷಯ ಕೇಳಿ ನನಗೆ ತೀರ ಕೆಡುಕೆನಿಸಿತು. ಅವರು ಕಷ್ಟದಲ್ಲಿದ್ದಾಗ ನಾವು ಸಹಾಯ ಮಾಡಲೂ ಆಗಲಿಲ್ಲ. ಆ ಒಂಟಿ ಜೀವ ಎಲ್ಲಿದೆಯೋ ಹೇಗಿದೆಯೋ ಎಂದು ಪರಿತಪಿಸಿದೆ. ಅವರಿಗೆ ಸಹಾಯ ಮಾಡಲೂ ನಮ್ಮಿಂದಾಗಲಿಲ್ಲ; 'ಜಗಜ್ಜೋತಿ ಬಸವೇಶ್ವರ ಲಾವಣಿ'ಯೂ ನಮಗೆ ಸಿಗಲಿಲ್ಲ. ಈಗ ಅವರೆಲ್ಲಿದ್ದಾರೆ ಎಂಬ ವಿವರವೂ ತಿಳಿಯಲಿಲ್ಲ. ಈಗ ಅವರ ವಿಚಾರವನ್ನು ತಿಳಿಯಲು ಅವರ ತಲೆಮಾರಿನವರು ಯಾರೂ ಉಳಿದಿಲ್ಲ. ನನ್ನ ದುರ್ದೈವಕ್ಕೆ ನಾನೆ ಹಳಿದುಕೊಳ್ಳದೆ ಬೇರೆ ಏನೂ ಹೊಳೆಯುತ್ತಿಲ್ಲ. ಆದರೂ ಪ್ರಯತ್ನವನ್ನು ಮಾತ್ರ ಬಿಟ್ಟಿಲ್ಲ.

ಈಗ 'ಜನಪದ ಶರಣ ಕಾವ್ಯಗಳು' ಕೃತಿಯ ಪ್ರಕಟಣೆಗೆ ಸಿದ್ಧತೆ ನಡೆಯುತ್ತಿರುವಾಗ ಮತ್ತೆ ಡಾ.ಜಿ. ಕೋದಂಡರಾಮನ್ ನೆನಪಾದರು. ಅವರ 'ಜಗಜ್ಜೋತಿ ಬಸವೇಶ್ವರ ಲಾವಣಿ'ಯನ್ನು ಈ ಸಂಕಲನಕ್ಕೆ ಸೇರಿಸಿಕೊಳ್ಳಬೇಕೆಂಬುದು ನನ್ನ ಹೆಬ್ಬಯಕೆಯಾಗಿತ್ತು. ಅದಕ್ಕಾಗಿ ಆ ಕೃತಿಯನ್ನು ದೊರಕಿಸಿಕೊಳ್ಳಲು ಪಟ್ಟ ಪ್ರಯತ್ನಗಳೆಲ್ಲ ವಿಫಲವಾದವು. ನನ್ನೊಡನೆ ನನ್ನ ಗೆಳೆಯ ಆಲನಹಳ್ಳಿ ಗುರುಸ್ವಾಮಿಯೂ ಸೇರಿ ಮೈಸೂರು ನಗರದಲ್ಲಿರಬಹುದಾದ ಗ್ರಂಥಾಲಯಗಳನ್ನೆಲ್ಲ ಸೋಸಿದರೂ 'ಜಗಜ್ಜೋತಿ ಬಸವೇಶ್ವರ ಲಾವಣಿ' ಸಿಗಲಿಲ್ಲ. ಸುಮಾರು ಐವತ್ತು ವರ್ಷಗಳ ಹಿಂದೆ ನಾನು ಕಂಡಿದ್ದ ಆ ಕೃತಿರತ್ನ ಎಲ್ಲೆಲ್ಲಿ ಹುಡುಕಿದರೂ ಎಲ್ಲೆಲ್ಲಿ ತಡಕಿದರೂ ಸಿಗದಿದ್ದಾಗ ದೊಡ್ಡ ಜಾತ್ರೆಯಲ್ಲಿ ಮಗುವನ್ನು ಕಳೆದುಕೊಂಡ ತಾಯಿಯ ಸ್ಥಿತಿ ನನ್ನದಾಯಿತು. ಸಿಗುವವರೆಗೂ ಹುಡುಕಾಟ ನಿಲ್ಲುವಂತಿಲ್ಲ.

ಮತ್ತೆ ಸುಭದ್ರಕ್ಕೆ ಕೊಟ್ಟಿದ್ದ ಪುಸ್ತಕದ ಕಟ್ಟನ್ನು ಬಿಚ್ಚಿ ನೋಟ್ ಬುಕ್ಕಿನ ಪ್ರತಿ ಪುಟಗಳನ್ನು ತಿರುವಿಹಾಕಿದೆ. ಆ ನೋಟ್ ಬುಕ್ಕಿನೊಳಗೆ ಜವಹರ್ ಲಾಲ್ ನೆಹರೂ ಅವರನ್ನು ಕುರಿತ ಲಾವಣಿಯ ಜೊತೆಗೆ 'ಜಗಜ್ಜೋತಿ ಬಸವೇಶ್ವರ ಲಾವಣಿ'ಯ ಮೂರು ಸೀಟುಗಳ ಹಸ್ತಪ್ರತಿ ಕಣ್ಣಿಗೆ ಬಿದ್ದಿತು. ಅಷ್ಟನ್ನಾದರೂ ಈ ಸಂಕಲನಕ್ಕೆ ಸೇರಿಸಲೇಬೇಕೆಂದು ನಿರ್ಧರಿಸಿದ ಪರಿಣಾಮ ವಾಗಿ ಆ ಲಭ್ಯ ತುಣುಕು ಓದುಗರ ಕೈಸೇರಿದೆ. ಮುಂದೆಂದಾದರೂ ಆ ಲಾವಣಿಯ ಪೂರ್ಣಪಾಠ ಸಿಕ್ಕೀತೆಂಬ ಮಹದಾಶೆ ನನ್ನದು.

ಡಾ. ಜಿ. ಕೋದಂಡರಾಮು ಅವರು 'ಜಗಜ್ಜೋತಿ ಬಸವೇಶ್ವರ ಲಾವಣಿ'ಯನ್ನಲ್ಲದೆ 'ಸಾಯಿಬಾಬಾ ಶತನಾಮಾವಳಿ', 'ಕನ್ನಡ ನಾಡಿನ ಲಾವಣಿ', 'ಅಕ್ಷರ ಮಾಲ ಗಣಪತಿ ಸ್ತೋತ್ರ ಪದ್ಯಾವಳಿ', 'ಶತಕೋಟಿ ದರ್ಶನ', 'ಶ್ರೀ ವಾಸವಾಂಬ ಅಷ್ಟೋತ್ತರ ಭಜನ ಮಾಲೆ', 'ಸಾಯಿಬಾಬಾ ಭಜನ ಮುಕ್ತಾವಳಿ', 'ನೀತಿರತ್ನ', 'ಅನುಭವಗೀತೆ', 'ವಿಶ್ವಜ್ಯೋತಿ ಜವಹರಲಾಲರ ಅಮರ ಗೀತೆ', 'ಬಸವರಾಜು ಸಂಕೀರ್ತನ', 'ಶ್ರೀ ಗಣಪತಿ ಶತನಾಮಾವಳಿ ಭಜನ ಮಾಲಾ', 'ಶ್ರೀ ಗುರು ಪದ್ಮಾನಂದ ಸ್ವಾಮಿ ಅಷ್ಟೋತ್ತರ ಭಜನಾವಳಿ' ಮುಂತಾದ ಕೃತಿಗಳನ್ನು ರಚಿಸಿರುವಂತೆ ತಿಳಿದುಬರುತ್ತದೆ. ಇವರ ಈ ಸಾಹಿತ್ಯ ಸೇವೆಯನ್ನು ಗುರುತಿಸಿ ವಿವಿಧ ಸಂಘ-ಸಂಸ್ಥೆಗಳು ಇವರಿಗೆ 'ಆಶುಕವಿ', 'ಆದರ್ಶಕವಿ', 'ವಿದ್ಯಾರತ್ನ' ಎಂಬೆಲ್ಲ ಬಿರುದುಗಳನ್ನಿತ್ತು ಗೌರವಿಸಿದಂತೆ ತಿಳಿದುಬರುತ್ತದೆ.

ಕೋದಂಡರಾಮು ಅವರ ಅನೇಕ ಗೀತೆಗಳು ಗ್ರಾಮಫೋನ್ ರೆಕಾರ್ಡ್‌ಗಳಾಗಿದ್ದಂತೆಯೂ ತಿಳಿಯುತ್ತದೆ. ಈ ವಿಚಾರವಾಗಿ ಅವರು ತಮ್ಮ ಕನ್ನಡ ನಾಡಿನ ಲಾವಣಿ ಕೃತಿಯ ಅರಿಕೆಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ :

"ಕನ್ನಡ ನಾಡಿನ ಲಾವಣಿಯನ್ನು ಬರೆಯುವುದಕ್ಕೆ ಅವಶ್ಯಕವಾದ ಸ್ಫೂರ್ತಿಯನ್ನು ನನ್ನಲ್ಲಿ ಉಂಟುಮಾಡಿದವರು ನನ್ನ ಆಪ್ತ ಗೆಳೆಯರಾದ ಪ್ರಸಿದ್ಧ ಗ್ರಾಮಫೋನ್ ವ್ಯಾಪಾರಿಗಳಾದ ಶ್ರೀಯುತ ಡಿ.ಎನ್. ಸೀತಾರಾಮಶ್ರೇಷ್ಠಿಗಳು. ಇವರು ನನ್ನಿಂದ ಸಣ್ಣಪುಟ್ಟ ಲಾವಣಿಗಳನ್ನೂ, ಜಾನಪದ ಗೀತೆಗಳನ್ನೂ, ಹಾಸ್ಯಪದಗಳನ್ನೂ ಈಗಿನ ಕಾಲಕ್ಕೆ ತಕ್ಕಂತೆ ಬರೆಸಿ ಅದನ್ನು ಗ್ರಾಮ ಫೋನ್ ರಿಕಾರ್ಡ್ ಮೂಲಕ ಪ್ರಚುರಪಡಿಸಿ ನನ್ನ ನೆರವಿಗೆ ನಿಂತು ಬಹಳ ಉಪಕಾರ ಮಾಡಿರುತ್ತಾರೆ"[1] ಎಂದು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ. ಹೀಗೆ ರೆಕಾರ್ಡ್ ಆಗಿರುವ ಸಾಹಿತ್ಯದ ಬಗೆಗೂ ಹುಡುಕಾಟ ನಡೆಯಬೇಕಾಗಿದೆ.

ಕೋದಂಡರಾಮು ಅವರ ಆತ್ಮೀಯರಲ್ಲಿ ಒಬ್ಬರಾಗಿದ್ದ ಕಾದಂಬರಿಕಾರ ನಾಡಿಗೇರ ಕೃಷ್ಣರಾಯರು ರಾಮು ಅವರ ಸಾಹಿತ್ಯ ಸೇವೆಯನ್ನು ಕುರಿತು ಹೀಗೆ ಹೇಳಿದ್ದಾರೆ :

"ಡಾ. ಕೋದಂಡರಾಮನ್ ಅವರು ನನ್ನ ಕಿರಿಯ ಗೆಳೆಯರು. ಲಾವಣಿಗಳನ್ನು ರಚಿಸುವುದರಲ್ಲಿ ಮತ್ತು ಅವನ್ನು ಸುಶ್ರಾವ್ಯವಾಗಿ ಹಾಡುವುದರಲ್ಲಿ ಅವರು ಎತ್ತಿದ ಕೈ."

ಲಾವಣಿಗಳು ನಮ್ಮ ಜನಪದ ಸಾಹಿತ್ಯದಲ್ಲಿ ಒಂದು ಗಣ್ಯ ಸ್ಥಾನವನ್ನು ಅಲಂಕರಿಸಿವೆ. ಜನಜೀವನಕ್ಕೆ ಹೊಂದಿಕೊಂಡಿರುವ ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ಈ ದಿವ್ಯಕಲೆ ಅಳಿಯುತ್ತಾ ಬಂದಿರುವುದು ದುರ್ದೈವದ ಸಂಗತಿ. ಶ್ರೀ ಕೋದಂಡರಾಮನ್ ಅವರು ಈ ಪರಿಸ್ಥಿತಿಯಲ್ಲಿ ಸಹ ಅಧೀರರಾಗದೆ ಈ ಕಲೆಯನ್ನು ಉಳಿಸಿ ಬಾಳಿಸಲು ಪ್ರಯತ್ನಿಸುತ್ತಿದ್ದಾರೆ. ಅವರ ಶ್ರಮ ಫಲಪ್ರದಾಯವಾಗಲೆಂದು ಹಾರೈಸುತ್ತೇನೆ."[2]

ಅನಕೃ ಅವರು ಕೋದಂಡರಾಮು ಅವರ 'ಜಗಜ್ಜೋತಿ ಬಸವೇಶ್ವರ ಲಾವಣಿ' ಕೃತಿಗೆ ಬರೆದಿದ್ದ 'ಹರಕೆ' ನುಡಿಗಳ ಹಸ್ತಪ್ರತಿಯಲ್ಲಿನ ಮಾತುಗಳು ಇವು :

"ಭಕ್ತಿ ಭಂಡಾರಿ ಬಸವಣ್ಣನವರು ಮೆರೆಸಿದ ನೂರೆಂಟು ಪವಾಡಗಳಲ್ಲಿ ಅತ್ಯಂತ ಶ್ರೇಷ್ಠವಾದುದು 'ಅನುಭವ ಮಂಟಪ' ಸ್ಥಾಪನೆ. ವಿಶ್ವಧರ್ಮದ ಸಾರಸರ್ವಸ್ವವನ್ನು ವೀರಶೈವದಲ್ಲಿ ಹುದುಗಿಸಲು ಅವರು ಪ್ರಯತ್ನಿಸಿದರು. ತಮ್ಮ ತಪಸ್ಸು, ತ್ಯಾಗ, ನಿಷ್ಕಳಂಕ ಜೀವನದಿಂದ ಲೋಕಜೀವನವನ್ನು ಶಿವಪಥದಲ್ಲಿ ನಡೆಸಲು ಶ್ರಮಿಸಿದರು. ಕನ್ನಡ ನಾಡನ್ನು ಕಟ್ಟಿದ ಈ ಪುಣ್ಯ ಪುರುಷನ ಹಿರಿಯ ಬಾಳ್ವೆ ವೀರಶೈವರಿಗೆ ಮಾತ್ರವೇ ಅಲ್ಲ, ವೀರಶೈವೇತರರಿಗೂ ಆದರ್ಶವಾಗಬೇಕು. ಕನ್ನಡ ಜನಪದದಲ್ಲಿ ಇವರ ಆದರ್ಶ, ಸಂದೇಶ ಬೆಳಗಿ ಅವರ ಜೀವನಕ್ಕೆ ಉದಾತ್ತ ಧ್ಯೇಯವನ್ನು ಕಲ್ಪಿಸಬೇಕು.

ಜನಪದ ಸಾಹಿತ್ಯ ನಿರ್ಮಾಣದಲ್ಲಿ ಏಕಮನಸ್ಕರಾಗಿ ದಕ್ಷತೆಯಿಂದ ದುಡಿಯುತ್ತಿರುವ ಕೋದಂಡರಾಮನ್ ಈ ಲಾವಣಿಯ ಕರ್ತೃಗಳು. ಅವರ 'ಕನ್ನಡ ನಾಡಿನ ಲಾವಣಿ' - ಸಾಯಿಬಾಬಾ ಭಜನಾವಳಿ - ಇತರ ಹಾಡುಗಬ್ಬಗಳು ಈಗಾಗಲೆ ಜನಪ್ರಿಯತೆಯನ್ನು ದೊರಕಿಸಿಕೊಂಡಿವೆ. ಬಸವಣ್ಣನವರ ದಿವ್ಯಾನುಕಂಪಪೂರ್ಣ ಮಾನವ ಜೀವನವನ್ನು ರಸವತ್ತಾಗಿ ಚಿತ್ತಾಕರ್ಷಕವಾಗಿ ನಿರೂಪಿಸಿರುವ ಈ 'ಬಸವೇಶ್ವರ ಲಾವಣಿ' ಕನ್ನಡಿಗರ ಆದರಾಭಿಮಾನಕ್ಕೆ ಪಾತ್ರವಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

೨೨.೦೮.೧೯೫೭ **ಅನಕೃ**

ಇಷ್ಟೆಲ್ಲ ಪ್ರಶಂಸೆಗೆ ಪಾತ್ರವಾಗಿದ್ದ ಈ ಕೃತಿ ಪ್ರೊ.ಹಾ.ಮಾ. ನಾಯಕರ 'ಕನ್ನಡ ಜಾನಪದ ಗ್ರಂಥಸೂಚಿ'ಯಲ್ಲೂ ದಾಖಲಾಗದೆ ಹೋದುದು ಆಶ್ಚರ್ಯ. ಅಲ್ಲದೆ ನಮ್ಮ ಜಾನಪದ ವಿದ್ವಾಂಸರಾರೂ ಕೋದಂಡರಾಮನ್ ಅವರ ಹೆಸರನ್ನಾಗಲಿ, ಅವರ ಲಾವಣಿಗಳನ್ನಾಗಲಿ ಹೆಸರಿಸದೇ ಇರುವುದೂ ಮಹದಾಶ್ಚರ್ಯ. ಮೈಸೂರಿನಲ್ಲೆ ಈ ಕರ್ತೃ ಇದ್ದರೂ ಇವರೆಲ್ಲರ ಕಣ್ತಪ್ಪಿಸಿಕೊಂಡು ಬಾಯಿಗೆ ಬೀಳದೆ ಹೋದುದೂ ದುರ್ದೈವವೇ ಸರಿ.

ಜನಪದ ಶರಣಕಾವ್ಯಗಳು

ಭಾಗ : ಒಂದು

ಬಸವಣ್ಣನವರ ಮತ್ತು ಅವರ ಸಮಕಾಲೀನರ
ಕುರಿತ ಕಾವ್ಯಗಳು

ತಾಯಿಗೆ ಶರಣೆಂದೆ ಭೂಮಿ ತಾಯಿಗೆ ಶರಣೆಂದೆ
ಹೊನ್ನಾರು ಹೂಡಿ ಉಳುವಾಗ - ಶರಣೆಂದೆ
ಕರುಣೆ ಕಲ್ಯಾಣದ ಬಸವಣ್ಣಗೆ |

ಆದಿ ಬಸವೇಶ್ವರ

ಸುವ್ವಿ ಸುವ್ವಂಬ ಲಾಲಿ-ಸುವ್ವಲಾಲಿ
ಸುರಗನ್ನೆ ಮರನೇರಿ-ಸುವ್ವಲಾಲಿ | ಸೊಲ್ಲು |

ತಾಯಿ ಉರಿಯಾದೇವಿ ಸುವ್ವಲಾಲಿ*
ಅವ್ವ ಮಗ ಉರಿಯಾದೇವ
ಆಕಾಸದಲ್ಲಿ ನಿಂತು
ಏನಂತ ಹೇಳುತಾರೆ
ಭೂಲೋಕ ಹುಟ್ಟಬೇಕು
ಭೂಲೋಕ ಬೆಳೀಬೇಕು
ನಾವು ತಾಯಿ ಮಗ ಈಗ
ಮೇಲೋಕ್ದಲಿದ್ದರೇನು
ನರಲೋಕ ಪಡಿಬೇಕು
ನರಲೋಕ ಸಾಕಬೇಕು |

ಅಯ್ಯ-ಭೂಮಿ ಬೆಳ್ಸಾಬೇಕು
ಹೆಸ್ರಾನೆ ಪಡಿಬೇಕು
ಉರಿಯಾದೇವಿ ತಾನು
ಏನೆಂದು ಹೇಳುತಾಳೆ
"ಕೇಳಪ್ಪ ನನಕಂದ
ನಾನೊಂದ ಹೇಳುತೀನಿ
ಏಳು ಸಮುದ್ರ ನೋಡು
ಆ ಸಮುದ್ರಾದ ಮಧ್ಯದಲ್ಲಿ
ಭೂಮಿಯು ಆಗಬೇಕು
ನಾನು ಸಮುದ್ರ ಮಾಡಿ
ನೀನು ಭೂಮಿಯ ಮಾಡಿ
ಭೂಲೋಕ ಬೆಳ್ಸಬೇಕು
ನರಪ್ರಾಣಿ ಪಡಿಬೇಕು"
ಹಂಗಂತ ಹೇಳುತಾಳೆ |

ಏಳು ಸಮುದ್ರದಲ್ಲಿ
ಏಳು ಸಮುದ್ರದ ಮಧ್ಯ
ಉರಿಯಾದೇವ ತಾನು
ಕೆರೆಯ ತಟ್ಟೆ ಮಾಡುತಾನೆ |

"ಕಂದ ಉರಿಯಾದೇವ
ಕೆರೆಯ ತಟ್ಟೆ ಮೇಲೆ
ನಾನು ಹುಲ್ಲನ್ನು ಬೆಳ್ಸುತೀನಿ
ನೀನು ಬಸವಣ್ಣ ಮಾಡಪ್ಪ |

ಹುಲ್ಲುಮೇಯಲು ನೋಡು
ಪ್ರಾಣಿ ಮಾಡಬೇಕು"
ಅವುರಾಗಂತ ಹೇಳುತಾಳೆ
ಉರಿಯಾದೇವ ತಾನು
"ಕೆಟ್ಟೆ ಕೆಟ್ಟೆ ತಾಯಿ
ಭೂಮೀಗೆ ಬಸವಣ್ಣ
ಅಯ್ಯ-ಮಾಡಿ ಕಳ್ಸಬೇಕು
ಅದು ಹ್ಯಾಗೆ ಹೇಳವ್ವ ? |"

"ಕಂದ-ನನ್ನ ಬೆನ್ನಲ್ಲಿ ಬೆವ್ರ
ನಿನ್ನ ಬೆನ್ನಲ್ಲಿ ಬೆವ್ರ
ಸೇರೀಸಿ ಬೆರ್ಸಬೇಕು
ಆಗ ಬಸವಣ್ಣ ಮಾಡಬೇಕು" |

ತಾಯಿ ಉರಿಯಾದೇವಿ
ತನ್ನ ಬೆವ್ರನು ನೋಡು
ಅವ್ವ, ತಗ್ಳಾಳು ಉರಿಯಾದೇವಿ
ಕೆಳ್ಗೆ ಹಡಿಯಾಲುತಾಳೆ
ಸೂರೀದೇವ ಕಾನ
ತನ್ನ ಬೇವ್ರ ತಗುದಾರೆ
ಅವ್ವು-ಬೆವ್ರ ಹಡೀತಾರೆ
ಎರ್ಡು ಬೆವ್ರ ಸೇರಿಸಾರೆ
ನೋಡುರಂತ ನೋಡೀಗ
ಅಯ್ಯ ಹೇಳೊಂಬ ಹೇಳುತಾಳೆ
ಬಸವಣ್ಣನ ನೋಡು
ಅವ್ವು-ಜೀವಾವ ಪಡಿದಾರೆ |

---

* ಪ್ರತಿಪಾದಕ್ಕೂ 'ಸುವ್ವಲಾಲಿ' ಎಂದು ಸೇರಿಸಿಕೊಂಡು ಹಾಡಿಕೊಳ್ಳಬೇಕು. ನಿಂತಗರ ಇರುವಡೆಯಲ್ಲೆಲ್ಲಾ ಸೊಲ್ಲಿನ ಪೂರ್ಣ ಭಾಗವನ್ನು ಹಾಡಬೇಕು.

"ಜೀವಾವ ಪಡುದೀವಿ
ಈ-ಬಸವಣ್ಣನ ಪಡುದೀವಿ"
ತಾಯಿ ಉರಿಯಾದೇವಿ
ಹುಲ್ಲ ತೋರಿಸುತಾಳೆ
ಬಸುವಣ್ಣ ಕರುದವುಳೆ
ಅವ್ನ ಮೈಯಾನೆ ಸವುರವುಳೆ |

"ಹುಲ್ಲ ಮೇಯಾಕೆ ತಾಯಿ
ನೀನು ವರುವ ಕೊಡು ತಾಯಿ"
"ಜೀವಾವ ಪಡುದಾಯ್ತು
ನೀನು ಹುಲ್ಲ ಮೇಯಾಕೋಗು"
ಹಂಗಂತ ಉರಿಯಾದೇವಿ
ವರವನ್ನೆ ಕೊಟ್ಟಳು |

ಕೆರೆಯ ತಟ್ಟೆಯಲ್ಲಿ
ನೋಡು-ಹುಲ್ಲಾನೆ ಮೇಯುತಾದೆ
ಹುಲ್ಲಾನೆ ಮೇಯುವಾಗ
ಮತ್ತೇನ ವರಕೊಟ್ರು
"ಕೇಳಪ್ಪ ನನಕಂದ
ನಾನು ನೀನೂ ಮಗನೆ
ಹೀಂಗೆ ಇದ್ದರೆ ಸಾಲ್ದು
ಭೂಲೋಕಕ್ಕೆ ನಾವು
ಭೂಮಿ-ಬೆಳಸಲು ಬೇಕೀಗ"
ಹಂಗಂತ ಹೇಳುತಾರೆ
ಬಸವಣ್ಣನ ಕೈಲಿ
ನಾವು-ಭೂಮೀಯ ಬೆಳ್ಸಬೇಕು
ಭೂಮಿ ಬೆಳಿಯಾಕೆ ನೋಡು
ಸೂರ್ಯ ವರವ ಕೊಟ್ಟ
ಉರಿಯಾದೇವಿ ತಾನು
ವರವಾ ಕೊಟ್ಟಾಳಲ್ಲ |

ಅಯ್ಯ ಬಸವಣ್ಣ ನೋಡು
ಕೆರೆಯಾ ತಟ್ಟೆ ಮ್ಯಾಲೆ
ಅವ್ನ-ಹುಲ್ಲನ್ನು ಮೇಯುವಾಗ
ಸಮುದ್ರಾವ ನೋಡಿದರೆ
ಅಡಿಯಾಗಿ ಬಂದಿತಲ್ಲ
ಬಸವಣ್ಣ ಕತ್ತ ಬಗ್ಸಿ
ಕೆರೆತಟ್ಟೆ ಹುಲ್ಲ ನೋಡಿ
ಬಸವಣ್ಣ ಮೇಯುತಿದೆ |

ಭೂಮಿತಾಯಿ ನೋಡಿ
ಬಸವಣ್ಣ ಕೇಳುತಾಳೆ
"ನನ್ನೆದೆ ಹಾಲು ಕುಡ್ದ
ನೀನ್ಯಾರು ಹೇಳಬೇಕು
ನೀನ್ಯಾರ ವರದಲ್ಲಿ
ಉತುಪತ್ತಿ ಅದೆಯಪ್ಪ
ಕೋಳಿ ಮೊಟ್ಟೆಯಂಗೆ
ಗರ್ತಿ ನಾನು ಕೂತೀನಲ್ಲೊ
ನನ್ನೆದೆ ಹಾಲ ಕುಡುದಂಗೆ
ನೀನು ಹುಲ್ಲಾನೆ ಮೇದೆಯಪ್ಪ
ಭೂಲೋಕಕೆ ನೀನು
ಅಧುಪತಿಯಾಗಪ್ಪ" |

"ಅಮ್ಮ ಭೂಮಿ ತಾಯಿ
ನಾನು ಉರಿಯಾದೇವಿಯಿಂದ
ನಾನು ಉರಿಯಾದೇವನಿಂದ
ಉತುಪತಿಯಾಗಿ ಬಂದೆ" |

ಆಗ ಭೂಮಿತಾಯವ್ವನೋರು
ಬಸವಣ್ಣ ದೇವರಿಗೆ
"ಕೇಳಪ್ಪ ಬಸುವಯ್ಯ
ಮುಂದೆ-ಬರುವ ನರಕಲಿಯೊಳಗೆ
ನೀನು ನಾನಿಬ್ಬರಾಳು
ನಾವು-ಇದ್ದಾರೆ ಸಾಕೇನು
ಅಯ್ಯ-ನಮ್ಮಾನೆ ಬೆಳುಸಾರು
ನಮ್ಮ-ಸಾಕೋರು ಸಲುವಾರು
ಯಾರಪ್ಪ ಬಸವಯ್ಯ
ನೀನು ತಿಳುದಾದ್ರೆ ಹೇಳಪ್ಪ |

ನಾನು ಎದ್ದಾಮೇಲೆ
ನನ್ನ-ಎದೆಯ ಮ್ಯಾಲಿದ್ದ ಹುಲ್ಲ
ನೀನು ಮೇಯ್ದು ಬಸವ
ನನ್ನ-ಎದೆಯ ಹಾಲ ಕುಡುದೆ"
ಭೂಮಿ ತಾಯಾದ್ರೆ ನೋಡು
ಬಸವಣ್ಣನ ಕೇಳುತಾಳೆ |

"ಕೇಳಪ್ಪ ಬಸವಯ್ಯ
ನಾನು-ನಿನ್ನ ನಗುನಾಗುತೀನಿ"
ಬಸವಣ್ಣನಾದಾರೆ

ಅದಕೇನು ಉತ್ರ ಕೊಟ್ಟ
"ಕೇಳು ಕೇಳೆ ಭೂಮಿತಾಯಿ
ನೀನು-ಎಷ್ಟಕು ಮಾತ್ರಕು
ನೀನು-ಕೆಟ್ಟ ಮಾತಾಡಬ್ಯಾಡ
ನೀನು-ಸಿಟ್ಟುನಲ್ಲಿ ನೋಡಬ್ಯಾಡ" |

"ನೋಡು ನೋಡು ಬಸವಯ್ಯ
ನನ್ನ ಮಾತ ಕೇಳಪ್ಪ
ನಿನ್ನ-ಎಷ್ಟು ಮಾತ್ರಕು ನಾನು
ನಾನು-ಬಿಟ್ಟು ಹೋಗೂದಿಲ್ಲ" |

"ಕೇಳಮ್ಮ ನನತಾಯಿ
ನಿನ್ನ-ಎದೆಯಾಲ ಕುಡುದಿವ್ನಿ
ಹಂಗಂತ ಹೇಳುತೀಯ
ನೀನು-ತಾಯಾಗಿ ಇರಬೇಕು
ನಾನು ನಿನ್ನ ಮಗನಲ್ಲ
ನಾನು ಹೆಂಗೆ ಗಂಡನವ್ವ
ಗಂಡಾಂತ ಸೊಲ್ಲ ನೀನು
ಎತುಬ್ಯಾಡ ನನತಾಯಿ
ನೀನು-ಹಾಂಗಂತ ಹೇಳಿದರೆ
ನಿನ್ನ-ಹತ್ರ ನಾನು ಇರಾಲುದಿಲ್ಲ
ನಿನ್ನ-ಜೊತೇಯ ಬಿಡಾಲುತೀನಿ
ನಾನು ಬೇಕಾದಲೋಗುತೀನಿ"
ನೋಡು ಹಾಗಂತ ಹೇಳುತಾನೆ
ಹೇಳಲು ಹೇಳಿ ಬಸವಣ್ಣ
ಮುಂದೆ ಮೂರ್ಹೆಜ್ಜೆ ನೋಡು
ಅವ್ನು ತಗುದಾನೆ ಬಸವಣ್ಣ
ಅಯ್ಯ ನೋಡು ನೋಡೀಗ
ಅವ್ನು-ಮೂರು ಹೆಜ್ಜೆಯ ತಗುದ
ಮೂರು ಹೆಜ್ಜೆಗೆ ನೋಡು
ಭೂಮಿ ತಾಯಿ ಬೆಳಿದಾಳು
"ಕೇಳ ಕೇಳ ಎಲೆ ತಾಯಿ
ನೀನು-ಮೂರು ಹೆಜ್ಜೆಗೆ ಬಂದೆ!"
ಅದಕಾದ್ರೆ ಭೂಮಿ ತಾಯಿ
ಏನಂತ ಹೇಳುತಾಳೆ
"ಕೇಳ ಕೇಳ ಬಸುವಯ್ಯ
ನೀನು ಎಲ್ಲಿ ಹೋದರೂವೆ
ಎಲ್ಲಿ ಹೋದರು ನಾನು
ನಿನ್ನ ಬೆನ್ನತ್ತಿ ಬರುತ್ತೀನಿ
ನಿನ್ನ ಬೆನ್ನನ್ನೇ ಬಿಡುಲಾರೆ
ನಿನ್ನ ಹಸ್ತಾವ ಬಿಡುಲಾರೆ"
ಹಾಗಂತ ಹೇಳುವಾಗ
ಬಸುವಯ್ಯ ಬೆದರೂತ
ನೋಡು ಮುಂದೆ ಮೂರ್ಹೆಜ್ಜೆ
ಮುಂದೆ ನಡ್ದಾನಲ್ಲ
ಮುಂದೆ ಮೂರ್ಹೆಜ್ಜೆಗೀಗ
ಅವ್ವ-ಬೆಳುದಾಳೆ ಭೂಮಿತಾಯಿ |

"ಕೆಟ್ಟೆ ಕೆಟ್ಟೆ ಭೂಮಿತಾಯಿ
ನೀನೆಲ್ಲೀಗೆ ಬರುತೀಯೆ"
"ಎಲ್ಲಿ ಹೋದಾರು ಮಗನೆ
ನಾನು-ನಿನ್ನ ಬಿಡಾಲು ಒಲ್ಲೆ
ನೀನೆ ನನ್ಗೆ ಗಂಡ ಕಾಣೊ!"
ಅವುರಾಗಂತ ಹೇಳುತಾಳೆ |

"ನಿನ್ನ ಸಂಗ ಬೇಡ ಕಾಣೆ"
ಹಂಗಂತ ಹೇಳಿಕೊಂಡು
ಮುಂದೆ ಮೂರ್ಹೆಜ್ಜೆ ಇಟ್ಟು
ನಡುದಾನೆ ಬಸುವಣ್ಣ
ಅದುವೊಂದು ಮೂರ್ಹೆಜ್ಜೆಗೀಗ
ಬೆಳ್ದಾಳೆ ಭೂಮಿತಾಯಿ
"ಅಯ್ಯೊ-ಕೆಟ್ಟ ಬುದ್ಧಿ ಬ್ಯಾಡ ತಾಯಿ
ಅಯ್ಯೊ-ದುಷ್ಟ ಬುದ್ಧಿ ಬ್ಯಾಡ ತಾಯಿ
ನನ್ನ ಬೆನ್ನತ್ತಿ ಬರುತೀಯೆ
ನೀನು ಎಲ್ಲೆಲ್ಲು ಬರುತೀಯೆ"
ನಾನು-ಓಡೊಂದ ಓಡುತೀನಿ
ನೀನು ಹಿಂದೆಯೆ ಬರುತೀಯೆ
ಅಂತ-ಓಡೊಂದ ಓಡುತೀನಿ
ನೀನು-ಬೆಳಕಂತ ಬರುತೀಯೆ
ಓಡುತಾನೆ ಬಸವಣ್ಣ
ಭೂಮಿ-ಬೆಳಕಂತ ಹೋದಳಲ್ಲ
ಹೆಜ್ಜೆ ಹೆಜ್ಜೆಗೆ ನೋಡು
ಅವ್ನು-ಬೆಳುದಂತೆ ಬೆಳುದಾಳೆ |

ಬಸವಣ್ಣ ಮುಂದೆ ಮುಂದೆ
ಅಯ್ಯ-ಓಡಿ ಓಡಿ ಹೋಗುತಾನೆ
ಭೂಮಿ ತಾಯಿಯಾದ್ರೆ
ಅವ್ನು ಓಡೀದ ಕಡೆಗೆಲ್ಲ

ಕೋಳಿ ಮೊಟ್ಟೆಯಂಗಿದ್ದ ಭೂಮಿ
ಹರಿದಾಡಿ ಬೆಳೆದಾಳೆ
ಬಸ್ಯ ಓಡಿ ಓಡಿ ನಿಂತ
ಅವ್ನ ಸುತ್ತ ಕ್ಯೋಟೆ ನಿಲ್ಸಿ
ಸುತ್ತ ಸುತ್ತೆಲ್ಲ ಆಗ
ಸಮುದ್ರಾವೆ ಮುಚ್ಚಿ ಬಂತು |

ಬಸವಣ್ಣ ಸೋತು ನಿಂತ
ಸೋತು ನಿಂತಾಗಂದು
ತಾಯಿ ಉರಿಯಾದೇವ್ಯ
ತಲೆಯೆತ್ತಿ ಬಸವಣ್ಣ
ಕೈಯೆತ್ತಿ ಮುಗಿದಾನೆ
ಕಣ್ಣೀರ ಕೆಡುಗಾನೆ
"ಕೆಟ್ಟಾ ಉರಿಯಾದೇವಿ
ನಾನು ಭೂಮೀಗೆ ಗಂಡನೇನೆ
ನಾನೇ ಗಂಡಾತಾಳೆ
ತಾನೆ ಮಡ್ದಿ ಅಂತಾಳೆ
ನಾನಾದ್ರೆ ಮಗನಲ್ಲೆ
ಹಿಂಗಂತ ಹೇಳಬೋದ
ಇದು ಒಂದು ಕಲಿಂಗಕೆ
ನಾನು ಒಳುಪಡುಲಾರೆನೆ"ಂದು
ಗೋಳಾಡಿ ಹೇಳುತಾನೆ
ಸತ್ಯವುಳ್ಳ ಬಸವಣ್ಣ |

ತಾಯಿ ಉರಿಯಾದೇವಿ
ಸತ್ಯವುಳ್ಳ ಬಸವಾಗೆ
ಏನಂತ ಹೇಳುತಾಳೆ
"ಭೂಲೋಕದಲ್ಲಿ ಹುಟ್ಟಿ
ನೀನು ಭೂಮಿ ಆಳಬೇಕು
ಜೀವ ಕೋಟಿ ಕಾಪಾಡಬೇಕು" |

ಉರಿಯಾದೇವಿ ಮಾತ
ಬಸವಣ್ಣ ಕೇಳವುನೆ
ಕಣ್ಣೀರ ಕೆಡುಗವುನೆ
ಭೂಮಿ ತಾಯಿಯಾದ್ರೆ
"ಕೇಳಯ್ಯೋ ಎಲೆ ಹುಡುಗ
ನೀನೇಯ ನನ್ಗೆ ಗಂಡ
ನಾನೇ ನಿನ್ಗೆ ಮಡ್ದಿ
ನೀನೆಲ್ಲು ಹೋಗಾದು ಬ್ಯಾಡ
ನನ್ನ ಎದೆ ಮ್ಯಾಲೆ
ಎದೆಯ ಕೆರ್ದು ನೀನು
ನರಕಲೀಗನ್ನ ಮಾಡು
ನನ್ನ ಎದೆಯೆಲ್ದು ಭಾಗ ಮಾಡಿ
ಉಳಬೇಕು ಬೆಳೀಬೇಕು
ನರಕಲೀಗನ್ನವಾಗಬೇಕು
ಅನ್ನಾವ ದುಡಿದರೆ
ಅನ್ನ ಉಣ್ಣೋರಿಲ್ಲವಲ್ಲ"
ಹಾಗಂತ ಭೂಮಿತಾಯಿ
ಯೋಚನೆ ಮಾಡುತಾಳೆ |

ಭೂಮಿ ತಾಯ ಮಾತ
ಕೇಳವ್ನೆ ಉರಿಯಾದೇವ
"ಕೇಳು ಕೇಳು ಉರಿಯಾದೇವ
ಕೇಳಪ್ಪ ನನಕಂದ
ನರಕಲಿಗೆ ಇಬ್ಬರಾಳು
ನಾವೆ ಇದ್ದರೆ ಸಾಲ್ದು
ಜಗತ್ಯಕೆ ನಾವೀಗ
ಈಸ್ವರನ ಕೊಡಬೇಕು"
ಹಾಗಂತ ಹೇಳುವಾಗ
ಮಾಯಾದ ಗುಡಿ ನೋಡು
ಮಾಯಾದ ಗುಡಿ ಒಳುಗೆ
ಈಸ್ವರನಾದಾರೆ
ಕಲ್ಲಾಗಿ ಕಾಣ್ಸಿಕೊಂಡ
ಲಿಂಗುವಾಗಿ ಮೂಡಿ ಬಂದ
"ಕೇಳಪ್ಪ ಈಸ್ವರ
ನರಕಲಿ ಸಾಕಬೇಕು
ಮಕ್ಕಳು ಮರಿಯಾನೆ
ನೀನು ಉತ್ಪತ್ತಿ ಮಾಡಬೇಕು |

ಈಸ್ವರ ತಿರ್ಗಿ ನೋಡಿ
ಅವ್ರೇನ ಕೇಳುತಾರೆ
ತಾಯಿ ಉರಿಯಾದೇವ್ಯ
ತಂದೆ ಉರಿಯಾದೇವ್ನ
ಈಸ್ವರ ನೋಡುತಾನೆ
ಅವ್ನು ಉತ್ರಾವ ಕೇಳುತಾನೆ
"ಕೇಳೆ ಕೇಳೆ ನನತಾಯಿ
ಜಗತ್ಯಾಕೆ ನನ್ನನು
ದೊಡ್ಡತಾಗಿ ಕಳಿಸೀದೆ

ಅಯ್ಯ-ಈಸ್ವರನಂತ್ಹೇಳಿ
ಮಾಯಾದ ಗುಡಿಕಟ್ಟಿ,
ಭೂಮೀಗೆ ಕಳಿಸೀದೆ
ನನ್ನ-ಗುಡಿಯ ತೊಳೆಯೊರಿಲ್ಲ
ಪೂಜೆ ಮಾಡೋರಿಲ್ಲ
ಪುನಸ್ಕಾರಕ್ಕಾರು ಇಲ್ಲ
ದಿಕ್ಕಿಲ್ಲ ದೆಸೆಯಿಲ್ಲ
ನರ್ಬುಳೀನ್ ಸುದ್ದಿಯಿಲ್ಲ
ಹ್ಯಾಗೆ ನಾ ಕೂರಲೆಂದು
ನನಗೊಂದು ವರವಾನು
ಕೊಟ್ಟಾರೆ ನನತಾಯಿ
ನಾನು ನರಕಲಿ ಸಾಕುತೀನಿ"
ಹಾಗಂತ ಈಸ್ವರ
ಕೈಯ ಜೋಡ್ಸಿ ಹಿಡುದಾನೆ
ಮಡ್ದಿ ಪಾರ್ವತವ್ನ ಕೊಟ್ಟರು
ಅಲ್ಲಿ-ಸೆರಗು ಮಾಜಿ ಬಂತೆ
ಸೆರಗು ಮಾಜೀತಲ್ಲ
ಸೆರಗು ಮಾಜಿದ ಮ್ಯಾಲೆ
ಗುಡಿವೊಳಗೆ ದಾಟಲಿಲ್ಲ
ಈಸ್ವರ ನೋಡಿದರೆ
ಕರ್ರು ಕೇಳಲುತಾಳೆ
ಕರ್ರು ಕೇಳಲುವಾಗ
"ಕೇಳಿ ಕೇಳಿ ನನ್ನ ಸ್ವಾಮಿ
ನಾನು - ಹೊಳೆಗೆ ಹೋಗುತೀನಿ
ನೀರ ಮೀದು ಬರುತೀನಿ
ಮೀದು ಮಡೀ ಮಾಡಿ
ನಾನು - ಬರುತೀನಿ ಅನ್ನುತಾಳೆ
ಬಟ್ಟೆ ಸೆಣುಕೊಂಡು ಈಗ
ನಾನು - ಬರುತೀನಿ ಅನ್ನುತಾಳೆ
ಗುಡಿಯಾನೆ ಬುಟ್ಟು ನೀವು
ಎಲ್ಲೀಗು - ಪಣ್ಣಕೇಳಲು ಬ್ಯಾಡಿ"
ಹಂಗಂತ ಹೇಳಿ ತಾಯಿ
ಶಿವ್ನೆ - ಹೊಳೆಗಾದ್ರೆ ಹೋದಾಳು |

ಪಾರ್ವತ ದೇವಿಯು

ಹೊಳೆಯ ಹುಡ್ಕೀಕೊಂಡು
ನಡಿದಾಳೆ ನಡಿದಾಳೆ
ನಡ್ದು ಕಾಲು ಸೋತೊ
ಹೊಳೆಯು ಹತ್ತಿರನಿಲ್ಲ
ಇನ್ನೆಲ್ಲಿ ಹೋಗಲೆಂದು
ಸತ್ಯವುಳ್ಳೋರ ಮಗ್ಳು
ನಾನಾಗಿ ಇದ್ದಾರೆ
ನಾನು ನಿಂತಲ್ಲೆ ಜಲ ಬರಲಿ
ಈಸ್ವರ್ನ ಸತ್ಯಾವು ತೋರಿ
ಮಾಯಾದ ಬಾವಿಯಾಯ್ತು |

ಬಾವೀಯ ಜಲವ ನೋಡು

ಗಂಗೇಯ ಸತ್ಯವದಿಂದ
ಜಲವಾನೆ ನೋಡಿದರೆ
ಬಾವಿ ತುಂಬಿ ಬಂತು
ತುಂಬೀದ ಬಾವೀಲಿ
ಹ್ಯಾಗೆ ನಾನಿಳಿಯಾಲಿ
ಸುತ್ತೂ ನೋಡಿದರೆ
ಸೂರಂಗ್ನ ಬಯಲಲ್ಲೊ
ಅಯ್ಯ ಮರವಿಲ್ಲ ಮರೆಯಿಲ್ಲ
ಹ್ಯಾಗೆ ನಾನು ಮೀಯಬೇಕು
ಹಾಂಗಂತ ಹೇಳುಕೊಂಡು
ಸತ್ಯ-ಉಳ್ಳೋರ ಮಗಳಾಗಿ
ಉಟ್ಟಿದ್ದ ಸೀರೇಯ
ಪೊಸ್ತಾಳೆ ಪಾರ್ವತಿ
"ಸತ್ಯ-ಉಳ್ಳೋರ ಮಗಳಾದ್ರೆ
ಈ ಸೀರೆ ತಗುಡಾಗ್ಲಿ
ಪುಣ್ಯ ಉಳ್ಳೋರ ಮಗಳು
ನಾನಾಗಿ ಇದ್ದಾರೆ
ಅಯ್ಯ-ಅಂತ ವರವ ಕೊಡು"
ಬೇಡಾಳೆ ಪಾರ್ವತಿ
ಬೇಡೋಂತ ಕಾಲದಲ್ಲಿ
ಬೇಕಾದ್ದ ಮನೆಯಾಯ್ತು |

ಬಚ್ಚಾಲ ಅರಮನೆ

ಮಾಯ್ದಲ್ಲಿ ಬಂತಲ್ಲ
ಬಾಗಲೀಗೆ ಪಾರಾವ
ಯಾರನ್ನು ಮಡಗಲೆಂದು
ಸ್ನಾನಕೆ ಇಳಿದಾಗ
ಈಸ್ವರ ಬಂದಾರು
ಬಂದಾರು ಅಂತ್ಹೇಳಿ
ನೋಡಾಕೆ ನಿಲ್ಸಬೇಕು

ಅವ್ರ-ಕೊಳ್ಳಾಲ ಬೇವ್ರ
ಬೇವ್ರ ಹಿಡುದೂ ಕೊಳೆಯ
ತಗ್ದಾರು ಪಾರ್ವತಿ
ತಗ್ದು ನೋಡಿ ಶಿವನೆ
ಗೊಂಬೆ ಮಾಡಲುತಾಳೆ
ಗೊಂಬೆ ಮಾಡಿದಳಲ್ಲೊ
ಬಾಗ್ಲೀಗೆ ನಿಲ್ಸಿದಳಲ್ಲೊ
ಬಾಗ್ಲಲ್ಲಿ ನಿಲ್ಸೀಬುಟ್ಟು
ಸ್ನಾನವ ಮಾಡುತಾಳೆ
ಈಸ್ವರ ಕಾಯುತಾರೆ
ಪಾರ್ವತಿ ಬರುನಿಲ್ಲ
ಅವ್ರು ಎಷ್ಟೊಂದು ದೂರ ಹೋದ್ರು
ಹತ್ತೂ ದಿಕ್ಕನು ನೋಡಿ
ಮಾಯಾದ ಬಚ್ಚುಲ್ ಮನೆಗೆ
ಬಂದಾರು ಶಿವುರಾಯ
ಅಲ್ಲಿ ನಿಂತಾರು ಶಿವುರಾಯ !
ಬಂದಂತ ಶಿವುರಾಯ
ಚಿನ್ನದಂತ ಗೊಂಬೆ ನೋಡಿ
ಮುಂದಕ್ಕೆ ಮೂರ್ಹೆಜ್ಜೆ
ಕಿತ್ತಾರು ಈಸ್ವರ
ಗೊಂಬೆ ಇಚಿತ್ರ ನೋಡಿ
ಅವ್ರು-ಕಣ್ಗೆ ಪ್ರೀತನಾಯ್ತು
ಅವ್ರು-ತಮ್ಮ ಬೆವ್ರ ಕೊಳೀಲಿ
ಇನ್ನೊಂದು ಗೊಂಬೆ ಮಾಡಿ
"ಈ ಜಗತ್ಯದಲ್ಲಿ
ನರಲೋಕದೊಳಗಾದ್ರೆ
ನಾವಿಬ್ರು ಗೊಂಬೆರಡು
ಇವ್ರು-ಮಾಯಾದ ಗೊಂಬೆಕಾನ
ಇವ್ಕೆ-ನಾನು ಜೀವವ ಕೊಡಬೇಕು"
ಹಂಗಂತ ಈಸ್ವರ
ಎರ್ಡೂ ಗೊಂಬೆಗಳುಗು
ಜೀವಾವ ಪಡಿತಾರೆ
ನಾಗುಬೆತ್ತದ ಕೋಲು
ಮಂತ್ರೀಸಿ ಈಸ್ವರ
ಅವ್ನು ಜೀವವ ಪಡೆದಾನೆ
ಜೀವಕೋಟಿ ಪಡೆದಾನೆ |

ಅಲ್ಲಿ ಹೆಣ್ಣುಗೊಂಬೆ ಗಂಡುಗೊಂಬೆ
ಜೋಡೀಲಿ ನಿಲ್ಲುತಾವೆ
ಈಸ್ವರ ಮಾಯವಾಗಿ
ಗುಡಿಗೀಗ ಬರುತಾರೆ
ಪಾರ್ವತಿ ದೇವೀಯು
ಸ್ನಾನದ ಅರಮಲ್ಲಿ
ಸ್ನಾನವ ಮಾಡಿಕೊಂಡು
ಹೊರಕೆ ಬರಲುತಾಳೆ
ಹೊರಕೆ ಬರಲುವಾಗ
ಅಲ್ಲಿ-ಮಾಯಾದ ಮಕ್ಕಾಳ
ಮಾಯಾದ ಮಕ್ಕಳನ್ನು
ನೋಡುತಾರೆ ಪಾರ್ವತಿ
"ಕೇಳಿ ಕೇಳಿ ಎಲೆ ಮಕ್ಕೆ
ಎಲ್ಲಿಂದ ನೀವು ಬಂದಿರಿ?"
ಅಂತ ಪಾರ್ವತಿ ನೋಡು
ಕೇಳೊಂದ ಕೇಳುತಾಳೆ
ಹಾಗಂತ ಕೇಳುವಾಗ
"ನಾವು ಬಂದಿದ್ದು ಗೊತ್ತಿಲ್ಲ."
ಹಂಗಂತ ಗೊಂಬೆಗಳು
ಪಾರ್ವತಿಗೆ ಹೇಳುತಾವೆ |

"ಮಕ್ಕಳೆ ನೀವುಗಳು
ಬಂದಿದ್ದು ನನಗೀಗ
ಒಳ್ಳೇದಾಯ್ತು ಮಕ್ಕಳೆ
ಬಾಳ ಒಳ್ಳೇದಾಯ್ತು"
ಹಾಗಂತ ಹೇಳವುಳೆ
ಕರಕಂಡು ಹೋಗುತಾಳೆ |

"ಕೇಳಪ್ಪ ಈಸ್ವರ ದೇವ್ರೆ
ಕೇಳಪ್ಪ ಪತಿದೇವ್ರೆ
ಕೇಳಪ್ಪ ಶಿವುರಾಯ
ಹೊರಗಡೆ ಬನ್ನಿ ಅಂದೆ"
ಹಂಗಂತ ಪಾರ್ವತಿ
ಕರುದಾಳೆ ಪಾರ್ವತಿ
ಹಂಗಂತ ಕರಿವಾಗ
ಬಾಗುಲ್ಗೆ ಬರುತಾರೆ
"ಕೆಟ್ಟೆ ಕೆಟ್ಟೆ ಪಾರ್ವತಿ
ಈ ಎಲ್ದು ಮಕ್ಕಾಳು

ಎಲ್ಲಿ ಸಿಕ್ಕಿದಾವೆ
ಇವು ಎಲ್ಲಿ ಕಂಡಿದ್ದಾವೆ" |

"ಕೇಳಿ ಕೇಳಿ ಶಿವರಾಯ
ಬಾಗ್ಲಲ್ಲಿ ನಿಂತಿದ್ದೊ
ಸ್ನಾನಾವಾ ಮಾಡಿ ನಾನು
ಹೊರಗಾಡೆ ಬರುವಾಗ
ಈ ಎಲ್ಲೂ ಮಕ್ಕಾಳು
ನಿಂತಿದ್ದೊ" ಅನುತಾಳೆ |

"ಕೇಳು ಕೇಳು ಪಾರ್ವತಿ
ನೀ ಕೇಳು ಪಾರ್ವತಿ
ಸುಳ್ಳು ಮಾತ ನೀನು
ಆಡುತೀಯ ಪಾರ್ವತಿ
ಈ ಮಕ್ಕಾಳು ನಿನ್ನಾವು"
ಹಾಗಂತ ಶಿವುರಾಯ
ಪಾರ್ವತಿ ದೇವೀಗೆ
ಹೇಳೊಂದ ಹೇಳುತಾರೆ |

ಈಸ್ವರ ದೇವಾರು
ಮಕ್ಕಾಳ ಕರುದಾರೆ
"ನೀವು-ಆಡುದೊಡ್ನೋರಾತನ್ಕ
ನೀವೆಲ್ಲು ಮಕ್ಕಾಳು
ಹಾದೀ ಬೀದೀ ಗುಡ್ಸಿ
ಪೂಜೆಗೆ ಹೂವ ಕೂದು
ಹೂವು ಪತ್ರೆ ತಂದು
ಕೊಡಬೇಕು" ಅನುತಾರೆ |

ಆ ಮಾತ ನೋಡೀಗ
ಹೇಳೊಂದ ಹೇಳೀಗ
ಆ ಇಬ್ಬಾರ ಮಕ್ಕಳು
ಹೇಳಿದಂತೆ ಮಾಡುತಾರೆ
ಈಸ್ವರನ ಪೂಜೇಯು
ಘನವಾಗಿ ನಡೀತಿದೆ
ಈವೇಳ್ಳು ಮಕ್ಕಾಳು
ಆಡುದೊಡ್ಡವಾದಾವು
ಆಡುದೊಡ್ಡವಾದ ಮೇಲೆ
ಇಬ್ಬಾರ ಕರ್ದು ನೋಡು

"ಕೇಳಿ ಕೇಳಿ ಮಕ್ಕಾಳೆ
ನೀವಿಬ್ಬಾರು ಗಂಡ ಹೆಂಡತೀರು"
ಈಸ್ವರ ಪಾರ್ವತಿ
ಮದುವೆಯ ಮಾಡಿಸಾರೆ |

ಈಸ್ವರ ಪಾರ್ವತಿ
ಗುಡಿಯಲ್ಲಿ ಕುಳ್ತಿಕೊಂಡು
"ಆ ಇಬ್ಬಾರ ಮಕ್ಕಳ
ಮದುವೇಯ ಮಾಡೀವಿ
ಅವ್ರ-ಆಡ್ತಾನ ಬಡ್ತಾನ
ಅವ್ರ-ಸಿರಿತನ ಹಿರಿತನ
ಅವ್ರ ಕಷ್ಟ ಸಖಾಕೆಲ್ಲ
ನಾವು-ಒಪ್ಪಂದ ಮಾಡಬೇಕು"
ಹಂಗಂತ ಅಂದುಕೊಂಡು
"ಕೇಳಿ ಕೇಳಿ ಮಕ್ಕಾಳೆ
ಬಸುವಣ್ಣನ ಕಟ್ಟಿಕೊಂಡು
ಭೂಮೀಯ ಉತ್ತಾರೆ
ಬೀಜಾವ ಬಿತ್ತಾರೆ
ಬೇಕಾದ ಬೆಳೆ ಬೆಳ್ದು
ಮೂರು [illegible]ಕು ನೀವು
ಅನ್ನಾವ [illegible]ಬವುದು
ಅನ್ನದಾನ ಮಾಡಿ ನೀವು
ಪುಣ್ಯವಂತರಾಗಿರಪ್ಪ"
ಹಂಗಂತ ಹೇಳಿದರು
ಈಸ್ವರ ಪಾರ್ವತಿ |

ಆಗ-ಬಸವಣ್ಣ ದೇವ್ರು
ಅಲ್ಲೀಗೆ ಬಂದವ್ರೆ
"ಕೆಟ್ಟೆ ಕೆಟ್ಟೆ ನನ ಸ್ವಾಮಿ
ನನಗ್ಯಾಕೆ ಇಂಥ ಶಿಕ್ಷೆ
ಇದನಾದ್ರೆ ಹೇಳಬೇಕು
ನನ್ನಾದ್ರೆ ಕಾಪಾಡಬೇಕು
ತಾಯೀಯ ಎದೆಯ ನಾನು
ನೇಗೀಲ ಗುಳದಿಂದ
ನಾನಾದ್ರೆ ಸೀಳಬೇಕು
ಈ ಪಾಪ ಕಾರ್ಯಾವು
ನನ್ನಿಂದ ಸಾಧ್ಯವಿಲ್ಲ"
ಅನ್ನುತಾರೆ ಬಸುವಣ್ಣ |

ಬಸವಣ್ಣನ ಮಾತಕೇಳಿ
ಈಸ್ವರ ನಗುತಾರೆ
"ನೀನು ಈ ಕಾರ್ಯ ತಪ್ಪುಬ್ಯಾಡ
ನೀನು ತಪ್ಪಿದರೆ ಕರ್ಮಾವು
ನೀವು ತಾಯಿ ಎದೆ ಸೀಳೀದ
ಕರ್ಮಾದ ಫಲವಾದೆ
ಮುಂದೆ ಬರುವಂತ
ಕಲಿಂಗ ಕಾಲದಲ್ಲಿ
ಕಲ್ಯಾಣ ಪಟ್ಟುದಲ್ಲಿ
ಬಸುವಯ್ಯ ಹುಟ್ಟಬೇಕು
ನೀನು-ಧರೆಯಲ್ಲಿ ಹುಟ್ಟಬೇಕು
ಧರುಮವ ಹೇಳಬೇಕು
ಕರುಮಾವ ಕಳೀಬೇಕು"
ಹಂಗಂತ ಹೇಳುತಾರೆ
ಪಾರ್ವತಿ ಪರುಮೇಸ
ಲವ್ವು ಲಿಂಗವಾಗಿ ಮೂಡುತಾರೆ |

ಆಗ-ಬಸವಣ್ಣ ದೇವರು
ಅಲ್ಲಿ-ದುಕ್ಕವಾದ್ರೆ ಮಾಡುತಾರೆ
"ನಾನು-ತಾಯಿ ಕೂಡಿದೆನಲ್ಲ
ನನ್ನ-ಕರ್ಮಾವೆ ಹೆಚ್ಚಾಯ್ತು ೫೧೦
ನನ್ನ ಕರುಮಾವ ಕಳೀಬೇಕು
ಹಾಗಂದು ಬಸವಣ್ಣ
ಈಸ್ವರನ ಗುಡಿ ಮುಂದೆ
ಬಂದು ಕೂರುತಾರೆ
ಈಸ್ವರನ ಮೊಕ ನೋಡಿ
ಗೋಳಂದು ಗೋಳಾಡುತಾರೆ
ಕಲ್ಯಾಣದಲ್ಲುಟ್ಟಿ
ಕರ್ಮಾ ಕಳೀಬೇಕ"ಂತ
ಯೋಚಿನೆಯ ಮಾಡುತಾರೆ
ಶಿವುರಾಯ್ನ ಗುಡಿ ಮುಂದೆ ೫೨೦
ನಮ್ಮ ಬಸುವಣ್ಣದೇವರು
ಅಲ್ಲಿ ಒಡದು ಮೂಡುತಾರೆ ೫೨೨

ಮಲ್ಲೀಗೆ ವನದಲ್ಲಿ ಮನುಗವುರೆ

ಹೊತ್ನಂತೆ ಎದ್ದು ಯಾರ್ಯಾರ ನೆನಿಯಾಲಿ
ಕಲ್ಲುಕಾವೇರಿ ಕಪನೀಯ - ಬಸವಣ್ಣ
ಹೊತ್ನಂತೆ ಎದ್ದು ನೆನೆದೇನು |

ಶಿವನೇ ಗತಿಯೆಂದು ಹಿಡಿದೆನು ರಾಗಿಕಲ್ಲ
ಶಿವನೇ ಕೊಡು ನಮಗೆ ಮತಿಗಳ - ಸಂಗನ ಬಸವ
ಗುರುವೆ ಕೊಡು ನಮಗೆ ಸುಖಿಗಳ |

ಎದ್ರೋನೆ ನೆನೆದೇವು ಸಿದ್ದರ ಸಿರಿಪಾದಾವ
ಮದ್ದೂರು ಕೆರೆಯ ಬಸವನಾ - ಪಾದಾವ
ನಾ - ಎದ್ರೊಂಗು ಗಳುಗೆ ನೆನೆದೇನು |

ಅಲ್ಲೆಲ್ಲ ಹುಡುಕೀದೆ ಇಲ್ಲೆಲ್ಲ ಹುಡುಕೀದೆ
ಎಲ್ಲೆಲ್ಲಿ ಹುಡುಕಿದರೂ ಸಿಗಲಿಲ್ಲ - ಬಸವಣ್ಣ
ಮಲ್ಲೀಗೆ ವನುದಲ್ಲಿ ಮನುಗವುರೆ |

ಕಲ್ಯಾಣದಣ್ಣ ಬಸವಣ್ಣ

ಸುವ್ವಾ ಬಾ ಚನ್ನಬಸವಯ್ಯ ಸುವ್ವಿ |

ಗುರುವೀಗೆ ಶರಣು ಗುರು ಭಕ್ತರಿಗೆ ಶರಣು
ಗುರುಪಾದಕ್ಕೆ ಶರಣು ಶರಣಾರ್ತಿ |

ಭಕ್ತರಿಗೆ ಶರಣು ಇರಕ್ತರಿಗೆ ಶರಣು
ಭಕ್ತ ಮಂಡಲಿಗೆ ಶರಣಾರ್ತಿ |

ಕೈಲಾಸದಲ್ಲಿ ಲೋಕಕ್ಕೆ ದೊಡ್ಡೋರು
ತಮ್ಮ ಗಣಸಮ್ಮೋಗದಲ್ಲಿ ಇರುತಾರೆ |

ಪರಮೇಶ್ವರನ ಒಡ್ಡಾಲಗದಲ್ಲಿ
ಸತ್ಯ ಶರಣರೆಲ್ಲ ನೆರೆದಿರುವರು |

ಮುಂದೆ ನಂದೀಶ್ವರ ಹಿಂದೆ ಭೃಂಗೀಶ್ವರ
ತಾಂಬುರದ ಪಂಜರದೊಳಗೆ ಗಿಣಿರಾಮ |

ತಾಂಬುರದ ಪಂಜಾರದಲ್ಲಿ ಗಿಣಿರಾಮ ಕೈಲಾಸ
ಅದೆ ತಾನೆ ಸ್ವಾಮೀಯ ಗುರುಮಠ |

ಒಂದು ಕಡೆ ನಾರಾಯ್ಣ ಒಂದೂ ಕಡೆ ಬ್ರಮ್ಮ
ಸ್ವಾಮೀಗೆ ಎದುರಾಗಿ ಇಂದ್ರದೇವ್ರು |

ಸ್ವಾಮಿ ಸನ್ನಿಧಿಯೊಳಗೆ ಭಕ್ತ ನಂದೀಶನು
ಸ್ವಾಮೀಯ ಸೇವೇಲಿ ಇರುತಾರೆ |

ಸ್ವಾಮೀಯ ಸೇವೇಲಿ ನಂದೀಶನಿರುವಾಗ
ಅವ್ನು - ದುಗುಡದಿಂದೆದ್ದು ನಿಲುತಾನೆ |

ನಂದೀಶರೆದ್ದುದ ಪರಶಿವ ನೋಡುತಾರೆ
"ಏನಪ್ಪ ನಂದೀಶ ನಿನಕಷ್ಟ? |

"ಸ್ವಾಮಿ - ಲೋಕಾದ ಕಷ್ಟ ನೋಡಲಾರೆ ನಾನೀಗ
ಈ - ಸಂಕುಟವ ನಾ ಹ್ಯಾಗೆ ಹೇಳಬೇಕು |

ಧರೆಯಲ್ಲಿ ಕರುಮ ಹೆಚ್ಚಾಗಿ ಪರಮಾತ್ಮ
ಕತ್ತಲು ಗವುದೀದೆ" ಅನುತಾನೆ |

ನಂದೀಶ್ನ ಮಾತ ಕೇಳವ್ರೆ ಜಗದೀಶ
ಪಕ್ಕಂತ ನಗುವ ನಗುತಾರೆ |

"ಅವುರವುರ ಕರ್ಮದಿಂದ ಕತ್ತಲುಗವುದಿದ್ರೆ
ನಾನು ನೀನೇನ ಮಾಡಬೋದು?" |

ಹಂಗಂದ ಮಾತನ್ನೆ ಕೇಳವುರೆ ನಂದೀಶ
ಅವ್ರು-ಗುಳುಗುಳನೆ ಕಣ್ಣೀರ ಕೆಡುಗವುರೆ |

"ಭೂಲೋಕವನ್ನು ಕಣ್ಣಲ್ಲಿ ನೋಡಿ ಬರುತೀನಿ
ಅಪ್ಪಣೆಯನ್ನು ಕೊಡಬೇಕು" |

"ಅಯ್ಯಾ-ನಂದೀ ಬಸವಣ್ಣ ನಿನ್ನಿಚ್ಚೆ ಸಲುತೀದೆ
ಬಾ ಹೋಗು" ಅಂದ್ರು ಜಗದೀಶ |

ನೀನೇನೊ ಬೂಲೋಕ ನೋಡಾಕೆ ಹೋಯ್ತೀಯೆ
ಅತ್ತಿಂದ ಬರುವಾಗ ಬಲು ಜೋಕೆ |

ಅತ್ತಿಂದ ಬರುವಾಗ ಲಿಂಗ ಕೊಳ್ಳಲ್ಲಿದ್ರೆ
ದ್ವಾರುಕ್ರು-ಕೈಲಾಸ್ಕೆ ನಿನ್ನ ಬುಡುತಾರೆ |

ಈ ಒಂದು ಮಾತು ಎಚ್ಚರವಿರಲಪ್ಪ
ಭೂಲೋಕ ನೋಡಿ ಬಾಹೋಗು" |

ಶಿವನ ಅಪ್ಪಣೆ ಪಡುದು ನಂದಿ ಬಸವಣ್ಣ
ಅಯ್ಯಾ ಭೂಲೋಕ ನೋಡಕೆ ಬರುತಾರೆ !

ಕೆಟ್ಟಿತ್ತು ಭೂಲೋಕ ಹುಟ್ಟಿತ್ತು ಕಲಿಯುಗ
ಕರ್ಮ ಹೆಚ್ಚಿ ಕತ್ತಲೆ ಗವುದಿತ್ತು |

ಅಡವೀ ಅರಣ್ಯದಲ್ಲಿ ಬಸವೇಶ ಬರುವಾಗ
ಅಲ್ಲೊಬ್ಬ ರಾಜಾನು ಶಿವಶರಣ |

ಬಸವೇಶ್ನ ಕಂಡಂತ ದೀಪಾಕ ರಾಜರು
"ಯಾರಪ್ಪ ಅಡವೀಲಿ ಘನಶರಣ? |

ಯಾರಪ್ಪ ನೀ ಶರಣ ಕಾಡು ಪರದೇಶಿಯಾಗಿ
ಏನು ಕಾರಣ ಇಲ್ಗೆ ದಯವಾದೆ" |

"ತಾವ್ಯಾರು ದೇವ್ರ? ಇಲ್ಲೇನು ಕಾರಣ ಬಂದ್ರಿ?
ನಮುಗೆ ನಿಜುವಾದ ವಾರ್ತೆ ಹೇಳಬೇಕು" |

"ಕೈಲಾಸದಲ್ಲಿ ನಂದೀಶ್ವರ ನಾವು
ಪೃತ್ಮಿ ನೋಡಾಕಂತ ಬಂದಿವಿನಿ |

ನೀವ್ಯಾರು?" ಎಂದು ಕೇಳಿದನು ನಂದೀಶ
"ಸ್ವಾಮಿ ನನ್ನ ಹೆಸರಾದ್ರೆ ದೀವುಕರಾಜ" |

"ಮುಕುವೆಲ್ಲ ನಿನಗೆ ಕಿನ್ನತಿಯಾಗದಲ್ಲೊ
ಏನು ಕಾರಣ ಹೇಳೊ ಘನಶರಣ" |

"ಕಾರಣಾಂದ್ರೇನಪ್ಪ ಬ್ಯಾಟೆಗೆ ಬಂದೆ ನಾನು
ಹಸುವು ಬಾಯಾರ್ಕೆ ಬಾಧೀಯು" |

"ಗಂಗ ಸರ್ವಾರ ಇಲ್ಲೀದೆ ಹೋಗಪ್ಪ
ತುರುಪ್ತಿಯಾಗಿ ನೀರ ಕುಡಿಯಪ್ಪ" |

"ನೀರನ್ನು ಕುಡಿವದಕೆ ಆವ್ಯಾಸ ನನಗಿಲ್ಲ
ನನ್ನಲ್ಲಿ ಲಿಂಗ ಇಲ್ಲುವಪ್ಪ" |

"ಮೂರೂ ಲೋಕದೊಳಗೆ ನಿನ್ನಂಥ ಭಕ್ತನ್ನ
ನಾನೆಲ್ಲು ಶಿವನೆ ಕಾಣಲಿಲ್ಲ |

ಲಿಂಗಪೂಜೆ ಮಾಡದೆ ನೀರು ಕುಡಿಯೋನಲ್ಲ
ಅನ್ನ ತಿನುವಂತಿಲ್ಲ ಅನುತೀಯೆ |

ನಮ್ಮಲ್ಲಿರುವ ಲಿಂಗ ಕೊಡುತೀನಿ ಶಿವಭಕ್ತ
ನೀರ ಕುಡಿದು ಸಂತೋಸವಾಗಯ್ಯ" |

ತಮ್ಮಲ್ಲಿರುವ ಲಿಂಗ್ಮ ದೀಪಕ ರಾಜನಿಗೆ
ಕೊಟ್ಟು ಕಳುಸಿದರು ಬಸವೇಶ |

"ಕೈಯಲ್ಲಿ ಲಿಂಗಾವ ಹಿಡ್ದಿಕೊಂಡು ಶರಣ
ನೀರ ಕುಡ್ದು ಬಾರೋ ಸಂತೋಷದಿಂದ |

ಹಿಡ್ದಿರುವ ಲಿಂಗವ ಭೂಮೀಗೆ ಇಡಬೇಡ
ಜ್ವೋಪಾನವಾಗಿ ತಂದುಕೊಡು" |

ಹಾಗೆ ಎಂದು ಒಪ್ಪಿಕೊಂಡು ಹೋದಂಥ ರಾಜ
ಭೂಮಿ ಮೇಲೆ ಲಿಂಗಾವ ಮಡಗೀದ |

ಭೂಮಿ ಮೆಲೆ ಲಿಂಗ ಮಡಗೀದ ತಕ್ಷಣವೆ
ಭೂಮಿಗೆ ಬೇರಾಗಿ ಹಿಡಿದೀತು |

ಹೋದಂತ ಭಕ್ತ ಇನ್ನು ಬರಲಿಲ್ಲ ಎಂದು
ನಂದೀಶ ಭಕ್ತನನ್ನು ಕೂಗುತಾನೆ |

ಲಿಂಗವನು ಕಳುಕೊಂಡು ಸುಮ್ಮನೆ ಬಂದು
ಲಿಂಗ ಇಲ್ಲವೆಂದು ತಿಳಿಸೀದ |

"ನಿನಗೂ ಲಿಂಗವಿಲ್ಲ ನನಗೂ ಲಿಂಗವಿಲ್ಲ
ಇಬ್ಬರಿಗೂ ಲಿಂಗ ಇಲ್ಲವಲ್ಲೊ |

ಲಿಂಗವಿಲ್ಲದ ಕಾರ್ಣ ಈ ಪೃತ್ಮಿ ಮೇಲಿರಬಾರ್ದು"
ಹಂಗಂತ ಕೈಲಾಸಕ್ಕೆ ಹೊರುಟಾರು |

ಕೈಲಾಸಕ್ಕೆ ಹೊರುಟಾಗ ಬಾಗಿಲಲ್ಲಿ ಪಾರದಾಳು
"ನೀವ್ಯಾರು?" ಎಂದು ಕೇಳುತಾರೆ |

"ದ್ವಾರುಪಾಲಕರೆ ಕೇಳಿ ಶಿವದೂತರೆ ಕೇಳಿ
ನಾನು ನಂದೀಶನಲ್ಲವೆ?" ಅನುತಾರೆ |

"ನಂದಿಯಾದರೆ ಏನು ಯಾರಾದರೇನು
ಲಿಂಗಾವ ತೋರ್ಸುಟ್ಟು ದಯಮಾಡಿ" |

"ನನ್ನಲ್ಲಿರುವ ಲಿಂಗ್ಮ ಕಳುಕೊಂಡೆ" ಅನುತ್ಹೇಳಿ
ನಂದೀಶ ಕಿನ್ನುತ್ತಾಗಿ ನಿಲ್ಲುತಾರೆ |

"ಲಿಂಗವಿಲ್ಲದ ಮೇಲೆ ನಮ್ಮಂಗಳಕೆ ಬರಬ್ಯಾಡ
ಹಿಂದಕೆ ವಾಪ್ಸಿ ದಯಮಾಡಿ" |

ಅದರಂತೆ ನಂದೀಶ ಹಿಂದಕೆ ದಯಮಾಡಿ
ಶಿವನ ಪಾದವ ಅಲ್ಲೆ ಅರಸೀದ |

ಶಿವನ ಪಾದವ ಅಲ್ಲಿ ಅರಸೀದ ಕೂಡಲೆ
ಶಿವನ ಪಾದಕೆ ಇದು ಅರುವಾದೊ |

ನಂದಿ ಬಂದನೆ ಎಂದು ಸ್ವಾಮಿ ಪರಿಶೀವ
ನಂದೀಯ ದಂಡ್ಯಕೆ ಬರುತಾರೆ |

"ನಮ್ಮ ಕೈಲಾಸಕ್ಕೆ ಯಾರು ಬಂದಿದ್ದರು ಶರಣ?"
ಹೇಳೆಂದು ಶಿವನು ಕೇಳುತಾರೆ |

"ನಂದೀಶ ದೇವರು ಬಂದಿದ್ರು ಮಾಗುರುವೆ
ಲಿಂಗವಿಲ್ಲವೆಂದು ಹೇಳಿದರು |

ಲಿಂಗಾವಿಲ್ಲಾದ ಮೇಲೆ ಕೈಲಾಸಕ್ಕೆ ಬಿಡೋದಿಲ್ಲ
ಹಿಂದಕೆ ನೀವು ದಯಮಾಡಿ |

ಹಿಂದಕ್ಕೆ ನೀವು ದಯಮಾಡಿ ಅಂತ್ಹೇಳಿ
ಕೈಲಾಸ್ಕೆ ಕೂಡಕೆ ಕಳುಗೀದೆ" |

"ನನ ಭಕ್ತ ನಂದೀಶ್ನ ತಡೀಬವುದ?" ಎಂದು
ಲೋಕ್ಕೆ ದೊಡ್ಡೋರು ಇದ ಕೇಳುತಾರೆ |

"ಅಂಗವೆಲ್ಲ ಲಿಂಗರೋಮ ರೋಮಕುಲಿಂಗ
ಲಿಂಗಲಿಂಗಕೆಲ್ಲ ಬಿಲುಪತ್ರ |

ಕೋಟಿ ಲಿಂಗವ ಅವನು ಧರಿಸವುನೆ ನಂದೀಶ
ಲಿಂಗವಿಲ್ಲ ಎಂದು ಬರಬವುದ |

ಬಾರಯ್ಯ ನಂದೀಶ ಅಕ್ಷಯವೆ ಆಗ್ಲಿ
ನನ್ನ ಕೈಲಾಸ್ಕೆ ನೀನು ಶಿವಶರಣ |

ಯಾರೋ ನಿನ್ನ ಕಂದ ತಡ್ದು ಜರಿದಾರೊ
ಅವ್ರು ಭವಿಗಳಾಗಿ ಹುಟ್ಟಾಲಿ ಪೃತ್ಮಿ ಮೇಲೆ |

ಭೂಲೋಕಕೆ ಹೋಗಿ ಯಾವ ಕರ್ಮಕು ಸಿಗದೆ
ಕೈಸೈವಾಗಿ ಕೈಲಾಸ್ಕೆ ಬಂದೀದೆ |

ಲಕ್ಷದ ಮೇಲೆ ತೊಂಬತ್ತಾರು ಸಾವ್ರ
ಎಲ್ಲರುಗಿ ನೀನು ಬೇಕಾದ ಸರಣ |

ಪೃತ್ಮಿಗೆ ನೀನೋಗಿ ಬಂದ ಕಾರಣದಿಂದ
ನಿನಗೆ ದಿತಿಸಂಬು ಎಂದು ಕರುದೀವಿ" |

"ದಿತಿಸಂಬು ಎಂದು ಹೆಸರನ ಕರುದರಲ್ಲ
ಇದು ಹ್ಯಾಗೆ ಸಲುತಾದೆ ನಂದೀಗೆ?" |

ಭಕ್ತರ ಮನಸಿನಲ್ಲಿ ಕಳವಳ ನೋಡಿದರು
"ಅವುನ್ಗೆ ಸಲುವಂತ ಹೆಸರು ಕರುದಿವಿನಿ |

ನಂದೀಗೆ ಕಟ್ಟೀದ ಹೆಸರು ನಿಮ್ಗೆ ಬೇಜಾರಾದ್ರೆ
ಪೃತ್ಮಿಗೆ ನೀವೆಲ್ಲ ಇಳಯೀರಿ |

ಕಲ್ಯಾಣಪಟ್ಟಣದಲ್ಲಿ ಬಿಜ್ಜಳುನ ದರಬಾರದಲ್ಲಿ
ಇವ್ರು ಬಸವಣ್ಣನಾಗಿ ಬರುತಾರೆ |

ನಂದಿ ಎನ್ನಾ ಹೆಸ್ರು ಸಲ್ಲುತದ ಇಲ್ವ ಎಂದು
ಎಲ್ಲುರ್ಗು ನಿಮುಗು ತಿಳಿವಾದು |

ನಂದೀಶ್ವರ ನೀನು ಪೃತ್ಮೀಗೆ ಹೊರಡಪ್ಪ
ಬಾಗಿವಾಡ ಪುರವ ಸೇರಬೇಕು |

ತಂದೆ ಮಾದರಸು ತಾಯಿ ಮಾದಲಾಂಬುಕೆ
ಅವುರ್ಗೆ ಕಂದನಾಗಿ ನೀನು ಹುಟ್ಟಿ ಬಾಪ್ಪ |

ಕಂದನಾಗಿ ಹುಟ್ಟಿ ಅವ್ರ ಸತ್ಮಕ್ಕೆ ನೀನು
ಅವ್ರ ಕೈಲಾಸಕ್ಕೆ ನೀನು ಕಳುಸಪ್ಪ" |

ಶಿವನ ಮಾತ ಕೇಳಿ ಶರಣೆಂದು ನಂದೀಶ
ಅವ್ರು ಬಂದಾರು ಬಾಗೇವಾಡುಕಾಗಿ |

ಬಾಗೇವಾಡಿಕೆ ಬಂದು ಲಿಂಗವಾಗಿ ಮೂಡಿ
ಆ ಲಿಂಗಕೊಂದು ರತುವ ನಡೆಸಿದರು |

ಬಾಗೇವಾಡದಲ್ಲಿ ಶಿವಬ್ರಾಮುಣ್ರ ಕುಲದಲ್ಲಿ
ಮಂಡಲ್ ಮಾದರಸ ಇರುತಾರೆ |

ಮಾದರಸನ ಮಡದಿ ಮಾದಲಾಂಬಿಕೆ ದೇವಿ
ನಂದೀಯ ರತುವ ನಡಸೀದ |

ನಂದೀಯ ರತಾವ ಮಾಡಿದರು ಮಾದಲಾಂಬ್ಕೆ
ಅವುರ್ಗೆ ಸೊಪ್ಪುನ್ದಲ್ಲಿ ಬಂದೇನ ನುಡಿದಾರು |

"ನನ್ನ ಸೇವೆ ನೀವು ಮಾಡಿದಿರಿ ಅಮ್ಮಯ್ಯ
ನಿಮ್ಗೆ ಮಗನಾಗಿ ನಾನೇ ಬರುತೀನಿ" |

ಸ್ವಾಮಿ ಅಂದ ಮಾತ ಕೇಳಿದರು ಮಾದಲಾಂಬ್ಕೆ
ತಮ್ಮ ಪತಿಯ ಒಂದಿಗೀದ ನುಡಿದಾರು |

ನಿಜವೆಂದು ಎಲ್ಲ ತಿಳಕೊಂಡು ಸರಣಾರು
ಶಿವ ಶಿವ ಎಂದು ಬೇಡಿದರು |

ನಂದೀಶ್ವರ ಸರಣ ಆಡಿದ ಮಾತಿನಂತೆ
ಅವುರ ಗರ್ಭದಲ್ಲಿ ಸ್ವಾಮಿ ಬೆಳಿದಾರು |

ನವಮಾಸೊಂಬತ್ತು ತಿಂಗ ನಡೆದಾವು ಸರಣಾರೆ
ಆಗ ತಾನೆ ಶರಣ ಮಗ ಜನಿಸೀತು |

ಹನ್ನೆರಡು ದಿವ್ಸಕ್ಕೆ ಸೂತ್ಕ ಪಾರಣೆ ಮಾಡಿ
ಸಂಗಮೇಶ್ವರ ಬಂದು ಸೂಸ್ಕ ಹಿಡಿದಾರು |

ಬಸುವಣ್ಣ ಅನುತೇಳಿ ನಾಮುಕರ್ಣವ ಮಾಡಿ
ಅವುರ್ಗೆ ಶಿವುಧಾರ್ಣೆ ಮಾಡಿದರು ಸಂಗಮೇಶ |

ಮಗನು ಹುಟ್ಟಿದ ಮೇಲೆ ಪ್ರೀತಿಂದ ಸಲುಗಿದರು
ಮಗನ ಇದ್ಯಕೆ ಸ್ವಾಮಿ ಕಳುಗಿದರು |

ವಿದ್ಯಾಭ್ಯಾಸುಕ್ಕೆ ಕಳುಗಬೇಕು ಎಂದು
ಮೇದುನಿ ಮಠಕೆ ಕರುದೋದರು |

ಓದ್ತಾ ಇರುವಾಗ ಸುಕ್ರುವಾರ ಪೂರ್ವದಲ್ಲಿ
ಹಲಗೆ ಬಳಪ ತೊಳ್ಬು ಬನ್ನಿರೆಂದು |

ಹಲಗೆ ಬಳಪ ತೊಳ್ದು ಬನ್ನಿರೆಂದು ಗುರುಗಳು
ಗಂಗೇ ನದೀಗೆ ಕಳುಗಿದರು |

ಗಂಗೇ ನದೀಗೆ ಆಗ ಬಂದರು ಬಸವಣ್ಣ
ಹಲಗೆ ಬಳಪಾವ ತೊಳಿದರು |

ಹಲಗೆ ಬಳ್ಪ ತೊಳಿವಾಗ ಸ್ವಾಮ ಅಂಬೊ ಹುಡುಗ
ಕೈತಪ್ಪಿ ನೀರಿಗೆ ಬೀಳುತಾನೆ |

ನೀರೀಗೆ ಬಿದ್ದಾಗ ಬಸವಣ್ಣನಿಗೆ ಹುಡುಗರು
ಸ್ವಾಮಣ್ಣನ ತಳ್ಳಿದನೆಂದು ಹೇಳುವರು |

ಗಂಗ ನದಿಯ ಬಿಟ್ಟು ಗುರುವಿನಲ್ಲಿಗೆ ಬಂದು
"ಸ್ವಾಮಣ್ಣ ನೀರಿಗೆ ತಳ್ಳಿದನು |

ಬಸವಣ್ಣೆ ನೂಕಿದನು" ಅನುತ ದೂರ್ತೇಳಿದರು
ಆಗ ಗುರುಗಾಳು ಬಸವಣ್ಣನ ಕರಿದಾರು |

"ಯಾಕೆ ಬಸವಣ್ಣ ಸ್ವಾಮನ ನೂಕಿದೆ?"
ಅನುತೇಳಿ ಗುರುಗಳು ಕೇಳಿದರು |

"ನಾನಲ್ಲ ಗುರುಗಳೇ ತಾನೇ ಬಿದ್ದಾನೆ"ಂದು
ಗುರುಗಳಿಗೆ ಬಸವಣ್ಣ ಹೇಳುತಾರೆ |

"ಯಾರೆಂದು ಆಮೇಲೆ ಗೋಚುರವಾಗುವುದಯ್ಯ
ಸ್ವಾಮನ ತಂದೆ ತಾಯ ಕರಿಸೀರೊ" |

ಊರಿಗೆ ಸುದ್ದಿ ತಿಳಿದ ಕಾರಣ ಕೂಡ
ಅವ್ರ ತಂದೆ ತಾಯ್ಗಳ ಅಲ್ಲಿ ಕರಸಿದರು |

"ಅಮ್ಮ ಅಮ್ಮ ನಿಮ್ಮ ಮಗನ ಸ್ವಾಮಣ್ಣನ
ನೀರೀಗೆ ಬಸವ ನೂಕಿಬಿಟ್ಟ" |

ಹುಡುಗರಾಡಿದ ಮಾತ ಕೇಳಿದಳು ಆ ತಾಯಿ
ಬಸವಣ್ಣನ ಮನೆಗೆ ಬರುತಾರೆ |

ಬಸವಣ್ಣನ ಮನೆಗೆ ಬರುತಾರೆ ಅವರೆಲ್ಲ
ಅವ್ನ ತಂದೆ ತಾಯ್ಗಳಿಗೆ ತಿಳಿಸಿದರು |

"ತಾಯಿ ಮಾದಲಾಂಬ್ಕೆ ಅಮ್ಮಯ್ಯ ಬುದ್ಧಿ
ನಿನ್ನ ಮಗ ಬಸವಣ್ಣ ನನ ಮಗನ |

ನೀರೀಗೆ ಸ್ವಾಮಣ್ಣನ ನೂಕಿ ಬಿಟ್ಟ" ಎಂದು
ಅವರೆಲ್ಲ ಬಂದು ಹೇಳುತಾರೆ |

"ಒಬ್ಬಾನೊಬ್ಬ ಮಗನ ನಾ ಕಳುಕೊಂಡೆನು ಬುದ್ಧಿ
ಮುಂದೆ ಯಾರು ನನಗೆ ಗತಿಯಾರು?" |

ಅವರಿವರು ಎಲ್ಲ ಸೇರಿ ಕೂಡಿಕೊಂಡು
ಬಸವಣ್ಣನ ಬೇಗ ಕರಿಸಿದರು |

"ಏನೊ ಬಸವಣ್ಣ ಸ್ವಾಮಣ್ಣನ ನೀನು
ನೀರಿಗ್ಯಾಕೊ ಮಗು ನೂಕೀದೆ?" |

"ಅಮ್ಮ ನಾನು ನೂಕಲಿಲ್ಲ ನಾ ಹೇಳಿದರೆ ಕೇಳೋದಿಲ್ಲ
ಎಲ್ಲ ಗಂಗೆ ಸ್ಥಾನಕೆ ನಡೆಯಾರಿ |

ನೀರಿನಲ್ಲಿ ಮುಳುಗಿ ಹೋಗಿರುವ ಸ್ವಾಮಣ್ಣ
ಅವುನಿಂದ್ಲೆ ನಾನು ಹೇಳುಸ್ತೀನಿ" |

ಆಗ ತಾನೆ ಎಲ್ಲ ಊರೆಲ್ಲ ಸೇರಿಕೊಂಡು
ಇವ್ರು ಗಂಗೆ ಸ್ನಾನಕೆ ಬರುತಾರೆ |

ಎಲ್ಲರು ಸೇರಿಕೊಂಡು ನೋಡುವ ಕಾಲದಲ್ಲಿ
ಸಾಮಣ್ಣನ ಕರೆದಾರು ಬಸವಣ್ಣ |

"ನೀರಿನಲ್ಲಿ ಮುಳುಗೋಗಿರುವ ಭಕ್ತ ಸ್ಯಾಮಣ್ಣ
ನಿನ್ನ ಯಾರು ನೂಕಿದರು ಬಂದು ಹೇಳಯ್ಯ" |

ಬಸವೇಶ್ವರರ ದೃಷ್ಟಿ ನೀರೀಗೆ ಬಿದ್ದಾಗ
ಸ್ಯಾಮಣ್ಣ ಎದ್ದು ಬರುತಾರೆ |

ಸ್ಯಾಮಣ್ಣ ಎದ್ದು ಬಂದಾಗ ಬಸವಣ್ಣ
"ನಿನ್ನ ಯಾರು ನೂಕಿದರಪ್ಪ ನಿಜ ಹೇಳು" |

"ಯಾರು ನೂಕಲಿಲ್ಲ ನನ್ನ ಕೈಕಾಲು ತೆಪ್ಪ
ನಾನೆ ಮುಳುಗೋದೆ ಗಂಗೆಯಲ್ಲಿ" |

ಸ್ಯಾಮಣ್ಣನ ಮಾತು ಎಲ್ಲರ್ಗು ದಿಟವಾಯ್ತು
ಶಿವಶಿವ ಎಂದು ನೆನೆಸಿದರು |

ಮೇದುನಿ ಪವಾಡವ ಗೆದ್ದರು ಬಸವಣ್ಣ
ಇವರೆ ಸಾಕ್ಷಾದ ಮೂರ್ತಿ ಪರಶಿವಮೂರ್ತಿ |

ಅವರು ಇವರೆಲ್ಲ ಕೂಡಿ ಊರಿಗೆ ತೆರಳಿದರು
ಊರೆಲ್ಲ ಸಂತೋಷ ಪಡುತಾರೆ |

ಹುಡುಗರೆಲ್ಲ ಸೇರಿ ಕುಚೇಷ್ಟ ಮಾಡಿ
ಒಂದು ಬೆಣ್ಯನೆಂಬ ಹುಡುಗನ ಕರೆದಾರು |

"ಸತ್ತು ಮನುಗ್ದಂಗೆ ನೀನು ಸುಮ್ಮಾನೆ ಮನಗಿರು
ಬಸವಣ್ಣ ಕರೆದಾರೆ ಮಾತಾಡಬೇಡ |

ನಾವು ಕರೆದಾರೆ ನೀನು ಮಾತಾಡೊ ಬೆನ್ಕ
ಅದುವರುಗು ನೀನು ಮಾತಾಡಬ್ಯಾಡ" |

ಡೋಲಿಯ ಕಟ್ಟುಕೊಂಡು ಬಸವಣ್ಣನ ಬಳುಗೆ
ಹುಡುಗರೆಲ್ಲ ಸೇರಿ ಬರುತಾರೆ |

"ಬಸವಣ್ಣ ಶರಣಾರೆ ಇಲ್ಲಿ ಬನ್ನಿ ಶರಣಾರೆ
ನಮ್ಮ ಬೆನ್ಕನು ಸತ್ತು ಮನುಗವ್ನೆ |

ಸತ್ತ ಬೆನ್ಕನ ನೀನು ಮಾತಾಡಿಸಿಕೊಟ್ಟರೆ
ಸತ್ಯವಂತರು ನೀವು ಅನುತಾರೆ" |

ಆಗ ಬಸವಣ್ಣನವರು ಹುಡುಗರ ಮಾತ ಕೇಳಿ
ಆ ಬೆನಕನ ಬಳಿಗೆ ಬರುತಾರೆ |

"ಅಯ್ಯ ಹುಡುಗಾರೆ ನೀವು ಸುಳ್ಳ ಹೇಳಬವುದೆ
ಅಯ್ಯ ಬೆನ್ಕ ಸತ್ತಿಲ್ಲ ಮನುಗವನೆ" |

ಸತ್ತವನೆ ಎಂಬ ಮಾತ ಹುಡುಗರೆಲ್ಲ ಕೇಳಿ
ಬಸವಣ್ಣನ ಹಾಸ್ಯ ಮಾಡುತಾರೆ |

ಬೆನ್ಕ ಬೆನ್ಕ ಎಂದು ಹುಡುಗರು ಕರಿವಾಗ
ಆ ಬೆನ್ಕನೆಂಬ ಹುಡುಗ ಮಾತಾಡನಿಲ್ಲ |

ಮೊಕುದ ಮುಸುಕ ತಗುದು ನೋಡಿದರು ಹುಡುಗಾರು
ನಿಜವಾಗು ಬೆನಕ ಸತ್ತೋಗವುನೆ |

ಆಗ ಬಸವಣ್ಣನವರ್ಗೆ ಹುಡುಗರೆಲ್ಲ ಸೇರಿ
ಈ ಬೆನ್ಕನ ನೀವು ಪಡಿಯಾಲೇಬೇಕು |

"ಸತ್ತು ವಸ್ತುವ ನಾನು ಮತ್ತೆ ಪಡೆಯುವದಕೆ
ಪರಶಿವನೆ ನಾನು?" ಅನುತಾರೆ |

ಬೆನ್ಕನ ತಾಯಿ ತಂದೆ ಇಂತ ಸುದ್ದೀಯ ಕೇಳಿ
ಬಸವಣ್ಣನ ಪಾದ ಹಿಡುಕೊಂಡು |

"ತಂದೆ ಬಸವಣ್ಣ ನಮ್ಮ ಕಂದನ ನೀವು
ಪಡುಕೊಡಿ" ಎಂದು ಗೋಳಾಡುತಾರೆ |

ಆಗ ಬಸವಣ್ಣನವರು ತಮ್ಮ ಸತ್ಯಾದಿಂದ
ಆ ಬೆನ್ಯಾನ ವಸ್ತುವ ಪಡಿದಾರು |

ತಂದೆ ತಾಯ್ಗಳಿಬ್ಬರು ತಮ್ಮ ಮಗನ ಕರುಕೊಂಡು
ಸಂತೋಷದಿಂದ ಮನೆಗೆ ತೆರಳಿದರು |

ಆಗ ಬಸವಣ್ಣನವರು ದಿತಿ ದೀಕ್ಷೆ ಮಾಡಬೇಕಂತ
"ಇಂದು ಮಠಕೆ ಹೋಗಬ್ಯಾಡ" ಅನುತಾರೆ |

"ಇಂದು ನಾ ಮಠಕೆ ಹೋಗಬೇಕು ತಂದೆ
ಗುರುಗಳು ಆಗ್ನೇಯ ಮಾಡವುರೆ" |

"ಗುರುಗಳನೆ ಕರೆಯಿಸಿ ಸೂಮೂರ್ತ ನಿಚ್ಚಯಿಸಿ
ಮಗನಿಗೆ ದಿತಿದೀಕ್ಷೆಗಳ ಮಾಡಬೇಕು |

ಬಂದರು ಬಸವಣ್ಣ ಏಳಪ್ಪ ಕಂದ
ದೀಕ್ಷ್ಯಕ್ಕೆ ನೀನು ಮೂರುತವಾಗು" |

"ತಂದೆಯವ್ರೆ ನನಗೆ ದಿತಿದೀಕ್ಷೆ ಬ್ಯಾಡಿ
ನನಗೆ ಶಿವುದೀಕ್ಷೆ ಮೊದುಲೆ ಆಗೀದೆ" |

"ಶಿವದೀಕ್ಷೆ ನಮುದಲ್ಲ ನಮಗೆ ದಿತಿದೀಕ್ಷೆ ಮಗುವೆ
ನೀನು ದಿತಿದೀಕ್ಷೆಗೆ ಕಂದ ನಿಲುಬೇಕು" |

"ದಿತಿದೀಕ್ಷೆಯಲ್ಲಿ ಏನು ಕ್ರಮ ತಂದೆ
ಅದು ನನಗ ಬೇಡ" ಅನುತಾರೆ | ೨೮೦

"ಗುರುವಿಂದ ನನಗೆ ಅನುಗ್ರಾವೆ ಆಗೀದೆ
ಅದರಿಂದ ದಿತಿ ದೀಕ್ಷೆ ಬೇಡಂದ್ರು |

ಶಿವುದೀಕ್ಷೆಯಿಂದ ಭಾರಿಕ್ರಮ ಉಂಟು
ಕೈಲಾಸದಲ್ಲಿ ಶಿವನ ಬಾರೇಲಿ |

ಸೊರುಗದಲ್ಲಿರುವೋರು ಊಟುಕ್ಕೆ ಬರುವಂತೆ
ಸತ್ಯವುಂಟು ಶಿವನ ದೀಕ್ಷ್ಯದಲ್ಲಿ" |

"ಸೊರಗದಲ್ಲಿರುವೋರ ಕರಯೀಸೋ ಬಸವಣ್ಣ
ನಿನ್ನ ಮಾತೀಗೆ ನಾವು ಒಪ್ಪುತೀವಿ" |

ಆಗ ಬಸವಣ್ಣನೋರು ಶಿವನೀಗರಿಕೆ ಮಾಡಿ
ಸೊರಗದಲ್ಲಿರೋರ ನಮ್ಮನೆಗೆ ಕಳುಗಸ್ಸೇಕು | ೨೯೦

ಬಸವಣ್ಣನ ಮಾತೀಗೆ ಸಂಗಮೇಶ್ವರ ಗುರು
ಅವರ ಬಂಧು ಬಳಗನೆಲ್ಲ ಕಳುಗಿದರು |

"ದಿತಿ ದೀಕ್ಷದ ಮರ್ಮ ಕಂಡುದ್ದಾಯಿತು ಮಗುವೆ
ನೀನು ಸತ್ಯವಂತನೆಂದು ತಿಳಿಯೀತು |

ಶಿವದೀಕ್ಷ್ಯದ ಜೊತೆಗೆ ದಿತಿದೀಕ್ಷ್ಯವು ಉಂಟು
ದಿತಿ ದೀಕ್ಷ್ಯಕ ನಿಲ್ಲು ಬಸವಣ್ಣ" |

ಬೇಡಿ ಬೇಡಿ ಎಂದ್ರು ಚರ್ಚೆ ಮಾಡಿ ಹೇಳ್ತೀರಿ
ನಾನಿರಲಾರನೆಂದು ಹೊರಟಾರು |

ಸಂಗಮನ ಆಲಯ್ಕೆ ಹೊರಟಾರು ಬಸವಣ್ಣ
ತಂದೆ ತಾಯ್ಗಳು ದುಕ್ಕ ಪಡುವಾರು | ೩೦೦

. ಅಕ್ಕ ನಾಗಮ್ಮನವರು ಹೊರುಟಾರು ಶಿವ ಶಿವ
"ಅಣ್ಣಯ್ಯ ಎಲ್ಲೀಗೆ ಹೋದೀರಿ |

ನಾನು ಬತ್ತೀನಿ" ಎಂದು ಅಕ್ಕ ನಾಗಮ್ಮ ತಾಯಿ
ಬಸವಣ್ಣನ ಜೊತೆಯಲ್ಲಿ ಹೊರುಟಾರು |

ಬಸವಣ್ಣ ಬಂದರೆಂದು ಸಂಗಮೇಶ್ವರ ಗುರು
ಯಾಕಪ್ಪ ಬಂದೆ ಶಿವುಶರಣ |

ಬಸವಣ್ಣ ಹೋದನು ಎಲ್ಲಿಗೋದಾರೆಂದು
ಒಂದು ಕಾಗದ ಬರೆದಾರು ಪಿಪಲೀಗೆ |

ಪಿಪಲೀಯ ಒಳುಗೆ ಬಲದೇವ ಮಂತ್ರಿ
ನಿಮ್ಮ ಅಳಿಯ ಬಸವಣ್ಣ ಬಂದಿರಬವುದು | ೩೧೦

ಅಕ್ಕ ನಾಗಮ್ಮನವರ ಬಸವಣ್ಣನವರ
ನೀನು ಸಲಗಪ್ಪ ಮಂತ್ರಿ ಬಲದೇವ |

ಅಕ್ಕನ ವಾಲೇಯ ಓದುಕೊಂಡು ಬಲದೇವ
ಹುಡಿಕೊಂಡು ಬರುತಾರೆ ಬಸವಣ್ಣನ |

ಹುಡುಕಿ ಬರುವಾಗ ಸಂಗಮನಾಲಯದಲ್ಲಿ
ಅಲ್ಲಿ ಬಸವಣ್ಣ ನಾಗಮ್ಮ ಇರುತಾರೆ |

ಮಾವನನೆ ಕಂಡು ನಮುಸ್ಕಾರವನ್ನೇ ಮಾಡಿ
"ಏನು ಬಂದಿರಿ ಹೇಳಿ" ಅನುತಾರೆ |

"ತಾಯಿ ತಂದೆ ಬಿಟ್ಟು ಬಂದ್ರಿಯಲ್ಲ ಬಸವಣ್ಣ
ಮೂರು ತಿಂಗ್ಳು ಜಿನ ಕಾಲವಾಯ್ತು | ೩೨೦

ಇಲ್ಲಿ ಇರುವುದು ಸರಿಯಲ್ಲ ಬಸವಣ್ಣ
ನಮ್ಮ ಪಟ್ಟಣಕೆ ದಯಮಾಡಿ |

ನಮ್ಮ ಮಗಳು ಗಂಗಾಂಬ್ಕ್ಕ ನಿಮಗೆ ಲಗ್ನ ಮಾಡುವೇನು
ನಮ್ಮ ಪಟ್ಟಣಕೆ ದಯಮಾಡಿ" |

ಗುರುವ್ನಿಂದ ಅಪ್ಪಣೆ ಪಡುಕೊಂಡು ಬಸವಣ್ಣ
ಪಿಪ್ಪಲೆ ಪಟ್ಟಣಕೆ ಬಿಜ ಮಾಡುತಾರೆ |

ಪಿಪ್ಪಲೆ ಪಟ್ಟಣಕೆ ಬಂದಾಗ ಬಸವಣ್ಣ
ಮದುವೆ ಕಲ್ಯಾಣ ಅವ್ರುಗೆ ಮಾಡಿದರು |

ಮದುವೆ ಕಲ್ಯಾಣವ ಮಾಡಿದರು ಸೋದರ ಮಾವ
"ನೀವು ಸುಕುಮಾಗಿ ಬಾಳಿ ಬಸವಣ್ಣ" |

ಅಕ್ಕ ನಾಗಮ್ಮನವರು ಬಸವಣ್ಣನವರು
ಸಂತೋಷದಿಂದ ಅಲ್ಲಿ ಇರುತಾರೆ |

ಹಿಂಗೆ ಇರುವ ಕಾಲದಲ್ಲಿ ಬಲದೇವ ಮಂತ್ರೀಗೆ
ಅವುಸ್ಯಾನ ಕಾಲ ಒದುಗೀತು |

ಅವುಸ್ಯಾನಕಾಲ ಒದಗೀತು ಅವರೀಗೆ
ಅವರು ಸೊರುಗಸ್ತರಾದರು ಬಲದೇವ |

ಮಾವನ ಕಳುಕೊಂಡೆ ಅನುತ್ಹೇಳಿ ಬಸವಣ್ಣ
ಅವ್ರು ದುಕ್ಕದಲಿ ಇರುತಾರೆ ಶರಣಾರು |

ಬಲದೇವ ಮಂತ್ರಿ ಸೊರುಗಸ್ತರಾದರೆಂದು
ಬಿಜ್ಜಳುಗೆ ಎತೆಯು ಒದಗೀತು |

ಬಂದಾನು ಒಂದು ದಿನ ದರಬಾರಲ್ಲಿರುವಾಗ
ಒಂದು ದೇವಲೋಕದ ಲಿಪಿ ಒದಗೀತು |

ಯಾರು ಅದನೋದಕೆ ಅರ್ಥಮಾಡಕೆ ಬರದೆ
ಯಾರೀಗು ಮಾಯತ್ತೆ ತಿಳಿಯದು |

ಎಪ್ಪತ್ತಾರು ಮಂತ್ರಿ ಮಾನ್ಯರು ಒಳುಗೆ
ಇದ ಯಾರೂ ಅರ್ಥಮಾಡಿ ಓದುನಿಲ್ಲ |

"ನನ್ನ ಬಲದೇವ ಮಂತ್ರಿ ಇದ್ದುದೊಂದಾಗಿದ್ದರೆ
ಇದ ಓದಿ ಅರ್ಥವ ಹೇಳುತ್ತಿದ್ದ" |

ದೊರೆಗಳಾಡಿದ ಮಾತ ಕೇಳಿದರು ಅರಸುಮಕ್ಕ
ಅವರೀಗೆ ಬದುಲಾಗಿ ಒಬ್ಬರಿರುತ್ತಾರೆ |

ಬಲದೇವ ಮಂತ್ರಿಯ ಅಳಿಯ ಬಸವಣ್ಣ
ಅವರ್ನ ಕರಿಸಿ ಸಭೆಯಾಕ್ಕೆ |

ಆಗ ಬಿಜ್ಜಳ ದೊರೆ ಆಳುಗಳ ಕರೆಯೀಸಿ
ಬಸವಣ್ಣನವರ ಕರಸಿದರು |

ದೊರೆಗಳಾಡಿದ ಮಾತಿಗೆ ತಿರುಸ್ಕಾರ ಮಾಡದೆ
ಬಂದಾನು ಶರಣ ಬಸವಣ್ಣ |

ಏನು ಕಾರಣ ನಮ್ಮ ಕರೆಸ್ತಿ ಮಾರಾಜ್ರೆ
ನಮ್ಮಿಂದ ನಿಮಗೇನಾಗಬೇಕು |

ನಮ್ಮಲ್ಲಿ ಒಂದು ಲಿಪಿ ಬಂದೀದೆ ಬಸವಣ್ಣ
ಅದ ಓದಿ ಅರ್ಥವ ನೀವು ಹೇಳಬೇಕು |

ದೊರೆಗಳಾಡಿದ ಮಾತ್ಗೆ ನೋಡಿದರು ಬಸವಣ್ಣ
ಆ ಲಿಪಿಯ ಕರದಲ್ಲಿ ಹಿಡಿದಾರು |

ಕರದಲ್ಲಿ ಹಿಡುಕೊಂಡು ನೋಡಿದರು ಬಸವಣ್ಣ
"ಇದು ದೇವಲೋಕದಿಂದ ಬಂದೀದೆ |

ಇದರಂತರಂಗವ ಹೇಳತೀನಿ ಮಾರಾಜ್ರೆ
ಆನಂದವಾಗಿ ನೀವು ಕೇಳಬೇಕು |

ರತ್ನಸಿಮ್ಮಾಸನದ ಆರಾಳ್ಕಟ್ಟದಡಿಯಲ್ಲಿ
ಒಂದು ಮುತ್ತೀನ ಸಿಮ್ಮಾಸ್ನ ಇರುತಾದೆ |

ಮುತ್ತೀನ ಸಿಮ್ಮಾಸ್ನ ಇರುತೀದೆ ಬಿಜ್ಜಳರಾಯ
ಪರೀಕ್ಷೆ ಮಾಡೀರಿ ಸಭೆಯಲ್ಲಿ" |

ಬಸವಣ್ಣೋರ್ ಮಾತಿಗೆ ಅಹಸರ್ಕ ಪಟ್ಟು ಎಲ್ಲ
ಭೂಮಿಯನ್ನೆ ಆಗ ಅಗೆದಾರು |

ಭೂಮಿಯನ್ನೆ ಅಗೆದು ನೋಡುವ ಕಾಲದಲ್ಲಿ
ಮುತ್ತೀನ ಸಿಮ್ಮಾಸನ ಇರುತೀದೆ |

ಶರಣಾರಾಡಿದ ಮಾತು ಹುಸಿಯೊಂದಾಗನಿಲ್ಲ
ನಮ್ಮ ಸಭೆಯ ಮಾನ್ಯರಿಗೆ ಒಪ್ತೀತು |

"ಸ್ವಾಮಿ ಬಿಜ್ಜಳರಾಯ ಇನ್ನೊಂದು ಮಹತ್ತ ಇದೆ
ಏಳು ಕೊಪ್ಪರುಕೆ ದ್ರವಿಯ ಇರುತಾದೆ |

ಏಳು ಕೊಪ್ಪರ್ಕೆ ದ್ರವಿಯ ಇರುತಾದೆ ಮಾರಾಜ
ನೀನು ತಗುಸು ಇಸ್ರಣವಾಗಿ" |

ಮಣ್ಣು ಒಡ್ಡರ ಕರೆಸಿ ಅಗಿಸಿದರು ದೊರೆರಾಯ
ಏಳು ಕೊಪ್ಪುರುಕೆ ದ್ರವಿಯ ಕಂಡೀತು |

ಏಳು ಕೊಪ್ಪುರ್ಕೆ ದ್ರವಿಯ್ವ ಪಟ್ಟದಾನೆಗೆ ಕಟ್ಟಿ
ಕೊಪ್ಪುರ್ಕೆ ಈಚ್ಗೆ ಎಳಸಿದರು |

"ಹಿಂಗೆ ಅರ್ಥಮಾಡಿ ಹೇಳೊ ಜಾಣರಿರಲಿಲ್ಲವಲ್ಲ
ಇವನೆಂತ ಸತ್ಯವಂತ ಬಸವಣ್ಣ |

ಎಪ್ಪತ್ತಾರು ಮಂತ್ರಿ ಮಂತ್ರಿಮಾನ್ಯರಲ್ಲಿ
ಮುಖ್ಯರಾದ ಮಂತ್ರಿ ನೀವಾಗಿ |

ಮುಖ್ಯಮಂತ್ರಿಯ ಪಟ್ಟ ನಿಮಗೆ ನಾವು ಕೊಡುತೀವಿ
ನಮ್ಮ ಅರಮಲ್ಲಿ ನೀವು ಇರಬೇಕು" |

ರಾಜರಾಡಿದ ಮಾತ ಕೇಳಿ ಬಸವಣ್ಣ
ಆಗಬವುದು ಎಂದು ಒಪ್ಪುತಾರೆ |

ಬಸವಣ್ಣ ಶರಣನಿಗೆ ಮಂತ್ರಿ ಪಟ್ಟವ ಕಟ್ಟಿ
ಅವರ್ಗೆ ಗುರುಮಠ ತಯ್ಯಾರತ್ ಮಾಡುತಾರೆ |

ಪೂರುಪ ಪಚ್ಚೇಮ ಒಂಬತ್ತು ಗಾವೀದ
ಉತ್ತರ ದಕ್ಷಿಣ ಹತ್ತು ಗಾವೀದ |

ಉತ್ತರ ದಕ್ಷಿಣ ಹತ್ತು ಗಾವೀದ ಅವುರೀಗೆ
ಗುರುಮಠ ಕಟ್ಸಿಸಿದ ಬಿಜ್ಜಳ |

ಇಲ್ಲೀಗೆ ಹರಹರ ಇಲ್ಲೀಗೆ ಶಿವಶಿವ
ಇಲ್ಲೀಗೆ ಈ ಸಂದು ಸಂಪೂರ್ಣ |

ಬಸವಣ್ಣನ ಪಾದಕೆ ಶರಣೆಂದೆ

ಗುರುವಿನ ಮಠದಾಗೆ ತಿರುಗಾಡುವವನ್ಯಾರೆ
ರೇಶೀಮೆ ದೋತುರದ ದೊರೆಮಗ - ಬಸವಣ್ಣ
ಗುರುಸೇವೆ ಮಾಡಿ ಬರುತಾರೆ |

ಭೂಮಿ ಹುಟ್ಟಕೆ ಮೊದಲು ಭೂಮಿ ಕಟ್ಟಕೆ ಮೊದಲು
ಭೂಪ ಹುಟ್ಟೀದ ಬಸವಯ್ಯ - ಮ್ಯಾಲೀನ
ಶಿವನಿಗೇಳು ದಿನದ ಹಿರಿಯವನು |

ಬಸವಣ್ಣನ ನೆನೆದಾರೆ ವಿಷವು ಅಮೃತವಾಗಿ
ಮುಸುಕೀದ ಕರ್ಮ ಬಯಲಾಗಿ - ಉಪ್ಪುರಿಕೆ
ಬಸವಣ್ಣನ ಪಾದಕೆ ಶರಣೆಂದೆ |

ಬಸವಣ್ಣ ಹುಟ್ಟಲಿ ಹೊಸಪ್ಯಾಟೆ ಕಟ್ಟಲಿ
ರಸದಾಳಿ ಕಬ್ಬು ಬೆಳಿಯಾಲಿ - ಕೈಲಾಸದ
ಬಸವಣ್ಣನ ತೇರು ಹರಿಯಾಲಿ |

ಊಳ್ಳೆಯ ಶರಣರು

ಸುವ್ವಿ ಹೇಳಮ್ಮ ದ್ಯಾವಾರ ದೇವ್ರೋ ಸುವ್ವಿ | ಸೊಲ್ಲು |

ಸತ್ಯಾ ಸರಣಾರು ನಿತ್ಯಾ ಸರಣಾರು
ಉತ್ತಾಮ ಸರಣಾರು ಇರುವಾರು | ಸುವ್ವಿ |

ಕೋಟುಗೊಬ್ಬ ಬಗುತಾರು ಕುಲಕೊಬ್ಬ ಸರಣಾರು
ಬಸವಣ್ಣನ ಸಭೆಯಲ್ಲಿ ಇರುವಾರು |

ಯಾರ್ಯಾರು ಎಂದಾರೆ ಯಾರ ಹೇಳಲಿ ಗುರುವೆ
ನೂರಲ್ಲ ನೂರ ಸಾವುರವಲ್ಲ |

ಕೋಟಿ ಬಕುತಾರಲ್ಲಿ ಉತ್ತಣ್ಣ ಸಪ್ಪಣ್ಣ
ಕಪಡಿ ರೇಚಪ್ಪಾಜಿ ಇರುತಾರೆ |

ಮಡಿವಾಳ ಮಾಚಪ್ಪ ಕುಂಬಾರ ಗುಂಡಯ್ಯ
ಒಕ್ಕುಲುಗ್ರ ಮುದ್ದಯ್ಯ ಸರಣಾರು | ೧೦

ಅಡಪದ ಅಂಪಯ್ಯ ಕುರುಬರ ಬೀರಯ್ಯ
ಈಡಿಗರ ಗುರುವಯ್ಯ ಇರುತಾರೆ |

ತುರುಕರ ಪೀರಯ್ಯ ತಿರುವಂಗ್ದ ದಾಸಯ್ಯ
ದೊಂಬರ ನಾಗಣ್ಣ ಸರಣಾರು |

ಹೊಲೇರ ಹೊನ್ನಯ್ಯ ಹರಳಯ್ಯ ಚನ್ನಯ್ಯ
ಕಲ್ಯಾಣದಲ್ಲಿ ಇರುವಾರು |

ಕಟ್ಟಿಗೆ ಸಂಗಯ್ಯ ನುಲಿಗೆಯ ಚಂದಯ್ಯ
ಅಂಬುಗರ ಚೌಡಯ್ಯ ಇರುವಾರು |

ಲಕ್ಕುಸ್ಸ ಮ್ಯಾಲೆ ತೊಂಬತ್ತಾರು ಸಾವುರ
ಇಂತಪ್ಪ ಸರಣಾರು ಅಲ್ಲಿ ಇರುತಾರೆ | ೨೦

ಒಂದು ಜಿನ ನೀಲಮ್ಮ ಏನಂತ ಹೇಳುತಾರು
"ಬಸವಯ್ಯ ನಿಮಗೆ ಸರಣಂದೆ" |

ಬಸವಯ್ಗೆ ಕೈಯ ಮುಗಿದು ನೀಲಮ್ಮಾಜಿ
ಏನಂತ ಆಗ ಹೇಳುವಾರು |

"ನಿಮ್ಮ ಸರಣ ಸಂತತಿಗೆಲ್ಲ ಎಡೆಸಾಧ್ನೆ ಮಾಡಬೇಕು
ಕರುಣಾರೆ ಅಪ್ಪಣೆ ಕರುಣೀಸಿ" |

"ನಮ್ಮ ಸರಣರ ಸುದ್ದಿ ನಿನಗಲ್ಲ ನೀಲಮ್ಮ
ದೊಡ್ಡವರ ಸುದ್ದಿ ನಮಗ್ಯಾಕೆ |

ಒಬ್ಬ ಜಂಗುಮ್ರ ಒಪ್ಪುಸೋದೆ ಬೋಕಷ್ಟ
ಲಕ್ಷದ್ಮೇಲೆ ತೊಂಬತ್ತಾರು ಸಾವ್ರ | ೩೦

ಲಕ್ಷುದ್ಮೇಲೆ ತೊಂಬತ್ತಾರು ಸಾವುರ ಗಣಗಳಿಗೆ
ನೀ ಭೋಜಣ ಮಾಡಿಸೋದು ನಿಜುವೇನ" |

"ತಮ್ಮಿಂದ ಅಪ್ಪಾಣೆ ಆದಾರೆ ನನಸ್ವಾಮಿ
ಅಂತೆ ಸೇವೆಯ ನಾನು ಮಾಡುತೀನಿ" |

"ನೀ ಮಾಡೂವಂತ ಬಗೆಯಾ ಯಾವ್ತಾರ ನಡಸೂವೆ
ನಡ್ಸುವಂತ ಬಗೆಯ ಒಡೆದೇಳೆ" |

"ಒಕ್ಕಳಕ್ಕಿ ಆಕಿ ಒಂದೇ ಮಾನ ಬ್ಯಾಳೆ
ಒಂದೇ ಬದನೆಕಾಯಿ ಹಾಕುತೀನಿ |

ಲಕ್ಷದ ಮ್ಯಾಲೆ ತೊಂಬತ್ತು ಸಾವುರ
ಜಂಗುಮ್ರುಗೆ ಎಡೆಸಾಧ್ನೆ ಮಾಡುತೀನಿ" | ೪೦

"ನಿನ್ನ ಸಕ್ತಿಯಲ್ಲಿ ನಮಗೆ ನಂಬುಕಿಯಿಲ್ಲ
ನಿನ್ನದೊಂದು ಸತ್ಯ ನೋಡಬೇಕು |

ಒಂದು ಕೊಳಗ ಬತ್ತ ನಾವಳದು ಕೊಡುತೀವಿ
ಅದಕ್ಕಿಯನ್ನೆ ಮಾಡಿ ನೀ ತರಬೇಕು |

ಬತ್ತವ ಅಳದಂತ ಕೊಳಗದಲಿ ಅಳೆದಾರೆ
ಸರಕ್ಕಿ ಬಂದ್ರೆ ನಾವು ಒಪ್ಪುತೀವಿ" |

ಹಂಗಂತ ಹೇಳಿದರು ಬಸವಣ್ಣ ನೀಲಮ್ಮ
ಅವರಂತೆ ಬತ್ತವಳ್ಳು ಕೊಡುತಾರೆ |

ಒಕ್ಲುಗರ ಮುದ್ದಪ್ಪ ಕರಸಿದರು ಬಸವಣ್ಣ
ಅವ್ರ ಮಡ್ದಿ ಮುದ್ದಮ್ಮನ ಕರೆಸಿದರು |

"ಗಂಡ ಹೆಂಡಿರು ಇಬ್ರು ರಾಜ ಕಣುಜದ ಒಳುಗೆ
ಒಂದು ಕೊಳುಗ ಬತ್ತಾವ ಅಳಿಯೀರಿ" |

ಸರಣ ಮುದ್ದೇಗೌಡ ಸರಣಿ ಮುದ್ದಮ್ಮ
ಅಳ್ಳು ಕೊಳಗ ಬತ್ತಾವ ಕೊಡುತಾರೆ |

ಅದನು ನೀಲಮ್ಮ ಬಿಡ್ದಿಗೆ ತಕ್ಕೊಂಡೋಗಿ
ಮೂರುಮಂದಿ ಸರಣಾರ ಕರೆದಾರು |

"ಕೊಟ್ಟುಣ್ಣಿ ಪುಟ್ಟಮ್ಮ ನೀರೀನ ಮಲ್ಲಮ್ಮ
ಎಣ್ಣೇಯ ಚನ್ನಮ್ಮ ಬೇಗ ಬನ್ನಿ |

ಸರಣರಿಗೆ ನಾಳೆ ಎಡೆಸಾಧ್ನೆ ಮಾಡಬೇಕು
ಅಕ್ಕಿ ಮಾಡಿ ತನ್ನೀರಿ ಶರಣಾರೆ" |

ಸಿವಸಿವ ಎನ್ನೂತ ಮೂರು ಮಂದಿ ಸರಣಾರು
ಶಿವನ ಪಂಚಾಕ್ಷರೀಯ ಜಪಿಸೂತ |

ಐದೆ ಕುಟ್ಟೀಗೆ ಅಕ್ಕಿ ಮಡಿಯನ್ನೆ ಮಾಡಿ
ನೀಲಮ್ಮನವ್ರ ಬಿಡದೀಗೆ ಕೊಡುತಾರೆ |

ಅಕ್ಕಿಯನ್ನೆ ತಗುದು ಬಸವಯ್ಯ ಬಳ್ಗೆ ಬಂದು
ತೊಳಿಸಿದಕ್ಕೀಯ ಅಳಿದಾರು |

ಕೊಳಗ ಬತ್ತಾಕೆ ಕೊಳಗ ಅಕ್ಕಿಯಾಗಿ
ಸೇರು ಪಾವಕ್ಕಿ ಮಿಗುಲಾದೊ |

ಸೇರು ಪಾವಕ್ಕಿ ಮಿಗುಲಾದ ಕಾರ್ಣದಿಂದ
ನಮ್ಮ ಬಸ್ಣಣ್ಣ ಏನಂದಾರು |

"ಸಮಕ್ಕಿ ಬಂದಾವು ಸರಕ್ಕಿ ಬಂದಾವು
ಇಲ್ಲಿ-ಸೇರುಪಾವಕ್ಕಿ ಮಿಗುಲಾದೊ" |

ಶಿವ ಶಿವ ಎನ್ನೂತ ಶಿವಧ್ಯಾನ ಮಾಡೂತ
ತಮ್ಮ ತಲೆಯನ್ನೆ ಸ್ವಾಮಿ ತೂಗುವಾರು |

ತಲೆಯನ್ನೆ ತೂಗುತ ಬಸವಣ್ಣೇನಂದಾರು
ಸರಣರಿಗೆ ಎಡೆಸಾಧ್ನೆ ಮಾಡಬೋದು |

ಸರಣರಿಗೆ ಎಡೆಸಾಧ್ನೆ ಮಾಡಬೋದು ಅನುತ್ಹೇಳಿ
ಮಾಲೆ ಬರೆದಾಗ ಕೊಡುತಾರೆ |

ಆಗ ನೀಲಮ್ಮ ತಾಯಿ ತಮ್ಮ ಬಿಡದೀಗೆ ಬಂದು
ಕುಂಬಾರ ಗುಂಡಯ್ನ ಕರಸಿದರು |

ಕುಂಬಾರ್ರ ಗುಂಡಯ್ಯ ಶಿವಶಿವಾ ಅನುತ್ಹೇಳಿ
ಗುರುಮಠಕೆ ಸಾಗಿ ಬರುತಾರೆ |

"ತಾಯಿ ನೀಲಮ್ಮ ಸರಣು ನಿಮ್ಮ ಪಾದಕೆ ಸರಣು
ನಿಮ್ಮೀರ್ಪಾಕ್ಷಿ ಲಿಂಗಾಕೆ ಸರಣಂದೆ |

ಏನು ಕಾರಣ ನಮ್ಮ ಕರಸಿದಿರಿ ಮಾತಾಯಿ
ಅಪ್ಪಣೆ ಕೊಡಿಸಿ ದಯದಿಂದ" |

"ಸರಣರಿಗೆಡೆ ಮಾಡಬೇಕು ಸರಣ ಗುಂಡಯ್ಯನೋರೆ
ಒಂದು ಪಾತ್ರಾವ ನೀ ಮಾಡಿ ಕೊಡಬೇಕು |

ನೋಡೋರ ಕಣ್ಗೆ ಒಂದೆ ಪಾತ್ರೆಯಂಗಿದ್ದರೂ
ಅದ್ರೊಳ್ಗೆ ಒಂಬತ್ತು ಹೊರುಕೆ ಇರಬೇಕು |

ಪಾತ್ರೆ ಮಾಡುವಾಗ ಮುಟ್ಟುತಟ್ಟು ಸೋಕದಂತೆ
ಬೆಂಕೀಲಿ ಬೇಯಿಸದೆ ತರಬೇಕು |

ಮಾಡೀದ ಮಡಕೇಯ ಮಾಡಿದಂಗೆ ತಂದು
ಹಸಿಯ ಮಡಕೇಯ ಕೊಡಬೇಕು |

ಹನ್ನೆರಡೊರುಸದ್ಗಂಟ ಇನ್ನು ಪಾತ್ರೆ ಕೊಳ್ಳದಂಗೆ
ಅದರಲ್ಲೆ ಅಡುಗೆ ಹೂಡಬೇಕು |

ಒಂದು ಪಾತ್ರೇಲಿ ಮಾಡಿದಂತ ಅಡಿಗೆ
ಲಕ್ಷುದ್ಮೇಲೆ ತೊಂಬತ್ತು ಸಾವುರ |

ಲಕ್ಷುದ್ಮೇಲೆ ತೊಂಬತ್ತು ಸಾವುರ್ಮಂದಿ ಸರಣಾರು
ಉಂಡು ಮಿಕ್ಕಿದಂತ ಪರುಸಾದ |

ಉಂಡು ಮಿಕ್ಕೋದಂತ ಪರಸಾದನೆಲ್ಲ
ಕಲ್ಲು ಬಂಡಿಗೆ ತುಂಬೀಸಿ |

ಕಲ್ಲು ಬಂಡೀಗೆ ತುಂಬೀಸಿ ಅದನೆಲ್ಲ
ಕೈಲಾಸ್ಕೆ ನಾನು ಕಳುಗೂವೆ" |

ಹಂಗಂದ ಮಾತ ಕೇಳಿದರು ಗುಂಡಯ್ಯ
ಅಂತೆ ಆಕಾಸ ನೋಡುತಾರೆ |

ಹರನೀಗೆ ಸರಣು ಗುರುವೀಗೆ ಸರಣು
ಸರಣಾರಿಗೆ ಸರಣು ಸರಣಂದ |

ಗಳುಗೆ ಒಂದಾಗನಿಲ್ಲ ಒಂಬತ್ತು ಹೊರಕೆ
ಮಡಕೇಯ ಮಾಡಿ ಕೊಡುತಾನೆ |

ನೀಲಮ್ಮ ತಾಯೀಗೆ ಮೇಲಾದ ಹೆಚ್ಚಾಳ
ಇಂತೆ ಮಡಕೆಗೆ ಮೊದಲು ಸರಣಂದು |

ಒಲೆಯ ಹೂಡಿ ತಾಯಿ ಮಡಕೇಯ ಮಡಗುತಾಳೆ
ಬಗೆಬಗೆ ಅಡುಗೆ ಪಡುಸವ್ವೆ |

ಒಂದು ಜಿನವಲ್ಲ ಒಂದು ತಿಂಗಾಳಲ್ಲ
ವರುಸೊಂಬತ್ತು ಕಾಲ್ಲೂ ಎಡೆಸಾಧ್ನೆ |

ವಂಚುಣೆ ಇಲ್ಲದಂಗೆ ಒಲುವರ ಇಲ್ಲದಂಗೆ
ಸಮವಾಗಿ ಸರಣರಿಗೆ ಎರಿದಾರು |

ಕೇಳಿದಂತೆ ಊಟ ಅವ್ರು ಕೇಳಿದಂತೆ ಶಿವಪೂಜೆ
ಹೆಚ್ಚಾಳದಿಂದ ನಡೆಸಿದರು |

ಹನ್ನೆರಡು ವರುಸ ಇನ್ನಿಲ್ಲ ಅನ್ನುವಂಗೆ
ಎಡೆಸಾಧ್ನೆ ತಾಯಿ ನಡಿಸಿದರು |

ತಾಯಿ ನೀಲಮ್ಮನವರು ಮಾಡುವಂತ ಸೇವಾರ್ತಿ
ಸಂಗುಮೇಸನ ಪಾದ್ಕೆ ಅರುವಾದೊ |

ಬಸವಣ್ಣನ ಭಕ್ತಿಗೆ ನೀಲಮ್ಮನ ದುಡಮನಕೆ
ಸಂಗುಮೇಸ್ವುರ ಏನು ನುಡಿದಾರು |

"ಕೇಳೀದವಿಷ್ಯಾರ್ಥ ಕೊಡುತೀವಿ ನೀಲಮ್ಮ
ಹೆಚ್ಚಾಳದಿಂದ ನಡೆಸೀರಿ" |

ಹಂಗಂದ ಮಾತ ಕೇಳಿ ಬಸವಣ್ಣನೋರು
ಭಾರಿ ಯೋಚುನೆಯ ಮಾಡುತಾಗೆ |

ಆರುಸಾವ್ರ ಗಣಗಳ ನಾ ತರಬೇಕು ಅನುತ್ಹೇಳಿ
ಸಂಗುಮೇಸನಿಗೆ ಅರುವ ಕೊಡುತಾನೆ |

ಬಸುವಣ್ಣನ ಭಕ್ತಿ ಶಿವನೀಗೆ ಅರುವಾಗಿ
ಆಸುರ್ವಾಣಿ ಆಗತಾನೆ ಕರೆದಾರು |

ಗುರುವೀನಾಗ್ನೀಗೆ ಬಂದಳಾಸುರ್ವಾಣಿ
ಸಂಕರಗೆ ಸರಣು ಎನುವಾಳು |

"ಯಾಕಾಗಿ ನನ್ನ ಕರುಸ್ತಿ ಸಂಕರನೆ
ಏನೆಂದು ನನಗೆ ಒಡೆದ್ಹೇಳಿ" |

"ಕಲ್ಯಾಣದಲ್ಲಿ ಕರ್ತು ಬಸವಣ್ಣ
ಆರು ಸಾವ್ರ ಮುನುಗಳ ಅರುಸವ್ವೆ |

ಉತ್ತಾರ ದೇಸಾದ ಮಾಂಡವಿ ಪುರದಲ್ಲಿ
ಊಳ್ಳೆಯ ಮನೆಯು ಇರುವಾದು |

ಅಲ್ಲಿ ಮೂರೊತ್ತು ಶಿವಪೂಜೆ ಎರಡೊತ್ತು ಬೋಜುಣ
ಪ್ರತಿಕಾಲದಲ್ಲಿ ನಡೆವಾದು |

ಪ್ರತಿಕಾಲದಲ್ಲಿ ನಡೆಸುವನು ಮಾದೂರಾಯ
ಅಲ್ಲಿ ಜಂಗಮರು ಇರುವಾರು |

ಅಲ್ಲಿರುವ ಜಂಗುಮರ ಕರಕೊಂಡು ಬರುವುದಕೆ
ಬಸವಣ್ಣೆ ನೀನು ತಿಳಿಸಮ್ಮ" |

ಸ್ವಾಮಿ ಹೇಳಿದ ಮಾತ ಕೇಳವುಳೆ ಆಸುರ್ವಾಣಿ
ಬಸವಣ್ಣೆ ಬಂದು ತಿಳಿಸಿದಳು |

ಆಗ ಬಸವಣ್ಣ ಬಾಳ ಸಂತಸದಿಂದ
ಮಾಂಡವಿ ಪುರಕೆ ಹೊರಟಾರು |

ಮಾಂಡವಿ ಪುರಕೆ ಹ್ಯಾಗೆ ಹೋಗಲಿ ಬೇಕು
ಯಾಪಾರಿಯಾಗಿ ಹೋಗಬೇಕು |

ದಂಡುವೀರಿ ಎಂಬ ರಾಷ್ಟಾನ ಕರದು
ಅವ್ರು ದಂಡವನೆ ಮಾಡಿದರು ಬಸವಣ್ಣ |

ಅಷ್ಟದಿಕ್ಪಾಲಕರ ತಕ್ಕಡಿ ದಾರ ಮಾಡಿ
ಸೂರ್ಯ ಚಂದ್ರಾದಿಗಳೆ ತಟ್ಟೆ ಮಾಡಿದರು |

ಇಪ್ಪಲಿ ರಾಸ್ಮಿ ಜೀರಿಗೆ ಮೆಣಸು
ಯಾಲಕ್ಕಿ ಲವಂಗ ಪಡಿದಾರು |

ಹಸುವೆಯು ಚೀಲದಲ್ಲಿ ತುಂಬುಕೊಂಡು ಬಸವಣ್ಣ
ಯಾಪಾರಿಯಾಗಿ ಹೊರುಟಾರು |

ಮಾಂಡವಿಯ ಪುರಕೆ ಬಂದರು ಬಸುವೇಸ
ಬಾಗುಲಲ್ಲಿ ಅವರ ತಡದಾರು |

"ಯಾರಪ್ಪ ನೀನು? ಏನು ಕೆಲಸಾವೆ"ಂದು
ಪಾರ್ವರು ತಡೆದು ಕೇಳುತಾರೆ |

"ಅಯ್ಯ ನಾನು ಯಾಪಾರಗಾರಿ ಗಾಸು ಮಾಡಲಿಬ್ಯಾಡಿ
ಯಾಪಾರುಕ್ಕಾಗಿ ನಾನು ಬಂದಿವಿನಿ" |

"ಏನು ಯಾಪಾರ ನಿಮುದು ಹೇಳಿ ಹೋಗಿ" ಎಂದು
ಬಾಗುಲಲ್ಲಿ ಅವರ ಕೇಳುತಾರೆ |

"ಲವಂಗ ಜಾಯಿಕಾಯಿ ವಾದಕ್ಕಿ ಪತ್ರೆ
ಯಾಲಕ್ಕಿ ಸುಂಟಿ ತಂದೀವಿ |

ನಮ್ಮ ಪಟ್ಟಣದಲ್ಲಿ ನಮ್ಮ ದೊರೆಯಾಗ್ನೆ
ತೂಕ ಮಾಡಿ ನಿಮ್ಮ ಬುಡಬೇಕು" |

"ನಿಮ್ಮ ಪದ್ಧತಿಯಂತೆ ನಡೆಯಿರಿ" ಅನುತ್ಹೇಳಿ
ತೂಕಕೆ ನಿಂತರು ಬಸುವೇಸ |

ಲೋಕಕ್ಕೆ ದೊಡ್ಡೋರ ತೂಕಾಕೆ ಹಾಕಿದರೆ
ಐದು ಪಂಚೇರು ಇಳಿದಾರು |

ಲೆಕ್ಕಾವ ಬರುಕೊಂಡು ನಾಮಾಂಕ್ತ ಬರುಕೊಂಡು
ಪಟ್ಟಣಕೆ ಅವರ ಬುಡುತಾರೆ |

ಬೀದಿ ಬೀದಿಗಾಣೆ ವೇಪಾರ ಸಾರೂತ
ಅಲ್ಲಲ್ಲಿ ಯಾಪಾರ ಮಾಡುತಾರೆ |

ಯಾಪಾರ ಸಾಪಾರ ಮಾಡುವಂತ ಕಾಲದಲ್ಲಿ
ಅವರ ಮಜ್ಜನದ ಹೊತ್ತು ಆದೀತು |

ಯಾಪಾರ ನಿಲ್ಲಿಸಿ ಸತ್ಯಾದ ಮೂರುತಿ
ಅವುರು ಬಿನ್ಯಕೆ ಸ್ವಾಮಿ ಹೊರುಟಾರು |

"ನಾವು ತಂದಿರೊ ಬುತ್ಯ ನಾವೆ ಉಣ್ಣಲಾಗ್ದು
ಒಚ್ಚು ಜಂಗೂಮ ಮೂರ್ತ್ಯ ನೋಡಬೇಕು |

ಜಂಗಮರ ಬೀದಿ ಎಲ್ಲೀದೆ?" ಅನುತ್ಹೇಳಿ
ಹಾದಿ ಬೀದೀರ ಕೇಳೀರು |

"ಜಂಗುಮರು ಇಲ್ಲಿಲ್ಲ ಜೋಗೇರು ಇಲ್ಲಿಲ್ಲ
ಊಳ್ಳೆಯ ಮನೆಗೆ ದಯಮಾಡಿ" |

ಊಳ್ಳೆಯ ಮನೆಗೆ ಕೇಳಿ ಬಂದ ಬಸವಣ್ಣ
ಪಾರದವನಲ್ಲಿ ತಡೆದಾನು |

ಪಾರದವನಲ್ಲಿ ತಡೆದು ಕೇಳಲು ಬಸವಣ್ಣ
"ಬಂದೆ ಜಂಗುಮರ ನೋಡಾಕೆ |

ತಂದಿರೊ ಬುತ್ಯ ದ್ರೀಯಕೆ ಸಲುಸಬೇಕು
ಮೊದಲು-ಜಂಗುಮರ ಪೂಜೆ ಆಗಬೇಕು" |

"ಊರು ಯಾವುದು ನಿಮುದು? ಕೇರಿ ಯಾವುದು ನಿಮುದು?
ಸಾರುವಂತ ನಾಮಾಂಕ್ತ ಯಾವುದಯ್ಯ?" |

"ನಾನು ಕಲ್ಯಾಣಪಟ್ಟುದಿಂದ ಬಂದೆನಪ್ಪ
ನಾಮಾಂಕ್ತ ನನದು ಬಸಸೆಟ್ಟಿ |

ಬಸಸೆಟ್ಟಿ ಕಾಣೆರಪ್ಪ ಬಿನ್ಯವಳಿಯ ಬೇಕು
ಜಂಗಮರ ಸನ್ನಿದಿಗೆ ಹೋಗಬೇಕು" |

"ನಮ್ಮ ದೊರೆ ಆಗ್ನಿ ಯಾರನ್ನು ಕೂಡೋದಿಲ್ಲ
ನೀವತ್ಲಾಗೆ ಸ್ವಾಮಿ ದಯಮಾಡಿ" |

"ಹಿಡಿ ಮುತ್ತ ಕೊಡುವೇನು ಹಿಡಿರತ್ನ ಕೊಡುವೇನು
ಒಂದು ಗಳುಗೆ ನನ್ನ ಬುಡಿರಪ್ಪ" |

ಮುತ್ತು ರತ್ನ ಎಂಬ ಆಸೆಗೆ ಪಾರದವನು
ಒಂದು ಗಳುಗೆ ಕಾಲ ಬುಡುತಾನೆ |

ಆರುಸಾವ್ರ ಗಣಗಳು ಆಲ್ದಮರ್ದ ಬುಡದಲ್ಲಿ
ಎಳಬಿಸುಲ ಕಾಯ್ತಾ ಮನುಗವುರೆ |

"ಸರಣಾರೆ ನಿಮ್ಮ ಪಾದಾಕೆ ಸರಣಾರ್ತಿ
ಒಂದು ಬುತ್ತಿ ನಮ್ಮ ಬಳಿಯುಂಟು |

ಒಂದು ಬುತ್ತಿ ನಮ್ಮ ಬಳಿಯುಂಟು ಮಾನ್ಯರೆ
ಶಿವು ಪೂಜ್ಗೆ ನೀವು ಬರಬೇಕು" |

"ಅಯ್ಯ-ಒಬ್ಬಿಬ್ಬ ಬರುವುದು ತರವಲ್ಲ ಕಾಣಪ್ಪ
ಆರು ಸಾವ್ರ ಗಣಂಗಳು ಇಲ್ಲುಂಟು" |

"ಆರು ಸಾವ್ರ ಗಣಂಗಳು ವಾಕುವಾಗಿ ಬನ್ನಿರಿ
ನಮ್ಮ ಮೀಸಲ ಅಳಿದು ಬರಬೇಕು" |

"ತಂದೀರೋದು ನೀನು ಒಂದೆ ಬುತ್ತಿಯಲ್ಲೊ
ಆರು ಸಾವುರಕೆ ಸಾಲೊ ಬಗೆಯೆಂಗೊ" |

"ಹಂಗನ್ನ ಬ್ಯಾಡಿರಪ್ಪ ಸರಣಾರೆ ಬನ್ನಿರಪ್ಪ
ಆರು ಸಾವ್ರಾಕು ನಾನು ಎರಿವೇನು" |

ಭಕ್ತನಾಡಿದ ಮಾತ ಸರಣಾರೆಲ್ಲ ಕೇಳಿ
ಶಿವಶಿವಾ ಎಂದು ಹೊರಟಾರು |

ಗಂಗೆಸ್ನಾನವ ಮಾಡಿ ಮೀದು ಮಡಿಗಳ ಉಟ್ಟು
ಎಲ್ಲ ಶಿವುಪೂಜ್ಯಕೆ ಕುಳಿತಾರು |

ಆಗ ಬಸವಣ್ಣನವರು ಜಂಗೂಮರೀಗೆಲ್ಲ
ಶಿವುಪೂಜೆಯನ್ನು ನಡಸಿದರು |

ಆಲಾದ ಎಲೆಯ ಬುಡುಸಿ ಆಲಾಗ್ರ ಮೇಲಾಗ್ರ
ಕೀಲು ಸ್ಯಾವೀಗೆ ತನಿಯಾಲು |

ಹಪ್ಪ ಉಪ್ಪಿನಕಾಯಿ ಮಾಗಳಿ ಬೇರಂತೆ
ತುಪ್ಪ ತೊವ್ವೆಗಳು ಮಿಗುಲಾದೊ |

ಸಂಗಮೇಶನ ಪಾದಾವ ನೆನೆಯೂತ
ಬುತ್ತೀಯ ಬಿಚ್ಚಿ ಮಡುಗವುರೆ |

ಸೋಮ್ಯಾಣೆ ಬೆಳಿಗಿ ಮಂಗಳಾರ್ತಿ ಕಸ್ಸಿ
ಬುತ್ತಿಗಾರತಿಯ ಬೆಳಗಿದರು |

"ತಂಗಾಳು ಬುತ್ತಿಯೆಂದು ಸಂದೇಗ ಪಡುಬ್ಯಾಡಿ
ಬಿಸಿಬಿಸಿ ಭೋಜನವ ಬಡಿಸುವೆ" |

ಸತ್ಯಾದ ಮೂರ್ತಿ ಕಲ್ಯಾಣ್ಣ ಬಸವಣ್ಣ
ಜುಮ್ಮೇರೈ ಹಣ್ಣೀನ ತುತ್ತುಗಳ |

ಜಮ್ಮೇರೈ ಹಣ್ಣೀನ ತ್ಯಾರಕೆ ತುತ್ತುಗಳ
ತಗತಗುದು ಸ್ವಾಮಿ ಬಡಿಸಿದರು |

ಪಂತಿಗೆಲ್ಲ ಎರದು ಮಂಗಳಾರ್ತಿ ಮಾಡಿ
ಉಳೇ ಎಂದು ಶಿವನ ನೆನಿದಾರು |

ಶಿವನ ಮೈಮಾದಿಂದ ಬಗೆಬಗೆ ಊಟವಾಗೆ
ಉಪರಿಚ್ಚಿಸಿದ ಊಟ ಬೆಳೆದಾವು |

ಊಟವ ಮಾಡಿಕೊಂಡು ಸರಣರೆಲ್ಲ ಸೇರಿ
ಸಾಲು-ಮಂಟಪದ ಬಳುಗೆ ಬರುತಾರೆ |

"ನಾನು ಮಾಡೀದ ಸ್ಯಾವೇಲಿ ಏನೇ ತಪ್ಪಿದ್ದಾರು
ಮನ್ನೀಸಬೇಕು" ಅನುತಾರೆ |

"ನಿನ್ನಲ್ಲಿ ವಂಚಾನ ಇಲ್ಲಾವೊ ಘನಸರಣ
ಒಪ್ಪೀತು ನಮಗೆ ನಿನಭಕ್ತಿ |

ನಾಡು ಯಾವುದು? ಸರಣ ನಾಮಾಕರ್ನವೇನು?
ನಿನ್ನ ಗುರು ಯಾರು?" ಎಂದು ಕೇಳಿದರು |

"ನಮ್ಮ ಪಟ್ಟಣ ಬುದ್ದಿ ಕಲ್ಯಾಣಪಟ್ಟಣ
ನನ್ಹೆಸರು ಬಸಸೆಟ್ಟಿ ಅನುತಾರೆ |

ನನ್ಗೆ ದೀಕ್ಷೆ ಮಾಡೀದ ಗುರು ಕಲ್ಯಾಣ್ಣ ಬಸವಣ್ಣ
ಅವರೂ ತಾನೆ ನಮ್ಮ ಗುರುದೇವ!" |

ಬಸವಣ್ಣಾಡಿದ ಮಾತ ಕೇಳಿದರು ಮುನುಗಳು
ಸಂತೋಷ ಪಟ್ಟಾರು ಮನುದಲ್ಲಿ |

"ಶರಣ ಬಸಸೆಟ್ಟಿ ನಿಮಗುರು ಬಸವಣ್ಣನ
ನೋಡಬೇಕು ಅನುವಂತ ಮನಸುಂಟು" |

"ನೋಡಬೇಕು ಅಂದ್ರೆ ಸ್ವಾಮಿ ಸರಣಾರೆ
ಕರುಕೊಂಡೋಯ್ತೀನಿ ದಯಮಾಡಿ" |

"ನಾವೇನೊ ಬರುತೀವಿ ಈ ಪಟ್ಟಣ ಬಂದೋಬಸ್ತಿ
ನೀನು-ಹ್ಯಾಗೆ ಕರುಕೊಂಡು ಹೋಗುತೀಯೊ" |

"ಯಾರೀಗೂ ಕಾಣದಂಗೆ ನಾ ಕರುಕೊಂಡೋಗುತೀನಿ
ದಯಮಾಡಿ ಸ್ವಾಮಿ ಸರಣಾರ" |

ಹಸುಬೆ ಚೀಲದ ಬಾಯಿ ತಗುದರಂತೆ ಬಸವಣ್ಣ
ಅಲ್ಲಿಗೊಬ್ಬಬ್ಬರಾಗಿ ಇಳದಾರು |

ಹಸುಬೆ ಚೀಲದೊಳಗೆ ಇಳದಾರು ಸರಣಾರು
ಬಿಲ್ವತ್ರೆ ದಳುವಾಗಿ ಕುಂತವ್ರ |

ಆರು ಸಾವ್ರ ಗಣಗಳ ಬಿಲುಪತ್ರೆ ದಳಮಾಡಿ
ಮಾಂಡವಿ ಪುರವ ಬಿಡುತಾರೆ |

ಮಾಂಡವಿ ಪುರವ ಬಿಟ್ಟು ಬರುವಾಗ
ಬಾಗುಲಲಿ ಕಾವುಲೋರು ತಡೆದಾರು |

"ಯಾರಪ್ಪ ನೀನು ಹಂಗೆ ಹೋಗೋ ಬ್ಯಾಡ
ತೂಕಮಾಡಿಸಿಕೊಂಡು ಹೋಗಪ್ಪ" | ೨೮೦

"ನೆನ್ನೆ ಹೋದವನು ಬುದ್ಧಿ ಬಸಸೆಟ್ಟಿ ನಾನು
ಯಾಪಾರ ಮುಗಿಯಿತು ಹೊರಟೇನು" |

ಆಗ ಬಾಗಲಲ್ಲಿ ಚಿಂತಾಲೆಯಲ್ಲಿಟ್ಟು
ತೂಕ ಮಾಡುತಾರೆ ಶರಣಾನ |

ತೂಕ ಮಾಡಿದರು ಶರಣ ಬಸುವಣ್ಣನ
ತೂಕ-ಒಂದು ಪಂಚೇರು ಇಳುದೋಯ್ತು |

"ಐದು ಪಂಚೇರು ನೀನಿದ್ದಲ್ಲೊ ಬಸಸೆಟ್ಟಿ
ಒಂದು ಪಂಚೇರು ಕಡಮ್ಯಲ್ಲೊ?" |

"ನನ್ನಲ್ಲೊಂದು ಬುತ್ತಿ ಇತ್ತು ಕಾಣೆರಪ್ಪ
ಆ ಬುತ್ತೀಯ ತೂಕ ಸೇರಿತ್ತು" | ೨೯೦

ಅವ್ರು-ಆರುಸಾವ್ರ ಮುನಿಗಳ ಹಸುವೆ ಚೀಲ್ದಲ್ಲಿ ಮಡಗಿ
ಕಲ್ಯಾಣ ಪಟ್ಟಣಕೆ ಬರುತಾರೆ |

ಕಲ್ಯಾಣ್ದ ಸನ್ನಿಪುಕೆ ಬಂದಾಗ ಬಸವಣ್ಣ
ಜಂಗುಮರು ಒಳುಗೆ ಹಸುದೋದ್ರು |

"ಬಿಸುಲೀನ ತಾಪ ತಾಳಲಾರೊ ಬಸಸೆಟ್ಟಿ
ಹಸುವೆ-ಚೀಲ್ದಿಂದ ಈಚೆಗಿರಿಸಯ್ಯ" |

ಜಂಗಮರ ಗಲುಗ ಕೇಳಲಾರ್ದೆ ಬಸವಣ್ಣ
ಹಸುವೆ ಚೀಲಾವ ಒದುರೀದ |

ಬಿಲ್ವತ್ರೆ ದಳುವೆಲ್ಲ ಜಂಗುಮರೆ ಆದುರಲ್ಲ ೩೦೦
ಕಲ್ಯಾಣಕೆ ಎಲ್ಲಾ ಹೊರುಟಾರು |

ಅಕ್ಕ ನಾಗಮ್ಮನವರು ಕಂಡ ಕೂಡಲೆ ಶಿವನೆ
ಅಣ್ಣಯ್ಯಗಾರತಿಯ ತಂದಾರು |

"ಆರತಿ ನನಗ್ಯಾಕೆ ? ಭಾರಿ ಭಾರಿ ಮುನಿಗಳು
ಆರುಸಾವ್ರ ಬಂದವ್ರೆ ಬೆಳಗಮ್ಮ" |

ಕಳಸ ಕನ್ನಡಿ ಸೈತ ನಾರೀ ಮುತ್ತೈದೇರು
ಜಂಗುಮರಿಗಾರ್ತಿ ಬೆಳಗಿದರು |

ಆಗ ಬಸವಣ್ಣನವರು ತಮ್ಮ ಜಂಗುಮ್ರ ಸಂಗಾಕೆ
ಆರುಸಾವ್ರ ಜಂಗುಮರ ಸೇರ್ಸಿದರು |

ಆರು ಸಾವ್ರ ಜಂಗುಮರ ತಂದಾರು ಬಸವಣ್ಣ
ಜಂಗುಮರ ಸ್ಯಾವೆ ಘನಸ್ಯಾವೆ | ೩೧೦

ಲಕ್ಕುಸ್ಸ ಮ್ಯಾಲೆ ತೊಂಬತ್ತಾರು ಸಾವ್ರ
ಜಂಗುಮರು ಲೆಕ್ಕವಾಗಿ ಇರುತಾರೆ |

ಜಂಗುಮರ ವಾರ್ತಿ ಬಸವೇಶನ ಕೀರ್ತಿ
ಈ ಸಂದು ಇಲ್ಲೀಗೆ ಸಂಪೂರ್ಣಂ | ೩೧೪

ಉಳವೀ ಬಸವ

ಉಳವಿಯ ಹಾದೀಲಿ ಕವಳೆಯ ಮೆಳೆ ಭಾಳ
ತಿಂದೇನಂದರೆ ಹುಳಿ ಭಾಳ - ಉಳವೀ ಬಸವ
ಬಂದೇನಂದರ ಗಿರಿದೂರ |

ಘನಶರಣ ಹರಳಯ್ಯ

ಸುವ್ವಾ ಬಾ ಚನ್ನಬಸವಯ್ಯ ಸುವ್ವಿ | ಸೊಲ್ಲು |

ಆಳುದ್ದ ಜಲದಲ್ಲಿ ಒಂತೋಳು ಗಾತುರ ಪದ್ಮ
ಹೇಳುವೆನು ಬಸವಣ್ಣ ವಚನವ |

ಹತ್ತಾಳುದ್ದ ಜಲದಲ್ಲಿ ಎತ್ತಲಾರದ ಪದ್ಮ
ನಾ-ನೆತ್ತುವೆ ಬಸವಣ್ಣ ವಚನವ |

ಸತ್ಯುವಂತರ ಕತೆಯ ನೀವು ಭಕ್ತೀಲಿ ಕೇಳಿದರೆ
ನೀವೊತ್ತಿದ್ದ ಪಾಪ ಪರಿಯಾರ |

ಕತ್ತಲೆ ಹರಿದು ಕರ್ಮ ಹರಿದು ನಿಮ್ ಪಾಪ
ನಾಳೆ ಕತ್ತರಿಸಿ ಹೋದೊ ಪುಡಿಯಾದೊ |

ಕಲ್ಯಾಣ ಎನ್ನದ್ದು ನಲವತ್ತೆಂಟು ಯೋಜನ
ಆ ಕಲ್ಯಾಣ ಪಟ್ಟಣಕೆ ಬಿಜ್ಜಳರಾಜ | ೧೦

ಬಿಜ್ಜಳನ ದೊರೆತನ ಬಸವಣ್ಣನ ಗುರುಪೀಠ
ಆ ಕಲ್ಯಾಣಕೆ ಗುರು ನಮ್ಮ ಬಸವಣ್ಣ |

ಗುರುಗಳು ಬಸವಣ್ಣ ದೊರೆಯೆ ಬಿಜ್ಜಳರಾಜ
ಅವುನ್ಗದ್ದೆವೊಳುಗೆ ಕೊಂಡುಗ ಮಂಚಣ್ಣನ ದರ್ಬಾರು |

ಕೋಟುಗೊಬ್ಬ ಶರಣಾರು ಕುಲುಕೊಬ್ಬ ಭಕ್ತಾರು
ಇರುವರು ಕಲ್ಯಾಣ್ದ ಮಠುದಲ್ಲಿ |

ಆದಿ ಕಲ್ಯಾಣ್ದಲ್ಲಿ ಯಾವ್ ಯಾವ ಸರಣಾರು
ನಾವ್ಹೇಳುವೆವು ಸರಣಾರ ಶಿವುಕತೆಯ |

ಕಕ್ಕಯ್ಯ ಚಿಕ್ಕಯ್ಯ ಒಕ್ಕಲುಗರ ಮುದ್ದಯ್ಯ
ಕಿನ್ನರಿ ಬೊಮ್ಮಯ್ಯ ಸರಣರಲ್ಲಿವರು | ೨೦

ಕಿನ್ನರಿ ಬೊಮ್ಮಯ್ಯ ಅಂಬುಗರ ಚೌಡಯ್ಯ
ನಮ್ಮ ಕುಂಬಾರ ಗುಂಡಯ್ಯ ಸರಣರಲ್ಲಿರುವರು |

ಕುಂಬಾರ ಗುಂಡಯ್ಯ ಕುರುಬಾರ ಬೀರಪ್ಪ
ನಮ್ಮ ಮಡಿವಾಳ ಮಾಚಯ್ಯ ಸರಣರಲ್ಲಿರ್ಪುವಾರು |

ಮಡುವಾಳ ಮಾಚಯ್ಯ ಹಡಪದ ಅಂಪಣ್ಣ
ಈಡುಗರ ಕೊಂಡಯ್ಯ ಸರಣಾರಲ್ಲಿರುವರು |

ಈಡಿಗರ ಕೊಂಡಯ್ಯ ಕನ್ಗತ್ರಿ ಮಾರಯ್ಯ
ನಮ್ಮ ಕೊರಮಾರ ತಿಮ್ಮಯ್ಯ ಸರಣರಲ್ಲಿರುವರು |

ಕೊರಮಾರ ತಿಮ್ಮಯ್ಯ ನುಲಿಯ ಚಂದಯ್ಯ
ನಮ್ ದೇವಾಂಗ್ಪ ದಾಸಯ್ಯ ಸರಣರಲ್ಲಿರುವರು | ೩೦

ದೇವಂಗ್ಪ ದಾಸಯ್ಯ ತುರುಕರ ಪೀರಯ್ಯ
ನಮ್ಮ ವಡ್ಡಾರ ಮುದ್ದಯ್ಯ ಸರಣರಲ್ಲಿರುವಾರು |

ಇಂತ ಸತ್ಯವುಳ ಸರಣಾರು ಇನ್ನು ಇರುವರಪ್ಪ
ಅಲ್ಲಿ ಸತ್ಯಂತರ್ಕಾರು ಅವ್ರ ಮಠದಲ್ಲಿ |

ಕಣ್ಣಿನ ಒಳುಗೆಲ್ಲ ಕಡಜನ ಗೂಡ್ ಕಟ್ಟಿದೋರು
ಮೂಗಿನ ಒಳುಗೆಲ್ಲ ಮೂಗುತ್ತ ಬೆಳುದೋರು |

ಕಿವಿಯ ಕರ್ಣದ ಒಳುಗೆ ಸಿಬುಲಕ್ಕಿ ಮರಿ ಮಾಡಿದೋರು
ಬೆನ್ನೀನ ಮ್ಯಾಲೆಲ್ಲ ಬನ್ನಿಮರ ಸಾಕೋರು |

ಹೊಟ್ಟೆಯ ಮ್ಯಾಲೆಲ್ಲ ತೊಟ್ಟಿ ಮೆಳೆ ಬೆಳೆದವರು
ಹುಬ್ಬೀನ ಮ್ಯಾಲೆಲ್ಲ ದ್ರಬ್ಬೆಮೆಳೆ ಬೆಳೆದವರು | ೪೦

ಗಡ್ಡ ಮೀಸೆ ಒಳುಗೆ ಹಾವು ಚೇಳು ಸಾಕೋರು
ಕಂಕುನ ಒಳುಗೆ ಹೆಜ್ಜೇನ ಸಾಕೋರು |

ಎಡುದ ಕಂಕುಳ ಒಳುಗೆ ಕಿರುದೇನ ಸಾಕೋರು
ಈಬುತ್ತಿ ಧರುಸೋರು ಇರುವಾರು |

ರುದ್ರಾಕ್ಷಿ ಕಟ್ಟಿದೋರು ಭದ್ರಾಕ್ಷಿ ಕಟ್ಟಿದೋರು
ಜೋಳುಗೆಯ ಹೊತ್ತವರು ಇರುವಾರು |

ಕಾವೀಯ ಕಂತೇಯವರು ಇಂತೆ ಸರಣರಲ್ಲಿ
ನಮ್ಮಾದಿ ಹರಳಯ್ಯ ಸರಣಾರಿರುವರು |

ಆದಿ ಹರುಳಯ್ಯ ಮಾದಾರಿ ಚನ್ನಯ್ಯ
ನಮ್ ಹೊನ್ನಯ್ಯ ಚನ್ನಯ್ಯ ಸರಣಾರು |

ಇಂತಿಂತೆ ಸರಣಾರ ಕಟುಕೊಂಡು ಬಸವಣ್ಣೋರು
ಇವುರ್ಗುಪದೇಸ ಹೇಳ್ಕೊಂಡು ಇರುವಾರು |

ಇವುರ್ಗೆ ಗುರುಬೋದ್ನೆ ಹೇಳ್ಕೊಂಡು ಗುರುವಾಗಿ ಇರುವಾರು
ಓರಿಯರಿಗೆ ಹಿರಿಯೋರು ಬಸವಣ್ಣ |

ಹೆಂಗಸರ ಜನರಲ್ಲಿ ಸತ್ಯವುಳ್ಳವರು
ಯಾವ್ಯಾವ್ ಸರಣಾರು ಅಲ್ಲಿರುವಾರು |

ಯಾವ್ಯಾವ್ ಸರಣಾರು ಅಲ್ಲಿರುವರೆಂದಾರೆ
ಬಸವಣ್ಣೋರ ಮಡದಿ ನೀಲಮ್ಮ |

ಬಸವಣ್ಣೋರ ಮಡದಿ ದೆಸೆಯುಳ್ಳ ನೀಲಮ್ಮ
ಆ ಕಲ್ಯಾಣ ಪಟ್ಟಣಕೆ ಸಿವಸರಣೆ |

ಆ ನೀಲಮ್ಮಯ್ಯ ತಾಯಿ ಯಾಕೆ ಸರಣಾರು ಅಂದಾರೆ
ಒಕ್ಕಳಕ್ಕಿ ಹಾಕಿ ಒಂದ್ಮಾನ ಬ್ಯಾಳೆ ಹಾಕಿ |

ಒಂದು ಬದನೆಕಾಯಿ ಚಿತ್ತುರಿಸಿ ಆ ತಾಯಿ
ಲಕ್ಕಸ್ಪ ಮ್ಯಾಲೆ ತೊಂಬತ್ತಾರು ಸಾವುರ ಕೋಟಿ |

ಗಣಂಗಳಿಗೆ ಊಟುಕೆ ಪಡುಸಿ ಆ ತಾಯಿ
ಮಿಕ್ಕೊಕ್ಕುವ ಪರುಸಾದವನು ತಂದು |

ಮಿಕ್ಕೊಕ್ಕುದ ಪರಸಾದವನು ಕಲ್ಲು ಬಂಡೀಗೆ ಕಟ್ಟಿ
ಕಲ್ಯಾಣ್ದ ಬಾಗುಲ್ಗೆ ಹೂಡ್ಸುವರಂತೆ |

ಅದಕಾಗಿ ಮಾತಾಯಿ ನೀಲಮ್ಮ ಶಿವಸರಣೆ
ಸರಣಯರೆಲ್ಲೆಲ್ಲ ದೊಡ್ಡ ಶಿವಸರಣೆ |

ಬಸವಣ್ಣೋರ ತಂಗಿ ಅಕ್ಕನಾಗಮ್ಮಯ್ಯ
ಆ ಕಲ್ಯಾಣ್ದ ಪಟ್ಟುಣಕೆ ಪತುವಾರ್ತಿ |

ಆಕ್ಕನಾಗಮ್ಮ ತಾಯಿ ಯಾಕೆ ಪತುವಾರ್ತಿ ಅಂದರೆ
ಪುರುಷರ ಭೋಗ ಇಲುವಲ್ಲ |

ಪುರುಷರ ಭೋಗ ಇಲ್ಲದ ಹರುಸವುಳ್ಳ ನಾಗಮ್ಮ
ಹೆಂಗುಸರ ಜನುಗಳಿಗೆ ಉಪುದೇಸ |

ಹೆಂಗುಸರ ಜನುಗಳಿಗೆ ಉಪುದೇಸ ಹೇಳುಕೊಂಡು
ಗುರುಬೋದ್ನೆ ಕೊಟುಕೊಂಡು ಇರುವಾರು |

ಗುರುಮಂತ್ರ ಹೇಳುಕೊಂಡು ಶಿವುಮಂತ್ರ ಹೇಳುಕೊಂಡು
ಅಕ್ಕನಾಗಮ್ಮ ಮಾ ಪತುವಾರ್ತಿ |

ಹೆಂಗುಸರ ಜನರಲ್ಲಿ ಮತ್ಯಾರು ಸರಣಾರು ಅಂದರೆ
ನೀರೀನ ಬೋರಮ್ಮ ಘನಸರಣೆ |

ನೀರೀನ ಬೋರಮ್ಮ ಯಾಕೆ ಸರಣೆ ಅಂದಾರೆ
ಹೊತ್ತುನಂತೆ ಎದ್ದು ಈಬುತ್ತಿ ಕೊಳದಲ್ಲಿ |

ಹೊತ್ತುನಂತೆ ಎದ್ದು ಈಬುತ್ತಿ ಕೊಳುಕೋಗಿ
ಒಂದು ಬಿಂದ್ಗೆ ನೀರ ತರುವಾಳು |

ಒಂದು ಬಿಂದ್ಗೆ ನೀರ ತಂದು ಕಲ್ಯಾಣದಲ್ಲಿ ಮಡಗಿದರೆ
ಜಂಗುಮರಿಗೆಲ್ಲ ಅಡುಗೆ ಹದಗೂಡಿ |

ಜಂಗುಮರಿಗೆಲ್ಲ ಮೀಯಣವ ಮಾಡಿ
ಕೈಕಾಲು ಮೊಕುವ ತೋಳುದಾರು |

ಕೈಕಾಲು ಮೊಕುವ ತೊಳಿದಾರು ಜಂಗಮರು
ಊಟ ಮಾಡಿದ ಕೈಯ ಅಲುಕುವರು |

ಊಟ ಮಾಡಿದ ಕೈಯ ಅಲುಕಿ ನೋಡಿದರೆ
ತುಂಬೂದ ಬಿಂದ್ಗೆ ತುಂಬುದಂಗೆ |

ತುಂಬೂದ ಬಿಂದ್ಗೆ ತುಂಬುದಂತೆ ಇದ್ದುವಂತೆ
ಅದಕಾಗಿ - ಆ ನೀರಿನ ಬೋರಮ್ಮ ಘನಸರಣೆ |

ಕೊಟ್ಟಣದ ನನ್ನಮ್ಮ ಅವ್ವು ಬಾಳ ಸರಣೆ
ಅವುಳ್ಯಾಕೆ ಸರಣೆ ಶಿವಶಿವಾ |

ಒನಕೇನ ಸರಣ ಮಾಡಿದರೆ ಆ ಒನಕೆ
ತಾನೆ ಎದ್ದು ನವುಣೆ ಕುಟ್ಟುವುದು |

ಒಕ್ಕ ನವುಣೆ ಕುಟ್ಟಿ ಅಕ್ಕಿ ಅಳ್ತೆ ಮಾಡಿದರೆ
ದೊಡ್ಡೆ ಒಂದ್ಗಂಡ್ಗ ಅಕ್ಕಿ ಆಗುವಾದು |

ಅದುಕೋಸ್ಕರವಾಗಿ ಕೊಟ್ಟಣದ ನನ್ನಮ್ಮ
ಕಲ್ಯಾಣದಲ್ಲಿ ಘನಸರಣೆ |

ದೀಪದ ಮಲ್ಲಮ್ಮ ಎಣ್ಣೇಯ ಚನ್ನಮ್ಮ
ಇಂತಿಂತೆ ಸರಣಾರ ಕಟ್ಟುಕೊಂಡು |

ಇಂತಿಂತೆ ಸರಣಾರ ಕಟುಕೊಂಡು ಬಸವಣ್ಣ
ಅವುರಾಳಿದರು ಕಲ್ಯಾಣ್ಣ ಗುರುಮಠುವ |

"ಇಂತಾ ಕಲ್ಯಾಣ್ಣ ಪರಿಪಾಲ್ನೆ ಮಾಡುವಂತ
ಗುರುವೀನ ದರುಸಣವ ನಾ ಮಾಡಬೇಕು | ೧೧೦

ಗುರುವೀನ ದರುಸಣವ ನಾ ಮಾಡಬೇಕು" ಅಂತ್ಹೇಳಿ
ಮಾನ್ಯ ಹರುಳಯ್ಯ ನುಡಿದಾರು |

ಕಲ್ಯಾಣಮ್ಮಯ್ಯನ ಕರ್ದು ಹರಳಯ್ಯನವರು
"ನಾನು-ಹೋಗಿ ಬರುತೀನಿ ಗುರುವೀನ ದರುಸರಣಕೆ |

ಗುರು ನೋಡ್ದಿದ್ದ ಮ್ಯಾಲೆ ನಮ ಕರ್ಮ ಸಮೆಯೋದಿಲ್ಲ
ಜಂಗಮರ ಸಭೀಕೆ ದೊಡ್ಡವರು ಬಸವಣ್ಣ |

'ಬಸುವಣ್ಣ!' ಎನುತ್ಹೇಳಿ ದಿನುಕೊಂದು ಸಲವಾದ್ರು
ನಮ್ಮ ಬಾಯ್ನಲ್ಲಿ ಹೊಗಳಿದರೆ |

ನಮ್ಮ ಬಾಯ್ನುಲ್ಲಿ ಹೊಗಳಿದರೆ ಕಲ್ಯಾಣಿ
ದೆಸೆಗೆಟ್ಟು ಹೋಗುವುದು ನಮ್ಮ ಪಾಪುವೆಲ್ಲ | ೧೨೦

ಅದುಕೋಸ್ಕುರವಾಗಿ ನಾವೋಗುಲ್ಲಾ ಕಲ್ಯಾಣಿ
ನೀನಡುಗೆ ಮಾಡೂತನಕ ನಾ ಬರುತೀನಿ |

ಬಂದು ಮಾಡ್ಕೋಳತೀನಿ ನನ ಲಿಂಗದ ಪೂಜ್ಯ
ಕಂಡು ಬರಬೇಕು ನನ್ನ ಗುರುವನ್ನು" |

ಹಾಗಂದ ಮಾತನ್ನ ಕೇಳಿ ಕಲ್ಯಾಣಮ್ಮ
"ಶಿವ ಶಿವ ಹೋಗಿ ಬನ್ನಿ ಗುರುವಿನ ದರುಸಣಕೆ |

ನೀವೋಗಿ ಅವರ ದರುಸಣ ಮಾಡಿದರೆ
ನನ್ನ ಹೃದಯದ ಕರ್ಮವು ಪರಿಯಾರ |

ಗಂಡ ಮಾಡಿದ ಪೂಜೆ ಅದು ನನ್ಗು ಸಲ್ಲುವದೆ"ಂದು
ಆ ಕಲ್ಯಾಣಮ್ಮಯ್ಯ ನುಡಿದಾಳು | ೧೩೦

ಕಕ್ಕೆ ಸೊಪ್ಪಿನ ಮಠವ ಬಿಟ್ಟರು ಹರಳಯ್ಯ
ಹೊರುಡುದರು ಕಲ್ಯಾಣ್ಣ ಗುರುವಿನಕೆ |

ಮಾನ್ಯ ಹರುಳಯ್ಯನವರು ಮಠವ ಬಿಟ್ಟಾಗಲೆ
ಹರಳಯ್ನ ಲಿಂಗ ಮುಂದೆ ಹೊರಟಿತ್ತು |

ಮೊದಲು ಹೊರಟೋಗ್ಬುಡ್ತು ಹರಳಪ್ಪನ ಲಿಂಗ
ಬಸವಣ್ಣನವರ ಲಿಂಗದ ಜೊತೆಯಲ್ಲಿ |

ಬಸವಣ್ಣನವರ ಲಿಂಗದ ಜೊತೆಯಲ್ಲಿ ಹೋಗಿ
ಆ ಲಿಂಗ ಲಿಂಗವೆರಡೆ ಮಾತಾಡುತಾವೆ |

"ಈವತ್ತು ಬರುತ್ತಾನೆ ಸರಣ ಹರಳಯ್ಯ
ಗ್ಯಾಪಕವಿರಲಪ್ಪ ನಿಮ್ ಮನದಲ್ಲಿ" | ೧೪೦

ಆ ಲಿಂಗ ಹೇಳಿದ ಮಾತ ಕೇಳಿದರು ಬಸವಣ್ಣ
ಇಂದೇನ್ ಕಾರ್ಲ ಬಂದನೊ ಹರಳಯ್ಯ |

ಎಡದ ಬಲದ ಗ್ಯಾನ ಮರೆತರು ಬಸವಣ್ಣ
ಹರುಳಯ್ಯ ಬರುತ್ತಾನೆ ಎಂದು ಕುಳಿತಾರು |

ಬಂದರು ಹರಳಪ್ಪ ಆದಿ ಕಲ್ಯಾಣ ಪುರಕೆ
ಅದಕರುವತ್ತು ಆರು ಬಾಗುಲು |

ಅದಕರುವತ್ತು ಆರು ಬಾಗುಲುದಾಗೆ ಬಂದು
ಆ ಕಡೆಯ ಬಾಗುಲಲಿ ನಿಲುತಾನೆ |

ಹರುಳಯ್ಯ ಬಂದು ನಿಂದ ಅರುವಾಯ್ತು ಬಸವಣ್ಣನಿಗೆ
"ಮಾನ್ಯ ಹರುಳಯ್ಯ ನನ ಗುರುಮಠಕೆ | ೧೫೦

ಮಾನ್ಯ ಹರುಳಯ್ಯ ನನ ಮಠಕೆ ಬರುತಾರೆ
ಅವ್ರ ತಡಿಬ್ಯಾಡಿ ಮರ್ಯಾದಿಯಿಂದ ಕರೆತನ್ನಿ |

ತಡಿಯಾ ಬೇಡಿ ಹರುಳಯ್ಯ ಒಳಗಡೆ ಕರ್ಕೊಂಡ್ಬನ್ನಿ"
ಹೀಗೆಂದು ಒಡ್ಡೋಲಗ್ದಿಂದ ಹೇಳಿ ಕಳುಸಿದರು |

"ಯಾವ ಜಂಗಮ್ರು ಬಂದರು ಬಿಡಬೇಡಿ ಅನುತಿದ್ರು
ಇಂದು ಸಮಪ್ಪೆ ಕೊಟ್ಟವ್ರೆ ಹರುಳಯ್ಯ |

ನಡೆಯಪ್ಪ ಹರುಳಯ್ಯ ಗುರು ಅಪ್ಪೆಯಾಗದೆ
ನಿನಗಡ್ಡಿಯಿಲ್ಲ ಒಳಗಡೆ ದಯಾಮಾಡು" |

ಅಷ್ಟು ಮಾತು ಕೇಳಿ ಇಷ್ಟೊಂದು ಕರುಣವು
ನನ್ನ ಗುರುವಿಗ ಇದ್ದಾರೆ ಸಾಕೆಂದು | ೧೬೦

ಗುರುವ ಗತಿಯೆಂದು ಗುರುವೆ ಮತಿಯೆಂದ
ಹರಳಯ್ಯ ಒಳಗತೆಗೆ ಹೊರಟನು |

ಜಂಗುಮರ ಸಭೆಯಲ್ಲಿ ಕುಳಿತಿದ್ದರು ಬಸವಣ್ಣ
ಬಂದ ಹರುಳಯ್ಯನವರ ನೋಡಿದರು |

ಬಂದ ಹರುಳಯ್ಯನವರ ಒಳ್ಳೆ ತಕ್ಷಣ ನೋಡಿದರು
"ಬಂದಪ್ಪ ಹರುಳಯ್ಯ" ಎನ್ನುತ್ತಾರೆ |

ಬಂದಪ್ಪ ಹರುಳಯ್ಯ ಎನ್ನುತಾರೆ "ನಿಮ್ಗೆ ಸರಣು ಸರಣಾರ್ತಿ
ಬಾರಪ್ಪ ಸರಣ ಹರುಳಯ್ಯ" |

"ಬಂದಿ ಬನ್ನಿ ಬುದ್ಧಿ ನಿಮುಗೆ ಸರಣು" ಎನುತ್ಹೇಳಿ
ಕೈಯೆತ್ತಿ ಕರವ ಮುಗಿದಾನು | ೧೭೦

"ದೇವರು ಮಾಡುವುರೆ ಸರಣು ಸರಣಾರ್ತಿಯ
ಸರಣ ಎಂದವುನಲ್ಲಿ ಗುರುವೀಗೆ |

ಸರಣು ಎಂದವನಲ್ಲ ಗುರುವೀಗೆ ಹರಳಯ್ಯ"
ಅಲ್ಲಿದ್ದೋರ ಮನಸ್ಸು ಮರುಗೀತು |

"ಅವರದು ಎರಡು ಸರಣ ಹರಳಯ್ಯನದು ಒಂದು ಸರಣು
ಇದು ಏನೋ ಕಾಣಪ್ಪ ತಿಳಿಯದು" |

"ಎಂದೂ ಇಲ್ಲದ ಹರಳಯ್ಯ ಇಂದೇನು ಬಂದೀರಿ
ಮನದ ಸಂದೇಗ ಹೇಳಪ್ಪ ನನ್ನ ಜೊತೆಯಲ್ಲಿ" |

"ಗುರುವೀನ ದರುಸಣಿಕೆ ಕರುಣ ಹುಟ್ಟಿತು ಬುದ್ಧಿ
ತಮ್ಮ ದರುಸಣಕೆ ಬಂದಿ ಬಸವಣ್ಣ" | ೧೮೦

"ಹೌದು ಹರುಳಪ್ಪ ನನ್ಮೇಲುನ ಪ್ರೇಮ ಅಷ್ಟಿದ್ದರೆ ಸಾಕು
ಊಟ ಮಾಡೋಗು ಮಠದಲ್ಲಿ" |

ದೇವುರಾಡಿದ ಮಾತ ಕೇಳಿದರು ಹರುಳಯ್ಯ
"ಶಿವಪೂಚೆ ಮಾಡಿಲ್ಲ ನನ್ನ ಗುರುವೇ |

ಶಿವ ಪೂಜೆ ಮಾಡಿಲ್ಲಾ ನನಗುರುವೇ ಶಿವಾರ್ಚನೆ ತೀರಿಲ್ಲಾ
ತಮ್ಮ ಪಾದದ ದರುಸಣ ಸಾಕು ನನ ಗುರುವೇ |

ತಮ್ಮ ಪಾದದ ದರುಸಣ ಸಾಕು ಹೋಗಿ ಬರುತ್ತೀನಿ ಬುದ್ಧಿ
ಹೋಗಿ ಬರುವೆ ನನ್ನ ಗುರು ಮಠಕೆ |

ಹೋಗಿ ಬರ್ತೀನಿ ಸ್ವಾಮಿ" ಹಾಗೆಯ ಹರುಳಯ್ಯ
ಆಗ ಕಲ್ಯಾಣ ಬಿಟ್ಟಿಂದಿರುಗಿ ಹೊರಟನು | ೧೯೦

ಅರವತ್ತಾರು ಬಾಗಲ ಕಡಾದಾರು ಹರಳಯ್ಯ
ರಾಜ ಬೀದಿಗೆ ಬಂದ ಹರಳಯ್ಯ |

ಬಸವಣ್ಣೋರ ಸರಣು ಇವುನ್ಮೇಲೊಂದುಳಿಯಾಲಾಗಿ
ಹರುಳಯ್ನ ನೇತ್ರ ಕಾಣದಲ್ಲ |

ಎರಡು ಕಣ್ಣುಳೂವೆ ಹರುಳಯ್ಗೆ ಕಾಣ್ವಂಗಾದೊ
ಹುಡುಕಾಡುತಾನೆ ರಾಜಬೀದಿ ಒಳಗೆ |

ಹುಡುಕಾಡುತಾನಲ್ಲೊ ತಡುಕಾಡುತಾನಲ್ಲೊ
ನಾ ಕೆಟ್ಟೆ ಅಂದ ತನ್ನ ಮನದಲ್ಲಿ |

"ದೊಡ್ಡೋರ ದರುಸಣಕೆ ನನ ಪಾಪ ಕಳಿಯಾಕ ಬಂದಿ
ಕಳಿಯಾನಿಲ್ಲ ಪಾಪ ಶಿವ ಶಿವಾ | ೨೦೦

ಕಳಿಯನಿಲ್ಲ ಪಾಪ ಶಿವ ಶಿವ ಮತ್ತಷ್ಟು
ಬಂತಲ್ಲೊ ನನ್ನ ರುದಯಕ್ಕೆ |

ನನ್ನ-ಕಕ್ಕೆಸೊಪ್ಪುನ ಮಠಕೆ ಕರುಕೊಂಡೋಗೋರ್ಯಾರಪ್ಪ
ನಾ ಕೆಟ್ಟೆ" ಎಂದರುಳಯ್ಯ ಅಳುತಾನೆ |

ಇಲ್ಲಿ-ಹುಡುಕಾಡು ಹರುಳಯ್ನ ಲಿಂಗ ಹೊರಟ್ಹೋಗಿ
ಕಲ್ಯಾಣಮ್ಮ ಜೊತೆಯಲ್ಲಿ ತಿಳಿಸೀತು |

"ಹರಳಯ್ ಬತ್ತಾವರಂತ ನೀ ಅಡ್ಗೆ ಮಾಡೀಯ ತಾಯಿ
ಕಣ್ಣಿಲ್ಲ ನಿನ್ನ ಹರಳಯ್ಗೆ |

ಕಣ್ಣಿಲ್ಲ ಕಾಣಮ್ಮ ನಿನ ಗಂಡ ಹರುಳಯ್ಗೆ
ಹುಡುಕಾಡುತಾನೆ ರಾಜಬೀದೀಲಿ" | ೨೧೦

"ಅಯ್ಯಯ್ಯೊ ಹಂಗಂದರೇನಪ್ಪ ಶಿವಲಿಂಗ್ಕೆ?"
ಅಡ್ಗೆ ಮಾಡೋದ ಬಿಟ್ಟಳಲ್ಲೆ |

ಅಡ್ಗೆ ಮಾಡೋದ ಬಿಟ್ಟು ಕಕ್ಕೆಸೊಪ್ಪುನ ಮಠವ ಬುಟ್ಟು
ಓಡುತ್ತ ಬರುತ್ತಾಳೆ ಕಲ್ಯಾಣಮ್ಮ |

ಓಡುತ ಬಂದರು ರಾಜಬೀದಿಗೆ ತಾಯಿ
ತಡಕಾಡುತಿದ್ರು ಹರಳಪ್ಪ |

ತಡಕಾಡೂ ಹರಳಪ್ಪ ಕಂಡುಕೊಂಡು ಕಲ್ಯಾಣಮ್ಮ
ಹೋಗಿ ಮುಂಗೈಯ್ಯ ಹಿಡುಕೊಂಡ |

"ಶಿವ ಶಿವ ಯಾರೊ ನಾಕಾಣೆ ನನ ಕೈಯ ಮುಟ್ಟಿದೋರ
ನನ್ನ ಕೈಯಿಡುದೋರ್ಯಾರ ಹೇಳಿ ನನ್ ಜೊತೆಯಲ್ಲಿ" | ೨೨೦

"ಯಾರು ಬಂದಾರು ಸ್ವಾಮಿ ನಿಮ್ ಕೈಯಾನೆ ಹಿಡಿವುದಕೆ?
ನಾನು ಕಾಣಪ್ಪ ನಿನ್ನ ಕಲ್ಯಾಣಿ |

ದೊಡ್ಡೋರ ದರುಸಣಕೆ ನೀವು ಹೊತ್ನಂತೆ ಬಂದುರಲ್ಲ
ಈ ಪಾಪ ಹೊತ್ತುಕೊಂಡ ಬಗೆಯೇನ |

ಕಳುದೋಗಬೇಕಾಗಿತ್ತು ನಿಮ್ಮಾತ್ಮ ಲಿಂಗದ ಪಾಪ
ಏನು ನಡೆದಿತ್ತು ಅವರ ಮಠದಲ್ಲಿ |

ಬಸವಣ್ಣನವರ್ಗು ನಿಮ್ಗು ಯಾವ್ ಮಾತು ನಡೆದೀತೆ"ಂದು
ಮಡ್ದಿ ಕೇಳಿದಳು ಕಲ್ಯಾಣಮ್ಮ |

"ಕೇಳು ಕೇಳು ಕಲ್ಯಾಣಿ ನಡೆದ ಮಾತೇಳುತೀನಿ
ಕಲ್ಯಾಣ್ದ ಒಳಗಡೆ ನೇರುವಾಗಿ | ೨೩೦

ಕಲ್ಯಾಣ್ದ ಒಳಗಡೆ ನೇರುವಾಗಿ ಹೊರಟೋದಿ
ಗುರುಗಳು ಜಂಗುಮರ ಸಭೆಯಲ್ಲಿ |

ಗುರುಗಳು ಜಂಗುಮರ ಸಭೆಯಲ್ಲಿ ಕುಂತಿದ್ದರು
ನಾನೋದ ತಕ್ಷಣವೆ ಏನಂದಾರು |

ನಾನ್ಹೋದ ತಕ್ಷಣವೆ ಸರಣು ಸರಣೆಂದಾರು
ನಾ ಸರಣೆಂದು ಕೈಯ ಮುಗಿದೇನು |

ಸರಣು ಎಂದವರಿಗೆ ಒಂದು ನಮುಸ್ಕಾರ ಮಾಡಿ
ಹೋಗುತೀನಿ ಅಂದಾಗ ಊಟ ಮಾಡು ಅಂದರು |

ದರುಸಣವೆ ಸಾಕು ಎಂದು ಹೊರಗಡೆ ನಾ ಹೊರಟಿ
ಅರವತ್ತಾರು ಬಾಗಲ ಕಡದೇನು | ೨೪೦

ಅರವತ್ತಾರು ಬಾಗಲ ಕಡ್ದು ನಾ ರಾಜ ಬೀದಿಗೆ ಬಂದಿ
ಬಂದ ತಕ್ಷಣ ಹೋಯ್ತು ನನ್ನ ಶಿವನೇತ್ರ |

ಹೊರುಟೋಯ್ತು ಕಲ್ಯಾಣಿ ಶಿವರುದ್ರವಾದ ಕಣ್ಣು
ನಾ ಕುರುಡಾನಾದಿ ಹೆಣ್ಣೆ ಜಗಪ್ಪಲ್ಲಿ |

ಕುರುಡಾನಾದಿ ಕಲ್ಯಾಣಿ ಜಗಡಲ್ಲಿ" ಅನುತ್ಪೇಳಿ
"ಈ ಕುರುಡ ಎಷ್ಟು ಕಾಲ ಬದುಕಿ ಫಲವೇನು?" |

ಹಾಂಗಂದ ಮಾತನ್ನ ಕೇಳಿ ಕಲ್ಯಾಣಮ್ಮ
"ನೀವ್ ಹೇಳಿದ ಮಾತಿಗೆ ನಾ ಹೇಳುವೆ ಉತ್ತರವ |

ತಾಳಿ ಹರುಳಯ್ಯ ಸಂದೇಗ ಪಡಬೇಡಿ
ಅದುರುತ್ತಾರ ನಾ ಹೇಳುವೆ | ೨೫೦

ದೊಡ್ಡೋರ ಸಭೆಯಲ್ಲಿ ಮಾಡಬಾರದೊಂಚಣೆ
ಮಾಡಿ ಬಂದುದರ ನವನರಕ" |

"ಏನು ವಂಚಣೆಯ ಮಾಡೀದೆ ಕಲ್ಯಾಣಿ
ನೀನಾದ್ರು ಹೆಳಬಾರ್ದ ನನ್ನ ಜೊತೆಯಲ್ಲಿ ?" |

"ದೊಡ್ಡವರ ನಮುಸ್ಕಾರ ಉಳುದದೆ ನಿಮ್ಮೇಲೆ
ಆ ಬಾಕೀಗೊಂಟೋಯ್ತು ಶಿವನೇತ್ರ |

ಸರಣ ಸರಣ್ಕಾರ್ತಿ ಹಂಗಿನ್ನಿಲ್ಲ ಬಸ್ವಣ್ಣ
ನೀವು ಸರಣು ಅನ್ನಬವುದ ಯಜಮಾನ |

ನೀವು ಸರಣು ಅಂತೇಳಿ ಅನ್ನಬಹುದೇನಪ್ಪ
ಅದ್ಕೆ-ಕಾಣಪ್ಪ ನಮ್ಗೆ ಕೇಡುಗಾಲ" | ೨೬೦

"ಹಾಳು ಕಲ್ಯಾಣಿ ನನ್ಗೆ ತಿಳುವಳಿಕೆ ಬರನಿಲ್ಲ
ಇನ್ನು ಬರೊದಿಲ್ಲ ನನ್ನ ಶಿವನೇತ್ರ |

ಇನ್ನು ಬರೊದಿಲ್ಲ ನನ್ನ ಶಿವನೇತ್ರ" ಎನುತೇಳಿ
ಅತ್ತತ್ತು ದುಕ್ಕಾ ಪಡುತಾನೆ |

"ಕಣ್ಣು ಬರಬೇಕಾದ್ರೆ ನಾ ನಿಜವಾಗಿ ಹೇಳುತೀನಿ
ಆ ದೊಡ್ಡೋರಿಗೊಂದು ಪ್ರಾರ್ಥನೆಯ |

ಆ ದೊಡ್ಡೋರಿಗೊಂದು ಪ್ರಾರ್ಥನೆಯ ನಾನೇಳಿದಂತೆ
ಕೇಳಕೊಂಡ ನೀವು ಮಾಡಬೇಕು |

ನಾ ಹೇಳಿದಂತೆ ಪ್ರಾರ್ಥನೆಯ ಮನಸ್ಪೂರ್ತಿ ಮಾಡಿದರೆ
ಹೋಗಿರುವ ನೇತ್ರ ತಿರುಗಿ ಬರುತ್ತೀದೆ" | ೨೭೦

"ಏನೇಳಿಯೆ ಹೇಳು ಬುಡು ನೀ ಹೇಳುದಂಗೆ ಮಾಡುತೀನಿ
ಮಾಡ್ತೀನಿ ಬಸವಣ್ಣ ಸಾಕ್ಷಿಯಾಗಿ" |

"ಮಾಡೀರ್ಯಾ ಹರುಳಪ್ಪ ನಾ ಹೇಳಿದಂತೆ ಪ್ರಾರ್ಥನೆಯ
ಹಂಗೊಂದು ಮಾತ ಕೇಳಪ್ಪ |

ನಿಮ್ಮೊಡದ ತೊಡೆಯ ಚರ್ಮ ನನ್ ಬಲದ ತೊಡೆಯ ಚರ್ಮ
ಎರಡನು ಅಳದು ಹದಗೂಡಬೇಕು |

ಆಯೂಧ ಮುಸ್ತೇವು ಒಂದನು ಸೋಕುಸದೆ
ನನ್ ಘಟದ ಆಯುಧಗಳಿಂದ |

ನನ್ ಘಟದ ಆಯುಧಗಳಿಂದ ನಿಮ್ಮ ಪಾದ್ಕೆ
ಎರಡು ಪಾದ್ರಾಕ್ಷಿ ಮಾಡತೀನಿ | ೨೮೦

ಎರಡು ಪಾದ್ರಾಕ್ಷಿ ಮಾಡುತೀನಿ ಅನುತ್ಹೇಳಿ
ಹರಕೆಯ ನೀವು ಮಾಡಿಕೊಳ್ಳಿ |

ಇಂತೆ ಹರಕೆಯಾ ಮಾಡುಕೊಂಡರೆ ನೀವು
ಹೋಗಿರುವ ನೇತ್ರ ಬರುತಾವೆ" |

ಕಲ್ಯಾಣದ ಬೀದೀಲಿ ನಿಂತ್ಕೊಂಡು ಹರುಳಯ್ಯ
ಕಲ್ಯಾಣಕ್ಕೆ ಕೈಯ ಮುಗಿದನು |

"ಭೂಮಿಯ ಪಡೆದೋರೆ ಭೂಲೋಕವ ಪಡೆದೋರೆ
ಕಾವಿ ಕಾಮಂಡ್ಲ ಪಡುದೋರೆ |

ಕಾವಿಯ ಪಡದೋರೆ ಕಾಮಂಡ್ಲ ಪಡುದೋರೆ
ಇಂತಾ ಸತ್ಯವರಿಗೆ ಒಂದು ಸರಣಪ್ಪ | ೨೯೦

ಜಗವನ್ನೆ ಪಡಾದೋರ್ಗೆ ಒಂದು ಸರಣೆಂದು
ಜಂಗುಮರ್ಗೆ ಗುರುಮಂತ್ರ ಹೇಳುವೋರ್ಗೆ |

ಜಂಗುಮರ್ಗೆ ಗುರುಮಂತ್ರ ಉಪದೇಶ ಮಾಡುದಂತ
ನನ್ನ-ಸಂಗನ ಬಸವಣ್ಣ ನಿಮ್ಗೆ ಸರಣು ಸರಣಾರ್ತಿ" |

ಸರಣ ಸರಣಾರ್ತಿ ಹಾಗೆಂದ ಕೂಡಲೆ
ಹರಳಯ್ನ ನೇತ್ರ ಕನ್ನಡಿ |

ಹರಳಯ್ನ ನೇತ್ರ ಕನ್ನಡಿ ಹಂಗೆ ಕಾಣುತಲ್ಲೋ
ಹೋಗಿದ್ದ ನೇತ್ರ ಬರುತವೆ |

ಹೋಗಿದ್ದ ನೇತ್ರ ನಮ್ಮ ಹರಳಯ್ಗೆ ಬಂದಾಗ
ಕೈಲಾಸಕ್ಕೆ ಕೈಯಾ ಮುಗಿದಾನು | ೩೦೦

"ಎಂತೆ ಗುರುಗಳಪ್ಪ ನನ್ನ ಕಲ್ಯಾಣ್ದ ಬಸವಣ್ಣ!
ಒಂದ್ಸರುಣ್ಗೆ ನಮ್ಗೀ ನರ್ಕ ಕೊಡಬಹುದೇ |

ಇಂದು ಗೊತ್ತಾಯ್ತಪ್ಪ ನಿನ್ನ ಮೈಮೆ" ಎನುತ್ಹೇಳಿ
ಮಾನ್ಯ ಹರುಳಯ್ಯ ತಿಳುಕೊಂಡ |

"ಒಪ್ಪೀದೆ ಕಲ್ಯಾಣೆ ನೀ ಹೇಳುವ ಉತ್ತರುವ
ನೀ ಹೇಳಲಾಗಿ ಕಣ್ಣು ಬಂದುವಲ್ಲ" |

"ಹೋಗನ ನಡೆಯಿರಿ ನಮ್ಮ ಕಕ್ಕೆಸೊಪ್ಪನ ಮಠಕೆ
ನಮ್ ಗುರುಗೆ ಚಮ್ಮಾಳುಗೆ ಮಾಡಬೇಕು |

ದೊಡ್ಡಪಾದಾದ ದೊರೆಗೆ ಮಾಡ್ಬೇಕು ಪಾದ್ರಾಕ್ಷಿಯ
ನಮ್ಮನದ ಕಾಟ ಕರ್ಮ ಕಳಿಯಲಿ" | ೩೧೦

ಗಂಡ ಹೆಂಡರು ಇಬ್ಬರು ಕಲ್ಯಾಣ್ದ ಬೀದಿ ಬುಟ್ಟು
ಬರುತಾರೆ ತಮ್ಮ ಗುರುಮಠಕೆ |

ಬಂದರು ಹರಳಯ್ಯ ಬಂದರು ಕಲ್ಯಾಣಮ್ಮ
ಅಡುಗೆ ಮಾಡನಿಲ್ಲ ಅವುರ್ಮಠದಲ್ಲಿ |

ಅಡುಗೆಯ ಮಾಡನಿಲ್ಲ ಮಠದಲ್ಲಿ ಕಲ್ಯಾಣಮ್ಮ
ಹನ್ನೆರಡು ದಿವಸ ಉಪುವಾಸ |

ಗಂಡು ಹೆಂಡರು ಇಬ್ಬರು ಉಪುವಾಸ ಇದ್ದರಂತೆ
ಅವುರೇಳು ದೊಂಕುನ ಕತ್ಯ ತಗಿದಾರು |

ಏಳು ದೊಂಕುನ ಕತ್ಯ ತಕ್ಕೊಂಡು ಹರುಳಯ್ಯ
ಉಜ್ಜಿ ಆಯುಧವ ಹದುಮಾಡಿ | ೩೨೦

ಉಜ್ಜಿ ಆಯುಧವ ಹದಮಾಡಿಕೊಂಡಠುಳಯ್ಯ
ಕಲ್ಯಾಣಮ್ಮಯ್ನ ಕರಿದಾರು |

ಕಲ್ಯಾಣಮ್ಮನ ಕರುದು ಪರದಾದ ಮರೆಯಲಿ ನಿಲ್ಲಿಸಿ
ನನ್ನ ಗುರು ಬಸವಣ್ಣ ನಿಮ್ಮ ಪಾದ |

ನನ್ನ ಗುರು ಬಸವಣ್ಣ ನಿಮ್ಮ ಪಾದವೇ ಗತಿಯೆಂದು
ಅಳಿದಾರು ಅವಳ ಬಲ್ಮೊಡೆ ಚರುಮಾವ |

ಹರುಳಯ್ಯನವರು ತೊಡೆಯ ಚರ್ಮವ ಎಳಿದು
ಮದುರಂಗನ ಕೊಳಕೆ ನೆನಿಯಾಕಿ |

ಸುಣ್ಣದಕ್ಕಿ ಮಾರಯ್ನು ಕರದು ಹರಳಯ್ಯನವರು
ಆ ಸುಣ್ಣದಲ್ಲಿ ಚರ್ಮ ಹದಮಾಡಿ | ೩೩೦

ಕಕ್ಕಯ್ಯ ಚಿಕ್ಕಯ್ನು ಕರದು ಹರುಳಯ್ಯನವರು
ಆ ಚೆಕ್ಕೆ ಒಳುಗೆ ಚರ್ಮ ಹದಮಾಡಿ |

ಬಂಗಾರದಾಗೆ ಮೃದು ಬಂದೀತು ಆ ಚರ್ಮ
ಹನ್ನೆರಡು ದಿವ್ಸಕ್ಕೆ ಅದ ಹದಮಾಡಿ |

ರತ್ನಗಂಬ್ಳಿ ಗದ್ದಿ ಹೂಡುದುರು ಹರಳಯ್ಯ
ಈ ಪಾದ್ರಾಕ್ಷಿ ಕೆಲಸಕ್ಕೆ ಕುಳಿತಾರು |

ರತ್ನ ಗಂಬಳಿ ಹೂಡಿ ಉದ್ಯಾಗಕ್ಕೆ ಕುಂತು ಕೊಂಡು
ಅಂಗೈಯ್ಯ ಅಡುಗಲ್ಲು ಮಾಡವುರೆ |

ಅಂಗೈಯ್ಯ ಅಡಿಗಲ್ಲು ಮುಂಗೈಯ ಕೊಡುತಿ ಮಾಡಿ
ಚೆಚ್ಚಿದರೂ ಚರ್ಮ ಒಂದದುವಾಗಿ | ೩೪೦

ಹೆಬ್ಬೆಳ್ಳ ರಂಪೀ ಮಾಡಿ ಕೊರಿದಾರು ಹರುಳಯ್ಯ
ಬಸವಣ್ಣನವರ ಪಾದದಳತೇಯ |

ದೊಡ್ಡವರ ಪಾದದಳತ್ಯ ಹೆಬ್ಬೆಳ್ಳಲ್ಲಿ ಕೊರಕೊಂಡು
ಕಿರು ಬೆರಳು ತಗದು ಉಳಿ ಮಾಡಿ |

ಕಿರು ಬೆರಳು ತಗದು ಉಳಿಮಾಡಿ ಹರುಳಯ್ಯ
ಇದುಕ್ಕೊಲುಗೆ ದಾರುವೆ ಮೊದಲಿಲ್ಲ |

ಬ್ಯಾರೆ ದಾರವ ಹೂಡುದ್ರೆ ನನಗುರು ಒಪ್ಪೀರಾ ಎಂದು
ಕಲ್ಯಾಣಮ್ಮಯ್ನ ಕರಿದಾರು |

ಕಲ್ಯಾಣಮ್ಮನ ಕರುದು ಹಿಂದ್ ಮುಂದಾಗಿ ನಿಲ್ಸಿಕೊಂಡು
ಅವ್ರ ಬೆನ್ನುಳಿಯ ನರುವ ಎಳುಕೊಂಡ | ೩೫೦

ಬೆನ್ನುಳಿಯ ನರವ ಎಳೆದು ಶಿವ ಶರಣ ಹರಳಯ್ಯ
ಇದು ಹೊಲುಗೆ ದಾರವ ಮಾಡಿದರು |

ಹೊಲುಗೆ ದಾರವ ಮಾಡಿ ಹೊಲುದವುರೆ ಪಾದ್ರಾಕ್ಷಿ
ಅವರು ಪ್ರೀತಿ ಮಾಡಿದ ಹರುಳಯ್ಯ |

ಅಂಗಾಲುಗೆ ನವರತ್ನ ಮುಂಗಾಲ್ಗೆ ಗೋಮೇದ್ಕ
ಮೇಗಲು ಮುಸ್ತೀಪು ನವರತ್ನ |

ಪಟ್ಟಿ ಬಾರ್ಲಳುಗೆಲ್ಲ ನವರತ್ನ್ದಿದುಳ ಮೆಟ್ಟಿ
ನನ್ನ-ಮಾನ್ಯ ಹರಳಯ್ಯ ಮಾಡ್ದ ಪಾದ್ರಾಕ್ಷಿ |

ಹೆಣಕೆಯ ಹೆಣದವನೆ ಬಂಗಾರ್ದ ಗೊಂಡೆಯ ಮಾಡಿ
ಸೂರ್ಯನ ನೋಡ್ಬವುದು ಜಗದಲ್ಲಿ | ೩೬೦

ಸೂರ್ಯನ ನೋಡಬವುದು ಚಂದ್ರನ ನೋಡಬವುದು
ಅವುನ ಪಾದ್ರಾಕ್ಷಿ ಮಂಗಳಾರತಿಯ ಬೆಳುಗೀದ |

ಮಂಗಳಾರುತಿ ಬೆಳುಗಿ ಮಾನ್ಯರೊಡೆಯ ಹರಳಯ್ಯ
ರತ್ನಗಂಬ್ಳೀಲಿ ಗಂಟ ಕಟ್ಟುತಾನೆ |

"ಹೋಗಿ ಬರುಲ್ಕಾ ಕಲ್ಯಾಣಿ ಕಲ್ಯಾಣ್ಕಿ ಗುರುಮಠಕೆ
ಒಪ್ಪೀಸಿ ಬರುತೀನಿ ಅವ್ರ ಪಾದ್ರಾಕ್ಷಿ" |

"ಹೋಗಿ ಬನ್ನಿ ಗುರುದೇವರೆ ಹರುಳಯ್ಯ
ಗ್ಯಾಪುಕವಿರಲಪ್ಪ ನಿಮ್ಮ ಮನದಲ್ಲಿ |

ಕಂಡ ತಕ್ಷಣವಾಗಿ ಕರವೆತ್ತಿ ಕೈಯ ಮುಗಿದು
ನೀವು ಭಕ್ತಿಯಿಂದ ಒಪ್ಪೀಸಿ ಅವುರ್ಗೆ ಪಾದ್ರಾಕ್ಷಿ" | ೩೭೦

"ಆಗಲಿ ಕಲ್ಯಾಣಿ ನಾ ಗ್ಯಾಪಕ ಮಾಡುಗಿನ್ನಿ
ಒಪ್ಪೀಸಿ ನಾ ಬೇಗ ಬರುತೀನಿ" |

ಮಠವನ್ನು ಬಿಟ್ಟು ಈ ಹರಳಯ್ಯ ಹೊರಟಾಗ
ಇವುರ್ಗಿಂತ ಮುಂಚೆ ಲಿಂಗ ಹೊರಟೋಯ್ತು |

ಹರುಳಯ್ನು ಲಿಂಗ ಹೋಗಿ ಬಸವಣ್ಣನ ಲಿಂಗದ ಬಳಿಗೆ
ಲಿಂಗ ಲಿಂಗವೆರಡೆ ಮಾತಾಡುತಾವೆ |

"ಅವರ ಗಂಡಹೆಂಡಾರ ಚರ್ಮವ ನಿಮಗಳಿದು ಹರಳಯ್ಯ
ಮಾಡವ್ನೆ ನಿಮ್ಗೆ ಪಾದ್ರಾಕ್ಷಿ |

ಅದ ಮೆಟ್ಟಿದರೆ ಕೆಡುತೀರಿ ಮೆಟ್ಟ ಬ್ಯಾಡಿ ಸ್ವಾಮಿ
ಮೆಟ್ಟಬ್ಯಾಡಿ" ಎಂದು ಹರುಳಯ್ನು ಲಿಂಗ ತಿಳಿಸೀತು | ೩೮೦

"ನನ್ನ ಕಲ್ಯಾಣ ಕೆಡಾಸೀನೇನೋ ನಾ ಕಾಣೆ" ಅನುತ್ಹೇಳಿ
ಚಿಂತೆ ಮಾಡಿದರು ಬಸವಣ್ಣ |

"ಹರುಳಯ್ಯ ಬರುತಾನೆ ಅರುಗಾಗಿ ಇಳುಗದವರೆ
ಅವುನ್ಗೆ ಅಡ್ಡಿ ಮಾಡದೆ ಕರೆತನ್ನಿ" |

ಬಂದ ಹರಳಯ್ಯನ ಕಂಡಿ ಬಾಗುಲಲಿದ್ದೂಳುಗದವ್ರು
ಕರೆಕೊಂಡು ಬಂದರವ್ನ ಒಳಗಡೆ |

ಜಂಗುಮರ ಸಭೆಯಲ್ಲಿ ಕುಳಿತಿದ್ರು ಬಸವಣ್ಣ
ಅವರ ಅಂತು ನೋಡೀದ ಹರುಳಯ್ಯ |

ಕಂಡ ತಕ್ಷಣವಾಗಿ ನಿಜುದಂತೆ ಹರಳಯ್ಯ
"ಸರಣು ಸರಣಾರ್ತಿ ಬಸವೇಶ | ೩೯೦

ಕಲ್ಯಾಣಕೆ ಸರಣು ಕೈಲಾಸಕ್ಕೊಂದು ಸರಣು
ಇಲ್ಲಿ ನೆರದಿರುವ ಜಂಗುಮರಿಗೆ ಸರಣು ಸರಣಾರ್ತಿ |

ಇಲ್ಲಿ ಎಲ್ಲಾ ಜಂಗುಮರಿಗು ಸರಣಾರ್ತಿ" ಎಂತ್ಹೇಳಿ
ಆ ಕಂಬಳಿಯ ಗಂಟು ಇಳುಕೀದ |

"ದಯಾ ಮಾಡಿ ನನ್ನ ಗುರು ನನ್ನ ದಯಾವುಳ್ಳ ಬಸವಣ್ಣ
ನಿಮ್ಗೆ ಮಾಡ್ಕೊಂಡ್ಬುಂದಿವ್ನಿ ಪಾದ್ರಾಕ್ಷ್ಯಾ |

ಎರಡು ಪಾದಕ್ಕೂ ಗುರುವೆ ಎರಡು ಪಾದ್ರಾಕ್ಷಿ ತಂದಿವ್ನಿ
ಮೆಟ್ಟಿಕೊಳ್ಳಿ ಒಡೆಯಾ ನಿಮ್ಮ ದೊಡ್ಡ ಪಾದಕ್ಕೆ" |

ಹಂಗಂದ ಮಾತನ್ನ ಕೇಳಿ ಬಸವಣ್ಣ
"ಬಂದ್ಯಪ್ಪ ಹರಳಯ್ಯ ಸರಣಾರ್ತಿ" | ೪೦೦

ಕಂಬಳಿ ಗಂಟನ್ನು ಬಿಚ್ಚಿಕ್ಕುದುರು ಹರಳಯ್ಯ
ಆ ಕಲ್ಯಾಣವೆಲ್ಲ ಹೊಳಿಯಾದೊ |

ಕತ್ತಲೆಯ ಮನೆಗೆ ಜ್ಯೋತೀಯ ಹಸ್ಸಾದಾಗೆ
ಪ್ರಕಾಸುವಾಯಿತು ಅವರ ಗುರುಮಠ |

"ಇದೇನಪ್ಪ ಹರಳಯ್ಯ ನೀ ಮಾಡಿ ತಂದಿರುವ ಕೆಲಸ
ನನ್ನ -ಪಾದಕಿಕ್ತಾರೆ ಅಂತ್ಹೇಳಿ ನೀ ತರುಬವುದ ? |

ನರಲೋಕದವರಿಗೆ ಸಲ್ಲೊ ಪಾದ್ರಾಕ್ಷಿಯಲ್ಲ
ಇವು ಕೈಲಾಸಕ್ಕೆ ಸಲ್ಲೊ ಪಾದ್ರಾಕ್ಷಿ ! |

ಕೂಡಲ ಸಂಗಮನಿಗೆ ಸಲ್ಲುವಂತ ಪಾದ್ರಾಕ್ಷಿ
ಇವು-ಬ್ಯಾಡಕಣಪ್ಪ ನನ್ಗೆ ಹರುಳಯ್ಯ" | ೪೧೦

ಎತ್ಕೊಂಡ್ರು ಪಾದ್ರಾಕ್ಷ್ಯ ತಮ್ ನೆತ್ತೀಮ್ಯಾಲಿಟ್ಟಿಕೊಂಡ್ರು
ಜಂಗುಮರ ಸಭೆಯಲ್ಲಿ ಮೆರೆದಾರು |

ನೆತ್ತಿ ಮ್ಯಾಲಿಟ್ಟಾಗ ಕಂಡುಕೊಂಡ ಹರುಳಯ್ಯ
"ನಾ ಕೆಟ್ಟೆ" ಅಂದ ಹರುಳಯ್ಯ |

"ಕಾಲಿಗೆ ಮಾಡೀದ ಎಕ್ಕುಡ ತಗುದು ಗುರುವೆ
ನಿಮ್ಮ ಸಿರುಮುಡಿಯ ಮ್ಯಾಲೆ ಮಡುಗ್‌ಬವುದ ? |

ನತ್ತಿ ಮ್ಯಾಲಿಟ್ಟ ಮ್ಯಾಲೆ ನಮ್ಮ ದೇವರು ಬಸವಣ್ಣ
ಇನ್ನ ಮೆಟ್ಕೋದು ನಿಜವ ಅವುರ ಪಾದಕ್ಕೆ |

ಒಂದು ಸರಣ್ಗಾಗಿ ಈ ಬಂಧಾನಾ ಪಟ್ಟಿವ್ನಿ
ಸೊಲ್ಪ ಇಕ್ಕಬೇಕು ಬುದ್ಧಿ ನಿಮ್ಪಾದವೆ" | ೪೨೦

"ಬ್ಯಾಡ ಕಾಣರುಳಯ್ಯ ನಿನ್ ಬೇಡಿಕೊಳ್ಳುತ್ತಿನೀ ನಾನು
ಮಾಪ್ಸಿ ಕೊಂಡೋಗು ನಿನ್ನ ಗುರು ಮಠಕೆ" |

"ಏನೇನಪರಾಧ ನಾ ಮಾಡಿದ್ದೇನು ಗುರುದೇವಾ
ಅಪರಾಧ ಮಾಪ್ ಮಾಡಿ ಮೆಟ್ಟಿಕೊಳ್ಳಿ" |

ನಿಮಗೆ ಮಾಡಿದ ಪಾದ್ರಾಕ್ಷೆ ಪುತ್ರ[illegible]ಡಲಪ್ಪ
ಇದು ಬಿಕ್ರಿ ಮಾಡುದ್ಕೆ ನಾ ಮಾಡುನಿಲ್ಲಾ |

ಮಾರುಕೊಳ್ಳಬೇಕಂತ ಮಾಡಿಲ್ಲ ಚಮ್ಮಾಳ್ಗಿಯ
ನಿಮುಗೋಸ್ಕರವಾಗಿ ಬುದ್ಧಿ ಮಾಡಿವ್ನಿ" |

"ಬೇಡ ಕಾಣರುಳಯ್ಯ ನೀ ತಂಟೆ ಮಾಡಲು ಬ್ಯಾಡಿ
ನನ್ತಂದೆ ತಾಯಿ ಸಾಕ್ಷಿ ಮೆಟ್ಟೋದಿಲ್ಲ | ೪೩೦

ತಂದೆ ತಾಯಿ ಸಾಕ್ಷಿ ಮೆಟ್ಟೋದಿಲ್ಲಾ"ಂತ್ಹೇಳಿ
ಬಂದು ತಬ್ಬಿದರು ಹರಳಯ್ನ |

ಬಂದು ತಬ್ಬುದರಲ್ಲೆ ಮಾನ್ಯ ಹರುಳಯ್ಯನ
ಪ್ರೀತಿಯಿಂದ ಮುದ್ದಾಡಿದರು ಬಸವಣ್ಣ|

"ಯಾಕಪ್ಪ ನನ್ನ ಗುರುವೆ ನನ್ನ ಮುಟ್ಟುಕೊಂಡ್ರಿ ಬಸವಣ್ಣ
ಕೆಟ್ಟೊಲಿಯಾ ಮಾದುಗರ ನೀ ಮುಟ್ಟಬವುದ |

ಕೆಟ್ಟೊಲಿಯಾ ಮಾದುಗರ ನೀವು ಮುಟ್ಟಿದಲ್ಲಿ ಗುರುವೆ
ದುಷ್ಟ ಈ ಪಾಪ ಕಳಿಯಂತ ತರನೆಂಗ್ಯಾ?" |

ಹರುಳಯ್ಯಾಡಿದ ಮಾತು ಕೇಳಿದರು ಬಸವಣ್ಣ
ಹರಹರ ಎಂದು ಶಿರದೂಗಿ | ೪೪೦

"ಎಂತೆ ಮಾತ ಹೇಳಿದೆ ನನ್ನ ಮಾನುಭಾವರುಳಯ್ಯ
ಹೊಲೆಯಾಗ್ದೆ ಹುಟ್ಟುದೋರ ಮೊದಲೇಳು |

ಹೊಲೆಯಲ್ಲಿ ಹುಟ್ಟಿದಾರೆ ಈ ಜಗತ್ಯ ನನ ಕಂದ
ಹೊಲೆಯಾಗ್ದೆ ತಲೆಯಲ್ಲಿ ಹುಟ್ಟುವಾರ |

ಹೊಲೆಯಾಗ್ದೆ ತಲೆಯಲ್ಲಿ ಹುಟ್ಟುವಾರ ಹರುಳಯ್ಯ
ಹೊಲೆಯಾನಲ್ಲಪ್ಪ ಹೊನ್ನಯ್ಯ |

ಮಾದಿಗ ಎಂತ್ಪೇಳಿ ಹೇಳದಲ್ಲ ಹರುಳಯ್ಯ
ಮಾದಿಗನಲ್ಲಪ್ಪ ನೀ ಮಾಸರಣ |

ನೀನು ಮಾದುಗನಲ್ಲ ಕೇಳಪ್ಪ ಹರಳಯ್ಯ
ಆಡಿದ ಮಾತುಗೆ ತಪ್ಪುದವ್ನೆ ಮಾದೀಗ | ೪೫೦

ಮಾತುಗೆ ತಪ್ಪೆಡದೋರು ಹೊಲಯ ಮಾದಿಗರು ಕಾಣಪ್ಪ
ನೀವು ಸರಣರು ಕಾಣಪ್ಪ ಈ ಜಗದಲ್ಲಿ |

ಇಂತೆ ಮಾತನೆಲ್ಲ ಹೇಳಿದರೆ ಮೆಟ್ಟುಕೊಳತಾರೆಂದ್ಯಾ
ಈ ಕಲ್ಯಾಣ ಸಾಕ್ಷಿ ನಾ ಮೆಟ್ಟೋದಿಲ್ಲ |

ಜಂಗಮರ ಸಾಕ್ಷಿಯಾಗಿ ನಾ ಪಾದ ಇಕ್ಕೋನಲ್ಲ
ನಿಮಗಂದರೆ ಕಾಲ್ಗೆ ತಗುಲುಸಬೋದ ?" |

"ಇಂತೆ ಮಾತನೆಲ್ಲ ಹೇಳಿದರಲ್ಲ ಗುರು
ನೀವು ಪಂಥ ಮಾಡಿದಿರ ನನ್ನ ಜೊತೆಯಲ್ಲಿ |

ಆಸೆಯಾಗಿ ಮಾಡಿದ್ದು ಆನಂದುವಾದ ಪಾದ್ರಾಕ್ಷಿ
ನನ್ನಾಸೆಗೆ ಮೋಸ ನೀವು ಮಾಡಬವುದ | ೪೬೦

ಯಾರಿಗೆ ಕೊಡಲಪ್ಪ ಇಂತೆ ಆನಂದ ಪಾದ್ರಾಕ್ಷ್ಯಂ?"
ಎಂದು ಅಳುತ ಪೊಟ್ಟಣವ ಕಟ್ಟುತಾನೆ |

"ಅಳದೆ ಪೊಟ್ಟಣವ ಕಟ್ಟಪ್ಪ ಹರಳಯ್ಯ
ಅವು ತಾವೆ ತಾವೆ ಹೊಯ್ತಾವೆ ಕೈಲಾಸ್ಕೆ |

ನಾನು ಮೆಟ್ಟಿನಿಲ್ಲಾಂತ್ಹೆಳಿ ಸಂದೇಗ ಪಡಬೇಡ
ಅದ ಮೆಟ್ಟೋರ್ಗೆ ಕರ್ಮ ಬರುತೀದೆ |

ಅದ ಮೆಟ್ಟೋರ್ಗೆ ಕರ್ಮ ಬರುತ್ತದೆ ಹರಳಯ್ಯ
ಸಾರಿ ಹೇಳಿ ನೀವಿನ್ನ ಜೊತಿಯಲ್ಲಿ |

ಸಾರಿ ಹೇಳಿ ನೀವಿನ್ನು ಜೊತೆಯಲ್ಲಿ ಹರಳಯ್ಯ
ಹೊತ್ತಾಯ್ತು ಹೋಗಪ್ಪ ನಿನ್ ಗುರುಮಠಕೆ" | ೪೭೦

ಹೊತ್ತುಗೊಂಡು ಪಾದ್ರಾಕ್ಷಿ ಕಂಬಳಿ ಗ್ಹಾಟೇಲಿ
ಅರವತ್ತಾರ್ ಬಾಗ್ಲು ಬುಟ್ಟು ಹೊರಟನು |

ರಾಜ ಬೀದಿ ಒಳಗೆ ಬರುತಿದ್ದರು ಹರುಳಯ್ಯ
ಎದುರಾಗಿ ಬಂದ ಮದುವರಸು |

ಅಜ್ಜು ಬೀಡಿನ ಅಳಿಯ ಮದುವರಸು ಬ್ರಾಮಾಣ
ಬಂದು ಹರಳಯ್ನ ತಡುಕೊಂಡ |

"ಎಲ್ಲೋಗಿದ್ದೆ ಹರುಳ ನೀ ಎತ್ತ ಕಡೆ ಹೋಗಿದ್ದೆ
ಏನು ನಿನ್ನ ಕಂಬಳಿ ಮುಗುಟಾವು? |

ಕಂಬಳಿ ಗ್ಹೋಟಲ್ಲಿ ನೀ ಸೇದುಕೊಂಡೀರೋದೇನ
ಹೇಳು ಹರಳ ನನ್ನ ಜೊತೆಯಲ್ಲಿ" | ೪೮೦

"ಏನು ಹೇಳ್ಲಿ ಮದುವರಸೆ ನಿನ್ನ ಜೊತೆಯೊಳಗೆ
ಆ ಮಾನವೀನದ ಮಾತ ನಾ ಹೇಳಲಾರಿ |

ದೊಡ್ಡ ಪಾದದ ದೊರೆ ಕಲ್ಯಾಣ್ದ ಬಸವಣ್ಣ
ಅವ್ರಗ್ಗೆ - ಮಾಡಿದ್ದ ಎರಡು ಚಮ್ಮಾಳ್ಗೆಯಾ" |

"ಅನಂತ್ರ ಏನಾಯ್ತು ಹೇಳೋ ಹರುಳ" ಎಂದು
ಅವ-ಎಕ್ಕ ಸೊಕ್ಕುದ ಮಾತ ಆಡುತಾನೆ |

"ದೊಡ್ಡವರ ಬಾಯ್ನಲ್ಲಿ ಹರುಳ ಅನ್ನಿಲ್ಲವಲ್ಲೊ
ಇಂತೆ-ಆಂಕಾರ ಬ್ಯಾಡ ನಿನ್ಗೆ ಮನದಲ್ಲಿ" |

"ಹರುಳ ಎನ್ನದೆ ನಿನ್ನ ಬುದ್ಧಿ ಎನ್ನಲುಬೇಕ?
ಇದ್ಮಾತ ಹೇಳು ನನ್ನ ಜೊತೆಯಲ್ಲಿ" | ೪೯೦

"ಇದ್ದೂ ಮಾತೇನಿಲ್ಲ ದೇವುರು ಬಸವಣ್ಣೋರ್ಗೆ
ಎರಡು ಪಾದ್ರಾಕ್ಷಿ ಮಾಡ್ಕೊಂಡು |

ಎರಡು ಪಾದ್ರಾಕ್ಷಿ ಮಾಡ್ಕೊಂಡು ಹೋಗಿದ್ದೆ
ಅವುರೊಪ್ಪುನಿಲ್ಲ ನನ್ನ ಬಸವಣ್ಣ" |

"ಯಾತಾಕೊಪ್ಪನಿಲ್ಲೋ ಏನೋ" ಅನ್ನತಾನೆ ಮದುವರಸು
"ಅದ್ಯಾಕೊ ಕಾಣಪ್ಪ ನನ್ಗೆ ತಿಳಿಯಾದು |

ನೀ ಮಾಡಿರುವ ಪಾದ್ರಾಕ್ಷಿ ಕೈಲಾಸ್ಕೆ ಹೊಯ್ತಾವೆಂದು
ವಾಪ್ಸಿ ಕಳುಗಿದರು ನನ್ನ ಗುರುಸ್ವಾಮಿ" |

ಕೈ ತಪ್ಪೆ ಹೊಡಕೊಂಡು ನಗುತಾನೆ ಮಧುವರಸು
"ಕಾಸಿಲ್ಲದೋರ್ ಮಾತು ಇದೆ ತಾನೆ? |

ಕಾಲಿನ ಎಕ್ಕಡ ಕೈಲಾಸ್ಕೆ ಹೋದವೇನೊ
ರೊಕ್ಕವಿಲ್ಲದೆ ಹೇಳವ್ನೆ ಬಸವಣ್ಣ |

ಚೆನ್ನಾಗಿ ಮಾಡಿರುವುದು ಕಾಲಿನ ಎಕ್ಕುಡವ
ಕ್ರಾಯ ಹೆಚ್ಚಾಯ್ತಾದೆ ಎಂದು ಹಾಗ್ಹೇಳುವುನೆ |

ಕ್ರಾಯ ಹೆಚ್ಚಾಯ್ತಾದೆ ಎಂದು ಹಾಗೆ ಹೇಳವನೆ ಬಸವಣ್ಣ
ಎಕ್ಕಡ ಕೈಲಾಸ್ಕೋಗೋದು ನಿಜವೇನೊ

ಬಿಕ್ಷ ಮಾಡೊ ಬಸವಣ್ಣೆ ರೊಕ್ಕವೆಲ್ಲಿಂದ ಬಂತು
ರೊಕ್ಕವಿಲ್ಲದೆ ಹೇಳವ್ನೆ ಹೊಸ ಮಾತ |

ಕಂಬಳಿ ಗ್ಯೋಟೀನ ಬೆಡಗು ಆ ಗಂಟನ್ನೆ ಬಿಚ್ಚಾಕು
ಅದೆಂಗೆ ಮಾಡಿದ್ದೀಯಾ ಸೊಲ್ಪ ನೋಡುತೀನಿ |

ರೊಕ್ಕವಿಲ್ಲದ ಜನಕೆ ಬೋ ಚನ್ನಾಗಿ ಮಾಡ್ತೀಯ
ನಮಗ್ಯಾಕೆ ಮಾಡಬಾರ್ದು ಈ ತೆರನಾಗಿ ?" |

ಕಂಬಳಿಗಂಟಿ ಬಿಚ್ಚಿ ಮಡುಗವ್ನೆ ಪಾದ್ರಾಕ್ಷ್ಯ
ತಳತಳನ ಪಾದ್ರಾಕ್ಷಿ ಹೊಳೆಯೀತು |

"ಗೊಂಡೆದಾರ ನೋಡು ಈ ಹರಳುಗಳ ಮೆಟ್ಟಿರೋದ ನೋಡು
ಇದೆಲ್ಲಿ ಕಲಿತಿದ್ಯೊ ಹರಳಯ್ಯ |

ಇಂತೆ ಕೆಲ್ಸ ಮಾಡ್ತನಂತ ನಾನು ತಿಳಿದಿರನಿಲ್ಲ
ನೀನು-ಕೆಲ್ಸಗಾರ ಕಾಣೊ ಹರುಳಯ್ಯ |

ಕ್ರಾಯ ಎಷ್ಟು ಹೇಳು ನಾ ಕೊಂಡುಕೊಳುತೀನಯ್ಯ
ನಡೆಯ ಮಾತ್ಹೇಳಾ ಹರುಳಯ್ಯ" |

"ಬೆಲೆಯ ಹೇಳುವನಲ್ಲ ಕ್ರಾಯ ಹೇಳುವನಲ್ಲ
ನೀ ಬಂದ ದಾರೀಲೆ ಹೋಗು ಮಧುವರಸೆ |

ಬಂದ ದಾರೀಲೆ ಹೊಗೊ ಮಧುವರಸೆ ಬ್ರಾಮಣ
ಆ ಪಾದ್ರಾಕ್ಷಿ ಗೊಡುವೆ ನಿನುಗ್ಯಾಕ?" |

"ಕಾಸಿಗೆ ಗತಿಯಿಲ್ಲವ ಕೊಡುವುದಕೆ ಯೊಗ್ಯತೆ ಇಲ್ಲ
ಇದ-ಕೊಂಡುಕೊಳುವ ಶಕ್ತಿ ನನಗಿಲ್ಲ? |

ಕೊಂಡುಕೊಳ್ಳುವ ಶಕ್ತಿ ನನಗಿಲ್ಲವೇನೊ ಹರಳ
ಬಾಳ ಸುಲಭದ ಮಾತ ಹೆಳುತ್ತಿಯೇ |

ಈ ಚಮ್ಮಾಳ್ಗೆಯಿಂದ ಬಂದುದ್ದೆಲ್ಲಾ ಬರ್ಲಿ
ಇಕ್ಕುಲ್ಯ ನನ್ನ ಪಾದವನ್ನೆ |

ಉಂಗುಷ್ಠ ಪಟ್ಟಿ ಸರಿಯಾಗಾದರೆ .
ನೀ ಹೇಳುವಷ್ಟು ರೊಕ್ಕ ನಾ ಕೊಡುತೀನಿ" |

"ಕೆಟ್ಟು ಮೂರು ಜಿನವಲ್ಲೊ ನನದುಷ್ಟು ಬ್ರಾಮಣಯ್ಯ
ಆ ದೊಡ್ಡವರ ಪಾದ್ರಾಕ್ಷಿ ನಿನಗ್ಯಾಕೆ |

ಆ ಸತ್ತವಂತರ ಪಾದಕ್ಕೆ ಮಾಡಿರುವ ಪಾದ್ರಾಕ್ಷಿ
ಅದೆ ಮೆಟ್ಟಿ ಬ್ರಾಮಣ ನೀನು ಕೆಡಬ್ಯಾಡ" |

"ಬ್ರಹ್ಮಪಿಂಡದೊಳಗೆ ನಾ ಹುಟ್ಟಿದ ಬ್ರಾಮಣ
ನನಗಿಂತ ಹೆಚ್ಚ ನಿನ್ನ ಬಸವಣ್ಣ |

ನನಗಿಂತ ಹೆಚ್ಚ ತಿರುಪೆ ಮಾಡೊ ಬಸವಣ್ಣ?"
ಅಂತ-ಎತ್ತೀದ ಕಾಲ ಪಾದ್ರಾಕ್ಷಿಗೆ |

ಕಾಲುಗಳ ಎತ್ತುದಾಗ ಅವು ಕೈಲಾಸ್ಕೆ ಹೊಂಟೋದೊ
ಮಾಯಾವಾಗಿ ಹಾರಿ ಹೊಂಟೋದೊ |

ಹರಳಯ್ನ ಪಾದ್ರಾಕ್ಷಿ ಕೈಲಾಸ್ಕೆ ಹೊರಟೋದೊ
ಇವ-ಭಗ್ನನೆ ಕತುಕೊಂಡ ಮಧುವರಸ |

ಭಗ್ನಭಗ್ನನೆ ಉರಿ ಎದ್ದು ಧಿಗ್ಗು ಧಿಗ್ಗುನೆ ಉರಿದು
ಅವ ಜಗ್ಗು ಜಗ್ಗುನೆ ಬ್ರಾಮಣ ಕುಣೆದಾನೊ |

ಮೂರು ಸಾರಿ ಹತ್ತಿ ಫಕ್ಕನೆ ಕೆಟ್ಟೊಯ್ತು
ಉರಿ ಹೊಪ್ಪಲೆ ಅವನ ಮೈಯಲ್ಲಿ |

ಬಾಯ್ ಬಾಯಿ ಬಡಿಕೊಂಡು ಬಿದ್ದೊಡಾವನೆ ಬ್ರಾಮಣ
ಓಡು ಬಂದು ಬಿದ್ದ ತಮ್ಮನೆಯಲ್ಲಿ |

ಮನೆಯೊಳಗೆ ಬಿದ್ದುಕೊಂಡು ಹೊರಳಾಡುತಾನೆ ಮಧುವರಸ
ಹಾಳಾದ ಉರಿಜ್ವಾಲ್ಯ ತಾಳನಾರ |

"ಯಾರಾರಮ್ಮ ಯಾರ್ರೊ ನನ್ನ ನೀರಿನ ಗೌಡಿರೆ
ನನ್ನೂರು ಮುಂದಲ ಕೊಳುಕ್ಹೋಗಿ |

ನನ್ನೂರ ಮುಂದಲ ಕೊಳಕೋಗಿ ಗೌಡೀರೆ
ತಣ್ಣೀರಾಗಣಿಯ ತನ್ನಿರಮ್ಮ |

ತಣ್ಣೀರಾಗಣಿಯ ತಂದು ಬ್ಯಾಗನೆ ನೀವು
ನನ್ನ ಮಂಡೀಗೆ ಬ್ಯಾಗ ಎರೀರಮ್ಮ |

ನನ್ನ ಮಂಡೀಗೆ ಬ್ಯಾಗ ಎರೀರಮ್ಮ ಗೌಡೀರೆ
ನಾ-ಯಮಲೋಕಕ್ಕೆ ಹೋಗೊ ಗತಿ ಬಂತು" | ೫೬೦

ಯಾರಿಂದೇನಾಯ್ತಪ್ಪ ನಮ್ಮ ಮಧುವರಸಂತ್ಹೇಳಿ
ಸುತ್ತು ಮುತ್ತುಗೆಯಾಗಿ ಅಳುತಾರೆ |

"ಮಾತನಾಡಣ ಅಂದರೆ ಈ ಜ್ಯಾಲೆ ಬ್ಯಾದಿಯಲ್ಲೆ
ನಾ ತಾಳನಾರೆನವ್ವ ಈ ಜಗದಲ್ಲಿ |

ಜಲ್ದಿ ಜಲ್ದಿ ಹೋಗಿ ನನ್ನುರಿ ಬೊಬ್ಬೆ ತಪ್ಪುಲಿ
ಉರಿ ತಪ್ಪುದ ಮೇಲೆ ನಾನು ನಿಮ್ಗೇಳ್ತೀನಿ" |

ಹಿತ್ತಾಳೆ ಬಿಂದ್ಗೆ ತಗುದು ಕಂಚಿನ ಬಿಂದ್ಗೆ ತೆಗ್ದು
ಗೌಡೀರು ಕೊಳಕ್ಕೆ ಹೊರಟಾರು |

ಊರಾ ಮುಂದಲ ಕೊಳಕೆ ಬಂದರು ಗೌಡೀರು
ನೂರೊಂದು ಬಿಂದಿಗೆ ನೀರ ಮೊಗಿದಾರು | ೫೭೦

ನೀರನ್ನೆ ಹೊತ್ತುಕೊಂಡು ಜಟ್ಟ ದಟ್ಟನೆ ಬಂದು
ಎರೆದಾರು ಮಧುವರಸನ ಮಂಡೀಗೆ |

ಮಧುವರಸಯ್ಯಾನ ಮೇಲೆ ಆ ತಣ್ಣೀರು ಬಿದ್ದಾಗ
ಮತ್ತಷ್ಟು ಬೆಂಕಿ ಹಚ್ಚುದಾಗೆ |

ಹಾರ್ಹಾರಿ ಬೀಳಾತ್ತಾನೆ ಉರಿ ಉರಿ ಅನುತಾನೆ
"ಅವ್ವ-ಬಿಸಿ ನೀರ್ತಂದು ನನ್ಗೆ ಎರಿಬವುದೆ?" |

"ಬಿಸಿ ನೀರು ಎಲ್ಲಿ ಬಂತು ಇದು ಹಸು ನೀರು ಬ್ರಾಮಣ
ಇದು ತಣ್ಣೀರು ಕಾಣಪ್ಪ ಮಧುವರಸೆ" |

"ನನ್ನ ಉರಿಯ ಜ್ಯಾಲಿಗೆ ನನ್ನ ಮನಸು ಹಂಗಿರಬವುದು
ನನ್ನಾಸೆ ಇನ್ನು ನೀವು ಮಡ್ಗಬೇಡಿ | ೫೮೦

ನನ್ನಾಸೆ ಯಾರೂ ಮನದಲ್ಲಿ ಇಡಬ್ಯಾಡಿ
ನಾ-ಯಮ ಲೋಕಕೋಗೊ ಗತಿ ಬಂತು |

ಕಲ್ಯಾಣಕ್ಕೆ ಸರಣು ಕೈಲಾಸಕ್ಕೆ ಸರಣು
ಅಲ್ಲಿರುವ ಬಸವಣ್ಣನಿಗೆ ಸರಣಪ್ಪು |

ನಿನ್ಗೆ ಮಾಡಿದ ಪಾದ್ರಾಕ್ಷಿ ಈ ಹರಳಯ್ಯನಿಂದ ಕೇಳಿ
ಇಂತ ನವನರ್ಕಕೆ ನಾನು ಗುರಿಯಾದೆ |

ಪ್ರಾಣವ ಬಿಟ್ಟರೆ ನಿನ್ಗೆ ಕೆಟ್ಟೆಸರು ಬಸವಣ್ಣ
ಕಾಪಾಡಿ ಕಲ್ಯಾಣ್ದ ಬಸುವೇಶ |

ಕಾಪಾಡು ಕಲ್ಯಾಣ್ದ ಬಸವೇಶ" ಎನುತ್ಹೇಳಿ
ಎತ್ತಿ ಎರಡ್ಕರವ ಮುಗಿದಾನು | ೫೯೦

ದೇವರು ಬಸವಣ್ಣೊರ್ಗೆ ಬ್ಯಾಗದಲ್ಲರುವಾಗಿ
ನಮ್ಮ ಮಾನ್ಯ ಹರುಳಯ್ಗೆ ಅರುವಾಗಿ |

"ಮಧುವರಸ ಪ್ರಾಣವ ಬುಡುತನಲ್ಲ ಗುರುವೆ
ಅವ ಸತ್ತರೆ ನಿಮಗು-ಅವಿಮಾನ |

ಅವ ಸತ್ತರೆ ನಿಮಗು ಅವಿಮಾನ ಬಸವಣ್ಣ
ಅವ ಸತ್ತರೆ ನನಗು ಅವಿಮಾನ" |

ಹಾಗಂತ ಹರುಳಯ್ಯ ಮನದಲ್ಲಿ ನೆನದಾಗ
ನಮ್ಮ ಗುರು ಬಸವಣ್ಣನಿಗೆ ಅರಿವಾದೊ |

ಆಗ ಬಸವಣ್ಣನೊರು ಅವ್ರ ಪಾದುಕ್ಕೆ ಅರುವಾಗಿ
ಮಾಯಾದ ದೊಂಬಾರ ಕಳುಗಿದರು | ೬೦೦

ಮಧುವರಸಯ್ಯನ ಬೀದ್ಗೆ ದೊಂಬರಾಟ ಬಂತು
ಆಡುತಾರೆ ದೊಂಬಾರು ಒಂದು ತೆರನಾಗಿ |

ಗಣವನ್ನೆ ಹೊತ್ತುತಾರೆ ದೋಳನ್ನೇ ಬಡಿತಾರೆ
ಗಣುದ್ಮೇಲ್ ಕೈ-ಬುಟ್ಟು ಆಟ ಆಡುತಾರೆ |

ಆಡುವ ದೊಂಬಾರ ನೋಡಿದರು ಗೌಡೀರು
"ಅವ್ವ-ಇಂದೆ ಬರಬವುದ ಇಂತೆ ಹೊಸ ಆಟ |

ಇಂತೆ ಗಣವ ಹತ್ತೋನ ನಾವು ನಾವೆಲ್ಲು ಕಂಡಿರನಿಲ್ಲ
ಆ ದೊಂಬರ ದೋಣನ ಬವುಣ ನೋಡಿರಪ್ಪ |

ಎಂತೆ ಬಾವುಣವಾಗಿ ಆ ದೋಳನ್ನೆ ಹೊಡಿತಾರೆ
ಇಂತೆ ಸಂತೋಷವೆ ನಿಮ್ ಬೀದ್ಗೆ ಬರಬವುದೆ" | ೬೧೦

ಬಿಂದಿಗೆ ಇರೀಕೊಂಡು ಸಂದು ಸಂದ್ಗೆ ಸೇರಿಕೊಂಡು
ನೋಡುತಾರೆ ದೊಂಬಾರ ಆಟವ |

ನೋಡುತಾರೆ ಗೌಡೀರು ದೊಂಬಾರ ವಿದ್ಯಾವ
"ನೀರುಗೆ ಹೊತ್ತಾಯ್ತು ನಡೀರವ್ವ |

ಬುಟ್ಟನೆ ಮಧುವರಸ ಕಟ್ಟಾಕಿ ಹೊಡಿತಾನೆ"
ಎಂದು ಹೊರುಟೋದ್ರು ನೂರು ಜನ ಗೌಡೀರು |

ನೂರೊಂದ್ಜನದ ಪೈಕೀಲಿ ನೂರು ಜನ ಹೊರಟೋದ್ರು
ಒಬ್ಬ ಕಣ್ಣು ಕಾಣದಜ್ಜಿ ನೀರಿನ ಬೋರಮ್ಮ |

ದೊಂಬರ ವಿದ್ಯಾ ತೀರಿತು ಗಣವನ್ನೆ ಕಿತ್ತುಕೊಂಡು
ಅವ್ರು ಪೊಟ್ಟಣ ಕಟ್ಟೋಗ ಹುಡುಕುತಾಳೆ | ೬೨೦

ಪೊಟ್ಟಣ ಕಟ್ಟೊಕೊಂಡಾಗ ಹುಡುಕುತಾಳಜ್ಜಮ್ಮ
ನೂರು ಜನರ ನೀರ ಗೌಡೀರ |

"ಎಲ್ಲೆಲ್ಲಿ ಹುಡುಕಿದರು ಆ ಗೌಡೀರೆ ಇಲ್ಲವಲ್ಲ
ಸೂರ್ಯ ಮುಳುಗಿ ಸಂದೆ ಆಯಿತಲ್ಲ |

ಕತ್ತಲೆ ಆಯಿತಲ್ಲೊ ನಾಯತ್ತಲಾಗೋಗಲಿ
ನಾ ಎಲ್ಲೋಗಿ ನೀರ ಮೊಗೆಯಲಿ |

ಬರಿ ಬಿಂದ್ಗೆ ಕೊಂಡೋದ್ರೆ ನನ ಬುಟ್ಟಾನ ಮಧುವರಸ
ಕಟ್ಟಾಕಿ ನನ್ನ ಹೊಡಿಯಾನು |

ಕಟ್ಟಾಕಿ ನನ್ನ ಹೊಡೆಯೋನು ಮಧುವರಸ
ನನಗ್ಯಾರೂ ಗತಿಯಿಲ್ಲವಲ್ಲ ಪರಶಿವನೆ | ೬೩೦

ಕಾಪಾಡಪ್ಪ ಬಸವಣ್ಣ ಈ ಪಾಪ ಮಾಡಿದ ಮುಂಡ್ಯ"
ಎಂದು ಕಲ್ಯಾಣಕ್ಕೆ ಕೈಯ ಮುಗಿದಾಳು |

ಎತ್ತಿ ಕೈಯ ಮುಗಿದ ಕಲ್ಯಾಣ್ಬ ಗುರುಮಠಕೆ
ಅವಳು ಕತ್ತಿನ ಲಿಂಗ ಮಗುವಾಯ್ತು |

ಕತ್ತಲಿರುವ ಲಿಂಗ ಒಳ್ಳೆ ಸಣ್ಣ ಜಂಗಮನಾಗಿ
ಅಜ್ಜಮ್ಮನ ಕೈಯ ಹಿಡಿದೀತು |

"ಯಾಕಮ್ಮ ಅಜ್ಜಮ್ಮ ನೀ ಒಬ್ಳೆ ಅಳುತೀಯೆ
ಎಲ್ಲಿಗೋಗಬೇಕು ನನಗೇಳು |

ಎಲ್ಲಿಗೋಗಬೇಕು ನನ್ಗೇಳು ಅಜ್ಜಮ್ಮ
ಅಲ್ಲೆ ಕೈ ಹಿಡಿದು ಕರ್ಕೊಂಡು ನಾ ಹೋಗುತ್ತೀನಿ" | ೬೪೦

"ಮಧುವರಸಯ್ನ ಮನೆಗೆ ನಾ ಗಂಗೆಯ ಹೊರಬೇಕು
ಈ ಊರ ಮುಂದ್ಲ ಕೊಳವ ತೋರಪ್ಪ" |

"ಇದಾಕ್ಕಾಗಿ ಅಳುತೀಯಾ ನೀ ನಡಿಯವ್ವ" ಅನುತ್ಹೇಳಿ
ಕೈ ಹಿಡಿದು ಅಜ್ಜಮ್ಮನ ಕರತಂತು |

ದೇವುರರುಳಯ್ಯನವರ ಕಕ್ಕೆ ಸೊಪ್ಪನ ಮಠ
ಅವ್ರ ಮದರಂಗ ಕೊಳಕೆ ಕರತಂದ |

ಮದರಂಗನ ಕೊಳ ಅಂದ್ರೆ ಮಾನ್ಯ ಹರುಳಯ್ಯ
ಚರ್ಮಗಳ ಹದಮಾಡೋ ಕೊಳವಲ್ಲೊ |

ಆ ಕೊಳದ ಬಳಿಯಾ ಒಳ್ಗೆ ಅಜ್ಜಮ್ಮನ ನಿಲಿಸಿಬುಟ್ಟು
ಆ ಬಿಂದಿಗೆ ಕೊಡವ ಮೊಗೆದಾನೊ | ೬೫೦

ಒಂದು ಬಿಂದಿಗೆ ನೀರ ಆ ಬಾಲಕನು ಮೊಗೆ ತಂದು
ಅಜ್ಜಮ್ಮನ ನೆತ್ತಿಗೆ ಹೊರಸೀತು |

ಅಜ್ಜಮ್ಮ ತಲೆಮ್ಯಾಲೆ ಈ ನೀರ ಮಡಿಗಿದಾಗ
ಆ ನೀರು ಮರುಗ ಮಲ್ಲಿಗೆ ಹೊಸ ಗಮನ |

ಎಂದು ಇಲ್ಲದ ನೀರ ಇಂದೇನು ದೇಕರಿಸೀವು
ಇಂದು ಹರುಳಯ್ನ ಮನೆಯ ಆಗ್ನಿಯೆಂದ |

ಹೊತ್ಕೊಂಡು ಬರುತಾಳೆ ಕೈ ಹಿಡಿದವ್ನೆ ಬಾಲಕನು
ಮಧುವರಸಯ್ಯನ ಮನೆಗೆ ಬಿಡುತ್ತಾನೆ |

ಮಧುವರಸಯ್ಯನ ಮನೆಗೆ ಬಿಟ್ಟು ಮಾಯಾವಾದನು ಬಾಲಕ
ಮಾಯ್ದಲಿ ಲಿಂಗವಾದ ಕೊರಳಿಗೆ | ೬೬೦

ಕತ್ತಿಗೆ ಲಿಂಗವಾದ ಆ ಪುತ್ರ ಜಂಗುಮನು
ಹೊತ್ತಂದ ಆಗಣಿಯಾ ಒಳಗಡೆ |

"ಎಲ್ಲಾರು ಬಂದ್ರಲ್ಲಾ ಅಜ್ಜಿ ಬರಲಿಲ್ಲಾವಲ್ಲ
ಅವುಳ್ಗೆ ಸಂಬಳ ಕೊಡಬವುದ ಅನ್ಯಾಯವಾಗಿ |

ಕಣ್ಣು ಕಾಣದ ಮುಂಡ್ಯ ನನ್ಮನೆಯಲ್ಲಿ ಇರಿಸಿಕೊಂಡು
ಒಂದು ಕೆಲ್ಸವು ಇಲ್ಲ ನನ್ ಮನೆಯಲ್ಲಿ |

ಕಷ್ಟಾದ ಕಾಲ್ದಲ್ಲಿ ನೀರುಗೋದ ಮುಂಡೆ
ಅವಳನ್ನು ನೀರ ತರನಿಲ್ಲ" |

ರೇಗಿ ರೇಗಿ ಬೀಳುತಿದ್ದ ಅಷ್ಟೊತ್ಗೆ ಬಂದಳಜ್ಜಮ್ಮ
ಆ ದೇವರು ಬಸವಣ್ಣನ ನೆನಿದಾಳು | ೬೭೦

ಮಾನ್ಯ ಹರುಳಯ್ನ ತನ್ನ ಮನದಲ್ಲಿ ನೆನುಕೊಂಡು
ಅವರ ನೆತ್ತಿಯ ಮ್ಯಾಲಾಗಣಿಯ ಎರಿದಾಳು |

ನತ್ತಿಮ್ಯಾಲಾಗಣಿಯ ಅಜ್ಜಮ್ಮ ಎರಿದಾಗ
ತಪ್ಪೋಯ್ತು ಮಧುವರಸನ ಉರಿ ಬೊಬ್ಬೆ |

ಉರಿಯೆಲ್ಲ ತಪ್ಪೋಯ್ತು ಬೊಕ್ಕೆವೆಲ್ಲ ಮರುಸೋಯ್ತು
ಇದ್ದಾಂಗೆ ಆದ ಆ ಮಧುವರಸು |

ಇದ್ದಾಂಗೆ ಆದ ಆ ಮಧುವರಸು ತಾನು
ಹರುಸುವಾಯಿತು ಅವನ ರುದಯಕ್ಕೆ |

"ನನ್ನ-ಜನ್ಮ ಪಾವನ ಮಾಡ್ದ ಅಜ್ಜಮ್ಮನ ಬೈಯ್ ಬೇಡಿ
ಆ-ಅಜ್ಜಮ್ನ ಸ್ವಲ್ಪ ಬರ ಹೇಳಿ | ೬೮೦

ನೀರು ತಂದಜ್ಜಮ್ಮನ ಬೇಗ ಕರೆತನ್ನಿ" ಅನುತ್ಹೇಳಿ
ಆಳ ಮೇಲೆ ಆಳ ಕಳುಸೀದ |

ಬಂದಂತ ಆಳುಗೊಳ ನೋಡಿದ ಅಜ್ಜಮ್ಮ
"ಕಂದಾನೆ ನಾ ಬಲ್ಲಿ ನನ್ ಹೊಡೆಯೋದಕೆ |

ಇಷ್ಟು ಹೊತ್ತುನ್ತನ್ಕ ನೀ ಎಲ್ಲಿಗೆ ಹೋಗಿದ್ದೆ ಎಂದು
ಹೊಡೆಯಾಕೆ ಕರದವ್ನೆ ನನ್ನ ಮಧುವರಸು |

ಪಾಪ ಮಾಡಿದ ಮುಂಡ್ಯ ಕಾಪಾಡು ಬಸವಣ್ಣ," ಎಂದು
ಗಡಗಡನೆ ಒದುರಿ ಹೊರಟಳು |

ಅಂಜುತ ಅಳಕುತ ಜೀವ ಕೈಯಲ್ಲಿ ಹಿಡಿದು
ಮುದುರಿ ಮುದ್ಯಾಗಿ ಬಂದ ಸಂಧನಕೆ | ೬೯೦

ಮುದುರಿ ಮುದ್ಯಾಗಿ ಅವನ ದಾರಿಗೆ ನಿಂತುಕೊಂಡು
ಜೋಡಿಸಿ ಎರಡು ಕರವ ಮುಗಿದಾಳು |

"ಸತ್ಮವಂತೆ ತಾಯಿ ನನಗೆತ್ತಿ ಕೈಯ್ಲು ಮುಗಿಬ್ಯಾಡ
ನೀ ಕೈಯ ಮುಗಿದಾರೆ ಕರ್ಮ ನನ್ಗೆ ಬರುತ್ತಿದೆ |

ಹೆತ್ತಮ್ಮ ಕೈಮುಗಿದಾರೆ ನನ್ಗೆ ಮಾಹಾಪಾಪ ಬರುತೀದೆ
ನೀ-ನೀರ್ತಂದ ಜಾಗ್ಯ ಮೊದಲೇಳು |

ಎಲ್ಲಿ ತಂದೆ ತಾಯಿ ಸುವ್ವಾಸನವಾದ ನೀರ
ಭಯಪಡಬೇಡ ಹೇಳು ನನ್ನ ಜೊತೆಯಲ್ಲಿ" | ೭೦೦

ಬ್ರಾಮಣಾಡಿದ ಮಾತ ಕೇಳವ್ಳೆ ಅಜ್ಜಮ್ಮ
ಮರುಸುಕೊಂಡ್ಯಾಗ್ಹೇಳ್ಳಿ ಇವ್ನ ಜೊತೆಯಲ್ಲಿ |

"ದೊಂಬರಾಟ ನೋಡ್ತ ನಾವೆಲ್ಲ ನಿಂತಿದ್ವಿ
ಸಂದೆಯಾಯ್ತು ಇವ್ರು ನನ್ನ ಕರೀನಿಲ್ಲ |

ಕತ್ತಲೆ ಆದಾಗ ಒಬ್ಬ ಸಣ್ಣ ಜಂಗುಮ ಬಂದು
ಓಡುಕೊಂಡ ಮಧುವರಸು ನನ್ ಮುಂಗ್ಯೆಯ |

ಮೊದಲೋಗುತ್ತಿದ್ದ ಕೊಳಕ್ಕೆ ನನ್ಗೆ ದಾರಿಯು ಕಾಣಲಿಲ್ಲ
ಬಂದು ಕಕ್ಕೆ ಸೊಪ್ಪಿನ ಮಠಕ್ಕೆ ನನ್ನ ಕರದೊಯ್ದ |

ಆ ಕಕ್ಕೆ ಸೊಪ್ಪಿನ ಮಠದ ಮುಂದೆ ತಾವರೆ ಹೂವಿನ ಕೊಳ
ಆ ಕೊಳದಾಗಾಣಿಯ ನಾನು ತಂದನಪ್ಪ" |

ಅಜ್ಜಿ ಆಡಿದ ಮಾತ ಅರ್ಥ ಮಾಡಿಕೊಂಡು ಬ್ರಾಮಣ
ಹಿಗ್ಗಿದ" ಅವನ ಸಿರುತೇರ್ಥ | ೭೧೦

ಯಾರ ಮನೆ ಕೊಳದ್ದಲ್ಲ ಹರಳಯ್ನ ಮನೆ ಕೊಳ
ಅವುನೆಂತೇವ್ನಾಗಿರಬಹುದು ಘನಸರಣ? |

ಆ ಹರುಳಯ್ನ ನಿಂದೀಸಿ ನಾ ಕೆಟ್ಟು ಬೆಂದೆನಲ್ಲ
ಈಗವನ ಮನೆಯ ಸಿರುತೇರ್ಥ |

ಈಗವನ ಮನೆಯ ಸಿರುತೇರ್ಥ ನನ ಮಂಡೆಯ ಮೇಲೆ
ಬೀಳಲಾಗಿ ಪಾವನವಾಯ್ತು ನನ ರುದಯವು |

ಪಾವನವಾಯ್ತು ನನ್ನ ರುದಯವು ಎಂದು
ಹಿಗ್ಗಿಗ್ಗಿ ಮಧುವರಸ ನಗುತ್ತಾನೆ |

ಮಾಡಿದರೆ ಮಾಡಬೇಕು ಇಂತ ಒಳ್ಳೆ ನಂಟ
ಮಾಡದೆ ಹೋದರೆ ಫಲವೇನು | ೭೨೦

ಮಾನ್ಯ ಹರುಳಯ್ಯನ ಮಹಿಮೇಯ ನಾ ಕಂಡಿ
ಆ ಶರಣಾನ ನೆಂಟ ಮಾಡ್ಸೇಕು |

ಸರಣ ಹರುಳಯ್ಯನಿಗೆ ಒಬ್ಬಳೆ ಹೆಣ್ಮಾಗಳು
ಆ ಹರುಳಯ್ನ ಮಗಳ ತರಬೇಕು |

ಹರುಳಯ್ನ ಮಗಳ ನನ್ ಮಗನೀಗೆ ತಂದಾರೆ
ನಮ್ಮ ಪಾಪಗಳೆಲ್ಲ ಪರಿಹಾರ" |

ತನ್ನ ಜೊತೆಗಾರರ ಕರೆಕೊಂಡು ಮಧುವರಸು
ಹರುಳಯ್ನ ಮಠಕೆ ಬರುತ್ತಾನೆ |

ಕುದುರೆ ಸಾರೋಟನ್ನೆ ಏರುಕೊಂಡು ಮಧುವರಸು
ಬಲು-ಪ್ರೇಮದಲ್ಲಿ ಬರುತ್ತಾನೆ
ಹರುಳಯ್ನ ಗುರುಮಠಕೆ | ೭೩೦

ಕಕ್ಕೆ ಸೊಪ್ಪಿನ ಮಠದ ಮುಂದೆ ನಿಂತುಕೊಂಡರುಳಯ್ಯ
ಬರುವ ಮಧುವರಸನ ನೋಡುತ್ತಾರೆ |

"ಎಂದು ಇಲ್ಲದ ಮಧುವರಸು ಇಂದ್ಯಾಕೆ
ಬಂದರೊ ನಾ ಕಾಣೆ
ಮಠವನೆ ಕೆಡುವ ದಿನ ಬಂತು |

ಮಠವನೆ ಕೆಡುವ ದಿನ ಬಂತಲ್ಲ ಕಲ್ಯಾಣ
ಅವುರುಗೊಂದು ಮಂಗಳಾರತಿಯಾ ಬೆಳಗೆ"ಂದು |

ಬಂಧ ಮಧುವರಸೀಗೆ ಒಂದಾರುತಿಯ ಬೆಳಗಿದರು
"ಸ್ವಾಮಿ ಬಂದಂತ ಬಗೆಯ ನಮಗ್ಹೇಳಿ |

ದೊಡ್ಡೋರು ಈವತ್ತು ಬಡುವನ ಮಠಕೆ ಬಂದೀರಲ್ಲ
ಸಂದೇಗವೇನ ಮೊದುಲ್ಹೇಳಿ | ೭೪೦

"ಕುಳುತುಕೊಳ್ಳಿ ಹರುಳಯ್ಯ ಹೇಳುತೀನಿ ಒಂದು ಮಾತ
ಲಾಲೀಸ್‌ಬೇಕಪ್ಪ ನಿನ್ ಮನದಲ್ಲಿ |

ಲಾಲೀಸಬೇಕಪ್ಪ ನಿನ್ ಮನದಲ್ಲಿ ಹರುಳಯ್ಯ"
"ಅಂತ ಮಾತೇನು ಸ್ವಾಮಿ ತಿಳಿಪಡಿಸಿ" |

"ನಿಮ್ಮ ಪಾದ್ಯಾಕ್ಷಿಯ ಕೇಳಿ ನಾ ಕೆಟ್ಟುದ್ದು ಗೊತ್ತಾಯ್ತೆ
ನಾ ಪಟ್ಟುಂತ ಕಷ್ಟ ನಿಮುಗೆ ತಿಳಿದಿಲ್ಲೆ" |

"ಕಾಲುನೆಕ್ಕುಡದಿಂದ ನಿಮಗೇನು ತೊಂದರೆ ಗುರುವೆ?"
"ಪರಿಹಾಸ್ಯ ಮಾಡಿ ಕೇಳುದನಲ್ಲ |

ಪರಿಹಾಸ್ಯ ಮಾಡಿ ನೀವು ಕೇಳಿದ ಕಾರಣದಿಂದ
ತೊಂದ್ರೆ ಇರಬಹುದು ನಿಮ್ಮನಕೆ"ಂದ | ೭೫೦

"ಸತ್ಯವಂತರು ಅಂದರೆ ಅವರೆಂತೇರ ಬಸವಣ್ಣ
ಅವರ್ಗೆ ಮಾಡಿದ್ದ ಪಾದ್ಯಾಕ್ಷಿ ಕೇಳಬಹುದ ?|

ಅವರು ಮಾಡಿದ್ದ ಪಾದ್ಯಾಕ್ಷಿ ಕೇಳಬಹುದ ಮಧುವರಸ
ಪಂಥ ಮಾಡಿ ನೀವು ಕೇಳಬಹುದ ?|

ಕಾಲಿನೆಕ್ಕಡ ಕೈಲಾಸ್ಕೆ ಹೋದವು ಅಂದ್ರಲ್ಲ
ಅವು ಹೋದವೊ ಇಲ್ಲೊ ಮೊದಲ್ಹೇಳಿ" |

"ಎಂತ ಮಾತ ಸರಣ ಮಾನ್ಯ ಹರುಳಯ್ಯ
ನೀ ಎಂತೇದ್ರಲ್ ಮಾಡಿದ್ದೊ ಶಿವ ಬಲ್ಲ" |

"ನಮ್ಮ ಗಂಡ ಹೆಂಡರ ತೊಡೆಯ ಚರ್ಮ ಅಳಿದು
ಮಧುವರಸು
ಮಾಡಿದ್ದೊ ಅವರಿಗೆ ಪಾದ್ಯಾಕ್ಷಿ" | ೭೬೦

"ಹಿಂಗೆ ಮಾಡುವರೆಂದು ನಾ ತಿಳಿದಿದ್ರೆ ಹರುಳಯ್ಯ
ನಾನು ನಿಲ್ಲಿಸಿ ಚರ್ಚೆ ಮಾಡೋನಲ್ಲ" |

"ಆದುದೆಲ್ಲ ಆಯ್ತು ಮುಂದೆ ಗುರುವೀನ ದಯಾವಿರಲಿ
ಈಗ ಬಂದ ಮಾತ್ಹೇಳಿ ನನ್ನ ಜೊತೆಯಲ್ಲಿ" |

"ನಾನು ಕೇಳುದು ಮಾತ್ಗೆ ನೀನುತ್ತರ ಹೇಳಬಾರ್ದು
ನೀನು ಸಂತೋಷ್‌ದಲ್ಲಿ ಮಾತ ಕೊಡಬೇಕು |

ನಿನಗೆ ಹುಟ್ಟಿರುವಂತ ಸುಂದರವಾದ ಮಗಳ
ಒಪ್ಪಿ ನನ್ನ ಮಗುನೀಗೆ ಕೊಡಬೇಕು |

ನಿನ್ನ ಮಗಳ ಕೊಟ್ಟು ನನ್ಮಗನೀಗೆ ಲಗ್ನ ಮಾಡಿದ್ರೆ
ನಾವು ಬೀಗ್ ಬೀಗರಾಗಿ ಮೆರೀಬವ್ದು" | ೭೭೦

ಹಂಗಂದ ಮಾತನ್ನ ಕೇಳಿದರು ಹರುಳಯ್ಯ
ಶಿವಶಿವ ಎಂದು ಸಿರುದೂಗಿ |

ಶಿವಶಿವ ಎನುತ್ಹೇಳಿ ಸಿರುದೂಗಿ ಹರಳಯ್ಯ
ಚಿಂತೆ ಕಾಂತನಾಗಿ ಕುಳಿತಾನು |

"ಇಲ್ಲಸಲ್ಲದ ಮಾತ ಇಲ್ಲ್ಯಾಕೆ ಹೇಳುವಿರಿ ಸ್ವಾಮಿ
ಏನಂದಾರು ನಮ್ಮ ಸರಣರು |

ಅಜ್ಜುಬೀಡನ ಅಳಿಯ ಮಧುವರುಸ ಬ್ರಾಮಣನು
ಅವನ ಮಗನಿಗೆ ನಮ್ಮ ಹರಳಯ್ಯ |

ಅವನ ಮಗನಿಗೆ ನಮ್ಮ ಹರಳಯ್ಯ ಮಗಳ ಕೊಟ್ಟನೆಂದರೆ
ಜಗತ್ಯಕೆ ನನ್ನ ಬಾಳು ನಗೆಬಾಳು | ೭೮೦

ಜಗತ್ಯವೆ ನಗುತಾವೆ ನಮ್ಮ ಬಸವಣ್ಣ ನೆಗುತಾರೆ
ಸುದ್ದಿ ಕೇಳಿದರೆ ಬಿಟ್ಟಾನ ಕೊಂಡಗರ ಮಂಚ ?|

ಬಿಜ್ಜಳ ದೊರೆಯ ಬಳಿಗೆ ನನ್ನನ್ನೆ ಕರುಸುಕೊಂಡು
ಕೊಡಬಾರ್ದ ಕೊಲೆಯ ಕೊಡುತಾರೆ |

ಜಾತೀಲಿ ಬ್ರಾಮಣನ ನೀ ಒಪ್ಪಿಕೊಟ್ಟ ಮಗಳ
ಅಂತ್ಹೇಳಿ ಸುಮ್ಮಾನೆ ಬಿಟ್ಟಾರೆ ಬಿಜ್ಜಾಳ ? |

ಯಾವ್ ಮಾತೇಳಿದಾರು ಹೇಳಿ ಮಧುವರಸ
ಹೆಣ್ಣೀನ ಮಾತು ನಿಮಗ್ಯಾಕ ?|

ಹೆಣ್ಣಿನ ಮಾತು ನಿಮಗ್ಯಾಕೆ ?" ಅಂತ್ಹೇಳಿ
ಆದಿ ಹರುಳಯ್ಯ ನುಡಿದನು | ೭೯೦

ಹರುಳಯ್ಯಾಡಿದ ಮಾತ ಕೇಳಿದನು ಮಧುವರಸು
ಕೋಪ ಹತ್ತೀತು ಅವನ ಮನದಲ್ಲಿ |

"ದೊರೆಯೆ ಬಿಜ್ಜಳ ರಾಜ ಆ ಗುರುಗಳು ಬಸವಣ್ಣ
ನಾವು ನೀವೊಂದಾಗಿದರೆ ಏನ ಮಾಡಾರು |

ನಾವು ನೀವೊಂದಾಗಿದರೆ ಏನ ಮಾಡಾರು ಹರುಳಯ್ಯ
ನಾವು ನೆಂಟರಾದರೆ ಬ್ಯಾಡ ಅನ್ನುವಾರ |

ಏನ ಮಾಡರು ಅವರು ಹರುಳಯ್ಯ ಹೇಳೂ"ಂತ
ಮಧುವರಸು ಅವಗೆ ತಿಳುಹೀದ |

"ನಿಮ್ಮ ಮನೆಯ ನೀರು ನನ ಮಂಡೇ ಮ್ಯಾಲೆ ಬಿದ್ದು
ತಪ್ಪೀತು ನನ್ನ ಉರಿಜ್ವಾಲೆ | ೭೯೦

ನಿಮ್ಮ ಗುಟ್ಟಾ ನಾನು ಕಂಡಿಷ್ಟಿ ಹರಳಯ್ಯ
ಇಂತೆ ಸರಣಾನ ನೆಂಟ ನಾ ಮಾಡಬೇಕು |

ನಮ್ಮರ್ಮ ಕಾಣದ ಜನರು ಏನಾರ ಹೇಳಿಕೊಳ್ಳಿ
ನೀವೊಂದೇ ದುಡದಲ್ಲಿ ಒಪ್ಪ ಕೊಡಬೇಕು |

ಒಂದೆ ದುಡದಲ್ಲಿ ಒಪ್ಪ ಕೊಟ್ಟರೆ ಹರಳಯ್ಯ
ನನ್ಗೆ ಬಂದಂತ ಕಷ್ಟ ಪರಿಯಾರ |

ಏನು ಬಂದರು ಬರಲಿ ನಿಮ್ಮಿಂದ ಹರಳಯ್ಯ
ನೀವು ಕೊಡದಿದ್ದರೆ ಪ್ರಾಣ ಕಳಿಯಾದು ನಾವು ನಿಜತಾನೆ |

ನಿಮ್ಮಿಂದ ನಮ್ಮ ಪ್ರಾಣ ಕಳುಕೊಳ್ತೀನಿ ಹರುಳಯ್ಯ
ನಾ ಪ್ರಾಣ ಬಿಟ್ಟರೆ ನಿಮಗೆ ಅವಿಮಾನ" | ೮೧೦

ಬಂತಲ್ಲ ಗ್ರಾಚರ ಎಂದು ಹರುಳಯ್ಯ
ದುಕ್ಕು ದುಕ್ಕುಳಿಸಿ ಅಳುತಾರೆ |

ಯಾಕೆ ಅಳುತೀರ ಸ್ವಾಮಿ ಹರಳಪ್ಪನವರೆ ಎಂದು
ಆ ಕಲ್ಯಾಣಮ್ಮ ಕೇಳಿದರಂತೆ |

"ಮಧುವರಸು ಬಂದವ್ರು ಮಗನಿಗೆ ಮಗಳ ಕೇಳತಾರೆ
ನಾ ಏನ್ಹೇಳಲಿ ಹೆಣ್ಣ ಅವ್ರ ಜೊತೆಯಲ್ಲಿ |

ಹೆಣ್ಣು ಕೊಡದೆ ಹೋದರೆ ಪ್ರಾಣ ಕಳಕೊಂಡಾರಂತೆ
ಈ ಗ್ರಾಚಾರ್ವ ಎಲ್ಲೋಗಿ ನಾನು ಕಳಿಯಾಲಿ ?"|

ಹರುಳಪ್ಪಾಡಿದ ಮಾತ ಕೇಳಿದರು ಕಲ್ಯಾಣಮ್ಮ
"ಇದಕ್ಯಾಕೆ ಸಂದೇಗೆ ಪಡುತೀರಿ | ೮೨೦

ಸೃಷ್ಟಿ ಮಾಡಿದ ಬ್ರಮ್ಮ ಆ ಬರಾ ಬರೆದಿದ್ರೆ
ನಾವು ನೀವು ಏನ ಮಾಡಬಲ್ಲೊ |

ನಾವು ನೀವು ಏನ ಮಾಡಬಲ್ಲೊ ಹರಳಯ್ಯ
ನಿಮ್ಮಾತೀಗೆ ಪ್ರತಿ ಉತ್ರ ನಾ ಹೇಳ್ಲಾರಿ |

ಒಪ್ಪು ಮಾತ ಕೊಡಿ ಅವರ್ಹಣೆ ಬರದಂಗಾಗ್ಲಿ!"
ಆ ತಾಯಿ ಕಲ್ಯಾಣಮ್ಮ ನುಡಿದಳು |

"ಹೆಣ್ಮಾತ್ರ ಅವ್ರರ್ಮನೆಗೆ ಮದುವೇಗೆ ಕಳುಗೋಳಲ್ಲ
ನಡೆ ಮದುವಿಗೆ ಗಂಡು ಇಲ್ಗೆ ಬರಬೇಕು |

ಸೀತಾಳು ಚಪ್ಪರವ ನಮ್ಮಠದಲ್ಲಿ ಹಾಕಬೇಕು
ಆದರೆ ತಿರ್ಮಾನ ಮಾಡಿ ಕಳುಗೆ"ಂದ | ೮೩೦

"ಶಾಸ್ತ್ರ ಕೇಳಿಕೊಂಡು ಅದ್ರ ಸಮ್ಮಂದ ತಿಳಿಕೊಂಡು
ಬನ್ನಿ" ಹೋಗಿ ಎಂದ ಕಳುಗೀದ |

ಕಲ್ಯಾಣಮ್ಮನ ಮಾತ ಕೇಳುಕೊಂಡು ಹರಳಯ್ಯ
ಈ ಉತ್ರ ಮಧುವರಸುಗೆ ತಿಳಿಸಿದರು |

"ಶಾಸ್ತ್ರ ಸಮ್ಮಂದ ನಾವೋದಿರುವ ಬ್ರಾಮ್ಮಣ
ಬರುವಾಗಲೆ ನೋಡಿ ನಾ ಬಂದಿವ್ನಿ |

ನಿಮ್ಮ ಮಗಳಿಗೂ ನನ್ನ ಮಗನೀಗೂ
ವರ ಚನ್ನಾಗಿದೆ" ಅಂತಾನೆ |

ವರ ಚೆನ್ನಾಗಿದೆ ಅಂತ್ಹೇಳಿ ಮಧುವರಸು
ಅಗಲ್ಲಿ ತಾನು ನಗುತಾನೆ | ೪೪೦

ಗಂಡು ಇಲ್ಲಿಗೆ ಬರಲಿ ಯಾವತ್ತು ಧಾರೆಯೆಂದು
ಹರಳಯ್ಯ ಕೇಳಿ ತಿಳಿದಾನು |

"ನಾಳೆ ಸೋಮುವಾರ ಶುಭ ಲಗ್ನ ಉಂಟು
ಬೆಳಗಿನೊಂಬತ್ತಕ್ಕೆ ತಾಳಿ ಕಟ್ಟಿಸಿರಿ |

ಬೆಳಗಿನೊಂಬತ್ತಕ್ಕೆ ತಾಳಿ ಕಟ್ಟಿದರೆ
ಬಾಳ ಚನ್ನಾಗಿದೆ" ಅಂದ ಮಧುವರಸ |

"ಹೋಗಿ ಬರಲ್ಕಪ್ಪ ನಾವು ಒಪ್ಪಂದವೆ ನಿಮಗೆ
ಗಂಡು ಬಂದಾಗ ಮಾತ ತಗಿಬ್ಯಾಡಿ |

ಶುಭ ಲಗ್ನಕ್ಕೆ ಮಾತ್ರ ಅಡ್ಡಿ ಮಾಡಬ್ಯಾಡಿ
ಇದು ಕಂಡುತ್ಬಾಗಿ ಹೇಳಿ ಹರಳಯ್ಯ | ೪೫೦

ಎಡ ಬಲದೋರ ಮಾತ ನಿಮ್ ಕಿವಿಯಲ್ಲಿ ಕೇಳ್ಕೊಂಡು
ಇದಕಡ್ಡಿ ಮಾಡಿದರೆ ಗುರಿ ಯಾರು? |

ಅಡ್ಡಿಯ ಮಾಡಿದರೆ ನಾ ಗುರಿಯಾಯ್ತೀನಿ" ಅಂತ್ಹೇಳಿ
ಹರುಳಯ್ಯ ಒಪ್ಪು ಕೊಡುತ್ತಾನೆ |

"ರಾಜ ಬಿಜ್ಜಳನಿಂದ ಏನಾರು ಬಂದಾರೆ
ಅದ್ಕೆ-ತಗುಲಾಗಿ ನೀನು ಇರುಬೇಕು |

ಆ ಮಾತಿನ ಭಾರ ನಿಮ್ಮದು ಮಧುವರಸೆ
ನನಗವಿಮಾನ ಮಾತ್ರ ತರುಬ್ಯಾಡಿ" |

"ಯಾವುದು ಬಂದಾರು ನನ್ ಭಾರವಾಗಲಿಯಪ್ಪ
ವೈರಿಗಳಿಗೆ ನೀವ್ ಹೆದುರ್ಬ್ಯಾಡಿ | ೪೬೦

ವೈರಿಗಳಿಗೆ ನೀವ್ ಹೆದುರ್ಬ್ಯಾಡಿ ಹರಳಪ್ಪ"
ಇಂತೆ ಧೈರ್ಯದ ಮಾತ ಹೇಳುತಾರೆ |

ಇಂತೆ ಧೈರ್ಯದ ಮಾತ ಹೇಳ್‌ಬುಟ್ಟು ಮಧುವರಸ
ಹೊರಟನು ತನ್ನ ಗುರುಮಠಕೆ |

ಮಗನನ್ನು ಕರೆದು ಪಕ್ಕದಲ್ಲಿ ಕುಳ್ಳಿರಿಸಿ
ತನ್ನ ಮಗನಿಗೆ ಬುದ್ಧಿ ಹೇಳುತ್ತಾರೆ |

"ರೂಪಿನಲ್ಲಿ ಚೆಲ್ವೆ ಹರಳಯ್ಯನ ಮಗಳು
ಅವಳ ಒಪ್ಪಂದ ಮಾಡಿ ಬಂದಿವ್ನಿ |

ಅವಳ ಒಪ್ಪಂದ ಮಾಡಿ ಬಂದಿವ್ನಿ ನನ್ನ ಕಂದ
ಒಪ್ಪುತೇನೊ ನಿನ್ನ ಮನಸೀಗೆ" | ೪೭೦

"ತಂದೆ ಮಾತೀಗೆ ಎಂದು ಉತ್ತುರವ ಹೇಳ್ದೊನಲ್ಲ
ಇಂದೇನ್ಹೆಳಿಯೆ ನೀನು ಹೇಳಪ್ಪ" |

ಅಪ್ಪ ಆಡಿದ ಮಾತ ಮಗನು ಕೇಳಿದ
ನೀವೊಪ್ಪುದಂಗೆ ಮಾಡೀಂತ ಕರವ ನಮಸ್ಕರಿಸಿದ |

"ನಾಳಿದ್ದು ಸ್ಮೊಮುವಾರ ನಾವಿಲ್ಲಿಂದೋಗಲು ಬೇಕು
ಅಲ್ಲೆ ಕಾಣಪ್ಪ ನಡೆ ಮದುವೆ" |

ತಂದೆ ಮಗನೊಂದಾಗಿ ಮಾತನ್ನೆ ಆಡುಕೊಂಡು
ಅದರಾಗುವ ಸಾಮಾನ ಸಿದ್ಯ ಪಡುಸಿದರು |

ಹರುಳಯ್ಯನ ಮಗಳು ಆ ಮದ್ವೆ ಸುದ್ದಿ ಕೇಳಿ
ಇವ ಇಲ್ಲಿ ಅನ್ನಹಾರ ತೊರಿದಳು | ೪೮೦

ಅನ್ನಹಾರಗಳ ತೊರುವ ನಿದ್ರೆನೀರ್ಗಳ ತೊರುವ
"ಆ ಬ್ರಾಮಣಗೆ ನಮ್ತಂದೆ ಒಪ್ಪ ಕೊಡುಬವುದ ? |

ಬ್ರಮ್ಮ ಪಿಂಡಾಕೆ ನಾನು ಹೆಂಗೆ ಲಗ್ನಾವಾಗಲಿ?" ಎಂದು
ಅವ ಆರಗಳ ಬುಟ್ಟು ಅಳುತಾಳೆ |

ಒದುಗಿ ಬಂತು ಶಿವನೆ ಮದುವೆಯ ಸಮೀಪು
ಆಗ ಮುತ್ತೈದೇರ ಕರಸಿದರು |

ಮುತ್ತೈದೇರ ಕರಸಿ ಸರಣ ಹರಳಯ್ಯ
ಮೊದಲು ಸಾಸ್ತರವ ಮಾಡಿದರು |

ಸೋಬಾನಗಳ ಪಾಡಿ ಹರಳಯ್ನ ಮಗಳಿಗೆ
ಎಣ್ಣೆ ಒತ್ತಾಗಣೆಯ ಎರಿದಾರು |

ಹತ್ತು ಮಾನ ಕೈಯೆಣ್ಣೆ ಐದುಮಾನ ಸೀಯೆಣ್ಣೆ
ಅವ್ಯ-ಮಂಡೆಗೊತ್ತಿ ಆಗಣೆಯ ಎರಿದಾರು |

ಅರುಸಿಣ ಸೀಗೆಕಾಯಿ ಒತ್ತುದರು ಮುತ್ತೈದೇರು
ಆಗ ಇನ್ನೊಂದಾಗಣೆಯಾ ಎರಿದಾರು |

ಕಡೆಯಲ್ಲಿ ಪನ್ನೀರ ಮೈತುಂಬ ಹುಯ್ದುವುರೆ
ಬಿಳಿಯ ಪತ್ತಲವ ಉಡುಸಿದರು |

ಬಿಳಿಯ ಪತ್ತಲವ ಉಡಿಸಿ ಬಿಳಿಯ ಕುಪ್ಪುಸ ಧರಿಸಿ
ಹಸ್ತಕ್ಕೆ ಕಡಗಾವ ಅಲ್ಲಿ ತೊಡಿಸಿದರು |

ಹಸ್ತ ಕಡಗದ ಮುಂದೆ ಕಸ್ತೂರಿ ಬಳೆಯ ತೊಡಿಸಿದರು
ವಜ್ಜುರ್ದ ವಾಲೆ ಅಮ್ಮನ ಕರಣಕೆ |

ಬಲಕೆ ಬಾಚೀ ಬಂದಿ ಎಡಕೆ ಒಂಕಿ ಬಂದಿ
ಹತ್ತು ಬೆರಳಿಗೆ ಹವಳದುಂಗುರ |

ಹತ್ತು ಬೆರಳಿಗೆ ಹವಳದುಂಗುರ ಧರಿಸಿ
ಹೆಣ್ಣಿಗೆ ಸುಂಗಾರ ಮಾಡಿದರು |

ತುಂಬಿದ ಸ್ಯೋಮಾರ ಸೀತಾಳು ಚಪ್ಪರ ಹಾಕಿ
ಕಂಬ ಮೂರುತವ ಮಾಡಿದರಂತೆ |

ಕಂಬ ಮೂರುತವಾಯ್ತು ಹರಳಯ್ನ ಮಠದಲ್ಲಿ
ತನ್ನ ಬಳಗವನ್ನೆಲ್ಲ ಕರಕೊಂಡು |

ತನ್ನ ಬಳಗವನ್ನೆಲ್ಲ ಕರಕೊಂಡು ಮಧುವರಸು
ಮಗನ ಕರಕೊಂಡು ಹೊರುಟಾರು |

ಗಂಡು ಕರುಕೊಂಡು ಬಂದುರು ಹರುಳಯ್ನ ಮಠಕೆ
ಸೀತಾಳು ಚಪ್ಪರಕ್ಕೆ ಬಂದು ಇಳಿದಾರು |

ಸೀತಾಳು ಚಪ್ಪರಕ್ಕೆ ಗಂಡು ಬಂದಿಳಿದಾಗ
ಅವುನ್ಗೆ ಪರದಾವ ತಂದು ಬಿಡುತಾರೆ |

ಪರದದ ಒಳಗಡೆ ಅವರ ಮಗೆನ್ನ ನಿಲುಸುದರೆ
ಸರಿಯಾಗಿ ಒಂಬತ್ತು ಗಂಟೆ ತುಂಬೀತು |

ಸರಿಯಾಗಿ ಒಂಬತ್ತು ಗಂಟೆಯಾಯ್ತು ಹರುಳಯ್ಯ
ಸಾಸ್ತ್ರಕ್ಕೆ ನಿಮ್ಮಗಳು ಬರನಿಲ್ಲ |

ಹರುಳಯ್ಯನವರ ಮಗಳಿಗೆ ಮೈತುಂಬ ಮುಸುಕಿಟ್ಟು
ರೇಕುವುಳ್ಳ ಬಾಸಿಂಗ ಪ್ರಣಿಯಲ್ಲಿ |

ರೇಕುವುಳ್ಳ ಬಾಸಿಂಗ ಪ್ರಣಿಯಲ್ಲಿ ಕಟ್ಟಿರಲು
ಕಂಕಣದ ಕೈಯಲ್ಲಿ ಅಮ್ಮ ಹೊರಟರು |

ತೆರೆಯ ಬಳಸಾ ಬಳಸ ಐದು ಬಳಸಾ ಬಂದು
ಎಳ್ಳು ಜೀರಿಗೆಯ ಹಿಡಿಸಿದರು |

ಎಳ್ಳು ಜೀರಿಗೆ ಬಿಟ್ಟು ಪ್ರಣಿಗೆ ಈಬುತ್ತಿ ಹಸ್ಸಿ
ರೇಖೆವುಳ್ಳ ತಾಲ್ಕ ಹಿಡಿದಾರು |

ಕುಲುಸಭೆಯ ಕೇಳಿದರು ತಾಲಿಯ ಕಟ್ಟೂದಕೆ
ಇವುಳು ಮಾಯವಾದುಳಲ್ಲಿ ಮದುಮಗಳು |

ತೆರೆಯ ಮುಸುಕ ತಗದು ಒಳಗೆ ನೋಡಿದರು
ಹರಳಯ್ನ ಮಗಳೆ ಮೊದಲಿಲ್ಲ |

ಹರಳಯ್ನ ಮಗಳೆ ಮೊದಲಿಲ್ಲ ಮದುವಮ್ಮ
ಹುಡುಕಾಡುತಾರೆ ಅವ ಸಿಗನಿಲ್ಲ |

ವಾಲೆ ಮರದ ಮ್ಯಾಲೆ ಹೋಗಿ ಕುಂತವಳಲ್ಲ
ಸರಳೆ ನೋಡಿದ ಹರಳಯ್ಯ |

"ಎಲ್ಲೆಲ್ಲಿ ಹುಡುಕಿದರು ಇಲ್ಲವಲ್ಲ ನನ್ಮಗಳು
ಅವಳಿರುವಂತ ಜಾಗ್ವ ನಿಮ್ಗೆ ತೋರುತೀನಿ" |

ಈಸನ್ಯ ಭಾಗುಕ್ಕೆ ಚಪ್ಪರದಟ್ಟಿ ಒಳಗೆ
ಮಧುವರಸನ ಮಗನ ಕರತಂದು |

ಚಪ್ಪರದ ಈಶನ್ಯ ಭಾಗಕ್ಕೆ ಇಕ್ಕಲ ಮಾಡಿದರು
ಕೈಯಲ್ಲಿ ಕನ್ನಡಿಯ ಕೊಡುತ್ತಾರೆ |

"ಚಿನ್ನವ ಕಂಡ್ಯಪ್ಪ ಚಿನ್ನದಂತೇವ್ಯ ಕಂಡ್ಯ
ಕಂಡ ನನ್ಮಗಳ ಅನುಂದ್ರತಿಯ |

ಬೆರಳಿಯಾ ಕಂಡ್ಯಪ್ಪ ಬೆರಳಿ ಅಂತೇವ್ಳ ಕಂಡ್ಯ
ಕಂಡ್ಯಪ್ಪ ನೀನು ಆನಂದ್ರತಿಯಾ |

ಮದುವೆ ಕಲ್ಯಾಣವ ಮಾಡುವ ಜನಗಳಿಗೆ
ನನ ಮಗ ಆನಂದ್ರತಿಯಾಗಿ ಹೊರುಟೋದ" |

ಹರುಳಯ್ಯಾಡಿದ ಮಾತ ಕೇಳಿ ಮಧುವರಸು
ರೇಗೀದ ಹರುಳಯ್ಯನ ಜೊತೆಯಲ್ಲಿ |

"ಮಗಳ ಕೊಡುತೀನಿ ಎಂದು ನಿನ್ಮನೆಗೆ ಕರುಸುಕೊಂಡು
ನನಗವಿಮಾನ ಮಾಡಿದ್ಯಾ ಹರುಳಯ್ಯ | ೯೫೦

ನನ್ನ ಮಗುಂಗು ನನಗು ಅವಿಮಾನ ಮಾಡಿದಿಯಾ
ಇಂದೋಗ್ತಿನಿ ಬಿಜ್ಜಳನ ಸನ್‌ದಾನ್ಕೆ |

ಹೋಗೀನ್ತಿ ಬಿಜ್ಜಳನ ಸನ್ನಿಧಾನಕ್ಕೆ ಹರುಳಯ್ಯ
ನಾ ಹೋಗಿ ಹೇಳೇನು ಈ ಹೊಸ ಮಾತು" |

ಎಂದೆಂದು ಇಲ್ಲದ ಮಾತ ಹೊಸದಾಗಿ ಅನಂದ್ರತಿ
ಅಂದಮೇಲೆ
ಒಪ್ಪಕೊಳ್ಳಿ ನಾಳೆ ಕುಲದೋರು |

ಕುಲದೋರು ಒಪ್ಪಿಕೊಳ್ಳಲಿ ಆ ರಾಜನು ಒಪ್ಪುಕೊಳಲಿ
ಅವರ್ಹೇಳೀದ ಶೀಕ್ಷ್ಯಕೆ ನೀನು ಗುರಿಯಾಗು |

ಅವರ್ಹೇಳಿದ ಶೀಕ್ಷಕೆ ಗುರಿಯಾಗು ಹರಳಯ್ಯ
ಇನ್ನು ಮೇಲೆ ನಿನ್ನ ಹರುಳಯ್ಯ ಅನ್ನದಿಲ್ಲ | ೯೬೦

ಇನ್ನು ಮೇಲೆ ನಿನ್ನ ಹರುಳಯ್ಯ ಅನ್ನಿದಿಲ್ಲವಪ್ಪ
ಶೂದ್ರ ಎನುತ್ಹೇಳಿ ನಿನ್ನ ಕರಿಯೂವೆ" |

ಇಂತ ಪ್ರಂಥ ಮಾಡಿ ಮಧುವರಸು ತಾನು
ಹರಳಯ್ನ ಮಟ ಬುಟ್ಟು ಹೊರಟನು |

"ಅಂದಾಗೆ ಅನ್ನಿಯಪ್ಪ ಆಡ್ದಂಗೆ ಆಡ್ಯಪ್ಪ
ಸತ್ಯಕೆ ಯಾರು ತಗುಲಿಲ್ಲ |

ಸತ್ಯಕೆ ಯಾರು ಅವಮಾನ ಮಾಡೋರಿಲ್ಲ
ಹಂಗೆ ಅನ್ನು ನನ್ನ ಜಗದಲ್ಲಿ" |

ಬಂದ ಮಧುವರಸು ಮಗನ ಮನೆಗೇ ಬಿಟ್ಟು
ಅವನು ಹೋಗ್ತಾನೆ ರಾಜಬೀದೀಲಿ | ೯೭೦

. ಆದಿ ಕಲ್ಯಾಣ ಅರವತ್ತಾರು ಬೀದಿ
ಆ ಬೀದಿ ಒಳುಗೆ ಬರುತಾನೆ |

ಆ ಬೀದಿ ಒಳುಗೆ ಬರುತಾನೆ ಮಧುವರಸ
ರಾಜಾ ಬಿಜ್ಜಳನ ಅರಮನೆಗೆ |

ತನ್ನ ಪರಂಗಪೀಠದ ಮೇಲೆ ಕುಳುತವ್ರೆ ಬಿಜ್ಜಳರಾಜ
ಅವರೊತ್ತುನಲ್ಲಿ ಕುಂತವ್ನೆ ಕೊಂಡುಗರ ಮಂಚ |

ಅವ್ರು ಕುಳಿತಿರುವ ಜಾಗಕ್ಕೆ ಬಂದ ಮಧುವರಸು
ವಂದಿಸಿ ಕರವ ಮುಗಿದಾನು |

"ಬಂದ್ಯಪ್ಪ ಮಧುವರಸೆ ಬಂದ ಕಾರಣವೇನು
ಬಂದ ಮಾತ ಹೇಳೂ ನಮ್ ಜೊತೆಯಲ್ಲಿ" | ೯೮೦

"ಎಂದು ಇಲ್ಲದ ನಡತೆ ಇಂದು ನಡೆದಿದೆ ಮಹಾರಾಜ
ಹದಗೆಟ್ಟು ಹೋಯ್ತಲ್ಲ ನಮ್ಮ ಕಲ್ಯಾಣ" |

"ಯಾತಕ್ಕೊಸ್ಕರವಾಗಿ ಹದಗೆಡುತು ಕಲ್ಯಾಣ
ಯಾರಿಂದ ಏನು ನಡೆದೀತು |

ರಾಜರಿರುವ ಸ್ಥಳದಲ್ಲಿ ನಮಗೊಂದನು ತಿಳಿಸದೆ
ನನ್ ರಾಜ್ಯಕವಿಮಾನ ತರಬಹುದೆ |

ನನುಗೊಂದು ಸ್ವಲ್ಪ ತಿಳುತಿಳುದು ಬಂದೀದೆ
ಬಾಯ್ ಬುಟ್ಟು ಹೇಳಯ್ಯ ನನ್ ಜೊತೆಯಲ್ಲಿ |

ಕೊಂಡುಗರ ಮಂಚಣ್ಣ ಎಲ್ಲರ್ನು ಪರುಶೋದ್ನೆ ಮಾಡವ್ನೆ
ಈ ಊರಲ್ಲಿ ನಡೆಯೊದು ನನ್ನೊಳಗುಂಟು" | ೯೯೦

"ಎಲ್ಲರ್ನು ತಿಳಿದಂತ ಮಾರಾಜ ಕೇಳಪ್ಪ
ಅವ ಮಾಡಿದ ನಡತೆಯ ಹೇಳ್ತೀನಿ |

ಯಾವತ್ತು ಒಂದಿನ ನಾ ಮಾರ್ಗದಲ್ಲೋಯ್ತಿದ್ದೆ
ಹರಳಯ್ಯ ಬಂದು ಕೈಯ ಹಿಡುಕೊಂಡು |

ಕೈಹಿಡಿದ ಕಾರಣ ಏನೆಂದು ಕೇಳಿದಾಗ
ತಿದ್ದೀದ ಗೊಂಬ್ಯಾಗೆ ನನ ಮಗಳು |

ತಿದ್ದೀದ ಗೊಂಬ್ಯಾಗೆ ನನ ಮಗಳು ಒಬ್ಬಳಿದ್ದಾಳೆ
ನಿಮ್ಮಗನೀಗೆ ಲಗ್ನ ಮಾಡ್ಕೊಳ್ಳಿ |

ನಿಮ್ಮಗನೀಗೆ ಲಗ್ನ ಮಾಡ್ಕೊಳ್ಳಿ ಎಂದು
ತಾನೆ ಬಾಯ್ಬಿಟ್ಟು ನನಗೆ ತಿಳಿಸಿದ |

ಹಂಗಂದ ಮಾತ್ಕೇಳಿ ಹರಳಯ್ಯಾಗೆ ಹೇಳಿದೆ
ನಾನು ಬ್ರಮ್ಮ ಪಿಂಡವಲ್ಲಯ್ಯ |

ನಾನು ಬ್ರಮ್ಮ ಪಿಂಡವಾದ್ಮೇಲೆ ಹರುಳಯ್ಯ
ಅದೆಂಗಪ್ಪ ಹರಳಯ್ಯ ಸರಿ ಎಂದಿ |

ರೂಪಸ್ತ ಆದರು ಸರಿಯೆ ಚಲುವೆ ಆದರು ಸರಿಯೆ
ಕೊಟ್ಟು ತರುವ ಮಾತೆ ಬೇಡೆಂದಿ |

ರಾಜ ಇರುವ ಸ್ಥಳದಲ್ಲಿ ನಾವೀರೀತಿ ಮಾಡಿದರೆ
ಬಿಟ್ಟಾನ ಬಿಜ್ಜಳ ದೊರೆಯೆಂದೆ |

ಅವ ಏನು ಮಾಡಲು ಬಲ್ಲ ಬಿಜ್ಜಳ ಮಾರಾಜ
ಕೊಡುವೋರು ತರುವೋರು ನಾವಲ್ಲವ |

ಕೊಡುವೋರು ತರುವೋರು ನಾವೊಂದಾವಣೆ ಇದ್ರೆ
ರಾಜೇನು ಮಾಡೀನು ಅಂದ ಹರುಳಯ್ಯ |

ಅಂತಾದೊಂದು ಮನಸ್ಸು ನಿನ್ನೊಳಗೇ ಇದ್ದಮ್ಮಾಲೆ
ಆಗ್ಲಿ ಅಂತ್ಕೇಳಿ ಒಪ್ಪುಕೊಂಡಿ |

ನೆನ್ನೆ ಸೋಮಾರ ಧಾರೆ ಮೂರುತವಿತ್ತು
ನೆಡೆ ಮದುವೆಗೆ ನನ್ ಮಗನ ಕರುತಂದಿ |

ತೆರೆಯನ್ನ ಬುಟ್ಟುಕೊಂಡು ನನ್ಮಗನ ನಾ ನಿಲಿಸಿದ್ದಿ
ಐದ್ ಬಳಸ ಬಂದೆಳ್ಳು ಜೀರಿಗೆ |

ಐದು ಬಳಸ ಬಂದೆಳ್ಳು ಜೀರಿಗೆ ಬಿಟ್ಟು
ತಾಲಿ ಕಟ್ಟುವಂತ ಹೊತ್ತಲ್ಲಿ ಹರಳಯ್ಯ |

ತಾಳಿ ಕಟ್ಟುವಂತ ಹೊತ್ತಲ್ಲಿ ಹರಳಯ್ಯ
ಅವನೆಲ್ಲೊ ಮರುಮಾಡ್ಕೊಂಡ ತನ್ನ ಮಗಳ |

ಎಲ್ಲೊ ಹರಳಯ್ಯ ನಿನ್ನ ಮಗಳೆಂದು ಕೇಳಾಗ
ಚಪ್ಪರದಟ್ಟೀಲಿ ಈಸನ್ಯ ಭಾಗ್ದಲ್ಲಿ |

ಚಪ್ಪರದಟ್ಟಿಲಿ ಈಸನ್ಯ ಭಾಗದಲ್ಲಿ ನಿಲ್ಲಿಸಿ
ಕನ್ನಡಿ ಕೊಟ್ಟು ತೋರುಸೀದ |

ಕನ್ನಡಿ ಕೊಟ್ಟು ಆನಂದ್ರತಿಯಾಗವ್ಳೆ ಅಂತ
ನನ್ನ ಮಗನೀಗೆ ಅವನು ತೋರಿಸಿದ |

ಮದುವೆ ಆಗೋರ್ಗೆಲ್ಲ ಆನಂದ್ರತಿ ಆದಂತ
ಹರಳಯ್ಯ ನನ ಜೊತೆಯಲಿ ತಿಳಿಸೀದ |

ಮಗನನ್ನು ಕರುಕೊಂಡು ಎಲ್ಲಾರ ಕರುಕೊಂಡು
ಈನನಾಗಿ ಬಂದಿ ನನ್ನ ಗುರುಮಠಕೆ |

ರಾಜ್ಯ ಆಳೋರ್ಗೆಲ್ಲ ಅವನ್ಮಗ ಆನಂದ್ರತಿಯಂತೆ
ಇಂತೆ ಮಾತ ಅವ್ನು ಹೇಳವ್ನೆ |

ಕಲ್ಯಾಣ್ದ ಬಸವನಿಂದ ಹೆಚ್ಚುಕೊಂಡ ಅಂತ್ಕೇಳಿ
ಕೊಂಡಕಾರ ನೊರುನೊರ್ನೆ ಹಲ್ಲ ಕಡಿದಾನು |

"ಬಾಳ ಸರಣ ಅವನು ಹರಳಪ್ಪ ಅನುತ್ಕೇಳಿ
ಬಸವಣ್ಣ ಒಬ್ಬ ನಂಬುವುನೆ |

ಬಸವಣ್ಣುಂಗೆ ಅವನೀಗು ಬಾಳ ಸ್ನೇತ
ಅದ ಕೆಡುಸ ಬೇಕಂದ ಮಂಚಣ್ಣ |

ಆ ಬಸವಣ್ಣನಿಂದಾಗ ನಮ್ ದೆಸೆಯೆಲ್ಲ ತಪ್ಪೊಯ್ತ
ಈವತ್ತೇಳಿವ್ನಿ ದೊರೆಯ ಬಾಯಿ ಬುಟ್ಸು |

ಹರಳಯ್ಯನಂತಾ ಸತ್ಯ ಯಾರಲ್ಲು ಇಲ್ಲಾಂತ್ಕೇಳಿ
ಆ ಬಸವಣ್ಣ ಹೊತ್ತಿ ಹೊತ್ತಿ ಹೊಗುಳುತ್ತಾನೆ |

ಕಲ್ಯಾಣ ಕಟ್ಟುವ ನೀವು ರಾಜರಾದೋರು ನೀವು
ಉತ್ತರ ದೇಶದಿಂದ ಗತಿಗೆಟ್ಟು ಇಲ್ಲಿಗೆ ಬಂದ |

ಉತ್ತರ ದೇಸ್ಕಿಂದ ಗತಿಗೆಟ್ಟು ಇಲ್ಲಿಗೆ ಬಂದ
ಅವುನ್ಗೆ ಮಂತ್ರಿಯ ಪದವಿ ಕೊಡಲಾಗಿ |

ನನ್ನೆನ್ನೇ ತಗುದ್ಬುಟ್ಟು ಅವುನ್ಗೆ ಮಂತ್ರಿಪದವಿ ಕೊಟ್ರು
ಅವ ಜಂಗುಮರ ಗುಂಪು ಕಟ್ಕುಕೊಂಡು |

ಒಬ್ಬೊಬ್ರಾಗೆ ಸೇರುಸ್ಕೊಂಡು ಲಿಂಗಧಾರ್ಣೆ ಮಾಡ್ಕೊಂಡು
ಈಗ ಗುರು ಅಂತ್ಕೇಳಿ ಅವ್ನು ಹೆಸುರಾದ |

ಗುರು ಆಗ್ಲೆ ಕೀರ್ತಿ ಪಡುಕೊಂಡು ಬಸವಣ್ಣ
ಈಗ ಅವುನ್ದೆ ದೆಸೆ ನಮ್ಮ ಮಠದಲ್ಲಿ |

ಮಂತ್ರಿಯಾದುದ ಮರ್ತ ಅನ್ನ ಕೊಟ್ಟುದ ಮರತ
ಈಗ ಉರಿಯ ಸಿಂವಾಸನೆ ಗುರುವಾದ |

ಉರಿಯ ಸಿಂವಾಸನೆ ಗುರುವಾದ ಬಸವಣ್ಣ
ಅವ್ನು ಕಟ್ಟುಕೊಂಡವ್ನೆ ಹರಳಯ್ನ |

ಹರಳಯ್ನ ಕಟ್ಟುಕೊಂಡು ಜಾತಿ ಕುಲವಿಲ್ಲ
ಮಧುವಾನದಲ್ಲಿದ್ದ ಕೊಳವಿಲ್ಲ | ೧೦೬೦

ಮಧುವಾನದಲ್ಲಿದ್ದ ಕೊಳವಿಲ್ಲ ಬಸುವಣ್ಣ
ಎಲ್ಲಾನು ಐಕುಮತ ಮಾಡ್ದ ಬಸವಣ್ಣ |

ಬಂದ ಬಂದೊರ್ನೆಲ್ಲ ನನ್ನವರು ಎನುತ್ತೇಳಿ
ಎಲ್ಲಾರು ಒಗ್ಗಟ್ಟು ಮಾಡುಕೊಂಡು |

ರಾಜ ಇರುವ ಸ್ಥಳದಲ್ಲಿ ಇಂತೆದೆಲ್ಲ ನಡುದ್ಮೇಲೆ
ರಾಜ ನಾಳೆ ನಿನಗೆ ಅವಿಮಾನ" |

"ನೆಡಾದ ಮಾತನೆಲ್ಲ ನೀ ಹೊಟ್ಟೆಲಿಟ್ಟಿದ್ದೀಯ
ನಿನುಗಿಂತ ಇಗುತ್ತಂತ ಇಲ್ಲಪ್ಪ ನನ್ ಸಭೆಯಲ್ಲಿ |

ನಿನ್ನಂತ ಇಗುತ್ತಂತ ಇನಿಲ್ಲ ಕಾಣಪ್ಪ
ನೀ ನ್ಯಾಯ್ಗಾರ ಕಾಣಪ್ಪ ಕೊಂಡುಗ | ೧೦೭೦

ರಾಜನಾದರೆ ಏನ ನಾ ರಾಜ್ಯ ಆಳಿದರೇನು
ಇಂತೆ ಮಾತುಗಳು ಒಂದು ನೆನುಪಿಲ್ಲ |

ಹೌದು ನೀನೇ ಹೇಳು ಮತ್ತೆ ಬಾಳು ಹಿಗ್ಗಿದ ಬಸವ
ಬಸವಣ್ಣ ಹಿಗ್ಗಾಗಿ ಹರಳಯ್ಯ |

ಬಸವಣ್ಣ ಹಿಗ್ಗಾಗಿ ಹರಳಯ್ಯ ಎನ್ನೋನು
ಹಿಗ್ಗಿ ಬಲು ಧೈರ್ಯ ಮಾಡವ್ನೆ |

ಇವರಿಬ್ಬರ ಸಾಮಾರ್ಥ್ಯ ನಾವು ಮುರಿಯಲು ಬೇಕು
ಇದ್ಕೆ ತಕ್ಕ ಮಾತೇಳಪ್ಪ ಮಂಚಣ್ಣ" |

"ಅವರೇಗ್ತಿ ಕೆಡುಸ್ಬೇಕಾದ್ರೇಳು ಬಿಜ್ಜಳು ದೊರೆಯೆ
ಕೋಟುಗೊಬ್ಬ ಸರಣಾರು ಮಂಚಣ್ಣ | ೧೦೮೦

ಕೋಟುಗೊಬ್ಬ ಸರಣಾರು ಕುಲುಕೊಬ್ಬ ಭಕ್ತರು
ನ್ಯಾಯಕ್ಕೆ ನಾವು ಸೇರಬೇಕು |

ಇಂದೆ ನಾಳ್ಕೆ ನಾವು ನ್ಯಾಯಕ್ಕೆ ಸೇರ್ಕೊಂಡು
ಅಲ್ಲೆ ಬಸವಣ್ಣನ ನಾವು ಕರುಸ್ಬೇಕು |

ಹರುಳ ಎಂಬೊನ್ ನ್ಯಾಯ್ವ ಆ ಸಭೆಯ ಜನಗೊಳಲ್ಲಿ
ಎಲ್ಲರ ಮುಂದೆ ಇಡಬೇಕು |

ಉತ್ತುರಕ್ಕೆ ಉತ್ರ ಸರಿ ಬರದೆ ಹೋದ್ರೆ
ಆ ಸಮಯಾದಲ್ಲೇಳ್ತೀನಿ ನಿನ್ನ ಜೊತೆಯಲ್ಲಿ |

ಹೆದುರ್ಬ್ಯಾಡ ಹೋಗು ಅಜ್ಜು ಬೀಡನ ಅಳಿಯ
ಮಧುವರಸು ನೀನು ಹೆದರ್ಬ್ಯಾಡ | ೧೦೯೦

ನ್ಯಾಯ ಇಟ್ಟ ಮ್ಯಾಲೆ ಹೆದುರ್ಬ್ಯಾಡ ಮಧುವರಸ
ಅವ್ರ ದೌಲತ್ತ ನಾವು ಕೆಡುಸ್ತೀನಿ" |

ಕುಳಿತಿರುವ ಜಾಗದಲ್ಲಿ ಕುಳಿತಾನೆ ಬಿಜ್ಜಾಳ
ಆಗ ಕುಲಕೊಬ್ಬ ಭಕ್ತರಿಗೆ ವಾಲೆ ಬರಿದಾರು |

ಕುಲಕೊಬ್ಬ ಭಕ್ತರಿಗೆ ಕೋಟಿಗೊಬ್ಬ ಸರಣರಿಗೆ
ಬಸವಣ್ಣನಿಗೊಂದ್ವಾಲೆ ಬರಿದಾರು |

"ಕಲ್ಯಾಣಕ್ಕೆ ದೊಡ್ಡೋನು ಎಲ್ಲಾರ್ಗೂ ಲಿಂಗ ಕಟ್ಟೋನೆ
ಸಂಗಾನ ಬಸವಣ್ಣ ಬರಬೇಕು |

ಕುಲುಪದ್ಧತಿದೊಂದು ನ್ಯಾಯ ಬಿದ್ದದಪ್ಪ
ನಾಳೆ ಸಬುಗೆ ನೀನು ಬರಬೇಕು | ೧೧೦೦

ಆ ನ್ಯಾಯ ಸಭೆಯಾಕೆ ನೀನು ಬರಬೇಕು
ಆ ಹರಳಯ್ನು ಅಲ್ಲಿಗೆ ಬರಬೇಕು |

ನಾಳೆ ಸಭೆಯದೊಳಗೆ ಸತ್ಯವಂತರ ಮುಂದೆ
ಈ ನ್ಯಾಯವ ನಾವು ಇಡುತೀವಿ" |

ಸತ್ಯವಂತ ಸರಣರು ಈ ವಾಲೆಯ ಓದ್ನೋಡಿ
ನಾವುತ್ರ ಹೇಳುಬೋದ ರಾಜನ ಜೊತೆಯಲ್ಲಿ |

ರಾಜ ಉತ್ರ ಮಾಡುವರೆ ನಾ ಉಳಿಯಕಾಗದಿಲ್ಲಾಂತ
ಸರಣ ಜಂಗುಮರೆಲ್ಲ ಹೊರುಟಾರು |

ಬಂದು ಸೇರಿರದಂತೆ ಪಂಚಾಯ್ತಿ ಮುಂದುಕ್ಕೆ
ಅಲ್ಲಿ ಕುಲವೆಲ್ಲ ಕುಳಿತಾರು | ೧೧೧೦

ಇದೇನೊ ಗೊತ್ತಿಲ್ಲ ಯಾವ ನ್ಯಾಯ್ವೊ ಕಾಣೆ
ಹಾಗೆಂದು ಬಸವಣ್ಣ ಬರುತಾರೆ |

ಹಾಗೆಂದು ಬಸವಣ್ಣ ದಯಾವಾದರು ಸ್ವಾಮಿ
ಮಂದದ ಕಟ್ಟೆಗೆ ಬರುತಾರೆ |

ಬರುಬರುತ್ತ ಕರೆಯಿಸಿದರು ಹರಳಯ್ಯ ಬಸವಣ್ಣ
ಈ ನ್ಯಾಯದ ಸಂದರ್ಭ ಅವುರ್ಗೆ ತಿಳಿದಿಲ್ಲ |

ಯಾರ್ಯಾರ್ದೊ ನ್ಯಾಯ ಎಂದು ಹರಳಯ್ಯ ಕರುಕೊಂಡು
ಕುಲುಸಭೆಗೆ ಬಂದು ಇಳಿದರು |

ಮೊದಲೆ ಬಂದಿಳಿದಾನೆ ಮಾರಾಜ ಬಿಜ್ಜಾಳ ದೊರೆ
ಅವನೊತ್ತಲ್ಲಿ ಕುಂತವ್ನೆ ಕೊಂಡುಗ | ೧೧೨೦

ರಾಜನ ಬತ್ತೀಲಿ ಕೊಂಡುಗರ ಮಂಚಣ್ಣ
ಬಸವಣ್ಣ ಬರುವುದ ನೋಡಿದರು |

ಆ ಕುಲುಸಭೆಗೆ ಬಂದು ಇಳಿದಾರು ಬಸವಣ್ಣ
ಕೂಡಿರುವ ಕುಲಕೆ ಸರಣಂದು |

ಬನ್ನಿ ಬಸವಣ್ಣೋರೆ ನಿಮುಗೆ ಸರಣೆಂದು
ಒತ್ತಿಗೆ ಕರೆದ ಬಿಜ್ಜಾಳ |

ರಾಜನೊತ್ತುನ ಒಳುಗೆ ನಮ್ ಬಸ್ವಣ್ಣ ಕುಳುತವ್ರೆ
ಈ ನ್ಯಾಯವ್ಯಾವುದೊ ಕಾಣೆ ನನ್ಗೆ ತಿಳಿಯದು |

ನ್ಯಾಯ ಯಾವುದೊ ಕಾಣೆ ನನ್ಗೆ ತಿಳಿಯಾದು ಅನುತ್ಹೇಳಿ
ಆ ರಾಜನ ಕೇಳಿದನು ಬಸವಣ್ಣ | ೧೧೩೦

"ಕೇಳ್ತಾನೆ ಕೊಂಡುಗರ ಮಂಚ ನೀವು ತಿಳುಕೊಳ್ಳಿ ಬಸವಣ್ಣ
ಒಬ್ಬೊಬ್ರುಗ್ಹೇಳೋದು ಸರಿಯಲ್ಲ |

ಕುಲುವೆಲ್ಲ ತಿಳಿಯೊಂಗೆ ಸಾರೇಳು ಕೊಂಡಗರ ಮಂಚ
ಎಲ್ಲ ತಿಳುಕೊಳ್ಳಿ ನಮ್ಮ ಕುಲಸಭೆಯ" |

"ಹರುಳ ಎಂಬುವನು ಯಾರೀಗೆ ಸಮ್ಮಂದ
ಇವುನ್ಗೆ ಹೆಣ್ಣು ಕೊಡೋದುಂಟ ನಮ್ ಕುಲದಲ್ಲಿ |

ಹಿಂದೆ ಯಾರ್ಯಾರು ಕೊಟ್ಟಿದ್ದಿರ ಯಾರಾರು ತಂದಿದ್ದೀರ
ನಡೆದಿದ್ರೆ ಸಾಕ್ಹೇಳಿ ನನ್ ಜೊತೆಯಲ್ಲಿ |

ಹಿಂದೆ ಮುಂದೆ ಕೊಟ್ಟು ತಂದಿದ್ದು ಗೊತ್ತಿಲ್ಲ
ನಮ್ಗೆ ತಿಳಿಯದು ಅಂದರು ಕುಲಸಭೆಯ | ೧೧೪೦

ಬ್ರಮ್ಮ ಕುಲದ ಬ್ರಾಮ್ಮಣ ಮಧುವರಸ ಸರಿಯಷ್ಟೆ
ಅವುನ್ಮಗುಂಗೆ ಹೆಣ್ಣ ಕೊಡುತಿನೀ ಅಂದುದ್ದು ನಿಜವಪ್ಪ |

ಹೆಣ್ಣು ಕೊಡುತೀನಿ ಎಂದು ಇವರಿಬ್ರು ಬೆರ್ಕೊಂಡು
ನೆನ್ನೆ ಸ್ಪೋಮಾರ ಮಾಡಿದ ಕಥೆ ನಿಮ್ಗೆ ತಿಳಿದಾದೆ |

ಎಲ್ಲ ಕೇಳಿಲ್ಲವೇನ್ರೊ ಕೂಡಿದ ಕುಲದವುರೆ
ತಿಳುಕೊಳ್ಳಿ ಅಂದ ಕೊಂಡುಗರ ಮಂಚ |

ಇವುರು ಮಾಡಿದ ನಡತೆ ನಿಮುಗೆಲ್ಲರ್ರು ಒಪ್ಪೊದ್ವ
ಕೂಡಿರುವ ಕುಲದೊರೆ ಹೇಳ್ರಪ್ಪ" |

ಮಂಚಪ್ಪಾಡಿದ ಮಾತ ಕುಲುದೋರೊ ಕೇಳ್ಕೊಂಡು
"ಇವ್ರು ಮಾಡಿರುವ ಕೆಲಸ ಸರಿಯಿಲ್ಲ | ೧೧೫೦

ನಿಮುಗೊಪ್ಪಚಾರವ ಹೇಳಿ ಕಲ್ಯಾಣ್ದ ಬಸವಣ್ಣ
ನೀವೊಪ್ಪಬೇಕು ಈ ಮಾತ ಮೊದಲಾಗಿ" |

"ಕೊಡದೇ ಹೋದವ್ನನ ಮನೆಗೆ ಇವ್ರು ಬಿಡದೆ ಹೋದ್ಮೆಲೆ
ನಾನು ಏನ್ಹೇಳ್ಳಿ ಬಿಜ್ಜಾಳ ನಿಮ್ ಜೆತೆಯಲ್ಲಿ" |

"ಬಿಡದೆ ಯಾರೋಗಿದ್ರು ಅದನ್ಹೇಳ್ಳಿ ಬಸವಣ್ಣಾರೆ
ದುಡುವಾಗಿ ಹೇಳಿ ನಿಮ್ಮನದಲ್ಲಿ" |

"ಮಧುವರಸು ಹೋಗಿ ಬಿಡದೆ ಕುಂತನಂತೆ
ಅದು ತಿಳಿದಿದ್ದಿ ಸೊಲ್ಪ ಕವಿಯಲ್ಲಿ |

ನೀನೆ ಸರಣ ನನಗರ್ಥವಾಯಿತು ಎಂದು
ಚರ್ಚೆ ಮಾಡುದರಂತೆ ಮಧುವರಸು" | ೧೧೬೦

ಬಸವಣ್ಣಾಡುವ ಮಾತ ಕೇಳುದುರು ಮಧುವರಸ
"ಯಾರ್ಹೇಳಿದರು ಬಸವಣ್ಣ ನಿಮ್ ಜೆತೆಯಲ್ಲಿ? |

ಹರಳಯ್ಯಂಗೂ ನನ್ಗೂ ಇಂತೆ ಸಮ್ಮಾಂಧವಿತ್ತ?
ಇದು ಸುಳ್ಳು" ಅನ್ತಾನೆ ಮಧುವರಸು |

"ಇಬ್ರು ಸೇರ್ಕೊಂಡು ನೀವೊಬ್ಬುರುಗು ತಿಳಿಸಾದೆ
ಈಗ ಮಾಡಿರುವ ಅಪರಾದ್ಕೆ ಗುರಿಯಾರು |

ಮಾಡಿರುವ ಅಪರಾಧಕ್ಕೆ ಗುರಿ ಯಾರು?" ಅಂತ್ಹೇಳಿ
ದೊರೆ ಕೇಳೀದ ಬಿಜ್ಜಳ ರಾಜ |

"ಇಂತಾ ನಡುವಳಕ್ಕ ನನ್ನ ಕಲ್ಯಾಣದಲ್ಲಿ ನಡೆದಾರೆ
ನಾಳೆ ಕೆಟ್ಟೆಸ್ರು ನನಗೆ ಬರುತಾದೆ |

ಇಂದು ಹರಳಯ್ಯಂಗೆ ನಾವೇನ ಮಾಡ್ಬೇಕ"ಂತ
ದೇವರು ಬಸವಣ್ಣನ ಕೇಳಿದರಂತೆ |

"ಏನಂತ ಹೇಳುದೊ ನಮ್ಗೆ ಬಾಯ್ ಬರದು" ಅಂತ
ಗುರು ಬಸವಣ್ಣ ಹೇಳಿದರು |

"ಎಲ್ಲಾನು ನೀವ್ ಬಲ್ರಿ ನಿಮ್ ಸಂಗ ಬಿಡೋದಿಲ್ಲ
ನನಗೆಲ್ಲಾ ಗೊತ್ತು" ಅಂದ ಮಂಚಣ್ಣ |

"ಇಂತೆ-ನ್ಯಾಯಗಳೆಲ್ಲ ನಿಮಗೆ ಗೊತ್ತಾದ್ಮೇಲಿ
ಅವ್ರುಗೇನ್ಮಾಡಬೇಕು ಮಂಚಣ್ಣ |

ಕುಲುಸಭೆಯ ಮುಂದೆ ಎಲ್ಲುರ್ಗು ತಿಳುವಳಿಕೆಯಾ
ಏನು ಮಾಡಬೇಕು ಹೇಳಪ್ಪ?" |

ಹಂಗೆಂದ ಮಾತನ್ನೆ ಕೇಳವ್ನೆ ಕೊಂಡುಗ
"ನಾ ಹೇಳುದ್ಕೆ ಎಲ್ಲಾರು ಒಪ್ಪಬೇಕು |

ಸೂಲಾ ತಂದು ಮಂದದಲ್ಲಿ ನೆಡಿಸಿ
ಸೂಲಕ್ಕರುಳಯ್ನ ಎತ್ತು ಬೇಕು |

ಅವುನೆರಡು ಕಣ್ಗಳ ತಗುದು ಸೂಲುಕ್ಕೆ ಬಲುದ್ರೆ
ಒಪ್ತಾರೆ ನನ್ನ ಕುಲುಸಬುಯು" |

"ಎಂತೆ ಮಾತ್ತಾಡ್ದಪ್ಪ ಕೊಂಡುಗರ ಮಂಚಣ್ಣ
ಹಂಗಂತ ಬಸವಣ್ಣ ನುಡಿದಾರು |

ಅಪರಾಧ ಇರಬಹುದು ಮರಣ ಮಾಡೋದುಂಟೆ
ಇದು ಧರ್ಮವೇನಪ್ಪ ಮಂಚಣ್ಣ |

ತಕ್ಕಾದ ಅಪರಾಧ ಪಡಕೊಳ್ಳಿ ಕುಲುದೋರು
ಹರುಳಯ್ಯನ ಮರಣ ಮಾಡೊದೂ ಸರಿಯಲ್ಲ" |

"ಬಿಡಿಬಿಡಿ ಬಸವಣ್ಣ ಒಪ್ರುದೊ ನಿಮ್ಮ ಮಾತು
ಅವುನ್ಗೆ ಜೊತೆಯಾದ ಮಾತ ಹೇಳ್ತೀರಿ" |

"ನಾಳೆ ಜಿನ ಇನ್ಯಾರು ಇಂತೆ ಕಥೆಯ ಮಾಡಿದರೆ
ನಾವು ಅಪ್ರಾದ ಪಡುಕೊಂಡು ಸುಮ್ನೆ ಇರಬಹುದ |

ನಾ ಹೇಳುದಂತ ಸೂಲುಕ್ಕೆ ಅಪ್ರಾಧಿಗಳು ಬಲಿಯಾದ್ರೆ
ತಿಳ್ಕೋಳುತಾರೆ ನಾಳೆ ಕುಲವೆಲ್ಲ" |

"ನಿನ್ನ ಅಧಿಕಾರ್ದಲ್ಲಿ ಬಿಜ್ಜಳನ ದೊರ್ತಾನದಲ್ಲಿ
ಏನಾದ್ರು ನೀವು ಮಾಡಬಹುದು" |

ಆ ಮಾತ ಕೇಳ್ಕೊಂಡು ಕೊಂಡುಗರ ಮಂಚಣ್ಣ
"ಹೌದು ನನ್ನದುಕಾರ್ದಲ್ಲಿಂಗೆ ನಡೀ ಬೇಕು" |

ಸೂಲದ ಮರ ತಂದು ಮಂದದಲ್ಲಿ ನಿಲ್ಲಿಸಿದರು
ನಾವು ಸೂಲಕ್ಕೇತ್ತುತೀವಿ ಒಪ್ಪಂದವಯ್ಯ |

ಕೊಂಡುಗರ ಮಂಚಣ್ಣನ ಮಾತ ಕೇಳಿಕೊಂಡು ಹರಳಯ್ಯ
ಕತ್ಯ ಕೈಯಲ್ಲಿ ಹಿಡಿದಾನು |

ಅಂದವುಳ್ಳ ಚೌಕ ತನ್ನ ಕೈಯಲ್ಲಿ ಹಿಡಿಕೊಂಡು
"ಬಂದುದೆಲ್ಲ ಬರ್ಲಿ ಅಂದುಕೊಂಡು |

ಬಂದುದೆಲ್ಲ ಬರ್ಲಿ ನನ್ನ ಗುರುವೀನ ದಯವಿರಲಿ"
ಅಂತ್ಹೇಳಿ ಕಣ್ಣುನ ಗುರಳ್ಯಾ ಕಿತ್ತುಕೊಂಡ |

ಗುರುಳ್ಕೆ ಕಿತ್ತುದ್ದ ನೋಡುದುರು ಕುಲುಸಭೆಯು
ನಾವು ನೋಡುವುದಪ್ಪ ನಮ್ ಕಣ್ಣಾರ |

ಹಿಡುದು ಹರುಳಯ್ಯನೋರು ಸೂಲಕ್ಕೆ ಬಂದಾರು
ಆಗೋದ ಇಂದು ಹರಳಯ್ಯ |

ಪರಳಯ್ಯನ ಕತೆ ಮುಗಿದೀತು ಅನುತ್ಹೇಳಿ
ಕೊಂಡುಗರ ಮಂಚ ನುಡಿದಾನು |

"ಒಪ್ಪುತಾ ಮಧುವರಸೆ ನಮ್ ಕುಲದೊರ್ ಮಾಡಿದ್ದ
ಈಗ ಸಂತೋಷ ಬಂತಪ್ಪ ನಿನ್ ಮನದಲ್ಲಿ |

ನ್ಯಾಯ ತೀರೋಗ್ಬುಡ್ತು ಕುಲಾ ಹೇಳಿ" ಎಂದು
ಎದ್ದಾರು ಆಗ ಕುಲುದೋರು |

ಗುರುವಿನ ದಯದಿಂದ ಬಸವಣ್ಣನ ಕರುಣದಿಂದ
ಸೂಲದ ಮರವು ಚಿಗುರುತು |

ಸೂಲದ ಮರವು ಬಿಲ್ವತ್ರೆ ಮರವಾಯ್ತು
ಚಿಗುತ ಬಿಲ್ವತ್ರೆ ಪುರ ಜೋತೀತು |

ಆ ಬಿಲ್ವತ್ರೆ ಮರದ ಮೇಲೆ ಕುಂತುಕೊಂಡು ಹರಳಯ್ಯ
"ನೋಡಪ್ಪ ನನ್ನ ಕುಲ ಸಭೇಯ |

ಹರಳಯ್ಯ ಸತ್ತ ಎಂದು ಸಂದೇಗ ಪಡಬೇಡ
ಗುರುವೀನ ದಯಾದಿಂದ ಉಳುದಿವ್ನಿ" |

ಕುಲವೆಲ್ಲ ನೋಡಿದರೆ ಕೈತಪ್ಪೆ ಹೋಡಿದರು
ಇವ ಸರಣ ಕಾಣಪ್ಪ ಹರಳಯ್ಯ | ೧೨೩೦

"ನಾ ಬೇಡಿ ಅಂತ ನಿಮುಗೆ ನಾನ್ ಮೊದಲೆ ಹೇಳ್ಲಿಲ್ಲೆ
ಈಗ ನೋಡಿದಿರ ಸರಣಾನ ನಿಜಭಕ್ತರು |

ನೋಡಿದರು ಸರಣಾನ ನಿಜ ಭಕ್ತ" ಅನುತ್ಪೇಳಿ
ನುಡಿದಾರು ಗುರು ನಮ್ಮ ಬಸವಣ್ಣ |

ಸೂಲದ ಮರದ್ಮೇಲೆ ಕುಂತುಕೊಂಡು ಹರಳಯ್ಯ
ಏನಂತ ಸರಣ ನುಡಿದಾನು |

"ಲಿಂಗ ಕಟ್ಟಿದ ಜಂಗಮರಿಗೆ ಆ ಲಿಂಗದ ಪೂಜೆಗೆ
ನಾ ಬಿಲ್ವತ್ರೆಯಾಗಿ ಮೊದಲು ಬರುತೀನಿ |

ಈ ಬಿಲ್ವತ್ರೆ ಧರಿಸಿ ನೀವು ಪೂಜೆ ಮಾಡಿ" ಎಂದು
ಆ ಮರದ್ಮೇಲಿ ಹರಳಯ್ಯ ನುಡಿದಾನು | ೧೨೪೦

ಬಿಲ್ವತ್ರೆ ಎನ್ನೋದು ಈ ಜಗದಲ್ಲಿ ಇರಲಿಲ್ಲ
ಅವ್ನ ಸೂಲದ ಮರವೆ ಬಿಲ್ವತ್ರೆ |

ಮರವ ಬಿಟ್ಟು ಕೆಳಗೆ ಇಳಿದಾಗ
ಮಧುವರಸು ಕೈಯಾ ಓಡಿದಾನು |

"ಅಲ್ಲಸಲ್ಲದ ಮಾತ ನಾ ಕುಲದಲ್ಲಿ ಹೇಳಿಬುಟ್ಟೆ
ಮಾಪ್ ಮಾಡು ನನ್ನ ಹರಳಯ್ಯ |

ಕೊಂಡುಗರ ಮಂಚ ಬಂದು ಕೈಯೆತ್ತಿ ಕರವ ಮುಗಿದು
ಸೂಲಕ್ಕೆ ಎತ್ತಕೆ ನಾ ಹೇಳುದೆನು |

ಸೂಲಕ್ಕೆ ಎತ್ತಿ ಎಂದು ನಾ ಹೇಳುವಂತ ಪಾಪ
ಕ್ರೋಧ ಇಡಬ್ಯಾಡಿ ಹರುಳಯ್ಯ | ೧೨೫೦

ನಿಮ್ಮಿಂದಾಡಿ ನನ್ನ ಸತ್ಯ ಬೆಳ್ಗಿತಪ್ಪ
ಕ್ರೋಧುವಿಲ್ಲ ನನ್ನ ಮನದಲ್ಲಿ |

ಕಕ್ಕೆಸೊಪ್ಪಿನ ಮಠದ ಒಳಗೆ ಕಾಲ ಮಾಡ್ತಾನೆ ಎಂದು
ಇಮಪರುಗು ನಾವು ತಿಳಿದಿದ್ದೊ |

ಕಕ್ಕೆ ಗುರುಳಿನ ಒಳುಗೆ ನೀ ಕಾಲ ಮಾಡುದುರೂವೆ
ನಿನ್ನ ಸತ್ಯ ತೊಲುಗನಿಲ್ಲ ಹರಳಯ್ಯ |

ಇಂದೆಲ್ಲಾ ಒಂದೂಗೆ ನಡೀಯಿರಿ ಹರಳಯ್ಯ ಜೊತೆಯಲ್ಲಿ
ಅವ್ರ ಮನೆತನ್ಕ ಹೋಗಿ ಕಳುಗಿ ಬರಬೇಕು" |

ಹರಳಯ್ಯ ಕರಕೊಂಡು ಸಭೆಯಲ್ಲಿ ಹೋರಟಾರು
ಬಂದುರು ಹರಳಯ್ನ ಗುರುಮಠಕೆ | ೧೨೬೦

ಕುಲುಸಭೆಯು ಬರುವಾಗ ಕಲ್ಯಾಣಮ್ಮಯ್ಯ
ಹದ್ನರಾಳುದ್ದ ಬಾವೀಲಿ ನೀರ ಸೇತ್ತಾಳೆ |

"ಬತ್ತರೆ ಕುಲಸಭೆಯು ಎತ್ತಿ ಕೈಯ ಮುಗಿ ಕಲ್ಯಾಣಿ"
ಎಂದ ಮಾನ್ಯ ಹರುಳಯ್ಯ ನುಡಿದಾನು |

ಯಾಜಮಾನ್ರ ಮಾತ ಕೇಳಿ ಕಲ್ಯಾಣಮ್ಮ
ಕೈಬುಟ್ಟು ಕುಲಕೆ ಸರಣಂದ |

ಆ ಬಾವಿಯೊಳಗೆ ಬಿಂದುಗೆ ಅರ್ಧ್ಯ ಬಂದಿತ್ತು
ಅದು ನಿಂತ ಜಾಗದಲ್ಲಿ ನಿಂತಿರುವುದು |

ಎಷ್ಟು ದೂರ ಎಳದಿದ್ರೂ ಅಷ್ಟು ದೂರ್ದಲ್ಲಿ ನಿಂತಾವೆ
ಇವುಳೆಂತಾ ಘನಾ ಗರತಿಯೊ ತಿಳಿಯಾದು | ೧೨೭೦

ಭಕ್ತರ ಬರುತ್ತಾರೆ ನೀ ರಾಜುಣವ ಕುಟ್ಸಿದ್ಯಾ
ರಾಜುಣ ಕುಟ್ಟೋದ ಕುಲುಕೆ ತೋರಮ್ಮ |

ರಾಜುಣ ಎಂದರೆ ನವಣೆ ಸರಣರೀಗೆ
ಆ ನವಣೆ ತೆಗುದು ಒರಳೀಗೆ |

ಆ ನವಣೆ ತಗುದು ಒರಳಿಗೆ ಸುರುಕೊಂಡು
ಒನಕೆ ಎತ್ತಿದಾರು ಕಲ್ಯಾಣಮ್ಮ |

"ಕಲ್ಯಾಣಿ ಗುರು ಬಸವಣ್ಣ ಬಂದಾರಲ್ಲ
ಎತ್ತಿ ಕೈ ಮುಗಿಬಾರ್ದ?" ಅಂದರು |

ಎತ್ತಿರುವ ಒನಕೆ ಬುಟ್ಟು, ಗುರುಬಸವಣ್ಣೋರ್ಗೆ
ಸರಣ ಸರಣಾರ್ತಿ ಅನ್ನುತಾಳೆ | ೧೨೮೦

ಎಷ್ಟು ದೂರ ಎತ್ತಿದ್ರು ಅಷ್ಟು ದೂರ್ದಲ್ಗೆ ಕೈ ಬಿಟ್ರು
ಅರ್ಧ ಅಂತರದಲ್ಲಿ ಒನಕೆ ನೀಂತೀದೆ |

"ಇಂತ ಭಕ್ತಿವಂತ್ಯ ನಾವಿನ್ನು ಕಾಣ್ನೆಲ್ಲಾ
ಸರಣೆ ಕಾಣಪ್ಪ ಕಲ್ಯಾಣಮ್ಮ" |

"ಕಲ್ಯಾಣಮ್ಮ ಸರಣತ್ತ ನಿಮಗ್ಯಾರಿಗೂ ಗೊತ್ತಿಲ್ಲ
ನಾ ಬಲ್ಲಿ" ಅಂದರು ಬಸವಣ್ಣ |

ನಮ್ಮ ಮಠವ ಕಟ್ಟುದ್ಮೇಕೆ ಕಲ್ಯಾಣಮ್ಮನ ಹೆಸರು
ಹೆಂಗೆ ಬಂತೆಂದು ಹೇಳುತೀನೀ |

ಆ ತಾಯಮ್ಮನ ಹೆಸರೇಳಿ ಒಂದುಳಿ ಏಟೊಡೆದಾರೆ
ಆಗ ಅಲ್ಲಾಗೋಂತ ಚಪ್ಪಿ ಹಾರುತಿತ್ತು | ೧೨೯೦

ಒಂದೊಂದೂ ಮನೆ ತುಂಬ ಒಂದೊಂದು ಚಪ್ಪಿ ಎಬ್ಸಿತು
ಅವ್ರ-ಗಂಡನ ಸೇವೆ ಘನಗರ್ತಿ |

ಗಂಡನ ಸೇವೆ ಘನಗರ್ತಿ ಆದ್ದರಿಂದ
ಕಟ್ಸೀದಿ ನಾನು ಈ ಕಲ್ಯಾಣವ |

ಕಟ್ಸೀದಿ ನಾನು ಈ ಕಲ್ಯಾಣ ಮಠವ
ಕರುಕೊಂಡೆ ಅವಳ ಹೆಸಾರನ್ನೆ |

ಕಲ್ಯಾಣ ಪಟ್ಟಣದ ಶಿವಶರಣೆ ಕಲ್ಯಾಣಮ್ಮ
ಎಂದು ಅವಳೆಸರ ಕರುಕೊಂಡಿ" |

"ಒಪ್ಪುದೋ ಬಸವಣ್ಣ ಅವ್ರ ಗಂಡ ಹೆಂಡ್ರ ಸತ್ಯವ
ಇನ್ನು ಮಾತುಂಟೆ ಸರಣರ ಜೊತೆಯಲ್ಲಿ | ೧೩೦೦

ಇಂತ ಸರಣಾರಿಲ್ದೆ ಈ ಲೋಕ ಬೆಳಗಾಗೋದಿಲ್ಲ
ಇಂತೇವ್ರಿಂದಲೆ ಅರುವೆಂದು |

ಇಂತೇವ್ರಿಂದ ತಾನೆ ಹೆಣ್ಣಾಗಂಡೆಲ್ಲ
ಅರುವ ಮಾಡ್ಕೊಬೇಕು" ಅನ್ನುತಾರೆ |

"ಅರುವ ಮಾಡ್ಕೊಂಡು ನಡೆದಾರೆ ಜಂಗುಮರು
ಸತ್ಯವ ತಿಳಿಯಬವುದು" ಅನ್ನುತಾರೆ |

ಮಾರಾಜ ಬಿಜ್ಜಾಳ ತನ್ನರಮನೆಗೆ ಹೊರಟೋದ
ಮಂಕಾಗಿ ಹೋಯ್ತಾನೆ ಕೊಂಡುಗ |

ಸಿರಾ ಬಗ್ಗಿ ಹೊಯ್ತಾನೆ ಮಧುವರಸು ತನ್ ಮನೆಗೆ
ಈ ಸತ್ಯ ನಮ್ಮ ಒಳಗಿಲ್ಲ | ೧೩೧೦

ಬಂದರು ಬಸವಣ್ಣ ಕಲ್ಯಾಣ್ದ ಗುರುಮಠಕೆ
ಅವ್ರು ಹೊಕ್ಕಿದರು ಕಲ್ಯಾಣ್ದ ಗುರುಮಠವ |

ಮಾಗುರು ಬಂದರು ಎಂದು ಮಾತನ್ಹಂಸಗಳು
ನಮ್ಮ ಗುರುವಿಗೆ ಮಂಗಳಾರ್ತಿಯ ಬೆಳಗಿದವು |

ಮಂಗಳಾರ್ತಿ ತಕ್ಕೊಂಡು ನಮ್ ಸಂಗನ ಬಸವಣ್ಣ
ತಮ್ಮ ಪಟ್ಟೆ ಸಿಂಹಾಸನಕೆ ಹೊರಟಾರು |

ಆ ಗದ್ದಿಗೆ ಮೇಲೆ ಬಂದು ನಮ್ ಗುರುಗಳು ಕುಳಿತಾರು
ಹರಳಯ್ನ ಮಾತ ನೆನೆಕೊಂಡು |

ಸತ್ಯವಂತರ ನಿಜ ಮಾತ್ರ ಎಂದೆಂದು ತೊಲಗೋದಿಲ್ಲ
ಸತ್ಯ ಇರಬೇಕು ಈ ಜಗದಲ್ಲಿ | ೧೩೨೦

ಕರ್ಮ ಕತ್ತಲೆ ಎಂದು ಸತ್ಯವೆ ಬೆಳಕೊಂಡು
ಸತ್ಪಂತರು ಸಾರಿದ್ದು ಹುಸೀಲಿಲ್ಲ |

ಸತ್ಪಂತರು ಸಾರಿದ್ದು ಇದು ಸುಳ್ಳಲ್ಲ ಎನುತ್ಹೇಳಿ
ನಮ್ಮ ಸತ್ಯವುಳ್ಳ ಬಸವಣ್ಣ ನೆನಿದಾರು |

ಸತ್ಪಂತ ಹರುಳಯ್ಯ ಮಾಡಿದ ಈ ಕತೆಯ
ಆ ಸತ್ಪಂತರೀಗೆ ಸರಣಪ್ಪ |

ಕಲ್ಯಾಣಕೆ ಸರಣು ಕೈಲಾಸಕ್ಕೆ ಸರಣು
ಆ ಕಲ್ಯಾಣಮ್ಮನಿಗೆ ಒಂದ್ಸರಣಪ್ಪ |

ಇಂತೆ ಆದಿ ಹರುಳಯ್ಯನ ಮಾತ ಕೇಳಿದ ಮಾನ್ಯರಿಗೆ
ಆ ಪುಣ್ಯಾತ್ಮಾರಿಗೊಂದು ಸರಣಪ್ಪ | ೧೩೩೦

ಇಲ್ಲಿಗೆ ಹರ ಹರ ಇಲ್ಲೀಗೆ ಶಿವ ಶಿವ
ಇಲ್ಲಿಗೆ ಹರುಳಯ್ಯನ ಕತೆ ಸಂಪೂರ್ಣ | ೧೩೩೨

ತುರುಕರ ಪೀರಣ್ಣ

ಸುವ್ವಿ ಕಲ್ಯಾಣದಯ್ಯ ಸುವ್ವಿಲಾಲೆ
ಕಲ್ಯಾಣ್ವ ಬಸುವಯ್ಯ ಸುವ್ವಿಲಾಲೆ | ಸೊಲ್ಲು |

ಕಲ್ಯಾಣ ಪಟ್ಟಣದಲ್ಲಿ
ಕಲ್ಲೆಲ್ಲ ಲಿಂಗುವಲ್ಲೊ
ಸರಣ್ರುಗೆಲ್ಲ ಮಾತ್ಮುರ್ಯಾರೊ
ತುರುಕರ ಪೀರಣ್ಣೋರು
ಪೀರಣೋರ್ಯಾವ ಕೆಲ್ಸ
ಅವ್ರು ದನಗಳ ಕಡಿತಾರೆ
ದನದ ಮಾವ್ಸ ಮಾರುತಾರೆ
ದೊಡ್ಡ ಬಸವಣ್ಣೋರು
ಬಾಳ ಚಿಂತೆ ಮಾಡುತಾರೆ
ಶಿವುನ ಗ್ಯಾನ ಮಾಡುತಾರೆ
ಶಿವಶರಣೆ ನೀಲಮ್ಮಯ್ಯ
ಒಕ್ಕಳಕ್ಕಿಯ ಹಾಕಿ
ಒಂದು ಬದ್ನೆ ಕಾಯಾಕಿ
ಲಕ್ಕುಸ್ಸ ತೊಂಬತ್ತಾರು ಕೋಟಿ
ಸರಣ ಮಾತ್ಮುರುಗೆಲ್ಲ
ನಿಚ್ಚು ಬೋಜ್ನೆ ಮಾಡುತಾರೆ
ಮಿಕ್ಕೀದ ಪರುಸಾದ್ವ
ಕಲ್ಪಂಡಿಗೇರುತಾರೆ
ಕೈಲಾಸ್ದ ಒಳ್ಗೆ ಶಿವ
ಒಂದ್ - ಕಂದ್ಮದ್ ಬಾವಿ ತೋಡುಸ್ತಾರೆ
ಕಂದ್ಮದ್ ಬಾವಿಗೋಗಿ
ಮಿಕ್ಕುದ್ ಪರ್ಸಾದ ಸುರ್ದರಂತೆ
ಅಲ್ಲಿನ್ ಕಲ್ಯಾಣಕ್ಬಂದ್ರು
ನಮ್ಮ ದೊಡ್ಡ ಬಸುವಣ್ಣೋರು
ಶಿವುನ ಗ್ಯಾನ ಮಾಡಿಕೊಂಡು
ಪಟ್ಟೆ ಮಂಚಾಕೆ ಬಂದ್ರು
ಉರಿಯಾಗದ್ದುಗೆ ಮ್ಯಾಲೆ
ಅವ್ರು ಒರುಗಿ ನಿದ್ದೆ ಮಾಡುತಾರೆ
ಒರ್ಗಿ ನಿದ್ದೆ ಮಾಡುವಾಗ
ಒಂದ್ - ಮಾಯಾದ ಸೊಪ್ಪ ಬೀಳ್ತು
ಮಾಯಾದ ಸೊಪ್ಪ ಕಂಡು

ಅವ್ರು ದಿಗ್ಗಂತ ಎದ್ದರಂತೆ
ಶಿವಶಿವಾ ಹರಹರಾ
ಹಂಗಂತ ಅಂದುಕೊಂಡು
ಎಂದೂ ಇಲ್ಲಾದ ಸೊಪ್ಪ
ನಾ ಇಂದು ಕಂಡೇನಲ್ಲ
ಪಟ್ಟೆ ಮಂಚಾವ ಬುಟ್ಟು
ಅವ್ರು-ಕಡೆ ಬಾಗ್ಲುಗೆ ಬಂದರಂತೆ
ಮಾಯ್ಯಾರ ಶಿವುರಾಯ
ಬಸ್ವಣ್ಣೋರ ಕರೆಯುತಾನೆ
"ಸರಣ ಮಾತ್ಮರು ನೀವು
ಕಲ್ಯಾಣ್ವ ಬಸುವಣ್ಣ
ನೀವು ಚಿಂತೇಯ ಮಾಡಬೇಡಿ
ನೀವು ದುಕ್ಕುಗಳ ಮಾಡಬೇಡಿ
ತುರುಕರ ಪೀರಯ್ನ
ನೀವು ಸರಣನಾಗಿ ಮಾಡಬೇಕು"

ಈಸ್ವುರುನು ಬಸವಣ್ಣನು
ಕೂಡಿ ಮಾತಾಡುತಾರೆ
"ನೀನೊಂದು ಹೋರಿಯಾಗು
ನಾನವುರ್ಗೆ ಮಾರುತೀನಿ"
ದಳ್ಳಾಳಿ ವ್ಯಾಪಾರ
ಒಳ್ಳೆ ದನವ ಮಾರಕೆ ಬಂದ್ರು
"ಇದ ಕೊಂಡೋನು ಯಾರಣ್ಣ
ಕಮ್ಮೀ ಕರೀದಿ ಕಂಡ್ರೊ
ಯಾರುಬೇಕಾದ್ರುವೆ
ನೀವು ಒಪ್ಪಿ ತಕೊಳ್ಳವುದು"
ಹೊಲಾರೊನ್ನಯುನ ಮನೆಗೆ
ಬಂದಾರು ಈಸ್ವುರ
ಈಸ್ವುರ ಎನ್ನುವುದು
ಇವ್ರುರೊಬ್ರುಗೂ ಗೊತ್ತಿಲ್ಲ
ದನವ ಮಾರೋರಾಗಿ

---

* ಪ್ರತಿ ಸಾಲಿಗೂ ಸುವ್ವಿಲಾಲೆ ಎಂದು ಸೇರಿಸಿಕೊಂಡು ಎರಡೆರಡು ಸಾಲುಗಳಿಗೊಮ್ಮೆ ಸೊಲ್ಲನ್ನು ಹಾಡಿಕೊಳ್ಳಬೇಕು.

ಲವ್ವು ಯಾಸವ ಮರುಸ್ಕೊಂಡು
ಇವ್ರ ದುಡುಚಿತ್ರ ನೋಡಬೇಕು
ಇವ್ರ ದುಡುಮನವ ನೋಡಬೇಕು
"ಹೊಲೇರೊನ್ನ ಬಯ್ಕ
ಏನು ಮಾಡಿಯಪ್ಪ ಸರಣ"
"ಎಲ್ಲೀವ್ರು ನೀವ"ಂತನೆ
"ನೀವು ಏನ್ಕಾರ್ಣ ಬಂದ್ರಪ್ಪ?"
"ನಾ ಹೋರಿ ಮಾರಕೆ ಬಂದಿವ್ನಿ
ತಕ್ಕೊಳ್ಳೋರು ಯಾರು ಇಲ್ಲ"
"ಇಂತೆ ಸರ್ಯಾತ್ರೆ ಒಳುಗೆ
ವ್ಯಾಪಾರುಕ್ಕಿರುಬೋದ?"
"ಅಯ್ಯ ಸಮಯ ಅನ್ನೇದು ದೊಡ್ಡು
ಅದಕಾಗಿ ಇಲ್ಲಿಗೆ ಬಂದೊ
ಹನ್ನೆರಡು ಯೋಜಣಕೆ
ನಾವು ಪಯ್ಣವ ಮಾಡಬೇಕು"
"ಹೋರೇನೊ ಚಂದಾಗದೆ
ನನ್ನ ಕೈಲೊಂದು ಕಾಸಿಲ್ಲ"
"ನಾ ದೂರಾಕೆ ಹೋಗಬೇಕು
ಕೊಂಡುಕೊಂಡು ಕಾಸ್ಕೊಡಪ್ಪ"
"ನೀ ತಂದೀರೋ ಹೋರೀಗೆ
ಎಷ್ಟು ಹಣ ಆವದಪ್ಪ?"
"ಹೆಚ್ಚಲ್ಲ ಕಮ್ಮಿಯಲ್ಲ
ಹತ್ತೂ ಹಣವಪ್ಪ"
"ಸಾವ್ರ ಬಾಳುವಂತ ಹೋರ್ಕ
ಹತ್ತೆ ಹಣ ಅಂತಿಯಲ್ಲ
ನನ್ನ ಮನೆಯಲ್ಲೆರ್ಡ ಹಣವಲ್ಲೊ
ಇನ್ನೆಂಟು ಹಣ ಎಲ್ಲಿ ತರ್ಲೊ
ನನ್ನ ತಮ್ಮ ಚನ್ನಯ್ಯನ್
ತಾವ್ಕೆ ನಡಿಯಪ್ಪ ಹೋಗಾಂವ್
ನಾವಿಬ್ಬರು ಸೇರಿ ತಕ್ಕೊತೀವಿ
ಸಮ್ಮಾಲು ಮಾಡ್ಕೊತೀವಿ"
ಹಂಗಂತ ಹೇಳುಬುಟ್ಟು
ಚನ್ನಯ್ಯನ ತಾವ್ಕೆ ಬರುತಾರೆ
"ಚನ್ನಯ್ಯ ಚನ್ನಯ್ಯ
ಕದ ತಗಿಯೊ ಘನಸರಣ"
ಹೊನ್ನಯ್ಯ ಸಪ್ತ ಕೇಳಿ
ಅವರ ದಡ್ಮನೆ ಕದ ತಗ್ದ
"ಸರ್ಯಾತ್ರೆ ಸಮ್ಮಾತ್ರೆ
ಏನು ಬಂದೀರಣ್ಣ?"
"ಎಂದೂ ಇಲ್ಲಾದೋರಿ
ಇಂದು ಕಾರಾಯ್ಕೆ ಬಂತು
ಅವ್ವು ಕಾರಾಯ್ವು ಕಟ್ಟು ಬುಟ್ಟು
ನಾವಿಬ್ರೂವೆ ವಯಸ್ಕೊಳಾಂವ
ಅಷ್ಟಾಣ ನನ್ತಾವಿಲ್ಲ
ನನ್ತಾವಿರೋದೆ ಎರಡಣ
ನಾವಿಬ್ರು ಹಣ ಕೊಟ್ರು
ಹೋರಿ ಕೊಂಡುಕೊಳ್ಳಬೇಕು"
"ಹೋರಿಯೇನೊ ಚಂದಾಗದೆ
ಎಷ್ಟಂತಣ್ಣಯ್ಯ ಬೆಲೆ?"
"ಹತ್ತಾಣ ಕ್ಕಾಯ ಕಣೊ
ನಿನ್ತಾವೆಷ್ಟಿದ್ದದಪ್ಪ?"
"ನನ್ತಾವೆಲ್ಲಿ ಬಂದಾದು?
ನನ್ತಾವು ಎರಡಣ
ಅದ್ರುಮ್ಯಾಲೊಂದಡಕ್ಕೂ ಇಲ್ಲ
"ಎರಡು ಎಂಡ್ನಾಕಣ
ಹತ್ತಣ ಇಲ್ಲವಲ್ಲ"
"ಕಮ್ಮಿ ಬೆಲೆಗಿಂತ ಹೋರಿ
ಇನ್ನೆಲ್ಲಾರು ಸಿಕ್ಕಬೋದ
ಏನ ಮಾಡೋದಪ್ಪ
ಇನ್ನೇನಾರು ಬುದ್ಧಿ ಹೇಳು"
"ಅಣ್ಣಯ್ಯ ಅಣ್ಣಯ್ಯ
ಅಲ್ಲಿ ತುರುಕಾರ ಪೀರಣ್ಣ
ದುಡ್ಡೀನ ಮನ್ಸ ಅವ
ದೊಡ್ಡ ಮನ್ಸ ಮಾಡುತಾನೆ
ಅಲ್ಲಿಗಾರು ಹೋಗಾಂವ
ಪಾಲಾಕಿ ಕೊಂಡುಕೊಳ್ಳುವ
ಆದೇಕ ನಷ್ಟುವೆಲ್ಲ
ನಮ್ಮ ಮೂರಾಳ್ಗು ಪಾಲು ಕಣ್ರೊ
ಮೂರ್ನನ್ನು ದುಡ್ಡಾಕಿ
ಆ ಎತ್ನೊನ್ಗೆ ಕೊಟ್ಬುಡುವ"

ಯಾಪಾರಿ ಕರುಕೊಂಡು

ಪೀರಣ್ಣನಟ್ಟಿಗ್ಬಂದ್ರು
"ಪೀರಣ್ಣ ಪೀರಣ್ಣ
ಭಾರಿ ಬಾಗ್ಲ ತಗಿಯಪ್ಪ"
ಮಸೀತಿ ಒಳುಗವ್ನೆ

ಅವ್ನು ನಮಾಜ ಮಾಡುತಾನೆ
ಅಲ್ಲ ಕೂದ ರಹಿಮಾಂತ
ತಾಯಿ ಜಾಮಾಲಮ್ಮಾಂತ
ಅವ ನಮಾಜ ಮಾಡುವುದ
ಇವರಿಬ್ಬರು ಕೇಳುತಾರೆ
ಮಂಡಿಯೂರಿ ಕೈ ಜೋಡ್ಸಿ
ಶಿವನ್ಗೆ-ನಮಾಜು ಮಾಡುತಾನೆ
ನಮಾಜ ಮಾಡೋದು
ನಮ್ ಶಿವುನ್ಗಾದುಕ್ಕರುವಾಯ್ತು
ನಮಾಜ ತೀರುಸ್ಕೊಂಡು
ಅವನೆದ್ದು ಈಚಿಗೆ ಬಂದ
ಹೊಲೆರೊನ್ನಯ್ಯ ಸರಣ
ಒಳ್ಳೆ ಮಾದುಗರ ಚನ್ನಯ್ಯ
ಮೂರ್ನನ್ನು ಕೂತ್ಕೊಂಡು
ಅಲ್ಲೊಂದಳ್ತೇಯ ಮಾಡುತಾರೆ
ಯಾಪಾರ್ದಲ್ಲಿ ಬುದ್ಧಂತ
ನಮ್ಮ ತುರಕ್ರ ಸರಣ ಪೀರಣ್ಣ
ಅಂದುವಾದ ಹೋರಿ ನೋಡ್ದ
"ಏನ್ರಪ್ಪ ನೀವು ಬಂದ್ರಿ"
"ಹೋರಿ ಯಾಪಾರವಾಯ್ತು
ನಮ್ಮೂರ್ನವೆ ಸೇರಬೇಕು
ನಿನ್ಸುಟ್ಟು ತಕ್ಕಳಕಿಲ್ಲ
ನಾವ್ಮೂರು ಜನ್ನು ತಕ್ಕೋಬೇಕು"
ಮೂರ್ನನ್ನು ದುಡ್ಡಾಕಿ
ಅವ್ರು ಹತ್ತಾಣ ಸೇರುಸುದ್ರು
ಹೋರಿನಾದ್ರೆ ಕೊಂಡುಕೊಂಡ್ರು
ಹಣವುನಾದ್ರೆ ಕೊಟ್ಟುಬುಟ್ರು
ಇದ-ಮಿಸ್ ಮಿಲ್ಲ ಮಾಡಬೇಕು
ಇದಿಸ್ಸಾವ ಹಾಕಬೇಕು
ಮೂರಾಳು ಹಂಚ್ಕೋಬೇಕು
ಮೂರಾಳು ಪಾಲ್ಕಾರ್ರು
ಶಿವನ ಸೋತ್ರ ಮಾಡುಬುಟ್ಟು
ಅದ್ರ-ಪೆಟ್ರುಗ್ ಚೂರಿ ಹಾಕ್ತಾರೆ
ಮಿಸು ಮಿಲ್ಲು ಮಾಡ್ಸುಟ್ರು
ಚರ್ಮಾವ ಒಳಿದೇ ಬುಟ್ರು
ತುಕ್ಡ ತುಕ್ಡ ಪಾಕ್ಸುಟ್ರು
ಮೂರ್ಪಾಗ ಮಾಡ್ಸುಟ್ರು
ಹೋರಿ ಯಾಪಾರಗಾರ

ಆಮೇಲೆ ಬಂದನಂತೆ
"ನಮ್ಗೊಂದು ಪಾಲುಕೊಡ್ರೊ
ನಿಮ್ಗೆ ಆದ್ಬಾರ್ದು ಕೊಡ್ತಿನ್ರಪ್ಪ"
"ಆಗ್ಲೆ ಹೇಳಿದ್ರೆ ನೀವು
ನಿಮ್ಗೊಂದ್ಪಾಲ ಹಾಕುತಿದ್ದೊ
ಯಾರೂ ಬರ್ಲಿಲ್ಲಾಂತ
ನಾವು ಮೂರ್ಜನುವೆ ಹಾಕೊಂಡೊ"
ಹೊಲಾರೊನ್ನಯ್ಯುಂಗೆ ಮಡ್ಕೆ
ಆ ಮಡುಕ್ಕೆ ತುಂಬುಕೊಂಡು
ತುರುಕರ ಪೀರಯ್ಯ ಸರಣ
ಅವ ಚೌಕ್ಕೇಯ ಕಟ್ಟುಕೊಂಡ
ಮಾದಾರಿ ಚೆನ್ನಯ್ಯ
ಅವ ದಳಾಗೆ ಕಟ್ಟುಕೊಂಡ
ಇನ್ನವುರ್ಮನ್ಗೆ ಅವುರ್ಚಂದ್ರು
ಇವುರ್ಮನ್ಗೆ ಇವುರ್ಚಂದ್ರು

ಮಾಯಾದ ದಳ್ಳಾಳಿ
ನೆಗುನೆಗ್ತಾ ಮಾಯವಾದ
ಹೊಲೇರೊನ್ನಯ್ಯ ಬಂದು
"ನಾನು ಕೊಟ್ಟಿದ್ದ ಹಣಕಿಂತ
ಹೆಚ್ಚಾಗಿ ಮಾವ್ಸ ಸಿಕ್ತು"
ಅಂತ ಮಡಕೆಯ ಬಿಚ್ತುತಾನೆ
ಮಡ್ಕೆ ಒಳ್ಗೊ ಏನಪ್ಪ
ಅಲ್ಲಿ ಬಸವಣ್ಣೋರ ಸಿರುವಲ್ಲೊ
ಲಬಲಬ್ಗೆ ಬಾಯನ್ನೆ
ಬಡುಕೊಂಡ ಹೊನ್ನಯ್ಯ
"ಬಸವಣ್ಣೋರ ಕೊಂದ ಸಂಗ್ತಿ
ಕಲ್ಯಾಣುಕ್ಕರುವಾಗ್ಬುಟ್ರೆ
ಬಿಜ್ಜಾಳ ನಮ್ ಬುಟ್ಟಾನ
ಮಂಚಣ್ಣ ನಮ್ ಬುಟ್ಟಾನ
ಇಂತೆ ಕೊಲೆಗಾರನಾಗುಬುಟ್ಟಿ
ನನ್ಗೆ ದಾರೀಯೆ ಕಾಣದಲ್ಲ
ಬಸವಣ್ಣೋರ ಕೊಂದ್ಮಪ್ಪ
ನಮ್ಗೆ ಹೋರಿ ಕೊಟ್ಟಾವ
ಅವ ನರ ಮನ್ಸನಲ್ಲ ಕಾಣ್ರೊ
ಸಾಕ್ಸಾದ ಭಗವಂತ
ಇಂಥ ಶಿಕ್ಷೇಕೆ ಗುರಿಮಾಡ್ದ"
ಅಂತೇಳ್ಕುಟ್ಟೊನ್ನಯ್ಯ

ಚಿಂತೇಯ ಮಾಡುತಾನೆ
ಒಬ್ಬುರುಗೆ ಕಾಣದಂತೆ
ಇದ ಮರೆಯ ಮಾಡುಬೇಕು
ಅಂತೇಳುಬುಟ್ಟೊನ್ನಯ್ಯ
ಮಡಕೇಯ ಹೊತ್ತುಕೊಂಡು
ಊರಾಚೆ ಬೆಟ್ಟುದ ಕಿಬ್ಗೆ
ಅವ್ನು ಕಾಣದಂಗೆ ಬರುತಾನೆ |

ಮಾದಾರ ಚನ್ನಯ್ಯ
ಮನೆಗಾದ್ರೆ ಬರುತಾರೆ
ದಳಾವ ಬಿಚ್ಚುತಾನೆ
ಬೆಚ್ಚುಕೊಂಡು ನಿಂತುಕೊಂಡ
ಏನಾಯ್ತು ಶಿವ ಶಿವಾ
ಏನಾಯ್ತು ಹರಹರಾ
"ಕಲ್ಯಾಣ ಪಟ್ಟಣವ
ಕೈಲಾಸ ಮಾಡಿದಂತ
ಬಸವಣ್ಣೋರ ಕೈಕಾಲ್ಗೋಳು
ದಳುದೊಳೀಕೆ ಹೆಂಗೆ ಬಂತು?
ಬಿಜ್ಜಾಳ ರಾಯುಂಗೆ
ತಿಳುದ್ರೆ ನನ್ನ ಬುಟ್ನಾನ
ಕುದ್ರೆ ಕಾಲ್ಗೆ ಕಟ್ಸುಸ್ತಾನೆ
ಆನೆ ಕಾಲ್ನಲ್ಲಿ ತುಣುಸ್ತಾನೆ
ಏನ್ ಮಾಡ್ಲೊ ಭಗವಂತ
ನಿನ್ ಮಾಯಾವ ಕಾಣೆನಲ್ಲೊ
ಕೋಳಿ ಕೂಗೋದ್ಕು ಮುಂಚೆ
ಇದ ಪರಾರಿಯ ಮಾಡಬೇಕು"
ಅಂದುಕೊಂಡು ಚನ್ನಯ್ಯ
ದಳಾವ ಸುತ್ತುತಾನೆ
ಯಾರಾರ್ ಕಂಡಾರು ಅಂತ
ಅವ್ನು ಕದ್ದು ಕದ್ದು ಬರುತಾನೆ
ಊರಾಚೆ ಬೆಟ್ಟುದ್ಕಿಬ್ಬಿಗೆ

ದಳಹೊತ್ತ ಕೊಂಡು ಬಂದ
ಹಣಗಾರ ಪೀರಣ್ಣ
ಅವ್ರ ಮಡ್ದಿ ಮಕ್ಕುಳ್ ವಾಸುಕ್ಕೊಟ್ಟು
ಮಾವ್ನ ಅನ್ನೋ ಆಸ್ಗೆ
ಅವ್ರ ಬೌಕನಾದ್ರೆ ಬಿಚ್ಚುತಾರೆ
ಬಸವಣ್ಣನ ಮೈಯಿತ್ತಲ್ಲೊ
ಆಚರಿಯ ಪಟ್ಟುಕೊಂಡ

"ಆಗಿಲ್ಲ ಈಗಿಲ್ಲ
ಇದೇನಪ್ಪ ಚೋಜಿಗ
ಬಿಜ್ಜಳನ ಮಂತ್ರಿಯಲ್ಲೊ
ಇವ್ನ ಕೊಂದವ್ನಂದ್ರೆ ಬುಟ್ಟುರೆ ನನ್ನ?
ಏನ ಮಾಡ್ಲೊ ಭಗವಂತ
ಎಂತೆ ಕರ್ಮ ಬತ್ತಪ್ಪ
ನನ್ನ ಹೆಡ್ತಿ ಮಕ್ಕು ಗತಿಯೇನೊ
ನಾನು ಯಾರುಗಾದ್ರು ಹೇಳಬವ್ದ
ಬೆಳಕರಿಯೋದುಕ್ಕುಂಚೆ ನಾನು
ಇದ ಪರಾರಿಯ ಮಾಡಬೇಕು
ಅಂದುಕೊಂಡು ಪೀರಣ್ಣ
ಅವ್ನು ಜಲ್ದಿ ಜಲ್ದಿ ನಡಿಯುತ್ತಾನೆ
ಊರಾಚೆ ಬೆಟ್ಟುದ್ಕಿಬ್ಬಿ
ಅಲ್ಲಿ ಮೂರಾಳು ಕೂಡುತಾರೆ
ಒಬ್ಬಾರ ಜೊತೆಗೊಬ್ರು
ಅವ್ರು ಮಾತಾಡ್ಕೊಂಡು ಬರುತ್ತಿದ್ರು.
ಕೈಲಾಸ್ದಲ್ ಕುಂತುಕೊಂಡು
ಶಿವ ಏನಂತ ಯೋಚಣೆ ಮಾಡ್ದ
ಮಾಯದ ಬಿಜ್ಜಳನ
ಕೊಂಡ್ಮಾರ್ ಮಂಚಣ್ಣೋರ್ನ
ಮಾಯಾದ ಚಕ್ಕುರನ
ಅವ್ರು ಸ್ರಿಷ್ಟೀಯ ಮಾಡುತಾರೆ
ಮಾಯಾದ ಚಕ್ಕುರ
ಓಡೋಡಿ ಬರುತಾನೆ
"ಬಸವಣ್ಣೋರ ಕೊಂದೋರು
ಇಲ್ಗೆ ಬತ್ತ ಅವುರೆ
ಬಸವಣ್ಣೋರ ಕೊಂದ್ಮೇಲೆ
ಇವ್ರಿನ್ಯಾರ ಬುಟ್ಟುರು?"
ಮಾಲುನ ಸೈತ್ವಾಗಿ ಹಿಡುಕೊಂಡು
ಅವುರ ಎಳುಕೊಂಡು ಬರುತಾನೆ
ಕೊಂಡ್ಮಾರು ಮಂಚಣ್ಣೋರು
ಅವ್ನು ಕಂಡ್ಕೊಂಡ್ಕರ್ಕೊಂಡ್ಪಂದ
ಆಗ-ಮಾಯಾದ ಬಿಜ್ಜಳ
ಅವ್ರ-ಮೂರುಜನ ನೋಡುತಾನೆ
"ಎಂತೆ ಮನಾಳ್ಕಪ್ಪ
ನೀವು-ಬಸವಣ್ಣನ ಕೊಲ್ಲಬೋದ ?
ನಿಮ್ಮ ಪಾಸೀಗೆ ಹಾಕಬೇಕು
ನಿಮ್ಮ ಹಿಂಗೆ ಬುಡಕಾಗ್ದು"

ಹಂಗಂತ ಬಿಜ್ಜಳ
ಬಸ್ಯಣ್ಣ ಸವ್ವ ತರಕೇಳ್ದ
ಮೂರುಜನ ಹೊತ್ತುಕೊಂಡು
ಅವ್ರು ಗಾಳುಗೋಳು ಮಾಡುತಾರೆ
"ನಮ್ಮ ಹೆಡ್ತಿ ಮಕ್ಕ ಗತಿಯೇನು
ನಮ್ಗೆ ಇಂತೆ ಶೀಕ್ಷೆ ಮಾಡಬೋದ
ಹೋರಿ ಮಾರೋದೋನು
ಅವ್ನು ಇನ್ನೆಂತೆ ಮಾಯಕಾರ !"
ಮೂರು ಜನ ಸರಣಾರು
ಕಣ್ಣಲ್ಲಿ ನೀರಾಕುತಿದ್ರು |

ಬಸುವಣ್ಣ ಸವ ತಂದು
ಬಿಜ್ಜಳ್ನ ಮುಂದೆ ಮಡಗುತಾರೆ
ಕಲ್ಯಾಣ್ದ ಬಿಜ್ಜಳ
ಅವ್ನು ಕೈಕಾಲ್ ತಲೆಯ ಕೊಟ್ಟು
"ಬಸವಣ್ಣೋರ ಸಿರುಸಾವ
ಬಸವಣ್ಣೋರ ಕೈಯಿಕಾಲ
ರುಂಡಾಕೆ ಸೇರುಸ್ರಪ್ಪ"
ಅಂತಾನೆ ಬಿಜ್ಜಳ್ದೊರೆ
ಇವ್ರು ಮೂರು ಜನ್ರು ಕೂತಿಕೊಂಡು
ಕೈಕಾಲ್ ಸಿರ್ನ ಸೇರುಸ್ತಾರೆ
ಆಗ ಮಾಯಾದ ಬಿಜ್ಜಳ
ಆಗ ಕೊಂಡುಕಾರ ಮಂಚಣ್ಣ
ಆಗ ಮಾಯಾದ ಚಕ್ಕರ
ಮರೆಯಾಗಿ ಹೋದರಲ್ಲೊ
ಮನುಗಿದ್ದ ಬಸವಣ್ಣ
ಮೈ ಮುರ್ಕೊಂಡೆದ್ದರಂತೆ
"ನಿಮ್ಮ ಸತ್ಯಾವ ಒಪ್ಪುಕೊಂಡೆ
ಹೆದುರ್ಬ್ಯಾಡ ಚನ್ನಯ್ಯ
ಹೊಲೇರ ಹೊನ್ನಯ್ಯ
ತುರುಕರ ಪೀರಣ್ಣ
ನಿಮ್ಮ ಸತ್ಯಾವ ಮೆಚ್ಚುಕೊಂಡೆ
ನೀವು ಹೆದುರ್ಬ್ಯಾಡಿ ಮನದಲ್ಲಿ"
ಹಂಗಂತ ಬಸುವಣ್ಣ
ಅವುರ್ಗೆ ಸರಣು ಸರಣನ್ನುತಾರೆ
ತುರುಕರ ಪೀರಣ್ಣ
ಹೊಲೇರ ಹೊನ್ನಯ್ಯ
ಸೂದುಗರ ಚನ್ನಯ್ಯ

ಬಸ್ಯಣ್ಣೊರ್ಗೆ ಸರಣಂದ್ರು
ಮೂರು ಜನ ಸರಣಾರ
ಕರುಕೊಂಡು ಬಸವಣ್ಣ
ಕಲ್ಯಾಣ ಪಟ್ಟುಣಕೆ
ಬರುತಾರೆ ಬಸುವಣ್ಣ |

ಮೂರು ಜನ ಸರಣಾರು
ಬಸ್ಯಣ್ಣೋರೂಳ್ಗ ಮಾಡ್ಕೊಂಡ್
ಸುಕುವಾಗಿ ಅವುರಂತೆ
ಸರಣ್ಯಾಗಿ ಬಾಳಾಡ್ತಾರೆ
ಸರಣ್ರುಗೆಲ್ಲ ಘನಸರಣ
ನಮ್ಮ-ತುರುಕಾರ ಪೀರಣ್ಣ
ಕಲ್ಯಾಣ ಪಟ್ಟುದಲ್ಲಿ
ಅವ್ನು ಬಾಳಾಡ್ತ ಇರುವಾಗ
ಅವ್ನು ನಮಾಜು ಮಾಡುವಾಗ
ಅಲ್ಗೆ ಬಸುವಣ್ಣ ಬಂದರಂತೆ
"ಎಂದೂ ಬರದಿದ್ದೋರು
ಇಂದು ಬಂದಂಥ ಬಗೆಯೇನು
ಕಲ್ಯಾಣ್ಕೆ ದೊಡ್ದೋರು
ನೀವು-ನನಮನ್ಗೆ ಬರಬವುದ ?
ಏನಾಗಬೇಕಿತ್ತು ?
ನಮ್ಮಿಂದೇನಾಗಬೇಕು ಸ್ವಾಮಿ ?
"ಕಲ್ಯಾಣ್ದ ಘನಸರಣ
ತುರುಕರ ಪೀರಣ್ಣ
ಅತಿಸಯ್ದ ಬೋಜುಣಕೆ
ನಾನು ನಿಮ್ಮ ಮನ್ಗೆ ಬಂದೆನಪ್ಪ"
"ಆಗಬವುದು ಬನ್ನಿ ಬುದ್ಧಿ
ನಿಮ್ಗೆ ಏನು ಬೋಜ್ನ ಮಾಡುಸ್ಲೇಳಿ?"
"ಅಂತಿಂತೆ ಭೋಜುಣ
ನನ್ನ ನಾಲುಗ್ಗೆ ರುಚಿಯಲ್ಲ
ಮಾವ್ಸಾರಾದಿಗಳು
ನಿನ್ಮನೆ ಭಿನ್ನವಾಗಲಿ"
"ಕಣ್ಣುಗ್ ಬೇಕಾದ ಮಾವ್ಸ
ನಾ ತಕ್ಕೊಂಡೆ ಬರುತೀನಿ
ಮಾವ್ಸಾ ಮಾವ್ಸಾಕೆಲ್ಲ
ಯಾವ ಮಾವ್ಸ ರುಚಿಯಪ್ಪ
ಆಡುನ್ ಮಾವ್ಸ ಕೋಳಿ ಮಾವ್ಸ
ನಿಮಗ್ಯಾವ್ದು ಬೇಕಾಗಿದ್ದು"

"ಅದಿಯೆಲ್ಲ ಬೇಕಿಲ್ಲ
ನನ್ಗೆ ರುಚಿಯಾದ ಮಾವ್ಸ ಬೇಕು
ಮಾವ್ಸಾ ಮಾವ್ಸಾಕೆಲ್ಲ
ಮಸ್ಸುನ್ ಮಾವ್ಸ ರುಚಿಯಂತೆ
ಮಸ್ಸುನ್ ಮಾವ್ಸ ತರಬೇಕು
ನಾನು ಭಿನ್ನಪ ಅಳಿಬೇಕು
ಆ ಮಾತ ಕೇಳಿ ಪೀರಣ್ಣ
ಒಳ್ಳೆ ಬಾಳ ಯೋಚ್ನೆ ಮಾಡುತಾನೆ
ನಾನು-ಗುರುವೀನ ಸಾಪುಕ್ ಸಿಕ್ಕಿ
ಈ ಸಾಪವೆಲ್ಲಿ ಕಳಿಯಲಪ್ಪ
ನೀವು-ಕೊಟ್ರೆ ವರ ಇಟ್ರೆ ಸಾಪ
ನಾನು ಘನುವಾಗಿ ಸಿಕ್ಕೊಂಡಿ" |

"ಯಾಕಪ್ಪ ಪೀರಣ್ಣ
ನೀನು ಬಾಳ ಯೋಚ್ನೆ ಮಾಡುತೀಯೆ
ಮಾಡೀಯೊ ಇಲ್ವೊ ಹೇಳು ?
ನಾನಿರಬೇಕೊ ಹೋಗಬೇಕೊ ?"
"ಹೋಗಬ್ಯಾಡಿ ಹೋಗಬ್ಯಾಡಿ
ಹೋಗಬ್ಯಾಡಿ ನನಗುರುವೆ
ನಿಮ್ಮಿಷ್ಟವಿದ್ದಂಗೆ
ಮಾಡ್ಕೊಡ್ತೀನಿ ಬಾವ್ಲೋಗಿ"
ಮರುಮನೆಗೆ ಬರುತಾನೆ
ಚಿಂತೆಯ ಮಾಡುತಾನೆ
ಓದಕ್ಕೋಗಿದ್ದ ಮಗುನ
ಬಂದೇಟ್ಗೆ ನೋಡುತಾನೆ
ಕಣ್ಣನ್ನೆ ಮುಚ್ಚುಕೊಂಡ
ಕೈಗೆ-ಚೂರಿಯ ಎತ್ತುಕೊಂಡ
ಕೈಕಾಲ ಬಿಗುದ್ಬುಟ್ಟು
ಅಪ್ಪ ಕೆಳೀಕ ಕೆಡಿಕೊಂಡ
ಕರಕರ್ನೆ ಸಿರುಸ ಅಳ್ದ
ಆ ಸಿರುಸನಾದ್ರೆ ತಕ್ಕೊಂಡ
ಅಟ್ಟು ಮ್ಯಾಲೆ ಮಡಿಕೊಂಡು
ಅದರ ಮೊಕನಾದ್ರೆ ನೋಡಬೇಕು
ಬಾಕೀ ಮಾಪ್ಸಾನೆಲ್ಲ
ಅಪ್ಪ ಬಿರಿಯಾನಿ ಮಾಪ್ಸುತಾನೆ
ಅಡುಗೇಯ ಮಾಡ್ಸುಬುಟ್ಟು
ಬಸ್ತಗ್ಲೋರ ಕರಿತಾನೆ
ಪಾದುಕ್ಕಾಗಣಿ ಕೊಟ್ಟ

ಮನೆಯಲ್ಲಿ ಕುಂಡ್ರಿಸೀದ
ಊಟಕ್ಕೆ ಬಡಿಸಿಬುಟ್ಟು
ಸಾಂರಾಣಿ ಬೆಳುಗೀದ
"ಊಟಾವ ಮಾಡಿ ಗುರುವೆ"
ಅಂತ ಶರಣಾರ್ತಿ ಮಾಡುತಾನೆ
ಮಾವ್ಸನೆಲ್ಲ ನೋಡುತಾರೆ
"ಅಪ್ಪ ತಲೆ ಮಾವ್ಸ ಇಲ್ಲಲ್ಲಪ್ಪ
ಮಾವ್ಸ ಮಾವುಸಕೆಲ್ಲ
ತಲೆ ಮಾವ್ಸ ಬಲುರುಚಿ
ತಲೆ ಮಾವ್ಸ ಮಾಡ್ಕೊಟ್ರೆ
ನಾನೂಟಾವ ಮಾಡ್ತೀನಿ."

ಕೆಟ್ಟೆ ಕೆಟ್ಟೆ ಅಂದನಲ್ಲೊ
ನಾ ಏನ ಮಾಡಲಿ ಗುರುವೆ
ಊಟಾವ ಮಾಡನಿಲ್ಲ
ಅವ್ರು ಮೇಲುಕ್ಕೆ ಎದ್ದುಬುಟ್ರು
ಅಟ್ಟು ಮೇಲಿದ್ದ ತಲೆಯ
ಅವ ಒಳ್ಳಕ್ಲುಗಾಕಿ ಚಚ್ಚುತಾನೆ
ಒಳ್ಳೆ ಮಸಾಲಾಕಿ
ಅವ್ನ ತಲೆ ಮಾವ್ಸ ಮಾಡ್ಸುತಾನೆ
ಅಯ್ಯ ಒಳ್ಳೆ ಮಾಸಾಲಾಕಿ
ಮಿದ್ಲೋಯ ಬೇಯ್ಸುತಾನೆ
"ಈಗ್ಲಾದ್ರೂ ಬನ್ನಿ ಗುರುವೆ
ಈಗ ಬನ್ಯಾವ ಸಲ್ಲುಸ್ರಪ್ಪ"
ಆಗ ಬಂದಾರಂತೆ
ಅವ್ನ ಮನೆಗೆ ಬಂದಾರಂತೆ
ಊಟಕ್ಕೆ ಕುಂತುಕೊಂಡ್ರು

ಅವ್ನ ಊಟಾವ ಪಡುಸ್ತಾನೆ
ತಲೆ ಮಾವ್ಸ ನೋಡ್ಬುಟ್ರು
ಅವ್ರು ಸಂತೋಷ ಪಟ್ಟರಂತೆ
ಊಟಾವ ಮಾಡ್ಬೇಕಾರೆ
"ನಾವೊಬ್ಬಾರೆ ಉಣ್ಣಾಬಾರ್ದು
ನೀವಾರು ಬನ್ನಿರಪ್ಪ
ನಿಮ್ಮ ಕಂದುನ್ನಾರ ಕರೀರಪ್ಪ"
ಹಂಗಂದ ಮಾತ ಕೇಳಿ
ಕಣ್ಣಲ್ಲಿ ನೀರ ಕೆಡುಗ್ದ
"ನಿನ್ನ ಮಕ್ಕಳ ಕರಿಯಪ್ಪ
ನಿನ್ಗೆ ಮಕ್ಕಾಳು ಎಷ್ಟು ಮಂದಿ?"

"ಒಬ್ಬಾನೆ ಒಬ್ಬ ಮಗ
ಅವ್ನ ಓದು ಮಠುಕೋಗವ್ನೆ"
"ಅವುನೆಸ್ರೇಳಿ ಕೂಗು ಕರಿ
ಅವ್ನ ಬತ್ತಾನೆ ಕರಿಯೋಗಪ್ಪ"

"ಕಂದಾ ಚಿಕ್ಕಪೀರ
ನನ್ನ ಕಂದಯ್ಯ ಚಿಕ್ಕಪೀರ
ಬಸುವಣ್ಣೋರು ಈಗ
ನಿನ್ನ ಕಾಯ್ಕೊಂಡು ಕುಂತವ್ರೆ
ಚಿಕ್ಕಪೀರ ಚಿಕ್ಕಪೀರ
ಓಡಿಬಾರೊ ನನ ಕಂದ"
ಸಿಲೇಟು ಪುಸ್ತಕಾವ
ಅವ-ಕಂಕ್ಳಲ್ಲಿ ಇರಿಕೊಂಡು
ಗುಡುಗುಡನೆ ಓಡಿಬಂದ
ಬಸ್ವಣ್ಣೋರ ದಂಡ್ಕಕ್ಕಂದ
ಇಕ್ಕಿದ್ದ ಊಟನೆಲ್ಲ
ಅವ್ರು-ಮಂತ್ರೋಪ್ದೇಸ ಮಾಡುತಾರೆ

ನೂರೊಂದು ಪುಷ್ಮವಾದೊ
ಅವ್ರು-ಜಾತ್ಗೊಂದ್ ಪುಷ್ಮ ಮಾಡುದ್ರು
"ನಿನ್ನಂತ ಸರಣನಿಲ್ಲ
ನೀನು ಮರ್ತಲೋಕದಲ್ಲಿರು
ದಿನುಕ್ಕೆ ಮೂರೊತ್ತು
ನೀನು ಶಿವುನನ್ನ ಕೂಗಪ್ಪ
ಶಿವುಗ್ಯಾನ ಮರಿದಂತೆ
ನರಮನುಸ್ರುಗೆ ಎಚ್ರಕೊಡು
ಮುಂದೆ ಕಲಿಕಾಲ ಕಾಣಪ್ಪ
ದೇವ್ರು ಇಲ್ಲ ಇಲ್ಲ ಅಂತಾರೆ
ಅವ್ರುಗೆ ಅದಲ್ಲ ಅಂತ ಎಚ್ರ ಹೇಳು
ಇಲ್ಲಾ ಅನ್ನೋದು ಸುಳ್ಳು
ಅದಲ್ಲಾ ಅಲ್ಲಾ ಅನ್ನೋದು ಸತ್ಯ"
ಹಂಗಂತ ಅಂದುಬುಟ್ಟು
ಅವ್ರು ಕಲ್ಯಾಣ್ಕೆ ಹೋದರಂತೆ
ಸರಣ ಪೀರಯ್ನ ಕತೆ
ಈ ಸಂದಿಲ್ಗೆ ಮಂಗಳ.

ಕಂದನ್ಹೆತ್ತಮ್ಮ ಸರಣೆನ್ನೆ

ಉತ್ತ ಹೊಲದಲ್ಲಿ ಉತ್ರಾಣಿ ಸಾಲಲ್ಲಿ
ಪುಟ್ಟ ರಾಜುಣದ ಬಯಲಲ್ಲಿ - ಬಸವಣ್ಣ
ಚಿತ್ರಸಾಲಲ್ಲಿ ಬರುತವುನೆ |

ಹಾದೀಲಿ ಬಸವಣ್ಣ ಬೀದೀಲಿ ಬಸವಣ್ಣ
ಸಾಲಾದ ಒಣೇಲಿ ಬಸವಣ್ಣ - ಬರುತವುನೆ
ಸಾಲೆನುಟ್ಟಮ್ಮ ಸರಣೆನ್ನೆ |

ಕಾಲುಕಂಬವು ಚಂದ ಬಾಲ ಮುದ್ರಿಕೆ ಚಂದ
ಬಾಲದಿಂದ ಚಂದ ಬಸವಯ್ಯ
ಬಾಲದಿಂದ ಚಂದ ಬಸವಯ್ಯನ ಪಾದಕೆ
ಬಾಲನ್ಹೆತ್ತವ್ವ ಸರಣೆನ್ನೆ |

ಕೊಂಬು ಕಳಸ ಚಂದ ಲಿಂಗ ಮುದ್ರಿಕೆ ಚಂದ
ಕೊಂಬಿನಿಂದ ಚಂದ ಬಸವಯ್ಯ
ಕೊಂಬಿನಿಂದ ಚಂದ ಬಸವಯ್ನ ಪಾದಕೆ
ಕಂಡನ್ಹೆತ್ತಮ್ಮ ಸರಣೆನ್ನೆ |

ನುಲುಗೆ ಚಂದಯ್ಯ

ತಂದನ್ನ ತಾನಾನಾ ತಂದನಾನಾ ತಾನಾನಾ
ತಂದನ್ನ ತಾನ ತಂದೇನಾನಾ-ತಂದನ್ನ | ಸೊಲ್ಲು |

ಬಸವಣ್ಣೋರ್ ಮಠುದಲ್ಲಿ ಯಾರ್ಯಾರು ಶರಣಾರು
ನುಲುಗೆ ಚಂದಯ್ಯ ಘನಶರಣ ತಂದನ್ನ
ತಂದನ್ನ ತಾನ ತಂದೇನಾನಾ-ತಂದನ್ನ |*

ನುಲುಗೆ ಚಂದಯ್ಯನವರು ದಾಸೋಗ ನಡೆಸುವರು
ಸತ್ಯ ಶರಣರೀಗೆ ದುಡದಿಂದ |

ಬಿತ್ತಗಿಲ್ಲ ಬೆಳಯೋಗಿಲ್ಲ ಬೆಳದ ನಾರೂ ಬೇರ
ತಂದು ಹಗ್ಗಾವ ಹೊಸಿಯುತಾರೆ |

ಅಂಬು ಬಳ್ಳಿಗಳಿಂದ ಹಗ್ಗಗಳ ಹೊಸೆದೀಕೊಂಡು ೧೦
ಮಾರಿ ದಾಸೋಗವ ನಡಸುತಾರೆ |

ಕಾಡಿಗೆ ಹೋದರಂತೆ ಅಂಬುಗಳ ಇಳುಕಿದರಂತೆ
ಹೊರೆಯ ಕಟ್ಟಿದರು ಚನ್ನಯ್ಯ |

ಹೊರುವನ್ನೆ ಹೊತ್ತೀಕೊಂಡು ಊರೀಗೆ ಬರುವಾಗ
ದಣುವಿನ ದಾವ ತಡಯನಾರ್ದೆ |

ಗಂಗೆ ಸರುವರುಕೆ ಬಂದು ಲಿಂಗಪ್ಪನ ಬಿಚ್ಚಿ ಆಗ
ಲಿಂಗ್ಯೆಲಿ ಇರಿಸಿಕೊಂಡು ಪೂಜುತಾರೆ |

ಪೂಜೆಗಳ ಮಾಡುವಾಗ ಅಂಗೈನ ಲಿಂಗಪ್ಪ
ಗಂಗೆವೊಳುಗೆ ಮುಳುಗಿ ಹೋಗುತಾನೆ |

"ಬಾರೋ ಲಿಂಗಪ್ಪ ನೀನು ಎಷ್ಟೊತ್ತೊ ಜಪತಪ
ಮಾಡುವಂತ ಶಿವುಪೂಜೆ ನಿಂತೋದೊ" |

ಚಂದಯ್ಯ ಕರಿಯುವಾಗ ಲಿಂಗಯ್ಯ ಬರುನಿಲ್ಲ
ಹಾಸ್ಯ ಮಾಡೀದ ಲಿಂಗಯ್ಯನವರು |

"ಬಾರಪ್ಪ ಲಿಂಗಯ್ಯ ಬಾಯಾರಿಕೆ ನನಗೆ
ನೀ ಬರದೆ ನಾನು ನೀರ ಕುಡಿಯಲಾರೆ |

ಬರದೆ ನೀರನ್ನು ನಾನು ಕುಡಿಲಾರೆ ಲಿಂಗಯ್ಯ
ಬರಬೇಕು ಬ್ಯಾಗನೆ" ಅನ್ನುತಾನೆ |

ಚಂದಯ್ಯ ಕರುದಾರು ಲಿಂಗಯ್ಯ ಬರನಿಲ್ಲ
"ಬರದಿದ್ರೆ ನಾನು ಹೋಗುತೀನಿ" |

ಹಂಗಂದ ಚಂದಯ್ಯ ಹೊರುವನ್ನೆ ಹೊತ್ತೀಕೊಂಡು
ಊರೀಗೆ ಸಾಗಿ ಬರುತಾರೆ |

ಊರನ್ನು ಸೇರಿದಾರು ಗುರುಮಠಕೆ ಬಂದಾರು
ಹೊರೆಯನ್ನು ಕೆಳಗೆ ಇಳ್ಸುತಾರೆ | ೩೦

ನೀರಿನಿಂದ ಲಿಂಗಯ್ಯ ತಾನಾಗಿ ಈಚೆಗೆ ಬಂದು
ತಡಕೀದ ತನ್ನ ಒಡೆಯಾರ |

ಒಡೆಯಾರು ಹೋದಾರೆಂದು ಗಾಬರಿ ಪಟುಕೊಂಡು
ಓಡಿ ಬಂದಾನು ಲಿಂಗಯ್ಯ |

ಓಡಿ ಬಂದಾರಂತೆ ಲಿಂಗಯ್ಯ ಆ ಊರ್ಗೆ
ಬಾಗುಲಲ್ಲಿ ಬಗ್ಗಿ ನೋಡುತಾನೆ |

ಭಯವಾಗಿ ಬಾಗಲಲ್ಲಿ ನಿಂತುಕೊಂಡು ಲಿಂಗಯ್ಯ
ಅಲ್ಲೊಂದು ಯೋಚನೆ ಮಾಡುತಾನೆ |

"ಸುಮ್ಮನೆ ಇರುವಾದು ನನಗೆ ಸರಿಯಿಲ್ಲ"ವೆಂದು
ಹಂಬುಗಳ ಹೊಸ್ದು ಹಗ್ಗ ಮಾಡುತಾನೆ | ೪೦

ಹೊಸ್ದು ಹಗ್ಗವ ಮಾಡಿ ಹೊತ್ತುಗೊಂಡು ಲಿಂಗಯ್ಯ
ಬೀದಿಬೀದಿಗಾಣೆ ಮಾರುತಾನೆ |

"ಒಂದು ಹಗ್ಗಕೆ ಸ್ವಾಮಿ ಒಂದು ಹಣ" ಅನುತ್ಹೇಳಿ
ಎಲ್ಲಾನು ಬೆಲೆಯ ಮಾಡುತಾನೆ |

---

* ಪ್ರತಿ ಎರಡೆರಡು ಸಾಲಿಗೂ ಇದನ್ನು ಸೇರಿಸಿ ಹೇಳಿ ಅನಂತರ ಸೊಲ್ಲಿನ ಪೂರ್ಣಭಾಗವನ್ನು ಹೇಳಬೇಕು.

ಹಗ್ಗವನೆ ಮಾರಿಕೊಂಡು ದುಡ್ಡನ್ನೆ ತಗದಿಕೊಂಡು
ತಮ್ಮ ಗುರುವೀನ ಬಳುಗೆ ಬರುತಾನೆ |

"ಕೊನ್ನಿ ಗುರುಗಳೆ ನಿಮ್ಮ ಹಗ್ಗಾದ ದುಡ್ಡನೆ"ಂದು
ಲಿಂಗಯ್ಯ ಒಡೆಯರಿಗೆ ಕೊಡಲೋದ |

"ಕೈಬಿಟ್ಟು ಹೋದವನು ತಿರಿಯಾಕಿ ಬರಬವುದ ?
ನೀನು-ನನ್ನ ಮನೆಯಲ್ಲಿ ಇರಬ್ಯಾಡ |
ನನ್ನ ಮನೆಯಲ್ಲಿ ಇರಬ್ಯಾಡ ಲಿಂಗಯ್ಯ"
ಅನುತ್ಹೇಳಿ ಆಚೆಗೆ ನೂಕುತಾರೆ |

"ನಾನು ಮಾಡಿದ ತೆಪ್ಪ ಕ್ರಮಿಸಿ ಕಾಯಲು ಬೇಕು
ಇನ್ನಿಂಥ ತೆಪ್ಪ ನಾನು ಮಾಡದಿಲ್ಲ" |

"ಮಾತಾಡಿ ಫಲುವಿಲ್ಲ ಹೋಗಪ್ಪ ಲಿಂಗಯ್ಯ
ನನಮನೆಗೆ ನೀನು ಬರುಬ್ಯಾಡ |

ನಿನಗೂವೆ ನನಗೂವೆ ಸೆಂಗಡವೆ ಕಳುದೋಯ್ತೆ"ಂದು
ಮನೆಯಿಂದ ಈಚೆಗೆ ನೂಕುತಾರೆ |

ಆಗ ಲಿಂಗಯ್ಯನವರು ಯಾರಲ್ಲಿ ಹೋಗಲಿ ಎಂದು
ಬಸುವಣ್ಣನ ಬಳುಗೆ ಬರುತಾರೆ |

ಬಂದು ಲಿಂಗಯ್ಯನವರು ಬಸವಯ್ನ ಪಾದಕ್ಕೆ
ಶರಣು ಶರಣಾರ್ತಿ ಮಾಡುತಾರೆ |

"ಭಕ್ತುವಸ್ತ ಲಿಂಗಯ್ಯ ಏನು ಬಂದ್ಯಪ್ಪ ನೀನು"
ಹಂಗಂತ ಬಸುವಣ್ಣ ಕೇಳುತಾರೆ |

"ಒಡೆಯರಿಗು ನನಗೂ ಹೊಡೆದಾಟವಾಗೀದೆ
ನೀವು ಸಮ್ತೀಯ ಮಾಡಬೇಕು |

ನ್ಯಾಯ ಪಂಚಾಯ್ತಿ ಮಾಡಿ ಮನೆಗೆ ಸೇರಿಸಬೇಕು
ಇದು ಒಂದು ಧರ್ಮ ನಿಮದೆ"ಂದ |

ದುಕ್ಕವನೆ ಮಾಡೂತ ಪ್ರಮತಾರ ಬೇಡೂತ
ಬಿದ್ದು ಬೇಡೀದ ಲಿಂಗಯ್ಯ ಶರಣ |

ಲಿಂಗಯ್ನ ಮಾತೀನಂತೆ ಕಲ್ಯಾಣ ಬಸುವಣ್ಣ
ನುಲುಗೆ ಚಂದಯ್ನ ಮನೆಗೆ ಬರುತಾರೆ |

"ನುಲುಗೆ ಚಂದಯ್ಯನವರೆ ಬನ್ನಿ ಬ್ಯಾಗನೆ" ಎಂದು
ಬಸವಣ್ಣನವರು ಕರಿದಾರು |

ಗುರುಪಾದ ಬಂದಿತೆಂದು ದಡದಡನೆ ಓಡಿಬಂದು
ಪಾದಕ್ಕೆ ಶರಣ ಮಾಡುತಾರೆ |

"ಯಾವಾಗ್ಲು ಇಲ್ಲ ಗುರುವೆ ಇಂದೇನು ಬಂದಿರಿ" ಎಂದು
ನುಲುಗೆ ಚಂದಯ್ಯ ಕೇಳುತಾರೆ |

"ನಿಮುದೊಂದು ನ್ಯಾಯವಂತೆ ಹೊಡೆದಾಟವಾಯಿತಂತೆ
ಲಿಂಗಯ್ಯ ಬಂದು ದೂಕರ್ಹೇಳಿಕೊಂಡ |

ಲಿಂಗಯ್ನೊಂದಿಗೆ ನೀವು ಕ್ರೋಪಾವ ಮಾಡಲಾಗ್ದು
ಲಿಂಗಯ್ನ ತೆಪ್ಪ ಮನ್ನಿಸಬೇಕು |

ಲಿಂಗಯ್ನ ತೆಪ್ಪುಗಳ ಮಾಪನ್ನೆ ಮಾಡಲುಬೇಕು
ಲಿಂಗಯ್ಯ ನಿಮ್ಮ ಮಲ್ಲಿರಬೇಕು" |

"ಗುರುವಾಡುದ ಮಾತೀಗೆ ತಿರಿಯಾಕಿ ಮಾತಾಡುದ್ರೆ
ನನ್ನಂತ ಪಾಪಿ ಇನ್ನಿಲ್ಲ |

ಅಣ್ಣಯ್ಯ ನಿಮ್ಮ ಮಾತ ನಾನು ಮೀರಲಾರೆ
ನತ್ತಿಮ್ಯಾಲೊತುಕೊಂಡೆ ನಿಮಮಾತ" |

"ಲಿಂಗಯ್ಯ ನೀನಿನ್ನು ತಪ್ಪಿ ಬಾಳಲಿ ಬ್ಯಾಡ"
ಹಂಗಂದ್ರು ಅಣ್ಣ ಬಸವಣ್ಣ |

"ನಿನಗಿಂತ ನಿನ್ನ ಶರಣಾರೆ ಹೆಚ್ಚುಕಾಣೊ
ಶರಣಾರ ಆಗ್ನೆ ಮೀರಲಿ ಬ್ಯಾಡ" |

ಗುರುವಾಡೀದ ಮಾತ್ಗೆ ನುಲುಗೆ ಚಂದಯ್ಯನೋರು
ಲಿಂಗಯ್ನ ಮನೆಗೆ ಕರುಕೊಂಡ |

ಲಿಂಗಯ್ನ ಪಾದಕ್ಕೆ ಜಂಗಮರ ಪಾದಕ್ಕೆ
ಲಿಂಗವಂತರ ಪಾದ್ಕೆ ಶರಣಾರ್ತಿ |

ಸತ್ಯಶರಣೆ ಶಿವನಾಗಮ್ಮ

ಸುವ್ವಾ ಬಾ ಚನ್ನ ಬಸುವಯ್ಯಾ ಸುವ್ವಿ | ಸೊಲ್ಲು |

ಕಲ್ಯಾಣ ಪಟ್ಟಣದಲ್ಲಿ ಕರುತು ಬಸವಣ್ಣನೋರು
ಬೀದಿ ಸೆಂಚಾರಕೆ ಬರುತಾರೆ | ಸುವ್ವಿ |

ಬೀದಿ ಸೆಂಚಾರಕೆ ಬರುವಾಗ ಬಸವಣ್ಣ
ಅಲ್ಲಿ-ದೇವಾರ ಪೂಜೆ ನಡೆಯುತಾವೆ |

ಶಿವನಾಗಮ್ಮನವರ ಗುರುಮಠದಲ್ಲಿ ಪೂಜೆ
ನಡೆಯುವ ಚೆಂದಾವ ನೋಡುತಾರೆ |

ಕರಡೆ ಸಮ್ಮಾಳಗದ ದನಿಯನ್ನೆ ಕೇಳಿ ಸ್ವಾಮಿ
ದೇವರು ಪೂಜೆಗೆ ಹೊರಟಾರು |

ಗಂಟೆ ಗಗ್ಗರವಂತೆ ಜಾಗ್ಟೆ ಜಾಲಾರಗಳು
ವೋಂಕಾರವಾಗಿ ನುಡಿದಾವು |

ನಡೆಯುವಂತ ಶಿವಪೂಜ್ಯ ನೋಡಿದರು ಬಸವಣ್ಣ
ಶಿವಪೂಜೆಗವರು ಬರುತಾರೆ |

ಲಾದು ಸಪ್ತಾವ ಕೇಳಿ ಬಂದಾರು ಬಸವಣ್ಣ
ದೇವರ ಪೂಜೆಗೆ ನಿಲುತಾರೆ |

ಬಸವಣ್ಣ ಬಂದಾರೆಂದು ಶರಣೆ ಶಿವನಾಗಮ್ಮ
ಪಾದಕ್ಕೆ ಶರಣು ಮಾಡುತಾರೆ |

ಪಾದುವನೆ ತೊಳ್ದಾರಂತೆ ಭಸುಮಂಗ ಧರ್ಸಿದರಂತೆ
ಮಲ್ಲೀಗೆ ಪುಷ್ಮವ ಧರುಸವುರೆ |

ಸೋಮ್ಯಾಣಿ ಬೆಳಗಿದರು ಮಂಗಳವ ಮಾಡಿದರು
ಪಾದಪೂಜೇಯ ನಡಸಿದರು |

ನೀವು ಮಾಡಿದ ಭಕ್ತಿ ಒಪ್ಪೀತು ಶಿವಸರಣೆ
ಹೋಗಿ-ಬತ್ತೀವಿ ನಮ್ಮ ಗುರುಮಠಕೆ |

ಬಸವಣ್ಣ ಬರುವಂತ ವ್ಯಾಳ್ಯದಲ್ಲಿ ಮಂಚಣ್ಣ
ಬೀದಿ ಸೆಂಚಾರವಾಗಿ ಬರುತಾನೆ |

"ಶರಣಾರೆ ಬಸವಣ್ಣ ಎಲ್ಲಿ ಹೋಗಿದ್ದಿರಿ ನೀವು?"
ಹಾಗಂತ ಮಂಚಣ್ಣ ಕೇಳುತಾನೆ |

"ನಾರದ ಮಂಚಣ್ಣನೋರೆ ಶಿವುನಾಗಮ್ಮ ಮಠದಲ್ಲಿ
ಶಿವಪೂಜ್ಗೆ ನಾವು ಹೋಗಿದ್ದೊ" |

"ದೇವಾರ ಪೂಜೆಗೆ ನೀವು ಹೋಗಿದ್ದು ಒಳ್ಳೇದು ಗುರುವೆ
ದಯಮಾಡಿ ನಿಮ್ಮ ಗುರುಮಠಕೆ" |

ಬಸುವಣ್ಣ ಹೋದಾರು ಮಂಚಣ್ಣ ಬಂದಾರು
ಬಿಜ್ಜಳಗೆ ಶರಣು ಮಾಡುತಾನೆ |

ಬಿಜ್ಜಳನ ಬಳಿಯಲ್ಲಿ ಕೊಂಡಕಾರ ಮಂಚಣ್ಣ
ಏನಂತ ಅಲ್ಲಿ ನುಡಿದಾನು |

"ಸ್ವಾಮಿ ಬಿಜ್ಜಳುರಾಯ ನಿಮ್ಮ ಬಸುವಣ್ಣನೋರು
ಶಿವನಾಗಮ್ಮ ಮನೆಗೆ ಹೋಗುಬವುದ? |

ಶಿವುನಾಗಮ್ಮ ಮನೆಗೆ ಹೋಗಾದು ಸರಿಯಾ ಸ್ವಾಮಿ?
ಬಸವಣ್ಣನ ನಡತೆ ಬಗೆ ಹೇಳಿ |

ಹೊಲೇರ ಶಿವನಾಗಮ್ಮ ಮಠದಲ್ಲಿ ಶಿವಪೂಜೆ
ನಿಮ್ಮ ಪರದಾನಿಗಳಿಗೆ ತರವೇನು |

ಇವರು ಇರಕ್ತರು ಸ್ವಾಮಿ ಮೇಲಾಗಿ ಶಿವಭಕ್ತ್ರು
ಭವಿಗಳ ಮನೆಗೆ ಇವ್ರು ಹೋಗಬವುದ?" |

ನೀವು ಹೇಳಿದ ಮಾತು ನಮಗೆ ಒಪ್ಪಿತವಲ್ಲ
ಏನು ಮಂಚಣ್ಣ ನಿಮ್ಮ ಹಗರಣ?" |

"ಹೋಗಿ ಬರುವಾಗ ನಾನು ರೂಬುರೂಬು ಕಂಡೆ ಸ್ವಾಮಿ
ಕರೇಸಿ ಕೇಳಿ ಬಸುವಣ್ಣನ" |

ಮಂಚಣ್ಣನ ಮಾತೀಗೆ ಮಂಕು ಮರುಳಾಗಿ ಅರಸು
ಶಿವಶಿವ ಎಂದು ಶಿರ ತೂಗುತಾರೆ |

"ಬನ್ನೀ ಬನ್ನೀರಯ್ಯ ಬಾಗೀಲೂಳಿಗದವುರೆ
ಚೀಟಿ ಚಲ್ಲಾಣ್ದ ಬಿಚ್ಚುಗತ್ತಿಯೋರೆ" |

ದೊರೆಗಳ ಮಾತೀಗೆ ಓಡೋಡಿ ಬಂದಾರಂತೆ
ಕರವೆತ್ತಿ ಕೈಯ ಮುಗಿದಾರು |

"ಏನು ಕಾರಣ ಸ್ವಾಮಿ ನಮ್ಮ ಬರಮಾಡಿದಿರಿ?"
ಎಂದು ಕೇಳಿದರು ಪಾರದವರು |

"ಕಲ್ಯಾಣ ಪಟ್ಟುಕೋಗಿ ಬಸುವಣ್ಣನ ಕರುದು
ಬೇಗ ಹೋಗಿ ನೀವು ಬನ್ನಿರಯ್ಯ" |

ಕಲ್ಯಾಣಕ್ಕೆ ಹೋಗಿ ಕರುತು ಬಸವಣ್ಣನವುರ್ಗೆ
ಬರ್ದ ವಾಲೆಯ ತಂದು ಕೊಡುತಾರೆ |

ವಾಲೇನೆ ಓದುಕೊಂಡು ಕರುತು ಬಸವಣ್ಣನೋರು
ಬಿಜ್ಜಳನರಮನೆಗೆ ತಾವು ಬರುತಾರೆ |

"ಬಂದೀರಾ ಬಸವಣ್ಣ ಬಂದುದೊಳ್ಳೇದು ನೀವು
ಕುಳ್ಳೀರಿ ನೀವು ಬಸವಣ್ಣ |

ಶಿವನಾಗಮ್ಮೋರ ಅರಮನೆಗೆ ಬಸವಣ್ಣ
ಏನು ಕಾರಣ ನೀವು ಹೋಗಿದ್ದಿರಿ?" |

ಶಿವನಾಗಮ್ಮನ ಮನೆಗೆ ಹೋಗಿದ್ದು ನಿಚ್ಚಯವೆಂದು
ಬಸವಣ್ಣ ದೇವ ನುಡಿದಾರು |

"ದೇವಾರ ಪೂಜೆಗೆ ಹೋಗಿದ್ದು ನಿಚ್ಚಯ
ಇದಕಾಗಿ ನಿಮಗೆ ಸಂಶಯವೇನಾ?" |

ನಾರದ ಮಂಚಣ್ಣನವರು ಏನೆಂದು ನುಡಿದಾರು
ಸತ್ಯಾದ ಮೂರುತಿ ಬಸವಣ್ಣಾಗೆ |

"ನೀವು ನೋಡಿದರೆ ಗುರುವು ಭಕ್ತಿ ಆಚಾರದವ್ರು
ಭವಿಗಳ ಮಟಕೆ ನೀವು ಹೋಗಬವುದ?" |

"ಶಿವನ ಭಕ್ತರಿಗೆ ಭಿನ್ನವಿಲ್ಲ ಭೇದವಿಲ್ಲ
ಇದರಿಂದ ತೊಂದರೆ ನಿಮಗೇನು ! |

ನಮ್ಮ ಮೈಯಲ್ಲಿ ಹಾಲು ಬರುವ್ರೂದುಂಟೆ
ಎಲ್ಲಾರ ಮೈಯಲ್ಲು ರಕ್ತಮಯ |

ಶಿವನ ಭಕ್ತಾರಿಗೆ ವಂಚನೆ ಮಾಡಲಾಗದು
ಭೇದವೇತಕ್ಕೆ ದೊರೆರಾಯ" |

ಬಸವಣ್ಣನವರ ಮಾತ ಕೇಳಿದನು ಮಂಚಣ್ಣ
"ಈ ಮಾತು ನಮಗೆ ಒಪ್ಪಿತವಲ್ಲ |

ಅವರೀಗ್ಗು ನಮಗು ಭೇದವಿಲ್ಲ ಮಂಚಣ್ಣ
ನಮಗಿಂತಲೂ ಅವರು ಶರಣಾರು" |

ಬಸುವಣ್ಣನ ಮಾತೀಗೆ ಕೊಂಡುಕಾರ ಮಂಚಣ್ಣ
ಮತ್ತೇನೆಂದು ಅಲ್ಲಿ ಹೇಳುತಾನೆ |

"ಹೆಚ್ಚು ಹೆಚ್ಚಂದರೆ ಹೆಚ್ಚು ಮಾತೇನು ಬ್ಯಾಡ
ಅವ್ಳ ಮೈಯ್ಯಲಿ ರಕುತ ಇಲುವೇನು |

ನಮ್ಮ ಮೈಯಲಿ ರಕುತ ಅವಳ ಮೈಯಲಿ ಹಾಲು
ತುಂಬಾದ ಹೇಳು ಬಸವಣ್ಣ?" |

"ನೀವು ಹೇಳಿದ ಮಾತು ನೂರುಕ್ಕೆ ನೂರು ಸತ್ಯ
ನಮ್ಮ ಶರಣಾರ ರಕುತ ತನಿಯಾಲು" |

"ನಮಗಿಂತ ಹೆಚ್ಚು ಅಂತ ನೀವೇ ಹೇಳಿದ ಮ್ಯಾಲೆ
ಅವ್ರ ಸತ್ಯಾವ ನೀವು ತೋರಬೇಕು |

ಧರ್ಮ ಸತ್ಯಾವ ನೀವು ತೋರಿದರೆ ಮಾತ್ರರೆ
ನಿಮ್ಮ ಆಗ್ನಿಗೆ ನಾವು ಅಡಿಯಾಳು |

ಶರಣೆ ಶಿವುನಾಗಮ್ಮನ ಕರಯೀಸು ದಂಡೇಶ
ನೀವು ಹೇಳುದಂತ ಸತ್ಯ ತೋರುತೀನಿ" |

ದೊರೆಗಳ ಮಾತಿನಂತೆ ಆಳುಗಳು ಹೋದರಂತೆ
ಭಕ್ತೆ ನಾಗಮ್ಮಾನ ಕರಿದಾರು |

"ಯಾರಮ್ಮ ಮಠದಲ್ಲಿ ಶರಣೆ ಶಿವುನಾಗಮ್ಮನವರೆ
ದೊರೆಗಳು ನಿಮ್ಮ ಬರೇಳುತಾರೆ" |

"ಯಾರಪ್ಪ ನೀವು?" ಎಂದು ಬಂದ ನಾಗಮ್ಮ ತಾಯಿ
"ನಾವು ಅರಮನೆಯ ಸಿಪಾಯಿಗಳು" |

"ನಮ್ಮ ದೊರೆ ಬಿಜ್ಜುಳ ನಿಮ ಕರುಕೊಂಡು ಬನ್ನೀಂತ
ನಮ್ಮನು ಇಲ್ಲುಗೆ ಕಳುಗವುರೆ" |

"ಭವಿಗಳ ಮಾತೀಗೆ ಬರುವುದಿಲ್ಲ ನಾನು
ನೀವು ಅಂಗಳವ ಬುಟ್ಟು ನಡಯೀರಿ" |

ನಾಗಮ್ಮನ ಮಾತ ಕೇಳಿ ಬಿಜ್ಜುಳನ ಆಳುಗಳು
ಅರಮನೆಗೆ ಸಾಗಿ ಬರುತಾರೆ |

ದೊರೆಯ ಬಳಿಗೆ ಬಂದು ಕರವೆತ್ತಿ ಕೈಮುಗಿದು
ಏನೆಂದು ಅವರೀಗೆ ಹೇಳುತಾರ್ಯೊ | ೧೧೦

"ಭವಿಗಳ ಮಾತೀಗೆ ಬರುವುದಿಲ್ಲಾಂತ್ಹೇಳಿ
ಕಳುಗಿದರು ಸ್ವಾಮಿ ಶಿವನಾಗಮ್ಮ" |

"ಏನು ಬಸವಣ್ಣ ನಮ್ಮ ಮಾತೀಗೆ ಅವಳು
ಇಂತೆ ಉತ್ತುರವ ಹೇಳಬವುದ ? |

ನಮ್ಮವರ ಕಳುಗೀದೊ ಬರಲಿಲ್ಲ ಬಸವಣ್ಣೋರೆ
ನಿಮ್ಮ ಕಡೆಯವರ ಕಳುಗಯ್ಯೊ" |

ದೊರೆಗಳಾಡಿದ ಮಾತ ಕೇಳಿದರು ಬಸವಣ್ಣ
ತಮ್ಮ ಭಕ್ತಾದಿಗಳ ಕಳುಗೀದರು |

ಬಂದಾರು ಜಂಗುಮರು ಶಿವನಾಗಮ್ಮ ಮನೆಗೆ
ನಾಗಮ್ಮ ಎಂದು ಕರೆದಾರು | ೧೨೦

ಕರಿವಂತ ಕಾಲದಲ್ಲಿ ಶರಣೆ ನಾಗಮ್ಮನವರು
ಯಾರೆಂದು ತಾಯಿ ಬರುತಾಳೆ |

ಬಂದಾಗ ತಾಯಿಯ ನೋಡಿದರು ಜಂಗುಮರು
ಶರಣಂದು ಕೈಯ ಮುಗಿದಾರು |

"ಎಂದೂ ಬರದ ನೀವು ಬಂದಿರಲ್ಲ ಗುರುಗಳೆ
ಇಂದು ಬಂದಂತ ಬಗೆಯ ಒಡದ್ಹೇಳಿ" |

"ಬಸವಣ್ಣನವರು ತಾಯಿ ಬರಹೇಳಿ ಕಳುಗವುರೆ
ತಾವು ದಯಮಾಡಿ ಬರಬೇಕು" |

ಬಂದಳು ನಾಗಮ್ಮ ಬಸುವಣ್ಣನ ಬಳುಗೆ
ಬಂದು ಶರಣಾರ್ತಿ ಮಾಡುತಾಳೆ | ೧೩೦

ಬಂದರು ನಾಗಮ್ಮ ಅಂದಾರು ಮಂಚಣ್ಣ
"ಕೇಳಿ ಬಸವಣ್ಣ ನಿಮ್ಮ ಬಗುತಾರ |

ಇವರಲ್ಲಿರೊ ಸತ್ಯಾ ಏನೆಂದು ಬಸವಣ್ಣ
ನಮಗೆಲ್ಲ ನೀನು ತೋರಿಸಪ್ಪ" |

ಹಂಗಂದ ಮಾತ ಕೇಳಿ ಸತ್ಯಾದ ಬಸುವಣ್ಣ
ಕಿಲಕಿಲನೆ ನೆಗೆಯ ನೆಗುವಾರು |

ರಾಜನರಮನೆಯಿಂದ ಪಾತುರವ ತರಿಸಿದರು
ನಾಗಮ್ಮನ ಕರವ ಹಿಡಿದಾರು |

ನಾಗಮ್ಮ ಕರವನ್ನೆ ಹಿಡ್ದು ಬಸವಣ್ಣನವರು
ಅವ್ವ-ಕಿರುಬೆಳ್ಳ ಹಿಡುದು ಹಿಂಡುತಾರೆ | ೧೪೦

ಹಿಂಡಿದಾಗ ನೊರೆಹಾಲು ಕಂಡಾರು ಮಂಚಣ್ಣ
ಅವ್ವ ಸತ್ಯಾವ ಅಲ್ಲಿ ಮೆಚ್ಚುತಾರೆ |

ಶರಣಾರು ಅಂದಾರೆ ಸತ್ಯವಂತರು ಕಾಣೊ
ಇಂತೆ-ಶರಣೆಗೆ ಶರಣು ಶರಣಂದ |

ಸತ್ಯಾ ಶರಣೆಗೆ ನಿತ್ಯಾ ಶರಣೆಗೆ
ಮತ್ತೆ ಶರಣಂದ ದೊರೆರಾಯ |

ಶರಣೆ ಶಿವನಾಗಮ್ಮನ ಸತ್ಯಾದ ಪಟವಾಡ
ಈ ಸಂದು ಇಲ್ಲಿಗೆ ಸಂಪೂರ್ಣ | ೧೪೮

ಗಟ್ಟಿವಾಳಯ್ಯ

ಸುವ್ವಿ ಕಲ್ಯಾಣದಯ್ಯ ಸುವ್ವಿಲಾಲೆ
ಕಲ್ಯಾಣ್ದ ಬಸುವಯ್ಯ ಸುವ್ವಿಲಾಲೆ | ಸೊಲ್ಲು |

ಕಲ್ಯಾಣವೆನ್ನೋದು ಸುವ್ವಿಲಾಲೆ*
ಅದು ಹನ್ನೆರಡು ಯೋಜೀಣ
ಅಲ್ಲಿ ಸತ್ಯ ಮಾತ್ಮರು
ದೊಡ್ಡ ಬಸವಣ್ಣನೋರು
ಅವುರೆಂಡ್ತಿ ನೀಲಮ್ಮ
ತಂಗೆ ನಾಗಮಯ್ಯ
ತಂಗೆ ಬೌರಮ್ಮನವರು
ಇಂತೆ ಸತ್ಯ ಮಾತ್ಮರು
ಕಲ್ಯಾಣ ಪಟ್ಟಣದಲ್ಲಿ
ಧರುಸುವಂತೆ ಈಬುತ್ತಿ
ಮಾಡೋರ್ಯಾರಪ್ಪ ಅಂದ್ರೆ
ಅವ್ರು ಗಟ್ಟಿವಾಳಪ್ಪನೋರು |

ಅವುರ್ಗೆ-ಗಟ್ಟಿ ಮಾಡೋದೆ ಕಾಯ್ಕ
ರುಸಿಗಳು ಮುನುಗಳ್ಗೆಲ್ಲ
ಅವ್ರು ಭಸುಮಾಂಗ ಕೊಡುತಿದ್ರು
ಮಾಡೀದ ಪಾಪುವೆಲ್ಲ
ಅಲ್ಲಿ ಎಲ್ಲ ಕಳುದೋಯ್ತಾದೆ
ಅಂತೆ ಸರಣಾರು
ಬಸುವಣ್ಣೋರ ಸಂಧಾನದಲ್ಲವ್ರೆ
ಬೋವರುಸ ಕಳದಾವು
ಮೂರು ಸಾವುರ್ದ ಮೂವತ್ತೊರ್ಷ
ಅವ್ರು ಹಣ್‌ಹಣ್ಣ ಮುದುಕಯ್ಕ
ಅವುರ್ಗೆ ಲಗ್ನಾಪ್ರಸ್ತಿಗಳಿಲ್ಲ
ಅಂತೆ ಸತ್ಯಮಾತ್ಮರು
ಈ ಬೂಯ್ನೋಕದಲ್ಲೆ ಇಲ್ಲ |

ಅಂತೆ ಮಾತ್ಮರ ಸೊರಣೆಯ
ಇಂತೆ ಉತ್ತುಂಗುಲುದೋರು ಕೇಳಿ
ಬಂದಾನು ಒಂದು ದಿವ್ಸ
ಬಂದ್ರು ಬಸ್ಯಣ್ಣೋರತ್ರ
ಸರಣು ಸರಣಂತಾರೆ
ಸಿರುಬಾಗಿ ಕೇಳುತಾರೆ
"ನಾ ಲಗ್ನುನ ಮಾಡ್ಕೋಬೇಕು
ನನ್ಗೆ ಅಪ್ಪಾಣೆ ಕೊಡಬೇಕು"
"ಮೂರ್ಸಾವುರ್ದ ಮೂವತ್ತೊರ್ಷ
ನಿನ್ಗೆ ಹೆಣ್ಕಾರು ಕೊಟ್ಟಿರಪ್ಪ
ಬ್ಯಾಡ ಬ್ಯಾಡಪ್ಪ ಗುರುವೆ
ಹೇಳ್ದ ಮಾತ್ಕೇಳ್ಕೊಂಡು
ನನ್ನ ಕಲ್ಯಾಣದಲ್ಲಿ ನೀವು
ನೀವು ತೆಪ್ಪಾಗೆ ಇರುವೋಗಿ" |

"ನಾವು ಕಂಡುತ್ಯಾಗಿ ಮಾಡ್ಕೋತೀನಿ
ನೀವು ಅಪ್ಪಣೆ ಕೊಡಬೇಕು"
"ಹಂಗಾದ್ರೆ ಓಗಪ್ಪ
ಮಾಡ್ಕೊಂಡು ಬಾವೋಗಪ್ಪ"
ಅಪ್ಪಣೆಯ ತಕ್ಕಂಡರು
ಕಲ್ಯಾಣ ಪಟ್ಣ ಬುಟ್ರು
ತಮ್ಮ ಮಠಕ್ಕೆ ಬಂದ್ರು
ಒಂದೋಜುಣ ದೂರುವಂತೆ
ಪಾಳು ಮಠಕ್ಕೆ ಬಂದ್ರು
ಬಾಗಲ ತಗುದಾರು
ಗಟ್ಟಿವಾಳಯ್ಯನೋರು
ಮಟ್ಟ ಒಳುಕ್ಕೆ ಹೋದ್ರು
ಹಾವು ಚೇಳು ನ್ಯಾಪ್ನುವಾಗಿ
ಒಳ್ಳೆ - ಮನುತುಂಬ ಮನುಗವೆ
ಕಾವಿ ಬಟ್ಟೆ ಹಾಸ್ಬುಟ್ರು
ಹಾವುನೆಲ್ಲ ಗೋರಾಕುದ್ರು
ಪೊಟ್ಟಣವ ಕಟ್ಟುಕೊಂಡು
ಒಂದಳ್ಳಾದ ಕರುಗ್ಬುಟ್ರು
ಈಚಾ ಮೂಲೇಲಿ ಬೇಳ್ಗೆ
ಒಂದು ಮೂಲೇಲಿ ಕಟ್ಗೆ

---

* ಪ್ರತಿ ಸಾಲಿಗೂ ಸುವ್ವಿಲಾಲಿ ಎಂದು ಹೇಳಿಕೊಳ್ಳಬೇಕು. ನಿಂತಗೆರೆ ಇರುವಲ್ಲಿ 'ಸುವ್ವಿಲಾಲಿ' ಎಂದು ಹೇಳಿ ಅನಂತರ ಸೊಲ್ಲಿನ ಪೂರ್ಣ ಭಾಗವನ್ನು ಹಾಡಿಕೊಳ್ಳಬಹುದು.

ಈಚಾ ಮೂಲೇಲಿ ಒಂದು
ಏಕ್ಕಾರ್ನು ಮಡುಗಿದ್ರಂತೆ
ಆ ಏಕ್ಕಾರ್ನ ತಕ್ಕೊಂಡರು
ಮಠುದ ಬೀಗ ಹಾಕೊಂಡು
ಅವ್ರು ನಾಡು ನಾಡೀನ
ಕೇರಿ ಕೇರಿಯ ಮ್ಯಾಲೆ
ಭಿಕ್ಷಾತ್ರೆ ಮಾಡ್ತಾರೆ.

ಭಿಕ್ಷಾ ಕೊಟ್ಟೋರು ಮಲ್ಲಿ
"ಒಂದು ಹೆಣ್ಣು ಗಿಣ್ಣು ಕೊಟ್ಟೀರ್ಯವ್ವ"
"ನಮ್ಮಲ್ಲಿ ಇಲ್ಲ ಹೋಗು
ನಿನಗ್ಯಾರು ಕೊಟ್ಟರಯ್ಯ?"
ಆ ಮನೆ ಬಿಟ್ಟನಂತೆ
ಮತ್ತೊಂದ್ಮನ್ಗೆ ಬಂದನಂತೆ
ಏಕ್ಕಾರ್ನ ಪಿಡಿಯುತಾರೆ
ಬಸವಣ್ಣೋರ ಪೆಸ್ರೇಳ್ತಾರೆ
"ಕಲ್ಯಾಣ ಬಸುವಣ್ಣೋರೆ
ನಮ್ಗೆ-ಜೋಳುಗ್ಗೆ ಭೀಕ್ಷೆ ನೀಡುರವ್ವ
ಭಿಕ್ಷಾ ಕೊಟ್ಟಾದ್ಮೇಲೆ
ಒಂದು ಹೆಣ್ಣಾ ಕೊಡ್ರವ್ವ ನನ್ಗೆ"
"ಹೆಣ್ಣು ಅಂದರೆ ಏನು
ನೀನು ಅಂದರೆ ಏನು
ಇಂತಾ ವಯಸ್ಸಾಗೆ ನೀನು
ನಿನ್ಗೆ ಹೆಣ್ಣಾರು ಕೊಟ್ಟರಪ್ಪ?"
ಆ ಮಾನೆ ಬಿಟ್ಟರಂತೆ
ಸೈ ಮುಂದುಲ್ಮನ್ಗೆ ಹೋಗುತಾರೆ
ಆ ಮಲ್ಲಿ - ಭಿಕ್ಷ ಕೇಳುತಾರೆ
ನನ್ಗೆ ಕಲ್ಯಾಣ್ದ ಭಿಕ್ಷ ಕೊಡಿ.

ಭಿಕ್ಷಾದ ಸಪ್ತ ಕೇಳಿ
ಅಲ್ಲೊಬ್ಬ ಮನ್ಸ ಬಂದ
"ಏನು ಬೇಕಾಗಿ ಬಂದೆ ?
ಏನು ಮುಂದಕ್ಕೆ ಹೇಳು ?"
"ನೈ ಹೆಣ್ಣುಗಿಣ್ಣು ಇದ್ರೆ ನನ್ಗೆ
ಒಂದ್ಹೆಣ್ಣಾ ಕೊಡಬೇಕು ನನ್ಗೆ"
"ಹೆಣ್ಣು ಬೇಕಿದ್ರೆ ನಿನ್ಗೆ
ನೀವು-ಮದ್ವೆ ಮಾಡ್ಕೊಳ್ಳಬೇಕು
ಹೆಣ್ಣ ಕೊಡ್ತೀವಿ ನಾವು
ಮದುವಾ ಮಾಡ್ಕೊಳ್ಳಬೇಕು
ಖರ್ಚು ವೆಚ್ಚ ತಕ್ಕಂಡು
ನಾಳೆ ಬಾ ಹೋಗಪ್ಪ"
"ಹೆಣ್ಣಾ ನೋಡ್ಬೇಕು ನಾನು
ನಿಮ್ಮ ಹೆಣ್ಣಾ ತೋರ್ಸಿ ನನ್ಗೆ"
ನಾಕು ಜನ ಮಕ್ಕು ಕರ್ದ
"ಒನ್ರಮ್ಮ ಹೆಣ್ಣ ಮಕ್ಕಳ"
ನಾಕ್ಜನುವ ನಿಲ್ಸುದ್ನಲ್ಲೇ
"ಯಾವೆಣ್ಣು ಬೇಕು ನಿನಗೆ ?"
"ಎಲ್ಲಕ್ಕೆ ಕಿರಿಯವ
ಈ ಎಣ್ಣ ಕೊಡು ನಮ್ಗೆ"
"ಮದುವೆ ಲಾಗೋಡ್ ತತ್ತ
ಅಂಗಾದ್ರೆ ಮಾಡ್ತೀನಿ"
"ಹೆತ್ತವ್ರು ನೀವಲ್ವ
ಹುಟ್ಟಿಸ್ದೋರು ನೀವಲ್ವ
ಧರ್ಮಾರ್ತ ಮಾಡಿ ಕಳ್ಸಿ
ನಿಮ್ಗೆ ಧರ್ಮಾ ಬರ್ತಾದೆ
ಹೆಣ್ಣ ದಾನಾವ ಮಾಡಿ
ನಿಮಗೆ ಬಾಳ ಧರ್ಮಾಗಳುಂಟು"
ಆ ಮಾತ ಕೇಳುಕೊಂಡು
ಚಪ್ಪರವ ಹಾಕುತಾನೆ
ಶಿವು ಮೋರ್ತ ನೆಟ್ಟುತಾನೆ
ಮುತ್ತೈದೇರ್ ಕರುದನಂತೆ
ಸಾಸ್ತ್ರ ಸಮ್ಮಂದ ಮಾಡ್ಸಿ
ಧಾರೆ ಪ್ರಸ್ತವ ಮಾಡ್ಸಿ
ಮದುವೆ ಲಗ್ನವ ಮಾಡ್ಸಿ
ಹೋಗು ಅಂತ ಕಳ್ಸುತಾರೆ
ಹೆಡ್ತೀಯ ಕರ್ಕೊಂಡು
ಗಟ್ಟೀವಾಳಪ್ಪ ಬಂದ
ತಮ್ಮ ಹಟ್ಗೆ ಬಂದ್ರು
ಮಠದಲ್ಲಿ ಇರುಸಿದರು
ಒಂದು ಮನೇಲಿ ಒಬ್ಬೆ
ಒಂದು ಮನೇಲಿರಿಸಿಬುಟ್ಟು
ಭಿಕ್ಷಕ್ಕೆ ಹೊರಟನಂತೆ
ಭಿಕ್ಷಾವ ಮಾಡ್ಕೊಂಡು
ಮೂರ್ಪಾವ ತಂದನಂತೆ
ಹೆಡ್ತಿ ವಾಸಿಗೆ ಕೊಟ್ಟ
ಹೆಡ್ತಿ ಹೆಡ್ತಿ ಅನ್ನನಿಲ್ಲ
"ತಕ್ಕವ್ವ ಭಿಕ್ಷವ

ನೀನೊಂದು ಪಾವುಗಳ
ನೀನು ಊಟವ ಮಾಡ್ಕವ್ವ
ನನಗೊಂದು ಪಾವುನೂಟ
ಬಂದೋರ್ಗು ಒಂದು ಪಾವು"
ಅಡಗೇಯ ದುಡುಗುತಾಳೆ
ಗಟ್ಟಿವಾಳಪ್ಪುಂಗಿಕ್ಕುದ್ದು
ಪರುವುರ್ಗೆ ದಾನ ಮಾಡ್ದ
ತಾನು ಊಟವ ಮಾಡ್ದ
ಬೆಳಗಾ ಹೊತಾರೆ ಶಿವ
ಯಾತಾಸ್ಥೆತಿ ಭಿಕ್ಷುಕೊಂಟ
ಹತ್ತೂರು ಭಿಕ್ಷಾ ಮಾಡ್ದ
ಅಲ್ಲಿ ಸಿಕ್ಕಾದೆ ಮೂರುಪಾವು
ಐದು ಮನೆ ಭಿಕ್ಷ ಮಾಡದ್ರು
ಸ್ಯೆಯೆ ಸಿಕ್ಕೋದೆ ಮೂರು ಪಾವು
ಭಿಕ್ಷಾವ ತಂದನಂತೆ
ಈ ತಕ್ಕವ್ವ ಜೋಳಿಗೆ
ಜೋಳಿಗೆಯ ಈಸಿಕೊಂಡು
ಅವ ಅಡುಗೇಯ ಮಾಡುತಾಳೆ
ಬಂದೋರ್ಗು ಇಕ್ಕುತಾಳೆ
ತಾನುವೆ ಉಣ್ಣುತಾಳೆ |

ವರ್ಷಾಲ ತುಂಬಿತಂತೆ
ಅವುರಪ್ಪನ್ಮನ್ಗೆ ಕಳುಗುಸ್ನಿಲ್ಲ
ಭಿಕ್ಷುಕೋದ ಸಪ್ತ ನೋಡಿ
ಒಬ್ಬ ಪಕ್ಕ ಊರಂವ ಬಂದ
ಎತ್ತು ಕರ ಮೇಯ್ಸಾಕೆ
ಆ ಮರ್ದಾ ದಂಡ್ಕಕೆ ಬಂದ
ಇವುಳಂದ ಚಂದ ನೋಡುದ್ನಂತೆ
ಒಂದ್ಸಾವ್ರ ಹೊನ್ನ ಕೊಟ್ಟ
ಅವುಳ್ಮಾಲೆ ಕಣ್ಣೆಟ್ಟನಂತೆ
ಅವುಳ್ನ ಮಾಡ್ಕೊಂಡನಂತೆ
ಮಾಡ್ಕೊಂಡು ಮನೆಲವ್ನೆ
ಗಟ್ಟಿವಾಳಯ್ಯನವರು
ಅಷ್ಟೊತ್ಗೆ ಬಂದರಂತೆ
"ಯಾರವ್ವ? ಯಾರವ್ವ?
ಮನಿಗಿರೋರು ಯಾರವ್ವ?"
"ನಿಮ್ಮ ಕೇಳ್ಕೊಂಡು ಬಂದ್ರು
ಅವುರ್ ಬರಗಂಟ ಹೋಗದಿಲ್ಲ
ಹಂಗಂತ ಇಲ್ಲೆ ಮನುಗವ್ರೆ
ಅದೇನಾ ಒಸಿ ಕೇಳಿಹೋಗಿ"
"ಮನುಗಿರೋರ ಏಳುಸ್ಬಾರ್ದು
ಅವ್ರು ಒಬ್ಬ ಸರಣ್ರಲ್ಲ
ನಾನೊಬ್ಬ ಸರಣನಾಗಿದ್ದಿ
ಅವ್ರು ಒಬ್ಬ ಸರಣ್ರು ಬಂದ್ರು
ಎಷ್ಟೊತ್ಗೆ ಏಳ್ತಾರೆ
ಅವುರ್ಕೆಚ್ರವ ಮಾಡ್ಬೇಡ" |

ನಿದ್ರೆಯ ತಿಳಿದೆದ್ದ
ನೆಟ್ಟಾಗೆ ಹೋಯ್ತಾನೆ
ಯಾಕೆ ಬಂದಿದ್ದೆ ಅಂತ
ಒಬ್ಬರೂವೆ ಕೇಳನಿಲ್ಲ
ಇನ್ನು ಒಂದಿಲ್ಲ ಒಂದಿವ್ನ
ಇನ್ನೂ ಒಂದ್ದಿನ ಬಂದ
ಮಠದಲ್ಲಿ ಮನುಗವ್ನೆ
ಅವ್ನ ಕೇಳೋರೆ ದಿಕ್ಕಿಲ್ಲ
ಮೂರು ತಿಂಗ್ಳು ತುಂಬಿತಂತೆ
ಅವುಳ್ಗೆ ಹೊಟ್ಟೆ ನೋವು ಬಂದಿತಂತೆ
ಬಾಯಿ ಬಾಯಿ ಬಡಿತಾಳೆ
ಗಟ್ಟೀವಾಳಯ್ನ ಕರದ
"ಯಾಕವ್ವ ಅಳುತ್ಕವ್ವ
ಅಳುಬ್ಯಾಡ ಸುಮ್ಮನಿರು
ಪಂಡುತ್ರಮನ್ಗೆ ಹೋಗ್ವ ನಡೀ
ಔಸ್ತಿನಾರ ಕೊಡ್ಸುತೀನಿ"
ಯಾವೌಸ್ದು ಹಿಡಿಯಾನಿಲ್ಲ
"ನಮ್ಮಪ್ಪಾನ ಮನೆಗೆ
ಕರುಕೊಂಡು ನಡೀರ"ಂದ
"ಅಪ್ಪಾನ ಮನೆ ಹೊಸ್ದು
ಆ ಹೊಸ್ದುಮೆಟ್ಟಿದಾರೆ
ನನ್ನ ಹೊಟ್ನೋವು ಹೋಯ್ತಾದೆ
ನಮ್ಮಪ್ಪನ ಮನ್ಗೆ ಕರ್ಕೊಂಡ್ನಡ್ರಿ"
"ಹಂಗಾದ್ರೆ ಹ್ಯೆಂಗವ್ವ
ಒಂದ್ಗಾಡಿನಾದ್ರು ನೋಡ್ತೀನಿ"
ನೀವು ಬಂದಾರಿಯಪ್ಪ
ಗಾಡಿಯವ್ರ ಕೇಳುತಾನೆ
ಇವ್ರು ಮನೆಗೆ ಬತ್ತಿದ್ನಲ್ಲ
ಅವ್ನ ಎತ್ತುಗಾಡಿ ಕೇಳುತಾರೆ

"ಬಾಡ್ಗ ಕೊಡ್ತೀನಿ ಕಾಣೊ
ಬಾಡಿಗ್ಗೆ ಬಂದಿಯಪ್ಪ"
"ಬತ್ತೀನಿ ನಡೀರಿ"
ಎತ್ತುಗಾಡಿ ಕಟ್ಕಿಕೊಂಡ
ಮಠುದ್ಗಾಗ್ಲು ಮುಂದುಕ್ತಂದು
ಎತ್ತುಗಾಡಿ ಬಿಚ್ಚಾಕ್ಬುಟ್ಟ |

ಊಟ ತಿಂಡಿ ಮಾಡ್ಕೊಂಡ್ರು
ಗಾಡಿ ಮ್ಯಾಲೆ ಕೂತ್ಕೊಂಡ್ರು
ಗಟ್ಟೀವಾಳಪ್ಪನೋರು
ಅವ್ರು-ಹೊರಚೇರಿ ಕೂತುಕೊಂಡ್ರು
ಮದ್ಯ ಗಾಡೀಲಿ ಕೂತ
ಗಟ್ಟಿವಾಳಯ್ನ ಹೆಡ್ತಿ
ಗಾಡಿ ಹೊಡೆಯುವ ಒಂದು
ಅವ್ನು ಮುಂದೆ ಕೂತ್ಕೊಂಡನಂತೆ
ಅರಣ್ಯದ್ ಮಾರುಗದಲ್ಲಿ
ಗಾಡಿ ಬುಟ್ಕೊಂಡು ಹೋಯ್ತ
ಒಂದು ಯೋಜಿನ ಬತ್ತು
ಎರಡು ಯೋಜಿನ ಬತ್ತು
ಮಧ್ಯೆ ದಾರಿಯ ಒಳ್ಗೆ
"ನನ್ಗೆ ದಾವು ಆಯ್ತುದೆ
ಸ್ವಲ್ಪ ನೀರುನಾದ್ರೆ ತಂದುಕೊಡಿ
ನನ್ನ ದಾವು ಪರಿಯರ್ಸಿ ನನ್ಗೆ"
"ಹಂಗಾದ ಮ್ಯಾಲೆ ಮಾತ್ರ
ಇಲ್ಲಿ ಗಾಡಿ ಬಿಚ್ಚುಕೊಂಡು
ನೀವಿಬ್ರು ಇಲ್ಲೆ ಇರಿ
ನಾ ನೀರ ತಕ್ಕೊಂಡ್ಬತ್ತೀನಿ"
ಆರಣ್ಯನೆಲ್ಲ ತಿರುಗ್ದ
ಅಲ್ಲಿ ಪಾಳು ಬಾವಿ ಸಿಕ್ತು
ಪಾಳು ಬಾವಿಯ ಒಳ್ಗೆ
ಅಂಗ್ಯೆ ಅಗ್ಲ ನೀರದೆ
ಹನ್ನೆಳ್ಹಾಳುದ್ದ ಬಾವಿ
ಅಲ್ಲೆ ಇಳಿಯೋರೆ ದಿಕ್ಕಿಲ್ಲ
"ಗಾಡಿ ದಂಡ್ಯಕೆ ಬಂದ
ನೀವು ಗಾಡೀಯ ಕಟ್ಟುರಪ್ಪ
ಬಾವೀ ದಂಡ್ಯಲೋಗಿ
ಗಾಡಿ ಬಿಚ್ಚಾಕುರಪ್ಪ"
ಬಾವೀಯ ದಂಡ್ಯಕೆ
ಅವ ಹೊಡ್ಕಂಡು ಬರುತಾನೆ
"ಗಾಡೀಯ ಹೊಡಿಯೋನೆ
ಬಾವೀಗೆ ನೀನಿಳಿಯಪ್ಪ
ನೀರುನಾದ್ರೆ ತಕ್ಕಂಡು
ನೀನು-ಮೆಲುಕಾದ್ರೆ ಹತ್ತಪ್ಪ"
"ಯಾವಾಗ್ಲು ಇಳುದೋನಲ್ಲ
ಬಾವಿ ಕಂಡ್ರೆ ಭಯವಾಯ್ತದೆ
ನೀವೆ ಇಳೀರಿ ಸ್ವಾಮಿ
ನಾವೇ ಇಲ್ಲಿರ್ತೀವಿ" |

ಗಾಡಿಯವ್ನ ಮಾತ್ಕೇಳಿ
ನಮ್-ಗಟ್ಟಿವಾಳಯ್ಯ ಇಳ್ದ
ಮಿಳ್ದಪ್ಪೆ ಕೈಲಿಡ್ಕೊಂಡು
ಬಾವೀಯ ಒಳಿಕಿಳ್ದ
ಕಾವೀಯ ಬಟ್ಟಿ ಒಳ್ಗೆ
ನೀರುನಾದ್ರೆ ಅಜ್ಜಿಕೊಂಡ
ಆ ತಪ್ಪುಲ್ಲಾದ್ರೆ ತುಂಬುಕೊಂಡ
ಅವುನಷ್ಟ್ಕ ಅವ್ನೆ ಕೂತವ್ನೆ
ಮ್ಯಾಕೆ ಅಂತ್ಕೊಂಡ್ನೋಡದ್ರ ?
ಅವ್ನು ಮ್ಯಾಕಂತ್ನೋಣ್ಲಿಲ್ಲ
ಅವನ್‌ಪಾಡ್ಕೆ ಅವುನವುನೆ
ನೀರ್ತುಂಬುತಾವ್ನಲ್ಲಿ
ಮ್ಯಾಲೆ ಕೂತಿದ್ರಲ್ಲ
ಇವುರೊಂದೋಚ್ನೆ ಮಾಡ್ಕೊಂಡ್ರಲ್ಲ
ಆನೆ ಗಾತ್ರ ಕಲ್ತಂದು
ಬಾವಿವೊಳ್ಕೆ ತಳ್ಳಂವ
ಅಲ್ಲೆ ಅವುನ ಪ್ರಾಣೋಯ್ತದೆ
ನಾವು ಕಂಡಾಟ ಆಡಬೋದು
ಇಬ್ಬುರೂವೆ ಹೋದರಂತೆ
ಒಂದಪ್ಕಲ್ಲ ಉಳ್ಳುಸ್ಕೊಂಡ್ಬಂದ್ರು
ಬಾವೀ ಕರೆಯ ಒಳುಗೆ
ಕಲ್ಲಾ ಮಡೀಕೊಂಡ್ರು
ಒಂದೇ ಸಲ ತಳ್ದ್ರು
ಆಚೆವಾಡ್ಗೆ ಈಚೆವಾಡ್ಗೆ
ಸದ್ದು ಆಗದ ನೋಡಿ
ಆಗ ಆಂತ್ಕಂಡು ನೋಡುತಾರೆ
"ಕಲ್ಯಾಣದಲ್ಲಿ ಇರುವ
ನಮ್ಮ ಬಸವಣ್ಣ ನೀವೇ ಗತಿ"

ಬಸವಣ್ಣೋರೆಸ್ರ ಹೇಳುದ್ರೆ
ಅದು ಅಂತುರ್ದಲ್ಲೇ ನಿಂತುಕೋತು
ತೊಟ್ಲಲ್ಲಿ ತೂಗುದಂಗೆ
ಅಲ್ಲಿ ತೂಗಾಡ್ತ ನಿಂತ್ಕೊತಾ ಕಲ್ಲು
ನೀರ ಮೊಕ್ಕಂಡ್ನಂತೆ
ಇವ ಹಂತ ಹತ್ಕೊಂಡು ಬಂದ
ಗಟ್ಟಿವಾಳಪ್ಪನೀಗೆ
ಕಲ್ಲು-ದಾರೀಯ ಬುಟ್ಟುಕೊಡ್ತು
ನೀರ ತಕ್ಕಂಡು ಮ್ಯಾಕೆ
ದಂಡ್ಕಕೆ ತಂದುಕೊಟ್ಟ
ಊಟಾವ ಮಾಡ್ಕೋಳಿ
ಯಾಕೆ ತಳ್ಳುದ್ರಿ ಅಂತ
ಅವ ಏನ್ನು ಕೇಳನಿಲ್ಲ
"ಬಸವಣ್ಣ ನೀವೇ ಗತಿ
ನೀವಿರೋಗಂಟ ಭಯವಿಲ್ಲ
ಯಾವು ಪವಾಡ ಬಂದ್ರು
ಬಸ್ವಣ್ಣ ನೀವೇ ಗತಿ"
ನೀರನ್ನು ಕುಡ್ಕೊಂಡ್ರು
ಈ ಸಲಿ-ಗಾಡೀಯ ಕಟ್ರಪ್ಪ
ಗಾಡೀಯ ಕಟ್ಕೊಂಡು
ಅವುರಪ್ಪನ್ ಮನ್ಗೆ ಬಂದರಂತೆ
ಗಾಡೀಂದ ಕೆಳೀಕಿಳ್ದ
ಅದೇ ಊರಂವೊಬ್ಬ
ಇಷ್ಟು ಜಿನ್‌ಗಂಟ
ನೀನು ಎಲ್ಲೀಗೋಗಿದ್ದೆ ಹೆಣ್ಣೆ
ಒಂದು ಸಾವುರ ಹೊನ್ನ
ನನ್ ಕೈಲೀಸುಕೊಂಡೆ
ಈಸುಗಂಡು ಈಸುಗಂಡು
ನೀನು ಮೋಸ ಮಾಡಿ ಹೊಂಟೋದ್ಯ
ಅವ ಬಂದು ಒಂದು ಕೈಯ
ಹಿಡುಕೊಂಡುನಂತೆ ಅಂವ
ಗಾಡೀ ಹೊಡೀತಿದ್ದಾಂವ
ಅವ್ನು ಸುಮ್ಮಿರ್ನಿಲ್ಲ
"ನಾನು ಒಂದು ಸಾವುರ ಕೊಟ್ಟೆ
ಹೆಣ್ಣೆ ಮೋಸ ಮಾಡಿ ಹೋದೀಯ"
ಒಬ್ಬ ಸರಣಾನು ಇದ್ದ
ಅಲ್ಲಿಗಿನ್ನೊಬ್ಬ ಸರಣ ಬಂದ
ಇಬ್ರು ಸರಣರಿದ್ರು

ಆ ಇನ್ನೊಬ್ಬ ಬಂದನವ
ಅವ ಅತ್ತಾಗೆ ಎಳೆತಾನೆ
ಇವ ಇತ್ತಾಗೆ ಎಳಿತಾನೆ. ..

ಗಟ್ಟಿವಾಳಯ್ಯನೋರು
ಅವ್ರು ಇಬ್ರುನ್ನು ನೋಡುತಾರೆ
"ಜಗಳಾವ ಮಾಡಬೇಡಿ
ನೀವು ಸುಮ್ಮಗಿರಿ ಅಂತಾರೆ
ಬೆಳ್ಳಿಯ ಬೆತ್ತ ತಗ್ಬು
ಅಂತ ಬಸವಣ್ಣೋರೆಸ್ರೇಳಿ
ಅವ್ರ ನತ್ತಿಮ್ಯಾಲೆ ಮಡಗಿದ್ರಂತೆ
ಅತ್ತಾಗೊಂದು ಇತ್ತಾಗೊಂದು
ಏಡ ಭಾಗ ಆದುಳಂತೆ
ತೆರೆಯನ್ನು ಹಾಕುಸ್ಬುಟ್ರು
ಮಂತ್ರೋಪುದೇಸ ಮಾಡ್ದ್ರು
ಒಳ್ಳೆ ಬಸವಣ್ಣೋರೆಸ್ರೇಳುದ್ರು
"ಕರ್ತು ಬಸವಯ್ಯನೋರೆ
ಈ ಪವಾಡ ಎತ್ತುರಪ್ಪ
ಯತುಗಳು ಮುನುಗಳೇ
ನಿಮ್ಮಾದುಕ್ಕೆ ಅರುವಾಗ್ಲಿ."
ಮಂತ್ರುಪದೇಸ್ರ ಮಾಡಿದ್ದ
ಅವ್ರು ಉಸ್ರು ಅಂತ ಎದ್ದಳಂತೆ
ಅವುನ್ಗೊಬ್ಬ ಹೋಯ್ತಾಳೆ
ಒಳ್ಳೆ-ಗಾಡಿನ್ಗೊಬ್ಬ ಹೋಯ್ತಾಳೆ
ಎರಡು ಪವಾಡ ಗೆದ್ರು |

ನಮ್ ಗಟ್ಟೀವಾಳಪ್ಪನೋರು
"ಕಲ್ಯಾಣ ಪಟ್ಣಾಣ್ಕೆ
ನಾನೀಗಲಾದ್ರು ಹೋಗಬೇಕು
ಬಾಳ ದಿಸ ಆಗುತಲ್ಲೊ
ಈಗಲಾರು ಹೋಗಬೇಕು
ಜಿನ ತುಂಬಿ ಬತ್ತಿತಲ್ಲೊ
ಜಿನ ತುಂಬಿ ಹೋಯಿತಲ್ಲೊ."
ಕಡಿಯಾ ಬಾಕುಲ್ಗೆ ಬಂದ್ರು
ಪಾರದವ್ರು ಬುಡುನಿಲ್ಲ
ಗಟ್ಟಿವಾಳಪ್ಪ ಅಂತ
ಅವ್ರು ಒಂದುನೂವೆ ಅರಿಯರಂತೆ
"ಪಟ್ಟಣಕ್ಕೆ ಬುಡುವುದಿಲ್ಲ

ನೀನು ಆಚೆ ನಿಂತುಕೊಪ್ಪ
ಲಿಂಗ ಇದ್ದಾದ ನಿನ್ಗೆ
ಲಿಂಗ ಇದ್ರೆ ಒಳೀಕೋಗು
ಲಿಂಗಗಳಿಲ್ಲವಲ್ಲೊ"
"ನಾನು ಮನೆಯಲ್ಲಿ ಮರುತ್ಬುಟ್ಟ"
"ಲಿಂಗ ಇಲ್ಲುದ ವ್ಯಾಲೆ
ನಾವು ಕಲ್ಯಾಣಕ್ಕೆ ಬುಡೋದಿಲ್ಲ
ಎಡ್ಕೆ ತಿರುಗ್ಹೊಡುದ್ನಂತೆ
ಒಂದು ಚಿಕ್ಕ ಬೆಟ್ಟ ಕಾಣ್ತು
ಬಲಕ್ಕೆ ತಿರುಗಿ ನೋಡ್ದ
ಬಲಕ್ಕೊಂದು ಬೆಟ್ಟ ಕಾಣ್ತು
ಎದೆಯ ಎರಡ್ ಭಾಗ ಮಾಡ್ದ
ಆತ್ಮಲಿಂಗಪ್ಪನವರು
"ಹಿಟ್ಟಿಕ್ಕ ಹಿಟ್ಟಿಕ್ಕ"
ನೋಡುತಾರೆ ಆತುಮಲಿಂಗ್ನ
"ಈ ಬೆಟ್ಟ ನುಂಕೊಪ್ಪ
ಈಚೆ ಬೆಟ್ಟ ನುಂಕೊಪ್ಪ"
ಗುಳುಕು ಗುಳುಕಾನೆ
ಏಡು ಬೆಟ್ಟ ನುಂಗಿಕೊಂಡು
ಆಗ ಆತುಮಲಿಂಗ ತೋರುಸ್ತಾರೆ
"ಸೈ ಈಗಲಾರು ಬುಡುರಪ್ಪ"
"ಹಂಗಾದ ಮೇಲೆ ನೀವು
ಈಸಾಲ ಹೋಗರಪ್ಪ"
ಕಲ್ಯಾಣದ ಒಳಕೆ ಬಂದ

ಬಸ್ಸಣ್ಣೋರು ಸರಣಂದ್ರು
"ಚಂದಾಗಿದ್ಕೀರ್ಕ ಸ್ವಾಮಿ
ನಮ್-ಗಟ್ಟಿವಾಳಪ್ಪನೋರು
ಮದುವೆಯಾದ ಸಂಪತ್ಗೆ
ನೀವ್-ಇಷ್ಟ ಜೀನುಗಂಟ ಬರನಿಲ್ಲ
ಹೆಡ್ತಿ ಮಕ್ಕು ಚೆನ್ನಾಗವ್ರ"
"ಎಲ್ಲಾ ಚನ್ನಾಗವ್ರೆ
ನಿಮ್ಮ ಪಾದ್ದೆ ಬಲ್ಲಾದು ನೋಡಿ"
ಗಟ್ಟಿವಾಳಪ್ಪನವರು
ಬಸವಳ್ಳೊರ್ಗೇನೇಳುತಾರೆ
"ಈವತ್ತು ನನ್ನಯ್ಯ
ತೀರೊಯ್ತು ಕಾಣ್ ಸ್ವಾಮಿ"

"ಹಂಗಂದ್ರೆ ಏನಪ್ಪ?
ನನ್‌ಗಟ್ಟಿ ಬಾಳಯ್ಯನೋರೆ"
ಬಸವಣ್ಣೋರ ಮುಂದೋಗಿ
"ನಾಸತ್ರು ಸಮಾಧಿಗಿಲ್ಲ
ಇದ್ರು ಕೈಲಾಸಕಿಲ್ಲ
ನೀವು ಮುಂದೆ ನೋಡ್ಕೊಳ್ಳಿ"
ಸುಟ್ಟು ಸುಕ್ರುವಾರ
ಅವ್ರು ವಸ್ತುವ ಬುಡುತಾರೆ
ಸಾರ್‌ಸಾರಿ ಹೇಳುಬುಟ್ಟು
ಅವ್ರು ಪ್ರಾಣಗಳ ಬುಡುತಾರೆ
ಕಾವಿ ಬಟ್ಟೆಯ ತಗ್ದು
ನಮ್-ಗಟ್ಟಿವಾಳಯುಂಗೊದುಸ್ರು
"ಬನ್ನಿ ಬಂದ್ರಪ್ಪ ನೀವು
ಕಲ್ಯಾಣ ಪಟ್ಟಣದ
ಗಟ್ಟಿವಾಳಯ್ಯನೋರ
ಒಪ್ಪವ ಮಾಡಬೇಕು
ನೀವು ಸರಣಾರೆಲ್ಲ ಬನ್ನಿ"
ಸಾವಿರ್ಕೋಟಿ ಗಣಂಗಳು
ಅವು ಕಲ್ಯಾಣ್ಕೆ ಬಂದರಂತೆ
"ಒಪ್ಪವ ಮಾಡ್ಬೇಕು
ನಾವು ಮಾಸಾಣ್ಗಟ್ಟೆಗೋಗಬೇಕು
ಒಪ್ಪವ ಮಾಡದ್ಕೆಲ್ಲ
ಆ-ವರ್ತ್ಮಾನ ಗೊತ್ತಿಲ್ಲವ
ನೆನ್ನೆಯ ದಿವುಸ
ಆ ಬಿಜ್ಜಾಳ್ನ ಸಂವರ್ದಲ್ಲಿ
ಕೊಂಡುಗಾರ್ ಮುಂಚೆಣ್ಣನ್ ಕರ್ದು
ಕಲ್ಯಾಣಕೆಲ್ಲ ಸಾರ್ದ
ಸತ್ರೆ ಸಮಾಧಿಗಿಲ್ಲ
ಇದ್ರು ಕೈಲಾಸಕಿಲ್ಲ
ಕಲ್ಯಾಣದಲ್ಲಿ ನೀವು
ನೀವು ಒಪ್ಪವ ಮಾಡಕಾಗ್ದು
ಕಲ್ಯಾಣ ಬುಟ್ಟು ನೀವು
ಆ-ದೂರ ದೇಸ್ಕೆ ಹೋಗಬೇಕು
ಬನ್ನಿ ಬನ್ನಿ ಬನ್ರಪ್ಪ
ಚಾಕು ಚೂರಿಯ ತನ್ನಿ
ಕೊಳ್ಳಿ ಕಡ್ಕತ್ತಿ ತನ್ನಿ
ಒಸಿ ಒಸಿಯಾ ಕತ್ರುಸ್ಕೊಂಡ್ರು

ಕಾವೀಯ ಜೋಳುಗ್ಗೆ
ಜೊಳ್ಳೇಗೆ ತುಂಬುಕೊಂಡು
ಸಾವುರಕೋಟಿ ಗಣಂಗಳು
ಮಚ್ಚುಕೊಳ್ಳಿ ತಂದರಂತೆ
ಕಾವೀಯ ಬಟ್ಟೆ ತಗುದ್ರು
ಗಟ್ಟೇ ಮನುಗದಲ್ಲೊ
ನಮುಗುಳುಗಾಲ ಬರನಿಲ್ಲ
ನಾವು ಉಳುಮೆ ಮನೆಗೋಗಬೇಕು
ಯಾರು ಬಂದಾರಿಯಪ್ಪ
ನಮ್ಮ ಉಳ್ಳೆ ಮನ್ಗೆ ಬರುವರ್ಯಾರು
ಕಲ್ಯಾಣಕ್ಕೆ ಕಲ್ಯಾಗ್ಲು
ಈ ಕಲ್ಯಾಗ್ಲ ಕೆಚ್ಚುಬುಡಿ
ಈಬುತ್ತಿ ಎಳುಕೊಂಡು
ನಿಮ್ಮಿಷ್ಟ ಬಂದಾಗೆ ಧರ್ಸಿ
ತೇಯ್ತಾ ತೇಯ್ತಾ ತೇಯ್ತಾ
ಆ ಗಟ್ಟೆಲ್ಲ ತೀರೊಯ್ತು

ಗಟ್ಟಿ ತೀರೋದ ಮಾಲೆ
ಇವ್ರು ಉಳ್ಳೆ ಮನೆಗೋಗುತ್ತಾರೆ.

ಕಲಿಯ ಹೆಚ್ಚಾಯ್ತಲ್ಲೋ
ಕಲಿಗ್ಯಾನ ಹೆಚ್ಚಾಯ್ತಲ್ಲೊ
ಕೋಟಿಗೊಬ್ಬ ಭಕ್ತನಾಗಿ
ಒಳ್ಳಿ ಕುಲಕೊಬ್ಬ ಸರಣನಾಗಿ
ಗಾವುದಕೊಂದು ಸಂತೆಯಂತೆ
ಒಂದುಗಾವುದಕೊಂದು ಜ್ಯೋತಿಯಂತೆ
ಅಟ್ಟ ಬೆಟ್ಟವೆಲ್ಲ ಗುರುವೆ
ಬಟ್ಟು ಬಯಲಾಗಬೇಕು
ಅಲ್ಲೀವರ್ಗಯು ನಾವು
ನಾವು ಕಲ್ಯಾಣ್ಕೆ ಬರೋದಿಲ್ಲ.
ಕಲಿಗಾಲ ಮುಗಿಯೊನ್ಗಂಟ
ನಾವು ಕಲ್ಯಾಣ್ಕೆ ಬರಬಾರ್ದು
ಉಳ್ಳೆ ಮನ್ಗೆ ಒಂಟೋದ್ರು
ಈ ಸಂದಿಲ್ಗೆ ಮಂಗಳ.

ಬಸವಣ್ಣ ಹೂಡಿ ಬಡಿಬ್ಯಾಡ

ಹಾದೀಯ ಹೊಲದಲ್ಲಿ ಮೇಯದಿರೊ ಬಸವಣ್ಣ
ಸಾಲವಂದಿಗರು ಬಡವರು
ಸಾಲವಂದಿಗರು ಬಡವರ ಹೊಲದಲ್ಲಿ
ಮೇಯದಲೆ ಹೋಗೋ ಬಸವಣ್ಣ |

ಬಟ್ಟೀಯ ಹೊಲವ ಮುಟ್ಟದಿರೊ ಬಸವಣ್ಣ
ಬಟ್ಟೀಯ ಹೊಲದೋರು ಬಡವರು
ಬಟ್ಟೀಯ ಹೊಲದೋರು ಬಡವರು ಅವುರ್ಹೊಲ
ಮುಟ್ಟದಲೆ ಹೋಗೋ ಬಸವಣ್ಣ |

ಕದ್ದು ಕಡಲೆ ಮೇದು ಇಬ್ಬನಿ ಹುಲ್ಲ ಮೇದು
ಕದ್ದು ಹೋಗವುನೆ ಬಸುವಣ್ಣ - ಈ ಊರ
ಹೆಬ್ಬಾಗುಲಲ್ಲಿ ಮನುಗವುನೆ |

ಹಸಿಕಾಯ ಹರಿಬ್ಯಾಡ ಹೊಡೆದಂಟ ಮುರಿಬ್ಯಾಡ
ಬಸವಣ್ಣ ಹೂಡಿ ಬಡಿಬ್ಯಾಡ - ಸೋಮವಾರ
ಹೊಸಮಗನಾಗಿ ತಿರುಗಾಲಿ |

ಅಕ್ಕ ನಾಗಮ್ಮ

ಸುವ್ವಾ, ಬಾ ಚನ್ನ ಬಸವಣ್ಣ ಸುವ್ವಿ | ಸೊಲ್ಲು |

ಕಲ್ಯಾಣದಲ್ಲಿ ಬಂದು ಉರಿಯ ಗದ್ದಿಗೆ ಮ್ಯಾಲೆ
ಸ್ವಾಮಿ - ಬಂದು ಒರಗಿದರು ಬಸವಣ್ಣ |

ಪಟ್ಟೆ ಮಂಚುದ ಮ್ಯಾಲೆ ಮನುಗವ್ರೆ ನೀಲಮ್ಮಯ್ಯ
ಬಾಳ-ಸುಕುನಿದ್ರೆ ಅವರೀಗೆ ದೊರತೀತು |

ನಿದ್ರೆ ಏಳ್ಕದ ಒಳಗೆ ಕೈಲಾಸ್ದ ಜಗದೊಡಿಯ
ನಿಂದು-ನೋಡಿದರು ಕಲ್ಯಾಣ್ದ ದರಬಾರ |

ಎಲ್ಲರ್ಗು ಗುರುವಾಗಿ ಇರುವಾರು ಬಸವಣ್ಣ
ಅವುರ್ಗೆ-ಮಕ್ಕಳ ಫಲುವೆ ಮೊದಲಿಲ್ಲ |

ಕೋಟಿ ಜಂಗಮುರುಗೆಲ್ಲ ಇವ್ರು ಲಿಂಗ ಕಟ್ಟುದರೇನ
ಪುತ್ತುರು ಸಂತಾನ್ವೆ ಮೊದಲಿಲ್ಲ | ೧೦

ಬಸವಣ್ಣ ಸಂದೋದ ಕಾಲ್ಕೆ ಇವರೆಸರೇಳುವಂತ
ಮಕ್ಕ ಇವರೀಗೆ ಮೊದುಲಿಲ್ಲ |

ಮಕ್ಕಳಿಲ್ಲದ ಕಲ್ಯಾಕ್ಕ ನಾ ಪ್ರಯ್ನ ಮಾಡಬೇಕೆಂದು
ನಮ್ಮ ಶಿವನು ನೀಲಮ್ಮ ಸೊಪುನಾಕೆ |

ನಮ್ಮ ಶಿವನು ನೀಲಮ್ಮ ಸೊಪುನಕೆ ಬಂದಾರು
ಬಂದು ಸೊಪುನಾಕೆ ಜಗದೊಡಿಯ |

ನೀಲಮ್ಮ ಸೊಪುನಾಕೆ ಬಂದಂತ ಜಗದೊಡಿಯ
ಬಂದು ಮೂರ್ಬಾಕ್ಕ ತಿಳಿಸಿದರು |

"ಮಕ್ಕಳಿಲ್ಲದ ಮನೆ ಮರುಗ ಇಲ್ಲಾದ ತೋಟ
ಲಿಂಗ ಇಲ್ಲಾದ ದೇವ್‌ಲಾಯ | ೨೦

ಲಿಂಗಾ ಇಲ್ಲಾದ ದೇವ್ಲಾಯ ನೀಲಮ್ಮಯ್ಯ
ನೀವು ಕಲ್ಯಾಣ ಆಳಿ ಫಲುವೇನ |

ಶತುಕೋಟಿ ಜಂಗಮರು ನಿಮ್ಮಠುದಲ್ಲಿದ್ದರೇನ
ನಿಮ್ಮೊಟ್ಟಿಗುಟ್ಟಿದ ಮಕ್ಕ ನಿಮುಗಿಲ್ಲ |

ನೀವು ಸಂದೋದ ಕಾಲ್ಕೆ ಕೇಳಿ ನೀಲಮ್ಮಯ್ಯ
ನಿಮ್ಮ ಗದ್ದುಗ್ಗೆ ಸಲುವ ಮಕ್ಕಳಿಲ್ಲ |

ಪರವರ ಮಕ್ಕಳು ನಿಮ್ಮಕ್ಕಳಾಗೋದಿಲ್ಲ
ನಿಮ್-ಉರಿಗದ್ದಿಗೆ ಪರುರು ಸಲ್ಲೋದಿಲ್ಲ |

ನೀವು ಇರುವ ತನಕ ನಿಮ್ಮ ಕಲ್ಯಾಣ್ದ ದರಬಾರು
ಮುಂದೆ ಮಕ್ಕಾಳು ನಿಮುಗಿಲ್ಲ" | ೩೦

ಮೂರ್ಮಾತ ಹೇಳಿದರು ಮುಕ್ಕಣ್ಣ ಜಗದೊಡಿಯ
ಮಾಯವಾದಾರು ನಮ್ಮ ಪರಶಿವನು |

ಶಿವನು ಮಾಯ್ವಾದಾಗ ಇವ್ರು ಕಣ್ಬೆರೆದು ನೋಡಿದರು
ಯಾರೂ ಇಲ್ಲ ಅವರ ಎಡಬಲಕೆ |

"ಯಾರೋ ಕಾಣ್ಣಿಲ್ಲಪ್ಪ ಇಂತೆ ಮಾತಾಡಿದರು?"
ಯೋಚಾಣೆ ಮಾಡಿದರು ತಮ್ ಮನದಲ್ಲಿ |

"ಕಂಡ ಸೊಪುನದ ಮಾತ ಯಜುಮಾನ್ರುಗೇಳಲು ಬೇಕು
ಹೇಳ್ಬೇಕ ಬಸುವಣ್ಣನ ಜೊತಿಯಲ್ಲಿ" |

ಬಲದ ಮೊಗ್ಗುಲಾಗೆದ್ದು ತಾಯಿ ನೀಲಮ್ಮಯ್ಯ
ಈಬುತ್ತಿ ಕೊಳುಕೆ ನೆಡಿದಾರು | ೪೦

ಈಬುತ್ತಿ ಕೊಳುಕೋಗಿ ಮುಳುಗಿ ಮೀಯಣ ಮಾಡಿ
ಒದ್ದೆ ಬಟ್ಟೆ ಒಳುಗೆ ತಾಯಿ ಹೊರಟಾರು |

ಬಂದಾರು ನೀಲಮ್ಮ ಬಸುವಣ್ಣನ ಸನ್ನಿಧಾನ್ಕೆ
ನಿಂದಾರು ಬಸವಣ್ಣನ ಎದುರಾಗಿ |

ಬಲದ ಮೊಗ್ಗುಲಾಗೆದ್ದು ಕುಳಿತಿದ್ದರು ಬಸವಣ್ಣ
ನೀಲಮ್ಮ-ಅವ್ರೊಂದೀಸಿ ಕರವ ಮುಗಿದಾರು |

ಕರವ ಮುಗುದ ನೀಲಮ್ಮ ಕಂಡಾರು ಬಸುವಣ್ಣ
"ನೀಲಮ್ಮ-ನಿನ್ನ ಕಲಿಮುಖ ಕಂದಿರುವ ಬಗೆ ಏನ |

ಕಲಿಮುಖ ಕಂದಿರುವ ಬಗೆ ಏನ" ಎನ್ನದ್ದಾಗಿ
ನಮ್ಮ ಸಂಗಾನ ಬಸವಣ್ಣ ಕೇಳಿದರು |

"ಮುಖ ಕಂದುದ ಮಾತ ಏನೆಂದು ಹೇಳಲಿ
ನಾವಿರಬವುದ ಸ್ವಾಮಿ ಈ ಧರಿಯಲ್ಲಿ?" |

"ಹಂಗಂದರೇನ ಹೇಳು ನೀಲಮ್ಮಯ್ಯ
ಯಾರೇನಂದಾರು ನಿನ್ ಜೊತೆಯಲ್ಲಿ?" |

"ಮಕ್ಕಳಿಲ್ಲಾದ ಮನೆ ಮರುಗೆವಿಲ್ಲಾದ ತೋಟ
ಇದು ಲಿಂಗವಿಲ್ಲಾದ ದೇವ್‌ಲಾಯ" |

ಲಿಂಗವಿಲ್ಲಾದ ದೇವ್ಲಾಯ ಬಸವಣ್ಣೋರೆ
ಈ ಮೂರೂ ಇರಬಾರ್ದು ಈ ಧರೆಯಲ್ಲಿ |

ನಮ್ಮಂತ ಮಕ್ಕಳಿಲ್ದ ಜಲ್ಮ ಇದ್ದೇನು ಫಲಸ್ವಾಮಿ?"
ಅಂತೇಳಿ ನೀಲಮ್ಮ ಅಳುತಾಳೆ |

ಹಂಗಂದ ಮಾತನ್ನೇ ಸಂಗನ ಬಸವ ಕೇಳಿ
ಫಕ್ಕಾ ಫಕ್ಕನೆ ಸ್ವಾಮಿ ನಗುತಾರೆ |

"ಕೋಟುಗೊಬ್ಬ ಸರಣಾರು ಕುಲುಕೊಬ್ಬು ಭಕ್ತರು
ಇವುರೆಲ್ಲ ನಮಗೆ ಮಕ್ಕಳಲ್ಲವೆ ? |

ನಾವು ಕಾವೀಯ ತೊಟ್ಟೋರು ನಾವು ಲಿಂಗವ
ಕಟ್ಟುದೋರು
ಅವರೆಲ್ಲ ನಮಗೆ ಸಿಸುಮಕ್ಕ |

ಆಪ್ತ ಸಿಸುಮಕ್ಕ ನಮ್ಮತಲ್ಲಿದ್ದ ಮೇಲೆ
ಇನ್ ಮಕ್ಕಾಳ ಫಲ ನಮುಗ್ಯಾಕೆ |

ಮಕ್ಕಾಳ ಫಲ ನಮಗ್ಯಾಕೆ ನೀಲಮ್ಮಯ್ಯ
ಈ ಕೋಟಿ ಜಂಗಮರೆ ನಮ್‌ಸಿಸುಮಕ್ಕ!" |

ದೊಡ್ಡೋರಾಡಿದ ಮಾತ ಕೇಳಿದರು ನೀಲಮ್ಮಯ್ಯ
ಆಗ್ಯಾವ ಉತ್ರ ತಾಯಿ ತಿಳಿಸೀದ |

"ನಾವು ಇರುವತನಕ ಇವುರೆಲ್ರು ನಮ್ಮಕ್ಕ ಇರಬೋದು
ನಾವು ಸಂದೋದ ಮ್ಯಾಲೆ ಗತಿಯೇನು? |

ನಾವು ಸಂದೋದ ಕಾಲಕ್ಕೆ ಗತಿಯೇನು
ನಮ್ಮ ಗದ್ದಿಗೆ ಸಲುವ ಮಕ್ಕಳಿಲ್ಲ |

ಸಿಸು ಮಕ್ಕಳು ಬಂದು ಉರಿಗದ್ದೀಗೆ ಏರೀರ ?
ಹೊಟ್ಟೀಲುಟ್ಟಿದ ಮಕ್ಕ ಇರಬೇಕು |

ಹೊಟ್ಟೀಲುಟ್ಟಿದ ಮಕ್ಕ ನಮಗಿದ್ದರೆ ಬಸವಣ್ಣ
ಪಟ್ಟವಾಯ್ತದೆ ಸ್ವಾಮಿ ಜಗದಲ್ಲಿ" |

ಮಡ್ದಿ ಆಡಿದ ಮಾತ ಕೇಳಿದರು ಬಸವಣ್ಣ
ಕಂದೋಯ್ತು ಸ್ವಾಮೀಗೆ ಕಲಿರೂಪು |

"ಹರಹರ ಶಿವಶಿವ ಮಕ್ಕಳಿಲ್ಲಾಂತ್ಹೇಳಿ
ಇದುವರೆಗೆ ಯಾರೂ ಹೇಳಿಲ್ಲ |

ಇದುವರೆಗೆ ಯಾರೂ ಹೇಳಿಲ್ಲವಲ್ಲೊ ಶಿವನೆ
ಈ ಮಾತ ಈವತ್ತು ಹೇಳಬವುದೆ? |

ತಿಳುವಳಿಕೆ ಇಲ್ಲದೋರ್ಗೆ ನೀವು ಮೊದಲೆ ಹೇಳಿದ್ದಾರೆ
ಆಗಂತ ಬಗೆಯ ಪಡುತಿದ್ದೊ" |

ಬಾಳ ಚಿಂತೇ ಮಾಡಿ ದೇವರು ಬಸವಣ್ಣ
ಆ ಶಿವನಿಂದ ವರವ ಬಯಸ್ಯಾರು |

ಈಬುತ್ತಿ ಕೊಳಕೋಗಿ ಅವ್ರು ಮುಳುಗಿ ಜಪವ ಮಾಡಿ
ಸಂಗಮೇಶ್ವರನ ಗದ್ದಿಗ್ಗೆ ಬರುತಾರೆ |

ಸಂಗಮೇಶ್ವರನ ಪೂಜ್ಯ ಮಾಡುತಾರೆ ಬಸವಣ್ಣ
ನನ್ ಕೂಡಾಲಸಂಗುಮ ನಿನ್ ಶ್ರೀಪಾದ |

ಮಕ್ಕಳಿಲ್ಲದ ಜಲ್ಮ ನಿನ್ನ ನಂಬಿ ಪೂಜೆ ಮಾಡ್ತೀನಿ
ನನ್ಗೆ ಮಕ್ಕಾಗೂ ತರುವ ಹೇಳುಬೇಕು |

ಅಂದದಿಂದಣ್ಮಾರುದು ಚಂದಾದಿಂದ್ಯಾಯೊಡೆದು
ಮಂಗಳಾರತಿಯ ಬೆಳಗಿದರು |

ಮಂಗಳಾರತಿಯ ಬೆಳಗಿ ನಮ್ಮ ಸಂಗನ ಬಸವಣ್ಣ
ಆ ಗದ್ದಿ ಮ್ಯಾಲೆ ಮೊಕಾಡನಾಗಿ ಮನುಗಿದರು |

ಗದ್ಗೆ ಮ್ಯಾಲೆ ಬಸವಣ್ಣ ಮೊಕಡನಾಗಿ ಮನುಗುದಾಗ
ಅವ್ರ ನೇತ್ರುಕೆ ನಿದ್ರೆ ದೂರಾಯ್ತು |

ಕಣ್ಣಿಗೆ ನಿದ್ರೆ ಬಂದಾಗ ನಮ್ಮ ಶಿವ ಪ್ರಯಾಣವಾದ
ಒಂದು ಮಾರುತ್ರ ಇವುರ್ಗೆ ಕೊಡುತಾರೆ |

"ಮಕ್ಕು ಮ್ಯಾಗಲ ಗ್ಯಾನ ನಾ ಹೇಳುದ ಮ್ಯಾಲೆ ಬತ್ತ?
ನಿಮ್ಗೆ ಮಕ್ಕಾಗೋ ತರವ ಹೇಳ್ತೀವಿ |

ಮಕ್ಕಾಗೋ ತರುವ ಇಂದೇಳ್ತೀವಿ ಬಸವಣ್ಣ
ಚಿತ್ತವಿಟ್ಟು ಕೇಳಿ ನಿಮ್ ಮನದಲ್ಲಿ |

ನಾವು ಹೇಳುದಂಗೆ ನೀವು ಕೇಳಾದ ಹೋದಾರೆ
ಪುತ್ತುರು ಸ್ಯಾಂತಾನ್ಸೆ ನಿಮುಗಿಲ್ಲ | ೧೧೦

ಕಕ್ಕಯ್ನ ಮನೆಯ ಮಿಕ್ಕುನ ಪ್ರಾಸೋದ್ಕೆ
ನೀವ್ ಎಂಬತ್ತೊಂದೊರುಸ ತ್ರಪಿಸಿರಬೇಕು |

ಚನ್ನಯ್ನ ಮನೆಯ ಹೊನ್ನುನಂತ ಪ್ರಾಸೋದ್ಕೆ
ನೀವು ಹನ್ನೆರಡೊಂದೊರ್ಸ ತ್ರಪಿಸಿರಬೇಕು |

ಹನ್ನೆರಡೊಂದೊರುಸ ನೀವು ತ್ರಪಸ ಮಾಡಿದಾರೆ
ಚಿನ್ನದಂತ ಮಕ್ಕು ನಿಮುಗುಟ್ಟುತ್ತಾರೆ |

ಹರಳಯ್ನ ಮನೆಯ ಒಳ್ಳೆ ಕರುಣುಳ್ಳ ಪ್ರಾಸೋದ್ಕೆ
ಅರವತ್ತೊಂದೊರುಸ ತ್ರಪಿಸಿರಬೇಕು |

ಅರವ್ತೊತ್ತೊಂದುರುಸ ನಿಜ ತ್ರಪಸನ್ನೆ ಮಾಡಿದರೆ
ಹಿರಾಳೀಸೋರಿ ನಿಮುಗೆ ಹುಟ್ಟುತಾಯ್ತೆ | ೧೨೦

ಹಿರಾಳೀನಾ ಹೋರಿ ನಿಮುಗುಟ್ಟುತ್ಕೆತೆ" ಅನುತ್ಹೇಳಿ
ಮಾಯವಾದರು ಪರಶಿವನು |

ಕಣ್ಣು ತೆರ್ದು ನೋಡುದ್ರು ಕಲ್ಯಾಣ್ದ ಬಸವಣ್ಣ
ಈ ಸೊಪ್ಪುನಾದ ಮಾತ ನೆನುಕೊಂಡು |

ನನ್ನಾದಿಯ ಹರುಳಯ್ಯ ಎಂತ ಶರಣನಿರಬೇಕು
ಎಂದು ಚಿಂತೆ ಮಾಡಿದರು ಬಸವಣ್ಣ |

"ಅಂದುನಿಂದಲೂ ಇದ್ದ ಒಂದೆ ಎಡೆಯ ಒಳುಗೆ
ಆ ಶಿವ ಒಂದಿನುವೆ ಈ ಉತ್ರ ಹೇಳುನಿಲ್ಲ |

ಎಂದೂ ಇಲ್ಲದ ಶಿವನು ಇಂದೀ ಉತ್ರ ಕೊಟ್ಟವುರೆ
ನಾವೆಲ್ಲೋಗಿ ತ್ರಬಸ ಮಾಡಬೇಕು | ೧೩೦

ಬನ್ನೀ ನೀಲಮ್ಮಯ್ಯ" ಹಾಗೆಂದು ಬಸವಣ್ಣೋರು
ಮಡದಿ ನೀಲಮ್ಮನ ಕರಿದಾರು |

"ಹರಳಯ್ನ ಮನೆವೊಳುಗೆ ಒಳ್ಳೆ ಶರಣ ಪ್ರಾಸೋದಕೆ
ತ್ರಬಸ ಮಾಡಿ ಅಂದಾರು ಪರಶಿವ |

ಅವರೇಳಿದಂತ ತ್ರಬಸ ಮಾಡಾದೆ ಹೋದಾರೆ
ಮಕ್ಕಾಳ ಫಲವೇ ನಮಗಿಲ್ಲ" |

ಕಲ್ಯಾಣ ಬುಟ್ಟು ಹೊರಗೆ ಕಾವೀ ಡೇರ್ಯಾ ಹೊಡೆದು
ಕಾವಿ ಡೇರ್ಯಾದಲ್ಲಿ ತ್ರಬಸಿದರು |

ಅನ್ನಹಾರ ಬುಟ್ಟು ನೀರು ನಿದ್ರೆ ಬುಟ್ಟು
ಗುರುಗ್ನಾನದೊಳುಗೆ ಕುಳಿತಾರು | ೧೪೦

ನಮ ಗುರುಗಳು ಬಸವಣ್ಣ ತ್ರಬಸೀಗೆ ಕುಳುತರೆಂದು
ಕಣ್ಮದಮಟೆ ಕಾಳದಮಟೆ ನುಡಿದಾವು |

ಕಣ್ಮದಮಟೆ ಕಾಳದಮಟೆ ಉಯುಲ್ಲೊಂಬು
ಉಯುಲ್ದಮಟೆ
ಛತ್ರಿ ಚಾಮರವ ಸುಂಗರಿಸಿದರು |

ಛತ್ರಿ ಚಾಮರವ ಬಿಡಿ ಬಿಡಿ ಕೊಂಬುನ ಕಾಳಿ
ನಗಾರಿ ನೌಪತ್ತು ಲಾದಂತೆ |

ಲಾದಗಳ ಮಾಡುಕೊಂಡ ಸಮ್ಮೋದವುಳ್ಳ ಬಸವಣ್ಣಾಗೆ
ಜಂಗುಮರೆಲ್ಲ ಹರಿಸಿದರು |

"ನಮ್ಮ ಕಾಪಾಡ್ದ ಗುರುವೀಗೆ ಪುತ್ರುಸ್ಯಾಂತಾನವಾದ್ರೆ
ನಮಗೆಲ್ಲ ಬಾಳ ಹೆಚ್ಚಾಳ | ೧೫೦

ನಮ್ ಬಸವಣ್ಣ ಸಲುಗಿದಂಗೆ ಅವರೊಟ್ಟೇಯ ಕೊನೆಯು
ನಮ್ಮನ್ನು ಸಲುಗುವರು" ಎನ್ನುತಾರೆ |

ನಮ್ಮನ್ನು ಸಲುಗವರು ಎನ್ನುತ್ತ ಜಂಗಮರು
ಅವುರಾ ಬಾಳ ಹೆಚ್ಚಾಳ ಪಡುತ್ತಾರೆ |

ಇವುರು ಗಂಡ ಹೆಂಡ್ತಿರಿಬ್ರು ಕಾವೀ ಡೇರ್ಯದೊಳಗೆ
ತ್ರಬಸೀಗೆ ದೇವ ಕುಳುತವುರೆ |

ಅರುವುತ್ತೊಂದು ವರುಷ ಮಾಡಿದರು ನಿಜ ತ್ರಬಸ
ಹಂಗೂ ದೊರಿಯಾನಿಲ್ಲ ಪ್ರಾಸೋದ |

"ಕುಂತ ಜಾಗದ ಒಳುಗೆ ನಾವು ತ್ರಬಸನ್ನೆ ಮಾಡಿದರೆ
ನೀಲಮ್ಮ - ತಂದು ಕೊಡೋರ್ಯಾರು ವರವನ್ನು? | ೧೬೦

ಮಾಸ್ಯ ಹರಳಯ್ನ ಮಠುಕೆ ನಾವೇ ಹೋಗಲುಬೇಕು
ಹೋಗಿ ಪ್ರಾಸೋದ ತರುಬೇಕು |

ಹೋಗಿ ಪ್ರಾಸೋದವನ್ನ ತರುಬೇಕು" ಅನುತ್ಹೇಳಿ
ಅವರ ತ್ರಬುಸನ್ನೆ ಬುಟ್ಟು ಹೊರಟಾರು |

ಗುರುಗಳು ಬಸವಣ್ಣ ಪ್ರಾಸೋದಕ್ಕೆ ಹೊರಡಾಗ
ಅವುರಾನೆ ಅಂಬಾರ್ಗೆ ಏರಿದರಂತೆ |

ಆನೆ ಮೇಲುಂಬಾರಿ ಒಂಟಿ ಮೇಲೆ ಡೆಂಕಾಣಿ
ಜಗ ಜಂಪನ್ನ ಸತ್ಗೆ ಅವುರ ಜೊತೆಯಲ್ಲಿ |

ಸತ್ಯವುಳ್ಳ ಬಸವಣ್ಣ ಒಬ್ರೆ ಹೋಗುವರೆಂದು
ಕೋಟಿ ಜಂಗಮರು ಅವ್ರ ಜೊತೆಯಲ್ಲಿ | ೧೭೦

ಕೋಟಿಗೊಬ್ಬ ಶರಣಾರು ಕುಲುಕೊಬ್ಬ ಭಕ್ತರು
ಹೊರಟರು ಬಸವಣ್ಣನ ಜೊತೆಯಲ್ಲಿ |

ಕಲ್ಯಾಣವ ಬುಟ್ಟು ಬಸವಣ್ಣ ಹೊರಟಾಗ
ಡೆಂಕಣಿಯ ಸಪ್ತ ನಿಲುಭಾರ |

ಪಯ್ಸುಕೊಂದೊಂದು ಡೆಂಕಣಿ ಹೊಡೆದವುರೆ
ಆಗ ಬಸುವಣ್ಣ ಹೊರುಟಾರು |

ದೇವರು ಬಸವಣ್ಣ ಕಲ್ಯಾಣವ ಬುಟ್ಟು
ಅವರು ಬರುತಾರೆ ಹರುಳಯ್ನ ಗುರುಮಠಕೆ |

ಬಸವಣ್ಣ ಬರೋ ದಿವ್ಸ ಹರುಳಯ್ನ ಮಠದಲ್ಲಿ
ಚಿಕ್ಕ ಬೋಜುಣದಡುಗೆ ದುಡುಗವುರೆ | ೧೮೦

ಹಿರಿಯೋರು ದೇವ್‌ಮಾನ್ರುಗೆ ಎಡೆಪಡುಸಬೇಕೆಂದು
ಕಲ್ಯಾಣಮ್ಮ ಅಡುಗೆ ಹದಮಾಡಿ |

ಕಪ್ಪೆ ಮುಟ್ಟದ ನೀರು ಅಗ್ನಿ ಮುಟ್ಟದ ಗುಂಬ
ಅದರಲ್ಲಿ ಅಡುಗೆ ಹದಗೂಡಿ |

ಕಪ್ಪೆ ಮುಟ್ಟದ ನೀರು ಅಂದ್ರೆ ಯಾವುದಂದೀರಪ್ಪ
ಎಳ್ನೀರ್ನಲ್ಲುಡುಗೆ ಹದಗೂಡಿ |

ಅಗ್ನಿಮುಟ್ಟದಗುಂಬ ಅಂದ್ರೆ ಕಲ್ಯಾಣಮ್ಮಯ್ಯ
ಹಸಿಯ ಮಡಕ್ಯಲ್ಲಿ ಅಡುಗ್ಯ ಹದಗೂಡಿ |

ಬಾಯ್ಕುಟ್ಟಾಕೊಂಡು ವಾಮಾನೇಮದಿಂದ
ಅಡುಗೆ ದುಡುಗವುರೆ ಅವ್ರು ಮಠದಲ್ಲಿ | ೧೯೦

"ಬಲ್ಲ ಹರುಳಪ್ಪೋರೆ ಆಗೋಗ್ತು ಅಡುಗೆ
ಎಡುಪಡುಸಿ ಬನ್ನಿ ಗುರುಹಿರಿಯರ್ಗೆ |

ಎಡೆಯ ಪಡುಸಿ ಬನ್ನಿ ಗುರುಹಿರಿಯರಿಗೆ" ಅನುತ್ಹೇಳಿ
ಕಲ್ಯಾಣಮ್ಮ ಹರುಳಯ್ನ ಕರಿದಾರು |

ಎಡೆಯ ಪಡುಸೋ ಗ್ಯಾನ ಹರುಳಯ್ಗೆ ಇಲ್ಲಲ್ಲ
ಇವುರು ಬರಾವಂತ ಸಾಬಾರಿಯ ನೋಡುತಾರೆ |

"ಬರುತೀದೆ ಸಾಬಾರಿ ನಮ್ಮ ದೊಡ್ಡ ಬಸವಣ್ಣೋರು
ಎತ್ತಕಡೆ ಹೋದರೊ ತಿಳಿಯಾದು |

ಇಂತ ಪ್ರಯಾಣವ ಒಂದಿನವು ಬಂದೋರಲ್ಲ
ಇಂದು ಈ ನ್ಯಾರ್ಕೆ ಬರುತಾರೆ | ೨೦೦

ಸೀದುವಾಗಿ ಬರ್ತಾರಲ್ಲ ನನ್ನ ಮಠದ ನ್ಯಾರುಕ್ಕೆ
ಏನ್ಮಾಡ್ಲಿ?" ಅಂದ ಹರುಳಯ್ಯ |

ನಮ್ಮ ಮನೆಯ ಮ್ಯಾಲೆ ಬಸವಣ್ಣ ದ್ರಿಷ್ಟಿ ಬಿದ್ರೆ
ಕೇಡ್ಗಾಲ ನನಗೆ ನಿಜ ಎಂದು |

ಒಳಗಡೆ ಹೋಗಿ ಕಲ್ಯಾಣಮ್ಮಯ್ನ ಕರ್ದು
"ಬನ್ನಿ ಕಲ್ಯಾಣಿ ನಿನ್ಗೆ ತೋರ್ತೀನಿ |

ಅಲ್ಲಿ ಬರುವ ಸಾಬಾರಿ ನಮ್ ಬಸವಣ್ಣೋರ್ದಲ್ಲವ
ಅವ್ರು ಎಲ್ಲೀಗೆ ಬಂದಾರೋ ತಿಳಿಯಾದು |

ಅವುರೆಲ್ಲಾದ್ರೂ ಹೋಗ್ಲಿ ಒಳಗಡೆ ನಡಿಯಿರಿ
ಹೊಚ್ಚೇಕು ಬಾಕ್ಲ ಕದಗಳ | ೨೧೦

ದೊಡ್ಡವರ ಕಣ್ಣಿಗೆ ಮರೆಯಾಗಿರಬೇಕೆ"ಂದು
ಹೊಚ್ಚುದುರು ಮನೆಯ ಕದುಗೊಳ |

ಕದವನ್ನೇ ಹೊಚ್ಕೊಂಡು ಒಳಗಡೆ ಸೇರ್ಕೊಂಡು
ಕಣ್ಣಾರ ಕಂಡ್ರು ನಮ್ ಬಸವಣ್ಣ |

ಕದುವನ್ನೆ ಹೊಚ್ಚಿದ್ದ ಕಂಡಾರು ಬಸುವಣ್ಣ
ಅವ್ರು - ಮೂರ್ ಮೈಲಿ ದೂರ್ದಲ್ಲಿ ಕುಳಿತಾರು |

ಕಷ್ಟಪಟ್ಟು ನಾವು ಮುಂದುಕ್ಕೋದಾರೇನ
ಹೊಚ್ಕೊಂಡ್ರು ಬಾಗ್ಲು ಕದುಗೋಳ |

ಕದ ಹೊಚ್ಚಾದ ಮೇಲೆ ನಮುಗೊರ ಸಿಕ್ಕೋದಿಲ್ಲ
ಮುಂದಕ್ಕೋದ್ರೇನು ಸುಕುವಿಲ್ಲ |

ಕದುವನ್ನೆ ಹೊಚ್ಚಿದ್ದ ಕಂಡಾರು ಬಸವಣ್ಣ
ನಮ್ಮೀರುಸಂಗಣ್ಣನ ಕರಿದಾರು |

"ನಮ್ಮುನ್ನೆ ಕಂಡುಕೊಂಡು ಕದುವನ್ನೆ ಹೊಚ್ಚುದುರಲ್ಲ
ಇನ್ನು-ದೊರಕೀದೇನಪ್ಪ ನನಗೆ ಪ್ರಾಸೋದ? |

ಬನ್ನಿ ವೀರ್‌ಸಂಗಣ್ಣ ಹೋಗಿ ಹರಳಯ್ಯ ಮನೆಗೆ
ಅವ್ನ ಮಠದ ಏಗಕ್ಷೇಮ ತಿಳಿದು ಬರಬೇಕು |

ತಿಳಿಕೊಂಡು ಬಾಪ್ಪ ವೀರಸಂಗಣ್ಣ" ಎಂದು
ದೇವಾರು ಬಸವಣ್ಣ ನುಡಿದಾರು |

ಆಗಲಿ ಬಸುವಣ್ಣ ನಾ ಹೋಗ್ತೀನಿ ಅನುತ್ಹೇಳಿ
ಬಂದಾರು ಹರುಳಯ್ಯ ಗುರುಮಠುಕೆ |

ಈರಸಂಗಣ್ಣನಿಗೆ ಇವ್ರು ಮಂಗಳಾರತಿ ಬೆಳಗಿ
ಬಂದ ಮಾತ್ಹೇಳಿ ಅಂದ ಹರುಳಯ್ಯ |

"ಅಡುಗೆ ಮಾಡಿಸ್ತೀರಲ್ಲ ಹರಳಪ್ಪನವರೆ
ನೀವು ಊಟ ಪಡೂಸೋಂತ ತೆರನ್ಹೇಳಿ" |

"ಅಡಿಗೆ ಮಾಡಿಸಿ ಬುದ್ಧಿ ನಮ್ಮಾನ್ಯರೂಟಕೆ ಕರುದು
ಭಕ್ತಿಯಿಂದ ಊಟ ಪಡುಸ್ತೀನಿ |

ಊಟ ಮಾಡುವ ಎಲೆಯ ಹೊರಗೆ ಬೀಸಾಡುದ್ರೆ
ಯಾವ-ಜಂಗುಮರ ಪಾದುಕ್ಕೆ ತಗುಲೀವೊ |

ಅವುರ ಪಾದುಕ್ಕೆ ತಗುಲಿದರೆ ನನ್ಗೆ ಪಾಪ ಬರುವುದು ಎಂದು
ಹನ್ನೆರ್ಡಾಳುದ್ದ ಕಂದ್ಕ ಮಾಡ್ಸಿವಿ |

ಊಟ ಮಾಡಿದ ಎಲೆಯ ಆ ಕಂದಕದಲ್ಲಿ ಇರಿಸಿ
ಮೇಲು ಮುಚ್ಚುಳವ ದಬ್ಬಾಕಿ |

ಇರುವೆಂಬತ್ತು ಕೋಟಿ ಒಳಗಡೆ ಹೋಗ್ತಾವೆಂದು
ಸುತ್ತ ಕೆಂಡಾವ ನಾವು ಬುಡುಸೀವಿ" |

"ಊಟದ ಎಂಜಲೆಲೆಗೆ ಇಂತೆ ಸಿಸ್ತು ಮಾಡವುನಲ್ಲ
ಸಿಕ್ಕೀದ ಇನ್ನು ಪ್ರಾಸೋದ?" |

ಹರುಳಯ್ಯಾಡಿದ ಮಾತ ಕೇಳುಕೊಂಡು ಈರಸಂಗಯ್ಯ
ನಮ್ಮ ಬಸುವಣ್ಣುಂಗ್ದೂರ ಹೇಳುತಾರೆ |

ಇಂತೇವ್ನ ಮನೆಯ ವರ ಇನ್ ಸಿಕ್ಕೋದಿಲ್ಲಾಂತ್ಹೇಳಿ
ಇವ್ರು ಶಿವುನ ಗ್ಯಾನಾವ ಮಾಡಿದರು |

"ಮಕ್ಕಳಿಲ್ಲವೆಂದು ನನಗೇಳಿದ ಪರಶಿವನೆ
ಈ ಪ್ರಾಸೋದ ದೊರಿಯಂತ ತರವ ಹೇಳಬಾರ್ದ |

ಪ್ರಾಸೋದ ದೊರಿಯೊ ತರನ ಹೇಳ್ಬಾರ್ದ ಶಿವನೆ
ಅವಿಮಾನ ಇಂದು ನನ್ಗೆ ದೊರುಕೀತು |

ನನ್ಗೆ ಅವುಮಾನವಲ್ಲ ಹೇಳ್ದೋರ್ಗೆ ಅವಿಮಾನ
ನನ್ನ ಕಾಪಾಡೂ ಭಾರ ನಿನದಪ್ಪ |

ನನ್ನ ಕಾಪಾಡುವ ಭಾರ ನಿನ್ದು ಶಿವನೆ" ಎಂದು
ಕರವೆತ್ತಿ ಕೈಯ ಮುಗಿದಾರು |

ಕರವೆತ್ತಿ ಕೈಯ ಮುಗಿದುದು ಬಸವಣ್ಣೋರು
ಬ್ಯಾಗಾನೆ ಕೈಲಾಸ್ಕೆ ಅರುವಾದೊ |

ಬ್ಯಾಗಾನೆ ಅರುವಾಯ್ತು ನಮ್ ಪರಶಿವ ಮೂರುತಿಗೆ
"ಇವುರ್ಗೆ ವರ ತಂದ್ಕೊಡುವ ತರ ಹೆಂಗ್?" |

ಶರಣ ಹರುಳಯ್ನ ಮಠುಕೆ ಯಾರು ಹೋಗದು ಸಾಧ್ಯವಿಲ್ಲ
ನಾ ಹೆಂಗೋಗ್ಲಿ ಹರಳಯ್ನ ಗುರುಮಠುಕೆ |

ನೀವೇ ಕೊಡಬೇಕ"ಂತ ಬೇಡುತಾರೆ ಬಸವಣ್ಣ
ಕೊಡದೆ ಹೋದ್ರೆ ಶಿವನೀಗೆ ಅವಿಮಾನ |

ಕೈಲಾಸದ ಒಳುಗೆ ಪರಶಿವನು ಕುಂತುಗೊಂಡು
ಸೃಷ್ಟಿ ಮಾಡಿದರು ಇರುಗೋಳ |

ಇರುಗೋಳು ಆನ್ನಾವ್ರ ಈ ಲೋಕದಲ್ಲಿರಲಿಲ್ಲ
ಆ ಪ್ರಾಸೋದ್ಕೆ ಸೃಷ್ಟಿ ಮಾಡವ್ರೆ |

ಈ ಪ್ರಾಸೋದ್ಕೆ ಇರುವ ಸೃಷ್ಟಿ ಮಾಡಿದರಂತೆ
ಯಾವ್ಯಾವ ಇರಾವ ಮಾಡಿದರು |

ಕಟ್ಟೀರ ಕಾಳೀರ ಸಣ್ಣೀರ ನುಚ್ಚಿರ
ಇಂತೆ ಪ್ರಾಣಿಗಳ ಸೃಷ್ಟಿ ಮಾಡಿದರು |

ಈ ಮಾಯದ ಇರಾಗಳುಗೆ ಸಿಕ್ಕದಿದ್ದರೆ ಕಷ್ಟ
ನಾನೇ ಬಂದಿರುವಾಗ ಹೋಗಬೇಕು |

ಇರಗಳ ಜೊತೆಯಲ್ಲಿ ಶಿವ ಸಣ್ಣೀರುವಾಗಿ
ಹೊರಡುದುರು ಹರುಳಯ್ಯ ಗುರುಮಠಕೆ |

ಇರುವಿನ ಸಾಲಿಟ್ಟು ಬಂದವಲ್ಲೊ ಸ್ವಾಮಿ
ಹರಡೀದೋ ಹರುಳಯ್ನ ಮಠದಲ್ಲಿ |

ಮೀದು ಮಡಿ ಉಟುಕೊಂಡು ಮಾನ್ಯ ಹರಳಯ್ಯ
ದೇವುತೆಗಳ್ಗೆ ಎಡೆಯ ಪಡುಸೋಗ |

ದೇವುತೆಗಳಿಗೆಡೆಯ ಪಡುಸೋ ಕಾಲದಲ್ಲಿ
ಜಾತಿಗೊಂದಿರವು ಹರಡೀತು |

"ಓಡು ಬನ್ನಿ ಕಲ್ಯಾಣ ನೋಡು ಬಾ ಕಲ್ಯಾಣ
ಎಲ್ಲಿತ್ತು ಇದುವರುಗೆ ಈ ಸಣ್ಣ ಪ್ರಾಣ |

ಇಂತ ಸಣ್ಣ ಪ್ರಾಣ್ಯ ನಾನಿದುವರಗು ಕಾಣ್ನಿಲ್ಲ
ಇದು ಶಿವಮಾಯ!" ಅಂದ ಹರುಳಯ್ಯ |

"ಚಿಕ್ಕದಾದರು ಸರಿಯೆ ದೊಡ್ಡದಾದರೂ ಸರಿಯೆ
ಪ್ರಾಣ ಎಲ್ಲ ಒಂದೆ ಅಂದ ಹರುಳಯ್ಯ |

ಸಣ್ಣ ಪ್ರಾಣಿ ಅಂದ್ರೆ ನಮ್ಮಂತ ಪ್ರಾಣಿ ಅಲ್ವ
ಅದ್ರ ಪ್ರಾಣ ಕೊಂದಾರೆ ನಮಗೆ ಮಾಪಾಪ |

ನಾವು ಹೆಚ್ಚೇಯ ಇಟ್ಟುಕೊಂಡು ಒಳಗಡೆ ತಿರುಗಿದರೆ
ನಮ್ಮ ಕಾಲೀಗೆ ತಗಲಿ ಅವು ಸಾಯ್ತುವೆ |

ಕಾಲುಗೆ ಸಿಕ್ಕಿದ ಪ್ರಾಣಿ ಪ್ರಾಣ ಬುಟ್ಟುಡತವೆ
ಮುಕ್ಕೋಟಿ ಕರ್ಮ ನಮ್ಗೆ ಬರುತೀದೆ |

ಬೊಳ್ಳಗೆ ರಜಾ ಬೆಳುಗು ಇರಾನೋಯುಸ್ಪೇಡ
ಹೊರಗಾಡೆ ತಳ್ಳು ಅಂದ ಹರುಳಯ್ಯ |

ಹರಳಪ್ಪನವರ ಮಾತ ಕೇಳಿ ಕಲ್ಯಾಣಮ್ಮ
ಮೆತ್ತಾ ಮೆತ್ತಾಗಿರುವ ತಳ್ಳುವುರೆ |

ರಜವನ್ನೆ ಬೆಳಗಿ ಹೊರಗಡೆ ತಳ್ಳುದುರು
ಅದು ತಿರುಗೆ ಬರಬಾರ್ದು ಒಳಗಾಡೆ |

ತಿರ್ಗ ಬರಬಾರ್ದು ಈ ಪ್ರಾಣಿ ಒಳಗಾಡೆ ಎಂದು
ಸುತ್ತಿ ಬೆಂಕಿ ಕೆಂಡಾವ ಹರಡಿದರು |

ಬೆಂಕಿ ಕೆಂಡ ಹರಡಿ ಎಡೆ ಪಡುಸ್ತಾರೆ ಹರುಳಪ್ಪ
ಏನಂತ ಎಡೆಯ ಪಡುಸಿದರು |

"ಸುರ ಮುನ್ನೂರು ಕೋಟಿ ದೇವತೆಗಳ ಪಾದ
ಗುರು ಹಿರಿಯವರ ಪಾದ ಸಿರುಪಾದ |

ತಂದೆ ತಾಯಿ ಪಾದ ನನ್ನ ಬಂಧುಬಳಗದ ಪಾದ
ನನ್ನ ಮತ ಕುಲುದವುರ ಶ್ರೀಪಾದ" |

ಹಾಗೆಂದು ಎಡೆಯ ಪಡ್ಸಿ ಬಾಗಲ ಮುಚ್ಚುಕೊಂಡು
ಹೊರಗಡಿಗೆ ಅವರು ಹೊರುಟಾರು |

ಬಾಗಲ ಮುಚ್ಚುಕೊಂಡು ಹೊರಗಡೆ ಕುಂತಾರಲ್ಲ
ಗಂಡ ಹೆಂಡಿರು ಬಂದು ಕುಳಿತಾರು |

ಸಣ್ಣೀರವಾಗಿದ್ದರಲ್ಲ ನನ್ಮುಕ್ಕಣ್ಣ ಶಿವನು
ಅವ್ರ ಕದೂನ ಮೂಲೇಲಿ ಕೂತಾರೆ |

"ಹೊರಗಡೆ ಹೋಗವುರೆ ಇದೆ ಒಳ್ಳೆ ಗಳಿಗೆ ಅಂತ
ತಕ್ಕೋಳಬೇಕೀಗೊಂದು ಪ್ರಾಸೋದವ |

ಸತ್ಯವಂತ ಬಸವಣ್ಣ ಊಟ ಮಾಡೋ ಪ್ರಾಸೋದ
ಇದು ತಕ್ಕೊಂಡೋಗಂತ ತೆರನೆಂಗ್ಯಾ ? |

ಕಾಲ ತಗುಲುಸ್ಬುಟ್ರೆ ಮಾಕರ್ಮ ಬರತಾದಲ್ಲ
ಇದ ಮೆಟ್ಟಿಕೊಂಡೋಗೊ ತೆರನೆಂಗ್ಯಾ |

ಎಡಿಯ ಮುಂದೆ ಕುಳಿತು ಇರ ಯೇಚನೆ ಮಾಡಿ
ಇದು ಕುಂಡೋಗೊ ತರಾವೆ ತಿಳಿಯಾದು" |

ನತ್ತೀ ಮಸ್ತಕ ಕೊಟ್ಟು, ಒತ್ತರಿಸಿ ಆ ಎಡಿಯ
ಒತ್ತುಕೊಂತು ನತ್ತೀಗೆ ಒಂದ್ಹರುಳನ್ನೆ |

ಒಂದರಳ ಪ್ರಾಸೋದ್ನ ತನ್ನೆತ್ತಿ ಮ್ಯಾಲೊತ್ತುಕೊಂಡು
ಆ ಕದುವೀನ ಮೂಲ್ಗೆ ಸೇರ್ತಲ್ಲೋ |

ಗಂಡ ಹೆಂಡಾರಿಬ್ರು ಒಳಗಡೆಗೆ ಬಂದಾರು
ಒರಿಯರಿಗೆ ಕೈಯ ಮುಗಿದಾರು | ೩೩೦

ಕೈಮುಗಿದು ನಿಂತುಕೊಂಡ್ರು ಇವುರೊಳಗಡೆ
ಹೊರಗಡೆಗೆ ಇರಾವ್ರ ಹೊರಳೀತು |

ಮುಕ್ಕಣ್ಣ ಪರಶಿವನು ಇರಾವೀನ ರೂಪದಲಿ
ಹೊತ್ತುಕೊಂಡ್ಬರುತಾನೆ ವರಾವನ್ನು |

ಹೊತ್ತುಕೊಂಡ್ಬರುತಿತ್ತು ಸತ್ಯವಂತರು ಕಂಡು
"ದೊರಕೀತಾ ನನಗೆ ಪ್ರಾಸೋದ |

ಮಕ್ಕು ಫಲದ ಪ್ರಾಸೋದ ನನಗೀವತ್ತು ಸಿಕ್ಕೀತು
ಹೆಂಗೆ ತಕ್ಕೊಳ್ಳಲಿ ಈ ವರವನ್ನ |

ವರವ ಹೊತ್ತಿರುವ ಪ್ರಾಣಿ ದಪ್ಪ ಪ್ರಾಣಿಯಲ್ಲ
ಸಣ್ಣ ಇರವಲ್ಲೊ ಜಗದೊಡಿಯ | ೩೪೦

ಕೈನಲ್ಲಿ ಮುಟ್ಟಿದರೆ ಇರು ಸತ್ತೋಗುತೀದೆ
ನಾ ಹೆಂಗೆ ಬುಡುಸಾಲಿ ಜಗದೊಡೆಯ |

ನೋಯ್ಸಿ ಬುಡುಸ್ಕೊಂಡಾರೆ ಮಕ್ಕಳಾಗೋದಿಲ್ಲ
ಇದಕ್ಕೆ ತಕ್ಕಾದ ಉಪಾಯ ಮಾಡಬೇಕು |

ಈರಸಂಗಣ್ಣನವರ ಕರುದರು ಬಸವಣ್ಣ
ನೀವೋಗ್ಬನ್ನಿ ಕಲ್ಯಾಣ್ಪ ಗುರುಮಠುಕೆ |

ಹಾಲು ಸೆಕ್ರೆಯನ್ನ ತಟ್ಟೆ ಒಳಗಿಟ್ಟು
ಬ್ಯಾಗ ನೀವೋಗಿ ತರಬೇಕು" |

ಓಡುತ್ತಾ ಬರುತಾರೆ ಈರಸಂಗಣ್ಣ
ಬಂದು ನೀಲಮ್ಮಯ್ಯಾಗೆ ತಿಳಿಸಿದರು | ೩೫೦

"ವರಾವು ಸಿಕ್ಕದೆ ತಾಯಿ ಇರಾವು ತಂದ್ಯೆತೆ
ಹಾಲು ಸಕ್ಕರೆಯ ನೀವ್ ಕೊಡಬೇಕು" |

ಹಾಲು ಸಕ್ಕರಿಯನ್ನ ತಟ್ಟೆ ಒಳುಗೆ ಇಂಬಿಟ್ಟು
ಬೇಗ ಕೊಟ್ಟು ತಾಯಿ ಕಳುಗಿದರು |

ತಂದು ಒಪ್ಸಿದರಂತೆ ನಂ ಬಸವಣ್ಣನವರಿಗೆ
ಈರಸಂಗಣ್ಣ ಕರುವ ಮುಗಿದಾರು |

ತಟ್ಟೆ ಕೈಯಲ್ಲಿಡಿದು ದೇವರು ಬಸವಣ್ಣ
ಹರಹರ ಅನುತ್ಹೇಳಿ ಧರೆಗೆ ಮಡುಗಿದರು |

ಹಾಲು ಸಕ್ಕರೆಯ ತಂದು ಧರೆಯ ಮ್ಯಾಲೆ ಮಡಗಿ
ಗುರುಗ್ಯಾನ ಮಾಡಿದರು ಬಸವಣ್ಣ | ೩೬೦

ಗುರುಗ್ಯಾನದ ಒಳುಗೆ ನನ ಬಸವಣ್ಣ ಕುಳಿತಾಗ
ಮಾಯದ ಇರುವು ನೋಡೀತು |

ಹಾಲು ಸಕ್ಕರೆಯಿಟ್ಟು ನಿಂದಾರೆ ಬಸವಣ್ಣ
ಎಲ್ಲಿಗೊರುವ ನಾನು ಬಿಡುಬೇಕು |

ಹತ್ತುರಕೆ ಬರಾದೆ ಹೊತ್ತೀದೆ ಪ್ರಾಸೋದವ
ಇದೇನೊ ಕಾಣೆ ಅಂದ ಬಸವಣ್ಣ |

ತಲೆ ಮ್ಯಾಲೆ ಕಟ್ಟಿರುವ ಅಪರಂಜಿ ಪೇಟ ಕಳೆದು
ಹಾಸಿದರು ಧರೆಗೆ ಬಸುವಣ್ಣ |

ಹೊತ್ತುಕೊಂಡು ಬಂತು ಪೇಟುಕ್ಕೆ ಪ್ರಾಸೋದ್ನ
ಈ ಮುಕುಟದ ಮೇಲೆ ಬಿಡುತಿದೆ | ೩೭೦

ಪಟ್ಟೆ ಮುಕುಟದ ಮೇಲೆ ಬಿಟ್ಟು ಬಿಟ್ಟು ಪ್ರಾಸೋದವ
ಹಾಲು ಸೆಕ್ಕರಿಗೆ ಎರುಗೀತು |

ಇಂದು ಸಿಕ್ಕೀತು ನನಗೆ ಅಂದವುಳ್ಳ ಪ್ರಾಸೋದ ಎಂದು
ಹೂಡಿದರು ಹತ್ತು ಬೆರಳನ್ನೆ |

ಹತ್ತು ಬೆರಳೂಡಿದರು ಎತ್ತುಕೊಂಡ್ರು ಮಕುಟವ
ಕಟ್ಟಿದರು ಪಂಚೈದು ಗಂಟುಗಳ |

ಐದು ಗಂಟ ಹೂಡಿ ಪೊಟ್ಟಣವ ಕಟ್ಟಿ
ಒತ್ತುಕೊಂಡರು ಎರಡು ನೈನಕ್ಕೆ |

ಕಣ್ಣು ಮೂಗಿಗೆ ಒತ್ತುಕೊಂಡು ಪ್ರಾಸೋದವ
ಅವುರು ಹೊರಟಾರು ಕಲ್ಯಾಣದ ಗುರುಮಠಕೆ |

ಒಳ್ಳೆಯ ಗಳಿಗೇಲಿ ಅಮುರ್ತದ ಗಳುಗೇಲಿ
ಹೊಕ್ಕುದುರು ಕಲ್ಯಾಣ್ದ ಗುರುಮಠುವ |

ಪ್ರಾಸೋದದ ಗಂಟ ತಂದು ಬಸವಣ್ಣೋರು
ಉರಿಯ ಗದ್ದುಗೆ ಮ್ಯಾಲೆ ಇರುಸಿದರು |

ಉರಿಯ ಗದ್ದುಗೆ ಮೇಲೆ ಇರುಸ್ಬುಟ್ಟು ಬಸವಣ್ಣ
ಸರಣೆ ನೀಲಮ್ಮನ ಕರಸಿದರು |

ಬಂದರು ನೀಲಮ್ಮ ನಿಂದಾರು ಅವರೆದುರಾಗಿ
ದೊರಕೀತ ಬುದ್ಧಿ ಪ್ರಾಸೋದ |

ಸಿಕ್ಕೀದೆ ಪ್ರಾಸೋದ ಕೇಳು ನೀಲಮ್ಮಯ್ಯ
ಇದೂಟ ಮಾಡೋಂತ ತರವ್ಯೆಂಗ್ಯ |

ಮಕ್ಕು ಫಲದ ಪ್ರಾಸೋದ್ವ, ಗಂಡಹೆಂಡಿರು ಸಲುಸ್ಬೇಕು
ಜಪತಪವ ಮಾಡಿ ಬರಬೇಕು |

ಜಪತಪವ ಮಾಡಿ ಈ ವರವನ್ನ ಸಲುಸಿದರೆ
ಅಯ್ತದೆ ನಮಗೆ ಸ್ಯಾಂತಾನ |

ಲಿಂಗ ಪೂಜೆ ಮಾಡಿ ಈ ವರವನ್ನೆ ಸಲ್ಲುಸಿದರೆ
ನಮ್ಮ ಭಂಗಾ ಕಳಿಯೇ ಮಕ್ಕು ಹುಟ್ಟುತ್ತಾರೆ |

ಇಲ್ಲೆಲ್ಲೂ ಜಪತಪವ ನಾವ್ ಮಾಡಕ್ಕಾಗೊದಿಲ್ಲ
ಚಿತ್ರಕಲ್ ದುರ್ಗಕ್ಕೆ ನಾವ್ಹೋಗಬೇಕು |

ಚಿತ್ರಕಲ್ ದುರ್ಗದಲ್ಲಿ ವಾಮ ನೇಮದೊಳಗೆ
ನಮ ಜಪತಪವ ಮಾಡಿ ಬರುಬೇಕು |

ಕಲ್ಯಾಣ ಬುಟ್ಟುಬಿಟ್ಟಿ ನಾವಿಬ್ರು ಹೊಂಟೋದಾರೆ
ಇಲ್ಲಿಗೊಡಕರ್ತರ್ಯಾರಪ್ಪ ಬಸುವೇಶ |

ಅಕ್ಕನಾಗಮ್ಮಯ್ಯ ನೀರಿನ ಬೋರಮ್ಮ
ದೀಪಾದ ಮಲ್ಲಮ್ಮ ಕರುಸಿದರು |

ಕೊಟ್ಟಣದ ನನ್ನಮ್ಮ ಎಣ್ಣೇಯ ಚನ್ನಮ್ಮ
ಸೂಳೆ ಪುಟ್ಟಕ್ಕನ ಕರಸಿದರು |

ಚಿತ್ರಕಲ್ ದುರ್ಗಕ್ಕೆ ನಾವ್ಹೋಗಿದ್ದು ಬರ್ತಿವ್ರಮ್ಮ
ಜ್ಯಾಕೆ ಕಣ್ರಮ್ಮ ಗುರುಮಠ |

ತಿಳುವಳಿಕೆ ಇಲ್ಲದೋಳ್ ನನ್ನಕ್ಕನಾಗಮ್ಮಯ್ಯ
ಅವ್ಳ ಜೊತೆಯಲ್ಲಿ ನೀವು ಇರುಬೇಕು |

ಊಳ್ಗುದವರ ಕರ್ಬು ಬಾಗಲಲ್ಲಿ ಪಾರ ಇಟ್ಟು
ಸ್ವಾಮಿ ಜಂಗಮರ ಕರುಕೊಂಡು ಹೊರಟರು |

ಚಿತ್ರಕಲ್ ದುರ್ಗಕೆ ಹೊರಟೋದರು ಬಸವಣ್ಣ
ಜೊತೆಯಲ್ಲಿ ನೀಲಮ್ಮ ಹೊರುಟಾರು |

ಗಂಡ ಹೆಂಡಾರು ಹೋಗಿ ಅಲ್ಲಿ ಜಪತಪವ ಮಾಡಾಗ
ಮಠದಲ್ಲಿ ಕುಂತಾಳೆ ನಾಗಮ್ಮ |

ಮಠದಲ್ಲಿ ಕುಂತಿರುವಂತ ನಾಗಮ್ಮದೇವಿಗೆ
ಆಗೊಂದು ಗ್ಯಾನ ಬರುತಲ್ಲ |

ಆಗೊಂದು ಗ್ಯಾನ ಬರುತಲ್ಲ ಅವಳೀಗೆ
"ನಾ ಸುಂಗಾರ ಮಾಡಬೇಕು ಗುರುಮಠುವ |

ಅಣ್ಣಯ್ಯ ಅತುಗಮ್ಮ ಮೀಯಾಣ ಮಾಡುಕೊಂಡು
ಮಠಕೆ ಬರೋಣತನಕ ನನಗೇನು ಕೆಲಸ ? |

ಮಠಕೆ ಬರೋಣತನಕ ನನಗೇನು ಕೆಲಸ ? ಅಂತ
ನಾಗಮ್ಮ ಯೋಚಣೆಯ ಮಾಡವ್ಳೆ |

ಮುತ್ತಿನಿಡಾಗಲ ತಗುದು ನನ್ ಮುತ್ತೈದೆ ನಾಗಮ್ಮ
ಮುತ್ತುನ್ ಚಂದುರ ಸಾಲ್ಕ ರಜಹೊಡಿದೆ |

ಮುತ್ತುನ್ ಚಂದುರಸಾಲ್ಕ ರಜಹೊಡಿಯೊ ನಾಗಮ್ಮಗೆ
ಇಲ್ಲಿ ಮಡಗಿರುವ ಪರಸಾದ ಕಂಡಾದೆ |

ಇಲ್ಲಿ ಮಡಗಿರುವ ಪರಸಾದ ಕಂಡಾಗ ಪರಶಿವನೆ
ಹೊಡೆದೀತು ಗಂಧ ಪರಿಮಳದ ಹೊಸಗಮನ |

ಹವಳದ ದಿಡ್ಡಾಗಲ ತಗುದು ನನ್ನರದಿ ನಾಗಮ್ಮಯ್ಯ
ಹವಳದ ಗುರುಮಠದ ರಜ ಬೆಳಗಿ |

ಹವಳದ ಗುರುಮಠದ ರಜ ಬೆಳಗೊ ನಾಗಮ್ಮುಗೆ
ಕೆಂಡ ಸಂಪಿಗೆ ಹೊಸಗಮನ |

ಒಂದೊಂದು ಗುರುಮಠುಕೋದರೆ ಒಂದೊಂದು
ಹೊಸಗಮನ
ಇದೇನೋ ಕಾಣ್ಸವ್ವ ಐಚೋದ್ಯ |

ಈಬುತ್ತಿ ಗುರುಮಠದ ರಜವನ್ನೆ ಬೆಳುಗೋಗ
ಒಂದು ಪಚ್ಚೆ ತೆನಿಯ ಹೊಸಾಗಮನ |

ಹೋದೋದ ಕಡೆಯೆಲ್ಲ ಒಂದೊಂದು ಗಮನವಲ್ಲ
ಇದೇನವ್ವ ಈ ಗಮನ ತಿಳಿಯಾದು | ೪೪೦

ಏನವ್ವ ಈ ಗಮನ ತಿಳಿಯಾದಂತ ನಾಗಮ್ಮ
ಉರಿಯಾಗದ್ದುಗೆ ಒಳುಗೆ ತೆರಳೀದ |

ಉರಿಯಾಗದ್ದುಗೆ ಒಳುಗೆ ಬಂದು ನಾಗಮ್ಮಯ್ಯ
ನಿಂದು ನೋಡವ್ವೆ ಘನಗರುತಿ |

ಅಂತು ನೋಡಿದಳಲ್ಲ ನನ್ನಕ್ಕ ನಾಗಮ್ಮಯ್ಯ
ಅಲ್ಲಿ-ಚಂದಿ ಮುಗುಟಾದ ಹೊಸುಗಂಟು |

ಅಲ್ಲಿ ಮಡಗಿರುವ ಗಂಟ ಕಂಡಾರು ನಾಗಮ್ಮ
ಇಲ್ಲಿ ಮಡುಗಿರೋದುನ ನನ್ಗೆ ತಿಳಿಯಾದು |

ಹತ್ತು ಕಟ್ಯೋರಲ್ಲ ಮುತ್ತು ಕಟ್ಯೋರಲ್ಲ
ಮುತ್ತು ಬಂಗಾರ್ದ ಗಂಟು ಇದು ಅಲ್ಲ | ೪೫೦

ಚಿನ್ನ ಕಟ್ಯೋವರಲ್ಲ ನಮ್ಮಣ್ಣ ಬೆರಳಿ ಕಟ್ಯೋರಲ್ಲ
ಬೆರಳಿ ಬಂಗಾರ ಇದು ಅಲ್ಲ |

ದುಡ್ಡು ಕಟ್ಯೋರಲ್ಲ ದುಗ್ಗಾಣಿ ಕಟ್ಯೋರಲ್ಲ
ದುಡ್ಡೀನ ಗಂಟು ಇದು ಅಲ್ಲ |

ಎಂದು ಇಲ್ಲದ ಗಂಟ ಇಂದ್ಯಾರು ಮಡಗಿದರೆಂದು
ಹೂಡಿದ ಹತ್ತು ಬೆರಳನ್ನೆ |

ಹತ್ತು ಬೆರಳು ಹೂಡಿ ಗಂಟನ್ನೆ ಇಳುಕಿದರು
ಬಿಚ್ಚೀದ ತಾಯಿ ಹತ್ತು ಬೆರಳಲ್ಲಿ |

ಬಿಚ್ಚಿ ನೋಡಿದರಂತೆ ಅಕ್ಕ ನಾಗಮ್ಮಯ್ಯ
ಒಳಗಿತ್ತು ಒಂದ್ ನವಣಕ್ಕಿ ಪ್ರಾಸೋದ | ೪೬೦

ಒಂದೇ ಒಂದು ಹರಳು ಒಳಗಿತ್ತು ಪ್ರಾಸೋದ
ಮೂರು ಗಾವುದಕ್ಕೆ ಗಮನ ನಿಲುಭಾರ |

ಪ್ರಾಸೋದದಾಗಮನ ಕಂಡುಕೊಂಡ ನಾಗಮ್ಮ
"ಇದ್ಯಾರ ಮನೆ ಪ್ರಾಸೋದ ತಿಳಿಯಾದು |

ಸತ್ಯುವಂತರ ಮಠುಕೆ ನೆನ್ನೆ ಹೋಗಿದ್ದರು
ಅಲ್ಲಿಂದ ಎಡೆಯ ತಂದಿರಬಹುದು |

ಒಂದೀಗುಟ್ಟಿದೊಡಹುಟ್ಟು ಒಬ್ಬಾಳೆ ಎನುತ್ತೇಳಿ
ನನ್ಗೆ ತಂದು ನಮ್ಮಣ್ಣಯ್ಯ ಮಡುಗವ್ವುರೆ |

ಒಂದುಗುಟ್ಟಿದ ತಂಗಿಗೆ ತಂದು ಮಡುಗವ್ವುರೆ
ಎಂತಾ ಪ್ರೇಮ ಅವರ್ಗಿರಬಹುದು | ೪೭೦

ನನ್ನ ಮ್ಯಾಗಲ ಪ್ರೇಮ ಇನ್ಯಾರ್ಮೇಲೂ ಇಟ್ಟಿಲ್ಲ
ಅಂತೇವ್ರು ನನ್ನ ಒಡಹುಟ್ಟು |

ಒಡಹುಟ್ಟು ಎಂದಾರೆ ಎಲ್ಲ ಒಡಹುಟ್ಟಿಲ್ಲ
ಸತ್ಯವಂತ್ಯಾರು ಬಸವಣ್ಣ |

ಸ್ನಾನಕ್ಕೆ ಹೋಗಾಗ ಹೇಳಿ ಹೋಗಾನಿಲ್ಲ
ಮರುತವ್ವುರೆ ನಮ್ಮ ಅಣ್ಣಯ್ಯ |

ಮರ್ತು ಬಿಟ್ಯೋಗವ್ವುರೆ ಅಣ್ಣಯ್ಯ" ಎನುತ್ತೇಳಿ
ಚೆನ್ನೆ ನಾಗಮ್ಮ ನೆನುಕೊಂಡು |

"ನಮ್ಮಣ್ಣ ಬಾಹತನಕ ನಾ ಸ್ನಾನ ಮಾಡ್ಕೊಂಡು ಬಂದು
ಸಲುಸ್ಬೇಕು ಇಂದು ಪ್ರಾಸೋದವ | ೪೮೦

ಯಾರ ಕವಲ ಮಡುಗ್ಲಿ ಕಲ್ಯಾಣದಲ್ಲಿ?" ಎನುತ್ತೇಳಿ
ಮಾತೀನ್ಹಂಸಾವ ಕರಿದಾಳು |

ಮಾತೀನ್ಹಂಸಾ ಕರ್ದು ನನ್ ನೂತನದ ನಾಗಮ್ಮ
ಕವಲಿಟ್ಟ ಗುರುಮಠದಲ್ಲಿ |

"ಈಬುತ್ತಿ ಕೊಳಕೋಗಿ ನಾ ಈಗಲೆ ಬರುತೀನಿ
ಜ್ಞಾಕೆ ಕಾಣ್ಸವ್ವ ಗುರುಮಠ" |

ಮಡೀಯ ಸೀರೆ ತಗ್ದು ವಜ್ರಾಣಿ ಕೈಯಲ್ಲಿಡಿದು
ಈಬುತ್ತಿ ಕೊಳುಕೆ ಹೊರಟಾಳು |

ಸತ್ಯವಂತರ ಮನೆಯ ಮಾ ಪ್ರಾಸೋದವ
ಜಪತಪವ ಮಾಡಿ ಸಲುಸ್ಬೇಕು |

ಹಾಗೆಂದು ಬಂದ ತಾಯಿ ಕೊಳದಲ್ಲಿ ಮುಳುಗಿ ಎದ್ದು
ಅಂತಾದ ಮೇಲೆ ಕುಳಿತಾಳು |

ಕೊಳದ ಹಂತದ ಮೇಲೆ ಕುಳಿತುಕೊಂಡು ನಾಗಮ್ಮ
ಶಿವಲಿಂಗ ಬಿಚ್ಚವುಳೆ ನಾಗಮ್ಮ |

ಲಿಂಗವ ತಗುದಾ ತನ್ನಂಗೈಲಿ ಇಟ್ಟುಕೊಂಡು
ಆ ಲಿಂಗೈಗೆ ಆಗಣಿಯ ಎರಿದಾಳು |

ಲಿಂಗುಕ್ಕಾಗಣಿ ಎರದು ಈಬುತ್ತಿ ಧಾರಣೆ ಮಾಡಿ
ಆ ಲಿಂಗೈಗೆ ಪುಷ್ಪ ಕರೆದಾಳು |

"ತೋಟದಲ್ಲುಟ್ಟುವುಳೆ ತೋಟದಲ್ಲಿ ಬೆಳಿಯವ್ಳೆ
ಗಂಡನಿಲ್ಲದ ಬಾಲೆ ಎಳೆಬಸುರಿ |

ಗಂಡನಿಲ್ಲದ ಬಾಲೆ ಎಳೆಬಸುರಿ ಚೆಂಡ್ಮಲ್ಲೀಗೆ
ನೀ ಬಂದು ಲಿಂಗೈಗೆ ಎಡೆಯಾಗು |

ತೋಟದಲ್ಲಿ ಹುಟ್ಟುವುಳೆ ನೀ ತೋಟದಲ್ಲಿ ಬೆಳೆಯಾಳೆ
ಎಪ್ಪತ್ತು ಏಳು ನೆರಿಯವುಳೆ |

ಎಪ್ಪತ್ತು ಏಳು ನೆರಿಯವುಳೆ ಸ್ಯಾಮಂತುಗೆ
ಬಂದು ಲಿಂಗಯ್ಗೆ ಎಡೆಯಾಗು |

ಊರಾ ಮುಂದುಟ್ಟುವುಳೆ ಊರಾ ಮುಂದೆ ಬೆಳೆಯೋಳೆ
ನೀ ಜಂಗುಮರ ಸಭೆಯಲ್ಲಿ ಮೆರಿಯವುಳೆ |

ನೀ ಜಂಗುಮರ ಸಭೆಯಲ್ಲಿ ಮೆರಿವಂತೆ ಬಿಲ್ಪತ್ರೆ
ಬಂದು ಲಿಂಗಕ್ಕೆ ಎಡೆಯಾಗು |

ತೋಟದಲ್ಲಿ ಹುಟ್ಟವುಳೆ ತೋಟದಲ್ಲಿ ಬೆಳಿಯೋಳೆ
ಆಕಾಸ್ಕೆ ಬಾಯಿ ತೆರಿಯೋಳೆ |

ಆಕಾಸ್ಕೆ ಬಾಯಿ ತೆರಿಯೊಂತ ಅಂತರಮಲ್ಗೆ
ನೀ ಬಂದು ಲಿಂಗೈಗೆ ಎಡಿಯಾಗು |

ನೀರೊಳಗೆ ಹುಟ್ಟೋಳೆ ನೀರುನೊಳಗೆ ಬೆಳಿಯೋಳೆ
ನೀರ್ನೆಲ್ಲ ಚಾರಿ ತಿರುಗವುಳೆ |

ನೀರ್ನೆಲ್ಲ ಚಾರಿ ತಿರುಗುವಂತ ತಾವರೆ ಹೂವೆ
ನೀ ಬಂದು ಲಿಂಗಯ್ಗೆ ಎಡೆಯಾಗು |

ಸಂದೆಲ್ಲಾದರ ಮಾಡಿ ಮುಸ್ಸಂದ್ಗೆ ಮುಟ್ಟಾಗಿ
ನೀ ಬೆಳಗಾನ ಮಗನ ಪಡಿಯೋಳೆ |

ಬೆಳಗಾನ ಮಗನ ಪಡೆವಂತೆ ನಿಚ್ಚೆಗಣಗ್ಲೆ ಹೂವೆ
ನೀ ಬಂದು ಲಿಂಗಯ್ಗೆ ಎಡೆಯಾಗು |

ಓಣಿ ಒಳುಗ್ಗುಟ್ಟವುಳೆ ಬೇಲಿ ಮೇಲ್ಪಬ್ಬುವುಳೆ
ಸತ್ಯಂತರ ಸೆರಗ ಹಿಡಿಯೋಳೆ |

ಸತ್ಯ ಸರಣರ ಸೆರಗ ಹಿಡಿಯೊ ಉತ್ರಾಣಿ ಪತ್ರೆ
ಮತ್ತು ಲಿಂಗಕೆ ಬರಬೇಕು |

ಆತಾಳ ಪ್ಯಾತಾಳ ಪ್ಯಾತಾಳ ಕಂಚಾಳ
ಆ ಕಂಚಾಳದೂವ ಕರಿದಾಳು |

ಹಿತ್ತಾಲಲ್ಲುಟ್ಟವುಳೆ ಹಿತ್ತಲಲ್ ಬೆಳಿಯೋಳೆ
ನಿಜಗೆಂಪುನ ಜಾಣೆ ಶಿವಶರಣೆ |

ನಿಜಗೆಂಪುನ ಜಾಣೆ ಶಿವಸರಣೆ ಪನ್ನೀರಮಲ್ಗೆ
ನೀ ಬಂದು ಲಿಂಗೈಗೆ ಎಡಿಯಾಗು |

ಎಲ್ಲರ್ನು ಕರಿಯಾದರೆ ಇಲ್ಯಾಳ ಹೊತ್ತಾಯ್ತದೆ
ಎಲ್ಲ ಬನ್ನಿ ನನ್ನ ಶಿವಶರಣೆ |

ಬರದೆ ಹೋದ ಪುಷ್ಪಕೆ ನಾ ಸಾಪ ಕೊಡುತೇನಿ" ಎಂದು
ಚೆನ್ನೆ ನಾಗಮ್ಮ ನುಡಿದಾಳು |

"ಕೆಂಡದ ಮೇಲ್ಕಡಗಿದರೆ ಈ ಭೂಮಂಡಲ್ಕೆ ತುಳುಕವುಳೆ
ಸೆಟ್ಟರಂಗ್ಡಿಲಿ ಮೆರಿಯೋಳೆ |

ಸೆಟ್ಟರಂಗ್ಡಿ ಒಳಗೆ ಮೆರಿಯವಂತ್ತೆ ಕೆಂಡ್ಸಾಮ್ರಾಣಿ
ಬಂದು ಅಂಗೈಗೆ ಎಡೆಯಾಗು |

ಎಣ್ಣೆಲ್ಲ ಬತ್ತಿಲ್ಲ ಬೋ ಸೊಗಸಾಗಿ ಉರಿಯುವುಳೆ
ಹಚ್ಚೆ ಬೆಳುಪಿನ ಜಾಣೆ ಪತುವಾರ್ತಿ |

ಸರಣರಿಗೆ ಬೇಕಾದ ಪತುವಾರ್ತಿ ಕರ್ಪೂರ
ಬಂದು ಲಿಂಗೈಗೆ ಆರತಿಯಾಗು" |

ಮಂಗ್ಯಾರ್ತಿ ಬೆಳಗಿದರು ಸಾಮ್ರಾಣಿ ಬೆಳುಗಿದರು
ಮುಚ್ಚುಕೊಂಡಾಳು ಶಿವಲಿಂಗಾವ |

ಎಲ್ಲಾ ಜಾತಿ ಬಂತು ಲಿಂಗುಕ್ಕೆ ಎಡೆಯಾಯ್ತು
ಕಡೆಯಲ್ಲಿ ಬಂತು ತಾಳೆಹೂವು |

"ನನ್ನ ಪೂಜೆ ತೀರುದ ಮ್ಯಾಲೆ ಬಂದೆ ತಾಳೇಹೂವೆ
ನೀ ಸತ್ಯವಂತರಿಗೆ ಸಲುಬ್ಯಾಡ | ೫೫೦

ಸತ್ಯವಂತರುಗೆ ಸಲುಬ್ಯಾಡ ತಾಳೆ ಹೂವೆ
ನೀ ಕತ್ತೆ ಲದ್ಯಾಗಿ ಬೆಳೆ ಹೋಗು |

ಕತ್ತೆ ಲದ್ದಿಯಾಗಿ ಬೆಳೆ ಹೋಗು ತಾಳೆಹೂವೆ
ನಿನ್ನ ಮುಡುದೋರ್ಗೆ ಮೂರ್ತಿಂಗ ತಲೆನೋವು |

ಮುಡಿದೋರ್ಗೆ ಮೂರ್ತಿಂಗ ತಲೆನೋವು ಬರಲಿ
ನೀ ಬ್ಯಾಮಾರ ಬೀದೀಲಿ ಮೆರಿಹೋಗು |

ಬ್ಯಾಮಾರ ಬೀದೀಲಿ ಮೆರಿ ಹೋಗು" ಎಂದ ತಾಯಿ
ತಾಳೇಗೆ ಸಾಪ ಕೊಡುತಾಳೆ |

ಎಲ್ಲ ಜಾತಿ ಬಂತು ಲಿಂಗಕ್ಕೆ ಎಡೆಯಾಯ್ತು
ಕಟ್ಟಕಡೆಯಲಿ ಬಂತು ಉಮ್ಮತ್ತದೂವು | ೫೬೦

ಕಟ್ಟ ಕಡೆಯಲ್ಲಿ ಬಂದ ಹಾಳು ಉಮ್ಮತ್ತದೂವೆ
ನೀ ತಿಪ್ಪೇಗುಂಡೀಲಿ ಬೆಳಿಹೋಗು |

ತಿಪ್ಪೆಗುಂಡೀಲಿ ಬೆಳಿ ಹೋಗು ಉಮ್ಮತ್ತದೂವೆ
ನೀ ಆಡ ಮಕ್ಕಳ ಕೈಲಿ ಮೆರಿ ಹೋಗು |

ಆಡ ಮಕ್ಕಳ ಕೈಲಿ ನೀ ಮೆರಿ ಹೋಗು ಅನ್ನುತ್ತೇಳಿ
ತಾಯಿ ಉಮ್ಮತ್ತುದೂಗೆ ಸಾಪ ಕೊಡುತಾಳೆ |

ಎಲ್ಲ ಜಾತಿ ಬಂತಾ ಲಿಂಗಕ್ಕೆ ಎಡೆಯಾಯ್ತು
ಕಡಗಾಲ್ವಲ್ಲಿ ಬಂತು ಎಕ್ಕದೂವು |

ನನ್ ಪೂಜೆ ತೀರಾದ ಮ್ಯಾಲೆ ಬಂದ್ಯ ಎಕ್ಕದ ಹೂವೆ
ನೀ ಎಕ್ಕುಟ್ಟಿದ ಬಾಗ್ಲಲ್ಲಿ ಬೆಳಿಹೋಗು | ೫೭೦

ಬ್ಯಾಡಿ ಬ್ಯಾಡಿ ತಾಯಿ ನೀವು ಸಾಪಗಳ ಕೊಡಬ್ಯಾಡಿ
ಹೆಂಗಾರು ಮಾಡಿ ಸಲುಸ್ಕೇಳಿ |

ಬ್ಯಾಡ ಅಂದರು ನನಗೆ ಉತ್ತರ ಹೇಳಕೆ ಬಂದ್ಯ
ನಿನ್ನ ಮೈಯಲಿ ಹಾಲು ಸುರಿಯಲೀ |

"ಮುಟ್ಟು ಮುಟ್ಟುದ ಜಾಗ್ಯೆಲ್ಲ ಹಾಲು ಸುರಿಯಲಿ ನಿನಿಗೆ
ನೀ ಪಂಡಿತ್ತುಗ್ಳೇಕಾಗಿ ಇರುವೋಗು" |

ಲಿಂಗಕ್ಕೆ ಧರಾಸುದರು ಜಂಬೂಕಾಂತಿ ಹೂವ
ಲೆಕ್ಕವಿಲ್ಲಾದ ಲಕ್ಷಪತ್ರ್ಯ |

ಸುತ್ತಾ ಧರಾಸಿದರು ಸುರಹೊನ್ನ ಪಾರಿಜಾತ್ಯವ
ಮೂರ್ ಗಾವುದಕೆ ಗಮನ ನಿಲುಭಾರ | ೫೮೦

"ಜಪಗಳ ಮಾಡ್ಕೊಂಡು ನಮ್ಮಣ್ಣ ಬರೊ ಹೊತ್ತಾಯ್ತು
ಬೇಗ ಹೋಗಿ ಸಲುಸ್ಬೇಕು ಪ್ರಾಸೋದವ" |

ಈಬುತ್ತಿ ಕೊಳಬುಟ್ಟು ಪುಟ್ಟಪಾದ ಮಡುಗುತ
ಬಂದ ಕಲ್ಯಾಣ್ದ ಗುರು ಮಠುಕೆ |

ಅವುರಾಗೋಸ್ಕರವಾಗಿ ಅವುರು ತಂದಿದ್ದರಲ್ಲಿ
ತಾಯಿ ತನ್ಗೆ ತಂದವ್ರಂತ ತಿಳುಕೊಂಡ |

ನನಗೆ ತಂದವ್ರೆ ನನ್ನಣ್ಣ ಎನುತ್ತೇಳಿ
ಇಳುಕಿದರು ಚಿಂದಿ ಮುಗುಟಾವ |

ಮುಗಟ್ಟಲಿ ಕಟ್ಟಿರುವ ಪ್ರಾಸೋದ ಬಿಚ್ಚುಕೊಂಡ
ಸತ್ಯವಂತಾರ ನೆನುಕೊಂಡು | ೫೯೦

"ಕಲ್ಯಾಣಕ್ಕೆ ಸರಣು ಕೈಲಾಸಕ್ಕೆ ಸರಣು
ನಮ್ಮ ತಂದೆ ತಾಯ್ಗಳಿಗೆ ಸರಣೆಂದ |

ತಂದೆ ತಾಯ್ಗಳ ಪಾದ ನನ್ನೊಂದುಗುಟಿದವ್ರ ಪಾದ
ನನ್ನತ್ತೀಗೆ ನೀಲಮ್ಮ ನಿನ್ ಶ್ರೀಪಾದ |

ನಮ್ಮಣ್ಣನಿಗೆ ಒಲುದಿರುವ ಹರುಳಯ್ಯ ನಿನುಪಾದ"
ದೇವು ಮಾನವರ ನೆನಿದಾಳು |

ದೇವ ಮಾನುವರ್ನೆಲ್ಲ ನೆನುಕೊಂಡ ನಾಗಮ್ಮ
ಆ ಪ್ರಾಸೋದವ ತಾಯಿ ಸಲುಸೀದ |

ಯಾವಾಗ ನಾಗಮ್ಮ ಈ ಪ್ರಾಸೋದ ಸಲುಸಿದಳೊ
ಕಲ್ಯಾಣ ಕೆಡುವ ದಿನ ಬಂತು | ೬೦೦

ಕಲ್ಯಾಣ ಕಡೆ ಬಾಗ್ಲಲ್ಲಿ ನಾಲಿಗಿಲ್ಲದ ಗಂಟೆ
ಅದು ಲಾದಾಯ್ತು ದೊಡ್ಡವರ ಮಠದಲ್ಲಿ |

ಸಾಸಣದ ಗಂಟೆ ಇದ ಲಾದಾದ ಕಾಲಕ್ಕೆ
ಕೆಡುತ್ಯತೆ ನಿಮ್ಮ ಗುರುಮಠ |

ಹಾಗೆಂದು ಹರುಳಯ್ಯ ಕಟ್ಟಿದ್ರು ಕಡೆ ಬಾಗ್ಲಲ್ಲಿ
ಅದು ಮೂರು ಲಾದು ಗಂಟೆ ನುಡಿದೀತು |

ಧಣಿ ಧಣಿ ಎನ್ನುತ್ಹೇಳಿ ಮೊಳುಗೀತು ಕಲ್ಯಾಣ
ಚಿತ್ರಕಲ್ ದುರುಗಕ್ಕೆ ಅರುವಾದೊ |

ಮೀಯಣ ಮಾಡಿ ಗುರುವು ಲಿಂಗು ಪೂಜೆ ಮಾಡೋಗ
ಈ ಗಂಟೆಲಾದು ಕೆನ್ನೆಗೆ ಬಡಿದಂಗೆ | ೬೧೦

ಬಸವಣ್ಣನ ಕೆನ್ನೆಗೆ ಬಡುದಂಗೆ ಲಾದಾಯ್ತು
ಚಿಂತೆ ಮಾಡಿದರು ಬಸವಣ್ಣ |

"ಎಂದೂ ಆಗದ ಗಂಟೆ ಇಂದು ಲಾದಾಯ್ತು ನೀಲಮ್ಮ
ಏನೋ ಹೊಸುನಡುತೆ ನಮ್ಮಠದಲ್ಲಿ |

ತಿಳುವಳಿಕಿಲ್ಲದ ತಂಗ್ಯ ಬಿಟ್ಟು ನಾವು ಬಂದೊ
ಏನೊ ಕಾರಣ ನಮಗೆ ತಿಳಿಯಾದೊ |

ನಾಗಮ್ಮ ಮಾಡುದರಲ್ಲಿ ಕಟ್ಟು ಲಿಂಗದ ಪೂಜ್ಯ
ಹಂಗೆ ಮಾಡಿದರು ಬಸವಣ್ಣ |

ಜಾಜಿ ಹೂವ್ಗಳ ಧರಿಸಿ ಶಿವಲಿಂಗ ಪೂಜೆಮಾಡಿ
ಬ್ಯಾಗ ನೀಲಮ್ಮ ಹೋಗುಬೇಕು | ೬೨೦

ಬ್ಯಾಗದಲ್ಲೋಗಬೇಕು ನಾವು ನೋಡಬೇಕು ಕಲ್ಯಾಣವ
ಈ ಗಂಟೆಲಾದ ನಮಗೆ ಅನುಮನ್ಸು" |

ಆನೆ ಅಂಬಾರಿಯ ಏರಿದರು ಬಸವಣ್ಣ
ಅವ್ರು ಹೊರಟಾರು ಕಲ್ಯಾಣ್ಣ ಗುರುಮಠಕೆ |

ಜಂಗುಮರ ಸ್ಕೆತುವಾಗಿ ಸರಣಾರ ಕಟ್ಟುಕೊಂಡು
ಡಾಕು ಡೂಕಲ್ಲಿ ಬರುತಾರೆ |

ಡಾಕು ಡೂಕಲ್ಲಿ ಬಂದರು ಗುರುಮಠಕೆ
ಬಂದ ಬಸವಣ್ಣೋರ ಕಂಡವು

ಬಂದ ಬಸವಣ್ಣೋರ ಕಂಡವು ಗಿಣಿರಾಮ
ಮಂಗಳಾರತಿಯ ಬೆಳಗಿದವ್ರ | ೬೩೦

ಉರಿಯ ಗದ್ದುಗೆ ಬಳಿಗೆ ಬಂದಾರು ಬಸವಣ್ಣ
ನಿಂದಾರು ಗದ್ದುಗ್ಗೆ ಎದುರಾಗಿ |

ಗದ್ದುಗ್ಗೆ ಎದುರಾಗಿ ನಮ್ಮ ಬಸವಣ್ಣ ನಿಂತುಕೊಂಡು
ಅಂತು ನೋಡಿದರು ಗುರುಸ್ವಾಮಿ |

ಅಂತು ನೋಡಿದರು ಸ್ವಾಮಿ ಆ ಉರಿಯಾಗದ್ದುಗೆಯ
ಚಂದಿ ಮುಕುಟದ ಗಂಟು ಮೊದಲಿಲ್ಲ |

ಗಂಟಿಲ್ದ ಗದ್ದಿಗೆಯ ನೋಡುಬುಟ್ಟು ಬಸವಣ್ಣ
"ಏನಾಯ್ತು ಕಾಣೆ ತಿಳಿಯಾದು? |

ಮಕ್ಕುಳುಗೋಸ್ಕರ ಮಾಕಷ್ಟ ಪಟ್ಟುನಲ್ಲ
ಹಂಗೂ ಪ್ರಾಸೋದ ನಮ್ಗೆ ದೊರಿನಿಲ್ಲ | ೬೪೦

ಅರವತ್ತು ಒಂದೊರುಸ ನಾ ತ್ರಬಸ ಮಾಡುದೆನಲ್ಲ
ತ್ರಬಸ ಮಾಡುದದ್ಕೆ ಸುಕುವಿಲ್ಲ |

ಯಾರು ತಕೊಂಡೋದ್ರೊ ಏನೇನ ಮಾಡುದರೊ
ನಾ ಯಾರಲ್ಲಿ ವಾಕ್ಯ ತಿಳಿಯಾಲಿ?" |

ನೀರುನ ಬೋರಮ್ಮ ಕರಸುದರು ಬಸವಣ್ಣ
"ನೀ ಕಂಡ್ಯವ್ವ ಚಂದಿ ಮಗುಟಾವ?" |

ಕೊಟ್ಟಣದ ನನ್ನವ್ವ ಕರಸುದರು ಬಸವಣ್ಣ
"ನೀ ಕಂಡವ್ವ ಚಂದಿ ಮಗುಟವ" |

ಎಣ್ಣೆ ಚೆನ್ನಮ್ಮನ ಕರಸುದರು ಬಸವಣ್ಣ
"ನೀ ಕಂಡವ್ವ ಚಂದಿ ಮಗುಟಾವ ?" | ೬೫೦

ಮಾಚಯ್ಯ ಮಡದಿ ಮಲ್ಲುಗೆದೇವಿ ಕರುದು
"ನೀ ಕಂಡವ್ವ ಚಂದಿ ಮಗುಟಾವ ?" |

ದೀಪಾದ ಮಲ್ಲಮ್ಮ ಕರದು ಬಸವಣ್ಣ
"ನೀ ಕಂಡವ್ವ ಚಂದಿ ಮಗುಟಾವ ?" |

ಸೂಳೆ ಪುಟ್ಟಕ್ಕನ ಕರಸಿ ಬಸವಣ್ಣ
"ನೀ ಕಂಡವ್ವ ಚಂದಿ ಮಗುಟಾವ ?" |

ಎಲ್ಲರೂ ಓಡಿ ಬಂದು ಕರವೆತ್ತಿ ಕೈಮುಗುದು
"ನಾವ್ ಕಾಣ್ನೆಲ್ಲಬುದ್ದಿ ನಿಮ್ಮಗುಟಾವ |

ನೀವ್ ಸ್ತಾನುಕ್ಕೋದಾ ಮೇಲೆ ನಾವು ಒಳಗಡೆ ಬರ್‌ನಿಲ್ಲ
ಕಣ್ಣಾಣಿ ಬುದ್ದಿ ನಾವ್ ಕಾಣ್ನೆಲ್ಲ | ೬೬೦

ಒಳಗಡೆ ಇದ್ದೋರು ನಿಮ್ಮೊಡವುಟ್ಟು ನಾಗಮ್ಮ
ಆ ನಾಗಮ್ನ ಕರುದು ತಿಳೀರೆಂದು |

ನಾಗಮ್ನ ಕರುದು ನೀವ್ ಕೇಳಿ ಬುದ್ದಿ" ಎಂದು
ಇವುರೆಲ್ಲಾ ಉತ್ತುರುವ ಹೇಳಿದರು |

ಅಣ್ಣ ಬರುವತನಕ ನನ ಸಣ್ಣ ನಾಗಮ್ಮನೀಗೆ
ಮಾಯಾದ ನಿದ್ರೆ ದೊರಾಕೀದೆ |

ಪಟ್ಟೆಮಂಚದ ಮೇಲೆ ಮನುಗವ್ಳೆ ನಾಗಮ್ಮ
ಅಲ್ಲೆ ಮಾತೀನ ಗಿಣಿಗಳು ಹೊರುಟಾವು |

"ಏಳ ನಾಗಮ್ಮಯ್ಯ ನಿಮ್ಮಣ್ಣಯ್ಯ ಬಂದವುರೆ
ಮಾಯಾದ ನಿದ್ರೆ ನಿಮುಗೆ ತರುವಲ್ಲ | ೬೭೦

ಮಾಯದ ನಿದ್ರೆ ನಿಮಗೆ ಕವುದೀತ ನಾಗಮ್ಮ
ನಿಮ್ಮಣ್ಣಯ್ ಕರೆಹೇಳಿ ನಮ್ಮ ಕಳುಗವುರೇ |

ಗಿಣಿರಾಮನ ಮಾತ ಕೇಳಿಕೊಂಡು ನಾಗಮ್ಮ
ತಡಬಡನೆ ಎದ್ದ ಘನಸರಣೆ |

"ಬಂದ್ಬುಟ್ರ ಅಣ್ಣಯ್ಯ ಬಂದ್ಬುಟ್ರ ಒಡಹುಟ್ಟು
ಅವ್ರು ಬಂದುದ್ದೆ ನನಗೆ ತಿಳಿಯಾದು |

ಎಂದು ಇಲ್ಲದ ನಿದ್ದೆ ನನಗಿಂದೇನು ಬತ್ತವ್ವ
ನಮ್ಮಣ್ಣೇನಂದಾರೊ ತಿಳಿಯಾದು !" |

ಅಂಜುತ ಅಳುಕೂತ ಮುದುರಿ ಮುದ್ದೆಯಾಗಿ
ಬಂದರು ಅಣ್ಣಯ್ನ ಸನ್ನಿಧಾನ್ಕೆ | ೬೮೦

ಅಣ್ಣನ ಎದುರಾಗಿ ನಾಗಮ್ಮ ನಿಂತುಕೊಂಡು
ಸಿರುಬಗ್ಗಿ ಕರುವ ಮುಗಿದಳು |

"ಎಷ್ಟೊತ್ತಲಿ ಬಂದಿರಪ್ಪ ನನ್ಗೆ ತಿಳುವಳ್ಕೆ ಬರನಿಲ್ಲ
ನಿದ್ದೇಲಿ ಸ್ವಲ್ಪ ಒರುಗಿದ್ದಿ |

ನಿದ್ದೇಲಿ ಸ್ವಲ್ಪ ಒರುಗಿದ್ದಿ ಅಣ್ಣಯ್ಯ
ಬೇಜಾರ್ ಪಡಬೇಡಿ ನಿಮ್ಮನುದಲ್ಲಿ" |

"ಅದುಕೋಸ್ಕರ ನನಗೆ ಬೇಜಾರಿಲ್ಲ ತಂಗಿ
ನನ್ ಬೇಜಾರ್ದ ಮಾತ ಹೇಳ್ತೀನಿ |

ನೀನೆ ಕಂಡಾಗೆ ನನ್ನಕ್ಕನಾಗಮ್ಮಯ್ಯ
ಮಕ್ಕಳುಂಟಾ ನಮ್ಮ ರುದಯಕ್ಕೆ | ೬೯೦

ಮಕ್ಕುಳುಗೋಸ್ಕರವಾಗಿ ಅರವತ್ತು ಒಂದೊರುಸ
ತ್ರಬಸ ಮಾಡಿದ್ದು ನಿಜತಾನೆ ? |

ಹರುಳಯ್ನ ಮನೆಯ ಕರುಣವುಳ್ ಪ್ರಾಸೋದವ
ಗದ್ದೀಗೆ ಮೇಲೆ ತಂದು ಮಡುಗಿದ್ದೆ |

ಸ್ತಾನ ಮಡಿ ಇಲ್ಲಾದೆ ನಾವ್ ಸಲುಸಬಾರದೆಂದು
ಜಪತಪಕೆ ಹೋದುದ್ದು ಸರಿಯಷ್ಟೆ |

ಮೀಯಣ ಮಾಡ್ಕೊಂಡು ಈಗ ಬಂದ ಹುಡುಕಿದರೆ
ಮುಗುಟದ ಗಂಟೆ ಮೊದಲಿಲ್ಲ |

ಆ ಚಂದಿ ಮಗುಟಾದ ಗಂಟು ಮೊದಲಿಲ್ಲ ನಾಗಮ್ಮ
ನೀ ಕಂಡ್ಯವ್ವ ನನ್ನ ಮಗುಟಾವ | ೭೦೦

ಕಂಡಿದ್ರೆ ಹೇಳವ್ವ ನೀ ಮರುಸುಕೊಳ್ಳಲು ಬ್ಯಾಡ
ನೆಡದಂತ ಮಾತ ಹೇಳವ್ವ" |

ಮಕ್ಕಳ ಫಲ್ದ ಮಾತ ನನ್ನಕ್ಕ ನಾಗಮ್ಮ ಕೇಳಿ
ಜಲಜಲನೆ ತಾಯಿ ಬೆವುತೋದ |

ಜಲಜಲನೆ ಬೆವುತೋದ ಕೈಕಾಲು ನಡುಗ ಬಂದು
ಗಾಜುನ ಕಂಬಕ್ಕೆ ಮರೆಯಾದ |

ಗಾಜುನ ಕಂಬಾದ ಮರೆಯಲ್ಲಿ ಸುಸ್ತಾಗಿ ಕೂತುಕೊಂಡು
"ನಾ ಏನ್ನೇಳ್ಲಿ ಅಣ್ಣಯ್ಯ ಜೊತೆಯಲ್ಲಿ |

ಅಂತೆ ಇಂತೆ ಮಾತ್ಗೆ ನನ್ಗೆ ಚಿಂತೆ ಬರಲಿಲ್ಲವಲ್ಲ
ಮಕ್ಕ ಅಂದುದಕೆ ಮಾ ಚಿಂತೆ | ೭೧೦

ಮಕ್ಕ ಫಲಕಾಗಿ ನಮ್ಮಣ್ಣ ತಂದವರೇಂತ
ಈ ಹಾಳಾದ ಜಲ್ಮ ತಿಳೀನಿಲ್ಲ |

ಹಾಳಾದ ಜಲ್ಮ ತಿಳಿಯಾದೆ ಹೋಯ್ತೊಲ್ಲೊ
ಯಾವುತ್ರ ಹೇಳಲಿ ಅಣ್ಣನ ಜೊತೆಯಲ್ಲಿ" |

"ಯಾಕವ್ವ ತಂಗಮ್ಮ ಮಾತಾಡ್ದೆ ಮರೆಯಾದೆ
ಸಂದೇಗ ಬೇಡ ಮೊದಲೇಳು" |

"ಅಂಜಿ ಬಿನ್ನ ಮಾಡ್ಲೊ ಅಂಜಾದೆ ಮಾಡಲೋ
ನಾ ಏನಂತೇಳಲಿ ನಿಮ್ಮ ಜೊತೆಯಲ್ಲಿ |

ಅತ್ಕಡೆ ಅಣ್ಣಯ್ಯ ನೀವು ಜಪತಪಕೆ ಹೋದಾಗ
ಈ ಹಾಳಾದ ಮಾತ ನಾ ತೀೀನಿಲ್ಲ | ೭೨೦

ಒಂದುಗುಟ್ಟುದ ತಂಗಿ ಇದ ನನಗೆ ತಂದವ್ರೆ ಎಂದು
ಆಸೆ ಹುಟ್ಟಿತು ನನ್ನ ರುದುಯಾಕೆ |

ಆಸೆ ಹುಟ್ಟೀತು ಅಣ್ಣ ನಾನ್ನಾಳದ ರುದಯಕ್ಕೆ
ಈಬುತ್ತಿ ಕೊಳುಕೆ ತೆರುಳೀದಿ |

ಈಬುತ್ತಿ ಕೊಳದಲ್ಲಿ ನಾನೀರ ಮುಳುಗಿ ಬಂದು
ಈಗ್ತಾನೆ ಸಲುಸೀದಿ ನನ್ ರುದಯಾಕೆ |

ಈಗ್ತಾನೆ ಸಲುಸೀದಿ ಹರುಳಯ್ನ ಮನೆಯ ಪ್ರಾಸೋದವ
ನನ್ನ ಕಣ್ಣೀಗೆ ನಿದ್ರೆ ದೊರೆದೀತು" |

ಶರಣ ಹರುಳಯ್ನ ಮನೆಯ ಕರುಣವುಳ್ ಪ್ರಾಸೋದ್ಕೆ
ನೀ ಗರ್ಭಿಣಿ ಆಗೋದು ನಿಜುವಮ್ಮ |

"ಅಸುಮಾಯ ಬಂತಲ್ಲ ನನ್ನದೆಸೆ ತಪ್ಪೋಯ್ತಲ್ಲ
ನನಗವಿಮಾನ ಆಗೋ ದಿನ ಬಂತು | ೭೩೦

ಗಂಡನಿಲ್ಲಾದ ಬಾಲೆ ಗರ್ಬಿಣಿ ಆಗುಬುಟ್ರೆ
ಸುಮ್ಮನೆ ಬಿಟ್ಟಾನ ಕೊಂಡಾಗ |

ಕೊಂಡಾಗರ ಮಂಚಣ್ಣ ತಂದಾಕೋನು ಕಾಣವ್ವ
ಅವ ಬಿಜ್ಜಳುಗೆ ಚಾಡಿಯ ಹೇಳ್ತಾನೆ |

ಗಂಡನಿಲ್ಲದ ಬಾಲೆ ಗರ್ಬಿಣಿ ಆಗವ್ಳೆಂದು
ಆ ಪಾಪಿ ಕೊಂಡುಗುವ ನಡಿಸಾನು |

ಕೋಟಿಗೊಬ್ಬ ಸರಣಾರು ಕುಲುಕೊಬ್ರು ಭಕ್ತಾರು
ನಾಳೆ ಮಂದಕ್ಕೆ ಬರುತಾರೆ | ೭೪೦

ಮುಂದದ ಕಟ್ಟೇಲಿ ನನ್ನನ್ನು ನಿಲುಸ್ಕೊಂಡು
ಯಾರುಗೆ ಬಸುರಾದ ನಿನ್ನೊಡಹುಟ್ಟು ? |

ಗಂಡನಿಲ್ಲದ ನಾಗಮ್ಮ ಯಾರೀಗೆ ಗರ್ಬಿಣಿಯಾದ
ಮೊದಲೇಳು ಬಸವಣ್ಣ ನಮ್ ಜ್ಯೋತೆಯಲ್ಲಿ |

ಮೊದಲೇಳು ಎನ್ನುತ್ತೇಳಿ ಆ ಬಿಜ್ಜಳ ಕೇಳಿದರೆ
ನಾ ಯಾವುತ್ರ ಹೇಳಿಗೆಲಲವ್ವ |

ಯಾವ್ ಜಮಾಬೇಳಿ ನಾನ್ ಗೆಲಲ್ಲೊ ತಂಗಮ್ಮ
ಕೆಟ್ಟೊಯ್ತು ಕಲ್ಯಾಣ್ದ ಗುರುಮಠ |

ಅಸುಮಾಯ ಬಂದೀತು ನನದೆಸೆಯೆ ತಪ್ಪೋಯ್ತು
ನಾ ಚಿಂತೆ ಪಡುವಂತ ಗತಿ ಬಂತು !" | ೭೫೦

ಹೇಳ್ತಾರೆ ಅಣ್ಣಯ್ಯ ಕೇಳ್ತರಕ್ಕನಾಗಮ್ಮ
ಗುಳು ಗುಳುಗನೆ ತಾಯಿ ಅಳುತಾರೆ |

"ಎರಡೊಂದು ಅನ್ನದ್ದ ನಾ ಕಂಡಂತ ಮುಂಡ್ಯಲ್ಲ
ನಾ ಬಸುರಾಗಬೋದ ಈ ಧರಿಯಲ್ಲಿ |

ಗಂಡನಿಲ್ಲದ ಮುಂಡೆ ನಾ ಗರ್ಬಿಣಿ ಆಗಿದರೆ
ನಿಜವಾಗು ನಮ್ಮಣ್ಣ ಉಳಿದಾನ ? |

ಹಗೆಯವ್ರು ಎದುರಾಗಿ ನನ್ನೊಡಹುಟ್ಟು ಬದುಕೀನ ?
ಯಾಕಪ್ಪ ನಾನು ಸಲುಸೀದಿ |

ಏನು ಉತ್ತರವಿಲ್ಲ ಇವರೀಗ್ಲೆ ಇಷ್ಟೇಳುತಾರೆ
ನಾ ಬಸುರಾದರೆಷ್ಟು ಅಳುವಾರು | ೭೬೦

ಕೋಟಿ ಜಂಗಮರಿಗೆಲ್ಲ ನಮ್ಮಣ್ಣ ಲಿಂಗಕಟ್ಟಿ
ಇಂದು ಜಂಗುಮರೆದಾರಿಗೆ ನಿಲಬವುದ |

ಕೋಟಿ ಜಂಗುಮರಿಗೆ ನಮ್ಮಣ್ಣ ಸಿರ ಬಗ್ಗುದರೆ
ನಾ ಹೆಣ್ಣಾಗಿ ಬದುಕಿ ಸುಕುವೇನ |

ಹತ್ತು ಐದು ಮಕ್ಕ ಬ್ರಹ್ಮ ಕೊಡನಿಲ್ಲ
ನಾವುಟ್ಟಿದೋರೆ ಇಬ್ರು ಈ ಧರಿಯಲ್ಲಿ |

ನಮ್ಮಣ್ಣಯ್ನ ಜೊತೆಯಲ್ಲಿ ನಾ ಗಂಡಾಗಿ ಹುಟ್ಟಿದ್ರೆ
ಇನ್ನು ದೆಸೆಯಿತ್ತು ಈ ಮಠದಲ್ಲಿ |

ಹೆಣ್ಮಂಡೆಯಾಗಿ ಅವರ ಜೊತೆಯಲ್ಲಿ ಹುಟ್ಟಲಾಗಿ
ನಮ್ಮಣ್ಣ ಸಂಕಟುವ ಪಡುವ ಗತಿ ಬಂತು | ೭೮೦

ಇಂತೆ ಕುಂದದ ಮಾತ ನಾನ್ ಕಿವೀಲಿ ಕೇಳಿದ ಮ್ಯಾಲೆ
ಇರಬಾರ್ದು ಇನ್ನು ಈ ಮಠದಲ್ಲಿ" |

ಎದ್ದರು ನಾಗಮ್ಮ ನಿದ್ರೆ ಮನೆಗೆ ಬಂದ
ಅವ್ವು ಬಂಗಾರ್ದ ಲಗುವ ಕಳಿದಾಳು |

ಲಗಲಾಣ್ಯ ಕಳುದ ಮನೆಯೊಳ್ಗೆ ಬೀಸಾಡಿ
ಒಂದೆಳೆಯ ಸೀರೆಯ ಧರುಸಿದರು |

"ಮಾನಗೆಟ್ಟ ಮುಂಡೆ ಇನ್ಯಾಕೆ ನಾ ಇರಬೇಕು
ಈಬುತ್ತಿ ಕೊಳುಕೆ ಬೀಳುಬೇಕು |

ಕುಂದದ ಮಾತೆಲ್ಲ ನನ್ ಜಲ್ಮಕೆ ಬಂದ್ಮೇಲೆ
ಆ ಕುಂದ ಬರೋದ್ಗೆ ಮುಂಚೆ ನಾನ್ ಸಾಯ್ಬೇಕು" |೭೯೦

ಯಾರೀಗೂ ಹೇಳನಿಲ್ಲ ನನ್ ಪತುರೊತೆ ನಾಗಮ್ಮ
ಈಬುತ್ತಿ ಕೊಳುಕೆ ಹೊರಟೋದ |

ಅತ್ತಿಗೆ ನೀಲಮ್ಮ ಹುಡುಕಿದರು ನಾಗಮ್ನ
"ಎಲ್ಲೋದ ನಾಗಮ್ಮ ತಿಳಿಯಾದು ?" |

ನಿದ್ರೆ ಮನೆಗೆ ಬಂದು ನೋಡುದರು ನೀಲಮ್ಮ
ಕಡದು ಬಿಸಾಡವ್ಳೆ ಆಭರಣೆಯ |

ಎಲ್ಲನು ಕಿತ್ತಿಟ್ಟು ಇವ ಎಲ್ಲೋದ ಕಾಣೆ ಎಂದು
ಆ ಕೊಳದ ಮಾರುಗದಲ್ಲಿ ಹೊರುಟಾರು |

ವಾಟದಲ್ಲೋಡೋಗಿ ಅವುರತ್ತಿಗೆ ನೀಲಮ್ಮ
ಹೋಗಿ ನಾಗಮ್ಮನ ತಡುಕೊಂಡ | ೮೦೦

"ಯಾಕು ಬಂದೆ ನೀನು ನನ್ನಾದುನಿ ನಾಗಮ್ಮ
ನಿನ್ನ ಮನದ ಸಂದೇಗ ನನುಗ್ಹೇಳು" |

"ಇರುವೊಬ್ರು ಒಡಹುಟ್ಟಿ ಇಂತೆ ಸಂಕಟವನಾ ಕೊಟ್ಟು
ನಾ ಇರಬೋದ ಅತ್ಗಮ್ಮ ಈ ಧರಿಯಲ್ಲಿ |

ಈ ಹಾಳುಮುಂಡೆ ಇದ್ದಾರೆ ನಿಮುಗು ಅವಿಮಾನ
ನಾನು ಈಬುತ್ತಿಕೊಳುಕೆ ಬೀಳುತ್ತೀನಿ" |

"ಹಂಗಂದೆರೇನವ್ವ ನನ್ನಾದನಿ ನಾಗಮ್ಮ
ಯಾರೇಳಿದರವ್ವ ನಿನ್ಗೆ ಈ ಹೊಸುಮಾತ |

ಗಂಡನ ಕೂಡಿದ್ದ ನಾಗಮ್ಮ ಎನುತ್ಹೇಳಿ
ಯಾರಂದರವ್ವ ನಿನ್ನ ಧರಿಯಲ್ಲಿ | ೮೧೦

ಸತ್ಕುವಂತ ಹರುಳಯ್ನ ಮನೆಯ ಪ್ರಾಸೋದಕೆ
ಬಸುರಾದ್ರೆ ಅದುಕೆ ಅವಿಮಾನವ ? |

ಸತ್ಕುವಂತರೀಗೆ ಅವಿಮಾನುವ ನಾಗಮ್ಮ
ಹೆದರಬ್ಯಾಡ ನಡಿಯವ್ವ ಗುರುಮಠಕೆ |

ನಿನ್ನ ಸರೀರಕ್ಕೆ ನೀ ತೊಂದರಿ ಮಾಡ್ಕೊಂಡ್ರೆ
ನಾ ಬದುಕೋದು ನಿಜವ ಈ ಧರಿಯಲ್ಲಿ |

ಒಂದು ಮನೆವೊಳ್ಗೆ ನಿನ್ನೊಬ್ಬಳ ಬುಟ್ಟುಬುಟ್ಟು
ನೀ ಹೋಗಿ ಜಲ್ಮವಾ ತೊರುದೀಯಾ |

ನಿನುಗೆ ಬಂದ ಕಷ್ಟ ನನಗು ಇಲ್ವ ನಾಗಮ್ಮ
ಅಳಬ್ಯಾಡ ನಡಿಯವ್ವ ಗುರುಮಠುಕೆ | ೮೨೦

ನೀ ಕೊಳುಕೆ ಬಂದ ಮಾತ ನಿಮ್ಮಣಯ್ಯ ಕೇಳಿದರೆ
ನಮ್ಮ ಸುಮ್ಮಾನ್ ಬಿಟ್ಟಾರ ಬಸುವೇಶ |

ನಡಿಯವ್ವ ನಾಗಮ್ಮ ಯೇಚಿನೆ ಪಡಬ್ಯಾಡ
ನಿನ್ನ ದಮ್ಮಯ್ಯ ನಡಿಯವ್ವ ಗುರುಮಠಕೆ" |

"ಬಿಡಿ ಬಿಡಿ ಅತ್ತುಗಮ್ಮ ನನ್ ಹಿಡಿದುಕೊಳ್ಳಲು ಬ್ಯಾಡಿ
ನಿಮ್ಮ ಪಾದುಕಾರು ತಾಯಿ ಬೀಳುತೀನಿ |

ಪಾಪ ಮಾಡಿದ ಜಲ್ಮ ನಾ ಇರಲಾರೆ" ಅನುತ್ಹೇಳಿ
ನಾಗಮ್ಮ ಶೋಕ ಪಡುತಾಳೆ |

"ಗಂಡಾ ಅನೊ ಜಲ್ಮವ ನೀ ಕಂಡಂತ ಮುಂಡ್ಮಲ್ಲ
ಇದಕ್ಯಾಕವ್ವ ಸಂಕಟ ಪಡುತೀಯೆ | ೮೩೦

ನೀನಗೇನು ಬಂದರು ಬರಲಿ ಆ ಪರಶಿವನ ದಯವಿರಲಿ
ಎದುರುಬ್ಯಾಡ ನಡಿಯವ್ವ ಗುರುಮಠುಕೆ" |

"ಅತ್ತುಗಮ್ಮ ಅಂದಾರೆ ಈ ಲೋಕದಲ್ಲೆರಗುವುರೆ
ಇಂತೆ ಅತ್ತುಗಮ್ನ ನಾನು ಕಾಣ್ನೆಲ್ಲ |

ಅಣ್ಣಾನ ಹೆಂಡ್ತೀರು ಒದ್ದು ಬೋಯ್ತಾರೆ
ಇವು ಮುದ್ದು ಕಾಣೊ ನಮ್ಮತ್ತುಗಮ್ಮ |

ಇಂತ ಮುದ್ದುನತ್ಗೆ ಮಾತ ನಾ ಹೆಂಗೆ ಮೀರಲಿ?" ಎಂದು
ಹಿಂದುರುಗಿ ನಾಗಮ್ಮ ಬರುತಾಳೆ |

ಬಂದರು ನೀಲಮ್ಮ ಬಂದರು ನಾಗಮ್ಮ
ಒಂದೇ ಮನೆಯಲ್ಲಿ ಕುಳಿತಾರು | ೪೪೦

ಒಂದೆ ಮನೆಯ ಒಳುಗೆ ಅತ್ತೀಗೆ ನಾದಿನಿ ಕುಳಿತು
ಅವ್ರು ಎತ್ತಾಗ್ಲು ನಾಗಮ್ಮ ಬಿಡನಿಲ್ಲ |

ದೇವ್ರು ಬಸವಣ್ಣನವರು ಬಾಳ ಎಸನ ಮಾಡುತಾರೆ
ತಂದೀದೆ ನಮ್ ಸ್ವಾಮೀಗೆ ಸಂತಾಪ್ರ |

ಸರಣಮಾತ್ಮನ ಮನೆಯ ಕರುಣ ಉಳ್ ಪ್ರಾಸೋದ್ಕೆ
ಮುಟ್ಟು ನಿಂದೀತು ನಾಗಮನೀಗೆ |

ಒಂದು ತಿಂಗಳ ದಿನ ಆಯ್ತು ನಾಗಮ್ಮನೀಗೆ
ಎರಡು ತಿಂಗಳ ದಿನವಾದೊ |

ಎರಡು ತಿಂಗಳು ತುಂಬಿ ಮೂರು ತಿಂಗಳ ದಿನ
ನಾಕಾಳು ತಿಂಗಳ ಬಸುರಾದ | ೪೫೦

ನಾಲಕ್ಕೈದು ತಿಂಗ್ಳು ತುಂಬಿ ನಾಗಮ್ಮುನಿಗೆ
ಆರು ತಿಂಗಳು ನೆಡಿಯಾದೊ |

ಆರು ತಿಂಗಳು ತುಂಬಿ ಅಕ್ಕನಾಗಮ್ಮನೀಗೆ
ಏಳು ತಿಂಗಳ ಎಳಬಸುರಿ |

ಗಂಡಹೆಂಡೀರ ಭೋಗುಕ್ಕೆ ಬೆಳಿಯಾ ಮಗನಲ್ಲ
ಶಿವನ ವರದಲ್ಲಿ ಅವ ಬೆಳಿಯಾನು |

ದಿನಕೆ ಬೆಳಿ ಅಂದರೆ ಜಾಮುಕ್ಕೆ ಬೆಳಿಯಾನು
ಹರನ ವರದಿಂದ ಹೊಟ್ಟೇಲ್ಬೆಳಿದಾನು |

ಜಿನುಕೊಂದು ತರವಾಗಿ ಹೊಟ್ಟೆ ಬಾಸರ ಕಂಡು
ಗೋಳಾಡ್ತಳೆ ಚೆನ್ನೆನಾಗಮ್ಮ | ೪೬೦

ಹಾಳ ಬೇಸ್ಕರಿಯ ನಾ ತಾಳ್ಲಾರೆನಲ್ಲವ್ವ
ಅಳುತಾ ಅತ್ಗಮ್ಮ ಬಳಿಗೆ ತೆರುಳೀದ |

ಅತ್ಗಮ್ಮ ಎದುರಾಗಿ ನಾಗಮ್ಮ ನಿಂತುಕೊಂಡು
ದುಕ್ಕುದುಕ್ಕುಳಿಸಿ ಅಳುತಾಳೆ |

"ಏನವ್ವ ನಾದಿನಿ ಯಾಕವ್ವ ಅಳುತೀಯೆ
ನಿನ್ಮನದ ಸಂಕುಟವ ನನಗ್ಹೇಳು" |

"ಹೇಳ್ಕಾರಿ ಅತುಗಮ್ಮ ನಾ ಹೇಳ್ದೆ ಇರುಲಾರಿ
ಹೇಳುದಕ್ಕೆ ಬಾಯಿ ಬರದವ್ವ" |

"ಏನಾಗಿದೆ ಹೇಳು ಸಂದೇಗ ಪಡಬ್ಯಾಡ
ಬೆದರಾದೆ ಹೇಳವ್ವ ನನ್ಮೊತೆಯಲ್ಲಿ | ೪೭೦

ಏಳು ತಿಂಗಳಾಯಿತು ನಾ ಹೊರಗಡೆ ಆಗಲಿಲ್ಲ
ಬಸುರಾದೆ ಅತುಗಮ್ಮ ಹಾಳ್ಜಲ್ಮ" |

ಮುಟ್ಟುನಿಂತಾ ದಿನವ ನೋಡುದುರು ನೀಲಮ್ಮ
ಅವ್ವ ಏಳು ತಿಂಗಾ ನಿನಗೆ ಸರಿಯಾದೊ |

"ಗರ್ಭಿಣಿಯಾದ ಮಾತ ಮರುಸಾಕೋಗುದಿಲ್ಲ
ನಾ ಹೇಳ್ಬೇಕು ದೊಡ್ಡವರ ಜೊತೆಯಲ್ಲಿ |

ಅಂದಿಗಿಂದುಗು ನಾನು ಮಕ್ಕಳೆತ್ತವಳಲ್ಲ
ಅದರ ಮರ್ಮ ನಾ ಒಂದೂನು ತಿಳಿದಿಲ್ಲ |

ಮಕ್ಕಳೆತ್ತ ಜನಕೆ ಅರ್ಥವಾಯ್ತದೆ ತಾಯಿ
ನನಗರ್ಥ ಇಲ್ವಲ್ಲೊ ನಾಗಮ್ಮ | ೪೮೦

ದೊಡ್ಡವರ ಜೊತೆಯಲ್ಲಿ ಈ ಮಾತ ಹೇಳದಿದ್ರೆ
ಸುಮ್ಮಾನೆ ಬಿಟ್ಬರ ಬಸವಣ್ಣ |

ಹೇಳಿ ಬರ್ತೀನಿ ತಾಳು ನಿಮ್ಮಣ್ಣಯ್ಯನ ಜೊತೆಯಲ್ಲಿ
ಯಾವ್ದೋ ಒಂದ್ ಸ್ಯಾಸ್ತ್ರ ಇದುಕುಂಟು |

ಏಳನೇ ತಿಂಗಳಿಗೆ ಒಂದು ಸ್ಯಾಸ್ತ್ರ ಇದುಕುಂಟು
ಕೇಳಿ ಬರುತೀನಿ ನಿನ್ನ ಒಡಹುಟ್ಟ |

ಅತ್ತುಗಮ್ಮ ಪಾದುಕ್ಕೆ ಬಿದ್ದುರುಳಿದ ನಾಗಮ್ಮ
ಹೇಳಬ್ಯಾಡಿ ಅಣ್ಣನ ಜೊತೆಯಲ್ಲಿ |

ಆಗಲೇ ಹಂಗಂದ್ರು ಈಗೋಗಿ ಹೇಳುದರೆ
ಇನ್ನೇನೆನಂದಾರೆ೦ ತಿಳಿಯಾದೊ | ೪೯೦

ಮನ್ಸ ಕೆಡಸ್ಕೋತಾರೆ ನನ್ ಮಾಗುರು ಅತುಗಮ್ಮ
ಆ ಗಂಡುಸರ ಜೊತೆಯಲ್ಲಿ ಹೇಳುಬ್ಯಾಡಿ |

ಗಂಡಾಸರ ಜೊತೆಯಲ್ಲಿ ಈ ಮಾತನ್ನೇ ಹೇಳಿದರೆ
ಕಳದಿದ್ದ ಮುಂಡರುಗೆ ಅವಿಮಾನ |

ಗಂಡನ ಕಟ್ಟಿದ್ದರೆ ಬಲು ಧೈರ್ಯ ಬರುತೀದೆ
ಇದು ಮಾನ ಉಳ್ಕೋರಿಗೆ ಅವಿಮಾನ |

ಈ ಮಾನಗಟ್ಟು ಮಾತ ನಮ್ಮಣ್ಣಂಗೆ ಹೇಳಬ್ಯಾಡಿ
ಚಿಂತೆ ಪಡ್ತಾರೆ ನನ್ನ ಒಡಹುಟ್ಟು" |

"ದಮ್ಮಯ್ಯ ದಮ್ಮಯ್ಯ ನನ್ನ ನಾದಿನಿ ನಾಗಮ್ಮ
ಇದು ಮರುಸುಕೊಳ್ಳುವಂತ ಮಾತಲ್ಲ | ೯೦೦

ನಿನ್ನ ಮಾನ ಹೋದಾರೆ ನನ್ನ ಮಾನ ಹೋದಂಗೆ
ಸಂದೇಗ ನಾಗಮ್ಮ ಪಡುಬ್ಯಾಡ |

ಎದ್ದರು ನೀಲಮ್ಮ ಎದ್ದು ನಡಿದಾರು
ಬಂದಾರು ಬಸವಯ್ನ ಸನ್ನಿಧಾನ್ಕೆ |

ಬಂದ್ರಲ್ಲ ನೀಲಮ್ಮ ನಿಂದಾರು ಗದ್ದಿಗೆ ಮುಂದೆ
ಚಿಂತೇಲ್ಮನುಗವುರೆ ಬಸುವಣ್ಣ |

ಮೈಮೇಲೆ ಕೈಯಿಕ್ಕಿ ಎಚ್ಚರವ ಮಾಡಿದರು
ತಡಬಡನೆ ಎದ್ದರು ಬಸವಣ್ಣ |

"ಏನೇ ನೀಲಮ್ಮಯ್ಯ ಯಾಕೆ ಎಚ್ಚರ ಮಾಡ್ದೆ
ನೀ ಎಚ್ಚರ ಮಾಡಿದ ಬಗೆ ಏನ | ೯೧೦

ಎಚ್ಚರ ಮಾಡಿದ ಬಗೆ ಏನ ಹಾಗಾಂದಾರೆ
ಗರ್ಬಿಣಿಯಾದ ನಿಮ್ಮೊಡಹುಟ್ಟು |

ಏಳು ತಿಂಗಳು ಜೀನ ನಾಗಮ್ಮಗಾಗೋಯ್ತು
ಅದು ತಿಳುಸುದಕೆ ನಾನು ಬಂದೆನಪ್ಪ" |

ನೀಲಮ್ಮಾಡಿದ ಮಾತ ಕೇಳಿದರು ಬಸವಣ್ಣ
ಹರಾಹರಾ ಎಂದು ಸಿರದೂಗಿ |

"ಗರ್ಬಿಣಿ ಆಗೋಗ್ಬುಟ್ಟೆ ನನ್ನೊಂದುಗುಟ್ಟಿದ ತಂಗೆ
ಮುಂದಿನ್ನೇನ್ ಬಂದದ್ದೊ ತಿಳಿಯಾದು?" |

ಎರಡು ಕಣ್ಣಿನ ನೀರ ತುಂಬ್ಕೊಂಡು ಬಸವಣ್ಣ
ಬೊಳುಬೊಳುನೆ ಜಲುವ ಸುಲಿಸಿದರು | ೯೨೦

"ಮಾನ ಈನನಾಗಿ ನಾನಿದುವರ್ಗು ಬದ್ಕಿರಿಲಿಲ್ಲ
ನನ್ ಮಾನ ಕೆಡುವಂತ ದಿನ ಬಂತು |

ವೈರಿಗಳು ಕೇಳಿದರೆ ನಾ ಏನ್ಹೇಳ್ಲಿ ನೀಲಮ್ಮ
ಅವ್ರು ಗೆಲುವಂತ ಮಾರ್ಗ ನೋಡುಬೇಕು |

ಏಳನೇ ತಿಂಗಳಿಗೆ ನನ್ನೆಳೆಯ ನಾಗಮ್ಗೆ
ಬಸುರೊಸುಗೆ ಮಾಡ್ಸು ಮಠದಲ್ಲಿ |

ಆ ಬಸುರೊಸ್ಗೆ ಅನ್ನದ್ದು ನಂಗೆ ತಿಳಿಯಾದಲ್ಲ ಗುರುವೆ
ನಾನಿನ್ನು ತಿಳಿದಿಲ್ಲ ಈ ಧರಿಯಲ್ಲಿ |

ಹುಟ್ಟು ಬಂಜೆ ನಾನು ಇದೊಂದೂ ಗೊತ್ತಿಲ್ಲ
ಅದೆಂಗೆಂಗೆ ಸ್ವಲ್ಪ ಒಡದ್ಹೇಳು" | ೯೩೦

"ನಿನಗೆ ಗೊತ್ತಿಲ್ವ ನನ್ಮಡದಿ ನೀಲಮ್ಮಯ್ಯ
ಅಂತಾ ಧರ್ಮಕರ್ಮ ನಾವು ಕಾಣ್ಲೆಲ್ಲ |

ಮುತ್ತೈದೇರ ಕರೆ ನಮ್ ಕಲ್ಯಾಣದೊಳಗೆ
ಅವರೆ ಹೇಳ್ತಾರೆ ಅದ್ರ ನಡೆನುಡಿಯ" |

ಬಸವಣ್ಣೋರ್ ಮಾತ್ಕೇಳಿ ನೀಲಮ್ಮಯ್ಯ
ಮುತ್ತೈದೇರ ತಾಯಿ ಕರೆಸಿದರು |

ಮಾತೀನ ಗಿಣಿಯ ಕಳುಗಿ ಅವ್ರುರೆಲ್ಲುನು ಕರೆಸಿದರು
ಅವುರು ಬಂದು ತುಂಬಿದರು ಮಠದ್ತುಂಬ |

ಬಂದು ತುಂಬಿದರು ಮಠದ್ತುಂಬ ಮುತ್ತೈದೇರು
"ನಮ್ಮ ಕರುದ ಮಾತ ತಾಯಿ ಮೊದುಲ್ಹೇಳು" | ೯೪೦

"ನಮ್ಮ ನಾದಿನಿ ನಾಗಮ್ಮ ಏಳು ತಿಂಗಳ ಗರ್ಭಿಣಿ
ಅವುರ್ಗೆನ್ಮಾಡಬೇಕು ಮಾಡಿ ನೀವೆಲ್ಲ |

ಮಕ್ಕಳೆತ್ತವರೆಲ್ಲ ಮನೆಯ ಕಟ್ಟಿದೋರೆಲ್ಲ
ಬಂದಿದ್ದೀರ್ಯವ್ವ ನನ್ ಗುರುಮಠುಕೆ |

ಮುತ್ತೈದೆರೆಲ್ಲ ಈ ಹೂವನ್ನೆ ಮುಡುಕೊಂಡು
ನೀವ್ ಕರವೆತ್ತಿ ಸಾಸ್ತ್ರ ಮಾಡೋಗಿ" |

ನಾಗಮ್ಮನ ಬಳಿಗೆ ಹೊರಡುದುರ ಮುತ್ತೈದುರು
ತಲೆಮೇಲೆ ಕೈಯಿಟ್ಟು ತಾಯಿ ಕುಳುತವುಳೆ |

"ಯಾಕವ್ವ ನಾಗಮ್ಮ ನೀವೇಚಣೆ ಪಡುವೀರಿ
ನೀವು ಕದ್ದಿಲ್ಲವಲ್ಲವ್ವ ನನ್ ಘನಗರುತಿ | ೯೫೦

ಗಂಡುಸ್ರು ಕದ್ದೋರು ಇಂತೆ ಯಸನ ಮಾಡೋದಿಲ್ಲ
ನೀ ಸತ್ಕುವಂತೆ ಯಸನ ಪಡುಬೇಡ |

ತುಂಬುದ ಸ್ವಾಮಾರ ಇಂದು ಸುಬುಗಳಿಗೆ ನಾಗಮ್ಮ
ಮೀಯಾಣದರುಮನೆಗೆ ನಡಿಯವ್ವ" |

ಮಿಯಾಣದ ಮನೆಗೆ ಕರತಂದರು ನಾಗಮ್ಮ
ಎಣ್ಣೆ ಒತ್ತಾಗಣೆಯ ಎರಿದಾರು |

ಅರುಸುಣ ಸೀಗೆಕಾಯ ಮಂಡಗೆ ಒತ್ತುದರು
ಆಗೊಂದು ನೀರ ಎರಿದಾರು |

ಕಡೆಯಲ್ಲಿ ನಾಗಮ್ಗೆ ಪನ್ನೀರ ಹೂಯ್ದಾರು
ಬಳಿಯ ಸೀರೆಯ ಉಡುಸಿದರು | ೯೬೦

ಬಳಿಯ ಸೀರೆಯ ಉಡ್ಸಿ ಬಳಿಯ ಕುಪ್ಸ ತೊಡ್ಸಿ
ಸಾಸ್ಯಾದ ಬಳೆಯ ತೊಡುಸಿದರು |

ಹಸ್ತ ಕಡಗದ ಮುಂದೆ ಕಸ್ತೂರಿ ಬಳೆಯ ತೊಡುಸಿ
ವಜ್ಜುರದ ವಾಲೆ ಕರಣಕ್ಕೆ |

ವಜ್ಜುರದವಾಲ್ಯ ಕರುಣಕ್ಕೆ ತೊಟ್ಟವುರೆ
ಬಾಚಿ ಬಂದೀಯ ತೊಡಿಸಿದರು |

ಬಾಚಿ ಬಂದಿಗಳು ಒಂಕಿ ಬಂದಿಗಳು
ಹವಳದುಂಗುರವ ತೊಡುಸಿದರು |

ಕಾಲು ಕಡುಗ ಹಾಕಿ ಒಳ್ಳೇ ಕೀಲು ಡಾಬ ಹಾಕಿ
ಕಾಲು ಪಿಲ್ಲೀಯ ತೊಡಿಸಿದರು | ೯೭೦

ಜಾಜಿ ಹೂವುನ ಜಡಿಯ ಹೆಣೆದು ನಾಗಮ್ಮುನಿಗೆ
ನಾಗುರುವ ಜಡೆಗೆ ಧರಿಸಿದರು |

ಮರುಗ ಮಲ್ಲಿಗೆ ತಂದು ಸುರಿಗಿ ಸ್ಯಾಮಂತಿಗೆಯ
ಅಮ್ಮನ ಜಡೆ ತುಂಬ ಮುಡಿಸಿದರು |

ಗದ್ದೀಗೆ ಮನೆಗೆ ಕರತಂದು ನಾಗಮ್ನ
ಹಸೆಯ ಮಣೆಯನ್ನೇ ಹೂಡಿದರು |

"ಬಲಗಾಲು ಮುಂದಾಗಿ ನೆಡಿಯವ್ವ ನಾಗಮ್ಮ
ಹಸೆಯ ಮೇಲೆ ತಾಯಿ ಮೋರುತ ಮಾಡವ್ವ" |

ಹಸೆಯ ಮೇಲೆ ಕುಳ್ಳುರಿಸಿ ಅಕ್ಕನಾಗಮ್ಮಯ್ನ
ಶಾಸ್ತ್ರ ಮಾಡಿದರು ಮುತ್ತೈದೇರು | ೯೮೦

ಐದಡಕೆ ಐದೆಲೆ ಈಬುತ್ತಿಉಂಡೆ
ಐದು ಚಿಟ್ಟುನ ಬೆಲ್ಲ ಹದಗೂಡಿ |

ಐದು ಕೊಂಬಿನರುಸಣ ಸೀಗೆಕಾಯಿ ಜೊತೆಗೆ
ತೆಂಗಿನಕಾಯ್ ಪೊಟ್ಟುಣವ ಕಟ್ಟಿದರು |

ಐದು ಮಾನ ಅಕ್ಕಿ ಕೂಡಿ ಗಂಟನ್ನೇ ಕಟ್ಟಿ
ಸೋಗಾಲ ಮರುಳ ತುಂಬಿದರು |

"ಬಸವಣ್ಣನ ತಂಗೆ ದೆಸೆಯುಳ್ಳ ನಾಗಮ್ಮ
ಮಗ್ಗುಲನೊಯ್ದಿ ಮಗನ ಪಡಿಯವ್ವ |

ಮಗ್ಗುಲು ನೋಯ್ದಂತೆ ನೀ ಮಗನ ಪಡಿಯಮ್ಮ
ಈ ಭೂಮಿ ಪಾಲುಕನ ಪಡಿಯವ್ವ | ೯೯೦

ಭೂಮಿಪಾಲುಕನ ನೀ ಪಡಿಯವ್ವ ನಾಗಮ್ಮ
ವೈರಿಗಳಿಗೊಡೆಯಾನ ಪಡಿಯವ್ವ |

ಬಸವಣ್ಣನ ತಂಗೆ ನನದುಂಡಿ ನಾಗಮ್ಮಯ್ಯ
ಆನಂದದ ಮಗನ ಪಡಿಯವ್ವ |

ಆನಂದದ ಮಗನ ಪಡಿಯವ್ವ ನೀ ನಾಗಮ್ಮ
ನಮ್ಮೆಲ್ಲ ಸಲುಗೋವ್ನ ಪಡಿಯವ್ವ |

ನಮ್ಮೆಲ್ರುನು ಕಾಪಾಡೊ ಮಗ ನಿನ್ನೊಟ್ಟೇಲಿ
ಹುಟ್ಟಲಿ" ಎಂದು
ಸಾಸಕ್ಕಿಯ ಮೇಲೆ ಹರಡಿದರು |

ಸಾಸಕ್ಕಿಯ ಹರಡಿದರು ಸ್ನಾಸ್ತ್ರ ಮಾಡಿದರು
ಆಗ ನೀಲಮ್ಮ ಹದುಗೂಡಿ | ೧೦೦೦

ಹಾಲುಗಕ್ಕೀ ಸುರುದು ನೀರುಗೆ ಬ್ಯಾಳೆ ಸುರುದು
ಇದ ಬ್ಯಾರೆ ಒಂದಡಗೆ ಹದುಗೂಡಿ |

ಸುಟ್ಟು ಸುಂಡೇಕಾಯಿ ಬೆಟ್ಟದ ನೆಲ್ಲಿಕಾಯಿ
ಮಾಗಳಿ ಬೇರಿನ ಉಪ್ಪುನಕಾಯಿ |

ಬಟ್ಟಗುಂಬುಳದಣ್ಣು ತೊಟ್ಟು ತಗ್ದು ಈಡಾಡಿ
ಅಟ್ಟೆನ್ನೆ ಒಳುಗೆ ಹದಗೂಡಿ |

ನಾರ ಈರುದ ಕಾಯ ನಾರ ತಗುದೀಡಾಡಿ
ನೀಲಮ್ಮ ಬಾಲೆನ್ನೆ ಒಳುಗೆ ಹದುಗೂಡಿ |

ಹಾಗಲದ ಕಾಯ್ತಂದು ಅದರುರುಪೆ ಎತ್ತಾಡಿ
ತುಪ್ಪುದಲಿ ಕಾಯಿ ಹದಗೂಡಿ | ೧೦೧೦

ಹಪ್ಪುಳುಪ್ಪಿನ ಕಾಯಿ ಹರುಸಾ ಕಡಲೇಬೇಳೆ
ಕಡ್ಲೆಹುಳೀ ತಾಳ್ದ ಹದಗೂಡಿ |

ಬಜ್ಜಿಗೊಜ್ಜುಗಳ ನೂರು ಸಂಡಿಗೆ ಮಾಡವ್ರೆ
ಕಲ್ಯಾಣವಾದ್ ಕಲ್ಯಾಣ ಗಮಗಮ |

ಕಲ್ಯಾಣಗಮ್ಮುಟ್ಟ ಮಾಡವ್ರೆ ನೀಲಮ್ ತಾಯಿ
"ಎಲ್ರುನೂ ಊಟುಕ್ಕೆ ಬರುಮಾಡಿ |

ಎಲ್ರುನೂ ಊಟುಕ್ಕೆ ಬರುಮಾಡಿ ಗುರುವೆ" ಎಂದು
ಗುರು ಬಸವಯ್ಗೆ ಕೈಯ ಮುಗಿದಾರು |

ದೊಡ್ಡವರ ಮಠದಲ್ಲಿ ಡಂಗುರ ಹೊಡಿದಾರು
"ಜಂಗುಮರು ಊಟುಕ್ಕೆ ಬರಬೇಕು | ೧೦೨೦

ಯಾರೂ ಉಳಕೊಳ್ಳಬ್ಯಾಡಿ ಎಲ್ರು ಬರಬೇಕೆ"ಂದು
ಸಾರೀತು ಡಂಗೂರ ಅವರ ಮಠದಲ್ಲಿ |

ಡಂಗೂರ ದನಿಯ ಕೇಳಿದುರು ಜಂಗುಮರು
ಬಂದು ಇಳಿದಾರು ಗುರುಮಠಕೆ |

ಬಾದ ಜಂಗುಮರೀಗೆ ಪಾದುಕ್ಕೆ ನೀರೆರುದು
ಮಡಿಯ ಹಾಸವುರೆ ಮಠದಲ್ಲಿ |

ಬಂದ ಬಂದವುರ್ನೆಲ್ಲ ಮಡಿಯ ಮೇಲ್ ಕುಳ್ಳಿರಿಸಿ
ಬಾಳೆಎಲೆಗಳ ನೀಡೀದನಂತೆ |

ಬಾಳೆ ಎಲೆಗಳ ನೀಡಿ ಶಿವಪೂಜೆ ಬಟ್ಟುಲ ಮಡಗಿ
ಮಾಡಪ್ಪ ನಿಮ್ಮ ಲಿಂಗುಪೂಜ್ಯ | ೧೦೩೦

ಅಡ್ಡಹಲಗೆಯ ಮೇಲೆ ದೊಡ್ಡೀಬುತ್ತಿಗಟ್ಟಿ ಇರಿಸಿ
ಜಾಜಿ ಹೂವುಗಳ ಮಡುಗವ್ರೆ |

ಮಡುಗಿರುವ ಸಂಭ್ರಮುವ ನೋಡಿದರು ಜಂಗಮರು
"ಹಿಂಗೆ ಮಾಡೀರಪ್ಪ ನಮ್ ಮನೆಯಲ್ಲಿ |

ಎಷ್ಟಾದರು ಶಿವಪೂಜೆ ಕಂಡವರು ಶಿವಶರಣ ಬಸವಣ್ಣ
ತಿಳಿದಂತ ತಾಯಿ ನೀಲಮ್ಮ |

ನಿಮ್ಮದೀ ಕಲ್ಯಾಣ ಹಾಲ್‌ಸಾಗ್ರ ಆಗಲಿ" ಎಂದು
ಜಂಗುಮರಾಸುರ್ವೋದ ಮಾಡಿದರು |

ಮಾಡಿರುವ ಪದಾರ್ಥವ ಬಾಯಿ ಕಟ್ಟುಕೊಂಡು
ಆ ಜಂಗುಮುರ್ಗೆ ಊಟಕ್ಕೆ ಪಡುಸಿದರು | ೧೦೪೦

ಎಪ್ಪತ್ತು ಏಳ್ಕೋಟಿ ಜಂಗುಮರಿಗೆ ನೀಲಮ್ಮ
ತಪ್ಪದೆ ಊಟಕ್ಕೆ ಪಡುಸಿದರು |

ಅರವತ್ತೂರ್ಮಂದಿ ಪುರಾತ್ಮರಿಗೆ ನೀಲಮ್ಮ
ತಪ್ಪದೆ ಊಟಕ್ಕೆ ಪಡುಸಿದರು |

ಲಕ್ಷುದ ಮೇಲೆ ತೊಂಬತ್ತಾರು ಸಾವುರ ಕೋಟಿಗೆ
ಒಬ್ರೆ ಮಾತಾಯಿ ಪಡುಸಿದರು |

ಒಂಚಾನೆ ಒಲೂರವಿಲ್ದೆ ಎಲ್ಲಾ ಪದಾರ್ಥಗಳನು
ಜಂಗುಮುರುಗೆ ತಾಯಿ ಎಡೆ ಪಡಿಸಿ |

ಊಟ ಮಾಡ ಜಂಗಮರು ಅವುರವುರೆ ಮಾತಾಡ್ತಾರೆ
"ಇದೆಲ್ಲಿ ಕಲ್ತಿದ್ದಳಪ್ಪ ಈ ಮಾತಾಯಿ | ೧೦೫೦

ಹಪ್ಪ ನೋಡ್ರಯ್ಯ ಉಪ್ಪುನಕಾಯ್ ನೋಡ್ರಪ್ಪ
ಈ ಕೈಯಾದ್ ಪದಾರ್ಥ ಮೊದುಲ್ನೋಡಿ |

ಹಾಗಲದ ಕಾಯನ್ನದ್ದು ಹದಗೆಟ್ಟ ಬದುಕಲ್ಲ
ಇದ ಹದಗೂಡಿರುವ ತರುವ ಮೊದಲ್ನೋಡಿ |

ಎಂತೆ ಅಮೂರ್ತವಾಗಿ ತಾಯಿ ಹಾಗಲ್ಕಾಯ್ ಮಾಡವ್ರೆ
ನಾವ್ಯಾವ ಜಲ್ಮಕ್ಕೆ ಮರಿಯೋಣ |

ಸತ್ಕುವಂತರ ಮನೆಯ ಮಾಪ್ರಾಸೋದ
ಎಷ್ಟು ಕೊಂಡಾಡಿದರು ಮುಗಿಯಾದು |

ಎಷ್ಟು ಕೊಂಡಾಡಿದರು ಸಾಲದು" ಎನ್ನುತ್ಪೇಳಿ
ಜಂಗಮ್ರು ಆನಂದ ಪಡುತಾರೆ | ೧೦೬೦

ಊಟಾದಂತೆ ಒಳುಗೆ ಮುಗ್ಗಲ ಸಂಗಷ್ಟ ಕರುದು
ಈಳ್ಕವ ಜಂಗುಮರಿಗೆ ಕೊಡಿಸಿದರು |

"ಚಿಕ್ಕು ದೊಡ್ಡು ಅಂತ ವಂಚಾಣೆ ಮಾಡಬ್ಯಾಡಿ
ಚಿಕ್ಕು ದೊಡುದುಕೆಲ್ಲ ಕೊಡುರಪ್ಪ" |

ಊಟ ಮಾಡ್ದೋರೆಲ್ಲ ಈಳ್ಕಮರ್ಯಾದಿ ತಕ್ಕೊಂಡು
ಅವುರವುರ ಮನಿಗೆ ಹೊರಟಾರು |

ರಾಜ ಬೀದಿ ಒಳುಗೆ ಏನಂತಿದ್ದರು ಜಂಗುಮರು
ನೋಡಿದ್ಕೆಣ್ಣ ಅಮ್ಮ ಮಾಡ್ದ ರುಚಿಯನ್ನೆ |

ಅಲ್ಲಾ ಕಾಣೊ ಆ ಹಾಗಲಕಾಯ್ನ ತಾಳ್ದೆ ಹದಗೆಟ್ಟ
ಪದಾರ್ಥ
ಅದೆಷ್ಟಮುರ್ತವಾಗಿತ್ತು ಅವ್ರು ಮಠದಲ್ಲಿ | ೧೦೭೦

ಅಂತೆ ಅಮುರ್ತದ ಅಡಿಗ್ಯ ಇನ್ನಾರು ಮಾಡೋದಿಲ್ಲ
ಜಯವಾಗ್ಲಪ್ಪ ಅವರ ಗುರುಮಠುಕೆ" |

ಹಂಗಂದ ಜಂಗುಮರು ಹೊಗಳೂಂತ ಹೋಗಾಗ
ಅವರೆದುರಾಗಿ ಬಂದ ಕೊಂಡುಗ |

"ಏನ್ರೋ ಜಂಗುಮರೆ ಈ ರೀತಿ ಕೊಂಡಾಟ
ಏನು ಕಲ್ಯಾಣದಲ್ಲಿ ಸಂಭ್ರಮ? " |

"ನೀವೆಲ್ಲಿ ಹೋಗಿದ್ದೀರಪ್ಪ ಕೊಂಡುಗರ ಮಂಚಪ್ಪ
ನಾವೇನೇಳೂವು ನಿಮ್ಮ ಜೊತೆಯಲ್ಲಿ |

ಬಸವಣ್ಣನ ತಂಗೆ ಹಸಿಯವರು ನಾಗಮ್ಮ
ಅವುರ ಬಸುರೊಸುಗೆ ಮಠದಲ್ಲಿ | ೧೦೮೦

ಏನ್ರೋ ಜಂಗುಮರೆ ಬಂದ ಮಾತ ಬಂದಂಗಾಡ್ತೀರಿ
ಸರಿಯಲ್ಲ" ಅಂದ ಕೊಂಡೂಗ |

"ಬಸವಣ್ಣನ ತಂಗೆ ಗಂಡನಿಲ್ಲದೆ ಬಾಲೆ
ಅವ-ಬಸುರಾಗೋದು ನಿಜುವ ಜಂಗುಮರೆ |

ಸತ್ಯವಂತರ ಮಾತ ನೀವು ಓಂಗೆ ದೂರುಲು ಬ್ಯಾಡಿ
ನಾಳೆ ತೊಂದೀರಿ ನಿಮುಗೆ ಬರುತೀದೆ" |

"ನಿಮ್ಮೊಂದಿಗೆ ಮಂಚಣ್ಣ ನಾವೆಂದ್ಗು ಸುಳ್ಳಾಡ್ದಿಲ್ಲ
ಈ ಹೊತ್ತು ಹೆಳೋದು ನಿಜುವಪ್ಪ್ಯಾ |

ನಮ್ಮಾಣೆ ಕಾಣಪ್ಪ ನಮ್ ಕಣ್ಣಾಣೆ ಕಾಣಪ್ಪ
ಬಸುರೊಸುಗೆ ಮಾಡವ್ರೆ ಮಠದಲ್ಲಿ" | ೧೦೯೦

"ಕಣ್ಣಿಂದ ನೋಡಿದ್ಯಾ ಹೆಣ್ಣ ನಾಗಮ್ಮನ
ಅವುಳೆಂಗಿದ್ದ ಹೇಳಿ ನನ್ ಜೊತೆಯಲ್ಲಿ" |

"ಬಿಳಿಯ ಸೀರೆ ಉಡ್ಸಿದ್ದರು ಬಿಳಿಯ ಕುಪ್ಪ ತೊಡಿಸಿದ್ರು
ಸಾಸ್ತ್ರದ ಬಳಿಯ ತೊಡುಸಿದ್ರು |

ಬಟ್ಟೆ ದಪ್ಪನಾಗಿ ಕುಲಪಂಗ್ತೀಗೆ ಬಂದಿದ್ದರು
ಕಣ್ಣಾರ ಕಂಡೊ ಕೊಂಡುಗರೆ" |

ಹಾಗಂದ ಮಾತನ್ನೆ ಕೇಳ್ದ ಕೊಂಡಗ ಮಂಚ
ಕಡುಗೋಪ ಹತ್ತೀತು ಅವ್ನ ಮನದಲ್ಲಿ |

ಹೊಟ್ಟೆ ಗಾತುರವ ನನ್ ಜೊತೆ ಹೇಳುದಮ್ಯಾಲೆ
ನಿಚ್ಚಾಯ ಅಂದ ಕೊಂಡೂಗ | ೧೧೦೦

"ಇಂತೇವ್ನೆಲ್ಲ ಕರಸಿ ಬಸ್ಯಣ್ಣನನ್ನು ಬುಟ್ಟವನಲ್ಲ
ಅವನೆಂತೇನಾಗಿರಬವ್ದು ಆ ಬಸವೇಶ |

ನನ್ನ ಕರೀಸ್ಬುಟ್ರೆ ಏನೇನ್ ಮಾಡೀನೊ ಎಂದು
ನನ್ನ ಕರೀಸ್ತೆ ಹೋದ ಬಸವಣ್ಣ |

ಕರೀಸ್ತೆ ಬುಟ್ಟುಬಿಟ್ಟೆ ನಾ ಕಳುಕೊಂಡೆ ಎನ್ನಬಹುದು
ನನ್ನೊಟ್ಟೇಲಿ ಮಡಗಿವ್ನಿ ಮಚ್ಚುರುವ" |

ಕಲ್ಯಾಣದ ಕಡೆಬಾಗಲ ಮುಂದೆ ಕುಳ್ತುಕೋಡು ಕೊಂಡುಗ
ಹಳೆಯ ಪಟ್ಟೀಗೆ ಲೆಕ್ಕ ಬರುಕೊಂಡ |

ಈವತ್ತು ಸ್ಯೋಮಾರ ಇಂತ ಹೊತ್ತುನಲ್ಲಿ
ಬಸುರೊಸುಗೆ ಎಂದು ಬರಿದಾನು | ೧೧೧೦

"ಉಂಡ ಜಂಗುಮರೆಲ್ಲ ಕೊಂಡಾಡುತಾರೆ ಬಸವಣ್ಣ
ಆ ದಪ್ಪಾ ಬಿಜ್ಜಳ ತಿಳುವಿಲ್ಲ |

ಇರ್ಲಿ ತಿರ್ಕ ಬಸವ ನಿನ್ನೊಗುತಾನ ಕೆಡುಸ್ತೀನಿ
ಗ್ಯಾಪುಕವಿರಲ್ಯಪ್ಪ ನಿನ್ ಮಸದಲ್ಲಿ |

ಕಂಡ ಕಂಡ ಜಂಗುಮರ್ಗೆ ನಿನ್ ತಂಗ್ಯನ್ನು ತಲೆಹಿಡಿದು
ಒಳಗೆ ಬಸರಾದ ನಾಗಮ್ಮ" |

ದೂರುತನೆ ಮಂಚಣ್ಣ ಸಾರುತಾನೆ ಮಂಚಣ್ಣ
ನಮ್ಮ ಬಸವಣ್ಣನ ಕೆನ್ನೆಗೆ ಹೊಡುದಂಗೆ |

ಕೆನ್ನೆ ಮೇಲೊಡುದಂಗೆ ಕೇಳೀತು ಬಸವಣ್ಣಂಗೆ
"ನಾವು ಊಟಕ್ಕೆ ಪಡುಸಿ ಫಲುವಿಲ್ಲ | ೧೧೨೦

ಉಂಡೋಗೋ ಜಂಗುಮರು ನಮ್ಮ ಕೊಂಡಾಡಿ
ಬೋಯ್ತಾರೆ
ಉಣ್ಣಕ್ಕಿಕ್ಕುದರು ಫಲುವಿಲ್ಲ |

ಅನ್ನದಾನ ಮಾಡಿ ವಸ್ತುರ ದಾನಮಾಡಿ
ನಾ ಪುಣ್ಯ ಪಡುದಿ ಎಂದು ತಿಳಿದಿದ್ದಿ |

ಪುಣ್ಯ ಬರುತದೆ ಎಂದು ನನ್ನರುದಯಕ್ಕೆ ತಿಳುದಿದ್ದಿ
ಬೊಯ್ಸುಕೊಳುವಂತ ಗತಿಬಂತು |

ಬನ್ನಿ ನೀಲಮ್ಮ ತಾಯಿ ಬೇಗದಲಿ ನೀವ್‌ಬನ್ನಿ
ಬೊಯ್ಸುದಕೆ ಊಟುಕ್ಕೆ ಪಡುಸಿದಿಯ |

ಹಪ್ಪಾಳ ತೆಪ್ಪೀತೋ ಉಪ್ಪುನಕಾಯಿ ತೆಪ್ಪೀತೋ
ಬಚ್ಚಿ ಗೊಜ್ಜಾರ್ಗೆ ಕೊಡನಿಲ್ಲ | ೧೧೩೦

ಊಟ ಉಂಡೋಗೋರು ತಿರ್ಕ ಬಸವಣ್ಣ ಎಂದು
ಕೊಂಡಾಡ್ತರಲ್ಲ ರಾಜ್‌ಬೀದೀಲಿ |

ನೀ ಮಾಡಿರುವ ಅಪರಾಧ್ವ ನಂಗೆ ಜಲ್ದಿ ಹೇಳು ಎಂದು
ನಮ್ ಸಂಗನ ಬಸವಣ್ಣ ನುಡಿದಾರು |

ನಿಮ್ ಕೈ ಹಿಡುದ ಕಾಲಕು ನಾವಂಚಣೆ ಮಾಡ್ದೋಳಲ್ಲ
ನಿಮ್ ಪಾದ ಸತ್ಯ ಸ್ವಾಮಿ ಇದು ನಿಜ" ಅಂದ |

"ನೀ ವಂಚ್ನೆ ಮಾಡದಿದ್ದ ಮ್ಯಾಲೆ ನನ್ನಾಡಿಕೊಳ್ಳೋರ್ಯಾರು
ಆ ಸರಣಾನ ನೋಡಿ ಬರುತೀನಿ" |

ಎದ್ದರು ಬಸವಣ್ಣ ತಮ್ಮ ಗದ್ದಿಗೆ ಬುಟ್ಟುಬುಟ್ಟು
ಕಲ್ಯಾಣ್ದ ಬಾಗುಲಿಗೆ ತೆರಳಿದರು | ೧೧೪೦

ಕಡೆಯ ಬಾಗುಲ ಮುಂದೆ ಕುಳುತವ್ನೆ ಕೊಂಡುಗ
ಕಾಲ್ ಮೇಲೆ ಕಾಲಾಕಿ ಕುಳುತವ್ನೆ |

ಕಾಲ್ ಮೇಲೆ ಕಾಲಾಕಿ ಕುಂತುಕೊಂಡು ಕೊಂಡೂಗ
ಹಳೆಯ ಪಟ್ಟೀಗೆ ಲೆಕ್ಕ ಬರೀತಾನೆ |

ವಾಲೆಗರಿಯ ಮ್ಯಾಲೆ ಬರಿಯುತ್ತಿದ್ದ ಈ ಲೆಕ್ಕ
ಹೋಗಿ ನಿಂದರು ಅವನ ಎದುರಾಗಿ |

ಅವನುಗಿಂತ ಮೊದಲೆ ನಮ್‌ಗುರು ಬಸವಣ್ಣೋರು
ಸರಣ ಸರಣಾರ್ತಿ ಎನ್ನುತ್ತಾರೆ |

"ಯಾಕಪ್ಪ ನನುಮೇಲೆ ನಿನ್ನ ರುದಯದಲಿ ಬಲುಕೋಪ
ನಾ ಮಾಡುದ ಅಪರಾಧ್ವ ನನಗೇಳು | ೧೧೫೦

ಅಂತೆ ತೆಪ್ಪಾ ನಿನಗೆ ನಾ ಏನು ಮಾಡಿದ್ದೇನು
ಹೇಳಿ ಮಂಚಣ್ಣ ನನ್ ಜೊತೆಯಲ್ಲಿ |

ಅನ್ನಿಂದ್ಲು ನನ್ನೆ ನೀ ಗುರು ಅಂತ ತಿಳುದಿದ್ದೆ
ಇಂದುಟ್ಟುದ ಬುದ್ಧ ನನಗೇಳು |

ಇಂದುಟ್ಟುದ ಬುದ್ಧ ನನಗ್ಹೇಳು" ಅಂದಾಗ
ಇವ ಮಾತಾಡ್ದೆ ಲೆಕ್ಕ ಬರಿದಾನು |

ಕರದರೆ ಮಾತಿಲ್ಲ ಇವ ತಿರುಗಿ ನೋಡನಿಲ್ಲ
ಹೋಗಿ ಮುಂಗ್ಯೆಯ ಹಿಡಿದಾರು |

"ಬಿನ್ಯಬ್ರೇದ ಬುಟ್ಟು ಎದ್ದೇಳಿ ಕೊಂಡುಗರೆ
ದಯಮಾಡಿ ಊಟುಕ್ಕೆ ಗುರುಮಠಕೆ" | ೧೧೬೦

"ಬಿಡ ಬಿಡ ಬಸವಣ್ಣ ನಿನ್ನ ಬಡ ಮಾತುಗಳನ್ನೆಲ್ಲ
ಬಿಡಾ ನನ್ ಕೈಯ ಹಿಡಿಬ್ಯಾಡ |

ನನಗೂ ನಿನುಗೂ ಏನೂ ಸಮ್ಮಂದವಿಲ್ಲ
ನನ್ಯಾರು ಅಂತ ಕೈಯ ಒಡುಕೊಂಡೆ |

ಮಗ್ಗುಲೊಳಗಲ ಹಾವೂಂತ ಹಿರಿಯರು ಹೇಳಿಲ್ಲೆ
ಅಂತಾ ಗುಣವುಂಟು ನಿನ್ ಮನದಲ್ಲಿ |

ಒಳ್ಳೀಗುಣವ ನಿನ್ನಾತ್ಮದಲ್ಲಿ ಇಟ್ಟಿದ್ದರೆ
ನನ್ ಬುಟ್ಟು ಊಟಕ್ಕೆ ನೀನಿರಲಿಲ್ಲ |

ಹುಳುಕು ಜಂಗಮರಿಗಿಂತ ನಾ ಕಡೆಯಾದ ಕಾರಣ
ನನ್ನ ಕರೆಯಾದೆ ಪಂತ್ಕ ಅಳುಕೊಂಡೆ | ೧೧೭೦

ಕೊಳುಕು ಜಂಗುಮರಿಗಿಂತ ನಾ ಕಡೆಯಾದ ಕಾರಣ
ನೀ ಒಳುಗೆ ಮಾಡ್ಕೊಂಡೆ ಬಸುರೊಸುಗ್ಕ |

ಕಂಡ ಮಾತಾಡೊವ್ರ ಕಂಡ್ರೆ ಕೆಂಡ ನುಂಗುದಂಗಂತೆ
ಆ ಮಚ್ರ ಉಂಟು ನಿನ್ ಮನದಲ್ಲಿ |

ಮೆತ್ತುಗಾಡುವನಲ್ಲ ನಾ ಸತ್ಕ ಬಿಡುವವನಲ್ಲ
ಕಂಡ ಮಾತ್ ಮಾತ್ರ ನಾ ಬಿಡೂದಿಲ್ಲ |

ಕಂಡ ಮಾತ ಮಾತ್ರ ನಾ ಬಿಡದಿದ್ದ ಕಾರಣ
ನನ್ ಮರ್ತು ಜಂಗುಮರಿಗೆ ಪಡುಸೀದೆ |

ನಂನಿದೇನಾಗ್ಬೇಕು ನಿನ್ನವರೆಲ್ಲ ಉಂಡ್ರಲ್ಲ
ನನ್ನ ಕೈ ಬಿಪು" ಅಂತಾನೆ ಕೊಂಡೂಗ | ೧೧೮೦

"ಇಂತೆ ಬುದ್ದಿ ಕಲಿತೊನೊಂದ್ಗೆ ನಾ ಏನ್ ಮಾತಾಡ್ಲಪ್ಪ
ನೀ ಬುದ್ಧವಂತ ಕಾಣಪ್ಪ ಧರಿಯಲ್ಲಿ |

ಇಂತಾ ಸುಚಿಯಾದ ಮಾತ ನಾನೆಂದು ಕಲಿಯಾಲಿಲ್ಲ
ಇಂತ ನ್ಯಾಯ ಅನ್ನುದ್ದ ನಾ ಕಾಣ್ಣೆಲ್ಲ |

ನ್ಯಾಯಗಾರನೊಂದೀಗೆ ನಾ ಯಾವ ಮಾತ ಹೇಳಪ್ಪ
ನ್ಯಾಯುವಾಗೂಟಕ್ಕೆ ನೀನೆಡಿಯಪ್ಪ |

ಇನ್ನು ಮುನ್ನು ನಾನು ಶಿವಪೂಜೀನೆ ಮಾಡಿಲ್ಲ
ನಿನ್ ಸತ್ಯವಾಗೂ ಕಾಣಪ್ಪ ಮಂಚಣ್ಣ |

ನಿನ್ನ ಬರಲಿ ಎಂದು ನನ್ನ ಮನುವೆ ಹರಿದಾಡುತಿತ್ತು
ಇದು ಸತ್ಯ ಅನುತ್ಹೇಳಿ ನೀ ತಿಳುಕಪ್ಪ | ೧೧೯೦

ಆದವರ ಬುಟ್ಟು ಬುಟ್ಟು ನಾ ಊಟ ಮಾಡೋನಲ್ಲ
ನೀ ಬಂದದ್ದು ಬಾಳ ಅನುಕೂಲ |

ಈವಾಗ ಬರದೇ ಇದ್ರೆ ನಾ ಜಂಗುಮರ ಕಳುಗುತಿದ್ದಿ
ಇದು ಸತ್ಯ ಎಂದು ನೀ ಬರುಕೊಪ್ಪ" |

"ಬಲ್ಲಿ ಬಲ್ಲಿ ಬಸವಣ್ಣ ನಿನ ಬೆಲ್ಲದಂತ ಮಾತ
ನೀ ಲಿಂಗ ಕಟ್ಟುದೋನಲ್ಲ ಬಸವಣ್ಣ |

ಗಂಗೇಗೆ ಕಟ್ಟಿಲ್ಲ ಲಿಂಗುಕ್ಕೆ ಸೂತುಕವಿಲ್ಲ
ನಿನ್ನ ಲಿಂಗಾಯುತ್ರು ಜನುಕೆ ಕುಲುಫ್ಲೆಲ್ಲ |

ಲಿಂಗವ ಕಟ್ದೋರ್ಗೆ ಕುಲುವಿಲ್ಲ ಚಲುವಿಲ್ಲ
ಇನ್ನೊಡುದೇಳ್ಕ ನಾನು ನಿನ್ ಜೊತೆಯಲ್ಲಿ ? | ೧೨೦೦

ನಾ ಅಂದುದೊಂದ್ಮಾತೀಗೆ ನೀ ಅರ್ಥ ಮಾಡಿದ್ದೆ ಸಾಕು
ಏನೇಳ್ದ ಅಂತು ನೀ ತಿಳುಕೊಪ್ಪ |

ಗರತಿ ಅಂತಿದ್ಮಲ್ಲ ನಿನ್ನಕ್ಕ ನಾಗಮ್ಮನವರ
ಅವಳ ಬಚ್ಚಲಿ ಗುಣುವ ನೀ ತಿಳುಕೊಂಡ್ಯಾ |

ನಿನ್ ತಂಗೆ ಮಾಡೀದ ಕೆಲ್ಸ ನಿನುಗರ್ಥವಾಯ್ತು ಬಸವಣ್ಣ
ಇದನಾಡುದವರ ಕಂಡ್ರೆ ನಿನುಗೆ ಬಲು ಕೋಪ" |

"ಇದೇನು ಮಂಚಣ್ಣ ಇಂತಾ ಕುಂದದ ಮಾತೇಳ್ತೀಯೆ
ಅವ ಬಚ್ಚಾಲಿ ಎಂದು ನೀ ತಿಳುಕೊಂಡ್ಯ ?" |

"ಬಚ್ಚಾಲಿ ಅಲ್ಲದೆ ನಿನ್ತಂಗೆ ಯಾರ್ಗೆ ಬಸುರಾದ
ನಿಚ್ಚಾಯವಾಗ್ಹೇಳು ನನ್ ಜೊತೆಯಲ್ಲಿ" | ೧೨೧೦

"ಹರುಳಯ್ಯ ಮನೆಯ ಒಂದ್ಹರಳು ಪ್ರಾಸೋದವ
ನನ್ ತಂಗೆ ಸಲುಸೀದ ನಾಗಮ್ಮ |

ಆ ಒಂದ್ಹರುಳು ಅನ್ನ ಪ್ರಾಸೋದವ ಚೆನ್ನನಾಗಮ್ಮುಂಡು
ಆ ಪ್ರಾಸೋದ್ಕೆ ತಂಗೆ ಬಸುರಾದ" |

"ಹೌದಾ ? ಹೌದು ಬಸವಣ್ಣ ಯಾರು ತಿಳಿಸಿರನಿಲ್ಲ
ಹಂಗಂತ ನಾನು ತಿಳಿನಿಲ್ಲ |

ಈಗ ನೀ ಆಡಿದ ಮಾತು ನಂಗೆ ಮುಂದೆ ಬೇಕಾಯ್ತದೆ
ಗ್ಯಾಪುಕವಿರಲಪ್ಪ ಬಸವಣ್ಣ" |

"ಆಮಾತೀಮಾತಿನಿಂದ ಬೆರಗು ಮಾಡಲುಬೇಡ
ನೀ ಊಟ ಮಾಡೋ ಮಾತ ಮೊದುಲ್ಹೇಳು | ೧೨೨೦

ನಮ್ಗೆ ಬಾಳ ಹಸುವಾಯ್ತೀವೆ ಎದ್ದೇಳು ಮಂಚಣ್ಣ
ನೀ ಬರೋದಿಲ್ಲ ಎಂದ್ರೂ ನಾ ಬಿಡಲಾರೆ" |

ಆ ಮಾತ ಕೇಳ್ಕೊಂಡು ಕೊಂಡುಗರ ಮಂಚಪ್ಪ
ಹೊರಟ ಕಲ್ಯಾಣ್ದ ಒಳುಗಡೆ |

"ದೊಡ್ಡ ಜನುಗಳ ಮಾತ ನಮಗ್ಯಾಕೆ ಬೇಕೂಂತ
ನೀವೇನಾರೂ ಮಾಡಿ ಬಸವಣ್ಣ |

ಹೊಟ್ಟೆ ತುಂಬಲಿ ನನಗೆ ಮಾತ್ಯಾಕೆ?" ಎನುತ್ಹೇಳಿ
ಬಂದು ಕಲ್ಯಾಣ್ದಲ್ಲಿ ಕುಳಿತಾರು |

ಪಾದುಕ್ಯಾಗಣಿ ಎರದು ಮಡಿಯನ್ನೆ ಹಾಸುದರು
ಆ ಮಡಿಯ ಮೇಲೆ ಮಂಚಣ್ಣ ಕುಳಿತಾರು | ೧೨೩೦

ತಾಯಿ ನೀಲಮ್ಮಯ್ಯ ಬಾಳ ವಾಮನೇಮದಿಂದ
ಮಾಡಿದ್ದ ಅಡುಗೆ ಎಡಪಡುಸಿ |

ಮಾಡಿದ್ದ ಅಡುಗೆ ಪಡುಸ್ತ್ರ ಮಂಚಣ್ಣನೀಗೆ
ಅವ್ರ ಬೆನ್ನಿಂದೆ ಬಸವಣ್ಣ ಕುಳುತವ್ರೆ |

"ನಾಚುಕೊಳ್ಳಬೇಡಪ್ಪ ಮನಪೂರ್ತಿ ಊಟ ಮಾಡು
ಸಂದೇಗ ಬೇಡ ನಿನ್ಮನದಲ್ಲಿ |

ಮಾನ ಕೊಟ್ಟರು ನಿನದೆ ಅವಿಮಾನಮಾಡುದ್ರು ನಿನದೆ
ಧರ್ಮಕರ್ಮವೆಲ್ಲ ನಿನ್ನೊಳಗುಂಟು |

ಕೋಟಿ ಜಂಗುಮರೆಲ್ಲ ನನ್ಮಠದಲ್ಲಿ ಇರಬಹುದು
ನ್ಯಾಯ ಕಂಡವರೆ ಮೊದುಲಿಲ್ಲ | ೧೨೪೦

ನನ್ನ ಕಲ್ಯಾಣ್ದ ಗುರುಮಠಕೆ ನೀ ನ್ಯಾಯಾದಿಪತಿಯಪ್ಪ
ನನ್ ಕಾಪಾಡ ಭಾರ ನಿನ್ನೊಳಗುಂಟು |

ಬಿಜ್ಜಳನ ಜೊತೆಯಲ್ಲಿ ನೀವೊಳ್ಳೆದಾಗಾಡಿದರೆ
ನಾನ್ ಹೊಳ್ಕೊಂಡಿ ಎಂದು ತಿಳಿಕೊಳ್ಳುವೆ |

ಆ ರಾಜನ ಜೊತೆಯಲ್ಲಿ ನೀ ಕೆಟ್ಟದಾಗ್ ಹೇಳಿದರೆ
ನಾ ಹದಗೆಟ್ಟಿ ಎಂದು ತಿಳುಕೊಳುವೆ |

ಒಳ್ಳೆದ್ದ ಮಾಡೀಯೊ ಕೆಟ್ಟದ್ದ ಮಾಡಿಯೋ
ಇವೆರಡು ಮಂಚಣ್ಣ ನಿನ್ನೊಳಗುಂಟು |

ಇವೆರಡು ಮಂಚಣ್ಣ ನಿನ್ನೊಳಗುಂಟು" ಎನುತ್ಹೇಳಿ
ಅವುನ್ಗೆ ಧರ್ಮಕರ್ಮಾನೆಲ್ಲ ಹೊರುಸಿದರು | ೧೨೫೦

ಧರ್ಮಕರ್ಮಗಳೆರಡ ಅವುನ್ ಮೇಲೆ ಇಟ್ಟಾಗ
ಅವ ಏನ್ಮಾಡ್ತನೆ ಪಾಪಿ ಕೊಂಡೂಗ |

ಬಲಗೈಲಿ ಮಂಚಣ್ಣ ಊಟವ ಮಾಡ್ತಾನೆ
ಎಡಗೈಲಿ ಮಣ್ಣ ಹಿಡಿದವ್ನೆ |

"ಧರ್ಮವಪ್ಪ ನಿನಗೆ ನನ್ನ ಹೆಚ್ಚೀನ ಮಂಚಪ್ಪ ?
ಮಣ್ಣೆನಿಡುಕೊಂಡೆ ನಿನ್ ಎಡಗೈಲಿ" |

"ನಿನಗಂತ ಬಸವಣ್ಣ ನಾ ಹಿಡಿದಿಲ್ಲ ಈ ಮಣ್ಣ
ಈ ಮಣ್ಣಿಡಿದ ಬಗೆಯ ನೀ ಬಲ್ಲಿ |

ಅನ್ನವ ಬೆಳಿಯದ್ದು ಈ ಮಣ್ಣಲ್ವ ಬಸವಣ್ಣ
ಆದಿ ಮಣ್ಣಲ್ವ ಬಸವಣ್ಣ | ೧೨೬೦

ಊಟಾವನ್ನು ಮಾಡಾಗ ಮಣ್ಣಾನು ಹಿಡಿಯಾದು
ನನ್ನ ಸಾಚಾ ಪದ್ಧತಿ ತಿಳುಕೊಪ್ಪ" |

ಹಂಗಂದ ಮಾತನ್ನೆ ಕೇಳಿ ಬಸವಣ್ಣನವರು
ನೀ ಹ್ಯೆಂಗ್ಯಾರು ಮಾಡು ಮಂಚಣ್ಣ |

ಊಟ ಮಾಡೆದ್ದವನಿಗೆ ನಮ್ಮ ಕಲ್ಯಾಣ್ದ ಬಸವಣ್ಣ
ಈಳ್ಯ ಮರ್ಯಾದೆಯ ಕೊಡುಸಿದರು |

ರೊಕ್ಕುವ ಮಡುಗವುರೆ ಲೆಕ್ಕವಿಲ್ದೆ ಬಸವಣ್ಣ
ತಕ್ಕೊಂಡೋಗಪ್ಪ ಮಂಚಣ್ಣ |

ಜೋಡಿ ಪಂಚೆ ಕೊಟ್ರು ಜೋಡಿ ಶ್ಯಾಲ ಕೊಟ್ರು
ಜೋಡು ಕುದುರೆ ಸಾರೋಟು ಬೋಮಾನ | ೧೨೭೦

"ಭೂಮಿ ಮ್ಯಾಲ್ ನಡುಕೊಂಡು ನೀ ತಿರುಗಬ್ಯಾಡ
ಮಂಚಣ್ಣ
ತಿರುಗು ಸಾರೋಟಾ ಗಾಡೀಲಿ" |

ಎಲ್ಲನು ಪಡುಕೊಂಡು ಬಿಟ್ಟಾನೆ ಗುರುಮಠುವ
ಏರೀದ ಕುದುರೆ ಸಾರೋಟ |

ಕಲ್ಯಾಣ್ದ ಬೀದಿವೊಳಗೆ ರವುಸ್ನಲ್ಲಿ ಬರುತ್ತಿದ್ದ
ಒಗೊಂದು ಗ್ಯಾನ ಮಾಡ್ತಾನೆ |

"ಉಂಡದ್ದು ಊಟವಲ್ಲ ತಕೊಂಡದ್ದು ಮರ್ಯಾದಲ್ಲ
ನಾ ಕಂಡ ಮಾತೇಳದ್ದೆ ಸರಿತಾನೆ ? |

ಹೇಳುಬಾರದು ಅಂತ ನನ್ನ ಮನದಲ್ಲಿ ಇತ್ತಲ್ಲೂ
ಯಾಕೊ ಹೊಟ್ಟೆ ನನಗೆ ನೋಯ್ತೀದೆ | ೧೨೮೦

ಅನ್ನ ಉಂಡ ದೊರೆಗೆ ಅನ್ಯಾಯ ಮಾಡಲು ಬ್ಯಾಡ
ಹಾಗೆಂದು ಈ ಹೊಟ್ಟೆ ನೋಯ್ತೀದೆ |

ಬಾಳ ಕಾಲದಿಂದ ಕಾಪಾಡವುರೆ ಬಿಜ್ಜಾಳ
ಮೊದಲು ಮಂತ್ರಿಯಾಗಿ ನನ್ನ ಪಡುದಿದ್ದ |

ಮಂತ್ರಿ ಪದ್ವಿ ಕೊಟ್ಟು ತಡುದಿದ್ದ ಬಿಜ್ಜಾಳ
ಅವುರ್ಗೆಂಗೆ ಮರುಸ್ಕೊಂಡು ನಾನಿರುಬೇಕು" |

ಮನುಗೋಗ ಸಾರೋಟು ಬಿಡುತಾನೆ ಅರಮನೆಗೆ
ಬಂದ ಬಿಜ್ಜಳನ ಅರಮನೆಗೆ |

ಮುತ್ತುನ್ಗದ್ದಿಗೆ ಮೇಲೆ ಕುಂತವ್ನೆ ಬಿಜ್ಜಳರಾಯ
ಇವನ ಸಾರೋಟ ಬುಟ್ಟು ಇಳಿದಾನು | ೧೨೯೦

ಸಾರೋಟ ಬುಟ್ಟಿಳಿದು ಮಾರಾಜನ ಬಳಿಗೆ ಬಂದ
ಇವನಂತೂ ನೋಡಿದ ಬಿಜ್ಜಾಳ |

"ಓಹೋ ಏನಪ್ಪ ಮಂಚಣ್ಣ ಬಲ್
ಖುಷಿಯಾಗಿದ್ದೀಯಲ್ಲ
ಇಂದುನ ಖುಷಿಯ ನೋಡಿದರೆ ನನಗಾನಂದ |

ಈವತ್ತುನ ಕಳೆಯ ನಿನ್ಗೆ ಬಾಳ ಚಂದಾಗದೆ
ಏನಾರು ಹೋಗಿದ್ಯ ಕಲ್ಯಾಣ್ದ ಗುರುಮಠುಕೆ ?|

ಒಡಿಯಾನ ಸೇವೆ ಮಾಡಿ ಒಂಬತ್ತು ತಿಂಗಳಾಯ್ತು
ನಾ ಇನ್ನು ಗುರುಗಳ ನೋಡಲಿಲ್ಲ |

ಗುರು ನೋಡದಿದ್ಮೇಲೆ ನಮ್ ಕರ್ಮ ಹರಿಯೋದಿಲ್ಲ
ಕಂಡಿದ್ಯಾ ಹೇಳು ಗುರುಸ್ವಾಮ್ಯ | ೧೩೦೦

ಬಸವಣ್ಣ ಎನುತ್ಹೇಳಿ ನಮ್ ಬಾಯಲ್ಲಿ ಹೊಗಳಿದರೆ
ದೆಸೆಗೆಟ್ಟೋಗುವುದು ನಮ್ಮ ಪಾಪವೆಲ್ಲ |

ಅವುರ್ಸುದ್ದಿ ಕೇಳಿ ಒಂಬತ್ತು ತಿಂಗಳು ದಿನ
ಕಂಡಂಗಿಂಡಿದ್ಯಪ್ಪ ಆ ಗುರುವನ್ನ |

ಅರವತ್ತಾರ್ ಬೀದಿ ಕಡ್ದು ನನಗೋಗದಾಕೆ ಬೇಜಾರು
ಹೋಗಿ ದೊಡ್ಡೋರ ನಾನೋಡ್ನಿಲ್ಲ |

ಹೆಂಗಸ್ರು ಎಂದಾರೆ ಎಲ್ರು ಹೆಂಗಸರಲ್ಲ
ಮಾತಾಯಿ ಸತ್ವಂತೆ ನೀಲಮ್ಮ |

ಆ ನೀಲಮ್ಮತಾಯಿ ಪಾದ ನಾನಿನ್ನು ನೋಡ್ಲಿಲ್ಲವಲ್ಲ
ನೀವೋಗಿ ಕಂಡ್ಯಪ್ಪ ಗುರುವನ್ನ" | ೧೩೧೦

ಆಡತನೆ ಬಿಜ್ಜಳ ಇವಕಣ್ಮುಚ್ಚಿ ಕೇಳತನೆ ಮಂಚಣ್ಣ
"ಎಷ್ಟಾಡಿಯೋ ಆಡು ನಾ ಕೇಳ್ತೀನಿ |

ಕಾಣದೆ ಹೋದೊರ್ಗೆ ಕೋಣೆ ಪರ್ವತವಂತೆ
ಇವ ಕಾಣ್ದೆ ಇದ್ದದುಕೆ ಪರುವಾತ |

ಬೆಟ್ಟ ಕೊಂಡಾಡಾಗೆ ಕೊಂಡಾಡ್ತನೆ ಬಸವಣ್ಣನ
ಅವ್ರ ಕೆಟ್ಟುದ್ದ ಇವ ತಿಳುದಿಲ್ಲ" |

"ಏನ್ ಮಂಚಣ್ಣ ನೀ ಮಾತನ್ನೆ ಆಡೋದಿಲ್ಲ
ಬಾಯ್ ಬುಟ್ಟು ಅರುಗ ನನ್ ಜೊತೆಯಲ್ಲಿ |

ಇದ್ದರೆ ಇರಬೇಕು ನಿನ್ನಂತೆ ಹೇಡಿ ರಾಜ
ಇಂತೆ ಹೇಡೀಗೆ ಯಾವುತ್ರ ನಾ ತಿಳಿಸಾಲಿ | ೧೩೨೦

ಹೇಡಿ ರಾಜನ ಒಂದ್ಗೆ ನಾ ಏನ್ ಹೇಳ್ಲಿ ಅಂತ್ಹೇಳಿ?"
ಕೋಪತ್ತು ಮಾತಾಡ್ದ ಅವ್ನ ಜೊತೆಯಲ್ಲಿ |

"ಕಲ್ಯಾಣ್ದ ಸಂಗತಿಯ ನಿನ್ ಜೊತೆಯಲ್ಲಿ ಹೇಳಿದರೆ
ನಿನ್ನ ಪಟ್ಟ ಪಾಳ್ಕೆವ ಕೊಡುತೀಯ |

ಪಟ್ಟವ ಕೊಡ್ತೀಯ ನಿನ್ ದೊರುತಾನ ಕೊಡ್ತೀಯ
ನಿನ್ನೇಳ್ಜನ ಹೆಡ್ತೀರ ಕೊಡುತೀಯ |

ನಿನ್ನೇಳ್ ಜನ ಹೆಡತೀರ ಒಂದ್ ಮದ್ವಾನೆ ಕೊಟ್ರೆ
ಅಲ್ಲಿ ನಡೆದಂತ ಸಂಗ್ತ್ಯ ನಾ ಹೇಳ್ತೀನಿ" |

ಕೊಂಡುಗ್ರ ಮಂಚನ ಮಾತ ಕೇಳಿ ಬಿಜ್ಜಳರಾಜ
ಭೂಮಿ ಬಡುಕೊಂಡು ಮೊರುದೆದ್ದ |

"ಎಂತೆ ಮಾತಾಡ್ಸೇನೊ ಕುಲುಗೇಡಿ ಕೊಂಡೂಗ
ಎಂತ ಮಾತಾಡ್ಸೆ ನನ್ ಜೊತೆಯಲ್ಲಿ |

ನನ್ನೆಂಡ್ತೀರ ಕೇಳ್ಸಂತ ಪೌರ್ಯಾಸ ಬಂತೇನೊ
ನಿನ್ನ ಕಲ್ಯಾಣಕ್ಕ ಕಟ್ಟಿ ಆರಸೂವೆ" |

"ಹೆಣ್ತೀರ್ ಕೊಡ್ನಿಲ್ಲ ನಿನ್ ದೊರ್ತಾನ ಬುಡ್ನಿಲ್ಲ
ಬೇಕು ಅಂತ ನಿನ್ನೆಂಗುಸ್ರನಾ ಕೇಳ್ನಿಲ್ಲ |

ನಮ್ಮ ತಾಯಿಯಂಗೆ ನಿನ್ನೆಂಗುಸರು ಬಿಜ್ಜಾಳ
ನಿನಗೆ ಕೊಪ್‌ಬರ್ಲಿ ಎಂದು ನಾ ಆಡೀದಿ |

ಕನ್ನ ಪ್ರಾಯದ ಹುಡುಗಿ ಗರ್ಭಣಿಯಾಗವಳಲ್ಲ
ಅದ್ಕೆ ಕೇಳ್ದಿ ನಿನಗೆ ಈ ಮಾತ" |

"ಯಾರು ? ಯಾರು ? ಯಾರು ? ಕೊಂಡುಗರ ಮಂಚಣ್ಣ
ಯಾರು ಗರ್ಭಣಿಯಪ್ಪ ಮಂಚಣ್ಣ ? |

"ಕಲ್ಯಾಣ್ದ ಒಳುಗೆ ಬಸವಣ್ಣನ ತಂಗೆ
ಅಕ್ಕ ನಾಗಮ್ಮಯ್ಯ ಬಸುರಾದ |

ಅಕ್ಕ ನಾಗಮ್ಮಯ್ಯ ಬಸುರಾದ ಈ ಮಾತು
ಬಿಜ್ಜಳ ದೊರೆಯಿ ತಿಳಿದಿಲ್ಲ |

ಬಸವಣ್ಣನ ತಂಗೆ ಬಸುರಾದ ಈ ಮಾತು
ಒಕ್ಕುಲುಗರ ಬೀದೀಲಿ ನಿಲುಭಾರ |

ಅಕ್ಕ ನಾಗಮ್ಮಯ್ಯ ಕದ್ದಂತ ಈ ಸುದ್ದಿ
ಸೂಳೆಗೇರಿ ಒಳುಗೆ ಹರುಡೀದೆ |

ಬೀದಿ ಬೀದಿ ಒಳುಗೆಲ್ಲ ಅದೇ ಸುದ್ದಿ ಬಿಜ್ಜಳ
ಇನ್ನು ನಿನ್ ಕಿವುಗೆ ಬಿಳನಿಲ್ಲ |

ಹಾಲ್ ಕುಡಿದರೆ ಏನ ನೀ ಅನ್ನ ಉಂಡರೆ ಏನ
ಹಾಲ್ನಂತ ಬುದ್ದಿ ನಿನ್ನೊಳಗಿಲ್ಲ |

ಹಾಲೀಗೆ ಸಕ್ಕರೆ ಹಾಕಿ ನೀ ಊಟಮಾಡಿದರೇನ
ಆ ಸೆಕ್ರದಂತೆ ರುಚಿ ನಿನ್ನೊಳಗಿಲ್ಲ |

ಆ ಸೆಕ್ರದಂತೆ ರುಚಿ ನಿನ್ನೊಳಗಿಲ್ಲ ಬಿಜ್ಜಳರಾಜ
ನೀ ರಾಜನಾಗಿ ಇದ್ದು ಫಲವೇನ |

ಬೋಳು ಬೋಳು ಜಂಗುಮರ ಅವ ಮಾಳಿಗ್ಗೆ
ಕರುಕೊಂಡು
ಬೋಳುದಲೆಯವರೊಂದ್ಗೆ ಒಡನಾಡಿ |

ಬೋಳುದಲೆಯವರೊಂದ್ಗೆ ಒಡನಾಡಿ ಬಿಜ್ಜಳ ರಾಜ
ನಾಗಮ್ಮ ಏಳು ತಿಂಗಳ ಎಳಬಸುರಿ |

ಕಂಡ ಕಂಡವರ ಮಕ್ಕ ಕೈಬೀಸಿ ಕರುಕೊಂಡು
ಆ ಕಂಡವರ ಮಕ್ಕೊಂದ್ಗೆ ಒಡನಾಡಿ |

ಕಂಡವರ ಮಕ್ಕೊಂದ್ಗೆ ಒಡನಾಡಿ ಬಿಜ್ಜಾಳ
ಆ ದುಂಡಿ ನಾಗಮ್ಮ ಬಸುರಾದ |

ಊರೆಲ್ಲ ಕೂಗ್ತೀದೆ ಕೇರೆಲ್ಲ ಉಂಡಾದೆ
ಈ ಸುದ್ದಿ ನಿನ್ ಕಿವಿಗೆ ಬೀಳನಿಲ್ಲ |

ಈ ಸುದ್ದಿ ನಿನ್ ಕಿವಿಗೆ ಬೀಳದಿದ್ದ ಕಾರಣ
ನಾ ಕೋಪತ್ತಿ ಮಾತಾಡ್ದೆ ನಿನ್ ಜೊತೆಯಲ್ಲಿ |

ಗುರು ಗುರಂತ್ಹೇಳಿ ಕೊಂಡಾಡ್ಕಲ್ಲ ಬಸವಣ್ಣನ
ಆ ಗುರುಮನೆಯ ಯೋಕ್ಕ ತಿಳುಕೊಂಡ್ಯ ? |

ಮಾಗರತಿ ಅನ್ನತ್ತಿದ್ದಲ್ಲ ಅವುನ ತಂಗೆ ನಾಗಮ್ಮಾನ
ಆ ಗರತಿಯ ನಿಜುವ ತಿಳುಕೊಂಡ್ಯ ? |

ಗರತೀಯ ನಿಜವನ್ನೇ ತಿಳುಕೊಂಡ್ಯ ಬಿಜ್ಜಾಳ
ಕೆಟ್ಟೊಯ್ತು ಕಲ್ಯಾಣ್ದ ಗುರುಮಠ |

ರಾಜನಾಗಿ ನಿನಗೆ ಮಾನ ಉಳಿಯೊದಿಲ್ಲ
ರಾಜ್ಯ ಕೆಟ್ಟೋಗೋ ದಿನ ಬಂತು |

ಗುರುಗಳ ಮನೆಯಲ್ಲಿ ಇಂಥ ಕತೆಯಾದ್ಮೇಲೆ
ಇನ್ನು ಉರೋರಿಂದೇನ ಬಿಜ್ಜಾಳ ? |

ಕಾಳೀ ಬೋಳಿರೆಲ್ಲ ಇನ್ ಬಸುರಾಯ್ತರೆ ಕಾಣಯ್ಯ
ರಾಜ ಎಂದು ನಿನ್ಗೆ ಹೆದುರೊದಿಲ್ಲ |

ಏನ್ಮಾಡ್ಬೇಕಪ್ಪ ನನ್ನ ನ್ಯಾಯಾಧಿಪತಿಯೆ
ಏನ್ಮಾಡ್ಬೇಕು ಹೇಳು ನನ್ ಜೊತೆಯಲ್ಲಿ |

ತಪ್ಪು ಮಾಡೀದ ಜನಕೆ ಏನ್ಮಾಡಬೇಕು ಕೆಲ್ಸ
ನೀ ಹೇಳ್ದಂಗೆ ನಾಳೇ ನಾ ಕೇಳ್ತೀನಿ |

ಮಂದದ ಕಟ್ಟೆಗೆ ಕರಸು ಬಿಜ್ಜಳ ದೊರೆಯೆ
ಸೇರಾಲಿ ಕೂಟ ಕುಲುದೋರು" |

ಕೋಟುಗೊಬ್ಬ, ಸರಣಾರು ಕುಲುಕೊಬ್ಬ, ಭಕ್ತಾರು
ಸೇರಬೇಕೆಂದು ಸಾರ್ಸವುರೆ | ೧೩೯೦

ಅಜ್ಜುಬೀಡನ ಅಳಿಯ ಮಧುವರಸು ಬ್ರಾಮಣ
ಬರಬೇಕು ನಮ್ಮ ಕುಲಸಬುಗೆ |

ಆ ಕಲ್ಯಾಣ್ದ ಬಸವಣ್ಣನ ಇನ್ನು ನೋಡ್ತಿವಿ ಅನುತ್ಹೇಳಿ
ಆ ಮಂಚಣ್ಣ ಮಚ್ರ ಮಡುಗೀದ |

"ಅನ್ನ ಪ್ರಾಸೋದ ಉಂಡಾ ಯಾರು ಬಸುರಾದಾರು
ಆಗಿದ್ದಾರ ದೊರೆಯೆ ಈ ಧರೆಯಲ್ಲಿ ?|

ಹರುಳಯ್ನ ಮನೆಯ ಒಂದರುಳು ಪ್ರಾಸೋದಕ್ಕೆ
ಅವ್ಗರ್ಭಣೆಯಾದದ್ದು ನಿಜುವಯ್ಯ? |

ಕುಲುವೆಲ್ಲ ಕೂಡಾಲಿ ನನ್ ಸಭೆಯ ಸೇರಾಲಿ
ಕೇಳುತೀನಿ ನೋಡಯ್ಯ ಬಸವಣ್ಣನ" | ೧೪೦೦

ಕೊಂಡುಗರ ಮಾತನ್ನ ಕೇಳಿ ಬಿಜ್ಜಳರಾಜ
ಕಲ್ಯಾಣ್ಕೆ ವಾಲೆ ಬರೆದಾನು |

ಕಲ್ಯಾಣ್ಕೆ ದೊಡ್ಡವುರೆ ಕೈಲಾಸ್ಕೆ ಹಿರಿಯೋರೆ
ಅಲ್ಲವೇನು ನಮ್ಮ ಶ್ರಮದವುರೆ |

ಅಲ್ಲವೇನು ನಮ್ಮ ಶ್ರಮದವುರೆ ಪ್ರಮದವುರೆ
ನಿಮ್ ಶ್ರಮೆಯ ಪಟ್ಟು ಮುಂದಕ್ಕೆ ಬರಬೇಕು |

ನಿಮ್ ಹರುಳಯ್ನ ಕರುಕೊಂಡು ನೀವ್ ಬರುಬೇಕು ಸಬುಗೆ
ನೆಡದಂತ ಸುದ್ದಿ ನಮುಗೇಳ್ಬೇಕು |

ಕೋಟಿ ಜಂಗುಮರಿಗೆಲ್ಲ ನಿಮ್ ಸುದ್ದೀಯಾ ಹೇಳೀರಿ
ಕುಲುಕೊಬ್ಬ ಸರಣಾರು ಬರುತಾರೆ | ೧೪೧೦

ಕುಲುವೆಲ್ಲ ಸೇರ್ಕೊಂಡು ನಿಮ್ ಕೇಳ್ತಾರೆ ಬಸವಣ್ಣ
ಅದ್ಕೆ ತಿಕ್ಕಿ ಉತ್ತುರುವ ಕೊಡಬೇಕು |

ಬಂದಂತೆ ವಾಲೇಯ ಓದಿದರು ಬಸವಣ್ಣ
ಹರಹರಾ ಎಂದು ಸಿರುದೂಗಿ |

"ನನ್ತಂಗಿ ನಾಗಮ್ಮ ಮಾಡಿದಪರಾಧಕ್ಕೆ
ನಾ ಕುಲುಸಬುಗೆ ಹೋಗ ದಿನ ಬಂತು |

ಅನ್ನ ಪ್ರಾಸೋದವುಂಡು ಇನ್ಯಾರು ಬಸುರಾಗಿಲ್ಲ
ತಿಳಿಯಬೇಕು ನನ್ತಂಗಮ್ಮ ಬಾಯಾರ |

ಬನ್ನಿ ನೀಲುಮ್ಮಯ್ಯ ಕರ್ಕೊಂಡ್ಬುನ್ನಿ ನಾಗಮ್ಮುನ
ಅವ ಕದ್ವನ ಕೇಳಿ ಕುಲುಕೋಗಬೇಕು" | ೧೪೨೦

"ಬನ್ನಿ ಬನ್ನಿ ತಾಯಿ ಬನ್ನಿ ನಾಗಮ್ಮಯ್ಯ
ನಿಮ್ಮಣ್ಣಯ್ಯ ಕರಿದಾರೆ ಬಸುವಣ್ಣ" |

"ಎಂದೂ ಇಲ್ಲದೊಡವುಟ್ಟು ಇಂದ್ಯಾಕೆ ಕರದರು?" ಎಂದು
ಆ ಏಳ್ತಿಂಗದ ಬಸುರಿ ಅಳುತಾಳೆ |

ಹೊಟ್ಟೆ ಒಳುಗಿರುವಂತ ಈ ಮಗುವನ್ನೆ ಹೊತ್ತುಕೊಂಡು
ನಾ ಹೆಂಗೋಗ್ಲಿ ಒಡಹುಟ್ಟಿನೆದುರೀಗೆ |

ಗಂಡು ಅನ್ನೊ ಜಲ್ಮವ ನಾ ಕಂಡಂತ ಮುಂಡ್ಯಲ್ಲ
ಆ ಬ್ರಮ್ಮ ಈದೀಯ ಬರಿಯಬಹುದೆ?" |

ಬಿಳಿಯ ಸೀರ್ಕ ತಾಯಿ ಮುಸುಕನ್ನೆ ಇಟ್ಟುಕೊಂಡು
ತೂಗೂತ ಬಾಗೂತ ಹೊರುಟಾಳು | ೧೪೩೦

ಬಂದರು ನಾಗಮ್ಮ ಅಣ್ಣಯ್ನ ಸನ್ನುಧಾನ್ಕೆ
ಬಂದು ನಿಂತ ಕಂಬದ ಮರಿಯಲ್ಲಿ |

ಗಾಜುನ ಕಂಬಾದ ಮರೆಯಲ್ಲಿ ನಿಂತುಕೊಂಡು
"ಕರುದ ಮಾತಣ್ಣಯ್ಯ ಮೊದಲೇಕ" |

"ಬಿಜ್ಜಳ ದೊರೆಯಿಂದ ನಸುಗ್ಯಾಲೆ ಕಳುಗವುರವ್ವ
ನೀ ಕದ್ವನ ಹೋಗಿ ನಾ ಹೇಳುಬೇಕು |

ಸುಳ್ಳು ಮಾತೇಳಿದರೆ ನಮ ಸತ್ಯ ತೊಲಗೋಗುತಿದೆ
ನಡ್ದ ಮಾತೇಳವ್ವ ನಮ್ ಜೊತೆಯಲ್ಲಿ |

ಒಡಹುಟ್ಟು ಎನುತೇಳಿ ನೀ ಮರುಸಕೊಳ್ಳಲು ಬ್ಯಾಡ
ಸತ್ಯವಾಗ್ಹೇಳವ್ವ ನನ್ ಜೊತೆಯಲ್ಲಿ" | ೧೪೪೦

"ನಾ ಮಾಡೀದ ತಪ್ಪಿಗೆ ನಾ ಮಾಡಿದಪರಾಧಕ್ಕೆ
ನಮ್ಮಣ್ಣ ನಾ ಕದ್ದವನ ಕೇಳ ಜಿನು ಬಂತು |

ಸತ್ಯವಾದ ಮಾತ ನಿಮುಗೇಳ್ತೀನಿ ಒಡಹುಟ್ಟು
ಸೊಲ್ಪ ದಯಮಟ್ಟು ಕೇಳಪ್ಪ ನಿಮ್ಮನುದಲ್ಲಿ |

ದೇವರರುಳಯ್ನ ಮನೆಯ ವರವ ತಂದಿಟ್ಟಿದ್ದಿರಲ್ಲ
ಅದ ಸಲುಸ್ಬುಟ್ಟು ನಾನು ಬಸುರಾದಿ |

ಕಲ್ಯಾಣ ಸಾಕ್ಷಿ ನಮ ತಂದೆ ತಾಯಿ ಸಾಕ್ಷಿ
ನಿಮ್ಮ ಲಿಂಗ ಸಾಕ್ಷಿ ಒಬ್ಬನ ಕಳುನಿಲ್ಲ |

ನಿಮ್‌ಲಿಂಗ ಸಾಕ್ಷಿ ಒಬ್ಬ ನಾ ಕಳನಿಲ್ಲ ಅಣ್ಣಯ್ಯ
ಈ ಸತ್ಯಾದ ಮಾತ್ಹೇಳಿ ಕುಲುದಲ್ಲಿ | ೧೪೫೦

ಒಪ್ಪುದರೆ ಒಪ್ಪುಕೊಳ್ಳಿ ಒಪ್ಪದಿದ್ದರೆ ಇಲ್ಲ
ನಾನೇ ಬರುತೀನಿ ಆ ಕುಲುಸಬುಗೆ |

ನಾನೇ ಬರ್ತೀನಣ್ಣಯ್ಯ ಕೂಡಿದ ಕುಲುಸಬುಗೆ
ನನ್ ಮಾಡ್ದಂಗೆ ಮಾಡ್ದಿ ಆ ಕುಲುದೋರು !" |

ಸತ್ಯುವಂತೆ ಮಾತ ನಮ್ ಬಸವಣ್ಣ ಕೇಳಿದರು
"ಹಂಗಂದರೆ ಒಪ್ಪೀರವ್ವ ಕುಲುಸಬಿಯ |

ಬಂದದ್ದೆಲ್ಲ ಬರ್ಲಿ ನಮ ತಂದೆ ತಾಯ್ ದಯವಿರಲಿ
ನೀ ಹೇಳುದಂತೆ ಕುಲುದಲ್ಲಿ ನಾ ಹೇಳ್ತೀನಿ |

ಹೋಗಿ ಬರ್ಲ ತಾಯಿ ಮಂದುಕ್ಕೆ?" ಎನುತ್ಹೇಳಿ
ತಂಗಿ ಜೊತೆಯಲ್ಲಿ ನುಡಿದಾರು | ೧೪೬೦

"ಕುಲುಕೋಗುತೀರಿ ಅಣ್ಣ ನೀವ್ ಸುಮ್ನೆ
ಹೋಗಲು ಬ್ಯಾಡಿ
ನಾಳೆ ಕುಲುದೋರು ಕೇಳುತಾರೆ |

ನಮ್ ತಂದೆ ಕೈಯೀನ ಉಂಗ್ರ ಆ ಗದ್ಗೆ ಮ್ಯಾಲದೆ
ಆ ಉಂಗ್ರ ನಿಮ್ಪೆರಳೀಗೆ ಧರುಸಣ್ಣ |

ಬಂದ್ರೆ ಬಸವಣ್ಣ ಎಂದು ಅವುರೆಲ್ರು ಕೈಮುಗಿತಾರೆ
ನೀವು ಕೈಯೆತ್ತುದ್ರೆ ಕುಲ ಕೆಡುತೀದೆ |

ಅವುರ್ ಮಾಡ್ದ ನಮಸ್ಕಾರ ಅವರ ಪಾಪ ಕಳಿಯಾಲಿ
ನೀವು ಮಾಡೀದ ಸರಣ ನಿಮ್ಮುಂಗ್ರುಕ್ಕಾಗ್ಲಿ |

ನಿಮ್ಮ ಕೈಲಿರುವ ಉಂಗ್ರುಕ್ಕೆ ನಿಮ್ ನಮಸ್ಕಾರ ಆಗ್ಲಪ್ಪ
ಹಾಕೊಂಡೋಗಿ ನಿಮ್ ಬೆರುಳೀಗೆ" | ೧೪೭೦

ತಂಗೆ ಆಡಿದ ಮಾತ ನಮ್ ಬಸವೇಶ್ವರ ಕೇಳಿ
ಸುಂಗಾರವಾದರು ಮಠದಲ್ಲಿ |

ಸಂಗನ ಬಸವಣ್ಣ ಇನ್ ಮಂದಕೋಯ್ತಾರೆಂದು
ಅಲ್ಲಿದ್ದ ಜಂಗಮರು ಹೊರುಟಾರು |

ಆನೆ ಅಂಬಾರಿಯ ಏರುದರು ಬಸವಣ್ಣ
ಅಂಬಾರಿ ಮೇಲೆ ಕುಳುತಾರು |

ಚತ್ತರೀ ಚಾಮರ ಜಗಜಂಪೀನ ಸತ್ತೀಗೆ
ಸತ್ತೀಗೆ ಸೂರಿಪಾನಿ ಅವ್ರ ಜೊತೆಯಲ್ಲಿ |

ಬೇರ್ಮೀನಿಸಾನಿ ಕಣಕ್ಕಮಟೆ ಕಾಳ್ದಮಟೆ
ನಗಾರಿ ನೌಪತ್ತು ಅವ್ರ ಜೊತೆಯಲ್ಲಿ | ೧೪೮೦

ಎಡದಲ್ಲಿ ಚೌಕಿಪಾರ ಬಲದಲ್ಲಿ ಗೊಲ್ಲುರಪಾರ
ಬಿಚ್ಚತ್ತಿ ಪಾರ ಹಿಂದೆ ಮುಂದೆ |

ಸತ್ತುವಂತರು ಎಂದು ಮಂದುಕೋಯ್ತಾರೆ ಎಂದು
ಡಂಕಣಿಯ ಸಪ್ತ ನಿಲುಭಾರ |

ಡೆಂಕಣಿ ಸಬುತವ ಕೇಳಿದರು ಹರುಳಯ್ಯ
ಹೊರಟಾರು ಕಲ್ಯಾಣಕ್ಕೆ ಗುರುಸ್ವಾಮಿ |

ಭೂಮೀಗೆ ದೊಡ್ಡೋರು ನಮ್ ಬಸವಣ್ಣ
ಹೊರುಟವುರೆ
ನಾನು ಹೋಗ್ತೀನಿ ಕುಲುಸಬುಗೆ |

ನಾ ಹೋಗಿ ಬರ್ತೀನ್ಬೆಣ್ಣೆ ನಾನವುರ ಜೊತೆಯಲಿ ಅಂತ
ಮಾನ್ಯ ಹರುಳಯ್ಯ ನುಡಿದನು | ೧೪೯೦

ಕಕ್ಕಯ್ಯ ಚಿಕ್ಕಯ್ಯ ಒಕ್ಕುಗರ ಮುದ್ದಯ್ಯ
ಹೊರಟಾರು ಬಸವಣ್ಣನ ಜೊತೆಯಲ್ಲಿ |

ಬ್ಯಾಡಾರ ಕಣ್ಣಯ್ಯ ಈಡುಗರ ಕೊಂಡಯ್ಯ
ಸಮ್ಮ ಪೀರಣ್ಣ ರಾಚಯ್ಯ ಹೊರುಟಾರು |

ದೇವಂಗ್ಡ ದಾಸಯ್ಯ ಸೆಟ್ಟುಗಳ ಪುಟ್ಟಣ್ಣ
ನಮ್ ಕೊರುಮರ ತಿಮ್ಮಯ್ಯ ಹೊರಟಾರು |

ಆಯ್ದಕ್ಕಿ ಮಾರಯ್ಯ ಬ್ಯಾಡಾರ ಕಣ್ಣಯ್ಯ
ನಮ್ಮಂಬುಗರ ಚೌಡಯ್ಯ ಹೊರುಟಾರು |

ಕುಂಬಾರ್ರ ಗುಂಡಯ್ಯ ನಮ್ ಕುರುಬಾರ ಬೀರಪ್ಪ
ನಮ್ ಕನ್ಗತ್ತಿ ಮಾರಯ್ಯ ಹೊರುಟಾರು | ೧೫೦

ಚಿತ್ರೀಯ ವೆಂಕ್ಟಯ್ಯ ನೂಲೀಯ ಚಂದಯ್ಯ
ಇಂತ ಸತ್ಯ ಸರಣ್ಕಾರು ಹೊರುಟಾರು |

ಅಂಗಾಲು ಜಡೆಯವುರು ಮುಂಗಾಲು ಜಡೆಯುವುರು
ಈಬುತ್ತಿ ಸರದ ಸರಣ್ಕಾರು |

ಕಾವೀಯ ಹೊದ್ದವರು ಕಾಮಂಡ್ಲ ಧರುಸೋರು
ಈ ಪಂಚರುದ್ರಾಕ್ಷಿ ಸರದವರು |

ಇಂತಿಂತ ಸರಣರ ಕಟ್ಟುಕೊಂಡು ಬಸವಣ್ಣ
ಬರ್ತಾರೆ ಬಿಜ್ಜಾಳನ ಕುಲುಸಬ್ಗುಗೆ |

ಬರುವಂತ ಬಸವಣ್ಣನ ಕಂಡ ಕೊಂಡೂಗ ಮಂಚ
ಆ ಬಿಜ್ಜಳಗೆ ಚಾಡಿ ಹೇಳ್ತಾನೆ | ೧೫೧

"ಗ್ಯಾನವಿಲ್ಲ ಮಾನುವಿಲ್ಲ ಬಸವಣ್ಣನೀಗೆ
ಅವನು ಬರುವಂತ ಟೀಕ ನೋಡಯ್ಯ |

ತಂಗಿ ಮಾಡಿದ ತೆಪ್ಪ ಮರುತ್ಕೊಂಡ ಬಸವಣ್ಣ
ಅಂಬಾರಿ ಮೇಲವುನು ಬರಬೇಕ |

ಅಂಬಾರಿ ಮೇಲವುನು ಮಾನವಿಲ್ದೆ ಬರಬೇಕ ?"
ಎಂದು ರಾಜನಿಗೆ ಕೊಂಡ್ಲ ನೆಡಸೀದ |

ಕೊಂಡುಗ ಮಂಚನ ಮಾತು ಇವ್ರ ಕೆನ್ನೇಗೆ ಬಡಿದಂಗೆ
ಆಡ್ದಾಂಗಾಡಪ್ಪ ಮಂಚಣ್ಣ |

ಬಂದು ಬಸವಣ್ಣೋರು ಇಳುದಾರು ಕುಲುಸಭೆಗೆ
ಕುಲವೆಲ್ಲ ಕರವ ನಮಿಸಿದರು | ೧೫೨

"ಬಂದ್ರಪ್ಪ ಬಸವಣ್ಣ ಬಂದ್ರ ಗುರುವೆ" ಎಂದು
ಎದ್ದೆದ್ದು ಕೈಯ ಮುಗಿದ್ದಾರು |

"ಬಂದೊಕಾಣ್ ಬನ್ರಪ್ಪ ನಿಮ್ಮ ಕುಲಕೆಲ್ಲ ನಾವ್ ಸರಣು
ಉದ್ಧಾರವಾಗ್ಲಪ್ಪ ಈ ಕುಲಸಬಿಯ |

ಕಲ್ಯಾಣ್ಕೆ ಸರಣು ನಮ್ ತಂದೆ ತಾಯಿಗೆ ಸರಣು
ದೊರೆಯೆ ಬಿಜ್ಜಾಳ ನಿನ್ಗೆ ಸರಣಪ್ಪ |

ಸತ್ಯವಂತರ ಮಾನ ನೀ ಕೆಡಸಬೇಕಂತ್ಹೇಳಿ
ನೀ ಕರುಸ್ಕ್ಯಪ್ಪ ಇಂತೆ ಕುಲುಸಬ್ಗುಗೆ" |

"ಸತ್ಯಂತ ಎನುತೇಳಿ ನೀ ಯಾರ್ಮುಂದೆ ಹೇಳುತೀಯೆ
ನಿಮ್ಮ ಸರಣ ನಾವೆಲ್ಲ ಮೆಚ್ಚನಿಲ್ಲ | ೧೫೩

ನಾವೆಲ್ಲ ಮಾಡಿದ ಸರಣು ನಿನ್ ಪಾದುಕ್ಕಾದರವಾಯ್ತು
ನಿನ್ ಸರಣು ಇವುರೊಬ್ರುಗು ತಗುಲಿಲ್ಲ |

ನೀನು ಮಾಡಿದ ಸರಣು ನಿನ್ ಬೆರಳಿನುಂಗ್ರುಕಾಯ್ತು
ಉಂಗ್ರ ಕಳುದಾಕು ಕುಲದಲ್ಲಿ |

ಆ ಉಂಗ್ರವ ಕಳದು ನೀ ತಿರ್ಗ ಕೈಮುಗಿದಾರೆ
ಒಪ್ತಾಯ್ತೆ ನನ್ನಿ ಕುಲುವೆಲ್ಲ |

ನಿನಗೆ ಬಂದ ದೌಲತ್ತು ನನಗೆ ಬಂದ ಬಡತಾನ
ತಿರುವಲ್ಲ ಮಂಚಣ್ಣ ಧರೆಯಲ್ಲಿ |

ಉಂಗುರುವ ಕಳುದರು ಬಿಜ್ಜಳ್ನ ಗದ್ಗೆ
ಮೇಲ್ಮಡುಗುದರು
ತಿರುಗ ಸರಣಂದ್ರು ಬಸವಣ್ಣ | ೧೫೪

"ಈಗ ಕೈಮುಗದದ್ದು ಅದೆಲ್ಲಾಯ್ತು ಅಂದ ಬಿಜ್ಜಳ
ಈಗ್ಲು ಒಪ್ಪಿಲ್ಲ ನನ್ನ ಕುಲುಸಬೀರು |

ಈಗ ಮಾಡೀದ ನಮುಸ್ಕಾರ ಅವನ ತಲೆಯ
ಪೇಟಕ್ಕಾಯ್ತು
ಆ ಪೇಟ ಕಳ್ದು ಕೈಯ ಮುಗಿಸಯ್ಯ" |

"ಯಾರ್ಯಾರು ಹೇಳುದರು ನಾ ಪೇಟ ತಗುದೋನಲ್ಲ
ನನ್ನ ತಂಗಿಯಿಂದ ಬಂತು ಈ ಅವಿಮಾನ" |

ಪೇಟವನು ಕಳದಾಕಿ ನಮ ಕಲ್ಯಾಣ ಪ್ರಭು
ತಿರಗ ಎರಡ್ ಕರುಪ ನಮಿಸಿದರು |

"ನೋಡಿದ್ಯಾ ಬಿಜ್ಜಳ ನೀ ಏನು ಅಂತ ತಿಳುದಿದ್ಯಾ
ತಿಳುಕೊಂಡ್ಯ ಇದರ ತರುಗೋಳ | ೧೫೫೦

ತಂಗೆ ಕಳವ್ರ ಮಾಡ್ದದುಕೆ ನಾವೇಳ್ದಂಗೆ ಕೇಳವ್ನೆ
ಅವಗರ್ತಿಯಾಗಿದ್ರೆ ಅವ ಕಳಿಯೋನ |

ನಿನ್ನ ನಮುಸ್ಕಾರದ ಮಾತು ಅಲ್ಲಿರ್ಲಿ ಬಸವಣ್ಣ
ಏನಾಗಿದ್ದಳು ನಿನ್ನ ನಾಗಮ್ಮ |

ಏನಾಗಿದ್ದಳು ನಿನ್ನಕ್ಕನಾಗಮ್ಮಯ್ಯ
ಮೊನ್ನೆ ಬಸುರೋಸ್ಗೆ ಮಾಡಿದ್ದು ನಿಜುವಪ್ಪ |

ಯಾವ ಜಂಗುಮನ ನಿನ್ತಂಗೆ ಕೂಡ್ಕೊಂಡಿದ್ದ
ಅವ್ನ ತೋರು ನಮ್ಮ ಕುಲದಲ್ಲಿ |

ನಿನ್ತಂಗೆ ಕೂಡ್ಕೊಂಡೋನ ನಮ್ಮ ಕುಲದಲ್ಲಿ ತೋರಿದರೆ
ಆದಂತ ಅಪರಾಧ ನಾವು ಪಡಿತೀವಿ | ೧೫೬೦

ಅಪರಾಧ ಪಡುಕೊಂಡು ನಿನ್ತಂಗೆಗೆ ಗಂಡನ ಮಾಡ್ತೀವಿ
ಮರುಸ್ಕೊಳ್ದೆ ತೋರು ನಮ್ ಕುಲುದಲ್ಲಿ" |

ಕೊಂಡುಗ ಮಂಚಣ್ಣನ ಮಾತ ಕೇಳುದುರು ಬಸವಣ್ಣ
"ಇಂತ ಕೆಟ್ಮಾತ ನೀನು ಆಡ್ಸೇಡ |

ಗಂಡನ ಕಟ್ಕೊಂಡು ನನ್ತಂಗೆ ಗರ್ಬಣಿಯಲ್ಲ
ಈ ಹರುಳಯ್ನ ಮನೆಯ ಪ್ರಾಸೊದ್ಕೆ |

ಹರುಳಯ್ನ ಮನೆಯ ಒಳ್ಕೆ ಕರುಣುಳ್ಳ ಪ್ರಾಸೊದ್ಕೆ
ನಾ ಎಪ್ಪತೊಂದೊರುಷ ತ್ರಬಸಿದ್ದಿ |

ಆ ಪ್ರಾಸೋದವ ತಂದು ಗದ್ದಿಗೆ ಮೇಲಿರಿಸಿ
ಚಿತ್ರಕಲ್ ದುರ್ಗಕೆ ನಾ ಹೊರುಟೋದಿ | ೧೫೬೦

ಲಿಂಗಪೂಜೆ ಮಾಡದ್ಕೆ ನಾವೋದ ಗಳುಗೇಲಿ
ನನ್ತಂಗೆ ತಿಳುವಳಿಕೆ ಬಾರ್ಲಿಲ್ಲ |

ತಂಗೆ ನಾಗಮ್ಮಂಗೆ ತಿಳುವಳಿಕೆ ಬಾರಾದೆ
ಅವ ಸಲುಸ್ಕೊಂಡ್ಹಪ್ಪ ಪ್ರಾಸೋದವ |

ಆ ಮಾನ್ಯನ ಮನೆಯ ಮಾ ಪ್ರಾಸೋದಕ್ಕೆ
ಗಂಡನಿಲ್ಲದ ತಾಯಿ ಬಸುರಾದ" |

ಹಂಗದ ಮಾತನ್ನೆ ಕೇಳಿ ಕೊಂಡುಗ
"ಒಪ್ತ ಬಿಜ್ಜಾಳ ನಿನ್ನ ಕುಲುಸಬುಯ |

ಅನ್ನ ಉಂಡೆಂಗುಸರೆಲ್ಲ ಹಂಗಂಗೆ ಬಸುರಾದ್ರೆ
ಗಂಡ್ಮಾಕೆ ಬೇಕು ಈ ಧರಿಯಲ್ಲಿ | ೧೫೮೦

ಆಕಾಸ ಗುಡುಗಾದೆ ಭೂಮಿಗೆ ಮಳೆ ಹೂಯಾದೆ
ಪೈರಾಗದುಂಟು ಈ ಧರೆಯಲ್ಲಿ |

ಆಕಾಸ ಗುಡುಗ್ಬೇಕು ಈ ಭೂಮಿಗೆ ಮಳೆಯಾಗಬೇಕು
ಆಗ ಬೀಜಗಳ ಚೆಲ್ಬೇಕು |

ಆ ಕಾಲದ ವೊಳುಗೆ ಬೀಜಗಳ ಚಲ್ಲುದರೆ
ಸೊಗಸಾಗುಟ್ಟವೆ ಧರೆಯಲ್ಲಿ |

ಗಂಡನಿಲ್ಲದ ಬಾಲ್ಗೆ ಗಂಡನ ಭೋಗ ಇಲ್ದೆ
ಮಕ್ಕಳಾಗಾದು ಸುಳ್ಳೆ"ಂದ |

"ಗಂಗೆಗೆ ಕಟ್ಟಿಲ್ಲ ಲಿಂಗುಕ್ಕೆ ಸೂತುಕವಿಲ್ಲ
ಈ ಲಿಂಗಾಯುತ್ರು ಜನುಕೆ ಕುಲುವಿಲ್ಲ | ೧೫೯೦

ಲಿಂಗಾಯುತ್ರು ಜನುಕೆ ಕುಲವಿಲ್ಲ ಬಿಜ್ಜಾಳ
ಜಾತಿ ಕುಲ ಅನ್ನದೆ ಬವುಸ್ತಾರೆ |

ಬೋಳು ಬೋಳು ಜಂಗುಮರ ತನ್ಮನುಗ್ಗೆ ಕೂಡ್ಕೊಂಡು
ಇವುನ್ತಂಗೆ ಏಳು ತಿಂಗಳ ಎಳೆ ಬಸುರಿ |

ಚಿಕ್ಕ ಚಿಕ್ಕ ಜಂಗುಮರ ತನ ಚತ್ರುಕ್ಕೆ ಕರುಕೊಂಡು
ಆ ಚಿಕ್ಕ ಜಂಗುಮರೊಂದ್ಗೆ ಒಡನಾಡಿ |

ಚಿಕ್ಕ ಜಂಗುಮರೊಂದ್ಗೆ ಒಡನಾಡಿ ಬಿಜ್ಜಾಳ
ಇವನಕ್ಕನಾಗಮ್ಮ ಬಸುರಾದ |

ಹರುಳಯ್ನ ಮನೆಯ ಪ್ರಾಸೋದದ ಒಳುಗೆ
ಪಿಂಡ ಇತ್ತಪ್ಪ ಬಿಜ್ಜಾಳ | ೧೬೦೦

ಹರುಳಯ್ಯ ಹರುಳಯ್ಯ ಎಂದು ಅವ್ನ ಬೆರುಕೊಂಡು
ಬಸವಣ್ಣ
ನೀ ಕೆಡಿಸೀದೆ ಕಲ್ಯಾಣ್ದ ಗುರುಮಠವ |

ಬರಿ ಸುಳ್ಳಾತ ನಮ್ಮ ಜೊತೆಯಲ್ ಹೇಳಲು ಬ್ಯಾಡ
ಕಂಡ್ಯಾತ ಹೇಳು ಬಸವಣ್ಣ |

ನಡದ ಮಾತೇಳಿದರೆ ನಿನ್ನ ಬಿಡ್ತೀವಿ ಬಸವಣ್ಣ
ಸುಳ್ಳಾತೇಳಿದರೆ ನಿನ್ ಬುಡಲಾರೆ |

ನಾನು ಕಂಡಷ್ಟು ನಿಮ್ ಜೊತಿಯಲ್ಲಿ ಹೇಳಿವಿ
ನಿವ್ಹೊಪ್ಪಿದಂಗಿನ್ಮಾಡಿ ಕುಲುಸಬಿಯ |

ಕದ್ದವಳ ಬುಟ್ಟುಟ್ಟು ಗಂಡುಸ್ನೆ ತೊಂದ್ರಿ ಕೊಡುಬಹುದ ?
ಇದ್ರ ಮೂರ್ ಮೈಲಲ್ ಸೆರೆಯ ಮಡುಗಪ್ಪ | ೧೬೧೦

ಆ ಬಸುರಾಗಿರುವಂತ ನಾಗಮ್ನ ಬರಮಾಡು
ಅವ ಬಾಯ್ಬುಟ್ಟೇಳ್ತುನೆ ನಮ್ ಜೊತೆಯಲ್ಲಿ |

ಗಂಡನಿಲ್ಲಾದ ಭೋಗವಿಲ್ದೆ ಬಸುರಾದಿ ಹಾಂಗಂದರೆ
ಅವುಳುಣುಸೆ ಬರಳಿನೇಟು ಗುರಿ"ಯೆಂದ |

"ಹುಣಸೆ ಬರಳ ತಕ್ಕಂಡವುಳಿಗೆ ಚಾರಚೂರಿಗೆ ಹೊಡೆದಾರೆ
ಕದ್ದ ಜಂಗುಮನ ನಮಗೇಳ್ತಾಳೆ" |

ಕೊಂಡುಗ್ರು ಮಂಚಣ್ಣನ ಮಾತ ಬಿಜ್ಜಾಳ ಕೇಳಿದ
ಸೆರೆಯ ಮಡಿಗಿ ಅಂದ ಬಸವಣ್ಣನ |

ವಾಲೆಗರಿಯ ತಕ್ಕಂಡು ಬರದ ಬಿಜ್ಜಾಳ
ನಾಗಮ್ಮಂಗ್ಯಾಲ್ಕ ಬರದಾನು | ೧೬೨೦

"ನಿಮ್ಮಣ್ಣಯ್ಯ ಬಂದ್ರು ನ್ಯಾಯ ಸಮನಾಗ್ಲಿಲ್ಲ
ನೀ ಬರುಬೇಕು ನನ್ನ ಕುಲಸಬುಗೆ |

ಬಸವಣ್ಣನ ತಂಗೆ ನೀ ಸತ್ಯುವಂತೆ ಆದಾರೆ
ಸೆರೆಯಲ್ಲಿರುವೋನ ನೀ ಬುಡುಸ್ಕೋದು |

ನಿನ್ನಿಂದ ನಿಮ್ಮಣ್ಣ ಇಂದ್ ಸೆರೆಯಲ್ಲಿ ಬಿದ್ದಾರೆ
ತಕ್ಷಣ ನಾಗಮ್ಮ ನೀನ್ ಬರಬೇಕು" |

ಹ್ಯಾದಂತ ವಾಲೀಯ ಓದುದಾರ ನಾಗಮ್ಮ
ಸಂಕಾಟ ಬಂತು ಮನದಲ್ಲಿ |

"ಜಂಗಮರ ಕಳಲಿಲ್ಲ ಕದ್ದು ಗರ್ಭಣಿಯಾಗ್ಲಿಲ್ಲ
ಇಂತ ಅವಿಮಾನ ದೊರಕೀತೆ? | ೧೬೩೦

ಹೊಟ್ಟೆ ಒಳಗಿರುವಂತ ಈ ಮಗ್ಗುವನ್ನೇ ಹೊತ್ತುಕೊಂಡು
ನಾ ಹೆಂಗೋಗ್ಲಿ ಅತ್ತುಗಮ್ಮ ಕುಲುಸಬುಗೆ |

ಮಂದಾದ ಕಟ್ಗೆ ಇಲ್ಲಿಂದಾರು ಗಾವುದ
ನಾ ಹೆಂಗೋಗ್ಲಿ ತಾಯಿ ಕುಲಸಬುಗೆ |

ನಿನ್ನೊಬ್ಬುಳ್ನೆ ಕಳುಗ್ಬುಟ್ಟು ನಾ ಇದ್ದೇನ ನಾಗಮ್ಮ
ನಾನು ಬರ್ತೀನಿ ನಿನ್ನ ಜೊತೆಯಲ್ಲಿ |

ನಾನು ಬರ್ತೀನವ್ವ ಇಂದು ನಿನ್ ಜೊತೆಯಲ್ಲಿ
ನಮ್ಗೆ ಬಂಧಾನ ಕೊಡಲಿ ಕುಲುಸಬಿಯ |

ನೀ ಇದ್ದ ಸಂತೋಷಕ್ಕೆ ನಾವು ಬಿದ್ದ ಬಾಳಾಟಕ್ಕೆ
ಇಂತ ಸಂಕಟ ಕೊಟ್ನಲ್ಲ ಕೊಂಡೂಗ | ೧೬೪೦

ಇಂತ ಸಂಕಟಕ್ಕೆ ನಮ್ಮ ಗುರಿಯ ಮಾಡುದನಲ್ಲ
ಬಂದುದ್ದೆಲ್ಲಾ ಬರ್ಲಿ ನಡಿಯವ್ವ |

ಹಾಳಾಯ್ತು ಕಲ್ಯಾಣ ಪಾಳಾಯ್ತು ನಮ್ಮಠ
ನಿಮ್ಮಣ್ಣಯ್ಯ ಸೆರೆಯ ಬೀಳುಬಹುದ |

ಸತ್ಯಸರಣರ ಮಾನ ತೊಲುಗುಸ್ಬೇಕಂತ್ತೇಳಿ
ಕಾಯ್ದವುನೆ ಕಾಣವ್ವ ಕೊಂಡೂಗರ ಮಂಚ |

ಕೋಟಿ ಜಂಗುಮರೆಲ್ಲ ಕುಲುದಲ್ಲಿ ಸೇರಿರಬಹುದು
ಅಲ್ಲಿ ಮಾತಾಡೋ ಸರಣಾರು ಮೊದಲಿಲ್ಲ |

ಮಾತಾಡೊ ಸರಣ ಇವತಾನೆ ಕೊಂಡೂಗ
ಅವುನ್ತಲೆ ಸಾಸ್ರೋಳಾಗಲಿ ನಡಿಯವ್ವ" | ೧೬೫೦

"ಮಂದಾದ ಕಟ್ಟೆತನ್ಕ ನಾ ನಡುದೇನ ಅತ್ಗಮ್ಮ
ಈ ಬಂಧಾನ ಯಾರ್ಗೆ ನಾ ಹೇಳ್ಕವ್ವ |

ಅನ್ನ ಪ್ರಾಸೋದು ಎಂದು ನನ್ನಾಳು ಹೊಟ್ಟೆಗೆ ತಿಂದು
ಈ ಅನ್ನಾಯ್ಕೆ ನಾನು ಗುರಿಯಾದಿ" |

ಒಂದೊಂದು ಕಣ್ಣಲ್ಲಿ ಒಕ್ಕ ಕಣ್ಣೀರ ತುಂಬ್ಕೊಂಡು
ನನ್ನಕ್ಕ ನಾಗಮ್ಮ ಅಳುತಾಳೆ |

ನೀರೀನ ಬೌರಮ್ಮ ಕೊಟ್ಟಣದ ನನ್ನಮ್ಮ
ಎಣ್ಣೆ ಚನ್ನಮ್ಮ ಅಳುತಾಳೆ |

ಮಡುವಾಳ ಮಾಚಯ್ಯ ಮಡದಿ ಮಲ್ಲುಗದೇವಿ
ನಮ್ ಸೂಳೆ ಪುಟ್ಟಕ್ಕ ಅಳುತಾಳೆ | ೧೬೬೦

ಹರಳಯ್ಯ ಮಡದಿ ಸರಣೆ ಕಲ್ಯಾಣಮ್ಮ
ಎಲ್ಲಾರೂ ಗೋಳಂತ ಅಳುತಾರೆ |

"ಸತ್ಯವಂತರಾಗಿ ಬದುಕಿದ್ರು ಬಸವಣ್ಣ
ಇಂದವರ ಸತ್ಯ ತೊಲಗೂವ ಗತಿ ಬಂತು |

ನಾ ಒಬ್ಳೆ ಹೋಗ್ತೀನಂತ ನೀ ಅಳುಬ್ಯಾಡ ನಾಗಮ್ಮ
ನಾವೆಲ್ರು ಬರುತೀವಿ ನಿನ್ನ ಜೊತೆಯಲ್ಲಿ |

ಬಿಳಿಯ ಸೀರೆ ಉಟ್ಟು ಬಿಳಿಯ ಕುಪ್ಸ ತೊಟ್ಟು
ಲಗಲಾಣ್ಯ ನಾಗಮ್ಮ ತೊಡನಿಲ್ಲ |

ಪುಟ್ಟು ಪುಟ್ಟು ಪಾದ ಒಳ್ಳೆ ಬೊಳ್ಳು ಬೊಳ್ಳುಗೆ ಇಡುತ
ಕಲ್ಯಾಣ್ದಿಂದ ಹೊರಗೆ ಹೊರಟಾರು | ೧೬೭೦

ಸತ್ಯುವಂತೆ ಇಂದು ಮಂದುಕ್ಕೋಯ್ತಳೆ ಎಂದು
ಭೂಮುತಾಯಮ್ಮ ನಡೆಮಡಿಯಾದ |

ಸೂರ್ಯದೇವರು ಬಂದು ಭೂಚಕ್ರಾದ ಕೊಡೆಯಾದ
ಏಳ್ತಲೆಯ ಸರ್ರ ಬರುತಾದೆ |

ಅಮ್ಮಯ್ನ ಚಂದನೋಡಿ ಗಂಡುಸ್ರು ದೃಷ್ಟಿಪಡುತಾರೆ
ಎಂದು
ಮೈಯಾದ ಮೈನೆಲ್ಲ ಸರ್ರ ನುಲುಕೊಂಡ |

ಮೈಯಾದ ಮೈನೆಲ್ಲ ಮಾಸೇಸ ನುಲುಕೊಂಡು
ನತ್ತಿ ಮೇಲೇಳ್ಸೆಡೆಯ ಹರಡೀದ |

ಬಲದಲ್ಲಿ ಬಾಳೆವನ ಎಡದಲ್ಲಿ ತೆಂಗಿನ್‌ವನ
ಕಜ್ಜುರ್ದ ವನಗಳ ಅವ್ಳ ಜೊತೆಯಲ್ಲಿ | ೧೬೮೦

ಎಂತೆ ಪತುರ್ವರ್ತ್ಯಯಪ್ಪ ನಮ್ಮ ನಾಗಮ್ಮ ಅನುತ್ಹೇಳಿ
ಆ ನೆರಳಲ್ಲಿ ಮುತ್ತೈದೇರು ಹೊರಡಿದರು |

ಬಾಳ ದೂರ್ದಲ್ಲಿ ಬರುತಿದ್ದ ನಾಗಮ್ಮನ
ಈ ಕರ್ಮಿ ನೋಡೀದ ಕೊಂಡೂಗ |

"ನನ್ಮಾತು ಸುಳ್ಳು ಅಂತಿದ್ಕಲ್ಲ ಬಿಜ್ಜೂಳ
ಅವ-ಬರುವಂತ ಬೆಡಗ ನೋಡಯ್ಯ |

ನಾರಿ ಬರುವ ಸೊಬಗ ನೀ ನೋಡು ಬಿಜ್ಜಾಳ ದೊರೆಯೆ
ಅವ್ಳ ಬಾವ್ಗುಣವೇ ಬಲು ಚಂದ |

ನಿನ್ನಂತೆ ದೊರ್ತಾನ ನನಗಿದ್ದಾರೆ ಬಿಜ್ಜಾಳ
ಅವಳ-ಒಂದಿನುವಾದ್ರೂ ನಾ ಬುಡುತಿರುನಿಲ್ಲ" | ೧೬೯೦

ಆ ಪಾಪಿ ಆಡಿದ ಮಾತು ಅವ್ಳಕ್ಕನ್ನೆಗೆ ಹೊಡುದಾಗೆ
ಕಿಚ್ಚು ಒಡಮೊಗದು ಅಳುತಾಳೆ |

"ಆಡುದವುರೆಲ್ಲ ನನ್ಗೆ ನಾಳೆ ಆಳಾಗಿ ಹುಟ್ತೀರಿ
ನೋಡು ಅಂದವರು ಕುರುಡಾಯ್ತೀರಿ |

ಮುಂದಾಲ ಜಲ್ಮಕೆ ನೀವು ಕುರುಡಾಗಿ ಹುಟ್ತೀರಿ
ನನ್ನ ಅಂದಂಗನ್ನಪ್ಪ ಕೊಂಡೂಗ |

ಅಂದಂಗನ್ನಪ್ಪ ಕೊಂಡೂಗ ಮಂಚ" ಎಂದು
ದುಕ್ದಲ್ಲಿ ಕುಲುಕೆ ಇಳಿದಾಳು |

ಬಂದ ನಾಗಮ್ಮಯ್ನ ನೋಡೀದ ಬಿಜ್ಜಾಳ
ಎಂಥಾ ಸುಂದರಿಯೋ ಈ ನಾಗಮ್ಮ | ೧೭೦೦

ಆ ದೊರೆಯ ಎದುರೀಗೆ ನಿಂತುಕೊಂಡು ನಾಗಮ್ಮ
"ಸರಣು ಸರಣಾರ್ತಿ ಬಿಜ್ಜುಳರಾಯ |

ನಿನ್ನ ಮಗುಳಾಗೆ ನಾನು ಒಬ್ಬ ಮಗಳಲ್ಲವಪ್ಪ
ನಿನ್ನ ಮಗಳ ಈ ಕುಲುಕೆ ಕರಿಬವುದ |

ನಿನ್ ಮಗ್ಳಾಗಿದ್ರೆ ನೀ ಕರುಸ್ತಿದ್ಯ ಮಾರಾಜ
ನಾ ದಿಕ್ಕಿಲ್ದ ಮುಂಡೆ ಧರಿಯಲ್ಲಿ |

ನಾಗಮ್ಮಾಡೀದ ಮಾತ್ಗೆ ಬಿಜ್ಜುಳ್ನ ಹೊಟ್ಟೆ ಉರುದೀತು
ಅವ್ನು - ಕಣ್ಣೀನ ನೀರ ಒತ್ತೀದ |

ಕಣ್ಣೀರ ಒತ್ತೋನ ಕಂಡಾನು ಕೊಂಡೂಗ
"ಮಂಕಾಗ್ತ ಬಿಜ್ಜಾಳ ನಿನ್ನ ಮನುವೆಲ್ಲ | ೧೭೧೦

ಅವ ಗರ್ತಿ ಅಂತ್ಹೇಳಿ ನೀನ್ ಕಣ್ಣೀರ ತುಂಬ್ಕೊಂಡ್ಯ
ಅವ್ಳು ಕರೂಸ್ತ ಮಾತ್ಹೇಳು ಕುಲುದಲ್ಲಿ" |

"ನಾನ ಆಡಾಕೆ ಬಾಯ್ಸರುದು ನೀನೇ ಕೇಳಪ್ಪ
ನನ್ ಮನಸೀಗೆ ಯಾಕೊ ಸರಿಯಿಲ್ಲ" |

ಹಾಗಂದ ಮಾತನ್ನ ಕೇಳಿ ಕೊಂಡುಗರ ಮಂಚ
"ನೀ ಯಾರೀಗೆ ಬಸುರಾದೆ ನಾಗಮ್ಮ ? |

ಯಾವ ಜಂಗೂಮನೊಂದ್ಗೆ ಒಡನಾಡಿ ಗರ್ಭಣಿಯಾದೆ
ವಂಚೂಣೆ ಇಲ್ದೆ ಹೇಳು ಕುಲುದಲ್ಲಿ" |

"ಕುಲುಸಭೆಯ ಅಂದಾರೆ ಇದು ದೇವಾರು ಕಾಣಪ್ಪ
ಈ ದೇವರ್ಮುಂದೆ ಸುಳ್ಳ ಹೇಳುಲಾರಿ | ೧೭೨೦

ಹರುಳಯ್ನ ಮನೆಯ ಒಂದರುಳು ಪ್ರಾಸೋದ್ಕೆ
ಇರುಳೀನ ಹೋರಿ ಬೆಳುದಾನೆ |

ಕಕ್ಕಯ್ನ ಮನೆಯ ನವುಣಕ್ಕಿ ಪ್ರಾಸೋದ್ಕೆ
ಈ ರಾಜ್ಯಕ್ಕೆ ಗೇದಿಕ್ಕವ ಬೆಳುದವುನೆ |

ಚನ್ನಯ್ನ ಮನೆಯ ಚಿನ್ನುದಂತ ಪ್ರಾಸೋದ್ಕೆ
ನನ್ನೊಟ್ಟೇಲಿ ಚನ್ನ ಬಸವ ಬೆಳುದವುನೆ" |

"ನೋಡ್ದ್ಯಾ ಬಿಜ್ಜಾಳ ನಾಗಮ್ಮಾಡೀದ ಮಾತ
ಅವುರಣ್ಣಾನ ಮಾತ್ನೆ ಆಡುತಾಳೆ |

ಅವುರಣ್ಣಯ್ನು ಹಂಗಂದ ಇವಳೂ ಹಂಗಂದ
ಇವುರ್ ಮಾತಾಡ್ಕೊಂಡ್ ಬಂದಿದ್ರು ಮನೆಯಿಂದ | ೧೭೩೦

ನಿನ್ನ ಕರಾದು ಕೇಳುದ್ರೆ ನಾ ಹಿಂಗೆ ಹೇಳ್ತೀನಿ
ನಾ ಹೇಳ್ದಂಗೆ ಹೇಳು ಅಂದಿದ್ದ ಒಡಹುಟ್ಟೆ |

ಅವುರಾಡುತಕ್ಕೆ ಮಾತು ನಮುಗರ್ಥ ಆಗೋದಿಲ್ವ
ಮುಂದೇನ್ ಮಾಡೋಂವ್ ಹೇಳು ಬಿಜ್ಜಾಳ |

ಬನ್ರೊ ಊಳಿಗದವುರೆ ನೀವ್ ಬೇಗುದಲ್ಲಿ ಹೋಗಿ
ಮೂರ್ಹೊರೆ ಹುಣ್ಸೆ ಬರ್ಲ ತರುದ್ರನ್ನಿ |

ಹುಣ್ಸೆ ಬರ್ಲ ತಂದು ಇವುಳ್ಮುಂದೆ ಗುಡ್ಡೆ ಮಾಡಿ
ನಾವೇ ಮನುಸುಗ್ಸಂದಂಗೆ ಹೊಡಿಬೇಕು |

ಗಂಡುನ್ ಭೋಗ ಇಲ್ದೆ ಗರುಬಿಣಿ ಆದೋಳ್ಗೆ
ಹುಣಸೆ ಬರಳೇಟು ಗುರಿ"ಯೆಂದ | ೧೭೪೦

"ಕಂಡವರ ಕದ್ದು ಬಸುರಾದರಂತ ನಾರೀರ್ಗೆ
ಅವ-ಹುಣಸೆ ಬರಳೇಟು ಸರಿ"ಯೆಂದ |

ಓಡೋಗಿ ಊಳ್ಗದವರು ತರುದ್ತಂದ್ರು ಹುಣ್ಸೆ ಬರ್ಲ
ರಾಸ್ಕ ಮಾಡಿದರು ಇವುಳೆದುರಾಗಿ |

"ಸುಮ್ಮನೆ ಬಿಡ್ತಾರೆಂದು ನೀ ತಿಳಿಯಬ್ಯಾಡ ನಾಗಮ್ಮ
ಆ ಹುಣ್ಸೆ ಬರಳ ನೋಡಿ ಮಾತಾಡು" |

"ಇನ್ನೇನು ಮಾತಾಡದ್ಕೆ ನಂಗೆ ಬಾಯೇ ಬರದಪ್ಪ
ನೀವು ಮಾಡ್ದಂಗೆ ಮಾಡಿ ನನ್ ಕುಲುಸಭುಯ" |

"ನಿಂತ್ಕೊ ನಾಗಮ್ಮ ಆ ಕುದುರೆ ಗುಂಟದ ಮ್ಯಾಲೆ
ಒಂದೆ ಕಾಲಲ್ಲಿ ನೀ ನಿಲಬೇಕು | ೧೭೫೦

ಕಾಲ್ಮೇಲೆ ಕಾಲಾಕಿ ಕುದುರೆ ಗುಂಟಾದ ಮೇಲೆ ನಿಂತ್ರೆ
ನಾವುಣುಸೇ ಬರಳಿಂದ ಹೊಡಿತೀನಿ" |

ಅವುರತ್ತೊಗೆ ನೀಲಮ್ಮ ಈ ಮಾತ ಕೇಳುದುರು
ನಾದುನಿಯ ಸಿರುವ ತಬ್ಬಿದರು |

"ಕೆಟ್ಕಲ್ಲ ನನ್ನವ್ವ ನೀ ಕೆಟ್ಕಲ್ಲ ನಾಗಮ್ಮ
ನಿನ್ ಬುಡುಸ್ಕೊಳೊರ್ಯಾರವ್ವ ಈ ಕುಲುದಲ್ಲಿ |

ಈ ಕೋಟಿ ಜಂಗುಮರ ಮುಂದೆ ನಿಮ್ಮಣ್ಣೊಬ್ಬ
ಗುರುವಾಗಿ
ಈ ಏಟೀಗೆ ನನ್ನವ್ವ ಗುರಿಯಾದ್ಯ" |

"ಅವುರ್ಮಾಡುದಂಗೆ ಮಾಡ್ಕೊಳ್ಳಿ ನೀವಳು ಬ್ಯಾಡಿ ಅತ್ಗಮ್ಮ
ಹಂಗ್ ಒಗುದವುನೆ ನನಗೆ ಹಾಳ್ ಬ್ರಮ್ಮ" | ೧೭೬೦

ಕುದ್ರೆ ಗುಂಟಾದ ಮ್ಯಾಲೆ ನಿಂತ್ಕೊಂಡು ನಾಗಮ್ಮ
ಕಾಲ್ಮೇಲೆ ಕಾಲಾಕಿ ತಾಯಿ ನಿಲುತಾಳೆ |

ಸೀರೀಯ ಎತ್ತಿ ಅವ್ಳ ಮಂಡಿ ಮ್ಯಾಲೆ ಕಟ್ಸೇಕು
ಮಂಡಿಂದ ಕೀಳೀಗೆ ನಾವು ಹೊಡೀಬೇಕು |

ಸೀರೇಯ ಕಟ್ಸದಕೆ ಬಂದಾನೆ ಕೊಂಡೂಗ
"ಅಪ್ಪ ಪಾಪ್ಸೇಡಿ ಸೀರ್ಕ ನೀ ಮುಟ್ಬ್ಯಾಡ |

ನಾನೆ ಕಟ್ಕೊಳ್ತೀನಿ ನೀ ಮಾಡುದಂಗೆ ಮಾಡ"ಂತ್ಹೇಳಿ
ತಾಯಿ-ಹಾರೂಗಚ್ಚೆ ಸೀರೆ ಉಡುತಾಳೆ |

ಮಂಡಿ ಮ್ಯಾಲುಕೆ ಕಟ್ಸಿದ ನನ ದುಂಡಿ ನಾಗಮ್ಮಯ್ಯ
ಆಗ-ತಕ್ಕೊಂಡ ಕೈಗೆ ಹುಣ್ಸೆ ಬರಳ | ೧೭೭೦

ರಮ್ಮರುಮ್ಮನೆ ಹೊಡ್ದ ಅವ್ಳಳ್ಗೆ ಚಾರೂ ಚೂರನೆ ಹೊಡ್ದ
"ಎಲೆ ಮಾತಾಡು ಗರ್ತಿ ನಮ್ ಜೊತೆಯಲ್ಲಿ" |

ಒಂದೊರೆ ಮುಗುದೋಯ್ತು ಎರುಡೋರೆ ತೀರೋಯ್ತು
"ನಾ ಕಳುನಿಲ್ಲ ಅನ್ನುತಾಳೆ ನಾಗಮ್ಮ" |

"ಇಷ್ಟು ಗಾತ್ರ ಹೊಡುದರು ನಾ ಕಳ್ಳಲ್ಲ ಅಂತಾಳಲ್ಲ
ಆ ಉಳಿದಿರುವ ಹೊರೆಯ ಅಳಿಯಪ್ಪ" |

ಮೂರೊರೆಯ ಹುಣಸೆ ಬರಲು ಮುಗಿಯತನಕ ಹೊಡದ
ಅವ್ಳಳ ತೊಡು ಚಿಮ್ಮಿ ರಕ್ತ ಹರಿಯಾದು |

ಕೂತಿರೊ ಕುಲವೆಲ್ಲ ನೋಡುದರು ನಾಗಮ್ಮ
ಎಲ್ಲ ಅಳುತಾರೆ ಕುಲದವ್ರುರು | ೧೭೮೦

"ಇಂತ ನವನರುಕುವ ಯಾರೂ ನೋಡಿರನಿಲ್ಲ
ಇಂತ ನರಕ ಕೊಡುಬಹುದ ಗರತೀಗೆ |

ಭೂಮಿ ಮೇಲೆ ಬಿದ್ಕೊಂಡು ಹೊರ್ಳುತಾಳೆ ನೀಲಮ್ಮ
ನನಗಾರು ಹೊಡೀರಪ್ಪ ಕುಲುದೋರೆ |

ಮಕ್ಕಳಿಲ್ಲದ ಮನ್ಸೆ ಅವ್ಳಳ್ ಅಪರೂಪದ ಬಿಮ್ಮನ್ಸೆ
ನನ್ನಾದ್ನಿ ಗರ್ಭಣಿಯ ನೀವ್ ಕೊಲುಬ್ಯಾಡಿ |

ಈ ನನ್ನವ್ನನಿಂದ್ಲಾರೂ ನನ್ ಮನೆ ಬೆಳಕಾಗ್ಲಿ ಎಂದು
ಅವರತ್ತುಗೆ ನೀಲಮ್ಮ ಅಳುತಾಳೆ |

ನೀರಿನ ಬೋರಮ್ಮ ಕೊಟ್ಟಾಣದ ನನ್ನಮ್ಮ
ಅವ್ರು ಪ್ರಣೆಯ ಕುಟ್ಟುಕೊಂಡು ಅಳುತಾರೆ | ೧೭೯೦

"ನಿನ್ನೊಡೆಯಲರಿಯೋ ರಕ್ತವ ನಿಯೂರೀಗೇಳಿ ತಾಯಿ
ನಿನ್ನ ಮೊನುಗಾರಿಲ್ಲವಲ್ಲ ಒಡಹುಟ್ಟು |

ನಿನ್ನ ಸತ್ಯವಂತ ಬಸವಣ್ಣ ಇದ ನೋಡಿದ್ರೆ ನಾಗಮ್ಮ
ಅವರಿನ್ನೆಷ್ಟೊಂದಳುತಿದ್ರೊ ಶಿವ ಬಲ್ಲ" |

ಯಾಕ್ರವ್ವ ಅಳುತೀರಿ ನನ್‌ಮುತ್ತೈದೀರ ಅನುತ್ಹೇಳಿ
ನಾಗಮ್ಮ ಕೆಳಗೆ ಇಳಿದಾಳು |

ಒಡದಿರುವ ಹುಣಸೆ ಬರಳ ಗೋರಿ ಗುಡ್ಡೆ ಮಾಡೀದ
ಆ ಹುಣಸೆ ಬರಳೀಗೆ ಸರಣೆಂದ |

"ನನ್ನೊಡದ ಹುಣಸೆ ಬರಳೆ ನಾ ಬಚ್ಚಾಲಿ ಆದರೆ
ತೋರುಬ್ಯಾಡ ಕುಲುದೋರ್ಗೆ ಮಹೀಮೇಯ | ೧೮೦೦

ಆ ದೇವು ಹರುಳಯ್ನ ಮನೆಯ ಪ್ರಾಸೋದ್ಕೆ ಬಸುರಾದ್ರೆ
ಕುಲುದೋರ್ಗೆ ತೋರು ನಿನ್ ಸಾಸಾವ" |

ಹುಡಿಹುಣಸೆ ಬರಳೀಗೆ ಸರಣನ್ನೆ ಮಾಡ್ದಾಗ
ಗಲುಗಲುನೆ ಮರವು ತಿರುಗೀತು |

ಗಲುಗಲುನೆ ತಿರುಗೀತು ಹುಣಸೆಮರವಾಗೋಯ್ತು
ಹೂಕಾಯಿ ಬುಟ್ಟು ಜೋಲ್ತೀದೆ |

ಹೂ ಕಾಯಿ ಬುಟ್ಟು ಜೋಲಾಡ್ತಿತ್ತು ಹುಣಸೆಮರ
ಅಲ್ಲಿ ಕುಂತಿದ್ದ ಸರಣರಿಗೆ ನೆರುಳಾಗಿ |

ಕುಂತಿದ್ದ ಸರಣರಿಗೆ ನೆರಳಾಯ್ತು ಹುಣಸೆ ಮರ
"ಕಂಡ್ರಪ್ಪ ಗರ್ತಿ ನಿಜವನ್ನ" | ೧೮೧೦

ಬಾಯ್ಮೇಲಿ ಕೈ ಮಡುಗ್ದ ದೊರೆಯೆ ಬಿಜ್ಜಾಳರಾಯ
"ಅವ ಗರ್ತೀ ಕಾಣಪ್ಪ ನಾಗಮ್ಮ" |

ಬಿಜ್ಜಾಳಾಡಿದ ಮಾತ ಕೇಳಿದ ಕೊಂಡುಗ್ರ ಮಂಚ
"ಒಪ್ಪಿಲ್ಲ ಬಿಜ್ಜಳ ನನ್ ಕುಲುಸಬಯ |

ಮದ್ದುಕಾತಿ ಇವ್ನು ಮಾಯಕಾತಿ ಇವ್ನು
ಮಾಯ್ದ ಬೇಳ್ಕೆ ಇವುಳೊಳಗುಂಟು |

ಎಲ್ಲ ಜಾತಿಮರ ತರ್ದು ನೆಟ್ಟರೆ ಚಿಗುರುತೀವೆ
ಹುಣಸೆಮರ ಚಿಗಿಯಾದ ನಾ ಕಾಣ್ದಿಲ್ಲ |

ಬಿಗುತಿದೆ ಅಂತೇಳಿ ನೀವ್ಯಾರು ತಿಳುಕೊಳಬ್ಯಾಡಿ
ಅವುಳ ಕಪ್ಪುನ ತ್ರಾಣ್ಕೆ ಹಂಗೆ ಕಾಣ್ತೇದೆ | ೧೮೨೦

ಮೊನ್ನೆ ಬಂದುರಲಿಲ್ಲ ನಮ್ಮೂರ್ ಗಾವಾಡುಗ್ರು
ಅವರ್ ಮಾಡ್ದಂತ ಇದ್ಯ ನೀವ್ ನೋಡ್ನಿಲ್ಲ |

ಒಂದ್ ಮಾವುನ ಬೀಜ ತಗ್ದು ಅದ್ಕೆ
ಮಂತ್ರುಪದೇಶ ಮಾಡಿ
ಆಗ್ಲೆ ಹೂ ಕಾಯಿ ಬಿಡಲಿಲ್ಲ |

ಮಣ್ಣನ್ನೆ ಎತ್ತುಕೊಂಡು ನಮ್ಮೆಲ್ರು ಕಣ್ಣಿಗು ತೋರಿ
ಅವ್ರು ರೂಪಾಯ್‌ಗಳ ಮಾಡಿ ನಮ್ಗೆ ತೋರ್ನಿಲ್ಲ |

ಬೆಳ್ಳಿ ಹಣವ ಮಾಡಿ ನಮ್ ಕಣ್ಣಿಗೆ ತೋರ್ನಿಲ್ಲೇನ್ರೊ
ಅಂತ ಕಪ್ಪ ಮಡುಗವ್ಳೆ ಈ ಕಲುಗಾತಿ |

ಮರುವಾಯ್ತು ಅಂತೇಳಿ ನಾ ಒಪ್ಪೊ ಮಂಚಣ್ಣನಲ್ಲ
ಇವ ಇನ್ನೊಂದು ಸತ್ಯ ಮಾಡ್ಬೇಕು | ೧೮೩೦

ಹನ್ನೆರಡು ಕಂಡ್ಗೆಣ್ಣ ಗುಳುಗುಳನೆ ಮಳ್ಗೀಸಿ
ಮರಳೋದೆಣ್ಣೆ ಇವ್ರು, ಮುಳಗ್ಬೇಕು |

ಇವರಣ್ಣ ಮಡುಗಿರುವ ಉಂಗುರವ ಕೊಪ್ಪರುಗೆ
ಬಿಡಬೇಕು
ಆದರೊಳಗಿಂದ ಉಂಗ್ರ ಇವ ತಗಿಬೇಕು |

ಮೂರ್ಸಾರಿ ಮುಳುಗಿ ಇವ ಮೂರ್ಸಾರಿ ಎದ್ದು
ಉಂಗುರವ ತಂದು ನಮ್ಗೆ ತೋರ್ಬೇಕು |

ಉಂಗುರವ ತಂದು ನಮ್ಗೆ ತೋರುದರೆ ಬಿಜ್ಜಾಳ
ಇವ ಗರ್ತೀ ಅಂತ್ಹೇಳಿ ನಾನೆಂಬ್ತೀನಿ |

ಒಲುಗುಂಡ ತರುಸಿದರು ಆ ಮಂದದಲಿ ಮಡುಗಿದರು
ಕೊಪ್ಪರ್ಕೆ ಎಣ್ಣ ಹುಯ್ಸಿದರು | ೧೮೪೦

ಒರುಳಣ್ಣೆ ಕೈಯೆಣ್ಣ ತುಂಬುವುರೆ ಕೊಪ್ಪುರ್ಕೆಗೆ
ಗಂಧದ ಸೌದ್ಕ ಉರಿಹಾಕಿ |

ಗಂಧಾದ ಸೌದ್ಕ ಒಟ್ಟುದ್ರಲ್ಲೊ ಪರಶಿವನೆ
ಗುಳುಗುಳನೆ ಎಣ್ಣೆ ಮರಳೀತು |

ಕಾದೆಣ್ಣೆ ಕಾದು ಗುಳುಗುಳನೆ ಮರಳುವಾಗ
ಅವುರತ್ತೀಗೆ ತಬ್ಬುದ್ರು ನಾಗಮ್ಮನ |

ಅತ್ತೀಗೆ ನೀಲಮ್ಮ ತಬ್ಬುಕೊಂಡು "ನಾಗಮ್ಮಯ್ಯ
ನೀನು ಮಗು ಸೈತವಾಗಿ ಸಾಯ್ತೀಯೆ |

ಕಂಡು ಬ್ಯಾರೆ ಮಾಡ್ನಿಲ್ಲ ಕಯ್ಯಾರೆ ಮಾಡ್ನಿಲ್ಲ
ಉಂಡಾರ ಕೊಲುಸೀಯ ಬಿಜ್ಜಾಳ |" ೧೮೫೦

ಹೊಟ್ಟೆ ಮಗ ಸೈತ್ಯಾಗಿ ನನ್ನಾದ್ನಿ ಕೊಲುಸೀಯಪ್ಪ
ನಾವೇನು ಮಾಡಿದೆವಪ್ಪ ಕುಲುಸಭೆಗೆ |

ಅವನಿಗಿದ್ದೋನ್ ಒಬ್ಬೊಡಹುಟ್ಟು ನೀವ್ ಸೆರೇಲಿ
ಮಡುಗಿದರಿ
ನನ್ನ ನಾದೀನಿ ಸತ್ತಾರೆ ಗತಿ ಯಾರು |

ಪರಮಾತ್ಮ ನಾದನಿ ಸತ್ತರೆ ಗತಿ ಯಾರು?" ಅನುತ್ಹೇಳಿ
ಗೋಳಾಡಿದರು ಅವುರತ್ತುಗಮ್ಮ |

"ನೀ ಸತ್ಯಂತೆಯಾಗಿದ್ರು ನಿನಗೀ ಕಷ್ಟ ಬಂತಲ್ಲ
ಅವ್ವಾ ಗಂಡನ ಕಟ್ಟೋರ್ಗೆ ಇನ್ನೆಷ್ಟು ಬರುವುದು |

ಪರಪುರುಸ್ರ ಬವುಸ್ದೋರ್ಗೆ ಇನ್ನೇನು ಬಂದದೊ ಕಾಣೆ
ಗ್ಯಾನ್‌ವುಳ್ಳೆ ನಿಮ್ಮಣ್ಣ ನಿನ್ ನೋಡ್ನಿಲ್ಲ | ೧೮೬೦

ನೀರು ಬಿಸಿಯಾದರೆ ಮೈಗೆ ಹಾಕದು ಕಷ್ಟ
ನೀ ಮರಳುವೆಣ್ಣೆಲಿ ಉಳುದಾಯ |

ಮರಳುವೆಣ್ಣೆಲಿ ನೀ ಉಳುದಾಯ ನಾಗಮ್ಮ
ನನ್ಗೇಳಿ ಹೋಗವ್ವ ಮೂರ್ಮಾತ" |

"ಅತ್ತಿಗೆ ನಾದ್ನೀರು ಈ ಲೋಕದಲ್ಲಿರಬವುದು
ಇಂತ ಅತ್ಗಮ್ಮನುಂಟ ಈ ಧರಿಯಲ್ಲಿ |

ನಾದುನಿಯ ಮೇಲೆ ಎಷ್ಟಾಸೆ ಇರಬಹುದೆ"ಂದು
ಆ ಕುಲದ ಜನುವೆಲ್ಲ ಅಳುತಾರೆ | ೧೮೭೦

"ಯಾತಾಕೆಲೆ ನಾಗಿ ಬಾಳ ಹೊತ್ತಾಯ್ತೀದೆ
ಹಸ್ತಾವುರೆ ನನ್ನ ಕುಲುಸಭೆಯ |

ನಿನ್ನಿಂದ ಕುಲುದೋರು ಬಾಳ ಹಸುದವುರಲ್ಲೆ
ಬೇಗದಲ್ಲಿ ಮುಳುಗು ನಾಗಮ್ಮ" |

"ಕಲ್ಯಾಣ್ಕೆ ಸರಣು ಕೈಲಾಸಕೆ ಸರಣಪ್ಪ
ನನ್ ಕೋಟಿ ಜಂಗುಮರೀಗೆ ಸರಣಪ್ಪ |

ತಂದೆ ಸಂಗಮೇಶ ತಾಯಿ ಮಾದಲಾಂಬೆ
ನನ್ನೊಡಹುಟ್ಟಿ ಬಸವಣ್ಣ ನಿನ್ಗೆ ಸರಣಪ್ಪ |

ಇಲ್ಲಿ ಕೂತಿರೊ ಕುಲುಕೆಲ್ಲ ಸರಣಾರ್ತಿ" ಅನುತೇಳಿ
ಕೊಪ್ಪುರ್ಕೆ ಬಳಿಗೆ ನೆಡಿದಾಳು | ೧೮೮೦

ಮರಳೋ ಎಣ್ಣೆ ಬಳೆಸ ಮೂರಾ ಪರದಕ್ಷಿಣ ಬಂದ
ನನ್ನ ಆದಿ ಕಕ್ಕಯ್ಯ ನಿನ್ ಶ್ರೀಪಾದ |

"ಆದೀಯ ಹರುಳಯ್ಯ ನಿನ್ ಪಾದುವೇ ಗತಿ"ಯೆಂದು
ಹೋಗಿ ಕೊಪ್ಪುರುಕೇಗೆ ಮುಳುಗೀದ |

ಭುಗ್ಗು ಭುಗ್ಗೆಂದೀತು ಅದು ರವರವನೆ ಉಕ್ಕೀತು
ಉಕ್ಕಿ ಎಣ್ಣೆ ಸುರಿಯಾದು |

ಕೈ ತಪ್ಪ ಹೊಡುದ ಕೊಂಡುಗರ ಮಂಚಣ್ಣ
"ಆಗೋದ ಬಚ್ಚಾಲಿ ನಾಗಮ್ಮ |

ಆಗೋದ ಕಾಣಪ್ಪ ಅಕ್ಕನಾಗಮ್ಮ ಅನ್ನೋಳು
ಇನ್ ಬರೋದಿಲ್ಲ ಬಿಜ್ಜ ಹೊರುಗಾಡೆ" | ೧೮೯೦

ಕಾದ ಎಣ್ಣೆ ಒಳ್ಗೆ ಕುಳುತವ್ಗೆ ನಾಗಮ್ಮ
ಅವುಳ್ಗೆ ತಣ್ಣೀರ್ ಕೊರುದಂಗೆ ಕೊರಿಯಾದು |

ಅಣ್ಣಯ್ಯ ಉಂಗುರುವ ಒಳಗಡೆ ಇಟ್ಟಿದ್ದಾರಂತೆ
ಅದ ಎತ್ತಿ ಬೆರುಳಲ್ಲಿ ಇರಾಸೀದ |

ಕೊಪ್ಪುರ್ಕೆಯಿಂದ ಮೇಲ್ಕೆ ಎದ್ದ ಆ ನಾಗಮ್ಮ
ತೋರೀದ ಆಗ ಕುಲುಸಬುಗೆ |

"ಕೊಂಡುಗರ ಮಂಚಣ್ಣ ನನ್ನ ಕುಲಕೆ ಬಿಜ್ಜಾಳ ದೊರೆಯ
ಈಗೊಪ್ಪಪ್ಪ ನಿಮ್ಮ ಕುಲು ಸಭೆಯ |

ಅಜ್ಜುಬೀಡನ ಅಳಿಯ ಮದುವರಸಯ್ಯ ಬ್ರಾಮಣ
ಕಂಡ್ರಪ್ಪ ಗರ್ತಿ ನಿಜವನ್ನ | ೧೮೦೦

ಕೋಟುಗೊಬ್ಬ ಸರಣಾರೆ ನನ್ ಕುಲಕೊಬ್ಬ ಭಕ್ತಾರೆ
ಕಂಡ್ರಪ್ಪ ನಾಗಮ್ಮ ದುಡುಮನವ ?" |

ಎಲ್ಲಿ ನೋಡುದರಂತೇ ಒಳ್ಗೆ ಕೈತಪ್ಪೆ ಹೊಡೆದರಂತೆ
ನನ್ನ ಸತ್ಯಂತ್ಗೆ ಕೈಯ ಮುಗಿದಾರು |

ನನ್ನ ಸತ್ಯಂತೆ ಅನುತೇಳಿ ಕುಲ ಕೈಯ ಮುಗಿದಾಗ
ನನ್ಹೆಡ್ರು ಅನ್ನುತಾನೆ ಮಂಚಣ್ಣ |

"ಹೆಡ್ಡಾರು ಕುಲದೋರು ಪೆದ್ದಾರು ಕುಲುದೋರು
ಅವಳ ಮಾಯ ಮಂತುರವ ತಿಳಿನಿಲ್ಲ |

ಅವ್ಳ ಮಾಯವ ತಿಳಿಯದಕೆ ನಾ ಹೇಳೀದಿ ಈ ಮಾತ
ಇದು ಯಾರು ತಿಳಿದಿದ್ದೀರಿ ಕುಲುದೋರೆ ? | ೧೯೧೦

ನಾವ್ ಬಾಯ್ಬಟ್ಟೇಳ್ಬಾರ್ದು ನೀವೆಲ್ಲ ತಿಳ್ಕೋತೀರಿ
ಇಲ್ಲಿ ಮಾತಾಡೋ ಜಂಗಮರೆ ಮೊದಲಿಲ್ಲ |

ಮರಳ ಎಣ್ಣೆಗೆ ಮುಳುಗಿ ಯಾರು ಬದುಕಿದ್ದಾರು ?
ಇದು ಸುಳ್ಳಲ್ವೇನ್ರಪ್ಪ ಜಗದಲ್ಲಿ |

ಮಾಯದ ಬೇಳ್ಕೆ ಅಲ್ದೆ ಇವ ಕಂಡುತ ಮುಳುಗಿಲ್ಲ
ಇವಳ ಮಾಯ್ದ ಕಪ್ಪು ಹಂಗೆ ಮಾಡೀದೆ |

ಒಳಗಡೆ ಮುಳುಗಿಲ್ಲ ಅದ್ರ ಪಕ್ಕದಲ್ಲಿ ನಿಂತವ್ಗೆ
ಮುಳುಗ್ದಂಗೆ ಕಣ್ಗೆ ತೋರವ್ಗೆ |

ಮುಳುಗ್ದಂಗೆ ಕಣ್ಗೆ ತೋರವ್ಗೆ ಕುಲಸಬಯ
ಇವುಳ್ ಗರ್ತಿ ಅನುತ್ಹೇಳಿ ನೀವು ನಂಬುಬ್ಯಾಡಿ | ೧೯೨೦

ಇದ್ಮವನು ಕಲಿಯಾದಕೆ ಇವುರಣ್ಣಯ್ಯ ಹೋಗಿದ್ದ
ಗಾಡುಗರಿದ್ಮಾವ ಅವ ಕಲುತಿದ್ದ|

ಅವ ಕಲುತ ಇದ್ಮ ತನ ತಂಗೂಗು ತೋರವ್ನೆ
ನೀವ್ ತಿಳುಕೊಂಡ್ರೇನಪ್ಪ ನನ್ ಕುಲುದೋರೆ |

ಉಕ್ಕುನೊನಕೆ ತರ್ಸಿ ಇವ್ಗ ಕೈಯೀಗೆ ಕೊಡುರಪ್ಪ
ಆ ಉಕ್ಕ್ಯೂನ್ಕೇಲಿ ನಾರ ತೆಗಿಯಾಲಿ |

ಉಕ್ಕುನೊನ್ಕೇಲಿ ನಾರ ಎಡುದ್ಬುಟ್ರೆ ನಾಗಮ್ಮ
ಇವ ಗರ್ತಿ ಎಂದು ನಾ ನಂಬ್ತೀನಿ" |

ಆಗಲಿ ಕುಲವೆಲ್ಲ ಒಪ್ಪುದರು ಬೇಗ್ದಲ್ಲಿ
ಇವುಳಿಗೆ ಉಕ್ಕುನೊನಕೆಯ ತಂದುಕೊಡುತಾರೆ | ೧೯೩೦

"ಬಸವಣ್ಣನ ತಂಗೆ ಅಕ್ಕ ನಾಗಮ್ಮಯ್ಯ
ಈ ಉಕ್ಕುನೊನ್ಕೇಲಿ ನಾರ ಎಡಿಯಮ್ಮ" |

ಆ ಉಕ್ಕುನೊನ್ಕೆ ಈಸ್ಕೊಂಡು ತನ್ ಕೈಯಲ್ಲಿ
ಹಿಡುಕೊಂಡು
ಸತ್ಯ ಸರಣ್ಕಾರ ನೆನುಕೊಂಡು |

ಸತ್ಯ ಸರಣ್ಕಾರ ನೆನುಕೊಂಡು ಹೂಡೀದ ಹತ್ ಬೆರಳ
ಬಾಳೇಯ ಪಟ್ಟ ಎಡಿದಂಗೆ |

ಬಾಳೆಯ ಪಟ್ಟ ಎಡಿದಂಗೆ ನಾಗಮ್ಮಯ್ಯ
ಎಡೆದೆಡದು ಗುಡ್ಡೆ ಮಾಡಿದಳು |

"ಒಪ್ಪುದ್ರಾ ಕುಲದೋರೆ ಒಪ್ಪುದ್ರಾ ಸಬುದೋರೆ ?
ಒಪ್ತೇನಪ್ಪ ಕೊಂಡುಗರೆ ? | ೧೯೪೦

"ಇವ್ಳ ಮಾಯದ ಬೇಳ್ಕೆ ತಿಳಿಯದ್ಕೆ ನಾ ಹಂಗಂತ ಹೇಳಿದ್ದು
ತಿಳುಕೊಂಡ್ರ್ಯಾ ಈಗ ಮದ್ದುಕಾತ್ಯ |

ಹಸಿಯ ಮರದೊಳುಗೆ ನಾರ ಎಡಿಯದು ಕಷ್ಟ
ಉಕ್ಕುನೊನಕೇಲಿ ಬರುದು ನಿಜುವಪ್ಪ |

ಸುಳ್ಳಲ್ಲ ಈ ಮಾತು ತಿಳುಕೊಳಿ ಕುಲದೊರೆ
ಗರ್ತಿ ಎಂದು ಕೈಯ ಮುಗುದ್ರಲ್ಲ |

ಅಂತ ಹರುಳಯ್ನ ಮನೆಯ ಪ್ರಾಸೋದ್ಕೆ ಬಸುರಾಗಿದ್ರೆ
ಹಿಣ್ಣ ಮೇಲಕೆ ಮಾಡಿ ಸೂಜೀಯ |

ಹಿಣ್ಣ ಮೇಲಕೆ ಮಾಡಿ ಸೂಜೀಯ ನಿಲುಸೀವಿ
ಆ ಸೂಜಿ ಕಣ್ಣಲ್ಲಿ ನುಗ್ಗುಬೇಕು | ೧೯೫೦

ದಾರ ಓಡಾಡೊಂಗೆ ಓಡಾಡುದರು ನಾಗಮ್ಮ
"ಒಪ್ತೇನ್ರಯ್ಯ ಕುಲುವೆಲ್ಲ?" |

"ನೋಡಿದ್ರಾ ಕುಲುದೊರೆ ಕಂಡಿರ್ಯಾ ಊಳ್ಗಾದವುರೆ
ಇವ ಮದ್‌ಕಾರ್ತಿ ಅಲ್ದೆ ಗರುತ್ಯಲ್ಲ |

ಸರಣನ ಮನೆಯ ಪ್ರಾಸೋದಕ್ಕೆ ಬಸುರಾಗಿದ್ರೆ
ಇನ್ನೊಂದು ಸತ್ಯ ಮಾಡ್ಬೇಕು |

ಹಸಿ ಮರಳುವ ಒಳುಗೆ ಹರವೀಯ ಮಾಡ್ಬೇಕು
ಮರಳೀನ ಹರವೀಗೆ ಮೂರು ತೂತು |

ಮರಳೀನ ಹರವೀಗೆ ಹೂಡಬೇಕು ಮೂರು ತೂತ
ಎಳೆನಾಗನಿಡಿದು ಸಿಂಬಿ ಮಾಡ್ಬೇಕು | ೧೯೬೦

ಎಳೆನಾಗನಿಡಿದು ಸಿಂಬೀಯ ಮಾಡ್ಕೊಂಡು
ಕೈ ಬುಟ್ಕೊಂಡು ನೀರ ತರಬೇಕು |

ಸುಳುಕ್ಕೆಯ ಬುಟ್ಕೊಂಡು ನಮ್ ಕುಲುಕೊತ್ಕೊಂಡು ಬಂದ್ರೆ
ಗರತಿ ಅನ್ತಾರೆ ನನ್ ಕುಲುದೋರು" |

ಹಂಗಂದ ಮಾತನ್ನೆ ಕೇಳುದುರು ನಾಗಮ್ಮ
ಕಾವೇರಿ ನದಿಗೆ ಹೊರುಟಾರು |

ಕಾವೇರಿ ನದುಗೋಗಿ ನನ್ನಕ್ಕಯ್ಯ ನಾಗಮ್ಮ
ಈ ಭೂಮ್ತಾಯೀಗೆ ಸರಣಂದ |

ನನ್ನೊತ್ತಿರೊ ಭೂಮ್ತಾಯಿ ನಾ ಪತುವಾರ್ತೆಯಾದರೆ
ಮರಳೀನ ಹರವೀಯ ಕೊಡಬೇಕು | ೧೯೭೦

ಭೂಮ್ತಾಯುಗ್ಹೊಟ್ಟುರುದು ನಮ ನಾಗಮ್ನ ಸತ್ಯಕೆ
ಗರಗರುನೆ ಹರುವಿ ತಿರುಗೀತು |

ಗರಗರನೆ ತಿರುಗೀತು ಮರಳೀನರುವಾಯಿತು
ಬಂದು ಕೈ ಮೇಲೆ ಕುಳುತೀತು |

ಬಂದಂತ ಹರವೀಗೆ ಹೂಡಿದರು ಮೂರ್ತೂತ
ಹೊನ್ನ ಹುತ್ತಕ್ಕೆ ಹೊರಟಾಳು |

ಹೊನ್ನ ಹುತ್ತುಕ್ಕೋಗಿ ಇಕ್ಕುದಳು ಎರಡ್ ಕೈಯ
ಒಳಗಿರುವ ಸರ್ಪ ನನ್ ಕಡಿಯಪ್ಪ |

ನಾ ಪತುವಾರ್ತೆಯಾಗಿದ್ರೆ ನಂಗೆ ಸಿಂಬಿಯಾಗ್ಲಾ ಎಂದು
ಕೈಯ ಇಕ್ಕವುರೆ ನಾಗಮ್ಮ | ೧೯೮೦

ಮಾಸೇಸ ಬಂದು ತೆಕ್ಕೆ ಮಡುಸ್ಕೊಂಡು
ಅಂಗೈಯ ಮೇಲೆ ಮನುಗೀತು |

ತೂತೀನ ಹರುವೀಲಿ ನೀರನ್ನೆ ತುಂಬ್ಕೊಂಡು
ಸಿಂಬೀಯ ಇಟುಕೊಂಡು ನಾಗಮ್ಮ |

ಸಿಂಬೀಯ ಇಟುಕೊಂಡು ಎರಡು ಕೈಯ ಬುಡುಕೊಂಡು
ನಾಗಮ್ಮ ಮಂದುಕ್ಕೆ ಬರುತಾಳೆ |

ತೂಗೂತ ಬಾಗೂತ ಏಳು ತಿಂಗಳ ಬಸುರಿ
ಬಂದ ಬಿಜ್ಜಾಳನ ಕುಲಸಬುಗೆ |

"ನೋಡ್ರಪ್ಪ ಕುಲುದೋರೆ ಹಂಗಿಂಗೆ ಅನ್ನಬ್ಯಾಡಿ
ಈಗ್ಲಾರೂ ಒಪ್ತ ನಿಮ್ ಕುಲುಸಬಿಯ?" | ೧೯೯೦

ಹಂಗಂದ ಮಾತನ್ನೆ ಕೇಳಿ ಊಳ್ಗದವರು
"ಒಪ್ತುತಮ್ಮ ತಾಯಿ ನಿನ್ ನಿಜಭಕ್ತಿ!" |

ಹತ್ತಬಾರದ ಕೋಪ ಹತ್ತೀತು ಮಂಚಣ್ಣ
ನಾ ಒಪ್ಪಿಲ್ಲ ಅಂತಾನೆ ಕೊಂಡೂಗ |

"ಸತ್ಯಗಳ ಮಾಡ್ಸಿದರೆ ಇವುಳೆಷ್ಟಾದರೂ ಮಾಡ್ತಾಳೆ
ಕೆಲಸುವಿಲ್ಲವೇನ್ರಪ್ಪ ನಮ್ ಮನೆಯಲ್ಲಿ |

ಕೆಲ್ಸವಿಲ್ಲವೇನ್ರಪ್ಪ ನಮ್ಮ ಮನೆಯಲ್ಲಿ?" ಅನುತ್ಹೇಳಿ
"ಇವುಳಿನ್ನೊಂದು ಸತ್ಯ ಮಾಡಬೇಕು |

ಇವುಳೊಟ್ಟೆ ಒಳುಗಲ ಮಗು ನಮ್ಮೊಂದುಗೆ ಮಾತಾಡಿದರೆ
ಒಪ್ತುತ್ಯೆತೆ ನನ್ನ ಕುಲುವೆಲ್ಲ | ೨೦೦೦

ಒಪ್ತುತ್ಯೆತೆ ನನ್ನ ಕುಲುವೆಲ್ಲ" ಎನುತ್ಹೇಳಿ
ಆ ನಾರ್ದಾರ ಮಂಚ ನುಡಿದಾನು |

"ಏಳು ತಿಂಗಳಾ ಮಗು ಯಾರೊಂದ್ಗೆ ಮಾತಾಡೀತು
ಅದು ಮಾತಾಡೋದು ನಿಜುವ ಧರಿಯಲ್ಲಿ? |

ಧರ್ಮವೇನಪ್ಪ ಅಯ್ಯ ಕೊಂಡುಗರ ಮಂಚಣ್ಣ
ಇದು ನ್ಯಾಯವೇನಪ್ಪ ಬಿಜ್ಜಾಳ |

ಮಾತನಾಡದೆ ನೀನು ಸುಮ್ಮನೆ ಕುಳಿತ್ಯಲ್ಲ
ನೀ ಅಧಿಕಾರ ಕೊಟ್ಯಪ್ಪ ಮಂಚಣ್ಣುಗೆ |

ಇಂತ ಮಾತನೆಲ್ಲ ಆಡು ಎಂದು ಅವುನ್ಗಧಿಕಾರ ಕೊಟ್ಟು
ನನ್ನ ಸಂಕಟ ಪಡುಸೀರ್ಯಾ ಕುಲುಜೋರೆ | ೨೦೧೦

ತಂದೆ ತಾಯಿ ಹೊಟ್ಟೇಲಿ ನೀವು ಹುಟ್ಟುನಿಲ್ಲವೇನ್ರಪ್ಪ
ನನ್ನಂತ ಮಕ್ಕ ನಿಮುಗಿಲ್ಲೆ |

ಹೆಣ್ಣು ಗಂಡು ಮಕ್ಕ ನಿಮುಗಿಲ್ಲೆನ್ರಪ್ಪ?" ಎನುತ್ಹೇಳಿ
ನನ್ ಚನ್ನೆ ನಾಗಮ್ಮ ನುಡಿದಾಳು |

"ಹೇಳಪ್ಪ ಮಾರಾಜ ಇಂತೆ ತೊಂದ್ರೆ ಕೊಡುಬ್ಯಾಡೆಂದು
ನೀ ಹೇಳು ಮಂಚಣ್ಣನ ಜೊತೆಯಲ್ಲಿ" |

"ನಾನೇನೇಳ್ಲಿ ನಾಗಮ್ಮ ಅವ್ನು ನ್ಯಾಯ್ದಂತೆ ಕೇಳ್ತಾನೆ
ಅವುನೇ ಬುದ್ಧಂತ ನಮ್ ಕುಲುಸಬುಗೆ |

ಅನ್ನವುಂಡೇ ಬಸುರಾದೋರ ನಾನಿನ್ನಾಗ್ಗೂ ನೋಡ್ನಿಲ್ಲ
ಅದಕಾಗಿ ಈ ಉತ್ರ ಕೇಳ್ತಾನೆ | ೨೦೨೦

ಗಂಡನಿಲ್ಲದೆ ಗರ್ಭಿಣಿ ಭಯವೇಕೆ ನಾಗಮ್ಮ
ಶಿವನೇ ಕೊಟ್ಟಿರಬೋದು ವರುಗಳ |

ಶಿವ ಕೊಟ್ಟಂತ ವರ ಮಾತಾಡಕೆ ಭಯುವೇನ
ಮಗು ಮಾತಾಡುದ್ರೆ ಒಪ್ತಾರೆ ಕುಲುದೋರು" |

"ಮಾತ್ನೆ ಆಡಲು ಬೇಕ ಕಂಡುತ್ಯಾಗಿ!" ಅನುತ್ಹೇಳಿ
ನನ್ನ ದುಂಡಿ ನಾಗಮ್ಮ ಅಳುತಾಳೆ |

"ಅಪ್ಪ ಮಾತಾಡೋ ನನ್ ಮಗನೇ ಮಾತಾಡೋ
ನೀನ್ ಮಾತಾಡಿ ನನ್ ನರ್ಕ ಬಿಡುಸಪ್ಪ |

ನೀನಾರೂ ಮಾತಾಡಿ ನನ್ ಸೆರೆ ಬುಡ್ಸು" ಎಂದು
ಆ ಮಗುವೀಗೆ ತಾಯಿ ಹೇಳ್ತಾಳೆ | ೨೦೩೦

"ನೀ ಮಾತಾಡ್ದೆ ಹೋದ್ರೆ ಬಿಡುರಲ್ಲ ಕುಲದೋರು
ನನಗಿನ್ನೇನ್ ನವನರ್ಕ ಕೊಡುತಾರ್ಯೊ |

ಸರಣ ಹರುಳಯ್ನ ಮನೆಯ ಪ್ರಾಸೋದ್ಕೆ ಸುಪ್ಪಿಯಾದ
ನನ್ನೊಟ್ಟೆ ಒಳಗುಲ ಕಂದ ಮಾತಾಡೊ" |

ತನ್ನ ಸಂಕಟಕೆ ನಾಗಮ್ಮ ಹೊಟ್ಟೆ ಬಡುಕೊಂಡ
ಹೊಟ್ಟೆ ಒಳಗಲ ಮಽಗೆ ತಿರುಗೀದ |

"ಅಂಜುಬ್ಯಾಡ ತಾಯಮ್ಮ ನೀ ಹೆದುರ್ಬ್ಯಾಡ ನನ್ನಮ್ಮ
ನಾ ಬರ್ತೀನಿ ಬಿಜ್ಜಾಳನ ಸಂಮರಕೆ |

ಮಗ ತಿಳಿಯನು ಎನುತ್ಹೇಳಿ ನೀ ಎಂದುಗ್ಗು ತಿಳಿಬ್ಯಾಡ
ನಿನ್ ಕಷ್ಟನೆಲ್ಲ ತಾಯಿ ತಿಳುದೀನಿ |

ಕಷ್ಟ ನಾ ತಿಳುದೀನಿ ದ್ರುಷ್ಟುರಿಗೆ ವೈರಿಯಾಗಿ ಬರುತೀನಿ"
ಎದ್ದೊಂದು ಗುಟುರ ಹೊಡಿದಾನು |

ತಾಯಿ ಮಂಟುಪದೊಳಗೆ ಎದ್ದು ಗುಟುರ್ಹೊಡುದ
ಆಕಾಸ ಭೂಲೋಕ ನಡುಗೀತು |

ಆಕಾಸ ನಡುಗೋಗಿ ಭೂಮಿ ತಲ್ಲಣುಸೋಗಿ
ಬೆಳುಗುನ ನಕ್ಷುತ್ರವೆಲ್ಲ ಉರುದೋದೊ |

ಕಲ್ಯಾಣ ಮೊಳಗೋಯ್ತು ಆ ಪಟ್ಟುಣವೆ ನಡುಗೋಯ್ತು
ಮೂರ್ಚವಾದಾರು ಕುಲುಸಬುಯ |

ಉರಿಯ ಸಿವ್ಯಾಸನದಲ್ಲಿ ಕುಳುತಿದ್ದ ಬಿಜ್ಜಾಳ
ಮೊಕ್ಕಾಡನಾದ ಪೀಠುದಲ್ಲಿ |

ಭುಗುಭುಗನೆ ತಿರುಗಿ ಬಿದ್ದೋದ ಕೊಂಡೂಗ
ಮೂರ್ಚುವಾಗೋಯ್ತು ಕುಲುಸಬುಯ |

ಇಂತೆ ಗುಟುರೊಡೆದವನು ಎಲ್ಲಾಣೆ ಬಂದಾನು
ನಮ್ಮೇನ್ ಮಾಡಾನೊ ಕಾಣಿ ತಿಳಿಯಾದು |

ನರುಜಲ್ಮದ ಸಪ್ತ ಈ ರೀತಿ ಆಗೋದಿಲ್ಲ
ಇದೇನೋ ಒಂದ್ ಬೂತು ಇರಬವುದು |

ಆತು ಭೂತುವ್ಹೋ ಕಾಣಿ ಪೀಡೆ ಪಿಚಾತಿಯೋ ಕಾಣಿ
ಅಮ್ಮಾನ ಹೊಟ್ಟೇಗೆ ಸೇರಿರಬವುದು |

ನರಮನುಸರ ಸೊರಣೆ ಅದು ಬ್ಯಾರೆ ಸೊರುಣೆ
ಇದು ನರುಮಾನ್ರ ಸೊರುಣೆ ಮೊದುಲಲ್ಲ |

ಮೂರ್ಚ್ಯ ತಿಳಿದು ಕುಲುವೆಲ್ಲ ಎದ್ದಾರು
ಉಸ್ಸೋ ಎಂದಾನು ಬಿಜ್ಜೂಳ |

"ಯಾಕಪ್ಪ ಕರಿಸೀದಿ ಇಂತೆ ಘನಗರುತ್ಯಾ?
ನಾ ಕರೀಸಿ ತೊಂದ್ರ್ಯ ಕೊಡಬವುದ ? |

ಅವುಳ್ಗೇನು ಮಾಡಲು ಬ್ಯಾಡಿ ಬುಟ್ಟುಡಿ ಮಂಚಣ್ಣ
ಅವುರೋಗಲಿ ಅವುರ ಮಠುಮನೆಗೆ" |

ಹಂಗಂದ ಮಾತನ್ನೆ ಕೇಳವ್ನೆ ಕೊಂಡೂಗ
"ನಿನುಗೆ ಬುದ್ಧಿ ಇಲ್ಲಪ್ಪ ಬಿಜ್ಜುಳ |

ಹುಟ್ಟ ನಿನಗೆ ಇಷ್ಟು ವಯ್ಸು ಬಂತಲ್ಲ
ಮಗ ಮಾತಾಡದೆಲ್ಲಾರೂ ತಿಳಿದಪ್ಪ |

ಮಾತಾಡ್ದ ಅಂತ್ಹೇಳಿ ಮನಕೆ ಸಂದೇಗ ನಿನುಗ್ಬ್ಯಾಡ
ಈಗ ತಿಳುಕೊಂಡಿ ಅದರ ಒಳಗುಟ್ಟು |

ಮಾಯಾದ ಗೊಂಬೆ ಮಾಡಿ ನರಿಯ ಚಂಡಲ್ಲಿ ಕಟ್ಟುವುಳೆ
ಆ ಗೊಂಬೆ ಹೊಡುತೀತು ಇಂತೆ ಹೊಸುಕಾಕ |

ಮನುಸ್ಕೊಡೆದ ಕಾಕಲ್ಲ ಇದು ಆತು ಬೂತುವಲ್ಲ
ಗೊಂಬೊಡೆದ ಕಾಕ ಬಿಜ್ಜಾಳ |

ಹಿಡುಕಳ್ತೀನವಳ ಸೆರಗ ಈಗ ಸೀರೆ ಊರಾಕ್ತೀನಿ
ನರಿಯ ಚಂಡಲ್ ಗೊಂಬ್ಯ ನಾ ತೋರ್ತೀನಿ |

ನಾ ಗೊಂಬೆ ತೋರುದ ಮೇಲೆ ನೀನೊಪ್ಪು
ಬಿಜ್ಜುಳದೊರೆಯೆ
ನಾ ಹಂಗೆ ಬಿಟ್ಬೇನ ಈ ಘನಗರುತ್ಯಾ |

ಗಂಡಿಲ್ಲದೆ ಬಸುರಾದ ಮುಂಡೇರುಗೆ ಸೀರೆ ಅಳ್ದು
ಬುದ್ಧೀಯ ಇವುರೀಗೆ ಕಲುಸ್ಬೇಕು |

ಬುದ್ಧೀಯ ಇವುರೀಗೆ ಕಲುಸಿದ್ದೆ ಆದಾರೆ
ಮಾನುವಾಗಿ ಇವರು ಇರುತಾರೆ" |

ಎದ್ದೂ ಬಂದ ಮಂಚ ಹಿಡುಕೊಂಡ ಅಮ್ಮನ ಸೆರಗ
ಕುಲುದಲ್ಲಿ ಸೀರ್ಕ ಅಳಿಯಾರು |

ಸೀರೆ ಸೆರಗಿಡಿದಾಗ ನಾ ಕೆಟ್ಟ ಅಂದ ನಾಗಮ್ಮ
"ನನ ಭಂಗ ಮಾಡ್ಸೀಯಪ್ಪ ಕುಲುಗೇಡಿ |

ಇಂತ ಗಂಡುಸ್ರ ಸಭೆಯಲ್ಲಿ ನನ ಮುಂಡಾಗಿ ನಿಲುಸೀಯೊ
ಕಂಡವರ ಮುಂದ್ ಭಂಗ ಮಾಡುಸೀಯೊ?" |

ಎರಡು ಕಣ್ಣೀನ ನೀರು ಅಕ್ಕನಾಗಮ್ಮನೀಗೆ
ಎದೆಯ ಮೇಲ್ ತಾಯ್ಗೆ ಹರುದಾವ್ಹೊ |

ಹೊಟ್ಟೆ ಒಳುಗಲ ಮಗುಗೆ ಬ್ಯಾಗಾನೆ ಅರುವಾಗಿ
"ನೀ ಹೆದ್ರುಬಾಡ ತಾಯಿ ಬರುತೇನೆ |

ಬಿಜ್ಜೂಳ್ಳ ಸಮ್ಮರಕೆ ನಾ ಬರುತೀನಿ ನನ್ನಮ್ಮ
ನಮ್ಮಾವ ಎಲ್ಲೋದ್ರು ಬಸುವಣ್ಣ |

ನಮ್ಮಾವುನುತ್ರಾ ಕೇಳಿ ನಾ ತಕ್ಷಣ ಬರುತೀನಿ
ಭಂಗವಾಗ್ತೀನಿ ಎಂದು ನೀ ಅಳುಬ್ಯಾಡ" |

ತನ್ನ ಲಿಂಗ ಕಳ್ದುಮಾವುನ ಲಿಂಗಕ್ಕೆ ಕಳುಗೀದ
ಲಿಂಗ ಲಿಂಗ ಎರಡೆ ಮಾತಾಡ್ತವೆ | ೨೧೦೦

ಅಳಿಯನಾತುಮಲಿಂಗ ಮಾವನಾತುಮಲಿಂಗದೊಂದ್ಗೆ
ಎರಡೂ ಕೂಡಿ ಮಾತಾಡ್ತಾವೆ |

"ನನ್ಹೆತ್ತ ತಾಯೀಗೆ ಮಾವ ಅವಿಮಾನ ಮಾಡ್ತಾರಲ್ಲ
ನಾ ಎಲ್ಲೋಣೆ ಮಾವಯ್ಯ ಬರಬೇಕು |

ಕಣ್ಣಲ್ಲಿ ಬರುತೀನಂದ್ರೆ ಕಣ್‌ಜಾರು ಅಂತಾರಲ್ಲ
ಇನ್ನೆಲ್ಲಾಣೆ ಬರಲಿ ಮಾವಯ್ಯನೋರೆ |

ಮೂಗುನಿಂದ ಬರ್ತೀನಂದ್ರೆ ಗೊಣ್ಣೆ ಅಂತರೆ ಮಾವ
ನಾ ಯಾವ್ ಮಾರುಗದಲ್ಲಿ ಬರುಲಪ್ಪ |

ಕಿವಿಯಲ್ಲಿ ಬಂದರೆ ನನ್ನ ಗುಗ್ಗೆ ಅಂತರೆ ಮಾವ
ನಾ ಬರುವಂತ ದಾರ್ಯ ಮೊದುಲೇಳಿ | ೨೧೧೦

ಕಂಕ್ಳಲ್ಲಿ ಬತ್ತೀನಂದ್ರೆ ನನ್ ಬೆವುರು ಅಂತಾರೆ ಮಾವ
ಇನ್ಯಾವ ದಾರೀಲಿ ಬರುಲಪ್ಪ |

ಜಲ ಮೂತ್ರುದಲಿ ಬಂದಾರೆ ಜಲಮೂತ್ರ ಅಂತರೆ ಮಾವ
ನಾ ಬರುವಂತ ಮಾರ್ಗ ಮೊದಲೇಳಿ |

ಅಪುರೂಪುಕ್ಕುಟ್ಟವನು ಎಲ್ಲೊಲ್ಲೊ ಬರುವನಲ್ಲ
ತಾಯ-ಬೆನ್ಮಚ್ಚ ಸೀಳಿ ಬರುತೀನಿ |

ಬೆನ್ಮಚ್ಚ ಸೀಳ್ಬುಟ್ಟು ನಾ ಧರೆಗೆ ಬರುತೀನಿ ಮಾವ
ನಾ ಬರುವಂತ ವಾರ ಮೊದುಲೇಳಿ |

ಮಂಗಳ್ಯಾರ ಬಂದಾಗ ಅಂಗಾಳ ಎಂಬರು ಮಾವ
ಇನ್ಯಾವಾರ ಬರುಲಪ್ಪ ಮಾವಯ್ಯ | ೨೧೨೦

ಬುಧುವಾರ ಹುಟ್ಟಿದರೆ ನನ್ ಭೂತ ಅಂತರೆ ಮಾವ
ಇನ್ಯಾವಾರ ಮಾವ ಬರುಲಪ್ಪ |

ಬ್ರೇಸ್ಪಾರ ಹುಟ್ಟಿದರೆ ಬೆನ್ನುನ್ಯಾರ ಮಾವಯ್ಯ
ಇನ್ಯಾವಾರ ಮಾವಯ್ಯ ಬರುಲಪ್ಪ |

ಸುಕ್ರಾರ ಹುಟ್ಟಿದರೆ ಬಲು ಸುತ್ತಾಟ ಮಾವಯ್ಯ
ಇನ್ಯಾವಾರ ಮಾವಯ್ಯ ಬರುಲಪ್ಪ |

ಸನುವಾರ ಹುಟ್ಟಿದರೆ ಸನಿಕಾಟ ಮಾವಯ್ಯ
ಇನ್ಯಾವಾರ ಮಾವಯ್ಯ ಧರೆಗೆ ಬರುಲಪ್ಪ |

ಆಯುತ್ವಾರ ಹುಟ್ಟಿದರೆ ಆಯ್ತು ಹೋಯ್ತು ಅಂತಾರೆ
ಇನ್ಯಾವಾರ ಧರೆಗೆ ಬರುಲಪ್ಪ | ೨೧೩೦

ಈವತ್ತು ಸೋಮಾರ ಒಳ್ಳೆ ಸುಬ್ಬುಗಳುಗೆ ಮಾವಯ್ಯ
ನಾ ಬತ್ತೀನಿ ಬಿಜ್ಜಳನ ಸಮ್ಮರಕೆ" |

ಮಾವುನುತ್ರ ಕೇಳಿದ್ದು ಮುಕ್ಯಾಲು ಗಳುಗಾಯ್ತು
ಅಳುದವುನೆ ಪಾಪಿ ಅರ್ಧ ಸೀರ್ಯ |

ಬರಬರನೆ ಅಳಿತಾನೆ ಕೊಂಡುಗರ_ಮಂಚಣ್ಣ
"ಇವುಳೆಷ್ಟೊಳ ಉಟ್ಟಿದ್ದಾಳೊ ಘನಗರ್ತಿ |

ಕಷ್ಟಪಟ್ಟಳುದುರೂವೆ ಮುಗಿಯದೆ ಹೋಯ್ತಲ್ಲ
ಇನ್ನೆಷ್ಟೊತ್ಗೆ ಕಾಣವು ಆ ಗೊಂಬೀಯ |

ಇವ್ನ ನರಿಯ ಚೆಂಡುನ ಗೊಂಬೆ ಎಷ್ಟೊತ್ಗೆ
ಕಂಡದೊ" ಎಂದು
ಬೆಮುತಾ ಕುಲಗೇಡಿ ಅಳುದಾನು | ೨೧೪೦

"ಭಂಗುವಾಯ್ತಿನಿ ಎಂದು ಭಯ ಪಡುಬ್ಯಾಡಿ ನನ್ನಮ್ಮ
ಸೊಲ್ಪ ಸುಂಗಾರವಾಯ್ತೀನಿ ತಾಳವ್ವ |

ಮಾವುನಪ್ಪ ಕೇಳಿ ನಿನ್ ಮಂಟುಪುಕೆ ಸೇರಿನಿ
ನಾ ಬಿರುದ ತೊಡ್ತೀನಿ ಸೊಲ್ಪ ತಾಳವ್ವ |

ಮಂಚದ ಪಾದ್ವಂಗೆ ನಾಲಕು ಪಾದಾ ತೊಟ್ಟ
ಹೂವ್ನಾಗಿ ಒಂದು ಹೊಸಬಾಲ |

ಹಿರುಳನೆ ತೊಡುಕೊಂಡ ಈಬುತ್ತಿ ಧರುಸೀದ
ನಾ ಸುಂಗಾರವಾಯ್ತೀನಿ ತಾಳಮ್ಮ |

ಹೊಟ್ಟೆ ಒಳುಗಲ ಮಗ ಸರಣರಿಗೆ ಕಲಿಯುಗದ ಪಂಚಂಗ
ರುದಯಾದ ಒಳುಗೆ ಗ್ಯಾರಂಜ | ೨೧೫೦

ಕೆಂಬಾರವಾದ ಮಕ್ಕಳಿಗೆ ಅಟ್ಟುದಕೆ ಗ್ಯಾರಂಜ
ರುದಯದಲ್ಲಿ ಮಗ ಇರುಸೀದ |

ನತ್ತೀ ಮ್ಯಾಲುರುಗಣ್ಣು ಚೂರುಣದಾಗೆರಡು ಕೊಂಬು
ಸುಂಗಾರವಾದಾನು ಮಂಟುಪದಲ್ಲಿ |

ತಾಯಿ ಮಂಟುಪದಲ್ಲಿ ಸುಂಗಾರವಾದ ಮಗನು
ಈಗ ಬರ್ತೀವಿ ತಾಳವ್ವ ಹೊರಗಾಡೆ |

ಮೊಂಚು ಕೊಂಬೀನ ಒಳುಗೆ ಹೆಟ್ಟೀದ ಅಮ್ಮನ ಬೆನ್ನೀಗೆ
ಕೊಂಬಲ್ಲಿ ಮಚ್ಚ ಬಗಿದಾನು |

ಕೊಂಬುನಲ್ಲಿ ಬೆನ್ಮಚ್ಚ ಬಗಿದಾನು ಚನ್ನಬಸವಣ್ಣ
ಉರುಗಣ್ಣ ಬುಟ್ಟು ನೋಡ್ತಾನೆ | ೨೧೬೦

ಉರುಗಣ್ಣ ಬುಟುಕೊಂಡು ಅವುನರಮನೆಯ ನೋಡೀದ
ಅವುನ ಕಲ್‌ಚಾವ್ಡಿ ಕತ್ತಿ ಬೇಯ್ತಾದೆ |

ಬಗ್ಗಿ ನೋಡಿದ ಮಗನ ಕಂಡ ಕೊಂಡುಗನೋ ಮಂಚ
ಸೀರೆಯ ಬುಟ್ಟು ಬಿದ್ದೋಡ್ತಾನೆ |

"ಎಲ್ಲಿಗೋದಾಯೋ ಪಾಪಿ ನಾ ಬಂದಿ ತಾಳು" ಎಂದು
ಹೂಂಕರಿಸಿ ಒಂದ್ಗುಟ್ರ ಹೊಡಿದಾನು |

ಗುಟುರನ್ನೆ ಹೊಡುದ ಪಣುಕನೀಚಿಗೆ ನೆಗುದ
ಮಣ್ಣು ಬಾಚಿ ಅಂತರುಕೆ ಎಸಿದಾನು |

ಕಾಲಲ್ಲಿ ಮಣ್‌ಬಾಚಿ ಅಂತರುಕೆ ಎಸಿದಾನು
ನನ್ನಪ್ಪ ತಿರುಗ್ದಾ ಬಿಜ್ಜಳುನ ಎಡಬಲುಕೆ | ೨೧೭೦

ತಿರುಗ್ದ ಬಿಜ್ಜಳುನ ಎಡಬಲುಕೆ ಬಸುವಣ್ಣ
ಅವ್ನ ಮೊನುಗೊಂಬಲ್ಲೆತ್ತಿ ಒಗಿದಾನು |

"ರಾಜ್ಯಕ್ಕೆ ದೊರಿಯಾಗಿ ಕಲ್ಯಾಣ್ಕೆ ದೊಡ್ಡವನಾಗಿ
ನಮ್ ತಾಯೀಗೆ ಈ ನರ್ಕ ಕೊಡಬವುದೆ? |

ಆ ಕೊಂಡುಗರ ಮಂಚಣ್ಣುನ ಬುಟುಕೊಂಡು ನೀ ಸೌರ್ಕ ತೋರ್ತಿದ್ಕ
ತಡುಕೋ ಕುಲಗೇಡಿ ನನ್ನ ನರಕವ |

ನಾನು ಕೊಡುವ ನರುಕ್ಕಾ ನೀ ತಡುಕೋಳೊ" ಅನುತ್ಹೇಳಿ
ಅವುನೆದೆ ಮೇಲೆ ಪಾದ ಮಡುಗೀದ |

ನಾಲಕ್ಕು ಪಾದ್ನ ಅವುನೆದೆಯ ಮೇಲಿರಿಸಿ
ಕಾರ ಹೊಸುಗಂಗೆ ಪಾಪ್ಕ ಹೊಸುಗೀದ | ೨೧೮೦

ಓಡ್ತಾನೆ ಕೊಂಡೂಗ "ನನ್ ಬುಟ್ಟಾನ?" ಅನುತ್ಹೇಳಿ
"ಎಲ್ಲೋಡಿಯೆ ಪಾಪಿ ಬರುತೀನಿ" |

ಓಡೋಡಿ ಅಡ್ಗಟ್ಟಿ ಕೊಂಡುಗರ ಮಂಚಯ್ನ
ಕೊಂಬುನಲ್ಲಿ ಪಾಪ್ಕ ಎತುಕೊಂಡ |

ಕೊಂಬುನಲ್ಲೆತ್ಕೊಂಡ ಆಕಾಸುಕ್ಕೆಸುದ
ತಿರ್ಗಾ ಭೂಮೀಗೆ ಅವ್ನ ಇಳುತಾನೆ |

ಎದೆಯ ಮ್ಯಾಲೆರ್ಡು ಪಾದ ನತ್ತೀಮ್ಯಾಲೆರಡು ಪಾದ
ತನ್ನಾಕ್ರೋಸ ಬುಟ್ಟು ಹೊಸುಗೀದ |

ಅಳಿಯ ಚನ್ನಬಸವಣ್ಣುನ ಬಾಧಿ ತಡಿಯಲಾರ್ದೆ
"ನನ್ ಹೊತ್ತೀರೊ ಭೂಮ್ತಾಯಿ ಬಾಯ್ದೆರಿಯೊ | ೨೧೯೦

ನನ್ಹೊತ್ತಿರೊ ನನ್ನಮ್ಮ ನೀ ಬಾಯ್ದೆರಿಯೊ ತಾಯಿ"
ಎಂದು ಕೊಂಡೂಗ ಅಳುತಾನೆ |

"ಸತ್ಕುವಂತರ ತಂದು ಈ ಕಷ್ಟ ಕೊಟ್ಟುದಕೆ
ಹಂಗೆ ಹೊಸುಗಪ್ಪ ಈ ಕುಲಗೇಡ್ಗಾ |

ಹಂಗೆ ಹೊಸುಗು ಮಗನೆ ಕುಲಗೇಡ್ಗ" ಅನುತ್ಹೇಳಿ
ಜಂಗುಮರ ಕುಲುವೆಲ್ಲ ಕೈ ಮುಗಿದಾರು |

"ಇವ ಕೊಂಡೂಗ ಹೇಳ್ದಿದ್ರೆ ಹಿಂಗೆಲ್ಲ ಆಗ್ತಿರಲಿಲ್ಲ
ಇವ - ತಂದಿಟ್ಟವನೆ ಅವ ಕೊಂಡೂಗ |

ತಂದಿಟ್ಟವನೆ ಅವನು ಈ ನ್ಯಾಯಾವ ಮಂಚಣ್ಣ
ಇಂದವ್ನ ಮರೆ ಮಾಡುದ್ಯಪ್ಪ ನನ್ ಮೊನುಗಾರ | ೨೨೦೦

ಬಿಜ್ಜಾಳ ಆಗೋದ ಮಂಚಣ್ಣ ಆಗೋದ
ನಿನುಗಿನ್ಯಾರು ವೈರಿ ಮೊದುಲಿಲ್ಲ |

ಅಂತೆ ವೈರಿಗಳು ನಿನಗಿಲ್ಲ ಕಾಣೊ ನನ್ನಪ್ಪ
ಇದ್ದಾರೆ ನೋಡಪ್ಪ ಕುಲುದಲ್ಲಿ |

ನಾವೇ ನಿನ್ ಪೂಜೆ ಮಾಡಿ ನಿನ್ಮಕ್ಕಾಯ್ತುವಿ ಸ್ವಾಮಿ
ನಿನ್ನ ಕಣ್ಣಾ ನಮ್ಮೇಲೆ ಬಿಡುಬ್ಯಾಡ |

ನಿನ್ನ ನೇತ್ರಾ ನೋಡುದರೆ ಬಾಳ ಭಯವಾಯ್ತೀದಪ್ಪ
ಯಾವ್ ಬ್ರಹ್ಮ ನಿನ್ನ ಸೃಷ್ಟಿಸೀದ |

ಎರಡು ಕಾಲ್ಮನುಸಾರು ಇದುವರ್ಗೆ ಇದ್ದಾರು
ನೀನ್ ನಾಲಕ್ಕು ಪಾದಾದ ಮೊನುಗಾರ | ೨೨೧೦

ನಾಲಕ್ಕು ಪಾದಾದ ಮೊನುಗಾರ ಮಾತಾಯಿ ಮಗ
ನೀನ್ಯಾವರದಲ್ಲುಟ್ಟಿದೆ ಶಿವುಬಲ್ಲ |

ಎರ್ಡು ಕಣ್ಗಳ ಜನುವ ಇದುವರ್ಗು ನೋಡಿದ್ವಪ್ಪ
ನೀನು ಮೂರು ಕಣ್ಣುಳ್ಳ ಘನಸರಣ |

ಮೂರು ಕಣ್ಣುಳ್ಳಗನ ನಮ್ಮ ನಾರಿ ನಾಗಮ್ಮ ಪಡೆದ
ಇನ್ನು ರಾಜ್ಯದಲಿ ವೈರಿಗಳು ನಿರ್ಮೂಲ" |

ಕೊಂಡಾಡ್ತಾರೆ ಜಂಗಮರು ಮಾತಾಡ್ತಾರೆ ಕುಲುಸಬುಯ
ಅಳಿಯಾನ ಲಿಂಗ ಹೊರಟೋಯ್ತು |

ಅಳಿಯನಾತುಮಲಿಂಗ ಮಾಂವ್ನಲಿಂಗುದತ್ತುರಕೋಗಿ
ಅವ್ರ ಮಾವಯ್ನ ಸೆರೆಯ ಬಿಡಿಸೀತು | ೨೨೨೦

"ನಾವುಟ್ಟೀನಿ ಮಾವಯ್ಯ ಮಂದಾದ ಕಟ್ಟೇಲಿ
ನಾ ವೈರಿಗಳ ಕೊಂದಿವ್ನಿ ನೀವ್ ದಯಮಾಡಿ |

ಬಿಜ್ಜಾಳ ಎಂಬ ಸೊರುವ ನಿರ್ಮೂಲ ಮಾಡಿವ್ನಿ
ಆ ಕೊಂಡುಗನ ನಾನು ಮಡುಗಿಲ್ಲ |

ಬನ್ನಿ ಮಾವಯ್ಯ ಮಂದುಕ್ಕೆ" ಅನುತ್ತೇಳಿ
ಆತುಮದ ಲಿಂಗ ಕರುದೀತು |

"ಆಗಲೆ ಧರೆಗೆ ನೀ ಬಂದ್ಯಪ್ಪ ನನ್ನಳಿಯ
ಎಂದು ದೊಡ್ಡ ಬಸವಣ್ಣ ಹೊರುಟಾರು |

ಸೆರೆಯ ಮನೆಯ ಬುಟ್ಟು ಡಾಕುಡೀಕಲ್ಲಿ ಬಂದ್ರು
ಕುಣುದಾಡುತಾನೆ ಮಂದದಲ್ಲಿ | ೨೨೩೦

ಅಳಿಯ ಕುಣುದಾಡುತಿದ್ದ ಮಂದದ ಕಟ್ಟೆ ಒಳುಗೆ
ಬಂದರು ಮಾವಯ್ಯ ಸನ್ನಿಧಾನುಕೆ |

ಸೋದರ ಮಾವನ ಕಂಡು ಪಾದುಕ್ಕೆ ಎರುಗೀದ
ಸರಣು ನಿಮ್ಪಾದುಕ್ಕೆ ಮಾವಯ್ಯ |

ಪಾದಕ್ಕೆರಗಿದ ಮಗನ ಕಂಡಾರು ಬಸವಣ್ಣ
ಗುಳುಗುಳುನೆ ಸ್ವಾಮಿ ಅಳುತಾರೆ |

"ನಿನ್ನ ರೂಪನ್ನೆ ನೋಡಿದರೆ ನನ್ಗೆ ಭಯವಾಯ್ತದಲ್ಲಪ್ಪ
ನಿನ್ನ ಸೃಷ್ಟಿಮಾಡಿದೋರ್ಯಾರ ಈ ಧರೆಗೆ |

ವೈರಿಗಳ ಸಮ್ಮಾರ ನೀ ಮಾಡುದ್ಯ ನನ್ನಳಿಯ
ಹೆಂಗ್ಹೋತ್ತಿದ್ದಳಪ್ಪ ನನ್ನೊಡವುಟ್ಟು | ೨೨೪೦

ನವನಾತ್ರಿ ಒಂಬತ್ತಿಂಗ ತುಂಬುನಿಲ್ಲ ನನ್‌ಕಂದ
ನೀ ಏಳು ತಿಂಗಳಿಗೆ ಬರಬವುದ ? |

ಇಂತೆ ಬೆಟ್ಟುದಂತ ಮಗನ ನನ್ನವ್ವ ಹೆಂಗೊತಿದ್ದ
ಎಲ್ಲೋದ ನಿನ್ನವ್ವೆ ನಾಗಮ್ಮ? |

ಕಾವಿ ಡೇರ್ಕ ಹೊಡೆದು ಒಳುಗಡೆ ಮನುಗ್ಸವ್ರೆ
ಮೂರ್ಚ್ಛೆವಾಗಿ ತಾಯಿ ಮನುಗವ್ಳೆ |

ಆ ಮಗುನ ಕರುಕೊಂಡು ತಾಯ್ ಬಳುಗೆ ಬಂದ್ರು
ಅವುಳ್ಗೆ ಕಪ್ಪು ಧೂಳ್ತಾವ ಇಕ್ಕಿದರು |

ಎದ್ದೇಳು ನನ್ನವ್ವ ನನ್ ಗರತಿ ತಂಗ್ಯವ್ವ
ಎದ್ದು ನೋಡವ್ವ ನಿನ್ ಮಗುನನ್ನ | ೨೨೫೦

ಹೆಂಗೊ ಎಂದು ತಂಗಿ ನಾ ತಿಳುದಿದ್ದಿ ನನ್ನವ್ವ
ನಿನ್ನ ಭಂಗ ಬಡಿಸಿದನು ಈ ಮಗ ಬಂದು |

ಹುಟ್ಟಿದ ನನ್ನಳಿಯನ ನೀವ್ ಹಂಗೆ ಬುಟ್ಕೊಂಡ್ರಲ್ಲ
ಅವುನ್ಗೇನಾರೂ ಹೆಸರ ಇಡುಬಾರುದ |

ಹೆಸ್ರನ್ನೆ ಇಡುಬಾರುದ ನನ್ನಳಿಯಂಗೆ ?" ಅಂತ್ಹೇಳಿ
ಆ ದೆಸೆಯ ಪಾಲುಕರು ನುಡಿದಾರು |

"ನೀವೇ ಇಲ್ಲದ ಮ್ಯಾಲೆ ನಾವೇನನ್ನವು ?" ಅಂತ್ಹೇಳಿ
ಮಡದಿ ನೀಲಮ್ಮ ನುಡಿದಾಳು |

ಅಳಿಯನ ಹಿಡಿದು ತೊಡೆಯಲ್ಲಿ ಕೂರಿಸಿ ಬಸವಣ್ಣ
ಶಿವಸರಣರ ಜೊತೆ ಜೋಗುಳ ಆಡಿದರು | ೨೨೬೦

ಅಕ್ಕ ನಾಗಮ್ಮನ ಮಗನು ಬಂದು
ಚಿಕ್ಕವ ಚಿನ್ನಬಸವಣ್ಣ ಬಂದ
ಜೋಜೋಜೋ ಎನ್ನಿರೋ
ಶಿವಸರಣರೆಲ್ಲ ಜೋ ಜೋ ಜೋ ಎನ್ನಿರೋ | ಸೊಲ್ಲು |

ನಾಗಮ್ಮನ ಮಗ ಬಂದ
ರಾಜ್ಯಕ್ಕೆ ದೊಡ್ಡವ ಬಂದ
ಅಳಿಯ ಚನ್ನ ಬಸವಣ್ಣ
ನತ್ತೀಮ್ಯಾಲುರುಗಣ್ಣ ಕಂದ ಜೋ ಜೋ ಜೋ |

ನತ್ತೀ ಮ್ಯಾಲೆ ಉರುಗಣ್ಣ ಕಂದ
ಚೂರುಣದಂತ ಎರುಡ್ಕೊಂಬ ತಂದ ೨೨೭೦
ಮಂಚೂದ ಪಾದುದಂಗೆ
ನಾಕು ಪಾದವ ತೊಟ್ಟು ಬಂದ ಜೋ ಜೋ ಜೋ |

ನಾಕಪಾದವ ತೊಟ್ಟವ ಬಂದ
ರಾಜ್ಯ ಆಳುವ ಮಗನು ಬಂದ
ಹರುಳಯ್ಯ ಮನೆಯ ಕರುಣ ಪ್ರಾಸೋದಕೆ
ಹುಟ್ಟಿದ ಚನ್ನಬಸವ ಬಂದ ಜೋ ಜೋ ಜೋ |

ಮಾನ್ಯ ಹರುಳಯ್ಯ ಮನೆಯ
ಹಿರುಳೀನ ಹೋರಿ ಬಂದ
ಗಂಡನಿಲ್ಲದ ಗರುಬಿಣಯಾದ
ದುಂಡಿ ನಾಗಮ್ಮನ ಮಗನು ಬಂದ ಜೋ ಜೋ ಜೋ | ೨೨೮೦

ನವಣಕ್ಕೀಯ ಪ್ರಾಸೋದದಲಿ
ರಾಜ್ಯಕೆ ಗೇದಿಕ್ಕವ ಬಂದ
ಒಕ್ಕಲಾದ ಗೌಡನಿಗೆ
ಗೇದಿಕ್ಕೊ ಮಗನು ಬಂದ ಜೋ ಜೋ ಜೋ |

ಅಕ್ಕ ನಾಗಮ್ಮನ ಮಗನಂತೆ
ಲೆಕ್ಕಕೆ ಇವ ಬರುವನಲ್ಲ
ನ್ಯಾಯಕ್ಕಿವನು ಬರುವನಲ್ಲ
ದುಷ್ಟರ ಮಾತ್ರ ಬಿಡುವುನಲ್ಲ ಜೋ ಜೋ ಜೋ |

ಜಾತಿ ಕುಲ ಕೆಟ್ಟ ಜನಕೆ
ಜಲ್ಮ ಸುದ್ಮ ಮಾಡವ ಬಂದ ೨೨೯೦
ಕೆಂಬಾರವಾದ ಸಣ್ಣ ಮಕ್ಕಳಿಗೆ
ಅಟ್ಟದಕೆ ಗ್ಯಾರಂಜಣ ತಂದ ಜೋ ಜೋ ಜೋ |

ಭಕ್ತರ ಬೀದೀಲಿ ಮೆರಿಯವ ಬಂದ
ಇಕ್ಕದಕೆ ಈಬುತ್ತಿ ತಂದ
ಇದ್ಯಾ ಕಲಿತ ಮಾನ್ಯರಿಗೆ
ಓದುದಕೆ ಕಲೀಗದ ಪಂಚಾಂಗವ ತಂದ ಜೋ ಜೋ ಜೋ |

ಅಕ್ಕನಾಗಮ್ಮನು ಬಂದ
ಅಳಿಯ ಬಸವಣ್ಣನು ಬಂದ
ಎಲ್ಲಾ ಜಾತಿಯ ಮನೆಯ ಒಳಗೂ
ಎಂಜಲೂಟವ ಮಾಡವ ಬಂದ ಜೋ ಜೋ ಜೋ | ೨೩೦೦

ಹರುಳಯ್ಯ ವರದಲ್ಲಿ ಹುಟ್ಟಿದ
ಮೊನುಗಾರ ಬಸವ ಬಂದ
ನಾಕು ಲೋಕುವೆಲ್ಲ ಜಾತಿಯಲ್ಲ
ಏಕ ಜಾತಿ ಅನ್ನವ ಬಂದ ಜೋ ಜೋ ಜೋ |

ಏಳು ತಿಂಗ್ಳಿಗೆ ಹುಟ್ಟವ ಬಂದ
ಬೆನ್ನ ಮಚ್ಚವ ಸೀಳ್ದವ ಬಂದ
ಏಳು ತಿಂಗಳ ಕಂದಾ ಬಂದ
ಬಿಜ್ಜಳನ ಸಮ್ಮಾರಿ ಬಂದ ಜೋ ಜೋ ಜೋ |

ಬಿಜ್ಜಾಳನ ಸಮ್ಮಾರಿ ಬಂದ
ಕೊಂಡುಗ ಮಂಚನ ಕೊಂದವ ಬಂದ ೨೩೧೦
ನಾಗಮ್ಮನ ಮಗನು ಬಂದ
ಈ ರಾಜ್ಯಕೆ ದೊಡ್ಡವನು ಬಂದ ಜೋ ಜೋ ಜೋ |

ಮಂದದ ಕಟ್ಟೆಯ ಒಳುಗೆ
ಮೈರಿಗೆ ಬಂಧಾನ ಕೊಟ್ಟವ ಬಂದ
ಸೆರೆ ಬಿದ್ದಿರುವಂತ ಮಾವಯ್ಯ
ಸೆರೆಯ ಬುಡಿಸುವ ಅಳಿಯ ಬಂದ ಜೋ ಜೋ ಜೋ |

ಆರು ವಾರವ ಮರುತು ತಾನು
ಬೆಳ್ಳಿವಾರುದಲಿ ಧರೆಗೆ ಇಳಿದ
ಸ್ವಾಮಾರ ಹುಟ್ಟಿದ ಸ್ವಾಮಿ ಬಂದ
ಈ ಭೂಮುತಾಯಿಯ ಗಂಡ ಬಂದ ಜೋ ಜೋ ಜೋ | ೨೩೨೦

ಭೂಮಿ ತಾಯಿಯ ಗಂಡ ಬಂದ
ಲೋಕಕೆ ಗೇದಿಕ್ಕವ ಬಂದ
ಹಿಡಿಯದಕೆ ಬಾರ್ಕೋಲ ತಂದ
ಹೊಡೆಯದಕೆ ಚಾಮ್ಟಿ ತಂದ ಜೋ ಜೋ ಜೋ |

ತುಪ್ಪ ತುಂಬದಕೆ ಸಿದಿಗೆ ತಂದ
ಮೆಟ್ಟುನ್ನುದಕೆ ಪಾದ್ರಾಕ್ಷಿ ತಂದ
ಗಾಳಿ ಗ್ರಾಚಾರ ಹಿಡುಕೊಂಡೋರಿಗೆ
ಮೂರು ಪೆಟ್ಟು ಹೊಡಿಯುವ ಬಂದ ಜೋ ಜೋ ಜೋ |

ಆತುಭೂತಾಕೆ ಗಂಡ ಬಂದ
ಮಾತಾತದಿದ್ದ ಮಗನು ಬಂದ
ಹಬ್ಬ ಹುಣ್ಣಿಮ್ಮ ಮಾಡೋವ್ರ ಮನೆಯ
ಮೊದಲು ಸುದ್ದ ಮಾಡವ ಬಂದ ಜೋ ಜೋ ಜೋ |

ಮನೆಯ ಸುದ್ದವ ಮಾಡವ ಬಂದ
ಜಗತ್ಕಕೆ ದೊಡ್ಡವ ಬಂದ
ಸಮ್ಮಕ್ಕ ನಾಗಮ್ಮನ ಮಂಟ್ರದಲಿ
ಬೆಳೆದಂತ ಮಗನು ಬಂದ ಜೋ ಜೋ ಜೋ |

ಗಂಡನಿಲ್ಲದೆ ಗರ್ಭಿಣಿಯಾಗಿ
ದುಂತು ಮಗುನ ಪಡಿದಳು ತಾಯಿ
ಕೆಂಡಗಣ್ಣ ಒಡೆಯಾನ ಪಡದ
ದುಂಡಿ ನಾಗಮ್ಮನ ಮಗಗೆ ಜೋ ಜೋ.ಜೋ |

ಮಂಗಳಾರತಿ ಬೆಳಗಿದರಂತೆ
ಅಳಿಯ ಚನ್ನ ಬಸವಣ್ಣನಿಗೆ
ಕೋಟುಗೊಬ್ಬ ಸರಣಾರು ನಿಂತು
ಎತ್ತತ್ತಿ ಕೈಯ ಮುಗುದರಂತೆ ಜೋ ಜೋ ಜೋ |

ಕುಲುಕೊಬ್ಬರು ಭಕ್ತರು ನಿಂತು
ಕೋಟುಗೊಬ್ಬ ಸರಣಾರು ನಿಂತು
ಜಡಮುಡಿ ಹೊತ್ತವರು ನಿಂತು
ಕಾವಿ ಹೊದ್ರವರು ನಿಂತು ಜೋ ಜೋ ಜೋ |

ಕಾಮುಂಡ್ಲ ಹೊದ್ದವರು ನಿಂತು
ರುದ್ರಾಕ್ಷಿ ಸರದೋರು ನಿಂತು
ಭದ್ರಾಕ್ಷಿ ಕಟುದೋರು ನಿಂತು
ಹಂಚಿಕಂತ್ಕವರು ನಿಂತು ಜೋ ಜೋ ಜೋ |

ಪಂಚಲಿಂಗವ ಕಟ್ಟಿದೋರು
ಜೋಳುಗೆ ಹೊತ್ತವರು ನಿಂತು
ಜಡಮುಡಿ ಹೊತ್ತವರೆಲ್ಲ ಬಂದು
ಮಗನಿಗೆ ಮಂಗ್ಳಾರ್ತಿ ಬೆಳಗಿದರಂತೆ ಜೋ ಜೋ ಜೋ |

ಆಗತಾನೆ ಬಸವಣ್ಣ ನೀ ವೈರಿಗಳ ಕೊಲಬವುದ
ಹಾಗೆಂದು ಅಳಿಯನ ಕೇಳುತಾರೆ |

"ಕೊಂದ್ಕಲ್ಲ ಬಿಜ್ಜಳನ ಕೊಂದ್ಕಲ್ಲ ಕೊಂಡುಗನ
ನಮ್ಮೆಸ್ರೇಳೋರ್ಯಾರಪ್ಪ ಈ ಧರಿಯಲ್ಲಿ ? |

ಅವುರು ಮಾಡಿದ ತಪ್ಪು ಅವುರುಗಿರಲಿ ಅಳಿಯ
ನೀ ಕೊಲಬವುದೇನಪ್ಪ ಮಾರಾಜನ ? |

ಕೊಂಡುಗರ ಮಂಚಣ್ಣ ನಾಳೆ ನಾರ್ದನಾಯ್ತನಪ್ಪ
ಆ ನಾರ್ದಾನ ನೀನು ಕೊಲಬವುದ ? |

ಅಂತಂತವರಿರಲಾಗಿ ನಮಗೊಳ್ಳಿ ಹೆಸರು ಮತ್ತು
ಚನ್‌ಬಸವಣ್ಣ ಪುರಾಣ ಎಂದು ಹೆಸುರಾದೊ |

ಅಳಿಯ ಚನ್‌ಬಸವಣ್ಣ ಎಂದು ಹೆಸರಾಯ್ತು ಈ ಕತೆ
ಅವುರ್ಮಾಡುದಿದ್ರೆ ಈ ಕತೆ ಮೊದುಲಿಲ್ಲ |

ಸತ್ಯವಂತಾರ್ಯಾರು ದ್ರುಷ್ಟ ಜನಗಳು ಯಾರು
ಎಂದು ಅರ್ತವಾಯಿತು ಈ ಜಗದಲ್ಲಿ |

ಅರ್ಥವಾಗಿತಲ್ಲಪ್ಪ ನನ್ನಳಿಯ ಬಸವಣ್ಣ
ಅವುರ್ ಕೆಟ್ಟೋರು ಅಂತ್ಹೇಳಿ ತಿಳಿಬ್ಯಾಡ |

ಇಂತೆ ಕತೆಗಳನೆಲ್ಲ ಮುಂದುವರಿಸುವ ಜನರು
ಅವುರು ನಮಗಿಂತ್ಹೆಚ್ಚಿನ ಗುರುಗಳು |

ನಮಗಿಂತ್ಹೆಚ್ಚಿನ ಗುರುಗಳು ನನ್ನಳಿಯ
ನಮ್ ಒಳುಗಿದ್ದರೇನು ಫಲುವಿಲ್ಲ |

ಕಲ್ಯಾಣ್ಕೆ ಗುರುವೆಂದು ನಾವೊಳ್ಗೆ ಇದ್ದಿದ್ದರೆ
ಇದು ಡಂಗೂರ್ಯಾಗ್ತಿರಲಿಲ್ಲ ಜಗದಲ್ಲಿ |

ಸತ್ಯುವಂತರ ಕತೆಯ ಡಂಗೂರ ಸಾರವ್ನೆ
ಅವ ಕೆಟ್ಟವನಲ್ಲಪ್ಪ ನಾರುದ್ರ ಮಂಚ |

ಮಂಚಣ್ಣನಾಡುದ ಮಾತ್ಗೆ ಒಪ್ಪಿರುವ ಬಿಜ್ಜಾಳ ದೊರೆ
ಮೊದಲನ್ನ ಕೊಟ್ಟು ನನ್ ಸಲುಗವ್ನೆ |

ಮಂತ್ರಿಯಾಗಿ ನಾನು ಬಿಜ್ಜಳನ ಮನೆಗೆ ಬಂದಿ
ಇಲ್ಲಿದ್ದಾರು ಕಾಣಪ್ಪ ಈ ಕುಲುಸಬಿಯ |

ಇಲ್ಲಿದ್ದ ಸಬುಗಳಿಗೆಲ್ಲ ನಾ ಬೋಧಾನೆ ಮಾಡೀದಿ
ನಾ ಉಪುದೇಸ ಮಾಡೀದಿ ಈ ಜನುಕೆಲ್ಲ |

ನನ್ನ ಗುರುಬೋಧನೆ ಕೇಳಿ ನನ್ನ ಶಿವಮಂತ್ರ ಕೇಳಿ
ಈ ಜಂಗುಮರು ಕೈಬಿಟ್ರು ಬಿಜ್ಜಳ ದೊರೆಯ |

ಜಂಗುಮರು ಕೈಬಿಟ್ರು ಮಾರಾಜ ಬಿಜ್ಜಳನ
ನನ್ನಂತೆ ಆದ್ರಪ್ಪ ಈ ಕುಲುವೆಲ್ಲ |

ನನ್ನಂತೆ ಆಗಿ ನಾ ಹೇಳುದಂಗೆ ಕೇಳುದ್ರು
ಅದಕೆ ಸಂದೇಗ ಪಡುನಿಲ್ಲ ಬಿಜ್ಜಾಳ |

ಇವುರೆಲ್ಲ ಬರುವುದ ನೋಡಿ ಅವುಂಗೆ ಸಂತೋಷ ಬಂದು
ಅವ ಮಾಡವ್ನೆ ನಮ್ಮ ಪಾದಸೇವ್ಯ |

ನನ್ಮಂತ್ರಿಯಾಗಿ ತಡ್ದಿದ್ದವ ಮುಟ್ಟವುನೆ ನನ್ ಪಾದಾವ
ಅವ ಕೆಟ್ಟವನು ಎಂದು ತಿಳಿಬ್ಯಾಡ |

ತಿಳುವಳಿಕೆ ಇಲ್ಲದವರು ಅವ್ರು ದ್ರುಷ್ಟರು ಅನ್ನಬವುದು
ದ್ರುಷ್ಟರಲ್ಲ ಅವರು ಸರಣಾರು" |

"ಹಂಗಂದರೇನ ಮಾವ ನನಗತ್ತುತದೆ ಬಲುಕ್ಯಾಪ
ಅವುರೆಸರ ಹೇಳಿದರೆ ನನ್ಗೆ ಬಲು ಕೋಪ | ೨೪೦೦

ನನ್ನ ಎದುರ್ಗೆ ಮಾತ್ರ ಅವುರ ತೋರುಬ್ಯಾಡಿ" ಎಂದು
ನನ್ನ ಚನ್ನಬಸವಣ್ಣ ನುಡಿದಾನು |

ಬ್ಯಾಡ ಕಾಣಪ್ಪ ಅಳಿಯ ನನ್ಹತ್ರುಕೆ ಬಾ ಅನುತ್ಹೇಳಿ
ಆ ಪುತ್ರಾನತ್ತುರಕೆ ಕರಿದಾರು |

ಅಳಿಯನತ್ರುಕೆ ಕರುದು ಮುದ್ದಾಡಿ ಬಸುವಣ್ಣ
ಕೈಯಲ್ಲಿ ಕಪ್ಪು ಧೂಳ್ತಾವ ತಗಿದಾರು |

"ಎರಡ್ ಕಣ್ಣಿದ್ದಾರೆ ಈ ಲೋಕುಕ್ಕೆ ಸಾಕಪ್ಪ
ನತ್ತೀ ಮ್ಯಾಲುರುಗಣ್ಣು ನಿನಗ್ಯಾಕೆ ?|

ಆ ಉರುಗಣ್ಣ ಬುಡಲಾಗಿ ಕಲ್‌ಚಾವ್ನಿ ಉರುದೋಡುವ
ಇನ್ನವನ ಮನೆ ನೋಡಿದರೆ ಉಳಿದಾದ ?| ೨೪೧೦

ಅವ್ರುರ ಮನುಮಕ ಉಳಿದಾವ ? ಆ ಮೈರಿಗಳು ಉಳಿದಾರ ?
ನಾ ಪಡುದ್ರೂವೆ ಬುಡನು ಚನ್ನಬಸವಣ್ಣ |

ನಾ ಪಡುದ್ರೂವೆ ಬುಡೋದಿಲ್ಲ ನಿರ್ಮೂಲ ಮಾಡ್ತಾನೆ
ಎಂದವನ ನತ್ತೀಯ ಕಣ್ಣ ಮುಚ್ಚಿದರು |

ಹರಹರ ಹರುಳಯ್ಯ" ಹಾಗೆಂದು ಬಸವಣ್ಣ
ಇಕ್ಕಿದರು ಕಪ್ಪು ಧೂಳ್ತಾವ |

ಇಕ್ಕಿದರು ಕಪ್ಪು ಧೂಳ್ತಾವ ಬಸವಣ್ಣ
ಮುಚ್ಚೋಯ್ತು ಆಗ ಉರುಗಣ್ಣು |
ಬಾಳ ಶ್ರಮೆಯ ಪಟ್ಟ ಅಳಿಯ ಚನ್ನ ಬಸವಣ್ಣ
ಏನಾದ್ರೂ ಆ ಕಣ್ಣು ಬಾರ್ಲಿಲ್ಲ | ೨೪೨೦

"ಎಂತೇವ್ರಾಗಿರಬೋದು ನಮ್ಮಾವಯ್ಯ ಎನುತ್ಹೇಳಿ
ನೀವು ದೊಡ್ಡೋರು ಮಾವ ಜಗದಲ್ಲಿ |

ಬ್ರಮ್ಮನಿಂದ ತಂದ್ಕಣ್ಣ ನೀವು ಮುಚ್ಚಿದುರಲ್ಲ
ನೀವು ಬ್ರಮ್ಮನ್‌ಗಿಂತ್ಹೆಚ್ಚು ಮಾವಯ್ಯ" |

"ಪಳ್ತಿಂಗ್ಳುಗೆ ಬಂದ್ಕಲ್ಲಪ್ಪ ನಿನ್ನ ಎಳೆಗಬ್ಬ ಅನ್ನುತಾರೆ
ನಿನ್ ತಾಯಿ ಮಂಟುಪಕೆ ನಡಿಯಪ್ಪ |

ಹೆತ್ತಮ್ಮನ ಮಂಟುಪುಕೆ ತಿರ್ಗಾ ಹೊಂಟೋಗು ನನಕಂದ
ನೀನೊಂಬತ್ತು ತಿಂಗಳಿಗೆ ಬರಬೇಕು |

ಜಿನ ತುಂಬಿ ನೀನು ಹೊರಗಡೆ ಬರಬೇಕು
ನೀ ಬರ್ತಕ್ಕ ದಾರಿ ಹೇಳ್ತೀನಿ | ೨೪೩೦

ಬೆನ್ನು ಮಚ್ಚದಲ್ಲುಟ್ಟೋದೆ ಈ ಲೋಕುಕ್ಕೆ ಆಯ್ತಾದೆ
ಇನ್ನು ಬರುವ ಬಸವಣ್ಣಳ್ಗೆ ಅದೆದಾರಿ |

ಇನ್ನುಟ್ಟೊ ಬಸುವುಂಗೆಲ್ಲ ಅದೆದಾರಿ ಆಯ್ತಾದಪ್ಪ
ಜಲು ಮೂತ್ರದಲ್ಲಿ ನೀನು ಬರಬೇಕು |

ಒಂಬತ್ತು ತಿಂಗಳಿಗೆ ಮೂರ್ದಿವ್ಸ ಕಡಿಮ್ಯಾಗಿ
ನೀ ಜಲುಮೂತ್ರದಲ್ಲಿ ಜರಣಾಗು |

ಜಲುಮೂತ್ರದಲ್ಲಿ ನೀ ಜರಣಾಗು" ಅಂತ್ಹೇಳಿ
ಅಳಿಯುಂಗೆ ಬುದ್ಧಿ ಹೇಳಿದಾರು |

"ಹುಟ್ಟಿದಂತ ಮಗನ ತಿರ್ಗಾ ಹೊಟ್ಟೆಗೆ ಕಳುಗೀರ್ಯಾ ಮಾವ
ಇನ್ನೆಂಗೆ ಎರಡ್ತಿಂಗ ನಾ ಕಳಿಯಾಲಿ | ೨೪೪೦

ಬರ್ಬೇಕು ಅಂತ್ಹೇಳಿ ನನಗಾಸೆ ಇರ್ನಿಲ್ವಲ್ಲ
ನನ್ನ ಕರುಸೀದ ಆ ಕೊಂಡೂಗ |

ನನ್ನ ತಾಯ ಭಂಗ ಮಾಡಿದುದ್ಕೆ ಬಿಜ್ಜಾಳ
ಅವ್ರ ಸಮ್ಮಾರ್ಕೆ ನಾನು ಇಳಿದೇನು |

ಬೆಸ್ಸು ಮಚ್ಯದಲ್ಲಿ ನಾ ತಕ್ಷಣ ಬರದೇ ಇದ್ರೆ
ಭಂಗವಾಯ್ತಿದ್ದ ನಿನ್ನೊಡವುಟ್ಟು |

ನನ್ತಾಯಿ ನಿನ್ನೊಡವುಟ್ಟು ಭಂಗವಾಗಿದ್ದರೆ ಮಾವ
ಇಲ್ಲಿರುವ ಜಸುವೆಲ್ಲ ನಗುತಿದ್ರು |

ಜಂಗಮರು ನಗುತಿದ್ರು ಈ ಕುಲುವೆಲ್ಲ ನಗುತಿದ್ರು
ನಮ್ಮಮ್ಮನಿಗಾಗ್ತಿತ್ತು ಅವಿಮಾನ | ೨೪೫೦

ಅದಕ್ಕೋಸ್ಕರವಾಗಿ ನಾ ಧರಗಿಳಿದಿ ಮಾವಯ್ಯ
ಮುಂದಾಲ ಮಾತೇಳ ನನ್ ಜೊತೆಯಲ್ಲಿ" |

"ನನ್ನ ಮಾತ ಕೇಳು ನನ್ನ ಚನ್ನಬಸವಣ್ಣ
ನನ್ನ ಚನ್ನಯ್ಯ ಮನೆಯ ವರುದವುನೆ |

ನನ್ನ ಮಾತ ಕೇಳೊ ನನ್ನಿರುಳೀನ ಹೋರಿ
ಹರುಳಯ್ನ ಮನೆಯ ವರುದವುನೆ |

ಕಕ್ಕಯ್ನ ಮನೆಯ ವರುದ ನನ್ ಕಂದಯ್ಯ
ನೀ ಹೊರಡು ತಾಯಮ್ಮ ರುದಯಕ್ಕೆ" |

ಪ್ರೀತೀಲಿ ಮಾತಾಡಿ ಅಳಿಯಾನ ನಂಬೀಸಿ
ಅವ್ರ ತಾಯ ಗರ್ಭಕ್ಕೆ ಕಳುಗಿದರು | ೨೪೬೦

ಮಾವುನಪ್ಪುಣೆಯಂತೆ ಮಂಟುಪುಕೆ ಹೊರಟೋದ
ಅಮ್ಮಾನ ಬೆನ್ನ ಮಚ್ಚಾವ ಮುಚ್ಚಿದರು |

ಬೆನ್ನ ಮಚ್ಚ ಮುಚ್ಚಿ ದೊಡ್ಡವರು ಬಸವಣ್ಣೋರು
ಕಪ್ಪು ಧೂಳ್ತಾವ ತೆಗಿದಾರು |

ಕಪ್ಪು ಧೂಳ್ತವ ತಗುದು ಮುಂದುಕ್ಕರಡಿದರಂತೆ
ಗಲಿಗಲಿನೆ ಎದ್ದ ಬಿಜ್ಜಾಳ |

ಬಿಜ್ಜಾಳ ಎದ್ದ ಕೊಂಡುಗರ ಮಂಚ ಎದ್ದ
ಪರದಾಡಿ ಪ್ರಪಂಚ್ಕ ನೋಡವುರೆ |

ಸತ್ತೋಗಿದ್ದೋರ್ ನಾವು ಎತ್ನಿಂದ ಬಂದೊ ಎಂದು
ದಿಗ್ಬ್ರಮಿಯ ಹಿಡ್ದು ನೋಡ್ತಾರೆ | ೨೪೭೦

ಸುತ್ತಮುತ್ತ ನೋಡುದ್ರು ಕುಳುತವ್ರೆ ಜಂಗಮರು
ಕಾವೀ ಡೈರ್ಯದ ಮುಂದೆ ಬಸವಣ್ಣ |

ಕಾವೀ ಡೈರ್ಯದ ಮುಂದೆ ನಮ್ಮ ಬಸುವಣ್ಣ ಕುಳಿತಿದ್ರು
ಓಡೋಡಿ ಬಂದ ಬಿಜ್ಜಾಳ ರಾಜ |

ಎರಡು ಕಣ್ಣುನ ನೀರು ಮುಕ್ಕುಳಿಸಿ ತುಂಬಾವೆ
ಆ ಗುರುವೀನ ಪಾದುಕ್ಕೆ ಎರುಗೀದ |

"ಇಂತೆ ಸರಣಾರು ಎಂದು ನಾ ತಿಳುವಿರನಿಲ್ಲಲ್ಲ
ನನ್ ಮರುಣ ಮಾಡಿದ್ರ್ಯ ಬಸವಣ್ಣ |

ನಾನು ಮಾಡಿದ ಧರ್ಮ ನೆನಪಿಟ್ಟುಕೊಂಡು
ನನ್ನ ಪಡುದ್ರ್ಯಪ್ಪ ಗುರುವೆ ಬಸವಣ್ಣ | ೨೪೮೦

ನಾವ್ ಮಾಡಿದ ಧರ್ಮ ನನ್ ಬೆನ್ನತ್ತಿ ಇರಲಾಗಿ
ಆ ಚನ್ನಬಸವಣ್ಣನ ಮೊಕ ಕಂಡಿ" |

"ಆಗಲ್ಯಪ್ಪ ಮಾರಾಜ ನೀ ದುಕ್ಕ ಮಾಡಲು ಬ್ಯಾಡ
ಮೊದಲನ್ನ ಕೊಟ್ಟವ ನೀ ತಾನೆ |

ಅವ್ನ ಕೊಟ್ಟ ದೊರೆಗೆ ಅನ್ಯಾಯ ಮಾಡೋನಲ್ಲ
ಸತ್ಯವುಂಟಪ್ಪ ನನ್ ಮನದಲ್ಲಿ |

ನಿಮ್ ಸತ್ಯಾನೆಲ್ಲ ನಾನಾಗ್ಲಿಂದ್ಲು ಬಲ್ಲಿ
ನನಗೆ ತಂದಿಳುಕೀದ ಕಾಣಪ್ಪ ಕೊಂಡೂಗ |

ಇಂತೆ ಕೆಟ್ಟ ಬುದ್ಧಿಗ್ಯಾನ ನಾನೆಂದೂ ಮಾಡಿದೋನಲ್ಲ
ನನ್ನ ದ್ರುಷ್ಟನ್ನ ಮಾಡ್ದೋನು ಕೊಂಡೂಗ" | ೨೪೯೦

"ಆಗಲಿ ಬಿಜ್ಜಾಳ ಯಾರಾರು ಮಾಡುಕೊಳಲಿ
ನನ್ನಳಿಯ ಹುಟ್ಟುದ ಕತೆಯ ತಿಳಿದಪ್ಪ" |

ಅಳಿಯ ಚನ್ನಬಸುವಣ್ಣನ ಪುರಾಣ ಅನುತ್ತೇಳಿ
ನಮ್ಮೆಲ್ಲ ಸೇರ್ಸಿ ಬುದ್ಧಿ ಬರುಕೊಳ್ಳಿ |

ನಮ್ಮುನ್ನೆಲ್ಲ ಸೇರ್ಸಿ ನೀವ್ ಬರುಕೊಳ್ಳಿ ಬಸವಣ್ಣ
ನಿಮ್ ಕೊಂಡಾಡ್ಲಿ ಜಗದ ಜನುವೆಲ್ಲ |

ನಿಮ್ಮ ಕೊಂಡಾಡ್ಲಿಯಪ್ಪ ನಮ್ಮ ಅನ್ಯಾಯ್ಯಾರ್ರು ಅನ್ನಿ
ಇನ್ನೇನಂದ್ರು ನಮುಗೆ ಅವಿಮಾನ |

ಈ ಕಥೆಯ ನೋಡ್ದೋರೆಲ್ಲ ನಮ್ಮ ಬೊಯ್ಕೊಳ್ಳಿ ನಮ್ಮಪ್ಪ
ನೀವ್ ದೊಡ್ದೋರಾಗ್ರಪ್ಪ ಈ ಮಠದಲ್ಲಿ" | ೨೫೦೦

"ನಿನ್ನನ್ಯಾಕೆ ಬಿಜ್ಜಾಳ ನಾ ಬೊಯ್ಯಾಲಿ?" ಅನುತೇಳಿ
ನಮ್ಮ ಗುರು ಬಸವಣ್ಣ ನುಡಿದಾರು |

"ಬೆಂದಿರುವ ಕಲ್‌ಚಾವುಡ್ಯ ನಾ ಪಡುದೀನಿ ಹೋಗಪ್ಪ
ನನ್ನಳಿಯುಂಗೆ ಇತ್ತು ಉರುಗಣ್ಣು |

ಅವ್ನು - ಉರುಗಣ್ಣು ಬುಟ್ಟಿದ್ರೆ ನಿನ್ಮನೆ ಉಳಿತಿರುನಿಲ್ಲ
ಅದ-ಮರೆಮಾಡಿ ಕಳುಗಿವ್ನಿ ತಾಯ ರುದಯಕ್ಕೆ |

ಒಂಬತ್ತು ತಿಂಗಳಕೆ ಅವ ಜರಣವಾಗ್ಬರ್ತಾನೆ
ಆಗ-ಬನ್ನಿ ಬಿಜ್ಜಾಳ ಗುರುಮಠುಕೆ |

ಬೇಕು ಅಂದರೆ ಅವನ ಸಾಕಾರ ಪಡುಕೊಳ್ಳಿ
ಲೋಕ ಆಳೋನು ಚೆನ್ನಬಸವಣ್ಣ | ೨೫೧೦

ನಮ್ಮಾಳ್ಕೆ ತೀರೋಯ್ತು ಇನ್ನು ನನ್ನಳಿಯನಾಳ್ಕೆ ಕಾಣ್ಸೊ
ಅವುನುಟ್ಟಾಗ ಬಂದು ನೋಡಬವುದು |

ಬ್ಯಾಡ ಎಂಬುವ ಜನ್ರು ನನ್ನಳಿಯಂಗ್ಯಾರೂ ಇಲ್ಲ
ಅತ-ವರುದಲ್ಲಿ ಹುಟ್ಟವ್ನೆ ಚನ್ನಬಸವಣ್ಣ |

ಅವ-ಬೀಸಾಕುವ ಪದಾರ್ಥ ಅವ್ನ ರುದಯದಲ್ಲಿಲ್ಲ
ಅವ-ಬಂಗಾರ ಕಾಣ್ಸೊ ಜಗಕೆಲ್ಲ |

ಅವ್ನ ಕಂಡಮಾವ್ಸಗಳೆಲ್ಲ ಬಲುಭಂಡಾರ" ಅನುತ್ಹೇಳಿ
ನನ್ನ ಭಂಡಾರಿ ಬಸವಣ್ಣ ತಿಳುಸುದುರು |

ಭಂಡಾರಿ ಬಸುವಣ್ಣ ಎಂದು ಅವುರ್ಕ್ಯಾತುಕ್ಕೆ ಹೆಸರಾಯ್ತು
ಚನ್ನಬಸವಣ್ಣ ಅವುರ್ಮನೆಯ ಭಂಡಾರ | ೨೫೨೦

ಆತುಮದಲ್ಲಿ ತುಂಬಿರುವ ನಿಜುವೇ ಭಂಡಾರ
ಆ ಸತ್ಯಕ್ಕೆ ಭಂಡಾರಿ ಬಸವಣ್ಣ |

ಸತ್ಯವೇ ಭಂಡಾರ ಈ ಜಗದಲ್ಲಿ ಅನುತ್ಹೇಳಿ
ನನ್ನ ಸ್ವಾಮ್ಯ - ಭಂಡಾರಿ ಬಸವ ಎಂದು ಕರಿದಾರು |

ಹೋಗಪ್ಪ ಬಿಜ್ಜಳ ನಿನ್ ಮಡದಿ ಮಕ್ಕಳ ನೋಡು
ನಾವು ಹೋಗ್ತೀವಿ ಕಲ್ಯಾಣ್ದ ಗುರುಮಠುಕೆ |

ಪಾದುಕ್ಕೆ ಸರಣೆಂದು ಹೊರುಟೋದ ಬಿಜ್ಜಳ
"ಸ್ವಾಮಿ - ನಿತ್ಯ ನಿನ್ ಪೂಜ್ಯ ಮಾಡುತೀನಿ |

ನಿಮ್ಮ ನಿಮ್ಮಳಿಯನ ನಾ ನಿತ್ಯಪೂಜೇಪೆ
ಇದು ಸತ್ಯ"ಂತ ಬಿಜ್ಜಾಳ ಹೊರಟಾನು | ೨೫೩೦

ಬಿಜ್ಜಳ ಹೊರುಟಾಗ ಓಡ್ಸಂದ ಕೊಂಡೂಗ
ಬಂದಿವರ ಪಾದುಕ್ಕೆ ಎರುಗೀದ |

"ಬಂದ್ಕಪ್ಪ ಮಂಚಣ್ಣ ಬಂದೇನ್ಸೋ ಕೊಂಡುಗ್ಮಂಚ
ನಿನ್ ಕೊಂಡ್ಗ ಏನಾಯ್ತು ತಿಳುಕೊಂಡ್ಯಾ" |

"ಪ್ರಪಂಚುಂಕೆ ನಿನ ಕತೆ ಕೀರ್ತೀಗೆ ಬರ್ಲಿ ಎಂದು
ನಾ ಕಂಡುತ್ಸಾಗಿ ಮಾಡ್ದಿ ಈ ಹೊಸುಕಥೆಯ |

ನಾ ತಪ್ಪೊಸ್ತನಲ್ಲ ಕಲ್ಯಾಣ್ದ ಬಸವಣ್ಣ
ಈಗ-ಮೆರಿತಾದೆ ನಿಮ್ಸುದ್ದಿ ನಾಕ್ ಜಗದಲ್ಲಿ |

ಅರುಮನೇಲಿ ಕೂತುಕೊಂಡು ಆನಂದ ಪಡುತಿದ್ದ
ಬಿಜ್ಜಾಳ ತಾನೆ ಹೆಚ್ಚೂಂತ ಮೆರಿತಿದ್ದ | ೨೫೪೦

ನೆನ್ನೆಮೊನ್ನೆಗೆ ಬಂದ ಬಸುವಣ್ಣುಂಗೆ ಹಕ್ಕಿಲ್ಲ ಅನುತಿದ್ದ
ನಿಮ್ಹುಕ್ಕು ಮಾಡದ್ಕೆ ನಾ ಕರುಸೀದಿ |

ಹಕ್ಕು ಬಾಧ್ಮಮಾಡಿ ನಿಮ್ ದೊಡ್ಡೋರ ಮಾಡ್ಬೇಕೂಂತ
ಅಂದಿನಿಂದ್ಲು ನನ್ ಮನ್ಸು ಹಿಸುಗ್ತಿತ್ತು |

ಅದುಕೋಸ್ಕರವಾಗಿ ನಿಮ್ಮ ಮಂದಕ್ಕೆ ಕರುಸೀದಿ
ಅದಕೆ ನಿಜವುಳ್ಳ ಒಡುತ್ಸಾ ಕರುಸೀದೆ |

ನಿಜವುಳ್ಳ ನನ್ನೊಡತಿ ನನ್ನಕ್ಕ ನಾಗಮ್ಮಯ್ಯಾನ
ಅವ್ಯ-ಕತೆಯ ಜಗತ್ಯಾಕೆ ಹರುಡೀದಿ |

ತಿಳುವಳಿಕೆ ಇಲ್ಲಾದೆ ನಾವೊಳ್ಗೆ ಬುಟ್ಕೊಂಡಿದ್ರೆ
ಅವ ಮೊನುಗಾರನಾಗ್ತಿದ್ದ ಬಿಜ್ಜಾಳ | ೨೫೫೦

ನಾ ಬೀದೀಗೆ ತರಲಾಗಿ ತಾವ್ ದೊಡ್ಡೋರಾಗ್ಲಿಲ್ವ
ಅವ ಪತುರೊರ್ತೆ ಆಗ್ಲಿಲ್ವ ನಾಗಮ್ಮ |

ನಾನು ಮಾಡಿದ್ದು ಅಪರಾಧ್ವ ಬಸವಣ್ಣ
ಅಪುರಾಧವಿದ್ರೆ ನೀವ್ ನನುಗ್ಹೇಳಿ" |

"ಗೆದ್ಮ್ಯಾಲೆ ನೀವು ಏನಾದ್ರೂ ಹೇಳಬವುದು
ಸೋತಿದ್ರೆ ನಮ್ಮ ಗತಿಯೇನ ?|

ನನ್ತಂಗೀಗೆ ಕೊಟ್ಟಿಂಸ್ಕ ಇನ್ನಾರಿಗೂ ಕೊಡಬ್ಯಾಡ
ಅನ್ಯರು ತಡದಾರ ಈ ಜಗದಲ್ಲಿ |

ಮಗು ಸ್ಯೆತವಾಗಿ ಎಣ್ಣೆ ಕೊಪ್ರಿಕೆಗೆ ಮುಳುಗಿಸ್ಯಾಲ್ಲ
ಇದು ನ್ಯಾಯವೇನಪ್ಪ ಕೊಂಡೂಗ | ೨೫೬೦

ನ್ಯಾಯವೇನಪ್ಪ ಕೊಂಡುಗರ ಮಂಚಣ್ಣ
ನೀನು-ಮುಂದೆ ನಾರುದನಾಗಿ ಹುಟ್ಟಪ್ಪ |

ನಾರದನಾಗಿ ನೀನು ಮುಂದೆ ಹುಟ್ಟಿದ ಮ್ಯಾಲೆ
ನಿನ್ಹೊಟ್ಟೇಲಿ ಮಕ್ಕ ಬೇಡುವಯ್ಯ" |

ಕೊಂಡುಗರ ಮಂಚನಿಗೆ ಸ್ಯಾಪಗಳ ಕೊಟ್ಟುಬುಟ್ಟು
ಹೊರಡಿ ಜಂಗುಮರೆ ಗುರುಮಠಕೆ |

ಆನೆ ಅಂಬಾರಿ ಮ್ಯಾಲೆ ನನ್ ಮಾನುಭಾವರು ಕುಳುತ್ರು
ಫಲ್ಲಕ್ಕಿ ಏರೀದ ನಾಗಮ್ಮ |

ಮುತ್ತುನ ಫಲ್ಲಕ್ಕಿ ಒಳಗೆ ನನ ನಾಗಮ್ಮ ಕುತುಕೊಂಡು
ಜಂಗುಮ್ರು ಸ್ಯೆತ್ವಾಗಿ ಹೊರುಟಾರು | ೨೫೭೦

ಜಂಗುಮ್ರು ಒಡಗೂಡಿ ನನ ಸಂಗನ ಬಸವಣ್ಣ
ಜೊತೆಯಲ್ಲಿ ಹರುಳಯ್ಯ ಹೊರುಟಾರು |

"ನಿನ್ನಿಂದ ಕಲ್ಯಾಣ ಉದ್ಧಾರವಾಯ್ತಪ್ಪ
ನಡೀ - ಹರುಳಯ್ಯ ನಮ್ಮ ಗುರುಮಠಕೆ |

ನನದಲ್ಲ ಗುರು ಈ ಶಿವುನಪ್ಪಣೆ ಎಂದು
ಆ ಭಕ್ತ ಹರುಳಯ್ಯ ನುಡಿದಾನು |

ಹಿರುಳೆದ್ದು ಗೇಯುವನ ನೀ ತಂದ್ಕಲ್ಲ ಹರುಳಯ್ಯ
ಎಂದೆಂದ್ಗೆ ನಿನ್ನ ಮರೆಯಾಲಿ |

ಎಂದೆಂದ್ಗೆ ನಿನ್ನ ಮರೆಯಾಲಿ ಎನುತ್ಹೇಳಿ
ದೇವಾರು ಬಸವಣ್ಣ ನುಡಿದಾರು | ೨೫೮೦

ಈ ಬಸ್ವಣ್ಣನ ಸೊರಣ್ಯ ಮಾಡುವ ಜನುವೆಲ್ಲ
ನಿನ್ಹೆಸರ ಹೊಗಳಾಲಿ ಧರಿಯಲ್ಲಿ |

ಸುವ್ವಾ ಬಾ ಚನ್ನ ಬಸುವಯ್ಯ ಅನುತ್ಹೇಳಿ
ನನ್ನ - ಚೆನ್ನ ಹರುಳಯ್ಯ ನಿನ್ ಹೊಗುಳಾಲಿ |

ನನ್ನ ಕಲ್ಯಾಣದ್ಹೆಸರು ನಿನ್ ಕಲ್ಯಾಣಮ್ಮನ ಹೆಸರು
ನಮ್ ಬೆಳಗುವ ಹರುಳಯ್ಯ ನೀ ತಾನೆ" |

"ನನ್ ಮಾತ್ರ ಗುರು ಎಂದೆಂದ್ಗು ಹೊಗುಳ್ಯಾಡಿ
ಕೊಂಡಾಡಿ ನನ್ನ ಶಿವನನ್ನು |

ಕೊಂಡಾಡಿ ಬಸುವಣ್ಣ ಆ ಶಿವನನ್ನು" ಅನುತ್ಹೇಳಿ
ಮಾನ್ಯ ಹರುಳಯ್ಯ ನುಡಿದಾನು | ೨೫೯೦

"ಹೋಗಿ ಬರ್ತೀನಿ ಬುದ್ಧಿ ನನ್ನ ಗುರುಮಠಕೆ ಬಸವಣ್ಣ
ಸರಣು ಸರಣಾರ್ತಿ ಗುರುವೀಗೆ" |

"ಬಿಜ್ಜಳನ ಸಂವಾರ ಆವತ್ತು ಮುಗಿದಿತು ಎಂದು
ನೀ ಹೋಗಿ ಬಾರಪ್ಪ ಹರುಳಯ್ಯ" |

ಕಲ್ಯಾಣ ಪಟ್ಟುಣುಕೆ ಬರುವಾಗ ನಾಗಮ್ಮ
"ಹೋದೀರ್ಕ ಹರುಳಯ್ಯ ಸರಣಾರ್ತಿ |

ಗಂಡನಿಲ್ಲದ ಬಾಲೆಗೆ ಮಕ್ಕಳ ಕೊಟ್ಟ ಹರುಳಯ್ಯ
ನಿನ್ನಿಂದ ಚನ್ನಬಸವಣ್ಣನ ಪಡುಕೊಂಡಿ |

ಎಂದಿಗೆಂದಿಗು ನಿನ್ನ ಮರೆಯದಿಲ್ಲ ಹರುಳಯ್ಯ
ನಿನ್ನಾಡ್ದವರ ತಲೆಯ ಸಾಸ್ಕೋಳು | ೨೫೬೦

ನಿನ್ನಾಡ್ದವರ ತಲೆಯ ಸಾಸ್ಕೋಳು" ಅನುತ್ಹೇಳಿ
ನನ್ನ ಚೆನ್ನೆ ನಾಗಮ್ಮ ನುಡಿದಾರು |

"ಅಂದವರನ್ನಲಿ ತಾಯಿ ನನ್ನಾಡ್ದೋರು ಆಡಾಲಿ
ನಾ ದೊಡ್ಡೋನಲ್ಲ ತಾಯಿ ಜಗದಲ್ಲಿ" |

"ಬಲ್ಲವರೆ ಬಲ್ಲಾರು ನಿನ್ಮಾಯಗಳ ಹರುಳಯ್ಯ
ನೀ ಬೆಲ್ದಂತೆ ಕಾಣಪ್ಪ ನಮ್ ಗುರುಮಠಕೆ" |

"ಆಗಲಿ ನನ್ನಮ್ಮ ನಿನ್ ಆಸುರ್ವೋದ ನನಗಿರಲಿ
ನೀವ್ ದಯಮಾಡಿ ತಾಯಮ್ಮ ನಾನೋಗ್ತೀನಿ" |

ಕಕ್ಕೆ ಸೊಪ್ಪುನ ಮಠಕೆ ಹೊರುಟೋದ ಹರುಳಯ್ಯ
ಕಲ್ಯಾಣಕ್ಕೆ ಬಂದ್ರು ನನ್ ಬಸುವಣ್ಣ | ೨೫೭೦

ಮಂದದ ಕಟ್ಟೆಗೋಗಿ ಇಂದಿಗೊಂಬತ್ತು ದಿನ
ಶ್ರಮೆ ಪಟ್ಟಾರು ನನ್ನ ಬಸುವೇಶ |

ಶ್ರಮೆಯ ಪಟ್ಟರು ನನ್ನ ಗುರುದೇವ ಅನುತ್ಹೇಳಿ
ಮಾತಿನ್ಹಂಸಗಳು ಆರತಿಯ ಬೆಳಗಿದವು |

ಪಾವಾಡ ಮಾಡಿದ ನಮ್ ನಾಗಮ್ಮ ಬಂದವುರೆ
ಮೊನುಗಾರನ ಪಡುದ ನನ್ನ ಘನಗರತಿ |

ಮೊನುಗಾರ್ನ ಪಡುದ ನನ್ನ ಘನಗರುತಿ ಅನುತ್ಹೇಳಿ
ನನ್ನ ನಾಗಮ್ಮಾರುತಿಯ ಬೆಳಗಿದರು |

ಪಾದುಕೆ ಪನ್ನೀರೆರೆದು ಅವುಳ್ಗೆ ಮುತ್ತುನಾರತಿ ಬೆಳಗಿ
ಕರುಕೊಂಡೊರಡಿದರು ಒಳುಗಾಡೆ | ೨೫೮೦

ಯಾವ ಗಳುಗೆ ಒಳುಗೆ ಜರಣವಾದಾರೋ ಎಂದು
ಕಾಯ್ದು ಕುಳಿತಾರೆ ಇವ್ರ ಎಡಬಲಕೆ |

ನವುಮಾಸೊಂಬತ್ತು ತಿಂಗ ತುಂಬಿತು ನಾಗಮ್ಗೆ
ಹೊಟ್ಟೇಯ ಬ್ಯಾನೆ ಬಲುಬ್ಯಾನೆ |

"ಹೊಟ್ಟೆ, ನೋಯ್ತಾದೆ ಅತುಗಮ್ಮ ನಾ
ತಡಿಯನಾರನಲ್ಲಮ್ಮ
ಹಾಳ ನೋವ್ ಬ್ಯಾನೆ ಬಲುಬ್ಯಾನೆ |

ಹಾಳು ನೋವುನ ಬ್ಯಾಧ್ಯ ನಾ ತಡಿಯಲಾರಿ ಅನುತ್ಹೇಳಿ
ಕಡುದುಕ್ಕ ಮಾಡೀದ ಕರಚಲುವೆ |

ಅವ-ಮಂದದಲ್ಲುಟ್ಟಾಗ ನನಗೊಂದು ಕಾಣ್ಣಿಲ್ಲ
ಇಂದೇನ ಕಾರಣ ಈ ನೋವು" | ೨೫೯೦

"ಜಲಮೂತ್ರದೊಳಗೆ ಬರಬೇಕಲ್ಲ ನಾದೀನಿ
ಅದಕೆ ಜಗದಂತ ಬ್ಯಾಧ್ಯ ಕೊಡುತಾನೆ" |

"ಜಗವೆ ಬ್ಯಾಡ ಎಂಬ ಬ್ಯಾದ್ಯೆ ಕೊಟ್ಟವುನವ್ವ
ಕಳುದೋಗ್ತೀದೆ ನನು ಪ್ರಾಣ" |

"ಕಣ್ಣಾರೆ ಕಾಣ್ದೆ ಇದ್ರೆ ನಾವೆಂಗೋ ಅನಬೌದು
ಕಂಡೀವಲ್ಲ ನಿನ್ನ ಮಗನ ಧರಿಯಲ್ಲಿ |

ಏಳಾನೆ ತಿಂಗಳಿಗೆ ಹೆಂಗಿದ್ದ ನಿನ ಮಗ
ಈಗೆಂಗಿದ್ದಾನೋ ಕಾಣೆ ತಿಳಿಯಾದು |

ಆದಿತ್ಯೋರದ ರಾತ್ರಿ ಬೆಳಗೂ ಬೋ ಬ್ಯಾನೆ
ಹೊರುಳಾಡುತಾಳೆ ಚೆನ್ನೆ ನಾಗಮ್ಮ | ೨೬೦೦

ಕೊಟ್ಟಂತ ಶಿವ ನೀ ಅರ್ಗುಗ ಮಾಡಬಾರ್ದಪ್ಪ
ನಾ ತಡಿಯಲಾರ್ನಪ್ಪ ಈ ನೋವ |

ಮಕ್ಕಳ ಪಡಿಯ ಮುಂಡೇರು ಇನ್ನೊಂಟ್ ಸಂಕ್ಪ ಪಟ್ಟಾರು
ಅವುರೆಂಗೆರುಗೆ ಮಾಡೀರೊ ನಾ ಕಾಣೆ |

ಹುಟ್ಟುವಾಗ ಮಕ್ಕ ಈ ಬ್ಯಾನೆ ಒಳಗ್ಹುಟ್ಟಿ
ನಾಳೆ ದ್ರುಷ್ಟುರಾಯ್ತಾರೆ ಜಗದಲ್ಲಿ |

ಮಕ್ಕಳೆತ್ತೋರು ನಾವು ಅನುಬೋಗಿಸಿವಿ ನಾಗಮ್ಮ
ನಿನಗೂ ಅದೆ ಬಾಳು ಅಳುಬ್ಯಾಡ |

ಯಾರ್ಮಾತಾಡೂದ್ರೂ ಇವುಳ್ತಡಿಯಾಕಾಗೋದಿಲ್ಲ
ಬಾಳ ನೋವ್ ಬ್ಯಾನ್ಯ ತಿಂದಾಳು | ೨೬೧೦

ಬೆಳ್ಳಿ ಮೂಡೀತು ಬೆಳಕರಿದು ಬಂದೀತು
ಬೆಳಕರುದು ಬಂತು ಸ್ವೋಮಾರ |

ತುಂಬೀದ ಸ್ವೋಮಾರ ಸೂರ್ಯ ಹುಟ್ಟೋವಾಗ
ಜರಣವಾದರು ಚನ್ನಬಸವಣ್ಣ |

ಜರಣವಾದ ಮಗನ ಆತ್ಕೊಂಡು ಮುತ್ತೈದೇರು
ತೊಳದು ಬೆಳುಗೋಣ ನಡೀರವ್ವ |

ತೊಳೆದು ಬೆಳುಗೋಣೆಂದು ಇವುರೆಲ್ಲ ಮಾತಾಡೋಗ
ಗುಟುರೊಡ್ಕೊಂಡು ಎದ್ದ ಚನ್ನಬಸವಣ್ಣ |

ಗುಟುರನ್ನೆ ಹೊಡುಕೊಂಡು ಎದ್ದ ಚನ್‌ಬಸವಣ್ಣ
ಎಲ್ಲಾರು ಓಡುಕೊಂಡ್ರು ಬಸುವಯ್ನ | ೨೬೨೦

ಎಲ್ಲರು ಹಿಡುಕೊಂಡು ಅವ್ನ ಮೈಯನ್ನೆ ತೊಳೆದು
ಸುದ್ದ ಪಡುಸುದುರು ನಂದಿ ಬಸವಾನ |

ಸುದ್ದ ಪಡುಸುದರಲ್ಲ ಚನ್ನಬಸವಣ್ಣನ
ದೊಡ್ಡ ಬಸವಣ್ಣನಿಗೆ ಅರ್ಥವಾದೊ |

ಜರಣವಾದನವ್ನ ನನ್ನಳಿಯ ಬಸವಣ್ಣ
ಆಗಲೆ ಜರಣಾದ ಚನ್ನಬಸವಣ್ಣ |

ಮಾಪ ಆಡಿದ ಮಾತು ಅಳಿಯಂಗರುವಾಯ್ತು
ಬಂದ ಮಾವಯ್ನ ಸನ್ನಿಧಾನ್ಕೆ |

ಬಂದ ಚನ್ನಬಸವ ಅವುರ್ಮಾವಯ್ನ ಬಳುಗೆ
ಮಾವುನಿಗೆ ಹೋಗಿ ಸರಣೆಂದ | ೨೬೩೦

ಬಂದ ಅಳಿಯನ ಕಂಡು ದೊಡ್ಡ ಬಸವಣ್ಣೋರು
ಮುದ್ದಾಡಿ ಮುತ್ತ ಕುಡಿದಾರು |

ಮುದ್ದನ್ನೆ ಆಡಿದರು ಮುತ್ತನ್ನೆ ಕೊಟ್ಟಾರು
ನನ್ನ ಧೀರ ಬಂದ್ರಪ್ಪ ಧರೆಗಿಂದು |

ಹುಟ್ಟಿದ ಲೆಕ್ಕವನ್ನೇ ನೋಡಿದರು ಬಸವಣ್ಣ
ವಾಲೆ ಗರಿಯ ಮ್ಯಾಲೆ ಬರಿದಾರು |

ಅಳಿಯನ ಜಾತುಕವ ಬರಿದಾರು ಬಸವಣ್ಣ
"ಯಾಕೊ ನಿನ್ ಗಳುಗೆ ಸರಿಯಿಲ್ಲ |

ಕಷ್ಟಪಡುವ ಲೆಕ್ಕ ಬರುತದಲ್ಲೊ ನನ್ನಳಿಯ
ಇದೇನೊ ಕಾಣ್ಲಿಲ್ಲ ನನಗೆ ಅನುಮನಸು | ೨೬೪೦

ರಾವ್ಗಳಿಗೆವೊಳಗೆ ಸೂರ್ಯನ ಕಿರುಣದೊಳಗೆ
ನೀವು ಹುಟ್ಟಿರುವ ಗಳುಗೆ ಸರಿ ಬರುದಲ್ಲ |

ಅಯ್ಯುಕ್ಕೆ ತೊಂದರಿಯಿಲ್ಲ ಅನ್ನಕ್ಕೆ ತೊಂದರಿಯಿಲ್ಲ
ಸುಕ ಮಾತ್ರ ಹೇಳೀಯ ನಿನ್ಗೆ ಮೊದಲಿಲ್ಲ |

ಸುಕ ಮಾತ್ರ ನಿನಗೆ ಮೊದಲಿಲ್ವಲ್ಲ ನನ್ನಳಿಯ
ಅಂತಾ ಲೆಕ್ಕಾವು ಇಲ್ಲಿ ಬರುತೀದೆ" |

"ಬ್ರಮ್ಮ ಬರದ ಬರ ಹಾಂಗಿದ್ರೆ ಮಾವಯ್ಯ
ನೀವೇನ್ ಮಾಡೀರಿ ನನ್ನ ಧರಿಯಲ್ಲಿ" |

ಆಗ ದೊಡ್ ಬಸವಣ್ಣ" ನಿಜ ಕಾಣಪ್ಪ ನಿನಮಾತು
ಅದ ನೆನಸ್ಕೊಬೇಕು ನಿನ್ ಮನದಲ್ಲಿ | ೨೬೫೦

ಚಿಕ್ಕವರಾದರೆ ಏನ ದೊಡ್ಡವರಾದರೆ ಏನ
ಆ-ಬ್ರಮ್ಮನ ಗ್ಯಾನ ನಿನ್ನೊಳಗುಂಟು |

ಬ್ರಮ್ಮ ಲಿಪಿಯ ನೀನು ತಿಳಿದಿರುವಂತ ನನ್ನಳಿಯ
ನಾ ಮುಂದೇನೇಳದಕು ಬಾಯ್ ಬರದು" |

ಅಳಿಯ ಮಾವ್ ಮಾತಾಡಿ ಬಲು ಸಂತೋಷ ಪಡುತಾರೆ
ಕಳೆಯ ಬಂದೀತು ಕಲ್ಯಾಣ್ಕೆ |

ಅಳಿಯ ಹುಟ್ಟಿದ ಮೇಲೆ ಬಲು ಕಳೆಯ ಒದಗಿ ಬಂತು
ಅದರಾನಂದ ನೋಡಿ ಹಿಗ್ಗಿದರಂತೆ |

"ಮಕ್ಕಳಿಲ್ಲದ ಮನೆಯಲ್ಲಿ ಇದುವರ್ಗೆ ಒಕ್ಕಲಿತ್ತು
ಇಂತಾ ಸಂತೋಷ ಬಂದಿರನಿಲ್ಲ | ೨೬೬೦

ಇಂತೆದೊಂದ್ಸಂತೋಷ ಮಠದಲ್ಲಿರನಿಲ್ಲಾ"ಂತ
ನನ್ ಸಂತೋಷಕಾರ ನುಡಿದಾರು |

"ಎಲ್ಲ ಜಂಗುಮರು ಲಿಂಗಗಳ ಕಟ್ಟಿದರು
ಅವುರ್ಗೆ ಮಕ್ಕಿಲ್ಲ ಅಂತ ಜಗ ನಗುತಿತ್ತು |

ಈಗ ತಂಗೀ ಹೊಟ್ಟೆ ಒಳುಗೆ ಬಸವಣ್ಣ ಹುಟ್ಟುದ ಮ್ಯಾಲೆ
ದೆಸುಗಾಲ ಬಂತು ಗುರುಮಠುಕೆ |

ದೆಸೆಕೊಡ್ತು ಅಂತ ಯಾರೇನಂದರೋ ಕಾಣೆ
ಸಂದೇಗ ಪಡಬವುದು ಬಿಜ್ಜಳ |

ಯಾರೂ ಹೆದರೋರಿಲ್ಲ ಇನ್ ಕಲ್ಯಾಣ್ದ ಬಸವಣ್ಣ
ನಾವ್ ಈನ ನರರು ಎಂದು ತಿಳಿದಿರಬವುದು | ೨೬೭೦

ಈನ ನರರು ಎಂದು ತಿಳಿದಿರಬವುದು ಬಿಜ್ಜಳ
ಅವ್ನ ಮಾನ ಕೆಡಿಸೋದು ನಮುಗೆ ತರುವಲ್ಲ |

ಕಲ್ಯಾಣ್ದ ಪಟ್ಟುಣಕೆ ಅವ್ನು ಮೊದಲ ಮಾರಾಜ
ಅವನೇ ಆಳಲಿ ಈ ಗುರುಮಠುವ |

ನಾಳೆ ಬರುತೀದಲ್ಲ ಈ ಜಗತ್ಕದಲ್ಲಿ ಕಲಿ
ದೇವತೆಗಳ್ಗೆ ಮಾರ್ಗ ಮೊದುಲಿಲ್ಲ |

ಈಗಲೆ ಬಂತು ನಮ್ ಕಣ್ಣೆದುರ್ಗೆ ನರ್ಕ
ಇನ್ ಕಲಿ ಒಳುಗೆ ಯಾವ್ ನರ್ಕ ಬಂದೀದೊ |

ನಾವು ಸಾಕುದ ಜನರು ನಮಗ್ಯೈರಿಯಾಗುವರೆ"ಂದು
ನಮ್ ಸಂಗನ ಬಸವಣ್ಣ ನುಡಿದಾರು | ೨೬೮೦

"ಸರಣರು ಅಂತ್ಹೇಳಿ ನಮ್ಮಠುದಲ್ಲಿ ಇರಬವುದು
ಇವ್ರೆ ಗುರು ಆಗೋ ಕಾಲ ಬರುತೀದೆ |

ನಮ್ಮ ಶಿಷ್ಯರೆಲ್ಲ ನಮಗೆ ಗುರುವಾಯ್ತಾರೆ
ನಾಳೆ ಈ ಕಾಲ ಬರುತೀದೆ |

ಈ ಕಲಿ ಬರುವುದಕೆ ಮೊದಲೆ ಕೈಲಾಸ್ಕೆ ಹೋಗಬೇಕು
ಕರಿಯೋ ನಾಗಮ್ಮ ನೀಲಮ್ಮುನ |

ಅಕ್ಕನಾಗಮ್ಮನ ಕರೆ ನನ್ನಳಿಯ ಬಸವನ ಕರೆ
ಇದ ಹೇಳ್ಬೇಕು ಅವುರ್ಗೆ ವಾಕ್ಕಾನ" |

ತನ್ನ ಮಗುನ ಕರುಕಂಡು ಬಂದು ನಾಗಮ್ಮ
ಅವ ಒರಿಕೊಂಡು ನಿಂತುಕೊಂಡ ಬಸವನ್ನ | ೨೬೯೦

ಮಗನನ್ನು ಒರಿಕೊಂಡು ನಿಂತವ್ಳೆ ಹೆತ್ತತಾಯಿ
ಆ ತಂಗಿ ಒಂದೀಗೆ ಏನ್ ನುಡಿದಾರು |

"ಕೈಲಾಸುಕ್ಕೋಗನ ನನ್ನಕ್ಕ ನಾಗಮ್ಮಯ್ಯ
ನಮುಗೆ ಬ್ಯಾಡ ಕಲ್ಯಾಣ್ದ ಗುರುಮಠ" |

"ನಿಮ್ಮಷ್ಟೆ ಆದಂಗಾಗ್ಲಿ ಅಣ್ಣಯ್ಯ" ಅನುತ್ಹೇಳಿ
ನನ್ನ ಸಣ್ಣನಾಗಮ್ಮ ನುಡಿದಾಳು |

ಕಣ್ಣೆನಲ್ಲಿ ನೀರ ತುಂಬಿಕೊಂಡು ನೀಲಮ್ಮಯ್ಯ
"ಇನ್ನು ಬ್ಯಾಡಿ ಸ್ವಾಮಿ ಈ ಗುರುಮಠ |

ಇಷ್ಟೊಂದು ದಿವ್ಸ ನೀವು ಗುರುವು ಆಗಿದ್ದೆ ಸಾಕು
ನಾವ್ ಕೇಳ್ನಾರೊ ಮುಂದೆ ಕುಂದುಕವ | ೨೭೦೦

ಮಂದುಕ್ಕೋಗಿ ಬಂದ ದಿನದಿಂದಲೂವೆ ನನ ಮನ್ಸೆ
ನೋಯ್ತೀದೆ
ಅವಂದುದ್ದ ಕೇಳಿದಿರ್ಯಾ ಕೊಂಡೂಗ ?" |

"ಏನಂದ ನೀಲಮ್ಮ ಕೊಂಡುಗರ ಮಂಚಣ್ಣ
ಅವನಂದುದ್ದ ಹೇಳು ನನ್ನ ಜೊತೆಯಲ್ಲಿ" |

"ಗಂಗೇಗೆ ಕಟ್ಸಿಲ್ಲ ಲಿಂಗುಕ್ಕೆ ಸೂತಕವಿಲ್ಲ
ಈ ಲಿಂಗ ಕಟ್ಕೋರ್ಗೆ ಕುಲುವಿಲ್ಲ |

ಈ ಲಿಂಗ ಕಟ್ಟುಡ ಜನ್ಕೆ ಕುಲುವಿಲ್ಲ ಅನುತ್ಹೇಳಿ
ನನ್ನ ಕಿವುಗೆ ಬಡುಂಗೆ ಅವ ಹೇಳಬವುದ |

ಎಷ್ಟು ಕೋಟಿ ಜನುಕೆ ನಾವು ಲಿಂಗ ಕಟ್ಟಿದರೇನ
ಇದು-ಎಲ್ಲುರ್ಗು ಅವಿಮಾನ ಈ ಧರೆಯಲ್ಲಿ | ೨೭೧೦

ನಮಗೆ ಅಂದ ಮಾತು ನಮ ಜಂಗುಮರ್ಗೆ ಅಲುವಪ್ಪ?
ಜಂಗುಮರಿಗಂದ್ಮಾತು ನಮುಗಲ್ಸೆ" |

ನೀಲಮ್ಮಾಡಿದ ಮಾತ ನನ ನಿಜಗುರು ಕೇಳಿದರು
"ಹಂಗಂದನ ಮಂಚಣ್ಣ ? ನಾ ಕೇಳ್ನಿಲ್ಲ |

ಸಣ್ಣ ಪುಟ್ಟ ಮಾತು ನಮ್ ಕಿವುಗೆ ಬಿದ್ದ ಮ್ಯಾಲೆ
ನಾವು ಕಲ್ಯಾಣ ಬುಡುವದೆ ಸರಿತಾನೆ |

ಅನ್ನಿಂದಲು ಸಾಕಿ ಇನ್ನೋಗ್ತಾರೆ ಅಂತ್ಹೇಳಿ
ಕುಲುಕೊಬ್ಬ ಭಕ್ತಾರು ಅಳುಬ್ಯಾಡಿ |

ಊಟುವಿಲ್ಲ ಅಂತ್ಹೇಳಿ ನೀವು ಸಂಕಟ ಪಡುಬ್ಯಾಡಿ
ಅವಕೆಲ್ಲ ಹೇಳಿಸೂವೆ ಬೀದೀಲಿ | ೨೭೨೦

ಬಾಪ್ಪ ನನ್ನಳಿಯ ನನ್ನ ಚಿಕ್ಕ ಚನ್ನಬಸುವಣ್ಣ
ಸಾರಪ್ಪ ಕಲ್ಯಾಣ್ದ ಬೀದೀಲಿ |

ಅನ್ನ ಕೊಡುವರ್ಯಾರು ಅಂತ ಅವುರೆಲ್ಲರು ಕೇಳಿದರೆ
ಅನ್ನದ ಮಾರ್ಗವ ಸಾರಯ್ಯ |

ನಮ್ಮಾವಯ್ನು ನಾವು ಕೈಲಾಸ್ಕೆ ಹೋಗ್ತೀವಿ
ಎಂದು ಸಾರಪ್ಪ ಕಲ್ಯಾಣ್ದ ಬೀದೀಲಿ |

ಮಕ್ಕಳಿಗೆ ಮೂರೂಟ ದೊಡ್ಡವರ್ಗೆ ಎರಡೂಟ
ಸಾರಪ್ಪ ರಾಜ ಬೀದೀಲಿ" |

ಮಾವ ಆಡಿದ ಮಾತ ಚನ್ನಬಸವಣ್ಣ ಕೇಳಿ
ಸಂತೋಸ ಬಂದೀತು ಅವ್ನ ಮನದಲ್ಲಿ | ೨೭೩೦

ಬಾಲವ ಎತ್ತೀದ ಬೆನ್ಮೇಲೆ ಮಡುಗೀದ
ಅಡ್ಡನೆಗುತಾವ ನೆಗುದಾನು |

ಅಡ್ಡ ನೆಗ್ತಾ ನೆಗೆದ ನನ ಕುಸುಗಾರ ಚನಬಸವ
ಸಾರೀದ ರಾಜ ಬೀದೀಲಿ |

"ಲೆಕ್ಕವಿಲ್ಲದ ಊಟ ಎಳೆ ಮಕ್ಕಳೆ ಉಣ್ಣೆ" ಎಂದು
ಕುಸಿಯಾಗಿ ಸಾರಿ ಹೋಗುತಾನೆ |

"ಮೂರು ಹೊತ್ತುನ ಊಟ ದೊಡ್ಡವರು ಉಣ್ಣಿ" ಎಂದು
ಅಳಿಯ ಬಸವಣ್ಣ ಸಾರ್ತಾನೆ |

"ಅಂದಿನಿಂದ ನಮುಗಿಂಗೆ ಯಾರೂ ಸಾರಿರನಿಲ್ಲ
ಅಳಿಯ ಚನಬಸವಣ್ಣ ಸಾರ್ತಾರೆ | ೨೭೪೦

ಎರಡೊತ್ತುನೂಟ ಇದುವರ್ಗು ಮಾಡೀದೊ
ನಮ್ಗೆ ಮೂರೂಟ ಸಾರವ್ರೆ ಚನ್ನಬಸವಣ್ಣ |

ಸತ್ಯುವಂತರ ಮಗ ನಮಗೂಟ ಸಾರವುನೆ" ಎಂದು
ಜಂಗುಮರು ಒಗ್ಗಿ ಮೆರಗಿದರು |

ಸಾರುಬುಟ್ಟು, ಚನ್ನಬಸವ ಮಾವಯ್ನ ಬಳಿಗೆ ಬಂದ
ಸರಣಾರು ಬಂದರು ಅವ್ನ ಜೊತೆಯಲ್ಲಿ |

"ಧರ್ಮಿಷ್ಟ, ನಿಮ್ಮಳಿಯ ನಮುಗ್ ಮೂರೂಟ ಸಾರವುರೆ
ಸತ್ಯಂತ ಚನ್ನಬಸವಣ್ಣ |

ಲೆಕ್ಕವಿಲ್ಲದ ಊಟ ಮಕ್ಕುಳ್ಗೆ ಸಾರವನೆ ಬುದ್ಧಿ
ನಮ್ಮಕ್ಕ ಹೆಚ್ಚೂಂತ ಜಿನ ಬಂತು" | ೨೭೫೦

"ಹಂಗಂದರೇನಪ್ಪ ನನ್ನಳಿಯ ಚನ್ನಬಸವ
ಹದಗೆಡಿಸೀದಪ್ಪ ಗುರುಮಠವ |

ಲೆಕ್ಕವಿಲ್ಲದ ಐಟ್ಟ ಮಕ್ಕಳ್ಗೆ ಸಾರ್ದಲ್ಲ
ಅವುರ್ಗನ್ನಕರುತ್ಯಾರಪ್ಪ ಜಗದಲ್ಲಿ ? |

ದೊಡ್ಡೋರ್ಗೆ ಮೂರೂಟ ನೀ ಸಾರ್ದಲ್ಲೊ ಬಸವ
ಅವುರ್ಗೇದಿಕ್ಕೋರ್ಯಾರಪ್ಪ ಧರಿಯಲ್ಲಿ ? |

ನನ್ನ ತಲೆಯ ಮ್ಯಾಲೆ ನೀ ಕೆಟ್ಟೆಸರ ತರುಬ್ಯಾಡ
ನೀ ಗೇದಿಕ್ಕಬೇಕಪ್ಪ ನರರೀಗೆ |

ನಿನ್ಮಾತ್ರ ನಾನು ಕರುಕೊಂಡೋಗದಿಲ್ಲ
ಕೈಲಾಸ್ದ ಮಾರ್ಗ ನಿನುಗಿಲ್ಲ | ೨೭೬೦

ಈ ನರುಲೋಕ್ದಲ್ ನಿನ್ ಬುಟ್ಟೋಯ್ತೀನಿ ಕಾಣಳಿಯ
ಕಲಿ ತೀರೋವರ್ಗೂ ನೀನಿರಬೇಕು |

ಕಲಿಯುಗ ಮುಗಿಯೊತನ್ಕ ನೀನಿಲ್ಲಿರಬೇಕು" ಅನುತ್ಹೇಳಿ
ನಮ್ ಸಂಗಾನ ಬಸವಣ್ಣ ನುಡಿದಾರು |

"ಹಂಗಂದ್ರೇನ ಮಾವ ನೀವೇಳ್ತಕ್ಕ ಮಾತು
ನಾ ಹೆಂಗೆ ಈ ನರಲೋಕ್ದಲ್ಲಿರಲ್ಕಪ್ಪ |

ಅತ್ತೆಮಾವುನ ಬುಟ್ಟು ನನ್ನತ್ತಮ್ಮನ ಮರ್ತು
ನಾನಿನರಲಾರಿ ಮಾವ ಈ ಧರಿಯಲ್ಲಿ" |

"ನಾನಿಲಾರಿ ಹಾಂಗಂದ್ರೆ ನಾವ್ ಮಾಡ್ಲಿಲ್ಲ ಮಗನೆ
ನೀ ಮಾಡೀದ ಕತೆ ನಿನಗಪ್ಪ | ೨೭೭೦

ನಾವೇಳ್ದಂಗೆ ಸಾರಿದ್ರೆ ನಿನಗೀ ಸೀಕ್ಷಿಯಾಗುತಿತ್ತ?
ನರರೀಗೆ-ಕಲಿಯುಗದಲ್ಲಿ ಗೇದೀಕ್ಕವ ನೀ ತಾನೆ |

ಅಕ್ಕನಾಗಮ್ಮನ ಮಗ ನಮಗೂಟ ಸಾರೊರಟಾರು
ಎಂದು ಲೋಕದಲ್ಲವಿಮಾನ ತರುಬ್ಯಾಡ" |

"ಈ ನರಲೋಕದಲ್ಲಿ ಬುಟ್ಟು ಹೋಗುತೀರಲ್ಲ ಮಾವ
ನನಗೊಡಯರ್ಯಾರು ಮಾವ ಈ ಜಗದಲ್ಲಿ ?"

"ಒಕ್ಕುಲುಗರ ಮುದ್ದಯ್ನ ನಾ ಕರೀತೀನಿ ನನಕಂದ
ಅವುರ್ವಾಸಕ್ಕೆ ಬುಟ್ಟು, ನಾವೋಗುತೀವಿ |

ನಿನ್ನ ಅದುಕಾರನೆಲ್ಲ ಅವ್ರ ಕೈಯೀಗೆ ಕೊಡ್ತೀವಿ
ಅವ್ನ ತಾಬಿಯಲಿ ನೀನು ಇರಬೇಕು | ೨೭೮೦

ಆದಿ ಹರುಳಯ್ನೋರು ಈ ಲೋಕದಲಿ ನನಕಂದ
ನಿನ್ನ ಭಾರಿ ಪರುಸೋದ್ನೆ ಮಾಡುತಾರೆ |

ನಿನ್ನ ಸರೀರನೆಲ್ಲ ಅಪರಂಜಿ ಮಾಡೋಗ್ತೀವಿ
ಹೆದುರದೆ ಇರಪ್ಪ ಈ ಜಗದಲ್ಲಿ |

ಹರುಳಯ್ನ ಮನೆಯ ಹಿರುಳೀನ ಹೋರಿ ಎಂದು
ನಿನ್ನ - ಜಗವೆಲ್ಲ ಕೂಗಿ ಬದುಕಾಲಿ |

ಜಗವೆಲ್ಲ ಕೂಗಿ ಬದುಕಾಲಿ ನನಕಂದ
ಇರುಳೆದ್ದು ಗೆಯ್ಮೆ ಅವುರ್ಮನೆಯಲ್ಲಿ" |

"ಕೆಟ್ಟೇನಲ್ಲ ಮಾವ ನೀವೇಳ್ದಂತ ಮಾತೀಗೆ
ದ್ರುಷ್ಟರು ಮಾವಯ್ಯ ನರಜನರು | ೨೭೯೦

ದ್ರುಷ್ಟು ಜನಗಳು ನನ್ನ ಪ್ರಾಣ ಕೊಲುತಾರೆ ಮಾವ
ನಾ ಬರ್ತೀನಿ ನಿಮ್ಮ ಜೊತೆಯಲ್ಲಿ" |

"ಕಟ್ಟಾಗ ಬಿಡುವಾಗ ಹೊಡೆದೇಟು ನಿನಗಾಗ್ಲಿ
ಸಂದೆವರಗನೇಟು ನನಗಪ್ಪ |

ಮಿಕ್ಕಾದ ಏಟೆಲ್ಲ ಅದು ನನ್ಗೆ ಬೀಳಲಿ" ಅಂತ್ಹೇಳಿ
ಅವುರ್ಮಾವ ಬಸುವಣ್ಣ ನುಡಿದಾರು |

"ಇಂತೆ ನವನರ್ಕಕೆ ನನ್ನ ಗುರಿಮಾಡಿ ಹೋದೀರ್ಯಾ
ನಾ ತಂದೆ ತಾಯಿಲ್ಲದ ಪರದೇಸಿ" |

"ಎಷ್ಟು ಏತ್ತರು ನಿನ್ನ ಕಟ್ಟುಕೊಳ್ಳೋನು ನಾನಲ್ಲ
ನಿನ್ನ ಬುಟ್ಟೋಗುವುದು ನಿಜುವಪ್ಪ" | ೨೮೦

ಅಕ್ಕ ನಾಗಮ್ಮಯ್ಯ ಕರುದಾರು ಬಸುವಣ್ಣೋರು
"ನಿನ್ಮಗುನೀಗೆ ಬುದ್ಧಿ ಹೇಳಿ ಹೊರುಡವ್ವ" |

"ಗಂಡನ ಕೂಡಿ ನಿನ್ ಪಡಿಯನಿಲ್ಲ ಮಗನೆ
ಹರುಳಯ್ಯ ಮನೆಯ ಪ್ರಾಸೋದ |

ಮಾನ್ಯನ ಮನೆಯ ಪ್ರಾಸೋದ್ಕೆ ಹುಟ್ಟಿದೋನೆ
ನೀ ಮಾನುವರ್ಗೆ ಗೇದಿಕ್ಕೊ ಗತಿಬಂತು |

ಸೋದುರ ಮಾವುನ ಮಾತ್ಗೆ ನೀ ಪ್ರತಿ ಹೇಳಲು ಬ್ಯಾಡ
ಕಾಲ ಕಳಿಯಪ್ಪ ಈ ಜಗದಲ್ಲಿ" |

"ನಿನ್ನ ಬಾಯ್ನಲ್ಲು ತಾಯಿ ಇಂತೆ ಮಾತು ಬಂದ್ಮೇಲೆ
ಆದಂಗಾಗಲಿ" ಅಂದ ಚನ್ನಬಸವಣ್ಣ | ೨೮೧೦

ಮಗನನ್ನೆ ಒಪ್ಪುಸ್ತು ಈ ಶರಣರ್ನೆ ಕರುದಾರು
"ಬನ್ನಿಪ್ಪ ನನ್ನ ಕುಲುದೋರೆ" |

ಒಕ್ಕುಲುಗರ ಮುದ್ದಯ್ಯ ಅಂಬುಗರ ಚೌಡಯ್ಯ
ಕುಂಬಾರ ಗುಂಡಯ್ಯನ ಕರಸಿದರು |

ಕನ್ನಗತ್ತಿ ಮಾರಯ್ನ ಬ್ಯಾಡಾರ ಕನ್ನಯ್ನ
ಈಡಿಗರ ಕೊಂಡಯ್ನ ಕರಸಿದರು |

ಕೊರಮರ ತಿಮ್ಮಯ್ನ ನೂಲಿಯ ಚಂದಯ್ನ
ಹಡಪದಂಪಣನ ಕರಸಿದರು |

ಹಡಪದಂಪಣನ ಮಡುವಾಳ ಮಾಚಯ್ನ
ನಮ್ಮ ಸಣ್ಣಕ್ಕಿ ಮಾರಯ್ನ ಕರಸಿದರು | ೨೮೨೦

ಛತ್ತರಿ ವೆಂಕ್ಟಯ್ನ ನಮ್ಮೊಡ್ಡಾರ ಮುದ್ದಯ್ನ
ನಮ್ಮ ಕುರುಬರ ಬೀರಪ್ಪ ಕರಸಿದರು |

ಕತ್ತೀಯ ಮಾರಯ್ನ ತುರುಕರ ಪೀರಯ್ನ
ನಮ್ಮಾದಿ ಹರುಳಯ್ನ ಕರಸಿದರು |

"ಇಂತೆ ಸರಣಾರ್ಥಾಸಕ್ಕೆ ಬುಟ್ಟೊಯ್ತೀನಿ ಅಳಿಯಾನ
ನೀವ್ ಕಾಪಾಡಬೇಕಪ್ಪ ಧರಿಯಲ್ಲಿ |

ಈಗ ಮಾತಾಡೋ ಬಸವನ ನಾ ಮೂಗ್ಮಾಡಿ ಹೋಗ್ತೀನಿ
ಆ ಅವುನ್ಗೆ ತೊಂದ್ರಿ ಕೊಡಬ್ಯಾಡಿ ಜಗದಲ್ಲಿ |

ನನ್ನಳಿಯನ ಗಂಜಳ ನಿಮುಗಮುರ್ತವಾಗ್ತದ್ರಪ್ಪ
ಹೊಡ್ದು ಇವುನ್ಮಾತ್ರ ನೀವು ನೋಯುಸ್ಬೇಡಿ | ೨೮೩೦

ಬಸವಣ್ಣನ ಮಾತ ಕೇಳುದುರು ಹರಳಯ್ಯ
"ಅವ್ನ - ಬೀಸಾಡದುಂಟ ಬುದ್ಧಿ ಜಗದಲ್ಲಿ |

ಚರ್ಮಗಳ ಅಳುಕೊಂಡು ಮೆಟ್ಟದ್ಕೆ ಪಾದ್ರಾಕ್ಷಿ
ಹೊಡೊಯೋದ್ಕೆ ಬಾರ್ಕೋಲ ನಾ ಮಾಡ್ತೀನಿ" |

"ಎಲ್ಲಪ್ಪ ಹೊನ್ನಯ್ಯ ಮುಂದು ಬಾ" ಅನುತ್ಹೇಳಿ
ನಮ್ಮ ದೊಡ್ಡ ಬಸವಣ್ಣ ಕರಿದಾರು |

"ನನ್ನಳಿಯನ ಕಂಡಮಾವ್ಸ ನಿನ್ನ ರುದಯಕ್ಕೆ ಸಲುಸಪ್ಪ
ಗ್ಯಾಪನವಿರಲಿ ನಿನ್ನ ಮನದಲ್ಲಿ |

ಕೊಂಬು ಕೊಳುವೆ ಲೆಕ್ಕ ಚನ್ನಯ್ಯ ಕೊಡುಲಪ್ಪ
ಈ ಚರ್ಮದ ಲೆಕ್ಕಕ್ಕೂ ಅವತಾನೆ | ೨೮೪೦

ಕಂಡಮಾವ್ಸದ ಲೆಕ್ಕ ಕುಲುದೋರು ಕಂಡಾಗೆ ಕೊಡಬೇಕು
ಕಲಿ ತೀರೀದ ಮ್ಯಾಲೆ ನಾವ್ ಬರುತೀವಿ |

ಒಕ್ಕುಲಗರ ಮುದ್ದಯ್ಯ ಮುಂದಾಗಿ ನೀ ಬಾಪ್ಪ
ನನ್ನ - ಚಿಕ್ಕ ಅಳಿಯಾನ ನಾ ಕಾಪುತೀನಿ |

ಅಂದಿಂದ ಆಡಿದ ಮಾತು ಇಂದ್ ಮರ್ತೋಗ್ಲಿ" ಅಂತ್ಹೇಳಿ
ಅಳಿಯಂಗೆ ಧೂಳ್ತ ಇಕ್ಕಿದರಂತೆ |

ಮಾವನ ಧೂಳ್ತ ಪ್ರಣಗೆ ಹಚ್ಚಿದ ಮ್ಯಾಲೆ
ಮೂಗಾದ ನನ್ನ ಚನ್ನಬಸವಣ್ಣ |

ಅವುರತ್ತೆ ನೀಲಮ್ಮಯ್ಯ ಅಕ್ಕ ನಾಗಮ್ಮಯ್ಯ
ನಿನ್ಮಾತು ಮರೆಯಾಯ್ತೆಂದು ಅಳುತಾರೆ |

ಬಿಜ್ಜಳನ ಕೊಲುವಾಗ ನಿನ್ಸಾರ್ಥಟ ಎಷ್ಟಿತ್ತು
ಮೂಗನಾದ್ಯಪ್ಪ ಧರೆಯಲ್ಲಿ |

ನನ್ನ ಮೂಗಳಿಯನೀಗೆ ಏನ್ ಮಾಡಿದಿರಿ" ಎಂದು
ತಾಯಿ ನೀಲಮ್ಮ ಕೇಳುತಾಳೆ |

ನನ್ನೂಟ್ಟೇಲುಟ್ಟಿದ ಮಗನ ಯಾರೀಗೆ ಕೊಟ್ಟೀರಂತ
ನನ್ನಕ್ಕ ನಾಗಮ್ಮ ಕೇಳಿದರು |

ನಾಗಮ್ಮಾಡಿದ ಮಾತ ನೀಲಮ್ಮಾಡಿದ ಮಾತ
ಗುರುಗಳು ಕೇಳಿದರು ಬಸವಣ್ಣ |

"ನಿನ್ನ ಮಗನಿಗೆ ನಾವು ಅನ್ಯಾಯ ಮಾಡಿಲ್ಲ
ಆದಿಹೊನ್ನಯ್ಯನಿಗೆ ತಿಳುಸೀವಿ |

ಆದಿ ಹೊನ್ನಯ್ಯ ನಮ್ಮಾದಾರಿ ಚನ್ನಯ್ಯ
ಅವರಿಬ್ರೂಗೂ ತಾಕಿರ್ತಿ ಮಾಡೀವಿ" |

"ನಮ್ಮೆದುರೀಗೆ ಸ್ವಾಮಿ ನೀವ್ ಕರುದೇಳಿ" ಅನ್ನುತ್ತ
ತಾಯಿ ನೀಲಮ್ಮ ನುಡಿದಾರು |

"ಕೈಲಾಸುಕ್ಕೋಗುವಾಗ ನಾವೇಚುಣೆ ಮಾಡಬಾರ್ದು
ನಮ್ಮನುಕೆ ಸಂತೋಷ ಬರಬೇಕು |

ನಮ್ಮನುಕೆ ಸಂತೋಷ ಬರವಂತೆ ಬಸ್ಸಣ್ಣೋರೆ
ನಮ್ಮೆದುರೀಗೆ ಸ್ವಾಮಿ ತಿಳುಪಡಿಸಿ |

ಆದಿ ಹೊನ್ನಯ್ ಬಾಪ್ಪ ನನ್ ಮಾದಾರಿ ಚನ್ನಯ್ಯ
ಏನ್ ಮಾಡೀರಿ ನನ್ನ ಅಳಿಯಾನ ? |

ಏನ್ ಮಾಡೀರ್ಯಪ್ಪ ನನ್ನಳಿಯ ಚನ್‌ಬಸವನ
ನೀವೇಳುದಂತೆ ಸ್ವಾಮಿ ಮಾಡ್ತೀವಿ |

ಮಣ್ಣೀಗೆ ಮುಚ್ಚೇಡಿ ನನ್ನಳಿಯ ಚನ್‌ಬಸವನ
ಇವ ಬಂಗಾರ ಎಂದು ತಿಳುಕೊಳ್ಳಿ |

ನನ್ನಳಿಯನ ರುದಯ ಬಂಗಾರ ಕನ್ರಪ್ಪ
ಅವುನಾತ್ಮ ನಿಮ್ಮಲ್ಲಿ ಉಳಿಯಾಲಿ |

ಅವುನಾತ್ಮ ನಿಮ್ಮಲ್ಲಿ ಉಳಿಯಾಲಿ" ಅನುತ್ಹೇಳಿ
ನಮ್ಮ ಭೂಮಿ ಆಳುವರು ನುಡಿದಾರು |

"ಗಂಡನ ಸುಕುವಿಲ್ದೆ ದುಂಡಿ ಗರ್ಭುದ ಒಳುಗೆ
ಹುಟ್ಟಿನ್ನೆ ನಮ್ಮಳಿಯ ಘನಸರಣ |

ಇಂತ ಘನಸರಣಾನ ಕೆಟ್ಟೋನು ಅನ್ನೋದಿಲ್ಲ
ನಾವ್ ಬಂಗಾರ ಎಂದು ತಿಳುದೀವಿ |

ಆ ಮಾತೀಗೆ ತಪ್ಪಿದರೆ ನೀವ್ ನರಲೋಕುಕೆ ಬಂದಾಗ
ನಮ್ಗೆ ಕೊಡಬಾರ್ದ ಸೀಕ್ಷ್ಯ ಕೊಡುವೋಗಿ |

ನಮ್ಗೆ ಕೊಡುಬಾರ್ದ ಸೀಕ್ಷ್ಯ ಕೊಡುವೋಗಿ ಬಸವಣ್ಣೋರ
ಇದು ನಿಚ್ಚಾಯ ಎಂದು ಬರುಕೊಳ್ಳಿ |

ನಿಚ್ಚಾಯ ಎಂದು ವಾಲೆ ಗರೀಗೆ ಬರೀರಿ
ಆ ಒಕ್ಕುಲುಗ್ರ ಗೌಡನಿಗೆ ತಿಳುಸೋಗಿ" |

ಒಕ್ಕುಲುಗ್ರ ಮುದ್ದಯ್ನ ಕರುದು ಬಸುವಣ್ಣೋರು
"ನನ್ನಕ್ಕನಾಗಮ್ಮ ಮಗ ಜ್ಞಾಕೆ |

ನನ್ನಳಿಯ ಮರುಣವಾದಾಗ ಹೊರುಗೆ ಬಿಸಾಡ್ಬೇಡಿ
ಈ ಹೊನ್ನಯ್ಯ ಚನ್ನಯ್ನ ಕರುಸಪ್ಪ |

ಹೊನ್ನಯ್ಯ ಚನ್ನಯ್ಗೆ ನೀ ತಾಕೀರ್ತಿ ಮಾಡಪ್ಪ
ಅವುನ ಒಪ್ಪ ಮಾಡ್ತಾರೆ ಜಗದಲ್ಲಿ |

ಒಪ್ಪ ಮಾಡುವರಪ್ಪ ನನ್ ಬಂಗಾರ್ದ ಅಳಿಯಾನ
ಬೀಸಾಕ್ ಬುಟ್ಟೀಯೆ ಲಿಗುವಿರಲಿ |

ನನ್ನಳಿಯನಿಗೆ ನಾಳೆ ನವನರ್ಯಾವ ಕೊಟ್ಟಾರೆ
ನೀನ್ ತಿನ್ನಾ ಅನ್ನಾವೆ ಬಲ್ಲವಯ್ಯ |

ನಿನ್ ಮಕ್ಕುಗಿಂತೆಚ್ಚಾಗಿ ನನ್ನಳಿಯನ ಸಾಕಿದರೆ
ನೀ ತಿನ್ನುನಾರ್ದ ಅನ್ನ ಕೊಡುತಾನೆ |

ನಿನ್ನತ್ತು ಜನ ಗಂಡುಮಕ್ಕ ಅವ್ರೇನು ಮಾಡಿಯಾರು
ಇವೊಬ್ಬ ದುಡಿಯೋನು ಜಗದಲ್ಲಿ |

ಹತ್ತು ಜನದ ಕೆಲ್ಸ ಇವನೊಬ್ಬಾನೆ ದುಡಿತಾನೆ
ಇದು ನಿಚ್ಚಾಯವೆಂದು ತಿಳುಕೊಪ್ಪ |

ಮಾತಿಲ್ಲ ಪ್ರಾಣ ಎಂದು ನೀ ತೊಂದಾರಿ ಕೊಟ್ಟಾರೆ
ನಿನ್ನೈಸ್ವರ್ಯಕ್ಕೆ ಕೇಡು ಬರುತೀದೆ |

ನನ್ನಳಿಯ ಹಿಗ್ಗಿದ ಮನೆ ಬೆಳೆಯಾಲಿ" ಅನುತ್ಹೇಳಿ
ನನ್ ಬಸುವಣ್ಣ ಆಸುರ್ವೋದ ಮಾಡಿದರು |

ಬಸವ ಉಕ್ಕುದ ಮನೆಯ ಬಡ್ತಾನ ಬಯಲಾಗ್ಲೀಂತ
ನಮ್ಮ ದೊಡ್ಡ ಬಸವಣ್ಣ ನುಡಿದಾರು | ೨೯೧೦

ಹಿರುಳೀನಾ ಹೋರಿ ಉಕ್ಕೀದಂತಾ ಮನೆಯಲ್ಲಿ
ಹಗಲು ಇರುಳೆಲ್ಲ ಹಾಲ್ ಕರಿಯಾಲಿ |

ಹಗಲು ಇರುಳೆಲ್ಲ ಹಾಲ್ ಕರುದಂಗೆ ಕರೆಯಾಲಿ
ಅಂತು ಸಂತೋಷಕಾರ ನುಡಿದಾರು |

ಸಂತೋಷುಕಾರ ಸಂಗನ ಬಸುವಣ್ಣ
ಬಲು ಸಂತೋಸ್ದಲ್ಲಿ ಮಾತ ಅರುಗಿದರು |

ಅಳಿಯಾನ ಮೈ ತೊಳ್ದು ಅಕ್ಕಸ್ತಿ ಗಂಧ ಹಸ್ಸಿ
ಪೂಜೆ ಮಾಡಿದರು ಮಠುದಲ್ಲಿ |

ಜಾಜೀ ಪೂವಿನ ಮಾಲ್ಯ ಕೊರಳಿಗಿಟ್ಟಾರು
ನನ ಜಾಣ ಬಸವಣ್ಣಾನ ಮೈತುಂಬ | ೨೯೨೦

ಪಟ್ಟೆ ಮುಗುಟವ ಆಭರಣ ಹೊದಿಸಿ ನಾಗಮ್ಮ
ತನ್ನ ದ್ರಷ್ಟಳ್ಳ ಮಗನ ನೋಡಿ ಅಳುತಾಳೆ |

ಇನ್ನೆಂದಿಗೆ ನಿನು ಮೊಕುವ ನಾ ಕಾಣಲಿ ನನಕಂದ
ನರುಮಾನ್ಯುಗೆ ನೀನು ಗುರಿಯಾದ್ಯ |

ತಾಯಿ ನೀಲಮ್ಮಯ್ಯ ಅಕ್ಕನಾಗಮ್ಮಯ್ಯ
ಅಳುತ ಅವುನ್ ಪೂಜ್ಯ ಮಾಡಿದರು |

ನನ ದೊಡ್ಡ ಬಸವಣ್ಣೋರು ಅಳಿಯನ ಸಿರುವ
ತಬುಕೊಂಡು
"ಜ್ಯಾಕೆ ಕಾಣಪ್ಪ ಹೋಗಿ ಬರುತೀವಿ |

ನಿನ್ ಪಾದುಪೂಜೆ ನಮಗಿಂದೀಗೆ ಮುಗಿದೀತು
ನನ್ ಬಂಧಾನ ಕಳುದಂತ ಮಗ"ನೆಂದು | ೨೯೩೦

ನನ್ ಬಂಧಾನ ಕಳುದಂತ ಮಗನೆಂದು ನಾಗಮ್ಮ
ಆ ಕಂದನ ಮ್ಯಾಲ್ ಕಣ್ಣೀರ ಕೆಡುಗೀದ |

ಕೋಟಿ ಜಂಗುಮರೆಲ್ಲ ಸುತ್ತಲು ನಿಂತುಕೊಂಡು
ಅವುರತ್ತಾರು ಕಲ್ಯಾಣ್ದ ಮಠುದಲ್ಲಿ |

"ಈ ಭೂಮಿ ಪಾಲ್ಕನು ಬುಟ್ಟು ನಮ್
ಗುರುಗಳೋಯ್ತಾರಲ್ಲೊ
ಈ ಭೂಮ್ತಾಯ ಗಂಡ ಇವ ನರರ್ವಾಸ |

ಉತ್ತಿ ಬಿತ್ತುವ ಮಗ ನರರ್ವಾಸ" ಅನುತ್ಹೇಳಿ
"ಇವರೆಂತಾ ಸತ್ಯಂತರಪ್ಪ ಬಸವಣ್ಣ |

ನರುರುಗೋಸ್ಕರವಾಗಿ ಇವ್ನ ರಾಜ್ಯಕೆ ಬುಟ್ಟೋಗುತಾರೆ
ಇವರೆಂತೆ ಧರ್ಮಿಷ್ಟರು ಬಸವಣ್ಣ | ೨೯೪೦

ಸಕಲ ಪ್ರಾಣಿಗಳಿಗೆಲ್ಲ ಲಿಂಗ ಕಟ್ಟಿದ ನಮ್ಮಪ್ಪ
ನಿನ್ನಂಗವ ತಿಳಿದವುರೆ ಮೊದಲಿಲ್ಲ |

ಕೋಟಿ ಜಂಗುಮರಿಗೆಲ್ಲ ಉಪದೇಸ ಹೇಳಿದ ಗುರು
ನಿನ್ನಾಟ ಕಂಡವರೆ ಮೊದುಲಿಲ್ಲ |

ಕೈಲಾಸ್ಕೆ ಹೋಗುವನ ಇಲ್ಬುಟ್ಟು ಹೋಯ್ತಾರಲ್ಲ
ಇವುರೆಂತೆ ಸರಣಾರು ಬಸುವಣ್ಣ |

ಒಬ್ಬಿಬ್ರುಗೆ ಗುರುವಲ್ಲ ಇವ ಜಗತ್ಯಕೆ ನಿಜಗುರು
ನಿಮ್ಮ ನಿಜುವ ಕಂಡವುರೆ ಮೊದುಲಿಲ್ಲ |

ನಿಜುವುಳ್ಳ ಗುರುದೇವ ಇಂದೋದೀರ್ಯ?" ಎನುತ್ಹೇಳಿ
ಜಂಗೂಮರೆಲ್ಲ ಅಳುತಾರೆ | ೨೯೫೦

ಜಂಗುಮರು ಅಳುತಳುತ ಆದಿ ಕಲ್ಯಾಣದಲ್ಲಿ
ಮಾಡಿದರು ಅವರ ಪಾದಪೂಜ್ಯ |

ಮಾಡಿದರು ಬಸವಣ್ಣನ ನೀಲಮ್ಮಯ್ಯನ ಪೂಜ್ಯ
ನನ್ನಕ್ಕ ನಾಗಮ್ಮ ಅಲಂಕರಿಸಿ |

ಅವ್ವ ಚಿಕ್ಕ ಚನ್‌ಬಸವಣ್ಣನ ಅಲಂಕಾರಗಳ ಮಾಡಿ
ಬಲು ಅಕ್ರಿಯಲಿ ಎಲ್ಲ ಪೂಜಿದರು |

ಅಕ್ರಿಯಲಿ ಎಲ್ಲ ಪೂಜ್ಯ ಮಾಡುವರೆ ಬಸವಣ್ಣಂಗೆ
"ಹೊತ್ತಾಯ್ತು ಕಾಣಪ್ಪ ನಾವ್ ಹೋಗ್ತೀವಿ |

ಕಲ್ಯಾಣ ಇನ್ಮೇಲೆ ಕಡುಕರಂಗ್ಹಿ ಆಗ್ತೀದೆ
ಗ್ಯಾಪುನವಿರಲ್ಯಪ್ಪ ನಿಮ್ ಮನುದಲ್ಲಿ | ೨೯೬೦

ನಾವ್ ಕೈಲಾಸ್ಕೆ ಹೋದ್ಮೇಲೆ ಇದು ಕಡುಕ್ರಂಗ್ಹಿ" ಎಂದು
ಮೂರ್ಸಾತ್ಯ ಹೇಳಿದರು ಬಸವಣ್ಣ |

ಕೊರುಳ್ಗಗ್ಗ ಹಾಕಿ ಒಕ್ಕುಲುಗ್ರ ಮುದ್ದಯ್ಯ
"ಇಂದು ದಯ್ ಮಾಡು ನನ್ನಪ್ಪ ನನ್ಮನೆಗೆ |

ಬಲಗಾಲು ಮುಂದಾಕಿ ನೀ ದಯಮಾಡು" ಅಂತ್ಹೇಳಿ
ಅವುನ ಪಾದುಕ್ಕೆ ಎರಗಿ ಕರಿದಾನು |

ಒಕ್ಕಲುಗ್ರ ಮುದ್ದಯ್ನ ಅಂತಂತು ನೋಡೀದ
ಅಳುತಳುತ ಹೋಯ್ತಾನೆ ಚನ್ನಬಸವಣ್ಣ |

ಒಳ್ಳೀಯ ಗಳುಗೇಲಿ ಅಮುರ್ತದ ಹೊತ್ತಲ್ಲಿ
ಆ ಮುದ್ದೇಗೌಡನ ಮನೆಗೆ ಬಂದನಂತೆ | ೨೯೭೦

ಅವನ ಮನೆಗೆ ಹೊಕ್ಕಾಗ ಅವುನ್ಹಾಸೀಗೆ ಹಾಕಿ
ಕಟ್ಟೀದನಂತೆ ತನ್ನ ಗೊಂತಿನಲ್ಲಿ |

ಆಗ ಚನ್ನ ಬಸವಣ್ಣನ್ನ ಕಟ್ಟುಕೊಂಡ್ರು ಮುದ್ದಯ್ಯ
ನಮ್ ಸ್ವಾಮಿ ಕಲ್ಯಾಣ ಬುಟ್ಟು ಹೊರಡಿದರು |

"ಕಲ್ಯಾಣ ಬುಟ್ಟುಬುಟ್ಟು ನನ್ಗುರುಗಳೋದಾರಂತೆ !"
ಬಿದ್ದೋಡಿ ಬಂದ ಬಿಜ್ಜಾಳ |

"ಮಠುವನ್ನೆ ಬುಟ್ಟುಬುಟ್ಟು ನನ್ಗುರುಗಳೋದಾರಂತೆ
ನಮ್ಗೆ ಗುರುವ್ಮಾರ ಸ್ವಾಮಿ ಈ ಮಠುದಾಗೆ" |

"ಗುರುಗಳ ಕಾಲ ಮುಗುದೋಯ್ತು ಬಿಜ್ಜುಳ ದೊರೆಯೆ
ಇದು ರಾಜಾರ ಕಾಲ ಧರಿಯಲ್ಲಿ | ೨೯೮೦

ಮುಟ್ಟುಗೌಡೀರ ಕಾಲ ಅವ್ರು ಪಟ್ಟುಕೆ ಬರೋ ಕಾಲ
ಗುರು ಅನ್ನಾ ಸುದ್ದಿ ಇನ್ನು ನಮುಗ್ಯಾಕೆ |

ಗುರು ಅನ್ನಾ ಸುದ್ದಿ ಇನ್ನು ನಮುಗಿಲ್ಲ ಬಿಜ್ಜಳ ದೊರೆಯೇ
ನೀ ರಾಜ್ಯ ಆಳ್ಕೊಂಡು ನಾಳೆ ತಿಳುಕ್ಕೊಪ್ಪ |

ಕೋಟಿ ಜಂಗುಮ್ರುನೆಲ್ಲ ಕುಲುಕೊಬ್ರು ಭಕ್ತರುನೆಲ್ಲ
ನೀ ಕಟ್ಸಾಳು ನಾವು ನೋಡ್ತೀವಿ |

ಅರವತ್ತಾರು ಬೀದ್ಗ ಆದಿ ಕಲ್ಯಾಣವ
ನೀ ಪರಿಪಾಲ್ನೆ ಮಡಾಪ್ಪ ನಾವ್ಹೋಗುತೀವಿ |

ವಮುಸ್ಕೊಂದೊಕ್ಕಾಲು ನಾವ್ ಗುರುವಾಗಿ ಇದ್ದುದ್ಕೆ
ನೀವಾಡ್ಬಾರ್ದಾಟ ಆಡಿದಿರಪ್ಪ | ೨೯೯೦

ಆಡಬಾರದ ಆಟ ನನ್ಗೆ ಮಾಡಬಾರದ ಕೆಲ್ಸ
ನೀವು ಕೊಡುಬಾರ್ದ ಕೊಲೆಯ ಕೊಟ್ರಲ್ಲೊ |

ಕೊಡುಬಾರ್ದ ಕೊಲೆಯ ಕೊಟ್ರಲ್ಲ ಬಿಜ್ಜಳ
ನಿಮ್ ಪಟ್ಟುದ್ದಾರವಾಗ್ಲಿ ಬದುಕ್ಕಪ್ಪ |

ಜಂಗುಮರ ಜರುದ್ ಕರ್ಮ ನಿಮುಗಿನ್ನು ಕಳಿದಿಲ್ಲ
ನಾವ್ ಹೋದ್ಮೇಲಿ ತಿಳುಕೊಳ್ಳಿ ಅದ್ರ ಮಾಯತ್ತು |

ಈ ಲಿಂಗಾಯುತ್ರ ಜರ್ದು ನೀವು ಭಂಗ ಪಡುತಿರಿ" ಎಂದು
ನನ್ನ ಸಂಗಾನ ಬಸವಣ್ಣ ನುಡಿದಾರು |

"ಈ ಕಾವೀ ಹೊತ್ತೋರ್ ಜರ್ದು ನೀವ್ ಕಾಡಾಯ್ತೀರಿ"
ಎಂದು
ನಮ್-ಸಂಗನ ಬಸವಣ್ಣ ನುಡಿದಾರು | ೩೦೦೦

"ಜೋಳ್ಗೆ ಹೊತ್ತೇರ ಜರ್ದು ನೀವ್ ಗೋಳಾಡ್ತೀರಿ" ಎಂದು
ನಮ್ ಕರ್ತು ಬಸವಣ್ಣ ನುಡಿದಾರು |

"ಹಂಗಂದರೇನಪ್ಪ ನನ್ಗುರುವೇ ಬಸವಣ್ಣ
ಸ್ಯಾಪ ಕೊಟ್ಬೇರೇನಪ್ಪ ನಮುಗೆಲ್ಲ |

ಸ್ಯಾಪಾವ ಕೊಟ್ಟುಟ್ಟು ನೀವು ಹೋದೀರ್ಯಾ ಬಸವಣ್ಣ
ನಮ್ ಪಾಪ ಕಳಿಯಾದು ಯಾವಾಗ?" |

"ನಿಮ್ ಪಾಪ ಕಳಿಯೋ ಮಾತ ನಾನೇನು ಬಲ್ನೆಪ್ಪ
ಮುಂದೆ ಸುಕುಪಡಿ ಹೋಗಿ ಬರುತೀನಿ" |

ಸತ್ಯವುಳ್ ಸರಣರಿಗೆ ಅವ್ರು ಎತ್ತಿ ಕೈಯ ಮುಗ್ದು
ಮತ್ತೆ ಬಸವಣ್ಣ ಹೊರುಟಾರು | ೩೦೧೦

ನೀಲಮ್ಮ ಒನುಗೂಡಿ ಅವುರ್ತಂಗಮ್ಮ ಕರುಕೊಂಡು
ಕಲ್ಯಾಣ ಬುಟ್ಟು ಕಡೆದಾರು |

ಅರವತ್ತಾರ್ಬೀದಿ ಜನುವೆಲ್ಲ ಮುತ್ತಿಗೆಯಾಗಿ
ನಮ್ ಕಾಪಾಡುವ ಕರ್ತು ಹೊರುಟಾರು |

ಎಲ್ಲಿಗೋದಿರಿ ಎಂದು ಅವುರೆಲ್ಲರು ಕೇಳಿದರು
ಇದಿಲ್ಲೆ ಉಳುಮಿಗೆ ನಾವು ಹೋಗ್ತೀವಿ |

ಬಾಳ ದೂರ ಇಲ್ಲ ಅದಿಲ್ಲೆ ಉಳುಮೆ ಅಂತ್ಹೇಳಿ
ಅವುರೆಲ್ಲರುಗು ಕರವ ಮುಗಿದಾರು |

ಸರಣ ಮಾತ್ಮರ ದೂರಿ ನಮ್ಮೂರ ಬಿಡಿಸಿದರೆಂದು
ನೀವು ಸುಕತ್ತಿ ಬಾಳಪ್ಪ ಬಿಜ್ಜಾಳ | ೩೦೨೦

ನಿನ್ನೊಟ್ಟೆ ತಣ್ಣಾಯ್ತುಪ್ಪ ಕೊಂಡುಗರ ಮಂಚಪ್ಪ
ಬಿಟ್ಕೋಯ್ತಾರೆ ಗುರುವು ಮಠುಮನೆಯ |

ಯಾವ್ ಕಷ್ಟ ಬಂದಾರು ಬಯಲಾಯ್ತಿತ್ತಲ್ಲಪ್ಪ
ಇನ್ ಬಯಲ್ ಮಾಡೋರ್ಯಾರ ಮಠುದಲ್ಲಿ |

ಇದಿಲ್ಲೆ ಊಳ್ಕೆ ಕಾಣ್ರೊ ಈಗ ಬರ್ತೀನಂತ್ಹೇಳಿ
ಮಾಯವಾಗೊರುಟೋದ್ರು ಬಸವಣ್ಣ |

* * *

ಮಂಗಳಾರತಿ ಎತ್ತಿ ಬೆಳಗಿ...
ಮಂಗಳೊ ಜಯ ಮಂಗಳೊ...|

ಆದಿ ಕಲ್ಯಾಣದಲ್ಲಿ ಏದ ಓದೀಸಿದವುಗೆ
ವಾದೀಸಿ ನರರೊಡನೆ ಒಡನಾಡಿದ ಪ್ರಭುವೀಗೆ | ೩೦೩೦

ನರರು ನನ್ನವರೆಂದು ಆನಂದ ಪಟ್ಟ ಮೂರ್ತೀಗೆ
ಜಾತಿ ಕುಲವಿಲ್ಲದೆ ಜಂಗುಮರ ಬಿಟ್ಟವರಿಗೆ |

ಒಕ್ಕುಳಕ್ಕಿ ಹಾಕಿ ಒಂದ್ಮಾನ ಬೇಳೆ ಹಾಕಿ
ಕೋಟಿ ಜಂಗಮರೀಗೆ ಊಟಕ್ಕೆರುವವುರೀಗೆ |

ಮಿಕ್ಕುದನ್ನವ ಕಲ್ಲುಬಂಡಿಯ ಕಟ್ಟಿ
ಕಲ್ಯಾಣ್ದ ಬಾಗುಲ್ಗೆ ಹೂಡಸ್ತುಂತ ನೀಲಮ್ಮ ತಾಯಿಗೆ |

ಗಂಡನ ಕಾಣಾದಾ ಗರ್ಭಿಣಿ ಆದೋಳ್ಗೆ
ಹರುಳಯ್ನ ಮನೆಯ ಹಿರುಳಿನ್ಹೋರಿ ಪಡುದೋಳ್ಗೆ |

ಹಿರುಳೀನ ಹೋರಿ ಚನ್ನಬಸವಣ್ಣನ ಪಡುದು
ಪ್ರಪಂಚುಕ್ಕೆ ಗೇದಿಕ್ಕೋಗೊ ಮಗನ
ಕೊಟ್ಟ ನಾಗಮ್ಮನಿಗೆ | ೩೦೪೦

ಬಿಜ್ಜಳನ ಸಂಮಾರ ಮಾಡಿ ಏಳು ತಿಂಗಳೀಗೆ
ಬೆನ್ ಮಚ್ಕದಿಂದ ಹುಟ್ಟಿ ಬಂದವನಿಗೆ |

|| ಮಂಗಳೋ ಜಯ ಮಂಗಳೋ || ೩೦೪೩

ನೀನ್ಯಾರ ಮಗನೋ ಚನ್ನಬಸವ

ಕಡಲೆಯ ಕಾಳಿನಂಗೆ ಕಡೆದಾರೆ ಬಸವನ
ಕೊಡಸೀಗೆಲವುರೆ ಶರಣರು - ಶಿವಗಂಗೇರು
ಕಡೆದಾರೆ ಚನ್ನಬಸವಣ್ಣನ |

ಹೆಸರುಕಾಳಿನಲ್ಲಿ ಎರೆದಾರೆ ಬಸವನ
ಹರಳಳ್ಳೀಲವುರೆ ಶರಣಾರು - ಶಿವಭಕ್ತ
ಎರೆದಾರೆ ಚನ್ನಬಸವನಾ |

ಉದ್ದಿನಕಾಳಲ್ಲಿ ತಿದ್ದಾರೆ ಬಸವನ
ಉದ್ದೂರಲ್ಲವುರೆ ಶರಣಾರು - ಶಿವಭಕ್ತಾರು
ತಿದ್ದಾರೆ ಚನ್ನಬಸವಣ್ಣನ |

ಕೋಡನು ತಿರುವೂತ ಬಾಲಾವ ಬೀಸುತ
ಬಸವ ಬಂದಾನು ಬಣವೀಗೆ - ಮೇಯ್ಲಕ
ನೀನ್ಯಾರ ಮಗನೋ ಚನ್ನಬಸವ |

ಮಡಿವಾಳ ಮಾಚಿಪ್ಪ

ಸುವ್ವಾ ಬಾ ಚನ್ನಬಸವಯ್ಯ ಸುವ್ವಿ | ಸೊಲ್ಲು |

ಬಸವಣ್ಣ ಹುಟ್ಟುವಾಗ ಬಿಸಲಿಲ್ಲ ಬೆಂಕಿಲ್ಲ
ಆಲಾದ ಮೂಲ ಸೊಸುಮರ |

ಆಲಾದ ಮೂಲ ಸೊಸುಮರ ಹುಟ್ಟುವಾಗ
ಅಲ್ಲಿ-ಹಸುಮಕ್ಕಳ ಗಲಗೆ ಮೊದಲಿಲ್ಲ |

ಬಸವರಾಯನ ಮಡದಿ ಹುಸಿಯನಾಡುವಳಲ್ಲ
ಹಸುದು ವಾರವೆಲ್ಲ ನೆರಳಲ್ಲಿ |

ಹಸುದು ವಾರವೆಲ್ಲ ನೆರಳಲ್ಲಿ ನೀಲಮ್ಮತಾಯಿ
ಹಸುದು ಬಂದ ಜಂಗುಮರಿಗೆ |

ಹಸುದು ಬಂದ ಜಂಗುಮಕೆಲ್ಲ ಎಡೆಮಾಡಿ
ಮುಕ್ತಿ ಪಡೆದ ಶರಣೆ ಶಿವಶರಣೆ | ೧೦

ಬಡಗ ಬಾಗಿಲ ಮಠವು ಅದು ಬೆಡಗಿನ ಚಂದ್ರಸಾಲೆ
ಮಧ್ಯ ಬಸವಣ್ಣೋರ ಗುರುಪೀಠ |

ಸುತ್ತಾ ನೂರೊಂದು ಲಿಂಗಾದ ಮಧ್ಯದಲ್ಲಿ
ಬಸ್ವಣ್ಣ-ಹೆಚ್ಚಾಳದಿಂದ ಕುಂತವುರೆ |

ಬಸವಣ್ಣನ ಗುರುಮಠಕೆ ನೂರೊಂದು ಜಂಗುಮರು
ಅವುರೆಂಥ ಶರಣಾರು ಮಹಿಮಾರು |

ಆದಕ್ಕೆ ಮಾರಯ್ಯ ವಾದಕ್ಕೆ ಚನ್ನಯ್ಯ
ಇಂಥ-ಜಂಗಮರು ಅಲ್ಲಿ ಇರುವಾರು |

ಮೂಗುನಲ್ಲಿ ನೋಡುದರೆ ಮೂಗುತ್ತ ಪಡೆದವರು
ಕಣ್ಣಲ್ಲಿ ನೋಡುದರೆ ಕಿರುಜೇನುಗೂಡು ಕಟ್ಟಿದವರು ೨೦

ನೆತ್ತೀಮ್ಯಾಲೆ ನೋಡುದರೆ ಮತ್ತಿ ಮರ ಬೆಳದವರು
ಅಂಗ್ಯೆ ನೋಡುದರೆ ಹೊಂಗೇ ಮರ ಪಡುದವರು

ಗಡ್ಡದಲ್ಲಿ ನೋಡಿದರೆ ಗೀಜುಲಕ್ಕಿಗೂಡು ಕಟ್ಟಿದೋರು
ಅಂಗಾಲ ಜಡೆಯವರು
ಮುಂಗಾಲ ಜಡಿಯವರು -

ಇಂತಿಂತ ಸರಣ ಮಾತ್ಮರಲ್ಲಿಗುವಾರು |

ಕಲ್ಯಾಣ ಪಟ್ಟಣದಲ್ಲಿ
ಏಳೇಳು ಹದಿನಾಲಕ್ಕೂ ಬೀದಿಗಳುಂಟು
ಹದಿನಾಲಕ್ಕೂ ಬೀದಿಗೂ
ಮುಖ್ಯರಾದವರು ಯಾರಪ್ಪಾಂದ್ರೆ - ೩೦

ಅಲ್ಲಿ ಬಿಜ್ಜಳರಾಯುಂಗೆ ದೊರೆತಾನ |

ಬಿಜ್ಜುಳರಾಯುಂಗೆ ದೊರೆತನವಾದರೆ
ಕುಂಡುಕಾರ ಮಂಚಣ್ಣುಗೆ ಮಂತ್ರುತ್ವ |

ಅಲ್ಲಿ ಶರಣಮಾತ್ಮರು ಯಾರ್ಯಾರಪ್ಪಾಂದ್ರೆ -

ಹೊಲೇರ ಹೊನ್ನಯ್ಯ ಶರಣ ಮಾದಾರ ಚನ್ನಯ್ಯ ಶರಣ
ಅಂಬುಗರ ಚೌಡಯ್ಯ ಘನಶರಣ |

ಕುರುಬರ ಮಾಕಯ್ಯ ಒಕ್ಕುಲುಗರ ಮುದ್ದಯ್ಯ
ಡಂಬುಕರ ಕ್ಯಾತಯ್ಯ ಘನಶರಣ |

ಒಡ್ಡರ ತಿಮ್ಮಯ್ಯ ಸೆಟ್ಟಿಗಾರ ಪುಟ್ಟಯ್ಯ
ತುರುಕರ ಪೀರಯ್ಯ ಒಬ್ಬ ಘನಶರಣ | ೪೦

ಆದ್ರೂ ಬಸವಣ್ಣನವರ ಹದ್ದುಗೆಯೊಳುಗೆ
ಇಂತಿಂತಾ ಸರಣ ಮಾತ್ಮುರೆಲ್ಲ ಇದಾರೆ-

ಕೋಟಿಗೊಬ್ಬರು ಶರಣ ಕುಲಕೊಬ್ಬ ಭಕ್ತರು
ನಂದಿ ಕಲ್ಯಾಣದಲ್ಲಿ ಇರುವಾರು |

ಬಸವಣ್ಣನವರ ಕಲ್ಯಾಣದಲ್ಲಿ ಏನಪ್ಪಾಂದ್ರೆ
ಅಲ್ಲಿ ಬಿಜ್ಜಳರಾಯನ ತಲೆಯೊಳಗೆ
ಬಸವಣ್ಣನವರ ದರಬಾರನಲ್ಲಿ
ಕೋಳಿಗೆ ಲಿಂಗ ಕೊತ್ತಿಗೆ ಲಿಂಗ
ನಾಯಿಗೆ ಲಿಂಗ ನರೀಗೆ ಲಿಂಗ
ಆಡಿಗೆ ಲಿಂಗ ದನಕರ ಕುರೀಗೆ ಲಿಂಗ ೫೦
ಬಸುವಣ್ಣನವರ ಸಂದಾನದಲ್ಲಿ
ಕಲ್ಯಾಣಪಟ್ಟುವೆಲ್ಲ ಲಿಂಗುಮಯವಾಗೈತೆ.

ಬಸುವಣ್ಣನವರು
ತುಂಬುದ ಸ್ವಾಮಾರ ಮಾಪ್ಪಣ್ಣ ಕಾಲದಲ್ಲಿ
ಮುಂದಲ ಪಾದುಕ್ಕೆ ಮುನ್ನೂರು ಜಂಗ್ ಧರ್ಸಿ
ಹಿಂದುಲ ಪಾದುಕ್ಕೆ ೞನ್ನೂರು ಜಂಗು ಧರ್ಸಿ
ಮುಡುಪನ್ನು ಸುತ್ತುಕೊಂಡು
ಹಣೆಗೆ ಮೈ ಕೈಗೆ ಕುತ್ತಿಗ್ಗೆ ಈಬುತ್ತಿ ಧರುಸ್ಕೊಂಡು
ಭಕ್ತರ ಮನೆಗೆ -

ಅವ್ವು ಭಿನ್ನ ಅಳಿವುದಕೆ ಸ್ವಾಮಿ ಬರುತಾರೆ | ೬೦

ತುಂಬುದ ಸ್ವಾಮಾರ ಭಕ್ತರ ಮನೆಯಲ್ಲಿ ಬಿನ್ನಾಳಿಯದಕೆ
ಶಿವಕಂತೆಯನ್ನು ಅಳುದ್ರಲ್ಲ
ಶಿವಕಂತೆಯಲ್ಲಿದ್ದ ಪರಸಾದವಾದ ಪರುಸಾದವೆಲ್ಲ
ಶಿವನ ಸಾಪದಿಂದ ಏನಾಗದಪ್ಪ ಅಂದ್ರೆ-

ಒಂದು ಸಾವುರ ತಿಗಣೆ ಒಂದು ಸಾವುರ ನಸುರು
ಒಂದು ಸಾವುರ ಮೊಟ್ಟೆ ಅಲ್ಲುಂಟು |

ಒಂದು ಸಾವುರ ಹೇನು ಒಂದು ಸಾವುರ ಚಿಗಟೆ
ಒಂದು ಸಾವುರ ನತ್ತು ಅಲ್ಲುಂಟು |

ಲಕ್ಷಾದ ಮ್ಯಾಲೆ ತೊಂಬತ್ತೇಳು ಕೋಟಿ
ಜೀವ ಜಂತಿ ಅಲ್ಲಿ ಸೇರೋಯ್ತು | ೭೦

ಆದ್ರೆ ಬಸುವಣ್ಣ ಶಿವಕಂತೆಯಲ್ಲಿರುವಂತ
ಜೀವಜಂತಿಗಳನ್ನೆಲ್ಲ ನೋಡಿದರು
"ಆಹ್ಹಾ ಕೆಟ್ನಲ್ಲ
ನನ್ನ ಸತ್ಯ ನನ್ನ ಸಾಸವೆಲ್ಲ
ನನ್ನ ತಲೆವ್ಯೊಳಗೆ ಮರೆಯಾಯ್ತುದೊ ಏನೋ ಕಾಣ್ಣಿಲ್ಲ"ಂತ-
ಚಿಂತೆ ಮಾಡುವುರೆ ಕರುತು ಬಸವಣ್ಣ |

ಬಸವಣ್ಣನೋರು ಯೋಚುಣೆ ಮಾಡ್ತಿದ್ರೆ
ತಂಗೆ ನಾಗಮ್ಮ ಬಂದುಲು

'ಅಣ್ಣಯ್ಯಾ-

ಯಾರು ಬೈದರು ಅಣ್ಣ ಯಾರು ಹೊಡೆದರು ಅಣ್ಣ ೮೦
ಯಾರೇನಂದರೊ ನಿನಗೆ ಬಸುವೇಸ |

ಅಣ್ಣ ಬಸುವಣ್ಣ
ಯಾತುಕ್ಕಾಗಿ ಅನೇಕುವಾದಂತ ಯೋಚಿಣೆ
ಮಾಡ್ತಿದ್ದೀರಲ್ಲ'

'ತಂಗೆ ನಾಗಮ್ಮ
ನಮ್ಮ ತಂದೆ ತಾಯ್ಗಳು
ನಮ್ಮ ತಾಯಿ ಕಲ್ಯಾಣಮ್ಮ ತಂದೆ ಕಲ್ಯಾಣದೇವ್ರು
ಅವ್ರುರ ಸಾಸ ಕೆಟ್ಟಿರ್ನಿಲ್ಲ
ನನ್ನ ಸತ್ಯ ನನ್ನ ಸಾಸ ಕೆಟ್ಟಿದೆ ಅಂತ್ಹೇಳಿ
ಯೋಚಿಣೆ ಮಾಡ್ತಿದ್ದೀನಿ'

'ಅಣ್ಣಯ್ಯಾ
ಹಿರೀಕರು ಏನು ಹೇಳಿದ್ದಾರೆ ಗೊತ್ತೆ ? ೯೦
ಜೈವಿರಗಂಟ ಬೈವಿಲ್ಲಾಂತ
ನನ್ನ ಸಂಗಡದಲ್ಲಿ ನಿನ್ನ ಚಿಂತೆಯನ್ನು ಹೇಳು'

'ನಾಗಮ್ಮ ಏನೂ ೞಲ್ಲ
ನಾನು ಹೋದ ಸ್ವಾಮಾರ
ಭಕ್ತರ ಮನೆ ಬಿನ್ನಾಳಿಯದಕೆ ಹೋಗಿದ್ನಲ್ಲ
ಮಡಿ ಶಿವುಕಂತೆ -

ಮೈಲಿಗೆಯಾಯ್ತಮ್ಮ ನಾಗಮ್ಮ|'

'ಅಣ್ಣಯ್ಯ
ಆ ಮೈಲಿಗೆ ಶಿವುಕಂತೆಯನ್ನು ಮಡಿ ಮಾಡಿಸೋದ್ಕೆ
ನಿನ್ನಿಂದಾಗೋದಿಲ್ವೆ ?

'ತಂಗಮ್ಮ ೧೦೦
ಆ ಮೈಲಿಗೆ ಶಿವುಕಂತೆಯನ್ನು ಮಡಿ ಮಾಡ್ಯೋರ್ಯಾರು ಅಂದ್ರೆ
ಮಡುವಾಳ್ ಸೆಟ್ಟಿಗಳು ಆಗಬೇಕೇ ಹೊರ್ತು
ಮತ್ಯಾರಿಗೂ ಆಗದಿಲ್ಲ-

ಆದ್ರೆ-ಮಾಚಯ್ನ ಪತ್ನೆ ಮೊದಲಿಲ್ಲ' |

'ಅಣ್ಣಯ್ಯ ಮಾಚಿಪ್ಪ ಪತ್ತುವೆ ಮೊದಲಿಲ್ಲ
ಅಂತಿದೀರಲ್ಲ
ನಮ್ಮ ಕಲ್ಯಾಣದಲ್ಲಿ
ಮಡಿವಾಳ್ ಮಾಚಿಪ್ಪನರು ೞಲ್ವೆ?'

'ತಂಗ್ಯಮ್ಮ
ಇತ್ತಿತ್ಗೆ ಪತ್ತನೇ ಇಲ್ಲ ಕಣಮ್ಮ'

'ಅಣ್ಣಯ್ಯ, ಮಾಚಪ್ಪನವರು
ಹೋಗೋದು ಬರೋದು ಒಬ್ರಿಗೂ ಗೊತ್ತಿಲ್ಲ
ಆದ್ರೂ ಕತೆ ಬಾಗಲಲ್ಲಿರುವಂತ ಕಟುಗರ
ಸಂಗಪ್ಪನವರಿದ್ದಾರಲ್ಲ'

'ಎಲ್ಲಿ?'
'ನಿಮ್ಮ ಗುರುಮಠದಲ್ಲಿ. ಅವುರ್ಗೆ-

ಆಗ್ಗೆ ಮಾಡಯ್ಯ ಬಸವಣ್ಣ' |

'ತಂಗಮ್ಮ ಏನಂತ ಆಗ್ಗೆ ಮಾಡಬೇಕು ?'

'ಅಣ್ಣಯ್ಯ ಏನಂತ ಆಗ್ಗೆ ಮಾಡಬೇಕು ಅಂದ್ರೆ-

ಎಲೊ ಕಟುಗ್ರ ಸಂಗಪ್ಪ
ಮಡುವಾಳ ಮಾಚಪ್ಪ ಏನಾದನು
ಕತ್ತೆ ಮ್ಯಾಲೆ ಹೇರ್ ಹೇರ್ಕೊಂಡೋಯ್ತಾ ಇದ್ರೆ
ಎಲೋ ಮಾಚಯ್ಯ ಬಸವಣ್ಣನವರು ಬರಮಾಡ್ತಿದ್ದಾರೆ
ನಂದೀ ಗುರುಮಠುಕೆ ಬಾ ಅಂತ್ಹೇಳಿ
ಕಟುಗರ ಸಂಗಪ್ಪನ ಕೈನಿಂದ
ಮಾಚಪ್ಪನವರ ಬರ್ಮಾಡ್ಕೊ' ಅಂದವುರೆ.
ಕಡೆ ಬಾಗ್ಲಲ್ಲಿರುವಂತಾ ಕಟುಗರ ಸಂಗಪ್ಪ
ಬಸವಣ್ಣ ಕೈಬೀಸಿ ಕರುದುರು
ಕಟುಗರ ಸಂಗಪ್ಪ ಸಿರುಬಾಗಿ ನಿಂತಿದ್ದಾರೆ
'ಅಣ್ಣಾವುರು ಯಾತುಕ್ಕೋಸ್ಕರ ಬರುಮಾಡ್ಕೊಂದ್ರಿ'
'ಅಂತಾದ್ಯೇನೂ ಇಲ್ಲ ಕಾಣೊ ನನಕಂದ ಕಟುಗ್ರ ಸಂಗಪ್ಪ
ಎಲ್ಲಿಯಾದ್ರೂ ಮಾಚಪ್ಪನವರು
ನಿನ್ನ ಕಣ್ಣುಗೆ ಬಿದ್ದಿದ್ದೆ ಆದ ಪಕ್ಷುದಲ್ಲಿ-

ಅವ್ರ-ನಂದೀ ಗುರುಮಠಕೆ ಬರಮಾಡು |

ಬಸವಣ್ಣನ ಮಾತ ಕೇಳವುನೆ ಕಟುಗಾರಿ
ಬಾಳ ಸಂತೋಸ ಪಡುತಾನೆ |

ಕಟುಗ್ರ ಸಂಗಪ್ಪ ಅಂದ್ರೆ ಬಾಳ ಸರಣನು
ಅಣ್ಣಾವುರ ಮಾತುಗೆ ಎರಡ್ನೇದ ಆಡನಿಲ್ಲ
ಆದರೂ ಕಟುಗರ ಸಂಗಪ್ಪನವರು
ಕಡೇ ಬಾಗುಲ ಕಾವುಲಾಗಿ ನಿಂತವುರೆ
ಮಡುವಾಳು ಮಾಚಪ್ಪ ಮನೆಯಲ್ಲಿ ಸುಕುನಿದ್ರೆಯನ್ನು
ಮಾಡ್ತಿದ್ದಾರೆ-

ಮುಂಗೋಳಿ ಕೂಗಿದೊ ಮೂಡು ಕೆಂಪೇರಿದೊ
ಮಡದಿ ಮಲ್ಲುಗದೇವ್ಯ ಕರಿದಾರು |

'ಕಾಕೋಳಿ ಕೂಗಿದೊ ಲೋಕ ಬೆಳುಗಾದೊ
ಏಳ್ಚಿಣ್ಣೆ ನೀನು ಮಲ್ಲುಗದೇವಿ' |

ಮಡದಿಯಾದಂತ ಮಲ್ಲುಗದೇವಿ ಎದ್ದಳು
'ಎಲೋ ಮಲ್ಲುಗದೇವಿ
ಈ ಗ್ರಾಮ ಅಂದ್ರೆ ತುಂಟುಗ್ರಾಮ
ಇಲ್ನೋಡು ಬಿಜ್ಜಳರಾಯನ ತಲೆಯೊಳಗೆ ನನಗೆ
ಎಂತೆಂಥಾ ಶಿಕ್ಷೆ ಕೊಟ್ಟಾರೋ ಗೊತ್ತಿಲ್ಲ
ಹೋಗಕೆ ಬರಾಕೆ ತೀಟೆ ಮಾಡ್ತಿದಾರೆ
ಆದಕ್ಕೋಸ್ಕರ ಮುಂಜಾವಕೆ ನಾನು ಎದ್ದಿದೀನಿ
ಹರೀವಂತ ಕಾಳಿಂದಿನ ಮಡೀಗೆ ನಾನು ಹೋಯ್ತಿದೀನಿ
ಮಗೀನ ಓದಾಕೆ ಕಳಗುಬುಟ್ಟು,
ನನಗೆ ಊಟ ತರಬೇಕು' ಅಂತ್ಹೇಳಿ
ಮಡುವಾಳ ಮಾಚಪ್ಪನವರು-

ಮಡದೀಗೆ ಬುದ್ಧಿ ಹೇಳುತಾರೆ |

ಕಂಡವರ ಮನೆ ಮುಟ್ಟುತಟ್ಟುವ ಬಟ್ಟೆ ಇತ್ತಲ್ಲ
ಅದುನ್ನ [illegible]ನ್ನು ಕಟ್ಟುಕೊಂಡು-

ಕತ್ತೆ ಮ್ಯಾಲೆ ಕೌದೀಯ ಬಿಗಿದಾನು |

ಮಡಿವಾಳ ಮಾಚಪ್ಪನವರು
ಮಡದಿಗೆ ಬುದ್ಧಿವಾದ ಹೇಳುಬುಟ್ಟು
ತಲೆಗೆ ಬಟ್ಟೆಯನ್ನು ಕಟುಕೊಂಡು ಹೊರಟರು
ಮುಂದೆ ಮುಂದೆ ಕತ್ತೆಯು ಹಿಂದೆ ಹಿಂದೆ ಮಾಚಯ್ಯ
ಹರಿವ ಸಮುದ್ರಕೆ ಬರುತಾನೆ |

ಮಡುವಾಳ್ ಮಾಚಪ್ಪನವರು
ಹೋಗಬೇಕಾದರು ಬಸವಣ್ಣನವರ ಗುರುಮಠದ
ಮುಂಭಾಗದಲ್ಲಿಯೆ
ಬರಬೇಕಾದ್ರೂ ಅದೇ ರಸ್ತೇಲೀಯೆ
ಆದ್ರೂ ಕೋಳಿ ಕೂಗಿದ ಪ್ರಾತಂಕಾಲದಲ್ಲಿ-

ನಂದಿ ಗುರುಮಠದಗಾಣೆ ಬರುತಾನೆ |

ಬಸವಣ್ಣನವರ ಗುರುಮಠದ ಮುಂಭಾಗದಲ್ಲಿ
ಕಟುಗರ ಸಂಗಪ್ಪ ಕಾವುಲಾಗಿದ್ನಲ್ಲ
ಕತ್ತೆ ಸಬ್ತವನ್ನು ಎರಡು ಕಿವೀಕರ್ನದಿಂದ ಕೇಳ್ಬುಟ್ಟು-

ಎಚ್ಚರವಾದನೋ ಶಿವಶರಣ |

ಬರುವಂತಾ ಮಡುವಾಳ್ ಮಾಚಪ್ಪ ನೋಡುದ್ರು
ಯಾರು ? ಕಟುಗಾರಿ ಸಂಗಯ್ಯ
'ಒಹ್ಹೊ ಬಸವಣ್ಣನವರು ತಿಳಿಸಿದ್ರು
ಅದೇ ಜಮಯ್ಕೆ ಮಾಚಪ್ಪನವರು ಬರ್ತಿದ್ದಾರೆ
ಮಡುವಾಳ ಮಾಚಪ್ಪನವರ್ಗೂ ತಿಳಿಸೋದ ತಿಳೀಸ್ ಬುಡುವಾ
ತಡಿಯಪ್ಪ' ಅಂತ್ಹೇಳಿ
ಮಧ್ಯ ರಸ್ತೇಲಿ ನಿಂತ್ಕೊಂಡು -

'ನಿನಗೆ ಶರಣು ಕಾಣಯ್ಯ ಮಾಚಯ್ಯ' |

ಮಡುವಾಳ ಮಾಚಪ್ಪನೋರು
ಕಟುಗ್ರು ಸಂಗಪ್ಪನವರಿಗೆ ಸರಣು ಮಾಡಿದ್ದಾರೆ
ಆಗ ಕಟುಗ್ರ ಸಂಗಪ್ಪ
'ಅಯ್ಯಾ ಮಾಚಯ್ಯ
ಯಾಕೋ ಕಾಣೆ ದೊಡ್ಡೋರು ಬಸವಣ್ಣನವರು
ನಿಮ್ಮನ್ನ ಕಾಣಬೇಕೂಂತ್ಹೇಳಿ ನನಗೆ ತಿಳಿಸಿದ್ರು
ಅದೇ ಸಮಯಕ್ಕೆ ಸಿಕ್ಕಿದ್ದೀಯೆ
ರಾಜಭೀತಿ ಗುರುಭೀತಿ ಅನ್ನೋದು
ಮಹಾದೊಡ್ಡದಲ್ಲವೆ ?
ಅದುಕ್ಕೋಸ್ಕರ ಸೊಲ್ಪ ಬಂದಿದ್ದು ಹೊರ್ಡಿ ಗುರುವೆ'

ಕಟುಗ್ರು ಸಂಗಪ್ಪನವರ ಮಾತ ಮಾಚಪ್ಪನವರು ಕೇಳಿ
"ಅಹ್ಹಾ ಬಸವಣ್ಣನೋರು ಭೂಲೋಕುಕ್ಕೆ ದೊಡ್ಡೋರು
ನಾವು ಹೋಗದೆ ಇದ್ ಮ್ಯಾಲೆ
ಬಸವಣ್ಣೋರು ಏನ್ ತಿಳ್ಕೊಂಡರೊ ಗೊತ್ತಿಲ್ಲ
ಅವರು ಮಾತ್ಕ್ಕೂರು
ನಾನು ಕಂಡುತ್ಯಾಗಿ ಹೋಗಿದ್ದು ಬರಬೇಕೆಂ[illegible]ಾಗಿ
ಆ ಕತ್ತೆಗಳನ್ನು ಕಡೇ ಬಾಗ್ಲಿ[illegible]
ಕಟುಗ್ರು ಸಂಗಪ್ಪನವರೆ [illegible]ಳ್ಬುಟ್ಟು-

'ಸಂಗಪ್ಪೋರೆ ನಾನು ಹೋಗಿ
ಬಸವಣ್ಣೋರ ಮಾತಾಡಿಸ್ಕೊಂಡು ಬರೋಗಂಟ-
ನೀನೆ ಕಾವುಲಾಗಿ ಇರಬೇಕು ಮಾಚಪ್ಪ |

ನೀವೇ ಕಾವುಲಾಗಿರ್ಬೇಕು' ಅಂತ್ಹೇಳಿ
ಮಾಚಪ್ಪನವರು ಬುದ್ದಿ ಹೇಳ್ಬುಟ್ಟು-

ಗುರುಮಠಕೆ ಸಾಗಿ ಬರುತಾರೆ |

ಸೂರ್ಯ ರುದಯ ಆಗೋ ಹೊತ್ನಲ್ಲಿ ಬಸವಣ್ಣೋರು ಎದ್ದು

ಸೂರ್ಯಂಗೆ ಅರಗಿನ್ನು ಕೊಡ್ತಾ ನಿಂತಿದ್ರು -

ಬಂದನಲ್ಲ ಮಾಚಯ್ಯ ನಿಂದನಲ್ಲ ಬಳಿಯಲ್ಲಿ
ವಂದೀಸಿ ಕರವ ಮುಗಿದಾನು |

ಮಡುವಾಳ ಮಾಚಪ್ಪನವರು ದೊಡ್ಡಬಸವಣ್ಣನವರ
ಸನ್ನುದಾನದಲ್ಲಿ ನಿಂತ್ಕೊಂಡು |

'ಎಂದು ಇಲ್ಲದ ಗುರುವೆ ಇಂದೇಕೆ ಕರಸಿದಿರಿ
ಕರಸೀದ ಬಗೆಯ ಒಡೆದ್ಹೇಳಿ' |

'ಅಹ್ಹಾ ಮಾಚಪ್ಪನವರೆ
ಅಪೂರೂಪವಾಗಿ ಬಂದಿದೀರಿ ಸ್ವಾಮಿ
ನಿಮ್ಮನ್ನ ಯಾತುಕ್ಕೆ ಬರುಮಾಡ್ಕೊಂಡಿದ್ದೀವಿ ಅಂದರೆ
ನಿನ್ನೆ ತುಂಬುದ ಸೋಮವಾರ
ನನ್ನ ಭಕ್ತರ ಮನೆಗೆ ಶಿವಕಂತೆಯನ್ನು ತಕ್ಕಂಡು
ಬಿನ್ನಾಳಿಯದ್ಕೆ ಹೋಗಿದ್ದೆ
ಒಂದು ಮಡಿಶಿವುಕಂತೆ ಮೈಲಿಗೆ ಆಗಿರುವುದು-

ನೀವು-ಮಡಿಮಾಡಿ ತನ್ನಿ ಘನಶರಣ |

ನಾನು ಕೊಟ್ಟಂತ ಶಿವುಕಂತೆಯನ್ನು ಮಡಿಮಾಡಿ
ಕೊಟ್ಬುದ್ದೇ ಆದರೆ -

ನಿನ್ನಂತ ಘನಶರಣ ನಿನ್ನಂತ ದುಡಭಕ್ತ
ಕಲ್ಯಾಣದಲ್ಲಿ ಇನ್ನು ನನಗಿಲ್ಲ' |

ಬಸವರಾಯರ ಮಾತ ಕೇಳವ್ನೆ ಮಾಚಪ್ಪ-

ಅವ್ನು-ಮನಸಲ್ಲಿ ಹೆಚ್ಚಾಳ ಪಡುತಾನೆ
ಅವ್ನು-ಬಾಳ ಸಂತೋಸ ಪಡುತಾನೆ |

'ಒಹ್ಹೊ ಗುರುವೆ ಒಂದಲ್ಲ ಒಂಬತ್ತಿದ್ರೂ ಕೊಡಿ
ಶಿವಕಂತೆಯನ್ನು ಮಡಿಮಾಡಿ ತಂದು
ಮಠುಕ್ಕೊಪ್ಪು ಸ್ತೀನಿ' ಅಂದುನು ಮಾಚಪ್ಪ
'ಮಡುವಾಳ ಮಾಚಪ್ಪ
ನೀನು ಮಡಿ ಮಾಡೋದು ನಂಗೂ ಗೊತ್ತು ತಾನೆ ?
ನಿಂಗೆ ಚಂಚಕಾರ ಕೊಡ್ತೀನಪ್ಪ ಯಾಕೆ?'
ಎಲ್ಯೆ ಮಡುವಾಳ ಮಾಚಪ್ಪ
ಬಸವಣ್ಣೋರು ಬರುಮಾಡ್ಕೊಂಡು
ಬಟ್ಟೆ ಚಾಕ್ರಿ ಮಾಡುಸ್ಕೊಂಡ್ರು ಅಂತ ಕೋಪುಸ್ಕೊಳ್ತಿಯ-

ಅದಕೆ-ಚಂಚ್ಕಾರ ಮೊದಲೆ ಕೊಡುವೇನು |

ತಕ್ಕಪ್ಪಾ' ಅಂತ್ಹೇಳ್ಬುಟ್ಟು
ಹೊಸ ಮೊರ್ಕೆ ಐದು ಪಾವಕ್ಕಿ ಐದು ಹೋಳು ಬ್ಯಾಳೆ
ಐದಚ್ಚು ಬೆಲ್ಲ
ಐದು ಕಂಟ್ರಿ ಹಣ ಈರುಳ್ಳಿ ಬೆಳ್ಳುಳ್ಳಿ ಉಪ್ಪು
ಹುಣ್ಸೆಹಣ್ ಸ್ಮೆತುವಾಗಿ
ಒಂದು ಹೊಸ ವಲ್ಲಿಯನ್ನು ಮಡಗಿ
ಗಂಧದ ಕಡ್ಡಿಯನ್ನು ಹಸ್ಸಿ-
ಬಸ್ವಣ್ಣ-ಚಂಚ್ಕಾರವನ್ನು ಕೊಡುತಾರೆ |

ಬಸುವಣ್ಣೋರು ಚಂಚ್ಕಾರವನ್ನು
ಮಾಚಪ್ಪನವರ ಕೈಲಿ ಕೊಡ್ತಿದ್ದಾರೆ-

ಮುಂದೆ ಬರುವುದ ಕಾಣ್ದೆ ಮಡುವಾಳ ಮಾಚಯ್ಯ
ಎರಡು ಕರವೊಡ್ಡಿ ಶರಣ ಈಸುಕೊಂಡ |

ಮಡಿವಾಳ ಮಾಚಪ್ಪನವರು
ಅಕ್ಕಿ ಬ್ಯಾಳೆಯನ್ನು ಪೊಟ್ಟಣಕಟ್ಟಿ ತನ್ನ ಕಂಕುಳ್ಗೆ ಎರೀಕೊಂಡು
ಅಲ್ಲಿ ನೆಗುನೆಗ್ತಾ ಮಾತಾಡ್ತಾ ಇದಾನೆ
'ಅಣ್ಣಾವ್ರೇ
ನಮುಗೆ ಚಂಚ್ಕಾರ ಬಂದೋಯ್ತು'
ನಿಮ್ಮ ಮೈಲ್ಗೆ ಜೋಳ್ಗೆ ನನಗೆ ಬರನಿಲ್ಲ-

ಮೈಲಿಗೆ ಶಿವಕಂತ್ಯಾ ಕೊಟ್ಟಾರೆ ಬಸವಣ್ಣ
ಹೆಚ್ಚಾಳದಿಂದ ಮಡಿಯ ಮಾಡುವೇನು |

ಬಸವಣ್ಣಾವ್ರೆ
ನಿಮ್ಮ ಶಿವಕಂತ್ಯಾ ಸೀಗ್ರುದಲ್ಲಿ ಕೊಡಿ
ನಾನು ಮಡಿಮಾಡಿ ತಂದು ಕೊಡ್ತಿದ್ದೀನಿ'

ಮಡಿವಾಳ ಮಾಚಪ್ಪನವರ ಮಾತನ್ನು ಕೇಳಿ
ಬಸವಣ್ಣನವರು ಹೇಳ್ತಿದ್ದಾರೆ |

'ನನದೊಂದು ಮಾತು ಕೇಳು ಘನಶರಣ ಮಾಚಯ್ಯ
ಶಿವಕಂತೆ ತೂಗಿ ಕೊಡಬೇಕು |

ಶಿವಕಂತೆಯನ್ನು ತೂಗಿ ಎಷ್ಟು ತೂಕ ಇದ್ದದು
ಎಂಬುದನ್ನು
ನೋಡಿ ಕೊಡಬೇಕು ಮಾಚಪ್ಪ' ಅಂದರು
ಬಸವಣ್ಣವರಾಡಿದ ಮಾತ

ಮಾಚಪ್ಪನವರು ಎರಡು ಕಿವೀಕರ್ನದಲ್ಲಿ
ಕೇಳ್ಬುಟ್ಟು ನೆಗ್ತಾ ನಿಂತಿದ್ದಾರೆ |

'ಬಸವರಾಜರೆ
ಯಾರಾದ್ರೂ ಪ್ರಪಂಚದಲ್ಲಿ
ಬಟ್ಟೆ ಅನ್ತಕ್ಕದ್ದನ್ನ ತೂಕ ಮಾಡೋದುಂಟೆ?'

'ಅಪ್ಪಾ ಮಡಿವಾಳ ಮಾಚಯ್ಯ
ನಿನ್ನ ಕಣ್ಣದೆ ಅದು ಬಟ್ಟೆ ಅನ್ನೋದು ಕಾಣ್ತಾ ಅದೆ
ಆದ್ರೆ ಘನಶರಣ
ಆ ಜೋಳಿಗೆಯಲ್ಲಿರುವಂತ-
ಜೀವ್‌ರಾಸ್ಯ ನಿನಗೆ ಗೊತ್ತಯ್ಯ?' |

'ಸ್ವಾಮಿ, ಜೋಳಿಗಯೊಳ್ಗೆ ಜೀವರಾಸಿ ಉಂಟಾ?'

'ಮಡುವಾಳ ಮಾಚಪ್ಪ
ಆ ಜೋಳ್ಗೇಯೊಳಗಿರುವಂತಾ ಮಿಕಾ ಹೇಳ್ತೀನಿ ಕೇಳು-

ಒಂದು ಕೋಟಿ ತಿಗಣೆ ಒಂದು ಕೋಟಿ ಚಿಗಟೆ
ಒಂದು ಕೋಟಿ ನಸುರು ಅಲ್ಲಿ ಹಡದ್ಯೆತೆ |

ಒಂದು ಕೋಟಿ ಹೇನು ಒಂದು ಕೋಟಿ ನತ್ತು
ಲಕ್ಷಾದ ಮ್ಯಾಲೆ ತೊಂಬತ್ತು |

ಲಕ್ಷಾದ ಮ್ಯಾಲೆ ತೊಂಬತ್ತಏಳು ಕೋಟಿ
ಜೀವಜಂತಿ ಅಲ್ಲಿ ಇರುವಾದು |

ಅಪ್ಪಾ ಮಡುವಾಳ ಮಾಚಯ್ಯ
ಹೇನು ಕೂರೆ ತಿಗ್ಣೆ ಚಿಗಟೆ ನತ್ತು ನಸುರು ಮೊಟ್ಟೆಮರಿ
ಸೀರು ಅನ್ತಕ್ಕದ್ದು

ಲಕ್ಷುದ ಮ್ಯಾಲೆ ತೊಂಬತ್ತು ಏಳು ಕೋಟಿ ಉಂಟಪ್ಪ
ಅದುನ್ನ ಯಾವ್ರೀತಿ ಮಡಿ ಮಾಡ್ತೀಯಪ್ಪ?'

'ಅಯ್ಯೋ ಗುರುವೆ
ನೀವು ಕೊಡುವಂತ ಶಿವಕಂತೆಯನ್ನು
ಉಬ್ಬೇಗಾಕಿ ಚನ್ನಾಗಿ ಬೇಯ್ಸಿ ಹೊಳೇಲಿ ಜಾಲ್ಸಿ
ಕಲ್ಲುನ ಮ್ಯಾಲೆ ಕುಸುರ್ಬುಟ್ಟು ನೀರುಗಜ್ಜಿ ಮಡಿಮಾಡಿ-
ತಂದು ಒಪ್ಪಿಸುವೆ ದಯಮಾಡಿ' | ೯೯೦

'ಓಹೊಹೋ ಮಾಚಪ್ಪನವರೆ
ಮಾತು ಸಾಕು ಮಾತು ಸಾಕು
ನಿಮ್ಮ ಮಡಿಮಾಡೋ ರೀತಿ ನಮುಗೆ ಒಪ್ಪಾಕಿಲ್ಲ
ನಾನು ಕೊಟ್ಟಂತ ಶಿವುಕಂತೆ ಜೋಳಿಗೆಯ
ನೀರುನಲ್ಲಿ ಅಜ್ಜೊ ಹಂಗಿಲ್ಲ
ಕಲ್ಲುನ ಮ್ಯಾಲೆ ಕುಸುರೋ ಹಂಗಿಲ್ಲ
ಉಬ್ಬೇಲಿ ಬೇಯ್ಸೋ ಹಂಗಿಲ್ಲ ನೀಲಿ ಹಾಕೋ ಹಂಗಿಲ್ಲ
ಅದ್ಕೆ-

ರಾವ್ಮಡಿಯ ಶರಣ ಮಾಡಬೇಕು' |

ಬಸವಣ್ಣಾಡಿದ ಮಾತ ಕೇಳಿ ಮಾಚಪ್ಪ ೯೦೦
ಕೆಟ್ಟನಲ್ಲೊ ಶಿವಶಿವ ಅನುತಾರೆ |

'ಹಾದೀಲೋಗಲಾರ್ದ ಹಾಳು ಪಾಪೀ ನಾನು
ಈ ಗುರುನಂದಿ ಮಠುಕೆ ಬರಬವುದ ?' |

ಹಂಗಂತ ಹೇಳಿ ಘನಶರಣ ಮಾಚಪ್ಪ
ಕಣ್ಣಲ್ಲಿ ನೀರ ಕೆಡುಗೀದ |

'ಆದರೂ ಬಸವಣ್ಣನವರು ಚಂಚಕಾರವನ್ನು ಕೊಟ್ಟರು
ನಾನೆಂಗೆ ಮಡಿಯ ಮಾಡಬೇಕಪ್ಪ
ಇನ್ನು ಬಸವಣ್ಣನವುರ್ಗೆ
ರಾವ್ಮಡಿ ಮಾಡಕಾಕಿಲ್ಲ ಅಂದ್ಬುಟ್ರೆ -

ಅವ್ರು ಎತ್ತಿ ಸಾಪಾವ ಕೊಡುತಾರೆ | ೯೧೦

ಇನ್ನು ಬಸವಣ್ಣೋರು ಎತ್ತಿ ಸಾಪವನ್ನು ಕೊಟ್ಟರೆ
ನನ್ನ ವಂಸುವೆಲ್ಲ ನಿರೊಂಸವಾಯ್ತುದಾದೆ-

ಬಂದದೆಲ್ಲ ಬರಲಿ ಬಸವಣ್ಣ ಪರಮೇಶ
ನಿಮ್ಮ ದಯವಿರಲಿ ಸ್ವಾಮಿ ನಮಮ್ಯಾಲೆ" |

ಮಾಚಪ್ಪನವರು ಮನಸ್ನಲ್ಲಿ
ಅನೇಕವಾಗಿ ಯೋಚ್ನೆ ಮಾಡ್ತಿದ್ದಾರೆ.
ಮಾಚಪ್ಪೋರ ನೋಡ್ಬುಟ್ಟು ಬಸವಣ್ಣೋರು ಹೇಳ್ತಿದ್ದಾರೆ
'ಏಲ್ಯೆ ಮಾಚಪ್ಪ
ರಾವ್ಮಡಿ ಮಾಡಿ ತಂದ್ಕೊಡು ಅಂದ್ರೆ
ಅನೇಕುವಾದಂತ ಚಿಂತೆ ಮಾಡ್ತಿದ್ದಾಯೆ ೯೨೦
ನಿನುಗ್ಯಾತುಕಪ್ಪ ನಾವು ಕಷ್ಟಕೊಡಬೇಕು
ನಿನ್ನೆಲಿ ಆಯ್ತುದ್ರೆ ತಕ್ಕೊಂಡೋಗು
ಆಗಕಿಲ್ಲ ಅನ್ನುವಂತಿದ್ರೆ
ಕೊಟ್ಟಿರುವಂತ ಚಂಚಕಾರವನ್ನ ವಾಪ್ಸಿ ಮಾಡಿ-

ನಂದಿ ಮಠುವನ್ನು ಬಿಟ್ಟು ಹೊರಡಯ್ಯ' |

ಬಸವಣ್ಣೋರ ಮಾತನ್ನು ಕೇಳಿ ಮಾಚಪ್ಪನವರು-

'ರಾವು ಮಡಿಯನ್ನು ಮಾಡ್ತೀನಿ ಬಸುವೇಸ
ನಿಮ್ಮ ಶಿವುಕಂತೆ ಬೇಗ ಕೊಡಬೇಕು' |

'ಹಂಗಾದ್ರೆ ಒಸಿ ತಳಾರ ಮಾಡಪ್ಪ ಅಂದ್ಬುಟ್ಟು
ಬಾರಮ್ಮ ತಂಗೆ ಅಕ್ಕನಾಗಮ್ಮ' ಅಂದುರು- ೯೩೦

ಅಣ್ಣನಾಡಿದ ಮಾತ ಕೇಳಿ ಏಳೊರುಸದ ನಾಗಮ್ಮ
ಅಣ್ಣನ ಬಳಿಗೆ ಬರುತಾಳೆ |

'ಅಣ್ಣಯ್ಯ ಯಾತುಕ್ಕೋಸ್ಕರ ಬರುಮಾಡಿಕೊಂಡೆ?'

'ನಾಗಮ್ಮ ಈವತ್ತುನ ಜಿವ್ಸ
ಮಡುವಾಳ ಮಾಚಪ್ಪನವರು ಗುರುಮಠುಕೆ ಬಂದಿದ್ದಾರೆ-

ಅವುರ ಕೈಲಿ ನಾವು ಶಿವುಕಂತೆಯನ್ನು ಕೊಡಬೇಕು
ತಕ್ಕಿ ತರಾಸ ತಂದು ಮಡಗವ್ವಾ |

ತಕಡಿ ಬಟ್ಟನ್ನು ತಂದು ಮಡುಗವ್ವಾ' ಅಂತ್ಹೇಳಿ
ಬಸವಣ್ಣ ಅಂದರು.

ಅಣ್ಣಯ್ಯನ ಮಾತ್ಗೆ ಪ್ರತಿಯುತ್ರ ಹೇಳ್ದಂತೆ ನಾಗಮ್ಮನವರು
ತಕಡಿ ಬಟ್ಟನ್ನು ತಂದು ಮಡಗಿದ್ದಾರೆ. ೯೪೦

ಬಸವಣ್ಣನವರು ಆ ಶಿವುಕಂತೆಯನ್ನು
ಪಕ್ಕದಲ್ಲಿಟ್ಟುಕೊಂಡು
ತ್ರಾಸನ್ನು ತಕೊಂಡು ಕೈಲಿಡುಕೊಂಡು-

ಒಕ್ಕಡೆ ಬಟ್ಟು ಒಕ್ಕಡೆ ಶಿವುಕಂತೆಯನ್ನು ಮಡುಗಿ
ಶಿವುಕಂತ ತೂಕ ಮಾಡುತಾರೆ |

ಶಿವುಕಂತೆ ತೂಗಿ ನೋಡುತಿದ್ರೆ -
ಅದು ಹನ್ನೆರಡು ತೂಕ ತೂಗುತಾದೆ |

'ಅಪ್ಪಾ ಮಡುವಾಳ ಮಾಚಯ್ಯ
ಶಿವುಕಂತೆ ಜೋಳುಗೆ ಹನ್ನೆರಡು ತೂಕ ಸರಿಯಾಗಿ ಬಂದ್ಕೆತೆ
ನೋಡಪ್ಪಾ ಒಂದು ಮೊಟ್ಟೆ ಒಡೀಬಾರ್ದು
ಒಂದು ಸೀರು ಸಿಡೀಬಾರ್ದು
ಒಂದು ನಸುರು ನಲುಗ್‌ಬಾರ್ದು
ಒಂದು ನತ್ತು ನರುಳ್‌ಬಾರ್ದು
ಒಂದು ತಿಗಣೆ ಸಾಯಬಾರ್ದು
ಒಂದು ಹೇನು ನೋಯಬಾರ್ದು
ಚಿಗಟೆ ಪ್ರಾಣ ಬುಡಬಾರ್ದು
ಆ ಥರ್ಪಲ್ಲಿ ರಾವ್ಮಡಿ ಮಾಡ್ಕೊಂಡ್ ಬಂದುದ್ದೇ ಸಾಚುವಾದ್ರೆ-

ನೀನು ಕೇಳೀದ ಬೋಮಾನ ಕೊಡುವೇನು' |

'ತಮ್ಮಪ್ಪನೆಯಂತಾಗ್ಲಿ ಕೊಡೀ ಬುದ್ಧಿ' ಅಂದಿದ್ದಾನೆ.

ಬಸ್ಯಣ್ಣನೋರು ಶಿವುಕಂತೆಯನ್ನು ಕೊಟ್ಟಿದ್ದಾರೆ-

'ಎನ್ನೊಡೆಯಾ ಬಸವಣ್ಣ ಹೋಗಿದ್ದು ಬರಲಿಯಾ
ಹರಸಿ ಕಳುಗಪ್ಪ ನಿನ್ನ ಶರಣಾನ' |

'ಹೋಗಿದ್ದು ಬಾಪ್ಪ' ಅಂತ ಬಸವಣ್ಣ ಆಸುರವಾದವನ್ನು
ಕೊಟ್ಟುರು-

ಶಿವಶಿವಾ ಎನ್ನುತ್ತಾ ಶಿವುಕಂತೆ ತೆಗುದಾನು
ಬೆನ್ನೀಗೆ ಬಿಕ್ಕೊಂಡ ಶಿವುಶರಣ |

'ಅಯ್ಯಾ ಕಟುಗ್ರು ಸಂಗಣ್ಣ
ಹೋಗಿದ್ದು ಬರ್ತೀನಪ್ಪ' ಅಂತ ಅವ್ನುನ್ನೂ ಮುಕ್ಷ ತಿಳುಸ್ಬುಟ್ಟು-

ಕತ್ತೆ ಹೊಡುಕೊಂಡು ಶರಣ ಹೊರುಟಾನು |

ಕತ್ತೆ ಹೊಡುಕೊಂಡು ಶಿವಶರಣ ಮಾಚಪ್ಪ
ಹರಿವಂತ ಕಾಳಿಂದಿನ ಮಡುವಿಗೆ ಬಂದಿದ್ದಾರೆ
ಸಮುದ್ರದ ಪಕ್ಕದಲ್ಲಿದ್ದಂತ ಸಣ್ಮುಳ್ಳಿನ ಮ್ಯಾಲೆ
ಬಸವಣ್ಣೋರು ಕೊಟ್ಟಿದ್ದಂತ ಶಿವುಕಂತೆಯನ್ನು ಮಡುಗಿ
ಮಾಚಪ್ಪನವುರು ಯೋಚಿಣೆಯನ್ನು ಮಾಡ್ತಿದ್ದಾರೆ.

'ಅಹ್ಹಾ, ಬಸುವಣ್ಣನವರು ಕಲ್ಯಾಣದಲ್ಲಿದ್ದಾರೆ
ನಾನು ಹೊಳೇ ಕರೇನಲಿದ್ದೀನಿ
ಆದ್ರೂ ನನ್ನ ಮಡದಿಯಾದಂತ ಮಲ್ಲುಗದೇವಿ ಊಟ ತರ್ತಾಳೆ
ಊಟ ಯಾರುಗ್ಬೇಕು?
ಹಸುಕೊಂಡು ಪ್ರಾಣ ಬುಡ್ತಿದ್ದೀನಿ.
ಕತ್ತೆಗ್ಯಾತುಕ್ಕೆ ಕೊಲೆ ಕೊಡುಬೇಕು
ಮೆಯ್ಯಾಕೆ ಬುಡುಬೇಕು' ಎಂಬುದಾಗಿ
ಕತ್ತೆ ಮೇಲಿದ್ದಂತ ಬಟ್ಟೆಯನ್ನು ಇಳೀಕೊಂಡು
ಮುಂದಲ ಕಾಲ ಕಟ್ಬುಟ್ಟು-

ಮಾಳದಲಿ ಮೆಯ್ಯಾಕೆ ಒದಗೀದಾ |

ಮಾಚಪ್ಪನವರು ಸುತ್ತಮುತ್ತ ನೋಡುದ್ರಲ್ಲ
'ಅಹ್ಹಾ, ನನ್ನ ಸರೀಸಮಾನರಾದಂತ ಅಗಸರೆಲ್ಲ
ಮೈಲಿಗೆ ಬಟ್ಟೆ ತಕೊಂಡೋಗಿ ಮಡೀ ಮಾಡ್ತಿದ್ದಾರೆ
ಬಸವಣ್ಣೋರು ಕೊಟ್ಟಂತ ಶಿವುಕಂತೆಯ-

ನಾನೆಂಗೆ ಮಡಿಯ ಮಾಡಲಯ್ಯ |

ಎಳುಬಿಸುಲ್ನಲ್ಲಿ ತಲೆಗೆ ಶಿವುಕಂತೆಯನ್ನು ಹಾಕೊಂಡು-

ಬಸುವಣ್ಣನವುರ ಪಾದ ನೆನುಕೊಂಡು
ಮೊಕ್ಕಾಡುನಾಗಿ ಮನುಗೀದ |

ಮಾಚಪ್ಪನವರ ಮಡುದಿ ಮಲ್ಲುಗದೇವಮ್ಮ
ಮನೇಲಿದ್ಲಲ್ಲ
'ಒಹ್ಹೊ ನನ್ನ ಪತಿ ಮಡುವಿಗೋಗಿದ್ದಾರೆ
ಅವರ ಹೊತ್ಗೆ ಊಟ ತಕ್ಕೊಂಡೋಗಬೇಕು' ಅಂತ -

ಹಾಲುಗಕ್ಕಿಯ ಸುರುದು ನೀರಿಗೆ ಬ್ಯಾಳೆ ಸುರುದು
ಹೆಚ್ಚಾಳದಿಂದಡಿಗೆ ದುಡುಕೀದ |

ಅಡಿಗೆ ಆಗ್ಮೆತೆ ಊಟ ತಕ್ಕೊಂಡೋಗಬೇಕೆಂಬುದಾಗಿ
ಮಲ್ಲುಗದೇವಮ್ಮ
ಸುಬ್ಯಾಣೆ ಪುಟ್ಟೇಗೆ
ಊಟವನ್ನು ತುಂಬ್ಕೊಂಡು ಬರುವಂತ ವ್ಯಾಳ್ಳದಲ್ಲಿ-

ಓದೊ ಮಠ್ಗೆ ಹೋಗಿದ್ದ ಭಾಗ್ಯವುಳ್ಳ ಕೆಂಪಣ್ಣ
ಓದುಕೊಂಡು ಮನೆಗೆ ಬರುತಾನೆ |

ಬರುವಂತ ಮಗುನ್ನ ನೋಡಿದಲು ಮಲ್ಲುಗದೇವಮ್ಮ
'ಇರ್ಲಿ ನನ್ನ ಮಗು ಬರ್ತಿದ್ದಾದೆ
ಅವುನ್ಗೆ ಊಟುಕ್ಕೆರಿಬೇಕೆ'ಂಬುದಾಗಿ
ಮಗೀನ್ ಮೊಕುವನ್ನು ನೋಡ್ಬುಟ್ಟು
ಮುದ್ದಾಡಿ ಮುತ್ತಾ ಕುಡುದ್ಬುಟ್ಟು :
'ಹಲಗೆ ಬಳಪುವನ್ನು ಮಡುಗ್ಬುಟ್ಟು-

ಊಟಕ್ಕೆ ಬಾರೋ ಕಂದಯ್ಯ' |

ಭಾಗ್ಯವುಳ್ಳ ಕೆಂಪಣ್ಣ ತಾಯಿ ವಾಕುಸ್ತಾನವನ್ನು ಕೇಳಿ
ಕೈಕಾಲು ಮೊಕ ತೊಳುಕೊಂಡು-

ಊಟಕ್ಕೆ ಬಂದು ಕುಂತವುನೆ |

ಮಗುನ ಮುಂಭಾಗುದಲ್ಲಿ
ಮುಕ್ಕಾಲು ತೌಂಟ್ಗೆಯನ್ನು ಮಡ್ಗಿ ತೌಂಟ್ಗೆ ಮ್ಯಾಲೆ
ಚಿನ್ನುದರುವಾಣವನ್ನು ಮಡ್ಗಿ-

ತಾಯಿ ಮಲ್ಲುಗದೇವಿ ಕಂದ ಕೆಂಪಣ್ಣುಂಗೆ
ಸಂತೋಷದಿಂದ ಊಟ ಎರಿದಾಳು |

ಮಗ ಕೆಂಪಣ್ಣ ಊಟವನ್ನು ಮಾಡಿದಾನೆ
'ಅಪ್ಪಾ ಕಂದ
ನಾನು ನಿಮ್ತಂದೆಯೋರ್ಗೆ ಊಟುವನ್ನು ಕೊಂಡೋಯ್ತಿದ್ದೀನಿ
ನೀನು ಓದೋ ಮಠುಕೋಗುಪ್ಪ' ಅಂದಿದ್ದಾಳೆ.
ಕಂದ ಕೆಂಪಣ್ಣ ತಾಯಿ ಪಾದಂಗಳಿಗೆ ಸರಣ್ಮಾಡಿ
ಓದೋಮಠುಕ್ಕೆ ಹೋದುನು
ಓದೋ ಮಠುಕ್ಕೆ ಮಗ ಹೋದ ತಕ್ಷಣ
ತಲೆಮ್ಯಾಲೆ ಪುಟ್ಬೆಯನ್ನೂ ಮಡಿಕೊಂಡು
ಮೈತುಂಬ ಸೆರಗ್ಹೊದ್ಕೊಂಡು -

ತಾಯಿ-ಕಡವೀಗೆ ಊಟ ತರುತಾಳೆ |

ಊಟವನ್ನು ತತ್ತಾ ತತ್ತಾ ಪತೀಮುಕುವನ್ನು
ನೋಡುದ್ದು

'ಆ ಏನಾಶ್ಚರ್ಯ
ನಮ್ಮ ಪತಿ ಒಂದು ಬಟ್ಟೆಯನ್ನು ಮುಕ್ಷ ಮಡಿ ಮಾಡಿಲ್ಲ
ಜಾತಿಯವರೆಲ್ಲ ಮಡಿ ಮಾಡ್ತಿದ್ದರೆ
ನನ್ನ ಪತಿ ಯೋಚ್ನೆ ಮಾಡ್ತಿದ್ದಾರಲ್ಲ
ಈ ಗ್ರಾಮ ಅಂದರೆ ಇದು ತುಂಟುಗ್ರಾಮ
ಯಾರು ಬೋದಿದ್ದರೊ ಕಾಣೆ ಗೊತ್ತಿಲ್ಲ
ಪತಿ ಮಾತಾಡುಸ್ಬೇಕು ಎಂಬುದಾಗಿ
ಪುಟ್ಬೆಯನ್ನು ಬಲಭಾಗದಲ್ಲಿಟ್ಕೊಂಡು
ಪತೀ ಪಕ್ಕದಲ್ಲಿ ಕುಂತ್ಕೊಂಡು
ಪತಿ ಬೆನ್ನಿನ ಮ್ಯಾಲೆ ಎರಡು ಹಸ್ತವನ್ನೂರಿ-

ಗಂಡಾನ ಮೈಯ್ಯ ತಾಯಿ ಅಲಕೀದ |

ಗಂಡನ ಮೈಯ್ಯ ಅಲಕಿದಾಳೆ
ಪತೀ ಎರಡು ನೇತ್ರುವನ್ನು ಬುಟ್ಟನು
'ಸ್ವಾಮಿ ಯಾತುಕ್ಕೋಚ್ನೆ ಮಾಡ್ತಿದ್ದೀರಿ-

ನಿಮಗೆ ಬಂದಿರುವ ಭಾರಿ ಬಂದನವೇನು
ಅದ ನನ್ನೊಂದಿಗೊಸಿ ಹೇಳೀರಿ' |

ಮಡದಿ ಆಡಿದ ಮಾತನ್ನು ಮಾಚಪ್ಪ
ಎರಡು ಕಿವೀ ಕರ್ನದಿಂದ ಕೇಳಿದುನು-

ಅಂತೆ-ಭಾರಿಘನಶರಣ ಧಾರುವತಿಯಾಗಿ
ಕಣ್ಣಲ್ಲಿ ನೀರ ಕೆಡುವೀದ |

'ಸ್ವಾಮಿ ಯಾತುಕ್ಕೆ ಚಿಂತೆ ಮಾಡ್ತಿದ್ದೀರಿ
ಯಾರು ಬೊಯ್ದರು ಯಾರು ಹೊಡದುರು ?'
'ಮಡ್ದಿ ನನ್ನ ಯಾರು ಬೊಯ್ತರೆ ಯಾರು ಹೊಡಿತರೆ?'
'ಮತ್ತೆ ಯಾಕ್ ಸ್ವಾಮಿ ಚಿಂತೆ ಮಾಡ್ತೀರಿ?'
'ಮಡ್ದಿ, ಗಂಡನೆಂಬ ಆಸೆ ನಿನುಗ್ಯಾತುಕ್ಕೆ ಬಂತು
ಮಡ್ದಿ ಅನ್ನುವಾಸೆ ನನುಗ್ಯಾತುಕ್ಕೆ ಬಂತು |'

'ಸ್ವಾಮಿ ಯಾತುಕ್ಕೆ ಹೊಸ ಮಾತು?'
'ನೋಡು ಮಲ್ಲುಗದೇವಿ
ಬತ್ತಿದ್ದೋನ ಬಸವಣ್ಣೋರು ಬರಮಾಡಿಕೊಂಡ್ರು
ದೊಡ್ಡೋರು ಅಂತ ನಾನು ಹೋಗಿ ನಿಂತ್ಕೊಂಡಿ
ಬಸವಣ್ಣ ಯಾತುಕ್ಕೋಸ್ಕರ ಕರುಸ್ರಿ ಅಂದಿ
ಅಯ್ಯ ಮಾಚಪ್ಪ ನನ್ನ ಮಠುದಲ್ಲಿ ಒಂದು ಶಿವುಕಂತೆ
ಇರುವುದು
ಅದುನ್ನ ಮಡಿ ಮಾಡ್ಕೊಡ್ತೀಯೇನಪ್ಪ ? ಅಂತ ಕೇಳದ್ರು
ಆ ಶಿವುಕಂತೆಯನ್ನು ಕೊಡಿ ಬುದ್ಧಿ
ಮಡಿಯನ್ನು ಮಾಡಿ ತಂದ್ಕೊಡ್ತೀನಿ ಅಂದಿ

ನೀನು ಶಿವುಕಂತೆಯನ್ನು ಮಡಿ ಮಾಡಬೇಕಾದ್ರೆ
ಚಂಚ್ಕಾರವನ್ನು ಕೊಡ್ತಿದ್ದೀನಿ ಕ್ಯಾಪ್ಪ ಅಂತ್ಹೇಳಿ-

ಚಂಚ್ಕಾರ್ನ ನನಗೆ ಕೊಟ್ಬರ್ಬೇಡ್ನೆ |

ಚಂಚ್ಕಾರವನ್ನು ಕೊಟ್ಟು ಮ್ಯಾಲೆ
ಬಸವಣ್ಣ ಶಿವುಕಂತೆಯನ್ನು ಕೊಡಿ ಅಂದಿ
ಅಪ್ಪಾ ಮಾಚಯ್ಯ
ನಿನ್ನ ಕೈಲಿ ಶಿವುಕಂತೆ ಕೊಡಬೇಕಾರೆ
ಹೆಂಗ್ ಮಡಿ ಮಾಡ್ತಿಯಪ್ಪ ಅಂದ್ರು
ಉಬ್ಬೆಯೊಳುಗೆ ಕಾಯುಸ್ಬುಟ್ಟು
ಕಲ್ಲುನೊಳಗೆ ಕುಸುರ್ಬುಟ್ಟು ಮಡಿ ಮಾಡ್ತೀನಿ ಅಂದಿ ೪೭೦
ಹಂಗಲ್ಲ ಮಾಚಪ್ಪ
ನಾನು ಕೊಟ್ಟಂತ ಶಿವುಕಂತೆಯ
ನೀರುಗೆ ಅಜ್ಜುಬಾರ್ದು
ಕಲ್ಲುನ ಮ್ಯಾಲೆ ಕುಸುರ್ಬಾರ್ದು
ನೀಲಿಯನ್ನು ಹಾಕಬಾರ್ದು
ರಾವ್ಮಡಿ ಮಾಡುಬೇಕು ಅಂದ್ರು
ಇನ್ನು ರಾವ್ಮಡಿ ಮಾಡಾಕೆ ನನ್ನ ಕೈಲಾಯ್ತದ ಅಂತೇಳ್ಬುಟ್ಟು
ಮೊಕ್ಕಡನಾಗಿ ಮನುಗಿದ್ದೀನಿ ಮಲ್ಲುಗದೇವಿ' -

ಗಂಡನ ಮಾತ ಕೇಳಿ ಮಲ್ಲುಗದೇವಿ
ಪಕ್ಕಂತ ತಾಯಿ ನಗುವಾಳು | ೪೮೦

'ಸ್ವಾಮಿ ರಾವ್ಮಡಿ ಮಾಡುವಂತಾ ವಿಧಾನ್ ನಿಮ್ಗೆ
ಗೊತ್ತಿಲ್ಲವ?'
'ಗೊತ್ತಿಲ್ಲ ಮಲ್ಲುಗದೇವಿ.'
'ಅಯ್ಯೋ ಸ್ವಾಮಿ ಶಿವುಕಂತೆಯನ್ನು
ರಾವ್ಮಡಿ ಮಾಡುವಂತ ವಿಧ ನಂಗೆ ಚನ್ನಾಗಿ ಗೊತ್ತು
ಅದುನ್ನ ಹೇಳ್ಕೊಡ್ತೀನಿ ಅದುಕ್ಕೆ ಮೊದುಲು -

ಊಟಕ್ಕೆ ನೀವು ದಯಮಾಡಿ' |

ಮಡದಿ ಆಡಿದಂತ ಮಾತ
ಮಾಚಪ್ಪ ಎರಡು ಕಿವೀಕರ್ನದಿಂದ ಕೇಳಿದುನು
ಮಡದಿ ಮಲ್ಲುಗದೇವಿ
ರಾವ್ಮಡಿ ಮಾಡುವಂತ ವಿಧ ನಂಗೆ ಚನ್ನಾಗಿ ಗೊತ್ತು
ಅಂದೆಯಲ್ಲ ೪೯೦

ನಂಗೆ ಹೇಳ್ಕೊಟ್ಟು ಹೋಗು
ನಾನು ರಾವ್ಮಡಿ ಮಾಡ್ಬೇಕು-

ರಾವ್ಮಡಿ ಮಾಡಿ ಬಸವಣ್ಣೋರ್ಗೆ ತಲುಪ್ಸಿ
ಆಮ್ಯಾಲೆ-ಇಬ್ರೂ ಊಟಾವ ಮಾಡಾಂವಾ |

'ಸ್ವಾಮಿ ಮೊದ್ಲು ಊಟವಾಗ್ಲಿ ಆಮ್ಯಾಲೆ ಹೇಳ್ತೀನಿ'
'ಅಹ್ಹಾ ಮಲ್ಲುಗ್ದೇವಿ ನಿನ್ನ ಮಾತುನಂತೇ ಆಗ್ಲಿ'
ಅಂದ್ಬುಟ್ಟು-

ಕಪನೀಯೊಳಗೆ ಜಲಕ ಮಾಡಿದನು |

ಸ್ನಾನವನ್ನು ಮಾಡ್ಬುಟ್ಟು
ಈ ಬುತ್ತಿಯನ್ನು ಧರುಸ್ಕೊಂಡು
ಊಟುಕ್ಕೆ ಬಂದು ಕುಳ್ತಿದ್ದಾನೆ ೫೦೦
ಮಡದಿ ಮಲ್ಲುಗದೇವಮ್ಮ
'ನನ್ನ ಪತೀಗೆ ನನ್ನ ಕೈನ ಅನ್ನದ ರುಣ ಈವತ್ಗೆ
ತೀರೋಯ್ತು' ಅಂತ್ಹೇಳಿ
ತಟ್ಟೆಯನ್ನು ಮುಂಭಾಗ್ದಲ್ಲಿ ಮಡುಗ್ಬುಟ್ಟು-

ತನ್ನ ಗಂಡುಂಗೆ ಊಟ ಎರುದಾಳು |

ಪತಿಗೆ ಯಾವಾಗ ಊಟ ಎರುದಳೋ
ಸಂತೋಷದಿಂದ ಮಾಚಪ್ಪ ಊಟವನ್ನು ಮಾಡುದ್ರು
ತಾಂಬೂಲವನ್ನು ತಾಯಿ ಎರಡು ಕೈನಿಂದ ಕೊಟ್ಟಲು
ತಾಂಬೂಲವನ್ನು ಮೆಲ್ತಾ ಮಾಚಪ್ಪನವ್ರು ಕುಳ್ತಿದ್ರೆ
ಮಡದಿ ಮಲ್ಲುಗದೇವಮ್ಮ ಹೇಳ್ತಿದಾಳೆ.

'ಸ್ವಾಮಿ ಯಜಮಾನ್ರೆ ೫೧೦
ಬಸವಣ್ಣನವ್ರ ಶಿವುಕಂತೆಯನ್ನು ರಾವ್ಮಡಿ ಮಾಡ್ಬೇಕಾದ್ರೆ
ಪತೀ ಅನ್ನೋ ಆಸೆಯನ್ನು ನಾನು ಮರೀತಿದ್ದೀನಿ
ಸತೀ ಅನ್ನೋ ಆಸೆಯನ್ನು ನೀವು ಮರುತ್ಬುಟ್ಟು-

ಅಯ್ಯ-ಕುಯ್ಯಯ್ಯ ನನ್ನ ಸಿರುಸಾವ |

ಸ್ವಾಮಿ ನನ್ನ ಸಿರುಸೇದ್ನೆಯನ್ನು ಮಾಡ್ಬುಡಿ
ಆ ರಕ್ತ ಹರೀತದಲ್ಲ
ಅದ್ನ ಅಗುರ್ ಬಾಂಡವಾಳ್ಕೆ ಬಸ್ಕೊಯ್ಯ
ನನ್ನ ಎದೆಯ ಗುಂಡ್ಗೆ ಸಿಗಿಯಯ್ಯ
ನನ್ನ ಹೊಟ್ಟೆಯೊಳಗಿರುವ ಈಲಿಯನ್ನು ತಕ್ಕೊಂಡು-

ಅದ-ನೀಲಿ ಅಜ್ಞೋಕೆ ಮಡಿಕೊಯ್ಯ |

ಸ್ವಾಮಿ ನನ್ನ ತಲೆಯನ್ನು ಒಡುದ್ಬುಟ್ಟು
ಆ ನನ್ನ ನೆತ್ತಿಯಲ್ಲಿರುವಂತಾ ಮಿದಿಲಿಯನ್ನ ತಕ್ಕೊಳ್ಳಿ
ಬಸವಣ್ಣನವರು ಕೊಟ್ಟಂತ ಶಿವು ಜೋಳಿಗೆಯನ್ನು
ರಾವ್ಮಡಿ ಮಾಡುವಾಗ-

ಅದ-ಗಂಜಿ ಅಜ್ಞೋಕೆ ಮಡಿಕೊಯ್ಯ |

ನನ್ನ ಎರಡು ರುಂಡಿಯನ್ನು ತಕ್ಕೊಂಡು
ಭೂಮಿ ಮ್ಯಾಲೆ ಇಟ್ಟುಟ್ಟು
ಅದುರ್‌ಮ್ಯಾಲೆ ಅಗುರ್‌ಬಾಂಡವಾಳವನ್ನು ಮಡಗಿ
ಬಸ್ವಣ್ಣೋರ್ ಪಾದವೇ ಗತಿ ಅಂತ್ಹೇಳಿ
ಆ ಬಸ್ವಣ್ಣೋರ್ ಪಾದ ನೆನುಕೊಂಡ್ರೆ
ಅಗ್ಗುದೇವ್ರಿ ಧಗ್ಗಂತ ಹತ್ಕೊತಾಳೆ.

ಆವಾಗ ನನ್ನ ಬೆನ್ನುನ ಮಚ್ಚೇಮ್ಯಾಲೆ-
ಹೆಚ್ಚಾಳದಿಂದ ಮಡಿಯ ಮಾಡಯ್ಯ' |

ಮಡದಿ ಆಡಿದ ಮಾತ ಕೇಳವುನೆ ಮಾಚಯ್ಯ-
ಅವ್ನ-ಕಣ್ಣಲ್ಲಿ ನೀರ ಕೆಡುವೀದ |

'ಮಡದಿ ಮಲ್ಲುಗದೇವಿ
ಬ್ರಹ್ಮ ಇಸ್ಟುರು ಈಶ್ವರರು ಸಾಕ್ಷಿಯಾಗಿ
ಆಕಾಸವಾಣಿ ಭೂಮ್ತಾಯಿ ಸಾಕ್ಷಿಯಾಗಿ
ಗಂಗಮ್ಮ ಸಾಕ್ಷಿಯಾಗಿ
ನೀನು ಬಲಗಾಲು ಮುಂದುವಾಗಿ ಲಗ್ನವಾಗಿ ನನ್ನ
ಮನೆಗೆ ಬಂದೆ.
ಬಾಯೆತ್ತಿ ನಿನ್ನ ಬೈನಿಲ್ಲ
ಕೈಯೆತ್ತಿ ನಿನ್ನ ನಾ ಹೊಡೀನಿಲ್ಲ
ಇಂದುನ ದಿವ್ಸ ನನ್ನ ಸಿರುಸಾ ಕುಯ್ದುಬುಟ್ಟು
ರಾವ್ಮಡಿ ಮಾಡಿ ಬಸವಣ್ಣನವರಿಗೆ ಶಿವುಕಂತೆ ಒಪ್ಸಿ
ಅಂತಿಯಲ್ಲ-
ಹೆಣ್ಣೆ-ಹೇಗೆ ಕುಯ್ಕೆ ನಿನ್ನ ಸಿರುಸಾವ' |

'ಸ್ವಾಮಿ ನನ್ನ ಸಿರುಸಾವ ಕುಯ್ದು
ಬಸ್ವಣ್ಣೋರ್ಗೆ ಮಡಿ ಮಾಡಿ ತಕ್ಕೊಂಡು ಕೊಡದೇ ಹೋದ್ರೆ
ಇನ್ನು ಬಸವಣ್ಣ ಸಾಪ ಕೊಡ್ತಾರೆ -

ನೀನು ಸಾಪಕ್ಕೆ ಹೊಣೆಯು ಆಗುತೀಯ' |

'ಮಡದಿ ನಿನ್ನ ಸಿರುಸವನ್ನು ನಾನು
ಕುಯ್ದಾಕಿದ್ದೆ ಸಾಚುವಾದ್ರೆ-
ನಿನ್ನ-ಅಣ್ಣ ತಮ್ಮ ಸುಮ್ಗೆ ಬುಟ್ಟಾರ' |

'ಏನು ಸ್ವಾಮಿ ನನ್ನ ಅಣ್ಣ ತಮ್ಮದೀರ್ಗೆ ಹೆದುರ್ಕೊಂಡು
ನನ್ನ ಸಿರುಸಾ ಕುಯ್ಕೊಲ್ರಿಯಾ ?
ಅದನ್ನೆ ಹೇಳ್ತೀನಿ ಕೇಳಿ ಸ್ವಾಮಿ
ಅಹ್ಹಾ ನೋಡುದ್ಯಾ ನನ್ನ ಮಡ್ದಿ ಮಲ್ಲುಗ್ದೇವಿ
ಊಟ ಮಾಡ್ಕೊಂಡು ಅಣ್ಣ ತಮ್ಮ ತಾಯಿ ತಂಗೇರ
ನೋಡ್ಕೊಂಡು
ಇನ್ನಾಗ್ಗೂ ಬರನಿಲ್ಲವಲ್ಲ ಅಂತ್ಹೇಳಿ-

ನನ್ನ ತಂದೆ ಮ್ಯಾಲೆ ರಿಪೋರ್ಟ್ ಹಾಕಯ್ಯ |

ಸ್ವಾಮಿ ನಿಮ್ಮ ತಲೆಮ್ಯಾಲೆ ಯಾವ್ದೂ ಬರೋದಿಲ್ಲ
ನನ್ನ ತಂದೆ ಅಣ್ಣ ತಮ್ಮದೀರ ತಲೇಮ್ಯಾಲೆ ಬರ್ತಿದೆ
ನನ್ನ ಸಿರುಸಾ ಕುಯ್ದ್‌ಬುಟ್ಟು

ಬಸವಣ್ಣನವರು ಕೊಟ್ಟಂತ ಶಿವುಕಂತೆ ಜೋಳಿಗೆಯ
ರಾವ್ಮಡಿಯನ್ನು ಮಾಡಿ
ಅವುರೊಡ್ಯೆಯನ್ನು ಅವುರ್ಗೆ ಕೊಟ್ಟುಡು' ಅಂದುಲು.

ಗಂಡ ಹೆಡ್ತೀರು ಮನೆಗೆ ಬಂದಿದಾರೆ
ಸ್ವಾಮಿ ನೀವು ಇಲ್ಲೆ ಕೂತ್ಕೊಳ್ಳಿ ಅಂತ್ಹೇಳಿ-

ಮಡಿವಾಳ ಮಾಚಪ್ಪನ ಮಡದಿ ಸರಣೆ ಮಲ್ಲುಗದೇವಿ
ಗೆಜ್ಜಾರ್ರ ಮನೆಗೆ ಬರುತಾಳೆ |

ಗೆಜ್ಜಾರ್ರ ಮನೆಗೆ ಬಂದು
ಒಂದು ಚೂರಿಯನ್ನು ಮಾಡಿಸ್ಕೊಂಡು
ತನ್ನ ಪತೀ ಕೈಲಿ ಕೊಟ್ಟಲು-

ತಾಯಿ-ಕುಂಬಾರ ಮನೆಗೆ ಬರುತಾಳೆ |
ಮಡ್ಕೆ ಒಳ್ಳೆ ಮಾಡೋವಂತ ಕುಂಬಾರ್ರ ಮನೆಗೆ ಬಂದು
ಮಣ್ಣಲ್ಲಿ ಬಾಂಡ್ಯಾಳ ಮಾಡುಸ್ಕೊಂಡು-
ತಾಯಿ-ಪತ್ಯೊಲಿ ತಂದು ಕೊಡುತಾಳೆ |

'ಸ್ವಾಮಿ ಎಲ್ಲಾ ಆಯ್ತು
ನೀರನ್ನು ತರ್ತೀನಿ' ಅಂತ್ಹೇಳಿ.

ತನ್ನ ಪತಿ ಮುಂದೆ ಕೂತ್ಕೊಂಡು ಸುಂಗಾರವಾಗಿ
ಪತಿ ಪಾದಕೆ ಸರಣ ಮಾಡ್ಬುಟ್ಟು
ಎಡದ ಕುಕ್ಸಲ್ಲಿ ತಾಮ್ರದ ಚೊರಿಗೆ ಎರ್ಕಿದ್ದಾಳೆ
ಬಲದ ಕೈನಲ್ಲಿ ಹಿತ್ತಾಳೆ ಚೊರಿಗೆ ಹಿಡಿದಿದಾಳೆ
ಹಾಲದ ಕೊಳಕೆ ನೀರಿಗೆ ಬಂದಳು.

ಹಾಲದ ಕೊಳಕೆ ತಾಮ್ರುದ ಬಿಂದುಗೆ ಎಸುದ್ಬುಟ್ಟು
ಮೈನಲ್ಲಿ ಧರಿಸಿದ್ದಂತ ಒಡ್ವೆ ವೈರೂಡ್ಯವನ್ನು ಬಿಸಾಕ್ಬುಟ್ಟು-

ಸೀರೆ ರವುಕೆ ಹರುದು ಕೈಯಿನ ಬಳೆ ನರುಕಿ
ಮಾರುದ್ದ ಮಂಡೆಯ ಕೂದ್ಲ ಕೆದರುತಾಳೆ |

ಮುಂಡಾರುತಿ ಇಕಾರ ರೂಪ ತಾಳ್ಕೊಂಡು-

ತೂತು ಬಿಂದ್ಗೆ ಕಂಕ್ಳಲ್ಲಿ ಎರೀಕೊಂಡು
ನೀರ ತಕ್ಕೊಂಡು ಸರ್ನೆ ಬರುತಾಳೆ |

ಮಡುವಾಳ್ ಮಾಚಪ್ಪ
ಬರುವಂತ ಮಡದಿ ಮೊಕುವನ್ನು ನೋಡುದ್ರು
ಏನ್ಲೆ ಮಡದಿ ಹೋಗುವಾಗ ಒಂಥರಾ ಹೋದೆ
ಬರುವಾಗ ಒಂಥರಾ ಬರ್ತಿಯಲ್ಲ
ನಿಂಗೆ ಹೇಳೋರು ಕೇಳೋರು ಯಾರೂ ಇಲ್ಲ ಅಂತ್ಹೇಳಿ
ಮಡದಿ ಮುಂದಾಲೆಯನ್ನು ಹಿಡುಕೊಂಡು
ಹೊಸ್ತುಲ ಮ್ಯಾಲೆ ಕೆಡಿಕೊಂಡು ಅಂತೆ ನೋಡುದ್ನಲ್ಲ
ಮನೆಸೂರಿನಲ್ಲಿ ಚೂರಿ ಸಿಗ್ಸಿತ್ತು
ಆ ಚೂರಿಯನ್ನು ಎಳ್ಕೊಂಡು
ತನ್ನ ಹೆಂಡ್ತಿಯನ್ನು ಹೊಸ್ತಿಲ ಮ್ಯಾಲೆ ಕೆಡಿಕೊಂಡು-

ಅಯ್ಯ-ಕರಕರನೆ ಕೊರಳ ಕೂದಾನು |

ಗರಗರ ಕೊರಳ ಕೂದಿದಾನೆ
ರಕ್ತ ಹರೀತಿತ್ತಲ್ಲ
ಪಕ್ಕದಲ್ಲೆ ಮಣ್ಣಿನ ಬಾಂಡವಾಳ ಇತ್ತಲ್ಲ-

ಆ ರಕ್ತವನ್ನು ತಗ್ಬು ಬಾಂಡವಾಳ್ಕೆ ಬಸುಕೊಂಡು
ಅವುಳ ಎದೆಯ ಗುಂಡಿಗೆಯ ಸಿಗಿದಾನು |

ಎದೆಯ ಗುಂಡಿಗೆಯನ್ನು ಸಿಗಿದಿದಾನೆ
ಹೊಟ್ಟೆಯೊಳಗಿತ್ತಲ್ಲ ಈಲಿ ತಕ್ಕೊಂಡು -

ಆದ-ನೀಲಿ ಆಜ್ಞೋಕೆ ಶರ್ಣ ಮಡಗೀದ |

ತನ್ನ ಮಡದಿ ತಲೆಯನ್ನು ಒಡುದನಲ್ಲ
ತಲೆ ಎರಡು ಭಾಗವಾಯ್ತು
ಆ ಮಿದ್ಳೆ ಇತ್ತಲ್ಲ -

ಅದ-ಗಂಜಿ ಅಜ್ಜುಕೆ ಸರಣ ಮಡಗೀದ |

ತಲೆ ಚಿಪ್ಪಿತ್ತಲ್ಲ ಅದ ಬಾಂಡವಾಳ ಮಾಡ್ಕೊಂಡು
ಹೆಡ್ತಿ ರುಂಡಿ ಮ್ಯಾಲೆ ಬಾಂಡುವಾಳವನ್ನು ಮಡಗಿದಾನೆ
ಅಗ್ಗುದೇವ್ತಿ ಪಾದ ನೆನುಕೊಂಡ ತಕ್ಷಣ
ಅಗ್ಗುದೇವ್ತಿ ಹತ್ಕೊಂಡು ಧಗಧಗಾಂತ ಉರೀತಿದ್ರೆ
ಮಿದ್ಳೆ ಕೊತ್ತ ಕೊತ್ತನೆ ಕುದೀತಿದೆ
ಇದ ನೋಡ್ಬುಟ್ಟು ಶರಣ ಮಾಚಪ್ಪ-

ಅಲ್ಲಿ ಬಸವಣ್ಣೋರ್ ಪಾದ ನೆನುಕೊಂಡ |

'ಬಸವಣ್ಣ ನಿಮ್ಮ ಪಾದವೇ ಗತಿ' ಅಂತ್ಹೇಳಿ
ಅವರು ಕೊಟ್ಟಂತ ಮೈಲಿಗೆ ಶಿವಕಂತೆಯನ್ನು ತಕ್ಕೊಂಡು
ಒಳುಗೆ ಇಗ್ಗುಲಿಸಿ ನೋಡುದ್ನಲ್ಲ
ಹೇನು ಕೂರೆ ತಿಗಣೆ ನತ್ತು ನಸುರು
ಮೊಟ್ಟೆಮರಿಯಾದಿಯಾಗಿ
ಒಂದು ಲಕ್ಷುದ ಮ್ಯಾಲೆ ತೊಂಬತ್ತೇಳು ಕೋಟಿ ಜೀವ
ಪ್ರಾಣಿ ಇತ್ತು
ಅದುನ ಎರಡು ಕೈಲೂ ಗೋರ್ಕೊಂಡು
ತನ್ನ ಹೆಡ್ತಿ ರಕ್ತ ಇತ್ತಲ್ಲ
ರಕುತ್ತೊಳೀಕೆ ತೂಯ್ದು ಬಿಸಾಕ್ಬುಟ್ಟುರು
ಹೇನು ಕೂರೆಯೆಲ್ಲ ರಗ್ತಾ ಕುಡುದ್ಬುಟ್ಟು ಅಳ್ಕೋಗ್ಬುಟ್ಟೊ
ಮೊಟ್ಟೆಯಾಗಿದ್ದವೆಲ್ಲ ಮರಿಯಾಗ್ಬುಟ್ಟೊ
ಕಾಲಿ ಜೋಳುಗೆ ಇತ್ತಲ್ಲ
ಅದುನ್ನ ತಕ್ಕೊಂಡು ಕೈಲಿ ಹಿಡುಕೊಂಡು
ಹೆಡ್ತಿ ಮಿದುಲೇ ಕೂದಿತ್ತಲ್ಲ
ಆ ಗಂಜೇ ಒಳೀಕೆ ಚನ್ನಾಗಿ ಅಜ್ಜುಬುಟ್ಟು
ಅವಳ ಈಲಿ ಕುಂಡೋಗಿ ನೀಲಿ ಮಾಡ್ಕೊಂಡು
ಸಂತೋಷದಿಂದ-

ರಾವ್ಮಡಿಯ ಸರಣ ಮಾಡವುನೆ |

ಆ ರಕ್ತದ ಒಳುಗಿದ್ದಂತ ಜೀವಜಂತುನೆಲ್ಲ ತಕ್ಕಂಡು
ಜೋಳಿಗೆ ಒಳೀಕೆ ತುಂಬಿದಾನೆ
ರಾವ್ಮಡಿ ಮಾಡ್ಬುಟ್ಟು
ಆ ಶಿವುಕಂತೆ ಜೋಳ್ಗೆಯನ್ನು ತಕ್ಕೊಂಡೋಗಿ

ಗುಂಟುದಲ್ಲಿ ಸಿಕ್ಕಾಕ್ಬುಟ್ಟು
ಹೆಡ್ತಿ ಮೂಳೆ ಮಾಂಸನೆಲ್ಲ ತಕ್ಕೊಂಡೋಗಿ
ಒಂದು ಈಚುಲ್ ಪುಟ್ಟೇನಲ್ಲಿ ತುಂಬುಟ್ಟು
ಯೋಚ್ನೆ ಮಾಡ್ತಾ ಕುಂತಿದ್ರೆ-

ಓದೋಕೆ ಹೋಗಿರುವಂತ ಭಾಗ್ಯವುಳ್ಳ ಕೆಂಪಣ್ಣ
ಓದ್ಕೊಂಡು ಮನೆಗೆ ಬರುತಾನೆ |

ಬರುವಂತ ಮಗನ ಒಳ್ಳೆ ನೋಡವ್ನೆ ಮಾಚಯ್ಯ
ದುಕ್ಕಾ ಶೋಕಾವ ಸರಣ ಮಾಡುತಾನೆ |

ದುಕ್ಕ ಮಾಡುತಿದ್ರೆ ೬೬೦
ಬಂದು ತಂದೆ ಕೈಯನ್ನು ಹಿಡ್ಕೊಂಡ
'ತಂದೆಯವರೆ ತಾಯೆಲ್ಲಿ -

'ಅಪ್ಪ-ತಾಯಿಲ್ದ ತಬ್ಲಿ ನೀನಾದೆ' |

'ತಂದೆಯವರೆ ನಮ್ಮ ತಾಯಿ ಏನಾದ್ಲು'

'ಅಯ್ಯೊ ನನಕಂದ ನಿಮ್ಮ ತಾಯಿ
ನಿಮ್ಮಯ್ಯುಂಗೆ ಸಕತ್ತು ಕಾಯ್ಲಾ ಅಂತೆ
ನಿಮ್ಮ ತಾತುನ್ನ ನೋಡ್ಕೊಂಡು ಬತ್ತಿನಿ ಅಂತ ಹೋದವಳು
ಇನ್ನೂ ಬರ್ನಿಲ್ಲಪ್ಪ
ಅದಕ್ಕೆ ಹಂಗಂದಿ.

ಬಾ ಇಲ್ಲಿ ಬಸವಣ್ಣನವರಿಗೆ ೬೭೦
ಶಿವುಕಂತೆ ಜೋಳಿಗೆ ಕೊಟ್ಟು ಬರುವ' ಅಂತ್ಹೇಳಿ
ಶಿವುಕಂತೆಯನ್ನು ಎರೀಕೊಂಡು
ಹಿಂದೆ ಮಗುನ್ನ ಕಟ್ಕೊಂಡು-

ನಂದಿ ಗುರುಮಠುಕೆ ಬರುತಾನೆ |

ಎಂಟು ದಿವ್ಸ ವಾಯ್ಬಿ ತಕ್ಕೊಂಡೋದಂತ ಮಾಚಪ್ಪ
ಇನ್ನಾಗ್ನೂ ಬರ್ನಿಲ್ಲ ಅಂತ್ಹೇಳಿ
ಉರೀ ಗದ್ಲೆ ಮ್ಯಾಲೆ ಬಸವಣ್ಣ ಕೂತಿದ್ರೆ
ಬಂದಂತ ಮಾಚಪ್ಪ ಕಡೇ ಬಾಗ್ಲಲ್ಲಿ ನಿಂತ್ಕೊಂಡು-

ಬಸವಣ್ಣೋರ ಮೊಕುಗಳನ್ನ ನೋಡಿ
ಸಿರುಬಾಗಿ ಸರಣ ಮಾಡುತಾರೆ | ೬೮೦

'ಅಪ್ಪಾ ಮಾಚಯ್ಯ
ಎಂಟು ದಿವ್ಸ ವಾಯ್ಬಿಯನ್ನು ತಕ್ಕೊಂಡೋಗಿದ್ದೆಯಲ್ಲ
ರಾವ್ಮಡಿ ಮಾಡಿ ತಂದ್ಕಪ್ಪ?' -

'ಅಯ್ಯೊ ರಾವ್ಮಡಿಯನ್ನು ಮಾಡಿವ್ನಿ ಬಸವಣ್ಣ
ನೀವು ಒಪ್ಪಿಸಿಕೊಳ್ಳಿ ನಿಮ್ಮೊಡವೀಯ |

ಬಸವಣ್ಣ ತಕ್ಕೊಳ್ಳಿ ಶಿವುಕಂತೆ ಜೋಳಿಗೆಯ'
'ಏನು ಮಾಚಯ್ಯ, ಒಂದಿಂಚು ಕಮ್ಮಿ ಮಾಡಿದ್ದೀರ್ಯಾ?'
'ಹೌದು ಗುರುವೆ?'
'ಹಂಗಾದ್ಮೇಕೆ ಮಡುಗಪ್ಪ ತಕಡಿ ಮ್ಯಾಲೆ' ಅಂದನು ಬಸವಣ್ಣ-

ಒಕ್ಕಡೆ ತಕಡಿ ಬಟ್ಟನ್ನು ಮಡಗಿ ತ್ರಾಸ್ ಹಿಡ್ಕೊಂಡು ೬೯೦
ಜೋಳೀಗೆ ತೂಕ ಮಾಡುತಾರೆ |

ಸರಿತೂಕ ತೂಗ್ತು
'ಸಾಬಾಸ್ ಮಾಚಯ್ಯ
ಇದೇನು ನೀರಲ್ಲಜ್ಜಿ ಮಡಿ ಮಾಡಿದ್ಕೊ ರಾವ್ಮಡಿ
ಮಾಡಿದ್ಕೋಪ್ಪ!'

'ಸ್ವಾಮಿ ರಾವ್ಮಡಿ ಮಾಡಿದ್ದೀನಿ ಗುರುವೆ.'

'ಅಪ್ಪಾ ಹೆಂಗ್ಮಾಡ್ದಿಯಪ್ಪ?'

'ಸ್ವಾಮಿ ಯಾವಳೊ ಮುದುಕಮ್ಮ ನಮ್ಮನೆಗೆ ಬಂದಲು
ಅವುಳನ್ನ ಕೂದ್ಬುಟ್ಟು, ಅವುಳ್ಕಕ್ತುದಲ್ಲಿ -

ರಾವ್ಮಡಿಯ ಮಾಡಿವ್ನಿ ಬಸವಣ್ಣ' | ೭೦೦

ಹಂಗಂದ ಮಾತ ಕೇಳವ್ನೆ ಕಂದ ಕೆಂಪಣ್ಣ
ಅವ್ನು - ಲಬಲಬನೆ ಬಾಯ ಬಡಿದಾನು |

'ಒಹ್ಹೊ ತಂದೆಯವುರೇ
ಹೆತ್ತ ತಾಯನ್ನು ಕೂದಾಕಿದೀರ್ಯಾ?' ಅಂದ್ಬುಟ್ಟು ಅಳುತಿದ್ರೆ

'ಇಲ್ಲಪ್ಪ ಕಂದ ಇಲ್ಲ
ನಿಮ್ಮ ತಾಯ ಕೂದಿಲ್ಲ' ಅಂತ ಮಾಚಪ್ಪ ಹೇಳ್ತಿದ್ದರೆ-

ಇವ್ನು-ಕಿಚ್ಚೆದ್ದು ಶೋಕ ಮಾಡುತಾನೆ |

'ಸಾಬಾಸ್ ಮಾಚಯ್ಯ ಸರಣ
ಆದ್ರೂ ನಿನ್ನ ಸರಣತ್ವ ತಿಳಿದಂಗಾಯ್ತು
ಇಷ್ಟೇ ಸಾಕು ನಿಜಾ ನೋಡಿದ್ದು
ಅಪ್ಪಾ ಮಾಚಯ್ಯ ಶಿವುಕಂತೆ ಜೋಳಿಗೆ ಒಪ್ಪುಸ್ಕೊಬೇಕಾದ್ರೆ-

ನಿನ್ನ ಮಡದಿ ಮಲ್ಲುಗದೇವಿ ಬರಬೇಕು' |

'ಅಯ್ಯೊ ಸ್ವಾಮಿ ನನ್ನ ಹೆಂಡ್ತಿ ಯಾಕೆ ಬರಬೇಕು
ನಿಮ್ಮ ಒಡುವೆಯ ನೀವು ಒಪ್ಪುಸುಗೊಳ್ಳಿ' |

'ಇಲ್ಲ ಮಾಚಯ್ಯ ನಿನ್ನೆಡ್ತಿ ಬರ್ಲೇಬೇಕು'
ಅಂತ ಬಸವಣ್ಣ ಹೇಳಿದುರು
ಮಾಚಪ್ಪನವರು ಚಿಂತೆ ಮಾಡ್ತಾ ನಿಂತಿದಾರೆ
ಬಸವಣ್ಣೋರು ನೆಗ್ತಾ ಇದ್ದಾರೆ
'ಸರಣ ಮಾಚಪ್ಪ ಹೆದುರ್ಬ್ಯಾಡ
ನಿನ್ನ ಹೆಡ್ತಿ ಹೆಸ್ರಿಡ್ಲು ಕೂಗಪ್ಪ' ಅಂದರು ಬಸವಣ್ಣ.
ಬಸವಣ್ಣೋರ ಮಾತ್ಕೇಳಿ ಕಣ್ಣೀರ್ ತುಂಬ್ಕೊಂಡು
ಬಿಕ್ಕುಳಸ್ತ ದುಕ್ಕ ಮಾಡ್ತ 'ಮಡ್ಡಿ ಮಲ್ಲುಗ್ದೇವಿ!'
ಅಂತ ಮೂರ್‌ದಪ ಕೂಗಿ ಕರುದ್ನಂತೆ
ಕೂಗಿ ಕರುದಾಗ-

ಅಯ್ಯಾ-ದಡಬಡನೆ ಎದ್ದು ಬರುತಾಳೆ |

ಆಗ ಮಾಚಯ್ಯ ಮಡ್ಡಿ ಮಲ್ಲುಗ್ದೇವಿ ಕಂಡು
ಸಂತೋಷಪಟ್ಟಿದ್ದಾರೆ
ಗಂಡ ಹೆಡ್ತೀರಿಬ್ರು ಭಕ್ತಿಯಿಂದ ಶಿವುಕಂತೆ ಒಪ್ಸಿದ್ದಾರೆ.
'ಅಪ್ಪಾ ಶರಣ ಮಾಚಯ್ಯ
ಈ ಶಿವುಕಂತೆ ಸಾಕ್ಷಾದ್ ಶಿವನದು
ಮುಂದೆ ಬರುವಂತ ಕಲಿಯುಗವನ್ನೂ ಕಣ್ಣೆತ್ತಿ
ನೋಡ್ಬುಟ್ಟು
ಕೈಲಾಸ್ಕೆ ಹೋಯ್ತಿವಲ್ಲ-

ಆಗ ನೀನು ಮುಕ್ಷ ಬರಬೇಕು' ಅಂತ್ಹೇಳಿ
ಆಸುರ್ವಾದ್ವ ಬಸವಣ್ಣ ಕೊಡುತಾರೆ |

ಗಂಡ ಹೆಡ್ತೀರು ಬಸವಣ್ಣೋರ ಪಾದ್ಕೆ ಬಗ್ಗಿ
ಸರಣ್ಮಾಡಿದ್ದಾರೆ
ಮಗ ಕೆಂಪಣ್ಣನು ಸರಣ್ಮಾಡಿದ್ದಾನೆ-

ಅವುರ ಕೈನಿಂದ ಆಸುರ್ವಾದವನ್ನು ಪಡ್ಕೊಂಡ
ಶರಣಾರು ಮನೆಗೆ ನಡೆದಾರು |

ಶರಣ ಮಾಚಪ್ಪ ಕತೆ ಕೇಳೀದ ಮಾನ್ಯರಿಗೆ
ಹೊತ್ತಿದ್ದ ಪಾಪ ಪರಿಯಾರ |

ಬನ್ನೀರೊ ಸ್ವಾಮಿಗೆ ಶರಣೆನ್ನಿ

ಒಕ್ಕಳ ಹುರಿಗೆಜ್ಜೆ ಒಕ್ಕಳ ಕಿರುಗೆಜ್ಜೆ
ಚೊಕ್ಕ ಬೆಳ್ಳೀಯ ಮೊಕುರಂಬ - ತಮ್ಮೀಹಳ್ಳಿ
ತಿಟ್ಟಿನಲ್ಲಿರುವ ಬಸವಣ್ಣಗೆ |

ಉತ್ತೇನಹಳ್ಳೀಯ ಸತ್ಯಶರಣರು ಬಂದು
ಕೆತ್ತವುರೆ ಕಡಲೆ ಬಸವನ - ಕೊಣಸೂರ
ಉತ್ತಮರು ಪಲ್ಲಕ್ಕಿ ಹೊತ್ತವುರೆ |

ಹೊನ್ನೂರ ಬಸವಯ್ಗೆ ಚಿನ್ನಾದ ಕೋಡಣಸು
ಮುನ್ನೂರೊಕ್ಕಳ ಸರಗಂಟೆ - ಸರಗೆಜ್ಜೆ
ಬನ್ನೀರೊ ಸ್ವಾಮೀಗೆ ಸರಣನ್ನಿ !

ಹೊಲೇರ ಹೊನ್ನಯ್ಯ- ೧

ಸುಪ್ಪಿ ಬಾ ಸ್ವಾಮಿ ಬಸವಯ್ಯ ಸುಪ್ಪಿ * | *ಸೊಲ್ಲು* |

ಬಡಗೀಯ ಹಟ್ಟೀಲಿ ಬೆಡಗೀನ ಕಲುಕಂಬ
ಕಂಬಿದ್ದರೇನು ತೊಲೆಯಿಲ್ಲ |

ಕಂಬಿದ್ದರೇನು ತೊಲೆಯಿಲ್ಲ ಬಡಗೀ ಮನೆ
ರಂಬಿದ್ದರೇನು ಕುಲಬೇರೆ ?

ರಂಬಿದ್ದರೇನು ಕುಲಬೇರೆ ಬಡ್ಗಿಹುಡ್ಗಿ
ಸಿಕ್ಕಟ್ಗೆ ಸೀರಣ್ಗೆ ತಕ್ಕೊಂಡು |

ಸಿಕ್ಕಟ್ಗೆ ಸೀರಣ್ಗೆ ತಕ್ಕೊಂಡು ಬಡ್ಗಿಹುಡ್ಗಿ
ಅಂದಾಕೆ ಚೆಂದಾಕೆ ತಲೆಕೆರದು |

ಅಂದಕೆ ಚಂದಕೆ ತಲೆಯ ಕೆರೆದಳು
ಚಿನ್ನದ ಕುಪ್ಪಸ ಧರುಸವ್ವೆ |

ಚಿನ್ನಾದ ಕುಪ್ಪಸ ಕಟ್ಟಿಕೊಂಡು ಬಡ್ಗಿಹುಡ್ಗಿ
ಸಣ್ಣ ಮಲ್ಲಿಗೆಯ ಮುಡಿದಾಳೆ |

ಸಣ್ಣ ಮಲ್ಲಿಗೆಯ ಮುಡಿದಾಳೆ ಬಡ್ಗಿಹುಡ್ಗಿ
ಕೈಲಿ ಕರಡಿಯ ಹಿಡುಕೊಂಡು |

ಕೈಲಿ ಕರಡೀಯ ಹಿಡುಕೊಂಡು ಬಡ್ಗಿಹುಡ್ಗಿ
ಅಂದ ಚೆಂದಾಕೆ ಮಕನೋಡಿ |

ಅಂದ ಚೆಂದಾಕೆ ಮಕನೋಡಿ ಬಡ್ಗಿಹುಡ್ಗಿ
ಹಣೆಗೆ ಕುಂಕೂಮ ಇಕ್ಕವುಳೆ |

ಅಂದ ಚೆಂದಾಕೆ ಮಕವ ನೋಡಿದಾಳೆ
ಕುತನೀಚೀಲುವ ಎಡಗ್ಯೆಲಿ |

ಕುತನೀ ಚೀಲುವ ಎಡಗ್ಯೆಲಿ ಇಡುಕೊಂಡು
ರನ್ನದ ಕೊಡವ ಇರುಕ್ಯಾಳೆ |

ರನ್ನದ ಕೊಡವ ಇರುಕವ್ಯೆ ಬಡ್ಗಿಹುಡ್ಗಿ
ಬಾವಿ ನೀರೀಗೆ ಹೋಗುತಾಳೆ |

ಬಾವಿ ನೀರಿಗೆ ಹೋದಳು ಬಡ್ಗಿಹುಡ್ಗಿ
ಕಲಕುತ ನೀರ ಮೊಗುದಾಳೆ |

ಕಲಕಿ ನೀರ ಮೊಗುದಾಳೆ ಬಡ್ಗಿಹುಡ್ಗಿ
ಕೊಡವ ಹೊತುಕೊಂಡು ಬರುತಾಳೆ |

ಕೊಡುವ ಹೊತುಕೊಂಡು ಬಡ್ಗಿಹುಡ್ಗಿ ಬರುವಾಗ
ಹೊಲೇರ ಹೊನ್ನಯ್ನ ಮಗನಲ್ಲೊ |

ಹೊಲೆಯ ಹೊನ್ನಯ್ನ ಮಗನು ಏನಂದಾನು
ಏಳು ಸುತ್ತೀನ ಮಲ್ಲೀಗೆಗೆ |

ಏಳುಸುತ್ತೀನ ಮಲ್ಲೀಗೆ ಮೊಗ್ಗೀಗೆ
ಕಬ್ಬಿಣ್ಣಬೇಲಿಯು ತರವೇನೆ |

ಕಬ್ಬಿಣ್ಣ ಬೇಲಿ ಯಾಕೆ ? ಕಲ್ಲುಕಟ್ಟೆ ಯಾಕೆ ?
ನಿಲ್ಲೆ ನಿನ್ನ ಜೊತೆಗೆ ಬರುತೀನಿ |

ಬಿಳಿಯೆಲೆಗೆ ಸುಣ್ಣ ಸವರಿ ಕಳಿಯಡ್ಕೆ ಮಡಗಿ
ಮೆಲುವಾಕೆ ಹುಡುಗ ಕೊಡುತಾನೆ |

ಬಡಗೀಯ ಹುಡುಗೀಯ ಬಳಸಿ ನಿಂತಾನು
ಬಿಳಿಯೆಲೆ ಮೆಲಿದಾನೆ ಹೊಲೇರುಡುಗ |

ದಾರಿ ಬಿಡೆಂದಾರು ದಾರಿಯ ಬಿಡದೆ
ಎಲೆಮಡಿಚಿ ಲವಳ ಬಾಯಿಗೆ |

ಬಿಳಿಯೆಲೆ ಮಡಚಿ ಬಾಯೀಗೆ ಇಡಲಾಗ
ಸಿಡುಕಲ್ಲಿ ಹೊಂಟಳು ಬಡ್ಗಿಹುಡ್ಗಿ |

---

* ಎರಡೆರಡು ಪಾದಗಳಿಗೆ ಅಂದರೆ ನಿಂತಗೆರೆ ಇರುವಲ್ಲಿ 'ಸುಪ್ಪಿ' ಎಂದು ಹೇಳಿ ಅನಂತರ ಸೊಲ್ಲಿನ ಪೂರ್ಣ ಭಾಗವನ್ನು ಹಾಡಬೇಕು.

ಕೊಡವನೆ ಹೊತುಕೊಂಡು ಅರಮನ್ಗೆ ಹೋದಳಲ್ಲ
ಅರಮಲ್ಲಿ ಕೊಡವ ಇಳುಕ್ಯಾಳೆ |

ಅರಮಲ್ಲಿ ಕೊಡವ ಇಳುಕಿದ ಬಡ್ಗಿಹುಡ್ಗಿ
ಮಂಚಾದ ಮ್ಯಾಲೆ ಮನುಗವ್ಳೆ |

ಮಂಚಾದ ಮ್ಯಾಲೆ ಮಕ್ಕಾಡೆ ಮನುಗವ್ಳೆ
ಅವುಳಪ್ಪ ಬಡಗಿ ಬಂದಾನಲ್ಲೊ | ೫೦

ಅವಳಪ್ಪ ಬಡಗಿ ಬಂದೇನ್ಹೇಳಿದ್ದಾನೆ
'ಯಾಕವ್ವ ಮಗಳೆ ಮನುಗಿದ್ದೀಯೆ? |

ಯಾಕವ್ವ ಮಗಳೆ ಮನುಗಿದ್ದಿ ನೀನೀಗ
ಏಳವ್ವ ಊಟವ ಮಾಡೇಳೆ' |

'ನಾನೆದ್ದು ಊಟಾವ ಮಾಡದಿಲ್ಲ ನನತಂದೆ
ಹೊಲ್ಯಾರ ವಮುಸ ಇಲ್ಲದಂಗೆ |

ಹೊಲ್ಯಾರ ವಮುಸ ಇಲ್ಲದಂಗೆ ನನತಂದೆ
ಇಸಗುಂಟೆನ್ಹಾಕಿ ಹರಗೋಗೊ |

ಇಸಕುಂಟೆನ್ಹಾಕಿ ಹರಗಿ ಬಾ ನನ ತಂದೆ
ಆಗೆದ್ದು ನಾನು ಊಟ ಮಾಡುತೀನಿ | ೬೦

ಎದ್ದು ಊಟವ ಮಾಡುತೀನಿ' ಅಂತಾಳೆ
ತಂದೇಗೆ ಅವಳು ಹೇಳುತಾಳೆ |

ಆಗಲು ಆ ಬಡಗಿ ಬೇಗಾನೆ ಹೋಗವ್ನೆ
ಕುಂಟೇಯ ಸುಂಗಾರ ಮಾಡುತಾನೆ |

ಕುಂಟೇಯ ಸುಂಗಾರ ಮಾಡೀದ ಬಡಗಿನ್ನು
ಒಕ್ಕಾಡಿಂದ ಅವ್ನು ಹರ್ಗುತಾನೆ |

ಬತ್ತಾದ ಗದ್ದೇಗೆ ಹತ್ತಾನೆ ನುಗ್ಗಿದಂಗೆ
ವಲೇರ್ನ ಇಸಗುಂಟೇಲಿ ಹರ್ಗುತಾನೆ |

ರಾಗೀಯ ಹೊಲದಲ್ಲಿ ಚೇಗೊಂದು ಇಲ್ಲದಂಗೆ
ಇಸಗುಂಟೇಲಿ ವಲೇರ್ನ ಹರ್ಗುತಾನೆ | ೭೦

ಜೋಳದ ಹೊಲದಲ್ಲಿ ಕೂಳೊಂದುಳೀದಂತೆ
ಇಸಗುಂಟೇಲಿ ವಲೇರ್ನ ಹರ್ಗುತಾನೆ |

ಬಡಗೀಯ ವಲೇರ ವಮುಸವೆ ಹರ್ಗುವಾಗ
ವಲೇರ ವಮುಸ ಇಲ್ಲದಂಗೆ |

ವಲೇರ ವಮುಸ ಇಲ್ಲದಂಗ ಮಾಡುತೀನಿ
ಅಂತ್ಹೇಳಿ ಬಡಗಿ ಹರ್ಗುವಾಗ |

ಒಂದೇಯ ಒಂದು ವಲೇರುಡುಗನಾದ್ರೆ
ಕದ್ದೇಯ ಓಡಿ ಹೋಗುತಾದೆ |

ಕದ್ದೇಯ ಓಡಿ ವಲೇರುಡುಗ ಹೋಗ್ವಾಗ
ನೀರ ಮಡುವಲ್ಲಿ ಮಡಿವಾಳಿ | ೮೦

ನೀರ ಮಡುವಲ್ಲಿ ಮಡಿವಾಳ್ ಮಾಚಯ್ಯನೋರು
ವಲೇರುಡ್ಗನ ಕಣ್ಗೆ ಬೀಳುತಾರೆ |

ಊರೀಗೆ ಹಿಂದಾಗಿ ನೀರೀಗೆ ಮುಂದಾಗಿ
ಸುವ್ವಾನಿ ಸೀರೆ ಒಗಿಯೋರ |

ಸುವ್ವಾನೆ ಸೀರೆ ಒಗಿಯೋ ಮಾಚಪ್ಪನೋರ
ನೋಡೀದ ವಲೇರುಡುಗಾನು |

ನೋಡೀದ ವಲೇರುಡುಗ ಓಡೋಡಿ ಬಂದು
ಮಡಿವಾಳ್ ಮಾಚಯ್ನ ತೆಬ್ಬಿಕೋತು | ೯೦

"ಪಟ್ಟಾಣ ಹಿಂದಾಗಿ ಕಟ್ಟೇನೆ ಮುಂದಾಗಿ
ಬಟ್ಟೇಯ ಒಗಿಯೋ ಶರಣಾರೆ |

ಉಸ್ಸಂತ ಉಸ್ಸಂತ ವಸ್ತ್ರಾವ ಒಗಿಯೋರೆ
ವಸ್ತ್ರವ ತೊಳಿಯೋ ಶರಣಾರೆ |

ನಾನು ನಿಮ್ಮೋನು ನಿಮ್ಮ ಮಗ ನಾನು"
ಅಂತ್ಹೇಳಿ ತೆಬ್ಬಿಕೋತು ವಲೇರುಡ್ಗ |

"ನನ್ನ ಕಾಪಾಡಿ ನಿಮ್ಮ ಧರ್ಮ" ಅನುತ್ಹೇಳಿ
ಮಾಚಪ್ಪ ತೆಬ್ಬಿಕೋತು ವಲೇರುಡ್ಗ |

ಹೋಗಿ ತೆಬ್ಬುಕೊಂಡ ಹೊಲ್ಯಾರ ಹುಡುಗಾನ
ಬಾನಿ ದಬ್ಬಾಕಿ ಮಡುಗ್ಯಾರೆ |

ಬಾನಿ ದಬ್ಬಾಕಿ ಮಡುಗವ್ರೆ ಮಾಚಪ್ಪ
ಅಲ್ಲಿಗೆಯ ಬಡ್ಗಿ ಹೋಯ್ತಾನಲ್ಲೊ | ೧೦೦

ಅಲ್ಲಿಗೆ ಹೋಗಿ ಬಡಗ್ಯೇನಂದಾನೆ
"ಇಲ್ಲೆ ಹೊಲೇರುಡ್ಗ ಓಡಿ ಬಂತೆ ?" |

"ಹೊಲೇರುಡ್ಗಾನ ಸುಳ್ಳ ನಾನೇನು ಬಲ್ಲೇನು ?"
"ನನ್ನ ಮಗನ ಬಿಸುಲಂತ್ಹೇಳಿ |

ನನ್ನ ಮಗನ ಬಾಳ ಬಿಸುಲಂತ್ಹೇಳಿ
ಬಾನಿ ದಬ್ಬಾಕಿ ಮಡಗಿದ್ದೀನಿ |

ಕೋಳಿ ಕೂಗುತಿದ್ದೊ ನಾಯಿ ಬಗುಳುತಿದ್ದೊ
ನನ್ನೆಡುತಿ ರಾಗಿ ಬೀಸುತಿದ್ದಳು |

ನನ್ನೆಡುತಿ ರಾಗಿ ಬೀಸುವ ಕಾಲದಲ್ಲಿ
ಬೆನ್ನಾಡಿ ಬಂದ ನನ್ನ ಮಗ | ೧೮೦

ಬೆನ್ನಾಡಿ ಬಂದ ನನ್ನ ಮಗ ನಾನೀಗ
ಬಾನಿ ದಬ್ಬಾಕಿ ಮಡಗಿದ್ದೀನಿ" |

"ನಿನ್ನ ಮಗನಾದರೆ ನಿನ್ನೊಂದಿಗುಣಬೇಕು
ನಿನ್ನ ಮಡದೀಯಾ ಎದಿಯಾಲೋ |

ನಿನ್ನ ಮಡದೀಯ ಎದಿಯಾಲ ಕುಡಿದಾರೆ
ಬುಟ್ಟೋಯ್ತೀನಿ ನಾನು ಮಡಿವಾಳೆ" |

ಆಗ ಮಡಿವಾಳಿ ಮಾಚಪ್ಪನೆಡುತಿನ್ನ
ಹಿಟ್ಟೊತ್ತುಕೊಂಡು ಬರುತಾಳೆ |

ಹಿಟ್ಟೊತ್ತುಕೊಂಡು ಬಂದಳು ಮಲ್ಲೀರಮ್ಮ
ಗಂಡನ ಕೈಗ್ ನೀರ ಕೊಡುತಾಳೆ | ೧೯೦

ಆಗಲೆ ಮಡಿವಾಳ ಮಾಚಪ್ಪನೋರಿನ್ನು
ಏರೀಯ ಹಿಂದಕೆ ಹೋದರಿನ್ನು |

ಏರಿಯ ಹಿಂದಕೆ ಹೋದ ಮಾಚಪ್ಪನೋರು
ಅಗ್ಗಾದ ಬಾಳೆದೆಲೆಯನ್ನು |

ಅಗ್ಗಾದ ಬಾಳೆದೆಲೆಯನ್ನು ಕುಯ್ಯಂಡಾಗ
ಬ್ಯಾಗದಲ್ಲವ್ವು ಬರುತಾರೆ |

ಬ್ಯಾಗದಲ್ಲವ್ವು ಬಂದಾರ್ ಮಾಚಪ್ಪನೋರು
ಊಟಾಕೆ ಅವ್ವು ಕೂರುತಾರೆ |

"ಕಂದಾನೂ ನಾನೂವೆ ಒಂದಿಗೂಟವ ಮಾಡಬೇಕು
ತತ್ತಾರೆ ಮಡದಿ ನಾನೀಗ" | ೧೩೦

ನೀರಾನೆ ಕೊಟ್ಟವ್ವೆ ಎಲೆಯಾನೆ ಹಾಸವ್ವೆ
ಊಟಕೆ ಅವಳು ಇಕ್ಕುತಾಳೆ |

ಎಲೆಯಾನೆ ಈಸಿಕೊಂಡು ಮಡಿವಾಳ್ ಮಾಚಪ್ಪನೋರು
ಚಿಳ್ಳುಗರಲ್ ಎಲೆಯ ಜಿಗುಳ್ಯಾರೊ |

ಚಿಳ್ಳುಗುರಲ್ಲೆಲೆಯ ಜಿಗುಳಿದ್ ಮಾಚಪ್ಪನೋರು
ಒಂದಿಗೂಟಾವ ಮಾಡುತಾರೆ |

ಒಂದಿಗೂಟಾವ ಮಾಡುತ ಕುಂತವ್ರೆ
ಅಲ್ಲೇಯ ಬಡ್ಗಿ ಬಂದವ್ನಲ್ಲ |

ಅಲ್ಲೇಯ ಬಡಗಿ ಬಂದು ಏನಂದಾನೆ
"ಒಂದಿಗುಂಡಾರು ಒಪ್ಪೋದಿಲ್ಲ| ೧೪೦

ಒಂದಿಗುಂಡಾರು ಒಪ್ಪೋದಿಲ್ಲ ಮಾಚಯ್ಯ
ನಿನ್ನ ಮಡದೀಯ ಎದಿಹಾಲ |

ನಿನ್ನ ಮಡದೀಯ ಎದಿಹಾಲ ಕುಡಿದಾರೆ
ಬಿಟ್ಟೋಯ್ತೀನಿ ಕಾಣೊ ಮಡಿವಾಳಿ" |

ಆಗ ಮಡಿವಾಳಿ ಮಾಚಪ್ಪನವರಾದ್ರೆ
ಮದುವ್ಯಾಗಿ ಮುವ್ವತ್ತು ವರ್ಸುವಲ್ಲೊ |

ಮದುವ್ಯಾಗಿ ಮೂವತ್ತು ವರ್ಷದಾಗಿಂದೂವೆ
ಮಕ್ಕಾಳ ಸುಖ ಅವ್ನುನಿಗಿಲ್ಲ | ೧೫೦

ಮಕ್ಕಳ ಸುಖ ಇಲ್ದಂತೆ ಮಾಚಪ್ಪೆಡ್ತಿಗೆ
ಹಾಲಾದರೆಂಗೆ ಬರುತಾವೊ |

ಆಗಲೆ ಮಡಿವಾಳ ಮಾಚಪ್ಪನ ಜೊತೆಗೆ
ಮಡದಿ ಮಲ್ಲೀರಮ್ಮ ತಾಯಿ |

ಸ್ನಾನಗಳ ಮಾಡಿದರು ಮಡಿಗಳ ಉಟ್ಟಾರು
ಮಡಿಯಾಗಿ ಶರಣರು ಬಂದರು |

ಇಬ್ಬಾರು ತಾನಾವ ಮಡಿಗಳ ಮಾಡಿಕೊಂಡು
ಶಿವನೂ ಪಾರ್ವತಿಯ ನೆನುದಾರೋ |

ಶಿವನ್ನೂ ಪಾರ್ವತಿಯ ನೆನುಕೊಂಡು ಬ್ಯಾಗದಲ್ಲಿ
ಗಂಧಾದ ಕಡ್ಡೀಯ ಬೆಳುಗ್ಯಾರೇ |

ಗಂಧಾದ ಕಡ್ಡೀಯ ಬೆಳುಗ್ಯವ್ರೆ ಬೇಗನವ್ವು
ಕತ್ತೆ ಮೇಲೇರ ಹೇರಿಕೊಂಡು |

ಕತ್ತೆ ಮೇಲೇರ ಹೇರಿಕೊಂಡು ಕಂದನ
ಹಿಂದಿಂದುಗುಟ್ಟೆ ಕರುಕೊಂಡು |

ಕಂದನ್ನ ಹಿಂದ್ಗಾಡೆ ಕರಕೊಂಡು ಅವರಿನ್ನು
ಹೋಯ್ತಾರೆ ಅವರ ಅರಮನೆಗೆ |

ಹೋದಾರೆ ಅವ್ರು ಅರಮನ್ಗೆ ಬೇಗಾನೆ
ಬೆನ್ನಾಡಿ ಹೋದ ಬಡಗೀಯು |

ಬೆನ್ನಾಡಿ ಹೋದ ಬಡಗಿನ್ನೇನಂದಾನೆ
"ಅಂಗೆ ಎದಿಯಾಲು ಬಂದಾರೆ |

ಅಂಗೆ ಎದಿಯಾಲು ಬಂದಾರೆ ಮಡಿವಾಳ
ಒಪ್ಪೊ್ದಿಲ್ಲ ಕಾಣೊ ನಾನೀಗ |

ಒಪ್ಪೊ್ದೆ ಇಲ್ಲಾ ಮಡಿವಾಳ ನಾನೀಗ
ಏಳು ತೆರೆಯ ಹಾಕಿಸಯ್ಯ |

ಏಳುತೆರೆ ಹಾಕಿ ಆಚೇಲಿ ನಿಲಿಸಯ್ಯ
ಒಳಗೆ ನಿನ್ನ ಮಡದಿ ನಿಲಿಸಯ್ಯ |

ನಿನ್ನ ಮಡ್ದಿ ಮಲ್ಲೀರಮ್ನ ನಿಲಿಸಯ್ಯ
ಏಳುತೆರೆ ಬುಟ್ಟು ಎದಿಹಾಲು |

ಏಳುತೆರೆ ಬುಟ್ಟು ಎದೆಹಾಲು ಬಂದಾರೆ
ಬುಟ್ಕೋಯ್ತೀನಿ ಕಾಣೊ ಮಡಿವಾಳ" |

ಆಗ ಮಡಿವಾಳ ಮಾಚಪ್ಪ ಹೋದಾನೆ
ಏಳು ತೆರೆಯನಾಕಿಸ್ಯಾನೆ |

ಏಳೂ ತೆರೆನ್ಹಾಕಿ ಕಂದಯ್ನನ್ನೀಚೇಲಿ
ನಿಲ್ಸೀದ ಮಡಿವಾಳ ಮಾಚಪ್ಪನೋರು |

ಮಡದೀಯ ಒಳಗೆ ನಿಲ್ಸೀದ ಮಡಿವಾಳ
ಕಲ್ಯಾಣ್ದ ಬಸವಣ್ಣ ನೆನದಾನೊ |

"ಕಲ್ಯಾಣ್ದ ಬಸವಣ್ಣ ನಿನ ಪಾದವೇ ಗತಿ
ದಯವು ಇರಲಪ್ಪ ನಮ್ಮ ಮ್ಯಾಲೆ |

ಬೆಟ್ಟದಂಗೆ ಬಂದ ಈ ನಮ್ಮ ಕಷ್ಟವು
ಬೆಣ್ಣೇಯು ಆಗಿ ಕರಗಲಿ |

ಬೆಣ್ಣೆಯಾಗಿ ಕರಗಲಿ ಬಸವಣ್ಣ ಸ್ವಾಮಿ
ನಿಮ್ಮ ದಯವು ಒಂದಿರಲಿ ನಮ್ಮ ಮ್ಯಾಲೆ" |

ಹಂಗಂತ ಹೇಳಿ ಮಡಿವಾಳ ಮಾಚಪ್ಪನೋರು
ಮಡದೀಯ ಒಳಗ ನಿಲ್ಲೀಸಿ |

ಮಡದೀಯ ಒಳಗೆ ನಿಲ್ಲೀಸಿ ಆಗಿನ್ನು
ಏಳು ತೆರೆಯ ಬುಟ್ಟು ನಿಂತಾರು |

ಮಾಚಯ್ನ ಭಕ್ತಿ ಕಲ್ಯಾಣಕರುವಾದೊ
"ಅಕ್ಷಯವಾಗಲಪ್ಪ" ಅನುತಾರೆ |

ಅಕ್ಷಯವಾಗಲಪ್ಪ ಅನುತಾರೆ ಬಸವಣ್ಣ
ಏಳುತೆರೆ ಬುಟ್ಟು ಎದೆಯಾಲು |

ಏಳುತೆರೆಯ ಬುಟ್ಟು ಎದಿಯಾಲು ಚಿಲ್ಲನೆ
ಹಾರಿ ಕೋಡಿಗಟ್ಟೆ ಹರಿದಾವು |

ಏಳ್ತೆರೆ ಬುಟ್ಟು ಎದಿಯಾಲು ಹರಿದಾವೆ
ಕಂದಾನ ಬಾಯ್ತುಂಬ ಹರುದೋದೊ |

ಕಂದನ ಬಾಯ್ತುಂಬ ಹರಿಯೋದ ನೋಡ್ಕೊಂಡು
ಹಾಳಾದ ಬಡಗಿನ್ನು ಓಡಿಹೋದ |

ಹಾಳಾದ ಬಡಗಿನ್ನು ಓಡಿಹೋದ ಮೇಲೆ
ಮಗ್ನ - ಮಡಿವಾಳ ಮಾಚಪ್ಪ ಸಾಕಿದರು |

ಆಗ ಮಾಚಪ್ನೋರು ಹೊಲೇರೊನ್ನಯ್ನ ಮಗ್ನ
ಚೆನ್ನಾಗಿ ಸಾಕಿ ಸಲುಗ್ಯಾರೆ |

ಚನ್ನಾಗಿ ಸಾಕಿ ಸಲುಹ್ಯಾರಲ್ಲ
ಕತ್ತೆ ಕಾಯಾಕೆ ಹೋಗುತಾನೆ |

ಕತ್ತೇಯ ಕಾದವ್ನೆ ಕೈಪುಳ್ಳೆ ಆದವ್ನೆ
ವಳಗೇರೀವಳ್ಗೆ ಇರುವ್ಹೋನೆ |

ವಳಗೇರಿವಳ್ಗೆ ಅವ್ನಲ್ಲ ಕಂದಯ್ಯ
ಎದೆಬಡ್ದು ಅರೆಯ ಕಲ್ತವ್ನೆ |

ಎದೆಬಡ್ದು ಅರೆಯಾ ಕಲ್ತವ್ನೊಲೇರುಡ್ಗ
ಅನ್ನೆರ್ಡು ಕಿನ್ನುಡಿಯ ನುಡಿಸವ್ನೆ |

ಅನ್ನೆರ್ಡು ಕಿನ್ನುಡಿಯ ನುಡಿಸವ್ನೊಲೇರುಡ್ಗ
ಕತ್ತೆಯ ಅವ್ನು ಕಾದವ್ನೆ |

ಆಗಲಿನ್ನೂ ಶಿವ್ನೂ ಪಾರ್ವತಿಯೂವೆ
ಪಟ್ಟಕೆ ವಾದ್ಯಾವು ಇಲ್ಲದಾಲೆ |

ಪಟ್ಟಕೆ ವಾದ್ಯಾವು ಇಲ್ಲದಾಲೆ ಅವ್ರಿನ್ನೂ
ಚಪ್ಪ್ರಾದರೂ ಬಂದೇ ಇಲ್ಲ |

"ಮಣ್ಹಾಕಿ ಮೂವತ್ತು ದಿನ ಹಸ್ಕಾಕೆ ಹನ್ನೆರ್ಡು ದಿನ
ಚಪ್ಪರ್ಹಾಕಿ ಚಪ್ಪನ್ನೈವತ್ತಾರು |

ಚಪ್ಪರ್ಹಾಕಿ ಚಪ್ಪನ್ನೈವತ್ತಾರು ದಿನವಾದೂ
ಹಸೆಗವ್ರು ಇನ್ನೂ ಬಂದೇ ಇಲ್ಲ |

ಹಸೆಗೆ ನಾವು ಹ್ಯಾಗೋಗಕಾದ್ದು ?
ನಡಿಯಪ್ಪ ನೀನು ಬಡಗೀಯ |

ನಡಿಯಪ್ಪ ನೀನು ಬಡಗೀಯ ಮನೆತಾಕ್ಕೆ
ವಲ್ಕಾರ ವಮುಸ ಕೇಳಾನ |

ಬಡಗೀಯ ಮನೆತಾವ್ಕೆ ನಾವಾದ್ರೂ ಹೋಗಿನ್ನು
ವಲ್ಕಾರ ಹುಡುಗನ ಕೇಳಾನ" |

ಶಿವ್ನು ಪಾರ್ವತ್ಕೂ ಹೋದಾರ್ ಬಡ್ಗಿಮನ್ಗೆ
"ಯಾರೋ ಆಚಾರಿ ಬಾ ಈಚ್ಗೆ |

ಯಾರೋ ಆಚಾರಿ ಈಚೆಗೆ ಬಾರಯ್ಯ
ನಮ್ಮೊಲೆಯ ವಮುಸಾವ ತಂದುಕೊಡೂ |

ನಮ್ಮ ಒಲೆಯ ವಮ್ಸಾವ ತಂದ್ಕೊಡ್ದೆ ಹೋದ್ರೆ
ನಿನ್ನ - ಸೂಲಾಕೆ ಅಗ್ನಿ ಮಾಡ್ಸುವೆ |

ನಿನ್ನ ಸೂಲಾಕೆ ಅಗ್ನಿಯ ಮಾಡ್ಸುವೆ
ನಾವು - ಇಂದು ಪಟ್ಟಕೆ ನಿಲಬೇಕು |

ನಾವು ಪಟ್ಟಾಕೆ ನಿಲುವಂತ ಕಾಲದಲ್ಲಿ
ನಮ್ಮ - ವಲಮಗನ ವಾದ್ಯ ಇಲ್ಲುವಲ್ಲೊ |

ವಲಮಗನ ವಾದ್ಯಿಲ್ಲ ಭ್ಯಾಗುದಲ್ಲಿ ತಂದುಕೊಡೊ
ಇಲ್ದಿದ್ರೆ - ಕಬ್ಬರಸುದಂಗೆ ಅರುಸ್ತೀನಿ |

ಆಗಾಲೆ ಬಡಗೀಗೂ ಬಡಗಿಯ ಮಗಳೀಗು
ಬರಬಾರದ್ಯೋಚನೆ ಬಂದಿತಲ್ಲೊ |

ಆಗಾಲೆ ಬಡ್ಗಿಹುಡ್ಗಿ ಯೋಚನೆ ಮಾಡಿ
ಅಪ್ಪಾಗೆ ಏನ ಹೇಳುತಾಳೆ |

"ಕೇಳು ಕೇಳೊ ನಮುತಂದೆ ಕೇಳಪ್ಪ ನಮು ತಂದೆ
ನಾನು - ಮತ್ಯೂವೆ ನೀರೀಗೆ ಹೋಗುತೀನಿ |

ಮತ್ಯೂವೆ ಬಾವಿ ನೀರೀಗೆ ಹೋಗುತೀನಿ"
ಅಂತ್ಹೇಳಿ ಬಡಗೀಯ ಮಗುಳಾದ್ರೆ |

ಬಡಗೀಯ ಮಗಳಾದ್ರೆ ಕೊಡವನ್ನೆ ತಕ್ಕೊಂಡು
ನೀರೀಗೆ ಅವಳು ಹೋಗುತಾಳೆ |

ಕೊಡವಾ ತಕ್ಕೊಂಡು ಸಿವ್ನುನ್ನು ತಕ್ಕೊಂಡು
ತಲೆಮ್ಯಾಲೆ ಅವಳು ಆಕ್ಕವ್ಳೆ |

ತಲೆಮ್ಯಾಲೆ ಅವ್ಳು ಆಕ್ಕವ್ಳೆ ಬಡ್ಗೀರುಡ್ಗಿ
ಬಾವಿ ನೀರೀಗೆ ಹೋದಳಲ್ಲೊ |

ಬಾವಿ ನೀರೀಗೆ ಹೋದಾಳ್ ಬಡ್ಗಿಹುಡ್ಗಿ
ಕಲಕಿ ನೀರಾನೆ ಮೊಗುದವುಳೆ |

ಕಲಿಕಿ ನೀರನ್ನ ಮೊಗುದು ಮಡಗಿದಳಲ್ಲ
ಯೋಚಾನೆ ಮಾಡುತ ಕುಳುತವ್ಳೆ |

ಯೋಚನೆ ಮಾಡೂತ ಕುಳ್ತಿರೋ ತಕ್ಕೀಗ
ಮಡಿವಾಳ ಮಾಚಯ್ನ ಮಗಳಲ್ಲೊ |

ಮಡಿವಾಳ ಮಾಚಯ್ನ ಮಗಳು ಚನ್ನಾದೇವಿ
ನೀರೀಗೆ ಅಲ್ಲೀಗೆ ಹೋದಳಲ್ಲೊ |

ನೀರೀಗೆ ಅವಳೂವೆ ಹೋದಳಲ್ಲೊ ಅವ್ಳೂವೆ
ನೀರಾನೆ ಮೊಗ್ದು ಕೂತುಕೊಂಡ್ಲು |

ಆಗ ಬಡಗೀಯ ಮಗಳು ಹೊನ್ನಾದೇವ್ಯ
ಮಾಚಯ್ಯ ಮಗಳು ಚನ್ನಾದೇವಿ |

ಮಾತೀಗೆ ಎಳದು "ಏಳೇ ಹೊನ್ನಾದೇವಿ
ಕೊಡವ ಹೊತುಕೊಂಡು ಏಳೆಮ್ಮಾಲುಕೆ |

ಕೊಡವ ಹೊತುಕೊಂಡು ಏಳಮ್ಮ ಹೊನ್ನಾದೇವಿ
ಏನೆ ಯೋಚುಣೆಯ ಮಾಡುತೀಯೆ |

ನಿನಕಷ್ಟವಾದರೂ ಅದು ಏನು ಹೇಳೆ
ಸುಮ್ಮನೆ ಚಿಂತಿಸಬೇಡಮ್ಮ" |

"ಚಿಂತೇನೂ ಕಾಣೆ ಕಂತೇನೂ ನಾ ಕಾಣೆ
ನನ್ನ ಕಷ್ಟ ನನ್ನದು ಹೋಗು ತಾಯಿ |

ನನ್ನ ಕಷ್ಟವ ನೀನು ತೀರುಸೊಕಾದತ ?
ಹೋಗಮ್ಮ ನಿನ್ನ ಅರಮನೆಗೆ" |

"ನಾನೂವೆ ನೀನೂವೆ ಇಬ್ಬಾರೂ ದೋಸ್ತಿಗಾರ್ರು
ನಿನ್ನ ಕಷ್ಟ ನನಗೆ ಇರಲಮ್ಮ |

ನಿನ್ನ ಕಷ್ಟ ನನಗೆ ಇರಲಿ ಕಾಣೆ ತಾಯಿ
ಹೇಳಮ್ಮ ನೀನು ನನ್ನಕೂಟೆ" |

"ಹಿಂದೆ ನಮ್ಮಪ್ಪ ವಲ್ಕೇರ ವಮುಸಾವ
ಇಸ್ಕುಂಟೆನ್ಹಾಕಿ ಹರುಗ್ಸಂದ |

ಇಸ್ಕುಂಟೆನ್ಹಾಕಿ ಅರುಗ್ಸಂದ ತಿರುಗ್ಸಂದ
ಶಿವ್ನೂ ಪಾರ್ವತ್ಮೂ ಬಂದೋರೀಗ |

ಶಿವ್ನೂ ಪಾರ್ವತ್ಮೂ ಬಂದೇನನ್ನುತಾರೆ
ಶೂಲಕಾಗ್ನೇಯ ಮಾಡ್ಯವ್ರೆ |

ಶೂಲಕಾಗ್ನೀಯ ಮಾಡಿದ ಕಾರಣದಿಂದ
ನಮಗೆ ಯೋಚನೆ ಬಂದೈತೆ" |

ಆಗ - ಆ ಮಾತ ಕೇಳಿ ಚನ್ನಾದೇವೇನಂದ್ಲು,
ಅದುಕ್ಕಾಕೆ ಇಷ್ಟೊಂದು ಯೋಚನೆ |

ಕೇಳು ಕೇಳು ನಮ್ಮ ದೊಡ್ಡಪ್ಪನರುಮಲ್ಲಿ
ಒಂದೊಲೇರ ಹುಡ್ಗ ಐತಿ ಕನೆ |

ಹೊಲ್ಯಾರ ಹುಡ್ಗ ಐತಿ ಕಾನೆ ಹೊನ್ನಾದೇವಿ
ನಿಮ್ಮಪ್ಪ ಬಡಗೀಗೆ ಹೇಳೋಗು |

ನಿಮ್ಮಪ್ಪ ಬಡಗೀಗೆ ಹೇಳೋಗು ಹೊನ್ನಿ
ಬರ್ತೀನಿ ಬೀಗ ತೆಗಿಯೋಗು |

ಬೀರೀನ ಬೀಗ ಬೇಗಾನೆ ತಕ್ಕಂಡು
ಒಂದು ಮೊರದಷ್ಟ ಬಂಗಾರವ |

ಒಂದು ಮೊರ ಬಂಗಾರ ಒಂದು ಬಿಂದಿಗೆ ಹಣ
ತಕ್ಕೊಂಡು ಬೇಗ ಬರುವೋಗಿರೇ |

ತಕ್ಕೊಂಡು ಬೇಗ ಬನ್ನಿರಿ ನಿಮ್ಮ ತಂದೆ
ಕೊಂಡುಕೊಂಡಾರೆ ಕೊಡುತಾನೆ" |

"ಕೊಂಡುಕೊಳ್ಳೋದು ನಮಗೆ ಬೇಡವ್ವ
ಪಾರ್ವತಿಗೆ ವಾಲುಗ ಮಾಡಲವ್ವ |

ವಾಯ್ದುಕೆ ನೀವು ಕಳಿಸಿಕೊಡುತೀನಂದ್ರೆ
ಬೇಗನೆ ನಾವು ಬರುತೀವಿ" |

ಆಗಲೆ ಬ್ಯಾಗನೆ ಅರಮನ್ಗೆ ಬಂದವ್ಳೆ,
ಅವುರಪ್ಪನ್ನ ಬ್ಯಾಗ ಏಳಿಸವ್ಳೆ |

ಅವುರಪ್ಪನ್ನ ಬ್ಯಾಗಾನೆ ಏಳ್ಸಿ ಏನೆಂದಾಳೆ
"ಬೀರೀನಾ ಬೀಗ ಬ್ಯಾಗಾನೆ ತೆಗಿಯೋ |

ಬೀರೀನ ಬೀಗ ಬ್ಯಾಗಾನೆ ತೆಗಿಯಪ್ಪ"
ಒಂದು ಬಿಂದೀಗೆ ಹಣವನ್ನು |

ಒಂದು ಬಿಂದಿಗೆ ಹಣವ ಬೇಗನ ತುಂಬವ್ಳೆ
ಒಂದು ಮೊರ ಹೊನ್ನ ಬೇಗಾನೆ ತುಂಬಿ |

ತುಂಬಿಕೊಂಡಾಗ ಮಡಿವಾಳ ಮಾಚಪ್ಪ
ಅರಮನ್ಗೆ ಅವರು ಹೋಗುತಾರೆ |

ಅರುಮನ್ಗೆ ಅವ್ರು ಬ್ಯಾಗುದಲ್ಲಿ ಹೋದುರಲ್ಲ
ಮಡಿವಾಳ ಮಾಚಪ್ಪ ಅರುಮಲ್ಲಿ |

"ಮಡಿವಾಳ ಮಾಚಪ್ಪಾ ನಾವೀಗ ಬಂದೀವಿ
ನಿಮ್ಮಗನ ವಾದ್ಯಾಕೆ ಕಳ್ಸಿಕೊಡಿ |

ಕೈಲು ಕಬ್ಬಿಣ ಕೈಕ್ಕೆ ಅದ್ದೆ
ವಳಗೇರಿ ಒಳಗೆ ಅಪ್ಪುವರೆ ।

ವಳಗೇರಿ ಒಳಗೆ ಅಪ್ಪುವರೆ ಅಪ್ಪನ್ನ
ಹೆಣ್ಣಿನ್ನ ಕೈಪಿ ಸುತ್ತಿಕ್ಕವರೆ ।

ಹೆಣ್ಣಿನ್ನ ಕೈಪಿದು ನುಡಿಸೊ ಮಗ ನಿಮ್ಮ
ಶಿವ್ನ ಪಾರ್ವತ್ಮೊ ಈಗಾಲೆ ।

ಶಿವ್ನ ಪಾರ್ವತ್ಮೊ ಈಗಾಲೆ ಅವಿನ್ನ
ಪಟ್ಟಾಕೆ ವೇಗಾಕೆ ಏಲಬೇಕು ।

ಪಟ್ಟಾಕೆ ಅವ್ವ ಏಲಬೇಕು ಈಗಾಲೆ
ವಾಲ್ಗ ಇಲ್ಲಾದೆ ಅವುರವ್ರೆ ।

ವಾಲ್ಗ ಇಲ್ಲದೆ ಅವ್ವ ಪಟ್ಟಾಕೆ ಬಂದಿಲ್ಲ
ನಿಮ್ಮಗಡ ವಾದ್ಮಕೆ ಕ್ಸಿಕೊಡಿ" ।

ಆಗಾಲೆ ಮಡಿಮಾಳಿ ಮಾಚಪ್ಪನವರಿನ್ನ
ಮಗಡ ಮಾತಾವೆ ಕೊಡುತಾನೆ ।

ಮಗಡ ಮಾತಾವೆ ಕೊಟ್ಟು ಆಗಾಲೆಯ
ವಳಗೇರಿ ಮುಂದೆ ಕರಿಯಾಕೆ ।

ವಳಗೇರಿ ಮುಂದೆ ಕರಿಯಾಕೆ ಅವರಿಂಗ
ಮಡಿಮಾಳ್ ಮಾಚಪ್ಪ ಹೋಗುತಾರೆ ।

"ಕೇಳು ಕೇಳು ನವ ಮಗ್ನೆ ಕೇಳಪ್ಪ ನಮಮಗ್ನೆ
ಪಾರ್ವತಿ ಪಟ್ಟಾಕೆ ಏಲಬೇಕು ।

ಪಾರ್ವತಿ ಪಟ್ಟಾಕೆ ನಿಲ್ಲು ಬಾರೋ ನೀನೀಗ
ನಿನ್ನ ವಾದ್ಮೂವ ಬೇಡುತಾರೆ ।

ನಿನ್ನ ವಾದ್ಮಾವ ಬೇಡುತಾರೆ ಕುಂತುಕೊಂಡು
ಪಟ್ಟಾಕೆ ಅವ್ವ ನಿಂತೇಯಿಲ್ಲ" ।

ಆಗಾಲೆ ಮಾಚಪ್ಪೋರು ಮಗನ ಕರುಕೊಂಡು
ಅರಮನೆ ಹತ್ರಕೆ ಬಂದುರಲ್ಲ ।

ಅರಮನೆ ಹರಕೆ ಬಂದನಲ್ಲ ಕಂದಯ್ಯ
ಕಂದಾಗೂಟಾಕೆ ಇಡುತಾರೆ ।

ಕುಮಾಗೂಟಾಕೆ ಇಕ್ಕಿ ಮಾಚಪ್ಪ
"ಹೋಪ್ಪ ನಮಿರವ ನೀನೀಗ ।

ಹೋಪ್ಪ ನಮಿರವ ನೀನಾವ್ರೆ ಬೇಗನೆ
ಆನೆ ಸುಂಗಾರ ಮಾಡುಮಯ್ಯ ।

ಸುಂಗಾರ ಮಾತಿ ಸುಮಾವ ಹಾಕ್ಕ
ಹನ್ನೆರ್ಡ ಕಿನ್ನಡಿ ತಕ್ಕೊಳ್ಳೆ ।

ಹನ್ನೆರಡು ಕಿನ್ನಡಿ ತಕ್ಕೊಂಡು ನಮಿರವ
ಮಾತು ಕೊಟ್ಟಿನ್ನಿ ಮನಿಗೋಗೋ ।

ಮಾತು ಕೊಟ್ಟಿನ್ನಿ ಮನಿಗೋಗೊ ಪಾರುಮತ್ತಿ
ಪಟ್ಟಾಕಾಗಿಯ ನಿಲಿಸವ್ರೆ" ।

ಆಗಲು ಕಂದಯ್ಯ ಅಳುವುತ ಕರೆಯುತ
ಮಾಚಪ್ಪನೀನಂತ ಕೇಳುತಾನೆ ।

"ತುಪ್ಪ ಅಕ್ಕಪನಿಕ್ಕಿ ನೆತ್ತಿಗಿಕ್ಕೆಯನೊತ್ತಿ
ಚಿಕ್ಕ ಮಗನಿಂದ ಸಲಹೀದೆ ।

ಚಿಕ್ಕ ಮಗನಿಂದ ಸಲಹೀದ ನೀ ತಂದೆ
ಮಕ್ಕಳ್ಚಣಗೆ ಮನಸಾವ ।

ತಂಗ್ಳಿಟ್ಟನಿಕ್ಕಿ ತಲೆಗಿಕ್ಕೆಯನೊತ್ತಿ
ಸಣ್ಣಾ ಮಗುವಿಂದ ಸಲಹೀದೆ ।

ಸಣ್ಣಾ ಮಗುವಿಂದ ಸಲಹೀದ ನನತಂದೆ
ಬಂಗಾರ್ಕೆ ನೀನು ಮನುಷ್ಯಾವ ?" ।

ಬಂಗಾರ್ಕೆ ನೀನು ಮನುಷ್ಯಾದ್ಮ ನನತಂದೆ
ಅಂತ್ಹೇಳಿ ಆನೆ ಸುಂಗರ ಮಾಡಿದ ।

ಆನೆ ಸುಂಗಾರ ಮಾಡಿಕೊಂಡು ಕಂದಯ್ಯ
ಹನ್ನೆರಡು ಕಿನ್ನುಡಿ ಹಿಡುಕೊಂಡು ।

ಹನ್ನೆರಡು ಕಿನ್ನುಡಿ ಹಿಡಿದು ನುಡಿಸಿಕೊಂಡು
ಕಂದಯ್ಯ ಆನೆ ಮೇಲೆ ಹೋಗುತಾನೆ ।

ಕಂದಯ್ಯ ಆನೆ ಮೇಲೆ ಹೋಗುವಂತ ಕಾಲದಲ್ಲಿ
ಶಿವನ ಅರಮನೆಯ ದಾರೀಲಿ ।

ಶಿವನೂ ಪಾರ್ವತಿಯಾ ಅರಮನ್ಗೆ ಹೋಗುವಾಗ
ಹನ್ನೆರಡು ಕಿನ್ನುಡಿಯ ನುಡಿಸವ್ನೆ |

ಹನ್ನೆರಡು ಕಿನ್ನುಡಿಯ ನುಡುಸ್ಕೊಂಡು ಹೋಗುವಾಗ
ಬಾಯೊಳಗ್ಕ ಪೀಪೀ ಕೆಳೀಗ್ಸಿತ್ತು |

ಬಾಯೊಳಗ್ಕಾ ಪೀಪೀ ಕೀಳುಗೆ ಬಿದ್ದೇಟಿಗೇಯಾ
ಹಜಾಮರ ಹುಡುಗ ತಕಂಡವುನೆ |

ಹಜಾಮುರ ಹುಡುಗ ತಕ್ಕಂಡವ್ನೆ ಬೇಗುದಲ್ಲಿ
ಬಾಯೀಗೆ ಅವ್ನು ಇಟುಕೊಂಡ |

ಮತ್ತೂವೆ ಕಂದಯ್ಯ ಹನ್ನೆಡ್ಡಾಲುಗ ಮಾಡ್ತ
ಆನೆ ಮ್ಯಾಲೆ ತಾನು ಹೋಗುತಾನೆ | ೩೯೦

ಕೈಯೊಳಗ್ಕಾ ಕುಡ ಕೇಳೀಕ್ ಬಿದ್ದುದ ಕಂಡು
ಮಾದಿಗ್ರ ಹುಡುಗ ತಕ್ಕಂಡವ್ನೆ |

ಮತ್ತೂ ಕಂದಯ್ಯ ಹತ್ತೂ ವಾದ್ಯವ ಮಾಡಿ
ಪಾರ್ವತಿ ಅರಮನ್ಗೆ ಹೋಗುತಾನೆ |

ಪಾರ್ವತಿ ಅರುಮನ್ಗೆ ಹೋದಾನು ಕಂದಯ್ಯ
ಶಿವ್ನೂ ಪಾರ್ವತಿಯೂ ಅಗ್ಲೇಯ |

ಆಗ ಪಾರ್ವತ್ಕೂ ಶಿವ್ನೂ ನೋಡುತ
ಹೊಲಮಗ ಬಂದುದಕೆ ಸಂತೋಷದಿಂದ |

ಹೊಲಮಗ ಬಂದುದಕ್ಕೆ ಸಂತೋಷ ಪಡುತ
ಅವರು ಕೈ ತಪ್ಪಾಳೆಯ ಹೊಡಿದಾರು | ೪೦೦

ಹೊಲೆಮಗ ಬಂದಾಂತ ಕೈ ತಪ್ಳೆ ಹೊಡೆಯುತ
ಆನೇಯ ಮ್ಯಾಲಿಂದ ಇಳಿಸಾರೆ |

ಆನೇಯ ಮ್ಯಾಲಿಂದ ಇಳಿದಂತ ಕಂದಯ್ಗೆ
ಊಟಾಕೆ ಅವ್ರು ಕುಂಡ್ರುಸ್ತಾರೆ |

ಊಟಾಕೆ ಅವುರು ಕುಂಡ್ರಿಸೀದ ಕಂದಯ್ಗೆ
ಹಾಲು ಅನ್ನವ ಕೊಡುತಾರೆ |

ಹಾಲು ಅನ್ನವ ಉಂಡಾ ಮಗನೀಗೆ
"ಊಟ ಮಾಡೀದ ನನಮಗನೆ ?|

ಊಟಾವ ಮಾಡೀದೆ ನನಮಗನೆ ನೀನೀಗ
ನಾವೂ ಪಟ್ಟಾಕೆ ನಿಲುತೀವಿ | ೪೧೦

ನಾವು ಪಟ್ಟಾಕೆ ನಿಲುತೀವಿ ಕಾನಪ್ಪ
ನಿನ್ನೊಲೆಯ ವಾದ್ಯಾವ ಮಾಡೇಳೊ |

ನಿನ್ನೊಲೆಯ ವಾದ್ಯಾವ ಮಾಡೇಳೊ ಕಂದಯ್ಯ
ಆನೆ ಮೆಲೀಗ ಕುಂತುಕೊಳ್ಳೊ" |

ಆನೆಯ ಮ್ಯಾಲೆ ಕುಂತುಕೊಂಡು ಕಂದಯ್ಯ
ಹತ್ತೂ ವಾದ್ಯಾವ ತಕಂಡವುನೆ |

ಹತ್ತೂ ವಾದ್ಯಾವ ಮಾಡುವಾಗ ಆ ಕಂದ
ಶಿವುನ್ಗು ಪಾರ್ವತಿಗೂ ಪಟ್ಟ ಕಟ್ಟಿತಲ್ಲೊ |

ಶಿವ್ನೂ ಪಾರ್ವತಿಗೂ ಪಟ್ಟಾವ ಕಟ್ಟಿತಲ್ಲೊ
ಹತ್ತೂ ವಾದ್ಯಾವ ನುಡಿಸೂತ | ೪೨೦

"ನೀನೇನು ಬೇಡ್ಕೋತೀಯೋ ಬೇಡ್ಕಳ್ಳೊ ಮಗನೆ
ನಿನಗೇನು ಬೇಕು ಬೇಡುಕೊಳ್ಳೊ" |

"ನಿಮ್ಮರ್ಚೀಯ ಹಣ ಬ್ಯಾಡ ಮೊರದ ಬಂಗಾರ ಬ್ಯಾಡ
ನಿನ್ನರುಬೀನಲ್ಲಿರುವ ಮಲ್ಲಿಗೆ ಸರ |

ನಿನ್ನರುಬೀನಲ್ಲಿರುವ ಮಲ್ಲ್ಗೆ ಸರ ತಂದು
ನನ್ನರುಮನೆ ಮ್ಯಾಲೆ ಹಾಕು ತಾಯೆ |

ನನ್ನರುಮನೆ ಮ್ಯಾಲೆ ಒಗೆಯವ್ವ" ಅಂತಾವ
ಕಂದಾನೆ ತಾನು ಬೇಡಿಕೊಂಡ | ೪೩೦

"ಕೇಳಪ್ಪ ನನಮಗ್ನೆ ಕೇಳು ಕೇಳು ನನಮಗ್ನೆ
ಅದು - ನಿನಗಾದರೆ ಸಮವು ಉಂಟೇನೊ |

ಅದು ನಿನಗೆ ಸಮ ಉಂಟೇನೊ ನನಕಂದ
ನಿನ್ನ ನಗುನಾವ ಮಾಡಬೇಕು |

ನಿನ್ನ ನಗುನಾವ ಮಾಡಬೇಕೊ ಕಂದಯ್ಯ
ನೀನು - ಈ ಪಟ್ಣದಲ್ಲೀಗ ಸಾರಯ್ಯ" |

"ಈ ಪಟ್ಣದೊಳಗೆ ಏನೆಂದು ಸಾರಾಲಿ?"
"ಈ ಜಾತುರೆ ಒಂದು ಘನಜಾತುರೆ |

ಏಳಕ್ಕೆ ಜನ ಸೇರುತ್ಯತೆ ಅಂತಾವ
ಉಯ್ಯಪ್ಪ ಒಂದು ಕುಡವನು" |

ಆಗಾಲೆ ಕಂದಯ್ಯ ಏನೆಂದು ಹೇಳುತಾನೆ
"ಈ ಪಟ್ಟಣಕೆ ಎಲ್ಲ ಬರಬೈದು |
ಈ ಪಟ್ಟಣದ ಒಳಗೊಂದು ಘನಜಾತ್ರೆ ಆಗುತ್ಯತೆ
ಯಾರಾದ್ರೂ ಬಂದು ನೋಡಬೈದು |

ಯಾರಾದ್ರೂ ಬಂದು ನೋಡಬೈದು" ಅಂತಾವ
ಊದಾನು ಅವನು ಒಂದು ಕುಡ |

ಆಗಾಲೆ ಅಲ್ಲೀಗೆ ಎಲ್ಲ ಊರೋವ್ರು ಬಂದ್ರು
ಎಲ್ಲ ಸೇರಿ ಅಲ್ಲೊಂದು ಘನಜಾತ್ರೆ |

ಎಲ್ಲಾ ಊರೋರು ಒಳ್ಳೆ ಸೀರೆಯ ಧರ್ಸಿಕೊಂಡು
ಒಳ್ಳೊಳ್ಳೆ ಬಟ್ಟೆ ಹಾಕಿ ಬರುತಾರೆ |

ಆಚಾರ್ಯಂಬುವನು ಇವ್ರೂವೆ ಮಗಳೀಗೆ
ಒಂದ್ಹಳೆ ಕಂಬ್ಳಿ ಉಡ್ಸಿಕೊಂಡು |

ಒಂದ್ಹಳೆ ಕಂಬ್ಳಿ ಉಡ್ಸಿಕೊಂಡು ಅವ್ನೀಗ
ಜಾತ್ರೆ ನೋಡಾಕೆ ಬರುತಾನೆ |

ಆ ಜಾತ್ರೆ ಒಂದು ಘನಜಾತ್ರೆ ಆಗೋಯ್ತು
ಶಿವ್ನೂ - ಪಾರ್ವತ್ಮೂ ಅಲ್ಲೀಗೆ ಬಂದರು |

ಶಿವ್ನೂ ಪಾರ್ವತ್ಮೂ ಅಲ್ಲಿಗೆ ಬಂದೇನಂದಾರು
"ಏನ - ಬೇಡ್ಮೋತಿ ಬೇಡ್ಮೊಳ್ಳೊ ಮಗನೆ |

ಏನ ಬೇಡ್ಮತಿ ಬೇಡ್ಮಳ್ಳೊ ನನ್ನ ಮಗನೆ
ಈ - ಪರ್ಸೆ ಒಳುಗೆ ಇರೊ ಹೆಣ್ಣಿನೊಳಗೆ |

ಈ ಪರ್ಸೆ ಒಳಗಿರ್ವ ಹೆಣ್ಮಾರು ಬೇಕಪ್ಪ
ಆ ಹೆಣ್ಣೀಗೆ ಮಾಲೆ ಹಾಕೋಗು" |

ಆಗಾಲೆ ಹೊಲೇರ ಹೊನ್ನಯ್ಯ ಮಗನು
ಕುಂತಿರೊ ಆನೆ ಹೊರಟೀತು |

ಕುಂತಿರುವ ಆನೆ ಹೊರಟೋಯ್ತು ಬ್ಯಾಗಾನೆ
ಆಚಾರಿ ಮಗಳ ಸುತ್ತುತ್ಯತೆ |

ಹಳೆಕಂಬ್ಳಿ ಸುತ್ತಿರೋಳು ಆಚಾರಿ ಮಗಳಲ್ಲೊ
ಮಾಲೆಯ ಅವ್ಳೀಗೆ ಹಾಕಬೇಕು |

ಆಗಾಲೆ ಹೊಲೇರ ಹೊನ್ನಯ್ನ ಮಗನಾದ್ರೆ
ಆಚಾರಿ - ಮಗಳೀಗೆ ಮಾಲೆ ಹಾಕೀದ |

ಆಚಾರಿ ಮಗಳಿಗೆ ಮಾಲೆ ಹಾಕಿದ ಮೇಲೆ
ಶಿವ್ನೂ ಪಾರ್ವತಿಯೂ ಬಂದರಲ್ಲೀಗೆ |

ಶಿವ್ನೂ ಪಾರ್ವತಿಯೂ ಬಂದಾರು ಅಲ್ಲೀಗೆ
ಆಚಾರಿ ಮಗಳ ಹಿಡುಕೊಂಡು |

ಆಚಾರಿ ಮಗಳ ಹಿಡ್ದು ಕರಕೊಂಡು
ಪಾರ್ವತಿ ಅರಮನ್ಗೆ ಹೋಗುತಾರೆ |

ಪಾರ್ವತಿ ಅರಮನ್ಗೆ ಹೋದಂತ ಅವರು
ಹೊಲೇರೊನ್ನಯ್ನ ಮಗನೀಗೆ |

ಹೊಲೇರೊನ್ನಯ್ನ ಮಗನೀಗೂ ಆಚಾರಿ
ಮಗಳೀಗೂ ಅಸೆ ಊಡುತಾರೆ |

ಅಸೆಯ ಅವರು ಇಬ್ರೂಗೆ ಊಡೂತಾರೆ
ಇಬ್ಬರಿಗೂ ನಗುನ ಮಾಡುತಾರೆ |

ಆಗಲೆ ಇಬ್ರೂಗೂ ಲಗ್ನಾವ ಕಟ್ಟಿಸಿ
ಇಬ್ರೂಗೂ ಕಲ್ಯಾಣ ಮಾಡುತಾರೆ |

ಆ ನಗ್ನ ಮಾಡಿ ಆದ ಮೇಲಿನ್ನು
ಆಚಾರ್ಯಂಬೋನ ಅರಮನ್ಗೆ |

ಆಚಾರ್ಯಂಬೋನ ಅರಮನೆಗೆ ಆಗಿನ್ನೂ
ಗಂಡು ಹೆಣ್ಣುಗಳ ಕರುಕೊಂಡು |

ಗಂಡು ಹೆಣ್ಣುಗಳ ಕರಕೊಂಡು ಅವರಾಗ
ಸೋಬ್ನಾಕೆ ಅವುರ ಕಳ್ಸುತಾರೆ |

"ಕೇಳು ಕೇಳು ಬಡಗಿ ಕೇಳಯ್ಯ ಬಡಗಿ
ನಿನ್ನ - ಮಗ್ಳು ಅಳ್ಯಾನ ಕರುಕೊಂಡೋಗು |

ಮಗುಳ್ನು ಅಳ್ಯನ್ನು ಕರಕೊಂಡೋಗೊ ಬಡಗಿ
ನಿಮ್ಮ - ಊರಿನರಮನ್ಗೆ ಹೋಗಬೇಕು |

ನಿಮ್ಮ ಅರಮನ್ಗೆ ಕರ್ಕೊಂಡು ಹೋಗಿನ್ನು
ನಿಮ್ಮ - ನತ್ತೆ ನುಡ್ತೆಯ ನಡುಸಯ್ಯ |

ನಿಮ್ಮ ನತ್ತೆ ನುಡ್ತೇಯ ನಡ್ಸಿ ಕಳ್ಸುಬುಡು
ಕಳ್ಸಿಕೊಡಯ್ಯ ನಮ್ಮ ಅರಮನ್ಗೆ" |

ಆಚ್ಯಾರೆಂಬೋನು ಕರುಕೊಂಡು ಹೊರಟ್ನಲ್ಲ
ಕರುಕೊಂಡು ಬಂದಾನು ಅರಮನೆಗೆ |

ಬ್ಯಾಗಾನರುಮನ್ಗೆ ಕರುಕೊಂಡೋದ ಬಡ್ಡಿ
ಬ್ಯಾಗಾನೆ ಅಡುಗೆ ಮಾಡುತಾನೆ |

ಅಡುಗೆಯ ಮಾಡ್ಯಾಗ ಏನಡುಗೆ ಮಾಡ್ಸವ್ನೆ
ಇಸದ ಕಜ್ಜಾಯ ಮಾಡ್ಸವ್ನೆ |

ಇಸದ ಕಜ್ಜಾಯ ಮಾಡಿದನಲ್ಲ
ಬಾರೆ ನನಮಗ್ಗೆ ಹೊನ್ನಮ್ಮ |

ಬಾರೆ ನನಮಗಳೆ ಹೊನ್ನಾದೇವಿ ನಿನ್ನ
ಗಂಡುಂಗೆ ಊಟಾವ ಕೊಡುಬಾರೆ |

ಗಂಡಾಗೂಟಕೆ ಇಕ್ಕಲಿಕ್ಕೆ ಹೋದಳಲ್ಲ
ಹರಿವಾಣ ಅವ್ಳು ಬೆಳುಗ್ಯಾಳೆ |

ಹರಿವಾಣ ಬೆಳಗಿ ಊಟಕೆ ಕೊಟ್ಯಾಳು
ಇಸದ ಕಜ್ಜಾಯ ಹಾಕುತಾಳೆ |

ಇಸ್ದ ಕಜ್ಜಾಯ ಹಾಕಿ ಕ್ಯಾಣ ಬಾಗ್ಲಲಿ ನಿಂತು
ಏನಂತ ಗಂಡಾಗೆ ಹೇಳುತಾಳೆ |

ಮುಂದಾಗ್ಲ ಗುಕ್ಕ ಮುಂದಾಗುಣ್ಣಾಕ್ಕಾಗ್ದು
ಮುಂದಿರೊ ನಾಯ್ಗೆ ಎಸಿಬೇಕು |

ಹಿಂದ್ಗಾಡೆ ಗುಕ್ಕ ಹಿಂದಿಟ್ಟುಣ್ಣಾಕಾಗ್ದು
ಹಿಂದಿರೊ ಕೊತ್ಗೆ ಎಸೀಬೇಕು |

ಹಿಂದಿರೊ ಕೊತ್ಗೆ ಎಸೀಬೇಕು ಅಂತಾವ
ಅಡ್ಡಮಾತಲ್ಲವಳು ಹೇಳುತವ್ಳೆ |

ಆಗಾಲೆ ಹೊಲ್ಯಾರ ಹೊನ್ನಯ್ಯ ಮಗನಿನ್ನು
ಮುಂದಿರೊ ನಾಯ್ಗೆ ಎಸಿತಾನೊ |

ಮುಂದಿರೋ ನಾಯ್ಗೆ ಎಸುದಾನೆ ಕಂದಯ್ಯ
ನಾಯಿ ನೆಗ್ದೇಯ ಬೀಳುತಾದೆ |

ಆಗಾಲೆ ಮತ್ಮೊವೆ ಒಂದು ಗುಕ್ಕನು ತೆಗ್ದು
ಹಿಂದಿರು ಕೊತ್ಗೆ ಎಸುದಾನೆ |

ಹಿಂದಿರೊ ಕೊತ್ಮೊ ನೆಗ್ದೇ ಬಿದ್ದೀತಲ್ಲ
ಹೊಲ್ಯಾರೊನ್ನಯ್ನ ಮಗನಾಗ |

ಹೊಲ್ಯಾರೊನ್ನಯ್ನ ಮಗನಾಗ ಏನು ಮಾಡ್ದ
ಹರಿವಾಣವನ್ನೆ ಜಾಡೀಸಿ ಒದ್ದು |

ಹರಿವಾಣವನ್ನೆ ಜಾಡ್ಸಿ ಒದ್ದೇನಂದಾನೆ
"ಏಳೇಳೆ ಹೊನ್ನಿ ಹೋಗಾನ |

ಏಳು ಏಳು ಹೊನ್ನಿ ಹೋಗಾನ ನಾವೀಗ
ನಿಮ್ಮಪ್ಪನ್ನ ಬೇಗ ಕರಿಯಮ್ಮ" |

ಅವುರಪ್ಪಾನ ಕರೆದಾಳೆ ಹೊನ್ನಾದೇವಿ
"ಬ್ಯಾಗಾನೆ ಬಾರಯ್ಯ ನನಮುಂದಕೆ |

ನೀನು ಮಾವನಲ್ಲ ನಾನು ಅಳ್ಯಾನಲ್ಲ
ನಿನ್ನೂಟ ಇಲ್ಲಿಗೇಯ ಸೈ |

ನಿನ್ನೂಟ ನನ್ಗೆ ಇಲ್ಲಿಗೆ ಸಯ್ಯಪ್ಪ
ನಿನ್ನ - ಮನೆಯ ನೀರು ಬೇಡಪ್ಪ |

ನೀರೂ ನನ್ಗೆ ಬೇಡ ಅನ್ನೂ ನನ್ಗೆ ಬೇಡ
ನಿನ್ನ ಮನೆ ಅನ್ನ ಆವಾರ ಬೇಡ |

ಎಲೆ ಅಡಕ್ಕು ನನ್ಗೆ ಬೇಡ ಮಾವಯ್ಯ
ಸುಣ್ಣಾನು ಸೈತ ನನ್ಗೆ ಬೇಡ |

ನೀನೂರಲ್ಲಿ ಮದ್ವೆ ಮಾಡಬ್ಯಾಡ ಮಾವಯ್ಯ
ನಿನ್ನ - ಮಗ್ಳ ಕಳ್ಸಕೇನ್ಹೇಳುತೀಯೆ" |

"ನನ್ನ ಮಗ್ಳ ನಿನ್ಗೆ ಕೊಟ್ಟೇ ಆಯ್ತು
ಕರುಕೊಂಡೋಗಪ್ಪ ನೀನೀಗಲೆ" |

ಆಗಾಲೆ ವಲ್ಯಾರ ವನ್ನಯ್ನ ಮಗನೀಗ
ಆಚಾರಿ ಮಗ್ಳ ಕರುಕೊಂಡು |

ಆಚಾರಿ ಮಗ್ಳ ಕರುಕೊಂಡೊರಟನಲ್ಲ
ಶಿವಪಾರ್ವತಿಯ ಅರಮನೆಗೆ |

ಶಿವನ ಪಾರ್ವತಿಯ ಮನೆಗೆ ಹೋದರಲ್ಲ
"ಯಾರವ್ವ ತಾಯಿ ಅರುಮಲ್ಲಿ? |

ಯಾರವ್ವ ತಾಯಿ ಅರಮಲ್ಲಿ ಇರುವೋರು
ನಮ್ಮ - ಪಾದುಕಾಗಣಿಯ ಕೊಡು ಬಲ್ಲಿ" |

ಆಗಾಲೆ ಪಾರ್ವತಿ ಆಗಣಿಯ ತಕ್ಕಂಡು
ಪಾದಪೂಜೆಯ ಮಾಡುತಾಳೆ |

ಪಾದಾವ ತೊಳುದಾಳೆ ಪೂಜೆಯ ಮಾಡಿದಳೆ
ಅರುಮನ್ಗೆ ಕಂದಯ್ನ ಕರುಕೊಂಡ್ಲು |

ಆಗಾನೆ ಗಂಡಾನೂ ಹೆಂಡ್ತೀನೂ ಕರಕೊಂಡು
ಪಾರ್ವತಿ ಅರುಮನ್ಗೆ ಹೋದುರಲ್ಲ |

ಅರುಮನ್ಗೆ ಕರುಕೊಂಡು ಹೋದಾಳು ಪಾರ್ವತಿ
ಊಟಾಕೆ ಬೇಗನೆ ಕೊಡುತಾರೆ |

ಊಟ ಕೊಟ್ಟಾತಾಯಿ "ಏನು ಮಗನೆ ನಿನ್ನ
ಮಾವ ಚಂದಾಗಿ ಕಂಡನೇನೊ |

ನಿಮ್ಮಾವ ಚಂದಾಗಿ ಕಂಡನೇನೊ ಹೇಳಯ್ನ
ಹೊನ್ನಮ್ಮ ಚಂದಾಗಿ ಕಂಡನೇನೆ ? |

ಏನಮ್ಮ ಸೊಸಿಯೆ ಎಲೆಮಗಳೆ ಹೊನ್ನಿ
ನಿಮ್ಮಪ್ಪ ಚಂದಾಗಿ ಕಂಡನೇನೆ ?" |

"ನಮ್ಮಪ್ಪ ಚಂದಾಗಿ ಕಂಡಿದ್ದ ಏನ್‌ಹೇಳ್ಳಿ
ನನ್ನ - ಮುತ್ತೈದೆತನವ ಕಳಿಯೋನು" |

ಆಗಲೆ ಅವ್ವು ಏನಂತ ಹೇಳ್ಯಾರೇ
"ನಿನ್ನ ಹಣೆಯಲ್ಲಿ ಬರದಂಗಾಗಲೇಳು |

ನಿನ್ನ ಹಣೆಯಲ್ಲಿ ಬರದಂಗೆ ಆಗಲೇಳು
ನಿನಗರುಮಸ್ಯಾ ನಾವು ಕಟ್ಟುಸ್ತೀವಿ" |

"ಅರುಮನೆ ಕಟ್ಟುಸ್ಯಾಕೆ ಕೇಳವ್ವ ನನತಾಯಿ
ನಮ್ಮಪ್ಪ ಮಾಚಪ್ಪ ಅರುಮನ್ಗೆ |

ನಮ್ಮಪ್ಪ ಮಾಚಪ್ಪ ಅರಮನ್ಗೆ ಹೋಯ್ತಿವಿ
ಗಂಡ ಹೆಂಡೀರಿನ್ನ ಹೋಯ್ತೀವಿ |

ನಮ್ಮಪ್ಪ ಅರುಮನ್ಗೆ ಹೋಯ್ತೀವಿ" ಅಂತಾವ
ಅವ್ರರಿಬ್ಯಾರು ಆಗ ಹೊರುಟಾರು |

ಇಬ್ಬಾರು ಅವ್ವು ಹೋದಾರವರಿನ್ನು
ಮಡಿವಾಳ ಮಾಚಪ್ಪ ಅರುಮನೆಗೆ |

ಮಡಿವಾಳ ಮಾಚಪ್ಪ ಅರಮನ್ಗೆ ಹೋದುರಲ್ಲ
"ಯಾರಪ್ಪ ತಾಯಿ ಹಡುದವ್ವಾ |

ಯಾರವ್ವ ತಾಯಿ ಹಡುದವ್ವ ನಮತಾಯಿ
ನಮ್ಮ ಪಾದಾಕೆ ನೀರ ಕೊಡುಬಾರಮ್ಮ |

ಪಾದಕ್ಕೆ ನೀರ ತಕ್ಕಂಡ್ಬಂದಾಳೆ
ಮಡಿವಾಳ ಮಾಚಪ್ಪ ಮಡದೀಗ |

ನೀರು ತಕ್ಕಂಡೋಗಿ ಕಾಲ ತೊಳ್ಕೊಂಡು
ಕಂದ ಅರುಮನ್ಗೆ ಹೋಗುತಾನೆ |

ಅರಮನ್ಗೆ ಕಂದಯ್ಯ ಹೋದೂನಲ್ಲಾ
ಊಟಾಕವ್ರುವೆ ಕೊಡುತಾರೆ |

ಊಟಾವ ಮಾಡಾಯ್ತೆ ಮಾಚಪ್ಪ ಕೇಳುತಾರೆ
"ಶಿವ್ನೂ ಪಾರ್ವತ್ಮೂ ಚನ್ನಾಗಿ |

ಶಿವ್ನೂ ಪಾರ್ವತ್ಮೂ ಚನ್ನಾಗಿ ಕಂಡುರೇನೊ
ನಿಮ್ಮ ಲಗ್ನನಾವ ಮಾಡುದ್ರೇನೊ |

ನಿಮ್ಮ ಲಗುನಾವ ಮಾಡುದ್ರೇನೊ ಕಂದ
ನಮ್ಮ ಬುಟ್ಟು ನಗ್ನಾವ ಆದೇನೊ ?" |

"ನನ್ನ ನಗ್ನ ಆಯ್ತು ಪಟ್ಟ ಕಟ್ಟಿ ಆಯ್ತು
ಅತ್ತೆ ಮನೆಗೋಗಿ ಬಂದಾಯ್ತು |

ನನ್ನ ಹಡುದವ್ವ ಕೇಳೆ ನನ್ನ ಮಾತ
ಹೋಯ್ತೀನಿ ನನ್ನ ಅರಮನೆಗೆ |

ನನ್ನ ಹಡುದವ್ವ ಹಡೆದ ತಂದೆ ಕೇಳಿ
ಹೋಯ್ತೀನಿ ನನ್ನ ಅರಮನೆಗೆ |

ಹೋಯ್ತೀನಿ ನಾನೀಗ ನಿಮ್ಮರಮನೆ ಬುಟ್ಟು
ಮಾಡತೀನಿ ನಾನೀಗ ನಿಮ್ಮ ಪಾದಪೂಜೆ |

ನಿಮ್ಮ ಪಾದಪೂಜೆ ನಾನೀಗ ಮಾಡಬೇಕು"
ಅಂತ್ಹೇಳಿ ಅಗ್ಗುಣಿಯ ತಕ್ಕಂಡು |

ಪಾದಾವ ತೊಳ್ದು ಗಂಧದ ಕಡ್ಡೀಲಿ ಬೆಳಗಿ
ಪಾದಪೂಜೆಯ ಮಾಡಿದನು |

ಪಾದಪೂಜೆ ಮಾಡಿ ಇಬ್ಬರೂ ಹೊಂಟರಲ್ಲ
ನಿಮ್ಮಿಂದ ಒಳ್ಳೆ ಒಗತಾನ |

"ನಿಮ್ಮಿಂದ ಒಳ್ಳೆ ಒಗತಾನ ಬರಬೇಕು"
ಹಂಗಂತ ಆಸುರ್ವಾದ ಮಾಡಿದರು |

"ಕೇಳು ಕೇಳು ನನಕಂದ ಕೇಳಪ್ಪ ನನಕಂದ
ನಿನ್ನ-ಚನ್ನಾಗಿ ಸಾಕಿದ್ದೊ ಸಲವಿದ್ದೊ |

ಇನ್ನು ನೀನು ಪಾರ್ವತಿ ಎಂಬೊ ಅರಮನೆಗೋಗಿ
ಸುಖವಾಗಿ ಬಾಳಿ ಬದುಕೋಗಿ |

ಪಾದಪೂಜೆಯ ಮಾಡಿ ಮುಂದಕೆ ಹೊಂಟರಲ್ಲ
ಪಾರ್ವತಿ ಎಂಬೊ ಅರಮನೆಗೆ |

ಪಾರ್ವತಿ ಎಂಬೊ ಅರಮನೆಗೆ ಹೊರಟರಲ್ಲ
"ಯಾರವ್ವ ತಾಯಿ ಅರಮಲ್ಲಿ ? |

ಯಾರವ್ವ ತಾಯಿ ಅರಮಲ್ಲಿ ನನ್ನಡುದವ್ವ
ಪಾದಾಕಗ್ಗುಣಿಯ ತರುಬಾರೆ" |

ಅಗ್ಗುಣಿ ತಂದಾರು ಪಾದಾವ ತೊಳುದಾರು
ಕಂದಾನರಮನೆಗೆ ಕರುಕೊಂಡರು |

ಕಂದಾನ ಅರಮನೆಗೆ ಕರುಕೊಂಡು ಹೋದರಲ್ಲ
ಮುಂದಲಿಗೆ ಹಾಸಿ ಕೊಡುತಾರೆ |

"ನಿನ್ನಡುದಪ್ಪ ಮಲ್ಲಿ ಚಂದಾಗಿ ಕಂಡರೇನೊ
ಮುಖವಾಳ್ ಮಾಚಪ್ಪ ಅರುಮಲ್ಲಿ?" |

"ಚಿಕ್ಕ ಬಾಲುಕನಿಂದ ನೆತ್ತಿಗೆಣ್ಣೆಯನೊತ್ತಿ
ಅವ್ವ - ಚನ್ನಾಗಿ ನಮ್ಮ ಸಲಹಿದರು |

ಚನ್ನಾಗಿ ನಮ್ಮ ಸಲಹಿದರು ತಂದೆತಾಯಿ
ಅವ್ರೆ ತಾನೆ ನಮ್ಮ ತಂದೆ ತಾಯಿ" |

"ನಿಮ್ಮ ತಂದೆ ತಾಯಿ ಅವ್ರೇ ಆಗಲಪ್ಪ
ನಿನ್ನರುಮನೆ ನಾವೇ ಕಟ್ಟುಕೊಡುತೀವಿ |

ಅರುಮನೆ ನಿನ್ಗೆ ಕಟ್ಟಿಕೊಡುತೀವಿ
ಅರಮಲ್ಲಿ ಸುಕುವಾಗಿ ಬಾಳಪ್ಪ" |

"ನನ್ಗೆ ಅರುಮನೆ ನೀವು ಕಟ್ಟಿಕೊಡಕೆ
ಅಲ್ಲಿ ನಾನು ಸುಕುವಾಗಿರದಕೆ |

ನಾನು ಅರಮಲ್ಲಿ ಸುಕುವಾಗಿರಬೇಕಾದ್ರೆ
ನನ್ನ ಹಡುದವ್ನ ನನ್ಗೆ ತೋರ್ಸಿಕೊಡಿ" |

"ಕೇಳು ಕೇಳು ನನ್ನ ಮಗ್ನೆ ಕೇಳಪ್ಪ ನನ್ನ ಮಗ್ನೆ
ಶಿವಪಾರ್ವತಿಯಾದ ನಾವಿಬ್ಬರು |

ಹಿಂದೆ ನಾವಿಬ್ಬರು ಕಾಡು ದಾರೀಲಿ
ನಡೆದು ಹೋಗುವಂತ ಕಾಲದಲ್ಲಿ |

ಕಾಡಿನಲಿ ನಾವು ಹೋಗುತಿದ್ದ ಕಾಲದಲ್ಲಿ
ಬಾಯಾರಿ ಬಾಳ ಸುಳುವೀದೆ |

ಬಾಯಾರಿ ಬಾಳ ಸುಳುವೀದ ಕಾಲದಲ್ಲಿ
ನಿಮ ತಂದೆ ಶಿವ್ನು ನೋಡಿದರು |

ಸುತ್ತಮುತ್ತ ನೋಡಿದರು ಸೊಸಿಮರವು ಕಾಣ್ತು
ಸೊಸಿಮರಕೆ ತಿರುಸೂಲ ಚುಚ್ಚಿದರು |

ಈಸ್ವುರನು ಚುಚ್ಚಿದ ಮರ ಈಚಲ ಮರವಾಯ್ತು
ಮೂರು ಕಣ್ಣಿಂದ ಹಾಲು ಹೊಂಡವು |

ಸೊಸಿಮರ್ವಲ್ಲಾಲು ವಂಡಿದಲ್ಲೊ ಕಂದಯ್ಯ
ಕುಡಿದೇನು ಮೂರು ಬೊಗಸೇಯ |

ಸೊಸಿಮರದ ಹಾಲ ಕುಡಿದಾಗ ಕಂದಯ್ಯ
ಹೊರಗಾಡೆಗಾದೆ ಕೇಳೊ ಕಂದಯ್ಯ |

ಹರಿಯೋ ಹೊಳೆವಳಿಗೆ ಮುಳುಕೀದೆ ಮೂರು ಪಾಟ
ಹೊಲೆಯ ಸೀರೆಯ ಕಸಿದೇನೇ ಇಟ್ಟೆ |

ನಾನು ಹೊಲಸೀರೆಯ ಕಸ್ದು ಇಟ್ಟೆನಲ್ಲೊ
ಬ್ಯಾರೇಯ ಸೀರೆ ಧರಿಸೀದೆ |

ಬ್ಯಾರೆ ಸೀರೆಯ ಧರಿಸಿಕೊಂಡು ಬಂದೆ
ಮುಟ್ಟೀನ ಸೀರೆಯ ಹೊಳೆಗೆಸೆಯುವಾಗ |

ಮುಟ್ಟೀನ ಸೀರೆಯ ಹೊಳೆಗೆ ಎಸೆಯುವಾಗ
ಸೀರೆಯ ಒಳ್ಗೆ ನೀನಿದ್ದೆಯಲ್ಲೊ |

ಹೊಲೆ ಸೀರೆ ಒಳುಗೆ ಉತ್ಪತ್ತಿಯಾದ್ಕಲ್ಲೊ
ನೀನು - ನನ್ಮಗ್ನೆ ಹೊರ್ತು ಬದುಲಿಲ್ಲ |

ನೀನು ನನ್ನ ಮಗನೆ ಹೊರ್ತು ಬದುಲಿಲ್ಲ ಕಾನಪ್ಪ
ನಾನು ನಿನ್ನನ್ನು ಸಾಕಿ ಸಲಹೀದೆ |

ನಾನು ಸಾಕಿದ್ದೆ ಚನ್ನಾಗಿ ಸಾಕೀದೆ
ಕಾಮಧೇನು ಎಂಬೊ ಹಸುವನ್ನ |

ಕಾಮಧೇನು ಎಂಬೊ ಹಸುವನ್ನು ಕಾಯ್ವುದಕೆ
ನಿನ್ನನ್ನು ನಾವು ಬಿಟ್ಟಿದ್ದೊ ಕಂದ |

ನಿಮ್ಮಪ್ಪ ಶಿವರಾಯ ಏನು ಹೇಳಿದರು
ಹಾಲನು ಹಾಲಿನ ಕೆನೆಯನು |

ಹಾಲನು ಹಾಲಿನ ಕೆನೆಯನು ಮಗುವಿಗೆ
ಕೊಡಬ್ಯಾಡಾಂತ ಕಟ್ಟು ಮಾಡಿದರು |

ಅಂದಿನಿಂದ ನಿನ್ನ ಒಳೀಕೆ ಕೂಡಲಿಲ್ಲ
ಒಳಗೆ ಊಟ ಕೊಡಿತಿರಲಿಲ್ಲ |

ಎಂದೂವೆ ನಿನ್ನ ಕ್ವಾಣೆಗೆ ಕೂಡಲಿಲ್ಲ
ಹೊರಗಡೆಲೆ ಊಟ ಹಾಕುತಿದ್ದೊ |

ಒಂದು ದಿನ ನಾನು ನೀರಿಗೆ ಹೋದೆನಲ್ಲ
ದಾರೀಲಿ ನೀನು ಸಿಕ್ಕೀದೆ |

ದಾರೀಲಿ ನೀನು ಸಿಕ್ಕಿದಾಗ ನಾನಾದ್ರೆ
ಮನೆಯ ಬೀಗದೆಸಳು ಕೊಟ್ಟೇನು |

ಮನೆಯ ಬೀಗದೆಸಳ ನಾನು ಕೊಟ್ಟಾಗ
ಮನೆಯ - ಬಾಕಲ ನೀನು ತಗುದುಕೊಂಡು |

ಕ್ವಾಣೇಗೆ ಹೋಗಿ ಹಾಲನ್ನು ನೋಡಿ
ಹಾಲಕೆನೆಯ ತಕ್ಕೊಂಡೆ ಕಂದಯ್ಯ |

ಹಾಲಕೆನೆಯ ತಕ್ಕೊಂಡು ನೀನಾದ್ರೆ
ಬಾಯಿಗೆ ಎಸುಕೊಂಡೆ ನನಕಂದ |

ಹಾಲೀನ ಕೆನಿಯ ತಕ್ಕಂಡು ತಿಂದು
ಊಟದಂಬಲವ ಮರೆತ್ಕಲ್ಲೊ |

ಊಟದಂಬಲವ ಮರೆತೆ ನೀ ಕಂದಯ್ಯ
ಗಂಡುಗೊಡಲಿ ಮಾಡ್ಸಿ ಕೊಡಬೇಕು |

ಗಂಡುಗೊಡ್ಲಿ ನನಗೆ ಬೇಕು ಬೇಕೂಂತ
ನೀನು ತಕಪಕನೆ ಕುಣಿಯುತಿದ್ದೆ |

ಆಗಾನೆ ಅಲ್ಲೀಗೆ ಬಂದ ಶಿವರಾಯನು
'ಯಾಕೆ ಮಗ್ನೆ ಹೀಗೆ ಕುಣಿತೀಯೆ |

ಯಾಕೆ ಮಗ್ನೆ ಹೀಗೆ ಕುಣಿತೀಯೆ ನೀನಿನ್ನು
ಊಟಾವ ಮಾಡು ಬಾರಪ್ಪ' |

ಊಟ ನನ್ಗೆ ಬ್ಯಾಡ ಮತ್ತೊಂದು ನನ್ಗೆ ಬ್ಯಾಡ
ಗಂಡುಗೊಡ್ಲಿಯ ಮಾಡ್ಸಿಕೊಡಿ |

ಗಂಡುಗೊಡ್ಲಿಯನ್ನು ಮಾಡ್ಸಿಕೊಡಿ ನನತಂದೆ
ನಾನು ಕಾಯುವಂತ ಹಸುವನ್ನು |

ನಾನು ಕಾಯುವಂತ ಹಸುವನ್ನು ಕತ್ತರಿಸಿ
ಬಾರೇಯ ಮ್ಯಾಲೆ ಪಾಲು ಹಾಕಿ |

ಕಡಿತೀನಿ ಕತ್ರುಸ್ತೀನಿ ಪಾಲು ಹಾಕುತೀನಿ
ಅದ್ರ - ಖಂಡವ ನಾನು ತಿನ್ನಬೇಕು' |

ಆಗಲೆ ಶಿವ್ನು ಪಾರ್ವತಿಯ ಕರುದಾರೆ
'ಏನಮ್ಮ ಇವನಾಡೊ ಮಾತುಗಳು?' |

ಏನಮ್ಮ ಯಾವ ರುತಿ ಹಿಡ್ದಿ ಮಗನೀಗ
ಹಸುವ ಕಡ್ಡೂ ತಿನ್ನಲಿಕೆ |

ಹಸುವಾ ಕಡ್ದು ತಿನ್ನಾಕೊಂಟವುನಲ್ಲೆ
ಗಂಡುಗೊಡಲಿಯು ಬೇಕಂತಲ್ಲೆ?"

"ಆಲುಕೆನೆಯನು ಗೋರಿ ತಿಂದ ಶಿವನೆ
ಊಟುದ್ಮೇಲ್ ಅವುನ್ಗೆ ಗ್ಯಾನುವಿಲ್ಲ |

ಊಟವ ಬುಟ್ಟು ಕುಂತವ್ನೆ ಸ್ವಾಮಿ
ಹಸುವಿನ್ಮ್ಯಾಲ್ಕೆತ ಅವುನ್ ಗ್ಯಾನ |

ನೆನ್ನಿಂದ್ಲು ಹೀಗೆ ಹಟ ಮಾಡಿ ಕುಂತವ್ನೆ
ನೀವಾದ್ರೂ ಬುದ್ಧಿ ಹೇಳಬಾರ್ದ?" |

"ಬುದ್ಧಿ ಹೇಳೋಂಗಿಲ್ಲ ತಿದ್ದಿಮಾಡೋಂಗಿಲ್ಲ
ಗಂಡುಗೊಡಲಿಯ ತಂದುಕೊಡೊ" |

ಗಂಡುಗೊಡ್ಲಿಯ ಮಾಡ್ಸಿ ಕೊಟ್ಟಾರಲ್ಲ
ಕಂದ ಹೆಗುಲ್ಮ್ಯಾಲೆ ಮಡುಗೀದ |

ಕಂದ ಹೆಗುಲ್ಮ್ಯಾಲೆ ಮಡಿಕೊಂಡು ಗಂಡುಗೊಡ್ಲ್ಯಾ
ಬಾರೇಯ ತಾವ್ಕೆ ನಡೆದಾನು |

ಬಾರೇಯ ತಾವ್ಕೆ ಬ್ಯಾಗಾನೆ ಹೋದನಲ್ಲ
ಮಂಕಾರಿ ಚೂರಿ ತಕ್ಕಂಡವ್ನೆ |

ಮಂಕಾರಿ ಚೂರಿ ತಕ್ಕಂಡು ಹೋದನಲ್ಲ
ಕಾಮಜೇನು ಹಸುವ ಕಡಿದಾನು |

ಕಾಮಜೇನು ಹಸುವ ಕಡಿದಿನ್ನ ಕಂದಯ್ಯ
ನಾಕ ಪಾಲನೆ ಹಾಕುತಾನೆ |

ನಾಕು ಪಾಲಾಕಿ ನಾಕಾ ದಿಕ್ಕನು ನೋಡಿ
ಸಾಬಾರ ಹುಡುಗನ ಕರೆದಾನು |

ಸಾಬರುಡುಗನಿಗೆ ಒಂದು ಪಾಲು ಕೊಟ್ಟು
ಮಾದಿಗ್ರ ಹುಡುಗುಂಗೆ ಒಂದು ಪಾಲು |

ಮಾದಿಗರುಡುಗನಿಗೆ ಒಂದು ಪಾಲು ಕೊಟ್ಟು
ಒಕ್ಕಲರುಡುಗನಿಗೆ ಒಂದು ಪಾಲು |

ಬ್ಯಾಡರುಡುಗನಿಗೆ ಒಂದು ಪಾಲು ಕೊಟ್ಟನಲ್ಲ
ಮೂರಾಳ್ಗು ಮೂರು ಪಾಲು ಕೊಡುತಾನೆ |

ಮೂರಾಳ್ಗೂ ಮೂರು ಪಾಲು ಕೊಟ್ಟು ಕಂದಯ್ಯ
ತಾನೊಂದು ಪಾಲ ಹೊತ್ತುಕೊಂಡು |

ಒಂದು ಪಾಲ ಅವ್ನು ಹೊತ್ತುಕೊಂಡು ಹೋದನಲ್ಲ
ಬಾರೇಯ ಮ್ಯಾಲೆ ಒಂದುಗೂಡಿ |

ಬಾರೇಯ ಮ್ಯಾಲೆ ಒಂದುಗೂಡಿರುವಾಗ
ಬರಬಾರ್ದ ಮಳೆ ಬಂದಿತಲ್ಲ |

ಬರಬಾರ್ದ ಮಳೆ ಬಂತಂತ ಹೊತ್ತಲ್ಲ
ತುರುಕಪ್ಪ ಗುಡಿವೊಳುಕೋಡಿಹೋದ |

ತುರುಕಪ್ಪ ಜೊತೆಯಲ್ಲಿ ಬ್ಯಾಡರ ಹುಡುಗನು
ಗುಡಿಯ ಒಳುಗಡೆ ಸೇರಿಕೊಂಡ |

ಇನ್ನಿಬ್ಬರು ಈ ಚೋರಿ ಗ್ವಾಡೇಯ ಒತ್ತೀಲಿ
ತೆಬ್ಬಿಕೊಂಡಿಬ್ಬರು ನಿಂತವುರೆ |

ಯಂಡೂ ಕಡೆಯೂ ಯಂಡಾಳು ನಿಂತವ್ರೆ
ಶಿವ್ನು ಪಾರ್ವತ್ಕು ಅಲ್ಲೆ ಬಂದರಲ್ಲ |

ಶಿವ್ನ ಕಂಡ ಮಕ್ಕಳು ಓಡೋಡಿ ಬಂದು
ಎಡಬಲಕಿಬ್ಬರು ತಬ್ಬುಕೊಂಡ್ರು |

ಆಗ ಶಿವ ಪಾರ್ವತಿ ಏನಂತ ಹೇಳುತಾರೆ
ಎಡಕೆ ಬಂದು ನಿಂತವನೀಗ |

ಎಡಕೆ ನಿಂತವ್ನು ಎಡಗ್ಯೆಯವನಾಗ್ಲಿ
ಬಲಕೆ ನಿಂತವನು ಬಲಗ್ಯೆ |

ಒಳಗಡೇನೊಬ್ಬ ಸಾಬಣ್ಣನಾಗಲಿ
ಇನ್ನೊಬ್ಬ ಬ್ಯಾಡರುಡುಗನಾಗಲಿ |

ನಾಕು ಜನರು ನಾಕು ಕುಲವಾದ್ರಲ್ಲೂ
ನಾಕು ಜನ್ವೂ ನೀವು ಹೋಗಿರಪ್ಪ |

ನಾಕು ಜನ್ವೂ ನೀವು ಬೇಯ್ಸಿ ತಿನ್ನಿರಪ್ಪ
ಹಂಗಂತ ಆಸುರ್ವಾದ ಮಾಡಿದರು |

ಹೊನ್ನಯ್ನ ಮಗನೀಗೆ ಪಾರ್ವತಿ ಹೇಳುತಾಳೆ
"ನಿನಗೆ ಅರಮನೆಯ ಕಟ್ಸೀವಿ |

ನಿನಗೆ ಅರಮನೆಯನು ಕಟ್ಸೀವಿ ಕಂದಯ್ಯ
ಚನ್ನಾಗಿ ನೀನು ಬದುಕಯ್ಯ |

ನಿನ್ಗೆ - ಕಂಬ ಕುಂಬಗಳುಂಟು ಹರಿಣೆ ಬಾಸಿಂಗ ಉಂಟು
ಪಟ್ಟುಂಟು ನಿನ್ನ ಹಣೆಯಲ್ಲಿ |

ಪಟ್ಟುಂಟು ನಿನ್ನ ಹಣೆಯಲ್ಲಿ ಹೊನ್ನಯ್ಯ
ಪಣವುಂಟು ನಿನಗೆ ಹದಿನೆಂಟು |

ಪಣವುಂಟು ನಿನಗೆ ಹದಿನೆಂಟು ಕಂದಯ್ಯ
ಸುಕುವಾಗಿ ನೀನು ಬದುಕಪ್ಪ" |

ಹಂಗಂತ ಹೇಳಿ ಮುಂದಾಕೊಂಟಾರಲ್ಲ
ಪಡಿ ಅಳಿತವ್ರೆ ಶಿವ್ನು ಪಾರ್ವತಿಯು | ೭೮೦

ಶಿವ್ನು ಪಾರ್ವತಿಯು ಪಡಿ ಅಳಿತ ಹೋಗುತಿದ್ರೆ
ಮುದ್ದೇಗೌಡನ ಮಡ್ದಿ ಓಡಿಹೋದ್ಲು |

ಮುದ್ದೆಗೌಡನ ಮಡ್ದಿ ಬೇಗದಲ್ಲಿ ಓಡಿಹೋಗಿ
ಪಡಿಗೆ ಮಡಿಲ ಆತಳಲ್ಲ |

ಮುದ್ದೇಗೌಡನ ಮಡದಿ ಮಡಿಲನ್ನು ಆತುಕಂಡು
ಪಡಿಯನ್ನೆ ಪಡೆದುಕೊಂಡಳಲ್ಲ |

ಮುದ್ದೇಗೌಡನ ಮಡದಿ ಮಡಿಲು ತುಂಬಿರುವಾಗ
ಶಿವ ಪಾರ್ವತೀರು ಮುಂದಕೊರಟಾರು |

ಮುನುಮುಂದಕೋಗುವಾಗ ಹೊನ್ನಯ್ಯನ ಮಗ
ಮಡದೀಯ ಸ್ಕೆತ ಓಡಿಬಂದ | ೭೯೦

ಮಡದೀಯ ಸ್ಕೆತ ಬಂದ ಮಡದಿ ಸೆರಗೊಡ್ಡಿ
ನನಗೂ ಪಡಿಯ ಅಳಿಯಪ್ಪ |

ನನಗೂ ಪಡಿಯ ಅಳಿ ಅಂತ ಹೇಳಿದರೆ
"ಎಲ್ಲಿಂದ ತರುವುದಕಾದೀತು ? |

ನಿನಗೆ ಪಡಿಯನ್ನು ನಾನೇನು ತರಲಮ್ಮ
ಈ ಗೌಡಮ್ಮ ಕೈಲಿ ನೀವು ಈಸಿಕೊಳ್ಳಿ |

ಅಲ್ಲೀಗೆ ನೀನೋಗಿ ಈಸಿಕೊಳ್ಳೊ ಕಂದಮ್ಮ
ಅಲ್ಲೇಯ ಪಡಿಯ ಅಳೆದಿವ್ನಿ" |

ಹಂಗಂತ ಹೇಳಿ ಶಿವ್ನು ಪಾರ್ವತಿಯು
ಮುಂದಕ್ಕೆ ಮುಂದಕ್ಕೆ ಹೊರಟರು | ೭೯೦

ಅಲ್ಲೀಗೆ ಬಂದಂತ ಕಲ್ಯಾಣ್ಣಿ ಬಸವಣ್ಣ
ಮುದ್ದೇಗೌಡನ ಕಂಡರಾಗ |

ಮುದ್ದೇಗೌಡ್ನ ಕಂಡ್ರು ಹೊನ್ನಯ್ಯಮಗನ ಕಂಡ್ರು
ಶಿವಕೊಟ್ಟ ಪಡಿಯ ತಿಳಿದುಕೊಂಡ್ರು |

ಶಿವಕೊಟ್ಟ ಪಡಿಯು ಹೊನ್ನಯ್ಯ ಮಗನಿಗೆ
ಪಾಲು ಕೊಡಿರೆಂದು ಹೇಳುತಾರೆ |

ಅದಕೆ ಮುದ್ದೇಗೌಡ ಏನಂತ ಹೇಳಿದಾರು
"ಲೋಕಕೆ ಪಾಲ ಕೊಡುತೀನಿ |

ಲೋಕಕೆ ಪಾಲ ಕೊಡುವಾಗ ನಾನು
ಹೊನ್ನಯ್ಯನನ್ನು ಮರೆಯಲುಂಟ ?" | ೭೯೦

ಹಂಗಂತ ಮಾತ ಕೇಳಿ ಬಸವಣ್ಣ ಆನಂದುವಾಗಿ
ಶರಣರ ಜೊತೆಯಲಿ ನಡೆದಾರು |

ಶರಣ ಮುದ್ದಯ್ಯನ ಜೊತೆ ಶರಣ ಹೊನ್ನಯ್ಯನ ಜೊತೆ
ಕಲ್ಯಾಣ ಪಟ್ಟಣಕೆ ನಡೆದಾರು |

ಇಲ್ಲೀಗೆ ಶಿವಶಿವ ಇಲ್ಲೀಗೆ ಹರಹರ
ಇಲ್ಲಿಗೆ ಮಾತು ಮಂಗಳವಾಯ್ತು | ೭೯೬

ಕಲಿಸಿರಿ ಕಲ್ಯಾಣ್ಣಿ ಪದನೂರ

ಹೊಲೇರ ಹೊನ್ನಯ್ಯ ಮಾದಾರ ಚೆನ್ನಯ್ಯ
ಇದ್ದಾವ ಕಲಿಸೋ ಹರುಳಯ್ಯ - ಶರಣಾರೆ
ಕಲಸೀರಿ ಕಲ್ಯಾಣ್ಣಿ ಪದನೂರ |

ಹೊಲೇರ ಹೊನ್ನಯ್ಯ - ೨

ಸುವ್ವಿ ಶಿವ್ರಾಯ ಸುವ್ವಿ ಗಿರಿಜಮ್ಮ
ಸುವ್ವಿ ಕಲ್ಯಾಣ್ಣ ಬಸುವಯ್ಯೊ ಸುವ್ವಿ | ಸೊಲ್ಲು |

ಸೊಲ್ಲು ಸೊಲ್ಲೀಗೆ ಮೊದಲ ಸೊಲ್ಲೀಗೆ
ಮಲ್ಲಯ್ಯ ಪಾದ ನೆನುದೇವು | ಸುವ್ವಿ |

ಮಲ್ಲಯ್ಯ ಪಾದಕೆ ಸರಣು ಸರಣೆನ್ನುತ
ಗಿರಿಜಮ್ಮ ತಾಯ ನೆನೆದೇವು |

ಗಿರಿಜಮ್ಮ ತಾಯ ಪಾದಂಗಳಿಗೆ
ಮೊದಲೀಗೆ ಸರಣು ಸರಣಾರ್ತಿ |

ನಮ್ಮಮ್ಮ ಸಾರದಾಂಬೆ ಉಮಾಮಹೇಸ್ವರಿ
ನಿಮ್ಮ ಜೊತೆಗಿರುವ ಇನಿಯಂಕ |

ನಿಮ್ಮ ಜೊತೆಗಿರುವ ಇನಿಯಂಕ ಸ್ವಾಮಿಗೆ
ಮೊದಲ ಪೂಜೇಯ ಸಲಿಸೇವು |

ಸ್ವಾಮಿ ಪರಮೇಶ್ವರನ ತಾಯಿ ಗಿರುಜಮ್ಮನ
ಕಲ್ಯಾಣ್ಣ ಶಿವಕಥೆಯ ಹೇಳುವೆ | ೧೦

ಶಿವಕತೆಯೆಂದರೆ -
ಆದಿಕಾಲದ ಕಥೆ
ಹರಿಹರ ಬ್ರಮ್ಮಾದಿಗಳು
ಸೃಷ್ಟಿ ಸ್ಥಿತಿ ಲಯಕ್ಕೆ ಒಡೆಕರ್ತರಾಗಿ
ದೇವತೆಗಳನ್ನು ಪಡೆದಿದ್ದಾರೆ.
ಅಪಿಲಾಂಡ ಕೋಟಿ ಬ್ರಮ್ಮಾಂಡವನ್ನು ಪಡೆದಿದ್ದಾರೆ
ದೇವು ದಾನವ ಮಾನವ ಕುಲವನ್ನೆಲ್ಲ ಪಡೆದಿದ್ದಾರೆ
ಪಾತಾಳ ಲೋಕವನ್ನು ಪಡೆದಿದ್ದಾರೆ -

ದೇವ ದಾನವರು ಮಾನವರು ಇರುವಂತ
ಸತ್ಯಲೋಕವು ಸುಕುಲೋಕ | ೨೦

ಸುಕುಲೋಕದಲ್ಲಿರುವ ದಕ್ಷಬ್ರಮ್ಮನೆಂಬೋನು
ಎಲ್ಲರ ನೋಡಿ ಚಿಂತೆ ಪಡುತಾನೆ |

ದೇವದಾನವರು ಮಾನವರೊಳಗೆಲ್ಲ
ನಾನೇಯ ಶ್ರೇಷ್ಠನಾಗಬೇಕು |

ನನಮುಂದೆ ಬೇರೆ ಯಾರೂ ದೊಡ್ಡವರಿರಬಾರ್ದು
ಅನುವಂತ ಸಕ್ತೀಯ ಪಡೀಬೇಕು |

ಅನುವಂತ ಚಲದಲ್ಲಿ ದಕ್ಷಬ್ರಮ್ಮನು
ಬಾಳ ಯೋಚಿಣೆಯ ಮಾಡುತಾನೆ |

ಬಾಳ ಯೋಚಿಣೆಯ ಮಾಡಿ ದಕ್ಷ ಬ್ರಮ್ಮನು
ಬ್ರಮ್ಮನ ಕುರುತು ತಬಸೀಗೆ | ೩೦

ಬ್ರಮ್ಮನ ಕುರುತ ತಬಸೀಗೆ ನಿಂತು
ಬ್ರಮ್ಮನ ಪ್ರತೇಕ್ಷ ಮಾಡಿಕೊಂಡ |

ಬ್ರಮ್ಮನ ಪ್ರತೇಕ್ಷ ಮಡಿಕೊಂಡು ದಕ್ಷಬ್ರಮ್ಮ
ಬ್ರಮ್ಮನಲಿ ವರವ ಕೇಳುತಾನೆ |

ಬ್ರಮ್ಮನು ಏನಂತ ವರವನು ಕೇಳಿದ
ಕೇಡಿಗ ಹಾಳು ದಕ್ಷಬ್ರಮ್ಮ |

"ಸ್ವಾಮಿ ಬ್ರಮ್ಮದೇವರೆ
ನೀವು ನನ್ನ ತ್ರಬಸಿಗೆ ಮೆಚ್ಚಿ
ವರವನ್ನು ಕೊಡುವುದಾದರೆ
ನಾನು ಕೇಳಿದ ವರವನ್ನು ಕೊಡ್ತೀನಂತ ೪೦
ಮೊದಲಿಗೆ
ಬಲಗ್ಯೆ ಮುಟ್ಟಿ ಭಾಷೆ ಕೊಡುಬೇಕು"
"ದಕ್ಷ ಇಂತ ಮಾತು ಬೇಡ
ನೀನು ಏನು ಕೇಳಬೇಕೂಂತಿದ್ದೀಯೋ
ಅದನ್ನ ಕೇಳು ನಾನು ಖಂಡಿತ ಕೊಡ್ತೀನಿ."
"ಸ್ವಾಮಿ ಮಾತುಗೆ ತಪ್ಪೋದಿಲ್ಲ ಅನ್ನೋದಾದ್ರೆ
ನೀವು ತ್ರೇಮೂರ್ತಿಗಳು
ನನಗೆ ಅಧೀನಕರಾಗಿರಬೇಕು
ಈ ಮಾತು ನಿಮಗೆ ಒಪ್ಪಿಗೆಯ?"
"ಅಯ್ಯಾ ದಕ್ಷ ೫೦

ಈ ಆಂಕಾರದ ಮಾತಾಡಿ ವಾಂಕಾರ ಪಡುಬೇಡ
ನಿನ್ನ ಸಕ್ತಿ ಎಷ್ಟೋ ಅಷ್ಟನ್ನ ಅನುಭವಿಸಿ ಸುಖಿಪಡಪ್ಪ
ಆಗಲಾರದಕ್ಕೆ ಕೈಹಾಕಿ ಸೀಗ್ಲುರದಲ್ಲಿ ಸಾಯಬೇಡ
ನನ್ನ ಮಾತಿನಂತೆ ನಡುಕೊಳ್ಳಪ್ಪ"
"ಸ್ವಾಮಿ ಬ್ರಮ್ಮದೇವರೆ
ನಿಮ್ಮ ಉಪದೇಶ ನನಗೆ ಬೇಡ
ವರ ಕೊಡೋದಾದ್ರೆ ಕೊಡಿ ಇಲ್ಲದಿದ್ರೆ
ತಮ್ಮ ತಾನುಕ್ಕೆ ದಯಮಾಡಿ ಸ್ವಾಮಿ
ದೊಡ್ಡೋರ್ದು ಅಂತ ಅಡ್ಡೇಲಿ ಹೊತ್ರಂತೆ
ನಿಮ್ಮ ದೊಡ್ಡತನಕ್ಕೆ ದೊಡ್ಡ ನಮುಸ್ಕಾರ ಸ್ವಾಮಿ"
"ದಕ್ಷ
ನನ್ನ ಮಾತನ್ನು ಮೀರುದ್ದೇ ಆದ್ರೆ
ನಿನ್ನ ತಲೆಗೂ ಕುರೀ ತಲೆಗೂ ವೆತ್ಯಾಸವೇ ಇಲ್ಲಪ್ಪ
ನಿನ್ನ ತಲೆ ನಿನಗೆ ಬೇಡವೇನಪ್ಪ ?"
"ಬ್ರಮ್ಮದೇವರೇ
ನನಗೆ ತಲೆ ಇಲ್ಲದಿದ್ರೂ ಪರ್ವಿಲ್ಲ
ನನ್ನು ತಾವು ಹೇಳುದಂತೆ ಕುರಿ ತಲೆ ಆದ್ರೂ ಪರ್ವಾಗಿಲ್ಲ
ತಾವಿನ್ನು ದಯಮಾಡಿ ಸ್ವಾಮಿ"
"ದಕ್ಷ
ವರ ಕೊಡಲು ಬಂದವನು
ಪರದೇಸಿಯಂತೆ ಬರಿಕ್ಕೆ ತೋರಿಸಿ ಹೋಗುವುದಿಲ್ಲ
ನಿನ್ನಿಚ್ಛೆಯಂತಾಗಲಿ!" -

ದಕ್ಷಬ್ರಮ್ಮನ ಮಾತೀಗೆ ಬದಲಾಗಿ
ಬ್ರಮ್ಮ ದೇವ್ರು ಬೇರೆ ಹೇಳನಿಲ್ಲ |

ತ್ರೈಮೂರ್ತಿಗಳು ನಿನ್ನ ಅಧೀನ ಕಾಣಪ್ಪ
ಹಾಗಂತ ಹೇಳಿ ಹೊರಟರು |

ವರವನ್ನು ಪಡೆದು ಹಿರಿಹಿರಿ ಹಿಗ್ಗಿದ
ದಕ್ಷಬ್ರಮ್ಮನು ಬಂದ ಅರಮನೆಗೆ |

ಹಜಾರದಲ್ಲಿರುವ ಸಿವ್ವಾಸನದಲಿ ಕುಳಿತು
ಹೆಂಡತಿ ಮಕ್ಕಳ ಜೊತೆಯಲ್ಲಿ |

ವಿಜ್ರಂಬಣೆಯಿಂದ ಬಾಳುವೆ ನಡೆಸೀದ
ಕಾಲೀಗೆ ಮುಳ್ಳು ಚುಚ್ಚಿದಂಗೆ |

ದಕ್ಷ ಬ್ರಹ್ಮನ ಮಗಳು ದಾಕ್ಷಾಯಿಣಿ ಎಂಬೋಳು
ಶಿವನೀಗೆ ಮನಸ ಕೊಡುತಾಳೆ |

ಶಿವನ ಮೆಚ್ಚಿದ ತಾಯಿ ಶಿವಗ್ಯಾನ ಮಾಡುವಾಗ
ದಕ್ಷಬ್ರಮ್ಮನಿಗೆ ಆಗ ಕಿಡುಕೋಪ |

ಕಿಡುಕೋಪದಲಿ ಅವನು ಮಗಳ ಜರಿಯುವಾಗ
ದಾಕ್ಷಾಯಿಣಿ ಹಿಡಿದ ಪಟ್ಟನ್ನು |

ದಾಕ್ಷಾಯಿಣಿ ಹಿಡಿದ ಪಟ್ಟನ್ನೆ ಬಿಡ್ದದೆ
ಶಿವನೆ ನನಗಂಡ ಅನುತಾಳೆ |

ಶಿವನ ಮೆಚ್ಚಿದ ಮಗಳ ಮನೇಲಿಡಬಾರದಂತ
ಅಟ್ಟಿದನು ಅವಳ ಕಾಡೀಗೆ |

"ಪರುವತದ ಮ್ಯಾಕೆ ಕರುಕೊಂಡು ಹೋಗಿವಳ
ತಳ್ಳುಬಿಡಿ ಕಿಬ್ರಿಯ ಪಾತಾಳುಕೆ" |

ಹಂಗಂತ ದಕ್ಷ ಆರ್ಡರನು ಮಾಡಿದಾಗ
ಅವುರವ್ರಂಗೆ ದುಕ್ಕ ನಿಲುಭಾರ |

ಹೆತ್ತ ಕಳ್ಳು ಆಗ ಚುರ್ರಂದರೂ ಸೈತ
ದಕ್ಷನು ಹಟವ ಬುಡನಿಲ್ಲ |

ದಕ್ಷನು ಹಟವ ಬುಡದೋದ ಕಾಲದಲಿ
ದೂತರು ಕಾಡೀಗೆ ಕರುಕೊಂಡು |

ದಾಕ್ಷಾಯಿಣಿ ದೇವ್ಯಾ ಕರುಕೊಂಡು ಬಂದು
ಆರಂದಡವೀಯ ಬೆಟ್ಟದ ತುದಿಗೆ |

ಆರಂದಡವೀಯ ಬೆಟ್ಟದ ತುದಿಗೆ
ತಂದು ದಾಕ್ಷಾಯಿಣಿಯ ತಳ್ಳಿದರು |

ಶಿವಸೊರಣೆಯಲ್ಲಿ ಮೈಮರೆತಿದ್ದ ದಾಕ್ಷಾಯಿಣಿಯ
ಬೀಳದಂತೆ ಶಿವನು ಆತುಕೊಂಡ್ರು |

ದಾಕ್ಷಾಯಿಣಿಯ ಆತುಕೊಂಡು ಶಿವರಾಯ
ಅವ್ರು - ತಂದಾರು ತಮ್ಮ ಕೈಲಾಸಕೆ |

ಕೈಲಾಸುಕೆ ಬಂದ ಶಿವದಾಕ್ಷಾಣೇರ
ದೇವಾದಿದೇವ್ರಿಗಳು ನೋಡಿದರು |

ಬ್ರಮ್ಮ ಇಸ್ನು ಮತ್ತೆ ದೇವಾದಿದೇವ್ರಿಗಳು
ಶಿವನ ಕಲ್ಯಾಣಕೆ ಸೇರಿದರು |

ಶವ ದಾಕ್ಷಾಯಿಣಿ ಕಲ್ಯಾಣ ಮಾಡಿದರು
ಕೈಲಾಸಕೆ ಬಂತು ಹೊಸಕಳೆಯ |

ದೇವಾದಿ ದೇವ್ತಿಗಳು ಸಂತೋಷ ಪಟ್ಟುರಾಗ
ಒಂದು ಔತಣವ ನಡೆಸಿದರು |

ಎಲ್ಲ ರುಸಿಮುನಿಗಳು ಔತಣಕೆ ಬರುವಾಗ
ದಕ್ಷಬ್ರಮ್ಮನ ಕರೆದಾರು |

ದಕ್ಷಬ್ರಮ್ಮನು ಬರೋದಿಲ್ಲ ಅಂದಾಗ
ನಾರದರು ಅಲ್ಲಿಗೆ ದಯಮಾಡ್ರು |

"ಅಯಾ ದಕ್ಷಬ್ರಮ್ಮ ವಿನ್ನಮಾಚಾರ?"
"ನಾರುದ್ರೆ, ಮೂರುಲೋಕ ಚೆಂಚಾರ
ಮಾಡುವಂತ ನಿಮುಗೆ
ತಿಳೀದೇ ಇರೋ ಸಮಾಚಾರ ಯಾವುದದೆ ?"
"ಹಂಗಾದ್ಮೇಕೆ ನೀನು ದೇವ್ತಿಗಳು ನಡುಸ್ತಿರೊ
ಔತಣಕೊ ಹೋಗೊಂಗಿಲ್ಲ?"
"ಪಂಗೋಗ್ಲಿ ನಾರುದ್ರೆ
ನನಗೆ ಮಾನ ಬ್ಯಾಡ್ವ? ಮರ್ಯಾದೆ ಬ್ಯಾಡ್ವ?"
"ದಕ್ಷ, ನೀನು ಹೋಗದೇ ಹೋದ ಪಕ್ಕುಸದಲ್ಲಿ
ಮಾನ್ವೂ ಇಲ್ಲದಂಗಾಯ್ತದೆ
ಮರುವಾದ್ಲೂ ಇಲ್ಲದಂಗಾಯ್ತದೆ!"
"ಅದೆಂಗೆ ನಾರುದ್ರೆ ?"
"ಈ ಔತಣುಕೆ ನೀನು ಹೋಗದೇ ಇದ್ರೆ
ದೇವ್ತಿಗಳು ಮುಂದೆ ನೆಡಿಸುವಂತ
ಯಾವುದೇ ಸಬಿಯಕೆ ನಿನ್ನ ಕರೆಯೋದಿಲ್ಲ
ಹಂಗೆ ಕರೀದಿದ್ದರೆ ನೀನೇ ಹೋಗಕಾಯ್ತದ?
ಯೋಚ್ನೆ ಮಾಡು ದಕ್ಷ?"
"ನಾರುದ್ರೆ, ಅಲ್ಲಿಗೆ ಆ ಈಸ್ವುರ ಬತ್ತನೆ ಅಲ್ವೆ?"
"ಬಂದ್ರೆ ನಿನಗೇನು?"
"ಅವ್ನ್ನ ಕಂಡ್ರೆ ನನಗಾಗಕಿಲ್ಲ"
"ದಕ್ಷ, ಅದೆಲ್ಲ ಈಗ ತರುವಲ್ಲ
ತ್ರೇಮೂರ್ತಿಗಳ ಬುಟ್ಟು ದೇವುತೆಗಳು
ಯಾವ ಕೆಲ್ಸಾನು ಮಾಡಕಾಗಕಿಲ್ಲ
ನೀನು ಛಲ ಮಾಡ್ತ ಕೂತ್ರೆ
ಈಗಿರೋ ಸ್ಥಾನುವೂ ಹೋಯ್ತದೆ ಅಷ್ಟೆ"
"ನಾರುದ್ರೆ, ಆ ತ್ರೇಮೂರ್ತಿಗಳು ಅಷ್ಟು ಶಕ್ತರೆ?"
"ಅದನ್ನ ನಾನು ಬ್ಯಾರೆ ಹೇಳಬೇಕ?"
"ಹಂಗಾದ್ಮೇಕೆ ಆ ಶಕ್ತಿಯ ವಾಸು ಪಡೀಬೇಕು ಮಾರ್ಗ ಇದ್ರೆ
ಅದುಕ್ಕೆ ಯಾವುದಾದ್ರೂ ದಾರಿ ಇದ್ರೆ ಹೇಳಿ"
"ದಕ್ಷ, ಅದು ಆಮ್ಮಾಲೆ
ಮೊದಲು ನಡಿ ಸಬಿಯಕೆ " -

ನಾರುದರ ಮಾತೀಗೆ ಮರಳಾಗಿ ದಕ್ಷನು
ಬಂದಾನು ದೇವ್ತಿಗಳ ಔತಣಕೆ |

ದಕ್ಷಬ್ರಮ್ಮನು ಸಬಿಯಕೆ ಬಂದಾಗ
ದೇವಾದಿದೇವ್ತಿ ರುಸಿಮುನಿಗಳು |

ದೇವಾದಿದೇವ್ತಿ ರುಸಿಮುನಿಗಳು ಎದ್ದು
ಕರವೆತ್ತಿ ಕೈಯ ಮುಗಿದಾರು |

ತ್ರೇಮೂರ್ತಿಗಳು ಮಾತ್ರ ಮ್ಯಾಲುಕೇಳನಿಲ್ಲ
ದಕ್ಷ ರ್ಯಾಸದಲಿ ಹಲ್ಲುಕಡಿದ |

ಕೆಂಗಣ್ಣು ಬುಡುತ ಹಲ್ಲಲ್ಲು ಕಡಿಯುತ
ದುರುಗುಟ್ಟಿ ತ್ರೇಮೂರ್ತಿಗಳ ನೋಡಿದನು |

ನಾರದರು ಅಲ್ಲೀಗು ಬಂದೇ ಬಂದರಲ್ಲ
ಸಾಂತಿಯ ಮಾತ ನುಡಿದಾರು |

ಸಾಂತಿಯ ಮಾತಿನಲಿ ಸಮಾಧಾನ ಮಾಡಿದರು
ಹೆಚ್ಚಟ್ಟೆ ಸಬಿಯು ನಡೆಯಿತು |

ಹೆಚ್ಚಟ್ಟೆ ಔತಣವ ಮುಗಿಸಿಕೊಂಡು ಎಲ್ಲ
ಅವರವರ ಲೋಕಕೆ ನಡೆದಾರು |

ಹೊರಡುವ ನಾರದರ ಹಿಡಿದು ನಿಲ್ಲಿಸಿ ದಕ್ಷ
ನಾರದರ ತಡೆದು ಕೇಳುತಾನೆ |

"ನಾರುದರೆ ಆ ತ್ರೇಮೂರ್ತಿಗಳು
ನನಗೆ ಮರ್ಯಾದೆ ಕೊಡದ ಅವುಮಾನ ಮಾಡಿದ್ದಾರೆ
ಅವರ ಆಂಕಾರ ಅಡವಿ ಪಾಲಾಗದ ಹೊರ್ತು
ಅನ್ನ ನೀರು ಸೇರದಿಲ್ಲ ನಿದ್ದೆ ಹತ್ತೋದಿಲ್ಲ
ಹೇಳಿ ನಾರುದ್ರೆ
ಆ ತ್ರೇಮೂರ್ತಿಗಳ ಶಕ್ತಿಯನ್ನು ನಾನು ಪಡೀಬೇಕು
ಅದಕ್ಕೆ ಯಾವ ಪೂಜೆ ಹಾಕುಸ್ಬೇಕು ಹೇಳಿ"
"ಅಯ್ಯಾ ದಕ್ಷ

ಆ ತ್ರೇಮೂರ್ತಿಗಳಿಗೆ ಆ ಶಕ್ತಿ ಕೊಟ್ಟೋಳು ಯಾರು ?
ಆದಿಶಕ್ತಿ ತಾನೆ?
ಆ ಆದಿಶಕ್ತೀಗೆ ಪೂಜೆ ಮಾಡ್ಸು
ಅದ್ಕೆ ದೇವಾದಿದೇವ್ತಿಗಳ ಕರ್ಸು
ರುಸಿಮುನಿಗಳ್ನೆಲ್ಲ ಸೇರ್ಸು
ದೊಡ್ಡ ಪೂಜೆ ಮಾಡ್ಸಿ ಆ ಶಕ್ತಿದೇವ್ತಿಯ
ಪ್ರತೇಕ್ಷ ಮಾಡ್ಕೊಂಡು
ಅವ್ಳುತ್ರ ವರಪಡ್ಕೊಂಡ್ರೆ ಆಯ್ತಪ್ಪ?"
"ಅಷ್ಟೇಯಾ ನಾರುದ್ರೆ?"
"ಅಷ್ಟಲ್ದೆ ಇನ್ನೇನು?" -

ನಾರದುರ ಮಾತೀಗೆ ಮರುಳಾದ ದಕ್ಷಬ್ರಹ್ಮ
ಆದಿಶಕ್ತಿ ಪೂಜೆ ಮಾಡದಕೆ |

ಬೇಕು ಬೇಕಾದ ಸಾಮಾನು ಸರಂಜನೆಲ್ಲ
ಹದಗೂಡಿಸಿಕೊಂಡು ಬ್ಯೇಗ ಬ್ಯೇಗ |

ದೇವಾದಿದೇವ್ತಿಗಳ ರುಸಿಮುನಿಗಳನೆಲ್ಲ
ಆದಿಶಕ್ತಿ ಪೂಜೆಗೆ ಕರಸಿದನು |

ದೇವಾದಿ ದೇವ್ತಿಗಳು ರುಸಿಮುನಿಗಳು ಬಂದ್ರು
ಇಸ್ಟು ಸೈತ ಬ್ರಮ್ಮಾರು ಬಂದಾರು |

ಈಸ್ವುರನಿಗೆ ಮಾತ್ರ ಕರೆಯ ಕಳಸುನಿಲ್ಲ
ಉಳಿದೋರೆಲ್ಲ ಬಂದು ಸೇರಿದರು |

ಇತ್ತ ಕಡೆ ಕೈಲಾಸ್ದಲ್ಲಿ ದಾಕ್ಷಾಯಿಣಿ ತಾಯಿ
ಅಪ್ಪ ಆಗ ಬರಬವ್ದು |

ಆಗ ಬರಬವ್ದು ಈಗ ಬರಬವ್ದು
ನಮ್ಮ ಕರೆಯದಕೆ ಬರಬವ್ದು |

ನನ್ನ ಕರೆಯದಕೆ ಬರಬವ್ದು ನನ್ನನ್ನು
ಅಳಿಯನ ಕರೆಯದಕೆ ಬರಬವ್ದು |

ತಾಯಿ ದಾಕ್ಷಾಯಿಣಿ ದೇವಿ ಕಾದು ಕುಳಿತರು
ದಕ್ಷನು ಕರೆಯದಕ್ಕೆ ಬರನಿಲ್ಲ |

ಆಗ ದಾಕ್ಷಾಯಿಣಿ ಪರಶಿವನ ನೋಡಿ
ಏನೊಂದು ಮಾತ ನುಡಿದಾರು |

"ಸ್ವಾಮಿ, ನಮ್ಮ ತಂದೆಯವರು
ಆದಿಶಕ್ತಿ ಪೂಜೆ ಮಾಡ್ತಾ ಇದ್ದಾರೆ
ನಾವು ಹೋಗೋನ ಬನ್ನಿ"
"ದಾಕ್ಷಾಯಿಣಿ, ಕರೆಯದೇ ಇದ್ದ ಸ್ಥಳಕ್ಕೆ
ಹೋದ್ರೆ ಗೌರವ ಕಮ್ಮಿ ಬೇಡ ದಾಕ್ಷಾಯಿಣಿ"
"ಸ್ವಾಮಿ ಅವರಿವರಾದ್ರೆ
ಕರೀಬೇಕು ಕಳುಸ್ಬೇಕು
ನಾನು ಮಗಳು ನೀವು ಅಳಿಯ
ನಮ್ಮ ಮನೆಯವ್ರನ್ನ ನಾವು ಕರೀಬೇಕ? ಅಂತ್ಹೇಳಿ
ನಮ್ತಂದೆಯವರು ಸುಮ್ಮಿರಬವ್ದು
ನಾವು ಹೋಗೋದು ತಪ್ಪಿಲ್ಲ ಸ್ವಾಮಿ
ಬನ್ನಿ ಹೋಗಿ ಬರೋನ"
"ದಾಕ್ಷಾಯಿಣಿ
ನಿಮ್ಮ ತಂದೆ ನನಗೆ ನಿನ್ನ ಧಾರೆ ಎರ್ದು ಕೊಟ್ಟಿಲ್ಲ
ಅಳಿಯಾಂತ ಒಂದು ಸಲಾನು ಹೆಚ್ಗಟ್ಟೆ ಮಾಡಿ
ಪಿತೃಣಕ್ಕೆ ಕರಿದಿಲ್ಲ
ಎಂದೂ ಕರೀದಿದ್ದೋರ ಮನೆಗೆ
ನಾವು ನಾವೇ ಹೋದ್ರೆ ಗೌರವ ಸಿಕ್ಕದಿಲ್ಲ
ಆ ಕಾರಣಕ್ಕೆ ನಾನು ಬ್ಯಾಡ ಅಂತ ಹೇಳ್ದೆ"
"ಸ್ವಾಮಿ ನೀವು ಅಳಿಯ
ನಿಮ್ಮನ್ನ ನೀವು ಹೊರಗಿನವ್ರು ಅನ್ಕೋತಿದ್ದೀರಿ
ನಾನು ಅವರ ಮಗಳು
ನಾನೂ ಹೊರುಗ್ನೋಳ ಸ್ವಾಮಿ?"
"ದಾಕ್ಷಾಯಿಣಿ
ನೀನು ಮನೆಮಗಳು
ಹ್ಯಾಗೆ ಹೊರಗಿನವಳಾಗದಕ್ಕೆ ಸಾಧ್ಯ?
ಆದ್ರೂ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಅನ್ನೊ ನೀತಿ ಅದೆ
ಈ ಎರಡು ಮಾತ್ನಲ್ಲಿ ನಿನಗೆ ಯಾವುದು ಹಿಡುಸ್ತದೋ
ಆ ಪ್ರಕಾರವಾಗಿ ನೀನು ನಡೀಬವ್ದು !"
"ಸ್ವಾಮಿ ನ್ಯಾಯ ನೀತಿ ಮಾತು ಹಂಗಿರ್ಲಿ
ಬೆಟ್ಟಕೆ ಬಿದುರಾಸೆ ಬಿದುರೀಗೆ ಮಳೆಯಾಸೆ
ಹೆಣ್ಣುಮಕ್ಕಳಿಗೆ ತವುರಾಸೆ
ಅನ್ನೋ ಮಾತು ಗೊತ್ತು ತಾನೆ ?
ಅಂದ್ಮೇಲೆ ಅದ್ಹೆಂಗೆ ನಾನು ತವುರಿಗೆ ಹೊರಗು ಸ್ವಾಮಿ?"

"ದಾಕ್ಷಾಯಿಣಿ
ಹೆಣ್ಣುಮಕ್ಕಳಿಗೆ ತವುರಿನ ವ್ಯಾಮೋಗ ಇರ್ತದೆ ಸರಿ
ಆದ್ರೆ ನಿಮ್ಮ ತಂದೆ ?"

"ಸ್ವಾಮಿ, ತಂದೇಯ ನೆನದಾರೆ ತಂಗಳ ಬಿಸಿಯಾಯ್ತು
ಅನ್ನೋ ಮಾತಿಲ್ವೆ?
ಹೆಣ್ಣು ಮಕ್ಕಳು ಅದ್ಹೆಂಗೆ ತವರ್ನ ಮರಿಯಾಕಾಯ್ತದೆ ಸ್ವಾಮಿ
ನೀವೇ ಯೋಚನೆ ಮಾಡಿ ಹೇಳಿ"
"ದಾಕ್ಷಾಯಿಣಿ ಏನೇ ಕಾರ್ಣಕ್ಕೂ
ನಾನು ನಿಮ್ಮಪ್ಪನ ಮನ್ಗೆ ಬರೋದಿಲ್ಲ
ನೀನು ಹೋಗಿ ಬರೋದಾದ್ರೆ
ನಾನು ಅದ್ಕೆ ಅಡ್ಡಿ ಮಾಡದಿಲ್ಲ
ಇನ್ನು ನಿನ್ನಿಚ್ಛೆ!"
"ಹಂಗದ್ಯಾಕೆ ಹೋಗಿ ಬಂದ್ಬುಡ್ತೀನಿ ಸ್ವಾಮಿ" -

ತಾಯಿ ದಾಕ್ಷಿಣೆದೇವಿ ಪತಿಯ ಒಪ್ಪಿಗೆ ಪಡೆದು
ತಂದೆ ಮಾಡುವ ಪೂಜೆಗೆ |

ತಂದೆ ಮಾಡುವ ಆದಿಶಕ್ತಿ ಪೂಜೆಯ
ಮಂಟಪಕೆ ತಾಯಿ ಬಂದಳು |

ಮಗಳು ಬಂದ ಸುದ್ದಿ ಕೇಳಿ ದಕ್ಷಬ್ರಮ್ಮ
ಕೋಪದಲಿ ಕಿಡಿಕಿಡಿ ಆದಾನು |

ಕಿಡಿಕಿಡಿ ಕಾರುತ ಕೆಂಗಣ್ಣ ತಿರುವುತ
ರ್‍ಯಾಸವೇಸದಲಿ ಬಂದಾನು |

ರ್‍ಯಾಸವೇಸದಲಿ ಬಂದು ದಕ್ಷಬ್ರಮ್ಮ
ಮಗಳನ್ನು ಅಡ್ಡಗಟ್ಟಿ ನಿಲ್ಲಿಸಿದ |

"ಏಯ್ ಯಾರು ನೀನು ?
ಯಾಕೆ ಇಲ್ಲಿಗೆ ಬಂದೆ ?
ಯಾರು ನಿನ್ನುನ ಕರೆದಿದ್ರು ?
ಬಂದ ದಾರಿ ಹಿಡುದು ಹೋದುದ್ದೇ ಆದ್ರೆ ಸರಿ
ಇಲ್ಲದೆ ಇದ್ರೆ ನಾನು ಏನು ಮಾಡ್ತಿನೊ ನನಗೆ ಗೊತ್ತಿಲ್ಲ"
"ಅಪ್ಪಾಜಿ...."
"ಇನ್ನೊಂದ್ಸಲ ನನ್ನ ಅಪ್ಪಾಜಿ ಅನ್ನಬೇಡ"
"ಮಗಳು ತಂದೇನ ಅಪ್ಪಾಜಿ ಅನ್ನದೆ ಇನ್ನೇನನ್ನಕಾಯ್ತಾದೆ
ತಂದೆ?"
"ತಂದೆ? ಯಾರು ನಿನಗೆ ತಂದೆ?
ನಾನು ನಿನಗೆ ತಂದೆಯೂ ಅಲ್ಲ
ನೀನು ನನಗೆ ಮಗ್ಳೂ ಅಲ್ಲ.
ಯಾವಾಗ ನೀನು ಆ ಗೋಸಾಯಿಯ ಮದುವೆಯಾದ್ಯೊ
ಅವತ್ತೆ ನಿನ್ನ ನನ್ನ ಸಂಬಂಧ ಕಿತ್ತೋಯ್ತು !"
"ಸಂಬಂಧ ಕಿತ್ತೋಗೋದು ಅಷ್ಟು ಸುಲಬುವ ಅಪ್ಪಾ
ನಾನು ನಿಮ್ಮ ಮಗಳು
ಪರಮೇಶ್ವರ ನಿಮ್ಮ ಅಳಿಯ
ಈ ಸಂಬಂಧ ಹೇಗೆ ತಾನೆ ಮರ್‍ತೋಯ್ತದೆ?"
"ಬಾಯ್ಮುಚ್ಚು ಅವಿವೇಕಿ
ಆ ಗೋಸಾಯಿಯ ಆ ಗೊರುವಯ್ಯನ
ಆ ಇಕಾರ ರೂಪನ ಭೂತುವನ್ನ
ನನ್ನ ಅಳಿಯ ಅಂತೀಯ?"
"ಅವ್ರು ಭೂತ ಅಲ್ಲ ಅಪ್ಪಾಜಿ ಭೂತೇಶ್ವರ!"
"ಆ ನಿನ್ನ ಭೂತೇಶ್ವರ
ಬೂದಿಬಡುಕ
ಹೆಣದ ಕಪಾಲು ಕೈನಲ್ಲಿ
ಉಡಾಕೆ ಬಟ್ಟೆ ಇಲ್ಲದ ಅವುನ್ಗೆ ಹುಲಿಚರ್ಮವೇ ಬಟ್ಟೆ
ಆ ಮುಕುವೊ ಇನ್ನಾ ಇಚಿತ್ರ
ಎಲ್ಲರ್‍ಗೂ ಎರ್ಡು ಕಣ್ಣಾದ್ರೆ ಇವುಂಗೆ ಮೂರ್‍ಕಣ್ಣು
ಒಡವೆಗೆ ಗತಿಯಿಲ್ಲದ ಅವುನ್ಗೆ ಹಾವುಗಳು ಆಭರಣ
ವಾಸ ? ಸ್ಮಸಾನ !
ಇಂತೇವ್ನು ನನ್ನ ಅಳಿಯನ ?
ಇಂತೇವ್ನ ಮೆಚ್ಚುದೋಳು ನನ್ನ ಮಗಳ ?
ತುಂಬುದ ಸಬಿಯಾಕೆ ನಾನು ಹೋದ್ರೆ
ಮಾವ ಬಂದಾಂತ ಮರ್‍ಯಾದೆ ಕೊಡದೆ
ಬಂದು ನನ್ನ ಕಾಲಿಗೆ ಬಿದ್ದು
ಆಸುರ್‍ಯಾದ ತಕ್ಕೊಳ್ದೆ ಕುಂತಿದ್ನಲ್ಲ
ಆ ದೊಡ್‌ಮನುಸ ನನ್ನ ಅಳೀಯ್ನಾ?
ಅವ್ನು ಅಳಿಯನೂ ಅಲ್ಲ
ನೀನು ನನ್ನ ಮಗಳೂ ಅಲ್ಲ
ಏಯ್ ಯಾರ್‍ಯೊ ಅಲ್ಲಿ
ಇವ್ನ ಬಟ್ಟೆಬರೇನೆಲ್ಲ ಹರ್‍ದಾಕಿ
ಇವ್ನ ತಲೇನೆಲ್ಲ ಬೋಳ್ಸಿ
ಹಣೇಗೆ ಮೂರ್‌ನಾಮ ಬಳ್ದು
ಕತ್ತೆಮ್ಯಾಲೆ ಕುಂಡ್ರಿಸಿ ಆ ಗೊರುವುನ ಹತ್ರುಕೆ ಕಳ್ಸಿ
ಆಗ ನನ್ಗೆ ಸಮಾಧಾನ ಆಯ್ತದೆ!" -

ತಂದೆ ಆಡಿದ ಮಾತ ಕೇಳಿದಳು ದಾಕ್ಷಾಯಿಣಿ
ಆದ ಅವಮಾನವ ತಡೆಯಲಾರದೆ |

ಹತ್ತಿ ಉರೀತಿದ್ದ ಕೊಂಡಕೆ ತಾಯಿ
ಹಾರಿಬಿದ್ದ ಪ್ರಾಣ ತ್ಯಾಗ ಮಾಡಿದಳು |

ಹಂಗೆ ಸತ್ತ ದಾಕ್ಷಾಯಿಣಿ ದೇವಿಯು
ಗಿರಿರಾಜ್ನ ಮಗಳಾಗಿ ಹುಟುತಾಳೆ |

ಭೂಲೋಕದಲ್ಲಿ ಗಿರಿರಾಜ್ನ ಮಗಳಾಗಿ
ಮಗಳು ವಯಸಾಕೆ ಬರುತಾಳೆ |

ವಯಸಿಗೆ ಬಂದ ಮಗಳ ಮದುವೆಗಾಗಿ
ಗಿರಿರಾಜ ಗಂಡ ಹುಡುಕುತಾನೆ |

ಗಿರಿರಾಜ ಗಂಡ ಹುಡುಕುವ ಕಾಲಕೆ
ನಾರದರು ಅಲ್ಲೀಗೆ ಬರುತಾರೆ |

ನಾರದರು ಬಂದು ಗಿರಿರಾಜನ ಕೂಡೆ
ಗಿರಿಜಮ್ಮ ಕಥೆಯ ಹೇಳುತಾನೆ |

ದಾಕ್ಷಾಯಿಣಿ ದೇವಿ ಗಿರಿಜ್ಯಾಗಿ ಹುಟ್ಟವುಳೆ
ಶಿವನೀಗೆ ಕೊಟ್ಟು ಮದುವೆಯ |

ಶಿವನೀಗೆ ಕೊಟ್ಟು ಮದುವೆಯ ಮಾಡಂತ
ದೇವ್ತಿಗಳು ಸೈತ ಹೇಳುತಾರೆ |

ನಂದಿ ಬಸವಣ್ಣ ಮುತ್ತೈದೇರೊಂದಿಗೆ ಬಂದು
ಹೆಣ್ಣ ಕೊಡಬೇಕು ಅನ್ನುತಾನೆ |

ಮದುವೆ ಮೂರ್ತಕೆ ಲಗ್ನಾವ ಕಟ್ಟಿಸಿ
ಬೇಕು ಬೇಕಾದ್ದನೆಲ್ಲ ಹೊಂದ್ಸುತಾರೆ |

ಬೇಕು ಬೇಕಾದ್ದ ಹೊಂದಿಸಿಕೊಂಡರು
ಲಕ್ಷೋಪಿಲಕ್ಷ ಮುನಿಗಳು |

ಲಕ್ಷೋಪಿಲಕ್ಷ ಮುನಿಗಳು ರುಸಿಗಳು
ದೇವಾದಿದೇವ್ತಿಗಳು ಬರುತಾರೆ |

ಬ್ರಮ್ಮ ಸರಸ್ವೋತಿ ಲಕ್ಷ್ಮೀನಾರಾಯ್ಣರು
ಸುಬುಮೂರ್ತಕೆ ಆವರು ಬರುತಾರೆ |

ಪರಶಿವನ ಕಲ್ಯಾಣ್ಕೆ ಎಲ್ಲಾರು ಬರುತಾರೆ
ಸತ್ಯ ಶರಣರು ಒನುಗೂಡಿ |

ಸತ್ಯ ಶರಣರು ದೋಹರ ಕಕ್ಕಯ್ಯ
ಏಂಬಾರ ಗುಂಡಯ್ಯ ಬರುತಾರೆ |

ಮೇದರ ಕೇತಯ್ಯ ಹಡಪದ ಅಂಪಣ್ಣ
ಮಡಿವಾಳ ಮಾಚಯ್ಯ ಬರುತಾರೆ |

ಮಾದಾರ ಚನ್ನಯ್ಯ ಒಕ್ಕುಲುಗ್ರ ಮುದ್ದಯ್ಯ
ಆಯ್ದಕ್ಕಿ ಮಾರಯ್ಯ ಬರುತಾರೆ |

ಈಡಿಗರ ಗುರುವಯ್ಯ ದೇವಾಂಗ್ದ ದಾಸಯ್ಯ
ಶರಣ ಹರುಳಪ್ಪ ಬರುತಾರೆ |

ಕಲ್ಯಾಣ ಪಟ್ಣದ ಸತ್ಯ ಶರಣರೆಲ್ಲ
ಅಣ್ಣ ಬಸವಣ್ಣನ ಒನುಗೂಡಿ |

ಕಲ್ಯಾಣದ ಅಣ್ಣ ನಮ್ಮ ದೊಡ್ಡ ಬಸವಣ್ಣನೋರು
ಪರಶಿವ್ನ ಕಲ್ಯಾಣ್ಕೆ ಬರುತಾರೆ |

ಬರುವಾಗ ಬಸವಣ್ಣ ಒಂದ್ಯೋಚನೆ ಮಾಡುತಾರೆ
"ಸ್ವಾಮಿ - ಲಗ್ನುನಕೆ ನಾವು ಹೋಗುವಾಗ |

ಸ್ವಾಮಿಯ ಲಗ್ನುನಕೆ ಹೋಗಬೇಕಾದ್ರೆ ನಾವು
ಹಂಗಿಂಗೆ ಹೋಗೋದು ತರುವಲ್ಲ |

ಹನ್ನೆರಡು ತಾಳಗಳು ಹನ್ನೆರಡು ಮೇಳಗಳು
ಶ್ರುತಿ ಮೋರಿ ಡೋಲುಗಳು ಬೇಕು |

ಇಂತೆ ವಾದ್ಯಗಳ ನುಡಿಸೋರು ಯಾರಪ್ಪ?
ನನ್ನ ಶರಣಮಾತ್ಮರೆ ಹೆಸರ್ಹೇಳಿ" |

ಬಸವಣ್ಣೋರ ಮಾತ ಕೇಳೀದ ಶರಣರು
ತಲೆಗಳ ತೂಗುತ ನಿಂತಾರು |

ಯಾರೂಂತ ನನಗೆ ಮೊದುಲ್ಹೇಳಿ ಶರಣರೆ
ಅಂತೆ - ಘನಶರಣನ ನಾವು ಕರೀಬೇಕು |

ಹಂಗದ ಕೂಡಲೆ ಶರಣ ಚನ್ನಯ್ಯನೋರು
ಹೊನ್ನಯ್ನ ಹೆಸರ ಹೇಳಿದಾರು |

"ಹೊಲೇರ ಹೊನ್ನಯ್ನ ವಾದ್ಯ ಅಂದರೆ ಸ್ವಾಮಿ
ಅದು - ಜಗತ್ಯಕೆ ಒಳ್ಳೆ ಹೆಸರಲ್ವ? |

ಜಗತ್ಯಕೆ ಹೆಸರಾದ ವಾದ್ಯಕಾರ ಹೊನ್ನಯ್ಯ
ತಪಾದೆ ಕರಿಸಿಕೊಳಬೇಕು" |

ಚನ್ನಯ್ಯ ಮಾತ ಕೇಳಿ ಬಸವಣ್ಣನೋರು
ಹಡಪದಂಪಣ್ಣನ ಕರೆದಾರು |

ಹಡಪದಂಪಣ್ಣನ ಕರದು ಏನಂದಾರು
"ನೀವು ಈಗಲೆ ಹೊನ್ನಯ್ಯ ಕರಕೊಂಡು |
ಹಂಪಣ್ಣ ಶರಣ ಬೇಗದಲಿ ಹೋಗಿ
ವಾದ್ಯುಸೈತಾಗಿ ಹೊನ್ನಯ್ಯನ |

ವಾದ್ಯಸೈತಾಗಿ ಹೊನ್ನಯ್ಯ ಕರುಕೊಂಡು
ಬನ್ನಿ ಹೋಗಿ ಹಂಪಣ್ಣ ಶರಣಾರೆ" |

ಬಸವಣ್ಣೋರ ಮಾತ್ಗೆ ಎದುರುತ್ರ ಹೇಳದೆ
ಹಂಪಣ್ಣ ಹೊರಟರು ಬೇಗುದಲ್ಲಿ |

ಪಂಪಣ್ಣ ಬಂದು ಹೊನ್ನಯ್ಯ ಕಂಡು
ಬಂದಂತ ಸುದ್ದಿಯ ಅರುಗಿದರು |

ಹಂಪಣ್ಣ ಮಾತ ಕೇಳಿ ಹೊನ್ನಯ್ಯನೋರು
ತಲೆಯನು ತೂಗೂತ ನುಡಿದಾರು |

"ನಾವು ಪರಮಾತ್ಮ ಕಲ್ಯಾಣ್ಕೆ ಬರುವುದಕೆ
ಹಂಗಿಂಗೆ ಬಂದರೆ ಆಗಾದು |

ಹನ್ನೆರಡು ತಾಳಗಳು ಹನ್ನೆರಡು ಮೇಳಗಳು
ಶ್ರುತಿ ಮೋರಿ ಡೋಲು ವಾಲೂಗ |

ಶ್ರುತಿ ಮೋರಿ ಡೋಲು ವಾಲೂಗ ಸೈವಾಗಿ
ನಾವುಗಳು ಕಲ್ಯಾಣ್ಕೆ ಬರಬೇಕು |

ನಮ್ಮ ಕುಲಕಸುಬಿಗೆ ನಾವು ಅನ್ಯಾಯ ಮಾಡೊಂಗಿಲ್ಲ
ನಾವು ಕಂಮುತ್ಯಾಗೂ ಬರುತೀವಿ |

ಪರಶಿವನು ಗಿರಿಜಮ್ಮ ಕೈ ಹಿಡಿಯೊ ಕೆಲಸಕೆ
ನಮ್ಮ - ವಾದ್ಯಗಳ ಜಯಭೇರಿ ಆಗಬೇಕು |

ಎಲ್ಲಾ ಮಾತ್ಯಾರು ಕಾಲು ನಡಿಗೇಲಿ ಬರಬವುದು
ನಾವುಗಳು ಹಂಗೆ ಬರಲಾರೊ |

ಹನ್ನೆರಡು ತಾಳ ಹನ್ನೆರಡು ಮೇಳ
ನಗಾರಿ ನೌಪತ್ತುಗಳನೆಲ್ಲ |

ನಗಾರಿ ನೌಪತ್ತು ಕೊಂಬು ಕಹಳೆಗಳು
ಡೋಲು ಢಕ್ಕಿ ಶ್ರುತಿ ಮೋರಿಗಳು |

ಕಿನ್ನಾರಿ ಕೌಸಾಳೆ ಶ್ರುತಿ ಮೋರಿಗಳನ್ನೆಲ್ಲ
ಹೊತ್ತು ತರುವುದಕೆ ಆಗದಿಲ್ಲ |

ಇವುನೆಲ್ಲ ನಾವು ತಕ್ಕೊಂಡು ಪರಶಿವನ
ಸನ್ನಿಧಿಗೆ ಬರಬೇಕು ಅನ್ನೋದಾದ್ರೆ |

ನಮ್ಮ ಜನಕೂ ಒಂದು ಸ್ಥಿತಿಗತಿ ಬೇಕು ಸ್ವಾಮಿ
ನಾವು ಸಂತೋಷದಿಂದ ಬರಬೇಕು |

ನಾವು ಸಂತೋಷದಿಂದ ಬರಬೇಕು ಅನ್ನೋದಾದ್ರೆ
ನಮುಗೊಂದು ಸ್ಥಾನಮಾನ ಕೊಡಬೇಕು |

ನಮಗೆ ಆನೆ ಅಂಬಾರಿ ಹಾಕಿ ಆನೆಗೆ ಸುಂಗಾರ ಮಾಡಿ
ನದುರು ಕೊಟ್ಟು ನಮ್ಮ ಕರುಸ್ಬೇಕು |

ನದುರು ಕೊಟ್ಟು ನಮ್ಮ ಕರುಸೋದು ಸೈವಾದ್ರೆ
ಆನಂದದಿಂದ ನಾವು ಬರುತೀವಿ |

ಆನಂದದಿಂದ ವಾದ್ಯ ಮಾಡಿಕೊಂಡು
ಸಂತೋಷದಿಂದ ನಡ್ಸುತೀವಿ" |

ಹೊಲೇರ ಹೊನ್ನಯ್ಯ ಹಾಗಂತ ಹೇಳಿ
ತನ್ನ ಕಡೇರ್ನ ಕಳ್ಸಿದಾನು |

ತನ್ನ ಕಡೇರ್ನ ಬಸವಣ್ಣರ್ಹತ್ರುಕೆ
ಕಳಿಸಿ ಸುದ್ದೀಯ ಮುಟ್ಟುಸಿದ |

"ಆನೆ ಮ್ಯಾಲಂಬಾರಿ ಹಾಕಿ ಕಳುಸಬೇಕಂತೆ
ಹಂಗೆ ಆಗಲಿ ಕಳಿಸಿಕೊಡಿ |

ವಾದ್ಯವಿಲ್ಲದ ಮ್ಯಾಲೆ ಅದೆಂತೆ ಕಲ್ಯಾಣ ?
ಆನೆ ಅಂಬಾರಿಯ ಕಳಿಸಿಕೊಡಿ |

ಪರಶಿವನ ಮದುವೆ ಗಿರಿಜಮ್ಮನ ಮದುವೆ
ಮೂರು ಲೋಕಕೆ ಹೆಸರಾಗಲಿ |

ಹೊನ್ನಯ್ಯ ಹೇಳಿದ್ದು ಬಾಳ ಚಂದದ ಮಾತು
ಇದು ಒಂದು ಐಭೋಗ ನಡೆದೋಗಲಿ |

ಬ್ಯಾಗನೆ ಕಳಿಸಿರಿ ಆನೆ ಅಂಬಾರಿಗಳ
ಹೊನ್ನಯ್ನ ಬ್ಯಾಗನೆ ಕರತನ್ನಿರೊ" |

ಬಸವಣ್ಣೋರ್ ಮಾತಿಗೆ ಎಲ್ಲ ತಲೆ ತೂಗಿದರು
ಮದ್ವಾನೆ ಸಿದ್ದಯ್ಯನ ಕರಸಿದರು |

ಆನೆಮ್ಯಾಲಂಬಾರಿ ಹಾಕೊಂಡು ಸಿದ್ದಯ್ಯ
ಹೊನ್ನಯ್ನ ಕರೆವುದಕೆ ನಡೆದಾರು |

ಹೊನ್ನಯ್ನ ದೊಡ್ಡ ಮರ್ಯಾದೆಯಿಂದ
ಕರುಕೊಂಡು ಬರಬೇಕು ಅನುತಾರೆ | ೪೩೦

ಅಂಬಾರಿ ಆನೇಲಿ ಬರೋದೆ ಒಳ್ಳೇದು
ಮದುವೆಗೆ ವಾದ್ಯಗಳು ಬೇಕೇಬೇಕು |

ಮಂಗಳ ವಾದ್ಯಗಳು ಮದುವೆಗೆ ಬೇಕೇ ಬೇಕು
ಬ್ಯಾಗ ಬ್ಯಾಗ ಹೊನ್ನಯ್ನ ಕರತನ್ನಿ |

ಹಂಗಂತ ಸರಣರುಮಾತ್ಮರ ಕಾದುನಿಂತವ್ರೆ
ಪರಮಾತ್ಮನ ಸ್ಯಾಮೆ ಆಗಲಂತ |

ಆಯ್ತುವಾರ ಚಪ್ರ ಸ್ಯಾಮಾರ ಧಾರೆಯೆಂದು
ನಿಚ್ಚಾಯವಾಗಿತ್ತು ಸುಬುದಿನ |

ಸರಣಮಾತ್ಮರೆಲ್ಲ ಕೋಟಿ ಗಣಂಗಳೆಲ್ಲ
ಹೊನ್ನಯ್ನ ಕಾದು ನಿಂತವುರೆ | ೪೪೦

ಲೋಕದ ಮಾನ್ಯವರೆಲ್ಲ
ಮಿಂದು ಮಡಿಯುಟ್ಟು, ಹಸ್ತು ಹಲ್ಲು ಸುಲುದು
ತಮ್ಮ ಕುಲೋದ್ಯೋಗದಲ್ಲಿ ಜಾಗೃತರಾಗಿ
ಬಂಗಾರದ ತಟ್ಟೆಗಳಲ್ಲಿ ಬಾಳಣ್ಣು ತೆಂಗಿನಕಾಯಿ
ಬೆಲ್ಲದಚ್ಚು, ಕಳಸ ಕನ್ನಡಿ
ಪಟ್ಟೆ, ಸೀರೆ ಪಟ್ಟೆರವುಕೆ
ತಲೆಗೆ ಬೈತಲೆ ಬೊಟ್ಟು, ನಾಗರು ಜಡೆಬಿಲ್ಲೆ, ರೋಜಾದ ಹೂವು
ಕಂಠೀಸರ, ಜೋಮಾಲೆಸರ, ಅಡ್ಡೆ, ಮುತ್ತುನಸರ, ರತ್ನುದ್ ಪದಕ
ವಜ್ರುದ್ ವಾಲೆ, ಜುಮುಕಿ, ನತ್ತು, ವಂಕಿ
ತೋಳುಬಂದಿ, ಬಳೆ, ಕಡಗ, ನವರತ್ನುದ್ ಉಂಗ್ರುಗಳು ೪೫೦
ನವರತ್ನ ಮೆಟ್ಟಿರೊ ಚಿನ್ನದ ಡಾಬು, ಕಾಲುಂಗ್ರ, ಪಿಲ್ಲಿ, ಕಾಲ್ಚೈನು
ಕಾಲಂದುಗೆಗಳ್ನೆಲ್ಲ ಭೂಪೆಟ್ಟಿಗೆಗೆ ತುಂಬಿ ತಂದ್ರು

ನಡಮಡಿ ನಡಚಪ್ರ ನಗಾರಿ ನೌಪತ್ತು
ಕೊಂಬು ತಮಟೆ, ತಾಳಮೇಳ ಸ್ಯೆವಾಗಿ -

ಹನ್ನೆರಡು ತಾಳಗಳು ಹನ್ನೆರಡು ಮೇಳಗಳು
ಡೋಲು ವಾಲುಗ ಶ್ರುತಿಮೋರಿ |

ಡೋಲು ವಾಲುಗ ಶ್ರುತಿ ಮೋರಿ ನುಡಿಸುತ
ಲಿಂಗಬೀರರ ಕುಣಿಸುತ |

ಬೆಳ್ಳಿ ಅಂಬಾರಿ ಮೇಲೆ ಚಿನ್ನದ ಕಳಿಸವು
ನಂದಿಧ್ವಜ ಸ್ಯೆವಾಗಿ ಬರುತಾರೆ | ೪೬೦

ವಾದ್ಯ ಮಾಡಿಕೊಂಡು ವೈಭೋಗದಿಂದ ಹೊನ್ನಯ್ಯ
ಬರುವಾಗ ನದರ ಕೊಡುತಾರೆ |

ಇಂತೆ ವೈಭೋಗದ ವಾದ್ಯ ನೋಡಿರನಿಲ್ಲ
ಅಂತ್ಪೇಳಿ ಕೇರಿ ಜನುವೆಲ್ಲ |

ಕೇರಿ ಕೇರಿಯ ಹೆಣ್ಣು ಗಂಡೆಲ್ಲ ಬಂದು
ಬೆರಗಲ್ಲಿ ನೋಡಿ ನಿಲುತಾರೆ |

ಪಡ್ಡೆ ಹೈಕಗಳು ವಾದ್ಯಾದ ತಾಳಕ್ಕೆ
ತಕ್ಕಂತೆ ಕುಣುಕೊಂಡು ಬರುತವ್ರೆ |

"ಎಲ್ಲಾ ಕುಲಸ್ತ್ರೂಗೂ ಕಾಲ್ನಡುಗೆಯಾದರೆ
ನಮ್ಮ ಕುಲುದೋರ್ಗೆ ಪಟ್ಟದಾನೆ | ೪೭೦

ನಮ್ಮ ಕುಲುದೋರ್ಗೆ ಪಟ್ಟದಾನೆ !" ಅಂತ್ಪೇಳಿ
ಹೆಚ್ಚಾಳ ಪಟ್ಟುಕೊಂಡ ಹೊನ್ನಯ್ಯ |

ಕಲ್ಯಾಣ್ಪ ಮಂಟುಪಕೆ ಹೊನ್ನಯ್ಯ ಬರುವಾಗ
ಬಾಕುಲಲ್ಲೆ ಹೊನ್ನಯ್ನ ತಡುದಾರು |

ಶಿವನ ಕಲ್ಯಾಣಕೆ ಬಂದಾರು ಹೊನ್ನಯ್ಯ
ಕಡೆಬಾಕಲಲ್ಲಿ ತಡೆದಾರು |

ಸಾವ್ರ ಕೋಟಿ ಗಣಗಳು ಹೆಣ್ಣು ಗಂಡ ಜೊತೆಗೆ
ಕಲ್ಯಾಣ ಮಂಟಪಕೆ ನಡೆದಾರು |

ಶರಣ ಮಾತ್ಮರೆಲ್ಲ ಲಿಂಗಬೀರರಿಗೆ
ಆರತಿ ಬೆಳಗಿ ಕರುಕೊಂಡರು | ೪೮೦

ಕಾಲು ನಡುಗೇಲಿ ಬಂದ ಶರಣಮಾತ್ಮರೆಲ್ಲ
ಕಲ್ಯಾಣ ಮಂಟುಪಕೆ ತೆರುಳಿದರು |

"ಆನೆ ಮ್ಯಾಲಿರೊ ನಾವು ಮಂಟಪದೊಳೀಕೆ
ಬರುವಂತ ಬಗೆಯು ತಿಳಿಯದಲ್ಲ |

ಆನೆಯು ನಿಂತಿತು ಚಪ್ಪರದ ಒಳಗಡೆಗೆ
ಹೋಗೋದಕಾಗದೆ ನಿಂತವುರೆ |

ಗಿರಿರಾಜ ಬಂದು ಪರಮಾತ್ಮನೀಗೆ
ಗಿರಿಜಮ್ಮ ಧಾರೆ ಎರಿದಾರು |

ಹೊನ್ನಯ್ಯ ಹೊರಗಡೆ ನಿಂತು ವಾದ್ಯ ಮಾಡುವಾಗ
ಗಿರುಜಮ್ಮೆ ಶಿವನು ತಾಲೀಯ | ೪೯೦

ಗಿರುಜಮ್ಮೆ ಶಿವನು ತಾಲೀಯ ಕಟ್ಟಿದರು
ಮಂಗಳ ಕಾರ್ಯ ನಡೆದೀತು |

ಮುತ್ತೈದೆರೆಲ್ಲ ಸೋಬಾನ ಹಾಡುತ
ಶಾಸ್ತ್ರಗಳನೆಲ್ಲ ಮಾಡಿದರು |

ಅಂಜೂರ ಏಜ್ಜೂರ ಬಾದಾಮಿ ಕಲ್ಸಕ್ರೆ
ಹಣ್ಣು ಹಂಪುಲವ ಕೊಡುತಾರೆ |

ಹೆಸ್ರುಬ್ಯಾಳೆ ಕಡ್ಲೆಬ್ಯಾಳೆ ಪಂಚಾಮೃತ ಕೊಟ್ಟು
ಸೇರಿದ್ದ ಸಬುಗೆ ಹಂಚುತಾರೆ |

ಅರಿಸಿನ ಕೂಕುಮ ತಾಂಬೂಲಗಳ ತಂದು
ಮಾನ್ಯವರಿಗೆಲ್ಲ ಕೊಡುತಾರೆ | ೫೦೦

ಗಿರಿಜಮ್ಮಂಗೂ ಪರಮೇಶ್ವರಂಗು
ವಿಜ್ರಂಭಣೆಯಿಂದ ಮದುವೆ ಆಯ್ತು
ಅಲ್ಲಿ ಸೇರಿದ್ದ ಜನುವೆಲ್ಲ
'ಜೈ ನಮ ಪಾರ್ವತೀ ಪತೆ ಹರಹರ ಮಾದೇವ್' ಅಂತ್ಹೇಳಿ
ಪಾರ್ವತಿ ಪರಮೇಶ್ವರರ್ನ ಕೊಂಡಾಡುದ್ರು
ಬಂದಿದೋರ್ಗೆಲ್ಲ ಊಟ ಉಪುಚಾರಗಳಾದೊ
ಎಲ್ಲರ್ಗೂ ವೀಳ್ಯೆ ಕೊಟ್ಟು ಕಳುಸ್ಕೊಡ್ತಿದ್ರೆ
ಆನೆಮ್ಯಾಲೆ ಕೂತಿದ್ದಂತ ಹೊನ್ನಯ್ಯ
ಸ್ವಾಮಿಯವರ ಕಲ್ಯಾಣವನ್ನು ಕಣ್ತುಂಬ ನೋಡಕಾಗ್ಲಿಲ್ಲ.
ಪಾರ್ವತೀ ಪರಮೇಶ್ವರರು ೫೧೦
ಕೈಲಾಸ್ಕ ಹೊಂಟು ನಿಂತಿರುವಾಗ
ಆನೆ ಮೇಲೆ ವಾದ್ಯಸೈವಾಗಿ ಕುಳಿತಿದ್ದ ಹೊನ್ನಯ್ಯನವರು
"ಸ್ವಾಮಿ ನಿಮ್ಮ ಮದುವೆ ನೋಡೊ ಆನಂದ
ನನಗೆ ಸಿಕ್ಕಿಲ್ಲವಲ್ಲ ನನ್ನಪ್ಪ
ಲೋಕಕೆ ದೊಡ್ಡೋರು ನೀವಿರುವಾಗ
ನಾನು ಆನೆ ಅಂಬಾರೀಲಿ ಬರಬೇಕೂಂತ
ಹಟವನ್ನು ಮಾಡಿದ್ದು ತಪ್ಪಾಯ್ತು ಸ್ವಾಮಿ" ಅಂತ
ಆನೆ ಮ್ಯಾಗ್ರಿಂದ್ಲೆ ಕೈಮುಗುದ.
ಪಾರ್ವತಿ ಪರಮೇಶ್ವರರು ನಂದಿವಾಗನವೇರಿ
ಕೈಲಾಸಕೆ ನಡುದ್ರು ೫೨೦
ಆಗ ನಾರುದ್ರು ಹೊನ್ನಯ್ನ ನೋಡುದ್ರು
ಅಣ್ಣ ಬಸವಣ್ಣನವರು ಅಲ್ಲಿಗೆ ಬಂದ್ರು
ನಾರುದ್ರು ಹೇಳ್ತರೆ
"ಹೊನ್ನಯ್ಯ ನೀನು ಮಾಡಿದ್ದು ನಿನ್ನೇ ತಿನ್ತು
ಆದ್ರೂ ಕಲ್ಯಾಣದ ಬಸವಣ್ಣನ ಎದುರ್ಗೆ ಒಂದು ಮಾತ್ಹೇಳ್ತೀನಿ.
ನಿನ್ನ ಈ ಪಾಪವ ನೀನು ಕಳ್ಕೋಬೇಕು ಅನ್ನೋದಾದ್ರೆ
ಕೈಲಾಸದಲ್ಲೇ ಆಗ್ಲಿ ಕಲ್ಯಾಣದಲ್ಲೇ ಆಗ್ಲಿ
ಯಾವುದೇ ಊರುಕೇರಿಯಾಗಲಿ
ಯಾರದೇ ಮದುವೆ ಆದ್ರೂ
ಚಪ್ಪರದೊಳೀಕೆ ಬರದೆ ವಾದ್ಯ ಮಾಡ್ಬೇಕು ೫೩೦
ಹಿಂಗೆ ನೀನು ಎಲ್ಲರ ಕಲ್ಯಾಣಗಳಿಗೆ ಕಾರ್ಣವಾಗಿ
ಕಂಬಶಾಸ್ತ್ರ ಗುಂಬಶಾಸ್ತ್ರ ಎಲ್ಲ ಮುಗುದು
ದೇವರ ಕಂದ್ರು ಬಿಡೋನ್ಗಂಟ
ಹೊನ್ನಯ್ಯ ನೀನು
ಈಚೇಲಿ ನಿಂತ್ಕೊಂಡು ವಾದ್ಯ ಮಾಡ್ಕೊಂಡಿರಪ್ಪ"
ಅಂತ್ಹೇಳಿ ನಾರುದ್ರು -

ಕೈಲಾಸದಲ್ಲಿ ಒಂದು ಚಪ್ಪೋಡ ಮಾಡಿಸಿ
ಹೊನ್ನಯ್ನ ಕುಲಕೆ ಕೊಡುತಾರೆ |

ಸ್ವಾಮಿ ಬಸವಣ್ಣೋರ ಸಾಕ್ಷ್ಯವಾಗಿ ನಾರದರು
ಚಪ್ಪೋಡ ಹೊನ್ನಯ್ಗೆ ಕೊಡುತಾರೆ |

ಗಿರುಜಮ್ಮ ತಾಯಿಗೆ ಸ್ವಾಮಿ ಶಿವರಾಯಗೆ ೫೪೦
ಕಲ್ಯಾಣದ ನಂದಿ ಬಸವಣ್ಣಗೆ |

ಕಲ್ಯಾಣ ನಂದಿ ಬಸವಣ್ಣಗೆ ಶರಣಾರ್ತಿ
ಹೊನ್ನಯ್ಯನಿಗೊಂದು ಶರಣಾರ್ತಿ |

ಮಂಗಳೋ ಮಂಗಳಂ
ಶುಭಮಂಗಳೋ ಮಂಗಳಂ ೫೪೪

ಕಗ್ಗುಂಡಿ ಪರಂಜೋತಿ ಹರಳಯ್ಯ

ಹರಹರ ಹರುಳಯ್ಯ ಗುರುವೆ
ಶರಣು ನಿಮ್ಮ ಪಾದಕೆ | ಸೊಲ್ಲು |

ಬೆಟ್ಟದಪುರದ ಮಲ್ಲಿಕಾರ್ಜುನ್ಸ್ವಾಮಿ
ಮೊದಲಿಗೆ ನಿಮಗೆ ಶರಣಾರ್ತಿ |

ಹರಳಳ್ಳಿಗೊಲುದ ಚಂದಿರ ಮೌಳಿಸ್ವಾಮಿ
ಮೊದಲಿಗೆ ನಿಮಗೊಂದು ಶರಣಾರ್ತಿ |

ಕಗ್ಗುಂಡಿ ಕೈಲಾಸ್ಪ ಪರಂಜೋತಿಯವರೆ
ನಿಮಗೆ ಶರಣು ಶರಣಾರ್ತಿ |

ನಿಮ್ಮ - ಸುತಿಸುವ ನಮ್ಮ ನಾಲಿಗೆ ಮ್ಯಾಲಿದ್ದು
ಮತಿಗಳ ಕರುಣಿಸಿ ಹರಳಯ್ಯ ಗುರುವೆ |

ಕಲ್ಯಾಣವೆನ್ನೊ ಕೈಲಾಸ ಕಟ್ಟಾಳೊ
ಅಣ್ಣಾ ಬಸವಯ್ಯಗೆ ಶರಣಾರ್ತಿ |

ಲಕ್ಸದ ಮೇಲೆ ತೊಂಬತ್ತೇಳಿ ಕೋಟಿ
ಇರುವಂತ ಗಣಗಳಿಗೆ ಶರಣಾರ್ತಿ |

ಕಲ್ಯಾಣವೆಂಬೊ ಕೈಲಾಸದಲ್ಲವರೆ
ಅಣ್ಣಾ ದೊಡ್ಡೋರು ಬಸುವೇಶ |

ಮಧುವರ್ಸ್ನ ಮಗಳು ಮಣಿಮಾಲೆ ಕೊಟ್ಟು
ಹರಳಯ್ನ ಮಗುನೀಗೆ ಮದುವಿಯ |

ಹರಳಯ್ನ ಮಗನಿಗೆ ಮದುವೆ ಮಾಡಿದಾಗ
ಕೊಂಡುಗದ ಮಂಚಣ್ಣ ನೋಡಿದ |

ನೋಡೀದ ಕೂಡಲೆ ಹೊಟ್ಟೆನೋವ್ ಬಂದು
ಧೊಪ್ಪನೆ ಬಿದ್ದು ಒದ್ದಾಡಿದ |

ಒದ್ದಾಡುವಂತ ಗಂಡನ ಕಂಡಾಳು
ಮೆಲ್ಲಗೆ ಕೈ ಹಿಡಿದೆತ್ತಿದಳು |

ಕುಂತ್ಕೊಂಡ ಗಂಡನಿಗೆ ನೀರ ಕುಡಿಸಿದಳು
ಆಗ ಮಂಚಣ್ಣ ಉಸುರುಬುಟ್ಟ |

"ಏನಾಯ್ತು ಹೇಳಿ ಯಾಕೆ ಬಿದ್ದಿರಿ ಸ್ವಾಮಿ
ಮನುದಲ್ಲಿ ಮಡುಗಬೇಡಿರಿ |

ಏನಿದ್ರು ನನಗೆ ಹೇಳಲೇಬೇಕೂ"ಂತ
ಮಡದಿ ಮರುಗಮ್ಮ ಕೇಳಿದಳು |

"ಏನ ಹೇಳಲೆ ನಾನು ಮಡದಿ ಮರುಗಮ್ಮ
ನಾನೀಗ ಕೊಂಡುಗ ಹೇಳಬೇಕು |

ಹೇಳದೆ ಇದ್ದರೆ ಕೊಂಡುಗ್‌ದೇವಿ ಶಾಪ
ನಂಗ್ಹೊಟ್ಟೆ ನೋವು ಬರುವುದು |

ಕೊಂಡುಗದೇವಿ ಕ್ಯಾಪವ ಮಾಡುವಳು
ಕ್ಯಾಪದಿಂದ ಶಾಪ ಕೊಡುವಳು |

ಮಡದಿ ನನ್ನ ಕಷ್ಟವನಾದರೆ
ಯಾರಕೂಟೆ ನಾನು ಹೇಳಲಿ ?" |

ಹಂಗಂತ ಹೇಳಿ ಸಂಕಟ ಪಡುವಾಗ
ವಾಲ್ಗಾದ ಸದ್ದು ಕೇಳಿದವು |

ವಾಲ್ಗದ ಸದ್ದ ಕೇಳಿದ ಕೊಂಡುಗ
ಮೈಯೆಲ್ಲ ಕವಿಯಾಗಿ ಕೇಳಿದ |

ನೀರೊತ್ತುಕೊಂಡು ಬಂದಂತ ಗೌಡೀರ
ಕೇಳಿದ ವಾಲ್ಗದ ಸದ್ದೇನು? |

"ಯಾವ ಕಾರಣಕ್ಕೆ ವಾಲ್ಗ ನುಡಿದಾವು
ಹೇಳಿ ನೀರೊರೊ ಗೌಡೀರೆ?" |

"ಸ್ವಾಮಿ - ಹರುಳಯ್ನ ಮಗನೀಗೂ
ಮಧುವರ್ಸರ ಮಗಳೀಗೂ
ಮದುವೆ ಕಾರ್ಯ ನಡೆಯುತಿದೆ |

ಮದುವೆ ಕಾರ್ಯಕೆ ವಲೇರವ್ನೊನ್ನಯ್ಯ
ವಾಲ್ಗ ಮಡುತವ್ರೆ ಸ್ವಾಮಿಯೋರೆ"|

ಗೌಡೀರ ಮಾತ ಕೇಳೀದ ಕೊಂಡುಗ
ಸಂತೋಷದಿಂದ ನೆಗೆ ಹೊಡೆದನು |

ಕೊಂಡುಗ ದೇವಿಗೆ ಕೈಮುಗುದು ಕೊಂಡುಗ
"ಸಂಕಟಕೊಂದು ಪರಿಯಾರ |

ಪರಿಯಾರ ನನಗೆ ಸಿಕ್ಕಿತು" ಎನುತ
ವಾಟ ಹೊಡೆದನು ಅರಮನೆಗೆ |

ಬಿಜ್ಜಳರಾಯನ ಕಂಡನು ಕೊಂಡುಗ
ಕರವೆತ್ತಿ ಕೈಯ ಮುಗುದಾನು |

"ಬಂದ ಕಾರ್ಯವೇನು ಹೇಳಿ ಮಂಚಣ್ಣ
ರಾಜ-ಕಾರ್ಯವಿದ್ದರೆ ಹೇಳಬೇಕು!"

"ರಾಜಕಾರ್ಯವಷ್ಟೇ ಅಲ್ಲ ಸ್ವಾಮಿ
ನಿಮ್ಮ-ರಾಜ್ಯವೇ ಹಾಳಾಗುತೀದೆ | ೬೦

ಜಾತಿ ಮತ ಕುಲ ಧರ್ಮ ಎಂಬೋವೆಲ್ಲ
ಕೊಚ್ಚುಕೊಂಡು ಹೋಗ್ತಿವೆ ಮಾರಾಜ |

ಇಂತೆ ಹೀನಸ್ಥಿತಿ ಪ್ರಾಪ್ತವಾದ ಮೇಲೆ
ರಾಜ್ಯವೆಲ್ಲಿ ಮತ್ತೆ ರಾಜರೆಲ್ಲಿ? |

ಇಂತೆ ಅನ್ಯಾಯಗಳು ನಡೆಯುತಿದ್ದರೂ ಸೈತ
ಕಂಡು ಕಾಣದಂಗೆ ನೀವಿದ್ದೀರಿ |

ನಿಮ್ಮ - ದೇಶವಾದ ದೇಶವೆಲ್ಲ ಜಾತಿಗೆಟ್ಟು ಹೋಗುತಿದೆ
ತಡೆಯದಿದ್ದರೆ ಮಾರಾಜರೆ |

ನಿಮಗೂ ನಿಮ್ಮ ದೇಶಕು ಕೆಟ್ಟೆಸರು
ಬಂದೇ ಬರುತಾದೆ ಮಾರಾಜರೆ | ೭೦

ಕೆಟ್ಕೋಯ್ತು ಕಾಲ ಕಲಿಕಾಲ ಬಂದಾಯ್ತು
ನಮ್ಮ - ದೇವರೆ ಕಾಪಾಡಬೇಕು" |

ಕೊಂಡಿ ಮಂಚಣ್ಣನ ಮಾತ ಕೇಳಿದ ರಾಜ
ಗರ ಬಡಿದವನಂತೆ ನಿಂತುಕೊಂಡ |

ಕೊಂಡುಗ ಹೇಳೀದ ಕೊಂಡಿ ಮಂಚಣ್ಣನಿಗೆ
ಸಂಕಟ ಪರಿಯಾರ ಆಯಿತು |

ಕೊಂಡುಗನ ಸಂಕಟ ಪರಿಯಾರವಾದಾಗ
ಬಿಜ್ಜಳನ ಸಂಕಟ ಹೆಚ್ಚಾಯ್ತು |

ಕೊಂಡುಗ ಅಲ್ಲಿಂದ ಮೆಲ್ಲಗೆ ಜಾರಿಕೊಂಡ
ಬಿಜ್ಜಳ ಹಲ್ಲುಗಳ ಕಡಿಯುತ | ೮೦

ದಣ್ಣಾಯ್ಕ ಬಸವಣ್ಣ ಬ್ಯೇಗದಿ ಕರಿಸಿದ
"ನ್ಯಾಯವ ಹೇಳು ಬಸವಣ್ಣ |

ಬ್ರಾಮಣ ಹೆಣ್ಣೀಗು ಮಾದಿಗರ ಹುಡುಗನಿಗು
ತರವೇನು ಮದುವೆ ಸಮ್ಮಂದ |

ಇಂತೆ ಸಮ್ಮಂದ ಮಾಡಿ ನನ ರಾಜ್ಯದಲಿ
ಕುಲಗಳ ಕೆಡಿಸಬಹುದೇನು ?|

ಧರ್ಮಕರ್ಮವ ತಿಳಿಯಾದೆ ಇಂತೆ
ಮದುವೇಗೆ ನೀನು ಒಪ್ಪಬವುದ ?" |

ಬಿಜ್ಜಳನ ಮಾತೀಗೆ ಬಸವಣ್ಣಸ್ವಾಮಿ
ಅಲ್ಲೇನು ಮಾತ ನುಡಿದರು | ೯೦

"ರಾಜರೆ ಈ ಮಾತು ಸರಿಯಲ್ಲ ತರವಲ್ಲ
ಅವ್ವು - ಬ್ರಾಮಣ ಮಾದಾರ ಕುಲುವಲ್ಲ |

ಅವ್ವು - ಶರಣರು ರಾಜರೆ ಅವರಿಗೆ ಕುಲವಿಲ್ಲ
ಅವ್ವು - ಶರಣ ಮಾತ್ರರು ರಾಜರೆ |

ಇದರಲ್ಲಿ ತಪ್ಪು ಎಂಬುವ ಮಾತಿಲ್ಲ
ಅವರಿಬ್ಬಾರು ಶರಣರ ಕುಲದೋರು |

ಶರಣರು ಶರಣರ ಜೊತೆ ಸಮ್ಮಂದ
ಮಾಡಿದರದಕೆ ದೋಷುವಿಲ್ಲ" |

ಬಸವಣ್ಣನೋರ ಮಾತ ಕೇಳಿ ಬಿಜ್ಜಳ
ಬುಸುಗುಟ್ಟಿ ಏನ ನುಡಿದನು ?| ೧೦೦

"ಬ್ರಾಮಣ ಮಾದಾರ ಒಂದೇ ಆಗುವುದು
ಯಾವ ಶಾಸ್ತ್ರದಲಿ ಹೇಳೀದಪ್ಪ ?|

ಯಾವ ಶಾಸ್ತ್ರದಲಿ ಯಾವ ಧರ್ಮದಲಿ
ಇಂಥ ಮದುವೆಯ ಹೇಳೀತಪ್ಪ |

ಈ ಮದುವೆ ಆಗದ್ಕೆ ನನ್ನ ಒಪ್ಪಿತವಿಲ್ಲ
ಕೂಡಲೆ ಇದನು ತಡಿಯಲು ಬೇಕು" |

ಬಿಜ್ಜಳನ ಮಾತ ಕೇಳಿ ಬಸವಣ್ಣ
ಕಿವಿಗಳ ಮುಚ್ಚಿಕೊಂಡರು |

"ಇಂತೆ ಮಾತುಗಳ ಕೇಳಲಾರೆ ನಾನು
ಅವುರಪ್ಪಕೆ ಅವರ ಬುಟ್ಟುಬುಡಿ | ೧೧೦

ಶರಣರ ಸಮ್ಮಂದ ತಪ್ಪಲ್ಲ ರಾಜರೆ
ಇದಕೆ ಶಿವನ ಒಪ್ಪಿತ |

ಇದಕೆ ಶಿವನ ಒಪ್ಪಿತ ಉಂಟೆಂ"ದು
ಬಸವಣ್ಣ ಗುರುವು ನುಡಿದರು |

ಬಸವಣ್ಣ ಮಾತಿಗೆ ಕಿವಿಯ ಕೊಡದಲೆ
"ಆ ಮದುವೆಯ ರದ್ದು ಮಾಡಿರಿ |

ಆ ಮದುವೆಯ ರದ್ದು ಮಾಡದೆ ಹೋದರೆ
ಇಂತೆ ಹೀನಾಯ್ತ ತಡುಕೊಳ್ಳಲಾರಿ |

ಇಂತೆ ಹೀನಾಯ್ತ ತಡುಕೊಳ್ಳಲಾರಿ ನಾನು
ಈಗಲೆ ನಿಲ್ಲಿಸಿ ಮದುವೆಯ | ೧೨೦

ನೀವು ದಣ್ಣಾಯ್ಕರಾಗಿಕೊಂಡು ನಮ್ಮರಾಜ್ಯದಲಿ
ಹೀನಾಯ್ತ ಕೆಲಸ ಮಾಡಬೋದ?" |

ರಾಜರ ಮಾತ ಕೇಳಿ ಬಸವಣ್ಣೊರು
"ದಣ್ಣಾಯ್ಕ ಪಟ್ಟ ನನುಗ್ಯಾಕೆ? |

ಮಾತಿಗೆ ಬೆಲೆ ಇಲ್ದ ಪಟ್ಟ ಪದವಿ ಯಾಕ ?
ದಣಾಯ್ಕ ಪದವಿಯ ಬಿಡುತೀನಿ |

ದಣಾಯ್ಕ ಪದವಿಯ ಬಿಟ್ಟು ನಾ ಹೋಗುತೀನಿ
ಈ ಕಲ್ಯಾಣ್ದಲ್ ನಾನು ಇರಲಾರೆ |

ಕಲ್ಯಾಣ ಪಟ್ಟಿವ ಬುಟ್ಟು ನಾ ಹೋಗುತೀನಿ
ಮತ್ತೆ - ಈ ಕಡೀಗ್ ತಲೆಯ ಹಾಕಲಾರೆ" | ೧೩೦

ಹಂಗಂತ ಹೇಳಿ ದೊಡ್ಡ ಬಸವಣ್ಣೊರು
ಪಟ್ಟದ ಕತ್ತಿ ಕಿರೀಟವ |

ಪಟ್ಟದ ಕತ್ತಿ ಕಿರೀಟವ ಕಳುದು
ಕೊಟ್ಟರು ಬಿಜ್ಜಳನ ಕೈಯಿಗೆ |

ಕತ್ತಿ ಕಿರೀಟವ ಕೊಟ್ಟು ಬಸವಣ್ಣೊರು
ಕಲ್ಯಾಣ ಬುಟ್ಟು ಕಡದರು |

ಇತ್ತಲಾಗಿ ಬಿಜ್ಜಳ ದೊರೆಯು ಆಗ
ಮಂಚಣ್ಣನವರ ಕರಸಿದ |

ಮಂಚಣ್ಣನವರ ಕರಸಿ ಬಿಜ್ಜಳನು
ದಣ್ಣಾಯ್ಕ ಪಟ್ಟವ ಕಟ್ಟಿದರು | ೧೪೦

ಪಟ್ಟವ ಕಟ್ಟಲು ಥಟ್ಟನೆ ಮಂಚಣ್ಣ
ನೆಟ್ಟಗೆ ಬಂದು ನಡುಬೀದಿಗೆ |

ಮದುವೆಯ ದಿಬ್ಬಣ ಕಂಡು ಮಂಚಣ್ಣ
"ಮದುವೆಯ ನಿಲ್ಲಿಸಿ" ಅಂದನು.

"ಇಂತೆ ಶುಭಕಾರ್ಯವ ನಿಲ್ಸು ಅನ್ನ್ದಕೆ
ನೀನ್ಯಾರು ?" ಎಂದರು ಶರಣರು |

"ನಿಲ್ಲಿಸದೆ ಹೋದರೆ ತಪ್ಪು ನಮದಾಗುತ್ತೆತೆ
ಹೇಳಿದ ಮಾತ ಕೇಳಿರಿ" |

"ನಿನ್ನ ಮಾತನು ಕೇಳಿ ಮದುವೆ ನಿಲ್ಸೊದುಂಟ
ಸುಮ್ಮನೆ ಹೋಗೋ ದಾಸಯ್ಯ" | ೧೫೦

"ನನ್ನೇ ದಾಸಯ್ಯ ಅಂತೀರಾ ಪಾಪಿಗಳೆ
ನಿಮಗೆ ತಕ್ಕನಾದ ಶೀಕ್ಷೀಯ |

ನಿಮಗೆ ತಕ್ಕನಾದ ಶೀಕ್ಷಿಯ ಮಾಡದಿದ್ರೆ
ಕೊಂಡುಗ ಅನ್ನೊ ಹೆಸ್ರು ನನುಗ್ಯಾಕೆ?" |

ಅನುತ್ತೇಳಿ ಕೊಂಡುಗ ಸೇನಿಕರ ಕರುದು
"ಹರುಳಯ್ನ ಕುಲಗೆಟ್ಟ ಮದುವರ್ಸನ |

ಆನೆ ಕಾಲಿಗೆ ಕಟ್ಟಿ ತುಣಿಸಿರಿ" ಎಂದನು
ಸೇನಿಗರು ಆನೆಲಾಯದಲಿ |

ಮದ್ವಾನೆಗಳ ಹಿಡುಕೊಂಡು ಬಂದಾರು
ಹರುಳಯ್ನು ಮದುವರ್ನು ಎಳುಕೊಂಡು | ೧೬೦

ಉದ್ದಕೆ ಬೀದೀಲಿ ಮಲಗೀಸಿ ಸೇನಿಕರು
ತುಣಿಯಾಕೆ ಆನೆಗೆ ಹೇಳಿದರು |

ಆನೆಯು ಅಬ್ಬರ ಮಾಡಿಕೊಂಡು ನುಗ್ಗಿ
ಸೊಂಡಿಲ ಬಾಚಿ ಮಂಚಣ್ಣನ |

ಕೊಂಡುಗ ಮಂಚಣ್ಣನ ಸೊಂಡಿಲಲ್ಲಿ ಎತ್ತಿಕೊಂಡು
ಬಟ್ಟೆ, ಒಗೆಯೊಂಗೆ ಒಗಿಯಿತು |

ಕೊಂಡಿ ಮಂಚಣ್ಣನ ಸೊಂಡಿಲಲ್ಲಿ ಎತ್ತಿಕೊಂಡು
ನೆಲಕೆ ಕೊಂಡುಗನ ಅಪ್ಪಳಿಸಿತು |

ಆನೆಯ ಅಬ್ಬರ ನೋಡಿದ ಮಾವುಟಿಗಳು
ಅಲ್ಲಿಂದ ಕಾಲು ಕಿತ್ತರು | ೧೭೦

ಮುಂಚಣ್ಣನಿಗಾದ ಗತಿ ಕಂಡು ಜನರು
ಆನೆಗೆ ಹಾಸಾಸಿ ಬೀಳುತವ್ರೆ |

ಜನಗಳು ಆನೆಗೆ ಹಾಸಾಸಿ ಬೀಳುತಿದ್ರೆ
ಆನೆಯು ಸೊಂಡಿಲ ಚಾಚಿತು |

ಆನೆಯು ಸೊಂಡಿಲಲ್ಲಿ ಹರಳಯ್ನ ಎತ್ತಿ
ಕುಂಡ್ರಿಸಿಕೋತು ಬೆನ್ನಮ್ಯಾಲೆ |

ಬೆನ್ನಮ್ಯಾಲೆ ಆನೆ ಹರಳಯ್ನ ಹೊತ್ತುಕೊಂಡು
ಬೆಟ್ಟದ ಪುರದ ದಿಕ್ಕಿದು |

ಬೆಟ್ಟದಪುರದ ದಿಕ್ಕಿನಲ್ಲಿ ಬಂದು
ಮುಂದೆ ಕಿತ್ತೂರ ಸೇರಿದರು | ೧೮೦

ಕಿತ್ತೂರಿನಿಂದ ಹತ್ತೂರ ಬುಟ್ಟು
ರಾವಂದೂರಿಗೆ ಬಂದರು |

ಆಷ್ಟ ಹೊತ್ತಿಗೆ ಆನೆ ಬಂದ ದಾರಿ ಹಿಡಿದು
ಕಲ್ಯಾಣದಿಂದ ಶರಣರು |

ಕಲ್ಯಾಣದಿಂದ ಶರಣರು ಬಂದರು
ಹರುಳಯ್ನ ಇಳಿಸಿತು ಆನೆಯು |

ಇದ್ದಕ್ಕಿದ್ದಂತೆ ಆನೆ ಮಾಯವಾಯ್ತು
ಶರಣರು ಹರುಳಯ್ನ ಸೇರಿದರು |

ಹರುಳಯ್ನ ಬರುವ ಸುದ್ದಿಯ ಕೇಳಿದರು
ರಾವಂದೂರಿನ ಚೇನಿಗರು | ೧೯೦

ಹರುಳಯ್ಯ ಕುಂತಿದ್ದ ಚೌಕಿಗೆ ಬಂದರು
ಹರುಳಯ್ನ ಜೊತೆಗೆ ಸೇರಿದರು |

ಚೇನಿಗರು ಹರುಳಯ್ನ ಚೈನನ ಮಾಡಲು
ಗುರುಗಳ ಕರಯದಕೆ ಹೋದಾಗ |

ಶರಣರ ಗುಂಪು ರಾವಂದೂರ ಕಡದು
ಕೊಣವಿದ್ದ ತಾಣದಲ್ಲಿ ನೆಲಗೊಂಡರು |

ಚೇನಿಗರು ಅಲ್ಲಿಗೂ ಬೆನ್ನತ್ತಿ ಬಂದರು
ಶರಣರ ಜೊತೆಯ ಸೇರಿದರು |

ಚೇನಿಗರು ಶರಣರು ಮನೆಮಠ ಕಟ್ಟಿಕೊಂಡು
ಹರಳಯ್ನಹಳ್ಳಿ ಕಟ್ಟಿದರು | ೨೦೦

ಊರವರೆಲ್ಲ ಒಟ್ಟಾಗಿ ಸೇರಿಕೊಂಡು
ಏನೆಂದು ಯೋಚಿನೆ ಮಾಡಿದರು |

ಊರಿಗೆ ಒಂದು ದೇವುಸ್ಥಾನ ಬೇಕೂಂತ
ಎಲ್ಲಾರು ತೀರ್ಮಾನ ಮಾಡಿದರು |

ಎಲ್ಲಾರು ಸೇರಿದರು ಗುಡಿಯ ಕಟ್ಟಿದರು
ಚೇನಿಗರು ಶರಣರು ಯೋಚಿಸಿದರು |

ಚೇನಿಗರು ಚಂದ್ರನಾಥ ಬಸದಿಯಾಗಬೇಕು
ಅಂತ್ಹೇಳಿ ಮುಂದೆ ಬಂದರಾಗ |

ಹರುಳಯ್ನ ಕಡೆಯವ್ರು ಚಂದ್ರಮೌಳೇಶ್ವರ್ನ
ದೇವುಸ್ತಾನ ಇದೆಂದು ಹೇಳಿದರು | ೨೧೦

ಚೇನಿಗರ್ಗು ಶರಣರ್ಗು ಮಾತು ಮಾತು ಬೆಳ್ದು
ದೊಡ್ಡ ಗುಂಪಾಗಿದ್ದ ಚೇನಿಗರು |

ಹರುಳಯ್ನ ಕರದು ಒಂದು ಸವಾಲು ಹಾಕಿದರು
"ಕೇಳು ಕೇಳಯ್ಯ ಹರುಳಯ್ಯ |

ನೀವೂ ನಾವೂ ಹೊಡುದಾಡೋದು ಬ್ಯಾಡ
ನಮ್ಮ ದೇವರು ಚಂದ್ರನಾಥ |

ನಿಮ್ಮ ದೇವರು ಚಂದ್ರಮೌಳೇಶ್ವರ
ಯಾರ ದೇವರು ಹೆಚ್ಚಿನದು |

ಹೆಚ್ಚೀನ ದೇವರು ಯಾರದು ಅನ್ನುವ
ಪರೀಕ್ಷ್ಯ ಈಗ ನಡೆಯಲಿ | ೨೨೦

ನಮ್ಮ ದೇವರು ಹೆಚ್ಚೊ ನಿಮ್ಮ ದೇವರು ಹೆಚ್ಚೊ
ಎಂಬುವ ಉತ್ತರ ಹೇಳಬೇಕು" |

ಚೇನಿಗರ ಮಾತಿಗೆ ಹರುಳಯ್ಯ ಶರಣರು
"ಚಂದ್ರಶೇಖರ ಸ್ವಾಮಿಯು |

ಹೆಚ್ಚಿನ ದೇವರು ಈ ಮಾತು ಸತ್ಯ
ಇದನ್ನು ನೀವು ಒಪ್ಪುಬೇಕು" |

"ಒಪ್ಪುತೀವಿ ನಿನ ಮಾತ ಅದಕೂ ಮುಂಚೆ
ನಿನ್ನ ಮೈಮವ ಹೇಳಬೇಕು |

ನಾವು - ಗುಡಿಯ ಬಾಕಲಿಗೆ ಬೀಗ ಹಾಕುತೀವಿ
ನೀನು ಊರ ಮುಂದಿರುವಂತ | ೨೩೦

ಕೆರೆಯಲ್ಲಿ ಮುಳುಗಿ ಗುಡಿಯ ಬೀಗವನು
ತೆಗಿಯದೆ ಗುಡಿಯ ಒಳಗೋಗಿ |

ನಿನ್ನ ದೇವರಾದ ಚಂದ್ರಮೌಳಿಸ್ವಾಮಿಯ
ತಾಪೀಸಿ ಪೂಜೆ ನಡೆಸಬೇಕು |

ಇದು ನಿನಗೆ ಸಾಧ್ಯವೇ ಹೇಳಬೇಕು
ಸಾಧ್ಯವಾದ್ರೆ ಮಾಡಿ ತೋರಿಸು |

ಹಾಗೆ ಮಾಡಿದರೆ ನಿನ್ನ ದೇವರ ಸತ್ಯವ
ನಿನ್ನ ಸತ್ಯವ ಒಪ್ಪುತೀವಿ |

ನೀನು ಸೋತರೆ ನಾವು ಹೇಳಿದಂತೆ
ಜೇನಿಗನಾಗಲು ಒಪ್ಪುಬೇಕು | ೨೪೦

ಒಪ್ಪಬೇಕು ನಮಗೆ ಶರಣಾಗಬೇಕು
ಏನನ್ನುತೀಯೆ ಹರುಳಯ್ಯ ? " |

ಜೇನಿಗರ ಮಾತನ್ನು ಕೇಳೀದ ಹರಳಯ್ಯ
ಪರಮಾತ್ಮ ಶಿವನ ನೆನೆದರು |

ಶಿವನನು ನೆನೆದು ಶಿರವ ತೂಗಿದರು
ಸವಾಲಿಗೆ ಒಪ್ಪಿಗೆ ನೀಡಿದರು |

ಜೇನಿಗರ ಜೊತೆಯಲ್ಲಿ ಶರಣರು ಸೇರಿದರು
ದೊಡ್ಡಕೆರೆ ಏರಿಗೆ ಬಂದಾರು |

ಹರಳಯ್ಯ ಶರಣರು ಕೆರೆ ಏರಿ ಮ್ಯಾಲೆ
ನಿಂತು ಪರಮಾತ್ಮನ ನೆನೆದರು | ೨೫೦

ಕರವೆತ್ತಿ ಕೈಮುಗಿದು ಆಕಾಸ್ಕೆ ಮೊಕ ಮಾಡಿ
ಪರಶಿವನ ಸೋತ್ರ ಮಾಡಿದರು |

ಭಕ್ತಿಯಿಂದ ಶಿವನ ಪೂಜೆಯ ಮಾಡಿ
ದೀಪ ಬೆಳಗಿ ಧೂಪ ಹಾಕಿದರು |

ಜನ ನೋಡ ನೋಡುತ್ತಿದ್ದ ಹಾಗೆ ಹರಳಯ್ಯ
ದೊಡ್ಡಕೆರೆಯೊಳಗೆ ಮುಳುಗಿದರು |

ಹರುಳಯ್ಯ ಮಾರುದ್ದ ಮಂಡೆಕೂದ್ಲು ಕೆದುರೀತು
ಕೆರೆಲಗಲಕ್ಕೆ ಮುಡಿ ಹರಡೀತು |

ಹರಡಿಕೊಂಡ ಮುಡಿ ಹರಡಿದಂಗೆ ಇತ್ತು
ಹರುಳಯ್ಯ ಮ್ಯಾಕೆ ಬರುನಿಲ್ಲ | ೨೬೦

ಕೆರೆಯಿಂದ ಮ್ಯಾಲಕ್ಕೆ ಹರುಳಯ್ಯ ಬರನಿಲ್ಲ
ಜೇನಿಗರು ಹೆಮ್ಮೇಲಿ ಬೀಗಿದರು

ಹರುಳಯ್ಯ ಮ್ಯಾಲಕ್ಕೆ ಬರನಿಲ್ಲ ಎನುತ್ಹೇಳಿ
ಹರುಳಯ್ನ ಕಡೆಯವ್ರು ಕೊರಗಿದರು |

ಹರುಳಯ್ನ ನೆನೆದು ಶರಣರು ನಡುಗಿದರು
ಜೇನಿಗರು ಗೆದ್ದೆವೆಂದು ನಗುತಿದ್ದರು |

ಹರುಳಯ್ಯ ಮುಳುಗಿ ನೆಲ ಕಚ್ಚಿದನೆಂದು
ಕಾಕ್ಕಾಕಿ ಕುಣಿದರು ಜೇನಿಗರು |

ಮರುಗುತ ಕೊರಗುತ ಶರಣರು ಕಣ್ಣೀರ
ಸುರಿಸುತ ಕೊರಕೊರ ಕೊರಗಿದರು | ೨೭೦

ಶರಣರು ಕೊರಗುವ ಹೊತ್ತಲ್ಲಿ ಶಿವನೆ
ಅಲ್ಲೊಂದು ಜೋಜುಗ ನಡೆದೀತು |

ಊರೊಳಗಿದ್ದ ಗುಡಿಯ ಒಳಗಿಂದ
ಗಂಟೆ ಜಾಗಟೆ ಕೊಂಬು ಕಹಳೆ |

ತಾಳ ತಂಬೂರಿ ಹೆಬ್ಬರೆ ನಗಾರಿ
ಕೌಸಾಳೆ ಕಿನ್ನರಿ ಮೊಳಗಿದೊ |

ಇದ್ದಕ್ಕಿದ್ದಂತೆ ಎದ್ದ ಈ ಸದ್ದಿಗೆ
ಜನವೆಲ್ಲ ಸೋಜುಗ ಎನ್ನುತ |

ಬೀಗ ಹಾಕಿರುವಂತ ದೇವರ ಗುಡಿಯೊಳಗೆ
ಯಾರು ಈ ವಾದ್ಯಗಳ ನುಡಿಸಿದರು | ೨೮೦

ವಾದ್ಯಗಳ ನುಡಿಸಿದೋರ ನೋಡಬೇಕೂಂತ
ಎಲ್ಲಾರೂ ಓಡೋಡಿ ಬರುತಾರೆ |

ಹಾಕಿದ್ದ ಬೀಗ ಹಾಕಿದಂಗೆ ಇತ್ತು
ಗುಡಿಯ ಒಳಗಿಂದ ವಾದ್ಯಗಳು |

ಗುಡಿಯ ಒಳಗಿಂದ ಮಂಗಳ ವಾದ್ಯಗಳು
ಮೊಳಗುವುದ ಅವ್ರು ನೋಡಿದರು |

ಬಾಕಲಿಗೆ ಹಾಕಿದ್ದ ಬೀಗ ತಂತಾನಾಗಿ
ಬಿಚ್ಚಿಕೊಂಡಿದ್ದ ನೋಡಿದರು |

ಗುಡಿಯ ಒಳಗಿಂದ ಹರುಳಯ್ಯ ಶರಣರು
ಗಂಡುಗತ್ತರಿಯ ಹೆಕ್ಕತ್ತಿಗೆ | ೨೯೦

ಹೆಕ್ಕತ್ತಿಗೆ ಗಂಡುಗತ್ತರಿ ಹಾಕಿಕೊಂಡು
ಮುಂದಕೆ ಜಗ್ಗಿಸಿ ಎಳೆದರು |

ಜಗ್ಗಿಸಿದಾಗ ಕತ್ತರಿಸುತಿದ್ದ ಶಿರುಸು
ಮತ್ತೆ ಹಿಂದಕ್ಕೋಗಿ ಕೂಡುತಿತ್ತು |

ಗಂಡುಗತ್ತರಿಯ ಪವಾಡ ನೋಡಿದರು
ಸೇರಿದ್ದ ಶರಣರು ಜೇನಿಗರು |

ಜೇನಿಗರಾಗ ಗಡಗಡ ನಡುಗುತ
ಹರುಳಯ್ಯ ಪಾದವ ತಬ್ಬಿದರು |

ಹರುಳಯ್ಯ ಪಾದಾವ ತಬುಕೊಂಡು ಹೇಳಿದರು
"ನಮ್ಮದು ದೊಡ್ಡ ಅಪರಾಧ | ೩೦೦

ನಿಮ್ಮ ಮೈಮೆಯ ನಿಮ್ಮ ಹಿರಿಮೆಯ
ತಿಳಿಯದೆ ಮಾತಾಡಿ ತಪ್ಪಿದೆವು |

ಸರ್ವಾಪ್ರಾದವಾಗಿದೆ ನಮ್ಮಿಂದ
ಕ್ಷಮಿಸಿರಿ ಸ್ವಾಮಿ ಗುರುದೇವ |

ನೀವು ನಮ್ಮಗೆಲ್ಲ ಸಾಕ್ಷಾತು ಪರಮಾತ್ಮ
ನಾವಾದ್ರೆ ನಿಮಗೆ ಭಕ್ತರು |

ನಾವು ನಿಮಗೆ ಭಕ್ತರು ನಾವು ನಿಮ್ಮ ಶಿಷ್ಯರು
ಕೈಹಿಡಿದು ಕಾಪಾಡಿ ಗುರುದೇವ |

ಇಂದಿಗೆ ನಾವು ಜೈನಧರ್ಮವ ಬುಟ್ಟೊ
ಶಿವನ ಧರ್ಮಕೆ ಜಯತು ಜಯತು | ೩೧೦

ನಿಮ್ಮ ಧರ್ಮವೆ ಮುಂದೆ ನಮ್ಮ ಧರ್ಮಸ್ವಾಮಿ
ಚಂದ್ರುಪ್ರಭುನಾಥ ನಮಗಿಲ್ಲ |

ಚಂದ್ರಮೌಳೇಶ್ವರ ಸ್ವಾಮಿ ನಮ್ಮ ದೇವರು
ನಿಮ್ಮ ಜೊತೆಗೆ ನಾವು ಶರಣರು" |

ಜೇನಿಗರು ಹರುಳಯ್ಯ ಪಾದಕೆ ಬಿದ್ದು
ಆಗಲೆ ಶರಣರು ಆದರು |

ಹರುಳಯ್ಯ ಪವಾಡ ಮೆರೆದ ಆ ಸ್ಥಳದಲ್ಲಿ
ಊರು ಬೆಳೆದು ದೊಡ್ಡದಾಯ್ತು |

ಹರುಳಯ್ಯ ಪವಾಡ ಮೆರೆದ ಆ ಸ್ಥಳವೆ
ಹರುಳಯ್ಯನ ಹಳ್ಳಿ ತಾನಾಯಿತು | ೩೨೦

ಆವತ್ತಿನ ಹರುಳಯ್ಯನ ಹಳ್ಳಿಯೆ
ಈವತ್ತ ಹರಳಳ್ಳಿ ಕಾಣೆರಪ್ಪ |

ಶಿವಭಕ್ತ್ರು ಜೊತೆಯಾಗಿ ಹರುಳಯ್ಯ ಇರುವಲ್ಲಿ
ಹರುಳಳ್ಳಿ ಕೈಲಾಸ ಆಯಿತು |

ಜೈನರನೆಲ್ಲ ಶರಣರ ಮಾಡಿ
ಹರುಳಯ್ಯ ಮುಂದಕೆ ಹೊರಟರು |

ಮುಂದಕೆ ಹೊರಟ ಹರುಳಯ್ಯಸ್ವಾಮಿ
ಕಗ್ಗುಂಡಿ ಕಾಲುವೆ ತಳುದಲ್ಲಿ |

ಮಠುವ ಮಾಡಿಕೊಂಡು ಜಪುನೆ ತಪುನೆಯಲ್ಲಿ
ಹರುಳಯ್ಯ ಸುಕುವ ಹೊಂದಿದರು | ೩೩೦

ಹರುಳಯ್ಯ ಸ್ವಾಮಿ ಪರಂಜ್ಯೋತಿ ಆದರು
ಹರಹರ ಶಿವಶಿವ ಶರಣಾರ್ತಿ |

ಹರುಳಯ್ಯ ಶರಣರ ಕಥೆಯ ಹೇಳಿಸಿ
ಕೇಳಿದ ಮಾನ್ಯರಿಗೆ ಶರಣಾರ್ತಿ |

ಇಲ್ಲಿಗೆ ಹರಹರ ಇಲ್ಲೀಗೆ ಶಿವಶಿವ
ಇಲ್ಲೀಗೆ ಶಿವಶಿವ ಶರಣಾರ್ತಿ | ೩೩೬

ಪಾದ ಮೂಡ್ಯಾವು ಪರಿಪರಿ

ಹಾಸುಗಲ್ಲಿನ ಮ್ಯಾಲೆ ಹಾದು ಹೋದುವನ್ಯಾರೋ
ಪಾದ ಮೂಡೀವು ಪರಿಪರಿ - ಹರುಳಯ್ಯ
ಹಾದು ಹೋದಾರು ಜಲಧಿಗೆ |

ಕುಂಬಾರ ಗುಂಡಯ್ಯ - ೧

ಹರಹರ ಶಿವಶಿವ ಸುವ್ವಿಲಾಲಿ
ನಮ್ಮ - ಶರಣರ ಆತುಮವೆ ಸುವ್ವಿಲಾಲಿ | ಸೊಲ್ಲು |

ಕಲ್ಯಾಣ ಪಟ್ಟಣ
ಅದು - ಹನ್ನೆರಡು ಯೋಜನ
ಕಲ್ಯಾಣ ಪಟ್ಟುದಲ್ಲಿ
ಅಲ್ಲಿ ಕಲ್ಲೆಂಬ ಶಬ್ದುವಿಲ್ಲ
ಅಲ್ಲಿ ಕಲ್ಲೆಂಬ ಶಬ್ದುಕೆ
ಲಿಂಗ ಅಂತ ಕರಿತಾರೆ
ಕಲ್ಲು ಬಟ್ಟು ಅಲ್ಲಿಲ್ಲ
ಕಲ್ಲುಮಡ್ಕೆ ಅಲ್ಲಿಲ್ಲ
ಕಲ್ಲು ಬಾನಿ ಅಲ್ಲಿಲ್ಲ |

ಅಲ್ಲಿ ಕಲ್ಲೀನ ಅಂಡೆಯಿಲ್ಲ
ಕಲ್ಲ ಗುಡಾಣವಿಲ್ಲ
ಕಲ್ಲು ಮುಚ್ಚಳವಿಲ್ಲ
ಕಲ್ಲು ಕಡಾಯ ಇಲ್ಲ
ಅಲ್ಲಿ - ಕಲ್ಲು ಬೌರಿಗೆಯಿಲ್ಲ
ಕಲ್ಲೆಂಬುದು ಅಲ್ಲಿಲ್ಲ
ಅಲ್ಲಿ ಕಲ್ಲೆಲ್ಲ ಶಿವಲಿಂಗ |

ಕಲ್ಲು ಗಟ್ಟಿ ಅನ್ನುವುದು
ಲೋಕರೂಢಿಯ ಮಾತು
ಆದ್ರೆ - ಕಲ್ಯಾಣ ಪಟ್ಟುದಲ್ಲಿ
ಒಂದು ಚೋಜಿಗ ನೋಡಿ
ಕಲ್ಲಿಗಿಂತ ಗಟ್ಟಿಯಾದ
ಮಡ್ಕೆ ಕುಡ್ಕೆ ಅಲ್ಲದೆ
ಕಲ್ಲಿಗಿಂತ ಗಟ್ಟಿಯಾದ
ಅಳಗೆ ಗುಡಾಣ ಅವೆ
ಬಾನಿ ಬೋಗುಣಿ ಅವೆ
ಮಣ್ಣ ಮಚ್ಚಳ ಅವೆ
ಮಣ್ಣೀನ ಶಿವಲಿಂಗ
ಅದ್ಕೆ - ಮಣ್ಣೀನ ಕರಡಿಗೆ
ಮಣ್ಣೀನ ಅಂಡೆಗಳು
ಮಣ್ಣೀನ ತಣಿಗೆಗಳು
ಮಣ್ಣೀನ ಕಳಸಿಗೆ
ಮಣ್ಣೀನ ಹರ್ಪಿಗಳು
ಮಣ್ಣೀನ ಒಲೆಗಳು
ಮಣ್ಣೀನ ಹಂಚುಗಳು
ಅವು - ಎತ್ತಾಕಿ ಕುಕ್ಕುದ್ರೂವೆ
ಒಡೆಯೊ ಪದಾರ್ಥವಲ್ಲ
ಕಲ್ಲಲ್ಲಿ ಹೊಡುದ್ರೂವೆ
ಅವು-ಒಡೆಯುವಂತ ಪದಾರ್ಥವಲ್ಲ
ಅಂತ ಗಟ್ಟುಮುಟ್ಟಾದ
ಮಡಕೆ ಕುಡುಕೆಗಳು
ಎಲ್ಲ ಶರಣರ ಮನೆ
ಸಕಲೆಂಟು ಪಾತ್ರೆಗಳು
ಕಲ್ಯಾಣ ಪಟ್ಟುದಲ್ಲಿ
ಮಣ್ಣೀನವು ಮಣ್ಣೀನವು |

ಇಂತೆ ಗಟ್ಟಿಮುಟ್ಟಾದ
ಎತ್ತಾಕುದ್ರೂ ಒಡೆಯದ
ಕುಕ್ಕುದ್ರೂ ಒಡೆಯದ
ಮಡಕೆ ಕುಡುಕೆಗಳ
ಮಾಡುತಾನೆ ಘನಶರಣ
ನಮ್ಮ - ಕುಂಬಾರ ಗುಂಡಯ್ಯ |

ಕೋಳಿ ಕೂಗೋಕು ಮುಂದೆ
ಶಿವಸೊರಣಿ ಮಾಡಿಕೊಂಡು
ಬಲ್ದ - ಮಗ್ಗುಲಾಗಿ ಎದ್ದು
ಗುಂಡಯ್ಯನವ್ರು ಎದ್ದು
ಕೊಟ್ಟುಗೆಗೆ ಹೋಗಿ
ಬಸವಣ್ಣ ದರ್ಸ್ನ ಮಾಡಿ
ಊರಾಚೆ ಹಳ್ಳುಕ್ಕೋಗಿ
ಮಿಂದು ಮಡಿಯನುಟ್ಟು
ಶಿವುಗ್ಯಾನ ಮಾಡುತ
ಶಿವುಪೂಜೆ ಮಾಡಿಕೊಂಡು
ಬಂಡೀಯ ಹೂಡಿಕೊಂಡು
ಕೆಬ್ಬೆ ಹಳ್ಳಕೆ ಬಂದು
ಭೂಮ್ಗೆ ಶರಣು ಮಾಡಿ
ಭಸ್ಮಂಗ ಹೂವ ಮಡ್ಗಿ

ಶಿವಸೊರಣೆ ಮಾಡುತ
ಕಡ್ಡಿ ಕಲ್ಲುರ ಬೆಳಗಿ
ಹಾರೇಲಿ ಮಣ್ಣಮೀಟಿ
ಆಳಾದ ಮಣ್ಣನೆತ್ತಿ
ಎಲೆಕೊಟ್ಟು ಬೀಸಿ ನೆಲಕೆ
ಮಣ್ಣೆಳ್ದು ಮಂಕ್ರಿಗ್ತುಂಬಿ
ಎತ್ತಿ ಬಂಡಿಗೆ ಸುರ್ದು
ಬಂಡೀಯ ಕಟ್ಟಿಕೊಂಡು
ಮನೆಯ ಮಂದಾಳ್ಕೆ ಬಂದು
ಮಂದಾಳ್ದ ಒಚ್ಚೋಲೀಲಿ
ಇರುವ ಗುಂಡಿಗೆ ಸುರ್ದು
ಶಿವಸೊರಣೆ ಮಾಡುತ
ಗಿರಿಜಮ್ಮನೆಂಬುವ
ಹರಬೀಯ ತಕ್ಕೊಂಡು
ಕೈಲಾಸ ಅನ್ನುವ
ಕಟ್ಟೆಬಾವಿಯಿಂದ
ಗಂಗಮ್ಮ ತುಂಬಿಕೊಂಡು
ಶಿಪಮಣ್ಣಿಗೆ ಸುರ್ದು
ಕೈಲಾಸ ಎನ್ನುವ
ಗೋಣೇಯ ತಾಟ ತಂದು
ಶಿವಶಿವ ಎನ್ನುತ
ಮಣ್ಣನು ಮುಚ್ಚಿದರು |

ನೆನೆಹಾಕಿದ ಮಣ್ಣು
ಶಿವಧ್ಯಾನ ಮಾಡಿತು
ಸಂತೋಷದಿಂದ ಮಣ್ಣು
ಓಗ್ಗಿಕೊಂಡು ಅರಳಿತು |

ಅರಳೀದ ಮಣ್ಣಿಗೆ
ವಂದ್ರಿಯಾಡಿದಂತ
ಕೂಕುಮದಂತ ಮಳ್ಳು
ಗಿರಿಜಮ್ಮ ಹೆಸರಲ್ಲಿ
ಗುಂಡಯ್ಯ ಬೆರ್ಸಿದರು
ವಂದ್ರಿಯಾಡಿದಂತ
ನುಣ್ಣಗಿರೊ ಬೂದಿಯ
ಶಿವನ ಹೆಸರಿನಲ್ಲಿ
ಗುಂಡಯ್ಯ ಬೆರ್ಸಿದರು |

ಈ ಜಗತ್ಕಕೆಲ್ಲ ಶಿವನೆ
ನೀನೊಬ್ಬನೆ ಸ್ವಾಮಿ
ನಾನಿಲ್ಲ ನಾನಿಲ್ಲ
ಅನುತ್ಹೇಳಿ ಗುಂಡಯ್ಯ
ಮಣ್ಣನೆ ತುಣ್ದು ತುಣ್ದು
ಮಣ್ಣ ಹದ ಮಾಡುತಾರೆ |

ಚನ್ನಾಗಿ ತುಣ್ದ ಮಣ್ಣ
ಮಿದ್ದಿಸಿ ಮಿದ್ದಿಸಿ
ಮುದ್ದೆಗಳ ಕಟ್ಟುತ
ಓಂ ಶಿವ ಅನ್ನುತಾರೆ |

ಇಡುಗುಳಿ ನೆಲಕೆ ನಾಟಿ
ಅದ್ರ ಮೇಲೆ ತಿಗರಿ ಮಡಗಿ
ತಿಗ್ರಿ ಮೇಲೆ ಚಕ್ರ ಹೂಡಿ
ಚಕ್ರದ ಗುಂಬದ ಮ್ಯಾಲೆ
ಮಣ್ಣ ಮುದ್ದೆಯ ಮಡಗಿ
ಶಿವಸೊರಣೆ ಮಾಡುತ
ಕೈಲಾಸ್ದ ಗಣಗಳ
ಹೆಸರಲ್ಲಿ ಗುಂಡಯ್ಯ
ಮಡಕೆಗಳ ಮಾಡುತಾನೆ
ಶಿವನಾಮ್ದ ಮೈಮೆಯಿಂದ
ಆ ಮಡ್ಕೆ ಕುಡ್ಕೆಗಳು
ಎತ್ತಾಕುದ್ರು ಒಡೆಯೋದಿಲ್ಲ
ಬೇಕೂಂತ ಕಲ್ಲಲ್ಲೊಡುದ್ರು
ಮಡ್ಕೆ ಕುಡ್ಕೆ ಒಡೆಯೋದಿಲ್ಲ |

ಗುಂಡಯ್ನ ಶಿವಭಕ್ತಿ
ಎಲ್ಲೆಲ್ಲು ಹೆಸರಾಗಿ
ಮುಕ್ಕಣ್ಣ ಮೂರುತಿ
ಮಾದೇವ್ಗೆ ಅರುವಾದೊ |

ಹರನು ಗುಂಡಯ್ಯನ
ದುಡಮನ ನೋಡಲೆಂದು
ಮನಸು ಮಾಡಿ ಸ್ವಾಮಿ
ಭೂಲೋಕಕೆ ಬಂದರು |

ಗುಂಡಯ್ಯ ಶರಣರು
ತಮ್ಮ - ಶಿವಮಠದ ಮುಂದೆ ಕೂತು
ಮಡ್ಕೆಗಳ ತಟ್ಟಿತಟ್ಟಿ
ಆ ಕಡೀಕೆ ಓತುತಿದ್ರು
ಶಿವನು ಬೇರೆ ಕೀಲಿನಲ್ಲಿ

ಜಂಗಮರ ರೂಪುನಲ್ಲಿ
ಬಂದ ಪರಮಾತ್ಮನು
ಗುಂಡಯ್ನ ನೋಡುತ
"ಇಲ್ಲಿ ಕುಂಬಾರ ಗುಂಡಯ್ನ
ಮನೆ ಯಾವ್ದು ಹೇಳಪ್ಪ"
"ಇದೇ ಸ್ವಾಮಿ ಇದೇ ಸ್ವಾಮಿ
ಇದೇ - ಗುಂಡಯ್ನ ಶಿವಮಠ"
"ಗುಂಡಯ್ಯ ಇದ್ದಾನಪ್ಪ?"
"ನಾನೇ ಗುಂಡಯ್ಯ ಸ್ವಾಮಿ."
"ನೀನೇಯೋ ಗುಂಡಯ್ಯ?"
"ನನ್ನಿಂದ ಏನಾಗಬೇಕು.
ದಯ ಮಾಡಿ ಹೇಳಿ ಬುದ್ಧಿ"
"ನೀನು - ಮಾಡೀದ ಮಡ್ಕೆಗಳು
ಒಡಿಯೋದಿಲ್ಲಾಂತ
ಅಲ್ಲಿ - ಮಾತಾಡಿಕೊಳ್ಳುತಿದ್ರು
ಅದಕಾಗಿ ನಿನ್ನೇ
ಹುಡುಕಿಕೊಂಡು ಬಂದೆನಪ್ಪ"
"ಹೇಳಿ ಹೇಳಿ ನನ್ನ ಒಡಿಯ
ಒಡೆಯದಂತ ಮಡಕೆಯ
ನಾನು ಮಾಡಿಕೊಡುತೀನಿ
ನನ್ನಿಂದ ನಿಮುಗೆಂತ
ಮಡಕೆ ಬೇಕೂಂತ
ಆಗ್ನೆ ಮಾಡಿ ನನ್ನಪ್ಪ
ತಪ್ಪಾದೆ ಖಂಡುತ್ವಾಗೂ
ಮಾಡಿಕೊಡ್ತೀನಿ ಬುದ್ಧಿ"
"ಹಂಗಾದ ಮ್ಯಾಲೆ ಕೇಳು
ಒಂದು ಸೇರಕ್ಕಿ ಬೇಯೊ
ಚಟ್ಟೀಯು ನನ್ಗೆ ಬೇಕು
ಮಾಡಿಕೊಡಕಾದದಪ್ಪ?"
"ಯಾವಾಗ ಬೇಕು ಸ್ವಾಮಿ?"
"ನಾನು - ಒಂದು ವಾರದ ಮ್ಯಾಲೆ
ಕಾಸೀಗೆ ಹೋಗುತೀನಿ
ಕಾಸೀಗೆ ಹೋಗುವಾಗ
ಈ ಚಟ್ಟೀಯ ತಕ್ಕೊಂಡು
ನಾನಾದ್ರೆ ಹೋಗ್ತೀನಪ್ಪ
ಒಂದು ವಾರದ ಒಳುಗೆ
ಚಟ್ಟಿ ನನ್ಗೆ ಬೇಕಪ್ಪ"
"ಮಾಡಿಕೊಡ್ತೀನಿ ಬುದ್ಧಿ
ಇವತ್ಗೊಂದ್ಯಾರ ಆದೆ
ನೀವು ಶುಕ್ರುವಾರದಲ್ಲಿ
ಬಂದೋಗಿ ನನ್ನ ಸ್ವಾಮಿ
ನಿಮಗೆ - ತಕ್ಕನಾದ ಚಟ್ಟೀಯ
ನಾನು - ಮಾಡಿ ಕೊಡ್ತೀನಿ ಸ್ವಾಮಿ
"ಹಂಗಾದ ಮ್ಯಾಕೆ ತಕೊ
ನಿನ್ಗೆ - ಉಲುಪೆಯ ಕೊಡುತೀನಿ"
"ಬ್ಯಾಡ ಬ್ಯಾಡ ಬುದ್ಧಿ
ನಾನು - ಹಂಗೆ ಮಾಡಿಕೊಡುತೀನಿ"
"ಹಂಗೇಯ ಕೊಡುತೀಯ
ಹಂಗೇಯ ಅಂದಾರೆ
ಪುಗಸಟ್ಟೆ ಕೊಡುತೀಯ
ಬಿಟ್ಟಿಗಿಟ್ಟಿ ಕೊಡುತೀನಿ
ಅನುಬ್ಯಾಡ ಗುಂಡಯ್ಯ
ಬಿಟ್ಟಿ ತಕೊಂಡಂತ
ಚಟ್ಟಿಲಿ ಅಟ್ಟುಂಡರೆ
ಹೊಟ್ಟೆನೋವು ಬರುತ್ಯೆತೆ
ನಿನ್ನ - ಬಿಟ್ಟಿ ಯಾರಿಗೆ ಬೇಕು
ತಕ್ಕೊಳಪ್ಪ" ಅಂತ್ಹೇಳಿ
ಶಿವನ ಪಂಚಮುಖದ
ಮುದ್ರೆಯ ಕಾಸನ್ನು
ಗುಂಡಯ್ನ ಕೈಯಿಗೆ
ಸ್ವಾಮಿಯು ಕೊಟ್ಟರು |

"ಸ್ವಾಮಿ - ಶಿವನ ಮುಕುವುಳ್ಳ
ಚಿನ್ನಾದ ನಾಣ್ಯ ಇದು
ಒಂದೇ ಒಂದು ಚಟ್ಟೀಗೆ
ಇಷ್ಟೊಂದು ಹಣ ಬ್ಯಾಡ
ನಾನು - ಚಟ್ಟೀಯ ಕೊಟ್ಟಮ್ಮಾಲೆ
ನೀವು - ಹಣವ ಕೊಡಿ ಸ್ವಾಮಿ"
"ನಿನ್ನ - ಕೈಗೆ ಕೊಟ್ಟುದ್ದಾಯ್ತು
ಹೆಚ್ಚು ಮಾತಾಡಬ್ಯಾಡ
ಶುಕ್ರಾರ ಬರುತೀನಿ
ಚೆಟ್ಟಿ ಮಾಡಿ ಮಡಗಿರು
ಮಾತಿಗೆ ತಪ್ಪ ಬ್ಯಾಡ"
ಅನುತ್ಹೇಳಿ ಪರಶಿವನು
ಗುಂಡಯ್ನ ಮಠಬುಟ್ಟು
ಕೈಲಾಸ್ಕೆ ನಡೆದರು |

ಕೈಲಾಸದಲ್ಲಿ ಶಿವನೆ
ಗೌರಮ್ಮ ತಾಯಿಯು
ಸೀಗೆಯ ಅರುಕೊಂಡು
ನೀರನ್ನು ಕಾಯಿಸಿ
ಸ್ವಾಮಿ ಶಿವರಾಯರಿಗೆ
ನೀರನ್ನು ಹುಯ್ಯುವಾಗ
ಆ ನೀರ ನಾಕು ಕಾಳು
ಭೂಮೀಲಿ ಮನುಗಿದ್ವ
ಹುಂಜನ ತಲೆಮ್ಯಾಲೆ
ಬಿದ್ದಾಗ ಹುಂಜಾವು
ಹೊತ್ತಾರೆ ಆಯಿತೆಂದು
ಮುಂಗೋಳಿ ಕೂಗಿತು
ಮುಂಗೋಳಿ ಕೂಗಿದಾಗ
ಮೂಡು ಕೆಂಪೇರಿತು
ಹಕ್ಕಿ ಪಕ್ಷಿಯ ಗಲಗು
ಜಗತ್ಯವ ತುಂಬೀತು
ಮಕ್ಕ ಮರಿ ಗಲಗು
ನಾಡಾನೆ ತುಂಬಿತು |

ಆಗ - ಕುಂಬಾರ ಗುಂಡಯ್ಯ
ಶಿವಸೊರಣೆ ಮಾಡುತ
ಮಿಂದು ಮಡಿಯುಟ್ಟು
ಹಣಿಗೆ ಈಬುತ್ತಿ ಹಸ್ಸಿ
ಶಿವನೀಗೆ ಕೈಮುಗುದು
ಹಳ್ಳದಿಂದ ಗುಂಡಯ್ಯ
ಕಳಿಯ ಮಣ್ಣನು ತಂದು
ತುಣ್ಣು ಹದ ಮಾಡುವಾಗ
ಮಣ್ಣೀನ ಒಳಗಿದ್ವ
ಕಾರೇಯ ಮುಳ್ಳೂ ಚುಚ್ಚಿ
ರಗುತಾವು ಚಿಲ್ಲನೆ
ಕಿತ್ತುಕೊಂಡು ಹರಿಯಿತು |

ಹರಿದಂತ ರಗುತಾವು
ಒಂದು ಮುದ್ದೆಗಾತ್ರ
ಮಣ್ಣಾಗೆ ಸೇರಿಕೊಂಡು
ಮಣ್ಣಾನು ನೆನಿಸಿತು
ಶರಣ ಗುಂಡಯ್ಯನೋರು
ಉಳಿದ ಮಣ್ಣನೆಲ್ಲ
ತುಣ್ಣು ಹದಮಾಡಿ
ಮಿದ್ದಿಸಿ ಮುದ್ದೆಕಟ್ಟಿ
ಗುಂಬದ ಮೇಲೆ ಮಡಗಿ
ಶಿವಸೊರಣೆ ಮಾಡುತ
ಚಕ್ರಾವ ತಿರುಗಿಸಿ
ಚೆಟ್ಟಿ, ಬಟ್ಯಾಲುಗಳ
ಗುಂಡಯ್ಯ ಮಾಡಿದರು
ಮಾಡಿ - ಸಂತೋಷ ಪಟ್ಟರು
ರಗ್ತದಲ್ಲಿ ನೆನೆದಿದ್ದ
ಮಣ್ಣೆನುಂಡೆ ಮಡಗಿ
ಒಂದು ಪುಟ್ಟದಾಗಿರುವ
ಬಟ್ಯಾಲ ಮಾಡಿದರು |

ಗೇಯ್ದ ಚಟ್ಟಿ ಬಟ್ಯಾಲ
ನೆಳ್ಳಲ್ಲಿ ಒಣಗಿಸಿ
ಹದವಾಗಿ ಒಣಗಿದ
ಮಡ್ಕೆ ಕುಡ್ಕೆನೆಲ್ಲ
ಸೊಣದಲಿ ತಟ್ಟಿತಟ್ಟಿ
ಗಾರೆಕಲ್ಲ ಚಿಪ್ಪಿನಿಂದ
ಹೊಳೆಯೊಂಗೆ ನುಣ್ಪುಮಾಡಿ
ಚಟ್ಟೀಯ ಕಂಠದಲಿ
ಲಿಂಗಾದ ಸಾಲು ಬಿಡ್ಸಿ
ಲಿಂಗಾದ ಮುಂದುಗಾಡೆ
ನಂದೀಯ ಕೂರಿಸಿ
ನಾಗಸಂಪ್ಗೆ ಹೂ ಬುಡ್ಸಿ
ಚಂದಾದ ಚೆಟ್ಟೀಯ
ಸಾಲಾಗಿ ಒತರು |

ರಗುತದಲ್ಲಿ ನೆನೆದಿದ್ದ
ಮಣ್ಣೀನ ಉಂಡೆಯಲ್ಲಿ
ಮಾಡಿದ್ದ ಬಟ್ಲಿಗು
ಹದವನ್ನು ಕೊಟ್ಟರು
ನೆಳ್ಳಲ್ಲಿ ಒಣಗಿರುವ
ಚೆಟ್ಟಿ, ಬಟ್ಟಲನೆಲ್ಲ
ಆವಿಗ್ಗೆ ತುಂಬಿ
ಸುಟ್ಟು ಹದಗೂಡಿದರು |

ಬೆಂದ ಮಡ್ಕೆಗಳ
ಸಾಲಾಗಿ ಒತರು
ಅಂತೂ ಇಂತೂ ಬಂತು
ಬಂದೇ ಬತ್ತು ಶುಕ್ರಾರ

ಶಿವನು ಜೋಗಿಯಾಗಿ
ದಡಬಡನೆ ಬಂದನು
"ಕೊಡುಕೊಡು ಜಲ್ದಿ ಕೊಡು
ನಾನು ಆಡ್ರು ಕೊಟ್ಟ ಚೆಟ್ಟೀಯ
ನನ್ಗೆ - ಬೇಗಾದಲ್ಲಿ ಬೇಕು
ನಾನೀಗಲೆ ಹೋಗಬೇಕು
ಬೇಗು ಬೇಗದಲ್ಲಿ
ಚಟ್ಟೀಯ ಕೊಡು" ಅಂದ |

"ಸ್ವೊಮಿಯೋರೆ ಸ್ವೋಮಿಯೋರೆ
ಕಣ್ಣೀಗೆ ಬೇಕಾದಂತ
ಚಟ್ಟೀ ಬಟ್ಟಲುಗಳ
ನಾನು ಮಾಡಿ ಮಡಗಿವ್ನಿ
ನಿಮಗಿಚ್ಚೆ ಬಂದಂತಾದ್ದ
ತಕ್ಕೊಂಡೋಗಿ ನನ್ನ ಗುರುವೆ" |

ಗುಂಡಯ್ನ ಮಾತ ಕೇಳಿ
"ಯಾವು ಅವು ? ಯಾವು ಅವು ?
ಕಣ್ಣೀಗೆ ಬೇಕಾದ್ದವು ?
ಬ್ಯಾಗ ಬೇಗ ತೋರಪ್ಪ"
ಜಂಗಮರ ಮಾತೀಗೆ
ಗುಂಡಯ್ಯನವರು
ಒತಿದ್ದ ಮಡಕೆಯ
ಸಾಲುಗಳ ತೋರಿಸುತ
"ಇಲ್ಲಿ ನೋಡಿ ಸ್ವಾಮಿ
ಇಷ್ಟೊಂದು ಮಡ್ಕೆಗಳು
ಚೆಟ್ಟಿ ಬಟ್ಟಲುಗಳು
ನಿಮಗಾಗಿ ಮಡುಗಿವ್ನಿ
ಯಾವ್ದು ನಿಮ್ಮ ಕಣ್ಣೀಗೆ
ಚಂದಾಗಿ ಕಾಣುತಾದೊ
ಅಂತಾ ಚೆಟ್ಟೀಯ ನೀವು
ತಕ್ಕೊಳಬವ್ದು ಸ್ವಾಮಿ" |

ಗುಂಡಯ್ನ ಮಾತ ಕೇಳಿ
ಹುಸ್ನೆಗೆಗಳ ನೆಗುತ
ಪರಶಿವನಾದರೂ
ಜಂಗಮರ ರೂಪುನಲಿ
"ಅಯ್ಯಾ ನಾನು ಕೊಟ್ಟ
ಹಣ ಏನು ಕಡ್ಮೆಯಲ್ಲ
ಅದಕೆ ತಕ್ಕನಾದ
ಚೆಟ್ಟಿ ನನ್ಗೆ ಬೇಕು
ಚೆಟ್ಟಿಗಳ ನಾನು
ಪರೀಕ್ಷ್ಯ ಮಾಡಬೇಕು
ಚೆಟ್ಟಿಗಳ ನಾನಾದ್ರೆ
ಮುಟ್ಟಿ ನೋಡಬೇಕು
ತಟ್ಟಿ ನೋಡಬೇಕು
ಕುಟ್ಟಿ ನೋಡಬೇಕು
ಒಡುದೋಗೊ ಮಡ್ಕೆಯಾದ್ರೆ
ನನಗೆ ಬೇಕಾಗಿಲ್ಲ
ಒಡೆಯದ ಮಡ್ಕೆ ಮಾತ್ರ
ನನಗೆ ಬೇಕಪ್ಪ ಸರಣ"
ಅಂತ್ಹೇಳಿ ಸ್ವಾಮಿಗಳು
ಎಲ್ಲಾ ಮಡ್ಕೆಗಳ
ಮುಟ್ಟಿ ಮುಟ್ಟಿ ನೋಡಿದರು
ಎಲ್ಲಾ ಮಡ್ಕೆಗಳ
ಸವುರಿ ಸವುರಿ ನೋಡಿದರು
ಎಲ್ಲಾ ಚೆಟ್ಟಿಗಳ
ತಟ್ಟಿ ತಟ್ಟಿ ನೋಡಿದರು
ಎಲ್ಲ ಕುಡ್ಕೆಗಳ
ಕುಟ್ಟಿ ಕುಟ್ಟಿ ನೋಡಿದರು
ಮುಟ್ಟೀದ ಮಡ್ಕೆಗಳು
ಪುಡಿ ಪುಡಿ ಆದವು
ತಟ್ಟಿದ ಚೆಟ್ಟಿಗಳು
ಪುಡಿ ಪುಡಿ ಆದವು
ಕುಟ್ಟಿದ ಕುಡ್ಕೆಗಳು
ಪುಡಿ ಪುಡಿ ಆದವು
ಮಣ್ಣ ತುಣೇವಾಗ
ಕಾರೇಯ ಮುಳ್ಳುಚುಚ್ಚಿ
ರಗುತದಲ್ಲಿ ನೆನೆದಿದ್ದ
ಮಣ್ಣಲ್ಲಿ ಮಾಡಿದ್ದ
ಪುಟ್ಟಿ ಬಟ್ಟಲನು
ಜಂಗಮರು ಸವರಿದರು
ಮುಟ್ಟಿದರು ಕುಟ್ಟಿದರು
ತಟ್ಟಿದರು ಕುಟ್ಟಿದರು
ಆ ಪುಟ್ಟಾಣಿ ಬಟ್ಟಲು
ಎತ್ತಾಕಿದರೂ ಸೈತ
ಒಡೆದು ಹೋಗನಿಲ್ಲ |

ಗುಂಡಯ್ಯನವುರಾದ್ರೆ
"ಶಿವಶಿವ !" ಎಂದರು
"ಇದು ಏನು ಮಾಯವೊ
ಇದು ಏನು ಸೋಜುಗ
ಗುಂಡಯ್ಯ ಮಾಡಿದ
ಮಡಕೆಗಳು ಅಂದರೆ
ಕಲ್ಲಲ್ಲಿ ಚಚ್ಚುದ್ರೂ
ಒಡೆಯುತಿರುನಿಲ್ಲ
ಈ ದಿನಕೆ ಇಂತೆ
ಅಪಮಾನ ಬಂದಿತಲ್ಲ
ಏನ ಮಾಡಲಿ ಶಿವನೆ
ಯಾರೀಗೆ ಹೇಳಲಿ!"
ಅಂತ್ಹೇಳಿ ಚಿಂತೇಯ
ಮಾಡುತ ಇರುವಾಗ
ಜಂಗಮರು ಗುಂಡಯ್ನ
ಕರದು ಹೇಳುತಾರೆ
"ಅಯ್ಯಾ ಗುಂಡಯ್ಯ
ಈ ಪುಟ್ಟಾಣಿ ಬಟ್ಟಲು
ಒಡೆದು ಹೋಗನಿಲ್ಲ
ಗಟ್ಟಿಯಾದ ಪದಾರ್ಥ
ಇಂತೆ - ಹದುವಾದ ಮಣ್ಣಲ್ಲಿ
ನನ್ಗೆ ಚೆಟ್ಟೀಯ ಮಾಡಬೇಕು
ಅಂತೆ ಚೆಟ್ಟೀಯ ಸೈವಾಗಿ
ಇನ್ನೊಂದು ವಾರವಾಗ್ಲಿ
ಅಂತೆ ಚಟ್ಟೀಯ ತಕ್ಕೊಂಡು
ನಾನು ಹೋಗಬೇಕಪ್ಪ"
ಅದಕಾಗಿ ತಿರುಗಿ ನಿನ್ಗೆ
ಉಲುಪೀಯ ಕೊಡುತೀನಿ
ನಾನು - ಮುಂದಿನ ಶುಕ್ರಾರ
ಬರುತೀನಿ ಘನಶರಣ
ನೀನು ಚೆಟ್ಟಿ ಮಾಡಿರಪ್ಪ"
ಪಂಗಡ ಮಾಳ್ಪಂತ
ಜಂಗಮರು ಹೊರಟಾರು |

ಗುಂಡಯ್ಯನವ್ರ ಜೀವ
ಚಿಂತೇಗೆ ಬಿದ್ದಿತು
"ಆ ಸ್ವೋಮಿಯವ್ರು ಮೆಚ್ಚಕೊಂಡ
ಆ ಸಣ್ಣ ಚೆಟ್ಟೀಯಾದ್ರೆ
ನನ್ಗೆ - ಮುಳ್ಳು ಚುಚ್ಚಿ ಬಂದಂತ
ರಗುತದಲ್ಲಿ ನೆನೆದಿತ್ತು
ಆ ರಗುತಾದ ಮಣ್ಣಲ್ಲಿ
ಮಾಡೀದ ಚೆಟ್ಟೀಯನು
ಸ್ವೋಮಿಯರು ಒಪ್ಪಿದರು
ಈಗ ಅಂಥ ಮಣ್ಣಿಂದ್ಲೆ
ಚೆಟ್ಟೀಯ ಮಾಡಬೇಕು
ಅಂತೆ ಚೆಟ್ಟೀಯ ಮಾಡದಕೆ
ರಗುತಾವ ಸುರ್ಸಬೇಕು
ಅಯ್ಯೊ ಶಿವನೆ ಭಗವಂತ
ಇದ - ಹ್ಯಾಗೆ ನಾ ಮಾಡಬೇಕು
ನಾ - ಹ್ಯಾಗೆ ಬಾಳಬೇಕು
ಪರಮಾತ್ಮ ಪರಮಾತ್ಮ
ಏನಪ್ಪ ನಿನ್ನ ಲೀಲ್ಯಾ
ನೀನೆ - ದಾರಿ ತೋರಬೇಕು
ನೀನೆ - ಕಾಪಾಡಬೇಕು
ನನ್ಗೆ- ಗತಿಯೂ ನೀನೆ ಸ್ವಾಮಿ
ನನ್ಗೆ - ಮತಿಯೂ ನೀನೇ ಸ್ವಾಮಿ
ಪರಮಾತ್ಮ ಪರಶಿವ
ನಿನ್ನಿಚ್ಛೆಯಿದ್ದಂತಾಗ್ಲಿ"
ಅಂತ್ಹೇಳಿ ಗುಂಡಯ್ಯನವರು
ಹೊಸಮಣ್ಣನು ತಂದು
ಹಸನು ಮಾಡಿ ಹದ ಮಾಡಿ
ಗುಂಡಯ್ಯ ಶರಣರು
ತಮ್ಮ ಎದೆಯನೆ ಬಗೆದು
ಹದವಾದ ಮಣ್ಣುನ್ ಮ್ಯಾಲೆ
ರಗುತಾವ ಸುರಿಸಿ
ಮಣ್ಣನು ಮಿದಿಸಿ
ಚಂದಾದ ಚೆಟ್ಟಿಗಳ
ಗುಂಡಯ್ಯ ಮಾಡಿದರು |

ಸಮ ಸಮ ರಾತ್ರಿ ಹೊತ್ಗೆ
ಮಡ್ಕೆಗಳು ಬೆಂದೊ
ಸಪ್ಪಟ್ಟು ಸರ್ರಾತ್ರೇಲಿ
ಮಡ್ಕೆಗಳನೆಲ್ಲ
ಸಾಲಾಗಿ ಒತರು
ಅಷ್ಟು ಹೊತ್ತಿಗೆ ಶಿವನೆ
ಕುಂಬಾರ ಕುಂಡಯ್ನ
ಎದೆ ರಗುತೆಲ್ಲ ಸೋರೋಗಿ
ಸುಸ್ತು ಸಂಕಟವಾಗಿ

ತಲೆಸುತ್ತು ಬಂದಂತಾಗಿ
ಕಣ್ಣೀಗೆ ಅರುಸುಣ್ಣ
ಪುಡಿಯ ಚೆಲ್ಲಿದಂತಾಗಿ
ಕಣ್ಗೆ ಕಾಣದಂತಾಗಿ
ನಿಲ್ಲಕಾಗ್ದೆ ನಡೆಯಕಾಗ್ದೆ
ಒಂದು - ದೊನ್ಗೇಯ ಊರಿಕೊಂಡು
ಜಗ್ತೀಯ ಮೂಲೇಲಿರೊ
ಮಂದಲ್ಗೆ ಮ್ಯಾಲುಕೆ
ಧೊಪ್ಪಾನೆ ಬಿದ್ದಾರು |

ಕೋಳಿ ಕೂಗಿ ಬೆಳಕಾದೊ
ಗುಂಡಯ್ನ ಮಡ್ದಿ ಗೌರಮ್ಮ
ಶಿವುಸೊರಣೆ ಮಾಡುತ
ಬಲ್ದ ಮಗ್ಗುಲಾಗಿ ಎದ್ದು
ಮಣ್ಣ ಮುಟ್ಟಿ ಸಣ್ಮಾಡಿ
ಶಿವನ ಪಟಕೆ ಸಣ್ಮಾಡಿ
ಮನೆಯ ಕದವ ತಗ್ದು
ಕಸ ಹೊಡ್ದು ಮುಸ್ರೆ ತೊಳ್ದು
ಮುಂದಲ ಬಾಕಲ
ಹೊಸ್ತಲ ಮಡಿಮಾಡಿ
ಅದ್ಕೆ- ಈಬುತ್ತಿ ಧರುಸಿ
ಅರುಸ್ಣ ಕೂಕುಮ ಹಸ್ಸಿ
ಶಿವಸೊರಣೆ ಮಾಡುತ
ಕಡ್ಡಿಕರ್ಪೂರ ಬೆಳಗಿ
ಜಗತೀಯ ಮೂಲೇಲಿ
ಮನುಗಿರುವ ಗುಂಡಯ್ನ
ನೋಡಿದರು ಗೌರಮ್ಮ
"ಆಗಲೆ ಹೊತ್ತು ಮೂಡಿ
ಎರಡಾಳುದ್ದ ನೆಳ್ಳು ಬಿದ್ದು
ಊರ ಜನುವೆಲ್ಲ
ಗೇಯಾಕೆ ಹೋಯ್ತಿದ್ರೆ
ಇವ್ಯಾಕೆ ಇನ್ನೂವೆ
ಮನುಗವ್ರೆ ?" ಅನುತ್ಹೇಳಿ
ಗಂಡನ ಎಳ್ಸದಕೆ
ತಾಯಮ್ಮ ಹತ್ರ ಬಂದ್ರು
"ಇಷ್ಟೊತ್ತಾದ್ರೂ ಇದು ಯಾಕೆ
ಮನುಗಿದ್ದೀರಿ ಎದ್ದೇಳಿ"
ಅನುತ್ಹೇಳಿ ಮುಟ್ಟಿದರೆ
ಮೈ ತಣ್ಣಗಾಗಿತ್ತು |

ಗೌರಮ್ಮ ಬೆಚ್ಚಿದರು
ಬಾಯಿ ಬಾಯಿ ಬಡುಕೊಂಡ್ರು
ಊರ ಕೇರಿಯ ಜನ
ಬಂದು ಸೇರಿತು ಆಗ
ಗುಂಡಯ್ನ ವಸ್ತು
ಹೋಗದೆ ಅನುತ್ಹೇಳಿ
ಊರ ಜನ ಹೇಳುವಾಗ
ಅಷ್ಟೊತ್ಗೆ ಜಂಗುಮಯ್ಯ
"ನನ್ನ ಚೆಟ್ಟಿ ಮಾಡಾಯ್ತ?
ನನ್ನ ಮಡ್ಕೆ ಮಾಡಾಯ್ತ
ನಾನದಕೆ ಕೊಟ್ಟಿರೋದು
ಅಂತಿಂತ ಹಣುವಲ್ಲ
ಪಂಚಮುಖಿ ಶಿವನ
ಚಿನ್ನಾದ ಲಾಣ್ಯ ಅದು
ಬ್ಯಾಗ ಬ್ಯಾಗ ಕೊಡಪ್ಪ"
ಅಂತ್ಹೇಳಿ ಬಂದನು |

ಊರಜನ ಕಣ್ಣೀರ
ಹಾಕೋದ ನೋಡುತ
"ಏನಾಯ್ತು ಏನಾಯ್ತು?
ಯಾಕ್ರಪ್ಪ ಅಳುತೀರಿ
ಏನಾಯ್ತು ಹೇಳಿರಪ್ಪ?"
ಅನ್ನುತ ಜಂಗಮರು
ಜನಗಳ ಕೇಳಲಾಗಿ
"ಸ್ವಾಮಿ ಗುಂಡಯ್ಯನೋರು
ಶಿವನ ಪಾದ ಸೇರಿಕೊಂಡ್ರು"
ಜನರ ಮಾತ ಕೇಳಿ
ಜಂಗೂಮರು ನೆಗುನೆಗುತ
ಗುಂಡಯ್ನ ನೋಡಿದರು
"ಗುಂಡಯ್ಯ ಗುಂಡಯ್ಯ
ಮ್ಯಾಕೇಳು ಮಾರಾಯ"
ಅಂತ ಕೂಗಿದರಾಗ
ಸ್ವಾಮಿ ಜಂಗೂಮಯ್ಯ |

ಆಗಲೀಗ ಗುರುವೆ
ಗುಂಡಯ್ಯ ಶರಣರು
ನಿದ್ದೆ ಮಾಡುತಿದ್ದೋರು
ಎದ್ದು ಬರೋಹಂಗೆ
ಉಸ್ಸಂತ ಆಕಸ್ಮಿಕ

ಬಲ್ವ ಮಗ್ಗುಲಾಗಿ ಎದ್ದು
ಶಿವ ಶಿವಾ ಅನ್ನುತ
ಜಂಗುಮಯ್ಯ ನೋಡಿದರು |

ಗುಂಡಯ್ಯ ಶರಣರಿಗೆ
ಸಂತೋಷ ಬಂದುಬುಡ್ತು
ಸ್ವೋಮಿಯೋರ ಪಾದಕೆ
ಹಾಸಾಸಿ ಬೀಳುತ
ಶರಣು ಶರಣೆನ್ನುತ
ಶರಣ ಗುಂಡಯ್ಯನೋರು
ಚೆಟ್ಟೀಯ ತಂದು
ಸ್ವಾಮಿ - ಪಾದಕೆ ಒಪ್ಪಿದರು |

ಜಂಗುಮಯ್ಯ ಚೆಟ್ಟೀಯ
ಸವುರಿ ನೋಡಿದರು
ಮುಟ್ಟಿ ನೋಡಿದರು
ತಟ್ಟಿ ನೋಡಿದರು
ಕುಟ್ಟಿ ನೋಡಿದರು
ಚೆಟ್ಟೀಯ ಒಡಿಯನಿಲ್ಲ |

"ಇದಪ್ಪ ಚಟ್ಟಿಯಂದ್ರೆ
ಮುಟ್ಟುದ್ರ ಒಡೆಯದಿಲ್ಲ
ತಟ್ಟುದ್ರು ಒಡೆಯದಿಲ್ಲ
ಕುಟ್ಟುದ್ರು ಒಡೆಯದಿಲ್ಲ
ಇದು - ಮಣ್ಣಿನ ಚೆಟ್ಟಿಯಲ್ಲ
ಅಮೃತ್ಪಾತ್ರೆ ಕಣ್ರೊ
ಇದ್ಕೆ - ಬೆಲೆಯ ಕಟ್ಟೋ ಮಗ
ಈ ಲೋಕದಲ್ಲೆ ಹುಟ್ಟಿಲ್ಲ
ಇದ್ಕೆ ಬೆಲೆ ಕಟ್ಟೋಕಾದ್ದ ?
ಕಟ್ಟುದ್ರು ಕೊಡಕ್ಕಾದ್ದ ?
ಸಮಯ ಕೂಡಿ ಬಂದಾಗ
ಅದರ ಬೆಲೆಯ ನಾನಾದ್ರೂ
ತಪ್ಪಾದೆ ಕೊಡುತೀನಿ
ಈ ಮಾತು ಶಿವಸತ್ಯ" |

ಜಂಗಮ ದೇವರು
ಒಂದು ಗಳುಗೆ ನಿಲ್ಲನಿಲ್ಲ
ಚೆಟ್ಟೀಯ ತಕ್ಕೊಂಡು
ಬಂದೋರು ಬಂದಂಗೆ
ಜನಗಳ ಗುಂಪಿನಲ್ಲಿ
ಮರೆಯಾಗಿ ಹೋದರು |

ಗುರುವೀಗೆ ಒಪ್ಪಿದಂತ
ಚೆಟ್ಟೀಯ ಮಾಡಿದ
ಸಂತೋಷ ಪಟ್ಟುಕೊಂಡು
ಗುಂಡಯ್ಯ ಶರಣರು
ಸ್ವಾಮಾರ ಸಂತೆಗೆ
ಮಡ್ಕೆ ಕೊಂಡೋದರು
ಎಂದಿನಂತಲ್ಲದ
ಒಳ್ಳೆ ಯಾಪಾರ ನಡ್ದು
ಕೈತುಂಬ ಹಣ ಬಂತು
ಇಂತೆ ಸಂತೋಷದಲ್ಲಿ
ಬಂದ ಗುಂಡಯ್ಯನು
ಮಡ್ಕೆ ಮಾಡದಕಂತ
ಮಣ್ಣ ತುಣಿಯುತಿದ್ರು |

ಅಂತೆ ಹೊತ್ತಿನಲ್ಲಿ
ತಾಯಿ ಗೌರಮ್ಮನೋರು
ಗೌಡಾರ ಹೊಲದಲ್ಲಿ
ಕಡ್ಲೆ ಕುಡಿ ಕುಯ್ಯಕಂತ
ಸಂಗಾಡಗಾತಿರೊಂದ್ಗೆ
ಗೌರಮ್ಮ ಹೊರಟಳು.
ಹೋಗುವಾಗ ತಾಯಿಯು
ತನ್ನ ಕಂದ ಶಂಕರನ
ನೋಡಿಕೊಳ್ಳುವಂತೆ ಹೇಳಿ
ಗೌರಮ್ಮ ಹೋದರು |

ಗುಂಡಯ್ಯ ಶರಣರು
ಮಣ್ಣನು ತುಣಿಯುತಿದ್ರು
ಕಂದಯ್ಯ ಶಂಕರ
ತನ್ನಷ್ಟಕೆ ತಾನು
ಆಟ ಆಡಿಕೊಳ್ಳುತ್ತಿತ್ತು
ಆಡುತ್ತ ನಗುತ್ತಿತ್ತು |

ಗುಂಡಯ್ಯನಾದರು
ಶಿವಭಜನೆ ಮಾಡುತ
ಮಣ್ಣ ತುಣಿತಿದ್ದ
ತುಣಿಯುತ ತುಣಿಯುತ
ಓಂ ಶಿವ ಓಂ ಶಿವ

ಶಿವಶಿವ ಶಿವಶಿವ
ಹರಹರ ಹರಹರ
ಶಂಕರ ಶಂಕರ
ಗಿರಿಜಾ ಶಂಕರ
ಶಿವ ಶಿವ ಶಿವಾಯ
ನಮೋ ನಮಶ್ಶಿವಾಯ
ನಮೋ ಶಿವ ಶಿವಾಯ
ಶಂಕರ ಶಂಕರ
ಶಂಕರ ಶಂಕರ
ಶಂಕರ ಶಂಕರ
ಶಂಕರ ಶಂಕರ
ಅನ್ನುವ ದನಿ ಕೇಳಿ
ಆಡುತಿದ್ದ ಕಂದನು
ಅಪ್ಪ ಕರೀತಾನೆಂತ್ಹೇಳಿ
ತೆವುಳುತ ಬಂದಿತು |

ಶಂಕರ ಶಂಕರ
ಅನ್ನೋ ಸಪ್ತ ಕೇಳಿ
ಕಂದ ಮುಂದು ಮುಂದಕೆ
ಬಂದು ನೋಡುತಿತ್ತು
ಅಪ್ಪ ಕರಿಯುತಿದ್ದ
ಶಂಕರ ಶಂಕರ
ಶಂಕರ ಅನುತಿದ್ದ
ಅಪ್ಪನು ಕರೀತಾನೆ
ಅಂತ್ಹೇಳಿ ಕಂದನು
ಗುಂಡಯ್ಯ ತುಳಿಯುತಿದ್ದ
ಮಣ್ಣಿನ ರಾಸಿ ಮ್ಯಾಲೆ
ಹತ್ತಿ ಹತ್ತಿ ಬರುವಾಗ
ಶಿವಭಜನೆ ಮಾಡುತ
ಮೈಮರೆತಿದ್ದ ಗುಂಡಯ್ಯ
ತನ್ನ ಮಗ ಶಂಕರನ
ಕಾಣಾದೆ ತುಣಿದನು
ಕಂದ ಮಣ್ಣೀನ
ಮುದ್ದೇಯ ಜತೆ ಸೇರಿ
ಮಣ್ಣೀನ ಮುದ್ದೆಯಾಗಿ
ಮಣ್ಣನ್ನೇ ಸೇರಿತು |

ಕುಂಬಾರ ಗುಂಡಯ್ಯ
ಮೊಗನಾದ್ರೆ ನೋಡಲಿಲ್ಲ
ಅವನ ಭಕ್ತಿ ಅವನೀಗೆ
ಅವನ ಭಜನೆ ಅವನೀಗೆ
ಅವನ ಶಿವನೆ ಅವನಿಗೆ
ಅವನ ದೇವ್ರು ಅವನೀಗೆ
ಲೋಕಾವ ಮರೆತಿದ್ದ
ಮಾರ್ತು-ಮಣ್ಣಾನೆ ತುಣಿಯುತಿದ್ದ |

ಕಡ್ಲೆ ಕುಡಿಗೋಗಿದ್ದ
ಗೌರಮ್ಮ ತಾಯಿಯು
ಮಡ್ಲು ತುಂಬ ಸೊಪ್ಪನು
ತುಂಬಿಕೊಂಡು ತಾಯಿಯು
ಗೌಡರ ಹೊಲದಿಂದ
ಹಟ್ಟೀಗೆ ಬಂದರು |

ಕಡ್ಲೆಸೊಪ್ಪಿನ ಕುಡಿಯ
ಎಸ್ರು ಮಾಡಬೇಕೂಂತ
ಹಟ್ಟೀಗೆ ಬಂದಳು
ಗೌರಮ್ಮ ತಾಯಿಯು
ಬಂದು ಕಂಡಳು ಅವ್ರು
ಅವ್ರು - ಮುದ್ದುಕಂದಯ್ಯ
ಮಗನು ಶಂಕರನು
ಮಣ್ಣೀನ ಮುದ್ದೇಲಿ
ಮಣ್ಣಾಗಿ ಹೋಗಿದ್ದ
ಅವ್ರು - ನೋಡಾಕೆ ಆಗದೆ
ಕಿಟ್ಟಾನೆ ಕಿರುಚಿಕೊಂಡ್ರು
ಬಾಯಿಬಾಯಿ ಬಡುಕೊಂಡ್ರು
ಮಣ್ಣೀನ ಗುಡ್ಡೆಮ್ಯಾಲೆ
ಶಿವಭಜನೆ ಮಾಡುತ
ಮಣ್ಣು ತುಣಿಯುತಿದ್ದ
ಗಂಡನ ಕೈಹಿಡಿದು
ಎಳದು ಎಚ್ಚರ ಮಾಡಿ
ಬಾಯಿ ಬಾಯಿ ಬಡುಕೊಂಡ್ರು
ಏನಂತ ನೋಡಿದರೆ
ಕಂದ ಶಂಕರನು
ಮಣ್ಣೊಳಗೆ ಮಣ್ಣಾಗಿ
ಮಣ್ಣೀನ ಮುದ್ದೆಯಾಗಿ
ಮಣ್ಣಾಗಿ ಹೋಗಿದ್ದ |

"ಶಿವನ ಧ್ಯಾನದಲಿ
ಮೈಮರೆತಿರುವಾಗ

ಎಂತೆ ಆಚಾರ್ಯ
ನಡೆದೋಯ್ತು" ಅಂತ್ಹೇಳಿ
ಗುಂಡಯ್ಯನಾದರು
ದುಕ್ಕಗಳ ಮಾಡುತ
ಕಣ್ಣೀರ ಸುರ್ಸಿದರು |

ಮಗನ ಕಳುಕೊಂಡ
ದುಕ್ಕಾದಲಿದ್ದಂತ
ಗೌರಮ್ಮ ತಾಯಿಯ
ದುಕ್ಕದ ಜೊತೆಗೆ
ರೋಸಾವೇಸ ಹೆಚ್ಚಿ
'ನಿಮ್ಮ ಹಾಳು ಶಿವ ಭಜನೆಯಿಂದ
ನನ್ನ - ಇದ್ದೊಬ್ಬ ಮಗನನು
ಕಳ್ತುಕೊಂಡೆನಲ್ಲ
ನೀವು ಭಜನೆ ಮಾಡುತಿದ್ರಿ
ಅದು - ನಿಮಗೊಂದು ರೋಗ
ನೀವು ಮಗುವನು ತುಣಿವಾಗ
ಆ - ಶಿವನಾದ್ರೆ ಏನು ಮಾಡುತಿದ್ದ
ಅವ್ನ - ದೇವ್ರು ದೇವ್ರು ಅಂತ
ಈ ಗುಂಡುಕಲ್ಲ ಪೂಜ್ತೀರಲ್ಲ
ಕಷ್ಟಕ್ಕೆ ಆಗದೋನು
ಸುಖಕ್ಕೆ ಬರುದೋನು
ಅವುನೆಂತೆ ದೇವರು ?
ಅವ್ನ - ದೇವರಲ್ಲ ದೇವರಲ್ಲ
ಅವುನೊಂದು ಗುಂಡ್ಕಲ್ಲು
ಅವುನೊಂದು ಕರಿಕಲ್ಲು
ಆ ಕಲ್ಲ ತಗ್ದು ನಾನು
ತಿಪ್ಪೇಗೆ ಎಸೆಯುತೀನಿ
ಈ ಗುಂಡ್ಕಲ್ಲು ದೇವರಂತ
ನಂಬಿ - ನೀವು ಹಾಳಾದ್ರಿ
ನನ್ನ ಕಂದಾನ ಕಿತ್ತುಕೊಂಡ
ಈ ಗುಂಡ್ಕಲ್ಲ ನಾನು ಮಾತ್ರ
ಒಂದು ಕ್ಷಣವೂ ಈ ಮನೇಲಿ
ಮಡಗಾಕೆ ಕೊಡೋದಿಲ್ಲ
ಈ ಗುಂಡ್ಕಲ್ಲ ನಂಬುಕೊಂಡು
ನನ್ನ ಕಂದನ್ನ ಕೊಂದಾಕುದ್ರಿ"
ಅಂತ್ಹೇಳಿ ಗೌರಮ್ಮ
ಶಿವಲಿಂಗಾವ ತಕ್ಕೊಂಡು
ತಿಪ್ಪೇಗೆ ಎಸೆಯೋದ್ಕೆ
ಹೋಗುವ ಹೊತ್ತಲ್ಲಿ
ಗುಂಡಯ್ಯ ಹೂಂಕರ್ಸಿ
ಗೌರಮ್ಮನ ತಡೆದರು
"ನೀವು ತಡುದ್ರು ನಾ ಬಿಡಕಿಲ್ಲ
ಈ ಪೀಡೆಯ ಕೊಂಡೋಗಿ
ತಿಪ್ಪೇಗೆ ಎಸೀತೀನಿ
ಅಲ್ಲೀನ್ಗಂಟ ನನಗೆ
ಸಮಾಧಾನ ಅನ್ನೋದಿಲ್ಲ!"
ಅಂತ್ಹೇಳಿ ಗೌರಮ್ಮ
ಹಟಸಾದ್ನೆ ಮಾಡುತಿದ್ರೆ
ಕ್ಯಾಪರ್ಯಾಪದಲಿ ಗುಂಡಯ್ಯ
ಗೌರ್ಮನ ಹೊಡಿಯದಕೆ
ಕೈಯಾನೆ ಎತ್ತಿದರು |

ಆಗ ಗೌರಮ್ಮ ತಾಯಿ
"ನನ್ನ ಹೊಡಿಯಾಕೆ ಬತ್ತೀರ
ಮುಟ್ಸಿನೋಡಿ ಮತ್ತೆ
ನೀವು - ನನ್ನ ಮುಟ್ದಿದ್ದೇ ಆದ್ರೆ
ನಿಮ್ಮ ಶಿವನ ಮೇಲಾಣೆ
ನಿಮ್ಮ ದೇವ್ರ ಮೇಲಾಣೆ!"
ಅಂತ್ಹೇಳಿ ಗೌರಮ್ಮ
ಶಿವನ ಮೇಲಾಣೆಯ
ಮಾಡಿದ ಕಾರಣದಿಂದ
ಗುಂಡಯ್ನ ಕೈಯಿಯು
ತಾನೆ ಕೆಳಕಿಳಿಯತು |

"ಕೋಪದಲಿ ನಾನು
ಪಾಪಿ ಆದೆನಲ್ಲ"
ಗುಂಡಯ್ಯ ಶರಣರು
ತಲೆತಲೆ ಕುಟ್ಟಿಕೊಂಡು
ದುಕ್ಕಗಳ ಮಾಡಿದರು
ಸೋಕಗಳ ಮಾಡಿದರು
ಅವತ್ತಿನಿಂದಾನು
ಗಂಡ ಹೆಂಡತೀರು
ಒಬ್ಬಾರನೊಬ್ಬರು
ಮುಟ್ಟುವಂತಿರಲಿಲ್ಲ
ಹಂಗಾಗಿ ಇಬ್ಬರು
ದೂರ ದೂರ ಇದ್ದುಬುಟ್ರು |

ಗಂಡನು ಉತ್ತರ
ಹೆಂಡತಿ ದಕ್ಷಿಣ
ಮಾತುಕತೆ ಉಂಟು
ಮುಟ್ಟೋದ್ ಗಿಟ್ಟೋದು ಇಲ್ಲ
"ಇದ್ದೊಬ್ಬ ಮಗುನ್ನ
ಕಳುಕೊಂಡೊ ನಾವು
ನಮ್ಗೆ - ಮಕ್ಕಳಾಗುವಂತ
ಭಾಗ್ಯಾವು ಇಲ್ಲುವಾಯ್ತು
ನಾವು - ಯಾರಿಗಾಗಿ ಬಾಳಬೇಕು
ಯಾರಿಗಾಗಿ ಬದುಕಬೇಕು
ಇಂತೆ ಹೊಡುಬಾಳುಗಿಂತ
ಸಾಯೋದೆ ಮೇಲು!"
ಅಂತ್ಹೇಳಿ ಗಂಡ ಹೆಂಡ್ತಿ
ಚಿಂತೇಯ ಮಾಡುವಾಗ
ಕಲ್ಯಾಣದ ಅಣ್ಣನವ್ರು
ಸ್ವಾಮಿ ಬಸವಣ್ಣನೋರು
ಗುಂಡಯ್ನ ಮನೆಗೆ
ದೇವ್ರು - ಬಂದಂಗೆ ಬಂದ್ರು |

ಬಂದ ಅಣ್ಣನವರ
ಕಂಡು ಗುಂಡಯ್ಯನೋರು
ಶರಣು ಮಾಡುತ ಅವ್ರು
ಪಾದಾಕಗ್ಗಣಿ ತಂದು
ಪಾದುಗಳ ತೊಳುದು
ಪಾರಿಜಾತ್ಕದ ಪುಷ್ಪ
ಪಾದದ ಮ್ಯಾಲೆ ಮಡ್ಗಿ
ಕಡ್ಡಿ ಕರ್ಪೂರ ಬೆಳುಗಿ
ಗಂಡ ಹೆಂಡತೀರು
ಸ್ವಾಮಿ ಪಾದಗಳ
ಕಣ್ಣಿಗೊತ್ತಿಕೊಂಡು
"ಬಂದಂತ ಕಾರ್ಯವ
ಹೇಳಬೇಕು ದಮ್ಮಯ್ಯ
ಆಗ್ನೆ ಮಾಡಿ ನಮ್ಮ ದೇವ್ರೆ" |

"ಗುಂಡಯ್ಯ ಶರಣರೆ
ಲಕ್ಕುಸ್ಪ ಮ್ಯಾಲೆ
ತೊಂಬತ್ತಾರು ಸಾವ್ರ
ಶರಣರು ನಮ್ಮ
ಕಲ್ಯಾಣ್ಕೆ ಬರುತವ್ರೆ
ಅವರಿಗೆಲ್ಲ ನಾವು
ಊಣಪಡಿಸಬೇಕು
ಅದಕೆ ಬೇಕಾದಂತ
ಮಣ್ಣಿನ ತಣಿಗೆಗಳ
ಚಟ್ಟಿ ಬಟ್ಟಲುಗಳ
ಮಣ್ಣಿನ ಕರಡಿಗೆಗಳ
ಮಾಡಿಕೊಡಬೇಕಪ್ಪ
ವಾರ ಒಪ್ಪತ್ತುಗಳ್ಗೆ
ದೂರ ಆಗದಿಲ್ಲ.
ಬ್ಯಾಗುದಲ್ಲಿ ನೀವು
ಇಂತೆ - ಸಾಹ್ಯವ ಮಾಡಬೇಕು"
ಅಂತ್ಹೇಳಿ ಬಸುವೇಶ
ಆಡ್ರು ಮಾಡಿಬುಟ್ಟು
ಉಲುಪಿಯ ಕೊಟ್ಟ್ರು
ಬೇಕು ಅಂತ ಕೇಳನಿಲ್ಲ
ಬ್ಯಾಡ ಅಂತ ಹೇಳುನಿಲ್ಲ
ಏನೇ ಹೇಳಿದರೂ
ಅಣ್ಣಾವ್ರು ಒಪ್ಪಾದಿಲ್ಲ
ಅಂತ್ಹೇಳಿ ಗುಂಡಯ್ಯ
ಉಲುಪಿಯ ಹಣವನ್ನು
ಕಣ್ಣೀಗೆ ಒತ್ತುಕೊಂಡು
ದಾಸೋವಾಕಯ್ತುದಂತ
ಮಡ್ಡಿ ಕೈಗೆ ಕೊಟ್ಟಾರು |

ಅಂತಾ ಹೊತ್ತಿಗೆ ಸರಿ
ಚಟ್ಟೀಯ ಮಾಡ್ಸಿಕೊಂಡು
ಹೋಗಿದ್ದ ಘನಶರಣ
ಆತುರಾತುರದಲ್ಲಿ
ಬಂದನು ಜಂಗುಮಯ್ಯ
ಗುಂಡಯ್ನ ಕಂಡು
"ಗುಂಡಯ್ಯ ಗುಂಡಯ್ಯ
ನೀನು ಕೊಟ್ಟ ಈ ಚೆಟ್ಟಿ
ಅಂತಿಂತ ಚೆಟ್ಟಿಯಲ್ಲ
ಇದು ಅಮೃತ್ಪಾತ್ರೆಯಪ್ಪ
ಇದ್ಕೆ - ಶಿವಶಕ್ತಿ ತುಂಬಿವ್ನಿ
ಇದ್ಕೆ - ವರ ಕೊಡೊ ಶಕ್ತಿ ಅದೆ
ನಾನು - ಕಾಸೀಗೆ ಹೋಗುತಿವ್ನಿ
ಕಾಸೀಯ ದಾರೀಲಿ
ಕಳ್ಳ ಸುಳ್ಳರು ಬಂದು

ಇದ - ಕದ್ದುಕೊಂಡು ಹೋಗಬವುದು
ನನ್ನ ಹೊದ್ದು ಬದ್ದು
ಕಿತ್ತುಕೊಂಡು ಹೋಗಬವುದು
ಅದಕಾಗಿ ಗುಂಡಯ್ಯ
ಈ ಅಮೃತ್ ಪಾತ್ರಿಯನ್ನು
ನೀನು ನಂಬಿಕಸ್ತ ಅಂತ
ಊರೋರೆಲ್ಲ ಹೇಳಿದರು
ಹಂಗಾಗಿ ನಿನ್ನ ನಂಬಿ
ಈ ಅಮೃತ್ ಪಾತ್ರೆಯ
ನಿನ್ನ ಕೈಗೆ ಕೊಡುತಿವ್ನಿ
ನಾನು ಕಾಸೀಗೆ ಹೋಗಿದ್ದು
ಬರೋನ್ಗಂಟ ಇದ
ಜ್ಞಾಪಾನ ಮಾಡಬೇಕು
ಜ್ಞಾಪಾನವಾಗಿ ಮಡಗಿದ್ದು
ನಾನು ಹಿಂದಕ್ಕೆ ಬಂದಾಗ
ನನ್ಗೆ - ತಿರ್ಗಿ ಇದ ಕೊಡಬೇಕು
ನನ್ಗೆ ತಪ್ಪಾದೆ ಕೊಡಬೇಕು
ನಂಬಿಕಸ್ತ ನೀನೂಂತ
ನಿನ್ನ ಕೈಗೆ ಕೊಡುತಿವ್ನಿ
ಈ ಮಾತು ನಿನ್ನೆದೆಯಲ್ಲಿ
ಸ್ಥಿರುವಾಗಿ ಇರಲಪ್ಪ
ನಾನು ಈ ತಿಂಗಳ
ಕಡೆಯ ಸ್ವಾಮಾರ್ ದಿನ
ದೇವರ್ ಮ್ಯಾಗ್ಗ ಹೂ ತೆಪ್ಪುದ್ರು
ನಾನ್ ಮಾತ್ರ ತೆಪ್ಪೊದಿಲ್ಲ
ಬಂದೇ ಬರ್ತೀನಪ್ಪ
ಮನುದಲಿ ನೆನುಪಿರ್ಲಿ
ನಾನು ಬಂದಾಗ ಇದ
ನನ್ಗೆ - ಹಿಂದಕ್ಕೆ ಕೊಡಬೇಕು"
ಅಂತ್ಹೇಳಿ ಜಂಗಮರು
ಕಿರುಗಣ್ಣ ಬುಟ್ಟು,
ಅರಗಣ್ಣಲ್ ನೋಡುತ
ಹುಸು ನೆಗವ ನಗುತ
ಗುಂಡಯ್ಗೆ ಒಪ್ಪೀಸಿ
ಕಾಸೀಗೆ ಹೊಂಟೋದ್ರು |

ಗುಂಡಪ್ಪನವರು
ಭಯದಿಂದ ಭಕ್ತಿಯಿಂದ
ಅಮ್ರುತ್ ಪಾತ್ರೆಯನು
ಮನೆ ಒಳೀಕೆ ತಕ್ಕೊಂಡೋಗಿ
ಪಟ್ಟೆ - ವಸ್ತ್ರದಲ್ಲಿ ಸುತ್ತಿ
ಪೆಟ್ಟೀಯ ಒಳುಗ್ಮಡ್ಗಿ
ಬೀಗಗಳ ಹಾಕಿ
ಭದ್ರ ಮಾಡಿ ಮಡ್ಗಿದರು |

ಅಮ್ರುತ್ ಪಾತ್ರೆಯನು
ಜ್ಞಾಪಾನ ಮಾಡುಬುಟ್ಟು
ಬಸವಣ್ಣನವರು
ಆಡ್ರು ಮಾಡಿದ್ದಂತ
ಮಣ್ಣಿನ ಪದಾರ್ಥಗಳ
ದಿನಬೆಳಗು ಮಾಡಿ ಮಾಡಿ
ಶರಣರ ಸ್ಯಾವೆ ಅಂತ
ಗುಂಡಯ್ಯ ಹಿಗ್ಗಿದರು |

ಬಂತು ಬಂದೇ ಬಂತು
ಕಡೇ ಸ್ವಾಮಾರ ಬಂತು
ಕಾಸೀಗೆ ಹೋಗಿದ್ದ
ಆ ಜಂಗಮ ದೇವರು
ಆತುರಾತುರದಲ್ಲಿ
ಗುಂಡಯ್ನ ಮನೆಗೆ ಬಂದು
"ಗುಂಡಪ್ಪ ಗುಂಡಪ್ಪ
ಏನ್ಮಾಡ್ತಾ ಇದ್ದೀಯಪ್ಪ?
ಹೊತ್ತಾಯ್ತು ಮಾರಾಯ
ನಾ ಬ್ಯಾಗಾನೆ ಹೋಗಬೇಕು
ನನ್ನ ಅಮ್ರುತ್ ಪಾತ್ರೆಯ
ಕೊಡುಕೊಡು ಗುಂಡಯ್ಯ
ನನ್ಗೆ ನಿಲ್ಲಾಕೆ ಹೊತ್ತಿಲ್ಲ
ಕೂರಕ್ ಪುರುಸತ್ತಿಲ್ಲ
ಮಾತಾಡಕು ನನ್ಗೆ
ಟೇಮಿಲ್ಲ ಟೇಮಿಲ್ಲ
ಬ್ಯಾಗ ಬ್ಯಾಗ ಗುಂಡಯ್ಯ
ನನ್ನ - ಅಮ್ರುತ್ ಪಾತ್ರೆ ಕೊಡು
ಹೊತ್ತಾಯ್ತು ಹೊತ್ತಾಯ್ತು
ತಡ ಮಾತ್ರ ಮಾಡಬೇಡ!"

ಜಂಗಮರ ದನಿಕೇಳಿ
ಗುಂಡಯ್ಯ ಶರಣರು

ಮನೆ ಒಳಗಿದ್ದೋರು
ಓಡೋಡಿ ಬಂದಾರು
ಜಂಗಮರ ಕಂಡು
ಕರವೆತ್ತಿ ಕೈಮುಗುದು
ಶರಣು ಶರಣಾರ್ತಿಯೆಂದು
ಜಂಗಮರ ಕಾಲೀಗೆ
ಆಗಣಿಯ ತಂದು
ಕೊಡದಕೆ ಹೋದರು |

"ಗುಂಡಯ್ಯ ಕೇಳು ಕೇಳು
ಕೈಕಾಲು ತೊಳುಕೊಂಡು
ಪಲ್ಲಂಗದಲ್ಲಿ ಕೂತುಕೊಂಡು
ಊಟ ಉಪಚಾರದಿಂದ
ಮಾತುಕತೆ ಆಡಿಕೊಂಡು
ಕಾಲ ಕಳೆಯೋದಕ್ಕೆ
ನನ್ಗೆ - ಪುರುಸತ್ತಿಲ್ಲ
ಮೊದಲು ಮೊದ್ಲು ಕೊಡು ಕೊಡು
ನನ್ನ ಅಮ್ರುತ್ ಪಾತ್ರೆಯ
ಹೊತ್ತಾಗುತ್ಕೆತಪ್ಪ
ತತ್ತ ಬ್ಯಾಗು ಬ್ಯಾಗುದಲ್ಲಿ" |

"ಸ್ವಾಮಿ - ನಿಮ್ಮಿಚ್ಛೆಯಂತಾಗಲಿ
ಸೊಲುಪ ತಾಳಿ ಸೊಲುಪ ತಾಳಿ
ನಿಮ್ಮ ಅಮ್ರುತ ಪಾತ್ರೆಯ
ಜ್ಯಾಪನವಾಗಿ ಮಡುಗಿವ್ನಿ
ದೇವುರ್ಕನೆಯೊಳಗಿರೊ
ಪೆಟಾರಿಯೊಳಗೆ ಮಡಗಿ
ಬೀಗ ಹಾಕಿದ್ದೀನಿ
ಜ್ಯಾಪಾನ ಮಾಡಿದ್ದೀನಿ" |

"ನೀನು - ಜ್ಯಾಪಾನ ಮಾಡಿದ್ದೀಯೊ
ಹಂಗೇಯ ಬುಟ್ಟಿದ್ದೀಯೊ
ಅದೆಲ್ಲ ನನಗ್ಯಾಕೆ
ನನ್ಗೆ - ಬೇಕಾಗಿರೋದು ಅಂದ್ರೆ
ನನ್ನ ಅಮ್ರುತ್ ಪಾತ್ರೆ
ಬ್ಯಾಗನೆ ಅದ ತಂದುಕೊಟ್ಟು
ಬ್ಯಾಗುದಲ್ಲಿ ಕಳುಸಪ್ಪ
ಸೀಗ್ರುವಾಗಿ ಕಳುಸಪ್ಪ!" |

"ಸ್ವಾಮಿ ಒಂದೇ ಒಂದು ಕ್ಷಣ
ಒಂದೇ ಕ್ಷಣುಮಾತ್ರದಲ್ಲಿ
ನಿಮ್ಮ ಪಾತ್ರೆಯ ತರುತೀನಿ
ತಾಡಿ ನನ್ನ ಸ್ವಾಮಿ!"
ಹಾಗಂತ ಹೇಳುತ
ಶರಣ ಗುಂಡಯ್ಯನವರು
ಮನೆ ಒಳೀಕೆ ಹೋಗಿ
ದೇವುರ್ಕ್ಯಾಣಿ ಬಾಕ್ಲು ತಗ್ದು
ಅದರೊಳ್ಗೆ ಮಡಗಿದ್ದ
ಕಬ್ಬಿಣದ್ ಪೆಟಾರಿಯ
ಬೀಗವ ತೆಗೆದರು
ತಗ್ದು ನೋಡಿದರೆ
ಪೆಟಾರಿವೊಳುಗಡೆ
ಅಮ್ರುತ್ ಪಾತ್ರೆಯೇ ಇಲ್ಲ!"

ಗುಂಡಯ್ಯನವರಿಗೆ
ಎದೆ ಒಡೆದಂತಾಗಿ
ಮೈಯೆಲ್ಲ ನಡುಗಿತು
ನಿಲ್ಲಾಕು ಆಗದಷ್ಟು
ಸಗುತಿ ಕುಂದಿತು ಆಗ
ಕಣ್ಣೀಗೆ ಆರುಸುನ್ದ ಪುಡಿ
ಚೆಲ್ಲಿದಂತಾಗಿ
ದಿಕ್ಕೆಟ್ಟು ಹೋದರು |

ಒಂದೇ ಉಸುರಲ್ಲಿ
ಹೆಂಡತಿ ಗೌರಮ್ಮುನ
ಕೂಗಿ ಕರದರಾಗ
ಶರಣ ಗುಂಡಯ್ಯ
"ಒಂದೇ ಸಮ್ಕೆ ಹಿಂಗೆ
ಯಾಕಾರು ಕೂಗುತವ್ರೆ?"
ಅಂತ ಬೆದರೀದ ಜೀವವ
ಮುಂಗೈಲಿ ಹಿಡುಕೊಂಡು
ಗೌರಮ್ಮ ತಾಯಿಯು
ಓಡೋಡಿ ಬಂದರು |

"ಎಲ್ಲೆ ? ಎಲ್ಲೆ ? ಎಲ್ಲೆ?
ಎಲ್ಲೋಯಿತೆ? ಹೇಳಿ !
ಆ ಜಂಗಮ್ರು ಕೊಟ್ಟಿದ್ದ
ಅಮ್ರುತ್ ಪಾತ್ರೆ ಎಲ್ಲೆ ?

ಈ ಕಬ್ಬುದ್ ಪೆಟಾರೀಲಿ
ಮಡಗಿ ಬೀಗ ಹಾಕಿದ್ದೆ
ಈಗ್ ನೋಡುದ್ರೆ ಇಲ್ಲಿ
ಇಲ್ಲಾವೆ ಇಲ್ಲ ಕಾಣ !
ನೀನೇನಾದ್ರೂ ಕಂಡ್ಯಾ?
ಕಂಡಿದ್ರೆ ಬ್ಯೇಗನೆ ಹೇಳು!" |

ಗುಂಡಯ್ಯ ಶರಣರ
ಮಾತ ಕೇಳಿ ಗೌರಮ್ಮ
ಜಲುಜಲನೆ ಬೆಪ್ತುತೋದ್ರು
ಮಾತೆ ಹೊರುಹಾಲೊಲ್ಲು
ಚಿಂತೇಯ ಮಾಡುತ
ಗೌರಮ್ಮ ನಿಂತವುರೆ.
ಮಾತಾಡದ ಗೌರಮ್ಮನ
ಕಂಡು ಗುಂಡಯ್ಯನವರು
"ಪೇಳೆ ಎಲ್ಲೋಯಿತು?
ಮಾತಾಡಕೇನಾಗದೆ?
ಗರ - ಬೊಡುದಂಗ್ ನಿಂತಿದ್ದಿಯಲ್ಲ
ಎಲ್ಲೆ ಅಮ್ರುತ್ ಪಾತ್ರೆ?"
ಎಂದು ಗುಡುಗಿದರು ಗುಂಡಯ್ಯ
ನಿಮುಕಿ ಕೂಗಾಡಿದರು |

ಆಗ ಗೌರಮ್ಮತಾಯಿ
ಸಗುತಿಯ ತಂದುಕೊಂಡು
ಧೈರ್ಯವ ತಂದುಕೊಂಡು
ಬಾಯಿ ಬಿಟ್ಟರು ತಾಯಿ
"ಸ್ವಾಮಿ ಕೇಳಿ ಕೇಳಿ
ಆ ಪೆಟಾರಿಯಲಿ ಇದ್ದಂತ
ಅಮ್ರುತ್ ಪಾತ್ರೆಯನು
ನಾನು ಕಂಡವಳಲ್ಲ
ಆ ಕಬ್ಬುದ್ದಾದ್ ಪೆಟಾರಿಯ
ಬೀಗದೆಸ್ರು ನಮ್ಮತ್ರದೆ
ಅಂತೇದ್ರಲ್ಲಿ ನಾನೆಂಗೆ
ಬೀಗಾವ ತೆಗ[illegible]
ಪೆಟಾರಿಲಿ[illegible]ದಾರ್ಥವ
ನಾನೆಂಗೆ ಕಾಣಲಿ
ಅಪ್ರ ಗುಣ ರುಣ ಎಲ್ಲ
ನಿಮ್ಗೆ ತಿಳಿದಿರಬೇಕು
ನಾನೊಂದನೂ ಕಂಡೋಳಲ್ಲ
ನಾನೊಂದನೂ ತಿಳ್ದೋಳಲ್ಲ
ನನ್ನ ಮಾತು ಸುಳ್ಳಂತಾದ್ರೆ
ನನ್ನ-ನಾಲಿಗ್ಗೆ ಬರೆ ಹಾಕಿ" |

ಹೆಂಡತಿ ಮಾತ ಕೇಳಿ
ಗುಂಡಯ್ಯ ಕೊರಗಿದರು
ತಲೆಸುತ್ತಿದಂತಾಗಿ
ಗ್ಯಾಡೆಗೆ ಒರಗಿಕೊಂಡು
ದುಕ್ಕಗಳ ಮಾಡುತವ್ರೆ
ಸೋಕಗಳ ಮಾಡುತವ್ರೆ
"ಅಮ್ರುತ್ ಪಾತ್ರೆ ಇಲ್ಲಾಂತ
ಆ ಜಂಗಮ ದೇವುರ್ಗೆ
ನಾ ಹೆಂಗೆ ಹೇಳಲಿ ಶಿವನೆ ?
ನಾ ಹೆಂಗೆ ಬಾಳಲಿ ಶಿವನೆ ? "
ಎಂದು ಗುಂಡಯ್ಯನವ್ರು
ಒಂದೆ ಸಮ್ನೆ ಕೊರಗುತವ್ರೆ |

"ಮನೆ ಒಳೀಕೋದೋನು
ಇಷ್ಟೋತಾದ್ರೂ ಸ್ನೆತ
ಈಚೆಗೆ ಬರದಲೆ
ಏನ್ ಮಾಡ್ತಿದ್ದಾನೊ ಕಾಣೆ
ನನ್ನ ಅಮ್ರುತ್ ಪಾತ್ರೆಯ
ಲಪ್ಪಾಯ್ಸೋ ಪಳಾನೊ ?
ಇರ್‌ಬೋದ್ ಇರ್‌ಬೋದು!"
ಅನ್ನುತ ಗುಂಡಯ್ಯನ
ಕೂಗಿ ಕರೆಯುತವ್ರೆ
ಕ್ಯಾಪ ಮಾಡಿ ಕರೆಯುತವ್ರೆ |

ಗುಂಡಯ್ಯ ಶರಣರು
ತಲೆಮೇಲೆ ಗುದ್ದವೆ
ಕುಸುದು ಬಿದಂತಾಗಿ
ಮಾತುಗಳೆ ಹೊರಡದೆ
ಗಳಗಳಗಳಾಂತ
ಕಣ್ಣೀರ ಸುರುಸುತವ್ರೆ
ಮನೆಯ ಮೂಲೆನೆಲ್ಲ
ಸಂದು ಗೊಂದನೆಲ್ಲ
ಅಟ್ಟ ಬೆಟ್ಟನೆಲ್ಲ
ಒಂದು ಕಡೆಯಿಂದ

ಹುಟುಕುತಾರೆ ತಡಕುತಾರೆ
ಅಮ್ರುತ್ ಪಾತ್ರೆ ಇಲ್ಲ! |

ಬೀದೀಲಿ ಜಂಗಮಯ್ಯ
ಮನೆ ಮುಂದೆ ನಿಂತುಕೊಂಡು
ಊರುಗೆಲ್ಲ ಕೇಳುವಂತೆ
ಕಪಿಲೆ ಮ್ಯಾಲೆ ಬೀಳೊ
ಭಾರಿ ಬರಗನಂತೆ
ಜಂಗಮರು ಕಾಣುತಿದ್ರು
ಜಂಗಮರ ದನಿಯ ಕೇಳಿ
ಊರ ಜನ ಎಲ್ಲ
ಮಾಡುವ ಕೆಲ್ಸನೆಲ್ಲ
ಅಲ್ಲಲ್ಲೆ ಕೈನಿಲ್ಸಿ
ಓಡೋಡಿ ಬಂದರಾಗ |

ಜಂಗಮ ಸ್ವಾಮಿಯವರು
"ನೋಡ್ರಪ್ಪ ನೋಡಿ
ಕೇಳ್ರಪ್ಪ ಕೇಳಿ
ಇಂಥಾ ಮೋಸಗಾರರ
ಇಂಥ ವಂಚುನೆಗಾರರ
ಇಂಥ ಮನೆಹಾಳರ
ಇಂಥ ಒಳಗಳ್ಳರ
ನಾನು ಕಂಡಿರನಿಲ್ಲ
ನಾನು ಮುದುಕಪ್ಪನಾಗಿ
ಹಣ್ ಹಣ್ ಮುದ್ಕನಾಗಿ
ಎಷ್ಟೊಂದು ಜನರನ್ನು
ನಾನು ನೋಡಿಲ್ಲ
ಆದ್ರೆ ಇಂತೆ ಕಳ್ಳ
ನಾನು ಕಂಡಿರನಿಲ್ಲ
ಕೇಳ್ರಪ್ಪ ಕೇಳಿ
ನಾನು - ಇವ್ರ ಹತ್ರ ಕೊಟ್ಟ
ಅಮ್ರುತ್ ಪಾತ್ರೆ ಅಂದ್ರೆ
ಅಂತಿಂತ ಪಾತ್ರೆಯಲ್ಲ
ಅದು - ಅಕ್ಷೀ ಪಾತ್ರೆ ಕಾಣೆರಪ್ಪ
ಅದು - ಕೇಳಿದ್ದನೆಲ್ಲ
ಕೊಡುತಿತ್ತು ಕಾಣೆರಪ್ಪ.
ಅಂತೆ ಅಕ್ಷಿಪಾತ್ರೆಯ
ಈ ಕದೀಮರು ಕದ್ದುಕೊಂಡು
ಕೊಡೊ ಮನಸಿಲ್ಲವಾಗಿ
ಈಚೆಗೆ ಬರಲೊಬ್ರು.
ನೋಡುದ್ರಪ್ಪ ? ನೋಡುದ್ರಪ್ಪ ?
ಊರುನ ಮಾನ್ಯವರೆ
ನೀವುಗಳೆ ಹೇಳಿರಪ್ಪ
ನನ್ಗ - ಅಮ್ರುತ್ಪಾತ್ರೆಯ ನನಗೆ
ಕೊಡದೆ ಈ ಕಳ್ಳರು
ಬರಿಗ್ಯೆಲಿ ಕಳುಸುತಾರೊ ?
ನನಗೊಂದೂ ತಿಳಿಯುತ್ತಿಲ್ಲ |

ಒಳಗಿರೊ ಗಂಡ ಹೆಂಡ್ರು
ಮಾತಾಡಕಾಗದೆ
ಕಣ್ಣೀರ ಸುರಿಸುತ
ದೇವುರ್ ಕ್ವಾಣೇಲಿ ಕುಂತವ್ರೆ
"ಎಂತೆ ಹಣೆ ಬರಾ
ಹಿಂಗಾಯ್ತಲ್ಲ ಶಿವುನೆ
ಜಂಗಮ್ಮದೇವುರ್ಗೆ
ನಾ-ಹ್ಯಾಂಗೆ ಮೊಕ ತೋರಿಸಲಿ
ಅವ್ರ - ಮುಂದುಗಡೆಗೆ ಹೋಗಿ
ನಾ ಹ್ಯಾಂಗೆ ನಿಂತುಕೊಳ್ಳಲಿ
ಅಯ್ಯೊ - ಶಿವಶಿವ ಶಿವಶಿವ
ಗುರುವೆ ಗುರುಪಾದವೆ
ಇದೆಂತೆದಾಯಿತು ?
ಇದೇನಾಗಿ ಹೋಯಿತು ?
ಇನ್ನು ನನ್ಗೆ ಗತಿಯೇನು
ಇನ್ನು ನನ್ಗೆ ಮತಿಯೇನು
ಇಂತೆ ಕಷ್ಟಾಕೆ ನನ್ನ
ಸಿಕ್ಕಿಸಿದೆಯಲ್ಲೊ ಸ್ವಾಮಿ"
ಅಂತ್ಹೇಳಿ ಗುಂಡಯ್ಯ
ಕಣ್ಣೀರ ಕೆಡುಗುತವ್ರೆ |

ಪರಮಾತ್ಮ ಜಂಗಮಯ್ಯ
"ಗುಂಡಯ್ಯ ಶರಣಾರೆ
ಬ್ಯಾಗ ಬ್ಯಾಗ ಕೊಡಿರಪ್ಪ
ಬ್ಯಾಗಾನೆ ತನ್ನಿರಪ್ಪ
ಹೊತ್ತು ಗೊತ್ತೇನ್ನೋದು
ನಿಮಗೆ ತಿಳಿಯಾದಪ್ಪ
ನನ್ಗೆ - ಹೊತ್ತಾಯ್ತು ಹೊತ್ತಾಯ್ತು
ನನ್ಗೆ - ಪುರುಸತ್ತು ಇಲ್ಲ
ನನ್ ಅಮ್ರುತ್ ಪಾತ್ರೆಯ

ಕೊಡ್ರಪ್ಪ ಬ್ಯಾಗನೆ"
ಹಂಗಂತ ಕೂಗುತಿವ್ರೆ
ಗುಂಡಯ್ಯ ಶರಣರಿಗೆ
ಕುತ್ಗೆ ಕಟ್ಟಿ ಬಂದ್ಯತೆ
ಜೀವವ ಹಿಡಿ ಮಾಡ್ಕೊಂಡು
ಬ್ಯಾರೆ ದಾರಿ ಇಲ್ಲದೆ
ಬೀದಿ ಬಾಕಲಿಗೆ ಬಂದು
ಜಂಗಮರ ಕಾಲೀಗೆ
ಧೊಪ್ಪನೆ ಬಿದ್ದಾರು |

"ಏನಪ್ಪ ಗುಂಡಯ್ಯ
ಬರಿ ಕೈಲಿ ಬಂದ್ಯಲ್ಲ
ಎಲ್ಲಪ್ಪ ನನ್ ಅಮ್ರುತ್ ಪಾತ್ರೆ ?
ಎಲ್ಲಯ್ಯ ನನ್ ಅಮ್ರುತ ಪಾತ್ರೆ ?
ನನ್ ಅಮ್ರುತ್ ಪಾತ್ರೆ
ಅಂತಿಂತೆ ಪಾತ್ರೆಯಲ್ಲ
ಅದು ಲಕ್ಷೀಪಾತ್ರೆ ಕಾಣಪ್ಪ
ಅಂತೆ ಪಾತ್ರೆ ಬ್ಯಾರೊಂದಿಲ್ಲ
ಅದ ನೋಡುವ ತನಕ
ನನ್ಗೆ ನೆಮ್ಮದಿ ಇಲ್ಲ ಕಾಣಪ್ಪ
ತತ್ತಪ್ಪ ನನ್ ಪಾತ್ರೆಯ
ಕೊಡಪ್ಪ ನನ್ ಪಾತ್ರೆಯ"
ಅಂತ್ಹೇಳಿ ಜಂಗುಮರು
ಕೂಗಾಡುತಿದ್ದರೆ
ಶರಣ ಗುಂಡಯ್ಯನವರು
ಬಾಯಿ ಕಟ್ಕೋದರಂಗೆ
ಮಾತುಕತೆಯೆ ಇಲ್ಲೆ
ಹ್ಯಾಪುಮ್ಮಾರೆ ಹಾಕೊಂಡು
ಕಣ್ಣೀರ ಹಾಕುತ
ತಪ್ಪಾಗೆ ನಿಂತವುರೆ |

"ಯಾಕಪ್ಪ ಗುಂಡಯ್ಯ
ಮಾತುಕತೆ ಇಲ್ಲದೆ
ಮೂಗು ಬಸವ ಆಗಿದ್ದಿ
ಸುಮ್ಮಕೆ ನಿಂತಿದ್ದಿ
ಎಲ್ಲಯ್ಯ ನನ್ ಚೆಟ್ಟಿ
ಎಲ್‌ನನ್ ಅಮ್ರುತ್ ಪಾತ್ರೆ
ಕೊಪು ಕೊಡು ಮಾರಾಯ

ಕೊಟ್ಟು ಬ್ಯಾಗ ಕಳುಸಪ್ಪ
ನನಗೆ ಹೊತ್ತಾಗುತ್ಯತೆ
ಬ್ಯಾಗನೆ ಕಳ್ಸೀ ಕೊಡು"
ಅಂತ್ಹೇಳಿ ಜಂಗಮರು
ಹೇಳುತಿದ್ದರೂ ಮುಕ್ಷ
ಗುಂಡಪ್ಪ ಶರಣರು
ಆಕಾಸ ಅಂತೆ ನೋಡಿ
ಮೊಕುವ ಮುಚ್ಚಿಕೊಂಡು
ಗುಳುಗುಳನೆ ಅಳುತವ್ರೆ |

ಜಂಗುಮ ಮಾತ್ಮರು
ಗುಂಡಯ್ಯನ ನೋಡಿದರು
"ಏನಪ್ಪ ಗುಂಡಯ್ಯ
ಮಾತಿಲ್ಲ ಕತೆಯಿಲ್ಲ
ನೀನು - ಅಳೋದ ನೋಡಿದರೆ
ನನುಗ್ಯಾಕೆ ಗುಮಾನಿ
ನನ್ ಅಮ್ರುತ್ ಪಾತ್ರೆಯ
ಲಪ್ಪಾಯುಸ್ಕೋಳಕೆ
ನಾಟ್ಕ ಕಟ್ತಿದ್ದೀಯ ?
ನನುಗ್ - ಟೋಪಿ ಹಾಕಕಂತ
ಯೋಚ್ನೆ ಮಾಡ್ತಿದ್ದೀಯ ?
ಮರುವಾದಿಯಿಂದ ಮೊದ್ಲು
ನನ್ ಅಮ್ರುತ್ ಪಾತ್ರೆ ಮಡ್ಗಿ
ಆಮ್ಯಾಲ್ ಮಾತಾಡು
ಇಲ್ಲ ಗಿಲ್ಲ ಲಂದ್ಯೊ
ನಿನ್ನ - ಇಲ್ಲದಂಗೆ ಮಾಡ್ಬುಡ್ತೀನಿ
ಗ್ಯಾನುವಿರ್ಲಿ ಮೈಮ್ಯೇಲೆ
ಎಚ್ಚುರವಾಗಿ ನಡ್ಕೊ
ನನ್ ಅಮ್ರುತ್ ಪಾತ್ರೆಯ
ತಂದುಕೊಟ್ರೇ ಸರಿ
ಇಲ್ದಿದ್ರೆ ಈವತ್ತೆ
ನಿನ್ಹುಟ್ಟುದ್ ದಿನ ಕಾಣುಸ್ತೀನಿ
ಮೊಕ - ಮುಚ್ಕೊಂಡ್ನಿಂತಿದ್ದಿಯಲ್ಲ
ತಗಿಯಯ್ಯ ನಿನ್ ಕೈಯ
ಮಾತಾಡಕ ನಿನ್ ನಾಲುಗ್ಗೆ
ಸೇದೋರೋಗ್ಯ ಹೇಳು ?
ಮಳ್ಳಿಯಂಗಿ ನಿಂತವ್ನಲ್ಲ
ಈ ಕಳ್ಳ ಮುರುವ ಶಿವಶಿವಾ !

ಹೋಯ್ತಲ್ರಪ್ಪ ಹೋಯ್ತಲ್ರಪ
ನನ್ - ಚಂದುದ್ ಅಮ್ರುತ್ ಪಾತ್ರೆ
ಕೆಟ್ನಲ್ಲಪ್ಪ ಕೆಟ್ನಲ್ಲಪ್ಪ
ನನ್ ಅಮ್ರುತ್ ಪಾತ್ರೆ ಹೋಯ್ತಲ್ಲಪ್ಪ
ಬನ್ರಪ್ಪ ಬನ್ರಪ್ಪ
ಇವುನೆಂತೆ ಕಳ್ಳಾಂತ
ಊರ ಜನ ನೋಡ್ರಪ್ಪ !"
ಅಂತ್ಹೇಳಿ ಜಂಗುಮಯ್ಯ
ಊರು ಜನ್ರುನೆಲ್ಲ
ಕೂಗಿ ಕೂಗಿ ಕರುದವ್ರೆ |

"ಬನ್ರಪ್ಪ ಬನ್ರಪ್ಪ
ನೀವೇಯ ಹೇಳ್ರಪ್ಪ
ಇವ - ಸತ್ಯವಂತ್ನ ಹೇಳಿ ?
ನನ್ ಅಮ್ರುತ್ ಪಾತ್ರೆಯ
ಮಡಿಗಿರಕೆ ಹೇಳಿ
ಇವುನ ಕೈಗೆ ಕೊಟ್ಟು
ನಾನು ಕಾಸೀಗೆ ಹೋಗಿದ್ದೆ
ಕಾಸಿಯಿಂದ ಬಂದು ನಾನು
ನನ್ನ ಅಮ್ರುತ್ ಪಾತ್ರೆಯ
ಕೇಳುದ್ರೆ ಈವಯ್ಯ
ಪಾತ್ರೇನೂ ಕೊಡದಲೆ
ಮಾತನು ಆಡದಲೆ
ಮೂಗುದೆಯ್ಯದಂಗೆ
ನಿಂತವ್ನೆ ನೋಡ್ರಪ್ಪ
ಹಿಂಗೆ - ತಲೆಹೊಡ್ದು ಬದುಕೋರ
ನಾನೀವರ್ನೂ ಕಂಡಿರ್ನಿಲ್ಲ
ನನ್ ಪಾತ್ರೆಯ ಕದ್ದುಕೊಂಡು
ಮುಚ್ಚಿ ಮಡಗಿಕೊಂಡವ್ರೆ
ಇವ್ರು - ಇಂತೆ ಮನೆಹಾಳ್ರು
ಅನ್ನೋದು ಗೊತ್ತಿದ್ರೆ
ನಾನು - ಖಂಡುತ್ಯಾಗು ಕೊಡ್ತಿರ್ನಿಲ್ಲ
ಒಳ್ಳೇವ್ನು ಒಳ್ಳೇವ್ನು
ಅಂತೆ ನೀವು ಹೇಳ್ತೀರಲ್ಲ
ಈ ಮಳ್ಳಿ ಈ ಕಳ್ಳ
ಒಳ್ಳೇವ್ನ? ನೀವೇ ಹೇಳಿ !
ಎಂತೆ ಕೆಲ್ಸ ಆಯ್ತು ನೋಡಿ
ಎಂತೆ ಅನ್ಯಾಯ ಆಯ್ತು
ಒಳ್ಳೆ ಮಾತಾಡಿಕೊಂಡು
ಎಂತೆ ಕೆಲ್ಸ ಮಾಡಿಬುಟ್ರು
ಇವ್ರ ಮಾತುಕತೆಗೆ ಶಿವನೆ
ನಾನೂ ಮರುಳಾದೆನಲ್ಲ
ಹೆಂಗಪ್ಪ ತಡುಕೊಳ್ಳಿ
ಆ ಅಮ್ರುತ್ ಪಾತ್ರೆ ಅಂದ್ರೆ
ನನ್ನ - ಜೀವುಕ್ಕಿಂತ ಹೆಚ್ಚಿನದು
ನಾನು ಬದುಕೋದಿಲ್ಲ
ನಾನು ಉಳಿಯೋದಿಲ್ಲ
ನನ್ಗೇ ಕೈಕೊಟ್ಟ ಇವುರ್ನ
ನೀವೆಂಗೆ ನಂಬುತೀರಿ ?
ನ್ಯಾಯ ಕೊಡಿ ನನ್ಗೆ
ನನ್ ಪಾತ್ರೆ ಕೊಡ್ಸಿ ನನುಗೆ
ಇಲ್ದಿದ್ರೆ ನಾನಿಲ್ಲೆ
ಎದೆಬಕ್ಕೊಂಡ ಸತ್ತೋಯ್ತೀನಿ
ಈ ಮೋಸ್ಗಾರ್ರು ದೆಸಿಂದ
ನಾನು ಮಾತ್ರ ಬದುಕೋಂಗಿಲ್ಲ!"
ಅಂತ್ಹೇಳಿ ಜಂಗುಮಯ್ಯ
ಲಬಾಲಬನೆ ಸ್ವಾಮಿ
ಬಾಯಿಗಳ ಕುಟ್ಕೋತಾರೆ
ಬೀದೀಗ್ ಬಿದ್ದು ಹೊರಳಾಡಿ
ಹಿಡಿ ಮಣ್ಣ ತಕ್ಕೊಂಡು
ಗುಂಡಯ್ಯ ಬಾಕುಲುಗೆ
ಸಾಪುಳಿಸಿ ಹಾಕುತಾರೆ
ತಲೆತಲೆ ಚಚ್ಕೋತಾರೆ
ಏನೆಲ್ಲ ನುಡಿಯುತ್ತಿದ್ರು
ಗುಂಡಯ್ಯ ಶರಣರು
ತಲೆಯನ್ನು ಎತ್ತುನಿಲ್ಲ
ಜನಗಳ್ಗೆ ಮೊಕ ತೋರನಿಲ್ಲ
ಬಾಯಿಯನ್ನು ಬುಡನಿಲ್ಲ |

ರ್ಯಾಸವೇಸದಲ್ಲಿ
ಜಂಗುಮ ದೇವರು
ರಂಪಗಳ ಮಾಡುತಾರೆ
ಕಲಯಗಳ ಮಾಡುತಾರೆ
ಜಗಳಗಳ ಮಾಡುತಾರೆ
ಕದನಗಳ ಮಾಡುತಾರೆ
ದಾರಿಲೋಗೋರ್ನೆಲ್ಲ ಕರ್ದು

ಬನ್ನಿ ಬನ್ನಿ ಅಂತ ಕರ್ದು
ಅವುರೆಲ್ಲಾರ ಮುಂದುಗಡೆ
ಗುಂಡಯ್ಯ ಶರಣರ
ಮಾನ - ಹರಾಜು ಹಾಕುತಾರೆ
ಆಡಬಾರ್ದ ಮಾತಿನಲ್ಲಿ
ಮಾನಗಳ ಕಳಿಯುತಾರೆ |

ಗುಂಡಪ್ಪ ಶರಣರ
ನೋಡಿ ಊರ ಜನಗಳು
ಹೊಟ್ಟೆ - ಉರುಕೊಳ್ಳುತಾರೆ
ಅಯ್ಯೋ ಪಾಪ ಅನ್ನುತಾರೆ
"ಎಂತಾ ಒಳ್ಳೆ ಮನುಸನಿಗೆ
ಎಂತಾ ಗತಿ ಬಂತಪ್ಪ
ಹಿಂಗಾಗಬಾರದಿತ್ತು
ಹಿಂಗಾಗಿ ಹೋಯಿತಲ್ಲ
ಅಯ್ಯೋ ಶಿವನೆ ಅಯ್ಯೋ ಶಿವನೆ
ನಿನಗೆ ಕಣ್ಣು ಇಲ್ಲವ ?
ಎಂತೆ ಅನ್ನೇಕಾರನಪ್ಪ ನೀನು
ಗುಂಡಯ್ಯ ಶರಣರು
ಮೊಕ ಎತ್ತಿ ತಿರುಗದಂಗೆ
ಮಾಡಿದ್ಮಲ್ಲ ಪರಮಾತ್ಮ
ಇದು ನ್ಯಾಯಾವ ತಂದೆ ನಿನಗೆ ?
ಇದು ಧರ್ಮವ ದೇವ್ರೆ ನಿನಗೆ ?"
ಅಂತ್ಹೇಳುತಿದ್ದರೆ
ಜಂಗುವ ದೇವರು
ಕಣ್ಣ ಮೆಡ್ರುಸ್ಕೊಂಡು
ಜನಗಳ ನೋಡುತ
"ಹೊಟ್ಟೆ ಉರ್ಕೋಳೋರಿದ್ರೆ
ಯಾರು ಮುಂದೆ ಬನ್ರಪ್ಪ
ಬಂದು ನನಗಾಗಿರುವಂತ
ನಷ್ಟಾವ ತುಂಬಿಕೊಟ್ಟು
ಆಮ್ಯಾಲ್ ಮಾತಾಡುರಪ್ಪ"
ಹಂಗಂತ ಹೇಳಿದಾಗ
ಅಲ್ಲಿದ್ದಂತ ಜನಗಳ
ನಾಲೀಗೆ ಕಟ್ಕೋಯ್ತು |

ಅಷ್ಟೊತ್ತಿಗೆ ಅಲ್ಲೆ
ಪಟೇಲ ಶ್ಯಾನುಭೋಗ
ಯಜುಮಾನರೆಲ್ಲ ಬಂದ್ರು
ನ್ಯಾಯಾದ ಕಟ್ಟೆಗೆ
ಇವರಿಬ್ಬಾರ ಕರುಕೊಂಡು
ಬಾರಪ್ಪ ಅಂತ್ಹೇಳಿ
ತಳುವಾರುನ್ಗೆ ಆಡ್ರು ಮಾಡಿ
'ಹದಿನೆಂಟು ಜನಗಳು
ಮಂದಾದ ಕಟ್ಟೆಗೆ
ಮುಂದಾಗಿ ಹೊಂಟರು |

ಗುಂಡಯ್ಯ ಶರಣರ್ನು
ಜಂಗೂಮ ದೇವರನ್ನು
ತಳವಾರನಾಗಲೆ
ಮಂದಾದ ಕಟ್ಟೆಗೆ
ಕರುಕೊಂಡು ಬಂದು ನಿಲ್ಸಿ
ಶರಣು ಶರಣಂದನು |

ಪಟೇಲ ಶ್ಯಾನುಭೋಗ
ಯಜಮಾನರೆಲ್ಲರೂ
ವಿಚಾರಣೆ ಮಾಡಿ
ವಿಷಯನೆಲ್ಲ ತಿಳುಕೊಂಡ್ರು
ಗುಂಡಯ್ಯ ಶರಣರು
ತಗ್ಗಿಸಿದ ತಲೆಯನ್ನು
ಮ್ಯಾಲಕ್ಕೆ ಎತ್ತದೆ
ಮಾತಾಡಕಾಗದೆ
ಬುಳುಬುಳನೆ ಕಣ್ಣೀರ
ಸುರಿಸುತ ನಿಂತವ್ರೆ |

ಗುಂಡಯ್ನ ಬಲ್ಲಂತ
ಊರುಕೇರಿ ಜನುವೆಲ್ಲ
"ಅಯ್ಯೋ ಪಾಪ ಅಯ್ಯೋ ಪಾಪ
ಗುಂಡಯ್ಯ ಶರಣರು
ಕಳುವಂತ ಜನುವಲ್ಲ
ಸುಳ್ಳುಪಳ್ಳು ಒಂದೂ
ಆ ಶರಣರಿಗೆ ತಿಳಿಯಾದು
'ಒಳ್ಳೇವ್ರು ಅಂದ್ರೆ ಯಾರ್ರಪ್ಪ?'
ಅಂತ್ಕಾರಾದ್ರೂ ಕೇಳಿದರೆ
ಒಳ್ಳೇರು ಅಂತ್ಹೇಳಿ
ತೋರಿಸಿ ಕೊಡುವುದಕೆ
ಇರೋರು ಒಬ್ರೆ ಅಂದ್ರೆ
ಈ ಗುಂಡಯ್ಯ ಶರಣರು

ಇವುರಂತ ದೊಡ್ಡ ಮನಸ
ಈ ಜಗತ್ಯದಲ್ಲೆ ಸಿಗಾದಿಲ್ಲ
ಈ ಲೋಕದಲ್ಲೆ ಇನ್ನೊಬ್ಬಿಲ್ಲ" |

ಜನಗಳ ಮಾತ ಕೇಳಿ
ಜಂಗಮ ಸ್ವಾಮಿಯೋರು
"ಜನುಗಳೆ ಕೇಳಿ ಕೇಳಿ
ನೀವು ಹೇಳೊ ಮಾತನೆಲ್ಲ
ನಾನು ಒಪ್ಪುಕೋತೀನಿ
ನನ್ - ಅಮ್ರುತ್ ಪಾತ್ರೆಯ ನನ್ಗೆ
ನೀವು ಕೊಟ್ಟೀರ ಹೇಳಿ?
ಕೊಡೋದಾದ್ರೆ ಆಗ ನಿಮ್ಮ
ಮಾತುಗಳ ಒಪ್ಪುತೀನಿ
ಇದುಕ್ಕೋಪ್ಪೀರ ಹೇಳಿ!" |

ಜಂಗುಮರ ಮಾತೀಗೆ
ಜನಗಳು ತಪ್ಪುಗಾದ್ರು
ಆಗಲೀಗ ಪಟೇಲರು
ಗುಂಡಯ್ಯ ಶರಣರ
ಇಚಾರ್ಣೆ ನಡ್ಸಿದರು
ಗುಂಡಯ್ಯ ಶರಣರು
ಇದ್ದುದ್ದ ಇದ್ದಂತೆ
ಒಚ್ಚೋರಿಯಿಂದ ಅವ್ರು
ತಾಳುನಿಂದ ತುದಿವರಗು
ನಡದುದ್ನೆಲ್ಲ ಹೇಳಿದರು
"ಇಷ್ಟೆ ಸ್ವೋಮಿ ನಡುದುದ್ದು
ಅವ್ರ- ಅಮ್ರುತ ಪಾತ್ರೆಯು
ಮಾಯವಾದ ಬಗೆಯ
ನಾನು ಹೇಳಿದರೂ ಸೈತ
ಜನುಗಳು ನಂಬೊಲ್ರು
ಅವ್ರ ಅಮ್ರುತ ಪಾತ್ರೆಯ
ನಾನು - ಹರ್ಗೀಸ ಕದ್ನೋನಲ್ಲ
ಆ ಪಾತ್ರೆಯ ಕಟ್ಟಿಕೊಂಡು
ನನಗೇನು ಆಗಬೇಕು ?
ಆ ಪಾತ್ರವ ಮಡಿಕೊಂಡು
ನಾನೇನು ಮಾಡಬೇಕು?
ಅವುರ ಪದಾರ್ಥವ ನಾನು
ಕಳವು ಮಾಡಿದೋನಲ್ಲ
ಗೌಡ್ರೆ ನೀವು ದೊಡ್ನೋರು
ಊರ್ಗೇ ನ್ಯಾಯ ಮಾಡೋರು
ಅವ್ರು ನನ್ನ ತೆಪ್ಪೀಗೆ
ಏನು ಶೀಕ್ಷ್ಯ ಕೊಟ್ಟರೂ
ಅದಕೆ ನಾನು ಸಿದ್ದನು
ಅದಕೆ ನಾನು ಬದ್ದನು
ಕೇಳಿ ಸ್ವೋಮಿ ಕೇಳಿ ಸ್ವೋಮಿ
ಸತ್ಯ ಮಾಡಿ ಹೇಳುತೀನಿ
ಆಣೆ ಮಾಡಿ ಹೇಳುತೀನಿ
ನಾನು - ಯಾವುದ್ರ ಮೇಲಾದ್ರೂ
ಆಣೆ ಮಾಡಿ ಹೇಳುತೀನಿ
ಸತ್ಯವನ್ನೆ ಹೇಳುತೀನಿ
ಪ್ರಮಾಣ ಮಾಡಿ ಹೇಳುತೀನಿ"
ಅಂತ್ಹೇಳಿ ಗುಂಡಯ್ಯನೋರು
ಸುಮ್ಮಾಗೆ ನಿಂತುಕೊಂಡ್ರು |

"ನೀನು ಎಲ್ಲಾಕು ಸಿದ್ಧ
ನೀನು ಎಲ್ಲಾಕು ಬದ್ಧ
ನಿಜನಿಜ ಒಳ್ಳೆ ಮಾತು
ಸರಿ ಸರಿ ಒಳ್ಳೆ ಮಾತು
ಬದ್ದು ಬಾಳಾಡೋರು
ಕಂಡೋರ ಗಂಟು ನುಂಗಿ
ನೀರು ಕುಡಿದೋರು
ನಾನು ಕಾಣೆ ಅಂತ ಹೇಳದೆ
ಮಡಿಕೊಂಡಿವ್ನಿ ಅಂತರ ?
ಇವ್ರ - ಕಳ್ಳಾಟ ನೋಡಿದರೆ
ನನ್ನ ಅಮ್ರುತ ಪಾತ್ರೆ
ನನ್ಗೆ - ಸಿಕ್ಕೋಂಗೆ ಕಾಣಕಿಲ್ಲ
ಅಂತೂ ಇಂತೂ ನನಗೆ
ನ್ಯಾಯ ಸಿಕ್ಕೋ ತೆರುನಿಲ್ಲ"
ಅಂತ್ಹೇಳಿ ಜಂಗುಮಯ್ಯ
ಬಾಯಿಬಾಯಿ ಬಡುಕೊಂಡ್ರು |

ಆಗ - ಗುಂಡಯ್ಯ ಶರಣರು
"ಸ್ವಾಮಿ ನನ್ನ ನಂಬಿ ಸ್ವಾಮಿ
ಖಂಡುತ್ವಾಗೂ ನಂಬಿ ಸ್ವಾಮಿ
ನಾನು ಆಣೆ ಮಾಡಿ ಹೇಳ್ತೀನಿ
ನಾನು - ಯಾವುದ್ರ ಮೇಲಾದ್ರೂ ಸೈ
ಪ್ರಮಾಣ ಮಾಡಿ ಹೇಳುತೀನಿ
ಸತ್ಯವಾಗೂ ಹೇಳುತೀನಿ

ದೇವುರಾಣ್ಗು ಹೇಳುತೀನಿ
ಯಾವುದ್ರು ಮ್ಯಾಲೆ ನಾನು
ಆಣೆ ಮಾಡಿ ಹೇಳಲಿ
ಹೇಳಿ ನಿಮ್ ದಮ್ಮಯ್ಯ
ಹೇಳಿ ನಿಮ್ಮ ಪಾದ." |

ಆಗ ಪಟೇಲರು
"ಅಯ್ಯಾ ಜಂಗುಮಯ್ಯ
ಅವ್ರು ನಿನ್ನ ಪಾತ್ರ್ಯವ
ತಕ್ಕೊಂಡಿಲ್ಲ ಅಂತಾವ್ರೆ
ನಮುಗೆಲ್ಲ ಇವುರ್ ಮ್ಯಾಲೆ
ನಂಬುಕೆ ಅದೆ ಕಾಣಪ್ಪ
ನಿನ್ಗೆ ನಂಬ್ಕೆ ಬರೋದ್ಕೆ
ಏನು - ಮಾಡಬೇಕು ಹೇಳಪ್ಪ" |

"ಸ್ವಾಮಿ - ನಿಮ್ಮ ಮಾತ ಒಪ್ಪೀದೆ
ಇವ್ರು - ಸತ್ಯಾವ ಮಾಡೋದಾದ್ರೆ
ಆಣೆ ಮಾಡಿ ಹೇಳೋದಾದ್ರೆ
ಪ್ರಮಾಣ ಮಾಡೋದಾದ್ರೆ
ಅವ್ರ - ಮಗನ ತಲೆಮ್ಯಾಲೆ
ಈ ಇಬ್ಬರು ತಮ್ ಅಂಗ್ಕೆ ಮಡ್ಗಿ
'ನಾವು ಅಮ್ರುತ್ ಪಾತ್ರೆಯ
ಆಸೆಪಟ್ಟು ಕದ್ದೋರಲ್ಲ
ಕದ್ದು ಮುಚ್ಚಿ ಮಡಗ್ದೋರಲ್ಲ
ಇದು ಸತ್ಯ' ಅಂತ್ಹೇಳಿ
ಪ್ರಮಾಣ ಮಾಡಿ ಹೇಳ್ಲಿ ಸ್ವಾಮಿ
ಆಗ - ನಾನು ನಂಬುತೀನಿ" |

ಆ ಮಾತ ಕೇಳೀದ
ಕುಂಬಾರ ಗುಂಡಯ್ಯ
ಗಡಗಡ ನಡುಗಿದರು
"ನಾವು ಗಂಡ ಹೆಡ್ತಿ
ಒಬ್ಬರನು ಒಬ್ಬಾರು
ಮುಟ್ಟುವ ಹಾಂಗಿಲ್ಲ
ಮುಟ್ಟಿದರೂ ಸೈತ
ಇದ್ದೊಬ್ಬ ಮಗನ್ನ
ಕಳ್ಕೊಂಡಿರೊ ನಾವುಗಳು
ಅವ್ನ - ತಲೆಮ್ಯಾಲೆ ಕೈ ಮಡ್ಗಿ
ಆಣೆ ಪ್ರಮಾಣಗಳ
ಮಾಡೋದು ಹ್ಯಾಗೆ ಶಿವ್ನೆ
ಶಿವನೆ ಶಿವನೆ ನನ್ನಪ್ಪ
ಮಗನ ಎಲ್ಲಿಂದ ತರಲಪ್ಪ ?
ಶಿವನೆ ಹರನೆ ಪರಮಾತ್ಮ
ನನ ಕಂದ ಎಲ್ಲವುನೆ ಭಗವಂತ"
ಅಂತ್ಹೇಳುತ ಗುಂಡಯ್ಯ
ಕೊರಗಿ ಕಣ್ಣೀರಾಕುತವ್ರೆ |

ಅಂತೆ - ಹೊತ್ತಲ್ಲಿ ಜಂಗುಮಯ್ಯ
"ಬ್ಯೇಗ ಬ್ಯೇಗ ಬ್ಯೇಗ ಬ್ಯೇಗ
ಆಣೆ ಪ್ರಮಾಣಗಳ
ಬ್ಯೇಗನೆ ಮಾಡಿರಪ್ಪ
ನನ್ಗೆ ಹೊತ್ತಾಯ್ತು ಹೊತ್ತಾಯ್ತು
ನಾನು ಬ್ಯಾಗನೆ ಹೋಗಬೇಕು"
ಜಂಗಮ ದೇವರು
ಆತುರ ಮಾಡುತಾರೆ |

ಜಂಗುಮರ ಆತುರಕೆ
ಗಂಡ ಹೆಂಡತೀರು
ಒಬ್ಬರ ಮೊಕುವ
ಒಬ್ಬಾರು ನೋಡಿಕೊಂಡು
ಗುಳುಗುಳನೆ ಅಳುತವ್ರೆ
ಗಂಡ ಗುಂಡಯ್ಯ ಶರಣ
ಹೆಡ್ತಿ ಗೌರಮ್ಮ ತಾಯಿ
ಅವರಿಬ್ಬಾರ ದುಕ್ಕಗಳ
ಗುಳುಗುಳನೆ ಅಳುವುದ
ಕಂಡಾರು ಜಂಗುಮರು
ಆಗ ಆ ಜಂಗುಮಯ್ಯ
ಕೈ ತಪ್ಪಳೊಡೆಯುತ
"ನೋಡುದ್ರಾ ನೋಡುದ್ರಾ
ಈ ಗಂಡ ಹೆಂಡಿರಾಡೊ
ಕಳ್ಳಾಟ ನೋಡಿದಿರ್ಯಾ
ಸುಳ್ಳುಗಳ ನೋಡಿದಿರ್ಯಾ"
ಅಂತ್ಹೇಳಿ ಕೂಗಾಡಿ
ರಂಪಗಳ ಮಾಡುವಾಗ
ಗುಂಡಯ್ಯ ಶರಣರು
ಕಲ್ಲುನಂತೆ ನಿಂತುಬುಟ್ರು |

"ಯಾಕಪ್ಪ ಗುಂಡಯ್ಯ
ನನ ಮಾತು ಕೇಳನಿಲ್ಲ
ನೀನು - ಸುಮ್ಮಾನೆ ನಿಂತರೆ
ನನ್ನ - ಅಮ್ರುತ್ ಪಾತ್ರೆ ನನ್ಗೆ
ಬಂದಂಗಾಗಕಿಲ್ಲ
ಕೊಡು ಕೊಡು ಬ್ಯೇಗ ಬ್ಯೇಗ"
ಅಂತ್ಹೇಳಿ ಜಂಗುಮಯ್ಯ
ಕಾಡುತ ಇರುವಾಗ
ಕಂಗೆಟ್ಟು ಗುಂಡಯ್ಯ
ಕಣ್ಣೀರ ಸುರಿಸುತ
"ನಮ್ಮ ಕಂದ ನಮ್ಮತ್ರ
ಈಗ ಇಲ್ಲ ಯಜಮಾನರೆ
ನನ್ನ ಮಾಪ್ ಮಾಡಬೇಕು
ನನ್ಗೆ - ಕರುಣ ತೋರ್ಸಬೇಕು |

ಗುಂಡಯ್ಯ ಶರಣರ
ಮಾತು ಕೇಳಿ ಜಂಗುಮಯ
"ನೋಡಿದ್ರಾ ನೋಡಿದ್ರಾ
ಸುಳ್ಳೆಂಗೆ ಬರುತ್ತೆತೆ
ಅವುರ್ಮಗ ಅವುರತ್ರ
ಇಲ್ಲಂತೆ ಕೇಳಿರಪ್ಪ
ಮಗನ-ಅವ್ನ ತಾತುನ ಜೊತೆ
ಜಾತ್ರೆಗೆ ಕಳುಗ್ಸುಟ್ಟು
ತಪ್ಪಿಸಿಕೊಳ್ಳುವ
ಹಿಕಮತ್ತ ಮಾಡುತವುರೆ
ನಾನೇ ಆ ಜಾತ್ರೇಲಿ
ಕಣ್ಣಾರೆ ಕಂಡಿದ್ದೀನಿ
ಇವ್ರ ಮಗ ಶಂಕರ
ಅವ್ನ ತಾತನ ಜೊತೆಯಲ್ಲಿ
ಹೋದುದ್ದ ಕಂಡಿದ್ದೀನಿ
ಬೇಕಾರೆ ಕರುಸುತೀನಿ"
ಅಂತ್ಹೇಳುತಿರುವಾಗ
ಪರಶಿವನ ಮಾಯದಿಂದ
ವೀರಭದ್ರ ತಾತನಾಗಿ
ನಂದಿಯೆ ಶಂಕರುನಾಗಿ
ಜನಗಳು ಸೇರಿದ್ದ ತಾವ್ಕೆ
ತಾವಾಗೆ ಬರುತಾರೆ |

ತಾತನ ಮೊಮ್ಮಗನ
ರೂಪಲ್ಲಿ ಬಂದರು
ವೀರಭದ್ರೇಶ್ವರ
ನಂದೀ ದೇವರು ಅಲ್ಗೆ
ಬಂದುದ್ದ ನೋಡಿದರು
ಜಂಗೂಮ ದೇವರುಗಳು
"ಅಲ್ನೋಡಿ ಅಲ್ನೋಡಿ
ಅವ್ರ ಮಗ ಶಂಕರ
ತನ್ ತಾತನ ಜೊತೆಯಲ್ಲಿ
ಕಳ್ಳೇಪುರಿ ತಿನ್ನುತ
ಕಲ್ಯಾಣ ಸ್ಯಾವೆ ಮುಕ್ಕುತ
ಕಾರಸೇವ ಕುರುಮುತ
ಹೆಂಗ್ ಬತ್ತವುನೆ ನೋಡಿ
ಅವ್ನೆ - ಇವ್ರ ಮಗ ಶಂಕ್ರ !
ಅವ್ನೆ ಅವ್ನೇಯ ನೋಡಿ
ಇವ್ರ ಮಗ ಶಂಕರ!"
ಅನುತ್ಹೇಳಿ ಜಂಗುಮರು
ಕೂಗಿ ಕೂಗಿ ಕರುದ್ರು |

ಗುಂಡಯ್ಯ ಶರಣರು
ತಾಯಿ ಗೌರಮ್ಮನೋರು
"ಸತ್ತ ಮಗ ಮತ್ತೆ
ಹೆಂಗೆದ್ದು ಬಂದನಪ್ಪ?"
ಅಂತ್ಹೇಳಿ ಬೆಚ್ಚಿದರು
ಬೆರಗಿನಿಂದ ನೋಡಿದರು
"ಏನಪ್ಪ ಶಿವನೆ ನಿನ್ನ
ಲೀಲೆಗಳು ತಿಳಿಯವಪ್ಪ!"
ಅನುತ್ಹೇಳಿ ಗುಂಡಯ್ಯ
ಆಕಾಸ ಅಂತೆ ನೋಡಿ
ಕಣ್ಣ ಮುಚ್ಚಿಕೊಂಡು
ಶಿವುನ ಧ್ಯಾನ ಮಾಡಿ
ಕರಗಳನೆತ್ತಿ ಶರಣ
ಕೈಗಳ ಮುಗಿದರಾಗ |

ಆಗ ಜಂಗುಮಯ್ಯನವರು
"ನೋಡಿದ್ರಾ ನೋಡಿದ್ರಾ?
ಈ ಗಂಡ ಹೆಂಡ್ತೀರಾಡೊ
ಕಳ್ಳಾಟಗಳ ಕಂಡೀರ್ಯಾ?"

ಅನುತ ಅಣಕ ಮಾಡುವಾಗ
ಮಾಯದ ಮಗ ಶಂಕರ
ಓಡೋಡಿ ಬಂದು ಆಗ
'ಅಪ್ಪಾ ಅಮ್ಮಾ' ಅನುತ
ತಂದೆ ತಾಯಿಗಳ ಕಂದ
ಬಿಗಿಯಾಗಿ ತಬ್ಬುಕೊಂಡ |

"ಸತ್ತ ಮಗನು ಮತ್ತೆ
ಹೆಂಗೆ ಬಂದನೊ ಶಿವನೆ ?
ಇದು ಹ್ಯಾಂಗೆ ಸಾಧ್ಯವೋ?"
ಅನುತ್ಹೇಳಿ ಗಂಡ ಹೆಂಡ್ರು
ಸೋಜುಗ ಪಡುವಾಗ
ಜಂಗೂಮಯ್ಯ ಜೋರಾಗಿ
"ಬ್ಯೇಗ ಬ್ಯೇಗ ಬ್ಯೇಗ ಬ್ಯೇಗ
ಪ್ರಮಾಣಗಳ ಮಾಡಿ ಹೇಳಿ"
ಎನ್ನುತ ಜಂಗುಮರು
ಆತುರಪಡಿಸಿದರು |

ಪಟೇಲು ಶ್ಯಾನುಭೋಗ್ರು
ಯಜಮಾನರು ಎಲ್ರೂ
"ಗುಂಡಯ್ಯ ಕೇಳಪ್ಪ
ಜಂಗುಮರು ಹೇಳಿದಂತೆ
ಆಣೆ - ಪ್ರಮಾಣ ಮಾಡಪ್ಪ"
ಎಂದಾಗ ಗೌಡರು
ಗುಂಡಪ್ಪ ಶರಣರು
ಮಾತುಕತೆ ಇಲ್ಲದೆ
ತಲೆಗಳ ಎತ್ತದೆ
ಸುಮ್ಮನೆ ನಿಂತುಕೊಂಡ್ರು |

"ಏನಪ್ಪ ಗುಂಡಯ್ಯ
ನೀನು ಪ್ರಮಾಣ ಮಾಡದಿದ್ರೆ
ನೀನು ಕಳ್ಳಾಂತಾಯ್ತಿಯೆ
ಶೀಕ್ಷ್ಯಕೊಳಗಾಗುತೀಯೆ"
ಅಂತಂದರು ಪಟೇಲರು.
ಪಟೇಲರ ಮಾತಿಗೂ
ಗುಂಡಪ್ಪ ಶರಣರು
ತಲೆ ಮ್ಯಾಲುಕ್ಕೆತ್ತದೆ
ಮೆಲ್ಲುಕೆ ಬಾಯ್ಬಿಟ್ಟರು
"ಸ್ವಾಮಿ ಪಟೇಲರೆ
ನ್ಯಾಯವಂತ ನನ್ನ ಜನುಗಳೇ
ನಾನೂ ನನ್ನ ಹೆಂಡ್ತೀಯೂ
ಒಬ್ರುನೊಬ್ರು ಮುಟ್ಕೋಂಗಿಲ್ಲ
ಮುಟ್ಟಿ - ಪ್ರಮಾಣ ಮಾಡೋಂಗಿಲ್ಲ" |

ಆ ಮಾತ ಕೇಳೀದ
ಆ ಸಬಿಯಾದ ಜನುವೆಲ್ಲ
ಗೊಳ್ ಅಂತ ನೆಗಾಕತ್ತದ್ರು
ಆಗ ಜಂಗುಮಯ್ಯನೋರು
"ಸ್ವಾಮಿ ನಂಗೊತ್ತಾಗೋಯ್ತು
ಈ ಕಳ್ಳರೇ ನನ್ನ
ಅಮ್ರುತ್ ಪಾತ್ರೆಯ ಕದ್ದು
ಈಗ ಇಲ್ಲ ಅನ್ನುತವ್ರೆ
ಇವ್ರ ನಂಬುವ ಬಗೆ ಹ್ಯಾಂಗೆ ?
ಇವ್ರ ನಚ್ಚುವ ಕ್ರಮು ಹ್ಯಾಂಗೆ ?
ಇಂತೆ ಮನೆ ಹಾಳರ ನಾನು
ಇಂತೆ ವಂಚುಕರ ನಾನು
ಇದುವರ್ಗು ಕಂಡಿರ್ನಿಲ್ಲ
ಇನ್ನಾಗ್ಗೂ ಕೇಳಿರ್ನಿಲ್ಲ
ಹೋಯ್ತಲ್ಲ ಹೋಯ್ತಲ್ಲ
ನನ್ನ ಅಮ್ರುತ್ ಪಾತ್ರೆ
ಕೆಟ್ನಲ್ಲ ಕೆಟ್ಟೆನಲ್ಲ
ಕಳ್ಕೊಂಡೆ ನನ್ ಅಮ್ರುತ್ ಪಾತ್ರೆ
ಶಿವನೆ ಶಿವನೇ ಶಿವನೆ
ಇನ್ನೇನು ಗತಿಯೋ ಕಾಣೆ
ಮುಚ್ಚಿ ಮರೆ ಮಾಡಿಕೊಂಡು
ನಾವ್ಯಾಣೋ ಅನ್ನುತವ್ರುರೆ
ಈ ಮೆತ್ತಾನೆ ಕಳ್ಳರು
ಏನೂ ಅರಿಯಾದಂತ
ಪಾಯಿಗಳ ರೂಪುನಲ್ಲಿ
ನನ್ಗೆ ಮೋಸ ಮಾಡವ್ರೆ
ನನ್ನ ಪಾತ್ರೆ ಕದ್ದವುರೆ
ಇವುರೆ ಪಾತ್ರೆ ಕಳ್ಳರು
ಇವ್ರೆ ಇವ್ರೆ ಕಳ್ಳರು
ಗೋಮೊಕುದ ಯಾಗ್ರಾರು" |

ಜಂಗೂಮಯ್ನ ಮಾತ ಕೇಳಿ
ಗುಂಡಯ್ಯ ಶರಣರು
ತಡುಕೊಳ್ಳನಾರದೆ

"ಇಲ್ಲ ಇಲ್ಲಾ ಇಲ್ಲ
ನಾನು ಕಳ್ಳನು ಅಲ್ಲ
ನಾನು ಸುಳ್ಳನು ಅಲ್ಲ
ಹರಗೀಸ ನಾನಾದ್ರೂ
ಪಾತ್ರೆಯ ಕದ್ದೋನಲ್ಲ"
"ಹಂಗಾರೆ ಗುಂಡಪ್ಪ
ಪ್ರಮಾಣ ಮಾಡೋಕೆ
ಮಾಡಿ ಹೇಳೋದಕೆ
ಯಾಕೆ ಹೆದರುತೀಯಪ್ಪ?
"ಹೆದರಿಕೆ ಅಂತಲ್ಲ
ನಾವು ಮಾತ್ರ ಪ್ರಮಾಣ
ಮಾಡುವಂತ ಸ್ಥಿತಿಯಲ್ಲಿ
ಖಂಡಿತವಾಗೂ ಇಲ್ಲ!"
"ಗಂಡ ಹೆಂಡತಿ ಕೈಯ
ಹೆಂಡ್ತಿ ಗಂಡನ ಕೈಯ
ಹಿಡ್ದು-ಕಂದನ ತಲೆಮ್ಯಾಲೆ
ಮಡ್ಗಿ ಪ್ರಮಾಣಗಳ
ಮಾಡಿದರೆ ಆಗ ನೋಡು
ನೀನು ಸತ್ಯುವಂತ ಅನ್ನುತೀನಿ"

"ಸ್ವಾಮಿ ನಿಮ್ಗೆ ನಾನು
ಹೇಳದಕಾಗದಿಲ್ಲ
ಆದರೆ ಈಗ ನಾನು
ಹೇಳಲೆ ಬೇಕಾಯಿತು
ನನ್ನ ಹೆಡ್ತಿ ಮೈಕೈಯ
ನಾನು - ಮುಟ್ಟುವಂತಿಲ್ಲ
ಅವ್ಳೂ ಕೂಡ ನನ್ನ
ದ್ರೀಯವ ಮುಟ್ಕೊಂಗಿಲ್ಲ
ಯಾವುದೂ ಒಂದ್ ಗಳುಗೇಲಿ
ಶಿವನ ಮ್ಯಾಲೆ ಆಣೆ ಮಾಡಿ
ಮುಟ್ಟದಂಗೆ ನಾವಿದ್ದೀವಿ
ಈ ಮಾತು ದಿಟ ದಿಟ
ಇಲ್ಲಿಲ್ಲ ತಟವಟ"
ಅನ್ನುತ ಗುಂಡಯ್ಯ
ಮಾತಿಲ್ದೆ ನಿಂತರು |

"ಅಯ್ಯಾ ಶರಣ ಕೇಳು
ನಾನೂ ಮಾತು ಮಾತಿಗೆ
ಆಣೆ ಪ್ರಮಾಣಗಳ
ಬೇಕಾದಂಗೆ ಮಾಡುತೀನಿ
ಹಂಗಂತ ಹೇಳಿ ನಾನು
ಹೇಳಿದ ರೀತಿಲೆ
ನಡಿಯೋಕೆ ಆದತ್ತ?
ಶಿವನ ಮ್ಯಾಲೆ ಆಣೆ
ಮಾಡಿದ್ದು ಯಾರೀಗೆ ಗೊತ್ತು ?
ಅದು ಮರುತು ಈಗ
ಎಲ್ಲರೂ ಕಾಣೋ ಹಂಗೆ
ಈ ಮಗೀನ ತಲೆಮ್ಯಾಲೆ
ಕೈಮಡಗಿ ಆಣೆ ಮಾಡಿ"
ಅಂದರು ಜಂಗೂಮಯ್ಯ |

"ಸ್ವಾಮಿ ನಿಮ್ಮ ದಮ್ಮಯ್ಯ
ಎಲ್ಲ ನೋಡಿದರೂ ಸೈ
ನೋಡದಿದ್ದರೂ ಸೈ
ಆಣೆ ಪ್ರಮಾಣದ
ಮಾತ ತಗಿಯೋಂಗಿಲ್ಲ
ಅದು - ಶಿವನ ಮೇಲಾಣೆ!"
"ಅಯ್ಯೋ ಗುಂಡಯ್ಯ
ಶಿವ ಎಲ್ಲಿದ್ದಾನಯ್ಯ?
ಇಲ್ಲದ ದೇವುರ್ ಮ್ಯಾಲೆ
ಆಣೆ ಮಾಡೋದು ಕಷ್ಟುವ?"
"ಎಲ್ಲೆಲ್ಲು ಇರುವೋನ
ಇಲ್ಲಾಂತ ಹೇಳಿದರೆ
ನನ್ನ - ನಾಲೀಗೆ ಸೇದೋಗುತದೆ
ನಿಮ್ಮ ದಮ್ಮಯ್ಯ ಸ್ವಾಮಿ
ಅಂತೆ ಮಾತ ನನ್ನ ಬಾಯಿಂದ
ಆಡಾಕೆ ಆಗದಿಲ್ಲ
ನಿಮ್ಮ ಪಾತ್ರೆ ಕೊಡ್ಸಿಲ್ಲಂತ
ನನ್ನ ಶೂಲಕ್ಕೆ ಹಾಕಿಸಿರಿ
ಶೂಲದಲ್ಲಿ ನಾನು ಸತ್ತರೂ
ಸುಳ್ಳು ಮಾತ್ರ ಹೇಳಲಾರಿ"
"ಹೋಗ್ಲಿ ಬಿಡು ಗುಂಡಯ್ಯ
ನಿನ್ನ ಮಗನ ತಲೆಮ್ಯಾಲೆ
ಈ ನಾಗುಬೆತ್ತ ಮಡುಗುತೀನಿ
ಈ ತುದಿಯ ಗುಂಡಯ್ಯ
ಆ ತುದಿಯ ಗೌರಮ್ಮ
ನೀವು ಗಂಡ ಹೆಂಡ್ತೀರು

ಹಿಡ್ಕೊಂಡ್ ಪ್ರಮಾಣ ಮಾಡಿ
ಆಗ ನಾನು ಒಪ್ಪುತೀನಿ!" |

ಜಂಗುಮರ ಮಾತೀಗೆ
ಒಪ್ಪಿ ಗುಂಡಯ್ಯನವರು
ಮಾಯದ ಕಂದನ
ತಲೆಮ್ಯಾಲೆ ಅಡ್ಡಲಾಗಿ
ಮಡಗಿದ್ದ ನಾಗುಬೆತ್ತದ
ಆ ಕಡೆ ಗೌರಮ್ಮ
ಈ ಕಡೆ ಗುಂಡಯ್ಯ
ಹಿಡುಕೊಂಡು ಕಣ್ಣಮುಚ್ಚಿ
ಆಣೆಪ್ರಮಾಣಗಳ
ಮಾಡುವಂತ ಕಾಲದಲಿ
ಬಾಲಕನು ಮರೆಯಾದ
ನಾಗುಬೆತ್ತ ಮರೆಯಾಯ್ತು
ಜಂಗುಮದೇವರು
ಶಿವನ ರೂಪ್ನಲ್ಲಿ
ಪಾರ್ವತಿ ಸ್ಮೈತುವಾಗಿ
ಪ್ರತೇಕ್ಷವಾದರು.
ಕಲ್ಯಾಣ ಪಟ್ಟಣದ
ಎಲ್ಲಾ ಶರಣರಾಗ
ಪರಮಾತ್ಮನ ದರ್ಶನೆ
ಮಾಡಿ ಉಘೇ ಅಂದರು |

ಶಿವನು ಗುಂಡಯ್ಯನವರ
ಸತ್ಯವ ಮೆಚ್ಚಿಕೊಂಡು
ಸತ್ತು ಮರೆಯಾಗಿದ್ದ
ಪುತ್ರನ ಕೈಗೆ ಕೊಟ್ರು
"ಶರಣ ಗುಂಡಯ್ಯ
ನಿನ್ನ ಈ ದೃಢಭಕ್ತಿ
ಜಗತ್ಮಕೆ ತಿಳಿಯಲಿ
ನಿನ್ನ ಈ ಶಿವಕತೆ
ನಿಚ್ಚಾಯವಾಗಲಿ
ಸಾವಿರ ವರ್ಷ ಬಾಳಿ
ಬದುಕಿದ್ದು ಬಾರಪ್ಪ"
ಅಂತ್ಹೇಳಿ ಪರಮಾತ್ಮ
ಆಸುರ್ವಾದಗಳ ಮಾಡಿ
ಕೈಲಾಸ್ಕೆ ನಡೆದರು |

ಊರಜನವೆಲ್ಲ
ಶರಣ ಗುಂಡಯ್ಯನವರ
ಮೆಚ್ಚಿ 'ಉಘೆ!' ಎಂದಿತು
ಅವುರ್ಗೆ ಶರಣು ಶರಣಂದಿತು
ಶರಣ ಗುಂಡಯ್ಯನವರ
ಕಲ್ಯಾಣ ಪಟ್ಟಣದ
ಬೀದಿ ಬೀದಿಗಳಲಿ
ಮೆರವಣಿಗೆ ಮಾಡಿಕೊಂಡು
ಮನೆಯ ಸೇರಿಸಿದರು
ಇದು - ಸತ್ಯ ಶರಣರ ಕತೆ
ಇದು - ನಿತ್ಯ ನೂತನ ಕತೆ
ಇದು - ಶರಣ ಮಾತ್ಮರ ಕತೆ
ಇಂಥ - ಕತೆಯ ಹೇಳಿದೋರ
ಇಂಥ - ಕತೆಯ ಕೇಳಿದೋರ
ಪಾಪ ಪರಿಹಾರ ಶಿವನೆ
ಇದು ಇಲ್ಲೀಗೆ ಶಿವಮುದ್ರೆ
ಶರಣು ಶರಣಾರತಿ
ಶರಣು ಮಂಗಳಾರತಿ
ಜೈ ನಮೊ ಪಾರ್ವತಿ ಪತೆ ಹರಹರ ಮಾದೇವ್

ಜಲ್ಲಗೊಂಬಿನ ಬಸವ

ಕಸವ ಹೊಡೆದ ಕೈಯಿ ಕಸ್ತೂರಿ ನಾತಾವ
ಬಸವಣ್ಣ ನಿನ್ನ ಸೆಗಣೇಯ - ಬಳಿದ ಕೈಯಿ
ಎಸಳು ಯಾಲಕ್ಕಿ ಗೊನೆನಾತ |

ಮಲ್ಲನ ಮೂಲೇಲಿರುವ ಜಲ್ಲಗೊಂಬಿನ ಬಸವ
ಇಲ್ಲೇಕೆ ನೀವು ನೆಲಸಿದಿರಿ - ಬಸವಣ್ಣ
ಮಲ್ಲಯ್ಯ ಕರುದವುರೆ ನಡಿಯಣ್ಣ |

ಕುಂಬಾರ ಗುಂಡಯ್ಯ - ೨

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

ಕಲ್ಯಾಣ ಎಂಬುದು ಕಡೆಯನೆ ಕೈಲಾಸ
ಅಲ್ಲಿ - ಬಿಜ್ಜಾಳರಾಯಾನ ದೊರೆತನ | ಸುವ್ವಿ |

ಬಿಜ್ಜಳರಾಯನಿಗೆ ಮುನ್ನೂರರವತ್ತು ಬೀದಿ
ನಮ್ಮ - ಬಸವಣ್ಣನವರಿಗೆ ಪಂಚ್ಮೆದು |

ಬಸವಣ್ಣನವರ ಪಂಚ್ಮೆದು ಬೀದೀಲಿ
ಚಂದಾದ ನಂದಿ ಗುರುಮಠ |

ಅಂದಚಂದಾದ ನಂದಿ ಗುರುಮಠಕೆ
ಪಂಚ್ಮೆದು ಚಿನ್ನಾದ ಮಣಿಗಳಸ |

ಭೂಮ್ಯಗಲ ಹಾಸಣಕೆ ಆಕಾಸ್ದ ಹಂದರಿಕೆ
ಆನಂದವಾದ ಗುರುಮಠ | ೧೦

ಬಸವಯ್ನ ಮನೆ ಮುಂದೆ ಹಸುರಾಣಿ ಚಪ್ಪಾರ
ದೆಸುಗಾತಿ ನಮ್ಮ ನೀಲಮ್ಮ |

ದೆಸವಂತ ನೀಲಮ್ಮ ಬಸವಯ್ನ ಪಾದಗಳ
ಕಣ್ಣಿಗೊತ್ತಿಕೊಂಡು ಸರಣಂದರು |

ನೀಲಮ್ಮನವರ ಮುಕುವ ನೋಡಿ ಬಸವಣ್ಣ
ಅಲ್ನೊಂದು ಮಾತ ನುಡಿದಾರು |

"ಮಡದಿ ನೀಲಮ್ಮ ಸಡಗರಿಸಿ ಕೇಳು ಕೇಳು
ನಾನು - ಮಾಂಡವಿ ಪುರಕೆ ಹೋಗುತೀನಿ |

ಮಾಂಡವಿಪುರದ ಊಳ್ಗಿ ಮನೇಲಿರೊ
ಸರಣರ ಕರುಕೊಂಡು ಬರುತೀನಿ | ೨೦

ಆನಂದವಾದ ಈ ಚಂದದ ಗುರುಮಠಕೆ
ತಕ್ಕನಾದ ಸರಣ್ರಾರು ಬರುತಾರೆ |

ಒಂದು - ಲಕ್ಕುಸ್ಸ ಮ್ಯಾಲೆ ತೊಂಬತ್ತೇಳು ಕೋಟಿ
ಗಣಂಗಳು ಕಲ್ಯಾಣ್ಕೆ ಬರುತಾರೆ |

ಕಲ್ಯಾಣ್ಕೆ ಬರುವ ಆ ಎಲ್ಲ ಗಣಂಗಳಿಗೂ
ನಿಚ್ಚುಬೋಜುಣೆ ಆಗಬೇಕು" |

ಬಸವಣ್ಣೋರ ಮಾತ ಕೇಳಿ ನೀಲಮ್ಮ ತಾಯಿ
ಆಗೊಂದು ಮಾತ ನುಡಿದಾರು |

"ಆ ಸರಣರಿಗೆ ತಕ್ಕನಾದ ಭೋಜುಣೆಯ ಮಾಡದಕೆ
ಅಡಿಗೆ ದುಡುಕೂವ ಬಗೆಹೇಳಿ | ೩೦

ಅಡಿಗೆ ದುಡುಕೂವ ಬಗೆಹೇಳಿ" ಅನ್ನುತ
ನೀಲಮ್ಮ ಕೇಳಿದರು ಬಸವಣ್ಣನ |

ಹಂಗಂದ ಮಾತ ಕೇಳಿದರು ನಂದೀಶ
ಏನೆಂದು ಯೋಚುಣೆ ಮಾಡುತಾರೆ |

"ನಾನು ಬಲ್ಲೆನೆ ಮಡದಿ ಯಾರು ಬಲ್ಲರು ಮಡದಿ
ಪ್ರಭುದೇವರ ಹೋಗಿ ಕೇಳಬೇಕು |

ಪ್ರಭುದೇವರ ಹೋಗಿ ಕೇಳಬೇಕು" ಅಂತ್ಹೇಳಿ
ರುದ್ರಾಕ್ಷಿ ಮಠಕೆ ಹೊರುಟಾರು |

ಬಸವಯ್ನ ಮಡದಿ ದೆಸೆಗಾತಿ ನೀಲಮ್ಮ
ನಾಗರಸಿಂಬೀಯ ತಲೆಮ್ಯಾಲೆ | ೪೦

ನಾಗರಸಿಂಬಿಯ ತಲೆಮ್ಯಾಲೆ ಇಟುಕೊಂಡು
ಮರಳ ಕೊಡಪಾನ ಹೊತ್ತುಕೊಂಡು |

ಮರಳ ಕೊಡಪಾನ ಹೊತ್ತುಕೊಂಡು ನೀಲಮ್ಮ
ಬಸವಣ್ಣನ ಮುಂದಕೆ ಬುಟುಕೊಂಡು |

ಬಸವಣ್ಣಸ್ವಾಮಿಯ ಮುಂದಕೆ ಬುಟುಕೊಂಡು
ಪ್ರಭುಸ್ವಾಮಿ ದರುಸನಕೆ ಬಂದಾರು |

ಕಾವೀಡೇರ್ಯಾದಲ್ಲಿ ಕುಳಿತಿರುವ ಪ್ರಭುಸ್ವಾಮ್ಯ
ಪಾದ - ತೊಳೆದಾರು ತಾಯಿ ನೀಲಮ್ಮ |

ಪಾದಾವ ತೊಳೆದಾರು ಪತ್ರೆಯ ಇಟ್ಟಾರು
ಈಬುತ್ತಿಯ ಪಾದಕೆ ಧರಿಸಿದರು |

ಕಾಯೊಡ್ದು ಹಣ್ಮಾರುದು ಕಡ್ಡಿಕಲ್ಪುರ ಬೆಳಗಿ
ಪಾದಪೂಜೆಗಳ ಮಾಡಿದರು |

ಸತಿಪತಿಗಳು ಬಾಗಿ ಸರಣು ಸರಣೆನ್ನುತ
ಪ್ರಭುದೇವ್ರ ಪಾದಗಳ ಹಣೆಗೊತ್ತಿ |

ಪಾದಗಳ ಕಣ್ಣ್ಗೀಗೆ ಒತ್ತುಕೊಂಡು ಸರಣಾರು
ಕರವೆತ್ತಿ ಕೈಯ ಮುಗುದಾರು |

ಸರಣಾರ ಬಕುತೀಗೆ ಕರುಣುಳ್ಳ ನನ್ನ
ಪ್ರಭುಸ್ವಾಮಿ ತಲೆಯ ತೂಗಿದರು |

"ಅಯ್ಯೊ ಕಂದುಗಳ್ಳಾ ಬಂದ ಕಾರಣವೇನು
ಕುಂದುರಪ್ಪ ಬಂದ ಬಗೆಹೇಳಿ" |

"ತಮ್ಮ ದರುಸಣದ ಕರುಣ ಕೇಳದಕೆ
ಪರಮಾತ್ಮ ಬಂದೊ ನಿಮ್ ಬಳುಗೆ |

ಮಾಂಡವಪುರದ ಊಳ್ಗಿಗೆ ಹೋಗುತಿವ್ನಿ
ಅಲ್ಲಿರುವ ಸರಣರ ತರುತಿವ್ನಿ |

ಒಂದು ಲಕ್ಷದ ಮೇಲೆ ತೊಂಬತ್ತೇಳು ಕೋಟಿ
ಗಣಂಗಳು ಕಲ್ಯಾಣ್ಕೆ ಬರುತೀದೆ |

ಬಂದಂತ ಗಣಗಳಿಗೆ ಪ್ರಾಸೋದವಾಗಬೇಕು
ಆ ಪ್ರಾಸೋದವಾಗೊ ಬಗೆಹೇಳಿ" |

"ಮಗಳೆ ನೀಲಮ್ಮ ಒಂದು ಮಾತ ಕೇಳಮ್ಮ
ಒಕ್ಕಕ್ಕಿ ಒಂದ್ಮಾನ ತೊಗರಿಬ್ಯಾಳೆ |

ಒಂದ್ಮಾನ ತೊಗುರ್‌ಬ್ಯಾಳೆ ಒಂದು ಬದನೆಕಾಯಾಕಿ
ಒಂದೆ ಮಡ್ಕೇಲಡ್ಗೆ ಮಾಡಬೇಕು |

ಒಂದ್ಮಡ್ಕೆಲ್ ಮಾಡಿದ ಅಡ್ಗೆ ಆಗಬೇಕು
ಇಂತೆ ಅಡುಗೇಯ ಮಾಡಮ್ಮ" |

ಪ್ರಭುದೇವ್ರ ಮಾತ ಕೇಳಿದರು ನೀಲಮ್ಮ
"ಆ ಮಾತುನ ಸನ್ಮ ತಿಳಿಯಾದು |

ಸ್ವಾಮಿ ನನ್ನ ಗುರುವೆ ಸ್ವಾಮಿ ನನ್ನ ಪ್ರಭುವೆ
ಇದೆಂತೆ ಮಾತ ಹೇಳಿದಿರಿ |

ಒಕ್ಕಕ್ಕಿ ಒಂದ್ಮಾನ ಬ್ಯಾಳೆ ಒಂದ್ ಬದ್ನೇಕಾಯಿ
ಇದ - ಒಂದ್ಮಡ್ಕೇಲ್ ಮಾಡಬೇಕು |

ಈ ಒಂದು ಮಡ್ಕೆ ಪ್ರಾಸೋದವಾದ್ರೂ
ಯಾರ್ಯಾರಿಗಿಕ್ಕಾಲಿ ಹೇಳಿ ಸ್ವಾಮಿ |

ಒಂದು ಲಕ್ಕುಸ್ವಮ್ಮಾಲೆ ತೊಂಬತ್ತೇಳು ಕೋಟಿ
ಗಣಂಗಳು ಕಲ್ಯಾಣ್ಕೆ ಬರುತಾರೆ |

ಇಷ್ಟೊಂದು ಗಣಂಗಳಿಗೆ ಈ ಮಡ್ಕೆ ಪ್ರಾಸೋದ
ಯಾವ್ ಮೂಲೆಗಾದಾತು ಹೇಳಿ ಸ್ವಾಮಿ?" |

"ಅಮ್ಮ ನೀಲಮ್ಮ ನನಮಾತ ಕೇಳಮ್ಮ
ದಿವಿಪಾತ್ರೆಯ ನೀನು ಮಾಡ್ಸಬೇಕು |

ದಿವಿಪಾತ್ರೆ ಅಂದ್ರೆ ಅದು ಅಕ್ಷಿಯ ಪಾತ್ರೆ
ಆ ಪಾತ್ರೆಲಿ ಅಡಿಗೆ ಮಾಡಬೇಕು |

ದಿವಿಪಾತ್ರೇಲಿ ಮಾಡಿದರೆ ಅದರಲ್ಲಾದ ಅಡಿಗೆ
ಎಷ್ಟನ್ನವಾದರೂ ಕೊಡುತೀದೆ |

ದಿವಿಪಾತ್ರೆಯ ನೀನು ಈಗಲೇ ಮಾಡ್ಸಮ್ಮ
ಸರಣರಿಗೆ ಭೋಜುಣೆ ಪಡುಸಮ್ಮ" |

"ಅಯ್ಯೋ ಗುರುವೆ ಎಂತೆ ಮಾತ ಹೇಳಿದಿರಿ
ದಿವಿಪಾತ್ರೆ ಅಂದರೆ ಏನು ಗುರುವೆ ? |

ಅಂತೆ - ಪಾತ್ರೆಯ ಮಾಡಿಕೊಡೊ ಮಾತ್ಮರು ಯಾರಪ್ಪ
ಒಡೆದು ಹೇಳಬೇಕು ನಿಮ್ಮ ಪಾದ" |

"ಅಮ್ಮ ನೀಲಮ್ಮ ದಿವಿಪಾತ್ರೆ ಅಂದರೆ
ಪಂಚಲೋಕದ ಮಣ್ಣು ಸೇರಬೇಕು |

ಪಂಚಲೋಕದ ಮಣ್ಣು ಸೇರಿಸಿ ಮಾಡಿದರೆ
ಪಂಚಮುಖಿ ಶಿವನು ನೆಲೆಯಾಗಿ |

ಪಂಚಮುಖಿ ಶಿವನು ಅನ್ನಪೂರ್ಣೇಶ್ವರಿ ಜೊತೆಗೆ
ದಿವಿಪಾತ್ರೇಲಿ ಸ್ವಾಮಿ ನೆಲೆ ಆಗುತಾರೆ |

ಇಂತೆ ದಿವಿಪಾತ್ರೆಯ ನೀನು ಮಾಡಿಸು ಹೋಗಮ್ಮ
ನಿನ್ನ ಕಾರ್ಯ ಸಿದ್ಧಿ ಆಗಲಮ್ಮ" |

"ಅಯ್ಯೋ ಅಯ್ಯೋ ಗುರುವೆ ಎಂತೆ ಮಾತ ಹೇಳಿದಿರಿ
ದಿವಿಪಾತ್ರೆ ಮಾಡುವ ಮಾತ್ಮರು |

ದಿವಿಪಾತ್ರೆ ಮಾಡುವ ಮಾತ್ಮರ ಹೇಳಿಕೊಡಿ
ನಿಮ್ಮ - ಪಾದಕೆ ಬಿದ್ದು ಬೇಡುತೀನಿ" | ೧೧೦

ಸರಣೆ ನೀಲಮ್ಮನ ಮಾತ ಕೇಳಿ ಪ್ರಭುಸ್ವಾಮಿ
ಒಂದು ಹುಸುನೆಗುವ ನೆಗುತಾರೆ |

"ಅಮ್ಮ ನೀಲಮ್ಮ ಕಲ್ಯಾಣ ಪಟ್ಟ್ನದಲ್ಲಿ
ಘನಸರಣ ಗುಂಡಯ್ಯ ಇರುವಾನು |

ಘನಸರಣ ಕುಂಬಾರ ಗುಂಡಯ್ಯನವರು
ದಿವಿಪಾತ್ರೆ ಮಾಡಿ ಕೊಡುತಾರೆ |

ಅಂತೆ ಸರಣರ ಹೋಗಿ ಕೇಳಿ ನೀಲಮ್ಮ
ನಿಮ್ಗೆ - ದಿವಿಪಾತ್ರೆ ಮಾಡಿ ಕೊಡುತಾರೆ" |

ಪ್ರಭುದೇವ್ರ ಮಾತೀಗೆ ತಲೆಬಾಗಿ ನೀಲಮ್ಮ
ಸರಣುಗಳ ಮಾಡಿ ಹೊರುಟಾರು | ೧೨೦

ಅಲ್ಲಿಂದ ತಾಯಿ ನಂದಿ ಗುರುಮಠಕೆ ಬಂದು
ಒಕ್ಕಳ ಹೊನ್ನ ಉಡಿಯಲ್ಲಿ |

ಒಕ್ಕಳ ಹೊನ್ನ ಉಡಿಯಲ್ಲಿ ಕಟುಕೊಂಡು
ಬಂದಾರು ಗುಂಡಯ್ನ ಅರುಮನೆಗೆ |

ನೀಲಮ್ಮ ತಾಯೋರ ದೂರದಲ್ಲೆ ಕಂಡು
ಓಡೋಡಿ ಬಂದಾರು ಸರಣರು |

ಸರಣ ಗುಂಡಯ್ಯ ಮಡದಿ ಮರುಗಮ್ಮ
ಓಡೋಡಿ ಬಂದಾರು ಸರಣಾರು |

ಓಡೋಡಿ ಬಂದು ನೀಲಮ್ಮ ತಾಯಿಗೆ
ಸರಣುಗಳ ಮಾಡಿ ಪ್ರೇಮುವಾಗಿ | ೧೩೦

ಪ್ರೇಮುವಾಗಿ ತಾಯ ಕುರ್ಚೀಲಿ ಕುಂಡುರುಸಿ
ಕುಡಿವುದಕೆ ಹಾಲು ಸಕ್ಕರೆಗಳ |

ಕುಡಿವುದಕೆ ಹಾಲು ಸಕ್ಕರೆ ಕೊಟ್ಟೊಗ
"ಮೊದಲು ಬಂದ ಕೆಲ್ಸ ಆಗಬೇಕು |

ನಾವು ಹೇಳುವ ಕೆಲ್ಸ ಮಾಡಿ ಕೊಡೋದಾದ್ರೆ
ಕುಡಿತೀವಿ ಹಾಲು ಸಕ್ಕರೆಗಳ" |

"ತಾಯಿ ನೀಲಮ್ಮ ನೀವು ಕಾಲಲಿ ತೋರಿದ್ದ
ನಾವು ತಲೆಲೊತ್ತು ಮಾಡುತೀವಿ |

ಬಂದ ಕಾರ್ಯ ಏನು ಅನ್ನೋದು ಹೇಳೀರಿ
ನಾವು - ಆಗೊದಿಲ್ಲ ಅನ್ನೊ ಜನುವಲ್ಲ" | ೧೪೦

'ಹಂಗಾದ ಮ್ಯಾಲೆ ಹೇಳುತೀನಿ ಕೇಳೀರಿ
ನನ್ಗೆ - ದಿವಿಪಾತ್ರೆಯ ಮಾಡಿಕೊಡಬೇಕು |

ದಿವಿಪಾತ್ರೆ ಅಂದಾರೆ ಹೇಳುತೀನಿ ಕೇಳೀರಿ
ಪಂಚಲೋಕಗಳ ಮಣ್ಣುಗಳು |

ಪಂಚಲೋಕಗಳ ಮಣ್ಣ ಕೂಡಿಸಿದರೆ
ಪಂಚಮುಖಿ ಶಿವನು ಬರುತಾನೆ |

ಪಂಚಮುಖಿ ಶಿವನು ಅನ್ನಪೂರ್ಣೇಶ್ವರಿ ಸ್ಮೆತ
ಆ ಪಾತ್ರೇಲಿ ಅವ್ರು ನೆಲ್ಸುತಾರೆ |

ಇಂತೆ ದಿವಿಪಾತ್ರೆ ಅಂದರೆ ಅಕ್ಷಿಯ ಪಾತ್ರೆ
ಇದ ಸರಣರಿಗಾಗಿ ಕೊಡಬೇಕು" | ೧೫೦

ಮುಂದೆ ಬರೊ ತುಂಬಿದ ಸ್ವಾಮಾರದ್ದಿನ
ದಿವಿಪಾತ್ರೆಯ ನನಗೆ ಕೊಡಬೇಕು |

"ನೀಲಮ್ಮ ತಾಯಿಯು ಹಾಲುಸಕ್ಕೆಗಳ
ದ್ರೀಯಕೆ ಸಲ್ಲಿಸಿ ಹೊರುಟರು |

ದ್ರೀಯಕೆ ಸಲ್ಲೀಸಿ ಸರಣುಗಳ ಮಾಡಿ
ಅವ್ರು - ನಂದಿ ಗುರುಮಠಕೆ ಹೊರುಟಾರು |

ನೀಲಮ್ಮ ತಾಯಿಗೆ ಮಾತು ಕೊಟ್ಟಾಯಿತು
ಏನ - ಮಾಡಲಿ ಗುರುವೆ ಪರಮಾತ್ಮ |

ಇಂತೆ ಕಷ್ಟಾಕೆ ನಾನು ಸಿಕ್ಕಿಕೊಂಡೆನಲ್ಲ
ಪಂಚಲೋಕಾದ ಮಣ್ಣ ತರಬವುದ ? |

ಪಂಚಲೋಕದ ಮಣ್ಣ ಎಲ್ಲಿಂದ ತರಲಪ್ಪ
ದಿವಿಪಾತ್ರೆಯ ನಾನು ಮಾಡಬವುದ ? |

ದಿವಿಪಾತ್ರೆಯ ನಾನು ಮಾಡಿಕೊಡದ ಮ್ಯಾಲೆ
ನಾನು ಬದ್ದು ಬಂದಂತ ಫಲವೇನು ? |

ಅಯ್ಯೊ ಶಿವನೆ ಶಿವ ಶಂಕರ ಗುರುವೆ
ಎಂತೆ ಕಷ್ಟಕೆ ನನ್ನ ಸಿಕ್ಕಿಸಿದ್ಯೊ |

ಈ - ಜಲ್ಮಕ್ಕೆ ಇಂತೆ ಕಷ್ಟ ಎಂದೂ ಬಂದುದಿಲ್ಲ
ಎಲ್ಲಿಗೋಗಲಿ ಏನ ಮಾಡಲಪ್ಪ |

ಲೋಕದಲ್ಯಾರಿಗೂ ಇಲ್ಲ ಸೋಕಾವ ಕೊಟ್ಟು
ನೂಕಿಬಿಟ್ಯ ತಂದೆ ಮಾದೇವ |

ಮತಿಯೀನನಾಗಿ ನಾನು ಗತಿ ಕಾಣೆನಲ್ಲೊ ತಂದೆ
ನನ್ನ - ದುಕ್ಕಸೋಕಗಳ ನೋಡಪ್ಪ |

ನನ್ನ - ದುಕ್ಕಸೋಕಗಳ ಗಾಳುಗೋಳುಗಳ
ಪರಿಯರಿಸೊ ತಂದೆ ಪರಮಾತ್ಮ |

ನಾನು ಎಲ್ಲಿಗೋಗಲಿ ಏನ ಮಾಡಲಿ ಗುರುವೆ
ನನ್ನ ಕೈ ಬಿಟ್ಯ ಗುರುವೆ ಮಾದಪ್ಪ |

ನನ್ನ ಕೈ ನೀ ಬಿಟ್ಟಮ್ಮಾಲೆ ನನಗ್ಯಾರು ಗತಿಯಪ್ಪ
ನನ್ನ ಪ್ರಾಣಗಳ ನಾನು ಬುಡಬೇಕು |

ಪ್ರಾಣಗಳ ಬುಡದೆ ಬ್ಯೇರೆ ದಾರಿಯ ಕಾಣೆ
ನನ್ಗೆ ದಾರಿಯ ತೋರೊ ಪರಮಾತ್ಮ |

ಮಾತು ತಪ್ಪಿದ ಮ್ಯಾಲೆ ಯಾತರ ಬದುಕಪ್ಪ
ಸೋತೋರು ಸತ್ತರು ಪರಮಾತ್ಮ |

ಸೋತರಂದಾರೆ ಸತ್ತರಂತ್ಲೇ ಲೆಕ್ಕ
ಈ ದ್ರೋಹವೇ ದಂಡ ಪರಮಾತ್ಮ |

ಇಂಥ ದಂಡವಾದ ದ್ರೋಯ ಇದ್ದೇನು ಫಲವಪ್ಪ
ಈ ಜಲ್ಮವ ನಾನು ಕಳೀಬೇಕು" |

ಕುಂಬಾರ ಗುಂಡಯ್ಯನೋರು ಚಿಂತೆ ಮಾಡುತ
ಹೊಳೆದಂಡ್ಯದಲ್ಲಿ ಕುಂತಾರು |

ಬಾಯಾರಿದಂತ ಭಾರಿ ಸಲಗವೊಂದು
ನೀರ ಕುಡಿಯಲೆಂದು ಬಂದೀತು |

ನೀರ ಕುಡಿಯಲೆಂದು ಹೊಳೆ ಹತ್ತಿರಕೆ ಬಂದು
ಗುಂಡಯ್ಯ ಶರಣರ ನೋಡೀತು |

ಗುಂಡಯ್ಯ ಶರಣರು ಆನೆಯ ಕಂಡರು
ಕಂಡರೂ ಕಾಣದಂತೆ ಕುಂತಿದ್ದರು |

ಹೆದರಲಿಲ್ಲ ಅವರು ಬೆದರಲಿಲ್ಲ ಅವರು
ಆನೇಗೆ ಕೈಯ ಮುಗಿದಾರು |

"ಸ್ವಾಮಿ ಈಸ್ವರುನ ಪ್ರೇಮುದ ಮಗನಿವನು
ಗಣಗಳಿಗೊಡೆಯ ಇನಿಯಂಕ |

ಈ ಗಜಮುಕುದ ಗಣಪತಿಯು ದಯಮಾಡಿ
ನನ್ನ - ಕುಂತಲ್ಲೆ ತುಣುದು ಮುಗಿಸಾಲಿ" |

ಗುಂಡಯ್ಯನವರು ಮನುದಲ್ಲಿ ನೆನುಕೊಂಡ
ಮಾತು ಸ್ವಾಮೀಗೆ ಅರುವಾಯ್ತು |

ಗುಂಡಯ್ಯನ ಕಡೆಗೆ ತಿರುಗಿ ನಿಂತಿತು ಆನೆ
ಒಡೊದೊಡೆದು ಮಾತ ಆಡುತೀದೆ |

"ಸರಣ ಗುಂಡಯ್ಯ ಸಾರ್ಥಕವಾಯ್ತಪ್ಪ
ಕೊಟ್ಟ ಮಾತೀಗೆ ತಪ್ಪೀದ |

ಕೊಟ್ಟ ಮಾತೀಗೆ ತಪ್ಪುವ ಸರಣರು
ನಿನ್ನಂಗೆ ಯಾರೂ ಇಲ್ಲುವಪ್ಪ |

ನೀಲಮ್ಮ ತಾಯಿಗೆ ದಿವಿಪಾತ್ರೆ ಕೊಡಲು
ಒಪ್ಪಿ ಬಂದಿರೊ ಗುಂಡಯ್ಯ |

ಒಪ್ಪಿ ಬಂದ ಮಾತೀಗೆ ತಪ್ಪಿ ನೀವು ನಡೆದರೆ
ಒಪ್ಪೀನಪ್ಪ ನಮ್ಮ ಪರಶಿವ |

ಕೊಟ್ಟ ಮಾತನು ಮೊದಲು ಉಳಿಸುಕೋಪ್ಪ
ಮಾತೀಗೆ ತಪ್ಪೋದು ಸರಿಯಲ್ಲ" |

"ಆನೆರೂಪುದಲಿ ಬಂದು ಆನಂದವಾಗಿ ನುಡಿಯುವ
ಗೌರಮ್ಮನ ಪುತ್ರ ಗಣಪತಿಯೆ |

ಮೊದಲೀಗೆ ನಿಮ್ಮ ಪಾದಕೆ ಸರಣಪ್ಪ
ನನ್ನ ಕಥೆ ನಿನಗೆ ತಿಳಿಯಾದು |

ಪಂಚುಲೋಕದ ಮಣ್ಣ ನಾನೆಂಗೆ ತರಲಪ್ಪ
ದಿವಿಪಾತ್ರೆ ಹೆಂಗೆ ಮಾಡಲಪ್ಪ | ೨೨೦

ದಿವಿಪಾತ್ರೆ ಕೊಡದೆ ನೀಲಮ್ಮ ತಾಯಿಗೆ
ನಾನೆಂಗೆ ಮೊಕುವ ತೋರಲಪ್ಪ |

ಅದಕಾಗಿ ನನ್ನ ತುಣುದು ಸಾಯಿಸು ಅಂತ
ನಿನ್ನ ಪಾದುದಲ್ಲಿ ಕೇಳಿಕೊಂಡೆ |

ನಿನ್ನ ಕರುಣ ಒಂದಿದ್ದರೆ ನನ್ನ ಪ್ರಾಣ ಹೋಗಲಿ
ಮಾತಿಗೆ ತಪ್ಪಿ ನಾನಿರಲಾರೆ" |

ಗುಂಡಯ್ಯನವ್ರ ಮಾತ ಕೇಳಿದ ಗಜರಾಜ
ಅಲ್ಲಿ ಕಿಲಕಿಲನೆ ಸ್ವಾಮಿ ನಕ್ಕಾರು | ೨೩೦

"ಅಯ್ಯಾ ಸರಣ ಕೇಳು ನಿನಗೊಂದು ದಾರಿಯುಂಟು
ನೀನು ಹೆದರೂವ ಕಾರ್ಣವಿಲ್ಲ |

ನೀನು ನೋಯಬೇಕಿಲ್ಲ ಸಾಯಬೇಕಿಲ್ಲ
ನಿನ್ಗೆ ಪಂಚಲೋಕದ ಪಡಿಮಣ್ಣ |

ಪಂಚಲೋಕದ ಪಡಿಮಣ್ಣ ತರಿಸಿ
ಕೊಡುವಂತ ಕೆಲಸ ನನಗಿರಲಿ" |

ಅಕ್ಕ ಗೌರಮ್ಮನ ಅಕ್ಕರೆಯ ಕಂದ
ಮುಕ್ಕಣ್ಣನ ಮೆಚ್ಚಿನ ಗಣಪತಿ |

ಮುಕ್ಕಣ್ಣ ಮೆಚ್ಚೀದ ಗಣಪತಿ ದೇವರು
ತನ್ನ - ವಾಗನ ಇಲಿಯ ಕರೆದಾರು |

"ಅಯ್ಯಾ ಮೂಸಿಕನೆ ನನ ಮಾತ ಕೇಳಪ್ಪ
ಬ್ರಹ್ಮದೇವರಿರೊ ಸತ್ಯಲೋಕ | ೨೪೦

ವಿಷ್ಣುವಿನ ವೈಕುಂಠ ಪರಶಿವನ ಕೈಲಾಸ
ನಾಗರಾಜನ ಪಾತಾಳ |

ನಾಗರಾಜನ ಪಾತಾಳ ಮಾನವರ ಭೂಲೋಕ
ಈ ಐದುಲೋಕಗಳ ಮಣ್ಣನ್ನು |

ಈ ಐದು ಲೋಕಗಳ ಮಣ್ಣ ತಂದುಕೊಡು ಕಂದ
ಗುಂಡಯ್ನ ಕಷ್ಟಕೆ ಒದುಗಪ್ಪ" |

ಹಂಗಂದ ಮಾತ ಇಲಿಯಣ್ಣ ಕೇಳಿ
ಪಂಚಲೋಕ್ದ ಮಣ್ಣು ತಂದಾರು |

ಪಂಚಲೋಕ್ದ ಮಣ್ಣ ರಾಶಿ ಹಾಕಿದ್ದ ನೋಡಿ
ಗುಂಡಯ್ಯ ಸರಣ ಕರವೆತ್ತಿ | ೨೫೦

ಗುಂಡಯ್ಯ ಸರಣ ಇನಿಯಂಕ ಸ್ವಾಮಿಗೆ
ಕರವೆತ್ತಿ ಕೈಯ ಮುಗಿದಾರು |

ಕರವೆತ್ತಿ ಕೈಯ ಮುಗಿದಾರು ಗುಂಡಯ್ಯ
ಪಾದಂಗಳಿಗೆ ಸರಣು ಸರಣಂದರು |

ಆನೆಯ ರೂಪುದಲಿ ಬಂದಿದ್ದ ಗಣಪತಿ
ಗುಂಡಯ್ಗೆ ಆಸುರ್ವಾದ ಮಾಡಿದರು |

ಗುಂಡಯ್ಗೆ ಆಸುರ್ವಾದ ಮಾಡಿ ಗಣಪತಿ
ಅವ್ರು - ಕೈಲಾಸ ಪರ್ವತಕೆ ಹೊರುಟಾರು |

ಪಂಚುಲೋಕದ ಮಣ್ಣ ತಕ್ಕೊಂಡು ಗುಂಡಯ್ಯ
ಬಂದಾರು ತಮ್ಮ ಗುರುಮಠಕೆ | ೨೬೦

ಗಂಡ ಬರುವುದ ಕಂಡು ಮರುಗ ಮಲ್ಲಿಗದೇವಿ
ಪಾದಾಕೆ ಪನ್ನೀರಾಗಣೆಯ |

ಪನ್ನೀರಾಗಣೆ ತಂದು ಪಾದಾವ ತೊಳೆದು
ಪಂಚುಲೋಕಾದ ಭಾಗ್ಯಾವ |

ಪಂಚುಲೋಕಾದ ಭಾಗ್ಯವುಳ್ಳ ಮಣ್ಣ
ಮನೆಗೆ ಕರುಕೊಂಡರು ಮರುಗಮ್ಮ |

ಪಂಚಲೋಕದ ಮಣ್ಣ ಬೆರಸಿ ಕಲಸಿದಿರು
ಹದಗೂಡಿ ಮಾಡಿದರು ದಿವಿಪಾತ್ರೆಯ |

ಮರುಗಮಲ್ಲಿಗದೇವಿ ತಲೆಮ್ಯಾತೆ ದಿವಿಪಾತ್ರೆ
ಹೊತ್ತುಕೊಂಡು ನಡೆದಾರು ಕಲ್ಯಾಣಿಗೆ | ೨೭೦

ಕಲ್ಯಾಣಿ ಕೊಳದಲ್ಲಿ ಮರುಗಮ್ಮ ಗುಂಡಯ್ಯ
ಮಿಂದು ಮಡಿಯುಟ್ಟು ಪೂಜಿದರು |

ಕಾಶಿ ಕೈಲಾಸದ ವಿಶ್ವನಾಥನ ನೆನೆದು
ಭಕ್ತೀಲಿ ಅವರು ಕೈಮುಗಿದು |

ಅನ್ನಪೂರ್ಣ ಸ್ಮೈತುವಾಗಿ ಪ್ರತೇಕ್ಷವಾಗಲೆಂದು
ನಡುನೀರಲ್ಲಿ ನಿಂತು ಧ್ಯಾನ ಮಾಡಿದರು |

ತುಂಬುದ ಸ್ವಾಮಾರ ಸೂರ್ಯ ಮೂಡುವಾಗ
ಸೂರ್ಯನಿಗಿಂತ ಹೆಚ್ಚಾಗಿ |

ಸೂರ್ಯನಿಗಿಂತ ಹೆಚ್ಚಾದ ಪ್ರಕಾಶದಲ್ಲಿ
ವಿಶ್ವನಾಥ ಅನ್ನಪೂರ್ಣೇಶ್ವರಿ |

ವಿಶ್ವನಾಥ ಅನ್ನಪೂರ್ಣೇಶ್ವರಿ ದೇವಿ
ಪ್ರತೇಕ್ಷವಾಗಿ ಮುಂದೆ ನಿಂತಾರು |

ಸ್ವಾಮಿ ಪ್ರತೇಕ್ಷನಾಗಿ ಮುಂದೆ ನಿಂತಿರುವಾಗ
ಗುಂಡಯ್ಯನವರು ತಲೆಬಾಗಿ |

ಗುಂಡಯ್ಯ ಮರುಗಮ್ಮನವರು ತಲೆಬಾಗಿ
ಸರಣು ಸರಣೆಂದು ಕೈಮುಗಿದು |

ದಿವಿಪಾತ್ರೇಲಿ ಬಂದು ನೆಲೆಗೊಳ್ಳಬೇಕೆಂದು
ಬೇಡಿಕೊಂಡರು ಸರಣರು |

"ಗುಂಡಯ್ಯ ಸರಣ ನಮ್ಮ ಮಾತ ಕೇಳು
ನೀಲಮ್ಮ ತಾಯಿಗೆ ಮೀಸಲು |

ಈ ಪಾತ್ರ್ಯ ನೀಲಮ್ಮ ಕೇಳಿದಾಗಲೆಲ್ಲ
ಕೇಳಿದಷ್ಟು ಆಗಾರ ಬರುತೀದೆ |

ಬೇರೆ ಯಾರಿಗೂ ಇದು ಜಪ್ಪಯ್ಯ ಅನ್ನೊಲ್ದು
ನೀಲಮ್ಮ ತಾಯಿಯು ಜಲುಮಾವು |

ನೀಲಮ್ಮ ತಾಯ ಜಲುಮ ಇರುವನಕ
ನಾವು - ಈ ಪಾತ್ರೇಲಿ ಇರುತೀವಿ ಗುಂಡಯ್ಯ" |

ಅನುತ್ಹೇಳಿ ಪಾರ್ವತಿ ಅನ್ನಪೂರ್ಣೇಶ್ವರಿದೇವಿ
ದಿವಿಪಾತ್ರೆಯನ್ನು ಸೇರಿಕೊಂಡರು |

. ಆನಂದುವಾಗಿ ಗುಂಡಯ್ಯ ಸರಣರು
ದಿವಿಪಾತ್ರೆಯನ್ನು ತಕ್ಕೊಂಡು |

ವಾದ್ಯ ಮಾಡಿಸಿಕೊಂಡು ಪಾತ್ರೆ ಹೊರ್ಸಿಕೊಂಡು
ನಂದಿಮಠಕೆ ಸರಣರು ಹೊರುಟಾರು |

ನಂದಿಮಠಕೆ ಬಂದು ಗುಂಡಯ್ಯನವರು
ನೀಲಮ್ಮ ತಾಯ ಪಾದಂಗಳಿಗೆ |

ದಿವಿಪಾತ್ರೆ ಒಪ್ಪೀಸಿ ಸರಣು ಸರಣನ್ನುತ
ತಮ್ಮ - ಗುರುಮಠಕೆ ಗುಂಡಯ್ಯ ನಡೆದಾರು |

ಇತ್ಲಕಡೆ ಬಸುವಣ್ಣ ಊಳ್ಳಿಯ ಸರಣರ
ಕರುಕೊಂಡು ಕಲ್ಯಾಣ ಪಟ್ಟಣಕೆ |

ಕರುಕೊಂಡು ಕಲ್ಯಾಣ ಪಟ್ಟಣಕೆ ಬಸವಯ್ಯ
ಡಂಗೂರ ಹೊಡ್ಸಿಕೊಂಡು ಬಂದಾರು |

ನೀಲಮ್ಮ ತಾಯಿಯು ಊರಂಕಕೆ ಹೋಗಿ
ಸರಣರ ಪಾದಗಳ ತೊಳೆಯುತ |

ಈಬುತ್ತಿ ಹಸ್ಸಿ ಕಡ್ಡಿ ಕಲ್ಲುರದಲಿ ಬೆಳಗಿ
ಕಲ್ಯಾಣ್ಕೆ ಬರಮಾಡಿಕೊಂಡ್ರು ಸರಣರ |

ಒಂದು ಲಕ್ಷದ ಮೇಲೆ ತೊಂಬತ್ತೇಳು ಕೋಟಿ
ಗಣಂಗಳು ಕಲ್ಯಾಣ್ಕೆ ಬಂದಾವು |

ಬಂದ ಗಣಂಗಳಿಗೆ ಕಾವಿ ಡೇರ್ಕಗಳಲಿ
ಉಳ್ಕೊಳಕೆ ತಾವ ಮಾಡಿದರು |

ಸರಣೆ ನೀಲಮ್ಮನವರು ಬಸವಣ್ಣನ ಆಸೆಯಂತೆ
ಭೋಜುಣೆಗೆ ತಯ್ಯಾರಿ ಮಾಡ್ಸಿದರು |

ಒಕ್ಕಳ ಅಕ್ಕಿ ಹಾಕಿ ಒಂದಮಾನ ಬ್ಯಾಳೆ ಹಾಕಿ
ಒಂದ್ ಬದನೆ ಕಾಯಾಕಿದರು |

ದಿವಿಪಾತ್ರೆಯಲ್ಲಿ ಸಿದ್ದವಾದ ಅಡಿಗೆಯ
ಸರಣರಿಗೆ ಪಡುಸಬೇಕಂತ |

ಬಸವಣ್ಣನವರು ಸರಣರೆಲ್ಲರನು
ಸ್ನಾನಮಡಿಗಳ ಮಾಡ್ಸಿದರು |

ಲಿಂಗಪೂಜೆ ಮಾಡ್ಸಿ ಜಂಗಮರ ಪೂಜೆಮಾಡ್ಸಿ
ಭೂಮ್ಯಾಗಲ ಹಾಸಣಿಕೇಲಿ ಕುಂಡುರಿಸಿ |

ಪಂಕ್ತಿ ಪಂಕ್ತಿಗೆಲ್ಲ ಕೇಳಿದಂತ ಪದಾರ್ಥಗಳು
ನೀಲಮ್ಮ ತಾಯಿ ಪಡುಸಿದರು | ೩೩೦

ಯಾವ ಲೋಕದಲೂ ಇಂತೆ ರುಚಿಯಾದ ಊಣಿಸ
ನಾವು ಉಂಡಿದ್ದೆ ಇಲ್ಲ ಎಂದಾರು |

ಬಂದ ಬಂದ ಸರಣರು ಪಂತಿ ಪಂತಿ ಕುಂತು
ಮನಸಾರ ಊಟಗಳ ಮಾಡಿದರು |

ಊಟ ಉಪಚಾರಕ್ಕೆ ನೀಲಮ್ಮನಂತೋರು
ಈ ಜಗತ್ಯಕ್ಕೆ ಬೇರೆ ಇಲ್ಲಾಂತ |

ಈ ಜಗತ್ಯಕೆ ಬೇರೆ ಯಾರೂ ಇಲ್ಲಾಂತ
ಆ ಜಂಗುಮರೆಲ್ಲ ಕೊಂಡಾಡಿದರು |

ನೀಲಮ್ಮ ತಾಯಿಯ ನಿಜಭಕ್ತಿಗೆ ಮೆಚ್ಚಿ
ಜಂಗಮರು ಕೊಂಡಾಡುತಿರುವಾಗ | ೩೪೦

ಬಸವಣ್ಣ ದೇವರು ನೀಲಮ್ಮ ತಾಯಿಯು
ಶಿವನ ಕ್ರಪಾಯಕೆ ತಲೆಬಾಗಿ |

ಕಾವೀಡೇರ್ಯಾದಲ್ಲಿದ್ದ ಪ್ರಭುದೇವರ ಕಂಡು
ಪಾದಗಳ ಕಣ್ಣಿಗೊತ್ತಿಕೊಂಡು |

ಲಕ್ಸುದಮೇಲೆ ತೊಂಬತ್ತೇಳು ಕೋಟಿ
ಗಣಂಗಳಿಗೆ ಬೋಜಣೆ ಮಾಡಿಸಿದ |

ಭೋಜಣೆ ಮಾಡಿಸಿದ ಸುದ್ದೀಯ ತಿಳಿಸಿ
ಪ್ರಭುಸ್ವಾಮಿಗೆ ಉಘೇ ಎಂದಾರು |

ಒಕ್ಕ ಅಕ್ಕಿ ಹಾಕಿ ಒಂದ್ಮಾನ ಬ್ಯಾಳೆ ಹಾಕಿ
ಒಂದು ಬದನೆಕಾಯಾಕಿ ೩೫೦
ಲಕ್ಕುಸದ ಮೇಲೆ ತೊಂಬತ್ತೇಳು ಕೋಟಿ
ಗಣಂಗಳಿಗೆ ನಿಚ್ಚು ಭೋಜಣೆ ಮಾಡ್ಸಿ
ಮಿಕ್ಕಿದ ಪರ್ಸಾದವ ಕಲ್ಲುಬಂಡಿಗೆ ತುಂಬ
ಕೈಲಾಸಕ್ಕೆ ಕಳಿಸಿದಂತ ನೀಲಮ್ಮ ತಾಯಿ
ಪಾದಂಗಳಿಗೆ
ಉಘೇ ಉಘೇ ಉಘೇ
ಬಸವಣ್ಣನವರು ಕುಂಬಾರ ಗುಂಡಯ್ಯನವುರ
ಕರಸಿಕೊಂಡರು ಕಾವಿ ಡೇರ್ಯಾಕೆ |

ಕರಸಿಕೊಂಡರು ಪ್ರಭುಸ್ವಾಮಿಗಳಿರುವಂತ
ಪವಿತ್ರುವಾದ ಕಾವಿ ಡೇರ್ಯಾಕೆ |

"ಗುಂಡಯ್ಯನವರೆ ಈ ಜಗತ್ಯದಲ್ಲೆಲ್ಲ ೩೬೦
ನರಮನ್ಸ ಅನ್ನ ತಿನ್ನುವತನಕ |

ನಿಮ್ಮ ಮಡಕೆಯಿಂದ್ಲೆ ಅವರು ಅನ್ನ ತಿನ್ನಲಿ
ನಿಮ್ಮ ಹೆಸರು ತಿರುವಾಗಲಪ್ಪ" |

ಹಂಗಂದ ಮಾತ ಕೇಳಿ ಗುಂಡಯ್ಯ ಸರಣರು
ಪ್ರಭುಸ್ವಾಮಿ ಪಾದಗಳ ತಬುಕೊಂಡು |

ಪ್ರಭುಸ್ವಾಮಿ ಪಾದಗಳ ತಬುಕೊಂಡು ಗುಂಡಯ್ಯ
ಸರಣು ಸರಣು ಸರಣೆಂದಾರು | ೩೬೭

ಬಸವಣ್ಣನ ಮನೆಯ ಶರಣೆಯರು

ಬಸವಣ್ಣ ಹುಟ್ಟೋಗ ಬಿಸಿಲಿಲ್ಲ ಗಾಳಿಲ್ಲ
ಬಸವಯ್ಯ ತಂಗೆ ನಾಗಮ್ಮ - ಹುಟ್ಟುವಾಗ
ಹಸುರೊಳಗೊಡದು ಫಲಬಂದೊ |

ಹಸೆಯ ಬರೆಯೋಳ ಹಸುಳೆಯ ಕರೆಸೀರಿ
ಬಸವಣ್ಣನ ಮನೆಯ ಶರಣೆಯ - ನೀಲಮ್ಮನ
ಹಸೆಯ ಬರೆಯೋಕೆ ಕರೆಸೀರಿ |

ಬಸವಣ್ಣನ ಮಡದಿ ಹಸುಗೂಸು ನೀಲಮ್ಮ
ಬಸುರಾದರ್ಹೆಂಗೆ ನಡೆದಾಳು - ಗೋದೀಯ
ಸಸಿಯಾಗೆ ನೌಲು ನಡೆದಂಗೆ |

ಕುಂಬಾರ ಗುಂಡಯ್ಯ - ೩

ಕುಂಬಾರ ಗುಂಡಯ್ಯ - ನಂಬಿದ
ಶಂಭು ಶಂಕರ ಶಿವನಾ | ಸೊಲ್ಲು |

ಕಲ್ಯಾಣ ಪಟ್ಟದಲಿ
ಕಲ್ಯಾಣ್ಣ ಬಸವಣ್ಣ
ಕಲ್ಯಾಣಿ ಕೊಳದಲಿ
ಮಿಂದು ಮಡಿಯುಡುವಾಗ |

ಕಲ್ಯಾಣ್ಣ ಬಸವಣ್ಣ
ಮಿಂದು ಮಡಿಯುಟ್ಟು
ಸಂದು ಸಂದೀಗೆ ಸ್ವಾಮಿ
ಈಬುತ್ತಿ ಧರ್ಸುವಾಗ |

ಮಡಿಯುಟ್ಟು ಬಸವಯ್ಯ
ಮಲ್ಲೂಗೆ ಹೂ ತಗ್ದು
ಸಂಗಮೇಶ್ವರ ಸ್ವಾಮಿ
ತಲೆ - ಮೇಲಿಟ್ಟು ಪೂಜುವಾಗ |

ಕಡ್ಡಿ ಕರ್ಪೂರ ಬೆಳ್ಗಿ
ಸಾಮ್ರಾಣಿ ಧೂಪನಿಕ್ಕಿ
ಹಣ್ ಮುರ್ದು ಕಾಯೊಡ್ದು
ಪೂಜೆಯ ಮಾಡುವಾಗ |

ಶಿವನ ಸೊರಣೆ ಮಾಡಿ
ಶಿವು ಧ್ಯಾನ ಜಪ ಮಾಡಿ
ಶಿವನ ಪಾದಂಗಳ್ನೆ
ಶರಣು ಶರಣನುವಾಗ |

ನಿಚ್ಚ ಶಿವರಾತ್ರಿಯೆಂದು
ಮೆಚ್ಚಿ ಪೂಜೆಯ ಮಾಡಿ
ಶರಣ ಮಾತ್ಮರನೆಲ್ಲ
ಸೊರಣೆಯ ಮಾಡುವಾಗ |

ಗುಂಡಯ್ಯ ಮಾತ್ಮರು
ಬಂಡೀಲಿ ಮಣ್ಣತುಂಬಿ
ಬರುವಾಗ ದಾರೀಲಿ
ಬಸವಣ್ಣನವ್ರ ಕಂಡ್ರು |

ಬಸವಣ್ಣನವರ ಕಂಡು
ಎರ್ಡೂ ಕೈಗಳನೆತ್ತಿ
ಭಕ್ತೀಲಿ ಕೈಮುಗ್ದು
ಶಿರ - ಬಾಗಿ ಶರಣು ಶರಣಂದಾರು |

ಮಗಳು ಕಲ್ಯಾಣಿಯ
ಮದುವೆ ಸುದ್ದಿ ಹೇಳಿ
ಆಸುರ್ವಾದಗಳ ಬೇಡಿ
ಸರ್ಮು - ಬಾಗಿ ಶರಣು ಶರಣಂದಾರು |

ಮಗಳು ಕಲ್ಯಾಣಿಗೆ
ಸುಭವಾಗಲಂತ ಹೇಳಿ
ಆಸುರ್ವಾದಗಳ ಬೇಡಿ
ಸರ್ಮು - ಸರಣಂದಾರು ಗುಂಡಯ್ಯ |

ಗುಂಡಯ್ನ ಮಾತ ಕೇಳಿ
ದೊಡ್ಡೋರು ಬಸವಣ್ಣ
ಸಂತೋಷ ಪಟ್ಟುಕೊಂಡು
ಹರಸಿ ಸ್ವಾಮಿ ಕಳಿಸಿದರು |

ಶಿವನಾಮ ಜಪಿಸುತ
ಶಿವಧ್ಯಾನ ಮಾಡುತ
ಕಲ್ಯಾಣ್ಣ ಅಣ್ಣನ
ನೆನೆಯುತ ಗುಂಡಯ್ಯ |

ಹಟ್ಟೀಗೆ ಬಂದಾರು
ಸರಣ ಗುಂಡಯ್ಯನೋರು
ಜಗ್ತಿ ಮ್ಯಾಲಿದ್ದಂತ
ಜನ್ರ - ನೋಡಿದರು ಗುಂಡಯ್ಯ |

ಯಾರು ಸ್ವಾಮಿ ತಾವು
ಏನು ಬಂದಿರಿ ಹೇಳಿ
ನಿಮಗೆಲ್ಲ ಭಕುತೀಲಿ
ಸರ್ಮು - ಸರಣಾರ್ತಿ ಅನ್ನುತೀನಿ |

ಗುಂಡಯ್ನ ಮಾತ ಕೇಳಿ
ಬಂದಿದ್ದ ನಂಟರು
ಒಲ್ಮೊಂದು ಮಾತ
ಹೇಳುತಾರೆ ಏನಂತ |

"ಗುಂಡಯ್ಯ ಸರಣರೆ
ನಮ್ಮ ಮಾತ ಕೇಳಿ
ನಾವು ಗಂಡೀನ ಕಡೆಯ
ನೆಂಟಾರು ಬಂದಿದ್ದೀವಿ" |

"ಹೇಳಿ ಹೇಳಿ ಸ್ವಾಮಿ
ಬಂದ ಕಾರ್ಯವ ಹೇಳಿ
ತಾವು ಕಾಲಲಿ ತೋರಿದ್ದ
ನಾನು - ತಲೆಲೊತ್ತು ಮಾಡುತೀನಿ" |

"ನಿಮ್ಮ ಮಗಳು ಕಲ್ಯಾಣಿ
ನಿಮ್ಮ ಹುಡುಗ ಲಿಂಗಯ್ನ
ಈ ಇಬ್ಬರ ಮದುವೆ
ಲಗುನಕೆ ಬರುತೀವಿ |

ನಮ್ಮ ಕಡೆಯಿಂದ ಕೇಳಿ
ವರನು ಬರೂವುದಕೆ
ಆನೆಯ ಕಳಿಸಿ
ಕೊಡಬೇಕು ಬೀಗರೆ |

ಆನೆಯ ಮೇಲುಗಡೆ
ವರನನ್ನು ಕೂರ್ಸಿಕೊಂತು
ಮದುವೆ ಮಂಟಪಕೆ
ಕರುಕಂಡು ಬರುತೀವಿ |

ಇದಕೊಪ್ಪೀಗೆ ಮಾತ
ಹೇಳೀರಿ ಬೀಗರೆ
ನಾವು ಸ್ಕೆತ ಒಪ್ಪಿ
ಬ್ಯಾಗುದಲಿ ಬರುತೀವಿ" |

ನೆಂಟರ ಮಾತುಗಳ
ಕೇಳಿದರು ಗುಂಡಯ್ಯ
"ನೀವು ಹೇಳಿದಂತೆ
ಆನೆ - ಕಳಿಸಿ ಕೊಡುತೀನಿ" |

"ಹಂಗಾದ ಮ್ಯಾಕೆ
ಈಗಲೆ ಕಳ್ಸಿಕೊಡಿ
ವರನನ್ನು ಕರುಕೊಂಡು
ಬ್ಯಾಗದಲ್ಲಿ ಬರುತೀವಿ" |

ಗುಂಡಯ್ಯ ಶರಣಾರು
ಶಿವನ ಸೊರಣೆಯ ಮಾಡಿ
ಮಾವಟಿ ಮದ್ದಾರ್ಯ
ಮನೆಯ - ಬಾಕಲಿಗೆ ಬರುತಾರೆ |

"ಅಯ್ಯಾ ಮದ್ದಾರಿ ಕೇಳು
ನಿನಗೊಂದು ಸರಣಾರ್ತಿ
ನಮ್ಮ ಅಳಿಯಾನ
ಕರಕೊಂಡು ಬರುವುದಕೆ |

ಅಳಿಯನ ಕರುಕೊಂಡು
ಬರುವೋಕೆ ಮದ್ದಾರಿ
ನಿನ್ನ - ಆನೆಯ ಬಾಡಿಗೆಗೆ
ಕೊಡಬೇಕು ಕಾಣೆರಪ್ಪ |

ಬಾಡಿಗೆ ಕೊಡುತೀವಿ
ಬಂಕಾವ ಕೊಡುತೀನಿ
ವರನ ಕರತರಬೇಕು
ಆನೆಯ ಕೊಡಿರಪ್ಪ |"

ಬಾಡೀಗೆ ಮಾತಾಡಿ
ಆನೆಯ ತಕ್ಕೊಂಡು
ವರನ ಕರುಕೊಂಡು
ಅವ್ರು - ಆನಂದವಾಗಿ ಬರುವಾರೆ |

ಮಗಳು ಕಲ್ಯಾಣಿಯ
ಹುಡುಗ ಲಿಂಗಯ್ಯನಿಗೆ
ಅದ್ಧೂರಿಯಲಿ ಮದುವೆ
ಕಾರ್ಯವು ನಡೆದೀತು |

ಮದುವೆ ಕಾರ್ಯವು ನಡ್ಸು
ಹೆಣ್ಣು ಗಂಡುಗಳನು
ಶಾಸ್ತ್ರ ಸಮ್ಮಂದ ಮಾಡಿ
ಮಡಿಲನೆ ತುಂಬಿದರು |

ನೆಂಟರಿಷ್ಟರ ಜೊತೆಗೆ
ಹೆಣ್ಣುಗಂಡುಗಳ
ಆನೆಲಂಬಾರಿ ಮ್ಯಾಲೆ
ಕಳಿಸಿಕೊಟ್ಟರಾಗ |

ಮಗಳು ಕಲ್ಯಾಣೆಯ
ಅಳಿಯ ಲಿಂಗಪ್ಪನ
ಸೊಸ್ತಾನುಕ್ ಮುಟ್ಟಿಸಿ
ಆನೆಯು ಬರುವಾಗ |

ಗೊಮ್ಮರ್ದು ರೋಗದಿಂದ
ಆನೆಯು ಅರಚುತ
ನೆಲಕ್ಕೆ ಬಿದ್ದು ಪ್ರಾಣ
ಕಳದೇಯಕೊಂಡಿತಲ್ಲ |

ಸುದ್ದಿಯ ತಿಳಿದ
ಶರಣ ಗುಂಡಯ್ಯನೋರು
ಮಾವಟಿ ಮದ್ದಾರಿಯ
ಕರಸಿಕೊಂಡರು ಆಗ |

ಆನೇಯು ಸತ್ತ ಸುದ್ದಿ
ಕೇಳಿದ ಮದ್ದಾರಿಯು
"ನನಗೆ ನನ್ನ ಆನೆ
ಬೇಕೇಬೇಕಂ"ದನು |

"ನಿನ್ನ ಆನೆಗೆ
ಬದಲು ಆನೆಯನು
ಕೊಡ್ತೀನಿ ಮದ್ದಾರಿ
ಒಪ್ಪಿಕೊಳಯ್ಯ |

ಆನೆಗೆ ಬದಲಾಗಿ
ನೀ ಏನ ಕೇಳುದ್ರು ಸೈತ
ಕೊಡ್ತೀನಿ" ಅಂತ
ಗುಂಡಯ್ಯ ನುಡಿದಾರು |

ಗುಂಡಯ್ಯ ಶರಣರ
ಮಾತ ಕೇಳದಲೆ
ಮದ್ದಾರಿ ಕ್ಯಾಪುದಲಿ
ಏನಂತ ನುಡಿದನು |

ನೀನು ಏನ ಕೊಡಬಲ್ಲೆ
ನೀನು ಏನ ಮಾಡಬಲ್ಲೆ
ನನ್ನ ಆನೆಯೇ ನನಗೆ
ಬೇಕೇಬೇಕಂದನು |

"ನನಗೆ ನನಗೆ ನನ್ನ
ಆನೆಯೇ ಆಗಬೇಕು
ಬೇರೆ ಆನೆ ಕೊಟ್ರೂ
ನನಗೆ ಬೇಕಾಗಿಲ್ಲ |

ನಿನ್ನ ದುಡ್ಡು ಯಾರ್ಗೆ ಬೇಕು
ನಿನ್ನ ಕಾಸು ಯಾರ್ಗೆ ಬೇಕು
ನನ್ಗೆ ಆನೆಗೆ ಬದಲಾಗಿ
ಏನೇನೂ ಬೇಕಾಗಿಲ್ಲ" |

"ಸತ್ತ ಆನೆಯ ನಾನು
ಹೆಂಗೆ ತಂದುಕೊಡಲಪ್ಪ
ನೀವೊಪ್ಪುವ ಬೆಲೆಯ
ಸಲ್ಸುತೀನಿ ಮಾವಟಿ" |

ಗುಂಡಯ್ನ ಮಾತಿಗೆ
ಒಪ್ಪಾದೆ ಮಾವಟಿ
ಆಕಾಶ ಭೂಮಿಗಳ
ಒಂದು ಮಾಡುತ್ತಿದ್ದ |

ಆಕಾಶ ಭೂಮಿಗಳ
ಒಂದು ಮಾಡೋ ಹಂಗೆ
ಕೂಗಾಡಿ ಬಾಯಿಗೆ
ಬಂದಂತೆ ಬಯ್ಯುತಿದ್ದ |

ಎಷ್ಟೆ ಕೇಳಿಕೊಂಡರು
ಎಷ್ಟೇ ಬೇಡಿಕೊಂಡರು
ಗುಂಡಯ್ನ ಮಾತಿಗೆ
ಬೆಲೆ - ಕೊಡಲಿಲ್ಲ ಮಾವಟಿ |

"ಬೇರೆ ದಾರಿಯ ನಾನು
ಕಾಣೆನಲ್ಲ ಪರಮಾತ್ಮ"
ಹಂಗಂತ ಗುಂಡಯ್ಯ
ಮನೆಯ ಸೇರಿಕೊಂಡರು |

"ಮದ್ದಾರಿ ಅನೆಯ
ಹೆಂಗೆ ತಂದುಕೊಡಲಪ್ಪ?"
ಅಂತ್ಹೇಳಿ ಚಿಂತೆಯ
ಮಾಡಿದರು ಗುಂಡಯ್ಯ |

ಅಂತು ಚಿಂತೆಯ ಮಾಡಿ
ಮಂಚಾದಲ್ಲೊರಗಿದರು
ಮಾಯಾದ ನಿದ್ರೆಯು
ಕವಿಯಿತು ಗುಂಡಯ್ಗೆ |

ಮಾಯಾದ ನಿದ್ದೆಲಿ
ಶಿವುನ ಸೊಪ್ಪನದಲಿ
ಹರನು ಗಿರಿಜಮ್ಮನು
ನಗುನಗುತ ಹೇಳಿದರು |

"ಶರಣ ಗುಂಡಯ್ಯ
ಚಿಂತೇಯ ಮಾಡಬೇಡ
ಏಳು ಬೇಗೇಳು
ನಾವು ಹೇಳಿದಂತೆ ಮಾಡಪ್ಪ |

ಮನೆಯ ಮುಂಬಾಗಲ
ಮುಚ್ಚಿಕೊ ಗುಂಡಯ್ಯ
ನಾ ಹೇಳಿದಂಗೆ ಮಾಡು
ಶರಣ ಗುಂಡಯ್ಯ |

ಕದದ ಕೆಳಗಲಿಂದ
ಉತ್ಸಾಸ್ವವರುಗೂ
ನೀನು - ಹೊಸ ಮಡ್ಕೆಗಳನೆಲ್ಲ
ಒತುಬುಡು ಗುಂಡಯ್ಯ" |

ಹಂಗಂತ ಹೇಳಿ
ಆಸುರ್ವಾದವ ಮಾಡಿ
ಹರನು ಗಿರುಜಮ್ಮನು
ಕೈಲಾಸ್ಕೆ ಹೋದರು |

ಹರನು ಗಿರಿಜಮ್ಮನ್ನು
ಗುಂಡಯ್ಯ ಕೈಮುಗ್ದು
ಪಗ್ಗನೆ ಮ್ಯಾಲುಕೆದ್ದು
ನಾಕ ದಿಕ್ಕ ನೋಡಿದನು |

ಥಟ್ಟನೆ ಗುಂಡಯ್ಯ
ಮುಂದಾಲ ಬಾಕಲ
ಮುಚ್ಚಿ ಉತ್ಸಾಸನ್ಗಂಟ
ಹೊಸ - ಮಡ್ಕೆಗಳ ಒತುಬುಟ್ರು |

ಮಡ್ಕೆಗಳ ಒತುಬುಟ್ರು
ಗುಂಡಯ್ಯ ಶರಣರು
ಮನೆವೊಳ್ಗೆ ಕೂತುಕೊಂಡು
ಶಿವನ ಧ್ಯಾನ ಮಾಡುತಿದ್ರು |

ಗುಂಡಯ್ಯ ಶರಣರು
ಶಿವುಧ್ಯಾನ ಮಾಡುವಾಗ
ಮದ್ದಾರಿ ಊರಲೆಲ್ಲ
ಸಾರಿಕೊಂಡು ಬಂದನು |

ಮದ್ದಾರಿ ಊರಲೆಲ್ಲ
ವಿನಂತ ಸಾರೀದ
"ಗುಂಡಯ್ಯ ಅನ್ಯಾಯ
ಮಾಡವುನೆ ಜನಗಳೇ |

ನನ್ಗೆ ನ್ಯಾಯ ಬೇಕು
ನನ್ಗೆ ತೀರ್ಪು ಬೇಕು
ನನಗಾದ ಅನ್ಯಾಯಕೆ
ಪರಿಹಾರ ಬೇಕು |

ನನಗಾದ ಅನ್ಯಾಯಕೆ
ನ್ಯಾಯಾ ಕೊಡಬೇಕು"
ಹಂಗಂತ ಹಿರೀಕರ
ಮದ್ದಾರಿ ಸೇರಿಸಿದ |

ಮಂದಾದ ಕಟ್ಟೆಯಲಿ
ಪಟೇಲ್ರು ಯಜಮಾನ್ರು
ಶ್ಯಾನುಬೋಗರನೆಲ್ಲ
ಮದ್ದಾರಿ ಸೇರಿಸೀದ ;

ಹಿರೀಕ್ರುನೆಲ್ಲ ಸೇರ್ಸಿ
ನ್ಯಾಯಾವ ಕೇಳುತಾನೆ
ನ್ಯಾಯ ನನಗೆ ನೀವು
ಕೊಡಬೇಕು ಅಂದನು |

ನ್ಯಾಯಾದ ಕಟ್ಟೆಯಲಿ
ಹಿರೀಕರೆಲ್ಲ ಸೇರಿ
ನ್ಯಾಯ ಪಂಚಾಯ್ತಿಯ
ಮಾಡುತಾರೆ ಬೇಗುದಲ್ಲಿ |

ಸತ್ಯ ಅಸತ್ಯಾವ
ತಿಳಿಯಬೇಕು ಅಂತ
ಶರಣ ಗುಂಡಯ್ನ
ಕರೆಯಿರಿ ಅನ್ನುತಾರೆ |

ಗುಂಡಯ್ಯ ಶರಣರ
ಮನೆ ತಾವ್ಕೆ ಆಳುಗಳು
ಬಂದು ಕೂಗಿ ಕರೆದರು
ಗುಂಡಯ್ನ ಸದ್ದಿಲ್ಲ |

ಗುಂಡಯ್ನ ಸದ್ದಿಲ್ಲ
ಅನುತ್ಹೇಳಿ ತಳವಾರ
ನ್ಯಾಯಾದ ಕಟ್ಟೆಗೆ
ಸುದ್ದೀಯ ಕೊಟ್ಟನು |

ಆಗ ಮದ್ದಾರಿಯು
"ನಾನೇ ಹೋಗುತೀನಿ
ನಾನೇ ಗುಂಡಯ್ನೋರ
ಕರ್ಕೊಂಡು ಬರುತೀನಿ |

ಗುಂಡಯ್ನ ನಾನೇ
ಕರ್ಕೊಂಡ್ಬತ್ತೀನಿ" ಅಂತ
ಮದ್ದಾರಿ ತಾನೆ
ಗುಂಡಯ್ನ - ಮನೆತಾವ್ಕೆ ಬಂದ |

ಗುಂಡಯ್ಯ ಶರಣರ
ಕರಿಯಾಕೆ ಬಂದಂತ
ಮದ್ದಾರಿ ಮನೆಮುಂದೆ
ನಿಂತುಕೊಂಡು ಕೂಗೀದ |

ಮದ್ದಾರಿ ಕೂಗಿದರೂ
ಶರಣ ಗುಂಡಯ್ಯನವ್ರು
ಮಾತುಕತೆಯಾಡದೆ
ಮನೆಯು ಒಳಗಿದ್ದರು |

ಕೂಗಿದರೂ ಸೈತ
ನುಡಿಯಲೊಲ್ಲರು ಅಂತ
ಮದ್ದಾರಿ ಕ್ಯಾಪುದಿಂದ
ಝಾಡೀಸಿ ಬಾಗಲೊದ್ದ |

ಝಾಡೀಸಿ ಬಾಕಲ
ಒದ್ದ ರಬುಸಕೆ
ಬಾಕಲ ಹಿಂದುಗಡೆ
ಓತಿದ್ದ ಮಡಕೆ ಸಾಲು |

ಓತಿದ್ದ ಮಡಕೆ
ಸಾಲು ಸಾಲೆಲ್ಲ
ಒಡೆದೊಡೆದು ಪುಡಿಪುಡಿ
ಆದಾವು ಕಾಣೆರಪ್ಪ |

ಮಡ್ಕೆಗಳು ಒಡೆದು
ಪುಡಿಪುಡಿ ಆದವು
ಆಗ ಗುಂಡಯ್ಯನವರು
ಮನೆಯನು ಕಡೆದರು |

ಗುಂಡಯ್ಯನವರ
ನೋಡೀದ ಮದ್ದಾರಿ
ಬನ್ನಿ ಮಂದಾಕೆಂದು
ಕೂಗಿ ಕರೆದಾನು |

ಮದ್ದಾರಿ ಕರೆದಾಗ
ಗುಂಡಯ್ಯನವರು
ನಗುನಗುತ ಮಂದಕೆ
ಸಾಗಿ ಬಂದಾರು |

ಮಂದದ ಕಟ್ಟೆಗೆ
ಬಂದ ಗುಂಡಯ್ಯನವರು
ಅಲ್ಲಿದ್ದ ಮಾತ್ಮರಿಗೆ
ಶರಣು ಶರಣೆಂದರು |

"ಏನಪ್ಪ ಗುಂಡಯ್ಯ
ನ್ಯಾಯಾದ ಕಟ್ಟೆಗೆ
ಕರೆದರೂ ನೀವು
ಬರದೆ ನಿಲಬವ್ದದೆ?" |

"ಸ್ವಾಮಿ ಯಜಮಾನರೆ
ಕರೆಯದೆ ಇದ್ದರೂ
ನಾನಾಗೆ ನಿಮ್ಮತ್ರುಕೆ
ತಪ್ಪಾದೆ ಬರುತಿದ್ದೆ |

ಈಗ ಬರಬೇಕಾಯ್ತು
ಬಂದಿವ್ನಿ ಮಾನ್ಯರೇ
ಈ ಮದ್ದಾರಿ ನನ್ನ
ವೈವಾಟ ಕೆಡುಸವ್ನ" |

ಗುಂಡಯ್ನ ಮಾತ ಕೇಳಿ
ಅಲ್ಲಿ ಸೇರಿದ್ದೋರು
"ಏನು ನಿನ್ನ ವೈವಾಟು?
ಹೇಳು ಹೇಳು" ಎಂದಾರು |

"ಸ್ವಾಮಿ ಕೇಳಿ ಕೇಳಿ
ತಿಂಗ್ಳಾನುಗಟ್ಲೆ ನಾನು
ದುಡಿದಿದ್ದ ಕೆಲ್ಸನೆಲ್ಲ
ಹಾಳುಗೆಡ್ಡಿ ಬಂದವುನೆ |

ನಾನು ತಲೆ ಎತ್ತದಂತೆ
ನನ್ನ ವೈವಾಟನೆಲ್ಲ
ಪಾಳುಗೆಡವಿ ಬಂದವ್ನೆ
ಈ ಹಾಳು ಮದ್ದಾರಿ |

ಕೈಗೆ ಬಂದ ತುತ್ತು
ಬಾಯ್ಗೆ ಬರದಂಗೆ
ನನ್ನ ಬಾಳಗೆಡಸಿ
ಬಂದವ್ನೆ ಮದ್ದಾರಿ |

ನನ್ಗೆ - ನ್ಯಾಯವ ಕೊಡಬೇಕು
ನನ್ನ ಕಾಪಾಡಬೇಕು
ನನಗಾದ ಲುಕ್ಸಾನ
ಕಟ್ಟಿ ಕೊಡಬೇಕು" |

ಗುಂಡಯ್ನ ಮಾತ ಕೇಳಿ
ಮಾವಟಿ ಮದ್ದಾರಿ
ಬುಸುಬುಸನೆ ಉಸುರ
ಬುಡುತ ನಿಂತಾನು |

ಮಂದಾದ ಕಟ್ಟೇಲಿ
ಸೇರಿದ್ದ ಹಿರೀಕರು
ಮೂಗುಜ್ಜಿಕೊಳ್ಳುತ
ಅವುರೆಲ್ಲ ನೋಡಿದರು |

"ಏನಾಯ್ತು ಹೇಳಪ್ಪ
ಶರಣ ಗುಂಡಯ್ಯ
ನಿಸಗಾದ ಲುಕ್ಸಾನು
ಏನೂಂತ ಹೇಳಪ್ಪ" |

ಗುಂಡಯ್ಯ ಶರಣರು
ಎಲ್ಲರ್ಗು ಕೈಮುಗುದು
ಏನಂತ ಆರಿಕೆಯ
ಮಾಡಿದರು ಗುರುವೆ |

"ಸ್ವಾಮಿ ನಾನು ಕಷ್ಟಪಟ್ಟು
ಮಾಡಿದ್ದ ಮಡ್ಕೆಗಳ
ಬಾಕಲಲ್ಲಿ ಓತು
ಮಡಗಿದ್ದೆ ಕೇಳಿರಪ್ಪ |

ಮಡಗಿದ್ದ ಮಡ್ಕೆಗಳ
ಈ ಮದ್ದಾರಿ ಮಾವಟಿ
ಬಾಕಲ ಒದ್ದು
ಒಡ್ದು ಹಾಳುಗೆಡುಗವ್ನೆ |

ಹಾಳುಗೆಡವಿದ ನನ್ನ
ಬಾಳುಗೆಡವಿದ ನನ್ನ
ಈ ಮದ್ದಾರಿ ನನಗೆ
ಅನ್ಯಾಯ ಮಾಡವ್ನೆ" |

ಹಂಗಂತ ಮಾತ ಕೇಳಿ
ಮದ್ದಾರಿ ಹೇಳುತಾನೆ
"ಅದರ ನಷ್ಟವ ನಾನು
ಕಟ್ಟಿಕೊಡುತೀನಿ" |

ಅದರ ನಷ್ಟವ ನಾನು
ಕಟ್ಟಿ ಕೊಡುತೀನಂತ
ಹೇಳಿದಾಗ ಗುಂಡಯ್ಯ
ಶರಣರು ನುಡಿದಾರು |

"ನನ್ಗೆ - ನಷ್ಟ ಕಟ್ಟಿಕೊಡೊ
ಕಷ್ಟ ನಿನುಗ್ಯಾತಕಪ್ಪ?
ಮದ್ದಾರಿ ನನ್ಗೆ ನನ್ನ
ಮಡಕೆಗಳೇ ಬೇಕು |

ನನ್ನ ಮಡ್ಕೆಬುಟ್ಟು
ನನಗೇನು ಬೇಕಾಗಿಲ್ಲ
ಮೊದಲಿದ್ದಂತೆ ನನ್ನ
ಆ ಮಡ್ಕೆಗಳ್ನ ಕೊಡಬೇಕು!" |

"ಒಡುದ ಮಡ್ಕೆಗಳ
ಮೊದುಲಂಗೆ ಕೊಡಕಾದ್ತ?
ಅದಕೇನು ಬೆಲೆಯಾಯ್ತದೆ
ಹೇಳು ಗುಂಡಯ್ಯ"

ಮದ್ದಾರಿ ಮಾತ ಕೇಳಿ
ಗುಂಡಯ್ಯ ಶರಣರು
ನೆಗುನೆಗುತ ಅಲ್ಲೊಂದು
ಮಾತ ನುಡಿದಾರು |

"ಒಡ್ದ ಮಡ್ಕೆಗಳು
ಮೊದಲಂಗೆ ಆಗದಿಲ್ಲ
ಸತ್ತ ಆನೆ ಸೈತ
ಮತ್ತೆಂಗೆ ಬಂದೀತು?"

ಗುಂಡಯ್ಯ ಶರಣರ
ಮಾತಕೇಳಿ ಎಲ್ಲರೂ
'ಸರಿ ಸರಿ' ಅಂತ್ಹೇಳಿ
ನ್ಯಾಯ-ಪೈಸಲ್ ಮಾಡಿದರು |

ದಿಕ್ಕು ತೋಚದೆ ನಿಂತ
ಮಾವಟಿ - ಮದ್ದಾರಿ
ಗುಂಡಯ್ಯ ಶರಣರ
ಪಾದಾವ ತಬ್ಬಿಕೊಂಡ |

ಮಾವಟಿಯ ಮ್ಯಾಲುಕೆತ್ತಿ
ಶರಣ ಗುಂಡಯ್ಯನವ್ರು
ಸಮಾಧಾನ ಮಾಡಿ
ಕಳಿಸಿ ಕೊಡುತಾರೆ |

ಸತ್ಯ ಶರಣಾರಾದ
ಗುಂಡಯ್ಯ ಕಥೆಯ
ಕೇಳೀದ ಮಾತ್ಮರಿಗೆ
ಶರಣು ಶರಣಾರ್ತಿ |

ಇರೆಂಬತ್ಕೋಟಿ ನೆನುದಾವೋ

ಬಂಡಿಗೆ ಬಂಟನಾಗಿ ಭೂಮಿಗೊಂಟಿಗನಾಗಿ
ಭೂಮೀಗೆ ನೀನು ದಣಿಯಾಗಿ - ಅನ್ನಕೊಟ್ಟೆ
ಬಸವಣ್ಣನ್ನ - ಇರೆಂಬತ್ಕೋಟಿ ನೆನುದಾವೊ |

ಒಕ್ಕಲಿಗರ ಮುದ್ದೇಗೌಡ

೧. ಜೇನಿಗರ ಮುದ್ದೇಗೌಡ್ರು ಲಿಂಗವಂತರಾದರು

ತಂದನ್ನೂ ತಾನೂ ತಂದನುತಂದೆನಾನೂ || *ಸೊಲ್ಲು* ||

ಸುದ್ದುಳ್ಳ ಶಿವುಭಕ್ತ ಕಲ್ಯಾಣ್ ಪಟ್ಟಣುದಲ್ಲಿ*
ಮುದ್ದೇಗೌಡನೆಂಬೊ ಒಕ್ಕುಲಿಗ ಘನಸರಣ
ಅವುರ್ಗೇಳು ಜನ ಗಂಡುಮಕ್ಕ ಒಬ್ಬಾಳೆ ಹೆಣ್ಣು ಮಗ್ಳು
ಒಬ್ಬಾಳೆ ಹೆಣ್ಣು ಮಗ್ಳು ಲಕ್ಷುಮದೇವಮ್ಮ
ಗಂಡು ಮಕ್ಕಳಂದ್ರೆ ಬೋರೇಗೌಡ ಈರೇಗೌಡ
ಕಾಳೇಗೌಡ ನೀಲೇಗೌಡ ಸಿದ್ದೇಗೌಡ ದ್ಯಾವೇಗೌಡ
ಕೆಂಚೇಗೌಡ ಅನ್ನುವ ಏಳು ಜನ ಗಂಡು ಮಕ್ಕ
ಅವುರ್ಗೆ - ಏಳು ದೊಡ್ಡಿ ದನಗಳು ಏಳು ಜೊತೆ ಎತ್ತುಗಳು
ಏಳು ದೊಡ್ಡಿ ಎಮ್ಮೆಗಳು ಏಳುಗೂಡು ಆಡು ಕುರಿ
ಏಳು ನೂರು ಎಕರೆ ಹೊಲಗದ್ದೆ ತೋಟಗಳು ೧೦
ಅವುರ್ಗೆ - ಏಳುಪ್ಪರಿಕೆ ಮನೆ ಏಳು ಕೊಪ್ರಿ ದ್ರವಿಯಾವು
ಹೇಳಕಾಗದಷ್ಟು ಒಡೆತನ ವಹಿವಾಟು
ತುಂಬೀದ ಮನೆಯಲ್ಲಿ ಹಾಲುಸಾಗರವಾಗಿ
ಮುದ್ದೇಗೌಡರು ಬಾಳಾಟ ಮಾಡುತಲವುರೆ |

ಮುದ್ದೇಗೌಡ್ರ ಏಳು ಉಪ್ಪರಿಗೆ ಮನೆ ಮುಂದೆ
ಹನ್ನೇಡಂಕ್ಲಾದಲ್ಲಿ ಕರಿಕಲ್ಲಿನ ಬಸ್ತಿ ಗುಡಿ
ಬಸ್ತಿಗುಡಿಯಲ್ಲಿ ಸ್ವಾಮಿ ಮಲ್ಲಿನಾಥ ದೇವ್ರು
ಮಲ್ಲಿನಾಥ ದೇವುರ್ಗೆ ಪೂಜೆಯ ಮಾಡ್ಕೊಂಡು
ಹೊಲಗದ್ದೆ ತೋಟುದಲ್ಲಿ ವೆಳಸಾಯ ಮಾಡ್ಕೊಂಡು
ಏಳುಗಂಡು ಮಕ್ಕಾಳ ಜೊತೆಯಲ್ಲಿ ಮುದ್ದೇಗೌಡ್ರು ೨೦
ಐಭೋಗದಲ್ಲಿ ಬಾಳಾಟ ಮಾಡುತವುರೆ |

ಮುದ್ದೇಗೌಡ್ರ ದುಡಮನ ಭಕ್ತಿಗಳು
ಕೈಲಾಸದಲ್ಲಿರುವಂತ ಪರಮಾತ್ಮ
ಪರಂಜ್ಯೋತಿಗರುವಾಯ್ತು
"ಮುದ್ದೇಗೌಡ ಅನ್ತಕ್ಕವ ಭೂಮಿ ತೂಕದ ಮನುಸ
ಬಾಳ ಭಕ್ತ
ಅವ್ನ ಜೇನಿಗನಾಗಿದ್ದಾನೆ
ಇಂತ ಭೂಮಿತೂಕುದ ಮನುಸ್ನ
ನಮ್ಮ ಕೈಲಾಸಕ್ಕೆ ಶರಣರ ಕೂಟುಕ್ಕೆ ಲಾಯಕ್ಕಾದ ಮನುಸ
ಇವ್ನ ಏನಾರ ಮಾಡಿ ಚಟಕಾಯುಸ್ಕೋ ಬೇಕಲ್ಲ"
ಹಾಗಂತ ಯೋಚಿನೆ ಮಾಡಿ ೩೦
ಕಲ್ಯಾಣ ಪಟ್ಟಣಕೆ ಬಂದು
ಬಸ್ವಣ್ಣೋರ್ಗೆ ಕಾಣುಸ್ಕೊಂಡ್ರು
"ಪರುಮಾತ್ಮ ಅಪ್ಪೆಯಾಗ್ಲಿ" ಅಂದ್ರು ಬಸುವಣ್ಣೋರು
"ಬಸುವೇಶ
ಈ ಕಲ್ಯಾಣಪಟ್ಟುಕ್ಕೇ ಒಂದು ರತ್ನ ಆ ಒಕ್ಕುಲುಗ್ರು
ಮುದ್ದೇಗೌಡ
ಅವನಂತ ಭಕ್ತುರು ಯಾರಿದ್ದಾರಪ್ಪ?
ಅವುನು ಭೂಮಿತೂಕುದ ಮನುಸ
ಅವುನ್ನ ಹೆಂಗಾದ್ರೂ ಸರಿ
ಏನಾರ ಮಾಡಿ ನಮ್ಮ ಕೂಟುಕ್ಕೆ ಕರ್ಕೊಬೇಕಲ್ಲ!"
ಬಸ್ವಣ್ಣೋರು ಪರಮಾತ್ಮನ ಮಾತ್ಗೆ ತಲೆದೂಗಿ ೪೦
"ಹಂಗೇ ಆಗ್ಲಿ ಸ್ವಾಮಿ" ಅಂದ್ರು
ಅತ್ಲಾಗೆ ಪರಶಿವನು ಕೈಲಾಸುಕ್ಕೋದ್ರು
ಇತ್ಲಾಗೆ ಬಸವಣ್ಣೋರು ಮುದ್ದೇಗೌಡರ ಮ್ಯಾಲೆ
ದ್ರಿಷ್ಟಿ ಮಡುಗುದ್ರು
ಮುದ್ದೇಗೌಡ್ರು ಹೊನ್ನರಳಿ ಮರದ ಕೆಳಗೆ ನೆಳ್ಳಲ್ಲಿ
ಚಿನ್ನುದ್ ಕುರ್ಚಿ ಹಾಕುಸ್ಕೊಂಡು ಕುಂತವ್ರೆ
ಏಳುಜನ ಮಕ್ಳು ಏಳುನೂರು ಆಳ್ಗೊಳ ಕಟ್ಕೊಂಡು
ಹೊಲಗದ್ದೆ ತೋಟುದಲ್ಲಿ ಗೇಯ್ತಿದ್ದಾರೆ -

ಕರಿಯೋನು ಕೆಂಚಿಗೌಡ ಹೊಲ ಉಳುತಿರುವಾಗ
ಅವ್ನ-ನೇಗೀಲ ಕುಡುವ ಏನೊ ಕಚ್ಚಿಕೊಂಡಂಗಾಯ್ತು
ನೇಗ್ಲು-ಮುಂದಕ್ಕೆ ಹೋಗಲೊಲ್ದು ಕೀಳುಕ್ಕೂ ಬರಲೊಲ್ದು ೫೦
ಇದೇನಂತ ತಿಳಿಯಾದ ಬೆದರೀದ ಕೆಂಚೇಗೌಡ
ಅವುರಪ್ಪ ಮುದ್ದೇಗೌಡ್ರ ಕೂಗಿ ಕರೆದಾನು |

ಮಗ ಕೆಂಚೇಗೌಡ ದಿಗುಲ್ಗೊಂಡಿರೋದು ಕಂಡು
ಮುದ್ದೇಗೌಡ ಎದ್ದು ಬಂದು
"ಏನೊ ಮೊಗ ಕೂಕೊಂಡ್ಕಲ್ಲ?'
"ಅಪ್ಪಾ ಈ ನೇಗಿಲು ಕುಡ ಅಲ್ಲಾಡದಂಗೆ
ಏನೋ ಕಾಣೆ ಕಚ್ಚಿ ಹಿಡ್ಕೊಂಡದೆ ಕಣಪ್ಪ"

---

* ನಿಂತಗೆರೆ ಇರುವ ಭಾಗವನ್ನು ಪದ್ಯವೆಂತಲೂ ಬಿದ್ದಗೆರೆ ಇರುವ ಭಾಗವನ್ನು ವಚನವೆಂತಲೂ ತಿಳಿಯಬೇಕು. ಪದ್ಯಭಾಗದ ಪ್ರತಿಯೊಂದು ಸಾಲಿನ ಕೊನೆಗೂ ಸೊಲ್ಲನ್ನು ಹಾಡಿಕೊಳ್ಳಬೇಕು.

"ಹಂಗಾ? ಒಸಿ ಜಗ್ಸಿ ಹೊಡಿಯೊ."
"ಹೊಡ್ದೆ ಕನಪ್ಪ ಅಲ್ಲಾಡೋಲ್ಲು."
"ಹೋಗ್ಲಿ ಹಿಂದುಕ್ಕೆಳಿ."
"ಎಷ್ಟೆಳುದ್ರೂ ಜಗ್ಲೊಲ್ಲು ಕಣಪ್ಪ."
"ಇರ್ಲಿ, ಲೋ ಬೋರ ಸಿದ್ದ ಕಾಳ ದ್ಯಾವ
ನೀಲ ಈರ ಬರ್ರುಲಾ ಇಲ್ಲಿ
ಇದೇನೂ ಅಂತ ಒಸಿ ನೋಡಿ" ಅಂದ್ರು
ಮುದ್ದೇಗೌಡ್ರ ಏಳು ಜನ ಮಕ್ಕೂ ಸೇರ್ಕೊಂಡ್ರು
"ಈ ನೇಗ್ಲು ಕುಡುವ
ಏನೋ ಕಚ್ಚಿ ಒಪ್ಪಂಗಾಗ್ಕೆತಂತೆ
ಏನಿರಬೋದು ನೋಡ್ರೊ"
ಗೌಡ್ರು ಮಾತ್ಕೇಳಿ ಮಕ್ಕೆಲ್ಲ ಸೇರಿ
ನೇಗ್ಲೆತ್ತಕೋದ್ರು
ಜಪ್ಪಯ್ಯ ಅಂದ್ರೂ ಅಲ್ಲಾಡೋಲ್ಲ.
ತಿರ್ಗ ತಿರ್ಗ ಪ್ರಾಯತ್ನ ಮಾಡುದ್ರು
ಮತ್ತೆ ಮತ್ತೆ ಎಳುದ್ರು
ಎತ್ಕೊಳ್ಳೆ ಹೊಡ್ದು ಜಗ್ಸಿ ಎಳಿಯೋಕೆ ನೋಡುದ್ರು
ಆಗ್ಲೂ ಆಗ್ಲಿಲ್ಲ.
"ಇದ್ಯಾವ ಗಾಳಿಯೊ ಗರಾವೊ ಪೀಡಿಯೊ ಪಿಚಾತಿಯೋ
ಕಾಣ್ಯಲ್ಲ" ಅಂತ್ಕೇಳಿ
ಯೋಚುಣೆ ಮಾಡ್ತಾ ನಿಂತವುರೆ
ಏನ್ ಮಾಡ್ಲೇಕು ಅಂತ ಒಬ್ರುಗೂ ತಿಳುನಿಲ್ಲ -

ಅಷ್ಟೊತ್ತುಗಲ್ಲಿ ಹೊನ್ನರ್ಪಿಮರ್ದ ಸಾಲಲ್ಲಿ
ಕಲ್ಯಾಣದ ಅಣ್ಣೋರು ಬಸವಯ್ಯ ಬಂದರು
ಮುದ್ದೇಗೌಡ್ರು ಮಕ್ಕಳ ಜೊತೆಗೆ ಸೇರಿಕೊಂಡು
ಪಡುತಿರೊ ಪರಿಪಾಟ್ಲು ಕಣ್ಣಾರೆ ಕಂಡರು
ಗುರು ಬಸುವೇಸರ ಕಂಡು ಮುದ್ದೇಗೌಡ್ರು
"ಬುದ್ಧಿಯೋರೆ ಅಡ್ಡಿದ್ದೆ ಬರಬೇಕು ಸ್ವಾಮಿ"
ಅಣ್ಣ ಬಸುವಣ್ಣೋರು ಸರಣು ಸರಣಂದರು |

"ಏನು ಗೌಡ್ರೆ ಏನೊ ಗಾಚಾಲ್ ನಡುದ್ಯೆತೆ?"
"ಏನಿಲ್ಲ ಬುದ್ಧಿ
ನಮ್ ಕಿರೀಹ್ಯೆದ ಕೆಂಚ ಹೊಲ ಉಳ್ತಿದ್ದ
ಇದ್ದಕ್ಕಿದ್ದಂಗೆ ಅವ್ನ ನೇಗ್ಲು ಕುಡುವ
ಯಾನೊ ಕಾಣ ಗಪ್ತಂತ ಹಿಡ್ಕೊಂಡು
ಏನ್ ಮಾಡುದ್ರೂ ಬರ್ಲೆ ಚೌಕಾಸಿ ಮಾಡ್ತಾದೆ ಬುದ್ಧಿ."
"ಗೌಡ್ರೆ ನಿಮ್ ದೇವುರ್ಕಾವ್ದು ಹೇಳಿ
ನಿಮ್ಮ ದೇವುರೆಸ್ರು ಹೇಳಿ ಕಿತ್ಕಾಯ್ತಪ್ಪ"

"ಸ್ವಾಮಿ ನಾವು ಕುಲದಲ್ಲಿ ಒಕ್ಕುಲುಗ್ರು
ಬಲದಲ್ಲಿ ಜೇನಿಗರು
ನಮ್ಮ ಮನೆದೇವ್ರು ಮಲ್ಲಿನಾಥ ಅನ್ನೋ
ಬಸ್ತೀದೇವ್ರು ಸ್ವಾಮಿ"
"ನಿಮ್ಮ ಬಸ್ತೀದೇವುರ್ಹೇಸ್ರೇಳಿ ಎಳೀಸಿ" -

ಅಣ್ಣೋರ ಮಾತಕೇಳಿ ಏಳುಜನ ಮಕ್ಕ
ಎತ್ತುಗಳ ಬೆದುರಿಸಿ ಎಳುಸಾಕೆ ನೋಡುದ್ರು
ಎಷ್ಟೇ ಎಳ್ಸಿದರು ನೇಗ್ಲು ಅಲ್ಲಾಡನಿಲ್ಲ
ಹಿಂದಕ್ಕೆ ಮುಂದಕ್ಕೆ ಜಗ್ಗೀಸಿ ಎಳೆದಾರು
ಒಂದಿಂಕ್ರವು ನೇಗ್ಲು ಅಲ್ಲಾಡನಿಲ್ಲ
ಆ-ಕುಡವು ಜಪ್ಪಯ್ಯ ಅನ್ನಾಲೆ ಇಲ್ಲ|

ಮುದ್ದೇಗೌಡ್ರು ಬಸುವಣ್ಣೋರ ಮೊಕ ನೋಡುದ್ರು
"ಯಾಕ್ರಮ್ಮ ನಿಮ್ಮ ಬಸ್ತೀದೇವುರು
ನಿಮ್ಮ ನೇಗ್ಲು ಕುಡುವ ಮ್ಯಾಲುಕೆತ್ತುನಿಲ್ವ?"
"ಏನೇ ಮಾಡುದ್ರು ಅಲ್ಲಾಡೋಲ್ಲ ಸ್ವಾಮಿ
ಕಚ್ಕೊಂಡ್ ಕೂತ್ಕೆತೆ"
"ಹಂಗಾದ್ಮೇಕೆ 'ನಮಶಿವಾಯ' ಅಂತ್ಕೇಳಿ ಎಳೀರಿ"
ಬಸವಣ್ಣೋರ ಮಾತ್ಕೇಳಿ ಒಬ್ರು ಮೊಕುವ ಒಬ್ರು ನೋಡುದ್ರು
ಆಗ ಮುದ್ದೇಗೌಡ್ರು
"ಸ್ವಾಮಿ ನೀವ್ಹೇಳ್ದಂಗೆ
ನಮಶಿವಾಯ ಅಂತ್ಕೇಳಿ ಎಳೀತೀವಿ
ಆಗ್ಲೂ ಈ ಕುಡ ಮ್ಯಾಲುಕೇಳ್ದೇ ಇದ್ರೆ
ನೀವು ಇಲ್ಲಿಂದೀಚ್ಗೆ
ಈಬುತ್ತಿ ಕಟ್ಟಾಕದ ಬುಟ್ಟುಡ್ತೀರ್ಯಾ?
ಕಾವೀಬಟ್ಟೆಗಳ ಕಿತ್ತೆಸಿತೀರ್ಯಾ?
ನಿಮ್ಮ ಕುತ್ತಿಗೆಲಿರೋ ಕಲ್ಲಿಂಗ್ವ
ಕಿತ್ತು ಬೇಲಿ ಮ್ಯಾಕೆಸೀತೀರ್ಯಾ?
ಇನ್ನು ಮುಂದುಕೆ ಯಾವಾಗ್ಲೂ ನಮಶಿವಾಯ ಅಂತಿದ್ರಲ್ಲ
ಆ ಮಾತ್ಕೇಳದ ಬುಟ್ಟೀರ್ಯಾ?
ಹೇಳಿ ಬುದ್ಧಿ."
"ಗೌಡ್ರೆ, ನೀವು ಹೇಳ್ದಂಗೇ ಆಗ್ಲಿ ಗೌಡ್ರೆ."
ಗೌಡ್ರು ಮಕ್ಕುಳ್ಗೆ, ಸನ್ನ ಮಾಡುದ್ರು
ಮಕ್ಕು "ಓಂ ನಮ ಶಿವಾಯ ಓಂ ನಮ ಶಿವಾಯ" ಅಂತ್ಕೇಳಿ
ಆರ್ ಹೊಡುದ್ರು.
ನೇಗ್ಲು ಕುಡುಕೆ ಕಚ್ಕೊಂಡಿದ್ದಂತ
ಒಂದು ಶಿವುಲಿಂಗ ಮ್ಯಾಲುಕ್ಕೇಳ್ತು.
ಎಲ್ರೂ ಸೋಜುಗ ಪಡ್ತ ನಿಂತವುರೆ

ಆಗ ಬಸವೇಶ್ವರ ಸ್ವಾಮಿ ಮುದ್ದೇಗೌಡರ ಮೊಕ ನೋಡ್ತಾ
"ಗೌಡ್ರೆ ಪರಮಾತ್ಮ
ನಿಮ್ಮ ಹೊಲುದೊಳುಗೆ ಉದ್ದುಬವ ಆಗವುರೆ
ನೀವು ಪರುಂಭಕ್ಕು ಅನ್ನೋದು ಶಿವುಂಗೆ ಅರುವಾಗದೆ
ನೀವು ಸಾಮಾನ್ಯರಲ್ಲ ಗೌಡ್ರೆ
ಶಿವುನಿಗೆ ಪ್ರಿಯವಾದ ಪರುಂಭಕ್ಕು ನೀವು" ಅಂದಾಗ
ಮುದ್ದೇಗೌಡ್ರು ಹಿಂದು ಮುಂದ ನೋಡ್ದೆ-

ಕರವೆತ್ತಿ ಕೈಮುಗುದು ಬಸವಣ್ಣೋರ್ ಪಾದಕೆ
ಉದ್ದುದ್ದವಾಗಿ ಬಿದ್ದರು ಮುದ್ದೇಗೌಡರು
"ಇಂದು ಮೊದಲಾಗಿ ನಾ ನಿಮ್ಮ ಪಾದ ಸೇವಕ
ನೀವು ಹೇಳುದಂಗೆ ಸ್ವಾಮಿ ನಾನು ಕೇಳುತೀನಿ
ನಿಮ್ಮ ಪಾದ ನಮ್ಮ ಹೊಲದಲ್ಲಿ ಓಡಾಡಲಾಗಿ
ಆ ಶಿವನೆ ನಮ್ಮ ಮನೆಗೆ ಬಂದಂಗೆ ಆಯ್ತು
ನಾನು ನನ್ನೆಂಡತಿ ಮಕ್ಕಳು ಮೊದಲಾಗಿ
ನಾವು ಬಂಧೂ ಬಳಗವೆಲ್ಲ ಶಿವಭಕ್ತಾಗುತೀವಿ
ನಿಮ್ಮ ಪಾದಕೆ ಶರಣು ಶರಣಾರ್ತಿ ಸ್ವಾಮಿ!" |

ಬಸವಣ್ಣೋರು ನೆನೆದಂಗೆ ಶಿವಶರಣರು ಬಂದರು
ತಾಳ ಮೇಳದಲ್ಲಿ ಶಿವಭಜನೆ ಮಾಡಿದರು
ಮುದ್ದೇಗೌಡರಿಗೆ ಮಡದಿ ಮುದ್ದಮ್ಮನಿಗೆ
ಅವುರೇಳು ಜನ ಗೌಡರ ಏಳು ಗಂಡು ಮಕ್ಕಳಿಗೆ
ಅವರೊಬ್ಬಾಳೆ ಒಬ್ಬ ಮಗ್ಳು ಲಕ್ಷುಮ್ಮ್ ದೇವಿಗೆ
ಶಿವುದೀಕ್ಷೆ ಕೊಟ್ಟಾರು ಲಿಂಗುಧಾರ್ಣೆ ಮಾಡಿದರು
ಮುದ್ದೇಗೌಡರ ಏಳುನೂರು ಆಳುಕಾಳು
ಬಂಧೂಬಳಗ ಸ್ನೇತ ಎಲ್ಲರು ಎಲ್ಲಾರು
ಶಿವದೀಕ್ಷ್ಯ ಪಡುಕೊಂಡು ಲಿಂಗುಧಾರ್ಣೆ ಆದರು
ಆ ಹೊಲುದಲ್ಲಿ ಸಿಕ್ಕಂತ ಶಿವಲಿಂಗ ತಂದು
ಬಸ್ತಿ ಗುಡಿಯಲ್ಲಿ ಪ್ರತೀಷ್ಟ್ಯವ ಮಾಡ್ಸಿದರು
ಪ್ರಾತೀಷ್ಟ್ಯ ಮಾಡಿದಂತ ಕಾಲದಲ್ಲಿ ಗುಡಿ ಮುಂದೆ
ಚಿನ್ನಾದ ಮಳೆಹೂದು ಬೀದಿಬೀದಿಗಳೆಲ್ಲ
ಜಗಜಗಿಸಿ ಜಗಜಂಪ ಜಗಜಂಪನ್ನವಾದವು
ತೋರಮುತ್ತುಗಳ ಆನುಕಲ್ಲು ಸುರಿದಾವು
ಗುಡುಗು ಮಿಂಚುಗಳು ವಜ್ರುವಾಗಿ ಸುರಿದಾವು
ಹಿಂಗೆ ಚಿನ್ನಾದ ಮಳೆಯ ಪಾಮಾಡ ಮೆರೆಯಿತು.
ಒಕ್ಕಲಿಗ ಮುದ್ದೇಗೌಡ್ರ ಮನೆದೇವ್ರು ಶಿವನಾಗ
ಒಕ್ಕಲುಗ್ರ ಈಸ್ವುರ ಓಕುಳೇಶ್ವುರನಾಗಿ
ಪರಮಾತ್ಮ ಮುದ್ದೇಗೌಡ್ರ ಮನೆ ದೇವರಾದನು
ಆಗ - ಕೈಲಾಸದಲ್ಲಿ ಭೇರ್ಮಿನಿಸಾನಿಗಳು
ಮೊಳಗಿ ಮೂರುಲೋಕಕೂ ಸುದ್ದಿ ಸಾರಿದವು |

೨. ಜೇನಿಗರಿಗೆಲ್ಲ ಲಿಂಗ ದೀಕ್ಷ್ಯ ಕೊಡಿಸಿದರು

ತಂದನ್ನೊ ತಾನೊ ತಂದನು ತಂದೆನಾನೊ | ಸೊಲ್ಲು |

ಮುಂಗೋಳಿ ಕೂಗೀದೊ ಮೂಡುಕೆಂಪೇರಿದೊ
ಎಂದಿನಂತೆ ಜೇನಿಗರ ಬೀದೀಯ ಜನುವೆಲ್ಲ
ವರುತ್ನೆಗೆ ಬರುತಿದ್ದ ಮುದ್ದೇಗೌಡ್ರ ಮನೆಹಾಲು
ಹೊತ್ತೇರುತಿದ್ದರೂ ಇನ್ನಾಗ್ಗೂ ಬರನಿಲ್ಲ
ಯಾಕಂತ ತಿಳಿಯಾದು ಏನೂಂತ ತಿಳಿಯಾದು
ಹೋಗಿ ನೋಡಿಕೊಂಡು ಕೇಳಿಕೊಂಡು ಬರಬೇಕು
ಅನುತ್ಹೇಳಿ ಜೇನಿಗರು ಮುದ್ದೇಗೌಡ್ರ ಮನೆತಾವ್ಕೆ
ಬಂದಾಗ ಸರಣ್ಕಾರು ಹಾಲುಕೊಂಡು ಹೋಗುತಿದ್ರು
ಕಂಡು - ಜೇನಿಗರು ದಿಗ್‌ಬ್ರಮಿಯಲ್ಲಿ ನಿಂತಾರು |

"ಮುದ್ದೇಗೌಡ್ರೆ, ಮುದ್ದೇಗೌಡ್ರೆ" ಜೇನಿಗರು ಕೂಗಿದರು
"ಯಾರು ಸ್ವಾಮಿ?" ಅಂತ್ಹೇಳಿ ಗೌಡ್ರು ಮನೆಯಿಂದ
ಬಾಗ್ಲು ಕಡ್ಡು ಬಂದ್ರು
"ಇದೇನ್ ಗೌಡ್ರೆ ಅನ್ನಾಯ?"
"ಯಾವ್ದು ಸ್ವಾಮಿ?"
"ನಿಮ್ ಹಣೇಲಿ ಈಬುತ್ತಿಯೇನು?
ಕೊಳ್ಳಲ್ಲಿ ಲಿಂಗುವೇನು?"
"ಅದೆಲ್ಲ ಆ ಶಿವುನಿಚ್ಚೆ ಸ್ವಾಮಿ."
"ಶಿವುನಿಚ್ಚೆಯ ? ಯಾವ್ ಶಿವ ಗೌಡ್ರೆ?
ದಿನುಂಪ್ರತಿ ನಮ್ ಮನೆಗಳ್ಗೆ ಹಾಲಾಕ್ತಿದ್ರಿ
ಈ ದಿನ ಯಾರ್ ಮನೆಗೂ ಹಾಲ್ ಬಂದಿಲ್ಲ
ಯಾಕೆ ಅಂತ ಕೇಳನ ಅಂತ ಇಲ್ಲುಗ್ ಬಂದೊ
ಬಂದ್ ನೋಡುದ್ರೆ ಆ ಲಿಂಗುವಂತ್ರುಗೆಲ್ಲ
ಹಾಲ್ ಕೊಡ್ತಿದ್ದೀರಿ?
ಏನಾಯ್ತು ನಿಮ್ ಬುದ್ಧಿಗೆ?"
"ಸ್ವಾಮಿಗಳೇ ಬುದ್ಧಿ ಸುದ್ದವಾಯ್ತು ಸ್ವಾಮಿ

ಆ ಪುಣ್ಯಾತ್ಮ ಬಸುವಣ್ಣೋರ್ ದಯದಿಂದ
ನಾನು ಶಿವಸರಣನಾದೆ ಸ್ವಾಮಿ
ನಿಮ್ ಬಸ್ತೀಗುಡಿ ದೇವುರ ಬುಟ್ಟು
ಒಕ್ಕುಲಿಗುಂಗೆ ಒಲುದು ಬಂದ ಓಕುಳೇಶ್ವುರುಂಗೆ
ಬಗುತ್ನಾಗಿದ್ದೀನಿ ಸ್ವಾಮಿ
ಇನ್ನು ಮುಂದೆ ನಾನು
ಜೇನುಗರ ಮನೆಗಳಿಗೆ ಹಾಲೊಡಿಯೊದಿಲ್ಲ ಸ್ವಾಮಿ"
"ಮುದ್ದೇಗೌಡ್ರೆ ನೀವು
ಆದಿಯಿಂದ ಬಂದ ಹಾದಿ ಬುಟ್ಟು
ಕಾಡ್ಜನಗಳ ಮಾತ್ಕೇಳಿ ಕಾಡ್ದಾರಿಲೋಯ್ತಾ ಇದ್ದೀರಿ
ಇದರಿಂದ ನಿಮ್ಗೆ ಒಳ್ಳೆದಾಗಕಿಲ್ಲ"
"ಸ್ವಾಮಿಗಳೆ ಒಳ್ಳೇದಾಗ್ಲಿ ಕೆಟ್ಟುದಾಗಿ ಆ ಶಿವನಿಂದ ಆಗ್ಬೇಕು
ಅವುನಿಚ್ಚೆ ಹೆಂಗಿದ್ದದೊ ಹಂಗಾಯ್ತದೆ ಬುಡಿ ಸ್ವಾಮಿ"
"ಹಂಗಾದ್ರೆ ನಮ್ಗೆ ಹಾಲ್ಕೊಡೋದಿಲ್ಲ?"
"ಇನ್ಮೇಲೆ ಕೊಡದಿಲ್ಲ ಸ್ವಾಮಿ."
"ಗೌಡ್ರೆ ನೋಡ್ಕೋತೀವಿ. ನೋಡ್ಕೋತೀವಿ" ಅಂತ್ಹೇಳಿ
ಜೇನಿಗರೆಲ್ಲ ಹೊಂಟೋದ್ರು -

ಜೇನಿಗರು ಸಭೆ ಸೇರಿ ನ್ಯಾಯ ಮಾಡಿದರು
"ಆ ಗೌಡನಿಗೆ ಏಳುದೊಡ್ಡಿ ದನಗಳು ಉಂಟು
ಅವನ - ಕರೆಯೊ ಹಸುಗಳನೆಲ್ಲ ಹೊಡುಕೊಂಡು ಬರಬೇಕು"
ಹಾಗಂತ ಜೇನಿಗರು ದನದ ಕಾವಲಿಗೋಗಿ
ದನಗಳ್ನು ಕರುಗಳ್ನು ಹೊಡುಕೊಂಡು ಹೋದಾರು
ಯಾರ್ಯಾರ್ಗೆ ಎಷ್ಟೆಷ್ಟು ದನಗಳು ಬೇಕೊ
ಅಷ್ಟಷ್ಟು ದನಗಳ ಹೊಡುಕೊಂಡು ಹೋದರು
ಕೊಟ್ಟಿಗೇಲಿ ಕಟ್ಟಿ ಹುಲ್ಲನ್ನು ಹಾಕಿದರು
ದನಗಳು ಹುಲ್ಲ ತಿನ್ನದೆ ಹೋದೊ
ಕುಡಿಯಲು ಮುಂದೆ ಕಲಗಚ್ಚ ಮಡಗಿದರು
ದನಗಳು ಕಲಗಚ್ಚ ಕುಡಿಯನೆ ಇಲ್ಲ
ಹುಲ್ಲನ್ನು ತಿಂದಿಲ್ಲ ಕಲಗಚ್ಚ ಕುಡಿದಿಲ್ಲ |

ಹಾಲ ಕರಕೊಳ್ಳಕಂತ ಜೇನಿಗರ ಹೆಂಗಸರು
ಹಾಲ ಹಿಂಡಿದರೆ ರಗುತಾವೆ ಬರುತೀದೆ
ರಗುತಾವ ಕಂಡು ಜೇನಿಗರ ಹೆಂಗಸರು
ಬೆದರಿ ಬಾಯಿಬಾಯ ಬಡಿದುಕೊಂಡಾರು
"ಈ ಹಸ ನಮಗೆ ಬ್ಯಾಡ ಮೊದಲು ಕೊಟ್ಟುಬನ್ನಿ"
ಹಾಗಂತ ಗಂಡಸರ ಕರದು ಹೇಳಿದರು
"ನಾವು ಜೇನಿಗರು ಹಿಂಸ್ಯವ ಕೊಡೋರಲ್ಲ
ಈ ದನಗಳು ನಮ್ಮನೆಯ ಹುಲ್ಲನ್ನು ತಿನ್ನೋದಿಲ್ಲ
ಹುಲ್ಲ ತಿನ್ನೋದಿಲ್ಲ ಕಲಗುಚ್ಚ ಕುಡಿಯೋದಿಲ್ಲ
ಈ ದನಗಳ ಕುಂಡೋಗಿ ಗೌಡರ ಹಟ್ಟಿಗೆ
ಹೊಡದೂ ಬನ್ನೀಂತ" ಹೆಂಗಸರು ಹೇಳಿದರು |

ಹೆಂಗಸರ ಮಾತಕೇಳಿ ಜೇನಿಗರೆಲ್ಲ
ದನಗಳ ಹೊಡುಕೊಂಡು ಗೌಡ್ರ ಹಟ್ಟಿಗೆ ಬಂದು
"ಗೌಡರೆ ಕೇಳಿ ಕೇಳಿ ನಮ್ಮ ಮಾತ ಕೇಳಿ
ನಿಮ್ಮ ದನಗಳ ನೀವೇ ನಿಮ್ಮಟ್ಟಿಲಿ ಕಟ್ಟಿಕೊಳ್ಳಿ
ನೀವು - ಮೊದಲೆಂಗೆ ಹಾಲ ವರ್ತುನೆಗೆ ಕೊಡುತಿದ್ರೊ
ಆ ಪ್ರಕಾರುದಲ್ಲಿ ನಮ್ಗೆ ಹಾಲನ್ನು ಕೊಡಬೇಕು"
ಜೇನಿಗರ ಮಾತೀಗೆ ಮುದ್ದೇಗೌಡರಾದರೆ
ಒಪ್ಪಾದೆ" ಇನ್ನು ಮುಂದೆ ಹಾಲ ಕೊಡೋದಿಲ್ಲ
ಹೆಚ್ಚು ಮಾತಾಡದೆ ಹೋಗಿ ಹೋಗಿ ಜೇನಿಗರೆ"
ಎನಲು ಅನಂತಯ್ಯ ಎನುವೊಬ್ಬ ಜೇನಿಗನು
ಗೌಡರಿಗೆ ಹೊಡೆಯಲು ಕೈ ಎತ್ತಿ ನಿಂತನು
ಗೌಡರು ಹೆಗಲ ಮೇಲಿದ್ದ ವಲ್ಲಿಯನು
ಬೀಸಿ ಅನಂತಯ್ಯನ ಮೇಲೆ ಎಸೆದರು
ಬೀಸೀದ ವಲ್ಲಿಯು ಬುಸುಗುಡುವ ಕಾಳಿಂಗನಾಗಿ
ಅನಂತಯ್ಯನ ಕಚ್ಚಲು ಅವನಲ್ಲೆ ಸತ್ತ
ಕಾಳಿಂಗ ಸರ್ಪವ ಕಂಡು ಜೇನಿಗರೆಲ್ಲ
ಜೀವ ಹೋದಂತಾಗಿ ಬೆಚ್ಚಿ ನಿಂತುಕೊಂಡರು |

ಅನಂತಯ್ಯ ಸತ್ತು ಬಿದ್ದಿರೋದ ಕಂಡು
ಜನುವಾದ ಜನುವೆಲ್ಲ ದುಕ್ಕ ಸೋಕುಗಳ ಮಾಡ್ತಾ ಅದೆ.
ಆಗ ಆ ಜೇನಿಗರ ಮುಖ್ಯಸ್ಥ ಹೇಳ್ತನೆ
"ಗೌಡ್ರೆ ನಮ್ಮು ತಪ್ಪಾಯ್ತು
ನಮ್ಮ ಅಪ್ರಾಧುಗಳ ಕ್ರಮಿಸಿ ಸ್ವಾಮಿ
ನಮ್ಮನ್ನ ಕಾಪಾಡಬೇಕು
ನಿಮ್ಮ ಶಿವನ ಮೈಮ್ಮ
ನಿಮ್ಮ ಶಿವಶರಣರ ಮೈಮ್ಮ
ನಾವು ಕಣ್ಣಾರೆ ಕಂಡೊ
ನೀವು ನಮ್ಮ ಅನಂತಯ್ಯನ ಬದುಕಿಸಿ ಕೊಟ್ಟುದ್ರೇ ಆದ್ರೆ
ನಾವೆಲ್ಲ ಈಗಿಂದೀಗ್ಲೆ
ನಿಮ್ಮ ಸಮಕ್ಷ್ಯದಲ್ಲಿ ಲಿಂಗುದೀಕ್ಷೆ ಪಡ್ದು
ಸರಣರಾಗ್ತೀವಿ ಸ್ವಾಮಿ" ಅಂದ್ರು
ಆಗ ಮುದ್ದೇಗೌಡ್ರು
ಪರಮಾತ್ಮನ ಸೊರಣೆ ಮಾಡುದ್ರು
ಎಲ್ರೂ ನೋಡ್ತಾ ಇದ್ದಂತೆ
ಕಾಳಿಂಗಸರ್ಪ ಬಂದು

ಅನಂತಯ್ಯನ ದ್ರೀಯದಿಂದ ಇಸುವನ್ನು
ಎಳುಕೊಳ್ತು
ಅನಂತಯ್ಯ ನಿದ್ದೆ ತಿಳಿದೋನಂಗೆ
ಎದ್ದು ಕುಂತಕೊಂಡ -

ಹಾವು ಕಚ್ಚಿ, ಸತ್ತಿದ್ದ ಚೇನಿಗ ಅನಂತಯ್ಯ
ನಿದ್ದೆ ತಿಳಿದೋನಂಗೆ ಎದ್ದು ಕುಂತ ಶಿವನೆ
ಚೇನಿಗರೆಲ್ಲ ಮುದ್ದೇಗೌಡ್ರ ಪಾದಕೆ
ಹಾಸಾಸಿ ಬಿದ್ದರು ಕಾಪಾಡಿ ಅಂದರು
ಆಗ ಗೌಡರು ಶರಣರೆಲ್ಲರ ಕರಸಿ
ಚೇನಿಗರಿಗೆಲ್ಲ ಲಿಂಗದೀಕ್ಷ್ಯ ಕೊಡಿಸಿದರು.
ಆಗ - ಆ ಕೂಡ್ಲೆ ಚೇನಿಗರು ಶರಣಾದರಂತ್ಹೇಳಿ
ಅವುರ್ಗೆ - ಕುಂಬ ಕುಂಬ ಹಾಲುಗಳ ಗಾಡೀಲಿ
ಹೊಡೆಸಿದರು. ೨೭೦

೩. ಸತ್ತೋದ ಮಗನ ಮತ್ತೆ ಪಡೆದರು ಸ್ವಾಮಿ

ತಂದನ್ನೊ ತಾಸೊತಂದನು ತಂದನಾನೊ || ಸೊಲ್ಲು ||

ಶಿವುನ ಅವುಸೇಕೆ ಅಂತ್ಹೇಳಿ ಶರಣರು
ಮುದ್ದೇಗೌಡ್ರ ಮನೆಹಾಲ ಎಲ್ಲರು ಹೊತ್ತರು
ಗೌಡರ ಮೊಮ್ಮಗ ತೊಟ್ಟಿಲ ಹಸುಕಂದ
ಕೆಂಪೇಗೌಡನೆಂಬುವ ಹಸುಕಂದನಾದರೆ
ಹೊಟ್ಟೆ ಹಸ್ದು ಹಾಲಿಗಾಗಿ ಅಳುತಳುತಿರುವಾಗ
ಮನೆಯಲ್ಲಿ ಒಂತೊಟ್ಟು ಹಾಲಾದರಿರಲಿಲ್ಲ
ಸೊಸೆಯ ಎದುಪಾಲು ನಿಂತು ಬಾಳ ದಿನವಾದೊ
ಮಗು ಅಳುತಿದ್ದರೆ ಮುದ್ದಮ್ಮ ಬಂದು
ಸೊಸೆ ಪಡೊ ಸಂಗುಟವ ಕಣ್ಣಾರೆ ಕಂಡು
ಏನ ಮಾಡಲಪ್ಪ ಶಿವ ಈಗೇನು ಮಾಡಲಪ್ಪ ೨೮೦
ಅನುತ್ಹೇಳಿ ಮುದ್ದಮ್ಮ ಗಾಳುಗೋಳು ಪಡುತಿದ್ರೆ
ಸೊಸೆಮುದ್ದಿ ನಿಂಗಮ್ಮ ಕಣ್ಣೀರ ಕೆಡುಗಿದಳು
ಇವರ ಪರೀಕ್ಷ್ಯಕಾಗಿ ಶಿವ ಇವ್ರ ನೋಡಿದನು
ಅತ್ತು ಅತ್ತೂ ಮಗು ಸತ್ತೇಯೆ ಹೋಯಿತು
ಮುದ್ದೇಗೌಡ್ರು ಮಾತು ಬರ್ದೆ ಮೂಕರಾಗಿ ಕುಂತರು
ದುಕ್ಕಸೋಕ ಮಾಡುತ ಕಣ್ಣೀರ ಸುರ್ಸಿದರು
ಅತ್ತೆ ಮುದ್ದಮ್ಮ ದುಕ್ಕ ಸೊಸೆಯು ನಿಂಗಮ್ಮ ದುಕ್ಕ
ಹತ್ತಿಕೊಂಡುರಿಯೋದ ಕಂಡು ಮುದ್ದೇಗೌಡ್ರು
ಸತ್ತ ಮೊಮ್ಮಗುವನು ಎತ್ತಿಕೊಂಡು ಹೋಗಿ
ಹಿತ್ತಾಲ ಮೂಲೇಲಿ ಮಣ್ಣು ಮಾಡಿ ಬಂದರು | ೨೯೦

ಕಲ್ಯಾಣದ ಮಹಾಮನೇಲಿ
ಅಣ್ಣೋರು ಶಿವಪೂಜೆ ಮಾಡ್ತ ಕುಂತಿದ್ರು
ಶಿವ ಬಂದು ಅವರ ರುದಯದಲ್ಲಿ ನಿಂತು
"ಬಸವಣ್ಣ, ಗೌಡ್ರು ಮನೇಲಿ
ಶರಣ್ರುಗೆಲ್ಲ ಹಾಲ್ಕೊಟ್ಟು,
ಮನೇಲಿರೊ ಮಗೂಗೂ ಒಂತೊಟ್ಟು, ಹಾಲುಳೀನಿಲ್ಲ
ಹೊಟ್ಟೆ ಹಸ್ದು ಅತ್ತು ಅತ್ತು ಅತ್ತು
ಅವರ ಕಂದ ಕೆಂಪಣ್ಣ ಪ್ರಾಣ ಬಿಟ್ಟೈತೆ
ನೀನು ಹೋಗಿ ಅವರ ಕಂದುನ
ಉದ್ಧಾರ ಮಾಡಿ ಬಾಪ್ಪ" ಅಂದ್ರು
ಆ ತಕ್ಷಣುವೆ ಬಸವಣ್ಣೋರು ೩೦೦
ಶಿವುನ್ಗೆ ಮಾಡಿದ ಅವುಸೇಕದ ಪಂಚಾಮೃತವ ತಕ್ಕಂಡು
ನೂರೊಂದು ಜನ ಶರಣ್ರು ಸೈತುವಾಗಿ
ಮುದ್ದೇಗೌಡ್ರ ಮನೆಗೆ ಹೊಂಟ್ರು
ಕೊಂಬು ಕಾಳೆ ಭೇರ್ಮಿನಿಸಾನಿ
ತಾಳ ಮೇಳ ಕಳಸ ಕನ್ನಡಿ ಸೈತುವಾಗಿ
ಬಸವಣ್ಣೋರು ಬತ್ತಿದ್ರೆ
ಮುದ್ದೇಗೌಡ್ರು ಎದ್ದು ಓಡೋಡಿ ಬಂದ್ರು
ಬಸವಣ್ಣೋರ ಪಾದ ತೊಳ್ದು ಪೂಜೆ ಮಾಡಿ
ನಡೆಮಡಿ ಮ್ಯಾಲೆ ಕರ್ಕೊಂಡ್ಪಂದು
ಚಿನ್ನದ ಸಿವ್ವಾಸನದಲ್ಲಿ ಕುಂಡ್ರುಸುದ್ರು - ೩೧೦

ಮುದ್ದೇಗೌಡ್ರ ಮನೆಗೆ ಬಂದೋರು ಬಸವಣ್ಣ
ಶರಣರಿಗೆ ಸನ್ನೆಯ ಆಗಲ್ಲಿ ಮಾಡಿದಾಗ
ಶರಣರು ಹೊತ್ತು ತಂದ ಹಣ್ಣುಹಂಪಲುಗಳು
ಕಜ್ಜಾಯ ಕರ್ಜಿಕಾಯಿ ಚಿಕಳಿ ಚೀರೋಟಿಗಳು
ಚಕ್ಕುಲಿ ಕೋಡುಬಳೆ ಅಪ್ಪಿಟ್ಟು, ಒಬ್ಬಿಟ್ಟು,
ತಂಬಿಟ್ಟು, ನಿಪ್ಪಿಟ್ಟು, ಇಡ್ಡಲಿಗಳನೆಲ್ಲ
ಇಂತೆ - ಬೇಕು ಬೇಕಾದ ತಿಂಡಿಯ ಕುಕ್ಕೆಗಳ
ಮುದ್ದೇಗೌಡರ ಮನೆಯ ಒಳಗಡೆಗೆ ಮಡಗಿದರು |

ಬಸವಣ್ಣೋರು ಆಚೆಗೂ ಈಚೆಗೂ ಕಣ್ಣಾಡುಸ್ದ್ರು,
ಸುತ್ತಮುತ್ತ ನೋಡುದ್ರು ೩೨೦

ಮುದ್ದೇಗೌಡ್ರ ಮೊಕ ನೋಡಿ
"ಗೌಡ್ರೆ, ಉತ್ತುರದೇಸ್ಕಿಂದ ನಮ್ಮನೆಗೆ
ಶಿವುನ ಭಕ್ತರು ಬಂದಿದ್ರು
ಅವುರ್ಗೋಸ್ಕರ ಹೆಚ್ಕಟ್ಲೆ ಮಾಡಿದ್ದೊ
ಅದ ನಿಮುಗೂ ಕೊಟ್ಕೋಗನ ಅಂತ ಬಂದಿವಿ
ಅದಿರ್ಲಿ ಈ ಪಂಚಾಮೃತುವ ನಿಮ್ಮ
ಕೆಂಪಣ್ಣುಂಗೆ ಅಂತ ತಂದಿವ್ನಿ
ಮಗೀನ ಕರೀರಿ
ಇದ ನಾನೇ ನನ್ನ ಕೈಯಾರ ಈ ಪ್ರಾಸೋದ್ನ
ಕೆಂಪಣ್ಣುಂಗೆ ಕೊಡ್ತೀನಿ."
ಬಸವಣ್ಣೋರ ಮಾತ್ಕೇಳಿ ಮುದ್ದೇಗೌಡ್ರುಗೆ
ತುತ್ಗಟ್ಟಂದಂತಾಗಿ ಮಾತಾಡಕಾಗ್ದೆ
ಗುಳುಗುಳು ಅಂತ ಕಣ್ಣೀರ್ ಹಾಕುದ್ರು
"ಯಾಕ್ ಗೌಡ್ರೆ ಕಣ್ಣೀರ್ ಹಾಕ್ತಿದ್ದೀರಿ?"
"ಯಾಕೆ ಅಂತ ಕೇಳುದ್ರೆ ಏನ್ ಹೇಳ್ಲಿ ತಂದೆ!"
"ಪರುವಿಲ್ಲ ಹೇಳಿ ಗೌಡ್ರೆ."
"ನನ್ನ ಮನೆ ಒಡುವೆ ಅನ್ನೋದು ಮನೇಲಿಲ್ಲ ಸ್ವಾಮಿ."
"ಮನೇಲಿಲ್ಲ ಅಂತ್ಹೇಳುದ್ರೆ ಅದು ಕಳ್ಕೋಗದ ಗೌಡ್ರೆ"
"ಹಂಗೇ ಅನ್ಕೊಳಿ ಸ್ವಾಮಿ."
"ಹಂಗಾರೆ ತಾಳಿ ನೋಡ್ತೀನಿ....
ನಿಮ್ಪಟ್ಟಿ ಓತ್ಲು ಮೂಲೇಲಿರೋಂಗೆ ಕಾಣ್ತಾ ಅದಲ್ಲ."
"ಸ್ವಾಮಿ, ನೀವು ಏನ್ ಹೇಳ್ತಾ ಇದ್ದೀರಿ?"
"ಅದೇ ನಿಮ್ಮ ಮನೆ ಒಡುವೆ."
"ಅದು ತಿರುಗಿ ಬರಲಾರದ ಒಡುವೆ ಸ್ವಾಮಿ."
"ಯಾಕ್ ಬರಲಾರ್ದು
ನಾನೀಗ ಬರೋ ಹಂಗೆ ಮಾಡ್ತೀನಿ ತಾಳಿ" ಅಂತ್ಹೇಳಿ
ಬಸವಣ್ಣೋರು ಓಂ ನಮಶಿವಾಯ ಮಂತ್ರುವನ್ನ
ಜಪುನೆ ಮಾಡಿ
"ಕೆಂಪಣ್ಣ ಕೆಂಪೇಗೌಡ
ಮೊಗ ಕೆಂಪು ಎಲ್ಲಿದ್ದಾಯಿ ನನಕಂದ
ಎದ್ದು ಬಾಪ್ಪ" ಅಂತ ಕೂಗುದ್ರು.
ಕೆಂಪಣ್ಣ ಗುದ್ದ ಒಡ್ಕೊಂಡು ಎದ್ದು
ಕೈ ತಪ್ಪಳೆ ಹಾಕ್ತ ಓಡೋಡಿ ಒಂದು
ಬಸವಣ್ಣೋರ ತೊಡೆ ಮ್ಯಾಲೆ ಕೂತ್ಕೊಂಡ -

ಬಸವಣ್ಣ ದೇವರ ಮಾಯತ್ತ ನೋಡಿದರು
ಎಲ್ಲಾರು ಬಸುವಣ್ಣನ ಪಾದಾಕೆ ಬಿದ್ದರು
ಬಸವಣ್ಣ ಕೆಂಪಣ್ಣನ ತೊಡೆ ಮ್ಯಾಲೆ ಕೂರ್ಸಿಕೊಂಡು
ಶಿವನ ಅವುಸೇಕದ ಪಂಚಮ್ರುತವ ಕೊಟ್ರು
ಕಂದಯ್ನ ನೆಗಿಸಿ ಕುಣಿಸಿ ನಲಿದಾಡ್ಸಿದರು
ಮುದ್ದೇಗೌಡ್ರು ಬಸವೇಶ್ವರರ ದೊಡ್ಡತನ ನೋಡಿ
ಹಾಸಾಸಿ ಬಸವಣ್ಣೋರ ಪಾದಕೆ ಬಿದ್ದರು
ಬಂದಿದ್ದ ಶರಣಾರು ಪಾವಾಡವ ಕಂಡು
"ಸತ್ತೋದ ಮಗನ ಮತ್ತೆ ಪಡೆದರು ಸ್ವಾಮಿ
ನಿಮ್ಮಂತ ಮಾತ್ಮರು ಮತ್ತುಂಟೆ ಗುರುವೆ
ನಿಮ್ಮಪಾದಕೆ ಶರಣು ಶರಣಾರ್ತಿ" ಅನುತ್ಹೇಳಿ
ಬಸವಣ್ಣೋರ ಪಾದವ ಹಣೆಗೊತ್ತಿಕೊಂಡರು |

೪. ಇದು ಯಾವ್ದು ನನ್ನದಲ್ಲ ಎಲ್ಲವೂ ನಿಮ್ಮದೆ

ತಂದನ್ನೊ ತಾನೊ ತಂದನು ತಂದೆ ನಾನೊ || ಸೊಲ್ಲು ||

ಮುದ್ದೇಗೌಡ್ರು ಏಳು ಜನ ಗಂಡು ಮಕ್ಕ ಕರುಕೊಂಡು
ಹೊಲಗದ್ದೆ ತೋಟಾದ ಕೆಲಸಾಕೆ ಬಂದರು
ಏಳು ನೂರು ಎಕರೆಗೆ ಏಳು ನೂರು ಪೆಟ್ಟೆಗಳ
ಬಿತ್ತನೆ ಕಾಳುಗಳ ಹೊತ್ತು ತಂದರು.
ಹೊನ್ನರಳಿ ಮರದ ಕೆಳಗೆ ಮುದ್ದೇಗೌಡ್ರು
ಚಿನ್ನಾದ ಕುರುಚೀಲಿ ಕೂತುಕೊಂಡು ನೋಡುತಿದ್ರು
ಏಳು ಜನ ಗಂಡುಮಕ್ಕ ಹೊಲಗಳ ಉಳುತಿದ್ರು
ಏಳುನೂರು ಆಳುಗಳು ಬಿತ್ತನೆ ಕಾಳುಗಳ
ಪುಟ್ಟೆಗೆ ತುಂಬುಕೊಂಡು ಸಾಲ ಬಿಡಕ್ ಬರುತಿದ್ರು
ಅಂತೆ ಹೊತ್ತಲ್ಲಿ ಇವರ ಜಮೀನುಗಾಣೆ
ಶ್ರೀ ಶೈಲುಕೆ ಹೋಗುವ ಶಿವಭಕ್ತರ ಪರುಸೆ
ಮಲ್ಲಯ್ಯ ಮಲ್ಲಯ್ಯ ಉಘೇ ಉಘೇ ಎನ್ನುತ
ಕಾಕಾಕಿ ಕೂಗುತ್ತ ಕುಣುದು ಕುಪ್ಪಳಿಸುತ್ತ .
ಮಲ್ಲಿಕಾರ್ಜುನ ಸ್ವಾಮಿ ಜಾತುರುಗೆ ಹೊರುಟಿತ್ತು
ಶ್ರೀ ಶೈಲಪರ್ವತದ ಮಲ್ಲಯ್ಯಸ್ವಾಮಿಯ
ಜಾತ್ರೆಗೆ ಹೊರುಟಿದ್ದ ಪರುಸೆಯು ಗೌಡುರ
ಜಮೀನುಗಾಣೆ ಹಾದೋಗುತಿರುವಾಗ
ಹಾದೀಲಿ ಮುದ್ದೇಗೌಡ್ರ ಜಮೀನ ನೋಡಿದರು

ಜಮೀನ ಒತ್ತೀಲಿದ್ದ ಕಲ್ಯಾಣಿಕೊಳ ಕಂಡು
ನೀರು ಕುಡಿಯಾಕಂತ ಪರುಷೆಯು ನುಗ್ಗಿತು
ಬಂದಂತ ಭಕುತರು ಸುತ್ತಮುತ್ತ ನೋಡುವಾಗ
ಬಿತ್ತನೆ ಕಾಳು ತುಂಬ್ದ ಹೆಡಿಗೆಗಳ ಕಂಡರು |

"ಗೌಡ್ರೆ ಶರಣು."
"ಶರಣು ಶರಣಾರ್ತಿ ಸ್ವಾಮಿ."
"ಗೌಡ್ರೆ ನಿಮ್ಮ ಕಲ್ಯಾಣಿ ನೀರು ಕುಡಿಬೋದ?"
"ಸಂತೋಷವಾಗಿ ಕುಡೀರಪ್ಪ."
"ಗೌಡ್ರೆ ಈ ಹೆಡಿಗೇಲಿರೊ ಕಾಳುಗಳ ನೋಡ್ರೊ
ಮನುಸ್ ಮಾಡಿ ನಮ್ಗು ಸೊಲುಪ ಕೊಡಿ"
"ಸ್ವಾಮುಗಳೆ ನೀವು ನನ್ನ ಕೇಳ್ಬೇಕ?
ಸೊಲುಪ ಅಲ್ಲ ನಿಮುಗೆಷ್ಟು ಬೇಕೊ ಅಷ್ಟನ್ನೂ ತಕೊಳಿ
ಇದು ಯಾವ್ದೂ ನನ್ನದಲ್ಲ ಎಲ್ಲವೂ ನಿಮ್ಮದೆ!"
"ಎಂತೆ ಉದಾರ್ ಬುದ್ಧಿ ಸ್ವಾಮಿ ನಿಮ್ದು?"
"ಅದು ಉದಾರ್ ಬುದ್ಧಿ ಅಲ್ಲ ಕಣ್ರಪ್ಪ
ಯಾರ್ ಯಾರ್ಗೆ ಯಾವುದ್ರು ರುಣ ಅದೊ
ಅದು ಅವುರವುರ್ಗೆ ತಲುಪ್ತದೆ ಅಷ್ಟೆ!"
"ಗೌಡ್ರೆ ನೀವೇ ಕೈಯಾರೆ ದಾನ ಮಾಡಿ"
"ಅದುಕ್ಕೇನು ಕೊಡ್ತೀನಿ ತಕೊಳ್ರಪ್ಪ" -

ಸಾಲಾಗಿ ನಿಂತುಕೊಂಡು ಶ್ರೀಶೈಲ ಪರುಸೆ
ಮುದ್ದೇಗೌಡ್ರು ಕೈಯೆತ್ತಿ ಕೊಡುವ ಕಾಳುಗಳ
ಮಳ್ಳುಗೆ ತುಂಬಿಕೊಂಡು ಸಂತೋಷ ಪಡುತ
"ಗೌಡರ ಜಮೀನು ಚನ್ನಾಗಿ ಹುಲುಸಾಲಿ
ವೋಳ್ಗೆಯೊ ವಾಸ್ದೇವ ವೋಳ್ಗೆಯೊ ವಾಸ್ದೇವ"
ಎಂದು ಕೂಗುತ್ತ ಗೌಡರ ಕೊಂಡಾಡುತ್ತ
ಶ್ರೀಶೈಲ್ದ ಹಾದಿ ಹಿಡ್ದು ಪರ್ಸೆಯು ಹೊರಟಿತು
ಹೆಡಗೇಲಿ ಮಡುಗಿದ್ದ ಬಿತ್ತುನೆ ಕಾಳಿನಲ್ಲಿ
ಒಂದೇ ಒಂದು ಕಾಳೂ ಗೌಡರಿಗೆ ಉಳಿದಿಲ್ಲ
'ಶಿವನಿಚ್ಛೆ,' ಅಂದುಕೊಂಡು ಮುದ್ದೇಗೌಡರು
ಮಕ್ಕಳ ಕರುಕೊಂಡು ಮನೆಗಾದ್ರೆ ಹೋದಾರು |

ಅವತ್ತುನ ಸಮ್ ಸಮ್ ರಾತ್ರೀಲಿ
ಭಾರಿ ಮಳೆ ಹುಯ್ತು
ಕೋಳ್ ಕೂಗೋಹೊತ್ಗೆ ಮುದ್ದೇಗೌಡ್ರು ಎದ್ರು
'ಜಮೀನ್ ಕಡೇಗ್ ಹೋಗಿದ್ ಬರನ' ಅಂತ್ಹೇಳಿ
ಮನೆಯಿಂದಾಚ್ಗೆ ಕಡುದ್ರು
ಹೊಳುವಾಗಿತ್ತು.
ಗೌಡ್ರು ಭೂಮ್ತಾಯ ಸಣ್ ಮಾಡ್ಕೊಂಡು
ಜಮೀನ್ ಒಳೀಕೆ ಕಾಲಾಕುದ್ರು
ಕಾಲಾಕುದ್ರೆ
ಯಾವ ಹೊಲ ಯಾವ ಗದ್ದೆ ಯಾವ ತ್ತೋಟುಕ್ಕೆ
ಏನೇನ್ ದವಸ ಧಾನ್ಯ ಬಿತ್ಬೇಕು ಅಂತ ಅಂದಿದ್ರೊ
ಆ ಕಾಳೆಲ್ಲ ಮೊಳ್ತು ಮ್ಯಾಕೆದ್ದವೆ.
"ಇದೇನಪ್ಪಾ ಇದು?
ನಾವು ನೋಡುದ್ರೆ ಒಂದು ಕಾಳ್ನೂ ಬಿತ್ನಿಲ್ಲ!
ಇಲ್ ನೋಡುದ್ರೆ ನಾವು ಯಾವ ಯಾವ ಹೊಲುಕೆ
ಯಾವ್ ಯಾವ್ ಕಾಳುಕಡ್ಡಿ ಬಿತ್ಬೇಕು ಅಂದ್ಕೊಂಡಿದ್ರೊ
ಅದೇ ತೆರುನಾಗಿ ಇಲ್ಲಿ ಕಾಳು ಮೊಳ್ತವಲ್ಲ.
ಪರಮಾತ್ಮ ಎಲ್ಲಾ ನಿನ್ನ ಲೀಲೆ ಕಾಣಪ್ಪ"
ಅಂತ್ಹೇಳಿ ನೋಡುತಿದ್ರೆ
ಒಂದು ಸಾರ್ಗೆ ನೆಲಕಡ್ಲೆ
ಒಂದು ಸಾರ್ಗೆ ತಡ್ಡಿ
ಒಂದು ಸಾರ್ಗೆ ಅವುರೆ
ಒಂದ್ ಸಾರ್ಗೆ ತಗರಿ
ಒಂದ್ ಸಾರ್ಗೆ ಸೊಪ್ಪುನ ಕಳ್ಳೆ
ಉದ್ದು ಹಸುರು ಹುಳ್ಳಿ ಇಂತೆ ಎಲ್ಲ ಕಾಳ್ಗಳೂ
ಒಂದೊಂದು ಸಾರ್ಗೆ
ರಾಗಿ ಬತ್ತ ಜ್ವಾಳ ಗೋದಿ - ನವುಣೆ ಕಂಬು ಸಾವೆ
ಆರಕ ಇಂತೆ ಎಲ್ಲ ದವ್ಸಗಳೂ ಹುಟ್ಬವೆ
ಮುದ್ದೇಗೌಡ್ರು ಪರಮಾತ್ಮನ ಲೀಲೆಗೆ
ತಲೆದೂಗ್ತಾ ಅವುರೆ
ಆ ವರ್ಷ ಇದೂವರ್ಗೂ ಬರ್ದೇ ಇರೋಷ್ಟು
ಎಲ್ಲ ದವ್ಸ ಧಾನ್ಯಗಳ ಇಳುವರಿ ಬಂತು
ಕಣುದಲ್ಲಿ ಎಲ್ಲ ದವ್ಸಧಾನ್ಯಗಳ
ಬುಗುರ್ ರಾಸಿ ಹಾಕವ್ರೆ
ರಾಸ್ಯ ಪೂಜೆ ಮಾಡಕೆ ಅಂತ
ಗೌಡ್ರ ಎಳ್ಜನ ಸೊಸೇರು ಜೊತೆಗೆ
ಚಿಕ್ಕೋಳು ಗೌಡ್ರು ಮಗ್ಳು ಲಕ್ಷುಮದೇವಿ ಬಂದ್ರು -

ಪೂಜೆಯ ಮುಗುಸ್ಕೊಂಡು ಮನೆಗೋಗುತಿರುವಾಗ
ಆ ಊರಿನ ರಾಜ ಕುದ್ರೆ ಮ್ಯಾಲೆ ಬತ್ತಿದ್ದ
ಆ ರಾಜನು ಮುದ್ದೇಗೌಡ್ರ ಮಗಳನ್ನೆ ನೋಡಿದ
ಆ ಹಾಳಾದೋನ ಕಣ್ಣು ಲಕ್ಷುಮ್‌ದೇವಿ
ಮ್ಯಾಲೆ ಬಿತ್ತು!

೫. ಲಕ್ಷುಮದೇವಿ ಒಕ್ಕಲಿಗರ ಮನೆದೇವರಾದಳು

ತಂದನ್ನೊ ತಾನೂ ತಂದನು ತಂದೆನಾನೂ || *ಸೊಲ್ಲು* ||

ರಾಜನು ಮುದ್ದೇಗೌಡ್ರ ಮಗಳನ್ನು ಬಯ್ಕೆ ಮಾಡಿ
ರಾಜನ ಮೋಜೀಗೆ ಲಕ್ಷುಮ್‌ದೇವಿ ಬೇಕಾಗಿ
ಹೆಣ್ಣ ಕೇಳಾಕಂತ ಮಂತ್ರಿ ಪರದಾನಿಗಳ ಕರ್ದು
"ಈಗಲೆ ಮುದ್ದೆಗೌಡ್ರ ಮನೆಗಾದ್ರೆ ಹೋಗಿ
ಅವರ ಮಗಳ ನಮ್ಮರಾಜರಿಗೆ ಕೊಟ್ಟು
ಲಗ್ನಸವ ಮಾಡಿಕೊಡಬೇಕಂತ ಹೇಳಿರಿ
ನಮ್ಮ ಸಮ್ಮಂದಕ್ಕೆ ಒಪ್ಪದಿದ್ದ ಪಕ್ಷುದಲ್ಲಿ
ಕಲ್ಲುಗಾಣಕ್ಕಾಕಿ ಅರುಸ್ತೀವಿ ಅಂತ್ಹೇಳಿ"
ರಾಜಾನ ಆಗನಿಯ ತಲೆಮ್ಯಾಲೆ ಹೊತುಕೊಂಡು
ಹೆಣ್ಣ ಕೇಳಾಕಂತ ಮಂತ್ರಿ ಪರದಾನಿಗಳು
ಮಂತ್ರಿಪರದಾನಿಗಳು ಮುದ್ದೆಗೌಡ್ರ ಮನೆಗೆ
ಬಂದವರೆ ರಾಜನ ಸಮ್ಮಂದ ತಿಳಿಸಿದರು.
ಮಂತ್ರಿ ಪರದಾನಿಗಳು ಹೆಣ್ಣ ಸುದ್ದಿ ಹೇಳಿದಾಗ
ಮುದ್ದೆಗೌಡ್ರ ಬಾಯಿಂದ ಮಾತುಗಳೆ ಹೊರುಡ್ಲಿಲ್ಲ
ಬಂಡೆವೊಂದು ಗೌಡ್ರ ಮಂಡೆಮ್ಯಾಲೆ ಬಿದ್ದಂಗಾಗಿ
ಕಣ್ಣಮುಚ್ಚಿಕೊಂಡು ಚಿಂತೇಯ ಮಾಡಿದರು
ಸೊಲುಪ್ಪೊತ್ನ ಮ್ಯಾಲೆ ಕಣ್ಣ ಬುಟ್ಟು ಗೌಡರು
ಯಾವುದಕೂ ಯೋಚನೆ ಮಾಡುತೀವಿ ಅಂತ್ಹೇಳಿ
ಮಂತ್ರಿ ಪರದಾನಿಗಳ ಬಂದಂಗೆ ಕಳ್ಸಿದರು |

ಮುದ್ದೇಗೌಡ್ರು ಏಳು ಜನ ಗಂಡು ಮಕ್ಕ ಕರೆದಾರು
ರಾಜಾನ ನಂಟು ಮಾಡೊ ಸುದ್ದೀಯ ಹೇಳಿದರು
ಮಂತ್ರಿ ಬಂದೋದ ಸುದ್ದೀಯ ತಿಳಿಸಿದರು
"ನಿಮುಗೆ ಅನ್ನುಸೋದ ಮನದಲ್ಲಿ ಮಡಗದೆ
ನನ್ನ ಕೂಡ ತಪ್ಪಾದೆ ಹೇಳಬೇಕು ಮಕ್ಕಳೆ"
ಅಪ್ಪೋರು ಹೇಳಿದ ಮಾತುಗಳ ಕೇಳಿದರು
ಹಿರಿಯೋನು ಬೋರೇಗೌಡ ಕತ್ತೆತ್ತಿ ನೋಡಿ
"ಅಪ್ಪಾರೆ ಕೇಳಿ ನಮಮಾತ ಕೇಳೀರಿ
ನಮ್ಮೋಳು ಜನ್ರ ಮಾತೂ ಒಂದೇ ಮಾತು
ನಮ್ಮ ತಂಗಮ್ಮ ಆ ಪಾಪಿಗೇಡ್ಗೆ ಕೊಡಲಾರೊ"
ಏಳು ಜನ್ರು ಒಟ್ಟಾಗಿ ಒಂದೆ ಮಾತ ಹೇಳಿದರು |

"ನಂಟ ಬೆಳಸಾಕಂತ ರಾಜನು ಬಯುಸವುನೆ
ನಾಯಿ ಸಮ್ಮಂದ ನಮಗಾದರೆ ತರುವಲ್ಲ
ನಾಯಿ ಸಮ್ಮಂದಕಿಂತ ಸಾಯೋದು ಲೇಸಲ್ಲವ
ರಾಜನ ಎದುರಾಕೊಂಡು ಬದುಕೋದು ಸಾಧ್ಯವಿಲ್ಲ
ಏನ ಮಾಡಬೇಕಂತ ಹೇಳೀರಿ ಮಕ್ಕಳೆ"
"ಅಪ್ಪಾಜಿ ಬ್ಯಾರೆ ಮಾತು ಆಡೋದೆ ಬೇಕಿಲ್ಲ
ಆ ಪಾಪಿಗೆಡ್ಗೆ ನಮ್ಮ ತಂಗಮ್ಮನ ಕೊಡಲಾರೊ!" |
"ಅಪ್ಪಾಜಿ ಗಿಣಿಸಾಕಿ ಗಿಡುಗುಂಗೆ ಕೊಟ್ಟುಂಗೆ
ಆ ನಾಯಿಗೆ ನಮ್ಮ ತಂಗಮ್ಮನ ಕೊಡಕಾದ್ದ?
ನಮ್ಮ ಜಾತಿ ನಮ್ಮ ಮತ ನಮ್ಮ ಧರ್ಮ ಅಂದರೇನು ?
ಅಂತಾದ್ರಲ್ಲಿ ಆ ನಾಯಿ ಹೆಣ್ಣ ಕೇಳಕ್ಕಳುಸವ್ನಲ್ಲ
ಅವನಿಗಿನ್ನೆಷ್ಟು ಆಂಕಾರ ಇರಬೋದು" |

"ಅಪ್ಪಾಜಿ
ಅವುನೇನಾರ ಜುಲುಮಿ ಮಾಡಿ
ಮದ್ವೆ ಮಾಡ್ಕೊಡಿ ಅಂತ ಬಂದ್ರೆ
ಆ ಮಗುನ್ನ ನಾವು ಸುಮ್ನೆ ಉಳಿಸಾಕಿಲ್ಲ
ನಾನ್ ಸತ್ರೂ ಚಿಂತಿಲ್ಲ
ಅವುನ್ನೊಂದ್ಗತಿ ಕಾಣುಸ್ಬುಟ್ಟೇ ನಾವ್ ಸಾಯದು!"
"ಮಕ್ಕಳೇ ನಿಮ್ಮೆಲ್ರು ಮಾತೂ ಸರಿಯಪ್ಪ
ಅವ್ನು ರಾಜ, ನಾವು ಅವುನ ಪ್ರಜುಗೊಳು
ಅವುನ ವಿರುದ್ಧ ನಾವು ನಡ್ದು ಬದುಕೋದುಂಟ?
ನಾವು ಹೆಣ್ ಕೊಡೋದಿಲ್ಲಾಂತ್ಹೇಳುದ್ರೆ
ಅವ್ನು ಏನ್ ಮಾಡಕೂ ಹೇಸೋನಲ್ಲ
ಹಂಗಾದ್ರೆ ಏನ್ ಮಾಡ್‌ಬೋದು ಹೇಳಿ!"
"ಅಪ್ಪಾಜಿ ನಮ್ಮ ಪ್ರಾಣ ಹೋದ್ರೂ ಸರಿಯೆ
ನಮ್ಮ ಕುಲಾಚಾರ ಬುಟ್ಟು
ಆ ಕಮ್‌ಜಾತಿಯೋನ್ಗೆ ನಾವು ಹೆಣ್ ಕೊಡಕಾಗ್ದು
ಆ ನಾಯಿ ಸಮ್ಮಂದ್ವ ಒಪ್ಪಕಾಗ್ದು!"
"ಮತ್ತೆ ಏನ್ಮಾಡದ್ರಪ್ಪ?"
"ತಂಗಮ್ಮುನ ಆ ನಾಯಿಗೆ ಕೊಡೋ ಸುದ್ದಿ ಬುಟ್ಟು
ನೀವೇನ್ ತೀರ್ಮಾನ ತಕೋತೀರೊ ಅದ್ಕೆ
ನಾವೆಲ್ಲ ಬದ್ದುರಾಗಿರ್ತೀವಿ" -

ಮಕ್ಕಳ ಮಾತು ಕೇಳಿ ಮುದ್ದೇಗೌಡರು
ತಲೆಯ ತೂಗಿದರು ನೆಲವ ನೋಡಿದರು
"ನಾವು ಹುಟ್ಟಿ ಬೆಳುದಂತ ಈ ನೆಲುವ ಬುಟ್ಟು
ಹೋಗಲೆ ಬೇಕಾದ ಗತಿ ನಮಗೆ ಬಂತು"

ಹಾಗಂತ ಹೇಳಿ ಯೋಚುಣೆಯ ಮಾಡಿದರು
ಹೋಗೋದೆ ಸರಿಯಂತ ತೀರ್ಮಾನ ತಕ್ಕೊಂಡರು |

ದಿನವೆಲ್ಲ ಗಂಟು ಮೂಟೆಗಳ ಕಟ್ಟಿದರು
ಅಮಾಸೆ ಕತ್ತಲ ಸಮಸಮ ರಾತ್ರೇಲಿ
ಯಾರಿಗೂ ತಿಳಿಯಾದ ಒಪ್ಪಂದದಲ್ಲಿ
ಏಳು ಬಂಡಿ ತುಂಬ ಹೇರುಗಳ ತುಂಬಿದರು
ಏಳು ಬಂಡೀಲಿ ಅವುರೆಲ್ಲರು ಕುಂತು
ಯಾರೀಗೂ ತಿಳಿಯದ ರೀತೀಲಿ ಅವರು
ಊರನ್ನು ಬುಟ್ಟು ದೂರ ದೂರ ಸರಿದರು |

ಮುಂಗೋಳಿ ಕೂಗಿ ಮೂಡುಕೆಂಪೇರಲು
ರಾಜನು ಕಳುಗೀದ ಸೈನಿಕರು ಬಂದು
ಮುದ್ದೇಗೌಡ್ರ ಮನೆಯ ಒಂದು ಬಳ್ಸ ಬಂದರು
ಹಿತ್ತಾಲ ಬಾಕಲು ಹಾರುದಗಿದಿತ್ತು
ಮುಂದಾಲ ಬಾಕಲ ತಾಡು ಹಾಕಿತ್ತು
ಹಟ್ಟೀಯ ಒಳೂಕೆ ನುಗ್ಗೀದ ಸೈನಿಕರು
ಹಟ್ಟೀಯ ಮೂಲೆ ಮೂಲೆನೆಲ್ಲ ಸೋಸಿದರು
ಮನೆಯಲ್ಲಿ ಒಬ್ಬಾರ ಸುಳಿವೂ ಸಾ ಇರನಿಲ್ಲ
ಮನೆಯಲ್ಲಿ ಬೆಲೆಬಾಳೂ ಯಾವುದೂ ಇರನಿಲ್ಲ
ರಾಜನ ಆಗ್ನಿಯಂತೆ ಬಂದಿದ್ದ ಸೇನಿಕರು
ಈ -ಸುದ್ದೀಯ ಕುಂಡೋಗಿ ರಾಜನಿಗೆ ಮುಟ್ಸಿದರು
ಮುದ್ದೇಗೌಡ್ರು ಮಾಡಿದಂತ ಮೋಸಾವ ತಿಳಿದು
ರಾಜನು ಕ್ಯಾಪದಿಂದ ಕೆಂಡದುಂಡೆಯಾಗಿ
ಕೋಪದಿಂದ ಕೆಂಪಾನೆ ಕಣ್ಣುಗಳ ಬುಡುತ
ಕಿಡಿಕಿಡಿ ಕೆಂಡದುಂಡೆಗಳ ಕಾರುತ್ತ
ಬುಸುಗುಡುತ ಅಬ್ಬರ ಆರ್ಭಟ ಮಾಡಿದನು |

ನಾಕಾಕಡೆಗೂ ಬೇಗ ಸೇನಿಕರ ಕಳುಗಿ
ಅವುರೆಲ್ಲೆ ಇದ್ದರೂ ಬುಡದೆ ಎಳುತನ್ನಿ
ಹಾಗಂತ ರಾಜನು ಆಡರು ಮಾಡಿದನು
ರಾಜನ ಮಾತಿನಂತೆ ತಕ್ಷನವೇ ಸೇನಿಕರು
ನಾನಾ ಕಡೆಗೂ ನಾಗಾಲೋಟದಿಂದ
ಕತ್ತಿಗುರಾಣಿ ಹಿಡ್ದು ಕುದುರೆಗಳ ಹತ್ತುಕೊಂಡು
ಅಟ್ಟಾಡಿ ಬರುತಾರೆ ಬೆನ್ನತ್ತಿ ಬರುತಾರೆ |

ಸೇನಿಕರು ಬೆನ್ನಾಡಿ ಬರುವುದನು ಕಂಡಾರು
ಮುದ್ದೇಗೌಡ್ರ ಬಂಡಿಗಳು ಬ್ಯೇಗ ಬ್ಯೇಗ ಓಡಿದಾವು
ಬ್ಯೇಗುದಲ್ಲಿ ಹೋಗುವಾಗ ಎದುರಾಗಿ ಶಿವುನೆ
ತುಂಬಿ ಹರಿಯೋ ಹೊಳೆ ಗಂಗಾಭವಾನಿ
ಬಂಡಿಗಳು ಹೋಗದಕೆ ಅಡ್ಡವಾಗಿ ನಿಂತಾವು
ಮುದ್ದೇಗೌಡ್ರು ಮನದಲ್ಲಿ ಚಿಂತೇಯ ಮಾಡುವಾಗ
ಮಗಳು ಮಹಾಲಕ್ಷುಮಿ ತಾಯಿ ಲಕ್ಷುಮ್ಮದೇವಿ
ಬಂಡಿಯಿಂದ ಇಳುದು ಗಂಗೆಯಲ್ಲಿ ಮುಳುಗಿ
ಭಕ್ತಿಯಲಿ ಕೈಮುಗುದು ಗಂಗಮ್ಮನ ಬೇಡಿದಳು |

"ಅಮ್ಮಾ ತಾಯಿ ಗಂಗಾಭವಾನಿ
ನನ್ನ ತಂದೆ ತಾಯಿಗಳು ಸತ್ಯವಂತ್ರು
ಅಂತಾವುರ ಮಗಳಾದ ನಾನು
ಕಮ್ಜಾತಿಯೋನು ಬಯಸವುನೆ ಅಂತ
ಸುಮ್ಮನಾಗಲಿಲ್ಲ.
ಅವುನೇನಾರ ಜುಲುಮೆ ಮಾಡಿದ್ದ ಪಕ್ಷುದಲ್ಲಿ
ಅವನೆದೆ ಬಗ್ದು ಅವುನ ದ್ರೇಯವನ್ನು ಕತ್ರುಸಿ
ನಾಯಿನರಿಗಳುಗೆ ಹಾಕ್ತಿದ್ದೆ.
ಅಮ್ಮ ತಾಯಿ ಗಂಗಾಭವಾನಿ
ನನ್ನ ಸತ್ಯ ನನ್ನ ಧರ್ಮ ನನ್ನ ನೀತಿ ನಡತೆ
ಸುದ್ದುವಾದುದ್ದು ಅನ್ನೋ ಪಕ್ಷುದಲ್ಲಿ
ತುಂಬಿ ಹರೀತಿರೊ ನೀನು ಏಡು ಭಾಗವಾಗಿ
ನಮುಗೆ ದಾರಿ ಕೊಡಮ್ಮ"
ಹಾಗಂತ ಹೇಳಿ ಲಕ್ಷುಮದೇವಿ
ಗಂಗಾಭವಾನಿಯನ್ನು ಪೂಜೆ ಮಾಡಿ
ಬಾಗಿನ ಕೊಟ್ಟು-

ಲಕ್ಷುಮದೇವಿ ಭಕ್ತಿ ಗಂಗಮ್ಮುಗೆ ಅರುವಾಗಿ
ಹೊಳೆ ಏಡು ಪಾಲಾಗಿ ದಾರಿಯ ಬುಟ್ಟುಕೊಟ್ತು
ಮುದ್ದೇಗೌಡ್ರ ಬಂಡಿಗಳು ಹೊಳೆ ದಾಟಿ ನಡೆದವು
ಬಂಡಿಗಳು ಈಚೋರಿಕೆ ಬಂದಂತ ಹೊತ್ತಲ್ಲಿ
ಗಂಗಾಭವಾನಿ ಕೂಡಿ ಮೊದಲಂತೆ ಹರಿದಾಳು |

ಮುದ್ದೇಗೌಡ್ರ ಪರಿವಾರ ಹೊಳೆದಾಟಿ ಬಂದಾಗ
ಆಚೋರಿ ಅಟ್ಟುಸ್ಕೊಂಡು ಬಂದಂತ ಸೇನಿಕರು
ಹೊಳೆತುಂಬಿ ಹರಿಯೋದ ನೋಡಿ ಏಂತಾರು
ಆಚೆ ದಡದಲ್ಲಿ ಮುದ್ದೇಗೌಡ್ರ ಬಂಡಿಗಳು
ಈಚೆ ದಡದಲ್ಲಿ ರಾಜನ ಸೇನಿಕರು
ಒಂದಷ್ಟು ಹೊತ್ತು ನಿಂತುಕೊಂಡು ನೋಡಿದರು
ಬಂದ ದಾರ್ಲೆ ಸುಂಕವಿಲ್ಲ ಅಂದುಕೊಂಡು ಸೇನಿಕರು
ಬಂದ ದಾರಿಲಿ ಹಿಂದು ಹಿಂದಕ್ಕೆ ಹೋದರು |

ಮುದ್ದೇಗೌಡ್ರ ಬಂಡಿಗಳು ಮುಂದಕ್ಕೆ ಹೊರಟಾವು
ಕಾಡು ಕಾಡನು ದಾಟಿ ನಾಡದಾರಿಯ ಹಿಡಿದು
ದೂರಾದ ಸೀಮೆ ಕಾವೇರಿ ಹೊಳೆಯಂಚು
ಜಲಕಂಡು ಗಂಗಾಭವಾನಿಗೆ ಕೈಮುಗುದು
ಅಲ್ಲಿ ತಂಗಿದರು ತಳುಗಿ ಅಟ್ಟುಂಡರು
ಪ್ರಯಾಣದ ಆಯಸಕೆ ಎಲ್ಲಾರು ಮನುಗಿದರು
ತಂಗಿ ಲಕ್ಷುಮದೇವ್ಯ ಮಧ್ಯಕೆ ಬುಟುಕೊಂಡು
ಅವ್ರ ಸುತ್ತ ಏಳು ಜನ ಅಣ್ಣ ತಮ್ಮಂದಿರು
ಸುತ್ತಾಲು ಮನುಗಿ ತಂಗೀಗೆ ಕಾವುಲಾದ್ರು.

ಮುಂಗೋಳಿ ಕೂಗೀದೊ ಮೂಡುಕೆಂಪೇರಿದೊ
ಎಲ್ಲಾರೆದ್ದ ಸೂರಿಯನ ದರುಸನ ಮಾಡಿದರು
ಏಳು ಜನ ಅಣ್ಣಾರು ಕಣ್ಣೊಸಕಿಕೊಂಡು
ಎದ್ದು ಕುಂತರು ತಮ್ಮ ನಡೂಮಧ್ಯದಲ್ಲಿದ್ದ
ಮನುಗಿದ್ದ ತಂಗಿಗಾಗಿ ಸುತ್ತಮುತ್ತ ನೋಡಿದರು
ಅಲ್ಲಿ ಲಕ್ಷುಮದೇವಿ ಅವರಿಗೆ ಕಾಣಲಿಲ್ಲ
ಎಲ್ಲರೂ ಎಲ್ಲ ಸೇರಿ ಲಕ್ಷುಮದೇವಿ ಹುಡುಕಿದರು
ಎಲ್ಲೂ ಎಲ್ಲೂ ಎಲ್ಲೂ ಲಕ್ಷುಮದೇವಿ ಇರವಿಲ್ಲ
ಎಲ್ಲಾರ ಜೀವವೆ ಹೋದಂತಾಯಿತು
ಎಲ್ಲಾರು ಮೊಕ ಮೊಕ ನೋಡಿಕೊಂಡರು
ಎಲ್ಲಾರು ಲಕ್ಷುಮದೇವಿ ಮನುಗಿದ್ದ ಸ್ಥಳಕೆ
ಬಂದು ಕೂತುಕೊಂಡು ಮತ್ತಲ್ಲಿ ನೋಡಿದರು
ಅಲ್ಲಿ ಲಕ್ಷುಮದೇವಿ ದೇವರಾಗಿ ಮೂಡಿದ್ದಳು
ನಮ್ಮ - ವಮುಸದ ಮಗಳು ನಮ್ಮನ್ನು ಅಗಲಿದಳು
ಹಾಗಂತ ಹೇಳುತ್ತ ಗಾಳು ಗೋಳು ಮಾಡುತ
ಎಲ್ಲರು ಕಣ್ಣೀರ ಕೋಡೀನೆ ಹರಿಸಿದರು.
ಲಕ್ಷುಮದೇವಿ ನಮ್ಮ ಕುಲಕೆ ದೇವುರಾಗವುಳೆ
ನಮ್ಮ - ವಮುಸಾದ ಹೆಸರುಳಿಸಿ ನಮ್ಮನಗಲವುಳೆ
ಒಕ್ಕಲಿಗರ ಮನೆದೇವ್ರು ಕುಲದೇವ್ರು ಆಗವುಳೆ
ಮಗಳ ಹೆಸರಲಿ ಗೌಡ್ರು ಲಕ್ಷುಮಿಪುರ ಮಾಡಿಕೊಂಡು
ಮಕ್ಕಳು ಮೊಮ್ಮಕ್ಕಳ ಜೊತೆಯಲ್ಲಿ ಬಾಳಿದರು |

ಸತ್ಕುವಂತೆ ಲಕ್ಷುಮದೇವಿ ಪಾದಂಗಳಿಗೆ
ಶರಣ ಶರಣಾರ್ತಿ
ಜೈ ನಮ ಪಾರ್ವತಿ ಪತೇ ಹರಹರ ಮಾದೇವ್
ಏಳ್ಮಲೆ ಹೆತ್ತಯ್ಯ ಮಾಯ್ಕಾರ ಮಾದೇವ
ನಿನ್ನ ಪಾದವೇ ಗತಿ ಕಾಣಪ್ಪ ಶರಣು ಶರಣಾರ್ತಿ

ಮೂರು ಲೋಕಕು ಅನ್ನ ಕೊಡುವೋನು

ಊರಿಗೆ ಮಳೆಹೂದೊ ಅರುಕಟ್ಟೊ ಕಂದಯ್ಯ
ಊರ ಮುಂದಿರುವ ಬಸವಣ್ಗೆ - ಕೈ ಮುಗುದು
ಅರುಕಟ್ಟೊ ಮುದ್ದು ಮೊಕುದವುನೆ |

'ಆರಂಬದರುಕೋಲ ಯಾರು ಕೊಟ್ಟರಣ್ಣಾಯ್ಯ?'
ಮೂರು ಲೋಕಕು ಅನ್ನ ಕೊಡುವೋನು
ಮೂರು ಲೋಕಕು ಅನ್ನ ಕೊಡುವೊ ಬಸ್ಯಣ್ ಕೊಟ್ಟ
ಅವ - ಯಾರು ಕೇಳಿದರೂ ಕೊಡನೊಲ್ಲ |

ಭೂಮ್ತಾಯಿ ಗತಿಯೆಂದು ಮಾದೇವ ಮತಿಯೆಂದು
ಬಸುವಣ್ಣ ಪಾದ ನೆನುಕೊಂಡು - ಗೌಡ್ರುಮಗ
ಹೊನ್ನ ಬಿತ್ಯಾನೆ ಹೊಲುಕೆಲ್ಲ |

ಕುರುಬರ ಬೀರಪ್ಪ

ತಂದನ್ನೊ ತಾನೊ ತಾನೊ ತಾನಂದನೊ
ತನುತಂದನಾನೊ ತಾನೊ ತಾನಂದನೊ || ಸೊಲ್ಲು ||

ಬೀರಪ್ಪನವರು ತಾನೊ ತಾನಂದನೊ*
ಕುರುಗಳ ಬುಟುಕೊಂಡು
ಮಲ್ಲಿಗೆರೆ ಏರಿಮ್ಯಾಲೆ
ಹೊಂಗೇಯ ನೆಳ್ಳಲ್ಲಿ
ಕೂತುಕೊಂಡು ಕುರುಗಳ
ಕಡೆಗೆ ಕಣ್ಣಾಡಿಸುತ
ಮೊಳ್ಳಲ್ಲಿ ಕಟ್ಕಿಕೊಂಡು
ಮನೆಯಿಂದ ತಂದಿದ್ದ
ಹುರುದ ಪುಂಡುನ ಬಿತ್ತ
ಹುಳ್ಳಿಯ ಕಾಳುಗಳ
ಕುರುಕುತ ಕುಂತಿದ್ರು |

ಇತ್ಲಿಂದ ಕಲ್ಯಾಣ
ಪಟ್ಟಣದಿಂದ ಹೊಂಟ
ಸರಣರ ಪರುಸೆಯ
ಶ್ರೀಶೈಲ ಪರ್ವತ್ಕೆ
ಹೋಗುವ ದಾರೀಲಿ
ಉಗೇಯ ಇಕ್ಕುತ
ಮಲ್ಲಿಕಾರ್ಜುನ ಸ್ವಾಮ್ಯ
ದರುಸಣಕೆಗಾಗಿ ಪರುಸೆ
ಗುಂಪಾಗಿ ಹೊಂಟಿತ್ತು |

ಸರಣರ ಕಂಡಂತ
ಬೀರಪ್ಪನವರು
ಮ್ಯಾಲಕ್ಕೆ ಎದ್ದರು
ಸರಣರ ಮುಂದುಕ್ಕೋಗಿ
ಅವರ - ಪಾದಗಳ ಹಿಡ್ದು
ಸರಣು ಸರಣಂದರು |

'ಅಯ್ಯಾ ನೀನ್ಯಾರಪ್ಪ?'
'ಸ್ವಾಮಿಗಳೆ ನಾನು ಕುರುಬರ ಬೀರಪ್ಪ ಬುದ್ಧಿ'
'ನಮ್ಮಿಂದ ನಿನಗೇನಾಗಬೇಕಿತ್ತಪ್ಪ?'
'ಸ್ವಾಮಿಗಳೇ ಬೋದಿನುದಿಂದ
ಕಲ್ಯಾಣದ ಕೈಲಾಸುಕ್ಕೋಗಿ
ಅಣ್ಣ ಬಸುವಣ್ಣನವರ ನೋಡ್ಬೇಕು ಅಂತ ಆಸೆ
ನನಗೆ ಹೋಗೋ ಬಗೆ ಹೇಳಿ ಬುದ್ಧಿ'
'ಅಯ್ಯಾ ನೀನ್ನೋಡುದ್ರೆ ಕುರಿ ಕಾಯ್ಕಂಡಿರೋನು
ನಿನ್ನ ಬಟ್ಟೆ-ಬರೆ ನಿನ್ನ ರೂಪು ರೇಕ್ಯಾ
ಆಕಾರ ಇಕಾರಗಳನ್ನ ನೋಡುದ್ರೆ
ಕಡೇ ಬಾಗ್ಲಲ್ಲಿ ನಿಂತಿರೋವಂತ ಕಾವುಲ್ಲಾರ್ರು
ನಿನ್ನ ಒಳೀಕೆ ಬುಡೋದಿಲ್ಲಾಪ್ಪ'
'ಹಂಗಾದ್ಮೇಕೆ ನಾನು ಬಸುವಣ್ಣೋರ
ನೋಡೋದು ಹೆಂಗ್ ಸ್ವಾಮಿ?'
'ಅಯ್ಯಾ ನಿನಗೆ ಲಿಂಗಧಾರಣೆ ಆಗ್ಯೆತ?'
'ಇಲ್ಲ ಬುದ್ಧಿ'
'ಹಂಗಾದ್ರೆ ನೀನು ಕಲ್ಯಾಣಕ್ಕೋಗೋಂಗಿಲ್ಲ
ನಿನ್ಗೆ ಲಿಂಗಧಾರ್ಣ ಆಗ್ಬೇಕು'
'ಬುದ್ಧಿ ಹಂಗಾರೆ ನೀವೇ ನನಗೆ ಲಿಂಗ್ಧಾರ್ಣೆ
ಮಾಡಿ ಬುದ್ಧಿ'
'ಅಯ್ಯಾ ಲಿಂಗ್ಧಾರ್ಣೆ ಮಾಡಕೆ
ನಾವೇನು ಲಿಂಗುವ ಇಲ್ಲಿ ತಂದಿದ್ದೇವ?'
'ಮತ್ತೇನ್ ಮಾಡ್ಲಿ ಬುದ್ಧಿ?'
'ಅಯ್ಯಾ ನಾವು ಶ್ರೀಶೈಲುಕ್ಕೋಯ್ತಾ ಇವಿ
ಶ್ರೀಶೈಲದಲ್ಲಿ ಲಿಂಗಗಳು ಬೇಕಾದಂಗ ಸಿಕ್ತವೆ
ನಾವೇ ಅಲ್ಲಿಂದ ಒಂದು ಲಿಂಗ ತಂದು
ನಿನ್ನ ಕುತ್ತಿಗ್ಗೆ ಕಟ್ಟಿ
ನಾವೇ ನಿನ್ನ ಕಲ್ಯಾಣ್ಕೆ ನಮ್ಮೊಟ್ಟಿಗೆ ಕರ್ಕೊಂಡೋಯ್ತೀವಿ
ನಾವು ಮುಂದೂನ ಸ್ವಾಮಾರ್ಕೆ ಬರ್ತೀವಪ್ಪ
ಆ ದಿನ ಸ್ನಾನ ಮಡಿ ಮಾಡ್ಕೊಂಡು ಈ ತಾಮುಕೇ ಬಾ
ನಿನ್ಗೆ ಲಿಂಗಧಾರ್ಣೆ ಮಾಡ್ತೀವಿ.
ಕಲ್ಯಾಣ್ಕ ಕರ್ಕೊಂಡೋಯ್ತೀವಿ'
'ಹಂಗಾರೆ ಅಣ್ಣಾವ್ರ ದರುಸ್ನೆ ಮಾಡುಸ್ತೀರ ಸ್ವಾಮಿ?'

---

* *ಪ್ರತಿಪಾದದ ಕೊನೆಯಲ್ಲೂ 'ತಾನೊ ತಾನಂದನೊ' ಎಂದು ಹೇಳಬೇಕು. ನಿಂತಗೆರೆ ಇರುವಲ್ಲಿ ತಾನೊ ತಾನಂದನೊ ಎಂದು ಹೇಳಿದ ಮೇಲೆ ಸೊಲ್ಲಿನ ಪೂರ್ವಭಾಗವನ್ನು ಹಾಡಬೇಕು.*

'ಕಂಡಿತ್ಕಾಗೂ ಮಾಡುಸ್ತಿವಿ
ಅಲ್ಲೀನ್ಕಂಟ ಜೇಮ ಹಿಡ್ಕೊಂಡು
ತ್ಕೈರಸ್ತು ಮಾಡ್ಕೊಂಡು ಇರಪ್ಪ'
'ಹಂಗೇ ಆಗ್ಲಿ ಬುದ್ಧಿಗಳೇ
ನಿಮುಗೆ ಸರಣು ಸರಣಾರ್ತಿ' -

ಸರಣರ ಪರುಸೆಯು
ಶ್ರೀಶ್ಯೆಲ್ಕೆ ಹೊಂಟೋಯ್ತು
ಇತ್ಕಾಗಿ ಬೀರಪ್ಪನವರು
ಸುಬು ಸ್ವಾಮುವಾರವ
ಗ್ಯಾನ್ಯೆಸಿಕೊಂಡು ಹಿಡ್ದು
ಮುಂಗೋಳಿ ಕೂಗೋದ್ಕು
ಮೂಡು ಕೆಂಪೇರೋದ್ಕು
ಮುನ್ನಾವೆ ಮ್ಯಾಲಕೆದ್ದು
ಕೈಲಾಸಮೂರುತಿಯ
ಸೊರಣೆಯ ಮಾಡಿಕೊಂಡು
ಬಸುವಣ್ಣಸ್ವಾಮಿಯ
ಪಾದುವ ನೆನುಕೊಂಡು
ಮಲ್ಲಿಗೆರೆ ಏರೀಗೆ
ಓಡೋಡಿ ಬಂದಾರು |

ಮಲ್ಲಿಗೆರೆ ಒಳುಗೆ
ಮಿಂದು ಮಡಿಯನುಟ್ಟು
ಕಕ್ಕೆ ಕಣುಗಲ
ಹೂಗಳ ಕಿತ್ತುಕಂದು
ಬೆಣ್ಣೇಯ ಸುಟ್ಟು
ಬೂದಿಯ ಗುಡ್ಡೆ ಮಾಡಿ
ಧೂಪದ ಮರಗಳ
ಚಕ್ಕೆಯ ರಾಶಿ ಮಾಡಿ
ಬೆದ್ದಲ್ಕೆ ಸೌದೆಗಳ
ಉರಿಸಿ ಕೆಂಡವ ಮಾಡಿ
ಸರಣರ ಪರುಸೆಯ
ಕಾಯುತ ಕುಂತರು
ಬೀರಪ್ಪನವರು |

ಶ್ರೀಶ್ಯೆಲ ಪರ್ವತಕೆ
ಹೋಗಿದ್ದ ಪರುಸೆಯು
ದೂರದಲ್ಲಿ ಬರುವುದ
ನೋಡಿದ ಬೀರಪ್ಪನವ್ರು
ದಡಗರುಕೊಂಡೆದ್ದರು
ಚಾಮಗಾಮಕೆ ಸ್ವಾಮ್ಗಳು
ಬಂದಾರು ಅನುತ್ಹೇಳಿ
ಬಂದ ಸರಣರುಗಳ
ಪಾದಂಗಳಿಗೆ ಬೀರಪ್ಪ
ಸರಣು ಸರಣಂದರು |

ಸರಣರ ಗುಂಪು
ಬೀರಪ್ಪನವ್ರ ಕಂಡು
ಆಸುರ್ವಾದಗಳ
ಮಾಡಿದರು ಸರಣರು |

'ಸ್ವಾಮಿಗಳೇ ನಿಮುಗೆ ಸರಣು ಸರಣಾರ್ತಿ'
'ಭಕ್ತವಸ್ತ ನೀನ್ಯಾರಪ್ಪ?'
'ಸ್ವಾಮುಗಳೇ ನಾನು ಕುರುಬರ ಬೀರಪ್ಪ
ನೀವು ಶ್ರೀಶ್ಯೆಲ ಪರ್ವತಕ್ಕೆ ಹೋಗುವಾಗ
ನಾನು ನಿಮ್ ಪಾದುಕ್ಕೆ ಬಿದ್ದಿ
ನನಗೆ ಲಿಂಗುಧಾರ್ಣ ಮಾಡಿ ಅಂದಿ
ಬಸವಣ್ಣೋರ ದರುಸ್ನೆ ಮಾಡ್ಸಿ ಅಂದಿ
ನೀವು ಲಿಂಗುಧಾರ್ಣೆ ಆಗ್ಬೇಕು ಅಂದ್ರಿ
ಅದ್ಕಾಗಿ ನಿಮ್ನೇ ಕಾಯ್ತಾ ಇದ್ದೀವಿ ಬುದ್ಧಿ'
ಈ ಶರಣ್ರು
ಬೀರಯ್ಯುಂಗೆ ಲಿಂಗುಧಾರ್ಣೆ ಮಾಡ್ತೀವಿ ಅಂದದ್ದೂ
ಅವುನಿಗಾಗಿ ಶ್ರೀಶ್ಯೆಲದಿಂದ ಲಿಂಗುವನ್ನು ತರ್ತೀವಿ ಅಂದಿದ್ದೂ
ಮರ್ತೇಬುಟ್ಟಿದ್ರು.
ಈಗೇನ್ ಮಾಡದಪ್ಪ ಅಂತ ಯೋಚ್ನೆ ಮಾಡುದ್ರು
ಕಡೇಗೆ
'ಅಯ್ಯಾ ನಿನುಗೆ ಲಿಂಗುಧಾರ್ಣೆ ಮಾಡ್ತೀನಿ
ನೀನು ಪೂಜುಗೆ ಬೇಕಾದ್ದನೆಲ್ಲ
ಅಮ್ಯುಸ್ಕೋ ಅಪ್ಪ' ಅಂದ್ರು
ಬೀರಪ್ಪನವರು
ಬೆಣ್ಣೆ ಬೂದೀನೂ ಬೆಜ್ಜಲ್ಕೆ ಕೆಂಡಾನು
ಧೂಪುದ ಚಕ್ಕೆಗಳ್ನೂ ತಂದು ಮುಂದಕ್ಕೆ ಮಡುಗುದ್ರು.
ಆಗ ಆ ಸರಣ್ರು
ಅವುರ ಹಣೇಗೆ ಈಬುತ್ತಿ ಬಳುದ್ರು
ಬೀರಪ್ಪನವರ ಕೀಲುಕೀಲುಗು
ಈಬುತ್ತಿ ಧಾರ್ಣೆ ಮಾಡುದ್ರು
ಬೆದ್ದುಲ್ಕೆ ಕೆಂಡುಕ್ಕೆ ಧೂಪದ ಚಕ್ಕೆ ಸುರುದ್ರು
ಧೂಪದ ಹೊಗೆ ಸುತ್ತೆಲ್ಲ ಗವುದೋಯ್ತು

ಆ ಹೊತ್ತಲ್ಲಿ ಬೀರಪ್ಪನವರ್ಗೆ ಕಾಣ್ದಂಗೆ
ಆ ಸರಣ್ರು
ಒಂದು ಕುರಿಪಿಕ್ಕೆಯನ್ನು ತಗ್ದು ವಸ್ತ್ರಕೆ ಕಟ್ಟಿ
ಅದ್ಕೆ ಬೆಣ್ಣೆ ಈಬುತ್ತಿ ಧಾರ್ಣೆ ಮಾಡಿ
ಕಕ್ಕೆ ಕಣುಗ್ಲು ಹೂವ್ಮಡಗಿ
ಆ ವಸ್ತುವನ್ನು ಧೂಪುಕ್ಕೆ ಹಿಡಿದು
ಬೀರಪ್ಪನವರ ಕೊಳ್ಳುಗೆ ಕಟ್ಟಿ
'ಓಂ ನಮುಸಿವಾಯ' ಅನ್ನೊ ಮಂತ್ರವ ಹೇಳ್ಕೊಟ್ರು -

ಬೀರಪ್ಪನವರು
ಗದುಗುಸ್ತ ಸರಣರ
ಪಾದಗಳ ಹಿಡಿಕೊಂಡು
'ಜಾಬಾದ ಮಂತ್ರವ
ಉಪ್ದೇಸ್ನೆ ಮಾಡಿದಿರಿ
ಇಂತೆ - ತಾರಕ ಮಂತ್ರವ
ನನಗಾದ್ರೆ ಕೊಟ್ಟಿರಿ
ನಿಮ್ಮಿಂದ ನಾನು
ಧನ್ಯನಾದೆನು ಸ್ವಾಮಿ
ನಿಮ್ಮ ದಯವ್ವೊಂದು
ನನ್ಗೆ - ಅಣ್ಣೊೀರ ಪಾದದ
ದರುಸ್ನೆ ಮಾಡ್ಸಿದರೆ
ನಿಮ್ಮ ಪುತ್ರನಾಗಿರುತೀನಿ
ನಿಮ್ಮ ತೊತ್ತಾಗಿ ಇರುತೀನಿ' |

ಬೀರಪ್ಪನವರಿಗೆ
ಆ ಶರಣರೆಲ್ಲಾರು
'ಸ್ಥಿರಂಜಿಯಾಗಪ್ಪ'
ಅಂತ್ಹೇಳಿ ಆಸುರ್ವಾದ
ಮಾಡಿ ಬೀರಪ್ಪನವರ
ಕಲ್ಯಾಣ ಪಟ್ಟಣಕೆ
ಕರುಕೊಂಡು ಹೋದರು |

ಕಲ್ಯಾಣ ಪಟ್ಟಣಕ್ಕೆ
ಹೋದುದ್ದೆ ಸಮನಾಯ್ತು
ಲಿಂಗಾಂತ ಹೇಳಿ
ಕುರಿಪಿಕ್ಕೆ ಕಟ್ಟಿದ್ದ
ಈನಾಯ್ದ ಸರಣರು
ಒಂದು - ಓಣೀಯ ತೋರಿಸಿ
'ಈ ಓಣೀಲಿ ಹೋಗಪ್ಪ
ಅಲ್ಲಿ ಬಸವಣ್ಣ ದೇವರ
ಗುರುಮಠ ಕಾಣುತದೆ'
ಅಂತ್ಹೇಳಿ ಅವುರೆಲ್ಲ
ಮರೆಯಾಗಿ ಹೋದರು |

ಪರದಾಡುತ್ತಿದ್ದ
ಬೀರಪ್ಪನವರನು
ಕಂಡ ಪಾರುದೋರು
'ಯಾರಪ್ಪ ನೀನು?
ಏನಾಗಬೇಕಿತ್ತು?'
ಅನುತ್ಹೇಳಿ ಕೇಳಿದಾಗ
'ಅಣ್ಣವ್ವುರ ಗುರುಮಠಕೆ
ದಾರಿ ತೋರಿ ನಿಮ್ಮ ಧರ್ಮ'
ಅಂದಾಗ ಪಾರುದೋರು
ಅಣ್ಣಾವ್ರ ಹತ್ತಿರಕ್ಕೆ
ಬೀರಪ್ಪನವರನು
ಕರುಕೊಂಡು ಹೋದರು |

ಗುರುಮಠಕೆ ಕರುಕೊಂಡು
ಹೋದಂತ ಪಾರುದೋರು
ಕಾವೀಯ ಕುರ್ಚೀಲಿ
ಬೀರಪ್ಪನ ಕುಂದುರಿಸಿ
ಪೂಜೆಣಿಗೆ ಕುಂತಿದ್ದ
ಅಣ್ಣಾವುರ್ಗೆ ತಿಳ್ಸಿದರು
'ಕೂಡಲ ಸಂಗಮ
ದೇವರೆ ನನಮನೆಗೆ
ಪೂಜೆಯ ಹೊತ್ತೀಗೆ
ಬಂದವ್ನೆ' ಅನುತ್ಹೇಳಿ
ಅಣ್ಣಾವ್ರು ನೀಲಮ್ಮ
ಕರುಕೊಂಡು ಜೊತೆಯಲ್ಲಿ
ಪನ್ನೀರಾಗಣಿ ಸ್ಕೆತ
ಪಂಚಕಳಸ ಸ್ಕೆತ
ಮಂಗಳಾರತಿ ಸ್ಕೆತ
ಬೀರಪ್ಪ ದೇವರ
ಹತ್ತಿರಕೆ ಬಂದರು
ಸರಣು ಸರಣ್ಗಂತ್ಹೇಳಿ
ಹಾಸಾಸಿ ಬಿದ್ದಾರು |

ಬಸವಣ್ಣ ದೇವರ
ನಡವಳಿಯನು ನೋಡಿ
ಬೀರಪ್ಪನವರು
ಬೆಚ್ಚಿ ಬೆದರಿದರಾಗ
ಅಣ್ಣಾವ್ರ ಪಾದದ ಮ್ಯಾಕೆ
ಅಡ್ಡಡ್ಡ ಬಿದ್ದರು |

ಅಣ್ಣಾವ್ರು ಬೀರಪ್ಪನವರನ್ನು ಮಾಲುಕೆತ್ತಿ
ಕಾವೀಕುರ್ಚಿ ಮ್ಯಾಲೆ ಕುಂಡ್ರುಸ್ಸೆ
ತಾಮಿ ನೀಲಮ್ಮನವರು
ಚಿನ್ನದ ತಣಿಗೇತಿ ಬೀರಪ್ಪನವರ ಪಾದಗಳ ಮಡಗಿ
ಪನ್ನೀರಾಗಣಿಯಲ್ಲಿ ತೊಳುದ್ರು
ಪಾದದ ಮ್ಯಾಲೆ ಪುಷ್ಪ ಮಡುಗಿ
ಹಣ್ ಮುರ್ದು ಕಾಯೊಡ್ದು
ಗಂಧದ ಕಡ್ಡಿಗಳ ಹಸ್ಸಿ
ಕಲ್ಪೂರದಿಂದ ಬೆಳುಗುದ್ರು
ಆಗ ಬೀರಪ್ಪನವರು ದಿಗುಲಾಗಿ
"ಸ್ವಾಮಿ ಇದೇನ್ ಮಾಡ್ತಿದ್ದೀರಿ
ನನ್ನ ಬುಟ್ಟುಡಿ ನಾನು ಹೋಯ್ತೀನಿ
ನಿಮ್ಮಿಂದ ಪೂಜಣೆ ಮಾಡುಸ್ಕೊಳೊ ಯೋಗ್ತಿ
ನನಗಿಲ್ಲ ಸ್ವಾಮಿ
ನನ್ನ ಬುಟ್ಟುಡಿ ಬುಟ್ಟುಡಿ" ಅಂತ ಗ್ವೊಗರುದ್ರು
ಆಗ ಬಸವಣ್ಣ ಹೇಳ್ತರೆ
'ಬೀರಪ್ಪ ದೇವರೆ
ನಿಮ್ಮಂತ ಭಕ್ತರ ಮುಂದೆ ನಾವೆಲ್ಲ ಸಣ್ಣವರು
ಪರಮಾತ್ಮ ನಿಮುಗೆ ಒಲಿದಿರೂ ಸಂಗ್ತೀಯ
ನನ್ನ ಸಂಗಮೇಶ್ವರ
ಈಗ ಪೂಜಣೆಗೆ ಕೂತಿದ್ವಾಗ ತಿಳುಸವ್ನೆ ಗುರುವೆ'
'ಅಣ್ಣಾವ್ರೆ ನೀವು ಹೇಳ್ತಿರೋದೊಂದೂ
ನನಗೆ ಗೊತ್ತಾಯ್ತಿಲ್ಲ
ನನ್ನ ಬುಟ್ಟುಡಿ ನಾನು ನನ್ನ ಕುರಿಹುಂಡಿಗೋಯ್ತೀನಿ
ನನ್ನ ಬುಟ್ಟುಡಿ!'
ಆಗ ಬಸವಣ್ಣನವರು
ಬೀರಪ್ಪನವರ ಕುತ್ತಿಗೆಲಿರೋ
ವಸ್ತ್ರವನ್ನ ಬಿಚ್ಚಿ ಅದರಲ್ಲಿದ್ದಂತ
ಕುರಿಪಿಕ್ಕೆಯನ್ನು ತೋರಿಸಿ
"ಇದೇನು ಸ್ವಾಮಿ?" ಅಂತ ಕೇಳುದ್ರು
"ಅಣ್ಣ ಅಲ್ಲಿ ನೋಡಿ
ಅಲ್ಲಿ ಕೈಲಾಸಪರ್ವತ ಕಾಣ್ತಾ ಅದೆ
ಅಲ್ಲಿ ಪಾರ್ವತಿ ಪರಮೇಶ್ವರರು ಕಾಣ್ತಾ ಇದ್ದಾರೆ
ಅವುರ ಆ ಕಡೆ ಈ ಕಡೆ
ಇಗ್ನೇಸ ಸುಬ್ರಮಣಿ ನೆಗ್ತಾ ನಿಂತಾವುರೆ
ಪರಮಾತ್ಮನ ಆಸ್ಥಾನದ ತುಂಬ
ಲೆಕ್ಕವಿಲ್ಲದಷ್ಟು ಗಣಂಗಳಿದ್ದಾರೆ ಸ್ವಾಮಿ"
"ಬೀರಪ್ಪ ದೇವರೆ
ಅಲ್ಲಿ ಇನ್ನೇನು ಕಾಣ್ತಾ ಇಲ್ಲವ?"
"ಸ್ವಾಮಿ ಇಡೀ ಬ್ರಹ್ಮಾಂಡವೇ ತಾವಾದ
ಪರಮೇಶ್ವರನೇ ಕಾಣ್ತಾ ಇರುವಾಗ
ಇನ್ನೇನು ಕಾಣಕಾದದು ಸ್ವಾಮಿ ?
ಅಣ್ಣಾವ್ರೆ ನನ್ನ ಜೀವನವೆಲ್ಲ
ಇದ್ನೇ ಕಾಣ್ತಾ ಇರೋ ಸೌಭಾಗ್ಯ ಸಿಕ್ಕುದ್ರೆ
ಅದುಕ್ಕಿಂತ ಇನ್ನೇನು ಬೇಕು ಸ್ವಾಮಿ ?'
ಅಂದ್ರು ಬೀರಪ್ಪನವರು
ಅಣ್ಣಾವ್ರುರ್ನೂ ನೀಲಮ್ಮ ತಾಯಿಗೂ
ಕುರಿಪಿಕ್ಕೆ ಮಾತ್ರ ಕಾಣ್ತಾ ಅದೆ
ಆಗ ಬಸವಣ್ಣೋರು
ಬೀರಪ್ಪನವರ ಮೊಕ ನೋಡುದ್ರು
ಬೀರಪ್ಪನವರ ಮೊಕ ಪೋರ್ಲೋಮಿ
ಚಂದ್ರುನಂಗೆ ಕಾಣ್ತಾ ಅದೆ
ಆಗ ಅಣ್ಣಾವುರು
ತಮ್ಮ ಕಲ್ಯಾಣ ಪಟ್ಟಣದಲ್ಲಿದ್ದಂತ
ಲಕ್ಷುದದ್ಮೇತೆ ತೊಂಬತ್ತಾರು ಕೋಟಿ
ಗಣಂಗಳನ್ನೆಲ್ಲ ಕುರ್ದು
ನನ್ನ ಕಲ್ಯಾಣ ಪಟ್ಟಣ
ಇಂಥ ಶರಣರಿಂದ ಕೈಲಾಸಪಟ್ಟವಾಯ್ತು ಅಂತ್ಹೇಳಿ -

ಬೀದಿ ಬೀದಿಗುಂಟ
ರುದ್ರಾಕ್ಷಿ ಮಂಟ್ಪದಲ್ಲಿ
ಬೀರಪ್ಪ ದೇವರ
ಮೆರವಣಿಗೆ ಮಾಡಿದರು
ಕುರಿಪಿಕ್ಕೆಯನ್ನು
ಲಿಂಗಾವ ಮಾಡೀದ
ಕಲ್ಯಾಣಪಟ್ಟವನ್ನೇ
ಕೈಲಾಸ ಮಾಡಿದ
ಬೀರಪ್ಪ ಮಾತ್ಮರ
ಕತೆಗೆ ಶರಣು ಶರಣು
ಮಂಗಳಂ ಮಾ ಮಂಗಳಂ |

ಸಿದ್ಧರಾಮೇಶ್ವರ

೧. ಶಿವಸಿದ್ಧನಾಗಿ ನಾನು ಭೂಲೋಕದಲ್ಲಿ ಹುಟ್ಟಬೇಕು

ತಂದನ್ನೊ ತಾನೊ ತಾನೊ ತಾನಂದನೊ
ತನುತಂದನಾನೊ ತಾನೊ ತಾನಂದನೊ | ಸೊಲ್ಲು |

ಓಂ ಪ್ರಥಮದಲಿ ತಾನೊ ತಾನಂದನೊ *
ಸೊಲ್ಲೀಗೆ ಮೊದಲು
ಮಂಗಳ ಮೂರುತಿ
ಸಿದ್ಧಿಯಿನಾಯಕ
ಸುಂದರ ಮೂರುತಿ
ಸೊಂಡಿಲದ ಗಣಪನ
ಹರದಿ ಪಾರ್ವತಿಯ
ಮುದ್ದುಕುಮಾರನ
ಕರವೆತ್ತಿ ಕೈಯ ಮುಗುದು
ಸೊರಣೆಯ ಮಾಡುವೆ | ೧೦

ನೆನ್ನಕ್ಕಿ ನೆನಗಡ್ಲೆ
ಎಳ್ಳುಂಡೆ ಜೇನುತುಪ್ಪ
ಸೂಸಲು ಕಡುಬುಗಳ
ಮೀಸಲು ಎಡೆಮಾಡಿ
ಪ್ರಾಣಲಿಂಗ ಮಡಗಿ
ಎಡೆಮಾಡಿದೆ ಸ್ವಾಮಿ
ಒಪ್ಪಿಸಿಕೊಳ್ಳಬೇಕು
ನಿಮ್ಗೆ - ಕರವೆತ್ತಿ ಕೈಯ ಮುಗ್ದೆ |

ಸ್ವಾಮಿ ಇಗ್ಗುನೇಸನೆ
ಸೆಡಗರಿಸಿ ಬಂದು ಸ್ವಾಮಿ ೨೦
ನಮ್ಮ - ರುದಯದೊಳಗಿದ್ದು
ನಮ್ಮ - ನಾಲೀಗಕ್ಷರವ
ನಲುದಾಡಿ ಬರಕೊಡೊ
ಸೊಂಡಲದ ಗಣಪನೆ
ನಿಮ್ಮ - ಪಾದಕ್ಕೆ ಸರಣಂದೊ |

ಓಂಕಾರ ಮೂರುತಿ
ಓಂ ಪರಮೇಶ್ವರ
ಕೈಲಾಸದ ಒಡೆಯ
ಓಂಕಾರ ಲಿಂಗಯ್ಯ
ಮುಕ್ಕಣ್ಣ ಮೂರುತಿಯ ೩೦
ಮೊದಲೀಗೆ ಬಲಗೊಂಬೆ |

ಪಟ್ಟಾದ ಪಾರ್ವತಿ
ತಾಯಿ ಗವುರಮ್ಮ
ನಮ್ಮಮ್ಮ ಸಾರದಾಂಬೆ
ಉಮಾ ಮಹೇಶ್ವರಿ
ಭಾಗ್ಯಾದ ಲಕ್ಷುಮದೇವಿ
ನಿಮ್ಮ - ಪಾದಂಗಳಿಗೆ ಸರಣು |

ಇದ್ಯೆಯ ಕಲಿಸಿದ
ಬುದ್ಧೀಯ ತಿಳಿಸಿದ
ಸುದ್ದುಳ್ಳ ಗುರುವಿನ ೪೦
ಪಾದಂಗಳಿಗೆ ಮೊದ್ಲು
ಸರಣು ಸರಣಾರತಿ |

ಸಿದ್ದು ಸಿದ್ಧರಿಗೆಲ್ಲ
ಗುರುಸಿದ್ಧರಾಮಯ್ಯ
ಸತ್ಯ ಶರ್ಣ ಮಾತ್ಮರು
ನಿತ್ಯ ಸವೀಕ್ಯ ಕೊಡೊ
ಅವರ ಪಾದಂಗಳಿಗೆ
ಸರಣು ಸರಣಾರತಿ |

ಹೊತ್ತುನಂತೆ ನಾನು
ಭಕ್ತೀಲಿ ಸರಣು ಮಾಡಿ ೫೦
ಶಿವು ಸೊರಣೆ ಮಾಡುತ
ಸುದ್ದುಳ್ಳ ಗುರುಸ್ವಾಮಿ
ಸಿದ್ಧರಾಮಯ್ಯನವರ

---

* *ಪ್ರತಿಪಾದದ ಕೊನೆಗೂ 'ತಾನೊ ತಾನಂದನೊ 'ಎಂದು ಸೇರಿಸಿ ಹಾಡಿಕೊಳ್ಳಬೇಕು. ನಿಂತಗೆರೆಯುರು ವಲ್ಲಿ 'ತಾನೊ ತಾನಂದನೊ ' ಎಂದು ಹೇಳಿದ ನಂತರ ಸೊಲ್ಲಿನ ಪೂರ್ಣಭಾಗವನ್ನು ಹಾಡಿ ಕೊಳ್ಳಬೇಕು.*

ಶಿವಕತೆಯ ಹೇಳುವೆ
ಕೇಳುವ ಮಾತ್ಮರಿಗೂ
ಕೋಟಿ - ಸರಣು ಸರಣ್ಕಾರ್ತಿ |

ಕೈಲಾಸ ಪರ್ವತದಲ್ಲಿ
ಬೆಳ್ಳಿ ಬೆಟ್ಟುದ್ ಸೆರಗಲ್ಲಿ
ಸ್ವಾಮಿ ನಂದೀಶ್ವರ
ತನ್ನ - ಪ್ರೇಮದ ಮಡದಿಯಾದ
ಕಾಮಜೇನು ಜೊತೆಯಲ್ಲಿ
ಆನಂದವಾಗಿರುವಾಗ
ನಂದೀಶಮೂರ್ತಿಯು
ಜಗತ್ಯಕೆ ದೊಡ್ಡೋರು
ನನ್ನ ತಂದೆ ಪರಮೇಶ
ಅವ್ರ ಪೂಜೆ ಮಾಡದಕೆ
ನನ್ಗೆ ಹೊತ್ತಾಗುತೀದೆ
ನನ್ನ ತಾಯಿ ಗೌರಮ್ಮನ
ಪಾದಪೂಜೆ ಮಾಡಬೇಕು
ನಾನು ಈಗ ಹೋಗಬೇಕು
ಹೊತ್ತಾಯ್ತು ಹೊತ್ತಾಯ್ತು
ಪಾದ ಪೂಜೆ ಆದ ಮೇಲೆ
ಗೌರೀಶಂಕರರನು
ನನ್ನ - ಬೆನ್ನಲ್ಲಿ ಏರ್ಸಿಕೊಂಡು
ಜಗತ್ಯದ ಜೀವಿಗಳಿಗೆ
ಅನ್ನಪಡಿ ಆಳಿಯೋದ್ಕೆ
ಅವ್ರ - ಕರುಕೊಂಡೋಗಬೇಕು |

ನನ್ನ ತಂದೆ ತಾಯಿ ಸೇವೆ
ಮಾಡದಕೆ ನನಗೀಗ
ಹೊತ್ತಾಯ್ತು ಕಾಮಜೇನು
ನಾನೀಗ ಹೊಗಬೇಕು
ಬೇಗದಲ್ಲಿ ಹೋಗಬೇಕು"
ಅನುತ್ಹೇಳಿ ನಂದೀಶ
ಕಾಮಜೇನುದೇವಿಗೆ
ಹೇಳುವಂತ ಕಾಲದಲ್ಲಿ
ಕಾಮಜೇನು ದೇವಿಯು
ಮೋಡು ಬುದ್ಧಿಯಲಿ
ಕ್ಯೋಪ ಮಾಡಿಕೊಂಡಳು |

"ಸ್ವಾಮಿ, ನೀವು ಪರಮೇಶ್ವರನನ್ನು
ತಂದೆ ಅಂತ ಹೇಳ್ತಿದ್ದೀರಿ
ಗೌರಮ್ಮನವರ ತಾಯಿ ಅಂತ ಹೇಳ್ತಿದ್ದೀರಿ
ನೀವು ಆ ತಂದೆ ತಾಯ್ಗಳ್ಗೆ ಹೆದ್ರುಕೊಂಡು
ಹೊಂಟು ನಿಂತಿದ್ದೀರಲ್ಲ
ಅವರ ತಂದೆ ತಾಯ್ಗಳ್ಗೆ ಅವರು
ನಿಮ್ಮಂಗೆ ಹೆದ್ರುಕೋತಿದ್ರಾ ?
ಅದಿರ್ಲಿ ಹೊತ್ಕೊಂಡ್ ತಿರ್ಗಕೂ ಇಷ್ಟೊಂದು ಆತುರ್ವಾ?"
"ಅದು ನನ್ನ ಕರ್ತವ್ಯ ಕಣೆ!"
"ಕರ್ತವ್ಯ ಅಲ್ಲ ಕಣ್ರೆ ಅದು ಜೀತ!"
"ಜೀತ? ಎಂಥಾ ಮಾತಾಡ್ತಿದ್ದೀಯೆ?"
"ಅವ್ರು ನಿಮ್ಗೆ ತಂದೆ ತಾಯ್ಗಳಿರಬಹುದು
ಅವುರೇ ತಂದೆ ತಾಯಿಗಳಾಗಿದ್ದಿದ್ದೇ ಆಗಿದ್ರೆ
ಆಗ ಮಕ್ಕಳ ಮನ್ಸು ಏನೂಂತ ಅವುರ್ಗೆ ತಿಳೀತಿತ್ತು"
"ಈ ಥರಾ ಮಾತ ಈವರ್ಗೂ
ಯಾರೂ ಹೇಳಿರ್ನಿಲ್ಲ ಕಣೆ
ಎಂಥಾ ಮಾತಾಡ್ಬುಟ್ಟೆ?
ಪರಮೇಶ್ವರುಂಗೆ ತಂದೆ ತಾಯಿಗಳ?
ಅವುರ್ಗಳೆ ಈ ಅಖಿಲಾಂಡ ಕೋಟಿ ಬ್ರಹ್ಮಾಂಡುಕೆಲ್ಲ
ತಂದೆ ತಾಯ್ಗಳಲ್ಲವ?
ಅವುರ್‌ಗ್ಯಾವ ತಂದೆ ತಾಯಿಗಳೆ?"
"ಅದೇ ಕಣ್ರೆ ನಾನ್ ಹೇಳ್ತಾ ಇರೋದು
ತಂದೆ ತಾಯಿ ಕಂಡಿದ್ದೋರ್ಗೆ
ತಂದೆ ತಾಯ್ಗಳ್ ಸುಖ ಅಂದ್ರೇನು
ಅನ್ನೋದು ಅರ್ಥವಾಯ್ತದೆ
ಅಂದ್ಮೇಲೆ ಪರಮೇಶ್ವರಂಗೆ ಹೆಂಗ್
ಅರ್ಥವಾಯ್ತದೆ ಹೇಳಿ?"
"ಕಾಮಜೇನು
ಇಂತೆ ಮಾತ್ಗಳ ನೀನು ಆಡಬಾರ್ದು
ಇವು ಹೇಳೂವಂತ ಮಾತ್ಗಳೂ ಅಲ್ಲ
ಕೇಳುವಂತ ಮಾತ್ಗಳೂ ಅಲ್ಲ
ಅವುಗಳ್ಗೆ ಅರ್ಥ ಹೇಳದೂ ಕಷ್ಟ"
"ಅದುಕ್ಕೇ ಕಣ್ರೆ ನಾನು ಹೇಳಿದ್ದು
ನಮ್ಮ ಕಷ್ಟ ಕಾರ್ಪಣ್ಯವೆಲ್ಲ
ಅವುರ್ಗೆ ಅರ್ಥವನಾಗೋದಿಲ್ಲಾಂತ
ತಂದೆ ತಾಯ್ಗಳ್ನ ಕಾಣ್ದೆ ಇರೋರ್ಗೆ
ತಂದೆ ತಾಯಿ ಪ್ರೀತಿ ಅಂಬೋದು
ಎಲ್ಲಿ ಅರ್ಥವಾಯ್ತದೆ ಹೇಳಿ?"

"ನಿನ್ನ ಮಾತು ಅತಿಯಾಯ್ತು
ದೊಡ್ಡೋರ ಕುರ್ತು ಹಿಂಗೆಲ್ಲ ಮಾತಾಡ್ಬಾರ್ದು
ಈ ಮಾತಾಡಿದ್ದೆಲ್ಲ ತಪ್ಪಾಯ್ತು
ಬಾ ಸ್ವಾಮಿ ದರ್ಶನ ಮಾಡಿ
ಆಡಿದ ಪಾಪುವನ್ನು ಕಳ್ಕೊಳನ ನಡಿ" -

ಕಾಮಜೇನು ನಂದೀಶ್ವರ
ಅವ್ವು - ಕೈಲಾಸದ ಪರ್ವತದ
ಪರ-ಮೇಶ್ವರನ ಆಸ್ಥಾನಕ್ಕೆ
ಭಕ್ತಿಯಿಂದ ಓಡಿ ಬಂದು
ತಾಯಿ ಪಾರ್ವತಿಗೂ
ತಂದೆ ಶಿವರಾಯನಿಗೂ
ಕರವೆತ್ತಿ ಕೈಯ ಮುಗ್ದು
"ಓಂ ನಮಶಿವಾಯ ಓ ನಮ ಶಿವಾಯ
ಜಯ್ ನಮ್ಮ ಪಾರ್ವತಿ ಪತೇ
ಹರಹರ ಮಹದೇವಾ"
ಅನುತ್ಹೇಳಿ ಶಿವನಿಗೆ
ತಾಯಿ ಪಾರ್ವತಿಗೆ
ಕೆಡ್ದು ಬಿದ್ದು ಸರಣರು
ಸರಣುಗಳ ಮಾಡಿದರು |

"ಕಂದ ನಂದೀಶ್ವರ
ಮಗಳೆ ಕಾಮಜೇನು
ನಿಮ್ಮಿಬ್ಬರ ಮನ್ಸುಗಳು
ಯೋಚಿಣೆಯ ಮಾಡಿದಂತ
ಬುದ್ಧಿ ಚಾತುರ್ಯವೆಲ್ಲ
ನನ್ನ ಮನಸೀಗೆ ತಿಳಿದಿದೆ
ತಂದೆ ತಾಯ್ಗಳ ಸುಖ
ಏನೂನ್ನೋದ ನಾನು
ಅನುಭವ್ಸಿ ಬರಬೇಕು
ತಿಳುಕೊಂಡು ಬರಬೇಕು
ಅದಕಾಗಿ ನಾನೀಗ
ಭೂಮೀಗೆ ಹೋಗಬೇಕು
ಶಿವಸಿದ್ಧನಾಗಿ ನಾನು
ಭೂಲೋಕ್ದಲ್ಲಿ ಹುಟ್ಟಬೇಕು
ಭೂಲೋಕ್ದಲ್ಲಿ ಬಾಳಬೇಕು |

ಕಂದ ನಂದೀಶ್ವರ
ನೀನು - ನಮಗೆ ವಾಗನವಾಗಿ
ನಮ್ಮ ತೂಕವ ತಿಳುದಿದ್ದಿ
ಈಗ ನಾನು ಭೂಮೀಗೆ
ಹೋಗುತೀನಿ ಕಂದಯ್ಯ
ಭೂಲೋಕದ ಭಾರವ
ನಾನು ತಿಳಿಯುತೀನಿ.
ಬಡಜನರ ಕಷ್ಟಗಳ
ಅವ್ರ ಕಷ್ಟ ಕೋಟಲೆಗಳ
ಅವ್ರ ದುಕ್ಕದ ಭಾರಗಳ
ನಾನು ಕಣ್ಣಾರ ಕಂಡು
ಬರಬೇಕು ನಂದೀಶ
ಹದವುಳ್ಳ ನೆಲದಲ್ಲಿ
ಬಿದ್ದ ಬಿತ್ತನೆ ಕಾಳು
ಒಳ್ಳೆ ಬೆಳೆಯಾಗಿ
ಫಲವನ್ನು ಕೊಡುವಂತೆ
ನಾನು ಜನ್ಮಿಸಬೇಕಾದ್ರೆ
ಭೂಲೋಕದಲ್ಲಿ ನೀವು
ಶಿವಮಾಳಿಗೆ ಪುರದಲ್ಲಿ
ನೀನು ನಂದೀಶ್ವರ
ಒಕ್ಕಲಿಗ್ರ ಮುದ್ದೇಗೌಡ
ಅನುವ ನಾಮಕರ್ಣೆಯಲ್ಲಿ
ನೀನು ಹುಟ್ಟಬೇಕು ಕಂದ
ಈ ಕಾಮಜೇನುವಾದರೆ
ಸುಗ್ಗೀಗೌಡನ್ಹೊಟ್ಟೇಲಿ
ಮಗಳಾಗಿ ಹುಟ್ಟಬೇಕು
ಸುಗ್ಗೀಗೌ ಪ್ಪ ಮಗಳು
ಸುಗ್ಗಮ್ಮನಾಗಿ ಹುಟ್ಟಿ
ನೀವಿಬ್ಬರೂ ನನಗಾಗಿ
ಕಾಯಬೇಕು ಕಂದುಗಳ್ಳ
ನಾನು ಬಂದೇ ಬರುತೀನಿ
ನಿಮ್ಮ ಹೊಟ್ಟೇಲಿ ಹುಟ್ಟುತೀನಿ
ಸಿದ್ಧನಾಗಿ ನಾನು
ಭೂಲೋಕಕೆ ಬರುತೀನಿ
ಹಂಗಾದಮ್ಯಾಕೆ ನೀವು
ಈಗ ಮುಂದೆ ಮುಂದೆ ನಡೀರಿ" |

ಶಿವನ ಆಪ್ಪಣೆ ಪಡ್ದು
ಶಿವನ ವಾಗನನಾದ
ಶಿವಭಕ್ತ ನಂದೀಶ
ಲೋಕದ ತಾಯಿ

ಕಾಮಜೇನುದೇವಿಯು ಮಡದೀಯ ಮಾಡಿಕೊಂಡು
ಭೂಲೋಕಕೆ ಬಂದು ಲಕ್ಷಕ್ಕೊಬ್ಬ ದೊಡ್ಡಗೌಡ
ಶಿವಮಾಳಿಗೆ ಪುರದಲ್ಲಿ ೨೦೦ ಕುಲಕ್ಕೊಬ್ಬ ಮಾಭಕ್ತ
ಒಕ್ಕಲಿಗ ವಮುಸದ ಕೋಟಿಗೊಬ್ಬ ಶರಣನಾಗಿ
ಸಿದ್ದೇಗೌಡ್ರ ಹೊಟ್ಟೇಲಿ ಘನಶರಣ ಮುದ್ದೇಗೌಡ
ಮಗ ಮುದ್ದೇಗೌಡ ಆಗಿ ವೆಳಸಾಯ ಮಾಡಿಕೊಂಡು
ನಂದೀಶ್ವರ ಹುಟ್ಟಿದರು. ಬಾಳಾಟ ಮಾಡುತವುನೆ.
ಕಾಮಜೇನುದೇವಿ ಪತುರೊತಾ ಸಿರೋಮಣೆ ೨೨೦
ಸುಗ್ಗೀಗೌಡರ ಹೊಟ್ಟೇಲಿ ಸತ್ಕುವಂತೆ ಸುಗ್ಗಮ್ಮ
ಮಗಳಾಗಿ ಹುಟ್ಟಿದಳು. ಗೋಕುರ್ತಿ ಮಾಡಿಕೊಂಡು
ಸುಗ್ಗೀಗೌಡರ ಮಗಳು ಗಂಡನಿಗೆ ತಕ್ಕಾದ
ಸುಗ್ಗಮ್ಮನ ತಾಯಿಯ ಹೆಂಡ್ತಿ ಆಗಿ ತಾಯಿ
ಮುದ್ದೇಗೌಡರಿಗೆ ೨೧೦ ಬದುಕಾಟ ಮಾಡಿಕೊಂಡು
ಮದುವೆಯ ಮಾಡಿದರು ಹಾಲುಸಾಗ್ರವಾಗಿ
ಸುಗ್ಗಮ್ಮನ ಮದುವ್ಯಾಗಿ ಬಾಳಾಟ ಮಾಡುತವುರೆ | ೨೨೭

೨. ತಂದೆ ತಾಯಿಗಳ ಕಣ್ಣಾಗಿ ಬೆಳೆದನು

ತಂದನ್ನೊ ತಾನೊ ತಾನೊ ತಾನಂದನೊ
ತನುತಂದನಾನೊ ತಾನೊ ತಾನಂದನೊ | ಸೊಲ್ಲು |

ಮುದ್ದೇಗೌಡ ಸುಗ್ಗಮ್ಮ ಅವ್ವು - ಹುಟ್ಟು ಬಂಜೆ ದಟ್ಟ ಧರ್ನಿ
ಜಿನುದ ಏಡೊತ್ತಿನಲ್ಲು ಮಕ್ಕಳು ಬೇಕನ್ನೊ
ಪರಶಿವನ ಪೂಜುಕೊಂಡು ೨೩೦ ಅವ್ವ - ಸಂಕಾಟ ಸಮನಲ್ಲ
ಯಾವುದಕೂ ಆಸ್ ಬೀಳ್ದೆ ಮಕ್ಕಳ ಆಸೆಯಿಂದ
ಭಗವಂತ ಕೊಟ್ಟುದ್ರಲ್ಲಿ ಅತ್ತು ಕರ್ದಳು ತಾಯಿ ೨೫೦
ಅಚ್ಚುಕಟ್ಟಾದ ಬದುಕ ಕಂಡ ಕಂಡ ದೇವುರ್ಗೆಲ್ಲ
ನಡ್ಸುಕೊಂಡು ಬಂದವುರೆ ಹರಕೆಯ ಹೊತ್ತರಲ್ಲ
ಅವ್ವು - ಬಾಳ ಪ್ರೇಮುವಾಗಿ ಬಂಜೇಯ ಬಾಳೊಂದು
ಸಂಸಾರ ಮಾಡಿಕೊಂಡು ಬಾಳಲ್ಲ ಅಂದುಕೊಂಡು
ಶಿವನ ಸೊರಣೆಯ ಶಿವನಿಚ್ಚೆ ಏನಿದೆಯೊ
ಇಂಬಲದಲ್ಲಿ ಅವುರು ಹಂಗೇ ಆಗಲಂತ
ಹಾಲು ಸಾಗ್ರವಾಗಿ ಮುದ್ದೇಗೌಡ್ರ ಜೊತೆಯಲ್ಲಿ
ಬಾಳಾಟ ಮಾಡುತವುರೆ | ೨೪೦ ಸುಗ್ಗಮ್ಮ ತಾಯಿಯು
ಕಾಲಯಾಪನೆ ಮಾಡುತ
ಸುಗ್ಗಮ್ಮ ದೇವಿಯು ಹೆಂಗೋ ಬಾಳಾಡುತವುರೆ | ೨೬೦
ಹುಟ್ಟಿ ಐವತ್ತೆರ್ನು ವರ್ಷ
ಮಂಡೆ ಮಾಸಿ ಹನ್ನೆರಡೊರ್ಷ ಒಂದಾನು ಒಂದು ಜಿವ್ಸ
ಮೈನ ಬಣ್ಣ ಕೆಡುನಿಲ್ಲ ಭೂಮಿಗೆ ದೊಡ್ಡೋರು
ಮೊಕದ ಕಾಂತಿ ತಪ್ಪುನಿಲ್ಲ ರೇವಣಸಿದ್ದರೆಂಬೊ

ಗುರುಸ್ವಾಮಿ ಬಂದು
ಮುದ್ದೇಗೌಡ್ರ ಹಟ್ಟೀಯ
ಬಾಕಲಲ್ಲಿ ನಿಂತುಕೊಂಡು
ಭಿಕ್ಷವ ಸಾರಿದರು |

ತಾಯಿ ಸುಗ್ಗಮ್ಮನವರು
ಆನಂದುವಾಗಿ ಎದ್ದು
ಚಿನ್ನಾದ ಮೊರದಲ್ಲಿ
ಅಕ್ಕೀಯ ಸುರುಕೊಂಡು
ಬೆಳ್ಳೀಯ ಬಟ್ಟಲಲ್ಲಿ
ಕೆಂಡಾವ ತುಂಬುಕೊಂಡು
ಬೆಜ್ಜುಲ್ಕೆ ಕೆಂಡದ್ಮೇಲೆ
ಸಾಮ್ರಾಣಿ ಸಾರಗಳ
ಧೂಪವನೆ ಹಾಕಿ
ಗುರುಸ್ವಾಮಿಗಳೀಗೆ ಬೆಳಗಿ
ಕ್ಷೌರಣ್ಯಗಳ ತಾಯಿ
ಕೊಡುವುದಕೆ ಹೋದಾಳು |

"ಅಮ್ಮ ತಾಯಿ
ನೀನು ಭಿಕ್ಷವ ತಂದುದ್ದು ಸಂತೋಷವಾಯ್ತಮ್ಮ
ಕೊಡುವ ಕ್ಷಾರಣ್ಯವ ನಿನ್ನ ಕಂದಗಳ
ಕೈಲಿ ಕೊಡುಸಮ್ಮ," ಅಂದ್ರು
ಆಗ ಸುಗ್ಗಮ್ಮಂಗೆ ಹೊಟ್ಟೆ ಕಿವುಚಿದಂಗಾಯ್ತು
ಬಾಯಿ ಕಟ್ಟಿದಂಗಾಯ್ತು
ತಾಯಿ ಬಾಯ್ನಿಂದ ಮಾತೆ ಹೊರುಡ್ನಿಲ್ಲ
ತಂದಿದ್ದ ಮೊರವನ್ನು ಎಸುದು
ದುಕ್ಕಸೋಕಗಳ ಮಾಡ್ತಾ
ಗುರುಸ್ವಾಮಿಗಳ ಪಾದುದ ಮ್ಯಾಲುಕ್ಕೆ
ಧೊಪ್ಪನೆ ಬಿದ್ದಳು.
"ಅಮ್ಮ ಯಾಕಮ್ಮ ತಾಯಿ
ಹಿಂಗೆ ದುಕ್ಕ ಸೋಕಗಳ ಮಾಡ್ತಾ ಇದ್ದೀಯಲ್ಲ?"
"ಸ್ವಾಮಿ ನಾನು ಹುಟ್ಟು ಬಂಜೆ ದಟ್ಟ ಧರಣಿ
ನನಗೆ ಮಕ್ಕಳ ಫಲವಿಲ್ಲ ಸ್ವಾಮಿ"
"ಅಮ್ಮ ಹಂಗಾದ ಮ್ಯಾಕೆ
ನಿನ್ನ ಕೈಯಿನ ಭಿಕ್ಷ ನನಗೆ ಬ್ಯಾಡಮ್ಮ"
"ಮಕ್ಕಳಿಲ್ಲದವರ ಕೈನ ಭಿಕ್ಷಾ ಬ್ಯಾಡಾಂತಂದ್ರೆ
ಮಕ್ಕಳ ಫಲವನ್ನು ನನ್ನಣೇಲಿ ಬರೀದೆ ಇರೋದು
ನಿಮ್ಮ ತಪ್ಪಲ್ಲವ?"
"ತಾಯಿ, ಹಣೆಲಿ ಬರೆಯೋದ್ಕೆ
ನಾನೇನು ಇಷ್ಣುವೋ ಬ್ರಮ್ಮನೋ ಈಶ್ವರನೋ ?"
"ಹಂಗಾದ್ರೆ ನನ್ಗೆ ಮಕ್ಕಳ ಫಲ ಇಲ್ಲ ಸ್ವಾಮಿ?"
"ತಾಯಿ ನಿನಗೆ ಮಕ್ಕಳ ಫಲ ಇಲ್ಲ ಎಂದವರ್ಯಾರು?
ಆ ಪರಮಾತ್ಮ ನಿನಗೆ ವಂಚನೆ ಮಾಡಿಲ್ಲ
ಆದ್ರೆ ನೀನು ಹಿಂದುನ ಜನ್ಮದಲ್ಲಿ
ದೊಡ್ಡೋರ್ನ ದೂಷಣೆ ಮಾಡಿದ ಫಲ ನಿನ್ನ ಕಾಡ್ತಾ ಅದೆ
ಅದರಿಂದ ನೀನು ಬಂಜೆಯಾಗಿದ್ದೀಯಮ್ಮ"
"ಗುರುಗಳೆ ಆ ಕರ್ಮ ಕಳಿಯೋದು ಯಾವಾಗ ?"
"ತಾಯಿ, ಆ ಶಿವನನ್ನ ಭಕ್ತಿಯಿಂದ ಪೂಜೆ ಮಾಡು
ನೀನು ಬರೀ ತಾಯಲ್ಲ ಮಹಾತಾಯಿ ಆಗ್ತೀಯೆ"
"ಹಾಗಂದ್ರೇನು ಸ್ವಾಮಿ ಒಳ್ಳೆ ಒಂಟುನಂತೆ
ಮಾತಾಡ್ತೀದ್ದೀರಲ್ಲ?"
"ತಾಯಿ, ನಿನಗೆ ಮಕ್ಕಳ ಫಲ ಇದೆ
ಆದರೆ ನಿನ್ನಂಥ ಪತುರೊತಾ ಸಿರೋಮಣಿ ಹೊಟ್ಟೇಲಿ
ನರಕೀಟಗಳು ಹುಟ್ಟುವುದುಂಟ ?
ಸಿದ್ಧಪುರುಷನೊಬ್ಬ ನಿನ್ಹೊಟ್ಟೇಲಿ ಹುಟ್ತಾನಮ್ಮ
ಇದು ಆ ದೇವರ ಇಚ್ಛೆ
ಅಂತಾ ಸುಯೋಗ ನಿನಗದೆ
ನೀನು ಮಹಾನುಭಾವನ ತಾಯಿಯಾಗ್ತೀಯೆ
ಆಗ ನಾನು ಬರ್ತೀನಮ್ಮ
ಆಗ ನೀನು ಭಿಕ್ಷ ಕೊಡಬೇಕು ತಾಯಿ"
"ಸ್ವಾಮಿಯೋರೆ
ದೊಡ್ಡ ದೊಡ್ಡ ಮಾತುಗಳಾಡ್ತಿದ್ದೀರಿ
ಅದೊಂದೂ ನನಗೆ ಗೊತ್ತಾಗೊಲ್ಲು
ನನ್ಹೊಟ್ಟೇಲಿ ಒಂದು ಕುಡಿ ಅನ್ನೋದು ಕಂಡಾಗ
ಕಂಡುತ್ಯಾಗೂ ಬನ್ನಿ ಸ್ವಾಮಿ"
"ಖಂಡಿತ ಬರ್ತೀನಮ್ಮ" -

ರೇವಣ್ಣಸಿದ್ಧಾರು
ಸುಗ್ಗಮ್ಮ ತಾಯೀಗೆ
ಆಸುರ್ವಾದಗಳ ಮಾಡಿ
ಹಿಂದಕ್ಕೆ ಹೊರುಟರು |

ಸುಗ್ಗಮ್ಮ ತಾಯಿಯು
ಮಕ್ಕಳ ಫಲಕಾಗಿ
ಬಾಳ ಆಸೆಪಟ್ಟು
ಶಿವನ ಪೂಜೇಗಳ

ಕಟ್ಟುನಿಟ್ಟಿನಲಿ
ಮಾಡುತ ತಾಯಮ್ಮ
"ಕತ್ತಲ ಮನೆಗೊಂದು
ಜ್ಯೋತಿಯ ಕೊಡು ತಂದೆ
ಹಂಗಂತ ಹೇಳುತ
ಪರಶಿವನ ಪೂಜೆಗಳ
ತಾಯಮ್ಮ ಮಾಡುತವ್ವಳೆ |

"ಆ - ಸ್ವಾಮ್ಯೋರು ಹೇಳಿದಂತೆ
ಮಕ್ಕ ನನಗಾಗೋದುಂಟ?
ನನ್ಗೆ-ನೋವಾಗಬಾರ್ದಂತ
ಸಮಾಧಾನ ಮಾಡದಕೆ
ಅಂತೆ ಮಾತ ಹೇಳಿದ್ದಾರ?
ಅಯ್ಯೊ ಶಿವನೆ ಅಯ್ಯೊ ಶಿವನೆ
ನಾನು ಯಾವ ಜನ್ಮದಲ್ಲಿ
ಯಾವ ಪಾಪ ಮಾಡಿದ್ದೆನೊ
ಯಾವ ಜಲ್ಮದಲ್ಲಿ ನಾನು
ಯಾವ ತಾಯ ನೋಯಿಸಿದ್ನೊ
ಯಾವ ಜಲ್ಮದಲ್ಲಿ ನಾನು
ಯಾರ ಮಕ್ಕಳಿಗೆಲ್ಲ
ಒಲ್ಲಾರ ವಂಚುನೆಗಳ
ಮಾಡಿದ್ದೆನೊ ಕಾಣೆ
ಆ ಕರ್ಮ ಫಲುವೆ ಬಂದು
ನನ್ಗೆ ಮಕ್ಕಳ ಫಲವೆ
ಇಲ್ಲದಂತೆ ಕಾಡುತ್ಯೆತೆ
ಏನು ಮಾಡಲಿ ಶಿವನೆ
ಬಂಜೆ ಅಂಬೊ ಮಾತ
ನಾ - ಕೇಳನಾರಿ ಕೇಳ್ಯಾರಿ
ನನ್ನ ದುಕ್ಕ ಸೋಕ ನಿನಗೆ
ಅರುವಾಗನಿಲ್ಲವ ಶಿವನೆ
ಅಯ್ಯೊ ನನ್ನಪ್ಪ ಶಿವನೆ
ನೀನೇ ಗತಿಯು ನನಗೆ
ನೀನೇ ಮತಿಯು ನನಗೆ
ಕಂದಾನ ಭಾಗ್ಯಾವ
ಕರುಣೇಸು ಪರಮಾತ್ಮ"

ಸುಗ್ಗಮ್ಮ ತಾಯಿಯು
ಶಿವನ ಸೊರಣೆ ಮಾಡಿ
ತಣ್ಣೀರ ಹಾಕುವಂತ
ಕಾಲದಲ್ಲಿ ಶಂಕರನು
ಗೌರಮ್ಮನ ಜೊತೆಯಲ್ಲಿ
ಲೋಕಲೋಕಗಳ
ಜೀವರಾಸ್ಯಗಳಿಗೆಲ್ಲ
ಅನ್ನಪಡಿ ಅಳಿಯೋಕೆ
ಆಕಾಸ ಮಾರ್ಗದಲ್ಲಿ
ಹೋಗುವಂತ ಕಾಲದಲ್ಲಿ
ಸುಗ್ಗಮ್ಮ ತಾಯಿಯ
ದುಕ್ಕಸೋಕಗಳು
ಗಾಳುಗೋಳುಗಳು
ಶಿವನು ಪಾರ್ವತಿಯ
ಕಿವಿಕರ್ಣಕೆ ಬಿದ್ದಿತಾಗ
ಗೌರಮ್ಮ ತಾಯಿಯು
ಪರಮಾತ್ಮನ ಮೊಕನೋಡಿ
ಏನಂತ ಕೇಳುತಾರೆ |

"ಸ್ವಾಮಿ, ಭೂಲೋಕದಲ್ಲಿ
ಯಾವುದೂ ಒಂದು ನರಕೀಟ
ಗಾಳುಗೋಳು ಮಾಡುತ್ತಿರುವುದಲ್ಲ
ಅದರ ದುಕ್ಕ ಸೋಕ ಯಾಕಿರಬವುದು ಸ್ವಾಮಿ?"
"ಪಾರ್ವತ
ಆ ನರಕೀಟ ಬ್ಯಾರೆ ಯಾರೂ ಅಲ್ಲ
ಕಾಮಜೇನುವಾಗಿದ್ದ ಅವಳು
ಈಗ ಶಿವಮಾಳಿಗೆ ಪುರದಲ್ಲಿ
ಸುಗ್ಗೀಗೌಡನ ಮಗಳು ಸುಗ್ಗಮ್ಮ ಆಗಿ ಹುಟ್ಟಿದ್ದಾಳೆ
ಸಿದ್ದೇಗೌಡರ ಮಗ ಮುದ್ದೇಗೌಡ ಅವಳ ಗಂಡ
ಅವುಳ್ಗೆ ಮಂಡೆ ಮಾಸಿ ಹನ್ನೆರಡೊರ್ಸ
ಮಕ್ಕಳ ಫಲ ಇಲ್ಲಾಂತ್ಹೇಳಿ
ಮಕ್ಕಳಿಗಾಗಿ ಹಾತೊರಿತಿದ್ದಾಳೆ"
"ಹಂಗಾದ್ಮೇಕೆ ಅವುಳ್ಗೆ ಮಕ್ಕು ಫಲ ಇಲ್ವೇ ಸ್ವಾಮಿ"
"ಯಾಕಿಲ್ಲ? ಅದೆ !
ಆದ್ರೆ ಅಂತಿಂಥ ಮಗು ಅಲ್ಲ
ಅವಳ ಪವಿತ್ರ ಗರುಬುದಲ್ಲಿ
ಶ್ರೇಷ್ಟುವಾದ ಜೀವ ಹುಟ್ಬೇಕು
ಅನ್ನೋದು ವಿಧಿನೆಯಮ"
"ಅಂಥಾ ಜೀವ ಯಾವ್ದು ಸ್ವಾಮಿ?"
"ನಾನೇ!"
"ನೀವಾ? ಕೂಡದು.
ಲೋಕಕಲ್ಯಾಣ ಕಾರ್ಯದಲ್ಲಿ ಇರಬೇಕಾದ ನೀವು

ಹುಲುಮಾನವ ಆಗಬಾರ್ದು ಸ್ವಾಮಿ
ನನಗಾದ್ರೂ ಏನ್ ಕೆಲ್ಸ ಅದೆ
ಬೇಕಾದ್ರೆ ನಾನು ಆ ಪವಿತ್ರ ಗರುಬದಲ್ಲಿ
ಹುಟ್ತಿದ್ದೀನಿ ಸ್ವಾಮಿ"
"ಅದು ಹಾಗಾಗದಿಲ್ಲ ಪಾರ್ವತ"
"ಯಾಕಾಗದಿಲ್ಲ?"
"ಅದು ವಿಧಿನೈಮ"
"ಅದನ್ನು ಮೀರೋ ಶಕ್ತಿ ನನಗಿದೆ"
"ಇಂಥ ಮಾತುಗಳು ಬ್ಯಾಡ ಪಾರ್ವತ"
"ಇಲ್ಲ ನಾನು ಬಿಟ್ಟು ಕೊಡೋದಿಲ್ಲ"
"ಹಂಗಾದ್ ಯಾಕೆ ಒಂದು ಕೆಲ್ಸ ಮಾಡನ"
"ಏನದು?"
"ನಾನೂ ಒಂದಿನ ಮಾವ್ನಣ್ಣಾಯ್ತೀನಿ
ನೀನೂ ಒಂದಿನಿಮಾವ್ನಣ್ಣಾಗು
ನಾನು ಜಂಗಮರ ವೇಷ್ದಲ್ಲಿ
ಅವುಳ ಮನೆಮುಂದೆ ನಿಂತು
ಭಿಕ್ಷಾ ಸಾರ್ತೀನಿ
ಅವಳು ಭಿಕ್ಷಾ ಕೊಡಾಕೆ ಬಂದಾಗ
ಬಂಜೆ ಕೈನ ಭಿಕ್ಷಾ ಬ್ಯಾಡ ಅಂತೀನಿ
ಆಗ ಅವ್ಳು ಮಕ್ಳು ಫಲುಕ್ಕೆ ಬೇಡ್ಕೋತಾಳೆ
ಆ ಸಮಯದಲ್ಲಿ
ಆ ಎರಡು ಇನಿಮಾವ್ನಣ್ಣಲ್ಲಿ ಒಂದು ತಕೊಂಡು
ದ್ರೀಯಕ್ಕೆ ಸಲ್ಸು ಅಂತೀನಿ
ಅವ್ಳು ನನ್ನ ಇನಿಮಾವ್ನಣ್ಣ ತಕೊಂಡ್ರೆ
ನಾನು ಅವುಳೊಟ್ಟೇಲಿ ಹುಟ್ತೀನಿ
ನಿನ್ನ ಇನಿಮಾವ್ನಣ್ಣ ತಕೊಂಡ್ರೆ
ನೀನು ಅವುಳೊಟ್ಟೇಲುಟ್ಟು
ಆಗಬವುದ?"
"ಹಾಗೇ ಆಗ್ಲಿ ಸ್ವಾಮಿ" -

ಆಗಾಲೆ ಪರಮಾತ್ಮ
ಕಾವಿ ಕಾಮಂಡ್ಲು ಧರ್ಸಿ
ರುದ್ರಾಕ್ಷಿ ಭದ್ರಾಕ್ಷಿಗಳ
ಕೊಳ್ಳು ತುಂಬ ಧರ್ಸಿಕೊಂಡು
ಎಳವಾರಿ ಜಂಗುಗಳ
ಎಡದ ಪಾದಕೆ ಧರ್ಸಿ
ಭಾಪುರಿ ಜಂಗುಗಳ
ಬಲ್ದ ಪಾದಕೆ ಧರ್ಸಿ
ಕೀಲು ಕೀಲೀಗೂ
ಈಬುತ್ತಿಗಳ ಧರ್ಸಿ
ಮುತ್ತಿನ ಜೋಳ್ಗೆಯ
ಮುಂಗ್ಕೆಗಾಧಾರ ಮಾಡಿ
ಸುಗ್ಗಮ್ಮ ತಾಯಿಯ
ಮನೆ ಮುಂದೆ ನಿಂತುಕೊಂಡು
ಓಂ ನಮ ಶಿವ ಓಂ ನಮ ಶಿವ
ಭವತಿ ಭಿಕ್ಷಾಂದೇಯಿ
ಅನುತ್ಹೇಳಿ ಸ್ವಾಮಿಯೋರು
ಕೋರಣ್ಯಗಳ ಸಾರಿದರು |

ಗುರುಗಳ ಸಪ್ತವನ್ನು
ಕೇಳುಕೊಂಡ ಸುಗ್ಗಮ್ಮ
ಕೈಕಾಲು ಮೊಕಗಳ
ತೊಳುಕೊಂಡು ತಾಯಮ್ಮ
ತಲೆತುಂಬ ಮುಸುಕಿಟ್ಟು
ಈಬುತ್ತಿ ಕೂಕುಮ
ಹಣೇಗೆ ಧರ್ಸಿಕೊಂಡು
ಚಿನ್ನಾದ ಮೊರದಲ್ಲಿ
ಸಣ್ಣಕ್ಕಿ ಸುರುಕೊಂಡು
ಬೆಳ್ಳಿ ಬಟ್ಟಲದಲ್ಲಿ
ಬೆಜ್ಜುಲ್ಕೆ ಕೆಂಡ ಮಡ್ಗಿ
ಕೆಂಡದ ಮ್ಯಾಲುಕ್ಕೆ
ಗಂಧದ ಚಕ್ಕೆ ಮಡಗಿ
ಧೂಪವನು ಹಾಕಿ
ಸ್ವಾಮಿಗಳ ಪಾದಕೆ
ಶರಣುಗಳ ಮಾಡುತ
ತಲೆಬಾಗಿ ನಿಂತಳು |

ಪರಮಾತ್ಮ ಸುಗ್ಗಮ್ನ
ದುಡಮನ ಪರೀಕ್ಷ್ಯಾ
ಮಾಡಬೇಕೂಂತ
ಶಿವಜೋಳಿಗೆ ಒಡ್ಡಿ
ಭಿಕ್ಷಗಳ ಕೇಳಿದರು |

"ಬುದ್ಯೋರ
ನನ್ನ ಕೈನ ಭಿಕ್ಷ ನಿಮುಗಾದದಪ್ಪ?"
"ಯಾಕ್ ತಾಯಿ ಹಂಗ್ಕೇಳ್ತಿ?"
"ನಾನು ಹುಟ್ಟು ಬಂಜೆ ದಟ್ಟ ಧರಣಿ

ನನ್ನ ಕೈನ ಭಿಕ್ಷ ತಕೊಳ್ದೆ
ಸ್ವಾಮಿಯೊರೊಬ್ರು ಹೊಂಟೋದ್ರು
ಅದ್ಕೇ ಹೇಳ್ದೆ ಸ್ವಾಮಿ"
"ತಾಯಿ ನೀನಾಗೆ ಮೊದುಲಾಗಿ
ಹೇಳಿದ್ದು ಒಳ್ಳೇದಾಯ್ತಮ್ಮ
ನಾವೂ ಸೈತ
ಬಂಜೆ ಕೈನ ಭಿಕ್ಷೆ ತಕ್ಕೊಣದಿಲ್ಲಮ್ಮ!"
"ಸ್ವಾಮ್ಯೋರೇ
ನಾನು ಬಂಜೆ ಆಗ್ಬೇಕು ಅಂತ ಕೇಳ್ಕೊಂಡಿದ್ನ?
ಆ ಭಗವಂತ ಕೊಡದ ಭಾಗ್ಯಾವ ನಾನೆಲ್ಲಿಂದ
ತರ್ಲಿ ಸ್ವಾಮಿ?
ನಾನು ಎಷ್ಟೊಂತ ತಾಳ್ಕೊಳ್ಳಿ ಸ್ವಾಮಿ
ಬಂಜೆ ಅನ್ನೊ ಸಪ್ತ ಕೇಳಿ ಕೇಳಿ
ನನಗೂ ಸಾಕಾಗೋಗದೆ
ಆ ಹಾಳ್ಮನೆ ಶಿವುಂಗೆ ಕರುಣ ಅನ್ನೋದಿಲ್ಲ
ಅವುನ ಹೆಸ್ರೇಳಿ ಈಗ ನಿಮ್ಮ ಪಾದದ್ಮೇಲೆ ಬಿದ್ದು
ನನ್ನ ಪ್ರಾಣ ಕಳ್ಕೋತೀನಿ ಸ್ವಾಮಿ"
"ಪ್ರಾಣ ಕಳ್ಕೊಂಡ್ರೆ ಮಕ್ಕಾಯ್ತವ ತಾಯಿ?
ಯಾವುದ್ಕೂ ಕಾಲ ಕೂಡ್ಬರಬೇಕಮ್ಮ
ಅಲ್ಲೀನ್ಗಂಟ ಕಾಯ್ಬೇಕು!"
"ಮಕ್ಕಾಗೋದಾದ್ರೆ ಕಾಯನ ಸ್ವಾಮಿ
ಆಯ್ತವೆ ಅನ್ನೋ ಆಸ್ಪಿದ್ದು
ಆಗ್ಬೆ ಮೋಸ್ವಾದ್ರೆ ಬದುಕಿದ್ದೇನು ಫಲ ಸ್ವಾಮಿ?"
"ತಾಯಿ ಆ ಪರಮೇಶ್ವರ
ನಿನಗೆ ಮಕ್ಕಳ ಫಲ ಬರುದಿದ್ದಾನಮ್ಮ"
"ನಿಜುವಾ ಸ್ವಾಮಿ?"
"ನಿಜ ತಾಯಿ"
"ಅದ ನಾನೆಂಗ್ ನಂಬ್ಲಿ ಸ್ವಾಮಿ?"
"ತಾಯಿ ಈ ಎರ್ಡು ಇನಿಮಾವುನಣ್ ನೋಡು
ಇದುರಲ್ಲಿ ಒಂದ ಹಣ್ ತಕೊಂಡು
ನಿನ್ ದ್ರೇಯಕ್ಕೆ ಸಲ್ಸು
ನಿನಗೆ ಐಂಡುತ್ವಾಗೂ ಮಕ್ಕಾಯ್ತವೆ
ಈ ಎರಡು ಹಣ್ಗಳಲ್ಲಿ ಒಂದ್ ಮಾತ್ರ
ತಕೋಬೇಕು ತಾಯಿ" -

ಪರಶಿವನ ಮಾತ
ಕೇಳಿದಳು ಸುಗ್ಗವ್ವ
ಶಿವನ ಹೆಸರಲ್ಲಿ ನ

ಇನಿಮಾವ ತಕ್ಕೊಂಡು
ಸ್ವಾಮ್ಯೋರ ಪಾದಕ್ಕೆ
ಶರಣುಗಳ ಮಾಡಿ
ಧೂಪಗಳ ಬೆಳಗಿ
ಶರಣು ಶರಣನ್ನುತ
ಪೂಜೆಗಳ ಮಾಡುವಾಗ
ಕಣ್ಮುಚ್ಚಿ ಕಣ್ಣ ಬಿಡೊ
ಹೊತ್ತಿಗಾಗಲೆ ಸ್ವಾಮಿ
ಮಾಯವಾಗಿ ಹೋಗಿದ್ರು |

ಸುಗ್ಗಮ್ಮ ತಾಯಿಯು
ಇನಿಮಾವ್ನಣ್ಣ ಕುಂಡೋಗಿ
ದೇವ್ರ ಪಟುದತ್ರ ಮಡ್ಗಿ
ದೀಪುವ ಕಚ್ಚಿದರು
ಹಣ್ಣಮುರ್ದು ಕಾಯೊಡ್ದು
ಕಡ್ಡಿಕರ್ಪೂರ ಬೆಳಿಗಿ
ಕಣ್ಣೀಗೊತ್ತಿಕೊಂಡು
ದ್ರೀಯಾಕೆ ಸಲ್ಸಿದರು
ಮಾಟೇಯ ಕುಂಡೋಗಿ
ಕೊಟ್ಟಿಗ್ಗೆ ಎಸುದುರು
ಕೊಟ್ಟೀಗೆ ಬಿದ್ದಂತ
ಕಪಿಲೆ ಅನ್ನೋ ಗೋವು
ಮಾಟೇಯ ನುಂಗಿತು
ಮಾಟೆಯ ನುಂಗಿದಂತ
ಕಪಿಲೆ ಅನ್ನೊ ಹಸ
ಗರುಬವ ಧರಿಸಿತು |

ಇನಿಮಾವ್ನ ಹಣ್ಣಾಗಿ
ಜಗತ್ಕ ಮಾನ್ಯವರು
ಪರಶಿವ ಪರಮಾತ್ಮ
ಸುಗ್ಗಮ್ಮ ತಾಯಿಯ
ಗರುಬವ ಸೇರಿದರು
ಕಪಿಲ ಅನ್ನೊ ಗೋವುನ್ಜೊತೆ
ಸುಗ್ಗಮ್ಮ ತಾಯಿಯು
ಒಟ್ಟೀಗೆ ಗರುಬವ
ಧರಿಸಿದರು ಶಿವುನೆ |

ಸುಗ್ಗಮ್ಮ ತಾಯಿಯು

ಮುದ್ದೇಗೌಡರು ಬಂದು
ಬಡಬಗ್ಗರನ್ನೋರ್ಗೆ
ಬೇಕು ಬೇಕಾದ್ದನ್ನೆ
ದಾನ ಧರ್ಮ ಮಾಡಿದರು
ಶಿವುಮಾಳಿಗೆ ಪುರದ
ಮುತ್ತೈದೆಯರು ಬಂದು
ಸುಗ್ಗಮ್ಮ ತಾಯಿಗೆ
ಸ್ನಾನ ಮಡಿ ಮಾಡಿಸಿ
ಮಡ್ಲುತುಂಬಿ ತಾಯಿಗೆ
ಆರತಿಗಳ ಬೆಳಗಿ
ಬಸುರೊಸಗೆ ಮಾಡಿದರು |

ತುಂಬುದ ಸ್ವಾಮಾರ
ಸುಬುವಾದ ಗಳುಗೇಲಿ
ಸುಬುವಾದ ಲಗ್ನದಲಿ
ಸುಗ್ಗಮ್ಮ ತಾಯಿಗೆ
ಹೊಟ್ಟೆನೋವು ಕಾಣ್ಸಿಕೊಂಡೊ
ಆಗಲೀಗೆ ಶಿವನೆ
ಪಟ್ಟದ ಪಾರ್ವತಮ್ಮನವರು
ಸೂಲುಗಿತ್ತಿ ರೂಪುನಲ್ಲಿ
ಗೌಡರ ಮನೆಗೆ ಬಂದು
ಸೂರ್ಯ ರುದುಯವಾಗುವಂತ
ಸುಬುಗಳಗೇಲಿ ತಾಯಿ
ಹೆರಿಗಗಳ ಮಾಡ್ಸಿದಳು |

ಕಂದ ಹುಟ್ಟಿದಂತ
ಸುಬುದಿನ ಸುಬುವಾರ
ಸುಬುಗಳುಗೇಲಿ ಶಿವನೆ
ಶಿವುಮಾಳಿಗೆ ಪುರದಲ್ಲಿ
ಸೊವರ್ಣದ್ ಮಳೆ ಹೂದಿತಂತೆ
ಸೊವರ್ಣುದ್ ಮಳೆ ಹುಯ್ಯಲಾಗಿ
ಶಿವಮಾಳಿಗೆ ಪುರವೇ
ಸೊನ್ನಲಿಗೆ ಪುರ ಆಯಿತಂತೆ
ಚಿನ್ನಾದ ನೀರೆಲ್ಲ
ಪುಣ್ಯಾವಂತ್ರ ಕಣ್ಣೀಗೆ
ಬಕುತರ ಕಣ್ಣೀಗೆ
ಮಾತ್ರುವೆ ಕಾಣದಂತೆ

ರೂಢೀಯ ಮಳೆಯಂತೆ !
ಹೂದ - ಚಿನ್ನಾದ ನೀರೆಲ್ಲ
ಆ - ರಾಜ್ಯವನಾಳುತಿದ್ದ
ಚಾಮುಲದೇವಿಯೆಂಬ
ರಾಣೀಯ ಬೊಕ್ಕ್ಸಕೆ
ಸೇರಿಕೊಂಡು ನೀರೆಲ್ಲ
ಚಿನ್ನುದೇ ಘಟ್ಟಿ ಆಯಿತಂತೆ |

ಸುಗ್ಗಮ್ಮ ತಾಯಿಯು
ಮೂರ್ಚ್ಯೆ ತಿಳಿದೆದ್ದಿಲ್ಲ
ಮೈಮ್ಯಾಲೆ ಗ್ಯಾನುವಿಲ್ಲ
ಅವುಳ ಎದೆಯಲ್ಲಿ
ಒಂತೊಟ್ಟೂ ಹಾಲಿಲ್ಲ
ಆಗ ಪಾರ್ವತದೇವಿ
ಕಂದಯ್ನ ಎತ್ತಿಕೊಂಡು
ಎದೆಕಚ್ಚಿಸಿದರಂತೆ
ಆಗ ಆ ಕಂದನು
ಒಡೊದೊಡ್ಡು ನುಡಿಯಿತು
ಕೈಲಾಸ್ದಲ್ ಮಡ್ದಿ ನೀನು
ಭೂಲೋಕ್ದಲ್ ತಾಯಾದೆ
ನನ್ಗೆ ಹಾಲು ಕುಡಿಸೀದೆ
ಈ ಒಂದು ಕಾರ್ಣದಿಂದ
ಈ ಭೂಮಿಲಿರೊ ಹೆಣ್ಗಳೆಲ್ಲ
ನನ್ಗೆ ತಾಯಿ ಸಮಾನ
ಅಂತ್ಹೇಳಿ ಕಂದಯ್ಯ
ಕಿಲಕಿಲನೆ ನಕ್ಕನಂತೆ
'ಸದ್ದು ಮಾಡಬೇಡಪ್ಪ
ನನ್ನ ಮುದ್ದು ಕಂದಯ್ಯ'
ಅಂತ್ಹೇಳಿ ಗೌರಮ್ಮ
ಬಾಯ ಮುಚ್ಚಿದಳಂತೆ |

ಅಪ್ಪೊತ್ತಿಗೆ ರೇವಣರು
ಮುಂಬಾಗಲಲ್ಲಿ ನಿಂತು
ಸೋತ್ರ ವ[illegible]ದರಂತೆ
ಆಗ ಗೌರಮ್ಮನವರು
ಬಂದುದ್ದು ತಿಳೀದಂಗೆ
ಹೋದುದ್ದು ತಿಳೀದಂಗೆ

ರೇವಣ್ಣಸಿದ್ದರ
ಕಂಡು ಮುದ್ದೇಗೌಡ್ರು
ಕರವೆತ್ತಿ ಕೈ ಮುಗ್ದು
ಕಾಲೀಗೆ ಅಡ್ಡಬಿದ್ದು
ಗದ್ದಿಗೆಯ ಹೂಡಿ
ಮೂರ್ತವ ಮಾಡಿರೆಂದು
ಕೈಯಾ ಮುಗಿದಾಗ
ರೇವಣರು ನಕ್ಕರಂತೆ |

"ಮುದ್ದೇಗೌಡ್ರೆ
ನಾನು ಕೂತ್ಕೋಳಕೆ ಬಂದಿಲ್ಲ
ನಿನ್ನ ಮನೆಯಲ್ಲಿ ಮಹಾತ್ಮನೊಬ್ಬ
ಜರಣವಾಗಿದ್ದಾನೆ
ಅವನ ದರ್ಶನ ಮಾಡಿ
ಪಾದಗಳ ಮುಟ್ಟಿ ನಮುಸ್ಕಾರ ಮಾಡಕೆ
ಅಂತ ಬಂದಿವ್ನಿ
ನಡೀರಿ ನನಗೆ ಮೊಗಾ ತೋರ್ಸಿ" -

ಆಗ್ಲಿ ಅಂತ ಹೇಳಿ
ಮುದ್ದೇಗೌಡ್ರು ಭಕ್ತೀಲಿ
ಕರವೆತ್ತಿ ಕೈಮುಗುದು
ಸ್ವಾಮಿಗಳ ಕರುಕೊಂಡು
ಕಿರುಮನೆಗೆ ಬಂದರು.
ಕತ್ತಲೆಯಾಗಿರುತಿದ್ದ
ಕಿರುಮನೆಯೊಳಗೆಲ್ಲ
ಜಗಂಜ್ಯೋತಿ ಉರಿದಂತೆ
ಬೆಳಕು ತುಂಬಿತ್ತು
ರೇವಣಸಿದ್ದರು
ಪರುಮ್ ಸಂತೋಸದಲಿ
ಕಂದಯ್ನ ಕಾಲುಗಳ
ಹಣೆಗೊತ್ತಿಕೊಂಡರು |

"ಮುದ್ದೇಗೌಡ್ರೆ
ಈ ಕಂದ ಮುಂದೆ ಜಗತ್‌ಮಾನ್ಯವನಾಗ್ತಾನೆ
ಇವನೊಬ್ಬ ಸಿದ್ಧ, ಮಹಾಸಿದ್ಧ
ಸಿದ್ಧಪ್ರಭು ಅನ್ನೋ ಹೆಸ್ರು ಇನುನಿಗಾಗ್ಲಿ"
"ಸ್ವಾಮಿ ಹಂಗಾಗಕಿಲ್ಲ
ನಮ್ಮ ಮನೆ ದೇವ್ರು ರಾಮೇಶ್ವರ
ಅಪ್ಪೂಪ್ರಕೆ ಹುಟ್ಟಿದ ಈ ಮೊಗೀಗೆ
ರಾಮೇಶ್ವರ ಅಂತ್ಲೇ ಕರೀಬೇಕು ಸ್ವಾಮಿ"
"ಗೌಡ್ರೆ ನಿಮ್ಮ ಮಾತೇ ಮೇಲುಗ್ಕೆ ಆಗಲಿ
ಸಾಕ್ಷಾತ್ ಪರಮೇಶ್ವರನೇ ಸಿದ್ಧನ ರೂಪ್ನಲ್ಲಿ
ಮೈದಾಳಿ ಬಂದಿದ್ದಾನೆ
ಅಂಗೈ ಮುಟ್ಟಿ ಹೇಳಿ
ಇವನನ್ನು ಸಿದ್ಧರಾಮೇಶ್ವರ ಅಂತ ಕರೀಬೇಕು
ನಿಮಗೆ ಒಪ್ಪಿಗೆ ತಾನೆ?"
"ಗುರುಗಳೇ
ತಾವು ದೊಡ್ಡೋರು
ನಿಮ್ಮ ಮಾತುನಂತೇ ಆಗ್ಲಿ ಗುರುವೆ"
"ಸಂತೋಷ ಗೌಡ್ರೆ
ಈ ಮಗೂನ ಕಣ್ಣಲ್ಲಿ ಕಣ್ಣಿಟ್ಟು
ನೋಡ್ಕೋಬೇಕು"
"ತಮ್ ಪಾದ ಹಂಗೇ ಆಗ್ಲಿ ಸ್ವಾಮಿ."
"ನಿಮ್ಮ ಕಪಿಲೆ ಈವತ್ತು ಒಂದು
ಹೋರ್ಗರ ಹಾಕ್ತದೆ
ಅದ್ನ ರಾಮಾಂತ ಕರಿಯಪ್ಪ.
ಈ ಇಬ್ಬರೂ ಸಿದ್ಧರಾಮ ಗೌಡ್ರೆ"
"ತಮ್ಮ ಪಾದ ಬುದ್ಧಿ
ನೀವು ಹೇಳಿದಂಗೇ ಆಗ್ಲಿ" -

ರೇವಣ್ಣಸಿದ್ಧರು
ತಿರುಗಿ ಕಂದಯ್ಯನ
ಪಾದಗಳ ಮುಟ್ಟಿ
ಹಣೆಗೊತ್ತಿಕೊಂಡು
ಹೊಂಟು ನಿಂತಾರು
ಮುದ್ದೇಗೌಡ್ರು ಸ್ವಾಮ್ಕೋರ
ಅಷ್ಟು ದೂರ ಕಳ್ಸಿಕೊಟ್ಟು
ಹಟ್ಟೀಗೆ ಬಂದು
ಕಂದಯ್ನ ತಗ್ದು
ತಲೆಮ್ಯಾಲೆ ಮಡಿಕೊಂಡು
"ಸಿದ್ದರಾಮೇಶ್ವರ ಸಿದ್ದರಾಮೇಶ್ವರ
ಅನುತ್ಹೇಳಿ ಗೌಡರು
ಕುಣ್ದು ಕುಣುದಾಡುತ
ಸಂತೋಷಪಡುವಾಗ
ಅವ್ರ ಕೊಟ್ಟೀಗೆಲಿದ್ದ
ಕಪಿಲೆ ಅನ್ನು ಹಸ

ಹೋರಿ ಕರುವೀಗೆ
ಜಲ್ಮವ ಕೊಟ್ಟಿತು |

ತಾಯಿ ಸುಗ್ಗಮ್ಮನ
ಐಸ್ಸಿರಿಯ ಹೇಳಿದಕೆ
ಮಾತಲ್ಲಿ ಆಗೊಲ್ದು
ಅಂಥ ಆನಂದ ಪಟ್ಟರೂ
ತಾಯಿಯ ಎದೆಯಲ್ಲಿ
ಒಂತೊಟ್ಟು ಹಾಲಿಲ್ಲ
ಕಪಿಲೆಯ ಹಾಲು ಕರ್ದು
ಸಿದ್ಧರಾಮಯ್ಗೆ ಕುಡ್ಸಿ
ಸಂತೋಷಪಟ್ಟರಾಗ |

ಸಿದ್ಧರಾಮೇಶ್ವರ
ತಂದೆ ತಾಯಿಗಳ
ಕಣ್ಣಾಗಿ ಬೆಳೆದನು
ಕಂದಾನ ಚೆಂದವ
ನೋಡುತ ಸುಗ್ಗಮ್ಮ
ಸಿದ್ಧು ಸಿದ್ಧೊಂತ
ಕರೆಯೋದೆ ಆನಂದ
ಒಂದರಗಳ್ಗೆ ಬಿಡದೆ
ಕಂದನನೆತ್ತಿಕೊಂಡು
ಮನೆತುಂಬ ಓಡಾಡಿ
ಆನಂದ ಪಡುತವ್ಳೆ |

ಸಿದ್ಧರಾಮಯ್ಯನಿಗೆ
ಮೂರು ವರ್ಷ ಆದರೂವೆ
ಮಾತುಗಳೆ ಬರನಿಲ್ಲ
ಆರು ವರ್ಷ ಆದರೂವೆ
ಆಟಕೂಟ ಸೇರನಿಲ್ಲ.
ಊರ ಮಕ್ಕಳೆಲ್ಲ
ಚೆಂಡಾಟ ಆಡುತಾವೆ
ಗೋಲಿಗೆಜ್ಜ ಆಡುತಾವೆ
ಬುಗರೀಯ ಆಡುತಾವೆ
ಚೌಕಾಬಾರಾ ಆಡುತಾವೆ
ಹುಲಿಕುರಿ ಆಟಗಳ
ಮಕ್ಕಳು ಆಡುತಾವೆ
ಕಲ್ಲೂ ಮಣ್ಣೂ ಆಡುತಾವೆ
ಉಯ್ಯಾಲೆ ಆಡುತವೆ
ಎಲ್ಲ ಮಕ್ಕಳಂತೆ
ಸಿದ್ಧರಾಮ ಆಡನಿಲ್ಲ
ಯಾವುದನು ನೋಡಲಿಲ್ಲ
ಯಾವುದನು ಬೇಡಲಿಲ್ಲ
ಅದು ಬೇಕು ಇದು ಬೇಕು
ಅಂತ್ಹೇಳಿ ಕಾಡನಿಲ್ಲ
ಒಬ್ಬಾನೆ ಕೂತುಕೊಂಡು
ಶಿವುಧ್ಯಾನ ಮಾಡುತ್ತಿದ್ದ |

ಸಿದ್ಧರಾಮೇಶ್ವರ
ತನ್ನೆ ಸಿಬ್ರಿ ಅನ್ಸಿದಾಗ
ತನ್ನ ಜೊತೆಗಾರನಾಗಿ
ಕಪಿಲೇಲಿ ಹುಟ್ಟಿದಂತ
ರಾಮ ಅನ್ನೋ ಹೋರಿಗರುವ
ಕರುಕೊಂಡು ಅದರ
ಮ್ಯಾಲೆ ಕೂತುಕೊಂಡು
ತನ್ನಷ್ಟಕೆ ತಾನೆ
ಆಟ ಆಡಿಕೊಳ್ಳುತ್ತಿದ್ದ |

ಸಿದ್ದರಾಮಯ್ಯ
ಕರುಗಳ ಹೊಡುಕೊಂಡು
ಹೊಲುದತ್ರುಕೋಗಿ
ಕರುಗಳ ಮೇಯ್ಸುತ್ತ
ಶಿವಧ್ಯಾನ ಮಾಡಿಕೊಂಡು
ಕಾಲಾವ ಕಳೆಯುತ್ತಿದ್ದ |

ಸಿದ್ಧರಾಮೇಶ್ವರ
ಮನೆಯಲ್ಲಿ ಊಟುಕ್ಕೆ
ಕೊಟ್ಟರೆ ತಿನ್ನುತಿದ್ದ
ಕೊಡದಿದ್ರೆ ಸುಮ್ಮಿರುತಿದ್ದ
ಬೇಕೂಂತ ಕೇಳ್ದೋನಲ್ಲ
ಬ್ಯಾಡಾಂತ ಹೇಳ್ದೋನಲ್ಲ
ಮಾತುಕತೆ ಇಲ್ದೆ
ಮೂಗು ಬಸಪ್ಪನಂಗೆ
ಊರಲ್ಲಿ ಇರುತಿದ್ದ
ಹೊಲುತ್ತಾಕೆ ಬಂದಾಗ
ಹಕ್ಕಿಪಕ್ಷಿಗಳ ಜೊತೆ

ಮಾತಾಡಿಕೊಳ್ಳುತ್ತಿದ್ದ
ದನಕರುಗಳ ಜೊತೆಗೆ
ಕೂಗಾಡಿ ಕುಣಿಯುತಿದ್ದ
ಯಾರ ಜೊತೇಗೂ ಅವ್ನು
ಸೇರಿದವನೇ ಅಲ್ಲ
ಹಕ್ಕಿಪಕ್ಷಿಗಳು ಅವುಂಗೆ
ಸಿನೇಯುತರಾಗಿದ್ರು
ದನಕರುಗಳೇ ಅವ್ನ
ಬಂಧುಬಳ್ಗವಾಗಿತ್ತು |

೩. ನಿಮ್ಗೆ ಆರೋಗ್ಯ ಮೇರೋಗ್ಯನೆಲ್ಲ ತತ್ತೀನಿ

ತಂದನ್ನೊ ತಾನೊ ತಾನೊ ತಾನಂದನೊ
ತನು ತಂದೆನಾನೊ ತಾನೊ ತಾನಂದನೊ | ಸೊಲ್ಲು |

ಸಿದ್ದರಾಮಣ್ಣನವ್ರು
ಕರುಗಳ ಹೊಡುಕೊಂಡು
ಹೊಲುತ್ತಾಕೆ ಬಂದರು
ಬರೋ ದಾರಿಯಲ್ಲಿ
ಅಲ್ಲೊಂದು ಬಿಲುಪತ್ರೆ
ಮರುವು ಗೋಚುರವಾಯ್ತು
ಮರದ ಕೀಳುನಲ್ಲಿ
ಎರೆಯಮಣ್ಣಿನಲ್ಲಿ
ಒಂದು - ಶಿವುಲಿಂಗ ಮಾಡಿ
ಅದ್ಕೆ - ತುಂಬೇಹೂವುಗಳ
ಅಲಂಕಾರುವ ಮಾಡಿ
ಸುತ್ತಮುತ್ತು ನೋಡಲಾಗಿ
ರಾಗೀಯ ಹೊಲುದಲ್ಲಿ
ಹೊಸತೆನೆಗಳ ಕಂಡು
ಹಸ್ರು ತೆನೆಗಳ
ಆರ್ಸಿ ಆರ್ಸಿ ತಂದು
ಅದ - ಬೆಂಕೀ ಉರೀಲಿ
ಚನ್ನಾಗಿ ಕಾಸಿ ಕಾಸಿ
ಕಾಸೀದ ತೆನೆಗಳ
ಅಂಗ್ಯೆಲಿ ಹೊಸ್ಕಿ ಹೊಸ್ಕಿ
ಉಜ್ಜಿದಾಗ ಬಂದಿರೊ
ತೆನೆಗಳ ಕಾಳನೆಲ್ಲ
ಮೊಳ್ಕೀಗೆ ತುಂಬುಕೊಂಡು
ಒಂದು - ಮೊನುಬಾಳ ಎಲೆತಂದು
ಲಿಂಗಾದ ಮುಂದೆ ಹಾಸಿ
ಮೊಳ್ಕಲಿದ್ದ ಕಾಚಕ್ಕಿಯ
ಎಲೆಮ್ಯಾಲುಕ್ಕೆ ಸುರ್ದು
ಶಿವನೀಗೆ ನೀವೇದ್ಯ
ಮಾಡಿದರು ರಾಮಣ್ಣ |

ಸಿದ್ದರಾಮಯ್ಯನವರು
ಲಿಂಗಾದ ಮುಂದೆ ಕೂತು
ಜಪುನೆಯ ಮಾಡುತಾರೆ
ತಪುನೆಯ ಮಾಡುತಾರೆ
ಶಿವುನ ಧ್ಯಾನ ಮಾಡಿ
ಕರವೆತ್ತಿ ಕೈಮುಗುದು
ಕಣ್ಣೀಗೆ ಒತ್ತುಕೊಂಡು
ಸರಣು ಸರಣನ್ನುತ
"ನಿಂಗೆಡೆ ಮಾಡದೆ
ಒಬ್ಬಾನೆ ಹ್ಯಾಗೆ ತಿನ್ನಿ
ಶಿವುನೆ ಶಿವುನೇ ಶಿವ್ನೆ
ನನ್ನಪ್ಪ ಶಂಕರ"
ಅಂತ್ಹೇಳಿ ಲಿಂಗಕೆ
ಹಣೆಮುಟ್ಟಿ ಸರಣಂದು
ಪೂಜೇಯ ಸುಕುದಲ್ಲಿ
ರಾಮಯ್ಯ ಇರುವಾರು |

ಆಗ ಪರಮಾತ್ಮನು
ರಾಮಯ್ನ ಪರೀಕ್ಷ
ಮಾಡಬೇಕಂತ್ಹೇಳಿ
ಒಬ್ಬ - ಜಂಗೂಮಯ್ಯನಾಗಿ
ಬಿಲುಪತ್ರೆ ಮರದ
ಹತ್ತಿರಕೆ ಬಂದರು
"ನಮ ಶ್ಯೀವಾಯ ಓಂ
ಓಂ ನಮಶ್ಯೀವಾಯ

ಜೈನಮ ಪಾರ್ವತಿ
ಪತೆ - ಹರಹರ ಮಾದೇವ"
ಅನ್ನುವ ದನಿಯು
ಕೇಳಿ ಬಂದೀತಾಗ
ಸಿದ್ದರಾಮಯ್ಗೆ
ಅಂತೇ ದನಿ ಕೇಳಿ
ಅವ್ನ - ಮೈ ಜುಮ್ಮೆಂದಿತು ೬೨೦
ಕವೀಕರ್ಣಗಳು
ನೆಸ್ಕೊಂಡು ನಿಂತಾವು
ದ್ರೇಯವಾದ ದ್ರೇಯವೆಲ್ಲ
ಹೇಳಲಾರದಂತ
ಸಂತೋಸ ಪಡುತ
ಹಿಂದಕ್ಕೆ ತಿರುಗಿದ
ಜಂಗೂಮಯ್ಯನವರ
ದರುಸಣೆ ಮಾಡೀದ
ದರ್ಸಣೇ ಮಾಡಿದಾಗ
ಸಿದ್ದರಾಮಣ್ಣಂಗೆ ೬೩೦
ಸಿರಿಕಂಡ ಬಡವನು
ಮಾತಾಡಲಾರದೆ
ಬಾಯ್ಕಟ್ಟಿದಂಗಾಯ್ತು |

"ಸ್ವಾಮ್ಯೋರ ದರುಸ್ನೆಯಿಂದ
ಹಿರಿಹಿರಿ ಹಿಗ್ಗಿದ
ಸಿದ್ದರಾಮಣ್ಣನೋರು
ಜಂಗುಮರ ಪಾದಂಗಳ್ಗೆ
ಶಿರಬಾಗಿ ಸರಣಂದರು
ಮುದ್ದುಕುಮಾರ
ಸಿದ್ದರಾಮಯ್ಯನವರ ೬೪೦
ಕೈಹಿಡ್ದು ಮ್ಯಾಲುಕೆತ್ತಿ
ಮಾಯಾದ ಜಂಗೂಮಯ್ಯ
ಮಾತೀಗೆ ನಿಂತರು |

"ಕಂದ ಸಿದ್ದು ಏನ್ಮಾಡ್ತಾ ಇದ್ದೀಯಪ್ಪ?"
"ಸ್ವಾಮಿ ನಾನು ನಿಮ್ಮುನ್ನು ನೋಡ್ತಾ ಇರೋದು
ಇದೇ ಮೊದುಲ್ನೆ ಸಲ
ನನ್ಸೆಸ್ರು ನಿಮುಗ್ ಹ್ಯಾಂಗ್ ಗೊತ್ತಾಯ್ತು?
"ಸಿದ್ರಾಮ ನಿನ್ಸೆಸ್ರು ಮಾತ್ರುವಲ್ಲ
ನಿನ್ನ ತಂದೆ ಮುದ್ದೇಗೌಡ
ನಿನ್ನ ತಾಯ್ ಸುಗ್ಗಮ್ಮ
ಈ ಎಲ್ರೂ ಹೆಸ್ರೂ ನಂಗೆ ಗೊತ್ತು ಕಂದ" ೬೫೦
"ಇದು ಐಸೋಜುಗ!"
"ಇದ್ರಲ್ಲಿ ಐಸೋಜುಗ ಏನ್ಕೆತಪ್ಪ?
ನಾನೂ ನಿನುಗೆ ಚನ್ನಾಗಿ ಗೊತ್ತು!"
"ಇಲ್ಲ. ನನಗೆ ನೀವ್ಯಾರು ಅನ್ನೋದು ಗೊತ್ತೇ ಇಲ್ಲ
ನಾನು ನಿಮ್ಮುನ್ನ ನೋಡ್ತಾ ಇರೋದು
ಇದೇ ಮೊದುಲ್ನೆ ಸಲ"
"ಇಲ್ಲ ಕಂದ.
ನೀನು ನನ್ನುನ್ನ ಮೊದಲೇ ನೋಡಿದ್ದಿ
ಈಗ ಇನ್ನೊಂದ್ಸಲ ಚನ್ನಾಗಿ
ದಿಟ್ಟಿಸಿ ನೋಡು"
"ಇರ್ಬೋದು ಸ್ವಾಮಿ
ನಾನು ಆಂಬಾವುದಿಂದ
ನಿಮ್ಮುನ್ನ ನೋಡ್ಲೂ ೬೬೦
ಮರ್ತಿರಬೋದು ಸ್ವಾಮಿ
ನನ್ನ ಕ್ರಮುಸಿ ಸ್ವಾಮಿ
ಸ್ವಾಮ್ಯೋರ ನಿಮ್ಮುನ್ನ ದಿಟ್ಟಿಸ್ತಿದ್ರೆ
ನೀವು ನನ್ಗೆ ಬಾಳ ಹಿಂದಿನಿಂದ್ಲೂ
ಪರಿಚಿತ್ರು ಅನ್ನೋಂಗಾಯ್ತಾ ಉದೆ.
ಅದೆಂಗೊ ಏನೋ ತಿಳೀತಾ ಇಲ್ಲ
ಅದಿರ್ಲಿ ನೀವ್ಯಾರು ? ನಿಮ್ಮೆಸ್ರೇನು?
ನೀವಿರೋದೆಲ್ಲಿ ? ನೀವೇನ್ ಮಾಡ್ತಿದ್ದೀರಿ
ಈವ್ನೊಂದೂ ನಂಗೊತ್ತಿಲ್ಲವಲ್ಲ."
"ಕಂದ ಸಿದ್ರಾಮ, ನನ್ನೆಸ್ರು ಮಲ್ಲಯ್ಯಾಂತ ೬೭೦
ಉಳಿದ ಇಚಾರನೆಲ್ಲ ಆಮ್ಯಾಲೆ ಹೇಳ್ತೀನಿ
ಈಗ ನೀನೇನ್ ಮಾಡ್ತಾ ಇದ್ದೀಯಪ್ಪ?"
"ಸ್ವಾಮಿ ಶಿವುನ ಪೂಜೆ ಮಾಡ್ತಾ ಇದ್ದೀನಿ
ದೇವ್ರಲ್ಗೆ ಕಾಚಕ್ಕಿ ಎಡೆ ಮಡ್ಗಿ
ಪೂಜೆ ಮಾಡ್ತಿದ್ದೀನಿ
ಕೂತ್ಕೊಳ್ಳಿ ನಿಮುಗೂ ಕೊಡ್ತೀನಿ"
"ಎಡೆಗಿಡೆ ಪ್ರಸಾದ ಅನ್ನೋದು ಏನೂ ಬ್ಯಾಡಪ್ಪ
ನನ್ಗೆ ಹೊಟ್ಟೆ ಬಾಳ ಹಸ್ಯಾಗದೆ
ಈ ತಕ್ಷಣುವೆ ನನ್ಗೆ ತಿನ್ನಕೆ ಏನಾರೂ ಕೊಟ್ಟು
ಈ ಜೀವ ಉಳುಸ್ಕೋಪ್ಪಾ" -

ಮಲ್ಲಯ್ನ ಮಾತ ೬೮೦
ಕೇಳಿ ಸಿದ್ಧರಾಮಣ್ಣ
ಕಾಚಕ್ಕಿಗಳ ತಗ್ದು
ಮಲ್ಲಯ್ನ ಮಳ್ಳಿಗೆ

ಸುರುದು ಸಿದ್ದರಾಮಣ್ಣ
"ತಿನ್ನಿ ಸ್ವಾಮುಗಳೇ!"
ಎಂದು ಕೈ ಮುಗಿದನು |

"ಸಿದ್ದೂ ಮದ್ದಾನೆ ಹೊಟ್ಗೆ ಮೂರ್ಕಾಸುನ ಮಜ್ಗೆ!
ಅಂತರಲ್ಲ ಹಂಗಾಯ್ತು
ತುಂಬ ಹಸುವಾಗಿರೋಗ
ಈ ಕಾಚಕ್ಕಿ ತಿಂದ್ರೆ ಏನಾದ್ದಪ್ಪ?
ಹಿಟ್ಟು ರೊಟ್ಟಿ ಅನ್ನ ಸಾರು ಏನಾರೂ
ಇದ್ರೆ ಕೊಡು ಕಂದ"
"ಸ್ವಾಮಿ ಬನ್ನಿ ನಮ್ಮಟ್ಟಿಗೆ
ನಿಮುಗ್ ಬೇಕಾದ್ನೆ ಮಾಡ್ಸಿ ಉಣ್ಣಿಕಿಕ್ಕುಸ್ತೀನಿ
ಬನ್ನಿ ಬುದ್ಧಿ ಹಟ್ಟೀಗ್ ಹೋಗಂವು"
"ಸಿದ್ದು ಬಾಳ ಹಸುದ್ಬುಟ್ಟು
ನಡೆಯಾಕೆ ಶಕ್ತಿ ಇಲ್ಲ ನನಕಂದ"
"ಸ್ವಾಮಿ ಹಂಗಾದ್ ಮ್ಯಾಕೆ ಇಲ್ಲೇ ಕುಂತಿರಿ
ನಾನೋಡೋಗಿ ನಮ್ಮಟ್ಟಿಯಿಂದ
ಮೊಸ್ರನ್ನದ ಬುತ್ತಿ ತತ್ತೀನಿ
ಆಗಬವುದ ಸ್ವಾಮಿ?"
"ಅಪ್ಪಾ ಮಗೂ
ನಂಗೆ ಹೊತ್ತಾಯ್ತದೆ ಕಣಪ್ಪ
ಬಲೂಚಾರ ಮಾಡಬೇಡ
ನಾನು ಹೋಗಿದ್ದು ಬತ್ತೀನಿ ಕಣಪ್ಪ"
"ಇಲ್ಲ ಸ್ವಾಮಿ ತಳಾರ ಆಗಂಗಿಲ್ಲ
ಹಿಂಗೋಗಿ ಹಂಗೆ ಸಡಾರ್ನೆ ಬಂದ್ಬುಡ್ತೀನಿ
ನೀವು ಹಸ್ಬು ವಾಂಕಾರ ಪಡೋದ
ನಾನು ನೋಡ್ನಾರಿ
ಬುದ್ಧಿ ನಾನು ಈ ಕೂಡ್ಲೆ ಹೋಗಿ
ಅಂಬುರುಸ್ಕೊಂಡ್ ಬತ್ತಿನಿ
ನೀವಿಲ್ಲೆ ಇರಿ ಸ್ವಾಮಿ"
"ನೀನು ಹೋಗಿದ್ದು ಬಾ ಕಂದ
ನಿನ್ಗೆ ದೀಗಾಯ್ಸವಾಗ್ಲಪ್ಪ"
"ಸ್ವಾಮಿ ಬೇಗುನೆ ಬಂದ್ಬುಡ್ತೀನಿ
ನಿಮ್ಗೆ ಆಲಾಗ್ರ ಮೇಲೋಗ್ರನೆಲ್ಲ ತತ್ತೀನಿ" -

ಅಂತ್ಹೇಳಿ ರಾಮಯ್ಯ
ಸಣ್ಮಾಡಿಕೊಂಡು ಹೊಂಟ
"ಇದು ನನ್ಗೆ ಸುವ್ವುದಿನ
ಇದು ನನ್ಗೆ ಸುಬುವಾರ"
ಅಂತ್ಹೇಳಿ ರಾಮಯ್ಯ
ಲೆಂಗುಣ್ಸಿ ಲೆಂಗಣಿಸಿ
ಹಟ್ಟೀಗೆ ಓಡಿಬಂದು
ಸುಗ್ಗಮ್ಮ ತಾಯಿಯ
ಬಿಗುದಪ್ಪಿ ಕೊಂಡನು
ಎಂದಿನಂತಲ್ಲದ
ಕಂದನ ಕಂಡು ತಾಯಿ
ಸೋಜುಗ ಪಡುವಾಗ
ರಾಮಣ್ಣ ಮುದ್ದಾಗಿ
ಮಾತುಗಳ ಆಡಿದನು |

"ಅವ್ವ ಅವ್ವ ಅವ್ವ"
"ಏನೊ ನನಕಂದ
ಎಂದೂ ಮಾತಾಡದವ ನೀನು
ಇಂದು ಇಷ್ಟೊಂದು ಚಂದಕೆ
ಗಿಣಿ ಬಾಯ ಬುಟ್ಟಂಗೆ ಬುಡ್ತೀಯಲ್ಲೊ ನನಕಂದ
ಏನು ಬೇಕು ಕೇಳಪ್ಪ
ಏನು ಹೇಳೊ ಕಂದ"
"ಅವ್ವ ನನಗೆ
ಹಾಲೋಗರ ಬೇಕು ಮೇಲೋಗರ ಬೇಕು
ಮೊಸರನ್ನ ಬೇಕು ಬೆಣ್ಣೆ ತುಪ್ಪ ಬೇಕು
ಬೇಗುದಲಿ ಬುತ್ತಿ ಕಟ್ಟಿ ಕೊಡ್ತೀಯೇನಮ್ಮ? -

ಸುಗ್ಗಮ್ಮ ತಾಯಿಯು
ಮಗನ ಭಾಷಿತ ಕೇಳಿ
ಸಂತೋಸ ಪಟ್ಟುಕೊಂಡು
ಒಲೆಯನು ಕಚ್ಚಿದಳು
ಅಡಿಗೆಗೆ ತುಡ್ಕಿದಳು
ಹಾಲಿಗಕ್ಕಿ ಸುರುದು
ನೀರಿಗೆ ಬ್ಯಾಳೆ ಸುರುದು
ಹಾಲೋಗ್ರ ಮಾಡಿದಳು
ಮೇಲೋಗ್ರ ಮಾಡಿದಳು
ಅಡಕೇಯ ಹಾಳೆಗೆ
ಬಿಳಿಯನ್ನ ಹಾಕಿ
ಅದ್ರುಮೇಲೆ ಗಟ್ಟಿಯಾದ
ಮೊಸರನ್ನೆ ಹಾಕಿದಳು
ಉಪ್ಪು ಮೆಣ್ಸುನ್ ಪುಡಿ
ಹಾಕಿ ಕಲಸಿದಳು
ಉಪ್ಪೀನ ಕಾಯಿಗಳ

ಅನ್ನದ ಮೇಲಿಗಿರಿಸಿ
ನೀರುಳ್ಳಿ ಸಿಪ್ಪೆ ಸುಲ್ದು
ನಾಲ್ಕು ತುಳಿಯ ಮಾಡಿ
ಅನ್ನದ ಮೇಲುಕಿರಿಸಿ
ಹಾಲೋಗ್ರ ಮೇಲೋಗ್ರಗಳ
ಒಂದು ಹಾಳೆಗೆ ಕಟ್ಟಿ
ಅವುಗಳ ಜೊತೆಯಲ್ಲಿ
ಕಾಯಿಪಲ್ಲೆಗಳ
ತಾಳ್ದಗಳ ಮಡುಗಿ
ಬುತ್ತೀಯ ಕಟ್ಟಿ
ಕಂದನಿಗೆ ಕೊಟ್ಟಳು
ಸಿದ್ಧರಾಮಣ್ಣನು
ಸುದ್ದೂ ಮನಸುನಿಂದ
ಬುತ್ತೀಯ ಹೊತ್ತುಕೊಂಡು
ಬ್ಯಾಗುಬ್ಯಾಗುದಲ್ಲಿ
ಹೊಲುತ್ತಾಕೆ ಬಂದನು |

೪. ಮೊದ್ಲು ನನ್ನ ಮಲ್ಲಯ್ಯುನ ತೋರ್ಸಿ

ತಂದನ್ನ ತಾನೊ ತಾನೊ ತಾನಂದನೊ
ತನುತಂದನಾನಾ ತಾನೊ ತಾನಂದನೊ | ಸೊಲ್ಲು |

ಸಡಗರಿಸಿ ಬಂದಾನು
ಕಂದ ರಾಮಯ್ಯ
ಬಿಲ್ವತ್ರಿ ಮರದ
ತಳದಲ್ಲಿ ಕೂತಿದ್ದ
ಮಲ್ಲಯ್ನ ಕಾಣಕಂತ
ಸಿದ್ದರಾಮಯ್ಯನವರು
ಆನಂದವಾಗಿ ಬಂದು
ಅಲ್ಲಿ ನೋಡಿದರು.
ನೋಡಿದರೆ ಅಲ್ಲಿ
ಮಲ್ಲಯ್ನ ಸುಳುವಿಲ್ಲ
ಎಲ್ಲಿ ಹೋದರೂ ಕಾಣೆ
ಇಲ್ಲೇ ಎಲ್ಲಾದರೂ
ಮನುಗಿರಬಹುದಂತ
ಸುತ್ತಮುತ್ತ ನೋಡಿ
ಅಲ್ಲೆಲ್ಲೂ ಕಾಣದೆಲೆ
"ಅಯ್ಯ ಅಯ್ಯ ಮಲ್ಲಯ್ಯ
ಅಯ್ಯಯ್ಯೊ ನನ್ನಯ್ಯ
ಎಲ್ಲಿದ್ದೀರಿ ಸ್ವಾಮಿ
ಬ್ಯಾಗುದಲಿ ಬನ್ನಿ ಸ್ವಾಮಿ
ನಿಮ್ಗೆ ಅಂತ ನಾನು
ಬುತ್ತೀಯ ತಂದಿವ್ನಿ
ಹಸುದೋದ್ರಿ ತಂದೆ ನೀವು
ಬ್ಯಾಗುದಲ್ಲಿ ಬನ್ನಿ ಸ್ವಾಮಿ
ಬುತ್ತೀಯ ತಂದಿದ್ದೀನಿ
ಸಲ್ಲುಸೋಕೆ ಬನ್ನಿ ಸ್ವಾಮಿ
ನಾನು - ತಳುವಿದ್ರೆ ಕ್ರಮಿಸಿ ಸ್ವಾಮಿ
ನಿಮಗಂತ ಹೇಳಿ ನಾನು
ಬಿಸಿಬಿಸಿ ಹಾಲೋಗ್ರ
ಬಿಸಿಬಿಸಿ ಮೇಲೋಗ್ರ
ಮೊಸರನ್ನ ಉಪ್ಪುಗಾಯಿ
ತಂದಿವ್ನಿ ಗುರುಗಳೆ
ಮಲ್ಲಯ್ಯ ಸ್ವಾಮಿಗಳೆ
ಎಲ್ಲಿದ್ರೂ ಸೈತ ನೀವು
ತಳುವಾದೆ ಬನ್ನಿರಪ್ಪ
ನನ್ನಪ್ಪ ಮಲ್ಲಯ್ಯ
ನನ್ನಯ್ಯ ಮಲ್ಲಯ್ಯ
ಬನ್ನಿ ನನ್ನ ಸ್ವಾಮಿ" |

ಸಿದ್ಧರಾಮಯ್ಯನೋರು
ಕೂಗಿ ಕೂಗಿ ಕರುದಾರು
ಕೂಗಿ ಕರದರೂ ಮುಕ್ಷ
ಮಲ್ಲಯ್ಯನ ಸುಳುವಿಲ್ಲ
ತಲೆಯ ಎತ್ತಿಕೊಂಡು
ಹಣೆಗೆ ಅಂಗ್ಯೆ ಹೂಡಿ
ದೂರದ್ರಿಷ್ಟಿಯ ಮಾಡಿ
ರಾಮಣ್ಣ ನೋಡಿದರು
ಎಲ್ಲೆಲ್ಲಿ ನೋಡಿದರು
ಮಲ್ಲಯ್ನ ಸುಳುವಿಲ್ಲ
ತೆವ್ಳುತಿಟ್ಟುನೇರಿ
ದೂರಕೆ ದ್ರಿಷ್ಟಿ ಮಾಡಿ

ಕಣ್ಣುಗಳ ಅರಳಿಸಿ
ಮಲ್ಲಯ್ಯ ಹುಡ್ಕಿದರು
ಎಲ್ಲೆಲ್ಲು ಹುಡ್ಕಿದರು
ಮಲ್ಲಯ್ಯ ಸುಳುವಿಲ್ಲ
"ಎಲ್ಲಿದ್ದೀಯೊ ತಂದೆ
ಎಲ್ಲಿಗೋದೊ ಮಲ್ಲಯ್ಯ
ನಿನಗೇ ಅಂತ್ಹೇಳಿ
ನಾನು ಬುತ್ತೀಯ ತಂದೆನಲ್ಲೊ
ನೀನಿಲ್ಲದ ಮ್ಯಾಲೆ
ನಾನ್ ಇನ್ಯಾರ ಕರೆಯಲೊ
ನೀನೊಲ್ಲದ ಮ್ಯಾಲೆ
ನಾನಿನ್ಯಾರಿಗೆ ಕೊಡಲೊ
ಮಲ್ಲಯ್ಯ ಮಲ್ಲಯ್ಯ
ನನ್ನಯ್ಯ ಮಲ್ಲಯ್ಯೋ"
ಅನುತ್ಹೇಳಿ ರಾಮಯ್ಯ
ಕೊಳುದತ್ರ ಹುಡುಕೀದ
ಕೆರೆಯತ್ರ ಹುಡುಕೀದ
ಹೊಲುದತ್ರ ಹುಡುಕೀದ
ಮೆಳೆಯತ್ರ ಹುಡುಕೀದ
ತೋಟದಲಿ ಹುಡುಕೀದ
ತುಡಿಕೆಯಲಿ ಹುಡುಕೀದ
ತೋಪಿನಲಿ ಹುಡುಕೀದ
ನೂಪಿನಲಿ ಹುಡುಕೀದ
ಎಲ್ಲೆಲ್ಲಿ ಹುಡುಕಿದರೂ
ಮಲ್ಲಯ್ಯ ಸುಳುವಿಲ್ಲ |

"ನನ್ನನ್ನು ನಂಬೀಸಿ
ಗನ್ನೆಕಾರ ಮಲ್ಲಯ್ಯ
ಎಲ್ಲೀಗೆ ಹೋದನೊ
ಏನಾದನೊ ಕಾಣೆ
ಮಲ್ಲಯ್ಯ ಮಲ್ಲಯ್ಯ
ನನ್ನಯ್ಯ ಮಲ್ಲಯ್ಯ
ಎಲ್ಲಿದ್ದೀಯಯ್ಯಾ?"
ಅನುತ್ಹೇಳಿ ರಾಮಯ್ಯ
ಕೂಗಿ ಕೂಗಿ ಕರೆದಾನು
ಕರ್ರು ಕರ್ರು ಸೊರ್ಗಿದಾನು
ಮಲ್ಲಯ್ಯ ನನ್ನ ಬುಟ್ಟು,
ಎಲ್ಲಿಗೊ ಹೊಂಟೋದ

ಅಂತ್ಹೇಳಿ ರಾಮಯ್ಯ
ಬುತ್ತೀನೆಲ್ಲ ತಗ್ದು
ಎತ್ತಿ ನೆಲಕೊಗೆದನು
ಮಲ್ಲಯ್ಯ ನೆನೆಯುತ
ಕಣ್ಣೀರ ಸುರಿಸುತ
ಬಾಯಿಬಾಯಿ ಬಡಿಯುತ
ತಲೆತಲೆ ಚಚ್ಚಕೋತ
ಮೂರು ದಾರಿ ಕೂಡೊ
ಮಧ್ಯಾಕೆ ಬಂದು
ಹೊಲಗದ್ದೆ ತೋಟ
ಬೆಟ್ಟಗುಡ್ಡ ಎಲ್ಲ
ಕಣ್ಬುಟ್ಟು ನೋಡೋಂಗೆ
ಕಿವಿಗೊಟ್ಟು ಕೇಳೊಹಂಗೆ
ಮಲ್ಲಯ್ಯೋ ಮಲ್ಲಯ್ಯೋ
ಅಂತ್ಹೇಳಿ ಕೂಗುತ
ದಡ್ಡಾನೆ ನೆಲ್ಕೆ ಬಿದ್ದು
ಮಣ್ಣೂ ಅನ್ನೋದ್ನು ಕಾಣೆ
ಒದ್ದಾಡಿ ಒದ್ದಾಡಿ
ಮೂರ್ಛೆ ಹೋದ ರಾಮಣ್ಣ |

ಹಿಂಗೊಂದು ಗಳುಗೇಲಿ
ಶ್ರೀಶೈಲ ಪರ್ವತುಕೆ
ಮಲ್ಲಯ್ಯ ಸ್ವಾಮಿಯ
ಪೂಜೇಗೆ ಹೊರುಟಿದ್ದ
ಪರುಸೇಯು ಬರುಬರುತ
ದಾರೀಲಿ ಬಿದ್ದಿದ್ದ
ಕಂದ ರಾಮಯ್ಯನೋರ
ಕಂಡು ಕರುಣ ಪಟ್ಟು
ಗಿಂಡಿಯಿಂದ ನೀರ್ತಗುದು
ಮೊಕುಕ್ಕೆ ಚಿಮ್ಮಿದರು.
ಆ ಒಂದು ಗಳುಗೇಲಿ
ಸಿದ್ದರಾಮಯ್ಯನೋರು
ಎಚ್ಚುರಮಾಗುತ
ಕಣ್ಣುಗಳ ಬುಟ್ಟು,
ಪರುಸೇಯ ನೋಡಿದರು |

"ಯಾರಪ್ಪ ಮಗು ನೀನು?"
"ನಾನ್ಯಾರಾರೂ ಆಗ್ಲಿ

ಎಲ್ಲಿ ನನ್ನ ಮಲ್ಲಯ್ಯ
ಮೊದ್ಲು ನನ್ನ ಮಲ್ಲಯ್ಯುನ ತೋರ್ಸಿ"
"ಯಾವ ಮಲ್ಲಯ್ಯುನಪ್ಪ?"
"ಅದೇ ಆ ದೂರ್ದಲ್ಲಿ ಕಾಣ್ತೆರೊ ಬೆಟ್ಟ?
ಶ್ರೀಶೈಲ ಪರ್ವತುದಲ್ಲವುನಲ್ಲ ಆ ಮಲ್ಲಯ್ಯ"
"ಹಂಗ್ಹೇಳು ಮತ್ತೆ
ಬಾ ನಾವೂ ಅಲ್ಲಿಗೇ ಹೋಯ್ತ ಇದ್ದೀವಿ
ನಿನ್ನ ಮಲ್ಲಯ್ನ ನಿಮಗೆ ತೋರುಸ್ತೀವಿ" -

ಪರ್ಸೇಯ ಮಾತಕೇಳಿ
ರಾಮಯ್ಯನವರಾಗ
ಸಡಗರಿಸಿಕೊಂಡು
ಪರ್ಸೇಯ ಜೊತೆಯಲ್ಲಿ
ಶ್ರೀಶೈಲ ಪರ್ವತುಕೆ
ಸಿದ್ಬರಾಮ ಹೊಂಟಾನು | ೧೧೦೬

೫. ಮಲ್ಲಯ್ನ ತೋರ್ತೀನಂತ ಕಲ್ಲಯ್ನ ತೋರಿದರು

ತಂದನ್ನ ತಾನೊ ತಾನೊ ತಾನಂದನೊ
ತನುತಂದೆನಾನೊ ತಾನೊ ತಾನಂದನೊ | ಸೊಲ್ಲು |

ಶ್ರೀಶೈಲ ಪರ್ವತಕೆ
ಹೋಗುವಂತ ಪರ್ಸೇಯ
ಜೊತೆಯಲ್ಲಿ ರಾಮಯ್ಯ
ಏಳೋದು ಕಾಣಾದೆ
ಬೀಳೋದು ಕಾಣದೆ
ಹಗಲೆಂದು ತಿಳಿಯದೆ
ಇಳ್ಕೆಂದು ತಿಳಿಯದೆ
ಪರ್ಸೇಯ ಜೊತೆಯಲ್ಲಿ
ರಾಮಯ್ಯ ನಡೆದನು |

ಭೂಮೀಯೆ ಕೈಲಾಸ
ಅನುವಂತ ಶ್ರೀಶೈಲ
ಪರ್ವತಕೆ ರಾಮಯ್ಯ
ಪರುಸೇಯ ಜೊತೆಯಾಗಿ
ಬೆಟ್ಟಗುಡ್ಡ ಹತ್ತಿ
ದೇವಾಲ್ಯಕೆ ಬಂದನು
ಪರುಸೇಯ ಜನುವೆಲ್ಲ
ಉಘೇ ಉಘೇ ಮಲ್ಲಯ್ಯ
ಉಘೇ ಉಘೇ ಮಲ್ಲಯ್ಯ
ಅನುತ್ಹೇಳಿ ಸೊರಣೆಗಳ
ಮಾಡುತ್ತ ಗುಡಿ ಸುತ್ತ
ಪ್ರದಾಕ್ಷಿಣ್ಯ ಮಾಡುವಾಗ
ರಾಮಯ್ಯ ಪರುಸೆಯ
ಜನಗಳ ಕೈಓಡಿದು
ಜಗ್ಗೀಸಿ ಕೇಳಿದನು

"ಅಪ್ಪಾ ಅಪ್ಪಾ ಹೇಳಿ
ಅಯ್ಯಾ ಅಯ್ಯಾ ಹೇಳಿ
ಅಣ್ಣಗಳೇ ಹೇಳಿ ಹೇಳಿ
ಎಲ್ಲವುನೆ ಮಲ್ಲಯ್ಯ
ನನ-ಮಲ್ಲಯ್ಯ ಎಲ್ಲವುನೆ
ಮೊದುಲಾಗಿ ತೋರುರಪ್ಪ
ಅವ್ನ-ನೋಡಾದೆ ನಾನು
ಉಳಿಯುವ ಹಾಂಗಿಲ್ಲ
ನಾನು ನೋಡಲೆ ಬೇಕು
ನನ್ನ ಮಲ್ಲಯ್ನ ತೋರಿರಪ್ಪ ೧೧೪೦
ನನ್ನ ಮಲ್ಲಯ್ಯ ಎಲ್ಲವುನೆ
ಬ್ಯಾಗುದಲಿ ತೋರಿರಪ್ಪ"
ಅನುತ್ಹೇಳಿ ರಾಮಯ್ಯ
ಗೋಗರಿಯುತಿರುವಾಗ
ಪರುಸೇಯ ಜನಗಳು
ಮಲ್ಲಿಕಾರ್ಜುನ ಸ್ವಾಮಿ
ದೇವಾಲ್ಯದ ಒಳಕಾಗಿ
ರಾಮಯ್ನ ಕರುಕೊಂಡು
ಹೋಗಿ ಶಿವುಲಿಂಗಕೆ
ಕೈಮುಗ್ದು ಅಡ್ಡಬಿದ್ದು ೧೧೫೦
ಸರಣ ಮಾಡುತಿರುವಾಗ
ಕಂದ ರಾಮಣ್ಣನು
"ಸ್ವಾಮಿಗಳೆ ತಳುವ ಬೇಡ
ಬ್ಯಾಗುದಲ್ಲಿ ನನ್ನ
ಮಲ್ಲಯ್ನ ತೋರಿರಿ"

ಅನುವಾಗ ಪರುಸೇಯ
ಜನುವೆಲ್ಲ ರಾಮಯ್ಗೆ
ಮಲ್ಲಿಕಾರ್ಜುನ ಸ್ವಾಮಿ
ಲಿಂಗಾವ ತೋರುತ
"ಇವ್ನೇ ಕಣಪ್ಪ ನಿನ್ನ
ಮಲ್ಲಯ್ಯನೆಂಬೋನು"
ಎಂದಾರು ಭಕ್ತೀಲಿ |

ಶಿವಲಿಂಗ ನೋಡೀದ
ಸಿದ್ದರಾಮಯ್ಯನವರು
ಕೊಂಡದೊಳೀಕೆ ಬಿದ್ದ
ಸೊಂಡೆ ಹಕ್ಕಿಯಂತೆ
ನೆಲಕೆ ದಡ್ಡನೆ ಬಿದ್ದು
ಬಾಯಿ ಬಾಯಿ ಬಡಿಯುತ
"ಮಲ್ಲಯ್ಯ ಮಲ್ಲಯ್ಯ
ನಿನ್ನ ತೋರ್ತೀನಂತ ಇವ್ರು
ಮೋಸಾವ ಮಾಡಿಬುಟ್ರು
ಮಲ್ಲಯ್ನ ತೋರ್ತೀನಂತ
ಕಲ್ಲಯ್ನ ತೋರಿದರು !
ಮಲ್ಲಯ್ಯ ಮಲ್ಲಯ್ಯ
ನೀನಿಲ್ಲಾದ ಮ್ಯಾಲೆ ನಾನು
ಏನು ಮಾಡಲಿ ಹೇಳು
ಈ ಪರುಸೆ ಜನ ನಂಗೆ
ಮೋಸ ಮಾಡಿದರು"
ಅನುವಾಗ ರಾಮಯ್ಯ
ಪರ್ಸೆ ಜನುವೆಲ್ಲ
"ಈ ಹುಡುಗ ಹುಚ್ಚಪ್ಪ"
ಅನುತ್ಹೇಳಿ ಅವುರವುರ
ದಾರೀಲಿ ಹೋದರು |

"ಕೆಟ್ಟೆ ಕೆಟ್ಟೆ ನಾನು
ಮಲ್ಲಯ್ಯ ಮಲ್ಲಯ್ಯ
ಎಲ್ಲಿದ್ದಿ ಮಲ್ಲಯ್ಯ
ನೀನೆಲ್ಲಿದ್ದಿ ಮಲ್ಲಯ್ಯ
ನಿನ್ನ ಬುಟ್ಟು ನಾನು
ಬದುಕಿರಲಾರಿ
ಶ್ರೀಶೈಲದಲ್ಲಿವ್ನಿ
ಅಂತ್ಹೇಳಿ ನೀನು ನನಗೆ
ಈಗ ಇಲ್ಲಿ ಕಾಣದೆ
ಎಲ್ಲಿ ಅವುತಿದ್ದೀಯೆ
ಬಾ ನನ್ನ ಮಲ್ಲಯ್ಯ
ನಿನ್ನ ಮೊಕ ತೋರಯ್ಯ
ನನ್ನ ಉಳಿಸಿಕೊಳ್ಳಯ್ಯ
ಮಲ್ಲಯ್ಯ ಮಲ್ಲಯ್ಯ"
ಅನುತ್ಹೇಳಿ ರಾಮಣ್ಣ
ಗುಡಿಯಾಚೆಗೆ ಬಂದು
ಹತ್ತೂ ದಿಕ್ಕ ನೋಡಿ
ದಿಕ್ಕೆಟ್ಟು ಹೋದಂತೆ
ಕಣ್ಣ ಮುಚ್ಚಿಕೊಂಡ.
ಕಣ್ಣ ಮುಚ್ಚಿಕೊಂಡ್ರೆ
ಕಣ್ಣ ತುಂಬ ಮಲ್ಲಯ್ಯ
ತುಂಬಿಕೊಂಡಂತಾಗಿ
ಕಣ್ಣ ಬುಟ್ಟನು ಕಂದ
ಮಲ್ಲಯ್ಯ ಹೊರುಗಿಲ್ಲ
ಎಲ್ಲವುನೆ ಮಲ್ಲಯ್ಯ
ಎಲ್ಲವುನೆ ಮಲ್ಲಯ್ಯ
ಅನುತ್ಹೇಳಿ ರಾಮಯ್ಯ
ಮಿಂಚಿನಂತೊಳುದು
ಅಲ್ಲಿಂದ ಓಡಿದನು |

೬. ಬೀಳುತಿದ್ದ ರಾಮಯ್ನ ತೋಳಲ್ಲಿ ಆತುಕೊಂಡ್ರು

ತಂದನ್ನ ತಾನೊ ತಾನೊ ತಾನಂದನೊ
ತನುತಂದೆನಾನೊ ತಾನೊ ತಾನಂದನೊ | ಸೊಲ್ಲು |

ಎದ್ದೋಡಿದನು ರಾಮ
ಬಿದ್ದೋಡಿದನು ರಾಮ
ಬಾಯಿ ಬಾಯಿ ಬಡುಕೊಂಡು
ಕೆಡೆದೋಡಿದನು ರಾಮ
ತಲೆತಲೆ ಚಚ್ಚಿಕೊಂಡು
ಗೋಳಾಡಿದನು ರಾಮ
ಅತ್ಲಾಗ್ ನೋಡುತ್ತ
ಅತ್ಲಾಗ್ ಓಡಿದನು

ಇತ್ಲಾಗ್ ನೋಡುತ್ತ
ಇತ್ಲಾಗ್ ಓಡಿದನು
ಎತ್ತೆತ್ತಲೂ ನೋಡಿ
ಎಲ್ಲೆಲ್ಲೂ ಕಾಣದೆ
ನೆಲಕೆ ದಡ್ಡನೆ ಬಿದ್ದು
ಒದ್ದಾಡಿ ಬಿದ್ದಾಡಿ
ಕಿಟ್ಟನೆ ಕಿರುಚುತ
"ಮಲ್ಲಯ್ಯೋ ಮಲ್ಲಯ್ಯೋ
ನನ್ನಯ್ಯೋ ಮಲ್ಲಯ್ಯೋ
ನನ್ನಪ್ಪ ಮಲ್ಲಯ್ಯೊ
ನನಸ್ವಾಮಿ ಮಲ್ಲಯ್ಯ"
ಅನುತ್ಹೇಳಿ ಕೂಗಿದರೆ
ಬೆಟ್ಟಗುಡ್ಡಾಗಳ
ಮೊರೆಯೋ ಬಂಡೆಗಳು
ಓಯ್ ಓಯೆನುತಿದ್ದೊ |

ಮೊರೆಯೋ ಬಂಡೆಗಳ
ದನಿಕೇಳಿ ರಾಮಯ್ಯ
ಅಲ್ಲವುನೆ ಮಲ್ಲಯ್ಯ
ಇಲ್ಲವುನೆ ಮಲ್ಲಯ್ಯ
ಅನುತ್ಹೇಳಿ ರಾಮಯ್ಯ
ಬೆಟ್ಟಬೆಟ್ಟಗಳ
ಮುಟ್ಟಾಡಿದ ರಾಮಯ್ಯ
ಮಲ್ಲಯ್ಯ ಸ್ವಾಮಿಗಾಗಿ
ಬಟ್ಟಾಡಿದ ರಾಮಯ್ಯ
ಕಲ್ಲುಗಳು ಅನ್ನಾದೆ
ಮಣ್ಣುಗಳು ಅನ್ನಾದೆ
ನಡನಡದು ರಾಮಯ್ಯ
ಕಲ್ಲೊತ್ತಿ ಮುಳ್‌ಚುಚ್ಚಿ
ಪಾದಗಳೆರಡೂ
ರಣರಂಪವಾಗಿ
ಅವ್ವ - ಕಾಲುಗಳಿಂದ
ಚಿಲ್ಲಾನೆ ರಗುತಾವು
ಕೋಡಿಗಟ್ಟಿ ಹರೀತಾದೆ
ಒಂದೊಂದು ಹಜ್ಜೇಯ
ಮುಂದಕೆ ಇಟ್ಟರೆ
ಬೊದ್ಕ ಬೊದ್ಕನೆ ರಗುತ
ಕಿತ್ಕೊಂಡು ಹರಿದಿತು |

ಪಾದಗಳ ಊರಾಕೆ
ಆಗದೆಲೆ ರಾಮಣ್ಣ
ಮಂಡಿಗಳ ಊರಿಕೊಂಡು
ತೆಮಿಯುತ ಬರುವಾಗ
ಕಲ್ಲು, ಮುಳ್ಳು ಚುಚ್ಚಿ
ಮಂಡಿ ಚರ್ಮ ಕಿತ್ತುಬಂದು
ತೆಮಿಯಕಂತೋದರೆ
ಮಂಡಿ ಚಿಪ್ಪೆ ಕಿತ್ತು ಬಂದೊ
ಚಿಲ್ಲಾನೆ ರಗುತಾವು
ಕೋಡಿಗಟ್ಟಿ ಹರಿಯುತೀದೆ |

ಆಗ ಸಿದ್ದರಾಮಯ್ಯ
ಎಡೂ ಕೈಗಳನೂರಿ
ಕಾಲುಗಳ ಭಾರವ
ಕೈಗಳಿಗೆ ಕೊಟ್ಟು
ಅಂಗ್ಕೈ ಊರಿಕೊಂಡು
ಮುನುಮುಂದೆ ಬರುವಾಗ
ಅಂಗೈಗಳೆರಡೂ
ಕಲ್ಲುಮುಳ್ಳು ಚುಚ್ಚಿ
ಚಿಲ್ಲಾನೆ ರಗುತಾವು
ಕೋಡಿಗಟ್ಟಿ ಹರಿಯಿತು |

ಆಗ ಸಿದ್ದರಾಮಯ್ಯ
ಮೊಣಕೈಯ ಊರಿಕೊಂಡು
ತೆಮುಕೊಂಡು ಹೋಗುತವುನೆ
ಮೊಣಕೈಯ ಸಂದುಗಳು
ಕಿತ್ತು ಬಂದವು ಶಿವನೆ
ಆಗ ಬೊದ್ಕ ಬೊದ್ಕಾಂತ
ರಗುತ ಕೋಡಿಗಟ್ಟಿ
ಹರೀತ್ಹೆತೆ ಶಿವನೆ |

ಆಗ ಸಿದ್ದರಾಮಯ್ಯ
ಎದೆಯೂರಿ ನೆಲುಕೆ
ಕಂದಯ್ಯ ತೆಮಿತವುನೆ
ಎದೆಚರ್ಮವೆಲ್ಲ ಕಿತ್ತು
ಚುಳುಚುಳನೆ ರಗುತ
ಮಡಗಟ್ಟಿ ಹರಿದ್ಹೆತೆ |

ರಾಮಯ್ನ ಸಂಗುಟಾವ
ಆನೆ ಹುಲಿ ಕರಡಿಗಳು
ಸಿಮ್ಮ ಸಾರ್ದೂಲಗಳು
ಕಡವೆ ಕಾಟಮ್ಮೆಗಳು
ನವುಲು ಸಾರಂಗಗಳು
ಜಿಂಕೆಗಳು ಮೊಲಗಳು
ಮಂಗ ಮುರುಕಾಟಿಗಳು
ಎಲ್ಲವ್ನೂ ನೋಡುತ
ಕಣ್ಣೀರ ಸುರ್ಸಿದವು
ರಾಮಯ್ಯನ ಭಕ್ತೀಗೆ
ಎಲ್ಲ ಜೀವಿಗಳು
ಸಂತೋಸ ಪಡುತ
ಸರಣಾರ್ತಿ ಮಾಡಿದವು |

ಎಪ್ಪತ್ತೇಳು ಬೆಟ್ಟಗಳ
ರಾಮಣ್ಣ ದಾಟಿಕೊಂಡ
ಆಕಾಸದೆತ್ತರಕೆ
ಬೆಳೆದು ನಿಂತಿರುವಂತ
ಪಾಲ್ಕಿ ಪರ್ವತದ
ತುದಿಗೆ ಬಂದು ನಿಂತ
ನಡಿಯೋದ್ಕೆ ತ್ರಾಣುವಿಲ್ಲ
ನಿಲ್ಲುದಕ್ಕೆ ಸಕ್ತಿಯಿಲ್ಲ
ಮಲ್ಲಯ್ಯನ ಕಾಣದೆ
ಬದ್ಕಿ ಬಂದ ಫಲವೇನು
ಅನುತ್ಹೇಳಿ ರಾಮಯ್ಯ

ಪಾಲ್ಕಿ ಪರ್ವತದ
ತುಟ್ಟ ತುದೀಲಿ ನಿಂತು
ಮಲ್ಲಯ್ಯೋ ಮಲ್ಲಯ್ಯೊ
ಅನುತ್ಹೇಳಿ ರಾಮಣ್ಣ
ಆಳಪಾತಾಳವಾದ
ಕತ್ತಲೆ ಕಮ್ಮರಿಗೆ
ಬಿದ್ದು ಪ್ರಾಣ ಕಳ್ಕೊಳಕೆ
ಮಲ್ಲಯ್ನ ಗ್ಯಾನ ಮಾಡಿ
ಕುಪ್ಪುರಿಸಿ ನೆಗೆದಾನು |

ಆಕಾಸ್ದ ಎತ್ರುದಿಂದ
ರಾಮಯ್ಯ ಬೀಳುವಾಗ
ಕೈಲಾಸದಲ್ಲಿದ್ದಂತ
ಪರಶಿವನು ನೋಡಿದನು
ಪಾರ್ವತಿಯು ನೋಡಿ
ತಾಯಿ ಬೆಚ್ಚಿದಳು
ಆ ತಕ್ಸುಣುವೆ ಅವರು
ಕಮ್ಮರಿಗೆ ಕೈಯೊಡ್ಡಿ
ಬೀಳುತಿದ್ದ ರಾಮಯ್ನ
ತೋಳಲ್ಲಿ ಆತುಕೊಂಡ್ರು
ಆತುಕೊಂಡ ಮಗನ
ಅಂತುರದಲ್ಲೆ ತಮ್ಮ
ಕೈಲಾಸ ಪರ್ವತಕೆ
ಕರುಕೊಂಡು ಹೋದರು |

೭. ಸಿದ್ಧರಾಮಯ್ನ ಭೂಮಿಗೆ ಕಳಿಸಿದರು

ತಂದನ್ನೊ ತಾನೊ ತಾನೊ ತಾನಂದನೊ
ತನು ತಂದೆನಾನೊ ತಾನೊ ತಾನಂದನೊ | ಸೊಲ್ಲು |

ಕೈಲಾಸ ಪರ್ವತುಕೆ
ರಾಮಣ್ಣ ಬಂದರು
ಗಣಪತಿ ಸಣ್ಮಕ
ರಾಮಯ್ನ ನೋಡಿದರು
ಆಟ ಆಡಕೆ ನಮ್ಗೆ
ಒಳ್ಳೆ ಸಿನೇಹ್ತ ಅಂದ್ರು
ಸಕಲ ಗಣಂಗಳು
ರಾಮಯ್ನ ನೋಡಿದರು

ಈ ಮುದ್ದು ಕಂದಯ್ಯನ
ನಮ್ಮ ತೋಳ ತೊಟ್ಟಿಲಲ್ಲಿ
ತೂಗಬೇಕಂದಾರು
ಗೌರಮ್ಮ ತಾಯಿಯು
ಕಂದಯ್ನ ತೊಡೆಮೇಲೆ
ಮನಗೀಸಿಕೊಂಡು
ದಾಸೀರ ಕೈಲಿ
ಕಾಸೀದಾಲ ತರಿಸಿ

ಒಳ್ಳೇಲಿ ಹಾಲುಕುಡಿಸಿ
ಕಂದುಂಗೆ ನೀವುಳಿಸಿ
ದ್ರಿಷ್ಟಿ ತಗುದಾಳು |

ನಂದೀಸ್ನ ಹೆಗುಲಲ್ಲಿ
ಕೂತುಕೊಂಡು ರಾಮಯ್ಯ
ಆದರಿಸಿ ಬಸುವಯ್ನ
ಮೇಲೆ ಸವಾರಿ ಮಾಡಿ
ಸಂತೋಸ ಪಟ್ಟಾನು
ಗಣಗಳ ಜೊತೆಯಲ್ಲಿ
ಕುಣಿಕುಣಿದಾಡುತ
ಸಂತೋಸ ಪಟ್ಟಾನು
ವಾರೊಪ್ಪತ್ತು ಕಳುದೊ
ರಾಮಯ್ನ ಕರ್ದು ಸ್ವಾಮಿ
"ಮುದ್ದು ಕಂದ ಸಿದ್ದು
ನೀನು ಬಂದಾಗಲೆ
ವಾರವು ಕಳುದೋಯ್ತು
ನೀನು ಸೊವರುಣಪುರಕೆ
ಹೋಗಾದಿಲ್ಲ ಕಂದ ?"
"ಹೋಗಲಾರೆ ನನ್ನಪ್ಪ
ಹೋಗಲಾರೆ ನನ್ನಯ್ಯ
ಹೋಗೋದಿಲ್ಲ ಮಲ್ಲಯ್ಯ
ನಿನ್ನ ಬುಟ್ಟು ಇರಲಾರೆ
ನನ್ಗೆ - ಲಿಂಗಪತಿ ನೀನು
ನನ್ಗೆ - ಅಂಗ ಗತಿ ನೀನು
ನನ್ಗೆ- ಸಂಗ ಮತಿ ನೀನು
ನನ್ಗೆ - ಗತಿಮತಿ ಪತಿ ನೀನು
ತಂದೆ ತಾಯೂ ನೀನು
ಬಂಧೂ ಬಳುಗ್ವು ನೀನು
ನಿನ್ನ ಬುಟ್ಟರೇ ನನ್ಗೆ
ಬ್ಯಾರೆ ಯಾರೂ ಇಲ್ಲ
ನಾನು ನಿನ್ನತ್ರುವಿರುತೀನಿ
ನಿನ್ನಲ್ಲೆ ಇರುತೀನಿ !" |

ರಾಮಯ್ನ ದುಡುಮನ
ನೋಡಿದ ಮಲ್ಲಯ್ಯ
"ನೀನು ಕಾಯ ಸ್ಥೈತ ಇಲ್ಲಿ
ಇರಾದಕಾಗದಿಲ್ಲ
ಭೂಲೋಕುದಲ್ಲಿ ನೀನು
ನಿನ್ನ ಕಾಯಕಗಳ ಮುಗ್ಸಿ
ಆಮ್ಯಾಲೆ ಕೈಲಾಸ್ಕೆ
ಬರಬೇಕು ರಾಮಯ್ಯ"
ಅನುತ್ಹೇಳಿ ಮಲ್ಲಯ್ಯ
ರಾಮಯ್ಯನ ಒಪ್ಪೀಸಿ
ಕಪಿಲೆಯ ಕಂದನಾದ
ರಾಮಯ್ನ ಕೂಗಿ ಕರುದ
ರಾಮು ಅನ್ನೊ ಹೋರ್ಗರ
ಸೊನ್ನಲಾಪುರದಿಂದ
ಕೈಲಾಸ ಪರ್ವತಕೆ
ಇಮಾನು ಬರುವಂತೆ
ತೇಲಿಕೊಂಡು ಬಂದಿತು |

ಕಪಿಲೆರಾಮಯ್ನ
ಬೆನ್ನಲ್ಲಿ ಸಿದ್ದನನ್ನು
ಕುಂತ್ಕಳದ್ಕೇಳುದ್ರು
ಪಾರ್ವತಿ ಪರಶಿವ
ಪರಮಾತ್ಮನ ಆಗ್ನಿಯಂತೆ
ರಾಮಯ್ಯನಾದರೆ
ಕಪಿಲೆರಾಮಯ್ನ ಮ್ಯಾಲೆ
ಕೂತುಕೊಂಡಾಗ ರಾಮ
ಕಪಿಲಾ ಸಿದ್ದರಾಮಯ್ನ
ಪಾರ್ವತಿ ಪರಮೇಶ್ವರ
ಸಕಲ ಗಣಂಗಳೂ
ಪ್ರೀತಿಪಟ್ಟು ರಾಮಯ್ನ
ಭೂಮಿಗೆ ಕಳುವಾಗ
ಸಿದ್ದರಾಮಣ್ಣನು
ಕಣ್ಣೀರ ಸುರಿಸುತ
"ನಾನು ಹೋಗದಿಲ್ಲ
ಹೋಗದಿಲ್ಲ ಹೋಗದಿಲ್ಲ
ನಿಮ್‌ಬಿಟ್ಟು ನಾನಿರಲಾರೆ"
ಅನುತ್ಹೇಳಿ ರಾಮಯ್ಯ
ಗೋಳಾಡುತಿರುವಾಗ
ರಾಮಯ್ನ ಸಂಗುಟಾವ
ನೋಡೀದ ಪರಶಿವನು |

"ಕಂದ ರಾಮಯ್ಯ
ನೀನು ಅಳಬ್ಯಾಡ ಸಿದ್ದು
ನಾನು ನಿನ್ನ ಜೊತೇಲೆ

ಯಾವಾಗ್ಲೂ ಇರುತೀನಿ .ರಾಣೀಯ ಬೊಕ್ಕ್ಯದಲ್ಲಿ
ಭೂಮೀಲಿ ನಿನ್ನ ಜೊತೆ ಮಡುಗಿವ್ನಿ ಕಂದಯ್ಯ
ಯಾವಾಗ್ಲೂ ನಾನಿರುತೀನಿ ೧೪೩೦ ನಾನು ಈವತ್ತು ಅವ್ನ
ನೀನು - ಭೂಮೀಗೆ ಹೋಗು ಕಂದ" ಕನುಸಲ್ಲಿ ಕಾಣ್ಸುಕೊಂಡು ೧೪೬೦
ಅನ್ನಲು ಮಲ್ಲಯ್ನ ನಿನ್ಗೆ ಹಣಕೊಡು ಅಂತ
ನೋಡುತ ರಾಮಯ್ಯ ಹೇಳ್ತೀನಿ ಕಂದಯ್ಯ
"ಹಂಗಾರೆ ಈಗಲೆ ಕೆರೆ ಕಟ್ಟೆ ಕಟ್ಸಿಸು
ನನ್ನ ಜೊತೆ ಬರಬೇಕು !" ಗುಡಿಗುಂಡಾರ ಕಟ್ಸು
ಅನುತ್ಹೇಳಿ ರಾಮಯ್ಯ ಬಡವರಿಗೆಲ್ಲ
ಹಟ ಮಾಡುತಿರುವಾಗ ಮನೆಮಠ ಕಟ್ಸಿಸು
"ಕಂದ ರಾಮಯ್ಯ ಜೀವ ಕೋಟಿಗಳಿಗೆಲ್ಲ
ನೀನು ಭೂಮಿಗೆ ಹೋಗು ನೀರುನಿಡಿ ಸಿಗುವಂತೆ
ನಾನೂ ಭೂಮಿಗೆ ಬರುತೀನಿ ೧೪೪೦ ಕೆರೆಕಟ್ಟೆ ಕಟ್ಸಿಸಿ
ಸೊನ್ನಲಾಪುರದಲ್ಲಿ ನಾನು ಉಪುಕಾರಿ ಆಗಪ್ಪ" ೧೪೭೦
ಲಿಂಗವಾಗಿ ಮೂಡುತೀನಿ ಅನುತ್ಹೇಳಿ ರಾಮಯ್ಗೆ
ನಾನು - ಲಿಂಗವಾಗಿ ಮೂಡಿದಾಗ ಬುದ್ಧೀಯ ಹೇಳಿದರು |
ನಿನ್ನ ಮನೇಲಿರೊ ಕಪಿಲೆ
ನನ್ನ ಮ್ಯಾಲೆ ಅದು ಬಂದು ರಾಮಯ್ನ ತಲೆಸವುರಿ
ಹಾಲು ಕರೀತಾದಪ್ಪ ಆಸುರ್ವಾದಗಳ ಮಾಡಿ
ಅದ - ನೀನು ನೋಡಿಕೊಂಡು ರಾಮ ಅನ್ನೊ ಹೋರಿ ಮ್ಯಾಲೆ
ನನ್ನ ಅಲ್ಲಿ ಕಂಡುಕೊಂಡು ಕೂತ್ಕಳದ್ಕೆ ಹೇಳಿದರು
ಬಡಬಗ್ಗರಿಗೆಲ್ಲ ಸಿದ್ಧರಾಮಯ್ಯ
ದಾನಧರ್ಮ ಮಾಡಬೇಕು ೧೪೫೦ ಸ್ವಾಮಿಯ ಪಾದಕೆ ಬಿದ್ದು
ಅದಕಾಗಿ ದುಡ್ಡುಕಾಸ ಶರಣುಗಳ ಮಾಡಿದನು
ಎಲ್ಲಿಂದ ತರಲಪ್ಪ ಪಾರ್ವತಿ ಪರಮೇಶ್ವರರು ೧೪೮೦
ಅನುತ್ಹೇಳಿ ರಾಮಯ್ಯ ಸಕಲ ಗಣಂಗಳು
ಯೋಚುಣೆ ಮಾಡಬ್ಯಾಡ ಪ್ರೀತಿ ಪಟ್ಟು ರಾಮಯ್ನ
ನಾನು ಚಿನ್ನಾದ ಮಳೆಹುಯ್ಸಿ ಭೂಮಿಗೆ ಕಳವಿದರು | ೧೪೮೩
ಚಾಮಲದೇವಿಯೊಂಬೊ

೮. ಕೈಲಾಸ್ಕೆ ಹೋಗಿ ಬಂದ ಶರಣ ಸಿದ್ಧರಾಮಯ್ಯ

ತಂದನ್ನೊ ತಾನೊ ತಾನೊ ತಾನಂದನೊ
ತನುತಂದೆನಾನೊ ತಾನೊ ತಾನಂದನೊ | ಸೊಲ್ಲು |

ಸೊನ್ನಲಾಪುರಕೆ ತುಂಬುದ ಸ್ವಾಮಾರ
ಸಿದ್ಧರಾಮಯ್ಯ ಬಂದು ಕಪಿಲೆ ಹಸುವನ್ನು
ಶಿವುನ ಧ್ಯಾನುದಲ್ಲಿ ರಾಮಯ್ಯ ಕೈಮುಗುದು ೧೪೯೦
ಕಾಲರ್ನೆ ಮಾಡುವಾಗ ಪೂಜೆಗಳ ಮಾಡಿದನು |

ಕಪಿಲೆ ಹಸುವಾದ್ರೆ
ಮುಂದ ಮುಂದಕೆ ಹೊರಟು
ಹೊನ್ನರಳಿ ಮರುದತ್ರ
ಇರೊ ಹೊನ್ನುತ್ತುದ
ಹತ್ತಿರಕೆ ಬಂದಿತು
ಹೊನ್ನುತ್ತಕೆ ಕಪಿಲೆ
ಕಾಲುಗಳ ಪೊತ್ತುರಿಸಿ
ಹಾಲನ್ನು ಜೊರ್ರಂತ
ಕರೆಯುತ ಇರುವಾಗ ೧೫೦
ಹುತ್ತದ ಒಳಾಗಿಂದ
ಮಲ್ಲಿಕಾರ್ಜುನ ಸ್ವಾಮಿ
ಪ್ರತೇಕ್ಷ ಆದರು |

ಸಿದ್ಧರಾಮಯ್ಯ
ಸಂತೋಷಪಟ್ಟುಕೊಂಡು
ಕುಣುದಾಡುತಿರುವಾಗ
ಆ ದಾರೀಲಿ ಹೋಗುತಿದ್ದ
ರಾಮಯ್ನ ನೋಡಿ
"ನನ್ಗೆ ಕನಸಲ್ಲಿ
ಮಲ್ಲಿಕಾರ್ಜುನ ಸ್ವಾಮಿ ೧೫೧೦
ತೋರಿಸಿದ ಮಾತ್ಮನು
ಇವ್ನನೇಯ ಅಂತ್ಹೇಳಿ
ಪಲಕ್ಕಿಯಿಂದ ಇಳ್ದು
ರಾಮಯ್ನ ಹತ್ತಿರಕೆ
ಬಂದು ಚಾಮವ್ವ ರಾಣಿ
ಶರಣು ಶರಣೆನ್ನುತ
ರಾಮಯ್ನ ಪಾದಗಳಿಗೆ
ಶರಣಗಳ ಮಾಡಿದಳು |

ಸಿದ್ಧರಾಮಯ್ಯ
ಸೋಜುಗದಿಂದ ೧೫೨೦
ಚಾಮವ್ವ ರಾಣಿಯ
ನೋಡುತಿರುವಾಗ
ಚಾಮವ್ವರಾಣಿಯು
"ಮಲ್ಲಯ್ನ ಕ್ರುಪೆಯವು
ತನಗಾದ ಬಗೆಯನ್ನು
ಚಿನ್ನಾದ ಮಳೆ ಸುರುದು
ಆ ಚಿನ್ನವೆಲ್ಲ ತನ್ನ
ಕೊಪ್ಪಿಕೆಯಲ್ಲಿ ಇರುವುದು
ಅದರಿಂದ ಲೋಕಕೆ
ಬೇಕಾದ ಕೆಲಸಗಳ ೧೫೩೦
ಮಾಡಬೇಕು ಅಂತ
ಮಲ್ಲಯ್ನ ಅಪ್ಪಣೆ
ಆಗಿದೆ ಸ್ವಾಮಿಗಳೆ"
ಅಂತಾಗ ನುಡಿದಳು |

ಮಲ್ಲಯ್ನ ಕ್ರುಪಯಕೆ
ರಾಮಯ್ಯ ತ್ರುಪ್ತನಾಗಿ
ಸ್ವಾಮೀಯ ಮನುಸಲ್ಲೆ
ಸೊರಣೆಯ ಮಾಡಿದನು
ಚಾಮವ್ವರಾಣಿಯ
ಅರಮನೆಯಿಂದ ಆಗ ೧೫೪೦
ಆನೆ ಮ್ಯಾಲೆ ಆರು
ಕೊಪ್ಪುಕೆ ಚಿನ್ನ ಬಂದೊ
ಒಂಟೆಯ ಮ್ಯಾಲೆ ಎಂಟು
ಕೊಪ್ಪುಕೆ ಚಿನ್ನ ಬಂದೊ
ಕುದ್ರೆಮ್ಯಾಲೆ ಆಗ
ಹದ್ನಾರು ಕೊಪ್ಪುರ್ಕೆ
ಚಿನ್ನಾವ ಹೊತ್ತು ತಂದೊ |

ಅಂತೆ-ರಾಸಿ ರಾಸಿ ಚಿನ್ನದಿಂದ
ಮಲ್ಲಯ್ಯ ಸ್ವಾಮೀಗೆ
ದೇಮಲ್ಕ ಕಟ್ಟಿಸಿದ ೧೫೫೦
ಪಸುಪಕ್ಷಿ ಪ್ರಾಣಿಗಳ
ನೀರು ಕುಡಿಯಕಂತ
ಕೆರೆಗಳ ಕಟ್ಟಿಸಿದ
ಬಡಬಗ್ಗರ ಮಕ್ಕಳಿಗೆ
ಮದುವೆಗಳ ಮಾಡಿಸಿದ
ಮನೆ ಇಲ್ಲದೋರಿಗೆ
ಮನೆಗಳ ಕಟ್ಟಿಸಿದ
ಹೊಲಗದ್ದೆ ಇಲ್ಲದೋರ್ಗೆ
ಹೊಲಗದ್ದೆಗಳ ಕೊಡಿಸಿದ
ಕೆಲಸ ಇಲ್ಲುದೋರ್ಗೆ ೧೫೬೦
ಚಾಮವ್ವೆ ರಾಣಿಗ್ಹೇಳಿ
ಅವ್ರುಗೆ - ಕೆಲ್ಸಗಳ ಕೊಡಿಸಿದ.
ಅನ್ನಚತ್ರಗಳ ಕಟ್ಸಿ

ಅನ್ನದಾನ ಮಾಡಿಸಿದ
ಮಲ್ಲಯ್ಯ ಹೆಸ್ರಲ್ಲಿ
ಎಲ್ಲೆಲ್ಲು ಗುಡಿಗಳು
ಗೋಪ್ಯುಗಳ ಎತ್ತುಸ್ದ
ಲೋಕ ಲೋಕಕೆಲ್ಲ
ರಾಮಯ್ಯ ಹೆಸರಾದ | ೧೫೬೯

೯. ಸಿದ್ಧರಾಮಯ್ಯನವರು ಶಿವಲಿಂಗುವಾದರು

ತಂದನ್ನೊ ತಾನೊ ತಾನೊ ತಾನಂದನೊ
ತನುತಂದನಾನೊ ತಾನೊ ತಾನಂದನೊ | ಸೊಲ್ಲು |

ಮಲ್ಲಿಕಾರ್ಜುನ ಸ್ವಾಮಿ ೧೫೭೦
ಹೆಸರಲ್ಲಿ ರಾಮಯ್ಯ
ಗುರುಮಠವನ್ನು ಕಟ್ಟಿ
ಮಠದಲ್ಲಿ ಇರುವಾಗ
ಅಲ್ಲಮಪ್ರಭು ಸ್ವಾಮಿ
ಅಲ್ಲೀಗೆ ಬಂದರು |

ಒಬ್ಬ ಸೂರ್ಯನ
ಮತ್ತೊಬ್ಬ ಸೂರ್ಯನು
ಕಂಡಂತೆ ಆ ಇಬ್ಬರು
ಆನಂದ ಪಟ್ಟರು
ಆಗ ಅಲ್ಲಮಪ್ರಭು ೧೫೮೦
ರಾಮಯ್ಯ ಕರುಕೊಂಡು
ಕಲ್ಯಾಣ ಪಟ್ಟಣಕೆ
ಪ್ರಾಯಾಣ ಮಾಡಿದರು.
ಕಲ್ಯಾಣ ಪಟ್ಟದಲ್ಲಿ
ಬಸವಣ್ಣನವುರತ್ರ
ಲಕ್ಕುಸ್ದಮ್ಯಾಲೆ
ತೊಂಬತ್ತಾರು ಕೋಟಿ ಗಣಗಳು
ಇರುವದ ಕಂಡರು
ಅವುರೆಲ್ಲರಿಗೂ ಶರ್ಣು ಮಾಡಿ
ಅಲ್ಲಿಂದ ರಾಮಯ್ಯ ೧೫೯೦
ಸೊನ್ನಲಾಪುರಕೆ ಬಂದು
ಸ್ವಾಮೀಯ ನೆನೆದಾರು |

ಅಲ್ಲಮಪ್ರಭುಗಳು
ಶ್ರೀಶೈಲ ಪರ್ವತದಲ್ಲಿ
ಬಸವಣ್ಣ ದೇವರು
ಕಲ್ಯಾಣ ಪಟ್ಟುದಲ್ಲಿ
ಕಾಯವ ಕಳುದು
ಕೈಲಾಸ ಸೇರಿದ
ಸುದ್ದಿಯ ಕೇಳಿದರು.
ಆ ದಿನುವೆ ರಾಮಯ್ಯ ೧೬೦೦
ಕೈಲಾಸ್ಕೆ ಹೋದರು
ಮಲ್ಲಯ್ಯ ಸ್ವಾಮಿಯ
ಕಾಲಿಗೆ ಬಿದ್ದು
"ಸ್ವಾಮಿ ನನ್ನಯ್ಯ
ನಿನ್ನ ಬಿಟ್ಟು ನಾನು
ಆ ಭೂಮೀಲಿ ಇರಲಾರೆ
ನಾನು ಬಂದುಬುಡುತೀನಿ"
ಎಂದಾಗ ಮಲ್ಲಯ್ಯ
ರಾಮಯ್ನ ತಲೆಮ್ಯಾಲೆ
ಕೈಯನ್ನು ಮಡಗಿ ೧೬೧೦
ಆಸುರ್ವಾದಗಳ ಮಾಡಿ
"ಕಾಯವ ಕಳ್ದು ನೀನು
ಬಾ ಹೋಗು ಕಂದಯ್ಯ
ಅನುತ್ಪೇಳಿ ಆಜ್ನೀಯ
ಮಾಡಿದರು ಪರಮಾತ್ಮ |

ಸೊನ್ನಲಾಪುರಕೆ
ಬಂದನು ರಾಮಯ್ಯ
ಎಲ್ಲ-ಸಿಸುಮಕ್ಳ ಕರೆದನು
ಅವುರೆಲ್ಲುರ್ಗು ಸೈತ
ತಾನು ಕೈಲಾಸುಕಾಗಿ ೧೬೨೦
ಹೋಯ್ತೀನಿ ಅನುತ್ಪೇಳಿ
ಕಾವಿಕಮಂಡಲು ಸೈತ
ಯೋಗದಂಡ ಹಿಡ್ದು
ಬಯಲಾದ ಬಯಲಲ್ಲಿ
ತ್ರಪಸೀಗೆ ಕುಣುತಾರು
ಕುಂತಲ್ಲೆ ರಾಮಯ್ಯ

ಮಲ್ಲಯ್ಯ ಸೊರಣೆಯ
ಮಾಡು ಮಾಡುತಲೆ
ಸಿದ್ಧರಾಮಯ್ಯನವರು
ಶಿವಲಿಂಗುವಾದರು | ೧೬೩೦

ಸಿದ್ಧರಾಮಯ್ಯನ
ನೋಡುತಿದ್ದ ಬಕುತರು
ನೋಡುತಿದ್ದ ಸಿಸುಮಕ್ಕ
ನಮ್ಮ-ಬುಟ್ಟೋದಿರ ತಂದೆ
ಅನುತ್ಹೇಳಿ ಕಣ್ಣೀರ
ಸುರಿಸುತ ಕೈಮುಗುದು
ಹಾಸಾಸಿ ಅಡ್ಡಬಿದ್ದು
ರಾಮಯ್ಗೆ ಶರಣು
ಶರಣು ಶರಣಾರ್ತಿ
ಉಘೇ ಉಘೇ ಅಂತ್ಹೇಳಿ ೧೬೪೦
ಸಿದ್ಧರಾಮಯ್ಯನ
ಸೊನ್ನಲಾಪುರಂತ್ಹೇಳಿ
ಹೆಸರನ್ನು ಮಾಡಿದರು |

ಸಿದ್ಧರಾಮಯ್ಯನವರು
ಶಿವಲಿಂಗುವಾದುದ ಕೇಳಿ
ಚಾಮವ್ವ ರಾಣಿಯು
ಭಕ್ತಿಯಿಂದ ಬಂದು
ಶರಣುಗಳ ಮಾಡಿ
ಸಿದ್ಧರಾಮ ಲಿಂಗಕೆ
ದೇವಾಲ್ಯ ಕಟ್ಸಿದಳು | ೧೬೫೦

ಕಾಯಸ್ಥೆತುವಾಗಿ
ಕೈಲಾಸಕೆ ಹೋಗಿ ಬಂದ
ಶರಣರು ಯಾರೂ ಇಲ್ಲ
ರಾಮಯ್ಯ ಮಾತ್ರವೆ
ಕೈಲಾಸ್ಕೆ ಹೋಗಿ ಮತ್ತೆ
ಭೂಮಿಗೆ ಬಂದೋರು
ಇಂಥ - ಶರಣಮಾತ್ಮರ
ಸೊರಣೆ ಮಾಡಿದೋರ್ಗೆ
ಕೈಲಾಸ ಪ್ರಾಪ್ತವಾಯ್ತದೆ
ಶರಣ ಶರಣಾರ್ತಿ | ೧೬೬೦

ಸಿದ್ಧರಾಮಯ್ಯ ದಯವಾಗೊ

ಸಿದ್ಧರಾಮಯ್ಯ ಶಿವನೆ ಗಂಗಾಧರ
ಮುದ್ದುರಾಮಯ್ಯ ಮರುಳಯ್ಯ - ಸೊಲ್ಲಾಪುರ್ದ
ಸಿದ್ಧರಾಮಯ್ಯ ದಯವಾಗೊ |

ಸೊಲ್ಲಾಪುರದಯ್ಯನ ಸೊಲ್ಲೆಲ್ಲ ಶಿವನುಡಿ
ಅವುರ್ - ನಂದಿಕೋಲೆಲ್ಲ ದವುನಾವೆ - ಸಿದ್ರಾಮಯ್ನ
ನಂಬಿದೋರೆಲ್ಲ ಸರಣಾರೆ |

ಸೊಲ್ಲಾಪುರದೊಳಗೆ ಕಲ್ಲೆಲ್ಲ ಮಲ್ಲೀಗೆ
ಹಾಸುಮಂಚೆಲ್ಲ ಹವಳಾವು - ಸಿದ್ಧರಾಮನ
ದಂಡು ಕೋಲೆಲ್ಲ ದವುನಾವು |

ಸೊಲ್ಲಾಪುರದಿಂದ ಒಳ್ಳೆ ಜಂಗಮ ಬಂದ
ಬೆಳ್ಳಿ ಹಾವುಗೆ ತಿರುಶೂಲ - ಬೆಳ್ಳಿಬೆತ್ತ
ಅವ್ವುರೆಳ್ಳೀನ ಕಣದೊಳಗೆ ತಳುಗ್ಯಾರೆ |

ಗಾಣಿಗರ ಕಲ್ಲಯ್ಯ

ಸುವ್ವಿ ಹೇಳಮ್ಮ ದೇವಾರು ದೇವ ಸುವ್ವಿ | ಸೊಲ್ಲು |

ಕಲ್ಯಾಣ ಎಂಬೋದು ಬಲ್ಲಂತ ಶರಣರಿಗೆ
ಅದು - ಕಲ್ಯಾಣವಲ್ಲ ಕೈಲಾಸ | ಸುವ್ವಿ |

ಕಲ್ಯಾಣ ಪಟ್ಟಣದ ಪಂಚ್ಮೆದು ಬೀದೀಲಿ
ನಂದೀಮಠವಲ್ಲಿ ಇರುವಾದು |

ಆ ನಂದಿಮಠ
ಎಷ್ಟು ಚಂದದಲ್ಲಿ ಇದೆ ಅಂತ ಹೇಳುದ್ರೆ -

ಮುತ್ತುನಲ್ಲಿ ಮುಂಬಾಗ್ಲು ಹವುಳ್ದಲ್ಲಿ ಹರಿಗೋಡೆ
ಹೊನ್ನೂಚಿನ್ನಾದ ಮಣಿಗಳಸ |

ಹೊನ್ನೂಚಿನ್ನಾದ ಮಣಿಗಳಸ ನಂದೀಮಠಕೆ
ಉಕ್ಕೀನ ಬೀಗ ಬಿಗುದವುರೆ | ೧೦

ಸತ್ಯದಿಂದ ಕೂಡಿರೊ ಆ ಮಠದ ಬಾಗುಲಿಗೆ
ಅಚ್ಚ ರುದ್ರಾಕ್ಷಿ ಸರಕಟ್ಟು

ಆರುಸುತ್ತಿನ ಕೋಟೆ ಗಂಟೆಯ ಹೊರಸಾಲು
ಬಾಗುಲಿಗೆ ಗಂಟೆ ತೋರಣವು |

ಬಾಗಲಿಗೆ ಗಂಟೆ ತೋರಣವ ಬಿಗುದವುರೆ
ಇಂತೆ-ನಂದಿ ಮಠದಲ್ಲಿ ಘನಶರಣಾರು |

ಇಂತ ನಂದಿಮಠದಲ್ಲಿ
ಯಾವ್ಯಾವ ಶರಣರಿದ್ದಾರೆ ಅಂದ್ರೆ -

ಆಗಯ್ಯ ಭೋಗಯ್ಯ ಆಯ್ದಕ್ಕಿ ಮಾರಯ್ಯ
ದಿಂಬುದಾನೆ ರಾಚಯ್ಯ ಇರುವಾರು | ೨೦

ನಡೆಪುರುಷ ನುಡಿಪುರುಷ ಭಕ್ತಿಪುರ್ಸ ಭಾವ್‌ಪುರ್ಸ
ಇಂತ - ಪುರುಸಾರು ಅಲ್ಲಿ ಇರುವಾರು |

ಇನ್ನೆಂತೆ ಶರಣರು ಇರುವಾರು ಅಂದರೆ
ತುರುಕರ ಪೀರಯ್ಯ ಇರುತಾರೆ |

ವಡ್ಡರ ತಿಮ್ಮಯ್ಯ ಮ್ಯಾದರ ಕೇತಯ್ಯ
ಅಂಬುಗರ ಚೌಡಯ್ಯ ಇರುತಾರೆ |

ಕುಂಬಾರ್ರ ಗುಂಡಯ್ಯ ಮಡಿವಾಳ ಮಾಚಯ್ಯ
ಇಂತಿಂತೆ ಶರಣಾರು ಇರುವಾರು |

ಜಾತೀಲಿ ಹರಳಯ್ಯ ಕುಲದಲ್ಲಿ ಮಾದಾರಿ
ಹೊಲೇರ ಹೊನ್ನಯ್ಯ ಇರುವಾರು | ೩೦

ಒಕ್ಕುಲುಗ್ರ ಮುದ್ದಯ್ಯ ಕಿನ್ನುಡಿಯ ಬೊಮ್ಮಯ್ಯ
ಬೇಡರ ಕನ್ನಯ್ಯ ಇರುವಾರು |

ಇಂತಿಂತೆ ಶರಣರ ಜೊತೆಗೆ ಕಲ್ಲಯ್ಯನೋರು
ಅವ್ರು - ಗಾಣದ ಕಲ್ಲಯ್ಯ ಇರುವಾರು |

ಗಾಣದ ಕಲ್ಲಯ್ಯನ ಕಾಯ್ಕ ಅಂದ್ರೆ
ಗಾಣ ಆಡಿ ಎಣ್ಣೆ ತಗಿಯಾದು
ಮೊದಲು ತಗುದ ಎಣ್ಣೆಲಿ
ಪರಮಾತ್ಮನ ಶಿವುಲಿಂಗಕೆ ಎಣುಮಜ್ಜಣ ಮಾಡಿ
ಉಳಿದಂತ ಎಣ್ಣೆಯ ಜೀರ್ಗೆಲ್ಲ ಮಾರೋದು
ಮಾರಿ ಬಂದ ಲಾಭದಲ್ಲಿ ೪೦
ಶರಣರ ಭಿನ್ಯಾಕೆ ಕರ್ದು
ಅವುರ ಸ್ಯೇವೆ ಮಾಡೋದು -

ಗಾಣಿಗರ ಕಲ್ಲಯ್ನ ಈ ನೇಮ ನಿಷ್ಠೆಗಳು
ಪರಮಾತ್ಮನ ಪಾದಕೆ ಅರುವಾದೊ |

ಪರಮೇಶ್ವರನು
ಗಾಣಿಗರ ಕಲ್ಲಯ್ಯನ ದುಡಾಮನವನ್ನು
ಪರೀಕ್ಷ್ಯಮಾಡ್ಬೇಕು ಅಂತ
ಬರುವಂತ ಕಾಲ್ದಲ್ಲಿ
ಸತ್ಯಶರಣೆ ನೀಲಾಂಬುಕಾದೇವಿಯವರು
ಗಾಣದ ಕಲ್ಲಯ್ಯನ ಮನೆಗೆ ಬಂದ್ರು
ಬಂದ ನೀಲಮ್ಮನವರನ್ನು ಕಂಡು ೫೦
ಕಲ್ಲಯ್ಯನವರು ಓಡೋಡಿ ಬಂದು

ತಾಯಿಯವರ ಪಾದಂಗಳಿಗೆ ಶರಣು ಮಾಡಿದರು.
ಶರಣು ಮಾಡಿದ ಕಲ್ಲಯ್ಯನವರು
"ತಾಯಿ ಬಡವರ ಮನೆಗೆ ಭಾಗ್ಯದೇವ್ತಿ ಬಂದಂಗೆ
ಬಂದಿದ್ದೀರಿ
ನಮ್ಮಿಂದ ಏನಾಗ್ಬೇಕು ಅಂತ ಅಪ್ಪಣೆ ಮಾಡ್ಬೇಕು"
ಅಂತ ಬೇಡ್ಕೊಂಡ್ರು
ಆಗ ನೀಲಮ್ಮನವರು
"ಶರಣಕಲ್ಲಯ್ಯ
ನಿಮುಗೆ ಶರಣು ಶರಣಾರ್ತಿ
ಮುಂದುನ ತುಂಬುದ ಸ್ವಾಮಾರದ್ದಿನ
ಲಕ್ಷದಮೇಲೆ ತೊಂಬತ್ತಾರು ಕೋಟಿ ಗಣಂಗಳಿಗೆ
ಭೋಜನೆ ಮಾಡ್ಬೇಕಾಗದೆ
ಅದಕ್ಕೆ ಬೇಕಾದಂತ ಎಣ್ಣೆಗಾಗಿ
ಉಲುಪಿಯನ್ನು ಕೊಡದಕ್ಕಾಗಿ ಬಂದಿದ್ದೀನಪ್ಪ" ಅಂದ್ರು
ಅದುಕ್ಕೆ ಕಲ್ಲಯ್ಯನವರು
"ತಾಯಿ ಅದಕ್ಕೆ ಉಲುಪಿ ಯಾಕಮ್ಮ
ತಾವು ಆಡ್ರು ಕೊಟ್ರಷ್ಟೇ ಸಾಕು" ಅಂದರು
ಆದ್ರೂ ನೀಲಮ್ಮ ತಾಯಿ
ಹಿವ್ಸ ಮಾಡಿ ಉಲುಪಿ ಕೊಟ್ಟು
"ಆಯ್ತುವಾರುದೊತ್ಗೆ ಎಣ್ಣೆ ಕಳುಗಪ್ಪ" ಅಂತ್ಹೇಳಿ
ತಾಯಿ ಹೊಂಟೋದ್ರು -

ಗಾಣಿಗರ ಕಲ್ಲಯ್ಯ ಘನಶರಣನೆನ್ನುವರು
ಇವ್ರ - ಘನಗುಣವ ನಾನು ನೋಡಬೇಕು |

ಕಲ್ಲಯ್ಯನವರ ಘನಗುಣವ ತಾನು
ನೋಡ್ಬೇಕು ಅಂಹೇಳಿ ಪರಮೇಶ್ವರನು -

ಹಣ್ಣಣ್ಣು ಮುದುಕಾಗಿ ಕಲ್ಲಯ್ಯನ ಮನೆ ಮುಂದೆ
ಬಂದು ಭಿಕ್ಷಾಂದೇಯಿ ಅನುತಾರೆ |

ಯಾವಾಗ ಭವತಿ ಭಿಕ್ಷಾಂದೇಯಿ ಅಂತ
ಹ್ವಾರಣ್ಯ ಸಾರುದ್ರೊ
ಕಲ್ಲಯ್ಯ ಹ್ವಾರಂದ ಅದ ಕೇಳಿ ನಡುಗೋಯ್ತು
ಕಲ್ಲಯ್ಯ ಗುಡುಗುಡುನೆ ಓಡಿ ಬಂದ್ನು
ಸ್ವಾಮಿಯವ್ರು ನೋಡಿ
ಮಂಕು ಮರುಳಾಗಿ ದಿಂಕುದಿರುಳಾಗಿ
ನಿಂತಂಗೇ ನಿಂತ್ಬುಟ್ಟ
ಆಗ ಸ್ವಾಮಿಯೋರು
"ಯಾಕಪ್ಪ ಕಲ್ಲಯ್ಯ ಕಲ್ಲಂಗೆ
ನಿಂತ್ಕೊಂಡ್ಬುಟ್ಟಲ್ಲ?" ಅಂತ ಕೇಳುದ್ರು
ಕಲ್ಲಯ್ಯ ಮಾತುಕತೆ ಒಂದ್ನೂ ಅಡ್ಲಿಲ್ಲ
ಅವ್ನು ಸ್ವಾಮ್ಯೋರ ಕಾಲ್ಗೆ ಧೊಪ್ಪನೆ ಬಿದ್ದು
ಶರಣು ಮಾಡಿದ.
ಆಗ ಪರಮೇಶ್ವರ ಹುಸ್ಗೆಗ ನಗ್ತಾ
"ಕಲ್ಲಯ್ಯ
ನಾನು ನಿನುಗೊಂದು ಕೆಲ್ಸ ಪಯ್ಸನ ಅಂತ ಬಂದ್ರೆ
ಕಾಲ್ಹಿಡ್ಕೋತಾ ಇದ್ದಿಯಲ್ಲಪ್ಪ"
"ಸ್ವಾಮಿ ಅದೇನು ಅನ್ನೋದ
ಅಪ್ಣೆ ಮಾಡಿ ಗುರುವೆ"
"ಅಯ್ಯಾ ಘನಶರಣ
ನಾನು ಭಿನ್ಕಕೆ ಬರನಿಲ್ಲ ಭಿಕ್ಷಕೆ ಬರನಿಲ್ಲ
ಕಲ್ಯಾಣ ಪಟ್ಟಣದಲ್ಲಿ
ಬಸ್ವಣ್ಣನ ಹತ್ತಿರ ಇರೊ ಘನಶರಣ ನೀನು
ಅಂತ ಕೇಳಿದ್ದೆ
ಅದ್ಕೆ ನಾನು
ನಾಳೆ ಸುಭುದಿವ್ಸ ಸುಕ್ರುವಾರ ಪ್ರಾತುಕ್ಕಾಲಕ್ಕೆ -

ಅಯ್ಯ - ನಿನ್ನ ಮನೆಯ ಪಂಚಾರ್ತಿಗೆ ನಾನು ಬರುತೀನಿ
ನೀನು - ಪಂಚಾರ್ತಿ ಎತ್ತಿ ನನ್ಗೆ ಬೆಳ್ಗಬೇಕು |

ಹಂಗಂತ್ಹೇಳಿ ಸ್ವಾಮಿಗಳು ಹೊಂಟೋದ್ರು
ಆಗ ಗಾಣುಗರ ಕಲ್ಲಯ್ಯನವರು
ಮಡ್ದಿ ಗಿರಿಯಮ್ಮನನ್ನು ಕರುದ್ರು
ಗಂಡ ಹೆಂಡತೀರಿಬ್ರು
ಸ್ನಾನಜಲಕ ಮಾಡ್ಕೊಂಡು
ಮಡೀನಲ್ಲಿ ಭಯಭಕ್ತೀಲಿ
ಕುಲೋದ್ಯೋಗದಂತೆ -

ಗಾಣಕೆ ಎತ್ತಹೂಡಿ ಎಣ್ಣೆಕಾಳ ಸುರಿದು
ಗಾಣ - ಆಡುತಾರೆ ಗಂಡಹೆಂಡತೀರು |

ಪ್ರಾತ್ತುಕಾಲವಾಯ್ತು
ಎಣ್ಣೆಯನ್ನು ತಗುದು ಕೊಪ್ರಿಕೆಗೆ ತುಂಬಿ
ಸ್ನಾನಜಲಕಗಳ ಮಾಡಿ
ಮಡಿಗಳನ್ನು ಉಟ್ಟುಕೊಂಡು
ಹಣೆಗೆ ಈಬುತ್ತಿ ಧರುಸ್ಕೊಂಡು
ಮಾಸ್ವಾಮಿಂಗಳವರ ಪಂಚಾರ್ತಿಗೆ

ಹಣ್ಣುಕಾಯಿ ಹೂವು ಗಂಧ ಪುಷ್ಪಗಳನ್ನೂ ಹದಗೂಡಿ
ಗಂಧದ ಕಡ್ಡಿ ಕಲ್ಪುರಗಳನ್ನು ಮಡೀಕೊಂಡು
ಸ್ವಾಮಿ ಬರೋದ್ನ ಕಾಯ್ತಾ ಇದ್ದಾರೆ -

ಆಗಲೀಗ ಸ್ವಾಮಿ ಸುಭುಸುಕ್ಕಾರದ ದಿವ್ಸ
ನಂದಿಮಠಕೆ ಸ್ವಾಮಿ ಬರುತಾರೆ |

ನಂದಿಮಠಕೆ ಸ್ವಾಮಿ ಬಂದು ಏನನ್ನುತಾರೆ
"ಬಂದೋಗು ನನ್ನ ಜೊತೆಯಲ್ಲಿ |

ಬಂದೋಗು ನನ್ನ ಜೊತೆಯಲ್ಲಿ ಬಸವಣ್ಣ
ಕಲ್ಲಯ್ನ ಮನೆಗೆ ಹೋಗಬೇಕು |

ಕಲ್ಲಯ್ನ ಮನೆಗೆ ನಾನು ಹೋಗಬೇಕು
ಬಾರಪ್ಪ ನನ್ನ ಜೊತೆಯಲ್ಲಿ |

ಗಾಣದ ಕಲ್ಲಯ್ನ ಮನೆಯಲ್ಲಿ ನಡಿವಂತ
ಕಾರಿಯವ ನೀನು ನೋಡಬೇಕು" |

ಹಾಗಂತ ಬಸವಣ್ಣ ಪರಮೇಶ್ವರ ಕರೆದಾಗ
ಹಸೀನ ಹಿಂದೆ ಕರುವಾಗಿ |

ಮಾತುಕತೆ ಇಲ್ಲದೆ ಬಸವಣ್ಣ ನಡೆದಾರು
"ಈ ಸ್ವಾಮ್ಯೋರ ನಾನು ನೋಡಿಷ್ನಿ |

ಈ ಸ್ವಾಮ್ಯೋರ ನಾನು ಹಿಂದೆ ನೋಡಿರೋದುಂಟು
ಇವುರ್ಯಾರೆನುವ ಗೆಪ್ತಿ ಬರಲೊಲ್ಲದು" |

ಅಂತ್ಹೇಳಿ ಬಸುವಣ್ಣ ಯೋಚಿನೆ ಮಾಡುವಾಗ
ಬಂದರು ಕಲ್ಲಯ್ನ ಗುರುಮಠಕೆ |

ಬಸವಣ್ಣ ಅನ್ನೋದು ಗೊತ್ತಾಗಬಾರದಂತ
ಅವುರ್ಗೆ - "ಸಿಸುಮಗನ ರೂಪು ಕೊಟ್ಟವುರೆ |

ಪರಮೇಶ್ವರ ಪ್ರತೇಕ್ಷುವಾಗಿ
ಗಾಣುಗ್ರು ಕಲ್ಲಯ್ನ ಮುಂದೆ ನಿಂತಿದ್ದಾರೆ.

"ಕಂದ ಬಾರಪ್ಪ ಕಲ್ಲಯ್ಯ
ನಿನ್ನ ಮನೆಗೆ ನಾನು ಬಂದು ಬಾಳ ಹೊತ್ತಾಯ್ತಪ್ಪ -

ನಿನ್ನ ದುಡಭಕ್ತಿಯ ಮೆಚ್ಚಿ ಬಂದಿವಿನಿ
ತುಂಚಾರ್ತಿ ತಂದು ಬೆಳುಗಪ್ಪ |

ಕಲ್ಲಯ್ಯನವರು ಗಿರಿಯಮ್ಮನವರು
ಸ್ವಾಮಿಯವ್ರುಗೆ ಶರಣು ಮಾಡಿದ್ದಾರೆ
"ಕಂದ ಪಂಚಾರ್ತಿಯನ್ನು ಹದಗೂಡಿದ್ದೀಯಪ್ಪ?"
"ಸ್ವಾಮಿ ಇದೂ ಈಗಿಂದೀಗ್ಲೆ ತತ್ತಿನಿ" ಅಂತ್ಹೇಳಿ
ಕಲ್ಲಯ್ಯ ಎಣ್ಣೆ ಉಗ್ರಾಣಕ್ಕೆ ಬಂದು
ಪಂಚಾರ್ತಿ ದೀಪುದ ಐದು ಬತ್ತಿ ಕ್ವಾರೆಗಳ್ನೂ
ಐದು ಬತ್ತಿಗಳ್ನ ಮಡುಗುದ್ರು
ದೀಪುಗಳ ಸಿದ್ಧ ಮಾಡ್ಕೊಂಡು
ಮೀಸುಲಾಗಿ ತಗದಿರಿಸಿದ್ದ ಎಣ್ಣೆಗಡ್ಲೆ ಹತ್ರುಕೆ ಬಂದ್ರು
ಪರಮಾತ್ಮ ಎಣ್ಣೆಗಡ್ಲೆಯ ದ್ರಿಷ್ಟಿಸುದ್ರು
ಗಡ್ಲೇಲಿ ಒಂತೊಟ್ಟೂ ಎಣ್ಣೆ ಇಲ್ಲುದಂಗೆ ಖಾಲಿ ಆಗಿತ್ತು
ಕಲ್ಲಯ್ಯನವರು
"ಮಡ್ದಿ ಗಿರಿ ಇದೇನಿದು?
ಸ್ವಾಮಿಯೋರ್ಗೆ ಅಂತ ಮೀಸ್ಲಲ್ಲಿ ಮಾಡಿದ್ದ ಎಣ್ಣೆ
ಒಂತೊಟ್ಟೂ ಇಲ್ಲುದಂಗೆ ಖಾಲಿ ಆಗ್ಯೆತಲ್ಲ !
ಏನಾಯ್ತು ಮಡದಿ?"
"ಸ್ವಾಮಿ ನಾನು ಮಾತ್ರ ಕಾಣೆ
ತುಂಬುದ ಗಡ್ಲೆಯ ಯಾರೂ ಮುಟ್ಟಿಲ್ಲ
ನಮ್ಮನೆಗೆ ಪರುವುರು ಯಾರೂ ಬಂದಿಲ್ಲ
ಅಂತಾದ್ರಲ್ಲಿ ಏನಾಯ್ತು ಅಂತ ಹ್ಯಾಂಗ್ ಹೇಳ್ಲಿ ಸ್ವಾಮಿ?"
"ಅಯ್ಯೊ ಮಡದಿ
ಮಾತುಗೆ ತಪ್ಪಿದ ಪಾಪಿಗಳಾಗ್ತಿವಲ್ಲ
ಎಂತೆ ಕಷ್ಟಕಾಲ ಬಂತು
ಆ ಪರಮಾತ್ಮನ ಸೇವಕೆ ಈ ಕಷ್ಟ ಬರಬವುದ?
ಅಯ್ಯೊ ಶಂಕರ ಶಂಭೋಶಂಕರ
ಹರಹರ ಮಹಾದೇವ ನೀನೇ ಕಾಪಾಡಬೇಕು"
ಅಂತ್ಹೇಳಿ ಗಂಡ ಹೆಂಡ್ತೀರು ಗೋಳಾಡ್ತಿದ್ದಾರೆ
ಕಲ್ಲಯ್ಯ 'ಕೆಟ್ಟೆ ಕೆಟ್ಟೆ' ಅಂತ ಕಣ್ಣೀರ್
ಸುರುಸ್ತಾ ಇದ್ರೆ
ಗಿರಿಯಮ್ಮ ಸೇರು ಪಡಿ ಪಾವು ಚಟಾಕನೆಲ್ಲ
ನೋಡ್ತಿದ್ದಾರೆ
ಯಾವುದ್ರಲ್ಲೂ ಔಂಸ್ತಿಗೆ ಅಂತ ಕೇಳುದ್ರೂ
ಒಂತೊಟ್ಟು ಎಣ್ಣೆ ಇಲ್ಲ -

ಮಡದಿಯ ಕೊರಳ ಪತಿಯು ತಬ್ಬುಕೊಂಡು
ಪತಿಯ ಕೊರಳ ಮಡದೀಯು |

ಪತಿಯ ಕೊರಳ ಮಡದೀಯು ತಬ್ಬುಕೊಂಡು
ಅಲ್ಲಿ ಭಾರಿ ದುಕ್ಕಗಳ ಪಡುತಾರೆ |

"ಏನು ಹೇಳಲಿ ಮಡದಿ ಗಿರಿಯಮ್ಮ
ಕೆಟ್ಟೆವಲ್ಲ ಮಡದಿ
ಬೆಂದು ಹೋದುವಲ್ಲ ಮಡದಿ -

ಮಾತು ತಪ್ಪಿದ ಮ್ಯಾಲೆ ಯಾತಕ್ಕೂ ಸಲುನಿಲ್ಲ
ದಾತಾನು ಕೈಯ ಬುಟ್ಟನಲ್ಲ |

ಕಂದು ಹೋದೊ ನಾವು ಬೆಂದು ಹೋದೊ ನಾವು
ನಾವು - ಕೊಟ್ಟ ಭಾಷೇಗ ತಪ್ಪಿದೆವು |

ಕಲ್ಲಯ್ಯನವರು ಗಿರಿಯಮ್ಮನವರು
ದುಕ್ಕು ಸೋಕಗಳ ಮಾಡ್ತಾ ಇರ್ಬೇಕಾದ್ರೆ
ಬಾಕ್ಲಲ್ಲಿ ನಿಂತಿರುವಂತ ಪರಶಿವ-

ಕಂದ ಕಲ್ಲಯ್ಯ ಮಗಳೆ ಗಿರಿಯಮ್ಮ
ಪಂಚಾರ್ತಿಯ ನೀವು ತರಬೇಕು |

ಪರಶಿವನ ಮಾತು ಕಲ್ಲಯ್ನ ಕಿವಿಗೆ
ಬರಸಿಡಿಲು ಬಡಿದಂತೆ ಆಯಿತಲ್ಲ |

ಗಿರಿಯಮ್ಮ ಹೇಳ್ತಿದ್ದಾರೆ
"ಹಾ ಈಗಲೀಗ ಕೆಟ್ಟೊ
ನಮ್ಮಲ್ಲಿ ಅಂತ ಸರಣಾತ್ವ ಇದ್ದು
ಅಂತ ಶಕ್ತಿವಂತ್ರು ನಾವಾದ್ರೆ
ನಾವು ಪಂಚಾರ್ತಿಯನ್ನು ಬೆಳುಗಲೇಬೇಕು" ಅಂತ
ಗಿರಿಯಮ್ಮ ಪತಿದೇವುರ್ಗೆ ಹೇಳ್ತಿದ್ದಾರೆ.

ಆಗಲೀಗ ಗಾಣುಗ್ರು ಕಲ್ಲಯ್ಯ
ನನ್ನ ಪ್ರಾಣ ಹೋದರೂ ಹೋಗ್ಲಿ ಅಂತ್ಹೇಳಿ
ಮಡದಿ ಗಿರಿಯಮ್ಮನ ಕೈಹಿಡ್ಕೊಂಡು
ಹಿಂದ್ಲಟ್ಟೀಗೆ ಕರ್ಕೊಂಡೋಗಿದ್ದಾನೆ.
"ಮಡದಿ
ನಾವು ಮಾತುಗೆ ತಪ್ಪುದ್ರೆ
ಶರಣ್ರು ಅನ್ನೊ ಹೆಸ್ರು ನಮುಗ್ಯಾಕೆ ಮಡದಿ ?
ಎಣ್ಣೆ ಇಲ್ಲಾಂತ ನಾವು
ಪಂಚಾರ್ತಿ ಬೆಳುಗ್ದೇ ಹೋದ್ರೆ
ನಮ್ಮ ವಾಕುಸ್ತಾನ ಉಳಿಯಾಕಿಲ್ಲ.
ಮಡದಿ ನಾವು ಭಕ್ತಿಯಿಂದ
ಸ್ನಾನಮಡಿಗಳ ಮಾಡ್ಕೊಂಡು
ಪರಶಿವನ ಪೂಜೆಯನ್ನೂ ಮಾಡಿ
ನಮ್ಮ ಡಿಂಬುವನ್ನು ಬಗುದು
ಕಳ್ಳು ಕೊಬ್ಬುನೆಲ್ಲ ಹಿಂಡಿ ಎಣ್ಣೆ ತಗ್ದು -

ಪರಶಿವನು ಪ್ರೀತಿಯ ಪಡುವಂತ ರೀತೀಲಿ
ಪಂಚಾರ್ತಿ ನಾವು ಎತ್ತಬೇಕು |

ಗಂಡಹೆಂಡ್ತೀರಿಬ್ರು ಸ್ನಾನಜಲಕಗಳ ಮಾಡುದ್ರು
ಪರಮೇಶ್ವರನ ಪೂಜೆ ಮಾಡಿ
ತಮ್ಮ ಡಿಂಬುವನ್ನು ಅಳ್ದು -

ಸೀನೀರ ಕೊಳಕೆ ಕಳ್ಳು ಕೊಬ್ಬುಗಳ ತಂದು
ಮಡಿಯ ಮಾಡುತಾನೆ ಘನಶರಣ |

ಮಡಿಮಾಡಿ ಮನೇಗ್ ತಂದ್ರು
ತಂದಂತ ಕಳ್ಳುಕೊಬ್ಬುಗಳ್ನೆಲ್ಲ -

ಏಡೂ ಬೊಕ್ಕ್ಸಕೆ ಮಡೀಕೊಂಡು ಕಲ್ಲಯ್ಯ
ಅವ್ರು - ಗಸಗಸನೆ ಅಲ್ಲಿ ಹಿಂಡುತಾರೆ |

ಗಸಗಸನೆ ಹಿಂಡುವಾಗ
ಅದು ಎಣ್ಣೆ ರೂಪ್ನಲ್ಲಿ ಭಾಂಡವ ತುಂಬ್ಕೋತು
ಹಿಂಡುದಂತ ರಸವ ಮಡೀಕೊಂಡು
ಗಂಡ ತನ್ನ ಬಲಗೈನ ಐದು ಬೆಳ್ಳುಗೆ
ಹೆಂಡ್ತಿ ತನ್ನ ಎಡಗೈನ ಐದ್ ಬೆಳ್ಳುಗೆ
ಅಳ್ಳೆಯನ್ನು ಸುತ್ತಿ
ಆ ಅಳ್ಳೆಬೆಳ್ಳುಗಳ
ಬಾಂಡದಲ್ಲಿರೋ ರಸುಕ್ಕೆ ಅಜ್ಕೊಂಡು
ಅಗ್ನಿದೇವ್ತೆಯನ್ನು ನೆನೆದ್ರು
ಆಗ ದಿಗ್ಗುನೆ ಬೆಳ್ಳುಗಳ ದೀಪ ಹತ್ಕೊಂಡು

ಗಂಡ ಕಲ್ಲಯ್ಯ ಹೆಂಡತಿ ಗಿರಿಯಮ್ಮ
ತಮ್ಮ - ಏಡು ಹಸ್ತಗಳ ಜೋಡೀಸಿ |

ತಮ್ಮ - ಏಡು ಹಸ್ತಗಳ ಜೋಡಿಸಿ ಕೈ ಮುಗ್ದು
ಪರಶಿವನಿಗೆ ಪಂಚಾರ್ತಿ ಎತ್ತುತಾರೆ |

ಗಾಣುಗ್ರು ಕಲ್ಲಯ್ನ ಶರಣೆ ಗಿರಿಯಮ್ನ
ನಿಜಭಕ್ತಿಯ ಕಂಡರು ಪರಶಿವ |

ನಿಜಭಕ್ತಿಯ ಕಂಡು ಪರಮೇಶ್ವರನು
ಮೆಚ್ಚೀದೆ ಅಂತ ನಗುತಾರೆ |

"ಅಪ್ಪಾ ಘನಶರಣ ಕಲ್ಲಯ್ಯ
ಅಮ್ಮಾ ಗಿರಿಯಮ್ಮ
ನಿಮ್ಮಿಬ್ರು ಭಕ್ತಿಯನ್ನ ಮೆಚ್ಚೀದೀನ್ರಪ್ಪ" ಅಂತ್ಹೇಳಿ
ಬಸವಣ್ಣನವರ ಕಡೀಗೆ ನೋಡುದ್ರು
ಬಸವಣ್ಣನವರು ಸಾ ನಿಜರೂಪ್ನಲ್ಲಿ ನಿಂತ್ರು
ಆಗ ಪರಮೇಶ್ವರ
ಪಾರ್ವತಿ ಸೈತುವಾಗಿ ಪ್ರತೇಕ್ಷವಾಗಿ
ಬಸ್ವಣ್ಣೊರ್ಗೆ ಹೇಳ್ತರೆ

"ಇಂತೆ ಶರಣ ಮಾತ್ಮರು ನನ್ನ ಕೈಲಾಸ್ಕೆ ಬೇಕ"ಂತ
ಆಸಿಂದ ಶರಣರ ನೋಡುತಾರೆ |

ಆಸಿಂದ ಶರಣರ ನೋಡಿ ಪರಮೇಶ್ವರ
ಪುಷ್ಪಕವ ಆಗ ತರಿಸಿದರು |

ಪುಷ್ಪಕವ ತರಿಸಿ ಆ ಶರಣಮಾತ್ಮರ
ಕುಂಡುರಿಸಿಕೊಂಡು ಹೇಳುತಾರೆ |

"ಇಂತೆ ಶರಣರಿಂದ ನನ್ನ ಕೈಲಾಸ್ಕೆ ಕಳೆಯ"
ಅಂತ್ಹೇಳಿ ಬಸ್ವಣ್ಣೆ ಹೇಳುತಾರೆ |

ಕಲ್ಲಯ್ಯ ಶರಣರ ಕರುಕೊಂಡು ಪರಮಾತ್ಮ
ಕೈಲಾಸಕೆ ಸ್ವಾಮಿ ನಡೆದಾರು |

ಕಾಯ ಸೈತ ಕೈಲಾಸ್ಕ ಕಂಡ ಕಲ್ಲಯ್ಯನೋರ್ಗೆ
ಕರವೆತ್ತಿ ಕೈಯ ಮುಗಿದೇನು |

ಕರವೆತ್ತಿ ಕೈಯ ಮುಗುದು ಈ ಶಿವಕಥೆಗೆ
ಇಲ್ಲೀಗೆ ಮುದ್ರೆ ಶಿವಶಿವಾ |

ನಾ ತುಂಬೆ ಹೂವ್ಮಡಿಗಿ ಶರಣಂದೆ

ಬಾಗೇವಾಡಿಯ ಬಸವ ಬಾರಿ ಬಾರಿಗೆ ನೆನುದೊ
ಬಾರಯ್ಯ ನಮ್ಮ ಊರೀಗೆ - ಬಸವಣ್ಣ
ಬ್ಯಾರೆ ಹೊಸಳ್ಳೀಯ ಬಯಲೀಗೆ |

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣೆ ಕಲ್ಯಾಣ್ಪ ಬಸವಣ್ಣ - ಶಿವಲಿಂಗ
ಕಡೆತನಕ ಕಾಯೊ ಅಭಿಮಾನ |

ಗಂಗೇಯ ತಡಿಯಲ್ಲಿ ಗೌರೀಮಂಟಪದಲ್ಲಿ
ತುಂಬ ಕುಂತವ್ರೆ ಶರಣಾರು
ತುಂಬ ಕುಂತಿರುವ ಶರಣಾರ ಪಾದಕ್ಕೆ
ನಾ - ತುಂಬೆ ಹೂವ್ಮಡಗಿ ಶರಣಂದೆ |

ಅಕ್ಕಮಾದೇವಿ

ತಂದನ್ನೊ ತಾನೊ ಶಿವನೆ ತಂದನ್ನೊ ತಾನೊ | ಸೊಲ್ಲು |

ಓಂ ಪ್ರಥಮದಲಿ ಓನಾಮ ಮೂರುತಿ*
ಮಲೆಯ ಮಾದಯ್ಯ ಮಂಟ್ಯೇದಲಿಂಗಯ್ಯ
ತೋಪುನ ದೊಡ್ಡಮ್ಮ ತಾಯಿಯ ಪಾದವ
ಮೊದಲಿಗೆ ನೆನೆದು ಶರಣು ಶರಣಾರ್ತಿ |

ಆದಿಯಲ್ಲಿ ಇಗ್ನೇಸನ ನೆನೆಯುವೆ
ಸಾರದಾಂಬೆ ಸರಸತಿಯರ ನೆನೆಯುವೆ
ತಾಯಿ ತಂದೆಗಳ ಪಾದಕೆ ಶರಣು
ಇದ್ಯ ಕಲಿಸಿದ ಗುರುವಿಗೂ ಶರಣು |

ಆದಿಗುರು ಬಸವಣ್ಣನ ಪಾದಕು
ಅಕ್ಕನಾಗಮ್ಮ ನೀಲಮ್ಮ ತಾಯಿಗು
ಅಲ್ಲಾಮ ಪ್ರಭುವಿಗೆ ಅಕ್ಕಮಾದೇವಿಗು
ಇವರೆಲ್ಲರ ಪಾದಕು ಶರಣು ಶರಣಾರ್ತಿ |

ಸತ್ಯಶರಣರ ಕಥೆಯನು ಹೇಳುವೆ
ಉತ್ತಮರ ಪಾದಕೆ ಶರಣೆನ್ನುವೆ
ಇಂಥ ಶರಣರ ಕಥೆಯ ಕೇಳಿದವರಿಗೆ
ಪಾಪ ಪರ್ಕಾರ ಪುಣ್ಯೇಪಾರ |

ಶಿವಗಿರಿ ಕೈಲಾಸಪರ್ವತದಲ್ಲಿ
ಮಡದಿ ಗೌರಮ್ಮನ ಜೊತೆಯಲಿ ಶಂಕರ
ಗಣಗಳ ಸಭೆಯ ಸಿಂಹಾಸನದಲ್ಲಿ
ಕುಂತಿದ್ದರು ಸ್ವಾಮಿ ಸಂತೋಷದಲ್ಲಿ |

ಗಣಗಳು ಶಿವನ ಸೊರಣೆಯಲಿರಲು
ಗೌರಮ್ಮ ಸಾಕಿದ ಮಗಳು ಶಿವಮಣಿ
ಹಾಡುತ ನರ್ತನೆ ಮಾಡುತಲಿದ್ದಳು
ಗಣಗಳೆಲ್ಲ ಮೈಮರೆತು ನೋಡಿದವು |

ಕೋಗಿಲೆಯಂತೆ ಹಾಡುವ ಶಿವಮಣಿ
ಶಿವನಲೀಲೆಗಳ ನರ್ತನೆ ಮಾಡುತ
ಸರುವಗಣಗಳು ಸಂಭ್ರಮದಲ್ಲಿ
ಸಂತೋಸ ಪಡುವಂತೆ ನರ್ತನೆ ಮಾಡಿದಳು |

ಮೋಡಿ ಮಾಡುವ ಹಾಡಿನ ಜೊಡಿಗೆ
ಆಡುವ ಕುಣಿಯುವ ರುತ್ಮದ ರೀತಿಗೆ
ಮರುಳಾದರಲ್ಲಿ ಇದ್ದವರೆಲ್ಲ
ತಲೆಯ ತೂಗಿ ಕೈಚಪ್ಪಳೊಡೆದರು |

ನರ್ತನೆ ಮಾಡುವ ಶಿವಮಣಿ ಚಂದಕೆ
ಅವಳು ಹಾಡುವ ಕುಣಿಯುವ ಚಂದಕೆ
ಗಣಗಳಲ್ಲಿ ಶಿವಗಣ ಎನ್ನುವನು
ಶಿವಮಣಿ ಹತ್ತಿರಕೆ ಓಡಿ ಬಂದನು |

ಶಿವಗಣ ಸೊಲುಪವು ಯೋಚಣೆ ಮಾಡದೆ
ಶಿವಮಣಿಯನು ಬಿಗಿದಪ್ಪಿಕೊಂಡನು
ದಿಗಿಲಿನಿಂದ ಎಲ್ಲ ನೋಡುತಲಿರುವಾಗ
ಅವ - ತಲೆಮೇಲೆ ಕುಂಡ್ರಿಸಿಕೊಂಡುಬಿಟ್ಟನು |

ಶಿವಗಣ ಮಾಡಿದ ನಡತೆಯ ಕಂಡರು
ಶಿವನ ಮೊಕುವನು ಗೌರಮ್ಮ ನೋಡುತ
ಗೌರಮ್ಮ ಮೊಕುವನು ಶಿವನು ನೋಡುತ
ಶಿವಗಣನನು ದುರುಗುಟ್ಟಿ ನೋಡಿದರು |

ದುರುದುರು ನೋಡಿದ ಪರಮೇಶ್ವರನು
ಗಣಗಳ ಸಾಕ್ಷೀಲಿ ಏನ ನುಡಿದರು
ಗೋರಾಪುರಾದವ ಮಾಡಿದ ಮೇಲೆ
ಪಾಪಕೆ ಮಾತು ಶಾಪವಾಯಿತು |

"ಕಾಮನ ಗೆಲ್ಲದ ಗಣಗಳು ಇನ್ನು
ಕೈಲಾಸದಲ್ಲಿ ಇರುವಂತಿಲ್ಲ
ಈಗಲೆ ನೀವು ಭೂಮಿಗೆ ಹೋಗಿ
ಕಾಮದ ಕರ್ಮವ ತಿಳಿದು ಬನ್ನಿರಿ" |

ಶಿವನ ಮಾತನು ಕೇಳಿದ ಶಿವಗಣ
ಕಟಕಟ ಹಲ್ಲಳ ಕಡಿಯುತ ನಿಂತನು
ಒಟ್ಟಾಗಿ ಗಣಗಳ ದಿಟ್ಟಿಸಿ ನೋಡಿದ
ರೋಸಾವೇಸದಲ್ಲಿ ಗುಡಿಗಿದನು |

---

* ಪ್ರತಿ ಪಾದದ ಕೊನೆಯಲ್ಲಿ 'ತಂದನ್ನೊ ತಾನೊ' ಎಂದು ಹೇಳಿಕೊಳ್ಳಬೇಕು. ನಿಂತಗೆರೆ ಇರುವಲ್ಲಿ 'ತಂದನ್ನೊ ತಾನೊ' ಎಂದು ಅನಂತರ ಸೊಲ್ಲಿನ ಪೂರ್ಣಭಾಗವನ್ನು ಹಾಡಿಕೊಳ್ಳಬೇಕು. ಬಿದ್ದಗೆರೆ ಇರುವ ಭಾಗವನ್ನು 'ವಚನ' ಎಂದು ತಿಳಿಯಬೇಕು.

"ಪರಮೇಶ್ವರ
ತಾಯಿ ಪಾರ್ವತಾದೇವಿ
ನಾನು ತಪ್ಪು ಮಾಡಿದೆನೆ ?
ಅದು ತಪ್ಪು ಅನ್ನುವುದಾದರೆ
ಒಂದು ಸಣ್ಣ ತಪ್ಪಿಗೆ ಇಷ್ಟು ದೊಡ್ಡ ಶಾಪವೆ ?
ಕೂಡದು. ಕೂಡದು. ನಾನಿದನೊಪ್ಪುವುದಿಲ್ಲ"

ಶಿವಗಣ ಸೆಟೆದು ನಿಂತುಕೊಂಡನು
ಶಿವನ ಶಾಪವನು ಒಪ್ಪದ ಅವನು
ಲಾಯರಿಯಂತೆ ದಯರಗೆಡದಲೆ
ಶಿವನಿಗೆ ಜವಾಬ ಹೇಳುತ ನಿಂತನು |

"ಪರಮೇಶ್ವರ
ನೀವೂ ಗಿರುಜಮ್ಮನವರೂ ಸತಿಪತಿಗಳು
ಇದು ಲೋಕುಕ್ಕೆಲ್ಲ ಗೊತ್ತು
ಅಲ್ಲೆ ನೀವು ಅರ್ಧನಾರೀಶ್ವರರಾಗಿದ್ದೀರಿ
ಗಿರುಜಮ್ಮನ ಬುಟ್ಟು ನೀವಿರೋದಿಲ್ಲ
ನಿಮ್ಮ ಬುಟ್ಟು ಗಿರುಜಮ್ಮನಿರೋದಿಲ್ಲ
ಅಂತಾದ್ರಲ್ಲಿ ನಿಮ್ಮ
ಯೋಗೀಶ್ವರ ಅಂತರಲ್ಲ ಬುದ್ದಿ ?
ಅರ್ಧನಾರೀಶ್ವರ ಅಂದ್ರೆ ?
ನೀವಿಬ್ರೂ ಒಂದೇ ಆದ್ಮೇಲೆ
ನೀವೆಂಗೆ ಯೋಗೀಶ್ವರ ? -

ಇಂತೆ ಸಮ್ಮಂದ ನಿಮ್ಮದಾಗಿದೆ
ಗಂಡ ಹೆಂಡತಿ ಒಂದೇ ಆದರೆ
ಹೆಣ್ಣು ಗಂಡು ಅನ್ನೊ ಭೇದುವೆಲ್ಲದೆ ?
ನೀವಿರಬೋದು ದೊಡ್ಡೋರು ದುಡ್ಡೋರು ?" |

ಶಿವಗಣ ಆಡಿದ ಮಾತನು ಕೇಳಿ
ಪರಮೇಶ್ವರನು ತಲೆದೂಗಿದರು
ಮೂಗಿನ ಮ್ಯಾಲೆ ಬೆಳ್ಳಟ್ಟುಕೊಂಡು
ಬೆರಗಿನಿಂದ ಗೌರಮ್ಮ ನೋಡಿದರು |

"ನಿನ್ನ ಮಾತು ನೀನಾಡಿದ ಮಾತಲ್ಲ
ಇದು ಲೋಕವೆ ಕೇಳುವ ಮಾತಪ್ಪ
ಇಂತೆ ಕೆಟ್ಟೈಸ್ರ ನಾವ್ ಕಳಕೊಳ್ಳಬೇಕು
ಗಿರಿಚೆಗು ನನಗೂ ಈ ಮಾತು ಸಂದಿತು |

ನಾವ್ಗಳು ಒಂದೇ ಆಗ್ಯೂ ಇರ್ತೀವಪ್ಪ
ನಾವ್ಗಳು ಬ್ಯಾರೆ ಬ್ಯಾರಾಗೂ ಇರ್ತೀವಪ್ಪ
ಲೋಕದ ಕಣ್ಣಿಗೆ ಎರ್ಡೂ ರೂಪಲ್ಲು
ಇದ್ದೀವನ್ನೋದ ತಿಳುಕೊಳ್ಳಪ್ಪ |

ನೀರಿಗೆ ಉಪ್ಪ ಬೆರಸಿದ ಮ್ಯಾಲೆ
ಉಪ್ಪು ಕಣ್ಣಿಗೆ ಕಾಣುವುದೇನು
ಕಾಣದಿದ್ದರೂ ನೀರಲ್ಲಿರುವಂತೆ
ಇದ್ದೀವನ್ನೋದ ತಿಳ್ದುಕೊಳ್ಳಪ್ಪ |

ಇದ್ದಂಗು ಇರ್ತೀವಿ ತಿಳುಕೊಳ್ಳಪ್ಪ
ಇಲ್ದಂಗು ಇರ್ತೀವಿ ನಿಜ ಕಾಣಪ್ಪ
ಈ ನಿಜವ ತಿಳುಕೊಂಡು ಬಾಳಾಡಪ್ಪ
ಹಿಂಗಾದರೆ ನಿನಗೆ ಮುಕ್ತಿ ಕಾಣಪ್ಪ" |

"ಪರಮೇಶ್ವರ
ಇದುನ್ನೆಲ್ಲ ನಾನೊಪ್ಪದಿಲ್ಲ
ನೀನು ಇಂತೆ ಚಂದದ ಹೆಡ್ತಿ ಜೊತೆ ಸುಖಾಪಡ್ತಾ
'ಸಂನ್ಯಾಸಿ' ಯೋಗಿ 'ಮುನಿ' ಅನ್ನೊಸ್ಕೋತಾ ಇದ್ದೀಯಲ್ಲ
ಅದ ಸುಳ್ಳು ಅಂತ ಒಪ್ಕೊ
ಅದಬುಟ್ಟು
ಒಲಿದು ಬಂದ ಹೆಣ್ಣ ಒಲ್ಲೆ ಅನ್ನೋದುಂಟೆ ?"
"ಯಾರೋ ನಿನ್ನನ್ನು ಒಲಿದು ಬಂದವರು ?"
"ಅವಳೆ ಆ ಶಿವಮಣಿ" -

ಶಿವಗಣ ಆಡಿದ ಮಾತನು ಕೇಳಿ
ಬೆದರುತ ಬೆಚ್ಚುತ ಗಡಗಡ ನಡುಗುತ
ಶಿವಮಣಿ ಗೌರಮ್ಮನ ಪಾದಕೆ ಬಿದ್ದು
ಪಾದವ ಬಿಡದೆ ಗೋಳಾಡಿದಳು |

ಆಗ ಗೌರಮ್ಮನವರು
"ಮಗಳೆ ಶಿವಮಣಿ
ಯಾಕೆ ಈ ದುಕ್ಕ?
ಯಾಕೆ ಹೆದರುತ್ತಿದ್ದೀಯೆ
ಹೆದರಬೇಡ ಅದೇನು ಹೇಳು ಮಗಳೆ"
"ತಾಯಿ
ನಾನೆಂದೂ ಈ ಪಾಪಿಯನ್ನು ಕಣ್ಣೆತ್ತಿ ನೋಡಿದವಳಲ್ಲ
ಅವನನ್ನು ಮಾತಾಡಿಸಿದವಳೂ ಅಲ್ಲ

ಅವನನ್ನು ಬಯಸಿದವಳೂ ಅಲ್ಲ
ಪಾಪಿ ಹೇಳುತ್ತಿರುವುದು ಬರೀ ಸುಳ್ಳು !"
"ಹಾಗಾದರೆ ನಿನ್ನ ಆಸೆ ಏನು ಶಿವಮಣಿ?"
"ತಾಯಿ ನನ್ನ ಜೀವನ ಪರ್ಯಂತ
ದ್ರೀಯದಲ್ಲಿಉಸಿರಿರೋನ್ಗಂಟ
ನಿಮ್ಮ ಪಾದಸೇವೆ ಮಾಡ್ಕೊಂಡಿರದಲ್ದೆ
ಬ್ಯೇರೆ ಏನೂ ಬ್ಯೇಡ ತಾಯಿ"
"ಈತ ಭೂಮಿಗೆ ಹೋಗುತ್ತಿದ್ದಾನೆ
ಅಲ್ಲಿ ಅವನನ್ನು ಬಯಸುತ್ತೀಯ?"
"ಬ್ಯೇಡ ತಾಯಿ ಬ್ಯೇಡ
ನನಗೆ ಪುರುಷನ ಸುಖಾಭೋಗ ಕಂಡುತ್ಯಾಗೂ ಬೇಡ.
ನನಗೆ ಕಾಮದ ಕ್ಯೋಟ್ಲೆ ಬ್ಯೇಡ ತಾಯಿ" -

ಶಿವಮಣಿ ಮಾತಿಗೆ ತಾಯಿ ಗೌರಮ್ಮ
"ಕಾಮ ಅನ್ನೋದು ನಿನಗಿಲ್ಲದ ಮ್ಯಾಲೆ
ಗಂಡನ ಸುಕುವನು ಪಡೆಯದೆ ನೀನು
ಗರುಬವತಿ ನೀನಾಗುತೀಯಮ್ಮ !"

"ತಾಯಿ ಇದೇನಮ್ಮ ನಿನ್ನ ಮಾತು"
"ಮಗಳೆ ಅದು ವಿಧಿನಿಯಮ
ಈ ನಿಯಮವನ್ನು ಮೀರುವುದಕ್ಕೆ ಯಾರಿಂದಲೂ
ಸಾಧ್ಯವಿಲ್ಲಮ್ಮ
ನಮ್ಮ ನಂದೀಶ ಈಗಾಗಲೆ ಭೂಮಿಗೆ ಹೋಗಿದ್ದಾನೆ
ಅವನ ಜೊತೆಗೆ ನೀನು
ಅಕ್ಕನಾಗಮ್ಮನಾಗಿ ಹುಟ್ಟು ಹೋಗಮ್ಮ"

ಆಗ ಶಿವಗಣ ಹೇಳ್ತಿದ್ದಾನೆ
"ಅಮ್ಮ ಹಾಗಾದರೆ
ನನ್ನನ್ನು ಅವಳ ಜೊತೆಗೇ ಕಳಿಸಿ"
"ಸಾಧ್ಯವಿಲ್ಲ
ನಿನ್ನಂಥ ಕಾಮಿ ಅವಳಿಗೆ ಗಂಡನೆ?"
"ನಾನು ಕಾಮಿಯಾದರೂ ಕಡೆಯಾದವನೆ ತಾಯಿ?"
"ಅಂಥ ಚಂದದ ಹುಡುಗಿ ನಿನಗಲ್ಲ"
"ಅವಳಿಗಿಂತಲೂ ಚಂದದವಳು
ಬ್ಯಾರೆ ಯಾರೂ ಇಲ್ಲವೇನು?"
"ಇದ್ದರೆ ಅಂಥವರು ಯಾರು?"
"ನೀವೇ!"
"ಅಯ್ಯೋ ಪಾಪಿ ನನ್ನ ಸೌಂದರ್ಯವೂ ನಿನ್ನ
ಕಣ್ಣು ಕುಕ್ಕತೇನೊ?
ದುರಾತ್ಮ!
ನಿನಗೆ ತಕ್ಕ ಶಾಸ್ತಿಯಾಗಲೇಬೇಕು"
"ಆಗುವುದಿದ್ದರೆ ಬನ್ನಿ ಭೂಮಿಗೆ
ಭೂಮಿಯಲ್ಲಿ ಏನಾಗುತ್ತದೋ ಅದಾಗಲಿ
ಯೋಗೀಶ್ವರನಾಗಿದ್ದ ಪರಮೇಶ್ವರ
ನಿಮ್ಮಿಂದಲ್ಲವ ತಾಯಿ ಸಂಸಾರಿ ಆದುದ್ದು
ಅದು ಅವರ ತಪ್ಪಲ್ಲ
ಹೆಣ್ಣಾದ ನಿಮ್ಮಿಂದಾದ ತಪ್ಪು
ಇದು ನಿಜ ತಾನೆ?"

'ಎಲಾ ದುರಾಂಕಾರಿ
ನಿನ್ನನ್ನು ಇಲ್ಲೇ ಮುಗುಸ್ತೀನಿ!' ಅಂತ್ಕೇಳಿ
ತಾಯಿ ಗೌರಮ್ಮ ಕೈಯೆತ್ತುದ್ರು
ಪರಮೇಶ್ವರ ತಾಯಿ ಕೈ ತಡ್ದು

"ನನ್ನ ಕೈಲಾಸದಲ್ಲಿ
ರಕ್ತದ ಕಲೆ ಆಗಬಾರ್ದು
ನೀನು ಏನು ಮಾಡುವುದಿದ್ದರೂ
ಅದು ಭೂಲ್ಕೋಕುದಲ್ಲಿ ನಡೀಲಿ -

ಇದು ಸಾಕ್ಷಾತ್ಕಾರ ಆಗಲೇ ಬೇಕು
ಇದು ಲೋಕಕ್ಕೆಲ್ಲ ತಿಳಿಯಲೇ ಬೇಕು
ಹಿಂಗೆ ನೀವು ಬ್ಯಾರೆ ಬ್ಯಾರೆ ಕಾಣಲು
ಈಗಲೆ ಭೂಮಿಗೆ ಹೋಗಲೇ ಬೇಕು !

ಪರಮೇಶ್ವರ
ಪಾರ್ವತಿದೇವಿಯವರ ಸ್ಮೆತುವಾಗಿ
ಭೂಮಿಗೆ ಬಂದ್ರು
ಅವರ ಹಿಂದಿಂದೇನೇ ಬಂದ
ಶಿವಮಣಿ ಬಸವಣ್ಣನವರ ಒಡುಟ್ಟಾದಳು
ಪಾರ್ವತಿದೇವಿಯವರ ಹಿಂದೆ ಬತ್ತಿದ್ದಂತ
ಶಿವಗಣುನ್ನ
ಪರಮೇಶ್ವರ ನೋಡುದ್ರು
ನೋಡಿದ ತಕ್ಷಣವೆ ಅವ್ನು
ಒಂದು ಮೊಗ ಆದ್ನು
ಆ ಮೊಗೀನ ಅಲ್ಲಿ ಹತ್ರುದಲ್ಲೆ ಕಾಣ್ತಿದ್ದ
ಗೋಡಿಕೆರೆ ಏರಿ ಮ್ಯಾಲೆ ಮನುಗುಸ್ದ್ರು
ಆ ಮೊಗ ಗಾರ್‌ಗಾರ್ ಅಂತಿದ್ರೆ
ಆ ಸುತ್ತುನೆಲ್ಲ ಆಳಿದಂತೆ ಪಾಳೇಗಾರ ಕೂಚಪ್ಪಯ್ಯ

ಎತ್ತುಗೋಣಪುರುದಿಂದ ಬ್ಯಾಟೆಗೆ ಬಂದಿದ್ದ
ಬ್ಯಾಟೆ ಮುಗುಸ್ಕೊಂಡು ಬತ್ತಿರ್‌ಬೇಕಾರೆ
ಗೋಡಿಕೆರೆ ಏರಿಮ್ಯಾಲೆ
ಗಾರ್‌ಗಾರ್ ಅನ್ತಿರೊ ಒಂದು ಮೊಗೀನ
ಉಳ್ಳವಾಕಿರೋದ ಕಂಡ.
ಆ ರಾಜುಂಗೂ ಮಕ್ಕಿರ್ನಿಲ್ಲ
ಮಕ್ಕಿಲ್ಲದ ನಂಗೆ ಆ ಪರಮಾತ್ಮನೇ ನಂಗೆ
ಮಕ್ಕ ಕೊಟ್ಟ, ಅಂತ್ಹೇಳಿ
ಆ ಮೊಗೀನ ಮನೆಗೆ ತಕ್ಕೊಂಡೋಗಿ
"ಸುಧೀರ ಕೂಚಪ್ಪಯ್ಯ" ಅಂತ ನಾಮ್‌ಕರ್ನೆ ಮಾಡ್ದ
ಇತ್ಲಾಕಡೆ ಏನಾಯ್ತಪ್ಪಾಂದ್ರೆ
ಬೆಳ್ಳಿಗಾವೆ ಅನ್ನೋದು ಒಂದು ಊರು
ಆ ಊರ್ನಲ್ಲಿ ಶಿವಭಕ್ತರಾದಂತ
ಗುರುಭಕ್ತ ಗಂಗಯ್ಯ ಶಿವಭಕ್ತೆ ನೀಲಮ್ಮ
ಈ ದಂಪತಿಗಳ ಹೊಟ್ಟೇಲಿ
ಪರಮೇಶ್ವರ ಅಲ್ಲಮಪ್ರಭುಗಳಾಗಿ ಹುಟ್ಟವುರೆ -

ಉಡುತಾಳು ಗ್ರಾಮದ ಶಂಭಲಿಂಗಯ್ಯ
ಅವನ ಹೆಂಡತಿ ಲಿಂಗಮ್ಮ ತಾಯಿ
ಗಂಡ ಹೆಂಡತಿ ಶಿವಭಕ್ತಿಯಲಿ
ಜಗತ್ಯಕೇ ಸಮರ್ಯಾರೂ ಇಲ್ಲ |

ಶಂಭುಲಿಂಗಯ್ಯ ಪ್ರತಿಂದಿವಸವೂ
ಶಿವುನ ದೇವುಸ್ತಾನಕೆ ಹೋಗಿ
ಪೂಜೆ ಕೆಲಸ ಕಾರ್ಯಗಳ ಮಾಡಿ
ಊರ ಜನವೆಲ್ಲ ಒಪ್ಪುವಂತಿದ್ದ |

ಲಿಂಗಮ್ಮದೇವಿಯು ಪ್ರತಿಂದಿವಸವೂ
ಮೂಡುಕೆಂಪೇರಿ ಮುಂಬೆಳಗು ಬರುವಾಗ
ದೇವುಸ್ತಾನದ ರಜಗಳ ಹೊಡೆದು
ತಾರಿಸಿ ರಂಗ್ವಾಲೆ ಬಿಡುತಲಿದ್ದ |

ಮರುಗ ಮಲ್ಲಿಗೆ ಜಾಜಿ ಜವನ
ಬಿಲ್ವತ್ರೆ ಸಂಪುಗೆ ಸಾವಂತ್ಗೆ ಗಣುಗಲೆ
ಪೂಪತ್ರೆಗಳ ಆರಿಸಿ ಆರಿಸಿ
ಲಿಂಗಮ್ಮದೇವಿ ತಂದುಕೊಡುತ್ತಿದ್ದ |

ತಾವರೆಕೆರೆಯಿಂದ ಜಲವನು ತಂದರು
ತಾವರೆ ಹೂಗಳ ಪೂಜೆಗೆ ತಂದರು
ಶಿವನಿಗೆ ತಾಮರೆ ಹೂಗಳ ಮಡಗಿ
ಪೂಜೆ ಮಾಡಿದರು ಶಂಭುಲಿಂಗಯ್ಯ |

ಶಿವನ ತಲೆಮ್ಯಾಲೆ ತೊಡಿಸಿದ್ದ ಹೂವೊಂದು
ಬಲಕ್ಕೆ ವರವಾಗಿ ಮುಂದಕ್ಕೆ ಬಿತ್ತು
ಪೂಜಾರಿ ಶಂಭುಲಿಂಗಯ್ಯನವರು
ತಾಮರೆ ಪುಷ್ಪವನೆತ್ತಿಕೊಂಡರು |

ಭಕ್ತಿಯಿಂದ ಕೈಗೆತ್ತಿಕೊಂಡು
ಕಣ್ಣುಗಳಿಗೆ ಅವ ಒತ್ತಿಕೊಂಡು
ಲಿಂಗಮ್ಮ ತಾಯಿಗೆ ಕೈಯೆತ್ತಿ ಕೊಡುವಾಗ
ತಾಯಮ್ಮ ಮಡಿಲಿಗೆ ತುಂಬಿಕೊಂಡರು |

ಶಿವನು ಕೊಟ್ಟ ತಾಮರೆ ಪುಷ್ಪವ
ಮಡಿಲಲ್ಲಿ ಕಟ್ಟಿಕೊಂಡು ಮನೆಗೆ ಬಂದರು
ದೇವರಕ್ಯಾಣೆಗೆ ಲಿಂಗಮ್ಮ ಹೋಗಿ
ಮಡಿಲಲ್ಲಿದ್ದ ಹೂವನ್ನು ತಗಿದರು |

ದೇವರ ಮುಂದೆ ತಾವರೆ ಹೂವನು
ಮಡಿಲಿಂದ ತಗಿದಾಗ ಮೊಗ್ಗಾಗಿತ್ತು
ಮೊಗ್ಗನು ಕಣ್ಣಿಗೆ ಒತ್ತಿಕೊಳ್ಳುತ್ತ
ಮೆಲ್ಲಮೆಲ್ಲಗೆ ದಳ ಬಿಡಿಸಿದಳು |

ತಾವರೆ ಹೂವಿನ ನಡುಮಧ್ಯದಲ್ಲಿ
ಹೆಣ್ಣು ಕಂದಮ್ಮ ನಗುನಗುತಿತ್ತು
ಶಂಭುಲಿಂಗನು ಲಿಂಗಮ್ಮ ತಾಯಿಯು
ಕಂದಮ್ಮನ ಕಂಡು ಬೆರಗಲಿ ನಿಂತರು |

"ಮಡದಿ ಲಿಂಗಮ್ಮ
ಮಕ್ಕಳಿಲ್ಲ ಮಕ್ಕಳಿಲ್ಲ ಅಂತಿದ್ದಲ್ಲ?
ಈಗ ನೋಡು
ಆ ಪರಮೇಶ್ವರ ನಮ್ಮ ಮೊರೆ ಕೇಳಿ
ಇಂಥ ಚೆಂದದ ಕಂದಮ್ಮನ ಕೊಟ್ಟಿದ್ದಾರೆ.
ಇದುನ್ನ ಪ್ರೀತಿಯಿಂದ ನಾವು ಸಾಕಬೇಕು" -
ಬಡವರ ಮನೆಗೆ ಭಾಗ್ಯ ಬಂತೂಂತ
ತಾಯಿ ಗೌರಮ್ಮನೆ ಕಂದಮ್ಮ ಆಗಿರೋದು ತಿಳೀದೆ
ಅವರು ಸಂತೋಸ ಪಡುತಾರಲ್ಲ
"ಮಾಯದಿಂದ ಈ ಕಂದಮ್ಮ ಬಂತು
ಇವ್ಳು ಮಾಯಾದೇವಿ" ಅಂತ ಹೆಸ್ರು ಕರೆದರು |

ಪರಮಾತ್ಮ ಕೊಟ್ಟ ಪುತ್ರಿಯನ್ನು
ಅಕ್ರಿಯಿಂದ ಸಾಕಿ ಅಕ್ಕ ಅಂತ ಕರೀತಿದ್ರು
ಅಕ್ಕ ತಂದೆ ತಾಯ್ಗಳ ಆಶ್ರಯದಲ್ಲಿ
ಶಿವನ ಕೃಪೆಯಿಂದ ಬೆಳ್ದು
ಹದಿನಾರರ ಹರಯಕ್ಕೆ ಬಂದವ್ಳೆ -

ಅಕ್ಕ ಮಾಯಾದೇವಿ ಅಕ್ಕರಿಯಿಂದ
ಚೊಕ್ಕ ಬಂಗಾರದ ಗೊಂಬೆಯಂತೆ
ಬೆಳೆದಳು ತಾಯಿ ಬುಯ್ಲೋಕದಲಿ
ಜನದ ಕಣ್ಣಿಗೆ ಮಾಯಾದೇವಿಯಾಗಿ |

ಶಿವಪೂಜೆಯೆಂದರೆ ತಾಯಿಗೆ ಇಷ್ಟ
ದಿನದಿನ ಶಿವಪೂಜೆ ಮಾಡುತಲಿದ್ದಳು
ಆ ದಿನ ಶಿವರಾತ್ರಿ ಹಬ್ಬವು ಬಂದಿತು
ಊರಿಗೆ ಊರೇ ಸಂಭ್ರಮಪಟ್ಟಿತು |

ಅಕ್ಕಮಾಯಾದೇವಿ ಶಿವಪೂಜೆಯನು
ಮಾಡಲು ಶಿವನ ದೇವಾಲ್ಯಕೆ ನಡೆದಳು
ಪೂಜೆಯ ಮುಗಿಸಿ ಹಿಂದಕೆ ಬರುವಾಗ
ಆಗೊಂದು ಕಥೆಯು ನಡೆದು ಹೋಯಿತು |

ಎಡುಗೋಣಪುರದ ಸುಧೀರ ಕೂಚಪ್ಪನು
ಊರೂರ ಮ್ಯಾಲೆ ಸಬಾರಿ ಬರುವಾಗ
ದೇವಾಲ್ಯದಿಂದ ಬರುತಿದ್ದ ಅಕ್ಕನ
ಕಾಣುತ ತಬ್ಬಿಬ್ಬಾಗಿ ನಿಂತನು |

"ಯಾರಿವಳು? ಇವಳ್ಯಾರಿವಳು?"
ಎನ್ನುತ ಕುಂತಿದ್ದ ಕುದುರೆ ನಿಲ್ಲಿಸಿದ
ಕಣ್ಣೆಪ್ಪೆ ಹೊಡೆಯದೆ ಅವಳನೆ ನೋಡಿದ
ಅವ್ಳನ್ನ ಕಣ್ತುಂಬ ತುಂಬಿಕೊಂಡನು |

ಆಗಲೆ ತನ್ನ ಬಿಡದಿಗೆ ಬಂದನು
ಊರ ಗೌಡರ ಕರೆಸಿಕೊಂಡನು
ಆ ಚಂದುಳ್ಳಿ ಹೆಣ್ಣು ಯಾರೆಂದು ಕೇಳಿದ
ಅವಳು ತನಗೆ ಬೇಕೆಂದು ಕೇಳಿದ |

ರಾಜನ ಮಾತಿಗೆ ಎದುರಾಡಿದರೆ
ಊರಗೌಡರು ಉಳಿಯುವಂತಿಲ್ಲ
ಏನು ಮಾಡದಕ, ತಿಳಿಯದೆ ಹೋಯಿತು
ಮನಸ್ಸಿಲ್ಲದ ಮನಸಲ್ಲಿ ಹೆಜ್ಜೆ ಹಾಕಿದ |

ಪೂಜಾರಿ ಶಂಭುಲಿಂಗಯ್ನ ಮನೆಗೆ
ಊರಗೌಡರು ಬಂದು ಕುಳಿತರು
ಗೌಡರು ಬಂದುದ ನೋಡಿ ಶರಣರು
ಕೈಕಾಲ್ಗೆ ನೀರಕೊಟ್ಟು, ಬರಮಾಡ್ಕಿಕೊಂಡರು |

"ಗೌಡ್ರೆ ಬರಬೇಕು
ಎಂದೂ ಬರದವುರು ನಮ್ಮಟ್ಟಿಗೆ ಇಂದು ಬಂದ್ರಿ ಅಂದ್ರೆ
ಏನೋ ಇಸೇಸ ಇರ್ಲೇಬೇಕು
ಮನುಸ್ನಲ್ಲಿ ಏನೂ ಮಡಿಕೊಳ್ಳದೆ
ಬಂದ ಇಸಯವ ಹೇಳಿ ಗೌಡ್ರೆ"

"ಸ್ವಾಮಿ ಶಂಭುಲಿಂಗಯ್ಯನವುರೆ
ನನ್ನ ಕಾರ್ಯಕೆ ನಾನು ಬರನಿಲ್ಲ
ದೇಶ ಆಳೋರು ನಾಡಿಗೆ ದೊಡ್ಡೋರು
ನಮ್ಮ ದಣಿಗಳು ಕೂಚಪ್ಪನವರು
ಒಂದು ಇಚಾರವ ಹೇಳಿ ಕಳುಗವುರೆ"
"ಇರ್ಲಿ ಅದೇನಂತ ಹೇಳಿ ಗೌಡ್ರೆ"
"ಸ್ವಾಮಿ ಶಂಭುಲಿಂಗಯ್ಯನವರೆ
ನಾನು ಇಂತೆ ಮಾತಾಡ್ತಿನಿ ಅಂತ ತೆಪ್ ತಿಳೀಬ್ಯಾಡ
ಸೇವುಕ್ರು ಚಾಕ್ರೀನೆ ಇಂತೇದು
ಗೌಡಾಳ್ಕೆ ಅನ್ನೋದು ಬಿಸಿತುಪ್ಪ
ನುಂಗೋಕೂ ಆಗದಿಲ್ಲ ಉಗಿಯಕೂ ಆಗದಿಲ್ಲ
ಹಿಂಗೆ ಹೇಳ್ದೆ ಅಂತ ದೂಷಣೆ ಮಾಡಬೇಡಿ
ರೋಷಣೆ ಆಗಬೇಡಿ"
"ಗೌಡ್ರೆ ಏನೂಂತ ಇಷ್ಟ ಹೇಳ್ದೆ
ನಮುಗೆ ತಿಳಿಯದಾದ್ರೂ ಹ್ಯಾಗೆ ಹೇಳಿ?"
"ಸ್ವಾಮಿ ಶಂಭುಲಿಂಗಯ್ಯನವುರೆ
ನಮ್ಮ ರಾಜರು ನಿಮ್ಮ ಸಮ್ಮಂದ
ಮಾಡ್ಬೇಕು ಅಂತವುರೆ
ನಿಮ್ಮ ಮಗುಳ್ನ ಅವುರ್ಗೆ ಕೊಟ್ಟು
ಮದ್ವೆ ಮಾಡ್ಕೊಡಬೇಕಂತೆ"
"ಗೌಡ್ರೆ ಆಡ್ತಾ ಆಡ್ತಾ ಎಂತೆ ಮಾತಾಡುದ್ರಿ
ಆ ರಾಜ ನಮ್ಮಮಗಳ ಕೇಳೋದು ಅಂದ್ರೇನು
ನೀವು ಬಂದು ನಮಗೆ ತಿಳುಸೋದು ಅಂದ್ರೇನು
ಇದೇ ಸ್ವಾಮಿ ಕಲಿಂಗ ಅನ್ನೋದು
ನಾವು ನೋಡುದ್ರೆ ಶಿವನ ಕುಲದೋರು
ಅವುರ ಕುಲಕ್ಕೂ ನಮ್ಮ ಕುಲುಕ್ಕೂ ಸಮನ ಗೌಡ್ರೆ?
ದಯಮಾಡಿ ಇದೊಂದು ಮಾತಾಡಬ್ಯಾಡಿ
ಬಂದ್ ದಾರಿಗ ಸುಂಕಿಲ್ಲ ಅಂತ

ಈಗಿಂದೀಗ್ಲೆ ಇಲ್ಲಿಂದ ಹೊಂಟೋಗಿ"
"ಶಂಭುಲಿಂಗಯ್ಯನವರೆ
ಇದೇನು ನಾನು ಕೇಳಕೆ ಬಂದುದ್ದು
ನನಗೇ ಅಂತ್ಲಾ?
ನಾವು ಬಂಟ್ರು ಸ್ವಾಮಿ
ಅವರು ಹೇಳುದಂಗೆ ನಾವು ಕೇಳ್ಬೇಕು
ತಪ್ಪಿದ್ರೆ ಕ್ರಮುಸಿ"
"ಅಯ್ಯಾ ಗೌಡ್ರೆ ಇನ್ನು ಮಾತುಬ್ಯಾಡ -

ಕೇಳೋಕೆ ಬಂದಿದ್ದೆ ಅನ್ನೋದ ಮರ್ತು
ಹೇಳೋಕೆ ಬಂದಿದ್ದೆ ಅನ್ನೋದ ಮರ್ತು
ಬಂದಂಗೆ ಬಂದ ದಾರೀಲಿ ಹೋಗಿರಿ
ಗೌಡರೆ ನಿಮ್ಮುಗೆ ದಮ್ಮಯ್ಯ ಅಂತೀನಿ" |

ಪೂಜಾರ್ರ ಮಾತನು ಕೇಳಿದ ಗೌಡರು
ಆಡಿದ ಮಾತ ಆಡಿದಂತೆ ತಂದು
ಸುಧೀರ ಕೂಸಪ್ಪಯ್ಯನಿಗೆ ಹೇಳಲು
ಕೂಸಪ್ಪಯ್ಯ ಕಿಡಿಕಿಡಿ ಆಗುತಾನೆ |

"ಗೌಡ್ರೆ ಆ ಪೂಜಾರಿ ಮಾತು ಹಂಗಿರ್ಲಿ
ಅವನ ಮಗ್ಳು ಇದ್ದಾಳಲ್ಲ
ಅವುಳ್ನ ಕೇಳ್ಕೊಂಡ್ಬನ್ನಿ" -

ಸುಧೀರ್ನ ಮಾತಿಗೆ ಎದುರಾಡದಲೆ
ಗೌಡರು ಬಂದು ಅಕ್ಕನ ಕಂಡರು
"ರಾಜ ಅಂದರೆ ಪ್ರಚೆಗಳ ತಂದೆ
ತಂದೆಯೆ ಮಗಳನು ಬಯಸ ಬವುದೆ?" |

ಅಕ್ಕ ಮಾಯಾದೇವಿ ಮಾತನು ಕೇಳಿ
ಅಲ್ಲಿಂದ ಗೌಡರು ಹಂಗೇ ಬಂದರು
ಅಕ್ಕನ ಮಾತ ಬಂದು ತಿಳಿಸಿದರು
ಆ ಮಾತಿಗೆ ಸುಧೀರ ರ್ಯಾಷವೇಶದಲಿ |

"ಒಪ್ಪದಿದ್ದರೆ ಅವುಳಪ್ಪನ ಅಮ್ಮನ
ಆನೆಯ ಕಾಲಿಗೆ ಕಟ್ಸಿಸೆಳಸುವೆ"
ಈ ಮಾತ ತಿಳಿಸಲು ಗೌಡರ ಕಳುಗಿದ
ಗೌಡರು ಅಕ್ಕನ ಬಳುಗೆ ಬಂದರು |

ರಾಜನ ಮಾತನು ತಿಳಿಸಲು ಅಕ್ಕ
ಗೌಡರ ಕೆಂಗಣ್ಣಲ್ಲಿ ಅಕ್ಕ ನೋಡಲು
ಅವ್ರ ಗಡ್ಡಮೀಸೆಗಳು ಉರಿದೇ ಹೋದವ್ವ
ಬಾಯಿಬಾಯಿ ಬಡುಕೊಂಡು ಗೌಡರು ಓಡಿದರು |

ಗೌಡರ ಅವಸ್ತಿ ನೋಡಿದ ರಾಜನು
ತಾನೇ ಮಾಯಾದೇವಿಯ ಕಾಣಲು
ಶಂಭುಲಿಂಗಯ್ನ ಮನೆಗೆ ಬಂದನು
ಬಂದು ಅಕ್ಕನನು ಕಂಡು ಮಾತಾಡಿದ |

"ಏಯ್ ಹುಡುಗಿ
ನಾನು ದೇಶವನ್ನು ಆಳುವಂತ ರಾಜ
ಈ ನಾಡಿನ ಸಮಸ್ತವೂ ನನಗೆ ಸೇರಿದ್ದು
ಆ ಸಕಲೆಂಟರಲ್ಲಿ ನೀನೂ ಸೇರಿದ್ದಿ
ನೀನು ನನ್ನನ್ನು ಒಪ್ಪಲೇ ಬೇಕು
ಒಪ್ಪದಿದ್ದರೆ ನಾನು ಕಂಡಿತ್ಕಾಗೂ ಬುಡೋನಲ್ಲ
ಕೈಕಾಲು ಕಟ್ಟಿ ನನ್ನರಮನ್ಗೆ ಎಳುಸ್ತೀನಿ
ನೀನು ಒಪ್ಪುದ್ರೆ
ನಿನ್ನಪ್ಪ ಅಮ್ಮನೂ ಬದುಕ್ತರೆ
ಇಲ್ಲದಿದ್ರೆ ನಿಂಜೊತೆ ಅವ್ರು ಸಾಯ್ತರೆ"
"ನಾನು ಸಾಯದ್ಕೆ
ನನ್ನ ಅಪ್ಪ ಅಮ್ಮ ಸಾಯದ್ಕೆ
ನೀನು ಬದುಕಿದ್ರೆ ತಾನೆ?
ಅಯೋಗ್ಯ ಇಲ್ಲಿಂದ ಹೋದ್ರೆ ಸರಿ
ಇಲ್ಲದಿದ್ದರೆ ನಿನ್ನ ಗತಿ ಏನಾಗುತ್ತದೆ ಗೊತ್ತೆ?"
"ಏಯ್ ಹುಡುಗಿ
ಏನು ಮಾಡಲು ಸಾಧ್ಯ ನಿನ್ನಿಂದ?
ಒಂದು ಕ್ಷಣದಲ್ಲಿ ನಿನ್ನನ್ನು ಏನು
ಬೇಕಾದರೂ ಮಾಡಬಲ್ಲೆ
ಆದರೆ ದುಡುಕಬಾರದೆಂದು ಸುಮ್ಮನಿದ್ದೇನೆ!"

"ಏಯ್ ನೀಚ
ನೀನು ದುಡುಕಿದರೂ ಒಂದೆ ದುಡುಕದಿದ್ದರೂ ಒಂದೇ
ಕಡೆಗಾಲ ಹತ್ತಿರವಾದಾಗ ಇಂಥ ಸಿಡುಕು ಸರಿಯಾಗಿದೆ -
ಬದುಕಬೇಕೆಂಬ ಆಸೆ ನಿನಗಿದ್ದರೆ
ಮರಿಯಾದೆಯಿಂದ ಹಿಂದಕ್ಕೆ ತೊಲಗು
ಇಲ್ಲದಿದ್ದರೆ ಇಂದೇ ಇಲ್ಲೆ ನಿನ್ನ ಕೊನೆ"
"ಏನು? ನನ್ನ ಕೊನೆಯೆ?
ಎಷ್ಟು ಅಹಂಕಾರ ನಿನಗೆ
ರಾಜನೆದುರು ಒಂದು ದರಿದ್ರ ಹೆಣ್ಣು
ಆಡುವ ಮಾತೆ ಇದು ?

ಇದೋ ನಿನಗೆ ಕಡೆಯದೊಂದು ಅವಕಾಶ
ನೀನು ನನ್ನನ್ನು ಒಪ್ಪಿದೆಯೋ ಸರಿ
ಒಪ್ಪದಿದ್ದಲ್ಲಿ ಇಲ್ಲೆ ಈ ಸ್ಥಳದಲ್ಲೆ
ರಕ್ತದ ಹೊಳೆಯಲ್ಲಿ ಒದ್ದಾಡಬೇಕಾಗುತ್ತದೆ" -

ಹಾಗೆಂದು ಹೇಳುತ ಕೂಚಪ್ಪಯ್ಯನು
ಅಕ್ಕ ಮಾಯಾದೇವಿಯ ಕೈಯನು
ಓಡಿಯಲು ಹೋದಾಗ ಮಾಯಾದೇವಿಯೂ
ಮಾಯವಾಗಿ ಚಾಮುಂಡಿಯೆ ಆದಳು |

ಆರುಭುಜಗಳು ಹನ್ನೆರಡು ಕೈಗಳು
ಕತ್ತಿಗುರಾಣಿ ಪಾಶಗದೆಗಳು
ಹನ್ನೆರಡು ಕೈಯಲು ಹನ್ನೆರಡು ಆಯ್ಧವ
ಹಿಡಿದು ಮಾಯಾದೇವಿ ಮ್ಯಾಲುಕೆದ್ದಳು |

ಸುಧೀರನ ಜುಟ್ಟನು ಹಿಡಿದುಕೊಂಡಳು
ಕತ್ತಿ ಬೀಸಲು ಒಂದೇ ಏಟಿಗೆ
ಸುಧೀರ ಶಿರ ಆಕಾಶಕೆ ನೆಗೆಯಿತು
ಆಕಾಶದಿಂದ ಸಮುದ್ರಕೆ ಬಿದ್ದಿತು |

ಊರ ಜನರೆಲ್ಲ ಅಕ್ಕನ ಕಂಡರು
ನೀನು ಅಕ್ಕ ಮಾಯಾದೇವಿ ನಿಜ
ನೀನು ಸಾಕ್ಷಾದು ಮಹಾದೇವಿ ಕಾಣಮ್ಮ
ಅಕ್ಕ ಮಾದೇವಿ ಎಂದು ಕರೆದರು |

ತೆಂಗಿನ ಕಾಯ ತಂದು ಇಡ್ಕಾಯ ಒಡೆದರು
ಹಣ್ಣನು ಮುರುದು ಮುಂದೆ ಮಡಗಿದರು
ಕಡ್ಡಿ ಕಲ್ಪುರಗಳಿಂದ ಬೆಳಗುತ
ಭಕ್ತೀಲಿ ತಾಯಿಯ ಪೂಜೆ ಮಾಡಿದರು |

"ಜನುಗಳೇ
ಈ ಪಾಪಿಗಾಗಿ ನಾನು ನರಮನಸ್ಯಳಾದೆ
ನನ್ನ ಕೆಲ್ಸ ಮುಗೀತು
ಇಂಥ ಇಕಾರ ರೂಪುನಲ್ಲಿ ನೀವು ನನ್ನ
ನೋಡಿದಮ್ಯಾಲೆ
ನಾನು ಈ ಊರ್ನಲ್ಲಿ ನಿಲ್ಲೋಳಲ್ಲ
ನಾನು ನನ್ನ ಚನ್ನಮಲ್ಲಿಕಾರ್ಜುನನ ಸೇರ್ಬೇಕು
ಅದುಕ್ಕಾಗಿ ಶ್ರೀಶೈಲುಪರ್ವತುಕ್ಕೆ ಹೋಗ್ತೀನಿ
ಕಲ್ಯಾಣ ಪಟ್ಟುಕ್ಕೋಗಿ
ಅಲ್ಲಿ ಅಲ್ಲಾಮಪ್ರಭು ಬಸವಣ್ಣ
ಸಿದ್ದರಾಮಯ್ಯರ್ನೆಲ್ಲ ನೋಡಿ

ಅವ್ರುರೆಲ್ಲರ ಆಸುರ್ವಾದ ಪಡೆದು
ನಾನು ಶ್ರೀಶೈಲುಕ್ಕೆ ಹೋಗ್ತೀನಿ
ನನ್ನೂರಿನ ನನ್ನ ಬಂಧುಗಳೆ
ನನಗೆ ಆಸುರ್ವಾದ ಮಾಡಿ
ಆನಂದುವಾಗಿ ನನ್ನ ಕಳುಸ್ಕೊಡಿ" ಅಂತ್ಹೇಳಿ
ಎಲ್ರುಗೂ ನಮುಸ್ಕಾರ ಮಾಡಿ -

ಕಲ್ಯಾಣ ಪಟ್ಟದ ಕಡೆಗೆ ನಡೆದಳು
ಕಲ್ಯಾಣದಲ್ಲಿ ಅಲ್ಲಾಮಪ್ರಭುವನು
ಕಂಡು ತಾಯಿ ನಮುಸ್ಕಾರವ ಮಾಡಿ
ಆಸುರ್ವಾದಗಳ ಬೇಡಿಕೊಂಡಳು |

ಶರಣರೆಲ್ಲರು ಅಕ್ಕಮಾದೇವಿಗೆ
ಮಲ್ಲಿಕಾರ್ಜುನನ ಶ್ರೀಶೈಲಕೋಗಲು
ಮಡಿಲನು ತುಂಬಿ ಆರತಿ ಬೆಳಗಿ
ಸಂತೋಷದಿಂದ ಕಳಿಸಿಕೊಟ್ಟರು |

ಶರಣರ ನೆನೆಯೋ ನನ ಮನವೆ

ಶರಣರ ಪಾದಕೆ ಮರುಗ ಮಲ್ಲಿಗೆ ಇಟ್ಟು
ಧರಣೀಯ ದೊರೆ ಬಸವಣ್ಣಗೆ ಕೈಮುಗುದು - ಕಲ್ಯಾಣ
ಶರಣರ ನೆನೆಯೋ ನನಮನವೆ |

ಸಂತಾನ ಸಾವುರ ಆಗಲಿ

ಕೋಲೆ ಕೋಲೆ ಕೋಲು ಕೋಳಣ್ಣ ಕೋಲೆ
ಕೋಲು ಕೋಲಣ್ಣದ ಬಸುವನ ಕೋಲೆ | ಸೊಲ್ಲು |

ಕೋಲ ಬುಡ್ತೀವಂತ ಕೋಪಾವ ಮಾಡಬ್ಯಾಡಿ
ಮತ್ತೆ ರಾತುರಿಕೆ ಬರುತಿವಿ ಕೋಲೆ |

ಹತ್ತು ಜತೆ ಕೋಲುಗಳ ಎತ್ತುನ್ ಮ್ಯಾಲೆ ಹೇರಿಕೊಂಡು
ಹತ್ತು ಸಾವ್ರ ಪದಗಳ ತುಂಬುಕೊಂಡು ಕೋಲೆ |
ಹತ್ತು ಸಾವ್ರ ಪದಗಳ ತುಂಬುಕೊಂಡು ಹೊತ್ತುಕೊಂಡು
ಮತ್ತೆ ರಾತುರಿಕೆ ಬರುತಿವಿ ಕೋಲೆ |

ಎಂಟು ಜತೆ ಕೋಲುಗಳ ಒಂಟೆ ಮ್ಯಾಲೆ ಹೇರಿಕೊಂಡು
ಎಂಟು ಸಾವ್ರ ಪದಗಳ ತುಂಬುಕೊಂಡು ಕೋಲೆ |
ಎಂಟು ಸಾವ್ರ ಪದಗಳ ತುಂಬುಕೊಂಡು ಹೊತ್ತುಕೊಂಡು
ಮತ್ತೆ ರಾತುರಿಕೆ ಬರುತಿವಿ ಕೋಲೆ |

ಆರು ಜತೆ ಕೋಲುಗಳ ಹೋರಿ ಮ್ಯಾಲೆ ಹೇರಿಕೊಂಡು
ಆರು ಸಾವು ಪದಗಳ ತುಂಬುಕೊಂಡು ಕೋಲೆ |
ಆರು ಸಾವ್ರ ಪದಗಳ ತುಂಬುಕೊಂಡು ಹೊತ್ತುಕೊಂಡು
ಮತ್ತೆ ರಾತುರಿಕೆ ಬರುತಿವಿ ಕೋಲೆ |

ಹಾಲು ಸಕ್ಕರೆ ತುಪ್ಪ ಮೇಲು ಕೊಬ್ಬರಿ ಬೆಲ್ಲ
ಬಾಲರಿಗೆ ಕೊಡಿಸಿ ಆಡ್ಸಿದರು ಕೋಲೆ |
ಬಾಲರಿಗೆ ಕೊಡಿಸಿ ಕೋಲಾಟನಾಡಿಸಿದ
ನೀಲೇಗೌಡರಿಗೊಂದು ಶರಣಾರ್ತಿ ಕೋಲೆ |

ನೀಲೇಗೌಡರ ಬಾಳು ಹಾಲು ಸಾಗರವಾಗ್ಲಿ
ಅವ್ರ - ಮಡ್ದಿ ಸಿದ್ದಮ್ಮನೋರ ಸಿರುಪಾದ ಕೊಲೆ |
ಮಡುದಿ ಸಿದ್ದಮ್ಮನವರ ಸಿರುಪಾದ್ಕೆ ಸರಣಂದೊ
ಅವ್ರ - ಸಂತಾನ ಸಾವುರ ಆಗಲಿ ಕೋಲೆ |

ಕೋಲ ಬುಡ್ತೀವಿ ಅಂತ ಕ್ಷಾಪಾವ ಮಾಡಬ್ಯಾಡಿ
ಮತ್ತೆ ರಾತುರಿಕೆ ಬರುತಿವಿ ಕೋಲೆ |
ಕೋಲೂದು ಪದಗಳ ಹಾಡುಕೊಂಡು ಶರಣರ
ಸೊರಣೆಯ ಮಾಡಿಕೊಂಡು ಬರುತಿವಿ ಕೋಲೆ |

ಸತ್ಯ ಶರಣರ ಸೊರಣೆಯ ಮಾಡಿಕೊಂಡು
ಮತ್ತೆ ರಾತುರಿಕೆ ಬರುತಿವಿ ಕೋಲೆ |

ವೀದ್ಯೆ ವೀದ್ಯೆ ವೀ ದತ್ ಥ್ಯೆ
ಶರಣು ಶರಣಾರ್ತಿ

---

* ಇದು ಕೋಲಾಟವನ್ನು ಮುಕ್ತಾಯ ಮಾಡುವಾಗ ಹೇಳುವ ನಿಲ್ಕೋಲು ಪದ. ಇದನ್ನು ಹಾಡಿದವರು ಜನಪದ ಮಹಾಭಾರತವನ್ನು ಹಾಡಿರುವ ಜನಪದ ಗಾಯಕ ರತ್ನ ಬೆಳ್ಳಿದಬೀಡು ಸಿದ್ದಶಿಷ್ಯಿಯವರು. ಈ ಗೀತೆಯಲ್ಲಿ ಬಾಬರುವ ಶ್ರೀ ನೀಲೇಗೌಡ ಮತ್ತು ಶ್ರೀಮತಿ ಸಿದ್ದಮ್ಮನವರು ಸಿದ್ದಶಿಷ್ಯಿಯವರ ಆಶ್ರಯದಾತರು. ಬೆಳ್ಳಿದಬೀಡಿನ ಈ ಮೂವರೂ ಈಗ ದಿವಂಗತರು. ಆದರೆ ಕಲಾವಿದ ಸಿದ್ದಶಿಷ್ಯಿಯವರು ಹಾಡಿರುವ ಜನಪದ ಮಹಾಭಾರತ ಮಹಾಕಾವ್ಯದಿಂದ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಬೆಳ್ಳಿದಬೀಡು ಗ್ರಾಮದ ಪಟೇಲ್ ನೀಲೇಗೌಡರು ಪಂಪ ಮಹಾಕವಿಗೆ ಆಶ್ರಯ ಕೊಟ್ಟಿದ್ದ ಅರಿಕೇಸರಿಯಂತೆ ಅಮರರಾಗಿದ್ದಾರೆ.

ಜನಪದ ಶರಣಕಾವ್ಯಗಳು

ಭಾಗ : ಎರಡು

ಕರಪಾಲ ಬಸವಪುರಾಣ

ತುಂಬೀದ ಹೊಳೆಯಾಗೆ ಕೊಂಬು ಕಾಣಿಸುತಾವೆ
ಇಂಬುಳ್ಳ ಇಣಿಲ ಬಸವಣ್ಣ - ಬರುವಾಗ
ಗಂಗೆದ್ದು ಕೈಯ ಮುಗಿದಾಳು |

ಕರಪಾಲ ಬಸವಪುರಾಣ

ಗಜಾನನಂ ಭೂತಗಣಾದಿ ಸೇವಿತಂ
ಕಪಿತ್ಥ ಜಂಬೂಫಲ ಸಾರಭಕ್ಷಿತಂ
ಉಮಾಸುತಂ ಶೋಕವಿನಾಶಕಾರಣಂ
ನಮಾಮಿ ವಿಘ್ನೇಶ್ವರ ಪಾದಪಂಕಜಂ | ೧

ಗುರುರ್ಬ್ರಹ್ಮಾ, ಗುರುರ್ವಿಷ್ಣು, ಗುರುರ್ದೇವೋ ಮಹೇಶ್ವರಃ
ಗುರುಸ್ಸಾಕ್ಷಾತ್ ಪರಂಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ೨

ಜಯ ಬಸವೇಶ್ವರ ಜಯತು ಮಲ್ಲೇಶ್ವರ
ಜಯಜಗದೀಶ್ವರ ಪಾಲಿಸು ದೇವ
ಪಾಲಿಸು ದೇವ |
ದಿತ್ ತಳಾಂಗು ತಕದಿಮಿತ ೩

ನಿರೂಪಕ

ಅಂದ ಹಾಗೆ ಆನೆ ಮೊದಲಾಗಿ ಇರುವೆ ಕಡೆಯಾಗಿ ಎಂಬತ್ತು ನಾಲ್ಕು ಲಕ್ಷ ಪಿಪೀಲಿಕಾದಿ ಜೀವಜಂತುಗಳಿಗೆ ಆಧಾರವಸ್ತುವಾಗಿರುವ ಭೂಮಾತೆಗಾದರೂ ಭಾರತಮಾತೆಯೆಂದು ಮಹನೀಯರು ಕ್ರೋಡೀಕರಿಸಿದ್ದಾರೆ. ಮಾತೆಯೆಂದರೆ ತಾಯಿ. ಮಾತೆಗಿಂತ ಮಿಗಿಲಾದ ದೇವರಿಲ್ಲ. ಹೆತ್ತ ತಾಯಿಗಿಂತ ಬೇರೆ ದೇವರಿಲ್ಲ ಎಂಬುದಕ್ಕೆ ನಿಜಗುಣ ಶಿವಯೋಗಿಗಳು ಅನಂತ ಕಾಲ ತಪಸ್ಸನ್ನಾಚರಿಸಿ ಆ ತಪಸ್ಸಿನಿಂದ ಯಾವ ಪ್ರತಿಫಲವೂ ಲಭಿಸದೇನೆ ಆ ಮಹನೀಯರು ಏನಪ್ಪಣೆ ಮಾಡಿದ್ದಾರೆ.

ಮಂದಿರದೊಳಿರಬೇಡ
ಪರ್ವತಾಗ್ರದೊಳಿರ್ಪ ಕಂದರದೊಳಿರಬೇಡ
ಕಂದ ಮೂಲಗಳ ತಿಂದು
ದೇಹವನು ಕುಂದಿಸಬೇಡ.
ನಿನ್ನ
ತಂದೆತಾಯಣ್ಣತಮ್ಮಂದಿರ ಬಳಿಯಲಿರ್ದು
ತಪವನಾಚರಿಸು.... ೪

ಅಂದ ಹಾಗೆ ಯಾವ ನಿಜಗುಣ ಶಿವಯೋಗಿಗಳ ವಚನೋಕ್ತಿಯಂತೆ ಮನೆ ಮಠಗಳನ್ನು ಬಿಡಬೇಡ. ತಂದೆ ತಾಯಿಗಳ ಸೇವೆಯನ್ನು ಬಿಡಬೇಡ. ಬಿಟ್ಟು, ಕಾಡುಮೇಡುಗಳಲ್ಲಿ ಅಲೆದಲೆದು ದಣಿಯಬೇಡ. ಬೆಟ್ಟಗುಡ್ಡ ಗವಿಯೊಳಗೆ ಕುಳಿತು 'ಓಂ ನಮಶ್ಶಿವಾಯ' 'ಸಮ್ಮಪ್ಪ ಮೊದಲು ಸಾಯ' ಎನ್ನುವುದಕ್ಕಿಂತ ಉತ್ತಮೋತ್ತಮವಾದ ತಪಸ್ಸೆಂದರೆ ತಂದೆತಾಯಿಗಳ ಸೇವೆ. ಭ್ರಾತೃಭಗಿನಿಯರ ಸೇವೆಯನ್ನು ತಿಳಿದು ತಪಸ್ಸು ಮಾಡುವುದು ಶ್ರೇಯಸ್ಕರವು ಎಂದಿಲ್ಲವೆ ? ಅಂದಹಾಗೆ ಶರಣರಾದರೋ ಶಿವನೇ ದೈವ, ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದನ್ನು ಒಲ್ಲದಿರ್ಪುದೇ ನೇಮ, ಆಸೆ ಇಲ್ಲದಿರ್ಪುದೇ ಜಪ, ರೋಷವಿಲ್ಲದಿಪ್ಪುದೇ ತಪ, ವಂಚನೆಯಿಲ್ಲದಿಪ್ಪುದೇ ಭಕ್ತಿ, ಕುಂದಿಲ್ಲದಿಪ್ಪುದೇ ಸಮಯಾಚಾರ, ಇದು ಸತ್ಯ, ಶಿವನಾಣೆ, ಶಿವಬಲ್ಲ ಎಂದು ಶರಣರು ಘೋಷಿಸಿದ್ದಾರೆ.

ಶಿಷ್ಯ

ಹೌದೆ, ಗುರುವೆ ?

ನಿರೂಪಕ

ಹೌದಪ್ಪ ಮಗು, ಆದ್ದರಿಂದ-

ನಾವು ಬಲ್ಲವರಲ್ಲ ನಾವು ತಿಳಿದವರಲ್ಲ
ಬಲ್ಲಂತ ಪ್ರಾಜ್ಞರು ತಿದ್ದಿಕೊಳಬೇಕು
ತಿದ್ದಿಕೊಳಬೇಕು | ೫

ಆದ್ದರಿಂದ ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ ; ನಾವು ಎಲ್ಲವನ್ನು ಬಲ್ಲೊ ಎಂಬ ಗರ್ವದಿಂದ ಇಲ್ಲಿ ಬಂದಿಲ್ಲ. ನಮಗಿಂತ ತಿಳಿದವರು ಇಲ್ಲಿ ಬಹಳ ಜನ ಇದ್ದಾರೆ. ಅಂದ ಹಾಗೆ ನಾವೇನು ಅಂಥಾ ವಿದ್ಯಾವಂತರಲ್ಲ. ಕಾಲೇಜು ಅನ್ನೋದನ್ನ ಕನಸ್ಸಲ್ಲೂ ಕಂಡಿಲ್ಲ. ಪ್ರಾಥಮಿಕ ಶಾಲೆ ಪ್ರಥಮದಲ್ಲೇ ಗೊತ್ತಿಲ್ಲ. ಮಾಧ್ಯಮಿಕ ಶಾಲೆ ಮೊದಲೇ ಗೊತ್ತಿಲ್ಲ. ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಪ್ರೌಢರೂ ನಾವಲ್ಲ. ನಾವು ಬಲ್ಲವರೆಂಬ ಗರ್ವವೂ ನಮಗಿಲ್ಲ.

ಸರ್ವಜ್ಞನೆಂಬುವನು ಗರ್ವದಿಂದಾದವನೆ
ಸರ್ವರೊಳಗೊಂದೊಂದು ನುಡಿಗಲಿತು-ವಿದ್ಯೆಯಾ
ಪರ್ವತವೆ ತಾನಾದ ಸರ್ವಜ್ಞ | ೬

ಅಂಥಾ ವಿದ್ಯೆಯ ಪರ್ವತವಾಗಿರುವಂತ ಸರ್ವಜ್ಞರ ಪಾದಗಳಿಗೆ ಶರಣೆಂದು, ಇಂಥ ಸುಸಂದರ್ಭದಲ್ಲಿ ನಾವು ಮಾಡಬೇಕಾದಂಥ ಕರಪಾಲ ಕಥಾಭಾಗದಲ್ಲಿ ನ್ಯೂನತೆಗಳು ಲೋಪ ದೋಷಗಳು ಏನಾದರೂ ಕಂಡುಬಂದ ಪಕ್ಷದಲ್ಲಿ ; ನಮ್ಮ ಮಕ್ಕಳು ನಮ್ಮ ಮುಂದೆ ಹಾಡಿಪಾಡುತ್ತಿವೆ ಎಂದು ತಿಳಿದು ನಮ್ಮನ್ನು ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತ ಈ ಕಥೆಯನ್ನು ಕೇಳಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೇಳಿಕೊಳ್ಳುತ್ತ ಕಥಾಭಾಗವನ್ನು ಪ್ರಾರಂಭಿಸುತ್ತಿದ್ದೇವೆ.

ಗಜಮುಖ ಗಣನಾಥ ಭುಜಗಭೂಷಣ ಪ್ರೀತ
ಅಜ ಹರಿಸುರನುತ ಭಜಿಪೆನ್ನೆ ಸತತ
ಭಜಿಪೆನ್ನೆ ಸತತ | ೭

ಮರೆಹೊಕ್ಕವರ ಕಾಯ್ವ ಬಿರುದು ಧರಿಸೀಯೆ ಮೆರೆವ
ಗರಳಕಂಧರ ಕಂದ ನಿರುತ ಭಜಿಪೆವು
ನಿರುತ ಭಜಿಪೆವು | ೮

ಈಶನ ವರಸುತನೆ ಮೂಷಕ ವಾಹನನೆ
ಕ್ಲೇಷವಿದೂರನೆ ಪೋಷಿಸುದೇವ
ಪೋಷಿಸುದೇವ
ದಿತ್ ತಳಂಗು ತಕದಿಮಿತ ೯

ಕಥಾ ಪ್ರಾರಂಭದಲ್ಲಿ ವಿದ್ಯಾಧಿಪತಿಯನ್ನು ಪ್ರಾರ್ಥಿಸಿ ಆ ವಿದ್ಯಾಗಣಪತಿಯು ಸರ್ವರಿಗೂ ಇರುವ ವಿಘ್ನಗಳನ್ನು ಹೋಗಲಾಡಿಸಿ ನಿರ್ವಿಘ್ನವನ್ನು ದಯಪಾಲಿಸಲಿ ಅಂತ ಹೇಳಿ, ಗಣಪತಿಯನ್ನು ಕೊಂಡಾಡಿ ಮುಂದೆ ಶಾರದಾದೇವಿಯನ್ನು ಹೇಗೆ ಕೊಂಡಾಡಿದ್ದಾರೆ.

ಶಿಷ್ಯ

ಹೇಗೆ ಕೊಂಡಾಡಿದ್ದಾರೆ ಗುರುವೆ ?

ನಿರೂಪಕ

ಹೀಗಪ್ಪ

ಶರಣು ಶರಣಮ್ಮ ತಾಯಿ ಶರಣಮ್ಮ ಶಾರದೆ
ಶರಣೆಂದು ಬೇಡುವೆ ಓ ಶಾರದಾಂಬ
ಓ ಶಾರದಾಂಬ | ೧೦

ವಾಣಿ ಪನ್ನಗವೇಣಿ ವಾಣಿ ಬ್ರಹ್ಮನ ರಾಣಿ
ಜಾಣೆಯೆ ಸಲಹಮ್ಮ ಓ ಶಾರದಾಂಬ
ಓ ಶಾರದಾಂಬ | ೧೧

ಅಯ್ಯಾ ಮಗು, ಸತ್ಯಲೋಕದ ಒಡೆಯನಾದ ಬ್ರಹ್ಮನ ರಾಣಿ ಶಾರದಾಂಬೆಯನ್ನು ಕೊಂಡಾಡಿ ಮುಂದೆ ಕಥಾಭಾಗವನ್ನು ಹೇಗೆ ಹೇಳಲಾಗುತ್ತೆ.

ಶಿಷ್ಯ

ಹೇಗೆ ಹೇಳಲಾಗುತ್ತೆ ಸ್ವಾಮಿ ?

ನಿರೂಪಕ

ಇಳೆಯೊಳು ಮೋಕ್ಷಕೆ ತವರೂರು ಎನಿಸೀದ
ಕೈಲಾಸ ಪರ್ವತದಿ ಹರನು ಪಾರ್ವತಿಯು
ಹರನು ಪಾರ್ವತಿಯು |
ದಿತ್ ತಳಂಗು ತಕದಿಮಿತ ೧೨

ಮಗು, ಕೈಲಾಸಪರ್ವತವೆಂದರೆ ಮೋಕ್ಷಕ್ಕೆ ಸಾಧನವಾದ ರಜತಪರ್ವತ. ಅದು ಹಿಮಾಲಯ ಪರ್ವತವೆಂದೂ ಪ್ರಸಿದ್ಧಿಯಾಗಿದೆ. ಅಂತಹ ಕೈಲಾಸ ಪರ್ವತದಲ್ಲಿ ಪಾರ್ವತಿ ಪರಮೇಶ್ವರರು ವೃಷಭಾರೂಢರಾಗಿದ್ದಾರೆ. ಜಟಾಮಕುಟದಲ್ಲಿ ಗಂಗಾಭವಾನಿ, ತೊಡೆಯ ಮೇಲೆ ಗೌರೀದೇವಿ, ತ್ರಿಶೂಲ ಡಮರುಗ ಸರ್ಪಭೂಷಣನಾಗಿ ಪರಮೇಶ್ವರನು ಒಡ್ಡೋಲಗ ದಿಂದ ಪ್ರಮಥಗಣರೊಡನೆ ಕೈಲಾಸದಲ್ಲಿರಲು ತ್ರಿಲೋಕ ಸಂಚಾರಿಗಳಾದ ಬ್ರಹ್ಮಮಾನಸ ಪುತ್ರರು ಕೈಯಲ್ಲಿ ಶ್ರೀಮಾತೆಯೆಂಬ ವೀಣೆಯನ್ನು ಹಿಡಿದು ಪರಮೇಶ್ವರನ ನಾಮಾಮೃತವನ್ನು ಸಂಕೀರ್ತನೆ ಮಾಡುತ್ತ ಕೈಲಾಸಕ್ಕೆ ಅವರು ಹೇಗೆ ದಯಮಾಡಿಸುತ್ತಿದ್ದಾರೆ ಎಂದರೆ-

ಶಿಷ್ಯ

ಹೇಗೆ ದಯಮಾಡಿಸುತ್ತಿದ್ದಾರೆ ಸ್ವಾಮಿ ?

ನಿರೂಪಕ

ಶಿವನೆ ಗಂಗಾಧರನೆ ಭವರೋಗ ವೈದ್ಯನೆ
ದೇವರದೇವ ಸ್ವಾಮಿ ಶಂಭುಲಿಂಗಾನೆ
ಶಂಭುಲಿಂಗಾನೆ |
ದಿತ್ ತಳಂಗು ತಕದಿಮಿತ ೧೩

ಇತ್ತ ನಾರದರು ಕೈಲಾಸಕ್ಕೆ ದಯಮಾಡಲು, ಬಂದಂತ ನಾರದ ಮಹಾಮುನಿಗಳನ್ನು ಪರಮೇಶ್ವರನು ಸಂತೈಸಿ ಉಚಿತವಾದ ಪೀಠವನ್ನು ಕೊಟ್ಟು ಕುಳ್ಳಿರಿಸಿ

ಈಶ್ವರ : ಅಯ್ಯಾ ನಾರದ, ಬಂದ ಸಮಾಚಾರವೇನು ? ಹೇಳುವಂತವನಾಗು.

ನಾರದ : ಪರಮಾತ್ಮ ಕೇಳುವಂತವನಾಗು, ಧರಣಿಯ ಜನರು-

ಮಾರಹರನೆ ನಿನ್ನ ಧ್ಯಾನವ ಮರೆಯುತ್ತ
ಮಾರಿ ಮಸಣಿಯರನು ಪೂಜಿಸುತಿಹರು
ಪೂಜಿಸುತಿಹರು | ೧೪

ಅಂದ ಹಾಗೆ ಮಹಾದೇವ, ಬಹಳ ಪ್ರಾಚೀನ ಕಾಲದಿಂದಲೂ ಯುಗಯುಗಗಳಿಂದ ದೇವತಾರಾಧನೆಯು ಹೇಗೆ ನಡೆಯುತ್ತ ಇದ್ದುದು ಎಂದರೆ -

ಬ್ರಹ್ಮಾ ಕೃತಯುಗೇ ಪೂಜ್ಯ : ತ್ರೇತಾಯಾಂ ಭಗವಾನ್ ರವಿಃ
ದ್ವಾಪರೇ ವಿಷ್ಣುದೈವಂತು ಕಲೌರುದ್ರೋ ಮಹೇಶ್ವರಃ ೧೫

ಅಂತಹದರಲ್ಲಿ ಕೃತಯುಗದಲ್ಲಿ ಬ್ರಹ್ಮನೇ ದೇವರೆಂತಲೂ ತ್ರೇತಾಯುಗದಲ್ಲಿ ಭಗವಾನ್ ಸೂರ್ಯದೇವನೇ ದೇವರೆಂತಲೂ ದ್ವಾಪರ ಯುಗದಲ್ಲಿ ವಿಷ್ಣುವೇ ದೇವರೆಂತಲೂ ಕಲಿಯುಗದಲ್ಲಿ ನೀನೇ ದೇವರೆಂದೂ ಹೇಳುತ್ತಿರುವಾಗ ಭೂಲೋಕದಲ್ಲಿ ಎಲ್ಲೆಲ್ಲಿ ನೋಡಿದರೂ ಮಾರಿ ಮಸಣಿ ಮುಂತಾದ ಕ್ಷುದ್ರದೇವತೆಗಳನ್ನು ಆರಾಧಿಸುತ್ತಿರುವರು ಪರಮಾತ್ಮ-

ಪುಣ್ಯ ಭೂಮಿ ಪುಣ್ಯ ನದಿಯು ಪುಣ್ಯ ಪುರುಷರಿಂ ಧರಣಿ
ಗಣ್ಯವೆಂದೆನಿಸಿತ್ತು ಹರ ನಿನ್ನ ದಯದಿ
ಹರ ನಿನ್ನ ದಯದಿ | ೧೬

ಅಂದ ಹಾಗೆ ಅಂತಹ ಪುಣ್ಯಭೂಮಿ ಪುಣ್ಯನದಿಗಳಿಂದ ಕೂಡಿ ಈಗಿನವರೆಗೆ ಮೆರೆಯುತ್ತಿದ್ದ ಭೂಲೋಕದಲ್ಲಿ ಶಕ್ತಿ ಹೆಚ್ಚಿ ನಿನ್ನ ಮೇಲಿನ ಭಕ್ತಿ ಇಲ್ಲದಂತಾಗಿದೆ.

ನಂದಿ : ಪರಮಾತ್ಮ, ನಾರದರು ಹೇಳುತ್ತಿರುವಂತೆ ಭೂಲೋಕ ಅಂತಪ್ಪ ಪುಣ್ಯಭೂಮಿಯೇ? ಆ ಪುಣ್ಯನದಿಗಳಿಂದ ಪವಿತ್ರವಾಗಿರುವ ಆ ಭೂಮಿಯನ್ನು ನಾನು ಕಣ್ಣಾರೆ ಕಾಣಬೇಕೆಂಬ ಹಂಬಲ ಉಂಟಾಗುತ್ತಿದೆ ಪ್ರಭು.

ನಾರದ : ನಂದೀಶ, ನನ್ನ ಮಾತುಗಳನ್ನು ಸಾವಧಾನದಿಂದ ಆಲಿಸುವಂತವನಾಗು.

ನಂದಿ : ನಾರದರೆ, ನನ್ನ ಬಯಕೆಯನ್ನು ಈಡೇರಿಸುವ ಮಹಾದೇವನಿರುವಾಗ ನೀವೇಕೆ ತಡೆಯುತ್ತೀರಿ. ಸುಮ್ಮನಿರಿ. ಮಹಾದೇವ ನನಗೆ ಅಪ್ಪಣೆಯೆ?

ಈಶ್ವರ : ತಥಾಸ್ತು. ನಂದೀಶ, ನಿನ್ನ ಅಪೇಕ್ಷೆಯಂತೆಯೇ ಆಗಲಿ. ನೀನು ಭೂಲೋಕಕ್ಕೆ ಹೋಗಿ ಶಿವತತ್ತ್ವ ಮಹಿಮೆಯನ್ನು ಸಾರಿ ಜಯಶೀಲನಾಗಿ ಬರುವಂತವನಾಗು.

ನಿರೂಪಕ

ಪರಮೇಶ್ವರನು ಇಂತು ನಂದೀಶ್ವರನಿಗೆ ಅಪ್ಪಣೆಯನ್ನು ಮಾಡಲು, ನಂದೀಶ್ವರನಾದರೋ ಪಾರ್ವತೀಪರಮೇಶ್ವರರನ್ನು ಪ್ರದಕ್ಷಿಣೆ ಮಾಡಿ ಭೂಲೋಕಕ್ಕೆ ಬಂದಿದ್ದಾರೆ.

ಶಿಷ್ಯ

ಎಲ್ಲಿಗೆ ಬಂದರು ಸ್ವಾಮಿ ?

ನಿರೂಪಕ

ಶಿಳ್ಳಿಗನ ಹಾಳಲ್ಲಿ ಉಲ್ಲಾಸಗೊಂಡವರಾಗಿ
ನಂದೀಕುಳಿಯೆಂಬಲ್ಲಿ ನಯನದಿಂ ಮಲಗಿ
ನಯನದಿಂ ಮಲಗಿ
ಧಿತ್ತಳಂಗು ತಕಧಿಮಿತಾ ೧೭

ಅಯ್ಯಾ ಮಕ್ಕಳೆ, ಇತ್ತ ನಂದೀಶ್ವರನು ಶಿಳ್ಳಿಗನಹಾಳಲ್ಲಿ ವಿಶ್ರಾಂತಿಯನ್ನು ಹೊಂದಿ ನಂದಿಕುಳಿಯೆಂಬಲ್ಲಿ ಮಲಗಿ ನಿದ್ರೆಯಂ ಮುಗಿಸಿಕೊಂಡು ಮುಂದೆ ಪ್ರಯಾಣ ಬೆಳೆಸಿದ್ದಾರೆ.

ಶಿಷ್ಯ

ಎಲ್ಲಿಗೆ ಪ್ರಯಾಣ ಬೆಳೆಸಿದರು ಸ್ವಾಮಿ ?

ನಿರೂಪಕ

ಸಿಂಧಗನ ಹಳ್ಳಿಯಲ್ಲಿ ಸುಂದರದಿಂ ತಾವು
ಚಂದ್ರಧರನ ಭಜಿಸಿ ಕುಳಿತಿರಲು ಅಲ್ಲಿ
ಕುಳಿತಿರಲು ಅಲ್ಲಿ | ೧೮

ಸಿಂಧಗಿಯೆಂಬ ಗ್ರಾಮದ ಅಡವಿಯಲ್ಲಿ ನಂದೀಶ್ವರನು ಕುಳಿತಿರಲು ಇತ್ತಲಾ ಅನಿಮಿಷಾರ್ಯನೆಂಬ ದೊರೆಯು ತನ್ನ ಸೇನಾಸಪರಿವಾರದಿಂದೊಡಗೂಡಿ ಅರಣ್ಯಕ್ಕೆ ಬೇಟೆ ಯಾಡಲು ಬಂದಿರುವಾಗ ಬಿಸಿಲಿನ ತಾಪದಿಂದ ಬಾಯಾರಿಕೆಯನ್ನು ತಡೆಯಲಾರದೇನೆ ಕಾಡಿನಲ್ಲಿ ಬರುತ್ತಿರಲು ಸರೋವರವನ್ನು ಕಂಡು ನೀರು ಕುಡಿಯುವುದಕ್ಕೆ ಪ್ರಯತ್ನ ಮಾಡಿದ್ದಾನೆ. ಅಂದ ಹಾಗೆ ಅವನು ಯಾವ ಆಹಾರವನ್ನೇ ಆಗಲಿ ಪಾನೀಯವನ್ನೇ ಆಗಲಿ ಸೇವಿಸಲು ಲಿಂಗಪೂಜೆ ಆಗಲೇಬೇಕು-ಲಿಂಗಪೂಜೆಯಿಲ್ಲದೆ ಸೇವಿಸುತ್ತಿರಲಿಲ್ಲ. ಏನು ಮಾಡುವುದಕ್ಕೂ ತೋಚದೆ ಇಲ್ಲಿ ಎಲ್ಲಾದರೂ ಲಿಂಗವಿರಬಹುದೇ ಎಂದು ಅಲೆಯುತ್ತಾ ಇದ್ದಾನೆ. ಅಂದರೆ ಬಹಳ ಪ್ರಾಚೀನ ಕಾಲದಲ್ಲಿ ಜ್ಯೋತಿರ್ಲಿಂಗಗಳು.

ಸೌರಾಷ್ಟ್ರೇ ಸೋಮನಾಥಂ ಚ ಶ್ರೀ ಶೈಲೇ ಮಲ್ಲಿಕಾರ್ಜುನಂ
ಉಜ್ಜಯಿನ್ಯಾಂ ಮಹಾಕಾಲಂ ಓಂ ಕಾಲಮಮಲೇಶ್ವರಂ
ಪರಲ್ಯಾಂ ವೈದ್ಯನಾಥಂಚ ಢಾಕಿನ್ಯಾಂ ಭೀಮಶಂಕರಂ
ಸೇತು ಬಂಧೇತು ರಾಮೇಶಂ ದಾರುಕವನೇ ನಾಗೇಶಂ
ವಾರಣಾಸ್ಯಾಂ ವಿಶ್ವೇಶ್ವರಂ ತ್ರ್ಯಂಬಕಂ ಗೌತಮೀ ತಟೇ
ಹಿಮಾಲಯೇತು ಕೇದಾರಂ ಘ್ರುಸ್ಯಣೇಶಂ ಶಿವಾಲಯೇ | ೧೯

ಅಂದ ಹಾಗೆ ಈಗಿನಂತೆ ಎಲ್ಲಾ ಕಡೆಗಳಲ್ಲೂ ಲಿಂಗಮೂರ್ತಿಗಳು ಇರಲಿಲ್ಲವಾದ್ದರಿಂದ ಪರಿತಪಿಸುತ್ತಾ ಇದ್ದ ಅನಿಮಿಷಾರ್ಯನನ್ನು ನಂದೀಶ್ವರನು ನೋಡಿ 'ಸಮಾಚಾರವೇನಪ್ಪಾ?' ಎಂದು ಕೇಳಲು ಅನಿಮಿಷಾರ್ಯನು :

ಹಸಿದೆನು ನನ್ನ ಸ್ವಾಮಿ ಪಶುಪತಿಯ ಕಾಣದೆ
ಹಸಗೆಟ್ಟು ಈ ಘೋರ ವಿಷಮಾದಡವಿಯೊಳು
ವಿಷಮಾದಡವಿಯೊಳು | ೨೦

'ಸ್ವಾಮಿ, ನಾನು ಬಿಸಿಲಿನ ಬೇಗೆಯಲ್ಲಿ ಬಾಯಾರಿದ್ದೇನೆ. ನಾನು ನೀರನ್ನು ಲಿಂಗಕ್ಕೆ ಸಮರ್ಪಿಸದೆ ಸೇವಿಸುವುದಿಲ್ಲ. ಇಲ್ಲಿ ಎಲ್ಲಿ ಹುಡುಕಾಡಿದರೂ ಲಿಂಗಗಳ ದರ್ಶನವೇ ಇಲ್ಲದಿರುವುದರಿಂದ ನನ್ನ ಪ್ರಾಣವೇ ಹಾರಿಹೋದಂತಾಗಿದೆ' ಎನ್ನಲು ಇತ್ತ ನಂದೀಶ್ವರನಾದರೋ ದಯೆಯಿಂದ ತನ್ನ ಇಷ್ಟಲಿಂಗವನ್ನು ಅನಿಮಿಷಾರ್ಯನಿಗೆ 'ನನ್ನಪ್ಪಾ, ನಿನ್ನ ಕರ್ತವ್ಯವನ್ನು ಮುಗಿಸಿಕೊಂಡು ಪುನಃ ಕೊಡಬಹುದು' ಎಂದು ಕೊಟ್ಟಿದ್ದಾರೆ. ಅನಿಮಿಷಾರ್ಯನಾದರೋ ನಂದೀಶ್ವರನ ಇಷ್ಟಲಿಂಗವನ್ನು ನೋಡಿದ ಮೇಲೆ ತನ್ನ ಅಂಗದಲ್ಲಿ ಲಿಂಗವನ್ನು ಇಟ್ಟು ಮೂರ್ತೀಭವಿಸಿ ಅನಿಮಿಷದೃಷ್ಟಿಯಿಂದ ನೋಡುತ್ತಿರುವಾಗ

ಲಿಂಗಮಧ್ಯೇ ಸರ್ವಂ ಖುತಂ ಜಗತ್ | ೨೧

ಎಂಬಂತೆ ಆ ಲಿಂಗದಲ್ಲಿ ಪರಮೇಶ್ವರನೇ ಮೂರ್ತೀಭವಿಸಿದಂತೆ ಆತನ ಕಣ್ಣಿಗೆ ಗೋಚರವಾಗಲು, ಅನಿಮಿಷಾರ್ಯನಾದರೋ ಆನಂದದಿಂದ ಅವನು ಹೇಗೆ ಶಿವನನ್ನು ಕೊಂಡಾಡುತ್ತಿದ್ದಾನೆಂದರೆ-

ಶಿಷ್ಯ

ಅವನು ಹೇಗೆ ಕೊಂಡಾಡ್ತ ಇದ್ದಾನೆ ಸ್ವಾಮಿ ?

ನಿರೂಪಕ

ಓಂ ನಮೋ ನಮೋ ನಟರಾಜ ನಮೋ
ಹರ ಜಟಾಜೂಟಧರ ಶಂಭೋ
ಓಂ ನಮೋ ನಮೋ ನಟರಾಜ
ಓಂ ನಮೋ ನಮೋ ನಟರಾಜ | ಪಲ್ಲವಿ |

ಗಂಗಾ ಗೌರಿ ಹೃದಯ ವಿಹಾರೀ
ಲೀಲಾ ಕಲ್ಪಿತ ಸಂಸಾರೀ
ಭಳಿರೇ ಭಾಸುರ ಬ್ರಹ್ಮಚಾರಿ
ಭಾವಜ ಮಧು ಸಂಹಾರೀ | ಓಂ ನಮೋ |

ಫಣಿಭೂಷಾ ಭಿಕ್ಷುಕ ವೇಷ
ಈಶ ತ್ರಿಭುವನ ಸಂಪೋಷಾ
ಸಕಲ ಚರಾಚರ ಮಂಗಳಾಕಾರ
ಹಾಲಾಹಲ ಸಂಹಾರ | ಓಂ ನಮೋ |* ೨೨

ಹೀಗೆ ಅನಿಮಿಷಾರ್ಯನು ಆನಂದಪರವಶನಾಗಿ ಆ ಶಿವಲಿಂಗವನ್ನು ನೋಡಿ ಹಾ: ಕೊಂಡಾಡಿ 'ಈ ಲಿಂಗ ಎಷ್ಟು ಮನೋಹಾರವಾಗಿದೆ!' ಎಂದು ಹೇಳುತ್ತ ಪ್ರೀತಿಯಿಂದ ಬಾಯಿಯಲ್ಲಿ ಇಟ್ಟುಕೊಂಡ ತಕ್ಷಣವೇನೇ ಅನಿಮಿಷಾರ್ಯನ ಪ್ರಾಣಪಕ್ಷಿಯು ಹಾರಿಹೋಗಿದೆ. ಇತ್ತ ನಂದಿಕೇಶ್ವರನಾದರೋ ಅನಿಮಿಷಾರ್ಯನು ಗತಿಸಿರುವುದನ್ನು ನೋಡಿ 'ಅಯ್ಯೋ ಕೆಟ್ಟೆ' ಎಂದು ಕೈಲಾಸಕ್ಕೆ ಹೋಗುತ್ತಾ ಇದ್ದಾನೆ.

ಕೆಟ್ಟೆನಕಟಾ ದೇವಾ ಭ್ರಷ್ಟನಾದೆನು ದೇವಾ
ಇಷ್ಟಲಿಂಗವ ಕೊಟ್ಟು ಕೆಟ್ಟೆನು ಹರನೇ
ಕೆಟ್ಟೆನು ಹರನೇ | ೨೩

ಎಂದ ಕಣ್ಣಿನಲ್ಲಿ ಅಶ್ರುಬಿಂದುಗಳನ್ನು ಧಾರಾಕಾರವಾಗಿ ಸುರಿಸುತ್ತಾ ಕೈಲಾಸಕ್ಕೆ ಹೋಗಲು, ದ್ವಾರಪಾಲಕನು ನಂದಿಕೇಶ್ವರನನ್ನು ತಡೆದು

ಲಿಂಗವಿಲ್ಲದ ಭವಿ ಇಂಗಿತವರಿಯದೆ
ಹೆಂಗಪ್ಪ ಕೈಲಾಸ ಪುರಕೆ ನೀ ಬಂದೆ
ಪುರಕೆ ನೀ ಬಂದೆ | ೨೪

ನೀನು ಲಿಂಗವಿಲ್ಲದ ಮೇಲೆ ಕೈಲಾಸಕ್ಕೆ ಬರಲು ಅರ್ಹನಲ್ಲವೆಂದು ನಿರಾಕರಿಸುತ್ತ ನಂದೀಶ್ವರನನ್ನು ಹಿಂದಕ್ಕೆ ತಳ್ಳುತ್ತಿರಲು ನಂದೀಶ್ವರನಾದರೋ ಪರಮೇಶ್ವರನನ್ನು ಕುರಿತು ಏನೆಂದು ಬೇಡುತ್ತಾ ಇದ್ದಾನೆ.

ಪಾಪಿಯಾದೆನು ನಾನು ಭೂತಲದೊಳು ಶಿವನೆ
ಫಾಲನೇತ್ರನೆ ಎನ್ನ ಕಾಪಾಡು ಹರನೇ
ಕಾಪಾಡು ಹರನೇ | ೨೫

ಎಂದು ನಂದೀಶ್ವರನು ಆರ್ತಧ್ವನಿಯಿಂದ ಪರಮೇಶ್ವರನನ್ನು ಕುರಿತು ಮೊರೆಯಿಡಲು ಪರಮೇಶ್ವರನು ದ್ವಾರಪಾಲಕನನ್ನು ನೋಡಿ ಏನೆಂದು ಶಾಪವನ್ನು ಕೊಡುತ್ತಾ ಇದ್ದಾರೆ.

ಶರಣ ನಂದೀಶನಿಗೆ ಶರೀರವೆಲ್ಲವೂ ಲಿಂಗ
ಭವಿಯೆಂದು ಜರಿದುದಕೆ ಭವಿಯಾಗಿ ಹುಟ್ಟು
ಭವಿಯಾಗಿ ಹುಟ್ಟು | ೨೬

ಅಲ್ಲದೆ ಅಲ್ಲಿ

ಕಾಳಾಂಚಿರಾಯನ ಗರ್ಭದೊಳು ಜನಿಸಿ
ಕಲ್ಯಾಣದರಸು ಬಿಜ್ಜಳನಾಗು
ಬಿಜ್ಜಳನಾಗು | ೨೭

ಪರಮೇಶ್ವರನ ಶಾಪದಿಂದ ನೊಂದ ದ್ವಾರಪಾಲಕನಾದರೂ ದೀನತೆಯಿಂದ ಪರಮೇಶ್ವರನಲ್ಲಿ ಕ್ಷಮೆಯನ್ನು ಬೇಡುತ್ತ

ಎಂದಿಗೆನ್ನಯ ಶಾಪ ಹಿಂಗುವುದು ಸದ್ಗುರುವೆ
ಎಂದು ನಿಮ್ಮನು ನಾನು ನೋಡುವೆನು ದೇವಾ
ನೋಡುವೆನು ದೇವಾ | ೨೮

'ಮಹಾದೇವ ಅರಿಯದೆ ಜರಿದು ಕೆಟ್ಟೆನು. ಮತ್ತೆ ನಿನ್ನ ದಿವ್ಯ ಸನ್ನಿಧಿಯನ್ನು ನಾನು ಎಂದಿಗೆ ನೋಡುತ್ತೇನೆ' ಎಂದು ಬೇಡಿಕೊಳ್ಳಲು ಪರಮೇಶ್ವರನು ಸದುತ್ತರವಾಗಿ

ಜಗದೇವ ಮಲ್ಲೆ ಬೊಮ್ಮಣ್ಣಗಳು ನಿನ್ನ
ಶಿರವನ್ನು ಹರಿಯುವರು ಬಂದು ನೀ ಸೇರು
ಬಂದು ನೀ ಸೇರು | ೨೯

ಕಲ್ಯಾಣದಲ್ಲಿ ಕ್ರಾಂತಿಯಾಗಿ ಸೋಮಯಾಜಿಯಕ್ಕನ ಮಕ್ಕಳಾದ ಜಗದೇವ ಮಲ್ಲೆಬೊಮ್ಮಣ್ಣಗಳು ನಿನ್ನ ಶಿರಸ್ಸನ್ನು ಕತ್ತರಿಸುವರು. ಆಗ ನೀನು ಬಂದು ನನ್ನನ್ನು ಸೇರಬಹುದು ಎಂದು ಪರಮೇಶ್ವರನು ಹೇಳಿಕಳಿಸಿದನು.

ಇತ್ತ ಕಡೆ ಭೂಲೋಕದಲ್ಲಿ ಇಂಗಳೇಶ್ವರ ಬಾಗೇವಾಡಿಯಲ್ಲಿ ಮಂಡಿಗೆ ಮಾದರಸರು ಹಾಗೂ ಅವರ ಧರ್ಮಪತ್ನಿಯಾದ ಮಾದಲಾಂಬಿಕಾದೇವಿಗಾದರೋ ಓರ್ವಳೆ ಸುಕುಮಾರಿ. ಗಂಡು ಸಂತಾನವಿಲ್ಲವೆಂದು ದಂಪತಿಗಳೀರ್ವರೂ ಪುತ್ರಸಂತಾನಕ್ಕಾಗಿ ನಂದೀಶ್ವರ ವ್ರತವನ್ನು ಆಚರಿಸುತ್ತಾ ಇದ್ದಾರೆ. ಹಿಡಿದ ವ್ರತಗಳ ಬಿಡದೆ ನಡೆದರೆ ಮೃಡನ ಪಾದವ ಕಾಂಬೆವೆಂದು ನಂಬಿ ಏಕಚಿತ್ತದಿಂದ ದಯಾಮಯನಾದ ಭಗವಂತನನ್ನು ಏನೆಂದು ಕೊಂಡಾಡುತ್ತಿದ್ದಾರೆ.

ಜಯ ಜಯ ಶಿವಶಂಕರಾ - ದಯಾಕರ
ಜಯ ಜಯ ಶಿವಶಂಕರಾ |

ಪಾವನ ಮೂರ್ತಿ ಪರಮ ಸುಕೀರ್ತಿ
ಪರಿಹರಿಸೆನ್ನೆಯ ಮನದ ಶಂಕೆಯ |

ಬಂಧನವ ಹರಸುಮಾನಂದ ಮೂರುತಿ
ಚಂದದಿ ಬೇಡುವೆ ತಂದೆ ನೀ ಪಾಲಿಸೊ | ೩೦

ದಂಪತಿಗಳೀರ್ವರೂ ಶ್ರದ್ಧಾಭಕ್ತಿಗಳಿಂದ ಪರಮೇಶ್ವರನನ್ನು ಬೇಡುತ್ತಾ ಇರುವಾಗ ದೈವಾನುಗ್ರಹದಿಂದ -

ಶಿಷ್ಯ

ಏನು ಸೂಚನೆ ತೋರುದ್ರು ಸ್ವಾಮಿ ?

ನಿರೂಪಕ

ರಾತ್ರಿ ಸ್ವಪ್ನದಲ್ಲಿ ಮಾದಲಾಂಬಿಕಾದೇವಿಗೆ ಕಾಣಿಸಿಕೊಂಡ ನಂದೀಶ್ವರನು 'ಅಮ್ಮಾ, ನಿನ್ನ ಗರ್ಭಸಾಗರದಲ್ಲಿ ನಾನು ಜನಿಸುತ್ತೇನೆ ತಾಯಿ' ಎಂದು ಸೂಚನೆ ತೋರಲು ತನ್ನ ಪತಿಯಾದ ಮಾದರಸರಿಗೆ ಮಾದಲಾಂಬಿಕೆ ಹೇಳಿದಳು.

ಶಿಷ್ಯ

ಏನಂತ ಹೇಳುದ್ರು ಸ್ವಾಮಿ ?

ನಿರೂಪಕ

ಹರನೊಲಿದರೆ ಕೊರಡು ಕೊನರುವುದಯ್ಯ
ಹರನೊಲಿದರೆ ಬರಡು ಹಯನಹುದಯ್ಯ
ಹರನೊಲಿದರೆ ವಿಷವು ಅಮೃತವಹುದಯ್ಯ ನಂದೀಶ್ವರಾ ೩೧

ತಂದೆ ನಂದೀಶ್ವರ ನಿನ್ನ ಕೃಪೆಯಿದ್ದಂತಾಗಲೆಂದು ದಂಪತಿಗಳೀರ್ವರೂ ಮಾತನಾಡುತ್ತಾರೆ.

ಶಿಷ್ಯ

ಅವರು ಏನು ಮಾತನಾಡಿದರು ಗುರುವೆ ?

ನಿರೂಪಕ

ಮಗು, ದಂಪತಿಗಳೀರ್ವರೂ ಸಂತೋಷದ ಮಾತುಗಳಾಡಿದರು. ದೈವಾನುಗ್ರಹದಿಂದ ಮಾದಲಾಂಬಿಕಾದೇವಿಗೆ ಗರ್ಭಸೂಚನೆ ತೋರಿತ್ತಾಗಿ

ಒಂದೆರಡು ಮೂರ್ನಾಲ್ಕು ಐದಾರು ಏಳೆಂಟು
ಸಂದಿಸಿತು ನವಮಾಸ ಇಂದುಮುಖಿಗಾಗ
ಇಂದುಮುಖಿಗಾಗ | ೩೨

ಶಿಷ್ಯ

ಆಮೆಲೇನಾಯಿತು ಸ್ವಾಮಿ ?

ನಿರೂಪಕ

ಮಕ್ಕಳೆ, ಒಂಬತ್ತು ತಿಂಗಳು ತುಂಬಿ ಪ್ರಸವವೇದನೆ ಪ್ರಾಪ್ತವಾಗಿ ಶುಭಲಗ್ನ ಶುಭವಾರ ಶುಭಕರಣದಲ್ಲಿ ಗಂಡುಮಗು ಜನನ ವಾಗಿದೆ.

ಶಿಷ್ಯ

ಆಮೇಲೇನು ಮಾಡಿದರು ಸ್ವಾಮಿ ?

ನಿರೂಪಕ

ಜಾಯತೇ ಜನ್ಮ ಶೂದ್ರಾಣಾಂ ವೇದ ಪಾಠಾತ್ತು ವಿಪ್ರಾಣಾಂ
ಬ್ರಹ್ಮ ಜ್ಞಾನಾತ್ತು ಬ್ರಾಹ್ಮಣಃ ೩೩

ಅಂದಹಾಗೆ ಎಂಥಾ ಸತ್ಕುಲ ಪ್ರಸೂತನಾದರೂ ಹುಟ್ಟಿದ ಮೇಲೆ ಹೆತ್ತ ಸೂತಕವು ಹತ್ತು ದಿನಕೆ ಪರಿಹಾರ ; ಮೃತ್ಯುಸೂತಕವು ಹನ್ನೊಂದು ದಿನಕೆ, ಮತ್ತೆ ಋಣ ಸೂತಕವು ಜನ್ಮ ಜನ್ಮಾಂತರಕು ಎತ್ತ ಹೋದರೂ ಬಿಡದೆ ಬೆನ್ನ ಹತ್ತಿ ಕಾಡುವುದು ಎಂಬಂತೆ ಅವರ ಪದ್ಧತಿಗನುಸಾರವಾಗಿ ಹುಟ್ಟಿದ ಸುಕುಮಾರನಿಗೆ ಸೂತಕಸ್ನಾನಾದಿಗಳಿಂದ ಶುಚೀರ್ಭೂತನನ್ನಾಗಿ ಮಾಡಿ ನಿರ್ಮಲವಾದ ಬಟ್ಟೆಗಳನ್ನು ಹಾಕಿ ತೊಟ್ಟಿಲಲ್ಲಿ ಮಲಗಿಸಿ ಮುತ್ತೈದೆಯರೆಲ್ಲ ಸೇರಿ ಬಾಲಕನನ್ನು ತೂಗುತ್ತಾ ಇದಾರೆ

ಶಿಷ್ಯ

ಅವರು ಹೇಗೆ ತೂಗಿದರು ಗುರುವೆ?

ನಿರೂಪಕ

ತೂಗಿದರು ಬಾಲನನ್ನು ನಾಗವೇಣಿಯರೆಲ್ಲ
ಜೋಗುಳವ ಹಾಡುತ್ತ ಜೋಯೆಂದು ತೂಗೆ
ಜೋಯೆಂದು ತೂಗೆ | ೩೪

ಹೀಗೆ ಮುತ್ತೈದೆಯರು ಬಾಲಕನನ್ನು ತೂಗಿದ್ದಾರೆ. ಅನಂತರ ಸುಕುಮಾರನಿಗೆ ಹನ್ನೊಂದನೇ ದಿವಸಕ್ಕೆ ನಾಮಕರಣವನ್ನು ಮಾಡಲು ಉದ್ದೇಶಿಸಿದ್ದಾರೆ. ಇತ್ತ ಸಂಗಮೇಶ್ವರನ ಬಳಿಯಿಂದ ಜಾತವೇದ ಮಹಾಮುನಿಗಳು ಬಂದಿದ್ದಾರೆ.

ಶಿಷ್ಯ

ನಿರೂಪಕ

ಅಯ್ಯಾ ಮಗು, ಜಾತವೇದ ಮಹಾಮುನಿಗಳು ಬಂದು ಸುಕುಮಾರನನ್ನು ತೊಡೆಯ ಮೇಲೆ ಮಲಗಿಸಿಕೊಂಡು ತ್ರಿಪುಂಡ್ರಧಾರಣ ಅಂದರೆ ಭಸ್ಮವನ್ನು ತ್ರಿವಳಿಗಳಂತೆ ಧರಿಸಿ ಸುಕುಮಾರನ ಕಿವಿಯಲ್ಲಿ ಶಿವಪಂಚಾಕ್ಷರಿ ಮಹಾಮಂತ್ರವನ್ನು ಅವರು ಹೇಗೆ ಉಪದೇಶ ಮಾಡ್ತಾ ಇದಾರೆ.

ಶಿಷ್ಯ

ಹೇಗೆ ಉಪದೇಶ ಮಾಡಿದರು ಸ್ವಾಮಿ ?

ನಿರೂಪಕ

ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ

ನುಡಿ ಮಗುವೆ ಶಿವನ ನಾಮಾವಳಿ |: ಸೊಲ್ಲು |

ಚಂದ್ರಧರನನು ಚಂದದಿ ಪಾಡುತ-ಭವ
ಬಂಧನದಿಂ ಪಾರಾಗಲು ನೀ | ಸೊಲ್ಲು |

ದೇವಾಧಿ ದೇವನ ಜಗದೋದ್ಧಾರನ
ಪಾವನ ಮೂರುತಿ ವರಶಿವನನು ನೀ | ನುಡಿ |

ಭಕ್ತರ ಹೃದಯದಿ ನೆಲಸಿರುವಾತನ
ಮುಕ್ತಿಯ ಕೊಡುವ ಮಹಾದೇವನ | ನುಡಿ | ೩೫

ಹೀಗೆ ಜಾತವೇದ ಮಹಾಮುನಿಗಳು ಮಸ್ತಕದ ಮೇಲೆ ಹಸ್ತವನ್ನಿಟ್ಟು, ಅಂಗದ ಮೇಲೆ ಲಿಂಗವನ್ನು ಧರಿಸಿ ಸುಕುಮಾರನಿಗಾದರೋ 'ಬಸವಣ್ಣ ಬಸವಣ್ಣ' ಎಂದು ನಾಮಕರಣ ಮಾಡಿದ್ದಾರೆ.

ಶಿಷ್ಯ

ಆಮೇಲೆ ಏನ್ ಗುರುಗಳೇ ?

ನಿರೂಪಕ

ಅನಂತರ ಜಾತವೇದ ಮಹಾಮುನಿಗಳು ಮಾದರಸ ಮಾದಲಾಂಬಿಕೆಯರಿಗೆ 'ಈ ಸುಕುಮಾರನು ಎಂಟು ವರುಷಗಳವರೆಗೆ ಮಾತ್ರ ನಿಮ್ಮವ, ಅನಂತರ ನಮ್ಮ ಆಶ್ರಮಕ್ಕೆ, ಕೂಡಲಸಂಗಮದೇವನ ಸನ್ನಿಧಿಗೆ ಕಳುಹಿಸಿಕೊಡಬೇಕೆಂದು' ಹೇಳಿ ಅವರ ನಿವಾಸಕ್ಕೆ ದಯ ಮಾಡಿದ್ದಾರೆ.

ಶಿಷ್ಯ

ಮುಂದೇನು ನಡೆಯಿತು ಗುರುಗಳೆ?

ನಿರೂಪಕ

ಕಂದನ ಲೀಲೆಯ ಚಂದಾದಿ ನೋಡುತ
ತಂದೆ ತಾಯಿಗಳು ಆನಂದಪಟ್ಟರು
ಆನಂದಪಟ್ಟರು | ೩೬

ಬಸವಣ್ಣನ ತಂದೆ ತಾಯಿಗಳಾದರೋ ಬಹುದಿವಸಕ್ಕೆ ಗಂಡು ಮಗನು ಹುಟ್ಟಿದ್ದಾನೆ ಎಂದು ಸಂತೋಷದಿಂದ ಸುಕುಮಾರನನ್ನು ನೋಡಿ ಕಾಲವನ್ನು ಕಳೆಯುತ್ತಾ ಇದ್ದಾರೆ. ಸುಕುಮಾರನಿಗೆ ಐದು ವರ್ಷವಾಗುತ್ತಾ ಬಂದಿದೆ -

ರಾಜವತ್ ಪಂಚವರ್ಷಾಣಿ
ದಶವರ್ಷಾಣಿ ದಾಸವತ್
ಪ್ರಾಪ್ತೇತು ಷೋಡಶೇ ವರ್ಷೇ
ಪುತ್ರೇ ಮಿತ್ರವದಾಚರೇತ್ ೩೭

ಶಿಷ್ಯ

ಹಾಗಂದ್ರೇನು ಗುರುಗಳೇ ?

ನಿರೂಪಕ

ಅಯ್ಯಾ ಮಗು 'ರಾಜವತ್ ಪಂಚವರ್ಷಾಣಿ' ಅಂದರೆ ಮಕ್ಕಳು ಹುಟ್ಟಿದ ಐದು ವರ್ಷದವರೆಗೆ ರಾಜರಂತೆಯೂ ಐದು ವರ್ಷ ಕಳೆದ ಮೇಲೆ ಹತ್ತನೇ ವರ್ಷದವರೆಗೆ ಸೇವಕನಂತೆಯೂ ಹತ್ತು ವರ್ಷ ಕಳೆದು ಹದಿನಾರನೇ ವಯಸ್ಸಿಗೆ ಬಂದಾಗ ಸ್ನೇಹಿತನಂತೆಯೂ ಕಾಣಬೇಕು ಎಂದು ನೀತಿಕಾರರು ಅಪ್ಪಣೆಯನ್ನು ಮಾಡಿದ್ದಾರೆ.

ಶಿಷ್ಯ

ಸರಿ ಗುರುಗಳೆ, ಮುಂದೇನಾಯಿತು ?

ನಿರೂಪಕ

ಅಯ್ಯಾ ಮಗು, ಐದು ವರ್ಷವು ತುಂಬಿ ಆರನೇ ವರ್ಷಕ್ಕೆ ವಿದ್ಯಾಭ್ಯಾಸಕ್ಕಾಗಿ ಗುರುಕುಲಾಶ್ರಮಕ್ಕೆ ಕಳುಹಿಸಿಕೊಟ್ಟಿದ್ದಾರೆ.

ಶಿಷ್ಯ

ಆಗಿನ ವಿದ್ಯಾಭ್ಯಾಸದ ಪರಿಯಾದರೂ ಹೇಗಿತ್ತು ಗುರುವೆ ?

ನಿರೂಪಕ

ಅಯ್ಯಾ ಮಗು -

ಕೃತಯುಗದೊಳು ಶ್ರೀಗುರು ಶಿಷ್ಯಂಗೆ
ಬಡಿದು ಬುದ್ಧಿಯ ಕಲಿಸೆ
'ಆಗಲಿ ಮಹಾಪ್ರಸಾದ' ಎಂಬನು.
ದ್ವಾಪರ ಯುಗದೊಳು ಶ್ರೀಗುರು ಶಿಷ್ಯಂಗೆ
ಬೈದು ಬುದ್ಧಿಯ ಕಲಿಸೆ,
'ಆಗಲಿ ಮಹಾಪ್ರಸಾದ' ಎಂಬನು
ತ್ರೇತಾಯುಗದೊಳು ಶ್ರೀಗುರು ಶಿಷ್ಯಂಗೆ
ಝಂಕಿಸಿ ಬುದ್ಧಿಯ ಕಲಿಸೆ
'ಆಗಲಿ ಮಹಾಪ್ರಸಾದ' ಎಂಬನು
ಕಲಿಯುಗದೊಳು ಶ್ರೀಗುರು ಶಿಷ್ಯಂಗೆ
'ನಮೋ ನಮೋ' ಎಂದು ಬುದ್ಧಿಯ ಕಲಿಸೆ
'ಆಗಲಿ ಮಹಾಪ್ರಸಾದ' ಎಂಬನು.

ಈ ಪ್ರಕಾರವಾಗಿ ಆಯಾ ಯುಗಕ್ಕನುಸಾರವಾಗಿ ವಿದ್ಯಾಭ್ಯಾಸವು ನಡೆಯುತ್ತಾ ಇರಲು ಉಪಾಧ್ಯಾಯರು ಹೇಳುವುದೇ ಒಂದಾದರೆ ಬಸವಣ್ಣನವರು ಹೇಳುತ್ತಿರುವ ರೀತಿಯೇ ಬೇರೆಯಾಗುತ್ತಿರಲು, ತಂದೆತಾಯಿಗಳು ವಿದ್ಯಾಭ್ಯಾಸವು ಕ್ರಮವಾಗಿ ನಡೆದಿದೆಯೇ ಎಂದು ಕೇಳಿದರೆ ಉಪಾಧ್ಯಾಯರು ತಂದೆ ತಾಯಿಗಳಿಗೆ 'ನಾವು ಹೇಳುವುದೇ ಒಂದಾದರೆ ನಿಮ್ಮ ಮಗನು

ಹೇಳುವುದೇ ಬೇರೆಯಾಗುತ್ತದೆ' ಎಂದು ಹೇಳಲು ಬಸವಣ್ಣನವರನ್ನು ತಂದೆ ತಾಯಿಗಳು ಕೇಳಿದಾಗ ಬಸವಣ್ಣನವರು ಪ್ರತಿಯುತ್ತರವನ್ನು ಹೇಳಿದ್ದಾರೆ.

ಶಿಷ್ಯ

ಏನು ಉತ್ರ ಕೊಟ್ರು ಗುರುವೆ ?

ನಿರೂಪಕ

ವೇದ ಮಂತ್ರಕೆ ಮೊದಲು ಆದಿ ಪಂಚಾಕ್ಷರಿಯು
ಮೇದಿನಿಯೊಳು ಗುರುವು ಬೋಧಿಸಿಹರೆನಗೆ
ಬೋಧಿಸಿಹರೆನಗೆ |
ಧಿತ್ತಳಂಗು ತಕದಿಮಿತ ೩೮

ಅಯ್ಯಾ ತಂದೆ, ಈಗಿನ ವಿದ್ಯೆಯೆಂದರೆ

ಸುವಿದ್ಯಃ ಸುಕೃತಃ ಚೈವ ನವಿದ್ಯೇತೇ ನದೃಶ್ಯೇತೇ | ೩೯

'ಈಗಿನ ವಿದ್ಯೆಯು ನನಗೆ ಅಷ್ಟಾಗಿ ರುಚಿಸುವುದಿಲ್ಲ. ನನ್ನ ಗುರುವಾದರೋ ಶಿವಪಂಚಾಕ್ಷರಿ ಮಹಾಮಂತ್ರವನ್ನು ಉಪದೇಶಿಸಿದ್ದಾರೆ. ಅಂತಹ ಮಂತ್ರವೇ ನನಗೆ ಸರ್ವವಿದ್ಯೆ' ಎಂದು ಉತ್ತರವನ್ನು ಕೊಟ್ಟಿದ್ದಾನೆ.

ಶಿಷ್ಯ

ಶಾಬ್ಬಾಸ್. ಆಮೇಲೆ ಹೇಳಿ ಗುರುವೆ !

ನಿರೂಪಕ

ಉಪಾಧ್ಯಾಯರು, 'ಅಯ್ಯಾ ಮಗು, ಅವರ ತಂದೆತಾಯಿಗಳ ಮುಂದೆ ನಾನು ಹೇಳಿದ ವಿದ್ಯೆಯನ್ನು ಸ್ವಲ್ಪವಾದರೂ ಉಚ್ಚರಿಸದೆ ಶಿವಪಂಚಾಕ್ಷರಿ ಮಹಾಮಂತ್ರವೇ ಶ್ರೇಷ್ಠವೆಂದು ಹೇಳಿ ನನಗೆ ಮುಖಭಂಗ ಮಾಡಿರುತ್ತಾನೆ' ಎಂದು ಹೇಳಿದ್ದಾರೆ.

ಶಿಷ್ಯ

ಹಾಗಾದ್ರೆ ಗತಿ ಏನು ಗುರುವೆ ?

ನಿರೂಪಕ

ಅಯ್ಯಾ ಮಗು, ಕೇಳುವಂತವನಾಗು. ದಿನಕ್ರಮದಂತೆ ಶಿಷ್ಯರೆಲ್ಲರೂ ಗುರುಕುಲಾಶ್ರಮಕ್ಕೆ ಬಂದು ಪದ್ಧತಿಯಂತೆ ಹಲಗೆಯನ್ನು ತೊಳೆಯಲು ಹುಡುಗರೆಲ್ಲ ಕೊಳದ ಬಳಿಗೆ ಬಂದಿದ್ದಾರೆ. ಕೊಳದ ಬಳಿಯಲ್ಲಿ ಹಲಗೆಯನ್ನು ತೊಳೆಯುವಾಗ ಬೆನಕನೆಂಬ ಹುಡುಗನು ಕಡಿದಾದ ಸ್ಥಳದಲ್ಲಿ ಕಾಲಿಟ್ಟು, ತಕ್ಷಣವೇನೆ ಜಾರಿ ನೀರಿನ ಒಳಗಡೆ ಮುಳುಗಿದವನು, ಎಷ್ಟು ಹೊತ್ತಾದರೂ ಏಳದೆ ಇರಲು ಆ ಹುಡುಗರೆಲ್ಲ ಬಸವಣ್ಣನವರ ಮೇಲಿನ ದ್ವೇಷದಿಂದ ಆ ಬೆನಕನ ತಂದೆ ತಾಯಿಗಳಿಗೆ 'ನಿಮ್ಮ ಮಗನಾದ ಬೆನಕನನ್ನು ಬಸವಣ್ಣನು ನೀರಿಗೆ ನೂಕಿಬಿಟ್ಟನು. ಬೆನಕನು ಎಷ್ಟು ಹೊತ್ತಾದರೂ ನೀರಿನಿಂದ ಮೇಲಕ್ಕೆ ಏಳಲೇ ಇಲ್ಲ.' ಎಂದು ದೂರನ್ನು ಕೊಟ್ಟಿದ್ದಾರೆ. ಬೆನಕನ ತಂದೆ-ತಾಯಿಗಳು ಮಕ್ಕಳು ಹೇಳಿದ ಮಾತು ನಿಜವೆಂದು ಕೊಳದ ಬಳಿಗೆ ಬಂದು ನೋಡಿ ತಮ್ಮ ಮಗ ಸತ್ತನೆಂದು ಅತ್ತು ಕರೆಯುತ್ತ 'ಬಸವಣ್ಣ ನಮ್ಮ ಮಗನಾದ ಬೆನಕನನ್ನು ನೀರಿಗೆ ನೂಕಿದ್ದಾನಂತೆ. ನೀವು ದೊಡ್ಡವರಲ್ಲವೆ? ನೀವು ಏನು ಬೇಕಾದರೂ ಮಾಡಬಹುದು' ಎಂದು ಕಠಿಣವಾಗಿ ಮಾತನಾಡಲು ಬಸವಣ್ಣನ ತಂದೆತಾಯಿಗಳು ಬಸವಣ್ಣನನ್ನು ಕರೆಸಿ,

'ಅಯ್ಯಾ ಬಸವಣ್ಣ, ನೀನು ಬೆನಕನನ್ನು ನೀರಿಗೆ ನೂಕಬಹುದೆ?' ಎಂದು ಕೇಳಿದ್ದಾರೆ.

ಶಿಷ್ಯ

ಅದಕ್ಕೆ ಬಸವಣ್ಣನವರು ಏನಂದರು ಗುರುವೆ ?

ನಿರೂಪಕ

ಕೇಳಯ್ಯಾ ಮಗು, ತಂದೆತಾಯಿಗಳು ಪ್ರಶ್ನಿಸಿದ್ದುದನ್ನು ಕೇಳಿ ಬಸವಣ್ಣನು ಬಹಳವಾಗಿ ನೊಂದು

'ತಂದೆಯೇ, ನಾನು ಆತನನ್ನು ನೀರಿಗೆ ಯಾತಕ್ಕೆ ನೂಕಲಿ? ಅವನೇ ಬಿದ್ದನೆ ? ಅಥವಾ ನಾನೇ ಅವನನ್ನು ನೀರಿಗೆ ತಳ್ಳಿದೆನೆ ? ಅಥವಾ ಬೇರೆ ಯಾರಿಂದಲಾದರೂ ಇಂತಹ ಸ್ಥಿತಿಯಾಯಿತೆ ? ಎನ್ನುವುದನ್ನು ಆ ಬೆನಕನ ಬಾಯಿಂದಲೇ ನಾನು ಕೇಳಿಸುತ್ತೇನೆ' ಎಂದು ಹೇಳಲು ಅಲ್ಲಿ ಸೇರಿದ್ದ ಜನವೆಲ್ಲ

'ಇವನೇನು ದೈವಾಂಶಸಂಭೂತನೆ? ಸತ್ತಿರುವವರನ್ನು ಮಾತಾಡಿಸಲು ಸೃಷ್ಟಿಕರ್ತನೆ?' ಎಂದು ಜನಸ್ತೋಮವು ಹಿಂಬಾಲಿಸಿ ಬಂದು ನೋಡುತ್ತಿದ್ದಾರೆ. ಇತ್ತ ಬಸವಣ್ಣನವರಾದರೋ ಚಿಂತಾವ್ಯಾಕುಲರಾಗಿ ಆಲೋಚಿಸುತ್ತಾ,

ಶಿಷ್ಯ

ಗುರುಗಳೇ, ಬಸವಣ್ಣನವರು ಸತ್ತ ಬೆನಕನನ್ನು ಮಾತಾಡಿಸಿದರೆ ?

ನಿರೂಪಕ

ಅಯ್ಯಾ ಮಗು, ಆತುರಬೇಡ, ಸಾವಧಾನದಿಂದ ಕೇಳು. ಆಗ ಏನಾಯಿತೆಂದರೆ

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ
ಧರೆಹತ್ತಿ ಉರಿದರೆ ನಿಲ್ಲಬಹುದೇ ಅಯ್ಯ
ಏರಿ ನೀರುಂಬೊಡೆ ಬೇಲೆದ್ದು ಮೆಯ್ವೊಡೆ
ನಾರಿ ತನ್ನ ಮನೆಯಲ್ಲಿ ಕಳ್ಳತನ ಕಲಿತರೆ
ತಾಯಿಯ ಎದೆಹಾಲು ವಿಷವು ತಾನಾದೊಡೆ
ಯಾರಿಗೆ ಹೇಳುವೆ ಯಾರನು ದೂರುವೆ ಕೂಡಲಸಂಗಮದೇವಾ ೪೦

ಹೇ ಪರಮೇಶ್ವರಾ, ಎಂಥ ವಿಷಮ ಪರೀಕ್ಷೆಯನ್ನು ತಂದೊಡ್ಡಿದೆ ಎಂದು ಚಿಂತಿಸುತ್ತ ಇರಲು ಪರಮೇಶ್ವರನನ್ನು ದೃಢಭಕ್ತಿಯಿಂದ ಬೇಡುತ್ತಾ ಇದ್ದಾನೆ.

ಶಿಷ್ಯ

ಹೇಗೆ ಬೇಡಿದ ಸ್ವಾಮಿ ?

ನಿರೂಪಕ

ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಶಿವಾಯ ನಮಃ ಓಂ ಓಂ ಓಂ

ಕರುಣಾಸಾಗರ ಭವಭಯ ದೂರ
ಪರಿಪಾಲಿಸು ನೀ ಗಿರಿಜಾರಮಣನೆ | ೪೧

ಹೀಗೆ ಪರಮೇಶ್ವರನನ್ನು ಬೇಡಲು, ಅಷ್ಟರಲ್ಲಿ ಭಕ್ತರ ಬಂಧುವಾದ ಪರಮೇಶ್ವರನು ಬೆನಕನೆಂಬ ಹುಡುಗನಿಗೆ ಪ್ರಾಣೋಪದೇಶವನ್ನು ಮಾಡಲು, ಆ ಹುಡುಗನು ಚೇತರಿಸಿಕೊಂಡು ನೀರಿನಿಂದ ಮೇಲಕ್ಕೆ ಎದ್ದು ದಡವನ್ನು ಹಿಡಿದು ಹತ್ತುವುದರೊಳಗಾಗಿ, ಸತ್ತುಹೋಗಿದ್ದವನನ್ನು ಬದುಕಿಸಿದಂತಹ ಬಸವಣ್ಣನು ಭೂಲೋಕದಲ್ಲಿ ದ್ವಿತೀಯ ಶಂಭುವೇ ಅವತರಿಸಿ ಧರ್ಮೋದ್ಧಾರಕ್ಕಾಗಿ ಬಂದಿರುವನೆಂದು ತಿಳಿದು ಜನಗಳೆಲ್ಲರೂ ಮುಕ್ತಕಂಠದಿಂದ ಕೊಂಡಾಡಿದ್ದಾರೆ. ಇದೇ ಬಸವಣ್ಣನವರ ಮೊದಲನೇ ಪವಾಡ.

ಶಿಷ್ಯ

ಆಮೇಲೇನಾಯ್ತು ಹೇಳಿ ಗುರುವೆ !

ನಿರೂಪಕ

ಅಯ್ಯಾ ಮಗುವೆ, ಬಸವಣ್ಣನು ಭೂಲೋಕದಲ್ಲಿ ಅವತರಿಸಿ ಬಾಲಲೀಲೆಯಲ್ಲಿರು ವಾಗ ಕೈಲಾಸದಲ್ಲಿ ಪರಮೇಶ್ವರನು ನೀವು ಭೂಲೋಕಕ್ಕೆ ಹೋಗಿ ಬಸವಣ್ಣನಿಗೆ ಆದಿಯಿಂದ ಹಿಡಿದು ಅಂತ್ಯಜರವರೆಗೆ ಎಲ್ಲರಿಗೂ ಲಿಂಗವನ್ನು ಧರಿಸಬೇಕಾಗಿದೆ. ಬಸವಣ್ಣನು ಗಂಗಾಂಬಿಕೆ ಮತ್ತು ಲೀಲಾಂಬಿಕೆಯನ್ನು ವಿವಾಹವಾಗಬೇಕು. ಆದ್ದರಿಂದ ಪ್ರಮಥಾದಿಗಳಾದ ನೀವು ಭೂಲೋಕಕ್ಕೆ ಹೋಗಬೇಕೆಂದು ಹೇಳುತ್ತ ನಾರದರನ್ನು ಕುರಿತು 'ನಾರದ ನೀನು ಮಂಚಣ್ಣ ಪಂಡಿತನೆಂಬ ಹೆಸರಿನಿಂದ ಕಲ್ಯಾಣ ಪಟ್ಟಕ್ಕೆ ಹೋಗಿ ಅಲ್ಲಿ ಬಸವಣ್ಣನಿಗೆ ತದ್ವಿರುದ್ಧವಾಗಿ ನಡೆದು ಅವರ ಭಕ್ತಿಯನ್ನು ಉಜ್ಜಿ ಮತ್ತೂ ಉಜ್ವಲಗೊಳಿಸಬೇಕು' ಎಂದು ಅಪ್ಪಣೆಯನ್ನು ಮಾಡಿದ್ದಾರೆ. ಗಂಗಾಭವಾನಿಗಾದರೂ ನೀನು ಭೂಲೋಕಕ್ಕೆ ಹೋಗಿ ಬಲದೇವ ಮಂತ್ರಿಗೆ ಮಗಳಾಗಿ ಹುಟ್ಟಿ ಬಸವಣ್ಣವರನ್ನು ವಿವಾಹವಾಗಬೇಕು ಎಂದು ಹೇಳಲು ಗಂಗಾಭವಾನಿಯು ಪರಮೇಶ್ವರನಿಗೆ ಏನುತ್ತರವನ್ನು ಕೊಡುತ್ತಾ ಇದ್ದಾಳೆ.

ಶಿಷ್ಯ

ಏನುತ್ತರ ಕೊಟ್ಟರು ಸ್ವಾಮಿ ?

ನಿರೂಪಕ

ಅಯ್ಯಾ ಮಗು, ಗಂಗಾ ಭವಾನಿಯು ದುಃಖದಿಂದ -

ಗಂಗೆ : ಶರಣು ಶರಣು ಹರಣದೊಡೆಯ
ಮಹದೇವ ನಾನು
ಧರಣಿಗಿನ್ನು ಹೋಗಲಾರೆ
ಮಹದೇವ ಸ್ವಾಮಿ

ಈಶ್ವರ ಕಂಜಮುಖಿ ಕಮಲಾಕ್ಷಿ ಕೇಳು
ಎಲೆ ಗಂಗಾ ನೀನು
ಅಂಜ ಬೇಡ ಮಾತ ಕೇಳು
ಎಲೆ ಗಂಗ ಗಂಗಾ
ಮಂಗಳಾಂಗಿ ಮಂತ್ರ ಜೀವಿ
ಎಲೆ ಗಂಗ ಬಸವ
ಸಂಜೀವ ಸಕಲ ವ್ಯಾಪಕ
ಎಲೆ ಗಂಗ ಗಂಗ. ೪೨

ಗಂಗೆ : ಮಹಾಸ್ವಾಮಿ ಅಂದ ಮೇಲೆ ನಾನು ಭೂಲೋಕಕ್ಕೆ ಹೋಗಿ ಬಲದೇವ ಮಂತ್ರಿಗೆ ಮಗಳಾಗಿ ಹುಟ್ಟಿ ಬಸವಣ್ಣನನ್ನು ವಿವಾಹವಾಗಲೆ ?

ಈಶ್ವರ : ಗಂಗಾ, ಕೇಳು ಕೇಳು.

ಹಿಂದೆ ಶಿಲಾದ ಋಷಿಗೆ ನಾನು ಕಂದನಾಗಿ
ಜನಿಸಿದ್ದೆ ಕೇಳೆ ನೀನು ಎಲೆಗಂಗ ಗಂಗಾ
ಎಲೆ ಗಂಗ ಗಂಗಾ | ೪೩

ಗಂಗಾ ನಾನು ಶಿಲಾಮುನಿಗೆ ಕಂದನಾಗಿ ಹುಟ್ಟಿರಲಿಲ್ಲವೆ ?

ನಿರೂಪಕ

ಎಂಬುದಾಗಿ ಸಮಾಧಾನಪಡಿಸಲು ಗಂಗಾಭವಾನಿಯು ಪರಮೇಶ್ವರನ ಅಪ್ಪಣೆಯಂತೆ ಭೂಲೋಕದಲ್ಲಿ ಬಲದೇವ ಮಂತ್ರಿಗೆ ಮಗಳಾಗಿ ಹುಟ್ಟಲು ಗರ್ಭ ಸೂಚನೆ ತೋರುತ್ತಾ ಇದೆ. ಬಲದೇವ ಮಂತ್ರಿಯ ಧರ್ಮಪತ್ನಿ ಮಹಾದೇವಿಗೆ.

ಒಂದೆರಡು ಮೂರ್ನಾಲ್ಕು ಐದಾರು ಏಳು ಎಂಟು
ಸಂದಿತು ನವಮಾಸ ಇಂದುಮುಖಿಗಾಗ
ಇಂದುಮುಖಿಗಾಗ | ೪೪

ಮಹಾದೇವಿಗೆ ನವಮಾಸವು ತುಂಬಿ ಹೆಣ್ಣು ಮಗು ಜನನವಾಗಿದೆ. ಅಂದ ಮೇಲೆ ಆ ಹೆಣ್ಣುಮಗು ಪದ್ಧತಿಗನುಸಾರವಾಗಿ ಸೂತಕ ಸ್ನಾನದಿಂದ ಶುಚೀರ್ಭೂತಳಾಗಿದ್ದಾಳೆ. ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಮುತ್ತೈದೆಯರು ತೂಗುತ್ತ ಹ್ಯಾಗೆ ಜೋಗುಳ ಹಾಡುತ್ತಿದ್ದಾರಪ್ಪ ಅಂದರೆ.

ಶಿಷ್ಯ

ಹೇಗೆ ಹಾಡ್ತಿದ್ದಾರೆ ಹೇಳಿ ಗುರುವೆ

ನಿರೂಪಕ

ಹಾಯೆಂದು ಅಳುಗೂಸ ಜೋಯೆಂದು ತೂಗಿದರೆ
ತಾಯಿ ಹಂಬಲವ ಮರೆಸುವದು - ಶಿಶುಗಾದ
ದಾಯತವ ನೋಡು ಸರ್ವಜ್ಞ | ೪೫

ಎಂಬ ಸರ್ವಜ್ಞಮೂರ್ತಿಯ ವಚನದಂತೆ ತಾಯಂದಿರು ಮಧುರವಾದ ಧ್ವನಿಯಿಂದ ತೂಗಿದರೆ ಹಾಗೇನೆ ಸ್ತಬ್ಧವಾಗಿ ಮಲಗುತ್ತದೆ.

ಶಿಷ್ಯ

ಆಮೇಲೆ ?

ನಿರೂಪಕ

ಅನಂತರ ತಂದೆ ತಾಯಿಗಳು, ಬಂಧು ಬಳಗದವರು ಏನು ಮಾಡುವರೆಂದರೆ

ಹೆತ್ತ ತಾಯಿ ತಂದೆಗಳು ಸತ್ತವರ ಹೆಸರಿಟ್ಟು
ಮತ್ತೆ ಗುಗ್ಗರಿಯ ಅನ್ನವನು-ಉಂಡುತಾ
ಅತ್ತ ಪೋಗುವರು ಸರ್ವಜ್ಞ | ೪೬

ಎಂಬ ಸರ್ವಜ್ಞಮೂರ್ತಿಯ ವಚನೋಕ್ತಿಯಂತೆ ತಂದೆ ತಾಯಿಗಳು ತಮ್ಮ ಹಿಂದಿನ ಪಿತೃಗಳ ಹೆಸರು ಚಿರಸ್ಮರಣೀಯವಾಗಿರಲೆಂದು ನಕ್ಷತ್ರಕ್ಕೆ ಸರಿಯಾಗಿ ಗಂಗಾಂಬಿಕಾ ಎಂದು ನಾಮಕರಣವನ್ನು ಮಾಡಿ ಸಂತೋಷಪಡುತ್ತಾ ಇದ್ದಾರೆ.

ಶಿಷ್ಯ

ಆಮೇಲೇನಾಯಿತು ಗುರುವೆ ?

ನಿರೂಪಕ

ಅನಂತರ ತಂದೆ ತಾಯಿಗಳು ಆ ಹೆಣ್ಣುಮಗುವಿನ ಗುಣಾತಿಶಯಗಳನ್ನು ನೋಡಿ ಗಂಗೋದಕವು ಎಷ್ಟು ನಿರ್ಮಲವೋ ಅಷ್ಟೇ ಸುಗುಣವುಳ್ಳ ಮಗುವನ್ನೇ ದೇವರು ದಯಪಾಲಿಸಿದ್ದಾನೆಂದು ಸಂತೋಷ ಸಾಗರದಲ್ಲಿ ಆನಂದ ಪಡುತ್ತಾ ಇದ್ದಾರೆ.

ಶಿಷ್ಯ

ಆಮೇಲೆ ?

ನಿರೂಪಕ

ಗಂಗಾಭವಾನಿಯನ್ನು ಐದನೆ ವರ್ಷದವರೆಗೆ ತಂದೆ ತಾಯಿಗಳು ಪ್ರೀತಿಯಿಂದ ಕಾಪಾಡಿ ಗುರುಕುಲಾಶ್ರಮಕ್ಕೆ ವಿದ್ಯಾಭ್ಯಾಸಕ್ಕಾಗಿ ಕಳಿಸಿಕೊಟ್ಟಿರುತ್ತಾರೆ. ಗುರುಗಳು ಗಂಗಾಭವಾನಿಗೆ ವಿದ್ಯಾಭ್ಯಾಸವನ್ನು ಉಪದೇಶಿಸುತ್ತಿದ್ದಾರೆ.

ಶಿಷ್ಯ

ಏನೆಂದು ಉಪದೇಶ ಮಾಡಿದ್ದಾರೆ ಗುರುವೆ?

ನಿರೂಪಕ

ವಿದ್ಯಾನಾಮ ನರಸ್ಯ ರೂಪಮಧಿಕಂ ಪ್ರಚ್ಛನ್ನ ಗುಪ್ತಂ ಧನಂ
ವಿದ್ಯಾ ಭೋಗಕರೀ ಯಶಃ ಸುಖಕರೀ ವಿದ್ಯಾಗುರೂಣಾ ಗುರುಃ

ವಿದ್ಯಾ ಬಂಧು ಜನೋ ವಿದೇಶಗಮನೇ ವಿದ್ಯಾಪರಾ ದೇವತಾ
ವಿದ್ಯಾ ರಾಜಸುಪೂಜ್ಯತೇ ನಹಿಧನಂ ವಿದ್ಯಾವಿಹೀನಃ ಪಶುಃ | ೪೭

ಎಂಬ ಸೂಕ್ತಿಗನುಸಾರವಾಗಿ ವಿದ್ಯೆಯೇ ಜ್ಞಾನಸ್ವರೂಪದಾಯಕವಾದದ್ದು, ವಿದ್ಯೆಯೇ ಸರ್ವ ಶ್ರೇಷ್ಠವಾದದ್ದು ಎಂಬುದಾಗಿ ಗಂಗಾಭವಾನಿಗೆ ಗುರುಗಳು ಉಪದೇಶ ಮಾಡಿದ್ದಾರೆ.

ಶಿಷ್ಯ

ಆಮೇಲೇನಾಯ್ತು ಗುರುವೆ ?

ನಿರೂಪಕ

ಗಂಗಾಭವಾನಿಯಾದರೋ ಚತುರ್ವಿದ್ಯೆಗಳಲ್ಲಿ ಸಂಪನ್ನೆಯೆಂಬಂತೆ ವಿದ್ಯೆಯಲ್ಲಿ ಕೀರ್ತಿ ಯನ್ನು ಪಡೆದಿದ್ದಾಳೆ. ಇತ್ತ ಕೈಲಾಸದಿಂದ ಕಳಿಸಿದ ಪ್ರಮಥರು ಇಂಗಳೇಶ್ವರ ಬಾಗೇವಾಡಿಯಲ್ಲಿ ಈಶ್ವರಾಜ್ಞೆಯಂತೆ ಜನಿಸಿ ಅವರೂ ಸಹ ಬೆಳೆಯುತ್ತಾ ಇದ್ದಾರೆ. ಇತ್ತ ಗಂಗಾಭವಾನಿ ಯಾದರೋ ಬಾಲ್ಯಾವಸ್ಥೆಯು ಕಳೆಯುತ್ತ ಪ್ರೌಢಾವಸ್ಥೆಗೆ ಕಾಲಿಟ್ಟಿದ್ದಾಳೆ.

ಶಿಷ್ಯ

ಆಮೇಲೇನಾಯಿತು ಹೇಳಿ ಗುರುವೆ ?

ನಿರೂಪಕ

ಅಯ್ಯಾ ಮಗು, ಇತ್ತ ಕಡೆ ಬಸವಣ್ಣನವರಿಗೆ ಏಳು ವರ್ಷವು ತುಂಬಿ ಎಂಟನೇ ವರ್ಷವಾಗುತ್ತಾ ಬರಲು ಮಂಡಿಗೆ ಮಾದರಸರು ಅವರ ಪದ್ಧತಿಯಂತೆ ಗಾಯತ್ರೀ ಮಂತ್ರವನ್ನು ಬ್ರಾಹ್ಮಣರ ಮುಖೇಣ ಉಪದೇಶಿಸಿ ಜನಿವಾರವನ್ನು ಹಾಕಿಸಬೇಕೆಂದು ಪ್ರಯತ್ನಪಟ್ಟು ಆಗಮಜ್ಞರು, ಬಂಧುಗಳು ಸಹಿತ ಸಕಲ ಸಾಮಗ್ರಿಗಳನ್ನು ಸಿದ್ಧಪಡಿಸುತ್ತಿರಲು ಬಸವಣ್ಣನವರು ಇದೇತಕೆಂದು ಕೇಳಲು 'ಅಯ್ಯಾ ಬಸವಣ್ಣ ನಿನಗೆ ಬ್ರಾಹ್ಮಣ ಪದ್ಧತಿಯಂತೆ ಜನಿವಾರವನ್ನು ಹಾಕಿಸಬೇಕೆ'ಂದು ಮಂಡಿಗೆ ಮಾದರಸರು ಹೇಳಲು ಅದಕ್ಕೆ ಬಸವಣ್ಣನವರು ಬೇಸರಗೊಂಡು ಏನೆಂದು ಹೇಳಿದ್ದಾರೆ.

ಶಿಷ್ಯ

ಏನೆಂದು ಹೇಳಿದ್ದಾರೆ ಗುರುವೆ ?

ನಿರೂಪಕ

ಬಸವಣ್ಣ : ಅಣ್ಣೆವಾಲತಿರಸವ ಸಣ್ಣಕ್ಕಿ ಪಾಯಸವ
ಉಣ್ಣುವುದನು ಬಿಟ್ಟು ಮಣ್ಣ ತಿನ್ನುವರೇ
ಮಣ್ಣ ತಿನ್ನುವರೇ | ೪೮

ಅಂದಹಾಗೆ ನಾನು ವೀರಶೈವ ದೀಕ್ಷೆಯನ್ನು ಈ ಮೊದಲೆ ಸದ್ಗುರುವಿನಿಂದ ಪಡೆದಿರುವೆನಲ್ಲವೆ ?

ಭೂರಿಯುಗಯುಗದೊಳಗೆ ವೀರಶೈವ ದೀಕ್ಷೆ
ಮಾರಾರಿಯಿಂ ಪಡೆದೆ ಧಾರುಣಿಯೊಳಗೆ
ಧಾರುಣಿಯೊಳಗೆ | ೪೯

ಬಸವಣ್ಣ : ಅಯ್ಯಾ ತಂದೆಯೇ, ನಾನು ನನ್ನ ಸದ್ಗುರುವಾದ ಸಂಗಮೇಶ್ವರನ ಹೆಸರಿನಿಂದ ಜಾತವೇದ ಮಹಾಮುನಿಗಳು ಬಂದು ಶಿವಪಂಚಾಕ್ಷರಿ ಮಹಾಮಂತ್ರವನ್ನು ಉಪದೇಶಿಸಿ ಲಿಂಗದೀಕ್ಷೆಯನ್ನು ಮಾಡಿದ್ದಾರೆ.

ಮಾದರಸ : 'ಭೂಸುರೋ ಬ್ರಾಹ್ಮಣಶ್ಚೈವ' ಎಂಬುದು ನಿನಗೆ ಗೊತ್ತೆ ?

ಬಸವಣ್ಣ : 'ಭೂರುದ್ರೊ ಜಂಗಮಸ್ತಥಾ' ಎಂಬುದು ನಿಮಗೆ ತಿಳಿಯದೆ ತಂದೆ ?

ಮಾದರಸ : ಅಯ್ಯಾ ಸುಕುಮಾರ ನಮ್ಮ ಬ್ರಾಹ್ಮಣಧರ್ಮಕ್ಕೆ ವಿರುದ್ಧವಾಗಿ ನಡೆದರೆ ನಮಗೆ ಬಹಿಷ್ಕಾರವನ್ನು ಹಾಕುವರು.

ಬಸವಣ್ಣ : ಬಹಿಷ್ಕಾರ ? ಹಾಗೆಂದರೇನು ತಂದೆ ?

ಮಾದರಸ :
ಪಂಕ್ತಿಗೆ ಸೇರಿಸರು ನಿಂದಿಸುವರು ಮಗನೆ
ಕುಂದನೆಣಿಸಬೇಡ ಕಂದ ನೀ ಕೇಳೊ
ಕಂದ ನೀ ಕೇಳೊ | ೫೦

ಅಯ್ಯಾ ಸುಕುಮಾರ, ದ್ವಿಜದೀಕ್ಷೆಯನ್ನು ತೆಗೆದುಕೊಳ್ಳದೆ ಹೋದರೆ ನಮ್ಮ ಬ್ರಾಹ್ಮಣರು ನಮ್ಮನ್ನು ಪಂಕ್ತಿಯಲ್ಲಿ ಸಹಭೋಜನಕ್ಕೆ ದೂರೀಕರಿಸುವರು. ನಮ್ಮ ಮಾತನ್ನು ಕೇಳು ಕಂದ.

ಬಸವಣ್ಣ : ತಂದೆಯೇ, ಶಿವದೀಕ್ಷೆಯೆಂದರೆ -

ದೀಯತೇ ಚ ಶಿವಜ್ಞಾನಂ ಕ್ಷೀಯತೇ ಪಾಶಬಂಧನಂ
ತಸ್ಮಾದೇವಂ ಸಮ್ಮಗುಕ್ತಾ ದೀಕ್ಷೇತಿ ಚ ವಿಚಕ್ಷಣೈಃ | ೫೧

ಎಂಬ ವೇದೋಕ್ತಿಗನುಸಾರವಾಗಿ ಶಿವದೀಕ್ಷೆಯನ್ನು ಹೊಂದಿ ಜಂಗಮರ ಸೇವೆಯಿಂದ ನನ್ನ ಜೀವನವನ್ನು ಪವಿತ್ರೀಕೃತ ಮಾಡಿ ಕೊಂಡು ಸಾರ್ಥಕಪಡಿಸಿಕೊಳ್ಳಬೇಕೇ ವಿನಾ ದ್ವಿಜದೀಕ್ಷೆಯನ್ನು ಹೊಂದಿ ನಾನು ನರಕ ಹೇತುವಾಗಲಾರೆ.

ಮಾದರಸ : ಹಾಗಾದರೆ ನಮ್ಮ ಮಾತನ್ನು ಧಿಕ್ಕರಿಸುವೆಯಾ ?

ಬಸವಣ್ಣ : ಅಂಥಾ ಮಾತೇಕೆ ತಂದೆ. ನಾನು ನಿಜವನ್ನು ಹೇಳಲೆ ?
ತಂದೆ ತಾಯಿ ನನಗೆ ಬಂಧು ಬಳಗ ನನಗೆ
ಬಂಧನ ಬಿಡಿಸುವ ಸಂಗಮದೇವಾ
ಸಂಗಮದೇವಾ |

ಅಯ್ಯಾ ತಂದೆ, ಹಿಂದೆಯೇ ಜಾತವೇದ ಮಹಾಮುನಿಗಳು ಎಂಟು ವರುಷದವರೆಗೆ ನಿಮ್ಮವ ಅನಂತರ ಇವನನ್ನು ನಮ್ಮ ಸನ್ನಿಧಿಗೆ ಕಳಿಸಿಕೊಡಬೇಕು ಎಂದು ಅಪ್ಪಣೆ ಮಾಡಿದ್ದರಲ್ಲವೆ ? ಅದರಂತೆ ನಾನು ನನ್ನ ಮನದೈವ, ಮನೆದೈವವಾದ ಕೂಡಲಸಂಗಮೇಶ್ವರನ ಸನ್ನಿಧಿಗೆ ಹೋಗುತ್ತೇನೆ.

ನಿರೂಪಕ

ಎಂದು ಆ ತಕ್ಷಣವೇ ಹೊರಟು ನಿಲ್ಲಲು ತಂದೆ-ತಾಯಿಗಳು ಇರುವ ಒಬ್ಬ ಮಗನನ್ನು ಕಳೆದುಕೊಳ್ಳಲಾರದೆ ಅಡ್ಡ ಗಟ್ಟಿದ್ದಾರೆ. ಬಸವಣ್ಣನಾದರೋ 'ನೀವು ನನಗೆ ಜನ್ಮ ಕೊಟ್ಟ ತಂದೆ ತಾಯಿಗಳು ನಿಜ. ಆದರೆ ನನಗೆ ಆತ್ಮ ಕೊಟ್ಟ ಗುರುವಿನ ಕರೆಯನ್ನು ತೊರೆಯಲಾರೆ' ಎಂಬುದಾಗಿ ಹೇಳಿ ಮುಂದೆ ಹೊರಟಿದ್ದಾರೆ.

ನಿರೂಪಕ

ಅನಂತರ ಅಕ್ಕನಾಗಮ್ಮನವರು 'ನನ್ನ ತಮ್ಮ ಒಬ್ಬನೇ ಹೋಗುತ್ತಿದ್ದಾನೆ' ಎಂದು ಬಸವಣ್ಣನವರ ಹಿಂದೆ ಹಿಂದೆಯೇ ಹೊರಟಿದ್ದಾರೆ.

ಶಿಷ್ಯ

ಅಕ್ಕ ನಾಗಮ್ಮನವರೂ ಹೊರಟರೆ ? ಶಿವಶಿವಾ. ಆಮೇಲೆ ನಡೆದ ವೃತ್ತಾಂತವೇನು ಗುರುವೆ ?

ನಿರೂಪಕ

ತಂದೆತಾಯಿಯು ನೀನೆ ಬಂಧುಬಳಗವೂ ನೀನೆ
ಚಂದ್ರಶೇಖರನೆನ್ನ ಬಂಧನವ ಕಳೆಯೈ
ಬಾಧನವ ಕಳೆಯೈ | ೫೩

ಹೀಗೆ ಬಸವಣ್ಣನವರು ಹೆಜ್ಜೆಹೆಜ್ಜೆಗೂ ಸಂಗಮೇಶ್ವರನ ಧ್ಯಾನವನ್ನು ಮಾಡುತ್ತ ಅಕ್ಕನಾಗಮ್ಮನೂ ಕೂಡಲಸಂಗಮೇಶ್ವರನ ಸನ್ನಿಧಿಗೆ ಹೋಗುತ್ತಿರಲು ನದಿಯು ಅಡ್ಡಲಾಗಿ ಹರಿಯುತ್ತಾ ಇದೆ. ನದಿಯ ದಂಡೆಯಲ್ಲಿ ನಿಂತು ಗಂಗಾಭವಾನಿಯನ್ನು ದಾರಿ ಬಿಡೆಂದು ಸ್ತೋತ್ರವನ್ನು ಮಾಡುತ್ತಾ ಇದ್ದಾರೆ.

ಜಟಾಮುಕುಟದಿಂದಿಳಿದು ಮರ್ತ್ಯಲೋಕದೊಳು
ಚಟಿಲು ಚಟಿಲೆಂದು ರಭಸದಿಂದ್ಹರಿಯೆ
ರಭಸದಿಂದ್ಹರಿಯೆ |

ಸಾರಿ ಹರಿಯುತ್ತ ಭೋರೆಂದು ಮೊರೆಯುತ್ತಾ
ಕಾರುಣ್ಯನಿಧಿ ಗಂಗೆ ಹರಿಯುತ್ತಲಿರಲು
ಹರಿಯುತ್ತಲಿರಲು | ೫೪

ಹೀಗೆ ಗಂಗಾಭವಾನಿಯು ರಭಸದಿಂದಲೂ ಪ್ರವಾಹವು ಮೇರೆ ಮೀರಿ ಬರುತ್ತಿರಲು ಗಂಗಾಭವಾನಿಯನ್ನು 'ತಾಯೆ, ಸಂಗಮೇಶ್ವರನನ್ನು ನೋಡಲು ನನಗೆ ದಾರಿಯನ್ನು ಬಿಡಬೇಕೆಂದು ಕೇಳಲು ಆ ತಕ್ಷಣವೇನೇ ಗಂಗಾಭವಾನಿಯು ದ್ವಿತೀಯ ಶಂಭುವೇ ಅವತರಿಸಿ ಬಂದಿರುವಾಗ ನಾನು ನದಿಯನ್ನು ಬಿಡಲೇಬೇಕೆಂದು ದಾರಿಯನ್ನು ಬಿಟ್ಟಿದ್ದಾರೆ'. ಇತ್ತ ಬಸವಣ್ಣನವರಾದರೋ 'ಸಂಗಮೇಶ್ವರ ಇದೆಲ್ಲವೂ ನಿನ್ನ ಮಹಿಮೆ' ಎಂದು ಹೇಳಿ ಬಸವಣ್ಣನವರು ಮುಕ್ತಕಂಠದಿಂದ ಸಂಗಮೇಶ್ವರನನ್ನು ಏನೆಂದು ಕೊಂಡಾಡುತ್ತಾ ಇದ್ದಾರೆ.

ಶಿಷ್ಯ

ಏನೆಂದು ಕೊಂಡಾಡುತ್ತಿದ್ದಾರೆ ಗುರುವೆ ?

ನಿರೂಪಕ

ಅಳತೆಯಿಲ್ಲದ ನಿನ್ನ ಮಾಯೆ ತಿಳಿಯಲಾರಿಗೆ ಸಾಧ್ಯವಯ್ಯ
ಬಳಲಿದ ಹರಿಬ್ರಹ್ಮರಿಗೆ ನಿನ್ನ ನೆಲೆಯ ತೋರಿಸದ್ಹೋದೆಯಯ್ಯ |

ಕಾಲ ಕರ್ಮವಿದೆಂಬ ಕಲ್ಪನೆ ಮೀರಿ ಮೆರೆದ ಮಹಾತ್ಮನೆ
ಪಾಲಲೋಚನ ಶೂಲಪಾಣಿಯೇ ಸ್ವಾಮಿ ಸಂಗಮದೇವನೆ | ೫೫

ಹೇ ಸಂಗಮೇಶ್ವರ, ನಿನ್ನ ಮಹಿಮೆ ಎಷ್ಟು ಅದ್ಭುತವಾದುದು ; ಅದ್ವಿತೀಯವಾದುದ್ದು ಮಹನೀಯ. ಭಕ್ತನ ಇಷ್ಟಾರ್ಥವನ್ನು ನಡೆಸಬೇಕೆಂಬ ಉದ್ದೇಶದಿಂದ ಗಂಗಾ ಭವಾನಿಯು ದಾರಿಯನ್ನು ಬಿಟ್ಟಿದ್ದಾಳೆ. ನಾನೇ ಧನ್ಯನೆಂದು ಸಂಗಮೇಶ್ವರನ ದಿವ್ಯಸನ್ನಿಧಿಗೆ ಹೋಗಿ ಸಂಗಮೇಶ್ವರನ ಮುಂದೆ ನಿಂತು ಕೈಜೋಡಿಸಿಕೊಂಡು ಭಕ್ತಿಯಿಂದ ಸಂಗಮೇಶ್ವರನನ್ನು ಕೊಂಡಾಡುತ್ತಾ ಇದ್ದಾರೆ.

ಶಿಷ್ಯ

ಯಾವ ರೀತಿಯಲ್ಲಿ ಕೊಂಡಾಡುತ್ತಿದ್ದಾರೆ ಗುರುವೆ ?

ನಿರೂಪಕ

ಶರಣ ಜನರು ಸದಾ ಹೃದಯ ನಳಿನದೊಳು
ಪರಿಶೋಭಿಸುತ್ತಿಹುದು ಶಿವ ನಿನ್ನ ಪಾದ
ಶಿವ ನಿನ್ನ ಪಾದ । ೫೬

ಹರಿಯ ನಯನದ ಕುರುಹು ಹಿಡಿದಿಹುದೀಗ
ಗುರುಶಂಭುಲಿಂಗ ನಿನ್ನ ದಿವ್ಯ ಪಾದಾವು
ದಿವ್ಯಪಾದಾವು । ೫೭

ದಿಟ್ಟ ರಾವಣನು ರಜತಾಚಲವನೆತ್ತಲೊತ್ತಿ
ಬಿಟ್ಟಿತ್ತು ರಸಾತಲಕೆ ಶಿವನಿನ್ನ ಪಾದ
ಶಿವ ನಿನ್ನ ಪಾದ । ೫೮

ಈ ಪರಿಯಾಗಿ ಬಸವಣ್ಣನವರು ಮನಸ್ಸಿನಲ್ಲಿ ಸಂಗಮೇಶ್ವರನನ್ನು ಧ್ಯಾನ ಮಾಡುತ್ತ ಇದಾರೆ.

ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು
ಮನದಲ್ಲಿ ನೆನೆಯದಿದ್ದವನು-ದೇಗುಲದ
ಕೊನೆಯಲಿದ್ದೇನು ಸರ್ವಜ್ಞ । ೫೯

ಅಂದ ಹಾಗೆ ಬಸವಣ್ಣನವರು ಸಂಗಮೇಶ್ವರನ ಧ್ಯಾನವನ್ನು ಮಾಡುತ್ತ ಗುರುಗಳಾದ ಜಾತವೇದಮಹಾಮುನಿಗಳ ಬಳಿಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. ಹೀಗೆಯೇ ಗುರುಗಳಾದರೋ ಬಸವಣ್ಣನವರಿಗೆ ಧರ್ಮ ಬೋಧನೆಯನ್ನು ಮಾಡುತ್ತಾ ಇದ್ದಾರೆ.

ಶಿಷ್ಯ

ಗುರುವೆ ಧರ್ಮಬೋಧನೆ ಎಂದಿರಲ್ಲ. ಏನು ಧರ್ಮಬೋಧನೆ ಮಾಡಿದ್ದಾರೆ ಅಂಬೋದನ್ನ ಸ್ವಲ್ಪ ಹೇಳ್ತೀರಾ ?

ನಿರೂಪಕ

ಅಯ್ಯಾ ಮಗು,

ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಕಾಣುವುದು-ಕೈಲಾಸ
ಬೆನ್ನ ಹಿಂದಿಹುದು ಸರ್ವಜ್ಞ । ೬೦

ಎಂಬುದಾಗಿ ಜಾತವೇದ ಮುನಿಗಳು ಬಸವಣ್ಣನವರಿಗೆ ಧರ್ಮೋಪದೇಶ ಮಾಡಿದ್ದಾರೆ.

ಶಿಷ್ಯ

ಸರಿ ಗುರುಗಳೆ ಆಮೇಲೇನಾಯ್ತು ಹೇಳಿರಿ.

ನಿರೂಪಕ

ಇತ್ತ ಕಡೆ ಬಲದೇವ ಮಂತ್ರಿಯಾದರೋ ತನ್ನ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನವರಿಗೆ ಕೊಟ್ಟು ವಿವಾಹವನ್ನು ಮಾಡಬೇಕೆಂದು ಬಿಜ್ಜಳ ಮಹಾರಾಜರಲ್ಲಿ ವಿಜ್ಞಾಪಿಸಿಕೊಂಡಿದ್ದಾರೆ.

ಶಿಷ್ಯ

ಗುರುವೆ, ಹೆಣ್ಣುಮಕ್ಕಳನ್ನು ಎಂತವರಿಗೆ ಕೊಡಬೇಕು ?

ನಿರೂಪಕ

ಅಯ್ಯಾ ಮಗು

ಕೊಡಬೇಕುತ್ತಮನಾದವಂಗೆ ಮಗಳಂ, ಸತ್ಪಾತ್ರಕಂ ದಾನಮಂ,
ಬಿಡಬೇಕ್ಕೆ ಧನಲೋಭ ಬಂಧು ಜನರೊಳ್, ದುಷ್ಪಾತ್ರರೊಳ್ ಗೋಷ್ಠಿಯಂ,
ಇಡಬೇಕೀಶ್ವರನಲ್ಲಿ ಭಕ್ತಿರಸಮಂ, ವಿಶ್ವಾಸಮಂ ಸ್ವಾಮಿಯೊಳ್
ಇಡಬೇಕಿದ್ದುಣಬೇಕೆಲ್ಲೆ ಹರಹರಾ ಶ್ರೀ ಚನ್ನಸೋಮೇಶ್ವರಾ | ೬೧

ಎಂಬ ಸೋಮೇಶ್ವರನ ಅಮೃತೋಕ್ತಿಯಂತೆ ಮಗಳನ್ನು ಉತ್ತಮ ಪುರುಷನಿಗೆ ಕೊಡಬೇಕು. ದಾನವನ್ನು ಸತ್ಪಾತ್ರರಿಗೆ ಅಂದರೆ ಶಿವಯೋಗಿಗಳಿಗೆ ಕೊಡಬೇಕು. ಧನವನ್ನು ಕಡುಬಡವರಿಗೆ ಕೊಡಬೇಕು. ಬಂಧುಗಳಿಗೆ ಆಪತ್ಕಾಲದಲ್ಲಿ ಸಹಾಯ ಮಾಡಬೇಕು. ತನಗೆ ಆಪತ್ಕಾಲದಲ್ಲಿ ಯಾರು ರಕ್ಷಣೆಯನ್ನು ಕೊಡುತ್ತಾರೆಯೋ ಅಂತವರೊಡನೆ ವಿಶ್ವಾಸದಿಂದಿದ್ದು ಭೃತ್ಯನಾಗಿ ನಡೆದುಕೊಳ್ಳಬೇಕು. ಪರಮೇಶ್ವರನಲ್ಲಿ ಸದಾಕಾಲ ಭಕ್ತಿ ಇಡಬೇಕು. ಹೀಗೆ ನಡೆದುಕೊಳ್ಳುವುದು ಸರ್ವಶ್ರೇಷ್ಠವಾದುದು ಎಂದು ಬಲದೇವ ಮಂತ್ರಿಯ ಮಾತಿನಂತೆ ಅಂದಣವನ್ನು ತೆಗೆಸಿಕೊಂಡು ಬಸವಣ್ಣನವರನ್ನು ಕರೆದುಕೊಂಡು ಬರುವುದಕ್ಕೆ ಹೊರಟಿದ್ದಾರೆ.

ಶಿಷ್ಯ

ಅವರು ಹ್ಯಾಗೆ ಹೊರಟಿದ್ದಾರೆ ಗುರುವೆ?

ನಿರೂಪಕ

ಅಯ್ಯಾ ಮಗು, ಆ ವೈಭವವನ್ನು ಮಾತಿನಿಂದ ಹೇಳಲಾಗುವುದಿಲ್ಲ. ಆದರೂ ಕೇಳು ವಂತವನಾಗು

ಹೊಡೆಯಿರೋ ಭೇರಿಯ ಬಡಿಯಿರೋ ತಮಟೆಯ
ಕರಡೆ ಕೌಸಾಳೆಗಳನು ನುಡಿಸಿರಿ ಎನುತ
ನುಡಿಸಿರಿ ಎನುತ | ೬೨

ಹೀಗೆ ಭೇರಿ, ನಗಾರಿ, ಕರಡೇವು, ಕಹಳೆ, ಕೌಸಾಳೆ ಮುಂತಾದ ವಾದ್ಯಗೋಷ್ಠಿ ಯಿಂದ ಬಸವಣ್ಣನವರನ್ನು ಕರೆದುಕೊಂಡು ಬರುವುದಕ್ಕೆ ಬಿಜ್ಜಳನ ನಿಯೋಗವು ಸಂಗಮೇಶ್ವರನ ದೇವಾಲಯದ ಬಳಿಗೆ ಹೋಗಿ ಸಕಲ ಸಿದ್ಧತೆಯಿಂದ ಜಾತವೇದ ಮಹಾಮುನಿಗಳ ಬಳಿಗೆ ಹೋಗಿ 'ಸ್ವಾಮಿ, ನಮ್ಮ ಮಗಳಾದ ಗಂಗಾಂಬಿಕೆಯನ್ನು ಬಸವಣ್ಣನವರಿಗೆ ಕೊಟ್ಟು ವಿವಾಹ ಮಾಡಬೇಕೆಂದು ಪ್ರಮುಖ ಪುರುಷರು, ದೊರೆಗಳೂ ಸಹ ಬಂದಿದ್ದಾರೆ. ದಯವಿಟ್ಟು ಕಳುಹಿಸಿಕೊಡಬೇಕು' ಎಂದು ಕೇಳಲು ಬಸವಣ್ಣನವರು 'ನಾನು ಬ್ರಹ್ಮಚಾರಿಯಾಗಿದ್ದು ವಿವಾಹಕ್ಕೆ ಒಪ್ಪಲೆ?' ಎಂದು ಕಳವಳ ಪಡಲು ಗುರುಗಳಾದರೊ 'ಬಸವಣ್ಣ, ಗೃಹಸ್ಥಾಶ್ರಮಕ್ಕಿಂತಲೂ ಶ್ರೇಷ್ಠವಾದ ಆಶ್ರಮ ಬೇರೊಂದಿಲ್ಲವಪ್ಪ. ನೀನು ವಿವಾಹವಾಗಲೇ ಬೇಕು, ಎಂದು ಗುರುಗಳು ಬಸವಣ್ಣನಿಗೆ ಅಪ್ಪಣೆಯನ್ನು ಮಾಡಲು ಅವರೆಲ್ಲ ಬಸವಣ್ಣನನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ವಾದ್ಯಗೋಷ್ಠಿಯಿಂದ ನಗರಕ್ಕೆ ಕರೆದುಕೊಂಡು ಬಂದು ಬಿಡಾರವನ್ನು ಕೊಟ್ಟು ವಿವಾಹಕ್ಕೆ ಪಟ್ಟಣವನ್ನು ಶೃಂಗಾರ ಮಾಡುವಂತೆ ಬಿಜ್ಜಳ ಮಹಾರಾಜರು ಆಜ್ಞೆಯನ್ನು ಮಾಡಿದ್ದಾರೆ.

ಶಿಷ್ಯ

ಆಮೇಲೆ ಏನು ಮಾಡಿದರು ಗುರುವೆ ?

ನಿರೂಪಕ

ಚಪ್ಪರ ಹಾಕುತ ಮೇಲ್ಕಟ್ಟು ಕಟ್ಟುತ
ಮುತ್ತಿನ ತೋರಣಗಳ ಬಿಗಿದಾರು ಆಗ
ಬಿಗಿದಾರು ಆಗ | ೬೩

ಸುಣ್ಣಬಣ್ಣಗಳಿಂದ ನಗರವಲಂಕರಿಸಿದರು
ಚಿಣ್ಣರ ಮದುವೆಯೆಂದು ಸಂಭ್ರಮದಿಂದ
ಸಂಭ್ರಮದಿಂದ | ೬೪

ಬಸವಣ್ಣನವರ ವಿವಾಹಕ್ಕೆ ಪಟ್ಟಣದಲ್ಲಿ ಚಪ್ಪರ ಮೇಲ್ಕಟ್ಟುಗಳಿಂದ ಮನೆಗಳಿಗೆ ಸುಣ್ಣಬಣ್ಣಗಳಿಂದ ಬೀದಿಗಳನ್ನು ಸಾರಿಸಿ ರಂಗೋಲಿಗಳಿಂದ ಸಾರಣೆ ಕಾರಣೆಗಳಿಂದ ಶೃಂಗಾರ ವನ್ನು ಮಾಡಿ ವಿವಾಹ ಮಂಟಪವನ್ನು ತಯಾರು ಮಾಡಿ ವಧೂ ವರರನ್ನು ಸ್ನಾನದಿಂದ ಶುಚೀರ್ಭೂತರನ್ನಾಗಿ ಮಾಡಿ ಬಸವಣ್ಣನವರಿಗೆ ಶೃಂಗಾರವನ್ನು ಮಾಡುತ್ತಾ ಇದಾರೆ.

ಶಿಷ್ಯ

ಅವರು ಶೃಂಗಾರವನ್ನು ಯಾವ ಪ್ರಕಾರದಿಂದ ಮಾಡ್ತಾ ಇದ್ದಾರೆ ಗುರುವೆ ?

ನಿರೂಪಕ

ಅಯ್ಯಾ ಮಗು, ಕೇಳುವಂತವನಾಗು.

ಬಸವಯ್ಗೆ ಬಾಸಿಂಗ ಕುಶಲದಿಂದಲಿ ಕಟ್ಟಿ
ಎಸೆವ ರುದ್ರಾಕ್ಷಿಯ ಮಾಲೆಯ ಧರಿಸಿ
ಮಾಲೆಯ ಧರಿಸಿ | ೬೫

ಶ್ವೇತಾಂಬರ ಉಡುಸಿ ಹಾರ ತುರಾಯ್ಗಳ ತೊಡಿಸಿ
ಪ್ರೀತಿಯಿಂದಲಿ ವರನ ಶೃಂಗರಿಸಿದರು
ಶೃಂಗರಿಸಿದರು | ೬೬

ಹೀಗೆ ಬಸವಣ್ಣನವರಿಗೆ ಸ್ನಾನವನ್ನು ಮಾಡಿಸಿ ಶ್ವೇತಾಂಬರ ಅಂದರೆ ಬಿಳೇ ಬಟ್ಟೆ ಗಳನ್ನು ಧರಿಸಿ, ಬಸವಣ್ಣನವರನ್ನು ವಿವಾಹ ಮಂಟಪಕ್ಕೆ ಕರೆದುಕೊಂಡು ಬರಲು, ಇತ್ತ ಗಂಗಾಂಬಿಕೆಯನ್ನೂ ಶೃಂಗರ ಮಾಡಿಕೊಂಡು ವಿವಾಹ ಮಂಟಪಕ್ಕೆ ಕರೆದುಕೊಂಡು ಬಂದು, ವಿವಾಹಮಂಟಪದಲ್ಲಿ ವಧೂವರರಿಗೆ ಪುರೋಹಿತರು ಹೇಗೆ ಧಾರೆ ಎರೆಯುತ್ತಾ ಇದ್ದಾರೆ ಎಂದರೆ

ಶಿಷ್ಯ

ಹೇಗೆ ಗುರುವೆ ?

ನಿರೂಪಕ

ವಿವಾಹ ಮಂಟಪದಲ್ಲಿ ಪುರೋಹಿತರು ವೇದಘೋಷದಿಂದ

ಅಂಬಾವಂದ್ಯ ದಿಗಂಬರಾರ್ಚಿತ ಪದಂ
ಕುಂಭೋದ್ಭವಾಡಂಬರಂ ಜಂಭಾರಿರಮಣಪ್ರಿಯಂ
ಶ್ರಿದಮಿದಂ ಕುರ್ಯಾತ್ ಸದಾ ಮಂಗಲಂ
ಸುಮುಹೂರ್ತ : ಸಾವಧಾನ : ಸುಲಗ್ನಾ : ಸಾವಧಾನ :
ಪಾರ್ವತೀ ಪರಮೇಶ್ವರ ಧ್ಯಾನಂ ಸಾವಧಾನಂ
ಧನಂ ಧಾನ್ಯ ಬಹುಪುತ್ರಲಾಭಂ ಶತಸಂವತ್ಸರಂ ದಂಪತಿ
ದೀರ್ಘಮಾಯುರ್ವೋ೯ | ೬೭

ಎಂದು ಪುರೋಹಿತರು, ವಿವಾಹಕ್ಕೆ ಸೇರಿದ ಗುರುಹಿರಿಯರು, ಸಕಲ ಪರಿಹಾರವೂ ಸಹ ಮಂತ್ರಾಕ್ಷತೆಗಳಿಂದ, ದಂಪತಿಗಳಿಗೆ ಹಾಲು, ತುಪ್ಪ, ಗಂಗೋದಕ, ಗುಡಾ, ಜೀರಿಗೆ, ತುಂಬೇ ತಳಿರುಗಳಿಂದ ಧಾರೆಯನ್ನೆರೆದಿದ್ದಾರೆ.

ಶಿಷ್ಯ

ಏನೆಂದು ಧಾರೆ ಎರೆದಿದ್ದಾರೆ ಗುರುವೆ ?

ನಿರೂಪಕ

ಪರಸತಿಗೆ ಪರಧನಕೆ ಎರಗದಾ ಭಾಷೆ
ಪರನಿಂದೆಯನು ಎಂದೂ ಮಾಡದಾ ಭಾಷೆ
ಪರತತ್ತ್ವ ಪರಬೋಧೆಗೆರಗದಾ ಭಾಷೆ
ಹರನ ತತ್ತ್ವವ ಮೀರದಾ ಭಾಷೆ | ೬೮

ಹೀಗೆ ಬಸವಣ್ಣನವರು ಪರಸ್ತ್ರೀಯರನ್ನು ತನ್ನ ತಾಯಿಯಂತೆಯೂ ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆಯೂ ಕಾಣುತ್ತೇನೆ. ಇದೇ ನನ್ನ ಸತ್ಯ ಇದೇ ನನ್ನ ಭಾಷೆ ಎಂದು ಆಣೆ ಮಾಡಿದ್ದಾರೆ. ಇತ್ತ ಗಂಗಾಂಬಿಕೆಯಾದರೋ ನಿನ್ನ ಮಾತಲ್ಲದೆ ಅನ್ಯರ ಮಾತಿಗೆ ನಾನು ಗಮನ ಕೊಡುವುದಿಲ್ಲ. ನೀನೇ ನನ್ನ ಭಾಗದ ದೇವರು ಎಂದು ತಿಳಿದಿರುತ್ತೇನೆ, ಇದೇ ನನ್ನ ಸತ್ಯವೆಂದು ಗಂಗಾಂಬಿಕೆಯು ಭಾಷೆಯನ್ನು ಮಾಡಿದ್ದಾರೆ.

ಶಿಷ್ಯ

ಅಲ್ಲಿಗೇನಾಯಿತು ಗುರುವೆ ?

ನಿರೂಪಕ

ಅಯ್ಯಾ ಮಗು, ಕೇಳುವಂತವನಾಗು. ಸಿದ್ಧರಸನ ಮಗಳಾದ ನೀಲಾಂಬಿಕಾದೇವಿಯನ್ನು ಬಿಜ್ಜಳಮಾರಾಜನು ಸಾಕು ಮಗಳಾಗಿ ಸಾಕಿಕೊಂಡಿರಲು ಈ ನೀಲಾಂಬಿಕಾದೇವಿಗೆ ಅನುರೂಪನಾದ ವರನು ಬಸವಣ್ಣನವರೇ ಸರಿ ಎಂದು ನಿರ್ಧರಿಸಿ, ನೀಲಾಂಬಿಕಾ ದೇವಿಗೂ ಸಹ ವಿವಾಹವನ್ನು ನಡೆಸಿದ್ದಾರೆ. ಇತ್ತ ಕಡೆ ದಂಪತಿಗಳಿಗೆ ಮುತ್ತೈದೆಯರು ಆರತಿ ಬೆಳಗುತ್ತಿದ್ದಾರೆ.

ಆರತಿ ಎತ್ತಿರೆ ನಾರಿಯರೆಲ್ಲರು
ಮಾರ ಸುಂದರ ಸುಕುಮಾರ ಶರೀರಿಗೆ | ಸೊಲ್ಲು |

ಮುಂಗಡೆಯಲಿ ನಿಂದು ಮಂಗಳವಾಗಲೆಂದು
ಅಂಗನೆಯರೆಲ್ಲರು ಮಂಗಳಾರತಿಯ |

ಬಾಲ ಮಾರ್ತಾಂಡನ ನಿವಾಳಿಸಿದಾತಗೆ
ಬಾಲೆಯರೆಲ್ಲರು ನೀಲದಾರತಿಯ | ೬೯

ಹೀಗೆ ಮುತ್ತೈದೆಯರು ಆರತಿಯೆನ್ನೆತ್ತಿ ವಧೂವರರನ್ನು ಗೃಹಕ್ಕೆ ಕಳಿಸಿಕೊಟ್ಟಿದ್ದಾರೆ. ಬಸವಣ್ಣನವರಾದರೋ ಗಂಗಾಂಬಿಕಾ ಮತ್ತು ನೀಲಾಂಬಿಕಾ ದೇವಿಯರಿಗೆ ಧರ್ಮೋಪದೇಶವನ್ನು ಉಪದೇಶಿಸುತ್ತಾ ಇದ್ದಾರೆ.

ಶಿಷ್ಯ

ಏನಂತ ಉಪದೇಶಿಸುತ್ತಿದ್ದಾರೆ ಗುರುವೆ ?

ನಿರೂಪಕ

ಮೊದಲಿಗೆ ವಿಭೂತಿಮಹಿಮೆಯನ್ನು ಹೀಗೆ ಉಪದೇಶಿಸುತ್ತಿದ್ದಾರೆ.

ನೀರಿಗೆ ನೈದಿಲೆ ಶೃಂಗಾರ
ಸಮುದ್ರಕೆ ತೆರೆಯೇ ಶೃಂಗಾರ
ನಾರಿಗೆ ಗುಣವೆ ಶೃಂಗಾರ
ನಮ್ಮ ಕೂಡಲ ಸಂಗಮ ದೇವನ
ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ ೭೦

ಎಂದು ಬಸವಣ್ಣನವರು ಮತ್ತೆ ಗಂಗಾಂಬಿಕೆಗೂ ನೀಲಾಂಬಿಕೆಗೂ ಏನು ಉಪದೇಶವನ್ನು ಮಾಡ್ತಾ ಇದ್ದಾರೆ.

ಶಿಷ್ಯ

ಅದೇನು ಗುರುವೆ ?

ನಿರೂಪಕ

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತಾ
ಇದ್ದರೇನು ಶಿವಶಿವಾ ಹೋದರೇನು
ಕೂಡಲಸಂಗಮ ದೇವಾ
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ ೭೧

ಎಂದ ಹಾಗೆ, ಬಸವಣ್ಣನವರು ತಮ್ಮ ಧರ್ಮಪತ್ನಿಯರಿಗೆ ಧರ್ಮೋಪದೇಶ ಹಿತೋಪದೇಶ ಜ್ಞಾನೋಪದೇಶಗಳನ್ನು ಬೋಧಿಸಿ ಧರ್ಮಪತ್ನಿಯರಲ್ಲಿ ಆಲಿಂಗನ ಸುಖದಲ್ಲಿ ಮಗ್ನರಾಗಿ, ದಿನರಾತ್ರಿಗಳಲ್ಲಿಯೂ 'ಸಂಗಮೇಶ್ವರ ನೀನೇ ನನಗೆ ಬಂಧುವೂ ಭಾಗ್ಯವೂ' ಎಂದು ಎಡಬಿಡದೆ ಬಸವಣ್ಣನವರು ಭಕ್ತಿಯಿಂದ ಇರುತ್ತಾ ಇದಾರೆ. ಹೀಗಿರುವಾಗ 'ಬಸವಣ್ಣನವರು ಪವಾಡಪುರುಷರೆಂದೂ ಮಹಾಗಣ್ಯ ವ್ಯಕ್ತಿಗಳೆಂದೂ ಗಂಗಾಂಬಿಕೆ ನೀಲಾಂಬಿಕೆಯರನ್ನು ಕೊಟ್ಟು ವಿವಾಹ ಮಾಡಿರುತ್ತಾರೆ. ಗೃಹಸ್ಥಾಶ್ರಮದಲ್ಲಿದ್ದುಕೊಂಡು ಅದು ಹೇಗೆ ಪವಾಡಪುರುಷರಾಗುತ್ತಾರೆ'ಂದು ಕೆಲವು ಕೃತ್ರಿಮಿಗಳು ಬಸವಣ್ಣನವರನ್ನು ಪರೀಕ್ಷಿಸಬೇಕೆಂದು ಉದ್ದೇಶಪೂರ್ವಕವಾಗಿ' ನೀರಿನಲ್ಲಿ ಬಿದ್ದು ಸತ್ತಿದ್ದ ಹುಡುಗನನ್ನು ಬದುಕಿಸಿದೆನೆಂಬ ಹೆಮ್ಮೆಯು ನಿನ್ನಲ್ಲಿರ ಬಹುದು' ಎಂದು ಕುಹಕಿಗಳು ಒಬ್ಬ ಹುಡುಗನನ್ನು ಅಶ್ವತ್ಥ ವೃಕ್ಷದ ಪೊಟರೆಯೊಳಗೆ ಕೂಡ್ರಿಸಿ 'ನಾವು ಕೂಗಿದರೆ ಮಾತನಾಡ ಬೇಕೇ ವಿನಹ ಬಸವಣ್ಣನು ಕೂಗಿದರೆ ನೀನು ಮಾತನಾಡಬಾರದು' ಎಂದು ಮೊದಲೇ ಹೇಳಿದ್ದರು. ಅದರಂತೆ ಆ ಕುಹಕಿಗಳು ಬಸವಣ್ಣನನ್ನು ಕರೆದುಕೊಂಡು ಹೋಗಿ ಅಶ್ವತ್ಥಮರದ ಪೊಟರೆಯಲ್ಲಿ ಕುಳ್ಳಿರಿಸಿರುವ ಆ ಬಾಲಕನು ಸರ್ಪದಷ್ಟನಾಗಿ ಎಂದರೆ ಹಾವು ಕಡಿದು ವಿಷವು ವ್ಯಾಪಿಸಿ ಸತ್ತಿರುವನು. 'ಬಸವಣ್ಣ ಪೊಟರೆಯಲ್ಲಿ ಸತ್ತುಮಲಗಿರುವ ಬಾಲಕ ಸೋಮನನ್ನು ಕೂಗಿ ಕರೆದು ಮಾತನಾಡಿಸು. ನಿನ್ನಿಂದ ಇದು ಸಾಧ್ಯವಾಗದಿದ್ದಲ್ಲಿ ಸತ್ತಿರುವ ಅವನನ್ನು ನಾವು ಮಾತನಾಡಿಸುತ್ತೇವೆ ಎನ್ನಲು' ಬಸವಣ್ಣನು ಕೂಗಿ ಕರೆಯಲು ಆ ಹುಡುಗನು ಮಾತನಾಡಲಿಲ್ಲ. 'ಈಗ ನಾವು ಕೂಗುತ್ತೇವೆ ನೋಡಯ್ಯ' ಎಂದು ಅವರು ಕೂಗಿದರು. ಹಾಗೂ ಮಾತಾಡದಿರಲು ಮರದ ಪೊಟರೆಯೊಳಗಿದ್ದ ಹುಡುಗನನ್ನು ತೆಗೆದು ನೋಡಲಾಗಿ ಆ ಹುಡುಗನು ಸರ್ಪದಷ್ಟನಾಗಿ ಸತ್ತಿರುವ ವಿಚಾರವು ಕಲ್ಯಾಣಪಟ್ಟಣದ ಪ್ರಜೆಗಳಿಗೆಲ್ಲ ಗೊತ್ತಾಗಿ 'ಆಹಾ ಇಂಥಾ ಅನರ್ಥ ಉಂಟಾಯಿತೆ ?' ಎಂದು ಜನಗಳೆಲ್ಲರೂ ನೋಡುತ್ತ ನಡೆದ ರೀತಿಯನ್ನು ತಿಳಿದು ಬಸವಣ್ಣನವರನ್ನು ಅಪಹಾಸ್ಯದಿಂದ ಮಾತನಾಡಿಸಿದ್ದರ ಫಲವಿದೆಂದು, ನೀವು ಕುತಂತ್ರ ಮಾಡಿರುವುದು ಸರಿಯಲ್ಲವೆಂದು ಬಸವಣ್ಣನವರ ಪಾದವನ್ನು ಹಿಡಿದು ಬೇಡಿಕೊಳ್ಳಿರೆನಲು ಆ ಪಾಪಕರ್ಮರು ಬಸವಣ್ಣನವರ ಪಾದಾರವಿಂದಗಳಲ್ಲಿ ಬಿದ್ದು ಬೇಡಲು ಬಸವಣ್ಣನವರು ಪರಮೇಶ್ವರನನ್ನು ಕುರಿತು ಯಾವ ರೀತಿ ಸ್ತೋತ್ರ ಮಾಡುತ್ತಾ ಇದ್ದಾರೆಂದರೆ,

ಶಿಷ್ಯ

ಯಾವ ರೀತಿ ಗುರುವೆ ?

ನಿರೂಪಕ

ಶ್ರೇಯಂ ಪಡೆವೊಡೆ ಪರಮಾಯುಷ್ಯದಪೇಕ್ಷೆ
ಕೈಗೂಡುವೊಡಾಹಾ
ಮಾಯಗೆ ಒಳಗಾಗದೆ ನೀ ಜೀಯನೇ ನುಡಿಯೋ
ಓಂ ನಮಃ ಶಿವಾಯ ಎಂಬುದು ಪದವಾ | ೭೨

ಹೀಗೆ ಬಸವಣ್ಣನವರು ಪರಮೇಶ್ವರನನ್ನು ಕಾಯಾ ವಾಚಾ ಮನಸಾ ಧ್ಯಾನಿಸಲು ಭಕ್ತರ ಬಂಧುವಾದ ಮಹೇಶನು ಬಸವಣ್ಣನವರ ಭಕ್ತಿಗೆ ಮೆಚ್ಚಿ, ಆ ಬಾಲಕನ ಪ್ರಾಣಪಕ್ಷಿಯು ಮರಳಿ ಬರಿಸಿದ್ದಾನೆ.

ಶಿಷ್ಯ

ಅದು ಹ್ಯಾಗ್ ಬಂತು ಗುರುವೆ ?

ನಿರೂಪಕ

ಅಯ್ಯಾ ಮಗುವೆ, ದೇವರನ್ನು ಧ್ಯಾನಿಸಿದರೆ ಎಂತಹ ವಿಪತ್ತಿನಿಂದಲೂ ಪಾರಾಗಬಹುದು ಎಂಬುದಕ್ಕೆ ನಮ್ಮ ಹಳ್ಳಿಯ ಜನರು ಏನು ಹೇಳಿದ್ದಾರೆ.

ಶಿಷ್ಯ

ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ದೇವರ ನೆನೆದರೆ ಸಾವು ಹುಟ್ಟು ನಮಗಿಲ್ಲ
ಹಾವು ಕಚ್ಚಿದರೂ ವಿಷವಿಲ್ಲ-ಸರ್ಪನ
ಹೆಡೆಯ ಮೆಟ್ಟಿದರೂ ಭಯವಿಲ್ಲ | ೭೩

ಹೀಗೆ ಬಸವಣ್ಣನವರು ಪರಮೇಶ್ವರನನ್ನು ಕೊಂಡಾಡುತ್ತಾ ಇರಲು ಇತ್ತ ಬಿಜ್ಜಳ ಮಹಾರಾಜನ ಆಳ್ವಿಕೆಯನ್ನು ಹೇಗೆ ವರ್ಣಿಸಿದ್ದಾರೆ ಎಂದರೆ

ಕೆತ್ತುಗಲ್ಲಿನ ಕೋಟೆ ಎತ್ತೀದ ತೆನೆಗಳು
ಎತ್ತೆತ್ತ ನೋಡಿದರೂ ಪುರವು ಶೃಂಗಾರವು
ಪುರವು ಶೃಂಗಾರವು | ೭೪

ಅಯ್ಯಾ ಮಗು, ಕಲ್ಯಾಣಪಟ್ಟಣವಾದರೋ ಹೇಗೆ ವೈಭವದಿಂದ ಮೆರೆಯುತ್ತಿರುವುದೆಂದರೆ ಆ ನಗರಕ್ಕೆ ಸುತ್ತಲೂ ಕೆತ್ತನೆ ಕಲ್ಲುಗಳಿಂದ ಸುಭದ್ರವಾದ ಕೋಟೆಯನ್ನು ಕಟ್ಟಿದ್ದಾರೆ. ಅಂದಮೇಲೆ ಆ ನಗರದಲ್ಲಿ ಯಾವ ವಿಶೇಷಗಳಿದ್ದವು ಎಂದರೆ

ಶಿಷ್ಯ

ಯಾವ ವಿಶೇಷಗಳಿದ್ದವು ಗುರುವೆ ?

ನಿರೂಪಕ

ನಳಿನಾಗೊಳ ನಾಗವಲ್ಲಿ ಪುನ್ನಾಗ ಗಜನಿಂಬಿ
ತಳಿರೆಸೆವ ಮಾವು ಮಂದಾರ ವೃಕ್ಷಗಳೂ
ಮಂದಾರವೃಕ್ಷಗಳೂ | ೭೫

ಅಯ್ಯಾ ಮಗು ಆ ಕಲ್ಯಾಣ ಪಟ್ಟಣದಲ್ಲಿ ನಳಿನಗೊಳ, ಸಿಹಿನೀರಬಾವಿ, ನಾಗವಲ್ಲಿ ಎಲೆ ಬಳ್ಳಿಗಳಿಂದಲೂ ಪೂಗ ಗಜನಿಂಬೆ ಬಿಲ್ವವೃಕ್ಷಗಳಿಂದಲೂ ಮಂದಾರಪುಷ್ಪ, ಹಾಲಿವಾಣದ ಮರಗಳಿಂದಲೂ ಪ್ರತಿಯೊಬ್ಬರ ಮನೆ ಮುಂದೆಯೂ ಬಿಲ್ವಪತ್ರೆಯ ಮರಗಳಿಂದಲೂ ರಾರಾಜಿಸುತ್ತಾ ಇದೆ. ಅಂದ್ಹಾಗೆ ಮತ್ತೆ ಏನೇನು ವಿಶೇಷಗಳಿದ್ದವು ?

ಶಿಷ್ಯ

ಏನಿದ್ದವು ಎಂಬುದನ್ನು ಹೇಳಿ ಗುರುವೆ ?

ನಿರೂಪಕ

ಮೊಲ್ಲೆ ಮಲ್ಲಿಗೆ ಜಾಜಿ ಸುರಗೀ ಸೇವಂತಿಗೆಯು
ಬಿಲ್ವಪತ್ರೆಯ ವೃಕ್ಷ ಎಲ್ಲಿ ನೋಡಿದರೂ
ಎಲ್ಲಿ ನೋಡಿದರೂ | ೭೬

ಅಂದಹಾಗೆ, ಮೊಲ್ಲೆ ಮಲ್ಲಿಗೆ ಜಾಜಿ ಸಂಪಿಗೆ ಮತ್ತು ಬಿಲ್ವವೃಕ್ಷಗಳಿಂದ ರಾರಾಜಿಸುತ್ತಾ ಇದೆ. ಆ ನಗರದಲ್ಲಿ ಯಾವ ಯಾವ ಬೀದಿಗಳಿದ್ದವು ಎಂದರೆ -

ಶಿಷ್ಯ

ಯಾವ ಯಾವ ಬೀದಿಗಳಿದ್ದವು ಗುರುವೆ ?

ನಿರೂಪಕ

ಹಾಲು ಮಾರುವ ಬೀದಿ ನೂಲು ಮಾರುವ ಬೀದಿ
ಶಾಲು ಸಕಲಾತಿಗಳ ಮಾರುವರ ಬೀದಿ
ಮಾರುವರ ಬೀದಿ | ೭೭

ಅಯ್ಯಾ ಮಗು, ಆ ಕಲ್ಯಾಣಪಟ್ಟಣದಲ್ಲಿ ಹಾಲು ಮಾರುವವರ ಬೀದಿ ನೂಲು ಮಾರುವವರ ಬೀದಿ ಶಾಲುಸಕಲಾತಿಗಳನ್ನು ಮಾರುವವರ ಬೀದಿಯಿಂದ ಆ ನಗರವು ಶೋಭಾಯಮಾನವಾಗಿರಲು ಮತ್ತೆ ಯಾವ ಯಾವ ಬೀದಿಗಳಿದ್ದವಪ್ಪಾ ಅಂದ್ರೆ

ಶಿಷ್ಯ

ಮತ್ತೆ ಯಾವ ಬೀದಿಗಳಿದ್ದವು ಗುರುವೆ ?

ನಿರೂಪಕ

ಮುತ್ತು ಮಾರುವ ಬೀದಿ ರತ್ನ ಮಾರೂವ ಬೀದಿ
ವಜ್ರ ವೈಡೂರ್ಯಗಳ ಮಾರುವರ ಬೀದಿ
ಮಾರುವರ ಬೀದಿ | ೭೮

ಅಯ್ಯಾ ಮಗು, ಕಲ್ಯಾಣನಗರದಲ್ಲಿ ಮುತ್ತು ಮಾರುವವರ ಬೀದಿ, ರತ್ನ ಮಾರುವವರ ಬೀದಿ, ವಜ್ರವೈಡೂರ್ಯಗಳನ್ನು ಮಾರುವವರ ಬೀದಿ, ಸಾಲು ಸಾಲಾಗಿರಲು ಆ ನಗರದಲ್ಲಿ ಯಾವ ಯಾವ ಜನಾಂಗಗಳು ಇದ್ದರಪ್ಪಾ ಅಂದ್ರೆ

ಶಿಷ್ಯ

ಯಾವ ಯಾವ ಜನ ಇದ್ರು ಸ್ವಾಮಿ ?

ನಿರೂಪಕ

ಲಿಂಗವಂತರ ಬೀದಿ ಲಿಂಗವಂತರ ಬೀದಿ
ಜಂಗಮರ ಬೀದಿಗಳು ಸಾಲುಸಾಲಿನಲಿ
ಸಾಲುಸಾಲಿನಲಿ | ೭೯

ಅಯ್ಯಾ ಮಗು, ಲಿಂಗವಂತರು, ಲಿಂಗವಂತರು, ಜಂಮಗರ ಬೀದಿಗಳು ಸಾಲು ಸಾಲಾಗಿರಲು, ಲಿಂಗವಂತರೆಂದರೆ ಲಿಷ್ಟಾಪರಣವೇ ಲಿಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಷಟ್‌ಸ್ಥಲ ಮಹಿಮೆಯನ್ನು ಅರಿತು ನಡೆಯುವ ಜಂಗಮರಾದರೋ 'ಜ ಕಾರೋ ಜನನಂ ನಾಸ್ತಿ' 'ಗಕಾರೋಗರ್ವವರ್ಜಿತಂ' 'ಮಕಾರೋ ಮರಣಂ ನಾಸ್ತಿ' 'ಜಂಗಮೋ ಜಗದೀಶ್ವರಃ' ಎಂಬುದಾಗಿ ಸಾಕ್ಷಾತ್ ಶಿವಸ್ವರೂಪಿಗಳಾದ ಜಂಗಮರು ಆ ನಗರದಲ್ಲಿ ವಾಸಿಸುತ್ತಿದ್ದಾರೆ.

ಶಿಷ್ಯ

ಆಮೇಲೆ ಇನ್ನು ಇದ್ದಾರೆ ಗುರುವೆ ?

ನಿರೂಪಕ

ಅಯ್ಯಾ ಮಗು ಬಿಜ್ಜಳ ಮಹಾರಾಜನಿಲ್ಲವೆ ? ಇದ್ದಾನೆ. ಬಿಜ್ಜಳ ಮಹಾರಾಜನು ಏಕಚಕ್ರಾಧೀಶನಾಗಿ ಸಂಪತ್ತನ್ನು ಅನುಭವಿಸಲು ಪುರುಷನ ಪುರುಷಾರ್ಥವೇ ಕಾರಣವೆನ್ನುವುದಕ್ಕೆ ಏನು ಹೇಳಿದ್ದಾರೆ ಗೊತ್ತೆ ?

ಶಿಷ್ಯ

ಏನಂತ ಹೇಳಿದ್ದಾರೆ ಗುರುವೆ ?

ನಿರೂಪಕ

ದೊರೆಗಳೆಲ್ಲರು ಮೊದಲು ಪುಣ್ಯಗಳ ಮಾಡದಲೆ
ಸಿರಿಯನುಂಬರೆ ?
ಬಡವರಘವೆಸಗಲು ಕೇಳು ತಿರಿದು ತಿಂಬರೆ ?
ಶಿವಗೆ ಪಕ್ಷಪಾತಗಳುಂಟೆ ?
ಬರಿಯ ಚೀಲದೊಳು ಕೈಯಿಕ್ಕಲೇನಹುದು ? ೮೦

ಅಂದ ಮೇಲೆ, ದೊರೆಗಳಾಗಬೇಕಾದರೆ ಹಿಂದಿನ ಜನ್ಮದಲ್ಲಿ ಪುಣ್ಯವನ್ನು ಮಾಡಿದ್ದರೆ ಮಾತ್ರ ದೊರೆಗಳಾಗಬಹುದು ಎಂದು ಹೇಳಿದ್ದಾರೆ. ದೊರೆಗಳಾಗಬೇಕಾದರೂ ಸಹ

ದಾನದಾ ಫಲದಿಂದ ಭೂನಾಥನಾಗುವನು
ಭಾನು ಮಂಡಲವನಡರುವಡೆ ಸ್ವರ್ಗದ
ಧೇನುವಂತಕ್ಕು ಸರ್ವಜ್ಞ | ೮೧

ಸರ್ವಜ್ಞ ಮೂರ್ತಿಯ ವಚನದಂತೆ ಎಲ್ಲಾ ದಾನಗಳಿಗೂ ಅನ್ನದಾನವೇ ಶ್ರೇಷ್ಠವೆಂದು, ಅನ್ನದಾನಕ್ಕೆ ಅಧಿಕವಾದ ಇನ್ನು ದಾನಗಳಿಲ್ಲ ಲೋಕದಿ ಚನ್ನಬಸವನ ಬಿಟ್ಟು ಮೇಲಿನ್ನು ದೈವಗಳೇ ? ಎಂಬಂತೆ ದಾನವನ್ನು ಕೊಡಬೇಕಾದರೋ

ಅದಾನ ದೋಷೇನ ಭವೇತ್ ದರದ್ರಃ
ದಾರಿದ್ರ್ಯ ದೋಷೇನ ಕರೋತಿ ಪಾಪಂ
ಪಾಪ ದರಿದ್ರೋ ಭವತೀಯೋ ಮರ್ತ್ಯಃ
ಪುನರ್ ದರಿದ್ರೋ ಪುನರೇವ ಪಾಪಿಃ | ೮೨

ಅಂದ ಹಾಗೆ ಯಾರು ಅನ್ನದಾನವನ್ನು ಮಾಡದೆ ಇರುತ್ತಾರೆಯೋ ಅವರು ದರಿದ್ರರಾಗುವರೆಂತಲೂ ಅಂತಹ ದರಿದ್ರತೆಯಿಂದ ಪಾಪಿಗಳಾಗಿಯೂ, ಚಂಡಾಲರಾಗಿಯೂ ಹುಟ್ಟುತ್ತಾರೆಂದು ಹೇಳುತ್ತಾರೆ. ಆದುದರಿಂದ ಅನ್ನದಾನ ಬಹಳ ಶ್ರೇಷ್ಠವಾದದ್ದು. 'ಅನ್ನವನಿಕ್ಕುವ ಅಂದಣವನೇರುವ' ಎಂಬ ನಾಣ್ನುಡಿಯಂತೆ ದಾನಗಳಲ್ಲಿ ಅನ್ನದಾನ, ಗೋದಾನ, ಕನ್ಯಾದಾನ, ವಸ್ತ್ರದಾನ, ವ್ಯಜನದಾನ, ಛತ್ರಿದಾನ ಇವು ಕಲಿಕಾಲದಲ್ಲಿ ನಡೆಯುವ ಮಹಾದಾನಗಳು. ಈಗಿನ ಕಾಲದಲ್ಲಾದರೋ ಅನ್ನದಾನ ಮಾಡೆಂದರೆ ಅನಿಷ್ಟ ಎನ್ನುತ್ತಾರೆ. ಕನ್ಯಾದಾನ ಮಾಡೆಂದರೆ ಕನಿಷ್ಟ ಎನ್ನುತ್ತಾರೆ. ಸಾರಾಯಿ ದಾನ ಮಾಡೆಂದರೆ ಸರ್ವಶ್ರೇಷ್ಠವೆಂದು ಹೇರಳವಾಗಿ ದುಃಶ್ಚಟಗಳ ದಾನಗಳೇನೇ ಅತಿಯಾಗಿ ನಡೆಯುತ್ತಿವೆ. ಇಂಥವುಗಳಿಂದ ಮನುಷ್ಯನಿಗೆ ಯಾವ ಫಲವೂ ಇಲ್ಲದೇನೇ ಪಶ್ಚಾತ್ತಾಪ ಫಲವನ್ನೇ ಪಡೆಯಬೇಕಾಗಿದೆ. ದಾನವನ್ನು ಮಾಡಬೇಕಾದರೂ ಯಾರಿಗೆ ಮಾಡಬೇಕು ಎನ್ನುವುದಕ್ಕೆ -

ಶಿಷ್ಯ

ಅದಕ್ಕೆ ಏನು ಹೇಳುತ್ತಾರೆ ಗುರುವೆ ?

ನಿರೂಪಕ

ಇಲಿ ಹೆಗ್ಗಣ ಹೆಚ್ಚಿದ ಮನೆಯುಂ
ಹಲವರು ತಿಂದು ತಿಂದು ತೇಗುವ ಮನೆಯುಂ
ಕಲಹಂ ಹೆಚ್ಚಿದ ಮನೆಯುಂ
ಬಲುಬೇಗ ಕೆಟ್ಟು ಹೋಪುದೆಂಬುದು ಸಹಜಂ ೮೩

ಅಂದ ಹಾಗೆ, ದಾನವನ್ನು ಮಾಡಬೇಕಾದರೆ ಯಾರಿಗೆ ಮಾಡಬೇಕು ಎಂದು ಮುಂದಾಲೋಚನೆಯಿಂದ ತಾನು ಯೋಚಿಸಿ ದಾನ ಮಾಡಬೇಕು ಎನ್ನುವುದಕ್ಕೆ ಸರ್ವಜ್ಞ ಮೂರ್ತಿ ಏನು ಹೇಳಿದ್ದಾರೆ ?

ಶಿಷ್ಯ

ಅಪ್ಪಣೆಯಾಗಲಿ ಗುರುವೆ !

ನಿರೂಪಕ

ಹತ್ತು ಜನಗಳಿಗಿಕ್ಕೆ ಮತ್ತೆ ದಣಿಯುವುದೇಕೆ
ತತ್ತ್ವವಾ ಬಲ್ಲಂಥ ಶಿವಯೋಗಿಗೆ ಒಂದು
ತುತ್ತನಿಕ್ಕೆಂದ ಸರ್ವಜ್ಞ | ೮೪

ಶಿಷ್ಯ

ಶಿವಯೋಗಿ ? ಹಾಗಾದರೆ ಶಿವಯೋಗಿ ಎಂದರೆ ಯಾರು ಸ್ವಾಮಿ ?

ನಿರೂಪಕ

ಶಿವಯೋಗಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ
ತತ್ತೃಪ್ತಾ ತನ್ಮಯಂ ವಿಶ್ವಂ ತೃಪ್ತಿಮೇತಿ ಚರಾಚರಂ ೮೫

ಅದರಂತೆ ಶಿವಯೋಗ ತತ್ಪರನಾಗಿರುವ ಅಂತಹ ಜಂಗಮಮೂರ್ತಿಗೆ ಉಣಬಡಿಸಿ ತೃಪ್ತಿಪಡಿಸಿದರೆ ಶಂಕರನೇ ತೃಪ್ತಿ ಹೊಂದಿದಂತೆ. ಅಂತಹ ಶಂಕರನೇ ತೃಪ್ತಿ ಹೊಂದಿದ ಮೇಲೆ ಆತನಲ್ಲಿರುವ ಸಚರಾಚರ ಪ್ರಾಣಿಗಳು ತೃಪ್ತಿ ಹೊಂದಿದಂತೆಯೇ ಎಂದು ಲಿಂಗಪುರಾಣದಲ್ಲಿ ಸಮಾವೇಶ ಮಾಡಿದ್ದಾರೆ. ಹೀಗೆ ಬಿಜ್ಜಳ ಮಹಾರಾಜನು ದಾನಗಳಿಂದ ಭೂನಾಥನಾಗಿ ಸಿಂಹಾಸನಾರೂಢನಾಗಿ ಸಪರಿವಾರ ಸೇನಾಸಮೇತನಾಗಿ ರಾಜ್ಯಭಾರವನ್ನು ಮಾಡುತ್ತಿರುವಾಗ

ಶಿಷ್ಯ

ಏನಾಯಿತು ಸ್ವಾಮಿ ?

ನಿರೂಪಕ

ಕರಿಶತ ಘಟೆಗಳು ತುರುಗವು ನವಲಕ್ಷ
ಪರಿಕಿಸೆ ಕಾಲಾಳು ವಿರಚಿಸಲಳವೇ
ವಿರಚಿಸಲಳವೇ | ೮೬

ಅಯ್ಯಾ ಮಗು, ಕರಿಶತ-ಅಂದರೆ-ನೂರು ಆನೆಗಳು, ನವಲಕ್ಷ ಕುದುರೆಗಳು ಪರಿಕಿಸೆ ಕಾಲಾಳು ವಿರಚಿಸಲಳವೇ ಎನ್ನುವುದಕ್ಕೆ ನಿಬಿಡವಿಲ್ಲದ ಆತನ ಬೆಂಬಲ ರಕ್ಷಕರಿಂದ ಬಿಜ್ಜಳ ಮಹಾರಾಜನಾದರೋ ಸಕಲ ಸಂಪದ್ಭರಿತನಾಗಿ ಪರಮೇಶ್ವರನ ಕರುಣದಿಂದ ಸುಖವಾಗಿ ರಾಜ್ಯಭಾರ ನಡೆಸುತ್ತ ಇರಲು ತನ್ನ ಮಂತ್ರಿಮಂಡಲದಲ್ಲಿ ಬಲದೇವ, ಮಂಚರಸ, ಪೆದ್ದರಸ, ಬಾಚರಸ ಇವರೇ ಮೊದಲಾಗಿ ಮಂತ್ರಿಮಂಡಲವಿರುವಾಗ ಬಲ ದೇವ ಮಂತ್ರಿಗಳಾದರೋ ಪಾಪ ಅವರು ಅನಾರೋಗ್ಯದಿಂದ ಅಸ್ವಸ್ಥರಾಗಿ ದಿವಂಗತರಾಗಿರುತ್ತಾರೆ.

ಶಿಷ್ಯ

ಆಮೇಲೆ ಬಲದೇವ ಮಂತ್ರಿಗೆ ಬದಲಾಗಿ ಆ ಸ್ಥಾನಕ್ಕೆ ಬೇರೆ ಯಾರನ್ನು ನೇಮಕ ಮಾಡಿಕೊಂಡರು ಸ್ವಾಮಿ ?

ನಿರೂಪಕ

ಅಯ್ಯಾ ಮಗು, ಬಲದೇವ ಮಂತ್ರಿಯು ದೈವಾಧೀನವಾದ ಮೇಲೆ ಬಸವಣ್ಣನವರು ಗಂಗಾಂಬಿಕೆ ನೀಲಾಂಬಿಕೆಯರು ಬಲದೇವ ಮಂತ್ರಿಯ ಉತ್ತರ ಕ್ರಿಯಾದಿಗಳು ವಿಧಿವತ್ತಾಗಿ ಮಾಡಿ ಬಲದೇವ ಮಂತ್ರಿ ಗತಿಸಿದ್ದರಿಂದ ತಾವು ಚಿಂತಾಕ್ರಾಂತರಾಗಿದ್ದಾರೆ.

ಶಿಷ್ಯ

ಹಾಗಾದರೆ ಮುಂದಿನ ಗತಿಯೇನು ಗುರುವೆ ?

ನಿರೂಪಕ

ಅಯ್ಯಾ ಮಗು, ಬಲದೇವ ಮಂತ್ರಿಯ ಪೀಠಕ್ಕೆ ಅಂದರೆ ಮುಖ್ಯಮಂತ್ರಿ ಪದವಿಗೆ ಸರ್ವಾನುಮತದಿಂದ ಬಿಜ್ಜಳ ಮಹಾರಾಜನು ಬಸವಣ್ಣನವರನ್ನು ಆಯ್ಕೆ ಮಾಡಿ ಮಂತ್ರಿಪದವಿಗೆ ನೇಮಿಸಿದರು.

ಶಿಷ್ಯ

ಸಂತೋಷವಾಯ್ತು ಗುರುವೆ. ಆಮೇಲೇನಾಯ್ತು ಹೇಳಿ ಸ್ವಾಮಿ.

ನಿರೂಪಕ

ಹರನ ಕರುಣದಿಂದ ಬಿಜ್ಜಳರಾಜನು
ಹರುಷದಿಂ ರಾಜ್ಯವನಾಳುತಲಿರಲು
ಆಳುತಲಿರಲು | ೮೭

ಅಂದಹಾಗೆ, ಹರಕೊಟ್ಟದ್ದು ಅಂತ್ಯದವರೆಗೆ ಮನುಷ್ಯ ಕೊಟ್ಟಿದ್ದು ಮನೆವರೆಗೆ ಎಂಬಂತೆ ಪರಮೇಶ್ವರಾನುಗ್ರಹದಿಂದ ಸಕಲ ಸುಖ ಸಾಮ್ರಾಜ್ಯದಿಂದಲೂ ಪ್ರಧಾನಮಂತ್ರಿ ಪದವಿಯಿಂದಲೂ ರಾಜ್ಯಭಾರವು ಸುಗಮವಾಗಿ ನಡೆಯುತ್ತಿರುವಾಗ ಕೈಲಾಸದಿಂದ ಓಲೆಗರಿ ಲಿಪಿಯೊಂದು ತಾನಾಗಿ ಆಸ್ಥಾನದಲ್ಲಿ ಬಂದು ಬಿದ್ದುಬಿಟ್ಟಿತು.

ಶಿಷ್ಯ

ಆ ಲಿಪಿ ಯಾವುದು ಸ್ವಾಮಿ ?

ನಿರೂಪಕ

ಅಯ್ಯಾ ಮಗು ಆ ಲಿಪಿಯ ಗುಪ್ತ ಲಿಖಿತವಿರುವ ಓಲೆಗರಿಯು. ಅದನ್ನು ಯಾರೂ ಓದಲಾರದಂಥ ವಿಚಿತ್ರಲಿಪಿಯಲ್ಲಿ ಬರೆಯಲಾಗಿತ್ತು.

ಶಿಷ್ಯ

ಹಾಗಾದರೆ ಆ ಲಿಪಿಯನ್ನು ಯಾರು ಓದಿದರು ಗುರುವೆ ?

ನಿರೂಪಕ

ಆ ಲಿಪಿಯನ್ನು ಓದುವುದಕ್ಕೆ ಅಲ್ಲಿರುವ ವಾಗ್ಮಿಗಳು, ಮೇಧಾವಿಗಳು, ವಿದ್ವಾಂಸರುಗಳು, ಪಂಡಿತರು - ಈ ಎಲ್ಲರೂ ಓದಲು ಪ್ರಯತ್ನಿಸಿ ಅದರಲ್ಲಿ ಬರೆದಿರುವ ಅಂಶವು ಯಾರಿಗೂ ತಿಳಿಯದಿರಲು ಬಿಜ್ಜಳ ಮಹಾರಾಜನು ಸಮಾಚಾರವೇನೆಂದು ಕೇಳಲು ಬಿಜ್ಜಳ ಮಹಾರಾಜನಿಗೆ "ಸ್ವಾಮೀ, ಈ ಲಿಪಿಯಲ್ಲಿರುವ ಅಕ್ಷರಗಳು ಈಗಿನ ಬಳಕೆಯಲ್ಲಿರುವ ಭಾಷೆಗಳಲ್ಲಿ ಯಾವ ಭಾಷೆಗೂ ಹೋಲಿಕೆಯಾಗುವುದಿಲ್ಲ" ಎಂದು ಉತ್ತರವನ್ನು ಹೇಳಲು ಬಿಜ್ಜಳ ಮಹಾರಾಜನು "ನೀವು ವಿದ್ಯಾವಂತರಾಗಿ ಭಾಷೆಯು ಗೊತ್ತಿಲ್ಲವೆಂದು ಹೇಳಲು ನಿಮಗೆ ನಾಚಿಕೆಯಾಗುವುದಿಲ್ಲವೆ? ಇರಲಿ. ಇದನ್ನು ಬಸವಣ್ಣನವರಿಗೆ ಕೊಡಿ ಅವರೇ ನೋಡಿ ಹೇಳಲಿ" ಎಂದಾಗ ಆ ಲಿಪಿಯನ್ನು ಬಸವಣ್ಣನವರಿಗೆ ಕೊಟ್ಟಿದ್ದಾರೆ, ಬಸವಣ್ಣನವರಾದರೋ ಆ ಲಿಪಿಯನ್ನು ಎರಡು ಕೈಗಳಿಂದಲೂ ತೆಗೆದುಕೊಂಡು,

ಓದಿನೊಳಲ್ಲಿದೆ ಇಹಪರ ಸಾಧನ ಸಂಪತ್ತುಮದುಕಾರಣದಿಂ
ಓದುವದು ಸಕಲ ಶ್ರುತಮಂ ಭೇದವ ತಿಳಿಯುತಲಿ ಸುಗುಣ ಕರಂಡ ೮೮

ಎಂದು ಬಸವಣ್ಣನವರು ಓದಿನ ಮಹಿಮೆಯನ್ನು ಕೊಂಡಾಡುತ್ತಾ ಆ ಮಾಯಾಲಿಪಿಯನ್ನು ನೋಡಿದರು. ಆ ಲಿಪಿಯ ಅಕ್ಷರಗಳು ಬಸವಣ್ಣನವರಿಗೆ ಸುವರ್ಣಾಕ್ಷರಗಳಂತೆ ಕಂಡವು. ಕನ್ನಡಾಕ್ಷರಗಳಾದರೂ ಹಿನ್ನಡಾಕ್ಷರಗಳಂತೆ ಕಂಡಾಗ ಕನ್ನಡಿಯನ್ನು ತರಿಸಿ ಆ ಪತ್ರವನ್ನು ಕನ್ನಡಿಗೆ ಎದುರಾಗಿ ಹಿಡಿದರು. ಹಿನ್ನಡೆಯಾಗಿದ್ದ ಅಕ್ಷರಗಳು ಸನ್ನಡೆಯ ಕನ್ನಡಾಕ್ಷರಗಳಾಗಿ ಮೂಡಿಬಂದವು. ಅಣ್ಣನವರು ಯಾವ ತೊಡಕು ತಪ್ಪುಗಳಿಲ್ಲದಂತೆ ಲೀಲಾಜಾಲವಾಗಿ ತೊದಲಿಲ್ಲದೆ ಸರಳವಾಗಿ ಬಿಜ್ಜಳ ಮಹಾರಾಜನ ಎದುರಿಗೆ ನಿಂತು ಓದಿ ಏನೆಂದು ಹೇಳುತಾ ಇದಾರೆ.

ಶಿಷ್ಯ

ಏನೆಂದು ಹೇಳುತಾ ಇದ್ದಾರೆ ಗುರುವೆ ?

ನಿರೂಪಕ

ಸೋಜಿಗವಿದ ಕೇಳು ರಾಜಾಧಿರಾಜನೆ
ಮೂಜಗಕಿಮ್ಮಡಿ ಹರನ ಕರುಣಾವು
ಹರನಕರುಣಾವು | ೮೯

ಹರನ ಕರುಣದಿಂದ ಧರೆಗೆ ಅಚ್ಚರಿಯಾಗಿ
ಹರಿಪೀಠದ ಕೆಳಗೆ ವರಕನಕವಿಹುದು
ವರಕನಕವಿಹುದು | ೯೦

ಕೇಳು ಬಿಜ್ಜಳರಾಜ ಏಳು ಕೊಪ್ಪರಿಗೆ
ಭಾಳಲೋಚನನಿಂದ ಬಂದ ಭಾಗ್ಯವು
ಬಂದ ಭಾಗ್ಯವು | ೯೧

"ಅಯ್ಯಾ ಮಹಾರಾಜ ಈ ಲಿಪಿಯಲ್ಲಿ ಉದಾಹರಿಸಿದ ಭಗವಂತನ ದೃಷ್ಟಿಯು ನಿಮ್ಮ ಮೇಲೆ ಸಂಪೂರ್ಣವಾಗಿ ಇದ್ದುದರಿಂದ ನೀವು ಆ ಹಣವನ್ನು ತೆಗೆದುಕೊಂಡು ಶರಣರ ಸೇವೆಯನ್ನು ಅಲ್ಲದೆ ದೇಶಕ್ಕೆ ಬರುವ ದುಃಸ್ಥಿತಿಯನ್ನು ಪರಿಹರಿಸಲು ಹಾಗೂ ಪ್ರಜಾಸಂರಕ್ಷಣೆಯಲ್ಲಿ ನೀನು ನಿನ್ನ ಸಹಮಂತ್ರಿಯಾದ ಬಸವಣ್ಣನವರೂ ಏಕೋದರ ಭಾವದಿಂದ ನಡೆದುಕೊಂಡು ನೀವು ಸಹಾಯಾನುಭೂತಿಯಿಂದ ನಮ್ಮಗಳ ನಡವಳಿಕೆಗೆ ಧಕ್ಕೆಯನ್ನು ತಂದುಕೊಳ್ಳದೇನೆ ನಡೆದುಕೊಳ್ಳಬೇಕೆಂದು ಈ ಲಿಪಿಯಲ್ಲಿ ನಿರೂಪಿಸಿದೆ" ಎಂಬುದಾಗಿ ಬಸವಣ್ಣನವರು ಅಲ್ಲಿರುವ ಮಂತ್ರಿಮಂಡಳಿಕರೆಲ್ಲರಿಗೂ ತಿಳಿಯುವಂತೆ ಉದಾಹರಿಸಿದರು.

ಶಿಷ್ಯ

ಆಮೇಲೇನಾಯ್ತು ಗುರುವೆ ?

ನಿರೂಪಕ

ಬಿಜ್ಜಳ ಮಹಾರಾಜನಾದರೂ ಬಸವಣ್ಣನವರು ಹೇಳುವ ಮಾತು ಸುಳ್ಳಾಗಲಾರದು. ಮೇಲಾಗಿ ಅವರ ವಾಕ್‌ಸಿದ್ಧಿಯು ಲಭಿಸುವುದು ಎಂದು ಆ ತಕ್ಷಣವೇನೆ ಆಳುಗಳನ್ನು ಕರೆಸಿ ಹಾರೆ, ಗುದ್ದಲಿ, ಮತ್ತು ಅದಕ್ಕೆ ಬೇಕಾದ ಸಲಕರಣೆಗಳನ್ನು ತರಹೇಳಿ ಅಗೆಯಲು ಆಳುಗಳಿಗೆ ನೇಮಕ ಮಾಡಿದರು.

ಶಿಷ್ಯ

ಅಗೆದಾಗ ಏನು ಸಿಕ್ಕಿತು ಸ್ವಾಮಿ ?

ನಿರೂಪಕ

ಅಯ್ಯಾ ಬಾಲಕರೆ, ಬಸವಣ್ಣನವರಿಗೆ ಎದುರು ಪಾಟಿಯಾದ ಮಂಚಣ್ಣ ಪಂಡಿತರು, 'ಬಿಜ್ಜಳ ಮಹಾರಾಜನ ಸಿಂಹಾಸನದ ಎದುರು ಬಾವಿಯನ್ನು ತೋಡುತ್ತಾರೇನು?' ಎಂಬುದಾಗಿ ವಿರುದ್ಧವಾಗಿ ಅಣಕದ ಮಾತನಾಡಿದ್ದಾರೆ. ಆ ಮಂಚಣ್ಣ ಪಂಡಿತರ ಮಾತನ್ನು ಅಂಗೀಕರಿಸದೆ ಭೂಮಿಯನ್ನು ಅಗೆದು ಮಣ್ಣನ್ನು ತೆಗೆದುಹಾಕುವಾಗ ಬಸವಣ್ಣನವರು ಹೇಳಿದಂತೆ ಏಳು ಕೊಪ್ಪರಿಗೆ ಕನಕವು ಅವರಿಗೆ ಗೋಚರಿಸಿ ಆ ಬಂಗಾರವನ್ನು ಕೊಪ್ಪರಿಗೆ ಸಹಿತವಾಗಿ ಈಚೆಗೆ ತೆಗೆದುಕೊಂಡು ಅದನ್ನು ಸದ್ವಿನಿಯೋಗಪಡಿಸ ಬೇಕೆಂದು ಬಸವಣ್ಣನವರಿಗೆ ಅಪ್ಪಣೆಯನ್ನು ಮಾಡಿದಾಗ

ಶಿಷ್ಯ

ಅವರು ಏನು ಹೇಳಿದರು ಸ್ವಾಮಿ ?

ನಿರೂಪಕ

ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬರ್ಕು
ಹರಿದು ಹೆದ್ರೊರೆಯು, ಕೆರೆ ತುಂಬಿದಂತಯ್ಯಾ

ನೆರೆಯದ ವಸ್ತು ನೆರೆವುದು ನೋಡಯ್ಯಾ
ಅರಸು ಪರಿವಾರ ಕೈವಾರ ನೋಡಯ್ಯಾ
ಪರಮ ನಿರಂಜನನ ಮರೆವ ಕಾಲಕ್ಕೆ
ತುಂಬಿದ ಹರವಿಯ ಕಲ್ಲುಕೊಂಡಂತೆ ಕೂಡಲಸಂಗಮದೇವಾ ೯೨

ಎಂದು ಬಸವಣ್ಣನವರು ಬಿಜ್ಜಳ ಮಹಾರಾಜನಿಗೆ ಪ್ರಿಯವಾಕ್ಯಗಳನ್ನಾಡಿ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಶಿಷ್ಯ

ಆಮೇಲೇನಾಯ್ತು ಹೇಳಿ ಗುರುವೆ ?

ನಿರೂಪಕ

ಅಯ್ಯಾ ಮಗು, ಬಸವಣ್ಣನವರಿಗೆ ಮಂತ್ರಿ ಪದವಿಯನ್ನು ನೇಮಕ ಮಾಡಿದ ಮೇಲೆ ಬಸವಣ್ಣನವರು 'ಹೇ ದಯಾಮಯ ಇದೆಲ್ಲವೂ ನಿಮ್ಮ ಕರುಣೆಯು, ನಿಮ್ಮ ಕರುಣೆಯಿಂದಲೆ ಈ ಭಾಗ್ಯವು ಲಭಿಸಿದೆ. ಸಂಗಮದೇವಾ ಸದಾಕಾಲವೂ ನಿನ್ನ ಚರಣಕಮಲಗಳನ್ನು ಮರೆಯದಂತೆ ನನಗೆ ಅಭಯ ಪ್ರದಾನವನ್ನು ದಯಪಾಲಿಸಬೇಕೆ'ಂದು ಸಂಗಮೇಶ್ವರನನ್ನು ಬಸವಣ್ಣನವರು ಹೇಗೆ ಬೇಡುತಾ ಇದಾರೆ.

ಶಿಷ್ಯ

ಹೇಗೆ ಬೇಡುತಾ ಇದ್ದಾರೆ ಗುರುವೆ ?

ನಿರೂಪಕ

ಪೊರೆಯೆನ್ನ ಗಿರಿಜಾವರ ಗಂಗಾಧರ |

ಪೊರೆ ಪರಮೇಶ ಭಕುತರ ಪೋಷ
ಶರಣು ಶರಣು ಈಶ ಶ್ರೀಶೈಲವಾಸ |

ಆದಿ ಅಂತ್ಯವು ನೀನೆ ಅಗಣಿತ ಮಹಿಮನೆ
ಭೇದರಹಿತ ಚಾರ ದಯತೋರಾ |

ನಾದರೂಪನೆ ದಿವ್ಯ ನಟನಕಲಾಧರ
ಜಯ ಜಗದೀಶ ಲೋಕೇಶ | ೯೩

ಹೀಗೆಯೇ ಬಸವಣ್ಣನವರಾದರೋ ಹೇ ಶಂಕರಾ, ದೀನ ಬಂಧು, ದಯಾಮಯ, ನಿನ್ನ ಮಹಿಮೆ ಎಷ್ಟು ಅದ್ಭುತವಾದದ್ದು ಎಂದು ಶಿವನ ಸ್ತೋತ್ರವನ್ನು ಮಾಡುತ್ತಿದ್ದಾರೆ.

ಶಿಷ್ಯ

ಶಿವನ ಸ್ತೋತ್ರವನ್ನು ಯಾವ ಪ್ರಕಾರವಾಗಿ ಮಾಡಿದರು ಗುರುವೆ ?

ನಿರೂಪಕ

*ಪಾಪಿಯ ಜೀವನ ಪಾವನಗೊಳಿಸುವ
ಪರಶಿವ ಲಿಂಗ ನಮೋ-ಕಡು
ಪಾಪಿಯ ಜೀವನ ಪಾವನಗೊಳಿಸುವ
ಪರಶಿವ ಲಿಂಗ ನಮೋ
ಹರಹರ ಶಂಭೋ ಮಹಾದೇವ
ಹರಹರ ಶಂಭೋ ಮಹಾದೇವ | ಸೊಲ್ಲು |

---

* ಇದು 'ಆದರ್ಶಸತಿ' ಎಂಬ ಚಲನಚಿತ್ರದ ಒಂದು ಗೀತೆ.

ಮಾಯಾ ಸಮುದ್ರವ ಹಾಯುವ ಪರಮೋ-
ಪಾಯವ ನೀ ತೋರೋ
ಹರಹರ ಶಂಭೋ ಮಹಾದೇವ
ಹರಹರ ಶಂಭೋ ಮಹಾದೇವ | ನಡೆಸೊಲ್ಲು |

ತನುವನು ಧರಿಸಿದೆ ಕರ್ಮದ ಕೂಪ
ಜನುಮ ಜನುಮಕು ಗಳಿಸಿದೆ ಪಾಪ
ಮನ ತಾನಾದುದು ವಿಷಯದ ದ್ವೀಪ
ಅನುಭವಿಸಿದೆ ನಾನತಿಶಯ ಪಾಪ
ಕೊನೆಗಾಣಿಸು ಈ ಕರ್ಮದ ಲೇಪ
ಪೊರೆ ಚಿನ್ಮಯ ರೂಪ | ಹರಹರ |

ನೀರಿನ ಮೇಲಣ ಗುಳ್ಳೆಯ ತೆರದಿ
ಮೂರು ದಿನದ ಬಾಳಿದು ಜಗದಿ
ಹೇಳದೆ ಕೇಳದೆ ಬರುವುದು ಮರಣ
ಕಾಲನ ಪಾಶದ ಕಂಠಾಭರಣ
ಬೆಳೆದ ಕೂಡಲೆ ನಿನ್ನೊಳು ಭಕ್ತಿ
ಗಳಿಸುವ ನರ ತಾ ಪರಮ ವಿರಕ್ತಿ
ಕರುಣಿಸು ಭಕ್ತಿ ನೀಡು ವಿರಕ್ತಿ
ಕೊಡು ಜೀವನ್ಮುಕ್ತಿ | ಹರಹರ | ೯೦

ಹೀಗೆ ಬಸವಣ್ಣನವರು ಭಕ್ತಿಪರವಶರಾಗಿ ಸ್ತೋತ್ರ ಮಾಡುತ್ತಿರಲಾಗಿ ಸಂಗಮೇಶ್ವರ ದೇವನಾದರೋ ಅವರಿಗೆ ಮುನ್ಸೂಚನೆಯಂತೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಬರುತ್ತಿರುವಾಗ ಆರು ಸಾವಿರ ಜಂಗಮರು ಮಾತ್ರ ಕಾಶ್ಮೀರದೇಶದ ಮಾಂಡವ್ಯಪುರದಲ್ಲಿರುವ ಮಹಾದೇವಭೂಪಾಲನ ಆಶ್ರಯದಲ್ಲಿ ಅವರು ಸೇವೆಯಂ ಕೈಗೊಂಡುದಕ್ಕೆ ಅಲ್ಲಿಯೇ ನಿಲ್ಲುತ್ತಾರೆ. ಇಲ್ಲಿಗೆ ಬರಲಿರುವ ಲಕ್ಷದ ಮೇಲೆ ತೊಂಬತ್ತು ಸಾವಿರ ಗಣಂಗಳಿಗೆ ಮಾತ್ರ ಸೇವೆಯಂಗೈಯ್ದು ನೀನು ಕೃತಾರ್ಥನಾಗಬೇಕು. ಇಂಥ ಕಾರ್ಯದಿಂದ ನೀನು ಜಗತ್ತಿಗೆ ಜ್ಯೋತಿಯಾಗಿ ಭಕ್ತಿ ಪಂಥವನ್ನು ಮುಂದುವರಿಸಿಕೊಂಡು ಅಂದರೆ -

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ ೯೫

ಎಂಬಂತೆ ನೀನು ಭಯದಿಂದ ಭಕ್ತಿ ಮಾರ್ಗದಿಂದ ನಡೆದರೆ ಭಕ್ತಿ ಭಂಡಾರಿ ಬಸವಣ್ಣನೆಂದು ಪ್ರಪಂಚದಲ್ಲಿ ಪ್ರಖ್ಯಾತನಾಗಿ ಆದಿಯಿಂದ ಹಿಡಿದು ಅಂತ್ಯಜರವರೆಗೆ ಎಲ್ಲರಿಗೂ ಲಿಂಗಧಾರಣೆ ಮಾಡಿ ಕೊನೆಗೆ ನನ್ನಲ್ಲಿಯೇ ನೀನು ಸೇರಬೇಕು ಎಂಬ ಮುನ್ಸೂಚನೆಯಂತೆ ಸಂಗಮೇಶ್ವರನೆ ಅವರ ಹೃದಯದಲ್ಲಿ ಆವರಿಸಿ ಅಪ್ಪಣೆ ಮಾಡಿದಂತಾಗಿದೆ.

ಶಿಷ್ಯ

ಶಿವನ ಕರುಣೆ ಅದ್ಭುತವಾದುದು ಗುರುಗಳೇ. ಆಮೇಲೆ ?

ನಿರೂಪಕ

ಅಯ್ಯಾ ಮಗು, ತನ್ನ ನೋಡಲಿ ಎಂದು ಕನ್ನಡಿಯು ಕರೆಯುವುದೆ ? ತನ್ನಲ್ಲಿ ಜ್ಞಾನ ಉದಿಸಿದ ಮಹಾತ್ಮನು ಕನ್ನಡಿಯ ತೆರದಿ ಎಂದು ಸರ್ವಜ್ಞಮೂರ್ತಿ ಅಪ್ಪಣೆ ಕೊಡಿಸಿಲ್ಲವೆ? ಆದ್ದರಿಂದ ಸರ್ವಜ್ಞಮೂರ್ತಿಯ ವಚನೋಕ್ತಿಯಂತೆ ಬಸವಣ್ಣನವರು ತಮ್ಮ ಭಕ್ತಿಯಿಂದ ತಮ್ಮ ಧರ್ಮಪತ್ನಿಯರಾದ ಗಂಗಾಂಬಿಕೆ ನೀಲಾಂಬಿಕೆಯರೊಡಗೂಡಿ ಶರಣರ ಸೇವೆ ಮಾಡುತ್ತಾ ಶರಣರ ಸೇವೆಯೇ ಸಂಗಮೇಶ್ವರನ ಸೇವೆಯೆಂದು ತಮ್ಮ ಧರ್ಮಪತ್ನಿಯರಿಗೆ ಹೇಳುತ್ತಾ...

ಶಿಷ್ಯ

ಹೇಳುತ್ತಾ ?

ನಿರೂಪಕ

ಹೇಳುತ್ತಾ, ಅರಸನ ಮನೆಯಲ್ಲಿ ಅರಸಿಯಾಗಿರುವುದಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿರುವುದು ಕರಲೇಸಯ್ಯ. ತಾರೋ ಅಗ್ಘವಣಿಯ, ನೀಡೋ ಪತ್ರೆಯ ಲಿಂಗಕ್ಕೆ ಬೋನವ ಹಿಡಿಯೋ ಎಂಬುದು ಕೂಡಲ ಸಂಗಮದೇವನ ಮಹಾಮನೆಯಲ್ಲಿ ಒಕ್ಕುದನುಣ್ಣೋ ತೊತ್ತೆ ಎಂಬಂತೆ ಗಂಗಾಂಬಿಕಾದೇವಿ ನೀಲಾಂಬಿಕಾದೇವಿಯರು ಬಸವಣ್ಣನವರ ಮಾತಿಗೆ ಪ್ರತಿ ಮಾತನಾಡದೆ ಸಮರಸ ಭಾವದಿಂದ ತಮ್ಮ ಪತಿಯೇ ನಿಜವಾದ ದೇವರೆಂದು ತಿಳಿದು ಬಸವಣ್ಣನವರ ಪಾದಪೂಜೆಯನ್ನು ನೆರವೇರಿಸುತ್ತಾ ಇದ್ದಾರೆ.

ಶಿಷ್ಯ

ಹೇಗೆ ನೆರವೇರಿಸುತ್ತಾ ಇದ್ರು ಗುರುವೆ ?

ನಿರೂಪಕ

ಪತಿಪಾದ ಪೂಜೆಗೈವ ಪುಣ್ಯಾಂಗನೆಗೆ ಇನ್ನು
ಸರಿಯುಂಟೆ ಯಮುನಾ ಗಂಗಾತೀರ್ಥಗಳು
ಗಂಗಾತೀರ್ಥಗಳು |

ಪತಿಪಾದದಗ್ಘವಣಿಯ ಪವಿತ್ರವೆಂದರಿಯಲು
ಶತಜನ್ಮ ಪಾಪವು ಪರಿಹರವು ಕೇಳು
ಪರಿಹಾರವು ಕೇಳು | ೯೬

ಹೀಗೆ ಪತಿಪಾದ ಪೂಜೆಯೇ ಸರ್ವಶ್ರೇಷ್ಠವೆಂದು ಯಾವ ಗಂಗಾಂಬಿಕಾ ನೀಲಾಂಬಿಕಾ ದೇವಿಯರು ಮಾಡುತ್ತಿರುವಾಗ ಬಸವಣ್ಣನವರು ಅವರೇನು ಹೇಳಿದರು ಅಂತಾಂದ್ರೆ

ಜಲವ ಕಂಡಲ್ಲಿ ಮುಳುಗುವರಯ್ಯ
ಮರವ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರವ
ನಂಬಿದವರೆತ್ತ ಬಲ್ಲರು ನಮ್ಮ ಕೂಡಲಸಂಗಮ ದೇವನ | ೯೭

ಎಂಬಂತೆ ತಮ್ಮ ಸತಿಯರಲ್ಲಿರುವ ಅತೀವ ಪ್ರೇಮಾತಿಶಯಕ್ಕೆ ಬಸವಣ್ಣನವರು ಸಂತೋಷ ಪಡುತ್ತ ಗುರುಸೇವೆಯೇ ಹರಸೇವೆ, ಶರಣರ ಸೇವೆಯೇ ಪರಮೇಶ್ವರನ ಸೇವೆ, ಇಂಥ ಸೇವೆ ಮಾಡುತ್ತ ಕೃತಾರ್ಥರಾಗಬೇಕು. ಇದು ಗೃಹಿಣಿಯರ ಧರ್ಮ.

ಕೃಷೀ ಮೂಲಮಿದಂ ಧಾನ್ಯಂ
ಭಾರ್ಯಾಮೂಲಮಿದಂ ಗೃಹಂ
ಮಂತ್ರಮೂಲಮಿದಂ ದೈವಂ
ದೈವ ಮೂಲಮಿದಂ ಜಗತ್ |

ಎನ್ನುವುದಕ್ಕೆ ಬದಲಾಗಿ ಈ ಕಲಿಯುಗದಲ್ಲಿ 'ಧನಮೂಲಮಿದಂಜಗತ್' ಎಂದಾಗಿದೆ. ಆದರೆ ದುಡಿಮೆಯೇ ದೇವರಲ್ಲವೆ? ಪ್ರತಿಯೊಬ್ಬ ಮನುಷ್ಯನು ಕಷ್ಟಪಟ್ಟು ತನ್ನ ದೇಹದ ಬಿಸಿ ಬೆವರನ್ನು ಭೂದೇವಿಗೆ ಅರ್ಪಣೆ ಮಾಡಿ ಧಾನ್ಯಗಳನ್ನು ಸಂಗ್ರಹಿಸಿ ಮೃಷ್ಟಾನ್ನವನ್ನು ಉಣ್ಣ ಬೇಕೇ ವಿನಾ ಪರಾನ್ನಕ್ಕಾಗಿ ನಾವು ಯಾವತ್ತೂ ಹಾತೊರೆಯಬಾರದು. ಇದನ್ನೇ ಬಸವಣ್ಣನವರು 'ಕಾಯಕವೇ ಕೈಲಾಸ' ಎಂದು ಸಾರಿದ್ದಾರೆ. ಕಾಯಕದಲ್ಲಿ ನಿರತರಾದ ಬಳಿಕ ಗುರುಸೇವೆಯಾದರೂ ಮರೆಯಬೇಕು, ಹರಪೂಜೆ ಯಾದರೂ ತೊರೆಯಬೇಕು. ಜಂಗಮ ಬಂದು ಮುಂದೆ ನಿಂದಿರ್ದೊಡಂ ಹಂಗು ಹರಿದಿರಬೇಕು. ಕಾಯಕವೇ ಕೈಲಾಸವಾದ ಕಾರಣ ಅಮಳೇಶ್ವರ ಲಿಂಗವೂ ಸಹ ಕಾಯಕದೊಳಗೆ ಎಂದು ಶರಣರು ಅಪ್ಪಣೆಯನ್ನು ಕೊಡಿಸಿದ್ದಾರೆ.

ಶಿಷ್ಯ

ಶರಣರು? ಶರಣರು ಅಂದ್ರೆ ಯಾರು ಗುರುವೆ?

ನಿರೂಪಕ

ಅಯ್ಯಾ ಮಗು ಶರಣನೆಂದರೆ

ಬಟ್ಟಂಬಯಲೆಲ್ಲ ಘಟ್ಟಿಗೊಂಡರೆ
ನೆಟ್ಟನೆ ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದಯ್ಯಾ ?
ಮೇಘದ ಜಲವೆಲ್ಲ ಮುತ್ತಾದರೆ ಸಪ್ತಸಮುದ್ರಗಳಿಗೆ
ಉದಕವಿನ್ನೆಲ್ಲಿಯದಯ್ಯಾ ?
ಲೋಕದ ಕಷ್ಟಜೀವಿಗಳೆಲ್ಲ ಸಿಟ್ಟನೆ ಶಿವಜ್ಞಾನಿಗಳಾದರೆ
ಭವದ ಬೆಳಗಿನ್ನೆಲ್ಲಿಯದಯ್ಯಾ ?
ಕೂಡಲ ಸಂಗಮದೇವಾ ನಿಮ್ಮ ಶರಣರಲ್ಲಿ
ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ | ೯೯

ಎಂದು ಬಸವಣ್ಣನವರು ಅಪ್ಪಣೆ ಮಾಡಿದ್ದಾರೆ. ಅಯ್ಯಾ ಮಗು ಶಿವನನ್ನು ಶಿವನ ಭಕ್ತರನ್ನು ತನ್ನ ಹರಣವನ್ನಾಗಿ ಉಳ್ಳಾತನೆ ಶರಣನಲ್ಲವೆ ?

ಶಿಷ್ಯ

ಹಾಗಾದರೆ ಕಾಯಕ ಎಂದರೇನು ಗುರುವೆ ? ಶರಣರು ಮಾಡುವ ಕೆಲಸ ಮಾತ್ರ ಕಾಯಕವೆ ? ಉಳಿದವರು ಮಾಡುವ ಕೆಲಸ ಕಾಯಕವಲ್ಲವೆ ?

ನಿರೂಪಕ

ಅಯ್ಯಾ ಮಗು, ಕಳ್ಳತನ ಕಾಯಕವಲ್ಲ. ದರೋಡೆ ಮಾಡುವವನು ದಯಾಳುವಲ್ಲ. ಸುಳ್ಳು ಹೇಳುವವನು ಶಿವಶರಣನಲ್ಲ. ಕೇಳು,

ಕಾಯಕವೆಂಬ ಕೆರೆಗೆ
ತನುವೆಂಬ ಏರಿಯ ಹಾಕಿ
ಮನವೆಂಬ ಕಲ್ಲುಕಟ್ಟೆಯ ಕಟ್ಟಿ
ಅನುಭವವೆಂಬ ತೂಬನ್ನು ಇಟ್ಟು
ಆನಂದವೆಂಬ ಜಲವ ತುಂಬಿ
ಸ್ವಾನುಭವವೆಂಬ ಸೋಪಾನವ ಮಾಡಬೇಕಯ್ಯ
ಆ ಕೆರೆಯ ಏರಿಯ ಮೇಲೆ
ಆಚಾರವೆಂಬ ವೃಕ್ಷವ ಬೆಳೆಸಿ
ಅರಿವೆಂಬ ಹೂವನ್ನು ಅದ್ವೈತವೆಂಬ ಎರಡು ಕೈಗಳಿಂದ ಕೊಯ್ದು
ಅನುಪಮಲಿಂಗವನ್ನು ಪೂಜಿಸುವಾತನನ್ನು ಭಕ್ತನೆಂಬೆನಯ್ಯಾ
ಮಹಾಶಿವ ಶಂಭುಲಿಂಗ ಸಿದ್ಧೇಶ್ವರ ಪ್ರಭುವೆ ೧೦೦

ಎಂದು ತೋಂಟದಾರ್ಯರು ಅಪ್ಪಣೆ ಕೊಡಿಸಿದ್ದಾರೆ. ಅದರಂತೆ ನಡೆದು ಆಚರಿಸಿ, ನುಡಿದಂತೆ ನಡೆದು, ಮಾತಿಗೆ ತಪ್ಪದಂತೆ ಇರಬೇಕು. ಇದೇ ಸದ್ಭಕ್ತರ ಲಕ್ಷಣ, ಇದೇ ಶಿವಶರಣರ ಸನ್ನಡತೆ. ಹೀಗಿರುವಾಗ ಬಸವಣ್ಣನವರು ಕಾಯಕದಲ್ಲಿ ನಿರತರಾಗಿ ಲಕ್ಷದ ಮೇಲೆ ತೊಂಬತ್ತು ಸಾವಿರ ಜಂಗಮರಿಗೆ ನಿತ್ಯವೂ ದಾಸೋಹವನ್ನು ಮಾಡುತ್ತಿದ್ದಾರೆ. ಅಲ್ಲಿ ಯಾರೂ ಸೋಮಾರಿ ಗಳಾಗಿರುವಂತಿಲ್ಲ. ದುಡಿಮೆ ಇಲ್ಲದೆ ಯಾರೂ ದವಡೆಯಾಡಿಸುವ ಆಧಾರಿಟಿ ಪಡೆದಿಲ್ಲ ಎಂಬುದಾಗಿ ಬಸವಣ್ಣನವರು ಆಗಾಗ್ಗೆ ಹೇಳುತ್ತ ಇದ್ದರು.

ಶಿಷ್ಯ

ಕಾಯಕ ಎಂದರೆ ಈಗರ್ಥವಾಯ್ತು ಗುರುಗಳೆ. ಆಮೇಲೆ ?

ನಿರೂಪಕ

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆಯ ವಾಸನೆಯು
ಬಲ್ಲಂಥ ಪ್ರಾಜ್ಞರು ತಿದ್ದಿಕೊಳಬೇಕು
ತಿದ್ದಿಕೊಳಬೇಕು | ೧೦೧

ಅನಂತರ ಬಿಜ್ಜಳ ಮಹಾರಾಜನು ಬಸವಣ್ಣನವರ ಪ್ರೀತಿ ಪಾತ್ರನಾಗಿ ಭವ್ಯವಾದ ಸೌಧವನ್ನು ನಿರ್ಮಿಸಲು ಪ್ರಯತ್ನವನ್ನು ಪಟ್ಟಿದ್ದಾನೆ. ಆ ಸೌಧಗಳಿಗೆ

ಏಳುನೂರೆಪ್ಪತ್ತು ಹೊಳೆಪ ಹೊಂಗಲಸವು
ಪಂಚಾಕ್ಷರಿಯ ಮುದ್ರೆ ಪಟನಂದಿಧ್ವಜವು
ಪಟನಂದಿಧ್ವಜವು | ೧೦೨

ಬಿಜ್ಜಳ ಮಹಾರಾಜನು ಬಸವಣ್ಣನವರಿಗೆ ಮತ್ತು ಏಳುನೂರ ಎಪ್ಪತ್ತು ಅಮರ ಗಣಂಗಳಿಗೆ ಲಕ್ಷದ ಮೇಲೆ ತೊಂಬತ್ತು ಸಾವಿರ ಶಿವಶರಣರಿಗೆ ಗೃಹವನ್ನು ನಿರ್ಮಾಣ ಮಾಡಿಸಿ ಸಂತೋಷದಿಂದಿರಲು ಇತ್ತ ಗಂಗಾಭವಾನಿಯು ಲಕ್ಷದ ಮೇಲೆ ತೊಂಬತ್ತು ಸಾವಿರ ಗಣಂಗಳಿಗೆ ಅನ್ನೋದಕವನ್ನು ಕೊಟ್ಟು ಜಂಗಮರ ಸೇವೆಯೇ ಜಗದೀಶನ ಸೇವೆಯೆಂದು ಜಂಗಮರ ಆಶೀರ್ವಾದಕ್ಕೆ ಪಾತ್ರಳಾಗಿರಲು ಇತ್ತ ಕಡೆ ಏನಾಗಿದೆಯಪ್ಪ, ಅಂದರೆ,

ಶಿಷ್ಯ

ಏನಾಗಿದೆ ಸ್ವಾಮೀ ?

ನಿರೂಪಕ

ಕೈಲಾಸದಲಿ ಪಾರ್ವತಾದೇವಿಯು "ಮಹೇಶ್ವರ, ಭೂಲೋಕದಲ್ಲಿ ಗಂಗಾಭವಾನಿಯು ಬಸವಣ್ಣನವರಿಗೆ ಧರ್ಮಪತ್ನಿಯಾಗಿ ಲಕ್ಷದ ಮೇಲೆ ತೊಂಬತ್ತು ಸಾವಿರ ಗಣಂಗಳಿಗೆ ಅನ್ನ ಪಾನಾದಿಗಳನ್ನು ನೀಡಿ ತೃಪ್ತಿಪಡಿಸುತ್ತಿದ್ದಾಳೆಂದು ಕೇಳಿರುವೆನಷ್ಟೆ. ನಾನು ಒಂದು ದಿನವಾದರೂ ಜಂಗಮರ ಸೇವೆಗೆ ಪಾತ್ರಳಾಗಬಾರದೆ?" ಎಂದು ಪರಮೇಶ್ವರನನ್ನು ಕೇಳಲು ಪರಮೇಶ್ವರನಾದರೋ 'ಪಾರ್ವತಿ, ಆ ಕಾರ್ಯವು ನಿನ್ನಿಂದಾಗದು' ಎಂದು ಗೌರೀದೇವಿಗೆ ಹೇಳಲು ಗೌರೀ ದೇವಿಯಾದರೋ ಪರಮೇಶ್ವರನ ಮಾತನ್ನು ನಿರಾಕರಿಸಿ ಗಣಪತಿಯನ್ನು ಜೊತೆಯಲ್ಲಿ ಕರೆದುಕೊಂಡು ಕಲ್ಯಾಣಪಟ್ಟಣಕ್ಕೆ ಹೋಗಿ ತನ್ನ ವೇಷವನ್ನು ಮರೆಮಾಚಿಕೊಂಡು ಗಂಗಾ ಭವಾನಿಯಲ್ಲಿ ಸ್ನೇಹವನ್ನು ಬೆಳಸಿ "ಗಂಗಾ ಭವಾನಿ, ಈ ದಿವಸ ಜಂಗಮರ ಸೇವೆಗೆ ಅಡಿಗೆಯನ್ನು ಮಾಡಲು ನನಗೆ ಅವಕಾಶವನ್ನು ಕೊಡು" ಎಂದು ಕೇಳಲು, ಗಂಗಾಭವಾನಿಯು ಒಪ್ಪಿ ಮಾಯಾರೂಪಿಯಾದ ಪಾರ್ವತೀದೇವಿಗೆ ಅನ್ನಪಾನಾದಿಗಳನ್ನು ಮಾಡುವುದಕ್ಕೆ ಅಪ್ಪಣೆ ಕೊಟ್ಟಿದ್ದಾರೆ.

ಶಿಷ್ಯ

ಹಾಗಾದರೆ ಪಾರ್ವತೀದೇವಿಯವರು ಅನ್ನಪಾನಾದಿಗಳನ್ನು ಸಿದ್ಧಪಡಿಸಿ ಜಂಗಮರ
ಸೇವೆಯನ್ನು ಮಾಡಿದರೆ ಸ್ವಾಮಿ

ನಿರೂಪಕ

ಅಯ್ಯಾ ಮಗು, ವೃದ್ಧನಂತೆ ವೇಷವನ್ನು ಧರಿಸಿಕೊಂಡು ಬಂದು ಅಡಿಗೆ ಮನೆಯ ಮುಂದೆ ಪರಮೇಶ್ವರನು ನಿಂತುಕೊಂಡು "ಅಮ್ಮಾ ಬಾಳ ಹಸಿವಾಗುತ್ತಿದೆ. ನೀನು ನನಗೆ ಸ್ವಲ್ಪ ಅನ್ನವನ್ನು ಬಡಿಸಮ್ಮ" ಎಂದು ಬಳಲಿದವರಂತೆ ಕೇಳಲು, ಬಂದಿರುವ ವೃದ್ಧನು ಸಾಕ್ಷಾತ್ ಪರಶಿವನೆಂದು ತಿಳಿಯದ ಪಾರ್ವತೀದೇವಿಯು "ಸ್ವಾಮಿ, ಜಂಗಮಾರ್ಚನೆಯಾಗದ ಹೊರತು ನಿಮಗೆ ಊಟಕ್ಕೆ ಬಡಿಸಲಾಗುವುದಿಲ್ಲ" ಎಂದು ಉತ್ತರ ಕೊಡಲು ಪರಮೇಶ್ವರನು ಅದಕ್ಕೆ ಏನಂತ ಘೇಳದ್ದಾನೆ.

ಶಿಷ್ಯ

ಏನಂತ ಹೇಳಿದರು ಗುರುವೆ ?

ನಿರೂಪಕ

ಹಸಿದು ಬಂದವರಿಗೆ ಅನ್ನವ ನೀಡಬೇಕು
ಶಿಶುಗಳಿಗೆ ಹಾಲ್ಬಣ್ಣ ಕೊಡಬೇಕು ತಾಯಿ
ಕೊಡಬೇಕು ತಾಯಿ | ೧೦೩

ಪರಮೇಶ್ವರನು ಹಸಿವಿನಿಂದ ಬಳಲಿದವನಂತೆ ನಟಿಸಲು ಪಾರ್ವತೀದೇವಿಯಾದರೋ ಇವರೊಬ್ಬರಲ್ಲವೆ ಎಂದು ಅವರಿಗೆ ಕೈಕಾಲಿಗೆ ನೀರು ಕೊಟ್ಟು, ಎಲೆಯನ್ನು ಮಡಗಿ ಕೂರಿಸಿದ್ದಾರೆ. ಅನಂತರ ಪಾರ್ವತೀದೇವಿಯು ಊಟಕ್ಕೆ ಬಡಿಸಿದಂತೆಲ್ಲ ಭೂಮಿಯೇ ಬಾಯ್ಬಿಟ್ಟಂತೆ ಎಷ್ಟು ಸಲ ಅನ್ನಸಾರುಗಳನ್ನು ಬಡಿಸಿದರೂ "ನನಗೆ ಸಾಕಷ್ಟಿಲ್ಲವಮ್ಮ, ಇನ್ನೂ ತರಬೇಕು" ಎನ್ನಲು ಮಾಡಿದ ಅನ್ನವೆಲ್ಲವನ್ನು ಸಂಪೂರ್ಣವಾಗಿ ಬಡಿಸಿದ್ದಾರೆ. ವೃದ್ಧ ಶಿವನು ಎಲ್ಲವನ್ನೂ ಮುಗಿಸಿದ್ದಾರೆ. ಇತ್ತ ಪಾರ್ವತೀದೇವಿಯಾದರೋ "ಅಯ್ಯೋ, ನಾನು ಒಂದು ಹೊತ್ತಿನ ಸೇವೆಗಾಗಿ ಮಾಡಿದ ಅನ್ನವನ್ನೆಲ್ಲ ಈ ಮುದುಕನು ತಿಂದುಬಿಟ್ಟನಲ್ಲ, ನನ್ನ ಪ್ರಾಣಪ್ರಿಯನು ಹೋಗಬೇಡವೆಂದರೂ ನಾನು ಅವರ ಮಾತನ್ನು ನಿರಾಕರಿಸಿ ಬಂದುದಕ್ಕೆ ಇಷ್ಟು ಅವಮಾನವನ್ನು ಹೊಂದಬೇಕಾಯಿತೆ? ಪರಮೇಶ್ವರನೇ ಈ ರೀತಿ ಪರೀಕ್ಷಿಸಲೆಂದೇ ಹೂಡಿರುವ ತಂತ್ರ ಇದಾಗಿರಬಹುದೆ?" ಎಂದು ಪಾರ್ವತೀದೇವಿಯ ಪರಮೇಶ್ವರನನ್ನು ಕುರಿತು ಅವಳು ಹೇಗೆ ಬೇಡುತ್ತಾ ಇದ್ದಾಳೆ.

ಶಿಷ್ಯ

ಹೇಗೆ ಬೇಡುತ್ತಾ ಇದ್ದಾರೆ ಗುರುವೆ ?

ನಿರೂಪಕ

ಜಯಜಯ ಶಂಕರಾ ಜಗದೇಕನಾಥನೆ
ಭಯನಿವಾರಣನೆ ಭಕ್ತಪೋಷಕನೆ
ಭಕ್ತಪೋಷಕನೆ | ೧೦೪

ಪಾಲನೇತ್ರನೆ ಹರ ಶೂಲಪಾಣಿಯೆ ಶಿವ
ಬಾಲಗೊಲಿದು ಹಾಲ ಸವಿದ ಶಂಕರನೆ
ಸವಿದ ಶಂಕರನೆ | ೧೦೫

ಮಂಗಳಾಂಗನೆ ಸ್ವಾಮಿ ಮಹಿಮಾಪುರುಷನೆ ದೇವ
ಭೃಂಗಿ ವಂದಿತಾ ಶಿವ ಚಂದ್ರಶೇಖರನೆ
ಚಂದ್ರಶೇಖರನೆ | ೧೦೬

ಪಾರ್ವತಾದೇವಿಯು 'ಹಾ ಪ್ರಾಣಪ್ರಿಯ ನಿನ್ನ ಮಾತನ್ನು ಕೇಳದೆ ನಾನು ಕೆಟ್ಟೆನೆ ?' ಎಂದು ಕಣ್ಣೀರನ್ನು ಹಾಕಲು ಪರಮೇಶ್ವರನಾದರೋ ಗೌರೀದೇವೀಗೆ ಏನಂತ ಹೇಳ್ತಾ ಇದ್ದಾರೆ.

"ಅಮ್ಮಾ ತಾಯಿ ಬೇಗನೆ ತಂದು ಬಡಿಸಮ್ಮ" ಎಂದು ಕೇಳಿದ್ದಾರೆ. ಪಾರ್ವತಿಯು ಕಂಗಾಲಾಗಿರಲು ಪರಮೇಶ್ವರನು ತನ್ನ ನಿಜ ಸ್ವರೂಪವನ್ನು ತೋರಿ ಪಾರ್ವತಾದೇವಿಯೊಡನೆ ಕೈಲಾಸಕ್ಕೆ ದಯಮಾಡಿದ್ದಾರೆ.

ಶಿಷ್ಯ

ಆಮೇಲೇನಾಯಿತು ಗುರುವೆ ?

ನಿರೂಪಕ

ಮುಂದಣ ಕಥೆಯದರಂದವ ಪೇಳುವೆ
ಚಂದದಿ ಲಾಲಿಸಿ ಸಭಿಕರೇ ನೀವು
ಸಭಿಕರೇ ನೀವು | ೧೦೩

ಇತ್ತ ಬಸವಣ್ಣನವರಾದರೋ ಇಷ್ಟು ಹೊತ್ತಾದರೂ ಜಂಗಮರನ್ನು ಊಟಕ್ಕೆ ಕರೆಯಲಿಲ್ಲವಲ್ಲ ಎಂದು ಇದು ಎಂಥ ಅಪರಾಧವೆಂದು ಅಡಿಗೆಯ ಮನೆ ಬಳಿ ಹೋಗಿ ನೋಡಿದ್ದಾರೆ. ಮಾಡಿದ ಅಡಿಗೆಯಾದರೋ ಒಂದಿರುವೆಗೂ ಸಾಲದಂತಿದೆ. ಬಸವಣ್ಣನವರು ಗಂಗಾಭವಾನಿಯನ್ನು ಕರೆದು ಹೀಗಾಗಲು ಕಾರಣವೇನೆಂದು ವಿಚಾರಿಸಲು ಗಂಗಾಭವಾನಿಯು "ಸ್ವಾಮಿ ಯಾರೋ ಒಬ್ಬಳು ಮಹಾತಾಯಿಯು ಬಂದು ಈ ದಿವಸ ಜಂಗಮರ ಸೇವೆಗೆ ಅಡಿಗೆ ಮಾಡಲು ನನಗೆ ಅವಕಾಶ ಕೊಡಿ ಎಂದು ಕೇಳಿದಳು. ಅವಳಿಗೆ ಅಡಿಗೆ ಮಾಡಲು ಬಿಟ್ಟುಕೊಟ್ಟೆ. ಅಡಿಗೆ ಎಲ್ಲವೂ ಆದ ಮೇಲೆ ಒಬ್ಬ ವೃದ್ಧಜಂಗಮರು ಬಂದು ಮಾಡಿದ ಅನ್ನದಲ್ಲಿ ಒಂದಗುಳನ್ನೂ ಸಹ ಬಿಡದಂತೆ ಊಟ ಮಾಡಿರುತ್ತಾರೆ. ಇಷ್ಟೇ ಸಮಾಚಾರ" ಎಂದು ಗಂಗಾಭವಾನಿಯು ತಿಳಿಸಲು ಬಸವಣ್ಣನವರು ಆಶ್ಚರ್ಯದಿಂದ "ಆಹಾ ಇದೆಲ್ಲವೂ ಆ ಶಿವನಲೀಲೆಯೇ ಹೊರತು ಬೇರೆ ಏನೂ ಅಲ್ಲ" ಎಂದು ಆನಂದಪಡುತ್ತಿರಲು ಜಂಗಮರೆಲ್ಲರೂ ಬಸವಣ್ಣನವರ ಬಳಿಗೆ ಬಂದು "ಬಸವದೇವ ನಾವು ನಮ್ಮ ಜೀವಮಾನದಲ್ಲಿಯೇ ಇಂಥ ಅಪೂರ್ವವಾದ ಭೋಜನವನ್ನು ಮಾಡಿರಲಿಲ್ಲ, ನಾವು ಬಹಳವಾಗಿ ಸಂತೃಪ್ತರಾಗಿದ್ದೇವೆ" ಎಂದು ಹೇಳುತ್ತಿರಲು ಬಸವಣ್ಣನವರಾದರೋ ಸಂತೋಷದಿಂದ ಪರಮೇಶ್ವರನ ಮಹಿಮೆಯನ್ನು ಕಂಡು ಕೃತಾರ್ಥಭಾವದಿಂದ ಸ್ತೋತ್ರ ಮಾಡುತ್ತಿದ್ದಾರೆ.

ಶಿಷ್ಯ

ಹೇಗೆ ಸ್ತೋತ್ರ ಮಾಡುತ್ತಿದ್ದಾರೆ ಗುರುವೆ ?

ನಿರೂಪಕ

ಶಿವನೆ ಭಯಹರನೆ ಚಿದಂಬರನೆ
ಜಟಾಧರ ನೀಲಕಂಠ ಗಜಚರ್ಮಾಂಬರನೆ
ಭವಾನಿ ವರಗಂಗಾಧರನೆ | ಪಲ್ಲವಿ |

ಮಹಾದೇವನ ವಿಶ್ವವಿಧಾತನ
ಸ್ಮರಣೆಯೇ ಆನಂದಕಾರಿ
ಸೇವೆಯೇ ಭವತಾಪಹಾರಿ
ಭಕ್ತರಾಧಾರಿ
ಶಂಕರ ನಿನ್ನ ಪಾದಕಮಲ
ತಿಂಗಳ ಬೆಳಕಂತೆ ವಿಮಲ
ಕಂಗಳ ಕಿರಣ ಕಲಾ
ಗಜ ಚರ್ಮಾಂಬರನೆ |

ನಿನ್ನ ಪಾದವು ಶ್ರೀಪಾತಾಳದೆ
ಮುಡಿಯದೆ ಸುರಲೋಕ ತಾಗೆ
ಜಟೆಯದೆ ಕರುಮೋಡ ಮಾಲೆ
ನಿನ್ನಯಾ ಲೀಲೆ
ಚಂದ್ರನು ರವಿ ನಿನ್ನ ನಯನ
ವಿಶ್ವದಾ ನಗು ನಿನ್ನ ವದನ
ನಾಮವೆ ಚಿರಪಾವನ
ಗಜ ಚರ್ಮಾಂಬರನೆ | * ೧೦೮

ಶಿಷ್ಯ

ನನಗೂ ಅಮೃತಾನ್ನ ಭೋಜನ ಮಾಡಿದಷ್ಟು ಸಂತೋಷವಾಯ್ತು ಗುರುವೆ.

ನಿರೂಪಕ

ಅಯ್ಯಾ ಮಗು, ಬಸವಣ್ಣನವರು ಪರಮಾತ್ಮನನ್ನು ಈ ಪರಿಯಲ್ಲಿ ಕೊಂಡಾಡುತ್ತಿರುವಾಗ ಆ ಜಂಗಮರಾದರೋ

ಶಿವನೆ ಗಂಗಾಧರನೆ ಭವರೋಗ ವೈದ್ಯನೆ
ದೇವರ ದೇವನೆ ನೀಲಕಂಠಾನೆ
ನೀಲಕಂಠಾನೆ | ೧೦೯

ಎಂದು ಸ್ತೋತ್ರ ಮಾಡುತ್ತಿರುವುದನ್ನೂ ಕಂಡ ಬಸವಣ್ಣನವರು ಶಂಭೋ ಶಿವ ಶಂಕರಾ. ತಂದೆ ನನ್ನ ಮಾನಾಪಮಾನಗಳಿಗೆಲ್ಲ ನೀನೇ ಕಾರಣ ತಂದೆ. ಶಿವನುಂಡ ಪ್ರಸಾದ ಸರ್ವಜಂಗಮರನ್ನೂ ತಣಿಸಿತೆಂದರೆ 'ಸರ್ವಂ ಶಿವಮಯಂ ಜಗತ್' ಎಂಬ ಮಾತು ಸತ್ಯವಾಯಿತಲ್ಲವೆ. ತಂದೆ, ಎಲ್ಲವೂ ನೀನೆ ಎಲ್ಲವೂ ನಿನ್ನದೇ

ಇಳೆ ನಿಮ್ಮದಾನ ಬೆಳೆ ನಿಮ್ಮದಾನ
ಸುಳಿದು ಸೂಸುವ ಗಾಳಿ ನಿಮ್ಮ ದಾನ
ಕಳೆಯೇರಿ ಬೆಳಗುವ ರವಿಶಶಿ ನಿಮ್ಮದಾನ
ಸಲಿಲವೆಂಬ ಸಪ್ತ ಶರಧಿ ನಿಮ್ಮದಾನ
ಕೂಡಲ ಸಂಗಮದೇವ ಸರ್ವವೂ ನಿಮ್ಮಭಿದಾನ. ೧೧೦

ಹೇ ದಯಾಪರ, ಕರುಣಾಕರ, ದಯಾಳು ಅಖಿಲಾಂಡ ಕೋಟಿ ಬ್ರಹ್ಮಾಂಡ ಸ್ವರೂಪನಾದ ಪರಮಾತ್ಮ.

ಸದ್ಯೋಜಾತಸ್ತಥಾ ಭೂಮಿಃ
ವರುಣದೇವೋ ಭವೇ ಜಲಃ
ಅಘೋರದ್ಯಹ್ನಿ ರೂಪಾಯ
ತತ್ಪುರುಷೇ ವಾಯುರುಚ್ಯತೇ
ಈಶಾನ್ಯೇ ಗಗನಾಕಾರೇ ಪಂಚಬ್ರಹ್ಮಂ ಮಯಂ ಜಗತ್ ೧೧೧

ಶಿಷ್ಯ

ಹಾಗಂದರೇನು ಗುರುವೆ ?

ನಿರೂಪಕ

ಅಪ್ಪಾ ಮಕ್ಕಳೇ

ಹರಿವ ನದಿಗೆ ಮೈಯೆಲ್ಲ ಕಾಲು
ಉರಿವ ಅಗ್ನಿಗೆ ಮೈಯೆಲ್ಲ ನಾಲಿಗೆ

---

* 'ಭಕ್ತ ಮಾರ್ಕಂಡೇಯ' ಎಂಬ ಹಳೆಯ ಚಿತ್ರದ ಒಂದು ಭಕ್ತಿ ಗೀತೆ.

ಬೀಸುವ ಗಾಳಿಗೆ ಮೈಯೆಲ್ಲ ಕೈಯಿ
ಕೂಡಲಸಂಗಮದೇವ
ನಿಮ್ಮ ಶರಣರಿಗೆ ಸರ್ವಾಂಗ ಲಿಂಗ ೧೧೨

ಅಂದಹಾಗೆ 'ಶರಣರ ಹೃದಯ ಪರಶಿವ ನಿಲಯ' ಎನ್ನುವಂತೆ ಪರೀಕ್ಷೆ ಮಾಡಲು ಪರಶಿವನೇ ಹೀಗೆ ಮಾಡಿರಬಹುದು ಎಂದುಕೊಂಡು ಬಸವಣ್ಣನವರು ಸಂತೋಷದಿಂದ ಇದ್ದಾರೆ. ಹೀಗಿರುವಾಗ ಗಂಗಾದೇವಿಗೆ ಗರ್ಭಸೂಚನೆ ತೋರಿ ಏನಾಗಿದೆ.

ಶಿಷ್ಯ

ಏನಾಗಿದೆ ಗುರುವೆ ?

ನಿರೂಪಕ

ಒಂದು ತಿಂಗಳೀಗೆ ಏನೇನ ಬಯಸಿದಳು
ಮೃಣ್ಮಯ ಪಾತ್ರೆಯ ಸಿಹಿನೀರ ತಾಯಿ
ಸಿಹಿನೀರ ತಾಯಿ | ೧೧೩

ಶಿಷ್ಯ

ಸಿಹಿನೀರ ತಾಯಿ ? ಹಂಗಂದರೇನು ಗುರುವೆ ?

ನಿರೂಪಕ

ಅಪ್ಪಾ ಮಕ್ಕಳೆ ಕೇಳಿ, ಗಂಗಾಭವಾನಿಗೆ ಗರ್ಭಸೂಚನೆ ತೋರಿ ಒಂದು ತಿಂಗಳಾಗಲು ಮೃಣ್ಮಯ ಪಾತ್ರೆ ಎಂದರೆ ಹೊಸ ಮಣ್ಣಿನ ಪಾತ್ರೆಯಲ್ಲಿ ಸಿಹಿನೀರನ್ನು ಒದಗಿಸಿಕೊಟ್ಟಿದ್ದಾರೆ. ಎರಡು ತಿಂಗಳಾಗಲು

ಶಿಷ್ಯ

ಆಮೇಲೇನೇನು ಬಯಸಿದ್ದಾರೆ ಗುರುವೆ ?

ನಿರೂಪಕ

ಅಯ್ಯಾ ಮಕ್ಕಳೇ, ಕೇಳುವಂತವರಾಗಿ

ಎರಡು ತಿಂಗಳಾಗೆ ಏನೇನ ಬಯಸಿದಳು
ಅಂಬರದಲ್ಲಾಡುವ ಎಳನೀರ ತಾಯಿ
ಎಳನೀರ ತಾಯಿ | ೧೧೪

ಅಯ್ಯಾ ಮಕ್ಕಳೆ ಗಂಗಾಭವಾನಿಗೆ ಗರ್ಭಸೂಚನೆ ತೋರಿ ಎರಡು ತಿಂಗಳಾಗಲು ನಾರಿಕೇಳ ಅಂದರೆ ತೆಂಗಿನ ಎಳ ನೀರನ್ನು ಅಪೇಕ್ಷೆಪಟ್ಟಿದ್ದಾರೆ. ಅದನ್ನು ಒದಗಿಸಿಕೊಟ್ಟರು. ಈಗ ಮೂರು ತಿಂಗಳಾಗುತ್ತ ಬಂದಿದೆ.

ಶಿಷ್ಯ

ಮೂರನೇ ತಿಂಗಳಿಗೆ ಏನನ್ನು ಬಯಸಿದರು ಗುರುವೆ ?

ನಿರೂಪಕ

ಮೂರು ತಿಂಗಳಾಗೆ ಏನೇನ ಬಯಸಿದಳು
ಕಿತ್ತಾಲಿ ಹಣ್ಣಿನ ರಸವನ್ನೆ ತಾಯಿ
ರಸವನ್ನೇ ತಾಯಿ | ೧೧೫

ಯಾವ ಗಂಗಾ ಮಾತೆಗಾದರೋ ಗರ್ಭಸೂಚನೆ ತೋರಿ ಮೂರು ತಿಂಗಳಾಗಿರಲು ಕಿತ್ತಲೆಹಣ್ಣಿನ ರಸವನ್ನು ಅಪೇಕ್ಷೆ ಪಟ್ಟಿದ್ದಾರೆ. ಅದನ್ನು ಒದಗಿಸಿಕೊಟ್ಟಿರಲು ನಾಲ್ಕು ತಿಂಗಳಾಗುತ್ತಾ ಬಂದಿದೆ.

ನಾಲ್ಕು ತಿಂಗಳಾಗೆ ಏನನ ಬಯಸಿದಳು
ರಸಬಾಳೆ ಹಣ್ಣಿನ ರುಚಿಯನ್ನು ತಾಯಿ
ರುಚಿಯನ್ನು ತಾಯಿ | ೧೧೬

ನಾಲ್ಕು ತಿಂಗಳಾಗಲು ಗಂಗಾದೇವಿಯು ರಸಬಾಳೆ ಹಣ್ಣನ್ನು ಅಪೇಕ್ಷೆಪಟ್ಟಿದ್ದಾರೆ. ಅದನ್ನು ಒದಗಿಸಿಕೊಟ್ಟನಂತರ ಐದು ತಿಂಗಳಾಗುತ್ತಾ ಬಂದಿದೆ.

ಐದು ತಿಂಗಳಾಗೆ ಏನೇನ ಬಯಸಿದಳು ।
ಪಂಚ ಭಕ್ಷ್ಯದ ಊಟ ಪಾಯಸವನ್ನು
ಪಾಯಸವನ್ನು । ೧೧೭

ಅಯ್ಯಾ ಮಗು, ಐದು ತಿಂಗಳಾದ ಮೇಲೆ ಗಂಗಾಭವಾನಿಯು ಪಂಚಭಕ್ಷ್ಯ ಪಾಯಸವನ್ನು ಅಪೇಕ್ಷೆಪಟ್ಟಿದ್ದಾರೆ. ಅಂದ್ಹಾಗೆ ಯಾವ ಅಡ್ಗೆ ಮಾಡಬೇಕಾದರೂ ಒಗ್ಗರಣೆ ಬೇಕೇ ಬೇಕು.

ಶಿಷ್ಯ

ಅಲ್ಸೇ ಗುರುವೆ, 'ಒಗ್ಗರಣೆ ಇಲ್ಲದ ಅಡಿಗೆ ವರದಕ್ಷಿಣೆ ಇಲ್ಲದ ಮದುವೆ' ಇವು ಅಪ್ರಯೋಜಕವೆನ್ನುತ್ತಾರಲ್ಲವೆ ?

ನಿರೂಪಕ

ಅಯ್ಯಾ ಮಗು, ಅಧಿಕಪ್ರಸಂಗಿತನ ಬೇಡ. ವರದಕ್ಷಿಣೆ ಗಿರದಕ್ಷಿಣೆಯೆಂದರೆ ಅದೆಲ್ಲ ನಗರದಲ್ಲಿ ವಾಸವಾಗಿರೋ ವಿದ್ಯಾವಂತರನ್ನು ಬಡಿದರೊ ಗರ ಕಣೋ. ಅದು ಹಾಗಿರಲಿ, ಯಾವ ಭಕ್ಷ್ಯ ಭೋಜ್ಯಗಳಿಗೂ ಎಣ್ಣೆ ಬೀಳ್ಬೇಕು ಇಲ್ಲ ಬೆಣ್ಣೆ ಬೀಳ್ಬೇಕು.

ಶಿಷ್ಯ

ಬೀಳ್ಬೇಕು ಬೀಳ್ಬೇಕು

ನಿರೂಪಕ

ಈಗಿನ ಕಾಲದಲ್ಲಿ ಎಣ್ಣೆ ಬೆಣ್ಣೆ ಯಾವುದನ್ನು ಉಪಯೋಗಿಸುವುದಿಲ್ಲ, ಏತಕ್ಕಾಗಿ ಅಂದರೆ

ಎಣ್ಣೆ ಬೆಣ್ಣೆಯ ಋಣವು ಅನ್ನ ವಸ್ತ್ರದ ಋಣವು
ಪುಣ್ಯ ತೀರಿದ ಮರುದಿನವೆ - ಆದೇಹ
ಮಣ್ಣು ಪಾಲೆಂದ ಸರ್ವಜ್ಞ । ೧೧೮

ಅಪ್ಪಾ ಮಕ್ಕಳೆ ಸರ್ವಜ್ಞ ಮೂರ್ತಿ ವಚನೋಕ್ತಿಯಂತೆ ಎಣ್ಣೆ ಬೆಣ್ಣೆ ಋಣ ಎರಡೂ ತೀರಿದರೆ ನಾವು ಬೇಗ ಸಾಯುತ್ತೇವೆಂದು ಈಗಿನ ತರುಣರು ಬೆಳಿಗ್ಗೆ ಎದ್ದ ಕೂಡಲೆ ವಾಟರ್ರು ಎಂದರೆ ನೀರನ್ನು ಕ್ಯಾಪಿಗೆ ಸವರಿಕೊಂಡು ನಮ್ಮ ಜನ್ಮವೇ ನೀರಾವರ್ತ ಎಂದು ತಲೆಬಾಚಿಕೊಂಡು ಹೋಗುತ್ತಾರೆ. ಅವರ ತಲೆ ಎಣ್ಣೇನೂ ಕಾಣದಿಲ್ಲ ಬೆಣ್ಣೇನೂ ಕಾಣದಿಲ್ಲ ಬರದಲೆ ಅರ್ಥಾತ್ ಬರೀ ತಲೆ. ಅದಿರಲಿ, ಅಂದಹಾಗೆ ಗಂಗಾಭವಾನಿಯಾದರೋ ಆರನೇ ತಿಂಗಳಾಗುತ್ತ ಬರಲು

ಶಿಷ್ಯ

ಅವರು ಏನ್ ಅಪೇಕ್ಷೆ ಪಟ್ಟಿದ್ದಾರೆ ಗುರುವೆ ?

ನಿರೂಪಕ

ಆರು ತಿಂಗಾಳಾಗೆ ಏನೇನ ಬಯಸಿದಳು
ಆರಿದ ಅನ್ನವು ಕೆನೆಮೊಸರ ತಾಯಿ
ಕೆನೆಮೊಸರ ತಾಯಿ । ೧೧೯

ಏಳು ತಿಂಗಳಾಗುತ್ತಾ ಬಂದಿರಲು

ಏಳು ತಿಂಗಳಾಗೆ ಏನೇನ ಬಯಸಿದರು
ಎಳ್ಳೇನ ಹೋಳಿಗೆ ತುಪ್ಪಾವ ತಾಯಿ
ತುಪ್ಪಾವ ತಾಯಿ । ೧೨೦

ಗಂಗಾಭವಾನಿಗೆ ಏಳು ತಿಂಗಳಾಗಲು ಎಳ್ಳು ಹೋಳಿಗೆ ಕಾಸಿದ ಹಸುವಿನ ತುಪ್ಪ ಬಯಸಿದ್ದಾರೆ. ಕಾರಣವೇನೆಂದರೆ 'ಎಳ್ಳು ಬೆಲ್ಲ ತಿಂದು ಒಳ್ಳೆ ಮಾತಾಡು' ಅಂದ ಹಾಗೆ ಗರ್ಭವತಿ ಸ್ತ್ರೀಯರು ಹಿತವಾಕ್ಯಗಳನ್ನೇ ಆಡುತ್ತಾ ಇರಬೇಕು. ಕಠಿಣವಾದ ಮಾತುಗಳನ್ನು ಉಪಯೋಗಿಸಬಾರದು. ಏತಕ್ಕೆಂದರೆ

ಒಡಲೆಂಬ ಹುತ್ತಕ್ಕೆ ನುಡಿವ ನಾಲಿಗೆ ಸರ್ಪ
ಕಡುರೋಷವೆಂಬ ವಿಷವೇರಿ - ಕ್ಷಮತೆ ಗಾ
ರುಡಿಗನಂತಕ್ಕು ಸರ್ವಜ್ಞ ೧೨೧

ಅಂದಹಾಗೆ ಬಸವಣ್ಣನವರು ಸಹ 'ಎಲವೋ ಎಂದರೆ ನರಕ, ಅಯ್ಯಾ ಎಂದರೆ ಸ್ವರ್ಗ' ಎಂದು ಹೇಳಿದ್ದಾರೆ. ಗರ್ಭವತಿ ಸ್ತ್ರೀಯರು ಮಿತಾಹಾರವನ್ನು ಸೇವಿಸಬೇಕೇ ವಿನಹ ಪಿಷ್ಟ ಪದಾರ್ಥಗಳನ್ನು ಸೇವಿಸಬಾರದು. ಕಾರಣವೇನೆಂದರೆ

ಜನನೀ ಜನ್ಮ ಸೌಖ್ಯಾನಾಂ ವರ್ಧನೀ ಕುಲಸಂಪದೇ
ಪದವೀ ಪೂರ್ವ ಪುಣ್ಯಾನಾಂ ಲಿಖ್ಯತೇ ಜನ್ಮಪತ್ರಿಕಾ ೧೨೨

ಅಂದಹಾಗೆ ತಾಯಿ ಸೇವನೆ ಮಾಡುವ ಆಹಾರಪದಾರ್ಥವು ಘನೀಭೂತವಾಗಿರಬೇಕು. ಇಲ್ಲೊಂದು ಇತಿಹಾಸ

ಶಿಷ್ಯ

ಅದ್ಯಾವ್ದು ಹೇಳಿ ಗುರುವೆ.

ನಿರೂಪಕ

ಒಂದೂರ್ನಲ್ಲಿ ರಂಗಣ್ಣ ಅವನ ಹೆಂಡ್ತಿ ಇದ್ರು. ರಂಗಣ್ಣನ ಹೆಂಡ್ತಿ ಗರ್ಭವತಿಯಾಗಿ ಮಿತಾಹಾರವನ್ನು ಸೇವನೆ ಮಾಡದೆ ಏನೇನ್ ಸಿಕ್ತದೆಯೋ

ಶಿಷ್ಯ

ಗುರುಗಳೇ ಏನೇನೊ ಅಂದ್ರೆ.... ಕಡ್ಡಿಕಸಾ...

ನಿರೂಪಕ

ಛೇ. ಪಿಷ್ಟಪದಾರ್ಥಗಳು ಕಣೋ. ಹಂಗಂದ್ರೆ ಕಡುಸಾರದ ಆಹಾರ ಪದಾರ್ಥಗಳ ಸೇವನೆ ಅಂತ. ರಂಗಣ್ಣನ ಹೆಂಡ್ತಿ ಇಂಥ ಪಿಷ್ಟಪದಾರ್ಥಗಳ ಸೇವನೆ ಮಾಡ್ತಾ ಇರುವಾಗ ಆಕೆಯ ಗರ್ಭವು ಬಹಳ ಸ್ಥೂಲವಾಗಿ ಇದ್ದುದರಿಂದ ಬೀದೀಲ್ ಹೊಂಟ್ರೆ ಕಮಾನ್ ಗಾಡಿ ಹೊಂಟಂಗಾಯ್ತಿತ್ತು. ಮಕ್ಕು ನೋಡುದ್ರೆ ಹೆದ್ರು ಬುಡ್ತಿದ್ದೊ. ಯಾವ್ ಯಂತ್ರ ಮಂತ್ರ ಮಾಡುಸ್ದು ಉಳೀದೆ, ಮಕ್ಕು ಸತ್ತೋಗ್ಬುಡ್ತಿದ್ದೊ. ಇದನ್ನೆಲ್ಲ ಆ ಗ್ರಾಮದವರು ನೋಡಿ 'ಅಯ್ಯೋ ರಂಗಣ್ಣ ಈ ಕಮಾನ್ ಗಾಡಿಯ ಬೀದೀ ಮ್ಯಾಲ್ ಬುಡ್ಬೇಡ ಕಣಪ್ಪಾ ಮನೇಲಿ ಕಟ್ಟಾಕ್ಬುಡೊ' ಅಂದ್ರಂತೆ. ಅಯ್ಯೊ ಮಗು ಇದು ಇಲ್ಲಿಗೆ ಸಾಕು. ಈಗ ಮುಖ್ಯ ಕಥಾಗರ್ಭಕ್ಕೆ ಬರೋಣ. ಗಂಗಾಭವಾನಿಗೆ ಎಂಟು ತಿಂಗ್ಳಾಗ್ತಾ ಬಂದಿದೆ. ಅಷ್ಟಮಾಸವು ತುಂಬಿ ಬರಲು ಪ್ರಸವ ವೇದನೆಗೆ ಏನೆಂದು ಹೇಳ್ತಾ ಇದ್ದಾರೆ.

ಶಿಷ್ಯ

ಏನೆಂದು ಹೇಳ್ತಾ ಇದ್ದಾರೆ ಗುರುವೆ ?

ನಿರೂಪಕ

ಅಷ್ಟಮಾಸವೂ ತುಂಬಿತೆನಗೆ
ಪ್ರಾಣಕಾಂತಾ ನಾನು
ಕಷ್ಟವನ್ನು ಸಹಿಸಲಾರೆ
ಪ್ರಾಣಕಾಂತ ಕಾಂತ
ಸಹಿಸಲಾರೆ ಈ ಬೇನೆಯನು
ಪ್ರಾಣಕಾಂತ ರಮಣ ೧೨೩

ಗಂಗಾಭವಾನಿಯು ಪ್ರಸವವೇದನೆಯನ್ನು ಸೈರಿಸಲಾರದೆ ತನ್ನ ಪತಿಯಾದ ಬಸವಣ್ಣ ನವರಲ್ಲಿ ಸಂಕಟವನ್ನು ನಿವೇದಿಸಿಕೊಳ್ಳುತ್ತಾ ಇದ್ದಾರೆ. ಇತ್ತ ಕಡೆ ಏನಾಗಿದೆಯಪ್ಪ ಅಂದರೆ,

ಶಿಷ್ಯ

ಏನಾಗಿದೆ ಸ್ವಾಮಿ ?

ನಿರೂಪಕ

ಒಂದೆರಡು ಮೂರ್ನಾಲ್ಕು ಐದಾರು ಏಳಂಟು
ತುಂಬಿತು ನವಮಾಸ ಇಂದುಮುಖಿಗಾಗ
ಇಂದುಮುಖಿಗಾಗ | ೧೨೪

ಗಂಗಾಭವಾನಿಯಾದರೋ ನವಮಾಸವು ತುಂಬಿ ಶುಭಲಗ್ನ ಶುಭ ವಾರ ಶುಭ ಘಳಿಗೆಯಲ್ಲಿ ಗಂಡುಮಗುವಿಗೆ ಜನ್ಮವಿತ್ತಿದ್ದಾರೆ. ಅನಂತರ ಮುತ್ತೈದೆಯರೆಲ್ಲ ಸೇರಿ ಸೂತಕ ಸ್ನಾನಾದಿಗಳನ್ನು ಮಗುವಿಗೂ ತಾಯಿಗೂ ಮಾಡಿಸಿ, ನಿರ್ಮಲವಾದ ಬಟ್ಟೆಗಳನ್ನು ತೊಡಿಸಿ, ತೊಟ್ಟಿಲಲ್ಲಿ ಮಗುವನ್ನು ಮಲಗಿಸಿ ಏನೆಂದು ತೂಗುತ್ತ ಇದ್ದಾರೆ.

ಅಳದಿರು ಎಲೆಬಾಲ ನೊರೆಹಾಲ ಕೊಡುವೆನು
ಎಳನೀರು ಜೇನ ತರುವೇನು - ಮಾವನ ಮಗಳ
ಎಳತಂದು ಧಾರೆ ಎರೆವೇನು | ೧೨೫

ಗಂಗಾಭವಾನಿಯಾದರೋ ಆ ಶಿಶುವಿಗೆ ಅಳಬೇಡವೆಂದು ಪೌರುಷವಾದ ಮಾತುಗಳನ್ನಾಡುತ್ತಾ ಬಾಲ್ಯದಲ್ಲಿಯೇ ಮಾರ್ಪಾಟು ಮಾಡುತ್ತಾ ಇದ್ದಾರೆ. ಈಗಿನ ಕಾಲದವರಾದರೋ ಮಕ್ಕಳಿಗೆ 'ಮಾವ ಬಂದ ಮೊಕುಕ್ಕುಗಿಯಪ್ಪ,' 'ಅತ್ತೆ ಬಂದ್ಲು ಕಾಲಲ್ಲೊದಿಯಪ್ಪ' ಎಂದೆಲ್ಲ ಹೇಳ್ತಾರೆ. ಹಾಗೆ ಹೇಳಿಕೊಟ್ಟರೆ ಮಕ್ಕು ಬೆಳ್ದು ದೊಡ್ಡವರಾದ ಮೇಲೆ ಯಾರು ಹೇಳ್ಕೊಟ್ರೋ ಅವುರ್ಗೇ ಉಗೀತವೆ ಅವುರ್ನೇ ಒದೀತವೆ. ಹೌದು ತಾನೆ? ಅದಿರಲಿ, ಗಂಗಾ ಭವಾನಿಯಾದರೋ ಮಗುವನ್ನು ನೋಡಿ ಆನಂದದಿಂದ ಪತಿದೇವರಿಗೆ ತೋರಿಸಿದ್ದಾಳೆ. ಪತಿ ಪತ್ನಿಯರಿಬ್ಬರೂ ಸಂತೋಷವನ್ನು ವ್ಯಕ್ತಪಡಿಸುತ್ತ ಇರುತ್ತಿರಲು ತಮ್ಮ ಪದ್ಧತಿಗನುಸಾರವಾಗಿ ಜಾತವೇದ ಮಹಾಮುನಿಗಳಿಂದ ಆ ಕುಮಾರನಿಗೆ ನಾಮಕರಣವನ್ನು ಮಾಡಿದ್ದಾರೆ.

ಶಿವನ ಕರುಣದಿಂದ ಹುಟ್ಟಿದ ಮಗುವಿಗೆ
ಸಂಗಮೇಶ್ವರನೆಂದು ಹೆಸರನ್ನು ಇಡಲು
ಹೆಸರನ್ನು ಇಡಲು | ೧೨೬

ಸಂಗಮೇಶ್ವರನ ದಯದಿಂದ ಹುಟ್ಟಿರುವ ಕುಮಾರನೆಂದು ಆ ಕಂದನಿಗೆ ಸಂಗಮೇಶ ಎಂದು ಹೆಸರನ್ನಿಟ್ಟಿದ್ದಾರೆ. ಇಂಥ ಸಂತೋಷದ ಸಮಯದಲ್ಲಿ ಬಸವಣ್ಣನವರು ರಾಜಾಸ್ಥಾನಕ್ಕೆ ಹೋಗಿ ರಾಜಸಭೆಯಲ್ಲಿ ಕುಳಿತಿರುವಾಗ ಬಿಜ್ಜಳ ಮಹಾರಾಜನು "ಬಸವಣ್ಣನವರೆ ಮಗೂ ಬಾಣಂತಿ ಆರೋಗ್ಯದಿಂದಿರುವರೆ?" ಎಂದು ಕೇಳಲು ಹೇಳುವಷ್ಟರಲ್ಲಿಯೇ ಒಂದು ವಿಚಿತ್ರ ನಡೆದಿದೆ.

ಶಿಷ್ಯ

ಆದೇನು ವಿಚಿತ್ರ ಹೇಳಿ ಗುರುವೆ ?

ನಿರೂಪಕ

ಹಾಲು ಮಾರೊ ಗೊಲ್ಲತಿಯು ಕಾಲುಜಾರಿ ನೆಲಕೆ ಬೀಳೆ
ಕೊಡವು ಬೀಳುವುದೆಂದು ಎತ್ತಿದನು ಬಸವ
ಎತ್ತಿದನು ಬಸವ | ೧೨೭

ಕ್ಷೀರವನ್ನು ಮಾರುವ ಗೊಲ್ಲತಿಯು ಹಾಲನ್ನು ಮಾರಿ ಜೀವನೋಪಾಯ ಮಾಡುವಂತವಳಾಗಿ ನಗರದ ಬೀದಿಯಲ್ಲಿ ಹಾಲಿನ ಕೊಡವನ್ನು ಹೊತ್ತುಕೊಂಡು ಬರುವಾಗ ಆಕಸ್ಮಿಕವಾಗಿ ಕಾಲು ಜಾರಲು ತಲೆ ಮೇಲೆ ಹೊತ್ತಿರುವ ಕೊಡವು ಬಿದ್ದು

ಹೋಗಿ ನನ್ನ ಜೀವನಕ್ಕೆ ಹಾನಿ ಉಂಟಾಗುತ್ತಿದೆಯಲ್ಲ ಎಂಬ ಭಯದಿಂದ "ಬಸವಣ್ಣಾ ಕೆಟ್ಟೆನಲ್ಲಪ್ಪಾ! ನನ್ನನ್ನು ರಕ್ಷಿಸು!!" ಎಂದು ಮೊರೆ ಬಿದ್ದಿದ್ದಾಳೆ. ಆಸ್ಥಾನದಲ್ಲಿ ಕುಳಿತಿದ್ದ ಬಸವಣ್ಣನವರು ಕೈಯೆತ್ತಿದ್ದಾರೆ. ಆಗ ಕೊಂಡಿ ಮಂಚಣ್ಣನವರು ಇದು ತಕ್ಕ ಸಮಯವೆಂದು "ಮಹಾರಾಜ, ನೀವು ಮಗು ಬಾಣಂತಿಯರು ಆರೋಗ್ಯದಿಂದಿರುವರೆ ? ಎಂದು ಕೇಳಿದರೆ ಬಸವಣ್ಣನಾದರೋ ತನ್ನ ತೋಳನ್ನೆತ್ತಿ ತೋರಿದನಲ್ಲ ನಿಮ್ಮ ಮೇಲೆ ತನ್ನ ತೋಳಿನ ಶಕ್ತಿಯನ್ನು ತೋರಿಸಬೇಕೆಂದು ಎತ್ತಿದನಲ್ಲವೆ? ಇದನ್ನು ವಿಚಾರ ಮಾಡಬೇಕು" ಎಂದು ಮಂಚಣ್ಣ ಪಂಡಿತರು ಹೇಳುತ್ತಿರಲಾಗಿ ಬಿಜ್ಜಳ ಮಹಾರಾಜನು "ಬಸವಣ್ಣ, ನಾನು ಸಂತೋಷದಿಂದ ಸಮಾಚಾರವನ್ನು ಕೇಳಿದರೆ ನೀನು ಕೈಯನ್ನು ಎತ್ತಿದೆಯಲ್ಲ, ಏನು ಕಾರಣವೆಂಬುದನ್ನು ತಿಳಿಸಬೇಕು" ಎನ್ನಲು ಬಸವಣ್ಣ ನಾದರೋ "ದೊರೆಯೇ, ಇದೇ ನಗರದ ಬೀದಿಯಲ್ಲಿ ಹಾಲು ಮಾರುವ ಗೊಲ್ಲತಿಯು ತನ್ನ ಜೀವನೋಪಾಯಕ್ಕಾಗಿ ಹಾಲನ್ನು ತರುವಾಗ ಕಾಲು ಜಾರಿ ಕೊಡವು ಕೆಳಗಡೆ ಬೀಳುವುದೆಂದು ನನ್ನನ್ನು ಸ್ತೋತ್ರ ಮಾಡಿದಳು. ಕೊಡವು ಕೆಳಗಡೆ ಬೀಳದಂತೆ ನಾನು ಕೈನಿಂದ ಹಿಡಿದೆತ್ತಿ ಕೊಂಡೆನು" ಎನ್ನಲು ಮಂಚಣ್ಣ ಪಂಡಿತರು ಕೈಚಪ್ಪಾಳೆ ಹಾಕುತ್ತ ಕೇಕೆ ಹಾಕಿ ನಗುತ್ತಾ "ಬಿಜ್ಜಳ ಮಹಾರಾಜರೇ ಹಾಲು ಮಾರುವ ಗೊಲ್ಲತಿಯೆಲ್ಲಿ? ರಾಜಸಭೆಯಲ್ಲಿ? ಅಲ್ಲಿಗೂ ಇಲ್ಲಿಗೂ ಪಾಸಲೆ ಎಷ್ಟಾಗುತ್ತದೆ? ಇದು ನಂಬತಕ್ಕ ಮಾತೆ? ಬಸವಣ್ಣನವರ ಕೈಯಿ ಅಲ್ಲೀ ತನಕ ಬೆಳೆದು ಹೋಯಿತೇನೋ!" ಎಂದು ಕುಚೋದ್ಯ ಮಾಡಲು ಬಿಜ್ಜಳ ಮಹಾರಾಜನಾದರೋ "ಈತನು ಪವಾಡ ಪುರುಷ, ಈತನಿಂದ ಈ ಕಾರ್ಯ ನಡೆದಿರಬಹುದು" ಎಂದು ಕೊಂಡು ಆಳುಗಳನ್ನು ಕರೆಸಿ ಆ ಆಳುಗಳಿಗೆ "ನಗರದ ರಾಜಬೀದಿಯಲ್ಲಿ ಹೋಗುತ್ತಿರುವ ಹಾಲು ಮಾರುವ ಗೊಲ್ಲತಿಯನ್ನು ರಾಜಾಸ್ಥಾನಕ್ಕೆ ಕರೆದುಕೊಂಡು ಬನ್ನಿ" ಎಂದು ರಾಜನು ಆಪ್ಪಣೆಯನ್ನು ಮಾಡಲು, ದೊರೆಯ ಮಾತಿನಂತೆ ಸೇವಕರು ಹೋಗಿ ಹಾಲನ್ನು ಮಾರುವ ಗೊಲ್ಲತಿಯನ್ನು ವಿಚಾರಿಸಿದ್ದಾರೆ.

ಸೇವಕರು : ಅಮ್ಮ ಹಾಲು ಮಾರುವ ಗೊಲ್ಲತಿ, ಹಾಲು ಹೊತ್ತುಕೊಂಡು ಹೋಗುತ್ತಿರುವಾಗ ಕಾಲು ಜಾರಿ ಬಿದ್ದೆಯಾ ?

ಗೊಲ್ಲತಿ : ಹೌದು, ಸ್ವಾಮಿ.

ಸೇವಕರು : ಕೆಳಕ್ಕೆ ಬೀಳುವಾಗ ಹಾಲು ತುಂಬಿದ್ದ ನಿನ್ನ ಕೊಡ ಕೆಳಕ್ಕೆ ಬಿದ್ದು ಹಾಲು ಸುರಿದು ಹೋಗಲಿಲ್ಲವೆ ?

ಗೊಲ್ಲತಿ : ಸುರಿದು ಹೋಗಲಿಲ್ಲ ಸ್ವಾಮಿಗಳೇ. ನಾನು ಕೆಳಕ್ಕೆ ಬೀಳುವಾಗ, "ಬಸವಾ ಬಸವ ಕೆಟ್ಟೆನಲ್ಲಪ್ಪಾ" ಎಂದು ಕೂಗಿಕೊಂಡೆ. ಆ ಕೂಡಲೆ ಕರುಣಾಳುವಾದ ಅಣ್ಣನವರು ಹಾಲಿನ ಪಾತ್ರೆಯು ತಳಗಡೆಗೆ ಬೀಳದಂತೆ ಹಿಡಿದುಕೊಂಡು ನನ್ನನ್ನು ಮೇಲೆತ್ತಿ ಕುಳ್ಳಿರಿಸಿ ನನ್ನ ತಲೆಯ ಮೇಲೆ ಸಿಂಬಿ ಮಡಗಿ ಆ ಕೊಡವನ್ನು ಸಿಂಬಿಯ ಮೇಲಿರಿಸಿದರು ಸ್ವಾಮಿ.

ಸೇವಕರು : ಸರಿ ಸರಿ. ರಾಜಾಜ್ಞೆ ಆಗಿದೆ. ಈ ವಿಚಾರವನ್ನು ರಾಜಾಸ್ಥಾನಕ್ಕೆ ಬಂದು ಮಹಾರಾಜರಿಗೆ ತಿಳಿಸಬೇಕು ನಡೆ ಎಂದು ಆ ಗೊಲ್ಲತಿಯನ್ನು ಕರೆದುಕೊಂಡು ಬಂದರು. ಸಭೆಗೆ ಬಂದ ಗೊಲ್ಲತಿಯನ್ನು ನೋಡಿ ಬಿಜ್ಜಳ ಮಹಾರಾಜನು

ಬಿಜ್ಜಳ : ಏನಮ್ಮ ನೀನು ಕಾಲು ಜಾರಿ ಕೆಳಕ್ಕೆ ಬಿದ್ದು ಹಾಲು ಅನ್ಯಾಯವಾಗುತ್ತಿತ್ತೆ? ಸುಳ್ಳನ್ನು ಹೇಳಬೇಡ.

ಗೊಲ್ಲತಿ : ಸುಳ್ಳು ಹೇಳುವುದಿಲ್ಲ ರಾಜರೇ, ನಾನು ಕಾಲು ಜಾರಿ ಬೀಳುತ್ತಿರುವಾಗ ನಮ್ಮ ತಂದೆ ಬಸವಣ್ಣನವರು ನನ್ನ ಕೊಡವು ಕೆಳಕ್ಕೆ ಬೀಳದಂತೆ ಕೈ ಹಿಡಿದು ಎತ್ತಿ ತಲೆಯ ಮೇಲಿಟ್ಟನಪ್ಪ, ಇದು ಸತ್ಯ

ಎಂಬುದಾಗಿ ಗೊಲ್ಲತಿ ಹೇಳಿದ್ದಾಳೆ. ಇತ್ತ ಕಡೆ ಏನಾಗಿದೆ.

ಶಿಷ್ಯ

ಏನಾಗಿದೆ ಗುರುವೆ ?

ನಿರೂಪಕ

ಫಾಲನೇತ್ರನ ದಯದಿ ಬಸವಣ್ಣನೂ ತಾನು
ಸಕಲ ದ್ರವ್ಯವನೆಲ್ಲ ದಾನ ಮಾಡಿದರು
ದಾನ ಮಾಡಿದರು | ೧೨೮

ಜಂಗಮರು ಬಂದು ಬಸವಣ್ಣನವರನ್ನು ಕಂಡು "ಸ್ವಾಮಿ ಬಸವಣ್ಣ ನೀನು ಪವಾಡ ಪುರುಷನೆಂದು ಹೇಳುತ್ತಾರೆ. ಆ ಹಿಂದೆ ಪರಮೇಶ್ವರನ ಅನುಗ್ರಹದಿಂದ ಬಂದಿರ್ತಕ್ಕಂತ ಹಣವನ್ನು ನಮಗೆಲ್ಲ ದಾನ ಮಾಡಿ ಅಷ್ಟೇ ಹಣವು ಬೊಕ್ಕಸದಲ್ಲಿರುವಂತೆ

ಮಾಡಿದರೆ ಆಗ ನಿನ್ನನ್ನು ಪವಾಡ ಪುರುಷನೆಂದು ನಂಬಬಹುದು. ಅದೇ ರೀತಿ ಮಾಡಿ ತೋರಿಸೆಂದು" ಜಂಗಮರೆಲ್ಲ ಕೇಳುತ್ತಿರಲು ಬಸವಣ್ಣನವರಾದರೋ ಆ ದ್ರವ್ಯವನ್ನೆಲ್ಲ ಜಂಗಮರಿಗೆ ದಾನ ಮಾಡಿದ್ದಾರೆ. ದಾನವನ್ನು ತೆಗೆದುಕೊಂಡು ಬಂದ ಜಂಗಮರು ಅರಮನೆಯ ಮುಂಭಾಗದಲ್ಲಿ ದ್ರವ್ಯವನ್ನು ಹೊತ್ತುಕೊಂಡು ಹೋಗುತ್ತಿರುವಾಗ ಮಂಚಣ್ಣ ಪಂಡಿತರು ನೋಡಿ ಆ ಜಂಗಮರನ್ನು ಕರೆಸಿ ಇದೇನೆಂದು ಕೇಳಲು "ಬಿಜ್ಜಳನ ಭಂಡಾರದ ಹಣವನ್ನು ಬಸವಣ್ಣನವರು ನಮಗೆಲ್ಲ ದಾನ ಮಾಡಿದರು. ಆ ಹಣವನ್ನು ಹೊರಲಾರದೆ ಹೊತ್ತುಕೊಂಡು ಹೋಗುತ್ತಿದ್ದೇವೆ" ಎನ್ನಲು ಮಂಚಣ್ಣ ಪಂಡಿತನು ಹಲ್ಲು ಹಲ್ಲು ಕಡಿಯುತ್ತ ಬಾಯಿ ಬಾಯಿ ಬಡಿದನು.

"ಅವರಿವರ ಒಡವೆಗಳ ದಾನಧರ್ಮವ ಮಾಡಿ
ಅವರಿಗಲ್ಲದ ಪುಣ್ಯ ಇವರೀಗೆ ಬಹುದೆ.
ಇವರೀಗೆಬಹುದೆ | ೧೨೯

ಎಂದ ಹಾಗೆ ಬಿಜ್ಜಳ ಮಹಾರಾಜ ನೀನು ಗಳಿಸಿಟ್ಟ ದ್ರವ್ಯವನ್ನು ಬಸವಣ್ಣನು ದಾನ ಮಾಡಿದರೆ ಅವನಿಗೆ ಪುಣ್ಯವಿದೆಯೆ? ಕೂಡಿಟ್ಟಿರುವ ಧಣಿಗಲ್ಲದೆ ಈತನಿಗೆಲ್ಲಿದೆ ಪುರುಷಾರ್ಥ? ಆದುದರಿಂದ ಎಷ್ಟು ಹಣವನ್ನು ದಾನ ಕೊಟ್ಟಿದ್ದಾರೆಯೋ ಅಷ್ಟು ಹಣವೂ ನಿನ್ನ ಬೊಕ್ಕಸದಲ್ಲಿರಬೇಕು" ಎಂದು ಮಂಚಣ್ಣ ಪಂಡಿತರು ಹೇಳಲು ಬಸವಣ್ಣನವರು ಖಜಾನೆಗೆ ಹೋಗಿ ಬೊಕ್ಕಸದ ಬೀಗವನ್ನು ತೆಗೆಯುತ್ತಿರುವಾಗ

ಸತ್ಕರಿಗೆ ಧರೆಯೆಲ್ಲ ಮಸ್ತಕದಿ ಎರಗುವುದು
ಹೆತ್ತ ತಾಯ್ ಮಗನ ಕರೆವಂತೆ ಶಿವನವನ
ಎತ್ತಿಕೊಳ್ಳುವುದು ಸರ್ವಜ್ಞ | ೧೩೦

ಎಂದ ಹಾಗೆ ಬಸವಣ್ಣನವರ ಹಸ್ತವು ಪೆಟ್ಟಿಗೆಯನ್ನು ತೆಗೆಯುವುದಕ್ಕೆ ಕೈ ಹಾಕಿದ ಕೂಡಲೆ ಒಂದಕ್ಕೆ ಎರಡರಷ್ಟು, ಎರಡಕ್ಕೆ ನಾಲ್ಕರಷ್ಟು, ನಾಲ್ಕಕ್ಕೆ ಎಂಟರಷ್ಟು, ಎಂಟಕ್ಕೆ ಹದಿನಾರರಷ್ಟು ಹೀಗೆ ದ್ವಿಗುಣಾನಂತ ಹಣ ರಾಶಿ ರಾಶಿಯಾಗಿ ಸುರಿಯುತ್ತಿರಲು ಜನಸ್ತೋಮವೆಲ್ಲವೂ ಸೇರಿ ಬಸವಣ್ಣನವರನ್ನು ಕೊಂಡಾಡುತ್ತಾ ಇದೆ.

ಶಿಷ್ಯ

ಅವರು ಹೇಗೆ ಕೊಂಡಾಡ್ತಾ ಇದ್ದಾರೆ ಗುರುವೆ ?

ನಿರೂಪಕ

ಕಲ್ಯಾಣದಣ್ಣ ಬಾರೋ ಕಲ್ಯಾಣ ಪ್ರಭುವೆ ಬಾರೋ
ನೀ ಬರದಿರೆ ಲೋಕಕೆ ಅಳಿಗಾಲವಣ್ಣ
ಅಳಿಗಾಲವಣ್ಣ | ಸೊಲ್ಲು | ೧೩೧

ಸತ್ಯ ಧರ್ಮಂಗಳೆಲ್ಲವು ಹಾಳಾಗಿವೆ
ನಿತ್ಯ ನೇಮಂಗಳೆಲ್ಲವು ಹೊಲಸಾಗಿವೆ
ಭಕ್ತ ಭಂಡಾರವು ಮುಕ್ತಿ ಮಂದಿರವು
ನಿತ್ಯ ಜೀವನ ಸಾರವು ಹುಸಿಯಾಗಿದೆ |

ಋಷಿಯು ಪರಿಸರವನ್ನೊಟ್ಟಿ ಮಾರುತಿದೆ ಭಕ್ತಿ
ಕುಸುಮ ರಸದ ಗಂಧ ಒಣಗುತಿದೆ
ಹುಸಿಹೆಚ್ಚಿ ದೆಸೆಯೆಂಟು ಹಾಳಾಗಿದೆ
ಅಸಮಾಕ್ಷ ನೀ ಬಂದು ಕಾಪಾಡದೇ | ೧೩೨

ಅಲ್ಲಿನ ನಗರದ ಜನಗಳೆಲ್ಲರೂ ಮುಕ್ತ ಕಂಠದಿಂದ ಬಸವಣ್ಣನವರನ್ನು ಕೊಂಡಾಡಿದ್ದಾರೆ. ಇತ್ತ ಬಸವಣ್ಣನವರಾದರೋ "ಪರಮೇಶ್ವರ, ನೀನು ನನ್ನನ್ನು ಕಳುಹಿಸಿದ್ದೀಯೆ. ನೀನು ಆಡಿಸಿದಂತೆ ನಾನು ಆಡುವೆನಯ್ಯ" ಎಂದೆನುತ್ತಿರುವುದಲ್ಲದೆ "ಅಯ್ಯಾ ಶರಣರ ಬಾಯ್ತುಂಬುಲವ ಮೆಲ್ಲವೆ. ಅವರ ಬೀಳುಡುಗೆಯ ನಾನು ಹೊದೆವೆ" ಎಂದೂ "ಶರಣರ ಸೇವೆಯೇ ಶಂಕರನ ಸೇವೆ"

ಎಂದೂ ಸದಾ ಜಂಗಮರ ಸೇವೆಯನ್ನು ಮಾಡುತ್ತಿರುವಾಗ ಆಗಾಗ್ಗೆ ಕಾಯಕದ ಮಹತ್ವವನ್ನು ಶರಣರಿಗೆ ಹೇಳುತ್ತಿರಲು ಶರಣರು ಅವರವರ ದುಡಿಮೆಯನ್ನು ಮಾಡುತ್ತಿರಲು ಬಸವಣ್ಣನವರ ಮನೆಗೆ ಯಾವ ಶರಣರೂ ಬರದೇನೆ ಅವತ್ತು ಅವತ್ತಿನ ಅನ್ನದ ಆಯಾಸವಿಲ್ಲದೆ ಸಂತೃಪ್ತಿಕರ ಜೀವನ ನಡೆಸುತ್ತಿದ್ದಾರೆ. ಇಂಥ ಸುಸಂದರ್ಭದಲ್ಲಿ ಬಸವಣ್ಣನವರ ಹಿತವಚನವೇ ಶರಣರಿಗೆಲ್ಲ ಭಾಗ್ಯದ ನಿಧಿಯಿದ್ದಂತಾಗಲು ಬಸವಣ್ಣನವರಾದರೋ "ಆಹಾ ಜಂಗಮರು ಬೇಡದೆ ನಾನು ಕೆಟ್ಟೆನು" ಎಂದು ಸಂತಾಪ ಪಟ್ಟಿದ್ದಾರೆ.

ನಸುಮಾಡಿ ಜಂಗಮರು ಹಸಿದು ಮನೆಗೆ ಬರಲು
ಉಸಿರಾಡಬೇಡೆಂದು ನುಸುಳಿ ಪೋಗುವರು
ನುಸುಳಿ ಪೋಗುವರು | ೧೩೩

ಹಾಗೆಯೇ ಬಸವಣ್ಣನವರು ಯಾವ ಶರಣನೂ ಭಿಕ್ಷೆ ಮಾಡಬಾರದೆಂದು ಭಿಕ್ಷೆ ಮಾಡುವುದು ಹೀನಕೃತ್ಯವೆಂತಲೂ ಹೇಳಿದ್ದಾರೆ.

ಇರುವಾಗ ತನ್ನಲ್ಲಿ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು ಕೈಲಾಸ
ನೆರೆಮನೆಯೆ ಅಕ್ಕು ಸರ್ವಜ್ಞ |. ೧೩೪

ಅಂದಹಾಗೆ ಬಸವಣ್ಣನವರು ದೀರ್ಘವಾಗಿ ಆಲೋಚನೆಯನ್ನು ಮಾಡಿ ದಾನವನ್ನು ಮಾಡಬೇಕಾದರೆ ಯಾರಿಗೆ ಮಾಡಬೇಕು.

ಶಿಷ್ಯ

ಯಾರಿಗೆ ಮಾಡಬೇಕು ಗುರುವೆ ?

ನಿರೂಪಕ

ದಾರಿದ್ರೇ ಚ ಕೃತಂ ದಾನಂ ಶೂನ್ಯೇ ಲಿಂಗಾರ್ಚನಂ ಶಿವಂ
ಅನಾಥ ಪ್ರೇತ ಸಂಸ್ಕಾರಶ್ಚಾಶ್ವಮೇಧ ಫಲಂ ಇಯಾತ್ | ೧೩೫

ಎಂಬಂತೆ ದಾನವನ್ನು ಮಾಡಬೇಕಾದರೂ ಕುಂಟರು ಕುರುಡರು ದುರ್ಬಲರು ಇಂಥವರಿಗೆ ಮಾಡಬೇಕೆಂದು ಹೇಳಿದ್ದಾರೆ. ಅಂದಹಾಗೆ ಇತ್ತ ಬಸವಣ್ಣನವರು ಶರಣ ಸಮೂಹದಲ್ಲಿ ಮಡಿವಾಳ ಮಾಚಿದೇವ, ಒಕ್ಕಲಿಗರ ಮುದ್ದಯ್ಯ, ಮಾದಾರ ಚನ್ನಯ್ಯ, ಜೇಡರ ದಾಸಿಮಯ್ಯ, ಶಂಕರದಾಸಿಮಯ್ಯ, ಕುಂಬಾರಗುಂಡಯ್ಯ ಇಂಥ ಮಹಾಶರಣರೆಲ್ಲರೂ ಸೇರಿ ಒಂದು ಕಡೆ ಶಿವಾನುಭವ ಗೋಷ್ಠಿಯೆಂದೂ, ಅನುಭವ ಮಂಟಪವೆಂದೂ ಒಂದು ಮಂದಿರವನ್ನು ನಿರ್ಮಾಣ ಮಾಡಿ ಆ ಅನುಭವಮಂಟಪ ರಚನೆಯಾದ ಮೇಲೆ ಅದಕ್ಕೆ ಅಧ್ಯಕ್ಷತೆ ವಹಿಸಲು ಅಲ್ಲಮಪ್ರಭುವಿನ ಬರವನ್ನೇ ಹಾರೈಸುತ್ತಾ ಇದ್ದಾರೆ.

ಅನುಭವ ಮಂಟಪದಿ ಅನುಭವಿಗಳೆಲ್ಲ ಸೇರಿ
ದಿನಚರಿಯೊಳು ತಾವು ಘನವ ಪಡೆಯುತಲಿ
ಘನವ ಪಡೆಯುತಲಿ | ೧೩೬

ಅಂತಹ ಅನುಭವ ಮಂಟಪಕ್ಕೆ ಮಹಿಳಾ ಸಮಾಜದಲ್ಲಿಯೂ ಗಂಗಾಭವಾನಿ, ನೀಲಾಂಬಿಕಾದೇವಿ, ಬಿಜ್ಜಮಹಾದೇವಿ, ಧೂಪದ ಚನ್ನಮ್ಮ, ಆಯ್ದಕ್ಕಿ ಮಾರಯ್ಯನ ಹೆಂಡತಿ ಲಕ್ಕಮ್ಮ, ಅಪ್ಪಣ್ಣನವರ ಹೆಂಡತಿ ಲಿಂಗಮ್ಮ, ಹರಳಯ್ಯನವರ ಹೆಂಡತಿ ಕಲ್ಯಾಣಮ್ಮ ಇಂಥ ಮಹಾ ಶರಣೆಯರು ಶಿವಾನುಭವ ಮಂಟಪದಲಿ. ಮೂರ್ತಗೊಂಡಿರುವಾಗ ಅಲ್ಲಮಪ್ರಭುಗಳು ಸಿದ್ಧರಾಮಯ್ಯನನ್ನು ಜೊತೆಯಲ್ಲಿ ಕರೆದುಕೊಂಡು ಕಲ್ಯಾಣಪಟ್ಟಣದ ಮಾರ್ಗವಾಗಿ ಬಂದಿದ್ದಾರೆ. ಕಲ್ಯಾಣ ಪಟ್ಟಣದ ಬೀದಿಯಲ್ಲಿ ಬರುವಾಗ ಬಸವಣ್ಣನವರ ಅರಮನೆಯ ಮುಂಭಾಗದಲ್ಲಿ ಥಟ್ಟನೆ ನಿಂತರು. ಬಸವಣ್ಣನವರಾದರೋ ಸ್ನಾನವನ್ನು ಮಾಡಿಕೊಂಡು ಲಿಂಗ ಪೂಜೆಗೆ ಅಣಿಯಾಗಿದ್ದಾರೆ. ಅಲ್ಲಮಪ್ರಭುಗಳು ಬಸವಣ್ಣನವರನ್ನು ಬರಹೇಳಲು ಬಸವಣ್ಣನವರಿಗೆ ಲಿಂಗಪೂಜೆಯು ಮುಗಿಯದೆ ಇದ್ದ ಕಾರಣ ಪ್ರಭುವನ್ನು ಆಹ್ವಾನಿಸುವುದಕ್ಕೆ ಹೋಗದೆ ಇದ್ದುದರಿಂದ "ನೋಡಿದೆಯಾ ಸಿದ್ಧರಾಮಯ್ಯ, ಜಂಗಮರು ಬಂದು ಮನೆ ಮುಂದೆ ನಿಂತಿದ್ದರೂ ಸಹ ಬಸವಣ್ಣನು ಆಡಂಬರದ ಭಕ್ತಿಯಲ್ಲಿ ಮುಳುಗಿರುವನಲ್ಲ.

ಶಿಷ್ಯ

ಆಡಂಬರದ ಭಕ್ತಿ? ಅಹ್ಯಾವ ಭಕ್ತಿ ಸ್ವಾಮಿ?

ನಿರೂಪಕ

ಆಡಂಬರದ ಭಕ್ತಿ ದ್ರವ್ಯದ ಹಾಗೆ, ಕೊಡದೇ ತ್ಯಾಗಿ ಎಂಬುದು, ಮುಡಿಯಿಲ್ಲದ ಶೃಂಗಾರ, ದೃಢವಿಲ್ಲದ ಭಕ್ತಿ, ಅಡಿಯೊಡೆದ ಕುಂಭದಲ್ಲಿ ಸುಖಜಲವನಿಟ್ಟಂತೆ. ಆದ್ದರಿಂದ ಅಲ್ಲಮಪ್ರಭುಗಳು "ಸಿದ್ಧರಾಮಣ್ಣ ಈತನ ಆಡಂಬರದ ಭಕ್ತಿ ಈತನಿಗೆ ಇರಲಿ. ನಡೆ ನಾವು ಹಿಂದಕ್ಕೇ ಹೋಗೋಣ!" ಎಂದು ಪ್ರಯಾಣೋನ್ಮುಖರಾಗಿದ್ದಾರೆ. ಈ ಪ್ರಕಾರವಾಗಿ ಮಾತಾಡಿ ಹೋಗುತ್ತಿರುವ ಅಲ್ಲಮಪ್ರಭುವನ್ನು ಪೂಜೆ ಮಾಡುತ್ತಾ ಕುಳಿತಿದ್ದ ಬಸವಣ್ಣನವರು ದೃಷ್ಟಿಸಿ ಪೂಜೆ ಮಾಡುತ್ತಿದ್ದ ತಮ್ಮ ಇಷ್ಟಲಿಂಗದಲ್ಲಿ ಕಂಡಿದ್ದಾರೆ "ಆಹಾ ಎಂಥಾ ಅಪರಾಧವಾಯಿತು. ಮನೆ ಮುಂದೆ ಬಂದು ನಿಂತ ಪ್ರಭುವನ್ನು ನಾನು ಸಂತೈಸದೆ ನಿರಾಕರಿಸಿಬಿಟ್ಟೆನಲ್ಲ. ನನ್ನಿಂದ ಮಹಾಪರಾಧವಾಗಿದೆ" ಎಂದು ಪರಿತಪಿಸುತ್ತಿರಲು ಜಂಗಮ ಪ್ರಾಣಿಯೆನಿಸಿದ್ದ ಬಸವಣ್ಣನವರ ಪ್ರಾಣಜ್ಯೋತಿಯು ಪ್ರಯಾಣೋನ್ಮುಖರಾಗಿದ್ದ ಪ್ರಭುಗಳಿಗೆ ಅಡ್ಡಬಂದು ತಡೆದು ನಿಲ್ಲಿಸಿ "ಮಹಾಸ್ವಾಮಿ ನನ್ನ ಅಪರಾಧವನ್ನು ಕ್ಷಮಿಸಬೇಕೆ"ಂದು ಬೇಡಿಕೊಂಡು ತಮ್ಮ ನಿವಾಸಕ್ಕೆ ಕರೆದುಕೊಂಡು ಬಂದು ಸ್ನಾನವನ್ನು ಮಾಡಿಸಿ ಪಾದವನ್ನು ಪೂಜಿಸಿ ಶ್ರೀಗುರುವಿನ ಪಾದೋದಕವನ್ನು ಸ್ವೀಕರಿಸಿ ತೃಪ್ತಿಪಡೆದಿದ್ದಾರೆ. ಅಲ್ಲಮಪ್ರಭುಗಳ ಪಾದಾರವಿಂದಗಳಿಗೆ ಶರಣು ಮಾಡಿದ ಅಣ್ಣನವರು ಪ್ರಭುಗಳನ್ನು ಈ ರೀತಿ ಪ್ರಾರ್ಥಿಸುತ್ತಿದ್ದಾರೆ. "ಸ್ವಾಮಿ ನೀವು ಅನುಭವ ಮಂಟಪಕ್ಕೆ ಅಧ್ಯಕ್ಷರಾಗಬೇಕೆಂ"ದು ಹೇಳಲು ಪ್ರಭುಗಳಾದರೋ "ಬಸವಣ್ಣ, ನಿನಗೆ ಪ್ರತಿ ಹೇಳುವೆನೆ?" ಎಂದು ಹೇಳಿ ಅನುಭವ ಮಂಟಪದಲ್ಲಿ ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ್ದಾರೆ. ಭಕ್ತಿ ಭಂಡಾರಿ ಬಸವಣ್ಣನವರು, ವೈರಾಗ್ಯಮೂರ್ತಿ ಪ್ರಭುದೇವರು, ಯೋಗಮೂರ್ತಿ ಸಿದ್ಧರಾಮಣ್ಣನವರು, ಜ್ಞಾನಮೂರ್ತಿ ಚನ್ನಬಸವಣ್ಣನವರು ಈ ನಾಲ್ವರು ಅಗ್ರಗಣ್ಯರಾಗಿ ಸೇರುವ ಸಮೂಹಕ್ಕೆಲ್ಲ ಅನುಭವದಿಂದ ಕೆಲವು ಮಾತುಗಳನ್ನು ಹೇಳುತ್ತ ಮಡಿವಾಳ ಮಾಚೀದೇವ, ದೇವರ ದಾಸಿಮಯ್ಯ ಇಂತಹ ಪ್ರಮುಖ ಪುರುಷರು ಅನುಭವ ಮಂಟಪದಲ್ಲಿರುವಾಗ ಅಕ್ಕಮಹಾದೇವಿಯು ಕಲ್ಯಾಣ ಮಾರ್ಗವನ್ನು ಹಿಡಿದು ಚನ್ನಮಲ್ಲಿಕಾರ್ಜುನಸ್ವಾಮಿಯನ್ನು ಧ್ಯಾನ ಮಾಡುತ್ತಾ ಬರುತ್ತಿದ್ದಾರೆ.

ಶಿಷ್ಯ

ಯಾವ ರೀತಿ ಧ್ಯಾನ ಮಾಡುತ್ತಾ ಬರುತ್ತಿದ್ದಾರೆ ಸ್ವಾಮಿ ?

ನಿರೂಪಕ

ಅನುಪಮ ಭಾಗ್ಯವಿದೇ
ಕಂಡೆನು ನಾ ಪರಶಿವನಾ
ನನ್ನ ಚನ್ನಮಲ್ಲಿಕಾರ್ಜುನನ | ಅನುಪಮ |

ಗಂಗಾಧರನಾ ಗೌರೀವರನಾ
ಮಂಗಳ ಮೂರುತಿ ಶಂಕರನಾ
ಗಜಚರ್ಮಾಂಬರ ಭುಜಗಾಭರಣನ
ಅಜಹರಿ ಸುರನರ ವಂದಿತನ
ಕಂಡೆನು ನಾ ಚಿನ್ಮಯನ
ನನ್ನ ಚನ್ನಮಲ್ಲಿಕಾರ್ಜುನನ | ಅನುಪಮ |

ನನ್ನಗತಿ ನನ್ನಮತಿ ನನ್ನಪತಿ ಪಶುಪತಿ
ಪುರಹರ ಶಶಿಧರ ಮಾರಹರ
ಚಿದ್ಘನ ಮೂರುತಿ ಚನ್ನಮಲ್ಲಿಕಾರ್ಜುನ
ನನ್ನವನಾದನು ಧನ್ಯಳು ನಾ
ಕಂಡೆನು ನಾ ಚಿನ್ಮಯನ
ನನ್ನ ಚನ್ನಮಲ್ಲಿಕಾರ್ಜುನನ | ಅನುಪಮ

ಹೀಗೆ ಅಕ್ಕಮಹಾದೇವಿಯು ಚನ್ನಮಲ್ಲಿಕಾರ್ಜುನನ ಸ್ಮರಣೆಯನ್ನು ಮಾಡುತ್ತ ದಿಗಂಬರೆಯಾಗಿ ತನ್ನ ಕೇಶರಾಶಿಯಿಂದ ದೇಹವನ್ನು ಮುಚ್ಚಿಕೊಂಡು ನೇರವಾಗಿ ಬಂದು ಸಭೆಯ ಎದುರಾಗಿ ನಿಲ್ಲಲು ಪ್ರಭುದೇವರು ಇಂಥ ಪ್ರಾಪ್ತವಯಸ್ಸಿನಲ್ಲಿ ದಿಗಂಬರೆಯಾಗಿ ನಿಂತಿರುವ ಅಕ್ಕಮಹಾದೇವಿಯನ್ನು ನೋಡಿ ಏನೆಂದು ಕೇಳಿದ್ದಾರಪ್ಪಾ ಅಂದರೆ,

ಶಿಷ್ಯ

ಏನೆಂದು ಕೇಳಿದ್ದಾರೆ ಸ್ವಾಮಿ ?

ನಿರೂಪಕ

ಅಯ್ಯಾ ಮಗುವೆ, ಕೇಳುವಂತವನಾಗು ಅಲ್ಲಮಪ್ರಭುಗಳು ಹೀಗೆ ಕೇಳಿದ್ದಾರೆ.

ಉದಮದದ ಯವ್ವನವನೊಳಗೊಂಡು
ಇತ್ತಲೇಕೆ ಬಂದೆಯೇ ಅವ್ವಾ
ಸತಿಯೆಂದರೆ ಮುನಿಯುವರು ನಮ್ಮ ಶರಣರು
ನಿನ್ನ ಪತಿಯ ಹೆಸರ ಹೇಳಿ ಕುಳ್ಳಿರು
ಇಲ್ಲವಾದರೆ ತೊಲಗು | ೧೩೮

ಹೀಗೆ ಪ್ರಭುಗಳು ಕಠಿಣವಾದ ಮಾತುಗಳನ್ನು ಪ್ರಯೋಗ ಮಾಡಲು ಅಕ್ಕಮಹಾದೇವಿಯಾದರೋ ಪ್ರಭುಗಳನ್ನು ನೋಡಿ ಏನೆಂದು ಹೇಳುತ್ತಿದ್ದಾರೆ.

ಶಿಷ್ಯ

ಏನೆಂದು ಹೇಳುತ್ತಿದ್ದಾರೆ ಗುರುವೆ ?

ನಿರೂಪಕ

ಫಲಪಕ್ವವಾದಲ್ಲದೆ ಸಿಪ್ಪೆ ಒಪ್ಪಗೆಡದು
ಕಾಮದ ಮುದ್ರೆಯ ಕಂಡು
ನಿಮ್ಮ ಮನಸ್ಸಿಗೆ ನೋವಾದೀತೆಂದು
ಈ ಭಾವದಿ ಮುಚ್ಚಿದೆ ನೋಡಾ
ನನ್ನನೇಕೆ ನೋಯಿಸುವಿರಿ ಅಣ್ಣಗಳಿರಾ
ಚನ್ನಮಲ್ಲಿಕಾರ್ಜುನಯ್ಯನೊಳಗಾದವಳ | ೧೩೯

ಎಂದು ಅಕ್ಕಮಹಾದೇವಿಯವರು ಸದುತ್ತರವನ್ನು ಕೊಡಲು ಮಡಿವಾಳ ಮಾಚಿದೇವರಾದರೋ ಅಕ್ಕಮಹಾದೇವಿಯವರ ವೈರಾಗ್ಯವನ್ನು ನೋಡಿ

ನೆರೆಕೆನ್ನೆಗೆ ತೆರೆಗಲ್ಲಕೆ ಬಂದವರೆಲ್ಲ ಹಿರಿಯರೆ ?
ಕಾಲ ಮೇಲೆ ಕೈಯನೂರಿ ಕೋಲ ಹಿಡಿದವರೆಲ್ಲ ಹಿರಿಯರೆ ?
ಹುತ್ತೇರಿ ಬೆತ್ತ ಬೆಳೆದವರೆಲ್ಲ ಹಿರಿಯರೆ ?
ಒಂದನ್ನಾಡ ಹೋಗಿ ಒಂಬತ್ತನ್ನಾಡುವ ಅಜ್ಞಾನಿಗಳೆಲ್ಲ ಹಿರಿಯರೆ ?
ಹಿರಿದು ಕಿರಿದೆಂಬ ಭೇದವ ಮರೆತು
ಚನ್ನಮಲ್ಲಿಕಾರ್ಜುನಯ್ಯನಲ್ಲಿ ಮನವನಿರಿಸಿದ
ಮಹಾದೇವಿಯಕ್ಕಂಗಾಯ್ತು ಹಿರಿತನ | ೧೪೦

ಎಂದು ಕೊಂಡಾಡುತ್ತಿರಲು ಪ್ರಭುಗಳು, ಬಸವಣ್ಣನವರು, ಚನ್ನಬಸವಣ್ಣನವರು, ಸಿದ್ಧರಾಮಣ್ಣನವರು ಈ ಎಲ್ಲರೂ ಅಕ್ಕ ಮಹಾದೇವಿಗೆ ಶರಣೆಂದಿದ್ದಾರೆ. ಹೀಗೆ ಶಿವಾನುಭವ ಗೋಷ್ಠಿಯನ್ನು ಮುಗಿಸಿಕೊಂಡು ರಾಜಕಾರ್ಯಕ್ಕಾಗಿ ಬಸವಣ್ಣನವರು ಒಡ್ಡೋಲಗದಲ್ಲಿ ಸೇರಿದ್ದಾರೆ. ಇತ್ತ ಕೊಂಡಿಮಂಚಣ್ಣನವರು ಬಿಜ್ಜಳ ಮಹಾರಾಜನಿಗೆ ನೀವು ಹಾಕುವ ಶ್ವೇತಾಂಬರವು ಬಸವಣ್ಣನವರು ಧರಿಸುವ ಬಟ್ಟೆಯಷ್ಟು ಹೊಳಪಾಗಿ ಕಾಣುವುದಿಲ್ಲವೆಂದು ಚಾಡಿಯನ್ನು ಹೇಳಲು "ಬಸವಣ್ಣ ನಿನ್ನ ಬಟ್ಟೆಗಳು

ಅತ್ಯಂತ ಮನೋಹರವಾಗಿರುವುವು" ಎಂದು ಮಂಚಣ್ಣ ಮೆಚ್ಚಿಕೊಂಡವನಂತೆ ಹೇಳುತ್ತಿರಲು ದೊರೆಯು ಇದರ ಅಭಿಪ್ರಾಯ ವೇನೆಂದು ಬಸವಣ್ಣನವರನ್ನು ಕೇಳಲು ಬಸವಣ್ಣನವರಾದರೋ.

"ಮಹಾರಾಜ, ಮಡಿವಾಳ ಮಾಚಿದೇವರನು ಶರಣರ ಲಿಂಗದ ಹೊದಿಕೆ ಪಾವುಡಗಳನ್ನು ತೊಳೆಯುವುದಕ್ಕೆ ಹೋದಾಗ ನನ್ನ ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಒಗೆದುಕೊಂಡು ಬರುತ್ತಾರೆ. ಮಡಿವಾಳ ಮಾಚಿದೇವನ ಹಸ್ತ ಸ್ಪರ್ಶವಾದ ಬಟ್ಟೆಗಳೆಲ್ಲವೂ ಹಾಗೆಯೇ ಮನೋಹರವಾಗಿ ಕಾಣುತ್ತದೆ" ಎಂದು ಹೇಳಲು ಮಂಚಣ್ಣ ಪಂಡಿತರು

"ಮಡಿವಾಳ ಮಾಚಿದೇವನು ಪ್ರಭುವಿನ ಅನ್ನವನ್ನು ತಿಂದು, ನಿಮ್ಮ ಬಟ್ಟೆಗಳನ್ನು ಒಗೆಯಬಾರದೆ ಪ್ರಭು ? ನಿಮ್ಮ ಬಟ್ಟೆಗಳನ್ನು ಕೊಡಿ ಪ್ರಭು" ಎಂದು ಹೇಳಲು ಬಿಜ್ಜಳ ಮಹಾರಾಜನು ತನ್ನ ಸೇನಾನಿಗಳನ್ನು ಕರೆದು ಅವರು ಉಡುತಕ್ಕ ಬಟ್ಟೆಗಳನ್ನು ಪರಿಚಾರಕರ ಕೈಯಲ್ಲಿ ಹೊರಿಸಿಕೊಂಡು ಮಾಚಿದೇವರು ಬಟ್ಟೆಗಳನ್ನು ಒಗೆಯುವ ಕೊಳದ ಬಳಿಗೆ ತೆಗೆದುಕೊಂಡು ಹೋಗಿ ಒಪ್ಪಿಸಲು ಹೇಳಿದ್ದಾರೆ. ಸೇನಾನಿಯು ಪ್ರಭುಗಳ ಆಜ್ಞೆಯಂತೆ ಬಟ್ಟೆಗಳನ್ನು ಮಡಿವಾಳ ಮಾಚಿದೇವರ ಬಳಿ ಮಡಗಿ "ಈ ಬಟ್ಟೆಗಳನ್ನು ಒಗೆಯಬೇಕೆಂದು ಪ್ರಭುಗಳ ಅಪ್ಪಣೆಯಾಗಿದೆ. ಆದ್ದರಿಂದ ಈ ಕೂಡಲೆ ಈ ಬಟ್ಟೆಗಳನ್ನು ತೊಳೆದುಕೊಡು" ಎನ್ನಲು ಮಾಚಿದೇವರಾದರೋ ಏನಂತ ಹೇಳಿದ್ದಾರೆ.

ಶಿಷ್ಯ

ಏನಂತ ಹೇಳಿದ್ದಾರೆ ಗುರುವೆ ?

ನಿರೂಪಕ

ಭವಿಯ ಬಟ್ಟೆಗಳನು ಒಗೆಯುವುದಿಲ್ಲ ನಾವು
ಶಿವಶರಣರ ಬಟ್ಟೆಗಳನು ತೊಳೆದು ಕೊಡುವೇನೊ
ತೊಳೆದು ಕೊಡುವೇನೊ | ೧೪೧

ಶಿವಶರಣರ ಬಟ್ಟೆಗಳನ್ನಲ್ಲದೆ ಭವಿಗಳ ಬಟ್ಟೆಗಳನ್ನು ನಾನು ಒಗೆಯುವುದಿಲ್ಲ. ದೊರೆ ಯಾದರೋ ಪೂರ್ವಜನ್ಮ ಪುಣ್ಯ ಪರಿಪಾಕದಿಂದ ದೊರೆಯಾದ ಮಾತ್ರಕ್ಕೆ ನನಗೇನು?

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸುವರೆ ?
ನಡೆಯುವುದು ನುಡಿಯುವುದು ಶಿವಭಕ್ತರಲ್ಲಿ
ದುಮ್ಮಾನ ಹಮ್ಮು ಬಿಮ್ಮಾಗಿರಬೇಕಯ್ಯ
ಅಭ್ಯಾಸೇನ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಂ
ಗುರೋರಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ ೧೪೨

ಶಿಷ್ಯ

ಹಾಗಾದರೆ ಶಿವಭಕ್ತರು ಅಂದರೆ ಯಾರು ಸ್ವಾಮಿ ?

ನಿರೂಪಕ

ಭಕ್ತನಾದವಂಗೆ ಕಾಮ ಬೇಡ, ಕ್ರೋಧ ಬೇಡ, ಮದ ಬೇಡ, ಮತ್ಸರ ಬೇಡ ಎಂದು ಹೇಳಿದ್ದಾರೆ. ಇದೇ ಶಿವಭಕ್ತರ ಲಕ್ಷಣ. ಮಾಚಿದೇವರು ಹೀಗೆ ಹೇಳಿ ಕಳಿಸಲು ಪರಿಚಾರಕರು ಬಂದಿದ್ದಾರೆ. ಬಂದು ದೊರೆಗೆ ದೂರನ್ನು ಹೇಳಿದ್ದಾರೆ.

ಶಿಷ್ಯ

ಏನು ಹೇಳಿದ್ದಾರೆ ಗುರುವೆ ?

ನಿರೂಪಕ

ಭವಿಯ ಬಟ್ಟೆಗಳನು ಒಗೆಯುವುದಿಲ್ಲವಂತೆ
ಶಿವಶರಣರ ಬಟ್ಟೆಗಳನು ಒಗೆಯುವನಂತೆ
ಒಗೆಯುವನಂತೆ | ೧೪೩

"ಮಹಾರಾಜ, ನೀನು ಭವಿಯಂತೆ ಈ ನಗರದಲ್ಲಿರುವ ಶಿವಶರಣರೆಲ್ಲರಿಗೂ ನಿನ್ನಿಂದ ಲಬ್ಧವಾದ ಅನ್ನವನ್ನು, ಬಸವಣ್ಣನವರು ಅವರಿಗೆಲ್ಲ ಇಟ್ಟು ಆ ಜನರಿಗೆಲ್ಲ ಪ್ರೀತಿ ಪಾತ್ರರಾಗಿರುತ್ತಾರೆ. ಇದಕ್ಕೆಲ್ಲ ಕಾರಣ ಬೇರೆ ಯಾರೂ ಅಲ್ಲ, ನೀವು ಅತಿಯಾಗಿ ನಂಬಿ ಕೊಂಡಿರುವ ಆ ಬಸವಣ್ಣ, ಶರಣರೆಲ್ಲರ ಹಿತಕ್ಕೆ ನಿನ್ನ ಅನ್ನ ಕಾರಣವಲ್ಲವಂತೆ ನಿನ್ನ ಅನ್ನವನ್ನು ತನ್ನ ಹೆಸರಿನಲ್ಲಿ ಇಕ್ಕುವ ಬಸವಣ್ಣ ಮಹಾತ್ಮನಂತೆ ; ದೈವಾಂಶಸಂಭೂತನಂತೆ ಶಿವನ ಪ್ರತಿರೂಪವಂತೆ!" ಎಂಬುದಾಗಿ ಕೊಂಡಿ ಮಂಚಣ್ಣನವರು ಬಾಡಿಯ ಕೊಂಡಿಗಳನ್ನು ಒಂದಕ್ಕೊಂದನ್ನು ಬೆಸೆಯುತ್ತ ಪರಿಚಾರಕರನ್ನು ಕುರಿತು "ಪರಿಚಾರಕರೆ, ಪ್ರಭುಗಳ ಬಟ್ಟೆಗಳನ್ನು ಆ ಮಾಚ ಒಗೆಯಲೇಬೇಕು. ಒಗೆಯದಿದ್ದಲ್ಲಿ ಈ ನಗರವನ್ನು ಬಿಟ್ಟು ತೊಲಗಬೇಕು ಎಂದು ತಿಳಿಸಿ ಈ ವಸ್ತ್ರಗಳನ್ನು ಮಡಿ ಮಾಡಿಸಿಕೊಂಡು ಬನ್ನಿ. ನೀವು ಈ ತಕ್ಷಣವೇ ಹೋಗಿ ಇದು ಕಡ್ಡಾಯ. ಅವನು ಖಂಡಿತವಾಗಿ ಪ್ರಭುಗಳ ಬಟ್ಟೆಗಳನ್ನು ಒಗೆದು ಕೊಡಲೇ ಬೇಕು!" ಎಂದು ಕಿವುಡರು, ಕುರುಡರು, ಹೆಳವರನ್ನು ಜೊತೆಮಾಡಿ ಮಾಚಿದೇವರ ಬಳಿಗೆ ಕಳಿಸಿದ್ದಾರೆ. ಮಾಚಿದೇವರು ಜನಸ್ತೋಮವನ್ನು ನೋಡಿ ಇವರು ನನ್ನ ಮೇಲೆ ಘರ್ಷಣೆಗಾಗಿ ಬರುತ್ತಾರೆಂದು ಒಂದು ಸಾರಿ ಹೃದಯಪೂರ್ವಕವಾಗಿ ಓಂಕಾರ ಶಬ್ದವನ್ನು ಹೂಂಕರಿಸಲು ಕಿವುಡರಿಗೆ ಓಂಕಾರ ಶಬ್ದದ ಪರಿಣಾಮದಿಂದ ಕಿವಿಯು ಕೇಳುವಂತಾಗಿದೆ ; ನೇತ್ರವಿಲ್ಲದ ಕುರುಡರಿಗೆ ಕಣ್ಣು ಕಾಣಿಸುವಂತಾಗಿದೆ ; ಹೆಳವರಿಗೆ ಕಾಲುಗಳು ಬಂದಿವೆ. ಇಂಥ ಅಭೂತ ಪೂರ್ವಕವಾದ ರೀತಿಯಲ್ಲಿ ಅವರ ಪಾಪಗಳೆಲ್ಲವೂ ನಿವಾರಣೆಯಾಗಿ ಮಾಚಿದೇವನಿಗೆ ನಮಸ್ಕಾರ ಮಾಡಿ ಧನ್ಯರಾದೆವು ಎಂದು ದೊರೆಯಲ್ಲಿಗೆ ಬಂದು ಆದ ಕಾರ್ಯವನ್ನು ಬೋಧಪ್ರದವಾಗಿ ತಿಳಿಸಿದ್ದಾರೆ. ಮಂಚಣ್ಣ ಪಂಡಿತರಿಂದಾಗಿ ಶರಣರಲ್ಲಿ ಯಾರು ಯಾರು ಎಷ್ಟು ಮಹತ್ವವನ್ನು ಹೊಂದಿದ್ದಾರೆ ಎಂಬುದು ತಿಳಿದುಬರುತ್ತಿದೆ.

ಶಿಷ್ಯ

ಆಮೇಲೇನಾಯ್ತು ಗುರುವೆ ?

ನಿರೂಪಕ

ಅಂದ ಮೇಲೆ ಮಡಿವಾಳ ಮಾಚಿದೇವನು ಒಬ್ಬ ಗುರುವಾಗಿ ಶರಣರಿಗೆ ಮಾರ್ಗದರ್ಶಿಯಾಗಿದ್ದಾನೆ.

ಗುರುವ ನಿಂದಿಸಬೇಡ ಹಿರಿಯನೆಂದೆನ ಬೇಡ
ಬರೆಯುವವರೊಳಗೆ ಹಗೆಬೇಡ ಬಂಗಾರ
ದೆರವು ಬೇಡೆಂದ ಸರ್ವಜ್ಞ ೧೪೪

ಅಂದ ಹಾಗೆ ಮಾಚಿದೇವರು ಎಂಥಾ ಮಹಾಪುರುಷರು! ಕಣ್ಣಿಲ್ಲದವರಿಗೆ ಕಣ್ಣುಬಂದಿವೆ, ಕಿವಿ ಕೇಳಿಸದೇ ಇದ್ದ ಕಿವುಡರಿಗೆ ಶ್ರವಣಶಕ್ತಿಯುಂಟಾಗಿದೆ. ಮೂಕರಿಗೆ ವಾಚಾಳತ್ವವುಂಟಾಗಿದೆ. ಇದನ್ನು ಕಂಡ ಬಿಜ್ಜಳ ಮಹಾರಾಜನು ಸಂತೋಷ ದಿಂದಿರಲು ಕೊಂಡಿ ಮಂಚಣ್ಣನವರು ಶರಣರ ಮಹಿಮೆ ಪ್ರಕಾಶವಾಗಲು ಕಾರಣರಾಗಬೇಕು ಅಂದ ಮೇಲೆ

ಶಿಷ್ಯ

ಮತ್ತೇನಾಗಿದೆ ಸ್ವಾಮಿ ?

ನಿರೂಪಕ

ಚಂದನವ ಕೊರೆದು ತೇದೊಡೆ
ನೊಂದೆನೆಂದು ಸುಗಂಧವ ಬಿಟ್ಟಿತ್ತೆ?
ಸಂದ ಸಂದ ಕಡಿದು ಕಬ್ಬನ್ನು ತಂದು
ಗಾಣದಲಿಕ್ಕಿ ಅರೆದು
ಪಾಕವಾಗುಳ್ಳ ಬೇಯಿಸಿದರೆ
ಬೆಂದೆನೆಂದು ಕಹಿಯಾದೀತೆ?
ತಂದು ಸುವರ್ಣವ ಕಡಿದು ಕಾಯಿಸಿದೊಡೆ
ಕಳಂಕ ಹಿಡಿದೀತೆ ? ೧೪೫

ಎಂಬಂತೆ ಶರಣ ಸತ್ಯವನ್ನು ಅರಿತವರಾದರೂ ಸತ್ಯಪರೀಕ್ಷೆಯನ್ನು ಮಾಡುತ್ತಾ ಇದ್ದಾರೆ.

ಶಿಷ್ಯ

ಈಗ ಮಡಿವಾಳ ಮಾಚಿದೇವರಿಗೆ ಏನು ಹೇಳಿದ್ದಾರೆ ಗುರುವೆ ?

ನಿರೂಪಕ

ಪುನಃ ದೊರೆಯು ಆಳುಗಳನ್ನು ಕಳುಹಿಸಿ ಬಟ್ಟೆಗಳನ್ನು ಒಗೆಯಲೇಬೇಕೆಂದು ಹೇಳಲು ಮಾಚಿದೇವನಾದರೋ ಬಿಜ್ಜಳರಾಜನ ಬಟ್ಟೆಗಳನ್ನು ದಿವ್ಯ ದೃಷ್ಟಿಯಿಂದ ನೋಡಲು ಪರಮೇಶ್ವರನ ಹಣೆಗಣ್ಣಿನಿಗೆ ಮನ್ಮಥ ಉರಿದು ಬೂದಿಯಾದನೋ ಅದರಂತೆಯೇ ಬಿಜ್ಜಳ ಮಹಾರಾಜನ ಬಟ್ಟೆಗಳೂ ಸಹ ಸುಟ್ಟು ಬೂದಿಯಾಗಿವೆ.

ಶಿಷ್ಯ

ಆಮೇಲೇನಾಯ್ತು ಸ್ವಾಮಿ ?

ನಿರೂಪಕ

ಈ ಸಮಾಚಾರವನ್ನು ಪರಿಚಾರಕರು ಬಿಜ್ಜಳ ಮಹಾರಾಜನಿಗೆ ತಿಳಿಸಲು ಬಿಜ್ಜಳ ಮಹಾರಾಜನಾದರೋ ಅತ್ಯಂತ ಕೋಪಾರೂಢನಾಗಿ

ಹೊಡೆಸವನ ಓಡಿಸುವೆ ದಡಿಗತನವನು ನೋಡಿ
ಹುಡುಗಾಟವವನೀಗೆ ಇದು ತರವೆ ಎನುತ
ಇದು ತರವೆ ಎನುತ | ೧೪೬

ಬಿಜ್ಜಳ ಮಹಾರಾಜನು ಕೋಪಾರೂಢನಾಗಿ ತನ್ನ ಸೈನ್ಯ ಸಮೇತನಾಗಿ ಬಟ್ಟೆಯನ್ನು ಒಗೆಯುವ ಆ ಮಡಿವಾಳಿಯು ತನ್ನ ಮೇಲೆ ಇಷ್ಟು ಅಸಭ್ಯ ರೀತಿಯಿಂದ ನಡೆಯುವನೆ ? ಎಂದು ಬಂದು ಕೊಳವನ್ನು ಸಮೀಪಿಸುತ್ತಿರುವಲ್ಲಿ ಮಾಚಿದೇವನು ಶರಣರ ಬಟ್ಟೆಗಳನ್ನು ಒಗೆಯುತ್ತಿದ್ದ ನೀರನ್ನು ತನ್ನ ಕೈಗೆ ತೆಗೆದುಕೊಂಡು ಅವರ ಮೇಲೆ ಎರಚಲು ನೀರು ಯಾರಿಗೆ ಸೋಂಕಿತೋ ಅವರಿಗೆಲ್ಲ ಬುರುಬುರುನೆ ಬೊಬ್ಬೆಗಳು ಬಂದು ಪುನಃ ನಮ್ಮ ಗತಿ ಏನಾಗುತ್ತದೆಯೋ ಎಂದು ಎಲ್ಲರೂ ಓಡಿಹೋಗಿದ್ದಾರೆ. ಇತ್ತ ಬಸವಣ್ಣನವರು ಈ ಸಮಾಚಾರವನ್ನು ತಿಳಿದು

"ಏನು ಮಾಚಿದೇವರೇ, ಇಂಥ ಸ್ಥಿತಿಯುಂಟಾಗಲು ಕಾರಣವೇನು? ಈ ಬಟ್ಟೆಗಳೆಲ್ಲವೂ ಮೊದಲಿನಂತೆಯೇ ಆಗಲಿ" ಎಂದು ಹೇಳಿ ಮಾಚಿದೇವರ ಪಾದಗಳಿಗೆ ಬಸವಣ್ಣನವರು ನಮಸ್ಕಾರ ಮಾಡಲು ಶಾಂತರೀತಿಯಿಂದ "ಬಸವಣ್ಣ, ನಿನ್ನ ಮಾತಿಗೆ ನಾನು ಪ್ರತಿಹೇಳುವೆನೆ?" ಎಂದು ಹೇಳಿ "ಓಂ ನಮಃ ಶಿವಾಯ" ಎಂಬ ಮಂತ್ರವನ್ನು ಉಚ್ಚರಿಸಲು ಆ ಬಟ್ಟೆಗಳೆಲ್ಲ ಮೊದಲಿದ್ದ ಬಣ್ಣಕ್ಕಿಂತಲೂ ಇಮ್ಮಡಿಯಾಗಿ ಅಲ್ಲಿ ನೆರೆದಿದ್ದ ಜನಸ್ತೋಮಕ್ಕೆಲ್ಲ ಗೋಚರವಾಗಲು ಬಿಜ್ಜಳ ಮಹಾರಾಜನು "ನಾನು ಚಾಡೀ ಮಾತನ್ನು ಕೇಳಿ ಬಸವಣ್ಣನವರಿಗೆ ಎಷ್ಟೋ ಪೀಕಲಾಟವನ್ನು ತಂದಂತಾಗಿದೆ. ಮಾಚಿದೇವ, ನನ್ನ ಅಪರಾಧವನ್ನು ಕ್ಷಮಿಸು" ಎಂದು ಕ್ಷಮಾಪಣೆಯನ್ನು ಬೇಡಿದ್ದಾರೆ.

ಮುಂದಲ ಕಥೆಯದರಂದವ ಪೇಳುವೆ
ಚಂದದಿ ಲಾಲಿಸಿ ಸಭಿಕರೇ ನೀವು
ಸಭಿಕರೇ ನೀವು | ೧೪೭

ಇತ್ತ ಬಸವಣ್ಣನವರಾದರೋ "ದಯಾಮಯನಾದ ಭಗವಂತನೆ ಇನ್ನೂ ಪರೀಕ್ಷಿಸಬೇಕೆಂದಿರುವೆಯಾ?" ಎಂದು ಶಂಕರನನ್ನು ಬೇಡುತ್ತಾ ಇದ್ದಾರೆ.

ಹರಹರ ಮಹದೇವ ಕರುಣಸಾಗರ ಶಂಭೋ
ಪುರಹರ ಕಾಯೆನ್ನ ಗಿರಿಜಾರಮಣನೆ
ಗಿರಿಜಾರಮಣನೆ | ೧೪೮

ಹೀಗೆ ಬಸವಣ್ಣನವರು ದಿವಾರಾತ್ರಿಯಲ್ಲಿಯೂ ಶಿವನನ್ನು ಸ್ಮರಿಸುತ್ತ

ನುಡಿವ ನುಡಿ ಮಂತ್ರಂಗಳಾಗಲಿ
ನಡೆದುದೆಲ್ಲ ಪ್ರದಕ್ಷಿಣೆಯಾಗಲಿ

ಮಲಗಿ ಹೊರಳಿ ನಿದ್ರಿಸುವುದೆಲ್ಲ
ನಿನಗೆ ದೃಢ ಸಮಾಧಿಯಾಗಲಿ ಕೂಡಲಸಂಗಮದೇವಾ ೧೪೯

ಹೀಗೆ ಬಸವಣ್ಣನವರು ಪ್ರಭುವಾದ ಸಂಗಮೇಶ್ವರನೇ ಗತಿಯೆಂದು ನಂಬಿರಲು ಗಂಗಾಭವಾನಿ, ನೀಲಾಂಬಿಕೆ ಇವರೊಡನೆ ಸಂಸಾರ ಸುಖದಲ್ಲಿ ನಿರ್ಗಮನವಾಗಿ 'ಮಹೇಶ್ವರ ನಿನ್ನ ದಯೆಯಪ್ಪ' ಎಂದು ಯೋಚನೆ ಮಾಡುತ್ತಿದ್ದಾಳೆ.

ಶಿಷ್ಯ

ಯೋಚನೆ ? ಅಣ್ಣಾವರಿಗೆಂಥ ಯೋಚನೆ ಗುರುವೆ ?

ನಿರೂಪಕ

ಅಯ್ಯಾ ಮಗು, ಪರಮೇಶ್ವರನ ಆಜ್ಞೆಯಂತೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಕೈಲಾಸದಿಂದ ಬಂದವರು. ಆದರೆ ಲಕ್ಷದ ತೊಂಬತ್ತು ಸಾವಿರ ಗಣಂಗಳು ಮಾತ್ರ ಕಲ್ಯಾಣಕ್ಕೆ ಬಂದು ಆರು ಸಾವಿರ ಗಣಂಗಳು ಕಾಶ್ಮೀರ ದೇಶಕ್ಕೆ ಸಂಬಂಧಪಟ್ಟ ಮಾಂಡವ್ಯಪುರದ ಮಹಾದೇವ ಭೂಪಾಲನ ಹಿಡಿತಕ್ಕೆ ಸಿಕ್ಕಿ ಆ ಜಂಗಮರು ಇಷ್ಟು ದಿವಸಗಳಾದರೂ ಬರಲಿಲ್ಲವಲ್ಲ ಎಂಬುದೊಂದೇ ಯೋಚನೆ. ನಾನು ಕೋರಿಶೆಟ್ಟಿ ವೇಷದಲ್ಲಿ ಹೋಗಿ ಆರುಸಾವಿರ ಗಣಂಗಳ ಕರೆದು ತರಬೇಕು ಎಂಬುದೇ ಬಸವಣ್ಣನವರ ಯೋಚನೆಯಾಗಿದೆ. 'ಶಿವನೆ ನಿನ್ನ ಸಂಕಲ್ಪವಿದ್ದಂತಾಗಲಿ' ಎಂದು ಕೋರಿಶೆಟ್ಟಿಯ ವೇಷವನ್ನು ಅಂದರೆ ಹೆಗಲಸುಬೆಯಲ್ಲಿ ಸಾಂಬಾರ ಪದಾರ್ಥಗಳಾದ ಜೀರಿಗೆ, ಮೆಣಸು, ಶುಂಠಿ, ಏಲಕ್ಕಿ ಇಂಥ ಸಾಮಗ್ರಿಗಳನ್ನು ಮಾರುವವರಂತೆ ಹೆಗಲಸುಬೆಯನ್ನು ಇಟ್ಟುಕೊಂಡು, ಹೊರಡುವುದಕ್ಕೆ ಮುಂಚೆ ತನ್ನ ಧರ್ಮಪತ್ನಿ ನೀಲಾಂಬಿಕೆಯನ್ನು ಆರುಸಾವಿರ ಜನಕ್ಕೆ ಆಗತಕ್ಕ ಆಹಾರ ಪದಾರ್ಥಗಳ ಬುತ್ತಿ ಕಟ್ಟಿಕೊಡಬೇಕೆಂದು ಹೇಳಿದ್ದಾರೆ. ನೀಲಾಂಬಿಕಾ ದೇವಿಯಾದರೋ ಬುತ್ತಿಯನ್ನು ಹೇಗೆ ಸಿದ್ಧಪಡಿಸುತ್ತಿದ್ದಾರಪ್ಪಾ ಅಂದರೆ,

ಶಿಷ್ಯ

ಹೇಗೆ ಗುರುವೆ ?

ನಿರೂಪಕ

ಷಡ್ರಸ ಅನ್ನಗಳೆಂಬ ಬಗೆ ಬಗೆ ಭಕ್ಷವ ಮಾಡಿ
ಷಡುರುಚಿ ಎಂಬುವ ಅಮುರ್ತ ಹಸ್ತದಲಿ
ಅಮುರ್ತ ಹಸ್ತದಲಿ | ೧೫೦

ಹೀಗೆ ಪತಿವ್ರತಾಶಿರೋಮಣಿಯಾದ ನೀಲಮ್ಮನವರು ಬುತ್ತಿಯನ್ನು ಒಂದು ಸುಲಿದ ತೆಂಗಿನಕಾಯಿ ಗಾತ್ರ ಮಾತ್ರ ಕಟ್ಟಿದ್ದಾರೆ.

ಶಿಷ್ಯ

ಸ್ವಾಮಿ, ಅದೇನು ಪತಿವ್ರತಾಶಿರೋಮಣಿ ಅಂದ್ರಲ್ಲ.
ಹಂಗಾರೆ ಪತಿವ್ರತೆ ಅಂದರೇನು ಗುರುವೆ ?

ನಿರೂಪಕ

ಕೇಳು ಮಗು

ಕಾರ್ಯೇಷು ದಾಸೀ
ಕರಣೇಷು ಮಂತ್ರೀ
ಭೋಜ್ಯೇಷು ಮಾತಾ
ಶಯನೇ ಚ ರಂಭಾ
ರೂಪೇ ಚ ಲಕ್ಷ್ಮೀಃ
ಕ್ಷಮಯಾ ಧರಿತ್ರೀ
ಷಾಡ್ಗುಣ್ಯಯುಕ್ತಾ ಕುಲಧರ್ಮಪತ್ನೀ | ೧೫೧

ಶಿಷ್ಯ

ಹಾಗಾದರೆ ಈಗಿನ ಕಾಲದವರು ಹ್ಯಾಗೆ ಗುರುವೆ ?

ನಿರೂಪಕ

ಈಗಿನ ಕಾಲದವರಾದರೊ

ಕಾರ್ಯೇಷು ಚೋರಿ
ಕಲಹೇ ಬಜಾರಿ
ಭೋಜ್ಯೋಷು ಬಕಾಸುರಿ
ಶಯನೇಷು ಹಟಮಾರಿ
ರೂಪೇಷು ಅಷ್ಟಾವಕ್ರೀ
ಸಮಯೇಷು ಸೋಮಾರಿ
ಷಾಡ್ಗುಣ್ಯಯುಕ್ತಾ ಕುಲಕರ್ಮಪತ್ನೀ ೧೫೨

ಅಂದಹಾಗೆ ಪತಿವ್ರತಾಶಿರೋಮಣಿಯಾದ ನೀಲಾಂಬಿಕಾದೇವಿಯು ಕಟ್ಟಿದ ಬುತ್ತಿ ಯನ್ನು ತೆಗೆದುಕೊಂಡು ಬಸವಣ್ಣನವರು ಪರಶಿವನ ನಾಮಾಮೃತವನ್ನು ಹಾಡುತ್ತಾ ಬರುತ್ತಿದ್ದಾರೆ.

ಶಿಷ್ಯ

ಯಾವ ರೀತಿ ಹಾಡ್ತಾ ಇದ್ದಾರೆ ಸ್ವಾಮಿ

ನಿರೂಪಕ

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಕೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ
ನನಗೆ ನಮ್ಮ ಕೂಡಲಸಂಗಮ ದೇವನ
ನೆನೆಯುವುದೇ ಚಿಂತೆ | ೧೫೩

ಓಗೆ ಬಸವಣ್ಣನವರು ಶಿವನನ್ನು ಶಿವಶರಣರನ್ನು ನೆನೆಯುತ್ತ ಮಾಂಡವ್ಯಪುರಕ್ಕೆ ದಯಮಾಡಿಸಿದ್ದಾರೆ.

ಶರಣರೆಲ್ಲಿರುವರು ಎನುತಲಿ ಬಸವಣ್ಣ
ಹರನೆ ತೋರಿಸು ನನಗೆ ಮಾರ್ಗವನೀಗ
ಮಾರ್ಗವನೀಗ | ೧೫೪

ಇತ್ತ ಕಡೆ ಮಹಾದೇವ ಭೂಪಾಲನಾದರೋ ಮಾಂಡವ್ಯಪುರದ ಸುತ್ತ ಭದ್ರವಾದ ಕೋಟೆಯನ್ನು ಕಟ್ಟಿರುವುದಲ್ಲದೆ ಆ ನಗರಕೆ ಯಾರಾದರೂ ಹೊಸಬರು ಪ್ರವೇಶಿಸಲು ಬಂದರೆ ದ್ವಾರಪಾಲಕರು ತಡೆದು ಅವರ ವೃತ್ತಾಂತವನ್ನು ತಿಳಿದು ರಾಜನಿಗೆ ತಿಳಿಸಿ ಅನಂತರ ನಗರದೊಳಕ್ಕೆ ಬರಲು ಅವಕಾಶ ಕೊಡುವಂತದ್ದಾಗಿದೆ. ಬಸವಣ್ಣನವರು ದ್ವಾರದ ಬಳಿಗೆ ಬಂದಾಗ ದ್ವಾರಪಾಲಕರು ತಡೆಯಲು ಬಸವಣ್ಣನವರಾದರೋ ವಿನಯ ವಾಕ್ಯಗಳಿಂದ "ಸ್ವಾಮಿ, ನಾನು ಹೊಟ್ಟೆಪಾಡಿಗಾಗಿ ಸಾಂಬಾರ ಪದಾರ್ಥಗಳನ್ನು ಮಾರಲು ತಂದಿದ್ದೇನೆ" ಎಂದಿದ್ದಾರೆ. ಅದಕ್ಕೆ ದ್ವಾರಪಾಲಕರಾದರೋ "ಅಯ್ಯಾ ಹೊಸಬರಿಗೆ ಈ ನಗರದ ಪ್ರವೇಶವಿಲ್ಲ" ಎಂದಿದ್ದಾರೆ.

ಶಿಷ್ಯ

ಹೊಸಬರು ನಗರದ ಒಳಗಡೆಗೆ ಹೋಗಲು ಯಾತಕ್ಕೆ ಅವಕಾಶವಿಲ್ಲ ಗುರುವೆ ?

ನಿರೂಪಕ

ಆರುಸಾವಿರ ಜನರು ಜಂಗಮರಿರುವಾಗ
ಯಾರಾದರೂ ಕರೆದುಕೊಂಡೊಯ್ಯರೆಂದು
ಕೊಂಡೊಯ್ಯರೆಂದು | ೧೫೫

ಅಯ್ಯಾ ಮಗು, ಜಂಗಮ ಪ್ರೇಮಿಯಾದ ಇದೇ ನಗರದ ಮಹಾದೇವ ಭೂಪಾಲನು ತನ್ನ ನಗರದಲ್ಲಿರುವ ಜಂಗಮರನ್ನು ಯಾರಾದರೂ ಕರೆದುಕೊಂಡು ಹೋಗಬಹುದೆಂಬ ಭಯದಿಂದ ಆರು ಸಾವಿರ ಜನಕ್ಕೂ ಮಂದಿರಗಳನ್ನು ನಿರ್ಮಾಣ ಮಾಡಿಸಿ ಜಂಗಮಾರ್ಚನೆಯನ್ನು ಮಾಡಿ ಜಂಗಮರ ಪಾದತೀರ್ಥದಿಂದ ರಾಜನು ಪುನೀತನಾಗುತ್ತಿದ್ದಾನೆ. ಆ ಕಾರಣ ದಿಂದ ಯಾರನ್ನೂ ನಗರದ ಒಳಗಡೆಗೆ ಬಿಡಲಾಗದೆಂದು ರಾಜಾಜ್ಞೆಯಾಗಿರುವುದೇ ಕಾರಣ.

ಶಿಷ್ಯ

ಸರಿ ಗುರುವೆ. ಆಮೇಲೇನಾಯ್ತು ಹೇಳಿ ಸ್ವಾಮಿ ?

ನಿರೂಪಕ

ಬಸವಣ್ಣನವರು ದ್ವಾರಪಾಲಕರಿಗೆ "ಅಯ್ಯಗಳೇ, ನಾನು ವ್ಯಾಪಾರಕ್ಕಾಗಿ ಬಂದಿದ್ದೇನೆ. ಹಾಗೆ ಏನಾದರೂ ನಿಮಗೆ ಅನುಮಾನವಿದ್ದರೆ ನಾನು ತಂದಿರುವ ಸಾಂಬಾರ ಪದಾರ್ಥಗಳಾದರೋ ಒಂದು ಪಂಚೇರು ಅಂದರೆ ಐದು ಸೇರು ಮಾತ್ರ. ಇದನ್ನು ನೀವು ಪರೀಕ್ಷಿಸಿರೆಂದು ಹೇಳಲು ದ್ವಾರಪಾಲಕರಾದರೋ ಅದನ್ನು ತೂಕಕ್ಕೆ ಹಾಕಿದ್ದಾರೆ. ತೂಕವು ಸರಿಯಾಗಿರಲು ಇವರು ಸುಳ್ಳನ್ನು ಹೇಳುವವರಲ್ಲವೆಂದು ನಂಬಿ ಮೊದಲನೆಯ ದ್ವಾರಪಾಲಕನು ಬಸವಣ್ಣನವರನ್ನು ಒಳಗಡೆಗೆ ಬಿಟ್ಟಿದ್ದಾನೆ. ಬಸವಣ್ಣನವರು ಒಳಗಡೆ ಹೋಗಿ ನೋಡಲು ಏಳುಸುತ್ತಿನ ಕೋಟೆಯನ್ನು ಕಂಡು

ಏಳು ಸುತ್ತಿನ ಕೋಟೆ ಇರುವುದು ನಗರಕ್ಕೆ
ಕಾರಣವೇನುಂಟು ಕಾಣೆನು ನಾನು
ಕಾಣೇನು ನಾನು | ೧೫೬

ಎಂದು ಬಸವಣ್ಣವರು ಮರುಗುತ್ತ ಎರಡನೆ ದ್ವಾರಪಾಲಕನನ್ನು ವಿಚಾರಿಸಲು, ಎರಡನೇ ದ್ವಾರಪಾಲಕನಾದರೋ ಬಸವಣ್ಣನವರ ಮಾತಿನ ಹಿತವಚನಕ್ಕೆ ಮರುಳಾಗಿ "ಸ್ವಾಮೀ, ನೀವು ಕಾರಣಿಕ ಪುರುಷರಂತೆ ಕಾಣುತ್ತಿರುವಿರಿ. ಮಹಾದೇವ ಭೂಪಾಲನು ಆರು ಸಾವಿರ ಗಣಂಗಳಿಗೆ ಸೇವೆಯನ್ನು ಮಾಡುತ್ತಾ ಆ ಜಂಗಮರು ಕಲ್ಯಾಣಪಟ್ಟಣಕ್ಕೆ ಎಲ್ಲಿ ಹೋಗಿಬಿಡುತ್ತಾರೋ ಎಂಬ ಭಯದಿಂದ ಏಳುಸುತ್ತಿನ ಕೋಟೆಯೊಳಗಡೆ ಆರು ಸಾವಿರ ಜಂಗಮರುಗಳಿಗೂ ಮಂದಿರಗಳನ್ನು ಕಟ್ಟಿಸಿ ಅವರ ಸೇವೆಯನ್ನು ಕೈಗೊಳ್ಳುತ್ತಾ ಇದ್ದಾರೆ" ಎಂದನು. ಅಂದ ಹಾಗೆ ಬಸವಣ್ಣನವರು ಮನಸ್ಸಿನಲ್ಲಿ ಯೋಚಿಸುತ್ತಾ ಇದ್ದಾರೆ.

ಶಿಷ್ಯ

ಮತ್ತೆ ಏನು ಯೋಚನೆ ಗುರುವೆ ?

ನಿರೂಪಕ

ಜಂಗಮರನ್ನು ನಾನು ಹೇಗೆ ಕಾಣುವುದಯ್ಯ
ಅಂಗಜಾರಿಯೇ ಬಲ್ಲ ಇದರರ್ಥಗಳನು
ಇದರರ್ಥಗಳನು | ೧೫೭

ಶಿವಶಿವಾ, ಆರುಸಾವಿರ ಜಂಗಮರನ್ನು ಕಾಣುವ ಬಗೆ ಹೇಗೆ? ಈ ಕಾರ್ಯವು ಸಫಲವಾಗುವುದೇ ಎಂಬ ಯೋಚನೆಯಿಂದ ಎರಡನೇ ದ್ವಾರಪಾಲಕನನ್ನು 'ಅಯ್ಯಾ, ನನಗೆ ಬಾಯಾರಿಕೆಯುಂಟಾಗಿದೆ. ನಾನು ನೀರು ಕುಡಿಯಬೇಕಾದರೆ ಜಂಗಮರ ಪಾದಪೂಜೆಯನ್ನು ಮಾಡಿ ಅನಂತರ ಗಂಗೋದಕವನ್ನು ಸ್ವೀಕರಿಸುವುದು ನನ್ನ ವ್ರತ' ಎಂದೆನ್ನಲು ಎರಡನೇ ದ್ವಾರಪಾಲಕನು ಬಸವಣ್ಣನವರನ್ನು ಒಳಗಡೆಗೆ ಬಿಟ್ಟಿದ್ದಾನೆ. ಮೂರನೇ ಬಾಗಿಲಿನ ದ್ವಾರಪಾಲಕನ ಬಳಿಗೆ ಹೋಗಿ ಅಯ್ಯಾ ದ್ವಾರಪಾಲಕರೇ

ಜಂಗಮಾರ್ಚನೆಯಿಂದ ಇಂಗಿಸುವೆ ಭವವನ್ನು
ಮಂಗಳ ರೂಪನ ದಯದಿಂದ ನಾನು
ದಯದಿಂದ ನಾನು | ೧೫೮

ದ್ವಾರಪಾಲಕರೇ, ನಾನು ಜಂಗಮಾರ್ಚನೆಯನ್ನು ಮಾಡಬೇಕಾಗಿದೆ ನೀವು ನನಗೆ ಸಲಹೆಯನ್ನು ಕೊಡಬೇಕೆಂದು ಬಸವಣ್ಣನವರು ಹೇಳಲು, ದ್ವಾರಪಾಲಕನು 'ಇದು ನಿಜವೋ ಸುಳ್ಳೋ' ಎನ್ನಲು ಬಸವಣ್ಣನವರು ಏನು ಹೇಳಿದ್ದಾರೆ

ಶಿಷ್ಯ

ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗಮೆಚ್ಚಿ ಅಹುದಹುದೆನ್ನಬೇಕು
ನುಡಿಯೊಳಗಾಗಿ ನಡೆಯೊಳು ತಪ್ಪಿದರೆ
ಕೆಡಹಿ ಮೂಗ ಕೊಯ್ಯದೆ ಮಾಣ್ಪನೆ ನಮ್ಮ
ಕೂಡಲಸಂಗಮದೇವ. ೧೫೯

ಎಂದು ಬಸವಣ್ಣನವರು ನುಡಿದಂತೆ ನಡೆಯುತ್ತೇನೆಯೇ ಏನಹ ನಾನು ಎಂದಿಗೂ ಸುಳ್ಳು ಹೇಳುವವನಲ್ಲ ಎಂದು ಹೇಳಲು ದ್ವಾರಪಾಲಕನು ಅವರನ್ನು ಒಳಗಡೆ ಬಿಟ್ಟಿದ್ದಾನೆ.

ಶಿಷ್ಯ

ಅನಂತರ ಏನಾಯ್ತು ಸ್ವಾಮಿ ?

ನಿರೂಪಕ

ಮೂರು ಬಾಗಿಲನ್ನು ದಾಟಿ ಬಂದವರ ವಿಚಾರದಲ್ಲಿ ನಾಲ್ಕನೆ ಬಾಗಿಲಿನವನು ಐದನೇ ಬಾಗಿಲಿನವನು ಅನುಮಾನ ಪಡೆದೆ ಒಳಗಡೆ ಬಿಟ್ಟಿದ್ದಾರೆ.

ಶಿಷ್ಯ

ಆರನೇ ಬಾಗಿಲಿನವರು ಸ್ವಾಮಿ ?

ನಿರೂಪಕ

ಆರನೆ ಬಾಗಿಲಿನವರು ಒಳಗಡೆ ಬಿಟ್ಟರಾಗ
ಭೋರನೆ ಹೋದರು ಬಸವಣ್ಣನವರು
ಬಸವಣ್ಣನವರು | ೧೬೦

ಹೀಗೆ ಆರು ಬಾಗಿಲಿನವರು ಬಿಡಲು ಏಳನೇ ಬಾಗಿಲಿನವರಾದರೂ ಒಳಗಡೆ ಬಿಟ್ಟಿದ್ದಾರೆ. ಇತ್ತ ಒಳಗಡೆ ಇರುವ ಜಂಗಮರಾದರೋ ಬಸವಣ್ಣನವರನ್ನು ಕಂಡು 'ನೀನು ಯಾರು?' ಎಂದು ಕೇಳಲು ಅದಕ್ಕೆ ಬಸವಣ್ಣನವರು 'ನೀರಡಿಕೆಯಾಗಿರುವುದರಿಂದ ನಿಮ್ಮ ಪಾದಾರ್ಚನೆ ಮಾಡಿ ಕೃತಾರ್ಥನಾಗಬೇಕು' ಎಂದು ಬಂದಿದ್ದೇನೆ. ನಿಮ್ಮ ಪಾದಪೂಜೆಗೆ ಒಂದು ಅವಕಾಶವನ್ನು ಕೊಡಬೇಕೆಂದು ಬಸವಣ್ಣನವರು ಕೇಳಲು ಅದಕ್ಕೆ ಒಬ್ಬ ಜಂಗಮನು ಬಸವಣ್ಣನವರನ್ನು ಏನಂತ ಕೇಳಿದ್ದಾನೆ.

ಶಿಷ್ಯ

ಏನಂತ ಕೇಳಿದಾರೆ ಸ್ವಾಮಿ ?

ನಿರೂಪಕ

ಚಿಂದಿ ಬಟ್ಟೆಯನುಟ್ಟು, ಕರಿಯ ಕಂಬಳಿ ಹೊದ್ದು
ಬಂದೆಯ ಇಲ್ಲಿಗೆ ಜಂಗಮಾರ್ಚನೆಗೆ
ಜಂಗಮಾರ್ಚನೆಗೆ | ೧೬೧

ಅಯ್ಯಾ ನಿನ್ನನ್ನು ನೋಡಿದರೆ ನಿನ್ನ ವೇಷವೇ ವಿಚಿತ್ರ. ನೀನು ಹಾಕಿರುವ ಬಟ್ಟೆ, ಯಾದರೋ ಚಿಂದಿ ಬಟ್ಟೆ. ರಾಜ ಮಹಾರಾಜರು ಪೂಜಿಸುವ ಪಾದವನ್ನು ನಿನಗೆ ತೋರಲೇ ಎನ್ನಲು ಅದಕ್ಕೆ ಮತ್ತೊಬ್ಬ ಜಂಗಮರು ಏನೆಂದು ಹೇಳಿದ್ದಾರೆ

ಶಿಷ್ಯ

ಏನಂತ ಹೇಳಿದ್ದಾರೆ ಸ್ವಾಮಿ ?

ನಿರೂಪಕ

ಸ್ವಪಚನಾಗಲಿ ಗುರುವೆ ಉಪದೇಶವಿರಲವಗೆ
ಉಪಮಿಸಲು ಅವನ ಮನೆಯು ತ್ರಿಪುರಹರನಿಲಯ
ತ್ರಿಪುರಹರನಿಲಯ | ೧೬೨

ಬಸವಣ್ಣನವರ ಮಾತನ್ನು ಕೇಳಿ ಈತ ಹೀಗೆ ನೋಡುವುದಕ್ಕೆ ಭಿಕಾರಿಯಂತೆ ಕಂಡರೂ ಮಾತು ಮಧುರವಾಗಿದೆ.

ಅವರವರ ವೇಷಕ್ಕೆ ಅವರವರ ಭಾವಕ್ಕೆ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಪೂಜೆಗಂ ಅವರವರ ಭಕ್ತಿಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ ೧೬೩

ಆದ್ದರಿಂದ ವೇಷಭೂಷಣ ಕಟ್ಟಿಕೊಂಡೇನಾಗಬೇಕು. ಪಾದಪೂಜೆಯನ್ನು ಮಾಡು ಎಂದು ಒಪ್ಪಿಕೊಂಡಿದ್ದಾರೆ. ಅಂದ ಮೇಲೆ ಬಸವಣ್ಣವರು ಆ ಜಂಗಮರ ಪಾದ ಪೂಜೆಯನ್ನು ಯಾವ ಪ್ರಕಾರವಾಗಿ ಮಾಡ್ತಾ ಇದ್ದಾರಪ್ಪಾ ಅಂದರೆ

ಶಿಷ್ಯ

ಯಾವ ಪ್ರಕಾರವಾಗಿ ಮಾಡ್ತಾ ಇದ್ದಾರೆ ಗುರುವೆ ?

ನಿರೂಪಕ

ಶರಣಜನರರಸ ಸದು ಹೃದಯ ನಳಿನದೊಳು
ಪರಿಶೋಭಿಸುತ್ತಿಹುದು ಶಿವ ನಿನ್ನಪಾದ ಹರ ನಿನ್ನ ಪಾದ
ಹರಿಯನಯನದ ಕುರುಹು ಹಿಡಿದಿಹುದೀಗ
ಗುರು ಶಂಭುಲಿಂಗ ನಿನ್ನಯ ದಿವ್ಯಪಾದ ಹರ ನಿನ್ನ ಪಾದ
ದಿಟ್ಟ ರಾವಣನು ರಜತಾಚಲವನ್ನೆತ್ತಲೊತ್ತಿ
ಬಿಟ್ಟಿತು ರಸಾತಲಕ್ಕೆ ಶಿವನಿನ್ನ ಪಾದ ಹರನಿನ್ನ ಪಾದ ೧೬೪

ಎಂದು ಬಸವಣ್ಣನವರು 'ಶರಣರ ಹೃದಯ ಪರಿಶಿವನಿಲಯ' ಎಂಬಂತೆ ಜಂಗಮರ ಪಾದವನ್ನು ಅರ್ಘ್ಯ, ಆಚಮನೀಯ, ಗಂಧ, ಭಸಿತ, ಅಕ್ಷತೆಗಳಿಂದ ಪಾದಪೂಜೆಯನ್ನು ಮಾಡಿ ಬಿಲ್ವಪತ್ರೆಯನ್ನು ಧರಿಸಿ ಧೂಪದೀಪಾದಿಗಳಿಂದ ಪೂಜೆಯನ್ನು ಮಾಡಿದ್ದಾರೆ.

ಶಿಷ್ಯ

ಬಿಲ್ವ ಪತ್ರೆಯ ವೈಶಿಷ್ಟ್ಯವೇನು ಸ್ವಾಮಿ ?

ನಿರೂಪಕ

ಅಯ್ಯಾ ಮಗು,

ತ್ರಿದಲಂ ತ್ರಿಗುಣಾಕಾರಂ ತ್ರಿಣೇತ್ರಂಚ ತ್ರಯಾಯುತಂ
ತ್ರಿಜನ್ಮಪಾಪಸಂಹಾರಂ ಏಕ ಬಿಲ್ವಾರ್ಚನಂ ಶಿವಂ ೧೬೫

ಎಂಬ ಮಂತ್ರೋಕ್ತಿಯಂತೆ ಮೂರು ದಳವಿರುವ ಬಿಲ್ವಪತ್ರೆಯಿಂದ ಲಿಂಗಾರ್ಚನೆಯನ್ನು ಜಂಗಮರ ಪಾದಪೂಜೆಯನ್ನೂ ಯಾರು ಮಾಡುತ್ತಾರೆಯೋ ಅವರಿಗೆ ತ್ರಿಜನ್ಮ ಅಂದರೆ ಮೂರು ಜನ್ಮಗಳ ಪಾಪವೆಲ್ಲವು ನಾಶವಾಗಿ ಪರಮೇಶ್ವರ ಸನ್ನಿಧಿಯನ್ನು ಸೇರುತ್ತಾರೆ. ಅಂದಹಾಗೆ ಬಸವಣ್ಣನವರು ಜಂಗಮರ ಪಾದಪೂಜೆಯನ್ನು ಮಾಡಿ ನೈವೇದ್ಯಕ್ಕಾಗಿ ತಂದಿದ್ದಂಥ ಅಂದರೆ ನೀಲಮ್ಮತಾಯಿಯವರು ಪವಿತ್ರ ಹಸ್ತದಿಂದ ಮಾಡಿದ್ದ ಪಕ್ವಾನ್ನವನ್ನು ನಿವೇದಿಸುವುದಕ್ಕೆ ತೆಗೆದ ತಕ್ಷಣವೇನೆ ಆ ಅನ್ನವಾದರೋ ಸುಗಂಧವನ್ನು ಬೀರುವಂತೆ ಪರಿಮಳಯುತವಾಗಿ ಸುವಾಸನೆಯು ಆ ಜಂಗಮರ ನಿವಾಸಗಳಲ್ಲೆಲ್ಲ ವ್ಯಾಪಿಸಿಕೊಂಡಿದೆ. ಜಂಗಮರಾದರೊ ಇಂತಹ ಸುಗಂಧಯುಕ್ತವಾದ ಅನ್ನವನ್ನು ಕಂಡು ಇದನ್ನು ಸೇವಿಸಿದರೆ ಇನ್ನೆಷ್ಟು ರುಚಿಕರವಾಗಿರುವುದೊ ಇದನ್ನು ಸೇವಿಸುವ ನಾವೇ ಧನ್ಯರೆಂದು ಆರು ಸಾವಿರ ಜಂಗಮರು 'ನನಗು ಕೊಡಬೇಕು' 'ನನಗೂ ಕೊಡಬೇಕು' ಎಂದು ಬಸವಣ್ಣನವರನ್ನು ಬೇಡಿಕೊಂಡಿದ್ದಾರೆ. ಅದಕ್ಕೆ ಬಸವಣ್ಣನವರು 'ಸ್ವಾಮಿಗಳೇ, ನಿಮಗೋಸ್ಕರವಾಗಿಯೇ, ನಾನು ತಂದಿರುತ್ತೇನೆ. ತಾವು ದಯವಿಟ್ಟು ಪಂಕ್ತಿಯಲ್ಲಿ ಕುಳಿತುಕೊಳ್ಳಿ' ಎಂದು ಜಂಗಮರನ್ನು ಬೇಡಿಕೊಳ್ಳಲು ಆ ಅಮೃತಾನ್ನವನ್ನು ಭುಂಜಿಸುವುದಕ್ಕೆ ಜಂಗಮರೆಲ್ಲರು ಸಾಲಾಗಿ ಕುಳಿತಾಗ ಊಟಕ್ಕೆ ತಂದಿದ್ದ ಬಾಳೇ ಎಲೆ ಒಂದೇ ಒಂದು. ಬಸವಣ್ಣನವರು ಬಾಳೆ ಎಲೆಗೆ ಕೈಯಿಟ್ಟ ತಕ್ಷಣವೇನೇ ಅವರ ಅಮೃತಹಸ್ತ ಸ್ಪರ್ಶದಿಂದ ಒಂದಕ್ಕೆ ನೂರಾಗಿ ನೂರಕ್ಕೆ ಸಾವಿರವಾಗಿ, ಹೀಗೆ ಅಕ್ಷಯವಾಗಿ ಪರಿಣಮಿಸಿದೆ. ಆರು ಸಾವಿರ ಜಂಗಮರಿಗೆ ಬಾಳೆ ಎಲೆಯನ್ನು ಹಾಸಿ ನೀಲಮ್ಮನವರು ಮಾಡಿದ ಅನ್ನವನ್ನು ಅಂಗುಷ್ಠ ಅಂದರೆ ಹೆಬ್ಬೆರಳಿನ ಗಾತ್ರ ಉಂಡೆಯನ್ನು ಮಾಡಿ ಒಬ್ಬೊಬ್ಬರ ಎಲೆಯ ಮೇಲೆ ಇಟ್ಟುಕೊಂಡು ಬರುವಾಗ ಆ ಜಂಗಮರಾದರೋ "ಇಷ್ಟೇ ಇಷ್ಟು ಅನ್ನ ಯಾವ ಮೂಲೆಗೆ ಇನ್ನು ಸ್ವಲ್ಪ ಬಡಿಸಿ" ಎಂದು ಕೇಳಿದ್ದಾರೆ. ಬಸವಣ್ಣನವರು ಈಗ ಬಡಿಸಿರುವ ಊಟವನ್ನು ಮಾಡಿ ಸ್ವಾಮಿ, ಆ ಅನ್ನವು ಮುಗಿದ ಮೇಲೆ ಬಡಿಸುತ್ತೇನೆ ಎಂದು ಹೇಳಲು ಜಂಗಮರು "ಮಹಾಪ್ರಸಾದ" ಎಂದು ತಿಳಿದು ಲಿಂಗಾರ್ಪಿತಕ್ಕೆ ನಿವೇದಿಸಿ ಊಟ ಮಾಡುವ ಪ್ರಯತ್ನಪಟ್ಟಿದ್ದಾರೆ. ಜಂಗಮರು ಅನ್ನದ ಮೇಲೆ ಕೈಯ್ಯಿಟ್ಟ ತಕ್ಷಣವೇನೆ ಅಕ್ಷಯವಾಗಿ ಅವರು ಎಷ್ಟು ಊಟ ಮಾಡಿದರೂ, ಬಸವಣ್ಣನವರು ಮೊದಲು ಎಷ್ಟನ್ನು ಬಡಿಸಿದ್ದರೂ ಅಷ್ಟೇ ಅನ್ನವು ಮಾತ್ರ ಎಲೆಯ ಮೇಲೆ ಉಳಿದಿದೆ. ಅನಂತರ ಜಂಗಮರೆಲ್ಲರೂ ಮಹಾಶ್ಚರ್ಯದಿಂದ ಬಸವಣ್ಣನವರನ್ನು 'ಇವರು ಯಾರೋ ಕಾರಣಿಕ ಪುರುಷನಿರಬೇಕು' ಎಂದು ಯೋಚಿಸಿ ಕೇಳುತ್ತಿದ್ದಾರೆ.

"ಸ್ವಾಮಿ, ನೀವು ಯಾರು ? ನಿಮ್ಮ ಗ್ರಾಮ ಯಾವುದು ? ನಿಮ್ಮ ಹೆಸರೇನು ? ನೀವು ಏತಕ್ಕಾಗಿ ಬಂದಿರಿ?" ಎಂದು ಜಂಗಮರು ಕೇಳಲು ಬಸವಣ್ಣನವರು ಆ ಜಂಗಮರಿಗೆ ಏನಂತ ಹೇಳ್ತಾ ಇದ್ದಾರೆ.

ಶಿಷ್ಯ

ಏನಂತ ಹೇಳಿದರು ಗುರುವೆ ?

ನಿರೂಪಕ

ಬಸವಣ್ಣನೆಂದು ನನ್ನ ಹೆಸರಿಟ್ಟು ಕರೆಯುವರು
ದೆಸೆಯುಳ್ಳ ಕಲ್ಯಾಣಪಟ್ಟಣದವನು
ಪಟ್ಟಣದವನು | ೧೬೬

ಅಯ್ಯಾ ಜಂಗಮರೇ ಪರಮೇಶ್ವರನು ಕೈಲಾಸದಿಂದ ಭೂಲೋಕಕ್ಕೆ ಕಳಿಸಿದ ಬಸವಣ್ಣನೇ ನಾನು. ನನ್ನನ್ನು ಪರಮೇಶ್ವರನು ಕೈಲಾಸದಿಂದ ಕಳುಹಿಸಿದಾಗ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು ಏಳು ನೂರ ಎಪ್ಪತ್ತು ಜನ ಅಮರಗಣಂಗಳು ಐರವತ್ಮೂರು ಜನ ತ್ರಿವಿಧರುಗಳು ಸೇವೆಯನ್ನು ಸಲ್ಲಿಸಿ ಆದಿಯಿಂದ ಹಿಡಿದು ಅಂತ್ಯಜರವರೆಗೆ ಲಿಂಗವನ್ನು ಧರಿಸಿ ಭಕ್ತಿಮಾರ್ಗದಿಂದ ನಿನ್ನ ನಡತೆಯನ್ನು ಅನುಸರಿಸಿ ಜಗತ್ತಿಗೇ ಜಗಜ್ಯೋತಿ ಬಸವಣ್ಣನೆಂದು ಕೀರ್ತಿಯನ್ನು ಪಡೆದು, ಪುನಃ ನೀನು ಬಂದು ನನ್ನನ್ನು ಸೇರಬೇಕೆಂದು ಮಹೇಶ್ವರನು ಅಪ್ಪಣೆಯನ್ನು ಮಾಡಿದ್ದರು. ನಾನು ಈಶ್ವರಾಜ್ಞೆಯಂತೆ ಇಂಗಳೇಶ್ವರ

ಬಾಗೇವಾಡಿಯಲ್ಲಿ ಮಾದರಸರ ಧರ್ಮಪತ್ನಿಯಾದ ಮಾವಲಾಂಬಿಕೆಯ ಗರ್ಭದಲ್ಲಿ ಜನಿಸಿ ಕೂಡಲಸಂಗಮದೇವನ ಭಕ್ತನಾಗಿ ಸಂಗಮೇಶ್ವರನಿಂದ ಜಂಗಮ ದೀಕ್ಷೆಯನ್ನು ಪಡೆದು ಹರಗುರು ಚರಗುರು ಶರಣರ ಸೇವೆಯನ್ನು ಮಾಡಿ ಇದುವರೆಗೂ ನಿಮ್ಮ ನಿರೀಕ್ಷಣೆಯಲ್ಲಿದ್ದೆನು. ನಿಮ್ಮ ವಿಚಾರವನ್ನು ನಾನು ಹೊರಗಡೆ ತಿಳಿದಾಗ ಆರು ಸಾವಿರ ಜಂಗಮರಿಗೆ ಈ ಮಾಂಡವ್ಯಪುರದ ಮಹಾದೇವ ಭೂಪಾಲನು ಆರುಸಾವಿರ ಜನ ಜಂಗಮರಿಗೂ ಮಂದಿರವನ್ನು ಮಾಡಿಸಿ ಏಳುಸುತ್ತಿನ ಕೋಟೆಯನ್ನು ಕಟ್ಟಿಸಿ, ಏಳು ದ್ವಾರಗಳಿಗೂ ದ್ವಾರಪಾಲಕರನ್ನು ನಿಲ್ಲಿಸಿ, ನೀವು ಹೋಗದಂತೆ ಆಜ್ಞೆಯನ್ನು ಮಾಡಿ ನಿಮ್ಮ ಸೇವೆಯನ್ನು ಮಾಡುತ್ತಿರುವುದಾಗಿ ತಿಳಿದು ನಿಮ್ಮನ್ನು ಕರೆದುಕೊಂಡು ಹೋಗಬೇಕೆಂದು ಕೋರಿಶೆಟ್ಟಿಯ ವೇಷವನ್ನು ಧರಿಸಿ, ನಾನು ವೈಶ್ಯಜನಂತೆ ವ್ಯಾಪಾರವನ್ನು ಮಾಡುತ್ತ ನಿಮ್ಮ ದರ್ಶನವನ್ನು ಪಡೆದೆ. ನೀವು ನನ್ನೊಡನೆ ಕಲ್ಯಾಣಪಟ್ಟಣಕ್ಕೆ ಬರಬೇಕು ಎಂದು ಜಂಗಮರನ್ನು ಬೇಡಿಕೊಳ್ಳಲು ಬಸವಣ್ಣನವರಿಗೆ ಜಂಗಮರು ಏನು ಹೇಳಿದ್ದಾರೆ.

ಶಿಷ್ಯ

ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ಅಯ್ಯಾ ಭಕ್ತಿ ಭಂಡಾರಿ ಬಸವಣ್ಣ ನಿನ್ನ ಭಕ್ತಿ ಎಷ್ಟು ಅಚಲವಾದುದು ಎನ್ನುವುದನ್ನು ನಾವು ಕಣ್ಣಾರೆ ಕಂಡು ಸಂತೋಷಪಟ್ಟಿರುತ್ತೇವೆ. ನಾವು ನಿನ್ನೊಡನೆ ಬರಬೇಕೆಂದು ಹೊರಟರೆ ಮಹಾದೇವ ಭೂಪಾಲನು ನಮ್ಮಗಳನ್ನೆಲ್ಲ ಯಾವ ದುರ್ಗತಿಯನ್ನು ಹೊಂದಿಸುತ್ತಾನೆಯೋ ಅದನ್ನು ನಾವು ಹೇಳಲಿಕ್ಕೆ ಸಾಧ್ಯವಿಲ್ಲ. ನೀನೇ ಯಾವುದಾದರೂ ಉಪಾಯದಿಂದ ಕರೆದುಕೊಂಡು ಹೊರಟರೆ ನಿನ್ನ ಸಲಹೆಗೆ ನಾವು ಒಪ್ಪಿಕೊಳ್ಳುತ್ತೇವೆ ಎಂದು ಜಂಗಮರು ಹೇಳಿದ್ದಾರೆ.

ಶಿಷ್ಯ

ಹಾಗಾದರೆ ಬಸವಣ್ಣನವರು ಜಂಗಮರನ್ನು ಹೇಗೆ ಕರೆದುಕೊಂಡು ಹೋದರು ಗುರುಗಳೆ?

ನಿರೂಪಕ

ಬಸವಣ್ಣನವರಾದರೋ 'ಪರಮೇಶ್ವರ, ಇದು ಎಂಥಾ ಪರೀಕ್ಷೆ? ನಾನು ಜಂಗಮರನ್ನು ಹೇಗೆ ಕರೆದುಕೊಂಡು ಹೋಗಲಿ' ಎಂದು ಯೋಚಿಸುತ್ತಿರುವಾಗ ಬಸವಣ್ಣನವರ ಇಷ್ಟಲಿಂಗವಾದರೋ ಬಸವಣ್ಣನವರ ಅರುಹಿಗೆ 'ಅಯ್ಯಾ ಬಸವಣ್ಣ ಈ ಜಂಗಮರನ್ನೆಲ್ಲ ಕರೆದುಕೊಳ್ಳಲು ಅವರನ್ನೆಲ್ಲ ಕಣಿಗಲೆ ಹೂಗಳನ್ನಾಗಿ ಮಾಡಿ, ಶಿವಪಂಚಾಕ್ಷರಿ ಮಹಾ ಮಂತ್ರವನ್ನು ಜಪಿಸುತ್ತ ಹೂಗಳನ್ನು ಹೆಗಲ ಹಸುಬೆಯಲ್ಲಿ ತುಂಬಿಕೊಂಡು ನೀನು ಪ್ರಯಾಣ ಮಾಡು ಎಂದು ನುಡಿಯುತ್ತಿರಲು ಬಸವಣ್ಣನವರು ಒಬ್ಬೊಬ್ಬರನ್ನಾಗಿ ತಮ್ಮ ಅಮೃತಹಸ್ತದಿಂದ ಮುಟ್ಟಲು ಆರು ಸಾವಿರ ಜಂಗಮರು ಸಹ ಕಣಿಗಲ ಹೂವಾಗಿದ್ದಾರೆ. ಆ ಹೂಗಳನ್ನೆಲ್ಲ ಹೆಗಲಸುಬೆಗೆ ತುಂಬಿಕೊಂಡು ಶಿವಪಂಚಾಕ್ಷರಿ ಮಹಾಮಂತ್ರವನ್ನು ಹೇಳುತ್ತಾ ಪ್ರಯಾಣೋನ್ಮುಖರಾಗಿದ್ದಾರೆ.

ಶಿಷ್ಯಾ

ಅವರು ಯಾವ ಮಾರ್ಗದಿಂದ ಹೊರಟಿದ್ದಾರೆ ಸ್ವಾಮಿ ?

ನಿರೂಪಕ

ಎತ್ತೆತ್ತ ನೋಡಿದರತ್ತತ್ತ ನೀನೇ ದೇವಾ
ಸಕಲ ವಿಸ್ತಾರದ ರೂಹು ನೀನೇ ದೇವಾ
ವಿಶ್ವತಃ ಚಕ್ಷು ನೀನೇ ದೇವಾ
ವಿಶ್ವತೋ ಮುಖ ನೀನೇ ದೇವಾ
ವಿಶ್ವತೋ ಬಾಹು ನೀನೇ ದೇವಾ
ವಿಶ್ವತಃ ಪಾದ ನೀನೇ ದೇವಾ ಕೂಡಲಸಂಗಮ ದೇವಾ | ೧೬೭

ಹೀಗೆ ಪರಶಿವನ ನಾಮಾಮೃತವನ್ನು ಹಾಡುತ್ತ ಹಸುಬೆಯಲ್ಲಿ 'ಜಂಗಮರೆಲ್ಲರನ್ನು ಕಣಿಗಲ ಹೂಗಳನ್ನಾಗಿ ಮಾಡಿ ತುಂಬಿಕೊಂಡು ಬರುವಾಗ ದ್ವಾರಪಾಲಕರು ಹಸುಬೆಯನ್ನು ತೂಕ ಮಾಡಿದ್ದಾರೆ. ಮೊದಲು ಇದ್ದ ತೂಕಕ್ಕಿಂತ ಅಡಿಸೇರು

ತೂಕವು ಕಡಿಮೆ ಇರಲು 'ಇದೇನು ತೂಕವು ಇಷ್ಟು ಕಡಿಮೆ ಇದೆ' 'ಇದೇನು ತೂಕವು ಇಷ್ಟು ಕಡಿಮೆ ಇದೆ' ಎಂದು ಕೇಳಿದಾಗ 'ಮಾರುವ ಪದಾರ್ಥಗಳಲ್ಲವೆ ? ಖರ್ಚಾಗಿ ಇನ್ನು ಇಷ್ಟು ಉಳಿದಿದೆ' ಎಂದು ಬಸವಣ್ಣನವರು ಹೇಳಲು ಈ ದ್ವಾರಪಾಲಕರಂತೆ ಉಳಿದ ದ್ವಾರಗಳಲ್ಲಿದ್ದ ಕಾವಲುಗಾರರು ಪರೀಕ್ಷೆಯನ್ನು ಮಾಡಿದ್ದಾರೆ. ಅಡಿಸೇರು ಕಡಿಮೆಯಾಗಿರುವುದನ್ನು ಕಂಡು ಎಲ್ಲರೂ ಬಿಟ್ಟು ಕಳಿಸಿದ್ದಾರೆ.

ಶಿಷ್ಯ

ಅಬ್ಬ, ಅಂತೂ ಬಸವಣ್ಣನವರು ಹಿಡಿದ ಕಾರ್ಯ ಸಾಧಿಸಿಯೇಬಿಟ್ಟರು. ಆಮೇಲೇನಾಯ್ತು ಗುರುವೆ ?

ನಿರೂಪಕ

ತಿಲಮಧ್ಯೇ ಯಥಾ ತೈಲಂ ಕ್ಷೀರ ಮಧ್ಯೇ ಯಥಾ ಘೃತಂ
ಪುಷ್ಪಮಧ್ಯೇ ಯಥಾ ಗಂಧಂ ಭಾವಮಧ್ಯೇ ಯಥಾ ಶಿವಂ | ೧೬೮

ಎಂದ ಹಾಗೆ ಬಸವಣ್ಣನವರು ತನುಮನಧನಗಳೆಲ್ಲವನ್ನು ಪರಮಾತ್ಮನಲ್ಲಿ ಸಮರ್ಪಿಸಿ ಕಲ್ಯಾಣಪಟ್ಟಣಕ್ಕೆ ಬಂದು ಸೇರಿದ್ದಾರೆ.

ನೀನೊಲಿದರೆ ಕೊರಡು ಕೊನರುವುದಯ್ಯಾ
ನೀನೊಲಿದರೆ ಬರಡು ಹಯನಹುದಯ್ಯಾ
ನೀನೊಲಿದರೆ ವಿಷ ಅಮೃತವಹುದಯ್ಯಾ
ನೀನೊಲಿದರೆ ಸಕಲ ಪಡಿಪದಾರ್ಥ ಇದಿರಲ್ಲಿಪ್ಪುವು
ಕೂಡಲಸಂಗಮದೇವ | ೧೬೯

ಪರಮೇಶ್ವರ, ನಾನು ಈ ಜಂಗಮರನ್ನು ಕಣಿಗಲ ಹೂಗಳನ್ನಾಗಿ ಮಾಡಿ ಹೊತ್ತುಕೊಂಡು ಬರುವಾಗ ಶರಣರ ಉಸಿರೇನಾದರೂ ಆ ದ್ವಾರಪಾಲಕರಿಗೆ ಗೊತ್ತಾಗಿದ್ದರೆ ನನ್ನನ್ನೂ ಈ ಜಂಗಮರನ್ನೂ ಯಮಲೋಕಕ್ಕೆ ಕಳುಹಿಸುತ್ತಿದ್ದರೋ ಏನೋ ಎಂದು ಪರಮೇಶ್ವರನು ಎಲ್ಲೆಲ್ಲೂ ಇದ್ದುಕೊಂಡು ಸರ್ವಾಂತರ್ಯಾಮಿಯಾಗಿ ನಮ್ಮನ್ನು ರಕ್ಷಿಸಿದ್ದಾನೆಂದು ಪರಮೇಶ್ವರನ ದಿವ್ಯರೂಪವನ್ನು ಹೇಗೆ ಕೊಂಡಾಡುತ್ತ ಇದ್ದಾರಪ್ಪಾ ಅಂದರೆ

ಶಿಷ್ಯ

ಹೇಗೆ ಕೊಂಡಾಡ್ತಾ ಇದ್ದಾರೆ ಸ್ವಾಮಿ ?

ನಿರೂಪಕ

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮಕುಟ
ಅಗಮ್ಯ ಅಗೋಚರ ಅಪ್ರತಿಮ ಲಿಂಗವೆ
ಕೂಡಲ ಸಂಗಮ ದೇವಾ
ನೀವೆನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯಾ | ೧೭೦

ಬಸವಣ್ಣನವರಾದರೊ ಘನಮಹಿಮನಾದ ಸಂಗಮೇಶ್ವರ ಸ್ವಾಮಿಯನ್ನು ಸ್ತೋತ್ರ ಮಾಡುತ್ತ ಜಂಗಮರು ಕಣಿಗಲು ಹೂವಾಗಿ ತುಂಬಿದ್ದ ಹಸುಬೆ ಚೀಲವನ್ನು ಎರಡು ಹೋಳಾಗಿ ಸೀಳಿ ನೀಲಾಂಬಿಕೆಯನ್ನು ಕರೆದು 'ಈ ಹೂವುಗಳನ್ನು ಒಂದೊಂದಾಗಿ ತೆಗೆದಿಡು' ಎಂದು ಹೇಳಲು, ನೀಲಾಂಬಿಕೆಯಾದರೋ ಆ ಹೂವುಗಳನ್ನು ತೆಗೆದಿಡುತ್ತಾ 'ನಾನು ಪತಿವ್ರತಾ ಶಿರೋಮಣಿಯಾಗಿದ್ದರೆ ಈ ಹೂವುಗಳೆಲ್ಲ ಮೊದಲಿನಂತೆಯೇ ಶರಣರಾಗಲಿ' ಎಂದು ಬಸವಣ್ಣನವರ ಪಾದಪೂಜೆಯನ್ನು ಮಾಡಿ ಪಾದೋದಕವನ್ನು ಪ್ರೋಕ್ಷಿಸಿದ ತಕ್ಷಣವೇ ಶರಣರೆಲ್ಲರೂ ಪುನಶ್ಚೇತನಗೊಂಡು ಮೊದಲಿನಂತೆಯೇ ಸುರಕ್ಷಿತವಾಗಿದ್ದಾರೆ. ಗಂಗಾಂಬಿಕೆಯಾದರೋ ಬಸವಣ್ಣನವರಲ್ಲಿ ಸಂತೋಷದಿಂದ ಇರಲು 'ಸ್ವಾಮಿ, ನೀವು ಎಂಥಾ ಭಕ್ತ ಪುರುಷರು' ಎಂದಾಗ ಬಸವಣ್ಣನವರು ಹೇಳುತ್ತಿದ್ದಾರೆ

ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ
ಅಂಬುಜಗೆ ಭಾನುವಿನ ಉದಯದ ಚಿಂತೆ
ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ ೧೭೧
ನನಗೆ ನಮ್ಮ ಕೂಡಲಸಂಗಮದೇವನ ನೆನೆಯುವುದೇ ಚಿಂತೆ |

ಹಾಗೆ ಪ್ರತಿಯೊಬ್ಬರೂ ಬೆಳಗಿನ ಜಾವದಲ್ಲಿ ಎದ್ದು ದೇವರ ಧ್ಯಾನವನ್ನು ಮಾಡಬೇಕೆಂದು ಬಸವಣ್ಣನವರು ಹೇಳಿದ್ದಾರೆ.

ಕೋಳಿ ಕೂಗದ ಮುನ್ನ ಯಾರೂ ಏಳದ ಮುನ್ನ
ಭಾಳಾಕ್ಷ ಶಿವನ ಭಜಿಸಿದರೆ ಶಿವನು ತ
ನ್ನಾಳಾಗಿರುತಿಹನು ಸರ್ವಜ್ಞ | ೧೭೨

ಶಿಷ್ಯ

ಅದು ಹೇಗೆ ಸ್ವಾಮಿ ಶಿವ ಆಳಾಗೋದು ?

ನಿರೂಪಕ

ಸಣ್ಣನೆಯ ಮಳಲೊಳಗೆ ನುಣ್ಣನೆಯ ಶಿಲೆಯೊಳಗೆ
ಬಣ್ಣಿಸಿ ಬರೆವ ಪಟದೊಳಗೆ ಇರುವಾತ
ನಿನ್ನಲ್ಲೆ ಇಹನು ಸರ್ವಜ್ಞ | ೧೭೩

ಅಂದಹಾಗೆ, ದೇವತಾರ್ಚನೆಗೆ ಯಾವ ಪುಷ್ಪವೂ ಬೇಕಿಲ್ಲ; ಧೂಪ ದೀಪ ನೈವೇದ್ಯಾದಿಗಳೊಂದೂ ಬೇಕಿಲ್ಲ ಎಂಬುದಕ್ಕೆ ಸರ್ವಜ್ಞ ಮೂರ್ತಿ ಏನು ಹೇಳಿದ್ದಾನೆ ?

ಶಿಷ್ಯ

ಏನು ಹೇಳಿದ್ದಾನೆ ಗುರುವೆ ?

ನಿರೂಪಕ

ಕಾಯ ಕಮಲವೆ ಸೆಜ್ಜೆ ಜೀವರತುನವೆ ಲಿಂಗ
ಭಾವ ಪುಷ್ಪದಲಿ ಪೂಜಿಪ ಮಹಾತ್ಮನನು
ದೇವನೆಂದೆಂಬೆ ಸರ್ವಜ್ಞ ೧೭೪

ಭಾವ ಪುಷ್ಪವೆಂದರೆ ಸುಳ್ಳನ್ನಾಡಬಾರದು. ಕಳ್ಳನೆನಿಸಬಾರದು. ಅನ್ಯರ ದ್ರವ್ಯಕ್ಕೆ ಆಸೆ ಪಡಬಾರದು. ಸರ್ವಜೀವಗಳನ್ನು ಬ್ರಹ್ಮ ಸ್ವರೂಪವೆಂದು ಭಾವಿಸಿ ದಯೆತೋರಿಸುವುದೇ ಪುರುಷ ಲಕ್ಷಣ ಎಂಬುದಾಗಿರುವುದರಿಂದ ಬಸವಣ್ಣನವರ ನಡವಳಿಕೆಗನುಸಾರವಾಗಿ ಧರ್ಮಪತ್ನಿಯರು ನಡೆದುಕೊಳ್ಳುತ್ತಿದ್ದಾರೆ.

ಶಿಷ್ಯ

ಹಾಗಿದ್ದ ಮೇಲೆ ಅವರು ಅಂತಹ ಮಹಾತಾಯಿಯವರೆ ?

ನಿರೂಪಕ

ಬಸವ್ಯೊ ಮಗು, ಸ್ತ್ರೀಯರು ಒಲಿಯಬೇಕಾದರೂ ಅದಕ್ಕೆ ಒಂದು ಕಾರಣವಿದೆ.

ಅಂಗನೆಯರೊಲಿಯುವುದು ಬಂಗಾರ ದೊರೆಯುವುದು
ಸಂಗ್ರಾಮದೊಳಗೆ ಗೆಲಿಯುವುದು - ಇವು ಮೂರು
ಸಂಗಯ್ಯನೊಲುಮೆ ಸರ್ವಜ್ಞ ೧೭೫

ಅದರಂತೆ ಸ್ತ್ರೀಯರು ಒಲಿಯಬೇಕಾದರೂ ಸದ್ಗುಣವತಿಯರಾಗಿರಬೇಕು. ಮನುಷ್ಯನ ಜನ್ಮದಲ್ಲಿ ಉತ್ತಮ ಮಧ್ಯಮ ಅಧಮ ಎಂಬ ಬಗೆಗಳಿವೆಯಷ್ಟೆ. ಇವುಗಳನ್ನು ಒಂದೊಂದಾಗಿ ಹೇಳುತ್ತೇನೆ.

ಶಿಷ್ಯ

ಅದೇನು ಹೇಳಿ ಸ್ವಾಮಿ ?

ನಿರೂಪಕ

ಉತ್ತಮೇಚ ಕ್ಷಣಂ ಕೋಪಂ
ಮಧ್ಯಮೇ ಘಟಿಕಾದ್ವಯಂ
ಅಧಮೇ ತದಹೋರಾತ್ರೀ ೧೭೬

ಅಂದಮೇಲೆ ಉತ್ತಮ ಪುರುಷನಿಗೆ ಬರುವ ಕೋಪವು ಒಂದೇ ಒಂದು ಕ್ಷಣ. ಮಧ್ಯಮ ಪುರುಷನಿಗೆ ಬರುವ ಕೋಪವು ಎರಡೂವರೆ ಗಂಟೆವರೆಗೆ, ಅಧಮರಿಗೆ ಬರುವ ಕೋಪವಾದರೋ ಇಪ್ಪತ್ತನಾಲ್ಕು ಗಂಟೆವರೆಗೂ ಇರುತ್ತದೆ. ಪಾಪಿಷ್ಠರಿಗಾದರೋ ಬರುವ ಕೋಪ ಮರಣಾಂತರಂ ಅಂದರೆ ಅವನು ಸತ್ತು ನಾಲ್ಕಾಳು ಹೊತ್ತುಕೊಂಡು ಹೋಗುವಾಗಲೂ ಅವನ ಕೊಪವೂ ಅವನ ಜೊತೆಯಲ್ಲೇ ಹೋಗುತ್ತದೆಯಂತೆ. ಮತ್ತೊಂದು ವಿಧವಾಗಿ

ಉತ್ತಮಂ ಸ್ವಾರ್ಜಿತಂ ವಿತ್ತಂ ಮಧ್ಯಮಂ ಕೃಷಿವಾಣಜ್ಯಾತ್
ಅಧಮಂ ಭ್ರಾತೃವಿತ್ತಂ ಚ ಸ್ತ್ರೀ ವಿತ್ತಮಧಮಾಧಮಂ
ಉತ್ತಮ ಕುಶಲವಿದ್ಯಾಯ ಮಧ್ಯಮಂ ಪಿತ್ರಾರ್ಜಿತಂ
ಅಧಮಂ ಭ್ರಾತೃ ವಿತ್ತಂ ಚ ಮೃತಶ್ಚೌ ಮರಣ ದಂಡನಂ ೧೭೭

ಅಂದ ಹಾಗೆ, ಎಲ್ಲರ ಹಾಗೆ ಬಸವಣ್ಣನವರು ತಮ್ಮ ಧರ್ಮಪತ್ನಿಯರಿಗೆ ಉಪದೇಶ ವನ್ನು ಮಾಡಿ ಅವಿಶ್ರಾಂತವಾಗಿ ಬಿಜ್ಜಳ ಮಹಾರಾಜನ ಆಸ್ಥಾನಕ್ಕೆ ಹೋಗಿ ಸಭಾಸೀನರಾಗಲು ಅಲ್ಲಿದ್ದ ಮಂತ್ರಿಮಂಡಲವೆಲ್ಲವೂ ಎದ್ದು ಸಿಂಹಾಸನಾರೂಢರಾಗಿರುವ ದೊರೆಗೆ ಕೈಯನ್ನು ಮುಗಿಯುವಾಗ ಬಸವಣ್ಣನವರು ನಂದೀ ಮುದ್ರೆಯ ಕಡೆಗೆ ದೃಷ್ಟಿಯಿಟ್ಟು, ಕೈ ಮುಗಿದಿದ್ದಾರೆ. ಮಂಚಣ್ಣ ಪಂಡಿತರು ಇದು ಒಳ್ಳೆಯ ಸಮಯವೆಂದು ಬಿಜ್ಜಳ ಮಹಾರಾಜನಿಗೆ 'ಪ್ರಭುವೆ, ನಾವೆಲ್ಲರೂ ಕೈಮುಗಿವ ರೀತಿಯೇ ಬೇರೆ; ಬಸವಣ್ಣನವರು ಮುಗಿಯುವ ರೀತಿಯೇ ಬೇರೆ' ಎಂದು ಚಾಡಿ ಹೇಳಲು, ಬಿಜ್ಜಳ ಮಹಾರಾಜನಾದರೋ 'ರಾಜನೆಂದರೆ ಪ್ರತ್ಯಕ್ಷ ದೈವ' ಎಂಬ ಮಾತಿರುವುದು. ಏನು ಬಸವಣ್ಣ, ದೊರೆ ಎಂದರೆ ಏನು ತಿಳಿದಿದ್ದೀಯೆ? ದೊರೆಯು ವಾಸ ಮಾಡುವ ಮನೆಯನ್ನು "ಹ(ಅ)ರ ಮನೆ" ಎಂದಲ್ಲವೆ ಕರೆಯುವುದು. ಅಲ್ಲದೆ 'ನರರ ಆಟಕ್ಕೆ ತಕ್ಕ ದೊರೆಯನ್ನು ಭೂಮಿಗೆ ತಂದವರ್‍ಯಾರು ? ಹರನಾಟಕ್ಕೆ ಎಂದು ಅರಿಯರು ಜನರು' ಎಂಬ ನಾಣ್ನುಡಿಯಂತೆ, ಪ್ರಜೆಗಳು ಎಷ್ಟೆಷ್ಟು ಚಮತ್ಕಾರವನ್ನು ಕಲಿಯುತ್ತಾರೆಯೋ ಅದನ್ನು ಹೋಗಲಾಡಿಸತಕ್ಕಂತ ಚಮತ್ಕೃತಿಯ ದೊರೆಯಾಗಿ ದೇವರೇ ಅವತರಿಸಿ ಬರುತ್ತಾನೆ. ಅದರಂತೆ, ನೀನು ಕೈಮುಗಿಯುವಾಗ ನಂದಿಯ ಮುದ್ರೆಯ ಕಡೆಗೆ ಗಮನವಿಟ್ಟಿದ್ದು ಯಾಕೆ? ಅಂದ ಮೇಲೆ ಬಸವಣ್ಣನವರು 'ನೀವು ಕುಳಿತಿರುವ ಪರಿಪೀಠವನ್ನು ಬಿಟ್ಟು, ಕೆಳಕ್ಕಿಳಿದರೆ ಆವಾಗ ನಿಮಗೆ ಗೊತ್ತಾಗುತ್ತದೆ' ಎಂದು ಹೇಳಲು ಬಿಜ್ಜಳ ಮಹಾರಾಜನು ಪರಿಪೀಠವನ್ನು ಬಿಟ್ಟು, ಬೇರೆ ಪೀಠಕ್ಕೆ ಬಂದು ಕುಳಿತಾಗ ಬಸವಣ್ಣನವರು ಸಿಂಹಾಸನಕ್ಕೆ ಕೈಮುಗಿದ ತಕ್ಷಣವೇನೇ ಸಿಂಹಾಸನ ವಾದರೋ ಭಸ್ಮೀಕೃತವಾಯಿತು. ಇದು ಏತಕ್ಕೆಂದು ಬಿಜ್ಜಳ ಮಹಾರಾಜನು ಕೇಳಲು ಬಸವಣ್ಣನವರು 'ನಾನು ನಂದೀ ಮುದ್ರೆಗೆ ಕೈಮುಗಿಯುತ್ತಿದ್ದುದರಿಂದ ಇದುವರೆಗೂ ನೀನು ಹಾಗೂ ನಿನ್ನ ಪರಿಪೀಠ ಉಳಿದಿತ್ತು. ಹಾಗೇನಾದರೂ ನಂದೀಮುದ್ರೆ ಕಡೆಗೆ ದೃಷ್ಟಿ ಇಡದೆ ಹೋಗಿದ್ದರೆ ನೀನೂ ಭಸ್ಮೀಕೃತವಾಗಿ ಹೋಗುತ್ತಿದ್ದೆ' ಎಂಬ ದೃಷ್ಟಾಂತವನ್ನು ಹೇಳಲು ಬಿಜ್ಜಳ ಮಹಾರಾಜನು ವಿಧೇಯತೆಯಿಂದ ಬೇಡಿದಾಗ ಶರಣರನ್ನು ನಿಷ್ಕಾರಣವಾಗಿ ಎಂದೂ ನಿಂದಿಸಬೇಡವೆಂದು ಬುದ್ಧಿವಾದವನ್ನು ಹೇಳಿ, ಸಿಂಹಾಸನದ ಕಡೆಗೆ ತಿರುಗಿ 'ಸಿಂಹಾಸನ ಮೊದಲಿದ್ದಂತೆಯೇ ಆಗಲಿ' ಎಂಬುದಾಗಿ ಆಶೀರ್ವಚನ ಮಾಡಿದ ತಕ್ಷಣವೇನೇ ಸಿಂಹಾಸನವು ಮೊದಲಿದ್ದಂತೆ ರಾರಾಜಿಸುತ್ತ ಎಲ್ಲರಿಗೂ ಗೋಚರವಾಗಿದೆ.

ಹರನ ಮಹಿಮೆಯನ್ನು ಅರಿಯದೆ ಶರಣರ
ಜರಿಯಬಹುದೆ ನೀನು ಕ್ಷುದ್ರತನದಿಂದ
ಕ್ಷುದ್ರತನದಿಂದ | ೧೭೮

'ಅಯ್ಯಾ ಮಹಾರಾಜ ಶರಣರೆಂದರೆ ಪರಶಿವನ ಸರಿಸಮಾನರೆಂದು ತಿಳಿದು ಭಕ್ತಿ ವಿಶ್ವಾಸಗಳಿಂದ ನಡೆಯಬೇಕು' ಎಂದು ಹೇಳಿ ಬಸವಣ್ಣನವರು ಮನೆಗೆ ಹೋಗಿ ಸ್ನಾನದಿಂದ ಶುಚಿರ್ಭೂತರಾಗಿ ತಮ್ಮ ಅನುಷ್ಠಾನಗಳನ್ನು ಮುಗಿಸಿದ್ದಾರೆ. ಊಟವಾದ ಮೇಲೆ ತಾಂಬೂಲವನ್ನು ಅಡಕೆ ಕತ್ರಿ ಅಪ್ಪಣ್ಣನವರಿಂದ ಎಲೆ ಅಡಕೆ ಸುಣ್ಣ ಏಲಕ್ಕಿ ಲವಂಗ ಚಾಯಿಕಾಯಿ ಜಾಯಿಪತ್ರೆ ಮುಂತಾದ ತಾಂಬೂಲಕ್ಕೆ ಸಂಬಂಧಪಟ್ಟ ವಸ್ತುಗಳೆಲ್ಲವನ್ನೂ ಒಂದು ತಟ್ಟೆಯಲ್ಲಿಟ್ಟುಕೊಂಡು ಅದರ ಮೇಲೆ ನಿರ್ಮಲವಾದ ಬಟ್ಟೆಯನ್ನು ಹಾಕಿಕೊಂಡು ಉತ್ತಣ್ಣ ಪಂಡಿತರು ತೆಗೆದುಕೊಂಡು ಹೋಗುವಾಗ ಮಂಚಣ್ಣ ಪಂಡಿತರು ಎದುರಿಗೆ ಸಿಕ್ಕಿ 'ಇದೇನು ಪಂಡಿತರೆ ಹೀಗೆ ತೆಗೆದುಕೊಂಡು ಹೋಗುತ್ತೀರಿ' ಎಂದು ಕೇಳಲು ಉತ್ತಣ್ಣ ಪಂಡಿತರು 'ಮಂಚಣ್ಣನವರೇ ಬಸವಣ್ಣನವರ ಊಟವಾದ ಮೇಲೆ ತಾಂಬೂಲಕ್ಕೆ ಸಮಾನವಾದ ವಸ್ತುಗಳೆಲ್ಲವನ್ನೂ ತೆಗೆದುಕೊಂಡು ಹೋಗಿ, ಅಡಕೆ ಕತ್ತರಿ ಅಪ್ಪಣ್ಣನವರಿಂದ ಇದನ್ನು ಅಗಿಸಿಕೊಂಡು ಬರಬೇಕು' ಎಂದು ಉತ್ತಣ್ಣ ಪಂಡಿತರು ಮುಂದೆ ಹೋಗಿದ್ದಾರೆ. ಮಂಚಣ್ಣ ಪಂಡಿತರು 'ಇದು ಎಂಥ ಜಟಿಲವಾದ ಪ್ರಶ್ನೆ; ಬಸವಣ್ಣನವರು ಶರಣರಾಗಿ ಕೇವಲ ಉಲ್ಬಣವಾದ ಅಡಕೆ ಕತ್ತರಿ ಅಪ್ಪಣ್ಣನಿಂದ ಅಗಿದ ಎಂಜಲು ತಾಂಬೂಲವನ್ನು ಬಸವಣ್ಣನವರು ಪುನಃ ಬಾಯಿಗೆ ಹಾಕಿಕೊಳ್ಳುವುದೆ ? ಇದನ್ನು ಪರೀಕ್ಷಿಸಬೇಕು' ಎಂದು ಮಂಚಣ್ಣ ಪಂಡಿತರು ರಾಜರ ಒಡ್ಡೋಲಗಕ್ಕೆ ಹೋಗಿದ್ದಾರೆ.

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆಯ ವಾಸನೆಯು
ಬಲ್ಲಂತ ಪ್ರಾಜ್ಞರಿಗೆ ಅತಿ ಮಧುರದೇವ
ಅತಿಮಧುರದೇವ | ೧೭೯

ಅಂದ ಹಾಗೆ ಇತ್ತ ಕಡೆ ಏನಾಗಿದೆ ಅಂದರೆ, ಬಸವಣ್ಣನವರ ಊಟವಾಗುವುದರೊಳಗಾಗಿ ಉತ್ತಣ್ಣ ಪಂಡಿತರು ತನ್ನ ಕಾರ್ಯನಿರ್ವಹಣೆಯನ್ನು ಮಾಡಿಕೊಂಡು, ತಾಂಬೂಲವನ್ನು ತೆಗೆದುಕೊಂಡು ಹೋಗಿದ್ದಾರೆ. ಅಂದ ಹಾಗೆ ತಾಂಬೂಲಕ್ಕೆ ಎಂಥಾ ಪೂಜ್ಯತೆಯಿದೆ.

ಶಿಷ್ಯ
ಅದೇನು ಪೂಜ್ಯತೆ ಹೇಳಿ ಸ್ವಾಮಿ

ನಿರೂಪಕ
ಅಯ್ಯಾ ಮಗು, ತಾಂಬೂಲ ಸೇವನೆಯಲ್ಲೂ ಒಂದು ಪೂಜ್ಯತೆ ಇದೆ. ಒಂದು ಕ್ರಮಬದ್ಧತೆ ಇದೆ.

ನಾಗವಲ್ಲಿಯ ಹಿಂದು ಮುಂದನು
ನೀಗಿ ಕಳೆಯದೆ ಚೂರ್ಣ ಪರ್ಣ
ತ್ಯಾಗವಿಲ್ಲದೆ ದಂತ ಧಾವನ ಪರ್ಣವನು ಸವಿದು
ಭೋಗಿಸುವೊಡಮರೇಂದ್ರನಾಗಲಿ
ನಾಗಭೂಷಣನಾದೊಡವನನು
ನೀಗಿ ಕಳೆವಳು ಭಾಗ್ಯವಧು ಭೂಪಾಲ ಕೇಳೆಂದ | ೧೮೦

ಅದೂ ಅಲ್ಲದೆ ಕೇಳಪ್ಪಾ ಮಗು

ಭೋಜನಮೆರಡು
ವರತಾಂಬೂಲ ಹದಿನಾರು
ಮೈಥುನ ಮಾಸಕೆ ಮೂರು | ೧೮೧

ಹೀಗೆ ಮಿತಿ ಇರಬೇಕೇ ವಿನಹ ಅತಿ ಇರಬಾರದು.

ಅಡಕೆ ಹಾಕದ ಬಾಯಿ ಕಡಕು ಹಾಕದ ಕಿವಿಯು
ಅಡಕವಿಲ್ಲದವರ ಮನೆವಾರ್ತೆ ಎಣ್ಣೆಯ
ಕುಡಿಕೆ ಒಡೆದಂತೆ ಸರ್ವಜ್ಞ |

ಅಡಕೆಲೆಯನ್ನು ಹಾಕುವುದರಿಂದ ಬಾಯಿಯ ದುರ್ವಾಸನೆ ಹೋಗುತ್ತದೆ.

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ - ಮಳಲೊಳಗೆ
ಎಣ್ಣೆ ಹೊಯ್ದಂತೆ ಸರ್ವಜ್ಞ. ೧೮೩

ವೀಳಯದೆಲೆ ರಸದಿಂದ ರಕ್ತ ವೃದ್ಧಿಯು, ಸುಣ್ಣದಿಂದ ಕ್ರಿಮಿನಾಶವು ಉಂಟಾಗುತ್ತದೆ ಎಂದು ಹೇಳಿದ್ದಾರೆ. ಅದರಂತೆ ಬಸವಣ್ಣನವರು ಅಂತಹ ಶರಣರಿಂದ ಅಗಿಸಿಕೊಂಡು ತಂದ ತಾಂಬೂಲವನ್ನು ಮನಸ್ಸಿನಲ್ಲಿಯೇ ಧ್ಯಾನವನ್ನು ಮಾಡಿ ಒತ್ತರಿಸಿಕೊಂಡು ಆಸ್ಥಾನಕ್ಕೆ ಹೋಗಿದ್ದಾರೆ.

ಶಿಷ್ಯ

ಅಲ್ಲೇನಾಯ್ತು ಗುರುಗಳೆ?

ನಿರೂಪಕ

ಆಸ್ಥಾನಕ್ಕೆ ಹೋದ ತಕ್ಷಣದಲ್ಲೇ ಮಂಚಣ್ಣ ಪಂಡಿತರು ನೋಡುತ್ತಿದ್ದಾರೆ. ಬಸವಣ್ಣನವರು ಬಂದರೆಂದು ಶರಣಸಮೂಹವೆಲ್ಲ ಗೌರವದಿಂದ ಶರಣು ಮಾಡಲು ಎದ್ದು ನಿಂತಿದ್ದಾರೆ. ಮಂಚಣ್ಣ ಪಂಡಿತಾದರೋ 'ನಾನು ಇಷ್ಟು ದಿವಸಗಳವರೆವಿಗೂ ಬಸವಣ್ಣನವರನ್ನು ಪವಾಡ ಪುರುಷರೆಂದೂ ಮಹಿಮಾ ಪುರುಷರೆಂದೂ ತಿಳಿದಿದ್ದೆನು. ಇವರಲ್ಲಿರುವ ಅಶ್ಲೀಲ ಅಸಭ್ಯತೆಯಾದರೋ ಬಹಳ ಅಸಹನೀಯವಾದುದು' ಎಂದು ಆ ರಾಜಸಭೆಯಲ್ಲಿ ಉದ್ಗಾರವೆತ್ತಿದ್ದಾರೆ. ದೊರೆಯಾದರೋ

ಬಿಜ್ಜಳ : ಏನು ಮಂಚಣ್ಣ ಪಂಡಿತರೆ ?

ಮಂಚಣ್ಣ : ಹೊಸ ಸಮಾಚಾರವೊಂದಿದೆ ಪ್ರಭು.

ಬಿಜ್ಜಳ : ಅದೇನೆಂದು ಹೇಳಬಾರದೆ ?

ಮಂಚಣ್ಣ : ಪ್ರಭು, ಇವರೆಲ್ಲ ಹೀಗೆ ಗೌರವಿಸುತ್ತಿರುವ ಈ ಬಸವಣ್ಣನವರಾದರೋ ಅಡಕೆ ಕತ್ತರಿ ಅಪ್ಪಣ್ಣನವರು ಅಗಿದು ನಯ ಮಾಡಿದ ತಾಂಬೂಲವನ್ನು ಎಂಜಲೆನ್ನದೆ ತಾವು ಸೇವಿಸುತ್ತಾರೆಂದರೆ ಇದು ಯಾವ ಸಭ್ಯತೆಯ ಸುಸಂಸ್ಕೃತಿಯ ಸಲ್ಲಕ್ಷಣವೋ ನಾನು ಕಾಣೆ.

ಬಿಜ್ಜಳ : ಇದಕ್ಕೆ ಆಧಾರ ಸಾಕ್ಷಿಗಳೇನಾದರೂ ಇವೆಯೆ ?

ಮಂಚಣ್ಣ : ಪ್ರಭು, ಉತ್ತಣ್ಣ ಪಂಡಿತರೇ ಸಾಕ್ಷಾತ್ತಾಗಿ ಈ ವಿಷಯವನ್ನು ಹೇಳಿದ್ದಾರೆ. ಬೇಕಾದರೆ ಸತ್ಯಾಸತ್ಯಗಳನ್ನು ಬಸವಣ್ಣನವರನ್ನೇ ಕೇಳಿ ತಿಳಿಯಬಹುದಲ್ಲವೆ ಸ್ವಾಮಿ ?

ಬಿಜ್ಜಳ : ಬಸವಣ್ಣನವರೆ, ಮಂಚಣ್ಣ ಪಂಡಿತರು ಹೇಳುತ್ತಿರುವ ಮಾತು ನಿಜವೆ ?

ಬಸವೇಶ್ವರ : ಅಕ್ಷರಶಃ ಸತ್ಯ ಮಹಾಪ್ರಭು.

ಬಿಜ್ಜಳ : ತಾಂಬೂಲವು ಅಗಿದಾದ ಮೇಲೆ ತಂಬುಲವಲ್ಲವೆ ? ಅಂಥ ಎಂಜಲೆನಿಸುವ ತಂಬುಲವನ್ನು ನೀವು ಉಪಯೋಗಿಸಬಹುದೆ ?

ಬಸವೇಶ್ವರ : ಮಹಾರಾಜ,

ಶರಣರ ಬಾಯ್ದಂಬುಲವ ಮೆಲ್ಲುವೆ.
ಅವರ ಬೀಳುಡೆಯ ನಾನು ಹೊದಿವೆ.
ನನ್ನಾಣೆ, ಕೂಡಲಸಂಗಮದೇವನಾಣೆ.
ಶರಣರ ಬಾಯ್ದಂಬುಲವು ಶಿವನ
ಪ್ರಸಾದವಲ್ಲವೆ ಸ್ವಾಮಿ ? ೧೮೪

ಬಿಜ್ಜಳ : ಏನೆಂದಿರಿ ? ಶರಣನ ಬಾಯ್ದಂಬುಲವು ಶಿವನ ಪ್ರಸಾದವೆ ? ಹಾಗೆಂದ ಮೇಲೆ ಆ ಶರಣನನ್ನು ಪರೀಕ್ಷಿಸಲೇ ಬೇಕು.

ಬಸವೇಶ್ವರ : ಶರಣರ ಸತ್ಯ, ತತ್ವ, ಮಹತ್ವವೇನೆಂಬುದನ್ನು ಇಡೀ ಸಭೆಯೇ ಗಮನಿಸಲಿ ಪರೀಕ್ಷಿಸು ಮಹಾರಾಜ.

ಬಿಜ್ಜಳ : ಹೇಗೆ ಪರೀಕ್ಷಿಸಬೇಕು ಹೇಳಿ.

ಬಸವೇಶ್ವರ : ದೊರೆಯೇ ನೀವು ಶರಣನನ್ನು ಪರೀಕ್ಷಿಸಬೇಕಾದರೆ, ಹತ್ತು ಪೆಂಡಿ ಎಳ್ಳೆದೆಲೆ, ನೂರು ಸೇರು ಅಡಕೆ, ಅದಕ್ಕೆ ಸಾಕಷ್ಟು ಸುಣ್ಣ ಇಷ್ಟೆಲ್ಲವನ್ನು ಸಿಂಹಾಸನದ ಮುಂದಿಟ್ಟು ಸಿಂಹಾಸನಕ್ಕೆ ರತ್ನಗಂಬಳಿಯನ್ನು ಹೊದಿಸಿದರೆ ನಾನು ಅಡಕೆ ಕತ್ತರಿ ಅಪ್ಪಣ್ಣನವರ ಕತ್ತರಿಯನ್ನು ತರಿಸುತ್ತೇನೆ ಎಂದು ಹೇಳಿದ ಬಸವಣ್ಣನವರು ಉತ್ತಣ್ಣ ಪಂಡಿತರನ್ನು ಕರೆದು 'ನೀವು ಹೋಗಿ ಅಡಕೆ ಕತ್ತರಿ ಅಪ್ಪಣ್ಣನವರನ್ನು ಕಂಡು ನಿಮ್ಮ ಅಡಕೆ ಕತ್ತರಿಯನ್ನು ಬಸವಣ್ಣನವರು ತೆಗೆದುಕೊಂಡು ಬಾ ಎಂದು ನನ್ನನ್ನು ಕಳಿಸಿದ್ದಾರೆ ಎಂದು ಹೇಳಿ ತನ್ನಿರಿ' ಎನ್ನಲು ಉತ್ತಣ್ಣ ಪಂಡಿತರು ಹೋಗಿ ಈ ಸಮಾಚಾರವನ್ನು ಅಡಕೆ ಕತ್ತರಿ ಅಪ್ಪಣ್ಣನವರಿಗೆ ತಿಳಿಸಲು ಅಪ್ಪಣ್ಣನವರು ತಮ್ಮ ದೇಹದ ಮೇಲ್ಭಾಗದ ಶಿರಸ್ಸನ್ನು ಮಾತ್ರ ತೆಗೆದು ಒಂದು ತಟ್ಟೆಯಲ್ಲಿಟ್ಟುಕೊಟ್ಟಿದ್ದಾರೆ.

ಶಿಷ್ಯ

ಆಮೇಲೇನಾಯ್ತು ಬೇಗ ಹೇಳಿ ಗುರುವೆ ?

ನಿರೂಪಕ

ಆಸ್ಥಾನದಲ್ಲಿ ಸಿಂಹಾಸನದ ಮೇಲೆ ರತ್ನಗಂಬಳಿಯನ್ನು ಹಾಸಿದ್ದಾರೆ. ಬಸವಣ್ಣನವರು ಹೇಳಿದಂತೆ ಎಲೆ ಪೆಂಡಿಗಳನ್ನು ಅಡಕೆ ರಾಶಿಯನ್ನು ಸುರಿದಿದ್ದಾರೆ. ಸುಣ್ಣದ ಕುಡಿಕೆಯನ್ನು ಪಕ್ಕದಲ್ಲಿ ಇಟ್ಟಿದ್ದಾರೆ. ಉತ್ತಣ್ಣ ಪಂಡಿತರು ಅಡಕೆ ಕತ್ತರಿ ಅಪ್ಪಣ್ಣವರು ಕೊಟ್ಟ, ಅಡಕೆ ಕತ್ತರಿಯನ್ನು ತರುತ್ತ ಇದ್ದ ಹಾಗೇನೇ ಬಸವಣ್ಣವರು ಎರಡು ಕೈಗಳಿಂದಲೂ ಆ ತಟ್ಟೆಯಲ್ಲಿದ್ದ ಅಪ್ಪಣ್ಣನವರ ಶಿರಸ್ಸನ್ನು ಸಿಂಹಾಸನದ ಮೇಲಿರುವ ರತ್ನಗಂಬಳಿಯ ಮೇಲೆ ಇಟ್ಟು ಏನೆಂದು ಸ್ತೋತ್ರ ಮಾಡುತ್ತಿದ್ದಾರೆ.

ಜಯ ಜಯ ಶಂಕರ ಜಯ ಅಭಯಂಕರ
ಜಯ ಜಯತು ಶಶಿಧರ ಭವದೂರ ದೇವ
ಭವದೂರ ದೇವ | ೧೮೫

ಹೀಗೆ ಬಸವಣ್ಣನವರು ಪರಮೇಶ್ವರನನ್ನು ಧ್ಯಾನಿಸುತ್ತ ಅಪ್ಪಣ್ಣನವರಿಗೆ 'ಅಪ್ಪಣ್ಣನವರೆ ಮನುಷ್ಯನಿಗೆ ಕರ್ತವ್ಯವೇ ದೈವವಾದ್ದರಿಂದ ನಿಮ್ಮ ಕರ್ತವ್ಯವನ್ನು ಮುಂದುವರೆಸಿ' ಎಂದು ಬೇಡಿಕೊಂಡಿದ್ದಾರೆ. ಅಲ್ಲದೆ ಎಲೆಯ ಪೆಂಡಿಯ ಮೇಲಿನ ಮುಸುಕನ್ನು ತೆಗೆದು ಇಟ್ಟಿದ್ದಾರೆ. ಅಡಕೆ ಕತ್ತರಿ ಅಪ್ಪಣ್ಣನವರು ಎಲೆಯು ಅಡಕೆಯ ಸುಣ್ಣವು ಪ್ರಚಂಡ ಮಾರುತವು ಬೀಸುವಾಗ ಹೇಗೆ ತರಗೆಲೆಗಳು ಮುಂದೆ ಸೇರುತ್ತವೆಯೋ ಅದರಂತೆ ಅವರ ಬಾಯಿಗೆ ಹೋಗಿ ಸೇರಿದಾಗ ಅವೆಲ್ಲವೂ ಅವರ ದಂತದ ಹಿಡಿತಕ್ಕೆ ಸಿಕ್ಕಿ ಅಗಿಯುತ್ತ ಇದ್ದಾರೆ. ಇಂಥ ಮಹದಾಶ್ಚರ್ಯವನ್ನು ಸಭೆಯಲ್ಲಿ ಎಲ್ಲರೂ ನೋಡುತ್ತಿರುವಾಗ ಬಿಜ್ಜಳ ಮಹಾರಾಜನು 'ನನ್ನ ರತ್ನಗಂಬಳಿಗೆ ತಾಂಬೂಲದ ರಸವು ಸೋರಿ ಕೆಟ್ಟು ಹೋಗುತ್ತದೋ' ಎಂದು ಯೋಚಿಸುತ್ತಿದ್ದಾನೆ. ಬಸವಣ್ಣನವರು ದೊರೆಗೆ ಏನೆಂದು ಹೇಳುತ್ತಿದ್ದಾರೆ.

ಶಿಷ್ಯ

ಏನು ಹೇಳುತ್ತಿದ್ದಾರೆ ಸ್ವಾಮಿ ?

ನಿರೂಪಕ

ಶರಣರ ಮಹಿಮೆಯ ಅರಿಯಲು ಬಲ್ಲಿರೆ
ಪರಿಪರಿ ಪಾಪದ ನರಕುರಿಗಳಿರಾ
ನರಕುರಿಗಳಿರಾ | ೧೮೬

"ಬಿಜ್ಜಳ ಮಹಾರಾಜನೆ, ನೀನು ಇಂತಹ ಕುಹಕಿಗಳ ಮಾತಿಗೆ ಒಳಗಾಗಬಾರದು. ನಿನಗಾಗಲಿ, ನಿನ್ನ ರತ್ನಗಂಬಳಿಗಾಗಲಿ ಏನಾಗಿದೆ ಎಂಬುದನ್ನು ನೀನೇ ನೋಡು" ಅಂದಾಗ ಬಿಜ್ಜಳ ಮಹಾರಾಜನು ಸಮೀಪಕ್ಕೆ ಹೋಗಿ ತಲೆಯನ್ನು ಬಗ್ಗಿಸಿಕೊಂಡು ನೋಡುತ್ತಿರುವಾಗ ಆ ಉಸುರಿನ ಶಕ್ತಿಯು ಬಿಜ್ಜಳ ಮಹಾರಾಜನ ತಲೆಯನ್ನು ಎಳೆದುಕೊಂಡಿದೆ. ತಲೆಯು ಬಾಯಿಯ

ಒಳಗಡೆ ಸೇರಿ ಹಲ್ಲಿನಿಂದ ಕಡಿಯುವಷ್ಟರೊಳಗೆ ಬಿಜ್ಜಳ ಮಹಾರಾಜನು 'ಬಸವಣ್ಣ ಕೆಟ್ಟಿನಲ್ಲಪ್ಪ' ಎಂದು ಬಸವಣ್ಣನನ್ನು ಕೂಗಲು 'ಅಪ್ಪಣ್ಣನವರೆ ಕತ್ತರಿಯನ್ನು ನಿಲ್ಲಿಸಿಬಿಡಿ' ಎಂದು ಬಸವಣ್ಣನವರು ಹೇಳಲು ಕತ್ತರಿ ಹಾಗೆ ನಿಂತುಬಿಟ್ಟಿದೆ. ದೊರೆಯಾದರೋ 'ಶರಣರ ಮಹಿಮೆ ಎಷ್ಟು ಅದ್ವಿತೀಯವಾಯಿತ್ತು' ಎಂದು ಕೊಂಡಾಡುತ್ತಾ ಪಕ್ಕದಲ್ಲಿ ನಿಂತಿದ್ದಾನೆ. 'ಬಸವಣ್ಣನವರೇ ಇವರ ಶಿರಸ್ಸನ್ನು ತೆಗೆದು ನೋಡಿ' ಎನ್ನಲು ಬಸವಣ್ಣನವರು

ಸರ್ವಸ್ಯ ಗಾತ್ರಸ್ಯ ಶಿರಃ ಪ್ರಧಾನಂ
ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ
ಭವೇನ್ನದೀನಾಂ ಉದಕ ಪ್ರಧಾನಂ
ಷಣ್ಣಾಂ ರಸಾನಾಂ ಲವಣಂ ಪ್ರಧಾನಂ | ೧೮೭

ಶರೀರಕ್ಕೆಲ್ಲ ಮುಖ್ಯಪ್ರಾಯವಾದದ್ದು ಶಿರಸ್ಸು. ಸರ್ವೇಂದ್ರಿಯಗಳಲ್ಲಿ ಕಣ್ಣು ಅತೀ ಮುಖ್ಯವಾದದ್ದು. ಉದಕ ಪ್ರಧಾನವೆಂದರೆ ಭಕ್ಷ್ಯಗಳನ್ನು ಮಾಡುವುದಕ್ಕೆ ಗಂಗೋದಕವೇ ಅತೀಮುಖ್ಯ. ಲವಣ ಪ್ರಧಾನಂ ಅಂದರೆ ಭಕ್ಷ್ಯ ಭೋಜ್ಯಗಳಿಗೆಲ್ಲ ಉಪ್ಪೇ ಮುಖ್ಯವಾದದ್ದು ಎಂಬುದಾಗಿ ಬಸವಣ್ಣನವರು ಬಿಜ್ಜಳ ಮಹಾರಾಜನಿಗೆ ಹೇಳಿ ಆ ಶಿರಸ್ಸನ್ನು ತೆಗೆದುಕೊಂಡಿದ್ದಾರೆ. ರತ್ನಗಂಬಳಿ ಮೇಲಾದರೋ ಒಂದು ತೊಟ್ಟು ತಾಂಬೂಲದ ರಸ ಬಿದ್ದಿಲ್ಲ. ಇದೆಲ್ಲವನ್ನೂ ನೋಡಿದ ಸಭಾಸದರೆಲ್ಲ ಚಕಿತರಾಗಿದ್ದಾರೆ.

ಅಲ್ಲಿಗಲ್ಲಿಗೆ ಕಥೆಯು ಮಲ್ಲಿಗೆಯ ವಾಸನೆಯು
ಬಲ್ಲಂತ ಪ್ರಾಜ್ಞರು ತಿದ್ದಿಕೊಳಬೇಕು
ತಿದ್ದಿಕೊಳಬೇಕು | ೧೮೮

ಇತ್ತ ಬಸವಣ್ಣನವರಾದರೋ ಉತ್ತಣ್ಣನವರನ್ನು ಕರೆದು 'ಉತ್ತಣ್ಣ ಪಂಡಿತರೆ ಅಡಕೆ ಕತ್ತರಿ ಅಪ್ಪಣ್ಣನವರ ಕತ್ತರಿಯನ್ನು ಕೊಟ್ಟು ಬನ್ನಿ' ಎಂದು ಹೇಳಿ ಕೊಟ್ಟುಕಳಿಸಿದ್ದಾರೆ. ಉತ್ತಣ್ಣನವರು ಹೋಗಿ ಅಪ್ಪಣ್ಣನವರಿಗೆ ಕತ್ತರಿಯನ್ನು ಕೊಟ್ಟು ಬಂದಿದ್ದಾರೆ. ಇತ್ತ ಬಸವಣ್ಣನವರಿಗಾದರೋ ಬಹಳ ಸಂತೋಷವಾಗಿದೆ. ಹೀಗಿರುತ್ತಿರಲು ಇತ್ತ ಮಾಂಡವ್ಯ ದೇಶದ ಮಹಾದೇವ ಭೂಪಾಲನು ತಾನು ಜಂಗಮಾರ್ಚನೆಗೆಂದು ಪೂಜಾದ್ರವ್ಯಗಳನ್ನು ತೆಗೆದುಕೊಂಡು ಬಂದು ಜಂಗಮರಿದ್ದ ಮಂದಿರಗಳನ್ನು ನೋಡಿದ್ದಾನೆ. ಆರು ಸಾವಿರ ಜನಗಳಲ್ಲಿ ಒಬ್ಬರಾದರೂ ಇಲ್ಲದಿರುವಾಗ ದಿಗ್ಭ್ರಾಂತರಾಗಿ ತಾನು ಏಳುಸುತ್ತಿನ ಕೋಟೆಯನ್ನು ಕಟ್ಟಿಸಿ ಏಳು ದ್ವಾರಗಳಿಗೂ ದ್ವಾರಪಾಲಕರನ್ನು ನೇಮಿಸಿರುವಾಗ ಇವರ್ಯಾರಿಗೂ ಕಾಣದಂತೆ ಆಕಾಶ ಮಾರ್ಗವಾಗಿ ಏನಾದರೂ ಹೋಗಿರಬಹುದೆ? ಎಂದು ಬಾಗಿಲುಕಾರರನ್ನೆಲ್ಲ ವಿಚಾರಿಸುವಾಗ "ಸ್ವಾಮಿ, ಯಾರೋ ಕೋರಿಶೆಟ್ಟಿಯಂತೆ, ಹೆಗಲ ಮೇಲೆ ಹಸುಬೆ ಕರೀಕಂಬಿ, ಹಾಕಿಕೊಂಡು ಚಿಂದಿಬಟ್ಟೆಗಳನ್ನು ಧರಿಸಿ ಸಾಂಬಾರ ಪದಾರ್ಥಗಳನ್ನು ಮಾರುವವರಂತೆ ಬಂದು 'ನಾನು ಜಂಗಮಾರ್ಚನೆ ಮಾಡಬೇಕಾಗಿದೆಯಪ್ಪ' ಎಂದು ನಮ್ಮನ್ನೆಲ್ಲ ಕೇಳಿ ಒಳಗಡೆಗೆ ಹೋಗಬೇಕೆಂದು ಬಯಸಿದರು. ಅವರು ಒಳಕ್ಕೆ ಹೋಗುವಾಗ ಅವರು ತಂದಿದ್ದ ಗಂಟುಮೂಟೆಗಳನ್ನೆಲ್ಲ ತೂಕ ಮಾಡಿದೆವು. ಐದು ಸೇರು ಮಾತ್ರ ಇತ್ತು. ಆಮೇಲೆ ಅವರು ಹೊರಗಡೆಗೆ ಹೋಗುವಾಗ ಅದೇ ಪದಾರ್ಥಗಳನ್ನು ತೂಗಿದೆವು. ಅಡೀ ಸೇರು ಕಡಿಮೆ ಇತ್ತು" ಎಂದು ದ್ವಾರ ಪಾಲಕರು ಹೇಳಲು 'ಇದು ಯಾರಿಂದ ನಡೆದಿದೆ? ಬಹುಶಃ ಕಲ್ಯಾಣ ಪಟ್ಟಣದ ಬಸವಣ್ಣನಿಂದಲೇ ನಡೆದಿರಬಹುದು' ಎಂದು ಯೋಚನೆಯನ್ನು ಮಾಡುತ್ತ ಮಹಾದೇವ ಭೂಪಾಲನು ತನ್ನ ಅರಮನೆಗೆ ಹೋಗಿ ತನ್ನ ಆಪ್ತರಾದ ಕಕ್ಕಣ್ಣ, ಚಿಕ್ಕಣ್ಣರೆಂಬ ಮಿತ್ರರನ್ನು ಕಳುಹಿಸಿ 'ನಾನು ಸೇವೆ ಮಾಡುವುದಕ್ಕಾಗಿ ಇದ್ದ ಆರುಸಾವಿರ ಜನ ಜಂಗಮರೂ ಸಹ ಏಳು ಬಾಗಿಲಿನ ದ್ವಾರಪಾಲಕರಿಗೂ ಗೊತ್ತಾಗದಂತೆ ಹೋಗಿರುತ್ತಾರೆ. ಈ ಸಮಾಚಾರದಲ್ಲಿ ನನಗೆ ತಿಳಿದಂತೆ ಕಲ್ಯಾಣಪಟ್ಟಣದ ಬಸವಣ್ಣನಿಂದಲೇ ನಡೆದಿರಬಹುದು. ಆತನಿಗೆ ಪಂಚ ಪುರುಷ ದೃಷ್ಟಿಯು, ಶಿವನ ಕೃಪೆಯು ಇರುವುದರಿಂದ ಇದು ಆತನಿಂದಲೇ ನಡೆದಿರಬಹುದೆಂದು ಮಹಾದೇವ ಭೂಪಾಲನು ಹೇಳಲು ಕಕ್ಕಣ್ಣ ಚಿಕ್ಕಣ್ಣವರುಗಳು 'ನಮ್ಮಿಂದ ಏನಾಗಬೇಕಾಗಿದೆ?' ಎಂದು ಕೇಳಲು

ಶಿಷ್ಯ

ಮಹಾದೇವ ಭೂಪಾಲನು ಏನು ಹೇಳಿದನು ಸ್ವಾಮಿ ?

ನಿರೂಪಕ

ಕಲ್ಯಾಣಪಟ್ಟಣದ ಬಸವಣ್ಣನ ತಲೆಯ
ಕಡಿದು ತರಬೇಕೆಂದು ಆಜ್ಞೆ ಮಾಡಿದನು
ಆಜ್ಞೆ ಮಾಡಿದನು | ೧೪೯

ಮಹಾದೇವ ಭೂಪಾಲನು 'ಅಯ್ಯಾ ಆಪ್ತಮಿತ್ರರೆ ನೀವು ಕಲ್ಯಾಣ ಪಟ್ಟಣಕ್ಕೆ ಹೋಗಿ ಬಸವಣ್ಣನವರ ತಲೆಯನ್ನು ನಿಮ್ಮ ಪ್ರಯತ್ನದಿಂದ ತಂದುಕೊಟ್ಟರೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜನಂಗಳು ಇಲ್ಲಿಗೇ ಬಂದು ಸೇರುತ್ತಾರೆ. ನೀವು ಅಷ್ಟು ಉಪಕಾರವನ್ನು ಮಾಡಬೇಕು' ಎಂದು ಹೇಳಲು ಆ ತಕ್ಷಣವೇನೇ ಕಕ್ಕಣ್ಣ ಚಿಕ್ಕಣ್ಣರು ಪ್ರಯಾಣೋನ್ಮುಖರಾಗಿದ್ದಾರೆ.

ಶಿಷ್ಯ

ಆಮೆಲೇನಾಯ್ತು ಸ್ವಾಮಿ ?

ನಿರೂಪಕ

ಕೈಲಾಸ ವಾಸಿಯೇ ಪರಮೇಶ್ವರ ಶಿವನೇ
ಗಿರಿಜಾರಮಣನೆ ಎಮ್ಮ ಕಾಪಾಡು ಹರನೇ
ಕಾಪಾಡು ಹರನೇ | ೧೪೯

ಇತ್ತ ಕಕ್ಕಣ್ಣ ಚಿಕ್ಕಣ್ಣಗಳಾದರೋ ಕಲ್ಯಾಣಪಟ್ಟಣಕ್ಕೆ ಹೋಗಿ ಸುತ್ತಾಡುತ್ತಿದ್ದಾರೆ. ಆ ನಗರವಾದರೋ

ಏಳುನೂರೆಪ್ಪತ್ತು ಸೂರಬಾಗಿಲದಕೆ
ಚೋರದಿಡ್ಡಿಗಳದಕೆ ನೂರ ಹದಿನೈದು
ನೂರ ಹದಿನೈದು | ೧೯೦

ಹೀಗೆ ಕಕ್ಕಣ್ಣ ಚಿಕ್ಕಣ್ಣಗಳು ನಗರವನ್ನು ಪ್ರವೇಶಿಸಿ ಬೀದಿ ಬೀದಿಯಲ್ಲಿ ಬರುತ್ತ ಬಸವಣ್ಣವರ ಅರಮನೆಯನ್ನೆಲ್ಲ ದೃಷ್ಟಿಸಿ ನೋಡುತ್ತಾ ಇರಲು

ಶಿಷ್ಯ

ಅಲ್ಲಿ ಏನಾಗಿದೆ ಸ್ವಾಮಿ ?

ನಿರೂಪಕ

ಏಳುನೂರೆಪ್ಪತ್ತು ಎಸೆವ ಹೊಂಗಲಶವು
ಪಂಚಾಕ್ಷರಿಯ ಮುದ್ರೆ ಪಟನಂದಿಧ್ವಜವು
ಪಟನಂದಿಧ್ವಜವು | ೧೯೨

ಹೀಗೆ ಕಕ್ಕಣ್ಣ ಚಿಕ್ಕಣ್ಣನವರುಗಳು ಬಸವಣ್ಣನವರ ಅರಮನೆಯನ್ನು ನೋಡಿ ಅವರ ಮನೆಯ ಮುಂದಿರುವ ಹಲಗೆಯಲ್ಲಿ 'ಶಿವ ಭಕ್ತರಿಗೆ ಮಾತ್ರ ಈ ಮನೆಗೆ ಪ್ರವೇಶ' ಎಂಬ ಬಿರುದನ್ನು ನೋಡಿ ಕಕ್ಕಣ್ಣ ಚಿಕ್ಕಣ್ಣಗಳು ಭಯಗ್ರಸ್ಥರಾಗಿ ನಾವು ಲಿಂಗವನ್ನು ಧರಿಸಿಲ್ಲವಲ್ಲ ಎಂದು ಮಾತನ್ನಾಡಿಕೊಂಡು ಹೊರಗಡೆ ಬಂದಿದ್ದಾರೆ. ಅಲ್ಲಿ ಹೊಲದಲ್ಲಿ ಕರೇ ಬದನೇಕಾಯಿ ಗಿಡದಲ್ಲಿ ಕರೇ ಬದನೆಕಾಯಿಗಳನ್ನು ಕಂಡು ಆ ಇಬ್ಬರೂ ಆ ಕಾಯಿಗಳನ್ನು ಕಿತ್ತು ತಂದು ವಸ್ತ್ರಗಳಿತವಾಗಿ ಇಬ್ಬರೂ ಲಿಂಗದಂತೆ ಅವುಗಳನ್ನು ಕುತ್ತಿಗೆಗೆ ಕಟ್ಟಿಕೊಂಡು ನೇರವಾಗಿ ಬಸವಣ್ಣನವರ ಅರಮನೆಗೆ ಹೋಗಲು ಈ ಉಪಾಯವನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲವೆಂದು ಧೈರ್ಯಮಾಡಿ ಬಸವಣ್ಣನವರ ಅರಮನೆಯನ್ನು ಪ್ರವೇಶಿಸಿದ್ದಾರೆ.

ಶಿಷ್ಯ

ಅಲ್ಲಿ ಏನಾಗಿದೆ ಸ್ವಾಮಿ ?

ನಿರೂಪಕ

ಅಯ್ಯಾ ಮಗು, ಕಕ್ಕಣ್ಣ ಚಿಕ್ಕಣ್ಣನವರು ಬಸವಣ್ಣನವರ ಅರಮನೆಗೆ ಹೋದ ತಕ್ಷಣವೇನೇ ಬಸವಣ್ಣನವರು ಇವರನ್ನು ಕಂಡು 'ಬನ್ನಿ ಅಪ್ಪಾ ಶರಣರೆ, ಬಹಳ ಅಪರೂಪಕ್ಕೆ ದಯಮಾಡಿಸಿದ್ದೀರಿ, ಸ್ನಾನವನ್ನು ಮಾಡಿರಿ' ಎಂದು ಇಬ್ಬರಿಗೂ ಸ್ನಾನಮಡಿಗಳನ್ನು ಮಾಡಿಸಿ ಶಿವ ಪೂಜಾಮಂದಿರಕ್ಕೆ ಕರೆದುಕೊಂಡು ಹೋಗಿ 'ಶರಣರೇ ಲಿಂಗ ಪೂಜೆಯನ್ನು ಮಾಡಿ ಕೊಳ್ಳಿರಿ' ಎಂದು ಕಕ್ಕಣ್ಣ ಚಿಕ್ಕಣ್ಣರಿಗೆ ಹೇಳಲು ಕಕ್ಕಣ್ಣ ಚಿಕ್ಕಣ್ಣನವರುಗಳು ಲಿಂಗಗಳಿದ್ದರೆ ತಾನೆ ನಾವು ಪೂಜೆ ಮಾಡುವುದು? ನಾವು ಕಟ್ಟಿಕೊಂಡು ಬಂದಿರುವುದು ಕರೇ ಬದನೇಕಾಯಿಗಳು. ನಾವು ಇದರ ವಸ್ತ್ರ ಬಿಚ್ಚಿದರೆ ಬಸವಣ್ಣನವರು ಸುಮ್ಮನೆ ಬಿಡುತ್ತಾರೆಯೆ? ಶರಣರನ್ನು ಕರೆಯಿಸಿ ಏನು ತೊಂದರೆಯನ್ನು ಕೊಡುತ್ತಾರೋ ಎಂದು ಯೋಚಿಸುತ್ತಿರುವಾಗ ಬಸವಣ್ಣನವರಾದರೋ ಮುಂದು ವರೆದು 'ಅಯ್ಯಾ ಶರಣರೇ ನೀವು ಕಟ್ಟಿಕೊಂಡು ಬಂದಿರುವ ಕರೇ ಬದನೇಕಾಯಿಗಳು ಬದನೇಕಾಯಿಗಳಲ್ಲ. ಸಾಕ್ಷಾತ್ ಶಿವಲಿಂಗಗಳು. ತೆಗೆದು ಪೂಜೆ ಮಾಡಿರಪ್ಪಾ' ಎನ್ನಲು ಬೆಚ್ಚಿಬಿದ್ದ ಕಕ್ಕಣ್ಣ ಚಿಕ್ಕಣ್ಣಗಳು ವಸ್ತ್ರಗಳನ್ನು ಬಿಚ್ಚಿ ನೋಡಲು ಬಸವಣ್ಣನವರ ವಾಕ್‌ಸಿದ್ಧಿಯಂತೆ ಕರೇಬದನೇಕಾಯಿಗಳು ಲಿಂಗಗಳಾಗಿವೆ. ಆ ಶರಣರಾದರೋ ಭಯ ಭಕ್ತಿಯಿಂದ ಅವರು ಹೇಗೆ ಪೂಜೆ ಮಾಡ್ತಾ ಇದ್ದಾರೆ.

ಶಿಷ್ಯ

ಹೇಗೆ ಸ್ವಾಮಿ ?

ನಿರೂಪಕ

ಕಾಪಾಡು ಕಾಪಾಡು ಲಿಂಗವೇ-ನೀನು
ಕಾಪಾಡಬೇಕಯ್ಯ ಲಿಂಗವೇ
ಕಾಪಾಡಬೇಕಯ್ಯ ಕಾಪಾಲಧರನೆ
ಕಾಪಾಡಬೇಕೆನ್ನ ಜ್ಯೋತಿ ಲಿಂಗವೇ |

ಜಡದೇಹಿ ನಾನಯ್ಯ ಲಿಂಗವೇ
ದೃಢಮೂರ್ತಿ ನೀನಯ್ಯ ಲಿಂಗವೇ
ದೃಢ ಭಕ್ತಿಯಿಂದ ನಿನ್ನ ಅಡಿಗಳಿಗೆರಗುವೆ
ಕಡೆ ಹಾಯ್ಸು ಶಿವಜ್ಯೋತಿಲಿಂಗವೇ | ೧೯೩

ಓಗೆ ತಮ್ಮಲ್ಲಿರುವ ಧೂರ್ತಗುಣಗಳೆಲ್ಲವೂ ಹೋಗಿ ಶ್ರೇಷ್ಠವಾದ ಶಿವಭಕ್ತರೇ ಆಗಿದ್ದಾರೆ. ಮಾಂಡವ್ಯಪುರದ ಮಹಾದೇವ ಭೂಪಾಲನು ನಾಲ್ಕೈದು ದಿನಗಳವರೆವಿಗೂ ನೋಡಿ ಕಕ್ಕಣ್ಣ ಚಿಕ್ಕಣ್ಣನವರು ಬರದೇ ಇರಲು ಅದನ್ನು ಪರೀಕ್ಷಿಸು ವುದಕ್ಕೆ ಮಹಾದೇವ ಭೂಪಾಲನೇ ಕಲ್ಯಾಣಪಟ್ಟಣಕ್ಕೆ ಬಂದು ಬಸವಣ್ಣನವರ ಮನೆಯ ಮುಂದೆ ನಿಂತು ನೋಡುವಾಗ ಇತ್ತ ಕಡೆ ಆತನ ಕಣ್ಣಿಗೆ ಕೈಲಾಸದ ಮಹೇಶ್ವರನ ಮನೆಯಂತೆಯೇ ಗೋಚರವಾಗಿದೆ. ಮಹಾದೇವ ಭೂಪಾಲನಾದರೋ 'ಇದೆಂತಹ ಮಹಿಮೆಯು! ಶಿವನೇ, ನಾನು ಆರು ಸಾವಿರ ಜನಗಣಂಗಳಿಗೆ ಸೇವೆಯನ್ನು ನಡೆಸುತ್ತಿದ್ದುದೇ ಹೆಚ್ಚೆಂದು ತಿಳಿದಿದ್ದೆನು. ಈಗ ಬಸವಣ್ಣನವರ ಅರಮನೆಯನ್ನು ನೋಡಲು ಹೋಗುವವರು ಬರುವವರು ಮಿತಿಯೇ ಇಲ್ಲ. ಇದೆಲ್ಲವೂ ಪರಮೇಶ್ವರ ಮಹಿಮೆ' ಎಂದು ತಿಳಿದು ಆತನಲ್ಲಿದ್ದ ಗರ್ವವೆಲ್ಲ ಅಡಗಿಹೋಗಿ ಪರಮೇಶ್ವರನನ್ನು ಕುರಿತು ಏನೆಂದು ಕೊಂಡಾಡ್ತ ಇದ್ದಾನೆ.

ಶಿಷ್ಯ

ಏನೆಂದು ಸ್ವಾಮಿ ?

ನಿರೂಪಕ

ಶಂಕರ ಶಂಭೋ ನಿನ್ನ ಕಿಂಕರ ನಾನಯ್ಯ
ಓಂಕಾರ ರೂಪನೆ ಪಾಹಿ ಶಂಕರನೆ
ಪಾಹಿ ಶಂಕರನೆ | ೧೯೪

'ಹೇ ಶಂಕರಾ ನಾನು ರಾಜನಾಗಿ ಇದೂವರೆಗೂ ಅನುಭವಿಸಿದ ರಾಜಭೋಗವೇ ಸಾಕಾಗಿದೆ. ಇನ್ನು ಮುಂದೆ ಇದೇ ನಗರದಲ್ಲಿ ಬಸವಣ್ಣನವರ ಅರಮನೆಗೆ ಸೌದೆಯನ್ನು ತಂದುಹಾಕುವ ಕಾಯಕ ಹಿಡಿದು ಶರಣರ ಸೇವೆಗೆ ಭಾಗಿಯಾಗುತ್ತೇನೆ' ಎಂದು ಮಹಾದೇವ ಭೂಪಾಲನು ಕಾಡಿಗೆ ಹೋಗಿ ಸೌದೆಯನ್ನು ತಂದು ಹಾಕುತ್ತಿದ್ದುದರಿಂದ ಆತನಿಗೆ ಕಟ್ಟಿಗೆ ಮಾರಯ್ಯ ಎಂದು ಹೆಸರಾಗಿದೆ. ಅನಂತರ ಅವನ ಧರ್ಮಪತ್ನಿಯಾದ ಸರ್ವಮಂಗಳಾದೇವಿಯು ಕಕ್ಕಣ್ಣ ಚಿಕ್ಕಣ್ಣರು ಹಿಂದಿರುಗಲಿಲ್ಲ. ಅವರನ್ನು ಹುಡುಕಿ ಕರೆದುಕೊಂಡು ಬರುತ್ತೇನೆಂದು ಹೇಳಿ ಹೋದ ನನ್ನ ಪತಿದೇವರೂ ಬರಲಿಲ್ಲ. ಹೇ ಜಗದಂಬಾ ನನ್ನ ಪತಿಗೆ ಯಾವ ಅಪಜಯವೂ ಆಗದಂತೆ ಸನ್ಮಂಗಳವನ್ನು ದಯಪಾಲಿಸಮ್ಮಾ ಎಂದು ಜಗನ್ಮಾತೆಯನ್ನು ಬೇಡ್ತಾ ಇದ್ದಾಳೆ.

ಶಿಷ್ಯ

ಏನೆಂದು ಬೇಡ್ತಾ ಇದ್ದಾಳೆ ಸ್ವಾಮಿ ?

ನಿರೂಪಕ

ತಾಯೆ ಕರುಣಾಮಯೆ ತಾಯೆ ಮಹಾಮಾಯೆ
ಕಾಯಬೇಕಮ್ಮ ನೀನು ದಯತೋರು ದೇವಿ
ದಯತೋರು ದೇವಿ | ೧೯೫

- ಹೀಗೆ ಮಹಾದೇವ ಭೂಪಾಲನ ಧರ್ಮಪತ್ನಿ ಸರ್ವಮಂಗಳಾ ದೇವಿಯು ಜಗನ್ಮಾತೆಯನ್ನು ಪೂಜಿಸುತ್ತ ನಾಲ್ಕು ಐದು ದಿನಗಳು ಕಳೆದ ಮೇಲೆ "ನಾನೆ ಹೋಗಿ ಕಲ್ಯಾಣಪಟ್ಟಣದಲ್ಲಿ ನನ್ನ ಪತಿ ಮತ್ತು ಕಕ್ಕಣ್ಣ ಚಿಕ್ಕಣ್ಣರನ್ನು ನೋಡಿಕೊಂಡು ಬರಬೇಕು" ಎಂದು ಕಲ್ಯಾಣ ಪಟ್ಟಣಕ್ಕೆ ಬಂದಿದ್ದಾಳೆ.

ಮುಂದಣ ಕಥೆಯದರಂದವ ಪೇಳುವೆ
ಚಂದಾದಿ ಲಾಲಿಸಿ ಸಭಿಕರೆ ನೀವು
ಸಭಿಕರೆ ನೀವು | ೧೯೬

ಹೀಗೆ ಸರ್ವಮಂಗಳಾದೇವಿಯು ಕಲ್ಯಾಣಪಟ್ಟಣಕ್ಕೆ ಬಂದು ನೋಡುವಾಗ ತನ್ನ ಪತಿಯಾದರೋ ಸೌದೆಯನ್ನು ಹೊತ್ತುಕೊಂಡು ಬರುತ್ತಿರುವುದನ್ನು ಕಂಡು 'ಸ್ವಾಮಿ, ಇದೇನು ವೈಪರೀತ್ಯ? ನೀವು ರಾಜ್ಯಕೋಶಗಳನ್ನು ಬಿಟ್ಟು ಭೋಗ ಭಾಗ್ಯಗಳನ್ನು ಬಿಟ್ಟು ಕೂಲಿಕಾರರಂತೆ ಸೌದೆಯನ್ನು ಹೊರಬೇಕೆ?' ಎಂದು ತನ್ನ ಧರ್ಮಪತ್ನಿಯು ಕೇಳಲು ಕಟ್ಟಿಗೆ ಮಾರಯ್ಯನು ಹೆಂಡತಿಗೆ ಏನೆಂದು ಉತ್ತರವನ್ನು ಕೊಡುತ್ತಾ ಇದ್ದಾನೆ.

ಶಿಷ್ಯ

ಏನು ಉತ್ತರ ಕೊಟ್ಟರು ಸ್ವಾಮಿ ?

ನಿರೂಪಕ

ಭೋಗ ಭಾಗ್ಯಗಳು ಶಾಶ್ವತವಲ್ಲವು
ಭಾಗ್ಯವು ನಮಗಿನ್ನು ಶರಣರ ಸೂಳ್ನುಡಿಯೆ
ಶರಣರ ಸೂಳ್ನುಡಿಯೆ | ೧೯೭

ಪ್ರಾಣ ಪ್ರಿಯೆ, ನಮ್ಮ ಭೋಗ ಭಾಗ್ಯಗಳೆಲ್ಲವೂ ಅಸ್ಥಿರವಾದವುಗಳು. ಆದ್ದರಿಂದ ಇಂತಹ ಶರಣರ ಸೇವೆಯಲ್ಲಿ ನಾವು ಕೃತಕೃತ್ಯರಾಗಬೇಕು. ಇಂಥ ಸೇವೆ ಮಾಡುವುದಕ್ಕಿಂತ ಭಾಗ್ಯ ಬೇರೆ ಯಾವುದೂ ಇಲ್ಲ. ಶರಣರ ಸೇವೆಯೇ ಶಂಕರನ ಸೇವೆಯಾಗಿರುವಾಗ ನಮ್ಮಂತಹ ಪುಣ್ಯಶಾಲಿಗಳು ಯಾರಿದ್ದಾರೆ ಹೇಳು ?

ಆಳಾಗಿ ಬಾಳುವವ ಅರಸ ತಾನಾಗುವನು
ಆಳಾಗಿ ಬಾಳಲರಿಯದವ-ಕಡೆಗವನು
ಪಾಳಾಗಿ ಹೋಗುವನು ಸರ್ವಜ್ಞ | ೧೯೮

ಎಂಬ ಸರ್ವಜ್ಞಮೂರ್ತಿಯ ಮಾತಿನಂತೆ ನಾನು ಶಿವಾನುಭವ ಮಂಟಪದಲ್ಲಿ ಶರಣರು ಚರ್ಚಿಸುವಾಗ ಅವರ ಸೂಳ್ನುಡಿಗಳು ಸುಂದರ ನುಡಿಗಳಾಗಿ ಪರಿಣಮಿಸಿವೆ. ಬಸವಣ್ಣನವರು ತಮ್ಮನ್ನು 'ಶರಣರ ದಾಸಾನುದಾಸ ನಾನಯ್ಯ' ಎಂದು ನುಡಿದುದನ್ನು

ನೋಡಿದರೆ ಇದರಲ್ಲಿ ಎಂತಹ ವೈಚಿತ್ರ್ಯವಿದೆಯೆಂದು ನನಗೆ ಅನ್ನಿಸಿದೆ. ಸೇವೆ ಮಾಡುವುದಕ್ಕಿಂತ ಸೌಭಾಗ್ಯ ಮತ್ತೊಂದಿಲ್ಲ; ಸೇವೆಯನ್ನು ಮಾಡಿದರೆ ಮಾತ್ರ ಮುಕ್ತಿ ಮಾರ್ಗವು ಲಭಿಸುವುದರಲ್ಲಿ ಸಂದೇಹವಿಲ್ಲವೆಂದು ತನ್ನ ತಾನರಿದಡೆ ಶರಣನೆಂದು ಸತ್ಯವಾಕ್ಯ. ಆದುದರಿಂದ ನಮ್ಮ ರಾಜ್ಯ ಕೋಶ ಸಕಲ ಸಂಪತ್ತುಗಳನ್ನು ತ್ಯಾಗ ಮಾಡಿ ಇಲ್ಲೆ ನೆಲೆ ನಿಂತೆನು. ಇನ್ನು ಮುಂದೆ ನೀನು ನನ್ನ ಸಹಧರ್ಮಿಣಿಯಾಗಿದ್ದರೆ ನಾವಿಬ್ಬರೂ ಸೇರಿ ಶರಣಸೇವೆಯಲ್ಲಿ ಕೃತಾರ್ಥರಾಗೋಣ' ಎಂದು ಕಟ್ಟಿಗೆ ಮಾರಯ್ಯನು ತನ್ನ ಸಹಧರ್ಮಿಣಿಯಾದ ಮಂಗಳೆಗೆ ಹೇಳಿದ್ದಾನೆ. ಸರ್ವಮಂಗಳಾದೇವಿಯು ತನ್ನ ಪತಿಯ ಮಾತಿಗೆ ಒಡಂಬಟ್ಟು ಆಕೆಯು ಸಹ ತನ್ನ ಪತಿಗೆ ನೆರವು ಕೊಡುತ್ತಾ ಇದ್ದಾಳೆ. ಕಟ್ಟಿಗೆ ಮಾರಯ್ಯನೆಂಬ ಹೆಸರಿನಿಂದ ಕಲ್ಯಾಣ ಪಟ್ಟಣದಲ್ಲಿ ಜಂಗಮರ ಸೇವೆಯನ್ನು ಮಾಡುತ್ತಾ ಕಾಯಕಕ್ಕಿಂತ ಮಿಗಿಲಾದ ಸೇವೆ ಇಲ್ಲವೆಂದು ದಂಪತಿಗಳೀರ್ವರೂ ಶರಣರ ಸೇವೆಯಲ್ಲಿ ನಿರತರಾಗಿ ರಾಜ್ಯ ಕೋಶಗಳನ್ನು ತ್ಯಜಿಸಿ ಕಲ್ಯಾಣಪಟ್ಟಣದಲ್ಲೆ ವಾಸಿಸುತ್ತ ಇದ್ದಾರೆ.

ಹರನ ಕರುಣದಿಂದ ಶರಣರ ಸೇವೆಯ ಮಾಡಿ
ಮರೆತರು ತಮ್ಮ ರಾಜ್ಯ ಕೋಶವನೆಲ್ಲ
ಕೋಶವನೆಲ್ಲ | ೧೯೯

ಶಿಷ್ಯ

ಆಮೇಲೆ ಏನಾಯಿತು ಸ್ವಾಮಿ ?

ನಿರೂಪಕ

ಅಪ್ಪಾ ಮಗು, ಕೇಳುವಂತವನಾಗು. ಅದೇ ಗ್ರಾಮದಲ್ಲಿ ಕನ್ನಗತ್ರಿ ಬೊಮ್ಮಯ್ಯ ಎಂಬವನು ಹಾಗದ ಕಾಯಕ ಮಾಡಿಕೊಂಡಿದ್ದನು.

ಶಿಷ್ಯ

ಹಾಗಂದರೇನು ಸ್ವಾಮಿ ?

ನಿರೂಪಕ

ಹಾಗಂದರೆ ಅಲ್ಲವಪ್ಪ. ಹಾಗ ಅಂದರೆ ಒಂದು ನಾಣ್ಯ. ಕನ್ನಗತ್ರಿ ಬೊಮ್ಮಯ್ಯನ ಕಾಯಕ ಹಾಗದ ಕಾಯಕ. ಅವನು ಹಗಲು ಹೊತ್ತೆಲ್ಲ ಚನ್ನಾಗಿ ನಿದ್ದೆ ಮಾಡಿ ರಾತ್ರಿ ಹೊತ್ತು ಶರಣರ ಮನೆಗೆ ಮಾತ್ರ ಕನ್ನ ಹಾಕಿ ಅಲ್ಲಿ ಎಷ್ಟೇ ಸಂಪತ್ತಿದ್ದರೂ ಮುಟ್ಟದೆ ಒಂದೇ ಒಂದು ಹಾಗವನ್ನು ಮಾತ್ರ ತೆಗೆದುಕೊಂಡು ಹೋಗುತ್ತಿದ್ದನು. ಆ ಹಾಗವನ್ನು ತಂದು ಅದರಿಂದ ಅವನು ಹಾಗೂ ಅವನ ಧರ್ಮಪತ್ನಿ ಜೀವನ ಮಾಡುತ್ತಿದ್ದರಲ್ಲದೆ ಜಂಗಮಾರ್ಚನೆಗೆ ಅದರ ಅರ್ಧವನ್ನು ವ್ಯಯ ಮಾಡುತ್ತಿದ್ದರು. ಇನ್ನೊಂದು ವಿಶೇಷವೆಂದರೆ ಬೊಮ್ಮಯ್ಯ ಯಾರ ಮನೆ ಗೋಡೆಗೆ ಕನ್ನ ಹಾಕುತ್ತಿದ್ದನೋ ಆ ಗೋಡೆಯ ಮಣ್ಣು ಕಲ್ಲುಗಳೆಲ್ಲ ಬೆಳಿಗ್ಗೆ ಎದ್ದು ನೋಡುವ ಹೊತ್ತಿಗೆ ಸುವರ್ಣಗಳಾಗಿರುತ್ತಿದ್ದವು.

ಶಿಷ್ಯ

ಇದ್ರೆ ಇಂತ ಕಳ್ಕಿರಬೇಕಪ್ಪ ! ಅಲ್ವಾ ಗುರುವೆ ?

ನಿರೂಪಕ

ಪಕ್ಕದ ಮನೆಯವರು ಇಂಥ ಆಶ್ಚರ್ಯವನ್ನು ನೋಡಿ ಈ ದಿವಸ ನಮ್ಮ ಮನೆಗೂ ಕನ್ನ ಹಾಕಿದರೆ ಸಾಕು ; ನಾವು ಭಾಗ್ಯವಂತರಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹರಕೆಯನ್ನು ಹೊರುತ್ತಿದ್ದರು.

ಶಿಷ್ಯ

ಗುರುಗಳೇ, ನಮ್ಮಲ್ಲು ಯಾರಾದ್ರೂ ಹರ್ಕೆ ಹೊತ್ಕೊಂಡ್ರೆ ಅಂತಾವ್ರ ಮನೆಗೂ ಕನ್ನ ಹಾಕಬಹುದಲ್ಲವೆ ?

ನಿರೂಪಕ

ಕನ್ನ ಹಾಕಬಹುದು ಕಣೋ, ಆದರೆ ಚಿನ್ನದ ಇಟ್ಟಿಗೆ ಸಿಕ್ಕದಿಲ್ಲವೋ.

ನಿರೂಪಕ

ಈ ದಿನಗಳಲ್ಲಿ ಕನ್ನ ಹಾಕಕೆ ಬೊಮ್ಮಯ್ಯ ಎಲ್ಲಿ ಬರ್ತಾನೋ ? ಗುಮ್ಮಯ್ಯ ಬಂದು ಎಲ್ಲಾನೂ ಗುಮ್ಮೊಂಡೇಗಬವುದು. ಆಗ ಚಿನ್ನದಕಲ್ಲು ಇಲ್ಲ 'ಚಿನ್ನದ ಮಣ್ಣು ಇಲ್ಲ' ಚಿನ್ನದ ಇಟ್ಟಿಗೇನೂ ಇಲ್ಲ.

ಶಿಷ್ಯ

ಹಂಗಂತೀರಾ ?

ನಿರೂಪಕ

ಅಯ್ಯಾ ಮಗು, ಬೊಮ್ಮಯ್ಯನು ಎಲ್ಲಿ ಶಿವಭಕ್ತರಿರುತ್ತಿದ್ದರೋ ಅಂತಹವರ ಮನೆಗೆ ಮೊತ್ರ ಕನ್ನ ಹಾಕುತ್ತಿದ್ದನೇ ಹೊರತು ಬೇರೆಯವರ ಮನೆಗೆ ಹೋಗುತ್ತಿರಲಿಲ್ಲ.

ಶಿಷ್ಯ

ಇಂತಾವ್ರು ಭಕ್ತ್ರು ಇಂತಾವ್ರು ಭವಿಗಳು ಅಂತ ಅವುನಿಗೆ ಹ್ಯಾಗೆ
ಗೊತ್ತಾಗ್ತಾ ಇತ್ತು ಸ್ವಾಮಿ ?

ನಿರೂಪಕ

ಅಯ್ಯಾ ಮಗು, ಯಾರು ಸತ್ಯದಿಂದ ನಡೆದು ನಡೆದಂತೆ ನುಡಿದು ಸಾದಾಚಾರ ಸಂಪನ್ನರಾಗಿರುತ್ತಾರೆಯೋ ಅಂತಹ ಮಹಾಪುರುಷರು ಭಕ್ತರೆಂತಲೂ, ಭವಿಗಳೆಂದರೆ ದುರಾಚಾರ, ದುರ್ನಡತೆ, ದುರಹಂಕಾರಗಳಿಂದ ಮೆರೆಯುವವರು. ಅದಕ್ಕಾಗಿ ಬಸವಣ್ಣನವರು ಸ್ವಪಚಾದಿಯಾದರೇನು ಶಿವಭಕ್ತನೇ ಕುಲಜನು ಎನ್ನುತ್ತಿದ್ದರು. ಅದರಂತೆ ಕನ್ನದ ಬೊಮ್ಮಯ್ಯನು ಕನ್ನಗತ್ತರಿಯಿಂದ ಕೊರೆಯುವಾಗಲೆ ಭಕ್ತರ ಮನೆಯಾಗಿದ್ದರೆ ಹಸೀಮಣ್ಣಿನಲ್ಲಿ ಕೊರೆದಂತೆ ಆಗುತ್ತಿತ್ತು ; ಭವಿಗಳ ಮನೆಗೆ ಕನ್ನವನ್ನು ಹಾಕಿದರೆ ಕನ್ನಗತ್ತರಿ ಹರಿಯುತ್ತಿರಲಿಲ್ಲ. ಆಗ ಬೊಮ್ಮಯ್ಯನವರು ಇದು ಭವಿಯ ಮನೆಯೆಂದು ತಿಳಿದು ಭಕ್ತರ ಮನೆಯನ್ನು ಅರಸಿಕೊಂಡು ಹೋಗುತ್ತಿದ್ದರು. ಅಂದಮೇಲೆ ಕನ್ನದ ಬೊಮ್ಮಯ್ಯನಿಗೆ ಪರಶಿವನೆ ಪರೀಕ್ಷಿಸಬೇಕೆಂದು ಎಲ್ಲಿ ಹೋದರೂ ಕಳ್ಳತನಕ್ಕೆ ಅವಕಾಶ ಸಿಕ್ಕದೆ ಮುಂಗೋಳಿ ಕೂಗಿದ್ದೂ ಆಯ್ತು. ತಾನು ಚಿಂತಾಕ್ರಾಂತನಾಗಿ 'ಅಯ್ಯೋ ಶಿವನೆ ನಾನು ಶರಣರ ಸೇವೆಯನ್ನು ಈ ದಿನ ಯಾವ ರೀತಿಯಲ್ಲಿ ಮಾಡಲಿ?' ಎಂದು ಯೋಚಿಸುತ್ತ ಮನಸ್ಸಿಗೆ ಧೈರ್ಯ ತಂದುಕೊಂಡು 'ಬಿಜ್ಜಳ ಮಹಾರಾಜನ ಪಟ್ಟದ ಆನೆಯನ್ನೇ ಯಾರಿಗಾದರೂ ಮಾರಿ ನನ್ನ ಕಾಯಕವನ್ನು ನೆರವೇರಿಸಬೇಕೆಂದು ಮಾವುತರು ಕಾಣದಂತೆ ಅವರು ಏಳುವುದಕ್ಕೂ ಮುಂಚೆಯೇ ಗಜಾಲಯದಲ್ಲಿದ್ದ ಪಟ್ಟದ ಆನೆಯನ್ನು ಹೊಡೆದುಕೊಂಡು ಹೋಗುತ್ತಾ ಇದ್ದಾನೆ. ಬಿಜ್ಜಳ ಮಹಾರಾಜನ ಗಜಾಲಯದಲ್ಲಿ ಎಷ್ಟು ಆನೆಗಳು ಇದ್ದವಪ್ಪಾ ಅಂದರೆ

ಶಿಷ್ಯ

ಎಷ್ಟು ಇದ್ದವು ಸ್ವಾಮಿ ?

ನಿರೂಪಕ

ಕರಿಶತ ಘಟೆಗಳು ತುರಗವು ನವಲಕ್ಷ
ಪರಿಕಿಸೆ ಕಾಲಾಳು ಏರಚಪಡಳವೆ
ಏರಚಪಡಳವೆ | ೨೦೦

ನೂರು ಆನೆಗಳಿರುವಾಗ ಒಂದು ಆನೆಯನ್ನು ಹೊಡೆದುಕೊಂಡು ಹೋದರೆ ಯಾರಿಗೂ ಗೊತ್ತಾಗುವುದಿಲ್ಲ ಎಂದು ಪಟ್ಟದ ಆನೆಯನ್ನು ರಾಜಬೀದಿಯಲ್ಲಿ ಹೊಡೆದುಕೊಂಡು ಹೋಗುವಾಗ ಮಂಚಣ್ಣ ಪಂಡಿತರು ಎದುರಿಗೆ ಬಂದಿದ್ದಾರೆ. ಮಂಚಣ್ಣ ಪಂಡಿತರು ಆ ತಕ್ಷಣವೇನೇ ಮಾವುತರನ್ನು ಕರೆಸಿ ಬಿಜ್ಜಳ ಮಹಾರಾಜನನ್ನು ಕರೆದುಕೊಂಡು ಬರುವಂತೆ ಹೇಳಿ ಕಳಿಸಿದರು. ಮಾವುತರು ಹೋಗಿ ದೊರೆಯನ್ನು ಕರೆದುಕೊಂಡು ಬಂದು ಮಂಚಣ್ಣ ಪಂಡಿತರಿಗೆ ಹೇಳಲು 'ಅಯ್ಯಾ ಬಿಜ್ಜಳಮಹಾರಾಜ ಶರಣರು ಶರಣರು ಎಂದೂ, ಬಸವಣ್ಣನು ಪವಾಡ ಪುರುಷನೆಂದೂ ಅವರು ಏನು ತಪ್ಪು ಮಾಡಿದರೂ ಕ್ಷಮಿಸುತ್ತಿರುವೆ. ಕನ್ನದ ಬೊಮ್ಮಯ್ಯನು ನಿನ್ನ ಪಟ್ಟದ ಆನೆಯನ್ನೇ ರಾಜಬೀದಿಯಲ್ಲಿ ಹಿಡಿದುಕೊಂಡು 'ಯಾರಾದರೂ ಈ

ಆನೆಯನ್ನು ಕೊಂಡುಕೊಳ್ಳುವಿರಾ?' ಎಂದು ಸಾರುತ್ತಾ ಇದ್ದಾನೆ ಎನ್ನಲು ಬಿಜ್ಜಳ ಮಹಾರಾಜನು ತನ್ನ ಪರಿಚಾರಕರಿಗೆ ಆನೆಯನ್ನೂ ಆ ಕನ್ನದ ಬೊಮ್ಮಯ್ಯನನ್ನೂ ಎಳೆದುಕೊಂಡು ಬನ್ನಿ' ಎಂದು ಪರಿಚಾರಕರಿಗೆ ಹೇಳಿಕಳಿಸಿದ್ದಾನೆ.

ಶಿಷ್ಯ

ಪರಿಚಾರಕರು ಎಲ್ಲಿಗೆ ಹೋದರು ಸ್ವಾಮಿ ?

ನಿರೂಪಕ

ಅಯ್ಯಾ ಮಗು ಕನ್ನದ ಬೊಮ್ಮಯ್ಯನು ಆನೆಯನ್ನು ಹಿಡಿದುಕೊಂಡು ಬೀದಿಯಲ್ಲಿ ಹೋಗುತ್ತಿರುವಾಗ ಪರಿಚಾರಕರು ಹೋಗಿ ಆನೆಯನ್ನೂ ಕನ್ನದ ಬೊಮ್ಮಯ್ಯನನ್ನೂ ಎಳೆದುಕೊಂಡು ಬಂದು ದೊರೆಯ ಮುಂದೆ ನಿಲ್ಲಿಸಿದ್ದಾರೆ. ದೊರೆಯಾದರೋ ಏನು ಆಜ್ಞೆಯನ್ನು ಮಾಡ್ತಾ ಇದ್ದಾನೆ.

ಶಿಷ್ಯ

ಏನು ಆಜ್ಞೆ ಸ್ವಾಮಿ ?

ನಿರೂಪಕ

ಕಾಲು ಮೇಲಕೆ ಮಾಡಿ ನೂಲು ಹಗ್ಗವ ಬಿಗಿದು
ಆಲುತ ಹೊಡೆಯಿರೊ ಮುಖವ ನೋಡದಲೆ
ಮುಖವ ನೋಡದಲೆ | ೨೦೧

ಬಿಜ್ಜಳ ಮಹಾರಾಜನು ಕನ್ನದ ಬೊಮ್ಮಯ್ಯನನ್ನು ಕಾಲು ಮೇಲಕ್ಕೆ ಮಾಡಿ ತಲೆಕೆಳಗು ಮಾಡಿ ಕಂಬಕ್ಕೆ ನೂಲ ಹಗ್ಗದಿಂದ ಬಿಗಿದು ಚೆನ್ನಾಗಿ ಹೊಡೆಯಿರೆಂದು ಹೇಳಲು, ಕನ್ನದ ಬೊಮ್ಮಯ್ಯನು ಬಿಜ್ಜಳ ಮಹಾರಾಜನನ್ನು 'ದೊರೆಯೇ ನಾನು ಏನು ತಪ್ಪು ಮಾಡಿದ್ದೇನೆ? ನನಗೆ ಏಕೆ ಈ ಶಿಕ್ಷೆಯನ್ನು ಕೊಡಬೇಕು?' ಎಂದು ಕೇಳಲು ಬಿಜ್ಜಳ ಮಹಾರಾಜನು 'ನೀನು ಪಟ್ಟದಾನೆಯನ್ನು ಕದ್ದು ಹೊಡೆದದ್ದು ಸರಿಯೆ?' ಎಂದಾಗ ಕನ್ನದ ಬೊಮ್ಮಯ್ಯನು 'ಇದು ಶಿವನಿಂದ ದಯಪಾಲಿತವಾದ ಆನೆ. ನಿನ್ನ ಆನೆಗೂ ನನಗೂ ಸಂಬಂಧವೇನು? ಬೇಕಾದರೆ ಈಗಲೆ ನಿಮ್ಮ ಗಜಾಲಯಕ್ಕೆ ನಡೆಯಿರಿ. ಇದು ನಿಮ್ಮ ಆನೆ ಆಗಿದ್ದಲ್ಲಿ ನನಗೆ ಶಿಕ್ಷೆಯನ್ನು ಕೊಡಿ' ಎಂದು ಹೇಳಲು ದೊರೆಯೂ ಕೊಂಡಿ ಮಂಚಣ್ಣನೂ ಗಜಾಲಯಕ್ಕೆ ಹೋಗಿ ನೋಡ್ತಾರೆ. 'ಇವನು ಹೊಡೆದುಕೊಂಡು ಬಂದದ್ದು ಪಟ್ಟದ ಆನೆಯಲ್ಲ; ಇದು ಶಿವನ ಕೃಪೆಯಿಂದ ಉಂಟಾಗಿದೆ' ಎಂದು ಎಷ್ಟು ಪರೀಕ್ಷಿಸಿದರೂ ಭಕ್ತನೇ ಶಿವನಾಗಿ ಶಿವನೇ ಭಕ್ತನಾಗಿ ಕಂಡುಬರುವುದರಲ್ಲಿ ಯಾವ ಸಂದೇಹವೂ ಇಲ್ಲ ಎಂದು ನಿಶ್ಚಯಿಸಿ ಕನ್ನದ ಬೊಮ್ಮಯ್ಯನಿಗೆ ಮಾನ್ಯತೆಯನ್ನು ಕೊಟ್ಟಿದ್ದಾರೆ. ಕನ್ನದ ಬೊಮ್ಮಯ್ಯನಾದರೋ ಪರಮೇಶ್ವರನನ್ನು ಕುರಿತು ಹೇಗೆ ಬೇಡುತ್ತಾ ಇದ್ದಾನೆ.

ಶಿಷ್ಯ

ಅವನು ಏನು ಬೇಡ್ತಾ ಇದ್ದಾನೆ ಸ್ವಾಮಿ ?

ನಿರೂಪಕ

ಮಾಯೆಗೆ ಸಿಲುಕಿ ಮರುಳಾದೆ ಮನುಜ
ದಾರಿಯರಿಯದೆ ಮಿಡುಕುವೆ ಏಕೆ ? | ಸೊಲ್ಲು |

ಒಳಗಿನ ಕಣ್ಣಳ ತೆರೆದು ನೋಡು
ಜ್ಞಾನ ಜ್ಯೋತಿಯು ಕಾಣುವುದು
ಜೀವಿತ ಸಮರ ಭೀಕರವಹುದು
ಸಿರಿತನ ಬಡತನ ಸ್ಥಿರವಲ್ಲವೋ* ೨೦೨

ಹೀಗೆ ಕನ್ನದ ಬೊಮ್ಮಯ್ಯನಿಗೆ ಮಹೇಶ್ವರನ ದಯೆಯಿಂದ 'ನಾನು ಕನ್ನವನ್ನು ಹಾಕಿದರೂ ಸಹ ಜಂಗಮಾರ್ಚನೆಯಿಂದ ನನಗೆ ಬಂದ ವಿಪತ್ತೆಲ್ಲವೂ ಪರಿಹಾರವಾಗಿದೆ' ಎಂದು ಪರಮೇಶ್ವರನನ್ನು ಕೊಂಡಾಡಿದ್ದಾನೆ.

---

* 'ಬೇಡರ ಕಣ್ಣಪ್ಪ' ಚಿತ್ರದ ಒಂದು ಗೀತೆಯ ತುಣುಕು.

ಮಂಗಳ ಕಥೆಯದರಂದವ ಪೇಳುವೆ
ಚಂದದಿ ಲಾಲಿಸಿ ಸಭಿಕರೆ ನೀವು
ಸಭಿಕರೆ ನೀವು | ೨೦೩

ಹೀಗೆ ಬಸವಣ್ಣನವರು ದಿನೇ ದಿನೇ 'ಪರಮೇಶ್ವರ, ನೀನು ಆದಿಯಿಂದ ಹಿಡಿದು ಅಂತ್ಯಜನವರೆಗೂ ಲಿಂಗವನ್ನು ಧರಿಸಿ ಬರಬೇಕೆಂದು ಅಪ್ಪಣೆಯನ್ನು ಮಾಡಿದ್ದಂತೆ ನಾನು ಬರತಕ್ಕ ಭಕ್ತರಾದ ಚೇಡರ ದಾಸಿಮಯ್ಯ, ಶಂಕರ ದಾಸಿಮಯ್ಯ, ಕಿನ್ನರಿ ಬೊಮ್ಮಯ್ಯ, ಮಾದಾರ ಚನ್ನಯ್ಯ, ಮೇದರ ಕೇತಯ್ಯ ಇಂತಹ ಶರಣರಿಗೆ ಲಿಂಗೋಪದೇಶವನ್ನು ಮಾಡಿ, ಅಂಗದ ಮೇಲೆ ಲಿಂಗವನ್ನು ಧರಿಸಿ ಅವರು ತಮ್ಮ ಸನ್ನಡತೆಯಿಂದ ಶರಣಾಗಿದ್ದಾರೆ.

ಶಿಷ್ಯ

ಲಿಂಗವನ್ನು ಧರಿಸಿದರೆ ಶರಣರಾಯ್ತರ ಸ್ವಾಮಿ ?

ನಿರೂಪಕ

ಅಯ್ಯಾ ಮಗು, ಕಡಜವು ಬೇರೆ ಹುಳುವನ್ನು ತಂದು ಗೂಡುಕಟ್ಟಿ ಅದು ತನ್ನ ಕೊಂಡಿಯಿಂದ ಚುಚ್ಚಿ ಚುಚ್ಚಿ ಹೆದರಿಸುತ್ತಿರುವಾಗ ಆ ಕೀಟವೂ ಸಹ ವೇದನೆಯನ್ನು ತಾಳಲಾರದೆ 'ಶಿವನೇ' 'ಶಿವನೇ' ಎಂದು ಪರಿತಪಿಸುತ್ತಿರುವಾಗ ಮೂವತ್ತಾರು ದಿವಸ ಕಳೆಯುವುದರೊಳಗಾಗಿ ಆ ಕೀಟವೂ ಸಹ ಕಡಜನ ರೂಪವನ್ನೇ ಪಡೆಯುತ್ತದೆಯೆಂದು ಶರಣರು ಉದಾಹರಿಸಿದ್ದಾರೆ. ಅಂದಮೇಲೆ, ಹೀಗಿರುವಾಗ ಬಸವಣ್ಣನವರು ಅನುಭವ ಮಂಟಪಕ್ಕೆ ಹೋದಾಗ ಅಲ್ಲಮಪ್ರಭುಗಳು, ಶಿವಯೋಗಿ ಸಿದ್ಧರಾಮಣ್ಣನವರು, ಜ್ಞಾನ ಮೂರ್ತಿ ಚನ್ನಬಸವಣ್ಣನವರು, ಮಡಿವಾಳ ಮಾಚಿದೇವರು, ಕಿನ್ನರಿ ಬೊಮ್ಮಯ್ಯ ಮುಂತಾದವರೆಲ್ಲ ಅನುಭವ ಮಂಟಪದಲ್ಲಿರುವಾಗ ಶಿವಯೋಗಿ ಸಿದ್ಧರಾಮಣ್ಣನವರಾದರೋ ಅವರಿಗೆ ಲಿಂಗದೀಕ್ಷೆ ಇಲ್ಲದಿರಲು ಮಡಿವಾಳ ಮಾಚಿದೇವರು 'ಲಿಂಗದೀಕ್ಷೆ ಇಲ್ಲದ ಸಿದ್ಧರಾಮಣ್ಣನವರು ಹೇಗೆ ಶಿವಯೋಗಿಗಳಾದರು? ಅನುಭವ ಮಂಟಪಕ್ಕೆ ಲಿಂಗದೀಕ್ಷೆ ಇಲ್ಲದವರು ಬರುವಂತಿಲ್ಲ. ಆದ್ದರಿಂದ ಸಿದ್ಧರಾಮಣ್ಣನವರಿಗೂ ಅನುಭವ ಮಂಟಪಕ್ಕೂ ಸಂಬಂಧವೇ ಇಲ್ಲ' ವೆನ್ನಲು ಬಸವಣ್ಣನವರಾದರೋ

ಗುರುವಿನ ಮಹಿಮೆಯ ಗುರುಭಕ್ತರೆ ಬಲ್ಲರು
ನರರೇನು ಬಲ್ಲರು ಶಿವನ ಮಹಿಮೆಯ
ಶಿವನ ಮಹಿಮೆಯ | ೨೦೪

ಅಂದಹಾಗೆ ಹರಮುನಿದರೆ ಗುರು ಕಾಯ್ವನು ಗುರು ಮುನಿದರೆ ಕಾಯ್ವರಾರು ? ಎಂದು ಬಸವಣ್ಣನವರು ಹೇಳುವಾಗ ಗುರುವು ಹೇಗಿರಬೇಕು ? ಎನ್ನುವುದಕ್ಕೆ ಜಗದ್ವಿಖ್ಯಾತ, ಅರಿಷಡ್ವರ್ಗಗಳಿಂದ ಬಹುದೂರ, ಜೀವಾತ್ಮ ಪರಮಾತ್ಮರ ಸ್ವರೂಪದ ಅರಿವುಳ್ಳವ, ಭಸ್ಮ ರುದ್ರಾಕ್ಷೀಧಾರಣ ನಿಪುಣ, ಲಿಂಗಪೂಜಾನಿರತ, ಮಂತ್ರ ಶರೀರಿ-ಇದೇ ಗುರುವಿನ ಲಕ್ಷಣ ಎಂದು ಗುರುಮುಖವನ್ನು ಬಸವಣ್ಣನವರು ಪ್ರಸಾರ ಮಾಡುತ್ತಿರಲು ಸಿದ್ಧರಾಮಣ್ಣನವರಾದರೋ "ಬಸವಣ್ಣನವರೇ ನಿಮ್ಮಿಂದಲೇ ನನಗೆ ಲಿಂಗದೀಕ್ಷೆಯಾಗಬೇಕು" ಎನ್ನಲು ಬಸವಣ್ಣನವರು ಅಲ್ಲಮಪ್ರಭುಗಳನ್ನೇ ಜಂಗಮರನ್ನಾಗಿ ಮಾಡಿ, ಕಿನ್ನರಿ ಬೊಮ್ಮಯ್ಯನನ್ನೇ ಸಮಯಾಚಾರಿಯನ್ನಾಗಿ ಮಾಡಿ, ಚನ್ನಬಸವಣ್ಣನವರನ್ನೇ ದೀಕ್ಷಾಗುರುವನ್ನಾಗಿ ಮಾಡಿ ಸಿದ್ಧರಾಮಯ್ಯನವರಿಗೆ ಲಿಂಗದೀಕ್ಷೆಯನ್ನು ಮಾಡಿದ್ದಾರೆ. ಈ ಸಮಾಚಾರವು ನಗರದಲ್ಲೆಲ್ಲ ಹರಡಿ ಯಾರು ಕಲ್ಯಾಣಪಟ್ಟಣಕ್ಕೆ ಲಿಂಗವಿಲ್ಲದೆ ಬರುತ್ತಾರೆಯೋ ಅವರಿಗೆಲ್ಲ ಲಿಂಗವನ್ನು ಧರಿಸಿ ಲಿಂಗವಂತನನ್ನಾಗಿ ಮಾಡಿಕೊಳ್ಳುತ್ತಾರೆ. ಇಂತಹ ಶರಣರ ಹಾವಳಿಯಿಂದ ನಾವು ಈ ನಗರವನ್ನು ಬಿಡಬೇಕಾಗುತ್ತದೆಯೆಂದು ಮಂಚಣ್ಣನವರು ಬಿಜ್ಜಳ ಮಹಾರಾಜನಲ್ಲಿಗೆ ದೂರನ್ನು ಕೊಟ್ಟಿದ್ದಾರೆ. 'ಸ್ವಾಮಿ ಬಸವಣ್ಣನವರಿಗೆ ಪಂಚಪರುಷದೃಷ್ಟಿಯಿದೆ ಎಂದು ಹೇಳುತ್ತಾರೆ. ಜೋಳದ ರಾಶಿಯನ್ನು ಮುತ್ತುಗಳನ್ನಾಗಿ ಮಾಡಿದ್ದಾರಂತೆ. ಈಗ ಆತನನ್ನು ಪರೀಕ್ಷಿಸಬೇಕು' ಎಂದು ಹೇಳಿದ್ದಾರೆ. ದೊರೆಯಾದರೋ 'ಏನು ಮಂಚಣ್ಣಪಂಡಿತರೇ, ಬಸವಣ್ಣನವರನ್ನು ಹೀಗೆ ಪುರಸ್ಕರಿಸಿ ಎನ್ನುತ್ತೀರೋ ತಿರಸ್ಕರಿಸಿ ಎನ್ನುತ್ತೀರೋ ನನಗೆ ತಿಳಿಯುತ್ತಿಲ್ಲ' ಎಂದು ಬಿಜ್ಜಳ ಮಹಾರಾಜನು ಹೇಳಲು 'ದೊರೆಯೇ ಕಕ್ಕಣ್ಣ, ಚಿಕ್ಕಣ್ಣ ಎನ್ನುವವರು ಮಾಂಡವ್ಯ ದೇಶದ ಮಹಾದೇವ ಭೂಪಾಲನ ಅಪ್ತರು. ಅವರು ಭವಿಗಳಲ್ಲವೆ? ಅವರು ಕಲ್ಯಾಣಪಟ್ಟಣವನ್ನು ಪ್ರವೇಶಿಸಿದಾಗ ಕರೇ ಬದನೇಕಾಯಿ ಹೀಚನ್ನು ಲಿಂಗವೆಂದು ಕಟ್ಟಿಕೊಂಡು ಬಂದಿದ್ದರಂತೆ. ಬಸವಣ್ಣನವರ ದಿವ್ಯದೃಷ್ಟಿಯಿಂದ ಆ ಬದನೇಕಾಯಿಗಳು ಲಿಂಗಗಳಾದವಂತೆ. ಇದು ನಿಜವೇ ಅಥವಾ ಸುಳ್ಳೆ ಎಂಬುದನ್ನು ನಾವು ಪರೀಕ್ಷಿಸಬೇಕಾದರೆ

ಬೂದು ಗುಂಬಳಕಾಯನ್ನು ತಂದು ಸಭೆ ಮುಂದಿರಿಸಿ ಅದನ್ನು ಲಿಂಗವನ್ನಾಗಿ ಮಾಡಿದರೆ ಅವೆಲ್ಲವನ್ನು ನಿಜವೆಂದೇ ನಂಬಬೇಕಾಗುತ್ತದೆ' ಎಂದಾಗ ಬೂದುಗುಂಬಳಕಾಯನ್ನು ತರಿಸಿ ಒಡ್ಡೋಲಗದ ಮುಂದೆ ಇಟ್ಟಿದ್ದಾರೆ. ಇತ್ತ ಬಸವಣ್ಣನವರಾದರೋ ತಮ್ಮ ಆಹ್ನಿಕಗಳನ್ನೆಲ್ಲ ಮುಗಿಸಿಕೊಂಡು ರಾಜಸಭೆಗೆ ಅವರು ಹೇಗೆ ಬರುತ್ತಿದ್ದಾರಪ್ಪಾ ಅಂದರೆ

ಶಿಷ್ಯ

ಹೇಗೆ ಬರುತ್ತಿದ್ದಾರೆ ಸ್ವಾಮಿ ?

ನಿರೂಪಕ

ಶ್ವೇತಾಂಬರವನುಟ್ಟು ರುದ್ರಾಕ್ಷಿಯನು ಧರಿಸಿ
ಭದ್ರಪೀಠವ ತಾವು ಅಲಂಕರಿಸಿದರು
ಅಲಂಕರಿಸಿದರು | ೨೦೫

ಹೀಗೆ ಪರಮೇಶ್ವರನ ಲಾಂಛನವಾದ ರುದ್ರಾಕ್ಷದ ಮಾಲೆಯನ್ನು ಧರಿಸಿಕೊಂಡು ರಾಜನ ಒಡ್ಡೋಲಗಕ್ಕೆ ಬಸವಣ್ಣನವರು ಬರಲು ಸಭೆಯಲ್ಲಿದ್ದವರೆಲ್ಲ ಬಸವಣ್ಣನವರಿಗೆ ಶರಣು ಶರಣು ಎಂದು ಸನ್ಮಾನಿಸಲು ದೊರೆಯಾದರೋ ಸಿಂಹಪೀಠದಲ್ಲಿ ಆಸೀನರಾಗಿದ್ದಾರೆ.

'ಬಸವಣ್ಣ, ನೀನು ಹೊಲೆಯರು ಮಾದಿಗರು ಎನ್ನದೆ ಎಲ್ಲರಿಗೂ ಲಿಂಗವನ್ನು ಧರಿಸುತ್ತೀಯೆ, ಅಷ್ಟೇ ಅಲ್ಲ ಕರೇ ಬದನೆಕಾಯಿಗಳು ಲಿಂಗವಾದವಂತೆ' ಎಂದು ಕೇಳಲು

'ಅದು ಪರಶಿವನ ಆಜ್ಞೆ ಸ್ವಾಮೀ.'

'ಹೌದಾ ? ಹಾಗಾದರೆ ಎಲ್ಲರೆದುರಿಗೂ ಇರುವ ಈ ಸಭಾಮಧ್ಯದಲ್ಲಿ ಕಾಣುತ್ತಿರುವ ಬೂದುಗುಂಬಳಕಾಯಿಗೂ ಶಿವನಾಜ್ಞೆ ಉಂಟಲ್ಲವೆ?'

'ಏಕಿಲ್ಲ? ನಮ್ಮ ನಮ್ಮ ನಂಬಿಕೆಯೇ ನಮಗೆ ದೇವರು! ಮಹಾಪ್ರಭು ನಂಬಿಕೆಯಿಂದ ಕುರಿಯ ಹಿಕ್ಕೆ ಲಿಂಗವಾಗಲಿಲ್ಲವೆ? ನಂಬಿಕೆಯಿಂದ ತರುಣಿಯ ಕುಚ ಲಿಂಗವಾಗಲಿಲ್ಲವೆ? ಅಂದಹಾಗೆ ನಂಬಿ ಕರೆದರೆ ಓ ಎನ್ನನೆ ಶಿವನು ? ನಂಬದೆ ನಚ್ಚದೆ ಬರಿದೆ ಕೂಗಿದರೆ ಕೊಂಬ ಮೆಟ್ಟಿ ಕುಯ್ವ ನಮ್ಮ ಕೂಡಲಸಂಗಮದೇವಾ. ಅಂದಹಾಗೆ, ದೊರೆಯೇ ಯಾವುದಕ್ಕೂ ನಂಬಿಕೆಯೇ ಕಾರಣವು. ಯಾರು ನಂಬಿಕೆಯಿಂದ ಪೂಜಿಸುತ್ತಾರೆಯೋ ಅಲ್ಲಿ ಶಿವನಿರುತ್ತಾನೆ. ಅಂದ ಮೇಲೆ ದೇವರನ್ನು ಪೂಜಿಸುವುದಕ್ಕೆ ಯಾವ ಸ್ಥಳವಾದರೇನು ?

ಶಿಷ್ಯ

ಎಲ್ಲಿ ಬೇಕಾದರೂ ಪೂಜಿಸಬಹುದೇ ಸ್ವಾಮಿ ?

ನಿರೂಪಕ

ಅಪ್ಪಾ ಮಗು ಸರ್ವಜ್ಞ ಮೂರ್ತಿ ಏನು ಹೇಳಿದ್ದಾರೆ

ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು
ಮನದಲ್ಲಿ ನೆನೆಯದಧಮನು-ದೇಗುಲದ
ಕೊನೆಯಲಿದ್ದೇನು ಸರ್ವಜ್ಞ | ೨೦೬

ಹಾಗೆಯೇ ನಂಬಿಕೆಯೇ ಮುಖ್ಯ ಕಾರಣ.' ಬಿಜ್ಜಳ ಮಹಾರಾಜನಿಗೆ ಬಸವಣ್ಣನವರು ಏನೆಂದು ಹೇಳುತ್ತಿದ್ದಾರೆ.

ಓಂ ನಮಃ ಶಿವಾಯ ಶಿವಾಯನಮಃ
ಶಿವಾಯ ನಮಃ ಓಂ ನಮಃ ಶಿವಾಯ
ಕರುಣಾಸಾಗರ ಭವಭಯ ದೂರ
ಪರಿಪಾಲಿಸು ನೀ ಗಿರಿಜಾ ರಮಣನೆ ೨೦೭

ಶಿವನಾಮ ಸ್ಮರಣಂ ನಿತ್ಯಂ ಕಿಂಚಿತ್ ಪಾಪಂ ವಿನಶ್ಯತಿ
ಶಿವನಾಮ ಸ್ಮರಣಂ ನಿತ್ಯಂ ಪುನರ್ಜನ್ಮವಿನಶ್ಯತಿ ೨೦೮

ಎಂಬಂತೆ ಬಸವಣ್ಣನವರು ದಿವ್ಯದೃಷ್ಟಿಯಿಂದ ಆ ಬೂದುಗುಂಬಳಕಾಯನ್ನು ನೋಡುತ್ತಿರಲು ಆ ಬೂದುಗುಂಬಳಕಾಯಿ ಎಲ್ಲರಿಗೂ ಗೋಚರವಾಗುವಂತೆ ಲಿಂಗವಾಗಿ ಪರಿಣಮಿಸಿದೆ.

ಮುಂದಣ ಕಥೆಯದರಂದವ ಪೇಳುವೆ
ಚಂದ್ರಶೇಖರನ ದಯದಿ ಚಂದದಿ ಕೇಳಿ
ಚಂದದಿ ಕೇಳಿ | ೨೦೯

ಶಿಷ್ಯ

ಆಮೇಲೆ ಮುಂದೇನಾಯ್ತು ಸ್ವಾಮಿ ?

ನಿರೂಪಕ

ಮಂಚಣ್ಣನವರಾದರೋ ಬಿಜ್ಜಳ ಮಹಾರಾಜನಲ್ಲಿ "ದೊರೆಯೇ ಯಾವ ಜಂಗಮ ರನ್ನು ನೋಡಿದರೂ ಕಾವೀ ರುದ್ರಾಕ್ಷಿ ಕೌಪೀನವನ್ನು ಧರಿಸಿ ಪರಶಿವನ ತೇಜಃಪುಂಜದಂತೆ ಕಾಣುತ್ತಾ ಇದ್ದಾರೆ. ಇವರು ಪುರುಷರಿಗೆ ಮಾತ್ರ ಹೀಗೆ ಕಾಣಿಸುತ್ತಿದ್ದಾರೆಯೋ ಅಥವಾ ಸ್ತ್ರೀಯರನ್ನು ಜಂಗಮರುಗಳನ್ನಾಗಿ ಮಾಡಿದರೆ ನಾವು ನಂಬಬಹುದಲ್ಲವೆ?" ಎಂದು ಮಂಚಣ್ಣ ಪಂಡಿತರು ಹೇಳಿದ ಮಾತಿಗೆ ಒಡಂಬಟ್ಟು ಬಿಜ್ಜಳ ಮಹಾರಾಜನು ತನ್ನ ಅರಮನೆಯಲ್ಲಿರುವ ದಾಸಿಯರಿಗೂ ತನ್ನ ಧರ್ಮಪತ್ನಿಯಾದ ಶಾಂತಾದೇವಿಗೂ ಕಾವಿಯನ್ನು ಧರಿಸಿ ಬಸಿತವನ್ನು ತ್ರಿಪುಂಡ್ರರೂಪವಾಗಿ ಧಾರಣೆ ಮಾಡಿ ಬಸವಣ್ಣನವರನ್ನು ಕರೆದು 'ಶರಣರ ಧಾಳಿ ಬಹಳ ಹೆಚ್ಚಾಗಿದೆ. ನಮ್ಮ ರಾಜಗೃಹದಲ್ಲಿ ನೀವು ಅವರೊಡನೆ ಕೆಲವು ಮಾತುಗಳನ್ನಾಡಬೇಕಾಗಿದೆ. ಬನ್ನಿ ಹೋಗೋಣ"ವೆಂದು ಬಸವಣ್ಣನವರನ್ನು ಅರಮನೆಗೆ ಕರೆದುಕೊಂಡು ಹೋಗಲು ಆ ರಾಜನ ಅರಮನೆಯಲ್ಲಿ ಸ್ತ್ರೀಯರೆಲ್ಲ ಜಂಗಮವೇಷವನ್ನು ಧರಿಸಿದ್ದಾರೆ. ಬಸವಣ್ಣನವರು ಆ ಗೃಹಕ್ಕೆ ಕಾಲಿಡುತ್ತಲೆ ಸ್ತ್ರೀಯರು ಜಂಗಮರೂಪದಲ್ಲಿದ್ದವರು 'ಶರಣು, ಬಸವಣ್ಣನವರೇ', ಎನ್ನಲು ಬಸವಣ್ಣನವರಾದರೋ 'ಶರಣು ಶರಣಪ್ಪ, ಜಂಗಮರೆ' ಎಂದು ನುಡಿಯಲು ಆ ಸ್ತ್ರೀಯರೆಲ್ಲರೂ ಪುರುಷಾಕೃತಿಯನ್ನು ಪಡೆದಿದ್ದಾರೆ. ಅನಂತರ ಬಿಜ್ಜಳ ಮಹಾರಾಜನು ನೋಡುವಾಗ ಅವರ ಮೈಮೇಲಿನ ಕುಚಗಳೆಲ್ಲವೂ ಮಾಯವಾಗಿ ಮೀಸೆಯೂ ಸಹ ಬಂದಿದೆ. ಇತ್ತ ಬಿಜ್ಜಳನಾದರೋ 'ಎಂಥಾ ಅವಿವೇಕವಾಯಿತು. ನಾನು ಪರೀಕ್ಷೆ ಮಾಡಲು ಹೋಗಿ ಇಂಥ ಅಧೋಗತಿಯನ್ನು ಕಾಣಬೇಕಾಯ್ತಲ್ಲ' ಎಂದು ಚಿಂತಾಕ್ರಾಂತನಾಗಿ ಸಂತಾಪಪಡುತ್ತಿದ್ದಾರೆ.

ಶಿಷ್ಯ

ಅವರು ಹೇಗೆ ಸಂತಾಪಪಡುತ್ತಿದ್ದಾರೆ ಗುರುವೆ ?

ನಿರೂಪಕ

ಮುಂದೇನ ಮಾಡಲಿ ಚಂದ್ರಶೇಖರ ಶಿವನೆ
ಮಂದ ಬುದ್ಧಿಯೊಳ್ ನಾನು ಕೆಟ್ಟೆನೊ ಹರನೇ
ಕೆಟ್ಟೆನೊ ಹರನೇ | ೨೧೦

ಅಂದಹಾಗೆ

ಆತ್ಮ ಬುದ್ಧಿಃ ಸುಖಂ ಚೈವ ಗುರು ಬುದ್ಧಿರ್ ವಿಶೇಷತಃ
ಪರಬುದ್ಧಿರ್ವಿನಾಶಾಯ ಸ್ತ್ರೀ ಬುದ್ಧಿಃ ಪ್ರಲಯಾಂತಿಕಾ ೨೧೧

ಎಂಬಂತೆ ಪರರ ಮಾತನ್ನು ಕೇಳಬಾರದು. ಮಂಚಣ್ಣ ಪಂಡಿತರ ಮಾತನ್ನು ಕೇಳಿ ನಾನು ಕೆಟ್ಟೆನೆ. ಬಸವಣ್ಣ, ನಿನ್ನ ಮಹಿಮೆಯು ನನಗೆ ಗೊತ್ತಿಲ್ಲದೆ ನಾನು ಕುಹಕ ಮಾಡಿದೆನೆಂದು ನೀನು ಯೋಚಿಸಬಾರದು. ನನ್ನ ಅಪರಾಧವನ್ನು ಕ್ಷಮಿಸಿ, ನನ್ನ ರಾಣಿಯನ್ನು ನನ್ನ ಪರಿಚಾರಿಕೆಯರನ್ನು ಮೊದಲಿನಂತೆಯೇ ಸ್ತ್ರೀ ರೂಪದಲ್ಲಿರುವಂತೆ ಮಾಡು ಎಂದು ಬಸವಣ್ಣನವರ ಪಾದಗಳನ್ನು ಹಿಡಿದು ಕೊಂಡು ಬೇಡಿಕೊಳ್ಳಲು ಬಸವಣ್ಣನವರು 'ತಥಾಸ್ತು' ಎಂದು ಆಶೀರ್ವದಿಸಿದ ತಕ್ಷಣವೇನೇ ಪುರುಷ ರೂಪದಲ್ಲಿದ್ದ ಸ್ತ್ರೀಯರೆಲ್ಲರೂ ನಿಜವಾದ ಸ್ತ್ರೀಯರೇ ಆಗಿದ್ದಾರೆ. ಆ ಸ್ತ್ರೀಯರೆಲ್ಲರೂ ಬಸವಣ್ಣನವರ ಪಾದಗಳನ್ನು ಹಿಡಿದು

ಶರಣರ ಮಹಿಮೆಯ ಅರಿಯದೆ ನಾವೆಲ್ಲ
ಧರಿಸಬೇಕಾಯಿತು ಪುರುಷರೂಪವನು
ಪುರುಷರೂಪವನು | ೨೧೨

ಮಹನೀಯ ಬಸವಣ್ಣ ಶರಣರ ಮಹಿಮೆಯು ನಮಗೆ ಈಗ ತಿಳಿಯಿತು. ಶರಣರೇ ಶಿವಸ್ವರೂಪರು, ಶಿವನೇ ಶರಣಸ್ವರೂಪ. ನೀವು ಮಹಾಮಹಿಮರು. ನಮ್ಮ ಮೇಲೆ ಕೃಪೆ ಯಿಟ್ಟು ಮೊದಲಿದ್ದಂತೆ ಮಾಡಿದ ಕಾರಣ ನಾವೇ ಧನ್ಯರು ಎಂದು ಕೊಂಡಾಡಿದ್ದಾರೆ.

ಶಿಷ್ಯ

ಇದೊಂದು ಅದ್ಭುತ ಕೇಳಿದ್ದಾಯ್ತು. ಮುಂದೇನಾಯ್ತು ಗುರುವೆ ?

ನಿರೂಪಕ

ಕಾಯಕದೊಳು ತಾನು ಜೀವನ ನಡೆಸುತ್ತ
ಭಾವಶುದ್ಧಿಯಲಿಹನು ನುಲಿಯಚಂದಯ್ಯ
ನುಲಿಯಚಂದಯ್ಯ | ೨೧೩

ಅಂದ ಹಾಗೆ ಕಲ್ಯಾಣಪಟ್ಟಣದಲ್ಲಿ ಕಾಯಕವೆಂದರೆ ಅವತ್ತವತ್ತಿನ ಅನ್ನ ಆಯಾಸ ಏಲ್ಲದ ಮರಣವೆ ಮಹಾನವಮಿಯೆಂದು ದುಡಿಯುತ್ತಿದ್ದರೇ ವಿನಾ ನಾಳೆಗ ಇರಬೇಕೆಂಬ ಆಸೆಯು ಶರಣರಲ್ಲಿರಲಿಲ್ಲ. ಕಾರಣವೇನೆಂದರೆ

ನಾಳೆ ಎಂಬುವವನ ಮನೆಯು ಹಾಳು ಕೇಳು
ನಾಳೆ ತನಗಿರುವುದು ನಿಜವೇನು ಹೇಳು
ನಿಜವೇನು ಹೇಳು | ೨೧೪

ಎಂಬ ಶರಣರ ಉಕ್ತಿಯಂತೆ ಪ್ರತೀ ದಿನವೂ ಸಹ ಕಾರೆಯ ಸೊಪ್ಪಾದರೂ ಕಾಯಕದಿಂದಲೆ ತರಬೇಕೆಂದು ಶರಣರ ಧ್ಯೇಯವಿರುವಾಗ ಕಲ್ಯಾಣ ಪಟ್ಟಣದಲ್ಲಿ ನುಲಿಯ ಚಂದಯ್ಯನು ಪ್ರತಿನಿತ್ಯವು ಬೆಳಗಿನ ಜಾವದಲ್ಲಿಯೇ ಎದ್ದು ಸ್ನಾನದಿಂದ ಶುಚಿರ್ಭೂತನಾಗಿ ತನ್ನ ಅನುಷ್ಠಾನಗಳನ್ನು ಮುಗಿಸಿಕೊಂಡು ಕಾಡಿಗೆ ಹೋಗಿ ನಾರು ಸಿಗುವ ಮರದಲ್ಲಿ ತೊಗಟೆಯನ್ನು ಎಬ್ಬಿಕೊಂಡು ಬಂದು ಆ ತೊಗಟೆಯಲ್ಲಿನ ನಾರನ್ನು ತೆಗೆದು ಹುರಿಯನ್ನು ಮಾಡಿ ಹಗ್ಗವನ್ನು ಹೊಸೆದು ಅದನ್ನು ಮಾರಿ ಬಂದ ಹಣದಿಂದ ಜಂಗಮಾರ್ಚನೆಯನ್ನು ಮಾಡಿ ಮಿಕ್ಕ ಹಣದಿಂದ ದಂಪತಿಗಳೀರ್ವರೂ ಅವರ ಜೀವನೋಪಾಯವನ್ನು ಕಲ್ಪಿಸಿಕೊಳ್ಳುತ್ತಿದ್ದರು. ಬೆಳಗುವಾಗ ಒಂದು ದಿನ ಏನಾಗಿದೆ

ಶಿಷ್ಯ

ಏನಾಗಿದೆ ಸ್ವಾಮಿ ?

ನಿರೂಪಕ

ನುಲಿಯ ಚಂದಯ್ಯನಾದರೋ ಎಂದಿನಂತೆ ಕಾಯಕಕ್ಕೆ ಕಾಡಿಗೆ ಹೋಗಿ ಕಾರಣಾಂತರದಿಂದ ಬಾಯಾರಿಕೆಯಾಗಲು ಆ ಕಾಡಿನಲ್ಲಿ ಒಂದು ಸರೋವರವನ್ನು ಕಂಡು ನೀರನ್ನು ಕುಡಿಯಲು ಇಷ್ಟಲಿಂಗಕ್ಕೆ ಅರ್ಪಿಸದೆ ನೀರನ್ನು ಕುಡಿಯಬಾರದೆಂದು ತಿಳಿದು ತನ್ನ ಕರಡಿಗೆಯಲ್ಲಿದ್ದ ಲಿಂಗವನ್ನು ಈಚೆ ಕಡೆಗೆ ತೆಗೆದು ಗಂಗೋದಕವನ್ನು ನಿವೇದನೆ ಮಾಡಿ ನೀರನ್ನು ಕುಡಿಯ ಬೇಕೆಂದು ಯೋಚಿಸುತ ಲಿಂಗವನ್ನು ಅಂಗೈಯಲ್ಲಿಟ್ಟು ಲಿಂಗಕ್ಕೆ ಪ್ರೋಕ್ಷಿಸುವಾಗ ಆ ಲಿಂಗವಾದರೋ ಅಕಸ್ಮಾತ್ತಾಗಿ ಆ ನದಿಯೊಳಗೆ ಸೇರಿಹೋಯಿತು. ಅದಕ್ಕಾಗಿ ನುಲಿಯ ಚಂದಯ್ಯನು 'ಅಯ್ಯಾ ಲಿಂಗವೇ ನನ್ನನ್ನು ನಂಬಿ ನೀನು ನೀರಿನಲ್ಲಿ ಮುಳುಗಿ ಕೊಂಡೆಯಾ? ನಾನು ಏನು ಅಪರಾಧವನ್ನು ಮಾಡಿದ್ದೆ? ನನ್ನ ಊಟ ಉಪಚಾರವನ್ನು ನಿನಗೆ ನಿವೇದಿಸದೆ ನಾನೇನಾದರೂ ಸೇವಿಸಿದ್ದೆನೆ? ಬೇಡವಪ್ಪ ಎಂದು ಬೇಡಿಕೊಳ್ಳುತ್ತಿದ್ದೇನೆ.'

ಶಿಷ್ಯ

ಹೇಗೆ ಬೇಡಿದರು ಗುರುವೆ ?

ನಿರೂಪಕ

'ನಂಬಿದ ಮೇಲೆನ್ನ ಹಂಬಲಿಸುತ ಶಿವನೆ
ಚಂದ್ರಶೇಖರ ನಾಳೆ ಕುಂದೆಣಿಸಬೇಡ
ಕುಂದೆಣಿಸಬೇಡ' | ೨೧೫

'ನುಲಿಯ ಚಂದಯ್ಯನಾದರೋ ಲಿಂಗವೇ ಅಂಗವಾಗಿ ಅಂಗವೇ ಲಿಂಗವಾಗಿ ಅಂಗ-ಲಿಂಗ ಸಾಮರಸ್ಯ ಮನೋಭಾವದಿಂದ ನಡೆಯುತ್ತಿದ್ದಾನಲ್ಲದೆ ನಿನಗೆ ಏನಾದರೂ ವಂಚನೆ ಮೋಸ ದ್ರೋಹಗಳನ್ನೇನಾದರೂ ಮಾಡುತ್ತಿದ್ದೆನೆ ? ಬಾರಾ ಬಾರಪ್ಪ, ಬಾರ ಲಿಂಗಯ್ಯ' ಎಂದು ಬಹಳವಾಗಿ ಬೇಡಿಕೊಳ್ಳುತ್ತಾರೆ. ಇತ್ತ ಲಿಂಗವು ಬರದಿರಲು ಗಂಗಾಭವಾನಿಗೆ ಹೇಳುತ್ತಿದ್ದಾನೆ.

'ಗಂಗಾಭವಾನಿಯೆ ಲಿಂಗಯ್ಯನಿಗೆ ಹೇಳು
ಮಂಗಳರೂಪನೆ ಕೋಪ ಬಿಡೆಂದು
ಕೋಪ ಬಿಡೆಂದು | ೨೧೬

ನುಲಿಯ ಚಂದಯ್ಯನವರಾದರೋ 'ಅಮ್ಮಾ ಗಂಗಾಭವಾನಿ, ನನ್ನನ್ನು ಬಿಟ್ಟು ಬಿಡಬಹುದೆ ? ಏನಾದರೂ ಹೇಳು ತಾಯಿ' ಎಂದು ಗಂಗಾಭವಾನಿಯನ್ನು ಸಾಕ್ಷಿ ಮಾಡಿ ತನ್ನ ಕರಸ್ಥಲದ ಲಿಂಗಯ್ಯ ನಾನು ಕರೆದರೂ ಬರದೆ ಅನಂತರ ಪುನಃ ಬಂದರೆ ನಾನು ಕಣ್ಣೆತ್ತಿಯೂ ಸಹ ನೋಡುವುದಿಲ್ಲ. ಜಂಗಮಾರ್ಚನೆಗೆ ವೇಳೆಯಾಗುತ್ತಿದೆ' ಎಂದು ಹೇಳಿ ಚಂದಯ್ಯನವರು ನೀರನೂ ಸಹ ಕುಡಿಯದೆ 'ಹೇ ಲಿಂಗಯ್ಯಾ ನೀನು ನನಗೆ ದ್ರೋಹ ಮಾಡಿದರೂ ಚಿಂತೆಯಿಲ್ಲ, ನಾನು ಮಾಡಲಾರೆ' ಎಂದುಕೊಂಡು ಕಾಯಕಕ್ಕೆ ಕುಂದಕ ಬರುವುದೆಂದೆಣಿಸಿ ಕಾಡಿಗೆ ಬಂದು ಮರದ ತೊಗಟೆಗಳನ್ನು ಎಬ್ಬಿಕೊಂಡು ತನ್ನ ಮನೆಯ ಬಳಿಗೆ ಬರುವುದರೊಳಗಾಗಿ ಅವನಿಗೆ ಬಹಳ ಆಯಾಸವಾಗಿದೆ. ಆ ತೊಗಟೆಯನ್ನೆಲ್ಲ ಮನೆಯ ಹೊರಗಡೆಯಿಟ್ಟು ಆಯಾಸವನ್ನು ಪರಿಹರಿಸಿಕೊಳ್ಳಬೇಕೆಂದು ಮನೆಬಾಗಿಲಲ್ಲಿ ಮರೆಯಾಗಿ ಮಲಗಿದ್ದಾರೆ. ಇತ್ತ ಲಿಂಗಯ್ಯನಾದರೋ 'ನಾನು ನುಲಿಯ ಚಂದಯ್ಯನವರ ಇಷ್ಟಲಿಂಗವಾಗಿದ್ದೇನು. ನಾನು ಎಂಥಾ ಕೆಟ್ಟ ಕೆಲಸವನ್ನು ಮಾಡಿದೆ' ಎಂದು ಆ ಲಿಂಗಮೂರ್ತಿಯು ಒಬ್ಬ ವಟುವಿನಂತೆ ವೇಷವನ್ನು ಧರಿಸಿ ನುಲಿಯ ಚಂದಯ್ಯನ ಮನೆಯ ಬಳಿಗೆ ಹೇಗೆ ಬರುತ್ತಿದ್ದಾನಪ್ಪಾ ಅಂದರೆ

ಶಿಷ್ಯ

ಹೇಗೆ ಬರುತ್ತಿದ್ದಾನೆ ಸ್ವಾಮಿ ?

ನಿರೂಪಕ

ಇಷ್ಟಲಿಂಗವಾಗಿ ಕೆಟ್ಟದ್ದ ಮಾಡಿದೆನು
ಭ್ರಷ್ಟನೆಂದೆನ್ನುವರು ನುಲಿಯ ಚಂದಯ್ಯ
ನುಲಿಯ ಚಂದಯ್ಯ | ೨೧೭

ನಾನು ಅವನ ಪ್ರಾಣವಾಗಿ ತನುಮನಧನಾದಿಗಳನ್ನು ನನಗೆ ಅರ್ಪಿಸುತ್ತಿದ್ದರೂ ಸಹ ನಾನು ದ್ರೋಹ ಮಾಡಿದಂತಾಗಿದೆ. ನಾನು ಶರಣರಿಗೆ ದ್ರೋಹವೆಸಗುವುದು ತರವೆ? ಕೂಡದು ಕೂಡದು. ಈಗ ನಾನು ಅವರ ಬಳಿಗೆ ಹೋದರೆ ಅವರಿಂದ ನನಗೆ ಏನು ವಿಘಾತ ಒದಗುತ್ತದೆಯೋ ಏನೋ' ಎಂದು ವಟುರೂಪದಲ್ಲಿದ್ದ ಲಿಂಗಯ್ಯನು "ನಾರನ್ನು ಬೇಗ ಬೇಗ ಸಿಗಿದು ಹಗ್ಗವನ್ನು ಹೊಸೆದುಕೊಂಡು ಬೀದಿ ಬೀದಿಯಲ್ಲಿ ಮಾರಿಕೊಂಡು ಬಂದು ನುಲಿಯ ಚಂದಯ್ಯನಿಗೆ ಹೆಚ್ಚಾಗಿ ದುಡ್ಡನ್ನು ಕೊಟ್ಟರೆ ನನ್ನ ತಪ್ಪನ್ನು ಮನ್ನಿಸಿ ನನಗೆ ಪೂಜ್ಯತೆ ಕೊಡುತ್ತಾನೆ" ಎಂದು ಬೀದಿ ಬೀದಿಯಲ್ಲಿ ಲಿಂಗಯ್ಯನಾದರೋ ಸಾರಿಕೊಂಡು ಹೋಗುತ್ತಿದ್ದಾನೆ. ಯಾರು ನೋಡಿದರೂ ಸಹ 'ಇದು ನುಲಿಯ ಚಂದಯ್ಯ ಹೊಸೆದ ಹಗ್ಗವಲ್ಲ' ಎಂದು ಆ ಹಗ್ಗಗಳನ್ನು ಯಾರೂ ಕೊಳ್ಳಲಿಲ್ಲ.

ಲಿಂಗವಾದರು ಬೆದರಿ ಕಂಗೆಟ್ಟು ತಾನಾಗ
ಮಂಗಳಾಂಗನ ದಯೆ ಹೇಗಿದೆಯೋಕಾಣೆ
ಹೇಗಿದೆಯೋ ಕಾಣೆ | ೨೧೮

ಹೀಗೆ ಯಾರೂ ಕೊಳ್ಳಲಿಲ್ಲವಲ್ಲ ಎಂದು ವಟುವೇಷದಲ್ಲಿದ್ದ ಲಿಂಗಯ್ಯನು 'ಭಕ್ತಾಗ್ರಣಿಯಾದ ಬಸವಣ್ಣನವರ ಅರಮನೆ ಮುಂದೆ ಹೋದರೆ ಕೊಂಡುಕೊಳ್ಳಬಹುದು' ಎಂದು ಬಸವಣ್ಣನವರ ಅರಮನೆ ಮುಂದೆ ಹೋಗುತ್ತಿರುವಾಗ ಬಸವಣ್ಣನವರು ವಟುವನ್ನು ಕಂಡು 'ಇದು ನುಲಿಯ ಚಂದಯ್ಯನ ಲಿಂಗವು ಈ ಲಿಂಗಯ್ಯನಿಗು ನುಲಿಯ ಚಂದಯ್ಯನಿಗೂ ವಿರಸ ಉಂಟಾಗಿ ಹೀಗಾಗಿದೆ'

ಭಕ್ತ ಶಿರೋಮಣಿಯೆ ಭಕ್ತರ ಬಂಧುವೆ
ಮುಕ್ತಿದಾಯಕ ನೀನು ಹೀಗಾಗಬಹುದೆ
ಹೀಗಾಗಬಹುದೆ | ೨೧೯

'ಅಯ್ಯಾ ಲಿಂಗದೇವ, ನೀನು ಭಕ್ತರಿಗೆ ಹೀಗೆ ಮಾಡಬಹುದೆ? ನಿನಗೆ ಇದು ಯೋಗ್ಯವೆ ? ಎಂದು ಹಗ್ಗಗಳನ್ನು ತೆಗೆದುಕೊಂಡು ಲಿಂಗಯ್ಯನಿಗೆ ಕೈತುಂಬ ವರಹಗಳನ್ನು ಕೊಟ್ಟು, ಲಿಂಗದೇವನ ಪಾದಕ್ಕೆ ನಮಿಸಿ ಶರಣರ ಕಾಯಕಕ್ಕೆ ವೇಳೆಯಾಗುತ್ತದೆಯೆಂದು ಕಳಿಸಿಕೊಟ್ಟಿದ್ದಾರೆ.

ತಂದಿರುವೆನು ಹೊನ್ನ ಚಂದದಿ ಸ್ವೀಕರಿಸು
ಮಂದ ಬುದ್ಧಿಯಿಂದ ಕುಂದೆಣಿಸಿದೆನು
ಕುಂದೆಣಿಸಿದೆನು | ೨೨೦

'ಅಯ್ಯಾ ನುಲಿಯ ಚಂದಯ್ಯ, ನನ್ನ ಮಂದಬುದ್ಧಿಯಿಂದ ನಿನಗೆ ಇಂತಹ ಕುಂದಕವನ್ನೆಣಿಸಿದೆ. ನಾನು ಮಾಡಿದ ತಪ್ಪನ್ನು ಮನ್ನಿಸಿ ನನಗೆ ಪೂಜ್ಯತೆಯನ್ನು ಕೊಡು' ಎಂದು ಹೇಳಿ ಕೈಯಲ್ಲಿದ್ದ ಹೊನ್ನನ್ನು ಕೊಡಲಿಕ್ಕೆ ಹೋದಾಗ ನುಲಿಯ ಚಂದಯ್ಯನು ನೋಡಿ ಇಷ್ಟು ಹಣವನ್ನು ಎಲ್ಲಿಂದ ತಂದೆ? ಯಾರು ಕೊಟ್ಟರು?' ಎಂದು ಕೋಪಾರೂಢಿತನಾಗಿ ಪಕ್ಕದಲ್ಲಿದ್ದ ದಂಡವನ್ನು ತೆಗೆದುಕೊಂಡು ಈಚೆಗೆ ಬರುತ್ತಿದ್ದಾನೆ. ಲಿಂಗಯ್ಯನಾದರೋ 'ನಾನು ಮಾಡಿದ್ದು ತಪ್ಪು ಈತನ ಕೈಗೆ ಸಿಕ್ಕಿದರೆ ಏನು ಕೊಲೆ ಕೊಡುತ್ತಾನೆಯೋ' ಎಂದು ಗಾಬರಿಯಿಂದ ವೇಗವಾಗಿ ಹೋಗಿ ಬಸವಣ್ಣನವರ ಮೊರೆಯನ್ನು ಬಿದ್ದಿದ್ದಾರೆ. ಇತ್ತ ನುಲಿಯ ಚಂದಯ್ಯನವರಾದರೋ ಪಶ್ಚಾತ್ತಾಪಪಡುತ್ತ 'ಕಾಯಕಕ್ಕೆ ಧಕ್ಕೆ ಬಂದಿದೆ ಪರಮೇಶ್ವರ, ಏನು ಮಾಡಲಿ?' ಎಂದು ಯೋಚಿಸುತ್ತ ಇರಲು ಬಸವಣ್ಣನವರಾದರೋ ಲಿಂಗಯ್ಯನನ್ನು ಮಡಿವಾಳ ಮಾಚದೇವನನ್ನು ಚನ್ನಬಸವಣ್ಣನವರನ್ನೂ ಜೊತೆಯಲ್ಲಿ ಕರೆದುಕೊಂಡು ಬಂದು

ಬಸವೇಶ್ವರ : ನುಲಿಯ ಚಂದಯ್ಯನವರೇ, ನಿಮ್ಮ ಲಿಂಗಯ್ಯನು ಏನು ತಪ್ಪು ಮಾಡಿದನು? ನನ್ನನ್ನು ಮೊರೆ ಬಿದ್ದಿದ್ದಾನಲ್ಲ. ಅವನನ್ನು ನಿಮ್ಮ ಸೆಚ್ಚೆಗೆ ಸೇರಲು ಅವಕಾಶ ಕೊಡಿ.

ಚಂದಯ್ಯ : ಬಸವಣ್ಣನವರೇ, ನೀವೇ ಶಿವಾನುಭವ ಮಂಟಪದಲ್ಲಿ ಹೇಳಿರುವುದನ್ನು ಮರೆತಿರುವಿರಾ ?

ಬಸವೇಶ್ವರ : ಅದೇನು ಹೇಳಪ್ಪಾ.

ಚಂದಯ್ಯ : ನಂಬಬಲ್ಲ ಭಕ್ತನಿಗೆ ದೇವನೊಬ್ಬನಲ್ಲವೆ? ಇಬ್ಬರುಂಟೆ ಅಯ್ಯಾ? ನಂಬ ಬಲ್ಲ ಹೆಂಡತಿಗೆ ಗಂಡನೊಬ್ಬನಲ್ಲದೆ ಇಬ್ಬರುಂಟೆ ಅಯ್ಯಾ? ಹೀಗೆ ಗಂಡ ಹೆಂಡಿರ ಸಮಭಾವದಲ್ಲಿದ್ದ ಲಿಂಗಯ್ಯನೇ ನನಗೆ ಗಂಡನಾಗಿ ವೀರ ಪತಿವ್ರತಾ ಶಿರೋಮಣಿಯು ತನ್ನ ಗಂಡನಿಗೆ ದೇಹವನ್ನು ಹೇಗೆ ಅರ್ಪಿಸುತ್ತಾಳೆಯೋ ಹಾಗೆ ಸತಿಪತಿ ಭಾವದಲ್ಲಿದ್ದರೂ ಸಹ ನನ್ನ ಮೇಲೆ ವಂಚನೆಯೆ ? ಬಸವಣ್ಣನವರೇ ನೀವೇ ಹೇಳಿ (ಎಂಬುದಾಗಿ ಹೇಳಿ ಪುನಃ ಕೋಪಾನ್ವಿತನಾಗಿ ಲಿಂಗಯ್ಯನನ್ನು ಹೊಡೆಯಲು ಪ್ರಯತ್ನಿಸಿದ್ದಾನೆ. ಲಿಂಗಯ್ಯನಾದರೋ ಹೆದರಿ ಗಡಗಡ ನಡುಗುತ್ತ)

ಲಿಂಗಯ್ಯ : ಬಸವೇಶ್ವರ, ನಿನ್ನ ಪಾದದಾಣೆ ನಾನು ಭಕ್ತ ದ್ರೋಹವನ್ನು ಮಾಡಲಾರೆ. ನನ್ನನ್ನು ಕ್ಷಮಿಸಿ ಈ ಭಕ್ತನು ನನ್ನನ್ನು ಒಪ್ಪುವಂತೆ ಮಾಡು.

ಬಸವೇಶ್ವರ : ಭಕ್ತ ಶಿರೋಮಣಿ ನುಲಿಯ ಚಂದಯ್ಯನವರೇ, ನೀವು ದೊಡ್ಡವರು. ನಿಮಗೆ ನಾನು ಹೇಳತಕ್ಕದ್ದೇನಿದೆ? ಆದರೂ ಈ ಲಿಂಗಯ್ಯನನ್ನು ಕ್ಷಮಿಸಿ ಸ್ವೀಕರಿಸಬೇಕು.

ಚಂದಯ್ಯ : ಸ್ವಾಮಿ ಬಸವಣ್ಣನವರೇ, ನಿಮ್ಮ ಮಾತನ್ನು ತೆಗೆದುಹಾಕಬಾರದೆಂದು ಈ ಲಿಂಗಯ್ಯನಿಗೆ ಮನ್ನಣೆ ಕೊಡುತ್ತಿದ್ದೇನೆ. ಆಗಬಹುದೆ ?

ಬಸವೇಶ್ವರ : ಸಂತೋಷ ತುಂಬ ಸಂತೋಷ. ಎಲ್ಲವೂ ನನ್ನ ಸಂಗಮೇಶ್ವರ ಕೃಪೆ.

ಎಂದು ಹೇಳಿ ಸಮಾಧಾನ ಮಾಡಿ ಲಿಂಗಯ್ಯನನ್ನು ಸೆಜ್ಜೆಗೆ ಸೇರುವಂತೆ ಅಪ್ಪಣೆಯನ್ನು ಮಾಡಿದ್ದಾರೆ. ನುಲಿಯ ಚಂದಯ್ಯನೂ ಸಹ ಒಪ್ಪಿಕೊಂಡು ತನ್ನ ಕರಡಿಗೆಯಲ್ಲಿ ಲಿಂಗಯ್ಯನನ್ನು ಸೇರಿಸಿಕೊಂಡಿದ್ದಾರೆ.

ಶೃಂಗಾರ ಶಿವಕಳೆ ಸಿರಿಯ ಕಲ್ಯಾಣದ
ಮಂಗಳೋತ್ಸವದ ಮಹಿಮೆಯನೊರೆವೆ
ಮಹಿಮೆಯನೊರೆವೆ | ೨೨೧

ಶಿಷ್ಯ

ಅದ್ಯಾವ ಮಹಿಮೆ ಗುರುವೆ ?

ನಿರೂಪಕ

ಅಪ್ಪಾ ಮಗುವೆ ಈಗಲಾದರೂ ನೀನು ಬಾಯಿಬಿಟ್ಟೆಯಲ್ಲ ಸಂತೋಷ. ಆತುರಪಟ್ಟರೆ ಹೇಗೆ ? ಸಾವಧಾನವಾಗಿ ಕೇಳು ಹೇಳುತ್ತೇನೆ.

ಕಲ್ಯಾಣಪಟ್ಟಣದಲ್ಲಿ ಬಹು ಜನಗಣಸ್ತೋಮವು ವಾಸಿಸುತ್ತಿರುವಾಗ ಆ ಕಲ್ಯಾಣ ಪಟ್ಟಣವಾದರೋ ಎಷ್ಟು ವಿಸ್ತಾರವಾಗಿತ್ತು.

ಶಿಷ್ಯ

ಅದೆಷ್ಟು ವಿಸ್ತಾರವಾಗಿತ್ತು ಸ್ವಾಮಿ ?

ನಿರೂಪಕ

ಇಳೆಗೆ ನಾಲ್ವತ್ತೆಂಟು ಯೋಜನ ವಿಸ್ತಾರದ
ಕಳೆಯುಳ್ಳ ಕಲ್ಯಾಣ ಕ್ರಮದಿ ಒಪ್ಪಿಹುದು
ಕ್ರಮದಿ ಒಪ್ಪಿಹುದು | ೨೨೨

ಆ ಕಲ್ಯಾಣಪಟ್ಟಣವಾದರೋ ನಲವತ್ತೆಂಟು ಯೋಜನದಳತೆ ವಿಸ್ತಾರ ಉಳ್ಳದ್ದಾಗಿ ಆ ನಗರದಲ್ಲಿಯಾದರೋ ಹರಳಯ್ಯ ಮಧುವರಸಯ್ಯ, ಬೊಬ್ಬಿಬಾಚರಸಯ್ಯ, ನಾಗಮ್ಮಯ್ಯ, ಇನ್ನೂ ಮಿಕ್ಕನಾದ ಶರಣರೆಲ್ಲರೂ ಅಲ್ಲಿ ವಾಸವಾಗಿದ್ದಾರೆ. ಆ ಪ್ರತಿಯೊಬ್ಬರ ಮನೆ ಮುಂದೆಯೂ ಹೇಗೆ ರಾರಾಜಿಸುತ್ತಾ ಇತ್ತು.

ಶಿಷ್ಯ

ಏನು ಗುರುಗಳೆ ?

ನಿರೂಪಕ

ಮಲ್ಲೆ ಮಲ್ಲಿಗೆ ಜಾಜಿ ಮರುಗ ಸೇವಂತಿಗೆ ವನ
ಚೆಲುವು ಪುಷ್ಪಾದ ವನವು ಚೆಲ್ವಿನಿಂದಿರಲು
ಚೆಲ್ವಿನಿಂದಿರಲು | ೨೨೩

ಅಯ್ಯಾ ಮಗು, ಆ ನಗರದಲ್ಲಿ ವಾಸಿಸುವವರೆಲ್ಲ ಶರಣರಾದುದರಿಂದ ಎಲ್ಲೆಲ್ಲಿ ನೋಡಿದರೂ ಮಲ್ಲೆ ಮಲ್ಲಿಗೆ ಜಾಜಿ ಸುರಗಿ ಸೇವಂತಿಗೆಯನ್ನು ಪ್ರತಿಯೊಬ್ಬರ ಮನೆ ಮುಂದೆಯೂ ಬೆಳೆದಿದ್ದಾರೆ. ಬಿಲ್ವಪತ್ರೆ ಮರಗಳು ಶೋಭಾಯಮಾನವಾಗಿ ಬೆಳೆದಿವೆ. ಹೀಗಿರುವಾಗ ಅಂತಹ ವಿಶಾಲವಾದ ನಗರದಲ್ಲಿ ಹರಳಯ್ಯನೆಂಬ ಮಹಾ ಶಿವಭಕ್ತನು ವಾಸವಾಗಿದ್ದಾನೆ. ಅವನು ಜಾತಿಯಲ್ಲಿ ಶ್ವಪಚನಾದರೂ ಶ್ರೇಷ್ಠ ಶಿವಭಕ್ತನಾಗಿ ತನ್ನ ಆತ್ಮಲಿಂಗದಲ್ಲಿ ನಿಷ್ಠೆಯುಳ್ಳವನಾಗಿದ್ದಾನೆ. ಆತನ ಕಾಯಕವೆಂದರೆ ಮೊಚ್ಚೆಕಾಯಕ. ಪಾದರಕ್ಷೆಗಳನ್ನು ಮಾಡಿ ಅವುಗಳನ್ನು ಮಾರಿ ಬಂದ ಹಣದಿಂದ ಹರ ಗುರು ಶರಣರ ಸೇವೆಯನ್ನು ಮಾಡಿ

ಕೃತಾರ್ಥರಾಗುತ್ತಿದ್ದಾರೆ. ಹರಳಯ್ಯನವರು, ಅವರ ಧರ್ಮಪತ್ನಿ ಕಲ್ಯಾಣಮ್ಮ ಅವರ ಮಗನಾದ ಶೀಲವಂತ ಇವರಿಂದೊಡಗೂಡಿ ಸಂಸಾರ ಸುಖದಲ್ಲಿ ನಿರತರಾಗಿದ್ದಾರೆ. ಅಂದಮೇಲೆ ಬಿಜ್ಜಳ ಮಹಾರಾಜನು ತಾನು ರಾಜ್ಯಭಾರವನ್ನು ನಡೆಸುತ್ತಿರುವಾಗ ಒಡ್ಡೋಲಗದಲ್ಲಿ ಕುಳಿತು 'ರಾಜ್ಯಾದಾಯವನ್ನರಿಯದೆ, ರಾಜ್ಯದಿಂದ ಬಂದ ಅರ್ಥವನ್ನರಿಯದೆ ಕೋಡಗನಂತಿರ್ಪ. ಅರಸು ತಾನೇ ಕೆಡುಗುಂ'. ಅಂದಮೇಲೆ ಬಿಜ್ಜಳ ಮಹಾರಾಜನು ರಾಜಕಾರ್ಯಗಳಲ್ಲಿ ಮುಂದಾಲೋಚನೆಯನ್ನು ಮಾಡುತ್ತ ಇರುವಾಗ ಅಂತಹ ಸಮಯದಲ್ಲಿ ಬಾಗಿಲ ಮೇಲುಭಾಗದಲ್ಲಿ ಪಲ್ಲಿ ನುಡಿದಿದೆ. ಬಿಜ್ಜಳ ಮಹಾರಾಜನು ಒಡ್ಡೋಲಗದಲ್ಲಿ ಆಸೀನರಾಗಿದ್ದ ಪಂಡಿತರು, ವಾಗ್ಮಿಗಳು, ಮೇಧಾವಿಗಳನ್ನು ಕುರಿತು 'ಪಲ್ಲಿ ಏನೆಂದು ನುಡಿದಿದೆ' ಎಂಬುದನ್ನು ಶಕುನಜ್ಞರಾದ ತಾವುಗಳು ಹೇಳಬೇಕು' ಎಂದು ಕೇಳಿದ್ದಾನೆ. ಪಂಡಿತರಾದರೋ

'ಪಲ್ಲಿ ಶಕುನವ ಕೇಳು ಬಿಜ್ಜಳ ರಾಯನೆ
ತಲ್ಲಣವು ಲೋಕಕೆ ಎಂದು ನುಡಿದಿಹುದು
ಎಂದು ನುಡಿದಿಹುದು' | ೨೨೪

'ಅಯ್ಯಾ ದೊರೆಯೆ, ನೀನು ಇದುವರೆವಿಗೂ ಸುಖ ಸಾಮ್ರಾಜ್ಯಶಾಹಿಯಾಗಿ ಏಕ ಚಕ್ರಾಧೀಶನಾಗಿ ರಾಜ್ಯಭಾರವನ್ನು ಮಾಡಿದ್ದು ಸರಿಯಷ್ಟೆ. ಈ ಪಲ್ಲಿ ನುಡಿದುದನ್ನು ನೋಡಿದರೆ ಕಲ್ಯಾಣಕ್ಕೆ ಏನೊ ಕಂಟಕವಿರಬಹುದೆಂದು ತೋರುತ್ತದೆ' ಎಂದಾಗ ಬಿಜ್ಜಳ ಮಹಾರಾಜನಾದರೋ 'ಏನು ಕಂಟಕವಿದೆಯೆ ಹೇಳಿ?' ಎನ್ನಲು ಪಂಡಿತರು ಹೇಳುತ್ತಾ ಇದ್ದಾರೆ.

'ಕಷ್ಟವು ಕಲ್ಯಾಣ ಪಟ್ಟಣಕೆ ಇನ್ನು ಮುಂದೆ
ನಷ್ಟಾವು ಆಗುತ್ತೆತೆ ಎಂದು ನುಡಿದಿಹುದು
ಎಂದು ನುಡಿದಿಹುದು' | ೨೨೫

'ಕಲ್ಯಾಣ ಪಟ್ಟಣಕ್ಕೆ ವಿಧವಿಧವಾದ ಕಷ್ಟಗಳು ಒದಗುತ್ತವೆಯೆಂದು ಮುಂದೆ ಈ ನಗರದಲ್ಲಿ ಇರುವ ಪ್ರಮಥಾದಿಗಳಿಗೂ ಸಹ ನಷ್ಟವೆಂದು ಹೇಳುತ್ತಿದೆ'. ಅದಕ್ಕೆ ಬಿಜ್ಜಳ ಮಹಾರಾಜನು ಕೇಳುತ್ತಿದ್ದಾನೆ 'ಇದಕ್ಕೆ ಏನೂ ಉಪಾಯವಿಲ್ಲವೆ?' ಅದಕ್ಕೆ ಪಂಡಿತರು ಹೇಳುತ್ತಿದ್ದಾರೆ. 'ಅಯ್ಯಾ ದೊರೆಯೇ ಮುಂದಿನ ಕಾಲಗತಿಗಳನ್ನು ಹೇಳುವುದು ಸಾಧ್ಯವೆ? ನಿನ್ನ ಬಲಭುಜವಾಗಿರುವ ಬಸವ ದಂಡೇಶನು ಸಹ ನಿನ್ನನ್ನು ಬಿಟ್ಟು ಹೋಗುವನೆಂದು ಈ ಪಲ್ಲಿ ಸೂಚಿಸುತ್ತಿದೆ' ಎನ್ನಲು ಬಿಜ್ಜಳ ಮಹಾರಾಜನು 'ಅಯ್ಯಾ ಬಸವ ದಂಡೇಶ ಈ ಪಲ್ಲಿ ಶಕುನವನ್ನು ಕೇಳಿ ನನ್ನ ಮನಸ್ಸಿಗೆ ಏನೋ ಒಂದು ಸಂಕಲ್ಪವು ಉಂಟಾಗುತ್ತಾ ಇದೆ' ಎನ್ನುತ್ತ

ಗಡಿದುರ್ಗ ಮಂತ್ರಿ ಸಾಮಂತರಾಜರ ಮೇಲೆ
ಎಡಬಿಡದೆ ಎಚ್ಚರದೊಳಿರಬೇಕು ಎಂದ
ಇರಬೇಕು ಎಂದ | ೨೨೬

'ಅಯ್ಯಾ ಬಸವದಂಡೇಶ ನಮ್ಮ ಆಡಳಿತಕ್ಕೆ ಒಳಗಾಗಿರುವ ಗಡಿದುರ್ಗಗಳ ಮೇಲೆ ನಿಗಾ ಇರಲಿ. ನಮಗೆ ಕಪ್ಪಕಾಣಿಕೆಗಳನ್ನು ಕೊಡುವ ಸಾಮಂತರ ಮೇಲೆ ನಾವು ಎಚ್ಚರವಹಿಸಿ ಜಾಗೃತರಾಗಿರಬೇಕು' ಎಂದು ಬಸವಣ್ಣನವರಿಗೆ ತಿಳಿಸಿದ್ದಾರೆ. ಬಸವಣ್ಣನವರಾದರೋ ಬಿಜ್ಜಳ ಮಹಾರಾಜನಿಗೆ ಪ್ರತಿ ಉತ್ತರವಾಗಿ

ಮುಂದೆ ಬರುವಂತೆ ಕಾಲಗತಿಗಳನೆಲ್ಲ
ಚಂದ್ರಧರನೆ ಬಲ್ಲ ಕೇಳೆನ್ನ ಸೊಲ್ಲ
.ಕೇಳೆನ್ನ ಸೊಲ್ಲ | ೨೨೭

'ದೊರೆಯೇ ಮುಂದೆ ಬರುವ ಕಾಲಗತಿಗಳಿಗೆಲ್ಲ ಜಗತ್ತಿನೊಡೆಯನಾದ ಚಂದ್ರಧರನಿಗಲ್ಲದೆ ಮತ್ಯಾರಿಗೆ ಗೊತ್ತಿದೆ' ಎಂದು ಬಸವಣ್ಣನವರು ಹೇಳಲು ಬಿಜ್ಜಳನು ಏನು ಮಾಡಬೇಕೆಂದು ಅರ್ಥವಾಗದೆ ಬೆಪ್ಪಾಗಿ ಕುಳಿತಿದ್ದಾನೆ. ಅಂದಹಾಗೆ, ಬಸವಣ್ಣನವರಾದರೋ ಶರಣನಡಿಯಿಟ್ಟ ನೆಲವೇ ಕೈಲಾಸವೆಂದು ಹೊಲೆಗೇರಿಯಾಗಿರುವ ಹರಳಯ್ಯನವರ ಬೀದಿಗೆ ಹೋಗಿದ್ದಾರೆ. ಆ ಬೀದಿಯಲ್ಲಾದರೋ ಮಾರಿಯನ್ನು ಪೂಜಿಕೊಂಡು ಪ್ರಾಣಿಗಳನ್ನು ಬಲಿ ಕೊಡುತ್ತಾ ಇದ್ದಾರೆ. ಬಸವಣ್ಣನವರು ಹೋಗಿ ಅಲ್ಲಿನ ಜನರನ್ನು ವಿಚಾರಿಸಿದ್ದಾರೆ. ವಿಚಾರಿಸುವಾಗ 'ಸ್ವಾಮಿ ನಾವು ಹೊಲೆಯರು. ನಿಮ್ಮಂತ ಮಹನೀಯರು ಇಲ್ಲಿಗೆ ಬರಬಹುದೆ?' ಎನ್ನಲು ಬಸವಣ್ಣನವರು ಹೇಳುತಿದ್ದಾರೆ.

ಶಿಷ್ಯ

ಏನು ಹೇಳಿದರು ಗುರುವೆ ?

ನಿರೂಪಕ

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಗೆ
ಕೂಡಲಸಂಗನ ಶರಣರೆಲ್ಲರೂ ಒಂದೆ | ೨೨೮

ಅಂದಮೇಲೆ, ಅಯ್ಯೊ ಮಹನೀಯರೇ ಪರಮೇಶ್ವರನ ದೃಷ್ಟಿಯಲ್ಲಿ ಇದು ಹೊಲೆಯನ ಭೂಮಿ, ಇದು ಉತ್ತಮನ ಭೂಮಿ ಎಂದು ಬೇರೆ ಬೇರೆ ವಿಭಜನೆ ಉಂಟೆ? ಉದಯಿಸುವ ಸೂರ್ಯನಿಗೆ ಇದು ಬಡವನ ಮನೆ ಇದು ಶ್ರೀಮಂತರ ಮನೆಯೆಂದು ಭೇದವಿದೆಯೆ? ದೇವರ ದೃಷ್ಟಿಯಲ್ಲಿ ಎಲ್ಲರೂ ಒಂದೇ ಅಲ್ಲವೆ?' ಅಂದಾಗ ಎಲ್ಲರೂ ಬಸವಣ್ಣನವರ ಮಾತನ್ನು ಮೌನವಾಗಿ ನಿಂತು ಕೇಳುತ್ತಿದ್ದಾರೆ. 'ಅಯ್ಯಾ ನನ್ನ ಪ್ರಿಯಬಂಧುಗಳೆ, ಸರ್ವರಿಗೂ ಶಿವನಿರುವಾಗ ಸರ್ವರನ್ನು ರಕ್ಷಿಸುವ ದೊರೆ ಪರಮೇಶ್ವರನಾಗಿರುವಾಗ ನಿಮ್ಮಿಂದಲೇ ಕೋಳಿಕುರಿ ಆಡುಗಳನ್ನು ಬಲಿಕೇಳುವ ಮಾರಿ ಮಸಣಿಗಳು ನಿಮ್ಮನ್ನು ರಕ್ಷಿಸಬಲ್ಲವೆ? ಅಥವಾ ನೀವು ಕೇಳಿದ್ದನ್ನು ಕೊಡಬಲ್ಲವೆ?

ಮರನ ಗೊಟ್ಟಿಗೆ ಬಪ್ಪ ಕಿರುಕುಳ ದೈವಕ್ಕೆ
ಕುರಿಯನಿಕ್ಕಿಹೆವೆಂದು ನಲಿನಲಿದಾಡುವಿರಿ
ಕುರಿ ಸತ್ತು ಕಾಯ್ವುದೆ ಹರ ಮುಳಿದವರ
ಕೂಡಲಸಂಗಮದೇವನಿಗೆ ಶರಣೆನ್ನಿರೇ | ೨೨೯

ಅಯ್ಯಾ ಮಹನೀಯರೇ, ದೇವರ ದೃಷ್ಟಿಯಲ್ಲಿ ಕಂಗಳು ತಪ್ಪಿ ನೋಡಿದರೆ ಮಾರಿ, ಆದ್ದರಿಂದ ನಾವೆಲ್ಲರೂ ಆ ಪರಶಿವನ ಮಕ್ಕಳಲ್ಲವೆ ? ಎಂದು ಹೇಳಲು ಆ ಅಸ್ಪೃಶ್ಯರಾದರೋ 'ಇದೇನ್ ಬಿಡಿ ಸ್ವಾಮಿ ನೀವು ಹೇಳದ ನಂಬಕೆ ಸಾಧ್ಯವ? ಹಿರಿಯೋರು ಜಾತಿಮತ ಅನ್ನದ ಯಾಕೆ ಮಾಡಿದ್ದರು?'

ಶಿಷ್ಯ

ಅದಕ್ಕೆ ಬಸವಣ್ಣನವರು ಏನ್ ಹೇಳುದ್ರು ಗುರುವೆ ?

ನಿರೂಪಕ

ಅಯ್ಯಾ ಭಕ್ತ ಶಿರೋಮಣಿಗಳೇ ಜಾತಿ ಮತಗಳೆಂಬವು ಕಸುಬಿಗೆ ಕೊಟ್ಟ
ಒಂದೊಂದು ಮೆರುಗು ಕಾಣಿರಪ್ಪ.

ಶಿಷ್ಯ

ಮೆರುಗು ? ಏನ್ ಮೆರಗು ಬುದ್ಧಿ ?

ನಿರೂಪಕ

ಕಾಸಿ ಕಮ್ಮಾರನಾದ
ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ
ಲೇಸನೆ ಬಯಸುವ ನಮ್ಮ ಕೂಡಲ ಸಂಗಮದೇವನ
ಶರಣರನೆಲ್ಲ ಒಂದೇ ಎಂಬೆ | ೨೩೦

ಎಂದು ಬಸವಣ್ಣನವರು ಅವರಿಗೆ ಉತ್ತರವನ್ನು ಹೇಳಲು 'ಅಯ್ಯಾ ಭಕ್ತ ಶಿರೋಮಣಿಗಳೇ ಇನ್ನು ಮುಂದೆ ಇಂತಹ ಅಮಾನುಷ ಕೃತ್ಯವನ್ನು ದೇವರ ಹೆಸರಿನಲ್ಲಿ ಮಾಡಬಾರದು' ಎಂದು ಬಸವಣ್ಣನವರು ಹೇಳಿದ್ದಾರೆ. ಅದಕ್ಕೆ ಅವರು ಏನು ಹೇಳಿದ್ದಾರೆ.

ಶಿಷ್ಯ

ಏನು ಹೇಳಿದ್ದಾರೆ ಗುರುವೆ ?

ನಿರೂಪಕ

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ ಈ ವಿಶ್ವದೊಳಗೆ
ಈ ವಿಶ್ವದೊಳಗೆ | ೨೩೧

'ಅಯ್ಯಾ ಭಕ್ತ ಶಿರೋಮಣಿಗಳೇ ಮೇಲುಕೀಳು ಎಂಬ ಭಾವನೆ ಅವರವರ ನಡತೆಯಲ್ಲಿ ಬಂದಿದೆ.

ಮಡದಿ ಪ್ರಾಣದಲ್ಲಿದ್ದಿತೆ ಮೊಲೆ ಮುಡಿ
ಒಡೆಯನ ಪ್ರಾಣದಲ್ಲಿದ್ದಿತೆ ಯಜ್ಞೋಪವೀತ ಶಿವದಾರ ಉಡಿದಾರ
ಕಡೆಯಲ್ಲಿದ್ದ ಅಂತ್ಯಜನ ಪ್ರಾಣದಲ್ಲಿ ಹಿಡಿದಿದ್ದನೆ ಹಿಡಿಗೋಲ
ನೀ ತೊಡಕಿಕ್ಕಿದ ತೊಡರ ಲೋಕದ
ಜಡರೆತ್ತ ಬಲ್ಲರಯ್ಯಾ ರಾಮನಾಥಾ | ೨೩೨

ಅಂದಹಾಗೆ ಅವರವರ ಕಸುಬಿನಂತೆ ಪದ್ಧತಿಗನುಸಾರವಾಗಿ ಜಾತಿ ಇದೆಯೇ ಹೊರತು ಬೇರೇನೂ ಅಲ್ಲ. ಉದಾಹರಣೆಗಾಗಿ ಕೇಳಿ, ಹರಳಯ್ಯನವರು ಮೊಚ್ಚೆ ಕಾಯಕದಲ್ಲಿ ಅವರು ಕೈಯಲ್ಲಿ ರಂಪಿ ಹಿಡಿದಿರುವಂತೆ ಅಂತರಂಗದಲ್ಲಿರುವ ಆತ್ಮನು ಅದನ್ನು ಒಡಿದಿರುವನೆ? ನೀವೇ ಯೋಚನೆ ಮಾಡಿ' ಎಂದು ಬಸವಣ್ಣನವರು ಆ ಶ್ವಪಚರಿಗೆ ಬುದ್ಧಿವಾದವನ್ನು ಹೇಳಿದ್ದಾರೆ.

ಸುಗುಣ ಗುಣನಿಧಿ ನೀವು ಅಗಣಿತ ಮಹಿಮನು
ಜಗದೊಳು ಪೂಜಿಸಿ ಅಘಹರನ ನೀವು
ಅಘಹರನ ನೀವು | ೨೩೩

ಅಯ್ಯಾ ಅಂಗವು ಬೆಳೆದಷ್ಟು ಅಂಗಿಯನ್ನಿಡಬೇಕೆಂಬುದೇ ಭಾವಾರ್ಥ. ಆದುದರಿಂದ ನೀವು ಸಜ್ಜನರಾಗಿ ಯಾವ ಪ್ರಾಣಿಗಳನ್ನೂ ಕೊಲ್ಲಬೇಡಿರಿ. ನಿಮಗೇನಾದರೂ ಸ್ವಲ್ಪ ಕುಂದುಂಟಾದರೂ ಎಷ್ಟು ಸಂಕಟಪಡುತ್ತೀರೋ ಹಾಗೆಯೇ ಅಲ್ಲವೇ ಪ್ರಾಣಿಗಳೂ ಕೂಡ? ಬಸವಣ್ಣನವರ ಮಾತುಗಳನ್ನು ಕೇಳಿ ಒಬ್ಬಾತ ಹೇಳುತ್ತಿದ್ದಾನೆ. 'ಬುಡಿಬುದ್ಧಿ, ನಾವು ಮನೇಲಿ ಕಾಯಿಲೆ ಕಸಾಲೆ ಬಂದ್ರೆ ನಮ್ಮ ಮಾರಮ್ಮುಂಗೆ ಹರ್ಕೆ ಮಾಡ್ಕೋತೀವಿ. ಕುರೀನೋ ಕೋಳೀನೊ ತಕ್ಕೊಂಡೋಗಿ ಅಮ್ಮುನ್ಗೆ ಬಲಿಕೊಟ್ರೆ ಕಾಯ್ಲೆ ಉಸಾರಾಯ್ತದೆ ಸ್ವಾಮಿ' ಎಂದು ಹೇಳಲು

ಶಿಷ್ಯ

ಅದಕ್ಕೆ ಬಸವಣ್ಣನವರು ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ಹಬ್ಬಕೆ ತಂದ ಕುರಿ ತೋರಣಕೆ ಕಟ್ಟಿದ ತಳಿರ ಮೇಯುವುದು
ಕೊಂದಹರೆಂದರಿಯದೆ ಬೆಂದೊಡಲ ಹೊರೆವಾಸೆಯಲಿ
ಕುರಿ ಸತ್ತು ಕಾಯುವುದೆ ಹರಮುಳಿದವರ
ಕೊಂದವರುಳಿವರೆ ಕೂಡಲಸಂಗಮದೇವ | ೨೩೪

"ಅಯ್ಯಾ ಭಕ್ತ ಶಿರೋಮಣಿಗಳೇ, ದೇವರ ದೃಷ್ಟಿಯಲ್ಲಿ ಸರ್ವಪ್ರಾಣಿಗಳೂ ಮಕ್ಕಳ ಸಮಾನ. ತನ್ನ ಮಗುವನ್ನು ತಾಯಿ ಮುಂದೆ ಕೊಲೆ ಮಾಡುವಾಗ ನವಮಾಸ ಹೊತ್ತು ಹೆತ್ತು ಸಾಕಿದ ತಾಯಿಗೆ ಎಷ್ಟು ಸಂಕಟವಾಗುತ್ತದೆ. ನೀವೇ ಯೋಚಿಸಿ" ಎಂದು ಬಸವಣ್ಣನವರು ಬುದ್ಧಿವಾದವನ್ನು ಹೇಳಿದ್ದಾರೆ. ಅದಕ್ಕೆ ಮತ್ತೊಬ್ಬನು "ಬುಡಿ ಬುದ್ಧಿ ನೀವೇಳ್ದಂಗೆ ಮಾಡಕೋಗಿ ನಮ್ಮನೆ ಹಾಳಾಗೋಗ್ಬುಡ್ತದೆ. ನಾವು ಹರಕೆ ಒಪ್ಪುಸ್ಲೇ ಹೋದ್ರೆ ನಮ್ಮ ಕಾಯ್ಲೆ ವಾಸಿಯಾಯ್ತದ ಬುದ್ಧಿ?" ಅಂದಾಗ ಬಸವಣ್ಣನವರು ಬುದ್ಧಿವಾದವಾಗಿ ಮತ್ತೆ ಹೇಳಿದ್ದಾರೆ.

ಶಿಷ್ಯ

ಏನು ಹೇಳಿದ್ದಾರೆ ಗುರುವೆ ?

ನಿರೂಪಕ

ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ ೨೩೫

ಅಂದ ಹಾಗೆ ಪ್ರತಿಯೊಂದು ಪ್ರಾಣಿಯನ್ನೂ ತನ್ನಂತೆಯೇ ತಿಳಿಯಬೇಕೆಂದು ಬಸವಣ್ಣನವರು ಹೇಳಲು ಅದಕ್ಕೆ ಅವರು "ಅಲ್ಲಾ ಸ್ವಾಮಿ, ನರಸಮರ್ಪಣೆ ಮೃತ್ಯುದೇವಿಗೆ, ಕುರಿಸಮರ್ಪಣೆ ಶಕ್ತಿದೇವಿಗೆ, ಎಂದು ಹೇಳುವರಲ್ಲ ಬುದ್ಧಿ? ಹಾಗೆ ನಾವು ನಡೆದುಕೊಳ್ಳದಿದ್ದಲ್ಲಿ ಇಲ್ಲದ ಸಲ್ಲದ ಕಾಯಿದೆ ತಂದು ಕುರಿ ಕಡಿಯೋ ಹಾಗೆ ಮಾಡ್ತಾಳಲ್ಲ ಬುದ್ಧಿ" ಎಂದು ಹೇಳಲು ಬಸವಣ್ಣನವರು ಆ ಭಕ್ತರಿಗೆ ಮತ್ತೇನು ಹೇಳುತ್ತಿದ್ದಾರೆ,

ಶಿಷ್ಯ

ಮತ್ತದೇನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ಅಯ್ಯಾ ಭಕ್ತ ಶಿರೋಮಣಿಗಳೇ, ನರಸಮರ್ಪಣೆ ಮೃತ್ಯುದೇವಿಗೆ ಎಂದರೆ, ಮನುಷ್ಯನಾಗಿ ಹುಟ್ಟಿದ ಮೇಲೆ ನರನು ಹರನಾಗಬೇಕಪ್ಪ; ಮಾನವನು ದೇವನಾಗಬೇಕು; ಪಾಮರನಾಗಬಾರದು. ಪಾಮರನಾದುದರಿಂದಲೇ ಅವನು ಧರ್ಮ ಕರ್ಮ ವಿವೇಚನೆ ಇಲ್ಲದೆ ದುರಾಚಾರದಿಂದ ನಡೆದರೆ ಅವನ ದೇಹವು ರೋಗರುಜಿನಾದಿಗಳಿಂದ ಕೃಶವಾಗಿ ಮೃತ್ಯುವಿನ ವಶಕ್ಕೆ ತುತ್ತಾಗುತ್ತದೆ. ಕುರಿ ಸಮರ್ಪಣೆ ಶಕ್ತಿದೇವಿಗೆ ಎಂದರೆ ಮನುಷ್ಯನು ನಡೆಯತಕ್ಕಂತ ಸನ್ಮಾರ್ಗದಲ್ಲಿ ನಡೆಯುತ್ತಿರುವಾಗ ಯಾವ ಶಕ್ತಿಯು ಕಾಯಕರಣೇಂದ್ರಿಯಗಳಿಗೆ ಆಧಾರಭೂತವಾಗಿದೆಯೋ ಯಾವ ಚೈತನ್ಯವು ಜಾಗೃತ್ ಸ್ವಪ್ನ ಸುಷುಪ್ತಿಗಳ ಸಾಕ್ಷೀಭೂತವಾಗಿದೆಯೋ ಆ ಅರಿವೇ ಆತ್ಮ. ಹಾಗೆಯೇ ಪರಮಾತ್ಮನನ್ನು ನಾವು ನಮ್ಮ ಅರಿವಿನಿಂದ ಅರಿಯದೆ ಕುರಿಗಳಾಗಿ ಬಿಡುತ್ತೇವೆ. ನಮ್ಮ ದೇಹವೂ ಸಹ ಶಕ್ತಿಗುಂದಿ ನಮಗೆ ಕುಂದುಂಟಾಗುತ್ತದೆ. ಇಷ್ಟೇ ಇಲ್ಲಿರತಕ್ಕಂತ ಅಂತರಾರ್ಥ" ಎಂದು ಬಸವಣ್ಣನವರು ಧರ್ಮೋಪದೇಶವನ್ನು ಮಾಡಿದ್ದಾರೆ.

ಶಿಷ್ಯ

ಅದಕ್ಕೆ ಆ ಜನ ಒಪ್ಪಿದರೆ ಗುರುಗಳೇ

ನಿರೂಪಕ

ಬಸವಣ್ಣನವರು ಆ ಜನರಿಗೆ ಒಪ್ಪಿಗೆಯಾಗುವಂತೆ ಹೇಳುತ್ತಿದ್ದಾರಪ್ಪಾ.

ದಯವೇ ಧರ್ಮದ ಮೂಲವಯ್ಯಾ
ದಯವಿಲ್ಲದಾ ಧರ್ಮ ಯಾವುದಯ್ಯಾ
ದಯೆಯಿರಬೇಕು ಸಕಲ ಪ್ರಾಣಿಗಳಲ್ಲಿಯೂ
ಇದೇ ಅಂತರಂಗ ಶುದ್ಧಿ
ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ ೨೩೬

ಅಯ್ಯಾ ಭಕ್ತರೆ ಪರಮಾತ್ಮನ ಸೃಷ್ಟಿಯಲ್ಲಿ ಮನುಷ್ಯನ ಉಪಯೋಗಕ್ಕೆಂದು ಸಕಲ ಪ್ರಾಣಿಗಳನ್ನು ಸೃಷ್ಟಿಸಿದ್ದಾನೆ. ಆ ಪ್ರಾಣಿಗಳೂ ಸಹ ನಾವು ಅವುಗಳನ್ನು ಹೇಗೆ ಬಳಕೆಯಲ್ಲಿಟ್ಟುಕೊಳ್ಳುತ್ತೇವೆಯೋ ಅದರಂತೆ ಪ್ರಾಣಿಗಳು ನಮ್ಮನ್ನು ನಂಬಿ ಕೊಂಡಿರುತ್ತವೆ. ಆದುದರಿಂದ

ಮಾತೃವತ್ ಸರ್ವ ಭೂತಾನಿ
ಪರದ್ರವ್ಯಾಣಿ ಲೋಷ್ಟವತ್ | ೨೩೭

ಎಲ್ಲಾ ಪ್ರಾಣಿಗಳು ಒಂದೇ ಸಮಾನವೆಂದು ತಿಳಿದು ನಾವು ನಂಬಿಕೊಂಡಿದ್ದರೆ ದೇವರು ಮೆಚ್ಚುತ್ತಾನೆ" ಎಂದು ಬಸವಣ್ಣನವರು ಹೇಳಲು "ಬುದ್ಧಿ, ನಾವು ಶ್ವಪಚರು ಎಂದು ಊರೊಳಕ್ಕೆ ಸೇರಿಸುವುದಿಲ್ಲ. ಬುದ್ಧಿ, ನಮಗೆ ವಿದ್ಯಾಬುದ್ಧಿ ಕಲ್ಸೋರಿಲ್ಲ. ನಾವು ವಿದ್ಯಾವಂತರಲ್ಲ. ನಾವೂ ವಿದ್ಯಾವಂತರಾಗಿದ್ರೆ ನಾವು ತಿಳಿದಮಟ್ಟಿಗೆ ನಮ್ಮಲಿರೋ ದುಷ್ಟತ್ಯನೆಲ್ಲ ಬಿಡಬಹುದಾಗಿತ್ತು ಸ್ವಾಮಿ" ಎಂದು ಹೇಳಿದ್ದಾರೆ. ಇದನ್ನು ಬಸವಣ್ಣನವರು ಬಹಳವಾಗಿ ಯೋಚನೆ ಮಾಡುತ್ತ ನಗರಕ್ಕೆ ದಯಮಾಡ್ಸಿದ್ದಾರೆ.

ಶಿಷ್ಯ

ಆಮೇಲೇನಾಯ್ತು ಸ್ವಾಮಿ ?

ನಿರೂಪಕ

ಅಪ್ಪಾ ಮಗುವೆ, ಈ ಸಮಾಚಾರವನ್ನು ಶರಣನಾದ ಹರಳಯ್ಯನಿಗೆ ಅವರ ಸಮಾಜದವರು ಹೇಳಲು 'ಆ ಮಹನೀಯನಾದ ಬಸವೇಶ್ವರನನ್ನು ನಾನು ನೋಡಬೇಕು' ಎಂದು ಬಸವಣ್ಣನವರ ಅರಮನೆಗೆ ಹೋಗಿದ್ದಾನೆ.

ಶಿಷ್ಯ

ಹೋದಮೇಲೇನಾಯ್ತು ಸ್ವಾಮಿ ?

ನಿರೂಪಕ

ಶರಣರೆಲ್ಲರು ಆಗ ಪರವಶದಿಂ ತಾವು
ಹರಗುರು ಶರಣರ ಸೇವೆಯೊಳಿರಲು
ಸೇವೆಯೊಳಿರಲು | ೨೩೮

ಹರಳಯ್ಯನು ಹೋದಾಗ ಹೋಗಿ ಬರುವ ಶರಣರ ಸಮೂಹದಲ್ಲಿ ಬಸವಣ್ಣನವರು ಯಾವಾಗ ಹೊರಗಡೆ ಬರುತ್ತಾರೆ ಎಂದು ಆಲೋಚನೆಯನ್ನು ಮಾಡುತ್ತ ಇರುವಾಗ ಹರಳಯ್ಯನವರಾದರೋ ತನ್ನ ಇಷ್ಟಲಿಂಗಕ್ಕೆ ಏನೆಂದು ಸೂಚನೆ ಕೊಡುತ್ತಿದ್ದಾರೆ.

ಶರಣು ಶರಣೂ ದೇವ ಶರಣು ಶರಣು ಲಿಂಗ
ಹರಳ ಬಂದಿಹನೆಂದು ಸೂಚನೆಯ ತಿಳುಹು
ಸೂಚನೆಯ ತಿಳುಹು | ೨೩೯

ಓಂ ಮಹಾದೇವ, ಇಷ್ಟಲಿಂಗವೇ ಶ್ರೇಷ್ಠ ಮೂರುತಿಯೇ ಪ್ರಾಣಸಖನೆ, ಅಜ್ಞಾನವನ್ನು ಹೋಗಲಾಡಿಸುವ ಮಹಾಮಹಿನಾದ ಬಸವಣ್ಣನನ್ನು ನಾನು ಕಾಣಬೇಕೆಂಬ ಅಪೇಕ್ಷೆ ಇರುವುದು ನೀನು ಹೋಗಿ ಬಸವಣ್ಣನವರಿಗೆ ಈ ವಿಚಾರವನ್ನು ತಿಳಿಸು ಎಂಬುದಾಗಿ ಇಷ್ಟಲಿಂಗವನ್ನು ಹೇಗೆ ಪ್ರಾರ್ಥಿಸುತ್ತಿದ್ದಾರೆ.

ಶಿಷ್ಯ

ಹೇಗೆ ಪ್ರಾರ್ಥಿಸುತ್ತಿದ್ದಾರೆ ಗುರುವೆ ?

ನಿರೂಪಕ

ಬ್ರಹ್ಮ ಮುರಾರಿ ಸುರಾರ್ಚಿತ ಲಿಂಗಂ
ನಿರ್ಮಲ ಭೂಷಿತ ಶೋಭಿತ ಲಿಂಗಂ
ಜನ್ಮಜ ದುಃಖ ವಿನಾಶಕ ಲಿಂಗಂ
ತತ್ಪ್ರಣಮಾಮಿ ಸದಾಶಿವ ಲಿಂಗಂ |

ಅಷ್ಟದಲ ಪರಿವೇಷ್ಟಿತ ಲಿಂಗಂ
ಸೃಷ್ಟಿ ಸಮುದ್ಭವ ಕಾರಣಲಿಂಗಂ

ಅಷ್ಟದರಿದ್ರ ವಿನಾಶಕ ಲಿಂಗಂ
ತತ್ಕೃಣಮಾಮಿ ಸದಾಶಿವ ಲಿಂಗಂ |

ಕನಕ ಮಹಾಮಣಿ ಭೂಷಿತಲಿಂಗಂ
ಫಣಿಪತಿವೇಷ್ಟಿತ ಶೋಭಿತಲಿಂಗಂ
ಬ್ರಹ್ಮಮುರಾರಿ ಸುರಾರ್ಚಿತ ಲಿಂಗಂ
ತತ್ಕೃಣಮಾಮಿ ಸದಾಶಿವ ಲಿಂಗಂ | ೨೪೦

ಎಂದು ಇಷ್ಟಲಿಂಗವನ್ನು ಕೊಂಡಾಡುತ್ತಾ ಇರಲು ಆ ಇಷ್ಟಲಿಂಗವಾದರೋ ಬಸವಣ್ಣನವರ ಬಳಿಗೆ ಹೋಗಿ "ದ್ವಿತೀಯ ಶಂಭುವಾದ ಬಸವಣ್ಣನವರೇ, ನಿಮ್ಮ ಭಕ್ತ ಹರಳಯ್ಯನವರು ನಿಮಗೋಸ್ಕರವಾಗಿ ಕಾದಿದ್ದಾರೆ. ನೀವು ಅವರಿಗೆ ದರ್ಶನವನ್ನು ಕೊಡಿರಪ್ಪ!" ಎಂದು ಸೂಚನೆ ಕೊಟ್ಟಿದೆ. ಬಸವಣ್ಣನವರಾದರೋ

"ಕೆಟ್ಟಿತ್ತು ಕಲ್ಯಾಣ ಭ್ರಷ್ಟಾಗಿ ಹೋಗುವುದು
ಇಷ್ಟಲಿಂಗವು ಬಂದು ದ್ರಿಷ್ಟಿಯ ತೋರೆ
ದ್ರಿಷ್ಟಿಯ ತೋರೆ | ೨೪೧

ಮಹಾದೇವ, ನಿಮ್ಮ ಮಣಿಹವು ಇಂದಿಗೆ ಕಾಣುವಂತಾಯಿತೆ?". ಎಂದು ಬಸವಣ್ಣನವರು ಹರಳಯ್ಯನವರನ್ನು ನೋಡುವುದಕ್ಕೆ ಬರುತ್ತ ಇರುವಾಗ ಹರಳಯ್ಯನವರು ನೋಡಿ ಮುಕ್ತಕಂಠದಿಂದ ಬಸವಣ್ಣನವರನ್ನು ಕೊಂಡಾಡುತ್ತಿದ್ದಾರೆ.

ಕಂಡೆ ಕಂಡೆನೆನ್ನ ಖಂಡ ಪರುಷವ
ಕಂಡೆನೆನ್ನೆಯ ಕಾಮ್ಯಸಿದ್ಧಿಯ
ಕಂಡೆ ಜಗದಾಧಾರ ಶ್ರೀ ಗುರು
ಮಂಡಲೇಶನ ಚರಣಕಮಲವ |

ಧರ್ಮರೂಪನು ಬಸವೇಶ್ವರನು
ಕರ್ಮರೂಪನು ಬಸವರಾಜನು
ನಿರ್ಮಲಾತ್ಮಕ ಬಸವದೇವನು
ಸರ್ವಜನಪ್ರಿಯ ಶಿವಬಸವೇಶನು | ೨೪೨

ಹರಳಯ್ಯನವರ ಆನಂದಕ್ಕೆ ಪಾರವೇ ಇಲ್ಲ. ಆನಂದದಿಂದ ಮಹನೀಯ ನನಗೆ ನಿನ್ನ ದರ್ಶನವಾಯಿತು' ಎಂದು ಹರಳಯ್ಯನು 'ಶರಣು ಬಸವಣ್ಣ!' ಎಂದು ದೀರ್ಘದಂಡ ನಮಸ್ಕಾರ ಮಾಡುವುದಕ್ಕೆ ಬಗ್ಗಲಾಗಿ ಬಸವಣ್ಣನವರಾದರೋ 'ಶರಣು ಶರಣಪ್ಪ ಘನ ಶರಣ ಹರಳಯ್ಯ!' ಎಂದು ಬಾಚಿ ತಬ್ಬಿಕೊಂಡಿದ್ದಾರೆ. ಹರಳಯ್ಯನವರಾದರೋ 'ಶಿವ ಶಿವಾ ನಾನು ಹೊಲೆಯ. ಅಂತಾದ್ದರಲ್ಲಿ ಬಸವಣ್ಣನವರು ನನಗೆ ಎರಡು ಶರಣಿಕ್ಕಿದ್ದಲ್ಲದೆ ಬಾಚಿ ತಬ್ಬಿಕೊಂಡರಲ್ಲ!' ಎಂದು ಮನದಲ್ಲಿ ಆಲೋಚಿಸಿ ಬಸವಣ್ಣನವರಲ್ಲಿ ಏನೆಂದು ಬೇಡಿ ಕೊಳ್ಳುತ್ತಿದ್ದಾರೆ.

ಮುಟ್ಟುದಿರು ನನ್ನಯ್ಯ ಕೆಟ್ಟು ಮಾದಾರಿ ನಾನು
ಸೃಷ್ಟಿಯೊಳಗತಿ ದೂರ ಕಷ್ಟ ನಮ್ಮ ವಿವರ
ಕಷ್ಟ ನಮ್ಮ ವಿವರ | ೨೪೩

ಹರಳಯ್ಯನವರಾದರೋ 'ಅಪ್ಪಾ, ಮಹನೀಯ ನಾವು ಜಾತಿಯಲ್ಲಿ ಮಾದಾರ. ನನ್ನನ್ನು ಮುಟ್ಟಿದೆಯಲ್ಲಪ್ಪ' ಎನ್ನಲು ಅದಕ್ಕೆ ಬಸವಣ್ಣನವರು 'ಅಯ್ಯಾ ಹರಳಯ್ಯ ನೀನು ಹಾಗೆನ್ನ ಬಾರದಪ್ಪ' ಎಂದು ಪ್ರತಿ ಉತ್ತರವಾಗಿ ಬಸವಣ್ಣನವರು ಹರಳಯ್ಯನವರಿಗೆ ಸಮಾಧಾನ ಹೇಳಿದ್ದಾರೆ.

ಹೊಲೆಯಲಲ್ಲದೆ ಲೋಕ ತಲೆಯಲ್ಲಿ ಹುಟ್ಟುವುದೆ ?
ಮಲಹರನ ಭಕ್ತರಿಗೆ ಕುಲವುಂಟೆ ಜಗದಿ
ಕುಲವುಂಟೆ ಜಗದಿ | ೨೪೪

ಅಯ್ಯಾ ಹರಳಯ್ಯ ಪ್ರತಿಯೊಂದು ಜೀವಕೋಟಿಯು ದೈವಸೃಷ್ಟಿಯಲ್ಲಿ ಹೊಲೆ ರೂಪದಲ್ಲಿ ಬರಬೇಕಲ್ಲದೆ ತಲೆಯಲ್ಲಿ ಯಾರಾದರೂ ಹುಟ್ಟುವರೆ ? ಮಲಹರನ ಭಕ್ತರಿಗೆ ಕುಲವುಂಟೆ? ಕೇಳು

ವ್ಯಾಸ ಬೋಯಿತಿಯ ಮಗ
ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕಶ್ಯಪ ಕಮ್ಮಾರ, ದುರ್ವಾಸ ಮಚ್ಚಿಗ
ಸಾಕ್ಷಾತ್ ಕೌಂಡಿನ್ಯ ಮೂಲೋಕವರಿಯೆ ನಾವಿದ ೨೪೫

ಅದೂ ಅಲ್ಲದೆ ಕೇಳು

ಕುಲದಲ್ಲಿ ಅರುಂಧತಿ ಹೊಲತಿಯಾದರು ಅವಳ
ಕುಲವ ಕೇಳುವುದಂಟೆ ಹರಳಯ್ಯ ಕೇಳು
ಹರಳಯ್ಯ ಕೇಳು | ೨೪೬

ಅಯ್ಯಾ ಹರಳಯ್ಯ ವಶಿಷ್ಟರ ಪತ್ನಿಯಾದ ಅರುಂಧತಿಯು ಮಾದಾರಳಲ್ಲವೆ? ಮುನಿಗಳ ವಿಚಾರದಲ್ಲಿ ಹೇಳುವುದಾದರೆ ಯಾರು ತಾನೆ ಶ್ರೇಷ್ಠ ಕುಲದವರು ? ಅಂದ ಹಾಗೆ ಅವರ ನಡೆನುಡಿ ಸದ್ವರ್ತನೆಯಿಂದ ಕುಲವಂತರೆನಿಸಿಕೊಂಡಿದ್ದಾರೆ" ಎಂದು ಬಸವಣ್ಣನವರು ಹರಳಯ್ಯನವರಿಗೆ ಸಮಾಧಾನ ಹೇಳಿದ್ದಾರೆ. ಹರಳಯ್ಯನವರಾದರೋ "ನನ್ನಂತಹ ಪಾಪಿಗಳು ಈ ಜಗತ್ತಿನಲ್ಲಿ ಯಾರಿದ್ದಾರೆ. ನಾನು ಬಸವಣ್ಣನವರಿಗೆ ಒಂದು ಸಾರಿ ಶರಣೆಂದುದಕ್ಕೆ ಅವರು 'ಶರಣುಶರಣಪ್ಪ' ಎಂದು ಎರಡು ಶರಣು ಮಾಡಿ ಒಂದು ಶರಣನ್ನು ನನ್ನ ಮೇಲೆ ಹೊರೆ ಹಾಕಿದ್ದಾರೆ. ನಾನು ಅದಕ್ಕೆ ಯಾವ ರೂಪದಿಂದ ಪರಿಹಾರ ಮಾಡಿಕೊಳ್ಳಲಿ" ಎಂದು ನಡೆಯುವುದಕ್ಕೆ ದಾರಿ ಕಾಣದೆ ಕಣ್ಣು ಕಾಣದವನಂತೆ ನಿಂತು ಬಿಟ್ಟಿದ್ದಾನೆ. ಅವರ ಧರ್ಮಪತ್ನಿ ಕಲ್ಯಾಣಮ್ಮನವರಾದರೋ ನನ್ನ ಪತಿಯಾದ ಹರಳಯ್ಯನವರು ಇಷ್ಟು ಹೊತ್ತಾದರೂ ಬರಲಿಲ್ಲವಲ್ಲ ಎಂದು ಹುಡುಕಿಕೊಂಡು ಬರಲು ದಾರಿಯ ಮಗ್ಗುಲಲ್ಲಿ ನಿಂತು ಯೋಚನೆ ಮಾಡುತ್ತಿರುವ ಪತಿಯನ್ನು ನೋಡಿ ಏನೆಂದು ಹೇಳುತ್ತಾಳೆ

ದಾರಿಯಲಿಲ್ಲದ ದೊಡ್ಡ ಹೇರಡವಿ ಮನೆಯೊಳಗೆ
ಸೂರ್ಯಗತವಾದಂತೆ ಮೇರೆ ತಪ್ಪಿದರೆ
ಮೇರೆ ತಪ್ಪಿದರೆ | ೨೪೭

ಇತ್ತ ಹರಳಯ್ಯನವರಾರೋ ದಾರಿಯಿಲ್ಲದ ದೊಡ್ಡ ಘೋರಾರಣ್ಯದಲ್ಲಿ ಬರುವಾಗ ಪರ್ವತಗಳ ಶ್ರೇಣಿಯಲ್ಲಿ ಸೂರ್ಯನು ಮರೆಯಾದರೆ ಅಂಧಕಾರವೆಂಬ ಕತ್ತಲೆಯು ಮುಸುಗಿ ಮುಂದೆ ಬರಲು ಹೇಗೆ ಸಾಧ್ಯವಿಲ್ಲದೆ ಭಯವಾಗುತ್ತೆದಯೋ ಹಾಗೆಯೇ ಕಲ್ಯಾಣಮ್ಮನು ಬಂದು ತನ್ನ ಪತಿಯನ್ನು 'ಹಾ ಪ್ರಾಣಕಾಂತ, ಯಾತಕ್ಕೆ ಹೀಗೆ ನಿಂತಿರುವೆ ? ಜಂಗಮಾರ್ಚನೆಗೆ ವೇಳೆಯಾಗಲಿಲ್ಲವೆ? ಬನ್ನಿ ಹೋಗೋಣ' ಎಂದು ಹೇಳಲು, ಅದಕ್ಕೆ ಹರಳಯ್ಯನವರು 'ಪ್ರಾಣಕಾಂತೆ, ನಾನು ಎಂಥ ಪಾಪಿ. ನನ್ನಂತಹ ಪಾಪಿಗಳು ಭೂಲೋಕದಲ್ಲಿ ಇರಬಾರದು' ಎಂದು ಹೇಳಿದ್ದಾರೆ. ಕಲ್ಯಾಣಮ್ಮನವರಾದರೋ ಬೆದರಿ 'ಸ್ವಾಮಿ, ಅಂತಹ ಅಪರಾಧವನ್ನು ಏನು ಮಾಡಿದಿರಿ, ಏಕೆ, ಏನಾಯಿತು. ನಿಮ್ಮ ಈ ಚಿಂತೆಗೆ ಕಾರಣವೇನು?' ಎಂದು ಕೇಳಲು ಹರಳಯ್ಯನವರು ತನ್ನ ಪತ್ನಿಯೊಡನೆ ಏನೆಂದು ಹೇಳುತ್ತಿದ್ದಾರೆ.

ಶಿಷ್ಯ

ಏನೆಂದು ಹೇಳುತ್ತಿದ್ದಾರೆ ಸ್ವಾಮಿ ?

ನಿರೂಪಕ

ಶರಣು ಎಂದೆನಲು ನಾನು ಬಸವಣ್ಣನವರಿಗೆ ರಮಣಿ
ಶರಣು ಶರಣಾರ್ತಿ ಎಂದ ಬಸವಣ್ಣ
ಎಂದ ಬಸವಣ್ಣ | ೨೪೮

'ಹಾ ಪ್ರಾಣಪ್ರಿಯೆ, ಬಸವಣ್ಣನವರ ದರ್ಶನವನ್ನು ಮಾಡಿ ನಾನು ಒಂದು ಸಾರಿ ಶರಣು ಎಂದುದ್ದಕ್ಕೆ ಬಸವಣ್ಣನವರು 'ಶರಣು ಶರಣಾರ್ತಿ' ಎಂದರು ಪ್ರಾಣಪ್ರಿಯೆ. ಒಂದು ಶರಣನ್ನು ನನ್ನ ಮೇಲೆ ಹೊರಿಸಿದ್ದರಿಂದ ಆ ಸರಣನ್ನು ಪರಿಹರಿಸುವ ಬಗೆ ಹೇಗೆ ಎಂಬ ಯೋಚನೆಯು ನನ್ನನ್ನು ಬಾಧಿಸುತ್ತ ಇದೆ

ಶಿಷ್ಯ

ಅದಕ್ಕೆ ಕಲ್ಯಾಣಮ್ಮ ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ಶರಣು ಹೆಚ್ಚಿತು ಎಂದು ಕೊರಗಲೇತಕೆ ಸ್ವಾಮಿ
ಚರಣಕೆ ಪಾದುಕೆ ಮಾಡಿ ಪರಿಹರಿಪ ಬನ್ನಿ
ಪರಿಹರಿಪ ಬನ್ನಿ | ೨೪೯

ಕಲ್ಯಾಣಮ್ಮನವರಾದರೋ 'ಸ್ವಾಮಿ, ನೀವು ಇಷ್ಟಕ್ಕೆಲ್ಲ ಯೋಚಿಸಬಾರದು. ಬಸವಣ್ಣನವರೆಂದರೆ ಅವರು ಶಿವನ ಸಮಾನ. ಅಂತಹ ಮಹಾಪುರುಷರು ಶರಣಿಗೆ ಶರಣೆಂದ ಮೇಲೆ ನಾವು ಅದನ್ನು ಪರಿಹಾರ ರೂಪವಾಗಿ ನಿವಾರಿಸಿಕೊಳ್ಳಬೇಕು' ಎಂದು ಕಲ್ಯಾಣಮ್ಮನು ಹೇಳಲು 'ಅದು ಹೇಗೆ ಸಾಧ್ಯ?' ಎಂದು ಹರಳಯ್ಯನವರು ಕೇಳಲು ಕಲ್ಯಾಣಮ್ಮನವರು ತನ್ನ ಪತಿಯೊಡನೆ ಸವಿನುಡಿಯಿಂದ ಹೇಳುತ್ತಾ ಇದಾರೆ.

ಹೆಚ್ಚೀನ ಶರಣೀಗೆ ಮೆಚ್ಚ ನಾವು ಮಾಡಬೇಕು
ಮೊಚ್ಚೆಯ ಬಸವಣ್ಣನ ಸಿರಿಪಾದಗಳಿಗೆ
ಸಿರಿಪಾದಗಳಿಗೆ | ೨೫೦

ಹೆಚ್ಚೀದ ಶರಣಿಗೆ ಇಚ್ಚೆಯಿಂದಲಿ ನಾವು
ಮೊಚ್ಚೆಯ ಮಾಡಿಕೊಡಲು ಪರಿಹಾರ ಸ್ವಾಮಿ
ಪರಿಹಾರ ಸ್ವಾಮಿ | ೨೫೧

"ಪ್ರಾಣಪ್ರಿಯ, ಅಂತಹ ಮಹಾಪುರುಷರಿಂದ ನಮ್ಮಂತಹ ಅಸ್ಪೃಶ್ಯರಿಗೆ ಇಂಥ ಭಾರ ಬಿದ್ದಿರುವಾಗ ನೀವು ನಿಮ್ಮ ಬಲತೊಡೆಯ ಚರ್ಮವನ್ನು ನಾನು ನನ್ನ ಎಡತೊಡೆಯ ಚರ್ಮಗಳನ್ನು ರಂಪಿಗೆಯಿಂದ ಕುಯ್ದುಕೊಂಡು ಪಾದರಕ್ಷೆಯನ್ನು ಮಾಡಿ ಆ ಮಹಾಮಹಿಮನ ಪಾದಗಳಿಗೆ ತೊಡಿಸಿ ಆಶೀರ್ವಾದ ಪಡೆದರೆ ಮಾತ್ರ ಪರಿಹಾರವಾಗುತ್ತದೆ" ಎಂದು ಹೇಳಲು ಅದಕ್ಕೆ ಹರಳಯ್ಯನವರು "ಪ್ರಾಣಪ್ರಿಯೆ ನಾನು ಹೆಚ್ಚಿನ ಶರಣಿಗೆ ಬಾಗಿಯಾಗಿದ್ದೇನೇಯೇ ಏನಹ ನಿನಗೂ ಆ ಶರಣಿಗೂ ಸಂಬಂಧವೇನಿದೆ? ನನ್ನ ಎರಡು ತೊಡೆಯ ಚರ್ಮಗಳನ್ನು ರಂಪಿಗೆಯಿಂದ ಕುಯ್ದುಕೊಂಡು ಪಾದರಕ್ಷೆಯನ್ನು ಮಾಡಿ ಬಸವಣ್ಣನವರ ಪಾದಗಳಿಗೆ ತೊಡಿಸಿ ಆಶೀರ್ವಾದವನ್ನು ಪಡೆದು ನನ್ನ ಬದುಕನ್ನು ಸಾರ್ಥಕ ಮಾಡಿಕೊಳ್ಳುತ್ತೇನೆ" ಎಂದು ಹರಳಯ್ಯನು ಹೇಳಲು ಕಲ್ಯಾಣಮ್ಮನವರಾದರೋ

ಶಿಷ್ಯ

ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

"ಹಾ ಪ್ರಾಣಪ್ರಿಯ ವಿವಾಹ ಕಾಲದಲ್ಲಿ ಧರ್ಮೇಚ ಕಾಮೇಚ ಅರ್ಥೇಚ ಭೋಗೇಚ ಮೋಕ್ಷೇಚ ನಾತಿ ಚರಾಮಿ ಎಂದು ಭಾಷೆಯನ್ನು ಕೊಟ್ಟಿರುತ್ತೇನೆ. ಆದುದರಿಂದ ನನ್ನ ಎಡ ತೊಡೆಯ ಚರ್ಮವನ್ನು ತೆಗೆದು ಪಾದರಕ್ಷೆಯನ್ನು ಮಾಡಲೇಬೇಕೆಂದು ಬೇಡಿಕೊಳ್ಳುತ್ತಿದ್ದೇನೆ. ಇಲ್ಲದೆ ಹೋದರೆ ಅರ್ಧಾಂಗಿ ಎಂಬ ಹೆಸರಿಗೆ ನ್ಯಾಯ ಸಿಕ್ಕಿದಂತಾಗುವುದಿಲ್ಲ. ನನ್ನನ್ನು ವೃಥಾ ಕಾಡಿಸಬೇಡಿ" ಎಂದು ತನ್ನ ಗಂಡನ ಪಾದಗಳನ್ನು ತಬ್ಬಿಕೊಂಡು "ಸ್ವಾಮಿ, ನಾನು ನಿಮ್ಮ ಕಲ್ಯಾಣಕ್ಕೆ ಭಾಗಿಯಾಗದೆ ಹೋದರೆ ಧರ್ಮಪತ್ನಿ ಎನ್ನಿಸಿಕೊಳ್ಳುವೆನೆ? ದೇವರು ಮೆಚ್ಚುವನೆ?" ಎಂದು ಕಲ್ಯಾಣಮ್ಮನವರು ಹೇಳುತ್ತಿರಲು ಹರಳಯ್ಯನವರಾದರೋ ಧರ್ಮ ಪತ್ನಿಯ ಇಂಗಿತವನ್ನರಿತು ಆ ತಕ್ಷಣವೆ ಶಸ್ತ್ರವನ್ನು ತೆಗೆದು ಕಲ್ಯಾಣಮ್ಮನವರ ಎಡದೊಡೆಯ ಚರ್ಮವನ್ನು

ಶಿಷ್ಯ

ಹೇಗೆ ತಗೀತಿದ್ದಾರೆ ಸ್ವಾಮಿ ?

ನಿರೂಪಕ

ಮಡದಿಯ ಗದ್ದವ ಪಿಡಿಯುತಲಿ ಹರಳಯ್ಯ
ಎಡತೊಡೆಯ ಚರ್ಮವನು ಉಡಿಯುತಲಿ ಆಗ
ಉಡಿಯುತಲಿ ಆಗ | ೨೫೨

ಹಾಗೆಯೇ ಹರಳಯ್ಯನು ತನ್ನ ಧರ್ಮಪತ್ನಿಯ ಎಡದೊಡೆಯ ಚರ್ಮವನ್ನು ಕುಯ್ಯುವಾಗ "ಕಣ್ಣಿನಲ್ಲಿ ನೀರೇನಾದರೂ ಬಂದರೆ ನಾವು ಪಾದರಕ್ಷೆಯನ್ನು ಮಾಡಿಯೂ ಪ್ರಯೋಜನವಿಲ್ಲದಂತಾಗುತ್ತದೆ" ಎಂದು ಯೋಚಿಸಿದ್ದಾರೆ. ಕಲ್ಯಾಣಮ್ಮನವರಾದರೋ ಹೇ ಪರಮೇಶ್ವರ, ನನ್ನ ಪತಿಯೂ ಸಹ ದೇವರೆಂಬ ಭಾವನೆಯಿಂದ ಪರಮೇಶ್ವರನನ್ನು ಕುರಿತು ಆ ಮಹಾತಾಯಿ ಚರ್ಮವನ್ನು ಉಡಿಯುತ್ತ ಇರುವಾಗ ಎಷ್ಟೇ ನೋವಾದರೂ ಆಕೆಗೆ ಯಾವ ಬಾಧೆಯೂ ಇಲ್ಲದಂತೆ ಪರಮೇಶ್ವರನನ್ನು ಕೊಂಡಾಡುತ್ತಿದ್ದಾಳೆ. ಕಲ್ಯಾಣಮ್ಮನವರು ಶಿವನಾಮಸ್ಮರಣೆಯನ್ನು ಮಾಡುತ್ತ ಇರೆ "ಹೇ ಪರಮೇಶ್ವರ ನಿನ್ನ ಕರುಣೆ ಉಂಟಾಗಲಪ್ಪ" ಎಂದು ಹೇಳುತ್ತ ಹರಳಯ್ಯನವರೂ ಸಹ ತಮ್ಮ ಚರ್ಮವನ್ನು ಉಡಿಯುತ್ತಿದ್ದಾರೆ.

ನಾಹಂ ವಾಸಾಮಿ ಕೈಲಾಸೇ ನಮೇರೌ ನ ಚ ಮಂದರೇ
ಮದ್ಭಕ್ತಾ ಯತ್ರ ತಿಷ್ಠಂತಿ ತತ್ರ ತಿಷ್ಠಾಮಿ ಪಾರ್ವತೀ | ೨೫೩

ಎಲ್ಲಿ ದಂಪತಿಗಳು ಏಕೈಕ ಮನಸ್ಸಿನಿಂದ ಗಂಡನ ಮಾತಿಗೆ ಹೆಂಡತಿ ಪ್ರತಿಯುತ್ತರ ಹೇಳದೆ, ಹೆಂಡತಿಯ ಮಾತಿಗೆ ಗಂಡನು ಪ್ರತಿಯುತ್ತರ ಹೇಳದೆ ಏಕೈಕ ಭಾವದಿಂದ ಯಾರು ನಡೆಯುತ್ತಾರೆಯೋ ಆ ಗೃಹವೇನೇ ಪಾರ್ವತೀ ಪರಮೇಶ್ವರರ ಹಿಮಾಚಲ ಪರ್ವತ ಅರ್ಥಾತ್ ಕೈಲಾಸವೆಂದು ಮಹನೀಯರು ಅಪ್ಪಣೆ ಮಾಡಿದ್ದಾರೆ. ಅಂದ ಹಾಗೆ ಹರಳಯ್ಯನವರಾದರೋ ತಮ್ಮ ಬಲದೊಡೆಯ ಚರ್ಮವನ್ನು ಉಡಿಯುತ್ತ

"ಹರಹರ ಶಿವಶಿವ ಜಯಪರಮೇಶ್ವರ
ಕರುಣಸಾಗರ ಕಾಯೋ ಪರಮೇಶ ಶಿವನೆ
ಪರಮೇಶ ಶಿವನೆ | ೨೫೪

ಹೇ ಪರಮೇಶ್ವರ, ದ್ವಿತೀಯಶಂಭುವಾದ ಬಸವಣ್ಣನವರು ವಿಭೂತಿ ಪುರುಷರೇ ಆಗಿದ್ದರೆ ನನ್ನಲ್ಲಿ ನಂಬಿಕೆ ಇದ್ದರೆ ನನಗೆ ಯಾವ ಬಾಧೆಯೂ ಉಂಟಾಗದಿರಲಿ" ಎಂದು ಹರಳಯ್ಯನು ಶಸ್ತ್ರದಿಂದ ಬಲದೊಡೆಯ ಚರ್ಮವನ್ನು ತೆಗೆದಿದ್ದಾರೆ. ಮನಸ್ಸಿನಲ್ಲಿ ಧ್ಯಾನವನ್ನು ಮಾಡುತ್ತ ಮಡದಿಯ ಚರ್ಮವನ್ನು ಎಡಗಡೆ ಪಾದರಕ್ಷೆಯನ್ನಾಗಿಯೂ ತಮ್ಮ ಬಲದೊಡೆಯ ಚರ್ಮವನ್ನು ಬಲಗಡೆ ಪಾದರಕ್ಷೆಯನ್ನಾಗಿಯೂ ಮಾಡಿ ಕಲ್ಯಾಣಮ್ಮನವರಿಗೆ ತೋರಿಸಿದ್ದಾರೆ. ಪಾದುಕೆಗಳನ್ನು ನೋಡಿ ಅವರು ಹೇಗೆ ಕೊಂಡಾಡ್ತ ಇದ್ದಾರಪ್ಪಾಂದ್ರೆ

ಶಿಷ್ಯ

ಹೇಗೆ ಸ್ವಾಮಿ ?

ನಿರೂಪಕ

ಮಿಸುನಿಯಗೆಲಸದ ಹೊಸಪಾದುಕೆಗಳ ಮಾಡಿ
ಹಸನಾದವೆನ್ನುತ ಕುಣಿದು ಕೊಂಡಾಡಿ
ಕುಣಿದು ಕೊಂಡಾಡಿ | ೨೫೫

ಹರಳಯ್ಯನವರಾದರೋ ನಾವು ಪಾದರಕ್ಷೆಗಳನ್ನು ಮಾಡಿರುವುದು ಬಸವಣ್ಣನವರ ಶರಣಿನ ನಿವಾರಣೆಗಾಗಿ ಎಂದು ಕಲ್ಯಾಣಮ್ಮನವರಿಗೆ ಹೇಳುತ್ತಿರಲು ಕಲ್ಯಾಣಮ್ಮನವರಾದರೋ ಹರಳಯ್ಯನವರಿಗೆ ಮುನ್ಸೂಚನೆಯಿಂದ ಏನನ್ನು ಹೇಳುತ್ತಿದ್ದಾರೆ.

ಕೆಡುವುದು ಕಲ್ಯಾಣ ನೆಡುವ ಈ ಪಾದುಕೆಯಿಂದ
ಬಿಡುವರು ಬಸವಣ್ಣ ಕಲ್ಯಾಣವನ್ನು
ಕಲ್ಯಾಣವನ್ನು | ೨೫೬

ಹರಳಯ್ಯನವರಾದರೋ ಕಲ್ಯಾಣಮ್ಮನವರಿಗೆ ಏನು ಹೇಳುತ್ತಾ ಇದ್ದಾರೆ

ನಷ್ಟವು ಕಲ್ಯಾಣ ಪಟ್ಟಣಕೆ ರಮಣಿ
ಭ್ರಷ್ಟಾಗಿ ಹೋಗುವುದು ಕೇಳೆನ್ನ ರಮಣಿ
ಕೇಳೆನ್ನ ರಮಣಿ | ೨೫೭

ಹಾ ಪ್ರಾಣಪ್ರಿಯೆ ಕಲ್ಯಾಣಿ, ನಾವೇನು ಪವಾಡ ಪುರುಷರೆ ? ನಾವು ಹೀಗೆ ಹೇಳುವು ದಾದರೆ ನಮ್ಮ ಮಾತನ್ನು ಯಾರು ಗಣನೆಗೆ ತೆಗೆದುಕೊಳ್ಳುತ್ತಾರೆ ? ಆಗುವುದಕ್ಕೆಲ್ಲ ಬೇರೆ ವಸ್ತುವಿದೆ. ಅವನ ಆಟದಂತೆ ಜಗತ್ತೆಲ್ಲವೂ ನಡೆಯುತ್ತಾ ಇದೆ. ಅಳಿವು ಉಳಿವು ಭಗವಂತನ ಅಧೀನ. ಅದೆಲ್ಲ ನಮಗೇಕೆ ಅಥವಾ ನಮ್ಮಿಂದ ಏನು ತಾನೆ ಆಗಬಲ್ಲದು? ಸುಮ್ಮನಿರು ಕಲ್ಯಾಣಿ ಎಂದು ಸಮಾಧಾನವಂ ಮಾಡಿ ಆ ಪಾದರಕ್ಷೆಗಳನ್ನು ಶ್ವೇತಾಂಬರದಲ್ಲಿ ಹುದುಗಿಸಿಕೊಂಡು ಬಸವಣ್ಣನವರ ಅರಮನೆಗೆ ನೇರವಾಗಿ ಹೋಗಿದ್ದಾರೆ. ಇತ್ತ ಕಲ್ಯಾಣಮ್ಮನವರಾದರೋ ಏನೆಂದು ಆಲೋಚನೆ ಮಾಡುತ್ತಾ ಇದ್ದಾರೆ.

ಶಿಷ್ಯ

ಏನು ಆಲೋಚನೆ ಮಾಡ್ತಿದ್ದಾರೆ ಗುರುವೆ ?

ನಿರೂಪಕ

ಮುಂದೇನ ಮಾಡಲಿ ಚಂದ್ರಶೇಖರ ಶಿವನೆ
ಚಂದಾದ ಕಲ್ಯಾಣ ಪುರವು ಉಳಿಯುವುದೆ
ಪುರವು ಉಳಿಯುವುದೆ | ೨೫೮

"ಹೇ ಪರಮೇಶ್ವರ ಈ ನಗರವು ಮುಂದೆ ಉಳಿಯುವ ಬಗೆ ಹೇಗೆ? ನೀನೇ ದಯಾಳು. ನಿನ್ನಿಚ್ಛೆ ಏನಿದೆಯೋ ಅದರಂತಾಗಲಿ" ಎಂದು ಕಲ್ಯಾಣಮ್ಮನವರು ತಮ್ಮ ಪತಿಯ ಮೇಲೆ ಬಂದಿರುವ ಒಂದು ಹೆಚ್ಚಿನ ಶರಣು ನಿವಾರಣೆಯಾಗಲೆಂದು ತನ್ನ ಪತಿಗೆ ಶುಭವನ್ನು ಕೋರುತ್ತಾ ಇದ್ದಾಳೆ. ಹರಳಯ್ಯನವರಾದರೋ ಬಸವಣ್ಣನವರ ದರ್ಶನ ಮಾಡಿ "ಮಹಾಪ್ರಭು ಬಸವಣ್ಣನವರೇ ಈ ಪಾದುಕೆಯನ್ನು ನೀವು ಮೆಡಬೇಕು" ಎಂದು ಕೇಳಿದ್ದಾರೆ. ಆಗ ಬಸವಣ್ಣನವರು ಪಾದರಕ್ಷೆಗಳನ್ನು ನೋಡಿ "ಇವು ಸಾಮಾನ್ಯವಾದ ಪಾದರಕ್ಷೆಗಳಲ್ಲ. ಶರಣ ಹರಳಯ್ಯ ಶರಣೆ ಕಲ್ಯಾಣಮ್ಮನವರು ಅಚಲವಾದ ಭಕ್ತಿಯಿಂದ ಅವರ ತೊಡೆ ಚರ್ಮವನ್ನು ಉಡಿದು ಮಾಡಿದ ಈ ಪವಿತ್ರ ಪಾದುಕೆಗಳು ಶಿವನಿಗೆ ಮಾತ್ರ ಸಲ್ಲುವಂತವು. ಬೇರೆ ಯಾವ ನರಮಾನವನೂ ಇವುಗಳನ್ನು ಮೆಡಲಾರ.

ಕೈಲಾಸವಾಸಿಗೆ ಸಲ್ಲುವ ಪಾದುಕೆಯ
ನಾ ಮೆಡಲಾರೆನು ಕೇಳು ಹರಳಯ್ಯ
ಕೇಳು ಹರಳಯ್ಯ | ೨೫೯

ಶಿಷ್ಯ

ಅಂದ ಮೇಲೆ ಆ ಪಾದರಕ್ಷೆಗಳ ಗತಿಯೇನು ಗುರುವೆ ?

ನಿರೂಪಕ

ಅಯ್ಯಾ ಮಗು, ಆತುರ ಬೇಡ ಕೇಳುವಂತವನಾಗು. ಬಸವಣ್ಣನವರಾದರೋ ಶರಣ ಹರಳಯ್ಯನವರಿಗೆ "ಅಯ್ಯಾ ಹರಳಯ್ಯ, ಸಾಮಾನ್ಯವಾಗಿ ನೀನು ಮೊಚ್ಚೆಕಾಯಕ ಅಂದರೆ ಗೋಚರ್ಮದಿಂದ ಮಾಡುವ ಪಾದುಕೆಗೆ ಬದಲಾಗಿ ನೀನು ತಂದಿರುವ ಪಾದುಕೆಗಳಾದರೋ ಪರಮೇಶ್ವರನಿಗೆ ಸಲ್ಲುವುವೇ ಹೊರತು ಇವು ನರಕುರಿಗಳಿಗೆ ಯೋಗ್ಯವಲ್ಲಪ್ಪ" ಎಂದು ಹೇಳಿ ಅವುಗಳಿಗೆ ಮಾನಸ ಪೂಜೆಯನ್ನು ಮಾಡಿ ಹರಳಯ್ಯನವರಿಗೆ ಹೇಳುತ್ತಿದ್ದಾರೆ.

ಮೆಡಲೊಲ್ಲೆನು ನಾನು ಶರಣ ಚಮ್ಮಾವುಗೆಯ
ತಡವ ಮಾಡದೆ ನೀನು ಹೊರಡಲುಬಹುದು
ಹೊರಡಲುಹುದು | ೨೬೦

ಅಯ್ಯಾ ಹರಳಯ್ಯ ಒಂದು ಶರಣಿಗೆ ನೀನು ಹೀಗೆ ಮಾಡಿದ ಮೇಲೆ ನಾನು ಮತ್ತೊಂದು ಮಾತಾಡಿದರೆ ಏನುಂಟಾಗುವುದೋ ಏನೋ ಎನಲು ಹರಳಯ್ಯನು ಬೆದರಿ ಆ ತಕ್ಷಣವೇನೇ ಪಾದುಕೆಗಳನ್ನು ತೆಗೆದುಕೊಂಡು ತಮ್ಮ ಮನೆಗೆ ಹೊರಟಿದ್ದಾರೆ. ಬರುವಾಗ ದಾರಿಯಲ್ಲಿ ಬ್ರಾಹ್ಮಣರ ಮಧುವರಸಯ್ಯನು ಹರಳಯ್ಯನವರನ್ನು ಏಕವಚನದಲ್ಲಿ ಏನೆಂದು ಕೇಳ್ತಾ ಇದ್ದಾನೆ

ಶಿಷ್ಯ

ಏನೆಂದು ಸ್ವಾಮಿ ?

ನಿರೂಪಕ

"ಎಲ್ಲಿಗೆ ಹೋಗಿದ್ದೋ ಎಲವೋ ಹರಳನೆ ನೀನು
ಬಗಲಲ್ಲಿರುವುದೇನು ತೋರಿಸೋ ಹರಳ
ತೋರಿಸೊ ಹರಳ | ೨೬೧

ಎಲವೋ ಹರಳ ನೀನು ಎಲ್ಲಿಗೆ ಹೋಗಿದ್ದೆ? ನಿನ್ನ ಬಗಲಲ್ಲಿರುವ ಪದಾರ್ಥ ಯಾವುದು? ನನಗೆ ತೋರಿಸು ನೋಡಬೇಕು" ಎಂದು ಮಧುವರಸಯ್ಯನು ಕೇಳಲು ಹರಳಯ್ಯನು ಮಧುವರಸಯ್ಯನೊಡನೆ ಏನೆಂದು ಹೇಳ್ತಾ ಇದ್ದಾನೆ.

"ಬಸವಣ್ಣನವರಿಗೆ ಪಾದುಕೆಗಳ ನಾನು
ಹಸನಾಗಿ ಕೊಡಲು ನಾ ಹೋಗಿದ್ದೆನಯ್ಯ
ಹೋಗಿದ್ದೆನಯ್ಯಾ | ೨೬೨

ಸ್ವಾಮಿ ಮಧುವರಸಯ್ಯಗಳೆ ಬಸವಣ್ಣಯ್ಯನವರಿಗೆ ಪಾದರಕ್ಷೆಗಳನ್ನು ತೆಗೆದುಕೊಂಡು ಹೋಗಿದ್ದೆನು. ಬಸವಣ್ಣನವರಿಗೆ ತೋರಿಸಿ ಇವನ್ನು ನೀವು ಮೆಡಬೇಕೆಂದು ಕೇಳಿದೆ. ಬಸವಣ್ಣನವರಾದರೋ ಪರಮೇಶ್ವರನಿಗೆ ಸಲ್ಲತಕ್ಕ ವಸ್ತುಗಳಪ್ಪ ಎಂದು ಹೇಳಿದರು. ನಾನು ಬಹಳವಾಗಿ ಬೇಡಿಕೊಂಡರೂ ಸಹ ಒಪ್ಪದೆ 'ಇವು ಶಿವನ ಒಡವೆಗಳು ನಮಗೆ ಸಲ್ಲುವಂತವಲ್ಲ' ಎಂದು ಹಿಂದಕ್ಕೆ ಕೊಟ್ಟರು ಸ್ವಾಮೀ. ನಾಮ ಮನೆಗೆ ತೆಗೆದುಕೊಂಡು ಹೋಗುತ್ತಿದ್ದೇನೆ" ಎಂದು ಹರಳಯ್ಯನವರು ಹೇಳಲು ಮಧುವರಸಯ್ಯನು "ಎಲವೋ ಹರಳ ಅವು ಹೇಗಿವೆ ನೋಡೋಣ ತೆಗೆ" ಎಂದು ಕೇಳಲು "ಸ್ವಾಮಿ ಮಧುವರಸಯ್ಯಗಳೇ ಆ ಪಾದರಕ್ಷೆಗಳ ತಂಟೆ ನಿಮಗೆ ಬೇಡ" ಎಂದು ಎಷ್ಟು ಹೇಳಿದರೂ ಕೇಳದೆ

ಶಿಷ್ಯ

ಏನು ಮಾಡಿದರು ಸ್ವಾಮಿ ?

ನಿರೂಪಕ

ಕಡುಲೋಭಿ ಬಸವಣ್ಣ ಕೊಳಲಾರನೋ ಕೇಳು
ಕೊಡು ಪಾದುಕೆಗಳನು ಕೊಂಡುಕೊಳ್ಳುವೆನು
ಕೊಂಡುಕೊಳ್ಳುವೆನು ೨೬೩

ಎಲೋ ಹರಳ ಈ ಪಾದುಕೆಗಳನ್ನು ಕೊಳ್ಳುವಷ್ಟು ಶಕ್ತಿಯು ಹಣವೂ ಆ ಬಸವನಿಗೆ ಎಲ್ಲಿಂದ ಬರಬೇಕು ! ಅವನು ಮೊದಲೇ ಕಡುಲೋಭಿ. ಬಿಜ್ಜಳ ಮಹಾರಾಜನ ಮಂತ್ರಿಯಾಗಿ ಆಶ್ರಯ ಪಡೆದ ಮೇಲೆ ತಾನೆ ಅವನು ದುಡ್ಡು ಕಾಸು ಕಂಡದ್ದು! ಬಿಜ್ಜಳನ ಬಿಟ್ಟಿ ಪಣದಲ್ಲಿ ಅನ್ನವನ್ನು ಮಾಡಿಸಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳಿಗೆ ಅನ್ನ ಹಾಕುತ್ತಾನಂತೆ. ಆದರೂ ಅವನು ಪವಾಡ ಪುರುಷನಂತೆ ! ಅಬ್ಬಬ್ಬಬ್ಬ. ಆ ಬುದ್ಧಿಯಿಲ್ಲದ ಶ್ವಪಚರಾದರೋ ಆತನ ಬೆನ್ನೆ ಮಾತಿಗೆ ಮರುಳಾಗಿ ಅವನನ್ನು ದ್ವಿತೀಯ ಶಂಭು ಎಂದು ಕೂಗಿ ಕುಣಿಯುತ್ತ ಬೀಗಿ ಮೆರೆಯುತ್ತಾ ಆತನನ್ನು ಓಲೈಸುತ್ತಾ ಹಾಳಾಗುತ್ತಿದ್ದಾರೆ. ದಪ್ಪಮುಂಡೇವು ಅವನ ಬಗೆಗೆ ಹೇಳುವ ಕಟ್ಟು ಕಥೆಗಳೋ ಚಿನ್ನದ ರಾಶಿಯನ್ನು ಮುತ್ತಿನರಾಶಿ

ಮಾಡಿದನಂತೆ. ಕರೇ ಬದನೇಕಾಯಿಗಳನ್ನು ಲಿಂಗಗಳನ್ನಾಗಿ ಮಾಡಿದನಂತೆ. ಇವೆಲ್ಲವೂ ಕೇವಲ ಯಕ್ಷಿಣಿ ಲಿಲ್ಲವೆ? ಆತನು ನಿಜವಾಗಿಯೂ ಪವಾಡ ಪುರುಷನಾಗಿದ್ದರೆ ನಿನ್ನ ಈ ಜೋಡುಗಳನ್ನು ಕೊಳ್ಳುವಷ್ಟು ಹಣ ಅವನಲ್ಲಿರಲಿಲ್ಲವೆ? ಅವನು ಕಪಟಿ. ದ್ರೋಹಿ, ನಯವಂಚಕ ಮೇಲಾಗಿ ಕೃಪಣ. ಅವನ ಸ್ವಾರ್ಥಸಾಧನೆಗಾಗಿ ಅನುಭವ ಮಂಟಪ ಕಟ್ಟಿಸುತ್ತೇನೆ ಎಂದು ಬೊಕ್ಕಸ ದಲ್ಲಿದ್ದ ಹಣವನ್ನೆಲ್ಲ ವ್ಯಯ ಮಾಡಿದ್ದಾನೆ. ಅವನು ನಿಜವಾಗಿಯೂ ಶರಣನಾಗಿದ್ದರೆ ದುಡ್ಡಿಗೇನು ಕಡಿಮೆ ಇತ್ತೆ?" ಎಂದು ಹರಳಯ್ಯನನ್ನು ಕೇಳಲು "ಸ್ವಾಮಿ, ಪಾದರಕ್ಷೆಗಳ ತಂಟೆ ನಿಮಗೆ ಬೇಡಿ. ದಯವಿಟ್ಟು ಸುಮ್ಮನಿರಿ" ಎಂದು ಎಷ್ಟು ಹೇಳಿದರೂ ಕೇಳದೆ ಹರಳಯ್ಯನ ಬಗಲಲ್ಲಿದ್ದ ಚಮ್ಮಾವುಗೆಯನ್ನು ಕಿತ್ತುಕೊಂಡು ಕಾಲಿಗೆ ಧರಿಸಲು ಪ್ರಯತ್ನಪಟ್ಟಿದ್ದಾನೆ. ಹರಳಯ್ಯನಾದರೋ ಮಧುವರಸಯ್ಯನಿಗೆ ಕೈಮುಗಿದುಕೊಂಡು ಏನಂತಾ ಹೇಳ್ತಾ ಇದ್ದಾನೆ.

ಮೆಡಬೇಡ ದಮ್ಮಯ್ಯ ಶರಣರ ಪಾದುಕೆಗಳನು
ಕೆಡಬೇಡ ನೀನಿನ್ನು ಕೊಡು ಪಾದುಕೆಗಳ
ಕೊಡು ಪಾದುಕೆಗಳ | ೨೬೪

"ಅಯ್ಯಾ ಮಧುವರಸಯ್ಯಗಳೇ, ನೀವು ಹೇಳಿದರೆ ನಾನು ಕೇಳಬೇಕೆ ? ಬಸವಣ್ಣ ನವರು ಮಹಾಮಹಿಮರು. ಅವರು ಹಾಗೆ ಮಂತ್ರಿಗಳಾಗಿರುತ್ತೇನೆಂದು ಏನಾದರೂ ಸ್ವಲ್ಪ ಗರ್ವ ಇದೆಯೆ? ಆ ಮಹನೀಯನಲ್ಲಿ ಎಂತಾ ದಯಾಳುತನವಿದೆ. ನಮ್ಮ ಜನಾಂಗದಲ್ಲಿ ಪ್ರಾಚೀನ ಕಾಲದಿಂದಲೂ ನಡೆಯುತ್ತಿದ್ದ ಪ್ರಾಣಹತ್ಯೆಗಳನ್ನು ನಿಲ್ಲಿಸಿ ನಮಗೆ ಬಹಳ ಉಪಕಾರ ಮಾಡಿದ್ದಾರೆ. ಸ್ವಾಮೀ, ಅಂತಹ ಮಹನೀಯರೇನೇ ಮೆಡದೇ ಇರುವಾಗ ನೀವು ಮೆಟ್ಟಿ ಕೆಡಬೇಡಿ ಸ್ವಾಮಿ" ಎಂದು ಹರಳಯ್ಯನವರು ಹೇಳಿದ್ದಾರೆ. ಮಧುವರಸಯ್ಯನು ಅಹಂಕಾರದಿಂದ ಆ ಪಾದುಕೆಗಳನ್ನು ಕಿತ್ತುಕೊಂಡು ಪಾದರಕ್ಷೆಗಳಿಗೆ ಕಾಲನ್ನು ಹಾಕುತ್ತಲೇನೆ ಮಧುವರಸಯ್ಯನಿಗೆ ಏನಾಗಿದೆ.

ಶಿಷ್ಯ

ಏನಾಗಿದೆ ಸ್ವಾಮಿ ?

ನಿರೂಪಕ

ಮೆಟ್ಟಲು ಪಾದರಕ್ಷೆ ಕೆಟ್ಟೆನು ಎನ್ನುತ
ಭ್ರಷ್ಟನಾದೆನು ದೇವ ಕಾಪಾಡು ಎನುತ
ಕಾಪಾಡು ಎನುತ | ೨೬೫

ಅಯ್ಯೋ ನಾನು ಕೆಟ್ಟೆನೆ. ಹರಳಯ್ಯನು ಎಷ್ಟು ಹೇಳಿದರೂ ಕೇಳದೇನೇ ಪಾದರಕ್ಷೆ ಗಳಿಗೆ ಕಾಲಿಡುತ್ತಲೇನೆ ಶರೀರಕ್ಕೆ ಬೆಂಕಿ ಹಚ್ಚಿದಂತೆ ಆಗುತ್ತಿದೆ. ನಾನು ಬಸವಣ್ಣನು ಪವಾಡಪುರುಷನಲ್ಲವೆಂದು, ಕಡುಲೋಭಿ ಎಂದು ತಿಳಿದಿದ್ದೆನು. ಈಗ ಇದರ ಮರ್ಮವು ಗೊತ್ತಾಗುತ್ತಿದೆ. ಬಸವಣ್ಣನು 'ಇವು ಶಿವನ ಒಡವೆ' ಎಂದು ಹೇಳಿರುವುದು ಇದಕ್ಕಾಗಿಯೇನೆ. ಅಯ್ಯೋ ಕೆಟ್ಟೆನು ಕೆಟ್ಟೆನು ಹರಳಯ್ಯ, ಇದರ ನಿವಾರಣೆಗೆ ಉಪಾಯ ಕಂಡಿರುವೆಯಾ?" ಎಂದು ಹರಳಯ್ಯನವರನ್ನು ಬೇಡಿಕೊಳ್ಳಲು ಹರಳಯ್ಯನವರಾದರೋ "ಮಧುವರಸಯ್ಯನಿಗೆ ಬಸವಣ್ಣನವರೇ ಮೆಡದಿರುವ ಪಾದರಕ್ಷೆಗಳಪ್ಪ. ನಾನು ಎಷ್ಟು ಹೇಳಿದರೂ ಕೇಳದೆ ಇವನ್ನು ಮಾದಿಗನು ಮಾಡಿರುವ ಪಾದರಕ್ಷೆ ಎಂದು ಅಸಡ್ಡೆಯಿಂದ ಅವುಗಳ ಮಹತ್ವವನ್ನು ಅರಿಯದೆ ಮೆಟ್ಟೆಯಲ್ಲ, ಈಗ ನಿನ್ನ ಗತಿ ಏನಾಗಿದೆ?" ಎನ್ನಲು ಮಧುವರಸಯ್ಯನು ತನ್ನ ದೇಹಕ್ಕೆ ಬೆಂಕಿ ಬಿದ್ದಂತಾಗಿ ಬೇಗೆಯನ್ನು ತಾಳಲಾರದೆ ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾನೆ.

ಕೆಟ್ಟೆ ಕೆಟ್ಟೆನಕಟ ಭ್ರಷ್ಟನಾದೆನು ದೇವ
ಕಷ್ಟವ ಕಳೆವವರು ಯಾರುಂಟು ಶಿವನೆ
ಯಾರುಂಟು ಶಿವನೆ | ೨೬೬

ಹೀಗೆ ಮಧುವರಸಯ್ಯನು ಶರೀರಕ್ಕೆ ಬೆಂಕಿಯನ್ನು ಹಚ್ಚಿದಂತೆ, ಧಗಧಗನೆ ಉರಿದಂತೆ, ಕೆಂಡವನ್ನೇ ಮೈಮೇಲೆ ಸುರಿದಂತೆ ಆಗುತ್ತಿರಲು "ಅಯ್ಯೋ ಏನು ಮಾಡಲಿ, ಕಾಪಾಡಿ. ಯಾರಾದರೂ ನನ್ನ ಕಾಪಾಡಿ" ಎಂದು ಕೂಗುತ್ತ "ಹರಕು ಮೆಳೆಯಲ್ಲಿ ಜೇನು, ತಿರುಕ ಜನಗಳಲ್ಲಿ ಸತ್ಯ ಇರುವಂತೆ ಹರಳಯ್ಯನೂ ಸಹ ಶರಣನೇ ಇರಬೇಕು. ಆದ್ದರಿಂದಲೇ ಬಸವಣ್ಣನು ಆ

ಪಾದುಕೆಗಳನ್ನು ಮೆಟ್ಟದೆ ಹಿಂದಕ್ಕೆ ಕಳುಹಿಸಿದ್ದಾನೆ. ಮುಂದೇನು ಮಾಡಲಿ" ಎಂದು ಮಧುವರಸಯ್ಯನು ಮನೆಗೆ ಹೋಗಿದ್ದಾನೆ. ಮನೆಗೆ ಹೋಗಿ ದೇಹದ ತಾಪವನ್ನು ಸೈರಿಸಲಾರದೆ "ಅಮ್ಮಾ, ಕಿಚ್ಚೆನಲ್ಲಮ್ಮಾ" ಎಂದು ತನ್ನ ತಾಯಿಯನ್ನು ಬೇಡಿಕೊಳ್ಳಲು "ಮಗೂ ಏನಾಯಿತಪ್ಪ? ಹೊಟ್ಟೆಬಾಧೆಯೆ? ತಲೆ ಶೂಲೆಯೆ? ನಿನ್ನ ಶರೀರಕ್ಕೆ ಏನು ತೊಂದರೆ ಉಂಟಾಗಿದೆ ಮಗನೆ?" ಎಂದು ತಾಯಿಯು ಕೇಳಲು ಮಧುವರಸಯ್ಯನು ತಾಯಿಗೆ ಏನು ಹೇಳ್ತಾ ಇದಾನೆ

ಶಿಷ್ಯ

ಏನು ಹೇಳ್ತಾ ಇದಾನೆ ಸ್ವಾಮಿ ?

ನಿರೂಪಕ

ಶರಣರ ಪಾದುಕೆಗಳ ಅರಿಯದೆ ಮೆಟ್ಟಿದೆನು
ಗುರುವೇ ಬಲ್ಲನು ಎನ್ನ ಹರಣದ ಬಗೆಯಾ
ಹರಣದ ಬಗೆಯಾ | ೨೬೭

ಮಧುವರಸ : ಅಮ್ಮಾ, ಹರಳಯ್ಯನವರು ಬಸವಣ್ಣನವರಿಗೆ ಪಾದರಕ್ಷೆಗಳನ್ನು ಮಾಡಿ ತೆಗೆದುಕೊಂಡು ಹೋಗಿದ್ದರಂತೆ.

ತಾಯಿ : ಹರಳಯ್ಯನವರು ಮಾಡಿದ ಪಾದರಕ್ಷೆಗಳು ಬಸವಣ್ಣವರಿಗೆ ಬೇಕಿತ್ತಂತೇನಪ್ಪಾ?

ಮಧುವರಸ : ಅಮ್ಮಾ ಹರಳಯ್ಯನು ಬಸವಣ್ಣನವರಿಗೆ ಒಂದು ಸಾರಿ ಶರಣು ಎಂದನಂತೆ. ಅದಕ್ಕೆ ಬಸವಣ್ಣನವರು ಒಂದು ಶರಣಿಗೆ ಪ್ರತಿಯಾಗಿ ಎರಡು ಶರಣು ಮಾಡಿದರಂತೆ.

ತಾಯಿ : ಒಂದು ಶರಣು ಹೆಚ್ಚಾದರೇನಾಯ್ತು ?

ಮಧುವರಸ : ಅಮ್ಮಾ ಹಾಗಲ್ಲ. ಒಂದು ಶರಣನ್ನು ಮಹಾತ್ಮನಾದ ಬಸವಣ್ಣ ನನಗೆ ಮಾಡಿದನಲ್ಲ. ಈ ಪಾಪವನ್ನು ಹೇಗೆ ಪರಿಹರಿಸಿಕೊಳ್ಳಬೇಕೆಂದು ಯೋಚಿಸಿದನಂತೆ.

ತಾಯಿ : ಹೇಗಪ್ಪಾ ಮಗು ?

ಮಧುವರಸ : ಅಮ್ಮಾ. ಆ ಶರಣ ಹರಳಯ್ಯನು ಶರಣು ಹೆಚ್ಚಿದ್ದಕ್ಕೆ ಅವನ ಬಲದೊಡೆಯ ಚರ್ಮವನ್ನು ಹೆಂಡತಿಯ ಎಡತೊಡೆಯ ಚರ್ಮವನ್ನು ಕೊಯ್ದು ಪಾದರಕ್ಷೆಗಳನ್ನು ಮಾಡಿ ಬಸವಣ್ಣನರಿಗೆ ಕೊಟ್ಟು, ಅವರಿಂದ ಆಶೀರ್ವಾದವನ್ನು ಪಡೆಯಬೇಕೆಂದು ತೆಗೆದುಕೊಂಡು ಹೋಗಿದ್ದನಂತೆ.

ತಾಯಿ : ವಿಷಯ ಬಹಳ ಸ್ವಾರಸ್ಯವಾಗಿದೆ ಆಮೇಲೇನಾಯ್ತು ಹೇಳು.

ಮಧುವರಸ : ಅಮ್ಮಾ, ಆಮೇಲೆ ಬಸವಣ್ಣನಿಗೆ ಹರಳಯ್ಯನು ಪಾದರಕ್ಷೆಗಳನ್ನು ಕೊಡಲು ಬಸವಣ್ಣನು ನೋಡಿ 'ಇವು ಗೋವಿನ ಚರ್ಮದ ಪಾದರಕ್ಷೆಗಳಲ್ಲಪ್ಪ. ಇವು ಶಿವನ ಒಡವೆ. ಇವು ನಮ್ಮ ವಸ್ತುವಲ್ಲ' ಎಂದು ಹಿಂದಕ್ಕೆ ಕಳಿಸಿದರಂತೆ.

ತಾಯಿ : ಹೌದೆ ? ಆಮೇಲೇನಾಯಿತು ?

ಮಧುವರಸ : ನಾನು ತಿಳಿಯದೆ ಅಹಂಕಾರದಿಂದ ಹರಳಯ್ಯನು ಎಷ್ಟು ಹೇಳಿದರೂ ಕೇಳದೇನೆ ಪಾದರಕ್ಷೆಗೆ ಕಾಲಿಟ್ಟೆನಮ್ಮ. ಇಟ್ಟ ತಕ್ಷಣವೆ ಶರೀರಕ್ಕೆ ಬೆಂಕಿ ಇಟ್ಟಂತಾಯಿತು.

ತಾಯಿ : ಅಯ್ಯೋ ಶಿವನೆ !

ಮಧುವರಸ : ಹೌದಮ್ಮ. ಪಾದರಕ್ಷೆಗಳಿಂದ ಕಾಲನ್ನು ತೆಗೆದುಕೊಳ್ಳುವಷ್ಟರಲ್ಲಿ ನಾನು ಎಲ್ಲಿ ಬೆಂದು ಹೋಗುತ್ತೇನೆಯೋ ಎಂದು ತಿಳಿದಿದ್ದೆನು. ಆದುದರಿಂದ ಈಗ ನನ್ನ ದೇಹಕ್ಕೆ ಕೆಂಡದ ಮಧ್ಯೆ ನಿಂತಂತ ಬಾಧೆ ಉಂಟಾಗುತ್ತಿದೆ. ಈ ಉರಿಯನ್ನು ಸೈರಿಸಲಾರೆನಮ್ಮ.

ತಾಯಿ : ಅಯ್ಯೋ ಮಗು, ವಿವೇಚನೆಯಿಲ್ಲದೆ ಎಂಥಾ ಪಾಪ ಕಾರ್ಯವನ್ನು ಮಾಡಿಬಿಟ್ಟೆ.

ಎಂದು ಹೇಳುತ್ತಾ ಆ ತಕ್ಷಣವೇನೇ ವೇಗವಾಗಿ ಬಸವಣ್ಣನರ ಅರಮನೆಗೆ ಬಂದು ಬಸವಣ್ಣನವರನ್ನು ಕಂಡು ಶ್ರದ್ಧಾಭಕ್ತಿಗಳಿಂದ ಶಿರಬಾಗಿ ಶರಣು ಮಾಡುತ್ತಾ

ತರಳನ ಮೈ ಉರಿಯ ಪರಿಹರಿಸಯ್ಯಾ ದೇವ
ಶರೀರಕೆ ತೊಂದರೆ ಆಗಿಹುದಯ್ಯಾ
ಆಗಿಹುದಯ್ಯಾ | ೨೬೮

"ಅಪ್ಪಾ ಬಸವಣ್ಣ, ಹರಳಯ್ಯ ನಿಮ್ಮ ಬಳಿಗೆ ತಂದ ಪಾದರಕ್ಷೆಯನ್ನು ನೀವು ಮೆಡದೆ ಕಳುಹಿಸಿದ್ದಿರಂತೆ. ಹರಳಯ್ಯನು ಹಿಂದಕ್ಕೆ ತೆಗೆದುಕೊಂಡು ಹೋಗುವಾಗ ನನ್ನ ಮಗನಾದ ಮಧುವರಸಯ್ಯನು ಅಹಂಕಾರದಿಂದ 'ತೆಗೆದುಕೊಂಡು ಬಾರೋ ಹರಳ' ಎಂದು ಕೇಳಿದ್ದಕ್ಕೆ ಹರಳಯ್ಯನು ಎಷ್ಟು ಬುದ್ಧಿವಾದವನ್ನು ಹೇಳಿದರೂ ಕೇಳದೇನೆ ಆ ಪಾದರಕ್ಷೆಗೆ ಕಾಲನ್ನು ಇಟ್ಟುಕೂಡಲೆ, ಶರೀರಕ್ಕೆ ಬೆಂಕಿ ಹಚ್ಚಿದಂತೆ ಆಗಿದೆಯಪ್ಪಾ. ಇದಕ್ಕೆ ಪರಿಹಾರವನ್ನು ನೀವೇ ಹೇಳಬೇಕು" ಎಂದು ಬೇಡಿಕೊಂಡಿದ್ದಾಳೆ. ಬಸವಣ್ಣನವರಾದರೋ ಏನೆಂದು ಹೇಳುತ್ತಾ ಇದಾರೆ

ಶಿಷ್ಯ

ಏನೆಂದು ಸ್ವಾಮಿ ?

ನಿರೂಪಕ

ವರಗಂಗೋದಕದಿಂದ ಶರೀರದ ರೋಗವು
ಪರಿಹಾರವಾಗುವುದು ಆರು ತಿಂಗಳಿಗೆ
ಆರು ತಿಂಗಳಿಗೆ | ೨೬೯

"ಅಮ್ಮಾ ತಾಯಿ, ನಿತ್ಯವೂ ಗಂಗೋದಕವನ್ನು ಆತನಿಗೆ ಹಾಕುತ್ತಾ ಬಂದರೆ ಆರು ತಿಂಗಳಿಗೆ ಆ ರೋಗವು ನಿವಾರಣೆ ಯಾಗುತ್ತದೆ. ಹೋಗಿ ತಾಯಿ ಹಾಗೇ ಮಾಡಿ" ಎಂದು ಬಸವಣ್ಣನವರು ಹೇಳಿ ಕಳುಹಲು ತಾಯಿಯು ಬಂದು ಮಗನಿಗೆ ಬಸವಣ್ಣನವರು ಹೇಳಿದಂತೆ ಹೇಳಿದ್ದಾಳೆ. ಅಂದಿನಿಂದ ನಿತ್ಯವು ನೀರನ್ನು ಹಾಕುತ್ತಾ ಇದ್ದಾರೆ.

ಶುದ್ಧವಾದ ಜಲದಿಂದ ಇದ್ದ ರೋಗ ಹೋಗುವುದೆಂದು
ಬುದ್ಧಿವಂತರು ಅವರು ಹೇಳಿದರು ಮಗನೇ
ಹೇಳಿದರು ಮಗನೇ | ೨೭೦

"ಅಯ್ಯಾ ಮಗು, ಈ ರೋಗವು ಹೋಗಲು ನಿತ್ಯವೂ ನೀರನ್ನು ಹಾಕಿದರೆ ಆರು ತಿಂಗಳಿಗೆ ನಿವಾರಣೆಯಾಗುವುದೆಂದು ಬಸವಣ್ಣವರು ಹೇಳಿರುತ್ತಾರೆ" ಎಂದು ಒಪ್ಪಿಸಿ ಪ್ರತಿನಿತ್ಯ ನೀರನ್ನು ಹಾಕುತ್ತಿರುವಾಗ ಒಂದು ದಿನ ನೀರನ್ನು ತರಲು ಮನೆಯಲ್ಲಿರುವ ದಾಸಿಯನ್ನು ಕಳಿಸಿದ್ದಾರೆ.

ಪೂರ್ವಜನ್ಮದ ಕರ್ಮದಿಂದಲೆ ತಾನವಳು
ಬ್ರಾಹ್ಮಣರ ಮನೆಯಲ್ಲಿ ದಾಸಿಯಾಗಿಹಳು
ದಾಸಿಯಾಗಿಹಳು | ೨೭೧

ಆ ದಾಸಿಯಾದರೋ ಪೂರ್ವಜನ್ಮದ ಕರ್ಮದಿಂದ ಬ್ರಾಹ್ಮಣರ ಮನೆಯಲ್ಲಿ ಅವರ ಸೇವೆಯನ್ನು ಮಾಡುವುದಕ್ಕೆ ನಿರತಳಾಗಿ ನಿತ್ಯವೂ ನೀರನ್ನು ತಂದು ಹಾಕುತ್ತಿದ್ದಾಳೆ. ಆದರೂ ಸಹ

ಎಷ್ಟು ನೀರಾಕಿದರೂ ಅಷ್ಟಷ್ಟು ರೋಗವು
ಕಷ್ಟವಾಗಿ ಕಾಣುವುದು ಮಧುವರಸನಿಗೆ
ಮಧುವರಸನಿಗೆ | ೨೭೨

ದಾಸಿಯಾದರೋ ನೀರನ್ನು ತರಲು ಬೇಸರವಾಗಿ 'ನಾನು ಎಷ್ಟು ನೀರು ತಂದು ಹಾಕಿದರೂ ಸಹ ದಿನೇ ದಿನೇ ರೋಗವು ಉಲ್ಬಣವಾಗುತ್ತಿದೆಯೇ ಹೊರತು ಗುಣಮುಖವಾಗುತ್ತಲೇ ಇಲ್ಲ. ನನ್ನೊಡೆಯನಾದರೂ ನೀನು ಒಳ್ಳೆಯ ನೀರನ್ನು ತರದೆ

ಇದ್ದುದರಿಂದ ಹೀಗೆ ರೋಗವು ಪ್ರಬಲವಾಗುತ್ತಾ ಇದೆ ಎಂದು ಬಯಿಗೆ ಬಂದಂತೆಲ್ಲಾ ಬಯ್ಯುತ್ತಾ ಇದ್ದಾರೆ ಎನ್ನುತ್ತ, ಇತ್ತ ಆ ದಾಸಿಯಾದರೋ ನೀರನ್ನು ತರುವುದಕ್ಕೆ ಕೊಡಗಳನ್ನು ತೆಗೆದುಕೊಂಡು ಹೋಗುವಾಗ ನಗರದಲ್ಲಿ ದೊಂಬರು ಆಟವನ್ನು ಆಡುತ್ತಾ ಇದಾರೆ.

ಶಿಷ್ಯ

ಅವರು ಹೇಗೆ ಆಟ ಆಡ್ತಾ ಇದ್ರು ಗುರುವೆ ?

ನಿರೂಪಕ

ಗಣೆಯ ಮೇಲ್ಹತ್ತುತ್ತ ಮಿಣಿಯ ಮೇಲ್ತಿರುಗುತ್ತ
ಅಣಕಿಸುತ ಜನರನು ಆಟವಾಡುವರು
ಆಟವಾಡುವರು | ೨೭೩

ಇತ್ತ ದೊಂಬರಾದರೋ ಗಣೆಗಳನ್ನು ನೆಟ್ಟು ಮಿಣಿಗಳನ್ನು ಕಟ್ಟಿ ಗಣೆಯ ಮೇಲೆ ಹತ್ತುವುದು, ಮಿಣಿಯ ಮೇಲೆ ನಡೆಯುವುದು, ಜನಗಳನ್ನು ನಗಿಸುವುದು, ಹೀಗೆ ಆಟ ವಾಡುತ್ತಿರುವಾಗ ದಾಸಿಯು ನೋಡುತ್ತಾ ನಿಂತಿರಲು ಅಷ್ಟರಲ್ಲಿ ಸೂರ್ಯಾಸ್ತವಾಗುತ್ತಿರಲು ಅಂಧಕಾರ ಕವಿದು ದಾರಿ ಕಾಣದಂತಾಗಿದೆ. ಇತ್ತ ದಾಸಿಯಾದರೋ 'ನಾನು ದೊಂಬರ ಆಟವನ್ನು ನೋಡುತ್ತ ನೀರು ತರುವುದನ್ನೇ ಮರೆತೆನಲ್ಲ' ಎಂದು ತನ್ನ ಆತ್ಮಲಿಂಗವನ್ನು ಏನೆಂದು ಸ್ತುತಿ ಮಾಡುತ್ತಿದ್ದಾಳೆ.

ಶಿಷ್ಯ

ಏನೆಂದು ಸ್ತುತಿ ಮಾಡುತ್ತಿದ್ದಾಳೆ ಸ್ವಾಮಿ ?

ನಿರೂಪಕ

ಹೊತ್ತು ಮುಳುಗಿತು ಶಿವನೆ ಕತ್ತಲಾಯಿತು ನೀರ
ಹೊತ್ತು ತರಲು ದಾರಿ ಎತ್ತಲೆಂದರಿಯೆ
ಎತ್ತಲೆಂದರಿಯೆ | ೨೭೪

"ಶಿವ ಶಿವಾ ನಾನು ದೊಂಬರ ಆಟವನ್ನು ನೋಡುತ್ತ ನೀರು ತರುವುದನ್ನೇ ಮರೆತು ಬಿಟ್ಟೆನು. ಕತ್ತಲೆ ಆವರಿಸಿದೆ. ಅಂಧಕಾರವು ಮುಸುಕಿ ನಾನು ಯಾವ ಕಡೆ ಹೋಗಬೇಕೆಂಬುದೇ ಗೋಚರವಾಗುತ್ತಿಲ್ಲವಲ್ಲ. ನೀರನ್ನು ತೆಗೆದುಕೊಂಡು ಹೋಗದೇ ಹೋದರೆ ನನಗೆ ಏನು ಶಿಕ್ಷೆಯನ್ನು ಕೊಡುತ್ತಾರೆಯೋ" ಎಂದು ಆ ದಾಸಿಯಾದರೋ ತನ್ನ ಉರದ ಲಿಂಗವನ್ನು ಹೇಗೆ ಬೇಡುತ್ತಿದ್ದಾಳಪ್ಪಾ ಅಂದರೆ

ಶಿಷ್ಯ

ಹೇಗೆ ಗುರುವೆ ?

ನಿರೂಪಕ

ಉರದ ಲಿಂಗವ ತಾನು ಕರದೊಳಗೆ ಇಂಬಿಡಿದು
ಹರಳಯ್ಯನ ಕರೆ ಬಾನಿ ಬಳಿಗೆ ತಾ ಹೋಗೆ
ಬಳಿಗೆ ತಾ ಹೋಗೆ | ೨೭೫

ಹರಳಯ್ಯನು ಚರ್ಮವನ್ನು ಕೊಳೆಹಾಕುವ ಬಾನಿಯ ಹತ್ತಿರಕ್ಕೆ ಆ ದಾಸಿಯಾದರೋ ಬಂದಿರುವಾಗ ಆ ಲಿಂಗವಾದರೋ ಒಂದು ಪಟುವೇಷವನ್ನು ಧರಿಸಿಕೊಂಡು ದಾಸಿಯನ್ನು ಕೈಹಿಡಿದು ಕರೆದುಕೊಂಡು ಹೋಗಿ ಹರಳಯ್ಯನು ಕರೆಯ ಬಾನಿಯ ನೀರನ್ನು ಮೊಗೆದು ಆ ದಾಸಿಯ ತಲೆಯ ಮೆಲೆ ಹೊರಿಸಿ ಮಧುವರಸಯ್ಯನ ಮನೆ ಬಳಿಗೆ ಬಿಟ್ಟು ದಾಸಿಯ ಅಂತರಂಗವನ್ನು ಆ ಲಿಂಗವು ಸೇರಿಕೊಂಡಿದೆ.

ಶಿಷ್ಯ

ಆಮೇಲೆ ಏನಾಯಿತು ಸ್ವಾಮಿ ?

ನಿರೂಪಕ

ಅಪ್ಪಾ ಮಗುವೇ, ಆ ದಾಸಿಯಾದರೋ ನೀರನ್ನು ತೆಗೆದುಕೊಂಡು ಹೋಗಿ ಹಂಡೆಯಲ್ಲಿ ಸುರಿದಿದ್ದಾರೆ. ಆ ತಕ್ಷಣವೇನೆ ಮಧುವರಸಯ್ಯನ ತಾಯಿಯು ಮಧುವರಸನು ಆಗ್ರಹದಿಂದ 'ನೀನು ನೀರನ್ನು ತರಲು ಹೋದದ್ದು ಯಾವಾಗ? ಎಷ್ಟು ಹೊತ್ತಾಗಿದೆ? ಇಷ್ಟು ಹೊತ್ತು ಏನು ಮಾಡುತ್ತಿದ್ದೆ?' ಎಂದು ದಾಸಿಯನ್ನು ಕೇಳಿದರು. ಅವಳು ಮರುಮಾತನಾಡದೆ ಸುಮ್ಮನೆ ನಿಂತಿದ್ದಾಳೆ. 'ಪರ ಸೇವಾವೃತ್ತಿ ಕಷ್ಟವ್ಯೆ' ಎಂಬುದಾಗಿ ಸೋಮನಾಥ ಹೇಳಿಲ್ಲವೆ? ಅಂದಹಾಗೆ ದಾಸಿಯು ಮರುಮಾತು ಕುಡದೆ ಸುಮ್ಮನೆ ನಿಂತಿರಲು 'ಸ್ನಾನವಾಗಲಿ ಆಮೇಲೆ ನಿನಗೆ ಯಾವ ಶಿಕ್ಷೆ ಕೊಡುತ್ತೇನೆಂದು ನೋಡುತ್ತಿರು' ಎಂದು ದಾಸಿಯನ್ನು ಬಯ್ದು ಸ್ನಾನವನ್ನು ಮಾಡಲಿಕ್ಕೆ ಹೋಗಿ ಒಂದು ತಂಬಿಗೆ ನೀರನ್ನೂ ಮೈಮೇಲೆ ಸುರಿದುಕೊಂಡ ಕೂಡಲೆ ಉರಿಯುತ್ತಿದ್ದ ಶರೀರವೆಲ್ಲವೂ ಶೀತಲವಾಗಿದೆ. ಮಹದಾನಂದದಿಂದ ಮಧುವರಸಯ್ಯನು ಏನೆಂದು ಯೋಚನೆ ಮಾಡುತ್ತಾ ಇದ್ದಾನೆ.

ಗಂಗೆ ಗೋದಾವರಿ ತುಂಗಾಭದ್ರಾ ಯಮುನೆ
ಓಂಗದಲೆ ಮುಳುಗಿದರೆ ಫಲವಿಲ್ಲವೆಂದ
ಫಲವಿಲ್ಲವೆಂದ | ೨೭೬

ಮಧುವರಸಯ್ಯನಾದರೋ 'ಈ ರೋಗ ನಿವಾರಣೆಗಾಗಿ ಪವಿತ್ರವಾದ ಗಂಗೋದಕಗಳಾದ ಗಂಗೆ, ಗೋದಾವರಿ, ತುಂಗಭದ್ರೆ, ಯಮುನೆ ಇಂತಹ ಪವಿತ್ರವಾದ ನೀರಿನಿಂದ ಮೈತೊಳೆದರೂ ನನಗೆ ರೋಗ ಗುಣಮುಖವಾಗಲಿಲ್ಲ. ಈ ದಿವಸ ದಾಸಿಯು ತಂದು ಹಾಕಿರುವ ನೀರು ಎಷ್ಟು ಪವಿತ್ರವಾಗಿದೆ' ಎಂದು ದಾಸಿಯನ್ನು ವಿನಯ ವಾಕ್ಯದಿಂದ 'ಈ ಗಂಗೋದಕವನ್ನು ಎಲ್ಲಿಂದ ತಂದೆ ? ಇದು ಯಾವ ಸಮುದ್ರದ ಗಂಗೋದಕ ? ಸುಳ್ಳನ್ನು ಹೇಳಬೇಡ, ನಿಜವನ್ನು ಹೇಳು' ಎಂದು ಕೇಳಲು ದಾಸಿಯಾದರೋ ನನ್ನನ್ನು ಏನು ಮಾಡುತ್ತಾರೋ ಏನಾಗುತ್ತದೆಯೋ' ಎಂದು ಭಯದಿಂದ ಹೇಳುತ್ತಿದ್ದಾಳೆ.

ಮಾರಹರನ ಕೃಪೆಯೊಳ್ ಸಾರಿ ಹೊರಟೆನು ನಾನು
ನೀರು ಹರಳಯ್ಯನ ಕರೆಬಾನಿ ಉದಕ
ಕರೆಬಾನಿ ಉದಕ | ೨೭೭

'ದಣಿಯೇ, ದೊಂಬರಾಟವಾಡುತ್ತಿದ್ದುದರಿಂದ ನಾನು ನೀರು ತರುವುದನ್ನೇ ಮರೆತು ನಿಂತಿದ್ದೆನು. ಅಷ್ಟರಲ್ಲಿ ಸೂರ್ಯಾಸ್ತವಾಗಿ ಅಂಧಕಾರವು ಮುಸುಕಿ ದಾರಿ ಕಾಣದೆ ಹೆದರಿ ಉರದ ಲಿಂಗವನ್ನು ಪ್ರಾರ್ಥಿಸಲು ಲಿಂಗಯ್ಯನು ಮಟುವೇಷವನ್ನು ಧರಿಸಿ ನನ್ನನ್ನು ಕೈಹಿಡಿದು ಕರೆದುಕೊಂಡು ಹೋಗಿ ಮಾದಿಗರ ಹರಳಯ್ಯನು ಚರ್ಮವನ್ನು ನೆನೆ ಹಾಕುವ ಕರೆಬಾನಿಯ ನೀರನ್ನು ಮೊಗೆದು ತಲೆಯ ಮೇಲಿರಿಸಿದನಪ್ಪ. ಇದು ಸತ್ಯ' ಎಂದು ದಾಸಿಯು ಹೇಳಲು ಮಧುವರಸಯ್ಯನಾದರೋ ಏನು ಆಲೋಚನೆ ಮಾಡುತ್ತಿದ್ದಾನೆ.

ಶಿಷ್ಯ

ಏನು ಆಲೋಚನೆ ಗುರುವೆ ?

ನಿರೂಪಕ

ಶರಣ ಹರಳಯ್ಯನ ಕರೆಬಾನಿ ನೀರಿಂದ
ಶರೀರದ ನೋವೀಗ ಪರಿಹಾರವಾಯ್ತು
ಪರಿಹಾರವಾಯ್ತು | ೨೭೮

ಹೀಗೆ ಮಧುವರಸಯ್ಯನು ಹರಳಯ್ಯನ ಮಹಿಮೆಯನ್ನು ತಿಳಿಯದೆ ಬಾಯಿಗೆ ಬಂದ ಹಾಗೆ ನಿರಾಕರಿಸಿದೆನು. ಅವನು ನಿಜವಾದ ಶರಣನಾದುದರಿಂದ ಅವನ ಕರೆಬಾನಿಯ ನೀರಿನಿಂದಲೆ ನನ್ನ ಶರೀರದ ಉರಿಯು ನಿವಾರಣೆಯಾಯ್ತು ಎಂದು ಮಧುವರಸಯ್ಯನು ಸಂತೋಷವನ್ನು ವ್ಯಕ್ತಪಡಿಸುತ್ತಾ ಇದ್ದಾನೆ.

ಶಿಷ್ಯ

ಹೇಗೆ ಸಂತೋಷ ವ್ಯಕ್ತಪಡಿಸಿದರು ಗುರುವೆ ?

ನಿರೂಪಕ

ತಂದೆಯು ತಾಯ್ಗಳು ಬಂಧು ಬಳಗಾವೆಲ್ಲ
ಚಂದ್ರಶೇಖರನ ಪರಮ ಶರಣರು ನನಗೆ
ಶರಣರು ನನಗೆ | ೨೭೯

ಪರಮೇಶ್ವರನ ಭಕ್ತರೇನೆ ನನಗೆ ಬಂಧುಗಳು. ಹರನ 'ಶರಣರಿಗಿಂತಲೂ ಹಿರಿಯರು ಬೇರೆ ಯಾರಿದ್ದಾರೆ ? ಹರಳಯ್ಯ ಸಾಮಾನ್ಯನಲ್ಲ. ಅವನು ಮಹಾಮಹಿಮ ಮಹಾಶಿವಭಕ್ತ. ಅವನ ಮಗನಾದ ಶೀಲವಂತಯ್ಯನಿಗೆ ನನ್ನ ಮಗಳಾದ ನೀಲನನ್ನು ಕೊಟ್ಟು ಏಕೆ ವಿವಾಹ ಮಾಡಬಾರದು ? ಎಂದು ಮಧುವರಸಯ್ಯನು ಆಲೋಚಿಸಿದ್ದಾನೆ.

ಶಿಷ್ಯ

ಏನೆಂದು ಆಲೋಚಿಸಿದ್ದಾರೆ ಸ್ವಾಮಿ ?

ನಿರೂಪಕ

ಕೊಡಬೇಕು ಉತ್ತಮನಾದವಂಗೆ ಮಗಳಂ
ಸತ್ಪಾತ್ರಂಗೆ ಧನಮಂ
ಬಿಡಬೇಕ್ಕೆ ಧನಲೋಭಮಂ ಬಂಧು ಜನರೊಳ್
ದುಷ್ಪಾತ್ಮರೊಳ್ ಗೋಷ್ಠಿಯಂ
ಇಡಬೇಕೀಶ್ವರನಲ್ಲಿ ಭಕ್ತಿ ರಸಮಂ
ವಿಶ್ವಾಸಮಂ ಸ್ವಾಮಿಯೊಳ್
ಇದ್ದುದುಣಬೇಕೆಲ್ಲ ಹರಹರ ಶ್ರೀ ಚನ್ನಸೋಮೇಶ್ವರಾ | ೨೮೦

ಅಂದಹಾಗೆ ಮಧುವರಸಯ್ಯನು 'ಹರಳಯ್ಯನೇ ಇಂತಹ ಶರಣನಾದ ಮೇಲೆ ನಾನು ಯಾರನ್ನು ಕೇಳಬೇಕಾಗಿದೆ? ಆತನ ಮಗನಾದ ಶೀಲವಂತಯ್ಯನಿಗೆ ಮಗಳನ್ನು ಕೊಟ್ಟು ವಿವಾಹ ಮಾಡಬೇಕೆಂಬುದಾಗಿ' ಯೋಚಿಸುವಾಗ ತಾಯಿಯು ಮಗನಿಗೆ ಹೇಳುತ್ತಾಳೆ.

ಶ್ವಪಚಗೆ ಮಗಳನು ಉಚಿತದೆ ಕೊಡುವರೆ
ನಾಚಿಗ್ಗೇಡಾಗುವುದು ಕೇಳೆನ್ನ ಮಗನೆ
ಕೇಳೆನ್ನ ಮಗನೆ | ೨೮೧

'ಅಯ್ಯಾ ಸುಕುಮಾರ, ನಾವು ಬ್ರಾಹ್ಮಣರಾಗಿ ಶ್ವಪಚನ ಮಗನಿಗೆ ಹೆಣ್ಣನ್ನು ಕೊಟ್ಟರೆ ನಮ್ಮ ಬ್ರಾಹ್ಮಣರು ಸುಮ್ಮನೆ ಬಿಡುತ್ತಾರೆಯೆ?' ಎಂದು ತಾಯಿಯು ಕೇಳಲು ಮಗನು ಅದಕ್ಕೆ ಏನುತ್ತರ ಹೇಳಿದ್ದಾರೆ.

ಶಿಷ್ಯ

ಏನು ಉತ್ತರ ಹೇಳಿದ್ದಾರೆ ಗುರುವೆ?

ನಿರೂಪಕ

'ಅಮ್ಮಾ, ಶಿವಕುಲಕಿಂತಲೂ ಕುಲವು ಬೇರಿದೆಯೇ ತಾಯಿ ? ನನ್ನ ಶರೀರದ ಉರಿಯು ಹೋಗಲು ಅಂತಹ ಶರಣನ ಕರೆ ಬಾನಿಯ ನೀರು ಕಾರಣವಾಯಿತು. ಆದುದರಿಂದ ಶಿವಭಕ್ತರೇ ನನ್ನ ಬಂಧುಗಳು ಮಗಳನ್ನು ಕೊಟ್ಟು ವಿವಾಹ ಮಾಡುತ್ತೇನೆ' ಎಂದು ಹೇಳಿ ಲಗ್ನಕ್ಕೆ ಪ್ರಯತ್ನ ಮಾಡಿದ್ದಾನೆ.

ಇಲ್ಲೀಗೆ ಹರ ಹರ ಇಲ್ಲೀಗೆ ಶಿವ ಶಿವ
ಇಲ್ಲೀಗೆ ಪರಶಿವನ ಕರುಣವು ಇರಲಿ
ಕರುಣವು ಇರಲಿ | ೨೮೨

ಮಧುವರಸಯ್ಯನು ಹರಳಯ್ಯನವರ ಮನೆಗೆ ಹೋಗಿ ಹರಳಯ್ಯನವರ ಪಾದಗಳಿಗೆ ನಮಸ್ಕಾರವನ್ನು ಮಾಡಿ 'ಹರಳಯ್ಯ ನಾನು, ನೀನು ಮಾಡಿದಂತ ಪಾದರಕ್ಷೆಯನ್ನು ಮೆಟ್ಟಿದ ಕೂಡಲೇ ಶರೀರವೆಲ್ಲವೂ ಕುಡವನ್ನಿಟ್ಟಂತಾಗಿ ಬಹಳವಾಗಿ

ನೊಂದೆನು. ಆ ರೋಗ ನಿವಾರಣೆಗಾಗಿ ಬಸವಣ್ಣನವರನ್ನು ನಮ್ಮ ತಾಯಿಯವರು ಕೇಳಲು ಶರಣರ ಪಾದೋದಕದಿಂದ ನಿನ್ನ ಮಗನ ಕಾಯಿಲೆ ನಿವಾರಣೆಯಾಗುತ್ತದೆಯೆಂದು ಹೇಳಿದ್ದರಂತೆ. ನಿನ್ನ ಕರೆಯಬಾನಿಯ ನೀರು ನನ್ನ ಶರೀರದ ರೋಗವನ್ನು ಹೋಗಲಾಡಿಸಿದೆ. ಆ ಕಾರಣದಿಂದ ನಾನು ನನ್ನ ಮಗಳನ್ನು ನಿನ್ನ ಮಗನಿಗೆ ಕೊಟ್ಟು ಬಾಂಧವ್ಯವನ್ನು ಬೆಳಸಬೇಕಾಗಿದೆ' ಎನ್ನಲು ಹರಳಯ್ಯ ಹೇಳುತ್ತಿದ್ದಾರೆ.

ಶಿಷ್ಯ

ಏನು ಹೇಳಿದ್ದಾರೆ ಸ್ವಾಮಿ ?

ನಿರೂಪಕ

ಇಷ್ಟಲಿಂಗಯ್ಯನ ದ್ರಿಷ್ಟಿಯನರಿಯದ
ಭ್ರಷ್ಟದ್ವಿಜರು ನೀವು ಈ ಭೂಮಿಯೊಳಗೆ
ಈ ಭೂಮಿಯೊಳಗೆ | ೨೮೩

ಮಧುವರಸಯ್ಯನವರೇ ನಾವು ಶಿವಭಕ್ತರು. ಆದ್ದರಿಂದ ನಮಗೆ ಶರಣದೀಕ್ಷೆಯಾಗಿದೆ. ನೀನು ಸಹ ನಮ್ಮ ಹಾಗೆಯೇ ದೀಕ್ಷೆಯನ್ನು ಪಡೆದುಕೊಂಡರೆ ಮಾತ್ರ ನಾವು ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತೇನೆ' ಎನ್ನಲು ಮಧುವರಸಯ್ಯನಾದರೋ ಬಸವಣ್ಣನವರ ಮನೆಗೆ ಹೋಗಿ 'ಬಸವಣ್ಣ, ನಮಗೆ ಲಿಂಗ ದೀಕ್ಷೆಯನ್ನು ಮಾಡಬೇಕು. ಹರಳಯ್ಯನ ಮನೆಗೆ ನನ್ನ ಮಗಳನ್ನು ಕೊಟ್ಟು ವಿವಾಹ ಮಾಡಬೇಕು' ಎಂದು ಹೇಳಲು ಬಸವಣ್ಣನವರು ಮಡಿವಾಳ ಮಾಚೀದೇವ, ಕಿನ್ನರಿ ಬೊಮ್ಮಯ್ಯ, ಕಕ್ಕಣ್ಣ-ಚಿಕ್ಕಣ್ಣ ಇವರುಗಳನ್ನು ಕರೆಸಿ ಹರಳಯ್ಯನವರನ್ನು ಕರೆಸಿಕೊಂಡು ಮಧುವರಸಯ್ಯನಿಗೆ ಅವರ ಸಮಾಜವನ್ನು ಕೇಳದೇನೇ ಲಿಂಗದೀಕ್ಷೆಯನ್ನು ಮಾಡಿ ಶಿವಪಂಚಾಕ್ಷರಿ ಮಹಾಮಂತ್ರವನ್ನು ಉಪದೇಶಿಸಿದ್ದಾರೆ.

ಲಿಂಗವ ಧರಿಸುತೆ ಅಂಗಜಾರಿಯ ವರದೆ
ಸಂಗಮೇಶನ ದಯದಿಂ ನೀ ಬಾಳು ಎನುತ
ನೀ ಬಾಳು ಎನುತ | ೨೮೪

ಶರಣರೆಲ್ಲರೂ ಸೇರಿ ಮಧುವರಸಯ್ಯನಿಗೆ ಮತ್ತು ಅವರ ಸಮೂಹಕ್ಕೆಲ್ಲ ಇವರಾಗ ಏನು ಮಾಡಿದ್ದಾರೆ? ಹರಳಯ್ಯನಿಗೂ ಮಧುವರಸಯ್ಯನವರಿಗೂ ನಂಟು ನಡಾವಳಿ ಉಂಟಾಗುವಂತೆ ಒಪ್ಪಿಗೆ ಕೊಟ್ಟಿದ್ದಾರೆ. ಇತ್ತ ಮಧುವರಸಯ್ಯನಾದರೋ ಹರಳಯ್ಯನ ಮಗನಾದ ಶೀಲವಂತಯ್ಯನಿಗೆ ತನ್ನ ಮಗಳಾದ ನೀಲಳನ್ನು ವಿವಾಹ ಮಾಡಲು ಸಾಮಗ್ರಿಗಳನ್ನು ಒದಗಿಸಿ ಚಪ್ಪರವನ್ನು ಹಾಕಿ ಮಂಟಪಾಲಂಕಾರ ಮಾಡಿ ವಾದ್ಯಗೋಷ್ಠಿಯನ್ನು ಅವರು ಹೇಗೆ ನಡುಸ್ತಾ ಇದ್ದಾರೆಂದರೆ -

ಶಿಷ್ಯ

ಹೇಗೆ ನಡೆಸ್ತಾ ಇದ್ದಾರೆ ಸ್ವಾಮಿ ?

ನಿರೂಪಕ

ಹೊಡೆಯಿರೊ ಭೇರಿಯ ಬಡಿಯಿರೊ ತಮಟೆಯ
ಕರಡೆ ಕೌಸಾಳೆಗಳ ನುಡಿಸಿರೋ ನೀವು
ನುಡಿಸಿರೋ ನೀವು | ೨೮೫

ಹೀಗೆ ವಾದ್ಯಾಡಂಬರದಿಂದ ಮದುವೆಯ ಸಮಾರಂಭವು ಶರಣರ ಸಮೂಹದಲ್ಲಿ ನಡೆಯುತ್ತಿರಲು ವಧೂವರರನ್ನು ಅಲಂಕರಿಸಿದ್ದಾರೆ. ಶರಣರ ಕಾಲದ ಅಲಂಕಾರಕ್ಕೂ ಈಗಿನ ಕಾಲದ ಅಲಂಕಾರಕ್ಕೂ ಏನು ವ್ಯತ್ಯಾಸ.

ಶಿಷ್ಯ

ಏನು ವ್ಯತ್ಯಾಸ ಗುರುವೆ ?

ನಿರೂಪಕ

ಅಂಗೋಸ್ಕಗಳು ಹೋಯ್ತು,
ಅಂಗಿ ಪೈಜಾಮಾಯ್ತು,
ಮಂಗನ ಮುಸುಡಿಯಂತೆ
ಮೂಗಿನಡಿಗೆ ಮೀಸೆಯಾಯ್ತು,
ಎಂಥಾ ಸುಖವಿದು ಎಂಥಾ ಸುಖ |
ಕುಪ್ಪಸದ ಕಟ್ಟು ಹೋಯ್ತು,
ಕುಚ್ಚಿನ ಜಾಕೀಟಾಯ್ತು,
ಕೆನ್ನೆಗೆ ಫೇಸ್ ಪೌಡರಾಯ್ತು,
ಮಾತಿನಲ್ಲೆ ಮದುವೆಯಾಯ್ತು,
ಎಂಥಾ ಸುಖವಿದು ಎಂಥಾ ಸುಖ |

ಕಾಲಾಣೆ ಕ್ಷೀರ ಹೋಯ್ತು,
ಕ್ಯಾಪುಗಳು ಪ್ರಬಲವಾಯ್ತು,
ಮನೆಮನೆಗೆ ಸಲೂನಾಯ್ತು,
ಕಾಫಿ ಕುಡ್ತಾ ಪ್ರಬಲವಾಯ್ತು,
ಎಂಥಾ ಸುಖವಿದು ಎಂಥಾ ಸುಖ |

ಹಣೆಯಲ್ಲಿ ನಾಮ ಹೋಯ್ತು,
ಮುಖದಲ್ಲಿ ಬೀಡಿ ಆಯ್ತು,
ಮನೆದೈವವೆಲ್ಲ ಹೋಯ್ತು,
ಮಡದಿಯೆ ಮನೆದೈವವಾಯ್ತು,
ಎಂಥಾ ಸುಖವಿದು ಎಂಥಾ ಸುಖ | ೨೮೬

ಹೀಗೆ ಹಿಂದಿನ ಕಾಲದಲ್ಲಿ ಇರಲಿಲ್ಲಾಪ್ಪ. ಹೀಗೆ ಮಾಡದೆ ವಧೂವರರಿಗೆ ಶ್ವೇತಾಂಬರ ಅಂದರೆ ಬಿಳೇ ಬಟ್ಟೆಯಲ್ಲದೆ ಬಣ್ಣದ ಬಟ್ಟೆಗಳನ್ನು ಹಾಕುತ್ತಿರಲಿಲ್ಲ. ವಧುವನ್ನು ಶೃಂಗಾರ ಮಾಡಿ ವರನಿಗೆ ಪೇಟ ಕೋಟು ಬಾಸಿಂಗಗಳಿಂದ ಅಲಂಕಾರವನ್ನು ಮಾಡಿ, ಶರಣರು ಮತ್ತು ಶರಣ ಸತಿಯರ ಕ್ಷೀರ, ಗುಡ, ಜೀರಿಗೆ, ತುಂಬೇ ಹರಳುಗಳಿಂದ ಧಾರೆಯನ್ನೆರೆದಿದ್ದಾರೆ.

ಇತ್ತ ಮದುವೆ ನಡೆದು ಸಂಭ್ರಮ ತುಂಬಿರಲು
ಪಟ್ಟಣದೊಳು ಸುದ್ದಿ ಪಸರಿಸಿತಾಗ
ಪಸರಿಸಿತಾಗ | ೨೮೭

ಕಲ್ಯಾಣ ಪಟ್ಟಣದಲ್ಲಿ ಹರಳಯ್ಯನ ಮಗನಾದ ಶೀಲವಂತನಿಗೂ ಮಧುವರಸನ ಮಗಳಾದ ನೀಲಳಿಗೂ ವಿವಾಹ ನಡೆಯಿತೆಂದರೆ ಆಶ್ಚರ್ಯವಲ್ಲವೆ? ಹರಳಯ್ಯನು ಮಾದಿಗರವನು, ಮಧುವರಸಯ್ಯನು ಬ್ರಾಹ್ಮಣನು, ಇದು ಇಂತಹದಾಗಿರುವಾಗ ವಿವಾಹಕ್ಕೆ ಬಸವಣ್ಣ, ಸಿದ್ಧರಾಮಣ್ಣ, ಚನ್ನಬಸವಣ್ಣ, ಅಲ್ಲಮಪ್ರಭುಗಳು ಸೇರಿ ನೆರವೇರಿಸಿದರಂತೆ ಎಂಬ ಸುದ್ದಿ ಕಲ್ಯಾಣ ಪಟ್ಟಣದೊಳಗೆಲ್ಲ ಪ್ರಸಿದ್ಧಿಯಾಗಿದೆ.

ಚಂದ್ರಶೇಖರನ ದಯೆದಿಂದಲಿ ಎಲ್ಲರು
ಒಂದಾಗಿ ಸೇರುತ ಇರುತಿರಲು ಆಗ
ಇರುತಿರಲು ಆಗ | ೨೮೮

ಹರಳಯ್ಯನ ಮಗನನ್ನು ಮಧುವರಸನ ಮಗಳನ್ನು ಮೆರವಣಿಗೆಯಲ್ಲಿ ಕರೆದುಕೊಂಡು ಬರುವಾಗ ಅಸ್ಪೃಶ್ಯರ ಸಮೂಹ ಅವರಿವರೆಂಬ ಭೇದವಿಲ್ಲದೇನೆ ನಗರದಲ್ಲಿ ಮೆರವಣಿಗೆ ಬರುತ್ತಾ ಇದೆ. ನಗರದ ಜನರೆಲ್ಲ "ಈ ಶರಣರ ದೆಸೆಯಿಂದ

ನಡೆಯಬಾರದ ಕೃತ್ಯಗಳು ನಡೆಯುತ್ತಾ ಇವೆ. ಇದೇನು ಕಲ್ಯಾಣಕ್ಕೆ ಅಂತ್ಯಕಾಲವೋ? ಪ್ರಪಂಚದ ನಾಶವೋ?" ಎಂದು ಮಾತನಾಡುತ್ತಾ ಇದ್ದಾರೆ. ಹೀಗಿರುವಾಗ ಶರಣರು ಮತ್ತು ಹರಳಯ್ಯನ ಸಮೂಹದವರೆಲ್ಲ ಸೇರಿ ಪಂಕ್ತಿ ಭೋಜನವನ್ನೂ ಏರ್ಪಡಿಸಿದ್ದಾರೆ. ಬಿಜ್ಜಳ ಮಹಾರಾಜನು ಇದನ್ನೆಲ್ಲ ನೋಡಿ "ಅಯ್ಯಾ, ಬಸವಣ್ಣ, ಬ್ರಾಹ್ಮಣರ ಮಗಳನ್ನು ಆ ಶ್ವಪಚನಾದ ಹರಳಯ್ಯನ ಮಗನಿಗೆ ಕೊಟ್ಟು, ನೀವೇ ಮುಂದೆ ನಿಂತು ಮದುವೆ ಮಾಡಿದಾಗ ಮುಂದೆ ಏನಾಗುತ್ತದೆಯೋ ಕಾಣೆ. ಇದು ಸರಿಯೇ ಬಸವಣ್ಣ?" ಎಂದು ಕೇಳಲು ಬಸವಣ್ಣನವರು,

ಶ್ವಪಚನಾದರೂ ಗುರುವಿನುಪದೇಶದಿಂದಲವನು
ಉಪಮಿಸಲು ಅವನ ಮನೆಯು ತ್ರಿಪುರ ಹರನಿಳೆಯ
ತ್ರಿಪುರ ಹರನಿಳಯ | ೨೮೯

"ಮಹಾರಾಜ, ಜಾತಿಯಲ್ಲಿ ಶ್ವಪಚ, ಶೂದ್ರ ಇಂತಹ ಜಾತಿಗಳನ್ನು ಮನುಷ್ಯನು ಮಾಡಿಕೊಂಡಿರುತ್ತಾರೆಯೇ ವಿನಹ ಪ್ರತಿಯೊಬ್ಬರ ಹೃದಯದಲ್ಲೂ ಆ ಪರಮಾತ್ಮನ ಕಿಂಚಿತ್ತಾದ ಕಿಡಿಯೇ ಆವರಿಸಿ ವ್ಯಾಪಕವಾಗಿರುವಾಗ ಜಾತಿಯ ಮಾತೇಕೆ ?

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೆ
ಜಾತಿವಿಜಾತಿ ಎನಬೇಡ-ದೇವನೊಲಿ
ದಾತನೇ ಜಾತ ಸರ್ವಜ್ಞ | ೨೯೦

ಮಹಾರಾಜ, ಸಾಸುವೆ ಕಾಳಿನಷ್ಟು ಗಾತ್ರದ ಲಿಂಗವನ್ನು ಧರಿಸಿದ್ದರೂ ಸಾಕು ಅಂತಹ ಲಿಂಗವಂತರನ್ನೆಲ್ಲ ಒಂದೇ ಎಂಬೆ ನಾನು" ಎಂದು ಬಸವಣ್ಣನವರು ನುಡಿಯಲು ಬಿಜ್ಜಳ ಮಹಾರಾಜನು ಹರಳಯ್ಯನನ್ನು ಮಧುವರಸಯ್ಯನನ್ನೂ ಕರೆಸಿ "ಹರಳಯ್ಯ, ಮಧುವರಸಯ್ಯಗಳೇ ನೀವಿಬ್ಬರೂ ಸೇರಿ ಶರಣರೆಂದು ಹೇಳಿಕೊಂಡು ಅಂತರ್‌ಜಾತಿಗೆ ಅವಕಾಶವನ್ನು ಕೊಟ್ಟರೂ ಇದು ಧರ್ಮಸಮ್ಮತವಲ್ಲ, ಶಾಸ್ತ್ರ ಸಮ್ಮತವಲ್ಲ, ನ್ಯಾಯ ಸಮ್ಮತವಲ್ಲ. ಆದುದರಿಂದ ನಿಮಗೆ ತಕ್ಕ ಶಿಕ್ಷೆ ಆಗಲೇಬೇಕಿದೆ" ಎಂದು ಬಿಜ್ಜಳ ಮಹಾರಾಜನು ಒಂದು ಜೊತೆ ಎತ್ತುಗಳನ್ನು ಹಿಡಿತರಿಸಿ ಅವಕ್ಕೆ ನೊಗವನ್ನು ಕಟ್ಟಿ, ಹರಳಯ್ಯ ಮಧುವರಸರನ್ನು ಹಗ್ಗಕ್ಕೆ ಬಿಗಿದು ಎಳೆಹೂಟೆ ಮಾಡಿಸುತ್ತಿದ್ದಾನೆ.

ನಂದೀಶನ ಕರುಣದಿ ಶಿವಭಕ್ತರಿಗೆ ಆದು
ಕುಂದೆಣಿಸಲಿಲ್ಲವು ಹರನ ದಯದಿಂದ
ಹರನದಯದಿಂದ | ೨೯೧

ಹೀಗೆ ಹರಳಯ್ಯ ಮಧುವರಸರನ್ನು ಎಳೆಹೂಟೆ ಕಟ್ಟಿ ಹೊಡೆಯುತ್ತಾ ಇರಲು ಎತ್ತುಗಳು ಎಳೆಯುತ್ತಾ ಇವೆ. ಅನಂತರ ಚಾರಕರಿಗೆ "ನೀವು ಮುಖಮೋರೆ ನೋಡದೇನೇ ಕಲ್ಲುಮುಳ್ಳು, ಎನ್ನದೇನೆ ಎಳೆಸಿ ಇವರಿಗೆ ಬುದ್ಧಿ ಬರಲಿ" ಎಂದು ಬಿಜ್ಜಳ ಮಹಾರಾಜನು ಹೇಳಲು ರಾಜಾಜ್ಞೆಯಂತೆ ಚಾರರು ಕಲ್ಲು ಮುಳ್ಳುಗಳಿರುವ ಸ್ಥಳಗಳಲ್ಲೇ ಅವರನ್ನು ಎಳಸುತ್ತಾ ಹೊಡೆಯುತ್ತಾ ಇರಲು ಶಿವಭಕ್ತರಾದ ಶರಣರಿಗೆ ಯಾವ ತೊಂದರೆಯೂ ಆಗಿಲ್ಲ. ಬಿಜ್ಜಳ ಮಹಾರಾಜನು ಈ ದೃಶ್ಯವನ್ನು ನೋಡುತ್ತಾ ಇರುವಾಗ ಹರಳಯ್ಯನು ಮಧುವರಸಯ್ಯನು ಭೂಮಿಯ ಮೇಲ್ಭಾಗದಿಂದ ಒಂದು ಅಡಿ ಎತ್ತರದಲ್ಲಿ ಹೋಗುತ್ತಿದ್ದರೆ ವಿನಹ ಅವರ ಶರೀರಕ್ಕೆ ಸ್ವಲ್ಪವೂ ಕುಂದುಂಟಾಗಲಿಲ್ಲ.

ಶಿಷ್ಯ

ನಾನು ಏನಾಗೋಯ್ತೋ ಅಂತ ಹೆದರಿದ್ದೆ ಗುರುವೇ !

ನಿರೂಪಕ

ಹೆದರಬೇಕಿಲ್ಲ ಮಗು, ಶರಣರ ಮಹಿಮೆ ಇರುವುದೇ ಅವರ ಮರಣದಲ್ಲಿ ಎಂಬ ಮರ್ಮವನ್ನು ಅರಿಯಬೇಕು. ಮಹಾರಾಜನಾದ ಬಿಜ್ಜಳನು 'ನಾವು ಎಷ್ಟು ತೊಂದರೆ ಕೊಡಬೇಕೆಂದರೂ ನಮ್ಮ ಪ್ರಯತ್ನವು ಸಫಲವಾಗಲಿಲ್ಲವಲ್ಲ. ಆದ್ದರಿಂದ ಇವರಿಬ್ಬರನ್ನೂ ಶೂಲದ ಮರಕ್ಕೆ ಹಾಕಿಬಿಡಿ' ಎಂದು ರಾಜನು ಆಜ್ಞೆಯನ್ನು ಮಾಡಲು ಇತ್ತ ಹರಳಯ್ಯ ನನ್ನು ಮಧುವರಸಯ್ಯನನ್ನು ಶೂಲಕ್ಕೆ ಹಾಕುವಾಗ 'ಪರಮೇಶ್ವರ, ನಿನ್ನ ಕರುಣೆ ಇದ್ದಂತಾಗಲಿ!' ಎಂದು ಶಿವನನ್ನು ಬೇಡುತ್ತಿದ್ದಾರೆ.

ಶಿವನೆ ಗಂಗಾಧರನೆ ಭವರೋಗ ವೈದ್ಯನೆ
ದೇವರ ದೇವಸ್ವಾಮಿ ಶಂಭುಲಿಂಗಾನೆ
ಶಂಭುಲಿಂಗಾನೆ | ೨೯೨

ಇತ್ತ ಶರಣರಿಬ್ಬರು ಶೂಲದ ಮರದಲ್ಲಿ ನಿಂತು 'ಜೈ ಪರಮೇಶ್ವರ!' 'ಜೈ ಕರುಣಾಕರ!' ಎಂದು ಧ್ಯಾನವನ್ನು ಮಾಡುತ್ತಾ ಇರಲು ಆ ಶೂಲದ ಮರವೆ ಬಿಲ್ವಪತ್ರ ಮರವಾಗಿದೆ ಎಂಬುದಾಗಿ ಶರಣರು ಉದಾಹರಿಸಿದ್ದಾರೆ. ಇತ್ತ ಕಡೆ ಹರಳಯ್ಯನಿಗೂ ಮಧುವರಸಯ್ಯನಿಗೂ ಶೂಲವೇರಿಸುವ ಶಿಕ್ಷೆಯಾಯಿತೆಂದು ಕೇಳಿದ ಸೋಮಯಾಜಿಯಕ್ಕನು ತನ್ನ ಮಕ್ಕಳಾದ ಜಗದೇವ ಮತ್ತು ಮಲ್ಲಿಬೊಮ್ಮಣ್ಣಗಳಿಗೆ "ಅಯ್ಯಾ ಮಕ್ಕಳೇ ಶರಣ ದ್ರೋಹವನ್ನು ನಾನು ಕೇಳಲಾರೆ. ನೀವು ಅದಕ್ಕೆ ತಕ್ಕ ಶಾಸ್ತಿಯನ್ನು ಮಾಡಬೇಕು" ಎಂದು ಹೇಳಿದ್ದಾಳೆ. ಆಗ ಆ ಮಕ್ಕಳು 'ಅಮ್ಮಾ ನಮಗೆ ಹಸಿವಾಗಿದೆ, ಅನ್ನ ಹಾಕು ತಾಯಿ' ಎಂದು ಕೇಳಲು 'ಶರಣ ದ್ರೋಹಿಯನ್ನು ಕೊಂದು ಬರುವವರೆಗೂ ನಿಮಗೆ ನಾನು ಅನ್ನ ಹಾಕುವುದಿಲ್ಲ. ಹಾಗೇನಾದರೂ ನೀವು ಮೀರಿ ಊಟ ಮಾಡಿದರೆ ನೀವು ಉಂಡ ಅನ್ನ ಶ್ವಾನ ಮಾಂಸ ಸಮಾನ' ಎಂದು ಸೋಮಯಾಜಿಯಕ್ಕ ಹೇಳಿದ್ದಾಳೆ. ಇತ್ತ ಮಕ್ಕಳಾದರೋ ತಾಯಿ ಮಾತಿನಂತೆ ಬಿಜ್ಜಳನನ್ನು ಕೊಲೆ ಮಾಡುವುದಕ್ಕೆ ವಿರಾವೇಶದಿಂದ ಹೇಗೆ ಹೋಗ್ತಾ ಇದ್ದಾರಪ್ಪಾ ಅಂದರೆ

ಶಿಷ್ಯ

ಹೇಗೆ ಹೋಗ್ತಾ ಇದ್ದಾರೆ ಗುರುವೆ ?

ನಿರೂಪಕ

ಕಿಲಲೋಕಿಲಲೋ ಎಂದು ವೀರಾವೇಶದಿಂದ
ಕುವರರು ಹೊರಟರು ಬಿಜ್ಜಳನ ಕೊಲೆಗೆ
ಬಿಜ್ಜಳನ ಕೊಲೆಗೆ | ೨೯೩

ಹೀಗೆ ಜಗದೇವ, ಮಲ್ಲಿಬೊಮ್ಮಣ್ಣಗಳು ವೀರಾವೇಶದಿಂದ ಬಿಜ್ಜಳ ಮಹಾರಾಜನು ಬರುವ ದಾರಿಯಲ್ಲಿ ಸಮಯ ನಿರೀಕ್ಷಣೆಯಲ್ಲಿದ್ದು ಒಡ್ಡೋಲಗದಿಂದ ಹಿಂದಿರುಗಿ ಬರುತ್ತಿದ್ದುದನ್ನೇ ನೋಡಿಕೊಂಡು ಆ ಪ್ರಜೆಗಳೆಲ್ಲ ನುಗ್ಗಿ ಹೋಗಿ ಪಲ್ಲಕ್ಕಿಯ ಮೇಲೆ ಬರುವ ದೊರೆಯನ್ನು ತಮ್ಮ ತಾಯಿಗೆ ಕೊಟ್ಟು ಬಂದಿದ್ದ ವಾಗ್ದಾನವನ್ನು ನೆರವೇರಿಸಿಕೊಳ್ಳಲು ಸುರುಗಿಯಿಂದ ಇರಿದು ಕೊಲೆ ಮಾಡಿದ್ದಾರೆ. ಅನಂತರ ಪಟ್ಟಣದಲ್ಲೆಲ್ಲ ಎಲ್ಲೆಲ್ಲಿ ನೋಡಿದರೂ ಕೋಲಾಹಲ. ಇತ್ತ ಮಡಿವಾಳ ಮಾಚೀದೇವನಾದರೋ ಶರಣ ಸಮೂಹವನ್ನು ರಕ್ಷಿಸಬೇಕೆಂದು ವೀರಾವೇಶದಿಂದ ತನ್ನ ಹಿಂದೆಯೇ ಕರೆದುಕೊಂಡು ಬಂದು ಚನ್ನಬಸವಣ್ಣನವರನ್ನು ಕರೆಸಿ 'ಮುಂದೆ ಮಾಡಬೇಕಾದ್ದೇನಿದೆ. ನೀನು ಈ ಕೆಡುಕರ ಕೈಗೆ ಸಿಕ್ಕಬಾರದು' ಎಂದು ಹೇಳಿ ಸಂಗಮೇಶ್ವರನ ಸನ್ನಿಧಿಗೆ ಕಳಿಸಿಕೊಟ್ಟಿದ್ದಾನೆ. ಕೂಡಲ ಸಂಗಮಕ್ಕೆ ಬಂದ ಬಸವಣ್ಣನವರಾದರೋ ಸಂಗಮೇಶ್ವರನಲ್ಲಿ ಐಕ್ಯವಾಗಿದ್ದಾರೆ.

ಶಿಷ್ಯ

ಗುರುವೇ, ಹಾಗಾದರೆ ಕಥೆ ಮುಗಿದಂತಾಯ್ತು.

ನಿರೂಪಕ

ಅಯ್ಯಾ ಮಗು, ಆ ತರುವಾಯದಲ್ಲಿ ಮಡಿವಾಳ ಮಾಚಿದೇವನು ಬಿಜ್ಜಳನ ಮಗನಾದ ಅಳಿಯ ಬಿಜ್ಜಳನಿಗೆ ಪಟ್ಟವನ್ನು ಕಟ್ಟಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂಗಳು, ಏಳುನೂರೆಪ್ಪತ್ತು ಅಮರಗಣಂಗಳು, ಅರವತ್ತು ಮೂರು ಜನ ತ್ರಿವಿಧರು - ಇವರನ್ನೆಲ್ಲ ಹಿಂದಿಟ್ಟುಕೊಂಡು ಮಡಿವಾಳ ಮಾಚೀದೇವನು ದಕ್ಷಸಂಹಾರದಲ್ಲಿ ಹೇಗೆ ವೀರಭದ್ರನು ವೀರಾವೇಶದಿಂದ ಹೋರಾಡಿದನೋ ಅಷ್ಟೇ ಉಗ್ರರೂಪದಿಂದ ತನ್ನ ಎದುರಿಗೆ ಬರತಕ್ಕ ಶತ್ರುಗಳ ಶಿರಸ್ಸನ್ನು ಚಂಡಾಡುತ್ತ ಗಣಸಮೂಹವನ್ನು ಸೇರಿಸಿ ಗಂಗಾಂಬಿಕಾ ನೀಲಾಂಬಿಕಾ ಇವರುಗಳನ್ನು ಕರೆಯುವುದಕ್ಕೆ ಹೋಗಿದ್ದಾರೆ. ಗಂಗಾಂಬಿಕೆಯವರಾದರೋ 'ಬಸವಣ್ಣನವರು ಎಲ್ಲಿ?' ಎಂದು ಕೇಳಲು ಉತ್ತಣ್ಣ ಪಂಡಿತರು 'ಬಸವಣ್ಣನವರು, ಸಂಗಮೇಶ್ವರಲ್ಲಿ ಐಕ್ಯವಾಗಿದ್ದಾರೆ' ಎಂದು ಹೇಳಲು ಆ ಮಾತನ್ನು ಕೇಳುತ್ತಲೆ ನೀಲಾಂಬಿಕಾ ಗಂಗಾಂಬಿಕಾ ದೇವಿಯವರು ತಮ್ಮ ಇಷ್ಟಲಿಂಗವನ್ನು ಹಸ್ತದಲ್ಲಿ ಇಟ್ಟುಕೊಂಡು ಅವರಿಬ್ಬರೂ ಆ ಲಿಂಗದಲ್ಲಿಯೇ ನಿರ್ದಯರಾಗಿದ್ದಾರೆ.

ಶಿಷ್ಯ

ಮುಂದೇನಾಯ್ತು ಹೇಳಿ ಗುರುವೆ?

ನಿರೂಪಕ

ಅಪ್ಪಾ ಮಗುವೇ, ಇತ್ತ ಶರಣ ಸಮೂಹವೇ ಕಲ್ಯಾಣವನ್ನು ಬಿಟ್ಟು ಹೊರಟ ಮೇಲೆ 'ಉಳುವಿ ಮಹಾಮನೆಗೆ ಯಾರ್ಯಾರು ಬರುತ್ತೀರಿ ಅಥವಾ ಭೂಲೋಕದ ಸ್ಥಿತಿಗತಿಗಳನ್ನು ನೋಡಲು ಯಾರ್ಯಾರು ಇಲ್ಲಿ ಇರುತೀರಿ?' ಎಂದು ಚನ್ನಬಸವಣ್ಣನು ಕೇಳಲು ಪ್ರಭು, ಸಿದ್ಧರಾಮಣ್ಣನವರು ರುದ್ರಮುನಿಸ್ವಾಮಿಗಳಿಗೆ ಅಯ್ಯಾ ರುದ್ರಮುನಿ ಶಿವಾಚಾರ್ಯರೇ ಇಕ್ಕಿ ಎರೆಯುವ ಮನೆಯ ದಕ್ಷಿಣದೊಳಿಹುದು-ಅಂದ ಹಾಗೆ ಗಣಪರ್ವವನ್ನು ಮಾಡಿ ಗಣಂ ಗಳಿಗೆಲ್ಲ ವಿಭೂತಿ ಬಿಲ್ವಪತ್ರೆ ಫಲ ತಾಂಬೂಲಗಳನ್ನು ಕೊಡಲು ರೇಚಣ್ಣನವರಿಗೆ ಹೇಳಿದ್ದಾರೆ. ರೇಚಣ್ಣನವರಾದರೋ ಒಬ್ಬ ಕುರೂಪಿ ಜಂಗಮನನ್ನು ನೋಡಿ ಕರೇ ಎಲೆಯನ್ನು ಕೊಟ್ಟಿದ್ದಾರೆ. ಚನ್ನಬಸವಣ್ಣನವರು ಇದನ್ನು ನೋಡಿ "ನಾವು ಪಂಕ್ತಿಯಲ್ಲಿ ದ್ರೋಹವೆಣಿಸಿದಂತಾಯಿತು. ಆದ್ದರಿಂದ ರೇಚಣ್ಣನನ್ನು ರುದ್ರಮುನಿಸ್ವಾಮಿಗಳ ಸೇವೆಯಲ್ಲಿ ಬಿಟ್ಟು ಹೋಗುವುದೇ ಸರಿಯೆಂ"ದು ತೀರ್ಮಾನಿಸಿ "ಅಪ್ಪಾ ರೇಚಣ್ಣ ನಾವು ಗಾಬರಿಯಲ್ಲಿ ಬರುವಾಗ ಪಾದರಕ್ಷೆಗಳನ್ನು ಮರೆತು ಬಂದೆವು. ಹೋಗಿ ತೆಗೆದುಕೊಂಡು ಬಾರಪ್ಪ" ಎಂದು ರೇಚಣ್ಣನನ್ನು ಕಳಿಸಿಕೊಟ್ಟಿದ್ದಾರೆ. ರೇಚಣ್ಣನು ಪಾದರಕ್ಷೆಗಳನ್ನು ತರಲು ಹೋದಾಗ ಚನ್ನಬಸವಣ್ಣನವರು ಊಳ್ಳೆಯ ಮಹಾಮನೆಗೆ ಹೋಗುವ ಸಮಾರಂಭದಲ್ಲಿ ಆಲದ ಮರಕ್ಕೆ ಬೆಳ್ಳಿಯ ಸರಪಳಿಗಳನ್ನು ಹಾಕಿ ಒಂಗಾರದ ತೊಟ್ಟಿಲಲ್ಲಿ ಸರ್ವಗಣಂಗಳೆಲ್ಲ ಕುಳಿತು "ಜೈ ಪರಮೇಶ್ವರಾ!" ಎಂದು ತೊಟ್ಟಿಲನ್ನು ತೂಗಿ ಹೊರಟಿದ್ದಾರೆ. ಅಂದಿನಿಂದ ಇಂದಿನವರೆಗೂ ಆಲದ ಮರದಲ್ಲಿ ನೇತು ಹಾಕಿದ್ದ ಬೆಳ್ಳಿಯ ಸರಪಳಿಗಳು ಬಿಳಲುಗಳಾಗಿವೆ. ಶರಣರ ಸತ್ಯವೆಂದರೆ ಆ ಕಾಲದಿಂದಲೂ ಆಲದ ಮರದಲ್ಲಿ ಬಿಳಲು ಇದೆಯೆ ವಿನಹ ಮತ್ತೆ ಯಾವ ಮರಕ್ಕೂ ಬಿಳಲುಗಳಿಲ್ಲ. ಇದು ಶರಣರ ಹಿರಿಮೆಯ ಕುರುಹಾಗಿ ಇದೆಯೆಂಬುದು ಶರಣರ ಸಂದೇಶ.

ಶಿಷ್ಯ

ಚೆನ್ನಾಗಿದೆ ಗುರುವೆ. ಬೆಳ್ಳಿ ಸರಪಳಿ ಬಿಳಲಾಯ್ತು. ಸರಿ ಆಮೇಲೇನಾಯ್ತು ಹೇಳಿ ಗುರುವೆ.

ನಿರೂಪಕ

ಅಂದಮೇಲೆ, ರೇಚಣ್ಣನವರಾದರೋ ಪಾದರಕ್ಷೆಗಳನ್ನು ತಂದು ನೋಡುತ್ತಾರೆ, ಶರಣರೆಲ್ಲರೂ ಅವರನ್ನು ಬಿಟ್ಟು ಹೊರಟುಹೋಗಿದ್ದಾರೆ. 'ಹಾ ಶಿವನೇ ನಾನೇನು ಅಪರಾಧವನ್ನು ಮಾಡಿದೆನು. ಒಂದು ಕರಿಯೆಲೆಯ ತಪ್ಪಿಗೋಸ್ಕರವಾಗಿ ನನ್ನನ್ನು ಶರಣರು ಬಿಟ್ಟು ಹೋಗಬಹುದೆ?' ಎಂದುಕೊಳ್ಳುತ್ತ ರುದ್ರಮುನಿ ಶಿವಾಚಾರ್ಯರ ಗವಿಯ ಬಳಿಗೆ ಹೋಗಿ ರುದ್ರ ಮುನಿಗಳ ಸೇವೆ ಮಾಡಿಕೊಂಡಿದ್ದಾರೆ. ಹೀಗೆ ಕಾಲ ಕಳೆಯುತ್ತಿರಲು ರುದ್ರಮುನಿಗಳಾದರೋ ಅಂತರ್‌ಗೃಹದಲ್ಲಿ ಯಾರಿಗೂ ಕಾಣದಂತೆ ಸೇರಿ ತಮ್ಮ ದೇಹವನ್ನು ತೊರೆದು ಪರಶಿವನ ಪ್ರೇರಣೆಯಿಂದ ಲೋಕೋದ್ಧಾರಕ್ಕಾಗಿ ಶಿವಮೊಗ್ಗಾ ಜಿಲ್ಲೆಯ ನ್ಯಾಮತಿ ಎಂಬ ಗ್ರಾಮದಲ್ಲಿ ವಾಸವಿದ್ದ ಕೋಲಶಾಂತಯ್ಯ ಹಾಗೂ ಶಾಂತಮ್ಮ ಎಂಬ ಶಿವಭಕ್ತರ ಗರ್ಭದಲ್ಲಿ ಜನಿಸಿ ಬೆಳೆದು ದೊಡ್ಡವರಾದ ಮೇಲೆ ಮೈಸೂರು ಜಿಲ್ಲೆಯಲ್ಲಿರುವ ದೇವನೂರಿಗೆ ಬಂದು ಸೇರಿದರು.

ಶಿಷ್ಯ

ರೇಚಣ್ಣನವರೇನಾದರು ಗುರುವೆ ?

ನಿರೂಪಕ

ಇತ್ತ ರೇಚಣ್ಣನವರಿಗೆ ರುದ್ರಮುನಿಗಳು, 'ಅಯ್ಯಾ ರೇಚಣ್ಣ ನೀನು ಮೈಸೂರು ಜಿಲ್ಲೆಯಲ್ಲಿರುವ ಮೂಗೂರು ಗ್ರಾಮದಲ್ಲಿ ಹುಟ್ಟಿ ರಾಚಪ್ಪನೆಂಬ ಹೆಸರಿನಿಂದ ಸಂಸಾರಾಶ್ರಮದಲ್ಲಿ ಬೆಳೆಯುತ್ತಾ ಇರು. ನಾನು ದೇವನೂರಿಗೆ ಬಂದು ಗುರುಮಲ್ಲಾರ್ಯನೆಂಬ ಹೆಸರಿನಿಂದ ಶಿವಾನುಭವಗೋಷ್ಠಿಯಲ್ಲಿದ್ದು ನಿನ್ನನ್ನು ಕರೆಸಿಕೊಳ್ಳುತ್ತೇನೆ' ಎಂದು ರುದ್ರಮುನಿಗಳು ಅಪ್ಪಣೆ ಮಾಡಿದ್ದಾರೆ ಎಂಬಲ್ಲಿಗೆ -

ಶಿಷ್ಯ

ಎಂಬಲ್ಲಿಗೆ ?

ನಿರೂಪಕ

ಮಂಗಳ ಹಾಡನ ಕಣೋ

ಶಿಷ್ಯ

ಗುರುಗಳೇ ತಾಳಿ ತಾಳಿ

ನಿರೂಪಕ

ಏಯ್ ಸುಮ್ನಿರೋ ಹುಡುಗಾಟಿಕೆ ಸಾಕು. ಶರಣರ ಕಥೆ
ಮಾಡುತ್ತಿರುವಾಗ ಕಿರಿಕಿರಿ ಮಾಡಬೇಡ.

ಹರನ ದಯದಿಂದ ನಾವು ಬಸವಣ್ಣನ ಚರಿತ್ರೆಯ
ಹರುಷದಿ ಹೇಳಿದೊ ಕೇಳಿ ಸಜ್ಜನರೇ
ಕೇಳಿ ಸಜ್ಜನರೇ | ೨೯೪

ಶಿಷ್ಯ

ಗುರುಗಳೇ ಈ ಕಥೆಗೆ ಮಂಗಳ ಮಾಡುವುದಕ್ಕೆ ಮುಂಚೆ ಈ ಕಥೆಯನ್ನು ಮಾಡ್ಸಿದೋರ್ಯಾರೂ ಅಂತ ಹೇಳಿ

ನಿರೂಪಕ

ಅಪ್ಪಾ ಮಗು, ತುಮಕೂರು ಜಿಲ್ಲೆ ತುರವೇಕೆರೆ ತಾಲ್ಲೂಕಿನಲ್ಲಿ ಗುಡ್ಡೇನಹಳ್ಳಿ ಎಂಬ ಗ್ರಾಮವಿರುವುದು. ಆ ಗ್ರಾಮದ ರತ್ನದಂತಿದ್ದ ಶಿವೈಕ್ಯರಾದ ರುದ್ರೇಗೌಡ ಎಂಬ ಬಾಲಕನ ಸ್ನೇಹಿತರಾದ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದವರಾದ ರಾಜಶೇಖರ ಎನ್ನುವವರು ಮಾಡ್ಸಿದಾರಪ್ಪ.

ಶಿಷ್ಯ

ಅವರಿಗೆ ಆಶೀರ್ವಾದ ಮಾಡಿ ಗುರುವೆ

ನಿರೂಪಕ

ಅಪ್ಪಾ ಮಗುವೆ, ಹಾಗೆಯೇ ಆಗಲಿ, ರಾಜಶೇಖರಪ್ಪನವರಿಗೆ ಹಾಗೂ ಅವರ ಕುಟುಂಬದವರೆಲ್ಲರಿಗೂ ದಯಾಮಯನಾದ ಪರಮೇಶ್ವರನು ಆಯುರಾರೋಗ್ಯ ಐಶ್ವರ್ಯಾದಿ ಸಕಲ ಸುಖಸಂಪತ್ತನ್ನು ದಯಪಾಲಿಸಲಿ ಎಂಬುದಾಗಿ ಬೇಡೋಣ.

ಶಿಷ್ಯ

ಆಯ್ತು, ಗುರುಗಳೇ ಅವರು ನಮ್ಮ ಹೆಸರ್ಹೇಳಿ ಅಂತಿದ್ದಾರೆ.

ನಿರೂಪಕ

ಅಪ್ಪಾ ಮಗು, ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು ನೊಣವಿನಕೆರೆ ಹೋಬಳಿ ಬುರುಡೇಘಟ್ಟದ ಶ್ರೀ ರಂಗಪ್ಪ, ಶ್ರೀಮತಿ ಚನ್ನಮ್ಮ ಎಂಬ ವೀರಶೈವ ದಂಪತಿಗಳ ಪುತ್ರ ನಾದ ನಾನು ಕರಪಾಲ ತಿಮ್ಮಪ್ಪ ಎಂಬ ಹೆಸರಿನಿಂದ ಈ ದೇಹವನ್ನು ಗುರುತಿಸಿ ಕೊಳ್ಳುತ್ತಿದ್ದೇನಪ್ಪ.

ಶಿಷ್ಯ

ಹಾಗಾದರೆ ಹೆಸರು ದೇಹಕ್ಕೂ ಆತ್ಮಕ್ಕೂ ಗುರುವೆ?

ನಿರೂಪಕ

ಅಪ್ಪಾ ಮಗು, ಇದನ್ನೆಲ್ಲ ಹೇಳಲು ನಾನು ತತ್ತ್ವಜ್ಞಾನಿಯಲ್ಲ. ಹೆಸರೆಂಬುದು ಒಂದು ಮಾಯೆ. ಹೆಸರು ಆತ್ಮದ್ದೂ ಅಲ್ಲ, ದೇಹದ್ದೂ ಅಲ್ಲ. ಒಬ್ಬ ಸತ್ತುಬಿದ್ದಿದ್ದರೆ ಇಂಥವನ ದೇಹ ಎಂದು ಹೇಳುತ್ತಾರೆ. ಅಲ್ಲದೆ ಇಂಥವನ ಪ್ರಾಣ

ಹೋಯಿತು ಅನ್ನುತ್ತಾರೆ. ಆದ್ದರಿಂದ ಇಂಥವನ ಆತ್ಮ ಎನ್ನುತಾರೆಯೇ ಹೊರತು ಆತ್ಮಕ್ಕಾಗಲಿ, ದೇಹಕ್ಕಾಗಲಿ ಹೆಸರಿಲ್ಲ ಮಗು. ಆದರೂ ಮಾಯಾ ಪ್ರಪಂಚಕ್ಕೆ ಸಿಕ್ಕಿದ ನಮಗೆ ಹೆಸರಾಸೆ ಅಂಟಿಕೊಂಡಿರುತ್ತದೆ.

ಶಿಷ್ಯ

ಹಾಗಾದರೆ ನಮ್ಮ ಹೆಸರು ಹೇಳೋ ಅಗತ್ಯವಿಲ್ಲ ?

ನಿರೂಪಕ

ಹೆಸರಾಸೆಯನ್ನು ಬಿಡುವಷ್ಟು ನಾವು ಬೆಳೆದಿಲ್ಲ. ಆದ್ದರಿಂದ ನಿಮ್ಮಿಬ್ಬರ ಹೆಸರನ್ನು ಇಲ್ಲಿ ಸೇರಿರುವ ಸಭಾಸದರಿಗೆ ನಾನು ಪರಿಚಯ ಮಾಡಿಕೊಡುತ್ತೇನೆ. ಮಾನ್ಯ ಶರಣಸಜ್ಜನರೆ ಈ ಶಿಷ್ಯರಲ್ಲಿ ಬಲದಲ್ಲಿ ನಿಂತಿರುವ ಈ ಶಿಷ್ಯ ಬುರುಡೇಘಟ್ಟದ ಲಕ್ಕಣ್ಣ, ನನ್ನ ಎಡಗಡೆಗೆ ನಿಂತಿರುವ ಶಿಷ್ಯ ಬಸ್ತೀಹಳ್ಳಿ ಬಸವರಾಜು, ವಾದ್ಯ ನುಡಿಸಿದವರು ಈ ಬೆಣಚಗೆರೆ ಚಂದ್ರಶೇಖರಯ್ಯನವರ ವ್ಯಂದ.

ಶಿಷ್ಯ

ಗುರುಗಳೇ ಮುಂದೇನು ಅಪ್ಪಣೆ ?

ನಿರೂಪಕ

ಅಯ್ಯಾ ಮಗು, ಈ ಪುಣ್ಯ ಕಥಾಮೃತವನ್ನು ಕೇಳಿದಂತಹ ಮಾನ್ಯರಿಗೂ, ಈ ಕಥಾ ಭಾಗವನ್ನು ಮಾಡಿಸಿದ ಮಹನೀಯರಿಗೂ ನಮ್ಮನ್ನು ಮೈಸೂರಿನತನಕ ಕರಕೊಂಡು ಬಂದು ಈ ಕಥೆ ಮಾಡಲು ಕಾರಣರಾದ ಶ್ರೀಮತಿ ಗುಡ್ಡೇನಹಳ್ಳಿ ಕೆಂಪಮ್ಮ ಹಾಗೂ ಅವರ ಪತಿಯಾದ ಶ್ರೀ ಪುಟ್ಟಣ್ಣಸ್ವಾಮಿಗೌಡರಿಗೂ ಪರಮಾತ್ಮನು ಸನ್ಮಂಗಳವನ್ನುಂಟುಮಾಡಲಿ.

ಇಲ್ಲೀಗೆ ಹರಹರ ಇಲ್ಲೀಗೆ ಶಿವಶಿವ
ಇಲ್ಲೀಗೆ ಈ ಕಥೆ ಸಂಪೂರ್ಣವಾಯ್ತು
ಸಂಪೂರ್ಣವಾಯ್ತು | ೨೯೫

ತಪ್ಪುಗಳನು ತಿದ್ದಿ ಹೇಳುವ ಶರಣರಿಗೆ
ಇಪ್ಪತ್ತು ಸಾವಿರ ಶರಣಾರ್ತಿ ಎಂಬೆ
ಶರಣಾರ್ತಿ ಎಂಬೆ | ೨೯೬

ಜಯಜಯ ಮಂಗಳ ಜಯಶುಭ ಮಂಗಳ
ಜಯ ಬಸವೇಶಗೆ ಮಹಾಮಂಗಳವು
ಮಹಾಮಂಗಳವು | ೨೯೭

ಜಯಚಂದ್ರಶೇಖರ ಜಯಶುಭ ಮುರಹರ
ಜಯಮಂಗಳಂ ಗುರುವೆ ಜಯಜಯ ಗುರುವೆ
ಜಯಜಯ ಗುರುವೆ | ೨೯೮

ಜಯ್ ನಮಃ ಪಾರ್ವತೀಪತೇ ಹರಹರ ಮಹಾದೇವ್sss

ಎಲ್ಲೆಲ್ಲಿ ನೋಡಿದರೂ ಬಸವನಂಥವರಿಲ್ಲ

ಎಲ್ಲೆಲ್ಲಿ ನೋಡಿದರೂ ಬಸವನಂಥವರಿಲ್ಲ
ಹಲ್ಲು ನೋಡಿದರೆ ಹವಳಾವು - ತುಟಿಮೇಲಿರೊ
ಬಿಲ್ಲು ಮೀಸೆಯ ಚಲುವಾನು |

ಬಸವನ ಪಾದಕೆ ಯಸಳು ವಿಭೂತಿಗಟ್ಟಿ
ಬಂಗಾರ ಜಲ್ಲಿ ಮೊಕುರಂಬ - ಬಸವಣ್ಣಗೆ
ಪಂಚ್ಕೆದು ಕಳಸದ ಹೊಸಗವುಸು |

ತುಂಗಾದ ಬಸವಣ್ಗೆ ಸುಂಗಾರವೇನಮ್ಮ
ಬಂಗಾರದಣಸು ಸರಗೆಜ್ಜೆ - ಕಿರುಗೆಜ್ಜೆ
ಲಿಂಗಾಪುರದೋರು ಕಳುಗವುರೆ |

ಒಕ್ಕಳ ಹುರಿಗೆಜ್ಜೆ ಒಕ್ಕಳ ಕಿರಿಗೆಜ್ಜೆ
ಚೊಕ್ಕ ಬೆಳ್ಳೀಯ ಮೊಕುರಂಬ - ತಮ್ಡೀಹಳ್ಳಿ
ತಿಟ್ಟಿನಲ್ಲಿರುವ ಬಸವಣ್ಣಗೆ |

ಆರುಸಾವಿರ ಜಂಗು ಮೂರು ಸಾವಿರ ಗಂಟೆ
ದೂರ ಕೇಳೀವು ಗಗನಕೆ - ನಂ ಬಸವ
ಧೂಳು ಎಬ್ಸಿಸ್ಯಾನೊ ಶಿವನೀಗೆ |

ಹೊನ್ನೂರ ಬಸವಯ್ಗೆ ಚಿನ್ನಾದ ಕೋಡಣ್ಸು
ಮುನ್ನೂರೊಕ್ಕಳ ಸರಗಂಟೆ - ಸರಗೆಜ್ಜೆ
ಬನ್ನೀರೊ ಸ್ವಾಮಿಗೆ ಶರಣೆನ್ನಿ |

ಜನಪದ ಶರಣಕಾವ್ಯಗಳು

ಭಾಗ : ಮೂರು

ಇವರೂ ನಮ್ ಸರುಣ್ಯೋಯ

ಏಳುತಲೆ ಎದ್ದು ಯಾರ್ಯಾರ ನೆನಿಯಾಲಿ
ಕಲ್ಲು ಕಾವೇರಿ ಕಪನೀಯ - ನಂಜುಂಡನ
ಕಲ್ಯಾಣ್ದ ಸ್ವಾಮಿ ಬಸುವಣ್ಣನ |

ಮೈದಾಳ ರಾಮಣ್ಣ

೧. ಮಕ್ಕಳಿಲ್ಲ ಎಂದ ದುಕ್ಕ ದಳ್ಳುರಿಯಾಯ್ತು

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

ಭೀಮವತಿ ಎಂಬುವ ಪಟ್ಟಣದಲಿ ಒಬ್ಬ
ಬ್ರಾಮಣಗುಲದ ಶಿವಭಕ್ತ | ಸುವ್ವಿ |

ಬ್ರಾಮಣಗುಲದ ಶಿವಭಕ್ತ ಸ್ವೋಮಯ್ನ
ಪ್ರಿಯವಾದ ಮಡದಿ ಮಾದೇವಮ್ಮ |

ಭೀಮಾವತಿ ಎಂಬುದು ಪಟ್ಣ
ಆ ಪಟ್ಟಣದಲ್ಲಿ
ಜಾತಿವೊಳುಗೆ ಶಿವಬ್ರಾಮಣ ಸ್ವೋಮಯ್ಯ
ಅವ್ನ ಹೆಂಡ್ತಿ ಮಾದೇವಮ್ಮ
ಅಂದ್ರೆ ಅವ್ರು ಭಾರಿ ಐಸ್ವರ್ಯವಂತ್ರು .
ಐಸ್ವರ್ಯ ಇದ್ರೇನು ಸಂತಾನುಫಲುವಿಲ್ಲ ಅವುರ್ಗೆ
ಸಂತಾನು ಫಲುಕ್ಕೋಸ್ಕರವಾಗಿ
ಬೇಕು ಬೇಕಾದಂತ ದಾನಧರ್ಮ ಮಾಡಿದ ಕಾಲಕ್ಕೂ
ಸಂತಾನುಫಲ ಅವುರ್ಗೆ ಇಲ್ಲ.
ಈ ಸ್ವೋಮಯ್ಯ ಅನ್ನತಕ್ಕಂತ ಮನುಷ
ಹತ್ತಾರ್ ಜನುಕ್ಕೆ ಬೇಕಾದಂತ ಮನುಷ
ಆ ಗ್ರಾಮುಕ್ಕೆ ಅವನು ಯಜುಮಾನ
ಆ ಗ್ರಾಮದ ಸುತ್ತಮುತ್ಲ ಊರುಗಳಲ್ಲಿ
ಜಗ್ಗ ಬವ್ರ ಹೊಡ್ಸಾಟ ಬಡ್ಸಾಟ ಆಗಿದ್ದೇ ಆದ್ರೆ
ನ್ಯಾಯ ಪಂಚಾಯ್ತಿ ಮಾಡ್ತಿದ್ದೋನೆ ಸ್ವೋಮಯ್ಯ
ಅವ್ನು ನ್ಯಾಯ ಪಂಚಾಯ್ತಿ ಮಾಡೋನ್ತನ್ಕ
ಸುಮ್ನಿರ್ತಿದ್ದ ಜನಗಳು
ಅವ್ನು ಮನೆಗೆದ್ದು ಬರುತ್ತೆ
"ಇವ್ನು ಕೂತಿದ್ದಂತ ಜಾಗದಲ್ಲಿ ನಮ್ಮ
ಮಕ್ಕ ಮರಿ ಕೂತ್ಕೊಂಡ್ರೆ
ಅವು ಬಂಜೆ ಆಗ್ಬುಡ್ತವೆ" ಅಂತ್ಹೇಳಿ
ಅವ್ನು ಕೂತಿದ್ದಂತ ಜಾಗದ ಮೂರು ಗುದ್ದಿ
ಮಣ್ಣ ತಗ್ದು ಊರಾಚೆಗೆ ಎಸೀತಿದ್ರು
ಹಿಂಗಿರೋಗ ಒಂದು ದಿನ ನ್ಯಾಯದ ಕಟ್ಟೇಲಿ
ಒಂದು ಪಂಚಾಯ್ತಿ ಇತ್ತು -

ಮೂವತ್ಮೂರು ಗ್ರಾಮ ಸೇರಿ ಸ್ವೋಮಯ್ನ ಕರಿದಾರು
ನ್ಯಾಯಾದ ಕಟ್ಟೆಗೆ ಬರಮಾಡಿ |

ನ್ಯಾಯಾವ ಮಾಡಿದರು ಪಂಚಾಯ್ತಿ ಮಾಡಿದರು
ಅವರವರ ಮನೆಗೆ ನಡೆದಾರು |

ಅವರವರ ಮನೆಗೆ ಬರುವ ಯಾಳ್ಕದಲಿ
ಅವರ ಕುಲಸ್ತ್ರು ಏನ ನುಡಿದಾರು |

ಮಕ್ಕಳಿಲ್ಲದಿವನು ನಮ್ಮ ಸಭೆಯಲ್ಲಿ ಕುಂತಿದ್ದಂತ
ಮೂರು ಗುದ್ದಿ ಮಣ್ಣ ತಗಿದಾರು |

ಮೂರುಗುದ್ದಿ ಮಣ್ಣ ತಗುದು ಕುಲುದೋರೆಲ್ಲ
ಊರಿಂದಾಚೆಗೆ ಬೀಸಾಕುತಾರೆ |

ಒಂದಾನು ಒಂದು ದಿವ್ಸ ಇದು ಸ್ವೋಮಯ್ಯಂಗೆ
ಇವ್ರು ಮಾಡುವ ಕೆಲ್ಸ ಗೊತ್ತಾಗ್ಬುಡ್ತು.

"ಏನಪ್ಪ ಈ ನಾವು ಕೂತಿದ್ದಂತ ಜಾಗ್ದಲ್ಲಿ
ಈ ರೀತಿ ಮಾಡ್ತಿದ್ದೀರಲ್ಲ ಕಾರ್ಣವೇನು ?" ಅಂತ
ಕೇಳ್ಬೇಕಾಯ್ತು.
ಅದ್ಕೆ ಆ ಊರ್ ಸಮಸ್ತ್ರು
"ಸ್ವಾಮಿ ನೀವು ಭಾಗ್ಯವಂತ್ರು ದಕ್ಷತ್ತುಳ್ಳೋರು
ಅಂದ್ರೆ ನಿಮ್ಗೆ ಮಕ್ಳು ಫಲುವೇ ಇಲ್ಲದ ಕಾರ್ಣ
ನೀವು ಕುಂತಿದ್ದಂತ ಜಾಗದಲ್ಲಿ
ನಮ್ಮ ಮಕ್ಕ ಮರಿ ಕುಂತ್ರೆ
ಅತ್ಯಾ ನಾವು ಕುಂತ್ರೆ ಬಂಜೆರಾಯ್ತೀನಿ ಅಂತ್ಹೇಳಿ
ಇಷ್ಟು ಕೆಲ್ಸ ಮಾಡುಸ್ತಿದ್ದೀವಿ" ಅಂದ್ರು -?

---

* ಪ್ರತಿ ಎರಡೆರಡು ಪಾದಕ್ಕೆ ನಿಂತಗೆರೆಯಿರುವಲ್ಲಿ 'ಸುವ್ವಿ' ಎಂದು ಸೇರಿಸಿಕೊಂಡು ಅನಂತರ ಸೊಲ್ಲಿನ ಪೂರ್ಣಭಾಗ ಹಾಡಬೇಕು. ಬದ್ಲಗೆರ ಇರುವ ಭಾಗವನ್ನು ವಚನ ಎಂದು ತಿಳಿಯಬೇಕು.

ನಮ್ಮ ನ್ಯಾಯ ಪಂಚಾಯ್ತಿಗೆ ನೀನು ಬರಬೇಡ
ನಮ್ಮ- ಸಭೆಯಾಕೆ ನೀನು ಬರಬೇಡ |

"ಅಯ್ಯಾ ಸ್ವೋಮಯ್ಯ
ಇನ್ನು ನೀನು ನಮ್ಮ ಸಭೆಗೆ ಬರಬ್ಯೇಡ
ನೀನು ಸಭೇಗೆ ಬಂದ್ರೆ
ನಾವು ಬಂಜೆರಾಯ್ತೀವಿ ನಮ್ಮ ಮಕ್ಕ ಬಂಜೆಕಾಯ್ತುರೆ
ನಮ್ಮ ನೆಲ ಬಂಜೆಯಾಯ್ತುದೆ
ನಮ್ಮ ಕುಲ ಬಂಜೆಯಾಯ್ತುದೆ
ನೀನು ಮಾತ್ರ ಇನ್ನು ಬರಬ್ಯೇಡಪ್ಪ!" -

ಸಭೆಯ ಆಡಿದ ಮಾತ ಕೇಳಿದನು ಸ್ವೋಮಯ್ಯ
ಅವನಲ್ಲಿ ಚಿಂತೆಯ ಪಡುತಾನೆ |

ಈ ಪರಿಯ ಮಾತ ಕೇಳಿ ಸ್ವೋಮಯ್ಯ
ಗೋಳೆಂದು ದುಕ್ಕ ಪಡುತಾನೆ |

ಗೋಳೆಂದು ದುಕ್ಕ ಪಟ್ಟುಕೊಂಡ ಸ್ವೋಮಯ್ಯ
ತನ್ನ - ಅರಮನೆಗೆ ಸಾಗಿ ಬರುತಾನೆ |

ಅರಮನೆಗೆ ಸಾಗಿ ಬಂದ್ರಲ್ಲ ಸ್ವೋಮಯ್ಯ
ತೂಗುಮಂಚದ ಮ್ಯಾಲೆ ಒರುಗೀದ |

ತೂಗುಮಂಚದ ಮ್ಯಾಲೆ ಒರುಗಿ ಸ್ವೋಮಯ್ಯ
"ಇನ್ನು ನಾನು ಪ್ರಾಣ ಮಡುಗ್ಬಾರ್ದು |

ಇನ್ನು ಈ ಬುಯ್ಲೋಕದಲಿ ನಾವು ಇರಬಾರ್ದು" ಅಂತ
ಸ್ವೋಮಯ್ಯ ಚಿಂತೇಯ ಮಾಡುತಾವ್ರೆ |

"ಪ್ರಾತುಕ್ಕಾಲಕ್ಕೆ ಹೋದಂತ ನಮ್ಮ ಸ್ವಾಮ್ಯೋರು
ಇನ್ನೂ - ನ್ಯಾಯದ ಕಟ್ಟೆಯಿಂದ ಬರನಿಲ್ಲ|

ನ್ಯಾಯಾರ ಕಟ್ಟೆಯಿಂದ ಬಂದಿಲ್ಲ" ಅನುತ್ಹೇಳಿ
ತಾಯಿ ಹಜಾರಕೆ ಬರುತಾರೆ |

ಹಜಾರದಲ್ಲಿದ್ದ ತೂಗುಮಂಚದ ಮ್ಯಾಲೆ
ಸ್ವೋಮಯ್ಯನವರು ಮನುಗವ್ರೆ |

ಮನುಗಿರುವ ಪತಿದೇವ್ರ ಮಾದೇವಮ್ಮ ನೋಡಿದರು
ಹದಿನಾರು ಬಗೆಯ ಪದಾರ್ಥಗಳ |

ಹದಿನಾರು ಬಗೆಯ ಪದಾರ್ಥಗಳ ಅಟ್ಟವರೆ
ಚಿನ್ನಾದ ಗಿಂಡೀಲಿ ಪನ್ನೀರ |

ಚಿನ್ನಾದ ಗಿಂಡೀಲಿ ಪನ್ನೀರ ತಕ್ಕೊಂಡು
ಮಂಚು-ದತ್ರುಕೆ ತಾಯಿ ಬರುತಾರೆ |

ಪನ್ನೀರ ಗಿಂಡ್ಕ ತಲದೆಸಿಲಿ ಮಡುಗ್ಟುಟ್ಟು
ಮಂಚುದ್ಮೇಲೆ ತಾಯಿ ಕುಂತುಕೊಂಡು |

"ಹೊತ್ತು ಬಿದ್ದಿತು ಗುರುವೆ ಅಸ್ತಂಗವಾಯ್ತು ಬಂತು
ತಾನ - ಮಾಡ್ಕೊಂಡು ಊಟ ಮಾಡೇಳಿ |

"ಸ್ವಾಮಿ ಏಳಿ ಸ್ವಾಮಿ
ಸ್ನಾನ ಮಾಡ್ಕೊಂಡು ಶಿವಪೂಜೆ ಮಾಡ್ಕೊಂಡು
ಊಟ ಮಾಡೇಳಿ"
"ಮಡ್ದಿ ನಿನ್‌ಸ್ನಾನ ಯಾರುಗ್ ಬೇಕು?
ನಿನ್ ಮಡಿ ಯಾರುಗ್ ಬೇಕು?
ನಿನ್ನ ಶಿವಪೂಜೆ ಯಾರುಗ್ ಬೇಕು
ನಿನ್ ಊಟ ಯಾರುಗ್ಬೇಕು?
ನಿನ್ನ ಪಾಡು ನಿನ್ದು ನನ್ನ ಕಥೆ ನನ್ದು!"
"ಸ್ವಾಮಿ ಸ್ನಾನ ಮಡಿ ಮಾಡ್ಕೊಂಡು
ಶಿವಪೂಜೆ ಮಾಡ್ಕೊಂಡು
ಸಂತೋಷವಾಗೋದ್ರಿಯಲ್ಲ
ಅಲ್ಲಿಂದ ಬಂದು
ಈ ಥರಾ ಮಾತಾಡೋದ್ಕೆ ಕಾರ್ಣವೇನು?
ನಾನೇನು ಅಪುರಾಧ ಮಾಡ್ದೆ ಹೇಳಿ ಸ್ವಾಮಿ" -

ಮಡದಿ ಆಡಿದ ಮಾತ ಕೇಳಿದನು ಸ್ವೋಮಯ್ಯ
ಗೋಳೆಂದು ದುಕ್ಕ ಪಡುತಾನೆ |

"ಎಂದು ಇಲ್ಲದ ಸ್ವಾಮಿ ನೀವು ಅಳುವುದಕೆ ಕಾರ್ಣವೇನು?
ಯಾರೇನಂದಾರು ನನ್ಗೆ ಹೇಳಬೇಕು" |

"ಹೆಣ್ಣೆ ನೀ ಹೆಂಗ್ಸು ಕಾಣೆ ನಾನು ಗಂಡ್ಸು ಕಾಣೆ
ನಿನ್ನೊಂದಿಗ್ಹೇಳಾದು ಸರಿಯೇನು?" |

"ಇಲ್ಲ ಇಲ್ಲ ಹಂಗನ್ನೇಡಿ -

"ಹೆಂಡ್ತೀಗೆ ಬಂದ ಕಷ್ಟ ಗಂಡನದಲ್ಲವ
ಗಂಡನ ಕಷ್ಟ ಹೆಣ್ಣಿಗಲ್ಲವ ?

ಗಂಡನ ಕಷ್ಟ ಹೆಂಡ್ತೀಗಲ್ಲವ ಯಜಮಾನ
ಏನಿದ್ರೂ ಈಗ ಒಡುದ್ಹೇಳಿ" |

"ಗಂಡ ಅನ್ನೋ ಆಸ್ಕ ನೀ ಮಾಡ್ಕೇಡ ಮಾದೇವಿ
ಹೆಂಡ್ತಿ - ಅನ್ನೋ ಆಸ್ಕ ಇವತ್ಗೆ ಬುಡುತೀನಿ|

ನಿನ್ನ ರುಣ ನನ್ನ ರುಣ ಇವತ್ಗೆ ಕಳುದೋಯ್ತು
ನೀನೆಲ್ಲಾರು ಸೇರಿ ಬದುಕೋಗು" |

"ಸ್ವಾಮಿ ಯಾತುಕ್ಕೆ ಇಂತೆ ಮಾತಾಡ್ತಿದ್ದೀರಿ
ನನ್ನದೇನಾರೂ ಅಪ್ರಾಧ ಐತ ? ಹೇಳಿ ಸ್ವಾಮಿ"

"ಮಾದೇವಿ ನಿನ್ನದೇನೂ ಅಪ್ರಾಧವಿಲ್ಲ
ಎಲ್ಲಾ ನನ್ನ ಕರ್ಮ
ನನಗೆ ಬದುಕೋಕೆ ಆಸೆ ಇಲ್ಲ ಮಾದೇವಿ
ನಾನು ಮಾತ್ರ ಪ್ರಾಣ ಬುಟ್ಟುಡ್ತೀನಿ
ನೀನೆಲ್ಲಾರೂ ಸೇರಿ ಬದುಕೋಗು ಮಾದೇವಿ"

"ಹಂಗಂದ್ರೆ ಏನು ಸ್ವಾಮಿ
ಕಾರ್ಣ ಹೇಳ್ದಿದ್ರೆ ನಾನು ಹ್ಯಾಂಗೆ ತಿಳ್ಕೋಬೇಕು
ನಾನು ಹ್ಯಾಂಗೆ ಬಾಳ್ಬೇಕು?"
"ಮಾದೇವಿ
ನಾನು ಮಾರಿಗುಡಿ ಚಾವ್ಡಿ ಒಳುಗೆ
ನ್ಯಾಯ ಪಂಚಾಯ್ತಿ ಮಾಡ್ತಾ ಇದ್ದು
ನ್ಯಾಯ ಪೈಸಲ್ ಆಗಿ ನಾನು ಎದ್ದು ಬರುವಂತ ಕಾಲ್ದಲ್ಲಿ
ನಾನು ಮನೆ ಕಡೇಗ್‌ಬತ್ತಾ ಇದ್ರೆ
ಆ ಕಡೆ ಆ ಜನುವೆಲ್ಲ
ನಾನು ಕೂತಿದ್ದ ಸ್ಥಳದಲ್ಲಿರೋ ಮಣ್ಣನ್ನು
ಮೂರು ಗುದ್ದಿ ತಗುದು ದೂರ ಬಿಸಾಕ್ತರೆ
ಆ ಸ್ಥಳುಕ್ಕೆ
ಬ್ಯಾರೆ ಕಡೆಯಿಂದ ತಂದ ಮೂರ್ ಗುದ್ದಿ ಮಣ್ಣ
ಭರ್ತಿ ಮಾಡ್ತಿದ್ದಾರೆ ಮಡ್ದಿ
'ಇದ್ಯಾಕ್ರಪ್ಪ ಈ ತರ ಮಾಡ್ತೀರಿ?' ಅಂತ ಕೇಳುದ್ರೆ
'ಸ್ವಾಮಿ, ನೀವು ಬೇಕಾದಂತ ಐಸ್ವರ್ಯವಂತ್ರು
ಇಲ್ಲ ಅನ್ನಾಕಿಲ್ಲ, ಆದ್ರೆ ಮಕ್ಕು ಭಾಗ್ಯ ನಿಮುಗಿಲ್ಲ
ನೀವು ಕೂತಿದ್ದಂತ ಜಾಗದಲ್ಲಿ ನಮ್ಮ ಮಕ್ಕ ಮರಿಗಳು
ಬಂದು ಕೂತ್ಕೊಂಡ್ರೆ
ಬಂಜೆರಾಯ್ತರೆ ಅಂತ್ಹೇಳಿ
ಈ ಥರಾ ಮಾಡ್ತಿದೀವಿ ಅಂತ' ಹೇಳುರು.
ಮಾದೇವಿ ನಾವಿನ್ನು ಬದ್ದು ಫಲವೇನು?" ಅಂತ್ಹೇಳಿ
ಸ್ವೋಮಯ್ಯ ಕಣ್ಣೀರ್ ಕೆಡುಗುದ್ರು -

ಗಂಡನಾಡಿದ ಮಾತ ಕೇಳಿ ಪ್ಲಾದೇವಮ್ಮ
ಅವುಳಾಗ ಚಿಂತೆ ಪಡುತಾಳೆ |

"ಅರಮನೆ ಇದ್ದೇನು ಆಸ್ತಾನ ಇದ್ದೇನು
ಎಲ್ಲಾ ಇದ್ದು ಬಂದ ಫಲವೇನು? |

ಸ್ವಾಮಿ ನೀವು ಇಷ್ಟುಕ್ಕೆ
ಇಷ್ಟೊಂತ್ಕಾರ ದುಕ್ಕ ಮಾಡ್ತಿದ್ದೀರಲ್ಲ
ನಿಮಗಿಂತ ಐದ್ರಷ್ಟು ದುಕ್ಕ ನನಗದೆ ಸ್ವಾಮಿ"
"ಮಾದೇವಿ ಅದೇನಂತ ಕಷ್ಟ ?
ಹೇಳು ಮಡದಿ ದುಕ್ಕ ಮಾಡಬೇಡ"
"ಸ್ವಾಮಿ ನಿಮ್ಮ ಸಿತಿಗಿಂತ್ಲೂ ನನ್ನ ಸಿತಿ
ಬಾಳ ದೊಡ್ಡದಾಗದಲ್ಲ.
ಸ್ವಾಮಿ ನಾನು ಸೀನೀರ್ ಕೊಳುಕ್ಕೆ ನೀರುಗೋಗುವಾಗ
ಈ ಪಟ್ಟಣದ ಸುರೋಮಣಿಗಳು
ಅವರೇ ಒಂದು ದಾರಿ ಒಳುಗೋಯ್ತರೆ
ನಾನೇ ಒಂದಾರೀಲಿ ಬರ್ತಿದ್ದೀನಿ
ನಾನು ಮಕ್ಕಳಿಲ್ಲದ ಪುತ್ರಈನೆ ಅಂತೆ ನಾನು
ಇವುಳ್ಳೊತೆ ನಾವು ನೀರ್ಗೋದ್ರೆ, ನಾವು ಬಂಜೆ ರಾಯ್ತೀವಿ
ಇವುಳೆಜ್ಜೆ ನಾವೆಜ್ಜೆ ಹಾಕುದ್ರೆ
ನಾವು ಬಂಜೆರಾಯ್ತಿದ್ದೀವಿ
ಇವುಳ ನೆರ್ಕು ನಮ್ ಮ್ಯಾಲೆ ಬಿದ್ರೆ
ನಾವು ಬಂಜೆರಾಯ್ತಿದ್ದೀವಿ ಅಂತ್ಹೇಳ್ತಿರ್ತಾರೆ ಸ್ವಾಮಿ
ಹಂಗಾಗಿ ಈ ಪಟ್ಟಣದ
ರಂಭಾಸ್ತೀಯರಿಗೆ ಒಂದು ದಾರಿ
ನಂಗೇ ಒಂದಾರಿ ಸ್ವಾಮಿ"
"ಹಾಗಾದ್ರೆ ಮಾದೇವಿ
ನಮ್ಮಿಬ್ರು ಸಿತಿಗತಿ ಈ ಥರಾ ಆದ್ಮೇಲೆ
ನಾವು ಮರ್ತುಲೋಕದಲ್ಲಿ ಬದ್ದು ಸುಕುವಿಲ್ಲ
ಈಗ ನಾನೊಂದು ವಾಕ್ಯಾನ ಹೇಳ್ತೀನಿ
ನಾನು ಹೇಳ್ದಂತೆ ಕೇಳ್ತೀಯ?"
"ಏನು ಸ್ವಾಮಿ?"
"ಮಡದಿ ಮಾದೇವಿ
ಮಕ್ಕಳಿಲ್ಲ ಎಂಬ ದುಕ್ಕ ದಳ್ಳುರಿಯಾಯ್ತು
ಇನ್ನು ನಾವು ಬದುಕಿರಬಾರ್ದು

ಅರ್ಮನ್ಗೆ ತಕ್ಕಂತ ಮುತ್ತು, ರವರತ್ನ, ವಜ್ರ
ವೈರಾಣ್ಯ ಅನ್ನುವಂತ ಭಾಗವನ್ನು
ಒಕ್ಕಡೆ ಸಿದ್ಧಪಡ್ಸು
ಅರ್ಮನೆ ಗುಡ್ಸಿತಾರ್ಸಿ ರಂಗ್ವಾಲೆ ಬುಡು
ನಾವಿಬ್ರೂ ಸ್ನಾನ ಮಡಿ ಮಾಡ್ಕೊಂಡು ಬರೂಮಾ
ನೀನು ಪಾತ್ರೆ ಮಡುಗಿ ಗಂಜಿ ತಯ್ಯಾರಿ ಮಾಡು
ನಾನು ಅಂಗ್ಡೀಗೋಗಿ ಇಸ ತಕ್ಕಂಬತ್ತೀನಿ
ಇಸುವನ್ನು ಗಂಜಿವೊಳ್ಗೆ ಪಾಕ ಮಾಡಿ
ಏಳೇಳು ಮನೆ ಬಾಕ್ಲುಗಳ ಒಂದಾಗಚ್ಕೊಂಡು
ಇಬ್ರೂವೆ ಒಂದೇ ಆಸ್ಗೇಲಿ ಇಸ ಸೇವ್ನೆ ಮಾಡಿ
ಪ್ರಾಣಗಳ ಕಳ್ಕೋಬೇಕು -

ಪಾತ್ರೇಲಿ ಇಸವ ನೀನು ಕಾಯ್ಸು ಮಾದೇವಿ
ಆ ಇಸ್ವ ನಾವು ಈಗ ಕುಡಿಬೇಕು |

ಇಸ್ವ ಕುಡ್ದು ನಾವು ಪ್ರಾಣಗಳ ಬುಡಬೇಕು
ಆ ಶಿವನ ಪಾದಾವ ಸೇರಬೇಕು |

ಮಾದೇವಿ ಇದ್ಕೆ ನಿನ್ನ ಅಭಿಪ್ರಾಯವೇನು?"
"ಸ್ವಾಮಿ ಹಾಗೇ ಆಗ್ಲಿ" -

ಗಂಡನ ಮಾತಿಗೆ ಪ್ರತಿ ಉತ್ರ ಹೇಳದೆ
ಒಪ್ಪಿಕೊಂಡವ್ಳೆ ಮಾದೇವಮ್ಮ |

ಪತೀ ಮಾತ್ಗೆ ಒಪ್ಕೊಂಡು ಮಾದೇವಮ್ಮ
ಅರ್ಮನೆ ತಾರ್ಸಕೆ ಅಂತ ಹೋದ್ರು
ಸ್ವೋಮಯ್ಯ ಇಸ ತರಕೆ ಅಂತ ಅಂಗ್ಡಿಗೋದ್ರು
ಮಾದೇವಮ್ಮ ಮನೆ ರಜಾ ಹೊಡ್ದು
ತಾರ್ಸಿ ರಂಗ್ವಾಲೆ ಹಾಕುದ್ರು
ತಾನ ಮಡಿಗಳ ಮಾಡಿ
ಕೈಲಾಸಪತಿಯಾದಂತ ಪರಶಿವನ ತೋತ್ರ ಮಾಡಿ

ಧೂಪುದೀಪುಗಳಿಂದ ಪೂಜೆ ಮಾಡುದ್ರು
ಸ್ವೋಮಯ್ಯ ಅಂಗ್ಡಿಯಿಂದ ತಂದಿದ್ದಂತ ಇಸುವನ್ನು

ಪಾತ್ರೆಗೆ ಸುರುದು ಒಲೆಮ್ಯಾಲೆ ಮಡಿಕೊಂಡು
ಚನ್ನಾಗಿ ಕಾಯ್ಸುವೆ ಮಾದೇವಮ್ಮ |

ನಾವಿಸವನ್ನು ಕುಡಿವಾಗ ನರಮಾನ್ರು ಬರಬಾರ್ದು
ಬಾಗುಬಾಗುಲ್ನೆಲ್ಲ ಬಂದ್ ಮಾಡು |

ಬಾಗುಬಾಗ್ಲುನೆಲ್ಲ ಬಂದ್ ಮಾಡು ಮಾದೇವಿ
ಇಸದ - ಪಾತ್ರೆ ತಕ್ಕೊಂಡು ಬಾ ಹೆಣ್ಣೆ |

ಬಾಗುಲ್ನ ಬಂದ್ ಮಾಡಿ ತಾಳು ಹಾಕೊಂಡು
ಇಸದ ಪಾತ್ರೆಯ ಹಿಡುಕೊಂಡು |

ಇಸದ ಪಾತ್ರೆಯ ದಂಡೇಲಿ ಮಡಗಿ
ಗಂಡನ ಪಾದಕ್ಕೆ ಸರಣಂದ |

ಇಸದ ಪಾತ್ರೆಯ ದಂಡೇಲಿ ಮಡುಗ್ಬುಟ್ಟು
ಗಂಡನ ದಂಡೇಲಿ ಕೂತುಕೊಂಡ |

ಬೆಳ್ಳಿಯ ಬಟ್ಟಲಿಗೆ ಇಸವನ್ನು ಬುಟ್ಟಿದರು
ಪರಮಾತ್ಮನ ಗ್ಯಾನ ಮಾಡಿದರು |

ಸಾಕ್ಷಾದ್ ಭಗವಂತ್ನ ಗ್ಯಾನ ಮಾಡುವಾಗ
ಲೋಕಾದ ದೊಡ್ಡೋರ್ಗೆ ಅರುವಾದೊ |

ಲೋಕಾದ ದೊಡ್ಡೋರು ಪರಮಾತ್ಮ ಶಿವನು
ಮರ್ತುಲೋಕವನ್ನ ಬಗ್ಗಿ ನೋಡಿದರು |

ಲೋಕಕ್ಕೆ ದೊಡ್ಡೋರ್ಗುವೆ ಪಾರ್ವತಿ ಅಮ್ಮಯ್ಯಂಗುವೆ
ಅವರ ಪಾದಕ್ಕೋಗಿ ಅರುವಾಯತಂತೆ |

೨. ಕಂದನ ಭಾಗ್ಯ ನಿಮ್ಮ ಮನೆ ತುಂಬಾಲಿ

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

ಸ್ವೋಮಯ್ಯ ಮಾದೇವಮ್ಮ ಇಸಪಾಕ ಮಾಡಿಕೊಂಡು
ಪ್ರಾಣ - ಬುಡಬೇಕು ಅನ್ನುವ ಕಾಲದಲ್ಲಿ |

ಇತ್ತಲಾಗಿ ಕೈಲಾಸದಲ್ಲಿ
ಮೂರು ಲೋಕದ ಒಡೆಯ ಮುಕ್ಕಣ ಸ್ವಾಮಿಗಳ ಮಡದಿ
ತಾಯಿ ಪಾರ್ವತಾದೇವಿಯವರು
ಹಾಲು ಸಕ್ಕರೆ ಮೊಸರು ತುಪ್ಪ ಜೇನುಗಳ ಹಾಕಿ
ದ್ರಾಕ್ಷಿ ಕರ್ಜೂರ ಕಲ್ಸಕ್ರೆ ಕೊಪ್ರಿಗಳ ಹಾಕಿ
ಪಂಚಾಮ್ರುತ ಪಾಲು ಪರ್ವಾನಗಳ ಮಾಡ್ಕೊಂಡು
ಎಡೆಪಡುಸೋದಕ್ಕೆ ಪರಮಾತ್ಮನನ್ನು ಕಾಯ್ತಾ ಇದ್ದಾರೆ

ಎಷ್ಟೊತ್ತು ಕಾದ್ರೂ ಮಲ್ಲಯ್ಯ ಬರ್ನಿಲ್ಲ
ಆಗ ಅಕ್ಕ ಗೌರಮ್ಮನ ಅಂಗೈಯಲ್ಲಿದ್ದಂತ
ಗಿಣಿರಾಮು ಏನ್ಹೇಳ್ತಿದೆಯಪ್ಪಾಂದ್ರೆ -

"ಅಕ್ಕ ಅಕ್ಕ ಕೇಳೆ ಅಕ್ಕರೆಯ ಬಗೆ ಹೇಳೆ
ಅಕ್ಕ ನಿನಗಂಡ ಶಿವರಾಯ |

ಅಕ್ಕ ನಿನಗಂಡ ಶಿವುರಾಯ್ಗೆ ನೀನು
ಲೆಕ್ಕಕ್ಕೆ ಮಾತ್ರ ಮಡ್ದಿ ಕಾಣಕ್ಕ |

ಲೆಕ್ಕಕ್ಕೆ ಮಾತ್ರ ನೀನು ಮಡದಿಯಾದೆ
ಚಿಕ್ಕವಳು ಗಂಗೆ ಮನೆಯಲ್ಲಿ |

ಚಿಕ್ಕವಳು ಗಂಗೆ ಮನೆಯಲ್ಲಿ ಭಾವಯ್ಯ
ಚಿಕ್ಕಂದ ಆಡುತ ಕುಳುತವುರೆ |

ಚಿಕ್ಕಗಂಗೆ ಜೊತೆ ಚಿಕ್ಕಂದ ಆಡುತ
ಅಕ್ಕ ನಿನ ಮರೆತ ಶಿವುರಾಯ |

ಅಕ್ಕ ನಿನ ಮರೆತ ಮುಕ್ಕಣ್ಣ ನಂಭಾವ
ಚಿಕ್ಕೋಳು ಗಂಗೇಗೆ ಮರುಳಾದ |

ಆಟ ಆಡೋದು ಅಲ್ಲಿ ಊಟ ಮಾಡೋದು ಅಲ್ಲಿ
ಕೂಟವೂ ಗಂಗೆಯ ಮನೆಯಲ್ಲಿ |

ಅಕ್ಕ ನಿನ ತಲೆಮ್ಯಾಲೆ ಕಲ್ಲು ಹಾಕಿದ ಕಾಣೆ
ಇಂಥ ಭಾವಯ್ನ ನಂಬುಬೋದ?" |

ಗಿಣಿರಾಮ್ನ ಮಾತೀಗೆ ಮನುಸಲ್ಲೆ ಗೌರಮ್ಮ
ಬಾಳ ಕ್ಯಾಪಗಳ ಮಾಡಿದಳು |

ಬಾಳ ಕ್ಯಾಪಗಳ ಮಾಡಿದಳು ಗೌರಮ್ಮ
ಗುಳುಗುಳನೆ ಒಳುಗೊಳಗೆ ಅಳುತಾಳೆ |

ಅಷ್ಟೊತ್ತುಗೆ ಬಾಕುಲ್ಗೆ ಬಂದಾನು ಶಿವುರಾಯ
ಸೆರಗಲ್ಲಿ ಕಣ್ಣ ಒರ್ಸಿಕೊಂಡು |

ಸೆರಗಲ್ಲಿ ಕಣ್ಣ ಒರ್ಸಿಕೊಂಡು ಗೌರಮ್ಮ
ಎರಡು ಗಿಂಡೀಲಿ ಆಗಣೆಯ |

ಎರಡು ಗಿಂಡೀಲಿ ಆಗಣೆಯ ತಂದಳು
ಶಿವರಾಯ್ನ ಮುಂದೆ ನಿಂತಾಳು |

"ಯಾಕಲಾ ಮಡದಿ ಎರ್ಡು ಗಿಂಡಿ ಆಗನಿ
ನಿನಗಿಬ್ಬಾರುಂಟೆ ಪುರುಷರು ?" |

"ನನಗಿಬ್ಬರಾದರೆ ನೀವು ಉಳಿದೀರ?
ನಿಮ್ಮ ಜಡೆಲಿರೊ ಗಂಗಮ್ಮ |

ನಿಮ್ಮ ಜಡೆಲಿರೊ ಗಂಗೆ ಉಳಿದಾಳ ?
ಧರಣಿಯು ತಾನು ಉರುದೋದೀತು" |

"ಗಂಗೆ ಮನೇಲಿದ್ದ ಸುದ್ದಿ ಹೇಳಿದರ್ಯಾರು?
ಇವನೇ ತಾನೆ ಈ ಗಿಣಿರಾಮ? |

ಗಂಡ ಹೆಂಡತೀರ್ಗೆ ತಂದುಹಾಕುವ ಇವನು
ಹೋಗಿ ಹುಟ್ಟಲಿ ಧರೆಯಲ್ಲಿ |

ಕೊಂಡುಗದ ಮಾತೀಗೆ ಬಂಡೆಗಾತ್ರ ಶ್ಯಾಪ ಇದು
ಹುಟ್ಟುಬಂಜೆ ಹೊಟ್ಟೇಲಿ ಹುಟ್ಟುಹೋಗು" |

ಶಿವುರಾಯ ಶ್ಯಾಪಾವ ಕೊಟ್ಟಾಗ ಗಿಣಿರಾಮ
ಬಾಯಿ ಬಾಯಿ ಬಡುಕೊಂಡು ಅಳುತಾದೆ |

ಅಕ್ಕಭಾವರನು ಅಗಲಲು ಒಪ್ಪಾದೆ
ಗಿಣಿರಾಮ ದುಕ್ಕವ ಮಾಡೀತು |

ದುಕ್ಕವ ಕೊಂಡುಗ ಮಾಡುವಂತ ಕಾಲದಲಿ
ಶಿವರಾಯ ಸಂತುರ್ಸಿ ಹೇಳಿತಾರೆ |

"ಅಕ್ಕರಿಯ ಗಿಣಿರಾಮ ದುಕ್ಕ ಯಾಕೆ ಮಾಡುತೀಯೆ
ಅಕ್ಕ ಪಾರ್ವತಿಗೆ ಹೇಳುತೀನಿ|

ಪಾರ್ವತ ಕೇಳುವಂತವಳಾಗು -

ಸತ್ಯ ಮಾತ್ಮ ಸ್ಯೋಮಯ್ನುವೆ ಮಾದೇವಮ್ಮ ಅನ್ನೋರೂವೆ
ಇಸವ ಕುಡ್ದು ಪ್ರಾಣ ಬುಡುತಾರೆ |

ಅಂತೆ - ಸತ್ಯಮಾತ್ಮರು ಹೋದಮ್ಯಾಲೆ ನಾವಿದ್ದೇನು
ಫಲ ಬಂತು ?
ಹೋಗಿ ಅವ್ರ ಕಷ್ಟ ನೋಡಬೇಕು |

ಭಾರಿ ಭಕ್ತಿವಂತು ಧರ್ಮಿಷ್ಠರು ಅವರು
ಮಕ್ಕಳಿಲ್ಲಾಂತ್ಹೇಳಿ ದುಕ್ಕ ಮಾಡುತವುರೆ |

ಮಕ್ಕಳಿಲ್ಲದ ಮ್ಯಾಲೆ ನಾವಿದ್ದೇನು ಫಲಾಂತ
ಇಸ ಕಾಯ್ಸಿ ಕುಡಿಯಕೆ ಕುಂತವ್ರೆ" |

"ಹಂಗಾದ್ರೆ ಸ್ವಾಮಿ ಅವರ ರಕ್ಷಣ್ಯ ಮಾಡ್ಬೇಕು
ಮಕ್ಕಳೊರವ ನೀವು ಕೊಟ್ಟು ಬನ್ನಿ |

ಮಕ್ಕಳೋರ ಕೊಟ್ಟು ಅವ್ರ ಕಷ್ಟ ನಿರೂಪುಸ್ಬುಟ್ಟು
ಬರಬೇಕು ಸ್ವಾಮಿ ನಿಮ್ಮ ಧರ್ಮ" |

"ಪಾರ್ವತ ನಾನು
ಈ ಸಲ ಭೀಮವತಿ ಪಟ್ಣುಕ್ಕೆ ಹೋಗ್ಬರ್ತೀನಿ
ಇಸ ಕುಡ್ದು ಪ್ರಾಣ ಕಳ್ಕೋಬೇಕು ಅಂತಿದ್ದಾರೆ
ಅವ್ರು ಕುಡಿವಂತ ಇಸವ ನಾನು ನನ್ನ ದ್ರೇಯಕೆ ಸಲ್ಸಿ
ಅವ್ರಿಗೆ ಸಂತಾನ ಫಲವನ್ನು ಕೊಟ್ಬರ್ತೀನಿ
ನಾನು ಬರೋನ್ಗಂಟ
ನನ್ನ ಕೈಲಾಸ ಜ್ಞಾಪಾನ ಪಾರ್ವತಿ"
ಅಂತ್ಹೇಳಿ ಪರಮಾತ್ಮ
ಜಂಗುಮರಾಗಿ ಕಾವಿ ಕಾಮಂಡ್ಲು ಧರುಸ್ಕೊಂಡು
ಕೊರುಳ್ತುಂಬ ರುದ್ರಾಕ್ಷಿ ಭದ್ರಾಕ್ಷಿಗಳ ಧರ್ಸಿ
ನಾಗಬೆತ್ತ ಕೈಲಿಡುಕೊಂಡು
ನಾಕು ಪಾದ್ದ ಜೋಳುಗೆಯ ಮುಂಗ್ಕೆಗಾಧಾರ
ಮಾಡ್ಕೊಂಡು
ಮಾಯದವತಾರದಿಂದ
ಭೀಮವತಿ ಪಟ್ಣುಕ್ಕೆ ಸ್ವಾಮಿ ಹೊಂಟು ನಿಂತ್ರು.
ಗೌರಮ್ಮನು ಸುಂಗಾರ ಮಾಡ್ಕೊಂಡು
ಸ್ವಾಮಿ ಮುಂದೆ ಬಂದು ನಿಂತ್ರು.
ಆಗ ಪರಮಾತ್ಮನಾದ್ರು ಗಿಣಿರಾಮನನ್ನು ನೋಡಿ
"ಏಯ್ ಗಿಣಿರಾಮ
ರೂಪ್ನಲ್ಲಿ ಕಳೆಯದಲ್ಲಿ ಆಕಾರದಲ್ಲಿ
ನಿಮ್ಮಕ್ಕ ಚನ್ನಾಗಿದ್ದಳೊ ? ನಾನು
ಚನ್ನಾಗಿದ್ದೆನೊ ? ಹೇಳು !"
ಪರಮಾತ್ಮನ ಮಾತು ಕೇಳಿ ಗಿಣಿರಾಮ ನಡುಗೋಯ್ತು
ಬಾಳ ಯೋಚ್ನೆ ಮಾಡ್ತು
ಭಾವುನ್ ಕಡೆ ಹೇಳ್ಬುಟ್ಬೇನ, ಅಕ್ಕ
ನನ್ನ ಹೋಡ್ದು ಸಾಯುಸ್ತಳೆ
ಇನ್ನು ಅಕ್ಕನ ಕಡೆ ಹೇಳುದ್ರೆ ಭಾವ ಸಾಪ ಕೊಡ್ತನೆ
ನಾನು ಯಾರ್ಕಡೇಗೆ ಹೇಳ್ಕಪ್ಪ?
ಹೇಳಿ ಹೆಂಗೆ ಬಾಳ್ಯಾಡ್ಲಪ್ಪ?" ಅಂತ್ಹೇಳಿ
ಗಿಣಿರಾಮು ಬಾಳ ಯೋಚ್ನೆ ಮಾಡ್ತಾ ಇದೆ.
"ಕೊಟ್ಟ ಕಷ್ಟನೆಲ್ಲ ಕೊಟ್ಕಳ್ಳಿ
ನಂಗೆ ಬಂದ ಕಷ್ಟವೆಲ್ಲ ಬಂದ್ಕೊಳ್ಳಿ" ಅಂದ್ಕೊಂಡು
"ಸ್ವಾಮಿ ಅಕ್ಕಯ್ಯಂಗೆ ಹದಿನಾರು ಕಳೆಯ ಬುದ್ಧಿ
ನೀವು ಅಕ್ಕಯ್ಯನ ಜೊತೆಲಿ ಮಾತ್ರವೇ ಇದ್ರೆ
ನಿಮಗೂ ಹದಿನಾರು ಕಳೆಯ ಇರ್ತಿತ್ತು
ನೀವು ಹಂಗೆ ನಡ್ಕೊಂಡಿಲ್ಲವಲ್ಲ
ಅದ್ಕೆ ನಿಮುಗೆ ಹನ್ನೊಂದೇ ಕಳೆಯ" ಅಂತು.
"ನನ್ನ ನನ್ಮಡದಿ ಎದುರ್ಗೆ ಜರ್ದು ಮಾತಾಡ್ತೀಯ?
ಅಕ್ಕನ ಮೇಲ್ ಮಾಡಿ ನನ್ನ ಕೀಳ್ಮಾಡ್ತೀಯ"
"ಭಾವಯ್ಯ ನಾನು ಕೀಳು ಮಾಡಿಲ್ಲ
ಮೇಲೂ ಮಾಡಿಲ್ಲ
ನೀವು ಯಾವಾಗ್ಲೂ ನಮ್ಮಕ್ಕಯ್ಯುನ
ಜೊತೆಲೇ ಇರ್ಬೇಕು.
ಅದ್ಕೆ ಅಲ್ವಾ ? ನಿಮ್ಮ
ಅರ್ಧನಾರೀಶ್ವರ ಅನ್ನೋದು
ನೀವು ಆ ಮಾತ ಉಳುಸ್ಕೊಂಡಿದ್ದೀಯ ಭಾವ?"
"ಗಿಣಿರಾಮ ನೀನು ಚೆನ್ನಾಗಿ ಮಾತಾಡ್ತಿಯೆ
ಹಿಡಿ ಭಾಷೆಯ" ಅಂದ್ರು
"ಕೊಡಿ ಬುದ್ಧಿ!" ಅಂತು
ಉರಿ ಹಸ್ತ ಕೈಲಿತ್ತು ಗಿಣಿಮ್ಯಾಲೆ ಮಡುಗುದ್ರು
ಸುಟ್ಟು ಭಸ್ಮ ಆಯ್ತು ಗಿಣಿ -

ಭಸ್ಮವ ತಕ್ಕಂಡು ಲೋಕಕ್ಕೆ ದೊಡ್ಡೋರು
ಭೀಮಾವತಿಗೆ ಸಾಗಿ ಬರುತಾರೆ |

ಮರ್ತುಲೋಕದ ಭೀಮಾವತಿಯಲ್ಲಿ
ಸೋಮಯ್ಯ ಮಾದೇವಮ್ಮನವರು
ಭಾರಿ ಭಕ್ತಿವಂತ್ರು ಧರ್ಮಿಷ್ಠರು
ಅನ್ಯಾಯವಾಗಿ ಮಕ್ಕಿಲ್ಲದುಕ್ಕೋಸ್ಕರವಾಗಿ
ಇಸ ಕುಡ್ದು ಪ್ರಾಣ ಕಳ್ಕೊತ್ತಿದ್ದಾರಲ್ಲ
ಅವ್ರು ಕುಡಿವಂತ ಇಸುವನು ನಾವು ಸೇವ್ನೆ ಮಾಡಿ
ಅವ್ರಿಗೆ ಸಂತಾನ ಫಲವನ್ನು ಕೊಡ್ಬೇಕು" ಅಂತ್ಹೇಳಿ
ಜಂಗುಮರಾಗಿ ಕಾವಿ ಕಾಮಂಡ್ಲು ಧರುಸ್ಕೊಂಡು
ಕೊರಳ್ತುಂಬ ರುದ್ರಾಕ್ಷಿ ಧರ್ಸಿ
ನಾಗಬೆತ್ತ ಕೈಲಿಡುಕೊಂಡು
ನಾಕು ಪಾದ್ದ ಜೋಳ್ಗೆಯ ಕೈಗಾಧಾರ ಮಾಡ್ಕೊಂಡು

ಮಾಯಾವತಾರದಿಂದ
ಭೀಮಾವತಿ ಪಟ್ಟಣಕ್ಕೆ ಸ್ವಾಮಿ ದಯವಾದ್ರು -

ಸತ್ಯಲೋಕದಿಂದ ಶಿವನು ಮರ್ತ್ಯಕ್ಕೆ ಇಳಿದರು
ಭಕ್ತರ ದುಡುವ ನೋಡಾಲು |

ಭಕ್ತರ ದುಡುಮನವ ನೋಡಬೇಕೆಂದು
ಮುಕ್ಕಣ್ಣಯ್ಯ ಮರ್ತ್ಯಕೆ ಇಳಿದಾರು |

ನಾಕಾ ಕಡೆಯಿಂದ ನಾಕು ಬಾಗ್ಲಚ್ಚವೆ
ಹೋಗಾಕೆ ಸ್ವಾಮ್ಗೆ ಎಡೆಯಿಲ್ಲ |

ಮಾಯದ ಬೇಳ್ಮೆಯನ್ನು ತಗುದು
ಆರು ಸಾಸ್ತ್ರ ಹದಿನೆಂಟು ಪುರಾಣ ಜಪುನೆ ಮಾಡಿ
ಆ ಬೇಳ್ಮೆಯನ್ನು ಬಾಗುಲ್ಗೆ ಉರುಬುದ್ರು
ನಾಕಾ ಬಾಗ್ಲು ತಗುದ್ಬುಟ್ಟೊ
ಆಕಾರದಿಂದ ಜಂಗುಮಸ್ವಾಮಿಗಳಾಗಿ
ಬಾಕಾಲ ಕಡ್ದು ಒಳಗಡೆ ಬಂದು
ಅವ್ವ ನಡಟ್ಟಿಯೊಳುಗೆ ನಿಂತ್ಕೊಂಡು
ದಾನ ಕೇಳ್ತಿದ್ದಾರೆ
ಯಾವ ತರುವಾಗಿ ಅಂದ್ರೆ -

"ದಾನವ ನೀಡು ದೇವಿ - ಸನ್ನೇಸಿಗೆ
ಧರ್ಮವ ನೀಡುದೇವಿ | ಸೊಲ್ಲು |

ಆತಿ ಸಂಕಯ್ನ ಭಿಕ್ಷಾ
ಜ್ಯೋತಿ ಲಿಂಗಯ್ನ ಭಿಕ್ಷಾ
ಸೂರಿ ಚಂದ್ರಾದಿಗಳ
ಬೆಳಕಿನರಮನೆ ಭಿಕ್ಷಾ |

ದೇಸ ದೇಸವ ತಿರುಗಿ
ಊರು ಊರನೆ ತಿರುಗಿ
ಕೊಡಗು ಮಲೆಯಾಳ ತಿರುಗಿ
ಬಳಲಿ ಬೆಂಡಾಗಿ ಬಂದೆ |

ಮನೆ ಒಳುಗೆ ಯಾರ್ರಮ್ಮ
ಕರೆದಾರು ಸಬ್ಬವಿಲ್ಲ
ಬಾಳ ಹೊತ್ತಾಯ್ತು ತಾಯಿ
ಬಂದು ದಾನ ನೀಡವ್ವ |

ಅಮ್ಮ ಯಾರ್ರಮ್ಮ ಮನೆ ಒಳುಗೆ ?
ಬಂದು ಬಾಳ ಹೊತ್ತಾಯ್ತು ದಾನ ನೀಡಮ್ಮ"
ಎಂಬುದಾಗಿ ಸ್ವಾಮಿ ದಾನ ಕೇಳ್ತಿದ್ದಾರೆ.
ದಾನ ದಾನ ಅನ್ತಕ್ಕಂತ ಇಚಾರವ ದಂಪತಿಗಳು ಕೇಳುದ್ರು
"ಮಾದೇವಿ ಅದ್ಯಾರು ಸಪ್ತ ಮಾಫೋರು?
ಯಾರು? ಜಂಗುಮರು ಸಪ್ತ ಆಗ್ತಾ ಇದೆ ಯಾರ್ನೋಡು
ಕ್ಯಾಟೆ ಬಾಗುಲ್ಲಳ ಬೀಗು ಮುದ್ರೆ ಮಾಡಿರ್ನಿಲ್ವ ನೀನು?"
"ಮಾಡಿದ್ದೆ ಸ್ವಾಮಿ"
"ನಮ್ಮಾಸ್ತುನುಕ್ಕೆ ಎಲ್ಲಾಣೆ ಬಂದ್ರು ಅವರು?"
"ನಾ ಕಾಣೆ ಸ್ವಾಮಿ -

ಇಸ ಕಾಯ್ಸಿ ಕುಡಿಯಾಕೆ ಸಿದ್ದುವಿರುವಾಗ
ಜಂಗುಮರು ಮನೆಗೆ ಬಂದವುರೆ" |

"ಒಹೋ ಮಾದೇವಿ ಒಳ್ಳೆ ಟೇಮಲ್ಲಿ
ಜಂಗುಮರು ಭಿಕ್ಷೆಗೆ ಬಂದವುರೆ
ಪರುವಿಲ್ಲ ಮಾದೇವಿ
ಕೈಯಾರ ಕೊಟ್ಟು ದಾನ ನಮ್ಮುದು
ಬಚ್ಚಿಟ್ಟಿದ್ದು ಪರವುರದು.
ಈಗ ಜಂಗುಮರು ಸ್ವಾಮಿಯವ್ರು ಬಂದಂತ ಮಾತ್ಮರು
ಅವುರ್ಗೆ ಜೋಳ್ಗೆ ತುಂಬೇಕು
ನಮ್ಗೆ ಮಾನ ಬರ್ಬೇಕು
ಆ ಪ್ರಕಾರುವಾಗಿ ಬಂದಂತ ಮಾತ್ಮುರಿಗೆ ಭಿಕ್ಷೆ ಕೊಡು"
ಆಗ ಮಾದೇವಮ್ಮ ಪತಿ ಮಾತನ್ನು ಕೇಳಿ
ಮಡಿ ಸೀರೆ ಉಟ್ಕೊಂಡು
ಮಡುಗಿದ್ದ ಕುಪ್ಪ ಧರುಸ್ಕೊಂಡು
ಗಂಧ ಚಂದ್ರ ಅಕ್ಕಸ್ತಿ ಹಣೆಗೆ ಧರುಸ್ಕೊಂಡು
ಗೌರಿಗದ್ಗೆ ಮೊರ ತಕ್ಕೊಂಡು
ಮುತ್ತು ರವರತ್ನಗಳ ಮೊರುತ್ತುಂಬ ತುಂಬ್ಕೊಂಡು
ಎಲಡ್ಕೆವೊಳ್ಗೆ ಒಂದು ಕಂಟ್ರೀ ಹಣ ಮಡಿಕೊಂಡು
ತಟ್ಟೆವೊಳ್ಗೆ ಕರ್ಪೂರದ ಮಂಗ್ಳಾರ್ತಿ ಹಸ್ಸಿ
ಜಂಗುಮರಿಗೆ ಭಿಕ್ಷೆ ಕೊಡದಕೆ ಹೋಯ್ತಾ ಇದ್ರೆ
ಸ್ವೋಮಯ್ಯನವರು ಹೇಳ್ತಿದ್ದಾರೆ
"ಮಡ್ಡಿ ಭಿಕ್ಷವನ್ನು ಕೊಟ್ಟು ಬ್ಯೇಗ ಕಳುಸ್ಬುಡು
ನಾವಿಸಾ ಕುಡೀಬೇಕು!" ಅಂದ್ರು
ಮಾದೇವಮ್ಮ ಬಂದಿರುವಂತ
ಮಾತ್ಮುರಿಗೆ ಭಿಕ್ಷೆ ತಂದ -

ಗಂಧದ ಕಡ್ಡಿ ಸಾಮ್ರಾಣಿ ಧೂಪುಗಳ ಹಾಕಿ
ಕಲ್ಪುರ ಹಸ್ಸಿ ಬೆಳಗಿದರು |

ಜಂಗುಮರೆ ಭಿಕ್ಷ ಕೊನ್ನಿ ಬುದ್ಧಿ" ಅಂದ.

ಬಂದ ಮಾದೇವಮ್ಮನ ಮೊಕುವ ನೋಡಿದರು
ಮಕ್ಕಣ್ಣ ಹರ ಏನ ನುಡಿದಾರು ? |

"ಮಾದೇವಮ್ಮ ಸ್ವೊಲ್ಪ ನಿದಾನ ಮಾಡು ತಾಯಿ
ಅಮ್ಮ ನಿನ್ನ ಭಿಕ್ಷದ ಮಾತು ಹಾಗಿರಲಿ
ಭಿಕ್ಷವನ್ನು ಆಮ್ಯಾಲೆ ಕೊಡಿವೆ.
ನಾನೊಂದು ಸಣ್ಮಾತ್ಕೇಳ್ತೀನಮ್ಮ ಕೋಪ ಮಾಡ್ಕೋಬೇಡ
ನಾವು ಬಂದು ಬಾಳ ಹೊತ್ತಾಯ್ತು
ಒಂದು ಗಂಟೆ ಟೇಮಾಯ್ತು
ಆ ತಾವ್ಗಿಂದ ನಿಮ್ಮ ಮನೆಯೊಳುಗೆ
ಪುತ್ರ ಸಬ್ಬುವೆ ನನ್ನ ಕಿವಿಗೆ ಬೀಳ್ನಿಲ್ಲವಲ್ಲ -

ನಿನ್ಗೆ ಹೆಣ್ಮಕ್ಕಳೆಷ್ಟ? ಗಂಡ್ಮಕ್ಕಳೆಷ್ಟ?
ಒಟ್ಟು ಮಕ್ಕಳು ಎಷ್ಟು ಜನುವಮ್ಮ ?|

ನಿನ್ನೊಟ್ಟೆವೊಳುಗೆ ಹುಟ್ಟಿದಂತ
ಹೆಣ್ಮಕ್ಕಳೆಷ್ಟ? ಗಂಡ್ಮಕ್ಕಳೆಷ್ಟ? ಅಂತ ಹೇಳ್ಬುಟ್ಟು
ಆಮ್ಯಾಲೆ ಭಿಕ್ಷುವನ್ನು ಕೊಡಮ್ಮ"

ಸ್ವಾಮಿ ಆಡಿದ ಮಾತ ಕೇಳಿದಳು ಮಾದೇವಮ್ಮ
ಅಲ್ಲಿ - ಗುಳುಗುಳನೆ ತಾಯಿ ಅಳುತಾಳೆ |

ಸ್ವಾಮಿಯವರ ವಾಕ್ವಾನ ಕೇಳಿ ಮಾದೇವಮ್ಮ
"ಸ್ವಾಮಿ -

ನಾನುಟ್ಟಿ ಮೂವತ್ತೊರುಸ ಮಂಡೆ ಮಾಸಿ ಹನ್ನೆರಡೊರ್ಸ
ನನ್ಗೆ ಮಕ್ಕಾಳ ಫಲವೆ ಮೊದುಲಿಲ್ಲ" |

"ಛೇ ಮಾದೇವಮ್ಮ
ಪಾಪಳಾದ ನಿನ್ನ ಮೊಕ ನೋಡಿ ಹೋದ್ದೇ ಆದ್ರೆ
ಹೋದ ಕಾರ್ಯ ಸುಬಾ ಆಕ್ಕಿಲ್ಲ
ಹುಟ್ಟು ಬಂಜೇರು ನೀವು
ನಿಮ್ಮ ಮೊಕಾ ನೋಡ್ಬಾರ್ದು -

ಮಕ್ಕಳ ಫಲವು ನಿನಗಿಲ್ಲಾದ ಮ್ಯಾಕಿನ್ನು
ನಿನ್ನ - ಬಂಜೆ ಕೈಯಿನ ಭಿಕ್ಷ ನನ್ಗೆ ಬೇಕಿಲ್ಲ |

ಈ ಮನೆಗೆ ಭಿಕ್ಷಕ್ಕೆ ಬರಲಾಗಿ
ಸೀಲಾನದಿಗೋಗಿ ಸ್ನಾನ ಮಡಿ ಮಾಡುದ್ರೂ ಕೂಡ
ಈ ಕರ್ಮಸೇಸ ಕಳಿಯೋದಿಲ್ಲ
ದಟ್ಟದರಣಿ ಹುಟ್ಟುಬಂಜೆಯಾದ ಮಾದೇವಮ್ಮ
ನಿನ್ನ ಧರಣಿ ಕೈಯಿನ ಭಿಕ್ಷೆ ಮಾತ್ರ ನನಗೆ ಬೇಡಮ್ಮ"
ಹಾಗಂತ್ಹೇಳಿ ಸ್ವಾಮಿ
ಮಾದೇವಮ್ಮುನ್ನ ತುಂಬ ಬೆದುರುಸ್ಬುಟ್ರು
ಈ ವಾಕ್ವಾನವನ್ನು ಕೇಳಿ ಮಾದೇವಮ್ಮ
ದಾನುವನ್ನು ಆಕ್ಕಡೀಕೆ ಬಿಸಾಕಿ
ಸ್ವಾಮಿ ಪಾದುವನ್ನೆ ತಬ್ಬಿ ಹಿಡ್ದಿದ್ದಾಳೆ.
"ಬಿಡಮ್ಮ ಪಾದುವನ್ನು ಬಿಡಮ್ಮ"
"ಸ್ವಾಮಿ ನರಮಾನವರು ಕೂಡ ನನ್ನನ್ನು
ಬಂಜೆ ಅಂತ್ಹೇಳಿ ತಿರುಸ್ಕಾರ ಮಾಡ್ತಿದ್ದಾರೆ.
ತಾವು ಜಂಗುಮರು ನೀವು ಹಿಂಗೆ ಮಾತಾಡಿದ ಮ್ಯಾಲೆ
ನೀವು ನನಗೆ
ಸಂತಾನ ಫಲವನ್ನು ಕೊಟ್ಟು ಕಾಪಾಡಬೇಕು"
"ಮಾದೇವಮ್ಮ ನಿನ್ನರುಮನ್ಗೆ ಭಿಕ್ಷುಕ್ಕೆ ಬರಲಾಗಿ
ನಿನ್ಗೆ ಸಂತಾನಫಲವನ್ನು ನಾನೇ ಕೊಡ್ಬೇಕೇನಮ್ಮ?
ಆಗ್ಲಿ ಮಾದೇವಮ್ಮ ಆಗಬವುದು.
ಮಕ್ಕುಳ್ನ ಕೊಡುವಂತ ಭಾರ ನಮ್ಮುದಾಗ್ಲಿ
ಅಮ್ಮ ನಿನ್ನ ಭಿಕ್ಷಾ ತಕೊಂಡು ನಾನೇನು
ಮಾಡ್ಬೇಕು ತಾಯಿ
ನಾನ್ಯಾವ ಹೆಂಡ್ತಿ ಮಕ್ಕುಳ್ಗೆ ಕೊಡಬೇಕಿತ್ತವ್ವ?
ನನಗೆ ನಿನ್ನ ಭಿಕ್ಷೆ ಬೇಡಮ್ಮ
ನಾನೊಂದು ಮಾತೇಳ್ತೀನಿ ಕೇಳ್ತಿಯಮ್ಮ?"
"ಏನು ಹೇಳಿ ಸ್ವಾಮಿ."
"ಅಮ್ಮ ನಾನು ಅನ್ನಾರಾದಿಗಳ
ಮುಟ್ಟಿ ಆರ್ದಿವುಸ್ಯಾಯ್ತು
ಆರ್ದಿವುಸ್ತಾವ್ಗಿಂದ ಅನ್ನುವಿಲ್ಲ
ಅನ್ನ ಹಾರಾದಿಗಳಿಲ್ಲ ಕಣ್ಣಿಗೆ ನಿದ್ರೆ ಇಲ್ಲ.
ಹಸುವುನ್ ಕಾಲ್ದಲ್ಲಿ ಬಂದಿವ್ನಿ
ಈವತ್ತು ನಿನ್ಮನೆವೊಳುಗೆ ಶಿವುಪೂಜೆ
ಮಾಡ್ಸಿ ಊಟುಕ್ಕಿಕ್ಕುದ್ರೆ
ಆ ತಕ್ಷಣವಾಗಿ ಸಂತಾನ ಫಲ ಕೊಡ್ತಿವಮ್ಮ" -

ಸ್ವಾಮಿ ಆಡಿದಂತ ವಾಕ್ಪಾನ ಕೇಳಿದರು
"ಸ್ವಾಮಿ - ಅವುಕಾಸ ಕೊಡು ಅರ್ಧಗಂಟೆ ಟೇಮು |

ಹದ್ನಾರು ಬಗೆ ಪದಾರ್ಥಗಳ ಎಡೆಮಾಡಿ
ತಮ್ಮ ಪಾದಕ್ಕೆ ಎಡುಪಡುಸ್ತೀನಿ" |

ಮಾದೇವಮ್ಮ ಈಗ್ಲೊ ಇನ್ನೊಂದ್ ಗಳುಗ್ಲೊ
ಮಸ್ತು ಹೋಗ್ತಾ ಅದೆ.
ಊಟುಕ್ಕೆ ಪಡ್ಸಮ್ಮ ಮಕ್ಕು ಫಲ ಕೊಡ್ತೀನಂದ್ರೆ
ಅರ್ಧಗಂಟೆ ಟೇಮು ಕೇಳ್ತಿದ್ದಾಯಿ
ಇದು ಇಕ್ಕಾರ್ದ ಮಾತು"
"ಇದು ಹಾಗಲ್ಲ ಸ್ವಾಮಿ
ನಾನು ನಿಜಾ ಹೇಳ್ಬೇಕೊ ಸುಳ್ಳೇಳ್ಬೇಕೊ"
"ಸುಳ್ನಿಂದ ಸುಕುವಿಲ್ಲ ಮಾದೇವಮ್ಮ
ನಿಜವಾದ ಮಾತ್ಹೇಳು"
"ಸ್ವಾಮಿ ನಾವಡ್ಗೆ ಮಾಡಿಲ್ಲವಲ್ಲ ಬುದ್ಧಿ"
"ಇನ್ನೇನು ಮಾಡಿದ್ದೀರಮ್ಮ?"
"ಊರ ಜನರು ನಮಗೆ ಮಕ್ಕಿಲ್ಲಾಂತ
ತಿರಸ್ಕಾರ ಮಾಡಿದ್ಮಾಗಿ
ಇಸಾ ಸೇವ್ನೆ ಮಾಡಿ ಪ್ರಾಣ ಕಳ್ಕೋಬೇಕುಂಬುದಾಗಿ
ಇಸದ ಗಂಜಿ ಮಾತ್ರ ತಯ್ಯಾರಾಗದೆ ಸ್ವಾಮಿ
ಅದಂತ ಅನ್ನ ಮನೇಲಿಲ್ಲ.
ಇಸದ ಪಾತ್ರೆಯನ್ನು ಬ್ಯಾರೆ ಮಡುಗಿ
ನಿಮ್ಗೆ ಒಳ್ಳೆ ಅಡ್ಗೆ ಮಾಡ್ಕೊಡ್ತೀನಿ ತಾಳಿ ಸ್ವಾಮಿ
ಬ್ಯಾರೆ ಭಾಂಡವನೆತ್ತಿ ಅಡ್ಗೆ ಮಾಡ್ತೀನಿ"
"ಅಮ್ಮಾ ಅಷ್ಟೊತ್ತುನ್ಗಂಟ ಇರಲಾರೋ ಕಂದ"
"ಬುದ್ಧಿ, ಇರೋದೇ ಇಸಾ ಬುದ್ಧಿ!"
"ಮಾದೇವಮ್ಮ ಹಸುದೊತ್ಗೆ ಇಸವಾದ್ರೇನು
ಅಮ್ರುತವಾದ್ರೇನು.
ಅದುನ್ನ ತಂದ್ಬುಡು ನಮ್ ಅಕ್ಷಪಾತ್ರೆಗೆ
ಅದುನ್ನ ನಾವ್ಯೂಟ ಮಾಡ್ತೀವಿ"
"ಸ್ವಾಮಿ ಆ ಇಸುವನ್ನು ಮಾತ್ರ ನೀವು ಕೇಳಬೇಡಿ
ಆ ಇಸುವನ್ನು ಕೊಟ್ರೆ ನಿಮ್ಮ ವಸ್ತು ಹೊಗ್ತಿದ್ದಾದೆ.
ಆ ಕರ್ಮಕ್ಕೆ ನಾವೀಡಾಗನ?" -

ಅಮ್ಮ - ಇಸವಾದರೇನು ? ಅಮ್ರುತವಾದರೇನು?
ದುಡ ಮನದಲ್ಲಿ ತಂದು ಕೊಡು ಕಂದ |

ನಾನು ಹಸುವನ್ನು ತಡೀನಾರೆ ಕಂದಮ್ಮ
ಬ್ಯಾಗ ತಕ್ಕಂಬವ್ವ ಗಂಜೀಯ" |

"ಸ್ವಾಮಿ-ಇಸದ ಗಂಜಿಯನ್ನು ಕೊಡದು ತಪ್ಪಲ್ಲವೆ?
ತಿಳಿದೂ ನಾನು ನಿಮಗೆ ಕೊಡಬವುದೆ?" |

"ಅಮ್ಮ ತಾಯಿ ನಾನು ಹಸುವನ್ನ ತಡೀನಾರೆ
ನಿಮ್ಮಿಂದ ಸೊಲುಪುವೂ ತಪ್ಪಿಲ್ಲ |

ನೀವು ಕೊಡುವ ಗಂಜೀಯ ಗಟಗಟನೆ ಕುಡಿದು
ನೀವು ಕೇಳುದಂತ ವರುವ ಕೊಡುತೀವಿ" |

"ಕಂಡುತ್ವಾಗೂ ಕೊಟ್ಟೀರ ಬುದ್ಧಿ?"
"ಕಂಡುತ್ವಾಗೂ ಕೊಡ್ತೀನಮ್ಮ"
"ಮಕ್ಕಳು ವರವನ್ನು ಕೊಡ್ತೀನಿ ಅಂತೀರಲ್ಲ
ನೀವು ಇಸುಕುಡುದು ಸತ್ತೋದ್ಮ್ಯಾಕೆ
ಅದೆಂತೆ ಮಕ್ಕಳು ಫಲ ಕೊಟ್ಟೀರ ಸ್ವಾಮಿ?"

"ಮಾದೇವಮ್ಮ ಜಂಗುಮರು
ಇಸಾ ಕುಡ್ದು ಪ್ರಾಣತ್ಕೆ ಮಾಡ್ಕೊಂಡ್ರೆ
ನಮ್ಗೆ ಮಕ್ಕು ಫಲ ಕೊಡೋರ್ಯಾರು ಅಂತ
ಚಿಂತೆ ಮಾಡ್ತಿದ್ದೀಯ?
ಮೊದಲು ವರುವನ್ನು ಕೊಡ್ತಿದ್ದೀನಿ ಬಮ್ಮ
ನೀವು ದಂಪತಿಗಳು ತಾನ ಮಡಿಗಳ
ಮಾಡ್ಕೊಂಡು ಜಲ್ದಿ ಬನ್ನಿ" ಅಂದ್ರು.
ಸ್ನೋಮಯ್ಯು ಮಾದೇವಮ್ಮನೂ ತಾನ
ಮಡಿಗಳ ಮಾಡ್ಕೊಂಡು
ಬುದ್ಧಿಯೋರ ಮುಂದೆ ಬಂದು ಪಾದಗಳ
ಮುಟ್ಟಿ ಕಣ್ಣುಗೊತ್ಕೊಂಡ್ರು
ಆಗ ಪರಮಾತ್ಮ
ಗಂಡ ಹೆಂಡ್ತೀರ ದಂಡ್ಕಕೆ ನಿಲ್ಲುಸ್ಕೊಂಡು
"ಮಾದೇವಮ್ಮ ಕೇಳು ತಾಯಿ
ಹದ್ನಾರೊರುಸ್ದ ಮಗ ಬೇಕಾ ? ಬೇಡ್ಕೊ!
ಇಲ್ಲಾ ಏಳೊರುಸ್ದ ಮಗ ಬೇಕಾ ? ಕೇಳ್ಕೊ!
ಏಡೂನ್ನು ಕೇಳುದ್ರೆ ಸಿಗೊಲ್ದು
ಯಾವ್ದಾದ್ರು ಒಂದನ್ನ ಕೇಳ್ಕೊ"
"ಜಂಗುಮ್ರೆ ಹದ್ನಾರೊರುಸ್ದ ಮಗ ಅಂದ್ರೆ ಹ್ಯಾಗೆ?
ಏಳೊರುಸ್ದ ಬಾಲ್ಕ ಅಂದ್ರೆ ಹ್ಯಾಗೆ ಸ್ವಾಮಿ?"
"ಮಾದೇವಮ್ಮ ಹದ್ನಾರೊರುಸ್ದ ಮಗ ಅಂದ್ರೆ
ಕಳ್ತನ ಮಾಡ್ತನೆ ದರೋಡೆ ಮಾಡ್ತನೆ
ಸುಳ್ಳು ಸಾಕ್ಷಿ ಹೇಳ್ತನೆ
ಚಿತ್ರಾಕುಯ್ತನೆ ತಂದೆ ತಾಯಿ ಮಾನವನ್ನು

ಈಂಕಾರವಾಗಿ ಕಳೀತಕ್ಕವನು
ಏಳೊರುಸ್ಸ ಮಗ ಅಂದ್ರೆ
ತಂದೆ ತಾಯಿ ಪಾದಪೂಜೆ ಮಾಡೋನು
ಒಡುಟ್ಟುನ ಪೂಜೆ ಮಾಡಿ
ದಾನ ಧರ್ಮಗಳನ್ನು ಮಾಡಿ
ಪುಣ್ಯದ ಫಲವನ್ನು ಪಡೆದು
ಹುಟ್ಟಿದಂತ ಏಳೊರ್ಸುಕ್ಕೆ ಕೈಲಾಸ
ಸೇರುವಂತ ಪರುಮ್‌ಭಕ್ತ.
ಈ ಮಗ ಬೇಕಾ ? ಇಲ್ಲ, ಆ ಮಗ ಬೇಕಾ?
ಏಡ್ನೂ ಕೇಳುದ್ರೆ ಸಿಕ್ಕಾರ್ದು ಮಾದೇವಮ್ಮ" -

"ಸ್ವಾಮಿ - ಬುದ್ಧಿ ಇಲ್ಲದ ಮಗನು
ಇದ್ದು ಫಲವೇನು?
ಪರುಮ್‌ಭಕ್ತ ಮಗನ ಪಾಲಿಸಪ್ಪ |

ಬುದ್ಧಿ ಜಂಗುಮರೆ
ಕಳ್ತನ ಮಾಡಿ ಸುಳ್ಳು ಹೇಳಿ
ಚಿತ್ತಾಕೂದು ಬೇಡಿ ಬಿದ್ದು
ತಂದೆ ತಾಯಿಗಳ ಈಂಕಾರವಾಗಿ
ಮಾತಾಡ್ಸಿವಂತ ಮಗ ನಮ್ಗೆ
ಬೇಕಾಗಿಲ್ಲ
ತಂದೆ ತಾಯಿ ಪೂಜೆ ಮಾಡಿ
ಒಡುಟ್ಟುನ ಪೂಜೆ ಮಾಡಿ
ದಾನಧರ್ಮಗಳ ಮಾಡಿ ಹುಟ್ಟಿದೇಳು ವರ್ಷಕ್ಕೆ
ದಂಬ ಸ್ಯೆತುವಾಗಿ ಕೈಲಾಸ ಸೇರ್ತಕ್ಕಂತ
ಪರುಮ್‌ಭಕ್ತನಾದ ಮಗ ಹುಟ್ಸೊ ವರ
ಕೊಡಿ ಸ್ವಾಮಿ" -

ಸಾಕ್ಷಾದು ಪರಮೇಶ್ವರ ಮಾದೇವಮ್ಮ ಮಾತ ಕೇಳಿ
ತಮ್ಮ - ಮುತ್ತುನ ಜೋಳುಗ್ಗೆ ಕೈಹಾಕಿ |

ಮುತ್ತೀನ ಜೋಳುಗ್ಗೆ ಕೈಹಾಕಿ ಪರಮಾತ್ಮ
ಗಿಣಿರಾಮು ಭಸ್ಮವಾಗಿತ್ತಲ್ಲ
ಆ ಬೇಳ್ಕೆಯನ್ನು ಮಂತ್ರುಸಿ
"ಶಿವಭಕ್ತ ಸ್ವೋಮಯ್ಯುಂಗೆ ನೀನು ಮಗನಾಗು
ಮಾದೇವಮ್ಮನ ಗರುಬದಲ್ಲಿ ನೀ ಹುಟ್ಟು
ಮೈದಾಳು ರಾಮ ಅಂತ ಹೆಸ್ರುವಾಸ್ಕಿಯಾಗು
ಏಳೊರ್ಷುಕ್ಕೆ ಕಾಯಸ್ಯೆತ ಕೈಲಾಸುಕ್ಕೆ
ಬಾಪ್ಪ" ಅನ್ನುವಂತಾದ್ದು

ಅಪ್ಪೆ ಆಯ್ತು ಸ್ವಾಮಿಯವರಿಂದ
"ಓಂ ನಮೊ ಹರಹರ
ಸಕಲ ಕಂಟ್ಕ ನಿವಾರಣ
ಪರಂಜ್ಯೋತಿ ಪ್ರಕಾಸ" ಅನ್ನುವಂತ ಮಂತ್ರಾಕ್ಷಣೆ ಜಪಿಸಿ
ದ್ರೇಯಕ್ಕೆ ಸಲ್ಲುವುದಕ್ಕಂತ
ಮಾದೇವಮ್ಮುನ್ ಕೈಗೆ ಕೊಟ್ರು
"ಇದೇ ಪಿಂಡ ನಿನ್ನೊಟ್ಟೊವ್ನೊಳ್ಗೆ ಜರ್ಗಿಸಿ
ಸೌಪ್ತುವಾದಂತ ಮಗ ಹುಟ್ತದೆ
ಗಂಡು ಮಗ ಹುಟ್ತು ಅನ್ನೋದಾಗಿ
ಐಸ್ವರ್ಯ ಪಡ್ಸೇಡ
ಮಗ ಹುಟ್ದಂತ ಹನ್ನೊಂದಿವುಸ್ಗಂಟ
ತಾಯಿದೆ ಕೊಟ್ರೆ ಸತ್ತ ಮಗೀನಾಗೆ ಬಿದ್ಕೋತದೆ
ಎಣ್ಣೆ ಭಾಗ ಹಾಕುದ್ರೆ ಸೂಲಿಲ್ದೆ ಬಿದ್ಕೊತದೆ
ಇದ್ಕೆ ನೀನೇನೂ ಎತೆ ಮಾಡ್ಸೇಡ
ಇದ್ಕೆ ಎಲ್ದು, ಕಳ್ಳಿಯಾಲು ಎಕ್ಕದ
ಹಾಲ್ ಕರ್ಕೊಂಡ್ ಬಂದು
ಮಗೀನ ಬಾಯಿಗೆ ಬುಡು
ಮಗು ಕಣ್ಬುಟ್ಕೊಂಡು ಪ್ರಕಾಸುವಾಗಿ ಆಡ್ತದೆ.
ಹನ್ನೊಂದಿವುಸ್ಗಂಟ ಕಳ್ಳಿಯಾಲು
ಎಕ್ಕದಾಲು ಬುಟ್ರೆ ಸಾಕು
ಹನ್ನೊಂದಿವುಸುದ ಮೇಲೆ ಸೂತ್ರ
ಗೋತ್ರವನ್ನು ತಗ್ದು
ಮಗೂಗೆ ಮೈದಾಳುರಾಮ ಅಂತ ನಾಮ್ಕರಣ ಮಾಡು
ಮಗು ಹುಟ್ಟಂತ ಮೂರೊರುಷಕ್ಕೆ
ನಿನಗಂಡ ಸೋಮಯ್ಯ ಮಗುನ್ನ
ಇಸ್ಕೂಲ್ಮತುಕ್ಕೆ ಕಳುಸ್ಬುಟ್ಟು ಬರುವಾಗ
ಮಧ್ಯಾಂತ್ರುದಲ್ಲಿ ಸರ್ಪುದಷ್ಟವಾಗಿ ಪ್ರಾಣತ್ಯವಾಗುತ್ತೆ
ನಿನ್ನ ಗಂಡ ಮರಣೋದ ಮೇಲೆ
ನಿನ್ಗೆ ಐಸ್ವರ್ಯವಿರೋದಿಲ್ಲ
ಲಕ್ಕಿಸೊಪ್ಪುನ ಮನೆ ಮುತ್ತುಗದಾಳೆ ಕದವಾಗಿ
ಗೋರು ಬಡುಸ್ತಾನ ನಿನ್ಗೆ ಬರ್ತದೆ" ಹಾಂಗತ್ಹೇಳಿ
ಮುಂದೆ ಬರ್ತಕ್ಕಂತ ಇಚಾರವ ಮಾದೇವಮ್ಮಂಗೆ ತಿಳ್ಸಿ
"ಮಾದೇವಮ್ಮ ಹೊಟ್ಟೆ ಹಸೀತೈತಮ್ಮ
ಬೇಗುದಲ್ಲಿ ಗಂಜಿ ತಂದ್ಕೊಂಡು ಕಂದಮ್ಮ"
"ಸ್ವಾಮಿ ಅದು ಇಸದ ಗಂಜಿ ಬುದ್ಧಿ"
"ನೀನು ಯೋಚಿಣೆ ಮಾಡಬೇಡಮ್ಮ
ಪಾತ್ರೆಲಿ ಇರುವಷ್ಟನ್ನೂ ನನಗೆ ಕೊಡಬೇಕಮ್ಮ

ಇಂಕ್ರ ಕೊರೆಯಾದ್ರೂ ನನಗೆ
ಬೇಡಮ್ಮ" ಅಂತ್ಹೇಳುದ್ರು
ಆವಾಗ ಮಾದೇವಮ್ಮ ಇಸದ ಗಂಜ್ಯ
ಭಗವಂತನ ದಂಡ್ಯಕೆ ತಂದು ಕೊಡ್ತಾ ಇದ್ದಾಳೆ -

ಅಕ್ಷಿಪಾತ್ರೆಗೆ ಇಸಾ ಬುಡುಸ್ಕೊಂಡು ಪರಮಾತ್ಮ
ಎಲ್ಲಾನು ಬಳುದಾಕು ಅನುತಾರೆ |

ಎಲ್ಲಾನು ಚನ್ನಾಗಿ ಅಮುರಿ ತಗುದಾಕುದ್ದು
ಸ್ವಾಮಿಯೋರು ದ್ರೀಯಕೆ ಸಲಿಸಿದರು |

ಸಾಕ್ಷಾದ್ ಪರಮೇಶ್ವರ ಇಸ ಸೇವೆ ಮಾಡುದ್ರೇನು?
ಈಶ್ವುರುಂಗೆ ಇಸವು ತಗುಲೀದ |

ಶಿವನಿಗೆ ಇಸ ತಗುಲೀದ ? ಇಲ್ಲ ! ೬೧೦
ಆದರೆ ನರಮಾನ್ಕುವ್ವರು ಅರುಕುರುಗಳ್ನ ಪತ್ತೆ ಮಾಡ್ತರಂತ್ಹೇಳಿ
"ಮಾದೇವಮ್ಮ, ಸ್ವೋಮಯ್ಯ
ಯಾಕೋ ನಿಮ್ಮನೆಗಂಜಿ ನಮ್ಮ ಶರೀರಕ್ಕೆ ಬಿದ್ದಮ್ಯಾಲೆ
ನಮ್ಮ ಶರೀರವಾದ ಶರೀರನೆಲ್ಲ
ಗಡಗಡಾಂತ ನಡುಗ್ತಾ ಅದೆ.
ಯಾಕೋ ಆಯಾಸವಾಯ್ತದೆ" ಅಂದ್ರು.

ಇವರ ದುಡವ ನೋಡ್ಬೇಕು ಅಂತ ಈಸ್ವರ
"ಅಮ್ಮ ಸೊಲ್ಪ ಕಳುವು ಸೋಕದಂಗಾಯ್ತಲ್ಲಮ್ಮ
ನಿಮ್ಮ ಮನೆ ಇಸ ಕುಡ್ದು ತಡಿಯಕಾಗ್ದಲ್ಲಮ್ಮ"
"ಸ್ವಾಮಿ ಬ್ಯಾಡಾಂದ್ರೂ ಇಸ ಕುಡುದ್ರಿ ೬೨೦
ಈಗ ನಾವೇನು ಮಾಡ್ಬೇಕು ಸ್ವಾಮಿ
ನೀವೇನಾದರೂ ಸತ್ರೆ ನಿಮ್ ಜೊತೇಲಿ
ನಾವೂ ಸಾಯ್ತುವಿ ಸ್ವಾಮಿ
ನಿಮ್ಮಂತ ಮಾತ್ಮರಿಗೆ ಇಸದ ಗಂಜ್ಯಿ ಕುಡ್ಸಿ
ನಾವು ಬದುಕೋದುಂಟ ಜಂಗುಮರೇ"
"ಅಪ್ಪಾ ನನುಗೋಸ್ಕರವಾಗಿ
ನೀವು ಸಾಯ್ಬೇಕಾಗಿಲ್ಲ
ನನ್ನ ಊರ್ ಮುಂದಿರೊ ಹೊನ್ನರಳಿ
ಮರದ ಕಲ್ಕುಟ್ಟೆ ಜಗ್ಲಿಮ್ಯಾಕೆ
ಕರ್ಕೊಂಡೋಗಿ ಬುಟ್ರೆ ಸಾಕು ಕಣಪ್ಪ -

ಕಣ್ಣು ಕಾಣೋದಿಲ್ಲ ಲೋಕ ಕಾಣೋದಿಲ್ಲ
ಹ್ಯಾಗೆ ತಾನೆ ಹೋಗಲಿ ಸ್ವೋಮಯ್ಯ" | ೬೩೦

ಸ್ವೋಮಯ್ಯನವರು ಬುದ್ಧಿಯೋರ ಕೈ ಹಿಡ್ಕೊಂಡು
ಹೊನ್ನಳ್ಳಿ ಮರುದತ್ರುಕೆ ಕರ್ಕೊಂಡ್ಬಂದು
ಕಲ್ಕುಟ್ಟೆ ಜಗ್ತಿ ಮ್ಯಾಲೆ ಕುಂಡ್ರುಸ್ದ್ರು
ಪರಮೇಶ್ವರ ಸಂತೋಷದಿಂದ -

ಕಂದನ ಭಾಗ್ಯ ನಿಮ್ಮ ಮನೆ ತುಂಬಾಲಿ
ಜ್ಯೋತಿಯಾಗಿ ಮನೆಯ ಬೆಳಗಾಲಿ |

ಅಷ್ಟೊಂದು ಹೇಳುವ ಹೊತ್ಗೆ
ನಂದೀಶ್ವರ ಹೂವಿನರಥವನ್ನು ತಂದ -

ಹೂವಿನ ರಥದಲ್ಲಿ ಪರಶಿವನು ಕುಳಿತು
ಕೈಲಾಸಕವರು ನಡೆದಾರು | ೬೪೦

೩. ದಿನುಕ್ಕೆ ಬಾ ಅಂದ್ರೆ ಜಮೆಯಕ್ಕೆಳೀತಿದ್ದಾನೆ

ಸುವ್ವಿ, ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

ಪರಮೇಶ್ವರ ಕೊಟ್ಟಂತ ಪಿಂಡು ಪ್ರಾಸೋದವನ್ನು
ಮಾದೇವಮ್ಮನವರು ದ್ರೀಯಕೆ ಸಲ್ಲುಸುದ್ರಲ್ಲ
ಆ ಪಿಂಡ ಮಾದೇವಮ್ಮನವರ ಹೊಟ್ಟೆ ಒಳುಗೆ
ಬೆಳೀತಾ ಇದೆ -

ಒಂದು ತಿಂಗಾಳು ತುಂಬಿ ಮಾದೇವಮ್ಮಂಗೆ
ಎರಡು ಮೂರು ತಿಂಗ ನಡೆದೀತು |

ನಾಕು ತಿಂಗಳ ತುಂಬಿ ಐದು ತಿಂಗಳು ನಡೆದು
ಆರೆಂಬೊ ತಿಂಗಳು ತುಂಬೀತು |

ಏಳು ತಿಂಗಳ ಬಸುರಿ ಎಂಟು ತಿಂಗಳು ನಡೆದು
ಕೋಳು ಬೇಲದ ಕಾಯ ಬಯಸಿದಳು |

ಎಳೆಯ ಮಾವಿನ ಕಾಯ ಬಯಸಿದಳು
ಮಾದೇವಮ್ಮ ೬೫೦
ಎಂಟು ತಿಂಗಳ ಬಿಮ್ಮನ್ಸಿ |

ಎಂಟು ತಿಂಗ ತುಂಬಿ ಒಂಬತ್ತು ನಡೆದಾಗ
ಹುಣ್ಣಿಮೆ ಚಂದ್ರನ ಪ್ರವಿಯಂತೆ |

ಹುಣ್ಣಿಮೆ ಚಂದ್ರಾನ ಪ್ರವಿಯಂತೆ ಮೊಕುಕಳೆ
ರಂಭೆ ಮಾದೇವಮ್ಮನ ಎಳೆಬಸ್ರು |

ತಾವರೆ ಹೂವ್ನ ಮೊಕ ಕಂದು ಕುಂದೋಯ್ತಲ್ಲ
ಬಿಳಿಚಿಕೊಂಡ ಮೊಕ ಒಣಗಿರೊ ತುಟಿಗಳು |

ಅಟ್ಟಬೆಟ್ಟವೆಲ್ಲ ಒಟ್ಟಾದ ಬಗೆಯಲ್ಲಿ
ಹೊಟ್ಟೆನೋವಲ್ಲಿ ಮಾದೇವಮ್ಮ |

ಹೊಟ್ಟೆ ನೋ ಬಂದು ಹೊರಳಾಡುತಿರುವಾಗ
ಶುಕ್ರಾರ ಸೂರಿಯ ರುದಯವಾಗೋಗ |

ಭೀಮಾವತಿಯಲ್ಲಿ ರಾಮಯ್ನ ಜನಿಸಿದನು
ಸೂರಿಯನ ಕಳೆಯ ಮೊಕುದಲ್ಲಿ |

ಸ್ವೋಮಯ್ಯೋರ್ಗೆ ಸುದ್ದಿ ಬಂದು
"ಅಮ್ಮಾವ್ರುರ್ಗೆ ಹೆರ್ಗೆ ಆಯ್ತು ಸ್ವಾಮಿ."
"ಎಂತೇದು?"
"ಗಂಡ್ಮಗು!"
ಆ ವಾಕ್ಯಾನವನ್ನು ಕೇಳಿ ಸ್ವೋಮಯ್ಯನವುರ್ಗೆ
ಬಾಳ ಸಂತೋಷವಾಯ್ತು -

ಮಗನು ಹುಟ್ಟಿದ ಸುದ್ದಿ ಊರೆಲ್ಲ ಕೇಳಿದರು
ಊರ ಜನವೆಲ್ಲ ಕೊಂಡಾಡುತಾರೆ |

ಸತ್ಯ ಮಾತ್ಮರ ಹೊಟ್ಟೇಲಿ ಉತ್ತುಮನು ಹುಟ್ಟವ್ನೆ
ಸತ್ಯಶರಣರಿಗೆ ಜಯವಾಯ್ತು |

ಪಾನ್ಕ ಪನ್ನೀರುಗಳ ಎಳ್ಕಕ್ಕಿ ಸಕ್ರೆಗಳ
ಬಂದ ಬಂದೋರ್ಗೆಲ್ಲ ಕೊಡುತಾರೆ |

ಸುವ್ವನ್ಯಾನ ಬಂದೋರ್ಗೆ ಸೀರೆಯ ಕೊಡುತಾರೆ
ಆಸ್ಯಾದ ಕೊಟ್ಟು ಎಲ್ಲ ಹೋಗುತಾರೆ |

ಬೇಕು ಬೇಕಾದಂತ ದಾನಧರ್ಮಗಳ
ಸ್ವೋಮಯ್ಯನವರು ಮಾಡುತಾರೆ |

ಪುಣ್ಯೋಜನ ಮಾಡಿಸಿ ಪರೋಪಕಾರ ಮಾಡಿದರು
ಅನ್ನ ಸಂತರ್ಪಣೆಯ ಮಾಡ್ಸಿದರು |

ಸೋಮಯ್ಯನವರು ಸಂತೋಷ ಪಡ್ತಾ ಇದ್ರೆ
ಮಗೂನ ಬಾಯ್ಗೆ ಮಾದೇವಮ್ಮ ಎಣ್ಣೆ ಹಾಕ್ತಿದ್ದಾರೆ.
ಮಗ ಸತ್ತಂಗೆ ಬಿದ್ಕೋತದೆ.
"ಅಯ್ಯೋ ಪರಮೇಶ್ವರ
ಹುಟ್ಟಿದೊಂದು ಮಗೂನು ಹಿಂಗಾಯ್ತಲ್ಲಪ್ಪ" ಅಂತ್ಹೇಳಿ
ಮಾದೇವಮ್ಮ ಯೋಚ್ನೆ ಮಾಡ್ತಿದ್ರೆ
ಜಂಗುಮರು ಹೇಳಿದ್ದಂತ ವಾಕ್ಯಾನ ಗೆಪ್ತಿಗೆ ಬಂದು
ಒಂದಷ್ಟು ಕಳ್ಳಿಯಾಲು ಎಕ್ಕುದಾಲು ಕರೇಸಿ
ದಂಡೇಲಿ ಮಡೀಕೊಂಡು
ಒಂದೊಂದ್ತೊಟ್ಟುನ ಬಾಯ್ಗೆ ಬುಡ್ತಿದ್ದಾರೆ.
ಆಗ ಮಗ ಕಣ್ಬುಟ್ಕೊಂಡು
ಪ್ರಕಾಶವಾಗಿ ಆಡ್ತಿದ್ದಾದೆ.
ಈ ಪ್ರಕಾರವಾಗಿ ಹನ್ನೊಂದಿವುಸ್ಗಂಟ
ಕಳ್ಳಿ ಎಕ್ಕುದಾಲಲ್ಲಿ ಸಾಕಿ
ಹನ್ನೊಂದಿವುಸುವದ್ಮೇಲಿ ಸೂತ್ರ ಗೋತ್ರಗಳ ತಗ್ದು
ಹನ್ನೆರಡನೆ ದಿವುಸಕೆ ಭೀಮಾವತಿ ಪಟ್ಣವ ಸುಂಗರಿಸುದ್ರಂತೆ -

ಮುತ್ತುನ ತೋರಣ ಕಟ್ಟಿ ಹವಳದ ತೋರಣ ಕಟ್ಟಿ
ಪಟ್ಣಾನೆಲ್ಲಾವೆ ಸುಂಗರಿಸಿದರು |

ಹನ್ನೆರಡು ದಿವ್ಸ ತುಂಬಿದ ಕಂದನಿಗೆ
ನಾಮಕರ್ನೆ ಸಾಸ್ತ್ರ ಮಾಡೂದಕೆ |

ನಾಮಕರ್ಣೆ ಸಾಸ್ತ್ರ ಮಾಡೂದಕೆ ಪುರೋಯಿತ್ರ
ಸ್ವೋಮಯ್ಯನವರು ಕರಿಸಿದರು |

ನೀವು ಹೆತ್ತ ಮಗುಂಗೆ ನೀವು ಮೊದಲಾಗಿ ಕರೀರಿ
ಆಮೇಲೆ ನಾವು ಕರೀತೀವಿ |

ಮೈದಾಳ ರಾಮಯ್ಯ ಅಂತ ನಾಮಕರ್ಣ ಕಟ್ಟಿ ಬುದ್ಧಿ
ಆ ಈಶ್ವುರನ ದಯದಿಂದ ಹುಟ್ಟಿದೋನ್ಗೆ |

ಮೈದಾಳ ರಾಮಾಂತ ನಾಮಕರ್ಣೆ ಮಾಡಿದರು
ಊರಿನ ದೊಡ್ಡೋರು ಬ್ರಾಮಣರು |

ಮೂರು ಜನ ಪುರೋಯಿತ್ರು ಮುಂದ್ ಬಂದು -

ಮೈದಾಳ ರಾಮಪ್ಪ ಮೈದಾಳ ರಾಮಯ್ಯ
ಕಾಯಸ್ಥೆತ ಕೈಲಾಸ್ಕೆ ಹೋಗುವ |

ಕಾಯ ಸ್ಥೈತ ಕೈಲಾಸ್ಕೆ ಹೋಗುವಂತ ಮಗನಾಗು
ನಿಂಗೆ - ಒಳ್ಳೆ ಪದವಿಯು ಸಿಗಲಪ್ಪ |

ಅಂತಂತಾ ಆಸುರ್ವಾದ ಮಾಡಿದರು ಬ್ರಾಮಣರು
ಸಾಕ್ಷಾದ್ ಪರಮೇಶ್ವರನ ವರ್ಪಿಂದ ಹುಟ್ಟಿದ

ಮೈದಾಳ ರಾಮಯ್ಯ
ದಿನುಕ್ಕೆ ಬಾ ಅಂದ್ರೆ ಜಮಯಕ್ಕೇಳೀತಿದ್ದಾನೆ -

ಕಂದನ ನೋಡೀದ ತಂದೆ ತಾಯಿಗಳು
ಆನಂದದಿಂದ ಇರುವಾರು | ೭೨೦

೪. ಸ್ವೋಮಯ್ಯ ಶಿವನ ಪಾದ ಸೇರಿದರು

ಸುಪ್ಪಿ ಹೇಳಮ್ಮ ದೇವರ ದೇವಾ ಸುಪ್ಪಿ | ಸೊಲ್ಲು |

ರಾಮಣ್ಣ ಮೂರು ವರ್ಷದ ಮಗನಾದ
ಅವ್ನು - ಆರು ವರ್ಷದೊನಾಗಿ ಕಾಣುತಾನೆ |

ಊರ ಮಕ್ಕಳ ಜೊತೆಗೆ ಆಡಲು ಹೋಗುವನು
ಇರುಳೆ ಗೋಲಿ ಗೆಜ್ಜುಗನೆಲ್ಲ |

ಇರುಳೆ ಗೋಲಿ ಗೆಜ್ಜುಗ ಲಗ್ಗೆಚಂಡ
ಗೆದ್ದುಕೊಳ್ಳುವನು ರಾಮಯ್ಯ |

ಸೋತ ಮಕ್ಕಳಿಗೆ ಗುದ್ಮುರಿ ಕೊಡುವಾಗ
ಗೋಲಿ ಗೆಜ್ಜುಗಗಳ ಕಿತ್ಕೊಳ್ಳುವನು |

ಕೊಡದ ಮಕ್ಕಳಿಗೆ ಹೊಡೆದು ಕಿತ್ತುಕೊಳುವನು
ಓಡ್ಬಂದು ಮನೆಯ ಸೇರುವನು | ೭೩೦

ಹೊಡುಸ್ಕೊಂಡ ಮಕ್ಕಳು ಅವರ ಮನೆಗೆ ಬಂದು
ಅವುರ್ - ತಂದೆ ತಾಯ್ಗೆ ಹೇಳಿ ಅಳುವಾರು |

ಸ್ವೋಮಯ್ಯನ ಮಗ ನನಗೆ ಹೊಡೆದಾನು
ಮಾದೇವಮ್ಮನ ಮಗ ಹೊಡೆದಾನು |

ತಮ್ಮ ಮಕ್ಕಳ ದೂರ ತಂದೆ ತಾಯ್ಗಳು ಕೇಳಿ
ಮಾದೇವಮ್ಮನ ಹತ್ರುಕೆ ಬರುವಾರು |

"ಅಮ್ಮ ಮಾದೇವಮ್ಮ ನಿನ್ಮಗುಂಗೆ ಬುದ್ಧಿ ಕಲಿಸು
ನಮ್ಮ ಮಕ್ಕಳನೆಲ್ಲ ಹೊಡುದವುನೆ |

ನಮ್ಮ ಮಕ್ಕ ಇರುಳೆ ಗೋಲಿಗೆಜ್ಜುಗನೆಲ್ಲ
ಕಿತ್ತುಕೊಂಡು ಹೊಡೆದು ಕಳುಸವುನೆ | ೭೪೦

ಅವನಿಗೆ ಒಳ್ಳೆ ಬುದ್ಧಿ ಕಲ್ಸು" ಅನ್ನೋ ದೂರ ಕೇಳಿ
ಆ ಮಾತ ಕೇಳಿ ಮಾದೇವಮ್ಮ |

"ಅಯ್ಯೋ ಪರಮೇಶ್ವರ
ಮಕ್ಕಿಲ್ಲಾಂತ ದುಕ್ಕ ಮಾಡ್ತಿದ್ದಂತ ಕಾಲ ಒಂದು
ಸಾಕ್ಷಾದ್ಸಿವನೆ ನನ್ಗೆ ಸಂತಾನ ಫಲವನ್ನೂ ಕೊಟ್ಟ
ಈ ಮಗ ಹಿಂಗೆ ಪೋಲಿ ಬಿದ್ದೋಯ್ತಲ್ಲ" ಅಂತ ಎತೆ ಮಾಡವ್ಳೆ.
ಒಂದಾನು ಒಂದಿವ್ಸ
ತನ್ನ ಗಂಡನಿಗೆ ಬಂದು ಬುದ್ಧಿವಾದ ಹೇಳ್ತಿದ್ದಾಳೆ -

ಸಾಧೀಸಿಕೊಂಡಳು ತಾಯಿ ಭೇದಿಸಿ ಬುದ್ಧೀಯ
ಓದೀಸಿ ಮಗನ ತಿಳಿವದಿಕೆ | ೭೫೦

ಓದೀಸಿ ಮಗನ ತಿಳಿವದಿಕೆ ಮಾದೇವಮ್ಮ
ಬೋಧಿಸಿ ನುಡಿದ ತಮ್ಮ ಪುರುಷರಿಗೆ |

"ಸ್ವಾಮಿ ನಮ್ಮ ಮಗ ಬಾಳ ಪೋಲಿ ಆಗವ್ನೆ
ರೈತಾಪಿ ಮಕ್ಳಾದ್ರೆ
ಒಂದೆಳ್ಮೊರ್ಷ ಮೂರೊರ್ಷ ಆದ್ರೆ
ದನ್ನೊ ಕರ್ನೊ ಇದ್ರೆ ಅವಿಡ್ಕೊಂಡು
ಹೊಲಮನೆ ತಾವು ಹೋಯ್ತಾ ಬತ್ತಾ ಇದ್ರೆ
ಅವು ಆರಂಭ ಕಲುತ್ಕೋತವೆ
ಅದ್ರಿಂದ ಅವುರ ಅನ್ನದ ಸಿತಿ ನಡುದೋಯ್ತದೆ
ನಮ್ಮ ಬ್ರಾಮುಣ್ರು ಮಕ್ಕಳ್ಗೆ ಏನ್ ಸಿತಿಯಪ್ಪಾಂದ್ರೆ ೭೬೦
ನಾಲ್ಕಕ್ಷರ ಕಲುತ್ರೆ ಅವ್ಗೆ ಅನ್ನ ಸಿತಿ
ಈ ನಾಲ್ಕಕ್ಷರದ ಸಂಪತ್ತೆ ಬ್ರಾಮಣರಿಗೆ ಸಕಲ ಸಂಪತ್ತು
ಇಲ್ಲದೇ ಇದ್ರೆ ಅನ್ನುವಿಲ್ಲ
ಆದ್ರಿಂದ ಈ ಮಗುನ್ನ ಕರ್ಕಂಡೋಗಿ
ಇಸ್ಕೋಲ್ ಮತಕ್ಕೆ ಹಾಕ್ಬುಟ್ಟನ್ನಿ.
ಒಂದ್ ಹಬ್ಬ ಜಾತ್ರೆಯಾದ್ರೂ ಕೂಡ
ಅವ್ರು ಮನೆಗೆ ಕಳಿಸ್ಬಾರ್ದು.
ಇಲ್ಲ - ಕುದ್ರೆ ಕೂರ್ಸಿ ಕೋದಂಡನೆತ್ತಿ
ಚನ್ನಾಗಿ ವಿದ್ಯಾಬುದ್ಧಿ ಕಲುಸ್ಲಿ" -

ಸತಿಯ ಮಾತನು ಕೇಳಿ ಹಿತುನಾದ ಸ್ವೋಮಯ್ಯ
ಸುತನ ಪ್ರಿಯವಾಗಿ ಕರುದಾನು |

ಸತಿಪತಿಯರು ಆಗ ಸಂತೋಷದಲ್ಲಿ ಸುತಗೆ
ಸ್ನಾನಮಡಿಗಳ ಮಾಡಿಸಿದರು |

ನೆನ್ನಕ್ಕಿ ನೆನೆಗಳ್ಕೆ ಗೊನೆಯ ಬಾಳೆಹಣ್ಣು
ಮೂವತ್ಮೂರು ಹಣ ಹರುವಾಣದಲಿ |

ದೀಪ್ಕಾಕ್ಷಿ ಹಣ್ಣು ಕಜ್ಜೂರದ ಹಣ್ಣುಗಳ
ಹೊನ್ನ ಹರುವಾಣದಲ್ಲಿ ತುಂಬಿಕೊಂಡು |

ಗಂದ ಚಂದಿರ ಕೂಕುಮ ಸೈವಾಗಿ
ಅಕ್ಷತಿ ಹಣ್ಣು ಕಾಯಿಗಳ |

ಅಕ್ಷತಿ ಹಣ್ಣು ಕಾಯಿಗಳ ತಕ್ಕೊಂಡು
ಸುತನ ಕೈಹಿಡಿದು ನಡೆದಾರು |

ಕಂದನ ಕೈ ಹಿಡ್ಕೊಂಡು ಕಾಣಿಕೆ ತಕ್ಕೊಂಡು
ಬಂದಾರು ಸ್ವೋಮಯ್ಯ ಶಿವಮಠಕೆ |

ಆಗ ಇದ್ಮಕೆ ಗುರುವ್ಯಾರು? ಗಣೇಶ್ವುರ !
ಇಗ್ಗಣೇಶ್ವುರ ಅಂತ್ಹೇಳಿ
ಯಾವ ಕತೆ ಮಾಡೋಕ್ಕೂ ಮೊದಲು ಅವುನ ಸೋತ್ರ ಮಾಡಿ
ಗಂಧದ ಕಡ್ಡಿ ಹಸ್ಸಿ
ಅನಂತ್ರ ಇದ್ಯಾ ಪ್ರಾರಂಭವಾಗ್ಬೇಕು
ಅವುರ ಪೂಜೆಗಾಗುವಂತ ಸಾಮಾನುಗಳ ತಕ್ಕಂಡು

ಚನ್ನರಾಮಯ್ನು ಒಡುಗೊಂಡು ಸ್ವೋಮಯ್ಯ
ಮನ್ನಿಸಿ ಮಠಕೆ ಕರತಂದ |

ನೆನೆಯಕ್ಕಿ ನೆನೆಗಡಲೆ ಗೊನೆಯ ಬಾಳೆಹಣ್ಣು
ಇನಿಯ ಕಬ್ಬಿನ ಕೋಲು ರಸದಾಳಿ |

ಇನಿಯ ಕಬ್ಬಿನ ಕೋಲು ರಸದಾಳಿ ತಕ್ಕೊನ್ನ
ಇನಿಯಾನ್ಯನ ಪೂಜೆಗೆ ಬರುತಾರೆ |

ಈ ಕಾಲ್ಬಲ್ಲಿ ಗೌರ್ಮೆಂಟಿಸ್ಕೂಲವೆ
ಆ ಕಾಲ್ಬಲ್ಲಿ ಗ್ರಾಂಟಿ ಸ್ಕೂಲು
ಗ್ರಾಂಟಿ ಸ್ಕೂಲಂದ್ರೇನಂದ್ರೆ ಕೂಲಿಮಠ

ನಮ್ ಮಕ್ಕುಳ್ಗೆ ಇದ್ಯಾ ಪ್ರಾರಂಬ ಮಾಡ್ಬೇಕಂತ್ಹೇಳಿ
ಒಬ್ ಮೇಷ್ಟ್ರು ಪತ್ರೆ ಮಾಡಿ
ಅವ್ರುಗೆ ಕ್ವೊಡ್ತಕ್ಕಂತ ಕೂಲಿ ಮಾತಾಡಿ
ಇದ್ಯಾ ಪ್ರಾರಂಭ ಆಯ್ತಾ ಇತ್ತು.
ಅದ್ಕೇ ಕೂಲಿಮಠ ಅಂತಿದ್ರು.
ಅಂತೆ ಕೂಲಿಮಠುಕ್ಕೆ ಸ್ವೋಮಯ್ಯನೋರು
ಪೂಜೆ ಸಾಮಾನ್ ತಕ್ಕೊಂಡು
ಅವ್ರುಗೆ ಕೊಡುಬೇಕಾದ್ ಕೂಲಿ ಹಣುವನ್ನು ತಕ್ಕನ್ನ
ಮಗುನ ಕೈ ಹಿಡ್ಕೊಂಡು ಇಸ್ಕೂಲ್ ಮಠುಕ್ಕೆ ಬಂದ್ನ
ಉಪಾದ್ರು ನೋಡುದ್ರು -

"ಬಂದ್ರಿಯಪ್ಪ ಸ್ವೋಮಯ್ಯ ಚಂದಾಗಿದ್ದೀರ್ಕ ಸ್ವಾಮಿ
ಬಂದಂತ ಬಗೆಯ ಒಡುದ್ಹೇಳಿ" |

"ಉಪಾದ್ರೆ ಈತ ನನ್ ಮಗ
ಇವುನ್ಗೆ ಇದ್ಕೆ ಕಲುಸ್ಬೇಕು
ಇವುನು ತುಂಟುಡುಗ್ರು ಜೊತೆ ಸೇರ್ಕೊಂಡು
ಬಾಳ ಪೋಲ್ ಬಿದ್ದೋಗವುನೆ
ಇವುನ್ಗೆ ಕುದ್ರೆ ಕುಂಡ್ರುಸಿ ಕೋದಂಡ್ಕೆತ್ತಿ
ಬೇಕಾದಂತ ಶೀಕ್ಷಿ ಮಾಡಿ
ಒಂದಬ್ಬ ಒಂದ್ ಜಾತ್ರೆ ಅಂದ್ರೂ ಕೂಡ
ಇವುನ್ನ ಮನೆಗೆ ಕಳುಸ್ಕೊಡಬ್ಯಾಡಿ.
ಇವುನ್ಗೆ ಚಂದಾಗಿ ಇದ್ಕೆ ಪಾರಂಬ್ಯಾಡಿ
ವರುಸ್ಗಂಟ ಕೊಡೊ ಕೂಲಿ ಹಣ ಈಗ್ಲೆ ಕೊಡ್ತಿದ್ದೀನಿ
ಇದೋ ಇನಿಯನ್ಯನ ಪೂಜ್ಗೆ ಸಾಮಾನ್ ತಂದಿದ್ದೀನಿ
ಅದ್ನೂ ತಕ್ಕೊನ್ನಿ ಉಪಾದ್ರೆ
ಮಗನ್ನ ಇದ್ಯಾವಂತ ಮಾಡೋದು ಮಾತ್ರ ನಿಮ್ ಭಾರ" -

ತಂದೆ ಆಡಿದ ಮಾತ ಕೇಳಿ ಮೈದಾಳ ರಾಮ
ಬಾಳ ನೊಂದು ಸ್ವಾಕ ಪಡುತಾರೆ |

"ಅಯ್ಯೊ ಪರಮಾತ್ಮ
ನಮ್ ತಂದೆ ತಾಯ್ಗಳು ಮಕ್ಕಿಲ್ಲ ಅಂತ್ಹೇಳಿ
ದುಕ್ಕಗಳ ಮಾಡ್ತಿದ್ದರು.
ಆಗ ಸಾಕ್ಷಾದ್ ಪರಮೇಶ್ವುರ ಬಂದು
ಸಂತಾನ ಫಲುವನ್ನು ಕೊಟ್ರು
ಇಲ್ಲೀವರ್ಗಂಟ ನನ್ನ ಪ್ರೇಮುದಲ್ಲಿ ಸಾಕುದ್ರು
ಈಗ ಹಕ್ಕಿ ಸಾಕಿ ಬೆಕ್ಕುನ ಕೈಗೆ ಕೊಟ್ಟಂತೆ
ನನ್ನ ತಂದೆ ತಾಯ್ಗಳ ಕರ್ಕೊಂಡ್ಬಂದು

ಉಪಾದ್ರು ವಾಸುಕ್ಕೆ ನನ್ನ ಕೊಡ್ತಿದ್ದಾರೆ
ನಮ್ಮ ತಂದೆಯವರು
ಕುದ್ರೆ ಕುಂಡ್ರುಸಿ ಕೋದಂಡ್ಕೆತ್ತಿ ಅಂತ ಹೇಳ್ತಿದ್ದಾರೆ.
ನಾನು ಬರೆದ ಅಕ್ಷರದಲ್ಲಿ ಮಿಸ್ಟೀಕ್ ಬಂದ್ರೆ
ಓದೋದ್ರಲ್ಲಿ ತಪ್ ಬಂದ್ರೆ
ಉಪಾದ್ರು ನನ್ನ ಕುದ್ರೆ ಕುಂಡ್ರುಸ್ತಾರೆ
ಬೇಕಾದಂತ ಶೀಕ್ಷಿ ಮಾಡ್ತಾರೆ. ೬೬೦
ನನ್ನ ಹೊಡುದ್ರು ಅಂತ್ಹೇಳಿ ಮನುಗೋದ್ರೆ
ನನ್ನ ತಂದೆ ತಾಯ್ಗಳ ಚಂದಾಗೊಡ್ದು
ಇಸ್ಕೋಲ್ಮತುಕೆ ತಂದು ಬುಡ್ತರೆ
ಉಪಾದ್ರು ಹೊಡುದ್ರೆ ನಾನು ಯಾರ್ಗೆಳ್ಕೋಬೇಕು?
ನನ್ನ ತಿಟ್ಟೇಂಕಾರ್ ಮಾಡಿದಂತ ಸಾಕ್ಷಾದ್
ಪರುಮೇಶ್ವರುಂಗೆ ಅರ್ಪಿತ ಮಾಡ್ಬೇಕು"
ಅಂತ್ಹೇಳಿ ಇಸ್ಕೋಲ್ಮುತದಲ್ಲಿ ಮೈದಾಳುರಾಮ
ಪರಮೇಶ್ವರನ ಗ್ಯಾನ ಮಾಡುದ್ನು
ಅವನ ರುದಯದಲ್ಲಿ
ಸಾಕ್ಷಾದ್ ಪರುಮೇಶ್ವರ ನೇಪುಣ್ಸೆ ನಿಂತ್ಕೊಂಡ ೬೭೦
ಶಿವುನೆ ಬಂದ್ ನಿಂತ್ಕೋವಾಗ ಇದ್ಯ ಕಲಿಯದ್ ಸಂಪತ್ತೆ?
ಇತ್ತ ಕಡೆ ಉಪಾದ್ರು ಕೇಳುದ್ರು
"ಸ್ವೋಮಯ್ಯನವ್ರೆ ಪೂಜೆ ಸಾಮಾನ್ ತಂದಿದೀರ್ಯ?"
"ತಂದಿವ್ನಿ ಸ್ವಾಮಿ."
"ಕೊಡಿ ಇಲ್ಲಿ."
ಪೂಜಾ ಸಾಮಾನ್‌ಗಳ್ನೆಲ್ಲ ತಕ್ಕೊಂಡು -

ಸುಬುಸ್ವಾಮುವಾರ ಓನಮನ ಪೂಜೆ ಮಾಡಿ
ಮಠುದಲ್ಲಿ ರಾಮಯ್ನ ಕುಂಡುರಿಸಿ |

ಮಠದಲ್ಲಿ ರಾಮಯ್ನ ಕುಂಡುರುಸಿ ಉಪಾದ್ರು
ಹಲಗೆ ಬಳಪವ ಕೊಟ್ಟವುರೆ | ೬೬೦

ಹಲಗೆ ಬಳಪ ಹಿಡಿದು ನೆಲಕ್ಷರವ ಬರೆದ
ಅಮರು ಕೋಶದಲಿ ತಿಳಿದೆಂಬ |

ಅಮರು ಕೋಶದಲಿ ತಿಳಿದೆಂಬ ಕಾಲಕ್ಕೆ
ಬಲದಲ್ಲಿ ಶಿವನು ಬೆಸಗೊಂಡ |

ಇನಾಯ್ಕನ ಪೂಜೆ ಮಾಡುಸ್ತ್ರ
ಆ ಕಾಲ್ದಲ್ಲಿ ಬಳಪಿಲ್ಲ ಸಿಲೇಟಿಲ್ಲ ನೆಲಕ್ಷರ.
ನೆಲುದ ಮ್ಯಾಲೆ ಮಳ್ಳ ಹಂಡಿ
ಅಕ್ಷರ ಬರುಸೋರು. ತಾಳಕ್ಷರ !
ತಾಳಕ್ಷರ ಅಂದ್ರೆ ಓಂನ್ನಾಮ !
ಓಂ ಅನ್ತಕ್ಕಂತ ಅಕ್ಷರ ತಿದ್ದಾಕುದ್ರು ೬೯೦
ಆಗ ಮೈದಾಳರಾಮ ಆ ಅಕ್ಷರಗಳ್ನ ಬಗ್ಗಿ ನೋಡಿ
"ಗುರುಗಳೆ ಓಂನಾಮ ಅನ್ತಕ್ಕಂತ..
ಅಲ್ದೆ ಮೂವತ್ಮೂರಕ್ಷರ ನನ್ನ ನಡ್ಸುನಾಲ್ಗೆ ಒಳುಗವೆ
ಅದ್ರಿಂದ ಮುಂದಿನ ಪಾಠ ಹೇಳ್ಕೊಡಿ" ಅಂದ.
ಉಪಾದ್ರು ಮೈದಾಳ ರಾಮುನ ವಾಕ್ಯಾನ ಕೇಳಿ
"ಅರರೆ ಏನಯ್ಯ ಹುಡುಗ
ಇವುನಿಗಿಂತ ಮುಂಚಿತವಾಗಿ ಸೇರಿದ ಹುಡುಗ್ರು
ಓಂ ನಾಮ ಅನ್ತಕ್ಕಂತ ಅಕ್ಷರ ಬರೀರಿ ಅಂದ್ರೆ ಕೈ ಹೊಳ್ಳಕಿಲ್ಲ
ಬಾಯಲ್ಲೆಂಳಿ ಅಂದ್ರೆ ನಾಲ್ಗೆ ಹೊಳ್ಳಕ್ಕಿಲ್ಲ
ಈ ಮೈದಾಳ್ರಾಮ ಈವತ್ ಬಂದು ೬೯೦
ಓಂ ನಾಮ ಅನ್ನುವಂತ ಅಕ್ಷರ ಬರಿಯಕ್ಹೇಳುದ್ರೆ
ಇಂಥ ಮೂವತ್ಮೂರಕ್ಷರ ನನ್ ನಡ್ನಾಲ್ಗೆ ಒಳುಗವೆ
ಇದುಕ್ಕಿಂತ ಮುಂದಿನ ಪಾಠ
ಹೇಳ್ಕೊಡಿ ಅಂತನಲ್ಲ
ಈತ ಇದ್ಯದಲ್ಲಿ ಎಂತಾ ಚಾಲಾಕ್ಕನಾಗಿರಬೋದು"
ಅಂತ್ಹೇಳಿ ಉಪಾದ್ರುಗಳ್ಗೆ ಬಾಳ ಸಂತೋಷವಾಯ್ತು.
ಯಾವ ಪಾಠ ಹೇಳ್ಕೊಟ್ರೂ ಅದರ
ಮುಂದಿನ ಪಾಠ ಹೇಳಿ ಅಂತನೆ.
ಸ್ವೋಮಯ್ಯನವರು ಮಗನ ಚಾಲಾಕ್ಕಿತನ ಕಂಡು
ಸಂತೋಷ ಪಟ್ಕೊಂಡು -

ತಂದಿದ್ದ ಪರಸಾದ್ವ ಮಕ್ಕಳಿಗೆಲ್ಲ ಹಂಚಿ
ಗುರುಗಳಿಗೆ ಕೈಯ ಮುಗಿದಾನು | ೬೧೦

"ಸ್ವಾಮಿ - ನನ್ನ ಮಗನಿವನಲ್ಲ ನಿಮ್ಮ ಮಗ ಉಪಾದ್ರೆ
ನಾನಿನ್ನು ಹೋಗಿ ಬರುತೀನಿ |

ಓದು ನನಕಂದ ಬರಿಯೊ ನನಕಂದ
ನಾನಿನ್ನು ಹೋಗಿದ್ದು ಬರುತೀನಿ |

ಕಂದ ರಾಮಯ್ಯ ನನ್ನ ಮೈದಾಳು ರಾಮಯ್ಯ
ನಮ್ಮ - ವಂಸಕೆ ನೀನು ದೊರೆಕಾಣೊ" |

ಸ್ವೋಮಯ್ಯನವರ ಮಾತು ಕೇಳಿ ರಾಮಯ್ಯ
ತಂದೆಗೆ ಕರಗಳ ಮುಗುದಾನು |

ಓದೀದ ರಾಮಯ್ಯ ಏದ ಪುರಾಣಗಳ
ಆಗಮ್ಯ ಸಾಸ್ತ್ರ ಸೂತ್ರುಗಳ |

ಉಪಾದ್ರು ಎಲ್ಲಾನು ಕೇಳಿ
"ಯಾವ ಮಠುದಲ್ಲಿ ನಿನ್ನ ಹಾಕಿದ್ರಪ್ಪ?" ಅಂತ ಕೇಳುದ್ರು
ಹುಡುಗ ಎಲ್ಲೂ ಇಲ್ಲ ಅಂತ ತಲೆ ಅಲ್ಲಾಡುಸ್ತ
ಉಳಿದ ಹುಡುಗ್ರುನೆಲ್ಲ ನೋಡಿ ಉಪಾದ್ರು
"ಏನ್ರಪ್ಪ ಹುಡುಗ್ರೆ ಈವತ್ತು ಬಂದ ಈ
ಹುಗನ ಬುದ್ಧಿ ನಿಮುಗಿಲ್ಲವಲ್ಲ?
ನೀವು ಹೊಟ್ಟೆಗೆ ಏನ್ ತಿಂದಿರಿ?" ಅಂತ ಬೈದ್ರಂತೆ.
ಉಪಾದ್ರು ಮಾತ್ನಿಂದ ಈ ಹುಡುಗ್ರೆಲ್ಲ
ರಾಮಯ್ನ ಕಂಡು ಹೊಟ್ಟೆಕಿಚ್ ಪಡ್ತಾ ಅವ್ರೆ
'ಈ ಹುಡುಗ ಬಂದಿನ್ನೆ ಎಲ್ಲಾನು ಕಲೀತವ್ನೆ
ಎಲ್ಲಾನು ಹೇಳ್ತಾವ್ನೆ'
ಅಂತ್ಹೇಳಿ ಕೈಕೈ ಹೊಸೀಕೋತಾ ಇದ್ರಂತೆ
ಗುರುಗಳು
"ಅಹ್ಹಾ ರಾಮಯ್ಯ ಬಾಳ ಬುದ್ಧಿವಂತ
ಎಷ್ಟರಮಟ್ಗೆ ಕಲುತವ್ನೆ ನಮ್ಗೇ ಹೇಳ್ಕೊಡ್ತನಲ್ಲ"
ಅಂತ ಸಂತೋಸ ಪಡ್ತಿದ್ದಾರೆ
ಸ್ವೋಮಯ್ಯನವರು -

ಕಂದನ ಗುರುಗಳ ಕೈಯಿಗೆ ಒಪ್ಪೀಸಿ
ಮಂದಿರಕಾಗಿ ತೆರಳಿದರು |

ಮಂದಿರಕಾಗಿ ತೆರಳುವ ಕಾಲದೊಳಗೆ
ಬಂದುವಲ್ಲಿ ಬ್ರಮ್ಮನ ಲಿಖಿತಾವೆ |

ಸ್ವೋಮಯ್ಯನವರು ಮಗುನ್ನ ಇಸ್ಕೊಲ್ಮ್ಮತುಕ್ಕೆ
ಬುಟ್ಟುಟ್ಟು ಅರ್ಮನೆಗೆ ಬರ್ತಿದ್ದಾರೆ.
ಬರುವಾಗ ಸಾಕ್ಷಾದ್ ಪರುಮೇಶ್ವರ
ಕೈಲಾಸದಲ್ಲಿ ಕುಂತ್ಕೊಂಡು
ಮರ್ತುಲೋಕುವನ್ನು ಬಗ್ಗಿ ನೋಡುದ್ರು
"ನಾಗರಾಜ, ಸೋಮಯ್ಯರಾಯ್ನ ತೀರ್ಗಡೆಯಾಯ್ತು
ನೀನು ಮರ್ತುಲೋಕುಕ್ಕೋಗಿ ಮಧ್ಯೆ ಕಾಯ್ಕೊಂಡಿದ್ದು
ಆತುನ್ನೆ ಮೊಕುದ್ದರ್ನ್ನು ತೋರಿ ಬಂದ್ಬುಡು" ಅನ್ನೋದಾಗಿ
ನಾಗರಾಜಸ್ವಾಮಿಯ ಕಳುಸ್ತ್ರ
ನಾಗರಾಜಸ್ವಾಮಿ
ಮಧ್ಯದಾರಿಯೊಳುಗೆ ಕಾಯ್ಕೊಂಡ್ ಕೂತಿದ್ದಾನೆ.
ಸೋಮಯ್ಯ ಬರುವಂತ ಕಾಲುದೊಳುಗೆ -

. ಮಠವ ಬುಟ್ಟಳಿಗೆ ಸರ್ಪದಷ್ಟವಾಗ್ಬೇಕು
ಅದು ಒಂದು ಕಾರಣವಾಗಿತ್ತು |

ಕಾಳಿಂಗ ಸರ್ಪ ಕಣ್ಣೀಗೆ ಕಾಣನಿಲ್ಲ
ಹೆಡೆ ಮೇಲೆ ಕಾಲ ಮಡಗೀದ |

ಅಂಗಾಲುಂಗುಷ್ಟವ ಕಚ್ಚಿದ ನಾಗರಾಜ
ಕಚ್ಚಿತ್ತಾವಿಸವ ಕಕ್ಕೀದ |

ನಾಗರಾಜ
ಸ್ವೋಮಯ್ಯುಂಗೆ ಮೊಕುದರುಸ್ನ ಕೊಟ್ಟು ಕೈಲಾಸ್ಕೊಂಟೋದ.
ಸೋಮಯ್ಗೆ ಯಾವಾಗ ಸರ್ಪದಷ್ಟವಾಯ್ತೊ-

"ಕೆಟ್ಟೆ ಕೆಟ್ಟೆನು ಕಂದ ಕೆಟ್ಟೆನಲ್ಲೊ ರಾಮಯ್ಯ
ಇನ್ಯಾರ ಸೇರಿ ನೀ ಬಾಳಿಯಪ್ಪ |

ಯಾರ ಸೇರಿ ನೀನು ಬಾಳಿಯೋ ಕಂದಯ್ಯ"
ಅಂತ್ಹೇಳಿ ದುಕ್ಕ ಪಡುತಾನೆ |

ಗೋರಾದ ಕಣ್ಣೀರ ದಾರೀಲಿ ಸುರುಸ್ಕೊಂಡು
ಹಾ ಪರಮೇಶ್ವರ ಮುಂದೇನು ಗತಿ |

ನನ್ಗೆ ಸರ್ಪುದಷ್ಟವಾಯ್ತಲ್ಲ ಅನುತ್ಹೇಳಿ
ಅರಮನೆಗೆ ಬಂದ ಸ್ವೋಮಯ್ಯ |

ಸರ್ಪಕಚ್ಚಿತು ಕಾಣೆ ಬದುಕಲಾರೆ ದೇವಿ
ಮುಂದೆ ನಿನಗ್ಯಾರು ಗತಿಯೆಂದ |

ಗಂಡನಾಡಿದ ಮಾತ ಕೇಳಿ ಮಾದೇವಮ್ಮ
ಲಬಲಬನೆ ಬಾಯ ಬಡಿದಾಳು |

ಹಾಸ್ಗೆ ಹಾಸಿ ದಿಂಬಾಕಿ ಗಂಡುನ್ನ ಮನುಗ್ಸಿ
ಅವರಿವರ ಕೂಗಿ ಕರಿದಾಳು |

ಅವುರ್ಕರಿಯವ್ ಇವುರ್ ಕರಿಯವನ್ನ ತಾಕೆ
ಸೋಮಯ್ಗೆ ಬಾಳ ಕಷ್ಟವಾಯ್ತು |

"ಯಾರ್ಕರುದ್ಕಾಲ್ಕೂ ನನ್ನ ಪ್ರಾಣ ಉಳುಸ್ಕಾರ್ರು
ನನ್ನ - ಬ್ರಹ್ಮ ಲಿಖಿತವು ತುಂಬಿ ಬಂತು |

ಕಂದ ರಾಮಯ್ನ ಇಸ್ಕೋಲ್ ಬುಡುಸ್‌ಬ್ಯಾಡ
ಅವನಿಂದ ನೀನು ಸುಖಿಯಾಗು" |

ಹೆಂಡ್ತಿ ತೊಡೆಮ್ಯಾಲೆ ತನ್ತಲೆ ಇಟ್ಕೊಂಡು
ಮೂರು ವಾಕ್ಯಾನ ಹೇಳುವಾಗ |

ಸ್ವೋಮಯ್ಯ ಶಿವುನ ಪಾದ ಸೇರಿದರು
ಮಾದೇವಮ್ಮ ದುಕ್ಕ ಪಡುತಾರೆ |

ಹರನಿಗೆ ದುಕ್ಕ ಪಡುತಾಳೆ ಮಾದೇವಮ್ಮ
ಶಿವನೀಗೆ ಸೋಕ ಮಾಡುತಾಳೆ |

"ಮುತ್ತೈದೆ ರುಣವು ನನಗೆ ತೀರೋಯ್ತೆಂ"ದು
ಗೋಳೆಂದು ದುಕ್ಕ ಮಾಡುತಾಳೆ |

ಪತಿಯು ಸತ್ತಮ್ಯಾಲೆ ಗತಿಯು ಯಾರೆಂದು
ಬಂದು ಚಿಂತೇಯ ಮಾಡಿದಳು |

"ಪತಿಯೆ ನೀನು ಪ್ರಾಣಾತ್ಮವಾದ ಮೇಲೆ
ನಾನೆಲ್ಲಿ ಹೋಗಿ ಸೇರಬೇಕು |

ನಾನೆಲ್ಲಿ ಹೋಗಿ ಸೇರಾಲಿ ನನಸ್ವಾಮಿ
ಮಗನ ಯಾವ್ರೀತಿ ಕಾಪಾಡಲಿ |

ಮುತ್ತೈದೆ ಬಳೆಯು ಕತ್ತೀನ ತಾಳಿಯು
ಅರುಸಿನ ಕೂಕುಮ ಅಕ್ಷತೆಗಳು |

ಅಂಚೀನ ಸೀರ್ಯಾ ಉಡುವ ಹಾಂಗಿಲ್ಲ
ಹೂವ ಮುಡಿಯೋ ಭಾಗ್ಯವಿಲ್ಲ |

ಅರುಸಿನ ಕೂಕುಮ ಸುಬುಕಾರ್ಯಗಳಿಗೆ
ಹೋಗಿ ಬರುವ ಭಾಗ್ಯ ನನಗೆ ಇಲ್ಲ |

ಮುತ್ತೈದೆ ಭಾಗ್ಯವು ಮುಗಿದೀತು ಇಲ್ಲೀಗೆ
ಮುಂದೆ ನನಗಿನ್ನು ಗತಿಯಿಲ್ಲ" |

ಮಾದೇವಮ್ಮನ ದುಕ್ಕ ನೋಡಿ
ಊರ ಸಮಸ್ತೆಲ್ಲ ಬಂದು ಸೇರುದ್ರು
"ಅಯ್ಯೋ ಏನಾಶ್ಚರ್ಯ
ಈಗ ತಾನೆ ಮಗುನ್ನ ಇಸ್ಕೊಲ್ಮಠುಕ್ಕೆ ಹಾಕ್ಬುಟ್ಟಂದ್ರು
ಇಷ್ಟು ಜಲ್ದಿ ಅವ್ರೆ ಸಾವ್ಸರಲು ಕಾರಣಾರ್ತಿ ಏನು?"

ಹಾಗಂತ್ಹೇಳಿ ಊರ ಸಮಸ್ತೆಲ್ಲ ಸೇರ್ಕೊಂಡು
ಸತ್ತಿರುವಂತ ಸಬವನ್ನು ಮಡಿಕೊಂಡು ದುಕ್ಕ
ಮಾಡುದ್ರೆ ಸುಕುವಿಲ್ಲ
ಮೈದಾಳು ರಾಮುಂಗೆ ಸುದ್ದಿಕೊಡಿ" ಅಂತ್ಹೇಳಿ
ಇಸ್ಕೋಲ್ಮಠುಕೆ ಸುದ್ದಿ ಕೊಟ್ರು-

"ಮಠುಕೆ ಹೋಗುವಂತ ಜನಗಳು ಓಡಿಬಂದು
ರಾಮಯ್ಗೆ ಸುದ್ದಿ ಹೇಳಿದರು |

ಕಂದ ಕೇಳು ರಾಮಯ್ಯ ಮುಂದೆ ಹೇಳ್ವ ವಾರ್ತಿಯ
ನಿಮ್ಮ ತಂದೆ ಪ್ರಾಣಗಳ ಬುಟ್ಟವುರೆ |

ನಿಮ್ಮ ತಂದೆ ಪ್ರಾಣಗಳ ಬುಟ್ಟವುರಲ್ಲೊ ಕಂದಯ್ಯ
ಹೋಗಿ ನೋಡಪ್ಪ ಮೈದಾಳು ರಾಮ |

ಕಾಲವಾದ ಸೋಮಯ್ಯನವ್ರ ದಪನ್ ಮಾಡಾಕೆ
ನೀನು ಬೇಗ ಬರಬೇಕು ರಾಮಯ್ಯ" |

ಆಗ ಮೈದಾಳ ರಾಮ
"ಏನು ಆಶ್ಚರ್ಯ ಈಗ್ತಾನೆ ನಮ್ತೆಂದೇರು
ನನ್ನ ಇಸ್ಕೋಲ್ಮಠುಕ್ಕೆ ಹಾಕೋದ್ರು
ಇಷ್ಟೊಂದ್ ಜಲ್ದಿ ನಮ್ ತಂದೆಗೆ ಸಾವಾಯ್ತ?"

ಈ ಪರಿಯ ಮಾತ ಕೇಳಿದನು ರಾಮಯ್ಯ
ಓಗಿ ಉಪಾದರೀಗೆ ಸರಣಂದ |

"ಗುರುಗಳೇ ನಮ್ತಂದೆ ಸ್ವೋಮಯ್ಯನವರು
ಸರ್ಪದಷ್ಟವಾಗಿ ಶಿವನ ಪಾದ ಸೇರ್ಕೊಂಡ್ರಂತೆ
ಅವ್ರುನ್ನ ದಪನ್ ಮಾಡ್ಬೇಕು
ಉತ್ತರಗಿರಿಯಾದಿಗಳ ಮಾಡ್ಬೇಕು
ನನ್ಗೆ ಅಪ್ಪ್ಣೆ ಕೊಡಿ" ಅಂದ.
ಉಪಾದ್ರು ಎತೆಪಟ್ಟು "ಆಗ್ಲಪ್ಪ ಹೋಗಿದ್ದು ಬಾ" ಅಂದ್ರು -

ಓದೂ ಮಠವ ಬುಟ್ಟು ಮೈದಾಳರಾಮಯ್ಯ
ಅರಮನೆಗೆ ಸಾಗಿ ಬರುತಾನೆ |

ತಾಯಿ ಅತ್ತಿಂದ ಬಂದ ಮಗ ಇತ್ತಿಂದ ಬಂದ
ಸತ್ತ ಸ್ವೋಮಯ್ನ ನೋಡವುರೆ |

ತಾಯಿ ಕತ್ತ ರಾಮ ರಾಮಯ್ನ ಕತ್ತ ತಾಯಿ
ತಬುಕೊಂಡು ಸೋಕ ಮಾಡವುರೆ |

"ಪತಿಯಿಲ್ಪ ಮುಂಡ್ಗೆ ಇನ್ನು ಇತುವರು ಯಾರಪ್ಪ
ಸುತನೆ ನಿನ್ನ ನಂಬಿ ನಾ ಸಲುವಾಲೆ |

ಗಂಡ ಸತ್ತಮ್ಯಾಲೆ ನಾ ಮುಂಡುಗೂಳನೀಸ್ಕೊಂಡು
ಕಂದ - ರಾಮಯ್ಯ ನಿನ್ನಾ್ಹಗೆ ಸಲುವಾಲೊ |

"ಅಮ್ಮಯ್ಯ ಅಳಬ್ಯಾಡ ನೀ ಸುಮ್ಮನೆ ಇರುತಾಯಿ ೧೦೪೦
ನೀವತ್ರೆ ತಂದ್ಗೆ ಸೊರಗ ಮೊದಲಿಲ್ಲ|

ದುಕ್ಕ ಮಾಡ್ಬೇಡ ತಾಯಿ
ಆ ಭಗವಂತ ಏನ್ ಕಷ್ಟ ಕೊಡ್ತಾನೊ
ಆ ಕಷ್ಟನೆಲ್ಲ ಅನುಭವಿಸಂವ್" ಅಂತ್ಹೇಳಿ
ಸಮಾಧಾನ ಮಾಡ್ತಿದ್ರೆ
ಊರು ಜನುವೆಲ್ಲ ಸೇರ್ಕೊಂಡು ಕುರುಜುನ ಮಂಟ್ಪ ಕಟ್ಟುದ್ರು -

ಕುರುಜುನ ಮಂಟ್ಪ ನೋಡಿ ಕುಂತಿರುವ ಸಭೆಯ ನೋಡಿ
"ತಂದೆ - ಪಾದದ ಮೇಲೆ ಕಂದ ಬೀಳುತಾನೆ |

ತಂದೆ ಪಾದದ ಮ್ಯೇಲೆ ಕಂದ ಧೊಪ್ಪನೆ ಬಿದ್ದು
ತಂದೆ ಅನ್ನುವ ವಾಕ್ಯ ತಪ್ಪೀತು | ೧೦೫೦

ತಂದೆ ಅನ್ನುವ ವಾಕ್ಯ ನನಗೆ ತಪ್ಪಿತು ತಾಯಿ
ನಿನ್ಗೆ - ಮುತ್ತೈದೆ ಭಾಗ್ಯ ಮುಗಿದೀತು |

ನಾನು ಯಾರ ಸೇರಲಿ ಎಲ್ಲೋಗಿ ಬಾಳಲಮ್ಮ
ಯಾರಮ್ಮ ತಾಯಿ ನಮ್ಗೆ ಹಿತವರು |

ನಡಾಂತ್ರದಲ್ಲಿ ನನ್ನ ತಬ್ಬಲಿ ಮಾಡಿದರು
ದಿಕ್ಕು ದೆಸೆ ಇಲ್ಲದಂತಾದೆ ತಾಯಿ |

ಎಲ್ಲೋಗಿರ್ಬೇಕು ಯಾರು ಹಿತವರು ತಾಯಿ
ನಮ್ಮ ಕೈ ಬುಟ್ಟರಲ್ಲ ನಮ ತಂದೆ" |

ರಾಮಯ್ನ ದುಕ್ಕಾವ ಕಂಡ ಊರ ಜನವೆಲ್ಲ
ಸಮಾಧಾನ ತಂದ್ಕೊ ಅಂತ ಹೇಳುತಾರೆ | ೧೦೬೦

"ಕೇಳು ಕೇಳು ರಾಮಯ್ಯ ಕಾಲ ಮುಗಿದು ಬಂದೀತು
ಕಾಲ ಮುಗಿದ ಮ್ಯಾಲೆ ತಡಿಯೋಕೆ |

ಕಾಲ ಮುಗಿದ ಮ್ಯಾಲೆ ತಡಿಯೋಕೆ ನಮ್ಮಿಂದ
ಸಾಧ್ಯವಾದದ ಕಂದ ರಾಮಣ್ಣ ? |

ಹುಟ್ಟಿದೋರೆಲ್ಲ ಕಟ್ಟಕಡೆಗೊಂದು ದಿನ
ಬುಟ್ಟೋಗಬೇಕು ಭೂಮಿಯ |

ಅದಕಾಗಿ ಕಡು ಚಿಂತೆ ಮಾಡಬೇಡ ಕಂದಯ್ಯ
ನಿನ್ನ - ತಂದೆಗೆ ಸದ್ಗತಿ ಕಾಣಿಸಪ್ಪ |

ಮಗನಿಂದ್ಲೆ ತಂದೆಗೆ ಸದ್ಗತಿ ಕಾಣಪ್ಪ
ಏಳಪ್ಪ ಸದ್ಗತಿಯ ಕಾಣಿಸು | ೧೦೭೦

ಸದ್ಗತಿಯ ಕಾಣಿಸು" ಅನುತ್ಹೇಳಿ ಊರಜನ
ರಾಮಯ್ಗೆ ಬುದ್ಧಿಯ ಹೇಳುತಾರೆ |

ಬಾಯಿಬಾಯಿ ಬಡ್ಕೊಂಡು ಗೋಳಾಡುತಿರುವಂತ
ಮಾದೇವಮ್ನ ಜನರು ನೋಡಿದರು |

"ಮಾದೇವಮ್ಮ ಮೂರೊರುಸದ ಕಂದನ
ಮುಂದಿಟ್ಕೊಂಡು
ದುಕ್ಕಾ ಮಾಡ್ತಿದ್ದೀಯಲ್ಲ ತಾಯಿ
ಮಗುಂಗೆ ಸಮಾಧಾನ ಹೇಳ್ಬೇಕಾದವ್ಳು ನೀನು
ನೀನೇ ಹಿಂಗೆ ಧೈರ್ಯಗೆಟ್ರೆ ಹೆಂಗಮ್ಮ ತಾಯಿ
ಸತ್ತಿರುವ ಸಬವನ್ನು ಮುಂದ್ ಮಡಿಕೊಂಡು ದುಕ್ಕ ಮಾಡುದ್ರೆ
ಸತ್ತೋರು ಬದುಕ್ತರ? ೧೦೮೦
ಸಮಾಧಾನ ಮಾಡ್ಕೊ ತಾಯಿ.
ಮಗುಂಗೆ ಧೈರ್ಯ ಕೊಟ್ಕೊಂಡು ಇರ್ಬೇಕಾದ್ದು ನಿನ್ನ ಕರ್ತವ್ಯ"
ಹಾಗಂತ ಹೇಳಿ
ಅವುರ್ ಜಾತಿ ಕಿರಿಕಟ್ಲೆ ಏನ್ಮಾಡ್ಬೇಕೊ ಅದ್ನೆಲ್ಲ ಮಾಡುದ್ರು -

ಸಬವನ್ನು ತೊಳೆದು ಮಡಿಗಳನು ಉಡುಸಿ
ಲಿಂಗಯ್ನ ಅಂಗ್ಯೆಗೆ ಮಡಗಿದರು |

ಈಬುತ್ತಿ ಧರುಸಿ ರುದ್ರಾಕ್ಷಿಗಳ ತೊಡಿಸಿ
ಕೀಲು ಕೀಳುಗಳನೆಲ್ಲ ಅಲಂಕರಿಸಿದರು |

ಧೂಪ ದೀಪಗಳಿಂದ ಕಲ್ಪುರ ಸಾಮ್ರಾಣಿಯಿಂದ
ಸೋಮಯ್ನ ಸಬವ ಪೂಜೆ ಮಾಡಿದರು | ೧೦೯೦

ಬಂಡಿಯಲಿ ಸಿರುಗಂಧದ ಸೌದೆಗಳ ತರಿಸಿದರು
ಪತ್ರೆ ಪುಷ್ಪಗಳನೆಲ್ಲ ತರಿಸಿದರು |

ಸಬವನ್ನು ಕುರುಜನ ಮಂಟ್ಪದಲ್ಲಿ ಕುಂಡ್ರುಸಿ
ರುದ್ರಾವನದ ತ್ಯಾಟ್ಕೆ ತಂದ್ರು |

ಸಿರುಗಂಧದ ಹಸಳೆಯ ಮಾಡಿ
ಅದರ ಮ್ಯಾಲೆ ಸ್ವೋಮಯ್ಯನ ಸಬವನ್ನ ಮನುಗಿಸಿ

ಸ್ವೋಮಯ್ನ ಸಲೀರ್ನ ಅಗ್ಗುನಿಗೆ ದಾನ ಮಾಡ್ಬುಟ್ರು
ಅವರೆಲ್ರೂ ಗಂಗಾನದಿಗೆ ಬಂದು ಸ್ನಾನಮಡಿಗಳ ಮಾಡ್ಕೊಂಡು
ತಮ್ಮ ತಮ್ಮ ಮನೆಗಳಿಗೆ ಹೋಗಿದ್ದಾರೆ
ಮಾದೇವಮ್ಮಂಗೆ ಏನ್ ಬುದ್ಧಿ ಹೇಳ್ಬೇಕೊ ಅದ್ನ ಹೇಳಿ
ಅವುರವುರ ಮನೆಗೆ ಹೊರಟಿದ್ದಾರೆ.
ಮಾದೇವಮ್ಮ
"ಅಯ್ಯೋ ಶಿವುನೆ ನನುಗಿಂತೆ ಅವಸ್ತೆ ಬಂತಲ್ಲ" ಅಂತ್ಹೇಳಿ
ಮಗುಂಗೆ ಸ್ನಾನ ಮಡಿ ಮಾಡ್ಸಿ
ಮಗುನ್ನ ಇಸ್ಕೋಲ್ಮಕ್ಕೆ ಕಳುಸ್ಬುಟ್ರು
ಮಾದೇವಮ್ಮ ಅರ್ಮಲ್ಲಿ ಕೂತ್ಕೊಂಡು
ಬೇಕಾದಷ್ಟು ದುಕ್ಕ ಮಾಡ್ತಿದ್ದಾರೆ.

ಸಾಕ್ಷಾದ್ ಪರಮೇಶ್ವರ ಮಾದೇವಮ್ಮಂಗೆ
ಸಂತಾನಫಲ ಕೊಡುವಾಗ |

ಮಕ್ಕಳ ಫಲವ ಕೊಡುವಾಗೇನಂದಿದ್ದರು
ನಿನಗಂಡ ಕಾಲವಾದ ಗಳುಗೇಲಿ |

ಲಕ್ಕಿಸೊಪ್ಪಿನ ಗುಳ್ಳು ನಿಮುಗಾಗುತ್ತೆತಮ್ಮ
ಮುತ್ತುಗದಾಳೆ ಕದವಾಗುತ್ತೆತೆ |

ಮಾನ್ಯವರ ಮನೆಯಲ್ಲಿ ಬೇಡುವಂತ ಸ್ಥಿತಿ
ನಿಮಗುಂಟಾಗುತೀದೆ ಮಾದೇವಮ್ಮ |

ಹಾಗಂತ ಹೇಳಿದ್ದ ಮಾತಿನಂತೆ ಶಿವಶಿವಾ
ಲಕ್ಕಿಸೊಪ್ಪಿನ ಗುಳ್ಳು ಮನೆಯಾಯ್ತು |

ಲಕ್ಕಿಸೊಪ್ಪಿನ ಗುಳ್ಳು ಮುತ್ತುಗದಾಳೆಕದವು
ಗೋರು ಬಡಸ್ತಾನ ಬಂದೋಯ್ತು |

"ಅಯ್ಯೋ ಪರಮೇಶ್ವರ
ಇದೇನಾಶ್ಚರ್ಯ! ನನ್ನ ಪತಿ ಮರಣವಾದ್ಮೇಲೆ
ಇಂಥ ಅಘೋರುವಾದಂತ ಬಡಸ್ತಾನ ಬಂತಲ್ಲ" ಅಂತ್ಹೇಳಿ
ಮಾದೇವಮ್ಮ ಅನಂತವಾದ ದುಕ್ಕ ಮಾಡ್ತಿದ್ದಾಳೆ.
ಅವಳ ಮನೆಯೊಳಗೆ ಸ್ವೋಮಯ್ಯುಂಗೆ
ಉತ್ತರಿಕೆ ಮಾಡೋದ್ಕು ಮೂರ್ದಿಡಿ ದಿನ್ಸಿ ಇಲ್ಲ
ದುಡ್ಡು ಕಾಸಿಲ್ಲ.

ಮಾದೇವಮ್ಮ ದುಕ್ಕ ಮಾಡ್ತಿದ್ದಾಳೆ.
"ಏನಮ್ಮ ಮಾದೇವಮ್ಮ
ಏನು ಹಿಂಗೆ ಈ ಅವಸ್ತಿ ಉಂಟಾಯ್ತು" ಅಂತ ಕೇಳುದ್ರು
"ಇದು ಬ್ರಮ್ಮ ಲಿಕಿತ" ಅಂದ್ರು
ಆಗ ಊರ ಸಮಸ್ತ
"ಇಂಥ ದಕ್ಷತ್ನಿಂದ ಬಾಳ್ತಿದ್ದೋರ ಮನೆ ಈ ತರವಾಯ್ತಲ್ಲ
ಇನ್ನು ನಮ್ಮಂತೋರ್ ಬಾಳು ಹೆಂಗೆ ?" ಅಂತ್ಹೇಳಿ
ಮಾತಾಡ್ಕೋತಾ ಅವುರವುರ ಮನೆಗಳಿಂದ
ಒಂದ್ಸೇರು ಅಚ್ಚೇರು ಒಂದ್ಪಾವು ಅಂತೇಳಿ
ದವುಸಧಾನ್ಯಗಳನ್ನು ಚಂದಾ ಎತ್ತುದ್ರು
ಮನೆಗೊಂದೊಂದ್ ದುಡ್ನಂತೆ
ಒಂದಷ್ಟು ದುಡ್ಡುಕಾಸ್ನೂ ಚಂದಾ ಎತ್ತುದ್ರು
ಈ ಪರಕಾರವಾಗಿ ಎಲ್ಲಾ ಸಾಮಾನು
ಸರಂಜುಗಳ್ನ ಹೊಂದುಸ್ಕೊಂಡ್ರು.
ಹೊಂದುಸ್ಕೊಂಡು ಸ್ವೋಮಯ್ನ
ಉತ್ತರಿಕೆ ಮಾಡದ್ಕೆ ಪ್ರಯತ್ನ ಮಾಡ್ತಿದ್ದಾರೆ.
ಆಗ ಊರ ಸಬುಸ್ತರು ಸೇರಿ
ಉತ್ತರಿಕೆ ಮಾಡದ್ಕೆ ಮುಂದಾದ್ರು
ಈ ಬ್ರಾಮುಣ್ರು ಸೋಬಾವೇನು ಅಂದ್ರೆ
ಗಂಡ್ ಸತ್ತೋದ್ಮೇಲೆ
ಆಯಮ್ಮ ಮುಂಡೆಯಾದ್ಲು ಅನ್ನೋದಕ್ಕೆ
ಒಂದು ಕೆಲ್ಸ ಮಾಡ್ತರೆ
ಅದೇನಪ್ಪಾಂವ್ರೆ ಕೆಲ್ಸಿ ಕರ್ಕೊಂಡ್ ಬಂದು
ಮಂಡೆ ಚವುರ ಮಾಡುಸ್ತಾರೆ.
ಅವುಳಂಚುನ ಸೀರೆ ಉಡೋಂಗಿಲ್ಲ
ಮುತ್ತೈದೆ ಬಳೆ ತೊಡೋಂಗಿಲ್ಲ
ಅರುಸ್ನ ಕೂಕುಮವ ಹಣೇಗೆ ಹತ್ಸೊಂಗಿಲ್ಲ
ಪರುಪುರುಸ್ರ ಕಣ್ಣೆತ್ತಿ ನೋಡೋಂಗಿಲ್ಲ
ಇಮ್ಮ ಅವುರ್ ಜಾತಿ ಕಿರಾಕಟ್ಟೆ
ಕೆಲ್ಸಿ ಕರ್ಸಿ ಕುಂಡ್ರುಸ್ಕೊಂಡವುರೆ
ಆಗ್ತಕ್ಕಂತ ಕೆಲ್ಸ ಕಾರ್ಯ ಆಗ್ತಾ ಅದೆ.
ಮೈದಾಳ ರಾಮ ಇಸ್ಕೋಲ್ಮಕ್ಕುದಿಂದ ಇನ್ನೂ ಬಂದಿಲ್ಲ
ಇನ್ನೇನ್ ಬತ್ತನೆ ಅನ್ನೋದ್ರೊಳುಗೆ
ಮೈದಾಳರಾಮ ಬಂದ.
"ಮೈದಾಳ್ರಾಮ ಇವತ್ತು ನಿಮ್ತಂದೇರ್ಗೆ
ಹನ್ನೊಂದಿವುಸ್ವಲ್ವಯ್ಯ?
ನೀನು ಹೊತ್ತುಗ್ಮುಂಚೆ ಬರೂಕಿಲ್ವೆ?"
"ತಾವು ದೊಡ್ಡೋರಿರುವಾಗ ನಮ್ದೇನು ಸ್ವಾಮಿ?"

"ಮೈದಾಳ್ಯಾಮ ಈಗ ಕೆಲ್ಸೆಲ್ಲ ಆಗದೆ ನೀನು ಬರ್ಲಿ ಅಂತ
ಒಂದ್ ಕೆಲ್ಸ ಮಾತ್ರ ಉಳುಸ್ಕೊಂಡಿಮಿ"
"ಸ್ವಾಮಿ ಏನಂತೇದು?"
"ಮೈದಾಳ್ಯಾಮ ನಿಮ್ತಂದೇರು ಕಾಲವಾದುದ್ದುಂಟು ತಾನೆ?
ಈಗ ನಿಮ್ತಾಯೋರ್ ಮಂಡ್ಸುದ್ದ ಮಾಡ್ಬೇಕು
ನಿಮ್ತಾಯೋರು ಈವತ್ತಿಂದೀಚ್ಗೆ
ಐಚುನ್ ಸೀರೆ ಉಂಡೋಗಿಲ್ಲ
ಮುತ್ತೈದೆ ಬಳೆ ತೊಡೋಂಗಿಲ್ಲ
ಉರ್ಸಿನ ಕೂಕುಮ ಹಚ್ಕೊಳೋಂಗಿಲ್ಲ
ಪರಪುರುಸ್ರ ಕನ್ನೆತ್ತಿ ನೋಡೋಂಗಿಲ್ಲ
ದೇವುರ್ ಪೆಟ್ಟಯನ್ನು ಅವುರ್ ವಾಸುಕ್ಕೆ ಕೊಡ್ಬೇಕು
ನಿಮ್ತಾಯೋರ್ಗೆ ಒಂದೊತ್ತುನ್ ತಣ್ಣೀರ್ ಸ್ನಾನ
ಮಂಡೆ ಸುದ್ದ ಮಾಡೊಸ್ಕೊಂಡು
ಕೆಂಪ್ ಸೀರೆ ಸೆರಗ ತಲೆತುಂಬ ಮುಚ್ಕೊಂಡು
ಬಾಳ ನಿಯಾಮತದಿಂದ ಕಾಲ ಕಳೀಬೇಕು"
"ಸ್ವಾಮಿ ಅದೆಲ್ಲ ಇರ್ಲಿ
ಮಂಡೆ ಸುದ್ದಿ ಮಾಡ್ಬೇಕಾರೆ ಕಾರ್ಲ ಏನು?"
"ನಿಮ್ತಂದೆ ತೀರೋದ್ರಲ್ಲಯ್ಯಾ?
ಅದ್ಕೆ ಮಂಡೆ ಸುದ್ದಿ ಮಾಡ್ಬೇಕು!"
ಅದ್ಕೆ ಮೈದಾಳ್ಯಮ ಹೇಳ್ತಾನೆ -

"ಗಂಡ ಸತ್ರೆ ಏನುಸ್ವಾಮಿ ಗಂಡು ಮಗ ನಾನಿರುವಾಗ
ಮಂಡೆ ಸುದ್ದೀಯ ಮಾಡಬವುದ ? |

ಗಂಡ ಸತ್ರೇನು ಸ್ವಾಮಿ ?
ಗಂಡ್ಮಗ ನಾನಿರುವಾಗ
ಯಾಕ್ ನಮ್ತಾಯ್ ಮಂಡೆ ಸುದ್ದಿ ಮಾಡ್ಬೇಕು?"
"ಮೈದಾಳ್ಯಾಮ ವಿಷ್ಯಾ ಹಾಗಲ್ಲ ಕಣಯ್ಯ
ಗಂಡುಂಗು ಗಂಡ್ಮಗುಂಗು ಸಮವೇನಯ್ಯ?
ಗಂಡ್ಮಗ ಇದ್ರೆ ಗಂಡನ ಸಮ್ಮಂದವೇನಯ್ಯ?"
"ರೀ ಸ್ವಾಮಿ, ನಮ್ತಾಯಿ ಮಂಡೆ ಸುದ್ದಿ ಮಾಡ್ಬೇಕಾದ್ರೆ
ಒಂದು ಕಾರ್ಲ ಬೇಕು. ಅದೇನಂದ್ರೆ
ಯಾವ್ ಭಾರತ ರಾಮಣ್ಣ ಜೈಮುಣಿ
ಆರ್ ಸಾಸ್ತ್ರ ಹದಿನೆಂಟು ಪುರಾಣ ನಾಕ್ವೇದಗಳಲ್ಲಿ
ಯಾವ್ದೇದ್ದಲ್ಲಿ ಅದೆ ಅಂತ ತೋರುಸ್ಬುಟ್ಟು
ಆಮೇಲೆ ಮಂಡೆ ಸುದ್ದಿ ಮಾಡಿ"
"ಮೈದಾಳ್ಯಾಮ ಇದು ಭಾರತ್ರಾಮಣ್ಯವಲ್ಲ
ಇದು ನಮ್ಮ ಜಾತಿ ಕಿರಾಕಟ್ಲೆ
ಆ ಕಿರಾಕಟ್ಲೆ ಪರಕಾರ ನಾವು ಮಾಡ್ಬೇಕೊ ಬ್ಯಾಡ್ವೊ?"
"ಸ್ವಾಮಿ ಯಜುಮಾನ್ರೆ
ನಿಮ್ಮ ಲೆಕ್ಕಾಚಾರವಿದ್ರೆ ತೋರ್ಸಿ - ಆಮ್ಮೇಲೆ ಮಾಡಿ ೩೦೦೦
ನಿಮ್ಮ ಜಾತಿ ಕಿರಾಕಟ್ಲೆಯ ನಾನೊಪ್ಪಾಕಿಲ್ಲ!"
"ಬ್ಯಾಡಪ್ಪ ರಾಮ ಹಂಗನ್ನ ಬಾರ್ದು
ನಮ್ಮ ಜಾತಿ ಕರ್ಮ ಕಳೀಲಪ್ಪ
ನಿಮ್ತಾಯೋರ ಕಳುಸ್ಕೊಡು ರಾಮಯ್ಯ"
"ಇಲ್ಲ ನಾನು ಕಳುಸೋದಿಲ್ಲ!"
"ಮೈದಾಳ್ಯಾಮ -

ನಮ ಮಾತ ನೀನು ಹಿಂದುಕ್ಕಾಕುದ ಮ್ಯಾಲೆ
ನಿನ್ ಕಾರ್ಯ ನೀನೇ ಮಾಡ್ಕೋಬೇಕು |

ನೀನೂ ನಿನ್ನ ತಾಯೂ ಇಲ್ಲಿಂದ ಮುಂದಕ್ಕೆ
ನಮ್ಮ ಪಂತೀಗೆ ಬರುವಂತಿಲ್ಲ |

ನಮ್ಮ ಪಂತೀಗೆ ನೀವು ಬರೋ ಹಂಗಿಲ್ಲ
ನಿಮ್ಗೆ - ಬೆಂಕಿ ಬಿಸ್ನೀರ ಕೊಡಕಿಲ್ಲ |

ನಮ್ಮಿಂದ ನಿಮುಗೆ ಬೆಂಕಿ ಬಿಸ್ನೀರಿಲ್ಲ
ಹದ್ಬಸ್ತಲ್ ನಿಮ್ಮ ಮಡುಗ್ತೀವಿ" |

"ಸ್ವಾಮಿ ತಾವು ದೊಡ್ಡೋರು
ನೀವೇನ್ಬೇಕಾದ್ರೂ ಮಾಡ್ಕೋಬೋದು !"
"ನೋಡುದ್ರೇನಯ್ಯಾ
ಈ ಚೋಟುದ್ದ ಹುಡ್ಗ
ನಮ್ಗೆ ತಿರಾಕೊಂಡು ಜವಾಬೇಳಿದ್ದಲ್ದೆ
ನಮ್ಮ ಜಾತಿ ಕಿರಾಕಟ್ಲೆ ತಪ್ಪುಸುದ್ನಲ್ಲ
ಇನ್ನು ಇಲ್ಲಿ ನಮಗೇನ್ ಕೆಲ್ಸ
ನಡಾರಿ ಹೋಗುಮಾ" ಅಂತ್ಹೇಳಿ ಹೊಂಟೋದ್ರು
ಆಗ ಮೈದಾಳ್ಯಾಮ ತಾಯಿ ಜೊತೇಲಿ ನಿಂತು
ಉತ್ತುರುಕಿರೆಗಳನ್ನು ಮಾಡಿ ಪಿಂಡ ಹಾಕಿ
ಅವುನ್ನ ಹಿಂಡ್ಗೂಡುಸ್ತ್ರು.
ಸ್ವೋಮಯ್ಯ ಶಿವುನ ಪಾದ ಸೇರುದ್ರು.

೫. ನಿನ್ಗೆ - ಅಕ್ಕಯ್ಯ ಗೌರಮ್ಮ, ಭಾವಾಜಿ ಮಲ್ಲಯ್ಯ

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

ಸ್ವೋಮಯ್ನ ಉತ್ಸುಕರೆ ಮಾಡಿ ಮುಗ್ಸಿ ಮಾದೇವಮ್ಮ
ರಾಮಯ್ನ ಇಸ್ಕೋಲ್ಮಠುಕೆ ಕುಳುಗವ್ರೆ |

ಓದುತಾನೆ ರಾಮಯ್ಯ ಎದಪುರಾಣನೆಲ್ಲ
ಅವ್ನು - ಜಾಣರಿಗೆ ಜಾಣ ಕಡುಜಾಣ |

ತಿನ್ನದಕೆ ಅನ್ನುವಿಲ್ಲ ಉಡೂದ್ಕೆ ಬಟ್ಟೆಯಿಲ್ಲ ೩೦೩೦
ಇರೂದ್ಕೆ ಅವ್ರುರ್ಗೆ ಮನೆಯಿಲ್ಲ |

ಬ್ರಾಮುಣುರ್ಗೆ ಬಡತಾನೆ ಬಂದುದ್ದೇ ಆದರೆ
ಕಂಬ್ಳ ಗೇಯಾಕೆ ಸಿದ್ದುರಿಲ್ಲ |

ಕಂಬ್ಳ ಗೇಯಕೆ ಸಾಧ್ಯವೆ? ಕೂಲಿ ಮಾಡದ್ಕೆ ಸಾಧ್ಯವೆ?
ಒಂದ್ - ತಾಮುರ್ದ ಚೊಂಬ ಕೈಲಿಡ್ದು |

ತಾಮುರ್ದ ಚೊಂಬ ಕೈಲಿಡಿದು ಮಾದೇವಮ್ಮ
ಮನೆ ಮನೇಲಿ ವಾರದಾನ್ಯವ ತಂದು |

ಮೈದಾಳ ರಾಮಯ್ನ ಜೊತೆಯಾಗಿ ಮಾದೇವಮ್ಮ
ಕಾಲರಣೆ ಮಾಡಿಕೊಂಡು ಬರುತವುಳೆ |

ಇಸ್ಕೋಲ್ಮಠುದಲ್ಲಿ ಮೈದಾಳು ರಾಮಯ್ಯ ೩೦೪೦
ಇದ್ಯಾದಲ್ಲಿ ಮಾಪಾಲಾಕ್ಷನಾದ |

ಇದ್ಯದಲ್ಲಿ ಪಾಲಾಕ್ಷನಾದಾಗ ಉಪಾದ್ಯುಗೆ
ಚನ್ನಾಗಿ ಓದುವಂತ ರಾಮಯ್ಯನ |

ರಾಮಯ್ಯನ ಕಂಡ್ರೆ ಬಾಳ ಪ್ರೇಮುವಾಗಿ
ಉಳ್ಕೆ ಮಕ್ಕಳಿಗೆ ಪಾಠಗಳ |

ಉಳ್ಕೆ ಮಕ್ಕಳಿಗೆ ರಾಮಯ್ಯನಿಂದ
ಪಾಠಗಳ ಓದುಸೋಕೆ ಹೇಳುತಿದ್ರು |

ಹಿಂಗೆ ಪಾಠ ಹೇಳುಸ್ತಿರುವಾಗ
ಪಾಠ ಓದಕ್ಕೆ ಬರುದಿದ್ದೋರ್ಗೆ ಲೆಕ್ಕ ಮಾಡಕೆ ಬರ್ದಿದ್ದೋರಿಗೆ
ಮೈದಾಳ ರಾಮಯ್ಯನ ಕೈಯಿಂದ ೩೦೫೦
ಕೆನ್ನೆಗೆ ಹೊಡುಸ್ತಿದ್ರು
ಕುದ್ರೆ ಕುಂಡ್ರುಸು ಅನ್ತಿದ್ದರು.
ಮೈದಾಳ ರಾಮ ಇದ್ಯಾದಲ್ಲಿ ಪಾಲಾಕ್ಷನಾದಾಗ
ಮಿಕ್ಕಾದ ಹುಡುಗ್ರುಗೆ ಬಾಳ ಹೊಟ್ಟೆಕಿಚ್ಚಾಯ್ತು
"ಈ ಪಾಪಿ ಹುಡ್ಗ ಬರ್ಲಾಗಿ
ಆತುನಿಂದ ನಮ್ಗೆ ಏಟು ತಪ್ಸಿಲ್ಲ" ಅಂತ್ಹೇಳಿ
ಮೈದಾಳು ರಾಮುನ ಮ್ಯಾಲೆ ತುಂಬ ಕ್ರೋದುವಾದ್ರು -

ಹತ್ತೆಂಟು ಹುಡುಗರು ಅರ್ಥದಿಂದ ಓದಲು
ಮತ್ತೊಬ್ಬ ಬಾಲೇನ ನುಡಿದಾನು |

"ಅಮಾಸ್ಯೆ ಬಂದೀತು ಸಮಜಿನುವೆ ತುಂಬೀತು ೩೦೬೦
ಮನ್ಗೆ - ನಮ್ಮಕ್ಕ ಭಾವ ಬರನಿಲ್ಲ |

ನಮ್ಮಕ್ಕ ಭಾವ ಇನ್ನು ಬರನಿಲ್ಲ ಹುಡುಗಾರೆ
ನಮ್ಮಕ್ಕ ಭಾವರ ಹೋಗಿ ಕರತರಬೇಕು |

ಅಕ್ಕಭಾವರ ನಾವು ಕರತರಬೇಕು ಈಗ
ದೀಪುವಳಿ ಹಬ್ಬ ಮಾಡಬೇಕು |"

ಹಂಗಂತ ಹುಡುಗ್ರು ಮಾತಾಡ್ಕೊಂಡು
ಇಸ್ಕೂಲ್ಮಠ ಬುಟ್ಟಾಗ
ಹುಡುಗ್ರೆ ಒಕ್ಕಡೆ ರಾಮನೆ ಒಕ್ಕಡೆ
ಒಂದ್ಹುಡುಗ ಹೇಳ್ದ
"ಅಮಾಸೆ ಬಂತು ಸಮಜಿನ ತುಂಬ್ತು ೩೦೭೦
ಮನೆಗೆ ನಮ್ಮಕ್ಕ ಭಾವ ಬರ್ನಿಲ್ಲ
ನಾವು ರಜ ತಕ್ಕೊಂಡು ಹೋಗಿ ಕರ್ಕೊಂಡ್ಬರ್ಬೇಕು
ಅಕ್ಕಭಾವುನ ಕರ್ಕೊಂಡ್ಬಂದು
ದೀಪುವಳಿ ಹಬ್ಬ ಮಾಡ್ಬೇಕು" ಅಂತಂದ.
ಮಾರ್ನೆಗೆ ಹುಡುಗ್ರೆಲ್ಲ ಬಂದ್ರು
ಇಸ್ಕೋಲ್ಮಠುದ ಬೆಲ್ಲಾಯ್ತು
ಒಂದ್ ಹುಡುಗ್ರೊಬ್ರೂ ಪಾಠುಕ್ಕೆ ಕುಂತ್ಕೊಳ್ಳಿಲ್ಲ
ಎಲ್ರೂ ಉಪಾದ್ಯುಗೆ ನಮುಸ್ಕಾರ ಮಾಡುದ್ರು
"ಏನಪ್ಪ ಹುಡುಗ್ರೆ?"

ಆಗ ಒಂದ್ಹುಡುಗ ಹೇಳ್ತನೆ
"ಗುರುಗಳೆ -

ಅಮಾಸೆ ಬಂದಿತು ಸಮಜಿನ ತುಂಬಿತು
ನಮಕ್ಕ ಭಾವ ಇನ್ನೂ ಬರನಿಲ್ಲ |

ನಮ್ಮಕ್ಕ ಭಾವ ಇನ್ನೂ ಬರನಿಲ್ಲ ಉಪಾದ್ರೆ
ಅಕ್ಕಭಾವನ ಕರತರುವುದಕೆ |

ಅಕ್ಕಭಾವನ ಕರತಂದು ದೀಪುವಳ್ಳೆಯ
ಅರ್ತದಲ್ಲಿ ಹಬ್ಬ ಮಾಡಬೇಕು |

ಅರ್ತದಲಿ ಹಬ್ಬ ಮಾಡಬೇಕು ಗುರುಗಳೆ
ನಮ್ಗೆ - ಹತ್ತತ್ತು ದಿನ ರಜವ ಕೊಡಬೇಕು |

"ಏನ್ರಪ್ಪ ಎಲ್ರೂ ದೀಪುವಳ್ಗೆ ಮಾಡ್ತಿರೇನ್ರಪ್ಪ?"
"ಹೌದು ಸ್ವಾಮಿ."
ಆಗ ಉಪಾದ್ರು ಹುಡುಗ್ರುಗೆಲ್ಲ
ಹತ್ತತ್ತು ದಿನ ರಜ ಬರೀತಿದ್ದಾರೆ.
ರಜ ಬರುಸ್ಕೊಂಡಂತ ಹುಡುಗ್ರು
ಒಬ್ರೂ ಹೊರ್ಗಡ್ಗೆ ಬಂದಿಲ್ಲ
ಎಲ್ಲ ಒಂದ್ತಾವ್ ಗುಂಪ್ಕಟ್ಕೊಂಡು ಸೇರುದ್ರು
ಹುಡುಗ್ರುಗೆ ಇಲ್ಲೀವರ್ಗೂ
ಮೈದಾಳ್ಯಾಮನದಲ್ಲಿ ಒಂದ್ತಪ್ಪೂ ಸಿಕ್ಕಿರ್ನಿಲ್ಲ
ಅದ್ಕೆ ಒಬ್ಬ ಹುಡುಗ
"ಅಲ್ಲ ಕಣ್ರೊ ನಾವೆಲ್ಲ
ನಮ್ಮಕ್ಕ ಭಾವುನ ಕರಿಯಾಕೋಯ್ತಾ ಇದ್ದೀವಿ
ನಮ್ಗೆ ರಜ ಬರ್ದಿರೋದು ಸರಿ
ಅದ್ರೆ ಮೈದಾಳ್ಯಾಮ ಹಬ್ಬ
ಮಾಡ್ಸೇಕುಂತ ರಜ ಬರುಸ್ಸವುದ?
ಈಗ ಚಂದಾಗಿ ಅವುನ ಮಾನ ಕಳೀಬೇಕ್ಕನ್ರೋ!"
ಅಂತ ಅವುರೆಲ್ಲ ಮಾತಾಡ್ಕೊಂಡ್ರು.
ಮೈದಾಳರಾಮ ಹೋಗಿ ಉಪಾದ್ರುಗೆ
ನಮುಸ್ಕಾರ ಮಾಡ್ದ.
"ಏನಪ್ಪ ರಾಮಣ್ಣ?" ಅಂತ ಕೇಳುದ್ರು ಉಪಾದ್ರು
"ಗುರುಗಳೆ -

ನನಗುಂಟು ಅಕ್ಕಯ್ಯ ನನಗುಂಟು ಭಾವಯ್ಯ
ನನಗುಂಟು ಸರ್ವ ಬಳಗಾವು |

ನನಗುಂಟು ಸರ್ವಬಳಗಾವು ಉಪಾದ್ರೆ
ನಮ್ಮಕ್ಕ ಭಾವನ ಹೋಗಿ ಕರತರುವೆ |

ನಮ್ಮಕ್ಕ ಭಾವನ ನಾನು ಹೋಗಿ ಕರತಂದು
ಅರ್ಥದಲ್ಲಿ ಹಬ್ಬ ಮಾಡಬೇಕು |

ಉಪಾದ್ರೆ, ನನಗೂ ಅಕ್ಕ ಭಾವಂದಿರವ್ರುರೆ
ನಾನು ಅಕ್ಕಭಾವರ ಕರ್ಕೊಂಡ್ಬಂದು
ಅರ್ತದಲಿ ಹಬ್ಬ ಮಾಡಬೇಕು
ನನ್ಗೂ ಹತ್ತು ದಿನ ರಜ ಕೊಡ್ಬೇಕು" ಅಂತ
ಮೈದಾಳ ರಾಮಯ್ಯ ರಜ ಕೇಳುದ್ನು
ಯಾವಾಗ ರಜ ಕೇಳುದ್ನೊ
ಹುಡುಗ್ರೆಲ್ಲ ಒಟ್ಟಾಗಿ ತಿರೀಕೊಂಡ್ರು -

"ತಬ್ಬಲಿಯಾ ತರಳೆ ಹುಚ್ಚುಮುಂಡೇ ಮಗನೆ
ನಿನ್ಗೆ - ಅಕ್ಕಭಾವ ಎಂಬ ಸುದ್ದಿ ನಿನಗಿಲ್ಲ |

ಅಕ್ಕಯ್ಯ ನಿನಗಿಲ್ಲ ಭಾವಾಜಿ ನಿನಗಿಲ್ಲ
ಮಿಕ್ಕ ಬಾಂಧವರು ನಿನಗಿಲ್ಲ |

ಅಕ್ಕ ಭಾವುಳ್ಳೋರು ನಾವು ಕರೆಯಾಕೋದಾರೆ
ದಿಕ್ಕಿಲ್ಲದ ನೀನೆಲ್ಲಿಗೋಗುತೀಯೋ |

ದಿಕ್ಕಿಲ್ಲ ನೀನು ಎಲ್ಲಿಗೋಗುತೀಯೊ ರಾಮಯ್ಯ
ಯಾರ ಕರಿಯಾಕೆ ಹೋಗುತೀಯೋ |

ಅಕ್ಕಭಾವ ಇಲ್ದ ದಿಕ್ಕಿಲ್ಲದ ಪರದೇಶಿ
ಯಾವ - ಅಕ್ಕನ ಮನೇಲಿ ನೀನು ತಂಗೀಯೋ |

ತಂಗೆ ಉಳ್ಳೋರು ನಾವು ತಂಗುವೆವು ತಳುಗುವೆವು
ಇಂದೋಗಿ ನಾಳೆ ಬರುತೀವಿ |

ತಂಗೇರು ಇಲ್ಲಾದೆ ತಬ್ಬಾಲಿ ನೀನಲ್ಲೊ
ಯಾವ - ತಂಗಿ ಮನೇಲಿ ನೀನು ತಂಗೀಯೊ |

ಮೈದಾಳ ರಾಮ
ನಾವು ಅಕ್ಕನ ಮನೆಗೋಯ್ತೀವಿ ತಂಗಿ ಮೆಗೋಯ್ತಿವಿ
ಇವತ್ತಿದ್ದು ನಾಳೆ ಕರ್ಕೊಂಬಂದು ಹಬ್ಬ ಮಾಡ್ತಿವಿ
ದಿಕ್ಕಿಲ್ಲದ ಮೈದಾಳ್ ರಾಮ ನೀನೆಲ್ಲಿಗೋದಾಯ್ ? -

ಲೋ ತಬ್ಬಲಿ ಮಗನೆ ನಿನಗೆ ಹಬ್ಬ ಅಂದ್ರೇನು ?
ನಿನಗಕ್ಕ ಭಾವಾನು ಮೊದಲಿಲ್ಲ |

ನಿನಗ್ಯಾಕೊ ರಜ ? ನಿನುಗ್ಯಾರಿದ್ದರು ?
ನಿನ್ ತಾಯಿ ಹೆಣ್ ಹೆತ್ತಿದ್ದಳ ?
ಹೆತ್ತಿದ್ರೆ ಯಾರುಗ್ ಮದುವೆ ಮಾಡಿದ್ದಳು ?
ಯಾವೂರುಗ್ ಕೊಟ್ಟಿದ್ದರು ?
ನಿನಗ್ಯಾಕ್ಲ ತಬ್ಬಲಿ ಮಗ್ನೆ ರಜ ?" ಅಂತರೆ ಹುಡುಗ್ರು -

ಹುಡುಗರಾಡಿದ ಮಾತ ಕೇಳಿದನು ರಾಮಯ್ಯ
ಗೋಳೆಂದು ದುಕ್ಕ ಮಾಡುತಾನೆ |

ಹುಡುಗ್ರು ಮಾತ ಕೇಳಿ ಮೈದಾಳ್ ರಾಮ
ಅನೇಕವಾದಂತ ದುಕ್ಕ ಮಾಡ್ತ ನಿಂತ
ಹುಡುಗ್ರೆಲ್ಲ ಕುಚೇಷ್ಟೆ ಮಾಡಿ ಹೋದ್ರಲ್ಲ
ಆಗ ಉಪಾದ್ಯುಗೆ ಕನಿಕರ ಉಂಟಾಯ್ತು
"ಮೈದಾಳ್ಯಾಮ ಬಾ ಇಲ್ಲಿ
ದುಕ್ಕ ಮಾಡ್ತಕ್ಕಂತದ್ದು ಹಿತವಾದುದಲ್ಲ
ನಿಮ್ಮಕ್ಕುನ್ಹೆಸ್ರು ನಿಮ್ ಭಾವನೆಸ್ಹೇಳುದ್ರೆ
ನಿನ್ಗೆ ರಜ ಕೊಡ್ತೀನಿ"
ಮೈದಾಳ್ಯಾಮ ಹೇಳ್ತನೆ : -

"ಅಕ್ಷರದ ರೂಡಿಯಲಿ ಅಕ್ಕಭಾವರ ಮರೆತೆ ಸ್ವಾಮಿ
ಹೆತ್ತ ತಾಯಿಯ ಕೇಳಿ ಬರುತಿವ್ನಿ |

ಇದೂವರ್ಗೆ ಇದ್ಕರ ಮೇಲೆ ಅಪೇಕ್ಷೆ ಪಟ್ಟಿದ್ನೆ ಹೊರ್ತು
ಅಕ್ಕಭಾವರ ಹೆಸ್ರು ಕೇಳ್ನಿಲ್ಲ
ಅರಮನೇಲಿ ನನ್ ತಾಯವ್ವೆ
ನನ್ ತಾಯ್ ಕೇಳ್ಬಂದು ಹೇಳ್ತೀನಿ ಸ್ವಾಮಿ"
ಉಪಾದ್ಯು ಕೇಳಿ ಅಪ್ಪ್ಣೆ ತಕ್ಕೊಂಡು ಮೈದಾಳ್ಯಾಮ
ರಾಜಬೀದೀಲಿ ದುಕ್ಕ ಮಾಡ್ತಾ ಬತ್ತಿದ್ದಾನೆ.
ಅವರ ತಾಯಿ ಮಾದೇವಮ್ಮ
ಅಡ್ಗೆ ಮಾಡಿ ಮನೇಲಿಟ್ಟುಟ್ಟು
ಮಗನು ಬರುವಂತ ದಾರ್ಯ ನೋಡುವಂತ
ಪದ್ಧತಿ ಮಾದೇವಮ್ಮುನ್ದು -

ಓದಿ ಬರುವ ಮಗನ ಬೀದಿಯಲಿ ಕಂಡಾಳು
ಯಾಕೊ ರಾಮಯ್ಯ ನೆಗನಿಲ್ಲ |

ತಂದೆ ಇಲ್ಲದ ಮಗನ ಕೊಂದ ಪಾಪಿ ಯಾರೆಂದು
ಬಂದು ತಕ್ಕೈಸಿ ಬಿಗಿದಪ್ಪಿ |

ಬಂದು ತಕ್ಕೈಸಿ ಬಿಗಿದಪ್ಪಿ ಮಾದೇವಮ್ಮ
ತೊಡೆ ಮ್ಯಾಲೆ ಕುಂಡುರಿಸಿಕೊಂಡವ್ಳೆ |

ಕಂದನ ಕಣ್ಣೀರ ದಣಿಸಿದಳು ಮಾದೇವಮ್ಮ
ಮುದ್ದು ಮಾತಾಡಿ ಲಲ್ಲೈಸಿದಳು |

"ಮಗನೆ
ತಂದೆ ಇಲ್ಲದಂತ ವಗನನ್ನು
ಯಾವಾಕೆ ಮಕ್ಕ ಜರುದ್ರು ಯಾ
ಆ ಮಕ್ಕ ಹೊಡುದ್ರು ? -

ಯಾರು ಹೊಡೆದರೊ ಮಗನೆ ಯಾರು ಜರುದರೊ ಮಗನೆ
ಲೋಲ ರಾಮಯ್ಯ ಉಸುರಪ್ಪ |

ಮಗನೆ ರಾಮಯ್ಯ
ಹುಡುಗ್ರು ಯಾರಾದ್ರೂ ಈಂಕಾರವಾಗಿ ಮಾತಾಡುದ್ರ ?
ಹೆತ್ತ ತಾಯಾದ ನನ್‌ಕೈಲಿ ಹೇಳು" ಅಂದ್ಲು

"ಅಮ್ಮ ನನ್ನ ಯಾರೂ ಹೊಡೀನಿಲ್ಲ ಯಾರೂ ಬೊಯ್ಯನಿಲ್ಲ
ನನಗೆ ಬಂದೀತು ಇದಿವಾಸ |

ನನಗೆ ಬಂದೀತು ಇದಿವಾಸ ತಾಯಮ್ಮ
ಮುಂದೆ ನಿನಗ್ಯಾರು ಗತಿಯಮ್ಮ" |

"ಯಾರೇನಂದರೂ ಏನಾಯಿತೋ ಕಂದ
ಲೋಲ ರಾಮಯ್ಯ ಉಸುರಪ್ಪ" |

"ಅಮ್ಮ - ಅಕ್ಕನಿಲ್ಲದೋನಂತ ಆಡವ್ರೆ ಹುಡುಗಾರು
ಭಾವನಿಲ್ಲದೋನಂತ ಬೊಯ್ದವ್ರುರೆ |

ನನ್ಗೆ - ಭಾವ ಇಲ್ಲುವೇನಮ್ಮ ಅಕ್ಕ ಇಲ್ಲುವೇನಮ್ಮ
ನನ್ಗೆ - ಬಂಧುಬಳಗಾವು ಇಲ್ಲುವೇನಮ್ಮ? |

ಅಕ್ಕಾನಿಲ್ಲಾದವನೆಂದು ಆಡಿದರು ಇಸ್ಕೂಲಿನಲಿ
ಹೆತ್ತಮ್ಮ ಹೇಳು ನಿಜುವಾಗಿ |

ಅಮ್ಮ ಹುಡುಗ್ರೆಲ್ಲ
'ನಾವು ಹಬ್ಬ ಮಾಡ್ಬೇಕು

ಅಕ್ಕ ಭಾವರನ್ನು ಕರ್ಕೊಂಡ್ಬರ್ಬೇಕು' ಅಂತ್ಹೇಳಿ
ರಜ ಕೇಳ್ಕೊಂಡ್ರಮ್ಮ
ಆ ಇಚಾರವನ್ನು ಕೇಳಿ
ನನ್ಗೂ ಅಕ್ಕ ಭಾವ ಉಂಟು ಎಂಬುದಾಗಿ
ನಾನು ಹತ್ತು ದಿನಾ ರಜಾ ಕೇಳ್ದ ತಾಯಿ
ಆ ಮಾತನ್ನ ಕೇಳಿ ಹುಡುಗ್ರೆಲ್ಲ
ನಾನು ಅಘೋರುವಾದ ಸಮುದ್ರದ ಪಾತಾಳ್ಕೆ
ಬೀಳ್ಬೇಕು ಅಂತ ಮಾತೇಳುದ್ರು ತಾಯಿ -

ಅಕ್ಕನಿಲ್ಲದವನೆಂದು ಅಮ್ಮ ಆಡಿದರು ಇಸ್ಕೂಲಿನಲಿ
ಹೆತ್ತಮ್ಮ ಹೇಳು ನಿಜುವಾಗಿ |

ಅಮ್ಮ, ನಾನು ಅಕ್ಕ ಭಾವ ದಿಕ್ಕು ದೆಸೆ
ಸೊಮ್ಮುಸೋದ್ರ ಒಂದೂ ಇಲ್ಲೋನಂತೆ
ಹಾಗಂತ ಹುಡುಗ್ರೆಲ್ಲ ಜರ್ದು ಮಾತಾಡುದ್ರಮ್ಮ
ಅಮ್ಮ, ನಾನೂ ಅಕ್ಕಭಾವಂದ್ರ ಕರ್ಕೊಂಡ್ಬಂದು
ಹಬ್ಬ ಮಾಡ್ಬೇಕು ತಾಯಿ" ಅಂದ.
ಮಗ ಆಡಿದ ಮಾತ ಕೇಳಿ ಮಾದೇವಮ್ಮ
"ನನ್ನ ತಿಳುವಳ್ಕಿಲ್ಲದ ಮಗುಂಗೆ
ಯಾ ಪಾಪಿ ಮುಂಡೆ ಮಕ್ಕು
ಹಿಂಗೆಲ್ಲ ಹೇಳ್ಕೊಟ್ರೊ ಕಾಣ್ನಿಲ್ಲ" ಅಂತ್ಹೇಳಿ
ಮಾದೇವಮ್ಮ ದುಕ್ಕ ಮಾಡ್ತಳೆ.
"ಅಮ್ಮ, ಅಕ್ಕ ಭಾವ ಇದ್ರೆ ಅವ್ರೆ ಅನ್ನು
ಇಲ್ಲಾಂದ್ರೆ ಇಲ್ಲ ಅನ್ನು!"
ಮಗನಾಡಿದ ಮಾತ ಕೇಳಿ ಮಾದೇವಮ್ಮ
'ನಿಜನೇ ಹೇಳ್ಬುಡುಮ' ಅಂತ್ಹೇಳಿ -

"ಅಕ್ಕಯ್ಯ ನಿನಗಿಲ್ಲ ಭಾವಾಜಿ ನಿನಗಿಲ್ಲ ಕಂದ
ಮಿಕ್ಕ ಬಂಧುಗಳು ನಿನಗಿಲ್ಲ |

ಮಿಕ್ಕ ಬಂಧುಗಳು ನಿನಗಿಲ್ಲವಲ್ಲ ಕಂದಯ್ಯ
ನೀ ಹುಟ್ಟಿದೋನೊಬ್ಬ ರಾಮಯ್ಯ |

ನಿನ್ನ - ಹಿಂದೆ ಹುಟ್ದೋರಿಲ್ಲ ಬೆನ್ನಿಂದ ಬಿದ್ದೋರಿಲ್ಲ
ನೀನು - ಹುಟ್ಟಿದೋನೆ ಒಬ್ಬ ಮೈದಾಳರಾಮ" |

"ಅಮ್ಮ ಅಮ್ಮ ಅಮ್ಮ -
ನನಗೊಡಹುಟ್ಟಿಲ್ಲದ ಮ್ಯಾಲೆ ನಾ
ಮಡುಗೊದಿಲ್ಲ ಪ್ರಾಣಾವ
ಮುಂದೆ ನಿನಗ್ಯಾರು ಗತಿಯವ್ವ |

ಹುಡುಗರಾಡಿದ ಮಾತೂವೆ ನೀನಾಡಿದ ಮಾತೂವೆ
ಹೊಂದಾಣ್ಕೆ ಬಂತಲ್ಲ ನನತಾಯಿ |

ಇಸ್ಕೂಲ್ಮಠದಲ್ಲಿ ಹುಡುಗ್ರಾಡಿದ ವಾಕ್ದಾನ
ಸುಳ್ಳು ಅಂತಿದ್ದಿ ನನತಾಯಿ |

ನನ್ಮಗ ಅನ್ನೋ ಆಸೆ ನೀ ಮಡುಗ್ಲೇಡ ಅಮ್ಮಯ್ಯ
ಕಂಡುತ್ಕಾಗೂ ನಾನು ಪ್ರಾಣ ಬುಡುತೀನಿ |

ಮಗನು ಆಡಿದ ನುಡಿಯ ಕೇಳಿ ಮಾದೇವಮ್ಮ
ಏನ್ಹೇಳಬೇಕಂತ ತಿಳಿಯಾದೆ |

ಹೇಳ್ತೀನಿ ಅಂದ್ರೆ ಇಲ್ಲ ಹೇಳದಿದ್ರೆ ಮಗ ಉಳಿಯಾದಿಲ್ಲ
ಯಾರಲ್ಲೇಳಲೊ ನನ್ನ ಜಗದೀಶ" |

"ಅಮ್ಮಯ್ಯ, ನಿನ್ಹೊಟ್ಟೆವೊಳುಗೆ ಹೆಣ್ಮಕ್ಕು
ಇಲ್ವಾ ತಾಯಿ?"
"ಅಪ್ಪಾ, ನೀನುಟ್ಟುದ ಮೂರೊರುಸಕೆ
ನಿಮ್ಮಪ್ಪ ನಿನ್ನ ಇಸ್ಕೂಲ್ಮಠಕೆ ಬುಟ್ಟು ಬರೋ ಹೊತ್ತಲ್ಲಿ
ನಿಮ್ತಂದೆ ಸರ್ಪುದುಷ್ಟುವಾಗಿ ಕಾಲವಾದ್ರಪ್ಪ
ಆ ತೊಟ್ಟಿಂದ ನನ್ಗೆ ಮಕ್ಕಿಲ್ಲ ಕಂದ
ನೀನುಟ್ಟಿರೋನೆ ಒಬ್ಬ
ನೀನಿರೋ ಒಬ್ಬ ಮಗ ನನಗೆ ಸಾಕಲ್ವಪ್ಪ ?
ನೀನೂ ನನ್ನ ಕೈ ಬುಟ್ಟು ಹೋದ್ರೆ ನನಗೆ
ದಿಕ್ಕುದೆಸೆ ಯಾರು ಕಂದ ?"
"ಅಮ್ಮ ಅಮ್ಮ ಏನಂತ ಹೇಳ್ಲಮ್ಮ. ಹೋಗ್ಲಿ -

ನಿನ್ಹೊಟ್ಟೇಲಿ ಹೆಣ್ಮಕ್ಕಿಲ್ಲದ ಮ್ಯಾಲೆ
ನಿನ್ನಕ್ಕ ತಂಗೇರ ಮಕ್ಕ ಇದ್ದಾರೇನಮ್ಮ ?
ಇದ್ರೆ ಹೇಳಮ್ಮ ಅವುರ್ನಾರೂ ಕರ್ಕೊಂಡ್ಬಂದು
ಹಬ್ಬ ಮಾಡಿ ಹಟಾ ಕಳ್ಕೋತೀನಿ" ಅಂದ್ನು
ಅದ್ಕೆ ಮಾದೇವಮ್ಮ ಅಂತಳೆ -

"ಅಕ್ಕ ತಂಗೇರ ಮಕ್ಕ ಇದ್ದರೆ ಕಂದಯ್ಯ
ಅವ್ರು - ಬಂದಾರ ಕಂದ ನಮ್ಮ ಸಮಯಕ್ಕೆ |

ಬಂದಾರೇನೊ ಕಂದ ನಮ್ಮ ಸಮಯಕ್ಕೆ ಅವರು
ಏನುಂಟು ಕಂದ ನಮ್ಮ ಮನೆಯೊಳಗೆ |

ಲಕ್ಕಿಸೊಪ್ಪಿನ ಮನೆಯ ಮುತ್ತುಗ್ದಾಳೆ ಕದವು
ಇಷ್ಟು ಬಡುಸ್ತಾನ ನಮಗುಂಟು |

ಮಾನ್ಯವರ ಮನೆಬಾಗ್ಲಲ್ಲಿ ಭಿಕ್ಷಪಾತ್ರೆ
ಮಾಡ್ಕೊಂಡ್ ಬಂದ್ರೆ ಗತಿ
ಇಲ್ಬಿದ್ರೆ ಯಾವುದ್ಕೂ ಗತಿಯಿಲ್ಲ !
ಯಾರ್ನ ಕರೆಯೋದ್ ಕಂದ ?
ಕರುದ್ರೆ ಯಾರು ಬಂದರಪ್ಪ?"

"ಹಾಗಾದ್ರೆ ನನ್ ಜೊತೇರೆಲ್ಲ
ಅಕ್ಕಭಾವುರ ಕರ್ಕೊಂಡ್ ಬಂದು ಹಬ್ಬ ಮಾಡುದ್ರೆ
ಅವುರೆದುರಾಗಿ ಮೊಕ ಹೊತ್ಕೊಂಡು ಬಾಳ್ತಕ್ಕಂತದಲ್ಲ
ನನ್ ಪ್ರಾಣ ಕಳ್ಕೋತೀನಿ ತಾಯಿ ಅಪ್ಪ್ಣೆ ಕೊಡು"
ಮಗನಾಡಿದಂತ ವಾಕ್ಯಾನ ಕೇಳಿ ಮಾದೇವಮ್ಮ
"ನಾವೇ ಅಲ್ಲ ಲೋಕ್ದಲ್ಲಿ ಹೆಣ್ ಮಕ್ಕಿಲ್ದೋರು
ಅಕ್ಕ ಭಾವ ಇಲ್ದೇ ಇರೋರು
ಕೋಟಾನುಕೋಟಿ ಇದೆ.
ಮಾರುಸ್ಕೊಂಡ್ಹೋದ್ ಮಗ್ಳು
ಮನೆಗ್ಯಾಕ್ಬೇಕು ಅನ್ನೋಹಂಗೆ
ಹೆಣ್ಮುಕ್ಕುನ್ನ ಚಿಕ್ಕುದ್ರಿಂದ ಸಾಕಿ ಮದ್ವೆ ಮಾಡ್ತಿವಿ
ಅವ್ಳು ಗಂಡುನ್ ಮನೆವೊಳ್ಗೆ ಮಕ್ಕೈಹತ್ಕೊಂಡು
ಮನೆಕೆಲ್ಸ ಮಾಡ್ಕೊಂಡು ಜ್ಯೋತಿ
ಬೆಳುಗುಸ್ಕೊಂಡಿರ್ತಳಲ್ಲ
ಅಂತೆ ಹೆಣ್ ಮಕ್ಕಿಂದ ಬರ್ತಕ್ಕಂತ ಬೋಮಾನವೇನು ?
ಮರ್ಯಾದೆಯೇನು? ಸುಮ್ನಿದ್ದುಡಪ್ಪ"
"ಅಮ್ಮ ನೀ ಹೇಳೋ ಮಾತು ನಿಜ
ನಾನು ಹೆಣ್ ಮಕ್ಳು ವಾರ್ತಿಯನ್ನು ಹೇಳ್ತೀನಿ ಕೇಳು -

ಹೆಣ್ಣು ಮಗಳು ತಾಯಿ ಬಣ್ಣೀಸಿ ಪಾಡೋಳು
ಅಣ್ಣನ ಕುಲವ ಹೊಗಳೋಳು |

ಅಣ್ಣನ ಕುಲವ ಹೊಗಳುವ ತಾಯ್ತಂದೇರ್ಗೆ
ಪುಣ್ಯಕೆ ಒಬ್ಬ ಮಗಳಿರಬೇಕು |

ಏನು ಹೇಳ್ದೆ ತಾಯಿ
ಮಾರುಸ್ಕೊಂಡೋದ್ ಮಗ್ಳು ಮನೆಗ್ಯಾಕ್ಬೇಕು ಅಂತ್ಹೇಳ್ತಿಯೆ
ನಮ್ ಮಗುಳ್ನ ಲಗ್ನವಾಗುವಂತ ಗಂಡ್ಕಂದರೆ
ಸಾವ್ರಾರು ರೂಪಾಯಿ ಹಾಕಿ ಮದುವೆ ಮಾಡ್ತೀರಿ
ಆ ಕೊಟ್ಮನೆವೊಳ್ಗೆ ನಮ್ಮಗ್ಳು
ಏನೇ ಕಷ್ಟ ಬಂದೂ ನೀಸ್ತಳೆ
ಆ ಹೆಣ್ಮಗುಳ್ನ ಕುಲ ಕೇಳುದ್ರೆ
ಅವ ಆ ತವುರ್ಮನೆ ಕುಲಾನೆ ಕೊಂಡಾಡದು
ಅವುಳೊಟ್ಟೇಲುಟ್ಟಿದಂತ ಹೆಣ್ಮಕ್ಕ
ಅವುಳ್‌ಗಂಡುನ ಕುಲ ಹೇಳ್ತವೆ.
ಆದ್ದರಿಂದ ಮುಕ್ಯವಾಗಿ ಒಡುಟ್ಟೇಕು
ಅದೂ ಅಲ್ದೆ ಕೇಳಮ್ಮ -

*ಹೆಣ್ಣಿಲ್ಲದವರಿಗೆ ಪುಣ್ಯವೇ ಮೊದಲಿಲ್ಲ ತಂದನ್ನ ತಾನಾ |
ಎರ್ಡೂ ಕಣ್ಣಿಲ್ಲದ ತೆರನಂತೆ ತಾಯಿ ತಾನಾ ತಂದನ್ನ ತಾನಾ ||

ಕಣ್ಣಿಲ್ಲದವರ ಕತೆಯಾಗುತಾದೆ ಬಾಳು ?
ಪುಣ್ಯಕೆ ಒಬ್ಬ ಮಗ ಬೇಕು ||

ಅಕ್ಕನಿಲ್ಲದೆ ಮನೆ ಲಕ್ಷತ್ರಿಲ್ಲದ ಮೇಘ |
ಹೆಣ್ಣು - ಮಕ್ಕಳಿಲ್ಲಾದ ಮನೆಹಾಳು ||

ಭಾವ ಇಲ್ಲದ ಮನೆಯು ಜೀವ ಇಲ್ಲದ ದ್ರೀಯ |
ತಾವರೆ ಇಲ್ಲದ ಕೊಳದಂತೆ ||

ತಾವರೆ ಇಲ್ಲದ ಕೊಳದಂತೆ ತಾಯಮ್ಮ |
ನನ್ನ - ಜೀವವಿದ್ದೇನು ಫಲವಿಲ್ಲ ||

ಒಡುಟ್ಟಿಲ್ಲದ ಮ್ಯಾಲೆ ಮಡ್ದೊದಿಲ್ಲ ಪ್ರಾಣವ |
ನನ್ನ ಪ್ರಾಣಗಳ ಬುಡುತೀನಿ ತಾಯಿ ||

ನನ್ನ ಪ್ರಾಣಗಳ ಬುಡುತೀನಿ ತಾಯಮ್ಮ |
ನಾ ಸತ್ತರೆ ನಿನಗೆ ಗತಿ ಯಾರು ತಾಯಿ ||

ಕೈ ಹಿಡಿದ ಪತಿಯಾಸೆ ನಿನಗಿಲ್ಲ ತಾಯಮ್ಮ |
ನೀ ಹೆತ್ತ ಮಗ ನಾನು ಪ್ರಾಣ ಬುಡುತೀನಿ || *

"ಅಮ್ಮ ನಿನ್ನ ಕಷ್ಟುಕ್ಕೆ
ನೀನು ಕೈ ಹಿಡಿದ ಪತಿಯನ್ನು ಕಳ್ಕೊಂಡೆ
ನಿಯತ್ತಿನ ಮಗ ನಿನ್ನ ಕಣ್ಣೆದುರ್ಗೆ ಪ್ರಾಣತ್ಯಾಗ್ತೀನಿ"
"ಅಯ್ಯೋ ನನಕಂದ
ಹೆಣ್ಮಕ್ಕ ಹೆಣ್ಮಕ್ಕ ಅಂತಿಯಲ್ಲಪ್ಪ
ಅಪರಂಜಿಯಂತ ಗಂಡ್ಮಗ ನೀನಿರುವಾಗ
ಇಂತ ಒಬ್ಬ ಮಗ ಸಾಕಲ್ವಪ್ಪ?"

"ಅಮ್ಮ ನಾನು ಪ್ರಾಣತ್ಯವಾದ ಕಾಲ್ದಲ್ಲಿ
ಒಡುಟ್ಟಾಗಿರುವ ಹೆಣ್ಮಾಗ್ಳು ಬಂದು
ಚಟ್ಟವನ್ನು ಮೆಟ್ಟಿ
'ಹೋದ್ಯಪ್ಪ ಅಣ್ಣಾ
ತವುರ್ಮನೆಗೆ ಹೆಗ್ಗಂಬದಂತಿದ್ದಲ್ಲೊ ಅಣ್ಣಾ
ಅಕ್ಕತಂಗೀರು ಅಂದ್ರೆ ಪ್ರಾಣ ಬುಡ್ತಿದ್ದಲ್ಲೊ ಅಣ್ಣಾ
ಹಬ್ಬ ಹುಣ್ಣಿಮೆಗಳಿಗೆ ಅಕ್ರಿಯಿಂದ ಅಕ್ಕ ತಂಗೇರ ಕರ್ದು
ಬಾವುನ್ನೆ ಮರ್ಯಾದೆ ಮಾಡಿ ಕಳುಸ್ಕೊಡ್ತಿದ್ದಲ್ಲೊ
ಹಂಗೆ ಹೇಳ್ತ ಬಾಯ್ಬಡ್ಕೊಂಡತ್ರೆ ನನಗೆ ಸೊರುಗ
ಇಲ್ದೆ ಇದ್ರೆ ಸೊರುಗವಿಲ್ಲ.
ನಾ ನಗ್ಗುನ ಪ್ರಸ್ತವಾಗುವಾಗ
ಒಡುಟ್ಟು ಕಂದ್ಲು ಗಡಿಗೆ ತಂದು
ಚಪ್ಪುರದಟ್ಟೀಲಿ ಮಡುಗುದ್ರೆ ಎಷ್ಟು ಕಳೆಯ?
ಅದ್ಕೆ ಒಡುಟ್ಟು ಬೇಕು ತಾಯಿ

* ಅಮ್ಮಯ್ಯ ಅಳಬೇಡ ಸುಮ್ಮನೆ ಇರುತಾಯಿ
ತಂದನ್ನ ತಾನಾ ।
ಅವ್ವ - ನನ ಪ್ರಾಣಗಳ ಬುಡುತೀನಿ"
ತಾನ ತಂದನ್ನ ತಾನಾ ॥

ಎದ್ದಾನು ರಾಮಯ್ಯ ಚಂದ್ರಾಯ್ನ ತಕ್ಕೊಂಡ ।
ಆ ಮುಕ್ಕಣ್ಣ ಶಿವನೆ ಗತಿಯೆಂದ ರಾಮ ॥

ಆ ಚಂದ್ರಾಯ್ನ ಕತ್ತಿ ಎತ್ತವುನೆ ರಾಮಯ್ಯ । ೩೩೪೦
ಕತ್ತಿ ಎತ್ತೀದ ಮಗನ ತಾಯ್ನೋಡಿ ॥

"ಅಯ್ಯೊ ಉಳಿಯಲಾರನು ನನ್ನ ಮಗ ।
ಮಗನ ಪ್ರಾಣ ಇಂದು ಮರಣವಾಯ್ತದೆ ॥

ನಾ ಯಾರಲ್ಹೇಳಲಿ ಮಗನೀಗೆ ಶಿವನೆ ।
ಹೇಳ್ತೀನಂದರೆ ಯಾರೂ ಇಲ್ಲ ॥

ಹೇಳದೆ ಹೋದರೆ ಪ್ರಾಣ ಉಳಿಯೋದಿಲ್ಲ ;
ನಾ ಯಾರ ಹೇಳಲೊ ಜಗದೀಶ ॥

ದಿಕ್ಕಿಲ್ಲದವರ ಕಾಪಾಡೊ ಜಗದೀಶ ।
ನನ್ನ ಮಗನ ಪ್ರಾಣಾವ ಕಾಯೊ ಸ್ವಾಮಿ ॥* ೩೩೫೦

"ಜಗದೀಶ್ವರ ನನ್ನ ಮಗನ ಪ್ರಾಣುಕ್ಕೋಸ್ಕರ ನಾ ಕೋರ್ತೀನಿ
ಈ ಮಗನ ಪ್ರಾಣಕ್ಕೆ ನೀನು ಒಡಕರ್ತನಾಗಿ
ಇವುನ್ನ ಕಾಪಾಡೊ ಭಾರ ನಿಮ್ಮೆ ಹೊರ್ತು ನನ್ನದಲ್ಲ
ನಿಮ್ಮ ಮೇಲೆ ನಾನು ಕೋರ್ಕೆ ಇಡ್ತೀನಿ
ಈ ಪ್ರಾಣ ಹೋಗೊ ಕಾಲ್ದಲ್ಲಿ
ಒಂದು ಸುಳ್ಳು ಹೇಳಿ ಪ್ರಾಣ ಉಳುಸ್ಬೇಕು" ಅಂತ್ಹೇಳಿ
ಮಗನ ಕೈ ಹಿಡ್ಕೊಂಡ್ಬುಟ್ಟ ಬಂದು -

"ಆತುರ ಪಡಬೇಡ ನನ್ನ ಮಾತು ಕೇಳೊ ಕಂದಯ್ಯ
ಯಾತರ ಸುಕುವೊ ಸತ್ತು ಫಲವೇನು ।

ಅಕ್ಕಯ್ಯ ನಿನಗುಂಟು ಭಾವಾಜಿ ನಿನಗುಂಟು ೩೩೬೦
ಮಿಕ್ಕ ಬಾಂಧವರು ನಿನಗುಂಟು ।

ಅಕ್ಕಭಾವರ ಹೆಸರ ನಾನು ಹೇಳುತೀನಿ ಕಂದ
ಕತ್ತೀಯ ಮಡಗಿ ಮಾತಾಡು ಬಾರೊ" ।

ತಾಯಿ ಆಡಿದ ಮಾತ ಕೇಳಿದನು ರಾಮಯ್ಯ
ಕತ್ತೀಯ ತಗುದು ಕೆಳಗಿರಿಸಿ ।

ಕತ್ತೀಯ ತಗುದು ಕೆಳಗಿರಿಸಿ ಕೇಳುತಾನೆ
"ನೀ ಹೆತ್ತಮ್ಮ ಹೇಳು ನಿಜುವಾಗಿ" ।

ಅಕ್ಕ ಭಾವ ಅನ್ತಕ್ಕಂತ ವಾಕ್ದಾನ
ಯಾವಾಗ ಅವ್ನ ಕಿವೀಕರ್ಣುಕ್ಕೆ ಬಿತ್ತೋ ಆಗ
ಆನೆ ಕೊಟ್ಟಂತ ಐಸ್ವರ್ಯವೇ ಬಂದಂಗಾಯ್ತು ೩೩೭೦
"ಅಮ್ಮ ನನ್ನ ಮಗ ಪ್ರಾಣತ್ಕೆ ಮಾಡ್ಕೋತಾನೆ
ಅಂತ ಸುಳ್ಳೇಳುದ್ರೆ
ಇದೇ ಚಂದ್ರಾಯ್ದದ ಮೇಲೆ ಬಿದ್ದು
ಪ್ರಾಣತ್ಯವಾಯ್ತಿನಿ" ಅಂದ್ರೆ
ಮಾದೇವಮ್ಮ ಚಿಂತೆ ಮಾಡ್ತಿದ್ದಾಳೆ
"ಹೇಳನ ಅಂದರೆ ಇಲ್ಲ
ಹೇಳದಿದ್ರೆ ಮಗನ ಪ್ರಾಣ ಉಳಿಯಾದಿಲ್ಲ
ನರಮಾನ್ಯವರೊಂದಿಗೆ ಇವುನ ಕಷ್ಟ
ಹೇಳುದ್ರೆ ಸುಕುವಿಲ್ಲ
ನಮ್ಮ ತಿಸ್ಲೆ ಮಾಡಿದಂತ
ಪಾರ್ವತಿ ಪರಮೇಶ್ವರುರ್ಗೆ ಕೋರ್ಕೆ
ಮಾಡ್ಬುಡವು" ಅಂತ್ಹೇಳಿ
"ಕಂದ ರಾಮಯ್ಯ -

ಶ್ರೀಗೌರಿ ಎಂಬೋಳು ಹಿರಿಯಕ್ಕ ರಾಮಯ್ಯ ೩೩೮೦
ರಂಭೆ ಊರ್ವಸಿಗಿಂತ ಅತಿಚೆಲುವೆ |

ರಂಭೆ ಊರ್ವಸಿಗಿಂತ ಅತಿ ಚೆಲುವೆ ಕಂದಯ್ಯ
ಪ್ರೀಯಾದ ಅಕ್ಕ ಶ್ರೀ ಗೌರಮ್ಮ" |

"ಅಮ್ಮ ಈ ವಾಕ್ಯಾನವನ್ನು
ಇಸ್ಕೊಲ್ಮಥದಿಂದ ಬಂದು ಕೇಳಿದಾಗ್ಲೆ ಹೇಳಿದ್ರೆ
ಇಷ್ಟೊತ್ಗೆ ಎಷ್ಟೋ ಯೋಜನ ಹೋಯ್ತಿದ್ದೆ.
ಅಮ್ಮ ನಮ್ಮಕ್ಕನ ಹೆಸ್ರು ಶ್ರೀ ಗೌರಮ್ಮ ಆದ್ರೆ -

ಅಕ್ಕನ ಹೆಸರ ನೀ ಹೇಳಿದೆಯಲ್ಲವ್ವ
ನಮ್ ಭಾವನ ಹೆಸರ ಹೇಳವ್ವ |

ಭಾವಾನ ಹೆಸರ ಹೇಳಿದರೆ ತಾಯವ್ವ ೩೩೯೦
ಹೋಗಿ ನಾ ಹಬ್ಬಕೆ ಕರತರುವೆ" |

ಮಗನ ಮಾತನ್ನು ಕೇಳಿ ಮಾದೇವಮ್ಮ
ಎಂಬತ್ನಾಲ್ಕು ಲಕ್ಷಕ್ಕೆ ಕಾರಣಕರ್ತನಾದ ಜಗದೀಶ್ವರನ್ನ
ಅಳಿಯಾಂತ ಹ್ಯಾಗ್ಹೇಳ್ಬೇಕೆನ್ನೊದಾಗಿ
ತಾಯಿ ಮನಸು ಮಾತು ಬರೊಲ್ದು
"ಯಾತುಕಮ್ಮ ಮಗ್ಗೆಸ್ರು ಜಲ್ದಿ ಹೇಳ್ದೆ
ಅಳಿಯನೆಸ್ರು ಕೇಳುದ್ರೆ ತಡಮಾಡ್ತಿ ಯಾಕಮ್ಮ -

ಅಳಿಯನ ಹೆಸ್ರ ಹೇಳದಕೆ ನಾಚಿಕೆಯಾದ್ರೆ ತಾಯಿ
ಬ್ಯಾರೆಯವ್ರ ಕೈಲಿ ಹೇಳಸಮ್ಮ" |

ಮಗನಾಡಿದ ವಾಕ್ಯಾನ ಕೇಳಿ ಮಾದೇವಮ್ಮ ೩೩೯೦
"ನನ್ನಳಿಯನ ಹೆಸ್ರ ನನ್ಮಗುಂಗೆ ಹೇಳಿ ಅಂದ್ರೆ
ಇವ್ನು ಮಗ್ಗೆತ್ತಿದ್ದಳ ? ನೆಗ್ಲುನ ಮಾಡಿದ್ನಾಳ ?
ಇಲ್ಲ. ಅನ್ನೋದಾಗಿ ಪಕ್ಕದ ಜನಗಳು
ನನ್ಮಗುಂಗೆ ಚಾಡಿ ಹೇಳುದ್ರೆ
ಆಗೂ ನನ್ಮಗ ಕಾಡಂತ್ರವಾಯ್ತನೆ
ಮಗುನ್ಗೆ ನನ್ನಳಿಯನ ಹೆಸ್ರ ನಾನೇ ಹೇಳ್ತೀನಿ
ಸಾಕ್ಷಾದ್ಪರಮಾತ್ಮ ನರಯುಗದಲುಟ್ಟಿ
ನನ್ನಮ್ಮ ಆಂಕಾರುಕೋಸ್ಕರ ಶಂಕರ
ಅಳಿಯ ಅನ್ನೋದಾಗಿ ಕರೀತಿವ್ನಿ
ಬಡಕಂದನ್ನ ಕಾಪಾಡು ಶಂಕರ
ಮಗನೆ ನಿನ್‌ಭಾವುನೆಸ್ರು ಹೇಳ್ತಿದ್ದೀನಿ - ೩೪೧೦

ಮಲ್ಲಯ್ಯನೆಂದು ಲೋಕ ಕೊಂಡಾಡುವುದು
ಭೂತಳಲೋಕಕೆ ದೊಡ್ಡವರು |

* ನಿನ್ನ - ಅಕ್ಕಯ್ಯ ಗೌರಮ್ಮ ಭಾವಾಜಿ
ಮಲ್ಲಯ್ಯ ತಂದನ್ನ ತಾನಾ |
ಆ ಮಿಕ್ಕ ಬಂಧುಗಳು ಬಸವಯ್ಯ ಕಂದ
ತಾನ ತಂದನ್ನ ತಾನಾ ||

ಮಿಕ್ಕ ಬಾಂಧಿಗಳು ಚನ್ನಬಸವಯ್ಯ |
ಈ ಸತ್ಯದ ಮಾತ ಕೇಳು ಕಂದಯ್ಯ ||

ಮುಂಚೆ ಹುಟ್ಟಿದೋಳು ಶ್ರೀಗೌರಿ ಎಂಬುವಳು |
ಪ್ರಿಯವಾದ ಅಕ್ಕ ನಿನಗುಂಟು ಕಂದ ||

ಇಂತೆ ಅಕ್ಕ ಭಾವಂದಿರು ನಿನಗಿರುವಾಗ |
ನೀನು ದುಕ್ಕ ಮಾಡೋದು ತರುವಲ್ಲ" || ೩೪೨೦

ಅಂತ ಮಾದೇವಮ್ಮ ಹೇಳುದ್ದು.

೬. ಅಕ್ಕ ಭಾವಾಜೀರ ಕರ್ಕೊಂಡು ಬರುತೀನಿ

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

"ಅಕ್ಕಯ್ಯ ನನುಗವ್ಳೆ ಭಾವಾಜಿ ನನಗವ್ನೆ
ಯಾರಿದ್ದಾರು ನನ್ನಂತ ಪುಣ್ಯಾವಂತಾರು |

ಏನಮ್ಮ ತಾಯಿ
ನಮ್ಮಕ್ಕನ ಹೆಸ್ರು ಗೌರಮ್ಮ ಭಾವಯ್ಯನೆಸ್ರು ಮಲ್ಲಯ್ಯ
ನಮ್ಮಕ್ಕನ ರೂಪ್ಗೆ ಬ್ಯಾರೆ ಆಯ್ತು
ನಮ್ಮ ಭಾವಯ್ನ ನಾಮಕರಣ್ಕೆ ಬ್ಯಾರೆಯಾಯ್ತಲ್ಲ?"

"ಮಗನೆ ಆ ಸಾಕ್ಷಾತ್ ಪರಮಾತ್ಮಂಗೆ
ನಾನಾ ಅವುತಾರ ಉಂಟು ಕಣಪ್ಪ"
"ಯಾವ್ ಯಾವು ತಾಯಿ?" ೩೪೩೦
"ಮಾದೇಶ್ವರ, ನಂಜುಂಡೇಶ್ವರ, ಭೈರವೇಶ್ವರ
ಮಲ್ಲೇಶ್ವರ, ಮಲ್ಲಿಕಾರ್ಜುನೇಶ್ವರಾಂತ ನಾಮಕರ್ಣಗಳುಂಟು"
"ಈಗ ನಮ್ಮಕ್ಕಯ್ಯುನೆಸ್ರುಗೂ
ಭಾವಯ್ಯನೆಸ್ರುಗೂ ತಾತ್ಪರ್ಯ ಒಂದೇ ಆಯ್ತು ತಾಯಿ

ಈಗ ನಮ್ಮಕ್ಕಯ್ಯುನ್ ಕೊಟ್ಟಿರುವ ಊರ್ಹೆಸ್ರೇಳು -

ಅಕ್ಕಯ್ನ ಹೆಸ್ರೆಳ್ದೆ ಭಾವಾಜಿ ಹೆಸ್ರೇಳ್ದೆ
ಅಕ್ಕನ ಕೊಟ್ಟಿರುವ ಊರ ಹೆಸರ್ನೇಳು |

ಅಕ್ಕನ ಕೊಟ್ಟಿರುವ ಊರ್ಹೆಸರ ಹೇಳಿದರೆ
ಹೋಗಿ - ಅಕ್ಕನ ಕರುಕೊಂಡು ಬರುತೀನಿ" |

"ಅಲ್ಲಿಗಿಲ್ಲೀಗೆ ವಾಸ ಕಲ್ಯಾಣ್ಕೆ ಬಸುವೇಶ
ಮಲ್ಲಯ್ಯ ಇರುವಾದು ಕೈಲಾಸ |

ಜಲ್ಲೆಂದು ಮೊರೆವ ಪಾತಾಳುಗಂಗೆವ್ವೊಳುಗೆ
ಶ್ರೀಶೈಲ ಪರ್ವತವು ಇರುವಾದು |

ಮಲ್ಲಯ್ಯ ಇರುವಾದು ಕೈಲಾಸ ಕಾಣೊ ರಾಮ
ನಿಮ್ಮಕ್ಕಯ್ಯ ಇರುವ ಗಿರಿ ಕಾಣೊ" |

"ತಾಯಿ ಕೈಲಾಸ ಅಂದ್ರೆ ಎಷ್ಟು ದೂರವಮ್ಮ ?" -

"ಕೈಲಾಸ ಅಂದರೆ ಮೂರು ತಿಂಗಳ ದಾರಿ
ಅರವತ್ತು ಗಾವುದ ಕಾಣಪ್ಪ |

ಅರವತ್ತು ಗಾವುದ ಕೈಲಾಸ ಪರ್ವತವು
ಕಂಡವರು ಯಾರೂ ಮೊದಲಿಲ್ಲ |

ಮೂರ್ತಿಂಗ ದಾರೀಂತ ಹಿರೀಕ್ರು ಹೇಳ್ತಾರಪ್ಪ
ಕೈಲಾಸ್ಕೋದೋರು ಹಿಂದಕ್ಕೆ ಬರುನಿಲ್ಲ |

ಹೋದೋರು ಹಿಂದುಕ್ಕೆ ಬಂದಿಲ್ಲ ಕಂದಯ್ಯ
ಸುಮ್ಗಿದ್ದು ಈ ಕತೆಯ ಮರಿಯಪ್ಪ" |

"ಮರೆಯೋದು ಅಂದ್ರೇನು ಮಾತು ಬ್ಯಾಡಾಂದ್ರೇನು
ಅಕ್ಕ ಭಾವಯ್ನ ಮರೆಯೋದುಂಟ ?|

ಅಮ್ಮಯ್ಯ ಕೈಲಾಸ ಮೂರು ತಿಂಗಳ ದಾರಿ ಅಂತಿಯಲ್ಲ
ಯಾರೂ ಕಂಡವರು ಇಲ್ಲ ಅಂತಿಯಲ್ಲ
ಹಂಗಾದ್ರೆ ಹಿರೀಕ್ರುಗೆ ಹೆಂಗ್ ತಿಳೀತು?"
"ಕಂದ -

ತಂದೆ ತಾಯಿಯ ಪಾದ ಪೂಜೆ ಮಾಡಿದೋರ್ಗೆ
ಸಿಕ್ಕುವುದು ಮುಂದೆ ಕೈಲಾಸ. |

ಅತ್ತೆ ಮಾವರ ಪಾದ ಪೂಜೆ ಮಾಡಿದೋರ್ಗೆ
ಆ ಸಿಕ್ಕುವುದು ಮುಂದೆ ಕೈಲಾಸ |

ಅನ್ನ ದಾನ ಮಾಡಿ ಪುಣ್ಯ ಫಲ ಪಡಿದೋರ್ಗೆ
ಅವ್ರುರ್ಗೆ ಮುಂದುಂಟು ಕಂದ ಕೈಲಾಸ |

ಕೈಲಾಸ ಅಂದರೇನು ನೀನು ಅಂದರೇನು
ಅಪ್ಪ - ಯಾರೂ ಕಂಡವರು ಮೊದಲಿಲ್ಲ" |

"ಹಾಗಾದ್ರೆ ತಾಯಿ
ಅಟ್ಟೂರ ನಮ್ಮಕ್ಕನ ಕೊಟ್ಟು ಯಾಕಮ್ಮ
ಮದ್ವೆ ಮಾಡ್ಸೇಕಿತ್ತು?
ನಮ್ಮಕ್ಕ ಬಾಳ ರೂಪಸ್ತೆ
ಬಾಳ ಕರಚಲುವೆ ಅಂತ ಹೇಳ್ತೀಯೆ
ಅಂತೆ ಅಕ್ಕನ ನಮ್ಮ ದಕ್ಷಿಣ ದೇಸ್ದಲ್ಲಿ
ಅಂದ್ರೆ ಮರುತ್ನೋಕುದಲ್ಲಿ
ನಮ್ಮಕ್ಕನ ಮದುವೆಯಾಗೋರು ಯಾರೂ ಇರ್ನಿಲ್ಲವ?"
"ಅಪ್ಪಾ ಇದ್ರು
ಮಗನೆ ನಿಮ್ಮಕ್ಕ ಗೌರಮ್ಮ ಯಾವಾಗ ವಯುಸುಗ್ಬಂದ್ಲೊ
ಆಗ ನಿಮ್ತಂದೆ ಸ್ವೋಮಯ್ಯನೋರು
ಬೇಕುಬೇಕಾದ ದೇವಾನುದೇವ್ತಿಗಳು
ಬೇಕಾದ ರಾಜಕುಮಾರರ ಫೋಟೊ ತಂದು ತೋರುಸ್ದ್ರು
ನಿಮ್ಮಕ್ಕ ಯಾರ್ನೂ ಒಪ್ಲಿಲ್ಲ
ಬೇಕು ಬೇಕಾದ ಎತುಗಳು ಮುನಿಗಳು
ಲಕ್ಕುಸದ ಮೇಲೆ ತೊಂಬತ್ತಾರು ಕೋಟಿ ಜಂಗಮರು
ನಮ್ಮ ಭೀಮಾವತಿ ಪಟ್ಟಣಕೆ ಬಂದಿದ್ರು
ಸಾಲುಸಾಲಾಗಿ ನಿಲ್ಲುಸ್ಬುಟ್ಟು, ಜಂಗುಮ್ರು
ನಿನುಗ್ಯಾರು ಬೇಕು ಒಪ್ಕೋಮ್ಮ
ನಾವು ಲಗ್ನ ಮಾಡ್ಕೊಡ್ತಿವಿ ಅಂತ ಹೇಳ್ದೊ
ಅವ್ರು ಯಾರ್ನೂ ಒಪ್ಲಿಲ್ಲ
'ಅಪ್ಪಾ ನನಗೊಪ್ದೋರು ಇಲ್ಲಿ ಯಾರೂ ಇಲ್ಲ
ಇವುರಿವರ ಸ್ಥಾನಕ್ಕೆ ಎಲ್ರುನೂ ಒಟ್ಟಿಗೆ ಕಳುಸ್ಬುಡು' ೩೪೯೦
'ಇನ್ಯಾರ ಮದ್ವೆ ಆದಿಯವ್ವ?' -

'ಮೂರು ನೇತ್ರಾವು ಮೊಕುದಲ್ಲಿ ಇರುವಂತ
ಶಿವನೀಗೆ ಕೊಟ್ಟು ಲಗ್ನ ಮಾಡಪ್ಪ' |

'ಅಮ್ಮ ಸುರುಪತಿ ಅಂದ್ರೇನು ನಾವು ಅಂದ್ರೇನು ಕಂದ
ದಕ್ಷಿಣ ದೇಸ್ದಲ್ಲಿ ನಾವಿಷ

ಕೈಲಾಸ ಪರ್ವತದಲ್ಲಿ ಅವುರವುರೆ
ಅವ್ರುನ್ನ ಕರತರಕೆ ನಮ್ಮಿಂದ ಸಾಧ್ಯವಿಲ್ಲಮ್ಮ'
'ಅಪ್ಪಾಜಿ ಸಾಕ್ಷಾದ್ಪರಮೇಶ್ವುರ್ನ ನಾನು
ನಾನಿರೊ ತಾವ್ಕೆ ಬರೋಂಗೆ ಮಾಡ್ಕೋತೀನಿ' ಅಂತ್ಹೇಳಿ
ಸಾಕ್ಷಾದೀಶ್ವರನ ಕುರ್ತು ತ್ರಬಸ್ ಮಾಡ್ದ ಕಂದ ೩೫೦
ಆ ತ್ರಬಸ್ಸನ್ನು ಮೆಚ್ಚಿ
ಅವುರಾಗೆ ಅವ್ರು ಮರ್ತುಲೋಕುಕ್ಕೆ ಬಂದ್ರು ಕಂದ
ನಿಮ್ಮಕ್ಕನ ಚಂದ ಚಲುವ್ಕೆ ನೋಡಿ
ಮದುವೆ ಆಗಕೆ ಒಪ್ಕೊಂಡ್ರು
ಅಪ್ಪಾ ಅವುರ್ಗೆ ಗಂಗಾಸ್ನಾನದಲ್ಲಿ
ಸ್ನಾನ ಮಡಿಗಳ ಮಾಡ್ಸಿ
ಚಪ್ಪರವನ್ನು ಹಾಕ್ಸಿ
ಹಸೇ ಮಂಟುಪವನ್ನು ತೆಯ್ಯಾರು ಮಾಡಿ
ಧಾರೆ ಮೋರ್ತುವನ್ನು ಮಾಡ್ದೊ
ನಿಮ್ ಭಾವ ನಿಮ್ ಅಕ್ಕನ ಮದ್ವೆ ಮಾಡ್ಕೋಂಡು ೩೫೧೦
ಅವುರ್ ಜೊತೆ ಒಳುಗೆ ಕರ್ಕೊಂಡೋದ್ರಪ್ಪ?
ಇದು ನಮ್ತಪ್ಪಲ್ಲ ನಿಮ್ಮಕ್ಕನ ತಪ್ಪು"
"ಹಂಗಾದ್ರೆ ನಮ್ಮಕ್ಕ ಒಪ್ಪಿ ಲಗ್ನ
ಮಾಡ್ಕೊಂಡ್ಳ ತಾಯಿ?"
"ಹೌದು ರಾಮಣ್ಣ."
"ತಾಯಮ್ಮ ಕೈಲಾಸ್ಕೆ ನಮ್ಮಕ್ಕನ ಕೊಟ್ಟು
ಮಾಡುದ್ರು ಚಿಂತೆಯಿಲ್ಲ
ನಮ್ಮಕ್ಕ ಗೌರಮ್ಮನ ನಗ್ನ ಮಾಡಿ ಕಳ್ಸಿ
ಈವತ್ಗೆ ಹನ್ನೆರಡೊರ್ಸ"
"ಏನ್ತಾಯಿ ನಮ್ಮಕ್ಕನ ಮದ್ವೆ ಮಾಡಿ
ಹನ್ನೆರಡೊರ್ಸ ಆಗಿದ್ದಾದೆ?
ತಾಯಮ್ಮ ಹನ್ನೆರಡೊರ್ಸದಿಂದ ನಮ್ಮಕ್ಕ ಗೌರಮ್ಮ
ಒಂದಿನುವೆ ತೌರ್ಗೆ ಬಂದಿಲ್ವಲ್ಲ? ೩೫೨೦
ನಮ್ಮಕ್ಕ ಏನ್ತಪ್ ಮಾಡಿದ್ದಳು?

ನಮ್ ಭಾವುಂಗೆ ನಾನ್ ತಪ್ಪೊಟ್ಟು
ನಮ್ ಭಾವುನ್ನ ಕಾಲ್ಕಟ್ಟೊಂಡು
ನಮ್ಮಕ್ಕನ ಕರ್ಕೊಂಡ್ಬತ್ತಿನಿ -

ಅಕ್ಕ ಮಾಡಿದ ತೆಪ್ಪ ಹೇಳು ತಾಯಮ್ಮ
ತೆಪ್ ಕಟ್ಟಿ ನಮ್ಮಕ್ಕನ ಕರತರುವೆ |

ತೆಪ್ಪ ಕೊಟ್ಟು ನಮ್ಮಕ್ಕನ ಕರತರುವೆ
ಅರ್ತದಲ್ಲಿ ಹಬ್ಬ ಮಾಡುವೆ" |

"ಕಂದ -

ಕಟ್ಟಬಾರದ ತೆರವ ಕಟ್ಟವುರೆ ಜಗ್ಗದೀಶ
ಇಕ್ಕ ಬಾರದ ಲಗವ ಇಕ್ಕವುರೆ |

ಇಕ್ಕ ಬಾರದ ಲಗವ ಇಕ್ಕವುರೆ ಅವರು ೩೫೩೦
ಕಳುಗುವುದುಂಟೆ ಗೌರೀಯ |

ಅಪ್ಪಾ ಮೈದಾಳ ರಾಮ ನಿಮ್ ಭಾವ
ಕಟ್ಟಾರುದ ತೆರ ಕಟ್ಟವ್ನೆ ಇಕ್ಕಬಾರದ ಲಗ ಇಕ್ಕವ್ನೆ
ಭೀಮಾವತಿ ಪಟ್ಟಣದಲ್ಲಿ ಕಟ್ಟು ಮೆಟ್ಟನ್ನು
ಮಾಡಿ ರಿಕಾರ್ಟ್ ಬರ್ದು
ನಿಮ್ಮಕ್ಕನ ನಗ್ನ ಮಾಡ್ಕೊಂಡು ಕರ್ಕೊಂಡೋಗವ್ರೆ"
"ತಾಯಮ್ಮ ಕಟ್ಟಾರುದ ತೆರ ಅಂದ್ರೆ ಹೆಂಗೆ
ಇಕ್ಕಾರುದ ತೆರ ಅಂದ್ರೆಂಗೆ?"
"ಹೆಣ್ಣು ಚಂದಾಗದೆ ಅಂತ್ಹೇಳಿ ಎರುಡ್ತೆರ ಕಟ್ಕಿಲ್ಲ
ಅವುರ್ ಜಾತಿ ಪದ್ಧತಿ ಅವುರ್ ಕುಲದ ನಡಾವಳ್ಕೆ
ಎಷ್ಟು ಕಟ್ಬೇಕೊ ಅಷ್ಟೇ ಅವುರ್ ಕಟ್ಕೋದು
ಸ್ವಾಮಿಯವರ ಕೈಲಿ ನಿನ್ಗೆ ಬೇಕಾದಷ್ಟೀಸ್ಕೊ ೩೫೪೦
ನೀನು ಅವುರ್ಗೆ ಬೇಕಾದಷ್ಟ್ ಕೊಟ್ಕೊ
ಕುಲುದೋರ್ ಮುಂದೆ ಕಳ್ಸ ಕನ್ನಡಿ ಮುಂದ್ಗಡೆ
ತೆರಾ ಎಷ್ಟ್ ತೀರ್ಮಾನ ಮಾಡಿದ್ದಾರೆ ಅಷ್ಟೇಳ್ಬೇಕು
ಮೈದಾಳರಾಮ
ನಿಮ್ಮಕ್ಕುಂಗೆ ತೆರುವನ್ನು ಲೆಕ್ಕ ಮಾಡಿ ಕೊಡ್ಲಿಲ್ಲ"
"ತಾಯಿ ಇನ್ನೇನ್ ಮಾಡುದ್ರು?"
"ಮೈದಾಳ್ರಾಮ -

ಆನೆ ಮ್ಯಾಲೆ ದಿರವಯನ್ನೇ ಹೊತ್ಕೊಂಡು ಬಂದ್ರಯ್ಯ
ಚಪ್ಪುದಟ್ಟಿ ಒಳುಗೆ ಸುರಿದಾರು |

ಕೊಂಗದಲ್ಲಿ ತೂರಿದರು ಕೊಳುಗದಲ್ಲಿ ಅಳೆದಾರು ೩೫೫೦
ಗೌರಿ ಉದ್ದುಕೆ ಚಿನ್ನ ಸುರಿದಾರು |

ಹಂಗೆ ಒಂದ್ ಕಂಡೀಸ್ ಆಗೋಯ್ತು"
"ಏನು ಕಂಡೀಸ್ ಹೇಳಮ್ಮ?"
"ಮಾದೇವಮ್ಮ ಸ್ಕೋಮಯ್ಯ ಕೇಳಿ
ಈ ಹುಡ್ಗಿ ಮಾಂಸ್ಪಿಂಡದಲ್ಲುಟ್ಟವಳೆ
ಇವುಳ್ತಕ್ಕೊಂಡೋಗಿ ನಾನು ಕೈಲಾಸ್ಕೆ
ಅಧಿಪತಿ ಮಾಡ್ಕೊಂಡು

ಪಟ್ಟದ ಪಾರ್ವತಿ ಜಗನ್ಮಾತೆ ಅಂತ ಗೌರವ ಮಾಡಿ
ಕೈಲಾಸದಲ್ಲಿ ನಾವು ಇಟ್ಕೋತೀವಿ -

ಹೆಣ್ಣು ನಮ್ಮದು ತಾಯಿ ಹೊನ್ನು ಚಿನ್ನ ನಿಮ್ದು
ನನ್ನ ಕೈಲಾಸ್ಕೆ ನೀವ್ ಮಾತ್ರ ಬರಬೇಡಿ |

ನಿಮ್ಮ ಮರ್ತುಲೋಕುಕ್ಕೆ ನಾವು ಬರೋದಿಲ್ಲ
ನಮ್ಮ ಕೈಲಾಸ್ಕೆ ನೀವು ಬರಬೇಡಿ |

ಬೈಹೊಟ್ಟೆ ಒಳುಗೆ ಹುಟ್ಟವ್ವೆ ಗೌರಮ್ಮ
ನಮ್ಮಕೈಲಾಸ್ಕೆ ಕಾರಣ ಮಾಡುತೀವಿ |

ನಿಮ್ಮ ಭೀಮಾವತಿ ಪಟ್ಣಾಕೆ ನಾವು ಬರೂದಿಲ್ಲ
ನಮ್ಮ ಕೈಲಾಸ್ಕೆ ನೀವು ಬರಬೇಡಿ |

ನಮ್ಮ ಕೈಲಾಸ್ಕೆ ನೀವು ಬರಬೇಡಿ ಅಂತ್ಹೇಳಿ
ಕರೆನೆರೆ ಮಾಡಿ ಕರುಕೊಂಡ್ರು" |

"ಹೊನ್ನು ಚಿನ್ನದಾಸೆಗೆ ಹೆಣ್ಣು ಮಾರುವ
ಜಾತಿ ನೀವು
ಅಮ್ಮಯ್ಯ ಈ ಬುದ್ಧಿ ನಿಮಗೆ ತರುವಲ್ಲ |

ನನ್ನಂತ ಮೊನುಗಾರ ಆಗ ಹುಟ್ಟಿದ್ರೆ ನಾನು
ಗೌರಿ ಉದ್ದಕೆ ಹೊನ್ನ ಸುರಿದಿದ್ದರೂ |

ಗೌರಿ ಉದ್ದ ಹೊನ್ನ ಸುರಿದಿದ್ದರೂ ನಾನಾಗ
ಅಕ್ಕನ ಮಾರಿ ಕೊಡುತಿರುನಿಲ್ಲ |

ನನ್ನಂತ ತಮ್ಮ ನನ್ನಕ್ಕಂಗಾಗಿದ್ರೆ
ಅಕ್ಕನ - ಹಟ್ಟಿಂದಾಚ್ಕೆ ಕೊಡುತಿರುನಿಲ್ಲ |

ಮುಂಚೋದ ಕೆಲುಸಕ್ಕೆ ಚಿಂತೆ ಮಾಡಿ ಸುಕುವಿಲ್ಲ
ಬುತ್ತೀಯ ಬ್ಯೇಗುದಲಿ ಕಟ್ಟಮ್ಮ |

ಕಜ್ಜಾಯ್ಪ ಬುತ್ತೀಯ ಬೇಗಾನೆ ಕಟ್ಟಮ್ಮ
ನಮ್ಮಕ್ಕ ಗೌರಮ್ಮನ ಕರತರುವೆ |

ಹಾಲು ಅನ್ನದ ಬುತ್ಯಾ ಬ್ಯಾಗುದಲ್ಲಿ ಕಟ್ಟಮ್ಮ
ಮುಂದೆ ನಾ ಕೈಲಾಸ್ಕೆ ಹೋಗುತೀನಿ |

ಅಕ್ಕ ಗೌರಮ್ಮನ ಹೋಗಿ ಕರತಂದು ತಾಯಮ್ಮ
ನಾನರ್ತದಲಿ ಹಬ್ಬವ ಮಾಡಬೇಕು" |

ಮಗನಾಡಿದಂತ ವಾಕ್ಯಾನವನ್ನು ಕೇಳಿ ಮಾದೇವಮ್ಮ
"ಮೈದಾಳ್ಯಾಮ
ಸಾಕ್ಷಾದ್ಪರಮೇಶ್ವರ ಜಗತ್ಮಾತೆ ಗೌರಮ್ಮ
ಈ ಮರ್ತುಲೋಕುಕ್ಕೆ ಬರೋದಿಲ್ಲ ಕಂದ
ಬ್ಯಾಡ ಸುವ್ಕಿರಪ್ಪ"
"ತಾಯಮ್ಮ ನಮ್ಮಕ್ಕನ ನಗ್ನ ಮಾಡಿ
ಎಷ್ಟೊರ್ಷ ಆಯ್ತಮ್ಮ?"
"ಮೈದಾಳ್ಯಾಮ ನಿಮ್ಮಕ್ಕನ ನಗ್ನ ಮಾಡಿ
ಈವತ್ಗೆ ಹನ್ನೆರಡೊರ್ಷ"
"ನಾನ್ಹುಟ್ಟಿ ಏಳೊರ್ಷ!"
"ತಾಯಮ್ಮ ಹನ್ನೆರಡೊರ್ಷದ ಲೆಕ್ಕಾಚಾರ ಬೇಕಿಲ್ಲ
ನಾನುಟ್ಟಿದೆನಲ್ಲ ಏಳೊರ್ಷ?
ಏಳೊರ್ಷದಿಂದೀಚ್ಕೆ
ಒಂದೊ ಹಬ್ಬ ಒಂದ್ ಜಾತ್ರೆ ಒಂದ್ ಕಷ್ಟ ಸುಕುದಲ್ಲಿ
ನಮ್ತಂದೆ ತೀರೋದಂತ ಆರಭ್ಯ ಕಷ್ಟದಲ್ಲೂ ಕೂಡ
ನಮ್ಮುಕ್ಕ ನಮ್ಮನೆಗೆ ಬಂದಿಲ್ಲ
ನಮ್ಮಕ್ಕ ಏನ್‌ತೆಪ್ ಮಾಡಿದ್ದಾಳೆ
ಆ ತೆಪ್ಪನ್ನ ಹೇಳು
ನಮ್ ಭಾವ್ಗುಂಗೆ ತೆಪ್ ಕೊಟ್ಟುಟ್ಟು ನಮ್ಮಕ್ಕನ ಕರ್ಕೊಂಡ್ಬತ್ತಿನಿ -

ಅಕ್ಕಭಾವಾರಿಂದ ಅರಮನೆ ಮಾರಿದರು ಸರಿಯೆ
ನಾ ಬಿಟ್ಟು ಬರುವಂತ ಮಗನಲ್ಲ |

ಕರಿಯಕೆ ನಾ ಹೋಗಿ ಬರಿಗೈಲಿ ಬರೋನಲ್ಲ
ಬರದಿದ್ರೆ - ಅವ್ರ ಪಾದ್ದಲ್ಲಿ ಬಿದ್ದು ಪ್ರಾಣ ಬುಡುತೀನಿ" |

"ಆ ಕೊಟ್ಟಿರುವಂತ ತೆರುವನ್ನು ನೀನ್ಹ್ಯಾಗೆ
ತಾನೆ ಕೊಟ್ಟಿಯಪ್ಪ?" ಅಂದ ತಾಯಿ
"ಅಮ್ಮ ಕೈಲಾಸ್ಕೆ ಹೋಯ್ತೀನಿ
'ನಮ್ಮಕ್ಕನ ಕಳೀಸಿ ಬುದ್ಧಿ' ಅಂತ ಕೇಳ್ತೀನಿ
ನಾವು ಕಟ್ಟಾರದ ತೆರ ಕಟ್ಟಿದ್ದೀವಿ ಕಣಯ್ಯ
ಕಳಿಸಕಿಲ್ಲ' ಅಂತರೆ
ನ್ಯಾಯ ಅಲ್ಲಿ ಬೀಳ್ತದೆ.
'ಏನ್ ಸ್ವಾಮಿ ನೀವು ಕಟ್ಟಾರದ ತೆರುವ ಕಟ್ಟಿದ್ರೆ
ನಮ್ಮಕ್ಕನ ಕುಂಡ್ರುಸ್ಕೊಂಡ್ ಕೂತಿದ್ದೀರ್ಯೊ?'
'ನಿಮ್ಮಕ್ಕ ಇನ್ನೇನ್ ಮಾಡ್ತಿರ್ತಾಳಪ್ಪ?' ಅಂತಂದ್ರೆ -

'ಲೋಕ ಚಂಚರಣಗೋಗಿ ಬರುವ ಈಸ್ವರನೀಗೆ
ಪಾದಕಾಗಣಿ ತಂದು ಎರೀನಿಲ್ವ? |

ಅದುಕ್ಕೊಂದ್ ಲಕ್ಷ ವಜಾ ಅಂತೀನಿ
'ಬಾಕಿದಪ್ಪ?' ಅಂತರೆ
'ನಮ್ಮಕ್ಕ ನೂರೊಂದ್ಸಗೆ ಪದಾರ್ಥ ಅಡ್ಗೆ ಮಾಡಿ
ಬೆಳ್ಳಿ ತಟ್ಟೆ ಒಳುಗೆ ಎಡೆ ಪಡುಸ್ಕಿಲ್ವ?
ಕರ್ಪೂರದ ಗಂಧದ ಕಡ್ಡಿ ಹಸ್ಸಿ
ಊಟ ಮಾಡಿ ಬುದ್ಧಿ ಅಂತ್ಹೇಳಿ ನಮ್ಮಕ್ಕ
ಅವುರ್ ಪಾದುಕ್ಕೆ ನಮುಸ್ಕಾರ ಮಾಡ್ತಿರ್ನಿಲ್ಲವ?
ಅದುಕ್ಕೊಂದ್ ಲಕ್ಷ ವಜ ಅನ್ತೀನಿ -

ಹಾಲು ಅನ್ನದ ಬುತ್ಕ ನೀ ಬ್ಯಾಗಾನೆ ಕಟ್ಟಮ್ಮ
ಭಾವ ಮಲ್ಲಿಕಾರ್ಜುನ್ನ ಕರತರುವೆ |

ಅಮ್ಮ ನಮ್ಮಕ್ಕುನ ನಗ್ನ ಮಾಡಿ ಕಳೀಸುವಾಗ
ಒಂದುಗೆ ಮುತ್ತೈದೇರ್ಕಳಿಸ್ಕೊಡ್ಲಿಲ್ಲವೆ?"
"ಅಪ್ಪಾ ನಾ ಮದುವೆ ಗಲಾಟೀಲಿದ್ದಿ
ಐದ್ನನ ಹೋಗಿದ್ದರಂತೆ"
"ಅವ್ರು ಬಂದಿದ್ರೆ ಹೇಳು
ನಮ್ಮಕ್ಕ ಚಂದಾಗಿದ್ದಳ ಕೇಳ್ಕಂಬತ್ತೀನಿ"
"ಬರ್ನಿಲ್ಲ ಕಣಪ್ಪ ರಾಮ"
"ಯಾಕಮ್ಮ ಬರ್ನಿಲ್ಲ?"
"ಮಗನೆ ಈ ಮರುತ್ಲೋಕುದಲ್ಲಿ ನರುರಾಟುದೊಳಗಿದ್ದೊ
ಗೌರಮ್ಮನಿಂದಾಗಿ
ಹೂವ್ನಿಂದ ನಾರು ಸೊರ್ಗ ಸೇರ್ತು ಅಂತಾರಲ್ಲ
ಆ ಪ್ರಕಾರುವಾಗಿ ಹೋದೋರೆಲ್ಲ ಕೈಲಾಸ ಕಂಡ್ರು
ಇನ್ನೂ ಮರುತ್ಲೋಕದಲ್ಲಿ ಸುಕುವಿಲ್ಲ
ನಾವು ಇಲ್ಲೇ ಇರ್ಬೇಕಂತ್ಹೇಳಿ
ಅವುರಾತ್ಮ ಸಂತೋಷದಿಂದ
ಅವುರ್ ಕೈಲಾಸದಲ್ಲೆ ಉಳುದ್ ಬುಟ್ಟವ್ರೆ"
"ಅವುರ್ ಗಂಡ್ಡೀರ್ ಬಂದು ನಿನ್ನ ಕೇಳ್ಲಿಲ್ವೆ?"
"ಕೇಳ್ತರೆ ಕನಪ್ಪ"
"ಏನಂತ ಹೇಳ್ತಿದ್ದೀಯೆ?"
"ಈವತ್ಕತ್ತರೆ ನಾಳೆ ಬತ್ತರೆ ನಾಳಿದಾರೂ ಬತ್ತರೆ ಅಂತ್ಹೇಳಿ
ಇದೇ ರೀತಿ ಸುಳ್ಳ್ ಹೇಳ್ತಿವ್ನಿ ಕಂದ.
ಅವುರ್ ಬರ್ನಿಲ್ಲ ಇವುರ್ ಕೇಳೋದ್ ತೆಪ್ಪಿಲ್ಲ"
"ಅಮ್ಮ ಕಟ್ಟಿಬಾರದ ತೆರ ಕಟ್ಟವ್ನೆ
ಇಕ್ಕಬಾರದ ನಗಾ ಹಾಕಿದ್ದಾನೆ.
ಅವ್ನನೆಡ್ತೀಗೆ ಕಟ್ಟುನಿಟ್ಟು ಮಾಡಿ ತಡ್ಕಳೊ ಅಧಿಕಾರ ಅವುನ್ಗದೆ.
ಆದ್ರೆ, ಸೋಬಾನೆ ಹೇಳಕೋದೋಳ್ ಸೊಸೆಯಂತ ಕೂಡ್ಕಂಡಂಗೆ
ಒಂದ್ಗೋದ ಮುತ್ತೈದೇರಿರುಸ್ಕೊಂಡಪ್ಪುನಲ್ಲ
ಅವುನೆಂತಾ ಅಧಿಕಾರಸ್ತ
ಪರುವಿಲ್ಲ ಇದು ಮುಂದುಕ್ಕೆ ನ್ಯಾಯುಕ್ ಬೇಕಾಯ್ತದೆ
ನಾನು ಕೈಲಾಸುಕ್ಕೋಗಿ 'ಬನ್ನಿ ಭಾವಾಜಿ' ಅಂತ ನಾನು
ಬೇಕಾದಷ್ಟು ಪಾಡ್ಸಿದ್ದು ಕರ್ಕೊಂಡ್ಬತ್ತೀನಿ
ಮರುತ್ಲೋಕುಕ್ಕೆ ಬಂದ್ಮೇಲೆ
ನಮ್ಮಕ್ಕುನ ಮನೆಗೆ ಕಳುಸ್ಬುಟ್ಟು
'ಭಾವಾಜಿ ನಮ್ಮಕ್ಕನ ನಗ್ನ ಮಾಡ್ಕೊಂಡು
ನೀವೋಗೋಗ
ಭೀಮಾವತಿ ಪಟ್ಣ ಹ್ಯಾಗಿತ್ತು
ಈಗ ಹ್ಯಾಗಿದೆ' ಅಂತ ತೋರಕೆ ಕರ್ಕೊಂಡ್ಬತ್ತೀನಿ
ಕರ್ಕೊಂಡ್ಬಂದು ಐದ್ ಜನ ಮುತ್ತೈದೇರ್ ಗಂಡ್ಡೀರ್ ಕೈಲಿ
ಜಡಿಯ ಹಿಡಿದೆಳ್ದು ಬಗ್ಸಿ
ಒಬ್ಬೊಬ್ಬ ಎಳ್ದೆಳ್ದು ಅಂತ
ಐದಾಳ್ ಹತ್ತು ಗುದ್ದು ಹೊಡೇಸಿ
ಮುತ್ತೈದೇರನ್ನ ತಡ್ಕೊಂಡಿದ್ದು ತಪ್ಪು ಅನ್ನುದಾಗಿ
ಎಲಡ್ಕೆ ಒಳುಗೆ ನಾಕಾಣೆ ಅಪ್ರಾದವನ್ನು ಮಡಿಗ್ಸಿ
ಮುಡಿ ಊರ್ಸಿ ಅಡ್ಡೀಳುಸ್ತೆ ಹೋದ್ರೆ
ಮೈದಾಳ್ ರಾಮಣ್ಣೆ ತಾಯಿ ನಾನು?"
ಅಂತ ತಾಯೊಂದ್ಗೆ ಹೇಳ್ದ -

ಚಿಕ್ಕ ಮಗನಾಡಿದ ಮಾತ ಮುಕ್ಕಣ್ಣ ಕೇಳಿ
ಹರನು ಮಲ್ಲಯ್ಯ ಮೊರುದೆದ್ದ |

"ಪಾರ್ವತಿ ನೋಡಿದ್ಯಾ ಮೈದಾಳರಾಮುನ
ಕೇಳಿದ್ಯಾ ಅವನಾಡಿದಂತ ವಾಕ್ಯಾನವನ್ನ?
ಅವನ ತಾಯಿ ಮಾದೇವಮ್ಮ
ದಿಕ್ಕಿಲ್ಲದ ಮಗು ಅಂತ ಬೇಡ್ಕೊಳೋವತ್ಗೆ
ನನ್ನ ಜರ್ದು ಮಾತಾಡುದ್ನಲ್ಲ ಪಾರ್ವತಿ !
ಈ ತಕ್ಷಣವಾಗಿ ಹೋಗಿ
ಶ್ರೀಶೈಲ ಪರ್ವತದ ಮೇಲೆ ನಿಂತ್ಕೊಂಡು
ಭೀಮಾವತಿ ಪಟ್ಟಣವನ್ನು
ಕೆಂಡದ ಮಳೆ ಇಸದ ಮಳೆ ಕರ್ದು
ಭೀಮಾವತಿಯ ಸುಟ್ಟು ಭಸ್ಮಾಂಕಾರ ಮಾಡ್ತೀನಿ"
ಅಂತ್ಹೇಳಿ ಉಗ್ರಗ್ರೋಪುದಲ್ಲಿ ನಿಂತವುರೆ.
ಸ್ವಾಮಿಯವರ ಕ್ರೋಪುಕ್ಕೆ ಕೈಲಾಸ ತಲ್ಲಣುಸೋಗದೆ
ಪಾರ್ವತಿ ಅಮ್ಮಯ್ಯನವುರ್ಗೆ

ಕೈಲಾಸ್ದಲ್ಲಿ ನಿಂತ್ಕೊಳಕೆ ಜಾಗ ಸಾಲದೆ ಹೋಗ್ಬುಡ್ತು
ಆಗ ಪಾರ್ವತಿ ಅಮ್ಮಾಯ್ರ
ಸ್ವಾಮಿಯವುರ್ಗೆ ಕೈಗಳನ್ನು ಮುಗುದು -

"ಅರಿಯಾದ ಕಂದಯ್ಯ ಆಡಿದನು ಈ ಮಾತ
ಒಡವ ಕಂದನ ನೀನು ಕಾಪಾಡು ದೇವ |

ಪರಮಾತ್ಮ ಏಳೊರ್ಷದ ಬಾಲಕ
ಅವುನು ಯಾರೂಂತ ತಿಳ್ಕೊಂಡಿದ್ದೀರಿ?
ನ್ಯಾಯವಾಗಿ ನಾನು ಆ ಮೈದಾಳ ರಾಮಯ್ಯುಂಗೆ
ಅಕ್ಕ ಆಗ್ಬೇಕು! ನೀವು ಭಾವ ಆಗ್ಬೇಕು ! -
ಹ್ಯಾಗೆ ಹೇಳಿ?
ಹಿಂದೆ ಆ ದಿನ ನಾವಿಬ್ಬರೂ ಒಂದು ಕದನ ಆಡ್ದೊ
ಚಿಕ್ಕಗಂಗೆ ಜೊತೆ ನೀವು ಚಕ್ಕಂದ ಆಡ್ತಾ
ಮನೆಗೆ ತಡುವಾಗಿ ಬಂದ್ರಿ
ನೀವು ಗಂಗೇ ಮನೇಲಿದ್ದ ಸುದ್ದಿಯ
ನಮ್ಮ ಗಿಣಿರಾಮ ಹೇಳ್ದ
ಅದ್ಕೆ ನೀವು ಸಿಟ್ಕೊಂಡು -

'ಗಂಗೇ ಮನೆಲಿದ್ದ ಸುದ್ದಿ ಹೇಳಿದರ್ಯಾರು?
ಇವುನೇ ತಾನೆ ಈ ಗಿಣಿರಾಮ |

ಗಂಡ ಹೆಂಡತೀರ್ಗೆ ತಂದು ಹಾಕೋ ಇವ್ನು
ಹೋಗಿ ಹುಟ್ಟಲಿ ಧರೆಯಲ್ಲಿ !

ಕೊಂಡುಗದ ಮಾತೀಗೆ ಬಂಡ ಓ ಗಿಣಿರಾಮ
ಹುಟ್ಕೋಗು ಹುಟ್ಟು ಬಂಜೆ ಹೊಟ್ಟೆಯಲಿ' |

ಹಾಗಂತ ಶ್ಯಾಪವ ಕೊಟ್ಟವರು ನೀವು
ಆ ಗಿಣಿರಾಮಾನೇ ಈ ಮೈದಾಳ ರಾಮ |

ಅವುನ್ಗೆ ಶ್ಯಾಪ ಕೊಟ್ಟಾಗ
'ಸ್ವಾಮಿ ನಾನು ಭೂಲೋಕದಲ್ಲಿ ಹುಟ್ತೀನಿ
ಎಲ್ ಹುಟ್ಟೇಕು ? ಯಾರ್ಗೆ ನಾನ್ ಮಗನಾಗ್ಬೇಕು
ಯಾವಾಗ ನನಗೆ ಮೋಕ್ಷ ಅನ್ನೋದ
ನನಗೆ ತಿಳುಸ್ಬೇಕು ಸ್ವಾಮಿ'
ಅಂತ್ಬೇಳಿ ಬೇಡ್ಕೋತು.
ಅದ್ಕೆ ನೀವು ಭೀಮಾವತಿ ಪಟ್ಣಾದಲ್ಲಿ
ಸ್ಕೋಮಯ್ಯ ಮತ್ತು ಮಾದೇವಮ್ಮ ಅನ್ನೊ
ಶಿವಭಕ್ತ್ರು ಹೊಟ್ಟೇಲುಟ್ಟು
ಮೈದಾಳುರಾಮ ಅಂತ ಹೆಸ್ರು ತಕ್ಕೊಂಡು
ಏಳೊರ್ಷಕ್ಕೆ ಕೈಲಾಸಕ್ಕೆ ಬಾರಪ್ಪ ಅಂದಿದ್ರೆ
ಅವನು ಗಿಣಿರಾಮ ಆಗಿದ್ದಾಗ
ನನ್ನ ಅಕ್ಕಯ್ಯ ಅಂತಿದ್ದ ನಿಮ್ಮ ಭಾವಾಜಿ ಅಂತಿದ್ದ
ಈಗ ಮರ್ತುಲೋಕುದಲ್ಲಿ ರಾಮಯ್ಯನಾಗಿ
ನನ್ನ ಅಕ್ಕಯ್ಯ ಅಂತ ಕರೀತಿದ್ದಾನೆ
ನಿಮ್ಮನ್ನ ಭಾವಾಜಿ ಅಂತ ಕರೀತಿದ್ದಾನೆ
ಅವುನ್ಗೆ ನಾನೇ ಅಕ್ಕ ನೀವೇ ಭಾವ
ಇದರಲ್ಲಿ ತಪ್ಪೇನು ಹೇಳಿ ? -

ಅರಿಯದ ಕಂದಯ್ಯ ಆಡೀದ ಮಾತೀಗೆ
ಉರಿಯುವ ಕ್ಯಾಪ ನಿಮುಗ್ಯಾಕೆ |

ಅರಿತೊ ಅರಿಯದೆಯೊ ಆ ಕಂದ ಹಾಗೆ ಮಾತಾಡ್ತು
ಮಕ್ಕು ಮಾತ್ಗೆ ನೀವು ಇಷ್ಟು ರ್ಯಾಸವೇಸವಾಗ್ಬೇಕ?
ತಿಳಿದೇನೆ ಒಂದಾಡುತ್ತೆ
ಆ ಮಗುವನ್ನು ಕಾಪಾಡುವಂತ ಭಾರ ತಮ್ದು ಸ್ವಾಮಿ"
"ಪಾರ್ವತಾ, ಇವುರಕ್ಕಯ್ಯನ ಕೊಟ್ಟು ನಗ್ನ ಮಾಡಿದ್ದಾನ ?
ಮಾರಿಗುಡಿ ಚಾವುಡಿ ಕಂಬುಕ್ಕೆ ನೂಲಗ್ಗದಲ್ಲಿ ಕಟ್ಟಿಸಿ
ನಾಲ್ಕಾಣೆ ಅಪ್ರಾದುವನ್ನು ಮಡುಗ್ಸಿ
ಅಡ್ಡೀಳುಸ್ತೀನಿ ಅಂತ ಹೇಳವುನಲ್ಲ ಆಗ್ಬೋದ?"
"ಪರಮಾತ್ಮ ತಪ್ಪನ್ನ ತಮ್ಮಲ್ಲಿ ಮಡೀಕೊಂಡು
ರಾಮನ ಮ್ಯಾಲೆ ತಪ್ಪೊ್ರ್ಸೋದು ಸರಿಯ ಸ್ವಾಮಿ ?
ಮರ್ತುಲೋಕುದಲ್ಲಿ ಮಾದೇವಮ್ಮ ಸ್ಕೋಮಯ್ಯನವರು
ಮಕ್ಕಿಲ್ಲದೆ ಇಸುವನ್ನು ಕುಡಿದು ಪ್ರಾಣತ್ಯವಾಗೋಗ
ತಮುಗೇನಾದ್ರೂ ಕೈಲಾಸ್ಕೆ ವಾಲೆ ಬರುದಿದ್ರ?
ನಮಗೆ ಮಕ್ಕು ಫಲ ಕೊಡಿ ಅಂತ?"
"ಇಲ್ಲ ಪಾರ್ವತ ನಾವೇ ಹೋದೊ"
"ಎಷ್ಟು ವರವನ್ನು ಕೊಟ್ಟೆರಿ ಸ್ವಾಮಿ?"
"ಒಂದು ಗಂಡು ಸಂತಾನವಾಗ್ಲಿ ಅಂತ ವರ ಕೊಟ್ಟೊ"
"ಒಂದು ಗಂಡು ಸಂತಾನವಾಗ್ಲಿ ಅಂತ
ವರಕೊಟ್ಟ ಮ್ಯಾಲೆ ಅದರಿಂದ್ಲುಂಟೆ
ಒಂದ್ಹೆಣ್ಪುತ್ರಿಯಾಗ್ಲಿ ಅಂತ ಯಾಕೆ
ವರವನ್ನ ಕೊಡಬಾರದಿತ್ತು ?
ಅವುನ್ಗೆ ಒಡುಟ್ಟೆಲ್ಲ
ಅವನ ಜೊತೆ ಹುಡುಗ್ರು
ಅಕ್ಕಭಾವನ ಕರು ಹಬ್ಬ ಮಾಡ್ತಾ ಅವ್ರೆ
ಅವ ಅಮವಸ್ಯ್ಕೆ ಸರಿ

ತಾವು ಕೇಳುವಷ್ಟೂ ಸರಿ"
"ಪಾರ್ವತ, ಅವರ ತಾಯಿ ಕೈಲಿ ಬುತ್ತಿ ಕಟ್ಟುಸ್ಕೊಂಡು
ಶ್ರೀಶೈಲ ಪರ್ವತಕೆ ಬರ್ತನೆ
ಆಗ ಅವುನ್ಗೆ ಕೊಡುಬಾರದಂತ ಕಷ್ಟವನ್ನು ಕೊಟ್ಟು
ಅವುನ್ನ ಕೈಲಾಸ್ಕೆ ಕರ್ಕೊಳ್ದೇ ಹೋದ್ಮೇಲೆ
ನಾನು ಪರಮೇಶ್ವರುನೇನೆ ಪಾರ್ವತಿ?" ಅಂದ್ರು

೭. ನನ್ಮಗುನ್ನ ನೀವೇ ಕಾಪಾಡ್ಬೇಕು

ಸುಪ್ಪಿ ಹೇಳಮ್ಮ ದೇವರ ದೇವ ಸುಪ್ಪಿ | ಸೊಲ್ಲು |

ಇತ್ಲಾ ಕಡೆ ರಾಮಯ್ಯ -

"ಹೊತ್ತು ಹೋಯಿತು ಅಸ್ತಂಗ ಆದೀತು
ಅಕ್ಕನ ಗಿರಿಯಲ್ಲಿ ಹೋಗಿ ತಳಗುವೆನು |

ಅಕ್ಕ ಗೌರಮ್ಮನಿಂದ ಅರಮನೆ ಮಾರುದ್ದೂ ಸರಿಯೆ
ಬಿಟ್ಟು ಬರುವಂತ ರಾಮನಲ್ಲ |

ಬುತ್ತಿ ಕಟ್ಟು ತಾಯಿ ನಾ ಕೈಲಾಸ್ಕೆ ಹೋಯ್ತೀನಿ
ಅಕ್ಕಭಾವಜೀರ ಕರ್ಕೊಂಡು ಬರುತೀನಿ |

ಅಮ್ಮ ನಾನು ಕರ್ಕೊಂಡ್ಬಂದ ಮ್ಯಾಲೆ
ನೀನು ಅಕ್ಕಿಲ್ಲ ಬ್ಯಾಳಿಲ್ಲ ಅಂದ್ರೆ ಕೇಳದಿಲ್ಲ ನಾನು
ನಾನು ಕೈಲಾಸುಕ್ಕೋಗುವಾಗಲೆ
ನಾನ್ಹೇಳಿದ ಸಾಮಾನು ಅಡ್ಕವಾಗ್ಬೇಕು -

ಹನ್ನೇರ್ದ್ ಕಂಡೀಗ ತಾಯಿ ಬೆಳ್ತಕ್ಕಿಯ ತರಿಸಿ
ಕಜ್ಜಾಯ ಮಾಡಿ ಇರುಸಮ್ಮ |

ಅಮ್ಮ ಸ್ವಾಮಿಯೊಂದ್ಗೆ
ಲಕ್ಷುದ್ಮೇಲೆ ತೊಂಬತ್ತಾರು ಕೋಟಿ ಶರಣ ಮಾತ್ಮರು
ಬೇಕಾದಂತ ಶಿವುದಂಡೆಲ್ಲ ಬತ್ತದೆ
ಹನ್ನೆರ್ಡ್ ಕಂಡ್ಗ ಬೆಳ್ತಕ್ಕಿ ಉನಿಹಾಕಿ
ಕಜ್ಜಾಯ ಮಾಡಿ ಮಡಿಕೊ -

ಹನ್ನೆರ್ಡ್ ಕಂಡುಗ ಉದ್ದುನ ಬ್ಯಾಳೆ ತರ್ಸಿ
ಹಪ್ಪಳವಿಕ್ಕಿ ನೀನು ಇರಿಸಮ್ಮ |

ಲಕ್ಷ ವರಮಾ ಕೊಟ್ಟು ಒಂದು ಮುದ್ರೆಯುಂಗ್ರ ಮಾಡ್ಸಮ್ಮ
ನಮ್ಮ ಭಾವ್ನೆಗ್ಗೆ ಮರಿಯಾದಿ ಕೊಡಬೇಕು |

ಅಮ್ಮ ಇದು ಲಿಂಗಮುಂಗೆ ಅತ್ತೆ ಮರಿಯಾದ
ಹಬ್ಬ ತೀರುಸ್ಕೊಂಡು ಕೈಲಾಸುಕ್ಕೋದ್ಮೇಲೆ
ಏಷ್ಟು ಬ್ರಮ್ಮ ಈಸ್ವುರ ವೊಸಿಷ್ಟ ಮೂರುಸಿಗಳು
ಆನಂದ ಮಾರುಸಿಗಳು
ಎಲ್ಲಾ ಸೇರ್ತರೆ.
'ಪರಮಾತ್ಮ ಮರ್ತುಲೋಕುಕ್ಕೆ
ಅತ್ತೆ ಮನೆಗೂಟುಕ್ಕೋಗಿದ್ರಿಯಲ್ಲ
ನಿಮ್ಮತ್ತೆ ಮನೇಲಿ ಅಳಿಯುಂಗೆ ಏನ್ ಕೊಟ್ರು'
ಅಂತ ಕೇಳ್ತರೆ
'ಮುದ್ರೆ ಉಂಗ್ರ ಕೊಟ್ರಾ?' ಅಂತ ಕೇಳ್ದಾಗ ತೋರುದ್ರೆ
ನಿನ್ನ ಕೀರ್ತಿ ಕೈಲಾಸದಲ್ಲಿ ಕೊಂಡಾಡ್ಬೇಕು -

ಪುಣ್ಯಕೋಟಿ ಎನ್ನುವ ಹಸುವನ್ನು ತರಿಸಮ್ಮ
ಅಕ್ಕಯ್ಗೆ ಅಡುಗುಳಿ ನಾನು ಕೊಡಬೇಕು |

ಇದು ನನ್ನ ಮರಿಯಾದಿ ತಾಯಿ.
ನಮ್ಮಕ್ಕಯ್ಯ ಹಬ್ಬ ತೀರುಸ್ಕೊಂಡು ಕೈಲಾಸ್ಕೋದಾಗ
'ಒಡಹುಟ್ಟುಗೋಸ್ಕರವಾಗಿ ಏನ್ ಮರ್ಯಾದೆ ಕೊಟ್ನ?' ಅಂದ್ರೆ
ಹಸುಕರು ಕೊಟ್ಟಿದ್ದಾನೆ ಅನ್ನೋದಾಗಿ
ನನ್ನ ಕೀರ್ತಿ ಕೊಂಡಾಡಬೇಕು -

ಹನ್ನೆರ್ಡು ಗಾಡಿ ಒಳುಗೆ ತಟ್ಟೆ ಚೊಂಬು ತರಿಸಿ
ಬ್ಯಾರೆ ವಿಧುವಾಗಿ ನೀನು ಇರುಸಮ್ಮ |

ಹತ್ತು ಗಾಡಿವೊಳುಗೆ ಬಾಳೆಲೆಯ ತರುಸಮ್ಮ
ಬ್ಯಾರೆಯಾಗಿ ಅದನು ಮಡುಗಮ್ಮ |

ಇನ್ನೊತ್ತಾಡಿಯೊಳುಗೆ ಉಗ್ರಾಣಿ ಚೊಂಬು ತರುಸಿ
ಅದು ಬ್ಯಾರೆ ವಿಧುವಾಗಿ ಮಡುಗಮ್ಮ |

ಅಮ್ಮ ಬಂದಂತ ಶರಣ ಮಾತ್ಮರಿಗೆ
ಬಾಳೆಲೆಲೂಟ ಮಾಡ್ತೀನಿ ಅಂದ್ರೆ ಬಾಳೆಲಾಗ್ಬೇಕು
ತಟ್ಟೆಲೂಟ ಮಾಡ್ತೀನಂದ್ರೆ ತಟ್ಟೆ ಕೊಡ್ಬೇಕು
ಹತ್ತಾಡಿವೊಳ್ಗೆ ಪಟ್ಟೆಪೀತಾಂಬ್ರ ತರಿಸಿ

ನಮ್ಮಕ್ಕನ ಜೊತೆ ಬರೋ ಮುತ್ತೈದೇರ್ಗೆ ದಾನ ಕೊಡಬೇಕು
ಹತ್ಸಾಡಿ ಒಳುಗೆ ಗಂಧೆಣ್ಣೆ ತರುಸಮ್ಮ
ನಮ್ಮರಮನೆಗೆ ಲ್ಯಾಪ್ಣೆ ಮಾಡ್ಸೇಕು
ಬ್ರಾಮಣ್ರು ಹಬ್ಬ ಮಾಡುದ್ರೆ ಸುಣ್ಣ ಕೆಮ್ಮಣ್ಣುಗಳ
ಗ್ಯಾಡ್ಸೆರ್ಸುತರೆ
ನಾವು ಹಬ್ಬ ಮಾಡ್ಸೇಕಾದ್ರೆ
ಹತ್ಸಾಡಿ ಗಂಧೆಣ್ಣೆ ತರ್ಸಿ ಅರ್ಮನ್ಗೆ ಲ್ಯಾಪ್ಣೆ ಮಾಡು ೩೮೧೦
ನಮ್ ಭಾವ ಮಲ್ಲಿಕಾರ್ಜುನ ಬತ್ತರೆ
ಶರಣಮಾತ್ಮುರು ಬತ್ತರೆ
ಯಾವ್ಕಡೆ ತಿರ್ಗುದ್ರೂವೆ ಘಮಘಮಾಂತ
ಸುವಾಸ್ನೆ 'ಎಸೀಬೇಕು'
ಮಗನಾಡಿದಂತ ವಾಕ್ಯಾನವನ್ನು ಕೇಳಿ
"ಅಯ್ಯೋ ಪರಮೇಶ್ವರ
ಇಷ್ಟ್ಗತ್ರುದ್ ಸಾಮಾನೇಳ್ತನಲ್ಲ ನಾನೆಲ್ಲೋಗಿ ತರ್ಬೇಕು
ಹಗುಲ್ಗಿದ್ರೆ ಸಂದ್ಗಿಲ್ಲ ಸಂದ್ಗಾದ್ರೆ ಹಗುಲ್ಗಿಲ್ಲ
ಇಂತ ಘೋರುವಾದಿ ಕಷ್ಟ ನನುಗದೆ
ನನ್ನ ಮಗ ಇಷ್ಟೊಂದ್ ಸಾಮಾನಏಳ್ತಾ ಅವುನಲ್ಲ
ಇವುನ್ಗೆ ಗ್ಯಾನ ಪರಿಸಿದ ಆಯ್ತೋ? ೩೮೨೦
ಎಷ್ಟು ಹೇಳಿದ್ರೂವೆ ಕೇಳೂವ ಮಗನಲ್ಲವಲ್ಲೊ
ದಕ್ಕುವ ಮಗನು ಇವನಲ್ಲ |

ಹೆಡ್ಡನಾಗಿ ಹೆಳವನಾಗಿ ಹುಟ್ಟಿದ್ದರೆ ನನಕಂದ
ನೆಮ್ಮದಿಯ ಬಾಳ ನಡುಸೋನು |

ಇಂತೆ ಚೆಲುವು ಮಗನನ್ನ ಕೊಟ್ಟ ಆ ಪರಮಾತ್ಮ
ಮಧ್ಯಾಂತ್ರದಲ್ಲಿ ಇಂತೆ ಕಷ್ಟುಕ್ಕೆ ಗುರಿ ಮಾಡಬವುದ?"
ಹಾಗಂತ್ಹೇಳಿ ಮಾದೇವಮ್ಮ ದುಕ್ಕ ಮಾಡ್ತಿದ್ದಾಳೆ.
"ಮೈದಾಳ್ತಾಮ ನೀನು ಕೈಲಾಸ್ಕೋಗದು ಕಂಡಿತವಾದ್ರೆ
ನಾನೊಂದು ಮಾತೇಳ್ತೀನಿ ಕೇಳಪ್ಪ -

ಕೈಲಾಸ್ಕೆ ಹೋಗುವ ಕಂದ ರಾಮನೆ ಕೇಳೊ ೩೮೩೦
ನಾನು ನಿನ್ನೊಂದೀಗೆ ಬರುತೀನಿ |

ನಾನು ನಿನ್ನೊಂದೀಗೆ ಬರುತೀನಿ" ಅನುತ್ಹೇಳಿ
ರಂಭೆ ಮಾದೇವಿ ಅಳುತಾಳೆ |

"ಅಳಿಯನ ಕರೆವುದಕೆ ಅತ್ತೇರು ಹೋಗೋದು?
ಪೆತ್ತಮ್ಮ ಈ ಬುದ್ಧಿ ನಿನಗೆ ತರವಲ್ಲ |

ಏನಮ್ಮ ಅಳಿಯನ ಕತ್ತರಕೆ ಅತ್ತೋರೋಗೋದುಂಟ?
ನಾನಿಲ್ದಿದ್ರೆ ನೀ ಹೋಗಿ ಕರ್ಕೊಂಡ್ಬಂದು
ಹೆಣ್ಮಕ್ಕು ಬಾಣಂತನ ಮಾಡ್ತಕ್ಕಂತ ಕರ್ತವ್ಯ ನಿನ್ದು
ನಾನಿರುವಾಗ ನೀ ಯಾಕೆ ಕಷ್ಟ ಪಡುಬೇಕು?"
"ಮೈದಾಳ್ತಾಮ - ೩೮೪೦

ಕೈಲಾಸ್ಕ ಹೋಗುವ ಕಂದ ರಾಮಾ ಕೇಳೊ
ಕೊಂಡೋಗೊ ನನ್ನ ಪ್ರಾಣಾವ |

ಕಂದ ನನ್ ಕಣ್ಗೆ ಮಣ್ ಬಿದ್ದೋದ್ಮೇಲೆ
ನೀನೆಲ್ಲಾರೂ ಹೋಗು
ಮೊದ್ಲು ನನ್ನ ಕೊಂದಾಕೋಗಪ್ಪ
"ಅಮ್ಮ ನಿನ್ ಪ್ರಾಣವನ್ನು ಯಾವಾಗ ಕೊಲ್ತೀನಿ ಗೊತ್ತಮ್ಮ?
ನಾನು ಇಸ್ಕೋಲ್ಕ್ಕಾದಿಂದ ಬಂದು
ಅಕ್ಕಭಾವಿದ್ದರ ಅಮ್ಮ? ಅಂತ ಕೇಳ್ನಿಲ್ವೆ?
ನೀನಿಲ್ಲಾಂತ ಹೇಳ್ನಿಲ್ಲವ?
ಆವಾಗ್ಲೆನೆ ನಿನ್ನುನ್ನ ಒಂದೇಟ್ಗೆ ಎರುಡ್ತುಂಡ್ಮಾಡಿ ಬಿಸಾಕ್ತಿದ್ದೆ
ಇಲ್ಲೀವರ್ಗೂ ನಿನ್ ಪ್ರಾಣವನ್ನ ಯಾಕ್ ಮಡಗಿದ್ದೀನಂದ್ರೆ
ನಾನು ಭಾರಿ ಕಷ್ಟಪಟ್ಟು ಕೈಲಾಸ ಸೇರ್ತೀನಿ ೩೮೫೦
ನಮ್ಮಕ್ಕ ಗೌರಮ್ಮ ನನ್ನ ಕಂಡ ತಕ್ಷಣ್ಕೆ
ಹೆಣ್ಮುಕ್ಕುಗೆ ತಾಯ್ಮಂಡ್ರೆ ತುಂಬ ಪ್ರೇಮ -

'ಬಂದೇನೊ ತಮ್ಮಯ್ಯ ಚಂದಾಗಿದ್ದೀಯ ಕಂದ
ಅವ್ವ ಚಂದಾವೇನೊ ಮಠ ಚಂದವೆ |

ಅವ್ವ ಮಾದೇವಮ್ಮ ಮಠ ಚಂದವೇನೊ ರಾಮ
ಮಾನ್ಯವರು ಸವೀಕ್ಯವಾಗಿದ್ದಾರಪ್ಪ?' |

ಅಂತ ಕೇಳುದ್ರೆ
'ಅಕ್ಕ, ತಾಯಿ ಮಾದೇವಮ್ಮ ಚನ್ನಾಗಿದ್ದಾರೆ
ಆದ್ರೆ ನಾನು ಕೈಲಾಸ್ಕೆ ಬರುವಾಗ
ತಂಟೆ ಮಾಡ್ತ ಇದ್ದ ೩೮೬೦
ತಂಟೆ ಮಾಡುವಾಗ ಅವಳ ಪ್ರಾಣತ್ಯ ಮಾಡಿ ಬಂದೆ' ಅಂತಿನಿ
ಅಂತ ವಾಕ್ಯಾನವನ್ನು ಕೇಳಿ ನಮ್ಮಕ್ಕ ಗೌರಮ್ಮ
'ಏನಪ್ಪ ನಮ್ತಾಯಿನ ಪ್ರಾಣತ್ಯ ಮಾಡಿದ?
ಮತ್ಯಾಕಪ್ಪ ಬಂದೆ?' ಅಂತ ಕೇಳುದ್ರೆ
'ಮರ್ತುಲೋಕುದಲ್ಲಿ ಪಬ್ಬ
ನೀನ್ಬರ್ಲೇಕು' ಅಂತ ಅಕ್ಕುನ್ಗೆ ಹೇಳ್ತೀನಿ
ನಮ್ಮಕ್ಕ ಗೌರಮ್ಮ -

'ತಾಯಿಲ್ದ ತವರೀಗೆ ನಾನ್ಯಾಗೆ ಬರಲಿ ಕಂದ
ನಾ ಬರೂದಿಲ್ಲ ಹೋಗೊ ರಾಮಯ್ಯ |

ತಾಯಿಲ್ದ ತೌರ್ಗೆ ನಾನ್ಯಾಕೆ ಬರ್ಲಪ್ಪ ೩೮೭೦
ನಿನ್ನಬ್ಬುವೋ ಜಾತ್ರಿಯೊ ನೀನೇ
ನೋಡ್ಕೋ ಹೋಗಪ್ಪ' ಅಂತ್ಹೇಳಿ |
ನಮ್ಮಕ್ಕ ಬರೋದಿಲ್ಲ
ಅಲ್ಗೆ ತೌರು ಎನ್ನೊ ಋಣ ತಪ್ಸೋಯ್ತದೆ
ಹಿಂಗಾಗೋದು ನಿನ್ನಿಂದ ಅಲ್ವೆ ತಾಯಿ
ಅದ್ರಿಂದ, ಬ್ಯಾಡ ನಾನ್ಹೇಳಿದಂಗೆ ಸಾಮಾನ
ಜಮಾಯಿಸ್ಕೊಂಡು
ಸುಕುವಾಗಿ ಅರ್ಮಲ್ಲಿರು.
ನಾನೋಗಿ ನಮ್ಮಕ್ಕುನ ಕರ್ಕೊಂಡ್ಬತ್ತೀನಿ" -

"ಕೈಲಾಸಕೋಗುವ ಕಂದ ರಾಮನೆ ಕೇಳು
ನಿನ್ನ ತಾವ್ - ಬಾಳ ಕಾಣದೆಂಗೊ ರಾಮಯ್ಯ | ೩೮೮೦

ಮೈದಾಳ್ಯಾಮ, ನೀನು ಕೈಲಾಸ್ಕೋಯ್ತೀನಿ
ಅಂತ ಓಯ್ತಿದ್ದೀಯಲ್ಲ
ನೀನು ಕೈಲಾಸ್ಕೆ ತಲುಪುದ್ಕ
ಇಲ್ಲ ಹುಲಿ ಕರಡಿ ಬಾದಿಗೆ ಸಿಕ್ಕೊಂಡ್ಕ
ಇದುನ್ನೆಲ್ಲ ಹೆಂಗ್ ತಿಳ್ಕೊಳದಪ್ಪ?"
"ತಾಯಿ ನನ್ ಸಾವ್ ಬಾಳ ಪರೀಕ್ಷೆ ಮಾಡ್ಬೇಕಾದ್ರೆ
ಒಂದ್ ಕೊಣ್ಮಾವ್ ರುಕ್ಷ ತಂದು
ಅರ್ಮನೆ ಬಾಗ್ಲಲ್ ನೆಡ್ತಿವ್ನಿ
ಅದ್ಕೊಂದ್ ಮಲ್ಲಿಗೇಂಟ್ ಹಾಕ್ತಿವ್ನಿ
ತಾಯಮ್ಮ -

ಇದ್ಕೆ ಗೊಬ್ಬರ ಹಾಕಮ್ಮ ಆಗುನಿಯ ತಳಿಯಮ್ಮ ೩೮೯೦
ಎದ್ದೆದ್ದು ಮೊಕುವ ನೋಡಮ್ಮ ತಾಯಿ |

ಅಮ್ಮ ಇದ್ಕೆ ಗೊಬ್ರ ಹಾಕಿ ಆಗನಿ ತಳಿದು
ಬೆಳಗಾಯ್ತು ಸಾಯಂಕಾಲ ಆಯ್ತು
ಅಂದ್ರೆ ಇದ್ರ ಮೊಕ ನೋಡು
ನಮ್ಮಕ್ಕುನ ಪಾಡ
ಭಾವ ಮಲ್ಲಿಕಾರ್ಜುನನ ಪಾದ
ನಾನು ನೆಟ್ಟಿರೊ ಈ ಮಲ್ಲೆರುಕ್ಷ
ಚಿಗುತು ಹೂವಾಗಿ ಅರುಳ್ತದೆ
ಆಗ ನನ್ಮಗ ಕೈಲಾಸ ಕಂಡ್ನು' ಅಂತ್ಹೇಳಿ
ನಾನು ಹೇಳುದಂತ ಸಾಮಾನ ಜಮಾಯಿಸ್ಕೊ
ನಾನೇನಾರ ಮಧ್ಯಕಾಲ್ದಲ್ಲಿ ೩೯೦೦
ಹುಲಿಕರ್ಡಿ ಆನೆಗಳ ಬಾಯಿಗೆ ಸಿಕ್ಕಿ
ನಾನು ಮರಣ ಹೊಂದ್ಬುಟ್ರೆ
ಈ ಮಲ್ಲೆರುಕ್ಷ ಒಣುಗೋಯ್ತದೆ
'ಓ ಈಗ ನನ್ಮಗ ಘೋರುವಾದ ಆರಣ್ಯದಲ್ಲಿ
ಹುಲಿ ಬಾಯ್ಕೆ ಸಿಕ್ಕಿ ಮರಣ ಹೊಂದ್ದ'
ಅಂತ್ಹೇಳಿ ದುಕ್ಕ ಮಾಡ್ಬೇಡ
ನಮ್ಮ ಜಾತೀರ ಕರ್ಸಿ ಪಿಂಡ ಹಾಕುಸ್ಬುಡು"
ಈ ಮಾತನ್ನು ಕೇಳಿ ಮಾದೇವಮ್ಮ
"ನಾನು ಎಷ್ಟು ವಿಧವಾಗಿ ಹೇಳಿದ
ಕಾಲಕ್ಕೂ ಕೇಳೋದಿಲ್ವಲ್ಲ
ನನ್ಮಗುಂಗೆ ಇಂತೆ ಕಷ್ಟ ಸಂಭವುಸ್ತಲ್ಲ ಮಾದೇಶ್ವರ
ಜಗದೀಶ್ವರ ಜಗನ್ಮಾತೆ ಗೌರಮ್ಮ
ನನ್ಮಗುನ್ನ ನೀವೇ ಕಾಪಾಡ್ಬೇಕು" ೩೯೧೦
ಹಾಂಗತ್ಹೇಳಿ ಮಾದೇವಮ್ಮ
"ಅಪ್ಪಾ ಮಗುವೆ
ನರಕಂಕ್ಷನೂ ಇಲ್ಲ ಗುರುಕಂಕ್ಷನೂ ಇಲ್ಲ
ಮೈದಾಳರಾಮ ನಿನ್ಗೆ ಕಂಕ್ಷಧಾರ್ಣೆ ಮಾಡ್ಕೊಡ್ತೀನಿ"
"ಅಮ್ಮ ಅದೇನ್ ಮಾಡ್ಬೇಕೊ ಮಾಡಮ್ಮ ಜಲ್ದಿ"
ಆ ತಕ್ಷಣುದಲ್ಲಿ ಮಾದೇವಮ್ಮ
ಹಡಪದಂಪಣ್ಣನ ಬರಮಾಡಿ
ಮಗುಂಗೆ ಮಂಡೆ ಚವುರ ಮಾಡ್ಸಿ
ಹೊಸ ಪೀತಾಂಬ್ರವನ್ನು ಉಡಿಸಿ
ಹಸೆ ಮಂಟ್ಪ ತಯಾರು ಮಾಡಿ ೩೯೨೦
ಸೀತಾಳು ಚಪ್ರ ಹಾಕ್ಸಿ ಶಿವುಮೂರ್ತವನ್ನು ಇಟ್ಟು

ನಾರಿಮುತ್ತೈದೆರೆಲ್ಲ ಸೇರಿ
ಎಣ್ಣೆ ಅರುಸಣ ಒತ್ತುತಾರೆ |

ಒಂದು ಕೊಂಬೆ ಅರುಸಣ
ಕುಟ್ಟಿರೊ ಬಟ್ಟಲದುಂಬಿ
ಒಂದೆಲೆ ನಾರೀರು ಬಂದು
ಎರೆದಾರು ಎಣ್ಣರುಸಣವ |

ಎಡು ಕೊಂಬು ಅರುಸಣವ
ಕುಟ್ಟಿರೊ ಬಟ್ಟಲದುಂಬಿ
ಎಡೆಲೆ ನಾರೀರು ಬಂದು ೩೯೩೦
ಎರೆದಾರು ಎಣ್ಣರುಸಣವ |

ಮೂರುಕೊಂಬೆ ಅರುಸಣವ
ಕುಟ್ಟರೊ ಬಟ್ಟಲದುಂಬಿ
ಮೂರೆಲೆ ನಾರೀರು ಬಂದು
ಎರೆದಾರು ಎಣ್ಣಾರುಸಣವ ।

ನಾಕೆಂಬೊ ಅರುಸಣವ
ಕುಟ್ಟರೊ ಬಟ್ಟಲದುಂಬಿ
ನಾಕೆಲೆ ನಾರೀರು ಬಂದು
ಎರೆದಾರು ಎಣ್ಣಾರುಸಣವ ।

ಐದೆಲೆ ಅರುಸಣವ
ಕುಟ್ಟರೊ ಬಟ್ಟಲದುಂಬಿ
ಐದೆಲೆ ನಾರೀರು ಬಂದು
ಎರೆದಾರು ಎಣ್ಣಾರುಸಣವ ।

ಐದ್ನನ ಮುತ್ತೈದೇರು ಬಂದು
ಕಳಸ ಕನ್ನಡಿಯ ತಂದು ಮುಂದಿರಿಸಿ
ಕರಿಯ ಕಂಬಳಿ ತಂದು ಮಡಿದು ಗದ್ದುಗೆ ಮಾಡಿ
ಹಾಲು ತುಪ್ಪ ಎರ್ದು
ಮಗುಂಗೆ ಕಂಕ್ಣಧಾರ್ಣೆ ಮಾಡ್ಸಿ -

"ಜಯಜಯವಾಗಲೊ ಕಂದ ರಾಮಯ್ಯ
ಜಯಪರ್ವವಾಗಲಿ ಮೈದಾಳರಾಮ

ಜಯಪರ್ವವಾಗಲಿ ಮೈದಾಳರಾಮಯ್ಯ
ಆ - ಕೈಲಾಸ ನಿನಗೆ ಸಾಧ್ಯವಾಗಲಪ್ಪ ।

ಸಾಕ್ಷಾದೀಶ್ವರ ನಿನ್ನ ಕಣ್ಗೆ ಕಾಣಲಪ್ಪ
ನಿನ್ನಕ್ಕ ಗೌರಮ್ಮ ಕಾಣಲಪ್ಪ ।

ಹಾಲಿನ ರುಣ ಈವತ್ಗೆ ತೀರಿತು ಕಂದ
ಎಂದಿಗೆ ನಿನ್ನ ಮುಕುವ ನೋಡಲೊ" ।

ಹಾಗಂತ ಹೇಳಿ -

ಅಟ್ಟದ ಮೇಲಿರುವ ಪುಟ್ಟರಾಜುಣ ತಂದ
ಬತ್ತ ಹೂದಾಳು ಒಳ್ಳೂಗೆ ।

ಬತ್ತ ಹೂದಳು ತಾಯಿ ಒಳ್ಳುಗೆ ಮಾದೇವಮ್ಮ
ಹೊಂಬಾಳೆಯಾಗಿ ಅಕ್ಕಿ ಒಡುದಾವು ।

ಹಾಲು ಅನ್ನದ ಬುತ್ತಿ ಬ್ಯಾಗಾನೆ ಕಟ್ಟುಬುಟ್ಟು
"ನಿನ್ನ ಭಾವ ಮಲ್ಲಯ್ಯುಂಗೆ ಕೊಡು ಮಗನೆ" ।

ಒಂದ್ಹಾವಕ್ಕಿ ಉನಿ ಹಾಕಿ
ಅದರಲ್ಲಿ ಐದು ಕಜ್ಜಾಯ ತಯ್ಯಾರು ಮಾಡಿ
ಬುತ್ತಿಯನ್ನು ಕಟ್ಟಿ -

ಕಜ್ಜಾಯ ಬುತ್ತಿ ಸೀಗ್ರುದಲಿ ಕಟ್ಟುಬುಟ್ಟು
"ನಿಮ್ಮಕ್ಕ ಗೌರಮ್ಮಗೆ ನೀ ಕೊಡು ಕಂದ ।

ಹಾಗಂತ ಹೇಳಿ
"ಮಗನೆ ಮೈದಾಳ್ರಾಮ
ಕೈಲಾಸದಲ್ಲಿರೋರೆಲ್ಲ ಬರೀ ಲಿಂಗವಸ್ರು
ನಿನ್ಗೆ ಲಿಂಗುವಿಲ್ಲ
ಲಿಂಗುವಿಲ್ಲದ ಮ್ಯೇಲೆ ಕೈಲಾಸ ಸಾಧ್ಯವಿಲ್ಲವಲ್ಲ ಕಂದ"

ಅಮ್ಮ ಯಾವುದಮ್ಮ ಲಿಂಗ ? -

ಯಾವ ಲಿಂಗವಮ್ಮ ತಾಯಿ
ಯಾವ ಲಿಂಗವಮ್ಮ । ಸೊಲ್ಲು ।

ಯಾರು ಬಲ್ಲರಮ್ಮ
ಶಿವನ ಮೈಮೆಗಳ । ನಡೆ ಸೊಲ್ಲು ।

ಆತ್ಮ ಎಂಬುದೆ ಲಿಂಗ
ನೇತ್ರ ಎಂಬುದೆ ಜ್ಯೋತಿ
ಕೈಯೇ ಕೈಲಾಸ
ಪಾದವೆ ಕುದುರೆ
ರುದಯವೆ ಸಿಂವಾಸನ
ತಲೆ ಅಮ್ರುತ ಕಳ್ಸ ।

ಅಂಗ್ಯೆಲಿ ಶಿವಲಿಂಗ ಮಡಗಿ
ಗಂಗೇಲೋಗಿ ಹೂಪತ್ರೆ ಹಾಕಿ
ಲಿಂಗ ಲಿಂಗ ಪ್ರಾಣಲಿಂಗ
ಈ ಕತ್ನಲ್ಲಿ ಕಟ್ಟಿರೊ ಲಿಂಗ
ಕಾಯಬಲ್ಲದೆ ಹೇಳಮ್ಮ
ಪ್ರಾಣ - ಉಳಿಸಬಲ್ಲದೆ ಹೇಳಮ್ಮ ।

ಗುರುವಿನ ಮಾರ್ಗವ
ಗುರುವೇ ಬಲ್ಲನು
ಶಿವನ ಮಾರ್ಗವ

ಬ್ರಾಮಣ ತಾನು ಬಲ್ಲನೆ
ತಾಯಿ - ಬ್ರಾಮಣ ತಾನು ಬಲ್ಲನೆ |

ನಾರಿಯ ಬುಟ್ಟು ನೀರಲಿ ಮುಳುಗಿ
ಐದು ಗಂಟೆ ಜಾಮದ ಒಳುಗೆ
ಐದು ಜ್ಯೋತಿಯ ಹಚ್ಚಿಕೊಂಡು
ನಾಲ್ಕುವೇದವ ತೆಗೆದುಕೊಂಡು
ಆರುಸಾಸ್ತ್ರ ಹದಿನೆಂಟು ಪುರಾಣ
ಅವ ಓದಿ ಸತ್ತರೇನು
ಅವ್ನ ನಾಲ್ಕರ್ಹೊತ್ತರೇನು |

ಮುಲ್ಲ ಮುಲ್ಲರು ಎಲ್ಲ ಸೇರಿ
ಎಲ್ಲರು ಸೇರಿ ಮಸೀದಿ ಕಟ್ಟಿ
ದಿನಕ್ಕೆ ಮೂರ್ಸಲ ನಮಾಜು ಮಾಡಿ
ಮುಲ್ಲ ತಾನೆ ಬಲ್ಲನೇನು
ನಮ್ಮ ಶಿವನ ಮಾರ್ಗವ
ನಮ್ಮ ಗುರುವಿನ ಮಾರ್ಗವ |

ಆತ್ಮ ಎಂಬುದರೊಳಗೆ
ಅಮ್ಮುತ ಚಿನ್ಮಯ ತುಂಬಿ
ನೀತಿಶಾಸ್ತ್ರ ಕೊಡಸ ಮಾಡಿ
ಪಂಚ ತತ್ವ್ರಗಳನು ಕೂಡಿ
ಭಾವ ಭಾವವ ತಿಳಿದು
ಪಂಚಾಕ್ಷರಿಯ ಮನೆಯ ಕಟ್ಟಿ
ಕಾಯದ ಮಾಯವ ನೀಗಿ
ಕಡೆದು ಕಣ್ಣಿಯ ಮಾಡಿ
ನಾಲಿಗಿಲ್ಲದ ನಂದಿ ಗಂಟೆ
ಲಾದು ಶಬ್ದವನ್ನು ಕೇಳಿ
ಮರ್ತುಲೋಕದಲ್ಲಿ ಅದರ
ನಿಜನೇಮ ಕಂಡುತಮಾಗಿ
ತಿಳಿದವರು ಯಾರಮ್ಮ ?|

ಯಾರು ಬಲ್ಲರಮ್ಮ - ನಮ್ಮ
ಶಿವನ ಮೈಮೆಗಳ
ಯಾವ ಲಿಂಗವಮ್ಮ ತಾಯಿ
ಯಾವ ಲಿಂಗವಮ್ಮ |

ಅಮ್ಮ ನನ್ನೊಟ್ಟೈಲೊಳುಗೆ ಲಿಂಗ ಇದೆ ತಾಯಿ
ಈಚೆಗೆ ಕಾಣೋಂಗೆ ಕಟ್ಟೊಂಡಿಲ್ಲ ನಾನು" -

"ನಿನ್ನೊಟ್ಟೈ ಒಳಗಲ ಲಿಂಗ್ವ ನಿನ್ನೆತ್ತ ತಾಯ್ಗೆ ತೋರು
ಲಿಂಗಾದ ದರುಸ್ನ ಮಾಡಬೇಕು" |

ಎದ್ದನಲ್ಲ ರಾಮಯ್ಯ ಚಂದ್ರಾಯ ತಕ್ಕೊಂಡ
ತಾಯಿ ಪಾದಕ್ಕೆ ಸರಣ್ಮಾಡಿ |

ಚಂದ್ರಾಯ ಕತ್ತಿಯ ತಕ್ಕೊಂಡು ರಾಮಯ್ಯ
ಎದೆಯ ಕಂದಣ್ಣ ಬಗಿದಾನು |

ಎದೆಯ ಕಂದಣ್ಣ ಬಗಿದಾಗ ತಾಯಮ್ಮ
ಅಲ್ಲೊಂದು ಕೈಲಾಸ ನೋಡುತಾಳೆ |

ಎದೆ ಒಳುಗೆ ಕಲ್ಕುಟ್ಟೆ
ಆ ಕಲ್ಕುಟ್ಟೆ ಮಧ್ಯದಲ್ಲಿ ಒಂದು ಹೊನ್ನಳ್ಳಿಮರ
ಪಕ್ಕದಲ್ಲಿ ಹೊಂಗೇಮರ
ಪಕ್ಕದಲ್ಲಿ ಬೇವುನ ಮರ
ಅದ್ರ ಪಕ್ಕದಲ್ಲಿ ಲಿಂಗಮಾ ಬಿಲ್ವತ್ರೆ ಮರ
ಅದರ ಪಕ್ಕದಲ್ಲಿ ಪೀಕಿಮರ
ಅದರ ಮಧ್ಯದಲ್ಲಿ ಶಿವಲಿಂಗ
ಥಳಾಥಳನೆ ಹೊಳೀತಿದೆ
ಲಿಂಗವನ್ನ ನೋಡ್ಬುಟ್ಟು ಮಾದೇವಮ್ಮ
ಲಿಂಗವನ್ನು ತಗ್ದು ತನ್ನ ಎಡ ಅಂಗ್ಯೆ ಮ್ಯಾಲೆ
ಮಡಿಕೊಂಡು
ಪುಷ್ಪಗಳ ಕೂಗಿ ಕರೀತಿದ್ದಾಳೆ
ಬಗೆಬಗೆಯ ಜಾತಿ ಪುಷ್ಪಗಳೆಲ್ಲ ಬತ್ತಿದ್ದಾವೆ
ಒಂದೊಂದು ಪುಷ್ಪವನ್ನು ಮಾದೇವಮ್ಮ ಎತ್ತಿ ಎತ್ತಿ
ಲಿಂಗದ ಮ್ಯಾಲೆ ಮಡುಗ್ತಿದ್ದಾಳೆ -

ಇಲ್ಲಿ ಮಡಗಿದ ಪುಷ್ಪ ಕೈಲಾಸವನು ಸೇರಿ
ಶಿವನ ಪಾದಕೆ ಹೋಗಿ ಬೀಳುತಾದೆ |

ಮಾದೇವಮ್ಮ ಪಾರ್ವತಿ ಪರಮೇಶ್ವರರ್ಗೆ
ಮಂಗಳಾರತಿಯನ್ನು ಬೆಳುಗುದ್ದು
ಅದು ಕೈಲಾಸವನ್ನೇ ಬೆಳುಗ್ತಾ ಇದೆ.

ಮೈದಾಳರಾಮಯ್ನ -

ರ್‍ಯಾಮ ರ್‍ಯಾಮಕೆ ಲಿಂಗ ರ್‍ಯಾಮ ರ್‍ಯಾಮಕೆ ಪುಷ್ಪ
ರ್‍ಯಾಮರ್‍ಯಾಮಕೆ ಪತ್ರೆ ಬೀಳುತಾವೆ |

ಸಾಹಸ್ರ ಕೋಟಿ ಲಿಂಗ ತೋರಿ ರಾಮಯ್ಯ
ಪಾವಾಡಗಳನೂ ಮೆರಿದಾನು |

ತಾಯಿಯ ಮುಂದೆ ರಾಮು ಪಾವಾಡ ಮಾಡಲು
ಕೈಲಾಸ್ದಲ್ಲಿ - ಶಿವಭೇರಿ ಸಬ್ತ ಝೇಂಕರಿಸಿದವು |

ಕಾಯ ಸ್ಥತಾರಾಮ ಕೈಲಾಸ್ಕೆ ಬತ್ತಾನಂತ
ನಾಲಿಗಿಲ್ಲಾದ ಘಂಟೆ ಘಳಿರಂದೂ |

ಆಗ ಪಾರ್ವತಾದೇವಿ
'ಸ್ವಾಮಿ ಮೈದಾಳ ರಾಮಯ್ಯ
ತಾಯಿ ಮುಂದೆ ಪಾವಾಡ ಮಾಡ್ಬುಟ್ಟು
ಈಗ ದ್ರೇಯವನ್ನೂ ಏಡು ಭಾಗ ಮಾಡಿದ್ದಾನೆ ಸ್ವಾಮಿ
ಅವುನ್ಗೆ ಸಿರಂಜಾಯವಾದ ಆಯುಸ್ಯವನ್ನು ಕೊಟ್ಟು
ನಮ್ಮ ಕೈಲಾಸ್ಕೆ ಬರುವಂತ ರೀತಿ ಮಾಡ್ಬುಟ್ಟು ಬನ್ನಿ'
ಪಾರ್ವತಿಯ ಮಾತ ಪರಮೇಶ್ವರ ಕೇಳೀದ
ಹಾಗೇ ಆಗಲಂತ ಹೇಳುತಾನೆ
ಇತ್ಲಾಗೆ ಮಾದೇವಮ್ಮ
ವಾಲೆಗರಿ ತಕ್ಕೊಂಡು
ಸಾಕ್ಷಾದೀಶ್ವರುಂಗೆ ವಾಲೆ ಬರೀತಿದ್ದಾಳೆ.
'ಸಾಕ್ಷಾದ್ಪರಮೇಶ್ವರ
ಜಗನ್ಮಾತೆಯಾದ ಗೌರಮ್ಮ
ನನ್ಮಗುನ ಪ್ರಾಣುಕೋಸ್ಕುರುವಾಗಿ
ನಿಮ್ಮುನ್ನ ಮಗ್ಳು ಅಳಿಯ ಅಂತ
ಕೋರ್ಕೆ ಮಾಡ್ಬುಟ್ಟಿದ್ದೀನಿ
ನನ್ನ ಅಪ್ರಾದೇನಿದ್ರೂ ಕ್ರಮಿಸಿ
ಈ ನನ್ನ ಕಂದುನ್ನ
ನೀವು ಮೈದ ಅಂತ ಒಪ್ಕೊಂಡು
ಅಕ್ಕ ಭಾವ ಆಗಿ
ನಮ್ಮ ದಕ್ಷಿಣದೇಶುಕ್ಕೆ ನೀವು ಬರ್ಬೇಕು
ಅಂತ ಕೈಮುಗ್ದು ಬೇಡ್ಕೋತಿದ್ದೀನಿ"

ಮಾದೇವಮ್ಮ ವಾಲೆ ಬರ್ದು
ಬುತ್ತಿ ಒಳೀಕೆ ಸೇರುಸ್ಬುಟ್ಟು
ಬುತ್ತಿಯ ಮಗುನ ಮುಂದುಕ್ಕೆ ತಂದು ಮಡುಗ್ದ
ಆ ಮೈದಾಳ್ಯಾಮ ಆ ಬುತ್ಗೆ ನಮುಸ್ಕಾರ ಮಾಡಿ
ತನ್ನ ಬೆನ್ಗೆ ಕಟ್ಕೊಂಡು
ತಾಯಿ ಮಾದೇವುಂಗೆ ನಮುಸ್ಕಾರ ಮಾಡ್ದ -

ಇಂದಿಗೆ ಕೀರಿನ ರುಣ ತೀರಿತು ಅಂತ್ಹೇಳಿ
ತಾಯಿ ಪಾದುಕೆ ಸರಣಂದ |

ಅಮ್ಮ ಹನ್ನೊಂದಿವುಸುದ ಮಗೀನ್ಗಂಟ
ಕಳ್ಳಿಹಾಲೆಕ್ಕದ ಹಾಲಾಕಿ
ನನ್ನ ಪ್ರಾಣ ಉಳಿಸಿದಲ್ಲ ತಾಯಿ
ಆ ಹಾಲಿನ ರುಣ ಈವತ್ಗೆ ತೀರೋಯ್ತಂತ್ಹೇಳಿ
ತಾಯಿ ಪಾದ್ಕೆ ನಮುಸ್ಕಾರ ಮಾಡ್ದ
ಮಗನ ಮಾತ್ಕೇಳಿ ಮಾದೇವಮ್ಮ ಮೂರ್ಚ್ಯನಾದ.
"ಅಯ್ಯೊ ಪರಮೇಶ್ವರ
ನಮ್ಮ ತಾಯ್ಗೆ ಮೂರ್ಚ್ಯ ಉಂಟಾಯ್ತಲ್ಲ ಮುಂದೇನ್ಗತಿ ? -

ತಂದಿಲ್ಲ ತಾಯಿಲ್ಲ ಅಣ್ಣಿಲ್ಲ ತಮ್ಮಿಲ್ಲ
ಕೈಹಿಡಿದ ಪತಿಯಾಸೆ ಮೊದಲಿಲ್ಲ |

ಹೆತ್ತ ಮಗನೂ ಸಾಕಷ್ಟ ಸುಕಾದಿಗಳಿಗಿಲ್ಲ ಪರಮೇಶ್ವರ
ನನ್ನ ತಾಯ ನೀನೇ ಕಾಪಾಡ್ಬೇಕು" ಅಂತ್ಹೇಳಿ

ಚಂದಾಯ್ದ ಪಟವ ಕೈಯಲ್ಲಿ ಹಿಡುಕೊಂಡು
ಬುತ್ತೀಯ ಬೆನ್ನಲ್ಲಿ ಬಿಕ್ಕೊಂಡು |

ಬುತ್ತೀಯ ಬೆನ್ನಲ್ಲಿ ಬಿಕ್ಕೊಂಡು ರಾಮಣ್ಣ
ಕೈಲಾಸ್ನ ಮಾರ್ಗ ಹಿಡಿದಾನು |

೮. ಅಕ್ಕಭಾವರ ಬುಟ್ಟು ಹಿಂದಕ್ಕೆ ಹೋಗಲಾರೆ

ಸುಪ್ಪಿ ಹೇಳಮ್ಮ ದೇವರ ದೇವ ಸುಪ್ಪಿ | ಸೊಲ್ಲು |

ತಾಯಿ ಕೊಟ್ಟ ಬುತ್ತೀಯ ಬೆನ್ನೀಗೆ ಬಿಕ್ಕೊಂಡು
ಭೀಮಾವತಿಯಿಂದ ಹೊರಟಾನು |

ಭೀಮಾವತಿಯಿಂದ ರಾಮಣ್ಣ ಹೊರಟಾನು
ಕೈಲಾಸದ ಮಾರ್ಗ ಹಿಡಿದಾನು |

ಆರಣ್ಯದಡವೀಲಿ ಮಹಾಮೇರು ಪರ್ವತ
ಅಡವೀಯ ದಾರೀಲಿ ನಡೆದಾನು |

ಬೆಟ್ಟವ ಹತ್ತುತ ಬೆಟ್ಟವ ಇಳಿಯುತ
ಬೆಟ್ಟಲ್ಲಿ ಬೆಮರ ತಗಿಯುತ

ಬೆಟ್ಟಲ್ಲಿ ಬೆಮರ ತೆಗಿಯೂತ ರಾಮಣ್ಣ
ಮಂದರ ಗಿರಿಯ ಕಣುಮೇಲಿ |

ಕಲ್ಲತ್ತಿ ಕಲ್ಲಿಳಿದು ಕಣುಮೇಲಿ ಬರುವಾಗ
ಅನ್ನ ನೀರುಗಳ ಮರತಾನು |

ಅನ್ನ ನೀರುಗಳಿಲ್ಲ ನಿದುರೆಯು ಮೊದಲಿಲ್ಲ
ಹಗಲು ಇರುಳೆಂಬೊ ಅರುವಿಲ್ಲ |

ಹಗಲು ಹವಣಿಲ್ಲ ಇರುಳು ತಿಳಿಯನಿಲ್ಲ
ಕೈಲಾಸದ ಹಾದಿಯ ಬುಡನಿಲ್ಲ |

ಎಡವಿದರೆ ಅಕ್ಕ ಗೌರಮ್ಮ ಎನ್ನುತ
ಕೆಡೆದರೆ ಭಾವ ಮಲ್ಲಯ್ಯ |

ಕೆಡೆದರೆ ಭಾವ ಮಲ್ಲಯ್ಯನ ನೆನೆಯೂತ
ಬೆಟ್ಟ ಬೆಟ್ಟಗಳ ಹತ್ತಿದನು |

ಬೆಟ್ಟ ಬೆಟ್ಟಗಳ ಹತ್ತಿದನು ಸುತ್ತಿದನು
ಅಕ್ಕಭಾವಾಜಿ ಸುಳುವಿಲ್ಲ |

ಬೀಸಿದ ತೋಳು ಬೆರಗಾದೊ ರಾಮಯ್ಗೆ
ನಡೆದ ಕಾಲೆಲ್ಲ ಹೊಪ್ಪಳೆದ್ದೊ |

ಅಕ್ಕಯ್ಯ ಅಕ್ಕಯ್ಯ ಅನುತ್ಹೇಳಿ ಕೂಗಿದರು
'ಓ' ಅನ್ನೊ ಅಕ್ಕನ ದನಿಯಿಲ್ಲ |

ಭಾವಯ್ಯ ಭಾವಯ್ಯ ಅನುತ್ಹೇಳಿ ಕೂಗಿದರೂ
ಬಂದೆ ಬಂದೆ ಎಂಬ ಸಬುದಿಲ್ಲ |

ಅಕ್ಕಯ್ಯ ಗೌರಮ್ಮ ಭಾವಾಜಿ ಮಲ್ಲಯ್ಯ
ಇರುವ ಸಿರಿಗಿರಿಯ ಸುತ್ತವುನೆ |

ಇಲ್ಲವುರೆ ಅಲ್ಲವುರೆ ಅಲ್ಲವುರೆ ಇಲ್ಲವುರೆ
ಅಂತ್ಹೇಳಿ ಗಿರಿಯಿಂದ ಗಿರಿಗಾಣೆ |

ಎಲ್ಲಿ ಸುತ್ತಿದರೂ ಮಲ್ಲಯ್ನ ಸುಳಿವಿಲ್ಲ
ಅಕ್ಕ ಗೌರಮ್ಮನ ಸುಳಿವು ಮೊದಲಿಲ್ಲ |

ಕರಿಯಾಕೆ ನಾ ಬಂದು ಬರಿಗೈಲಿ ಹೋಗಲಾರೆ
ಗಿರಿಯಲ್ಲೆ ಪ್ರಾಣ ಬುಟ್ಟೇನು |

ಗಿರಿಯಲ್ಲೆ ಪ್ರಾಣ ಬುಟ್ಟೇನು ಭಾವಯ್ಯ
ನಿಮ್ಮ ಜೊತೆಯಿಲ್ದೆ ನಾನು ಹೋಗುಲಾರೆ |

ಅಕ್ಕಯ್ಯ ಗೌರಮ್ಮನ ಭಾವಾಜಿ ಮಲ್ಲಯ್ಯನ
ಕರುಕೊಂಡೆ ಬರುತೀನಿ ಅನುತ್ಹೇಳಿ |

ಕರುಕೊಂಡೆ ಬರುತೀನಿ ಅನುತ್ಹೇಳಿ ಬಂದವನು
ಛಲದಿಂದ ಕರುಕೊಂಡು ಹೋಗುತೀನಿ |

ಅಕ್ಕ ಭಾವಯ್ಯರು ಬರದಿದ್ದರೆ ಈಗ
ಈ ಗಿರಿಯಲ್ಲೆ ಪ್ರಾಣ ಬುಡುತೀನಿ |

ಅಕ್ಕಯ್ಯ ಗೌರಮ್ಮ ನಿನ್ನ ತಮ್ಮಯ್ಯ ಬಂದಿವ್ನಿ
ಅಕ್ಕ ಬಾ ಬಂದು ಮೊಕತೋರು |

ಭಾವಾಜಿ ಮಲ್ಲಯ್ಯ ನಿನ್ನ ಮೈದನ ನಾನು
ಮೈದಾಳ ರಾಮಯ್ಯ ಬಂದಿವ್ನಿ |

ಅಕ್ಕ ಗೌರಮ್ಮ ಭಾವ ಮಲ್ಲಯ್ಯ
ಬನ್ನಿ ಬಂದು ನನಗೆ ಮೊಕತೋರಿ |

ಮಾತು ಮಾತಿಗೆ ಅಕ್ಕ ಭಾವರ ನೆನೆಯುತ
ಒಡಹುಟ್ಟಾಗಿ ಅಕ್ಕ ಮೊಕದೋರು |

ಒಂದೀಗೆ ಹುಟ್ಟಿದೋಳೆ ನನ್ ಸಂಗಾಡ ಬೆಳಿದೋಳೆ
ಒಡಹುಟ್ಟಾಗಿ ಗೌರಮ್ಮ ನನ್ಗೆ ಮೊಕತೋರು |

ಭಾವಯ್ಯ ಮಲ್ಲಯ್ಯ ಭಾವಾಜಿ ಮಲ್ಲಯ್ಯ
ಎಲ್ಲಿರುವೆ ಬಂದು ಮೊಕದೋರು |

ಬೆಟ್ಟಗುಡ್ಡವ ದಾಟಿ ಬರುತವ್ನೆ ರಾಮಯ್ಯ
ಆರಂದಡವಿಗಳ ಅಲೆದು ಬರುತವ್ನೆ |

"ಕಾಡುಗೊಲ್ಲನಿಗೆ ವರ್ಷ ನೀ ಕೊಟ್ಟಿಲ್ಲಪ್ಪ ಜಗದೀಶ
ನನ್ನ - ಕಾಡುಪರದೇಶಿ ಮ್ಯಾಲೆ ದಯವಿಲ್ವ?" |

ರಾಮಯ್ಯ ಕೂಗೀಗೆ ಮುರುಗ ಜಾತಿಯೆಲ್ಲ
ಬೆದರಿ ಬೆಟ್ಟಾವ ಸೇರಿದವು |

ಕಡವೆ ಕಾಡೆಮ್ಮೆಗಳಿರ ನವ್ವುಲು ಸಾರಗ್ನುಂಡೆ
ನನ್ನ ತಿಂದು ನೀವು ನೀರ ಕುಡಿಬಾರ್ದ |

ಕಲ್ಲು ಕಲ್ಲನೆ ಹತ್ತಿ ಮುಳ್ಳು ಮುಳ್ಳನೆ ಮೆಟ್ಟಿ
ಗುಂಡುಗಳ ಹತ್ತಿ ಕರೆದಾನು |

ಕರೆಯೂತ ರಾಮಯ್ಯ ಕಲ್ಲುಮುಳ್ಳು ತುಣ್ಣು
ಬೀಳುತ ಏಳುತ ಬರುತವುನೆ |

ಏಳೇಳು ಬೆಟ್ಟ ಹತ್ತಿದನಂತೆ ರಾಮಯ್ಯ
ಅಕ್ಕಯ್ಯೋ ಅಕ್ಕಯೋಂತ ಅಕ್ಕರಿಂದ ಕೂಗುತಾನೆ |

ಬೆಟ್ಟಗುಡ್ಡಗಳೆಲ್ಲ 'ಓಯ್' ಎನ್ನುತಾವೆ
ರಾಮಣ್ಣನ ದನಿಗೆ ದನಿಗೊಟ್ಟು |

ಅಲ್ಲವ್ವೆ ಅಕ್ಕಯ್ಯ ಅಲ್ಲವ್ನೆ ಭಾವಾಜಿ
ಈ ಮಲ್ಲಿಕಾರ್ಜುನನ ಗಿರಿಯೊಳಗೆ |

"ಕಾಡುಗೊಲ್ಲನಿಗೆ ವರ್ಪ ಕೊಟ್ಯಲ್ಲೊ ಪರಮೇಶ್ವರ
ನನ್ಮೆಲೆ ನಿನಗಿನ್ನೂ ದಯವಿಲ್ಲುವಪ್ಪ ? |

ಕುರಿ ಕಾಯುತ್ತಿದ್ದ ಮಕ್ಕಳಿಗೆ ವರಕೊಟ್ಟೆ
ಕುರಿಪಿಕ್ಕೆ ಗುಡಿಸಿ ಗುಡ್ಡೆಮಾಡಿ |

ಕುರಿಪಿಕ್ಕೆ ಗುಡಿಸಿ ಗುಡ್ಡೆ ಮಾಡಿ ಅವರು
ಹೂಪತ್ರೆ ಮಡಗಿ ಬೆಳಗಿದರು |

ಹೂಪತ್ರೆ ಮಡಗಿ ಬೆಳಗಿ ಆ ಹುಡುಗರು
ಪರಮೇಶ್ವರ ಎಂದು ಕರೆದಾರೆ |

ಪರಮೇಶ್ವರ ಎಂದು ಕರೆದಾಗ ಅವರಿಗೆ
ಕುರಿಪಿಕ್ಕೆ ಒಳುಗೆ ಒಡ್ಡು ಬಂದಲ್ಲೊ |

ಮಾರ್ಕಂಡಯ್ಯುಂಗೆ ವರವ ಕೊಟ್ಯಲ್ಲೊ ತಂದೆ
ಯಮು ಬಂದು ಮಾಯಾದ ಪಾಶವ |

ಯಮರಾಯ ಮಾಯದ ಪಾಶದಲಿ ಎಳಿದಾಗ
ಮಾರ್ಕಂಡಯ್ಯ ಲಿಂಗ್ಯ ತಬ್ಬುದಾಗ |

ಲಿಂಗಯ್ಯ ಬುಡದೆ ಬಿಗಿಯಾಗಿ ತಬ್ಬಿದಾಗ
ಆ ಲಿಂಗದ ಒಳುಗೆ ಒಡ್ಡು ಮೂಡಿದೆಯಲ್ಲೊ |

ಸ್ಥಿರುವಾದ ಆಯುಸ್ಯವ ಕೊಟ್ಟು ಮಾರ್ಕಂಡಯ್ಯನಿಗೆ
ತಿರುಗಿ ಅವ್ನ ಪಡೆದೆಯಲ್ಲೊ ಮಾದೇವ |

ನನ್ನೂವೆ ಕಾಪಾಡು ಕಾಪಾಡು ಜಗದೀಶ
ಕಾಪಾಡದ ಮ್ಯಾಕೆ ಕೊಲ್ಲಯ್ಯ |

ಈ ಶ್ರೀಶೈಲ ಪರ್ವತದ ಕಲ್ಲೆಲ್ಲ ಲಿಂಗಗಳು
ಹುಲ್ಲೆಲ್ಲ ರಾಜುಣವಲ್ಲೊ ಶಿವರಾಯ |

ಕಲ್ಲೆಲ್ಲ ಲಿಂಗುವಾಗಿ ಹುಲ್ಲೆಲ್ಲ ರಾಜುಣವಾಗಿ
ಗುಳ್ಳುಸುಂಡೇಯ ಕಾಯಿ ಮುತ್ತಾದೊ |

ಪರಮಾತ್ಮ ನಿನ್ನಗಿರಿ ಇಷ್ಟು ಅಂದವಾಗದಲ್ಲಪ್ಪ -

ಎಟ್ಟಬೆಟ್ಟವೆಲ್ಲ ಹುಟ್ಟು ಲಿಂಗವಲ್ಲೊ
ಪಾದವೂರೋಕೆ ತಳುವಿಲ್ಲ |

ಲಿಂಗದ ಮ್ಯಾಲೆ ಪಾದ ಊರಿದರೆ
ಹೆಂಗಪ್ಪ ಜಲ್ಮ ತಡದೀತು |

ಹೆಂಗಪ್ಪ ಜಲ್ಮ ತಡದೀತು ಪರಮಾತ್ಮ
ನಂಗೆಂತ ಕಷ್ಟ ಕೊಟ್ಟೇಯೋ" |

ಅಡವಿಅರಣ್ಯದಲ್ಲಿ ಗಿಡವಿ ಚೌಮಧ್ಯದಲಿ
ರಾಮಯ್ಯ ಅಳುತಳುತ ಬರುತವುನೆ |

ಆರಣ್ಯದಲ್ಲಿ ಅಳುತಾನಲ್ಲೊರಾಮಯ್ಯ
ಅಲ್ಲಿ ಮಲ್ಲಯ್ನ ಪಾದ್ಕೆ ಅರುವಾದೊ |

ಪಾರ್ವತಿ ಅಮ್ಮಯ್ಗೆ ಪರಶಿವ ದೇವರಿಗೆ
ಅರುವಾದೊ ರಾಮಯ್ನ ಕಡುದುಕ್ಕ |

ಕಂದ ರಾಮಯ್ಯ ಗಾಳು ಗೋಳು ಮಾಡಿಕೊಂಡು
ಅಡವಿ ಚೌಮಧ್ಯದಲಿ ಬರುತವುನೆ |

ತಾಯಿ ಗೌರಮ್ಮ
ಮೈದಾಳ ರಾಮಯ್ಯನ ಕಷ್ಟುವನ್ನು ನೋಡಿ
"ಸ್ವಾಮಿ ಅವನ ಕಷ್ಟವನ್ನು ಕಣ್ಣಿಂದ
ನೋಡೋಕಾಗೋದಿಲ್ಲ
ಸ್ವಾಮಿ ದೇವುರಾಗಿ ಹೋಗಿ ಮೊಕುವನ್ನು ತೋರ್ಸಿ"
ಅಂತ್ಹೇಳಿ ತಾಯಿ ಪಾರ್ವತಿಯವರು ಹೇಳುದ್ರಲ್ಲ -

ಗೌರಮ್ಮನ ಮಾತನ್ನು ಕೇಳಿದ ಪರಮಾತ್ಮ
ಕೈಲಾಸದಿಂದ ಬರುತಾನೆ

"ಅಕ್ಕಯ್ಯ ಗೌರಮ್ಮ ಭಾವಾಜಿ ಮಲ್ಲಯ್ಯ
ನೀವಿಲ್ಲದೆ ನಾನು ಊರಿಗೆ ಹೋಗಲಾರೆ |

ನೀವಿಲ್ಲದೆ ಹೋಗಲಾರೆ ನಾನಿಲ್ಲಿಯೆ ನಿಮಗಾಗಿ
ಈ ಬಲ್ಲಳದ ಕಮರಿಗೆ ಬೀಳುತೀನಿ |

ಬಲ್ಲಳದ ಕಮರಿಗೆ ಬೀಳುತೀನಿ ನಾನೀಗ
ಬಿದ್ದು ಪ್ರಾಣಗಳ ಬುಡುತೀನಿ |

ರಾಮಯ್ಯನ ಮಾತ ಕೇಳೀದ ಪರಮಾತ್ಮ
ಕಾಡು ಜಂಗುಮರಾಗಿ ಬರುತಾರೆ | ೪೨೪೦

ಮೈದಾಳ ರಾಮಯ್ನ ದಂಡ್ಯಕೆ ಪರಮಾತ್ಮ
ಸೀದು ಸೀದುವಾಗಿ ಬರುತಾರೆ |

"ಯಾರೋ ಬಾಲಕ ನೀನು ಯಾವ ಲೋಕದ ಹುಡುಗ
ನೀನಿಲ್ಲೀಗೆ ಬಂದ ಬಗೆ ಹೇಗೆ ? |

ಯಾರು ಯಾರೆಲೆ ಕಂದ ಆರಣ್ಯದಲಿ ಬರುವೋನು
ಬಾರಪ್ಪ ಕಂದ ಸಣ್ಣ ಬಾಲಕನೆ" |

"ಯಾರು? ಯಾರು ನನ್ನನ್ನು ಕರೆದವುರು?"
"ಯಾರು ಅಂದ್ರೆ ನಾನೇ ಕಾಣಪ್ಪ
ಈ ಆರಣ್ಯದಲಿ ಅಳುವುದಕೆ ಕಾರಣವೇನು
ಈ ಅಡವಿ ಆರಣ್ಯ ಗಿಡುವಿ ಬೌಮಧ್ಯದಲಿ ೪೨೫೦
ಆನೆ ಹುಲಿ ಕರಡಿ ಚಿರುತೆ ಇಂತೆ ಕ್ರೂರು ಮಿರುಗಗಳಿರೊ ಕಾಡ್ಗೆ
ನೀನು ಹ್ಯಾಗೆ ಬಂದ್ಯಪ್ಪ?"

"ನಾನು ಬಂದ ಬಗೆಯ ಹ್ಯಾಗೆ ಹೇಳಲಿ ಗುರುವೆ
ನಾನೊಬ್ಬ ಕಾಡು ಪರದೇಸಿ" |

"ಪರದೇಶಿಯಾದರು ಪರುವಿಲ್ಲ ಕಂದಯ್ಯ
ಆರಣ್ಯಕೆ ಯಾಕೆ ಬಂದ್ಯಪ್ಪ? |

"ನಾನು ಯಾಕಾರೂ ಬರ್ತೀನಿ ಅದಿರ್ಲಿ
ನೀವ್ಯಾರು?"

"ಅಪ್ಪ, ನೀವ್ಯಾರು ಅಂದ್ರೆ ಏನ್ ಹೇಳ್ಬಪ್ಪ?
ನೀ ಯಾರು ಹೇಳೊ ಕಂದ" ೪೨೬೦
"ಸ್ವಾಮಿ ನೀವ್ಹೇಳಿ ಮೊದುಲಾಗಿ"

"ಒಹೊ ಗುರುವಿನ ಕೈಲಿ ಗುಳುಕಾಯ್ ಕುಯಿಸ್ತನೆ ಈ ಹುಡ್ಗ
ನೋಡಿದ್ರೊ ಒಳ್ಳೇದು, ಒಳ್ಳೆದು,
ನಾವೇ ಹೇಳ್ತೀವಪ್ಪ -

ಸಿದ್ಧಪಟ್ಟಣದಲಿದ್ದೊ ಶಿವಗಂಗೆ ಮಠಕೆ ಬಂದೊ
ಜಾಮಕೆ ಈವಾಗ ಇಲ್ಲಿ ಬಂದೇವೊ |

ಆ ಶಿವುಗಂಗೆ ಒಳುಗೆ ಒಂದು ಈಶ್ವುರನ ದೇವುಸ್ತಾನ
ಆ ಈಸ್ವುರನ ದೇವುಸ್ತಾನದಲ್ಲಿ
ಪೂಜೆ ಮಾಡ್ಕೊಂಡು ನಾವಿದ್ದೊ -

ಈಸ್ವುರನ ಗುಡಿಯಲಿ ಪೂಜೆ ಮಾಡ್ಕೊಂಡಿರೋ ೪೨೭೦
ತಮ್ಮಪ್ಪ ನಾನು ಕೇಳೊ ಕಂದ" |

"ಸ್ವಾಮಿ ಇಲ್ಯಾತುಕ್ ಬಂದ್ರಿ?"
"ಪರಮಾತ್ಮನ ನೋಡಕೆ ಅಂತ ಬಂದೊ
ಪಾರ್ವತಿ ಅಮ್ಮನವರ ನೋಡ್ಬೇಕು ಅಂತ ಬಂದೊ
ಒಬ್ಬರ ದರುಸ್ಸೆಯೂ ಇಲ್ವಲ್ಲಪ್ಪ
ಬಂದು ಮೂರ್ತಿಂಗ ಕಾಲವಾಯ್ತು ಕಂದ !
ಕಣ್ಣು ಕಾಣದಿಲ್ಲ ಕಿಮಿ ಕೇಳದಿಲ್ಲ
ಅನ್ನವಿಲ್ಲ ಹಾರವಿಲ್ಲ
ಮೂರ್ತಿಂಗವಾಯ್ತು
ಮೂರ್ತಿಂಗದಿಂದ ತಡುಕ್ತಾ ಇವ್ನಿ ಕಂದ - ೪೨೮೦

ಕೂತರೆ ಏಳಲಾರಿ ನಿಂತರೆ ಕೂರಲಾರಿ
ಹಿಂದುಕೋಗಾವಂದ್ರೆ ಹೋಗಲಾರಿ |

ಅಲ್ಲಿ ಪೂಜೆ ನಿಂತೋಯ್ತು ಇಲ್ಲಿ ದರುಸ್ಸೆ ಸಿಗದೋಯ್ತು
ಹಿಂಗೇ ತಡುಕ್ತಾ ಕಾಲ ಕಳಿತಿವಿನಿ |

ಕಂದ ಈಗ ಹೇಳಪ್ಪ ನಿನ್ನ ಸಮಾಚಾರ್ವ"

"ನಿಮ್ಮೂರು ಹೆಸ್ರುಗಳ ಹೇಳುದ್ರಲ್ಲ ಜಂಗುಮರೆ
ನಮ್ಮೂರ ಹೆಸ್ರ ಹೇಳ್ತೀನಿ ಕೇಳಿ |

ಭೀಮವತಿ ಎಂಬುವ ಪಟ್ಟಾಣದಲ್ಲೊಬ್ಬ
ಬ್ರಾಮಾಣಗುಲದ ಶಿವಭಕ್ತ |

ಶಿವಭಕ್ತ ಸ್ವೋಮಯ್ನ ಮಡದಿ ಮಾದೇವಮ್ಮ ೪೨೯೦
ಪ್ರೀಯಾದ ಸತಿಯು ಸಿರೋಮಣಿಯ |

ಪ್ರೀಯಾದ ಸತಿಯು ಮಾದೇವಮ್ಮನ ಗರುಬದಲಿ
ರಾಮನೆಂಬ ಸುತನು ನಾ ತಾನೆ |

ನಮ್ಮಕ್ಕ ಗೌರಮ್ಮನಂತೆ ನಮ್ಮಾವ ಈಸ್ವರನಂತೆ
ನಮ್ಮಕ್ಕನ ಕರಿಯಾಕೆ ಹೊಯ್ತಿವ್ನಿ ಸ್ವಾಮಿ" |

"ಓಹೊಹೋ ಹೋ
ನಿನಗೆ ಗೌರಮ್ಮ ಅಕ್ಕ ಮಲ್ಲಯ್ಯ ಭಾವಾಜಿಯೋ ?
ನಿನಗೆ ತಲೆಗಿಲೆ ಕೆಟ್ಟಿರಬೇಕು
ನೀನು ಹುಚ್ಚೊ ಬೆಪ್ಪೊ ಗೊತ್ತಾಯ್ತಿಲ್ಲ
ಓಂಗೆಲ್ಲ ಮಾತಾಡಿ ಹುಚ್ಚ ಅನ್ನಸ್ಕೋ ಬ್ಯಾಡ
ಬಾಯ್ಮುಚ್ಕೊಂಡು ಮನೆಗ್ಹೋಗು !
ಅಕ್ಕನಂತೆ ಅಕ್ಕ !
ಮೂರ್ತಿಂಗ ತಿರುಗಿವ್ನಿ ನನಗೇ ಸಿಕ್ಕಿಲ್ಲ
ನೀನೊಬ್ಬ ಬಚ್ಚ
ನಿನ್ಗೆ ಸಿಗೋದುಂಟ ? ನಿನ್ ಮನೆಗೆ ಬರೋದುಂಟ ?

ಯಾರು ಹೇಳಿದರೊ ನಿನ್ಗೆ ಗೌರಮ್ಮ ಅಕ್ಕನೆಂದು
ಶಿವನು - ಭಾವ ನಿನಗಾಗಬೇಕೆಂದು ? |

ಇಸ್ಕೋಲ್ಮಠದ ಹುಡುಗರ ಮಾತ ಕೇಳ್ಕೊಂಡು
ಹುಚ್ಚುಡುಗ ನೀನು ಬರಬವುದ ? |

ನಿನ್ನ ತಾಯಿ ನಿನಗೆ ಸುದ್ದ ಸುಳ್ಳೇಳವ್ಳೆ
ಸುಳ್ಳು ಮಾತ ಕೇಳ್ಕೊಂಡು ಬರಬವುದ ? |

ಸುಳ್ಳು ಮಾತ ಕೇಳ್ಕೊಂಡು ನಿಜ ಅಂತ ನಂಬ್ಕೊಂಡು
ಇಂತ - ಘೋರುವಾದ ಸಿರಿಗಿರಿಗೆ ಬರಬವುದ ? |

ಹುಡುಗು ಬುದ್ಧಿಯ ಬುಟ್ಟು ಹಿಂದಕ್ಕೆ ಹೋಗಪ್ಪ
ನಿನ್ಗೆ - ಒಳ್ಳೆಯದಾಗಲಿ ನಡಿಕಂದ" |

"ಸ್ವಾಮಿ, ತಾಡಿ ತಾಡಿ ಮಾತಾಡಬ್ಯಾಡಿ -
ನಿಮ್ಮ ಮಾತ ನಾನು ನಂಬಬವುದ ?

ಗಂಗೇಗೆ ಕಟ್ಟಿಲ್ಲ ಲಿಂಗಕೆ ಸೂತುಕವಿಲ್ಲ
ಜಂಗುಮರ ಮಾತೀಗೆ ನೆಲೆಯಿಲ್ಲ |

ಇಂತ ನೆಲೆ ಇಲ್ಲ ಜಂಗುಮರ ಮಾತು
ಸುಳ್ಳಲ್ಲ ಅಂತ ಹ್ಯಾಗೆ ನಂಬ್ಲಿ ? -

ನೀವಾಡೀದ ಮಾತೀಗೆ ನೆಲೆಯಿಲ್ಲ ಜಂಗುಮರೆ
ಅಯ್ - ಹೋಗಯ್ಯ ಹುಚ್ಯಾಡು ಜಂಗುಮಯ್ಯ !

ನೀವು ಕೊಟ್ರೆ ವರ ಸ್ವಾಮಿ ಇಟ್ರೆ ಶ್ಯಾಪ ಗುರುವೆ
ಹೋಗ್ಹೋಗು ಹುಚ್ಯಾಡು ಜಂಗೂಮಯ್ಯ |

ರಾಮನಾಡಿದ ಮಾತ ಕೇಳಿದರು ಪರಮಾತ್ಮ
ಮುಕ್ಕಣ್ಣಯ್ಯ ಸ್ವಾಮಿ ನೆಗುತಾರೆ |

"ಹಂಗಾದ್ರೆ ನೀನು ಕೈಲಾಸ್ಕೆ ಹೋಗ್ಲೇಬೇಕೇನಪ್ಪ?"
"ಹೋಗ್ಲೇಬೇಕು ಸ್ವಾಮಿ."
"ಹೆಂಗೋಯ್ತಿ?"
"ಈಗೆಂಗೋಯ್ತಾ ಇವ್ನೋ ಹಂಗೆಯ"
"ಹಂಗ್ ಹೋದ್ರೂ ನಿನ್ಗೆ ಕೈಲಾಸ ಸಿಕ್ಕೋದಿಲ್ಲಪ್ಪ
ನೀನು ಗೌರಮ್ಮನೂ ಮಲ್ಲಯ್ಯನ್ನೂ
ನೋಡಕಾಗದಿಲ್ಲಪ್ಪ
ಆಗ ಏನ್ಮಾಡ್ತಿ?"
"ಸ್ವಾಮಿ ನನ್ನಿಚಾರ ನಿಮ್ಗೆ ಗೊತ್ತಿಲ್ಲ
ನಾನು ಅಕ್ಕ ಭಾವರ ಕರ್ಕೊಂಡು
ಊರ್ಗೋಗದು ದಿಟ.
ಇದು ತಪ್ಪುದ್ರೆ ನಾನು ಉಳಿಯೋಂಗಿಲ್ಲ"
"ಉಳಿಯದಿಲ್ಲ ಅಂದ್ರೆ ಏನು ?"
"ಉಳಿಯದಿಲ್ಲ ಅಂದ್ರೆ ನನ್ ಪ್ರಾಣಗಳ
ಕಳ್ಕೋತೀನಿ ಸ್ವಾಮಿ."
"ಇದುಕ್ಕೆಲ್ಲ ಪ್ರಾಣ ಕಳ್ಕೋತಾರ?"
"ಸ್ವಾಮಿ ನನ್ನ ಉಪಾದ್ಯಗೆ
ನನ್ನ ಸಮದಲ್ಲಿ ಇಸ್ಕೂಲ್ಮಠದಲ್ಲಿ
ಓದೊ ಹುಡುಗ್ರುಗೆಲ್ಲ
ನಾನು ನನ್ನ ಅಕ್ಕ ಭಾವುನ್ನ ಕರ್ಕೊಂಡ್ಬರಕೆ
ಹೋಯ್ತಾ ಇದ್ದೀನಿ ಅಂತ ಹೇಳಿವ್ನಿ
ಹಂಗೆ ಹೇಳಿ ಅಕ್ಕ ಭಾವರಿಲ್ದೆ
ನಾನೊಬ್ಬನೆ ಹೋದ್ರೆ ನನ್ ಮಾನ ಉಳೀತದ ?
ಮಾನುಕ್ಕಿಂತ ಪ್ರಾಣ ಹೆಚ್ಚಾ ಜಂಗುಮರೆ?"
"ಓಹೋ ನೀನು ಇಷ್ಟೊಂದ್ ತಯ್ಯಾರಿ
ಮಾಡ್ಕೊಂಡ್ಬಂದಿರೋದ್ ನೋಡುದ್ರೆ
ಹಬ್ಬ ಬಾಳ ಜೋರು ಅಂತಾಯ್ತು."
"ಹೌದು ಜಂಗುಮರೆ."
"ಹಬ್ಬುಕೆ ಹೆಚ್ಕಟ್ರೆ ಏನೇನಪ್ಪ?"
"ಏನೇನಪ್ಪ ಅಂದ್ರೆ ಏನ್ ಹೇಳ್ಲಿ?

ಒಬ್ಬಿಟ್ಟು ತಂಬಿಟ್ಟು ಅಪ್ಪಿಟ್ಟು ನಿಪ್ಪಿಟ್ಟು
ಕಜ್ಜಾಯ ಕೋಡ್ಬಳೆ ಒಡೆ ಚಕ್ಲಿ ಚಿಗ್ಳಿ ಚಿರೋಟಿ
ಮೆಂತೆಕಿಚ್ಚಡಿ ಕಾಯ್ ಚಟ್ನಿ ಪಾಯಸ ಬೂಂದಿ
ಪೇಣೆ ಬತ್ತಾಸು ಕರ್ಜಿಕಾಯಿ ನಾಮದಲ್ಗೆ
ಇಂತಿಂತೆ ತಿಂಡಿ ತೀರ್ಥಗಳ್ನೆಲ್ಲ ಮಾಡುಸ್ತೀನಿ
"ಹಂಗಾದ್ಮೇಲೆ ಹಬ್ಬ ಜೋರು ಜೋರು."
"ಭಾರಿ ಭಾರೀನೆ!" ೪೩೯೦
"ನಾವೂ ನಿಮ್ಮನೆ ಹಬ್ಬುಕೆ ಬರಬೋದೇನಪ್ಪ?"
"ಖಂಡಿತ್ವಾಗೂ ಬನ್ನಿ ಸ್ವಾಮಿ."

"ಅಪ್ಪ ಮಗು
ಹಂಗಾದ್ಮೇಕೆ ನಿಮ್ಮ ಇಸ್ಕೂಲ್ಮಠುದ
ಹುಡುಗ್ರು ಆಡಿದ ಮಾತು
ನಿಮ್ತಾಯಿ ಆಡಿದ ಮಾತು ನಿಜ ಕಣಂತೆ ಹೋಗಪ್ಪ
ಅದಿರ್ಲಿ ಅದಿರ್ಲಿ ಅದುಕ್ಕ ಮೊದ್ಲು ಒಂದ್‌ಮಾತು
ಅದೇನಪ್ಪ ನಿನ್ ಬೆನ್ನಲ್ ಕಟ್ಕಿದ್ದೀಯಲ್ಲ ಅದು?"
"ಅದು ಪ್ರಸಾದ."
"ಹಂಗಾದ್ರೆ -

ಆ ಪ್ರಸಾದದಲ್ಲಿ ನಂಗ್ಸೊಲುಪ ಕೊಟ್ಟರೆ ೪೩೯೦
ನಿನಗೆ ಕೈಲಾಸ ಸುಲಭವು |

ಆ ಪ್ರಸಾದದಲ್ಲಿ ಸೊಲುಪ ನನಗೆ ಕೊಟ್ಟಾರೆ
ನಿಂಗೆ - ಬಾಳ ಕೋಟಿ ಧರ್ಮ ಬರುತಾದೆ |

ಅನ್ನ ಊಟ ಮಾಡಿ ನಾನು ಮೂರ್ತಿಂಗಳಾಯ್ತಲ್ಲೊ
ನನ್ಗೆ - ಅನ್ನ ಹಾರಾದಿಗಳೆ ಮೊದಲಿಲ್ಲ" |

"ಯಾವ ಮಾತ್ಹೇಳುದ್ರು ನಿಮ್ ಪಾದ ಚಾಕ್ರಿ ಮಾಡ್ತೀನಿ
ಅನ್ನದ ಸುದ್ದಿ ಮಾತ್ರ ಹೇಳಬ್ಯಾಡಿ |

ಅಕ್ಕ ಗೌರಮ್ಮನವರ ಪಾದವ ನಾ ಕಾಣೊನ್ಗಂಟ ೪೩೯೫
ನಾನು - ಈ ಬುತ್ತೀಯ ಬಿಚ್ಲೊ ಮಗನಲ್ಲ |

ಭಾವಾಜಿ ಮಲ್ಲಿಕಾರ್ಜುನನ ಪಾದವ ಕಾಣೊನ್ಗಂಟ
ಈಬುತ್ತಿ - ಮ್ಯಾಲ್ ಕೈಮಡುಗೊ ಮಗ ನಾನಲ್ಲ" |

"ಮಗೂ ನಿನ್ಗೆ ಬಾಳ ಕೋಟಿ ಧರ್ಮಬತ್ತದಲ್ಲೊ
ಸೊಲುಪ ಕೊಡಪ್ಪ"
"ಸ್ವಾಮಿ ಅದುನ್ನ ಮಾತ್ರ ಕಂಡುವ್ವಾಗೂ ಕೇಳಬ್ಯಾಡಿ"

"ಅಯ್ಯೊ ಹುಚ್ಚಪ್ಪ ಹಸುದ್ಹೋರ್ಗೆ ಅನ್ನ ಕೊಟ್ರೆ
ನಿನ್ನ ಪುಣ್ಯಫಲ ಪ್ರಾಪ್ತವಾಯ್ತದಪ್ಪ!"

"ಸ್ವಾಮಿ ಅದೊಂದ್ ಬುಟ್ಟು
ಬೇರೆ ಏನ್ ಬೇಕಾದ್ರೂ ಹೇಳಿ ನಾನು ಮಾಡ್ತೀನಿ
ಈಬುತ್ತಿ ಇಷ್ಟ ಮಾತ್ರ ಎತ್ತಬ್ಯಾಡಿ" -

"ಅನ್ನ ಕೊಡದೇ ಹೋದ್ರೆ ಪರವಾಗಿಲ್ಲ ರಾಮಯ್ಯ ೪೩೯೮
ನನ್ನ ಕಷ್ಟನಾರೂ ಕಣ್ಣಿಂದ ನೋಡಪ್ಪ" |

"ಏನು ಕಷ್ಟ ಬುದ್ದಿ?" -

"ನನ್ನ ಕಾವೀಯ ಅಂಗರೇಕ ಮೇಲುಕ್ಕೆತ್ತಿ ನೋಡೊ ಕಂದ
ಈ ಕಷ್ಟಾವ ಕಣ್ಣಿಂದ ನೋಡಪ್ಪ" |

ಅವರ - ಕಾವೀಯ ಅಂಗರೇಕ ಎರಡಸ್ತದಿಂದ ಎತ್ತವ್ನೆ
ಮಾಯಾದ ಹೊಪ್ಪೆ ಮೈತುಂಬ |

ಕಜ್ಜಿ ಕುರ ಕೀವು ಮೈನೆಲ್ಲ ನ್ಯಾಪ್ಸ್ತೆತೆ
ಒಂದು ಒಡೆದೋಗದ ರೀತೀಲಿ |

ಮುಟ್ಟಿ ಮಾಲೀಸ ಮಾಡೊ ಕಂದ ರಾಮಯ್ಯ
ನಿನ್ಗೆ - ಬಾಳ ಕೋಟಿ ಧರ್ಮ ಬರುವಾದು | ೪೪೦೦

"ಅಪ್ಪ ಮೊಗಾ
ಒಂದ್ ಹೊಪ್ಪೆ ಒಡೀಬಾರ್ದು
ಆ ರೀತೀಲಿ ಮಾಲೀಸು ಮಾಡು ಕಂದ" -

"ಅಕ್ಕ ಗೌರಮ್ಮ ನಿಮ್ಮ ಪಾದವೇ ಗತಿ"ಯೆಂದು
ಏಡು ಹಸ್ತವ ಎತ್ತಿ ಮಡುಗುವ್ನೆ |

ಏಡು ಹಸ್ತವ ಎತ್ತಿ ಮಡಗಿದನು ರಾಮಯ್ಯ
ಹೊಪ್ಪೆಳೆಲ್ಲ ಒಡ್ದು ರಕ್ತ ಸುರಿವಾದು |

ಒಂದು ಕೈಯಲಿ ಕೀವು ಒಂದು ಕೈಯಲಿ ರಕ್ತ
ರಾಮಯ್ನ ಮೊಳಸಂದೀಲಿ ಚೊಟ್ಟಿಡುತಾವೆ !

ರಾಮಯ್ಯ ಮಾಲೀಸು ಮಾಡ್ತಿದ್ರೆ ೪೪೧೦
ತೀಡಿ ತೀಡಿ ತೀಡಿ ಸ್ವಾಮಿಗೆ ಬಾಳ ಹಾಲು -
ಅನ್ನ ಉಂಡಂಗಾಯ್ತು
ರಾಮಯ್ಯ ಮಾಲೀಸು ಮಾಡ್ತಾ ಇದ್ರೆ

ಪರಮಾತ್ಮನ ಉರಿಗಣ್ಣಿನ ಜ್ವಾಲ್ಯ
ಮೈದಾಳರಾಮಯ್ನ ಮೈಗೆಲ್ಲ ಸೇರ್ಕೊಂಡು
ಉರಿಉರಿ ಉರಿ ಮೈಯಾದ ಮೈಯೆಲ್ಲ ಉರಿಉರಿಉರಿ
"ಸ್ವಾಮಿ ಸ್ವಾಮಿ ಮೈಯಾದ ಮೈಯೆಲ್ಲ
ಧಗಧಗಾಂತ ಉರೀತೈತೆ
ನಾನು ನೀರಲ್ಲಿ ಮುಳುಗಬೇಕು ಸ್ವಾಮಿ
ನೀರ ಕುಡೀಬೇಕು ಸ್ವಾಮಿ" ಅಂತ ಕೂಕ್ಕೊಂಡ
ಆಗ ಪರಮಾತ್ಮ - ೪೪೨೦

ಡಮರೂಗ ತಿರುಸೂಲ್ವ ತಕ್ಕೊಂಡು ಈಸ್ವರ
ಹುಟ್ಟಾರೆ ಕಲ್ಲೀಗೆ ಬಡಿದಾರು |

ಹುಟ್ಟಾರೆ ಕಲ್ಲಿಗೆ ಬಡಿದರಂತೆ ಪರಮಾತ್ಮ
ಗಂಗಮ್ಮ ಉತುಪತ್ತಿಯಾದಾಳು |

ಗಂಗಮ್ಮ ಪುಟದು ಮ್ಯಾಲೆಕೆದ್ದಳು ತಾಯಿ
ಜಲಜಲನೆ ಹರಿದು ಸಾಗುವಳು |

ಜಲ್ಲೆಂದು ದುರುಗ ಮೊರೆಯೋ ಪಾತಾಳಗಂಗೆ
ಜುಳುಜುಳನೆ ಮ್ಯಾಕ ಬಂದಳಂತೆ |

"ಆಚಾರಿ ಹಾಲುನ್‌ಕೊಳ ಈಚೋರಿ ನೀರುನ್ ಕೊಳ
ಈಗ - ಜೂಟ ಮಾಡೋಗೊ ರಾಮಯ್ಯ | ೪೪೪೦

ಅಪ್ಪಾ ರಾಮಯ್ಯ ಹೋಗಪ್ಪ ಕುಡಿ ಅಂದ"
ರಾಮಯ್ಯ ಹಂತಗಳ ಇಳುದಾನು |

'ರಾಮಯ್ಯ ಕೈ ತೊಳುದು ಕುಡಿತಾನ್ಯ
ಹಾಗೇ ಕುಡಿತಾನ್ಯ
ನೋಡ್ಬೇಕು' ಅಂತ್ಹೇಳಿ ಪರಮಾತ್ಮ ನೋಡ್ತಿದ್ದಾರೆ.
ರಗುತದ ಕೈಯು ಕೀವು ನಕ್ಕೆಯ ತೊಳೀನೆ ಇಲ್ಲ
ರಕ್ತ ಕೀವು ಬೆರ್ಕೆಲಿ ಮೂರು ಬೊಗ್ಸ ಎತ್ತಿ
ರಾಮಯ್ಯ ಸೇವನೆ ಮಾಡ್ಸುಟ್ಟ -

ಮೂರು ಬೊಕ್ಸೆ ಎತ್ತಿ ಸೇವನೆ ಮಾಡಲು ರಾಮಯ್ಯ
ಕತ್ತರಿಸಿ ಕರ್ಮ ಪುಡಿಯಾದೊ |

ಕತ್ತರಿಸಿ ಹೋದ ಕರ್ಮ ಪುಡಿಯಾಗಿ
ರಾಮನಿಗೆ ೪೪೪೦
ವಜ್ರುರ ಹಾಕಿದಂಗಾಯ್ತು ಅವನ ಮನಸೀಗೆ |

ರಾಮಾನ ಕಷ್ಟಗಳ ನೋಡಿದರು ಜಗದೀಶ
ಸಂತೋಸವಾಯ್ತು ಶಿವನ ಮನುವೆಲ್ಲ |

ಕೈಲಾಸ್ಕೆ ಹೋಗುವಂತ ಕಾರಣವೆ ಬಂತಲ್ಲ
ರಾಮಯ್ನ ಕರ್ಮುವೆಲ್ಲ ಕಳುದೋಯ್ತು |

"ರಾಮ ಬಾಪ್ಪ"
ಏನು ಸ್ವಾಮಿ?"
"ಭಾವ ಭಾವ ಅಕ್ಕ ಅಕ್ಕ ಅಂತಿಯಲ್ಲ
ಅವರ್ಗೂ ನಿನ್ಗೂ ಎಷ್ಟು ದೋಸ್ತಿ ಎಷ್ಟು
ಅಕ್ಕುರ್ತಿ ಇರಬವುದಪ್ಪ !
ನೋಡು ನಿನ್ನ ಭಾವಾಜಿಯವರು ಅತ್ತಿಂದ
ಬರೋ ಹಂಗೆ ಕಾಣ್ತಾದೆ ೪೪೫೦
ಅತ್ಲಾಗೆ ತಿರುಗಿ ನೋಡಪ್ಪ
ನಿನ್ನ ಕಷ್ಟ ನೋಡುನಾರ್ದೆ ಅವುರೆ ಅತ್ತಿಂದ
ಬತ್ತಾ ಅವುರಲ್ಲಪ್ಪ" ಅಂದ್ರು -

ಅತ್ಲಾಗಿ ತಿರುಗಿ ನೋಡಿದರೆ ರಾಮಯ್ಯ
ಇತ್ಲಾಗೆ ಸ್ವಾಮಿ ಮಾಯವಾಗುತಾರೆ | -

ಸಾಮಿ ಇಲ್ಲ !
"ಯಾರೂ ಬಂದಿರನಿಲ್ಲ ನಮ್ ಭಾವಾಜಿ ಬಂದಿದ್ರು
ಈ ಪಾಪಿ ಜಲ್ಮುಕ್ಕೆ ಅರುವಾಗ್ನಿಲ್ಲವಲ್ಲ
ಯಾರೋ ಒಬ್ಬ ಕಾಡುಜಂಗುಮ ಅಂತ್ಹೇಳಿ
ಅಂಕಾರ ಮಾಡ್ಬುಟ್ಟೆನಲ್ಲ
ನಮ್ಮ ಭಾವಾಜಿ ಅನ್ನೋದು ಮೊದಲು ಗೊತ್ತಾಗಿದ್ರೆ
ಅವುರ್ ಪಾದ್ವ ಇಲ್ಲೆ ಹಿಡ್ಕೊತಾ ಇದ್ನಲ್ಲ ೪೪೬೦
ನಂಗೆ ಎಷ್ಟೊಂದು ಮೋಸ ಮಾಡ್ಬುಟ್ರು
'ಅತ್ಲಾಗ್ ನೋಡಪ್ಪ' ಅಂದ್ಬುಟ್ರು ಇತ್ಲಾಗೆ
ಮರೆಯಾಗ್ಬುಟ್ರು
ಮುಂದೆ ಏನ್ ಕಷ್ಟ ನನ್ಗೆ ಬಂದದೊ ಕಾಣೆ
ಎಡಕೆ ಬಲಕೆ ತಿರುಗಿ ನೋಡಿದರೆ
ಯಾರೂ ಇಲ್ಲವಲ್ಲ ಏನೂ ಇಲ್ಲವಲ್ಲ
ಒಬ್ಬಾನೆ ಒಬ್ಬನಾಗಿ ನಿಂತಿವ್ನಿ
ದೇವ ಇಷ್ಟು ಮೋಸುವನ್ನು ಮಾಡಿ ಹೋಗ್ಬವುದ?
ಅಕ್ಕಭಾವರ ಬುಟ್ಟು ಹಿಂದಕ್ಕೆ ಹೋಗಲಾರೆ" ಅಂತ್ಹೇಳಿ -

ಅಕ್ಕಯ್ಯ ಗೌರಮ್ಮ ಭಾವಾಜಿ ಮಲ್ಲಯ್ನ
ಕೂಗಿ - ಕರೆಯುತ ಮುಂದಕ್ಕ ನಡೆದಾನು | ೪೪೭೦

೯. ಕೈಲಾಸಕೆ ಬಂದ ರಾಮಯ್ಯ

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

"ಅಕ್ಕಯ್ಯ ಗೌರಮ್ಮ ಭಾವಾಜಿ ಮಲ್ಲಯ್ಯ
ನಾನೊಬ್ಬಾನೆ ಒಬ್ನಾಗಿ ನಿಂತಿವಿನಿ |

ಅಕ್ಕುರಿಸಿ ಕರಿತಿವ್ನಿ ಅಕ್ಕಯ ಗೌರಮ್ಮ
ಚಿಕ್ಕ ತಮ್ಮಯ್ನ ಮ್ಯಾಲೆ ದಯತೋರು |

ಬಾವುಣ್ಸೆ ಕರಿತಿವ್ನಿ ಭಾವ ಮಲ್ಲಯ್ಯ
ಈ ಬಾಲನ ಮ್ಯಾಲೆ ದಯತೋರು |

ನಿಮ್ಮ ಕರ್ಕೊಂಡಲ್ದೆ ನಾ ಹಿಂದಕ್ಕೋಗಲಾರೆ
ನೀವು ಬರ್ದಿದ್ರೆ ನಾನು ಬಾಳನಾರೆ |

ನೀವು ಬರದೆಲೆ ನಾನು ಬಾಳ್ನಾರೆ ಬದುಕ್ನಾರೆ
ನಿಮ್ಮ ಬುಟ್ಟು ನಾನು ಹೋಗಲಾರೆ | ಳಳಲಂ

ದಾಯವಿಲ್ಲದೆ ನೀನು ಮಾಯವಾದಯ ಭಾವ
ಕಾಯ ಸ್ಕೆತ ನಾನು ಬರುತೀನಿ |

ಕಾಯ ಸ್ಕೆತ ನಾನು ನಿನ್ನ ಕೈಲಾಸ್ಕೆ ಬರುತೀನಿ
ಕೈಹಿಡಿದು ನನ್ನ ಕರುಕೊಯ್ಯ" |

ಮೈದಾಳರಾಮಯ್ನ ಮಾತ ಕೇಳಿ ಪರಮಾತ್ಮ
"ಮಾನವ ದ್ರೇಯದ ಬಾಲಕನು |

ಮಾನುವ ದ್ರೇಯದ ಮೈದಾಳರಾಮಯ್ನ
ಕಾಯ ಸ್ಕೆತ ಕೈಲಾಸ್ಕೆ ಕರುಕೊಳ್ಳಲಾಗದು |

ಅವುನ್ಗೆ ಇನ್ನಷ್ಟು ಕಷ್ಟಕೋಟುಲೆಗಳ ಕೊಟ್ಟು
ಕಳ್ಸಬೇಕು ಅವನ ಹಿಂದಕ್ಕೆ" | ಳಳ೯೦

ಗಾಳುಗೋಳು ದುಕ್ಕ ಮಾಡಿಕೊಂಡು ರಾಮಣ್ಣ
ಮಂದರಗಿರಿಯ ಕಣುಮೇಲಿ |

ಮಂದರಗಿರಿಯ ಕಣುಮೇಲಿ ಬರುವಾಗ
ಅವನ-ಹೆದುರಿಸಿ ಹಿಂದಕ್ಕೆ ಕಳುಸ್ಬೇಕು |

ರಾಮಯ್ನ ಹಿಂದಕ್ಕೆ ಕಳುಸ್ಬೇಕು ಅನುತ್ಹೇಳಿ
ಗೌರಮ್ನ ನೋಡಿ ನೆಗುನೆಗುತ |

ಕಪಿಹಿಂಡ ಈಗ ಕಳುಸೂವೆ ನೋಡು ಗೌರಿ
ಕಪಿಗಳಿಗೆ ಹೆದರಿ ಹೋಗುತಾನೆ |

ಕಪಿಗಳ ಕಳುಸಲು ಕಂಡನು ರಾಮಯ್ಯ
ಕೇಕೆ ಹಾಕುತ ಕುಣಿಯುತ |

ಐವಾರ್ಕ ರಾಮಾರ ಬಂಟ ಆಂಜನೇಯ
ಬಾರೊ ಬಾರೊ ನನ್ನ ಜೊತೆ ಆಡು |

ಬೂದುಗಂಬಳಿ ಮೈಯ ಬೆಳಮುಡಿ ತಲೆಯವುನೆ
ಲಂಕಾಪಟ್ಟಣವ ಸುಟ್ಟವನೆ |

ಲಂಕಾಪಟ್ಟಣವ ಸುಟ್ಟವನೆ ಆಂಜುನೇಯ
ಅಕ್ಕಗೌರಮ್ಮನ ಮಠವೆಲ್ಲಿ |

ಅಕ್ಕಗೌರಮ್ಮನ ಮಠಕೆ ದಾರಿ ತೋರು
ಆಡುತಾಡುತ ನಾವು ಹೋಗಬೇಕು |

ಕೊಂಬೆ ಕೊಂಬೆಗೆ ಹಾರಿ ಹಣ್ಣುಕೀಳುವ ಜಾಣ
ಭಾವ ಮಲ್ಲಯ್ಯನ ಮಠದೋರು |

ನಾನೊಬ್ಬನೆ ಹೊಗದಕೆ ಸಿಬ್ಬರಿ ಆಗುತ್ತಿತ್ತು
ಬನ್ನಿ ಕಪಿಗಳೆ ನನ ಜೊತೆಗೆ |

ದಾರಿ ತಿಳಿಯುತ್ತಿಲ್ಲ ನೀವು ನನ್ಗೆ ದಾರಿತೋರಿ
ಲೆಂಕೆಯ ಸುಳಿವ ಅರಿತವನು |

ಲೆಂಕೆಯ ಸುಳಿವ ಅರಿತ ಆಂಜುನೇಯ
ರಾಮರಿಗೆ ಸಾಯ್ಯ ಮಾಡಿದೋನು |

ರಾಮರಿಗೆ ಸಾಯ್ಯವ ಮಾಡಿದ ಆಂಜನೇಯ
ದಾರಿದೋರು ನನ್ಗೆ ಕೈಲಾಸಕೆ |

ನಿನ್ನ ಸ್ವಾಮಿ ದೊಡ್ಡರಾಮ ನಾನೊಬ್ಬ ಪುಟ್ಟರಾಮ
ನನ್ನೂ-ನೀನು ಸಾಹ್ಯವ ಮಾಡಬೇಕು |

ರಾಮಯ್ನ ಮಾತಕೇಳಿ ಕಪಿಗಳು ಹಲ್ಲು ಕಿರ್ದು
ಒಂದು ಯೋಜುಣಕೆ ಮರೆಯಾದೂ |

ಕಪಿಗಳ ಚೇಷ್ಟೆಗೆ ಬಗ್ಗನು ರಾಮನೆಂದು
ಮದ್ವಾನೆ ಹಿಂಡ ಕಳುವಿದರು |

ಸೊಂಡೀಲ ತೂಗುತ ಹೆಜ್ಜೆಯ ಹಾಕುತ
ಉಯ್ಯಾಲೆ ಮೈಯ ಆಡುತ |

ಹಿಂಡು ಹಿಂಡಾಗಿ ಬರುವಂತ ಆನೆಯ
ಕಂಡು ರಾಮಯ್ಯ ಕುಣೆದಾಡಿದ |

ಹೆಬ್ಬಂಡೆ ಮೈಯವನೆ ಅಬ್ಬರಿಸಿ ಬರುವೊನೆ
ಉಬ್ಬಾರಿ ಸೊಂಡಿಲ ತಲೆಯವನೆ |

ಮೊರದಗಲ ಕಿವಿಯೋನೆ ಮೊರಮೊರದು ಬರುವೋನೆ
ನಮ್ಮಕ್ಕನ ಮುದ್ದು ಮಗರಾಯ |

ನಮ್ಮಕ್ಕ ಗೌರಮ್ಮನ ಮುದ್ದು ಮಗರಾಯ
ದಾರಿದೋರಕ್ಕಯ್ಯನ ಮಠಕಾಗಿ |

ರಾಮಯ್ನ ಮಾತೀಗೆ ತಲೆಯ ತೂಗಿದವು
ಸೊಂಡಿಲ ಚಾಚಿ ಮುಂದಕ್ಕೆ |

ಸೊಂಡಿಲ ಚಾಚಿ ರಾಮಯ್ನ ಎತ್ತಿಕೊಂಡು
ಕೂರಿಸಿಕೊಂಡಿತು ಬೆನ್ನಿನಲಿ |

ಬೆನ್ನಲ್ಲಿ ಕೂರ್ಸಿಕೊಂಡು ಮೈದಾಳ ರಾಮಯ್ನ
ಒಂದು ಯೋಜುಣೆ ಮುಂದಕ್ಕೆ ಕಳುಗಿದವು |

ಆನೆಗೆ ಹೆದರನು ಹುಲಿಯಿಂದ ಹೆದರಿಸುವೆ
ಹಂಗಂತ ಹುಲಿಹಿಂಡ ಕಳುಗೀದ |

ಬೆಟ್ಟದ ಗವಿಯೋನೆ ಪಟ್ಟೆಯ ಮೈಯವನೆ
ಹೊನ್ನ ಬಣ್ಣದ ಹುಲಿರಾಯ |

ಅಕ್ಕಗೌರಮ್ಮನ ಅಕ್ಕರೆಯ ಮಾಗನನೆ
ಭಾವ ಮಲ್ಲಯ್ಯನ ಮಠವೆಲ್ಲಿ |

ಭಾವ ಮಲ್ಲಯ್ಯನ ಮಠಕೆ ದಾರಿಯ ತೋರು
ಅನ್ನಲು ರಾಮಯ್ನ ನುಡಿ ಕೇಳಿ |

ಪರಮಾತ್ಮನ ಹೆಸರ ಕೇಳಿದ ಹುಲಿರಾಯ
ಅಲ್ಲಿಗೊಂದು ಯೋಜುಣ ಕಳುಗಿದನು |

ಅಲ್ಲಿಗೊಂದು ಯೋಜುಣ ಕಳುಗಿದ ಹುಲಿರಾಯ
ಶರಣು ಮಾಡಿ ಅಲ್ಲಿಂದ ಮರೆಯಾದ |

ಮುದ್ದು ಮಾತಾಡುತ ಬಿದ್ದೋಡಿ ಬಂದಾವು
ಹನ್ನೆರಡು ಸಾವಿರ ಗಿಣಿಹಿಂಡು |

ಹನ್ನೆರಡು ಸಾವಿರ ಗಿಣಿಹಿಂಡ ಕಂಡಾನು
ಕೇಕೆ ಹಾಕೂತ ಕುಣೆದಾನು |

ಮಳಿಲ್ಲ ಬೆಳಿಲ್ಲ ಮೈಯೆಲ್ಲ ಹಸುರು
ಎಲಿಲ್ಲ ಅಡ್ಡಿಲ್ಲ ಬಾಯೆಲ್ಲ ಕೆಂಪು |

ನಿನ್ನ - ಪಚ್ಚೇಯ ಮೈಚಂದ ಪವಳಾದ ಬಾಯಿಚಂದ
ನೀನಾಡೊ ಮಾತು ಬಲುಚಂದ |

ಬಾ ಬಾರೊ ಗಿಣಿರಾಮ ನನ್ನ ಜೊತೆಗೆ ಬಾರೊ
ತೋರೊ - ಅಕ್ಕಗೌರಮ್ಮನ ಮಠವೆಲ್ಲಿ |

ಹಾಡುವ ಕೋಗಿಲೆಯೆ ಕಾಡು ಕೋಳಿಯ ಹಿಂಡೆ
ಓಡಾಡಿ ನೋಡುವ ಹುಲ್ಲೇಕರುವೆ |

ಹಾಡುವ ದುಂಬೀಯೆ ಜೀರುವ ಜೀರುಂಡೆ
ಬಂದ್ಹೇಳಿ ಅಕ್ಕಯ್ನ ಮಠವೆಲ್ಲಿ |

ರಾಮಯ್ಯ ದುಕ್ಕಗಳ ಮಾಡ್ತಿರುವಾಗ
ಪರಮೇಶ್ವರ ಮಲ್ಲಯ್ಯನವರು
"ಈ ಮೈದಾಳರಾಮನಿಗೆ ಒಂದು ಕಷ್ಟವನ್ನು
ಕೊಟ್ಟು ನೋಡ್ಬೇಕು ಈಗ
ಈಗ ಹಿಂದುಕ್ಕೆ ಹೊಯ್ತಾನೆಯೆ
ಇಲ್ಲ ಮುಂದುಕ್ಕೆ ಹೋಯ್ತಾನೆಯೆ
ಒಂದು ಕಷ್ಟವನ್ನು ಕೊಟ್ಟು ನೋಡ್ಬೇಕು" ಅಂತ್ಹೇಳಿ -

ಒಂದು ಬೆಟ್ಟದ ಹತ್ತಿ ಒಂದು ಬೆಟ್ಟ ಇಳಿದಾರೆ
ಒಂದು ಪಾದದ ರಕ್ತ ಹರಿಯಿತು

ಅವನ ಪಾದಕೆ ಯಾದಿ ಕೊಟ್ಟರಲ್ಲೆ ಪರಮಾತ್ಮ
ಪಾದುವೆಲ್ಲ ರಕ್ತಾದ ಜ್ವಾಲ ಆದಾವು |

ಮತ್ತೊಂದು ಪಾದುವನ್ನು ಎತ್ತಿ ಮಡುಗೋದ್ಕೆ
ಸಾಧ್ಯುವೇ ಇಲ್ಲ
"ನನ್ನ ಪಾದುಕ್ಕೆ ಯಾದಿ ಕೊಟ್ಕಲ್ಲೊ ಭಗುವಂತ
ಮುಂದೆ ನಾನೇನು ಮಾಡಲಪ್ಪ
ಈ ಎರಡು ಸಾಲುಗಳು ರಕ್ತಮಯ ಆಗಿದ್ದಾನೆ
ಪಾದುವನ್ನೂ ನೆಲುಕ್ಕೆ ಊರಲಾರಿ.

ಈ ಮಂಡಿ ಒಳುಗಾರ ಒಂದೋಜುಣ ಬತ್ತೀನಿ"
ಅಂದ್ಬುಟ್ಟು -

ಮಂಡಿಗಾಲಿನ ಒಳುಗೆ ಬತ್ತಾನೆ ರಾಮಯ್ಯ
ಅನ್ನ - ಮಂಡ್ಕೆಲ್ಲ ಒಡ್ದು ರಕ್ತ ಸುರಿದಾವು |

ಮಂಡ್ಕೆಲ್ಲ ಒಡ್ದು ರಕ್ತ ಸುರಿವಂತ ಕಾಲದಲ್ಲಿ
ಅಲ್ಲಿ - ದುಕ್ಕ ಮಾಡುವಾನು ರಾಮಯ್ಯ |

"ಈ ರಾಮಯ್ಯ
ಪಾದವಿದ್ರೆ ಕೈಲಾಸ್ಕೆ ಬತ್ತನೆ
ಈ ಮಂಡಿಯಾದ್ರೂ ಕೈಲಾಸ್ಕೆ ಬತ್ತನೆ" ಅಂತ್ಹೇಳಿ ಸ್ವಾಮಿ
ಈ ಎರಡಕ್ಕೂ ಯಾದಿಯನ್ನು ಕೊಟ್ರು

"ಪಾದ ಬ್ಯಾಡ ಮಂಡಿ ಬ್ಯಾಡ ಮೊಣಕ್ಕೆ ನನಗ್ಯೆತೆ
ಮೊಣಕ್ಕೆಲಿ ನಾನು ತೆವಳುವೆ" |

ಪಾದ ಇಲ್ಲದಿದ್ರೂ ಸರಿಯೆ ಮಂಡಿ ಇಲ್ಲದಿದ್ರೂ ಸರಿಯೆ
ನಾನು ಮೊಣಕ್ಕೈನಲ್ಲಿ ತೆವಿಕೊಂಡೋಯ್ತೀನಿ" ಅಂತ್ಹೇಳಿ
ಮೊಣಕ್ಕೈನಲ್ಲಿ ತೆವೀತಿದ್ರೆ -
ಅವನ ಮೊಣಕ್ಕೆಯ ರಕ್ತವೆಲ್ಲ ಹರಡಿತು
ರಾಮಯ್ಯ ದುಕ್ಕ ಪಡುತಾನೆ |

"ನನ್ನ ಮೊಣಕ್ಕೆಯೂ ಸೋಲ್ತು ಅಲ್ಲವ?
ಈ ಮಂಡಿ ಈ ಮೊಣಕ್ಕೆ ಈ ಪಾದಗಳು
ಯಾತ್ರಿಂದ ಹುಟ್ದೊ ?
ಎದೆಯಿಂದ ಹುಟ್ದೊ
ಎದೆ ಒಸಿ ಕಷ್ಟ ಮಾಡ್ಕಿ" -

ಗುಂಡಾಲ ಹತ್ತುತಾನೆ ಗುಂಡಾಲ ಇಳಿತಾನೆ
ಅವ್ನ-ಗುಂಡೀಗೆ ರಕ್ತುವೆಲ್ಲ ಹರಡಿಲದ್ದೋ |

"ಭಗುವಂತ ನಿಷ್ಕರುಣೆ ಆಗೋಗಿದ್ದೀನಿ
ಪಾದುವಿಲ್ಲ ಮಂಡಿಯಿಲ್ಲ ಮೊಣಕ್ಕೆಯಿಲ್ಲ
ಗುಂಡಿಗೆಯೂ ಇಲ್ಲ" ಅಂತ್ಹೇಳಿ -

ತೆಮುಕೊಂಡು ತೆಮುಕೊಂಡು ಬಂದನಂತೆ ರಾಮಯ್ಯ
ಬೆಟ್ಟದ ಕೊನುಗೋಗಿ ಕುಂತನಂತೆ |

"ಕರಿಯಾಕೆ ನಾ ಬಂದು ಹಿಂದಕ್ಕೆ ಹೋಗುವನೆ
ಅಕ್ಕ ಭಾವಾರು ಜೊತೆಗಿಲ್ಲದೆ" |

ಮೈದಾಳ ರಾಮಣ್ಣ ಸುತ್ತ ಎಡಬಲವ ನೋಡುದ
ಒಬ್ನೂ ಇಲ್ಲ
ಒಬ್ನೇ ಒಬ್ಬಾಗಿ ಕುಂತವುನೆ -
ಅಕ್ಕಯ್ಯ ಗೌರಮ್ಮ ಅಕ್ಕರಿಲ್ಲದ ಮ್ಯಾಲೆ
ಭಾವ - ಮಲ್ಲಯ್ಗೆ ದಯವು ಇಲ್ಲದಾಗ |

ಇವುರ ಕರುಕೊಂಡು ನಾನು ಊರಿಗೆ ಹೋಗದ ಮ್ಯಾಲೆ
ನಾನು ಇದ್ದು ಫಲವೇನು ಪರಮಾತ್ಮ |

ನಾನು ಏನೇ ಕಾರ್ಣಕ್ಕೂ ಹಿಂದುಕ್ಕೋಗೋನಲ್ಲ
ನಿಮ್ಮ ಪಾದ್ದಲ್ಲಿ ಪ್ರಾಣ ಬುಡುತೀನಿ |

ಉಕ್ಕುಳಿಸಿ ನೆಗೆದಾನು ಕಂದ ರಾಮಯ್ಯ
ಜಗದೀಶ ಕಾದು ನಿಂತವುರೆ |

ಜಗದೀಶ ಕಾದು ನಿಂತವುರೆ ಆಶ್ರಮದಲ್ಲಿ
ರುಸಿ ಮುನಿಗಳ ಜೊತೆ ನೋಡುತವುರೆ |

ಉಕ್ಕುಳಿಸಿ ನೆಗೆದ ರಾಮಯ್ನ ಪರಮಾತ್ಮ
ಹೂವಚಂಡಂತೆ ಆತುಕೊಂಡ್ರು |

ಆತುಕೊಂಡು ಅವುನ ರುಸಿ ಆಶ್ರಮಕೆ ಬುಟ್ರು
ಆಶ್ರಮಕೆ ಬಂದ ಕೂಡಲೆ
ರಾಮಯ್ಯ ಕೈಕಾಲೂ ಭುಜ ಮಂಡಿ ಮೊಣಕಾಲೆಲ್ಲ
ಮೊದಲಿದ್ದಂಗೆ ಸರಿಯಾಗೋದೊ
"ಇದೇನು ಇದು ಮೈಕ್ಕೆಯೆಲ್ಲ ನೋವಿಲ್ಲದಂಗಾಯ್ತು?"
ಕೈಕಾಲ ನೀವಿ ಸಣ್ಣುಸ್ತಂಗಾಯ್ತು" ಅಂತ್ಹೇಳಿ ರಾಮಯ್ಯ

ಕಣ್‌ಬುಟ್ಟು ನೋಡುದ್ರೆ
ಅಲ್ಲಿ ಎಷ್ಟೊಂದು ಜನ ರುಸಿಮುನಿಗಳು ನೋಡ್ತಾವ್ರೆ.
ಆ ರುಸಿಗಳು ಅಂದ್ರೆ -
ನತ್ತಿಮ್ಮಾಲೆ ಹೊನ್ನರಳಿ ಮರ ಹುಟ್ಟುದೋರು
ಕಣ್ಣಲ್ಲಿ ಕಡಜ ಕಟ್ಟುದೋರು |

ಬೆನ್ನಲ್ಲಿ ಬಾಗೇಮರ ಹುಟ್ಟಿರುವ ರುಸಿಗಳು
ಮೂಗ್ನಲ್ಲಿ ಹೆಜ್ಜೇನು ಮರಿ ಮಾಡಿದೋರು |

ಕಿವಿ ಒಳುಗೆ ಗೀಜುಗ ಮರಿಮಾಡಿದೋರು
ಕಣ್ಣೊಳಗೆ ದಬ್ಬೆಹುಲ್ಲು ಬೆಳೆದವರು | ೪೬೪೦

ದೊಕ್ಕೆ ಒಳುಗೆ ಗರುಡಾಳ್ ಪಕ್ಷಿ ಮರಿ ಮಾಡಿದೋರು
ನಾಲ್ಗೆ ಒಳುಗೆ ಚಿಕ್ಕಚಿಕ್ಕ ಗಿಡಹುಟ್ಟಿದೋರು |

ಎಕ್ಕತ್ತಿನ ಮೇಲೆ ಮತ್ತಿ ಮರ ಹುಟ್ಟಿದೋರು
ಮುಕ್ಕೋಟಿ ಮುನಿಗಳು ಇರುವರಲ್ಲಿ |

ಅನ್ನದಾನ ಮಾಡಿದೋರು ಕನ್ಯದಾನ ಮಾಡಿದೋರು
ಉನ್ನತ ಪದವಿ ಪಡುದೋರು |

ಉನ್ನತ ಪದವಿ ಪಡುದ ರುಸಿಗಳು ಅವರು
ಪುಣ್ಯವಂತರು ಅವರು ಧನ್ಯರು |

ರುಸಿಗಳ ವೇಸುದಲ್ಲಿದ್ದ ಪರಮಾತ್ಮ
ಮೈದಾಳ ರಾಮಯ್ನ ಕೇಳ್ತವುರೆ ೪೬೫೦
"ಯಾರಪ್ಪ ಕಂದ ನೀನು"
"ಸ್ವಾಮಿ ಮೈದಾಳ್ಯಾಮಯ್ಯ ಬುದ್ಧಿ"
"ಎಲ್ಲಿಗೋಯ್ತಿದ್ದೀಯಪ್ಪ?"
"ನಾನು ಕೈಲಾಸುಕ್ಕೋಯ್ತಿದ್ದೀನಿ ಬುದ್ಧಿ."
"ಕೈಲಾಸದಲ್ಲಿ ನಿಂಗೆ ಯಾರವುರಪ್ಪ?"
"ಸ್ವಾಮಿ ಜಗನ್ಮಾತೆ ಗೌರಮ್ಮ ನನ್ನಕ್ಕ.
ಆ ಪರಮೇಶ್ವರ ನನ್ಗೆ ಭಾವ ಅಲ್ವ ಬುದ್ಧಿ!"
"ಸ್ವಂತ ಭಾಮೈದುನ ಅಪ್ಪ?"
"ಮತ್ತೆ? ನಮ್ಮಕ್ಕನ ಕೊಟ್ಟಿಲ್ಲವ ಬುದ್ಧಿ?"
ಇವುರ್ಗೆ ಒಳೊಳ್ಗೆ ನೆಗಾ ೪೬೬೦
"ಹಂಗಾದ್ಮೇಲೆ ಕೈಲಾಸ್ಕೆ ಹೋಗ್ಬೇಕು ಅಂತಿಯೆ?"
"ಹೋಗ್ಲೇಬೇಕು ಬುದ್ಧಿ."
"ರಾಮಯ್ಯ ಈ ರುಸಿಗಳು ಯಾರಾದ್ರೂ ಕಣ್‌ಬುಟ್ಟು
ನಿನ್ನ ನೋಡುದ್ರೆ
ನೀನು ಸುಟ್ಟು ಭಸ್ಮ ಆಗೋಯ್ತುಯಪ್ಪ!"
"ಯಾಕೆ ಬುದ್ಧಿ?"
"ಅವ್ರು ತ್ರಪಸ್ ಮಾಡವ್ರೆ."
"ಸ್ವಾಮಿ ನಾನು ನನ್ನ ಅಕ್ಕ ಗೌರಮ್ಮನ ಭಾವ
ಮಲ್ಲಯ್ಯನ ಕುರ್ತು
ನಾನು ಹುಟ್ಟುತ್ತಾವ್ನಿಂದ ಜಪುನೆ ಮಾಡ್ತಿದ್ದೀನಿ
ಇವತ್ಗೆ ನನ್ನ ತ್ರಬಸ್ ಮುಗೀತು
ನಾನೂ ಕಣ್‌ಬುಟ್ರೆ ಆ ರುಸುಗಳೂ ಭಸ್ಮ ಆಯ್ತರೆ !" ೪೬೭೦
"ಇನ್ನೊಂದ್ಮಾತು"
"ಹೇಳಿ ಸ್ವಾಮಿ"
"ರಾಮಣ್ಣ ಕೈಲಾಸದಲ್ಲಿ
ಕೊತ್ತಿಗೆ ಲಿಂಗ ಕೋಳಿಗೆ ಲಿಂಗ
ನಾಯಿಗೆ ಲಿಂಗ ನರೀಗೆ ಲಿಂಗ
ಇರೆಂಬತ್ತೇಳು ಕೋಟಿ ಜೀವುರಾಸ್ಯಕೂ ಲಿಂಗ
ಲಿಂಗುವಿಲ್ಲದ ನೀನು ಭವಿ
ನೀನು ಕೈಲಾಸ್ಕೆ ಹೋದ್ರೆ ಒಳೀಕೆ ಬಿಡೋದಿಲ್ಲಪ್ಪಾ"
"ಜಂಗುಮ್ರೆ ನಿಮಗೆ ಲಿಂಗುವಿದೆಯ."
"ಇದೆ ಕಣಪ್ಪ." ೪೬೮೦
"ನೀವು ಕೈಲಾಸ್ಕೆ ಹೋಗಿದ್ದೀರಾ?"
"ನಾನಿರದೇ ಅಲ್ಲಿ."
"ಹಂಗಾದ್ರೆ ನಿಮ್ಮ ಲಿಂಗ ನೋಡನ ತಗೀರಿ."
"ನೋಡು" ಅಂತ್ಹೇಳಿ ಸ್ವಾಮಿಯೋರು
ಪಂಚಮುಕುದ ರುದ್ರಾಕ್ಷಿ ತಗ್ದು ತೋರುದ್ರು
"ಸ್ವಾಮಿ ನಾನು ಬರೋ ದಾರೀಲಿ
ಇಂತ ರುದ್ರಮಣಿ ಕಾಯಿ ದಾರಿ ಉದ್ದಕೂ ಬಿದ್ದವಲ್ಲ ಸ್ವಾಮಿ."
"ಹಂಗಾದ್ಮೇಲೆ ಇದ ನೋಡು" ಅಂದ್ಬುಟು
ಕರಡ್ಗೆ ಒಳಗಿರೊ ಪಂಚಲಿಂಗ ತೋರಿದರು
"ಸ್ವಾಮಿ ಇದೇನು ಕಲ್ಲು-ಬಳಪುದ ಕಲ್ಲು." ೪೬೯೦
"ರಾಮಯ್ಯ ನಮ್ಮ ರುದ್ರಾಕ್ಷಿಯನ್ನು
ರುದ್ರಮಣಿಕಾಯಿ ಅಂತಿದ್ದೀಯೆ
ಪಂಚಲಿಂಗುವನ್ನು ಬಳಪದ ಕಲ್ಲು ಅನ್ತಿದ್ದೀಯೆ
ಹಂಗಾದ್ಮೇಲೆ ನಿನ್ನ ಲಿಂಗ ತೋರು ನೋಡ್ತೀನಿ"
"ಸ್ವಾಮಿ ನನ್ನ ಲಿಂಗ ಕಲ್ಲಲ್ಲ ಕಾಯಲ್ಲ
ಅದು ನನ್ನ ಆತ್ಮದಲ್ಲದೆ!"
"ನಾನು ನೋಡಬವುದ?"
"ನೋಡ್ಬೇಕು ಅನ್ನೋದಾದ್ರೆ"
"ನೋಡ್ಬೇಕು!" -

ಚಂದಾಯ್ವವನ್ನೆ ತಕ್ಕೊಂಡು ರಾಮಯ್ಯ
ಕೈಲಾಸ್ದ ಬಾಕಲಿಗೆ ನಾಟಿದನು |

ಕುತ್ತೀಗೆ ಬುಡಕೆ ಕತ್ತೀಯ ನಾಟಿಸಿ
ಉದ್ದಕೆ ಮೈಯ ಸೀಳಿದನು |

ಉದ್ದಕೆ ಮೈಯ ಸೀಳಿ ರಾಮಯ್ಯ
ಏಡು ಪಾಲಾನೆ ಮಾಡಿದನು |

ಏಡು ಪಾಲಾನೆ ಮಾಡಿದ ರಾಮಯ್ಯ
ರುದಯದೊಳಗಿರುವ ಲಿಂಗವ |

ರುದಯದೊಳಗಿರುವ ಆತುಮಲಿಂಗವ ರಾಮ
ಸ್ವಾಮೀಗೆ ನೋಡೀಂತ ತೋರೀದ |

ರುದಯ ಕಮಲ ಅದು ಕೋಟಿ ಕೋಟಿ ದಳಗಳು
ದಳಕೊಂದು ಲಿಂಗ ಇರುವಾದು |

ನಡುವೇ ಪಂಚಲಿಂಗ ಅದರ ನಡುವೇಲಿ
ಪರಂಜ್ಯೋತಿ ಲಿಂಗ ಬೆಳಗುವುದು |

ಪರಂಜ್ಯೋತಿ ಲಿಂಗಾವೆ ತಾವಾದ ಪರಮಾತ್ಮ
ರಾಮಯ್ನ ಭಕ್ತಿಯ ಮೆಚ್ಚಿದರು |

ಪರಮಾತ್ಮ ಈಬತ್ತಿ ಗಟ್ಟೀಯ ನೀವುಳ್ಸಿ
ರಾಮಾನ ದ್ರೀಯಾವ ಕೂಡಿಸಿದರು |

ಕೂಡೀಸಿ ರಾಮಯ್ನ ಬೆನ್ನುತಟ್ಟಿ ಪರಮಾತ್ಮ
ಎದ್ದೇಳೊ ರಾಮಯ್ಯ ಎದ್ದೇಳು |

ಮೈದಾಳ ರಾಮನ ಲಿಂಗದ ಪವಾಡವಾಯ್ತು
ಕೈಲಾಸ್ದ ದ್ವಾರದಲ್ಲಿ ಇರುವಂತ |

ಕೈಲಾಸ್ದ ದ್ವಾರದಲ್ಲಿ ಇದ್ದ ನಾಲಿಗಿಲ್ಲಿದ ಗಂಟೆ
ಧಣೇರೆಂದು ಸಬ್ತ ಮಾಡೀತು |

ಎಲ್ಲದರಲ್ಲು ರಾಮಯ್ಯ ಗೆದ್ದನೆಂದು
ಕೈಲಾಸ್ದ ಶಿವುಭೇರಿ ಮೊಳಗೀದೊ |

ಕೈಲಾಸ್ಕೆ ರಾಮ ಬರುತಾನೆ ಅನುತ್ಹೇಳಿ
ಶಿವದಂಡು ನದರ ತರುತಾರೆ |

ಬರಿಯ ಪಾದದಲಿ ತಮ್ಮ ಕೈಲಾಸ್ಕೆ ಬಂದವನೆ
ಬೀಸುವ ತೋಳು ಬೆರುಗಾದೊ |

ಬೀಸುವ ತೋಳ ಬೆರುಗಾದೊ ತಮ್ಮಯ್ಗೆ
ನಡೆದಂತ ಕಾಲು ಹೊಪ್ಪುಳೆದ್ದೊ |

ಆಕ್ಕನ ಕಾಣದೆ ಹುರುಳೆದ್ದು ಬಂದವುನೆ
ಭಾವಾನ ಕಾಣದೆ ಬಾವುಣ್ಸುತ |

ಭಾವಾನ ಕಾಣದೆ ಬಾವುಣ್ಸುತ ಬಂದವ್ನೆ
ಈಗಿಂದೀಗಲೆ ಬರಬೇಕು |

ಈಗಿಂದೀಗಲೆ ಬರಬೇಕು ಅನುತ್ಹೇಳಿ
ದೇವಿಂದ್ರಾಯಾಗೆ ವಾಲೆ ಬರಿದಾರು |

ದೇವಿಂದ್ರಾಯಾಗೆ ಏನಂತ ವಾಲೆ ಬರಿದಾರು
ಮಲ್ಲೆ ಹೂವಿನ ಮಳೆಯ ಬುಡು ಎಂದು |

ಕೈಲಾಸವಾದ ಕೈಲಾಸವೆಲ್ಲ
ಒಂದು ಮೊಳಮಟ್ಟ ಮಲ್ಲೆ ಹೂವಾಗೋಯ್ತು -

ಮಲ್ಲೆ ಹೂವಿನ ಮಳೆಯ ನೋಡ್ಬುಟ್ಟು ರಾಮಯ್ಯ
ಬಾಳ ದುಕ್ಕಾವ ಮಾಡಿದನಂತೆ |

ಅಟ್ಟುವ ಹತ್ತಿ ನಾನು ಬೆಟ್ಟುವಿಳಿದು ಬಂದುದ್ಕೆ
ನನ್ನ ಪಾದಕ್ಕಿಷ್ಟು ಯಾದಿ ಕೊಟ್ಟವುರೆ |

ನೂರೊಂದು ಲಿಂಗಕ್ಕೆ ಮುಡಿಸೊ ಮಲ್ಲಿಗ್ಹೂವ
ಹಾದೀ ಹಾದೀಗಿಂಗೆ ಚಲ್ಲುವುರೆ |

ಶಿವನ ಮುಡಿ ಸೇರುವ ಈ ಮಲ್ಲಿಗೆ ಹೂವ್ ಮೇಲೆ
ಪಾದಾವ ನಾನೆಂಗೆ ಮಡಗಲಿ |

ಪಾದಾವ ನಾನೆಂಗೆ ಮಡಗಲಿ ಶಿವಶಿವಾ
ನನ್ನ ಪಾದಕಿನ್ನೆಂತೆ ಯಾದಿ ಬರಬವುದು |

ಅನುವಂತ ಕಾಲಕ್ಕೆ ಮಲ್ಲೀಗೆ ಹೂವೆಲ್ಲ
ಕಲ್ಲುಕಲ್ಲಾಗಿ ಹರಡಿದವು |

ಸಿರಿಗಿರಿಯ ಕಲ್ಲುಗಳು ಕಲ್ಲಲ್ಲ ಶಿವಶಿವಾ
ಕಲ್ಲೆಲ್ಲ ಲಿಂಗುವಾಗಿ ಹರಡಿದವು |

ಸೂಜಿ ಬೀರಲು ಮುಕ್ಷ ಸ್ಥಳವಿಲ್ಲ ಅನ್ನುವಂಗೆ
ಎಲ್ಲೆಲ್ಲೂ ಲಿಂಗಗಳು ಹರಡಿದವು |

ಲಿಕ್ಕಭಾವರ ನಾನು ಕರೆಯಲು ಬಂದವನು
ಈ ಲಿಂಗುಗಳ ಹ್ಯಾಗೆ ತುಣಯಾಲಿ |

ಲಿಂಗುಗಳ ತುಣೋಲಾರೆ ಹಿಂದಕ್ಕೂ ಹೋಗಲಾರೆ
ನಾನಿಲ್ಲೆ ಪ್ರಾಣಾವ ಬಿಡುತೀನಿ | ೪೭೬೦

ನಾನಿಲ್ಲೆ ಪ್ರಾಣಾವ ಬಿಡುತೀನಿ ಅನ್ನುವಾಗ
ಸತ್ಯವಂತೆ ಹ್ಯಾಮರೆಡ್ಡಿ ಮಲ್ಲಮ್ಮ |

ಲಿಂಗಗಳ ತುಣುಕೊಂಡು ಬಂದ ಮಲ್ಲಮ್ಮ
ಮುತ್ತಿನಾರತಿಯ ಬೆಳಗಿದಳು |

"ಆತುಮಲಿಂಗ ಉಳ್ಳೋನ್ಗೆ ಕಲ್ಲುಲಿಂಗ ಘನವೆ
ಕಾಲಮಡಗಿ ಬಾರೋ ಕಂದಯ್ಯ" |

ಮುತ್ತೀನ ಆರತಿ ರತ್ನಾದ ಆರತಿ
ಹವಳ ಪಚ್ಚೇದ ಆರತಿಯ |

ಹವಳ ಪಚ್ಚೇದ ಆರತಿಯ ತಂದು
ಮಲ್ಲಮ್ಮ ಆರತಿಯ ಬೆಳಗಿದಳು | ೪೭೭೦

ಸತ್ಯಮಾತ್ಮ ಇವನು ಕೈಲಾಸ್ಕೆ ಬಂದವ್ರೆ
ಕಾಯಸ್ಕೆತುವಾಗಿ ಬಂದವುನೆ |

ಶಿವನ ಕೈಲಾಸವೆಲ್ಲ ಸುಂಗಾರವಾಯಿತಲ್ಲ
ಮುತ್ತೀನ ತೋರಣ ಕಟ್ಟಿದರು |

ಮುತ್ತೀನಿ ತೋರಣ ಹವಳದ ತೋರಣ
ಬಿದ್ದು - ಕೈಲಾಸ ಸುಂಗಾರ ಮಾಡಿದರು |

ಕೈಲಾಸ್ವ ಗಣಗಳು ಹೂವಿನ ರಥಕೆ
ಮೈದಾಳ ರಾಮಯ್ಯನ ಕೂರಿಸಿಕೊಂಡು |

ಹೂವೀನ ರಥದಲ್ಲಿ ಮೈದಾಳ ರಾಮಯ್ನ
ಕರುಕೊಂಡು ಬಂದಾರು ಶಿವಗಣಗಳು | ೪೭೮೦

ಹೂವಿನ ರಥದಲ್ಲಿ ಆನಂದವಾಗಿ ಕುಂತು
ಕೈಲಾಸಕೆ ಬಂದ ರಾಮಯ್ಯ |

೧೦. ಲಿಕ್ಕನ ಹಬ್ಬ ಗೌರೀಹಬ್ಬ

ಸುವ್ವಿ ಹೇಳಮ್ಮ ದೇವರ ದೇವ ಸುವ್ವಿ | ಸೊಲ್ಲು |

ಬಾಕಾಲ ಭೈರುವ ಕಾವಲ ಕಲಿಬೀರ
ನಂದೀಶ ಗಣಪತಿ ಷಣುಮೂಕ |

ಹೂವಿನ ರಥದಲ್ಲಿ ರಾಮಯ್ನ ಕರುಕೊಂಡು
ಕೈಲಾಸ್ಕೆ ಅವರು ಬರುತಾರೆ |

ರವರತ್ನದ ಮಂಚದಲಿ ಕುಳಿತಿದ್ದ ಗೌರಮ್ಮ
ದುಕ್ಕುಳಿಸಿ ರಾಮಯ್ನ ನೋಡುತಾಳೆ |

ಲಿಕ್ಕ ಗೌರಮ್ಮನ ಕಂಡಾನು ರಾಮಯ್ಯ
ಉಕ್ಕುಳಿಸಿ ಗೌರಮ್ಮ ಬಳುಗಾಗಿ | ೪೭೯೦

ಉಕ್ಕುಳಿಸಿ ಲಿಕ್ಕಯ್ಯ ಗೌರಮ್ಮನ ದಂಡ್ಯಕೆ
ಮೈದಾಳು ರಾಮಯ್ಯ ನೆಗುದಾನು |

ಎಡಗ್ಯೆಲಕ್ಕನ ಪಾದ ಬಲಗ್ಯೆಲ್ ಭಾವನ ಪಾದ ತಬ್ಬಿ
ಮಧ್ಯದಲಿ ರಾಮಯ್ಯ ಸರಣಂದ |

"ಲಿಕ್ಕರೆಯ ತಮ್ಮನೆ ಚಿಕ್ಕವನೆ ರಾಮಯ್ಯ
ಬಂದ್ಯಪ್ಪ ತಮ್ಮಯ್ಯ ನಮುಗಾಗಿ |

ಬಂದ್ಯಪ್ಪ ತಮ್ಮಯ್ಯ ಚಂದಾಗಿ ಇದ್ದೀಯಾ?
ನಮ್ಮ - ಹೆತ್ತಮ್ಮ ಚಂದಾಗಿ ಇರುವಳೇನೋ" |

"ಲಿಕ್ಕಯ್ಯ ನಿಮ್ಮ ಲಿಕ್ಕರೆಯ ಆಸರಿಗೆ
ಸಿಕ್ಕೀದ ನಾವು ಚಂದಾಗಿದ್ವೀವಿ" | ೪೮೦೦

"ಮಗಳು ಲಿನ್ನೊ ಆಸ್ಗೆ ಲಿವ್ವ ಏನ ಕೊಟ್ಟಿದ್ದಾಳೊ
ಹೆತ್ತಮ್ಮ ಕೊಟ್ಟಿರೋದ ಕೊಡು ತಮ್ಮ" |

"ಅಕ್ಕಯ್ಯ ತಕ್ಕೊವ್ವ ಕಜ್ಜಾಯ್ದ ಬುತ್ತೀಯ
ಕೊಟ್ಟವ್ಳೆ ಹೆತ್ತಮ್ಮ ನಿನಗಂತ" |

ಮೈದುನ ಆಡುವ ಮುದ್ದು ಮಾತೀಗೆ
ಮರುಳಾದ ಪರಮಾತ್ಮ
ರಾಮಯ್ಯನನ್ನು ನೋಡಿ -

"ಅಕ್ಕರೆಯ ಬಾಲಕ ಚಿಕ್ಕವನೆ ರಾಮಯ್ಯ
ನಿನ್ನ ಅತ್ಯಮ್ಮ ಚನ್ನಾಗಿ ಇದ್ದಾರ ? |

ಭೀಮವತಿ ಪಟ್ಟಣದ ಜನುವೆಲ್ಲ ಕ್ಷೇಮುವೆ
ನೀನ್ಯಾಕೆ ಇಷ್ಟು ದೂರ ಬಂದ್ಯಪ್ಪ ? |

ಹೇಳಿ ಕಳಿಸಿದ್ದಾರೆ ನಾವೇ ಬರುತಿದ್ದೆವಲ್ಲೊ
ವಾಲೆಯ ಬರ್ದು ಕಳಿಸಬಾರಿದತ್ತ | ೪೪೧೦

ಅಳಿಯ ಏನ್ನೋ ಆಸೆಗೆ ಅತ್ತೆ ಏನ ಕಳುಗಿದ್ದಾರೊ
ಏನ ತಂದಿದ್ದೀಯೋ ರಾಮಯ್ಯ" |

"ಭಾವ-ಹಾಲು ಅನ್ನದ ಬುತ್ತ್ಯ ನಿಮಗಂತ ಕೊಟ್ಟವುರೆ
ಭಾವಾಜಿ ಕೊಳ್ಳಿ ನಿಮ್ಮ ಸಮಪಾಲ" |

ಪರಮಾತ್ಮ ಬುತ್ತಿಯನ್ನು ಬಿಚ್ಚಿದ್ದಾರೆ
ಬುತ್ತಿಯೊಳಗೆ ಏನಪ್ಪ ಅಂತಾಂದ್ರೆ
ತಾಯಿ ಮಾದೇವಮ್ಮನವರು ವಾಲೆ ಬರ್ದು ಮಡುಗಿದ್ರು
ವಾಲೆಯನ್ನು ಒಡ್ದು ಓದುಕೊಂಡ್ರು ಜಗದೀಶ್ವರಿ
ಒದ್ಕೊಂಡು ಕೇಳ್ತಿದ್ದಾರೆ

"ರಾಮಯ್ಯ ಏನಪ್ಪ ೪೪೨೦
ನಿಮ್ಮ ತಾಯೋರು ಈ ರೀತಿ ಬರುದವುರಲ್ಲ
ನಾವು ಭೀಮಾವತಿಗೆ ಬರಬೇಕಂತ !
ಹ್ಯಾಗೆ ಸಾಧ್ಯವಪ್ಪ?" -

"ಬರೋದಿಲ್ಲ ಅನ್ನೋ ಮಾತಾಡಬ್ಯಾಡಿ ಭಾವಾಜಿ
ನೀವು ಬರದಿದ್ರೆ ನಾನು ಬದುಕೇನ?" |

ರಾಮಯ್ನ ಕಣ್ಣುಗಳು ನೀರಾಡುವುದ ಕಂಡು
ಭಗವಂತ ಬೆಚ್ಚಿ ನುಡಿದಾರು |

"ಅಳಬ್ಯಾಡ ರಾಮಯ್ಯ ಅಳಬ್ಯಾಡ ಕಂದಯ್ಯ
ನಿನ್ನಂತ ಬಕುತ ನಮ್ಮ ಕೈಲಾಸ್ಕೆ |

ನಿನ್ನಂತ ಬಕುತ ನಮ್ಮ ಕೈಲಾಸ್ಕೆ ಬಂದು ೪೪೩೦
ಕಣ್ಣಲ್ಲಿ ಕಂಬನಿಯ ಸುರಿಸಿದರೆ !

ಕಣ್ಣಲ್ಲಿ ಕಂಬನಿಯ ಸುರಿಸಿದರೆ ಕಂದಯ್ಯ
ಭಸ್ಮವಾದೀತು ನಮ್ಮ ಕೈಲಾಸ |

ನಾವು ಬರುತೀವಿ ನಿಮ್ಮನೆಯಲ್ಲಿ ಏನುಂಟು
ಏನೇನು ಅದೆಯಂತೆ ನೀ ಹೇಳೊ" |

"ನಮ್ಮಪ್ಪನ ಮನೆಯ ಸಪ್ಪೆ ಸೊಪ್ಪು ನೀರಂಬಲಿಗೆ
ನಮ್ಮಕ್ಕ ಗೌರಮ್ಮನ ಜೊತೆಗೆ ಬರಬೇಕು |

ನಮ್ಮಕ್ಕನ ಜೊತೆಗೆ ನೀವು ಬರಬೇಕು ಭಾವಯ್ಯ
ನಾವು ದೀಪುವಳಿ ಹಬ್ಬವ ಮಾಡಬೇಕು |

"ಏನಪ್ಪ ರಾಮ ೪೪೪೦
ನೀನು ದೀಪುವಳಿ ಹಬ್ಬ ಮಾಡ್ಸೇಕ?"
"ಹೌದು ಮಾಸ್ವಾಮಿ"
"ರಾಮ, ನಿಮ್ಮಕ್ಕ ನಾನು ಇಬ್ರೆ ಬರೋದಿಲ್ಯಲ್ಲೊ."
"ಮತ್ತ್ಯಾಹಗೆ ಸ್ವಾಮಿ?"
"ನಾವು ಹೊಂಟ್ರೆ ನಮ್ಮ ಜೊತೆಗೆ ಕೈಲಾಸ್ಕೆ ಬತ್ತದೆ
ಲಕ್ಕುಸದ್ಮೇಲೆ ತೊಂಬತ್ತಾರು ಕೋಟಿ
ಗಣವೆಲ್ಲ ಬತ್ತದಲ್ಲಪ್ಪ
ಅವುರ್ಗೆಲ್ಲ ಹ್ಯಾಗಪ್ಪ?"
"ಸ್ವಾಮಿ -

ಅರಮಲ್ಲಿ ಅಕ್ಕಿಯುಂಟು ಕಿರುಮಲ್ಲಿ ಬ್ಯಾಳೆ ಉಂಟು
ಮಿಕ್ಕ ಸಾಂಬಾರಗಳು ಮೊದಲುಂಟು | ೪೪೫೦

ಲಕ್ಷ ಕಂಡುಗದಕ್ಕ ಕಜ್ಜಾಯ ಮಡುಗ್ಸಿನ್ನಿ
ನಿಮ್ಮ ಲಕ್ಕಸ್ತೊಂಬತ್ತಾರು ಗಣವು ಬರಲೇಳಿ |

ಹಪ್ಪುಳಕೆ ಅಂತ್ಹೇಳಿ ಎಪ್ಪತ್ತು ಸಾವಿರ ಕಂಡ್ಗ
ಉದ್ದುನ್ ಬ್ಯಾಳೆ ಒಡೆಸಿ ಮಡುಗಿವುನಿ" |

"ರಾಮಯ್ಯ ಅಷ್ಟೊಂದು ಭಾಗ್ಯ ನಿನ್ನಲ್ಲುಂಟೆ ?
ನಮ್ಮ ಕೈಲಾಸದರಮನೆ ಬೀಗ ತೆಗೀತೀನಿ
ನಮ್ಮ ಭಾಗ್ಯವ ನೋಡುವಂತೆ ಬಾ -

ಹನ್ನೆರಡು ಸಾವುರ ಗಾರೆ ತೊಟ್ಟಿಯ ತುಂಬ
ವಜ್ರ ವೈಡೂರ್ಯ ರವರತ್ನ |

ವಜ್ರ ವೈಡೂರ್ಯ ರವರತ್ನಗಳೆ ತುಂಬ್ಯವೆ
ನಿನ್ನ - ಪಟ್ಟಣದಲೇನುಂಟು ಹೇಳಯ್ಯ?" |

"ಭಾವಾಜಿ ಭಾವಾಜಿ ಏನು ಮಾತಾಡುವಿರಿ ?
ನಿಮ್ಮ - ವಜ್ರ ವೈಡೂರ್ಯ ರವರತ್ನಗಳ |

ನಿಮ್ಮ - ರವರತ್ನಗಳು ಯಾರೀಗೆ ಬೇಕು ಭಾವಾಜಿ
ನೀವಲ್ಲವೆ ಲೋಕದ ಜೀವರತ್ನ |

ರಾಗಿ ಭತ್ತ ಜೋಳ ನವಣೆ ಕೊಂಬು ಸಾವೆ
ಹುಳ್ಳ ತಡಗುಣಿ ತೊಗರಿಗಳ |

ಹುಳ್ಳಿ ತಡುಗುಣಿ ತೊಗರಿಗಳ ತಿನ್ನಬವುದು
ವಜ್ರ ವೈಡೂರ್ಯ ರತ್ನಗಳ |

ವಜ್ರವೈಡೂರ್ಯ ರತ್ನಗಳ ಸುರುಕೊಂಡು
ತಿನ್ನಬವುದೆ ಹೇಳಿ ಭಾವಾಜಿ |

ಅನ್ನರತ್ನದ ಮುಂದೆ ಇನ್ನ್ಯಾವ ರತ್ನವು
ನಿಮ್ಮ ರವರತ್ನವ್ಯಾತಕ್ಕೆ ಭಾವಾಜಿ ?" |

ರಾಮಾನ ಮಾತುಗಳು ರವರತ್ನಕಿಂತ ಹೆಚ್ಚೆಂದು
ಮೊಳಗಿದವು ಕೈಲಾಸ ಶಿವುಗಹಳೆ |

ಶಿವಗಾಳೆ ಮೊಳಗಲು ಸಂಭ್ರಮದಲಿ ಶಿವಗಣ
ರಾಮಯ್ನ ಕೊಂಡಾಡಿ ಹಾಡೀತು |

ಶಿವಗಾಳೆ ಮೊಳಗಿ ಶಿವಗಣವೆಲ್ಲ ಹೊರಟೀತು
ಭೀಮಾವತಿ ಪಟ್ಟಣದ ದಾರೀಗೆ |

ಗಾಡಿಗಾಡಿಯ ಹೊರಟೊ ಸಾರೋಟುಗಳು ಹೊರಟೊ
ಆನೆ ಕುದುರೆಗಳು ಸೈವಾಗಿ |

ಏನೇನು ಬೇಕೊ ಆ ಬೇಕಾದ್ದ ತಕ್ಕೊಂಡು
ಹೊರಟೀತು ಹೊತ್ತುಕೊಂಡು ಶಿವುಗಣ |

ಅಕ್ಕ ಗೌರಮ್ಮನ ಅಂದಲದಲಿ ಕೂರ್ಸಿ
ಹೊತ್ತುಕೊಂಡು ನಡೆಯಿತು ಶಿವಗಣ |

ಅಕ್ಕನಿಗೆ ಅಂದಾಲ ಮುನಿಗಳಿಗೆ ಸಾರೋಟು
ಸ್ವಾಮಿ ನಂದಿಬಸವನ ಮ್ಯಾಲೆ ಬರುತಾರೆ |

ಕೈಲಾಸ ಬುಟ್ಟು ಕಡೆಯ ಬಾಕಲಿಗೆ ಬಂದಾರು
ಮುನುಮುಂದೆ ನಮ್ಮ ಪರಮಾತ್ಮ |

ಮುನುಮುಂದೆ ನಮ್ಮ ಪರಮಾತ್ಮ ಬರುವಾಗ
ಮಧ್ಯದಲಿ ನಮ್ಮ ಗೌರಮ್ಮ |

ಅಕ್ಕನಂದಲದಲ್ಲಿ ರಾಮಯ್ಯ ಕುಂತುಕೊಂಡು
ಆನಂದದಿಂದ ಬರುತಾನೆ |

ಬಲದಲ್ಲಿ ಬ್ರಮ್ಮನು ಎಡದಲ್ಲಿ ನಾರಾಯ್ಣ
ನಟ್ಟ ನಡುವೆ ಸ್ವಾಮಿ ಶಂಕರನು |

ನಟ್ಟ ನಡುವೆ ನಮ್ಮ ಪರಮೇಶ್ವರ ಕುಂತು
ತ್ರೈಮೂರ್ತಿ ಸೈವಾಗಿ ಬರುತವುರೆ |

ಬಲದಲಿ ಬಸವನ ದಾಳ ಎಡದಲಿ ನಂದಿಕಂಬ
ಪರಶಿವನ ಕೊಳ್ಳಲ್ಲಿ ನಾಗೇಂದ್ರ |

ಗಣಗಳ ನಡುವೆಲ್ಲಿ ಗಣಪತಿ ಕುಂತವ್ರೆ
ಶರಣರ ಜೊತೆಗೆ ಷಣುಮುಕ |

ಹೊನ್ನಿನ ಅಂದಲದಲ್ಲಿ ಚನ್ನೆಗೌರಮ್ಮ ಕುಂತು
ಎಲ್ಲ - ಭೀಮವತಿ ಪಟ್ಟಣಕೆ ಹೊರಟವುರೆ |

ಪರಮಾತ್ಮ ಯೋಚ್ನೆ ಮಾಡುದ್ರು
ಮೈದಾಳರಾಮನ ಮನೆ ಅರಮನೆ ಆಗ್ಲಿ ಅಂದ್ರು
ಆ ಅರಮನೆ ತುಂಬ ಐಸ್ವರ್ಯ ತುಂಬಿ ತುಳುಕಾಡ್ಲಿ
ಅಂತ ಕುಬೇರುಂಗೆ ಆಡ್ರು ಮಾಡುದ್ರು
ರಾಮನ ಮನೇಲಿ ಅಟ್ಟ ಲಕ್ಷ್ಮಿಯರು
ವಾಲಾಡ್ತಾ ಅವುರೆ
ಕೈಲಾಸದಿಂದ ನರುಲೋಕಕ್ಕೆ ರಸ್ತೆ ಆಯ್ತು
ಹಾದೀಲಿ ಬರೋರ್ಗೆ ಆಯಾಸುವಾದ್ರೆ
ಸುದರಾಯಿಸ್ಕೊಳಕೆ ಅರವಂಟಿಗೆ ಗೇಯ್ಸವುರೆ
ಕೋಸಂಬ್ರಿ ನೀರಮಜ್ಜುಗೆ ಫಳಾರಗಳ ಇರ್ಸಿದ್ದಾರೆ
ಶಿವನ ದಂಡು ಬಯ್ಲೋಕುಕ್ಕೆ ಬಂತು |

ಶಿವುಗಣುವೆಲ್ಲ ಸುಂಗಾರವಾಗಿ ಬರೋದ
ಕೃಷ್ಣ ಪರಮಾತ್ಮ ನೋಡ್ಬುಟ್ರು
ಬಾಳ ಸಂತೋಷ ಪಟ್ಕೊಂಡ
ಮೈದಾಳ್ರಾಮಪ್ಪುಂಗೆ ನಾನೂ ಸೊಲ್ಪ ಸಾಯ್ಸಾಗ್ಬೇಕು ಅಂತ್ಹೇಳಿ
ಭೀಮವತಿ ಬಾಕಲಿಂದ ಕೈಲಾಸದ ಗಂಟೆ

ಉದ್ದಕೂ ಏಕ ಅರೊಂಟ್ಗೆ ಕಟ್ಟುಸ್ದ
ಅನ್ನ ಕೇಳುದ್ರೆ ಅನ್ನ
ನೀರು ಕೇಳುದ್ರೆ ನೀರು ೪೯೨೦
ಪಾನ್ಕ ಕೇಳುದ್ರೆ ಪಾನ್ಕ
ಮಜ್ಗೆ ಕೇಳುದ್ರೆ ಮಜ್ಗೆ
ಎಲ್ಲ ಬಗೆಯ ಊಟಗಳ ಕೊಡ್ತಾ ಅವುರೆ
ಕಾಸ್ ಕೊಡೋಹಂಗಿಲ್ಲ ಕರೀಮಣಿ ಕೊಡೋಹಂಗಿಲ್ಲ
"ಅಪ್ಪ ಇದ್ಯಾರದಪ್ಪ ಅರೊಟ್ಗೆ?" ಅಂತ
ಈಸ್ವುರ ಕ್ರಿಷ್ಣ ಪರಮಾತ್ಮನ ಕೇಳ್ದ
"ಅಯ್ಯೊ ಸ್ವಾಮಿ ಇದು ಮೈದಾಳ ರಾಮಣ್ಣ
ಮಡುಗ್ಸಿರೊ ಅರೊಟ್ಗೆ" ಅಂದ
ಈಸ್ವುರುಂಗೆ ಸಂತೊಷವಾಯ್ತು.
ಗೌರಮ್ಮನವುರ ಮೊಕ ಬಿಸುಲ್ಗೆ ಸೊಲುಪ ಕುಂದೋಯ್ತು
ಆಗ ಗೌರಮ್ಮ ಹೇಳುದ್ರು ೪೯೩೦
"ಕಂದ ರಾಮಣ್ಣ
ಸೊಲ್ಪ ಹಾಸರೇಸದ ಮಾತಾಡಪ್ಪ
ನಾನು ಸೊಲುಪ ನಗುಬೇಕು" ಅಂದ್ರು
ಅದ್ಕೆ ರಾಮುಯ್ಯ -

ಅಕ್ಕಯ್ಗೆ ಅಂದಾಲ ಎತುಗಳಿಗೆ ಸಾರೋಟು
ನಮ್ಮ - ಭಾವಾಜಿ ಕೂತಿರೋರು ಮುದಿ ಎತ್ತು |

ಮುದಿ ಎತ್ತು ಅಂದೇಟ್ಗೆ
ಗಣಾದಿಗಣವೆಲ್ಲ ಗೊಳ್ ಅಂತ ನಕ್ಕುಡ್ತು
ಸ್ವಾಮಿಯವುರ್ಗೆ ಅವಿಮಾನ ಆದಂಗಾಯ್ತು
"ಒಹೊ ರಾಮ ನಾನು ಬರಕಿಲ್ಲ
ಭೀಮವತಿಗೆ ಹೋಗ್" ೪೯೪೦
"ಸ್ವಾಮಿ ನಾನು ನಮ್ ಭಾವಯ್ಯ ಅಂತ ಒಂದ್ ಮಾತಾಡುದ್ರೆ
ಅಷ್ಟುಕ್ಕೆ ಕ್ವಾಪ ಬಂತ ಸ್ವಾಮಿ?
ಅಕ್ಕಯ್ಯನವರು 'ನನಗೆ ಆಯಾಸುವಾಗದೆ
ಒಂದು ಹಾಸರೇಸದ ಮಾತಾಡು' ಅಂದ್ರು
ಅದ್ಕೆ ಹಾಂಗಂದೆನೆ ಹೊರ್ತು ಬೇರಿಲ್ಲ -

ಎತ್ತು ಅನ್ನಬವುದೆ ಎಡಗೋಲು ಬಸವನ
ಸುತ್ತೇಳು ಲೋಕ ಸಲುಗೋನ |

ಸುತ್ತೇಳು ಲೋಕ ಸಲುಗೊ ನನ್ನ ಬಸವಣ್ಣನ
ಎತ್ತು ಅನ್ನಬವುದೆ ಧರೆಯೊಳಗೆ |

ಸ್ವಾಮಿ ಅಕ್ಕಗೌರಮ್ಮನುಗಾಗಿ ಹಾಸರೇಸದ ಮಾತಾಡ್ದೆ
ಕ್ರಮಿಸಿ ಸ್ವಾಮಿ ೪೯೫೦
ರಾಮನ ಮಾತಿಗೆ ಶಿವ ನಗನಾಡಿ -

ಒಂದು ಯೋಜಣ ಕಡದು ವರಕ್ಕು ಯೋಜಣ ದಾಟಿ
ಭೀಮವತಿ ಬಾಕುಲಿಗೆ ಬರುತಾರೆ |

ಭೀಮವತಿ ಪಟ್ಟಣದ ಬಾಕುಲಿಗೆ ಬಂದಾಗ
ಮಾದೇವಮ್ಮಂಗೆ ಸುದ್ದಿ ಅರುವಾದೊ |

ಮುತ್ತುನಾರ್ತಿ ರತ್ನುನದಾರ್ತಿ ಹವ್ಳದಾರ್ತಿ
ಪಚ್ಚೆ ಆರ್ತಿ ಮಾಡ್ಕೊಂಡು ಬರುವಾಗ |

ಅತ್ತೆಯ ಮೊಕುವ ಅಳಿಯ ನೋಡಬಾರದು ಎಂದು
ಸ್ವಾಮಿ ಶಿವುಮಠುಕೆ ನಡೆದಾರು |

ಸ್ವಾಮಿ ಶಿವುಮಠಕೆ ನಡೆದಾಗ ಗೌರಮ್ಮನವರು ೪೯೬೦
ತಾಯ್ಮನೆಯ ಬಾಗುಲಿಗೆ ಬಂದಾರು |

ಆರತಿಯ ತಂದು ತಾಯಿ ಮಗಳೀಗೆ ಬೆಳಗಿದಳು
ಆರತಿ ಬೆಳಗಿ -

"ಬಂದವ್ವ ಮಗಳೆ ಚಂದಾಗಿ ಇದ್ದಾಯ
ಮಾನ್ಯಾರು ಚಂದಾಗಿ ಇದ್ದಾರ ?|

ಮಾನ್ಯಾರು ಚಂದಾಗಿ ಇದ್ದಾರ ನನಮಗಳೆ
ನಿಮ್ಮ - ಮನೆ ಮಠ ಚಂದಾಗಿ ಇದ್ದಾದ ?" |

ತಾಯಿಯ ಮೊಕುವ ನೋಡುಬುಟ್ಟು ಗೌರಮ್ಮ
ಗುಳುಗುಳುನೆ ಕಣ್ಣರ ಸುರಿಸಿದಳು
ಮಗಳ ಸಂತೈಸಿ ತಾಯಿ ಮಾದೇವಮ್ಮ ೪೯೭೦
ಮನೆಯ ಒಳುಗಡೆಗೆ ಕರುಕೊಂಡ |

"ನನ್ನ ತಮ್ಮಯ್ಯ ಮೈದಾಳ ರಾಮಯ್ಯ
ದೀಪುವಳಿ ಹಬ್ಬಕೆ ಕರುತಂದ |

ಅಕ್ಕಯ್ಯ ಗೌರಮ್ಮ ಭಾವಾಜಿ ಮಲ್ಲಯ್ಯ
ಅನುತ್ಸೇಳಿ ಕೈಲಾಸ್ಕೆ ಬಂದಾನು |

ಬಂದು ನಮ್ಮನೆಲ್ಲ ದೀಪುವಳಿ ಹಬ್ಬಕೆ
ಕರುಕೊಂಡು ಬಂದವುನೆ ತಮ್ಮಯ್ಯ" |

ಮಾದೇವಮ್ಮ ತಾಯಿ ಮಾತಾಡಕೆ ಬರದಂತೆ
ಚಿತ್ತರದ ತಾಯಂತೆ ನಿಂತವುಳೆ |

ಅವುಳ್ಗೆ ಸಂತೋಸದ ಕಣ್ಣೀರು ಸುರಿದಾವು ೪೯೮೦
ಶಿವನು ಪಾರ್ವತಿಗೆ ಕೈಮುಗಿದಾಳು |

ಶಿವನು ಗೌರಮ್ಮನು ಮಂಚದ ಮ್ಯಾಲೆ ಕುಂತು
ಪಾಲು ಪರಸಾದದ ನೈವೇದ್ಯವ |

ಪಾಲು ಪರ್ಸಾದದ ನೈವೇದ್ಯವ ತಕ್ಕೊಂಡು
ತ್ರುಪ್ತೀಲಿ ತೇಗುತ ನಲಿದಾರು |

ಶಿವದಂಡೆಲ್ಲ ದೇವುಡಿ ಹಜಾರದಲ್ಲಿ ಕುಂತ್ಕೋತು
ಅವುರಿಗೆಲ್ಲ ಕೇಳಿ ಕೇಳಿದ ತಿಂಡಿ ತೀರ್ಥಗಳು
ಅನ್ನ ಹಾರಾದಿಗಳು ಪಾಲು ಪರ್ಸಾದಗಳ ಪಡುಸವುರೆ
ಒಬ್ಬಟ್ಟು ಅಪ್ಪಿಟ್ಟು ತಂಬಿಟ್ಟು ನಿಪ್ಪಿಟ್ಟು
ಕಡುಬು ಕಾಯಾಲು ಸಾವಿಗೆ ಪಾಯಸ ೪೯೯೦
ಪೇಣಿ ಪತ್ತಾಸು ಕಜ್ಜಾಯ ಸಿಕಿನುಂಟೆ
ಹಪ್ಪಳ ಸಂಡಿಗೆ ಉಪ್ಪಿನಕಾಯಿ
ಇಂತೆ ಬೇಕು ಬೇಕಾದ ಅಡಿಗೆಗಳ
ಗಣಂಗಳಿಗೆ ಪಡುಸವುರೆ
ಗಣಂಗಳಿಗೆ ಊಟುಕ್ಕೆ ಪಡುಸ್ಬುಟ್ಟು
ಸಾಮ್ರಾಣಿ ಬೆಳುಗಿ
'ಜಯ್ ನಮ ಪಾರ್ವತಿ ಪತೇ ಹರಹರ ಮಾದೇವ್'
ಅಂತ ಸೊರಣೆ ಮಾಡಿ
ಅನಂತ್ರ ಪ್ರಸಾದವ ಸಲ್ಲಿಸಿದ್ವಾರೆ.

ಹಾಲಾಗ್ರ್ ಮೇಲಾಗ್ರ ಮೇಲಾದ ಕಜ್ಜಾಯ
ಕೀರು ಸ್ವಾಮೀಗೆ ತನಿಯಾಲು | ೪೯೦೦

ತನಿಯಾಲು ಬೆಲ್ಲದ ಪಾಯ್ಸ ನಾನಾ ಪರಿಯಲ್ಲಿ
ಸ್ವಾಮೀಗೆ ಅಲ್ಲಿ ಎಡೆಯಾದೊ |

ಹಪ್ಪಳುಪ್ಪಿನ ಕಾಯಿ ಹಣಸು ಬಾಳೆ ಹಣ್ಣು
ಘಟ್ಟದ ಮೊಸರು ಎರೆದುಪ್ಪ |

ಘಟ್ಟದ ಮೊಸರು ಎರೆದುಪ್ಪ ರಾಜೀರುಳ್ಳಿ
ಹರನು ಮಲ್ಲಯ್ಗೆ ಎಡೆಯಾದೊ |

· ಆಗಾಲಾವ್ರೆ ದಂಟು ಮೇಗೆ ಚಪ್ಪರದವುರೆ
ಹರನು ಮಲ್ಲಯ್ಗೆ ಎಡೆಯಾದೊ |

ಬೆಟ್ಟದ ಮೇಲೆ ಒಬ್ಬ ನೆಟ್ಟ ತಲೆ ಹೆಂಗಸು
ಹುಟ್ಟುತಲೆ ಅವಳ ತಲೆಬೋಳು | ೪೯೧೦

ಹುಟ್ಟುತಲೆ ಅವಳ ತಲೆಬೋಳು ನಲ್ಲೀಕಾಯಿ
ಉಪ್ಪಿನ ಕಾಯಾಗಿ ಎಡೆಯಾದೊ |

ಊಟ ಮಾಡಿದರಂತೆ ಕೋಟಿ ಮಾನ್ಯವರೆಲ್ಲ
ಸ್ವಾಮಿ ದೇವುಡಿಯಜ್ಜಾರ್ಕೆ ಬರುತಾರೆ |

ಅಕ್ಕಿಲ್ಲ ಭಾವಿಲ್ಲ ಅಂತ ನಾವು ಜರುದುದ್ಕೆ
ಅಕ್ಕಭಾವುರ್ನ ಕರ್ಕೊಂಡ್ಬಂದು
ಹಬ್ಬ ಮಾಡುದ್ನಲ್ಲ ಅಂತ್ಹೇಳಿ ಇಸ್ಕೋಲ್ಮಠದ
ಹುಡುಗ್ರು ಸೋಜುಗ ಪಟ್ಟವುರೆ.
ಮೈದಾಳ ರಾಮಯ್ಯ -

ಲಕ್ಷವರಕೆ ಒಂದು ಮುದ್ರೆ ಉಂಗ್ರ ಮಾಡ್ಸಿ
ಸ್ವಾಮ್ಗೆ - ಚಿನ್ನಾದ ತಟ್ಟೇಲಿ ಎಡೆಯಾದೊ | ೪೯೨೦

ಆ ಉಂಗ್ರ ತಕ್ಕೊಂಡ್ಬಂದು
ಸ್ವಾಮಿ ಕೈಗೆ ಇಕ್ಕುದ್ನಂತೆ
"ಇದೇನಪ್ಪ?" ಅಂದ್ರು
"ಉಂಗ್ರಾ ಸ್ವಾಮಿ ಅತ್ತೆಮನೆಗೆ ಬಂದ
ಅಳೀದೀರ ಉಂಗ್ರ"
"ಅಪ್ಪಾ ರಾಮ ಅಳೀದೀರುಂಗ್ರ ಸರಿಯಪ್ಪ
ನಮಗೆ ಇಷ್ಟಾಯ್ತು ನಿಮ್ಮಕ್ಕುಂಗೇನ್ ಕೊಟ್ಟಿಯಪ್ಪ?" -

"ಸಾವುರ ವರಕೆ ಒಂದು ಕಾಮಜೇನ ಮಡುಗಿವ್ನಿ
ಅಕ್ಕನಿಗಡುಗುಲಿಯ ಹೊಡಿತೀನಿ |

ಅಕ್ಕನಿಗಡುಗೂಲಿಯ ಹೊಡಿತೀನಿ ಗುರುವೆ
ನಿಮ್ಮ ಕೈಲಾಸ ಉಂಡ್ರೂ ಮುಗಿಬಾರ್ದು" | ೪೯೩೦

"ಹುಂ ಏನಪ್ಪ ಇಲ್ಲೀಗೆ ನಿನ್ನ ಕೆಲ್ಸ ಕಾರ್ಯವೆಲ್ಲ
ಆಯ್ತು ತಾನೆ?"
"ಎಲ್ಲಾಯ್ತು ಸ್ವಾಮಿ
ದೀಪುವಳಿಗೆ ಬಂದು ಮೂರು ದಿನ ಕಳುದೊ
ಯಾವಾಗ್ಲೂ ಕೈಲಾಸ್ಲಲ್ಲೆ ಇರ್ತೀರಲ್ಲ

ಇಲ್ಲೊಂದು ಹನ್ನೇಡೊರ್ಷ ಇದ್ದೀಗಿ" ಅಂದ
ಅದ್ಕೆ ಗೌರಮ್ಮ ಹೇಳ್ತಿದ್ದಾರೆ
"ಸ್ವಾಮಿ ಈ ಭೂಮಿಗೆ ವರ್ಷಕ್ಕೊಂದ್ಸಲನಾದ್ರೂ
ನಾನು ಬರಬೇಕು
ತವುರ್ಗೆ ಬರ್ದೆ ಇರಕಾಯ್ತದ ಹೆಣ್ಮಾಗ್ಳು
ಹನ್ನೇಡೊರ್ಷ ಇರೋದ್ ಬ್ಯಾಡ
ಹನ್ನೇಡೊರ್ಷ ಹನ್ನೊಂದು ಜಿನ ಅಂದ್ಕೊಳ್ಳಿ ೫೦೪೦
ನಾನು ಬಂದು ಹೋಗೊ ಹನ್ನೇಡು ದಿನದಲ್ಲಿ
ಅದು ಗೌರಿ ಹಬ್ಬ ಅಂತ ಆಗಲಿ" ಅಂದ್ಲು
ಆಗ ಗೌರಮ್ಮ ತಾಯಿ ಹತ್ರುದಲೆ ಇದ್ದ ಗಣೇಸ
"ಅಮ್ಮ ನಾನು ನಿನಗಿಂತ ಮೊದಲಾಗಿ ಬತ್ತೀನಿ
ಭೂಮಿ ಅಂದರೆ ನನಗೂ ಇಷ್ಟ" ಅಂದ.

ಭೀಮವತಿ ಪಟ್ಣದಲ್ಲಿ ಹನ್ನೊಂದು ದಿನಗಳು
ಆನಂದುವಾಗಿ ಕಳುದಾವು |

ತಾಯಿ ಗೌರಮ್ಮನು ಸ್ವಾಮಿ ಪರಶಿವನು
ಕೈಲಾಸ್ಕೆ ಹೊರಟು ನಿಂತಾರು |

ಮೈದಾಳ ರಾಮಯ್ನ ನಂದೀಗೇರಿಸಿಕೊಂಡು ೫೦೫೦
ಪರಮಾತ್ಮ ಕೈಲಾಸ್ಕೆ ಹೊರಟಾರು |

ಗೌರಮ್ಮ ತಾಯಿ ಮಾದೇವಮ್ಮನ ಕರುಕೊಂಡು
ಕೈಲಾಸಕೆ ತಾಯಿ ಹೊರುಟಾರು |

ದೀಪುವಳಿ ಹಬ್ಬವ ಮಾಡಿದ ರಾಮಯ್ಯನಿಂದ
ಗೌರಮ್ಮನ ಹಬ್ಬವು ಉಂಟಾಯಿತು |

ಮೇದೀನಿ ಒಳುಗೆ ಮೆರಿಯೋ ಗೌರಮ್ಮನವರ
ಬೋಧೀಸಿ ರಾಮಯ್ಯ ಕರತಂದು |

ಬೋಧೀಸಿ ರಾಮಯ್ಯ ಕರತಂದ ಈ ಕತೆಯ
ಗೌರಿಹಬ್ಬದ ಕತೆ ಅಂತ ಹೇಳಿ |

ಗೌರಿ ಹಬ್ಬಾದ ಕತೆ ಅಂತ್ಹೇಳಿ ಕೇಳಿದೋರ್ಗೆ ೫೦೬೦
ಕೇಳಿದೆಲ್ಲೆ ಪಾಪ್ಕೆಲ್ಲ ಪರಿಯಾರ |

ಹೇಳ್ಬೋರ್ಗೆ ಹತ್ತುಕೋಟಿ ಕೇಳ್ದೋರ್ಗನ್ನೊಂದುಕೋಟಿ
ಸುವ್ವಿ ಅಂದೋರ್ಗೆ ಪಾಪ್ಕೆಲ್ಲ ಪರಿಯಾರ |

ಈ ಸಂದು ಇಲ್ಲೀಗೆ ಸಂಪೂರ್ಣ
ಸುವ್ವಾ ಬಾ ಸುವ್ವಾ ಬಾ ೫೦೬೫

ಚಿಕ್ಕ ಚಿಕ್ಕಲಿಂಗ ಚಿಕ್ಕವೆರಡೇ ಲಿಂಗ
ಚಿಕ್ಕರಾಮಯ್ನ ಎದೆಮ್ಯಾಲೆ - ಗಿಣಿಲಿಂಗ
ಚಿತ್ತಾರದೆಣತ ಹೆಣೆದಾವೆ |

ಗುಂಡು ಬ್ರಹ್ಮಯ್ಯ

(ಓರುಗಲ್ಲು ಘನಪತಿ ರಾಜನ ಕಥೆ)

೧. ಘನಪತಿರಾಜ ಶಿವನಿಂದ ವರ ಪಡೆದ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುವ್ವಿ | ಸೊಲ್ಲು |

ಉತ್ತರ ದಿಕ್ಕಿನ ಒಳುಗೆ ಓರ್ಗಲ್ಲು ಪಟ್ಟಣ
ಒತ್ತಲ್ಲಿ ಪುಕರ ಕೈಲಾಸ |

ಒತ್ತಲ್ಲಿ ಪುಕರ ಕೈಲಾಸದೊಳಗೆಲ್ಲ
ಶಿವಭಕ್ತರು ಮೆರುವ ಕಥೆಕೇಳಿ |

ಅರನೂ ಅರಿಯೂ ಸೇರಿ ಜಗಕೆ ಕಳ್ಳಾರಂತೆ
ಪುರದೊಳಗೆಲ್ಲ ಘನಪತಿ |

ಪುರದೊಳಗೆಲ್ಲ ಘನ್ಪತಿರಾಜನ ಕ್ವೋಟೆಲ್ಲಿ
ಸಿರಿಯ ಕದ್ದಂತ ಕಥೆ ಕೇಳ |

ದಂಡು ದಾಳಿಯು ಉಂಟು ಮಂದಿ ಮಾರ್ಬಲವುಂಟು
ಬೇಕಾದ ಐಸ್ವೀರಿ ಅವನಿಗೆ | ೧೦

ಬೇಕಾದ್ದ ಐಸ್ವಿರಿಯ ಅರಮಲ್ಲಿ ಇಟುಗೊಂಡು
ಅಯ್ಯ - ಹೆಚ್ಚಾಳದಲ್ಲಿ ರಾಜ್ಯ ಆಳುತಾನೆ |

ಓರುಗಲ್ಲು ಪಟ್ಟಣದಲ್ಲಿ
ಘನಪತಿ ಮಹಾರಾಜ ಅನ್ತಕ್ಕವನು
ಹೆಚ್ಚಾಳದಿಂದ ರಾಜ್ಯವನ್ನು ಪರಿಪಾಲುಸ್ತಿದ್ದಾನೆ.
ಒಂದಾನು ಒಂದು ಜಿಪ್ಸದಲ್ಲಿ
ಘನಪತಿ ಮಾರಾಜ ಮಡ್ದಿ ರಾಮಾಯಿ ಜೊತೆಯಲ್ಲಿ
ಮನುಗಿರುವಂತ ವ್ಯಾಳ್ಳದಲ್ಲಿ ಒಂದು ಸೊಪ್ಪುನ ಕಂಡಿದ್ದಾನೆ.
ಆ ಸೊಪ್ಪುನ ಏನಪ್ಪಾಂತಂದ್ರೆ -

ನೆಲಕೆ ಸೋಕದ ಕ್ವೋಟೆ ಮುಗುಲು
ಮುಟ್ಟುವಕ್ವೋಟೆ ೨೦
ಜಲದಲ್ಲಿ ತೇಲುವ ಘನಕ್ವೋಟೆ |

ಜಲದಲ್ಲಿ ತೇಲೂವ ಘನಕ್ವೋಟೆ ಸಿರಿಕಂಡು
ಅವ್ನು - ಫಕ್ಕನೆ ಕಣ್ಣ ಬಿಡುತಾನೆ |

"ಅಹ್ಹಾ ! ಎಂಥಾ ಚೋಜುಗ ಇದು
ನೀರುನ ಮ್ಯಾಲೆ ತೇಲುವಂತ ಏಳುಸುತ್ತುನ ಕ್ವೋಟೆ ಕಂಡೆನಲ್ಲ
ನಾನು ಕಂಡ ಸೊಪ್ಪುನ ನಿಜವಾಗಲೇಬೇಕು" ಅಂತ್ಹೇಳಿ
ಶಿವನನ್ನು ಕುರ್ತು ತಬುಸು ಮಾಡ್ಬೇಕೆಂಬುದಾಗಿ
ಯೋಚಿಣಿ ಮಾಡಿದ್ದಾನೆ.

ದಂಡುದಾಳಿ ಕಟುಕೊಂಡು ಅಂಬಾರೀಲಿ ಕೂತುಕೊಂಡು
ಅವ್ನು - ಸಪ್ತ ಸಮುದ್ರಕೆ ಬರುತಾನೆ |

ದಂಡುದಾಳಿಯನ್ನೆಲ್ಲ ದೂರದಲ್ಲೆ ನಿಲ್ಲುಸ್ಬುಟ್ಟು, ೩೦
ತಾನು ಸ್ನಾನ ಮಡಿಯನ್ನು ಮಾಡಿ
ಒಂಟುಕಾಲಲ್ಲಿ ನಿಂತುಕೊಂಡು
ಕತ್ತ ಆಕಾಸುಕ್ಕೆ ಅಂತ್ಗಂಡು -

ಅನ್ನ ಆರವ ಬುಟ್ಟು ನಿದ್ದೆ ನೇಮವ ಬುಟ್ಟು
ಶಿವನನ್ನು ಕುರ್ತು ತಪ್ಸ ಮಾಡುತಾನೆ |

ಒಂದು ಜಿಪ್ಸವಲ್ಲ ಎರಡು ಜಿಪ್ಸವಲ್ಲ
ಒಂದು ವರ್ಸವಲ್ಲ ಎರಡು ವರ್ಸವಲ್ಲ
ಏಳು ವರ್ಸುಗಳ ಕಾಲ ಘನಪತಿ ಮಾರಾಜ ತಬ್ಸ ಮಾಡ್ತಿದ್ರೆ -

ಏಳೇಳು ಸುತ್ತು ಎದ್ದು ಹುತ್ತುವಾದೊ
ಮೂಗುತ್ತದೊಳಗೆ ಮುನಿಯಾಗಿ | ೪೦

ಮೂಗುತ್ತದೊಳಗೆ ಘನಪತಿ ಮಾರಾಜ
ಶಿವಸೊರಣೆಯಲ್ಲಿ ನಿಲುತಾನೆ |

---

* ನಿಂತಗೆರೆ ಇರುವೆಡೆಯಲ್ಲೆಲ್ಲ 'ಸುವ್ವಿ' ಎಂದು ಸೇರಿಸಿ ಅನಂತರ ಸೊಲ್ಲಿನ ಪೂರ್ಣ ಭಾಗವನ್ನು ಹಾಡಬೇಕು. ನಿಂತಗೆರೆ ಇರುವ ಭಾಗ ಪದ್ಯ; ಬಿದ್ದಗೆರೆ ಇರುವ ಭಾಗ ವಚನ. ವಚನವನ್ನು ಪ್ರಧಾನ ಗಾಯಕ ಹೇಳುವಾಗ ಪ್ರತಿಸಾಲಿಗೂ ಸೊಲ್ಲಿನವರು ಹ್ಞೂಗುಡುತ್ತಾರೆ. ಕೆಲವೊಮ್ಮೆ 'ಹೌದು' 'ಶಿವಶಿವಾ' ಎಂದೂ ಹೇಳುತ್ತಾರೆ.

ಪಾರ್ವತಿ ಪರಮೇಶ್ವರರು ಕೈಲಾಸದಲ್ಲಿದ್ದಾರೆ
ಇವನು ಮಾಡುವಂತ ತಬುಸುನ ಜ್ವಾಲೆ
ಯಾರುಗರುವಾಯ್ತುಪ್ಪಾಂದ್ರೆ ಶಿವುಂಗರುವಾಯ್ತು -

ಪಟ್ಟದ ಪಾರ್ವತಿಯ ಮುಕುವನ್ನು ನೋಡಿ
ಪರಮಾತ್ಮ ಕಿಲಕಿಲನೆ ನಗುತಾನೆ |

'ಸ್ವಾಮಿ ನನ್ನ ಮುಕುವನ್ನು ನೋಡಿ ನಗ್ತೀರಲ್ಲ ಯಾತುಕ್ಕೆ?'
'ಪಾರ್ವತ ಬುಯಿಲೋಕದಲ್ಲಿ
ನರ್ನುಳ ನಮ್ಮನ್ನು ಕುರ್ತು ಏಗವಾಗಿ
ತಪುಸು ಮಾಡ್ತಿದ್ದಾದೆ
ಅವ್ನು ಕೇಳುವಂತ ವರವ ಕೊಟ್ಟು ಬರಬೇಕು
'ಸ್ವಾಮಿ ನರಪ್ರಾಣಿಗಳಿಗೆಲ್ಲ ವರಕೊಡಬೇಕು ಅಂತಿರಿ
ಮುಂದೆ ಅವುರ್ಗೆ ಅಂಕಾರ ಅಲ್ವೆ ?'
'ಪಾರ್ವತ ಅವುರಾಂಕಾರ ಕಟ್ಕೊಂಡು ನಮಗೇನಾಗ್ಬೇಕು
ಅವುರಾಂಕಾರ ಅವುರ್ನೇ ತಿಂತದೆ
ನಡೀ ವರುವನ್ನು ಕೊಟ್ಟು ಬರುವ' ಅಂತ್ಹೇಳಿ
ಯಾರು ? ಸಾಕ್ಷಾದ್ ಪರಮೇಶ್ವರ -

ತೊಡೆಯಲ್ಲಿ ಪಾರ್ವತ ಮುಡಿಯಲ್ಲಿ ಗಂಗಮ್ಮ
ಅವ್ರು - ನಂದಿವಾಗನದಲ್ಲಿ ದಯವಾಗುತಾರೆ |

'ನಮ್ಮನ್ನು ಕುರ್ತು ಏಗದಲ್ಲಿ ತಬುಸ್
ಮಾಡ್ತಿದ್ದೀಯಲ್ಲ
ನೀನು ಯಾರಪ್ಪ ದೊರಿಯೆ?'
'ಗುರುವೆ ನೀವ್ಯಾರು ಅಂತಕ್ಕದ್ದನ್ನ ಮೊದ್ಲು ತಿಳ್ಸುವಂತವರಾಗಿ
ಆ ಮ್ಯಾಕೆ ನಾನ್ಯಾರು ಅನ್ತಕ್ಕದ್ದ ಹೇಳ್ತೀನಿ'
'ಅಯ್ಯಾ ನಾನು ಕೈಲಾಸ್ಕೆ ಅದುಪತಿಯಾದ ಸಂಕರನು
ಕಣ್ಬುಟ್ಟು ಯಾವ ವರ ಬೇಕೋ ಅದ ಕೇಳಪ್ಪ'
'ಸ್ವಾಮಿ ನಾನು ಘನಪತಿ ಮಾರಾಜ
ನೀವು ನಾನು ಕೇಳುದ್ದ ಕೊಡೋದಾದ್ರೆ -

ಬಾಯಿ ಮಾತೀನಲ್ಲಿ ನ್ಯಾಯ ಬ್ಯಾಡಿ ಗುರುವೆ
ನೀವು - ಬಲಗ್ಯೆ ಮುಟ್ಟಿ ಭಾಷೆ ಕೊಡಬೇಕು |

'ಅಯ್ಯಾ ದೊರಿಯೆ ಶಿವನ ಮಾತು ಹುಸೀತದ
ಆಯ್ತು ಕಣ್ಬುಟ್ಟು ನೋಡಪ್ಪ' -

ನೀನು ಕೇಳಿದ ವರುವ ಕೊಡ್ತೀನಂತ್ಹೇಳಿ
ಬಲಗ್ಯೆ ಭಾಷೆ ಕೊಟ್ಟವುರೆ ಸಂಕರನು |

ಘನಪತಿ ಮಾರಾಜ ಎರಡು ನೇತ್ರುವನ್ನು ಬುಟ್ಟಿದ್ದಾನೆ-

ಸ್ವಾಮಿ - ನೆಲಕೆ ಸೋಂಕದ ಕ್ವೋಟೆ
ಮುಗುಲುಮುಟ್ಟುವ ಕ್ವೋಟೆ
ಜಲದಲ್ಲಿ ತೇಲಾಡೊ ಘನ ಕ್ವೋಟೆ |

ಇಂಥ - ಘನಕ್ವೋಟೆಗೆ ದೊರೆ ಘನಪತಿ ಆಗಲ್ಯಂತ
ಆಸುರ್ವಾದ ಮಾಡಿ ಅನುತಾನೆ |

ಏಳು ಸಮುದ್ರದ ನಡುವೆ ಏಳು ಸುತ್ತಿನ ಕ್ವೋಟೆ
ಇರುವಂತ ವರುವ ಕೊಡಬೇಕು |

'ಸ್ವಾಮಿ ಕಪ್ಪುಸಮುದ್ರ ಉಪ್ಪು ಸಮುದ್ರ
ಹಾಲು ಸಮುದ್ರ ಜೇನು ಸಮುದ್ರ
ಮೊಸ್ರು ಸಮುದ್ರ ಮಜ್ಜಿ ಸಮುದ್ರ
ಈ ಎಲ್ಲಕ್ಕೂ ನಡೂಮದ್ಯೆ ಸೀನೀರ್ ಸಮುದ್ರ
ಆ ಸೀನೀರ್ ಸಮುದ್ರುದ್ ಮ್ಯಾಲೆ ಏಳು
ಸುತ್ತುನಕ್ವೋಟೆ ಇರ್ಬೇಕು
ಕಬ್ಬುಣದ ಕ್ವೋಟೆ ಕಲ್ಲುನಕ್ವೋಟೆ ಕಂಚುನಕ್ವೋಟೆ
ಇತ್ತಾಳೆಕ್ವೋಟೆ ಬೆಳ್ಳಿ ಚಿನ್ನ ಅಪರಂಜಿಕ್ವೋಟೆ
ಈ ಏಳು ಕ್ವೋಟೆಗಳ ನಡೂಮದ್ಯೆ ಏಳಂತಸ್ತುನ
ಅರ್ಮನೆ ಆಗ್ಬೇಕು
ಗಗನಚಿಕ್ಕಿ ಮುಗುಲುಚಿಕ್ಕಿ
ನಾದ ಚಿಕ್ಕಿ ಏದ ಚಿಕ್ಕಿ ಕಾಲಚಿಕ್ಕಿ ನೀಲಚಿಕ್ಕಿ
ಮಾಯಾಚಿಕ್ಕಿ ಅನ್ನುವಂತ ಏಳಂತಸ್ತುನ ಅರ್ಮನೆಗೆ
ದೇವಮಾನ್ರು ಕನ್ನಾ ಹಾಕದ ರೀತೀಲಿ ಇರ್ಬೇಕು ಗುರುವೆ'
'ಅಯ್ಯಾ ದೊರಿಯೆ ನಿನ್ನ ಮಾತುನಂತೆ ಆಗ್ಲಿ
ಈ ಕಪ್ಪು ಧೂಳ್ತ ತಕೊ
ಈ ಕಪ್ಪು ಧೂಳ್ತವನ್ನು ತಕೊಂಡೋಗಿ ಸಮೊತ್ತು
ಸರೊತ್ತು ಕೂಡೊ ಏಗದಲ್ಲಿ

ಶಿವಸೊರಣೆ ಮಾಡ್ತ ನೆಲುಕ್ಕಿಡಪ್ಪ
ನಿನ್ನಿಷ್ಟ, ಏನದೊ ಅದಾಯ್ತದೆ ಅಂತ್ಹೇಳ್ಬುಟ್ಟು -

ಗೌರಮ್ಮ ಸೈತುವಾಗಿ ನಂದಿವಾಗನದಲ್ಲಿ
ಪರಮಾತ್ಮ ಸೆಂಚಾರ ಬರುತಾರೆ |

೨. ಸಕಲೆಂಟು ಜೀವಿಗಳ ಅನ್ನಪಡಿ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುವ್ವಿ | ಸೊಲ್ಲು |

ಆಕಾಶ ಮಾರ್ಗದಲ್ಲಿ ಪರಮಾತ್ಮ ಬರುವಾಗ
ಶಿವಸೊರಣೆ ಕೇಳಿ ನಿಲುತಾರೆ |

ಶಿವುಸೊರಣೆಯನ್ನು ಕೇಳ್ಬುಟ್ಟು ಪಾರ್ವತೀತಾಯಿ
'ಸ್ವಾಮಿ ಯಾರಾಗಿರಬವುದು?' ಅಂತ ಕೇಳಿದ್ದಾರೆ.
'ಪಾರ್ವತ ಗುಂಡಾಪುರದ ಗುಂಡು ಬ್ರಮ್ಮಯ್ಯ
ಏಗದಲ್ಲಿ ನನ್ನ ಧ್ಯಾನ ಮಾಡ್ತಿದ್ದಾನೆ.'
'ಸ್ವಾಮಿ ಅವನ್ಗೂನು ಏನಾದ್ರು ವರ ಕೊಡುಬಾರ್ದೆ?'
'ಪಾರ್ವತ ನನ್ನ ಭಕ್ತ
ಬೇಕೂಂತ ಬಯಸ್ತೋರ್ಲ್ಲ ಸಾಕೂಂತ ಸುಮ್ನಾದೋರಲ್ಲ
ಈ ಲೋಕದ ಲಕ್ಷ್ಮದ ಮೇಲೆ ತೊಂಬತ್ತೆಂಟು ಜೀವಿಗಳ್ಗೂ
ನಾನು ಅನ್ನಪಡಿ ಇಡ್ತಿದ್ದೀನಿ
ಸಕಲೆಂಟು ಜೀವಿಗಳ್ಗೂ ನಾನು ಅನ್ನಪಡಿ ತಪ್ಸಿಲ್ಲ
ಮಾತು ಸಾಕು ನಡೀ ಕೈಲಾಸ್ಕೋಗನ' ಅಂತ್ಹೇಳಿ -

ತೊಡೆಯಲ್ಲಿ ಗೌರಮ್ಮ ಮುಡಿಯಲ್ಲಿ ಗಂಗಮ್ಮ
ಅವ್ರು - ನಂದಿವಾಗನದಲ್ಲಿ ದಯವಾಗುತಾರೆ |

ತುಂಬುದ ಸ್ಯಾಮಾರವಂತೆ ಮಟಮಟ ಮದ್ಯಾನ
ಹಕ್ಕಿ ಪಕ್ಷಿ ಗೊದ್ದ ಗೋಸುಂಬಿ ಮೂಕ ಪ್ರಾಣಿಗಳೆಲ್ಲ
ನರಮನುಸ್ರು ಸೈತ ಶಿವನ ಸೊರಣೆ ಮಾಡ್ತಿದ್ದಾರೆ
ಕೈಲಾಸ ಕಟ್ಯಾಳುವಂತ ಸಂಕರ ನೋಡಿದ್ದಾರೆ
ಸಕಲೆಂಟು ಜೀವಿಗೂ ಮುಕ್ಷ ಅನ್ನಪಡಿ ಕೊಡ್ಬೇಕಂತ್ಹೇಳಿ-

ಅನ್ನಪಡಿ ನಡುಸ್ಟುಟ್ಟು ಬರುತೀನಿ ಅಂತ್ಹೇಳಿ
ಅನ್ನದ ಕರುತು ಬರುತಾರೆ |

ಇರನೂರೆಂಬತ್ತು ಕೋಟಿ ಜೀವರಾಸ್ಯಗಳ್ಗೆಲ್ಲ
ಲಕ್ಷೋಪಲಕ್ಷ ಜೀವ್ಕಳ್ಲ ಅನ್ನ ನೀಡಿದ್ದಾರೆ.
ಯಾರು? ಪರಮೇಶ್ವರ
ಪಟ್ಟದ ಪಾರ್ವತಿ ನೋಡುದ್ರು
ನನ್ನ ಗಂಡನಾದ ಮುಕ್ಕಣ್ಣ ಮಲ್ಲಯ್ಯ
ನರಪ್ರಾಣಿಗೆಲ್ಲ ಅನ್ನ ನೀಡ್ತೀನಿ ಅಂತ ಹೋಗಿದ್ದಾರೆ
ಅನ್ನಪಡಿಗೆ ಘನಪತಿ ಬ್ಯಾರೆಯಲ್ಲ ಗುಂಡುಬ್ರಮ್ಮಯ್ಯ
ಬ್ಯಾರೆಯಲ್ಲ ಅಂದವ್ರೆ

ಅವ್ರ ಸತ್ಯವನ್ನು ತಿಳೀಬೇಕಂತ್ಹೇಳಿ
ತಟ್ಟನೆ ಮಂಚುದಿಂದ ಇಳ್ದ -

ಭೂಮೀಯ ಮ್ಯಾಲೆ ಹರುಕೊಂಡು ಹೋಗುವಂತ
ಕೆಂಪಿರವ ತಾಯಿ ಹಿಡುಕೊಂಡ |

ಇರವನ್ನು ತಕ್ಕಂಡು ಭರಣಿಯೊಳಗೆ ಬಚ್ಚಿಟ್ಟು
ತನ್ನ ನರೀ ಒಳುಗೆ ಇಟ್ಟುಕೊಂಡಿದ್ದಾಳೆ -

ಕೈಲಾಸ ಆಳುವಂತ ಕಟ್ಯಾಳು ಪರಮೇಶ
ಪಾರ್ವತಿಯ ಗುರುಮಠಕೆ ಬರುತಾರೆ |

ಬಂದ ಗಂಡನ ನೋಡಿ ಪಟ್ಟದವಳು ಪಾರ್ವತಿ
ಆಗ್ನಿ-ತಕ್ಕೊಂಡು ತಾಯಿ ಬರುತಾಳೆ |

ಪರಮೇಶ್ವರ ಕೈಕಾಲ್ಗೆ ನೀರೀಸ್ಕೊಂಡ್ರು
ಬಂದು ಮಲ್ಗೆ ಮಂಚುದ ಮ್ಯಾಲೆ ಮನುಗ್ತಿದ್ದಾರೆ
ಪಾರ್ವತಾದೇವಿ ನೋಡುದ್ರು
'ಸ್ವಾಮಿಯವರೆ
ಅನ್ನಪಡಿಗೆ ಘನಪತಿಯೂ ಒಂದೆ ಗುಂಡುಬ್ರಮ್ಮಯ್ಯನೂ
ಒಂದೆ ಅಂತೀರಲ್ಲ
ಈವತ್ತು ಒಬ್ರಿಗೂ ನೀವು ಅನ್ನಪಡಿ ತಪ್ಸಿಲ್ಲೆ'
'ಪಾರ್ವತಿ ಒಂದು ಕೊನೇನೂ ಮುಕ್ಷ ತಪ್ಸಿಲ್ಲ
ಮೊದಲು ಸಕಲೆಂಟು ಜೀವಿಗಳ ಊಟ
ಆಮ್ಯಾಲೆ ನಮ್ಮ ಊಟ' ಅಂದ್ರು
ಆಗ ತಾಯಿ ನರೀ ಒಳೀಕೆ ಕೈಹಾಕಿ -

ಭರಣೀಯ ತಗುದಾಳು ಎಡಗೈಲಿ ಹಿಡಿದಾಳು
ಬಲಗೈಲಿ ಮುಚ್ಚುಳವ ತಗುದಾಳು |

ಅಹ್ಹಾ ಇರೀನಿ ಬಾಯಲ್ಲೂ ಮುಕ್ಷ ಒಂದಕ್ಕಿ ಕಾಳಿತ್ತು -

ಪಟ್ಟದ ಪಾರ್ವತಿ ಶಿವನ ಮೈಮೆ ಕಂಡು
ಪಾದಕೆ ಸರಣ ಮಾಡುತಾಳೆ |

ಘನಪತಿ ಆದರೇನು ಗುಂಡು ಬ್ರಮ್ಮನಾದರೇನು
ಅನ್ನಪಡಿ ಎಲ್ಲೂರ್ಗೂ ತಾಯಿ ಸಮನೆಂದ |

೩. ಓರುಗಲ್ಲಿನಲ್ಲಿ ಕಾಳೆ ಮೊಳಗಿದ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುವ್ವಿ | ಸೊಲ್ಲು |

ಏಳು ಸಮುದ್ರದ ನಡುವೆ ಏಳು ಸುತ್ತಿನ ಕ್ವೋಟೆ
ಹಾಲು ಸಾಗ್ರವಾಗಿ ಘನಪತಿ |

ಹಾಲು ಸಾಗ್ರವಾಗಿ ಬಾಳಾಡುವಂತ ಘನಪತಿ
ಏಳು-ಕ್ವೋಟೇಗು ಕವುಲ ಮಡುಗವುನೆ |

ಏಳು ಸುತ್ತಿನ ಕ್ವೋಟೆಗೆ ಆಳು ಗೊಲ್ಲರ ಪಾರ
ಹೇಳುವುದಕೆ ಶಿವನೆ ಅಸುದಳ |

ಎಂಟು ದಿಕ್ಕೀಗು ಗಂಟೆಗೊಲ್ಲರ ಪಾರ
ಮೇಲೆ ಡೆಂಕಣದ ಹುಲಿಮುಖ |

ಹತ್ತು ದಿಕ್ಕೀಗೂ ಕತ್ತಿ ಗೊಲ್ಲರ ಪಾರ
ಸುತ್ತಮುತ್ತೆಲ್ಲೆ ಬಿಚ್ಚುಗತ್ತಿ, ಪಾರ |

ಕಡದ ಕಂಚಿನ ಕ್ವೋಟೆ ಸೋಸಿದುಕ್ಕಿನ ಗುಂಡು
ಬೀರು ಗುಮ್ಮಿ ಏಟು ಅಲ್ಲಿ ಟಮಟಮ |

ಬಂದೂಕದ ಏಟು ಟಮಟಮ ಆ ಕ್ವೋಟೆ
ಕ್ವೋಟೆ ಹೋಗೈತೆ ಮುಗುಲೀಗೆ |

ಏಳುಕ್ವೋಟೆಗಳ್ಗೂ ಏಸಪ್ಪ ಪಾರಾಂದ್ರೆ
ಬಾಕುನ ಪಾರ ಬಂದೂಕಿನ ಪಾರ
ಕತ್ತಿ ಪಾರ ಕಠಾರಿ ಪಾರ
ಚಂದ್ರಾಯದ ಪಾದ ತಿರುಸೂಲದಪಾರ
ಮೇಲಾಗಿ ಮದ್ದುಗುಂಡಿನ ಪಾರ -

ಬಾರಿ ತುಂಬಿದ ಕಾಳೆ ಭೇರಿಯ ಸಬುತಾವು
ಅರಮನೀಯ ಒಳುಗೆ ನುಡಿದಾವು |

'ಹರಕೊಟ್ಟ ವರ ನಮ್ ಹಟ್ಟಿ ಹಿಂದುಳ್‌ಮರ
ಅಪ್ಪಾ ಗೊಲ್ಲಣ್ಣದೀರೆ ಬನ್ನಿ'
'ಏನು ಸ್ವಾಮಿಯವರೆ ?'
'ನೋಡ್ರಪ್ಪ ಗೊಲ್ಲಣ್ಣದೀರೆ.
ನಮ್ಮ ಓರ್ಗಲ್ಲು ಪಟ್ಟಣದಿಂದ
ಜಿವ್ಳುಕ್ಕೆ ಮೂರೊತ್ತು ಕಾಳೆ ಸಬ್ದ ಆಗ್ಬೇಕು
ಕಂಚುನ ಕಾಳೆ ಆಗ್ಬೇಕು ಮಿಂಚುನ ಕಾಳೆ ಆಗ್ಬೇಕು
ಚಿನ್ನದ ಕಾಳೆ ಆಗ್ಬೇಕು ರನ್ನದ ಕಾಳೆ ಆಗ್ಬೇಕು
ಕಬ್ಬುಣದ ಕಾಳೆ ಆಗ್ಬೇಕು ಉಕ್ಕುನ ಕಾಳೆ ಆಗ್ಬೇಕು
ಬೆಳ್ಳಿಕಾಳೆ ಸೈತುವಾಗಿ ಜಿವ್ಳುಕ್ಕೆ ಮೂರ್ಸಾರ್ತಿ ಮೊಳುಗಬೇಕು.
ಇಂಥ ಕಾಳೆಗಳನ್ನು ಮಾಡಿ' ಅಂತ್ಹೇಳಿದ್ದಾನೆ.
ಗೊಲ್ಲಣ್ಣದೀರು ಅದೇ ಪರುಕಾರವಾಗಿ ಕಾಳೆ
ಮಾಡಿ ನಿಲ್ಸಿದ್ದಾರೆ -

ಕಂಚೀನ ಕಾಳೆಗೆ ಕೀಲುಗಳ ಮಾಡವುರೆ
ಜನಕೆ ಮೂಠಸಲ ಕರಿಸುವುದು |

ಹನ್ನೆರಡು ಗಂಟೆಗೆ ಚಿನ್ನಾದ ಕಾಳೆಯು
ಬಲ್ಲಿಗ ದೊರೆ ಘನಪತಿ ಎನುತಾದೆ |

ಇಷ್ಟುವಿಲ್ಲ ಎಂದು ಬ್ರಮ್ಮನಿಲ್ಲ ಎಂದು
ಅಷ್ಟ ದಿಕ್ಪಾಲಕರೆ ಮೊದಲಿಲ್ಲ |

ಅಷ್ಟದಿಕುಪಾಲಕರೆ ಮೊದಲಿಲ್ಲ ಅನುತ್ಹೇಳಿ
ಟಮಟಮನೆ ಕಾಳೆ ಕರಿಸಿದವು |

ಘನಪತಿ ಮಾರಾಜ ಕಾಳವನ್ನು ನುಡುಸ್ತಿದ್ರೆ
ಶ್ರೀರಾಮಚಂದ್ರನ ರಕ್ಕೆ ಕಳ್ತಿದ್ರಲ್ಲ ಅವ್ವು |

ಆಕಾಸದಲ್ಲಿ ಹಾರಾಡಿಕೊಂಡು
ಅವ್ವು-ಲೋಕನೆಲ್ಲ ಸೆಂಚಾರ ಮಾಡುತಾರೆ
ರಕ್ಕೆ ಕಳ್ರು ಸೆಂಚಾರ ಬರ್ತಿರ್ಬೇಕಾದ್ರೆ
ಓರ್ಗಲ್ಲು ಪಟ್ಟುದ ಕಂಚುನಕಾಳೆ ಸದ್ದು ಕೇಳಿ
'ಇಲ್ಲೊಂದು ಕಾಳೆ ನುಡಿತಿದ್ದಾದೆ -

ಕನ್ನವ ಹೊಡುದು ಕಳ್ತನ ಮಾಡ್ಬೇಕೆಂಬುದಾಗಿ
ಅವ್ವು - ಮೇಲೋಕದಿಂದ ಇಳಿದಾರು |

ಇಳುದ್ಬುಟ್ಟು ಕನ್ನಾ ಹಾಕ್ತಿದ್ರೆ -

ಕಳ್ಳರು ಬಂದಾವರೆಂದು ಕಾಳೆಗಳು ಕರಿಸಿದವು
ಕಿಡುಕಿಡನೆ ಕ್ವಾಪ ಉರುದೀತು |

ಕಿಡುಕಿಡನೆ ಕ್ಯಾಪ ತಾಳುಕೊಂಡು ಘನಪತಿ
ಪಾರದೋರನೆಲ್ಲ ಕಳಿಸೀದ |

ಏಳನೆ ಅಂತಸ್ತಲ್ಲಿ ಅಂಕುರಿಸಿ ನೋಡುವಾಗ
ಹಾರು ಬರುತಾರೆ ರಕ್ಕೆ ಕಳ್ಕಾರು |

ಘನಪತಿ ರಾಜ ಚಂದ್ರಾಯದಲ್ಲಿ
ರಕ್ಕೆ ಕಳ್ರ ರಕ್ಕೆಗಳ ಕತ್ತುರುಸಿದ.
ರಕ್ಕೆ ಕಳ್ರು ಕಪ್ಪುಸಮುದ್ರದಲ್ಲಿ ಬೀಳುತ್ತು ಸತ್ತೋದ್ರು
ಈ ತರವಾಗಿ ಬಾಳಾಡ್ತ ಇರುವಾಗ
ಯಾವ ರೀತಿ ಕಾಳೆ ನುಡುಸ್ತಿದ್ದಾನೆ ಅಂದ್ರೆ -

ಓರ್ಗಲ್ಲು ಪಟ್ಟಣಕೆ ಒಡಿಯ ಘನಪತಿರಾಜ
ಬಲ್ಲಿಗ ದೊರೆಯು ಘನಪತಿ |

ಬಲ್ಲಿಗ ಘನಪತಿರಾಜನ ಕ್ವೋಟೇಲ್ಲಿ
ಸೊಲ್ಲುಸೊಲ್ಲಿಗು ಕಾಳೆ ಕರಿಸಿದವು |

'ಕಳ್ರುಗೆ ನಾ ಗಂಡಾಂತ ಕಾಲ್ಗೆ ಪೆಂಡೆ ಧರುಸಿಮ್ನಿ
ಚಿನ್ನಾದ ಕಾಳೆ ಬಲಗ್ಯೆಲಿ |

ನನ್ನ ಕನ್ನೆ ಮೈಮುಟ್ಟಿ ಚಿನ್ನವ ಕಳುದೋನ
ಅವ್ನ - ಚಿತ್ರದಂಡ ಮಾಡಿ ಕುಯ್ಸುವೆನು |

ಚಿತ್ರದಂಡವ ಮಾಡಿ ಕುಯ್ಸುವೆನು' ಅನುತ್ಹೇಳಿ
ಸೊಲ್ಲುಸೊಲ್ಲೀಗು ಕಾಳೆ ಕರಿಸಿದವು |

ಅಳ್ಗೇರಿ ಮ್ಯಾಲೆ ಸೂಲದ ಮರ ನೆಡ್ಸಿ
ನನ್ನ ಪಟ್ಣದಲ್ಲಿ ಕಳುವೋನ |

ನನ್ನ ಪಟ್ಣದಲ್ಲಿ ಕಳುವೋನ ಈ ಸೂಲ್ಕೆ
ಎತ್ತುಸ್ತೀನಂತ ಕಾಳೆ ಕರಿಸಿದವು |

ಇಷ್ಟು ಬಂದರೂ ಸರಿಯೆ ಬ್ರಹ್ಮ ಬಂದರು ಸರಿಯೆ
ಅಷ್ಟ ದಿಕ್ಪಾಲಕರು ಬಂದರು ಸರಿಯೆ |

ಅಷ್ಟ ದಿಕ್ಪಾಲಕರು ಸೈತುವಾಗಿ ಶಿವಬಂದ್ರು
ಅವುರ್ನ - ಸೂಲುಕ್ಕೆತ್ತುಸ್ತೀನಂತ ಕರಿಸಿದವು |

ಈ ಪರಕಾರವಾಗಿ ಘನಪತಿರಾಜ
ಏಳು ಸುತ್ತುನ ಓರ್ಗಲ್‌ಪುರಿ ಕ್ವೋಟೆ ಒಳುಗೆ
ಕಾಳೆ ನುಡ್ಸಿದ್ದಾನೆ.

೪. ಗುಂಡುಬ್ರಮ್ಮಯ್ಯ ಎದುರುಕಾಳೆ ಊದಿದ ಸಂದು

ಸುವ್ವಾ, ಬಾ ನನ್ನ ಬಸವಯ್ಯ ಸುಳ್ಳಿ |

ಓರುಗಲ್ಲ ಒತ್ತೀಲಿ ಗುಂಡಾಪುರ ಗುರುವೆ
ಗುಂಡಾಪುರದಲ್ಲಿ ಗುಂಡುಬ್ರಮ್ಮಯ್ಯ |

ಗುಂಡುಬ್ರಮ್ಮಯ್ಯನವರು ಪ್ರಾತಂಕಾಲುಕ್ಕೆ ಎದ್ದು
ಬಸುವಣ್ಣೋರ್ ಪಾದ್ವೇಗತಿ ಅಂತ್ಹೇಳಿ
ರಾಮ ಲಕ್ಷ್ಮಣ ಅನ್ತಕ್ಕಂತ ಹೋರಿಗಳ ಕಟ್ಟಿದ್ರಲ್ಲ
ಅವುಗಳ್ಗೆ ಕರವೆತ್ತಿ ಕೈಮುಗಿದಿದ್ದಾರೆ
ಸ್ನಾನಮಡಿ ಮಾಡ್ಕೊಂಡು ನಾಮದ ಸೇವೆ ಮಾಡಿದ್ದಾರೆ
ರಾಮ ಲಕ್ಷ್ಮಣ ಅನ್ತಕ್ಕಂತ ಹೋರಿಗಳ್ಗೂ ಮುಕ್ಕ
ಸ್ನಾನವನ್ನು ಮಾಡ್ಸಿದ್ದಾರೆ
ಅಕ್ಕಸ್ತಿ ಕುಂಕುಮವನ್ನು ಹಣೇಗೆ ಧರ್ಸಿದ್ದಾರೆ.
ಪಾದುಗಳ್ಗೂ ಧರ್ಸಿ ಪೂಜೆ ಮಾಡ್ಸುಟ್ಟು
ಶಿವ ನಿನ್ನ ಪಾದವೇ ಗತಿ ಅಂತ ಹೇಳಿ
ಬಂದು ಮನೆ ಮುಂದಾರ್ಪ ಜಗ್ತಿ ಮ್ಯಾಲೆ ಕುಂತಿದ್ದಾರೆ

ಘನಪತಿ ನುಡ್ಸಿದಂತ ಕಾಳದ ಸಬ್ತ ಬಂದು
ಗುಂಡು ಬ್ರಮ್ಮಯ್ನ ಮಠಕೆ ಕೇಳೀತು |

ಗುಂಡು ಬ್ರಮ್ಮಯ್ನ ಮಠಕೆ ಕೇಳೀತು ಕಾಳ ಸಬ್ತ
ಅವ್ನ - ಆಕಾಸ ಅಂತೆ ನೋಡೀದ |

ಆಕಾಸ ಅಂತೆ ನೋಡೀದ ಬ್ರಮ್ಮಯ್ಯ
ಆ - ಸರಣ ಏನಂತ ನುಡಿದಾನು |

'ಅಹ್ಹಾ ನೋಡಿದ್ಯಾ ನೋಡಿದ್ಯಾ
ಶಿವನು ಕೊಟ್ಟ ಭಾಗ್ಯವ ಓವುಸ್ಕೊಂಡು ಉಣ್ಣನಾರ್ದೆ
ನನ್ನ ಮುಂದೆ ಯಾರೂ ಇಲ್ಲಾಂತ್ಹೇಳಿ
ಕಾಲುಗೆ ಮುತ್ತುನ ಪೆಂಡೆ ಹಾಕುಸ್ಕೊಂಡು -
ಚಿನ್ನದ ಕಾಳೆ ವರ್ತುಮಾನ ಮಾಡುಸ್ತುನಲ್ಲ
ಅವ್ರನುಗೆ ಕೊಟ್ಟಂತ ಐಸರು ನಾಮ್ದ್ರೂ ಏನು

ನನಗೆ ಕೊಟ್ಟಂತ ಗರೀಬಿ ಸ್ಥಿತಿಯಾದ್ರೂ ಏನು ?
ನಾನು ಮಡ್ಕೆ ತಕೊಂಡೋಗಿ ಸಂತೆವೊಳುಗೆ ಮಾರುದ್ರೆ ಉಂಟು
ಇಲ್ದಿದ್ರೆ ನಮುಗೆ ಅನ್ನುವೇ ಇಲ್ಲ.
ಇವುರುಗೆ ಕೊಟ್ಟಂತ ಐಸ್ವರ್ಯ ನನಗ್ಯಾತುಕಪ್ಪ
ಕೊಡಬಾರ್ದು ಶಿವನಾರಾಯಣ ?
ನನ್ನ ಮುಂದೆ ಯಾವ ದೊರೆಯೂ ಇಲ್ಲ ದೇವ್ರೂ ಇಲ್ಲ
ನನ್ನಂತ ಬಲ್ಗ ಈ ಜಗತ್ಕದಲ್ಲೇ ಇಲ್ಲ ಅಂತನಲ್ಲ
ಆ ಶಿವನ ದಯದಿಂದ
ಭಾಗ್ಯದ ಲಕ್ಷ್ಮಿ ಬಂದು ತುಂಬಿ ತುಳುಕಿದ್ಕೆ
ಅವುನ್ಗಿಂಗೆ ಆಂಕಾರ ಪಡಬವುದ ?
ಬ್ರಮ್ಮ ಶಿವನಾರಾಯಣರ ಮ್ಯಾಲೆ ಪಂಥ ಮಾಡಬೋದ ?
ಆ ದೊರೆ ಒಂದ್ಗೆ ನಾನೇ ಹೋರ್ತೀನಿ
ಅವುನ್ ದೊಡ್ಡೋನಾದ್ರೆ ಅವುನ ಮನೆಗಿರ್ಲಿ
ಅವುನು ಚಿನ್ನದ ಕಾಳೆ ಒಳುಗೆ ವರ್ತುಮಾನ ಮಾಡವ್ನೆ
ಚಿನ್ನದ ಪೆಂಡ್ಕ ಕಾಲಿಗೆ ಹಾಕವ್ನೆ
ನಾನು ಮಣ್ಣುನ ಕಾಳೆ ಎರುಕೋತೀನಿ
ನಾನು ಗರೀಬು ಅವ ದೊಡ್ಡವ
ಮಣ್ಣುನ ಬಾರಿ ಮಾಡ್ಸಿ ಕಾಲ್ಗಾಕೋತೀನಿ
ಅವುನೊಂದ್ಗೆ ನಾನೇ ಹೋರ್ತೀನಿ
ಪಂಥ ಮಾಡ್ತೀನಿ ನೋಡೇ ಬುಡುವ -

ಕದ್ದವನ ಕೊಡೋದಿಲ್ಲ ಮೊರೆಬಿದ್ದವನ ಬಿಡೋದಿಲ್ಲ
ಅವುನೇರೋ ಶೂಲ್ಕೆ ನಾನೇರುತೀನಿ' |

'ಮಗಳೆ ಕಲ್ಯಾಣ
ಊಟುಕ್ಕೆ ಮಾತ್ರ ನನ್ನ ಕರೀಬ್ಯಾಡವ್ವ'
'ತಂದೆಯವರೆ ಯಾತುಕ್ಕೆ?'
'ಅವ್ವಾ ನಾನು ಮಣ್ಣೆನಕಾಳೆ ಮಾಡ್ಬೇಕು
ಘನಪತಿರಾಜುನ ಮ್ಯಾಲೆ ಮಣ್ಣುನ ಕಾಳೆ ನುಡುಸ್ಬೇಕು
ಶಿವುಗ್ಯಾನ ಶಿವುಪೂಜೆ ನೀನೇ ಮಾಡು ಕಂದಮ್ಮ
ನಾನು ಕಾಳೆ ಮಾಡ್ತೀನಿ' ಅಂದು ಟ್ಟು -

ಗಾಡಿ ಕಟ್ಟುಕೊಂಡು ಗುಂಡು ಬ್ರಮ್ಮಯ್ಯ
ಮೂರುಕ್ಕುಡದ ರಸ್ತೇಗೆ ಬರುತಾರೆ |

ಮೂರುಕ್ಕುಡದ ರಸ್ತೆ ಮುಕ್ಕಟ ರಸ್ತೆಗೆ ಬಂದು
ಮುಕ್ಕಟ್ಗೆ ಮಣ್ಣ ತೋಡೀದ |

ಶಿವನೆಸ್ರು ಹೇಳಿ ಗಾಡಿಗೆ ತುಂಬ್ಕೊಂಡು ತಂದಿದ್ದಾರೆ -

ಒಳ್ಗೆಲ್ಲಿ ಮಿದಿಸಿ ತುಪ್ಪದಲಿ ಹದಗೂಡಿ
ಅವ್ರು - ಮಣ್ಣೆನಲಿ ಕಾಳ ಮಾಡುತಾರೆ |

ಮಣ್ಣೆನ ಕಾಳೆಯನ್ನು ಬೇಯುಸ್ಬೇಕೂಂತ
ಆಮುಗೆ ಒಲೆಯನ್ನು ಹೂಡಿದ್ದಾರೆ -

ನಲವತ್ತೆಂಟು ಜಾತಿ ಪುಳ್ಳಿಪುಸುಗಲು ತಂದು
ಮಣ್ಣೆನ ಕಾಳೇಯ ಬೇಯಿಸೀದ |

ಬೆಂದಿದ್ದ ಕಾಳೆಯ ಕೈಲಿಡುಕೊಂಡು
ಪಾರ್ವತಿ ಪರಮೇಶ್ವರ ನಿಮ್ಮ ಪಾದ್ವೆ ಗತಿ ಅಂದಿದ್ದಾರೆ
ನಿಸ್ರಾತ್ರೆ ಜಾಮ ಕಲ್ಲೂನೀರು ಕರಗೊಹೊತ್ತಲ್ಲಿ
ಘನಪತಿ ರಾಜುನ್ಗೆ ಎದುರುಗಾಳೆ ಮಾಡಿ ನುಡುಸ್ತಿದ್ದಾನೆ
ಯಾರು ಬೇಕಾದ್ರೂ ಓರ್ಗಲ್ ಕ್ವೋಟೆಗೆ ಕನ್ನ ಹಾಕಬವುದು -

ಕದ್ದವನ ಕೊಡೋದಿಲ್ಲ ಮೊರೆಬಿದ್ದೋನ ಬುಡೋದಿಲ್ಲ
ಅವನೇರೊ ಶೂಲ್ಕೆ ನಾನೇರುತೀನಿ |

ಅವನೇರೊ ಶೂಲ್ಕೆ ನಾನೇರುತೀನಂತಾ ಹೇಳಿ
ಮಣ್ಣೆನ ಕಾಳೆ ಓಂಕರಿಸುತಾನೆ |

ಯಾರಾದ್ರೂ ಹೋಗಿ ಘನಪತಿ ರಾಜನ ಕ್ವೋಟೆಗೆ ಕನ್ನ
ಹಾಕ್ಬವುದು
ಅವುನ ಕೈಗೆ ಸಿಕ್ಕೊಂಡೋರು -

ಸಿರುಸ ಹೋಯ್ತದಂತ ನನ್ನ ಬಿದ್ದು ಬೇಡಿದರೆ
ಅವ್ರ - ಸಿರುಸಕೆ ನನ ಸಿರುಸ ಕೊಡುವೇನು |

ಪ್ರಾಣ ಹೋಯ್ತದಂತ ಓಡಿಬಂದು ಬೇಡಿದೋರ್ಗೆ
ಅವ್ರ - ಪ್ರಾಣಕೆ ನನ ಪ್ರಾಣ ಕೊಡುವೇನು |

ಏಡು ಹೊತ್ತಿನ ಕಾಳೆ ಸಾರ್ತಾವೋರ್ಗಲ್ಲುನಲ್ಲಿ
ಎದುರುಬದುರಾಗಿ ಅವ್ರು ಓಂಕರಿಸಿದವ್ರು |

೫. ಕಾಳೆ ಸಬ್ತ ಕೈಲಾಸಕ್ಕೆ ಅರುವಾದ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುಳ್ಳಿ । ಸೊಲ್ಲು ।

ಗುಂಡಾಪುರದಲ್ಲಿ ಗುಂಡು ಬ್ರಮ್ಮಯ್ಯನೋರು
ಓರುಗಲ್ಲಿನಲ್ಲಿ ಘನಪತಿ ।

ಇವ್ರು ಉರುಬೀದ ಕಾಳೆ ಸಬ್ತ ಯಾರೀಗೆ ಅರುವಾದೊ
ಕೈಲಾಸ್ತ ಅಮ್ಮಯಗೆ ಅರುವಾದೊ ।

ಗುಂಡು ಬ್ರಮ್ಮಯ್ಯ ಉರುಬ್ಬಂತ ಕಾಳೆ ಸಬ್ತ
ಪಾರ್ವತಿ ಅಮ್ಮಯ್ಯನ ಪಾದದ ಮ್ಯಾಲೆ
ಮೂರ್ತಿಂಗ್ಳು ಮಗಾ ಒದ್ದಾಡುವಂಗೆ ಒದ್ದಾಡ್ಬುಡ್ತಂತೆ
ಘನಪತಿ ರಾಜ ಉರುಬ್ಬಂತ ಕಂಚುನ ಕಾಳೆ ಸಬ್ತ
ಅಮ್ಮನವರ ಎದೆ ಮ್ಯಾಲೆ ಶೂಲ ಹೊಡ್ದಂಗೆ ಹೊಡಿಯದಂತೆ
ಪಾರ್ವತಿ ಅಮ್ಮಯ್ಯನೊರೂವೆ ಪರಮೇಶ್ವರನೂವೆ
ಪಗಡೆ ಮಂಚುದ್ಮೇಲೆ ಕುಂತ್ಗಂಡು ಪಗ್ಡೆ ಆಡ್ತಿದ್ರಂತೆ
'ಅಹ್ಹಾ ಆ ಜಿವ್ಸ ಘನಪತುರಾಜುಂಗೆ
ಕೇಳಿದ ವರ ಕೊಟ್ರು ಪರಮೇಶ್ವರ
ಆದ್ರೆ ಈವತ್ತುನ ಜಿವ್ಸ ಅವ್ನು ಶಿವುನ ಮ್ಯಾಲೆ
ಪಂಥ ಮಾಡ್ತಿದ್ದಾನೆ
ಆಂಕಾರ ಪಟ್ಬೋರ್ಗೆ ವಾಂಕಾರ ತಪ್ಪಿದ್ದಲ್ಲ.
ಛೇಷ್! ಬ್ರಮ್ಮಗುಂಡಯ್ಯ ನುಡುಸ್ದಂತ ಮಲ್ಲುನ ಕಾಳೆಸಬ್ತ
ನನ್ನ ಪಾದುಕ್ಕೆ ಸರುಣ್ ಮಾಡ್ತಿದೆಯಲ್ಲ
ಅವನು ಇನ್ನೆಂಥೆ ಶರಣ ಇರ್ಬೇಕು.
ಪರಮೇಶ್ವರ ವರಾ ಕೊಟ್ಟು, ಶಿರುಕ್ಕೆ ತಂದ್ಕೊಂಡಿದ್ದಾರೆ'
ಅಂತ್ಹೇಳಿ -

ಶಿವನ ಮೊಕುವ ನೋಡಿ ತಾಯಿ ಪಾರ್ವತದೇವಿ
ಅವ್ರು - ಫಕ್ಕಂತ ತಾಯಿ ನೆಗಿದಾರು ।

'ಎಲೋ ಪಾರ್ವತ ಯಾತುಕ್ಕಾಗಿ ನಗ್ತಿದ್ವೀಯಲ್ಲ?'
'ಸ್ವಾಮಿ ಮೊದಲು ಪಗಡೆಯಾಟ ನಿಲ್ಸಿ'

'ಪಗಡೆಯಾಟ ನಿಲ್ಸದಿರ್ಲಿ ನೀನು ನೆಗನಾಡಿದ್ಯಾಕೆ
ಅನ್ನೋದನ್ನು ಮೊದ್ಲು ಹೇಳುವಂತವಳಾಗು
ನನ್ನ ಗಡ್ಡ ನೋಡಿ ನೆಗ ಬಂತ ?
ನನ್ನ ಮೀಸೆ ನೋಡಿ ನೆಗ ಬಂತ ?
ನನ್ನ ಮುದಿ ಬಸವನ ನೋಡಿ ನೆಗಾ ಬಂತ ?
ನನ್ನ ನಂದಿಕಂಬ ನೋಡಿ ನೆಗ ಬಂತಾ ?
ನನ್ನ ನಾಗಬೂಸಣ ನೋಡಿ ನೆಗಾ ಬಂತ ?'
'ಸ್ವಾಮಿ ಕೇಳ್ದೋರಿಗೆಲ್ಲ ವರ ಕೊಡ್ತೀರಲ್ಲ -

ನೀವು ಕೊಟ್ಟ ಭಾಗ್ಯ ನಿಮುಗೆ ಮಿತ್ತಾಗಿ ಬಂತು
ನೀವು ಕೈಲಾಸ ಆಳಿ ಫಲುವೇನು? ।

ಸ್ವಾಮಿ ಘನಪತಿರಾಜುಂಗೆ ಹೆಚ್ಚಾಳದ ವರ ಕೊಟ್ರಿ -

ಕೇಳಿದ್ಯಾ ಪರಶಿವನೆ ಆ ಗುಂಡಿಗೆ ತಾರಾಣವ
ಅಮ್ಮ - ದೊಂಡೆಯ ಹಂಗು ನಿಮುಗಿಲ್ಲ ।

'ಹಂಗಂದ್ರೇನು ಪಾರ್ವತ?'
'ನೋಡಿ ಮಾಸ್ವಾಮಿ ಒಂದು ಕಾಳೆ ಹೇಳ್ತದೆ :
ನನ್ನ ಮುಂದೆ ಈ ಜಗತ್ತವೇ ಇಲ್ಲಾಂತ
ಯಾವ ದೇವ್ರು ಇಲ್ಲ ಯಾವ ದಿಂಡ್ರು ಇಲ್ಲಾಂತ
ನನ್ನ ಪಟ್ಟುಕೆ ಕನ್ನವನ್ನ ಹಾಕಿ
ನನ್ನ ಕನ್ನೆಯ ಮೈಮುಟ್ಟಿ ಚಿನ್ನಾ ಮುಟ್ಟಿದೋನ
ಅವುನ್ನ ಚಿತ್ರದಂಡ ಮಾಡಿ ಕುಯುಸ್ತೀನಿ
ಹಾಗಂತ ಒಂದು ಕಾಳೆ ಹೇಳ್ತದೆ ಸ್ವಾಮಿ
ಇನ್ನೊಂದು ಕಾಳೆ ಏನ್ಹೇಳ್ತದೆ :

ಕದ್ದೋನ ಕೊಡೋದಿಲ್ವಂತೆ ಮೊರುಬಿದ್ದೋನ
ಬುಡೋದಿಲ್ವಂತೆ
ಅವುನೇರುವಂತಾ ಶೂಲುಕ್ಕೆ ನಾನೇ ಏರ್ತೀನಿ ಅಂತ
ಇನ್ನೊಂದು ಕಾಳೆ ಹೇಳ್ತೀದೆ ಸ್ವಾಮಿ'
'ಪಾರ್ವತ ಘನಪತುರಾಜುಂಗೆ ಕೊಟ್ಟ ಭಾಗ್ಯದ
ಓವುಸ್ಕೊಂಡು ಉಣ್ಣುನಾರದೆ
ನನ್ಮುಂದೆ ಯಾರೂ ಇಲ್ಲ ಅಂತ ಮೆರೀತಾವ್ನೆ
ಗುಂಡು ಬ್ರಮ್ಮಯ್ಯ ದೊರೆ ಮೇಲೆ ಹೋರ್ಕೊಂಡವ್ನೆ
ತುಂಬಾ ಗರೀಬ
ಮಣ್ಣಿನ ಪೆಂಡೆಯ ಕಾಲ್ಗೆ ಹಾಕೊಂಡು
ಮಣ್ಣಿನ ಕಾಳೆಯ ಕೈಲಿಡ್ಕೊಂಡು
ವರ್ತುಮಾನುವನ್ನು ಮಾಡುಸ್ತಾ ಅವುನೆ
ಏಡು ಕಾಳೆ ಸಬ್ತುವೆ ನಮ್ಮ ಕೈಲಾಸ್ಕೆ ಕೇಳಾಯ್ತು ಪಾರ್ವತ'
'ಹೌದು ಸ್ವಾಮಿ, ಅವುನ್ಗ್ಯಾಕೆ ಅಷ್ಟು ಭಾಗ್ಯ ಕೊಟ್ರಿ
ಯಾವ ದೇವ್ರು ನನುಗ್ ಏನೆಯೇ ಇಲ್ಲಾಂತ

ಆ ರಾಜ ಹೇಳ್ತಾ ಇದ್ದಾನಲ್ಲ.
ಗುಂಡು ಬ್ರಮ್ಮಯ್ಯುಂಗೆ ಇಷ್ಟ್ಯಾಕೆ ಬಡುಸ್ತಾನ ಕೊಟ್ರಿ ೩೮೦
ಸಂದೀಕೆ ತಂದ್ರೆ ಹೊತಾರಿಕಿಲ್ಲಂತೆ
ಹೊತಾರಿಕೆ ತಂದ್ರೆ ಸಂದಿಕಿಲ್ಲಂತೆ
ಅಂತೇವ ಆ ದೊರೆ ಮೇಲೆ ಪಂಥಾ ಮಾಡಿದ್ದಾನೆ'

'ಹಾಗಾದ ಮ್ಯಾಕೆ ಅದೇ ಪಟ್ಟುಣಕೆ ನಾವೇ ಹೋಗಿ
ಅವನ ಕನ್ನೆ ಮೈಮುಟ್ಟಿ, ಚಿನ್ನ ಕಳೂಕೊಂಡು ಬರ್ಬೇಕು
ನಾವೇ ಕಳ್ಯಾಗಿ ಹೋಯ್ತೀವಿ
ಈಸತಿ ನೋಡ್ಕೊಳ್ಳಿ ದೊರೆ !
ನಮ್ಮುನ್ ಏನ್ ಮಾಡ್ತಾನೆ ನೋಡಂವ್'
'ಸ್ವಾಮಿ ಕಳುವುಗೆ ನೀವು ಮಾತ್ರ ಹೋಗ್ಬೇಡಿ
ಯಾರ್ನಾರ ಕಳುಸ್ಬುಡಿ ನೀವು ಹೋಗ್‌ಬ್ಯಾಡಿ' ೩೯೦

'ಪಾರ್ವತ ಮೊದುಲಾಗಿ ನಾವೇ ಹೋಯ್ತೀವಿ
ದೊರೆ ಪರಾಕ್ರಮವನ್ನು ನಾವು ನೋಡ್ಕೊಂಡು ಬರ್ತೀವಿ'
'ಬ್ಯಾಡಿ ಬುದ್ಧಿ ನೀವೋಗ್ಬೇಡಿ ನೀವೋಗ್ಬೇಡಿ !'
'ಹೇಳಾಗ ಹೇಳ್ಬುಟ್ಟು, ಬ್ಯಾಡಾಂತ ಕೇಳ್ತೀಯ?
ಕಳ್ತಾನ ಮಾಡ್ತೀವಿ ಗುಂಡು ಬ್ರಮ್ಮಯ್ಯುನ ಮೊರೆ ಬೀಳ್ತೀವಿ
ದುಡುವ ನಾವು ನೋಡ್ತೀವಿ
ಆ ಘನಪತಿ ರಾಜುನ್ನ -

ಹಾಳು ಮಾಡು ಬೇಕು ಹೆಣ್ಣೆ ಧೂಳು ಮಾಡಬೇಕು ಹೆಣ್ಣೆ
ಅವ್ನ - ಗಾಳಿಗೆತ್ತಿದ ಸೊಳ್ಳ ಮಾಡಿ ಬರುತೀವಿ |

ಪಂಥ ಮಾಡಿದೋನ ಅಂತೆ ಬುಡೋಕಾಗ್ದು ೪೦೦
ಅವ್ನ ದಟ್ಟೆ, ಸೀಳೋಂಗೆ ಸೀಳುತೀವಿ | ೪೦೧

೬. ದೇವ್ದಿ ಹಜಾರದ ಸಭೆ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುವ್ವಿ | ಸೊಲ್ಲು |

ದೇವ್ದಿ ಹಜಾರವನ್ನು ಬುಟ್ಟ
ಎದ್ದು ನಡಾ ಕಟ್ಕೊಂಡು ಪರಮೇಶ್ವರ
ಏಡು ಕೈಗಳ್ನೂ ಜೋಡಿಸ್ಕೊಂಡು -

ಲಕ್ಕಸದ್ಮೇಲೆ ತೊಂಬತ್ತು ಸಾವುರ ಜಂಗಮರೆ
ನಮ್ಮ ದೇವ್ದಿಹಜಾರಕ್ಕೆ ತೆರಳೀರಿ |

ದೇವ್ದಿ ಹಜಾರಕ್ಕೆ ತೆರಳಿರಪ್ಪ ಎನುತ್ಹೇಳಿ
ಸರಣ್ರುನೆಲ್ಲ ಸ್ವಾಮಿ ಕರುದಾರು |

ಯಾಕೋ ಕಾಣೆ ಈವತ್ತುನ ಜಿವ್ಸ ನಮ್ಮ ಸ್ವಾಮಿಯವ್ರು
ಅಪ್ಪೂಪಕೆ ದೇವ್ದಿ ಹಜಾರುಕ್ಕೆ ಕರೀತವುರೆ ೪೧೦
ನಡೀರಪ್ಪ ಹೋಗನ ಅಂತ್ಹೇಳಿ
ಚಿಕ್ಕದು ಪುಟ್ಟದೆಲ್ಲ ಬಂದು ಒಟ್ಟೆ
ದೇವ್ದಿ ಹಜಾರದಲ್ಲಿ ನಿಂತ್ಕೋತು -

ಆಗಿಲ್ಲ ಈಗಿಲ್ಲ ಯಾವಾಗ್ಲೂ ಇಲ್ಲದಲ್ಲೊ
ಏನು ಕಾರಣ ನಮ್ಮ ಕರಸಿದಿರಿ |

ಕರದ ಮಾತಿಗೆ ನೀವು ಬಂದಿರಪ್ಪ ಸರಣ್ರೆ
ನಿಮ್ಗೆ - ಕರವೆತ್ತಿ ಕೈಯ ಮುಗಿವೇನು |

ಬಂದಂತ ಜಂಗುಮರ ನೋಡಿ ಏನನ್ನುತಾರೆ
ನಾನೊಂದ್ಮಾಕುದಾನ ಹೇಳುತೀನಿ |

ಯಾರೂ ಹೋಗದೆ ಇದ್ದ ಓರುಗಲ್ಲು ಪಟ್ಟಣಕೆ ೪೨೦
ಹೋಗೋರು ಯಾರಪ್ಪ ಸಭಿಯೊಳಗೆ |

ಹೋಗೋರು ಯಾರಪ್ಪ ಸಭಿಯಲ್ಲಿ ಅಂದಾರೆ
ಸರಣರ ಬಾಯಿ ಬಿಗುದೋಯ್ತು |

ಮಾತುಕತೆ ಇಲ್ಲಾದೆ ಕುಂತಿದ್ದ ಸರಣರ
ನಮ್ಮ - ಶಿವನೋಡಿ ಅಲ್ಲಿ ನೆಗುತಾರೆ |

ಹೋದವ್ರಲ್ಲ ಗುರುವೆ ಬಂದವ್ರಲ್ಲ ಗುರುವೆ
ಓರುಗಲ್ಲು ಪಟ್ಟಾವ ನಾವು ಕಾಣೊ |

'ಹಂಗಾದ್ಮಾಕೆ ಓರ್ಗಲ್ಲು ಪಟ್ಟುಕೆ
ಹೋಗಿದ್ದು ಬರೋರು ಯಾರೂ ಇಲ್ಲುವ್ರೇನಪ್ಪ?'
'ಇಲ್ಲಾ ಮಾಸ್ವಾಮಿ ಯಾರೂ ಇಲ್ಲ' ೪೩೦
'ಹಂಗಾದ್ಮಾಕೆ ನಾನೇ ಹೋಗಿದ್ದು ಬರ್ಬೇಕು' ಎಂಬುದಾಗಿ
ಪರಮೇಶ್ವರ ಮ್ಯಾಲುಕ್ಕೆದ್ರು.
ಆಗ ಪಾರ್ವತದೇವಿಯವ್ರು
'ಮಾಸ್ವಾಮಿ ನಿಲ್ಲಿ ನಿಲ್ಲಿ' ಅಂತ ತಡ್ದಿದ್ದಾರೆ

'ಮಾಸ್ವಾಮಿ ನೀವು ಕೊಟ್ಟ ಭಾಗ್ಯಾವ ನೀವೇ ಕಿತ್ಕೊಳಕಾಗದಿಲ್ಲ
ನಿಮ್ಮ ಜೊತೆ ನಮ್ಮಣ್ಣಾಯ್ಯ ನಿಂತ್ಕೊಂಡ್ರೆ
ಅವುನ ಧುನಿಯಾ ಧೂಳೀಪಟ ಮಾಡಿ
ಅವುನ್ನ ಗಾಳಿಗೆತ್ತಿದ ಸೊಳ್ಳ್ ಮಾಡ್ಬೈದು'
'ಪಾರ್ವತ ನಿನ್ಮಾತೂ ಸರಿ' ಅಂದ್ಬುಟ್ಟು -

ಅಂತೆ ಆಕಾಸ ನೋಡಿ ಕೈ ಬೀಸಿ ಸಂಕುರನು ೪೪೦
ಗರುಡಾಳ ಸ್ವಾಮಿಯ ಕರಿದಾನು |

ಗರುಡಾಳ ಸ್ವಾಮಿ ಬಂದು ಶಿವನ್ಗೆ ನಮುಸ್ಕಾರ ಮಾಡುದ್ರು
'ಏಲೋ ಗರುಡಾಳ ನಂದಗೋಕುಲ್ಕೆ ಹೋಗಿ -

ಈ ವಾಲಿಯ ಕೊಟ್ಟು ಬ್ಯಾಗನೆ ಬರ್ಹೇಳಂತ
ಕರಕರನೆ ವಾಲಿ ಬರಿದಾರು |

ಬರದಂತ ವಾಲೇಯ ಗರುಡಾಳ್ನ ಕೊಳ್ಳಿಗೆ ಕಟ್ಟಿ
ಗರುಡಾಳ ಸ್ವಾಮಿಯ ಕಳುಗವುರೆ |

ಹಾರೀತು ಗರುಡಾಳ ನೆಗೆದೀತು ಆಕಾಸ್ಕೆ
ನಂದಗೋಕುಲಕೆ ಹೊರಟೀತು |

ನಂದಗೋಕುಲದಲ್ಲಿ ನಾರಾಯಣಸ್ವಾಮಿ ೪೫೦
ಲಕ್ಷುಮದೇವಿ ಜೊತೆ ಪಗಡೆನಾಡ್ತಿದ್ರು
ಗರುಡಾಳಸ್ವಾಮಿ ಹೋಗಿ ನಮುಸ್ಕಾರವನ್ನು ಮಾಡಿ
ತಂದಿರುವಂತ ವಾಲಿಯನ್ನು ಕೊಟ್ಟಿದ್ದಾರೆ -

ಕೊಟ್ಟ ವಾಲಿಯ ಸ್ವಾಮಿ ಕೈಯಲ್ಲಿ ಹಿಡುಕೊಂಡು
ವಾಲೀಯ ಒಡುದು ನೋಡುತಾರೆ |

'ಲಕ್ಷ್ಮಮದೇವಿ
ಯಾಕೋ ನಮ್ಮ ಭಾವನವರು ಬರ್ಮಾಡ್ತಾ ಇದ್ದಾರೆ
ಕೈಲಾಸ್ಕೆ ಹೋಗಿದ್ದು ಬರ್ತೀನಿ ಅಂತ್ಹೇಳಿ -

ನಾರಾಯಣಸ್ವಾಮಿ ನಂದಗೋಕುಲ ಬುಟ್ಟು
ಅವ್ರು - ಕೈಲಾಸ್ಕೆ ಸಾಗಿ ಬರುತಾರೆ | ೪೬೦

ಕೈಲಾಸದ ಬಾಕುಲ್ಲೂವೆ ಕಡೇ ಬಾಕುಲ್ಲೂವೆ
ಎಡೇ ಕೊಡುದೆ ನಿಂತಿದ್ರು
ಯಾರು ? ರುಸುಗಳು.
ಇದೇನು ಇವತ್ತು ಸಭೇ ಸೇರಿದ್ದತು
ಏನು ಕಾರ್ಣ ಸೇರಿದ್ದರು ಅಂತ ತಿಳೀಬೇಕು ಅನ್ಕೊಂಡು
ಆಗ ಕೈಲಾಸದೊಳೀಕೆ ನಾರಾಯ್ಣ ಬಂದ
'ಸೊಲ್ಲ ದಾರಿ ಕೊಡ್ರಪ್ಪ ಸ್ವಾಮಿಯವ್ರ ಸಂದಾನುಕ್ಕೋಯ್ತೀನಿ'
'ಅಯ್ಯೋ ಹೋಗಯ್ಯ ನಾವೆಲ್ಲಿ ಬುಡೋಂವ್
ದಾರೀಯ' ಅಂದ್ರು
ನಾರಾಯ್ಣ ಅನ್ನೋದು ಕಾಣ್ನೆಲ್ಲ
ಇವುರಾಗಿ ಇವುರೇ ದಾರಿ ಬುಟ್ಬುಡುಬೇಕು ೪೭೦
ಅಂತೇದೊಂದು ಕೆಲ್ಸ ಮಾಡ್ಬೇಕು ಅಂದ್ಬುಟ್ಟು -

ಮರದ ತಾಳ ತಕ್ಕೊಂಡು ಕಿವಿಗೆರ್ಚು ಬೆಂಡಿಕ್ಕೊಂಡು
ಸಾಸಾರ ನಾಮ ಏಡ ಬಳುಕೊಂಡ |

ಸಾಸಾರ ನಾಮಾವ ಬಳುಕೊಂಡ ನಾರಾಯಣ
ಒಂದ್ಯಾಸಗಾರವಾಗಿ ಬರುತಾನೆ |

ಹ್ಞಾಂ ಹ್ಞೂಂ ಅಂದ ತಾಳ ಸಬ್ತ ಮಾಡ್ದ
ಆಗ ಸೇರಿದ್ದಂತೆ ಗಣಗಳೆಲ್ಲ -

ಇದ್ಮಾಂಸ ಬಂದ್ಬುಟ್ಟ ದಾರೀಯ ಬುಡ್ರಪ್ಪ
ಕೈ ಕಲ್ಲೆಸ್ಗೆ ದಾರಿ ಬುಡುತಾರೆ |

ದಾರೀಯ ಬುಡುಸ್ಕೊಂಡು ತಂತ್ಯಾನು ನಾರಾಯ್ಣ ೪೮೦
ಸ್ವಾಮಿಯವ್ರ - ದೇವ್ನಿಯಜಾರಕ್ಕೆ ಬರುತಾರೆ |

ದೇವ್ನಿಯಜಾರುಕ್ಕೆ ಬಂದನಂತೆ ನಾರಾಯ್ಣ
ಅವ್ನು - ಕರವೆತ್ತಿ ಕೈಯ ಮುಗಿದಾನು |

ನಾರಾಯ್ಣನ ಮೊಕುವ ನೋಡುದ್ನಂತೆ ಜಗದೀಶ
ಬಾರಯ್ಯ ನೀನು ನಾರಾಯಣ |

'ನಾರಾಯ್ಣ'
'ಸ್ವಾಮಿ'
'ನೀನು ಬಂದುದ್ದು ನಮುಗೊಳ್ಳೆದಾಯ್ತಪ್ಪ-

ಒರುಗಲ್ಲು ಪಟ್ಟಣಕೆ ಹೋಗೋರ್ಯಾರ್ಯಾರು ಇದ್ದೀರಿಯ
ಯಾರುಂಟು ದೇವಸಭೆಯೊಳಗೆ | ೪೯೦

ಯಾರುಂಟು ದೇವತೆ ಸಭೆಯಲ್ಲಿ?' ಅಂದರೆ
ನಾರಾಯ್ಣ ಕರವ ನಮುಸಿದನು |

'ಯಾರೂ ಹೋಗದಿದ್ದಂತ ಓರುಗಲ್ಲೀಗೆ ಗುರುವೆ
ಹೋಗಿದ್ದು ನಾನು ಬತ್ತೀನಿ |

ಹಾದ್‌ಬೀದೀನೆಲ್ಲ ನಾ ತಿಳುಕೊಂಡು ಬತ್ತೀನಿ
ನಾನುಂಟು ಸ್ವಾಮಿ ಸಭೆಯಲ್ಲಿ' |

'ಹ್ಞಾಂ ನಾರಾಯಣ ನೀನೋದ್ರೆ ನಮ್ಗೆ ಬಾಳ ಸಂತೋಸವಪ್ಪ
ಹಂಗಾದ್ಮಾಲೆ ಹೋಯ್ತೀಯಪ್ಪ?'
'ನಿಮ್ಮಪ್ಪಣೆಯಾದ್ರೆ ಈ ತಕ್ಷಣವೆ ಕಡುದ್ಬುಡ್ತೀನಿ ಸ್ವಾಮಿ' -

'ದಾಸ್ಯೆನವುತಾರದಲ್ಲಿ ಹೋದ್ರೆ ಪಟ್ನಾ ಸೇರ್ಸೋದಿಲ್ಲ
ನಿನ್ನ ದಾಸುನವತಾರ್ವ ತಗುದಾಕು |

ಅಯ್ಯಾ ನಾರಾಯ್ಣ ಘನಪತಿ ಮಾರಾಜುಂಗೆ
ವರಕೊಟ್ಟಿ ಭಾಗ್ಯಾಕೊಟ್ಟಿ
ಅವ್ನೀಗ ನಮ್ಮ ಮ್ಯಾಲೆ ಪಂಥ ಮಾಡಿದ್ದಾನೆ
ಓರ್ಗಲ್ಲು ಕ್ವೋಟೆಗೆ ಕನ್ನವಿಕ್ಕಿ
ಅವ್ನ ಪಂಥದ ಪೆಂಡ್ಯ ಕಳೂಬೇಕು
ಅದುಕ್ಕಾಗಿ ಮೊದುಲು ಅವನ ಕ್ವೋಟೆ
ಇಸ್ತಾರವನ್ನು ತಿಳೀಬೇಕು -

ಎಲ್ಲಾಣೆ ಹೋಗಬೇಕು ಎಲ್ಲಾಣೆ ಬರಬೇಕು
ಎಲ್ಲಾಣೆ ಕನ್ನ ಹೊಡೀಬೇಕು |

ಎಲ್ಲಾಣೆ ಕನ್ನ ಹೊಡಿಬೇಕು ಅಂಬೋದ
ತಿಳುಕೊಂಡು ಕೈಲಾಸ್ಕೆ ಬರಬೇಕು |

ದಾಸಯ್ಯನವುತಾರ್ವ ತಗುದಾಕು ನಾರಾಯ್ಣ
ನನ್ನ ಬಿರುದುಗಳ ನಿನ್ಗೆ ಕೊಡುತೀನಿ |

ಸುತ್ತಲ್ಲು ಸುಲಿಪಲ್ಲು ಕೆಂಜೆಡೆ ಕೋರ್ಮೀಸೆ
ಅಂಗಕ್ಕೆ ಧರುಸಿದ್ದ ಮುರುಡಿ ಸರಪ್ಣಿ |

ಅಂಗಕ್ಕೆ ಧರುಸಿದ್ದ ಮುರುಡಿ ಸರಪ್ಣಿಯ
ನಮ್ಮ - ಹರಮೆಚ್ಚಿ ಅಲ್ಲಿ ಕೊಡುತಾರೆ |

ಡಮುರು ತಿರುಸೂಲ ಅಕ್ಕಸ ಪಾತ್ರೆ
ಮೂರು ನೇತ್ರ ಹುಲ್ಲೇ ಚರ್ಮ
ಎಲ್ಲಾನು ಮೆಚ್ಚಿ ನಾರಾಯ್ಣನ ವಾಸುಕ್ಕೆ ಕೊಟ್ರು
'ನಾರಾಯ್ಣ ನೀನೋದ ಕಾರ್ಯ ಜಯಪರ್ತವಾಗ್ಲಪ್ಪ
ಹೋಗಿದ್ದು ಬಾರಪ್ಪ' ಅಂದ್ರು
ಸ್ವಾಮಿಯವರ ಬಿರುದ್ನಲ್ಲಿ ಹೋದ್ರೆ ಪಟ್ನಾ ಸೇರ್ಸಕಿಲ್ಲಾಂತ
ನಾರಾಯಣ ತನ್ನ ಬಿರುದುಗಳ ಧರುಸ್ತಾನೆ -

ಹಳದಿ ಬಿಳದಿಯ ಧರಿಸಿ ಕಪ್ಪು ಕರ್ದೀಯ ಧರಿಸಿ
ಕತ್ತೀಗೆ ಪ್ರಮಾಳ ಧರಿಸೀದ |

ಕತ್ತೀಗೆ ಪ್ರಮಾಳ ಧರ್ಸಿಕೊಂಡು ನಾರಾಯ್ಣ
ಅಯ್ಯ - ಬಯ್ಲೋಕಕವರು ದಯವಾಗುತಾರೆ |

೭. ಗುಂಡು ಬ್ರಮ್ಮಯ್ಯನ ಬಲಗ್ಯೆ ಭಾಷೆ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುವ್ವಿ | ಸೊಲ್ಲು |

ದಾಸಯ್ನ ಯಾಸದಲ್ಲಿ ನಾರಾಯಣಸ್ವಾಮಿ
ಗುಂಡು ಬ್ರಮ್ಮಯ್ನ ಮನೆಗೆ ಬರುತಾರೆ |

ಜಾಗ್ಟೇಯ ಹೊಡುಕೊಂಡು ಕ್ಯಾರಣ್ಯ ಸಾರಿದರು
ಗುಂಡು ಬ್ರಮ್ಮಯ್ನ ಮಗಳು ಕಲ್ಯಾಣಿ |

ಗುಂಡು ಬ್ರಮ್ಮಯ್ನ ಮಗಳು ಕಲ್ಯಾಣಮ್ಮ
ಗುಡುಗುಡನೆ ಬಾಗಲಿಗೆ ಬರುತಾಳೆ |

ಕಲ್ಯಾಣಮ್ಮನು ಸ್ವಾಮಿ ಮೊಕುವನ್ನು ನೋಡಿ
'ಸ್ವಾಮಿ ಈ ಜಿವ್ಸ ತುಂಬುದ ಸ್ವಾಮುವಾರ
ನಮ್ಮ ತಂದೆಯವುರು ಗುರುಮಠದಲ್ಲಿ ಹರೀಕತೆ ನಡುಸ್ತಿದ್ದಾರೆ
ಅದೂ ಅಲ್ದೆ ಸ್ವಾಮಿ -

ನಾನು ಲಿಂಗೈತರ ಮಗಳಲ್ಲ ಜಂಗುಮರ ಸೊಸೆಯಲ್ಲ
ಜಾತಿವೊಳುಗೆ ಕುಂಬಾರ್ರ ಮಗಳಯ್ಯ |

ಭೇದವಿದ್ದರೆ ಹೋಗಿ ಭೇದವಿಲ್ಲ ಅಂದಾರೆ
ಭಿನ್ನವ ಅಳದು ದಯಮಾಡಿ |

'ಅಮ್ಮ ನಿಮ್ಮ ತಂದೆಯವರನ್ನು ಮೊದೂಲ್ ಕಂಡು
ಅಮ್ಮಾಕೆ ಭಿನ್ನ ಅಳೀತೀನಿ ಕಂದಮ್ಮ

ನಿಮ್ಮ ತಂದೇರಿರುವ ದಾರಿ ತೋರ್ಸಮ್ಮ' ಅಂದ್ರು
ಕಲ್ಯಾಣಮ್ಮ ದಾರಿತೋರ್ಕಡಕೆ ಬಂದ್ರಲ್ಲ
ದೂರದಲ್ಲಿ ಓರ್ಗಲ್ ಪಟ್ಣ ಕಣ್ಣಿಗೆ ಬಿತ್ತು
'ಕಂದಮ್ಮ ಕಾಣುವಂಥಾ ಪಟ್ಣ ಯಾವುದಮ್ಮ?'
'ಸ್ವಾಮಿ ಅದು ಓರ್ಗಲ್ಲು ಪಟ್ಣ
ದೇವ ದೇವುಮಾನ್ರುನೆಲ್ಲ ಕಾಲ್ದೆಸೀಗೆ
ಮಡಿಕೊಂಡಿವ್ನಿ ಅಂತ
ಆಂಕಾರದಿಂದ ಕಂಚುನ ಕಾಳೆ ನುಡ್ಸಿದ್ದಾನೆ
ಯಾರು ? ಓರ್ಗಲ್ ಘನಪತಿರಾಜ
ದೂರುಕ್ಕೆ ಕಣ್ಣಿಗೆ ಕಾಣುಸ್ತೋತದೆ
ಹೋಗ್ಬೇಕು ನೋಡ್ಬೇಕು ಅಂತ ದಂಡ್ಯಕೋದ್ರೆ
ದಿಕ್ಕೇ ತಪ್ಪೋಯ್ತದೆ ಸ್ವಾಮಿ -

ಆ ಪಾಪಿ ಪಟ್ಟುಣಕೆ ಹೋದೋರ ನಾ ಕಾಣೆ
ಆ ಪಟ್ಟುಣದ ಸುದ್ದಿ ನಿಮುಗೆ ತರುವಲ್ಲ |

ಭಾರಿ ಕಂಚಿನಕಾಳೆ ಭೇರಿಯ ಸಬುತಾವು
ಲಾಲೀಸಿ ಕೇಳೀರಿ ನಿಮ್ಮ ಮನದಲ್ಲಿ |

ಕಲ್ಯಾಣಮ್ಮನ ಮಾತ್ಕೇಳಿ ನಾರಾಯ್ಣ ಹೇಳ್ತಾರೆ -

ಯಾರೂ ಹೋಗದೆ ಹೋದ ಪಟ್ಟುಣಕೆ ನಾ ಹೋಗಿ
ಕ್ಯಾರಣ್ಯ ಮಾಡಿ ಬರಬೇಕು |

ಕಲ್ಯಾಣಮ್ಮ ಗುರುಮಠದ ದಾರಿ ತೋರ್‌ಕೊಟ್ರಲ್ಲ
ನಾರಾಯಣ ಗುಂಡು ಬ್ರಮ್ಮಯ್ಯನ ಮಠುಕೆ ದಯವಾದ್ರು -

ಗುಂಡು ಬ್ರಮ್ಮಯ್ನ ಮಠದಲ್ಲಿ ಅವತ್ತರೀಕತೆಯಂತೆ
ಹರಿಯಕಥೆ ಜಿವ್ಸ ಬರುತಾರೆ |

'ಅಪ್ಪಾ ಶರುಣ್ರೆ ನನಗೆ ದಾರಿ ಕೊಡಿ
ಗುಂಡು ಬ್ರಮ್ಮಯ್ಯನ ಮಠುಕೋಯ್ತೀನಿ
ದಾರಿಕೊಡ್ರಪ್ಪ' ಅಂದ್ರು
ಕುಂತಿದ್ದೋರೆಲ್ಲ
'ಅಯ್ಯೋ ಕುಂತ್ಕೊಂಡ್ ಆ ಚೋರಿ ನೋಡಯ್ಯ
ನಿಂಗೆಲ್ಲಿ ದಾರಿ ಕೊಡವು' ಅಂದ್ರು -

ಕಿವಿಗೆ ಬೆಂಡೆ ಇಕ್ಕೊಂಡ ಮರದ ತಾಳ ತಕ್ಕೊಂಡ
ಎರಡು ಸಾಸಾರ ನಾಮ್ಮ ಬಳುಕೊಂಡ |

ಸಾಸಾರು ನಾಮ ಬಳುಕೊಂಡು ನಾರಾಯಣ
ಒಂದು ಯಾಸ್ಕಾರನಾಗಿ ಬರುತಾನೆ |

ಇದ್‌ಮಾಂಸ ಬಂದಾಂತ ಇದ್ದ ಬದ್ಬೋರೆಲ್ಲ
ದ್ಹಾರೀಯ ಸ್ವಾಮಿಗೆ ಕೊಡುತಾರೆ |

ನಾರಾಯಣಸ್ವಾಮಿ ಗುಂಡು ಬ್ರಮ್ಮಯ್ಯನ
ಕಡೆಯ ಬಾಗುಲಿಗೆ ಬರುತಾರೆ |

ಹಿರಿಯ-ಶರಣ್ರಾರ ಮಠದಲ್ಲಿ ಬುರುಗು
ಜಗಾಟೆಯಂತೆ
ಬುರುಗು ಜಾಗಾಟೆ ಕೈತಾಳೆ |

ಬುರುಗು ಜಾಗಾಟೆ ಕೈತಾಳೆ ಸಬ್ತ ಕೇಳಿ
ಬಲದ ನಾರಾಯ್ಣ ಬರುತಾನೆ |

ಗುಂಡು ಬ್ರಮ್ಮಯ್ನ ಕಡೇ ಬಾಕ್ಲಲ್ಲಿ ನಿಂತ್ಕೊಂಡು
ಆ ಶರುಣ್ರೆಚ್ಚೆತ್ರನೆಲ್ಲ ನೋಡ್ತಾ ಅವ್ರೆ |

ಅವ್ರು ಬಾರುಸ್ತಿದ್ದಂತ ವೀಣೆ ಮದ್ಲೆ ಅರ್ಮಾಣಿ ತಪ್ಲ
ಎಲ್ಲುದ್ರು ಸಬ್ತ ನಿಸಬ್ತವಾಯ್ತು |

ನಮುಗಿಂತ ಹೆಚ್ಚುನ ಶರಣ್ರು ಯಾರೋ ಬಂದವ್ರೆ
ನಮ್ಮ ವಾದ್ಯಗಳ ಸೊಲ್ಲು ಅಡುಗೋಗ್ಬೇಕಾದ್ರೆ
ಅವುನಿನ್ನೆಂತೆ ಮಾತ್ಮ ಇರಬೈದು ಅಂದ್ಬುಟ್ಟು
ಗುಂಡು ಬ್ರಮ್ಮಯ್ಯ ಕಡೇಬಾಕುಲ್ಗೆ ಬಂದ್ಬುಟ್ರು-

ಬಡವರಿದ್ದ ಮನೆಗೆ ಭಾಗ್ಯಾವೆ ಬಂದಂಗೆ
ಒಳುಗಡುಗೆ ತಾವು ದಯಮಾಡಿ ಬುದ್ಧಿ |

ಗುಂಡುಬ್ರ್ಮಯ್ಯ ಒಂದು ತೊಳ್ಸಿಹಾರ ತಂದು
ನಾರಾಯಣನ ಕತ್ಗೆ ಹಾಕಿದ್ದಾನೆ.
ಅಹ್ಹಾ ಸಮಪೀಠದಲ್ಲಿ ನಾರಾಯಣನ ಕುಣುಸ್ತ
'ಓ ನಿಮ್ಮರಿಕತೆ ನಡುಸ್ರಪ್ಪ' ಅಂದ
ಯಾರು ? ಶ್ರೀಮನ್ನಾರಾಯ್ಣ
ಗುಂಡು ಬ್ರಮ್ಮಯ್ಯನವರು ಕಾಲ್ಗೆ ಮಣ್ಣಿನಬಾರಿ
ಹಾಕೊಂಡು
ಕೈಲಿ ಮಣ್ಣಿನ ಕಾಳೆ ಹಿಡ್ಕೊಂಡು
ಮುಂದುಕ್ಕೆ ಹರೀಕತೆ ಪ್ರಾರಂಭುಸ್ತಾ ಇದ್ದಾರೆ -

ಕಟ್ಟ ಕಡೆಯಲಿ ಕೂತ ಕಾರಂಬಿ ಯಾಸ್ಪಲ್ಲಿ
ದ್ರಿಷ್ಟಿ ಪಲ್ಲಾಟ ಹೊರನೋಟ |

ದ್ರಿಷ್ಟಿ ಪಲ್ಲಾಟ ಹೊರನೋಟ ಗುಂಡು ಬ್ರಮ್ಮಯ್ಯಾನ
ಕಟ್ಟಿರುವ ಬುರುಗುಗಳ ಸ್ವಾಮಿ ನೋಡುತಾರೆ |

'ಗುಂಡು ಬ್ರಮ್ಮಯ್ಯ ನಿನ್ನರೀಕತೆ ಹಾಳಾಗೋಗ್ಲಿ ಬಾ
ನೀನು ಏನ್ ಬಾಳ ಸರಣ್‌ಮಾತ್ಮ ಅಂತ ಇಲ್ಲಿಗೆ ಬಂದಿ
ನಿನ್ನ ಸರಣುತ್ಗೆ ನೋಡ್ದಂಗಾಯ್ತು
ನಿನ್ನರೀಕತೆ ನಿಲ್ಸಪ್ಪಾ'
ಹರೀಕತೆ ನಿಂತೋಯ್ತು ೬೧೦
'ಗುಂಡು ಬ್ರಮ್ಮಯ್ಯ ನಿನ್‌ಕಾಲುಗಾಕಿರದೇನಪ್ಪ?
ನಿನ್ನ ಕೈಲಿಡ್ದಿರದೇನು?'
'ಸ್ವಾಮಿ ನನ್ನ ಕೈಲಿಡ್ದಿರೋದು ಮಣ್ಣೆನಕಾಳೆ
ಕಾಲಲ್ಲಿರೋದು ಮಣ್ಣಿನ ಪೆಂಡೆ ಸ್ವಾಮಿ'
'ಇದ್ಯಾತುಕ್ಕೋಸ್ಕರ ಹಾಕಿದ್ದೀಯಪ್ಪ?'
'ಸ್ವಾಮಿ ಈ ಉತ್ತರ ದಿಕ್ಕಲ್ಲೊಂದೋರ್ಗಲ್ ಪಟ್ಣ
ಆ ಓರ್ಗಲ್ ಪಟ್ಣುದಲೊಬ್ಬ ಘನಪತಿ ಅನ್ತಕ್ಕಂತ ರಾಜ
ಚಿನ್ನದ ಕಾಳೆ ಮಾಡಿ ಕೈಲಿಡ್ಕೊಂಡು
ಚಿನ್ನುದ ಪೆಂಡೆ ಕಾಲ್ಗಾಕೊಂಡು
ಒಂದಿನುಕ್ಕೆ ಮೂರ್ದಪ ಕಾಳೆ ವರ್ತುಮಾನ
ಮಾಡುಸ್ತಿದಾನೆ ಸ್ವಾಮಿ' ೬೨೦
'ಗುಂಡು ಬ್ರಮ್ಮಯ್ಯ ಏನೂಂತ?'
'ನನ್ನಂತ ಶ್ರೀಮಂತ್ರೊರೆ ಈ ಜಗತ್ಯದಲ್ಲಿಲ್ಲ
ನನ್ನ ಪಟ್ಣುದಲ್ಲಿ ಕಳ್ತನ ಮಾಡವ ಈ ಲೋಕ್ದಲ್ಲೇ ಇಲ್ಲ
ಪರ್ಲೋಕದಲ್ಲೂ ಇಲ್ಲ
ಏಳು ಏಳು ಹದುನಾಕು ಲೋಕದಲ್ಲೂ ಇಲ್ಲ
ನನ್ನ ಕನ್ನೆಯ ಮೈಮುಟ್ಟಿ ಚಿನ್ನವನು ಕಳುದೋನ
ಅವ ಚಿತ್ರಗಂಡನವ ಮಾಡಿ ಕುಯುಸ್ತೀನಿ
ಹಿಂಗಂತ ಕಾಳೆ ವರ್ತುಮಾನುವಾಯ್ತುದೆ ಸ್ವಾಮಿ
ಜಿನುಕ್ ಮೂರ್ದಪ ಈ ಕಾಳೆಸಬ್ಬ
ಗುಂಡಾಪುರುಕಾಯ್ತುದೆ ಸ್ವಾಮಿ ೬೩೦
ನಾನು ತಾನೆ ಏನಾರಿ ಕೇಳ್ದಿ
ನನುಗೆ ಬಾಳ ಕ್ಯಾಪ್ಪಂದ್ಬುಡ್ತು ಸ್ವಾಮಿ
ಶಿವನು ಅವುನಿಗೆ ಕೊಟ್ಟಂತ ಐಸ್ವರಿಯ ಏನು ?
ನನಗೆ ಕೊಟ್ಟಂತ ಗರೀಬಿ ಸ್ಥಿತಿ ಏನು ಅಂದಿದ್ದೆ
ನಾನು ಮಣ್ಣಿನ ಪೆಂಡೆ ಕಾಲ್ಗಾಕೊಂಡು
ಮಣ್ಣಿನ ಕಾಳೆ ಕೈಲಿಡ್ಕೊಂಡು
ಅವುನ ಮ್ಯಾಲೆ ಪಂಥ ಮಾಡಿದ್ದೀನಿ ಸ್ವಾಮಿ -

ಕದ್ದೋನ್ನ ಕೊಡೋದಿಲ್ಲ ಮೊರೆ ಬಿದ್ದೋನ್ನ
ಬುಡೋದಿಲ್ಲ
ಅವುನೇರೊ ಶೂಲ್ಕೆ ನಾನೇರುತೀನಿ |

ಅವುನೇರೊ ಶೂಲ್ಕೆ ನಾನೇರುತೀನಿ ಅಂದುಬುಟ್ಟು ೬೪೦
ಆ ಧೀರನ ಮ್ಯಾಲೆ ಪಂಥ ಮಾಡಿವ್ನಿ |

ಅವುನ ಮ್ಯಾಲೆ ನಾನು ಪಂಥ ಮಾಡಿವ್ನಿ ಸ್ವಾಮಿ
ಯಾವು ಪುಣ್ಯಾತ್ಮನಾರೂವೆ ಕಳ್ತನ ಮಾಡಿ ನನ್ನ ಮೊರೆ ಬೀಳ್ಲಿ
ನನ್ನ ದುಡುಚಿತ್ತುವನ್ನು ಆಮ್ಯಾಲೆ ನೋಡ್ಲಿ'
'ಗುಂಡುಬ್ರಮ್ಮಯ್ಯ ಅವುನಾರೂ ದೊರೆ ಅನ್ನುಸ್ಕೋತಾನೆ
ನೀನ್ ನೋಡುದ್ರೆ ಗರೀಬ
ಅವುನೊಂದ್ಗೆ ಪಂಥ ಮಾಡಿದ್ದಿಯಲ್ಲಪ್ಪ!'
'ಸ್ವಾಮಿ ದೊರೆಯಾದ್ರೆ ಅವುನ್ ಮನೆಗೆ
ಪಟ್ಟ ಕಳ್ತನ ಮಾಡ್ತೀನಿ ಅಂತ ಯಾರಾರು ಬಂದು ಮಾಡಿ
ನನ್ನ ಮೊರೆ ಬೀಳ್ಲಿ ೬೫೦
ಆ ಮೊರೆ ಬಂದಂತ ಕಳ್ಳನ ನಾನು ಕೊಡೋನಲ್ಲ
ಅವುರೇರುವಂತ ಶೂಲ್ಕೆ ನಾನೇ ಏರ್ತೀನಿ'
'ಗುಂಡು ಬ್ರಮ್ಮಯ್ಯ ನೀನ್ಹೇಳೊ ಮಾತ್ನೋಡುದ್ರೆ
ಆ ಪಟ್ಟಣದ ಕಳ್ತನುಕ್ಕೆ ನಾನೇ ಹೋಗ್ಬೇಕಾಯ್ತು'
'ನೀವ್ಹೋದ್ರೆ ನಮುಗೆ ಮತ್ತೂ ಚಂದ ಬುದ್ಧಿ'
'ಹಂಗಾರೆ ನಾವೇ ಹೋಗ್ಬೇಕಾಪ್ಪ?'
'ಹೌದು ಬುದ್ಧಿ'
'ಅದೇ ಧೀರನ ಪಟ್ಟುಕೆ ಕನ್ನಕೊರ್ದು ಕಳ್ತಾನವನ್ನು ಮಾಡಿ
ನಿನ್ನ ಮೊರೆಯನ್ನು ಬೀಳ್ತೀವಿ
ಏಳು ಜಿನುಕ್ಕೆ ಸರಿಯಾಗಿ ಮಾತ್ರ ಇಲ್ಲುಗೆ
ಬತ್ತಿವಿ' ಅಂದ್ರು ೬೬೦

'ಆಡೀದ ಮಾತೀಗೆ ನಾ ಹೇಡಿಯಾಗೋನಲ್ಲ
ನಾ ಬಾಳುವಂತ ತಲೆ ನಿಮ್ಗೆ ಕೊಡುತೀನಿ |

ಬಾಳುವಂತ ತಲೆಯ ಕೊಡುತೀನಿ ನಿಮ್ಮ ಪಾದ
ಹೋಗ್ಬನ್ನಿ ಧೀರ್ನ ಅರಮನೆಗೆ |

'ಈವತ್ತುನ ಕರುಣ ನಾಳೆ ಒಸಿ ಇರುಲ್ಕಪ್ಪ
ಇಂದಿಗೇಳು ಜಿವುಸಕಿಲ್ಲೆ ಬರುತೀವಿ |

ಏಳು ಜಿವುಸಕ್ಕೆ ಬರುತೀವಿ ಗುಂಡು ಬ್ರಮ್ಮಯ್ಯ
ನೀ ಮರೆಯಬೇಡಪ್ಪ ಘನಸರಣ' |

'ಸ್ವಾಮಿ ಬಲಗ್ಯೆ ಮುಟ್ಟಿ ಭಾಷೆ ಕೊಡ್ತೀವ್ನಿ
ನಾ - ಮಾತೀಗೆ ತಪ್ಪೊ ಮಗನಲ್ಲ' |

'ನನುಗಾನಂದುವಾಯ್ತಪ್ಪ
ಈ ಸಲ ಹೋಗಿದ್ದು ಬರ್ತೀನಿ
ಸಂತೋಷುವಾಗಿ ನಿಮ್ಮರಿಕತೆ ನಡುಸ್ರಪ್ಪ'

ಸ್ವಾಮಿ - ಅಂಗಳುಕೆ ಬಂದ ಮ್ಯಾಲೆ ನೀವಂಗೆ
ಹೋಗಲು ಬ್ಯಾಡಿ
ಆದಂತ ಅನ್ನವ ಊಟವ ಮಾಡಿ |

ಆದಂತ ಅನ್ನ ಊಟ ಮಾಡಿ ನಿಮ್ಮ ಪಾದ
ಗುಂಬಾದಗ್ಗಣಿಗೆದ್ದು ಕೈಕೊಡಿ |

'ಗುಂಡುಬ್ರಮ್ಮಯ್ಯ ನಾವೂಟ
ಮಾಡಕಾಗೋದಿಲ್ಲ ಈಗ
ನ್ಹಾರಾಯ್ಣ ಬರ್ನಿಲ್ಲ ಅಂತ್ಹೇಳಿ
ದಾರು ದಾರೀಲಿ ಕಾದವ್ರೆ ಭಕ್ತರು
ನನ್ ಭಿನ್ನ ಅಲ್ಲೇ ತೀರುಸ್ಕೋತೀನಿ
ಬರಾದಿನಕೆ ಮಾತ್ರ ನಿನ್ಮನೇಲಿ ಭಿನ್ನ ಮಾಡ್ತೀನಿ
ಈವತ್ತು ಮಾತ್ರ ಖಂಡುತವಾಗ್ಲೂ ನಿನ್ಮನೆ
ಊಟ ಮಾಡದಿಲ್ಲಪ್ಪ' -

'ಹಂಗಾದ್ಮೇಲೆ ಸವಾರಿ ದಯಮಾಡಿರಿ ಸ್ವಾಮಿ'
ಗುಂಡು ಬ್ರಮ್ಮಯ್ನ ಮಠವ ಬುಡುತಾರೆ |

೮. ಓರುಗಲ್ಲು ಕೋಟೆ ಕನ್ನಕ್ಕೆ ನಾರಾಯ್ಣ ಗುರುತಿಟ್ಟ ಸಂದು

ಸುವ್ವಾ ಬಾ ನನ್ನ ಬಸವಯ್ಯ ಸುವ್ವಿ |

ಒಂದು ಯೋಜಿನ ಬಂದ ಏಡು ಯೋಜಿನ ಬಂದ
ಮೂರು ಯೋಜಿನವ ಬರುತಾರೆ |

ಮೂರು ಯೋಜಿನ ದಾರ್ಯಾ ಬಂದನಲ್ಲ ನಾರಾಯಣ
ಅವರು - ಅಗುಳೇರಿ ದಂಡ್ಯಕೆ ಬರುತಾರೆ |

ಅಗುಳು ಹಾಳೇರಿ ಉಂಟು ಮೊಗದಿಡ್ಡಿ
ಕೊತ್ತಳವುಂಟು
ಜಗಳವಾಡುವ ಬಂಟ್ರು ಮೊದಲುಂಟು |

ಏಳು ಸಮುದ್ರದ ಮಧ್ಯ ಏಳು ಸುತ್ತಿನ ಕ್ಯಾಟೆ
ಆಳುಗೊಲ್ಲರ ಪಾರ ಅಸದಳ |

ಹತ್ತು ಸುತ್ತೀಗು ಕೆತ್ತಿದಂಥ ಘನಶೂಲ
ಮೊತ್ತದ ಬಿದುರು ಹುಲಸೀಗೆ |

ಮೊತ್ತದ ಬಿದುರು ಹುಲಸೀಗೆ ಅವುನ್‌ಕ್ಕೋಟೆ
ಹತ್ತ್ಹೋರ್ಗೆ ಐದು ತಲೆ ಬೇಕು |

ಕಾಯೋ ಕಂಚಿನಕ್ಯಾಟೆ ಸೋಸೀದುಕ್ಕಿನ ಗುಂಡು
ಕಾಯೋ ಕರಣುಂಗೆ ಕ್ಯಾಟೆ ಅಳುವಲ್ಲ |

ಕಾಯೋ ಕರಣುಂಗೆ ಅಳವಲ್ಲ ಆ ಕ್ಯಾಟೆ
ಹೋಗಾದೆ ಸೇರಿ ಮುಗುಲಳಮೀಗೆ |

ಕರಣ ಹನ್ನೆರಡು ಸಾವ್ರ ದಂಡ್ ತಕ್ಕೊಂಡೋಗಿ
ಕ್ವೋಟೆ ಸುತ್ಲೂ ಕಾಯ್ಕೊಂಡ್ ನಿಂತಿದ್ದ
ಕಲ್ಲಿನ ಮ್ಯಾಗ್ಳು ಸಿವ್ರೂ ಎದ್ದಿಲ್ಲ
ಇದು ಐದು ಸಿರುಸಾ ಯಾರಿಗಿದಿಯೋ
ಅವ್ರುಗೆ ಮಾತ್ರ ಕ್ಯಾಟೆ ಶಕ್ಯವಾಯ್ತದೆ
ಇನ್ ಮಿಕ್ಕುನಾದೋರ್ಗೆ ಶಕ್ಯವಾಗೋದಿಲ್ಲ
ಹಾಗಂತ ಕರಣ ಅಲ್ಲಿ ಸಾಸಾನ ಬರುದವ್ನೆ
ಸಾಸಾನವನ್ನು ಓದಿ ನೋಡ್ಬುಟ್ಟು ನಾರಾಯ್ಣ
ಬಾಳ ಜೋಜುಗ ಮಾಡ್ಕೊಂಡ
ಏಡು ತೋಳು ಒಂದು ಸಿರುಸಾ ಇರೋವ್ರ್ಗೆ
ಈ ಕ್ಯಾಟೆ ಶಕ್ಯವಿಲ್ಲ.
ಐದು ಸಿರುಸ ಇರೋರ್ಗೆ ಈ ಕ್ವೋಟೆ ಶಕ್ಯ
ಇನ್ಯಾರೂ ಬರಾಕಾಗಕಿಲ್ಲ
ನಮ್ಮೀಶ್ವರುನೆ ಬಂದ್ರೆ ಈ ಕ್ಯಾಟೆ ಶಕ್ಯ
ಇನ್ಯಾರ್ ಕೈಲೂ ಆಗಕಿಲ್ಲ ಅನ್ಕೊಂಡ
ಯಾರು ? ನಾರಾಯಣ -

ಕ್ಯಾಟೆ ಕೊತ್ತಲ ಐದು ನೀಟಾದ ಅಳ್ವೇರಿ
ಸುತ್ತ ಹುಲುಕರಡಿ ಗಜಸಿಮ್ಮ|

ಸುತ್ತ ಹುಲುಕರಡಿ ಗಜಸಿಮ್ಮ ಇವುನ್ ಕ್ಯಾಟೆ
ಜೋರುಗುಟ್ಟೀದೊ ಬೆಳಗಾನ |

ಇಷ್ಟೆಲ್ಲ ಭೇದ್ನೆ ನೋಡ್ಕೊಂಡು ನಾರಾಯ್ಣ -

ಆಯ್ತೀನಿ ಅಂದ್ರೆ ಆಳ ದಾಟ್ತೀನಿ ಅಂದ್ರೆ ಅಗಲ
ಎಲ್ಲಾಣೆ ಹೋಗಬೇಕು ಕ್ವಾಟೆಗೆ |

ಎಲ್ಲಾಣೆ ಹೋಗಬೇಕು ಕ್ವಾಟೇಯ ಒಳುಗಡಿಕೆ
ಅಂತಲ್ಲಿ ಚಿಂತೆ ಮಾಡುತಾರೆ |

ತೆಂಕುಬೋರಿ ಪಕ್ಕುದಲ್ಲಿ ಕೀಲಲ್ಲೆ ಮಾಡ್ಸಿದ್ದಾರೆ
ಆ ಹಲ್ಲೆ ಈ ಬೊರಿಕೂ ಆ ಬೊರಿಕೂ ಇರೋದು
ಅದ್ರು ಮ್ಯಾಲೆ ಸಂದೆಗಂಟ ತಿರ್ಗೋರು
ದಂಡುದಾಳಿ ಮಂದಿ ಮಾರ್ಬಲ ಆನೆ ಕುದುರೆ
ಸಕಲ ರಾಣ್ಯವೆಲ್ಲ ಅಲ್ಲಿ ತಿರುಗ್ತಿತ್ತು ಹಗಲುಕಾಲ
ರಾತ್ರಿಕಾಲ ಕೀಲಲ್ಲೆ ಎತ್ಬುಟ್ರೆ
ಇನ್ನು ಒಳೀಕೆ ಯಾರೂ ಹೋಗೊ ಹಂಗಿಲ್ಲ
ತೆಂಕ್ಕೋರಿ ವಾರ್ದಲ್ಲಿ ಬಂದ್ ನಿಂತ್ಕೊಂಡು ನಾರಾಯ್ಣ
ತಿರುಗಾಡ್ತಾ ಇದ್ರಲ್ಲ ಜನುಗಳು
ಅವ್ರ ಹಿಂದ್ಗುಂಟೆ ಒಳೀಕೋಗ್ಬುಟ್ರು ಪೇತುಪಾಯದಲ್ಲಿ-

ಮಂತುರದ ಬುಡುಬುಡುಕ್ಕಾ ಕೈಯಲ್ಲಿ ತಕ್ಕಂಡ
ಈ ತಂತ್ರಾದ ಕಳ್ಳ ಜಗಕೆಲ್ಲ |

ಈ ತಂತ್ರಾದ ಕಳ್ಳ ಈ ಜಗಕೆಲ್ಲ ನಾರಾಯ್ಣನು
ಅಲ್ಲೊಂದು ಯಾಸಾವ ಕಟ್ಸುತಾರೆ |

ಸಣ್ಣ ನಾಮಾವ ನುಣ್ಣಾಗೆ ತೇಯ್ದು
ಪ್ರಣತೆಗೆ ಧರಿಸೀದ ನಾರಾಯಣ |

ಕಂಟಕೆ ಕರ್ದಿಚರ್ಮ ಸೊಂಟಕೆ ಹುಲೀಚರ್ಮ
ಗಂಟುಮೂಟೆ ಹೆಗಲೀಗೆ ಬಿಗಿದಾರು |

ಕಂಚೀನ ಬುಡುಬುಡುಕ್ಕಾ ಕೈಯಲ್ಲಿ ಹಿಡುಕೊಂಡು
ಕಾಲೀಗೆ ಗೆಜ್ಜೆ ಕೊಡುತಾರೆ |

ಕಂಚೀನ ಬುಡುಬುಡುಕೆ ನುಡಿಸಿದರು ಸ್ವಾಮಿಯೋರು
ಗೆಜ್ಜೆಯ ಸಬ್ದ ಘಲಿರಂದೊ |

ತಂತ್ರಾದ ಕಳ್ಳ ಈ ನಾರಾಯ್ಣ ಬರುವಾಗ
ತಡದು ನಿಲಿಸಿದರು ಪಾರದೋರು |

'ಏನಯ್ಯ ಯಾರು ನೀನು?'
'ನಾನು ಸಾಸ್ತ್ರೀಗ ಸ್ವಾಮಿ'
'ನಮ್ಮ ರಾಜ್ರಪ್ಪಣೆ ಇಲ್ದೆ ನೀನು ಒಳೀಕೋಗೋಹಂಗಿಲ್ಲ' -

'ಈ ರಾಜ್ಯಾವ ತಂದ ಸೋಜಿಗವ ಕೇಳಿರಣ್ಣ
ರಾಜರಾಜರಿಗೆ ರಾಜ್ಯ ನಮ್ಮಿಂದ |

ರಾಗಿದವಸಕೆ ಬಂದ ಮ್ವೋಡ ಸಾಸ್ತ್ರೀಕನಲ್ಲ
ಈ ರಾಜ್ಯಾವ ತಂದವರು ನಾವು |

ಕಾಸು ದುಡ್ಡು ಕೊಟ್ರೆ ಈಸ್ಕೊಳೊ ಜನುವಲ್ಲ
ಧರುಂಸಾಸ್ತ್ರ ಹೇಳುವ ಜನ ನಾವು |

'ಧರುಂಸಾಸ್ತ್ರ ಹೇಳ್ತೀವಿ ಯಾರ್ಬೇಕಾದ್ರೂ ಕೇಳ್ರಪ್ಪ'
'ಏನ್ ಸಾಸ್ತ್ರ ಹೇಳಿ ನೀನು?' -

'ಉಂಡ ಊಟವ ಉಂಡಂಗೆ ಹೇಳ್ತೀವಿ
ನೀವು - ಕಂಡ್ ಕನಸ ಕಂಡಂಗೆ ಹೇಳುತೀನಿ' |

ಆ ಇಬ್ಬರು ಗೊಲ್ಲಣ್ಣದೀರು ಮಾತಾಡ್ಕೊತಾರೆ ಈಗ
'ಅಲ್ಲಾ ಕಾಸಿಲ್ಲ ಕರೀಮಣಿಯಿಲ್ಲ ಅನ್ನೋಗ
ಒಂದ್ ಸಾಸ್ತ್ರ ಕೇಳುದ್ರೆ ನಮ್ಮಪ್ಪುನ್ ಗಂಟೇನೋದತು'
'ಹಂಗಾದ್ಮಾಕೆ ಒಂದು ಸಾಸ್ತ್ರ ಕೇಳ್ಬೇಕಪ್ಪ'
'ಅದುಕ್ಕೇನಂತೆ ಕೇಳನ ಕಣಣ್ಣ-

ನಮ್ಮನುಸನ ಕಳವಳವ ನೀ ಚಂದಾಗಿ ಹೇಳಿದರೆ
ನಮ್ಮೊಳಗೊಂದು ಕುರುತೀವಿ |

ನಮ್ಮೊಳಗೊಂದು ಕುರುತೀವಿ ಸಾಸ್ತ್ರಗಾರ
ಚಂದಾಗಿ ನೀನು ಹೇಳಬೇಕು' |

'ಆಯ್ತು ಕುರ್ತಿದ್ದೀರೇನಪ್ಪ'
'ಕುರ್ತಿದ್ದೀವಿ ಹೇಳಪ್ಪ' -

'ಈವತ್ತೊಂಬತ್ತಿಂಗ್ಳಲ್ಲಿ ನೀವ್ ಬಂದೀಖಾನೀಲಿದ್ರಿ
ಸಂಬು ಸರ್ವನ ನೆನುಕೊಂಡ್ರಿ |

ಸಂಬು ಸಂಕರನ ನೆನುಕೊಂಡ್ ಕಾರಣದಿಂದ
ನಿಮ್ಗೆ ಬಂಧಾನ ಹರ್ದು ಸಿರಿಬಂದೊ |

ಏನ್ರಪ್ಪ ಸುಳ್ಳೊ ನಿಜವೊ ಹೇಳಿ
ನೀವು ಒಂಬತ್ತಿಂಗ್ಳು ಸೆರೇಮನೇಲಿದ್ರಿ |

ಈವತ್ತು ಶಿವನಾರಾಯ್ಣನ ತೋತ್ರಾ ಮಾಡಿದ್ದೀರಿ
ಆ ದೊರ್ಗೆ ಈವತ್ತು ಬುಡುವಂತ ಮನಸ್ಸಂದು
ಇದೇ ದಿನ ನಿಮ್ಮ ಸೆರೆಯಿಂದ ಬುಡ್ಸಿ
ಕಡೇ ಬಾಕುಲ್ಗೆ ಪಾರ ನಿಲ್ಸಿರಾದು ಸರಿತಾನೆ?'
'ಅಪ್ಪಾ ನಾವು ಸೆರೇಮನೇಲಿದ್ದುದ್ದು ನಿಜುವೆ
ಶಿವನಾರಾಯಣನ ತೋತ್ರ ಮಾಡಿದ್ದು ನಿಜ
ಈ ಪಾರುಕ್ಕೆ ಬಂದಿರೋದು ನಿಜುವೆ -

ನಮ್ಮ ಮನಸುನ ಕಳವಳವ ಚಂದಾಗಿ ಹೇಳಿದಿರಿ
ನಿಮ್ಮಂತ ಸಾಸ್ತ್ರಿಕರು ನಮಗಿಲ್ಲ |

ನಿಮ್ಮಂತ ಸಾಸ್ತ್ರಿಕರು ನಮುಗಿಲ್ಲ ಕಣುರಣ್ಣ
ನೀವೇಳ್ದಂತ ಮಾತೆಲ್ಲ ನಮ್ಗೆ ನಿಜುವಾಯ್ತು |

ಮುಂದಲ ಪಾರ್ಮಾಕೆ ಕರ್ಕೊಂಡೋಯ್ತಿವಿ
ಅಲ್ಲಿ ನಮ್ಮಣ್ಣಂದಿರು ಪಾರಾ ಕಾಯ್ತಾವ್ರೆ ಬತ್ತೀರ್ಕಾ ಸ್ವಾಮಿ
ಅವುರ್ಗೂ ಒಸಿ ಸಾಸ್ತ್ರ ಹೇಳೀವ್ರಿ'
'ಆಯ್ತು ನಡೀರಪ್ಪ' ಅಂದ್ರು ನಾರಾಯ್ಣ -

ಮುಂದು ಮುಂದೆ ಪಾರದವ್ರು ಹಿಂದು ಹಿಂದೆ ನಾರಾಯ್ಣ
ಕಂಚೀನ-ಬುಡುಬುಡುಕಿ ಸಬ್ತ ಕಣಕಣೇ |

ಸಾಸ್ತ್ರಾಪ ಹೇಳ್ತಾನೆ ಸೂಸ್ತ್ರವ ಪಡಿತಾನೆ
ಅವ್ನ - ಅಲ್ಲೊಂದು ಕನ್ನಕ್ಕೆ ಗುರುತಿಟ್ಟ |

ಅಲ್ಲೆಂದು ಕನ್ನುಕ್ಕೆ ಗುರುತಿಟ್ಟು ನಾರಾಯ್ಣ
ಎಚ್ಚುರ್ಕೆ ವಯಿಸಿ ಬರುತವ್ನೆ |

'ಇದೇ ತಾವು ಕನ್ನ ಹೊಡೀಬೇಕು ನಾನೂ ನಂಬಾವ್ನೂ'
ಅಂತ್ಹೇಳ್ಬುಟ್ಟು ನಾರಾಯಣ ಜಾಗ ಗುರುತ್ಮಾಡ್ದ
ಮಧ್ಯ ಪಾರುತ್ತಾಕೋಗಿ ನಿಲ್ಲಿಸ್ಬುಟ್ಟು
'ಯಾಕ್ರಯ್ಯ ಯಾರೊ ಹೊಸುಬುನ್ನ ಇಲ್ಗೆ ಕರ್ತಂದ್ರಿ
ಇವುನ್ಯಾರ್ರಯ್ಯ?' ಅಂತ ಕೇಳುದ್ರು
'ಸ್ವಾಮಿ ಸಾಸ್ತ್ರೀಕ ಇವ್ನು
ಉಂಡನ್ನ ಉಂಡಂಗೆ ಕಂಡ ಕನ್ಸ ಕಂಡಂಗೆ ಹೇಳ್ತನೆ
ರಾಗಿ ಜ್ವಾಳ ಕಾಸು ಕರೀಮಣಿ ಏನ್ ಕೊಟ್ರು ಈಸ್ಕೊಳಕಿಲ್ಲ
ನೀವೇನಾರ ಕುರ್ತ್ಕೊಂಡ್ ಕೇಳೋದಿದ್ರೆ ಕೇಳ್ರಪ್ಪ'

'ಎಲಾ ಹಂಗಾದ್ಮಾಕೆ
ನಮ್ಮಲ್ಲೊಂದು ಕುರ್ತೀವಿ ಹೇಳಪ್ಪ' ಅಂದ
ಯಾರು ? ಒಂಟಿ ಪಾರುದವ -

'ಹಿರಿಯವ್ವ ತರಲಾಗಿ ಸಿರಿಲಕ್ಷ್ಮಿ ಬಂದಿದ್ದ
ಕಿರಿಯವ್ವ ತರಲಾಗಿ ತೊಲುಗೋದ |

ಕಿರಿಯವ್ವ ತರಲಾಗಿ ತೊಲಗೋದ ಚಿಂತೆ
ನಿನ್ನ ಮನದಲ್ಲಿ ಗೊಲ್ಲಣ್ಣ ನಿಜತಾನೆ ?|

ಸುಳ್ಳೊ ನಿಜುವೋ ಹೇಳಪ್ಪಾ ?'
'ನಿಜಾಕಣ್ ನನ್ನಪ್ಪ'
ಹ್ಯಾಗೆ ಅಂತಂದ್ರೆ ಬಡರೈತುರ ಮನೇಲಿ
ಒಂದೇ ಹೆಣ್ಣಂದ್ರೆ
ಯಾತುಕ್ಕೂ ಸಲುವಲ್ಲದ ಹೆಣ್ಣು
ಯಾವಾಗ ಅವ್ಳ ಲಗ್ನ ಮಾಡ್ಕೊಂಡು ಕರ್ಕೊಂಡ್ಬಂದ್ನೊ
ಎಲ್ಲೂ ಇಲ್ಲದಂತ ಭಾಗ್ಯ ಅವುನ್ಗೆ ಬಂದೋಯ್ತು
ಮನೇಲಿ ಭಾಗ್ಯಲಕ್ಷ್ಮಿ ಬಂದು ಕುಂತ್ಕೊಂಡ.
ಬೇಕಾದಂಗೆ ಒಡವ ವಸ್ತ ಆಸ್ತೀನೆಲ್ಲ ಕೊಂಡ
ಬಡುವುರು ಮನೆ ಹೆಣ್ ತಂದಿದ್ಕೆ ನನಗಿಷ್ಟಾಯ್ತಲ್ಲ
ಸಿರಿವಂತ್ರು ಮನೆ ತಂದಿದ್ರೆ ಇನ್ನೆಷ್ಟಾಗದು ?
ಈ ಹೆಣ್ಣೂ ನನ್ಗೂ ವರ ಚಂದಿಲ್ಲ ಅಂತ್ಹೇಳಿ
ಸಿರಿವಂತ್ರು ಮನೆ ಹೆಣ್ ನೋಡ್ದ
ಇವ್ನೂ ಧನಗಾರ ಅಂತ ಹೆಣ್ ಕೊಡೋರು ಕಡ್ಮೆ ಇರ್ಲಿಲ್ಲ

ಸಿರುವಂತ್ರು ಹುಡ್ಗಿ ಮದ್ವೆ ಮಾಡ್ಕೊಂಡ
ಯಾವಾಗ ಮದ್ವೆ ಮಾಡ್ಕೊಂಡು ಬಂದ್ನೊ
ಇವುನ್ಕೆಸ್ಪಿರಿಯೆಲ್ಲ ಕೆಳಾತ್ಮುಕನಾಗೋಯ್ತು
ಹಂಗಂಬುವಂತ ಚಿಂತೆ ಇವುನೊಳಗಿತ್ತು
ಈ ಸಾಸ್ತ್ರಾವ ಕಟ್ಟುನಿಟ್ಟಾಗಿ ಹೇಳ್ಬುಟ್ಟು ನಾರಾಯ್ಣ -

'ನಮ್ಮನ್ಸುನ ಕಳವಳವ ಚಂದಾಗಿ ಹೇಳಿಯಲ್ಲ
ನಿನ್ನಂತ ಸಾಸ್ತ್ರುಕನ ನಾವು ಕಂಡಿಲ್ಲ |

ಮಂತ್ರಿ ಹತ್ರುಕ್ ಕರ್ಕೊಂಡೋಯ್ತಿವಿ ನಡಾರಿ
ಸ್ವಾಮಿ' ಅಂದ
ಅಲ್ಲೂ ಸಾಸ್ತ್ರ ಹೇಳ್ದ ಸೂಸ್ತ್ರ ಪಿಡ್ಕೊಂಡ
ಅಲ್ಲೊಂದು ಜಾಗದಲ್ಲಿ ನಾಮುದ ಬೊಟ್ಟಸ್ಸಿ
ಕನ್ನುಕೊಂದ್ ಗುರುತ್ಮಾಡ್ಕೊಂಡ -

ಮುಂದೆ ಮುಂದೆ ಪಾರುದೋರು ಹಿಂದೆ ಹಿಂದೆ ನಾರಾಯ್ಣ
ಮಂತ್ರಿ ಹತ್ರ ಸಾಗಿ ಬರುತಾರೆ |

ಮಂತ್ರಿ ಹತ್ರುಕೆ ಸಾಗಿ ಬಂದನಂತೆ ನಾರಾಯ್ಣ
ಮಂತ್ರಿ ಪರಧಾನಿ ಕೂಗಿದರಂತೆ |

ಪಾರುದವರು ಮಂತ್ರಿ ಹತ್ತುರಕೆ ಬಂದು
'ಸ್ವಾಮಿ ದಯಮಾಡಿ ಬುದ್ಧಿ' ಅಂದ್ರು
'ಏನ್ರಯ್ಯ ಪಾರುದವರ ಯಾಕೆ ಬಂದ್ರಿ?'
'ಸ್ವಾಮಿಯವ್ರೆ ಒಬ್ಬ ಸಾಸ್ತ್ರೀಕ
ನಮ್ಮ ಪಟ್ಟುಣಕೆ ಬಂದಿದ್ದ
ಚನ್ನಾಗಿ ತಿಳೀದು ಸಾಸ್ತ್ರ ಹೇಳ್ತನೆ ಬುದ್ಧಿ
ಕಾಸು ಕರೀಮಣಿ ಏನೂ ಕೊಡೊ ಹಂಗಿಲ್ಲ
ಧರುಮಾಸ್ತ್ರ ಹೇಳ್ತಾನೆ ಬುದ್ಧಿ
ಅದ್ಕೆ ನಿಮ್ಮತ್ರ ಕರ್ಕೊಂಡ್ ಬಂದಿವಿ'
ನಾರಾಯ್ಣ ಅನ್ನೋದು ಗೊತ್ತಿಲ್ಲ
ನಾರಾಯ್ಣನ ಮೊಕುವನ್ನು ನೋಡ್ಚುಟ್ಟು ಮಂತ್ರಿ ಏನ್ಹೇಳ್ತಾನೆ-

'ಪರದೇಸಿಯಂದದೊಳಗೆ ಈ ಪಟ್ಟಣಕೆ ನುಗ್ಗವುನೆ
ನಾಳೆ ದಿವ್ಸ ನಮ್ಮ ದೊರೆಗೆ ಕಂಟಕವ ತರುತಾನೆ |

ದೊರೆಗೆ ಕಂಟುಕ್ವ ಇವ ತತ್ತನೆ ಪಾರುದವ್ರೆ
ಇವುನ್ಯಾತುಕ್ರಪ್ಪ ಇಲ್ಲಿ ಕರತಂದ್ರಿ |

ಸಾಸ್ತ್ರ ಹೇಳ್ತಕ್ಕಂತವನಲ್ಲ ಇವ
ಪರದೇಸಿ ಅಂತೆ ಬಂದವ್ನೆ
ನಾಳೆ ನಮ್ಮ ಪಟ್ಟುಣಕೆ ಮಿತ್ತು ತರೋನೆ ಇವ
ತಳ್ಳಿ ಆಚ್ಗೆ' ಅಂದ ಮಂತ್ರಿ
'ನನ್ನ ತರಾಣದ ಪ್ರಮಾಣ ಹಿಡ್ಕೊಂಡ್ನಲ್ಲ ಮಂತ್ರಿ
ಇಂತೇವ್ರೆ ನಿಜುವಾದ ಮಂತ್ರಿಗಳು
ಬುದ್ಧುವಂತ ಮಂತ್ರಿ
ನನ್ದೊನ್ದದೆ ಸಾಸ್ತ್ರ ಅಂತ ಹೇಳಿದ್ರೆ ಕೆಲ್ಸ ಇತ್ತು
ಈಗ ನನ್ನನ್ನೇ ಆಚೆಗೆ ತಳ್ಳು ಅನ್ತಾನಲ್ಲ
ನನ್ನಾಯ್ಸುದ ಪ್ರಮಾಣ ಹಿಡ್ಕೊಡು' ಅಂತ
ನಾರಾಯ್ಣಂಗೆ ಯೋಚ್ನೆ ಬಂತು.
ಕರ್ಕೊಂಡೋಗಿದ್ದಾತ ಉಬ್ಬುಸ್ಪುಟ್ಟು
'ಸ್ವಾಮಿ ಚನ್ನಾಗೇಳ್ತಾನೆ ಸಾಸ್ತ್ರ ಕೇಳಿ ಸ್ವಾಮಿ' ಅಂದ
'ಹ್ಞೂಂ ಆಯ್ತು. ಏನಯ್ಯ ಸಾಸ್ತ್ರೀಕ
ನಾನೊಂದ್ ಕುರ್ತಿದ್ದೀನಿ ಹೇಳು' ಅಂದ.

'ಸಿಕ್ತು ಕನೊ ನಿನ್ ಜುಟ್ಟು ಈಗ' ಅಂದ ನಾರಾಯ್ಣ -

ಮಂತ್ರದ ಬುಡುಬುಡಿಕೆ ಕೈಯಲ್ಲಿ ತಕ್ಕೊಂಡ
ಈ ತಂತ್ರಾದ ಕಳ್ಳ ಜಗಕ್ಕೆಲ್ಲ |

'ಎಲ್ಲಾ ಕುರ್ತಿದ್ದೀರಾ ಸ್ವಾಮಿ?' ಅಂದ
'ಕುರ್ತಿದ್ದೀನಿ ಹೇಳಪ್ಪ' -

'ಹನ್ನೆರಡು ವರ್ಷಾದಿಂದ ಮೊನ್ನರಾಯನ ಮಡದಿ
ಕನ್ನೆ ರಾಮಾಯ ನೀ ಬಯಸೀದೆ |

ನೆನ್ನೆ ರಾತ್ರಿ ಒಳುಗೆ ಮೊನ್ನರಾಯನ ಮಡದಿ
ನಿನ್ನ ಮಂಚಕೆ ಬಂದಿದ್ದಳಯ್ಯ |

ನಿನ್ನ ಮಂಚಕೆ ಬಂದಿದ್ದಳು ಕನಸ್ನಲ್ಲಿ
ಹಂಗಂಬುವ ಚಿಂತೆ ನಿನಗುಂಟು |

ಹಂಗಂಬುವ ಚಿಂತೆ ನಿನ್ನೊಳಗುಂಟು ಕಾಣಯ್ಯ
ಈ ಮಾತು ಸುಳ್ಳೋ ನಿಜವೊ ಹೇಳಯ್ಯ |

ಅಪ್ಪಾ ಮಂತ್ರಿ ನಿನ್ನ ಕನುಸ್ನಲ್ಲಿ
ರಾಜುನ ಮಡ್ದಿ ನಿನ್ನ ಮಂಚುಕ್ಕೆ ಬಂದು
ಜೊತೇಲಿ ಈಳ್ಯ ಮಾಡಿ
ಇನ್ನು ನಾನು ಹೋಗಿದ್‌ಬತ್ತಿನಿ ಅಂತ ಹೇಳುದ್ದು
ಹೋಗಿರ್ತಕ್ಕಂತ ಸೊಪನ ಹಂಗಂಬುವಂತ ಚಿಂತೆ
ನಿನ್ನ ಮನದಲ್ಲಿ
ಇದು ಸುಳ್ಳು ಅಂದ್ರೆ ಸುಳ್ಳು ಅನ್ನು
ನಿಜಾ ಅಂದ್ರೆ ನಿಜಾ ಅನ್ನು'
'ಅಯ್ಯೋ ಕೆಟ್ಟೀ ಕಣ್ ನನ್ನಪ್ಪ
ನೀನೇಳೋದೆಲ್ಲ ನಿಜ ನಿನ್ ಪಾದ್ವೇ ಗತಿ
ದೊರೆಗೇನಾರ ಈ ಸುದ್ದಿ ಗೊತ್ತಾಗ್ಬುಟ್ರೆ
ಅವ್ನು ನನ್ನ ಸಿಗೀಸಿ ರಾಡ್‌ಬಾಗುಲ್ಗೆ ನನ್ನ ಕಟ್ಟುಸ್ಬುಡ್ತನೆ
ಏನ್ಮಾಡ್ಲಪ್ಪ ಇದ್ದುದ ಇದ್ದಂಗೆ ಹೇಳ್ಬುಟ್ನಲ್ಲ
ಅಯ್ಯಾ ಸಾಸ್ತ್ರೀಕ ನಿನ್ನ ಪಾದ
ಈ ಸುದ್ದಿ ಮಾತ್ರ ಈ ಪಟ್ಟುದಲ್ಲೆಲ್ಲೂ
ಬಾಯ್ಬುಡುಬ್ಯಾಡ ಕನಪ್ಪ
ನಿನುಗ್ ಏನ್ ಕೊಡಬೇಕಾದ್ರೂ ಬೋಮಾನ ನಾನ್ ಕೊಡ್ತೀನಿ
ಆ ದೊರೆ ಪತ್ರುಕ್ ಕರ್ಕೊಂಡೋಯ್ತಿನಿ ಬತ್ತಿಯಪ್ಪ
ಸಾಸ್ತ್ರೀಕ್ ಅಂದ
ಇವ 'ನಡಿಯಪ್ಪ ಬತ್ತಿನಿ' ಅಂದ -

ಸಾಸ್ತ್ರಾವ ಹೇಳ್ತಾನೆ ಸೂಸ್ತ್ರಾವ ಪಿಡಿತಾನೆ
ಅಲ್ಲೊಂದು ಕನ್ನಕ್ಕೆ ಗುರುತಿಟ್ಟ |

ಅಲ್ಲೊಂದು ಕನ್ನಕ್ಕೆ ಗುರುತಿಟ್ಟ ನಾರಯ್ಯ
ದೊರೆಯ - ಸಂಧಾನ್ಕೆ ಬಂದು ನಿಂತುಕೊಂಡ |

ರಾಜ ರಾಜಾ ಅಂತ ಕೂಗಿದರಂತೆ ಮಂತ್ರಿ ೯೧೦
ಮಂತ್ರಿ ಸಬ್ತ ಕೇಳಿ ದೊರೆ ಬರುತಾನೆ |

'ಮಂತ್ರಿ ಏನ್ ಬಂದೆ?'
'ಸ್ವಾಮಿ ನಮ್ ಪಟ್ಣುಕೆ ಒಬ್ಬ ಸಾಸ್ತ್ರೀಕ ಬಂದವ್ನೆ
ಸಾಸ್ತ್ರದಲ್ಲಿ ಬಾಳ ನಿಪುಣ
ನಮ್ಮ ಪುರೋಯಿತ್ರುಗಳ್ಗೆ
ಸಾವುರ್‌ಸಾವ್ರ ಸಂಬ್ಳ ಕೊಟ್ ಮಡ್ಗಿವಲ್ಲ
ಅವುನ್ಗಿಂತ ಚನ್ನಾಗೇಳ್ತಾನೆ ಇವ್ನು'
'ಹಂಗಾದ್ಮ್ಯಾಕೆ ಮಂತ್ರಿ
ನನುಗೊಂದ್ ಸಾಸ್ತ್ರ ಹೇಳ್ಸುಮತ್ತೆ'
'ಆಯ್ತು ಕೇಳಿ ಬುದ್ಧಿ' ೯೨೦
'ಏನಯ್ಯ ಸಾಸ್ತ್ರೀಕ ಹೇಳ್ತೀಯ ಸಾಸ್ತ್ರಾವ ?'
'ಏನೋ ಕಂಡ್ಮಟ್ಗೆ ಹೇಳ್ತೀನಿ ಸ್ವಾಮಿ?'
'ಏನ್ ತಕ್ಕತ್ತಿಯಯ್ಯಾ?'
'ರಾಗಿ ಜ್ವಾಳ ದುಡ್ಡುಕಾಸು ಏನ್ ಕೊಟ್ರೂ ತಕಳಕಿಲ್ಲ ಸ್ವಾಮಿ
ಧರುಂ ಸಾಸ್ತ್ರ ಹೇಳ್ತೀನಿ'
'ಹಂಗಾರೆ ನಾನೊಂದು ಕುರ್ತಿದ್ದೀನಿ ಹೇಳು ಮತ್ತೆ
ನಿನ್ ಬುದ್ವಂತ್ಕ ನೋಡ್ತೀನಿ' -

ಮಂತ್ರದ ಬುಡಬುಡುಕ್ಕ ಕೈಯಲ್ಲಿ ತಕ್ಕಂಡ
ಈ ತಂತ್ರಾದ ಕಳ್ಳ ಜಗಕೆಲ್ಲ | ೯೩೦

ತಂತ್ರಾದ ಕಳ್ಳ ಈ ಜಗಕೆಲ್ಲ ನಾರಾಯ್ಣ
ಸಾಸ್ತ್ರರಕೆ ಹೋಗಿ ನಿಲ್ತುತಾನೆ |

'ನೆನ್ನೆ ರಾತ್ರೆ ಒಳುಗೆ ನಿಮುಗು ನಿಮ ಮಡದೀಗು
ಕಾಳುಗ ಹತ್ತಿ ಕದುನಗಳು |

ಕಾಳುಗ ಮಾಡ್ಕೊಂಡು ಕದುನುಗಳ ಆಡ್ಕೊಂಡು
ನೀವು - ಬ್ಯಾರೆ ಬ್ಯಾರೆ ಮಂಚುದಲಿ ಮನುಗಿದಿರಿ |

ಅನ್ನವನು ಉಣ್ಣನಿಲ್ಲ ನೀರಾನೆ ಕುಡೀನಿಲ್ಲ
ಒಂದೀಗೆ ಇಳ್ಕೇವ ಮೆಲುನಿಲ್ಲ |

ಒಂದೀಗೆ ಇಳ್ಕೇವ ಮೆಲುನಿಲ್ಲ ಮಾರಾಜ
ನನ್ನ - ಸಾಸ್ತ್ರಾವು ಸುಳ್ಳೋ ನಿಜುವಯ್ಯ |

'ಮಂತ್ರಿ ಇವುನ ಸಾಸ್ತ್ರ ನಿಜ ೯೪೦
ನನ್ಗೆ ಲಗ್ಗುನವಾದ್ ಕಾಲ್ದಿಂದ ಜಗಳವನ್ನೇ ಆಡಿರ್ನಿಲ್ಲ
ಈಗ ಜಗುಳವಾಡುದ್ನಲ್ಲ ಕಾರಣವೇನು ಸಾಸ್ತ್ರೀಕ
ಈಗ ಯಾಕೆ ಮುನುಸಿಟ್ಕೊಂಡ್ಯು ಇದ್ಯಾತ್ರಿಂದ್ನ?' ಅಂದ
ಹಂಗಂದೇಟ್ಗೆ ಒಳುಬಾಗ್ಲಲ್ಲಿ ಬೆಳೀಪಲ್ಲಿ ಶಕುನವಾಯ್ತು
'ಸಾಸ್ತ್ರೀಕ ಎಲ್ಲಾ ಸಾಸ್ತ್ರಾನು ಚನ್ನಾಗಿ ಬಲ್ಲೆ ನೀನು
ಆ ಗೌಳಿ ಸಕುನ ಏನ್ಹೇಳ್ತು ಅಂತ ಹೇಳು ನೋಡನ' -

'ನಿಮ್ಮಡದಿ ಇಕ್ಕಿರುವ ಒಡವೆ ಆಭರಣವೆಲ್ಲ
ಸುರಲೋಕದ ಕಳ್ಳರಿಗೆ ಸೂರೇಯು |

ಸುರಲೋಕದ ಕಳ್ಳರಿಗೆ ಸೂರೆ ಹೋಗುವುದು
ಅಂತ್ಹೇಳುತಾದೆ ಪಲ್ಲಿ ಭೂಪಾಲ' | ೯೫೦

'ಮಡದೀಯ ಮೈಮುಟ್ಟಿ ಒಡುವೇಯ ಕಳುದೋನ
ಹಿಡುಗಂಡ ಮಾಡಿ ಕುಯುಸ್ತೀನಿ |

ಕನ್ನೆಯ ಮೈಮುಟ್ಟಿ ಚಿನ್ನಾವ ಕಳುದೋನ್ಗೆ
ಚಿತ್ರಗಂಡಾವ ಮಾಡಿ ಕುಯಸ್ತೀನಿ' |

'ಸ್ವಾಮಿ ನಿಮ್ಮ ಪಟ್ಣ ಏಳುದಿನದ ಇಷ್ಟೊತ್ಗೆ
ಸುರುಲೋಕುದ ಕಳ್ಳುರ್ಗೆ ಸೂರೆಹೋಯ್ತದೆ ಅಂತದೆ ಬುದ್ಧಿ
ಆ ಪಲ್ಲಿ -

ಗಲುಗಾಯ್ತದೆ ಪುರದಲ್ಲಿ ಚಲ ಹುಟ್ತದೆ ನಿನಮನದಲ್ಲಿ
ಸುರುಲೋಕಾದ ಕಳ್ಳುರ್ಗೆ ಸೂರೆ ಹೋಯ್ತದೆ |

ಸುರುಲೋಕದ ಕಳ್ಳುರ್ಗೆ ಸೂರೆ ಹೋಯ್ತಾದಂತ್ಹೇಳಿ
ಪಲ್ಲಿ ಸಕುನಾವು ಕೇಳು ದೊರೆರಾಜ | ೯೬೦

ಮೂಡುದಿಕ್ಕಿನಿಂದ ಮುನುಗಳು ಬಂದಾರಂತೆ
ನಾಡನಾಡೋನ ಅಧಿಕಾವೆ |

ನಾಡನಾಡೋನ ಅಧಿಕಾವ ನೋಡದ್ಕೆ
ಹೂಡಿರುವಂತ ಬೀಗ ಅಸಮಾನ |

ಈ ರೀತಿಯಾಗುತೆ ಸ್ವಾಮಿ' ಅಂದ
ದೊರೆ ಬಂಧ್ಸ ಸಾಸ್ತ್ರ ಹೇಳುವಂತೆಲ್ಲ

ಘನಪತಿರಾಜನ ಹೆಡ್ತಿ ರಾಮಾಯಿ ಕೇಳ್ಕೊಂಡ
ಇನ್ಯಾರೂ ಬಂದಿಲ್ಲ ಸುರುಪತಿಗಳೇ ಬಂದಿರೋರು
ನಿಮ್ಮೋರೆ ಆಂಕಾರುಕ್ಕೆ ಏನ್ ಮಾಡೀರೊ ಕಾಣಿ
ಈಗ ನನ್ನ ಕ್ಷಾಪುವನ್ನು ಬುಟ್ಟು
ಆ ಪರುಮಾತ್ಮನ ಪಾದ ಹಿಡೀಬೇಕೆಂಬುದಾಗಿ -

ಎದ್ದುರಾಯನ ಮಡದಿ ಬಿದ್ದು ಪಾದದ ಮ್ಯಾಲೆ
ನನ್ಗೆ ಬುದ್ಧಿಕಲಿಸೋಗಿ ಶಿವುರಾಯ |

ನನ್ನಿಂದಲೆ ತಪ್ಪೊ ನನ್ ದೊರೆಯಿಂದಲೆ ತಪ್ಪೊ
ತೆಪ್ಪು ಅನ್ನಾಯ್ತ ಕ್ಷಮಿಸಯ್ಯ |

ತೆಪ್ಪು ಅನ್ನಾಯ್ತ ಕ್ಷಮಿಸಯ್ಯ ಅನುತ್ಹೇಳಿ
ನಾರಾಯಣನ ಪಾದ್ವ ಹಿಡಿದಾಳು |

'ನಿನ್ನ ವಾಲೆ ಭಾಗ್ಯ ಸಿರುಂದಿಯಾಗಿರಲಿ ಹೋಗವ್ವ
ದೊರೆಗೂ ನನ್ಗೂ ಇನ್ನೂ ಮಾತದೆ ಅಮ್ಮ,' ಅಂದ್ರು
ಪಟ್ಟದ ರಾಮಾಯಿ ಎದ್ದು ತನ್ನಾಸ್ಥಾನುಕ್ಕೊಂಟೋದ
ಆಗ ರಾಜ ಹೇಳ್ತನೆ :
'ಮಂತ್ರಿ ಈಯಾತನ ತಕ್ಕೊಂಡೋಗಿ
ನಮ್ಮ ಸೆರುಮನೇಲಿ ಏಡು ದಿನಗಂಟ ಮಡ್ಲು'
'ಅಯ್ಯಾ ಸಾಸ್ತ್ರೀಕ ನಡಿಯಪ್ಪ'
'ಎಲ್ಲುಗ್ರಯ್ಯ ಕರ್ಕೊಂಡೋಯ್ತಿರಿ ?'
'ಸೆರೆಮನೆಗೆ ಕಣಂತೆ ನಡಿಯಪ್ಪ'
ಸರಿ ಕತ್ತುನ ಮ್ಯಾಲೆ ಕೈಹಾಕೊಂಡು ತಳ್ಕೊಂಡ್ಬಂದ್ರು
ಕಳ್ತಾನ ಆದ್ರೆ ಸರಿ ಇಲ್ದೇ ಹೋದ್ರೆ ಇವುನ್ನ ಬುಡುಕಾಗಕಿಲ್ಲ
ಸೆರ್ಮನೆ ಒಳೀಕೆ ತಳ್ಬುಟ್ಟು ರಾಡ್‌ಬಾಗ್ಲು ಹಾಕ್ಬುಟ್ರು
ಆವಾಗೋಗಿ ಸೆರ್ಮನೆವೊಳುಗೆ ಕೂತ್ಕೊಂಡು
ನಾರಾಯ್ಣ -

ಕಲ್ಲೀನ ಕಿಂಡೀಲಿ ಕದುವೀನ ಮರೆಯಲ್ಲಿ
ಅಲ್ಲೊಂದು ಕನ್ನಕೆ ಗುರುತಿಟ್ಟು |

ಅಲ್ಲೊಂದು ಕನ್ನಕೆ ಗುರುತಿಟ್ಟು ನಾರಾಯ್ಣ
ಅವನ ಹಾಳ್ಬೇರಿ ಮ್ಯಾಲೆ ನಿಲುತಾನೆ |

ಹಾಳ್ಬೇರಿ ಮ್ಯಾಲೆ ನಿಂತುಗೊಂಡು ನಾರಾಯ್ಣ
ಅವ್ನ ಅರಮನೆಯನೆಲ್ಲ ನೋಡುತಾನೆ |

ಆಳ್ಬೇರಿಗೂವೆ ಅವುನರಮನೆಗೂವೆ
ನೂಲು ಸೂಸ್ತ್ರ ಹಾಕುದ್ನಂತೆ ನಾರಾಯಣ |

ದಪ್ಪುದೊಂದ್ ಗುಂಡ್ಮಡುಗಂದ್ನಂತೆ
ಇದೇ ಜಾಗ್ದಲ್ಲಿ ಬೀಳ್ಬೇಕ ಕನ್ನ ಅನ್ಬುಟ್ಟು
ಅಲ್ಲಿ ಗುರುತ್ಮಾಡಿ ಅಗುಳ್ಬುಟ್ಟು ಕೇಳೀಕೆ ಬಂದ್ರು -

ಒಂದು ಯೋಜಿಣ ಬಂದ ಏಡು ಯೋಜಿಣ ಬಂದ
ಮೂರು ಯೋಜಿಣ ಸಾಗಿ ಬರುತಾರೆ |

ಓರ್ಗಲ್ ಪಟ್ಟುದಿಂದ ಬಂದನಂತೆ ನಾರಾಯ್ಣ
ನಮ್ಮ ಈಸ್ವರನ ದಂಡ್ಯಕೆ ಬರುತಾನೆ |

ಓರುಗಲ್ಲು ಪಟ್ಟುಣಕೆ ಹೋಗಿದ್ಯಾ ನಾರಾಯ್ಣ
ಅಲ್ಲಿ ಭೇದ್ನೆನೆಲ್ಲ ತಿಳುತಂದ್ಯಾ |

'ತಿಳ್ಕೊಂಡ್ ಬಂದಿವ್ನಿ ಬುದ್ಧಿ' ಅಂದ
ಆವಾಗ ಸ್ವಾಮಿಯವ್ರು ಚಿನ್ನುದ ಕುರ್ಚಿಮ್ಯಾಲೆ ಕೂತ್ಕೊಂಡು
ನಾರಾಯ್ಣ ಬೆಳ್ಳಿ ಪೀಠುದ್ಮೇಲೆ ಕೂತ್ಕೊಂಡ್ರು
'ಓರ್ಗಲ್ಲೋಗಿದ್ದಲ್ಲ ನಾರಾಯ್ಣ
ಏನಪ್ಪ ಮಾಡ್ದೇಕು ಏನಪ್ಪ ಸಮಾಚಾರ'
'ಸ್ವಾಮಿ ಘನಪತ್ರಾಜ ಅಂದ್ರೆ ಭಾರಿ ಬಲ್ಗ ಸ್ವಾಮಿ
ಅವುನ ಪಟ್ಣ ಕಳ್ತಾನ ಮಾಡ್ಬೇಕಾದ್ರೆ
ಯಾರಿಂದ್ಲೂ ಸಾಧ್ಯುವಿಲ್ಲ ಬುದ್ಧಿ
ಐದು ಸಿರುಸು ಹತ್ತು ತೋಳಿರೋರ್ಗೆ ಕ್ವೋಟಿ
ಶಕ್ತ್ಯವಾಯ್ತದೆ ಬುದ್ಧಿ
ಇನ್ನು ಯಾರ್ಗೂ ಶಕ್ತ್ಯವಿಲ್ಲ
ಆ ಬೆಟ್ಟೂ ಈ ಬೆಟ್ಟು ಗಂಟಾಕವ್ನೆ -

ಮುನ್ನಯ್ನ ಕ್ವೋಟೆಗೆ ಬಿನ್ನವಿಲ್ಲದ ಕಲ್ಲು
ಇನ್ನಾವ ಬುದ್ಧಿ ಅದಕೆಂದು |

ಇನ್ನಾವ ಬುದ್ಧಿ ಅದಕೆಂದು ಈಸ್ವರ
ಬೆಟ್ಟುದ್ದ ಕನ್ಗತ್ರಿ ಮಾತ್ರ ಮಾಡುಸ್ಬೇಕು |

ಕನ್ನಗತ್ರಿಯಾದ್ರೆ ಆ ಕ್ವೋಟೆ ಶಕ್ತ್ಯವಾಯ್ತದೆ
ಅದಿಲ್ದೇ ಹೋದ್ರೆ ಸುಮ್ನೆ ಬರ್ಬೇಕಾಯ್ತದೆ ನೋಡ್ಬುಟ್ಟು -

ನಾರಾಯಣನ ಮಾತ ಕೇಳೀದ ಜಗದೀಶ
ಜೋಜೀಗ ಮಾಡ್ತಾರೆ ತಮ್ಮ ಮನದಲ್ಲಿ |

೯. ಕನ್ನಗತ್ರಿ ಮಾಡಿಸಿದ ಸಂದು

ಸುವ್ವಾ ಬಾ ನನ್ನ ಬಸುವಯ್ಯ ಸಪ್ಪಿ । ಸೊಲ್ಲು ।

'ನಾರಾಯ್ಣ ಕನ್ನಗತ್ರಿ ಮಾಡ್ಸೇಕಾದ್ರೆ ಯಾರಿಂದ್ಲೂ
ಸಾಧ್ಯವಿಲ್ಲುವಪ್ಪ
ಆ ಬ್ರಮ್ಮಲೋಕುಕ್ಕೋಗಿ
ಸ್ವಾಮಿಯವರು ಹೇಳುದ್ರು ಅಂತ್ಹೇಳಿ
ಒಂದ್ ಕನ್ಗತ್ರಿ ಮಾಡುಸ್ಕೊಂಡ್ ಬಾಪ್ಪ
ಅಂದ್ರೆ - ನಮ್ಮೈಸ್ಗೇಳು
ಹೇಳುದ ತಕ್ಸ್ಣ ಮಾಡ್ಕೊಡ್ತಾರೆ' -

ಈಸ್ವರನ ಮಾತ ಕೇಳುಕೊಂಡು ನಾರಾಯ್ಣ
ಬ್ರಮ್ಮಲೋಕಕೆ ಸಾಗಿ ಬರುತಾನೆ ।

ಬ್ರಮ್ಮಲೋಕಕೆ ಬಂದನಂತೆ ನಾರಾಯ್ಣ
ಇಸುಬ್ರಮ್ಮ ಮನೆಗೆ ಬರುತಾನೆ ।

ಕೋಳಿ ಕೂಗುನಿಲ್ಲ ಮೂಡು ಕೆಂಪತ್ತುನಿಲ್ಲ
ಅಷ್ಟೊತ್ತುನ - ಜಾಮದಲ್ಲೆ ಬಂದು ನಿಂತವುನೆ ।

'ಯಾರಯ್ಯ ಸರಣ ಇಸುಬ್ರಮ್ಮಚಾರಿ ನೀನು
ಇನ್ನು ನಿದ್ರೆ ತಿಳೀನಿಲ್ಲವಪ್ಪ ।

ಬಾಳ ಹೊತ್ತುನಿಂದ ನಿನ್ನ ಕಾದು ನಿಂತಿವ್ನಿ ಇಸುಬ್ರಮ್ಮ
ಇನ್ನೂ ನಿನ್ನಿದ್ರೆ ತಿಳೀನಿಲ್ಲುವಪ್ಪ ।

ಬಾಳ ಹೊತ್ತುನಿಂದ ನಿನ್ನ ಕಾದು ನಿಂತಿವ್ನಿ ಇಸುಬ್ರಮ್ಮ
ಪುರಂದಾಸನಾಗಿ ನಾನು ಬಂದಿವ್ನಿ ।

ಪುರಂದಾಸನಾಗಿ ನಾನು ಬಂದು ನಿನ್ನ ಬಾಕ್ಲಲ್ಲಿವ್ನಿ
ಎದ್ದು ಬಾರಪ್ಪ ನೀನು ಘನಸರಣ' ।

ಮಡದೀರ ಸಂಪತ್ನಲ್ಲಿ ಮನುಗವ್ನೆ ಇಸುಬ್ರಹ್ಮಚಾರಿ
ನಾರಾಯ್ಣ - ಕರುದ್ರೂವೆ ಅವುನ್ಗೆ ಅರುವಿಲ್ಲ ।

'ನಾನು ಎಷ್ಟಾಗೆ ಕರುದ್ರೂ ಕೂಡ
ಸೊಲ್ಲುವೆ ಎಚ್ಚುರವಿಲ್ದೆ ಮನುಗಿದ್ದಿಯೆ ಇಸುಬ್ರಮ್ಮ
ಎಷ್ಟೊತ್ಗೆದ್ದು ಈಚೆಗೆ ಬತ್ತಿದ್ದಿಯೊ
ಅಷ್ಟೊತ್ಗೆ ಬಾರಪ್ಪ' ಅಂದ್ಬುಟ್ಟು -

ಕೋಳಿ ಕೂಗಿತು ಗುರುವೆ ಮೂಡಾಲು ಕೆಂಪತ್ತಿ ಬಂತು
ಬೆಳ್ಳ ಮೂಡಿ ಬೆಳಕರಿಯೀತು ।

ಬೆಳ್ಳಿ ಮೂಡಿ ಗುರುವೆ ಬೆಳ್ಳಂಬೆಳಕಾಯಿತು
ಕೋಳಿಯ ಸದ್ದ ಕೇಳಿದನಂತೆ ।

ಕೋಳಿಯ ಸದ್ದ ಕೇಳಿ ಶಿವನೆ ನಾರಾಯಣ
ನಿನ್ನ ಶಿವುಪಾದ ನನಗೆ ಗತಿಯಪ್ಪ ।

ಬಲದ ಮಗ್ಗುಲಾಗಿ ಏಳುತಾನೆ ಇಸುಬ್ರಮ್ಮ
ಬಂದು ಕದುವನೆ ತಗಿದಾನು ।

ಕದುವನ್ನೆ ತಕ್ಕೊಂಡು ಈಚುಗೆ ಬಂದನಂತೆ
ನಾರಾಯ್ಣನ ಪಾದಾವ ಕಂಡನಂತೆ ।

ನಾರಾಯ್ಣ ಪಾದ ಕಂಡುಕೊಂಡು ಇಸುಬ್ರಮ್ಮ
ಅವ್ರ-ಸಿರುಪಾದಂಗಳಿಗೆ ನಮಿಸಿದನು ।

'ಪರಮಾತ್ಮ ನಾನು ಮಾಡಿರುವಂತ ಅಪ್ರಾಧವೇನು ಬುದ್ಧಿ
ಇಲ್ಲ ನನ್ನ ಮಡದೀರೇನಾರ ಮಾಡಿರುವಂತ
ಅಪರಾಧವೇನು ನನ್ನಪ್ಪ
ಪುರಂದಾಸನಾಗಿ ಬಂದು
ನನ್ನ ಬಾಕ್ಲಲ್ಲಿ ಕಾಯ್ಕೊಂಡು ನಿಂತ್ಕೊಂಡಿದ್ದಿಯಲ್ಲಪ್ಪ'
'ಇಸುಬ್ರಮ್ಮ ಏನೂ ಹೆದುರ್ಸ್ಕಾಡಪ್ಪ
ನೀನೇನೂ ತೆಪ್ ಮಾಡಿಲ್ಲ
ನಿನ್ ಹೆಡ್ತೀಯೂ ಏನೂ ತೆಪ್ ಮಾಡಿಲ್ಲ
ಅಂದ್ರೆ ನಾನ್ ಬಂದು ಬಾಳಾ ಹೊತ್ತಾಯ್ತು
ನಿನ್ನುನ್ನ ನೋಡ್ಬೇಕು ಅಂತ ನಾನು ಬಂದೆಯಪ್ಪ'
'ಏನ್ ಸಮಾಚಾರ ಬುದ್ಧಿ ?'
'ಅಪ್ಪಾ ಏನೂ ಇಲ್ಲ
ಲೋಕುಕೆ ದೊಡ್ಡೋರು
ಆ ಇಸುಬ್ರಮ್ಮುನ ಸೊಲೂಪ ಕರ್ಕೊಂಡ್ಬಾಪ್ಪ
ನೋಡಿ ಬಾಳಾ ಜಿವುಸ್ವಾಯ್ತು
ಸೊಲ್ಪ ನೋಡ್ಬೇಕು ಜಾಗುರುಕತೆಯಾಗಿ ಕರ್ಕೊಂಡ್ಬರೇಳುದ್ರು
ಇನ್ನು ಲೋಕುಕ್ ದೊಡ್ಡೋರ ಮಾತ ಮೀರ್ಬಾರ್ದು
ಅಂತ ನಾನು ಬಂದಿ'

'ಹಂಗಾರೆ ಕೇಳ್ಕೊಂಡ್ಬಂದ್ಬುಡ್ತಿನಿ ನಡಾರಿ ಬುದ್ಧಿ'
ಹೋಯ್ತಿನಿ ಬತ್ತೀನಿ ಅಂತ್ಲೂ ಮಡದೀರೊಂದ್ಗೆ ಹೇಳ್ನಿಲ್ಲ -

ಇಸುಬ್ರಮ್ಮ ಹಿನುಹಿಂದೆ ನಾರಾಯ್ಣ ಮುನುಮುಂದೆ
ಅವ್ರು - ಕೈಲಾಸ್ಕೆ ಸಾಗಿ ಬರುತಾರೆ |

ಕೈಲಾಸ್ಕೆ ಇಬ್ರು ಬಂದ್ರು
ಲೋಕುಕ್ಕೆ ದೊಡ್ನೋರ್ಗೆ ಹೋಗಿ ನಮುಸ್ಕಾರ ಮಾಡ್ದ
ಯಾರು ? ನಾರಾಯ್ಣ
'ನಾರಾಯ್ಣ ಬಂದಿದ್ದಾನಪ್ಪ?'
'ಕರ್ಕೊಂಡ್ಬಂದಿದ್ದೀನಿ ಮಾಸ್ವಾಮಿ'
'ಇಸುಬ್ರಮ್ಮ ಬಂದಿದ್ದಿಯೇನಪ್ಪ?'
'ಹುಂ ಬಂದಿದ್ದೀನಿ ಮಾಸ್ವಾಮಿ.
ಲೋಕುಕ್ಕೆ ದೊಡ್ನೋರಪ್ಪೆಯಾಗದೆ ಅಂತ
ಮಾಸ್ವಾಮಿಯವ್ರು ಹೇಳುದ್ರು
ಅದುಕೋಸ್ಕರವಾಗಿ ತಮ್ ಪಾದಕ್ಕೆ ಬಂದಿವ್ನಿ ಮಾಸ್ವಾಮಿ' -

'ನಾಡು ನಾಡಿನ ಮೇಲೆ ಒಂದು ಬಿರುದ ಗೆಲ್ಬೇಕಂತೀವಿ
ನೀನು - ನಮ್ಮೊಂದ್ಗೆ ಒಳಗೊ ಹೊರಗಪ್ಪ?" |

'ನಿಮ್ಮೊಳ್ಗೇ ಇದ್ದೀನಿ ಮಾಸ್ವಾಮಿ ನಾನು'
'ನಾವೇಳ್ದಂಗೆ ಕೇಳ್ದಯ?'
'ಕೇಳ್ತೀನಿ ಮಾಸ್ವಾಮಿ'
'ಕೊಡು ಭಾಷೆಯ'
'ತಕ್ಕಳ್ಳಿ ಸ್ವಾಮಿ'
'ಸರಿ, ಕೇಳಪ್ಪ ಇಸುಬ್ರಮ್ಮ -

ಯಾರೂ ಹೋಗ್ದೆ ಇದ್ದಂತ ಓರ್ಗಲ್ಲೋಗ್ಬೇಕು
ಬೆಟ್ಟುದ್ದ - ಕನ್ನಗತ್ರಿಯ ಮಾಡಬೇಕು |

ಕನ್ನಗತ್ತರಿಯ ಮಾಡುಕೊಟ್ರೆ ಇಸಬ್ರಮ್ಮ
ನಿನ್ನಂತೆ - ಇಸುಬ್ರಮ್ಮಚಾರಿ ನನಗಿಲ್ಲ' |

ಕನ್ನಗತ್ರಿ ಸುದ್ದಿ ಕೇಳಿದ ಇಸಬ್ರಮ್ಮ
ಕೆಟ್ಟ - ಅಂದಾನು ತನ್ನ ಮನದಲ್ಲಿ |

ಬಾಳಾವುರ ಮನೆ ನೋಡ್ಕಂಡ್ಬಂದವುರೆ
ಅವುರ್ ಮನೇಲೋಗಿ ಕಳ್ತನ ಮಾಡ್ಕೊಂಡ್ಬತ್ತರೆ
ಕನ್‌ಗತ್ರಿ ಮಾಡಿ ನಾನ್ ಕೊಟ್‌ಬುಡ್ತಿನ್ನಿ
ಇವ್ರು ಕಳ್ತನ ಮಾಡ್ಕೊಂಡು ಬತ್ತಂ

ಇವುರೆಡ್ತೀರ ಮುಂದೆ ಹಣಾಕಾಸು ಒಡಬೆ ತಂದು
ಇವುರೇನು ಸುರುದ್ಬುಡ್ತರೆ
ಅವ್ರು ಸುಕುವಾಗಿ ಕೂತ್ಕೊಂಡು ಉಣ್ತಾರೆ
ಅವ್ ಯಾವ ಮಾಡ್ಕೊಟ್ಟ ಅವ್ನುನ್ ಮಕ್ಕು ತಿನ್ಕೊಳ
ಕನ್ಗತ್ರಿಯ ಅಂತ
ಅವುರು ನನ್ನ ಬೋಯ್ತಾರೆ
ಈ ಮ್ವಾಸುಗಾರ ನಾರಾಯ್ಣ ನನ್ನ ಕರ್ಕೊಂಡ್ಬಂದು
ಇಂತೆ ಕಷ್ಟುಕ್ಕೆ ಸಿಕ್ಕುಸ್ಬುಟ್ನಲ್ಲ
ಮೊದ್ಲೆ ಅಲ್ಲಾರೆ ಹೇಳಿದ್ರೆ ಬರ್ತಿತ್ತಿಲ್ಲ ನಾನು
ಆ ಕೆಲ್ಸ ಈ ಕೆಲ್ಸ ಹೇಳಿ ತಪ್ಪುಸ್ಕೊಂಡ್ಬುಡ್ತಿದ್ದೆ
ಈಗ್ ಬಂದು ಭಾಷೆ ಬ್ಯಾರೆ ಕೊಟ್ಬುಟ್ಟೆ
ಈಗ ಕೊಟ್ ಮಾತ್ಗೆ ತಪ್ಪೊ ಹಂಗೂ ಇಲ್ಲ
ಏನ್ಮಾಡ್ಲಪ್ಪ' ಅಂತ ಚಿಂತುಕಾಂತರಾಗಿ ಹೇಳ್ತಿದ್ದಾರೆ
'ಸ್ವಾಮಿ ಕನ್‌ಗತ್ರಿ ಮಾಡಿ ಕೊಡೋದೇನೊ ಕೊಡ್ತೀನಿ
ನಾನ್ ಹೇಳಿದ ಸಾಮಾನ್ ಕೊಟ್ಬೇರ್ಯಾ?'
'ಏನ್ ಸಾಮಾನಾಗ್ಬೇಕಪ್ಪ? -

'ಆಯ್ತಾರಮಾಸೆ ಸೂರ್ಯಂಗೆ ಗ್ರಾಣ ಕಚ್ಚು ಬೇಕು
ಚಂದ್ರುಂಗೆ ಚೌಚಿ ಆಗಬೇಕು |

ಚಂದ್ರುಂಗೆ ಚೌಚಿ ಆಗಬೇಕು ಪಾಡ್ಯದಲಿ
ಹೋಗಿ - ಸುಡುಗಾಡ್ನಲ್ಬಿದ್ದಿರೊ ಕಬ್ಬುಣವ |

ಹುಟ್ಟಿದ ನಿರ್ವಾಣ ಹೋಗಿ ಸಮಸಮ ರಾತ್ರೇಲಿ
ತಂದು ಕೊಡಬೇಕು ಕನ್ನಗತ್ರಿಗೆ |

ತಂದುಕೊಡಬೇಕು ಸುಡುಗಾಡು ಕಬ್ಬುಣವ
ಕನ್ನಗತ್ರೀಯ ನಾನು ಮಾಡುತೀನಿ |

'ನಾರಾಯ್ಣ ಏನಪ್ಪ ಹಿಂಗೇಳ್ತನಲ್ಲ?'
'ಹೇಳ್ತನೆ ಕಳುಕೊಂಡೋಗನ ಅಂತ
ಹಂಗಂತ ಇವ್ನುನ್ನ ಬುಡಕಾದತ ?
ಅವ್ನು ಬೇಕಾದಷ್ಟು ಹೇಳುದ್ರೂ ಕೂಡ
ಕೈಲಾಸದಿಂದಾಚ್ಗೆ ಬುಡಕಾಗ್ದು ಇವ್ನುನ್ನ
ನೀನು ಹೇಳುದ ಸಾಮಾನ್ನೆಲ್ಲ ತಂದ್ಕೊಡ್ತೀನಿಪ್ಪ
ಇರು' ಅಂದ.
ಆಯ್ತುವಾರುದೊಂದ್ಗಳ್ಗೆ ಸ್ವಾಮಾರುದೊಂದ್ಗಳ್ಗೆ
ಮಂಗುಳುವಾರದೊಂದ್ಗಳ್ಗೆ
ಮೂರ್ ವಾರಾನು ಸೇರ್ಸಿ ಒಂದ್ವಾರ ಮಾಡ್ಕೊಂಡ

ಅಮ್ಮತ್ವಾದ ಗಳುಗೆ ತಕ್ಕೊಂಡು
ಆಯ್ತುವಾರ ಅಮಾಸೆ ಮಾಡುದ್ರು
ಸೂರ್ಯಂಗೆ ಗ್ರಾಣ ಕಚ್ಚುಸ್ತು
ಹುಟ್ಟುದ ನಿರ್ವಾಣವೋಗಿ ಸಮಸಮರಾತ್ರೇಲಿ
ಬಿದ್ದಿರೊ ಕಬ್ಲನೆಲ್ಲ ತಕೊಂಡ್ಬಂದ್ರು
ತಕ್ಕೊಂಡ್ಬಂದು ಇಸುಬ್ರಮ್ಮನ ಮುಂದೆ ಸುರುದ್ರು
'ಇವುರ್ ಮನೆ ಹಾಳಾಗ ಎಲ್ ತಂದ್ರಪ್ಪ
ಹೇಳ್ದೇಟ್ಗೆ ತಂದ್ರಲ್ಲ' ಅಂದ್ಕೊಂಡು
'ಇಷ್ಟುಕ್ಕೆ ಕನ್ಗತ್ರಿ ಆಗಕಿಲ್ಲ
ಇನ್ನೂ ಸಾಮಾನಾಗ್ಬೇಕು ಬುದ್ಧಿ'
'ಇನ್ನೂ ಏನಾಗ್ಬೇಕಪ್ಪ?'
'ಸಿಳ್ಳು ಹೊಡ್ದು ಹನ್ನೇಡೊರ್ಷ ಆಗಿರಬೇಕು
ಮೂರೂರು ಸುಟ್ಟೋಗಿರಬೇಕು
ಆ ಸಿಳ್ಳು ಎರಗಿ ಈವತ್ಗೆ ಹನ್ನೇಡೊರ್ಷ ಆಗಿರ್ಬೇಕು
ಆ ಸಿಳ್ಳು ಕುಡ್ಕ ನೀವು ತಂದುಕೊಟ್ರೆ
ನಾನು ಕನ್ಗತ್ರಿ ಮಾಡ್ತೀನಿ
ಇಲ್ದೆ ಹೋದ್ರೆ ನನ್ಕೈಲಿ ಆಗಕಿಲ್ಲ'
'ನಾರಾಯ್ಣ'
'ಸ್ವಾಮಿ'
'ಏನಪ್ಪ ಹಿಂಗೇಳ್ತನಲ್ಲ?'
'ಕನ್ಗತ್ರಿ ಮಾಡುದ್ದಕ್ಕೆ ಹಂಗ್ ಕೇಳ್ತಾನೆ ಸ್ವಾಮಿ
ಇವ ಕಳುಕೊಂಡೋಗಕೆ ಇದೆಲ್ಲ ಪಿಳಾನು

ತಕ್ಕಂಡ್ಬತ್ತಿನಿ ಪರವಾ ಇಲ್ಲ ಕೂತ್ಕೊ' -

ನಾರಾಯ್ಣಸ್ವಾಮಿ ಕೈಲಾಸ ಬುಟ್ಟುನಂತೆ
ಏಳೇಳು ಲೋಕವ ಚಂಚರ್ಲೆ ಮಾಡಿ |

ಏಳೇಳು ಲೋಕ ಚಂಚರ್ಲೆ ಮಾಡಿ ನಾರಾಯ್ಣ
ಈಸನ್ಯದ ಮೂಲ್ಗೆ ಬರುತಾನೆ |

ಈಸನ್ಯದ ಮೂಲೆವೊಳುಗೆ ನಿಂತುಕೊಂಡು ನಾರಾಯ್ಣ
ದ್ರಿಷ್ಟಿಯ ಮಡುಗಿ ನೋಡುತಾನೆ |

ಭೂಮಿಯ ಒಂದ್ ಒದ್ತ ಒದ್ನಂತೆ ಈಸನ್ನದ ಮೂಲೇಲಿ
ಭೂಮಿ ಇಬ್ಬಾಗುವಾಯ್ತು -

ಹನ್ನೇಡಾಳುದ್ದ ಪಾತಾಳುದ ಜಲದ ಕಣ್ಗಿಳುದ
ಸಿಳ್ಳು ಕುಡ್ಕ ತತ್ತಾನೆ ನಾರಾಯ್ಣ |

ಹನ್ನೇಡೊರ್ಷದಲ್ಲಿ ಹೊಡ್ದಿದ್ದಂತ ಸಿಳ್ಳು ಕುಡ್ಕ
ಮೂರೂರು ಬೇಯ್ಸಿ ಪಾತಾಳುಕ್ಕೆ ಬಂದು
ಜಲದ ಕಣ್ಣಲ್ಲಿ ಕೂತಿತ್ತು
ನಾರಾಯ್ಣ ಹುಡ್ಕಿ ಕೈಲಿ ತಕ್ಕೊಂಡು ಮ್ಯಾಕೆ ಹತ್ತುದ- ೧೧೮೦

ಸಿಳ್ಳು ಕುಡ್ಕ ತಕ್ಕಂಡು ಬ್ಯಾಗಾನೆ ಬಂದನಂತೆ
ಇಸುಬ್ರಮ್ಮ ದಂಡ್ಕಕೆ ಮಡಗಿದನು |

ಇಸುಬ್ರಮ್ಮ ದಂಡ್ಕದಲಿ ಮಡುಗ್ಬುಟ್ಟು, ನಾರಾಯ್ಣ
'ಕಂಡ - ಭಾವ್ದಲ್ಲಿ ಮಾಡಿ ಕೊಡುಸರಣ |'

'ಏಡ್ ಸಾಮಾನ್ ಕೊಟ್ರಲ್ಲ
ಈ ಏಡ್ ಸಾಮಾನ್‌ನಲ್ಲಿ ಕನ್ನಗತ್ರಿ ಆದತ ಬುದ್ಧಿ?'
'ಹಂಗಾರೆ ಇನ್ನೇನಪ್ಪ?'
'ಬೆಟ್ಟುದ್ದ ಮರುಜವ್ಳಿಕಡ್ಡಿ ಆಗ್ಬೇಕು
ಬೆಟ್ಟುದ್ದ ಮರ್ಜವ್ಳಿ ಕಡ್ಡಿಯಾದ್ರೆ ಕನ್ಗತ್ರಿ ಮಾಡ್ತೀನಿ
ಇಲ್ದೆನೆ ಹೋದ್ರೆ ನನ್ನಿಂದ ಶಕ್ಯವಲ್ಲ ಬುದ್ಧಿ' ೧೧೯೦
'ಇಸುಬ್ರಮ್ಮ ಈ ಮರುಜವಳಿ ಕಡ್ಡಿ ಎಲ್ಲಾರ್ಗೂ ಶಕ್ಯವಲ್ಲ
ಶ್ರೀರಾಮಚಂದ್ರುಂಗೆ ಮಾತ್ರ ಶಕ್ಯ ಏನ್ ಮಾಡದಪ್ಪ' -

ದಾಸುನವುತಾರ ಕಳ್ದು ರಾಮುನಾವತಾರದಲ್ಲಿ
ರಸಾದ್ರಿ ಪರುವತಕೆ ಸಾಗಿ ಬರುತಾನೆ |

ಮರುಜವ್ಳಿ ಮರುಜವ್ಳಿಯಂತ ಮೂರ್ಸಲ ಕರುದವುನೆ
ಮರುಜವುಳಿ ಮಾತ ಆಡನಿಲ್ಲ |

ಮರುಜವುಳಿ ನಾರಾಯ್ಣನ ವಾಸುಕ್ಕೆ ಬರ್ನಿಲ್ಲ
ಕ್ಯಾಪುದಿಂದ ಬಲಗ್ಗೆ ಹಾಕಿ ಅರ್ಧ ಬೆಟ್ಟುವನ್ನೇ ಕಿತ್ತು
ಹೆಗುಲ್ ಮ್ಯಾಲ್ಮಡೀಕೊಂಡು
ಇಸುಬ್ರಮ್ಮನ ಮುಂದೆ ತಂದು ಮಡುಗ್ಬುಟ್ಟು ೧೨೦೦
'ಈ ಸಲ ನಿನ್ಗೆ ಎಷ್ಟ್ ಬೇಕಾದ್ರೂ ಕಿತ್ಕೊಂಡು ಮಾಡಪ್ಪ
ಈ ಬೆಟ್ಟದಲ್ಲಿ -

ಹೇಳೇಳ್ದ ಸಾಮಾನ ತಂದುಕೊಟ್ಟ ನಾರಾಯ್ಣ
ಆ - ಎಡೆಯ ಕೊಡುನಿಲ್ಲ ಇಸುಬ್ರಮ್ಮನಿಗೆ |

ತಪ್ಪುಸ್ಕೊಳಕೆ ಎಡೆಕೊಡ್ನಲ್ಲ
ಗ್ಯಾಟೆಗೆ ಸಿಕ್ಕುಸ್ಕೊಂಡಂಗೆ
'ಮಾಡ್ತೀನಿ ಸ್ವಾಮಿ' ಅಂದ
ಎಲ್ಲಿ ಮಾಡ್ಬೇಕು ಕನ್ನಗತ್ರಿಯ -

'ಮೂರೂರು ಕೂಡ್ದ ಎಲ್ಲೇಲಿ ಹೋಗ್ಬೇಕು
ಹಾಕ್ಬೇಕು ದೊಡ್ಡ ಕುಲುಮೀಯ |

ಮರತ್ತಿ ದಂಡೇಲಿ ಕಿರತ್ತಿ
ಕಿರತ್ತಿ ದಂಡ್ಯದೊಳಗೆ ಒಂದಾಲುದ ಮರ
ಆಲುದ ಮರದ ದಂಡ್ಯೇಲಿ ಕುಲುಮೆ ಹಾಕ್ಬೇಕು
ಮತ್ತಲ್ಲೆ ಹೋಗ್ಬೇಕು'
'ಮತ್ತೆ ತಕಳಿ ಸ್ವಾಮಿ'
'ಅಯ್ಯಯ್ಯೊ ಇನ್ನೊಂದ್ಸಾಮಾನ್ ಮರ್ತೀಪ್ನಿ ಸ್ವಾಮಿ
ಒಂದು ಚಿಮ್ಮ ಮಾಡ್ಬೇಕಾದ್ರೆ ಹೆನ್ನೇಡಾಯ್ದ ಆಗ್ಬೇಕು
ಆಯ್ದವಿಲ್ದೆ ಕನ್ನಗತ್ರಿ ಮಾಡಕಾಗಕಿಲ್ಲ
ಹೆನ್ನೇಡಾಯ್ದ ಆದ್ರೆ ಕನ್ನಗತ್ರಿ ಮಾಡ್ತೀನಿ
ಇಲ್ಲಾ ಕೊಡಿ
ನಾನು ಬ್ರಮ್ಮಲೋಕುದಲ್ಲಿ ಮಾಡ್ಕೊಂಡು ತಕೊಂಡ್ಬತ್ತಿನಿ'
'ನೀ ಬ್ರಮ್ಮಲೋಕುಕ್ಕೆ ತಕ್ಕೊಂಡೋಗಿ
ಮಾಡ್ಕೊಂಡ್ಬರೋನ್ಗಂಟ ಆಯ್ತು
ನಾವು ಏಡು ದಿನ್ದೊಳ್ಗೆ ಬತ್ತಿವಿ ಅಂತ ಹೇಳ್ಬಂದಿವಿ
ನೀನು ಅಲ್ಲೋದ್ರೆ ನಿನ್ಗೆ ಸಾಲ್ದಾರ್ರು
ಕಡ್ಗಕೊಡು ದಾಬು ಕೊಡು ಕುಪ್ಗೆ ಕೊಡು ಅಂತ ಬಂದ್ರೆ
ನೀನು ಕನ್ನಗತ್ರಿ ಮಾಡಕಾದತ ?
ಅದೆಲ್ಲ ಬ್ಯಾಡ ಇಲ್ಲೆ ಆಯ್ದ ಕೊಡ್ತಿವಿ ಕೂತ್ಕೊ'
'ಕೊಡಿ ಆಯುದ್ವ ಕೊಟ್ರೆ ನಾನ್ಯಾಕ್ ಮಾಡ್ದಾರ್ದು?'
ಈಸ್ವರ ಎದ್ದು ನಿಂತ್ಕೊಂಡು ಅದೇನ್ ಹೇಳ್ತಾನೆ -

'ಎಲ್ಲಿದ್ದೀರಿಯಪ್ಪ ನನ್ನ ಅಟ್ಟ ದಿಕ್ಪಾಲಕರೆ
ಅಟ್ಟ್ದಿಕ್ಪಾಲಕರೆ ದಯವಾಗ್ರೊ' |

ಲೋಕಕೆ ದೊಡ್ಡೋರು ನಮ್ ಕರಿತರೆ ಅಂತ್ಹೇಳಿ
ಅಟ್ಟ ದಿಕ್ಪಾಲಕರು ಎಲ್ಲ ಬರುತಾರೆ |

ಎಂಟು ದಿಕ್ಪಾಲಕರು ಬಂದು ಈಸ್ವರನ ನೋಡುಬುಟ್ಟು
ಈಸ್ವರನ - ಪಾದಕೆ ಸರಣು ಅಂದರಂತೆ |

'ಸ್ವಾಮಿ ನಮ್ಮ ಕರೇಸಿದಂತ ಕಾರಣಾಂತ ಏನು ಬುದ್ಧಿ?'
'ಅಪ್ಪಾ ಇಸುಬ್ರಮ್ಮ ಆಯ್ದ ತಕ್ಕಂಡ್ಬರ್ನಿಲ್ಲವಂತೆ.
ಬೆಟ್ಟುದ್ವ ಕನ್ನಗತ್ರಿ ಮಾಡುಸ್ಕೊಬೇಕು ಕನ್ರಪ್ಪ
ಯಾರ್ಯಾರು ಯಾವಾಯುದವಾಯ್ತಿದ್ದೀರಿ ಸೊಲುಪ ಆಗಿ' -

ಬಡಗಲ ಕುಬೇರ ಬಡಿಯೋಕೆ ಚಮ್ಮುಟ್ಗೆಯಾದ
ವಾಯು ಅನ್ನೋನು ಅಡಗಲ್ಲಾದ |

ಹಿರಿಯ ಇಕ್ಕಾಳ ಯಮನು ತಾನಾದ
ಆದಿಶೇಷಾದ ರಾವ್‌ಗೋಲು |

ಆದಿಶೇಷಣ್ಣ ರಾವ್‌ಗೋಲು ತಾನಾದ
ಮಂಡ ಮಾರುದ್ದ ಹೊಲಿಯೊ ಸರವಾದ |

ಅಗ್ನಿಯಾಗಿ ಕಿಡಿಯಾದ ಶಿವನಾರಾಯಣ್ಗೂಗೆ
ಕನ್ನಗತ್ರೀಯ ಮಾಡುವುದಕೆ|

'ಹುಂ ಈಗ ಕನ್ನತ್ರಿ ಮಾಡಪ್ಪ,'
'ಅಲ್ಲ ಸ್ವಾಮಿ ಕನ್ನತ್ರಿ ಮಾಡು ಕನ್ನತ್ರಿ ಮಾಡು ಅಂದ್ರೆ
ನಾನೆಂಗ್ ಮಾಡ್ಲಿ ಸ್ವಾಮಿ
ತಿದಿಬೇಡ್ವ ಏಡು ತಿದಿಯಾದ್ರೆ ಮಾಡ್ಬೋದಪ್ಪ'
'ಹಂಗಾ ತಾಳಪ್ಪ,' ಅಂತ ಹೇಳ್ಬುಟ್ಟು ನಾರಾಯ್ಣ
ಆರಂದಡವಿ ಬೆಟ್ಟುದ ಕಿಬ್ರಿಗೆ ಕಣ್ಮಾಡುಗುದ್ರು
ಇಬ್ರು ರಾಕ್ಷೇಸ್ರು ಮೆಳಕಿಂಡೀಲಿ ಕೂತ್ಕೊಂಡು
ಇಣುಗ್ಕೆ ನೋಡ್ತಿದ್ರು
'ಅಪ್ಪಾ ನಾರಾಯ್ಣ ನಮ್ಕಂಡ್ರೆ ಬುಟ್ಟುರ?' ಅಂದ್ಬುಟ್ಟು
ಅಣ್‌ತಮ್ ರಾಕ್ಷುರು
ಬೆಟ್ಟುದ ಸೆರುಗೆತ್ಕೊಂಡು ಒಳೀಕೆ ನುಗ್ತಿದ್ರು
ನಾರಾಯ್ಣನ ಕಣ್ಣು ನಾನಾ ಕಡೆ ಆಡ್ತಿದ್ದೊ
ಕಂಡ್ಕೊಂಡ್ಬುಟ್ರು
ನಿಂತಿರೊ ಜಾಗ್ದಲ್ಲಿ ಒಂದ್ವಾದ
ಬೆಟ್ಟುದ್ಮೇಲೊಂದ್ ಪಾದ ಮಡೀಕೊಂಡು
ಚಿಮುಟ್ಗೇಲಿ ಹೊಡುದ್ರು
ಅರ್ಧ ಭಾಗ ಬೆಟ್ಟ ಕಸ್ದು ಆಚೆಗೆ ಬಿದ್ದೋಯ್ತು
ಅವುರಿಬ್ರು ಜುಟ್ನು ಹಿಡ್ಕೊಂಡು ಈಚೆಗೆ ಎಳುಕೊಂಡ್ರಂದ್ರು -

ಕತ್ತನು ಕೂದಾನು ಬೊತ್ತೆಗೆ ಸುರಿದಾನು
ಒತ್ತಕ್ಕೆ ತಿದಿಯ ಮಾಡಿದನಂತೆ |

ಒತ್ತಕ್ಕೆ ತಿದಿಯ ಮಾಡ್ಕಂಡನಂತೆ ನಾರಾಯ್ಣ
ಇಸುಬ್ರಮ್ಮನೊತ್ತೀಗೆ ಬಂದು ಕೊಟ್ಟನಂತೆ |

'ತಕ್ಕಯ್ಯ ಮಾಡು ಈ ಸಲ' ಅಂದುನಂತೆ -

ಇವುರ್ಮನೆ ಹಾಳಾಗ ಅನ್ಕೊಂಡು ಇಸುಬ್ರಮ್ಮ
ಹೂಡುದ್ರು ದೊಡ್ಡ ಕುಲಮೀಯ |

ತಿದಿಹಾಕುದ್ರು ಇಮ್ಮಲು ಸುರ್ರು ಕಬ್ಬುಣ ಹಾಕುದ್ರು
'ಹುಂ ಒಸಿ ಒತ್ತೀ ಬನ್ನಿ
ಒತ್ತಿ ಒತ್ತಿ ಒತ್ತಿ ತಿದಿ ಒತ್ತಿ' ಅಂದ ಇಸುಬ್ರಮ್ಮ
'ಅಯ್ಯ ಯಾವಾಗ್ಲೂ ಒತ್ತಿಲ್ಲವಲ್ಲಪ್ಪ ಇಸುಬ್ರಮ್ಮ'
'ಕಾದುದ್ದು ಬೆಂದುದ್ನೆ ನೋಡನೊ
ಇಲ್ಲಾ ತಿದೀನೆ ಒತ್ತನೊ ನಾನು ?'
ಆಗ ಶಿವ್ನೂ ನಾರಾಯ್ಣ್ನೂ ತಿದಿ ಒತ್ತಕೆ ಕೂತ್ಕೊಂಡ್ರು -

ಭಾವ್ಮಕ್ಕಳಿಬ್ಬಾರು ಭಾವ್ವಲ್ಲಿ ದೊಡ್ಡೋರು
ಬಾಗಿ - ಚನ್ನಾಗಿ ತಿದಿಯ ಒತ್ತುವರು | ೧೨೮೦

ಚನ್ನಾಗಿ ತಿದಿಯ ಒತ್ತಿದರು ಶಿವನಾರಾಯ್ಣ
ಅವ್ರು - ಹೆಬ್ಬಾವುನಂಗೆ ತಿದಿ ಮೊರಿದಾವು |

ಹೆಬ್ಬಾವುನಂಗೆ ತಿದಿಯೆಲ್ಲ ಮೊರಿವಾಗ
ಕಬ್ಬುಣವೆಲ್ಲ ಕಾದು ಹದುವಾಯ್ತು |

ಕಾವಿನೀರೀನಾಗೆ ಈರುಳ್ಳಿ ಸ್ಸಾಲೆಯಾಗೆ
ಕಬ್ಬುಣವೆಲ್ಲ ಕಾದು ಹದುವಾಯ್ತು |

'ಇಸುಬ್ರಮ್ಮ ಚನ್ನಾಗ್ ಮಾಡ್ಸೇಕು ಕನ್‌ಗತ್ರೀಯ -

ಕನ್ನಗತ್ರಿ ಮಾಡುವ ಬಿನ್ನಾಣ ನೀಕೇಳು
ಏಳೂರು ಕೊಡಿಗ್ಗೆ ನಿನ್ಗೆ ಕೊಡುತೀವಿ |

ಕನ್ನದ ಬಾಗಿಲೊಳಗೆ ಮುತ್ತು ರತ್ನ ಬಂದಾರೆ ೧೨೯೦
ನಿನಗೊಂದು ಸಮಪಾಲು ಕೊಡುತೀವಿ |

ನಿನ್ನ ಮನುಸ್ನಲ್ಲಿರೊ ಇಸಾಬುಟ್ಟು ಚನ್ನಾಗಿ ಮಾಡಪ್ಪ' -

ಅರಳೀಯ ಎಲೆಯಂಗೆ ಹುಳ್ಳಿಕಾಯ್ನ ಭಾವ್ನಾಗೆ
ಎಳನಾಗ್ರು ಬಾಯ ತೆರುದಂಗೆ |

ಎಳನಾಗ್ರು ಬಾಯ ತೆರುದಂಗೆ ಇಸುಬ್ರಮ್ಮ
ಮರುಜವ್ವೀ ಕಡ್ಡೀಯ ಮಂತ್ರುಸ್ತಾನೆ |

ಮರುಜವುಳಿ ಕಡ್ಡಿ ಮಂತುರಿಸಿ ಮಡುಗಿದರೆ
ಅದು ಎಳನಾಗರಾಗಿ ಆಡುತಾದೆ

ಹಿಡಿಗೆ ಇಸ್ಕುನ ರೂಪು ತುದಿಗೆ ಬ್ರಮ್ಮನ ರೂಪು
ಮಧ್ಯದಲಿ ಸ್ವಾಮಿ ಪತಿರೂಪು ! ೧೩೦೦

ಕನ್ನಗತ್ರಿ ಮಾಟಣವ ಚನ್ನಮಲ್ಲಯ್ಯ ನೋಡ್ಟುಟ್ಟು
ಸಂತೋಷವಾಯ್ತು ಅವ್ರ ಮನವೆಲ್ಲ |

'ನಾರಾಯ್ಣ'
'ಸ್ವಾಮಿ'
'ಇಸುಬ್ರಮ್ಮುಂಗೆ ಭಾಗ್ಯ ಕೊಡ್ತೀನಿಪ್ಪ ಈ ಸಲ
ಯಾಕೆ ಅಂದ್ರೆ : ಕನ್ಗತ್ರಿಯ ಚನ್ನಾಗಿ ಮಾಡವ್ನೆ'
'ಇನ್ನು ಕೊಡೋಗ ಬ್ಯಾಡ ಅನ್ನಗಾದತ ಕೊಡಿ ಬುದ್ಧಿ'

ಅಕ್ಕೀಗೆ ಆರೂರು ತುಪ್ಪಕ್ಕೆ ಮೂರೂರು
ನಮ್ಮುಕ್ಕಣ್ಣಯ್ಯ ಧಾರೆ ಎರುದಾರು |

'ಇಸುಬ್ರಮ್ಮ ಸಾಯ ಪರಿಯಂತ್ರುದಗಂಟ ೧೩೧೦
ನೀನು ಕೂತ್ಕೊಂಡು ಉಂಡ್ರೂ ಮುಗೀಬಾರ್ದು
ಅವುರೇ ತಂದು ಒಪ್ಪುಸ್ತಾರಪ್ಪ
ಸಂತೋಷವಾಗಿ ನೀನು ಊಟ ಮಾಡು'
'ಸ್ವಾಮಿ ಭಾಗ್ಯ ಕೊಟ್ರಿಯ ಇಸುಬ್ರಮ್ಮುಂಗೆ?'
'ನಾರಾಯ್ಣ ನಾನು ಕೊಟ್ಟಿದ್ದೀನಪ್ಪ
ನೀನೆಷ್ಟು ಕೊಟ್ಟಿಯೊ ಕೊಡೋಗಪ್ಪ'
'ಸ್ವಾಮಿಯವರ ಭಾಗ್ಯ ತಿರುವಲ್ಲ ಇಸುಬ್ರಮ್ಮ
ನಾನು ತಿರುವಾದ ಭಾಗ್ಯ ಕೊಡ್ತೀನಿ ಬಾಪ್ಪ' ಅಂತ್ಹೇಳಿದ
ಇನ್ನೂ ಕೊಟ್ಟನೇನೊ ಅಂದ್ಕುಟ್ಟು ದಂಡ್ಯಕೆ ಬಂದ
ಯಾರು ? ಇಸುಬ್ರಮ್ಮ ೧೩೨೦
'ಇಸುಬ್ರಮ್ಮ ಅಗಲಾಗಿ ಬಾಯ್ಮುಡು'
ಒಂದ್ ಹಿಡಿ ಹೊನ್ತಕ್ಕೊಂಡು ಬಾಯ್ತುಂಬ ತುಂಬುಟ್ಟ್ರು
'ಒಂದ್ಹೊನ್ನೇನಾರ ಕೆಳೀಕೆ ಬಿದ್ಕುಟ್ರೆ
ನಿನ್ನ ನನ್ನ ಚಕ್ರುಕ್ಕೆ ಬಲಿಕೊಟ್ಟುಡ್ತೀನಿ
ಬಾಯ್‌ಬುಟ್ಕೊಂಡ್ ಕೇಳೀಯೆ ಜ್ಯಾಕೆ
ಬಾಯ್ಮುಚ್ಕೊಂಡ್ ಕೇಳು'
'ಬಾಯ್ಮುಚ್ಕೊಂಡ್ ಹೆಂಗ್ ಕೇಳನ ಭಾಗ್ಯವ?'
'ಹೊತ್ತಾಯ್ತು ಕೇಳ್ಕೊಯ್ಯ ಭಾಗ್ಯಾವ ಅದೇನ್ ಕೇಳೀಯೆ'
'ಉಂ'ಅಂತ ಆಕಾಸುದ ಕಡೆ ಕೈಮಾಡಿ
ಬೆರುಳ್ನ ಚಕ್ರುದಂಗೆ ಸುತ್ತುಸ್ದ ೧೩೩೦
'ನಾರಾಯ್ಣ ಹಂಗಂದ್ರೇನಪ್ಪ?' ಈಸ್ಪುರ ಕೇಳ್ದ
'ಸ್ವಾಮಿ ಬೂರುಸುತ್ತ ಲಾಲೆ ಬಂದದಂತೆ
ಲಾಲೆ ಗದ್ರೆ ಆದದಂತೆ
ಗದ್ರೆ ಒಳ್ಗೆ ಒಂದ್ಬೊರೆ ಹುಲ್‌ಕೊಡಿ ಅಂತ ಕೇಳ್ತನೆ'
'ಕೇಳು ಜಲ್ದಿ ಇನ್ನೊಂದ್ಮಲ ಏನ್ ಬೇಕು?'
ಮೂರ್ನಾಗಿ ಪಮುಲಾಗಿ ಜೆಡ್ಡಿ ತೋರ್ದ

'ನಾರಾಯ್ಣ ಏನು ಹಿಂಗಂದ್ರೆ?'
'ಸ್ವಾಮಿ ರೈತ್ರು ಹೊಲ ಮಾಡ್ತರಲ್ಲ
ಮೂಡಪಡ ಒಂದು ಮೈಲೇ ಬುಡಿ ಅಂತ ಕೇಳ್ತನೆ'
'ಹುಂ ಬುಟ್ಬುಡು ಬಾಯ' ಅಂದ ೧೩೪೦
ಬುಟ್ಟುಟ್ಟ ಇಸುಬ್ರಮ್ಮ -

ನೀನು ಬೆಟ್ಟುದ್ದಾತ್ರ ಕಬ್ಬುಣವ ಸಂದ್ಗಂಟ ಬಡುದ್ರೂವೆ
ಹಾಗಾದ ಕಾಸಲ್ದೆ ನಿನುಗೆ ಹಣುವಿಲ್ಲ |

ಬಾಗುಲ್ಗಂಡ್ಗಾಣೆ ಬರ್ಲಿ ನಿನ್ಗೆ ಬಚ್ಚಲ್ಗಂಡ್ಗಾಣೆ ಹೋಗ್ಲಿ
ಅಂತ - ನಾರಾಯ್ಣ ಸಾಪ ಕೊಡುತಾರೆ |

ಸಿರುವಂತ್ರ ಮನೆಚಿನ್ನ ಕಳೂಕೊಳ್ದೆ ಹೋದ್ರೆ ನಿನ್ಗೆ
ಕಳ್ಳುಬ್ಯಾನೆ ಹೊಟ್ಟುಬ್ಯಾನೆ ಬರುಲಪ್ಪ |

ಈಸ್ಪುರ ಕೊಟ್ಟ ಭಾಗ್ಯನೆಲ್ಲ ಕಿತ್ಕೊಂಡ್ಯಪ್ಪ ಮೋಸ್ಗಾರ
ನಾನೊಂದು ಸಾಪ ಕೊಡ್ತೀನಿ ತಕೊ' ಅಂದ
ಯಾರು ಇಸುಬ್ರಮ್ಮ - ೧೩೫೦

ನನ್ನ ಕನ್ನಗತ್ರಿಯ ಕ್ಯಾಟೆ ಮ್ಯಾಲೆ ಮಡುಗುದ್ರೆ
ಕ್ಯಾಟೆ - ಅಡುಕ್ಕಡ್ಟೆ, ಒಡಿಯಂಗೆ ಒಡುದೋಗ್ಲಿ |

ಇಟ್ಟ ಒಂದು ಜೆನಕೆ ಪಟ್ಟಂತ ಒಡಿತಾದೆ
ಅನೆಗಾತ್ರ ಗುಂಡು ಕಸಿಯಾಲಿ |

ನೀನು - ಹತ್ತವುತಾರವ ಧರಿಯಲ್ಲಿ ಎತ್ತಬೇಕು
ನೀನು ಪಡುಬಾರ್ದ ಪಾಡ ಪಡೀಬೇಕು

ಶಾಪ ಕೊಟ್ಟುಟ್ಟು ಹೇಳ್ದೆ ಕೇಳ್ದೆ ಬ್ರಮ್ಮುಲೋಕುಕ್ಕೆ
ಹೊಂಟೋದ -

'ನಾರಾಯ್ಣ ಯಾಕಪ್ಪ ಹಂಗ್ಮಾಡ್ದೆ?'
'ಭಾವಯ್ಯ ಇಸುಬ್ರಮ್ಮುನ ಇಸ್ಯ ನಿಂಗೊತ್ತಿಲ್ಲ
ಒಂದು ಕನ್ನತ್ರಿ ಮಾಡ್ಕೊಡಕೆ ಇಷ್ಟೊಂದು ಸತಾಯ್ಸವ್ನೆ ೧೩೬೦
ಇನ್ನು ಅವ್ನು ಸಿರೀಸಂಪತ್ನಲ್ಲಿ ವಾಲಾಡೋಂಗಾಗ್ಬುಟ್ರೆ
ಅವ್ನು ನಮ್ಮಮಾತ ಕೇಳೀನ?
ನಮ್ಮ ತಾಬುಗೆ ಬಂದೀನ?' ಅಂದ
ಈಸ್ಪುರ ಕನ್ನತ್ರಿ ತಕ್ಕೊಂಡು
ಕನ್ನೆಗೌರಮ್ಮ ಕಂಡ್ಕೊತಳೆ ಅಂದ್ಬುಟ್ಟು
ಅವ್ರು ತಮ್ಮ ಜಂಜಡವೊಳುಗೆ ಮಡುಗಿ ಕಟ್ಟುಟ್ರು
'ಸ್ವಾಮಿ ನಾನು ಮೈಕುಂಟುಕ್ಕೋಗಿ
ಲಕ್ಷ್ಮೀಹತ್ರ ನಾಮುದ ಸ್ಯಾವೆ ತೀರುಸ್ಕೊಂಡ್ ಬರೋನ್ಗಂಟ
ನೀವು ಊಟ ಮಾಡ್ಕೊಂಡು ಕೈಲಾಸದಲ್ಲಿರಿ
ಆಮೇಲೆ ಹೊರಡಂವು ಅಂದ' ನಾರಾಯ್ಣ ೧೩೭೦

೧೦. ಶಿವನಾರಾಯಣರನ್ನು ಪಾರ್ವತಿ ಕಳಿಸಿಕೊಟ್ಟ ಸಂದು

ಸುಮ್ನಾ ಬಾ ನನ್ನ ಬಸುವಯ್ಯ ಸುಮ್ನಿ | ಸೊಲ್ಲು |

ಕೈಲಾಸ್ದ ಬಾಕುಲ್ಗೆ ಈಸ್ಪುರ ಬಂದರು
ಕೈಲಾಸ್ಕೆ ಬಂದ ಸುದ್ದೀಯ |

ಕೈಲಾಸ್ಕೆ ಬಂದ ಸುದ್ದಿ ಕೇಳಿ ಕನ್ನಗೌರಮ್ಮ
ಪನ್ನೀರಾಗಣಿಯ ತರುತಾರೆ |

ಮಡದೀರ ಮೊಕುವ ನೋಡುಬುಟ್ಟು ಜಗದೀಶ್ವರ
ಕಳುವುಗೋಯ್ತೀನಂತ ಹೇಳುತಾರೆ |

ಕಳುವುಗೋಯ್ತೀನಂತ ಮಡ್ದಿ ಒಂದ್ಗೆ ಹೇಳುದ್ರು
ಕಳಬ್ಯಾಡಿ ಗುರುವೆ ಬಲುಕಷ್ಟ |

ಕಳುಬ್ಯಾಡಿ ಗುರುವೆ ಬೋಕಷ್ಟ ಕೈಲಾಸ್ದಲ್ಲಿ
ನಮ್ಮ - ಸುರುಪತಿಗಳು ನೋಡಿ ನಗುತಾರೆ | ೧೩೮೦

ನೆಗಲಾಕೆ ಗೌರಾಯಿ ಜಗದೊಳಗೆಲ್ಲ
ನಿಮ್ ಬರ್ದ - ಮಿಗ್ಲು ಮಿಗ್ಲಾಗಿ ನಡುಸ್ತೀವಿ |

'ಪರಮಾತ್ಮ ನಮ್ಗ ಉಣ್ಣಕಿಲ್ಲೊ ತಿನ್ನಕಿಲ್ಲೊ
ಉಟ್ಕಳಕಿಲ್ಲೊ ತೊಟ್ಕಳಕಿಲ್ಲೊ
ಕಳುವನ್ನು ಬೋವುಸ್ಬೋದ ಮಾಸ್ವಾಮಿ
ಹೊಟ್ಟೆಗಿಲ್ದೆ ಇದ್ದೋರು ಕಳ್ತನ ಮಾಡ್ದಿ
ಬೇಕಾರೆ ಅವುರ್ಗೆ ಸಾಯ ಮಾಡಿ
ಆದರೆ ನೀವು ಕಳುವುಗೆ ಹೋಗ್ತಕ್ಕಂತಾದ್ದು ತರುವಲ್ಲ ಸ್ವಾಮಿ'
'ಮಾಡ್ಕೆ ಆಗ್ಲಿ ಅಂತ್ಲೆ ನಾವು ಕಳ್ತನುಕೋಯ್ತಾ ಇವಿ
ನೀನೇ ಮಾಡೋದೇನು? ಇನ್ನೊಬ್ಬ ಮಾಡೋದೇನು? ೧೩೯೦
'ನಾವು ಎಷ್ಟೇಳುದ್ರೂವೆ ಹೋಗ್ಬ್ಯಾಡಿ ಅಂತ
ನಿಮ್ಬುದ್ದಿ ನೀವ್ ಬುಡಾದೆ ಇಲ್ಯಲ್ಲ

ಕಳ್ತಾನ್ಕೆ ಹೋಗೆ ದಾರೀ ಒಳುಗೆ ಬೂತುಪೇತುಗಳು
ಭಾರಿ ಅಲ್ಲಿ
ಗಾಳಿಗಾಚಾರಗಳು ಜಾಸ್ತಿ ಅಲ್ಲಿ
ಕಾಳ್ಯಾತ್ರೆ ಪಂಚ್ಯಾತ್ರೆ ಒಳುಗೆ ಹೋಗೊ ಹೊತ್ನಲ್ಲಿ
ನಿಮ್ ಜಡೇಮುಡೀನೆಲ್ಲ ಹಿಡ್ಕೋತವೆ
ಜಡೇ ಮುಡೀನೆಲ್ಲ ಹಿಡ್ಕೊಂಡು ಕೆಳೀಕೆ ಬಗ್ಲುಸ್ಕೊಂಡು
ಎದೆಮ್ಯಾಲೆ ಕೂತ್ಕೊಂಡು ರಕುತ್ತ ಹೀರ್ಬುಡ್ತವೆ
ನೀವು ದೇವ್ರು ಅನ್ನೋದು ಅವ್ಕೆ ಗೊತ್ತಿಲ್ಲ'
'ಎಷ್ಟೇಳುದ್ರೂ ಬ್ಯಾಡ ಬ್ಯಾಡ ಅನ್ತಕ್ಕಂತದೇ
ನಿಂಗೆ ಬಂದ್ಬುಡ್ತಲ್ಲ' ೧೪೦೦
'ನಾವು ಎಷ್ಟೇಳುದ್ರೂ ನೀವು ಕೇಳೋದಿಲ್ಲ
ನೀವು ಹಾಳಾಗೋದ್ರೂ ಹೋಗಿ ಅಲ್ಲೆ
ಸತ್ತೋಗಾದ್ರೂ ಹೋಗಿ' -

'ಕೆಟ್ಟ ನುಡಿಯ ನುಡಿದ್ಯೇನು ನೀ ಮುಟ್ಯಾಗ ಹೆಂಗಸ್ಯ
ಒಳ್ಳೆ ನುಡಿ ನಿನ್ನ ಬಾಯ್ಗಿ ಬರಲಿಲ್ವೆ |

ಒಳ್ಳೆ ನುಡಿ ನಿನ್ನ ಬಾಯ್ಗಿ ಬರನಿಲ್ಲ ಪಾರ್ವತಿ' ಅಂತ
ಉರಿಯ ಹಸ್ತದಲ್ಲಿ ತೊಡರಿದರು |

ಉರಿಯ ಹಸ್ತದಲ್ಲಿ ಹೊಡೀಬೇಕಂತ ಎತ್ತಿದರು ಕೈಯ್ಯ
ಜಡೆಯಿಂದ - ಕೆಳೀಕೆ ಬೀಳ್ತು ಕನ್ನಗತ್ರಿ |

ಜಡೇಲಿದ್ದ ಕನ್ಗತ್ರಿ ಕನ್ನ ಗೌರಮ್ಮನ ಮುಂದೆ ಬಿದ್ಕೊಂಡು
ಎಳನಾಗ್ರು ಬಾಯ್ಬುಟ್ಟಂಗೆ ಆಡ್ತಾದೆ | ೧೪೧೦

ಕನ್ನಗತ್ರಿಯ ಮಾಟಣವ ಚನ್ನಗೌರಮ್ಮ ಕಂಡುಕೊಂಡು
ಹೆಚ್ಕೊಂಡ್ರು ಕಣಕ್ಕ ಕಳ್ರು ಧರಿಯಲ್ಲಿ |

ಯಾರಿಂದ್ಲೂ ಕಳುವು ಘನುವಾಗ್ಲಿಲ್ಲ ಕಾಣಕ್ಕ
ನಮ್ಮ - ನಾರಾಯ್ಣನಿಂದ ಕಳುವು ಘನುವಾಯ್ತು |

ನಮ್ಮ ಸ್ವಾಮಿಯವ್ರು ಅಷ್ಟರವುರಲ್ಲ
ತಂತ್ರುಗಾರ ನಾರಾಯ್ಣನಿಂದ್ಲೆ ಇಷ್ಟಾದುದ್ದು
ಗೌರಮ್ಮನೂವೆ ಪಾರ್ವತಿಯಮ್ಮನೂವೆ ಮುನುಸಿಟ್ಕೊಂಡು
ಒನೊನ್ದು ಮಂಚುದ ಮ್ಯಾಲೆ ಹೋಗಿ ಮನಿಕೊಂಡ್ರು
ಸ್ವಾಮಿಯರ ಪಾದ್ಕೆ ಅಗ್ಗಿ ಕೊಡುನಿಲ್ಲ
ಈಸ್ವರನೂವೆ ಮುನ್ಸಿಟ್ಕೊಂಡು ಒಂದ್ಮಂಚುದ್ಮೇಲೋಗಿ
ಮನೀಕೊಂಡ ೧೪೨೦

ಕನ್ಗತ್ರಿ ಅಲ್ಲೇ ಒದ್ದಾಡ್ತಾ ಬಿದ್ದದೆ -

ತುಟಿಯ ಮಡುಸ್ದಂಗೆ ಪೆಟ್ಟಿ ಬೀಗ ಒಡುದಂಗೆ
ಒರಗೀತು ಶಿವನ ಪಡುಗ್ಸೆಲ್ಲ |

ಈಚೋರಿ ಇವುರು ಮುನಿಸಿಟ್ಕೊಂಡು ಮನಿಕೊಂಡ್ರು
ಆಚೋರಿ ಅವುರು ಮುನಿಸಿಟ್ಕೊಂಡು ಮುನೀಕೊಂಡ್ರು
ಕನ್ಗತ್ರಿ ಅಲ್ಲೆ ಒದ್ದಾಡ್ತ ಬಿದ್ದದೆ
ಇತ್ತಾಗೆ ನಾರಾಯ್ಣ
ಕಾಮುನ ಸುಟ್ಟ ಬೇಳ್ಮೆ ಭಸ್ಮಾಸುರನ ಕೊಂದ ಬೇಳ್ಮೆ
ಉರುಗನ ಸುಟ್ಟ ಬೇಳ್ಮೆ
ಈ ಮೂರು ಬೇಳ್ಮೆನೂವೆ ಕಲ್ಯಾಣ ಪಟ್ಟುಣದಿಂದ
ತತ್ತನೆ ನಾರಯ್ಣ ೧೪೩೦

ಒಂದು ಯೋಜಿನಿ ಬಂದ ಏಡು ಯೋಜಿನಿ ಬಂದ
ಕೈಲಾಸ್ದ ಬಾಕುಲಿಗೆ ಬಂದನಂತೆ |

ಕೈಲಾಸ್ದ ಬಾಕುಲಿಗೆ ಬಂದು ನಿಂತುಗಂಡು
ಭಾವಾ ಭಾವಾಂತ ಕರುದಾನು |

ಲೋಕಕ್ಕೆ ದೊಡ್ಡೋರೆ ನನ್ನ ಸಾಕ್ಷಾದ ಈಸ್ವುರುನ
ಮೂರು ಸರ್ತಿ ಕರದ ನಾರಾಯಣ |

ಮೂರು ಸರ್ತಿ ಕರುದ್ರೂವೆ ಯಾರೂ ಮಾತಾಡ್ನಿಲ್ಲ
ನಾ ಹೇಳೀದ ಮಾತ ಮರುತ್ಬುಟ್ಟು |

ನಾ ಹೇಳೀದ ಮಾತ ಮರುತ್ಬುಟ್ಟು ಮಡ್ದೀರತ್ರ
ಕಳುವುಗೋಯ್ತೀವಂತ ಹೇಳವ್ರೆ | ೧೪೪೦

ಕಳುವುಗೋಗ ಬ್ಯೇಡೀಂತ ಅಮ್ಮನವ್ರು ಹೇಳವ್ರೆ
ಅಮ್ಮನವರ ಮಾತ ಕೇಳವ್ರೆ |

ಕೆಟ್ಟ ನುಡಿಯನಾಡುದ್ಕ ನೀನು ಮುಟ್ಯಾಗೊ ಹೆಂಗಸ್ಯ
ಅಂತ್ಹೇಳಿ ಉರಿಹಸ್ತ ಎತ್ತವುರೆ |

ಜಡೆಕೈಯ ಹಂಗೆ ಹಿಡ್ಕೊಂಡು ಜಗ್ಸಿ ಕಿತ್ತವುರೆ
ಕನ್ಗತ್ರಿ ಕೆಳಗೆ ಬಿದ್ದಾದೆ |

ಕನ್ಗತ್ರಿ ಬಿದ್ದಾದೆ ಕನ್ನೆ ಗೌರಮ್ಮನ ಮುಂದೆ
ಬಿದ್ದೂ ಒದ್ದಾಡುರೋದ ನೋಡವ್ರೆ |

ನೀವೆಲ್ಲಾರೂ ಹೋಗಿ ಹಾಳಾದ್ರೂ ಹೋಗಿ
ಅಂತ ಗೌರಾಯಿ ಮುನುಸಿಟ್ಟು

ಅಕ್ಕ ಗೌರಾಯಿ ಮುನುಸಿಟ್ಟು ಒರುಗವ್ಳೆ
ಭಾವಾಜಿ ಇಲ್ಲಿ ಒರುಗವ್ನೆ ?

ನಾನಾದರಲ್ಲೀಗೆ ಹೋಗಿ ಸಾಸ್ತ್ರಾವ ಹೇಳಿ
ಏಳು ಜಿನಕಿಲ್ಲೆ ಬರುತೀನಿ ?

ಏಳು ಜಿನಕಿಲ್ಲೆ ಬರುತೀನಿ ಅಂದಿವ್ನಲ್ಲ
ನನ್ನ - ಮಾತು ಹುಸಿಯೋದು ತರುವಲ್ಲ |

ನನ್ನ ಮಾತು ಹುಸಿದಾರೆ ಇನ್ನೇನೂ ಭಗುವಂತ
ಮೇಗುದಲಿ ಮಳೆಯು ತಪ್ಪುತಾದೆ |

ಮೇಗುದಲಿ ಮಳೆಯು ತಪ್ಪುತಾದೆ ಪರಮಾತ್ಮ
ಭೂಮೀಲಿ ಬೆಳೆಯು ತಪ್ಪುತಾದೆ |

ಅಕ್ಕ ಅಕ್ಕ ಅಂತ ಅಕ್ಕರಿಂದ ಕೂಗುತಾನೆ
ಅಕ್ಕ ಗೌರಮ್ಮನವರ ಸುಳುವಿಲ್ಲ |

ಅಕ್ಕ ಗೌರಮ್ಮನವರ ಸುಳುವಿಲ್ಲ ಕೈಲಾಸದಲ್ಲಿ
ಅಕ್ಕರೆಯ ದನಿಯು ಮೊದಲಿಲ್ಲ |

ಈಗ ಈ ರೀತಿಯಾಗಿ ಮುನ್ಸಿಟ್ಕೊಂಡು ಮನುಗವ್ರಲ್ಲ
ಈಗ ನಾನು ಯಾರ ಮುನ್ಸು ಅಂತ ತೀರುಸ್ಬೇಕು
ಮೊದ್ಲು ಅಕ್ಕದೀರ ಮುನುಸನ್ನೆ ತೀರುಸ್ಬೇಕು -

ನಡುವನ್ನೆ ಕಟುಕೊಂಡು ಕೈಯನ್ನು ಜೋಡಿಸ್ಕೊಂಡು
ಗೌರಮ್ಮನ ಮಂಚುದತ್ರೂಕೆ ಬರುತಾನೆ |

'ಅಕ್ಕಾ ಅಕ್ಕಾ -

ಆರದ ಮುಡಿಯೋಳೆ ಅಪರಂಜಿ ಕುಂದನವೆ
ನನ್ನ - ದೊಡ್ಡೋರ ಮಗ್ಳೆ ಪಾರ್ವತದೇವಿ |

ದೊಡ್ಡೋರ ಮಗ್ಳೆ ಪಾರ್ವತಿ ಅಮ್ಮಯ್ಯ
ಇಂತ - ಹೆಡ್ಡು ಶಿವುನ ಮ್ಯಾಲೆ ಮುನುಸ್ಕಾಕೆ |

ಅಕ್ಕ ಗೌರಮ್ಮ ನಿನುಗೆ ಮುನುಸ್ಕಾಕೆ
ಅಮ್ಮಯ್ಯ ನೀವು ನೋಡುದ್ರೆ ದೊಡ್ಡವರ ಮಗ್ಳು
ಹನ್ನೇಡು ಕಂಬದ ಸಾಕ್ಷಿಯಾಗಿ ಬಂದಿರುವಂತ
ಮಾ ಪಾರ್ವತಿ ನೀವು
ಆ ಹೆಡ್ ಶಿವುನೊಂದ್ಗೆ ಮುನುಸ್ಕಾಕೆ ನಿಮುಗೆ
ನಿಮ್ಮ ಕೈ ಮೇಲಾಗಿ ಅವುರ್‌ಕೈ:ಕೀಳಾಗಿ
ಆಗ್ನಿಯನ್ನು ಕೊಡಿ ಮಾತಾಯಿ
ಹೋದ ಕಾರ್ಯಗಳು ಜಯಪರ್ತವಾಗುತದೆ -

ನಾರಾಯ್ಣನ ಮಾತ ಕೇಳಿದರು ಗೌರಮ್ಮ
ಸಡಗರದಿಂದ ಮೇಕ್ಕೆ ಎದ್ದರಾಗ |

ಸಡಗರದಿಂದ ಮೇಕ್ಕೆ ಎದ್ದ ಪಾರ್ವತಿ
ಚೆಂಬೀನಾಗಣಿಗೆ ಕೈಕೊಟ್ಟ |

ಆಗ - ಈಸ್ಪುರನ ಮಂಚುತ್ತಾಕ್ಕೆ ಬತ್ತಾರೆ ನಾರಾಯ್ಣ
ಈಸ್ಪುರುನ ಮುನ್ಸಿ ತಿಳಿಸೋದ್ಕೆ |

ಭಾವಾಜಿ ಭಾವಾಜಿ ನನ್ನ ಕಾನುಳ್ಗಾರ ಭಾವಾಜಿ
ನೀವು - ತಂದ ಗೌಡಿವ್ನೊಂದ್ಗೆ ಮುನುಸ್ಕಾಕೆ |

ಏಳಿಏಳಿ ಆಗ್ನಿಯನ್ನು ತಕ್ಕೊಳ್ಳಿ
ನಮ್ಮ ಕಾರ್ಯ ಜಯ್ಯಾಗ್ಲಿ
ಮುನಿಸಿಟ್ಕೊಂಡು ಮನೀಕೊಳ್ಳೋದುಂಟ ?
ಲೋಕುವೆ ಕತ್ಲಾಗೋಯ್ತದೆ -

ನಾರಾಯ್ಣನ ಮಾತ ಕೇಳಿದರು ಜಗದೀಶ
ಚಂಬೀನಾಗಣಿಗೆದ್ದು ಕೈಕೊಟ್ರು |

ಆಗಣಿಯನ್ನೀಸ್ಕೊಂಡು ಪಾದವನ್ನು ಕಲಕಿ
ಪರಮಾತ್ಮ ಆವಾಗ ಕೈಲಾಸದೊಳೀಕೆ ಬಂದ್ರು
ಶಿವುಪೂಜೆ ಗುರುಮಠುದಲ್ಲಿ ಬಂದು ಕೂತ್ಕೊಂಡ್ರ
ಶಿವುಪೂಜೆಯನ್ನು ಮಾಡುತ್ತಿರುವರು -

ಕೀಲುಕೀಲಿಗು ಬಸಿತ ತೋಳಲ್ಲಿ ರುದ್ರಾಕ್ಷಿ
ನೋಡುದೋರ್ಗೆ ಪಾಪ ಪರಿಯಾರ |

ನೋಡುದೋರ್ಗೆ ಪಾಪ ಪರಿಯಾರ ಈಬುತ್ಯ
ಲಿಂಗ ದೇವ್ರುಗೆ ಧರಿಸಿದರು |

ಉತ್ತನ್ನೆ ಹೊಲದಲ್ಲಿ ಬೆತ್ತ ಬೆತ್ಲೆ ಬೆಳಿಯೋಳೆ
ಪುಟ್ಟು ಮೈನೋಳೆ ಸಿವಾಸರಣೆ |

ಪುಟ್ಟು ಮೈನೋಳು ಸಿವಸರಣೆ ತುಂಬೆ ಪುಷ್ಮವ
ತಂದು ಲಿಂಗುಕ್ಕೆ ಧರಾಸಿದರು |

ಹಳ್ಳದ ಕೆರೆಯಲ್ಲಿ ಜಲನಾಡಿ ನೀ ಬೆಳಿಯೋಳೆ
ನಲ್ಲದ್ದು ನೆಗುವ ನಗುವೋಳೆ | ೧೫೧೦

ನಲ್ಲದ್ದು ನೆಗುವ ಲಕ್ಕೀಯ ಪತ್ರೇಯ
ಹರನು - ಮಲ್ಲಯ್ಯನೋರ ಪಾದ್ಕೆ ಎಡೆಯಾಯ್ತು|

ಏರೀಯ ಒತ್ಕೊಂಡು ನೀರ್ನಲ್ಲಿ ಬೆಳಿಯೋಳೆ
ಸೂರ್ಯಂಗೆ ಕರವ ನಮುಸೋಳೆ |

ಸೂರ್ಯಂಗೆ ಕರವ ನಮುಸುವಂತೆ ಕೆಂಡ್ತಾಮ್ರೆ ಪುಷ್ಮವ
ಪದ್ಮ - ಲಿಂಗಕ್ಕೆ ತಂದು ಧರುಸಿದರು |

ಹರಿಸಿಣದ ಸೀರೇಗೆ ಗಮ್ಮಿನಿಂದ ನೆರಿಹೂಡಿ
ಪುರುಸರಿಲ್ಲಾದೆ ಬಾಲೆ ಬಸುರಾದ |

ಪುರುಸರಿಲ್ಲಾದೆ ಬಾಲೆ ಬಸುರಾದ ಸಾಮಂತ್ಗೆ ಹೂವ
ಸಾಂತಲಿಂಗಕ್ಕೆ ಸ್ವಾಮಿ ಧರುಸಿದರು | ೧೫೨೦

ಸಂದಲಿ ಸೂತುಕವಾಗಿ ಮುಂಜಾವ್ಗೆ ಬಸುರಾಗಿ
ಗಂಡನಿಲ್ಲಾದೆ ಬಸುರಾದ |

ಗಂಡನಿಲ್ಲಾದೆ ಬಸುರಾದ ಗಣಿಗ್ಲೆಯ
ದುಂಡು ಲಿಂಗಕೆ ಧರಾಸಿದರು |

ಆಲಂಬಾಡಿಯೋಳೆ ಮೂಗುದಪ್ಪೀನೋಳೆ
ಕಾವಿ ಜೋತುರಕೆ ಅಮುರೋಳೆ |

ಕಾವಿ ಜೋತುರಕೆ ಅಮುರುವಂತ ಮುತ್ತುಗದೂವ
ಪದ್ಮಲಿಂಗಕ್ಕೆ ಧರಿಸಿದರು |

ಸಣ್ಣಾನೆ ಗಿಡುವೀಗೆ ಗಿಣ್ಣೆದು ಎಸುಳ್ಕೆದು
ಬಣ್ಣೀಸಿ ನೆಗುವ ನಗುವೇಳು | ೧೫೩೦

ಬಣ್ಣೀಸಿ ನೆಗುವ ನೆಗುವಂತ ಮಲ್ಲೀಗೂವೆ
ಅಣ್ಣ ಮಲ್ಲಯ್ಯಾಗೆ ಎಡೆಯಾದೊ |

ಅಂತರ್ಕ್ಷದ ಒಳಗೆ ನಿಂತ್ಕೊಂಡು ಬೆಳಿಯೋಳೆ
ಕೆಂಪೀನಿ ಮೈಯಿ ನಿಜಗೆಂಪಿ |

. ಕೆಂಪೀನಿ ಮೈನೋಳೆ ನಿಜುಗೆಂಪಿ ಕೆಂಡ್ಸಪ್ಪೆ ಹೂವು
ಬೆಳ್ಳೀ ತಟ್ಟೇಲಿ ಎಡೆಯಾಯ್ತು |

ಹಾದಿ ಒಳುಗುಟ್ಟೋಳೆ ಹಾದಿ ಒಳುಗೆ ಬೆಳಿಯೋಳೆ
ಪಾದ ಸೋಕುದ್ರೆ ಅಸಮಾನ |

ಪಾದ ಸೋಕುದ ಅಸಮಾನಗ್ಗುನ ಪುಷ್ಮವು
ಸ್ವಾಮಿ ಲಿಂಗಕ್ಕೆ ಎಡೆಯಾಯ್ತು | ೧೫೪೦

ಹಾದೀಲಿ ಹುಟ್ಟೋಳೆ ಹಾದೀಲಿ ಬೆಳಿಯೋಳೆ
ಹೋದು ಬಂದೋರ ಸೆರಗ ಹಿಡಿಯೋಳೆ |

ಹೋಗಿ ಬರೋರ ಸೆರಗ ಹಿಡಿವಂತ ಉತ್ಪಾನ್ಯ
ಮಂಗಳಾರತಿಗೆ ಮಡಗಿದರು |

ಅಂಡುಮಲ್ಗೆ ದುಂಡುಮಲ್ಗೆ ಪಾರುಮಾಳ
ಪಾರುಜಾತ್ಕಪುಷ್ಮ
ದಂಡೆಗೊಪ್ಪುವ ಸಿರಿತೊಳಸಿ |

ದಂಡೆಗೊಪ್ಪುವ ತೊಳ್ಸಿ ಪಚ್ಚೆ ತೆನೆಯ
ಪದ್ಮಲಿಂಗಕೆ ಸ್ವಾಮಿ ಧರುಸಿದರು |

ಹಳ್ಳಾದ ಕರೆಯಲ್ಲಿ ನೀನು ಮುಳ್ಳುನೊಂದ್ಗೆ ಬೆಳಿಯೋಳೆ
ಗಾವುದಕೆ ಗಮುನೆ ನಿಲುಬಾರೊ | ೧೫೫೦

ಗಾವುದಕೆ ಗಮುನೆ ನಿಲುಬಾರೊ ತಾಳೆಹೂವೆ
ನಮ್ಮ - ಮಲ್ಲಯ್ಯಗ್ಯಾಕೆ ಮರೆಯಾದೆ |

ಮಲ್ಲಯ್ಯುಂಗ್ಯಾಕೆ ಮರೆಯಾದೆ ತಾಳೆಹೂವೆ
ನೀನೂರಿಂದ ಹೊರಗೆ ಇರು ಹೋಗು |

ಎಲ್ಲ ಪುಷ್ಮೆಮೆಲ್ಲ ಪೂಜೆ ಹೊತ್ತುಗೆ ಬಂದೊ
ಹುಚ್ಚಿ ನೀ ಯಾಕೆ ಬರನಿಲ್ಲ |

ಹುಚ್ಚಿ ನೀ ಯಾಕೆ ಬರನಿಲ್ಲ ಉಮ್ಮತ್ತುಗ್ಗ ಪುಷ್ಮ
ನೀ ತಿಪ್ಪೆ ಕರೆಯಲ್ಲಿ ಇರುಹೋಗು |

ಕೆಂಡದ್ಮೇಲೆ ಮಡುಗಿದರೆ ಭೂಮಂಡಲ್ಕ ತುಡುಕುವುದು
ಗಂಧಕರಂಗ್ಡೀಲಿ ಇರುವಾದು | ೧೫೬೦

ಗಂಧಕರಂಗ್ಡೀ ಒಳುಗೆ ಇರುವಂತ ಕರ್ಪುರ ಸಾಂರಾಣ್ಯ
ಮಂಗಳಾರತಿಯ ಬೆಳಗಿದರು |

ಒಂದು ಬಾಳೆ ಎಲೆ ಮ್ಯಾಲೆ ಒಂಬತ್ತು ಕಜ್ಜಾಯ
ಬಂದಳದ ಮೊಸರು ಎರುದುಪ್ಪ |

ಬಂದಳದ ಮೊಸರು ಎರುದುಪ್ಪ ರಾಜೀರುಳ್ಳಿ
ನಮ್ಮ ಮಲ್ಲಯ್ಯ ಪಾದ್ಕೆ ಎಡೆಯಾಯ್ತು |

ಆಲಾಗ್ರ ಮೇಲೋಗ್ರ ಮೇಲಾದಂತ ಕಜ್ಜಾಯ
ಕೀರುಸಾಮೀಗೆ ತನಿಯಾಲು |

ಕೀರುಸಾಮೀಗೆ ತನಿಯಾಲ್ ಬೆಲ್ಲುದ ಪಾಯ್ಸ
ಹರನು - ಮಲ್ಲಯ್ನ ಪಾದ್ಕೆ ಎಡೆಯಾಯ್ತು | ೧೫೭೦

ಹಾಗಲಮರೆಯ ದಂಟು ಮೇಗೆ ಚಪ್ಪರಕಾಯಿ
ನಾಗೋನಲ್ಲೋರೆ ತಡುಗುಣಿ |

ನಾಗೋನಲ್ಲೋರೆ ತಡಗುಣಿ ತಾಳ್ದವು
ಶಿವುನ ಪಾದುಕ್ಕೆ ಎಡೆಯಾಯ್ತು |

ಕಲ್ಲಲ್ಲಿ ಹುಟ್ಟುವುದು ಕಲ್ಲಲ್ಲಿ ಬೆಳಿಯುವುದು
ಅಲ್ಲಲ್ಲೆ ಜಾರಿ ತಿರುಗುವುದು |

ಅಲ್ಲಲ್ಲೆ ಜಾರಿ ತಿರ್ಗುವಂತ ಮಾಗಳಿ ಬೇರು
ಉಪ್ಪುನ ಕಾಯ್ಕೆ ಎಡೆಯಾಯ್ತು |

ಬೆಟ್ಟುದ್ಮೇಲೆ ಒಬ್ಬಮ್ಮ ನೆಟ್ಟು ನೆಲೆ ಹೆಂಗಾಸು
ಹುಟ್ಟುತಲೆ ಅವ್ಳ ತಲೆಬೋಳು | ೧೫೮೦

ಹುಟ್ಟುತಲೆ ಅವ್ಳ ತಲೆಬೋಳು ನಲ್ಲೀಕಾಯಿ
ಎಳ್ಳು ಸಂಡಿಗ್ಗೆ ಎಡೆಯಾಯ್ತು |

ಯಾವ ತಪ್ಪಿದ್ರೂವೆ ಯಾವುಪ್ರಾದವಿದ್ರೂವೆ
ಕರ್ಪೂರವನ್ನು ಹಸ್ಕೊಂಡು ಮಂಗ್ಳಾರ್ತಿಯನ್ನು ಮಾಡಿ
ಊಟ ಮಾಡಿ ಅಂತ್ಹೇಳಿ
ಪಾರ್ವತಿ ಅಮ್ಮಯ್ಯನೋರು ಗೌರಮ್ಮನೋರು
ಗಿರುಜಮ್ಮನೋರು
ಮೂರು ಜನ ಮಡದೀರು
ಸಾಂಬ್ರಾಣಿ ಬೆಳುಗಿ ಸರಣಂದ್ರು -

ಬಿದ್ದೋಗಿದ್ದ ಕನ್ನತ್ರ್ಯ ಎತ್ತುಕೊಂಡು ಗೌರಮ್ಮ
ಮಲ್ಲುಗೆ ಹೂನೊಳ್ಗೆ ಮಡುಲ್‌ಕಟ್ಟಿ | ೧೫೯೦

ಮಲ್ಲುಗೆ ಹೂನೊಳ್ಗೆ ಮಡುಲ್ ಕಟ್ಟಿ ಗೌರಮ್ಮ
ಹೋಗ್ಬನ್ನಿ ಧೀರ್ನ ಅರಮನ್ಗೆ |

ಅವುನ್‌ಕೈಯಿ ಕೀಳಾಗ್ಲಿ ನಿಮ್ಕೈ ಮೇಲಾಗ್ಲಿ
ಹೋದ ಕಾರ್ಯವೆಲ್ಲ ಜಯಜಯ |

ಕನ್ನತ್ರಿಯನ್ನು ತಗ್ದು ಜಡೇವೊಳ್ಗಿಟ್ಕೊಂಡು ಪರಮಾತ್ಮ
'ಪಾರ್ವತ ಹೊಗಿದ್ದ ಬರ್ವಾ?'
'ಅಕ್ಷಯವಾಗ್ಲಿ ಹೋಗಿದ್ದು ಬನ್ನಿ
ಆದ್ರೆ ಕೈಲಾಸ್ದಲ್ಲಿ ಇರೂದ್ಕೆ ನಮ್ಗೆ ಭಯವಾಯ್ತದೆ
ಮಾಸ್ವಾಮಿ' -

'ಉಗ್ರಾಣದಲ್ಲಿ ಈರಣ್ಣವುನೆ ಭಂಡಾರ್ದಲ್ಲಿ ಬಸ್ವಣ್ಣವುನೆ
ಉಂಡುಂಡುಳ್ಕಾಡೊ ಹೊಟ್ಟೆ ಬೆನುಮಣ್ಣ | ೧೬೦೦

ಉಂಡುಂಡು ಉಳ್ಕಾಡೊ ಹೊಟ್ಟೆ ಬೆನ್ಮ ಮನುಗವ್ನೆ
ಮೂರ್ದನ ಗಂಡ್ಮಕ್ಕ ಅವ್ರೆ ನಿನ್ಗೆ ಭಯವೇನೆ |

'ಹೊತ್ತುವಾಗದೆ ಗುರುವೆ ಅಸ್ತಂಗವಾಯ್ತ ಬಂತು
ಕಳುವುದಕೆ ನಮ್ಗೆ ಒಳ್ಳೆಗಳ್ಗೆ |

ಕಳುವುದಕೆ ನಮ್ಗೆ ಒಳ್ಳೆಗಳ್ಗೆ ಆಗದೆ
ದೇವ್ರೆ - ಈಚೆಗೆ ನೀವು ದಯಮಾಡಿ |

ಮಡ್ದೀರ ಒಂದೀಗೆ ಮೂರು ಮಾತಾಡ್ಬುಟ್ಟು
ತಲೆಬಾಗ್ಲ ಬುಟ್ಟೀಚ್ಕೆ ಬರುತಾರೆ |

ತಲುಬಾಗ್ಲ ಬುಟ್ಟು ಈಚ್ಗೆ ಬರುವ ಕಾಲದೊಳಗೆ
ತಲುಬಾಗ್ಲು ಗೌಳಿ ನುಡಿದೀತು | ೧೬೧೦

ತಲಬಾಗ್ಲ ಗೌಳಿ ನುಡುದಂತ ಕಾಲದಲ್ಲಿ
ಸ್ವಾಮಿ ಈವತ್ತುನ ಪಯಣವು |

ಸ್ವಾಮಿ ಈವತ್ತುನ ಪಯಣ ಬ್ಯಾಡಾಂತ
ಪಾರ್ವತಮ್ಮಯ್ಯನ ನುಡಿವಾರು |

'ಏನಮ್ಮಯ್ಯ?' ಅಂತ ನಾರಾಯ್ಣ ಕೇಳ್ದ.
'ತಲುಬಾಗ್ಲಲ್ಲಿ ಗೌಳಿ ಸಕುನವಾಯ್ತದಪ್ಪ'
'ಗೌಳಿ ಏನ್ಕೇಳ್ತು ತಾಯಿ'
'ತಲೋಕ್ಕಂಟ್ಕ ! ತಲೋಕ್ಕಂಟ್ಕ ! ಅಂತ ಹೇಳ್ತದೆ'
'ತಲೋಕ್ಕಂಟ್ಕ ಅಂತ ಹೇಳೋದಿಲ್ಲ ತಾಯಿ

ತಲೆಬಾಗ್ಲು ಸಕುನ ಕಷ್ಟ ಅನ್ನಲು ಬ್ಯಾಡಿ
ಬೋಳೊಂಬೊ ಮಂಡೆ ಸವುರ್ದಾಂಗೆ |

ಬೋಳೆಂಬೊ ಮಂಡೆ ಸವುರ್ವಾಗೆ ಗುಂಡುಬ್ರಮ್ಮಯ್ಯ
ಸೂಲ ಏರಿ ಕೈಲಾಸ್ಕ ಬಂದನಂತೆ |

ಹಂಗೆ ಹೇಳ್ತದೆ ತಾಯಿ ಆ ಪಲ್ಲಿ'
'ಹಂಗಾರೆ ನಿಮ್ ಸವಾರಿ ದಯಮಾಡ್ಲಪ್ಪ' -

ಕೈಲಾಸ್ಪ ಬೀದಿ ಒಳುಗೆ ಇಬ್ಬರೂವೆ ಬರ್ತಾರೆ
ಇಬ್ರು ನಾರೀರು ಕೊಡನ ಎದುರಾಗಿ |

ತುಂಬಿದ ಕೊಡನ ಎದುರಾಗಿ ಬರುವುದ ನೋಡಿ
ನಮ್ಮ ಹರನು ಮಲ್ಲಯ್ಗೆ ಬಾಳ ಹೆಚ್ಚಾಳ | ೧೬೬೦

'ಅಮ್ಮ ತುಂಬುದ್ಕೊ ಕೊಡ ಹೊತ್ಕೊಂಡೋಗುವಂತ
ಮುತ್ತೈದೇರ
ಬನ್ರಮ್ಮ ಇಲ್ಲಿ' ಅಂದ್ರು -

ತುಂಬುದ ಗುಂಬದ ಒಳುಗೆ ಆಗನಿಯ
ಬುಡುಸ್ಕೊಂಡು
ಸೂರ್ಕಂಗೆ ನಿವೇದ್ಯ ಮಾಡಿದರು |

ಸೂರ್ಯುಂಗೆ ನಿವೇದ್ಯ ಮಾಡಿ
ತಮ್ಮ ಲಿಂಗುಕ್ಕು ನಿವೇದ್ಯ ಮಾಡಿ
ಶಿವ್ನೂ ನಾರಾಯ್ಣೂವಾ
ದಾರೀ ಒಳುಗೆ ಮೂರ್ ಪಟ್ಟೆ, ನೀರ್ ಬುಟ್ಟುಟ್ರು
'ಇದುನ್ನ ದಾಟ್ಕೊಂಡ್ ಹೇಗ್ರಮ್ಮ ಮುಂದುಕ್ಕೆ'
ಅದುನ್ನ ದಾಟ್ಕೊಂಡು ಸ್ವಾಮಿಯವ್ರ
ಇತ್ತಾಗ್ ಬಂದ್ಬುಟ್ರು ೧೬೭೦
'ನಾರಾಯ್ಣ ನಮ್ಮೋದ ಕಾರ್ಯ ಜಯಪರ್ತವಾಯ್ತದೆ
ಪರುವಿಲ್ಲ'
'ಹಂಗೆ ಆಗ್ಲಿ ಮುಂದುಕ್ಕೆ ದಯ್ಮಾಡಿ ಗುರುವೆ' ೧೬೭೨

೧೧ ಧರ್ಮದೇವತೆ ಮಾತು ಕೊಟ್ಟ ಸಂದು

ಸುವ್ವಾ ಬಾ ನನ್ನ ಬಸುವಯ್ಯ ಸುವ್ವಿ | ಸೊಲ್ಲು |

ಒಂದು ಯೋಜಿಣ ಬಂದ್ರು ಎರಡು ಯೋಜಿಣ ಬಂದ್ರು
ಮೂರೆಂಬೊ ಯೋಜಿಣ ಬರುತಾರೆ |

ಮೂರೆಂಬೊ ಯಜಿಣವ ಬಂದು ಶಿವನಾರಾಯ್ಣ
ಸುತ್ತ ಎಡಬಲವ ನೋಡಿದರಂತೆ |

'ನಾರಾಯ್ಣ ಈಚೋರಿ ಕಾಣ್ತಾದಲ್ಲ ತ್ಯಾಟ ಇದ್ಯಾರ್ದು?'
'ಇದು ಘನಪತುರಾಜುಂದು ಸ್ವಾಮಿ.'
'ಈ ತ್ಯಾಟ್ಕೆ ಇಪ್ಪಲಂಕಾರವಾಗದಲ್ಲ
ಸುಮಾರು ಅವುನೆಪ್ಪುರು ಮಟ್ಗಿರುಬೋದು ನಾರಾಯ್ಣ ೧೬೫೦
ಈ ತ್ಯಾಟ್ಕೋಗ್ಬೇಕು ನಡಿಯಪ್ಪ' ಅಂದ್ರು -

ಹಸುಗುದುರೆ ತ್ರೋಟ ಮಿಸುಗುದುರೆ ಎಳೆದ್ಯಾಟ
ಕೋದಂಡ ರಾಮಯ್ನ ಬಾಳೇಯ ತ್ಯಾಟ |

ಕೋದಂಡ ರಾಮಯ್ನ ಎಳೆಯ ಬಾಳೆ ತ್ಯಾಟ್ವಲ್ಲಿ
ನಮ್ಮ - ದೇವ ಸಂಕುರಸ್ವಾಮಿ ಮನುಗವ್ರೆ |

ಹರುಳ್ಳೆ ಬಂದಿತು ನಾರಾಯ್ಣ ಬರುಳ್ಳೆ ಬಂದಿತು ನಾರಾಯ್ಣ
ತತ್ತಪ್ಪ ಏಡು ಕೆಂದೆಳನೀರ |

ತತ್ತಪ್ಪ ಏಡು ಕೆಂದುಗ್ನೆಳ್ನೀರ ಅಂದಾರೆ
ಹರನ - ಪಾದುಕ್ಕೆ ಮರ ಬಗ್ಗುದುವಂತೆ |

ಅಸುಮಾನುವಾದ ಪಟ್ಟುಣಕೆ ದೆಸು ಮಾನ್ಯವರು
ಹೋಯ್ತಾರೆ ೧೬೬೦
ನಾವು ಸೊಲುಪ ಸಾಯ್ಯ ಮಾಡಬೇಕು |

ನಾವು ಸೊಲುಪ ಸಾಯ್ಯ ಮಾಡಬೇಕೂಂತ್ಹೇಳಿ
ಏಡು - ಕೆಂದೆಂಗೀನ ಮರ ಬಗ್ಗುತಾವೆ |

ಏಡು ಕೆಂದೆಂಗುನ ಮರ
ಶಿವುನ ಪಾದುಕ್ಕೊಂದು ನಾರಾಯ್ಣುನ ಪಾದುಕ್ಕೊಂದು
ಬಗ್ಗುದೊ -

ಉಲ್ಲೇಸದಿಂದ ಎಳ್ನೀರ ಕಿತ್ಕೊಂಡ್ರು
ಕನ್ನಗತ್ರೀಲಿ ಮೊಗಳ ತಗುದಾರು |

ಕನ್ನಗತ್ರೀಲಿ ಮೊಗಳ ತಗದಾರು ಶಿವನಾರಾಯ್ಣ
ಅವ್ರ - ದಣುವಿನ ಕಾರ್ಯ ಸಂತುರುಸ್ಕೊಂಡ್ರು |

'ನಾರಾಯ್ಣ ನಮ್ಗೂ ಸಯಾಕ್ರಾದ್ರಲ್ಲ
ಈ ಏಡು ತೆಂಗುನ್ ಮರ್ಕೆ ಆಸುರ್ಯಾದುವನ್ನು ಕೊಡಬೇಕೀಗ -

ಮೂರುಲೋಕಕೆ ನೀನು ಮುಕ್ಕಣ್ಣಯ್ಯ ಅಂತ
ಇನ್ನು ಒಂದು ಕಣ್ಣ ಕೊಡುತಾರೆ |

ಇನ್ನೊಂದು ಕಣ್ಣ ಕೊಟ್ಟು ಶಿವನಾರಾಯ್ಣ
ಮುಕ್ಕಣ್ಣಯ್ಯ ಅಂತ ಕರಿದಾರು |

ಅದುಕ್ಕೆ ತೆಂಗುನ್‌ಕಾಯ್ಗೆ ಮೂರ್ಕಣ್ಣು
ಅವುರು ಆಸುರ್ಯಾದುವನ್ನು ಕೊಟ್ಟುದ್ರಿಂದ
'ಹೋಗ್ರಪ್ಪ ಈ ಸಲ ಅಂತ್ಕೊಂಡು ಬೆಳೀಬೇಡಿ
ತಗ್ಗಿಬಗ್ಗಿ ಬೆಳೀರಿ' -

ಕೆಂದೆಂಗೆಳ್ನೀರ ಕುಡ್ದು ಶಿವನಾರಾಯ್ಣ
ತ್ಯಾಟ ಬುಟ್ಟು ಈಚ್ಗೆ ಬರುತಾರೆ |

ತ್ಯಾಟ ಬುಟ್ಟು ಈಚ್ಕೆ ಬಂದ್ರು ಶಿವನಾರಾಯ್ಣ
ದೊರೆಯ ಚಮಾಲ್ ತ್ಯಾಟುಕೆ ಬರುತಾರೆ |

ಬಾಡು ಬಾಕುಲ್ಮಳ್ಳ ದಾರೀಯ ಬುಡುಸ್ಕೊಂಡು
ಅವರು - ಚಮಾಲ್ ತ್ಯಾಟುಕ್ಕೆ ಬರುತಾರೆ |

'ನಾರಾಯ್ಣ ಈ ತ್ಯಾಟ ಯಾರ್ದು ?'
'ಘನಪತುರಾಜುನ್ದು ಸ್ವಾಮಿ'
'ಆಹ್ಹಾ ಬಾಳ ಸುದ್ದುವಾಗದೆ !' ಅಂದ್ಬುಟ್ಟು
ಆ ಚಮಾಲ್ ತ್ಯಾಟ್ಕೆ ಬಂದ್ರು
ಕಡೇಚಾರಿವೊಳುಗೆ ದಾಳಿಂಬಿ ರುಕ್ಷ ಇತ್ತು
ಅದು ತನ್ನ ಜೊತೆಗಾರ್ರುಗೆಲ್ಲ.
'ಅಕ್ಕ ಅಕ್ಕ ಮರುಗ್ ಮಲ್ಲಿಗೊಳ್ಯಾ
ಸುರುಗಿ ಸ್ಯಾಮಂತುಗ್ಗೊಳ್ಯಾ
ಸಂಪೀಗೆ ವನುಗಳ್ಯಾ
ಜಾಜೀಯ ವನುಗಳ್ಯಾ
ಶಿವನೂ ನಾರಾಯ್ಣನೂವೆ ಹೊಟ್ಟೆಗಿಲ್ಲದವರಾಗೆ,
ಬಟ್ಟೆಗಿಲ್ಲದವರಾಗೆ ಕಳ್ತಾನುಕ್ಕೋಯ್ತಾರಲ್ಲಕ್ಕ' -

ದಾಳಿಂಬಿರುಕ್ಷ ಎಲ್ಲಾರ್ಗೂ ಹೇಳ್ಬುಟ್ಟು
ಅರಬಾಯ ಬುಟ್ಟು ನೆಗುತಾದೆ |

'ನಾರಾಯ್ಣ ದೊರೆ ಇರೋದು ಸರಿಯೆ
ಅವ್ನು ತ್ಯಾಟುಗಳ ಮಡುಗಿರಾದು ಸರಿಯು ' -

ಅಲ್ಲಿಂದ ಮುಂದುಕ್ಕೆ ಬತ್ತರೆ ಶಿವನಾರಾಯ್ಣ
ಮದಗದೇರಿ ಮ್ಯಾಕೆ ಬರುತಾರೆ |

'ನಾರಾಯ್ಣ ಇದ್ಮಾರ್ದು ಈ ಕೆರೆ'
'ಘನ್ಪತುರಾಜುಂದು ' -

ಕುಡುಗದೊಂಕನೇರಿ ನೀರೆಲ್ಲ ಪನ್ನೀರು
ಕಂಚೀನ ತೂಬು ಧಣೇರಂದೊ |

ಕಂಚೀನ ತೂಬು ಧಣೇರಂದ ಕಾಲದಲ್ಲಿ
ನಮ್ಮ - ಶಿವನು ಮಲ್ಲಯ್ಯ ನೋಡಿ ನೆಗುತಾರೆ |

ಆ ಕೆರೆ ಏರಿ ಮ್ಯಾಲೆ ಬರುವಾಗ
ಆ ಕೆರೇಲಿ ಒಂದರಕ್ಕಿ ಸಬ್ತವಾಯ್ತು
'ನಾರಾಯ್ಣ ಅದೇನು ಅಲ್ಲಿ ಕೂಗಿದ್ದು?'
'ಮಾಸ್ವಾಮಿ ದರಕ್ಕಿ'
'ನಾರಾಯ್ಣ ಅದ್ಯಾಕಪ್ಪ ಹಂಗ್ ಕೂಗೀದು ?'
'ಸ್ವಾಮಿ ಆ ಕೆರೆ ಒಳುಗೆ ಸುಮ್ಮುನೆ ನಿಂತ್ಕೋತದೆ ಅದು
ಯಾವುದಾದ್ರೂ ಒಂದು ಸೀಗ್ತಿಯೋ ಸತ್ತೆಯೋ
ಮೀನೋ ಹೋಗಿ
ಅದ್ರು ಕಾಲ ಕುಟುಕುದ್ರೆ
ಶಿವನಾರಾಯ್ಣ ಈಗ ಕೊಟ್ಮಪ್ಪ ಹಾರ್ವ ಅಂದ್ಬುಟ್ಟು
ನಮ್ಮ ತೋತ್ರ ಮಾಡ್ಬುಟ್ಟು ಅದು ಹಾರ ಮಾಡ್ತದೆ ಸ್ವಾಮಿ
ಅದುಕೆಂಗೆ ಹಾರ ಸಿಕ್ತದ್ದೊ
ಅದರಂತೆ ನಮ್ಗೂ ಸಿಕ್ತದೆ ನಡಾರಿ'
ಆ ಕೆರೆ ಏರಿ ಬುಟ್ಟು ಮುಂದುಕ್ ಬತ್ತರೆ
ಮುಂದುಕ್ ಬಂದು ನಿಂತ್ಕೊಂಡು
ಧರುಂದೇವ್ತಿಯನ್ನ ಸತ್ಯದೇವ್ತಿಯನ್ನ ಕೂಗಿ ಕರೀತಿದ್ದಾರೆ.
ಸತ್ಯದೇವ್ತಿ ಧರುಂದೇವ್ತಿ ತಕ್ಷಾಣದಲ್ಲಿ ಬಂದ್ರು
ಶಿವನಾರಾಯ್ಣರ ಪಾದುಕ್ಕೆ ಬಂದು ನಮುಸ್ಕಾರ ಮಾಡ್ತರೆ
'ಏನ್ ಕಾರಣ ಕರುದ್ರಿ ಬುದ್ಧಿ?' ಅಂತರೆ
'ಅಮ್ಮಾ ಹೋಗೋದು ಅಸ್ಮನವಾದ ಪಟ್ನ
ಹೋಪ್ರ ಹೆಂಗಮ್ಮಾ?'
'ಬುದ್ಧಿ ಧರ್ಮ ಕರ್ಮವ ತೂಕ ಮಾಡ್ತೀವಿ'
ಅಂತ ಹೇಳ್ಬುಟ್ಟು ತೂಕುಕ್ಕಾಕುದ್ರಂತೆ
'ಸ್ವಾಮಿ ಅಂಕಾರ ಪಟ್ಕೋರು ವಾಂಕಾರ ಪಡ್ಕೇಕು' ಅಂದ್ರು
ಆ ಧೀರ್ನ ಪಟ್ನವ ನಿಮ್ಮಂತೆ ಮಾಡ್ತೀವಿ
ಹೋಗ್ಬನ್ನಿ ಸ್ವಾಮಿ ಒಳ್ಳೇದಾಗ್ಲಿ' ಅಂತ ಹೇಳುದ್ರು
ಸೂರ್ಯಮಂಡ್ಲ ಚಂದ್ರು ಮಂಡುಲ್ಕೆ ಬಂದ್ರು

ಯಾರು ? ಶಿವನಾರಾಯಣರು
ಚಂದ್ರ ಸೂರ್ಯಾದಿಗಳ ರಥವನ್ನ ನಿಲ್ಲುಸ್ಬುಟ್ರು
'ಏನ್ರಪ್ಪಾ ಸೂರ್ಯ ಚಂದ್ರಾದಿಗಳ
ಹೋಗೋದು ಅಸುಮಾನವಾದ ಪಟ್ಣ
ನಿಮ್ ಸಾಯ್ಯ ಸೊಲ್ಪ ಬೇಕ್ರಪ್ಪ ೧೭೪೦
ಏನ್ ಸಾಯವಾದೀರಿ ?'
'ಸ್ವಾಮಿ ಆ ಧೀರುನ ಪಟ್ಣುಕ್ಕೆ ಕಾಲ್ಮಡುಗಿದ ತಕ್ಷಣ
ಧರುಂಗೊಡೆ ಹಿಡೀತೀವಿ
ಆ ಪಟ್ಣ ಕತ್ಲೆ ಮಾಡ್ತೀವಿ
ಮಾಶ್ರ ಪ್ರಪಂಚುಕೆಲ್ಲ ಬೆಳುಕ್ಕೊಡ್ತೀವಿ
ಆ ಧೀರುನ ಪಟ್ಣುಕೆ ಹಗುಲ್ಗತ್ಲೆ ಗವುಸ್ಬುಡ್ತೀವಿ'
'ನಾವು ಕಳುವು ಮಾಡೋನ್ಗಂಟ ದಯಮಾಡಿ' ಅಂತ್ಹೇಳಿ
ಎಲ್ಲುದ್ರುಲೂ ಅಸುರ್ಯಾದ ತಕ್ಕಂಡು
ಅಗಳೇರಿ ದಂಡ್ಯಕೆ ಬರುತಾರೆ. ೧೭೪೯

೧೨. ಶಿವನಾರಾಯಣರನ್ನು ಕಾಳಿಂಗ ಸರ್ಪ ಕಾಪಾಡಿದ ಸಂದು

ಸುವ್ವಾ ಬಾ ನನ್ನ ಬಸುವಯ್ಯ ಸುವ್ವಿ | ಸೊಲ್ಲು |

ಓರುಗಲ್ಲು ಎಂಬೋದು ಧೀರಘನಪತಿ ಕ್ವೋಟೆ ೧೭೫೦
ಹೇಳುವುದಕೆ ಕ್ವೋಟೆ ಅಸುದಾಳ |

ಮುಗುಲು ಮುಟ್ಟುವ ಕ್ವೋಟೆ ನೆಲಕೆ ಸೋಕದ ಕ್ವೋಟೆ
ಜಲದಲ್ಲಿ ತೇಲಾಡೊ ಘನಕ್ವೋಟೆ |

ಏಳುಸಮುದ್ರದ ನಡೂನಲ್ಲಿ ಏಳುಸುತ್ತಿನ ಕ್ವೋಟೆ
ಮೇಲೆ ಡೆಂಕಾಣಿ ಹುಲುಮುಖ |

ಅಗಳೀಗೆ ಬಂದು ನಿಂತುಕೊಂಡು ಶಿವನಾರಾಯಣ
ಅವನಗಳೀನ ಸಂಭ್ರಮವ ನೋಡಿದರಾಗ |

'ನಾರಾಯ್ಣ'
'ಏನು ಭಾವ?'
'ನಾವು ಬಂದ ಕಾರ್ಯ ಹೆಂಗಪ್ಪ?' ೧೭೬೦
'ಭಾವಾಜಿ ಹಂಗೆ ನೋಡ್ತಿರಿ' ಅಂತ್ಹೇಳ್ಬುಟ್ಟು ನಾರಾಯ್ಣ
ಕಾಮುನ ಸುಟ್ಟ ಬೇಳ್ಮೆ ಭಸ್ಮಾಸುರನ ಸುಟ್ಟ ಬೇಳ್ಮೆ
ಉರುಗುನ ಸುಟ್ಟ ಬೇಳ್ಮೆ ತಮ್ಮುಡೀಲಿತ್ತಲ್ಲ
ಬೇಳ್ಮೆ ಬೂದಿ ತಕ್ಕಂಡು ಮಂತ್ರುಸಿ 'ಊಫ್' ಅಂತಲೂದುದ್ರು
ಊದುದ ತಕ್ಷಣದಲ್ಲೆ
ಕಪ್ಪುಸಮುದ್ರ ಉಪ್ಪುಸಮುದ್ರ ಹಾಲಸಮುದ್ರ ಜೇನಸಮುದ್ರ
ಆಮ್ಯಾಲೆ ಮೊಸ್ರುಸಮುದ್ರ ಮಜ್ಜಿಗೆಸಮುದ್ರ ಮರೆಯಾಗ್ಬುಟ್ಟೊ
ಮುನುಮುಂದುಕ್ಕೆ ಬತ್ತಾವ್ರೆ ಶಿವನಾರಾಯ್ಣ
ಸೀನೀರ ಸಮುದ್ರುತ್ತಾಕೆ ಬಂದು ನಿತ್ಕೊಂಡು
'ನಾರಾಯ್ಣ ಒಳೆ ಬತ್ತದೆ ನಿಲ್ಲು ನಿಲ್ಲು ಇಲ್ಲಿ' - ೧೭೭೦

'ಒಳಿಯಲ್ಲ ಈಸ್ವರ ಒಳಿಯಗಾಜಿನ ಕ್ಯಾಟೆ
ಸುತ್ತ ಹುಲ್ಕರಡಿ ಗಜಸಿಮ್ಮ |

ಸುತ್ತ ಹುಲ್ಕರಡಿ ಗಜಸಿಮ್ಮ ಅವುನ್ ಕ್ಯಾಟ್ಗೆ
ಬೋರುಗುಡ್ತಾವೆ ಬೆಳುಗಾನ |

ಬೋರುಗುಡ್ತಾವೆ ಬೆಳಗಾನ ಹುಲ್ ಕರಡಿ
ನಡಿಯಪ್ಪ ಗುರುವೆ ಈಸ್ವರ |

'ನಾರಾಯ್ಣ ಇದೇನ್ ಇಲ್ಲಿ ಬೆಳ್ಳುಗೆ ಕಾಣದು?'
'ಗುರುಪಾದುವೆ ಸೀನೀರ್ ಸಮುದ್ರ ಇದು
ತನ್ನಗಳು ಸುತ್ತ ನೀರ್ ತುಂಬುಸವ್ನೆ
ಕ್ಯಾಟೆ ಒಳೀಕೆ ಬರಕೆ ಯಾರ್ಗೂ ಶಕ್ತ್ಯವಾಗ್ದೆ ಇರ್ಲಿ ಅಂತ ೧೭೬೦
ಈ ಸಮುದ್ರ ದಾಟಿ ಆಮ್ಯಾಲೆ ಮುಂದುಲ ಕ್ಯಾಟೆಗೋಗ್ಬೇಕು'
'ಈ ನೀರ್ ದಾಟ್ಬೇಕಾದ್ರೆ ನಾವ್ಯಾಗ್ ಮಾಡ್ಬೇಕು ನಾರಾಯ್ಣ?'
'ಹಾಯ್ತೀನಿ ಅಂದ್ರೆ ಆಳ, ದಾಟ್ತೀನಿ ಅಂದ್ರೆ ಅಗಲ
ಯಾಗೋಗ್ಬೇಕಪ್ಪ ಈ ಕ್ಯಾಟ್ಗೆ
ಇದುಕ್ಕೆ ತಕ್ಕ ಬುದ್ಧಿ ಹುಡುಕ್ಬೇಕು' -
ನಾಗುಬೆತ್ತದ ಕಡ್ಡಿಯ ನಾಕು ಪಾಲಿಗೆ ಸೀಳುದ್ರು
ಕಟ್ಟಿದರು ದೊಡ್ಡ ಹರುಗುಲವ |

ಈ ನಾಗುಬೆತ್ತದ ಕಡ್ಡಿಯನ್ನು ನಾಲ್ಕು ಪಾಲ್ಗೆ
ಸೀಳ್ಮಡುದ್ರು
ಕ್ಯಾಟೆ ಅಗುಳ್ ದಿಕ್ಕ ತಿರುಗ್ ನೋಡ್ದ ನಾರಾಯ್ಣ
ಎಪ್ಪತ್ತೊರುಸ್ಪ ಒಂದು ಮುದಾನೆ ೧೭೯೦
ಕ್ಯಾಟ್ಯ ಒರೀಕೊಂಡು ನಿದ್ರೆ ಮಾಡ್ತಿತ್ತು
ಕೆಳೀಕೆ ಬಿದ್ಕೊಂಡ್ಬುಟ್ರೆ ಕಷ್ಟಾ ಅಂತ
ನಾರಾಯ್ಣುನ ಕಣ್ಣು ನಾಕಾ ಕಡೀಗೂ ಆಡ್ತಿದ್ದೊ
ಆ ಆನೆಯನ್ನು ಕಂಡ್ಕೊಂಡು
ತನ್ನ ಇಷ್ಟುಸ್ ಚಿಕ್ಕ ತಗು ಬುಟ್ಟುಟ್ಟ ಆನ್ಗೆ

ಗರಗರಗರ ಅನ್ಕೊಂಡ್ ಹೋಗಿ ಆನೆ ಸೀಳ್ಬುಡ್ತು
ಯಾವ್ದು ? ಇಷ್ಟುನ್ ಚಕ್ರ !
ಆ ಚರುಮ್ವ ಅಳ್ಕೊಂಡು ಮಡೀಸಿ ಮಡಿಕೊಂಡ್ರು -

ನಾಗುಬೆತ್ತದ ಕಡ್ಯ ನಾಕು ಪಾಲೀಗೆ ಸೀಳಿ
ಕಟ್ಟಿದರು ದೊಡ್ಡ ಹರುಗುಲವ | ೧೪೦೦

ಆನೆಚರ್ಮದಿಂದ ನಾಗುಬೆತ್ತದಿಂದ ಹರುಗ್ನಾ ಕಟ್ಟುದ್ರು
'ಕೂತ್ಕೊಳಿ ಮಾಸ್ವಾಮಿ' ಅಂದ
ಯಾರು ? ನಾರಾಯ್ಣ -

ಕನ್ನಗತ್ತೀಯನ್ನು ಹುಟ್ಟು ಮಾಡೀಕೊಂಡು
ಸೇರಿದರು ದೊಡ್ಡ ಕ್ವಾಟೆ ಬುಡಕಾಗಿ |

ಸೇರಿದರು ದೊಡ್ಡ ಕ್ವಾಟೆ ಬುಡಕೆ ಶಿವನಾರಯ್ಣ
ಕನ್ನಗತ್ತರಿಯ ಕ್ವಾಟೇಗೆ ತಗುಲೀಸಿ |

ಕ್ವಾಟೆಗೆ ಕನ್ನಗತ್ರಿ ತಗುಲಿಸುದ ತಕ್ಷಣ
ಅಡಕದಟ್ಟೆ, ಒಡಿಯಾಂಗೆ ಒಡುದ್ಬುಡ್ತು -

ಆನೆಗಾತ್ರ ಗುಂಡು ಕಸ್ದು ಮ್ಯಾಕೆ ಬಿದ್ಬುಡ್ತು ೧೪೧೦
ಮುಳುಗೋಯ್ತು ದೊಡ್ಡ ಅರುಗೂಲ |

ಹರುಗ್ಗ ಮುಳೀಕತು
ಶಿವ್ನೂ ನಾರಾಯಣ್ನೂ ಮುಳುಗೋದ್ರು
ಆಳ ಕಂಡೋರೆ ಇಲ್ಲ
ಒಬ್ರು ಕತ್ತ ಒಬ್ರು ತಬ್ಕೊಂಡು
'ಕೆಟ್ಟೆಲ್ಲಪ್ಪ ನಾರಾಯ್ಣ - ,

ನಮ್ಮಡದಿ ಹೇಳ್ದ ಮಾತ ಮೀರಿ ನಾ ಬಂದುದಕೆ
ಮಾಯ್ದಿದಿವಾಸ ನಮ್ಗೆ ಬತ್ತಪ್ಪ |

ನಾರಾಯ್ಣ ಕೆಟ್ಟೆ, ನಾನು'
'ಈಸ್ಪುರ ನಾನೂ ಕೆಟ್ಟೆ, ಇದೆಲ್ಲ ಇಸುಬ್ರಮ್ಮುನ
ಸಾಪ ಭಾವಯ್ಯ" ೧೪೨೦

ಕೆಟ್ಟೆ, ಅನ್ನೋ ಮಾತ ಕೇಳ್ಕೊಂಡು ಕಾಳಿಂಗಸರ್ಪ
ಮದಗದ ಮೇಲಿಂದ ಏಳುತಾದೆ |

'ಒಹ್ಹೊ ಶಿವುನೂ ನಾರಾಯ್ಣನೂ ಅಳ್ತರಲ್ಲಪ್ಪ
ನಮ್ಮ ತಿರುಸ್ಕೊಕಾರ ಮಾಡ್ಕೋರು ಶಿವನಾರಾಯ್ಣ

ಅವುರೇ ಬಂದು ಇಲ್ಲಿ ಪ್ರಾಣ ಬುಟ್ಮ್ಯಾಕೆ
ನಾನು ಬದುಕುದ್ರೇನು ಸತ್ರೇನು?
ಅವುರ್ ಪ್ರಾಣ ಹೋಯ್ತಾವು ನನ್ ಪ್ರಾಣ
ಹೊಂಟೋಗ್ಲಿ' ಅಂದ್ಬುಟ್ಟು
ಮದುಗದ ಮೇಗ್ರಿಂದ ಅದ್ದೂ ಜಿಮ್ಮುಡ್ತು ನೀರ್ಗೆ
ಒಬ್ರು ಕತ್ತ ಒಬ್ರು ತಬ್ಕೊಂಡು ಅಳ್ತಾ ಅವ್ರೆ
ಶಿವನೂ ನಾರಾಯ್ಣನೂ - ೧೪೩೦

ಹೆದುರ್ಕ್ಯಾಡಿ ಗುರುವೆ ನಾನೂ ಬಂದಿವ್ನಿ
ಪನ್ನಂಗಧರನು ಸೆಡೆಯ ಕೊಟ್ಟು |

ಪನ್ನಂಗಧರನು ಸೆಡೆಯಕೊಟ್ಟು ಕಾಳಿಂಗ ಸರ್ಪ
ಅವುರಿಬ್ರೂ ಪಾದಾನು ಸುತ್ಕೊಂಡು |

ಪಾದ್ವ ಸೆಡೆಯ ಮ್ಯಾಲೆ ಮಡುಗುಸ್ಕೊಂಡು ಕಾಳಿಂಗ
ಅಗುಳಿಂದ ಈಚ್ಗೆ ತರುತಾದೆ |

ಅಗುಳಿಂದ ಮ್ಯಾಕೆ ತಂದುಬುಟ್ಟು ಕಾಳಿಂಗ ಸರ್ಪ
ಅವ್ರ - ಪಾದ್ದಲ್ಲಿ ಹೋಗಿ ಮನುಗೀತಂತೆ |

'ಪರುಮಾತ್ಮ ಕಾಳಿಂಗ ಅಂತ ನನ್ನ ಕರುದಿದ್ರೆ
ನಾನು ತಂದು ಈಚುಗೆ ಬುಟ್ಟುಡ್ತಿದ್ದೆ ೧೪೪೦
ಮ್ವಾಸ್ವಾಗಿ ಪ್ರಾಣುವನ್ನು ಬುಟ್ಟುಡ್ತಿದ್ರಲ್ಲ ಗುರುವೆ'
'ಸರ್ಪ ಮಾಡಿದ ಕಷ್ಟ ನೋಡಿದ್ಯಪ್ಪ ನಾರಾಯ್ಣ?'
'ನೋಡ್ದಿ ಬುದ್ಧಿ'
'ಇದ್ಕೆ ವರುವನ್ನು ಕೊಡು.'
'ಏನ್ ವರುವನ್ನು ಕೊಡ್ಲಿ ಮಾಸ್ವಾಮಿ?'
'ತ್ರಿಸ್ಟೆಕಾರ ಹಲ್ಲ - ನಾಕಲ್ಲ ತ್ರಿಸ್ಟೆಮಾಡು.'
ಕಾಳಿ ಕಂಕಾಳಿ ಕರಾಳಿ ಯಮದೂತಿ ಅನ್ನುವಂತ ಹಲ್ಲಳ
ನಾಲಕ್ಕು ಹಲ್ನೂ ತ್ರಿಸ್ಟಂಕಾರ ಮಾಡುದ್ರು ನಾರಾಯ್ಣ
'ನಾರಾಯ್ಣ ಹಲ್ಕೊಟ್ಯಾ?'
'ಕೊಟ್ಟಿದ್ದೀನಿ ಮಾಸ್ವಾಮಿ' ೧೪೫೦
'ನಾನು ಇಸಾ ಕೊಟ್ಟುಡ್ತೀನಿ ಅಪ್ಪ' ಅಂತ್ಹೇಳಿ
ಈಸ್ಪುರ ಇಸಾ ಕೊಡ್ತರೆ -

ಸರುಪನ ಬಾಯ್ಗೆ ಒಂದ್ ಸೊಲುಗಿಸ ಹಿಂಡುದ್ರು
ನರುಮನುಸನ ಬಾಯ್ಗೆ ಒಂದ್ವಡಿಸ |

'ನಾರಾಯ್ಣ ಇದು ಬಾಳ ಕಷ್ಟ ಮಾಡದೆ
ನಮ್ಮ ಕಿರೀಟದಲ್ಲಿ ಒಂದು ನಾಗುರತ್ನದ ಹರುಳ್ ಕಿತ್ತು

ಅದುಕ್ಕೆ ಕೊಟ್ಟುಡಪ್ಪ' ಅಂದ್ರು
'ನೀನು ಈ ಹರುಳ ದವಡೆ ಒಳುಗೆ ಮಡೀಕೊಂಡಿದ್ದು
ಕತ್ಲೇಲಿ ಹಾರ ಹುಡ್ಕಕೋದಾಗ
ಎಲ್ಲಾರೂ ಮಡೀಕೊಂಡಿದ್ದು ಬೆಳುಕ್ನಲ್ಲಿ
ಚೆಂಚಾರ ಮಾಡಪ್ಪ' ೧೪೬೦
ಅಂತ ಆಸುರ್ವಾದವನ್ನು ಮಾಡುದ್ರು
'ಗಂಡನ ಕಾಣ್ದಾಂಗೆ ಹೆಡ್ತಿ ಸಂಪಾದ್ನೆ ಮಾಡಾದು
ಹೆಡ್ತೀಗ್ ಕಾಣ್ದಾಂಗೆ ಗಂಡ ಸಂಪಾದ್ನೆ ಮಾಡದು
ಆ ಹಣುವನ್ನು ಭೂಮ್ಗೆ ಹೂತಾಕ್ಬುಡ್ತರೆ
ಸ್ಥಾಯೋ ಹೊತ್ನಲ್ಲಿ ಅವ್ಳೆ ಇವುನ್ಹೇಳೋದಿಲ್ಲ
ಇವುನ್ಗೆ ಅವ್ಳೆಹೇಳೋದಿಲ್ಲ ಅದು ಭೂಮಿ ಪಾಲೆ
ಆ ದ್ರವ್ಯದ ಮೇಲೆ ನೀನು ಪಾರ ಇರಪ್ಪ
ಅದೇ ನಿನ್ವಾಸ
ಸರ್ಪನ ಮಂಡೆ ಸವುರಿ ಕಳುಸ್ಬುಟ್ರು ೧೪೭೦

೧೩. ಓರುಗಲ್ಲು ಬೀದಿಗಳ ಸಂಚಾರ ಮಾಡಿದ ಸಂದು

ಸುವ್ವಾ ಬಾ ನನ್ನ ಬಸುವಯ್ಯ ಸುವ್ವಿ | ಸೊಲ್ಲು |

ಶಿವನಾರಾಯಣ ಕ್ಯಾಟೆ ಮುಂದುಕ್ಕೆ ಬಂದು
ಕಾಯೊಡ್ದು ಹಣ್ಮುರ್ದು ಕಲ್ಪುರ ಮಂಗ್ಳಾರ್ತಿಯನ್ನು
ಮಾಡ್ತರೆ ಕ್ಯಾಟ್ಗೆ
ಕನ್ನಗತ್ರೀಗೂ ಧೂಪ ಹಾಕ್ತರೆ
'ಈ ಸಲ ನಿಮ್ಕೈಲಿ ಕನ್ನಗತ್ರಿ ತಕೊಳಿ ಸ್ವಾಮಿ' ಅಂತ ಕೊಡ್ತನೆ
ಯಾರು? ನಾರಾಯ್ಣ
'ಕಲ್ಯಾಣ ಪಟ್ಟುಣದಲ್ಲಿರೋ ಕನ್ನುದ ಬೊಮ್ಮಯ್ಯನವುರೆ
ನಿಮ್ಮ ಶ್ರೀಪಾದ್ವೇಗತಿ
ಕಲ್ಯಾಣಪಟ್ಟುಣದಲ್ಲಿರೋ ಚ್ಯಾರ ಚಿಕ್ಕಯ್ಯನವುರೆ
ನಿಮ್ಮ ಪಾದ್ವೆ ಗತಿ' ಅಂದ್ಬುಟ್ಟು -

ತಗ್ದು ಇಂಟೇಯ ಈಚ್ಗೆ ಮಡಗಿದರು ೧೪೪೦
ಬಾಳೆಕಾಯಿ ಬುಟ್ಟಂಗೆ ಬುಡತಾದೆ !

ಬಾಳೆಕಾಯಿ ಬುಟ್ಟಂಗೆ ಕ್ಯಾಟ್ಗೆ ಕನ್ನಗತ್ರಿ
ಮಡುಗ್ದಾಗ ಕನ್ನ ಬಿದ್ಬೋಯ್ತು |

ಕನ್ನಾದ ಬಾಕ್ಲಲ್ಲಿ ನುಗ್ಗಿ ಈಚ್ಗೆ ಬಂದಾರು
ಅವುನಾಳ್ಕೇರಿ ಮೇಲೆ ಬಂದು ನಿಂತವ್ರೆ |

ಆಳ್ಕೇರಿ ಮೇಲೆ ನಿಂತ್ಕೊಂಡು ಶಿವುನು ನಾರಾಯಣ
ದೊರೆಯಿರುವ ಐಸ್ಪರಿಯ ನೋಡಿದರಂತೆ |

ಏಳ್ ಜಿನುದಿಷ್ಟೊತ್ಗೆ ಕಳ್ರು ಬಂದರಂತೆ ಅಂತ
ಕಾಪುಲು ಮಡುಗಪ್ಪೆ
ತಮುಟ್ಗಳು ಪಡ್ಕೊಂಡು ಬೂರುಸುತ್ತ ಚಕ್ರರು
ಸುತ್ತಾ ಅವ್ರೆ
ವಾಲ್ದುದವರು ಮೋರಿಯವರು ದೊಳ್ನೋರು
ಎಲ್ಲಾ ಸೇರ್ಕೊಂಡು ೧೪೯೦
ಪಟ್ಟುದಲ್ಲಿ ನಿದ್ಗೆಡುಸ್ತಾ ಅವ್ರೆ
'ಯಾರೋ ಒಬ್ಬ ಸಾಸ್ತ್ರಗಾರ ಸಾಸ್ತ್ರ ಹೇಳವುನಂತೆ
ಇವತ್ತು ಕಳ್ಳನ ಆದದಂತೆ
ಸೋಲೂಪ ಎಚ್ಚುರ್ಕೆ ಆಗಿರ್ರೋ !' ಅಂತ ಸಾರ್ಹೇಳ್ತಾ ಅವ್ರೆ
'ಇಷ್ಟ್ಮಟ್ಗೆ ಕಾಯ್ಕೊಂಡು ಕುಂತವುರಲ್ಲ
ಏನ್ಮಾಡದಪ್ಪ ನಾರಾಯ್ಣ?' ಅಂದ ಈಸ್ಪುರ
ಆಗ ತಂತ್ರಗಾರ ನಾರಾಯ್ಣ
ಭಸ್ಮಾಸುರನ ಸುಟ್ಟ ಬೇಳ್ಕೆ ಕಾಮುನ ಸುಟ್ಟ ಬೇಳ್ಕೆ
ಉರುಗನ ಸುಟ್ಟ ಬೇಳ್ಕೆ - ಈ ಮೂರು ಬೇಳ್ಕೇನೂ ಬೆರ್ಸಿ
ಆ ಬೂದಿಯನ್ನು ಆ ಪಟ್ಣುಕ್ಕೆ ಉರುಬ್ಬುಟ್ರು - ೧೫೦೦

ತಟ್ಟಿ ಮನುಗುಸ್ವಂಗೆ ಪೆಟ್ಟಿ ಬೀಗ ಒಡುದಂಗೆ
ಒರಗೀತು ರಾಜನ ಪಡುಗ್ವೆಲ್ಲ |

ಸದ್ದು ಗಲುಗು ಅನ್ನೋದು ಇಲ್ವೆ ಇಲ್ಲ
ಬೇಳ್ಕೆ ಬೂದಿ ಬಿದ್ದು ಎಲ್ಲ ಮಂಕು ಮರುಳಾಗಿ ಒರುಗವ್ರೆ
ನೀ ಕಂಡಾಟ ಆಡು ಶಿವುರಾಯ' ಅಂದ
'ನಾರಾಯ್ಣ ಇದ್ಮಾರು ಈಚೆ ಮನುಗಿರೋದು?'
'ಕುಂಬಾರ್ರು ಮಾಸ್ವಾಮಿ' -

'ಕುಂಬಾರ್ರಿರುವ ಬೀದೀಲಿ ಗಮ್ಮು ನೋಡು ನಾರಾಯ್ಣ
ಗುಂಬಾದುಪ್ಪರಿಗೆ ಗರಡೀಯೊ |

ಗುಂಬಾದುಪ್ಪರ್ಕೆ ಗರಡಿ ಸಾಲೆ ಒಳುಗೆ ೧೫೧೦
ಸಂಭ್ರಮುವ ತಾಳ ಜೆಳುಗಾನ' |

'ನಾರಾಯ್ಣ ಇದ್ಯಾರು?'
'ಗಾಣುಗ್ರು ಬೀದಿ ಮಾಸ್ವಾಮಿ ಇದು' -

'ಗಾಣುಗ್ರು ಬೀದೀಲಿ ಗಮ್ಮುನೋಡು ನಾರಾಯಣ
ಗಾಣಾದ ದೊಣ್ಣೆ ಇವುರೆಗುಲಲ್ಲಿ |

ಗಾಣಾದ ದೊಣ್ಣೆ ಇವುರೆಗ್ಳು ಮೇಲೊತ್ಕೊಂಡು
ಮೇಗಾಳ ಪಾರ ಇವುರ್ಗೆ ಬೆಳುಗಾನ |

'ಇದ್ಯಾರು ನಾರಾಯ್ಣ?'
'ಇದು ಒಕ್ಕುಲುಗರು ಬೀದಿ ಸ್ವಾಮಿ'
'ಅವೇನು ಕೈಲಿಡುದಿರೋವು?'
'ನೊಗ ಮೆರ್ಕೋಲು'
'ಅದ್ಯಾಕಂಗಿಡ್ಕೊಂಡಿದ್ದರು?'
'ಕಳ್ರು ಬಂದೇಟ್ಗೆ ಹೊಡಿಬೇಕೂಂತ' -

ಒಕ್ಲುಗ್ರು ಇರುವ ಬೀದೀಲಿ ಗಮುಕ್ಕೊಡು ನಾರಾಯ್ಣ
ನೊಕ್ಕೆ ನೊಗ ದೊಣ್ಣೆ ಮೆರುಕೋಲು |

ನೊಕ್ಕೆ ನೊಗ ದೊಣ್ಣೆ ಮೆರುಕೋಲು ಹೊತ್ತುಕೊಂಡು
ಇವ್ರು ಬೆಳುಗಾನ ಪಾರ ಇರುತಾರೆ' |

'ನಾರಾಯ್ಣ ಇದ್ಯಾರಪ್ಪ ಇಲ್ಲಿ
ಆರ್ಮಣಿ ತಪ್ಪ ಮಡೀಕೊಂಡು ಮನಿಗಿರೋರು ? -

ಶಿವುಭಕ್ರು ಬೀದೀಲಿ ಸೊಗುಸ್ನೋಡು ನಾರಾಯ್ಣ' ೧೯೩೦
ಅಂತ ಶಿವನು ತಾನಲ್ಲಿ ಒರುಗವುನೆ |

'ನಮ್ಮ ಕಂಡ್ರೆ ಭಕ್ತಿಯಾಗಿರೋರು
ಇವುರ್ಬುಟ್ರೆ ಇನ್ನಿಲ್ಲ ಕಾಣಯ್ಯ
ಉಳುದೋರು ನಮುಗೆ ಅಗುವಸ್ರು
ಇದ್ಯಾರು ಈ ಚೋರಿ ಮನುಗಿರೋರು?'
'ಮೀಸೆ ಬಂಟ್ರು'
'ಒಹೊ ಅವುರಾ ಆಗೋಸ್ರು -

ಮೀಸೆ ಮೀಸೆ ಬಂಟ್ರು ಮೀಸೆ ಮೀಸ್ಗೆ ಗಂಟಾಕು
ಆಸಾಸ್ಗೆ ಮ್ಯಾಲೆ ಕೆಡಿಯಪ್ಪ |

'ನಾರಾಯ್ಣ ಇವುರೆಲ್ಲ ಯಾರಪ್ಪ?' ೧೯೪೦
ನಾರಾಯ್ಣ ನೋಡುದ್ರು
'ಭಾವನಾದ ಪರಮೇಶ್ವರ
ನಮ್ಮುನ್ನ ಹಿಡೀಬೇಕೆಂಬುದಾಗಿ
ಸಾಬ್ರುಗಳು ನಿಮಾಜಿಗೆ ಕೂತಿದ್ದಾರೆ -

'ಬುಟ್ಟಕಣ್ಣು ಬುಟ್ಟಂಗೆ ನೆಟ್ಟಕಣ್ಣು ನೆಟ್ಟಂಗೆ
ಅವ್ರ - ಮೈಮ್ಯಾಲೆ ಗ್ಯಾನ ಮೊದುಲಿಲ್ಲ |

ಶಿವನಾರಾಯ್ಣ ಮಸೀದಿ ಒಳೀಕೆ ನುಗ್ಗಿ ಬಂದು
ಮುಸುಲ್ಮಾನ್ರೆಲ್ಲ 'ಅಲ್ಲಾಕುದು', 'ಅಲ್ಲಾಕುದು' ಅಂತಿದ್ದೋರೆಲ್ಲ
ಬೇಳ್ಕೆ ಬೂದಿ ಮಾಯಕ್ಕೆ ಸಿಕ್ಕಿ
ಹಂಗಂಗೆಯ ಒರೀಕೊಂಡಿದ್ದಾರೆ. ೧೯೫೦
'ಭಾವ, ನಮ್ಮುನ್ನ ಹಿಡೀಬೇಕೂಂತ
ತೋತ್ರಾ ಮಾಡ್ತ ನಮ್ಮ ನೆನಿಸಿದ್ದಾರೆ,
ಆದ್ರೂ ಇವುರ್ನೊಂದ್ ಕೆಲ್ಸ ಮಾಡನ' ಅಂದ್ಬುಟ್ಟು
ನಿಮಾಜನ ಸಾಬ್ರುಗಳ್ಗೆ ಗಡ್ಡ ಇತ್ತಲ್ಲ
ಅದನೋಡಿ ತಂತ್ರಿ ನಾರಾಯಣ -

ಒಬ್ಬೊಬ್ರು ಗಡ್ಡಾವ ಒಬ್ಬೊಬ್ರುಗೆ ಕಟ್ಟಿ
ಸ್ಕೆ - ಇವುರ್ಮೇಲೆ ಅವರ ಉಳುಸ್ತಾರೆ |

ಇವುರ್ಮೇಲೆ ಅವುರ ಉಳ್ಸಿಸಿ ಶಿವನಾರಾಯಣ
ಕ್ಯಾರೆ ಬುಲಾರೆ ಅನುತಾರೆ |

'ಇಸ್ಕಿ ಗಡ್ಡ ದೇಖೊ ಉಸ್ಕಿ ದಾಡಿ ದೇಖೊ ೧೯೬೦
ದೇಖೋರೆ ಹಮಾರಾ ಮಸಲತ್ತು |

ಏ ಬುಡ್ಬೇಕು ದೇಖೋ ಇಸ್ಕಿ ದಾಡೀಕು ದೇಖೋ
ಇನೆ - ಅಂಖ್ಮಾಖೋಲ್ ರಾಯ್ಸೆ ದೇಖೋ |

ಇಸ್ಕೆ - ಜುಬ್ಬೇಕು ದೇಖೋ ಇಸ್ಕೆ ಷರ್ಟಕು ದೇಖೋ
ಇಸ್ಕೆ - ಸರ್ಕೆ ಊಪರ್ ಕಿ ಟೋಪಿ ಕು ದೇಖೋ |

ಇಸ್ಕೇ ಗಲ್ಲೇಕಿ ತಾವೀಜ್ ಕು ದೇಖೊ
ದೇಖೊ ತಾವೀಜ್ ಕೆ ತಾಗೇ ಕು ದೇಖೋ |

ಇನೇ ಲುಂಗೀಕು ಬಂದಾಯಿಸೊ ದೇಖೊ
ಇಸ್ಕೆ ಕಂಬರ್ ಕೆ ಪಟ್ಟೇ ಕು ದೇಖೊ |

ಇಸೆ ದೇಖೋ ಇಸೆ ದೇಖೋ ಇಸೇ ಟಾಂಗಾಮಾಲಾ ೧೯೭೦
ಇಸ್ಕೇ ಹಾತ್ ಕ ಕೊಲ್ತೇಕು ದೇಖೋ |

ದಿನಕೆ ಮೂರುದಪ ನಿಮಾಜ ಮಾಡುತಾರೆ
ಇವರು - ನಮಗೆ ಒಳ್ಳೆ ಭಕ್ತರಪ್ಪ' |

'ಬುದ್ಧಿ'
'ಏನ್ ನಾರಾಯ್ಣ.'
'ಈ ಸಾಬ್ರು ಇನ್ನೊಂದಿಚಾರ ಗೊತ್ತ?'
'ಏನಪ್ಪ ಅದು?'
'ಇವ್ರು ಮುಂಜಿ ಅಂತ ಮಾಡುಸ್ಕೊತರೆ ಗಡ್ಡ ಮಾತ್ರ
ಬುಡುಸ್ಕೊತರೆ'
'ಇರಲಿ. ನಾರಾಯಣ ಪ್ರತಿನಿತ್ಯವು
ಮೂರ್ವಪ ನನ್ನ ತೋತ್ರ ಮಾಡ್ತರಪ್ಪ'
'ಆಗ್ಲಿ ನಡಾರಿ ಬುದ್ಧಿ ಮುಂದುಕ್ಕೋಗುವ'
'ನಾರಾಯ್ಣ ಈಚೇಲಿರೋರು ಯಾರು?'
'ಇವುರು ಮುಂದಲೆ ರಾವುತ್ರು' -

'ಮುಂದು ಮುಂದಲೆ ರಾವುತ್ರ ಅವರು ಹಿಂದ್ಮುನ ಗಂಟಾಕು
ಅವುರ ಹಿಂದುಮುಂದಲಾಗಿ ಕೆಡಿಯಪ್ಪ' |

'ನಾರಾಯ್ಣ ಅವುರೇನೊ ಆಯ್ತಲ್ಲ ಇವುರ್ಯಾರು?'
'ಇವ್ರು ಮೋರಿಯವ್ರು ತಾಳ್ಬೋರು, ದೋಣವರು
ಮದ್ಲೆಯವ್ರು ಸ್ವಾಮಿ'
'ಇಲ್ಲಿ ಮೋರಿಯವುರಿಡ್ದು ದೋಣ್ನೋನ್ಗೆ ಗಂಟಾಕು
ದೋಣ್ನೋನ ಹಿಡ್ದು ತಾಳ್ದೋನ್ಗೆ ಗಂಟಾಕು
ತಾಳ್ದೋನ ಹಿಡ್ದು ಬಿಡಿಯವುನ್ಗೆ ಗಂಟಾಕು'
ಒತ್ತಟ್ಟಿಂದ ಎಲ್ಲುರ್ನೂ ಕಟ್ಟಿ, ಉಳ್ಳಾಕ್ಕುಟ್ರು
ಎಲ್ಲಾರ್ನೂ ಉಳ್ಳಾಕ್ಕುಟ್ರು ಮುಂದುಕ್ ಬಂದ್ರು -

ಬಿಳಿಯ ಗಾಜುನ ಕ್ವಾಟ್ಕ ಕನ್ನಾವ ಹಾಕೊಂಡು
ಕಡ್ಪು ಮುಂದಕ್ಕೆ ಬರುತಾರೆ |

ಆ ಕನ್ನುದ ಬಾಗ್ಲಲ್ಲಿ ಈಚ್ಗೆ ನುಗ್ತರೆ
ಭಾರಿ ಕತ್ಲೆ
ಆ ಕನ್ನುದೊಳೀಕೆ ನುಗ್ಗಿ ಇನ್ನೊಂದರ್ಮನೆಗೆ ಬಂದ್ರೆ
ಅಲ್ಲಿ ಗಂವ್ನನ್ನೂ ಕತ್ಲೆ -

ಕತ್ತಲೆ ಹೊತ್ನಲ್ಲಿ ನಾವು ಕಳ್ತನ ಯಾಕ್ಮಾಡ್ಬೇಕು
ಹಸ್ಸಯ್ಯ ಏಡು ಪಂಜುಗಳ |

ಆಗ ಬಟ್ಟೆಯ ಹರ್ದು ಏಡು ಪೆಂಜಿ ಕಟ್ಕೊಂಡು
ಆ ಬೇಳ್ಕೆ ಬೂದಿ ಹಾಕುದ್ರಲ್ಲ ಧಗ್ಗುನೆ ಕತ್ಕೊತು -

ಬೇಳುಮೆ ಪೆಂಜಾ ಧಾಳಾಗಿ ಹಸ್ಕೊಂಡು
ಭೂಪಾಲನರಮನೆಯ ಕಳುವ್ಗಕೆ |

'ನಾರಾಯ್ಣ ನೀನು ಎಡಚೋರಿಕಾಣೆ ಬಾ
ನಾನು ಬಲ್ಚೋರಿ ಕಾಣೆ ಬತ್ತೀನಿ
ಚಿನ್ನ ಬೆಳ್ಳಿ ರತ್ನ ವಜ್ರ ಎಲ್ಲೆಲ್ಲಿದ್ದತೊ ನೋಡಂವ್'
ನಾರಾಯ್ಣ ಹೋಗೋ ದಾರೀಲೆಲ್ಲ
ಬರೀ ಚಿನ್ನ ಬೆಳ್ಳಿ ಮುತ್ತು ರತ್ನುವೆ
ಈಸ್ಪುರೋಗೋ ತಾವೆಲ್ಲ ಬರೀ ಹೆಣ್ಗೊಳೆ
ಆ ಹೆಣ್ಗಳ ನೋಡ್ಟುಟ್ಟು ಸ್ವಾಮಿಯವ್ರು ಇಷ್ಟಪಟ್ಟುಟ್ರು
'ನಾರಾಯ್ಣ ಬಾಪ್ಪ ಬಾಪ್ಪ ಜಲ್ದಿ ಓಡ್ಬಾ.'
'ಏನ್ ಸ್ವಾಮಿ ಏನ್ ಸ್ವಾಮಿ' ಅಂತ ಓಡ್ ಬಂದ
'ಏನಪ್ಪ ಈ ಹೆಣ್ಗಳು ಮನುಗಿರೊ ಹಗ್ಯಾಣ?
ಹತ್ತು ಕೋಟಿ ಹೊನ್ ಸಿಕ್ಕಿದ್ರೂ ನೀನೇ ತಕ್ಕೊಂಡೋಗು
ಇಲ್ಲಿ ಮನುಗಿರೊ ಹೆಣ್ಣೆಕ್ಕೆ ಸಾಕು ಕನಪ್ಪ ನನ್ಗೆ?' |

'ಅಲ್ಲಾ ಸ್ವಾಮಿ ನಾವ್ ಬಂದಿರೋದು ಕಳುವ್ಗೋಕೆ
ಚಿನ್ನ ಬೆಳ್ಳಿ ಮುತ್ತು ರತ್ನ ಬುಟ್ಟು
ಈ ಹೆಣ್ಗಳೆ ಸಾಕು ಅಂತೀರಲ್ಲ ಇದಾ ಹುಟ್ಟು?'
'ಈ ಹೆಣ್ಗಳ್ಗೆ ಜಾತ್ಕ ಕಟ್ಟು ನಾರಾಯ್ಣ
ಹಾಗಾದ್ರೆ ನಿನ್ನೊಂದ್ಗೆ ಬತ್ತಿನಿ ಇಲ್ದೆ ಇದ್ರೆ ಬರೋದಿಲ್ಲ.'
'ಪೆಂಜಿಡಿರಿ ನೋಡ್ತೀನಿ'
ಮುಸುಕುನ ಸೆರುಗ್ಮೇಲೆ ಕೂತಿದ್ದ ನೊಣ
ಜೋಂಯ್ನೆ ಎದ್ವಂತೆ -

'ಉಟ್ಟು ಸೀರೆ ಒಳುಗೆ ಒಕ್ಕುಳ ಕೊಳೆಯುವ
ತಂದೋರು ಕೊಟ್ಬೋರ್ಗೆಲ್ಲ ಕದನಾವು |

ತಂದೋರು ಕೊಟ್ಬೋರ್ಗೆಲ್ಲ ಕದನ ತಂದಾಕುವಂತ
ಇದು ಹಸ್ತಿನಿ ಜಾತುಕದ ಎಳೆಹೆಣ್ಣು |

ಇದೇ ಹಸ್ತುನ ಜಾತ್ಕ
ಮಾಡು ಮಾಡುತ್ಲೆ ಮಡ್ಕೇಲೆ ತಿನ್ನೋದು
ತಿನ್ತಿನ್ನುತ್ಲೆ ತಿಕುಕ್ ಸೀಟ್ಕೊಳ್ಳದು
ತಿಪ್ಪೊದ್ರೆ ನೀರ್ ತಕೊಳೊ ಹಂಗಿಲ್ಲ
ನೀರ್ನೂ ಅವಳ್ನೂ ಆಗಕಿಲ್ಲ
ಇದೇ ನೋಡಪ್ಪ ಹಸ್ತುನ ಜಾತ್ಕ
ತಕ್ಕೊಂಡೋಗೋದಿದ್ರೆ ನೋಡಿ ನಿಮ್ ಕೈಲಾಸ್ಕೆ'
'ಥೂ ಬ್ಯಾಡಪ್ಪ ಹಸ್ತುನ ಜಾತಕದ ಹೆಣ್ಣು
ಇದು ಒಳ್ಳೆ ಹೆಣ್ಣಲ್ಲ ಹಸ್ತುನಿ ಜಾತ್ಕ
ನಾರಾಯ್ಣ ಈಚೆ ಮನುಗವುಳಲ್ಲ ಅವುಳ್ಯಾರು?'
'ಅದು ಬಾಳ ಒಳ್ಳೆ ಹೆಣ್ಣು ಮಾಸ್ವಾಮಿ -

'ಕಾಲೊಚ್ಚೋರಿಕಿಟ್ಟವುಳೆ ಕೈಯೊಚ್ಚೋರಿಕಿಟ್ಟವುಳೆ
ಉಟ್ಟ - ಸೀರೆ ಅಳುಕೊಂಡು ಮನುಗವ್ಳೆ |

ಉಟ್ಟ ಸೀರೆ ಅಳ್ಕೊಂಡು ಮನುಗವ್ಳಲ್ಲೋ ಭಾವ
ಇದು ಕತ್ತ ಜಾತ್ಯದ ಎಳೆಹೆಣ್ಣು' |

'ಕತ್ತೆ ಜಾತ್ಯದ ಹೆಣ್ಣಾಂಡೇಲಿ
ಇಲ್ಲೊಬ್ಬ ಮನುಗವುಳಲ್ಲ ಇವುಳ್ಯಾರಪ್ಪ?' ಅಂದ
'ಇವುರಿಬ್ರುಗಿಂತ್ಲು ಒಳ್ಳೆ ಹೆಣ್ಣು ಬುದ್ಧಿ' -

ಅರಗಣ್ಣ ಬುಟ್ಟವುಳೆ ತೆರ್ಚಾಯ ತೆರದವುಳೆ
ಗುರುಕು ನಿದ್ರಿರಿಯ ಗೊರಿಯೋಳು |

ಗುರುಕು ನಿದ್ರಿರಿಯ ಗೊರಿಯೋಳು ಭಾವಾಜಿ
ಇದು ಕುರಿಯ ಜಾತುಕದ ಎಳೆಹೆಣ್ಣು | ೨೦೫೦

'ಕುರೀ ಜಾತುಕದ ಹೆಣ್ಣು ನಮ್ಗೆ ಬ್ಯಾಡಪ್ಪ ಒಳ್ಳೆ ಹೆಣ್ಣಲ್ಲ
ಇದ್ಯಾರು ಇಲ್ಲಿ ಮನುಗಿರೋರು -

ಉಟ್ಟ ಸೀರೆಯ ಅಸ್ದು ಒತ್ಯಾಡಿ, ಸಿಂಬಿಕಟ್ಟಿ
ಒತ್ತಾಲಿಕ್ಕವ್ಳೆ ತನ್ನ ತುರುಬೀಗೆ |

ಒತ್ತಾಲಿಕ್ಕವ್ಳೆ ತನ್ನ ತುರುಬೀಗೆ ಭಾವಾಜಿ
ಚಿತ್ತುಗ ಜಾತ್ಯದ ಇದು ಎಳೆಹೆಣ್ಣು' |

ಒಬ್ಬ ಗಂಡ ಇದ್ರೆ ಇವುಳು ನಿದ್ರೆ ಮಾಡೋಳಲ್ಲ
ಇನ್ನೊಬ್ಬ - ಗಂಡ ದಂಡೇಲಿರಬೇಕು |

ಇಂಥಾ ಚಿತ್ತುಗ ಜಾತಿ ಹೆಣ್ಣು ಇದು'
'ಚಿತ್ತುಗ ಜಾತಿ ಹೆಣ್ಣಿನ ದಂಡೇಲಿ ೨೦೬೦
ಈಚೆಗೆ ಮನುಗವ್ಳಲ್ಲ ಇವುಳ್ಯಾರು?' -

'ಸಾಲು ಸೀರೆ ಉಟ್ಟವುಳೆ ಮೇಲೆ ದುರುಬು ಕಟ್ಟವ್ಳೆ
ಸಾದು ಚಿಲ್ಕ ಇವುಳ ಪಣೆಯಲ್ಲಿ' |

ಸಾದು ಚಿಲ್ಕ ಇವುಳು ಪಣೆಯಲ್ಲಿ ಧರುಸ್ಕೊಂಡು
ಓತು ಒಂಬಾಳೆಯಾಗಿ ಮನುಗವ್ಳೆ |

ಇದು ಸಂಕುನ ಜಾತ್ಯ
ಮಾನ ಮರಿಯಾದೆಯಾಗಿ ಮನಗವ್ಳ ಒಳ್ಳೆ ಜಾತ್ಯ'

'ಸಂಕುನ ಜಾತ್ಯದ ಎಳೆಹೆಣ್ಣೀನ ದಂಡೇಲಿ
ಪದ್ಮುಮ ಜಾತ್ಯದ ಹೆಣ್ಣು ಇರಬೇಕು |

ಪದ್ಮುಮ ಜಾತ್ಯದ ಹೆಣ್ಣು ಇರಬೇಕಲ್ಲ ನಾರಾಯ್ಣ ೨೦೭೦
ಅವುಳೆಲ್ಲವುಳೆ ಬ್ಯಾಗ್ನೆ ತೋರ್ಸಪ್ಪ' |

'ಪದ್ಮುಮಜಾತ್ಯದ ಹೆಣ್ಣೂಂದ್ರೆ ಪಟ್ಟದ ರಾಮಾಯಿ
ದೊರೆಹೆಡ್ತಿ ಗಗನಚಿಕ್ಕಿ ಅರಮಲ್ಲವುಳೆ'
'ಚನ್ನಾಗಿದ್ದಾಳ ನಾರಾಯ್ಣ'
'ನಮ್ಮ ಮೂರ್ನನ ಮಡದೀರ್ಗಿಂತ ಲಕ್ಷಣವಾಗಿದ್ದತ ಆ ಹೆಣ್ಣು?'
'ಚನ್ನಾಗಿದ್ದಾಳೆ ಬನ್ನಿ ಸ್ವಾಮಿ ತೋರ್ತೀನಿ' -

ಮುನುಮುಂದೆ ನಾರಾಯ್ಣ ಹಿನುಹಿಂದೆ ಈಸ್ವರ
ಅವ್ರು - ಮಾಯಾಚಿಕ್ಕಿಗೆ ಸಾಗಿ ಬರುತಾರೆ |

೧೪. ಕನ್ನೆರಾಮಾಯ ಮೈಮುಟ್ಟಿ ಕಳವು ಮಾಡಿದ ಸಂದು

ಸುವ್ವಾ ಬಾ ನನ್ನ ಬಸುವಯ್ಯ ಸುವ್ವಿ | ಸೊಲ್ಲು |

'ನಾರಾಯ್ಣ್ಯೂ ರಾಮಾಯಿ ಮನುಗಿರೊ ಅರಮನ್ಗೆ
ಎಲ್ಲಾಣೋಗ್ಬೇಕಪ್ಪ?' ಅಂದ್ರು ೨೦೬೦
'ಸ್ವಾಮಿ ಇದು ಮಾಯಾಚಿಕ್ಕಿ ಅರಮನೆ
ಈ ಬಾಗ್ಲು ತಗ್ದು ಮುಂದುಕ್ಕೋದ್ರೆ ಗಗನಚಿಕ್ಕಿ
ಅರ್ಮನೆ ಸ್ವಾಮಿ
ಅದೇ ಅರ್ಮಲ್ಲಿ ಮನುಗವ್ಳೆ ಸ್ವಾಮಿ' -

ಹೆಣ್ಣು ಅನ್ನೋ ಆಸ್ಗೋಗಿ ಬಾಗುಲ್ಗೆ ಕೈ ಮಡಗಿದರು
ಗಪ್ಪಂತ ಕೈಯ ಹಿಡಿದೀತು |

ಗಪ್ಪಂತ ಕೈಯ ಹಿಡಿದೀತು ಬಾಕಲ ಬೀಗ
ಆನೆ - ಗಾಣದ ಕಬ್ಬಿಂಗೆ ನುಂಗುತಾದೆ |

ಗಾಣ ಕಬ್ಬ ನುಂಗೊ ಹಂಗೆ ನುಂಗುತಾದೆ ಕೈಯ
ಅಡಕೆ ಕತ್ತುರುಸೊ ಹಂಗ ಕತ್ತುಸ್ತಾದೆ |

'ಕಳ್ರು ಬಂದವ್ರೆ' 'ಕಳ್ರು ಬಂದವ್ರೆ' ಅಂತ
ಕೂಗುತಾದೆ ಬೀಗ ೨೦೯೦
ಅರಮನೆಗಾಕಿರೊ ಮಾತುನ ಬೀಗ |

'ನಾರಾಯ್ಣ ಹೋಯ್ ಹೋಯ್ತ್ ನನ್ ಕೈಯಿ'
ಅಂತ ಈಸ್ವುರ ಕೂಗ್ದ
'ಇದ್ಯಾವ್ ಬೋಮಾನ್ಕೆ ನನ್ನೂ ಬುಟ್ಬುಟ್ಟು
ಮುಂದುಕ್ಕೆ ಒದ್ಯಪ್ಪ?' ಅಂದ ನಾರಾಯ್ಣ -

ಅಟ್ಟಸ್ತಳದ ಬೀಗ ಮುಟ್ಟಿದರೆ ಅಸಮಾನ
ಸಂಚೀನ ಬೀಗ ಮಣಿ ಬೀಗ |

ಸಂಚೀನ ಬೀಗ ಮಣಿಬೀಗದ ಮ್ಯಾಲೆ
ಕಟ್ಟಿ ಬೇಳ್ಕೀಯ ಮಡುಗಿದರು |

ಬೇಳ್ಕೆ ಬೂದಿ ಕಟ್ಟಿ ಬೀಗುದ್ಮೇಲೆ ಮಡಗಿದರೆ
ಬೀಗ್ಗೆಲ್ಲ ಕಳುದು ಸಡಿಲಾಯ್ತು | ೨೧೦೦

ಆಗ ಜಾಡ್ಸಿ ಕದು ಒದ್ದಾರು ನಾರಾಯ್ಣ
ಕದುವು ಹಿಂದುಕ್ಕೆ ಹೊರುಟೋಯ್ತು |

ಆ ಬಾಗ್ಲು ಬುಟ್ಟು ಒತ್ತಾರೆ ಅವರು
ಬಾಗ್ಲು ಬುಟ್ಟು ಬರುವ ಕಾಲದ ಒಳುಗೆ
ಅಲ್ಲಿ ಇನ್ನೂ ನಾಕ್ಜನ ಸ್ತ್ರೀಯರು ಮನುಗವುರೆ
'ನಾರಾಯ್ಣ ಇಲ್ಲಿ ನಾಕ್ಜನ ಸ್ತ್ರೀಯರು ಮನುಗವ್ರಲ್ಲ
ಇವುರ್ಯಾರು ಹೇಳುವಂತವನಾಗಪ್ಪ?'
'ದೊರೆಹೆಡ್ತಿ ಸುಂಗಾರ ಮಾಡುವಂತ ದಾದೀರು'
'ಅವರ ನಾಮಾಂಕ್ತ ಯಾವುದು?' -

'ಇರುಳಾಯಿ ಪದ್ಮಾಯಿ ಇರುಳೆಗಂಗಳ ದೇವಿ ೨೧೧೦
ರತಿದೇವಿ ಇವುರ ನಾಮಾಂಕ್ತ!

ಇವುರು ರಾಜನ ಹೆಂಡ್ತೀಗೆ ಸುಂಗಾರ
ಮಾಡುವಂತ ದಾದೀರು'
'ಪದ್ಮ ಜಾತ್ಮದ ಹೆಣ್ಣು ಎಲ್ಲದೆ ನಾರಾಯ್ಣ?'

ಮಾಯಚಿಕ್ಕಿ ಅರ್ಮನೆ ಬುಟ್ಟು
ಹಂತ ಹತ್ಕೊಂಡು ಏದಚಿಕ್ಕಿ ಅರ್ಮನೆಗೆ ಬಂದ್ರು
ಅಲ್ಲಿ ಏದಗೋಸನೆ ಆಯ್ತಾ ಅದೆ
ಅಲ್ಲಿಂದ ಹಂತ ಹತ್ಕೊಂಡು ನಾದಚಿಕ್ಕಿ ಅರ್ಮನೆಗೆ ಬಂದ್ರು
ಅಲ್ಲಿ ಸಂಕು ಜಾಗ್ಟೆ ಕೊಂಬ ಕಾಳೆ ನಗಾರಿ ಸಬ್ತ ಆಯ್ತು
ಅಲ್ಲಿಂದ ಹಂತ ಹತ್ಕೊಂಡು ಗಾನಚಿಕ್ಕ ಅರ್ಮನೆಗ್ ಬಂದ್ರೆ
ಸನಿದಪ ಸನಿದಪ ಅಂತ ಸಂಗೀತ್ಯಾಯ್ತಿದ್ದದಂತೆ. ೨೧೨೦
ಜಾನಚಿಕ್ಕಿಗೆ ಬಂದ್ರು ಮನ್ಸೆಲ್ಲ ತಿಳಿಯಾಯ್ತು

ಅಲ್ಲಿಂದ ಹಂತ ಹಂತ್ಕಂಡು ಮುಗುಲ್‌ಚಿಕ್ಕಿ ಬಂದ್ರು
ಅರ್ಮನೆಯಾದ ಅರ್ಮನೆಯೆಲ್ಲ ಬೆಳ್ಳೀದು
ಅಲ್ಲಿಂದ ಹಂತ ಹತ್ಕೊಂಡು ಗಗನಚಿಕ್ಕಿಗೆ ಬಂದ್ರು
ಚಿನ್ನ ಬೆಳ್ಳಿ ಮುತ್ತು ರತ್ನ ವಜ್ರ ವೈಡೂರ್ಯದಲ್ಲಿ ಕಟ್ಟಪ್ರೆ
'ಭಾವಾ ಇಂಥ ಅರ್ಮನೆ ನಮ್ ಲೋಕ್ದಲ್ಲೂ ಇಲ್ಲಲೊ;
'ಅದಾಳಾಗ್ಲಿ ಪದ್ಮಜಾತಿ ಹೆಣ್ ತೋರಪ್ಪ ನಾರಾಯ್ಣ' -

'ಮೇಲುಕಟ್ಟಿದ ಮಣಿಮಂಚ್ವ ಅಂತ್ಕೊಂಡು ನೋಡಿಸ್ವಾಮಿ'
ಈಸ್ವುರ ಅಂತ್ಕೊಂಡು ನೋಡುತಾರೆ |

ಹಿಂಗೆ ಅಂತ್ಕೊಂಡು ನೋಡುದ್ರಲ್ಲ 'ಫಳಾರ್' ಅಂತು ೨೧೩೦
ಫಳಾರಂದಾಗ ಒಂದೇ ಒಂದು ಲೆಂಗುಣ್ಸೆ
ಮಂಚುದ್ಮೇಲೆ ಕೂತ್ಕೊಂಡ್ರು
ಯಾರು ? ಶಿವನಾರಾಯಣ -

ಚಂದ್ರಗಾವಿಯ ತೆರೆಯ ಪಾದ್ದಲ್ಲಿ ಒದ್ದುಹಾಕಿ
ರಂಭ ಮಂಚುದ್ಮೇಲೆ ಕೂತಿಕೊಂಡ್ರು |

ರಂಭ ಮಂಚುದ್ಮೇಲೆ ಹೋಗಿ ಕೂತ್ಕೊಂಡ್ರು ಶಿವುನು
ಅವ್ನು - ಮನಗಿರುವ ಐಭೋಗ್ಯ ನೋಡಿದರಂತೆ |

'ನಾರಾಯ್ಣ-
ಈ ರಂಭ ಮಂಚುದ್ಮೇಲೆ ದುಂಡು ಮಲ್ಲೆ ಹರಡವೆ
ನಂದದೀವಿಗೆ ಬೆಳಕಲ್ಲಿ |

ನಂದದೀವಿಗೆ ಬೆಳಕಲ್ಲಿ ಮನುಗವ್ಳೆ ೨೧೪೦
ಬೆಳ್ಳಿ ತಟ್ಟೇಲಿ ಬಿಳಿಯೆಲೆ |

ಬೆಳ್ಳಿ ತಟ್ಟೇಲಿ ಬಿಳಿಯೆಲೆಯ ಮಡಿಕೊಂಡು
ಭೋಗಾದ ನಿದ್ರೆ ಪಡುತಾಳೆ |

ನಾರಾಯ್ಣ ಬೆಳ್ಳಿ ತಟ್ಟೆ ಒಳುಗೆ ಬಿಳೀ ಎಲೆ ಮಡಿಕೊಂಡು
ಬಾಳ ಸಂತೋಷದಲ್ಲಿ ಮನುಗವ್ರಲ್ಲ ನಾರಾಯ್ಣ
ಇವುಳ ಮೊಕುಚೇರ್ಕೆ ಸೊಲುಪ ನೋಡ್ಬೇಕು -

ಬೆತ್ತುದ ಕಡ್ಡಿವೊಳ್ಗೆ ಎತ್ತುದ್ರಂತೆ ಮೊಕ್ಮುಸ್ಕ
ಏಳ್ಕೋಟಿ ಮಿಂಚು ಹೊಳುದಂಗೆ |

ಏಳ್ಕೋಟಿ ಮಿಂಚು ಹೊಳುದಂಗೆ ಆಯ್ತಂತೆ
ನಮ್ಮುಕ್ಕಜ್ಜಯ್ಯ ಸ್ವಾಮಿ ಮುಂಚ್ಕೊಂದ್ರು | ೨೧೫೦

ರಂಭೆ ಮಂಚುದ್ಮೇಲೆ ಈ ರಂಭೇಯ ಚಲುವೀಕೆ
ನನ್ನ ಜಂಭೂಲೋಕದಲ್ಲೂ ಇಲುವಲ್ಲ |

ನನ್ನ ಗೌರಾಯಿಗಿಂತ ಗಿರುಜಾಯಿಗಿಂತ
ನನ್ನ ಗಂಗಾಯಿಗಿಂತ ಇವ ಅತಿ ಚಲುವೆ |

ಗಂಗಾಯಿಗಿಂತ ಅತಿ ಚೆಲುವೆ ಮೂಡಿ ಬರುವ
ಸೂರ್ಕ ಹೊಳುದಂಗೆ ಹೊಳೆಯುವಳು |

ಸೂರ್ಕ ಹೊಳುದಂಗೆ ಹೊಳಿವಳಲ್ಲೂ ರಾಮಾಯಿ
ಈ ರಂಭೆ ಕುಂಡೋಗುವಂತ ಬಗೆ ಹ್ಯೆಂಗ್ಕ |

ಅಟ್ಟ ಹತ್ತುದ್ರು ಸರಿಯೆ ಬೆಟ್ಟ ಬಿದ್ದರು ಸರಿಯೆ
ಬುಟ್ಟಿವಳ ನಾನು ಹೋಗಲಾರೆ | ೨೦೬೦

ಬುಟ್ಟಿವಳ ನಾನು ಹೋಗುನಾರೆ ನಾರಾಯ್ಣ
ಇವ್ಳ - ತಕ್ಕೊಂಡೋಯ್ತೀನಿ ನನ್ನ ಕೈಲಾಸ್ಕೆ |

ಕ್ಯಾಟೆ ಕೊತ್ತಲಾಯ್ದು ನೀಟಾದ ಅಳ್ವೇರಿ
ಕೋಟಿ ಚಂದ್ರಮ ಹೊಳುದಂಗೆ |

ಕೋಟಿ ಚಂದ್ರಮ ಹೊಳುದಂಗೆ ಮನುಗವ್ಳೆ
ಈ ನಾರಿ ಕೊಂಡೋಗುವಂತ ಬಗೆ ಹ್ಯೆಂಗ್ಕ |

ಕರಣ ವರಣದ ಬಾಲೆ ಪೇರ್ಮಾಯಿ ರಾಮಾಯಿ
ಸೋರ್ಮುಡಿ ನವ್ಲು ಕುಣಿದಂಗೆ |

ಸೋರ್ಮುಡಿ ನವ್ಲು ಕುಣಿದಂಗೆ ರಾಮಾಯಿ
ಬಾರುಸ್ತಂಗದೆ ಇವ್ಳ ಎದುಭೂಜ | ೨೦೭೦

'ನಾರಾಯ್ಣ ,
ಇಂತೆ ಹೆಣ್ಣು ಇಂತೆ ಜಾಗ್ದಲ್ಲದೆ ಅಂತ ನಂಗೆ ಆಗ್ಲೆ ಹೇಳ್ಬಾರ್ದ?
ಪಟ್ಟುದಾನೇಲಿ ಕುಂಡ್ರುಸ್ಕೊಂಡ್ ಕರ್ಕೊಂಡೋಗಿವ್ನಿ
ನನ್ನ ಮಡುದೀರ್ನೆಲ್ಲ ಬುಟ್ಬುಡೀವ್ನಿ' -

ತಕ್ಕೊಂಡೋಯ್ತೀನಿ ಅನ್ನೋ ಸುದ್ಕ ಕೇಳೀತು ಗಿಣಿರಾಮ
ಈಸ್ಪುರನ ಜೊತೆಗೆ ಗಿಣಿರಾಮ |

ಈಸ್ಪುರನ ಜೊತೆಗೆ ಗಿಣಿರಾಮ ಮಾತಾಡ್ತದೆ
ಅದರ ಮಾತೊಂದು ಚಲುವ ಏನನ್ನಲಿ? |

'ಕುಂಜರನ ಎಡೆಯಲ್ಲಿ ಬಂದಿರೋನು ನೀನ್ಯಾರು
ರಂಜೀಪ ಸಿಂಹ ಇಲ್ಲಿ ಸುಳಿದಾಂಗೆ | ೨೦೮೦

ರಂಜೀಪ ಸಿಂಹ ಇಲ್ಲಿ ಸುಳಿದಾಂಗೆ ಬಂದು
ಧಾಳೀಸಿ ನೋಡೋನು ನೀನ್ಯಾರು? |

ನಮಕ್ಕನೂವೆ ಭಾವನೂವೆ
ಮನುಗಿರುವಂತ ವ್ಯಾಳ್ಳದಲ್ಲಿ
ಬಂದಿರುವಂತ ನೀನ್ಯಾರು ?

ಪಟ್ಟುದಾನೆಯಾಂಗೆ ಮನುಗಿರೋ ಕಾಲ್ದಲ್ಲಿ
ಸಿಮ್ಮ ಸುಳುದಂಗೆ ಸುಳೀತಿದ್ದೀಯೆ
ಇಳೀ ಇಳೀ ಇಳೀ ಕೆಳೀಕೆ -

ಸುಮ್ನಿರಪ್ಪ ಗಿಣಿರಾಮ ಉಣ್ಣಯ್ಯ ಎದುಪಾಲ
ನೆನ್ನಾಲೆ ಅಕ್ಕಿ ನೆನುಗಡಲೆ | ೨೦೯೦

ನೆನ್ನಾಲೆ ಅಕ್ಕಿ ನೆನಗಡ್ಲೆಕಾಯಿ ಕೊಡುತೀನಿ
ನಿಮ್ಮಕ್ಕನ ನಿದ್ದೆ ಕೆಡುಸ್ಬ್ಯಾಡ |

ಗಿಣ್ರಾಮ ನಮ್ಮ ಕೈಲಾಸ್ದಲ್ಲ ಇದುಕಿಂತ್ಲೂ ಚನ್ನಾಗಿ
ಮಡುಗ್ತೀವಿ
ನಿಮ್ಮಕ್ಕುನ್ನೂವೆ ನಿನ್ನೂವೆ
ನಿದ್ರೆ ಕೆಡುಸ್ಬ್ಯಾಡ' ಅಂದ್ರಲ್ಲ
ಇವ್ರು ಕಂಡುತ್ವಾಗ್ಲೂ ನಮ್ಮಕ್ಕುನ್ನ
ಹೊತ್ಕೊಂಡೋಯ್ತರೆ ಅಂತ ಗಿಣಿ ಗಾಬ್ರಿ ಪಡ್ತದೆ -

'ಅಕ್ಕಯ್ಯ ಅಕ್ಕಯ್ಯ ಹೊಕ್ಕವುರೆ ಕಳ್ಳರು
ಸೊಕ್ಕಿನ ಬೇಳ್ಕೆ ತಳುಗವುರೆ |

ಸೋಕ್ಕೀನ ಬೇಳ್ಕೆ ತಳುಗವುರೆ ಅಕ್ಕಯ್ಯ ೨೧೦೦
ನಿನ್ - ತೊಟ್ಬಂಗಾರ ಸೂರೆ ಇವತ್ತೋಯಾದೆ |

ಮಾತುಗೊಂಬುನ ಪಕ್ಷಿ ಹಾಕಿ ಕೂತ್ಕೋತು ಎದೆಮ್ಯಾಲೆ
ತಾಟ್ಗತ್ತಿ ನಿನ್ನಿದ್ರೆ ತಿಳೀನಿಲ್ವ |

ತಾಟ್ಗತ್ತಿ ನಿನ್ನಿದ್ರೆ ತಿಳಿನಿಲ್ವ ಅಕ್ಕಯ್ಯ' ಎಂದು
ಕುಟ್ಗಿ ಕುಟ್ಗಿ ಅಕ್ಕಯ್ಯ ಏಳುಸ್ತದೆ |

ಎಷ್ಟೇಳುಸುದ್ರೂವೆ
ಬೇಳ್ಕೆ ಬೂದಿ ಬಿದ್ದದೆ ಅವ್ರುಗ್ಗೆ ಎಚ್ಚುರ್ವೆ ಇಲ್ಲ -

'ಭಾವಾಜಿ ಭಾವಾಜಿ ಕ್ಯಾಣುಗಾರ ಭಾವ
ನಿನ್ - ಕಾಲ್‌ಪೆಂಡೆ ಸೂರೆ ಇವತ್ತೋಗುತಾದೆ |

ಕಾಲ್ ಪೆಂಡೆ ಸೂರೆ ಹೋಯ್ತಾದಲ್ಲೊ ಭಾವ
ನಿನ್ - ಮಾಯಾದ ನಿದ್ರೆ ತಿಳೀನಿಲ್ಲ |

ಭಾವೋ ಭಾವೋ ಅಕ್ಕೋ ಅಕ್ಕೋ ಅಂತಿದ್ರೆ ಗಿಣಿ
'ನಾವೆಷ್ಟು ಭಾವ್ರಲ್ಲಿ ಹೇಳ್ತಿದ್ರೂವೆ ಈ ಗಿಣಿ
ತನ್ನ ಬುದ್ಧಾ ಬುಡುನಿಲ್ಲವಲ್ಲ -

ಕಾಡಲಿದ್ದಂತ ಪಕ್ಷ್ಯ ತಂದು ಮಣ್‌ಮಾತ ಕಲ್ಸೊ ಹೊತ್ಗೆ
ನಮ್ಮ ತಲಗೆ ತಂತು ಚಂಚ್ಮಾರ |

ನಮ್ಮ ತಲೆಗೆ ತಂತು ಚಂಚ್ಮಾರ ನಾರಾಯ್ಣ
ಇದ್ರ - ಗೂಡ್ಕಿತ್ತು ಕೊತ್ತಿ ಮುಂದೊಗ್ಕೊ' |

ಯಾವಾಗ ಈ ಮಾತಾಡುದ್ರೊ ಜಗದೀಶ
ಗಿಣಿಗೆ ಬಾಳ ಸಂಗ್ಟ ಬಂದ್ಬುಡ್ತು

'ಲಿಂಗಯ್ಯ ಅನ್ನುವಂತಾದ ಕಾಣ್ಲಿಲ್ಲ ನಿಮ್‌ಪಾದ
ನಿಮ್ಮಂಗಾದ ಕಳುವೀಗೆ ನಾ ಒಳುಗು |

ಮುತ್ತು ಬೇಕಾದ್ರೆ ಮತ್ತಷ್ಟು ಹೊತ್ಕೊಂಡೋಗಿ
ಚಿನ್ನ ಬೇಕಾದ್ರೂ ಹೊತ್ತುಕೊಳ್ಳಿ |

ಚಿನ್ನ ಬೇಕಾದ್ರೂ ಹೊತ್ತುಕೊಳ್ಳಿ ಲಿಂಗಯ್ಯ
ನಮ್ಮಕ್ಕನ ಭಂಗೀತ ಮಾಡಬೇಡಿ |

ನಮ್ಮಕ್ಕನ ಮೈಕೈ ಮಾತ್ರ ಮುಟ್ಬೇಡಿ'
'ನಿನ್ನೂ ಬುಡೋದಿಲ್ಲ ನಿನ್ನಕ್ಕುನ್ನೂ ಬುಡೋದಿಲ್ಲ' ಅಂದ್ರು
ನಾರಾಯ್ಣ ಏನ್ ಮಾಡ್ದ?
ಯೋಚ್ನೆ ಮಾಡ್ದ
'ಈ ಹೆಣ್ಣ ತೋರಿಸಿದ್ಕೆ ಕೈಲಾಸ್ಕೆ ತಕ್ಕೊಂಡೋಗ್ಬೇಕು' ಅಂತನಲ್ಲ
ಇವುಳ್ನ ತಕ್ಕೊಂಡೋದ್ರೆ
ನಮ್ಮಕ್ಕದೀರ್ ಬಾಳ್ತಾನೆ ಎಡುವಟ್ಟಾಗದು
ನಾರಾಯ್ಣ ನಿನ್ನಿಂದ್ಲೆ ನಮ್ ಬಾಳು ಹಾಳಾದ್ದು
ಅಂದೆನೆ ಇದ್ದರ
ಅಯ್ಯೋ ಈಗೇನ್ ಮಾಡ್ಲಪ್ಪ ಭಗವಂತ್ನೆ'
ಆಗ ತಂತ್ರುಗಾರ ನಾರಾಯ್ಣ
ಗಾಬ್ರಿಯಿಂದ ಬಾಯಿಬಾಯ್ ಬಡ್ಕೊಂಡ್ಬುಟ್ಟ
ತನ್ನಷ್ಟಕ್ಕೆ ತಾನೆಯ.
'ನಾರಾಯ್ಣ ನಾರಾಯ್ಣ ಅದೇನಯ್ಯ ಅದೇನಯ್ಯ?' -

'ಬೆಳ್ಳಿ ಮೂಡುತ ಬಂತು ಬೆಳುಗಾಗುತ ಬಂತು
ಕೋಳಿ ಕೂಗಿ ಲೋಕ ಬೆಳಕಾಯ್ತು |

ಕೋಳಿ ಕೂಗಿ ಲೋಕ ಬೆಳಗಾಯ್ತು ಈಸ್ವರ
ಆ-ನಾರಿ ಸಂಗ್ಟ ಬುಟ್ಟು ಕೆಳಿಕಿಳಿಯಪ್ಪ' |

'ಅಷ್ಟ ಕಡಗದ ಮೇಲೆ ಕಸ್ತೂರಿ ಬಳೆ ಇಟ್ಟವುಳೆ
ಇವುಳೆಸುರೇನು ಹೇಳು ಕುಲವೇಳು |

ಹೆಸ್ರೇಳಿ ಇವಳ ಕುಲವೇಳಿ ಕೊಟ್ಬಾರೆ
ನನ್ಮನ್ಸು ಬೇರೆಯಾಗಿ ಇಳಿತೀನಿ' |

'ರಡ್ಡಿ ಮಾದ್ಗ ಅನ್ನುವ ಸುದ್ದ ಮಾದ್ಗಸ್ವಾಮಿ
ಸುದ್ದ ಮಾದುಗನ ಎಳೆಹೆಣ್ಣು |

ಸುದ್ದ ಮಾದುಗನ ಎಳೆಹೆಣ್ಣು ಈ ಚಲುವ್ಯ
ಚಂದಕ್ಕೆ ತಕ್ಕಂಬಂದ ಕಾಣೆರಪ್ಪ' |

'ಹಂಗಾರೆ ಮಾದುಗ್ರೋಳ ಇವ್ಳು?'
'ಹುಂ ಸ್ವಾಮಿ' -

'ಹೊನ್ನಯ್ಯ ಚನ್ನಯ್ಯ ನನಗೆ ಮಕ್ಕಳಾಗಬೇಕು
ಆ ಮಕ್ಕಳ ಬಯಸೋದು ತರುವಲ್ಲ' |

'ಮಕ್ಕಳ ಕಂಡಾರೆ ಅಕ್ಷಯ ಕೊಡಬೇಕು
ಈ ಮಕ್ಕಳ ಬವ್ಣಣ್ಸೋದು ನಿಮಗೆ ತರವಲ್ಲ |

ಮಕ್ಕುಳ್ಳೆ ಬವ್ಣಣ್ಸೋದು ತರುವಲ್ಲ ಈಸ್ವರ
ನಾರಿ - ಸಂಗಾವ ಬುಟ್ಟು ಜಲ್ದಿ ಇಳಿಯಪ್ಪ |

ಸತಿಗೆಲ್ಲ ಪತಿಕಾಣೊ ಇವ ಯತಿಭಾವ ಇವುಳ್
ಮೊಕುದಲ್ಲಿ
ಯತುಮುನುಗಳ ತ್ರಪವ ಕೆಡಿಸುವಳು |

ಯತು ಮುನುಗಳ ತ್ರಪವ ಕೆಡಿಸುವಳು ರಾಮಾಯಿ
ಈ ಸತಿಯ ಸಂಗಾಟ ನಿಮುಗೆ ತರುವಲ್ಲ |

ಇಳುದ್ಬುಡಿ ಬುದ್ಧಿ' ಅಂದ
'ಇವುಳಲ್ಲಿ ಒಂದ್ಕಳ್ತನ ಮಾಡಿ ಇಳುದ್ಬುಡ್ತಿನಪ್ಪ
ಇಲ್ದೆ ಹೋದ್ರೆ ದೊರೆ ಹೆಬ್ಬೆ ಮಾತಾಡ್ತನೆ
ನನ್ನೆಡ್ತಿ ಮೈಕೈ ಮುಟ್ಬಲ್ಲ ಅಂತ' -

ರಂಭೆ ರಾಮಾಯ ಮಿರುಗಿದ ಕುಪ್ಪಿ ಚವುಲ್ಕ
ಗಂಗಮ್ಮುಂಗ್ಬೇಕಂತ ಕಳುಕೊಂಡ್ರು |

ರಂಭೆ ರಾಮಾಯ ಮಿರುಗಿದೊಡ್ಯಾಣವ
ಪಾರ್ವತಿಗ್ಬೇಕಂತ ಕಳುಕೊಂಡ್ರು |

ರಂಭೆ ರಾಮಾಯ ಮುತ್ತೀನ ಪದಕವ
ನನ್ನ - ಗೌರೀಗೆ ಬೇಕೂಂತ ಕಳುಕೊಂಡ್ರು |

ರಂಭೆ ರಾಮಾಯ ಕಸ್ತೂರಿ ಬಳೆಗಳ
ನನ್ನ - ಗಿರುಜೆಗೆ ಬೇಕು ಅಂತ ಕಳುಕೊಂಡ್ರು |

'ಇನ್ನೊಂದ್ಕಳ್ತನ ಮಾಡ್ತೀನಪ್ಪ -
ರಂಭೆ ರಾಮಾಯ ಎದೆಯ ಕುಚ್ಚುನ ಮೇಲೆ
ಚಿಳ್ಳುಗುರಲ್ಲಿ ಗೀರಿದರು |

ಚಿಳ್ಳು ಉಗುರೊಳಗೆ ಗೀರಿದಾಗ ಅಲ್ಲಿ
ರಗುತ ಜ್ಯಾಲೇಲಿ ಇಳಿದೀತು |

ಇಷ್ಟೊತ್ತು ನಾ ನೋಡಿ ದ್ರಿಷ್ಟಿ ತಗುಲದೆ ಅಂದು
ಅರಸಿ ಇಟ್ಟಾರು ಮಸಿ ಚಿಲುಕವ |

ಹಣೆ ಮೇಲೊಂದ್ಪಟ್ಟು ಕೆನ್ನೆ ಮೇಲೊಂದ್ಪಟ್ಟು
ಗದ್ದದ್ಮೇಲೊಂದು ಬಟ್ಟ ಇಟ್ಟಾರು |

ಆಗ ದೊರೆ ಮುಂಚುಕ್ಕೆ ಬತ್ತರೆ -
ಶಬ್ರಿರು ಬಂದಿದ್ರು ಅಂತ ಹೆಬ್ಬೆ ಮಾತಾಡ್ಬೇಡ
ಬದಿಂದೋರು ಇಬ್ರು ನಿನ್ನ ಪಟ್ಟಾಣಿಕೆ |

ಬಿರುದು ಮಾಲೆಯ ಮುಂಗ್ಕೆಗೆ ಕಟ್ಟಿದರು
ಒದೀಕೊ ಬೆಳಗುನೊತ್ತಾರಿಕೆ |

ಚಿನ್ನುದ ಚಂದ್ರಾಯ ಅವುನ್ ಕಾಲುನ ಪೆಂಡಾಯ
ಎರುಡ್ನೂ ಕಳೂಕೊಂಡ್ರು
ಈಸ್ವರ ಮುಂಚ ಬುಟ್ಟು ಕೆಳೀಕಿಳಿದ್ಬುಟ್ರು -

ನಾರಾಯ್ಣುನ ದಂಡ್ಕಕೆ ಬಂದು ನಿಂತ್ಕೊಂಡ್ರು
ಭಾಗ್ಮದರುಮನಿಗೆ ನಡಿಯಯ್ಯ |

ಭಾಗ್ಮದರುಮನಿಗೆ ಬಂದು ಶಿವುನಾರಾಯಣ
ಅವನ ದ್ರವಿಯ ಸಂಪತ್ತ್ ನೋಡಿದರಂತೆ |

ಭಾಗ್ಮದ ಲಕ್ಷ್ಮಿ ಪುಣ್ಯೋದ ಲಕ್ಷ್ಮೀರ
ಘನ್ಪತರಾಜ ಸೆರೇಲಿ ಮಡುಗಿದ್ದ
ಅವುರು ಬಂದು ಈಸ್ವರನ ಪಾದ ಹಿಡ್ಕೊಂಡು
'ಸ್ವಾಮಿ, ಹೆತ್ತಯ್ಯ ಮುತ್ತಯ್ಯನ ಕಾಲ್ಬಿಂದ
ನಾವು ಇಲ್ಲಿ ಸೆರೆ ಇದ್ದೀವಲ್ಲ ಬುದ್ಧಿ,
ನಮ್ಮ ಸೆರೆಯ ಬುಡುಸ್ಬೇಕು ಬುದ್ಧಿ'
'ನಾರಾಯ್ಣ ಹೋಗಿ ಅವರ ಸೆರೆಬುಡುಸಪ್ಪ'
ನಾರಾಯ್ಣ ಸೆರೆಬುಡುಸ್ದುರು -

ಈವತ್ತು ಇದ್ದವರ ಮನೆ ನೀವು ನಾಳೀಕೆ ಇರಬ್ಯಾಡಿ
ನಾಡು ನಾಗಾವುದು ಹೊಂಟೋಗಿ |

ನಾಡು ನಾಗಾವುದ ಹೊಂಟೋಗಿ ಅಂತ್ಹೇಳಿ
ಸೆರೆಯ ಬುಡ್ಸಿದರು ನಾರಾಯಣ |

ಆಗ ಮುತ್ತು ರತ್ನ ಸೌಬೆರ್ಸಿ ತುಂಬಿತ್ತಲ್ಲ ಅಲ್ಲಿಗೆ ಬಂದ್ರು
ಹನ್ನೇಡ್ಸಾವ್ರ ಮದ್ದಾನೆ ಹನ್ನೇಡ್ಸಾವುರ ಒಂಟೆ
ಎಲ್ಲಾನು ಆ ದ್ರವ್ಯದ ಮನ್ಗೆ ಅಟ್ಟೊಂಡ್ಬಂದ್ರು
ಗೋಣೇ ಚೀಲ್ಕೆ ತುಂಬೋದು ಆನೆಮ್ಯಾಲೆ ಹೇರೋದು
ಒಂದು ಮುತ್ತುರತ್ನಾನೂ ಬುಡುನಿಲ್ಲ
ಹನ್ನೆರಡಂಕ್ಕ ಗಾರೆ ತೊಟ್ಟೇ ಒಳುಗಿದ್ದ ಭಾಗ್ಮನೆಲ್ಲ
ತುಂಬಿ ಮದ್ದಾನೆಗಳ್ಗೆ ಹೇರ್ಬುಟ್ಟು
ಒಂಟೆ ಹೇರು ಆನೆ ಹೇರ ಈ ಸರಿ ಕಟ್ಟುಸ್ಬುಟ್ರು -

ಸಾಲುಗೇರಿಗಾಣೆ ನೀ ಬಾಪ್ಪ ನಾರಾಯ್ಣ
ನಾ - ಸೂಳೆಗೇರಿಗಾಣೆ ಬರುತೀನಿ |

ಅವರ್ಧ ಒಂಟೆ ಆನೆ ಇವರ್ಧ ಒಂಟೆ ಆನೆ
ಅಟ್ಟೊಂಡು ಬೀದೀಲಿ ಬತ್ತಾ ಅವ್ರೆ
ಒಚ್ಚೋರಿ ಗೋಣಿ ಮೂಟೆ ಮೂಲ್ಕ ಕೂದಾಕುದ್ರು
ಬೀದಿಗಾಣೆ ಕಡಾ ಬುಟ್ಕೊಂಡ್ಬತ್ತರೆ
ರಂಡೇರು ಮುಂಡೇರು ಆಯ್ಕೊಂಡು
ಬದುಕ್ಲಿ ನಮ್ಮೆಸ್ರೆಳ್ಕೊಂಡು ಅಂತ -

ಆನೆ ಒಂಟೆ ಹೊಡ್ಕೊಂಡು ಶಿವನೂ ನಾರಾಯಣ
ಪುರದ ಬಸುವೇಶನ ಗುಡಿಗೆ ಬರುತಾರೆ |

೧೫. ಶಿವನಾರಾಯಣರು ಗುಂಡುಬ್ರಮ್ಮಯ್ಯನ ಮೊರೆಬಿದ್ದ ಸಂದು

ಸುವ್ವಾ ಬಾ ನನ್ನ ಬಸುವಯ್ಯ ಸುವ್ವಿ | ಸೊಲ್ಲು |

ಪುರುದ ಬಸುವಣ್ಣ ಅಂದ್ರೆ
ಘನ್ಪತ್ರಾಜನ ಮಂದೇವ್ರು ಹೆಬ್ಬೆಟ್ರಾಯ ಅಂತ -

ಹೆಬ್ಬೆಟ್ರಾಯ್ನ ದೇವುಸ್ತಾನ್ಕೆ ಬಂದುವಂತೆ ಹೇರೆಲ್ಲ
ಹೆಬ್ಬೆಟ್ರಾಯನ ದೇವುಸ್ತಾಮದಲ್ಲಿ ಇಳುಕಿದರು | ೨೨೩೦

ಮುತ್ತುರತ್ನನೆಲ್ಲ ಆ ದೇವ್ರು ಮುಂದೆ ರಾಸ್ಯ ಹಾಕುದ್ರು
ಒಂದಾನೆ ಹೇರ ಉಳುಸ್ಕೊಂಡ್ರು
ಉಳಿದಾನೆಗಳ ಕಾಡ್ಗೆ ಹೊಡುದ್ಬುಟ್ರು
'ಬಸುವಣ್ಣ ನಿನ್ ದೊರೆ ಮನೆ ಬಂಗಾರನೆಲ್ಲ
ಇಲ್ಲಿ ತಂದು ನಿನ್ಮುಂದೆ ಸುರುದಿವಿ
ನಿಮ್ ದೊರೆ ಬಂದಾಗ ಅವ್ನ ಕೇಳುದ್ರೆ ಎಲ್ಲಾನು ಕೊಟ್ಬುಡು -

ಶಬ್ಯ ಬಂದಿದ್ರು ಅಂತ ಹೆಬ್ಬೆ ಮಾತಾಡ್ಬೇಡ
ಬಂದಿದ್ದೋರಿಬ್ರು ನಿನ್ನ ಪಟ್ಟಾಣಕೆ |

ಆ ಒಡ್ಬೆ ಕಳ್ಕೊಂಡೋಗಿದ್ರಲ್ಲ
ಆ ಒಡ್ಬೆನೆಲ್ಲ ಬಸುವನ ಕತ್ಗೆ ಹಾಕ್ಬುಟ್ರು ೨೨೪೦
ಕರ್ಪೂರ ಗಂಧುದಕಡ್ಡಿ ಸಾಂರಾಣಿ ಹಸ್ಸಿ
ಆ ಬಸ್ಯಾಂಗೆ ಮಂಗಳಾರ್ತಿಯನ್ನು ಮಾಡ್ತರೆ
ಮಂಗ್ಳಾರ್ತಿಯನ್ನು ಮಾಡಿ
ಇನ್ನೊಂದಾನೆ ಹೇರ್ಕಟ್ಕೊಂಡು ಬತ್ತವ್ರೆ
ಎಲ್ಗೆ ? ಗುಂಡುಬ್ರಮ್ಮಯ್ಯನ ಮಠುಕೆ -

ಅಜ್ಜಜ್ಜುಗುಂಟ ಇಬ್ಬನಿಯ ತುಳುಕೊಂಡು
ಮುತ್ತು ಬುಟುಕೊಂಡು ಬರುತಾರೆ |

ಮುತ್ತು ಬುಟುಕೊಂಡು ಬತ್ತರೆ ಶಿವನಾರಾಯ್ನ
ಗುಂಡು ಬ್ರಮ್ಮಯ್ನ ಮಠಕಾಗಿ |

ಗುಂಡು ಬ್ರಮ್ಮಯ್ನ ಮಡದೀರ್
ಮೂರ್ಮಂದಿ ಸ್ತ್ರೀಯರು ೨೨೫೦
ಬಂಡೆದ್ರು ನಮ್ ಶಿವನ ಬೋಯ್ತಾರೆ |

'ಅಕ್ಕ - ಇಂದೀಗೇಳ್ದಿನುಕೆ ನಾವು ಬತ್ತಿವಿ ಅಂತೋದ್ರು
ಇನ್ನೂ ಬರ್ನಿಲ್ಲವಲ್ಲಕ್ಕ ಆ ಸರಣರು |

ಇನ್ನು ಬರ್ನಿಲ್ಲವಲ್ಲಕ್ಕ ಆ ಸರಣರು? ಅನುಕೊಂಡು
ಅವ್ರು - ಗುಂಬದಗ್ಗಣಿಗೆ ತೆರಳಿದರು !

ಗುಂಡು ಬ್ರಮ್ಮಯ್ನ ಕಡೆಯಬಾಕಲ ಒಳುಗೆ
ಚಿನ್ನದ ಕಾಳೆ ಕಾಲು ಪೆಂಡ್ಯ |

ಚಿನ್ನದ ಕಾಳೆ ಕಾಲು ಪೆಂಡ್ಯ ಶಿವನಾರಾಯ್ನ ೨೨೬೦
ಅವನ - ಕಡೆಯ ಬಾಕುಲ್ಗೆ ಕಟ್ಟಿದರಂತೆ |

ಕಡೆಯ ಬಾಕುಲೊಳಗೆ ಕಟ್ಬುಬುಟ್ಟು ಶಿವನಾರಾಯ್ನ
ಅವುರಾಮ್ಗೆ ಕೊಟ್ಗೇಲೋಗಿ ಮನುಗವ್ರೆ |

ಬೆಳ್ಳಿ ಮೂಡುತ ಬಂತು ಬೆಳುದಿಂಗ್ಳಾಯ್ತು ಬಂತು
ಕೋಳಿ ಕೂಗಿ ಲೋಕ ಬೆಳುಗಾಯ್ತು |

ಕೋಳಿ ಕೂಗಿ ಲೋಕ ಬೆಳಗಾದ ಕಾಲದಲ್ಲಿ
ಶಿವನೆ ನಾರಾಯ್ನ ನಿನ್ನ ಸಿರುಪಾದ |

ಶಿವುನೆ ನಾರಾಯ್ನ ನಿನ್ನ ಸಿರುಪಾದ ಗತಿಯೆಂದು
ಬಲ್ದ ಮಗ್ಳಾಗೆದ್ದು ಸರಣ ಈಚ್ಗೆ ಬರುತಾನೆ |

ಬಾಕ್ಲಬುಟ್ಟು ಒಳಬಾಕ್ಲಿಂದ ಈಚುಗ್ಬಂದ
ಗುಂಡುಬ್ರಮ್ಮಯ್ಯ
ನಾರಾಯಣನ ಪಾದ ಕಂಡನಂತೆ |

ಅವರಿಬ್ರು ಪಾದ ಓಗಿ ಹಿಡ್ಕೊಂಡು
ಗುಂಡು ಬ್ರಮ್ಮಯ್ಯ ೨೨೭೦
'ಆಡೀದ ಮಾತೀಗೆ ಬಂದೀರಿ |

ಆಡೀದ ಮಾತೀಗೆ ಬಂದೀರ' ಅಂತ್ಹೇಳಿ
'ನನ್ - ಮೊರುಬಿದ್ದ ಕಳ್ಳ ನಾ ಕೊಡುಲಾರಿ' |

ನಿದ್ರೀಯ ತಿಳಿದು ಮೇಲುಕೆದ್ದಾರಂತೆ
'ಬಾರಪ್ಪ ಸರಣ ಗುಂಡು ಬ್ರಮ್ಮಯ್ನೋರೆ' |

'ಇನ್ನೇನು ದೊರೆ ತಡಿಕೊಂಡು ಬರುತಾನೆ
ನಾವಿಲ್ಲಿರಬೇಕೂ ಮುಂದ್ಕೆ ಹೋಗಬೇಕೂ |

ಇಲ್ಲೆ ಇರಬೇಕೋ ನಾವು ಮುಂದ್ಗೆ ಹೋಗವಪ್ಪ ಸರಣ
ನಾವ್ಯೋಗಬೇಕೂ ಇಲ್ಲೇ ಇರಬೇಕೂ' |

'ಆಡಿದ ಮಾತ್ಗೆ ನಾನು ಹೇಡಿಯಾಗೋನಲ್ಲ ೨೨೮೦
ನನ್ - ಪ್ರಾಣವಂತೆ ತಲೆಯು ಕೊಡ್ತೀನಿ

ಬಾಳುವಂತ ತಲಿಯ ಕೊಡ್ತೀನಪ್ಪ ಗುರುವೆ
ದೊರು ಬಂದ್ರೆ ನಾನು ನಾಳೆ ಹೇಳ್ತೀನಿ |

ನೀವೇರೊ ಸೂಲುಕ್ಕೆ ನಾನೇರ್ತೀನಿ ಗುರುವೆ
ದೇವ್ರರೆ ನಿಮ್ಮನುಕೆ ಭಯ ಬೇಡಿ |

ದೊರೆ ಬರ್ಲಿ ಆ ದೊರೆಗೆ ನಾ ಹೇಳ್ತೀನಿ ಸ್ವಾಮಿ
ನೀವೇನು ಹೆದುರ್ಕೊಬೇಡಿ
ಅವ ಬರ್ಲಿ ನೀವು ಗುಂಬುದಗ್ಗಣಿಗೆ ಎದ್ದು ಕೈಕೊಡಿ
ಆಗ್ಲಿ ತಕಳಿ ಹೋಗಿ' ಅಂತ್ಹೇಳಿದ್ರು
ಮಡ್ತೀರು ಆಗಣಿ ತಕಂಬಂದು ಕೈಗೆ ಕೊಡ್ತರೆ - ೨೨೯೦

ಗುಂಬದಗ್ಗಣಿ ನೀರು ಅಂಗ್ಕೆಗೆ ಬೀಳ್ತಂತಾಗ
ಬೇಳ್ಕೆ ಬೂದಿ ಹರಿದು ಬೆಳಗಾಯ್ತು |

ಬೇಳ್ಕೆ ಎಲ್ಲ ಹರ್ದು ಬೆಳಗಾಗಿ ಬಂದ್ಬುಡ್ತು
ಇವ್ರು - ಗುಂಡು ಬ್ರಮ್ಮಯ್ನ ಮಠುದಲ್ಲಿ |

ಗುಂಡು ಬ್ರಮ್ಮಯ್ನ ಮಠುದಲ್ಲಿ ಶಿವುಪೂಜ್ಗೆ
ಕೂತು ಶಿವುಪೂಜ್ಯ ಮಾಡುತಾರೆ |

ಶಿವುಪೂಜೆ ಮಾಡ್ಬುಟ್ಟು ಊಟುಕ್ಕೆ ಕೂತ್ರಂತೆ
ಗುಂಡುಬ್ರಮ್ಮಯ್ನವರ ಮಡಿದೀರು ಊಟುಕ್ಕೆ ಪಡುಸ್ರಂತೆ
ಊಟ ಮಾಡ್ಬುಟ್ಟು ಎಲಡ್ಕೆ ತಗ್ದು ತಾಂಬೂಲ
ಹಾಕ್ತ ಕುತ್ಕೊಂಡ್ರು ೨೨೯೯

೧೬. ಗುಂಡುಬ್ರಮ್ಮಯ್ಯನನ್ನು ಶೂಲಕ್ಕೆತ್ತಿದ ಸಂದು

ಸುವ್ವಾ ಬಾ ನನ್ನ ಒಸುವಯ್ಯ ಸುವ್ವಿ | ಸೊಲ್ಲು |

ಒರ್ಗಲ್ಲೆ ಬೆಳಕ್ಹರೀತು ೨೩೦೦
ಆಗ ದೊರೆಗಲ್ಲಿ ಎಚ್ಚುರವಾಗೋಯ್ತು -

ನನ್ನ ಕನ್ನೆಯ ಮೈಮುಟ್ಟಿ ಚಿನ್ನವ ಕಳುದೋನ
ಅವ್ನ- ಚಿತ್ರುಗಂಡ ಮಾಡಿ ಕುಯುಸ್ತೀನಿ |

ಮಡದೀಯ ಮೈಮುಟ್ಟಿ ಒಡುವೇಯ ಕಳ್ದೋನ್ಗೆ
ಅವ್ನ - ಹಿಡುಗಂಡ ಮಾಡಿ ಕುಯುಸ್ತೀನಿ |

ಕನ್ನಾದ ಬಾಗ್ಲಲ್ಲಿ ತಣ್ಣುಗ್ ಗಾಳಿ ಬೀಸ್ತದೆ
ಇನ್ನು - ನಿನ್ನ ನಿದ್ರೆ ಗುರುವೆ ತಿಳಿನಿಲ್ಲೆ |

ಬೀದು ಬೀದಿಗುಂಟ ಹುಡಿಕೊಂಡು ಬರುತಾನೆ
ಹರಡಿರುವ ಮುತ್ತ ಹುಡಿಕೊಂಡು |

ಹರಡಿರುವ ಮುತ್ತ ನೋಡ್ಕೊಂಡು ಬಂದನಂತೆ ೨೩೧೦
ಹೆಬ್ಬೆಟ್ರಾಯನ ದೇವುಸ್ತಾನಕ್ಕೆ ಬರುತಾನೆ |

ಹೆಬ್ಬೆಟ್ರಾಯನ ದೇವುಸ್ತಾನುದಲ್ಲಿ ನಿಂತ್ಕೊಂಡು
ಚೋಜ್ಗ ಮಾಡ್ತನೆ ತನ್ನ ಮನದಲ್ಲಿ |

ನರಮಾನ್ರು ನನ್ನ ಪಟ್ಟುಕೆ ಬಂದಿಲ್ಲ
ಸುರುಪತಿಯೇನೊ ಶಿವಬಲ್ಲ |

ಮುತ್ತು ಹರಡಿರುವ ದಾರೀಯ ಹುಡಿಕೊಂಡು
ಗುಂಡುಬ್ರಮ್ಮಯ್ನ ಮಠುಕೆ ಬರುತಾನೆ |

ಯಾರಯ್ಯ ಸರಣ ಗುಂಡು ಬ್ರಮ್ಮಯ್ನಾನೆ
ಈಚೆಗೆ ಬಾರಪ್ಪ ಸರಣಾನೆ |

'ಅಹ್ಹಾ ದೊರೆಯೆ ಏನು?' ೨೩೨೦
'ಏನು ಅನ್ನೋದಾಗಿ ನೀನ್ ಕೇಳ್ತಿಯಯ್ಯ -

ದಾರೀಯ ಒಳುಗೆ ಒನ್ ಮಠವ ಕಟುಕೊಂಡು
ಹೋಗ್ಬರೊ ಕಳ್ರುನೆಲ್ಲ ಸೇರುಸ್ಕೊಂಡು |

ಹೋಗ್ಬರೊ ಕಳ್ರುನೆಲ್ಲ ಸೇರುಸ್ಕೊಂಡು ಗುಂಡುಬ್ರಮ್ಮಯ್ಯ
ನನ್ನ ಪಟ್ಟುವ ಹಲ್ಲೆ ಮಾಡುಬೋದ ? |

ನಿನ್ ಮೊನುಗಳ್ರ ತೋರ್ಸು ಜಲ್ದಿ'
'ಊಟ ಮಾಡ್ತವುರೆ ಸೊಲ್ಪ ನಿಂತ್ಕೊ ದೊರೆ
ಇನ್ನೇನ್ ಬತ್ತರೆ ತಾಂಬೂಲ ಮಾಡ್ತಾ ಅವ್ರೆ' -

ಚಿಕ್ಕ ಮಕ್ಕಳಾಗಿ ರೂಪು ಬದ್ಲು ಮಾಡ್ಕೊಂಡು
ಶಿವನಾರಾಯಣರು ಈಚೆಗೆ ಬರುತಾರೆ | ೨೩೩೦

'ಹುಂ ಇವ್ರೆಯ ಅದೇನ್ ಮಾಡಿಯೊ ಮಾಡು'
'ಆ ಚಿಕ್ಕಕ್ಕ ನನ್ ಪಟ್ಟುಕಳ್ತನ ಮಾಡ್ಬಲ್ರ?'
ದೊಡ್ಡ ಮೊನುಗಳ್ರು ಎಲ್ಲಿದ್ದರು ಅವುರ್ನ ತೋರ್ಸು' -

'ಚಿಕ್ಕಮಕ್ಕಳು ಅಂತ ಯಾಕಯ್ಯ ಹೇಳೀಯೆ
ಅವ್ರು - ನೋಡ್ ನೋಡುದ ಮೂಲೆಲ್ಲ ಹಾಳಪ್ಪ' |

'ಅಹ್ಹಾ ಗುಂಡುಬ್ರಮ್ಮಯ್ಯ
ಮಕ್ನು ತೋರ್ಸಿ ಮೊನುಗಳ್ರ ಮರೆ ಮಾಡ್ಕೊಬೇಡ
ಅವುರೆಲ್ಲಿದ್ರೂ ಬ್ಯಾಗ್ನೆ ತೋರು'
'ದೊರೆಯೆ ನನ್ನ ಮೊರೆ ಹೊಕ್ಕುದ ಕಳ್ರ ನಾನು ಕೊಡೊದಿಲ್ಲ
ಅವುರೇರುವಂತ ಶೂಲ್ಕೆ ನಾನೇರ್ಸೇಕು'
ಜಮ್ ನೇರ್ಸಿ ಮರುವ ತಂದು
ಕೆತ್ತಿರುವಲಗೆ ಮಾಡುದ್ರು ಆಗ
ಕೆತ್ತಿ ಹಲಗೆ ಮಾಡಿ ಮೇಲೆ ಸೂಲವನ್ನು ಮಾಡುದ್ರು
ಗುಂಡುಬ್ರಮ್ಮಯ್ನ ಮನೆ ಬಾಕ್ಲಲ್ಲಿ ಸೂಲ ನೆಟ್ರು
'ಅನ್ನಾಯವಾಗಿ ಸಾಯ್ಸೇಡ ಕನಯ್ಯ
ಮೊನುಗಳ್ರು ಕೊಟ್ರು ನಿನ್ನ ಜೀವ ಉಳುಸ್ಕೊ'
'ದೊರೆಯೇ
ಮೊರೆ ಬಂದೋರ ಬುಟ್ಕೊಡಕಿಲ್ಲ ಅಂತ
ಮಣ್ಣೆನ ಪೆಂಡೆ ಕಾಲುಗ್ ಕಟ್ಕೊಂಡು
ಮಣ್ಣೆನ ಕಾಳೆ ಬಿದಿದ್ದೀನಿ
ಅವುರೇರೋ ಸೂಲ್ಕೆ ನಾನೇರ್ತೀನಿ ಅಂತ ಮಾತ್ಕೊಟ್ಟಿದ್ದೀನಿ
ಮಾತು ತಪ್ದೊ ನೀತಿ ತಪ್ದೊ ಅಂತ
ನನ್ನಷ್ಟಕ್ಕೆ ನನ್ನ ಬುಟ್ಟುಡಪ್ಪ' ಅಂದ್ಬುಟ್ಟು
'ಗುರುದೇವ ನಾನು ಈ ಸಲ ಸೂಲವನೇರ್ತೀನಿ
ಈಗ ನೋಡಿ' ಅಂತ ಹೇಳ್ತನೆ -

ಸೂಲವೆ ಸುಂಗಾರವಾದೊ ಸೂಲವೆ ವೈಕುಂಟವಂತೆ
ಸೂಲವೆ ಅವುರ್ಗೆ ಸುಖೀಸ್ಕೊರ್ಗ |

ಗುಂಡು ಬ್ರಮ್ಮಯ್ಯ ಸೂಲುಕೇರ್ತರೆ ಅಂತ
ಒರ್ಗಲ್ ಪಟ್ಟುಣವಾದ ಪಟ್ಟುವೆ
ಒಂದು ಚಿಳ್ಪಿಳ್ಳೆಯೂ ತಪ್ಪೆ
ಗುಂಡಾಪುರುಕ್ಕೆ ಬಂದ್ಬುಡ್ತಂತೆ
ಗುಂಡುಬ್ರಮ್ಮಯ್ಯನವರು
ಒಂದು ಪಾದ ಎತ್ತಿ ಮಡುಗುದ್ರೆ
ಚಿಗುರು ಒಡೀವದಂತೆ
ಮತ್ತೊಂದು ಪಾದ ಎತ್ತಿ ಮಡುಗುದ್ರೆ
ಹೂವೇ ಬಿಡುವುದಂತೆ
ಮೂರು ಪಾದ ಎತ್ತಿ ಮಡುಗುದ್ರೆ
ಕಾಯೇ ಬಿಡುವುದಂತೆ
ನಾಕು ಪಾದವ ಒತ್ತಿ ಮೇಕೆ ಮಡುಗುದ್ರಲ್ಲ
ಹಣ್ಣು ಚಿಪ್ಪಳ್ಚುಡ್ತು
ಆಮಾಗ ಗುಂಡು ಬ್ರಮ್ಮಯ್ಯ ಹೋಗಿ ಸೂಲುಕ್ಕೆ ಬಡ್ಕೊಂಡ
'ನಾರಾಯಣ ಇವುನ ಸತ್ಯಕೆ ನಾನೊಪ್ದಿ'
ಅಂತ ಈಸ್ಪುರ
ಗುಂಡು ಬ್ರಮ್ಮಯ್ಯುನ ಗುಂಡ್ಗೆ ಒಳುಗೋಗಿ
ಶಿವುಪೂಜ್ಗೆ ಕೂತ್ಕೊಂಡ ಈಸ್ಪುರ
ಆಗ -

ಅಂತೆ ನೋಡಿದರಂತೆ ಅವುರ ಮಡದೀರು
ನಮ್ಮ ಶರಣರು ಅಕ್ಕ ಸೂಲಕ್ಕೆ |

ನಮ್ಮ ಸರಣರು ಸೂಲಕ್ಕೆ ಬಡುಕೊಂಡ್ರಲ್ಲ
ನಮ್-ಪ್ರಾಣಗಳ ನಾವು ಮಡುಗ್ಬಾರ್ದು |

ತಮ್ಮ ತಮ್ಮ ಕತ್ತ ಕೂದುಕೊಂಡ್ರಕ್ಕ ತಂಗೇರು
ತಮ್ಮ ತಮ್ಮ ಸಿರುವ ಮಂಗ್ಮಾರ್ತಿ ಮಾಡಿಕೊಂಡ್ರು
ಸೂಲುಕ್ಕೆ ಮುಂಡಾನಲ್ಲಿ ಮಂಗ್ಮಾರ್ತಿ ಮಾಡುದ್ರಲ್ಲ
ಮೂರ್ನೆನ ಮಡ್ಡೀರ್ನೂ ಎತ್ತಿ
ಆ ಶೂಲಕ್ಕೆ ಕುಂಡ್ರುಸ್ಕೊಂಡ್ರು
ಶಿವುನಾರಾಯ್ಣ ಕನ್ಗತ್ರಿಯ ಗಗನಚಿಕ್ಕೀ ಅರಮಲ್ಲಿ
ಬುಟ್ಟುಬುಟ್ಟಿದ್ರು
ಇಸುಬ್ರಮ್ಮನ ಸಾಪದಂತೆ ಮಡುಗಿದ ಒಂದಿನುಕೆ
ಅದು ಸಿಡ್ಲಾಗಿ ಎರುಗ್ಬೇಕು
ಗುಂಡುಬ್ರಮ್ಮಯ್ಯ ಸೂಲುಕ್ಕೇರಿದ್ರೂ
ಒರ್ಗಲ್ ಕ್ವೋಟೆ ಕತ್ಕೊಂಡಿದ್ರು ಒಂದೇ ಆಯ್ತು
ಕ್ವೋಟೆ ಧಗಾಧಗ್ನತ್ಕೊಂಡು ಧಿಗಾಧಿಗ್ನುರುದೋಯ್ತು-

ಶಿವುನೂ ನಾರಾಯ್ಣನು ಗುಂಡುಬ್ರಮ್ಮಯ್ಯನ
ಸತ್ಯಕ್ಕೆ ಮೆಚ್ಚಿ ತಲದೂಗುತಾರೆ |

ಗುಂಡುಬ್ರಮ್ಮಯ್ಯನ ಸತ್ಯಕ್ಕೆ ಮೆಚ್ಚಿ
ಕೈಲಾಸ್ಕೆ ಸಾಗಿ ಬರುತಾರೆ |

ಕೈಲಾಸ್ದ ಬೀದೀಲಿ ಬೀದಿನೆಲ್ಲ ಮೆರ್ಸೊಂಡು
ಪಾರ್ವತಿ ಅಮ್ಮಯ್ನ ಗುರುಮಠುಕೆ |

ಪಾರೋತಿ ಅಮ್ಮಯ್ನ ಗುರುಮಠುಕೆ ಮಾಸ್ವಾಮಿ
ಸರಣಾರ ಜೊತೆಗೆ ಬರುತಾರೆ |

ಆಡಿದ ಮಾತ್ಗೆ ಪಾರ್ವತ ತಂದಿವಿ
ಗುಂಡುಬ್ರಮ್ಮಯ್ನ
ಒಪ್ತೀತ ಹೆಣ್ಣ ನಿನ್ ಮನಸು |

ಕೈಲಾಸದ ಬೀದೀಲಿ ಮೂರ್ ಬಳ್ಸ ಬಂದಿವಿ
ಗುಂಡುಬ್ರಮ್ಮಯ್ಯನವುರ್ಗೆ
ಮಂಗಳಾರ್ತಿಯನ್ನು ಮಾಡುಬುಡು'
ಸೂಲುದಿಂದ ಎಲ್ರುನೂ ಕೆಳಿಕಿಳೀಸಿ
ಅವುರ ಮಡ್ದೀರ್ನೂ ಪಡುದ್ರು
ಗುಂಡುಬ್ರಮ್ಮಯ್ಯಂಗೆ ಆಸುರ್ವಾದ ಕೊಡ್ತಾರೆ
'ನಮ್ಮ ಕೈಲಾಸ್ದ ಬೀದಿ ಬುಟ್ಟು
ದಕ್ಷಿಣ ದೇಸುಕ್ಕೆ ಹೋಗಪ್ಪ ಗುಂಡುಬ್ರಮ್ಮಯ್ಯ
ಮಣ್ಣೆನಗಟ್ಟಿ ನಿನ್ಗೆ ಚಿನ್ನುದ ಗಟ್ಟಿ ಆಗ್ಲಿ ೨೪೧೦
ನೀನು ದಕ್ಷಿಣ ದೇಸ್ಕೆ ಹೋಗಪ್ಪ' ಅಂತ್ಹೇಳಿ
ಇಸ್ನುನ ಚಕ್ರ ಅವುನ್ಗೆ ಈಸ್ಕೊಟ್ರು
'ಈ ಚಕ್ರುದಲ್ಲಿ ನಿನ್ ಜೀವ್ನ ಮಾಡಪ್ಪ
ಈ ಜಗತ್ಯದಲ್ಲಿ ಬಡುಬಗ್ಗುರ್ಗೆ ಬೇಕಾದ ಮಡ್ಕೆಕುಡ್ಕೆಗಳ
ಮಾಡ್ಕೊಡಪ್ಪ
ನಿನ್ನ ಕೀರ್ತಿ ಜಗತ್ಯದಲ್ಲಿ ಮೆರೀಲಪ್ಪ' -

ಅಲ್ಲೀಗೆ ಹರಹರ ಇಲ್ಲೀಗೆ ಶಿವಶಿವ
ಪಲ್ಲೇತ್ರಮಠದಲ್ಲಿ ಪ್ರವುತಾರು |

ಪಲ್ಲೇತ್ರ ಮಠುದಲ್ಲಿ ಇರ್ತಾರೆ ಪ್ರವುತರು
ಅವುರ್ಗಲ್ಲೆ ಉಂಟಪ್ಪ ಕೈಲಾಸ |

ಗುಂಡು ಬ್ರಮ್ಮಯ್ನ ವಚನವ
ಹೇಳುದ ಪುಣ್ಯಾತ್ಮುರ್ಗೆ ಬರುದ ಪುಣ್ಯಾತ್ಮುರ್ಗೆ*
ಅವುರ್ಗೆ ಇವಲ್ಕ ಪಾಪ ಪರಿಯಾರ -

ಹೇಳು ಹೇಳು ಅಂದ್ರೆ ಹೇಳದೆ ಹೋದ್ರೆ ನಮುಗ್ಕರ್ಮ
ಮುಂದೆ ಕೇಳ್ನಿಲ್ಲ ಅಂದೋರ್ಗೆ ಯಮಗೊಂಡ |

ಹೇಳೋರ್ಗೆ ಬೋ ಮೆಚ್ಚು ಕೇಳೋರ್ಗೆ ಬೋ ಅಚ್ಚು
ಅಚ್ಚುಮೆಚ್ಚಾದ ನಮ್ಮ ಶಿವನ ಕಥೆ |

ಶಿವನಾರಾಯ್ಣರ ಸಂದು ಗುಂಡು ಬ್ರಮ್ಮಯ್ಯನ ಸಂದು
ಈ ಸಂದು ಇಲ್ಲೀಗೆ ಸಂಪೂರ್ಣ |



ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣೆ ಕಲ್ಯಾಣ್ದ ಬಸವಣ್ಣ - ಕಾಸೀಲಿಂಗ
ಕಡೆತನಕ ಕಾಯೋ ಅಭಿಮಾನ |

ಹೇಮರೆಡ್ಡಿ ಮಲ್ಲಮ್ಮ

ಸುವ್ವನ್ನಕ್ಕ ಸುವ್ವನ್ನವ್ವ ಸುವನ್ನಾಲಿ
ಹ್ಯಾಮರಡ್ಡಿ ಸೊಸ್ಮಲ್ಲಮ್ಮ ಸುವ್ವನ್ನಾಲಿ | ಸೊಲ್ಲು |

೧

ಉತ್ತುರದ ಸೀಮೆಲ್ಲಿ*
ಎತ್ತುರದ ಪರುವತ
ಸಿರುಶೈಲ ಕೈಲಾಸವು
ಅಲ್ಲಿ - ಮಲ್ಲಯ್ಯ ಸ್ವಾಮಿ
ಪಾರುವತ ಸೈತುವಾಗಿ
ಸಿರುಶೈಲ ಕೈಲಾಸುದಲ್ಲಿ
ಸ್ವಾಮಿ ನೆಲುಗೊಂಡವುರೆ |

ಸಿರುಶೈಲ ಪರುವತುಕೆ
ಬಲಕೆ ರಾಮಾಪುರ
ಎಡಕೆ ಸಿದ್ದಾಪುರ
ಪುರುಕೆ ಪುರ ದೊಡ್ಡದು
ಅದು - ರಾಮಾಪುರ ಕಾಣೆ
ರಾಮಾಪುರದಲ್ಲಿ
ಸೋಮರಡ್ಡಿ ಅಂಬೊ ಸರಣ
ಅವ್ನ - ಮಡದಿ ಗೌರಮ್ಮ ತಾಯಿ
ಅವ್ರು - ಸತ್ಯ ಶರಣರು
ಅವ್ರು - ಮಲ್ಲಯ್ಯ ಸ್ವಾಮಿಗೆ
ಮೀಸುಲಾದ ಒಕ್ಕಲು |

ಸಿರುಶೈಲ ಕೈಲಾಸದ
ಮಲ್ಲಯ್ಯ ಸ್ವಾಮಿಗೆ
ಒಕ್ಕಲಾಗಿದ್ದುಕೊಂಡು
ವರುಷಕೊಂದು ಸಲ
ಸ್ವಾಮಿ ಸನ್ನುದಾನುಕೆ
ಮಡ್ದಿ ಗೌರಮ್ಮುನ್ನ
ಕರುಕೊಂಡು ಸೋಮರಡ್ಡಿ
ಕೈಲಾಸ ಪರುವತಕೆ
ವರುಷಕೊಂದು ಸಲ
ತಪ್ಪದಂತೆ ಗಂಡಹೆಂಡ್ತಿ
ಬಂದು ಸ್ವಾಮಿ ದರುಸ್ನೆ ಮಾಡಿ
ಓಮ ನ್ಯಾಮದಲ್ಲಿ
ಪೂಜೆ ಪುಲಸ್ಕಾರ ಮಾಡಿ
ಭಕ್ತಿ ಭಾವುಣ್ಕೆಯಲ್ಲಿ
ಬಾಳಾಟ ಮಾಡುತವುರೆ |

ಗೌರಮ್ಮ ತಾಯಿಯ
ಹಟ್ಟೀಗೆ ಒತ್ತಿಲಿರೊ
ಕೊಂಡಾರೆಡ್ಡಿ ಹೆಂಡತಿ
ಅಲುಮೇಲಮ್ಮನಿಗೆ
ಗಂಡು ಮೊಗ ಹುಟ್ಟಲು
ಅದ್ರ - ನಾಮಕರಣಕೆಗಂತ
ಗೌರಮ್ಮ ತಾಯಿಯು
ಅಲುಮೇಲಮ್ಮನ
ಮನೆಗೆ ಸಾಸ್ತ್ರಕೆ ಹೋದ್ಲು |

ಮೋಗೀನ ತೊಟ್ಟಿಲಕೆ ಹಾಕಿ
ಆನಂದವಾಗಿ ಬಂದು
ಕಡುತದ ಹೆಣ್ಣುಮಕ್ಕಳು
ಆರುತಿಯ ಬೆಳಗೂತ
ಸೋಬಾನೆ ಹಾಡಿದರು |

ತೊಟ್ಟಿಲು ಸಾಸ್ತ್ರ ಮುಗುದು
ಆ ಪುಟ್ಟ ಮೊಗೀಗೆ
ಕನಕಮ್ಮ ಅನ್ನೊ ಹೆಸ್ರ
ನಾಮುಕರ್ಣೆ ಮಾಡಿದರು
ಆ ಮೊಗೀನ ಚಂದಕೆ
ಆ ಮೊಗೀನ ಅಂದಕೆ

---

* ಪ್ರತಿ ಪಾದಕ್ಕೂ 'ಸುವನ್ನಾಲಿ' ಎಂದು ಹೇಳಿಕೊಳ್ಳಬೇಕು ; ನಿಂತಗೆರೆ ಆರುವಲ್ಲಿ 'ಸುವನ್ನಾಲಿ' ಎಂದು ಹೇಳುವುದರ ಜೊತೆಗೆ ಸೊಲ್ಲಿನ ಪೂರ್ಣ ಭಾಗವನ್ನು ಹಾಡಬೇಕು.

ಆ ಮೊಗೀನ ಭಾವಕೆ
ಮರುಳಾಗಿ ಗೌರಮ್ಮ
ಆ ಮೊಗುವ ಎತ್ತೀಕೊಂಡು
ಮುತ್ತಿಕ್ಕಿ ಮುದ್ದಾಡಕಂತ
ತೊಟ್ಟಿಲಿಗೆ ಕೈಚಾಚಿ
ಎತ್ತಿಕೊಳ್ಳಕ್ಕೋದಾಗ
ಅಕ್ಕಪಕ್ಕದೆಂಗಸರು
ಗೌರಮ್ಮನ ಕೈಯ ಕಿತ್ತು
ಹಿಂದಕ್ಕೆ ನೂಕಿದರು
"ನೀನು ಬಂಜೆ ಅನ್ನೋದು
ನಿನಗೆ ತಿಳೀದ ಗೌರಮ್ಮ ?
ನಿನ್ನಂಥ ಗೊಡ್ಡೀರು
ಇಂಥ-ಕಂದಮ್ಮನ ಮುಟ್ಕೋದ ?
ಮೊದ್ಲು ಇತ್ಲಾಗೆ ಬಾ
ಮೊಗೀನ ಮುಟ್ಸುಗಿಟ್ಸಿ!" |

ಆ ಹೆಂಗಸರಾಡೀದ
ಅಂತೆ ಮಾತಗಳ ಕೇಳಿ
ಗೌರಮ್ಮ ತಾಯಿಯು
ಗಡಗಡನೆ ನಡುಗಿದಳು
ದುಕ್ಕ ಉಕ್ಕುಳಿಸಿ ಬಂದು
ಸೆರಗಲ್ಲಿ ಕಟ್ಟಿಕೊಂಡು
ಗಳುಗೂ ಅಲ್ಲಿ ನಿಲ್ಲಾದೆ
ತನ್ನಟ್ಟೀಗೆ ಬಂದುದ್ದೇ ತಡ
ಪಟ್ಟೇ ಮಂಚದಮ್ಯಾಲೆ
ಬಿದ್ದು ಗಳಗಳನೆ ತಾಯಿ
ಬಿಕ್ಕುಳಿಸಿ ಅತ್ತಳಾಗ |

"ಅಯ್ಯೊ ಭಾಗವಂತುನೆ
ನಾನು ಹುಟ್ಟಿ ಹನ್ನೆರಡೊರ್ಷ
ಮಂಡೆ ಮಾಸಿ ಮೂವತ್ತೊರ್ಷ
ನನ್ಗೆ-ಮಕ್ಕಳ ಫಲವಿಲ್ಲ
ಅಯ್ಯೋ ಅಯ್ಯೊ ಭಗುವಂತ
ನನ್ನಣೆಲಿ ಏನು ಬರುದ್ಯೊ
ಮಕ್ಕೈತ್ತ ತಾಯ್ಗಳೆಲ್ಲ
ನನ್ನ-ಹುಟ್ಟು ಬಂಜೆ ಅನುತಾರೆ
ನನ್ನ-ದಟ್ಟಿಧರ್ನಿ ಅನ್ನುತಾರೆ
ಜಗತ್ಯದಲ್ಲಿ ಇರುವಂತ
ಜೀವರಾಸ್ಯಕೆಲ್ಲನೂವೆ
ಮಕ್ಕು ಕೊಟ್ಯಲ್ಲೊ ಪರಮಾತ್ಮ
ನನ್ನೊಟ್ಟಿಲಿ ಒಂದು ಕೊನೆ
ಹುಟ್ಟುಬಾರ್ದಿತ್ತ ದೇವ್ರೆ
ಈ ನನ್ನ ಕಷ್ಟುವ
ಯಾರ ಕೈಲಿ ಹೇಳುಕೊಳ್ಳಿ?
ಹೇಳಿಕೊಳ್ಳಂವು ಅಂದ್ರ
ಅತ್ತು ಕರಿಯೂವಾಗ
ಹೇಳಿಕೊಳ್ಳಂವಾಂದ್ರೆ
ಹತ್ತಿರದಲ್ಲಿ ನನಗೆ
ತಂದಿಲ್ಲ ತಾಯಿಲ್ಲ
ಬಂಧುಬಳಗ ಮೊದುಲು ಇಲ್ಲ
ಒಂದುಗುಟ್ಟುರೋರು ಇಲ್ಲ
ಸಂಗ್ಡ ಬೆಳುದೋರು ಇಲ್ಲ
ಈ ಹಾಳ ಒಂಟಿ ಜೀವುಕೆ
ತಂಟ್ಲುಗಂಟ್ಲು ಮಾಡಿದ್ಯಪ್ಪ?
ಅಯ್ಯೊ ಶಿವುನೇ ಶಿವುನೇ
ಸಿರುಶೈಲಾದ ಮಲ್ಲಯ್ಯ
ನನ್ನ - ಸೋಕ ನಿನಗರುವಾಗನಿಲ್ವ?
ನನ್ನ - ದುಕ್ಕ ನಿನ್ಗೆ ತಟ್ಟುನಿಲ್ವ?
ನನ್ನ - ಕೈ ಬಿಟ್ಟಿಯೇನೊ ತಂದೆ
ನನ್ನ - ಮರತುಬಿಟ್ಯ ಮಲ್ಲಯ್ಯ
ನನ್ನ ಕಷ್ಟ ಸುಕ ಹೇಳ್ಕೋಳಕೆ
ನನ್ಗೆ ದಿಕ್ಕಿಲ್ಲವಾಯಿತಲ್ಲೊ" |

ಹಂಗಂತ ಗೌರಮ್ಮ
ದುಕ್ಕ ಸೋಕ ಮಾಡುವಾಗ
ದೇವಲ್ಕಕೆ ಹೋಗಿದ್ದ
ಗಂಡ ಸೋಮರೆಡ್ಡಿ
ಹಟ್ಟಿಗಾದರು ಬಂದಾನು
ಬಂದು ಗೌರಮ್ಮನ
ಕಂಡು ದಿಕ್ಕಾಣದಂತೆ
'ಅಪ್ಪಾಯ್ ಇದ್ಯಾನಾಯ್ತು?'
ಅಂತ್ಹೇಳಿ ಹತ್ತುರಕೆ
ಬಂದು ಸೋಮಾರಡ್ಡಿ
ಗೌರಮ್ಮನ ಇಚಾರ್ನೆ
ಮಾಡುವಂತ ಕಾಲದಲ್ಲಿ
ಗೌರಮ್ಮ ತಾಯಿಯು

"ಸ್ವಾಮಿ ಸ್ವಾಮಿ ನಾನು
ಏನಂತ ಹೇಳಲ್ಲಿ
ನನ್ನ ಹೊಟ್ಟೇಲಿ ಮಕ್ಕಳಿಲ್ಲ
ಕಟ್ಟೇಲಿ ನೀರಿಲ್ಲ
ಹುಟ್ಟು, ಬಂಜೆ ದಟ್ಟಧರ್ನಿ
ಅನ್ನುವಂತ ವಾಕುಸ್ತಾನ
ಕೊಂಡಾರಡ್ಡಿ ಹಟ್ಟೇಲಿ
ನಾಮುಕರ್ನೆ ಆಗುವಾಗ
ಮೊಗೀನ ಎತ್ತಿಕೊಂಡು
ಮುದ್ದಾಡಿ ಮುತ್ತಕೊಡಬೇಕು·
ಅಂತ್ಹೇಳಿ ನಾನಾದ್ರೆ
ತೊಟ್ಟಲಿಗೆ ಕೈಚಾಚುದೆ
ಅಲ್ಲಿದ್ದ ಹೆಂಗಸರು
ನನ್ನ - ಬಾಯಿಗೆ ಬಂದಂತೆ
ಹುಟ್ಟು, ಬಂಜೆ ಅಂದಾರು
ದಟ್ಟ, ಧರ್ನಿ ಅಂದಾರು
'ನೀನು ಮೊಗುವ ಮುಟ್ಟುಬವುದ?'
ಅಂತ್ಹೇಳಿ ಈಚೆಗಟ್ಟಿದರು
ಇಂತ ವಾಕುಸ್ತಾನ ಕೇಳಿದಮ್ಮಾಲಿ
ನಾವು ಬದುಕಿ ಏನು ಬಂತು?
ಬಾಳಾಡಿ ಏನು ಬಂತು" |

ಗೌರಮ್ಮ ಮಾತ ಕೇಳಿ
ಗಂಡ ಸೋಮರೆಡ್ಡಿ
ಸಮಾಧಾನ ಮಾಡುತ
ಸಿರುಶೈಲು ಪರುವತುಕೆ
ಹೊಗುವಂತ ಪರುಸೇಯ
ಕಂಡು ಮಡ್ಡಿ ಕೈಯ
ಹಿಡುಕೊಂಡು ಸೋಮರೆಡ್ಡಿ
"ಕೇಳು ಕೇಳು ಮಡ್ಡಿ·
ನನ್ನ ಮಾತ ಕೇಳು ಮಡ್ಡಿ
ನಾವು ಈ ಪರ್ಸೆ ಜೊತೆ
ಸಿರುಶೈಲಕೆ ಹೋಗಬೇಕು
ಸಿರುಶೈಲ ಕೈಲಾಸದಲ್ಲಿ
ಸ್ವಾಮಿ ಮಲ್ಲಯ್ಯನ
ಪಾದಕೆ ಮೊರುಬಿದ್ದು
ಮಕ್ಕಳ ಫಲ ಕೇಳಬೇಕು"
ಅನುತ್ಹೇಳಿ ಮಡದೀಯ
ಕರುಕೊಂಡು ಸೋಮರೆಡ್ಡಿ
ಹೆಂಡುತೀಯ ಜೊತೆಯಾಗಿ
ಸಿರುಶೈಲ ಪರುವತಕೆ
ಅವುರಿಬ್ಬಾರು ಹೊರುಟಾರು |

ಸಿರುಶೈಲ ಕೈಲಾಸದಲ್ಲಿ
ಸ್ವಾಮಿ ಮಲ್ಲಯ್ಯನ ಪೂಜೆ
ಮಕ್ಕಳ ಫಲಗಳ
ಗೌರಮ್ಮ ತಾಯಿಯು
ಸೋಮರೆಡ್ಡಿಯು ಸೇರಿ
ಮಲ್ಲಯ್ನಲ್ಲಿ ಕೇಳುತಾರೆ |

"ತಂದೆ ಮಲ್ಲಯ್ಯ ಸ್ವಾಮಿ
ನಮ್ಮ ದುಕ್ಕ ಸೋಕ
ನಿಮ್ಮ ಪಾದುಕ್ಕರುವಾಗ್ಲಿ
ನಮ್ಮೊಟ್ಟೇಲಿ ಒಂದು ಕುಡಿ
ಹುಟ್ಟಿದ್ದೇ ಆದರೆ
ನಿನ್ನ ಬೆಟ್ಟಕ್ಕೆ ಬಂದು
ನಿನ್ನ ಸನ್ನಿಧಾನದಲ್ಲಿ
ಆ ಮಗೀಗೆ ತಪ್ಪದೆ
ನಿನ್ನ ಹೆಸ್ರ ಕರಿಯುತೀವೀ"
ಹಂಗಂತ ಹರಕೆ ಹೊತ್ಕೊಂಡ್
ರಾಮಾಪುರುಕೆ ಬಂದರಂತೆ |

ತಾಯಿ ಗೌರಮ್ಮನವರು
ಸಿರುಸ್ಕೆಲದಿಂದ ಬಂದು
ಆನಂದುವಾಗಿ ತಾಯಿ
ಪ್ರತಿಂನಿತ್ಯು ಮಲ್ಲಯ್ಯನ
ಪೂಜೆಗಳ ಮಾಡುತಿದ್ರು
ಮಲ್ಲಯ್ಯುನ ಕರುಣದ್ರುಷ್ಟಿ
ಬೀಳಲಾಗಿ ಗೌರಮ್ಮ
ಗರುಬವತಿ ಆದುಳಂತೆ |

ಅಮ್ಮಯ್ಯನಿಗೆ ಗುರುವೆ
ಒಂದು ತಿಂಗಳಾಗೋಗ
ಒಂದೇನ ಭ್ರಮಿಸಿದಳು
ಗಂಧ ಕರ್ಪೂರ ಈಳ್ಕ
ತಂದು ಕೊಟ್ಟರಮ್ಮಯ್ಗೆ
ಎರಡು ತಿಂಗಳಾಗೋಗ
ಎರಡೇನ ಭ್ರಮಿಸಿದಳು

ಮೇರುತ್ಕೆ ಮಣ್ಣೆನೆಂಟೆ
ತಂದು ಕೊಟ್ಟರಮ್ಮಯ್ಗೆ
ಮೂರು ತಿಂಗಳಾಗೋಗ
ಮೂರೇನ ಭ್ರಮಿಸಿದಳು
ತ್ಯೋರಾದ ಹುಳಿಮಾವು
ತಂದು ಕೊಟ್ಟರಮ್ಮಯ್ಗೆ
ನಾಕು ತಿಂಗಳಾಗೋಗ
ನಾಕೇನ ಭ್ರಮಿಸಿದಳು
ಕುಂರಾಕ್ಷಿ ಹಣ್ಣುಗಳ
ತಂದುಕೊಟ್ಟರಮ್ಮಯ್ಗೆ
ಐದು ತಿಂಗಳಾಗೋಗ
ಐದೇನ ಭ್ರಮಿಸಿದಳು
ಓದೀಸಿ ಶರಣರ ಕಥೆ
ಅವ್ರ - ಪಾದಾವ ನೆನಿದಾಳು
ಆರು ತಿಂಗಳಾಗೋಗ
ಆರೇನ ಭ್ರಮಿಸಿದಳು
ಏರಿಮಾಗ್ಗ ಎಳೆಹುಣ್ಸೆಕಾಯಿ
ತಂದುಕೊಟ್ಟರಮ್ಮಯ್ಗೆ
ಏಳುತಿಂಗಳ ನಾರಿ
ಏಳೇನ ಭ್ರಮಿಸಿದಳು
ಏಳನಾರ್ದೆ ತಾಯಮ್ಮ
ಬಾಳಾಡೊ ತಾಯಿಯ
ತವ್ರುರೂರ ನೆನಿದಾಳು.
ಗೌರಮ್ನ ತವ್ರುರಿಂದ
ಅವ್ರ - ತಾಯಮ್ಮ ಬಂದಳು
ಎಂಟು ತಿಂಗಳಾಗೋಗ
ಎಂಟೇನ ಭ್ರಮಿಸಿದಳು
ಸುಂಟೀಯಾಲಕ್ಕಿ ತುಪ್ಪ
ತಂದು ಕೊಟ್ಟರಮ್ಮಯ್ಗೆ
ಒಂಬತ್ತು ತಿಂಗಳಾಗೋಗ
ಗೊಂಬೆ ಹಜಾರ್ಕೆ ಬಂದು
ಕಂಬ ಕಂಬುವ ನೆಮ್ಮಿ
ಕುಂತುಕೊಂಡರಾಗ ತಾಯಿ
ನನ್ನೊಟ್ಟೆ ನೋವು ಕಾಣೆರಮ್ಮ
ನಾನೇಳ್ಕಾರಿ ಅನ್ನುವಾಗ
ಸೂಲಗಿತ್ತಿ ಸಂಗಮ್ಮ
ಬಿಳಿಯ ಪತ್ತಲುಟ್ಟು
ಮೊಗ್ಗೀನ್ ರವುಕೆ ತೊಟ್ಟು

ಎಣ್ಣೆಗಡ್ಗೆ ಹಿಡ್ಕೊಂಡು
ಸೋಮರೆಡ್ಡಿ ಮನೆಗೆ ಬಂದು
ಹೆರಿಗೆಯ ಮಾಡುಸವ್ವಳೆ |

"ನಿಮ್ಮ ಮನೆ ಭಾಗ್ಯಾಕೆ
ಭಾಗ್ಯಲಕ್ಷ್ಮಿ ಹುಟ್ಟವ್ವಳೆ
ನಿಮ್ಮ ಮನೆ ಪುಣ್ಯಾಕೆ
ಹೆಣ್ಣುಮೊಗ ಹುಟ್ಟದೇಳಿ"
ಅಂತ್ಹೇಳಿ ಸಂಗಮ್ಮ
ಸೋಮರೆಡ್ಡಿಗೆ ಆಗ
ಸುದ್ದೀಯ ಕೊಟ್ಟಳು |

ಸೋಮರೆಡ್ಡೀಯು
ಬಾಳ ಸಂತೋಷ ಪಟ್ಟು
ಕೇರಿ ಕೇರಿಗೆಲ್ಲ
ಕೊಪ್ರಿ ಕಲ್ಸಕ್ರೆಗಳ
ಎಳ್ಳಕ್ಕಿ ಸಕ್ರೆಗಳು
ಕೊಟ್ಟುಕೊಂಡು ಬಂದನಂತೆ |

ಮಲ್ಲಯ್ನ ದಯವಾಗಲಾಗಿ
ಮಗಳು ಹುಟ್ಟಿದಳೆಂದು
ಆ ಗಂಡ ಹೆಂಡತೀರು
ಆನಂದ ಪಟ್ಟರಾಗ |

ಊರಿಗೆ ದೊಡ್ಡೋರು
ಸೋಮಾರೆಡ್ಡಿಯಾದರೂ
ಲಿಂಗ ಜಂಗುಮರ ಕರ್ದು
ದಾನಧರ್ಮಗಳ ಮಾಡಿ
ಮಗಳ ತೊಟ್ಟಿಲಿಗಾಕ್ಸಿ
ತುಂಬುದ ಸ್ವಾಮಾರ
ಸುಬುವಾದ ಕಾಲದಲ್ಲಿ
ಸಿರಿಗಿರಿ ಮಲ್ಲಯ್ಯನೋರ
ದಯವಾಗಿ ಹುಟ್ಟಿದ ಮಗ್ಳು
ಸ್ವಾಮಿ ಮಲ್ಲಯ್ನ ಹೆಸರಾಗಿ
ಚಂದದ ಮಗಳಿಗೆ
ಮಲ್ಲಮ್ಮ ಅಂತ ಕರ್ದು
ಬೆಜೆಬೆಣ್ಣೆಗಳ ಊಡಿ
ಅನ್ನದಾನ ಮಾಡಿದರು
ಚಿನ್ನ ದಾನ ಮಾಡಿದರು |

ಮಗಳು ಮಲ್ಲಮ್ಮದೇವಿ
ಜಿನುಕೆ ಬಾ ಅಂದರೆ
ಜಾಮುಕೆ ಬಂದಳು
ಅವ್ರ - ಕುಲಕೊಬ್ಬ ಗುರುಗಳು
ಅವ್ರ ಮನೆಗೊಬ್ಬ ಗುರುಗಳು
ಶಿವಸ್ವಾಮಿ ಗುರುಗಳು
ಮಲ್ಲಮ್ಮ ದೇವಿಗೆ
ಇದ್ಯಾಬುದ್ಧಿಯ ಹೇಳಿ
ನಡವಳ್ಕೆ ನುಡುವಳ್ಕೆ
ಎಲ್ಲಾನು ಹೇಳುವಾಗ
ಮಲ್ಲಮ್ಮ ಬೆಳಿದಳು |

೨

ಸುವ್ವನ್ನಕ್ಕ ಸುವ್ವನ್ನವ್ವ ಸುವ್ವನ್ನಾಲಿ
ಹ್ಯಾಮರೆಡ್ಡಿ ಸೊಸುಮಲ್ಲಮ್ಮ ಸುವ್ವನ್ನಾಲಿ | ಸೊಲ್ಲು |

ಸಿರುಶ್ಯೆಲಗಿರಿ ಒತ್ತುನಲ್ಲಿ
ಸಿರಿಗೊಂದು ಸಿದ್ದಾಪುರ
ಸಿದ್ದಾಪುರಕೆ ಸಿರುವಂತ
ನೇಮುಕಾರ ಹ್ಯಾಮರೆಡ್ಡಿ
ಅವುನ್ಸೈದು ಜನ ಗಂಡು ಮಕ್ಕ
ಹಿರಿಯರಿಬ್ಬಾರಿಗೆ
ಮದುವೆ ಮುಂಜಿ ಆಗಾದೆ
ಮೂರನೆ ಮಗನಾದ್ರೆ
ಭಾಗ್ಯಾದ ಭರಮಣ್ಣ
ಮೊರಜುಮನ್ಸ ಭರಮಣ್ಣ
ಒಂದು ಕಂಡಾರೆ ಒಂದ
ಕಾಣಾದ ಪಾಯಿ ಅವ್ನ
ಅಂತೆ ಚಿನ್ನಾದ ಮಗನಿಗೆ
ಮದ್ವೆ ಕಲ್ಯಾಣಗಳ
ಮಾಡಬೇಕು ಅಂತ್ಹೇಳಿ
ಹ್ಯಾಮರೆಡ್ಡಿ ಹೆಂಡತಿ
ಹೊನ್ನಾಜಮ್ಮ ದೇವಿಯು
ಹೆಣ್ಣ ಹುಡುಕುತಿರುವಾಗ
ಸಿರುಶ್ಯೆಲ್ದ ಮಲ್ಲಯ್ಯ
ಹ್ಯಾಮರೆಡ್ಡಿ ಮನೆಮ್ಯಾಲೆ
ದ್ರಿಷ್ಟಿಯ ಮಡಗಿದರಂತೆ |

ಒಂದು ಕಂಡಾರೆ
ಇನ್ನೊಂದ ಕಾಣದಂತ
ಪಾಯಿ ನನ್ನ ಭರಮಣ್ಣ
ನನ್ನ ಭರಮಣ್ಣ ಮಗನಿಗೆ
ಚಂದುಳ್ಳ ಹೆಣ್ಣನು
ನಾನು ತರಬೇಕು ಅಂತ್ಹೇಳಿ
ಸಾಸ್ತ್ರ ಸೂಸ್ತ್ರಗಳ ಮೊದ್ಲು
ಕೇಳೊದ್ಕೆ ಹೊನ್ನಾಜಮ್ಮ
ಚಿನ್ನಾದ ತಟ್ಟೆಯಲ್ಲಿ
ಹಣ್ಣುಕಾಯಿ ಮಡಗಿ
ಐದೆಲೆ ಐದಡ್ಕೆ ಮಡ್ಗಿ
ಅರಿಸಿನ ಕೂಕುಮ
ಗಂಧಕಸ್ತೂರಿಗಳ
ಐದು ಕಂಟ್ರಹಣ ಮಡ್ಗಿ
ಸಾಸ್ತ್ರ ಸೂಸ್ತ್ರಗಳ
ಹೊನ್ನಾಜಮ್ಮ ಕೇಳಿದಳು |

ಸಿರುಶ್ಯೆಲ್ದ ಮಲ್ಲಯ್ಯ
ದ್ರಿಷ್ಟಿಯ ಮಡುಗಲಾಗಿ
ಪುರೋಯಿತರೇನಂದ್ರು
"ರಾಮಾಪುರದಲ್ಲಿ
ಸೋಮಾರೆಡ್ಡಿ ಉಂಟು
ಅವ್ನ ಹೆಂಡತಿ ಗೌರಮ್ಮ
ಇವ್ರ - ಮಗ್ಳು ಮಲ್ಲಮ್ಮದೇವಿ
ನಿಮ್ಮ ಮಗನು ಭರಮಣ್ಣನಿಗೆ
ತಕ್ಕನಾದ ಸಮ್ಮಂದ"
ಪುರೋಯಿತ್ರ ಮಾತಕೇಳಿ
ಹೊನ್ನಾಜಮ್ಮ ಹ್ಯಾಮರೆಡ್ಡಿ
ಐದುಜನ ಮುತ್ತೈದೇರ
ಜೊತೆಯಲ್ಲಿ ಕರುಕೊಂಡು
ಕಳಸ ಕನ್ನಡಿ ಸೈತ
ರಾಮಪುರಕೆ ಬಂದರಂತೆ |

"ನನ್ನಂದುಳ್ಳ ಮಗನಿಗೆ
ನನ್ನ ಚಂದುಳ್ಳ ಮಗನಿಗೆ
ಭಾಗ್ಯಾದ ಭರಮಣ್ಣನಿಗೆ
ನನ್ನ ಚಿನ್ನಾದ ಮಗನಿಗೆ
ನಿಮ್ಮ ಮಗಳ ಕೊಡಲುಬೇಕು"
ಅನುತ್ಹೇಳಿ ಹೊನ್ನಾಜಮ್ಮ

ರಾಮಾಪುರುದ ಹತ್ತೂ ಜನ್ರ
ಪ್ರತೇಕ್ಷ ಮಾಡಿಕೊಂಡು
ಸೋಮರೆಡ್ಡಿ ಹ್ಯಾಮರೆಡ್ಡಿ
ಈಳ್ಕ ಬದಲಿಸಿಕೊಂಡರಂತೆ |

ತುಂಬುದ ಸ್ವೋಮುವಾರ
ಸುಬುವಾದ ದಿನದಲ್ಲಿ
ಸುಬುವಾದ ಗಳುಗೆಲ್ಲಿ
ಗುರುಹಿರಿಯರೆಲ್ಲ ಸೇರಿ
ಸೀತಾಳು ಚಪ್ರ ಹಾಕಿ
ಹೊನ್ನ ಹಸೆಮಣೆಮ್ಯಾಲೆ
ಗಂಡು ಹೆಣ್ಣ ಕುಂಡ್ರೀಸಿ
ಪಟ್ಟ ಬಾಸಿಂಗ ಕಟ್ಟಿ
ಧಾರಾಮೂರ್ತವ ಮಾಡಿ
ಭರಮಣ್ಣ ರೆಡ್ಡಿಗೂ
ಮಲ್ಲಮ್ಮದೇವಿಗೂ
ಧಾರೆಯ ಹೂದರಂತೆ |

ಶಿವಭಕ್ತೆ ಮಲ್ಲಮ್ಮ
ಗುರುಭಕ್ತೆ ಮಲ್ಲಮ್ಮ
ಗುರುಹಿರಿಯರೆಲ್ಲರಿಗೆ
ತಂದೆ ತಾಯಿಗಳಿಗೆ
ಸರಣು ಮಾಡಿ ಮಲ್ಲಮ್ಮ
ಆಸುರ್ವಾದಗಳ ಪಡುದು
ತಾಯಿ ತೊಟ್ಟಿಲದಿಂದ
ಅತ್ತ ಹಟ್ಟಿಗೆ ಬಂದಳಂತೆ
ಸಿದ್ದಪುರಕೆ ಸಿರಿದೇವಿಯು
ಬಂದಂತೆ ಮಲ್ಲಮ್ಮ
ಹ್ಯಾಮರೆಡ್ಡಿ ಮನೆಯ ತುಂಬಿ
ಮೈಮಾವಂತಳಾದಳಂತೆ |

೩

ಸುವ್ವನ್ನಳ್ಳ ಸುವ್ವನ್ನವ್ವ ಸುವ್ವನ್ನಾಲಿ
ಹ್ಯಾಮರೆಡ್ಡಿ ಸೊಸುಮಲ್ಲಮ್ಮ ಸುವ್ವನ್ನಾಲಿ | ಸೊಲ್ಲು |

ಹ್ಯಾಮರೆಡ್ಡಿ ಅರಮಲ್ಲಿ
ಮಲ್ಲಮ್ಮ ಸರಣೆ
ಹರಪೂಜೆ ಮಾಡಿಕೊಂಡು
ಗುರುಪೂಜೆ ಮಾಡಿಕೊಂಡು
ಅತ್ತೆಮಾವರ ಪೂಜೆ
ಮತ್ತೆ ಗಂಡನ ಪೂಜೆ
ಜೋಗಿ ಜಂಗುಮ್ರ ಪೂಜೆ
ಮಾಡಿಕೊಂಡು ಮಲ್ಲಮ್ಮ
ಅತ್ತೆ ಹೊನ್ನಾಜಮ್ಮುಂಗೆ
ಮುತ್ತೀನ ಸೊಸೆಯಾಗಿ
ಹ್ಯಾಮರೆಡ್ಡಿ ಮನೆಗಾದ್ರೂ
ಭಾಗ್ಯಾದ ಲಕ್ಷ್ಮಿಯಾಗಿ
ಮನೆಗೆ ಬೆಳುಕಾಗುತಾಳೆ |

ಹ್ಯಾಮರೆಡ್ಡಿ ಹೊನ್ನಾಜಮ್ಗೆ
ಮಲ್ಲಮ್ಮ ದೇವಿಯಾದ್ರೂ
ಮೆಚ್ಚುವಂತ ಸೊಸೆಯಾಗಿ
ಹಿರಿಯರಿಬ್ರು ಸೊಸೆ
ಲೆಕ್ಕಕ್ಕೆ ಬರದಾಗ
ಆ ಇಬ್ಬಾರು ಸೊಸೆಯರು
ಜೊತೆಯಾಗಿ ಕುಂತುಕೊಂಡು
ಯೋಚಣೆ ಮಾಡುತಾರೆ |

"ಆ ಮಳ್ಳಿ ಮಲ್ಲಮ್ಮ ಅವುರ್ಗೆ
ಒಳ್ಳೇಯ ಸೊಸೆಯಾದ್ಲು
ನಾವು ಮಾತ್ರ ಅವುರೀಗೆ
ಬ್ಯಾಡವಾದ ಸೊಸೆರಾದೊ
ಹ್ಯಾಂಗಾರ ಮಾಡಿ ನಾವು
ಅತ್ತಮ್ಮುಂಗೆ ಬೇಕಾದ
ಸೊಸೇರು ಆಗಬೇಕು"
ಅನುತ್ಹೇಳಿ ಆ ಇಬ್ಬಾರು
ಸಮಯ ಹುಡುಕುತಿದ್ರು |

ಶರಣಾರು ಜಂಗುಮರು
ಮನೆಗೆ ಬಂದೊತ್ತುನಲ್ಲಿ
ಮಲ್ಲಮ್ಮ ಅವುರ ಕರ್ದು
ಪಾದುಪೂಜೆಗಳ ಮಾಡಿ
ಪ್ರಾಸೋದಗಳ ಬಡ್ಸಿ
ಉಪುಚರಣೆ ಮಾಡುವುದ
ದಾನಧರ್ಮ ಕೊಡುವದ
ಮರೆಯಲ್ಲಿ ನಿಂತುಕೊಂಡು
ಅತ್ತಮ್ಮುಗೆ ತೋರುತಿದ್ರು

ದಿನದಿನವೂ ನೋಡಿ ನೋಡಿ
ಹೊನ್ನಾಜಮ್ಮನ ಬುದ್ಧಿ
ಕೆಟ್ಟಂತಾಗಿ ಅವಳು
"ಮಲ್ಲಮ್ಮ ನನ್ ಭರ್ಮನಿಗೆ
ಅನ್ಯಾಯ ಮಾಡುವಂತ
ಕೆಟ್ಟುಮುಂಡೆ ಆಗವುಳೆ
ಇವ್ಳ ಹದುಕೆ ಹಾಕದಿದ್ರೆ
ನಮ್ಮ ಮನೆತನಕೆ ಕೆಟ್ಟ ಹೆಸ್ರು"
ಅನುತ್ಪೇಳಿ ಚಿಂತೆಗಳ
ಮಾಡುತವುಳೆ ಹೊನ್ನಾಜಮ್ಮ |

ಹಿರೀಸೊಸೇರ್ ಮಾತಕೇಳಿ
ಕೆಟ್ಟ ಹೊನ್ನಾಜಮ್ಮ
ಮಲ್ಲಮ್ಮ ದೇವಿಗೆ
ಬಾಯಿಗೆ ಬಂದಂತೆ
ಬಯ್ಯೋದ ಮಾಡುತಾಳೆ
ಇಲ್ಲದ ತಪ್ಪುಗಳ
ಅವ್ಳ ಕೆಲ್ಸದಲ್ಲಿ ಕಂಡು
ತಲೆತಲೆಗೆ ಅತ್ತ
ಹೊನ್ನಾಜ ಹೊಡೀತವುಳೆ |

"ಮಾಯ್ಮಾತಿ ಮುಂಡಾಮಗ್ಗೆ
ಹಾದೀರ ಬೀದಿರನೆಲ್ಲ
ಮನೇಗೆ ಕೂಡಿಕೊಂಡು
ಲಿಂಗುಜಂಗುಮರಂತ
ಯಾರ್ಯಾರ್ನೊ ಕರ್ಕೊಂಡ್ಬಂದು
ಮಾಡ್ಬಾರ್ದ ಕೆಲ್ಸಗಳ
ನನ್ಹಟ್ಟೀಲಿ ಮಾಡುತೀಯ ?"
ಮಾರುದ್ದ ಮಂಡೇಯ
ಮುಂಗ್ಯೆಗೆ ಸುತ್ತಿಕೊಂಡು
"ಅವರಿವರ ಕೂಡಿಕೊಂಡು
ಸರಸ ಐಲಾಟ ಆಡಿತೀಯ
ಕೇಳು ಕೇಳು ನನ್ಸವ್ತಿ ಮಗಳೆ
ನಿನ್ನ ಸೂಲಕ್ಕಾದ್ರೂ ಎತ್ತುತೀನಿ
ಹೀನಮೋರೆ ಮುಂಡೇಯ
ತಂದು ನನ್ನ ಭರಮನ
ಬದುಕ ಹಾಳುಮಾಡಿದೆನಲ್ಲ
ನಿನ್ನಿಂದ ನಮ್ಮ ಮನೆಗೆ
ಕೆಟ್ಟ ಹೆಸರು ಬಂದಿತಲ್ಲ"
ಅನುತ್ಹೇಳಿ ಹೊನ್ನಾಜಮ್ಮ
ತುಂಡುಗಡ್ಡಿ ಕೈಯಲ್ಲಿಡ್ದು
ರಪ್ಪರಪ್ಪೆ ಹೊಡೀತಾಳೆ
ಧತ್ತಧುತ್ತ ಒದೆಯುತಾಳೆ |

ಹ್ಯಾಮರೆಡ್ಡಿ ಹೊನ್ನಾಜಮ್ಮ
ಉಣ್ತೇನಂದ್ರ ಊಟ ಕೊಡ
ಕುಡಿತೀನಂದ್ರ ನೀರು ಕೊಡ
ಹಿಟ್ಟು ಬಟ್ಟೆ ಒಂದನು ಕೊಡದೆ
ಮಲ್ಲಮ್ಮದೇವಿಗೆ
ಹೊಡಿಯುತಾಳೆ ಬಡಿಯುತಾಳೆ
"ದವಸಾಳಿಯ ದಂದ್ರಾಳಿಯ
ದಂದ್ರಾಳಿ ನನ್ನ ಮಗನ ಕೂಸ
ಎಲ್ಲಿ ಕಾಯ್ಕೊಂಡ್ ಕೂತಿದ್ಲೊ ಕಾಣೆ
ನನ್ನ ಮಗ ಭರ್ಮನ ಬಾಳ
ಹಾಳು ಮಾಡಿದ ಮುಂಡೆ ಇವ್ಳು
ನಾ ತರಬವುದವ್ಳೆ ಸಿದ್ದಪುರಕೆ" |

"ಅತ್ತಮ್ಮಲತ್ತಮ್ಮ
ನನ್ನ ಹೊಡಿಯಬ್ಯಾಡಿ
ದಮ್ಮಯ್ಯ ಬೊಯ್ಯಬ್ಯಾಡಿ
ನೀವು - ಹೇಳುದಂತ ಕೆಲಸಗಳ
ನಾ ತಪ್ಪದೆ ಮಾಡುತೀನಿ"
ಮಲ್ಲಮ್ಮ ದೇವಿಯು
ಹೊನ್ನಾಜಮ್ಮನ ಕಾಲಿಗೆ ಬಿದ್ದು
ಅತ್ತೆ ಅನ್ನುವ ಭಕುತಿಯಲ್ಲಿ
ಕೈ ಕೈ ಮುಗಿಯುತಾಳೆ
ಕಾಲಿಗೆ ಬಿದ್ದು ಬೇಡುತಾಳೆ
"ಗೂಡುಗಣ್ಣೆ ಗುಡ್ಡುಮೂಗಿ
ಚಪ್ಪರಗಾಲಿ ಬೀಟುಗಣ್ಣೆ
ಕಸಮುಗ್ಗಲಿ ಮಕ್ಕರಿಟ್ಟಿ
ದವಸಾಳಿ ದಂದ್ರಾಳಿ
ರಾಕಾಸ ನನ್ನ ಮಗಳ ಕೂಸ
ನಾ ತರಬವುದವ್ಳೆ ಸಿದ್ದಪುರಕೆ
ಅಮ್ಮೇಯ್ ಮಲ್ಲಾಜೆನ್ನುವುಳೆ
ನಾನೊಂದು ಕೆಲ್ಸ ಹೇಳುತೀನಿ
ನೀನು - ತಪ್ಪದೆ ಮಾಡಬೇಕು"

ಅವ ವಜ್ರಾದ ಮನೆಗಾದ್ರೆ
ಹೋದಳು ಹೊನ್ನಾಜಮ್ಮ
ಮೂಡಾಲಟ್ಟಲಿಗೆ
ಅವ್ಳು - ಮುತ್ತಿನೇಣಿ ಹೂಡುತಾಳೆ
ಅವ - ಮುತ್ತಿನ ಮೊರ ತಗುದಾಳಲ್ಲಿ
ಅವ - ಮೂಗಂಡ್ಗ ರಾಗೀಯ
ಅವ ತಂದು ಮುಂದಕೆ ಸುರಿದ
ಅವ ಮೂಗಂಡ್ಗ ರಾಗಿಯ
ಮಲ್ಲಮ್ನ ಮುಂದುಗಡೆ
ಸುರುದು ಏನನ್ನುತಾಳೆ
"ಮಾಯಕಾತಿ ಮುಂಡಾಮಗ್ಗೆ
ಹೀನಮ್ಯಾರೆ ಮುಂಡಾಮಗ್ಗೆ
ಕೇಳು ನನ್ನ ಸವ್ತಿ ಮಗಳೆ
ಮೂಗಂಡುಗ ರಾಗಿಯ
ನೀನು - ಮೂರೆ ಮೊರಕೆ ಒಣಿಯಬೇಕು
ವಣಿಯದಿದ್ರೆ ಹಾದುರುಗಿತ್ತಿ
ನಿನ್ನ ಕಲ್ಲುಗಾಣಕೆ ಹಾಕಿ
ಚನ್ನಾಗಿ ಅರುಸ್ತೀನಿ
ನುಣ್ಣಗೆ ನಿನ್ನ ಅರಸಿ
ಕ್ವಾಟ ಬಾಗುಲ್ಗೆ ಮೆತ್ತುಸ್ತೀನಿ" |

ಅತ್ತಮ್ನ ಮಾತಕೇಳಿ
ಮಲ್ಲಮ್ಮದೇವಿಯು
ಕಡಗಣ್ಣಾಲಿ ನೀರುಗಳ
ಕೆಡುಕೊಂಡು ಮಲ್ಲಮ್ಮ
ಅತ್ತ ಸುರುದಂತ ರಾಗಿಯ
ಅವ ಕಣ್ಣುಮೂಗಿಗೊತ್ತುಕೊಂಡ
ಸಿರುಗಿರಿ ಮಲ್ಲಯ್ನ ಪಾದ್ವ
ಮಲ್ಲಮ್ಮ ನೆನೆದಾಳಲ್ಲೊ
ಅಣ್ಣ ಬುಸುರಾಯ್ರ ಪಾದ್ವ
ಮಲ್ಲಮ್ಮ ನೆನೆದಾಳಲ್ಲೊ
ಅತ್ತಿಗೆ ನೀಲಮ್ಮನ ಪಾದ್ವ
ಮಲ್ಲಮ್ಮ ನೆನುದಾಳಲ್ಲೊ
ಅವ - ಕರಪೆತ್ತಿ ಕೈಯ ಮುಗುದು
"ಸಿರುಶೈಲ ಗಿರಿವಾಸ
ಮಲ್ಲಿಕಾರ್ಜುನ ಸ್ವಾಮಿ
ಎಲ್ಲಿದ್ದೆಯೊ ತಂದೆ
ನನ್ನ ಕಷ್ಟಕೆ ಯಾರು ಗತಿ?
ನನ್ನ ಕಾರ್ಯಕೆ ಯಾರು ಗತಿ?"
ಅಂತ್ಹೇಳಿ ಕಡಗಣ್ಣಾಲಿ
ನೀರ ಕೆಡುವಳುವಾಗ
ಮಲ್ಲಿಕಾರ್ಜುನ ಸ್ವಾಮಿ
ಮಾಯಾದ ಗೊಂಬಮಾಡಿ
ರಾಗೀಯ ವಣಿಯದಕೆ
ಮಲ್ಲಯ್ಯ ಕಳುಸಿದ |

ಮಾಯಾದ ಗೊಂಬ ಬಂದು
ಮೂಗಂಡುಗ ರಾಗಿಯ
ಮೂರೇ ಮೂರು ಮೊರಕೆ
ಗೊಂಬ ವಣಿದಿತು
ವಣಿದ ರಾಗೀನೆಲ್ಲ
ಪುಟ್ಟೆಗೆ ತುಂಬೀತು
ವಣಿದು ಪುಟ್ಟೆಗೆ ತುಂಬಲು
ಮಾಯದ ನಿದ್ದೆಲಿದ್ದ
ಮಲ್ಲಮ್ಮ ದೇವಿಗೆ
ಎಚ್ಚರವ ಕೊಟ್ಟವುರೆ
ನಮ್ಮ ಸ್ವಾಮಿ ಮಲ್ಲಯ್ಯನೋರು |

ಮಲ್ಲಮ್ಮ ದೇವಿಯು
ಮಲ್ಲಯ್ನ ಕರುಣಕೆ
ಕರವೆತ್ತಿ ಕೈಯಮುಗ್ದು
"ಅತ್ತಮ್ಮಲತ್ತಮ್ಮನವುರೆ
ನೀವು ಹೇಳಿದಂತೆ ಕೆಲ್ಸ
ಮಾಡಿವ್ನಿ ಲತ್ತಮ್ಮನವುರೆ
ನನಗಿನ್ನೊಂದ್ಕೆಲ್ಸ ಹೇಳಿ ಬನ್ನಿ"
"ದವಸ ದಂದ್ಯಾಳಿಯ
ರಾಕಾಸ ನನ್ನ ಮಗನ ಕೂಸ
ನಾ ತರಬವುದವ್ಮೆ ಸಿದ್ದಪುರಕೆ
ಆ ಕೆಲ್ಸ ನಾನೊಪ್ಪದಿಲ್ಲ
ನಾನಿನೊಂದ್ಕೆಲ್ಸ ಹೇಳುತೀನಿ
ಕೇಳು ಕೇಳು ಮಲ್ಲಿ
ಮೂಗಂಡ್ಗ ರಾಗೀನೂ
ನೀ ಒಂದೇ ಒಳ್ಗೆ ಬೀಸಬೇಕು
ಬೀಸದಿದ್ರೆ ನೀನು
ನಿನ್ನ ಮಾರುದ್ದ ಮಂಡೆಯ
ನನ್ನ ಮುಂಗ್ಯೆಗ ಸುತ್ತಿಕೊಂಡು

ಕೂದ್ಲುಬತ್ತಿ ಹಿಡಿದೆಳೆದು
ಬಾರ್ಕೋಲಲ್ಲಿ ಹೊಡೆಯುತೀನಿ
ಕಲ್ಲುಗಾಣಕೆ ಹಾಕ್ಸಿ
ನುಣ್ಣಗೆ ಅರ್ಸುತೀನಿ
ನುಣ್ಣಗಾದ್ದ ತರುಸಿ
ಕ್ಯಾಟೆ - ಬಾಕುಲ್ಗೆ ಮೆತ್ತುಸ್ತೀನಿ" |

ಹೊನ್ನಾಜಮ್ಮನ ಮಾತೀಗೆ
ನನ್ನ - ಘನಸರಣೆ ಮಲ್ಲಮ್ಮ
ಕಡಗಣ್ಣಲ್ಲಿ ಶಿವುನೆ
ಕಣ್ಣೀರ ಕೆಡುಗಿದಳು
"ಸಿರುಸ್ಯೆಲ ಗಿರುವಾಸ
ನನ್ನ - ಮಲ್ಲಿಕಾರ್ಜುನ ಸ್ವಾಮಿ
ಎಲ್ಲಿದ್ದಾಯೋ ತಂದೆ
ನನ್ನ ಅತ್ತಮ್ಮ ಕೊಟ್ಟಂತ
ಕೆಲ್ಸ ನಾ ಗೆಲ್ಲಬೇಕು
ನಿನ್ನ ಪಾದವೇ ಗತಿಯಪ್ಪ
ಅಣ್ಣ ಬಸವರಾಯರೆ
ನಿಮ್ಮ ಪಾದವೆ ಗತಿ ನನಗೆ
ಅತ್ತಿಗೆ ನೀಲಮ್ಮದೇವಿ
ನಿಮ್ಮ ಪಾದವೆ ಗತಿ ನನಗೆ"
ನೆನೆದು ಮಲ್ಲಮ್ಮ ತಾಯಿ
ಕರವೆತ್ತಿ ಕೈಯ ಮುಗುದ |

ಸಿರುಗಿರಿ ಮಲ್ಲಯ್ಯನವರು
ಮಾಯದ ವಡ್ಡರ ಕರದು
"ಕೇಳಿ ಕೇಳಿ ವಡ್ಡರೆ
ನನ್ನ - ಮಗ್ಳು ಮಲ್ಲಮ್ಮದೇವಿ
ಮೂಗುಡ್ಗ ರಾಗೀಯ
ಒಂದೆ ಒಳ್ಗೆ ಬೀಸಬೇಕು
ನಿಮ್ಗೆ ನೂರು ಹಣ ಕೊಡುತೀನಿ
ರಾಗಿ ಕಲ್ಲ ಗೇಯಬೇಕು
ಅದ್ಕೆ - ಕ್ಯಾಣಾನ ಕಟ್ಟಬೇಕು"
ಅದ್ಕೆ - ಮ್ಯಾಗಲಗೂಟ ತೆಂಗುನ್‌ಮರ
ಅದ್ರ - ನಡುಮಧ್ಯದ ಗೂಟ ಅಡ್ಕೆಮರ
ಕಲ್ಲ ಮಡಗಿ ಗೂಟ ನೆಟ್ಟು
ಕ್ಯಾಣನ ಕಟ್ಸಿದರು
ಮಾಯಾದ ಗೊಂಬೆಯ
ಮಲ್ಲಯ್ಯ ಕಳ್ಸಿದರು
ಮಾಯದ ಗೊಂಬ ಬಂದು
ಮೂಗಂಡ್ಗ ರಾಗೀನೆಲ್ಲ
ಒಂದೇ ಒಳ್ಳೀಗೆ ಸುರಿದು
ಒಂದೇ ಒಳ್ಗೆ ಬೀಸುಬುಟ್ಟು
ಮಲ್ಲಮ್ಮ ತಾಯಿಯ
ಮಾಯದ ನಿದ್ದೆಯಿಂದ
ಎಚ್ಚರ ಮಾಡಿದರಂತೆ |

ಮಲ್ಲಮ್ಮ ದೇವಿಯು
ರಾಗಿ ಹಿಟ್ಟು ರಾಶಿ ಮಾಡಿ
ಅವಳತ್ತಮ್ಮನ ಬಳುಗೆ ಬಂದು
ಹೊನ್ನಾಜಮ್ಮನ ಪಾದಕೆ ಬಿದ್ದು
"ಲತ್ತಮ್ಮ ಲತ್ತಮ್ಮ
ನೀನೇಳುದ ಕೆಲ್ಸ ಮಾಡಿ ಬಂದೆ"
ಹಂಗಂತ ಮಲ್ಲಮ್ಮ
ಹೇಳಿದಾಗ ಹೊನ್ನಾಜಮ್ಮ
"ಇದನೂ ಇವ್ಳು ಗೆದ್ದಳಲ್ಲ
ಇನ್ನೆಂತೆ - ಮಾಯ್ಯಾತಿ ಇವ್ಳುರಬೋದು"
ಅನುತ್ಹೇಳಿ ಮಲ್ಲಮ್ಮನ
ಕೆಕ್ಕರಿಸಿ ನೋಡಿದಳು.

"ಮಾಟ್ಲುಕಾರ ಮಲ್ಲಿ
ನೀನು ಕೂಟ್ಲುಕಾರ ಮಲ್ಲಿ
ಯಾವ ಮಾಯ ಮಾಡಿದ್ಕೆ
ಯಾವ ಮಂತ್ರ ಹಾಕಿದ್ಕೆ
ದಂದ್ಯಾಳಿ ನನ್ ಮಗನ ಕೂಸ
ನಾ ತರಬವುದವ್ಳೆ ಸಿದ್ದಪುರಕೆ
ನಿನ್ನ ಹಿಕ್ಮತ್ತ ತೋರಬ್ಯಾಡ
ಆ ಕೆಲ್ಸ ನಾನು ಒಪ್ಪಾದಿಲ್ಲ
ನಾ ಇನ್ನೊಂದ್ಕೆಲಸಲೇಳುತೀನಿ
ಮೂಗಂಡುಗ ಬತ್ತಾವ
ನೀನೊಂದೆ ಮೊರಕೆ ಹೊಣೆಯಬೇಕು
ನೀನು ಹೊಣೆಯದಿದ್ದ ಪಕ್ಷದಲ್ಲಿ
ನಿನ್ನ ಮಾರುದ್ದ ಮಂಡೆ ಕೂದ್ಲ
ಹಿಡ್ಕೊಂಡ್ ನಿನ್ನೆಳುದಾಡ್ತ
ಒಡ್ಕೊಂಡ್ ನಿನ್ನಟ್ಟಾಡ್ತ
ಬಾರ್ಕೋಲ ತಕ್ಕೊಂಡು

ಬಾರುಸ್ತೀನಿ ಕಾಣೆ ಮಲ್ಲಿ
ನಿನ್ನ ಕಲ್ಲುಗಾಣ್ಕೆ ಹಾಕ್ಸಿ
ನುಣ್ಣಾಗೆ ಅರುಸ್ತೀನಿ
ನುಣ್ಣುಗಾದ ನಿನ್ನ ತರ್ಸಿ
ಕ್ಯಾಟೆ ಬಾಕುಲ್ಗೆ ಮೆತ್ತುಸ್ತೀನಿ" |

ಅತ್ತೆ ಹೊನ್ನಾಜಮ್ಮ
ಆಡಿದಂತ ಮಾತ ಕೇಳಿ
ಸರಣೆ ಮಲ್ಲಮ್ಮದೇವಿ
ಕಣ್ಣೀರ ಕೆಡವುತಾಳೆ
ಅತ್ತೆ ಹೊನ್ನಾಜಮ್ಮ
ಮೂಗಂಡುಗ ಬತ್ತಾವ
ಮುಂದಕೆ ಸುರುದುಬುಟ್ಟು
ನೀನೊಂದೆ ಮೊರಕೆ ಹೊಣೆಯಬೇಕು
ಅನುತ್ಹೇಳಿ ಹೊನ್ನಾಜಮ್ಮ
ಹಿಂದ್ಲುಟ್ಟಿಗೆ ಮಲ್ಲಮ್ಮನ
ಕೂಡಿ ಕದ ಮುಚ್ಚಿಕೊಂಡ |

ಸಿರುಸ್ಕೆಲ್ದ ಮಲ್ಲಯ್ಯನ
ಪಾದಾವ ನೆನೆಕೊಂಡು
"ಎಲ್ಲಿದ್ದಾಯೋ ಮಲ್ಲಯ್ಯ
ನನ್ನ ಭಂಗಕೆ ಒದಗಿ ಬಾರೋ
ನಿನ್ನ ಪಾದಾವೆ ಗತಿ ಸ್ವಾಮಿ
ಅಣ್ಣಾ ಬಸವರಾಯರೆ
ನಿಮ್ಮ ಪಾದಕೆ ಸರಣಾರ್ತಿ
ಅತ್ತಿಗೆ ನೀಲಮ್ಮ ತಾಯಿ
ನಿಮ್ಮ ಪಾದವೆ ಗತಿಯಮ್ಮ"
ಹಂಗಂತ ಮಲ್ಲಮ್ಮ
ಮಲ್ಲಿಕಾರ್ಜುನ ಸ್ವಾಮಿಗೆ
ಕರಮೆತ್ತಿ ಕೈಯ ಮುಗುದ |

ಸಿರುಶ್ಕೆಲದ ಮಲ್ಲಯ್ಯನವರು
ಕುಂಡ್ಮಾರಿ ಕಿವುಡ್ಮಾರಿ
ಮೂಗ್ ಮ್ಮಾರೀರ ಕರ್ದು
ಬತ್ತ ಹೊಣೆದು ಕೊಡಬೇಕಂತ
ಆಡರ್ಸು ಮಾಡಿದರು
ಮೂರುಜನ ಮಾರೀರು
ಮುಂದಕೆ ಬಂದರಲ್ಲ
ಕುಂಡ್ಮಾರಿ ಬತ್ತನೆಲ್ಲ
ಗೋರಿಗುಡ್ಡೆಯ ಮಾಡ್ದ
ಕಿವುಡ್ಮಾರಿ ಮೊರಕೆ
ಆ ಬತ್ತನೆಲ್ಲ ತುಂಬಿಕೊಟ್ಟ
ಮೂಗ್ಮಾರಿ ಮಾತಾಡದೆ
ಬತ್ತನೆಲ್ಲ ಒಂದೆ ಮೊರಕೆ
ಹೊಣೆದು ರಾಶಿ ಮಾಡಿದಳು
ಮಲ್ಲಮ್ಮ ದೇವಿಯು
ಮಾಯಾದ ನಿದ್ದೆ ತಿಳಿದು
ಲತ್ತಮ್ಮನ ಬಳುಗೆ ಬಂದು
"ಲತ್ತಮ್ಮ ಲತ್ತಮ್ಮ
ನೀನೇಳುದ ಕೆಲ್ಸನೆಲ್ಲ
ಮಾಡಿ ಬಂದೆ ಲತ್ತಮ್ಮ" |

ಮಲ್ಲಮ್ಮನ ಮಾತ ಕೇಳಿ
ಅತ್ತೆ ಹೊನ್ನಾಜಮ್ಮ
"ಕಸಮುಗ್ಗಲಿ ಮಕ್ಕರಿಟ್ಟಿ
ರಾಕಾಸ ನನ್ ಮಗನ ಕೂಸ
ನಿನ್ನಂಥ ದಂದ್ರಾಳಿಯ
ನಿನ್ನಂಥ ದವುಸಾಳಿಯ
ಗೂಡುಗಣ್ಣಿ ಗುಡ್ಡುಮೂಗ್ಯ
ಚಪ್ಪಗಾಲಿ ಬೀಟುಗಣ್ಣ
ನಾ ತರಬವುದವ್ಯೆ ಸಿದ್ದಪುರಕೆ
ಅಮ್ಮ ಮಲ್ಲಾಜೆನ್ನುವೋಳೆ
ನಿನ್ನ ಕೆಲ್ಸ ನಾ ಒಪ್ಪದಿಲ್ಲ
ನಾನಿನ್ನೊಂದ್ ಕೆಲ್ಸ ಹೇಳುತೀನಿ
ನೀನು ತಪ್ಪದೆ ಮಾಡಬೇಕು"
ಅನುತ್ಹೇಳಿ ಹೊನ್ನಾಜಮ್ಮ
ಹೊಣೆದ ಮೂಗಂಡುಗ ಬತ್ತ
ಮಲ್ಲಮ್ಮನ ಮುಂದೆ ಸುರ್ದು
ಒಂದೇ ಒಬ್ಬೇಗೆ ನೀನು ಕುಟ್ಬೇಕು
ಕುಟ್ಟದೆ ಹೋದ ಪಕ್ಷುದಲ್ಲಿ
ನಿನ್ ಮುಂದಲೆ ಜುಟ್ಟ ಹಿಡ್ದು
ಎಳ್ದಾಡಿಕೊಂಡು ಮಲ್ಲಿ
ಬಾರ್ಕೋಲ್ನಲ್ಲಿ ಹೊಡಿಯುತೀನಿ" |

ಅತ್ತ ಹೊನ್ನಾಜಮ್ಮನ
ಮಾತ ಕೇಳಿ ಸರಣೇ ಮಲ್ಲಮ್ಮ
ಮಲ್ಲಯ್ನ ಪಾದ ನೆನುದು
ಅಣ್ಣಾ ಬಸುವಪ್ಪಮ್ರು ನೆನ್ದು

ಅವುರತ್ತೀಗೆ ನೀಲಾಜಿ ಪಾದವ
ಅಮ್ಮ - ಮನುದಲ್ಲಿ ನೆನೆದು
ಕರವೆತ್ತಿ ಕೈಯ ಮುಗುದು
ಕಣ್ಣಮುಚ್ಚಿ ನೆನಿಯುವಾಗ
ಗೌರಮ್ಮತಾಯಿ ಗಂಗಮ್ಮ ತಾಯಿ
ತೆಂಕಲಟ್ಟಲಿಗೆ ಹತ್ತಿದರು
ತೇಗಿನೇಣೆ ಊಡುತ್ತಾರೆ
ಅವ್ರು - ಉಕ್ಕಿನೊನಕೆ ತೆಗುದಾರಲ್ಲ
ಒಂದೇ ಒಂದೊಬ್ಬೆಗೆ
ಅಕ್ಕಾ ತಂಗೇರಿಬ್ರು ಸೇರಿ
ಕುಟ್ಟಿ ರಾಸ್ಕ ಸುರಿದರಂತೆ |

ಮಾಯಾದ ನಿದ್ದೆಯಿಂದ
ಮಲ್ಲಮ್ಮ ಎಚ್ಚುರಾಗಿ
ಒಂದೇ ಒಂದೊಬ್ಬೆಗೆ
ಕುಟ್ಟಿದ್ದ ರಾಸ್ಕನೆಲ್ಲ
ಕಂಡು ಮಲ್ಲಯ್ಯನಿಗೆ
ಕರವೆತ್ತಿ ಕೈಯ ಮುಗುದು
ಲತ್ತಮ್ಮನ ಕರುದು
"ಲತ್ತಮ್ಮಲತ್ತಮ್ಮ ಬನ್ನಿ
ಒಂದೊಳ್ಳುಗೆ ನಾನು
ಮೂಗಂಡುಗ ಬತ್ತವ
ಕುಟ್ಟಿ ರಾಸ್ಕ ಹಾಕಿವ್ನಿ"
ಅನುತ್ಹೇಳಿ ಲತ್ತಮ್ಮುನ
ಮಲ್ಲಾಜಿ ಕರುದಳು |

"ಲತ್ತಮ್ಮ ಲತ್ತಮ್ಮ
ನನಗಿನ್ನೊಂದ್ಕೆಲ್ಸ ಹೇಳಿ ಬನ್ನಿ"
"ದವುಸಾಳಿಯ ದಂದ್ರಾಳಿಯ
ರಾಕಾಸ ನನ್ ಮಗುನ್ ಕೂಸ
ನಾ ತರಬವುದವ್ಳೆ ಸಿದ್ದಾಪುರಕೆ
ಅಮ್ಮಿ ಆ ಕೆಲ್ಸ ನಾನೊಪ್ಪಾದಿಲ್ಲ
ನಾನಿನ್ನೊಂದ್ಕೆಲ್ಸಲೇಳುತೀನಿ
ಕೇಳು ಕೇಳೆ ಮಳ್ಳಿ ಕೇಳೆ
ಏಳುಂಡಿ ಎಮ್ಮೆ ಕಸುವ
ನೀ ಮೂರೇ ಗುಡ್ಸಿಗೆ ಗುಡ್ಸಬೇಕು
ಮೂರೇ ಗುಡ್ಸಿಗೆ ಗುಡ್ಸಿಬುಟ್ಟು
ನೀನೊಂದೆ ಮಕ್ರಿಗೆ ತುಂಬಬೇಕು
ಇಲ್ಲಾದ ಪಕ್ಷುದಲ್ಲಿ
ನಿನ್ನ ಕಲ್ಲುಗಾಣಕೆ ಹಾಕ್ಸಿ
ನುಣ್ಣಗೆ ಅರಸುತೀನಿ
ಅರುದದ ಕೊಂಡೋಗಿ ನಾನು
ಹ್ಯಾಟೆಗ್ಯಾಡ್ಗೆ ಮೆತ್ತುತೀನಿ" |

ಲತ್ತಮ್ಮನ ಮಾತಕೇಳೀದಳಲ್ಲ
ಮುತ್ತುನ ಸೊಸೆ ಮಲ್ಲಮ್ಮ
ಅತ್ತೆ - ಮೂಡಲು ಅಟ್ಟಲಿಗೆ
ಅವ - ಮುತ್ತಿನೇಣೆ ಊಡುತ್ತಾಳೆ
ಅವ - ರನ್ನದ್ ಬಳ್ಳುಕಡ್ಡಿ ತಗುದು
ಅವ - ಮಲ್ಲಾಜಿಗೆ ಕೊಡುತಾಳೆ
ಸರಣ ಮಲ್ಲಮ್ಮದೇವಿ
ಮಲ್ಲಿಕಾರ್ಜುನಸ್ವಾಮಿ ನೆನುದು
ಅಣ್ಣ ಬಸುವರಾಯರ ನೆನುದು
ಅತ್ತಿಗೆ ನೀಲಮ್ಮನ ಪಾದ ನೆನೆದು
ಅವ - ಕರವೆತ್ತಿ ಕೈಯ ಮುಗುದು
ಕಣ್ಣ ಮುಚ್ಚಿ ನಿಂತಾಗ
ಮಲ್ಲಯ್ಯ ವಾಸ್ದೇವ್ನೆ ಸೊನ್ನ ಮಾಡಿ
ಕಸ ಗೂಡ್ಸದಕೆ ಹೇಳಿದರಂತೆ
ಅವ - ಮೂರೇ ಗೂಸಿಗೆ ಗೂಸಿ ಬುಟ್ಟು
ಒಂದೆ ಮಕ್ರಿಗೆ ತುಂಬುಬುಟ್ಟು
ಮರೆಯಾಗಿ ಹೋದರಂತೆ |

"ಸಂಗಡದ ಮಕ್ಕಳೀರೆ
ನನ್ನ ಮಕ್ಕರಿ ಎತ್ತಾಕೆ ಬನ್ನಿ"
"ಮಕ್ಕರಿ ಎತ್ತಾಕೆ ಬಂದ್ರೆ
ನಿಮ್ಮತ್ತೆ ಹೊನ್ನಾಜಮ್ಮ
ನಮ್ಮ ಸುಮ್ನೆ ಬುಟ್ಟಾಳವ್ವ?"
ಆಗ - ಅಣ್ಣ ಬಸವರಾಯರು
ತಲೆಗೆ ರನ್ನದ ಸಿಂಬಿ ಮಡಗಿ
ಅವ - ಎತ್ತಿ ನತ್ತೀಗೆ ಮಡಗಿ
ಅದು ಈರುಳ್ಳಿ ಸ್ವಾಲ್ಯಾಗೆ
ಹಗುರವಾಗುವಂತೆ ಮಾಡಿ
ಅವ ಎತ್ತಿ ನತ್ತಿಗೆ ಮಡುಗ್ದ |

ಅವ - ಬಂಡಿ ಮಕ್ಕರಿ ಹೊತ್ತುಕೊಂಡು
ಅವ - ಮೂಡಾಲ ತಿಪ್ಪೆಗ ಹೊರಟು
ಅವ - ಸುರುದುಬುಟ್ಟು ಬರುತ್ತಾಳೆ

"ಲತ್ತಮ್ಮ ಲತ್ತಮ್ಮ
ನೀವೇಳುದ ಕೆಲ್ಸ ಮಾಡಿದ್ದಾಯ್ತು
ಇನ್ನೊಂದು ಕೆಲ್ಸ ಹೇಳಬನ್ನಿ"
"ಕಸಮುಗ್ಗಲಿಯೆ ಮಕ್ಕರಿಟ್ಟಿಯೆ
ರಾಕಾಸ ನನ್ನ ಮಗನ ಕೂಸೆ
ಗೂಡುಗಣ್ಣಿ ಗುಡ್ಡಮೂಗಿ
ಚಪ್ಪಗಾಲಿ ಬೀಟಗಣ್ಣಿ
ದವುಸಾಳಿ ದಂದರಾಳಿ
ದಂದ್ರಾಳಿ ನನ್ ಮಗುನ ಕೂಸೆ
ನಾ ತರಬವುದವ್ಯೆ ಸಿದ್ದಪುರಕೆ
ಅಮ್ಮ ಆ ಕೆಲಸ ನಾ ಒಪ್ಪೋದಿಲ್ಲ
ನಾನಿನ್ನೊಂದ್ಕೆಲಸಲೇಳುತೀನಿ"
ಬಡಗಲಟ್ಟಿಲಿಗೆ ಹೊನ್ನಾಜಿ
ಅವ - ಬೆಡಗಿನೇಣಿ ಬೂಡುತ್ತಾಳೆ
ಅವ - ಉಕ್ಕುನ ಬಿಂದಿಗೆ ಕೊಡುತ್ತಾಳೆ
ಅವ ರನ್ನದ ಸಿಂಬ್ಯಾ ಕೊಡುತ್ತಾಳೆ
"ಮಾಟ್ಲುಗಾತಿ ಮಲ್ಲಿ ಕೇಳು
ಏಳು ಕೊಪ್ಪುಕೆ ಮಡುಗಿವ್ನಿ
ನೀನೊಂದೆ ಸಾರಿಗೆ ತುಂಬಬೇಕು
ತುಂಬಾದೆ ಇದ್ದರೆ
ನಿನ್ನ ಕಲ್ಲುಗಾಣಕೆ ಕೊಟ್ಟು
ಅರುಸುತೀನಿ ಮಳ್ಳಿ ನಿನ್ನ
ನುಣ್ಣಗೆ ಅರಸುತೀನಿ
ಕ್ಯಾಟೆಗ್ಯಾಡ್ಲೆ ಮತ್ತುತೀನಿ" |

ಸರಣೆ ಮಲ್ಲಮ್ಮದೇವಿ
ರನ್ನದ ಸಿಂಬಿಯ ತಗುದ
ಅವ - ಉಕ್ಕಿನ ಬಿಂದಿಗೆ ಎತ್ತಿ
ಅವ - ಮೂಡಲ ಕೆರೆಗೊರಟುಳಲ್ಲೊ
ಅವ - ಅಲಕಲಕಿ ಮೊಗೆದಳಲ್ಲೊ
ಅವ - ಹಾಗಲದೂವುನ ತಿಳಿನೀರ
ಅವ - ಕುಲುಕಿ ಕುಲುಕಿ ಮೊಗೆದಾಳಲ್ಲೊ
ಅವ - ಕುಂಬಳದೂವುನ ತಿಳಿನೀರ
ಬಿಂದಿಗೇಗೆ ತುಂಬಿಕೊಂಡ
ತನ್ನ ಸಂಗಡದ ಬಾಲೇರ ಕರ್ದು
"ನನ್ಗೆ - ಬಿಂದಿಗೆಲೆತ್ತಿ ಬನ್ನಿಯಮ್ಮ"
"ನಿನ್ಗೆ ಬಿಂದ್ಗೆ ಎತ್ತಾಕೆ ಬಂದ್ರೆ
ನಿಮ್ಮತ್ತೆ ಬುಟ್ಯಾಳ ನಮ್ಮ?"
ಅನುವಾಗ ಸಂಗಡ ಬಾಲೇರು
ಸರಣೆ ಮಲ್ಲಮ್ಮದೇವಿ
"ಸಿರುಶೈಲದ ಮಲ್ಲಯ್ಯನ ಪಾದ
ಅಣ್ಣ ಬಸುವರಾಯರ ಪಾದ
ಅತ್ತಿಗೆ ನೀಲೋಜಿ ಪಾದ
ನಿಮ್ಮ ಪಾದುಕ್ಕೆ ಸರಣು ಸರಣು"
ಕರವೆತ್ತಿ ಕೈಯ ಮುಗುದು
ಎತ್ತಿದಾಗ ಹಗುರುವಾಗಿ
ನತ್ತಿಮ್ಯಾಲೆ ಮಡೀಕೊಂಡ್ಳು |

ಅವ - ಅರಮನಿಗೆ ಬಂದವ್ಳೆ
ಅವ - ಏಳು ಕೊಪ್ಪುಕೆ ಇರಿಸಿ
ಅವ - ಒಂದೆ ಸಾರಿಗೆ ತುಂಬವ್ಳೆ
"ಲತ್ತಮ್ಮ ಲತ್ತಮ್ಮ
ನೀವು ಹೇಳುದಂಗೆ ನಾನು
ಏಳು ಕೊಪ್ಪುಕೆಗೆ ನೀರ
ಒಂದೇ ಸಲಕೆ ತುಂಬಿವಿನಿ
ನನಗಿನ್ನೊಂದ್ಕೆಲ್ಸ ಹೇಳತ್ತಮ್ಮ"
"ಗೂಡುಕಣ್ಣಿ ಗುಡ್ಡಮೂಗಿ
ಚಪ್ಪಗಾಲಿ ಬೀಟಗಣ್ಣಿ
ದವುಸಾಳಿ ದಂದರಾಳಿ
ಕಸಮುಗ್ಗಲಿ ಮಕ್ಕರಿಟ್ಟಿ
ನಾ ತರಬವುದವ್ಯೆ ಸಿದ್ದಪುರಕೆ
ಹೆಣ್ಗೆ ಆ ಕೆಲ್ಸ ನಾ ಒಪ್ಪಾದಿಲ್ಲ
ನಾನಿನ್ನೊಂದು ಕೆಲ್ಸಲೇಳುತೀನಿ
ನೀನು - ಮನೆಮಠನೆಲ್ಲ ತಾರ್ಸಿಕೊಂಡು
ತಾರ್ಸಿ ರಂಗ್ಯಾಲೆ ಬರೆಯಬೇಕು
ಮನುಮಠುವ ಸಿಂಗರಿಸಬೇಕು
ನೀ ಮೀದು ಮಡಿಯ ಉಟ್ಟುಕೊಂಡು
ಪೂಜಾ ಮಾಡುತಿದ್ದರೆ ಮಲ್ಲಿ
ಆ ನಿನ್ನ ನಾ ಒಪ್ಪುತೀನಿ |

"ಸಿರುಶೈಲಾದ ಮಲ್ಲಯ್ಯ ಸ್ವಾಮಿ
ಅಣ್ಣಾಯ್ಯ ನನ್ನ ಬಸುವರಾಯ
ಅತ್ತುಗಮ್ಮ ನೀಲಾಜಿ ತಾಯಿ
ನಿಮ್ಮ ಪಾದುಕೆ ಸರಣು ಸರಣು"
ಅಂತ್ಹೇಳಿ ಮಲ್ಲಮ್ಮ
ಕರವೆತ್ತಿ ಕೈಮುಗಿಯುವಾಗ

ಕೈಲಾಸ್ಪ ಗಣಗಳು ಓಡಿ ಬಂದು
ಕಸ ಹೊಡ್ದು ಮುಸ್ರೆ ತೊಳ್ದು
ಮನೆಮಠನೆಲ್ಲ ತಾರಿಸಿ
ರಂಗ್ವಾಲೆಯ ಬಿಟ್ಟರಂತೆ |

ಸರಣೆ ಮಲ್ಲಮ್ಮದೇವಿ
ಹೊಸಾಲಿಗೆ ಹೂಮಡಗಿ
ಅರುಸ್ಣ ಕೂಕುಮ ಹಸ್ಸಿ
ಗಂಧಾದ ಕಡ್ಡೀಲಿ
ಬೆಳಗುತಿರುವ ಹೊತ್ತುನಲ್ಲಿ
ಮಲ್ಲಿಕಾರ್ಜುನ ಸ್ವಾಮಿ
ಜಂಗುಮರ ರೂಪುನಲ್ಲಿ
ಪ್ರೇತೇಕ್ಷವಾದರು |

ಜಂಗಮರು ಬರುವುದ ಕಂಡು
ಮಲ್ಲಮ್ಮ ಸರಣೆಯು
ಪನ್ನೀರಾಗಣೆಯಲ್ಲಿ
ಪಾದಾವ ತೊಳುದಳಂತೆ
ಪರಿಮಾಳ್ ಪಚ್ಚೆ ಪುಷ್ಮ
ಪಾದಕೆ ಮಡಗಿದಳಂತೆ
ನಡಾಮಡಿ ಹಾಸಿಕೊಂಡು
ಸ್ವಾಮ್ಯೋರ ಕರದುಕೊಂಡು
ದೇವ್ರಡಿ ಹಜಾರದಲ್ಲಿ
ಮಣೆಯ ಮ್ಯಾಲೆ ಕುಂಡ್ರಿಸಿ
ಪಾದು ಪ್ರೂಜೆಗಳ ಮಾಡಿ
ಮೊನುಬಾಳೆ ಎಲೆಯಲ್ಲಿ
ಹಾಲೋಗ್ರ ಮೇಲೋಗ್ರ
ಪಾಲು ಪರ್ಸಾದಗಳ
ತಾಯಿ ಎಡೆಮಾಡಿದಳು |

ಮಲ್ಲಮ್ಮ ಭಕ್ತೀಯ
ಮೆಚ್ಚಿಕೊಂಡ ಜಂಗುಮರು
"ಮಗಳೆ ಮುಂದೆ ಬರುವಂತ
ತುಂಬುದ ಸ್ವಾಮಾರ್ಪ ಜಿನ
ಸಿರುಶ್ಯೆಲಿ ಪರುವರ್ತದಲ್ಲಿ
ಮಲ್ಲಯ್ಯ ತೇರಯಿತೆ
ಜಾತ್ರೆಗೆ ಮಗಳೆ ನೀನು
ಗಂಡನ ಕರುಕೊಂಡು
ತಪ್ಪಿಸದೆ ಬರಬೇಕು"

ಹಂಗಂತ ಹೇಳಿ ಸ್ವಾಮಿ
ಅಲ್ಲಿಂದ ಮಾಯವಾದ್ರು |

ಳ

. *ಸುವ್ವನ್ನಕ್ಕ ಸುವ್ವನ್ನವ್ವ ಸುವ್ವನ್ನಾಲಿ*
ಹ್ಯಾಮರಡ್ಡಿ ಸೊಸು ಮಲ್ಲಮ್ಮ ಸುವ್ವನ್ನಾಲಿ | ಸೊಲ್ಲು |

ಸರಣೆ ಮಲ್ಲಮ್ಮದೇವಿ
ಅತ್ತೆ ಹೊನ್ನಾಜಮ್ಮನ
ಆಸ್ತಾನುಕೆ ಬಂದು
"ಲತ್ತಮ್ಮ ಲತ್ತಮ್ಮ
ಮುಂದೆ ಬರುವಂತ
ತುಂಬುದ ಸ್ವಾಮಾರು ಜಿವ್ಸ
ಸಿರುಸ್ಮೆಲ ಪರುವತದಲ್ಲಿ
ಸ್ವಾಮಿ ಮಲ್ಲಿಕಾರ್ಜುನನ
ತೇರು ಹರಿಯುತ್ತೆತಂತೆ
ಮಲ್ಲಯ್ನ ಜಾತ್ರೀಕೆ
ನನ್ನ ಪತಿದೇವ್ರ ಜೊತೆಯಲ್ಲಿ
ನಾನು ಹೋಗಿ ಬರುತೀನಿ
ಅಪ್ಪಣೆ ಕೊಡಿ ಲತ್ತಮ್ಮ
ನಮ್ಮ ಕುಲಗುರುಗಳು
ಶಿವಸ್ವಾಮಿ ಜಂಗುಮರು
ಹೇಳಿ ಹೋಗವುರೆ ಲತ್ತೆ
ನನಗೆ ಒಪ್ಪೀಗೆ ಕೊಟ್ಟು ಲತ್ತೆ
ನನ್ನ ಪತಿದೇವ್ರ ಜೊತೆಯಲ್ಲಿ
ಕಳಿಸಿಕೊಡಿ ಲತ್ತಮ್ಮ" |

ಮಲ್ಲಮ್ಮನ ಮಾತಕೇಳಿ
ಲತ್ತೆ ಹೊನ್ನಾಜಮ್ಮ
ರ್ಯಾಸವ್ಯಾಸದಲ್ಲಿ
"ಏನಂದ ನನ್‌ಸವ್ತಿ ಮಗ್ಳೆ
ಜಂಗೂಮಯ್ ಕರುದವ್ನ ?
ಯಾರಾರ ಕರುದ್ರೆ ಸಾಕು
ಹೋಗಾಕ್ ನಿಂತಿದ್ದೀಯಲ್ಲ
ನೀನ್ಯಾವ ಪತುರೊತೆಯೆ?
ಕಸಮುಗ್ಲಿ ಮಕ್ಕರಿಟ್ಟಿ
ರಾಕಾಸ ನನ್ ಸೌತಿಮಗ್ಳೆ"
ಅಂತೇಳಿ ಮುಂದಲೆಯ

ಜಗ್ಗೀಸಿ ಹಿಡುದುಕೊಂಡು
ಝಾಡೀಸಿ ಒದೆಯೂತ
ಧರಧರನೆ ಎಳುಕೊಂಡ್ಬಂದು
ಕೊಡಬಾರ್ದ ಕೊಲೆಯ ಕೊಟ್ಟು
ಮಾಡಬಾರದ ಶೀಕ್ಷ್ಯ ಮಾಡಿ
"ಹೀನ ಮ್ಯಾರ್ಕ ತೋರಾಕೆ ಬಂದ್ಕ
ದಂದ್ರಾಳಿ ನನ್ ಮಗನ ಕೂಸ !"
ಅಂತ್ಹೇಳಿ ಹೊನ್ನಾಜಮ್ಮ
ಸರಣೆ ಮಲ್ಲಮ್ಮದೇವಿಯ
ಮಾರುದ್ದ ಮಂಡೆ ಕೂದ್ಲ
ಝಾಡಿಸಿ ಎಳೆದುಕೊಂಡು
ಧಬ್ಬಧುಬ್ಬೆ ಹೊಡೆಯುತಾಳೆ
ಧತ್ತ ಧುತ್ತ ಒದೆಯುತಾಳೆ |

ಸರಣೆ ಮಲ್ಲಮ್ಮ ದೇವ್ಕ
ಕತ್ತಲೆ ಕ್ವಾಣೇಗೆ ನೂಕಿ
ಬೀಗನಾದರೆ ಹಾಕವುಳೆ
ಸಿರುಶೈಲಿ ಗಿರಿಯಿಂದ ಮಲ್ಲಯ್ಯ
ಎಲ್ಲವನ್ನೂ ನೋಡುತವುನೆ
ಅವ್ವು ಮಾಯದ ಮಲ್ಲಮ್ಮ ಮಾಡಿ
ಭರಮಣ್ಣನ ಕರುದು ಸ್ವಾಮಿ
ನಿಜದ ಮಲ್ಲಮ್ಮನ ಜೊತೆ
ಜಾತ್ರೆಗೆ ಹೋಗಿ ಬಾ ಅಂತ
ಹೊನ್ನಾಜಮ್ಮನ ರೂಪುನಲ್ಲಿ
ಸ್ವಾಮಿ ಮಲ್ಲಯ್ಯನವರು
ಮಗನು ಭರಮಣ್ಣನನ್ನು
ಸರಣೆ ಮಲ್ಲಮ್ಮನನ್ನು
ದುಡ್ಡುಕಾಸು ಕೈಗೆ ಕೊಟ್ಟು
ವಾರದ ಬುತ್ತಿ ಕಟ್ಟಿಕೊಟ್ಟು
ಸಿರುಶೈಲ ಪರುವತಕೆ
ಸ್ವಾಮಿ ಮಲ್ಲಯ್ಯನವರು
ಗಿರಿಗೆ ಕಳಿಸಿಕೊಟ್ಟರಂತೆ |

ಮಾಯದ ಮಲ್ಲಮ್ಮದೇವಿ
ಕತ್ತಲ ಕೋಣೇಯಲ್ಲಿ
ನಿದ್ದೆ ಮಾಡುತಿರುವಳಂತೆ
ಮಲ್ಲಮ್ಮನ ಜೊತೆಯಲ್ಲಿ
ಭರಮಣ್ಣ ಗಿರಿಗೆ ಹೋಗಿ
ಸ್ವಾಮಿ ದರಸ್ಲೆ ಮಾಡಿ
ಕಳ್ಳೆಪುರಿ ಕಾರಾಸಾವ್ಲೆ
ಬತ್ತಾಸು ಕಲ್ಯಾಣ ಸ್ಯಾವೆ
ಸ್ವಾಮಿಯ ಪೂಜಿದ ಪರ್ಸಾದ
ಎಲ್ಲಾನು ತಕ್ಕೊಡು
ಗಂಡ ಹೆಂಡತಿ ಇಬ್ರು
ಸಿದ್ದಾಪುರಕೆ ಬಂದರಂತೆ |

ಬಂದ ಮಲ್ಲಮ್ಮದೇವಿ
ಮಗನು ಭರಮಣ್ಣ
ಸಿರುಶೈಲ ಪರ್ವತದಿಂದ
ಬಂದವರು ನ್ಯಾರುವಾಗಿ
ಹೊನ್ನಾಜಮ್ಮನ ಹತ್ತಿರ ಹೋಗಿ
ಹೊನ್ನಾಜಮ್ಮನ ಪಾದಗಳಿಗೆ
ಸರಣುಗಳ ಮಾಡುತಾರೆ
ಹೊನ್ನಾಜಮ್ಮ ನೋಡುತವುಳೆ
"ಕತ್ತಲೆ ಕ್ವಾಣೆಗಾಕಿದ್ದಿ
ಈ ನನ್ ದಡ್ಡ ಸೂಳೆಮಗ
ಅವುಳ ಈಚೆಗೆ ಕರ್ಕೊಂಡು
ಬಂದವುನೆ" ಅನುತ್ಹೇಳಿ
ಕ್ವಾಪದಿಂದ ಲತ್ತಮ್ಮ
"ರಾಕಾಸ್ ನನ್ ಮಗುನ್ ಕೂಸ
ಕತ್ತಲ ಕ್ವಾಣೇಗೆ
ಕೂಡಿ ನಿನ್ನ ನಾನು
ಬೀಗ ಹಾಕೊಂಡು ಬಂದಿದ್ದೆ
ಅಂದೆಗಮ್ಮಿ ಈಚುಗ್ ಬಂದೆ?"
ಅನುತ್ಹೇಳಿ ಹೊನ್ನಾಜಮ್ಮ
ಮಲ್ಲಮ್ಮನ ಬೈಯುವಾಗ
ಗಂಡ ಹೆಂಡತೀರಿಬ್ರು
ಸೋಜುಗ ಪಡುವಾಗ
ಭರಮಣ್ಣ ಮಗನು
"ಅವ್ವ ಅವ್ವ ನೀನೆ ನಮ್ಮ
ಜಾತ್ರೀಗೆ ಕಳಿಸಿದ್ಯಲ್ಲ
ಇದ್ಯಾಕೆ ಬೊಯ್ಯುತೀಯೆ
ಇದ್ಯಾಕೆ ಹೊಡೆಯುತೀಯೆ"
ಅನ್ನುವಾಗ ಭರಮಣ್ಣ
ಹೊನ್ನಾಜಮ್ಮ ಕೂಡಲೆ
ಕತ್ತಲ ಕ್ವೋಣೆಯ

ಬಾಕಲ ತಗುವಾಗ
ಅಲ್ಲಿ ಒಬ್ಬು ಮಲ್ಲಮ್ಮ
ಕಾದುಕೊಂಡು ಕೂತಿದ್ದು |

ಈ ಇಬ್ಬಾರು ಮಲ್ಲಮ್ಮರ
ನೋಡೀದ ಹೊನ್ನಾಜಮ್ಮ
"ಓಯ್ ಏ ನನ್ ಮಗುನ್ ಕೂಸ
ಕಸಮುಗ್ಗಲಿ ಮಕ್ಕರಿಟ್ಟಿ
ಪಪಸಾಳಿ ದಂದ್ಯಾಳಿ
ಗೂಮುಗಣ್ಣಿ ಗುಡ್ಡಮೂಗಿ
ಇಪ್ಪಗಾಲಿ ಬೀಟುಗಣ್ಣಿ
ಇನ್ನೂಫ ಚಿತ್ರಾಂಗ್ಲಿಯ
ನಾ ತರಬವುದೈ ಸಿದ್ದಾಪುರಕೆ
ಇಂತ ಮಾಯಾಂಗ್ಲಿ ಅಂತ ನಾನು
ತಿಳುಕೊಂಡಿರನಿಲ್ಲ
ಮಲ್ಲಾಜೆನ್ನೊವಳೆ
ನೀನು - ಮಾಯಕಾತಿ ಮಂತ್ರಗಾತಿ
ಮಾಟ್ಲುಗಾತಿ ಕೂಟ್ಲುಗಾತಿ
ನೀವಿಬ್ಬಾರಿದ್ದೀರಲ್ಲ
ನಿಜವಾದ ಮಲ್ಲಿಮುಂಡೆ
ಯಾರು ಅನ್ನಾದ ಬಲ್ಲಿ
ಮಾಯದ ಮಲ್ಲಿ ಮುಂಡೆ
ಯಾರು ಅನ್ನಾದ ಬಲ್ಲಿ
ನಿಮುಗೆಲ್ಲ ಇವುರಿಬ್ರು
ಯಾರೂ ಅನ್ನಾದ ನಾನು
ಈಗ ತೋರಿಕೊಡುತೀನಿ"
ಹಂಗಂದು ಹೊನ್ನಾಜಮ್ಮ
ಹಿರೀಸೊಸೇರ ಕೂಗಿ ಕರ್ದು
ಒಂದು ಬೆಂಕಿಕೊಳ್ಳನಾದ್ರೆ
ಹೊನ್ನಾಜಮ್ಮ ತರುಸಿದಳು |

ಅವ್ಳ ಕೈಲಿದ್ದ ಬೆಂಕಿ ಕೊಳ್ಳಿ
ಅವ್ಳ ಕೈಯಾನೆ ಬಿಡ್ಸಿಕೊಂಡು
ಅವಳ ಕತ್ಗೆ ತಿರುಗಿಕೊಂಡು
ಅವುಳ್ನೆ ಸುಡಕಂತ ಬಂತು
ಇದ್ದಕ್ಕಿದ್ದಂತೆ ಓಂಗೆ
ಆದುದ್ದ ನೋಡಿ ಹೊನ್ನಾಜಮ್ಮ
ದಿಕ್ಕೆಟ್ಟು ಮಾಟ ಕಿತ್ತು

ಅವುಳೆಲ್ಲೀಗೆ ಹೋದರೂ
ಅವುಳ್ನ ಬುಡನಿಲ್ಲ ಬೆಂಕಿಕೊಳ್ಳಿ
ಅವುಳ ಮೈಕೈಯನೆಲ್ಲ
ಸುಟ್ಟು ಬರೆಹಾಕಿತು.

ಬರೆಗಳ ನೋವುಗಳ
ತಾಳಿಕೊಳ್ಳನಾರದೆ
ಹೊನ್ನಾಜಮ್ಮ ಬಂದರೆ
ಅವುಳ ಜೊತೆ ಹಿರಿಸೋಸೇರು
ಬಾಯಿ ಬಾಯಿ ಬಡುಕೊಂಡು
ಮಲ್ಲಮ್ಮನ ಬಳುಗೆ ಬಂದು
ತಪ್ಪಾಯ್ತು ತಪ್ಪಾಯ್ತು ಅಂತ
ಅವ್ಳ ಕಾಲೀಗೆ ಬಿದ್ದರಂತೆ |

ಹೊನ್ನಾಜಮ್ಮ ಬರೆಗಳ
ಉರಿಯನು ತಾಳನಾರ್ದೆ
ಬಾಯಿಬಾಯಿ ಬಡುಕೋತ
ಓಡಿ ಓಡಿ ಬಂದಳಂತೆ
"ನೀನು ನನ್ನ ಸೊಸೆಯಲ್ಲ
ನೀನೇ ನನಗ ಲತ್ತಮ್ಮ
ನಾನು ಮಾಡಿದ್ದು ತಪ್ಪಾಯ್ತು
ನನ್ನ ಕ್ಷಮುಸ್ಬೇಕು" ಅಂತ್ಹೇಳಿ
ಮಲ್ಲಮ್ಮುಂಗೆ ಕೈಮುಗುದು
ಸರಣ ಸರಣಂದಳಂತೆ
ಆಗ ಅವ್ಳ ಮೈಕೈ ಉರಿ
ಮಾಯಾವು ಆಯಿತಂತೆ
ಮಾಯದ ಮಲ್ಲಮ್ಮ
ಮರೆಯಾಗಿ ಹೋದಳಂತೆ |

೫

ಸುವ್ವನ್ನಕ್ಕ ಸುವ್ವನ್ನಮ್ಮ ಸುವ್ವನ್ನಾಲಿ
ಹ್ಯಾಮರೆಡ್ಡಿ ಸೊಸುಮಲ್ಲಮ್ಮ ಸುವ್ವನ್ನಾಲಿ | ಸೊಲ್ಲು |

ಮಾವ ಹ್ಯಾಮರೆಡ್ಡಿ
ಅತ್ತೆ ಹೊನ್ನಾಜಮ್ಮ
ಗಂಡ ಭರಮಣ್ಣರ
ಜೊತೆಯಲ್ಲಿ ಕರುಕೊಂಡು
ಸರಣೆ ಮಲ್ಲಾಜಮ್ಮ

ಶುಶ್ರೈಲುಕೆ ಬಂದಳಂತೆ
ಸ್ವಾಮಿ ಮಲ್ಲಯ್ಯನ ಕಂಡಳಂತೆ |

ಸಿರುಗಿರಿ ಪರುವತದಲ್ಲಿ
ಸೇರಿದ್ದ ಸರಣರಿಗೆಲ್ಲ
ಲಿಂಗ ಜಂಗಮರಿಗೆಲ್ಲ
ಲಕ್ಷದೊಂಬತ್ತ ಕೋಟಿಗೂ
ಊಟ ಭೋಜಣೆ ಮಾಡಬೇಕು
ಅನುತ್ಪೇಳಿ ಮಲ್ಲಮ್ಮದೇವಿ
ಲಕ್ಷದತೊಂಬತ್ತಾರು ಕೋಟಿಗೆ
ಅವ-ಪತ್ರದ ಎಲೆಯ ಕೊಡುತವುಳೆ
ಪತ್ರದ ಎಲೆಯ ಕೊಟ್ಟುಬಿಟ್ಟು
ಅವ - ಊಟ ಭೋಜುಣೆ ನೀಡುತವುಳೆ
ಊಟ ಭೋಜುಣೆ ನೀಡಿಬುಟ್ಟು
ತಾಯಿ ಮಲ್ಲಯ್ಯ ನೆನದಳಂತೆ

ಮಲ್ಲಿಕಾರ್ಜುನ ಸ್ವಾಮಿಯವರು
ಪ್ರತ್ಯೇಕ್ಷೆಯಾಗಿ ಬಂದು ನಿಂತು
ಮಲ್ಲಮ್ಮ ಸರಣೆಯ ಜೊತೆಯಲ್ಲಿ
ಅಲ್ಲಿದ್ದ ಮಾತ್ಮರುಗಳನೆಲ್ಲ
ಕೈಲಾಸ್ಕೆ ಕರ್ಕೊಂಡೋದರಂತೆ

ಸರಣೆ ಮಲ್ಲಮ್ಮದೇವಿ
ಗಂಡ ಭರಮಣ್ಣನ ಕರ್ಕೊಂಡು
ಅತ್ತೆಮಾವರ ಜೊತೆಗೆ
ಕೈಲಾಸ ಸೇರಿದಳಂತೆ
ಸತ್ಯುವಂತೆ ಮಲ್ಲಮ್ಮನ ಕಥೆ
ಬಲ್ಲವರಿಗೆ ಬೆಲ್ಲದ ಸವಿಯು
ಪತುರೊತಾ ಸಿರೋಮಣಿ
ಸರಣೆ ಮಲ್ಲಮ್ಮನ ಕಥೆಯು
ಇಲ್ಲೀಗೆ ಸಂಪೂರನಂ

ಮಲ್ಲಮ್ಮನಂಥ ಸೊಸೆಯಿಲ್ಲ

ಸಿದ್ದಯ್ಯ ಗುಡಿಯಲ್ಲಿ ಎದ್ದುಬೀಸುವಳ್ಯಾರೆ
ರುದ್ರಾನ ತಂಗಿ ಶಿವಶರಣೆ - ಮಲ್ಲಮ್ಮ
ಎದ್ದು ಶ್ರೀಗಿರಿಯ ನೆನೆದಾಳೊ |

ಏಳುತಲೆ ಶ್ರೀಗಿರಿಯ ಏನೆಂದು ನೆನಿದಾಳೊ
ಮಲ್ಲಯ್ಯರಿಜಮ್ಮರ ಪಾದ ಗತಿಯೆಂದು - ಮಲ್ಲಮ್ಮ
ತಲೆಯಾಗೆ ಹಸ್ತ ಮಡುಗ್ಯಾಳೊ |

ಬಸವಣ್ಣ ನಿನ್ನಂಥ ಭಕ್ತರು ಯಾರಿಲ್ಲ
ನೀಲಮ್ಮನಂಥ ಶರಣಿಲ್ಲ - ರಡ್ಡೀರ
ಮಲ್ಲಮ್ಮನಂಥ ಸೊಸೆಯಿಲ್ಲ |

ಸಾಸುವೆ ಕಾಳಮ್ಮ ರೇಸೀಮೆ ಉಟ್ಟವುಳೆ
ಆಕೆ ನಮ್ಮಕುಲಕೆ ಪತುವ್ರತೆ - ಮಲ್ಲಮ್ಮನ
ರಾಸೀ ವೀಳ್ಯಾಕೆ ಕರೆಸೀರಿ |

ಹಳ್ಳಾದಾಗಿರುವೋಳು ಹನ್ನೊಂದು ಜಡೆಯೋಳು
ಅಳ್ಳಳ್ಳದೂವ ಮುಡಿಯೋಳು - ಮಲ್ಲಮ್ಮಗೆ
ಅಲ್ಲಿ - ನೋಡಿ ಕೈಯ ಮುಗಿದೇನು |

ಮಾದಾರ ಚನ್ನಯ್ಯ

ಎಲ್ಲಿ ಕಾಣೆಲ್ಲಿ ಕಾಣೆಲ್ಲಿ ಕಾಣೆರಾ - ನಮ್ಮ
ಎಲ್ಲಮ್ಮನಂತ ಚೆಲುವೆಯನ್ನು ಎಲ್ಲಿ ಕಾಣೆರಾ | ಸೊಲ್ಲು |

ಅರಗೀಯಾದಿಯ ತೊಟ್ಟು ಎಲ್ಲಿ ಕಾಣೆರಾ
ಅವ್ವ - ಬ್ರಮ್ಮ ವೇಷವ ತೊಟ್ಟು ಎಲ್ಲಿ ಕಾಣೆರಾ |

ಆರೂರ ಮಗಳೆಲ್ಲಿ ಎಲ್ಲಿ ಕಾಣೆರಾ
ಯವ್ವ - ಸೊಸೀ ಬಾಲೀ ತಾಯಿ ಎಲ್ಲಿ ಕಾಣೆರಾ |

ಹಳದಿ ಪಟ್ಟದೊಳಗೆ ಎಲ್ಲಿ ಕಾಣೆರಾ
ಯವ್ವ - ಬಿಳದಿ ಪಟ್ಟದೊಳಗೆ ಎಲ್ಲಿ ಕಾಣೆರಾ |

ಏಳೇಳು ಪಟ್ಟದಲ್ಲಿ ಎಲ್ಲಿ ಕಾಣೆರಾ
ಯವ್ವ - ವೇದಾಶಕ್ತಿಯು ನೀನು ಎಲ್ಲಿ ಕಾಣೆರಾ | ೧೦

ಜಲಕರಾಯರ ತಾಯಿ ಎಲ್ಲಿ ಕಾಣೆರಾ
ಯವ್ವ - ಜಮದಗ್ನಿ ಮುನಿಯ ರಾಣಿ ಎಲ್ಲಿ ಕಾಣೆರಾ |

ಎಲ್ಲಿ ಕಾಣೆನು ಶಿವನೊಲ್ಲಬೆ ಎನಿಸೀದೆ
ಕಲ್ಲಿನೊಳಗೆ ಪುಟ್ಟಿ ಭೂಲೋಕ ಸಲುಗೋಳ
ಎಲ್ಲಿ ಕಾಣೆಲ್ಲಿ ಕಾಣೆರಾ |

ಬಾಳಮಂದಿ ಬೆತ್ತಲ ಮಾಡಿದೆ
ನೀನೆಂತಾಕ್ಯವ್ವ
ಬೇವ ಉಡಿಸಿ ಮೋಜ ಮಾಡಿದೆ |

* * *

ಎಲ್ಲಮ್ಮ ತಾಯಿಯ ಪುತ್ರನಾದ
ಪರಶುರಾಮನು
ತಂದೆ ಜಮದಗ್ನಿಯನ್ನು ಕೊಂದಂಥ ಪಾಪಿ
ಕಾರ್ತವೀರ್ಯಾರ್ಜುನನನ್ನು ಕೊಂದು ೨೦
ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಯನ್ನು ಮಾಡಿ
ಕ್ಷತ್ರಿಯವಂಶುವನ್ನೇ ನಿರ್ಮೂಲ ಮಾಡಿ
ಕಾರ್ತವೀರ್ಯನ ಶಿರವನ್ನು
ತಾಯಿ ಸ್ನಾನ ಮಾಡೊ ಜಾಗಕ್ಕೆ ಹೂಳಿ
ಯವ್ವ - ಸ್ನಾನವ ಮಾಡು ಬಾರಮ್ಮ
ಬಾರೆ ಎಲ್ಲಮ್ಮ |

ಸ್ನಾನ ಮಾಡು ಬಾರಮ್ಮ ಅಂತ ಕರ್ದಿದ್ದಾನೆ.
ತಾಯಿ ಎಲ್ಲಮ್ಮ ಪರಶುರಾಮಯ್ಯನ ನೋಡಿದ್ದಾಳೆ.
ರಕ್ತಮಯವಾದ ಅವನ ರೂಪವನ್ನು ನೋಡಿ
'ಸುಳಿಗೊಬ್ಬುನಾರ ಬಿಟ್ಟಾ' ಅಂದಿದ್ದೆ ೩೦
ಇವ ನನ್ ವಾಗ್ದಾನ ಮರ್ತು
ಒಬ್ರೂನೂ ಬಿಡ್ದೆ ಕೊಚ್ಚಾಕ್ ಬಂದಿದ್ದಾನೆ
ಕ್ಷತ್ರಿ ವಂಶುವನ್ನೇ ನಿರ್ಮೂಲ ಮಾಡಿದ್ದಾನೆ
ಇನ್ನು ಈ ರಕ್ಕಸ
ಕ್ಷತ್ರಿ ಮಗುಳಾದ ನನ್ನ ಬುಡ್ತನ ?' ಅಂತ್ಹೇಳಿ -

ಯವ್ವ - ಆ ಮೂಲೆ ತಾನೆ ಹೋದಾಳೊ
ಬಾರೆ ಎಲ್ಲಮ್ಮ |
ಯವ್ವ - ಈ ಮೂಲೆ ತಾನೆ ಹೋದಾಳೊ
ಬಾರೆ ಎಲ್ಲಮ್ಮ |
ಯವ್ವ - ಕದ್ದು ಕದ್ದು ತಾನೆ ಹೋದಾಳೊ ೪೦
ಬಾರೆ ಎಲ್ಲಮ್ಮ |

ಆ ಮೂಲೆ ಈ ಮೂಲೆಗೋದರೂ
ಓಡುಸ್ಕೊಂಡ್ ಬರ್ತಿದ್ದಾನೆ -

ಆ ಮೂಲೆಗೆ ಹೋದರು ಬುಡನಲ್ಲ
ಬಾರೆ ಎಲ್ಲಮ್ಮ |
ಈ ಮೂಲೆಗೂ ಹೋದರು ಬುಡನಲ್ಲ
ಬಾರೆ ಎಲ್ಲಮ್ಮ |
ಕದ್ದು ಕದ್ದು ಹೋದರ ಬುಡನಲ್ಲ
ಬಾರೆ ಎಲ್ಲಮ್ಮ |

ಕದ್ದು ಕದ್ದು ಮಾತೆಯಾದ ರೇಣುಕಾದೇವಿ ೫೦
ಅಣ್ಣನ ಸಿರುಸದ ಮೇಲೆ ಸ್ನಾನ ಮಾಡಬೇಕಲ್ಲಾಂತ
ಓಡಿ ಓಡಿ ಹೋಯ್ತಿದ್ದಾಳೆ.
ಎಲ್ಲುಗೋದ್ರೂ ಪರಶುರಾಮ ಬುಡ್ತಾ ಇಲ್ಲ
ಆವಾಗ ಮಾತೆಯಾದ ರೇಣುಕಾದೇವಿ
ಭಂಡಾರದ ಸೀರೆನ ತರೀಕೊಂಡು
ಭಂಡಾರದ ಕುಪ್ಪ ತೊಟ್ಕೊಂಡು

ಮಾತೆಯಾದಂತ ರೇಣುಕಾದೇವಿ -
ಅಯ್ಯ - ಕಲ್ಯಾಣದ ಪಟ್ಟಣಕೋದಾಳು
ರಾಮಾರಾಮ |
ಅಯ್ಯ - ಕಲ್ಯಾಣ ಪಟ್ಟಣದಲ್ಲಿ
ರಾಮಾರಾಮ |
ಅಯ್ಯ - ಒಕ್ಕಿಗರ ಮುದ್ದಯ್ಯ ಕಾಣಯ್ಯ
ರಾಮಾರಾಮ |
ಅಯ್ಯ - ಕುಂಬಾರ್ರ ಗುಂಡಯ್ಯ ಕಾಣಯ್ಯ
ರಾಮಾರಾಮ |
ಅಯ್ಯ - ಬೇಡಾರ ಕಣ್ಣಯ್ಯ ಕಾಣಯ್ಯ
ರಾಮಾರಾಮ |
ಅಯ್ಯ - ಅಡುಪಾದ ಅಪ್ಪಣ್ಣ ಕಾಣಯ್ಯ
ರಾಮಾರಾಮ |
ಅಯ್ಯ - ಮಡಿವಾಳ ಮಾಚಯ್ಯ ಕಾಣಯ್ಯ
ರಾಮಾರಾಮ |
ಅಯ್ಯ - ಆದಿಗರ ಹರುಳಯ್ಯ ಕಾಣಯ್ಯ
ರಾಮಾರಾಮ |
ಅಯ್ಯ - ಮಾದಿಗರ ಚನ್ನಯ್ಯ ಕಾಣಯ್ಯ
ರಾಮಾರಾಮ |

ಕಲ್ಯಾಣ ಪಟ್ಟುದಲ್ಲಿ ಬಿಜ್ಜಳುನ ಆಡಳ್ತ
ಬಸವಣ್ಣನವರಾದರೂ
ಬಿಜ್ಜಳರಾಜನ ಮಂತ್ರಿ ಪದವೀಲಿ
ಬಿಜ್ಜಳನ ಒಡ್ಡೋಲುಗದಲ್ಲಿದ್ರು
ಅಂತ ಶರಣ ಬಸವಣ್ಣನವ್ರು ಆಲಿ ಕೂಗಿ
ಮಾತೆಯಾದ ರೇಣುಕಾದೇವಿ
ಕಲ್ಯಾಣಪಟ್ಣ ಸೇರಿದ್ದಾಳೆ
ಕಲ್ಯಾಣ ಪಟ್ಟಣದಲ್ಲಿ -

ಅಯ್ಯ - ಮಾದಿಗರ ಚನ್ನಯ್ಯ ಕಾಣಯ್ಯ
ಬಾರೆ ಎಲ್ಲಮ್ಮ |
ಅಯ್ಯ - ಘನಶರಣ ಚನ್ನಯ್ಯ ಕಾಣಯ್ಯ
ಬಾರೆ [illegible]

ಮಾತೆ ರೇಣುಕಾದೇವಿ
ಮಾದಾರ ಚನ್ನಯ್ಯನ ಮನೆ ಮುಂದೆ ನಿಂತ್ಕೊಂಡು
"ಅಯ್ಯಾ ಚನ್ನಯ್ಯ ಅಯ್ಯಾ ಚನ್ನಜ್ಜ ಅಯ್ಯೊ ಚೆನ್ನಜ್ಜಪ್ಪ
ನನ್ನ ಮಗನಾದ ಪರಶುರಾಮನು
ಕ್ಷತ್ರಿವಂಶುವನ್ನೇ ನಿರ್ಮೂಲ ಮಾಡಿ
ನನ್ನ ಅಣ್ಣ ಕಾರ್ತವೀರ್ಯಾರ್ಜುನನನ್ನು ಕೊಂದು
ಅವನ ಶಿರವನ್ನು ತಂದು
ನಾನು ಸ್ನಾನ ಮಾಡೊ ಜಾಗದಲ್ಲಿ ಹೂತಾಕಿ
ಅದ್ರು ಮ್ಯಾಲೆ ಕೂತ್ಕೊಂಡು ಸ್ನಾನ ಮಾಡ್ಲಾ ಅಂತ
ಕರೀತಿದ್ದಾನೆ ಕಣಪ್ಪ
ನಾನು ಒಪ್ಪುದೇ ಹೋದುದ್ಕೆ
ನನ್ನುನ್ನೇ ಅಟ್ಟುಸ್ಕೊಂಡ್ ಬರ್ತಿದ್ದಾನೆ -

ನಿನ್ನ - ಮಲ್ಲಿ ಬೇಗ ಜಾಗ ಕೊಡಯ್ಯ
ರಾಮಾರಾಮ |

ನಿನ್ನಲ್ಲಿ ಬೇಗ ಜಾಗ ಕೊಡು" ಅಂದಾಗ
ಚನ್ನಯ್ಯ ಹೇಳ್ತಿದ್ದಾನೆ
"ತಾಯಿ ನೀನು ನೋಡುದ್ರೆ ಕ್ಷತ್ರಿಯಳು
ನಾನು ನೋಡುದ್ರೆ ಕೇವಲ ಮಾದುಗುನು
ಅಮ್ಮ ನನ್ ಮಲ್ಲಿ ಜಾಗ ಕೇಳ್ತಿಯಲ್ಲ
ನಾನು ಇರೋ ಸ್ಥಿತೀನ ಹೇಳ್ಲವ್ವ? -

ಯಮ್ಮ - ಬಿಲುವೀನ ಸಿಂಬಿ ಕಾಣಮ್ಮ
ಬಾರೆ ಎಲ್ಲಮ್ಮ |
ಯಮ್ಮ - ಚಕ್ಕಾದ ಹೊದಿಕೆ ಕಾಣಮ್ಮ
ಬಾರೆ ಎಲ್ಲಮ್ಮ |
ಯಮ್ಮ - ಮೂಳೇಯ ಬೋದಿಗೆ ಕಾಣಮ್ಮ
ಬಾರೆ ಎಲ್ಲಮ್ಮ |
ಯಮ್ಮ - ಮನೆಯೊಂದ್ ಮನೆ ಅಲ್ಲ ಕಾಣಮ್ಮ
ಬಾರೆ ಎಲ್ಲಮ್ಮ |
ಯಮ್ಮ - ಗತಗತ ಗಬ್ಬು ನಾರುತಾದಮ್ಮ
ಬಾರೆ ಎಲ್ಲಮ್ಮ |
ಯಮ್ಮ - ನನ್ನ ಮಲ್ಲಿ ಜಾಗ ಇಲ್ಲ ಕಾಣಮ್ಮ
ಬಾರೆ ಎಲ್ಲಮ್ಮ |

ಅಮ್ಮ ನಾವು ನೋಡುದ್ರೆ ಕೇವಲ ಮಾದುಗ್ರು
ನೀನು ನೋಡಿದ್ದೆ ಉಂಟಾದ್ರೆ ಕ್ಷತ್ರಿಯಳು
ನನ್ನ ಮಲ್ಲಿ ಜಾಗ ಕೇಳ್ತಿಯಲ್ಲ ತಾಯಿ
ನನ್ನ ಮನೇಲಿ ಜಾಗ ಎಲ್ಲದೆ ತಾಯಿ ?"
ಅದುಕ್ಕೆ ರೇಣುಕಾದೇವಿ ಹೇಳ್ತಿದ್ದಾಳೆ -

"ಅಯ್ಯ - ನಿನ್ ಮನೇಲಿ ಜಾಗ ಇಲ್ಲದಿದ್ರೆ
ಬಾರೆ ಎಲ್ಲಮ್ಮ |

ನಿನ್ನ - ಬಾನಿ ಒಳುಗೆ ಜಾಗ ಕೊಡಯ್ಯ
ಬಾರೆ ಎಲ್ಲಮ್ಮ |
ನಿನ್ನ - ಕರೆಬಾನೀಲಿ ಜಾಗ ಕೊಡಯ್ಯ"
ಬಾರೆ ಎಲ್ಲಮ್ಮ |

"ಯವ್ವ ಕರೇಬಾನೀಲಿ ಜಾಗ ಕೇಳ್ತಿದ್ದೀಯಲ್ಲ ತಾಯಿ
ಯವ್ವ ಆ ಕರೇಬಾನಿವೊಳುಗೆ
ಒಂದೊಂದ್ ಉಳ ಒಂದೊಂದು ಶಿವಗಂಗೆ
ಬೆಟ್ಟುದ್ ಗಾತ್ರ ಬಿದ್ದವೆ.
ಆ ಬಾನ್ಯಾದ ಬಾನೆಲ್ಲ -

ಯವ್ವ - ಗತಗತ ನಾರುತಾದವ್ವ
ಬಾರೆ ಎಲ್ಲಮ್ಮ |
ಯವ್ವ - ಬಾನಿ ಒಳುಗೆ ಜಾಗ ಇಲ್ಲಮ್ಮ"
ಬಾರೆ ಎಲ್ಲಮ್ಮ |

ಹಾಗಂದಾಗ ಜಗನ್ಮಾತೆಯಾದ ರೇಣುಕಾದೇವಿ
"ಅಯ್ಯ ಚನ್ನಜ್ಜಪ್ಪ
ಆ ಬಾನಿ ಒಳುಗೆ ಜಾಗ ಇಲ್ಲುದಿದ್ರೆ
ಅದುನ್ನ ಸೋಸ್ಬುಡು
ಸೋಸ್ಬುಟ್ಟು ಚನ್ನಾಗಿ ತೊಳ್ಸು
ತೊಳ್ದಾದ ಮ್ಯಾಲೆ
ಒಳ್ಳೆ ಪುರೋಯಿತ್ರು ಕರ್ಸಿ ಪುಣ್ಯ ಮಾಡ್ಸಪ್ಪ
ಏಳ್ ಮರುದ ಬೇವುನ ಸೊಪ್ ತುಂಬ್ಸಪ್ಪ
ಏಳು ಕೋಟಿ ಭಂಡಾರ ತುಂಬ್ಸಪ್ಪ
ಏಳು ಕೋಟಿ ಕುಂಕುಮ ತುಂಬ್ಸಪ್ಪ
ಏಳು ಕೋಟಿ ಚಂದ್ರ ತುಂಬ್ಸಪ್ಪ

ಇವೆಲ್ಲವನ್ನು ತುಂಬ್ಸಾದ್ಮ್ಯಾಲೆ-

ಅಯ್ಯ - ಬಾನಿ ಒಳುಗೆ ಕುಂಡ್ರುತೀನಯ್ಯ
ಬಾರೆ ಎಲ್ಲಮ್ಮ |

ಅಯ್ಯ ಚನ್ನಜ್ಜಪ್ಪ ಬೇಗ ಬೇಗ ತರ್ಸಪ್ಪ -
ಅಯ್ಯ -ನನ್ಮಗ ಬರೋ ವ್ಯಾಳ್ಳ ಆಯ್ತುಯ್ಯ"
ಬಾರೆ ಎಲ್ಲಮ್ಮ |

ಲೋಕಮಾತೆಯಾದ ಎಲ್ಲಮ್ಮದೇವಿ ಹೇಳಿದ ಪ್ರಕಾರ್ವಲ್ಲಿ
ಚನ್ನಜ್ಜಪ್ಪ ಎಲ್ಲವನ್ನು ಮಾಡ್ಸಿದ್ದಾನೆ

"ಯವ್ವ ನೀನು ಹೇಳಿದ ರೀತೀಲಿ ಮಾಡ್ಸಿದ್ದೀನಿ ತಾಯಿ
ಬಂದು ಮೂರ್ತವಾಗು ನನ್ನಮ್ಮ"
"ಆಗ್ಲಿ ನನಗೆ ಸಂತೋಸ ಆಯ್ತಪ್ಪ
ನಾನೀಗ ಇಲ್ಲಿ ಮೂರ್ತವಾಗ್ತೀನಿ
ಚನ್ನಜ್ಜಪ್ಪ ನನ್ನ ಮಗ ಬರೊ ವ್ಯಾಳ್ಳವಾಯ್ತು
ಅವ್ನು ಇಲ್ಲಿಗ್ ಬಂದು ಕೇಳುದ್ರೆ
'ಬಂದಿಲ್ಲ' ಅಂದ್ಬುಡಪ್ಪ
ಚನ್ನಜ್ಜಪ್ಪ ನಾನು ಬಾನಿವೊಳುಗೆ ಮೂರ್ತವಾಗ್ತಿದ್ದೀನಿ
ಈ ಬಾನಿ ಬಾಯ್ಗೆ ಏನ್ ಮುಚ್ತೀಯಪ್ಪ?"
"ಯವ್ವ ಏಳೂರೆಲ್ಲೆಲಗಲ್ಕೆ ಒಂದು ಕಲ್ಲೆತಿ
ಆ ಕಲ್ನ ಇದರ ಬಾಯ್ಗೆ ಎಳುದ್ಬುಡು ಅಂದ್ರೆ
ಎಳುದ್ಬುಡ್ತೀನಮ್ಮ"
"ಆಗ್ಲಿ ಹಂಗೇ ಎಳುದ್ಬುಡಪ್ಪ" ಅಂತ್ಹೇಳಿ
ಕರೇಬಾನಿವೊಳೀಕೆ ಕೂತ್ಕೊಂಡ್ಬುಟ್ಟು
ಚನ್ನಜ್ಜಪ್ಪ ಏಳೂರೆಲ್ಲೆಯಗುಲ್ದ ಕಲ್ಲ
ಕರೇಬಾನಿ ಬಾಯ್ಗೆ ಎಳುದ್ಬುಟ್ಟ.

ಇತ್ಲಾ ಕಡೆ ಉದ್ದಂಡ ಪರಶುರಾಮನಾದರೂ
"ನನ್ನ ತಂದೆಯಾದ ಜಮದಗ್ನಿ ಶಿರವನ್ನ
ಕಾರ್ತವೀರ್ಯ ತಗೀದ.
ಕಾರ್ತವೀರ್ಯನ ಶಿರವನ್ನು ನಾನು ತಗುದೆ.
ಅವನ ಸಿರುಸವನ್ನು ಹೋಗೊರೊ ತಾವು ಕೂತ್ಕೊಂಡು
ಸ್ನಾನ ಮಾಡ ಬಾರವ್ವ ಅಂದ್ರೆ
ಬರ್ತಾ ಇಲ್ಲವಲ್ಲ.
ಎಲ್ಲಿ ಅವುತ್ಕೊಂಡು ಕುಂತಿದ್ದಳೊ ಕಾಣೆ" ಅಂತ್ಹೇಳಿ
ಉದ್ದಂಡ ಪರಶುರಾಮ
ತನ್ನ ಬಲಗಡೆ ಹೆಗುಲ್ ಮ್ಯಾಲೆ ಕೊಡ್ಲಿ ಮಡೀಕೊಂಡು -

ತಾಯ ಹುಡುಕುತ ಬರುತಾನೊ
ಬಾರೆ ಎಲ್ಲಮ್ಮ |

ತಾಯ ಹುಡುಕ್ತಾ ಬಂದು ಪರಶುರಾಮ
ಚನ್ನಜ್ಜಪ್ಪನ ಮನೆ ಹತ್ರುಕೆ ಬಂದ.
ಬಂದು ಕೇಳ್ತಿದ್ದಾನೆ
"ಚನ್ನಜ್ಜಪ್ಪ ಇಲ್ಲುಗೆ ನಮ್ ತಾಯಿ ಬಂದಿಲ್ಲ?" ಅಂತ.
ಅದುಕ್ಕೆ ಚನ್ನಜ್ಜ ಹೇಳ್ತಿದ್ದಾನೆ
"ಅಯ್ಯ ಪರುಶುರಾಮ
ನಾವಾದ್ರೆ ಮಾದಿಗ್ರು
ನೀವಾದ್ರೆ ಕ್ಷತ್ರಿಯರು

ನಿಮ್ಮ ತಾಯಿ ಇಲ್ಲಿಗ್ಯಾಕಪ್ಪ ಬತ್ತಳೆ?
ಬಂದಿಲ್ಲ ಕಣಪ್ಪ" ಅಂದ.
ಚನ್ನಯ್ಯನ ಹೆಂಡ್ತಿ ಚನ್ನಜ್ಜಿ
ಕೊಡಪಾನ ತಕೊಂಡು ನೀರ್ಗೊಯ್ತಿದ್ದು.
"ಚನ್ನಜ್ಜಿ ಚನ್ನಜ್ಜಿ -

ನಮ್ಮ ತಾಯಾನೆ ಕಂಡೇನಮ್ಮ ಚನ್ನಜ್ಜಮ್ಮ
ಬಹುಬಾಳ ನಂಬಿದ್ದೆ ನಾ - ನಿನ್ನ
ಪಾದಾವ ನಂಬಿದ್ದೆ ನಾ |
ಬಹುಬಾಳ ನಿನುಬಾಳ ಏ ಬಾಳ ಸಿರಿಬಾಳ
ಬಹುಬಾಳ ನಂಬಿದ್ದೆ ನಾ - ನಿನ್ನ
ಪಾದಾವ ನಂಬಿದ್ದೆ ನಾ |
ಯಪ್ಪ - ಕಂಡೆ ಕಾಣೊ ನಾನು ಕಾಣೆ ಕಾಣೊ
ಬಹುಬಾಳ ನಂಬಿದ್ದೆ ನಾ - ನಿನ್ನ
ಪಾದಾವ ನಂಬಿದ್ದೆ ನಾ |

'ಕಂಡೆ ಕಾಣೊ' ಅಂದ್ಲು 'ಕಾಣೆ ಕಾಣೊ' ಅಂದ್ಲು
ಚನ್ನಜ್ಜಮ್ಮ ಎರಡು ಮಾತಾಡಿದ್ಲು
ತಿರ್ಗಾ ಕೇಳ್ದ ಪರುಶುರಾಮ
ತಿರ್ಗಾ ಚನ್ನಜ್ಜಮ್ಮ ಹಂಗೇ ಹೇಳ್ಬುಡ್ತು
ಆದ್ರೆ ಆದಿಶಕ್ತಿ ಎಲ್ಲಮ್ಮನ ಪುತ್ರ ಪರಶುರಾಮುಂಗೆ
ಜಗನ್ಮಾತೆ ಎಲ್ಲಿದ್ದಾಳೆ ಅನ್ನೋದು ಗೊತ್ತು
ಅವ್ನು ಕರೇ ಬಾನಿ ಹತ್ರುಕ್ಕೋಗಿ ನಿಂತ್ಕೊಂಡ.
ಏಳೂರೆಲ್ಲ ಅಗಲದ ಚಪ್ಪಿ ಮುಚ್ಚಿತ್ತಲ್ಲ
ಗಂಡ್‌ಗೊಡ್ಲಿ ಅಂಡುನಿಂದ ಏಳೂರೆಲ್ಲ ಕಲ್ಲೆತ್ತ
ಎತ್ತಿ ಎಸೆದಾಗ -

ಅಯ್ಯ - ತಾಯಿ ಮೊಕ ಮಗನು ನೋಡಿದನು
ಬಾರೆ ಎಲ್ಲಮ್ಮ |
ಅಯ್ಯ - ಮಗನ ಮೊಕ ತಾಯಿ ನೋಡಿದಳು
ಬಾರೆ ಎಲ್ಲಮ್ಮ |

ಮಗನ ಮೊಕ ನೋಡಿದಳು ತಾಯಿ
ನೋಡಿದ ತಕ್ಷಣವೆ
ಜಗನ್ಮಾತೆಯಾದ ರೇಣುಕಾದೇವಿ
"ಅಯ್ಯಯ್ಯೊ ಏನ್ಮಾಡ್ಲಪ್ಪ ದೇವ್ರೆ
ನನ್ನ ಮಗನಾದ ಪರಶುರಾಮ ಇಲ್ಲುಗೂ ಬಂದ್ಬುಟ್ನಲ್ಲ"
ತಲೆಯೆತ್ತಿ ಮಗುನ ಮೊಕುವನ್ನು ನೋಡಿ -

ಅಯ್ಯ - ನೆಲದುರ್ಗಕ್ಕೆ ತಾಯಿ ಇಳಿದಾಳು
ಬಾರೆ ಎಲ್ಲಮ್ಮ |

ನೆಲದುರ್ಗಕ್ಕೆ ಇಳಿಳ್ದು ಹೋಯ್ತಾ ಅವ್ಳೆ
ಶರೀರದ ಹೃದಯ ಭಾಗದವರ್ಗೂ ಮುಳುಗೋಯ್ತು
ನೋಡ್ತಾ ಇದ್ದಂತ ಪರಶುರಾಮ ದುಃಖದಿಂದ
"ಅಮ್ಮಾ ನನ್ನ ತಂದೆಯಾದ ಜಮದಗ್ನಿ ಶಿರುವನ್ನ
ಕಾರ್ತವೀರ್ಯ ತಗುದ
ಕಾರ್ತವೀರ್ಯನ ಶಿರುವನ್ನ ನಾನು ತಗುದೆ
ನನ್ಗೆ ನನ್ ತಾಯಿ ಒಬ್ಬಳಾದ್ರೂ ಇರ್ಲಿ ಅಂದ್ರೆ
ನನ್ನುನ್ನ ತಬ್ಬಲಿ ಮಾಡಿ ಪಾತಾಳುಕ್ಕಿಳಿತಿದ್ದೀಯೆ
ಅಮ್ಮ ಹೋಗಬ್ಯಾಡ ಬಾಮ್ಮ ಬಾಮ್ಮ
ಬರ್ದೇ ಹೋದ್ರೆ ನಿನ್ನ ಕೀಲುದೇವ್ರು ಮಾಡ್ತಿದ್ದೀನಿ
ಇನ್ನು ಎಂದೆಂದುಗೂ ನೀನು
ಕೀಲುದೇವರಾಗಿ ಉಳೀಬೇಕಾಯ್ತದೆ.

ಯವ್ವ - ಬ್ಯಾಡ ಹಿಂದಕೆ ಬಂದು ಬಿಡವ್ವ
ಬಾರೆ ಎಲ್ಲಮ್ಮ |
ಬಾರಬಾರದೇನಮ್ಮ - ಕರೆದಾಗ
ಬರಬಾರದೇನಮ್ಮ |
ಬಾರದಿರುವುದು ನಿನಗೆ ತರವಲ್ಲ ತಾಯಿ
ಬರಬಾರದೇನಮ್ಮ |

ಪರಶುರಾಮ ಎಷ್ಟೇ ಕರುದ್ರೂ
ಮಗನಿಗೆ ಹೆದುರಿ ರೇಣುಕಾದೇವಿ
ಇಳಿದೇ ಹೋಯ್ತಿದ್ದು
"ನಮ್ಮ ತಾಯಿ ಕಣ್ಣುಗ್ ಕಾಣದಂಗಾಗ್ಬುಡ್ತಳಲ್ಲ"
ಅಂತ್ಹೇಳಿ ಉದ್ದಂಡ ಪರಶುರಾಮ
ತಾಯಿ ಮಂಡೆಗೆ ಕೈಯಿಟ್ಟ
ತಾಯಿಗೆ ಏಳು ಮಾರುದ್ದ ಮಂಡೆ ಇತ್ತಂತೆ
ಏಳು ಮಾರುದ್ದ ಮಂಡೆಯನ್ನು
ಕಾಯ್ ಗುದಿ ಸುತ್ಕೋತಾರಲ್ಲ ಹಂಗೆ
ಎಡಗ್ಯೆಗೆ ಸುತ್ಕೊಂಡ
ಗಂಡ್‌ಗೊಡ್ಲಿ ತಕ್ಕೊಂಡ -

ಅಯ್ಯ - ಅವ್ನು ತಾಯಾನೆ ಶಿರುವ ಕುಯ್ಕೊಂಡ
ಬಾರೆ ಎಲ್ಲಮ್ಮ |
ಅಯ್ಯ - ಇವ್ನು ರೇಣುಕೆ ಮಗನೆ ರಾಮಣ್ಣ
ಬಾರೆ ಎಲ್ಲಮ್ಮ |

ತಾಯಿ ಶಿರುವನ್ನು ಕುಯ್ಕೊಂಡು
ಅಪರಂಜಿ ವಲ್ಲಿ ಒಳುಗೆ ಮುಸುಗಾಕೊಂಡು
ತಂದು ಮಂಚುದ ಮ್ಯಾಲೆ ಮಡಗಿದ್ದಾನೆ
ಮಂಚುದ ಮ್ಯಾಲೆ ಸಿರುವನ್ನಿಟ್ಟು
ಜಗತ್ತಿನಲ್ಲಿ ಯಾವ ಯಾವ ಪುಷ್ಪಗಳು ಬೆಳೀತವೋ
ಆ ಪುಷ್ಪಗಳನ್ನೆಲ್ಲ ತಂದು
ತಾಯಿ ಶಿರುಕ್ಕೆ ಮುಡುಸ್ದ
ಶಿರುಕ್ಕೆ ಪೂಜೆ ಮಾಡ್ದ -

ಅಯ್ಯ - ಈರಚಾಟಿ ತಕ್ಕೆಂಡ ರಾಮಯ್ಯ
ಬಾರೆ ಎಲ್ಲಮ್ಮ |
ಅಯ್ಯ - ಈರ್ಗಾಸೆ ಕಟ್ಕೊಂಡ ರಾಮಯ್ಯ
ಬಾರೆ ಎಲ್ಲಮ್ಮ |

ಗಾಜುನ ಕಂಬುಕ್ಕೆ ರಾಮ್‌ಬಾಣ ಕತ್ರುಬಾಣ
ಈರ ಬಾಣ
ನೂರು ಒಂದು ಬಾಣಗಳನ್ನು ತಗ್ದು ನಾಟಾಕ್ದ
ನಾಟಾಕಿ ಆ ಬಾಣುಗಳ್ಗೆ ಹೇಳ್ತಾ ಅವ್ನೆ
"ಕೇಳಿರೈ ಬಾಣಗಳೇ
ತಾಯಿಯನ್ನು ಕೊಂದು ಪಾಪಿಯಾದ ನಾನು
ಈ ಭೂಮಿ ಮ್ಯಾಲೆ ಇರಬಾರ್ದು" ಅಂತ್ಹೇಳಿ
ತಾಯಿ ಶಿರುದ ಮುಂದೆ ನಿಂತ್ಕೊಂಡು
ದುಕ್ಕಾ ಮಾಡ್ತಾ ಹೇಳ್ತಿದ್ದಾನೆ.

"ತಾಯಿ ಕೊಂದ ಪಾಪಿ ನಾನು
ಇರಬೋದ ಜಗದೊಳು |
ರೇಣುಕಾಂಬ ಜಗದಾಂಬ
ಇರಬೋದ ಜಗದೊಳು |

ರಾ ಬಾಣುವೆ ಕತ್ರುಬಾಣುವೆ ಈರ್ಬಾಣುವೆ
ನೂರೊಂದು ಬಾಣುಗಳೇ
ಪಾಪಿಯಾದ ನನ್ನನ್ನು ಹತ್ಯೆ ಮಾಡಿ"
ಹಾಗನ್ತಿರುವಾಗ ರಾಮ್ ಬಾಣ
ಸುಯ್ಯುನ್ ಕಿತ್ಕೊಂಡು
ಪರಶುರಾಮುಂಗೆ ಹೊಡೀತು ಅನ್ನೊದ್ರೊಳಗಾಗಿ

ಯಮ್ಮ-ಮಗನೀಗ ತಬ್ಬಾಳಲ್ಲ ಮಾಯಕಾತಿ ಜಗದಂಬೆ
ಬಾರೆ ಎಲ್ಲಮ್ಮ |

ಪರಶುರಾಮುನ್ನ ಜಗನ್ಮಾತೆ ರೇಣುಕಾದೇವಿ
ಥಟ್ಟನೆ ವಾರಚ್ಚಿಗೆಳ್ಕೊಂಡ್ಲು
ಠಾಂಬಾಣ ಒತ್ತೀಲೆ ಸೀದುವಾಗಿ ಹೊಂಟೋಯ್ತು
ಚನ್ನಯ್ಯನ ಮನೇಲಿದ್ದ ರುಂಡ ಬಂದು
ಮಾತೆಯಾದ ರೇಣುಕೆಯ ಮುಂಡುಕ್ಕೆ ಸೇರ್ಕೋತು
ಮಗುನ್ನ ಉಳೀಸ್ಕೋಬೇಕು ಅನ್ನೊ ಆಸೆಯಿಂದ
ತಾಯಿ ಎಲ್ಲಮ್ಮ ಬದುಕಿ ಬಂದ್ಲು
ತನ್ನ ಮಗುನ್ನೂ ಬದುಕಿಸಿಕೊಂಡ್ಲು
ಆವಾಗ ಮಗುನ್ನ ತಬ್ಕೊಂಡು
ಜಗನ್ಮಾತೆ ಕರೀತಿದ್ದಾಳೆ -

"ಯಪ್ಪ - ಹಾಲಾನೆ ಕುಡಿಬಾರೊ ನನ್ನ ಮಗನೆ
ರಾಮ ರಾಮ |
"ಯಮ್ಮ - ನಿನ್ನಾಲ ನಾನು ಕುಡಿಯುತೀನಮ್ಮ
ರಾಮ ರಾಮ |

ಆವಾಗ ಲೋಕಮಾತೆ ರೇಣುಕ
ತನ್ನ ಮಗನಾದ ಪರಶುರಾಮನನ್ನ
ತೊಡೆ ಮ್ಯಾಲೆ ಮನುಗುಸ್ಕೊಂಡು
ಹಾಲು ಕುಡುಸ್ತಾ
ಒಂದು ಜೋಗಳು ಪಾಡ್ತಳೆ -

ಜೋಗುಳನಾಡಿ ಬಂದೇನೊ - ಪರಶುರಾಮಯ್ನ
ತೂಗುತ ಹಾಡಿ ಬಂದೇನೊ | ಸೊಲ್ಲು |

ಜೋಗೀನಪುರದಲ್ಲಿ ಜೋಡ ತೊಟ್ಟಿಲ ಕಟ್ಟಿ
ಯಾರು ತೂಗಿದರೂ ಮನುಗೊಲ್ಲ |

ಯಾರು ತೂಗಿದರೂ ಮನುಗೊಲ್ಲ ಪರಶುರಾಮ
ಶಿವಸತ್ಯರು ತೂಗಿದರೆ ಸನುಮಾನ |

ಅಯ್ಯೊ ರಾಮಯ್ಯನ ಮೈಯೆಲ್ಲ ಚಿಳ್ಳುಗುರು
ಹ್ಯಾಗೆ ಸಲ್ಲಿಸೀದೊ ನೊರೆಹಾಲ |

ಹಂಗಂತ ಜೋಗುಳ ಹಾಡ್ತ
ಮಗ ಪರಶುರಾಮುಂಗೆ ಹಾಲು ಕುಡುಸ್ತಾ ಇದ್ದಾಳೆ -
ಯಮ್ಮ - ತಾಯಿ ಮಗನು ಎಲ್ಲಮ್ಮ
ಬಾರೆ ಎಲ್ಲಮ್ಮ |

ಯಮ್ಮ - ಸವದತ್ತಿ ಬೆಟ್ಟದಲ್ಲಿ ನಿಂತವುರೆ
ಬಾರೆ ಎಲ್ಲಮ್ಮ |
ಯಮ್ಮ - ಬೆಟ್ಟದ ಮ್ಯಾಲೆ ತಾಯಿ ನಿಂತವುಳೊ
ಬಾರೆ ಎಲ್ಲಮ್ಮ |
ಯಮ್ಮ - ಬೆಟ್ಟದ ಮ್ಯಾಲೆ ರಾಮಯ್ಯ ನಿಂತವುನೊ
ಬಾರೆ ಎಲ್ಲಮ್ಮ |

ಈ ರೀತಿ ತಾಯಿ ಮಗನೂ ಬೆಟ್ಟದ ಮ್ಯಾಲೆ ನಿಂತಿರುವಾಗ
ತಾಯಿ ಎಲ್ಲಮ್ಮ ಚನ್ನಜ್ಜಯ್ಯನ ನೋಡಿ
"ಚನ್ನಜ್ಜಯ್ಯ
ನನ್ನ ಮಗ ನನ್ನ ಅಟ್ಟುಸ್ಕೊಂಡ್ ಬಂದಾಗ
ನನ್ನನ್ನು ನೀನು ಬಚ್ಚಿಟ್ಟಿದ್ದೀಯೆ
ನನ್ನ ಮಗುನ ಕ್ಯೋಪ ಇಳಿಯೋವರ್ಗೂ
ನನ್ನನ್ನು ಕಾಪಾಡಿದ್ದೀಯೆ
ಅದುಕ್ಕೆ ನಾನು ನಿನ್ನ ಕುಲವನ್ನು ಉದ್ಧಾರ ಮಾಡಿ
ನಿನ್ನ ಕುಲದೇವತೆ ಆಗ್ತಿದ್ದೀನಿ
ನಿನಗೆ ಸಕಲ ಸಂಪತ್ತನ್ನೂ ಕೊಡ್ತಾ ಇದ್ದೇನೆ -

ನನ್ನ - ಒಕ್ಕಲು ನೀನು ಆಗು ಚನ್ನಯ್ಯ
ಬಾರೆ ಎಲ್ಲಮ್ಮ |
ನಿನ್ನ - ಮನೆಯಲಿ ನಾನು ಉಳ್ಕುತೀನಯ್ಯ
ಬಾರೆ ಎಲ್ಲಮ್ಮ |

ಅಪ್ಪಾ ಚನ್ನಯ್ಯ
ನಾನು ಕೊಡುವ ಐಶ್ವರ್ಯದಲ್ಲಿ
ನೀನೆಷ್ಟೇ ಸಾವುಕಾರನಾದ್ರೂ
ಕಾಲುಭಾಗನಾದ್ರೂ ಬಡತನ ಇಟ್ಕೊಂಡು ಬಾಳಪ್ಪ
ಇದೇ ನಾನು ನಿನಗೆ ಕೊಡ್ತಾ ಇರೋ ವರ"
ಉಧೋ ಎಕ್ಕಯ್ಯ ಉಧೋ ಜೋಗಯ್ಯ
ಉಧೋ ಉಧೋ
ಉಧೋ ಲೋಕಮಾತೆ ರೇಣುಕಾ ಉಧೋ
ಉಧೋ ಉಧೋ ಎಕ್ಕುಲ್ಲೋ

ಬಸವನ ಪಾದಕೆ ಹೂವು ಉದಿರ್ಯಾವು

ಬೆಳೆಯಾಗಿ ಬಂದೈತೆ ಬಸವಣ್ಣನ ದಯದಿಂದ
ಬೆಟ್ಟದಪುರದ ಜಾತ್ರೆಗೆ - ಹೋಯ್ತೀನಿ
ಹುರಿಗೆಜ್ಜೆ ಗಂಟೆ ತರುತೀನಿ |

ಆರುಸಾವಿರ ಜಂಗು ಮೂರು ಸಾವಿರ ಗಂಟೆ
ದೂರ ಕೇಳ್ಯಾವು ಗಗನಕೆ - ನಮ್‌ಬಸವ
ಧೂಳು ಎಬ್ಸಿಸ್ಯಾನು ಶಿವನೀಗೆ |

ಕುಡುಕೂರ ಹಾದೀಲಿ ಗಿಡಸಣ್ಣ ಮಲ್ಲಿಗೆ
ಗಿಡಗಿಡದ ತುಂಬ ಹೂವರಳಿ - ಬಸವನ
ಪಾದಕೆ ಹೂವು ಉದಿರ್ಯಾವು |

ಆ ತೇರು ಈ ತೇರು ಜ್ಯೋತಿ ಲಿಂಗಯ್ಯನ ತೇರು
ದೊಡ್ಡಬಸವಣ್ಣನ ಹೊಸತೇರು - ಬರುವಾಗ
ಆಕಾಸದ ಗಂಟೆ ಧಣಿರಂದೊ |

ನಿಲ್ಲು ನಿಲ್ಲೆಂದಾರು ನಿಲ್ಲದೆ ಬಸವಣ್ಣ
ಮಲ್ಲಯ್ಯ ಬೆಟ್ಟವ ಹತ್ತುವಾಗ - ಹಾದೀಲಿ
ಮಲ್ಲೀಗೆ ಮರುಗ ಸುರಿದಾವು |

ಬಲ್ಲಾಳರಾಯ

ಹರಹರ ಶಿವಶಿವ ಸುವ್ವಿಲಾಲಿ
ನಮ್ಮ - ಶರಣರ ಅತುಮವೆ ಸುವ್ವಿಲಾಲಿ | ಸೊಲ್ಲು |

ಓಂ ನಾಮ ಮೊದುಲಾಗಿ ಸುವ್ವಿಲಾಲಿ*
ಓಂಕಾರ ಗುರುವೆ
ಓಂ ನಮ ಶಿವಾಯ
ನಿಮ್ಮ - ನಾಮ ಸೊರಣೆಯನು
ಮಾಡುವೆ ಪರಮಾತ್ಮ
ಮತಿಕೊಡು ಮಾದೇವ
ಗತಿಕೊಡು ಗುರುದೇವ
ಸುತಿಕೊಡು ಸರಸತಿ
ನಮ್ಮಮ್ಮ ಸಾರದೆಯೆ
ಸರಣು ಸರಣಾರತಿ
ಸರಣ ಮಾತ್ಮರ ಕಥೆಯ
ಸೊರವೆತ್ತಿ ಹಾಡುವೆ
ಕೇಳುವ ಮಾತ್ಮರಿಗೆ
ಅವರ - ಮಗನಾಗಿ ಸರಣಾರ್ತಿ |

ತೆಂಕಾಲು ಸೀಮೇಲಿ
ಶಂಕರ ಪುರವುಂಟು
ಶಂಕರ ಪುರದಲ್ಲಿ
ರಾಜ ಬಲ್ಲಾಳರಾಯ
ಬಲ್ಲಾಳನೆಂದರೆ
ಭಾರಿ ಶಿವಭಕುತನು
ಅವ್ವು - ಹಗಲಲ್ಲು ಇಳ್ಳಲ್ಲು
ಅವ್ವು - ಕನಸಲ್ಲು ಮನಸಲ್ಲು
ಅವ್ವು - ದಿನಂಪ್ರತ್ಯದಲ್ಲೂ
ಅವ್ವು ಮನುಗಿರುವಾಗಲು
ಅವ್ವ - ಉಸುರುಸುರೆಲ್ಲವು
ಓಂ ನಮ ಶಿವಾಯ
ಶಿವಾಯ ನಮ ಓಂ
ಅನ್ನೋವ ಸೊರಣೆಯ
ಮಾಡುತ್ತ ಇತ್ತಂತೆ |

ರಾಜ ಬಲ್ಲಾಳನು
ಅವ್ವು - ಪ್ರತಿಂದಿನದಲ್ಲು
ಕೋಳಿ ಕೂಗೋದ್ಕು ಮೊದ್ಲು
ಶಿವುಸೊರಣೆ ಮಾಡುತ
ಶಿವುಗ್ಯಾನ ಮಾಡುತ
ಶಿವು ಜಪುನೆ ಮಾಡುತ
ಎದ್ದು ಶಿವನ ಪಟಕೆ
ಕೈಮುಗಿದು ಬಲ್ಲಾಳ
ಮೀಯಾಣಗಳ ಮಾಡಿ
ಮಡಿವಸ್ತ್ರಗಳ ಧರಿಸಿ
ಹಣೆಗೆ ಬಸಿತವ ಧರ್ಸಿ
ಶಿವನ ಮುಟ್ಟಿ, ಪೂಜೆಗಳ
ಮಾಡುವ ಗಳುಗೇಲಿ
ಭಜನೆಗಳ ಹೇಳುತ
ಶಿವಸೊರಣೆ ಮಾಡುತ
ಜಪುನೆ ತಪುನೆಗಳ
ಮನಮುಟ್ಟಿ, ಮಾಡುತ
ಶಿವುಲಿಂಗಕೆ ಸ್ನಾಮಿ
ಅವುಸೇಕಗಳ ಮಾಡಿ
ಹಣ್ಣುಗಳ ಮುರುದು
ಕಾಯಿಗಳ ಒಡುದು
ಶಿವನ ಮುಂದೆ ಮಡಗಿ
ಧೂಪದೀಪಗಳ
ಕಡ್ತೀಕಲ್ಪುರಗಳ
ಹಸ್ಸಿ ಪೂಜೇಯ ಮಾಡಿ
ಶಿವನ ಪಾದಗಳ
ಕಣ್ಣಿಗೊತ್ತಿಕೊಳ್ಳುವನು |

ಪೂಜೆ ಮಾಡಿದ ಮ್ಯಾಲೆ
ಬಂದ ಭಕ್ತರನೆಲ್ಲ
ಕಂಡು ಕರಗಳ ಮುಗುದು

ಶರಬಾಗಿ ಶರಣು ಮಾಡಿ
ಅವರ ಕಷ್ಟಸುಖಗಳನೆಲ್ಲ
ಕೇಳಿ ಇಚಾರ್ಣೆ ಮಾಡಿ
ಅವ್ರು - ಕೇಳಿದ್ದನೆಲ್ಲ ಕೊಟ್ಟು
ಬೇಡಿದ್ದನ್ನೆಲ್ಲ ನೀಡಿ
ಗಂಡಹೆಂಡಿರಿಬ್ಬರೂ
ಬಂದ ಭಕ್ತರಿಗೆಲ್ಲ
ಮಾಡಿದಂತ ಅಡಿಗೆಯ
ಭಿನ್ನವ ಅಳಿವರು
ಮಿಕ್ಕುದ ಪ್ರಾಸೋದವ
ರಾಜ ಬಲ್ಲಾಳರಾಯ
ತಾಯಿ ವಲ್ಲಬಮ್ಮ
ಗಂಡ ಹೆಂಡಿರಿಬ್ಬರು
ದ್ರೀಯಕೆ ಸಲ್ಲುಸುವರು |

ಭಕ್ತರಿಗೆ ಭಿನ್ನಾವ
ಅಳಿಯದ ಹೊರತು
ಬಲ್ಲಾಳರಾಯನು
ಒಂತೊಟ್ಟು ನೀರನು
ಕುಡಿದವನು ಅವನಲ್ಲ
ಅನ್ನಾರಾದಿಗಳ
ತಿಂದವನು ಅವನಲ್ಲ
ಬಲ್ಲಾಳರಾಯನ
ಇದು ಒಂದು ನೋಂಪಿ
ಇಂತೆ ನೋಂಪಿಯಲಿ
ರಾಜ ಬಲ್ಲಾಳರಾಯ
ಶಿವಪೂಜೆ ಮಾಡುತ
ಸಂತೋಸ ಪಡುವನು |

ಭಕುತ ಬಲ್ಲಾಳನ
ನೋಂಪಿಯ ಮೆಚ್ಚಿದ
ಶಿವನು ಸಂಭ್ರಮದಲ್ಲಿ
ಗಿರುಜಮ್ಮನ ಜೊತೆಗೆ
ಹೀಗಂತ ನುಡಿದರು
"ಗಿರುಜೆ ಕೇಳು ಕೇಳು
ತೆಂಕಾಲು ಸೀಮೆಯ
ಶಂಕರನ ಪುರದ
ಭಕ್ತ ಬಲ್ಲಾಳನಿಗೆ
ಶಿವಭಕ್ತರಂದರೆ
ಪಂಚಪ್ರಾಣ ಕಣೆ
ಶಿವನ ಭಕ್ತರಿಗೆ
ಭಿನ್ನವಳಿಯದೆ ಅವನು
ಎಂದೂ ಉಂಡವನಲ್ಲ
ಭಕ್ತರು ಬಂದು
ಅವುರು ಕೇಳಿದನೆಲ್ಲ
ಕೊಡುವ ದಾನಿ ಅವನು
ಇಂತೆ - ಭಕ್ತನ ದುಡಮನವ
ನಾವು - ಪರೀಕ್ಷ್ಯ ಮಾಡಬೇಕು
ನೀನು - ದೊಂಬತಿ ಆಗು
ಇಗ್ನೇಸ ಸಣ್ಮಕರು
ನಂದೀಶನು ಸೇರಿಕೊಂಡು
ದೊಂಬರ ಯಾಸದಲಿ
ಡೋಲು ಬಾರಿಸಿಕೊಂಡು
ಲಾಗಗಳ ಹಾಕಲಿ
ಪೈಟಿಗಳ ಹೊಡೆಯಲಿ
ನೀನು ಗಣಮ್ಮಾಲೆ
ನಡೆದಾಗ ಜನಕೆಲ್ಲ
ಸೋಜಿಗ ಆಗಬೇಕು
ನಾನು - ಸ್ವಾಮಿಗಳರೂಪಲ್ಲಿ
ಅಲ್ಲೀಗೆ ಬಂದಾಗ
ನೀವು - ಆಟಗಳ ಮುಗಿಸಿ
ಮರೆಯಾಗಿ ಹೋಗಬೇಕು |

ನಾನು ಅವ್ನ ಆರಮನ್ಗೆ
ಭಿನ್ನಾಕೆ ಹೋಗುತೀನಿ
ಭಿನ್ನಾ ಅಳಿದ ಮ್ಯಾಲೆ
ನಂಗೆ - ದೊಂಬ್ತಿ ಮ್ಯಾಲಾಸೆ ಬೀಳ್ತು
ನಂಗೆ - ದೊಂಬ್ತಿ ಬೇಕೂಂತ
ನಾನವನ ಕೇಳುತೀನಿ
ಅಷ್ಟೊತ್ತಿಗೆ ನೀವುಗಳು
ಯಾರ ಕಣ್ಣು ಬೀಳದಂತೆ
ಮರೆಯಾಗಿ ಹೋಗಬೇಕು
ಆಗವನ ಗೂಡಮನ
ನಮಗೆ ತಿಳಿಯಬೇಕು" |

ಶಿವನ ಮಾತಿಗೆ ತಾಯಿ
ಗಿರಿಜಮ್ಮ ಒಪ್ಪಿದರು
ದೊಂಬತಿಯಾಗಿ ತಾಯಿ

ನಂದೀಸ ಗಾಣೇಸ
ಸಣ್ಮಕರ ಕೂಡಿಕೊಂಡು
ದೊಂಬರ ಯಾಸದಲಿ
ಶಂಕರಪುರಕೆ ಬಂದು
ಬೀದಿ ಬೀದಿಲೆಲ್ಲ
ಕೇರಿ ಕೇರಿಲಿ ಎಲ್ಲ
ಆಟಗಳ ಆಡಿದರು |

ಬಲ್ಲಾಳರಾಜನು
ಎಂದಿನ್ ಪರ್ಕಾರದಲ್ಲಿ
ಪೂಜೆಗಳ ಮಾಡಿದನು
ನಿವೇದ್ಯಗಳ ಮಾಡಿದನು
ಪೂಜೆಗಳ ಮುಗಿಸಿ
ನಡಟ್ಟಿಗೆ ಬಂದು ರಾಜ
ಭಿನ್ನಾ ಅಳಿವುದಕೆ
ಭಕ್ತರು ಬಂದಿರಬವ್ದು
ಅಂತ್ಹೇಳಿ ಬಲ್ಲಾಳರಾಯ
ಸುತ್ತಮುತ್ತ ನೋಡಿದನು |

ದೇವುಡಿಹಜಾರಕೆ
ಬಂದು ನಿಂತನು ರಾಜ
ಕೇರಿ ಕೇರಿಗುಂಟ
ದಿಟ್ಟಿಸಿ ನೋಡಿದ
ಬೀದಿ ಬೀದಿಗುಂಟ
ನ್ಯಾಪ್ನುವಾಗಿ ನೋಡಿದ
ಹಾದಿಹಾದಿಯಲ್ಲಿ
ಒಬ್ಬ - ಭಕ್ತನೂ ಕಾಣನಿಲ್ಲ
ಬೀದಿಬೀದಿಯಲ್ಲಿ
ಒಬ್ಬ - ಶರಣನೂ ಕಾಣನಿಲ್ಲ
ದಾರಿ ದಾರಿಯಲ್ಲಿ
ಒಬ್ಬ - ಜಂಗಮಯ್ಯು ಕಾಣನಿಲ್ಲ
ಶಿವನ ಭಕ್ತರಿಗೆ
ಭಿನ್ನ ಅಳಿಯದ ಹೊರ್ತು
ಬಲ್ಲಾಳರಾಯನು
ತನ್ನ ದ್ರೀಯಕಾದರೆ
ಅನ್ನ ಸಲ್ಲಿಸೋಂಗಿಲ್ಲ
ಇಂತೆ ರೊತದ ರಾಜ
ಊರು ಕೇರಿನೆಲ್ಲ
ಹುಡಿಕೊಂಡು ಹೊಂಟನು |

ಅತ್ತ ಸುತ್ತಿ ಬಂದನು
ಇತ್ತ ಸುತ್ತಿ ಬಂದನು
ಎತ್ತ ಸುತ್ತಿ ಬಂದರೂ
ಶಿವಭಕ್ತರ ಕಾಣದೆ
ಬಿಳಿಗೇರಿ ಕಟ್ಟೆಯ
ಒತ್ತೀಲಿ ಬರುವಾಗ
ಬಿಲ್ವತ್ರೆ ವನದಲ್ಲಿ
ಒಬ್ಬ - ದೊಡ್ಡಗುರುಗಳು
ನೆಳ್ಳಲ್ಲಿ ಕುಂತುಕೊಂಡು
ಕಣ್ಣುಗಳ ಮುಚ್ಚುಕೊಂಡು
ಕಾಮೀ ಕಾಮಂಡಲುನಲ್ಲಿ
ಜಪುನೆಯ ಮಾಡುತ
ಕುಂತಿರೋದ ನೋಡಿದನು |

ಆ ದೊಡ್ಡಗುರುಗಳು
ಸಾಕ್ಷಾದು ಪರುಮಾತ್ಮ
ಪತೇಕ್ಷವಾದಂಗೆ
ರಾಜನಿಗೆ ಕಂಡರು
ರಾಜ ಬಲ್ಲಾಳರಾಯನು
ಕರವೆತ್ತಿ ಕೈಯಮುಗ್ದು
ಉದ್ದುದ್ದಕೆ ಬಿದ್ದು
ಸ್ವಾಮಿಯೋರ ಪಾದಗಳ
ಕಣ್ಣಿಗೊತ್ತಿಕೊಂಡು
ಸರಣು ಸರಣಂದನು |

ಗುರುಗಳು ಕಣ್ಣಬುಟ್ಟು
ಬಲ್ಲಾಳರಾಯನನು
ಕಣ್ಣಿಂದ ನೋಡಿದರು
"ಭಕ್ತವಸ್ತ ನೀನು
ಯಾರಪ್ಪ ನೀನು
ಏನು ಕಾರಣಕಾಗಿ
ಇಲ್ಲೀಗೆ ಬಂದ್ಯಪ್ಪ?"
ಗುರುಗಳ ಪ್ರಶ್ನಕೆ
ರಾಜ ಬಲ್ಲಾಳರಾಯ
"ತಮ್ ಪಾದ ಬುದ್ಧಿ
ನಮ್ಮ ಮನೆಗೆ ಈಗ
ದಯಮಾಡಬೇಕು ಸ್ವಾಮಿ
ನಮ್ಮ ಮನೆಗೆ ಬಂದು
ಭಿನ್ನವ ಅಳಿಬೇಕು

ದಾಸೋಗಕೆ ಬಂದು
ನಮ್ಗೆ - ಆಸುರ್ವಾದ ಮಾಡಬೇಕು" |

"ಬರ್ಲೇಬೇಕಪ್ಪ ನಾನು ?"
"ಬಂದೇ ಬರ್ಬೇಕು ಗುರ್ವೆ!"
"ಬಂದ್ರೆ ಏನೇನಪ್ಪ?"
"ಭಿನ್ನ ಅಳಿದ ಮ್ಯಾಲೆ
ನೀವು ಕೇಳಿದ್ದ ಕೊಡುತೀನಿ
ಒಪ್ಪಿ ಬರ್ಬೇಕು ಗುರುವೆ"
"ಮಾತಿಗೆ ತಪ್ಪಿದರೆ?"
"ಎಲ್ಲಾದರೂ ಉಂಟೆ?
ತಪ್ಪದೆ ಕೊಡುತೀನಿ
ನೀವು - ಒಪ್ಪಿ ಬರಬೇಕು"
ಸ್ವಾಮಿಗಳು ಒಪ್ಪಿಕೊಂಡು
ಬಿಜ್ಜಳರಾಯನ
ಜೊತೆಯಾಗಿ ಹೊಂಟರು |

ಗುರುಗಳು ರಾಜನ
ಮಾತಿಗೆ ಒಪ್ಪಿಕೊಂಡು
ಅರಮನೆಗಾಗಿ
ಬರುವಂತ ಕಾಲದಲಿ
ಮಠದ ಬೀದಿ ಚೌಕದಲಿ
ದೊಂಬರ ಕಂಡರು
ಮಾಯಾಕಾರದಲಿ
ಗಿರುಜಮ್ಮ ದೇವಿಯ
ದೊಂಬರ ಸೂಳೆಯಾಗಿ
ಗಣೆಮ್ಯಾಲೆ ಆಡುವಂತ
ಆಟಗಳ ನೋಡಿದರು
ಕೋರಿ ಪ್ರಾಯಾದ
ಕನ್ನೆಣ್ಣು ರೂಪುನಲ್ಲಿ
ಗಿರುಜಮ್ಮ ತಾಯಿಯು
ತಂತೀಯ ಮ್ಯಾಲುಗಡೆ
ನಡೆಯೋದ ನೋಡಿ
ಗುರುಗಳು ನಿಂತರು
ಗುರುಗಳ ಹಿಂದುಗಡೆ
ಬಲ್ಲಾಳರಾಜನು
ಸುಮ್ಮನೆ ನಿಂತನು
ದೊಂಬರ ಸೂಳೆಯ
ಆಟಗಳ ನೋಡುತ
ನಿಂತಿರೊ ಸ್ವಾಮಿಗಳ
ಬೆನ್ನಿಂದೆ ನಿಂತುಕೊಂಡು
ಬಲ್ಲಾಳರಾಯನು
ಸ್ವಾಮಿಗಳ ಕಾಯುತಾನೆ |

ದೊಂಬರ ಸೂಳೆಯ
ಆಟಗಳು ಮುಗಿದಾಗ
ಅವಳನ್ನೆ ನೋಡುತ್ತ
ನಿಂತಿದ್ದ ಗುರುಗಳ
ಕರೆಯೋದು ಹ್ಯಾಂಗಂತ
ಯೋಚನೆ ಮಾಡುತ
ಬಲ್ಲಾಳರಾಯನು
ಚಿಂತೆ ಮಾಡುವಾಗ
ದೊಂಬರು ತಮ್ಮ
ದೋಲು ಹಗ್ಗ ಗಣೆನೆಲ್ಲ
ಗಂಟು ಮೂಟೆ ಕಟ್ಟಿಕೊಂಡು
ಕತ್ತೆಮ್ಯಾಲೆ ಹೇರಿಕೊಂಡು
ಅಲ್ಲಿಂದ ಹೊಂಟೋದ್ರು |

ಬಲ್ಲಾಳರಾಯನು
ಸ್ವಾಮಿಗಳ ಕರುಕೊಂಡು
ಅರಮನೆ ಬಾಗಲಿಗೆ
ಬಂದಾಗ ವಲ್ಲಬಮ್ಮ
ಪನ್ನೀರಾಗಣ್ಣೀಲಿ
ಪಾದಗಳ ತೊಳೆದು
ಪಾರಿಜಾತ್ಮದ ಪುಷ್ಮ
ಪಾದಗಳ ಮ್ಯಾಲ್ಮಡ್ಗಿ
ಬೆಜ್ಜಲ್ಕೆ ಕೆಂಡುದ್ಮೇಲೆ
ಸಾಮ್ರಾಣಿ ಧೂಪ ಹಾಕಿ
ಕಡ್ಡಿ ಕಲ್ಪುರ ಬೆಳಗಿ
ಚತ್ರಚಾಮರ ಸೈತ
ಚಳೇವ ಹಿಡಿಸಿಕೊಂಡು
ನಡೆಮಡಿಯ ಮ್ಯಾಲೆ ಸ್ವಾಮಿ
ಪಾದಗಳ ಮಡಗುತ
ನೆಳ್ಳಲ್ಲಿ ಸ್ವಾಮಿಗಳು
ಅರಮನೆಗೆ ಬಂದರು |

ಭೋಜನ ಮನೆಯಲ್ಲಿ
ದಂತದ ಮಣೆಮ್ಯಾಲೆ

ಸ್ವಾಮಿಗಳ ಕುಂಡ್ರುಸಿ
ಚಿನ್ನದ ಹರುವಾಣ ಮಡಗಿ
ರನ್ನದ ಚೊಂಬಲ್ಲಿ
ಎಡದಲ್ಲಿ ನೀರ ಮಡಗಿ
ಹಾಲುಸಕ್ಕರೆ ತುಪ್ಪ
ಪಾಲು ಪಂಚಾಮೃತ
ಕೀಲು ಸಾಮಿಗೆ ಪಾಯ್ಸ
ಹಾಲೋಗರ ಮೇಲೋಗರ
ಬೇಕು ಬೇಕಾದಂತ
ಅನ್ನಾರಗಳ ಪಡುಸಿ
ಬಲಗಡೆ ಬಲ್ಲಾಳರಾಯ
ಎಡಗಡೆ ವಲ್ಲಬಮ್ಮ
ಕುಂತು ಬೀಸಣಿಕೆಯಲಿ
ಗಾಳಿಗಳ ಹಾಕುತ್ತ
ಭೋಜುನೆಯ ಮಾಡಿಸಿ
ಕೈಯನು ತೊಳೆದು
ಪೀತಾಂಬುರದಲ್ಲಿ
ಕೈಗಳನು ಒರೆಸಿ
ಸ್ವಾಮಿಗಳ ಕರುಕೊಂಡು
ಪಚಾರಕೆ ಬಂದು
ಚಿನ್ನದ ಕುರುಚೀಲಿ
ಗುರುಗಳ ಕುಂಡುರಿಸಿ
ಬಿಳಿಯೆಲೆ ಕಳಿಯಡಕೆ
ಯಾಲಕ್ಕಿ ಲಾವಂಗ
ಕಾಚು ಕಡ್ಡೀಪುಡಿ
ಜಾತಾಯಿ ಜಾಪತ್ರೆ
ಚೇನ್‌ಸಕ್ರೆ ಪುಡಿಬೆರ್ಸಿ
ತಾಂಬೂಲ ಸೇವೆಯ
ಗುರುಗಳಿಗೆ ಮಾಡ್ಸಿದರು |

ತಾಂಬೂಲ ಆದಮ್ಯಾಲೆ
ಗುರುಗಳಿಗೆ ಸೆರಣು ಮಾಡಿ
"ಬೇಕಾದ್ದ ಕೇಳಿ ಸ್ವಾಮಿ"
ಹಾಂಗಂತ ಬಲ್ಲಾಳ
ಗುರುಗಳ ಕೇಳಿದನು.
ಆಗ ಆ ಸ್ವಾಮಿಗಳು
'ರಾಜ ಬಲ್ಲಾಳರಾಯ
ಆ ದೊಂಬ್ರ ಸೂಳೆ ಕಂಡು
ಮನ್ಸು ನಿಯಾಮಿತ
ಕಳುಕೊಂಡ್ತು ರಾಜ
ಅವಳು ನನ್ನ ಕಣ್ಣಲ್ಲಿ
ತುಂಬಿಕೊಂಡವುಳೆ
ಅವ್ರು ನನ್ನದೆ ತುಂಬ
ತುಂಬಿಕೊಂಡವುಳೆ
ಅವುಳ ಕಂಡು ರಾಜ
ನಿನ್ನ ಬೂಟ ಉಪಚಾರಗಳು
ಒಂದೂ ರುಚಿಸಿಲ್ಲ
ರಾಜ ನನ್ನ ಹಾಸಿಗ್ಗೆ
ಅವುಳ ಕಳ್ಸಿಕೊಡಯ್ಯ
ನಾನವ್ರ ಜೊತೆಯಲ್ಲಿ
ಮನುಗಬೇಕೂಂತ
ಆಸೆ ಉಂಟಾಗದೆ
ಇದೊಂದು ಅಸೆಯ
ಸಲ್ಲುಸಪ್ಪ ಮಾರಾಜ"
"ಸ್ವಾಮಿಗಳ ಪಾದ
ಹೇಳಿದಂತೆ ಆಗತದೆ"
ಹಂಗಂತ ಹೇಳಿ ರಾಜ
ಬಂಟರ ಕರೇಸಿ
"ಎಲ್ಲಿದ್ದರೂ ಸರಿ
ಆ ದೊಂಬರ ಸೂಳೆಯ
ಈಗಿಂದೀಗಲೆ
ಅರಮನ್ಸೆ ಕರ್ಕೊಂಡ್ಬನ್ನಿ"
ಅಂತ್ಹೇಳಿ ಬಲ್ಲಾಳ
ಅಗ್ನಿಗಳ ಮಾಡಿದನು |

ರಾಜಾಗ್ನೆ ಅಂತ್ಹೇಳಿ
ಅರಮನೆಯ ಬಂಟರು
ಊರೂ ಕೇರಿನೆಲ್ಲ
ಸೋಸಿಕೊಂಡು ಬಂದರು
ಮೂಲೆ ಮುಡುಕಲುನೆಲ್ಲಿ
ಸಂದುಗೊಂದುನಲ್ಲಿ
ಎಲ್ಲೆಲ್ಲಿ ಹುಡ್ಕಿದರೂ
ದೊಂಬ್ರು ಸೂಳೆ ಸಿಗನಿಲ್ಲ |

ಬರಿಗ್ಯೆಲಿ ಬಂದಂತ
ಬಂಟರ ನೋಡಿ ರಾಜ

ಯೋಚಿನೆಯಮಾಡಿ
"ನಮ್ಮ ಊರಲ್ಲೆ ಇರೊ
ಸೂಳೀರನಾದರೂ
ಕರ್ಕೊಂಡು ಬನ್ನಿ" ಅಂದ
ಊರ ಸೂಳೇರೆಲ್ಲ
ಆ ಒಂದು ದಿನದಲ್ಲಿ
ಬೇರೆ ಪಾರ್ಟಿಗಳಿಗೆ
ಬುಕ್ಕಾಗಿ ಹೋಗಿದ್ರು
ಈ ಸುದ್ದಿ ಕೇಳೀದ
ಗುರುಗಳು ಕೋಪದಿಂದ
"ದೊಂಬರ ಸೂಳೆ ಅಲ್ದೆ
ನನಗ್ಯಾರೂ ಬೇಕಾಗಿಲ್ಲ!"
ಅಂತ್ಹೇಳಿ ಕ್ಯಾಪದಿಂದ
ರಾಜನ ನೋಡಿದರು
ಇದರಿಂದ ರಾಜನು
ತಲೆಚಿಟ್ಟು ಹಿಡಿದಂತಾಗಿ
ಏನೂ ಮಾಡದಕೂ
ತೋಚದೆ ಬಲ್ಲಾಳರಾಯ
ಸ್ವಾಮಿಗಳ ಹತ್ತಿರಕೆ
ಬಂದು ಮೆತ್ತಗೆ
"ಈ ದಿನ ಮಾರಾಣಿ
ನಿಮ್ಮ - ಸ್ಯೇವಕೆ ಬರುತಾಳೆ"
ಆ ಮಾತ ಕೇಳಿದಂತ
ಗುರುಗಳ ಕೋಪದಿಂದ
"ಆ ಮುದಿಗೂಬೆ ಮಾರಾಣಿ
ನನಗೆ ಬೇಕಾಗಿಲ್ಲ!
ಆ ಕೋರಿಪ್ರಾಯದ
ಕನ್ನೆಣ್ಣು ದೊಂಬರುಡುಗಿ
ಅವಳೇ ನನಗಾಗಬೇಕು"
ಹಾಗಂತ ಗುರುಗಳು
ಹಟಸಾಧ್ನೆ ಮಾಡಿದರು |

ಬಲ್ಲಾಳರಾಯನು
ಏನು ಮಾಡಬೇಕಂತ
ಚಿಂತೇಯ ಮಾಡುತ
ನಿಂತುಕೊಂಡಿರುವಾಗ
"ಕೇಳಿದವರಿಗೆ ನಾನು
ಕೇಳಿದ್ದ ಕೊಡುತೀನಿ
ಅಂತ್ಹೇಳಿ ನನಗೆ ನೀನು
ಮೋಸ ಮಾಡಿದೆಯಲ್ಲೊ
ಇಂತೆ-ಮಾತು ತಪ್ಪೋರ ಮಲ್ಲಿ
ನಾನು - ಭಿನ್ನ ಮಾಡಬೋದ
ಎಂತೆ ಕೆಲ್ಸ ಆಗೋಯ್ತು
ಎಂತೆ ಕರ್ಮ ಬಂದೀತು"
ಅಂತ್ಹೇಳಿ ಗುರುಗಳು
"ನನ್ಗೆ-ಬೇಕಾದ ದೊಂಬ್ರುಡ್ಗಿಯ
ನಾನೇ ಹುಡುಕೋತೀನಿ!"
ಅಂತ್ಹೇಳಿ ಸ್ವಾಮಿಗಳು
ಸಿಡಿಸಿಡಿ ಸಿಡುಕುತ
ಮ್ಯಾಲುಕ್ಕೆ ಎದ್ದರು |

ಆಗ ಬಲ್ಲಾಳರಾಯ
"ಬೇಡಿ ಸ್ವಾಮಿ ಬೇಡಿ
ನೀವು ಹೋಗದು ಬ್ಯಾಡ
ನಾವೇ ಹುಡ್ಕಿ ನಿಮ್ಗೆ
ದೊಂಬ್ರುಡುಗೀಯ ತಂದು
ಒಪ್ಪೀಸುತೀವಿ ಸ್ವಾಮಿ
ನಾನು ಈ ದಿಕ್ಕ
ನನೆಂಡತಿ ಆ ದಿಕ್ಕ
ಹೋಗಿ ಹುಡ್ಕೀಕೊಂಡು
ಬರೋನ್ಗಂಟ ನೀವು
ಇಲ್ಲಿರಬೇಕು ಸ್ವಾಮಿ"
ಅಂತ್ಹೇಳಿ ಬಲ್ಲಾಳರಾಯ
ಗುರುಗಳ ಕಾಲಿಗೆ ಬಿದ್ದ |

"ಅಯ್ಯಾ ರಾಜ ಕೇಳು
ಬೇಗುದಲ್ಲಿ ಬಂದ್ರೆ ಸರಿ
ಇಲ್ಲದಿದ್ದ ಪಕ್ಷದಲ್ಲಿ
ನಾನೊಂದು ಕ್ಷಣವೂ
ನಿಲ್ಲೂವಂತ ಮನ್ಸನಲ್ಲ
ನಾನು ಕೇಳಿದ್ದ ಕೊಡದೆ
ಹೋದ ಈ ರಾಜ್ಯಾಂತ
ನಾನೆಲ್ಲೂ ಹೇಳಕಿಲ್ಲ
ಬರೋದಿದ್ರೆ ಬೈಗ ಬಾ
ಇಲ್ಲದಿದ್ರೆ ಬ್ಯಾಡಪ್ಪ" |

ಗುರುಗಳ ಮಾತಕೇಳಿ
ರಾಜ ಬಲ್ಲಾಳರಾಯ
ರಾಣಿ ವಲ್ಲಬಮ್ಮ
ಸರಸರನೆ ಹೊರುಟರು
ಗರಗರನೆ ತಿರುಗಿದರು
ಎಲ್ಲೆಲ್ಲಿ ಹುಡುಕಿದರು
ಎಲ್ಲೆಲ್ಲಿ ತಡಕಿದರು
ದೊಂಬರ ಸೂಳೆಯ
ಸುಳಿವೇ ಮೊದಲಿಲ್ಲ |

ದೊಂಬರ ಹುಡುಗಿ ಇಲ್ಲ
ಅಂತ್ಹೇಳಿ ಬರಿಗೈಲಿ
ಸ್ವಾಮಿಗಳ ನೋಡುವ
ಬಗೆ ಹ್ಯಾಗೆ ಅನ್ಮುತ
ಹುಡುಕಿ ಹುಡ್ಕಿ ಹುಡ್ಕಿ
ರಾಜ ಬಲ್ಲಳರಾಯ
ರಾಣಿ ವಲ್ಲಬಮ್ಮ
ಬರುಬರುತ ಬಿಲ್ವತ್ರೆ
ವನಕಾಗಿ ಬಂದರು.
ಒಬ್ಬರ ಒಬ್ರು ನೋಡಿ
ಮಾತುಗಳ ಬಾರದೆ
ಕಣ್ಣೀರ ಕೆಡವಿದರು |

"ಜೀವನಪರ್ಯಂತ
ದಾಸೋಗದ ರೊತವನು
ದಾನದ ನೋಂಪಿಯನು
ನಡೆಸಿಕೊಂಡು ಬಂದೋರ್ಗೆ
ಎಂತೆ ಕಷ್ಟ ಬಂತು
ಬಲ್ಲಾಳರಾಯನು
ಮಾತಿಗೆ ತಪ್ಪಿದನು
ಅನುವಂತೆ ಪಾಪಕ್ಕೆ
ಗುರಿಯಾದೆನಲ್ಲ ಶಿವನೆ"
ಹಾಗಂತ ಹೇಳುಕೊಂಡು
ಬಲ್ಲಾಳರಾಯನು
ಗುಳುಗುಳನೆ ಕಣ್ಣೀರ
ಸುರಿಸಿ ಸ್ತಾಕ ಮಾಡಿದನು |

"ಒಬ್ಬ ಭಕ್ತನ ಬಾವುಣ್ಕೆ
ತೀರಿಸೋಕಾಗದ ನಾನು
ಬದುಕಿ ಬಂದ ಫಲವೇನು ?
ನಾನು ಬದುಕಿರಬಾರದು
ಬದುಕಿ ಆ ಮಾತ್ಮರಿಗೆ
ಮೊಕವ ನಾನಾದರೆ
ತೋರಲಾರೆ ಮಡದಿ
ನನ್ನ ಪ್ರಾಣಗಳ
ನಾನು ಕಳುಕೋತೀನಿ
ಆಡಿದ ಮಾತೀಗೆ
ತಪ್ಪಿದ ಮ್ಯಾಲೆ ನಾನು
ನಾನು ಬದುಕಿರಬಾರದು!"
ಅಂತ್ಹೇಳಿ ಬಲ್ಲಾಳನು
ಕತ್ತಿಯ ಹಿರುದುಕೊಂಡು
ಕುತ್ತಿಗ್ಗೆ ಇಡುವಾಗ
ಸತ್ಯವ ಮೆಚ್ಚಿ ಶಿವನು
ಪ್ರತೇಕ್ಷವಾದರು
"ಭಕ್ತ ನಿಲ್ಲು ನಿಲ್ಲು
ತಾಳಪ್ಪ ತಾಳು ತಾಳು
ನನ್ನ ಕೈಲಾಸಕೆ ನಿನ್ನ
ಕರುಕೊಂಡು ಹೋಗಾಕೆ
ಬಂದಿವ್ನಿ ಬಾರಪ್ಪ
ಈ ರತುವ ಹತ್ತಪ್ಪ"
ಅಂತ್ಹೇಳಿ ಕರೆದಾರು |

ಶಿವನ ದರುಸಣೆ ಮಾಡಿ
ಶಿವನ ಮಾತು ಕೇಳಿ
ಬಲ್ಲಾಳರಾಯನು
"ಸ್ವಾಮಿ ನಿನ್ನ ಕೈಲಾಸ
ಅತ್ಲಾಗಿರಲಿ ಬುದ್ಧಿ
ನಾನು ಗುರುಸ್ವಾಮಿಗಳ
ಕೋರಿಕೆಯ ಸಲ್ಲಿಸದ
ಪಾಪಿ ಆಗಿದ್ದೀನಿ
ಅಂತೆ ಕರ್ಮಿಯ ನೀವು
ಕೈಲಾಸ್ಕೆ ಕರೆಯಬವುದ
ಅಂತೆ ಮಾತ್ಮರಿಗೆ ನಾನು
ಅನ್ಯಾಯ ಮಾಡಿರೋಗ
ಕೈಲಾಸಕೆ ನಾನು ಹ್ಯಾಗೆ
ಬರಲ್ಕೇಳು ನನ್ನಪ್ಪ
ಆ ಗುರು ಮಹಾತಯರು
ಸಂತೋಸ ಪಮುಪ್ಪದ

ನಾನು ನೋಡದ ಹೊರತು
ನನಗೆ ನೀನೂ ಬ್ಯಾಡ
ನಿನ್ನ ಕೈಲಾಸವೂ ಬ್ಯಾಡ!" |

ಬಲ್ಲಾಳರಾಯನ
ಮಾತುಗಳ ಕೇಳಿ ಶಿವನು
ತಲೆಯ ತೂಗಿದರು
ಆಗಿಂದಾಗಲೆ ಸ್ವಾಮಿ
ಮಾಯಾಕಾರವಾಗಿ
ಗುರುಗಳ ಕಾಣಿಸಿದರು |

ಆ ಗುರುಗಳು ತಮ್ಮ
ಹೆಗಲ್ ಮ್ಯಾಲುಗಡೆ
ದೊಂಬ್ರು ಸೂಳೆಯನು
ಕುಂಡ್ರುಸ್ಕೊಂಡು ಬಂದು
"ಅಯ್ಯಾ ರಾಜ ನಿನ್ನ
ಬಂಟಾರು ಸುಳ್ಳುಕಾರ್ರು
ನೀನೂ ನಿನ್ನ ಹೆಂಡತಿಯೂ
ದೊಡ್ಡ ಮೋಸುಕಾರ್ರು
ಊರ ಬಾಕ್ಲಲ್ಲಿ ಇದ್ದ
ದೊಂಬ್ರು ಹುಡುಗೀಯ
ಇಲ್ಲ ಇಲ್ಲ ಅಂತ
ಸುಳ್ಳು ಹೇಳಿದೆಯಲ್ಲ
ಈಗ ನೋಡು ರಾಜ
ನಾನೆ ಕರುಕೊಂಡು ಬಂದೆ"

ಬಲ್ಲಾಳರಾಯನು
ಸ್ವಾಮಿಗಳ ಮಾತ ಕೇಳಿ
ಹಂಗಾದರೂ ಸರಿಯೆ
ಹಿಂಗಾದರೂ ಸರಿಯೆ
ನಿಮಗೆ ನಿಮ್ಮ ಹುಡುಗಿ
ಸಿಕ್ಕಿದ್ದಾಯ್ತು ಗುರುಗಳೆ
ನಾನು ನಿಮಗೆ ಏನನ್ನೂ
ಕೊಟ್ಟಂಗೆ ಆಗಲಿಲ್ಲ
ನನ್ನ ದಾನದ ನೋಂಪಿಯು
ತೀರಿಲ್ಲ ಗುರುಗಳೆ
ನಿಮಗೇನು ಬೇಕೂಂತ
ಬೇಗುದಲ್ಲಿ ಹೇಳಿ ಸ್ವಾಮಿ" |

"ಅಯ್ಯ - ಬಲ್ಲಾಳರಾಯ
ನೀನು ಈಗ ಹೋಗೊ ಕಡೆಗೆ
ನನ್ನೂ ಕರುಕೊಂಡೋಗು
ಆದೇ ನೀನು ನನಗೆ
ಕೊಡುವ ನುಡಿದಾನ ಆಗಲಿ"
"ಸ್ವಾಮಿ ಈಗ ನಾನು
ಕೈಲಾಸ್ಕೆ ಹೋಗುತಿವಿನಿ
ನನ್ನ ಜೊತೆಗೆ ಸ್ವಾಮಿ
ನೀವೂ ಬನ್ನಿ ಸ್ವಾಮಿ"
ಬಲ್ಲಾಳರಾಯನ
ಮಾತುಗಳ ಕೇಳಿ ಗಣಗಳು
"ನೀನೊಬ್ಬ ನಿನ್ನ ಜೊತೆ
ನಿನ್ನ ಹೆಂಡ್ತಿ ಬರಬೋದು
ಬೇರೆ ಯಾರಿಗೂ
ಬರಲು ಸಾಧ್ಯವೆ ಇಲ್ಲ"
ಎಂದಾಗ ಗಣಗಳ
ಮಾತನು ಕೇಳಿದ
ಬಲ್ಲಾಳರಾಯನು
"ನನ್ನ ಮಾತಿನಂತೆ
ನನ್ನ ರೊತದ ರೀತೀಗೆ
ನನ್ನ ಜೊತೆಗೆ ಗುರುಗಳು
ಬಂದೇ ಬರಬೇಕು
ಇದಕೆ ನಿಮ್ಮಗಳು
ಅಪ್ಪಣೆ ಕೊಡಬೇಕು"
"ಸಾಧ್ಯುವಿಲ್ಲ ಸಾಧ್ಯುವಿಲ್ಲ"
"ಹಂಗಾದ ಮ್ಯಾಕೆ ಸ್ವಾಮಿ
ನಿಮ್ಮ ಕೈಲಾಸವಾದರೆ
ನಿಮಗೆ ಇದ್ದುಕೊಳಲಿ
ನನಗೆ ನನ್ನ ರೊತವೆ
ಮೇಲಾಗಿ ಉಳಿಯಲಿ" |

ಬಲ್ಲಾಳರಾಯನ
ಮಾತಿಗೆ ಶಿವನು
ನಗುನಗುತ ಹೇಳಿದನು
"ನಿನ್ನ ಗುರುಗಳು ಬರಲಿ
ಕರುಕೊಂಡು ಬಾರಪ್ಪ"
ಆಗ - ಬಲ್ಲಾಳರಾಯ
ಗುರುಗಳ ಕರೆಯಲು

ಆ ಸ್ವಾಮಿಗಳು ನಗುತ
"ನಾನೊಬ್ಬ ಬಂದರಾಯ್ತ?
ನನ್ನ - ನಂಬಿ ಬಂದಿರುವಂತ
ನನ್ನ - ದೊಂಬ್ರೀಯು ನಂಗೆ ಬೇಕು
ಅವಳ ಕರುಕೊಂಡರೆ ಮಾತ್ರ
ನಿನ್ನ ಜೊತೆಗೆ ಬರುತೀನಿ" |

ಗುರುಗಳ ಮಾತೀಗೆ
ಗಣಗಳ ಒಪ್ಪನಿಲ್ಲ ೫೪೦
ಆಗ - ಬಲ್ಲಾಳರಾಯ
"ಅಯ್ಯೋ ಪರಮಾತ್ಮನೆ
ನಿನ್ನ ಬಾಟರ ಕರುಕೊಯ್ಯ
ನಿನ್ನ ಕೈಲಾಸ ಪರ್ವತಕೆ
ನೀನು ದಯಮಾಡಯ್ಯ
ನನ್ನ ಗುರುಗಳ ಬಿಡಲಾರೆ
ಅವ್ರ - ಮಡದೀಯು ಬರಬೇಕು
ನನ್ನ - ನಂಬಿದೋರು ಬರದಿದ್ರೆ
ನಿನ್ನ ಕೈಲಾಸ ಯಾರಿಗೆ ಬೇಕು?"

ಹಾಗಂತ ಬಲ್ಲಾಳರಾಯ ೫೯೦
ಹೇಳಿದ ಮಾತಿಗೆ
ಮೆಚ್ಚಿದ ಪರಮಾತ್ಮ
ಗುರುಸ್ವಾಮಿಗಳು ಆಗ
ಶಿವರಾಯ ಆದರು
ದೊಂಬರ ಸೂಳೆ ಆಗ
ಪಾರ್ವತಿ ಆದಳು
ಬಲ್ಲಾಳರಾಯನ
ಭಕ್ತಿಗೆ ಮೆಚ್ಚಿದಂತ
ಶಿವನ ಗಿರಿಜಮ್ಮನು
ಅವನ ತಮ್ಮ ಕೈಲಾಸಕೆ ೬೦೦
ಅವನ ಹೆಂಡತಿ ಸೈತುವಾಗಿ
ಹೂವುನ ತೇರಲ್ಲಿ
ಕರುಕೊಂಡು ಹೋದರು
ಭಕ್ತ ಬಲ್ಲಾಳರಾಯನ
ಕಥೆಯ ಕೊಂಡಾಟದ
ಇಲ್ಲಿಗೆ ಶಿವಮುದ್ರೆ ೬೦೬

ಸಿಂಗಾನಲ್ಲೂರು ಬಸವ

ಕಟ್ಟೆ ಬಸಪ್ಪ ನೀ ದಿಟ್ಟೀಸಿ ನೋಡಪ್ಪ
ಕಟ್ಟಳ್ಳದಲ್ಲಿ ಮಿಂದಾರು - ಮಾದಪ್ಪ
ದ್ರಿಷ್ಟಳ್ಳ ಸ್ವಾಮಿ ಬರುತಾರೊ |

ಅಲಂಬಾಡಿ ಬಸ್ಯ ಹಾಲಳ್ಳದಗಾಣೆ
ಅಲುತ ಬರುವ ಪರುಸೇಯ - ಕೈ ಹಿಡ್ದು
ವಿಳುಮಲೆ ಕೈಲಾಸ್ಕೆ ಕರುಕೊಯ್ಯ |

ಕಾರಯ್ಯ ಬಿಲ್ಲಯ್ಯ ಕಂಬಾದ ಬೋಳಯ್ಯ
ಸಿಂಗಾನಲ್ಲೂರ ಬಸವಯ್ಯ - ಏನಂದ
ಮುಂದಾಲ ಸ್ವಾಮಿ ನನಗೆಂದ |

ಜಗಜ್ಜ್ಯೋತಿ ಬಸವೇಶ್ವರ ಲಾವಣಿ

ಕನ್ನಡ ನಾಡಿನ ಕುಲಸಂಪನ್ನರೇ
ಕೇಳಿರಿ ಬಸವನ ಚರಿತೆಯನು
ಕನ್ನಡ ನಾಡಿನ ಕಣ್ಮಣಿ ಎನಿಸಿದ
ಬಸವೇಶ್ವರನ ಮಹಿಮೆಯನು |

ಮನದಲಿ ಶಿವನನು ಸ್ಮರಿಸುತ ತಿಳಿಸುವೆ
ಬಸವನ ನಿಜಗುಣ ಧ್ಯೇಯವನು
ಗುರುದಯದಿಂದಲಿ ಬರೆದೆನು ಲಾವಣಿ
ಬಸವನ ಅಮರ ಗೀತೆಯನು |

ಕನ್ನಡ ನಾಡಿನ ಕೀರ್ತಿಗೆ ಧರಿಸಿದ
ಮಾದಲಾಂಬಿಕೆ ಗರ್ಭವನು
ಜನಿಸಿದನು ನರಜನ್ಮದಿ ಶರಣರ
ಹೃದಯದಿ ಬೆಳೆಸಲು ನೀತಿಯನು |

ಕನ್ನಡ ನಾಡಿನ ಪುಣ್ಯದ ಧರಣಿ
ಇಂಗಳಬಾಗೇವಾಡಿಯಲಿ
ಕನ್ನಡ ನಾಡಿನ ಕುಲವುದ್ಧರಿಸಲು
ಜನಿಸಿದನು ಶಿಶುರೂಪದಲಿ |

ನೆರೆಹೊರೆಯಿಂದಲಿ ಬಂದರು ಎಲ್ಲರು
ಶಿಶುವನು ನೋಡಲು ಶ್ರದ್ಧೆಯಲಿ
ಆಡುವ ಮಗುವನು ತೂಗುತಲೆಲ್ಲರು
ಜೋಗುಳ ಹಾಡುತ ರಾಗದಲಿ |

ಶಂಭೋಶಂಕರ ಸಾಂಬ ಸದಾಶಿವ
ಹರಹರ ಮಹದೇವನೆನ್ನುತಲಿ
ವಸುಧೆಯ ಭಾರವನಿಳುಹಲು ಜನಿಸಿದ
ಶಿಶುವಿಗೆ ಶ್ರೇಯಸ್ಸು ಕೋರುತಲಿ |

ಮಾದರಸನ ಮನ ತೆರೆಯಿತು ಮಮತೆಯ
ಪುತ್ರನ ಲೀಲೆಯ ನೋಡುತಲಿ
ನವಸಂತೋಷವ ತಾಳುತ ಕಳೆದನು
ಇಷ್ಟಬಾಂಧವ ಮಿತ್ರರಲಿ |

ಪೂರ್ವಜನ್ಮದ ಪುಣ್ಯವಿಶೇಷದಿ
ಲಭಿಸಿತು ಎನ್ನಯ ವಂಶದಲಿ

ಎನ್ನುತ ಕಳೆದನು ಅನುದಿನ ಶಿವನ
ಧ್ಯಾನವ ಮಾಡುತ ಮನಸಿನಲಿ |

ಅಳದೆ ಇರುತಿಹ ಮಗುವನು ನಗಿಸಲು
ದಂಪತಿಗಳು ಪೇಚಾಡಿದರು
ದಂಪತಿಗಳು ಬಲುಚಿಂತೆಯಿಂದಲ್ಲಿ
ಕಂಡರು ಮುನಿಜಾತವೇದರನು |

ಅಳುವನು ನಗುವನು ಕಾಣದ ಮಗುವಿನ
ಚರಿತೆಯ ಗುರುಗಳಿಗರುಹಿದರು
ಚಲಿಸದ ಮಗುವಿನ ಗುಣವನು ತಿಳಿಯಲು
ಪಿಡಿದರು ಗುರುವಿನ ಚರಣವನು |

ಮಗುವಿನ ಚರ್ಯೆಯ ನೋಡಿದರು
ಹೃದಯದಾ ದಿವ್ಯದೃಷ್ಟಿಯಲಿ
ತಿಳಿಯಿರಿ ಜ್ಞಾನದ ಮಾರ್ಗದ ಕಂದನು
ಬಂದನು ನಿಮ್ಮಯ ಗರ್ಭದಲಿ |

ಜಗದ ಕಲ್ಯಾಣವ ತೂಗಲು ಬಂದನು
ನಿಮ್ಮಯ ಪೂಜೆಯ ಫಲದಿಂದ
ಕಲಿಯುಗದೊಳು ಕುಲ ಕಲ್ಮಷ ತೊಳೆಯಲು
ಜನಿಸಿರುವನು ಶಿವಕೃಪೆಯಿಂದ |

ಆಡುವ ನೆಪದಲಿ ಬೀದಿಗೆ ಬಂದನು
ಬಸವನು ಗೆಳೆಯರ ಗುಂಪಿನಲಿ
ಗೆಳೆಯರಿಗೆಲ್ಲಾ ತಿಳಿಸಿದನು ಶಿವ
ಪೂಜಾಮಹಿಮೆಯ ವಿನಯದಲಿ |

ಗೆಳೆಯರ ಬಾಯಿಂದ ನುಡಿಸಿದನು ಶಿವ
ಸಾಂಬ ಸದಾಶಿವನೆನ್ನುತಲಿ
ಅನುದಿನ ಬಸವನು ಆಡುವ ಆಟವು
ಶಿವನಿಗೆ ಪ್ರೀತಿಯಾಗುತಲಿ |

ನದಿಯಲಿ ಮುಳುಗಲು ತೆರಳಿದರೆಲ್ಲಾ
ಬಸವನ ಸಹಕಾರ ಕೋರುತಲಿ
ಬಸವನ ಮನಸಿಗೆ ಬೇಸರವಾಯಿತು
ಗೆಳೆಯರ ಸಂತೆಯ ನಿಲಯದಲಿ |

ಗೆಳೆಯರಿಗೆಲ್ಲಾ ಕೈಮುಗಿದಂದನು
ಮುಳುಗಲು ಬೇಡಿರಿ ನೀರಿನಲಿ
ಎನ್ನಯ ಮಾತನು ಲಾಲಿಸಿ ನೀವುಗಳು
ಬೇಡುವೆನು ನಾ ಪ್ರೇಮದಲಿ |

ಬಸವನ ಮಾತಿಗೆ ಗಮನವ ಕೊಡದೆ
ಮುಳುಗಿದರೆಲ್ಲರು ನೀರಿನಲಿ
ಮುಳುಗಿದ ಗೆಳೆಯರೊಳೊಬ್ಬನು ಸಿಕ್ಕಿದ
ನೀರಿನ ಮಧ್ಯದ ಸುಳಿಯಲ್ಲಿ |

ಮುಳುಗಿದ ಬಾಲನ ವಿಷಯವ ತಿಳಿಸಲು
ಓಡಿದರೆಲ್ಲರು ವೇಗದಲಿ
ಬಾಲನ ತಂದೆಗೆ ದೂರಿದರೆಲ್ಲರು
ಬಸವನ ಮೇಲೆ ಅಪವಾದದಲಿ |

ನಿಂದನೆ ಬರಲು ಕೂಡಲೆ ಬಸವನು
ಇಳಿದನು ನೀರಿನ ಮಧ್ಯದಲಿ
ಬಾಲನ ಜೊತೆಯಲಿ ಮೇಲಕೆ ಬಂದನು
ನಗುತ್ತ ಎಲ್ಲರ ಎದುರಿನಲಿ |

ಬಸವನ ಗುಣವನು ತಿಳಿಯದ ಜನರೆಲ್ಲ
ನಾಚಿಕೆಯಿಂದ ತಲೆಬಾಗಿದರು
ನಡೆದರು ಎಲ್ಲರು ಅವಮಾನದಿಂದಲಿ
ಅವರವರ ಮನೆ ದಾರಿಯಲಿ |

ಬಸವನ ಮಹಿಮೆಯು ಪ್ರಜ್ವಲಿಸಿತು
ನಮ್ಮ ಇಂಗಳ್ ಬಾಗೆವಾಡಿಯಲಿ
ಊರಿನ ಘನತೆಯು ಉಳಿಯಿತು ನಮ್ಮ
ಬಸವನು ಜನಿಸಿದ ವೇಳೆಯಲಿ |

ಬಸವನ ಮಹಿಮೆಯು ಅಸದಳವಾಯಿತು
ಎಮ್ಮೆಯ ಕರ್ಮಭೂಮಿಯಲಿ
ಧರ್ಮದ ಹಾದಿಯ ತೋರಲು ಜನಿಸಿದ
ಇಂಗಳ ಬಾಗೇವಾಡಿಯಲಿ |

ಬಸವನ ಭಕ್ತಿಗೆ ಮೆಚ್ಚಿದ ಪರಶಿವ
ಕೊಟ್ಟನು ದರುಶನ ಕನಸಿನಲಿ
ತಿಳಿಸಿದ ಬಸವಗೆ ಬಿಜ್ಜಳ ರಾಜ್ಯದಿ
ಕಾರ್ಯನಿರ್ವಹಿಸು ಸದ್ಯದಲಿ |

ನುಡಿದನು ಬಸವನು ಶಿವನಲ್ಲಿ ಮೊರೆಯಿಟ್ಟು
ಬಿಡಲೊಲ್ಲೆನು ನಿನ್ನ ಚರಣವನು
ಅನುದಿನ ನಿನ್ನಯ ಸೇವೆಯ ಮಾಡುತ
ಸವೆಯುವೆ ಈ ನರಜನ್ಮವನು |

ಬಸವನ ನುಡಿಯನು ಲಾಲಿಸಿದ ಶಿವ
ಮಮತೆಯ ತೋರಿದ ವಾಕ್ಯದಲಿ
ನೀ ಕರೆದಾಕ್ಷಣ ಇರುವೆನು ತಿಳಿದಿರು
ನಿನ್ನಯ ಶರಣರ ಹೃದಯದಲಿ | ೧೦೦

ಸಜ್ಜನರಿಲ್ಲದೆ ಪರಿತಪಿಸುತ್ತಿದೆ
ಬಿಜ್ಜಳ ರಾಜಾಸ್ಥಾನದಲಿ
ನಿನ್ನಯ ಕಾರ್ಯವು ತುಂಬುವುದಲ್ಲಿ
ನೆಲಸಲು ಪೋಗು ನೀ ಕಲ್ಯಾಣದಲಿ |

ಮಲಗಿದ ಸ್ಥಳವನು ಬಿಟ್ಟನು ಕ್ಷಣದಲಿ
ಕನಸಿನ ನೆನಪುಗಳ್ ಸವಿಯುತಲಿ
ತಿಳಿಸಿದ ಮಾತಾಪಿತೃಗಳಿಗೆಲ್ಲಾ
ರಾತ್ರಿಯ ಕನಸನು ವಿವರದಲಿ |

ಜನಿಸಿದ ಜನ್ಮ ಸ್ಥಳವನು ಬಿಡುವೆನು
ಕಳಿಸಿರಿ ಎನ್ನನು ಪ್ರೇಮದಲಿ ೧೧೦
ನೆಲೆಸುವೆ ಶಿವನ ಅಭಯವ ಪಾಲಿಸಿ
ಇರುವೆನು ಮುಂದೆ ಕಲ್ಯಾಣದಲಿ |

ಬಸವನ ನುಡಿಯನು ಕೇಳಿದ ಶರಣರು
ಮುಳುಗಿದರು ಮಹಾಚಿಂತೆಯಲಿ
ಬಸವನ ತೊರೆದು ಜೀವಿಸಲಾರೆವು
ಇಂಗಳ್ ಬಾಗೇವಾಡಿಯಲಿ |

ನಮ್ಮಯ ಊರಿನ ಜ್ಞಾನದ ಸಿರಿಯು
ಸೇರಿತು ನವಕಲ್ಯಾಣದಲಿ
ನಮ್ಮಯ ಋಣವು ತೀರಿತು ಇಂದಿಗೆ
ಬಸವನ ನೋಡುವ ನಯನದಲಿ | ೧೨೦

ತುಂಬಿದ ನೆರೆಜನರೆಲ್ಲರಿಗೊಂದಿಸಿ
ತಿಳಿಸಿದ ಬಸವನು ವಿನಯದಲಿ
ನಿಮ್ಮಯ ಪ್ರೇಮವು ಉಳಿದಿದೆ ಅನುದಿನ
ಎನ್ನಯ ಶಿವನಿರುವಾತ್ಮದಲಿ |

ನಿಮ್ಮಯ ಕಂದನಲೊಬ್ಬನು ಇವನೆಂದು
ಕಳಿಸಿರೆಲ್ಲಾ ಸಂತೋಷದಲಿ
ನಿಮ್ಮಯ ಆಶೀರ್ವಾದದ ಬಲದಿಂದ
ಇರುವೆನು ನವಕಲ್ಯಾಣದಲಿ |

ಬಸವನ ಬರುವಿಕೆಯಿಂದಲಿ ನಲಿದರು
ನವಕಲ್ಯಾಣದ ಜನರೆಲ್ಲ
ಸ್ವಾಗತ ಬಯಸುತ ಹಾರೈಸಿದರು
ಕಲ್ಯಾಣದ ಶಿವಶರಣರು ಎಲ್ಲ |

ಬಡವರು ಬಲ್ಲಿದರೆಲ್ಲರು ಬಂದರು
ಬಸವನ ನೋಡಲು ಭಕ್ತಿಯಲಿ
ಬಸವನಿಗಾರತಿ ಎತ್ತಿದರು ಮಹಾ-
ಪತಿವ್ರತೆಯರು ದೃಢಭಕ್ತಿಯಲಿ |

ಅನುದಿನ ದೀನರ ಸೇವೆಯ ಮಾಡುವ
ಪುಣ್ಯವ ಪಡೆದೆ ಈ ಜನ್ಮದಲಿ
ದೀನರ ಮನವನು ಬೆಳೆಸುವೆ ಧರ್ಮದಿ
ನಾನಿರುವ ನಿಮ್ಮ ಕ್ಷೇತ್ರದಲಿ |

ಧರ್ಮದ ಹಿನ್ನೆಲೆಯರಿಯದ ಅಧಮರು
ತುಂಬಿರುವರು ಕಲ್ಯಾಣದಲಿ
ಧರ್ಮದ ಧ್ವಜವನು ಪಿಡಿಯುತ ಬಂದಿಹೆ
ಕರ್ಮವ ತುಳಿಯಲು ನಾನಿಲ್ಲಿ |

ಬಸವನ ನುಡಿಯನು ಲಾಲಿಸಿದ ಶಿವ -
ಶರಣರು ಕಂಬಿನಿ ಸುರಿಸುತಲಿ
ಪಾವನವಾಯಿತು ಎಮ್ಮೆಯ ಜನ್ಮವು
ಬಸವನ ಅಮರ ವಾಕ್ಯದಲಿ |

ಹಿಂದುಳಿದ ಜನರೆಲ್ಲರು ಬಂದರು
ಬಸವನ ಚರಣವ ಪಿಡಿಯುತಲಿ
ಕಲಿಯುಗದೊಳು ನಮಗೊಲಿದು ಬಂದಿರುವ
ದೇವನೆ ನೀನೆಂದು ನಮಿಸುತಲಿ |

* * *

ಶರಣರ ಗುರುವೆ ಬಸವಣ್ಣ
ವರಕವಿಗಳಿಗೆಲ್ಲಾ ಹಿರಿಯಣ್ಣ
ನಿರುತವು ಸ್ಮರಿಸುವೋ ನಾವಣ್ಣ
ಕರುಣದಿ ಕಾಯಬೇಕಣ್ಣ |

ಪ್ರೇಮದ ಭಕುತಿಯ ಬಸವಣ್ಣ -
ಪಾಮರರುದ್ಧರಿಸಿದೆಯಣ್ಣ
ಪಾಮರರಿಗೆಲ್ಲ ಬಸವಣ್ಣಾ - ನಿನ್ನ
ನಾಮವೊಂದೇ ಸಾಕಣ್ಣ | ೧೬೦

ಮನವಿರಿಸಲು ಮಹದೇವನಲಿ
ಅನುಗ್ರಹಿಸೆನ್ನ ಸನ್ಮಾರ್ಗದಲಿ
ಅನುದಿನ ನಿನ್ನಯ ಧ್ಯಾನದಲಿ
ತನುವಿರಿಸಿರುವೆ ಸಂತೋಷದಲಿ |

ಜಂಗಮರೆಲ್ಲರ ತವರೂರು - ನಿನ್ನ
ಅಂಗದಲ್ಲಡಗಿದೆ ಆ ಊರು
ಸಂಗಯ್ಯ ನೆಲಸಿದ ಶಿವನೂರು - ಶಿವ
ಲಿಂಗವು ಇರುವುದೇ ನಮ್ಮೂರು |

ಸತ್ಯವ ನುಡಿಯಲು ಬಸವಣ್ಣ - ಪ್ರತಿ
ನಿತ್ಯವು ನಡೆಯುವೆ ಬಸವಣ್ಣ ೧೬೦
ಉತ್ತಮ ಮಾರ್ಗವ ನೀಡಣ್ಣ - ಎನ್ನ
ಚಿತ್ತದಲಡಗಿರಬೇಕಣ್ಣ |

ಸರ್ವರ ಹಿತ ಬಯಸಿದೆಯಣ್ಣ
ಸರ್ವರ ಏಳ್ಗೆಗೆ ಶ್ರಮಿಸಿದೆಯಣ್ಣ
ನಿನ್ನಾ ಸರ್ವರು ಪೂಜಿಸುವರಣ್ಣ
ಸರ್ವರ ಹೃದಯದಿ ನೆಲಸಣ್ಣ |

ಪರಮೇಶನ ಪ್ರಿಯ ಬಸವಣ್ಣ - ನಿನ್ನ
ಸ್ಥಿರಮನ ಪೂಜೆಯ ಬಸವಣ್ಣ
ಅರಿವಿನ ಸಿರಿಯೂ ಬಸವಣ್ಣ
ಅರಿತವರಲಿ ದಯವಿರಲಣ್ಣ | ೧೭೦

ಮಾದರಸರ ಪುಣ್ಯವಂಶದಲಿ
ಮಾದಲಾಂಬಿಕೆಯ ಗರ್ಭದಲಿ
ಉದಯಿಸಿದ ಮಹಾಲಗ್ನದಲಿ
ಮೇದಿನಿಯೊಳು ಶಿಶು ರೂಪದಲಿ |

ದೃಢ ಭಕ್ತಿಯಲಿ ಬಸವಣ್ಣ
ಬಿಡದೆ ನಂಬಿರುವೆನು ಬಸವಣ್ಣ
ಕಡುಕೃಪೆಯಿಂದಲಿ ಬಸವಣ್ಣ
ಬಡವರುದ್ಧರಿಸಲು ಬಂದ್ಯಣ್ಣ |

ಜಂಗಮರಿಗೆಲ್ಲ ಬಸವಣ್ಣ
ಲಿಂಗದೀಕ್ಷೆಯ ನೀಡಿದೆ ಬಸವಣ್ಣ - ಸತ್
ಸಂಗದಿ ಸುಖಿಸಲು ಬಸವಣ್ಣ - ಅಂತ
ರಂಗದಿ ನೆಲಸಲು ಬಾರಣ್ಣ |

ಅನುಭವ ಮಂಟಪ ಕಟ್ಟಿರುವೆ
ಅನುಭವದಡಿಗೆ ಮಾಡಿರುವೆ
ಅನುಭಾವದ ಸವಿ ಹಂಚಿರುವೆ
ಅನುಭಾವದ ಶಿವನಾಗಿರುವೆ |

ಸರ್ವಶಾಸ್ತ್ರಗಳ ತಿಳಿದಿರುವೆ
ಸರ್ವರಿಗೂ ಧರ್ಮ ಬೋಧಿಸಿದೆ
ಸರ್ವಧರ್ಮ ಪ್ರತಿಪಾದಿಸಿದೆ
ಸರ್ವರ ಮನ ನೀ ಸೆಳೆದಿರುವೆ |

ಸುಜನನು ಭಕ್ತಿ ಸೂತ್ರದಲಿ
ನಿಜಗುಣನೂ ನಿತ್ಯಾನಂದದಲಿ
ತ್ರಿಜಗ ಪೂಜ್ಯ ನೀ ಭಕ್ತಿಯಲಿ
ಅಜರಾಮರ ಶಿವಜ್ಞಾನದಲಿ |

ಕಾಯಕವೇ ಕೈಲಾಸವೆಂದು
ತೋರಲು ಕಲಿಯುಗದೊಳು ಬಂದು
ಸಾರಿದೆ ಇದು ನಿಜ ಮಾರ್ಗವೆಂದು
ಶಿವಶರಣರು ಕ್ಷೇಮದಿ ಇರಲೆಂದು |

ದಾನ ಪ್ರಧಾನವೆ ಬಸವಣ್ಣ
ಜ್ಞಾನ ಸಮುದ್ರನೆ ಬಸವಣ್ಣ
ಮೌನಗಂಭೀರನೆ ಬಸವಣ್ಣ
ದೀನ ದಯಾಪರ ಬಸವಣ್ಣ |

ನಿತ್ಯ ತೃಪ್ತನೂ ನೀ ಬಸವಣ್ಣ
ಮಿಥ್ಯಾ ಜಗದೊಳು ಬಸವಣ್ಣ
ಸತ್ಯವಂತರಿಗೆಲ್ಲ ಬಸವಣ್ಣ
ಸತ್ಯಾರ್ಥವ ಸಾರಿದೆ ಬಸವಣ್ಣ |

ಅರಿಷಡ್ವರ್ಗವ ಅಳಿಸಿರುವೆ
ಗುರಿ ಪರಮೇಶನಲಿಟ್ಟಿರುವೆ
ಸಿರಿಸಂಪದಗಳ ತೊರೆದಿರುವೆ
ಧರ್ಮೆಯೊಳು ಕೀರ್ತಿಯ ಪಡೆದಿರುವೆ |

ಬಿಜ್ಜಳ ರಾಜ್ಯದಿ ಬಸವಣ್ಣ ಧರ್ಮ
ಹೆಜ್ಜೆಯಿಂದನುಸರಿಸಿದೆಯಣ್ಣ
ಉಜ್ವಲ ಭವಿಷ್ಯದಿ ನೀಯಣ್ಣ - ನೀನು
ಸಜ್ಜನರುದ್ಧರಿಸಿದೆಯಣ್ಣ |

ಸತ್ಯದ ಜಲಧೀ ಬಸವಣ್ಯ
ನಿತ್ಯ ನೀ ಮನ ತೊಳೆಯುವೆಯಣ್ಣ
ಚಿತ್ತದಿ ಸ್ಮರಿಸುವೆ ನೀನಣ್ಣ
ಬೆತ್ತಲೆ ತಿರುಗುವ ಶಿವನನ್ನ |

ಇಂದಿನ ಕರ್ಮವ ಅಳಿಸಣ್ಣ
ಮುಂದಿನ ಮಾರ್ಗವ ತೋರಣ್ಣ
ನಿಂದನೆಗಳ ತೊರೆಸುವೆಯಣ್ಣ - ಭವ
ಬಂಧನಗಳ ಬಿಡಿಸುವೆಯಣ್ಣ |

ನಿನ್ನಯ ಕರುಣದಿ ನಾನಿರುವೆ
ನಿನ್ನ ಶರಣ ನಾನಾಗಿರುವೆ
ನಿನ್ನಯ ಚರಣವ ನಂಬಿರುವೆ
ನಿನ್ನಯ ಗುಣ ಪ್ರತಿಪಾದಿಸುವೆ |

ಜಗದನುಭವ ಸಂಸಾರದಲಿ
ಹಗಲಿರುಳು ಅನುಭವಿಸುತಲಿ
ಬಗೆಬಗೆ ರೂಪದಿ ಶ್ರಮಿಸುತಲಿ
ಸುಗಮವಾಯಿತು ನಿನ್ನ ಕಾಲದಲಿ |

ಅಂದದ ನಿನ್ನ ಈ ಕೃತಿಯನ್ನ - ಈ
ಕಂದನು ರಚಿಸಿದ ಕೇಳಣ್ಣ
ವಂದಿಸಿ ಪಾಡಿದ ಕೋದಂಡರಾಮನ
ಚಂದದಲಿ ಹರಸು ಬಸವಣ್ಣ |

ಮಂಗಳವು ಮಾದಲಾಂಬಿಕೆಗೆ
ಮಂಗಳವು ಮಾದರಸರಿಗೆ
ಮಂಗಳವು ನೀಲಾಂಬಿಕೆಗೆ
ಮಂಗಳವು ಬಸವಣ್ಣನಿಗೆ |

ಅರ್ಥಕೋಶ

ಅ

ಅಕ್ಕರಿ - ಪ್ರೀತಿ
ಅಕ್ಕರಿಸು, ಅಕ್ಕುರಿಸಿ - ಅಕ್ಕರೆಪಡು, ಪ್ರೀತಿಸು
ಅಕ್ಕಸಪಾತ್ರೆ - ಅಕ್ಷಯಪಾತ್ರೆ
ಅಕ್ಕಸ್ತಿ - ಅಕ್ಷತೆ
ಅಕ್ರಿ - ಪ್ರೀತಿ
ಅಕ್ಷೀಪಾತ್ರೆ - ಅಕ್ಷಯಪಾತ್ರೆ
ಅಗ್ಗಣಿ - ಅಘ್ಘವಣಿ, ನೀರು
ಅಗ್ಗುನಿ - ಅಗ್ನಿ, ಬೆಂಕಿ
ಅಗುರ್ ಬಾಂಡವಾಳ - ದೊಡ್ಡ ಬಾಯುಳ್ಳ ತಾಂಬಾಳ
ಅಗುವಸ್ರು - ಹಗೆಯವರು, ಶತ್ರುಗಳು
ಅಗುಳೇರಿ - ಕೋಟೆ ಸುತ್ತಲಿನ ಕಂದಕದ ದಡ
ಅಂಗಜಾರಿ - ಮನ್ಮಥನ ಶತ್ರು ಈಶ್ವರ
ಅಂಗಮಾ - ಪೂಜೆಗೆ ಬಳಸುವ ಒಂದು ಪತ್ರೆ
ಅಘ - ಪಾಪಕರ್ಮ
ಅಘಹರ - ಪಾಪನಿವಾರಕ
ಅಜ್ಜಜ್ಜುಗುಂಟ - ಹೆಜ್ಜೆಹೆಜ್ಜೆಗೂ
ಅಟ್ಟಲಕ್ಷ್ಮಯರು - ಅಷ್ಟಲಕ್ಷ್ಮಯರು
ಅಟ್ಟವರೆ - ಅಡಿಗೆ ಮಾಡಿದ್ದಾರೆ
ಅಟ್ಟಸ್ತಳ - ಅಷ್ಟಸ್ಥಲ(?) ಎಂಟು ದಿಕ್ಕುಗಳಿಗೂ ಮಂತ್ರಿಸಿ ಮಾಡಿರುವ ದಿಗ್ಬಂಧನದ ಬೀಗ
ಅಟ್ಟು - ಅಟ್ಟ
ಅಟ್ಟೂರ - ಅಷ್ಟದೂರ
ಅಟ್ಟೆಣ್ಣೆ - ಅಡಿಗೆ ಎಣ್ಣೆ, ಕೈಯಾರೆ ತಾವೇ ಎಣ್ಣೆಕಾಳುಗಳಿಂದ ತೆಗೆದ ಎಣ್ಣೆ.
ಅಡಪ - ಹಡಪ, ಕ್ಷೌರಿಕನ ಪೆಟ್ಟಿಗೆ
ಅಡುದೊಡ್ಡೋರು - ಪ್ರಾಯಕ್ಕೆ ಬಂದವರು (?)
ಅಡಕದಟ್ಟೆ, ಅಡುಕ್ಕಟ್ಟೆ - ಹುಲ್ಲುಮೆದೆ ಹಾಕಲು ಮಾಡುವ ಸೈಜುಗಲ್ಲು ಮತ್ತು ಮರದ ಬಡಿಗೆಗಳ ತಳಪಾಯ
ಅಡಗಲ್ಲು - ಅಡಿಗಲ್ಲು
ಅಡುಗುಲಿ - ಕೊಡುಗೆ, ಅಡುಗೆ ಮಾಡಲು ಬೇಕಾದ ಅಳು
ಅಡುಗುಳಿ - ಮಗಳಿಗೆ ತಂದೆ ಮನೆಯಿಂದ ಕೊಡುವ ಹಸುಕರು, ಅಡಿಗೆಗೆ ಬೇಕಾದ ವಸ್ತುಗಳು ಇತ್ಯಾದಿ ಕೊಡುಗೆಗಳು
ಅಡ್ತಾನ - ದೊಡ್ಡತನ
ಅಡಿಸೇರು - ಅರ್ಧಸೇರು
ಅಣಸು, ಅಣ್ಸು - ಹಣಸು, ದನಗಳ ಕೊಂಬಿಗೆ ಅಲಂಕಾರಕ್ಕಾಗಿ ಹಾಕುವ ಲೋಹದ ಆಭರಣ
ಅಣ್ಮುರಿದು - ಹಣ್ಣಿನ ತೊಟ್ಟನ್ನು ಮುರಿದು
ಅಣ್ಣೆವಾಲು - ಶುದ್ಧನಾದ ಹಾಲು
ಅಜ - ಬ್ರಹ್ಮ
ಅತ್ತ - ಅತ್ತೆ
ಅತ್ಯಾ - ಅಥವಾ
ಅತಿರಸ - ಅಕ್ಕಿ, ತೆಂಗಿನಕಾಯಿ ಮತ್ತು ಬೆಲ್ಲಗಳನ್ನು ಅರೆದು ತುಪ್ಪದಲ್ಲಿ ಬೇಯಿಸಿದ ಒಂದು ಸಿಹಿತಿಂಡಿ
ಅಂತ್ಗಂಡು - ಆಕಾಶದ ಕಡೆಗೆ ಮುಖಮಾಡಿ
ಅಂತರಕ್ಷಿ - ಅಂತರಿಕ್ಷ, ಆಕಾಶ
ಅಂತುರಿಸಿ - ಕೊರಳೆತ್ತಿ
ಅಂತೆ - ಹಾಗೆಯೇ ಕತ್ತೆತ್ತಿ
ಅಂದೆನೆ - ಅನ್ನದೆಯೆ
ಅಂದಲ - ಪಲ್ಲಕ್ಕಿ
ಅನ್ನಪಡಿ - ಅವರವರಿಗೆ ಸಲ್ಲಬೇಕಾದ ಅನ್ನದ ಪಾಲು
ಅನ್ನಾ - ಅನ್ನುವ
ಅನ್ನಾರ - ಅನ್ನ + ಆಹಾರ
ಅನ್ನಿಂದ್ಲು, ಅನ್ನಿಂದಲು - ಅಂದಿನಿಂದಲೂ
ಅನುಮನ್ಸು - ಅಳುಕು ಮನಸ್ಸು
ಅನ್ನುಸೋದ - ಅನ್ನಿಸುವುದನ್ನು
ಅನ್ನೇದು - ಅನ್ನುವುದು, ಅನ್ಯಾಯದ್ದು
ಅಪೂಪ್ರಕೆ - ಅಪರೂಪಕೆ
ಅಬ್ಬ - ಹಬ್ಬ
ಅಂಬರ - ಆಕಾಶ
ಅಂಬು - ಹಂಬು, ಬಳ್ಳಿ
ಅಂಬುರ್ಸು - ಹೊಂದಿಸಿ
ಅಮಾಸೆ - ಅಮವಾಸ್ಯೆ
ಅಮುರಿ - ಗೋರಿ, ಬಾಚಿ, ಬಳಿದು
ಅಮುರು - ಅಪ್ಪು, ತಬ್ಬು
ಅಮೂರ್ತ - ಅಮೃತ
ಅಮ್ರುತ - ಅಮೃತ
ಅಮ್ರುಸು - ಹದಮಾಡು, ಸಿದ್ಧಪಡಿಸು
ಅರ - ಹರ
ಅರಗಿನ್ನು - ಅರ್ಘ್ಯವನ್ನು

ಅರದಿ - ಹರದಿ, ಗರತಿ, ಮುತ್ತೈದೆ
ಅರಿ - ಹರಿ
ಅರುಕುರು - ಅರುಹು - ಕುರುಹು
ಅರುಗು - ಅರುಹು, ಹೇಳು
ಅರುವಾಣ - ಹರಿವಾಣ, ತಟ್ಟೆ
ಅರುವಾಯ್ತು - ಅರಿವಾಯಿತು, ತಿಳಿಯಿತು
ಅರುಸವ್ರೆ - ಅರಸುತ್ತಿದ್ದಾರೆ, ಹುಡುಕಿದ್ದಾರೆ
ಅರುಸುಣ - ಅರಿಸಿನ
ಅರ್ತದಲ್ಲಿ - ಔಚಿತ್ಯಪೂರ್ಣವಾಗಿ
ಅರೆ - ಹರೆ, ತಮ್ಮಟೆ
ಅರೊಂಟ್ಗೆ - ಅರವಟ್ಟಿಗೆ ; ಪ್ರಯಾಣಿಕರಿಗಾಗಿ ದಾರಿ ಮಧ್ಯೆ ಇರುವ ವಿಶ್ರಾಂತಿಧಾಮ ; ಪಯಣಿಗರಿಗೆ ನೀರು, ಮಜ್ಜಿಗೆ, ಫಳಾರಗಳನ್ನು ಕೊಟ್ಟು ಪ್ರಯಾಣ ಮಾಡಲು ಸಹಕಾರಿಯಾಗುವ ತಾಣ
ಅಲ್ಲಾರೆ - ಅಲ್ಲಿಯಾದರೂ
ಅಲುಕುವರು - ಅದ್ದುವರು
ಅವ್ಯಾವ - ಅವನು ಯಾರು
ಅವರತ್ತೂಗೆ - ಅವರ ಅತ್ತಿಗೆ
ಅವಸ್ತಿ - ಅವಸ್ಥೆ
ಅವಿಮಾನ - ಅವಮಾನ
ಅವುಸ್ಯಾನ - ಅವಸಾನ, ಮರಣ
ಅಸಡ್ಡೆ - ಅವಜ್ಞೆ, ಅಶ್ರದ್ಧಾ (ಸಂ)
ಅಸ್ಮನ, ಅಸ್ಮಾನ - ಅಸಾಮಾನ್ಯ
ಅಸುದಳ - ಅಸದಳ, ಅಸಾಧ್ಯ
ಅಸೆ - ಹಸೆ
ಅಸುಮಾಯ - ಹುಡುಗಾಟಿಕೆಯಲ್ಲದ್ದು, ಹೊರೆಯಾದ ಹೊಣೆಗಾರಿಕೆ
ಅಷ್ಟಾಣ - ಅಷ್ಟು ಹಣ
ಅಹಸರ್ಯ - ಆಶ್ಚರ್ಯ
ಅಳ್ಳ - ಅರಳು, ದೊಡ್ಡದಾಗು

ಆ

ಆಕ್ಕಡೀಕೆ - ಅತ್ತ ಕಡೆಗೆ
ಆಕಿ - ಹಾಕಿ
ಆಗಣೆ - ಅಘ್ರ್ಯದಣೆ, ನೀರು
ಆಗಂತ - ಆಗುವಂತಹ, ಹಾಗಂತ
ಆಗಲು - ಹಾಗಲಕಾಯಿ
ಆಗಾರ - ಆಹಾರ
ಆಗಿನ - ಆಗನಿ, ಅಘ್ರ್ಯವಣೆ, ನೀರು
ಆಗ್ನಿ - ನೀರು, ಪಾದೋದಕ
ಆಗ್ನೇಯ - ಆಜ್ಞೆಯನ್ನು
ಆಗೋಸ್ರ್ರ - ಆಗುಮಸ್ರ್ರ, ಹಗೆಯವರು
ಆಚಮನ - ಶುದ್ಧೋದಕವನ್ನು ಊಟಕ್ಕೆ ಮುಂಚೆ ಅಂಗೈಗೆ ಸುರಿದುಕೊಂಡು ಮನಸ್ಸಿನಲ್ಲೆ ಮಂತ್ರ ಹೇಳಿಕೊಳ್ಳುತ್ತ ಕುಡಿಯುವುದು
ಆಚರಿಯ - ಆಶ್ಚರ್ಯ
ಆಚಾಚುರ್ಯ - ಅಚಾತುರ್ಯ
ಆಚೆವಾಡ್ಗೆ - ಆಚೆಕಡೆಗೆ
ಆಡರು - ಆರ್ಡರು, ಆಜ್ಞೆ
ಆಡ್ಡವರು - ನಿಂದಿಸಿದವರು, ಆಡಿಕೊಳ್ಳುವವರು
ಆತಿಸಂಕಯ್ಯ - ಆದಿಸಂಗಯ್ಯ, ಈಶ್ವರ
ಆತುಭೂತ - ಪೀಡಿ ಪಿಶಾಚಿ ಭೂತ ಪ್ರೇತಾದಿಗಳು
ಆತುಮ - ಆತ್ಮ
ಆ ತೊಟ್ಕಿಂದ - ಅಲ್ಲಿಂದ ಮೊದಲಾಗಿ, ಅಲ್ಲಿಂದ ಹಿಡಿದು
ಆದಕ್ಕೆ - ಆಯ್ದಕ್ಕಿ, ಆಧಿಕ್ಯಕ್ಕೆ, ಆದಾಯಕ್ಕೆ
ಆದರ - ಹಾದರ, ಸೂಳೆಗಾರಿಕೆ
ಆದರ - ಆಧಾರ
ಆದವರ - ಆದ್ಯರ, ಮೊದಲಿಗರ, ಮುಖ್ಯರ
ಆದಿತ್ಯೋರ - ಆದಿತ್ಯವಾರ, ಭಾನುವಾರ
ಆದೇಕ - ಲಾಭ
ಆನಂದ್ರತಿ - ಅರುಂಧತಿ
ಆಂಬಾವ - 'ಅಹಂ' ಎಂಬ ಭಾವ, ದುರಹಂಕಾರ
ಆಮುಗೆ - ಆವುಗೆ, ಮಡಕೆ ಸುಡುವ ಗೂಡು
ಆಮ್ಗೆ - ಆವಿಗೆ, ಆವಗೆ
ಆಯ್ದ - ಆಯುಧ
ಆಯ್ಸ - ಆಯಸ್ಸು
ಆಯತ್ವಾರ, ಆಯ್ತಾರ - ಆದಿತ್ಯವಾರ, ಭಾನುವಾರ
ಆಯ್ತಿನಿ - ಹಾಯುತ್ತೇನೆ, ನೀರಿನಲ್ಲಿ ಹಾದು ಹೋಗುತ್ತೇನೆ
ಆರ - ಹಾರ, ಆಹಾರ
ಆರವ - ಆಹಾರವನ್ನು
ಆರ್ಮಣಿ, ಆರ್ಮಣಿ - ಹಾರ್ಮೋನಿಯಂ, ಒಂದು ಗಾಳಿ ವಾದ್ಯ
ಆರುತಿ - ಆರತಿ
ಆರೂರ - ಹಾರುವರ, ಬ್ರಾಹ್ಮಣರ
ಆಲಾಗ್ರ - ಹಾಲೋಗರ, ಹಾಲನ್ನ
ಆವಾರ - ಆಹಾರ
ಆವ್ಯಾಸ - ಅವಕಾಶ

ಆಸ್ಯ - ಆಸೆಯನ್ನು
ಆಸಾಸ್ಗೆ - ಹಾಸಿಗೆ ಹಾಸಿಗೆ
ಆಸುರ್ವಾಣಿ - ಅಶರೀರವಾಣಿ
ಆಸುರ್ವಾದ, ಆಸುರ್ವೋದ - ಆಶೀರ್ವಾದ
ಆಸ್ಗೆ - ಹಾಸಿಗೆ
ಆಳ್ವೇರಿ - ಕೋಟೆಯ ಎತ್ತರವಾದ ಗೋಡೆ
ಆಹ್ನಿಕ - ದಿನದಿನವೂ

ಇ

ಇಕ್ಕಲ - ಇಕ್ಕೆಲ, ಎರಡು ಕಡೆ
ಇಕ್ಕುಲ್ಕ - ಇಕ್ಕಿಕೊಳ್ಳಲೆ?
ಇಂಕ್ರ - ಸ್ವಲ್ಪ
ಇಂಗಿತ - ಮನಸ್ಸಿನಲ್ಲಿರುವ ವಿಚಾರ
ಇಗುತ್ವಂತ - ಯುಕ್ತವಂತ
ಇಗ್ಗುನೇಸ - ವಿಘ್ನೇಶ
ಇಗ್ಗುಲಿಸಿ - ಹಿಗ್ಗಲಿಸಿ, ಅಗಲಮಾಡಿ
ಇಗ್ನೇಸ - ವಿಘ್ನೇಶ, ಗಣಪತಿ
ಇಚಾರ - ವಿಚಾರ
ಇಚಾರ್ಣೆ - ವಿಚಾರಣೆ
ಇಚ್ಚೆತ್ರ - ಇಚಿತ್ರ, ವಿಚಿತ್ರ
ಇಂಟಿ, ಇಂಟೆ - ಈಟಿ
ಇಡಾಗಲ - ಹಿಡುಗುಲು, ಪೊರಕೆ
ಇಡುಗುಳಿ - (?)
ಇತ್ತಾಳೆ - ಹಿತ್ತಾಳೆ
ಇತುವರು - ಹಿತವರು
ಇದ್ಮಾಂಸ - ವಿದ್ಯಾಂಸ
ಇದಿವಾಸ - ವಿಧಿವಶ, ಕೊನೆಗಾಲ, ಸಾವು
ಇನಿಯಂಕ, ಇನಿಯಾನ್ಕ - ವಿನಾಯಕ
ಇಂಬಲ - ಗಟ್ಟಿಯಾಗಿ, ಶಕ್ತಿಯಲ್ಲಿ, ಆಧಾರ
ಇಮಾನು - ವಿಮಾನ
ಇರ - ಇರುವೆ, ಇರುಟೆ
ಇರಕ್ತ - ವಿರಕ್ತ
ಇರಬ್ಕೆದು - ಇರಬಹುದು
ಇರಾಲುದಿಲ್ಲ - ಇರುವುದಿಲ್ಲ
ಇರುಳೀನ - ಹಿರುಳೀನ, ಹಿಣಿಲಿನ
ಇರುಳೆ - ಹಿಳ್ಳೆಕಾಯಿ
ಇರುಳೆ - ಎರಳೆ, ಜಿಂಕೆ
ಇವಲ್ಕ - ಇಹದಲ್ಲಿಯ
ಇಷ್ಣು - ವಿಷ್ಣು
ಇಸ - ವಿಷ
ಇಸಗುಂಟೆ - ವಿಷದ ಗುಳ ಇರುವ ನೇಗಿಲು
ಇಸ್ತಾರ, ವಿಸ್ತೀರ್ಣ
ಇಸ್ಸ - ಪಾಲು
ಇಸ್ಕ - ವಿಷಯ
ಇಂಸ್ಕ - ಹಿಂಸೆ
ಇಸ್ತಾರ - ವಿಸ್ತಾರ
ಇಸು ಬ್ರಹ್ಮ - ವಿಶ್ವಬ್ರಹ್ಮ, ವಿಷಬ್ರಹ್ಮ
ಇಳುವರಿ - ಬೆಳೆಯ ಆಧಿಕ್ಯ, ಸಮೃದ್ಧ ಬೆಳೆ
ಇಳ್ಳು - ಇರುಳು, ರಾತ್ರಿ

ಈ

ಈಂಕಾರ - ಹೀನ ರೀತಿ
ಈದೀಯ - ವಿಧಿಯ, ಹಣೆಬರಹವನ್ನು
ಈನನಾಗಿ - ಹೀನನಾಗಿ, ಕೀಳಾಗಿ
ಈನಾಯ್ದ - ಹೀನಾಯದ
ಈನೆ - ಹೀನೆ, ಇಲ್ಲದವಳು
ಈರ್ಪಾಕ್ಷ - ವಿರೂಪಾಕ್ಷ
ಈಲಿ - ಈರಿ, ಪಿತ್ತಕೋಶ
ಈಸತಿ - ಈಸಲ
ಈಸಾಲ - ಈಸಲು, ಈಸರ್ತಿ
ಈಳ್ಕ - ವೀಳೆಯ

ಉ

ಉಕ್ಕುಡ - ಗಡಿ, ಎಲ್ಲೆ, ಸೀಮೆ
ಉಕ್ಕುಳಿಸಿ - ಚಿಮ್ಮಿ, ಹಾರಿ
ಉಗ್ರಾಣೆ - ಪೂಜೆಗಾಗಿ ಅಘ್ಯವಣಿ ತರುವ ಚೊಂಬು
ಉಡಿ - ಸೊಂಟ
ಉಣುಸೆಬರಳು - ಹುಣಸೆ ಸೆಬ್ಬೆ ; ಹುಣಸೆ ಕಡ್ಡಿಗಳಿಂದ ಮಾಡಿದ ಪೊರಕೆ
ಉತ್ತರಗಿರಿಯಾದಿಗಳು - ಸತ್ತವರಿಗೆ ಮಾಡುವ ಉತ್ತರ ಕ್ರಿಯಾದಿಗಳು
ಉತ್ತರಿಕೆ - ಉತ್ತರ ಕ್ರಿಯೆ
ಉತ್ತಾಸ - ಉತ್ತರಾಸ, ಬಾಗಿಲಿನ ಒಳಭಾಗದ ಮೇಲುಗಡೆ ಮುಂದಕ್ಕೆ ಚಾಚಿಕೊಂಡಿರುವ ನಾಲ್ಕಂಗುಲ ಅಗಲದ ಪಟ್ಟಿ. ಇದರ ಮೇಲೆ ಬೀಗದ ಕೈ,

ಕುಂಕುಮದ ಭರಣಿ, ಸುಣ್ಣಕಾಯಿ ಡಬ್ಬಿ ಮುಂತಾದ ಚಿಕ್ಕಪುಟ್ಟ ವಸ್ತುಗಳನ್ನು ಇಡಲು ಬಳಸುತ್ತಾರೆ.

ಉತುಪತ್ತಿ - ಉತ್ಪತ್ತಿ

ಉತ್ತುಂಗುಲ - ಉತ್ತಮ ಕುಲ

ಊದಾನು - ಹೂದನು, ಬಡಿದನು, ಹೊಡೆದನು, ಬಾರಿಸಿದನು

ಉದ್ಭವ - ಉದ್ಭವ, ಹುಟ್ಟಿಬರುವಿಕೆ

ಉನಿಹಾಕು - ನೆನೆಯಿಸು, ನೀರಿನಲ್ಲಿ ತೊಯ್ಯಿಸು

ಉಪಾದ್ರು - ಉಪಾಧ್ಯಾಯರು

ಉಪುದೇಸ್ನೆ - ಉಪದೇಶ, ಬೋಧನೆ

ಉಬ್ಬಾರಿ - ಉದ್ದವಾದ ಭಾರಿ ; ಬೇಡಿ (?), ಒಂದು ಆಭರಣ (?)

ಉಯಿಲ್ವಮಟೆ - ಹುಯಲುದಮಟೆ, ದೊಡ್ಡದಾದ ತಮಟೆ, ರಣರಂಗದಲ್ಲಿ ಬಳಸಬಹುದಾದ ದೊಡ್ಡ ತಮಟೆ, ಜಗ್ಗಲಗೆ(?)

ಉಯುಲ್ಲೊಂಬು - ಹುಲಯಗೊಂಬು, ದೊಡ್ಡದಾದ ಸುಷಿರವಾದ್ಯ, ಯುದ್ಧರಂಗದಲ್ಲಿ ಬಳಸಬಹುದಾದ ದೊಡ್ಡ ಗಾಳೀವಾದ್ಯ, ಕೊಂಬಿನಾಕಾರದ ರಣವಾದ್ಯ

ಉರ - ಎದೆ

ಉರಿಗದ್ದಿಗೆ, ಉರಿಗದ್ದುಗೆ - ಸಿಂಹಾಸನ, ಜ್ವಾಲಾಪೀಠ, ಗುರುಗಳು ಕುಳಿತುಕೊಳ್ಳುವ ಆಸನ

ಉರುಪೆ - ಸಿಪ್ಪೆ, ತೊಗಟೆ, ಹುರುಪೆ

ಉಲುಪಿ, ಉಲುಪೆ - ಮುಂಗಡ

ಉಳ - ಹುಳ

ಉಳ್ಳವಾಕು - ಉಳ್ಳಾಕು, ಮಲಗಿಸು

ಉಳ್ಳುಸು - ಉರುಳಿಸು

ಊ

ಊರಂಕ - ಊರನ್ನು ಪ್ರವೇಶಿಸಲು ಇರುವ ಹೆಬ್ಬಾಗಿಲು, ಊರ ಒಳಗಿರುವವರ ದೃಷ್ಟಿಯಲ್ಲಿ ಊರಿನ ಕೊನೆಯ ಭಾಗ.

ಎ

ಎಕ್ಕತ್ತು - ಹೆಕ್ಕತ್ತು

ಎಡೆ - ಸ್ಥಳ

ಎಡೆಪಡುಸು - ಊಟಕ್ಕೆ ಬಡಿಸು, ಎಡೆಮಾಡು

ಎಡೆಸಾಧ್ನೆ - ದಾಸೋಹ, ಭೋಜನ

ಎಣ್ಣು - ಹೆಣ್ಣು

ಎತ್ತಾಡಿ - ಸಿಪ್ಪೆಯನ್ನು ಸವರಿ, ಸುಲಿದು

ಎತುಗಳು - ಯತಿಗಳು

ಎತೆ - ವ್ಯಥೆ

ಎಂದುಗ್ಗು - ಎಂದಿಗೂ

ಎರುಕೋತೀನಿ - ಸಿದ್ಧಪಡಿಸಿಕೊಳ್ಳುತ್ತೇನೆ. (ಮಣ್ಣಿನ ಕಾಳ ಎರ್ಕೋತೀನಿ - ಮಣ್ಣಿನ ಕಹಳೆಯನ್ನು ಸಿದ್ಧಪಡಿಸುತ್ತೇನೆ ಅಥವಾ ತಯಾರಿಸಿಕೊಳ್ಳುತ್ತೇನೆ)

ಎರೀಕೊ - ಇರುಕಿಕೊ, ಕಂಕುಳು ಸಂದಿನಲ್ಲಿ ಇರಿಸಿಕೊ

ಎರೆದುಪ್ಪ - ಹೆರೆದುಪ್ಪ, ಗಟ್ಟಿತುಪ್ಪ, ಹೆತ್ತಿಕೊಂಡಿರುವ ತುಪ್ಪ

ಎಲ್ಲಚಾರಿ - ಎಲ್ಲ ಕಡೆಯೂ

ಎಲೆಕೊಟ್ಟು - ಗುದ್ದಲಿ

ಎಲ್ಲಾಣೆ - ಯಾವ ಕಡೆ

ಎಲ್ಡು - ಎರಡು

ಎಸನ - ವ್ಯಸನ

ಎಳೆಗಬ್ಬ - ಎಳೆಗರ್ಭ, ನವಮಾಸ ತುಂಬದಿರುವ ಗರ್ಭ

ಎಳೆಹೊಟೆ - ಒಂದು ಶಿಕ್ಷೆ : ನೇಗಲಿಗೆ ಬದಲಾಗಿ ಅಪರಾಧಿಗಳನ್ನು ಕಟ್ಟಿ ಎತ್ತುಗಳಿಂದ ಎಳೆಸುವುದು

ಏ

ಏಕ್ದಾರು- ಏಕತಾರಿ, ಒಂದೇ ತಂತಿಯ ಸೋರೆಬುರುಡೆ ಮತ್ತು ಬಿದಿರುದಂಡದಿಂದ ಮಾಡಿದ ಒಂದು ತಂತೀವಾದ್ಯ, ಶ್ರುತಿವಾದ್ಯ

ಏಗ - ಯೋಗ, ಕೂಡುವಿಕೆ

ಏಚಣೆ - ಯೋಚನೆ

ಏಡು - ಎರಡು

ಏದ - ವೇದ

ಏದಚಿಕ್ಕಿ - ವೇದಚಿಕ್ಕಿ, ವೇದಮಂತ್ರ ಹೇಳುವ ಅರಮನೆ, ವೇದಮಂದಿರ

ಏದಗೋಸನೆ - ವೇದಘೋಷಣೆ

ಏರು - ಹೇರು, ಹೊರೆ

ಏಳ್ಕ - ವೇಳೆ, ಸಮಯ

ಏಳ್ತಾ - ಹೇಳುತ್ತಾ

ಏಳ್ಕಾರಿ - ಏಳಲಾರೆ

ಐ

ಐದೆ - ಅಂಧಪಾ (ಪು), ಗಂಡುಳ್ಳ, ಗರತಿ

ಐಚೋದ್ಯ - ಆಶ್ಚರ್ಯ
ಐವಾರ್ಕ - ಅಯ್ಯನವರೆ
ಐಸ್ಪಿರಿ - ಐಶ್ವರ್ಯ
ಐಸೋಜುಗ - ಮಹದಾಶ್ಚರ್ಯ

ಓ

ಒಂಕಿಬಂದಿ - ನುಲಿನುಲಿಯಾಗಿರುವ ತೋಳಬಂದಿ
ಒಚ್ಚೋರಿ - ಒಂದು ಕಡೆ, ಒಂದು ನಿರ್ದಿಷ್ಟ ಸ್ಥಳ
ಒಟ್ಟೆಕೊನೆ - ಹೊಟ್ಟೆಯಲ್ಲಿ ಹುಟ್ಟಿದ ಮಗ, ಸಂತಾನ
ಒಂಟು - ಒಗಟು, ಸಮಸ್ಯೆ
ಒಡಕರ್ತ - ಕರ್ತವಾದ ಒಡೆಯ
ಒಡ್ಯಾಣ - ಡಾಬು
ಒಡುಟ್ಟು - ಜೊತೆಯಲ್ಲಿ ಹುಟ್ಟಿದವರು
ಒಣೆ - ಧಾನ್ಯವನ್ನು ಮೊರದಲಿಟ್ಟುಕೊಂಡು ಕಸ ಕಲ್ಲುಗಳನ್ನು ತೆಗೆಯಲು ಒನೆಯುವುದು ; ಒನಿ
ಒತ್ತಕ್ಕೆ - ಒತ್ತುವುದಕ್ಕೆ
ಒತ್ತಟ್ಟಿಂದ - ಒಂದು ಕಡೆಯಿಂದ
ಒಪ್ಪುಮಾತು - ಹೆಣ್ಣಿನ ಕಡೆಯವರು ಮತ್ತು ಗಂಡಿನ ಕಡೆಯವರು ಮದುವೆಗೆ ಒಪ್ಪಿಕೊಂಡು ಒಪ್ಪೀಳ್ಕ ಕೊಡುವುದು
ಒಂಬಾಳೆ - ಹೊಂಬಾಳೆ, ಅಡಕೆ ಮರ ಅಥವಾ ತೆಂಗಿನ ಮರದ ಹೂಗೊಂಚಲು, ಹೊಡೆ
ಒಲವರ, ಒಲ್ಯಾರ, ಒಲೂರ - ಪಕ್ಷಪಾತ
ಒಲ್ಲಬೆ - ವಲ್ಲಭೆ, ಪತ್ನಿ
ಒರ - ವರ (ಮಕ್ಕಳೊರ = ಮಕ್ಕಳು ಆಗಲಿ ಎಂದು ಕೊಡುವ ವರ)
ಒಸಿ - ಸ್ವಲ್ಪ
ಒಳೆ - ಹೊಳೆ
ಒಳ್ಳೆ - ಒಳಲೆ, ಮಕ್ಕಳಿಗೆ ಹಾಲು ಕುಡಿಸಲು ಬಳಸುವ ಸಾಧನ

ಓ

ಓಂಕರಿಸು - ಹೂಂಕರಿಸು, ಘರ್ಜಿಸು
ಓಗಿ - ಹೋಗಿ
ಓಗು - ಹೋಗು
ಓಣಿ - ಕಿರುಬೀದಿ, ಗಲ್ಲಿ
ಓತು - ಸಾಲಾಗಿ ಜೋಡಿಸಿ, ರಾಶಿಮಾಡಿ, ಗುಡ್ಡೆಹಾಕಿ
ಓವುಸ್ಕೊಂಡು - ಪ್ರೀತಿಯಿಂದ

ಔ

ಔಸ್ತಿ - ಔಷಧ

ಕ

ಕಕ್ಕೆ - ಕಾಡಿನಲ್ಲಿ ಬೆಳೆಯುವ ಒಂದು ಸಸ್ಯ. ಕಾಡುದೇವರುಗಳ ಪೂಜೆಗೆ ಈ ಹೂವು ಬಳಕೆಯಾಗುತ್ತದೆ.
ಕಚ್ಚು - ಹೊತ್ತಿಸು, ಹಚ್ಚು
ಕಂಟಕೆ - ಕಂಠಕ್ಕೆ, ಕುತ್ತಿಗೆಗೆ
ಕಂಟ್ರೀ ಹಣ - ಕಂಠೀರವ ನಾಣ್ಯ
ಕಡ - ಸಾಲ
ಕಡಜ - ಒಂದು ಕೀಟ
ಕಡತದ ಹೆಣ್ಣು ಮಕ್ಕಳು - ಹದಿನಾರರ ಹರೆಯದ ಹೆಣ್ಣುಮಕ್ಕಳು, ಪೋಡಶಿಯರು
ಕಡದ - ಕಡೆದ, ಕೆತ್ತಿದ
ಕಡಾಬುಟ್ಕೊಂಡು - ಸಾಲಾಗಿ ಸುರಿಸಿಕೊಂಡು
ಕಡುಕ್ರಂಗ್ಡಿ - ಕಟುಕರ ಅಂಗಡಿ
ಕಡ್ದು - ಕಡೆದು, ಹೊರಟು
ಕಣ್ಯದಮಟೆ - ಕುಣಿತಕ್ಕೆ ಬಳಸುವ ಖಣಿಲ್ ಖಣಿಲ್ ಶಬ್ದ ಬರುವ ತಮಟೆ ಕನಕದಮಟೆ (?)
ಕಣ್ಣಿ - ಹಗ್ಗ
ಕಣುಮೆ - ಕಣಿವೆ
ಕತ್ತ - ಕುತ್ತಿಗೆಯನ್ನು
ಕತ್ತರಕೆ - ಕರೆದುಕೊಂಡು ಬರುವುದಕ್ಕೆ
ಕತ್ತಿಕೊಂಡು - ಹೊತ್ತಿಕೊಂಡು
ಕದು - ಕದ, ಬಾಗಿಲು
ಕಂದಮೂಲ - ಗೆಡ್ಡೆಗೆಣಸು
ಕಂದರ - ಕಣಿವೆ
ಕಂದ್ಲು, ಕಂದ್ಲುಗಡಿಗೆ - ಅರಣಿಗಡಿಗೆ, ಕಳಸಕ್ಕಾಗಿ ಬಳಸುವ ಮಣ್ಣಿನ ಗಡಿಗೆ
ಕನ್ನೆ - ಕನ್ಯೆ
ಕಪಿಲೆ - ಹಸು
ಕಮ್ಜಾತಿ - ಕೀಳುಜಾತಿ
ಕರಡಿ - ಕನ್ನಡಿ
ಕರಡಿಗೆ - ಲಿಂಗವನ್ನು ಇಡುವ ಪುಟ್ಟ ಭರಿಣೆ
ಕರಡೆ, ಕರಡೇವು - ಒಂದು ಬಗೆಯ ಚರ್ಮವಾದ್ಯ - ಕರಡೆಮೇಳ
ಕರಣ - ಕೋಟೆ ಮೇಲಿನ ತುತ್ತೂರಿ ಊದುವ ಕಾವಲುಗಾರ, ಕರಣಿಕ

ಕರಣ - ಕರ್ಣ, ಕಿವಿ
ಕರಣ - ಕಲ್ಲು ಕೆಲಸದಪನು, ಶಿಲ್ಪಿ
ಕರಣ - ಕರಣೆ, ಒತ್ತಾಳೆಯಿಂದ ಮಾಡಿರುವ ಉದ್ದನೆಯ ತುತ್ತೂರಿ
ಕರಿಸು - ಮೊರೆಯುವಂತೆ ಗಾಳಿ ವಾದ್ಯವನ್ನು ಊದು
ಕರಿಸುವುದು - ಮೊಳಗಿಸುವುದು
ಕರ್ರಿ - ಕರೆದೆನು
ಕರೀದಿ - ಖರೀದಿ, ವ್ಯಾಪಾರ
ಕರುತು - ಕರ್ತ್ಯ
ಕರೆನೆರೆ - ಬೀಗರೂಟ
ಕರೆಬಾನಿ - ಚರ್ಮ ಕೊಳೆಹಾಕುವ ಬಾನಿ
ಕಲಯ - ಕಲಹ, ಜಗಳ
ಕಲ್ಯಾಣಸೇವೆ - ಒಂದು ಸಿಹಿ ತಿಂಡಿ, ಕಡಲೆ ಮಿಠಾಯಿ
ಕಲಿಂಗ, ಕಲೀಗ - ಕಲಿಯುಗ
ಕಲುಗಾತಿ - ಕಲೆಗಾರ್ತಿ
ಕಲ್ಪುರ, ಕಲ್ಪೂರ - ಕರ್ಪೂರ
ಕಲೆ - ಶಕ್ತಿದೇವಿಯ ೧೬ ರೂಪಗಳು : ೧. ಪದ್ಮಾ, ೨. ಶಚಿ, ೩. ಮೇಧಾ, ೪. ಸಾವಿತ್ರಿ, ೫. ವಿಜಯಾ, ೬. ಜಯಾ, ೭. ದೇವಸೇನಾ, ೮. ಸ್ವಧಾ, ೯. ಸ್ವಾಹಾ, ೧೦. ಶಾಂತಿ, ೧೧. ಪುಷ್ಟಿ, ೧೨. ತುಷ್ಟಿ, ೧೩. ಕುಲದೇವಾ, ೧೪. ಆತ್ಮದೇವಾ, ೧೫. ಧೃತಿ ಮತ್ತು ೧೬. ಗೌರಿ.
ಕಲೆಗಳು - ಈಶ್ವರನ ೧೧ ರುದ್ರರೂಪಗಳು :- ೧. ವೀರಭದ್ರ, ೨. ಶಂಭು, ೩. ಗಿರೀಶ, ೪. ಅಜೈಕಪಾತ, ೫. ಅಹಿರ್ಬುಧ್ನ್ಯ, ೬. ಪಿನಾಕಿ, ೭. ಸ್ಥಾಣು, ೮. ಪಶುಪತಿ, ೯. ಭವ, ೧೦. ಉಗ್ರ ಮತ್ತು ೧೧. ತ್ರಿಟ್ಪತಿ
ಕವಲು, ಕವ್ಲು - ಕಾವಲು
ಕಸಮುಗ್ಗಲಿ - ಕಸದ ವಾಸನೆ ಉಳ್ಳವಳು
ಕಸಿ - ಅಳಿ, ಬಿಚ್ಚು, ಕಳಚು
ಕಸ್ಸಿ - ಹೊತ್ತಿಸಿ, ಬೆಳಗಿ
ಕಳದಿದ್ದ - ಕಳವು ಮಾಡಿದಿದ್ದ
ಕಳಸಿಗೆ - ಗಡಿಗೆ, ಕಲಶ
ಕಳುಕೊಂಡೋಗನ - ಕಳಚಿಕೊಂಡು ಹೋಗೋಣಾಂತ, ತಪ್ಪಿಸಿಕೊಂಡು ಹೋಗೋಣವೆಂದು
ಕಳುಗು - ಕಳುಹಿಸಿಕೊಡು
ಕಳುವು - ಕಳೆವು, ಬಂಚೆ ; ಬರಡು
ಕಳ್ಳ - ಕರುಳು
ಕಳ್ಳಬ್ಯಾನೆ - ಕರಳುಬೇನೆ
ಕಳೂಬೇಕು - ಕಳ್ಳತನ ಮಾಡಬೇಕು
ಕಳ್ಳೆ - ಕಡಲೆ
ಕಳೆಯ - ಕಲೆ, ತೇಜಸ್ಸು, ಶೋಭೆ (ನೋಡಿ : ಕಲೆ)
ಕಳ್ಳೆಪುರಿ - ಕಡಲೆಪುರಿ
ಕ್ರಮಿಸಿ - ಕ್ಷಮಿಸಿ
ಕಾಚಕ್ಕಿ - ಹೊಡೆಯಾದ ರಾಗಿತೆನೆ ತುಸು ಬಲಿದು ಹಾಲು ದುಂಬಿದಾಗ ಅವುಗಳನ್ನು ಕಿತ್ತು ಬೆಂಕಿ ಉರಿಯಲ್ಲಿ ಕಾಸಿ ಅಂಗೈನಿಂದ ಹೊಸಗಿ ತೆಗೆದ ಕಾಳುಗಳೇ ಕಾಚಕ್ಕಿ. ಇದಕ್ಕೆ ಹುರಿದ ಅಚ್ಚೆಳ್ಳು ಮತ್ತು ಸಕ್ಕರೆಯನ್ನು ಬೆರಸಿ ತಿಂದರೆ ರುಚಿ ಇಮ್ಮಡಿಸುತ್ತದೆ.
ಕಾಣಿ - ಕಾಣೆನು
ಕಾಣಿ - ಕಾಣಿರೊ
ಕಾನ - ಕಾಣ, ಕಣೊ
ಕಾನುಳ್ಳಾರ - ಕ್ಯಾಣವುಳ್ಳವ, ಕ್ಯಾಣುಗಾರ
ಕಾಮಜೇನು - ಕಾಮಧೇನು
ಕಾಮಂಡ್ಲು - ಕಮಂಡಲ
ಕಾರಣಾರ್ತಿ - ಕಾರಣವಾದ ವಾರ್ತೆ
ಕಾರಣೆ - ಗೋಡೆಯ ತಳಭಾಗದಿಂದ ಒಂದು ಅಡಿ ಅಥವಾ ಎರಡು ಅಡಿವರೆಗೆ ಗಾರೆಯನ್ನ ಹಾಕಿ ಮೇಲಂಚಿಗೆ ಬಣ್ಣ ಬಣ್ಣದ ಹೂಬಳ್ಳಿಗಳನ್ನು ಬಿಡಿಸುವುದು ; ಮೇಜುಗಟ್ಟು
ಕಾರಸೇವು - ಖಾರಶ್ಯಾವಿಗೆ, ಚೌಚೌ
ಕಾರಾಯ - ಕ್ರಯ
ಕಾರಿಯ - ಕಾರ್ಯ
ಕಾಲರಣೆ - ಕಾಲಹರಣ, ಕಾಲ ಕಳೆಯುವುದು
ಕಾವಿನೀರು - ಕಾವಿಬಣ್ಣದ ನೀರು
ಕಾಸೀದಾಲ - ಕಾಯಿಸಿದ ಹಾಲನ್ನು
ಕಾಳ - ಕಾಳೆ, ಕಹಳೆ
ಕಾಳದಮಟೆ - ಒಂದು ಚರ್ಮವಾದ್ಯ. ಯುದ್ಧಗಳಲ್ಲಿ ಬಳಸುತ್ತಿದ್ದ ದೊಡ್ಡ ತಮಟೆ. ಕಳ(ಣ) ಅಂದರೆ ಯುದ್ಧಭೂಮಿಯಲ್ಲಿ ಬಳಸುವ ತಮ್ಮಟೆ.
ಕಾಳ್ರಾತ್ರೆ - ಕಗ್ಗತ್ತಲ ರಾತ್ರಿ
ಕಾಳ - ಕಾಳೆ < ಕಹಳೆ
ಕಾಳಿಂದಿನಮಡು - ಆಳವಾದ ಮಡು
ಕಾಳೆ - ಕಹಳೆ
ಕ್ಯಾಣ - ಕೋಣ
ಕ್ಯಾಣಾಗ್ಲು - ಕೋಣೆಯ ಬಾಗಿಲು
ಕ್ಯಾರಾಸ್ಸ - ಕೋರಾಸ್ಸ, ಕೋರಿದ ಅನ್ನ, ಭಿಕ್ಷೆ

ಕ್ಯಾರೆ - ದೀಪದಲ್ಲಿ ಬತ್ತಿಗಳನ್ನು ಇಡುವ ಭಾಗ
ಕಿನ್ನತಿ - ಖಿನ್ನತೆ, ಕಾಂತಿಹೀನ
ಕಿನ್ನುತ್ತಾಗಿ - ಖಿನ್ನನಾಗಿ
ಕಿಬ್ಬಿ - ಬೆಟ್ಟದ ಬುಡ, ಕಿಬ್ರಿ
ಕಿಬ್ರಿ - ಬೆಟ್ಟದ ತಪ್ಪಲು
ಕಿರಾಕಟ್ಲೆ - ಉತ್ತರ ಕ್ರಿಯಾದಿ ಕಾರ್ಯಗಳ ವಿಧಿವಿಧಾನಗಳು
ಕಿರುದೇನು - ಕಿರುಜೇನು
ಕಿಮಿ - ಕಿವಿ
ಕೀರಿನ - ಕ್ಷೀರದ, ಹಾಲಿನ
ಕೀಲಲ್ಲೆ - ಕೀಲುಹಲಗೆ, ಕೋಟೆ ಅಗುಳಿನಿಂದ ಊರ ಒಳಕ್ಕೂ ಹೊರಕ್ಕೂ ಹೋಗಿಬರಲು ಬಳಸುವ ಕೀಲು ಜೋಡಣೆ ಇರುವ ಹಲಗೆ
ಕೀಲು - ತಂತ್ರ, ಉಪಾಯ
ಕುಂಜರ - ಆನೆ
ಕುಡ - ತಮ್ಮಟೆ ಅಥವಾ ಚರ್ಮವಾದ್ಯಗಳನ್ನು ನುಡಿಸಲು ಬಳಸುವ ಕೋಲು
ಕುಡ - ಕುಳ, ಗುಳ
ಕುಡಿ - 'ಸಂತಾನ' ಎಂಬ ಅರ್ಥದಲ್ಲಿ ಬಳಕೆಯಾಗಿದೆ
ಕುಡ್ಮ - ಕುಡಿಯನ್ನು
ಕುಂಡೋಗು - ತೆಗೆದುಕೊಂಡು ಹೋಗು, ಕರೆದುಕೊಂಡು ಹೋಗು
ಕುಣುತಾರು - ಕುಳಿತಾರು
ಕುಣುಸ್ತ - ಕುಳ್ಳಿರಿಸಿದ
ಕುತನೀಚೀಲ - ಸ್ಯಾಟೀನ್ ಬಟ್ಟೆಯಿಂದ ತಯಾರಾದ ಚೀಲ, ವ್ಯಾನಿಟಿ ಬ್ಯಾಗು
ಕುದ್ರೆಕೂರ್ಸು - ಹಿಂದೆ ಕೂಲಿಮಠಗಳಲ್ಲಿ ತಪ್ಪಿದ ಶಿಷ್ಯರಿಗೆ ಕೊಡುತ್ತಿದ್ದ ಶಿಕ್ಷೆಗಳಲ್ಲಿ ಒಂದು
ಕುಂದನ - ಕುಂದಣ, ಅಪರಂಜಿ
ಕುಂದುರಿಸಿ - ಕುಳ್ಳಿರಿಸಿ
ಕುಪ್ಪರಿಸಿ - ಜಿಗಿಯಲು ನಿಲ್ಲುವ ಒಂದು ಭಂಗಿ
ಕುಪ್ಸ - ರವಿಕೆ
ಕುಪ್ಪಿಚವುಲಿ - ತಲೆಗಂಟು ದಪ್ಪಾಗಿರಲೆಂದೋ, ಜಡೆ ಉದ್ದವಾಗಿರಲೆಂದೊ ಚಿನ್ನದ ಕುಪ್ಪಿಗೆಗೆ ಕೂದಲನ್ನು ಅಳವಡಿಸಿರುವ ತಲೆಯಾಭರಣ
ಕುರುಜು - ಹೆಣ ಸಾಗಿಸಲು ಮಾಡುವ ತೇರು, ತೇರು
ಕುಂರಾಕ್ಷಿ - ಹುಳಿರುಚಿಯ ಒಂದು ಬಗೆಯ ಹಣ್ಣು
ಕ್ರುಪಾಯಕೆ - ಕೃಪೆಗೆ
ಕೂಕುಮ - ಕುಂಕುಮ
ಕೂದ - ಖುದಾ, ಮುಸ್ಲಿಂ ದೇವರ ಹೆಸರು, ಪರಮಾತ್ಮ
ಕೂಳೆ - ಪೈರನ್ನು ಕತ್ತರಿಸಿದ ಮೇಲೆ ಉಳಿಯುವ ಬುಡ
ಕೆಟ್ಟಿ - ಕೆಟ್ಟೆನು
ಕೆಡುಗಾನೆ - ಕೆಡಗುತ್ತಾನೆ, ಸುರಿಸುತ್ತಾನೆ
ಕೆಂಪಿರವ - ಕೆಂಪು ಇರುವೆಯನ್ನು
ಕೆಂಬಾರ - ಮಕ್ಕಳಿಗೆ ಬರುವ ಒಂದು ಕಾಯಿಲೆ, ಉಷ್ಣದ ಕಾರಣದಿಂದ ಮಗುವಿನ ಮೈಮೇಲೆ ಏಳುವ ಕೆಂಪು ಬಣ್ಣದ ಗುಳ್ಳೆಗಳು
ಕೆಲ್ಸಿ - ಕೆಲಸಿಗ, ಕ್ಷೌರಿಕ
ಕೆಳ್ಗೆ - ಕೆಳಗಡೆ
ಕೆಳಾತ್ಮಕ - ಅಧೋಗತಿಗಿಳಿದವನು
ಕೇಳ್ದಯ - ಕೇಳುತ್ತೀಯಾ ?
ಕ್ಲೇಷ - ಕಷ್ಟ
ಕೈ ಕಲ್ಲೆಸ್ಗೆ - ಕೈನಲ್ಲಿ ಕಲ್ಲು ಎಸೆಯುವಷ್ಟು ದೂರ
ಕೈತಪ್ಪೆ - ಕೈಚಪ್ಪಾಳೆ
ಕೈನಿಲ್ಸಿ - ಮಾಡುವ ಕೆಲಸವನ್ನು ಬಿಟ್ಟು
ಕೈಸೈವಾಗಿ - ಕಾಯಕ ಸಮೇತವಾಗಿ
ಕೊಂಗ - ಒಂದೇ ಒಂದು ಗೋಟು (ಮೂಲೆ) ಇರುವ ತೂರಲು ಬಳಸುವ ಮೊರ
ಕೊಡಪಾನ - ಬಿಂದಿಗೆ, ಕೊಡ
ಕೊಡಿಗ್ಯೆ - ಕೊಡುಗೆ
ಕೊಂಡುಗ - ಚಾಡಿ
ಕೊಂಡೋನು - ಕೊಳ್ಳುವವನು
ಕೊಣ್ಮಾವು - ಪೀಕಿ(ಪಿ) ಮರದ ಪತ್ರೆ, ಕೊಂಡಮಾವಿನ ಪತ್ರೆ, ಕೊಣಮಾವಿನ ಪತ್ರೆ, ಬಿಲ್ವಪತ್ರೆಯಂತೆ ಇದನ್ನು ಪೂಜೆಗೆ ಬಳಸುತ್ತಾರೆ.
ಕೊತ್ಗೆ - ಕೊತ್ತಿಗೆ, ಬೆಕ್ಕಿಗೆ
ಕೊತ್ತಲಾಯ್ದು - ಕೊತ್ತಲವನ್ನು ಹಾಯ್ದು, ಕೊತ್ತಲವನ್ನು ದಾಟಿ
ಕೊತ್ತಳ - ಕೋಟೆಯ ಮೇಲ್ಭಾಗ
ಕೊನ್ನಿ - ಕೊಳ್ಳಿ, ತೆಗೆದುಕೊಳ್ಳಿರಿ
ಕೊಪ್ರಿ - ಕೊಬ್ಬರಿ
ಕೊಪ್ಪಕೆ - ಕೊಪ್ಪರಿಕೆ, ಕಡಾಯ
ಕೊಳ್ಳಾಲ - ಕೊರಳಿನ, ಕುತ್ತಿಗೆಯ
ಕೊಳ್ಳಿ - ಕೊಡಲಿ
ಕೊಳುವೆ - ಕೊಳಬು, ದನಗಳ ಕಾಲಿನ ಗೊರಸು
ಕೋಟುಗೊಬ್ಬ - ಕೋಟಿಗೆ ಒಬ್ಬ
ಕೋದಂಡನೆತ್ತು - ಹಿಂದೆ ಕೂಲಿಮಠಗಳಲ್ಲಿ ತಪ್ಪಿದ

ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಶಿಕ್ಷೆಗಳಲ್ಲಿ ಒಂದು.

ಕೋರ್ಮೀಸೆ - ಕೋರೆ ಮೀಸೆ

ಕೋಳು ಬೇಲ - ಕಾಡು ಬೇಲ

ಕ್ರಾಯ - ಕ್ರಯ, ಬೆಲೆ

ಕೌಸಾಳೆ - ಕಂಸಾಳೆ

ಗ

ಗಗ್ಗರ - ನೀಲಗಾರರು ಹಾಡುವಾಗ ತಾಳವಾದ್ಯವಾಗಿ ಬಳಸಿಕೊಳ್ಳುವ ಕಂಚಿನಿಂದ ಮಾಡಿದ ಟೊಳ್ಳುಭಾಗಕ್ಕೆ ಸೀಸದ ಗುಂಡುಗಳನ್ನು ಸೇರಿಸಿ ಬೆರಳಿಗೆ ಸಿಕ್ಕಿಸಿಕೊಂಡು ಅಲುಗಾಡಿಸುವ ಒಂದೂವರೆ ಅಥವಾ ಎರಡು ಅಂಗುಲ ವ್ಯಾಸವುಳ್ಳ ಸಾಧನ.

ಗಜಸಿಮ್ಮ - ಆನೆ ಸಿಂಹ

ಗಂಡುಗತ್ತರಿ - ಗಂಡಕತ್ತರಿ, ಹೆಕ್ಕತ್ತಿಗೆ ಅಳವಡಿಸಿಕೊಂಡು ಕುತ್ತಿಗೆಯನ್ನು ಕತ್ತರಿಸಿಕೊಳ್ಳುವ ಪವಾಡದ ಆಯುಧ

ಗಣ - ಗಣೆ, ಬಿದಿರುಕಂಬ, ದೊಂಬರು ಆಟಕ್ಕೆ ಬಳಸುವ ಗಳು

ಗಣಿಗ್ಲೆ - ಕಣಿಗಲು

ಗದುಗುಸ್ತ - ನಡುಗುತ್ತ

ಗಂಧಕರಂಗ್ದಿ - ಗಂದಿಗ, ಗ್ರಂದಿಗ, ಔಷಧದ ಮೂಲಿಕೆಗಳನ್ನು ಮಾರುವವರು, ಪನಸಾರೆ ಅಂಗಡಿ

ಗನ್ನೆಕಾರ - ವಂಚಕ, ಸೋಗಿನವನು

ಗಮುನೆ - ಪರಿಮಳ

ಗಮ್ಮಿನಿಂದ - ಒನಪು ಒಯ್ಯಾರದಿಂದ

ಗರ - ಗ್ರಹ (ಸಂ), ದೆಯ್ಯ

ಗರಳಕಂಧರ - ವಿಷಕಂಠ

ಗರೀಬಿ - ಬಡತನ

ಗರುತ್ಯಲ್ಲ - ಗರತಿ ಅಲ್ಲ

ಗಲಗು, ಗಲುಗು - ಗಲಗು, ಸದ್ದು

ಗವುದಿದೆ - ಕವಿಬದೆ, ಮುತ್ತಿಕೊಂಡಿದೆ

ಗವುದೋಯ್ತು - ಕವಿದುಕೊಂಡಿತು

ಗಳಗೂ - ಒಂದು ಘಳಿಗೆಯೂ

ಗಾಜಾಲ್, ಗಾಜಾಲು - ಗಾಜುಗೋಜಲು, ಗೊಂದಲ, ಸಮಸ್ಯೆ

ಗ್ರಾಚಾರ - ಗ್ರಹಚಾರ

ಗ್ರಾಣ - ಗ್ರಹಣ

ಗ್ರಾಟಿ, ಗ್ರಾಟೆ - ಇಕ್ಕುಳ

ಗಾತುರ - ಗಾತ್ರ

ಗಾನಚಿಕ್ಕಿ - ಸಂಗೀತ ಶಾಲೆ, ಸಂಗೀತದ ಅರಮನೆ

ಗ್ನಾನ - ಜ್ಞಾನ, ಸ್ಮರಣೆ

ಗ್ನಾಪಕ - ಜ್ಞಾಪಕ

ಗ್ನಾರಂಜ - ಗೋರೋಜನ, ಗೋವಿನ ದೇಹದಲ್ಲಿ ದೊರೆಯುವ ಹಳದಿ ಬಣ್ಣದ ಒಂದು ನಿಂಬೆಕಾಯಿ ಗಾತ್ರದ ವಸ್ತು, ಇದನ್ನು ಮಕ್ಕಳಿಗೆ ಬರುವ 'ಕೆಂಬಾರೆ' ಎಂಬ ಕಾಯಿಲೆಗೆ ಔಷಧಿಯಾಗಿ ಬಳಸುತ್ತಾರೆ.

ಗಾವಾಡುಗ್ರು - ಗಾರುಡಿಗರು

ಗಾವೀದ - ಗಾವುದ, ದೂರದ ಒಂದು ಅಳತೆ

ಗಾಳಿ - ದೆಯ್ಯ, ದೆವ್ವ

ಗಾಸು - ತೊಡಕು, ತೊಂದರೆ

ಗಿಡವಿ - ಗಿಡಿ, ಕಾಡು

ಗಿಂಡಿ - ನೀರನ್ನು ಸುರಿಸಲು ಕೊಕ್ಕಿರುವ ಚಂಬು

ಗೀಜುಲಕ್ಕಿ - ಗೌಜಲಕ್ಕಿ, ಒಂದು ಪುಟ್ಟ ಪಕ್ಷಿ

ಗುಗ್ಗುರಿ - ಕಡಲೆಕಾಳನ್ನು ಬೇಯಿಸಿ, ಬಸಿದು, ಅದಕ್ಕೆ ವಗ್ಗರಣೆ ಹಾಕಿ, ಕಾಯಿತುರಿ ಬೆರೆಸಿದ ತಿನಿಸು

ಗುಂಟ - ಗೂಟ

ಗುಡ - ಬೆಲ್ಲ

ಗುಂಡಾಲ - ದೊಡ್ಡಬಂಡೆ

ಗುಂಡಿಗೆ - ಹೃದಯ

ಗುಡ್ಡುಮೂಗಿ - ಗುಡ್ಡೆಯ ಗಾತ್ರದ ಮೂಗಿನವಳು, ದಪ್ಪ ಮೂಗಿನವಳು

ಗುಂಡ್ಗೆ - ಗುಂಡ್ಯಾಯಿ, ಗುಂಡಿಗೆ, ಹೃದಯ

ಗುದ್ದಿ - ಎಲೆಕೊಟ್ಟು, ಎಲ್ಕೊಟ್ಟು

ಗುದ್ಮೂರಿ - ಆಟದಲ್ಲಿ ಸೋತವರಿಗೆ ಕರಾರಿನ ಪ್ರಕಾರ ಬೆನ್ನಿಗೆ ಗುದ್ದುವುದು

ಗುಂಬ - ಕುಂಭ, ಮಡಕೆ

ಗುಮ್ಮಿ - ಬೀಸಿ ಹೊಡೆಯಲು ಬಳಸುವ ಗುಂಡುಗಿರುವ ಸಣ್ಣಕಲ್ಲುಗಳು (?) ಒಂದು ಚರ್ಮವಾದ್ಯ (?)

ಗುರುಳ್ಯಾ - ಗುಳ್ಳೆಯನ್ನು

ಗುಳುಕಾಯ್ - ಬದನೆಕಾಯಿ ಜಾತಿಯ ಒಂದು ಸಣ್ಣಕಾಯಿ.

ಗುಳ್ಳು - ಗುಡಿಸಲು

ಗೂಡುಗಣ್ಣಿ - ಗುಳಿಬಿದ್ದ ಕಣ್ಣಿನವಳು

ಗೂಸಿ - ಗುಡಿಸಿ, ಕಸತೊಡೆದು

ಗೆಜ್ಜಾರ - ಕುಲುಮೆ ಕೆಲಸ ಮಾಡುವವನು

ಗೆಜ್ಜುಗ - ಗಜ್ಜುಗ, ಕಾಡಿನಲ್ಲಿ ಬೆಳೆಯುವ ಒಂದು ಮರದ ಸಣ್ಣಸಣ್ಣ ಕಾಯಿಗಳು, ಗೋಲಿಗಾತ್ರದ ಈ ಕಾಯಿಗಳು ಜನಪದ ಆಟಗಳಲ್ಲಿ ಬಳಕೆಯಾಗುತ್ತಿದ್ದವು.

ಗೆಪ್ತಿ - ಜ್ಞಪ್ತಿ, ನೆನಪು

ಗೇದಿಕ್ಕುವ - ದುಡಿದು ಅನ್ನ ಕೊಡುವ (ಗೆಯ್ = ನೇಗಿಲಿ ನಿಂದ ಉಳುವುದು) ವವ್ಯಸಾಯ ಮಾಡಿ ಅನ್ನ ನೀಡುವ

ಗೊಂತು - ಗೊತ್ತು, ದನಗಳಿಗೆ ಮೇವು ಹಾಕುವ ಚನ್ನಿಗೆ, ದನಗಳನ್ನು ಕಟ್ಟುವ ಗೂಟ ಮತ್ತು ಗೋದಲಿಕೆ

ಗೊದ್ದ - ಓತಿಕ್ಯಾತ, ಅಮ್ಮೆಗೊದ್ದ, ಹೆಂಟೆಗೊದ್ದ

ಗೊಂಬ - ಗೊಂಬೆ

ಗೊಮ್ಮರ್ಲುರೋಗ - ಆನೆಯ ಉಸಿರಾಟಕ್ಕೆ ತೊಂದರೆಯಾಗುವ ರೋಗ

ಗೊರಿ - ಗೊರಕೆ ಹೊಡಿ

ಗೋಕುರ್ತಿ - ಗೃಹಕೃತ್ಯ

ಗೋಗರಿ, ಗ್ಯೋಗರಿ - ಒರಲು, ಅಂಗಲಾಚಿ ಬೇಡಿಕೊಳ್ಳು

ಗ್ಯೋಟೆ - ಕಂಬಳಿ ಅಥವಾ ದಟ್ಟಿಯ ಒಂದು ಮೂಲೆಯಲ್ಲಿ ಕಟ್ಟಿದ ಗಂಟು

ಗೋಮೇದ್ಯ - ಗೋಮೇಧಕ, ನವರತ್ನಗಳಲ್ಲಿ ಒಂದು

ಗೋರಾಪುರಾದ - ಘೋರ ಅಪರಾಧ

ಗೋರುಬಡಸ್ತಾನ - ಘೋರವಾದ ಬಡತನ

ಗೌಡೀರು - ಸೇವಕಿಯರು

ಗೌರಿಗದ್ದೆ - ಗೌರಿದೇವಿಯ ಪೀಠ

ಗೌಳಿ - ಹಲ್ಲಿ

ಘು

ಘಟೆ - ಆನೆಗಳ ಸಮೂಹ

ಚ

ಚಕ್ಕಂದ - ಲಲ್ಲೆ, ಚಲ್ಲಾಟ

ಚಕ್ಕುರ - ಚಕ್ಕ, ಪಟೇಲ ಮತ್ತು ಶ್ಯಾನುಭೋಗರ ಕೈಕಳಗೆ ಕೆಲಸ ಮಾಡುವವನು

ಚಂಚಕಾರ, ಚಂಚ್ಯಾರ - ಮುಂಗಡವನ್ನು ವೀಳೆಯ ಸಹಿತವಾಗಿ ಕೊಡುವುದು, ಅಡ್ವಾನ್ಸ್

ಚಂಚರಣೆ - ಸಂಚಾರ

ಚಂಚ್ಯಾರ - ಸಂಚಕಾರ, ತೊಡಕು

ಚಟಕಾಯಿಸು - ಲಪಟಾಯಿಸು

ಚತ್ತರಿ - ಛತ್ರಿ, ಕೊಡೆ

ಚಂದಾಯ, ಚಂದ್ರಾಯ - ಚಂದ್ರಾಯುಧ, ಬಾಲಚಂದ್ರನಂತೆ ಬಾಗಿರುವ ಕತ್ತಿ

ಚಂದಿಮುಗುಟ - ಹೆಗಲ ಮೇಲಿಂದ ಇಳೀಬಿದ್ದ ವಸ್ತ್ರದ ಎರಡು ಮೂಲೆಗಳನ್ನು ಎರಡು ಕೈಗಳಿಂದ ಹಿಡಿದು ಆತುಕೊಳ್ಳಲು ಒಡ್ಡಿದ ತ್ರಿಕೋನಾಕೃತಿಯಲ್ಲಿ ಕಾಣುವ ವಸ್ತ್ರ. ಬಿಳೀವಸ್ತ್ರ (?)

ಚಂದುರಸಾಲೆ - ಚಂದ್ರಶಾಲೆ, ಮೇಲ್ಮಚ್ಚು ಹೊದಿಸಿರದ ಒಂದು ಕಡೆ ಮಾತ್ರ ಪ್ರವೇಶವಿರುವ ಮಂದಿರ. ಬೆಳದಿಂಗಳ ರಾತ್ರಿಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯವಾಗುವಂತೆ ನಿರ್ಮಿಸಿರುವ ಕಲಾಮಂದಿರ.

ಚಪ್ಪಗಾಲಿ, ಚಪ್ಪರಗಾಲಿ - ಪಾದವನ್ನು ನೆಲಕ್ಕೆ ಊರಿದಾಗ ಪಾದದ ಮುಂಭಾಗ ಮತ್ತು ಹಿಂಭಾಗ ಮಾತ್ರ ನೆಲವನ್ನು ತಾಕಿ ಉಳಿದ ಮಧ್ಯಭಾಗ ತಾಕದೆ ಚಪ್ಪರದಂತೆ ಕಾಲಿರುವವಳು

ಚಪ್ಪನ್ನೈವತ್ತಾರು - ಐವತ್ತಾರು (ಚಪ್ಪನ್ನ=ಐವತ್ತಾರು) ಚಪ್ಪನ್ನೈವತ್ತಾರು ಎಂಬುದು ದ್ವಿರುಕ್ತಿ

ಚಪ್ಪೊಡು - ತಾಮ್ರಶಾಸನ

ಚಮ್ಮಾಳಿಗೆ - ಚರ್ಮದ ಪಾದುಕೆ

ಚಮ್ಮಾವುಗೆ - ಚರ್ಮದ ಪಾದುಕೆ

ಚಮ್ಮುಟ್ಟಿ - ಕಮ್ಮಾರನು ಬಳಸುವ ದೊಡ್ಡ ಸುತ್ತಿಗೆ

ಚಲ್ಲಾಣ - ಚಲ್ಲಣ, ಚಡ್ಡಿ

ಚಾಮಗಾಮಕೆ - ?

ಚಾಮ್ಚಿ - ಚಾವುಟಿ ; ಚರ್ಮದಿಂದ ಮಾಡಿದ, ಹೊಡೆಯಲು ಬಳಸುವ ಸಾಧನ ; ಬಾರ್ಕೋಲು

ಚಾಲಾಕ್ಷ - ಚಾಣಾಕ್ಷ, ಚುರುಕುಬುದ್ಧಿಯವನು

ಚಿಗಟೆ - ಸೊಳ್ಳೆಯಂಥ ಒಂದು ಸಣ್ಣ ಕೀಟ

ಚಿಟ್ಟಚ್ಚು, ಚಿಟ್ಟುನ ಬೆಲ್ಲ - ಪುಟಾಣಿ ಬೆಲ್ಲದ ಅಚ್ಚು, ಶಾಸ್ತ್ರಗಳಿಗೆ ಬಳಸುವ ಸಣ್ಣ ಬೆಲ್ಲದ ಅಚ್ಚು

ಚಿಣ್ಣರು - ಮಕ್ಕಳು

ಚಿತ್ರಗಂಡನ ಮಾಡಿ - ಚಿತ್ರವಿಚಿತ್ರವಾದ ರೀತಿಯಲ್ಲಿ ಖಂಡ ತುಂಡುಗಳನ್ನು ಮಾಡಿ

ಚಿತ್ರದಂಡ - ಚಿತ್ರವಿಚಿತ್ರವಾದ ಕ್ರೂರ ಶಿಕ್ಷೆ

ಚಿತ್ತಾಕುಯ್ತನೆ - ಕತ್ತಿಯಲ್ಲಿ ಹುಯ್ಯುತ್ತಾನೆ, ಕಿತ್ತು ಹೊಡೆಯುತ್ತಾನೆ

ಚಿಂತಾಲೆ - ತಕ್ಕಡಿ

ಚಿತ್ತುಗ, ಚಿತ್ತಿನಿ - ಕಾಮಶಾಸ್ತ್ರದಲ್ಲಿ ಹೇಳಿರುವ ನಾಲ್ಕು ಜಾತಿಯ ಹೆಣ್ಣುಗಳಲ್ಲಿ ಒಂದು ಬಗೆ ; ಇವಳು ಮತ್ಸ್ಯದ ವಾಸನೆ ಉಳ್ಳವಳು, ಮೃಗಜಾತಿಯ ಪುರುಷ ನಿಂದ ತೃಪ್ತಿಪಡುತ್ತಾಳೆ.

ಚಿತ್ತುರಿಸಿ - ಸಣ್ಣ ಸಣ್ಣ ಹೋಳು ಮಾಡಿ, ಉತ್ತುರಿಸಿ

ಚಿಂತುಕಾಂತ - ಚಿಂತಾಕ್ರಾಂತ

ಚಿಪ್ಪಳ್ಚತ್ತು - ಚಿಪ್ಪು ಅರಳಿಕೊಂಡಿತು
ಚಿಮ್ಮು - ಚಿಮುಕಿಸು
ಚಿಲ್ಕ, ಚಿಲುಕ - ತಿಲಕ
ಚಿಳ್ಳುಗುರು - ಕಿರುಬೆರಳಿನ ಉಗುರು, ಚೂಪಾದ ಉಗುರು
ಚೂರುಣ - ಚೂಪಾದ, ಚೂಪಾದ ಮೊನೆಯುಳ್ಳ
ಚಟ್ಟಿ - ಸಾರು ಮಾಡುವ ಸ್ವಲ್ಪ ಅಗಲ ಬಾಯುಳ್ಳ ಮಡಕೆ
ಚೇಗು - ಪೈರನ್ನು ಕತ್ತರಿಸಿದ ಮೇಲೆ ಉಳಿಯುವ ಬುಡ
ಚೊರಿಗೆ - ಚೌರಿಗೆ, ಬಿಂದಿಗೆ, ಕೊಡ
ಚೋಜ್ಞ, ಚೋಜಿಗ, ಚೋಜುಗ - ಸೋಜಿಗ, ಆಶ್ಚರ್ಯ
ಚೌಚ - ಚವುತಿ, ಚತುರ್ಥಿ
ಚೌಕಿಪಾರ - ನಾಲ್ಕು ರಸ್ತೆ ಕೂಡುವ ಸ್ಥಳದಲ್ಲಿರುವ ಕಾವಲು

ಜ

ಜಗಜಂಪು - ಉಜ್ವಲಕಾಂತಿ
ಜಗಂಜೋತಿ - ಜಗಜ್ಜೋತಿ
ಜಗಳ - ಕಾಳೆಗ, ಯುದ್ಧ
ಜಗ್ತಿ - ಜಗುಲಿ, ಪಡಸಾಲೆ
ಜಂಗು - ಕಿರುಗಂಟೆ
ಜಂಜಡೆ - ಒತ್ತಾಗಿ ಹೆಣೆದುಕೊಂಡಿರುವ ಜಟೆ
ಜಟಾಮಕುಟ - ಜಡೆಯನ್ನೆ ಕಿರೀಟವಾಗಿಸಿಕೊಂಡ ಈಶ್ವರ
ಜಂಡೂಹಕ್ಕಿ - ಚೆಂಡು ಹೂನಂತಿರುವ ಹಕ್ಕಿ (?)
ಜಂತಿ - ಜಂತುಹುಳು
ಜಪುನೆ - ಜಪ
ಜಂಭೂಲೋಕ - ಶಂಭುವಿನ ಲೋಕ, ಕೈಲಾಸ
ಜಮಾಯಿಸು - ಹೊಂದಿಸು, ಅಣಿಮಾಡು
ಜಮೆಯ - ಜಾಮ (ಯಾಮ : ಸಂ) ಮೂರು ಗಂಟೆಯ ಅವಧಿ
ಜಯಪತ್ತು - ಜಯಪ್ರದ
ಜಯಪರ್ತ - ಜಯಪ್ರದ
ಜಯಪರ್ಪ - ಜಯಪ್ರದ
ಜರಣ - ಜನನ
ಜರ್ನಿಸಿ - ಜನನವಾಗಿ
ಜರುದ್‌ಕರ್ಮ - ಬೈದಪಾಪ
ಜಲಕರಾಯ - ಜನಕರಾಯ
ಜಲ್ಮ - ಜನ್ಮ
ಜಾಲಾರ- ಒಂದು ಕಂಚಿನ ತಾಳ
ಜಲ್ಲಿ - ಕುಚ್ಚು, ಗೊಂಡೆ
ಜಾನಚಿಕ್ಕ - ಜ್ಞಾನದಿಂದ ಕೂಡಿರುವ ಅರಮನೆ, ವಿದ್ಯಾ ಮಂದಿರ
ಜಾಬಾದ - ಸೊಗಸಾದ, ಚನ್ನಾದ, ಶ್ರೇಷ್ಠವಾದ
ಜಿಗುಳು - ಸೀಳು
ಜಿನ - ದಿನ
ಜಿವ್ಸ - ದಿವಸ
ಜೀಮ- ಜೀವ
ಜೀವ್ನ - ಜೀವನ
ಜುಲುಮಿ - ಬಲವಂತ
ಜೈಮುಣಿ - ಜೈಮಿನಿ
ಜೈವಿರಗಂಟ - ಜಯ ಇರುವವರೆಗೂ

ಡ

ಡಂಬುಕರು - ಮೋಸಗಾರರು
ಡಿಂಬ - ದೇಹ
ಡೆಂಕಣಿ, ಡೆಂಕಾಣಿ - ಕೋಟೆ ಕಾಳಗದಲ್ಲಿ ಶತ್ರುಗಳ ಮೇಲೆ ಗುಂಡು ತೂರಲು ಉಪಯೋಗಿಸುತ್ತಿದ್ದ ಒಂದು ಯಂತ್ರ
ಡೇರ್ಯ - ಡೇರೆ, ಗುಡಾರ
ಡೋಲಿ - ಸತ್ತವರನ್ನೆ ಅಥವಾ ಅಶಕ್ತ ರೋಗಿಗಳನ್ನು ಹೊರಲು ಬಳಸುವ ಸಾಧನ, ಪಲ್ಲಕ್ಕಿ

ತ

ತಕಳಿ - ತೆಗೆದುಕೊಳ್ಳಿ
ತಕ್ಕಂಬವ್ವ - ತೆಗೆದುಕೊಂಡ ಬಾರವ್ವ
ತಕ್ಡಿ - ತಕ್ಕಡಿ
ತಕ್ಕೀಗ - ತಾಕೆ ಈಗ, ಸ್ಥಳಕ್ಕೆ ಈಗ
ತಕ್ಕೊಣದಿಲ್ಲ - ತಕ್ಕೊಳದಿಲ್ಲ
ತಗದಿಕೊಂಡು - ತೆಗೆದುಕೊಂಡು
ತಗರಿ - ತೊಗರಿ
ತಗುಡು - ತಗಡು, ಲೋಹದ ಹಾಳೆ
ತಡ್ಗಿ - ತಡಗುಣಿ, ಹಲಸಂದೆ
ತಪ್ಲ - ತಬಲ
ತಪ್ಸ - ತಪಸ್ಸು
ತಪುನೆ - ತಪ
ತ್ರಪಸು - ತಪಸ್ಸು

ತಪ್ಪೊಸ್ತ - ತಪ್ಪಿತಸ್ಥ
ತಬುಸು - ತಪಸ್ಸು
ತ್ರಬಸ್ಸು - ತಪಸ್ಸು
ತಮ್ಮಪ್ಪ - ಪೂಜಾರಿ
ತರ - ತೆರ, ರೀತಿ, ಬಗೆ
ತರಾಣ - ತ್ರಾಣ
ತರಾಸು - ತ್ರಾಸು, ತೂಗುಗೋಲು, ತಕ್ಕಡಿ
ತರುಗೋಳ - ಬಗೆಗಳನ್ನು
ತಲೋಕ್ಕಂಟ್ಕ - ತಲೆಹೋಗೋ ಕಂಟಕ
ತಳಾರ - ತಡ
ತಳಿ - ಚಿಮುಕಿಸು
ತಳುವ ಬೇಡಿ - ತಡಮಾಡಬೇಡಿ
ತಳುವಿಲ್ಲ - ಸ್ಥಳವಿಲ್ಲ
ತಾಡಿ - ತಾಳಿರಿ
ತಾಡು - ತಾಳು, ಬೋಲ್ಸ್
ತಾನ - ಸ್ಥಾನ, ಸ್ಥಳ, ತಾಣ
ತಾಪೀಸಿ - ಸ್ಥಾಪಿಸಿ
ತಾಂಬುರ - ತಾಮ್ರ
ತಾಬು - ಅಧೀನ
ತಾಮುರ್ದಚೊಂಬು - ತಾಮ್ರದ ಚಂಬು
ತಾರಾಣ - ತ್ರಾಣ
ತ್ಯಾರ - ತೋರ, ದೊಡ್ಡಗಾತ್ರದ
ತಾರಿಸು - ಮನೆಯನ್ನು ಸಗಣಿಯಿಂದ ಸಾರಿಸಿ ಶುಚಿ ಮಾಡುವುದು
ತಾಳಕ್ಷರ - ಮೊದಲ ಅಕ್ಷರ, ಒನಾಮ
ತಾಳ್ದ - ಫಲ್ಯ, ಖಾದ್ಯ ಪದಾರ್ಥ
ತಿಕ್ಕಿ - ಒರೆಹಚ್ಚಿ
ತಿಗರಿ, ತಿಗ್ರಿ - ಕುಂಬಾರನ ಚಕ್ರ
ತಿಟ್ಟೇಂಕಾರ - ಸೃಷ್ಟಿ ಮಾಡಿದವನು
ತೀರ್ಗಡೆ - ಮುಕ್ತಾಯ
ತಿರಿಯಾಕಿ - ಹಿಂದಿರುಗಿ
ತಿರುವಂಗ - ದೇವಾಂಗ
ತಿರುವಲ್ಲ - ಸ್ಥಿರುವಲ್ಲ
ತಿರುಸ್ಣೆಕಾರ - ಸೃಷ್ಟಿಕರ್ತ
ತಿಸ್ಣೆ - ಸೃಷ್ಟಿ
ತುಡ್ಕಿದಳು - ತೊಡಗಿದಳು, ಪ್ರಾರಂಭಿಸಿದಳು
ತುರುಪ್ತಿ - ತೃಪ್ತಿ
ತುಳಿ - ಚೂರು
ತೆಮಿ - ತೆವಳು, ತೆವಿ, ತೆವ್ಳು
ತೆರ - ಮದುವೆ ಸಂದರ್ಭದಲ್ಲಿ ಹೆಣ್ಣಿಗೆ ಕೊಡುವ ಹಣ
ತೇಗಿನೇಣೆ - ಮರದ ಮಧ್ಯಭಾಗದ ಚೇಗಿನಿಂದ ಮಾಡಿದ ಏಣಿ
ತೇರ್ಥ - ತೀರ್ಥ
ತ್ಯೆರಸ್ತು - ತಯ್ಯಾರಿ, ಸಿದ್ಧತೆ
ತೊಡರು - ತೊಡಗು
ತೊ[illegible] - ಒಂದು ಬಗೆಯ ಸ್ಥಾರು, ಮೇಲೋಗರ
ತೋತ್ರಾ - ಸ್ತೋತ್ರ
ತ್ಯೋರ - ತೋರ, ದಪ್ಪದಾದ
ತೌಂಟ್ಗೆ - ತ್ರಿಪದಿಕಾ (ಸಂ) ತವುಂಟಿಕೆ, ತವುಂಟಿಗೆ, ತೇವುಟ್ಗೆ, ತೇವಟಿಗೆ, ತವಟಿಗೆ, ಮೂರುಕಾಲಿನ ಮಣೆ, ಮದುವೆ ಮುಂತಾದ ಶುಭಕಾರ್ಯಗಳಲ್ಲಿ ತಟ್ಟೆಗಳನ್ನಿಡಲು ಬಳಸುವ ಮೂರುಕಾಲಿನ ಮಣೆ, ತ್ರಿಪುಟಿಕೆ, ಚಕ್ಕು ಬಕ್ಕು ಹಾಕಿ ಕುಳಿತು ಊಟಮಾಡುವಾಗ ತಣಿಗೆಯನ್ನು ಇಟ್ಟುಕೊಳ್ಳಲು ಬಳಸುವ ಮೂರುಕಾಲಿನ ಸುಮಾರು ಒಂದು ಅಥವಾ ಒಂದೂವರೆ ಅಡಿ ಎತ್ತರದ ಪುಟ್ಟ ರೌಂಡ್ ಟೇಬಲ್ಲು

ದ

ದಟ್ಟಧರ್ಣಿ - ಬಂಜರುಭೂಮಿ, ಬಂಜೆ
ದಟ್ಟಿ - ಒರಟುವಸ್ತ್ರ
ದಟ್ಟೆ - ದಬ್ಬೆ, ಬಿದಿರುಗಳು
ದಡಗರಿ - ಸಂಭ್ರಮಿಸು
ದಂಡ್ಕಕೆ - ದಂಡೆಗೆ, ಹತ್ತಿರಕ್ಕೆ
ದಡಿಗತನ - ನಾಯಕತ್ವ (?)
ದಂದ್ರಾಳಿ - ಉದಾರವಾಗಿ ಕೇಳದವರಿಗೆ ಕೇಳಿದ್ದನ್ನೇ ಕೊಡುವವಳು
ದಪನ್ - ಶವಸಂಸ್ಕಾರ, ಒಪ್ಪಮಾಡುವುದು
ದಂಬ - ದೇಹ (ಡಿಂಬ : ಸಂ)
ದಯರ - ಧೈರ್ಯ
ದಯವಾಗು - ಪ್ರತ್ಯಕ್ಷವಾಗು
ದರಕ್ಕಿ - ಒಂದು ಜಾತಿಯ ನೀರುಹಕ್ಕಿ
ದರುಸಣೆ - ದರ್ಶನ
ದ್ರಬ್ಬೆಮೆಳೆ - ಬಿದಿರುಮೆಳೆ
ದವಸಾಳಿ - ದವಸವನ್ನು ಉದಾರವಾಗಿ ಅವರಿವರಿಗೆ ಕೊಟ್ಟು ಹಾಳು ಮಾಡುವವಳು

ದಳಾ - ದಳೆ, ಹರಿದುಹೋದ ಎರಡು ಬಟ್ಟೆ ಚೂರು ಗಳನ್ನು ಸೇರಿಸಿ ಹೊಲೆದ ಚೌಕಾಕಾರದ ಬಟ್ಟೆ ತುಂಡು
ದಾತಾನು - ಕೊಡುವವನು
ದಾರ್ಯ - ದಾರಿಯನ್ನು
ದ್ವಾರುಕ್ರು - ದ್ವಾರಪಾಲಕರು
ದಾಸೋಗ - ದಾಸೋಹ
ದಾಸೋವ - ದಾಸೋಹ. ಶರಣನಾದವನು ತಾನು ಗುರುಲಿಂಗ ಜಂಗಮರಿಗೆ ದಾಸನೆಂದು ತಿಳಿದುಕೊಂಡು ಊಟೋಪ ಚಾರಗಳಿಂದ ಸೇವೆ ಮಾಡುವುದು
ದಿಗಬ್ರಮಿಯ - ದಿಗ್ಭ್ರಮೆ
ದಿಡ್ಡಾಗಲ - ದಿಡ್ಡಿಬಾಗಿಲು, ಹೆಬ್ಬಾಗಿಲು ಮುಚ್ಚಿರುವಾಗ ತಿರುಗಾಡಲು ಬಳಸುವ ಕಿಂಡಿ, ಹೆಬ್ಬಾಗಿಲು
ದಿಡ್ಡಿ - ಪ್ರವೇಶ ದ್ವಾರ
ದಿತಿದೀಕ್ಷೆ - ಯಜ್ಞೋಪವೀತವನ್ನು ಧರಿಸುವ ಕಾರ್ಯ
ದಿತಿಸಂಬು - ದ್ವಿತೀಯ ಶಂಭು, ಎರಡನೆಯ ಈಶ್ವರ
ದಿರವಯ - ದ್ರವ್ಯ, ಹಣ
ದಿಸಾ - ದಿವಸ
ದೀಗಾಯ್ಸ - ದೀರ್ಘ ಆಯುಸ್ಸು
ದ್ರೀಯ, ದ್ರೇಯ - ದೇಹ
ದುಗ್ಗಾಣಿ - ತಾಮ್ರದ ಎರಡು ಕಾಣಿ, ಎರಡು ನಾಣ್ಯ
ದುಡಚಿತ್ತ - ದೃಢವಾದ ಮನಸ್ಸು
ದುಡಮನ - ದೃಢಮನಸ್ಸು, ಸ್ಥಿರಚಿತ್ತ
ದುನಿಯಾ - ಪ್ರಪಂಚ
ದುರುಬು - ತುರುಬು
ದೇಕರಿಸು - ತೇಕರಿಸು, ಹೊರಹೊಮ್ಮು
ದ್ರೇಯ - ದೇಹ
ದೇವ್‌ಲಾಯ - ದೇವಾಲಯ
ದೇವಲ್ಕ - ದೇವಾಲಯ
ದೇವುಡಿ ಹಜಾರ - ದೇವಡಿ ಹಜಾರ, ಮನೆ ಮುಂದಿನ ಜಗಲಿಕಟ್ಟೆ
ದೊಕ್ಕೆ - ಪಕ್ಕೆ
ದೊಡ್ಡೆ - ಒಡನೆ, ಕೂಡಲೆ
ದೊಳ್ಳು - ಒಂದು ದೊಡ್ಡಗಾತ್ರದ ಚರ್ಮವಾದ್ಯ
ದೊಂಡೆ - ನುಲಿದುಕೊಂಡಿರುವ
ದೋಣು - ಒಂದು ಚರ್ಮವಾದ್ಯ
ದೋಳು - ಡೋಲು, ಒಂದು ಚರ್ಮವಾದ್ಯ
ದೋಸ್ತಿಗಾರ್ರು - ಗೆಳೆಯರು, ಗೆಳತಿಯರು

ಧ

ಧಾರುವತಿಯಾಗಿ - ಧಾರಾಕಾರವಾಗಿ
ಧೂಳ್ತ - ವಿಭೂತಿ, ಭಸ್ಮ

ನ

ನಗುನ, ನಗ್ಗುನ, ನಗ್ನ - ಲಗ್ನ, ಮದುವೆ
ನಡಟ್ಟಿ - ಹಟ್ಟಿಯ ಮಧ್ಯಭಾಗ, ನಡುಮನೆ
ನಡಾಮಡಿ - ನಡೆಮಡಿ
ನಡಾಂತ್ರ - ಮಧ್ಯಕಾಲದಲ್ಲಿ
ನತ್ತು - ಮರಿಹೇನು
ನದರು - ನಜರು, ಕಾಣಿಕೆ
ನಂದಿವಾಗನ - ನಂದಿವಾಹನ
ನಮಗುಳುಗಾಲ - ನಮಗೆ ಉಳಿಯುವ ಕಾಲ
ನಮ್ಮಕ್ಕ - ನಮ್ಮ ಮಕ್ಕಳು
ನಮ್ಮನ್ಸುನ - ನಮ್ಮ ಮನಸ್ಸಿನ
ನರೀ - ನೆರಿಗೆ, ನೆರಿಗೆಗಳನ್ನು ಸೊಂಟಕ್ಕೆ ಸಿಕ್ಕಿಸಿದಾಗ ಕರೆಯುವ ಬಾಳೆಕಾಯಿ ಎಂಬ ಹೆಸರಿನ ಗಂಟು
ನರ್ಹಳ - ಮನುಷ್ಯನೆಂಬ ಕೀಟ, ನರಕೀಟ, ಕ್ಷುದ್ರಮಾನವ
ನಸುರು - ಸಣ್ಣಮರಿಗಳು, ಸೀರು, ಹೇನಿನ ಮರಿ ಅಥವಾ ತಿಗಣೆಯ ಮರಿ
ನಾಕಪಾಲು - ನಾಲ್ಕುಪಾಲು
ನಾಗವಲ್ಲಿ - ವೀಳೆಯದೆಲೆಯಲ್ಲಿ ಒಂದು ಜಾತಿ
ನಾಗಾವುದು - ನಾಲ್ಕು ಗಾವುದ
ನ್ಯಾಪ್ಲುವಾಗಿ - ಒಂದು ಕಡೆಯಿಂದ
ನಾಮಕರ್ನೆ - ನಾಮಕರಣ
ನ್ಯಾಯದಕಟ್ಟೆ - ಗ್ರಾಮಗಳಲ್ಲಿ ನ್ಯಾಯ ಮಾಡಲು ಸೇರುವ ಚಾವಡಿ
ನಾರಿಕೇಳ - ತೆಂಗು
ನ್ಯಾರುವಾಗಿ - ನೇರವಾಗಿ
ನ್ಯಾರ್ಕೆ - ನೇರಕ್ಕೆ
ನಾವೊಂದಾವಣಿ - ನಾವು ಹೊಂದಾವಣಿ, ಹೊಂದಾಣಿಕೆ ಆಗಿ
ನಿಚ್ಚಯ, ನಿಚ್ಚಾಯ - ನಿಶ್ಚಯ
ನಿಂಬಿಟ್ಟು - ನಿನ್ನನ್ನು ಬಿಟ್ಟು
ನಿಮಾಜು - ನಮಾಜು, ಮುಸ್ಲಿಮರು ಮಾಡುವ ಪ್ರಾರ್ಥನೆ
ನಿಯಾಮತ - ನಿಯಮಿತ, ನಿಯಮಬದ್ಧ
ನಿವೇದ್ಯ - ನೈವೇದ್ಯ, ಅರ್ಪಣೆ
ನಿಸಾನಿ - ಲಾಂಛನ

ನೀವೇದ್ಯ - ನೈವೇದ್ಯ
ನೀಸು - ಅನುಭವಿಸು
ನುಂಕೊಪ್ಪ - ನುಂಗಿಕೊಳ್ಳಪ್ಪ
ನ್ಯೂನತೆ - ಕೊರತೆ, ದೋಷ
ನೂಪು - ಮರಗಿಡಗಳಿಲ್ಲದ, ಏನೂ ಬೆಳೆಯದ ಬರಡು ಭೂಮಿ
ನೆಗಲಾಕೆ - ನಗುವುದಕ್ಕೆ
ನೆಗೆ - ನಗು
ನೆಗ್ದೇಯ ಬೀಳು - ನೆಗೆದುಬೀಳು, ಮರಣಹೊಂದು
ನೆಡಾದ - ನಡೆದುಹೋದ
ನೆನಕ್ಕಿ- ನೀರಿನಲ್ಲಿ ನೆನೆಸಿದ ಅಕ್ಕಿ
ನೆನಗಳ್ಕೆ - ನೀರಿನಲ್ಲಿ ನೆನೆಸಿದ ಕಡಲೆಕಾಳು
ನೆನ್ನಾಲೆ - ನೆನ್ನೆಯ ದಿನವೆ
ನೆಯಮ - ನಿಯಮ
ನೆಸ್ಕೊಂಡು - ನಿಮಿರಿಕೊಂಡು, ನೆಟ್ಟಗಾಗಿ
ನೇಪುಣ್ಸು - ಸ್ಪಷ್ಟವಾಗು
ನೇಮ - ನಿಯಮ
ನ್ಯೆನ - ನಯನ
ನ್ಯೆಮ - ನಿಯಮ
ನೊಕ್ಕೆನೊಗ - ನೊಗಕ್ಕೆ ನೊಗ
ನೊಕ್ಕೆ - ನೊಗದ ಜೊತೆಗೆ ಹೇಳುವ ಪದ
ನೌಪತ್ತು - ಒಂದು ಬಗೆಯ ಚರ್ಮವಾದ್ಯ, ನಗಾರಿ

ಪ

ಪಂಚಭಕ್ಷ್ಯ - ಕಜ್ಜಾಯ, ಒಬ್ಬಟ್ಟು, ಚಿಕಳಿ, ತಂಬಿಟ್ಟು, ಅಪ್ಪಿಟ್ಟು ಎಂಬ ಐದು ಬಗೆಯ ಸಿಹಿ ಅಥವಾ ಅವಲಕ್ಕಿ, ಬೆಲ್ಲ, ಕೊಬರಿ, ಕಡಲೆ ಮತ್ತು ಎಳ್ಳು ಗಳಿಂದ ತಯಾರಿಸಿದ ಒಂದು ಸಿಹಿತಿಂಡಿ
ಪಂಚಾಮೃತ - ಪಂಚಾಮೃತ
ಪಚ್ಚೀಮ - ಪಶ್ಚಿಮ
ಪಂಚೇರು - ಐದು ಸೇರು
ಪಡುಗು - ಬಳಗ, ಪರಿವಾರ
ಪಡುಗ್ವೆಲ್ಲ - ಪಡೆಯೆಲ್ಲ, ಈಶ್ವರನ ಗಣವೆಲ್ಲ
ಪಡ್ಕೊಂಡು - ಬಡಿದುಕೊಂಡು
ಪಣ್ಣಿಕೇಳಲು - ಪಣ್ಣನೆ ಏಳಲು, ಥಟ್ಟನೆ ಏಳಲು
ಪ್ರಣೆ - ಹಣೆ
ಪತ್ತಲ - ತೆಳುವಾದ ಸೀರೆ
ಪತುವಾರ್ತಿ - ಪತಿವ್ರತೆ
ಪತುರೊತೆ - ಪತಿವ್ರತೆ
ಪಂತ್ಕ - ಪಂಕ್ತಿಯನ್ನು
ಪ್ರಂಥ - ಪಂಥ, ಹಟ, ಛಲ
ಪ್ರದಾಕ್ಷಿಣ್ಯ - ಪ್ರದಕ್ಷಿಣೆ
ಪದ್ಮಿನಿ - ಪದ್ಮಿನಿ ಎಂಬ ಹೆಣ್ಣು. ಕಾಮಶಾಸ್ತ್ರದಲ್ಲಿ ಹೇಳಿರುವ ಹಸ್ತಿನಿ, ಚಿತ್ತಿನಿ, ಶಂಖಿನಿ ಮತ್ತು ಪದ್ಮಿನಿ ಎಂಬ ಹೆಣ್ಣು ಜಾತಿಗಳಲ್ಲಿ ಒಬ್ಬಳು. ಇವಳು ಕಮಲನೇತ್ರೆ, ಚಿಕ್ಕದಾದ ಮೂಗಿನ ಹೊಳ್ಳೆ ಉಳ್ಳವಳು, ನಿಬಿಡಸ್ತನಿ, ನೀಳಕೇಶೆ, ತೆಳುವಾದ ದೇಹ ಮತ್ತು ಮೃದುವಾದ ಮಾತಿನವಳು. ಕಮಲದಂತೆ ಸುಗಂಧಿನಿಯಾದ ಇವಳು ಸಂಗೀತಾದಿ ಕಲೆಗಳಲ್ಲಿ ಅಭಿರುಚಿಯುಳ್ಳವಳು. ಅಲ್ಲದೆ ಶಶಜಾತಿಯ ಪುರುಷನಿಂದ ತೃಪ್ತಿಪಡುವವಳು.
ಪ್ರಮದವರೆ - ಪ್ರಸಿದ್ಧರೆ
ಪರ್ಸೆ- ಪರಿಷೆ, ಜಾತ್ರೆ ಜನ
ಪರಕಾರ - ಪ್ರಕಾರ
ಪರಂಗಪೀಠ - ಪರಮಪೀಠ (?)
ಪರಸಾದ - ಪ್ರಸಾದ, ಅನ್ನ, ಊಟ
ಪರಿಯರಿಸೊ - ಪರಿಹರಿಸು
ಪರಿಸಿದ - ಪರಿಶುದ್ಧ
ಪರುಕಾರ - ಪ್ರಕಾರ
ಪಲ್ಲೇತ್ರ - ಬಲ್ಲಿದರ (?)
ಪ್ರವಿ - ಪ್ರಭೆ
ಪ್ರವುತರು, ಪ್ರವುತಾರು - ಪ್ರಮಥರು
ಪ್ರಸ್ತಿ - ಸೋಬನ
ಪಳಾನು - ಪ್ಲಾನು, ಉಪಾಯ, ತಂತ್ರ
ಪಾಡ್ಯ - ಪ್ರಥಮ ದಿನ, ಪಕ್ಷದ ಹದಿನೈದು ದಿನಗಳಲ್ಲಿ ಮೊದಲ ದಿನ
ಪಾತುರ - ಪಾತ್ರೆ
ಪ್ರಾತೀಷ್ಠ್ಯ - ಪ್ರತಿಷ್ಠಾಪನೆ
ಪಾಮರ - ಅಜ್ಞಾನಿ, ಮುಗ್ಧ
ಪಾರ - ಪಹರೆ, ಕಾವಲು
ಪಾರುಮಾಳ - ಪರಿಮಳ, ಸುಗಂಧ
ಪಾಲ್ಕಿಪರ್ವತ - ಶ್ರೀಶೈಲದ ಒಂದು ಬೆಟ್ಟ, ಪಲ್ಲಕ್ಕಿಯಾಕಾರ ದಲ್ಲಿರುವ ಬೆಟ್ಟ (?)
ಪಾಲಾಕಿ - ಪಾಲು ಹಾಕಿ
ಪಾವುಡ - ವಸ್ತ್ರ, ಬಟ್ಟೆ
ಪಾಸಲೆ - ಅಂತರ, ದೂರ

ಪಾಸಿ - ಗಲ್ಲು
ಪ್ರಾಸೋದ - ಪ್ರಸಾದ
ಪಿಚಾತಿ - ಪಿಶಾಚಿ
ಪಿಪಲಿ - ಒಂದು ಪಟ್ಟಣದ ಹೆಸರು
ಪಿಪೀಲಿಕಾ - ಇರುವೆ
ಪಿಲ್ಲಿ - ಕಾಲಿನ ಬೆರಳಿಗೆ ಧರಿಸುವ ಬೆಳ್ಳಿ ಅಥವಾ ಚಿನ್ನದ ಉಂಗುರ
ಪಿಳಾನು - ಉಪಾಯ, Plan
ಪೀಕಿಮರ - ಕೊಂಡಮಾವಿನ ಮರ, ಅಸ್ಸಾರದಮರ
ಪುಟ್ಟೈ - ಬಿದುರಿನ ಹೆಡಗೆ
ಪುಂಡುನಬಿತ್ತ - ಪುಂಡಿಬೀಜ, ಹುರುಳಿಕಾಳು ಜೊತೆ ಹುರಿದು ತಿನ್ನುವ ಬೀಜ, ಚಟ್ನಿಗೂ ಬಳಸುವ ಒಂದು ಧಾನ್ಯ
ಪುಣ್ಯೋಜನ - ಪುಣ್ಯಾಹವಾಚನ, ಮಂತ್ರ ಹೇಳಿಸಿ ದೇವರುಗಳಿಗೆ ಎಣ್ಣೆಮಜ್ಜಣ ಮಾಡಿಸುವ ಒಂದು ಆಚರಣೆ
ಪುಣ್ಯೇಪಾರ - ಪುಣ್ಯಆಪಾರ
ಪುತ್ರಈನೆ - ಮಕ್ಕಳಿಲ್ಲದವಳು
ಪುತ್ತುರುಸಂತಾನ - ಪುತ್ರಸಂತಾನ
ಪುನ್ನಾಗ - ಒಂದು ಬಗೆಯ ಮರ, ಸುರಹೊನ್ನೆ
ಪುರಂದಾಸಾಗಿ - ಬರಿಗೈಯವನಾಗಿ, ನಿರ್ಗತಿಕನಾಗಿ
ಪುರಾತ್ಮರು - ಪುರಾತನರು
ಪುಲಸ್ತ್ಯಾರ - ಪುರಸ್ಕಾರ
ಪೂಜಣೆ - ಪೂಜೆ, ಆರಾಧನೆ
ಪೂರುವ - ಪೂರ್ವ
ಪೃತ್ಮಿ - ಪೃಥ್ವಿ
ಪೆಂಜೆ, ಪೆಂಜು - ಪಂಜು, ದೀವಟಿಗೆ
ಪೆಟಾರಿ - ಪೆಟ್ಟಿಗೆ, ತಿಜೋರಿ
ಪೆಂಡ್ಯ, ಪೆಂಡೆಯ - ಕಾಲ್ಕಡಗ, ಕಾಲಿಗೆ ತೊಡುವ ಬಿರುದಿನ ಬಳೆ
ಪೇತುಪಾಯ - ಭೇದೋಪಾಯ
ಪೈಸಲ್ - ಅಂತಿಮ, ಮುಕ್ತಾಯ
ಪೊತ್ತುರಿಸಿ - ಅಗಲಿಸಿ
ಪೊಸ್ತಾಳೆ - ಬಚ್ಚಿದಳೆ ; ಕಳಚಿದಳೆ
ಪೋರ್ಲೋಮಿ - ಪೂರ್ಣಿಮೆ
ಪೌರ್ವಾಸ - ಪೌರುಷ

ಫ

ಫಳಾರ - ಫಲಾಹಾರ, ಉಪಾಹಾರ
ಫಲ್ಗೇತ್ರಮಠ - ಒಂದು ಮಠದ ಹೆಸರು

ಬ

ಬಗುತ - ಭಕ್ತ
ಬಚ್ಚ - ಏನೂ ಅರಿಯದ ಹುಡುಗ, ಮುಗ್ಧ (<ವತ್ಸ)
ಬಜ್ಜಲ್ಲಂಡ್ಗಾಣೆ - ಬಚ್ಚಲು ಕಂಡಿ ಕಡೆ
ಬಚ್ಚಾಲಿ - ಕಿಡಿಗೇಡಿ, ಹೆಂಗಸರನ್ನು ಬೈಯಲು ಬಳಸುವ ಒಂದು ಬೈಗುಳು
ಬಚಿತ - ಬಸಿತ, ವಿಭೂತಿ
ಬಡಗು - ಉತ್ತರದಿಕ್ಕು
ಬಂಡೆದ್ದು - ವಿರೋಧವಾಗಿ, ದಂಗೆಯೆದ್ದು
ಬಿತ್ತಗಿಲ್ಲ - ಬಿತ್ತುವ ಹಾಗಿಲ್ಲ
ಬತ್ತಾಸು - ಸಕ್ಕರೆಯ ಪಾಕದಿಂದ ಮಾಡಿದ ಬಗೆಬಗೆಯಾಕಾರದ ಬಣ್ಣದ ಸಿಹಿತಿಂಡಿ. ಸಕ್ಕರೆ ಕಡ್ಡಿ, ಸಕ್ಕರೆ ಮಿಠಾಯಿ
ಬದ್ದು - ಬದುಕಿದ್ದು
ಬಂದಳದ ಮೊಸರು - ಬಾಂದಳದ ಮೊಸರು, ನೆಲುವಿನ ಗಡಿಗೆಯಲ್ಲಿರುವ ಮೊಸರು
ಬಂದಿ - ತೋಳಿಗೆ ಧರಿಸುವ ಆಭರಣ
ಬಂದಿನ್ನೆ - ಬಂದ ದಿನದಲ್ಲೆ
ಬಂದುಲು - ಬಂದಳು
ಬಂದೋಬಸ್ತಿ - ಭದ್ರಪಡಿಸು
ಬಯ್ಯ - ಬಾರಯ್ಯ
ಬರಗ - ವ್ಯಾಘ್ರ, ಹುಲಿ
ಬರುಳ್ಕೆ - ಬಳಲಿಕೆ, ಆಯಾಸ
ಬರೂಮಾ - ಬರೋಣ
ಬಲ್ಲ - ಬಲ್ಲಿಗ, ಬಲವುಳ್ಳವನು
ಬಲ್ಲಳ - ಬಲುಆಳ
ಬಲುದ್ರೆ - ಮೆತ್ತಿದರೆ
ಬಲೂಚಾರ - ಬಲಾತ್ಕಾರ, ಒತ್ತಾಯ
ಬವ್ಣುಸು - ಬಯಸು, ಆದರಿಸು
ಬವ್ಣಕ್ಕೆ - ಬಯಕೆ, ಬವಣೆಸುವಿಕೆ
ಬಸುರೊಸಗೆ - ಗರ್ಭಿಣಿ ಹೆಂಗಸಿಗೆ ಮಾಡುವ ಶಾಸ್ತ್ರಗಳು
ಬಸವನ ದಾಳ - ನಂದಿಚಿತ್ರವಿರುವ ಬಾವುಟ
ಬಳ್ಳಕಡ್ಡಿ - ಬರಲುಕಡ್ಡಿ, ಪೊರಕೆ, ಹಿಡುಗಲು
ಬಾಕಾಲು, ಬಾಕುಲು, ಬಾಕ್ಲು - ಬಾಗಿಲು
ಬಾಕು - ಸೊಂಟಕ್ಕೆ ಸಿಕ್ಕಿಸಿಕೊಳ್ಳಬಹುದಾದ ಒಂದು ಬಗೆಯ ಕೈಗತ್ತಿ
ಬಾಗಿನ - ಮುತ್ತೈದೆಯರಿಗೆ ಹೊಸಬಿದಿರು ಮೊರದಲ್ಲಿ ಅರ್ಪಿಸುವ ಮಂಗಳದ್ರವ್ಯ ಹಾಗೂ ಫಲಪುಷ್ಪಾದಿಗಳು
ಬಾಗುಲ್ಲಂಡಾಣೆ - ಬಾಗಿಲು ಕಂಡಿಯ ಕಡೆ

ಬ್ಯಾಗ - ಬೇಗ
ಬಾಚೀಬಂದಿ - ಒಂದು ಬಗೆಯ ಆಭರಣ
ಬಾಸಿ - ಅಗಲಬಾಯಿಯ ದೊಡ್ಡಪಾತ್ರೆ
ಬಾಂಡ್ಯಾಳ - ಬೋಸಿ, ಅಗಲ ಬಾಯುಳ್ಳ ಪಾತ್ರೆ
ಬಾಯ್ಕಟ್ಟು - ದೇವರ ಪೂಜೆಗಾಗಿಯೇ ಮಾಡುವ ಅಡಿಗೆಯ ಸಮಯದಲ್ಲಿ ಆ ಆಹಾರದ ಮೇಲೆ ಉಸಿರು ಬೀಳಬಾರದೆಂದು ಬಾಯಿಗೆ ಬಟ್ಟೆ ಕಟ್ಟಿಕೊಳ್ಳುವುದು, ಪೂಜೆ ಮಾಡುವಾಗಲೂ ಇದೇ ಕ್ರಮ ಅನುಸರಿಸ ಲಾಗುತ್ತದೆ.
ಬಾರಿ - ಕಾಲ್ಕಡಗ, ಕಾಲ್ಚಳೆ
ಬಾರೆ - ಬೋರೆ, ದಿಬ್ಬ
ಬಾರೇಲಿ - ಸನ್ನಿಧಿಯಲ್ಲಿ
ಬಾರ್ಕೋಲು - ಚಾವುಟಿ, ಚರ್ಮದಿಂದ ಮಾಡಿದ ಬೀಸಿ ಹೊಡೆಯುವ ಸಾಧನ
ಬಾವುಣ್ಸು - ಅಭಿಮಾನದಿಂದ ಕಾಣು, ಪ್ರೀತಿಯಿಂದ ಕಾಣು
ಬಾಸರ - ಉಬ್ಬಿಕೊಳ್ಳುವಿಕೆ, ಊತ
ಬಾಳ - ಬಹಳ
ಬಾಳ್ತಾನ - ಬಾಳಾಟ
ಬಿಕ್ರಿ - ಬಿಕರಿ, ಮಾರಾಟ
ಬಿಜಮಾಡು - ದಯಮಾಡು
ಬಿಡಾಲುತೀನಿ - ಬಿಡುತ್ತೇನೆ
ಬಿಡಿ - ಒಂದು ಚರ್ಮವಾದ್ಯ(?)
ಬಿಡ್ಡಿ - ಬಿಡದಿ
ಬಿನ್ಯ - ಭೋಜನ
ಬಿನ್ಯ -ಬಿನ್ನಹ, ಅರಿಕೆ
ಬಿರುದು - ಧಾರ್ಮಿಕ ವಸ್ತುಗಳು
ಬಿಸಾಕಿ - ಬೀಸಾಡಿ
ಬೀಟುಗಣ್ಣಿ - ದೊಡ್ಡಗಾತ್ರದ ಕಣ್ಣುಗುಡ್ಡೆ ಇರುವವಳು
ಬೀರುಗುಮ್ಮಿ - ಸೈನಿಕರು ಬಳಸುವ ಒಂದು ಚರ್ಮವಾದ್ಯ
ಬೀರು - ಬೀಸುವ, ಹೊಡೆಯುವ
ಬುಗುರ್‌ರಾಸಿ - ಬುಗುರಿಯ ತಳ ಮೇಲೆ ಮಾಡಿ ನೆಲದ ಮೇಲಿರಿಸಿದಾಗ ಉಂಟಾಗುವ ಆಕಾರದಲ್ಲಿರುವ ಧಾನ್ಯಗಳ ರಾಶಿ.
ಬುಡಕಾದತ - ಬಿಡುವುದಕ್ಕೆ ಆಗುತ್ತದೆಯೆ ?
ಬುಯಿಲೋಕ, ಬುಯ್ಲೋಕ, ಬೂಯ್ಲೋಕ - ಭೂಲೋಕ
ಬುರುಗು - ಒಂದು ಗಾಳಿ ವಾದ್ಯ, ಒಂದು ಬಗೆಯ ಕಹಳೆ
ಬೂತು - ದೆಯ್ಯ, ಭೂತ
ಬೆಚೆಬೆಣ್ಣೆ - ಬೆಣ್ಣೆಯಲ್ಲಿ ಬಚೆಯನ್ನು ತೇಯ್ದು, ಬಂದ ಗಂಧವನ್ನು ನಾಮಕರಣದ ಸಂದರ್ಭದಲ್ಲಿ ಆ ಮಗುವಿಗೆ, ಆಗ ತಾನೆ ಕರೆದ ಹೆಸರನ್ನು ಹೇಳುತ್ತ ರವಷ್ಟು ಬಚೆಬೆಣ್ಣೆಯನ್ನು ಎಲ್ಲರೂ ತಿನ್ನಿಸುತ್ತಾರೆ
ಬೆಂಡೆ - ಕಿವಿಯಾಭರಣ, ಬೆಂಡಿನಿಂದ ಮಾಡಿದ ಕಿವಿಯ ಆಭರಣ
ಬೆಣ್ಣಿ - ಬೆರಣಿ, ದನಗಳ ಸಗಣಿಯನ್ನು ಅಂಗೈ ಅಗಲ ತಟ್ಟಿ ಒಣಗಿಸಿ ಒಲೆಗೆ ಒಟ್ಟಲು ಬಳಸುವ ಇಂಧನ
ಬೆದ್ದಲ್ಕೆ ಸೌದೆ - ಕೊಂಡಗಳಿಗೆ ಬಳಸುವ ಒಂದು ಕಾಡುಮರದ ಸೌದೆ
ಬೆನ್ನುಳಿ - ಬೆನ್ನಿನ ಭಾಗದಲ್ಲಿ ನೇರವಾಗಿ ಬರುವ ಮೂಳೆಯ ಅಥವಾ ನರಗಳ ಸಾಲು
ಬೆಮುತು - ಬೆವರಿ
ಬೆಮರು - ಬೆವರು
ಬೆರಳಿ - ಬೆಳ್ಳಿ
ಬೆರುಗಾದೊ - ಬಿಗಿದುಕೊಂಡಿದ್ದವು, ಸೆಟೆದುಕೊಂಡಿದ್ದವು
ಬೆಳಕಂತ - ಬೆಳೆದುಕೊಳ್ಳುತ್ತ
ಬೆಳಿಯಾನು - ಬೆಳೆಯುವವನು
ಬೆಳ್ಳಿವಾರ - ಸೋಮವಾರ (?) ಶುಕ್ರವಾರ (?)
ಬೆಳ್ಳು - ಬೆರಳು
ಬೇಡಿ - ಕೋಳ
ಬೇಳ್ಮೆ - ವಿಭೂತಿ, ಮಾಂತ್ರಿಕ ಪುಡಿ
ಬ್ರೇದ - ಭೇದ
ಬೈವಿಲ್ಲ - ಭಯವಿಲ್ಲ
ಬೈಹೊಟ್ಟೆ - ಗರ್ಭಿಣಿಯಾದ ಹೊಟ್ಟೆ
ಬೊಟ್ಟಸ್ಸಿ - ಬೊಟ್ಟನ್ನು ಹಚ್ಚಿ, ಗುರುತು ಮಾಡಿ
ಬೊತ್ತೆ - ಹೊರೆ, ಪಿಂಡಿ
ಬೊಳ್ಳುಬೊಳ್ಳುಗೆ - ಮೆಲ್ಲಮೆಲ್ಲಗೆ
ಬೊಕ್ಷ - ಬೊಕ್ಕಸ
ಬೊಕ್ಷ - ಬೊಗಸೆ
ಬೋದಿನ - ಬಹಳ ದಿನ
ಬೋಮಾನ - ಬಹುಮಾನ, ಹೆಚ್ಚಿನ ಗೌರವ
ಬೋಯಿತಿ - ಬೆಸ್ತರವಳು
ಬೋವರುಸ - ಬಹಳ ವರ್ಷಗಳು
ಬೋವುಸ್ಪೋದ - ಬಯಸಬಹುದೆ ?

ಭ

ಭಗಿನಿ - ಸಹೋದರಿ
ಭಂಗೀತ - ಶೀಲಭಂಗ
ಭಸುಮಂಗ, ಭಸಮಾಂಗ - ವಿಭೂತಿ
ಭಾಂಡ - ತಾಂಬಾಳೆ, ಅಗಲಬಾಯಿಯ ಪಾತ್ರೆ
ಭ್ರಾತೃ - ಸಹೋದರ
ಭಾರತ್ರಾಮಣ್ಯ - ಭಾರತ ಮತ್ತು ರಾಮಾಯಣ
ಭಾರಿ - ಕಾಲಿನ ಆಭರಣ
ಭಾವ್ಲಲ್ಲಿ - ಚಂದದಲ್ಲಿ
ಭಿನ್ಕ - ಭೋಜನ
ಭಿಕ್ಷಾಂದೇಯಿ - ಭಿಕ್ಷಾಂದೇಹಿ
ಭುಜಗ - ಭುಜದಿಂದ ಗಮಿಸುವ ಸರ್ಪ
ಭೂಪೆಟ್ಟಿಗೆ - ವಧುವಿನ ವಸ್ತ್ರಾಭರಣಗಳನ್ನು ಕೊಂಡೊಯ್ಯುವ ಬಿದಿರಿನ ಬುಟ್ಟಿ
ಭೂಮ್ಯಾಗಲ - ಭೂಮಿಯ ಅಗಲದಷ್ಟು
ಭೂಯ್ಲೋಕ - ಭೂಲೋಕ
ಭೇಜ್ಜು - ಭೇದಿಸುವಿಕೆ
ಭೇರಿ, ಭೇರ್ಕಿ - ಒಂದು ಚರ್ಮವಾದ್ಯ

ಮ

ಮಕ - ಮುಖ
ಮಕ್ಕ - ಮಕ್ಕಳು
ಮಕ್ಕರಿ - ಮಂಕರಿ, ಕಸತುಂಬಿ ತಿಪ್ಪೆಗೆ ಹೊರಲು ಬಳಸುವ ಬಿದುರು ಕುಕ್ಕೆ
ಮಕ್ಕರಿಟ್ಟಿ - ಒಂದು ಮಂಕರಿ ಹಿಟ್ಟು ತಿನ್ನುವವಳು
ಮಕ್ಕಾಡೆ - ಮುಖ ಅಡಿಯಾಗಿ
ಮಚ್ಚಿಗ - ಮೋಚಿ
ಮಚ್ಚುರ - ಮತ್ಸರ
ಮಜ್ಜನ - ಸ್ನಾನ
ಮಂಟುಪ - ಮಂಟಪ, ಗರ್ಭಕೋಶ ಎಂಬ ಅರ್ಥದಲ್ಲಿ 'ಅಕ್ಕನಾಗಮ್ಮ' ಕಾವ್ಯದಲ್ಲಿ ಪ್ರಯೋಗವಾಗಿದೆ.
ಮಂಡ ಮಾರುದ್ದ - ತಲೆಗೂದಲ ಉದ್ದಕ್ಕೆ
ಮಂಡ್ಸುದ್ದ - ವಿಧವೆಯಾದವಳ ತಲೆ ಬೋಳಿಸುವುದು
ಮಣಿಹ - ಬಾಗುವಿಕೆ, ನಮಿಸುವುದು
ಮತಿಯೀನ - ಮತಿಹೀನ
ಮದಗ - ತುಂಬಿ ತುಳುಕುವ ದೊಡ್ಡಕೆರೆ
ಮಂದ, ಮಂದದ ಕಟ್ಟೆ - ನ್ಯಾಯದ ಕಟ್ಟೆ
ಮದರಂಗ - ಗೋರಂಟಿ
ಮನಾಳ್ರು - ಮನೆಹಾಳರು
ಮರಸುಕೊಂಡ್ಯಾಗ್ಹೇಳ್ಳಿ - ಮುಚ್ಚುಮರೆ ಮಾಡಿ ಹೇಗೆ ಹೇಳಲಿ ?
ಮರುವಾದಿ - ಮರ್ಯಾದೆ
ಮರುಜವುಳಿಕಡ್ಡಿ - ಮಾರ್ಜಾಲ ದಂಡ
ಮರುತ್ಲೋಕ - ಮರ್ತ್ಯಲೋಕ, ಭೂಮಿ
ಮರುಳು - ಮಡಿಲು
ಮಲ್ಲಿ - ಮನೆಯಲ್ಲಿ
ಮಲ್ಲಿಗೇಂಟ್ - ಮಲ್ಲಿಗೆ ಅಂಟು, ಮಲ್ಲಿಗೆ ಗಿಡದ ಬೇರು
ಮಸ್ತಕ - ಶಿರಸ್ಸು
ಮಳ್ಳೀಸಿ - ಮರಳಿಸಿ, ಕುದಿಸಿ
ಮಳ್ಳು - ಮರಳು, ಮಳಲು
ಮಳ್ಳು - ಮಡಿಲು
ಮಾಗಳಿಬೇರು - ಉಪ್ಪಿನಕಾಯಿಗೆ ಬಳಸುವ ಶುಂಠಿಯಂಥ ಒಂದು ಬೇರು
ಮಾಟಣ - ರಚನಾಕೌಶಲ
ಮಾತುಗೊಂಬುನ ಪಕ್ಷಿ - ಮಾತನಾಡುವ ಪಕ್ಷಿ, ಗಿಳಿ
ಮಾತ್ಮ - ಮಹಾತ್ಮ
ಮಾಪ್‌ಮಾಡಿ - ಕ್ಷಮಿಸಿ
ಮಾಯತ್ತು - ಮಹತ್ತು
ಮಾವಟಿ - ಮಾವಟಿಗ, ಮಾವುತ
ಮಾವ್ಸ - ಮಾಂಸ
ಮಾವ್ಸಾರಾದಿಗಳು - ಮಾಂಸದ ಆಹಾರಾದಿಗಳು
ಮಾಸಾಣ್ಗಟ್ಟೆ - ಮಸಣದ ಕಟ್ಟೆ, ಸ್ಮಶಾನ ಭೂಮಿ
ಮಾಸೇಸ - ಆದಿಶೇಷ ಎಂಬ ಹೆಸರಿನ ಸರ್ಪ
ಮ್ಯಾಸುಗಾರ - ಮೋಸಗಾರ
ಮಿಕಾ - ಮೃಗ, ಜೀವಿ, ಪ್ರಾಣಿ
ಮಿಣಿ - ಚರ್ಮದ ಎಳೆಗಳಿಂದ ಹೊಸೆದ ಹಗ್ಗ
ಮಿದಿಲಿ - ಮೆದುಳು
ಮೀಯಣ, ಮೀಯಾಣ - ಸ್ನಾನ
ಮಿರುಗ - ಮೃಗ
ಮಿಳ್ಳಪ್ಪೆ - ಮಿಳ್ಳೆಯಂತೆ ಕೊಕ್ಕಿರುವ ಪಾತ್ರೆ
ಮುಕುಟ - ಮಕುಟ, ಪೇಟ
ಮುಕ್ಕಟ್ಟೆಮಣ್ಣು - ಮೂರುಸಲ ಬಗೆದ ಮಣ್ಣು
ಮುಕ್ಷ - ಸಹ, ಕೂಡ ಮುಖಿತಃ (?)
ಮುಗಲ್‌ಚಿಕ್ಕಿ - ಮುಗಿಲುಚುಕ್ಕಿ ಎಂಬ ಹೆಸರಿನ ಆರಮನೆ
ಮುಂಚೋಪ - ಮೊದಲೆ ಆಗಿಹೋದ

ಮುಡುಪು - ಸೊಂಟಕ್ಕೆ ಸುತ್ತಿಕೊಳ್ಳುವ ವಸ್ತ್ರ
ಮುಂಡರುಗೆ - ಮುಂಡೆಯರಿಗೆ
ಮುಂಡುಗೂಳು - ಬ್ರಾಹ್ಮಣವಿಧವೆಯರಿಗೆ ಕೊಡುವ ಮನೆಮನೆಯ ಅನ್ನ
ಮುತ್ತುಗದಾಳೆ - ಮುತ್ತುಗದ ಹಾಳೆ, ಮುತ್ತುಗದ ಎಲೆ
ಮುನ್ನಯ್ಯ - ಮಾನ್ಯ, ಪರಾಕ್ರಮಿ, ಮೊನೆಗಾರ
ಮುರುಕಾಟಿ - ಆಮೆ
ಮುರುಗ - ಮೃಗ
ಮುರುಡಿಸರಪ್ಪಿ - ಮುಂಗೈಗೆ ಧರಿಸುವ ಒಂದು ಆಭರಣ
ಮುಸ್ತೀಪು, ಮುಸ್ತೇಪು - ಹತಾರ(?) ಯುದ್ಧ ಸಾಮಗ್ರಿಗಳು (?)
ಮೂಡಪಡ - ಮೂಡಲು ಮತ್ತು ಪಡುವಲ, ಪೂರ್ವ ಮತ್ತು ಪಶ್ಚಿಮ
ಮೂಷಕವಾಹನ - ಇಲಿಯನ್ನು ವಾಹನವಾಗುಳ್ಳ ಗಣಪತಿ
ಮೆಟ್ರೆ - ಕುತ್ತಿಗೆ
ಮೆತ್ತುಗಾಡು - ಮೆಲ್ಲಗೆ ಮಾತಾಡು
ಮೇಕ್ಕೆ - ಮೇಲಕ್ಕೆ
ಮೇರುತ್ಕೆ - ಮೃತ್ತಿಕೆ, ಮಣ್ಣು
ಮೇಲಾಗ್ರ - ಮೇಲೋಗರ, ಅನ್ನದ ಮೇಲೆ ಸುರಿದ ಸಾರು, ಸಾರು ಸೇರಿದ ಅನ್ನ, ಬಿಸಿಬೇಳೆಭಾತ್
ಮೈದಾಳ - ಮೈದುನ (ಮೈದುನ > ಮೈದುಳ > ಮೈದಾಳ)
ಮೈಮ, ಮೈಮೆ - ಮಹಿಮೆ
ಮೈಲೇ - ಒಂದು ಮೈಲಿಯಷ್ಟು ದೂರ
ಮೊಕ್ಕಡನಾಗು, ಮೊಕಾಡನಾಗಿ - ಮುಖ ಅಡಿಯಾಗ ಬೆನ್ನು ಮೇಲಾಗಿ ಬೀಳುವುದು
ಮೊಕುರಂಬ - ದನಗಳ ಮುಖಕ್ಕೆ ಅಲಂಕಾರಕ್ಕಾಗಿ ಹಾಕುವ ಸಾಧನ
ಮೊಕುಚೇರ್ಕೆ - ಮುಖಚರ್ಕೆ
ಮೊಕುದ್ದರ್ಸ್ತು ತೋರು - ಬಾಯಿಯಿಂದ ಕಚ್ಚು (ಹಾವು ಕಚ್ಚಿತು ಎಂಬುದನ್ನು ಹೇಳುವ ಮಾತು)
ಮೊಕ್ಕಸ್ಕು - ದುಕೂಲ
ಮೊಗ - ಮಗು
ಮೊಗದಿಟ್ಟಿ - ಕೋಟೆಯ ಗುಪ್ತದ್ವಾರ
ಮೊಗಳು -. ಎಳನೀರು ಬುರುಡೆಯ ತೊಟ್ಟಿನ ಕಡೆ ರಂಧ್ರ ಮಾಡುವುದು
ಮೊಂಚು - ಮೊನಚು, ಚೂಪಾದ
ಮೊನ್ನರಾಯ - ಮಾನ್ಯನಾದ ರಾಜ
ಮೊನುಗಾರ - ಮೊನೆಗಾರ, ಸೇನಾಧಿಪತಿ, ಧೀರ
ಮೊನುಗಳ್ರು - ಚೋರನಾಯಕರು
ಮೊರಜು - ಏನೂ ಅರಿಯದ ಪಾಯ
ಮೋಡುಬುದ್ಧಿ - ಮೂಢಬುದ್ಧಿ, ಮೂರ್ಖತನ
ಮ್ಯೋಡ - ಮೂಢ
ಮೋರಿ - ಶ್ರುತಿವಾದ್ಯ
ಮೊಳ್ಳು - ಮಡಿಲು

ಯ

ಯಂಡು - ಎರಡು
ಯಾಗ್ರ - ವ್ಯಾಘ್ರ, ಹುಲಿ
ಯಾದಿ - ವ್ಯಾಧಿ, ನೋವು
ಯಾಪಾರಿ, ಯಾಪಾರಗಾರ - ವ್ಯಾಪಾರಿ
ಯಾಸ - ವೇಷ
ಯಾಳ್ಕ - ವೇಳೆ, ಸಮಯ
ಯೋಚಿಣೆ - ಯೋಚನೆ

ರ

ರಕುತ್ಸ - ರಕ್ತವನ್ನು
ರಕುತ್ತೊಳೀಕೆ - ರಕ್ತದ ಒಳಕ್ಕೆ
ರಗುತ - ರಕ್ತ
ರಂಗ್ಯಾಲೆ - ರಂಗೋಲೆ, ರಂಗವಲ್ಲಿ
ರಜ - ಕಸ
ರಜತಪರ್ವತ - ಬೆಳ್ಳಿಬೆಟ್ಟ, ಕೈಲಾಸ
ರತುವ - ವ್ರತವನ್ನು
ರಂಪಿ - ಚರ್ಮವನ್ನು ಕತ್ತರಿಸುವ ಸಾಧನ
ರವರತ್ನ - ನವರತ್ನ. ೧. ವಜ್ರ ೨. ವೈಡೂರ್ಯ ೩. ಗೋಮೇದಿಕ ೪. ಪುಷ್ಯರಾಗ ೫. ಮಾಣಿಕ್ಯ ೬. ಮರಕತ ೭. ನೀಲ ೮. ವಿದ್ರುಮ ಮತ್ತು ೯. ಮೌಕ್ತಿಕ
ರವುಸು - ವೇಗ, ರಭಸ
ರಸಾತಲ - ಪಾತಾಳ
ರಾಕಾಸಿ - ರಾಕ್ಷಸಿ
ರಾಜುಣ - ಒಂದು ಧಾನ್ಯ, ನವಣೆ
ರಾಜೀರುಳ್ಳಿ - ಮಜ್ಜಿಗೆ ಜೊತೆ ಬೆರಸಲು ಬಳಸುವ ದಪ್ಪ ಈರುಳ್ಳಿ
ರಾಡ್‌ಬಾಗ್ಲು - ಹೆಬ್ಬಾಗಿಲು
ರಾಣ್ಯ - ಸೈನ್ಯ
ರಾವ್ಮಡಿ - ಉಗ್ರರೀತಿಯಲ್ಲಿ ಬಟ್ಟೆಯನ್ನು ಮಡಿ ಮಾಡುವಿಕೆ

ರಾವುತ್ರು - ಕುದುರೆ ಸೈನಿಕರು
ರಾಸ್ಯ - ರಾಶಿ
ರಾಸ್ಮಿ - ಸಾಂಬಾರ ಪದಾರ್ಥ
ರ್ಯಾಮ - ರೋಮ
ರುಕ್ಷ - ವೃಕ್ಷ
ರುತಿ - ರುಚಿ
ರುದಯ - ಉದಯ
ರುದಯ - ಹೃದಯ
ರುಂಡಿ - ಕುಂಡಿ
ರುತ್ಯ - ನೃತ್ಯ
ರುಂದಾವನ - ವೃಂದಾವನ
ರೊಕ್ಕ - ಹಣ

ಲ

ಲಕ್ಷತ್ರ - ನಕ್ಷತ್ರ
ಲಗ - ನಗಾ, ಒಡವೆ
ಲಗ್ಗೆಚೆಂಡು - ಕ್ರಿಕೆಟ್ ಹೋಲುವ ಆಟ
ಲತ್ತೆ, ಲತ್ತಮ್ಮ - ಅತ್ತೆ, ಅತ್ತಮ್ಮ
ಲಪ್ಪಾಯ್ಸು - ಅಪಹರಿಸು
ಲಾಗೋಡು - ವೆಚ್ಚ
ಲಾಣ್ಯ - ನಾಣ್ಯ
ಲಾದ, ಲಾದು - ನಾದ, ಶಬ್ದ
ಲಾಲೆ - ನಾಲೆ, ಕಾಲುವೆ
ಲ್ಯಾಪ್ಸೆ - ಲೇಪನ
ಲಿಗ - ನಿಗ, ಎಚ್ಚರ
ಲೆಂಗುನ್ಸೆ - ನೆಗೆದು, ಹಾರಿ
ಲುಕ್ಸಾನು - ನಷ್ಟ

ವ

ವಕ್ಕಳಗನೇಗೆ - ಒಕ್ಕಳ ಹಣಕ್ಕೆ, ಒಂದು ಕೊಳಗ ಹಣಕ್ಕೆ
ವಂಚುಣಿಗಾರ - ವಂಚನೆ ಮಾಡುವವನು, ಮೋಸಗಾರ
ವಣೆ - ನೋಡಿ : ಒಣೆ
ವರ್ತನೆ - ನಿಗದಿತವಾದ ರೀತಿಯಲ್ಲಿ ಪ್ರತಿನಿತ್ಯ ಹಾಲು ಕೊಟ್ಟು ವಾರಕ್ಕೊಂದು ಸಲ ಅಥವಾ ತಿಂಗಳಿಗೊಂದು ಸಲ ಹಣವನ್ನು ಪಡೆದುಕೊಳ್ಳುವ ಪದ್ಧತಿ
ವಮುಸ - ವಂಶ
ವರಣ - ವರ್ಣ, ಬಣ್ಣ
ವಸ್ತು - 'ಪ್ರಾಣ' ಎಂಬ ಅರ್ಥದಲ್ಲಿ ಬಳಕೆಯಾಗಿದೆ
ವಸ್ತ - ವತ್ಸ, ಮಗು
ವಸ್ತುರ - ವಸ್ತ್ರ
ವಯ್ಸು - ವಹಿಸು
ವೃಷಭಾರೂಢ - ನಂದಿವಾಹನನಾದ ಈಶ್ವರ
ವಾಕ್ದಾನ - ಮಾತು
ವಾಕುದಾನ - ವಾಗ್ದಾನ, ಭರವಸೆ
ವಾಕುವಾಗಿ - ಒಂದು ಕಡೆಯಿಂದ
ವಾಂಕಾರ - ಬವಣೆ, ಕೋಟಲೆ, ಕಷ್ಟ
ವಾಗನ - ವಾಹನ
ವಾಟ - ಓಟ
ವಾಡ್ಕೆ - ವಾಡಿಕೆ, ರೂಢಿ
ವಾದಕ್ಕೆ - ಓಮು
ವಾಮ - ಹೋಮ
ವಾರಚ್ಚು - ಒರೆಯಾದ ಭಾಗ, ತುಸುವೇ ಪಕ್ಕ
ವಾರದಾನ್ಯ - ಒಂದೊಂದು ಮನೆಯಲ್ಲಿ ಒಂದೊಂದು ದಿನದಂತೆ ಪ್ರತಿಮನೆಯಲ್ಲೂ ಅನ್ನಬೇಡಿ ಪಡೆದು ಜೀವನ ನಡೆಸುವುದು
ವಾರ್ದಲ್ಲಿ - ಒರೆಯಾಗಿರುವ ಒಂದು ಸ್ಥಳದಲ್ಲಿ
ವಾಲಿ - ಓಲೆ, ಪತ್ರ
ವಾಸಿಗೆ - ವಶಕ್ಕೆ
ವಾಸ್ದೇವ - ವಾಯುದೇವ, ಗಾಳಿ
ವ್ಯಾಳ್ಯ - ವೇಳೆ, ಸಮಯ
ವ್ಯಾಮೋಗ - ವ್ಯಾಮೋಹ
ವೆಳಸಾಯ - ವ್ಯವಸಾಯ
ವೇಪಾರ - ವ್ಯಾಪಾರ
ವೈರಾಣ್ಯ - ವೈಡೂರ್ಯ
ವೈವಾಟು - ವಹಿವಾಟು
ವೋಳ್ಗೆ, ವಾಳ್ಗೆ - ಬಾಳ್ಗೆ, ಬಾಳಲಿ

ಶ

ಶಕ್ಯ - ಶಕ್ಯ, ಸಾಧ್ಯ
ಶಬ್ರುರು - ಸುಲಭದವರು, ಸೂಬರದವರು
ಶ್ರಮದವರೆ - ಸಮಾನರೆ
ಶ್ವಪಚ - ನಾಯಿಮಾಂಸ ಭಕ್ಷಕ
ಶಿವಾಗಾಳೆ - ಶಿವನ ಹೆಸರನ್ನು ಮೊಳಗಿಸುವ ಕಹಳೆ, ಓಂಕಾರ ಹೊರಡಿಸುವ ಕಹಳೆ

ಸ

ಸಂಕುನ - ಶಂಖಿನಿ ಜಾತಿಯ ಹೆಣ್ಣು. ಕಾಮಶಾಸ್ತ್ರದಲ್ಲಿ ಹೇಳಿರುವ ನಾಲ್ಕು ಜಾತಿಯ ಹೆಣ್ಣುಗಳಲ್ಲಿ ಒಬ್ಬಳು. ಇವಳು ವಿಶಾಲಾಕ್ಷಿ, ಮಹಾಸುಂದರಿ, ಕಾಮೋಪ ಭೋಗ ರಸಿಕೆ, ಗುಣಶೀಲಯುಕ್ತೆ, ಕ್ಷಾರ ಗಂಧಯುಕ್ತಳಾದ ಇವಳು ವೃಷಭ ಜಾತಿಯ ಪುರುಷನಿಂದ ತೃಪ್ತಿ ಪಡುತ್ತಾಳೆ.

ಸಂಗ್ಯ, ಸಂಗುಟ - ಸಂಕಟ

ಸಗುತಿ - ಶಕ್ತಿ

ಸಡಾರ್ನೆ - ಸಡನ್ನಾಗಿ, ಕೂಡಲೆ

ಸಣ್ಣಿಸು - ನುಣ್ಣಗಾಗಿಸು

ಸಣ್ಮುಕ - ಷಣ್ಮುಖ

ಸಂತರುಸು - ಸಂತೈಸು

ಸತ್ತಿಗೆ - ಛತ್ರಿ

ಸಂತುರ್ಸಿ - ಸಂತೈಸಿ, ಸಮಾಧಾನಪಡಿಸಿ

ಸಂದಲಿ - ಸಂಜೆಯಲ್ಲಿ

ಸಂದಾನ - ಸನ್ನಿಧಾನ, ಸಮೀಪ

ಸಂದೀಕೆ - ಸಂಜೆಗೆ

ಸಂದು - ಸಂಧಿ, ಅಧ್ಯಾಯ

ಸಂದೇಗ - ಸಂದೇಹ

ಸಂದೋದ - ತೀರಿಕೊಂಡ, ಮರೆಯಾದ

ಸಂಧನಕೆ - ಸನ್ನಿಧಾನಕ್ಕೆ, ಸಮೀಪಕ್ಕೆ

ಸಂದರ್ಪು - ಸಂದರ್ಭ

ಸನ್ಯ - ಸನ್ನೆ, ರೀತಿ

ಸನ್ನಿಪು - ಸಮೀಪ

ಸನ್ನುದಾನ - ಸನ್ನಿಧಾನ

ಸನ್ನೇಸಿ - ಸಂನ್ಯಾಸಿ

ಸಪ್ತ - ಶಬ್ದ

ಸರ್ಪದಷ್ಟ - ಹಾವು ಕಚ್ಚುವಿಕೆ

ಸಬ - ಶವ, ಹೆಣ

ಸಬ್ತ - ಶಬ್ದ

ಸಬಾರಿ - ಸವಾರಿ

ಸಬುಸ್ತರು - ಸಮಸ್ತರ

ಸಮಜಿನ - ಹದಿನೈದು ದಿನ, ಒಂದು ಪಕ್ಷ

ಸಂಮರ - ಸಂಹಾರ, ನಾಶ

ಸಮ್ಮಾಳ - ಚಮಾಳ, ಒಂದು ಚರ್ಮವಾದ್ಯ

ಸಮ್ತಿ - ಶಾಂತಿ, ಸಮಾಧಾನ

ಸಮ್ಮೋಗ - ಸಮ್ಮುಖ

ಸಮೊತ್ತು, ಸರೊತ್ತು - ಸಮಹೊತ್ತು, ಸರಿಹೊತ್ತು, ಮಧ್ಯರಾತ್ರಿ

ಸರಕ್ಕಿ - ಸರಿಯಾದ ಅಳತೆಯ ಅಕ್ಕಿ

ಸರುವರ - ಸರೋವರ

ಸಲಗು - ಸಲಹು

ಸಲೀರ - ಶರೀರ

ಸಲುವಾಲೆ - ಸಲಹಲೆ ? ಕಾಪಾಡಲೆ ?

ಸಲುಸ್ಕೇಳಿ - ಸಲ್ಲಿಸಿಕೊಳ್ಳಿರಿ

ಸಂವರ - ಸಂಹಾರ

ಸರ್ವಾರ್ - ಸರೋವರ

ಸವ, ಸವ್ವ - ಶವ, ಹೆಣ

ಸವೀಕ್ಯ - ಸೌಖ್ಯ

ಸವುಪೀಠ - ಸಮಸ್ಥಾನ

ಸ್ವಾಕ - ಶೋಕ

ಸಾಚುವಾದ್ರೆ - ಸಹಜವಾದರೆ

ಸಾಂತಿ - ಶಾಂತಿ

ಸಾರ್ದೂಲ - ಶಾರ್ದೂಲ, ಹುಲಿ

ಸ್ವಾನ - ಸ್ನಾನ

ಸಾಪ - ಶಾಪ

ಸಾಪುಳಿಸಿ - ಶಪಿಸುತ್ತ

ಸಾಬಾರಿ - ಸವಾರಿ, ತಿರುಗಾಟ, ಸಂಚಾರ

ಸಾಯ - ಸಹಾಯ

ಸಾಯ್ವಾಗು - ಸಹಾಯವಾಗು

ಸಾರಗನ್ನಿಂಡೆ - ಸಾರಗಗಳು ಗುಂಪೆ

ಸಾರ್ಗೆ - ಹೊಲಗಳ ಸಾಲು

ಸ್ವಾಲೆ - ಈರುಳ್ಳಿಸಿಪ್ಪೆ, ಸಿಲುವೆ

ಸಾರಣೆ ಕಾರಣೆ - ಮನೆಯ ನೆಲವನ್ನು ಸಗಣಿಯಿಂದ ಸಾರಿಸುವುದು ಮತ್ತು ಗೋಡೆಯ ತಳದಿಂದ ೧ ½ ಅಥವಾ ೨ ½ ಅಡಿ ಎತ್ತರದ ಗಾರೆಯ ಮೇಲುಕಟ್ಟಿನ ಉದ್ದಕ್ಕೂ ಬಣ್ಣ ಬಣ್ಣದ ಚಿತ್ರಗಳ ಅಲಂಕರಣ.

ಸಾರೋಟು - ಕುದುರೆಗಾಡಿ

ಸಾವ್ಗೆ - ಸೇವುಗೆ, ಶ್ಯಾಮಿಗೆ

ಸಾಸಕ್ಕಿ - ಸೇಸೆ, ಅಕ್ಷತೆ

ಸಾಸಾಣ, ಸಾಸಾನ - ಶಾಸನ

ಸಾಸಾರನಾಮ - ಸಹಸ್ರನಾಮ

ಸಾಸ್ತ್ರಿಗ - ಜ್ಯೋತಿಷಿ

ಸಾಸ್ರೋಳು - ಸಹಸ್ರ ಹೋಳು, ಸಾವಿರ ಚೂರು

ಸ್ಯಾಂತಾನ - ಸಂತಾನ

ಸಿಕ್ಕಟ್ಟೆ - ತಲೆಗೂದಲಿನ ಸಿಕ್ಕನ್ನು ಬಿಡಿಸಲು ಬಳಸುವ ಮರದ ಉದ್ದನೆಯ ದೊಡ್ಡಹಲ್ಲಿನ ಹಣಿಗೆ
ಸಿತಿ - ಸ್ಥಿತಿ
ಸಿದಿಗೆ - ಚರ್ಮದ ಚೀಲ
ಸಿನೇಯುತ - ಸ್ನೇಹಿತ
ಸಿನೇಹ್ತ - ಸ್ನೇಹಿತ
ಸಿಬ್ಬರಿ - ಬೇಸರ
ಸಿಬ್ರಿ - ಬೇಸರ
ಸಿಬುಲಕ್ಕಿ - ಒಂದು ಪಕ್ಷಿ
ಸಿರಂಜಾಯ - ಚಿರಂಜೀವಿ
ಸ್ಥಿರಂಜಿಯಾಗು - ಚಿರಂಜೀವಿಯಾಗು, ಶಾಶ್ವತವಾಗು
ಸಿರೀಯ - ಸೀರೆಯನ್ನು
ಸಿರುಂದಿ - ಚಿರಂಜೀವಿ
ಸಿರುಸೇದ್ನೆ - ಶಿರಃಛೇದನ
ಸ್ರಿಷ್ಟಿ - ಸೃಷ್ಟಿ
ಸಿವ್ಯಾಸನ - ಸಿಂಹಾಸನ
ಸಿವುರು - ತೆಳ್ಳನೆಯ ಚಕ್ಕೆ
ಸಿವ್ವ, ಸಿವುಡು - ಸಿಂಬೆ
ಸಿಸುಮಕ್ಕ - ಶಿಷ್ಯರು, ಮಕ್ಕಳು
ಸಿಳ್ಳು - ಸಿಡಿಲು
ಸಿಳ್ಳುಕುಡ - ಸಿಡಿಲಿನ ಕುಡಿ
ಸುಂಡೇಕಾಯಿ - ಬದನೇಕಾಯಿ ಜಾತಿಯ ಗೋಲಿ ಗಾತ್ರದ ಕಾಯಿ
ಸುತ್ತಾ - ಸುತ್ತುತ್ತ
ಸುತಿ - ಸ್ತುತಿ
ಸುಬಾ - ಶುಭ
ಸುಬುಗಳಿಗೆ - ಶುಭಘಳಿಗೆ
ಸ್ರುಷ್ಟಿ - ಸೃಷ್ಟಿ
ಸುಲಿಪಲ್ಲು - ಶುಚಿಮಾಡಿದ ಹಲ್ಲು
ಸುಲುದು - ಶುಚಿ ಮಾಡಿಕೊಂಡು (ಹಲ್ಲುಸುಲಿ = ಹಲ್ಲುಗಳನ್ನು ಉಜ್ಜಿ ಶುಚಿಗೊಳಿಸು)
ಸುವ್ವನ್ವಾನ - ಸುಯಿಧಾನ, ಗುರು ಲಿಂ ಜಂಗಮರಿಗೆ ಮಾಡುವ ನೈವೇದ್ಯ
ಸುವ್ವುದಿನ - ಶುಭದಿನ
ಸುಳ್ಳ - ಸುಳಿವನ್ನು
ಸುಳುಕ್ಕೆಯ - ಕೊಡಹೊತ್ತಿರುವವರು ಎರಡು ಕೈಗಳನ್ನೂ ಬೀಸುತ್ತ ಬಿಂಕದಿಂದ ಹೋಗುವುದು
ಸೂಮೂರ್ತ - ಸುಮುಹೂರ್ತ
ಸೂರಿಚಂದ್ರ - ಸೂರ್ಯ ಚಂದ್ರ
ಸೂರಿದೇವ - ಸೂರ್ಯದೇವ
ಸೂರಿಪಾನಿ - ದೇವರ ಅಥವಾ ರಾಜಮಹಾರಾಜರ ಮೆರವಣಿಗೆಯಲ್ಲಿ ಗೌರವಾರ್ಥವಾಗಿ ಹಿಡಿದು ತರುವ ಛತ್ರ, ಚಾಮರಗಳ ಜೊತೆಯಲ್ಲಿರುವ ಒಂದು ಫಲಕ
ಸೂಲ - ಶೂಲ, ಅಪರಾಧಿಗಳನ್ನು ಏರಿಸಿ ಕೊಲ್ಲಲು ಬಳಸುವ ಮೊನಚಾದ ಕಬ್ಬಿಣದ ಕಂಬ
ಸೂಲು - ಉಸಿರು
ಸೂಸ್ತ್ರ - ಸೂತ್ರ, ದಾರ
ಸೆಂಗಡ - ಸಂಗಡ
ಸೆಡಗರಿಸಿ - ಸಡಗರದಿಂದ
ಸೆಡೆ - ಹೆಡೆ, ಹಾವಿನಹೆಡೆ
ಸ್ಮೆತ - ಸಹಿತ
ಸ್ಮೆತ್ಯಾಗಿ, ಸ್ಮೆತುವಾಗಿ - ಸಹಿತವಾಗಿ, ಜೊತೆಯಾಗಿ
ಸೊಂಡೆಹಕ್ಕಿ - ಮುಖವನ್ನು ಮುಚ್ಚಿಕೊಳ್ಳುವ ಒಂದು ಸಣ್ಣ ಹಕ್ಕಿ, ಜಂಡೆಹಕ್ಕಿ
ಸೊಪ್ಪುನ - ಸ್ವಪ್ನ, ಕನಸು
ಸೊಮ್ಮುಸೋದ್ರ - ಸೋದರ ಸಂಬಂಧ
ಸೊರಣೆ - ಸ್ಮರಣೆ, ಧ್ಯಾನ
ಸೊರಣೆ - ಸೊರಗರೆಯುವಿಕೆ
ಸೊರುಗ - ಸ್ವರ್ಗ
ಸೊಲುಗಿಸ - ಒಂದು ಸೊಲುಗೆಯಷ್ಟು, ವಿಷ
ಸೊಲುಗೆ - ಒಂದು ಅಳತೆಯ ಸಾಧನ
ಸೊಲುಪ, ಸೊಲೂಪ - ಸ್ವಲ್ಪ
ಸೊವರುಣ - ಸ್ವರ್ಣ, ಚಿನ್ನ
ಸೊವರುಣಪುರ - ಸುವರ್ಣಪುರ, ಸೊನ್ನಲಿಗೆ
ಸೊಳ್ಳು - ಸೊಡರು, ದೀಪ
ಸೋಗಾಲು - ಸೋಗಲಕ್ಕಿ, ಮಡಿಲಕ್ಕಿ
ಸೋತ್ರ - ಸ್ತೋತ್ರ
ಸೋರ್ಮುಡಿ - ನೀಳವಾದ ಕೇಶರಾಶಿ
ಸೋಮ್ಮಾಣಿ - ಸಾಮ್ಮಾಣಿ
ಸೌತಿ - ಸವತಿ, ಸಹಪತ್ನಿ
ಸೌಬರ್ಸಿ - ಜೊತೆಗೂಡಿಸಿ

ಹ

ಹಗ್ರಾಣ - ಕಫ, ಹಗರಣ
ಹಂಗಾವ ಮ್ಯಾಲೆ - ಹಾಗಾವ ಮೇಲೆ

ಹಂಚಿಕಂತೆ - ಜೋಳಿಗೆ
ಹಟ್ಟಿ - ಮನೆ
ಹಡಿಯಾಲು ತಾಳಿ - ಪಡೆಯುತ್ತಾಳೆ
ಹಡೀತಾರೆ - ಪಡೆಯುತ್ತಾರೆ
ಹಣಸು - ಹಲಸಿನ ಹಣ್ಣು
ಹಂದರಿಕೆ - ಚಪ್ಪರ
ಹದ್ದುಗೆ - ಗಡಿ
ಹರದಿ - ಮುತ್ತೈದೆ
ಹರವಿ - ಮಣ್ಣಿನ ಗಡಿಗೆ
ಹರಿಣಿ- ಅರಣಿಗಡಿಗೆ, ಕಲಸ
ಹರ್ಲೀಸ - ಖಂಡಿತವಾಗಿ
ಹರುವಾಣ - ತಣಿಗೆ, ತಟ್ಟೆ
ಹರುಗ್ಲ - ತೆಪ್ಪ
ಹರುಸಾ - ಒಳ್ಳೆಯದಾದ (?)
ಹರುಳ್ಕೆ - ಅಳಲಿಕೆ, ಯಾತನೆ
ಹವಣಲ್ಲ- ಎಷ್ಟೆಂಬ ಲೆಕ್ಕವಿಲ್ಲ
ಹಸಳೆ - ಚಟ್ಟ
ಹಸುರಾಣಿ ಚಪ್ಪರ - ಹಸಿರುವಾಣಿ ಚಪ್ಪರ, ಬಾಳೆಕಂಬ ತೆಂಗಿನಗರಿ, ಮಾವಿನ ಸೊಪ್ಪು ಮುಂತಾದವುಗಳಿಂದ ಹಾಕಿದ ಚಪ್ಪರ
ಹಸ್ತುನ - ಹಸ್ತಿನಿ, ಕಾಮಶಾಸ್ತ್ರದಲ್ಲಿ ಹೇಳಿರುವ ನಾಲ್ಕು ಬಗೆಯ ಹೆಣ್ಣುಗಳಲ್ಲಿ ಒಂದು ಬಗೆ. ಇವಳು ಸ್ಥೂಲಾಧರೆ, ಸ್ಥೂಲನಿತಂಬಭಾಗೆ, ಸ್ಥೂಲಕುಚೆ, ಸುಶೀಲೆ, ಕಾಮೋತ್ಸುಕೆ, ಮದದಗಂಧವುಳ್ಳ ಇವಳು ಅಶ್ವಜಾತಿಯ ಪುರುಷನಿಂದ ತೃಪ್ತಿಪಡುತ್ತಾಳೆ.
ಹ್ಯಾಪುಮೋರೆ - ಕಂದಿದ ಮುಖ
ಹಾರ - ಆಹಾರ
ಹಾರುದಗಿ - ಪೂರ್ಣವಾಗಿ ತೆರಿದಿಡು
ಹಾಲಾಗ್ರ - ಹಾಲೋಗರ
ಹಾಸಣಿಕೆ - ಹಾಸಿದ ಚಾಪೆ, ಹಾಸಿದ ರತ್ನಗಂಬಳಿ
ಹಾಸರೇಸದ ಮಾತು - ನಕಲಿ ಮಾತು, ಹಾಸ್ಯದ ಮಾತು
ಹಿಟ್ಟಿಕ್ಕ - ಹಿಟ್ಟು, ನುಂಗಲು ಕಾದಿರುವವನು
ಹಿಂಡ್‌ಗೂಡುಸು - ಸತ್ತವರಿಗೆ ಉತ್ತರ ಕ್ರಿಯಾದಿಗಳನ್ನು ಮಾಡಿ ಹಿಂದೆ ಸತ್ತು ಸ್ವರ್ಗದಲ್ಲಿರುವವರ ಜೊತೆಗೆ ಸೇರಿಸುವುದು
ಹಿಣ್ಣು - ಸೂಜಿಯಲ್ಲಿ ಕಣ್ಣಿನ ಕಡೆಯ ದಿಂಡು
ಹಿಂದ್ಮುಗ - ಹಿಂದುಮುಂದಕ್ಕೆ ಮುಂದು ಹಿಂದಕ್ಕೆ
ಹಿರಾಳು, ಹಿರುಳು - ಹಿಣ್ಣಲ್ಲು, ಹೋರಿಯ ಬೆನ್ನಿನ ಮುಂತುದಿಯಲ್ಲಿರುವ ಡುಬ್ಬು
ಹಿವ್ಸ - ಹಿಂಸೆ, ಒತ್ತಾಯ
ಹುಸ್ನೇಗ - ಹುಸಿನಗು
ಹುಲಸೀಗೆ - ಹುಲ್ಲು ಮತ್ತು ಸೀಗೆಮೆಳೆ
ಹುಲಿಮುಖ, ಹುಲುಮುಖ - ಕೋಟೆಯ ಹೆಬ್ಬಾಗಿಲು
ಹುಲುಸಾಲಿ - ಫಲವತ್ತಾಗಿ ಬೆಳೆಯಲಿ
ಹುಂಡಿ - ಕುರಿಗಳನ್ನು ಕೂಡುವ ಗೂಡು, ಕುರಿಕೊಟ್ಟಿಗೆ
ಹೆಗಲಸುಬೆ - ಹೆಗಲಿನಲ್ಲಿ ನೇತುಹಾಕಿಕೊಳ್ಳುವ ಹಸುಲೆ ಚೀಲ, ಗೋಣಿಚೀಲ
ಹೆಬ್ಬೆ - ಹೆಮ್ಮೆ, ಅಹಂಕಾರ
ಹೆಟ್ಟೀದ - ತಿವಿದ
ಹೆಬ್ಬರೆ - ಹಿರಿದು + ಪರೆ, ದೊಡ್ಡಹರೆ
ಹೋಯ್ತಾವು - ಹೋಗುವಲ್ಲಿ
ಹೊಟ್ಟುಬ್ಯಾನೆ - ಹೊಟ್ಟೆನೋವು
ಹೊಡಬಾಳು - ಅಸಾಧ್ಯ ಕಷ್ಟ
ಹೊಡೆತೀತು - ಹೊಡೆಯುತಿತ್ತು, ಕೂಗುತಿತ್ತು
(ಪ್ರಯೋಗ : ಕಾಕುಹೊಡಿ - ಕಾಕುಹಾಕು ; ನಗಾಹೊಡಿ - ನಗೆಯಾಡು, ನಗಾಡು)
ಹೊಂಡವು - ಹೊರಟರು
ಹೊಣೆ - ಒನಿ, ಒಣೆ, ವಣೆ. ದವಸವನ್ನು ಮೊರದಲ್ಲಿಟ್ಟು ಕೊಂಡು ಬಲಕ್ಕೂ ಎಡಕ್ಕೂ ಆಡಿಸುತ್ತ ಕಸಕಲ್ಲು ಗಳನ್ನು ಬೇರ್ಪಡಿಸಿ ಶುದ್ಧೀಕರಿಸುವುದು
ಹೊಪ್ಪಲೆ - ಹೊಪ್ಪಳಿ, ಗುಳ್ಳೆ
ಹೊರಕೆ - ಪದರು
ಹೊರಗಾಡೆಗಾದೆ - ಮುಟ್ಟಾದ, ರಜಸ್ವಲೆಯಾದೆ
ಹೊರುವನ್ನು - ಹೊರೆಯನ್ನು
ಹೊಸಾಲು - ಹೊಸ್ತಿಲು
ಹೊಸುಗು - ರುಬ್ಬು, ಅರೆಯುವುದು
ಹೊಯ್ತಾವ ಹೋಗುವಲ್ಲಿ, ಹೋದ ಕಡೆಯಲ್ಲಿ
ಹೊಳ್ಳು - ಹೊರಳು



ಕೂಡಲಸಂಗಮಕೆ ಹೋಗಿ ಬರಬೇಕು

ಹಾಸುಗಲ್ಲಿನ ಮ್ಯಾಲ ಹಾದು ಹೋದವನ್ಯಾರೊ
ಪಾದ ಮೂಡ್ಯಾವು ಪರಿಪರಿಯ - ನಮ್ ಬಸವ
ಹಾದು ಹೋಗ್ಯಾನೊ ಜಳಕಕ |

ಬೆಳ್ಳನ್ನ ಎರಡೆತ್ತು ಬೆಳ್ಳಿಯ ಕೋಡಣಸು
ಹಳ್ಳದ ಹೊಲವ ಹರಗ್ಯಾವೋ - ನಮ್ ಬಸವನ
ತಳ್ಳನ್ನ ಹೊಟ್ಟ ಹಸಿದಾವೋ |

ಬಸವ ಬಂಡಿಯನೇರಿ ಶಿವನು ನಂದಿಯನೇರಿ
ಪಾರ್ವತದೇವಿ ರಥವೇರಿ - ಬರುವಾಗ
ಬಂದಂತ ಮೋಡ ಮರೆಯಾದೊ |

ಕೋಡನು ತಿರುವೂತ ಬಾಲವ ಬೀಸುತ
ಬಸವ ಬಂದಾನೊ ಬಣವೀಗೆ - ಮೆಟ್ಟಿಮೇಯಾಕೆ
ನೀನಾರ ಮಗನೋ ಚನಬಸವ |

ಸಂಗಮಕೆ ಹೋಗದಕೆ ಸಂಗಡ ಮಗಬೇಕು
ತಂಬೀಗೆ ಹಿಡಿಯಾಕೆ ಸೊಸಿಬೇಕು - ಕೂಡಲ
ಸಂಗಮಕೆ ಹೋಗಿ ಬರಬೇಕು |

ಡಾ. ಪಿ.ಕೆ. ರಾಜಶೇಖರ ಅವರು ಕನ್ನಡ ಜಾನಪದ ವಿದ್ವಾಂಸರಲ್ಲಿ ಬಹಳ ಮುಖ್ಯರು. ಅನೇಕ ವರ್ಷಗಳಿಂದ ಜಾನಪದವನ್ನೇ ಉಸಿರನ್ನಾಗಿ ಮಾಡಿಕೊಂಡಿರುವ ಇವರ 'ಜನಪದ ಶರಣ ಕಾವ್ಯಗಳು' ಒಂದು ಅಪರೂಪದ ಕೃತಿ. ಇಲ್ಲಿ ಪ್ರಸ್ತುತ ಬದುಕಿನ ಸಮಸ್ಯೆ–ಸವಾಲುಗಳನ್ನು ಕುರಿತಾದ ಚರ್ಚೆಗೆ ಅತಿಮುಖ್ಯವಾದ ತಾತ್ತ್ವಿಕ ನೆಲೆಗಟ್ಟುಗಳನ್ನು ಒದಗಿಸಿಕೊಡುವ ಮೂಲಕ ಸಾರ್ಥಕ್ಯವನ್ನು ಪಡೆದುಕೊಳ್ಳುವುದು ಗಮನಾರ್ಹ. ಸಮಾನತೆಯ ಸಂಸ್ಕೃತಿಯನ್ನು ಸಂಸ್ಥಾಪಿಸಲು ಅಹರ್ನಿಶಿ ದುಡಿದ ಬಸವಣ್ಣ ಮತ್ತು ಆತನ ಸಮಕಾಲೀನ ಶರಣರ ಜೀವನ ಕಥಾನಕವನ್ನು ಇಲ್ಲಿನ ಕಾವ್ಯಗಳು ನಿರೂಪಿಸುತ್ತವೆ. ಹನ್ನೆರಡನೆಯ ಶತಮಾನದ ಚರಿತ್ರೆಯನ್ನು ಹೇಳುವುದು ಇಲ್ಲಿ ಮುಖ್ಯವಾಗುವುದಿಲ್ಲ. ಶರಣ ಧರ್ಮದ ಪ್ರಧಾನ ಧೋರಣೆಯಾಗಿದ್ದ 'ಸಮಾನತೆಯ ಸಮಾಜ' ನಿರ್ಮಾಣದ ತಾತ್ತ್ವಿಕತೆಯನ್ನು ವರ್ತಮಾನಗೊಳಿಸುವ ಹಂಬಲ ಇಲ್ಲಿ ಎದ್ದುಕಾಣುತ್ತದೆ. ಹಾಗಾಗಿ ಇಲ್ಲಿ ಕಥೆ ಇದ್ದರೂ ಅದು ಮುಖ್ಯವಾಗದೆ ಒಟ್ಟು ಶರಣಧರ್ಮ ಹಾಗೂ ಜನಪದ ಧರ್ಮಗಳ ತತ್ತ್ವಾದರ್ಶಗಳ ಚರ್ಚೆ ಪ್ರಧಾನವಾಗುತ್ತದೆ.

ಡಾ. ಸಿದ್ಧಲಿಂಗಯ್ಯ
ಅಧ್ಯಕ್ಷರು



ಬೆಲೆ: ₹ 400/–